# ಕರ್ಣಾಟಕದ ಪರಂಪರೆ

(ಸಂಪುಟ 1)



ಸಾಧುಗೆ ಸಾಧು
ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ
ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ ॥

ಒಳ್ಳೆಯವರಿಗೆ ಒಳ್ಳೆಯವನು. ಮಧುರಗುಣ ಉಳ್ಳವರಿಗೆ ಮಧುರವಾಗಿ ವರ್ತಿಸುವವನು. ತೊಂದರೆಪಡಿಸುವ ದುಷ್ಟರಿಗೆ ದುಷ್ಟರಂತೆ ಕಾಣಿಸುವವನು. ಈತನು ಅಸಾಮಾನ್ಯನಾದ ಮಾಧವನೇ ಆಗಿರುವನು.

# ಕರ್ಣಾಟಕದ ಪರಂಪರೆ

1

# ಕರ್ಣಾಟಕದ ಪರಂಪರೆ

ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ ಪೆರನಲ್ಲ

ಸಾಧುಗೆ ಸಾಧು
ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ
ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ ॥

ಒಳ್ಳೆಯವರಿಗೆ ಒಳ್ಳೆಯವನು. ಮಧುರ ಗುಣ ಉಳ್ಳವರಿಗೆ ಮಧುರವಾಗಿ ವರ್ತಿಸುವವನು. ತೊಂದರೆಪಡಿಸುವ ದುಷ್ಟರಿಗೆ ದುಷ್ಟರಂತೆ ಕಾಣಿಸುವವನು. ಈತನು ಅಸಾಮಾನ್ಯನಾದ ಮಾಧವನೇ ಆಗಿರುವನು.

# ಕರ್ಣಾಟಕದ ಪರಂಪರೆ

ಸಂಪುಟ 1

## ಆದಿಕಾಲ

## ಭಾಷಾಂತರ ಯೋಜನಾ ಸಮಿತಿ

ಅಧ್ಯಕ್ಷರು :

**ಶ್ರೀ ಕೆ. ಸಂಪದ್ಗಿರಿರಾವ್**

ಸದಸ್ಯರು :

**ಶ್ರೀ ಎಲ್. ಗುಂಡಪ್ಪ**

**ಶ್ರೀ ನಾರಾಯಣ ಸಂಗಮ**

**ಶ್ರೀ ಸಿ. ಮಹಾದೇವಪ್ಪ**

**ಡಾ॥ ಜಿ.ಎಸ್. ಶಿವರುದ್ರಪ್ಪ**

ಸಂಚಾಲಕರು :

**ಶ್ರೀಮತಿ ಎಫ್. ಪ್ರೇಮದಾಸ್**
ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆಯ
ಡೆಪ್ಯುಟಿ ಡೈರೆಕ್ಟರ್.

# ಕರ್ಣಾಟಕದ ಪರಂಪರೆ

## ಸಂಪುಟ 1

## ಆದಿ ಕಾಲ

(ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ ಸಾಮ್ರಾಜ್ಯ ಕಾಲದ ವರೆಗೆ)

ಪ್ರಕಾಶಕರು :

ಮೈಸೂರು ರಾಜ್ಯ ಸರಕಾರ

1970

ಮೈಸೂರು ರಾಜ್ಯ ಸರಕಾರ

ಪ್ರಥಮ ಮುದ್ರಣ 1970

ಪ್ರಕಾಶಕರು :
ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ,
ಮೈಸೂರು ಸರಕಾರ, ಬೆಂಗಳೂರು.

ಮುದ್ರಕರು :
ಮೋಹನ್ ಪ್ರೆಸ್, ಗಾಂಧಿನಗರ, ಬೆಂಗಳೂರು–9.

# ಸಂದೇಶ

ಯುಗ ಯುಗಾಂತರಗಳಿಂದ ಪ್ರಜ್ವಲಗೊಂಡಿರುವ ಕರ್ಣಾಟಕದೇಶದ ಚರಿತ್ರೆಯನ್ನು ಆಮೂಲಾಗ್ರವಾಗಿ ಬರೆದಿಡುವ ಪ್ರಯತ್ನ ಸ್ವಾಗತಾರ್ಹವಾದುದೇ ಸರಿ. ಮೈಸೂರು ಸರ್ಕಾರದವರ ಪ್ರೋತ್ಸಾಹದಿಂದ ಆಂಗ್ಲ ಭಾಷೆಯಲ್ಲಿ "ಕರ್ಣಾಟಕ ಚರಿತ್ರೆ" 1968 ರಲ್ಲಿ ಹೊರಬಿದ್ದ ಬಳಿಕ, ಅದರ ಸರಳಾನುವಾದ ಗ್ರಂಥವನ್ನು ಕನ್ನಡಿಗರು ಅಪೇಕ್ಷಿಸಿದರು. ಅದರಂತೆ ಇದೀಗ "ಕರ್ಣಾಟಕದ ಪರಂಪರೆ" ಎಂಬುದು ಹೊರಬಿದ್ದಿದೆ. ಪ್ರಾಚೀನ ಕಾಲದಿಂದ ಆರಂಭವಾಗಿ, ತತ್ಕಾಲದ ವರೆಗೆ ನಮ್ಮ ಕನ್ನಡ ನಾಡಿನ ಭವ್ಯವಾದ ಇತಿಹಾಸ ವರ್ಣನೆಯನ್ನು ನೀಡಿರುವ ಈ ಯೋಗ್ಯ ಗ್ರಂಥಕ್ಕೆ ಎಲ್ಲರ ಪ್ರೋತ್ಸಾಹವೂ ಅಗತ್ಯ. ಇದು ಆಂಗ್ಲ ಭಾಷೆಯಲ್ಲಿರುವ, ಮೂಲಗ್ರಂಥದ ಅನುವಾದವೇ ಆದರೂ ನಿರೂಪಣೆ, ಶೈಲಿ, ವಿಷಯ ವೈವಿಧ್ಯ, ಇವು ಚೊಕ್ಕವಾಗಿವೆ. ವಿದ್ವನ್ಮಣಿಗಳುಳ್ಳ ವಿಶೇಷ ಸಮಿತಿಯವರ ಸತತ ಪ್ರಯತ್ನದಿಂದಲೂ ಇತರ ಸುಮಾರು 100 ಮಂದಿ ವಿದ್ವಾಂಸರುಗಳ ಒತ್ತಾಸೆಯಿಂದಲೂ ಈ ಅನುವಾದ ಗ್ರಂಥವು ಸಿದ್ಧವಾಗಿದೆ.

ಇಂತಹ ಅಮೂಲ್ಯಗ್ರಂಥದ ಸಿದ್ಧತೆಗೆ ಅನೇಕರು ಸಹಾಯಮಾಡಿದ್ದಾರೆ. ಮಹಾ ವಿದ್ವಾಂಸರೂ ಉಪಾಧ್ಯಾಯ ಶಿಖಾಮಣಿಗಳೂ ದೇಶಭಕ್ತರೂ ಆದ ಶ್ರೀ ಕೆ. ಸಂಪದ್ಗಿರಿ ರಾಯರ ಅಧ್ಯಕ್ಷತೆಯಲ್ಲಿ ಡಾ॥ ಜಿ.ಎಸ್. ಶಿವರುದ್ರಪ್ಪ, ಶ್ರೀ ಸಿ. ಮಹಾದೇವಪ್ಪ, ಶ್ರೀ ನಾರಾಯಣ ಸಂಗಮ, ಶ್ರೀ ಎಲ್. ಗುಂಡಪ್ಪ ಮತ್ತು ಶ್ರೀಮತಿ ಎಫ್. ಪ್ರೇಮದಾಸ್ ಅವರು ಗ್ರಂಥವನ್ನು ಅತಿ ಮೋಹಕವಾಗಿ ಸಿದ್ಧಗೊಳಿಸಿದ್ದಾರೆ. ಪಠ್ಯ ಪುಸ್ತಕಗಳ ನಿರ್ದೇಶಕರಾದ ಶ್ರೀ ಟಿ.ವಿ. ತಿಮ್ಮೇಗೌಡರು ಅಮೂಲ್ಯ ಸಲಹೆಗಳನ್ನಿತ್ತು ಉಪಕಾರ ಮಾಡಿದ್ದಾರೆ. ಗ್ರಂಥವನ್ನು ಮೋಹನ್ ಪ್ರೆಸ್ಸಿನ ಶ್ರೀ ಎಂ.ಎಸ್. ಶರ್ಮಾ ಅವರು ಅಂದವಾಗಿ ಮುದ್ರಿಸಿ ಕೊಟ್ಟಿದ್ದಾರೆ.

"ಕರ್ಣಾಟಕದ ಪರಂಪರೆ" ಯು ಪ್ರತಿ ಕನ್ನಡಿಗರ ಪುಸ್ತಕ ಭಂಡಾರದಲ್ಲಿ ಪ್ರಕಾಶಿಸಲಿ.

ವಿಧಾನಸೌಧ, ಬೆಂಗಳೂರು
ದಿನಾಂಕ 7-10-1970

ವೀರೇಂದ್ರ ಪಾಟೀಲ
ಮುಖ್ಯಮಂತ್ರಿಗಳು

# ಮೊದಲ ಮಾತು

ತಮ್ಮ ವಿಶಿಷ್ಟ ಸ್ವಭಾವ ಹಾಗೂ ಸಾಧನೆಗಳನ್ನು ಪ್ರಕಟಿಸಿಕೊಳ್ಳುವುದರ ಜೊತೆಗೆ, ನಮ್ಮ ದೇಶದ ಒಂದೊಂದು ಪ್ರಾಂತವೂ ಇಡೀ ರಾಷ್ಟ್ರದ ವೈಭವವನ್ನು ಪ್ರತಿಬಿಂಬಿಸುತ್ತದೆ. ಅಲ್ಲದೆ ಈ ಒಂದೊಂದೂ ಸಮಗ್ರ ಚಿತ್ರವೊಂದರ ಅಂಗವಾಗಿ, ಈ ಚಿತ್ರಕ್ಕೆ ತನ್ನದೇ ಆದ ವರ್ಣ ಹಾಗೂ ಕಾಂತಿಯನ್ನು ನೀಡಿದೆ. ಕರ್ಣಾಟಕದ ಸುದೀರ್ಘವಾದ ಕಥೆಯು ಈ ಮಾತಿಗೆ ಒಂದು ನಿದರ್ಶನವಾಗಿದೆ. ಇದರ ಪ್ರಾಚೀನ ಲಿಖಿತ ಇತಿಹಾಸವು, ಜೈನ ಹಾಗೂ ಬೌದ್ಧ ಧರ್ಮಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ತರುವಾಯದ ಕಾಲದಲ್ಲಿ ಶ್ರೀ ಶಂಕರಾಚಾರ್ಯರು ಕರ್ಣಾಟಕದಲ್ಲಿ ತಮ್ಮ ಮಠವನ್ನು ಸ್ಥಾಪಿಸಿದರು. ಕರ್ಣಾಟಕದಲ್ಲಿ ಬಸವ ಮತ್ತು ಮಧ್ವಾಚಾರ್ಯರು ಜನಿಸಿದರು; ರಾಮಾನುಜರು ಇಲ್ಲಿ ನೆಲಸಿದರು. ಹಲವು ಮುಸ್ಲಿಮ್ ಹಾಗೂ ಕ್ರೈಸ್ತ ಉಪದೇಶಕರು ಅಲ್ಲದೆ ಭಕ್ತಿಪಂಥದ ಸಂತರು ಸರ್ವಸಹನೆಯ ಸಂಪ್ರದಾಯವನ್ನು ಶ್ರೀಮಂತಗೊಳಿಸಿದರು. ಕರ್ಣಾಟಕದಲ್ಲಿ ಎಲ್ಲ ಮತಧರ್ಮದ ದೇವಾಲಯಗಳು ದೇಶಾದ್ಯಂತ ಹರಡಿಕೊಂಡಿವೆ. ಅವುಗಳಲ್ಲಿ ಅತ್ಯಂತ ಸುಪ್ರಸಿದ್ಧವಾದ, ಶಿಲ್ಪಕಲೆಯ ಮಹತ್ ಕೃತಿಗಳನ್ನೊಳಗೊಂಡ ಪಟ್ಟದಕಲ್ಲು, ಬಾದಾಮಿ, ಬೇಲೂರು, ಹಳೆಯಬೀಡು, ವಿಜಯನಗರ ಮತ್ತು ಬಿಜಾಪುರ—ಇವುಗಳು ಉಲ್ಲೇಖಾರ್ಹವಾಗಿವೆ.

ಹಿಂದೆ ಅನೇಕ ರಾಜ್ಯಗಳು ಕರ್ಣಾಟಕದಲ್ಲಿ ಬೆಳೆದು ಬಾಳಿವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಯೋಜನೆಗಳು ರೂಪುದಾಳಿವೆ. ಇಡೀ ಭಾರತವನ್ನು ಹಲವಾರು ಸಲ ಸಂಚರಿಸಿರುವ ಹೆಮ್ಮೆ ನನ್ನದಾಗಿದೆ; ಈ ಸಂಚಾರ ಕಾಲದಲ್ಲಿ, ನನ್ನ ಮನಸ್ಸಿನಲ್ಲಿ ನಿಧಿಯಾಗಿ ನಿಂತ ನೆನಪು ಹಾಗೂ ಚಿತ್ರಗಳಲ್ಲಿ ಹಲವು ಕರ್ಣಾಟಕ ಮತ್ತು ಅದರ ಜನತೆಗೆ ಸಂಬಂಧಿಸಿದವುಗಳಾಗಿವೆ.

ಅತಿ ಪ್ರಾಚೀನ ಕಾಲದಿಂದಲೂ ಅಕ್ಕಪಕ್ಕದ ರಾಜ್ಯ ಮತ್ತು ಪ್ರಾಂತಗಳ ನಡುವೆ ಕಲಹಗಳಾಗುತ್ತಲೇ ಇವೆ. ಇಂದಿನ ದಿನಗಳಲ್ಲಿಯೂ ನಡೆಯುತ್ತಿರುವ ಈ ರೀತಿಯ ಘರ್ಷಣೆಗಳಲ್ಲಿ ಕೆಲವಕ್ಕೆ ಆರ್ಥಿಕ ಸ್ಪರ್ಧೆ ಕಾರಣವಾದರೆ, ಮತ್ತೆ ಕೆಲವು ಅಜ್ಞಾನದ ಪರಿಣಾಮಗಳಾಗಿವೆ. ನಮ್ಮ ತಿಳಿವು ಹೆಚ್ಚಿದಂತೆ ಪ್ರಾಂತ ಪ್ರಾಂತಗಳ ಪರಸ್ಪರ ಅವಲಂಬನೆ ಹಾಗೂ ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಅರಿವು ಮತ್ತು ಮೆಚ್ಚುಗೆಗಳು ಮೂಡುತ್ತವೆ.

ಪ್ರಕಟವಾಗುತ್ತಿರುವ ಈ ರೀತಿಯ ಗ್ರಂಥಗಳು ನಮ್ಮ ಜನತೆಯ ಭಾವೈಕ್ಯ ಸಾಧನೆಗೆ ನೆರವಾಗುತ್ತವೆ. ಕರ್ಣಾಟಕ ಹಾಗೂ ಅದರ ಅಕ್ಕಪಕ್ಕದ ರಾಜ್ಯಗಳಿಗೆ, ಇಡೀ ದೇಶದೊಂದಿಗೆ ಮೊದಲಿನಿಂದಲೂ ಇರುವ ಸಂಪರ್ಕ ಮತ್ತು ಸೌಹಾರ್ದವನ್ನು ಈ ಪುಸ್ತಕವು ವಿಶೇಷವಾಗಿ ಒತ್ತಿ ಹೇಳಿರುವುದು ಸಂತೋಷದ ಸಂಗತಿಯಾಗಿದೆ. ಇಂದು ಕನ್ನಡದಲ್ಲಿ ಬರೆಯುವ ಅನೇಕ ಲೇಖಕರ ಮನೆ ಮಾತು ಕನ್ನಡವಲ್ಲದೆ ಬೇರೆ ಭಾಷೆಯಾಗಿದೆ ಎನ್ನುವುದು ಸ್ವಾರಸ್ಯವಾದ ಸಂಗತಿಯಾಗಿದೆ.

ಭಾಷಾವಾರು ಪ್ರಾಂತರಚನೆಯನ್ನು ಅಲ್ಲಗಳೆಯುತ್ತಾ ಎಲ್ಲ ಅನಿಷ್ಟಗಳಿಗೂ ಅದೇ ಕಾರಣ ವೆಂಬಂತೆ ಮಾತನಾಡುವುದು ಅನೇಕರಿಗೆ ಒಂದು ಮೋಜಿನ ಹವ್ಯಾಸವಾಗಿದೆ. ಪ್ರಜಾಪ್ರಭುತ್ವದಲ್ಲಿ ಜನತೆಯ ರಾಜಕಾರಣ ಹಾಗೂ ಸರ್ಕಾರ ತಮ್ಮ ತಮ್ಮ ರಾಜ್ಯಭಾಷೆಯಲ್ಲಿಯೇ ನಡೆಯುವುದು ವಿಹಿತವಾಗಿದೆ. ಹಾಗೆ ನೋಡಿದರೆ, ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ಚಳವಳಿ ಸಾಮಾನ್ಯ ಜನತೆಯಲ್ಲಿ ಬೇರೂರಿದ್ದು, ಅಲ್ಲಲ್ಲಿನ ಜನಭಾಷೆಯನ್ನು ಬಳಸಿಕೊಂಡ ಕಾರಣದಿಂದಲೇ ಎಂಬುದನ್ನು ಮರೆಯಬಾರದು. ಹೀಗೆ ಯಾವುದು ಸ್ವಾತಂತ್ರ್ಯವನ್ನು, ಪ್ರಜಾಪ್ರಭುತ್ವವನ್ನು ಸಾಧಿಸಲು ಕಾರಣವಾಯಿತೋ ಅದು, ಮೂಲತಃ ಕೆಟ್ಟದ್ದಾಗಿರಲಾರದು. ಅದೂ ಭಾರತದಂಥ ವಿಸ್ತಾರವಾದ ದೇಶದಲ್ಲಿ ವೈವಿಧ್ಯಕ್ಕೆ ತಕ್ಕಷ್ಟು ಅವಕಾಶವಿರಲೇ ಬೇಕು. ಏಕತೆಯ ಭದ್ರವಾದ ನೆಲೆ ಗಟ್ಟಿನ ಮೇಲೆ ಅದು ಸ್ಥಾಪಿತವಾಗುವುದಾದರೆ, ಜನಜೀವನದಲ್ಲಿ ಧರ್ಮಶ್ರದ್ಧೆ ಯಾವ ಪ್ರಭುತ್ವವನ್ನು ಪಡೆದಿದೆಯೋ, ಅದಕ್ಕೆ ದ್ವಿತೀಯ ಸ್ಥಾನದಲ್ಲಿ ಭಾಷಾಶ್ರದ್ಧೆ ನಿಲ್ಲುವ ಕಾರಣ, ನಾವು ಭಾಷೆಗಳನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಆದಕಾರಣ ಮೂಲತಃ ರಾಷ್ಟ್ರದ ಬಗೆಗಿರುವ ನಿಷ್ಠೆಯೊಂದಿಗೆ, ಇತರ ಸಣ್ಣ ಪುಟ್ಟ ನಿಷ್ಠೆಗಳು ತಾಕಲಾಡದಂತೆ ನೋಡಿಕೊಳ್ಳುವುದು, ಪ್ರತಿಯೊಂದು ರಾಜ್ಯದ ಶ್ರದ್ಧಾವಂತರ ಜವಾಬ್ದಾರಿಯಾಗಿದೆ. ಈ ದೇಶವು ಧರ್ಮ ಮತ್ತು ಭಾಷೆಯ ವಿಷಯಗಳಲ್ಲಿ ಸಹನೆಯಿಂದ ಮಾತ್ರ ಪ್ರಗತಿ ಯನ್ನು ಸಾಧಿಸಬಲ್ಲುದು.

ಶ್ರೀ ದಿವಾಕರರು ಮತ್ತು ಅವರ ವಿದ್ವತ್ಸಹಾಯಕರು ಕರ್ಣಾಟಕವನ್ನು ಕುರಿತು ಇಷ್ಟೊಂದು ವ್ಯಾಪಕ ವಾದ ರೀತಿಯಲ್ಲಿ ವಿಷಯಗಳನ್ನು ಕೊಡುವ ಈ ಗ್ರಂಥವನ್ನು ಪ್ರಕಟಿಸುವುದರ ಮೂಲಕ, ಕರ್ಣಾಟಕಕ್ಕೆ ಹಾಗೂ ಇಡೀ ದೇಶಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ. ಇದೊಂದು ಅಮೂಲ್ಯವಾದ ಆಧಾರ ಗ್ರಂಥವಾಗು ವುದರಲ್ಲಿ ಸಂದೇಹವಿಲ್ಲ.

**ಇಂದಿರಾ ಗಾಂಧಿ**
ಪ್ರಧಾನ ಮಂತ್ರಿಗಳು

ನವದೆಹಲಿ
ಏಪ್ರಿಲ್ 17, 1968.

[ಮೂಲ ಇಂಗ್ಲಿಷ್ ಗ್ರಂಥಕ್ಕೆ ಬರೆದುದರ ಅನುವಾದ]

## ಪೀಠಿಕೆ

ಮಾನವನ ಬದುಕಿನ ಕ್ಷಿತಿಜವು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಆದಿಮಾನವನು ಪ್ರಾಚೀನಕಾಲದಲ್ಲಿ ತಾನು ಮೊದಲು ಒಂದು ಸಂಸಾರದವನೆಂದು, ತದನಂತರ ಒಂದು ಕುಲದವನೆಂದು ತಿಳಿದು ಬದುಕುತ್ತಿದ್ದನು. ಇಂದು ಮಾನವರೆಲ್ಲ ಒಂದು ಅಖಂಡ ಜಗತ್ತಿನವರೆಂಬ, ಮಾನವತೆಯೆಲ್ಲ ಒಂದು ಕುಲವೆಂಬ ನಿಲುವಿಗೆ ಏರಲು ಹವಣಿಸುತ್ತಿದ್ದಾನೆ. ಒಮ್ಮೆ ಗಾಂಧೀಜಿ ಹೇಳಿದರು: 'ಮನುಷ್ಯ ಮನುಷ್ಯರ ನಡುವೆ ನಾನು ಯಾವ ಭೇದವನ್ನೂ ಎಣಿಸಲಾರೆ; ನನ್ನ ಪಾಲಿಗೆ ಮಾನವಸಮೂಹವೆಲ್ಲ ಒಂದು. ಆದರೂ ಮನುಷ್ಯರ ಶಕ್ತಿ-ಸಾಮರ್ಥ್ಯಗಳಿಗೆ ಒಂದು ಮಿತಿ ಸಹಜವಾಗಿಯೆ ಇರುವ ಕಾರಣ, ಅವರು ತಮ್ಮ ಪರಿಮಿತ ವಲಯಗಳಲ್ಲಿಯೇ ಕಾರ್ಯ ತತ್ಪರರಾಗಬೇಕಾಗಿದೆ. ಆದರೆ ತಮ್ಮ ಕಾರ್ಯಕ್ಷೇತ್ರವೇನೇ ಇರಲಿ, ತಾವು ಅಖಂಡ ಮಾನವ ವರ್ಗದ ಒಂದು ಅಂಗವೆಂಬ ವಿಶಾಲ ದೃಷ್ಟಿಯನ್ನು ಕಳೆದುಕೊಳ್ಳದೆ ಇರಬೇಕಾದುದು ಅತ್ಯಗತ್ಯವಾಗಿದೆ.

ಭಾರತದೇಶವು ಬಹು ಹಿಂದಿನಿಂದಲೂ ಒಂದು ಏಕ ಹಾಗೂ ಅಖಂಡ ದೇಶವೆಂಬಂತೆ ಸ್ವದೇಶೀಯ ಮತ್ತು ವಿದೇಶೀಯರಿಂದ ಪರಿಗಣಿತವಾಗಿದೆ. ಆದರೂ ಈ ದೇಶವು ಸದಾ ವಿವಿಧ ಮತ ಧರ್ಮ ಹಾಗೂ ಭಾಷೆಗಳ ಬಹು ಜನ ಸಮುದಾಯವನ್ನು ಒಳಗೊಂಡದ್ದಾಗಿದೆ. ಇದರಿಂದಾಗಿ ಭಾರತದ ಜನತೆಯಲ್ಲಿ ವೈವಿಧ್ಯದ ನಡುವೆಯೂ ಏಕತೆಗೆ ಅವಕಾಶವಾಗಿದೆ. ಹತ್ತೊಂಬತ್ತನೆಯ ಶತಮಾನದಂದು, ದೇಶಾದ್ಯಂತ ವ್ಯಾಪಕವಾದ ರಾಷ್ಟ್ರೀಯ ಜಾಗೃತಿಯು ಪ್ರಾದೇಶಿಕವಾದ ಪ್ರಾಂತಾಭಿಮಾನವನ್ನು ಕೆರಳಿಸಿದ್ದು ಅನಿವಾರ್ಯವಾಗಿದೆ. ಈಪ್ರಾಂತಾಭಿಮಾನ ಈಗ ಭಾಷಾವಾರು ಪ್ರಾಂತಗಳ ರಚನೆಯಲ್ಲಿ ಪರಿಣಮಿಸಿದೆ. ಹೀಗೆ ಪ್ರಕಟವಾದ ಈ ಶಕ್ತಿಯನ್ನು ಕೇವಲ ಸ್ವಾರ್ಥ ಹಾಗೂ ಪ್ರಾದೇಶಿಕ ಸ್ವಪ್ರಯೋಜನ ಸಾಧನೆಗೆ ಸೀಮಿತವಾಗಲು ಬಿಡದೆ, ಇಡೀ ರಾಷ್ಟ್ರದ ಪ್ರಗತಿಗೆ ಬಳಸಿಕೊಳ್ಳಬೇಕಾಗಿದೆ.

1956 ರಲ್ಲಿ ಲೋಕಸಭೆಯ ಶಾಸನವೊಂದರಿಂದ ಪುನಃ ರಚಿತವಾದ ರಾಜ್ಯವಾಗಿ ರೂಪತಾಳಿದ ಕರ್ಣಾಟಕಕ್ಕೆ ತನ್ನದೇ ಆದ ಒಂದು ವ್ಯಕ್ತಿತ್ವವೂ ಇತಿಹಾಸವೂ ಇದೆ. ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಗಣನೀಯವಾದ ಪಾತ್ರವಹಿಸಿದ ಈ ಪ್ರಾಂತವು, ಈಗ ಇತರ ಪ್ರಾಂತಗಳೊಡನೆ ಕ್ರಿಯಾಶೀಲವಾಗಿ, ಭಾರತದ ಗತ ಪರಂಪರೆಗೆ ತಕ್ಕುದಾದ ನವಭಾರತ ನಿರ್ಮಾಣದಲ್ಲಿ ತೊಡಗಿದೆ. ಈ ಸಂದರ್ಭದಲ್ಲಿ ಕರ್ಣಾಟಕದ ಜನತೆಯು, ಭಾರತದೊಂದಿಗೆ ತನಗಿರುವ ಪರಂಪರೆಯ ಸಮಾನಾಂಶಗಳನ್ನೂ ಯುಗಯುಗದ ಈ ಪರಂಪರೆಗೆ ತನ್ನ ವಿನಮ್ರವಾದ ಕಾಣಿಕೆ ಏನೆಂಬುದನ್ನೂ ಅವಶ್ಯವಾಗಿ ತಿಳಿದುಕೊಳ್ಳಬೇಕಾಗಿದೆ. ಭಾರತದಂತೆಯೆ ಕರ್ಣಾಟಕವೂ ಕಳೆದ ಎರಡು ಸಾವಿರ ವರ್ಷಗಳಲ್ಲಿ ಒಂದೇ ಬಗೆಯ ಅದೇ ರಾಜಕೀಯ ಭಾಗ್ಯ-ದೌರ್ಭಾಗ್ಯಗಳನ್ನೂ ಏಳು-ಬೀಳುಗಳನ್ನೂ ಕಂಡಿದೆ. ಆದರೂ ಈ ಎಲ್ಲ ಏಳು-ಬೀಳಿನ ನಡುವೆಯೂ ನಿರಂತರವಾದ ಸಾಂಸ್ಕೃತಿಕ ಪರಂಪರೆಯನ್ನೂ ಭಾಷೆ ಹಾಗೂ ಸಾಹಿತ್ಯಕ ಬೆಳವಣಿಗೆಯನ್ನೂ ಅಖಂಡ ಭಾರತದೊಂದಿಗೆ ಹೊಂದಾಣಿಕೆಯಿರುವಂಥ ವ್ಯಕ್ತಿತ್ವವನ್ನೂ ಕರ್ಣಾಟಕವು ಬೆಳೆಸಿಕೊಂಡು ಬಂದಿದೆ.

ಈ ಪ್ರಸ್ತುತ ಗ್ರಂಥದಲ್ಲಿ ಕರ್ನಾಟಕದ ಜನರು ಉದ್ದಕ್ಕೂ ಹೇಗೆ ಬದುಕಿದ್ದಾರೆ, ಹೇಗೆ ನಡೆದುಕೊಂಡಿದ್ದಾರೆ ಎಂಬ ಬಗೆಗೆ ಸ್ಥೂಲವಾದ ನಿರೂಪಣೆಯನ್ನು ಕಾಣಬಹುದು. ರಾಜಕೀಯ ಚರಿತ್ರೆಯಂತೂ ಬಹು ಮುಖ್ಯವೆಂಬುದರಲ್ಲಿ ಸಂದೇಹವಿಲ್ಲ; ಆದರೆ ಅದಕ್ಕಿಂತ ಮಿಗಿಲಾದದ್ದು ಇಲ್ಲಿನ ಜನಜೀವನ, ಧಾರ್ಮಿಕ ಶ್ರದ್ಧೆಗಳು, ಅವರ ತಾತ್ತ್ವಿಕ ನೆಲೆಗಟ್ಟು, ನೈತಿಕ ನಿಯಮಂಗಳು, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು, ಅವರ ಸಂಸ್ಕೃತಿ ಮತ್ತು ಕಲೆಗಳು. ಆದಕಾರಣ ಈ ದಿಶೆಯಲ್ಲಿ ತಕ್ಕಷ್ಟು ವಿಷಯ ಸಂಗ್ರಹ ಮಾಡಿ ನಿರೂಪಿಸಲು ವಿಶೇಷ ಪ್ರಯತ್ನ ಪಡಲಾಗಿದೆ. ಈ ಬಗ್ಗೆ ಹೆಚ್ಚು ವಿಷಯ ದೊರೆತಷ್ಟೂ ಅಪೇಕ್ಷಣೀಯವೇ. ಆದರೆ ದುರದೃಷ್ಟವಶಾತ್, ಬೇರೆ ದೇಶದವರೊಂದಿಗೆ ಹೋಲಿಸಿಕೊಂಡಾಗ, ಭಾರತೀಯರಾದ ನಮಗೆ ಚಾರಿತ್ರಿಕ ಪ್ರಜ್ಞೆ ತುಂಬ ಕಡಮೆ ಎನ್ನುವುದು ಕಂಡುಬರುತ್ತದೆ. ಎಷ್ಟೋ ವೇಳೆ ನಾವು ನಮ್ಮ ಇತಿಹಾಸಕ್ಕಾಗಿ ವಿದೇಶೀಯ ಮೂಲಗಳಿಗೂ ಹೋಗಬೇಕಾಗುತ್ತದೆ. ರಾಷ್ಟ್ರೀಯ ಮಹತ್ವವನ್ನುಳ್ಳ ಈ ವಿಚಾರದ ಬಗ್ಗೆ ವಿಶೇಷ ಗಮನ ಕೊಡಬೇಕಾದ ಸಂದರ್ಭ ಈಗ ಪ್ರಾಪ್ತವಾಗಿದೆ.

ಕಳೆದ ಎರಡು ಸಾವಿರ ವರ್ಷಗಳಲ್ಲಿ ಪ್ರವಹಿಸುತ್ತ ಬಂದಿರುವ ಕರ್ನಾಟಕದ ಪರಂಪರೆಯನ್ನು, ನಮ್ಮ ಕನ್ನಡದ ಜನ ತಿಳಿಯಲಿ ಎಂಬುದೇ ಈ ಗ್ರಂಥದ ನಮ್ರವಾದ ಆಶಯವಾಗಿದೆ. ಪ್ರಾಸಂಗಿಕವಾಗಿ ಭಾರತೀಯರು ಮತ್ತು ಹೊರಗಿನವರು, ಭಾರತದ ಭಾಗದವರಾದ ಕನ್ನಡ ಜನರು ಹೇಗೆ ಶ್ರಮಿಸಿ ಇವತ್ತಿನ ಒಂದು ಬದುಕನ್ನು ರೂಪಿಸಿಕೊಂಡಿದ್ದಾರೆ ಎಂಬುದನ್ನೂ ತಿಳಿಯಬಹುದು. ಕರ್ನಾಟಕದ ಜೀವನ, ಇಡೀ ಭಾರತೀಯ ಜೀವನ ಕ್ರಮದಿಂದ, ಅಲ್ಲಿ ಇಲ್ಲಿ ಒಂದೆರಡು ವಿಶೇಷ ಅಂಶಗಳನ್ನು ಬಿಟ್ಟರೆ, ಹೆಚ್ಚಿಗೆ ಏನೂ ಭಿನ್ನವಾಗಿಲ್ಲ—ಎಂಬುದನ್ನು ಓದುಗರು ಗಮನಿಸದೆ ಇರಲಾರರು.

ಕರ್ನಾಟಕದ ಈ ಭವ್ಯ ಪರಂಪರೆಯ ಅರಿವು ಅಮೂಲ್ಯವಾದುದೆನ್ನುವುದರಲ್ಲಿ ಸಂದೇಹವಿಲ್ಲ. ಈ ಗತ ಇತಿಹಾಸದಿಂದ ಸ್ಫೂರ್ತಿಗೊಂಡು, ಇನ್ನೂ ಭವ್ಯವಾದ ಭವಿಷ್ಯವನ್ನು ನಿರ್ಮಾಣ ಮಾಡುವುದರಲ್ಲಿ, ಈ ಅರಿವನ್ನು ಬಳಸಿಕೊಳ್ಳುವುದೇ ಅತ್ಯುತ್ತಮವಾದ ಮಾರ್ಗ.

ಈ ಪ್ರಯತ್ನ ಫಲಪ್ರದವಾಗುವುದೆಂದೂ ನವಕರ್ನಾಟಕ ಹಾಗೂ ನವಭಾರತದ ಕಣ್ಣ ಮುಂದೆ ಹೊಸ ನೋಟವೊಂದನ್ನು ತೆರೆಯುವುದೆಂದೂ ಆಶಿಸೋಣ.

**ಆರ್. ಆರ್. ದಿವಾಕರ**

[ಮೂಲ ಇಂಗ್ಲಿಷ್ ಗ್ರಂಥಕ್ಕೆ ಬರೆದುದರ ಅನುವಾದ]

# ಮುನ್ನುಡಿ

ಎರಡು ಬೃಹತ್ ಸಂಪುಟಗಳಲ್ಲಿ ಪ್ರಕಟವಾಗುತ್ತಿರುವ ಕರ್ಣಾಟಕದ ಪರಂಪರೆ ಎಂಬ ಈ ಗ್ರಂಥವು 1968ನೆ ನವೆಂಬರ್ ಒಂದನೆ ತಾರೀಖು ರಾಜ್ಯೋತ್ಸವದ ಸಂದರ್ಭದಲ್ಲಿ, ಮೈಸೂರು ಸರ್ಕಾರದವರು ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರದ ಶಾಖೆಯ ಮೂಲಕ ಸಿದ್ಧಪಡಿಸಿ ಪ್ರಕಟಿಸಿದ Karnataka through the ages ಎಂಬ ಇಂಗ್ಲಿಷ್ ಗ್ರಂಥದ ಅನುವಾದವಾಗಿದೆ. Karnataka through the ages ಎಂಬ ಆ ಬೃಹತ್ ಗ್ರಂಥವು, ಆಂಗ್ಲ ಭಾಷೆಯಲ್ಲಿದ್ದು ಕನ್ನಡೇತರರಿಗೆ ಕರ್ಣಾಟಕದ ಪರಂಪರೆಯನ್ನು ಕುರಿತು ವಿಪುಲವಾದ ಹಾಗೂ ವಿದ್ವತ್ಪೂರ್ಣವಾದ ಸಂಗತಿಗಳನ್ನು ಪರಿಚಯ ಮಾಡಿ ಕೊಡುವುದರಲ್ಲಿ ಸಫಲವಾಗಿದೆ. ಆದರೆ ಇಷ್ಟು ವಿಪುಲ ಪ್ರಮಾಣದ ಸಾಮಗ್ರಿ ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿರುವ ಎಲ್ಲ ಕನ್ನಡಿಗರಿಗೂ ಅವರದೇ ಆದ ಭಾಷೆಯಲ್ಲಿ ತಲಪಬೇಕೆಂಬ ಉದ್ದೇಶದಿಂದ ನಮ್ಮ ರಾಜ್ಯ ಸರ್ಕಾರದವರು ಆ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿಸುವ ಸಲುವಾಗಿ ಭಾಷಾಂತರ ಯೋಜನಾ ಸಮಿತಿಯೊಂದನ್ನು 1968ನೆ ಡಿಸೆಂಬರ್ 9ರಂದು ನಿಯಮಿಸಿ, ಅದಕ್ಕೆ ಅಗತ್ಯವಾಗುವ ಖರ್ಚು-ವೆಚ್ಚಗಳನ್ನು ಕುರಿತು ಸಮಿತಿಯು ಪರಿಶೀಲಿಸಿ ಸಲಹೆ ಮಾಡಬೇಕೆಂದು ಸೂಚಿಸಿ, ಅಧಿಕೃತ ಆದೇಶವನ್ನು ನೀಡಿದರು. ಭಾಷಾಂತರ ಯೋಜನಾ ಸಮಿತಿಯು ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಮಾಡಿದ ಸಲಹೆಗಳನ್ನು ಸರ್ಕಾರದವರು ತಮ್ಮ 1969 ಫೆಬ್ರುವರಿ 15ನೆಯ ತಾರೀಖಿನ ಅಧಿಕೃತ ಪತ್ರದ ಮೂಲಕ ಅನುಮೋದಿಸಿದರು.

ಭಾಷಾಂತರ ಯೋಜನಾ ಸಮಿತಿಯವರು Karnataka through the ages ಕೃತಿಯನ್ನು ಸಮರ್ಥರಾದ ಅನುವಾದಕರನ್ನು ಆರಿಸಿ, ಅವರ ಮೂಲಕ ಅನುವಾದಿಸಿ, ಬಂದ ಅನುವಾದಗಳನ್ನು ಸಮಿತಿಯ ಸದಸ್ಯರು ವೈಯಕ್ತಿಕವಾಗಿ ಪರಿಶೀಲಿಸಿ ಪರಿಷ್ಕರಿಸಬೇಕೆಂದು ನಿರ್ಧರಿಸಿದರು. ಇಂಗ್ಲಿಷ್ ಮೂಲ ಲೇಖನಗಳನ್ನು ಬರೆದವರು ಕನ್ನಡದಲ್ಲಿಯೂ ಪರಿಣತರಾಗಿದ್ದ ಪಕ್ಷದಲ್ಲಿ, ಆಯಾ ಲೇಖನದ ಕನ್ನಡ ಅನುವಾದ ಕಾರ್ಯವನ್ನು ಅವರಿಗೇ ಒಪ್ಪಿಸಬೇಕೆಂದೂ ಮೂಲ ಲೇಖಕರು ಅನುವಾದ ಮಾಡಲು ಸಾಧ್ಯವಾಗದಂತಹ, ಮತ್ತು ಮೂಲ ಲೇಖಕರು ಕನ್ನಡದಲ್ಲಿ ಅಭಿವ್ಯಕ್ತಿಪಡಿಸಲಾರದಂಥ ಸಂದರ್ಭಗಳಲ್ಲಿ ಆಯಾ ವಿಷಯಗಳನ್ನು ಚೆನ್ನಾಗಿ ಬಲ್ಲವರಿಗೆ ಆ ಅನುವಾವ ಕಾರ್ಯವನ್ನು ವಹಿಸಬೇಕೆಂದೂ ಸಮಿತಿಯು ತೀರ್ಮಾನಿಸಿತು. ಅಲ್ಲದೆ ಮೂಲದ ಇಂಗ್ಲಿಷ್ ಗ್ರಂಥವನ್ನು ಅನುವಾದ ಮಾಡಿಸಿದಾಗ, ಎರಡು ಸಂಪುಟಗಳಲ್ಲಿ ಪ್ರಕಟಿಸುವುದು ಉಚಿತವೆಂದೂ ಅಭಿಪ್ರಾಯ ಪಟ್ಟಿತು. ಇದರಿಂದಾಗಿ ಮೊದಲ ಸಂಪುಟದಲ್ಲಿ, ಆದಿಕಾಲದಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ವರೆಗಿನ ಸಂಗತಿಗಳೂ ಎರಡನೆಯ ಸಂಪುಟದಲ್ಲಿ, ವಿಜಯನಗರ ಸ್ಥಾಪನೆಯ ಕಾಲದಿಂದ ಆಧುನಿಕ ಕಾಲದ ವರೆಗಿನ ಸಂಗತಿಗಳೂ ಸಮಾವೇಶಗೊಂಡಿವೆ.

ಈ ಸಂಪುಟಗಳು ಮೂಲದ ಇಂಗ್ಲಿಷ್ ಭಾಷೆಯ ಗ್ರಂಥದ ಅನುವಾದವೇ ಆಗಿದ್ದರೂ ಮೂಲದಲ್ಲಿ ಇಲ್ಲದ ಕೆಲವು ಹೊಸ ವಿಷಯಗಳನ್ನು ಕುರಿತ ಲೇಖನಗಳು-ಅದರಲ್ಲಿಯೂ ಪೋರ್ಚುಗೀಸರು ಮತ್ತು ಕರ್ಣಾಟಕ ಎಂಬ ಲೇಖನವೂ ಆಳುಪರು, ಸಾಂತರರು, ಬಂಗರು, ಅಜಿಲರು, ಚೌಟರು ಇತ್ಯಾದಿ

ಕರ್ಣಾಟಕದ ಸಣ್ಣಪುಟ್ಟ ರಾಜಮನೆತನದ ವೃತ್ತಾಂತವನ್ನೊಳಗೊಂಡ ಲೇಖನಗಳೂ ಈ ಸಂಪುಟದಲ್ಲಿ ಸೇರಿರುವುದು ಒಂದು ವಿಶೇಷವೆಂದು ಭಾವಿಸಿದ್ದೇವೆ. ಕರ್ಣಾಟಕದ ಪರಂಪರೆಯ ಭವ್ಯ ಚಿತ್ರವನ್ನು ತೆರೆಯುವ ಈ ಕನ್ನಡ ಕೃತಿ ಕನ್ನಡಿಗರ ಪ್ರೀತಿ–ವಿಶ್ವಾಸಗಳಿಗೆ ಪಾತ್ರವಾಗಿ, ಅವರಲ್ಲಿ ಕರ್ಣಾಟಕದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸ ಬಲ್ಲುದೆಂಬ ಭರವಸೆ ನಮಗಿದೆ.

ಈ ಮಹಾಕಾರ್ಯದಲ್ಲಿ ಪಾಲುಗೊಂಡು ಈ ಕೃತಿಯ ಲೇಖನಗಳನ್ನು ಅನುವಾದ ಮಾಡಿ ಕೊಟ್ಟ ಅನೇಕ ವಿದ್ವಾಂಸರಿಗೂ ಇದರ ಗ್ರಂಥವಿವರ ಸೂಚಿಯನ್ನು ಸಿದ್ಧಪಡಿಸಿಕೊಟ್ಟ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಎಂ. ಎ. ತರಗತಿಯ ವಿದ್ಯಾರ್ಥಿಗಳಾದ ಶ್ರೀ ಬಿ. ಎಸ್. ರಾಮಪ್ರಸಾದ್ ಮತ್ತು ಡಿ.ಕೆ. ಶ್ಯಾಮಸುಂದರ್‌ರಾವ್ ಅವರಿಗೂ ಸೊಗಸಾಗಿ ಮುದ್ರಿಸಿಕೊಟ್ಟ ಮೋಹನ್ ಪ್ರೆಸ್ಸಿನವರಿಗೂ ಇದರ ಅಚ್ಚಿನ ಕರಡನ್ನು ಶ್ರಮವಹಿಸಿ ತಿದ್ದಿರುವ ಶ್ರೀ ಟಿ. ಕೇಶವ ಭಟ್ಟರಿಗೂ ಸರ್ಕಾರದ ಸಂಸ್ಕೃತಿ ಪ್ರಸಾರ ಶಾಖೆಯ ಮುಖ್ಯಸ್ಥರು ಹಾಗೂ ಅವರ ಸಹಾಯಕ ವರ್ಗದವರಿಗೂ ನಮ್ಮ ವಂದನೆಗಳು.

ಈ ಒಂದು ಸಾರ್ಥಕ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿದ ಘನ ಸರಕಾರದವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

**ಭಾಷಾಂತರ ಯೋಜನಾ ಸಮಿತಿ**

ಬೆಂಗಳೂರು,
ವಿಜಯದಶಮಿ,
ದಿನಾಂಕ : 10-10-1970

# ಪರಿವಿಡಿ


ವಿಷಯಗಳು ಮತ್ತು ಲೇಖಕರು ಪುಟಗಳು

ಪೀಠಿಕಾ ಭಾಗ ...... i xxiv

## ಅಧ್ಯಾಯ 1

ಕರ್ಣಾಟಕದ ಭೂವಿಕಾಸ .... 1 21

ಮೂಲಲೇಖಕರು : ಪ್ರೊ. ಎಲ್. ರಾಮರಾವ್
ಅನುವಾದಕರು : ಶ್ರೀ ಎಸ್. ವರದರಾಜನ್

ಆರ್ಥಿಕ ಭೂವಿಜ್ಞಾನ .... 22 34

ಮೂಲಲೇಖಕರು : ಶ್ರೀ ಎಂ. ಸದಾಶಿವಯ್ಯ
ಅನುವಾದಕರು : ಶ್ರೀ ಸೂರ್ಯನಾರಾಯಣ

## ಅಧ್ಯಾಯ 2

ಪ್ರಾಕೃತಿಕ ಲಕ್ಷಣಗಳು .... 35 47

ಮೂಲಲೇಖಕರು : ಶ್ರೀ ಸಿ.ಡಿ. ದೇಶಪಾಂಡೆ
ಅನುವಾದಕರು : ಶ್ರೀ ಎ. ಕುಮಾರಸ್ವಾಮಿ

ವಾಯುಗುಣ, ಮಳೆ ಮತ್ತು ನೀರಾವರಿ .... 48 54

ಮೂಲಲೇಖಕರು : ಶ್ರೀ ಕೆ. ಸಂಪದ್ಗಿರಿ ರಾವ್
ಅನುವಾದಕರು : ಶ್ರೀ ಎ. ಕುಮಾರಸ್ವಾಮಿ

ಕರ್ಣಾಟಕದ ಸಸ್ಯಸಂಪತ್ತು .... 55 68

ಮೂಲಲೇಖಕರು ಮತ್ತು ಅನುವಾದಕರು : ಡಾ॥ ಎಲ್. ನಾರಾಯಣ ರಾವ್

ಕರ್ಣಾಟಕದ ಪ್ರಾಣಿಸಂಪತ್ತು .... 69 81

ಮೂಲಲೇಖಕರು : ಡಾ॥ ಬಿ. ತಿರುಮಲಾಚಾರ್
ಅನುವಾದಕರು : ಶ್ರೀ ದೇವರಾಜ ಸರ್ಕಾರ್

## ಅಧ್ಯಾಯ 3

ಕರ್ಣಾಟಕದ ಬುಡಕಟ್ಟುಗಳು ಮತ್ತು ಜನಾಂಗಗಳು .... 82 86

ಮೂಲಲೇಖಕರು : ಡಾ॥ ಎಂ. ಶೇಷಾದ್ರಿ
ಅನುವಾದಕರು : ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಭಾಷೆಗಳು .... 87 102

ಮೂಲಲೇಖಕರು : ಪ್ರೊ. ಟಿ. ಎನ್. ಶ್ರೀಕಂಠಯ್ಯ
ಅನುವಾದಕರು : ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ವಿಷಯಗಳು ಮತ್ತು ಲೇಖಕರು ಪುಟಗಳು

## ಅಧ್ಯಾಯ 4


ಕರ್ನಾಟಕದ ಪ್ರಾಕ್ಚಾರಿತ್ರಿಕ ಸಂಸ್ಕೃತಿಗಳು .... 103 110
ಮೂಲಲೇಖಕರು : ಡಾ॥ ಎಂ. ಶೇಷಾದ್ರಿ
ಅನುವಾದಕರು : ಶ್ರೀ ಎಲ್. ಸೀಬಯ್ಯ

ಐತಿಹ್ಯಗಳು ಮತ್ತು ಆಖ್ಯಾನಗಳು .... 111 115
ಮೂಲಲೇಖಕರು : ಡಾ॥ ಆರ್.ಎಸ್. ಪಂಚಮುಖಿ
ಅನುವಾದಕರು : ಶ್ರೀ ಕೆ.ಎಲ್. ಗೋಪಾಲಕೃಷ್ಣಯ್ಯ


## ಅಧ್ಯಾಯ 5


ಚಾರಿತ್ರಿಕ ಯುಗ .... 116 123
ಮೂಲಲೇಖಕರು : ಡಾ॥ ಎಂ. ಶೇಷಾದ್ರಿ
ಅನುವಾದಕರು : ಶ್ರೀಮತಿ ಎಸ್.ಕೆ. ಕಿಟ್ಟಮ್ಮ

ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ .... 124 131
ಮೂಲಲೇಖಕರು : ಶ್ರೀ ಡಿ.ಎಲ್. ನರಸಿಂಹಾಚಾರ್
ಅನುವಾದಕರು : ಶ್ರೀ ಅ.ರಾ. ಮಿತ್ರ


## ಅಧ್ಯಾಯ 6


ರಾಜಕೀಯ ಚರಿತ್ರೆ .... 132 136
ಕದಂಬರು
ಮೂಲಲೇಖಕರು : ಡಾ॥ ಎಸ್. ಶ್ರೀಕಂಠಶಾಸ್ತ್ರಿ
ಅನುವಾದಕರು : ಶ್ರೀ ಕೆ.ಟಿ. ರಾಮಸ್ವಾಮಿ

ತಲಕಾಡಿನ ಗಂಗರು .... 137 150
ಮೂಲಲೇಖಕರು : ಡಾ॥ ಎಂ.ವಿ. ಕೃಷ್ಣರಾವ್
ಅನುವಾದಕರು : ಕೆ.ಟಿ. ರಾಮಸಾ ಮಿ

ಬಾಣರು .... 151 159
ಮೂಲಲೇಖಕರು : ಡಾ॥ ಎಂ.ವಿ. ಕೃಷ್ಣರಾವ್
ಅನುವಾದಕರು : ಶ್ರೀಮತಿ ಎಸ್.ಕೆ. ಕಿಟ್ಟಮ್ಮ

ಪಲ್ಲವರು ಮತ್ತು ಕರ್ನಾಟಕ, ನೊಳಂಬ ಪಲ್ಲವರು, ಪುನ್ನಾಟ .... 160 169
ಮೂಲಲೇಖಕರು : ಡಾ॥ ಎಸ್. ಶ್ರೀಕಂಠಶಾಸ್ತ್ರಿ
ಅನುವಾದಕರು : ಡಾ॥ ಸೂರ್ಯನಾಥ ಕಾಮತ್

ಮತ, ಸಮಾಜ ಮತ್ತು ಸಂಸ್ಕೃತಿ .... 170 184
ಮೂಲಲೇಖಕರು : ಡಾ॥ ಎಸ್.ಸಿ. ನಂದಿಮಠ
ಅನುವಾದಕರು : ಶ್ರೀ ಎಲ್. ಗುಂಡಪ್ಪ

ವಿಷಯಗಳು ಮತ್ತು ಲೇಖಕರು ಪುಟಗಳು

ವೈಷ್ಣವ ಧರ್ಮ .... 185 194
ಮೂಲಲೇಖಕರು : ಶ್ರೀ ಕೆ. ಸಂಪದ್ಗಿರಿ ರಾವ್
ಅನುವಾದಕರು : ಶ್ರೀ ನಾರಾಯಣ ಸಂಗಮ

ಜೈನಧರ್ಮ .... 195 203
ಮೂಲಲೇಖಕರು : ಶ್ರೀ ಟಿ.ಜಿ. ಕಲಘಟಗಿ
ಅನುವಾದಕರು : ಶ್ರೀ ಹಂಪ. ನಾಗರಾಜಯ್ಯ

ಕರ್ಣಾಟಕದಲ್ಲಿ ಬೌದ್ಧಧರ್ಮ ಮತ್ತು ಅಲ್ಪಸಂಖ್ಯಾತ ಮತಗಳು .... 204 210
ಮೂಲಲೇಖಕರು : ಪ್ರೊ. ಎಸ್.ಕೆ. ರಾಮಚಂದ್ರ ರಾವ್
ಅನುವಾದಕರು : ಡಾ।। ಎಂ. ಚಿದಾನಂದಮೂರ್ತಿ

ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿ .... 211 218
ಮೂಲಲೇಖಕರು : ಡಾ।। ಬಿ.ಆರ್. ಗೋಪಾಲ್
ಅನುವಾದಕರು : ಶ್ರೀ ಎಸ್.ಆರ್. ಮಳಗಿ

ಕನ್ನಡ (ಆದಿಕಾಲ) .... 219 226
ಮೂಲಲೇಖಕರು : ಶ್ರೀ ಎಂ. ಕೇಶವ ಭಟ್
ಅನುವಾದಕರು : ಶ್ರೀ ಕೆ. ಮರುಳ ಸಿದ್ದಪ್ಪ

ಸಂಸ್ಕೃತ (ಪ್ರಾಚೀನ ಕಾಲ) .... 227 232
ಮೂಲಲೇಖಕರು ಮತ್ತು ಅನುವಾದಕರು : ಡಾ।। ಕೆ. ಕೃಷ್ಣಮೂರ್ತಿ

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ .... 233 236
ಮೂಲಲೇಖಕರು : ಡಾ।। ಎಂ. ಶೇಷಾದ್ರಿ
ಅನುವಾದಕರು : ಶ್ರೀ ಬಿ. ರಾಮಸ್ವಾಮಿ

## ಅಧ್ಯಾಯ 7

ರಾಜಕೀಯ ಇತಿಹಾಸ
ಬಾದಾಮಿಯ ಚಾಲುಕ್ಯರು .... 237 256
ಮೂಲಲೇಖಕರು : ಡಾ। ಎಸ್. ಸಿ. ನಂದಿಮಠ
ಅನುವಾದಕರು : ಶ್ರೀ ನಾರಾಯಣ ಸಂಗಮ

ಮತ, ಸಮಾಜ ಮತ್ತು ಸಂಸ್ಕೃತಿ (ಮತ ಮತ್ತು ತತ್ವ) 257 260
ಮೂಲಲೇಖಕರು : ಪ್ರೊ. ಎಸ್. ರಾಘವಾಚಾರ್
ಅನುವಾದಕರು : ಡಾ।। ಎಂ.ಎನ್. ನರಸಿಂಹನ್

ಸಾಮಾಜಿಕ ಜೀವನ ಮತ್ತು ಆರ್ಥಿಕ ಪರಿಸ್ಥಿತಿ (ಬಾದಾಮಿ ಚಾಲುಕ್ಯರ ಕಾಲ) 261 273
ಮೂಲಲೇಖಕರು : ಶ್ರೀಮತಿ ಜ್ಯೋತ್ಸ್ನಾ ಬುರುಡೆ
ಅನುವಾದಕರು : ಶ್ರೀ ಎಸ್.ಆರ್. ಮಳಗಿ

| ವಿಷಯುಗಳು ಮತ್ತು ಲೇಖಕರು | | ಪುಟಗಳು |
|---|---|---|
| ಸಂಸ್ಕೃತ—ಬಾದಾಮಿ ಚಾಲುಕ್ಯರ ಕಾಲ | | 274 278 |
| ಮೂಲಲೇಖಕರು : ಡಾ|| ಕೆ. ಕೃಷ್ಣಮೂರ್ತಿ<br>ಅನುವಾದಕರು : ಶ್ರೀ ಬಿ. ರಾಮಸ್ವಾಮಿ | | |

## ಅಧ್ಯಾಯ 8

| | | |
|---|---|---|
| ಮಳಖೇಡದ ರಾಷ್ಟ್ರಕೂಟರ ರಾಜಕೀಯ ಚರಿತ್ರೆ | | 279 289 |
| ಮೂಲಲೇಖಕರು : ಡಾ|| ಪಿ.ಬಿ. ದೇಸಾಯಿ<br>ಅನುವಾದಕರು : ಶ್ರೀ ಬಿ.ಕೆ.ಸಿ. ಅಯ್ಯಂಗಾರ್ | | |
| ಧರ್ಮ ಮತ್ತು ಸಂಸ್ಕೃತಿ, ಧರ್ಮ ಮತ್ತು ತತ್ವಶಾಸ್ತ್ರ—ರಾಷ್ಟ್ರಕೂಟರ ಕಾಲ | | 290 295 |
| ಮೂಲಲೇಖಕರು : ಶ್ರೀ ಎಸ್.ಎಸ್. ರಾಘವಾಚಾರ್<br>ಅನುವಾದಕರು : ಶ್ರೀ ಕೆ. ಮರುಳ ಸಿದ್ದಪ್ಪ | | |
| ರಾಷ್ಟ್ರಕೂಟಕಾಲದ ಕನ್ನಡ ಸಾಹಿತ್ಯ | .... | 296 308 |
| ಮೂಲಲೇಖಕರು ಮತ್ತು ಅನುವಾದಕರು : ಶ್ರೀ ವಿ. ಸೀತಾರಾಮಯ್ಯ | | |
| ಸಂಸ್ಕೃತ—ರಾಷ್ಟ್ರಕೂಟರ ಕಾಲ | .... | 309 313 |
| ಮೂಲಲೇಖಕರು ಮತ್ತು ಅನುವಾದಕರು : ಡಾ|| ಕೆ. ಕೃಷ್ಣಮೂರ್ತಿ | | |
| ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ—ರಾಷ್ಟ್ರಕೂಟರ ಕಾಲ | .... | 314 318 |
| ಮೂಲಲೇಖಕರು : ಡಾ|| ಎಂ. ಶೇಷಾದ್ರಿ<br>ಅನುವಾದಕರು : ಶ್ರೀ ಬಿ. ರಾಮಸ್ವಾಮಿ | | |

## ಅಧ್ಯಾಯ 9

| | | |
|---|---|---|
| ರಾಜಕೀಯ ಚರಿತ್ರೆ<br>ಕಲ್ಯಾಣದ ಚಾಲುಕ್ಯರು | ... | 319 345 |
| ಮೂಲಲೇಖಕರು: ಡಾ|| ಎಸ್. ಸಿ. ನಂದಿಮಠ<br>ಅನುವಾದಕರು : ಶ್ರೀ ಎಸ್. ಆರ್. ಮಳಗಿ | | |
| ಕಲ್ಯಾಣದ ಕಲಚೂರಿಗಳು | ... | 346 353 |
| ಮೂಲಲೇಖಕರು : ಡಾ|| ಎಸ್. ಸಿ. ನಂದಿಮಠ<br>ಅನುವಾದಕರು : ಡಾ|| ಕೆ. ವೀರತಪ್ಪ | | |
| ಸಣ್ಣಪುಟ್ಟ ರಾಜವಂಶಗಳು : ಗೋವೆಯ ಕದಂಬರು, ಎಲ್ಬುರ್ಗದ ಸಿಂದರು, ಗುತ್ತಲಿನ ಗುತ್ತರು, ಶಿಲಾಹಾರರು | ... | 354 374 |
| ಮೂಲಲೇಖಕರು : ಶ್ರೀ ಆರ್.ಎಸ್. ಗುರವ್<br>ಅನುವಾದಕರು : ಶ್ರೀ ಎಂ.ಎಚ್. ಕೃಷ್ಣಯ್ಯ | | |

| ವಿಷಯಗಳು ಮತ್ತು ಲೇಖಕರು | | ಪುಟಗಳು | |
|---|---|---|---|
| ಕರ್ನಾಟಕದಲ್ಲಿ ಚೋಳರು | .... | 375 | 381 |
| ಮೂಲಲೇಖಕರು : ಡಾ।। ಎಸ್. ಶ್ರೀಕಂಠಶಾಸ್ತ್ರಿ | | | |
| ಅನುವಾದಕರು : ಡಾ।। ಸೂರ್ಯನಾಥ ಕಾಮತ್ | | | |
| ಆಳುಪರು, ಸೇನವರರು | ... | 382 | 386 |
| ಮೂಲಲೇಖಕರು : ಡಾ।। ಸೂರ್ಯನಾಥ ಕಾಮತ್ | | | |
| ಮಹಾಮಂಡಲೇಶ್ವರರು | ... | | 387 |
| ಮೂಲಲೇಖಕರು : ಶ್ರೀ ಆರ್. ಎನ್. ಗುರವ್ | | | |
| ಅನುವಾದಕರು : ಡಾ।। ಸೂರ್ಯನಾಥ ಕಾಮತ್ | | | |
| ಧರ್ಮ, ಸಮಾಜ ಮತ್ತು ಸಂಸ್ಕೃತಿ : ಧರ್ಮ ಮತ್ತು ತತ್ವಜ್ಞಾನ– ಕಲ್ಯಾಣ ಚಾಲುಕ್ಯರ ಕಾಲ | .... | 388 | 391 |
| ಮೂಲಲೇಖಕರು : ಶ್ರೀ ಎಸ್. ಎಸ್. ರಾಘವಾಚಾರ್ | | | |
| ಅನುವಾದಕರು : ಶ್ರೀ ಎಲ್. ಗುಂಡಪ್ಪ | | | |
| ಸಾಮಾಜಿಕ ಜೀವನ ಮತ್ತು ಆರ್ಥಿಕ ಪರಿಸ್ಥಿತಿ | .... | 392 | 406 |
| ಮೂಲಲೇಖಕರು : ಡಾ।। ಎಸ್. ಸಿ. ನಂದಿಮಠ | | | |
| ಅನುವಾದಕರು : ಶ್ರೀ ಸಿ. ಮಹಾದೇವಪ್ಪ | | | |
| ಶಿಕ್ಷಣ ಮತ್ತು ವಿಜ್ಞಾನ | .... | 407 | 432 |
| ಮೂಲಲೇಖಕರು : ಡಾ।। ಜಿ. ಎಸ್. ದೀಕ್ಷಿತ್ | | | |
| ಅನುವಾದಕರು : ಶ್ರೀ ಎಂ. ಕೆ. ರಾಜಗೋಪಾಲ್ | | | |
| ಕಲ್ಯಾಣ ಚಾಲುಕ್ಯರ ಯುಗ | .... | 433 | 445 |
| ಮೂಲಲೇಖಕರು ಮತ್ತು ಅನುವಾದಕರು : ಡಾ।। ಎಂ. ಚಿದಾನಂದ ಮೂರ್ತಿ | | | |
| ಸಂಸ್ಕೃತ–ಕಲ್ಯಾಣ ಚಾಲುಕ್ಯರ ಕಾಲ | .... | 446 | 453 |
| ಮೂಲಲೇಖಕರು : ಶ್ರೀ ಕೆ. ಟಿ. ಪಾಂಡುರಂಗಿ | | | |
| ಅನುವಾದಕರು : ಶ್ರೀ ಎಂ. ಎ. ಲಕ್ಷ್ಮೀತಾತಾಚಾರ್ | | | |
| ಚಾಲುಕ್ಯ ವಾಸ್ತುಶಿಲ್ಪ, ಚಿತ್ರಕಲೆ (ಪ್ರಾಚೀನ ಕಾಲ) | .... | 454 | 465 |
| ಮೂಲಲೇಖಕರು : ಡಾ।। ಎಂ. ಶೇಷಾದ್ರಿ | | | |
| ಅನುವಾದಕರು : ಶ್ರೀ ಪಿ.ವಿ. ನಾರಾಯಣ | | | |

## ಅಧ್ಯಾಯ 10

| | | | |
|---|---|---|---|
| ರಾಜಕೀಯ ಇತಿಹಾಸ | | | |
| ದೋರ ಸಮುದ್ರದ ಹೊಯ್ಸಳರು | .... | 466 | 477 |
| ಮೂಲಲೇಖಕರು : ಡಾ।। ಬಿ.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ | | | |
| ಅನುವಾದಕರು : ಶ್ರೀ ಜಿ. ವಿ. ನಾರಾಯಣ ಮೂರ್ತಿ | | | |

| ವಿಷಯಗಳು ಮತ್ತು ಲೇಖಕರು | | ಪುಟಗಳು |
|---|---|---|
| ದೇವಗಿರಿಯ ಯಾದವರು<br>ಮೂಲಲೇಖಕರು : ಶ್ರೀ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್<br>ಅನುವಾದಕರು : ಶ್ರೀ ಜಿ.ವಿ. ನಾರಾಯಣ ಮೂರ್ತಿ | .... | 478 484 |
| ಕೆಲವು ಸಣ್ಣಪುಟ್ಟ ಅರಸುಮನೆತನಗಳು<br>ಮೂಲಲೇಖಕರು : ಡಾ|| ಎಂ.ವಿ. ಕೃಷ್ಣರಾವ್<br>ಅನುವಾದಕರು : ಶ್ರೀ ಕೊರಟಿ ಶ್ರೀನಿವಾಸ ರಾವ್ | .... | 485 490 |
| ಧರ್ಮ, ಸಮಾಜ ಮತ್ತು ಸಂಸ್ಕೃತಿ : ಶ್ರೀ ಶಂಕರರ ಅದ್ವೈತ ವೇದಾಂತ<br>ಮೂಲಲೇಖಕರು : ಡಾ|| ಪಿ. ನಾಗರಾಜ ರಾವ್<br>ಅನುವಾದಕರು : ಸ್ವಾಮಿ ತದ್ರೂಪಾನಂದ | .... | 491 496 |
| ಶ್ರೀ ವೈಷ್ಣವ ಮತ<br>ಮೂಲಲೇಖಕರು : ಶ್ರೀ ಎಂ. ಯಾಮುನಾಚಾರ್ಯ<br>ಅನುವಾದಕರು : ಡಾ| ಎಂ.ಎನ್. ನರಸಿಂಹನ್ | .... | 497 508 |
| ದ್ವೈತ ವೇದಾಂತ<br>ಮೂಲಲೇಖಕರು : ಶ್ರೀ ಎಚ್.ಎನ್ ರಾಘವೇಂದ್ರಚಾರ್<br>ಅನುವಾದಕರು : ಶ್ರೀ ಎಂ.ಎ. ಲಕ್ಷ್ಮೀತಾತಾಚಾರ್ | ... | 509 523 |
| ಶೈವ ಮತ್ತು ವೀರಶೈವಧರ್ಮಗಳು<br>ಮೂಲಲೇಖಕರು : ಡಾ|| ಎ.ಎಲ್. ಶಿವರುದ್ರಪ್ಪ<br>ಅನುವಾದಕರು : ಶ್ರೀ ಸಿ. ಮಹಾದೇವಪ್ಪ | ... | 524 526 |
| ವೀರಶೈವಧರ್ಮ<br>ಮೂಲಲೇಖಕರು ಮತ್ತು ಅನುವಾದಕರು : ಡಾ|| ಜಿ. ರುದ್ರಪ್ಪ | ... | 527 533 |
| ಜೈನ ಧರ್ಮ<br>ಮೂಲಲೇಖಕರು ಮತ್ತು ಅನುವಾದಕರು : ಶ್ರೀ ಕೆ.ಎಸ್. ಧರಣೇಂದ್ರಯ್ಯ | ... | 534 539 |
| ಸಾಮಾಜಿಕ ಜೀವನ ಹಾಗೂ ಆರ್ಥಿಕ ಪರಿಸ್ಥಿತಿ<br>ಮೂಲಲೇಖಕರು : ಶ್ರೀ ಡಿ.ಎಚ್. ಕೊಪ್ಪರ್<br>ಅನುವಾದಕರು : ಶ್ರೀ ಎಚ್.ವಿ. ಶ್ರೀನಿವಾಸ ಶರ್ಮ | ... | 540 546 |
| ಶಿಕ್ಷಣ ಮತ್ತು ವಿಜ್ಞಾನ<br>ಮೂಲಲೇಖಕರು : ಶ್ರೀ ಡಿ.ಎಚ್. ಕೊಪ್ಪರ್<br>ಅನುವಾದಕರು : ಎಚ್.ವಿ. ಶ್ರೀನಿವಾಸ ಶರ್ಮ | ... | 547 550 |
| ಕನ್ನಡ–ಹೊಯ್ಸಳರ ಯುಗ<br>ಮೂಲಲೇಖಕರು : ಶ್ರೀ ಎಸ್.ಎಸ್. ಮಾಳವಾಡ<br>ಅನುವಾದಕರು : ಡಾ|| ಜಿ.ಎಸ್. ಶಿವರುದ್ರಪ್ಪ | ... | 551 557 |

| ವಿಷಯಗಳು ಮತ್ತು ಲೇಖಕರು | | ಪುಟಗಳು |
|---|---|---|
| ಸಂಸ್ಕೃತ-ಹೊಯ್ಸಳರ ಕಾಲ | ... | 558 562 |
| ಮೂಲಲೇಖಕರು : ಶ್ರೀ ಕೆ. ಟಿ. ಪಾಂಡುರಂಗಿ | | |
| ಅನುವಾದಕರು : ಶ್ರೀ ಎಲ್. ಗುಂಡಪ್ಪ | | |
| ಪ್ರಾಕೃತ (ಆದಿಕಾಲ) | ... | 563 568 |
| ಮೂಲಲೇಖಕರು : ಡಾ।। ಎ. ಎನ್. ಉಪಾಧ್ಯೆ | | |
| ಅನುವಾದಕರು : ಶ್ರೀ ಎಲ್. ಗುಂಡಪ್ಪ | | |
| ವಾಸ್ತು ಮತ್ತು ಶಿಲ್ಪ–ಹೊಯ್ಸಳರ ಕಾಲ | ... | 569 574 |
| ಮೂಲಲೇಖಕರು : ಡಾ।। ಎಂ. ಶೇಷಾದ್ರಿ | | |
| ಅನುವಾದಕರು : ಶ್ರೀ ನಾರಾಯಣ ಸಂಗಮ | | |
| ಲಲಿತ ಕಲೆಗಳು-ಹೊಯ್ಸಳರ ಕಾಲ | ... | 575 578 |
| ಮೂಲಲೇಖಕರು : ಶ್ರೀ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ | | |
| ಅನುವಾದಕರು : ಶ್ರೀ ನಾರಾಯಣ ಸಂಗಮ | | |
| ಸಂಗೀತ (ಪ್ರಾಚೀನಕಾಲ) | ... | 579 584 |
| ಮೂಲಲೇಖಕರು : ಶ್ರೀ ಆರ್. ಸತ್ಯನಾರಾಯಣ | | |
| ಅನುವಾದಕರು : ಶ್ರೀಮತಿ ಟಿ. ಆರ್. ನಾಗರತ್ನಮ್ಮ | | |
| ಅನುಬಂಧ 1–ಆಡಳಿತ ಸಂಸ್ಥೆಗಳು (ಆದಿಕಾಲ) | ... | 585 623 |
| ಮೂಲಲೇಖಕರು ಮತ್ತು ಅನುವಾದಕರು : ಡಾ।। ಎಂ. ವಿ. ಕೃಷ್ಣರಾವ್ | | |
| ಅನುಬಂಧ 2–ಕರ್ಣಾಟಕದಲ್ಲಿ ಶಾಕ್ತ ಪೂಜಾಪದ್ಧತಿ | ... | 624 639 |
| ಮೂಲ ಲೇಖಕರು : ಶ್ರೀ ಕೆ. ಗುರುದತ್ | | |
| ಅನುವಾದಕರು : ಶ್ರೀ ಸಿ. ಮಹಾದೇವಪ್ಪ | | |
| ಚಿತ್ರಗಳು | | ಪುಟ 640-641 ಇವುಗಳ ನಡುವೆ. |
| ಆಧಾರ ಗ್ರಂಥಗಳು | ... | 641 650 |
| ಗ್ರಂಥ ವಿವರ ಸೂಚಿ | ... | 651 671 |

# ರೇಖಾ ಚಿತ್ರಗಳು

| ಚಿತ್ರಸಂಖ್ಯೆ | ವಿವರ | ಪುಟ |
|---|---|---|
| 1 | ಭೂಸ್ತರಗಳ ವಿಭಾಗ ಕಾಲಮಾನಗಳ ಅಂದಾಜು ಅಳತೆ ಪಟ್ಟಿ | 4 |
| 2 | ಭೂ ಕಾಲಚಕ್ರ | 5 |
| | ಭೂಪಟಗಳು | |
| 3 | ಭಾರತ ಪರ್ಯಾಯ ದ್ವೀಪ | 8 |
| 4 | ಕರ್ಣಾಟಕದ ಸ್ಥಾನವನ್ನು ಸೂಚಿಸುವ ಭಾರತ ಪರ್ಯಾಯದ್ವೀಪದ ಭೂವೈಜ್ಞಾನಿಕ ಭೂಪಟ | 9 |
| 5 | ಕರ್ಣಾಟಕದ ಭೂವೈಜ್ಞಾನಿಕ ಭೂಪಟ | 15 |
| 6 | ಪ್ರಾಗೈತಿಹಾಸಿಕ ಕರ್ಣಾಟಕ | 106 |
| 7 | ಕರ್ಣಾಟಕದಲ್ಲಿ ಮೌರ್ಯ ಶಾತವಾಹನರ ನೆಲೆಗಳು | 118 |
| 8 | ಗಂಗರು | 138 |
| 9 | ಬಾದಾಮಿಯ ಚಾಲುಕ್ಯರ ಸಾಮ್ರಾಜ್ಯ | 239 |
| 10 | ರಾಷ್ಟ್ರಕೂಟರ ಚಕ್ರಾಧಿಪತ್ಯ | 285 |
| 11 | ಹೊಯ್ಸಳರು | 473 |


## ಚಿತ್ರಗಳ ವಿವರ (ಪುಟ 640–641 ರ ನಡುವೆ)

1 ನವಶಿಲಾಯುಗದ ಕೊಡಲಿಗಳು
2 ಘಟಪ್ರಭಾ ನದಿಯ ಕಲ್ಲುಹರಳ ತಳದ ಸಾಮಾನ್ಯ ನೋಟ
3 ಗುಲ್ಬರ್ಗ ಜಿಲ್ಲೆಯ ಸನ್ನತಿಯ ಬೌದ್ಧ ದಿಬ್ಬ
4 ಘಟಪ್ರಭಾ ನದಿಯ ಗುಂಡುಕಲ್ಲಿನ ತಳ
5 ಉತ್ಖನನದ ಸಾಮಾನ್ಯ ನೋಟ (ಟಿ. ನರಸೀಪುರ 22)
6 ಅಶೋಕನ ಶಿಲಾಶಾಸನ (ಬ್ರಹ್ಮಗಿರಿ)
7 ಬನವಾಸಿಯ ದಿಬ್ಬ
8 ಗೇರಸೊಪ್ಪೆ ಜಲಪಾತ
9 ಸನ್ನತಿಯ ಆಯಕಸ್ತಂಭ-ಕುಟುಂಬದೃಶ್ಯಸಹಿತ
10 ಬುದ್ಧನ ಮೂಲಸ್ಥಾನ, ಸನ್ನತಿಯ ಸ್ತೂಪದ ಕಲ್ಲುಮುಚ್ಚಳ.
11 ತಾಳಗುಂದದ ಶಿಲಾಸ್ತಂಭ ಶಾಸನ
12 ಹಲ್ಮಿಡಿ ಶಾಸನ
13 ಮಹಾಕೂಟೇಶ್ವರದ ಚಾಲುಕ್ಯರ ಅರ್ಧನಾರೀಶ್ವರ
14 ಪಟ್ಟದ ಕಲ್ಲಿನ ಪಾಪನಾಥ ದೇವಾಲಯ
15 ಹರಿಹರದ ಹರಿಹರೇಶ್ವರ ದೇವಾಲಯ

| ಚಿತ್ರಸಂಖ್ಯೆ | ವಿವರ | ಪುಟ |
|---|---|---|
| 16 | ಐಹೊಳೆಯ ದುರ್ಗಾದೇವಾಲಯ | |
| 17 | ಬಾದಾಮಿಯ ನಾಗ | |
| 18 | ಲಡ್ಖನ್ ದೇವಾಲಯ (ಬಿಜಾಪುರ ಜಿಲ್ಲೆಯ ಐಹೊಳೆ) | |
| 19 | ಕುಳಿತ ವಿಷ್ಣು (ಬಾದಾಮಿ ಮೂರನೆ ಗುಹೆ) | |
| 20 | ತ್ರಿವಿಕ್ರಮ (ಬಾದಾಮಿ ಮೂರನೆ ಗುಹೆ) | |
| 21 | ಬಾದಾಮಿ ಗುಹೆಯ ಒಂದು ತೈಲ ಚಿತ್ರ | |
| 22 | ಪಟ್ಟದ ಕಲ್ಲಿನ ಮಲ್ಲಿಕಾರ್ಜುನ ದೇವಾಲಯ | |
| 23 | ಪಟ್ಟದ ಕಲ್ಲಿನ ಲೋಕಮಹಾದೇವಿ ಅಥವಾ ವಿರೂಪಾಕ್ಷ ದೇವಾಲಯ | |
| 24 | ಬಾದಾಮಿಯ ಹದಿನೆಂಟು ತೋಳುಗಳ ನಟರಾಜ | |
| 25 | ತುಮಕೂರು ಜಿಲ್ಲೆಯ ಅರಳಗುಪ್ಪೆಯ ಮೇಲ್ಛಾವಣಿಯ ಶಿವತಾಂಡವ | |
| 26 | ಶ್ರವಣಬೆಳಗೊಳದ ಚಾವುಂಡರಾಯ ಬಸ್ತಿ | |
| 27 | ಲಕುಲೀಶ | |
| 28 | ಶ್ರವಣಬೆಳಗೊಳದ ಗೊಮ್ಮಟೇಶ್ವರ ಬೃಹನ್ಮೂರ್ತಿ | |
| 29 | 'ಶ್ರೀ ಕವಿರತ್ನ' ಎಂಬ ಹಸ್ತಾಕ್ಷರ (ಶ್ರವಣಬೆಳಗೊಳ) | |
| 30 | ಪಶ್ಚಿಮ ಗಂಗರ ಚಿನ್ನದ ನಾಣ್ಯಗಳು | |
| 31 | ಪಂಚಕೂಟ ಬಸದಿ (ಹಾಸನ ಜಿಲ್ಲೆಯ ಕಂಬದಹಳ್ಳಿ) | |
| 32 | ಗುಳ್ಳಕಾಯಜ್ಜಿ (ಶ್ರವಣ ಬೆಳಗೊಳ) | |
| 33 | ಗಂಗ-ರಾಷ್ಟ್ರಕೂಟ ಯುದ್ಧವನ್ನು ತೋರಿಸುವ ಹಿರೇಗುಂಡಗಲ್ಲಿನ ಒಂದು ವೀರಗಲ್ಲು | |
| 34 | ಹಿರೇ ಮಧುರೆಯ ಒಂದು ವೀರಗಲ್ಲು | |
| 35 | ಶ್ರವಣಬೆಳಗೊಳ ಗೋಮಟೇಶ್ವರನ ಮುಖದ ಸಮೀಪದೃಶ್ಯ | |
| 36 | ಶ್ರವಣ ಬೆಳಗೊಳದ ಜೈನ ಮಠದಲ್ಲಿರುವ ಗಂಗರ ಕಾಲದ ಕೊರೆದ ಲೋಹ ಪ್ರತಿಮೆ | |
| 37 | ನೀತಿಮಾರ್ಗನ ಮರಣಾವಸ್ಥೆಯ ಕೆತ್ತನೆ (ದೊಡ್ಡಹುಂಡಿ) | |
| 38 | ಕಪ್ಪೆ ಅರಭಟ್ಟನ ಶಾಸನ (ಬಾದಾಮಿ) | |
| 39 | ಶ್ರವಣಬೆಳಗೊಳದ ಭಂಡಾರಿ ಬಸದಿಯ ಇಂದ್ರನೃತ್ಯ | |
| 40 | ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಸಾಮಾನ್ಯ ದೃಶ್ಯ | |
| 41 | ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಭಿತ್ತಿವಿವರ ಮತ್ತು ಶಿಲ್ಪಾಲಂಕಾರದ ಪಟ್ಟಿಗಳು | |
| 42 | ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಇನ್ನೊಂದು ಭಿತ್ತಿವಿವರ | |
| 43 | ಯಕ್ಷಗಾನ ಪ್ರಸಂಗ (ಹಳೇಬೀಡು) | |
| 44 | ಶುಕಹಸ್ತೆ ಶಿಲಾಬಾಲಿಕೆ | |
| 45 | ದರ್ಪಣಾವಲೋಕನೆ | |
| 46 | ನೃತ್ಯ ಭಂಗಿಯ ಶಿಲಾಬಾಲಿಕೆ | |
| 47 | ಪ್ರಸಾಧನಾರತೆ | |
| 48 | ಬೇಲೂರು ಚೆನ್ನಕೇಶವ ದೇವಾಲಯದ ನವರಂಗದಲ್ಲಿರುವ ಮದನ ಶಿಲಾಬಾಲಿಕೆ | |
| 49 | ಬೇಲೂರು ಚೆನ್ನಕೇಶವ ದೇವಾಲಯದ ನವರಂಗದ ಸ್ತಂಭಗಳು | |

ರೇಖಾ ಚಿತ್ರಗಳು


| ಚಿತ್ರಸಂಖ್ಯೆ | ವಿವರ | ಪುಟ |
|---|---|---|
| 50 | ಬೇಲೂರು ಚೆನ್ನಕೇಶವ ದೇವಾಲಯದ ಮಧ್ಯದ ಮೇಲ್ಚಾವಣಿ— ನರಸಿಂಹನ ಕಿರಿಯ ವಿಗ್ರಹದೊಡನೆ | |
| 51 | ಸೋಮನಾಥಪುರದ ಕೇಶವ ದೇವಾಲಯ | |
| 52 | ಸೋಮನಾಥಪುರ ಕೇಶವ ದೇವಾಲಯದ ಹೊಯ್ಸಳ ಶಾಸನಶಿಲೆ | |
| 53 | ಶಾಂತಿನಾಥ ಜೈನ ಬಸದಿಯ ಭಿತ್ತಿವಿವರ (ಹಾಸನ ಜಿಲ್ಲೆಯ ಜಿನನಾಥಪುರ) | |

# ಕರ್ಣಾಟಕದ ಪರಂಪರೆ

ಸಂಪುಟ 1

## ಆದಿಕಾಲ

# ಅಧ್ಯಾಯ 1

## ಕರ್ನಾಟಕದ ಭೂವಿಕಾಸ

## (Geological Evolution of Karnataka)

ಒಂದು ದೇಶದ ಚರಿತ್ರೆಯು ಬಹುವಾಗಿ ಅದರ ಭೂಗೋಳದಿಂದ ನಿರ್ಧರವಾಗುತ್ತದೆಂದು ಆಗಾಗ್ಗೆ ಹೇಳಲಾಗಿದೆ; ಆದರೆ ಈ ಭೂಗೋಳವು ತನ್ನದೇ ಕ್ರಮದಲ್ಲಿ ಆ ಪ್ರದೇಶದ ಭೂಚರಿತ್ರೆಯ ವ್ಯಕ್ತತೆ ಎಂಬುದು ಅನೇಕ ಬಾರಿ ಅರಿವಿಗೆ ಬಂದಿರುವುದಿಲ್ಲ. ಆದುದರಿಂದ '**ಕರ್ನಾಟಕದ ಪರಂಪರೆ**' ಎಂಬ ಈ ಸಂಪುಟವು ಆ ಪ್ರದೇಶದ ಭೂವಿಕಾಸದಿಂದ ಪ್ರಾರಂಭವಾಗುವುದು ಸೂಕ್ತವಾಗಿದೆ. ಅಲ್ಲದೆ ಇದು ಅಗತ್ಯವಾದ ಹಿನ್ನೆಲೆಯೂ ಆಗುತ್ತದೆ.

ಕರ್ನಾಟಕವನ್ನು ಮುಖ್ಯವಾಗಿ ಕನ್ನಡ ಮಾತನಾಡುವ ಜನರು ವಾಸಮಾಡುವ, ದಕ್ಷಿಣ ಭಾರತದಲ್ಲಿರುವ ಪ್ರದೇಶವೆಂದು ಸ್ಥೂಲವಾಗಿ ವರ್ಣಿಸಬಹುದು. ಅದು ದಕ್ಷಿಣ ಭಾರತದ ಪಶ್ಚಿಮಾರ್ಧದ ಮಧ್ಯದಲ್ಲಿ ಪ್ರಮುಖ ಭಾಗವನ್ನು ಆಕ್ರಮಿಸಿದೆ. ಅದರ ಒಟ್ಟು ವಿಸ್ತಾರ 7400 ಚ. ಮೈಲಿಗಳು. ಅದರ ಉತ್ತರ ಭಾಗದಲ್ಲಿ ಮಹಾರಾಷ್ಟ್ರ ಪ್ರಾಂತ್ಯವೂ, ಪೂರ್ವಭಾಗದಲ್ಲಿ ಆಂಧ್ರ ಪ್ರದೇಶವೂ, ದಕ್ಷಿಣದಲ್ಲಿ ಕೇರಳವೂ ಹರಡಿವೆ. ಉತ್ತರದಲ್ಲಿ ಕಾರವಾರದಿಂದ, ದಕ್ಷಿಣದಲ್ಲಿ ಮಂಗಳೂರಿನ ವರೆಗೆ, 350 ಮೈಲಿಗಳ ಉದ್ದ ಹರಡಿರುವ ಅರಬಿಸಮುದ್ರ ತೀರವು, ಅದರ ಪಶ್ಚಿಮ ಮೇರೆಯಾಗಿದೆ. ಭೌಗೋಳಿಕವಾಗಿ ಕರ್ನಾಟಕವು ಸರಾಸರಿ 1800–2000 ಅಡಿಗಳು ಸಮುದ್ರ ಮಟ್ಟದಿಂದ ಎತ್ತರವಾಗಿ ದಖನ್ ಪ್ರಸ್ಥಭೂಮಿಯ ಭಾಗವಾಗಿದೆ. ಆದರೆ ಈ ಪ್ರದೇಶವು ಇಲ್ಲಿನ ಭೂಚರಿತ್ರೆಯಿಂದ ಸೀಮಿತವಾಗಿರುವ ಮತ್ತು ನಿರ್ಧರಿತವಾಗಿರುವ ತನ್ನದೇ ಆದ ಭೌತ ಮತ್ತು ಮೇಲ್ಮೈ ಲಕ್ಷಣಗಳ ರಚನೆಗಳಿಂದ ವೈಶಿಷ್ಟ್ಯವನ್ನು ಪಡೆದಿದೆ.

### ಭೂಚರಿತ್ರೆಯ ಪ್ರಮುಖ ಭಾವನೆಗಳು

ಸಂಗ್ರಹವಾದ ಈ ಮುನ್ನುಡಿಯಿಂದ ಕರ್ನಾಟಕದ ಭೂಚರಿತ್ರೆ ಅಥವಾ ಅದರ 'ಭೂವಿಕಾಸ'ವನ್ನು ಪರಿಶೀಲಿಸಬಹುದು. ಈ ಸಂದರ್ಭದಲ್ಲಿ 'ವಿಕಾಸ' ಎಂಬ ಪದವು ಎರಡು ಭಾವನೆಗಳನ್ನು ನಿರೂಪಿಸುವುದರಿಂದ ವಿಶೇಷ ಅರ್ಥಪೂರಿತವಾಗಿದೆ. (1) ಈ ಪ್ರದೇಶದಿಂದ ಭೂಭಾಗದಲ್ಲಿ ಒಂದಾದ ಮೇಲೊಂದರಂತೆ ಅನೇಕ ಬದಲಾವಣೆಗಳಾಗಿವೆ. ಮತ್ತು (2) ಈ ಅನುಕ್ರಮ ಬದಲಾವಣೆಗಳಾಗಲು ಬಹಳ ಕಾಲಾವಧಿ ಹಿಡಿದಿದೆ. 'ಭೂಚರಿತ್ರೆ' ಯೆಂದು ವರ್ಣಿಸಬಹುದಾದ ಭೂಭಾಗದ ಎಲ್ಲ ವಿಕಾಸವೂ ಭೂಮಿಯ ಹೊರಮೈಯಲ್ಲಿ ಕಾಲಾನುಕಾಲದಲ್ಲಿ ಆಗಿರುವ ಬದಲಾವಣೆಗಳು ಮತ್ತು ಈ ಬದಲಾವಣೆಗಳನ್ನುಂಟುಮಾಡಿರುವ ಕಾರಣಗಳು ಅವಿರತವಾಗಿ ನಡೆಯುತ್ತಿವೆ ಎಂಬ ಮೂಲವಾದ ಮತ್ತು ಚೆನ್ನಾಗಿ ಸ್ಥಾಪಿತವಾದ ವಿಷಯದಿಂದ ಪ್ರಾರಂಭವಾಗುತ್ತದೆ. ಇದರಿಂದ ಭೂಚರಿತ್ರೆಯ

ಯಾವುದೇ ಅಧ್ಯಯನಕ್ಕೂ ನಾವು ಮೊದಲು ಈ ಬದಲಾವಣೆಗಳನ್ನುಂಟುಮಾಡುವ ಭೂವ್ಯಾಪಾರ ಕರ್ತೃಗಳ ಉತ್ಪತ್ತಿ, ಸ್ವಭಾವ ಮತ್ತು ಪ್ರಮಾಣಗಳ ಕೆಲವು ವಿಚಾರಗಳನ್ನೂ ಅದರೊಂದಿಗೆ ಈ ಕರ್ತೃಗಳು ನಡೆಸುತ್ತಿರುವ ಕಾರ್ಯಗತಿಯ ಕಾಲಾವಧಿಯ ನಿರ್ದಿಷ್ಟಭಾವನೆಯನ್ನೂ ತಿಳಿದಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಪ್ರಪ್ರಥಮವಾಗಿ ನಾವು ಪರಿಶೀಲಿಸಬೇಕಾದ ಮುಖ್ಯವಾದ ಪ್ರಶ್ನೆಯೆಂದರೆ ಭೂಮಿಯ ಆಯುಸ್ಸಿಗೆ ಸಂಬಂಧಿಸಿದುದು. ಏಕೆಂದರೆ, ಇದು ನಮಗೆ ಭೂಕಾಲದ ಅಥವಾ ಭೂಚರಿತ್ರೆಯು ಕಳೆದಿರುವ ಕಾಲದ ಅವಧಿಯನ್ನು ಸ್ಪಷ್ಟಪಡಿಸುತ್ತದೆ. ಈ ಸಮಸ್ಯೆಯನ್ನು ಅನೇಕ ದೃಷ್ಟಿಯಿಂದ ವಿಮರ್ಶಿಸಲಾಗಿದೆ ಮತ್ತು ವಿವಿಧ ಮತ್ತು ವ್ಯತ್ಯಾಸವಾದ ನಿರ್ಧಾರಗಳಿಗೆ ಬರಲಾಗಿದೆ. ಈ ದಿಕ್ಕಿನಲ್ಲಿ ನಡೆಸಿರುವ ಸಂಶೋಧನೆಗಳ ವಿವರಗಳಿಗೂ ಅವುಗಳ ಪರಸ್ಪರ ಅರ್ಹತೆ ಮತ್ತು ಅನರ್ಹತೆಗೂ ಪ್ರವೇಶಿಸದೆ, ಈಚೆಗೆ ಕಂಡು ಹಿಡಿದ 'ರೇಡಿಯೋ ಆಕ್ಟೀವ್' ವಿಧಾನದಿಂದ ನಿರ್ಧರಿಸಿರುವ ಭೂಮಿಯ ಆಯುಸ್ಸು ಅತ್ಯಂತ ನಂಬಲರ್ಹವಾದುದೆಂದೂ ಒಪ್ಪಬಹುದಾದುದೆಂದೂ ಈಗ ಪರಿಗಣಿಸಲಾಗಿದೆ. ಈ ಅಧ್ಯಯನಗಳ ಪ್ರಕಾರ ಭೂಮಿಯ ಆಯುಸ್ಸು 300 ಕೋಟಿ ವರ್ಷಗಳು—ನಮಗೆ ಗ್ರಹಿಸುವುದಕ್ಕೂ ಕಷ್ಟವಾದ ಅಗಾಧ ಕಾಲಾವಧಿಯಿದು. ಅಂದರೆ ಇದು ಭೂಚರಿತ್ರೆಯ ಕಾಲಾವಧಿಯೆಂದಾಯಿತು. ಈ ಅಗಾಧ ಕಾಲಾವಧಿಯಲ್ಲಿ ನಡೆದಿರುವ ಪ್ರತಿಯೊಂದು ಬದಲಾವಣೆಯ ಸ್ವಭಾವವನ್ನೂ ಅನುಕ್ರಮವನ್ನೂ ಕಂಡುಹಿಡಿಯುವುದು ಮತ್ತು ಭೂಮಿಯ ಚರಿತ್ರೆಯನ್ನೂ ಭೂಮಿಯ ವಿಕಾಸವನ್ನೂ ಪುನಾ ರಚಿಸುವುದು ಭೂವಿಜ್ಞಾನಿಗಳ ಸಮಸ್ಯೆಯಾಗಿದೆ.

## ಚಾರಿತ್ರಿಕ ಭೂವಿಜ್ಞಾನದ ಮೂಲ ನಿಯಮಗಳು

ಪ್ರಾರಂಭದಲ್ಲಿಯೇ ಏಳುವ ಮೂಲ ಪ್ರಶ್ನೆಯೆಂದರೆ, ಹೇಗೆ ಮತ್ತು ಯಾವ ಆಧಾರದ ಮೇಲೆ ಭೂವಿಜ್ಞಾನಿಯು ಈ ಸಮಸ್ಯೆಯನ್ನು ಎದುರಿಸುತ್ತಾನೆ ? ಹಿಂದಿನ ಭೂವಿಜ್ಞಾನಿಗಳು ಭೂಮಿಯ ಪುರಾತನ ಚರಿತ್ರೆಯನ್ನು ರೂಪಿಸಬೇಕಾದರೆ ಭೂಮೇಲ್ಪದರದ ಶಿಲಾಸಮೂಹಗಳನ್ನು ಪರಿಶೀಲಿಸಬೇಕೆಂಬುದನ್ನು ಬೇಗ ಅರಿತುಕೊಂಡರು. ಈ ಶಿಲೆಗಳಲ್ಲಿ ಭೂಮಿಯು ತನ್ನ 'ಆತ್ಮಕಥೆ' ಯನ್ನೇ ಬರೆದಿದೆಯೆಂಬುದು ವಿಶದವಾಗಿದೆ ; ಭೂವಿಜ್ಞಾನಿಯು ಮಾಡಬೇಕಾದುದೇನೆಂದರೆ ಅದರಲ್ಲಿ ಬರೆದಿರುವ 'ಭಾಷೆ' ಯನ್ನು ಕಲಿಯುವುದು ಮತ್ತು ವಿವರಗಳನ್ನು ತಿಳಿಯುವುದು. ಇದರಿಂದ ಭೂಮಿಯ ಚರಿತ್ರೆಯನ್ನು ರಚಿಸಬೇಕಾದರೆ ಮೊತ್ತಮೊದಲು ಭೂಮಿಯ ಮೇಲ್ಭಾಗದಲ್ಲಿರುವ ಎಲ್ಲ ಶಿಲೆಗಳನ್ನೂ ಅವುಗಳ ಸ್ವಭಾವ, ಜೋಡಣೆ ಮತ್ತು ಪರಸ್ಪರ ಸಂಬಂಧಗಳನ್ನೂ ವಿಶೇಷ ದೃಷ್ಟಿಯಿಂದ ಪರಿಶೀಲಿಸಬೇಕು ಎಂಬುದು ಮನದಟ್ಟಾಯಿತು.

ಈ ಶಿಲೆಗಳನ್ನು ಸ್ಥೂಲವಾಗಿ ಎರಡು ಮುಖ್ಯ ವರ್ಗಗಳಾಗಿ ವಿಭಾಗಿಸಬಹುದು : (1) ಅಗ್ನಿಶಿಲೆಗಳು ಮತ್ತು (2) ಜಲಜಶಿಲೆಗಳು. ಅಗ್ನಿಶಿಲೆಗಳು ಶಿಲಾದ್ರವವು ಭೂಮೇಲ್ಪದರದೊಳಗೆ ಆಳದಲ್ಲಿಯಾಗಲೀ ಲಾವಾ ಅಥವಾ ಶಿಲಾರಸವೆನಿಸಿಕೊಂಡು ಭೂಮಿಯ ಮೇಲ್ಭಾಗಕ್ಕೆ ಹೊರಹೊಮ್ಮಿಯಾಗಲೀ, ಆರಿ ಘನಿಸುವುದರಿಂದ ರೂಪುಗೊಂಡವು. ಆದರೆ ಜಲಜ ಶಿಲೆಗಳು, ಅವುಗಳ ಹೆಸರೇ ಸೂಚಿಸುವಂತೆ ಮರಳು, ಮಣ್ಣು ಮತ್ತು ಧೂಳು ನೀರಿನ ತಳದಲ್ಲಿ ಸಂಚಯನವಾಗಿರುವುದರಿಂದಾದವು. ಎಲ್ಲೆಲ್ಲೂ ಇರುವ ಗ್ರಾನೈಟ್ ಶಿಲೆ, ಅಗ್ನಿಶಿಲೆಗೊಂದು ಉದಾಹರಣೆ ; ಸಾಮಾನ್ಯವಾಗಿರುವ ಮರಳುಶಿಲೆ ಅಥವಾ ಸ್ಯಾಂಡ್‌ಸ್ಟೋನ್ ಜಲಜ ಶಿಲಾವರ್ಗಕ್ಕೆ ಸೇರಿದ ಒಂದು ಮಾದರಿ ಶಿಲೆ. ಈ ಎರಡು ಶಿಲಾವರ್ಗಗಳಲ್ಲದೆ ಮೂರನೇ ಶಿಲಾವರ್ಗವೊಂದನ್ನು ಗುರುತಿಸಲಾಗಿದೆ. ಮೊದಲು ಅಗ್ನಿಶಿಲೆ ಅಥವಾ ಜಲಜ ಶಿಲೆಗಳಾಗಿದ್ದು

ಆ ಮೇಲೆ ಅತ್ಯಧಿಕ ಉಷ್ಣಾಂಶ ಮತ್ತು ಒತ್ತಡಗಳ ಪ್ರಭಾವದಿಂದ ಅವುಗಳ ರಚನೆ ಮತ್ತು ಖನಿಜಗಳಲ್ಲಿ ವಿಶೇಷ ಬದಲಾವಣೆಗಳನ್ನು ಹೊಂದಿದ ಶಿಲೆಗಳಿವು. ಇವುಗಳಿಗೆ ರೂಪಾಂತರ ಶಿಲೆಗಳೆಂದು ಹೆಸರು. ಶಿಸ್ಟುಗಳು ಮತ್ತು ನೈಸ್‌ಗಳು ರೂಪಾಂತರ ಶಿಲೆಗಳಿಗೆ ಉತ್ತಮ ಉದಾಹರಣೆಗಳು.

ಇವುಗಳಲ್ಲೆಲ್ಲಾ ಭೂಮಿಯ ಪುರಾತನ ಚರಿತ್ರೆಯನ್ನು ಪುನಾ ರಚಿಸುವ ದೃಷ್ಟಿಯಿಂದ 'ಜಲಜಶಿಲೆ'ಗಳೆಂಬವು ಬಹಳ ಉಪಯೋಗವಾದವು. ಈ ಶಿಲೆಗಳಲ್ಲಿ ವಿಶಾಲವಾಗಿ ಹರಡಿರುವವು ಮತ್ತು ಸಮುದ್ರ ತಳದಲ್ಲಿ ರೂಪಗೊಂಡವು ಮುಖ್ಯವಾದವು. ಏಕೆಂದರೆ ಎಲ್ಲ ಕಾಲದಲ್ಲಿಯೂ ಸಮುದ್ರಗಳು ಸಾಗರಗಳು ಬೃಹತ್ ಸಂಚಯನ ಸ್ಥಾನಗಳಾಗಿವೆ. ಜಲಜ ಶಿಲೆಗಳಿಗೆ ಚಾರಿತ್ರಿಕ ಭೂವಿಜ್ಞಾನದಲ್ಲಿ ಹೆಚ್ಚಿನ ಬೆಲೆಕೊಡುವ ಅವುಗಳ ಮುಖ್ಯವಾದ ಮತ್ತು ವಿಶೇಷವಾದ ಎರಡು ಲಕ್ಷಣಗಳಾವುವೆಂದರೆ : (1) ಅವು ಕ್ರಮವಾದ ಮತ್ತು ನಿರ್ದಿಷ್ಟವಾದ ಪದರಗಳಲ್ಲಿ ಒಂದರ ಮೇಲೊಂದಾಗಿ ಇರುವುವು ಮತ್ತು (2) ಅವುಗಳಲ್ಲಿ ಆಗಾಗ್ಗೆ 'ಜೀವಾವಶೇಷ' ಗಳೆಂಬವು–ಅಂದರೆ ಸಂಚಯನವಾದ ಕಾಲದಲ್ಲಿ ಆ ಸಂಚಯನ ಪಾತ್ರಗಳಲ್ಲಿ ಜೀವಿಸಿದ್ದು ಸತ್ತ ಪುರಾತನ ಜೀವಿಗಳ ಅವಶೇಷಗಳು ಇರುತ್ತವೆ. ಈ ಎರಡು ಲಕ್ಷಣಗಳು ಅತ್ಯದಲ್ಲಿ ಚಾರಿತ್ರಿಕ ಭೂವಿಜ್ಞಾನದ ಅಧ್ಯಯನಕ್ಕೆ ಆಧಾರವಾಗಿವೆ ಮತ್ತು ಈ ಕಾರಣದಿಂದ ಅತ್ಯಂತ ಹೆಚ್ಚಿನ ಗಮನವನ್ನು ಸೆಳೆದಿವೆ.

**ಭೂಕಾಲ**

ಮುಂದುವರಿಯುವುದಕ್ಕೆ ಮುನ್ನ ಭೂಕಾಲದ ಅವಧಿಯ ಸ್ಪಷ್ಟವಾದ ಚಿತ್ರವನ್ನು ಪಡೆಯುವುದು ಅಗತ್ಯ. ಇದರಿಂದ ಭೂಚರಿತ್ರೆಯಲ್ಲಿಯ ಅನುಕ್ರಮ ಬದಲಾವಣೆಯನ್ನು ಸರಿಯಾದ ಸಮೀಚೀನ ದೃಷ್ಟಿಯಲ್ಲಿ ಕಾಣಲು ಸಾಧ್ಯವಾಗುತ್ತದೆ. ಹಿಂದೆಯೇ ತಿಳಿಸಿದಂತೆ ಇದು ಅಗಾಧವಾದ ಕಾಲ–300 ಕೋಟಿ ವರ್ಷಗಳು. ಮತ್ತು ಈ ಕಾಲಾವಧಿಯಲ್ಲಿ ಸಾವಿರಾರು ಅಡಿ ಶಿಲಾಪದರಗಳು ಒಂದರ ಮೇಲೊಂದರಂತೆ, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ರೂಪುಗೊಂಡಿವೆ. ಈ ಪದರ ಶಿಲಾಕ್ರಮವನ್ನೂ ಮತ್ತು ಇವು ನಿರೂಪಿಸಿರುವ ಒಟ್ಟು ಕಾಲಾವಧಿಯನ್ನೂ ಚಾರಿತ್ರಿಕ ಭೂವಿಜ್ಞಾನಿಗಳು ಐದು ಮಹಾಭಾಗಗಳಾಗಿ ಅಥವಾ ಕಲ್ಪಗಳಾಗಿ ವಿಭಾಗಿಸಿರುವರು. ಇವನ್ನು ಭೂಚರಿತ್ರಗ್ರಂಥದ ಐದು ಸಂಪುಟಗಳನ್ನಾಗಿ ಪರಿಗಣಿಸಬಹುದು. ಪ್ರತಿಯೊಂದು ಪ್ರಮುಖ ಭಾಗವನ್ನೂ ಅನೇಕ 'ಭೂವರ್ಗ' ಗಳಾಗಿ ಪುನರ್ವಿಭಾಗಿಸ ಲಾಗಿದೆ; ಇವು ಪ್ರತಿಯೊಂದು ಸಂಪುಟದ ಅಧ್ಯಾಯಗಳಿಗೂ ತಾಳೆಯಾಗಿರುತ್ತವೆ. ಈ ವಿವಿಧ ಯುಗಗಳನ್ನೂ ಅವುಗಳನ್ನು ವಿಭಾಗಿಸಲಾಗಿರುವ ವರ್ಗಗಳನ್ನೂ ಸಾನುಕ್ರಮದಲ್ಲಿ ಜೋಡಿಸಿದರೆ 'ಭೂ ಐತಿಹಾಸಿಕ ಮಾನದಂಡ'ದ ರಚನೆಯಾಗುತ್ತದೆ. ಇದರಿಂದ ಯಾವುದೇ ಶಿಲಾಸಮೂಹದ ಸಾಪೇಕ್ಷಿಕ ವಯಸ್ಸನ್ನಾಗಲೀ ನಿರೂಪಿಸಬಹುದು. ಚಿತ್ರ 1ರಲ್ಲಿ ಮೂಲವಿಭಾಗಗಳನ್ನೂ ಮತ್ತು ಪ್ರತಿಯೊಂದು ಪ್ರಧಾನ ವಿಭಾಗವೂ ವ್ಯಾಪಿಸುವ ಸುಮಾರು ಕಾಲಾವಧಿಯನ್ನೂ ತೋರಿಸುವ ಆದರ್ಶ ಮಾನದಂಡವನ್ನು ಕೊಟ್ಟಿದೆ.

ಈ ಅಧ್ಯಯನದಲ್ಲಿ ಒಳಗೊಂಡಿರುವ ಬಹುಕಾಲವನ್ನು ಮತ್ತು ಅವುಗಳ ಪರಸ್ಪರ ಕಾಲಾವಧಿಯನ್ನು ವಾಸ್ತವವಾಗಿ ಮತ್ತು ವಿವರವಾಗಿ ಅರಿತುಕೊಳ್ಳಲು ಸಹಾಯಕವಾಗಿ ನಾವು 'ಭೂಕಾಲ' ವನ್ನು 24 ಘಂಟೆಗಳ ಸಂಗ್ರಹಿತ ಮಾನದಂಡದ ಪ್ರಮಾಣದಲ್ಲಿ ನಿರೂಪಿಸಬಹುದು. ಈ ಭೂಕಾಲ ಚಕ್ರದಲ್ಲಿ ಪ್ರತಿಯೊಂದು ಘಂಟೆಯೂ ಸುಮಾರು 12.5 ಕೋಟಿ ಭೂಕಾಲವನ್ನು, ನಿರೂಪಿಸುತ್ತದೆ. (ಚಿತ್ರ 2 ನೋಡಿ). ಈ ಭೂಕಾಲಯಂತ್ರದಲ್ಲಿ 'ನಿರ್ಜೀವಕಲ್ಪ' ವೇ 9 ಘಂಟೆಗಳ ಕಾಲವನ್ನೂ 'ಆದಿ ಜೀವಿಕಲ್ಪ' ವು 3 ಘಂಟೆ ಕಾಲವನ್ನೂ ಆಕ್ರಮಿಸುತ್ತವೆ. (ಚಿತ್ರ 2). ಹೀಗೆ ಈ ಎರಡು ವಿಭಾಗಗಳೇ ಭೂಕಾಲದಲ್ಲಿ


ಕ್ವಾರ್ಟರ್ನರಿ
ಟರ್ಷಿಯರಿ
ಕ್ರಿಟೇಷಿಯಸ್
ಜ್ಯೂರಾಸಿಕ್
ಟ್ರಯಾಸಿಕ್
ಪರ್ಮಿಯನ್
ಕಾರ್ಬಾನಿಫೆರಸ್
ಡೆವೋನಿಯನ್
ಸೈಲ್ಯೂರಿಯನ್
ಆರ್ಡೋವಿಷಿಯನ್
ಕೇಂಬ್ರಿಯನ್
ನವೀನ ಜೀವ
(೧೨ ಕೋಟಿ ವರ್ಷಗಳು)
ಮಧ್ಯಜೀವ
(೩೦ ಕೋಟಿ ವರ್ಷಗಳು)
ಪುರಾತನ ಜೀವ
(೧೦೦ ಕೋಟಿ ವರ್ಷಗಳು)
ಆದಿ ಜೀವ
(೪೦೦ ಕೋಟಿ ವರ್ಷಗಳು)
ಆರ್ಷೇಯ
(೧೨೦೦ ಕೋಟಿ ವರ್ಷಗಳು)

ಚಿತ್ರ 1

ಚಿತ್ರ 2

ಅರ್ಧ ಭಾಗವನ್ನು ಆಕ್ರಮಿಸಿವೆ ! ಉಳಿದ 12 ಘಂಟೆಗಳ ಕಾಲದಲ್ಲಿ ಆಧುನಿಕ ಜೀವಿಕಲ್ಪದ ಅವಧಿ ಒಂದು ಘಂಟೆಕಾಲ ಮಾತ್ರ. ಈ ಯುಗಗಳಲ್ಲಿ ಪ್ರತಿಯೊಂದು ಭೂವರ್ಗವೂ ಅವುಗಳ ಪರಸ್ಪರ ಕಾಲವನ್ನು ಸೂಚಿಸುತ್ತವೆ. ಇಂತಹ ಚಿತ್ರವು ಭೂಕಾಲದ ವ್ಯಾಪ್ತಿಯನ್ನು ಮೂಲವಿಭಾಗಗಳ ಮತ್ತು ಉಪವಿಭಾಗಗಳ ಪರಸ್ಪರ ಅವಧಿಯ ಭಾವನೆಯನ್ನು ನಮಗೆ ಕೊಡುವುದರಲ್ಲಿ ಸಹಾಯಮಾಡುತ್ತದೆ. ಚಾರಿತ್ರಿಕ ಭೂವಿಜ್ಞಾನದ ಎಲ್ಲ ಅಧ್ಯಯನದಲ್ಲಿಯೂ ಇದರ ಸ್ಪಷ್ಟಭಾವನೆ ನಮಗಿರಬೇಕು. ಏಕೆಂದರೆ ಇದರಿಂದ ಭೂಚರಿತ್ರೆಯ ಸಮೀಚೀನ ದೃಷ್ಟಿಯನ್ನು ಪಡೆದಿರಲು ನಮಗೆ ಸಹಾಯವಾಗುತ್ತದೆ. (2ನೇ ಚಿತ್ರ ನೋಡಿ).

ಆರ್ಷೇಯಕಲ್ಪದ ಶಿಲಾಸಮುದಾಯದಲ್ಲಿ ಸಂಪೂರ್ಣವಾಗಿ ಜೀವಾವಶೇಷಗಳು ಇಲ್ಲದಿರುವುದು ಗಮನಿಸುವುದಕ್ಕೆ ಆಸಕ್ತಿದಾಯಕವಾದ ವಿಷಯವೂ ಆಗಿದೆ. ಅಂದರೆ, ಅವು ಪೂರ್ಣವಾಗಿ ಜೀವಾವಶೇಷ ರಹಿತವಾಗಿವೆ ; ಮತ್ತು ಇವುಗಳಲ್ಲಿ ಅಲ್ಲಿ ಇಲ್ಲಿ ಸಿಕ್ಕಿರುವ ಕೆಲವೇ ಅವಶೇಷಗಳ ನಿರ್ದಿಷ್ಟ ಸ್ವಭಾವವು ಮುಸುಕಾಗಿಯೂ ಸಂಶಯವಾಗಿಯೂ ಇರುವ ಮೆದುವಾದ ಪ್ರಾರಂಭಾವಸ್ಥೆಯಲ್ಲಿರುವ ಪುರಾತನ ಮತ್ತು ಕೆಳಮಟ್ಟದ ರಚನೆಯುಳ್ಳ ಪ್ರಾಣಿಗಳ ಮತ್ತು ಸಸ್ಯಗಳದ್ದಾಗಿದೆ. ಚೆನ್ನಾಗಿ ರಕ್ಷಿಸಲಾಗಿರುವ ಮತ್ತು ನಿಸ್ಸಂಶಯವಾಗಿರುವ ಜೀವಾವಶೇಷಗಳನ್ನು ಪುರಾತನ ಜೀವಕಲ್ಪದ ಪ್ರಾರಂಭದಿಂದ ಮಾತ್ರ ಅಂದರೆ ಭೂಚರಿತ್ರೆಯ ಅರ್ಧಕಾಲ ಕಳೆದ ಮೇಲೆ ಮಾತ್ರ ಗುರುತಿಸಲಾಗಿದೆ. ಈ ಜೀವಾವಶೇಷಗಳ ಅಥವಾ ಪುರಾತನ ಜೀವಿಗಳ ದಾಖಲೆಗಳನ್ನು ಪರಿಶೀಲಿಸಿದರೆ ಮತ್ತು ಪುನರವಲೋಕಿಸಿದರೆ ಪುರಾತನ ಜೀವಿಕಲ್ಪದಿಂದ ಇಂದಿನ ವರೆಗೆ ಎಲ್ಲ ಜೀವರೂಪಗಳ ಅವಿರತ ಅನುಕ್ರಮವಿರುವುದಲ್ಲದೆ ಅವಿರತ ಮುನ್ನಡೆಯಿರುವುದನ್ನೂ ನಾವು ಕಾಣಬಹುದು. ಅವು ಜೀವವಿಕಾಸ ಭಾವನೆಗೆ ಪೋಷಕವಾದ ಅತ್ಯಂತ ನಂಬಲರ್ಹವಾದ ಮತ್ತು ಒಪ್ಪಿತವಾದ ಸಾಕ್ಷ್ಯವನ್ನು ಕೊಡುತ್ತವೆ. ಈ ರೀತಿಯಲ್ಲಿ ವಿಕಾಸದ ಅತ್ಯುನ್ನತ ಉತ್ಪನ್ನವನ್ನು ಪ್ರತಿನಿಧಿಸುವ ಪ್ರಾಣಿಯಾದ ಮಾನವನು ಸ್ವಾಭಾವಿಕವಾಗಿ ಈ ದೃಶ್ಯದಲ್ಲಿ ಕಾಣಿಸಿಕೊಂಡಿರುವುದು ಇತ್ತೀಚಿನದು ; ವಾಸ್ತವವಾಗಿ ಹಿಂದೆ ಕೊಟ್ಟಿರುವ 'ಭೂಕಾಲಚಕ್ರ' ದ ಪ್ರಕಾರ ಭೂಮಿಯ ಮೇಲೆ ಮಾನವನು ಕಾಣಿಸಿಕೊಂಡಿರುವುದು ಕೇವಲ 3 ಅಥವಾ 4 ನಿಮಿಷಗಳು ಮಾತ್ರ. ಈ ಕಾಲದಲ್ಲಿ ಮಾನವನ ಚರಿತ್ರೆಯನ್ನು ಬರೆಯಲವಕಾಶವಾಗಿರುವುದು ಕೇವಲ ಕೆಲವು ಸೆಕೆಂಡುಗಳು ಮಾತ್ರ ! ಇದನ್ನು ಭೂಮಿಯು ಇದ್ದಿರುವ 24 ಘಂಟೆಗಳಿಗೆ ಹೋಲಿಸಿ ; ಅದರಿಂದ ಭೂಕಾಲದ ಸಂಬಂಧದಲ್ಲಿ ಭೂಮಿಯ ಮೇಲೆ ಮಾನವನ ಬರುವಿಕೆಯು ನಿರ್ದಿಷ್ಟವಾಗಿ ಎಲ್ಲಿದೆಯೆಂಬುದು ನಿಮಗೆ ಮನದಟ್ಟಾಗುತ್ತದೆ !

## ಭಾರತದ ಭೂಚರಿತ್ರೆಯ ಸ್ಥೂಲ ಪರಿಚಯ

ಮೇಲೆ ತಿಳಿಸಿದ ಚಾರಿತ್ರಿಕ ಭೂವಿಜ್ಞಾನದ ಸಾಮಾನ್ಯ ನಿಯಮದ ಸಂಗ್ರಹವಾದ ಪುನರವಲೋಕನದ ಹಿನ್ನೆಲೆಯಲ್ಲಿ ಕರ್ನಾಟಕದ ಭೂಚರಿತ್ರೆಯನ್ನು ಈಗ ಪರಿಶೀಲಿಸೋಣ. ಆದರೆ ಅಂತಹ ಪರಿಶೀಲನೆಯಲ್ಲಿ ನಮ್ಮ ಗಮನವನ್ನು ಒಂದು ನಿರ್ದಿಷ್ಟವಾದ ಪ್ರದೇಶಕ್ಕೆ ಮಿತಿ ಮಾಡಲಾಗುವುದಿಲ್ಲ ; ಅಕ್ಕ ಪಕ್ಕದ ಪ್ರದೇಶಗಳನ್ನೂ ಪರಿಶೀಲಿಸುವಂತೆ ನಮ್ಮ ಹೊರನೋಟವನ್ನು ಸಾಧ್ಯವಾದಷ್ಟು ವಿಶಾಲಪಡಿಸಿಕೊಳ್ಳಬೇಕು. ಏಕೆಂದರೆ, ಭೌಗೋಳಿಕ ಮತ್ತು ಭೂರಚನೆಗಳು ನಮ್ಮ ರಾಜಕೀಯ ಮತ್ತು ಆಡಳಿತ ಅನುಕೂಲಕ್ಕೆ ತಕ್ಕಂತೆ ಕಾಲಾನುಕಾಲಕ್ಕೆ ಭೂಪಟದ ಮೇಲೆ ಎಳೆಯುವ ಸಂಕುಚಿತವಾದ ಪ್ರಾದೇಶಿಕ ಎಲ್ಲೆಗಳಿಂದ ಯಾವ ರೀತಿಯಲ್ಲಿಯೂ ನಿಯಮಿತವಾಗಿರುವುದಿಲ್ಲ. 'ಕರ್ನಾಟಕದ.' ಭೂಚರಿತ್ರೆಯು ಭಾರತದ ಭೂಚರಿತ್ರೆಯ ಕೇವಲ ಒಂದು ಭಾಗವೆಂಬುದು ಸ್ವತಃ ಸಿದ್ಧವಾದುದು. ಆದುದರಿಂದ ಕರ್ನಾಟಕ ಪ್ರದೇಶದ ಭೂಚರಿತ್ರೆಯನ್ನು ಅದರ ಸರಿಯಾದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದಕ್ಕೂ ಮತ್ತು

ಪ್ರಶಂಸಿಸುವುದಕ್ಕೂ ಸಾಧ್ಯವಾಗುವುದಕ್ಕೆ ಭಾರತದ ಭೂವಿಕಾಸದ ಪ್ರಮುಖ ರೂಪರೇಖೆಯನ್ನು ತಿಳಿದು ಕೊಳ್ಳುವುದು ಅಗತ್ಯವಾಗಿದೆ.

ಭೂಚರಿತ್ರೆಯ ಆಧಾರದ ಮೇಲೆ ಭಾರತವನ್ನು ಮೂರು ನಿರ್ದಿಷ್ಟ ಭಾಗಗಳನ್ನಾಗಿ ವಿಭಾಗಿಸ ಬಹುದು: (1) ದಕ್ಷಿಣದಲ್ಲಿ ಪರ್ಯಾಯ ದ್ವೀಪ—ಸುಮಾರಾಗಿ ಕಚ್ ಮತ್ತು ಕಲ್ಕತ್ತಾವನ್ನು ಸೇರಿಸುವ ರೇಖೆಗೆ ದಕ್ಷಿಣದಲ್ಲಿರುವ ತ್ರಿಕೋನಭಾಗವಿದು. (2) ಉತ್ತರದಲ್ಲಿ ಪರ್ಯಾಯದ್ವೀಪದ ಹೊರಭಾಗ—ಪಶ್ಚಿಮದಲ್ಲಿ ನೆರೆಪ್ರದೇಶಗಳಾದ ಅಫ್ಘಾನಿಸ್ಥಾನ, ಬೆಲೂಚಿಸ್ಥಾನ ಮತ್ತು ಸಿಂಧ್ ಪ್ರದೇಶಗಳಲ್ಲಿಯೂ ಪೂರ್ವದಲ್ಲಿ ಬರ್ಮಾದಲ್ಲಿಯೂ ಮುಂದುವರಿಯುವ ಹಿಮಾಲಯ ಪರ್ವತಭಾಗವಿದು. ಮತ್ತು (3) ಸಿಂಧೂ–ಗಂಗಾ ಮೆಕ್ಕಲು ಪ್ರದೇಶ—ಒಂದು ಕಡೆ ಪರ್ಯಾಯ ದ್ವೀಪಭಾಗಕ್ಕೂ ಇನ್ನೊಂದು ಕಡೆ ಪರ್ಯಾಯ ದ್ವೀಪದ ಹೊರಭಾಗಕ್ಕೂ ಮಧ್ಯದಲ್ಲಿ ವಿಶಾಲವಾಗಿ ಮತ್ತು ಒಂದೇ ಮಟ್ಟವಾಗಿ ಹರಡಿರುವ ಭಾಗವಿದು (ಚಿತ್ರ 3 ನೋಡಿ).

ಈ ಮೂರರಲ್ಲಿ ಪ್ರತಿಯೊಂದು ಭಾಗವು ಅಲ್ಲಿಯ ವೈಶಿಷ್ಟ್ಯಸೂಚಕ ಭೂಲಕ್ಷಣಗಳಿಂದ ಕೂಡಿದೆ. ಕೆಲವು ಮೂಲರಚನೆಗಳಿಂದ ವಿಶೇಷವಾದ ಇಂಡಿಯಾದ ಈ ಪರ್ಯಾಯದ್ವೀಪದ ಒಟ್ಟು ಭಾಗವು ಆದಿಜೀವಕಲ್ಪದಿಂದೀಚೆಗೆ ಸಮುದ್ರಮಟ್ಟದಿಂದ ಮೇಲೆದ್ದ ಘನ ಭೂಭಾಗವಾಗಿ ಭೂಮೇಲ್ಪದರದ ಸ್ಥಿರವಾದ ಮತ್ತು ದೃಢವಾದ ಶಿಲಾಭಾಗವನ್ನು ಪ್ರತಿನಿಧಿಸುತ್ತದೆ. ಇನ್ನೊಂದು ಕಡೆ, ಪರ್ಯಾಯ ದ್ವೀಪದ ಹೊರಭಾಗವು ಆದಿಜೀವಕಲ್ಪದಿಂದ ಬಹುಮಟ್ಟಿಗೆ ಇತ್ತೀಚಿನ ವರೆಗೆ ಹೆಚ್ಚುಕಡಮೆ ವಿಶಾಲವಾದ ಸಮುದ್ರದಿಂದ ಆವರಿಸಿದ್ದ ಮತ್ತು ಈಗ ಸಾಪೇಕ್ಷಿಕವಾಗಿ ಗಟ್ಟಿಯಿಲ್ಲದ, ಮಣಿಯುವ ಮತ್ತು ಅಸ್ಥಿರವಾದ ಭೂಭಾಗವನ್ನು ಪ್ರತಿನಿಧಿಸುತ್ತದೆ. ಮಧ್ಯಭಾಗವಾದ ಸಿಂಧೂ–ಗಂಗಾ ಮೆಕ್ಕಲು ಪ್ರದೇಶವು, ಅದರ ಹೆಸರೇ ಸೂಚಿಸುವಂತೆ ಭೂಚರಿತ್ರೆಯಲ್ಲಿ ಇತ್ತೀಚಿನ ಕಾಲದಲ್ಲಿ ಹಿಮಾಲಯದ ಪ್ರಮುಖ ಪರ್ವತದ ನದಿಗಳಾದ ಸಿಂಧು, ಗಂಗಾ ಮತ್ತು ಬ್ರಹ್ಮಪುತ್ರನದಿಗಳು ಮತ್ತು ಅವುಗಳ ಉಪನದಿಗಳು ಸಾಗಿಸಿ ತಂದ ಮೆಕ್ಕಲು ಶೇಖರಣೆಯಿಂದ ರೂಪಗೊಂಡ ಮಟ್ಟವಾದ, ವಿಶಾಲವಾದ ಮೈದಾನ ಪ್ರದೇಶವಾಗಿದೆ.

ಹಿಂದೆಯೇ ತಿಳಿಸಿದಂತೆ ಇಂಡಿಯಾ ಪರ್ಯಾಯದ್ವೀಪದ ಪ್ರದೇಶವು ಭೂಮಿಯ ಮೇಲ್ಪದರದ ಆಧಾರವಾಗಿರುವ ಮತ್ತು ಬೇರೆ ಪ್ರದೇಶಗಳಲ್ಲಿ ಮೇಲೆತ್ತುವಿಕೆ ಮತ್ತು ಕುಸಿಯುವಿಕೆಗಳನ್ನು ಉಂಟು ಮಾಡಿರುವನಂತರದ ತೀವ್ರ ಭೂಚಲನೆಗಳ ಎಲ್ಲ ಪರಿಣಾಮಗಳನ್ನೂ ತಡೆದುಕೊಂಡಿರುವ 'ಸ್ಥಿರಪ್ರದೇಶ' ವೆಂಬುದಕ್ಕೆ ಅತ್ಯುತ್ತಮ ಉದಾಹರಣೆ. ಈ ರೀತಿಯಲ್ಲಿ ಇಂಡಿಯಾ ಪರ್ಯಾಯ ದ್ವೀಪ ಭಾಗದ ಶೇಕಡ 60 ಭಾಗ ಅತ್ಯಂತ ಪುರಾತನ ಕಾಲದ ಅಂದರೆ ಆರ್ಷೇಯ ಕಲ್ಪದ ಶಿಲೆಗಳಿಂದಾಗಿದೆ. ಉಳಿದ ಭಾಗಗಳಲ್ಲಿ ಆರ್ಷೇಯ ಕಲ್ಪದ ಶಿಲೆಗಳ ಮೇಲ್ಭಾಗದಲ್ಲಿ ಇದರ ಮುಂದಿನ ಮಹಾಕಲ್ಪಕ್ಕೆ ಅಂದರೆ 'ಆದಿಜೀವಿಕಲ್ಪ'ಕ್ಕೆ ಸೇರಿದ ಜಲಜಶಿಲಾಶ್ರೇಣಿಗಳ ಕೆಲವು ಹೊರಚಾಚುಗಳಿವೆ. ಆದಿಜೀವಿಕಲ್ಪಕ್ಕೆ ಸೇರಿದ ಈ ಜಲಜ ಶಿಲಾಶ್ರೇಣಿಗಳನ್ನು ಸ್ಥೂಲವಾಗಿ ಕಡಪ ಮತ್ತು ಕರ್ನೂಲು ಜಿಲ್ಲೆಗಳ ಪ್ರದೇಶಗಳಲ್ಲಿ ಬಹುವಾಗಿ ಹರಡಿರುವ ಕಡಪ ಶ್ರೇಣಿಗಳೆಂಬ ಹಿರಿಯ ಶಿಲಾಸಮೂಹಗಳು ಮತ್ತು ವಿಂಧ್ಯಪರ್ವತ ಪ್ರದೇಶದಲ್ಲಿ ಮಾದರಿಯಾಗಿ ಹರಡಿರುವುದರಿಂದ ವಿಂಧ್ಯನ್ ಶ್ರೇಣಿಗಳೆಂಬ ಕಿರಿಯ ಶಿಲಾಸಮೂಹಗಳು (4ನೇ ಚಿತ್ರ ನೋಡಿ) ಎಂದು ಎರಡು ಭಾಗವಾಗಿ ವಿಭಾಗಿಸಲಾಗಿದೆ.

ಆದಿಜೀವಕಲ್ಪದ ಕೊನೆಯ ಭಾಗದಲ್ಲಿ ಭೂಚಲನೆಯಿಂದ ಈ ಸಂಚಯನ ಪಾತ್ರಗಳೆಲ್ಲ ಅದೃಶ್ಯವಾದವು ಮತ್ತು ಇಂಡಿಯಾ ಪರ್ಯಾಯ ದ್ವೀಪಭಾಗವೆಲ್ಲ ಒಂದು ಭೂಪ್ರದೇಶವಾಯಿತು. ಅದು ಉಳಿದ ಭೂಕಾಲದ ಅವಧಿಯಲ್ಲಿ ಅಂದರೆ ಆದಿಜೀವ ಕಲ್ಪದ ಪ್ರಾರಂಭದಿಂದ ಇಂದಿನ ವರೆಗೆ, ಇದೇ

ಚಿತ್ರ 3


ಕಚ್
ಕಟಕ್
ನಾಗಪುರ
ಬೊಂಬಾಯಿ
ಹೈದರಾಬಾದ್
ವಿಶಾಖಪಟ್ಟಣ
ಧಾರವಾಡ
ಮದ್ರಾಸು
ಬೆಂಗಳೂರು
ತಿರುಚನಾಪಳ್ಳಿ
ವಿವರಣೆ
ತೀರದ ನಿಕ್ಷೇಪಗಳು
ದಖ್ಖನ್ ಟ್ರ್ಯಾಪು
ಗೊಂಡ್ವಾನಾ ಶಿಲೆಗಳು
ಆದಿಜೀವ ಕಲ್ಪದ ಶಿಲೆಗಳು
ಆರ್ಷೇಯ ಕಲ್ಪದ ಶಿಲೆಗಳು

ಚಿತ್ರ 4

ಸ್ಥಿತಿಯಲ್ಲಿ ಉಳಿದಿದೆ. ಇನ್ನೊಂದು ಕಡೆ ಆದಿಜೀವಕಲ್ಪವಾದ ಮೇಲೆಯೂ ಇಂಡಿಯಾ ಪರ್ಯಾಯ ದ್ವೀಪದ ಹೊರಭಾಗವು ಇನ್ನೂ ಸಮುದ್ರದಿಂದ ಆವರಿಸಲ್ಪಟ್ಟು ಅದರಲ್ಲಿ ಪುರಾತನ ಜೀವಕಲ್ಪದ ವಿವಿಧ ಯುಗಗಳನ್ನು ನಿರೂಪಿಸುವ ಜೀವಾವಶೇಷದಿಂದ ಕೂಡಿದ ಸ್ತರಗಳು ಸಂಚಯನವಾದವು.

ಪುರಾತನ ಜೀವಕಲ್ಪದ ಅಂತ್ಯದಲ್ಲಿ ಭೂಚರಿತ್ರೆಯ ಪ್ರಮುಖ " ಪರ್ವ " ಗಳಲ್ಲೊಂದರಲ್ಲಿ ಅನೇಕ ತೀವ್ರ ಭೂಚಲನೆಗಳುಂಟಾದವು. ಇದರ ಪರಿಣಾಮವಾಗಿ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಭೂಭಾಗ ಮತ್ತು ಜಲಭಾಗಗಳ ಹರವಿನಲ್ಲಿ ವಿಶಾಲವಾಗಿ ಹರಡಿದ ಮತ್ತು ತೀವ್ರವಾದ ಬದಲಾವಣೆಗಳಾದವು.

ಈ ತೀವ್ರವಾದ ಭೂಚಲನೆಗಳಿಂದ ಬೇರೆ ಕಡೆಗಳಲ್ಲಿ ಅಂತಹ ಉಗ್ರ ಬದಲಾವಣೆಗಳಾದರೂ ಕೂಡ ಇಂಡಿಯಾದ ಪರ್ಯಾಯ ದ್ವೀಪಭಾಗವು ಸಮುದ್ರಮಟ್ಟಕ್ಕೆ ಸಾಕಷ್ಟು ಮೇಲ್ಭಾಗದಲ್ಲಿದ್ದು ಭೂಭಾಗ ವಾಗಿಯೇ ಉಳಿದುಕೊಂಡಿತು.

ಈ ತೀವ್ರ ಭೂಚಲನೆಗಳಿಂದ ಭಾರತದ ಈ ಪ್ರದೇಶದಲ್ಲಿ ಕೆಲವು ನೀಳವಾದ ತಗ್ಗುಗಳು ಸ್ತರಭಂಗ ಗಳಿಂದುಂಟಾದವು. ಈ ತಗ್ಗುಗಳು ಸಂಚಯನ ಪ್ರದೇಶಗಳೂ ಆದವು. ಆದರೆ ಈ ನಿಕ್ಷೇಪಗಳು ಪರ್ಯಾಯ ದ್ವೀಪದ ಹೊರಭಾಗದವುಗಳಂತಲ್ಲದೆ ಇಂಡಿಯಾ ಪರ್ಯಾಯ ದ್ವೀಪಭಾಗದಲ್ಲಿ ಆ ಕಾಲದಲ್ಲಿ ಇದ್ದ ನದಿಗಳಿಂದ ಸಾಗಿಸಿ ತಂದ ಮರಳು, ಮಣ್ಣು ಮತ್ತು ಧೂಳುಗಳು ಭೂಮಧ್ಯದಲ್ಲಿನ ಸಿಹಿನೀರಿನಲ್ಲಿ ಸಂಚಯನವಾದ ನಿಕ್ಷೇಪಗಳಿವು. ಸಿಹಿ ನೀರಿನಲ್ಲಾದ ನಿಕ್ಷೇಪಗಳು ಚಿಕ್ಕ ಮತ್ತು ಇಕ್ಕಟ್ಟಾದ ಪ್ರದೇಶಗಳಲ್ಲಿ ಶೇಖರವಾಗುತ್ತಿದ್ದರೂ ಇವು ಪರ್ಮಿಯನ್ ಕಾಲದಿಂದ ಕ್ರಿಟೇಷಿಯಸ್ ಯುಗದ ಪ್ರಾರಂಭದ ವರೆಗೆ ರೂಪುಗೊಂಡವು. ಸಿಹಿನೀರಿನ ನಿಕ್ಷೇಪಗಳಾದ ಈ ಶಿಲಾಸಮೂಹವು ಇಂಡಿಯಾ ಪರ್ಯಾಯ ದ್ವೀಪದ ಭೂಚರಿತ್ರೆಯ ನಿರ್ದಿಷ್ಟ ಏಕಮಾನವಾಗಿದೆ ಮತ್ತು ಇದಕ್ಕೆ " ಗೊಂಡ್ವಾನ ಶಿಲಾಸಮೂಹ " ವೆಂದು ಹೆಸರು ಕೊಡಲಾಗಿದೆ. ಪರ್ಯಾಯ ದ್ವೀಪಭಾಗದಲ್ಲಿ ಹರಡಿರುವ ಈ ಯುಗದ ಶಿಲೆಗಳು ಆರ್ಥಿಕ ದೃಷ್ಟಿಯಿಂದ ಬಹು ಬೆಲೆಯುಳ್ಳವು. ಏಕೆಂದರೆ ಈ ಯುಗದ ಕೆಳಭಾಗಕ್ಕೆ ಸೇರಿದ ಸ್ತರಗಳಲ್ಲಿ ಭಾರತದ ಬಹುಮಟ್ಟಿನ ಕಲ್ಲಿದ್ದಲು ದೊರಕುತ್ತದೆ.

ವಿಶೇಷ ಗಮನವನ್ನು ಕೊಡಬೇಕಾದ ಇನ್ನೊಂದು ಬಹಳ ಆಸಕ್ತಿದಾಯಕವಾದ ವಿಚಾರವೆಂದರೆ ಗೊಂಡ್ವಾನ ಸ್ತರಗಳು ಸಂಚಯನವಾಗುತ್ತಿದ್ದ ಕಾಲದಲ್ಲಿ (ಪರ್ಮಿಯನ್‌ನಿಂದ ಕ್ರಿಟೇಷಿಯಸ್‌ವರೆಗೆ) ಇಂಡಿಯಾ ಪರ್ಯಾಯ ದ್ವೀಪವು ಇಂದಿನ ಅರಬೀಸಮುದ್ರ ಮತ್ತು ಬಂಗಾಳಕೊಲ್ಲಿಗಳಲ್ಲಿ ಸರಿಯಾಗಿ ಅಡ್ಡಲಾಗಿ ಹರಡಿದ್ದು, ಈ ಇಂಡಿಯಾ ಪರ್ಯಾಯ ದ್ವೀಪವನ್ನು ಒಂದುಕಡೆ ದಕ್ಷಿಣ ಆಫ್ರಿಕದೊಂದಿಗೂ ಇನ್ನೊಂದುಕಡೆ ಆಸ್ಟ್ರೇಲಿಯದೊಂದಿಗೂ ಸೇರಿಸುವ ವಿಶಾಲವಾದ ಭೂಖಂಡವೊಂದರ ಭಾಗವಾಗಿತ್ತು. ಈ ವಿಶಾಲ ಭೂಖಂಡವು ದಕ್ಷಿಣ ಅಟ್ಲಾಂಟಿಕ್ ಸಾಗರದಲ್ಲಿ ಇನ್ನೂ ಪಶ್ಚಿಮಕ್ಕೆ ದಕ್ಷಿಣ ಅಮೇರಿಕದ ವರೆಗೆ ವಿಸ್ತರಿಸಿತ್ತು. ಒಂದುಕಡೆ ದಕ್ಷಿಣ ಅಮೇರಿಕದಿಂದ ಇನ್ನೊಂದುಕಡೆ ಆಸ್ಟ್ರೇಲಿಯದ ವರೆಗೆ ದಕ್ಷಿಣ ಆಫ್ರಿಕ ಮತ್ತು ಇಂಡಿಯಾ ಪರ್ಯಾಯ ದ್ವೀಪದ ಮೂಲಕ ಇದ್ದ ಈ ವಿಶಾಲ ಭೂಖಂಡಕ್ಕೆ ಗೊಂಡ್ವಾನ ಭೂಭಾಗವೆಂಬ ಹೆಸರು ಕೊಡಲಾಗಿದೆ. ಗೊಂಡ್ವಾನಾ ಭೂಭಾಗದ ಪರಿಶೀಲನೆ ಮತ್ತು ಅದರ ಭೂಚರಿತ್ರೆಗಳು ಭಾರತದ ಭೂವಿಜ್ಞಾನದಲ್ಲಿ ಮಾತ್ರವಲ್ಲ, ಒಟ್ಟು ಪ್ರಪಂಚದ ಭೂಚರಿತ್ರೆಯಲ್ಲಿಯೂ ಕೂಡ ಅತ್ಯಂತ ಪ್ರಕಾಶಮಾನವಾದ ಮತ್ತು ಆಕರ್ಷಕವಾದ ಅಧ್ಯಾಯಗಳಾಗಿವೆ.

ಕ್ರಿಟೇಷಿಯಸ್‌ನ ಅಂತ್ಯದಲ್ಲಿ ಇನ್ನೊಂದು ಪ್ರಬಲ ಭೂಚಲನೆಗಳ ಪರಂಪರೆಗಳುಂಟಾಗಿ ಭೂಚರಿತ್ರೆಯಲ್ಲಿ ಇನ್ನೊಂದು ' ಪರ್ವ ' ಕ್ಕೆ ಕಾರಣವಾದವು. ಇಂಡಿಯಾ ಪರ್ಯಾಯ ದ್ವೀಪ ಭಾಗದಲ್ಲಿ

ಈ ಭೂಚಲನೆಗಳಿಂದ ಎರಡು ಮುಖ್ಯ ಘಟನೆಗಳು ಪ್ರಾರಂಭವಾದವು: (1) ಗೊಂಡ್ವಾನಾ ಭೂಭಾಗದ ಒಡೆಯುವಿಕೆ ಮತ್ತು ಅದು ನಾವು ಇಂದು ಕಾಣುವಂತೆ ಅಮೇರಿಕ, ದಕ್ಷಿಣ ಆಫ್ರಿಕ, ಇಂಡಿಯಾ ಪರ್ಯಾಯ ದ್ವೀಪಭಾಗ ಮತ್ತು ಆಸ್ಟ್ರೇಲಿಯಾ ಖಂಡಗಳಾಗಿ ಬೇರ್ಪಡುವುದು. (2) ಇಂಡಿಯಾ ಪರ್ಯಾಯ ದ್ವೀಪಭಾಗದ ವಾಯುವ್ಯ ಭಾಗದಲ್ಲಿ ಅಸಾಧಾರಣವಾದ ಶಿಲಾರಸದ ಹೊರಹೊಮ್ಮುವಿಕೆಯಾಯಿತು.

ಟರ್ಷಿಯರಿ ಯುಗದ ಆದಿಭಾಗದಲ್ಲಿ ಉಂಟಾದ ಗೊಂಡ್ವಾನ ಭೂಭಾಗದ ವಿಚ್ಛೇದನದಿಂದ ಇಂಡಿಯಾ ಪರ್ಯಾಯ ದ್ವೀಪಭಾಗವು ಹೆಚ್ಚು ಕಡಮೆ ಇಂದಿರುವಂತೆ ಬಂಗಾಳಕೊಲ್ಲಿಯೊಂದುಕಡೆ ಮತ್ತು ಅರಬೀಸಮುದ್ರವೊಂದುಕಡೆಯಿರುವ ತ್ರಿಕೋನಾಕಾರವನ್ನು ಪಡೆಯಿತು.

ಇಂಡಿಯಾ ಪರ್ಯಾಯ ದ್ವೀಪದ (ಕ್ರಿಟೇಷಿಯಸ್ ಕಾಲದ ಕೊನೆಯ ಭಾಗದಲ್ಲಿ) ಒಂದು ಭಾಗದಲ್ಲಿ ನಡೆದ ಹೇರಳವಾದ ಶಿಲಾರಸದ ಹೊರಹೊಮ್ಮುವಿಕೆಯು ಭೂಚರಿತ್ರೆಯಲ್ಲಿ ಒಂದು ಅತ್ಯಂತ ಗಮನಾರ್ಹವಾದ ಘಟನೆಯಾಗಿದೆ. ಈ ಕಾಲದಲ್ಲಿ ನಡೆದ ತೀವ್ರ ಭೂಚಲನೆಗಳಿಂದ ಭಾರತದ ಈ ಪ್ರದೇಶದ ವಾಯುವ್ಯಭಾಗದ ಭೂಮಿಯ ಮೇಲ್ಪದರದಲ್ಲಿ ದೊಡ್ಡ ಬಿರುಕುಗಳು ಮತ್ತು ಸೀಳುಗಳುಂಟಾಗಿ ಅದರ ಮೂಲಕ ತಳಭಾಗದಲ್ಲಿರುವ ಶಿಲಾದ್ರವವು 'ಶಿಲಾರಸ' ರೂಪದಲ್ಲಿ ಬಹು ಪ್ರಮಾಣದಲ್ಲಿ ಹೊರಹೊಮ್ಮಿತು. ಈ ಶಿಲಾಪ್ರವಾಹಗಳು ಎಲ್ಲಾ ದಿಕ್ಕುಗಳಲ್ಲಿಯೂ ವಿವಿಧ ಪ್ರಮಾಣಗಳಲ್ಲಿ ಹರಡಿ, ಕೊನೆಯಲ್ಲಿ ಸರಾಸರಿ 3,000 ಅಡಿಗಳಿಗಿಂತ ಹೆಚ್ಚು ದಪ್ಪವಿರುವ, 2,00,000 ಚದರ ಮೈಲಿಗಿಂತ ಹೆಚ್ಚು ವಿಶಾಲವಿರುವ ಪ್ರದೇಶವನ್ನು ಆಕ್ರಮಿಸಿತು. ಈ ಜ್ವಾಲಾಮುಖಜ ಶಿಲಾಸಮೂಹವು ಈಗ "ದಖಿನ್" ಪ್ರಸ್ಥಭೂಮಿಯ ಪ್ರಮುಖ ಭಾಗವನ್ನಾಕ್ರಮಿಸಿದೆ. ಮತ್ತು ಉಚಿತವಾಗಿ 'ದಖಿನ್‌ಟ್ರ್ಯಾಪ್' ಎಂದು ಕರೆಯಲಾಗಿದೆ. ಅದು ಇಂಡಿಯಾ ಪರ್ಯಾಯ ದ್ವೀಪದ ವಾಯುವ್ಯ ಭಾಗದಲ್ಲಿ ವಿಶಾಲವಾದ ಭಾಗವನ್ನಾವರಿಸಿ ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಮತ್ತು ಆಂಧ್ರಪ್ರಾಂತ್ಯಗಳ ಬಹು ಭಾಗವನ್ನೊಳಗೊಂಡಿದೆ. ದಖಿನ್‌ಟ್ರ್ಯಾಪು ಪೂರಾ ಜ್ವಾಲಾಮುಖಜ ಶಿಲೆಗಳಿಂದಾಗಿದೆ. ಇವು ಅಗ್ನಿಶಿಲೋತ್ಪನ್ನವಾದುದರಿಂದ ಸ್ವಾಭಾವಿಕವಾಗಿ ಇವುಗಳಲ್ಲಿ ಜೀವಾವಶೇಷಗಳಿಲ್ಲ. ಟರ್ಷಿಯರಿ ಕಾಲದಲ್ಲಿ ಮತ್ತು ಟರ್ಷಿಯರಿಯನಂತರದ ಕಾಲದಲ್ಲಿ ಭಾರತದ ಪರ್ಯಾಯ ದ್ವೀಪಭಾಗದ ಭೂಚರಿತ್ರೆಯಲ್ಲಿ ವಿಶೇಷ ಪ್ರಾಮುಖ್ಯದ ಘಟನೆ ಯಾವುದೂ ನಡೆಯಲಿಲ್ಲ. ಮತ್ತು ಈ ಪ್ರದೇಶವು ಪೂರ್ತಿ ಇಂದು ನಾವು ಕಾಣುವಂತಹ ಆಕಾರವನ್ನು ಪಡೆಯಿತು.

**ಕರ್ನಾಟಕದ ಭೂವಿಕಾಸ**

ಕರ್ನಾಟಕವು ಭಾರತದ ಪರ್ಯಾಯ ದ್ವೀಪದ ಒಂದು ಭಾಗವಾಗಿದೆ ಮತ್ತು ಅದರ ಭೂಚರಿತ್ರೆಯ ಪ್ರಮುಖ ಲಕ್ಷಣಗಳು ಇಂಡಿಯಾ ಪರ್ಯಾಯ ದ್ವೀಪದ ಚರಿತ್ರೆಯನ್ನು ಬಹುವಾಗಿ ಹೋಲುತ್ತವೆ. ಭೂ ಇತಿಹಾಸದ ದೃಷ್ಟಿಯಿಂದ ಇಂಡಿಯಾ ಪರ್ಯಾಯ ದ್ವೀಪಭಾಗದಲ್ಲಿರುವಂತೆ ಶಿಲಾಸಮೂಹಗಳ ದಾಖಲೆಗಳು ಬಹಳ ಅಪೂರ್ಣವಾಗಿವೆ. ವಾಸ್ತವವಾಗಿ ಅದಕ್ಕಿಂತ ಹೆಚ್ಚಿಗೆ ಇವೇ ಕರ್ನಾಟಕದಲ್ಲಿ ಕಂಡುಬರುವ ಮೂರು ಪ್ರಮುಖ ಶಿಲಾಸಮೂಹಗಳಾವುವೆಂದರೆ: (1) ಆರ್ಷೇಯ ಕಲ್ಪದ್ದು, (2) ಕಲದ್ಗಿಯದು (ಆಜೀವಕಲ್ಪದ ಒಂದು ಅಲ್ಪಭಾಗವನ್ನು ಸೂಚಿಸುವುವು) ಮತ್ತು (3) ಟರ್ಷಿಯರಿಯ ಪ್ರಾರಂಭದ ದಖಿನ್ ಟ್ರ್ಯಾಪ್‌ಗಳು (4 ಚಿತ್ರನೋಡಿ). ಇವುಗಳಲ್ಲಿ ಆರ್ಷೇಯ ಕಲ್ಪಶಿಲೆಗಳು ಅತ್ಯಂತ ವಿಶಾಲವಾಗಿ ಹರಡಿರುವುವು ಮತ್ತು ಪ್ರಾಂತ್ಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು 75% ಭಾಗವನ್ನು ಆಕ್ರಮಿಸಿರುವುವು. ಕಲದ್ಗಿಶಿಲೆಗಳು ಈ ಪ್ರದೇಶದ ಉತ್ತರದಲ್ಲಿ ಸ್ವಲ್ಪಭಾಗದಲ್ಲಿ ಮಾತ್ರ ಹರಡಿರುವುವು

ಮತ್ತು ದಖನ್ ಟ್ರ್ಯಾಪು ಉತ್ತರದ ಕೊನೆಯಲ್ಲಿ ಮಹಾರಾಷ್ಟ್ರ ಮತ್ತು ಮೈಸೂರು ಪ್ರಾಂತ್ಯಗಳ ಗಡಿಯ ಅಂಚಿನಲ್ಲಿ ಮಾತ್ರ ದೊರಕುವುವು.

## ಆರ್ಷೇಯ ಕಲ್ಪದ ಶಿಲೆಗಳು

ಹಿಂದೆಯೇ ತಿಳಿಸಿದಂತೆ ಕರ್ಣಾಟಕದ ಸುಮಾರು $\frac{3}{4}$ ಭಾಗ ಆರ್ಷೇಯ ಕಲ್ಪದ್ದೆಂದು ಹೆಸರಾದ ಅತ್ಯಂತ ಪುರಾತನ ಶಿಲೆಗಳಿಂದಾಗಿದೆ. ಈ ಆರ್ಷೇಯ ಕಲ್ಪದ ಶಿಲೆಗಳು ವಿವಿಧ ರಾಸಾಯನಿಕ ಸಂಯೋಜನೆಯುಳ್ಳ ಮತ್ತು ವಿವಿಧ ರೀತಿಯಲ್ಲಿ ಉತ್ಪತ್ತಿಯಾದ ಅಲ್ಲದೆ ಬೇರೆಬೇರೆ ಕಾಲದ ಪರಿಸ್ಥಿತಿಗಳಿಗೊಳಗಾದ ಅನೇಕ ವಿಧವಾದ ಶಿಲೆಗಳನ್ನೊಳಗೊಂಡಿವೆ. ಇದರ ಪರಿಣಾಮವಾಗಿ ಅವು ಆಗಾಗ ಬಹಳ ಕ್ಷೋಭೆಗೊಳಗಾಗಿಯೂ ಬಹಳ ರೂಪಾಂತರವಾಗಿಯೂ ಇವೆ. ಹೀಗೆ ಅವು ಅತ್ಯಂತ ತೊಡಕಿನ ಶಿಲಾಸಮೂಹವಾಗಿವೆ ಮತ್ತು ಆ ಶಿಲಾಸಮೂಹಕ್ಕೆಲ್ಲ ಅನ್ವರ್ಥವಾಗಿ "ಆರ್ಷೇಯ ಕಲ್ಪದ ಶಿಲಾ ಸಂಕೀರ್ಣತೆ" ಎಂಬ ಹೆಸರು ಕೊಡಲಾಗಿದೆ. ಸಾಮಾನ್ಯವಾಗಿ ಈ ತೊಡಕಿನಲ್ಲಿನ ಶಿಲಾವಿಧಗಳಲ್ಲಿ ಗ್ರಾನೈಟ್ ನೈಸುಗಳು ಮತ್ತು ಶಿಸ್ಟುಗಳು ಬಹಳ ಸಾಧಾರಣವಾದುವು. ಇವುಗಳೊಂದಿಗೆ ಕ್ವಾರ್ಟ್ಸೈಟ್ ಮತ್ತು ಸುಣ್ಣಶಿಲೆಯಂತಹ ಇತರ ಶಿಲಾವಿಧಗಳೂ ಜೊತೆಗೂಡಿ ಸಿಗುತ್ತವೆ. ಆರ್ಷೇಯಕಲ್ಪದ ಶಿಲೆಗಳೆಲ್ಲ ಪ್ರಮುಖವಾಗಿ ಅಗ್ನಿಶಿಲಾ ಸ್ವಭಾವದವುಗಳೆಂದು ಹಿಂದೆ ಒಂದು ಬಾರಿ ಸೂಚಿಸಲಾಗಿತ್ತು. ಈಗ ಅದರಲ್ಲಿ ಕೆಲವು ನೀರಿನಲ್ಲಿ ಸಂಚಯನವಾದ ನಿಜವಾದ ನಿಕ್ಷೇಪಗಳೆಂದು ಸಾಧಿಸಲಾಗಿದೆ. ಆದರೆ ಈ ಪುರಾತನ ಸಂಚಯನ ಸ್ಥಾನಗಳ ನಿರ್ದಿಷ್ಟ ಸ್ವಭಾವವಾಗಲೀ ಈ ಪುರಾತನ ಸ್ತರಗಳು ಸಂಚಯನವಾದ ವಾತಾವರಣದ ಸನ್ನಿವೇಶದ ವಿಚಾರವಾಗಲೀ ನಮಗೆ ತಿಳಿದಿರುವುದು ಅತ್ಯಲ್ಪ. ಭಾರತದಲ್ಲಿ ಅಥವಾ ಹೊರಭಾಗದಲ್ಲಿನ ಇತರ ಆರ್ಷೇಯ ಕಲ್ಪದ ಶಿಲೆಗಳಂತೆ ಕರ್ಣಾಟಕ ಪ್ರದೇಶದ ಈ ಶಿಲೆಗಳು ಜೀವಾವಶೇಷ ರಹಿತವಾಗಿವೆ.

ಇತ್ತೀಚೆಗೆ ನಡೆಸಿರುವ ಪ್ರಾಯೋಗಿಕ ಪರಿಶೋಧನೆಗಳ ಆಧಾರದ ಮೇಲೆ ಕರ್ಣಾಟಕ ಪ್ರದೇಶದ ಆರ್ಷೇಯ ಶಿಲಾ ಸಂಕೀರ್ಣತೆಯಲ್ಲಿ ನಾಲ್ಕು ಮುಖ್ಯ ಭಾಗಗಳನ್ನು ಗುರುತಿಸಲಾಗಿದೆ. ಅವುಗಳ ಪರಸ್ಪರ ವಯಸಿನ ಪ್ರಕಾರ ಅವುಗಳನ್ನು ಕೆಳಗೆ ಕಂಡಂತೆ ಜೋಡಿಸಲಾಗಿದೆ. ಇವುಗಳಲ್ಲಿ 1 ಅತ್ಯಂತ ಹಳೆಯದು.

ಆರ್ಷೇಯ ಶಿಲಾಸಂಕೀರ್ಣತೆ
- (1) ಧಾರವಾಡ ಶಿಲಾಸಮೂಹ
- (2) ಪೆನಿನ್‌ಸುಲಾರ್ ನೈಸು
- (3) ಚಾರ್ನ್‌ಕೈಟುಗಳು
- (4) ಗ್ರಾನೈಟುಗಳು

ಅತ್ಯಂತ ಪುರಾತನ ವಿಭಾಗವಾದ ಧಾರವಾಡ ಶಿಲಾಸಮೂಹವು (ಅಥವಾ ಸಾಮಾನ್ಯವಾಗಿ ಧಾರವಾಡ ಶಿಲೆಗಳು ಎಂದು ಕರೆಯಲಾಗಿರುವುದು) ಪ್ರಾಯಶಃ ಅನೇಕ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು: ಆರ್ಷೇಯ ಶಿಲಾಕಲ್ಪದ ಶಿಲಾತೊಡಕಿನಲ್ಲಿ ಈ ಶಿಲಾಸಮೂಹವು ನಿರ್ದಿಷ್ಟವಾದ ಭಾಗವೆಂದು ಸ್ಥಾಪಿಸಿದ ಖ್ಯಾತಿಯು 1876 ರಲ್ಲಿ ಈ ಪ್ರದೇಶದ ಭೂಸರ್ವೆಯನ್ನು ಮೊದಲು ನಡೆಸಿದ ಬ್ರೂಸ್‌ಫುಟ್‌ಗೆ ಸಲ್ಲುತ್ತದೆ. ಈ ಶಿಲೆಗಳನ್ನು ಅವನು ಧಾರವಾಡದ ಸುತ್ತಮುತ್ತಲೂ ನೋಡಿದ್ದರಿಂದ ಇವುಗಳಿಗೆ 'ಧಾರವಾಡ ಶಿಲಾಸಮೂಹ' ವೆಂದು ಹೆಸರು ಕೊಟ್ಟನು. ಇದಾದ ಮೇಲೆ ಇದೇ ರೀತಿಯ ಶಿಲೆಗಳನ್ನು ಇಂಡಿಯಾ ಪರ್ಯಾಯ ದ್ವೀಪಭಾಗದಲ್ಲಿ ಕರ್ಣಾಟಕದ ಒಳಗೂ ಹೊರಗೂ ಕಂಡುಹಿಡಿಯಲಾಗಿದೆ. ಭಾರತದ ಪೂರ್ತಿ ಈಗ ಧಾರವಾಡ ಶಿಲಾಸಮೂಹವನ್ನು ಆರ್ಷೇಯ ಕಲ್ಪದ

ಅತ್ಯಂತ ಮುಖ್ಯಭಾಗವೆಂದು ಪರಿಗಣಿಸಲಾಗಿದೆ. ಕರ್ಣಾಟಕ ಪ್ರದೇಶದಲ್ಲಿ ಈ ಶಿಲೆಗಳನ್ನು ಬಹಳ ವಿವರವಾಗಿ ಪರಿಶೀಲಿಸಲಾಗಿದೆ ಮತ್ತು ಈ ಪರಿಶೋಧನೆಗಳ ಪರಿಣಾಮವಾಗಿ ಮೈಸೂರು ಪ್ರದೇಶದಲ್ಲಿ ಅಲ್ಲದೆ ಇಂಡಿಯಾ ಪರ್ಯಾಯ ದ್ವೀಪದ ಪೂರ್ತ ಧಾರವಾಡ ಶಿಲಾಸಮೂಹದ ತಿಳಿವಳಿಕೆಗೆ ಬೆಲೆಬಾಳುವ ಕೊಡುಗೆಯಾಗಿದೆ. ಈ ಪರಿಶೀಲನೆಗಳ ಆಧಾರದ ಮೇಲೆ ಧಾರವಾಡ ಶಿಲಾಸಮೂಹವನ್ನು ಕೆಳ, ಮಧ್ಯ ಮತ್ತು ಮೇಲುಭಾಗವೆಂದು ಮೂರು ವಿಭಾಗ ಮಾಡಲಾಗಿದೆ. ಅತ್ಯಂತ ಪುರಾತನವಾದ ಈ ಎಲ್ಲ ಶಿಲಾವರ್ಗಗಳ ಅಡಿಪಾಯವಾಗಿರುವ ಕೆಳಭಾಗವು **ಅಧಿಕಸಿಲಿಕಾಂಶ ಮತ್ತು ಕಡಮೆ ಸಿಲಿಕಾಂಶದ** ಶಿಲಾರಸ ಪದರಗಳಿಂದಾದ ಅಗ್ನಿಶಿಲೆಗಳನ್ನೊಳಗೊಂಡಿದೆ. ಇದರ ಮೇಲಿನ ವಿಭಾಗವಾದ ಮಧ್ಯ ಧಾರವಾಡ ಶಿಲೆಗಳು ಶಿಸ್ಟುಗಳು, ಕ್ವಾಟ್ಜೈಟ್‌ಗಳು, ಸುಣ್ಣಶಿಲೆಗಳು, ಡಾಲೊಮೈಟ್‌ಗಳು ಮತ್ತು ಪದರವಾದ ಫೆರುಜಿನಸ್ ಕ್ವಾಟ್ಜೈಟ್‌ಗಳು ಮುಂತಾದ ಶಿಲೆಗಳಿಂದಾಗಿವೆ. ಅವುಗಳಲ್ಲಿ ಕೆಲವಂತೂ ಜಲಜಶಿಲೆಗಳಾಗಿರುವುದರಲ್ಲಿ ಸಂಶಯವಿಲ್ಲ. ಮೇಲು ಧಾರವಾಡಶಿಲೆಗಳು ಕನ್ಗ್ಲಾಮರೇಟ್, ಕ್ವಾಟ್ಜೈಟ್, ಚರ್ಟ್ ಮತ್ತು ಫೆರುಜಿನಸ್ ಸಿಲ್ಟುಗಳು ಮತ್ತು ಸುಣ್ಣಶಿಲೆಗಳು ಇವೇ ಮುಂತಾದ ಶಿಲೆಗಳಿಂದಾಗಿವೆ. ಇವುಗಳಲ್ಲಿ ಅನೇಕವು ಸ್ಪಷ್ಟವಾಗಿ ಮೂಲಜಲಜೋತ್ಪನ್ನದ ಗುರುತುಗಳನ್ನು ತೋರಿಸುತ್ತವೆ. ಈ ಮೂರು ವಿಭಾಗದ ಶಿಲೆಗಳೂ ಅನಂತರದ ಅಗ್ನಿಶಿಲಾ ಚಟುವಟಿಕೆಗಳಿಂದಲೂ ಭೂಚಲನೆಗಳಿಂದಲೂ ವಿಪರೀತ ಉಷ್ಣ ಮತ್ತು ಒತ್ತಡಕ್ಕೆ ಒಳಗಾಗಿವೆ. ಅದರಿಂದ ಈ ಶಿಲೆಗಳು ತಮ್ಮ ರಚನೆ ಮತ್ತು ಖನಿಜ ಸಂಯೋಜನೆಗಳಲ್ಲಿ ಎಷ್ಟು ವ್ಯತ್ಯಾಸ ಪಡೆದಿವೆಯೆಂದರೆ, ಈಗ ಅವುಗಳ ಮೂಲಸ್ವಭಾವ ಮತ್ತು ರೂಪುಗೊಂಡ ಕಾಲಗಳನ್ನು ನಿರ್ಧರಿಸುವುದು ಬಹಳ ಕಷ್ಟ. ಧಾರವಾಡ ಸಮೂಹದ ಶಿಲೆಗಳು ಭೂಮಿಯ ಮೇಲೆ ತಿಳಿದಿರುವ ಶಿಲೆಗಳಲ್ಲೆಲ್ಲಾ ಖಂಡಿತ ಅತ್ಯಂತ ಪುರಾತನವಾದವು ಮತ್ತು ಇದರಲ್ಲಿ ಕೆಲವಂತೂ ಭೂಮೇಲ್ಪದರದ ಪ್ರಾರಂಭದಲ್ಲಿ ರೂಪುಗೊಂಡ ಶಿಲೆಗಳಿರಬೇಕೆಂದು ಕೆಲವರ ಊಹೆ.

ಕರ್ಣಾಟಕ ಪ್ರದೇಶದಲ್ಲಿ ಧಾರವಾಡ ಶಿಲಾಸಮೂಹದ ಶಿಲೆಗಳು ಸುಮಾರು ವಾಯವ್ಯದಿಂದ ಆಗ್ನೇಯಕ್ಕೆ ಹರಡಿರುವ ಇಕ್ಕಟ್ಟಾದ ಭೂವಲಯ ಅಥವಾ ಭೂಪದರದಲ್ಲಿ ಸಾಮಾನ್ಯವಾಗಿ ದೊರಕುತ್ತವೆ. ಈ ಭೂವಲಯಗಳಲ್ಲಿರುವ ಶಿಲೆಗಳು ಬಹುವಾಗಿ ಶಿಸ್ಟುಗಳು. ಆದುದರಿಂದ ಇವಕ್ಕೆ ಶಿಸ್ಟು ಭೂವಲಯಗಳೆಂದು ಆಗಾಗ್ಗೆ ಹೇಳುವುದುಂಟು. ಈ ಶಿಸ್ಟುಭೂವಲಯಗಳಲ್ಲಿ ಚೆನ್ನಾಗಿ ತಿಳಿದಿರುವುವು ಮೂರು—(1) ಧಾರವಾಡ–ಶಿವಮೊಗ್ಗ ಶಿಸ್ಟು ಭೂವಲಯ (2) ಗದಗ–ಚಿತ್ರದುರ್ಗ ಶಿಸ್ಟು ಭೂವಲಯ ಮತ್ತು (3) ಕೋಲಾರ ಶಿಸ್ಟುಭೂವಲಯ. ಇವುಗಳಲ್ಲಿ ಮೊದಲನೆಯದು 350 ಮೈಲಿ ಉದ್ದವಾಗಿ, ದಕ್ಷಿಣದಲ್ಲಿ ಅತ್ಯಂತ ಅಗಲವಾಗಿರುವ ಭಾಗದಲ್ಲಿ ಸುಮಾರು 100 ಮೈಲಿ ಇದ್ದು, ಅತ್ಯಂತ ವಿಶಾಲವಾದದ್ದಾಗಿದೆ. ಎರಡನೆಯದು ಇಕ್ಕಟ್ಟಾಗಿದ್ದರೂ ಉದ್ದವಾಗಿದ್ದು, ಉತ್ತರದಲ್ಲಿ ನರಗುಂದದಿಂದ ದಕ್ಷಿಣದಲ್ಲಿ ಮೈಸೂರಿನ ವರೆಗೆ ಹಬ್ಬಿ 550 ಮೈಲಿ ಉದ್ದವೂ ಕೇವಲ 50 ಮೈಲಿ ಅಗಲವೂ ಇದೆ. ಮೂರನೆಯದಾದ ಕೋಲಾರ ಶಿಸ್ಟು ಭೂವಲಯವು ಕೇವಲ 40 ಮೈಲಿ ಉದ್ದವಾಗಿಯೂ 6 ಮೈಲಿ ಅಗಲವಾಗಿಯೂ ಇದ್ದು, ಇತರ ಎರಡಕ್ಕಿಂತಲೂ ಚಿಕ್ಕದು. ಆದರೆ ಜಗತ್ಪ್ರಸಿದ್ಧವಾದ ಕೋಲಾರದ ಚಿನ್ನದ ಗಣಿ ಪ್ರದೇಶದಿಂದ ಹೊರತೆಗೆದ ಎಲ್ಲ ಚಿನ್ನವೂ ಈ ಶಿಸ್ಟು ಭೂವಲಯದಲ್ಲಿರುವುದರಿಂದ ಇದು ಅತ್ಯಂತ ಮುಖ್ಯವಾದುದಾಗಿದೆ.

ಈ ಮೂರು ಭೂವಲಯಗಳಲ್ಲದೆ ಧಾರವಾಡ ಶಿಲಾಸಮುದಾಯದ ಶಿಲೆಗಳು ಕರ್ಣಾಟಕದ ಇನ್ನು ನಾಲ್ಕು ಪ್ರದೇಶಗಳಲ್ಲಿವೆ. ಮತ್ತು ಅವು ಆರ್ಥಿಕ ದೃಷ್ಟಿಯಿಂದ ಬಹು ಮುಖ್ಯವಾದುವು. ಈ ನಾಲ್ಕು ಪ್ರದೇಶಗಳಾವುವೆಂದರೆ: (1) ಸೂಪ–ಲೋಂಡ ಪ್ರದೇಶ, (2) ಕಬ್ಬಿಣದ ಅದುರಿಗೆ ಪ್ರಸಿದ್ಧವಾದ ಹುನಗುಂದ ಪ್ರದೇಶ (ಬಿಜಾಪುರ ಜಿಲ್ಲೆ), (3) ಚಿನ್ನದಿಂದ ಕೂಡಿದ ಶಿಲೆಗಳಿಗೆ ಪ್ರಸಿದ್ಧವಾದ ಹಟ್ಟಿ

ಪ್ರದೇಶ (ರಾಯಚೂರು ಜಿಲ್ಲೆ) ಮತ್ತು (4) ಹೇರಳವಾದ ಮತ್ತು ವಿಶಾಲವಾದ ಕಬ್ಬಿಣದ ಮತ್ತು ಮ್ಯಾಂಗನೀಸ್ ಅದುರಿರುವ ಸಾಂದೂರು ಪ್ರದೇಶ (ಬಳ್ಳಾರಿ ಜಿಲ್ಲೆ).

ಧಾರವಾಡ ಸಮೂಹದ ಶಿಲೆಗಳಲ್ಲಿ ಕರ್ಣಾಟಕವು ಪ್ರಸಿದ್ಧವಾಗಿರುವ ಎಲ್ಲ ಬೆಲೆಬಾಳುವ ಲೋಹಗಳ ಅದುರು ನಿಕ್ಷೇಪಗಳು ಇರುವುದರಿಂದ ಅವು ಅತ್ಯಂತ ಬೆಲೆ ಬಾಳುವುವು ಆಗಿವೆ. ಇವುಗಳಲ್ಲಿ ಹೆಸರುವಾಸಿಯಾದ ಕೋಲಾರದ ಚಿನ್ನದ ಗಣಿಪ್ರದೇಶವು ಅತ್ಯಂತ ಪ್ರಮುಖವಾದುದು. ಚಿನ್ನವು ಕರ್ಣಾಟಕದ ಇತರ ಭಾಗಗಳಲ್ಲಿಯೂ ದೊರಕುತ್ತದೆ. ಇವುಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಹಟ್ಟಿಯ ಹತ್ತಿರವಿರುವುವು ಮತ್ತು ಧಾರವಾಡ ಜಿಲ್ಲೆಯಲ್ಲಿ ಗದಗ ಸಮೀಪದಲ್ಲಿರುವುವು ಹೆಸರುವಾಸಿಯಾದವು. ಈ ಎರಡು ಪ್ರದೇಶಗಳಲ್ಲೂ ಈಗ ನಡೆಸಲಾಗುತ್ತಿರುವ ಆಧುನಿಕ ರೀತಿಯ ಪರಿಶೋಧನೆಗಳಿಂದ ಕೋಲಾರ ದಂತಹ ಚಿನ್ನದ ಗಣಿಗಳಾಗಲು ಸಾಧ್ಯತೆಯಿರುವ ನಿಕ್ಷೇಪಗಳಿರುವುದು ಕಂಡುಬರಬಹುದು. ಚಿನ್ನವಲ್ಲದೆ ವಿಶಾಲವಾದ ಕಬ್ಬಿಣದ ಮತ್ತು ಮ್ಯಾಂಗನೀಸಿನ ನಿಕ್ಷೇಪಗಳು ಕರ್ಣಾಟಕದ ಅಮೂಲ್ಯವಾದ ಖನಿಜ ಸಂಪತ್ತಿನ ಭಾಗವಾಗಿವೆ. ಇಂಗಳದ ಹಾಳು (ಚಿತ್ರದುರ್ಗ ಜಿಲ್ಲೆ) ಮತ್ತು ಕಲ್ಯಾಡಿ (ಹಾಸನ ಜಿಲ್ಲೆ) ಗಳ ಸಮೀಪದಲ್ಲಿ ಕಂಡುಹಿಡಿಯಲಾದ ತಾಮ್ರದ ನಿಕ್ಷೇಪಗಳು ಗಮನಾರ್ಹವಾದವು. ಇವುಗಳಲ್ಲದೆ ಅನೇಕ ಕೈಗಾರಿಕೆಗಳಿಗೆ ಮೂಲಪದಾರ್ಥವನ್ನು ಒದಗಿಸುವ ಅನೇಕ ಆರ್ಥಿಕ ಖನಿಜನಿಕ್ಷೇಪಗಳು ಕರ್ಣಾಟಕದ ಅನೇಕ ಭಾಗಗಳಲ್ಲಿ ದೊರಕುವುವು.

### ಪೆನಿನ್‌ಸುಲಾರ್ ನೈಸು

ಧಾರವಾಡ ಶಿಲೆಗಳಾದ ಮೇಲೆ ವಯಸ್ಸಿನಲ್ಲಿ ಕಿರಿದಾದ, ಕರ್ಣಾಟಕದ ಆರ್ಷೇಯ ಕಲ್ಪದ ಶಿಲಾತೊಡಕಿನ ಪ್ರಮುಖ ಭಾಗವನ್ನು ಪೆನಿನ್‌ಸುಲಾರ್ ನೈಸು ಆಕ್ರಮಿಸಿದೆ. ಈ ಶಿಲಾಸಮೂಹದ ಮುಖ್ಯಭಾಗವು 'ನೈಸು' ಎಂಬ ಪಟ್ಟೆರಚನೆಯಿರುವ ಕಣ ಶಿಲೆಯಿಂದಾಗಿದೆ. ಈ ನೈಸು ಶಿಲೆಯು ಪರ್ಯಾಯದ್ವೀಪದ ಬಹುಭಾಗವನ್ನಾಕ್ರಮಿಸಿರುವುದರಿಂದ ಇದಕ್ಕೆ 'ಪೆನಿನ್‌ಸುಲಾರ್ ನೈಸು' ಎಂಬ ಹೆಸರು ಬಂದಿದೆ. ವಿಶದವಾದ ಪರಿಶೀಲನೆಯಿಂದ ಈ ಪೆನಿನ್‌ಸುಲಾರ್ ನೈಸ್ ಕೂಡ ಅನೇಕ ವಿಧವಾದ ಗ್ರಾನೈಟ್‌ನ ದೊಡ್ಡ ಹರವುಗಳಿಂದ ಕೂಡಿ ಅನೇಕ ರೀತಿಯ ನೈಸು ಶಿಲೆಗಳಿಂದಾದ 'ಶಿಲಾತೊಡಕು' ಆಗಿದೆಯೆಂದು ತಿಳಿದುಬಂದಿದೆ. ಸಾಮಾನ್ಯವಾಗಿ ಹೇಳುವುದಾದರೆ, ಈ ಶಿಲೆಗಳೆಲ್ಲ ಭೂಮೇಲ್ಪದರದ ಆಳಭಾಗದಿಂದ, ಮೊದಲಿದ್ದ ಧಾರವಾಡ ಶಿಲಾಸಮುದಾಯದ ಶಿಲೆಗಳನ್ನು ಭೇದಿಸಿಕೊಂಡು ಅಥವಾ ಅಂತಸ್ಸರಣವಾಗಿ ಮೇಲ್ಬಂದ ಅಗ್ನಿಶಿಲೋತ್ಪನ್ನವಾದ ಶಿಲೆಗಳು. ಈ ಕಾರ್ಯಗತಿಯಲ್ಲಿ ಹಳೆಯ ಧಾರವಾಡ ಶಿಲೆಗಳು ಒಂದುಕಡೆಗೆ ಒತ್ತರಿಸಲ್ಪಟ್ಟವು ಮತ್ತು ಹರವಿನಲ್ಲಿ ಅಲ್ಲಿ ಇಲ್ಲಿ ಇರುವ ಚಿಕ್ಕ ಪ್ರದೇಶಗಳಿಗೆ ಸೀಮಿತವಾಗಿವೆ. ಅನಂತರದ ನೈಸುಗಳು ಮತ್ತು ಗ್ರಾನೈಟುಗಳು ಹೊರಮೈಯ ಭಾಗವನ್ನಾಕ್ರಮಿಸಿವೆ. ಈ ಪೆನಿನ್‌ಸುಲಾರ್ ನೈಸುಗಳು ಆಗಾಗ್ಗೆ ಪೆಗ್ಮಟೈಟ್‌ಗಳೆಂಬ ಎಳೆಗಳನ್ನೊಳಗೊಂಡಿವೆ. ಮತ್ತು ಇವುಗಳಲ್ಲಿ ಪದೇ ಪದೇ ಅನೇಕ ಅಪರೂಪವಾದ ಆರ್ಥಿಕ ಮೌಲ್ಯದ ಅಥವಾ ವೈಜ್ಞಾನಿಕ ಆಸಕ್ತಿಯ ಖನಿಜಗಳು ಇರುವುದರಿಂದ ಇವು ವಿಶೇಷ ಬೆಲೆಯುಳ್ಳವಾಗಿವೆ.

### ಚಾರ್ನೈಕೈಟುಗಳು

ಪೆನಿನ್‌ಸುಲಾರ್ ನೈಸುಗಳು ರೂಪುಗೊಂಡ ಬಹುಕಾಲವಾದ ಮೇಲೆ ಇಂಡಿಯಾ ಪರ್ಯಾಯದ್ವೀಪದ ಆರ್ಷೇಯ ಕಲ್ಪದ ಭಾಗವಾಗಿರುವ ಬಹಳ ಆಸಕ್ತಿದಾಯಕವಾದ ಮತ್ತು ಮುಖ್ಯವಾದ ಶಿಲಾಸಮೂಹವು ರೂಪುಗೊಂಡಿತು. ಈ ಶಿಲಾಸಮೂಹಕ್ಕೆ ಚಾರ್ನೈಕೈಟುಗಳೆಂದು ಹೆಸರು. ಚಾರ್ನೈಕೈಟುಗಳು ಇಂಡಿಯಾ


ಕರ್ನಾಟಕದ
ಭೂವೈಜ್ಞಾನಿಕ ಭೂಪಟ
ವಿವರಣೆ
ನವೀನ ನಿಕ್ಷೇಪಗಳು
ದಖ್ಖನ್ ಟ್ರ್ಯಾಪು
ಗ್ರಾನೈಟುಗಳು
ಧಾರವಾಡ ಶಿಲೆಗಳು
ಬಿದರೆ
ಬಿಜಾಪುರ
ರಾಯಚೂರು
ಹುನಗುಂದ
ಧಾರವಾಡ
ಗದಗ್
ಕಾರವಾರ
ಬಳ್ಳಾರಿ
ಚಿತ್ರದುರ್ಗ
ಮಂಗಳೂರು
ಹಾಸನ
ಬೆಂಗಳೂರು
ಮೈಸೂರು

ಚಿತ್ರ 5

ಪರ್ಯಾಯದ್ವೀಪದ ಆರ್ಷೇಯ ಕಲ್ಪದ ನಿರ್ದಿಷ್ಟ ಘಟಕ ಎಂದು 1900ರಲ್ಲಿ ಸರ್ ಥಾಮಸ್ ಹಾಲೆಂಡ್‌ನಿಂದ ಮೊತ್ತಮೊದಲು ಕಂಡುಹಿಡಿಯಲಾಯಿತು. ಅವನು ಇವನ್ನು ಅಗ್ನಿಶಿಲಾವರ್ಗಕ್ಕೆ ಸೇರಿದವೆಂದು ವರ್ಣಿಸಿದನು. ಚಾರ್ನಕೈಟು ಶಿಲಾಸಮೂಹದ ಒಂದು ಅಲ್ಪ ಭಾಗವು ಕರ್ನಾಟಕದ ದಕ್ಷಿಣ ಭಾಗಕ್ಕೆ ಸೀಮಿತವಾಗಿದೆ (5ನೇ ಚಿತ್ರ ನೋಡಿ). ಬಿಳಿಗಿರಿರಂಗನ ಬೆಟ್ಟದಲ್ಲಿ ಇದರ ಉತ್ತಮವಾದ ವಿಧಗಳು ದೊರಕುತ್ತವೆ. ಚಾರ್ನಕೈಟುಗಳು ದಪ್ಪಕಣವುಳ್ಳ ಶಿಲೆಗಳು ; ಆದರೆ ಅವುಗಳಲ್ಲಿ ವಿವಿಧ ಖನಿಜ ಸಂಯೋಜನೆಗಳಿವೆ. ಒಟ್ಟಿನಲ್ಲಿ ಇವೆಲ್ಲ ಪೆನಿನ್‌ಸುಲಾರ್ ನೈಸುಗಳಿಗೆ ಕಿರಿದಾದವು.

### ಕಿರಿಯ ಗ್ರಾನೈಟುಗಳು

ಈ ಚಾರ್ನಕೈಟುಗಳು ರೂಪುಗೊಂಡ ಮೇಲೆ ಉತ್ತರದಲ್ಲಿ ಬಳ್ಳಾರಿಯಿಂದ ದಕ್ಷಿಣದಲ್ಲಿ ಶಿವಸಮುದ್ರದ ವರೆಗೆ ಸುಮಾರು ಉತ್ತರ–ದಕ್ಷಿಣವಾಗಿ ಗ್ರಾನೈಟುಗಳ ಮತ್ತು ಅದಕ್ಕೆ ಸಂಬಂಧಪಟ್ಟ ಶಿಲಾ ಪರಂಪರೆಗಳ ಇನ್ನೊಂದು ಅಂತಸ್ಸರಣವಾಗಿದೆ. ಈ ಪರಂಪರೆಗಳಲ್ಲಿ ದಪ್ಪ ಕಣದ, ಸ್ಫಟಿಕ ರಚನೆಯಿರುವ ಗ್ರಾನೈಟು ಬಹಳ ಸಾಮಾನ್ಯವಾದ ಶಿಲಾವಿಧ ; ಶಿಲೆಯು ವಿವಿಧ ಬಣ್ಣಗಳದ್ದಾಗಿದೆ, ಮತ್ತು ಶಿಲಾಸಮೂಹದಲ್ಲಿ ಹುದುಗಿರುವ ಆಗಾಗ್ಗೆ ಗುಲಾಬಿ ಅಥವಾ ಬೂದು ಬಣ್ಣದ, ದೊಡ್ಡ ಗಾತ್ರದ ಫೆಲ್ಡ್‌ಸ್ಪಾರ್ ಹರಳುಗಳನ್ನು ಕಾಣಬಹುದು. ಇದರಿಂದ ಶಿಲೆಗೆ ಅದರಲ್ಲೂ ಮೆರುಗುಕೊಟ್ಟರೆ, ಸುಂದರವಾದ ತೋರ್ಕೆಯಿರುತ್ತದೆ. ಈ ವಿಧವಾದ ಗ್ರಾನೈಟ್ ಶಿಲೆಯು ಕ್ಲೋಸ್‌ಪೇಟೆ (ರಾಮನಗರಂ) ಸುತ್ತಲೂ ಹರಡಿದೆ, ಮತ್ತು ಈ ರಚನೆಗೆಲ್ಲ 'ಕ್ಲೋಸ್‌ಪೇಟೆ ಗ್ರಾನೈಟು' ಗಳೆಂದು ಹೆಸರು ಬಂದಿದೆ. ಹಿಂದೆಯೇ ತಿಳಿಸಿದಂತೆ ಈ ಶಿಲೆಗಳು ಒಂದೇಸಮನೆ ಉತ್ತರದಲ್ಲಿ ಬಳ್ಳಾರಿಯಿಂದ ದಕ್ಷಿಣದಲ್ಲಿ ಶಿವಸಮುದ್ರದ ವರೆಗೆ ಸುಮಾರು 400 ಮೈಲಿಗಳ ವರೆಗೆ ಹರಡಿವೆ. ಹೋಲಿಕೆಯಿಂದ ಕಿರಿದಾಗಿ ಮತ್ತು ಹೆಚ್ಚು ನಿರೋಧ ಶಕ್ತಿಯಿರುವುದರಿಂದ ಈ ಶಿಲೆಗಳು ಆ ಪ್ರದೇಶಗಳಲ್ಲೆಲ್ಲ ಬೆಟ್ಟ ಸಾಲುಗಳಾಗಿ ಎದ್ದು ನಿಂತಿವೆ. ಇವುಗಳಲ್ಲಿ ಬಳ್ಳಾರಿ, ಚಿತ್ರದುರ್ಗ, ಹೊಸದುರ್ಗ, ಅರಸಿಕೆರೆ, ನಂದಿ, ಶಿವಗಂಗಾ, ಮಾಗಡಿ, ಕ್ಲೋಸ್‌ಪೇಟೆ, (ರಾಮನಗರ) ಮತ್ತು ಮೈಸೂರು ಸಮೀಪದಲ್ಲಿರುವವು ಪ್ರಮುಖವಾದವು. ಕ್ಲೋಸ್‌ಪೇಟೆ ಗ್ರಾನೈಟು ಭೂವಲಯದ ದಕ್ಷಿಣದ ಕೊನೆಯಲ್ಲಿ ಮತ್ತು ಅದಕ್ಕೆ ಸಮೀಪದಲ್ಲಿಯೇ 'ಪಾರ್ಫಿರಿಗಳು' ಎಂಬ ಇನ್ನೊಂದು ಶಿಲಾಸಮುದಾಯವು ದೊರಕುತ್ತದೆ. ಅವನ್ನು ಕ್ಲೋಸ್‌ಪೇಟೆ ಗ್ರಾನೈಟು ಸಮೂಹದ ಭಾಗವೆಂದು ಪರಿಗಣಿಸಲಾಗಿದೆ ; ಅವು ಮಂಡ್ಯ ಮತ್ತು ಮೈಸೂರು ಪ್ರದೇಶಗಳಲ್ಲಿ ಸಾಮಾನ್ಯವಾಗಿ ದೊರಕುತ್ತವೆ. ಅವುಗಳ ಅತ್ಯುತ್ತಮವಾದ ಹೊರಚಾಚುಗಳು ಶ್ರೀರಂಗಪಟ್ಟಣದ ಸಮೀಪದಲ್ಲಿವೆ. ಈ ಶಿಲೆಗಳು ದೊಡ್ಡದಾದ ಹೊಳೆಯುವ ಫೆಲ್ಡ್‌ಸ್ಪಾರ್ ಹರಳುಗಳು ಶಿಲೆಯ ಸಮುದಾಯ ಭಾಗವಾಗಿರುವ ಸೂಕ್ಷ್ಮಕಣದ ಅವೃತ್ತ ಕಣಸಮೂಹದಲ್ಲಿ ಹುದುಗಿರುವುದರಿಂದ ಅವುಗಳ ತೋರ್ಕೆ ವಿಶೇಷವಾಗಿರುತ್ತದೆ. ಫೆಲ್ಡ್‌ಸ್ಪಾರ್‌ನ ಬಣ್ಣ ವಿವಿಧವಾಗಿರುತ್ತದೆ, ಮತ್ತು ಅವೃತ್ತ ಕಣದ ಬಣ್ಣವು ಸ್ಥಳಸ್ಥಳಕ್ಕೆ ವ್ಯತ್ಯಾಸವಾಗಿರುತ್ತದೆ. ಈ ಎಲ್ಲ ವಿಧವಾದ ಬಣ್ಣ ವ್ಯತ್ಯಾಸಗಳಿಂದ ಅನೇಕ ವಿಧವಾದ ಪಾರ್ಫಿರಿಗಳು ದೊರಕುತ್ತವೆ. ಅವುಗಳನ್ನು ಕತ್ತರಿಸಿ ಹೊಳಪು ಕೊಟ್ಟಾಗ ಅವುಗಳ ತೋರ್ಕೆಯು ಬಹಳ ಸುಂದರವಾಗಿ ಮತ್ತು ಸಂತೋಷದಾಯಕವಾಗಿ ಇರುತ್ತದೆ. ಆದುದರಿಂದ ಅವನ್ನು ನಮ್ಮ ಅತ್ಯಂತ ಬೆಲೆಬಾಳುವ ಅಲಂಕಾರಕ ಶಿಲೆಗಳೆಂದು ಪರಿಗಣಿಸಲಾಗಿದೆ. ಅವು ಭಾರತದ ಎಲ್ಲ ಭಾಗಗಳಲ್ಲಿಯೂ ವಿದೇಶಗಳಲ್ಲಿಯೂ ಪ್ರಸಿದ್ಧವಾಗಿವೆ.

ಇದು ನಾಲ್ಕು ಶಿಲಾಸಮೂಹಗಳಾದ (1) ಧಾರವಾಡ ಶಿಲೆಗಳು (2) ಪೆನಿನ್‌ಸುಲಾರ್ ನೈಸುಗಳು (3) ಚಾರ್ನಕೈಟುಗಳು ಮತ್ತು (4) ಕ್ಲೋಸ್‌ಪೇಟೆ ಗ್ರಾನೈಟುಗಳು ಇವುಗಳ ವಿವರಣೆಯನ್ನು ಮುಕ್ತಾಯಗೊಳಿಸುತ್ತದೆ. ಇವು ಒಟ್ಟಿಗೆ ಮೈಸೂರಿನ ಆರ್ಷೇಯ ಕಲ್ಪದ ಶಿಲಾತೊಡಕನ್ನು ನಿರೂಪಿಸುತ್ತವೆ. ಮತ್ತು ಕರ್ನಾಟಕದ ಒಟ್ಟು ಪ್ರದೇಶದ ಶೇಕಡ 75 ಭಾಗಕ್ಕಿಂತ ಹೆಚ್ಚಿಗೆ ಆವರಿಸುತ್ತವೆ

ಈ ಶಿಲಾಸಮುದಾಯಗಳು ಪರಸ್ಪರ ವಯಸ್ಸಿನಲ್ಲಿ ವ್ಯತ್ಯಾಸವಾಗಿದ್ದರೂ ಅವುಗಳೆಲ್ಲ ಭೂ ಚರಿತ್ರೆಯ ಅತ್ಯಂತ ಪುರಾತನ ಕಾಲವಾದ ಆರ್ಷೇಯ ಕಲ್ಪಕ್ಕೆ ಸೇರಿದವೆಂಬುದನ್ನು ನೆನಪಿನಲ್ಲಿಡಬೇಕಾದುದು ಬಹಳ ಮುಖ್ಯವಾದ ವಿಷಯ.

## ಆದಿಜೀವಕಲ್ಪ

ಕರ್ಣಾಟಕವನ್ನು ತೆಗೆದುಕೊಂಡರೆ ಈ ಕಲ್ಪದ ಶಿಲಾಸಮೂಹಗಳು ಪ್ರಾಂತ್ಯದ ಉತ್ತರಭಾಗದಲ್ಲಿ ಬೆಳಗಾವಿನ ಸಮೀಪದಿಂದ ಈಶಾನ್ಯ ದಿಕ್ಕಿನಲ್ಲಿ ಚಿಂಚೋಳಿ (ಗುಲ್ಬರ್ಗ ಜಿಲ್ಲೆ) ವರೆಗೆ ಚಿಕ್ಕದಾದ ಮತ್ತು ಇಕ್ಕಟ್ಟಾದ ಪ್ರದೇಶದಲ್ಲಿ ಸೀಮಿತವಾಗಿವೆ. ಈ ಸಮೂಹದ ಪುರಾತನ ಶಿಲೆಗಳು ಬಿಜಾಪುರ ಜಿಲ್ಲೆಯ ಕಲದ್ಗಿಯ ಸುತ್ತಮುತ್ತಲಿನಲ್ಲಿ ಚೆನ್ನಾಗಿ ರೂಪುಗೊಂಡಿರುವುದರಿಂದ ಇವಕ್ಕೆ ಕಲದ್ಗಿಸ್ತೋಮಗಳೆಂದು ಹೆಸರು ಬಂದಿದೆ. ಇಲ್ಲಿ ಈ ಶಿಲೆಗಳು ಕಡಪಶಿಲಾಸಮುದಾಯದ ಅಮುಖ್ಯ ಭಾಗವನ್ನು ನಿರೂಪಿಸುತ್ತವೆ. ಅವು ಮುಖ್ಯವಾಗಿ ನಿಸ್ಸಂಶಯವಾಗಿ ಜಲಜ ಶಿಲೆಗಳಾದ ಕನ್ಗ್ಲಾಮರೇಟು, ಮರಳುಶಿಲೆ, ಶೇಲುಗಳು ಮತ್ತು ಸುಣ್ಣಶಿಲೆಗಳಿಂದ ರಚಿತವಾಗಿವೆ. ಕಲದ್ಗಿ ಶಿಲಾರಚನೆಗೆ ಈಶಾನ್ಯದಲ್ಲಿ ಬಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳ ಭಾಗಗಳಲ್ಲಿ "ಭೀಮಶಿಲಾಸ್ತೋಮ" ಗಳೆಂಬ ಇನ್ನೊಂದು ಜಲಜ ಶಿಲಾಸಮೂಹಗಳನ್ನು ನಾವು ಕಾಣುತ್ತೇವೆ. ಈ ಶಿಲೆಗಳು ಸಾಮಾನ್ಯವಾಗಿ ಕಲದ್ಗಿ ಶಿಲೆಗಳಿಗೆ ಹೋಲಿಕೆ ಪಡೆದಿದ್ದರೂ ವಯಸ್ಸಿನಲ್ಲಿ ಕಿರಿದಾದವು ಮತ್ತು ವಿಂಧ್ಯನ್ ಶಿಲಾಸಮೂಹದ ಕೆಳಭಾಗಕ್ಕೆ ಸೇರಿದವು.

ಆದಿಜೀವಕಾಲದ ಅಂತ್ಯದಲ್ಲಿ ಇಂಡಿಯಾ ದ್ವೀಪಭಾಗದಲ್ಲಿ ಭೂಚಲನೆಯ ಇನ್ನೊಂದು ಪರಂಪರೆಯಾಗಿ ಅದರ ಪರಿಣಾಮವಾಗಿ ಉಂಟಾದ ಸಮುದ್ರದ ತಳದ ಮೇಲೆತ್ತುವಿಕೆಯಿಂದ ಕಡಪ ಮತ್ತು ವಿಂಧ್ಯ ಶಿಲಾಸಮೂಹಗಳು ನಿಕ್ಷೇಪವಾಗುತ್ತಿದ್ದ ಎಲ್ಲ ಸಂಚಯನ ಸ್ಥಾನಗಳು ವಿಸರ್ಜಿಸಲಾದವು. ಮತ್ತು ಹೀಗೆ ಇಂಡಿಯಾ ಪರ್ಯಾಯದ್ವೀಪವು ಸಮುದ್ರದ ಮಟ್ಟದಿಂದ ಸಾಕಷ್ಟು ಮೇಲಿರುವ ವಿಶಾಲವಾದ ಒಂದು ಭೂಭಾಗವಾಯಿತು. ಉತ್ತರಕರ್ಣಾಟಕದಲ್ಲಿ ಕಲದ್ಗಿ ಮತ್ತು ಭೀಮ ಶಿಲಾ ಸ್ತೋಮಗಳು ಸಂಚಯನವಾಗುತ್ತಿದ್ದ ತಗ್ಗು ಪ್ರದೇಶವು ಅದೃಶ್ಯವಾಗಿ ಆದಿಜೀವಕಲ್ಪದ ಕೊನೆಯಲ್ಲಿ ಅದೊಂದುಃಒಣಭೂಮಿಯಾಯಿತು ; ಮತ್ತು ಉಳಿದ ಭೂಚರಿತ್ರೆಯ ಕಾಲದ ಪೂರ್ತಿ ಇಂದಿನ ವರೆಗೆ ಅದೇ ಸ್ಥಿತಿಯಲ್ಲಿ ಮುಂದುವರಿಯಿತು. ಈ ರೀತಿಯಲ್ಲಿ ಕರ್ಣಾಟಕ ಪ್ರದೇಶವು ಪ್ರಪಂಚದ ಅತ್ಯಂತ ಪುರಾತನ ಭೂಭಾಗವೊಂದನ್ನು ನಿರೂಪಿಸುತ್ತದೆ.

## ದಖಿನ್ ಟ್ರ್ಯಾಪು

ಕರ್ಣಾಟಕದಲ್ಲಿ ಕಲದ್ಗಿಶಿಲೆಗಳಿಗೆ ಕಿರಿದಾದ ಶಿಲಾರಚನೆಯೆಂದರೆ ದಖಿನ್ ಟ್ರ್ಯಾಪುಗಳು. ಇದರಲ್ಲಿಯೂ ಬೆಳಗಾಂ, ಬಿಜಾಪುರ, ಗುಲ್ಬರ್ಗ ಮತ್ತು ಬಿದರ್‌ಜಿಲ್ಲೆ (5ನೇ ಚಿತ್ರನೋಡಿ) ಗಳ ಅತ್ಯಂತ ಉತ್ತರ ಭಾಗದಲ್ಲಿ ಹೋಲಿಕೆಯಿಂದ ಬಹಳ ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿರುವ ಒಂದು ಸಣ್ಣಭಾಗವು ಮಾತ್ರ ಇಲ್ಲಿ ಕಂಡುಬರುತ್ತದೆ. ದಖಿನ್ ಶಿಲಾಸಮೂಹದ ಪೂರ ಅತಿಸಾಮಾನ್ಯವಾದ, ಕಪ್ಪಾದ, ಗಟ್ಟಿಯಾಗಿರುವ ಬೆಸಾಲ್ಟು ಶಿಲೆಯು ಪ್ರಧಾನ ಶಿಲೆಯಾಗಿದೆ.

ದಖಿನ್ ಟ್ರ್ಯಾಪಿನ ರಚನೆಯಾದ ಮೇಲೆ ಕರ್ಣಾಟಕ ಪ್ರದೇಶದ ಭಾಗದಲ್ಲಿ ಎಲ್ಲಿಯೂ ಯಾವ ವಿಧವಾದ ಹೊಸ ಶಿಲಾಸಮೂಹವೂ ರೂಪುಗೊಳ್ಳಲಿಲ್ಲ ; ಅದು ಸಮುದ್ರಮಟ್ಟಕ್ಕೆ ಸಾಕಷ್ಟು ಮೇಲಿದ್ದು ಸ್ಥಿರವಾದ ಭೂಭಾಗವಾಗಿ ಮುಂದುವರಿಯಿತು.

**ಇಂದು ನಾವು ಕಾಣುವಂತೆ ಕರ್ನಾಟಕದ ಭೂವಿಜ್ಞಾನ**

ಮೇಲೆ ತಿಳಿಸಿದ ಕರ್ನಾಟಕದ ಭೂಚರಿತ್ರೆಯ ಮುಖ್ಯ ಘಟನೆಗಳ ಸಂಗ್ರಹವಾದ ಪರಿಶೀಲನೆಯಿಂದ ಈ ಪ್ರದೇಶದಲ್ಲಿ ನಾವು ಇಂದು ಕಾಣುವ ಶಿಲಾರಚನೆಗಳನ್ನು ಅರಿತುಕೊಳ್ಳುವುದು ನಮಗೆ ಸುಲಭವಾಗಿದೆ. ಹೇಗಾದರೂ ಪ್ರಾರಂಭದಲ್ಲಿಯೇ ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ ಒಂದು ಮುಖ್ಯ ವಿಷಯವೆಂದರೆ, ಇಂದು ಕಂಡುಬರುವ ಶಿಲಾಸಮೂಹಗಳು ಅವು ರೂಪುಗೊಂಡ ಕೂಡಲೆ ಇದ್ದ ಸ್ಥಿತಿಯಲ್ಲಿಯೇ ಇಲ್ಲವೆಂಬುದು. ಅದರ ಭೂಚರಿತ್ರೆಯಿಂದಲೇ ಸ್ಪಷ್ಟವಾಗುವಂತೆ ಕರ್ನಾಟಕ ಪ್ರದೇಶವು ಆದಿಜೀವಕಲ್ಪದ ಅಂತ್ಯದಿಂದಲೂ ಭೂಭಾಗವಾಗಿಯೇ ಉಳಿದಿದೆ. ಅದರಿಂದೀಚೆಗೆ ಕಳೆದಿರುವ ಅಗಾಧವಾದ ಕಾಲಾವಧಿಯಲ್ಲಿ ವಿವಿಧ ಶಿಲಾವರ್ಗಗಳಿಂದ ರಚಿತವಾದ ಈ ಪುರಾತನ ಭೂಭಾಗವು ಈ ಬಹುಕಾಲದ ಅವಧಿಯಲ್ಲಿ ಭೂವ್ಯಾಪಾರ ಕರ್ತೃಗಳು ನಡೆಸಿರುವ ಭೂವ್ಯಾಪಾರ ಕ್ರಿಯೆಯಿಂದ ಅವಿರತವಾದ ಶಿಲಾಕುಸಿತ ಮತ್ತು ಭೂಸವೆತ ಕಾರ್ಯಗತಿಗಳಿಗೆ ಒಳಗಾಗಿವೆ. ಇದರ ಪರಿಣಾಮವಾಗಿ ಸಾವಿರಾರು ಅಡಿ ದಪ್ಪದ ಶಿಲಾವಸ್ತುಗಳು ಬೇರ್ಪಟ್ಟು ಸಾಗಿಸಲಾಗಿವೆ. ಅದರಿಂದ ಇಂದು ನಮಗೆ ಕಂಡುಬರುವುದು ಈ ಪುರಾತನ ಶಿಲೆಗಳು ರೂಪುಗೊಂಡಾಗ ಹೆಚ್ಚು ದಪ್ಪವಾಗಿಯೂ ವಿಶಾಲವಾಗಿಯೂ ಇದ್ದು ಭೂಸವೆತವು ನಡೆದು ಉಳಿದಿರುವ ಭಾಗಗಳು. ಆದರೆ ಈ ಭೂಸವೆತ ಕ್ರಿಯೆಯು ಎಲ್ಲ ಕಾಲದಲ್ಲಿಯೂ ಒಂದೇ ಗತಿಯಲ್ಲಿ ನಡೆದಿಲ್ಲ. ಅದು (1) ಬದಲಾವಣೆಯನ್ನುಂಟುಮಾಡುವ ಕರ್ತೃಗಳ ಸ್ವಭಾವ ಮತ್ತು ತೀವ್ರತೆ ಮತ್ತು (2) ಅವುಗಳ ಹೊಡೆತಕ್ಕೆ ಬಯಲಾದ ಶಿಲಾಸಮೂಹಗಳ ರಾಸಾಯನಿಕ ಸಂಯೋಜನೆ ಮತ್ತು ರಚನೆ ಇವುಗಳನ್ನವಲಂಬಿಸಿ ಕಾಲದಿಂದ ಕಾಲಕ್ಕೂ, ಸ್ಥಳದಿಂದ ಸ್ಥಳಕ್ಕೂ ವ್ಯತ್ಯಾಸವಾಗಿದೆ. ಹೀಗೆ ಭೂಸವೆತದ ವ್ಯತ್ಯಾಸದಿಂದ ಕ್ರಮೇಣ ಕಾಲಕಳೆದಂತೆಲ್ಲ ಭೂಹೊರಮೈಯಲ್ಲಿ ಅನೇಕ ವಿಧದ ಅಸಮಾನತೆಗಳುಂಟಾದವು. ಕೊನೆಯಲ್ಲಿ ಈ ಪ್ರದೇಶದಲ್ಲಿ ಇಂದು ನಾವು ಕಾಣುವಂತೆ ಎತ್ತರ ಮತ್ತು ತಗ್ಗುಗಳು, ಮೈದಾನಗಳು ಮತ್ತು ಪ್ರಸ್ಥಭೂಮಿಗಳು, ಬೆಟ್ಟಗಳು ಮತ್ತು ಕಣಿವೆಗಳು ಇವುಗಳಿಂದ ಕೂಡಿದ ಎಲ್ಲ ವಿಧವಾದ ಹೊರಮೈ ಸ್ವರೂಪಗಳುಂಟಾದವು. ಜೊತೆಯಲ್ಲಿಯೇ ಈಗ ಈ ಪ್ರದೇಶದಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು ಮತ್ತು ಉಪನದಿಗಳಿಗೆ ಕಾರಣವಾದ ಅನುವರ್ತಿತವಾದ ನದೀಸಮೂಹದ ರೂಪಿಕೆಗಳ ವಿಕಾಸವೂ ಉಂಟಾಯಿತು. ಭೂಮಿಯ ಮೇಲೆ ಕಾಲಾನುಕ್ರಮದಲ್ಲಿ ಭೂಮಿಯ ಹೊರಮೈಯ 'ಮುಖಲಕ್ಷಣ' ಗಳಂತಿರುವ ರಚನೆಗಳು ಯಾವ ನಿರ್ದಿಷ್ಟ ರೀತಿಯಲ್ಲಿ ವಿಕಾಸವಾದವು ಎಂಬುದರ ಅಧ್ಯಯನವು ತಾನೇ ಒಂದು ಆಸಕ್ತಿದಾಯಕವಾದ ವಿಜ್ಞಾನ. ಅದಕ್ಕೆ "ಭೂ ಹೊರಮೈ ಲಕ್ಷಣ ವಿಜ್ಞಾನ" ಎಂದು ಹೆಸರು. ಇದು ಒಂದು ಪ್ರದೇಶದ ಇಂದಿನ ಭೂವೈಜ್ಞಾನಿಕ ಮತ್ತು ಭೌಗೋಳಿಕ ಲಕ್ಷಣಗಳು ಅಲ್ಲಿನ ತಳಭಾಗದಲ್ಲಿರುವ ಶಿಲೆಗಳ ಸ್ವಭಾವ ಮತ್ತು ರಚನೆಗಳ ಸಂಬಂಧದಲ್ಲಿ ಹೇಗೆ ವಿಕಾಸವಾದವು ಎಂಬುದನ್ನು ವಿವರಿಸುತ್ತದೆ. ಭೂಹೊರಮೈ ಲಕ್ಷಣ ವಿಜ್ಞಾನದ ಇಂತಹ ಅಧ್ಯಯನಕ್ಕೆ ಅನೇಕ ಉತ್ತಮ ವಾಗಿರುವ ಪ್ರದೇಶಗಳು ಕರ್ನಾಟಕದಲ್ಲಿವೆ.

ಈಗ ನಾವು ಕಾಣುವಂತಹ ಕರ್ನಾಟಕದ ಪ್ರದೇಶದ ಭೂವಿಜ್ಞಾನವು ಬಹುಮಟ್ಟಿಗೆ ಸುಲಭವಾಗಿದೆ. ಪ್ರಾಂತ್ಯವೆಲ್ಲ (1) ಆರ್ಷೇಯ ಶಿಲೆಗಳು (2) ಆದಿಜೀವಕಲ್ಪದ ಶಿಲೆಗಳು ಮತ್ತು (3) ದಖಿನ್ ಟ್ರ್ಯಾಪು—ಈ ಮೂರು ಶಿಲಾಸಮೂಹಗಳಿಂದ ಆಗಿದೆ. ಆರ್ಷೇಯಕಲ್ಪದ ಶಿಲೆಗಳು ಅತ್ಯಂತ ವಿಶಾಲವಾದವು ಮತ್ತು ಅವನ್ನು (1) ಧಾರವಾಡ ಶಿಸ್ಟುಗಳು (2) ಪೆನಿನ್ ಸುಲಾರ್ ನೈಸುಗಳು, (3) ಚಾರ್ನ್ನೈಟುಗಳು ಮತ್ತು (4) ಕ್ಲೋಸಪೇಟೆ ಗ್ರಾನೈಟುಗಳು ಎಂದು ನಾಲ್ಕು ಉಪವಿಭಾಗ ಮಾಡಲಾಗಿದೆ. ಇವುಗಳಲ್ಲಿ ಪೆನಿನ್ ಸುಲಾರ್ ನೈಸು ಬಹುಭಾಗವನ್ನಾಕ್ರಮಿಸಿದೆ; ಮತ್ತು ಪ್ರಾಂತ್ಯದ 'ಮೈದಾನ ಪ್ರದೇಶ' ವೆನಿಸುವ ಬಹುಭಾಗ ಮಟ್ಟ ಪ್ರದೇಶವು ಈ ನೈಸುಗಳಿಂದಾಗಿದೆ. ಪೆನಿನ್ ಸುಲಾರ್ ನೈಸುಗಳು ಪುರಾತನ ಶಿಸ್ಟುಗಳನ್ನು ಛೇದಿಸಿ ಅಂತಸ್ಸರಣವಾಗಿವೆ; ಅದರ ಪರಿಣಾಮವಾಗಿ ಹಿರಿಯ ಧಾರವಾಡ

ಶಿಸ್ತುಗಳು ಒಂದುಕಡೆಗೆ ಒತ್ತರಿಸಲ್ಪಟ್ಟು, ತೊಡಕಾದ ಮಡಿಕೆಗಳಾಗಿ ಮುದುಡಲ್ಪಟ್ಟು ಈಗ ಶಿಸ್ತು ಭೂವಲಯಗಳೆಂದು ಕಂಡುಹಿಡಿಯಲಾಗಿರುವ ಇಕ್ಕಟ್ಟಾದ ಶಿಲಾಭಾಗಗಳಾಗಿ ದೊರಕುವಂತಾಗಿವೆ. ಈ ಶಿಸ್ತು ಭೂವಲಯದಲ್ಲಿರುವ ಕ್ವಾರ್ಟ್ಜೈಟ್ ಪೆರುಜಿನಸ್ ಕ್ವಾರ್ಟ್ಜೈಟ್‌ಗಳಂತಹ ಗಟ್ಟಿಯಾದ ಮತ್ತು ನಿರೋಧಕ ಸ್ವಭಾವವಿರುವ ಶಿಲೆಗಳಿರುವುದರಿಂದಲೂ ಇಕ್ಕಟ್ಟಾದ ಮಡಿಕೆಗಳಾಗಿರುವುದರಿಂದಲೂ ಅವು ಭೂಸವೆತ ಕರ್ತೃಗಳ ಸವೆತ ಕ್ರಿಯೆಯನ್ನು ತಡೆದುಕೊಂಡಿವೆ, ಮತ್ತು ಆಗಿಂದಾಗ್ಗೆ ಕಡಿದಾದ ಬೆಟ್ಟಗಳ ಮತ್ತು ಶಿಖರಗಳ ಪ್ರಮುಖಸಾಲು ಎದ್ದು ನಿಂತಿವೆ. ಪ್ರಾಂತ್ಯದ ಪಶ್ಚಿಮಭಾಗದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಮತ್ತು ಹಾಸನ ಜಿಲ್ಲೆಗಳ 'ಮಲೆನಾಡು' ಭಾಗಗಳೆಂದು ಹೆಸರಾದ ಕಡಿದಾದ ಬೆಟ್ಟಗಳು ಈ ಸ್ವಭಾವದವು ಮತ್ತು ಇವು ಪಶ್ಚಿಮಘಟ್ಟಗಳ ಭಾಗವಾಗಿವೆ. ಕ್ಲೋಸ್‌ಪೇಟೆ ಗ್ರಾನೈಟುಗಳು ಹೋಲಿಕೆಯಿಂದ ಕಿರಿದಾದರೂ ಅವು ಪ್ರಾಂತ್ಯದ ಪೂರ್ವಭಾಗದ ಮಧ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳ ಮೂಲಕ ಹಾದು ಗ್ರಾನೈಟು ಬೆಟ್ಟಗಳ (ದೊಡ್ಡದಾದ ಗುಂಡಾದ ಬಂಡೆಗಳಿಂದಾದ ಶಂಖಾಕಾರದ ಬೆಟ್ಟಗಳಿಂದಾದ) ಸಾಲುಗಳಿಗೆ ಕಾರಣವಾಗಿವೆ. ಕರ್ನಾಟಕದ ಶಿಲಾಸಮೂಹಗಳ ಅತ್ಯಲ್ಪ ಭಾಗವಾಗಿರುವ ಚಾರ್ನಕೈಟುಗಳು ಪ್ರಾಂತ್ಯದ ನೈಋತ್ಯ ಭಾಗದಲ್ಲಿ ಚಿಕ್ಕ ಪ್ರದೇಶವನ್ನಾಕ್ರಮಿಸಿ ಬೆಟ್ಟಗಳಾಗಿ ನಿಂತಿವೆ.

ಮೇಲೆ ತಿಳಿಸಿದ ಆರ್ಷೇಯಕಲ್ಪದ ಶಿಲೆಗಳಿಗೆ ಬಹಳ ಕಿರಿಯ ಕಲದ್ಗಿ ಮತ್ತು ಭೀಮ ಶ್ರೇಣಿಗಳು ಕೂಡ ಪ್ರಾಂತ್ಯದ ಉತ್ತರಭಾಗದಲ್ಲಿ ಅತಿಮಿತವಾದ ಹರವನ್ನು ಪಡೆದಿವೆ. ಕಲದ್ಗಿ ಶಿಲೆಗಳು ರೂಪ ಗೊಂಡ ಬಹಳ ಕಾಲವಾದ ಮೇಲೆ ರೂಪುಗೊಂಡ ದಖನ್‌ಟ್ರ್ಯಾಪ್ ಶಿಲೆಗಳು ಪ್ರಾಂತ್ಯದ ಅತ್ಯಂತ ಉತ್ತರ ಭಾಗದಲ್ಲಿ ಬಹಳ ಕಡಮೆ ಭಾಗವನ್ನಾಕ್ರಮಿಸಿವೆ. ಆದಿಜೀವಕಲ್ಪದ ಮತ್ತು ದಖನ್‌ಟ್ರ್ಯಾಪ್ ಶಿಲೆಗಳು ಒಟ್ಟುಗೂಡಿ ಕರ್ನಾಟಕ ಪ್ರದೇಶದ ಶೇಕಡ 25 ಭಾಗವನ್ನು ಮಾತ್ರ ಆಕ್ರಮಿಸಿವೆ. ಉಳಿದ ಶೇಕಡ 75 ಭಾಗವು ಆರ್ಷೇಯ ಕಲ್ಪದ ಶಿಲೆಗಳಿಂದ ಆವರಿಸಲ್ಪಟ್ಟಿದೆ.

### ತೋರಿಕೆಯ ನಿಕ್ಷೇಪಗಳು

ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಹರಡಿರುವ ಶಿಲಾಸಮೂಹಗಳನ್ನು ಮೇಲೆ ತಿಳಿಸಿದಂತೆ ವರ್ಣಿಸಿರು ವುದರಿಂದ ಅವು ಈ ಪ್ರದೇಶಗಳಲ್ಲೆಲ್ಲ ಕಾಣುವಂತೆ ಹೊರಚಾಚಿವೆಯೆಂದರ್ಥವಲ್ಲ. ಈ ಶಿಲಾಭಾಗಗಳು ಅಲ್ಲಲ್ಲಿ ಮೇಲ್ಭಾಗದಲ್ಲಿ ಕಾಣುವಂತೆ ಹೊರಚಾಚಿದ್ದರೂ ಇತರ ಭಾಗಗಳಲ್ಲಿ 'ಮಣ್ಣು' ಹರಡಿದೆ. ಈ ಮಣ್ಣು ಕೆಳಭಾಗದಲ್ಲಿರುವ ಶಿಲೆಗಳ ಭೌತ ಮತ್ತು ರಾಸಾಯನಿಕ ಶಿಥಿಲತೆಯಿಂದ ಉಂಟಾದ ಉತ್ಪನ್ನವಸ್ತುವಲ್ಲದೆ ಬೇರೆಯಲ್ಲ. ಇದು ಕೆಳಗಿರುವ ಶಿಲೆಗಳಿಗೆ ಒಂದುವಿಧವಾದ 'ಮೇಲುಹೊದಿಕೆ' ಯಾಗಿದೆ. ಈ 'ಮಣ್ಣಿನ ಮೇಲುಹೊದಿಕೆ'ಯ ವಾಸ್ತವವಾದ ದಪ್ಪವು ಅನೇಕ ಪದ್ಧತಿ ಗಳನ್ನವಲಂಬಿಸಿ, ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಮಣ್ಣಿನಿಂದ ಮೂಲಶಿಲೆಗೆ ಪರಿವರ್ತನೆಯು ನಿಯಮದಂತೆ ಇದ್ದಕ್ಕಿದ್ದಂತೆ ಆಗಿಲ್ಲ. ಅವುಗಳ ಮಧ್ಯದಲ್ಲಿ ಮೃದುವಾದ ಮಣ್ಣಿಗೂ ಕೆಳಗಿರುವ ಗಟ್ಟಿಯಾಗಿರುವ ಶಿಲೆಗೂ ಹಾದಿಯುಂತಿರುವ "ಕೆಳಮಣ್ಣು" ಎಂಬ ಮಧ್ಯವರ್ತಿ ವಲಯವಿದೆ. ಈ ಕೆಳಮಣ್ಣಿನ ವಲಯವು ಬಹಳ ಮುಖ್ಯವಾದುದು. ಏಕೆಂದರೆ, ನಮ್ಮ ಬಾವಿಗಳಿಗೆ ಮತ್ತು ಕೆರೆಗಳಿಗೆ ಆಧಾರವಾದ ಅಂತರ್ಜಲದ ಸಂಪತ್ತು ಒಂದು ಪ್ರದೇಶದ ಕೆಳಮಣ್ಣಿನ ಸ್ವಭಾವ ಮತ್ತು ರಚನೆಯ ಆಧಾರದ ಮೇಲೆ ನಿರ್ಭರವಾಗುತ್ತದೆ.

ಈ ಮೇಲುಹೊದಿಕೆ ಮಣ್ಣು ಕೆಳಗಿರುವ ಶಿಲೆಗಳ ಅವಿರತ ಶಿಥಿಲತೆಯ ಪರಿಣಾಮ ಎಂಬುದರ ದೃಷ್ಟಿಯಿಂದ ಒಂದು ಪ್ರದೇಶದ ಮಣ್ಣಿನ ಸ್ವಭಾವಕ್ಕೂ ತಳದಲ್ಲಿರುವ ಶಿಲೆಗಳ ರಾಸಾಯನಿಕ

ಸಂಯೋಜನೆಗೂ ನಿಕಟ ಸಂಬಂಧವಿದೆಯೆಂಬುದು ವಿದಿತವಾಗುತ್ತದೆ. ಅದರಿಂದ ಕರ್ನಾಟಕ ಪ್ರಾಂತ್ಯದ ಪ್ರತಿಯೊಂದು ಶಿಲಾರಚನೆಯೊಂದಿಗೂ ವಿಶೇಷವಾದ ಮಣ್ಣಿನ ವಿಧವು ಒಡಗೂಡಿದೆ. ಈ ಮಣ್ಣು ಮತ್ತು ಕೆಳಮಣ್ಣುಗಳು ಶುದ್ಧವಾಗಿ ಭೂವೈಜ್ಞಾನಿಕ ದೃಷ್ಟಿಯಿಂದ ವಿಶೇಷ ಆಸಕ್ತಿದಾಯಕವಲ್ಲದಿದ್ದರೂ ನಮ್ಮ ಆರ್ಥಿಕಸ್ಥಿತಿಯ ಬೆನ್ನೆಲುಬಾಗಿರುವ ವ್ಯವಸಾಯದ ದೃಷ್ಟಿಯಿಂದ ವಿಶೇಷ ಬೆಲೆಯುಳ್ಳವಾಗಿವೆ. ಎಲ್ಲ ವ್ಯವಸಾಯದ ಬೆಳವಣಿಗೆಯಲ್ಲೂ ಈ ಮಣ್ಣುಗಳ ಸ್ವಭಾವ, ಭೌತಲಕ್ಷಣಗಳು, ಅವುಗಳ ರಾಸಾಯನಿಕ ಸಂಯೋಜನೆಗಳು ಮತ್ತು ಅವುಗಳ ಸರಿಯಾದ ರಕ್ಷಣೆಯು ಅತ್ಯಂತ ಮುಖ್ಯವಾದ ವಿಷಯಗಳು.

ಪ್ರಾಂತ್ಯದ ಪಶ್ಚಿಮ ಎಲ್ಲೆಯ ಉದ್ದಕ್ಕೂ ವಿಶೇಷ ಆಸಕ್ತಿದಾಯಕವಾದ, ಭೂಚರಿತ್ರೆಯಲ್ಲಿ ಇತ್ತೀಚಿನ ಒಂದು ಮೇಲುಹೊದಿಕೆ ನಿಕ್ಷೇಪವು 'ಲ್ಯಾಟರೈಟ್' ಎಂಬುದು. ಇದು ಬಹಳವಾಗಿ ಹೆಚ್ಚು ಪ್ರಮಾಣದ ಸಿಲಿಕಾ ಇರುವ, ಕೆಂಪು ಬಣ್ಣದ ಕಬ್ಬಿಣದ ಅಂಶದಿಂದ ಕೂಡಿದ ಜೇಡಿನಿಂದಾಗಿದೆ. ಅದು ಸರಂಧ್ರಭರಿತವಾಗಿ ಹೊಸದಾಗಿ ತೆಗೆದಾಗ ಮೆದುವಾಗಿದೆ. ಆದರೆ ಬಯಲಾದಾಗ ಅದು ಬೇಗನೆ ಗಟ್ಟಿಯಾಗಿ ಮುದ್ದೆಯಾಗಿ ಒಣಗುತ್ತದೆ. ಈ ಲಕ್ಷಣದಿಂದ ಅದನ್ನು ಬಹುವಾಗಿ ಇಟ್ಟಿಗೆಗಳನ್ನು ತಯಾರಿಸುವುದಕ್ಕೆ ಉಪಯೋಗಿಸಲಾಗುತ್ತದೆ. ಅವು ಜಲ್ಲಿಕಲ್ಲಾಗಿ ಉಪಯೋಗಿಸುವುದಕ್ಕೂ ಉತ್ತಮ ವಾಗಿವೆ. ಕೆಲವು ವಿಶೇಷ ಪರಿಸ್ಥಿತಿಗಳಲ್ಲಿ ರೂಪುಗೊಂಡ ಕೆಲವು ಲ್ಯಾಟರೈಟುಗಳು ಕಬ್ಬಿಣ, ಮ್ಯಾಂಗನೀಸ್ ಮತ್ತು ಅಲ್ಯೂಮಿನಿಯಂನಂತಹ ಕೆಲವು ಲೋಹದ ಅದುರುಗಳಲ್ಲಿ ಹೇರಳವಾಗಿರುತ್ತವೆ. ಆಗ ಅವು ವಾಸ್ತವವಾಗಿ ಲೋಹದ ಅದುರುಗಳಾಗುತ್ತವೆ. ಮತ್ತು ಈ ಲೋಹಗಳನ್ನು ಬೇರ್ಪಡಿಸುವುದಕ್ಕೆ ಹಾಗೆಯೇ ಉಪಯೋಗಿಸಲಾಗುತ್ತದೆ.

ಕಾರವಾರದಿಂದ ಮಂಗಳೂರಿನ ವರೆಗೆ ತೀರದ ಅಂಚಿನಲ್ಲಿ ಉದ್ದಕ್ಕೂ ಇರುವ ಇಕ್ಕಟ್ಟಾದ, ಮಟ್ಟವಾದ ಭೂವಲಯಕ್ಕೆ ಇಲ್ಲಿ ವಿಶೇಷವಾದ ಪರಾಮರ್ಶೆಯನ್ನು ಮಾಡಬೇಕು (ಚಿತ್ರ 5 ನೋಡಿ). ಸಮುದ್ರಮಟ್ಟದಲ್ಲಿ ಈ ತೀರದ ಮೈದಾನವು ಸ್ಥಳೀಯ ಇಳುವರಿಕೆಯಿಂದ ಸಾಗರದ ಭೂಸವೆತಕ್ರಿಯೆ ಅದಾದಮೇಲೆ ಸಂಚಯನಗಳಿಂದ ಭೂಚರಿತ್ರೆಯಲ್ಲಿ ಇತ್ತೀಚೆಗೆ ಮೇಲುಹೊದಿಕೆ ನಿಕ್ಷೇಪಗಳಾಗಿವೆಯೆಂದು ನಂಬಲಾಗಿದೆ.

ಇವುಗಳಲ್ಲದೆ ಕರ್ನಾಟಕದಲ್ಲಿ ಇನ್ನೊಂದು ಮೇಲುಹೊದಿಕೆ ನಿಕ್ಷೇಪವು ದೊರಕುತ್ತದೆ. ಇವು ನದಿಗಳು ಸಾಗಿಸಿ ತಂದು ಬಿಡಲಾದ 'ಮೆಕ್ಕಲು ನಿಕ್ಷೇಪ'ಗಳು. ಈ ಮೆಕ್ಕಲು ನಿಕ್ಷೇಪಗಳು ಮರಳು, ಮಣ್ಣು ಮತ್ತು ಧೂಳುಗಳಿಂದಾಗಿವೆ, ಮತ್ತು ದೊಡ್ಡ ನದಿ ಕಣಿವೆಗಳ ಇಕ್ಕಡೆಗಳಲ್ಲಿಯೂ ವಿಶಾಲವಾದ, ಮಟ್ಟವಾದ ಮೈದಾನವನ್ನು ರಚಿಸಿವೆ. ಇವು ಕೆಲವು ಕಡೆಗಳಲ್ಲಿ ಸಾವಿರಾರು ವರ್ಷಗಳ ಕಾಲ ತಡೆಯಿಲ್ಲದೆ ಶೇಖರವಾಗಿ ಬಹಳ ದಪ್ಪವಾಗಿ ಬೆಳೆದಿವೆ. ಇವುಗಳಲ್ಲಿ ಅತ್ಯಂತ ಪುರಾತನ ಭಾಗವು ಅತಿ ಪುರಾತನ ಮಾನವನು ಈ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಕಾಲದಲ್ಲಿ ರೂಪುಗೊಂಡವು ಎಂಬುದು ಗಮನಿಸಲು ಅತ್ಯಂತ ಆಸಕ್ತಿದಾಯಕವಾಗಿದೆ. ಇಂತಹ ಪುರಾತನ ಮೆಕ್ಕಲು ನಿಕ್ಷೇಪಗಳಲ್ಲಿ ಪುರಾತನ ಶಿಲಾಯುಗ ಮತ್ತು ನವಶಿಲಾಯುಗಕ್ಕೆ ಸೇರಿದ ಪುರಾತನ ಮಾನವನ ಶಿಲಾಯುಧಗಳು ದೊರಕುವುದು ಇದನ್ನು ಸಾಧಿಸುತ್ತದೆ. ಇತ್ತೀಚೆಗೆ ಕರ್ನಾಟಕ ಪ್ರದೇಶದಲ್ಲಿ ಇಂತಹ ಪುರಾತನ ಶಿಲಾಯುಧಗಳನ್ನು ತೋರಿಸುವ ಅನೇಕ ನಿವೇಶನಗಳನ್ನು ಕಂಡುಹಿಡಿಯಲಾಗಿದೆ. ಈ ಪ್ರದೇಶಗಳಲ್ಲಿ ಹೊರತೆಗೆದ ಶಿಲಾಯುಧಗಳ ಅಧ್ಯಯನಕ್ಕೆ ನಾವು ಸ್ವಾಭಾವಿಕವಾಗಿ ಅತ್ಯಂತ ಹೆಚ್ಚಿನ ಗಮನವನ್ನು ಕೊಡಬೇಕು. ಅಂತಹ ಅಧ್ಯಯನವು ಕರ್ನಾಟಕ ಜನರ ಸಂಸ್ಕೃತಿ ಮತ್ತು ನಾಗರಿಕತೆಗಳ ಉತ್ಪತ್ತಿ ಮತ್ತು ಮುನ್ನಡೆಯ ಚರಿತ್ರೆಯ ವಾಸ್ತವಿಕ ಪ್ರಾರಂಭವಾಗಿರುತ್ತದೆ. ಈ ಕೆಲವು ಶಿಲಾಯುಧಗಳಿಗೆ ಸುಮಾರು 30,000 ವರ್ಷಗಳಾಗಿವೆಯೆಂದು ಊಹಿಸಲಾಗಿದೆ. ಮಾನವನ ಚರಿತ್ರೆಯ ದಾಖಲೆಗಳ ದೃಷ್ಟಿಯಿಂದ ಈ ಕಾಲಾವಧಿಯು ಅತ್ಯಂತ

ಪುರಾತನವಾದುದಾದರೂ ಭೂಕಾಲ ಚಕ್ರದ ಪ್ರಕಾರ ಇದು ಕೆಲವು ನಿಮಿಷಗಳೂ ಕೂಡ ಇಲ್ಲ ಎಂಬುದನ್ನು ನಾವು ಮರೆಯಬಾರದು !

ಕಾಲದ ಹಾದಿಯಲ್ಲಿ ಕರ್ಣಾಟಕದ ಜನರ ಅನೇಕ ಮುಖದ ಆದರೆ ಒಂದಕ್ಕೊಂದು ಸಂಬಂಧ ಪಟ್ಟಿರುವ ಮುನ್ನಡೆಯ ಅಧ್ಯಯನವು ಖಂಡಿತವಾಗಿ ಆಕರ್ಷಕವೂ ಸ್ಫೂರ್ತಿದಾಯಕವೂ ಆಗಿದೆ. ಈ ಅಧ್ಯಯನದ ಪೂರ್ತಿ ಗಮನಿಸಬೇಕಾದ ಒಂದು ವಿಚಾರವೆಂದರೆ, ಪ್ರಾಂತ್ಯದ ವಿವಿಧ ಭಾಗದ ಪ್ರಗತಿಯ ಮುಖ್ಯ ಪ್ರವೃತ್ತಿರೇಖೆಗಳು ಬಹುವಾಗಿ ಅಲ್ಲಿನ ಜನರು ವಾಸಿಸಿದ ಭೌತ ಮತ್ತು ಭೌಗೋಳಿಕ ವಾತಾವರಣದ ಮೇಲೆ ನಿರ್ಭರವಾಗಿವೆ. ಈ 'ವಾತಾವರಣದ ಪರಿಸ್ಥಿತಿ'ಗಳು ಬಹುವಾಗಿ ಈ ಪ್ರದೇಶದ ಭೂಚರಿತ್ರೆಯ-ಪರಿಣಾಮವಾಗಿವೆ. ಭೂವೈಜ್ಞಾನಿಕ ಜ್ಞಾನವು ಕರ್ಣಾಟಕದ ಮತ್ತು ಕಾಲದ ಹಾದಿಯಲ್ಲಿ ಅದರ ಜನರ ವಿಕಾಸದ ಮುಂದಿನ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಯ ಬಹುಮುಖ್ಯವಾದ ಭಾಗವಾಗಿದೆ. ಸಾಹಿತ್ಯದ, ಸಂಸ್ಕೃತಿಯ ಮತ್ತು ಆರ್ಥಿಕದ ಈ ವಿಕಾಸವು ನಿಧಾನವಾಗಿ, ಒಂದೇ ಗತಿಯಲ್ಲಿ ಮುಂದುವರಿಯುವುದು ಮತ್ತು ಅವಿರತ ಕಾರ್ಯಗತಿಯುಳ್ಳದ್ದೂ ಆಗಿದೆ. ಮತ್ತು ಇದು ಕಾಲಕಾಲಕ್ಕೆ ಅನೇಕ ವಿಷಯಗಳ ಕ್ರಿಯೆ, ಪ್ರತಿಕ್ರಿಯೆ ಮತ್ತು ಪರಸ್ಪರ ಕ್ರಿಯೆಗಳಿಂದ ನಿರ್ಧರಿಸಲಾಗಿದೆ. ಈ ವಿಕಾಸದ ಮುನ್ನಡೆಯ ಪ್ರತಿಯೊಂದು ಹಂತವೂ 'ವರ್ತಮಾನವು ಭೂತಕಾಲದ ಶಿಶು ಮತ್ತು ಭವಿಷ್ಯತ್ಕಾಲದ ಜನ್ಮದಾತ' ಎನ್ನುವ ಅರ್ಥದಲ್ಲಿ ಭೂತ ಮತ್ತು ಭವಿಷ್ಯತ್ಕಾಲಗಳೊಂದಿಗೆ ನಿಕಟ ಸಂಬಂಧ ಪಡೆದಿದೆ.

ಮೂಲ ಲೇಖಕರು : **ಪ್ರೊ॥ ಎಲ್. ರಾಮರಾವ್**
ಅನುವಾದಕರು : **ಶ್ರೀ ಎಸ್. ವರದರಾಜನ್**

# 2. ಆರ್ಥಿಕ ಭೂವಿಜ್ಞಾನ

## (ಖನಿಜ ಸಂಪತ್ತು)

ಈ ಹಿಂದೆಯೆ ತಿಳಿಸಿರುವಂತೆ ಕರ್ಣಾಟಕವು ಖನಿಜ ಸಂಪತ್ತಿನಲ್ಲಿ ಸಮೃದ್ಧವಾಗಿದೆ. ಅತಿ ಪ್ರಾಚೀನ ಕಾಲದಿಂದಲೂ ಕರ್ಣಾಟಕದ ಜನರು ಖನಿಜಗಳ ಉಪಯೋಗವನ್ನು ತಿಳಿದಿದ್ದರಲ್ಲದೆ ಅವುಗಳನ್ನು ಲಾಭದಾಯಕವಾಗಿ ಬಳಸುತ್ತಲಿದ್ದರು. ಹಳೆಕಾಲದ ಕಿಟ್ಟದ ರಾಶಿಗಳು ಮತ್ತು ಅನೇಕ ಕಡೆಯಲ್ಲಿ ಕಂಡುಬರುವ ಪಾಳುಬಿದ್ದ ಬಂಗಾರದ ಗಣಿಗಳು ಇದಕ್ಕೆ ನಿದರ್ಶನವಾಗಿವೆ. ಅಲ್ಲದೆ ಈಚೆಗೆ ಇಂಗಾಲದ ಮೂಲಕ ಕಾಲವನ್ನು ಕಂಡುಹಿಡಿಯುವ ವಿಧಾನದಿಂದ ರಾಯಚೂರು ಜಿಲ್ಲೆಯ ಹಟ್ಟಿ ಎಂಬಲ್ಲಿನ ಬಂಗಾರದ ಗಣಿಗಳು ಕ್ರಿ.ಪೂ. 3,000 ವರ್ಷಗಳಿಗೂ ಹಿಂದೆಯೇ ಕಾರ್ಯಾಚರಣೆಯಲ್ಲಿದ್ದುವೆಂದು ತಿಳಿದು ಬಂದಿದೆ.

ಕರ್ಣಾಟಕ ದೇಶವು ಖನಿಜಗಳ ಉತ್ಪಾದನೆಯಲ್ಲಿ ಭಾರತದಲ್ಲಿ ನಾಲ್ಕನೆಯ ಸ್ಥಾನವನ್ನು ಹೊಂದಿದೆಯಾದರೂ ವಾಸ್ತವವಾಗಿ ಇಲ್ಲಿನ ನಿಕ್ಷೇಪಗಳು ಇನ್ನೂ ಅಧಿಕವಾಗಿಯೇ ಇವೆ. ಕರ್ಣಾಟಕದ ಬಹುಭಾಗದಲ್ಲಿನ (ಅದರಲ್ಲೂ ಹಳೆಯ ಮೈಸೂರಿನ ಭಾಗ) ಪ್ರದೇಶದಲ್ಲಿ ಖನಿಜ ನಿಕ್ಷೇಪಗಳ ಶೋಧನೆ ನಡೆದಿದ್ದರೂ, ಇನ್ನೂ ಆರ್ಥಿಕ ಭಾಗದಲ್ಲಿ ಈ ನಿಕ್ಷೇಪಗಳ ಶೋಧನೆ ಮತ್ತು ಇವುಗಳ ಉತ್ಪಾದನೆ ನಡೆಯಬೇಕಾಗಿದೆ. ಇನ್ನೂ ಅನೇಕ ಭಾಗಗಳಲ್ಲಿ ವಿಶದವಾಗಿ ಇವುಗಳ ಶೋಧನೆಯನ್ನು ಮಾಡಬೇಕಾಗಿದೆ. ಆಧುನಿಕ ವಿಧಾನಗಳ ರೀತ್ಯಾ ಅದರಲ್ಲೂ ಭೂ ಭೌತ ವಿಜ್ಞಾನದ ರೀತಿಯಲ್ಲಿ ವಿಶದವಾಗಿ ಸಂಶೋಧನೆ ನಡೆಸಿದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಇನ್ನೂ ಹಲವಾರು ಖನಿಜ ನಿಕ್ಷೇಪಗಳು ಬೆಳಕಿಗೆ ಬರಬಹುದು.

### ಕರ್ಣಾಟಕದ ಶಿಲಾಸಮುದಾಯಗಳು ಮತ್ತು ಖನಿಜಸಂಪತ್ತು

ಕರ್ಣಾಟಕದ ಭೂಭಾಗವು ಮುಖ್ಯವಾಗಿ ಆರ್ಷೇಯಯುಗಕ್ಕೆ ಸೇರಿದ್ದು ನೈಸ್ ಮತ್ತು ಶಿಸ್ಟ್ ಎಂಬ ಶಿಲೆಗಳಿಂದ ಕೂಡಿದೆ. ಶಿಸ್ಟೆಂಬ ಪದರಗಳಿಂದ ಕೂಡಿದ ಶಿಲೆಗಳು 9,000 ಚ.ಮೈ. ಗಳನ್ನು ಮತ್ತು ಗ್ರಾನೈಟ್‌ನಿಂದ ಒಡಗೂಡಿದ ನೈಸ್‌ಗಳು 50,000 ಚ. ಮೈ, ಗಳನ್ನು ಆವರಿಸಿವೆ. ಧಾರವಾಡ ಶಿಲಾಸಮುದಾಯವು ಮುಖ್ಯವಾಗಿ ಶಿಸ್ಟ್ ಮತ್ತು ನೈಸ್‌ಗಳಿಂದ ಕೂಡಿದೆ. ತದನಂತರದ ಶಿಲಾಸಮುದಾಯಗಳಲ್ಲಿ ಕಡಪ ಶಿಲಾಸಮುದಾಯವು ಬೆಳಗಾಂ, ಬಿಜಾಪುರ, ಗುಲ್ಬರ್ಗ ಮತ್ತು ಧಾರವಾಡ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ 2,000 ಚ.ಮೈ.ಗಳನ್ನು ಮತ್ತು ಡೆಕ್ಕನ್ ಟ್ರ್ಯಾಪ್ಸ್ ಎಂಬ ಅಗ್ನಿಶಿಲೆಯು ಬೆಳಗಾಂ, ಗುಲ್ಬರ್ಗ, ಬಿಜಾಪುರ ಮತ್ತು ಬಿದರೆಯ ಉಳಿದ ಎಲ್ಲ ಪ್ರದೇಶವನ್ನು ಅಂದರೆ 10,000 ಚ.ಮೈ. ಗಳಷ್ಟನ್ನು ಆವರಿಸಿವೆ. ಉತ್ತರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಕರಾವಳಿಯ 200 ಮೈಲಿಗಳಿಗೂ ಉದ್ದವಾದ ಅಂದರೆ ಸುಮಾರು 2,000 ಚ. ಮೈಲಿಗಳಷ್ಟು ಪ್ರದೇಶವು ಈಚಿನ ಕಾಲದ ಮೆಕ್ಕಲುಮಣ್ಣು ಮತ್ತು ಸಮುದ್ರದ ಮರಳಿನಿಂದ ಆವೃತವಾಗಿದೆ.

ಅಮೂಲ್ಯವಾದ ಚಿನ್ನ, ಕಬ್ಬಿಣ, ಮ್ಯಾಂಗನೀಸ್, ಕ್ರೋಮೈಟ್ ಮತ್ತು ತಾಮ್ರದ ಅದುರುಗಳು ಅಲ್ಲದೆ ಕೊರಂಡಂ, ಗಾರ್ನೆಟ್, ಗ್ರಾಫೈಟ್, ಪೈರೈಟೀಸ್, ಕಲ್ನಾರು ಮತ್ತು ಇತರ ಖನಿಜಗಳು ಧಾರವಾಡ

ಶಿಸ್ಟ್‌ಗಳಿಗೆ ಸೀಮಿತವಾಗಿವೆ. ಇವು ಈ ಶಿಸ್ಟ್ ಪಟ್ಟೆಗಳಲ್ಲಿಯೂ ಒಂದೇ ಸಮನಾಗಿ ಹರಡಿಲ್ಲ. ಅಂದರೆ ಕೆಲವು ಪಟ್ಟೆಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರುಗಳು ಹೇರಳವಾಗಿದ್ದಲ್ಲಿ ಇತರ ಪಟ್ಟೆಗಳಲ್ಲಿ ಚಿನ್ನದ ಶಿರಗಳು, ಕ್ರೋಮೈಟು ನಿಕ್ಷೇಪಗಳು ಮತ್ತು ಗಂಧಕದ ನಿಕ್ಷೇಪಗಳು ಇರುವುವು. ಗ್ರಾನೈಟ್ ಮತ್ತು ನೈಸ್ ಶಿಲೆಗಳಲ್ಲಿ ಖನಿಜ ಸಂಪತ್ತು ಕಡಮೆ. ಆದರೂ ಇವುಗಳಲ್ಲಿಯೂ ಅಲ್ಲಲ್ಲಿ ಅಭ್ರಕ, ಕ್ವಾರ್ಟ್ಸ್, ಫೆಲ್ಸ್ಪಾರ್, ಬಿಳಿಜೇಡಿ ಮತ್ತು ಅಪೂರ್ವವಾದ ಮೋನಜೈಟ್, ಬೆರಿಲ್, ಸಾಮರ್‌ಸ್ಕೈಟ್, ಕೊಲಂಬೈಟ್ ಮುಂತಾದ ಖನಿಜಗಳು ದೊರೆಯುವುವು. ತದನಂತರದ ಶಿಲಾ ಸಮುದಾಯದಲ್ಲಿ ಸುಣ್ಣಕಲ್ಲು, ಮಣ್ಣುಗಳು, ಲ್ಯಾಟರೈಟು ಮತ್ತು ಕಟ್ಟಡದ ಶಿಲೆಗಳು ದೊರೆಯುವುವು.

ಕರ್ಣಾಟಕ ದೇಶದಲ್ಲಿ ಸುಮಾರು 40 ವಿವಿಧ ಬಗೆಯ ಮತ್ತು ವಿವಿಧ ಗಾತ್ರದ ಆರ್ಥಿಕವಾಗಿ ಉಪಯುಕ್ತವಾದ ನಿಕ್ಷೇಪಗಳು ಅಲ್ಲಲ್ಲಿ ಹರಡಿವೆ. ಈ ರಾಜ್ಯದಲ್ಲಿ ಹೆಮ್ಮೆಪಟ್ಟುಕೊಳ್ಳುವಂತಹ ಅಮೂಲ್ಯವಾದ ಮತ್ತು ಲಾಭದಾಯಕವಾದ ಚಿನ್ನದ ಗಣಿಗಳು ಕೋಲಾರದಲ್ಲಿವೆ. ಪ್ರಪಂಚದಲ್ಲಿ ಅತ್ಯಂತ ಉತ್ಕೃಷ್ಟವಾದುದಕ್ಕೆ ಸಮಾನವಾದ ಕಬ್ಬಿಣದ ಅದುರು ಸೊಂಡೂರು, ಕೆಮ್ಮಣ್ಣುಗುಂಡಿ ಮತ್ತು ಎಲ್ಲಾಪುರಗಳಲ್ಲಿದೆ. ಹಾಸನ ಜಿಲ್ಲೆಯ ಬೈರಾಪುರದಲ್ಲಿ ಲೋಹ ತೆಗೆಯಲು ಯೋಗ್ಯವಾದ ಕ್ರೋಮೈಟ್ ಅದುರು ಇದೆ. ಅಲ್ಲದೆ ಉತ್ತರ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶ್ರೇಷ್ಠವಾದ ಮ್ಯಾಂಗನೀಸು ಅದುರು ಗಳಿವೆ. ಇಷ್ಟೇ ಅಲ್ಲದೆ ಅಲ್ಯೂಮಿನಿಯಂ, ತಾಮ್ರ, ಸೀಸ ಮತ್ತು ಸುರಮ ಲೋಹಗಳ ಅದುರುಗಳು ಅನೇಕ ಕಡೆ ಸಿಕ್ಕುವುವು. ಲೋಹೇತರ ಖನಿಜಗಳಲ್ಲಿ ಮುಖ್ಯವಾದ ಕಲ್ನಾರು, ಬೆರಿಲ್, ಕೋರಂಡಂ, ಗಾರ್ನೆಟ್, ಗ್ರಾಫೈಟ್ ಬಿಳಿಜೇಡು, ಕಯನೈಟು, ಮ್ಯಾಗ್ನಸೈಟು ಮತ್ತು ಸುಮಾರು ಮೂವತ್ತು ವಸ್ತುಗಳು ಕರ್ಣಾಟಕದ ವಿವಿಧ ಭಾಗಗಳಲ್ಲಿ ದೊರಕುವುವು. ಈ ಆರ್ಷೇಯ ಕಲ್ಪದ ಶಿಲಾ ಸಮುದಾಯಗಳಲ್ಲಿ ಅನೇಕ ಲೋಹಗಳ ಅದುರುಗಳು ದೊರೆಯುವುವಾದರೂ ಬಹು ಮುಖ್ಯವಾದ ಲೋಹ ನಿಕ್ಷೇಪಗಳನ್ನು ಕೆಳಗೆ ವಿವರಿಸಲಾಗಿದೆ :—

## ಲೋಹದಿಂದ ಕೂಡಿದ ಖನಿಜಗಳು (ಅದುರುಗಳು)

### ಕ್ರೋಮಿಯಂ

ಕ್ರೋಮೈಟ್ ಖನಿಜವು ಕ್ರೋಮಿಯಂ ಲೋಹದ ಮುಖ್ಯವಾದ ಅದುರಾಗಿರುತ್ತದೆ. ಅಲ್ಲದೆ ಇದರ ನಿಕ್ಷೇಪವು ಕರ್ಣಾಟಕದಲ್ಲಿ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಒಂದು ದಶಲಕ್ಷ ಟನ್ ಗಳಿಗೂ ಮೀರಿದೆ. ಇದರಲ್ಲಿ ಶೇಕಡ 38ರಿಂದ 52ರ ವರೆಗೂ ಕ್ರೋಮಿಯಂ ಆಮ್ಲ ($Cr_2O_3$)ವಿದೆ. ಇಷ್ಟೆಅಲ್ಲದೆ ಈಚಿನ ಪರಿಶೋಧನೆಗಳಿಂದಾಗಿ ಶೇ. 30ರಿಂದ 38ರೊಳಗಿನ ಕೆಳದರ್ಜೆಯ ಅದುರಿನ ನಿಕ್ಷೇಪಗಳು ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿರುವುದು ತಿಳಿದು ಬಂದಿದೆ. ಕರ್ಣಾಟಕವು ಭಾರತದ ಶೇ. 40ರಷ್ಟು ಭಾಗದ ಕ್ರೋಮೈಟನ್ನು ಇದುವರೆಗೆ ಉತ್ಪಾದಿಸಿದೆ. ಬೈರಾಪುರದಲ್ಲಿ ಉತ್ಕೃಷ್ಟವಾದ ಕ್ರೋಮೈಟ್ ನಿಕ್ಷೇಪಗಳು ದೊರೆಯುವುವು. ಕ್ರೋಮೈಟ್ ಮುಖ್ಯವಾಗಿ ಸ್ಟೈನ್‌ಲೆಸ್ ಸ್ಟೀಲನ್ನು ತಯಾರಿಸಲು ಬಳಸಲ್ಪಡುತ್ತದೆ.

### ತಾಮ್ರ

ತಾಮ್ರದ ಅದುರುಗಳು (ಮುಖ್ಯವಾಗಿ ಮ್ಯಾಲಕೈಟ್ ಖನಿಜ) ಕರ್ಣಾಟಕದ ಹಲವೆಡೆಗಳಲ್ಲಿ ಆನರಲ್ಲಿಯೂ ಚಿತ್ರದುರ್ಗ ಮತ್ತು ಮೈಸೂರಿನ ಬಳಿ ಸಿಗುವುವು. ಈಚಿನ ಪರಿಶೋಧನೆಗಳ ಪ್ರಕಾರ

ಕೆಲವೆಡೆ ಬಹು ಉತ್ಕೃಷ್ಟವಾದ ನಿಕ್ಷೇಪಗಳಿರುವುದು ತಿಳಿದು ಬಂದಿದೆ. ಆದರೆ ಈ ನಿಕ್ಷೇಪಗಳು ದೊಡ್ಡ ಗಣಿಗಳನ್ನು ತೆಗೆದು ಕೆಲಸ ಮಾಡುವಷ್ಟು ವಿಪುಲವಾಗಿಲ್ಲ. ಆದರೂ ಭೂ ಭೌತ ವಿಜ್ಞಾನದ ರೀತ್ಯಾ ಮತ್ತು ಕೊರೆದ ಭಾವಿಗಳ ಮೂಲಕವಾದ ಪುನಃ ಪರಿಶೋಧನೆ ನಡೆಸಿ ಇವುಗಳು ಲಾಭದಾಯಕವೆ ಅಲ್ಲವೆ ಎನ್ನುವುದನ್ನು ತಿಳಿಯಬೇಕು.

**ಚಿನ್ನ**

ಚಿನ್ನವು ಕರ್ನಾಟಕ ದೇಶದಲ್ಲಿ ಧಾರವಾಡದ ಶಿಸ್ಟ್ ಎಂಬ ರೂಪಾಂತರ ಶಿಲಾಸಮುದಾಯದಲ್ಲಿ ಬಹಳ ಕಡೆ ಸಿಗುವುದು. ಈ ಪ್ರದೇಶಗಳಲ್ಲಿ ಅನೇಕ ಶತಮಾನಗಳ ಹಿಂದೆ ಚಿನ್ನದ ಗಣಿಯ ಉದ್ಯಮವು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದ್ದಿತೆಂಬುದು ಆಧಾರಗಳಿಂದ ತಿಳಿದು ಬಂದಿದೆ. ಸದ್ಯದಲ್ಲಿ ಕೋಲಾರ ಮತ್ತು ರಾಯಚೂರು ಜಿಲ್ಲೆಯ ಹಟ್ಟಿ ಪ್ರದೇಶಗಳೆರಡರಲ್ಲಿ ಮಾತ್ರ ಚಿನ್ನವನ್ನು ಉತ್ಪಾದಿಸಲಾಗುತ್ತಿದೆ. ಕೋಲಾರದ ಚಿನ್ನದ ಗಣಿಪ್ರದೇಶಗಳಲ್ಲಿ ನಂದಿದುರ್ಗ, ಛಾಂಪಿಯನ್ ಮತ್ತು ಮೈಸೂರು ಎಂಬ ಮೂರು ಗಣಿಗಳು ಕೆಲಸ ಮಾಡುತ್ತಿವೆ. ಅಲ್ಲಿ ಸುಮಾರು 30 ಚಿನ್ನದ ಶಿರಗಳು 3ರಿಂದ 4 ಅಡಿಗಳ ದಪ್ಪವಿರುವುದಾಗಿ ತಿಳಿದು ಬಂದಿದೆ. ಈ ಗಣಿಗಳು ಬಹಳ ಆಳವಾಗಿವೆ. ಅದರಲ್ಲೂ ಛಾಂಪಿಯನ್ ಗಣಿಯು ಅತ್ಯಂತ ಆಳವಾಗಿದ್ದು 10,000 ಅಡಿಗಳಿಗೂ ಹೆಚ್ಚಾಗಿ ತಳಕ್ಕೆ ಹೋಗಿದೆ. ಈ ಗಣಿಗಳ ಪ್ರದೇಶವು 4 ಮೈಲಿ ಅಗಲ ಮತ್ತು 50ಮೈಲಿ ಉದ್ದವಾಗಿದೆ. ಇದರ ಮಧ್ಯ ಭಾಗದ 4½ ಮೈಲಿ ಉದ್ದದ ಪ್ರದೇಶವು ಬಹು ಉತ್ಕೃಷ್ಟವಾದದ್ದು. ಈ ಪ್ರದೇಶದಲ್ಲಿನ ಗಣಿಗಳ ಸುರಂಗಗಳು ಒಟ್ಟು ಉದ್ದದಲ್ಲಿ 550 ಮೈಲಿಗಳಿಗೂ ಹೆಚ್ಚಾಗಿವೆ. ಅತಿ ಆಳವಾದ ಸುರಂಗಗಳಲ್ಲಿನ ಉಷ್ಣಾಂಶವು 140°F ಗೂ ಮಿಗಿಲಾಗಿರುತ್ತೆ. ಹಟ್ಟಿ ಪ್ರದೇಶದಲ್ಲಿ ಸುಮಾರು 300 ಹಳೆ ಗಣಿಗಳಿವೆ. ಆದರೆ ಈ ಚಿನ್ನದ ಗಣಿಗಳ ಆಳವು ಅಷ್ಟಿಲ್ಲ. ವರ್ಷೇ ವರ್ಷೇ ಇಲ್ಲಿನ ಉತ್ಪಾದನೆಯು ಹೆಚ್ಚಾಗುತ್ತಿದೆ. ಕೋಲಾರದ ಗಣಿಗಳು ಕಳೆದ 75 ವರ್ಷಗಳಲ್ಲಿ 21·94 ದಶಲಕ್ಷ ಔನ್ಸ್‌ಗಳಷ್ಟು ಬಂಗಾರವನ್ನು ಉತ್ಪಾದಿಸಿವೆ. ಮತ್ತು ಇದರ ಬೆಲೆಯು ಸುಮಾರು 210 ಕೋಟಿ ರೂ.ಗಳಾಗಬಹುದು. ಮೆ॥ ಜಾನ್ ಟೈಲರ್ ಅಂಡ್ ಸನ್ ಅವರು ಮೊದಲು ಈ ಗಣಿಗಳನ್ನು ನಡೆಸುತ್ತಿದ್ದರು. 1956ನೇ ಇಸವಿಯಲ್ಲಿ ಮೈಸೂರು ಸರ್ಕಾರದವರು ಇದನ್ನು ತೆಗೆದುಕೊಂಡು ಒಂದು ಬೋರ್ಡಿನ ಮೂಲಕ ಕೆಲವು ಕಾಲ ನಡೆಸಿದರು. ಭಾರತ ಸರ್ಕಾರವು 1962ರಲ್ಲಿ ಇದನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಹಟ್ಟಿಚಿನ್ನದ ಗಣಿಗಳನ್ನು ಜಾನ್ ಟೈಲರ್ ಅಂಡ್ ಸನ್ಸ್ ಅವರು ಈಗ ನಡೆಸುತ್ತಿದ್ದಾರೆ.

ಮೈಸೂರು ಸರ್ಕಾರವು ಬೆಳ್ಳಾರ ಚಿನ್ನದ ಗಣಿಗಳನ್ನು 1944ರಿಂದ 1954ರ ವರೆಗೂ ನಡೆಸಿ ಲಾಭದಾಯಕವಾಗಿಲ್ಲದ ಕಾರಣ 1954ರಲ್ಲಿ ಅದನ್ನು ನಿಲ್ಲಿಸಿತು. ಕರ್ನಾಟಕ ರಾಜ್ಯದಲ್ಲಿ ಚಿನ್ನ ಕಂಡುಬರುವ ಪ್ರದೇಶಗಳನ್ನೆಲ್ಲ ತೀವ್ರವಾಗಿ ಪರಿಶೋಧಿಸಲು ರಾಜ್ಯ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯೂ ಭಾರತದ ಭೂ ವಿಜ್ಞಾನದ ಇಲಾಖೆಯೂ ನಿರ್ಧರಿಸಿವೆ.

ಪುರಾತನ ಕಾಲದಿಂದಲೂ ಕರ್ನಾಟಕ ರಾಜ್ಯವು ಚಿನ್ನವನ್ನು ಉತ್ಪಾದಿಸುವ ಏಕೈಕ ರಾಜ್ಯವಾಗಿದೆ. ಭಾರತದಲ್ಲಿ ಚಿನ್ನವು ಇನ್ನೆಲ್ಲಿಯೂ ದೊರೆಯುವುದಿಲ್ಲ.

**ಕಬ್ಬಿಣ**

ಕರ್ನಾಟಕವು ಕಬ್ಬಿಣದ ಅದುರಿನಲ್ಲಿ ಸಮೃದ್ಧವಾಗಿದೆ (ಹಿಮಟೈಟ್, ಲೈಮೊನೈಟ್ ಮತ್ತು

ಮ್ಯಾಗ್ನಟೈಟು). ಬಳ್ಳಾರಿ ಜಿಲ್ಲೆಯ ಸೊಂಡೂರು, ಹೊಸಪೇಟೆ ಮತ್ತು ರಾಮಗಿರಿ ಪ್ರದೇಶಗಳಲ್ಲಿಯೂ, ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯಲ್ಲಿಯೂ ಉತ್ತರ ಕನ್ನಡದ ಎಲ್ಲಾಪುರ ಮತ್ತು ಹೊನ್ನಾವರ ತಾಲೂಕುಗಳಲ್ಲಿಯೂ ಲಾಭದಾಯಕವಾದ ನಿಕ್ಷೇಪಗಳು ಯಥೇಚ್ಛವಾಗಿವೆ. ಇವು ಅಲ್ಲದೆ ಧಾರವಾಡ, ಬೆಳಗಾಂ, ಶಿವಮೊಗ್ಗ, ಬಿಜಾಪುರ ಮತ್ತು ಬೆಂಗಳೂರು ಜಿಲ್ಲೆಗಳ ಹಲವೆಡೆಗಳಲ್ಲಿ ಕಬ್ಬಿಣದ ಅದುರಿನ ನಿಕ್ಷೇಪಗಳು ಇವೆ. ಆದರೆ ಅವುಗಳ ಪ್ರಮಾಣವು ಎಷ್ಟೆಂದು ಇನ್ನೂ ಕಂಡು ಹಿಡಿಯಲ್ಪಟ್ಟಿಲ್ಲ. ಈಚೆಗೆ ಶೇ. 60 ರಿಂದ 65ರಷ್ಟು ಕಬ್ಬಿಣದ ಅತ್ಯುತ್ಕೃಷ್ಟವಾದ ಅದುರಿನ ನಿಕ್ಷೇಪಗಳು ಎಲ್ಲಾಪುರ ಮತ್ತು ಹೊನ್ನಾವರ ತಾಲೂಕುಗಳಲ್ಲಿ ಕಂಡುಹಿಡಿಯಲ್ಪಟ್ಟಿವೆ. ಕೆಮ್ಮಣ್ಣುಗುಂಡಿ ನಿಕ್ಷೇಪದಲ್ಲಿ ಹಿಮಟೈಟು ಅದುರು 20 ದಶ ಲಕ್ಷ ಟನ್‌ಗಳಷ್ಟು ಇದ್ದು ಅದರ ಶೇಕಡವಾರು ಸಂಯೋಜನೆ ಈರೀತಿ ಇದೆ : ಕಬ್ಬಿಣ 55, ಅಲ್ಯುಮಿನ 7, ಸಿಲಿಕ 3 ಮತ್ತು ರಂಜಕ 01. ಸೊಂಡೂರಿನ ನಿಕ್ಷೇಪವು 200 ದಶ ಲಕ್ಷ ಟನ್‌ಗಳಷ್ಟು ಇರಬಹುದೆಂದೂ ಅದರಲ್ಲಿ ಕಬ್ಬಿಣದ ಪ್ರಮಾಣವು ಶೇ 65ಕ್ಕೂ ಹೆಚ್ಚಾಗಿದ್ದು ರಂಜಕ ಮತ್ತು ಗಂಧಕಗಳು ಅತ್ಯಲ್ಪವಾಗಿವೆಯೆಂದೂ ತಿಳಿದುಬಂದಿದೆ. ಸದ್ಯದಲ್ಲಿ ಈ ಅದುರುಗಳನ್ನು ವಿದೇಶಗಳಿಗೆ ರಪ್ತು ಮಾಡಲಾಗುತ್ತಿದೆ. ಕೆಮ್ಮಣ್ಣುಗುಂಡಿಯ ಸುತ್ತಮುತ್ತ ಅನೇಕ ಹಿಮಟೈಟ್ ನಿಕ್ಷೇಪಗಳಿದ್ದು ಅವುಗಳ ವಿವರ ಇನ್ನು ಸರಿಯಾಗಿ ತಿಳಿದುಬಂದಿಲ್ಲ.

ಕಬ್ಬಿಣದ ಅದುರುಗಳು (ಹಿಮಟೈಟ್ ಮತ್ತು ಮ್ಯಾಗ್ನಟೈಟು) ನಿಕ್ಷೇಪಗಳು ಬೆಂಗಳೂರು, ತುಮಕೂರು, ಚಿತ್ರದುರ್ಗ, ಮಂಡ್ಯ, ಧಾರ್ವಾಡ ಜಿಲ್ಲೆಗಳಲ್ಲಿ ಒಟ್ಟು 150 ದಶಲಕ್ಷ ಟನ್‌ಗಳಿಗೂ ಮಿಗಿಲಾಗಿದ್ದು ಇವುಗಳಲ್ಲಿ ಕಬ್ಬಿಣದ ಅಂಶವು ಶೇ. 40 ರಿಂದ 60 ಮತ್ತು ಕೆಲವು ವೇಳೆ ಶೇ. 70ರ ವರೆಗೂ ಇರುವುದು. ಈ ಅದುರುಗಳನ್ನು ಸ್ವಚ್ಛಗೊಳಿಸಿ ಬೀಡುಕಬ್ಬಿಣ ಮತ್ತು ಉಕ್ಕು ತಯಾರಿಕೆಗೆ ಉಪಯೋಗಿಸಬಹುದು. ಕರ್ಣಾಟಕ ರಾಜ್ಯದಲ್ಲಿ 765 ದಶಲಕ್ಷ ಟನ್‌ಗಳಷ್ಟು ಉತ್ಕೃಷ್ಟವಾದ ಹಿಮಟೈಟ್ ಮತ್ತು 215 ದಶಲಕ್ಷ ಟನ್‌ಗಳಷ್ಟು ಮ್ಯಾಗ್ನಟೈಟು ಇರುವುದು ಖಚಿತವಾಗಿರುವುದಲ್ಲದೆ, ಸುಮಾರು ಇನ್ನು 2,000 ದಶಲಕ್ಷ ಟನ್‌ಗಳಷ್ಟು ಹಿಮಟೈಟು ಮತ್ತು 500 ದಶಲಕ್ಷ ಟನ್‌ಗಳಷ್ಟು ಮ್ಯಾಗ್ನಟೈಟು ಇರಬಹುದೆಂದು ನಿರೀಕ್ಷಿಸಲಾಗಿದೆ. ಕೆಮ್ಮಣ್ಣುಗುಂಡಿ ಗಣಿಯು ಕಳೆದ 25 ವರ್ಷಗಳಲ್ಲಿ ಭದ್ರಾವತಿ ಕಬ್ಬಿಣದ ಕುಲುಮೆಗೆ 10 ದಶಲಕ್ಷ ಟನ್‌ಗಳಷ್ಟು ಹಿಮಟೈಟು ಅದುರನ್ನು ಒದಗಿಸಿದೆ.

### ಸೀಸ ಮತ್ತು ಸುರಮ (Antimony)

ಇಂಗಳಧಾಳಿನ ಗಂಧಕದ ನಿಕ್ಷೇಪ (ಶೇ. 40 ರಷ್ಟು ಗಂಧಕವನ್ನು ಹೊಂದಿರುವ $1\frac{1}{2}$ ದಶಲಕ್ಷ ಟನ್‌ಗಳಷ್ಟು) ದಲ್ಲಿ ಅಲ್ಪವಾಗಿ ಆರ್ಸನಿಕ್, ಸುರಮ ಮತ್ತು ಸೀಸ ಇವೆ. ಆದರೆ ಸೀಸ ಮತ್ತು ಸುರಮದ ಶಿರಗಳು ದೊಡ್ಡವಾಗಿಲ್ಲ. ಈಚೆಗೆ ಹೊಸಪೇಟೆ ತಾಲೂಕಿನ ಮೆಟ್ರಿ ಎಂಬಲ್ಲಿ ಗೆಲಿನ (Lead Sulphide) ಸಿಕ್ಕಿದೆ. ಈ ನಿವೇಶನವನ್ನು ಹೆಚ್ಚಾಗಿ ಪರಿಶೋಧಿಸಿದಲ್ಲಿ ಗೆಲಿನ ನಿಕ್ಷೇಪದ ಪರಿಮಾಣವು ಗೊತ್ತಾಗಬಹುದು.

### ಮ್ಯಾಂಗನೀಸ್

ಕರ್ಣಾಟಕವು ಮ್ಯಾಂಗನೀಸ್ ಅದುರುಗಳನ್ನು ಹೊಂದಿರುವ ರಾಜ್ಯಗಳಲ್ಲಿ ಭಾರತದಲ್ಲಿ ಐದನೆಯದಾಗಿದೆ. ಮ್ಯಾಂಗನೀಸ್ ಅದುರು ಬಹು ಮುಖ್ಯವಾಗಿದ್ದು ಅನೇಕ ಕೈಗಾರಿಕೆಗಳಲ್ಲಿ ಉಪಯೋಗಿಸಲ್ಪಡುತ್ತದೆ. ಅದರಲ್ಲಿಯೂ ಉಕ್ಕಿನ ಕೈಗಾರಿಕೆಯಲ್ಲಿ ಇದು ಬಹುಮುಖ್ಯ. ಸಾಮಾನ್ಯವಾಗಿ ಮ್ಯಾಂಗನೀಸ್ ಅದುರುಗಳು ಕಬ್ಬಿಣದ ಅದುರುಗಳೊಂದಿಗೆ ದೊರೆಯುತ್ತವೆ. ಇವು ಬಳ್ಳಾರಿ, ಶಿವಮೊಗ್ಗ,

ಚಿತ್ರದುರ್ಗ, ತುಮಕೂರು, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಮುಖ್ಯವಾಗಿ ಇವೆ. ಸಣ್ಣ ನಿಕ್ಷೇಪಗಳು ಧಾರವಾಡ, ಬಿಜಾಪುರ ಮತ್ತು ಬಿದರೆ ಜಿಲ್ಲೆಗಳಲ್ಲಿವೆ. ಇವುಗಳಲ್ಲೆಲ್ಲಾ ಮುಖ್ಯವಾದ ನಿಕ್ಷೇಪಗಳು ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಲೋಂಡ, ಸುಪ ಮತ್ತು ಕಾರವಾರಗಳಲ್ಲಿಯೂ, ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗದ ಅಕ್ಕಪಕ್ಕದಲ್ಲಿಯೂ, ತರೀಕೆರೆ ಮತ್ತು ಆನಂದಪುರಗಳಲ್ಲಿಯೂ ಇವೆ. ಕರ್ನಾಟಕದ ಮ್ಯಾಂಗನೀಸ್ ಅದುರುಗಳು ಲ್ಯಾಟರೈಟ್ (Lateriti) ಮಾದರಿಯಲ್ಲಿ ಉತ್ಪನ್ನವಾದುವು. ಕರ್ನಾಟಕದ ಮ್ಯಾಂಗನೀಸ್ ಅದುರುಗಳಲ್ಲಿ ಸರಾಸರಿ ಶೇಕಡವಾರು ಪ್ರಮಾಣ ಈ ರೀತಿ ಇದೆ :—ಮ್ಯಾಂಗನೀಸ್ 40, ಕಬ್ಬಿಣ 16, ಬೆಣಚು 1 ರಿಂದ 20 ಮತ್ತು ರಂಜಕ. 02. ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ದರ್ಜೆಗಳ ಅದುರುಗಳು ಸಿಗುತ್ತವೆ. ಆದರೂ ಲೋಂಡ ಮತ್ತು ಸುಪ ಪ್ರದೇಶಗಳ ಅದುರು ಬಹಳ ಉತ್ಕೃಷ್ಟವಾಗಿದ್ದು ಶೇ 66 ಮ್ಯಾಂಗನೀಸ್ ಮತ್ತು 1 ರಿಂದ 2 ಕಬ್ಬಿಣವನ್ನು ಹೊಂದಿದೆ. ಸದ್ಯದಲ್ಲಿ ಶಿವಮೊಗ್ಗ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳು ಉತ್ಕೃಷ್ಟವಾದ ಅದುರು (ಶೇ. 48 ಮೀರಿದ ಮ್ಯಾಂಗನೀಸ್) ಮುಗಿದು ಹೋಗಿರುವುದರಿಂದ ಸಾಮಾನ್ಯವಾದ ಇಲ್ಲವೆ ಕೀಳು ದರ್ಜೆಯ ಅದುರುಗಳನ್ನು (ಶೇ. 38 ರಿಂದ 42 ಮ್ಯಾಂಗನೀಸ್) ಉತ್ಪಾದಿಸುತ್ತಿವೆ. ಬಳ್ಳಾರಿಯ ಅದುರು ಸಾಮಾನ್ಯ ಅಥವಾ ಕೀಳು ದರ್ಜೆಯದಾಗಿದೆ. ಎಲ್ಲ ಪ್ರದೇಶಗಳ ಮ್ಯಾಂಗನೀಸ್ ಅದುರಿನ ನಿಕ್ಷೇಪಗಳ ಒಟ್ಟು ಪರಿಮಾಣವು ಸರಿಯಾಗಿ ತಿಳಿದುಬಂದಿಲ್ಲ. ಆದರೂ ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ 27 ದಶ ಲಕ್ಷಗಳಷ್ಟು ಅದುರು ಇದೆಯೆಂದು ಅಂದಾಜುಮಾಡಲಾಗಿದೆ. ತೀವ್ರ ಪರಿಶೋಧನೆಯಾದಲ್ಲಿ ಇನ್ನೂ ಅನೇಕ ನಿಕ್ಷೇಪಗಳು ದೊರೆಯಬಹುದು.

### ಬೆಳ್ಳಿ

ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೂ ಬೆಳ್ಳಿಯ ಅದುರು ದೊರೆತಿಲ್ಲ. ಆದರೆ ಕೋಲಾರದ ಚಿನ್ನದ ಅದುರಿನಲ್ಲಿ ಸ್ವಲ್ಪ ಬೆಳ್ಳಿಯಿದ್ದು ಇದು ಚಿನ್ನವನ್ನು ಉತ್ಪಾದಿಸುವಾಗ ತೆಗೆಯಲ್ಪಡುತ್ತದೆ. ಕೋಲಾರದ ಚಿನ್ನದ ಗಣಿಗಳು 1882ನೇ ಇಸವಿಯಿಂದ 1950ರ ವರೆಗೂ 33ಲಕ್ಷ ರೂಪಾಯಿಗಳ ಬೆಲೆಯ 1,65,000 ಔನ್ಸ್‌ಗಳಷ್ಟು ಬೆಳ್ಳಿಯನ್ನು ಉತ್ಪಾದಿಸಿವೆ.

### ಕೊಲಂಬಿಯಂ, ಟ್ಯಾಂಟಲಮ್, ಟೈಟಾನಿಯಂ ಮತ್ತು ತವರ (Columbium, Tantalum Titanium and Tin)

ಬೆಂಗಳೂರು ಸುತ್ತಮುತ್ತಲು ಕೊಲಂಬಿಯಂ ಮತ್ತು ಟ್ಯಾಂಟಲಂ ಅದುರುಗಳಿರುವುದಾಗಿ ತಿಳಿದು ಬಂದಿದೆ. ಇವು ಸ್ಟೈನ್‌ಲೆಸ್ ಸ್ಟೀಲು ಮತ್ತು ಅಬ್ರೇಸಿವ್ (abrasive) ಕೈಗಾರಿಕೆಗಳಿಗೆ ಉಪಯುಕ್ತ ವಾಗಿವೆ. ಮಂಡ್ಯ ಜಿಲ್ಲೆಯಲ್ಲಿ ಟೈಟಾನಿಯಂನಿಂದ ಕೂಡಿದ ಕಬ್ಬಿಣದ ಅದುರು ಸಿಗುತ್ತದೆ. ಮತ್ತು ಧಾರವಾಡ ಜಿಲ್ಲೆಯ ಕಪ್ಪದ ಗುಡ್ಡ ಪ್ರದೇಶದಲ್ಲಿ ತವರದ ಮರಳು ಸಿಗುತ್ತದೆ. ಈ ನಿಕ್ಷೇಪಗಳ ವಿಚಾರ ವಿಶದವಾಗಿ ಇನ್ನೂ ತಿಳಿದಿಲ್ಲ.

### ಅಲ್ಯುಮಿನಿಯಂ ಅದುರು (ಬಾಕ್ಸೈಟ್)

ಅಲ್ಯೂಮಿನಿಯಂ ಕೈಗಾರಿಕೆಗೆ ಆವಶ್ಯಕವಾದ ಬಾಕ್ಸೈಟ್ ಅದುರು ಹೇರಳವಾಗಿ ಬೆಳಗಾಂ ಜಿಲ್ಲೆಯಲ್ಲಿದೆ. ಅಲ್ಲದೆ ಇಲ್ಲಿ ಶೇ. 40 ರಿಂದ 60ರ ವರೆಗೆ ಅಲ್ಯೂಮಿನ್ ($Al_1O_3$) ಹೊಂದಿರುವ ವಿವಿಧ ದರ್ಜೆಯ ಅದುರಿನ ಪರಿಮಾಣವು 2.5 ದಶಲಕ್ಷ ಟನ್‌ಗಳೆಂದು ತಿಳಿಗುಬಂದಿದೆ. ಅರ್ಧ ದಶಲಕ್ಷ

ಟನ್‌ಗಳ ಪರಿಮಾಣದ ಬಾಕ್ಸೈಟಿನ ಸಣ್ಣ ನಿಕ್ಷೇಪಗಳು ಬಾಬಾಬುಡನ್‌ಗಿರಿಗಳಲ್ಲಿರುವುದೆಂದು ತಿಳಿದು ಬಂದಿದ್ದು ಉತ್ಕೃಷ್ಟವಾದ ಅದುರು ಅದರಲ್ಲಿ ಕೇವಲ ಒಂದು ಲಕ್ಷ ಟನ್ ಮಾತ್ರವೆಂದು ಗೊತ್ತಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ಸಿಲಿಕದಿಂದ ಕೂಡಿದ ಬಾಕ್ಸೈಟು ದೊರೆಯುತ್ತಿದೆ. ಇನ್ನೂ ಹೆಚ್ಚಿನ ಪರಿಶೋಧನೆ ನಡೆದಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ಅನೇಕ ಹೊಸ ನಿಕ್ಷೇಪಗಳು ಸಿಗಬಹುದು.

## ಅದುರುಗಳಲ್ಲದ ಖನಿಜಗಳು (Non-Metallic Minerals)

ಅದುರುಗಳಲ್ಲದ ಅನೇಕ ವಿಧವಾದ ಖನಿಜಗಳು ಕರ್ಣಾಟಕದಲ್ಲಿ ದೊರೆಯುವುವು. ಅವುಗಳಲ್ಲಿ ಬಹು ಮುಖ್ಯವಾದುವನ್ನು ಇಲ್ಲಿ ವಿವರಿಸಲಾಗಿದೆ.

### ಕಲ್ನಾರು

ಆಂಫಿಬೋಲಿನಿಂದ ಉತ್ಪನ್ನವಾದ ಕಲ್ನಾರು ಹಾಸನ ಜಿಲ್ಲೆಯಲ್ಲಿ ಅನೇಕ ಎಡೆಗಳಲ್ಲಿ ದೊರೆಯುತ್ತದೆ. ಕೆಲವು ಕಡೆಗಳಲ್ಲಿನ ನಿಕ್ಷೇಪಗಳು ಸಾಧಾರಣವಾಗಿ ದೊಡ್ಡವಾಗಿದ್ದು ಸಹಸ್ರಾರು ಟನ್‌ಗಳನ್ನು ಕೊಡಬಲ್ಲವು. ಇನ್ನೂ ಸಣ್ಣ ನಿಕ್ಷೇಪಗಳು ಮೈಸೂರು ಜಿಲ್ಲೆ, ಬಿಜಾಪುರದ ಜಿಲ್ಲೆಯ ಬಾಗಲುಕೋಟೆ ತಾಲೂಕಿನ ಎಲ್ಲಗಟ್ಟಿ, ಉತ್ತರ ಕನ್ನಡ ಜಿಲ್ಲೆಯ ಧಾರೇಶ್ವರ ಮುಂತಾದ ಹಲವೆಡೆಗಳಲ್ಲಿವೆ. ಕ್ರೈಸೊಲೈಟಿನಿಂದ ಉತ್ಪನ್ನವಾದ ಕಲ್ನಾರು ಹೊಳೆನರಸೀಪುರದ ಎಣ್ಣೆಹೊಳೆರಂಗನ ಬೆಟ್ಟದ ಪ್ರದೇಶದಲ್ಲೂ ಮೈಸೂರು ತಾಲೂಕಿನ ಮಾವಿನ ಹಳ್ಳಿಯ ಬಳಿಯೂ ದೊರೆಯುತ್ತದೆ. ಈ ಕೆಲವು ನಿಕ್ಷೇಪಗಳನ್ನು ಇನ್ನೂ ಪರಿಶೋಧಿಸಿ ಅವುಗಳ ಪ್ರಮಾಣವನ್ನು ತಿಳಿಯಬೇಕಾಗಿದೆ.

### ಪಚ್ಚೆ (ಬೆರಿಲ್)

ಮೈಸೂರು ಜಿಲ್ಲೆಯ ಕೃಷ್ಣರಾಜಸಾಗರದ ಬಳಿ ಮತ್ತು ಹಾಸನ ಜಿಲ್ಲೆಯಲ್ಲಿ ಕೆಲವೆಡೆಗಳಲ್ಲಿ ಪಚ್ಚೆಯ ನಿಕ್ಷೇಪಗಳಿವೆ. ಇವನ್ನು ಲಾಭದಾಯಕವಾಗಿ ಬಳಸುವುದರಲ್ಲಿ ಇನ್ನೂ ಸಂದೇಹವಿದೆ. ಪಚ್ಚೆಯನ್ನು ಅಮೂಲ್ಯವಾದ ಹರಳಾಗಿ ಬಳಸುತ್ತಾರೆ. ಪಚ್ಚೆಯ ಕಲ್ಲಿನಲ್ಲಿನ ಲೋಹವಾದ ಬೆರಿಲಿಯಂ ಬಹಳ ಲಘು ಮತ್ತು ಶಕ್ತಿಯುಳ್ಳದ್ದಾದ್ದರಿಂದ ಅನೇಕ ಕೈಗಾರಿಕೆಗಳಲ್ಲಿ ಅದರಲ್ಲೂ ತಾಮ್ರದೊಂದಿಗೆ ಬಳಸುತ್ತಾರೆ. ಪೂರ್ವದಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಪುನ್ನಾಟವು ಪಚ್ಚೆಗೂ, ಹೊಳೆನರಸೀಪುರದ ತಾಲೂಕು ಕೆಂಪುಗಳಿಗೂ ಪ್ರಸಿದ್ಧವಾಗಿದ್ದವು. (ಕನ್ನಡ ಸಾಹಿತ್ಯದಿಂದ ಉದ್ಧರಿಸಿದೆ.)

### ಕುರಂಗ (Corundum)

ಕರ್ಣಾಟಕ ರಾಜ್ಯದ ಹಾಸನ, ಬೆಂಗಳೂರು, ಚಿಕ್ಕಮಗಳೂರು, ಕೋಲಾರ, ಮೈಸೂರು, ತುಮಕೂರು, ಗುಲ್ಬರ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅನೇಕ ಕಡೆ ಇರುವ ಶಿಸ್ಟ್ ಕಲ್ಲುಗಳಲ್ಲಿ ವಿವಿಧ ವಾದ ಕುರಂಗವು ಇರುವುದು ತಿಳಿದು ಬಂದಿದೆ. ಇವುಗಳಲ್ಲಿ ಹಾಸನ ಜಿಲ್ಲೆಯ ನಿಕ್ಷೇಪಗಳು ಮುಖ್ಯ ವಾಗಿದ್ದು, ಲಾಭದಾಯಕವಾಗಿ ಕೆಲಸಕ್ಕೆ ಕಂಡುಬಂದಿದೆ. ಆದುದರಿಂದ ಇದನ್ನು ಸ್ವಲ್ಪವಾಗಿ ಇಲ್ಲಿ ತೆಗೆಯಲಾಗುತ್ತಿದೆ. ಮುಖ್ಯವಾಗಿ ಇದನ್ನು ಉಜ್ಜುವುದಕ್ಕಾಗಿ ಬಳಸುತ್ತಾರೆ.

## ಫೆಲ್ಸ್ಪಾರ್

ಪೊಟಾಸಿಯಂ ಮತ್ತು ಸೋಡಲ್ಯೆಮಿನಿಂದ ಕೂಡಿದ ಎರಡು ವಿಧಗಳಾದ ಫೆಲ್ಸ್ಪಾರ್‌ನ ಬೃಹತ್ಪ್ರಮಾಣದ ನಿಕ್ಷೇಪಗಳು ಅನೇಕ ಕಡೆಗಳಲ್ಲಿವೆ. ದೊಡ್ಡ ನಿಕ್ಷೇಪಗಳು ರಾಯಚೂರು, ಗುಲ್ಬರ್ಗ, ಬೆಂಗಳೂರು, ಹಾಸನ, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಇರುವುವು. ಬೆಂಗಳೂರನ್ನು ಬಿಟ್ಟು ಉಳಿದೆಡೆಗಳಲ್ಲಿ ಪಿಂಗಾಣಿ ಉದ್ಯಮವು ಬೆಳೆದಿಲ್ಲವಾದ್ದರಿಂದ ಈ ನಿಕ್ಷೇಪಗಳನ್ನು ಇನ್ನೂ ಬಳಸುತ್ತಿಲ್ಲ.

## ಗಾರ್ನೆಟ್

ಕರ್ಣಾಟಕದಲ್ಲಿ ಶಿಸ್ಟ್ ಕಲ್ಲುಗಳಲ್ಲಿ ವಿವಿಧ ಬಣ್ಣದ ಮತ್ತು ಜಾತಿಯ ಗಾರ್ನೆಟ್‌ಗಳು ದೊರಕುತ್ತವೆ. ಅಲ್ಲದೆ ಬಿಡಿ ಹರಳುಗಳ ರೂಪದಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿಯೂ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಮತ್ತು ಮೈಸೂರು ತಾಲೂಕುಗಳಲ್ಲಿ ನದಿಗಳ ಮರಳಿನಲ್ಲಿ ಹಾಗೂ ಉತ್ತರ ಕನ್ನಡದ ತೀರಪ್ರದೇಶದಲ್ಲಿಯೂ ಸಿಗುವುವು. ಸದ್ಯದಲ್ಲಿ ಈ ಯಾವ ನಿಕ್ಷೇಪಗಳನ್ನೂ ಉಪಯೋಗಿಸುತ್ತಿಲ್ಲ. ಗಾರ್ನೆಟ್‌ನ ಕಾಠಿನ್ಯವು ಅದನ್ನು ಉಜ್ಜುವ ಪದಾರ್ಥಗಳ ಕೈಗಾರಿಕೆಯಲ್ಲಿ (abrasive) ಬಳಸಲು ಉಪಯುಕ್ತವಾಗಿದೆ.

## ಕರಿಸೀಸ (ಗ್ರಾಫೈಟ್)

ಶೇ. 20 ರಿಂದ 25ರ ವರೆಗೂ ಹರಳುಗಳಲ್ಲದ ಕರಿಸೀಸದ ಕಣಗಳಿಂದ ಕೂಡಿದ ಮಣ್ಣು ಕೋಲಾರ ಜಿಲ್ಲೆಯ ಬಂಗಾರು ಪೇಟೆ ತಾಲೂಕಿನಲ್ಲಿ ಸುಮಾರು 1,00,000 ಟನ್‌ಗಳಷ್ಟು ಇದೆ. ಈ ನಿಕ್ಷೇಪವನ್ನು ಮೂಸೆಗಳ ಒಳಪದರಗಳನ್ನು ತಯಾರಿಸಲು ಉಪಯೋಗಿಸಲಾಗುತ್ತಿದೆ. ಹರಳಿನ ರೂಪದ ಸಣ್ಣ ರೇಖೆಗಳಾಕಾರದ ಕರಿಸೀಸದ ನಿಕ್ಷೇಪವು ಮೈಸೂರು ತಾಲೂಕು ಮಾವಿನ ಹಳ್ಳಿಯ ಬಳಿ ಇರುವ ಸರಗೂರು ಶಿಸ್ಟ್ ಕಲ್ಲುಗಳಲ್ಲಿ ದೊರೆಯುತ್ತದೆ. ಇದನ್ನು ಬಳಸುವ ಮೊದಲು ಶುದ್ಧ ಮಾಡಬೇಕಾಗುತ್ತದೆ. ಈಚೆಗೆ ಧಾರವಾಡ ಜಿಲ್ಲೆಯ ನಾಗಾವಿಯ ಬಳಿ ಕರಿಸೀಸದಿಂದ ಕೂಡಿದ ಮಣ್ಣು ಇರುವುದಾಗಿ ತಿಳಿದು ಬಂದಿದೆ. ಕರಿಸೀಸವನ್ನು ಸೀಸದ ಕಡ್ಡಿಗಳಲ್ಲಿ ಬಳಸುವುದಲ್ಲದೆ, ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯಲ್ಲೂ ಹಾಗು ಲೂಬ್ರಿಕೆಂಟಾಗಿಯೂ ಬಳಸಲಾಗುತ್ತಿದೆ.

## ಬಿಳಿ ಜೇಡಿಮಣ್ಣು (ಸುದ್ದೆಮಣ್ಣು Kaolin)

ಕರ್ಣಾಟಕದಲ್ಲಿ ವಿವಿಧ ದರ್ಜೆಯ ಬಿಳಿಯ ಜೇಡಿಮಣ್ಣಿನ ನಿಕ್ಷೇಪಗಳು ಹೇರಳವಾಗಿವೆ. ಇವುಗಳಲ್ಲಿ ಕೆಲವು ನಿಕ್ಷೇಪಗಳನ್ನು ತೆಗೆದು ಮಣ್ಣನ್ನು ಶುದ್ಧಿಮಾಡಿ ಕಾಗದ ಮತ್ತು ಪಿಂಗಾಣಿ ಕೈಗಾರಿಕೆಗಳಲ್ಲಿಯೂ, ಉಕ್ಕಿನ ಕುಲುಮೆಗಳಲ್ಲಿ ಶಾಖವನ್ನು ತಡೆಯುವ ವಸ್ತುವಿಗೂ ಅಥವಾ ಇಟ್ಟಿಗೆಗಳಿಗೂ ಇಲ್ಲವೆ ಸ್ಯಾನಿಟರಿ ವಸ್ತುಗಳ ಉತ್ಪಾದನೆಗೂ ಉಪಯೋಗಿಸುತ್ತಾರೆ. ಮತ್ತು ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಇದನ್ನು ತೆಗೆದು ಬಳಪವನ್ನು ಮಾಡಲು ಉಪಯೋಗಿಸುತ್ತಾರೆ. ಈ ನಿಕ್ಷೇಪಗಳು ಹಾಸನ, ಶಿವಮೊಗ್ಗ, ಕೋಲಾರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾಂ, ಬಿದರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿವೆ.

**ಕಯನೈಟ್ ಮತ್ತು ಸಿಲ್ಲಿಮನೈಟ್**

ಈ ಖನಿಜಗಳ ನಿಕ್ಷೇಪಗಳು ಮುಖ್ಯವಾಗಿ ಬೆಂಗಳೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿವೆ. ಅಲ್ಲದೆ ಸಣ್ಣ ನಿಕ್ಷೇಪಗಳು ಹಲವಾರು ಕಡೆಗಳಲ್ಲಿವೆ. ಕಯನೈಟ್ ಮತ್ತು ಸಿಲ್ಲಿಮನೈಟ್‌ಗಳ ರಾಸಾಯನಿಕ ಸಂಯೋಜನೆ ಒಂದೇ ಆದರೂ ಅವುಗಳ ಶಾಖ ನಿರೋಧಕ ಶಕ್ತಿ ಭಿನ್ನವಾಗಿದೆ. ಹಾಸನ ಜಿಲ್ಲೆಯ ಕಲ್ಯಾಡಿ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಕಯನೈಟ್ ನಿಕ್ಷೇಪಗಳು ಬಹು ಮುಖ್ಯವಾದುವು. ಈ ಖನಿಜಗಳು ಶ್ರೇಷ್ಠವಾದ ವಿದ್ಯುತ್ಪಿಂಗಾಣಿ ವಸ್ತುಗಳ ಕೈಗಾರಿಕೆಗೆ ಬಹಳ ಬೇಕಾಗಿವೆ.

**ಸುಣ್ಣಕಲ್ಲುಗಳು**

ಕರ್ನಾಟಕದ ಮೈಸೂರು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬಿಜಾಪುರ, ಧಾರವಾಡ, ಬೆಳಗಾಂ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸುಣ್ಣಕಲ್ಲುಗಳ ನಿಕ್ಷೇಪಗಳು ಹೇರಳವಾಗಿವೆ. ಸಣ್ಣ ಪ್ರಮಾಣದ ನಿಕ್ಷೇಪಗಳು ಇತರ ಜಿಲ್ಲೆಗಳಲ್ಲಿಯೂ ಇವೆ. ಸಂಯೋಜನೆಯಲ್ಲಿ ಈ ಸುಣ್ಣ ಕಲ್ಲಿನ ನಿಕ್ಷೇಪಗಳು ಅಧಿಕವಾದ ಸುಣ್ಣದ ಅಂಶವುಳ್ಳ ಬಿಳಿಯ ಕಲ್ಲುಗಳಿಂದ ಹಿಡಿದು ಮ್ಯಾಗ್ನೀಸಿಯಂ ಸುಣ್ಣಕಲ್ಲು ಡಾಲೋಮೈಟ್ ಮತ್ತು ಸಿಲಿಕ ಇಲ್ಲವೆ ಹೆಚ್ಚಾಗಿ ಮಣ್ಣು ಉಳ್ಳ ಜಾತಿಗಳಿಗೆ ಸೇರಿರುತ್ತವೆ. ಉತ್ಕೃಷ್ಟವಾದ ಸುಣ್ಣಕಲ್ಲನ್ನು ಸಿಮೆಂಟಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಶಿವಮೊಗ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಸಿಮೆಂಟ್ ಕಾರ್ಖಾನೆಗಳು ಒಂದು ವರ್ಷಕ್ಕೆ ಅನುಕ್ರಮವಾಗಿ 40,000 ಮತ್ತು 2,50,000 ಟನ್‌ಗಳಷ್ಟು ಸುಣ್ಣಕಲ್ಲನ್ನು ಬಳಸುತ್ತವೆ. ಭದ್ರಾವತಿಯಲ್ಲಿ ಕಬ್ಬಿಣದ ಅದುರನ್ನು ಕರಗಿಸಲು ಸುಮಾರು 5,000 ಟನ್‌ಗಳಷ್ಟು ಸುಣ್ಣಕಲ್ಲನ್ನು ಉಪಯೋಗಿಸುತ್ತಾರೆ. ಅತಿ ದೊಡ್ಡ ಸುಣ್ಣಕಲ್ಲಿನ ನಿಕ್ಷೇಪಗಳು ಈ ಸ್ಥಳಗಳಲ್ಲಿ ದೊರೆಯುವುವು ಮತ್ತು ಅವುಗಳ ಪ್ರಮಾಣಗಳು ಈ ರೀತಿ ಇವೆ : ಮೈಸೂರು ಜಿಲ್ಲೆಯ ಬೆಟ್ಟದ ಬೀಡು (1·5 ದ.ಲ. ಟನ್‌ಗಳು) ಶಿವಮೊಗ್ಗ ಜಿಲ್ಲೆಯ ಭಡಿಗುಂಡ (3 ದ.ಲ.) ತುಮಕೂರು ಜಿಲ್ಲೆಯ ಓಬಳಾಪುರ (50 ದ.ಲ.) ಮತ್ತು ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ಬಳಿ (26 ದ.ಲ.) ಮುಧೋಳು ಸುತ್ತಮುತ್ತ (750 ದ.ಲ.) ಬೆಳಗಾಂ ಜಿಲ್ಲೆಯ ನಾಗರಗಾಳಿಯಲ್ಲಿ (55 ದ.ಲ.) ಅಲ್ಲದೆ ಉತ್ತರ ಕನ್ನಡ ಜಿಲ್ಲೆಯ ನಾಗಜರಿ (10 ದ.ಲ). ಇವೆ. ಅಲ್ಲದೆ ಇನ್ನೂ ಅನೇಕ ನಿಕ್ಷೇಪಗಳು ಇದ್ದು ಅವುಗಳ ಶುದ್ಧತೆ ಮತ್ತು ಪ್ರಮಾಣವನ್ನು ನಿಖರವಾಗಿ ತಿಳಿದುಕೊಳ್ಳಬೇಕಾಗಿದೆ. ಎಲ್ಲೆಡೆಗಳಲ್ಲಿಯೂ ನೆಲದ ಮೇಲೆಯೇ ಸಿಗುವ 'ಕಂಕರ'ನ್ನು ಸುಣ್ಣ ಸುಡಲು ಉಪಯೋಗಿಸಲಾಗುತ್ತಿದೆ.

**ಮ್ಯಾಗ್ನಸೈಟು**

ಇದು ಸಿರಗಳ ರೂಪದಲ್ಲಿ ಹಾಸನ, ಮೈಸೂರು, ಕೊಡಗು ಜಿಲ್ಲೆಗಳಲ್ಲಿರುವ ಅತಿಕ್ಷಾರ ಶಿಲೆಗಳಲ್ಲಿ ದೊರಕುತ್ತದೆ. ಮೈಸೂರು ಜಿಲ್ಲೆಯ ದೊಡ್ಡಕಾಣ್ಯದಲ್ಲಿರುವ ನಿಕ್ಷೇಪವು ಸುಮಾರಾಗಿ ದೊಡ್ಡದಾಗಿದ್ದು ಕಳೆದ 30 ವರ್ಷಗಳಲ್ಲಿ ಸುಮಾರು 1 ಲಕ್ಷ ಟನ್‌ಗಳಷ್ಟು ಮ್ಯಾಗ್ನಸೈಟನ್ನು ಉತ್ಪಾದಿಸಿದೆ. ಇದಲ್ಲದೆ ಸಣ್ಣ ನಿಕ್ಷೇಪಗಳು ಕಡಕೊಳದಲ್ಲಿಯೂ ಕೊಡಗಿನಲ್ಲಿಯೂ ಇರುವುವು. ಮ್ಯಾಗ್ನಸೈಟು ಸಂಯೋಜನೆಯಲ್ಲಿ ಮ್ಯಾಗ್ನೀಸಿಯಂ ಲೋಹದ ಕಾರ್ಬೊನೇಟಾಗಿದೆ. ಇದಕ್ಕೆ ಹೆಚ್ಚು ಶಾಖ ತಡೆಯಬಲ್ಲ ಉಷ್ಣನಿರೋಧಕ ವಸ್ತುಗಳ ಉತ್ಪಾದನೆಯಲ್ಲಿ ಬಹಳ ಬೇಡಿಕೆ ಇದೆ. ಅಲ್ಲದೆ ಮ್ಯಾಗ್ನೀಸಿಯಂ ಲೋಹದಿಂದ ಕೂಡಿದ ಸಂಯೋಜಕಗಳನ್ನು ಔಷಧಿಗಳಲ್ಲಿ ಉಪಯೋಗಿಸುತ್ತಾರೆ.

## ಬೆಣಚುಕಲ್ಲು

ಕರ್ನಾಟಕದ ಅನೇಕ ಭಾಗಗಳಲ್ಲಿ ಬೆಣಚುಕಲ್ಲು ಸಿರಗಳ ರೂಪದಲ್ಲಿಯೂ ಮತ್ತು ಸಣ್ಣಗುಡ್ಡಗಳ ರೂಪದಲ್ಲಿಯೂ ದೊರೆಯುವುದಾದರೂ ಅವುಗಳ ನಿಷ್ಕೃಷ್ಟ ಪ್ರಮಾಣ ಮತ್ತು ಶುದ್ಧತೆಯನ್ನು ಇನ್ನೂ ತಿಳಿಯಲಾಗಿಲ್ಲ. ಇದು ಎಲ್ಲ ಜಿಲ್ಲೆಗಳಲ್ಲಿಯೂ ಪ್ರಾಯಶಃ ದೊರಕುತ್ತದೆ. ಆದರೂ ಬೆಣಚುಕಲ್ಲನ್ನು ಉಪಯೋಗಿಸುವ ಕೈಗಾರಿಕೆಗಳು ನಿಕ್ಷೇಪಕ್ಕೆ ಸಮೀಪದಲ್ಲಿಯೇ ಇರುವುದು ಮುಖ್ಯ. ಕೆಲವು ನಿಕ್ಷೇಪಗಳು ಬೃಹತ್ಪ್ರಮಾಣದ್ದಾಗಿದ್ದು ಭದ್ರಾವತಿ ಬಳಿ ಇರುವ ನಿಕ್ಷೇಪವು ಫೆರೊಸಿಲಿಕಾನ್ ಎಂಬ ಉಕ್ಕನ್ನು ತಯಾರಿಸಲು ಅನುಕೂಲವಾಗಿದ್ದು ಇದರ ಪ್ರಮಾಣವು 1ರಿಂದ 2 ದ. ಲ. ಟನ್‌ಗಳಷ್ಟಿದೆ. ಗಾಜನ್ನು ತಯಾರಿಸಲು ಬಳಸುವ ಮರಳು ಮತ್ತು ಕ್ವಾರ್ಟಸೈಟ್ ಶಿಲೆಯ ನಿಕ್ಷೇಪಗಳ ವಿವರಣೆ ಇನ್ನೂ ಸರಿಯಾಗಿ ತಿಳಿಯದು.

## ಬಳಪದ ಕಲ್ಲು

ಕರ್ನಾಟಕದ ಅನೇಕ ಕಡೆ ಉಪಯೋಗಕ್ಕೆ ಬರುವ ಬಳಪದ ಕಲ್ಲಿನ ನಿಕ್ಷೇಪಗಳಿದ್ದರೂ ಶುದ್ಧವಾದ ಬಳಪದ ನಿಕ್ಷೇಪಗಳು ಬಹಳ ವಿರಳ. ಇವು ಮೈಸೂರು, ಹಾಸನ, ಶಿವಮೊಗ್ಗ, ಧಾರವಾಡ, ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿವೆ. ಬಳಪದ ಕಲ್ಲನ್ನು ಕತ್ತರಿಸಿ ಸಾಧಾರಣವಾಗಿ ಉಷ್ಣವನ್ನು ತಡೆಯಬಲ್ಲ ಇಟ್ಟಿಗೆಗಳಿಗೂ, ಮರಿಗೆಗಳಿಗೂ, ವಾಸ್ತುಶಿಲ್ಪಗಳಿಗೂ ಸಣ್ಣ ವಿಗ್ರಹಗಳಿಗೂ ಬಳಸಲಾಗುತ್ತದೆ. ಸದ್ಯದಲ್ಲಿ ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಇದನ್ನು ತೆಗೆಯಲಾಗುತ್ತಿದೆ. ಇದನ್ನು ಸೌಂದರ್ಯ ವರ್ಧಕಗಳ ಕೈಗಾರಿಕೆ ಹಾಗೂ ಲೂಬ್ರಿಕೆಂಟಾಗಿಯೂ ಬಳಸಬಹುದು. ಸುಪ್ರಸಿದ್ಧವಾದ ಬೇಲೂರು ಮತ್ತು ಹಳೇಬೀಡುಗಳ ಶಿಲ್ಪಸೌಂದರ್ಯ ಮತ್ತು ವಿನ್ಯಾಸವು ಪ್ರಪಂಚದ ಗಮನವನ್ನೆಲ್ಲಾ ಸೆಳೆದಿದ್ದು ಭಾರತದ ಕಲಾಕೌಶಲಕ್ಕೆ ಒಳ್ಳೆ ನಿದರ್ಶನವಾಗಿದೆ. ಅವುಗಳ ಸೂಕ್ಷ್ಮತೆ ಮತ್ತು ಅಂದವು ಶಿಲ್ಪಿಗಳು ಬಳಸಿರುವ ಬಳಪದ ಕಲ್ಲನ್ನೇ ಅವಲಂಬಿಸಿವೆ. ಬಳಪದ ಕಲ್ಲು ಭೂಮಿಯಿಂದ ತೆಗೆದಾಗ ಮೃದುವಾಗಿದ್ದು ಅನಂತರ ಹವಾಮಾನದಿಂದ ಗಡಸಾಗುವುದರಿಂದ ಮರದ ಕೆತ್ತನೆಯ ಮಾದರಿ ಕೆತ್ತನೆ ಕೆಲಸಕ್ಕೆ ಶಿಲ್ಪಿಗಳಿಗೆ ಬಹಳ ಆದರ್ಶ ವಸ್ತುವಾಗಿದೆ.

## ವರ್ಮಿಕ್ಯುಲೈಟ್

ಇದು ಅಭ್ರಕದ ಒಂದು ಬಗೆ. ಈಚೆಗೆ ಈ ನಿಕ್ಷೇಪಗಳನ್ನು ಹಾಸನ, ತುಮಕೂರು, ಮಂಡ್ಯ, ಮೈಸೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಹಿಡಿಯಲಾಗಿದೆ. ಕ್ಷಾರ ಮತ್ತು ಅತಿಕ್ಷಾರ ಶಿಲೆಗಳ ಸಂಧಿಗಳನ್ನು ವಿಶದವಾಗಿ ಪರಿಶೀಲಿಸಿದಲ್ಲಿ ಇನ್ನೂ ಅನೇಕ ನಿಕ್ಷೇಪಗಳು ಕಂಡುಬರಬಹುದು, ಈ ಖನಿಜವು ವಿಶೇಷವಾಗಿ ಶಾಖವನ್ನು ತಡೆಯಬಲ್ಲ ಮತ್ತು ಧ್ವನಿಯನ್ನು ನಿಯಂತ್ರಿಸಬಲ್ಲ ವಿಶೇಷ ರಚನೆಯ ಗುಣಗಳನ್ನು ಹೊಂದಿರುತ್ತದೆ.

## ಬಣ್ಣದ ಮಣ್ಣುಗಳು

ಇವುಗಳನ್ನು ಬಣ್ಣಗಳು ಮತ್ತು ಡಿಸ್ಟೆಂಪರ್‌ಗಳನ್ನು ಮಾಡಲು ಬಳಸುತ್ತಾರೆ. ಇವುಗಳು ಸಂಯೋಜನೆಯಲ್ಲಿ ಕಬ್ಬಿಣದ, ಮ್ಯಾಂಗನೀಸಿನ ಆಮ್ಲಗಳಿದ್ದು ಕೆಲವು ವೇಳೆ ಮ್ಯಾಗ್ನೀಸಿಯಂ ಮತ್ತು ಕಬ್ಬಿಣದ ಜಲಜನಕಯುಕ್ತವಾದ ಬೆಣಚಾಗಿರುತ್ತವೆ (hydrated magnesium Iron silicates).

ಈ ಮಣ್ಣುಗಳು ಹಳದಿ, ಕೆಂಪು ಇಲ್ಲವೆ ಹಸುರುಬಣ್ಣದ್ದಾಗಿರುತ್ತವೆ. ಇವು ಚಿತ್ರದುರ್ಗ, ತುಮಕೂರು, ಬಳ್ಳಾರಿ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಾರುಗಳ ನಿಕ್ಷೇಪಗಳ ಮಧ್ಯದಲ್ಲಿ ಅಲ್ಲಲ್ಲಿ ಸಿಗುವುವು.

## ಕಟ್ಟಡದ ಕಲ್ಲುಗಳು

ಕರ್ನಾಟಕದಲ್ಲಿ ಗ್ರ್ಯಾನೈಟು, ನೈಸ್, ಪಾರ್ಫಿರಿ, ಸ್ಲೇಟು, ಅಮೃತಶಿಲೆ, ಬಳಪದ ಕಲ್ಲು, ಫೆಲ್ಸೈಟು, ಡಾಲರೈಟ್ (basic dykes), ಲ್ಯಾಟರೈಟು ಮತ್ತು ಮರಳು ಕಲ್ಲು ಮುಂತಾದ ವಿವಿಧ ನಮೂನೆಯ ಕಟ್ಟಡದ ಸಾಮಗ್ರಿ ಹೇರಳವಾಗಿವೆ. ಇವುಗಳಲ್ಲಿ ಅನೇಕ ಬಗೆಗಳನ್ನು ವಿದೇಶಗಳಲ್ಲಿ ಹಾಸುಗಲ್ಲುಗಳಾಗಿ ಮತ್ತು ಇತರ ವಿಧವಾಗಿ ಬಳಸಲು ರಫ್ತು ಮಾಡಲಾಗುತ್ತಿದೆ. ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ತೆಗೆದ ಕಲ್ಲುಗಳನ್ನು ಭಾರತದ ಅನೇಕ ಭಾಗಗಳಿಗಲ್ಲದೆ ವಿದೇಶಗಳಿಗೂ ಕಳಿಸಲಾಗುತ್ತಿದ್ದು ಇದಕ್ಕೆ ಬಹಳ ಬೇಡಿಕೆ ಸಹ ಇದೆ.

## ಉಪಸಂಹಾರ

ಕರ್ನಾಟಕ ರಾಜ್ಯದಲ್ಲಿ ಇದುವರೆಗೂ ನಡೆಸಿರುವ ಖನಿಜ ನಿಕ್ಷೇಪಗಳ ಪರಿಶೋಧನೆಯಿಂದಾಗಿ ನಮ್ಮಲ್ಲಿ ಯಥೇಚ್ಛವಾಗಿ ಕಬ್ಬಿಣದ, ಮ್ಯಾಂಗನೀಸಿನ ಅದುರುಗಳಿದ್ದು, ಸಾಕಷ್ಟು ಪ್ರಮಾಣದಲ್ಲಿ ಕ್ರೋಮೈಟು ಇದ್ದು, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ವಿಸ್ತರಿಸಲು ಅವಕಾಶವಿದೆ. ಹೊಸ ಸಿಮೆಂಟು ಕಾರ್ಖಾನೆಗಳನ್ನು ರಚಿಸಲು ಬೇಕಾದಷ್ಟು ಸುಣ್ಣಕಲ್ಲು ಮತ್ತು ಮಣ್ಣಿನ ನಿಕ್ಷೇಪಗಳೂ ಇವೆ. ಉಜ್ಜಲು ಉಪಯೋಗಿಸುವ (ಉಪ್ಪುಕಾಗದ ಮುಂತಾದ) ಪದಾರ್ಥಗಳನ್ನು ತಯಾರಿಸಲು ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಕೊರಂಡಂ, ಗಾರ್ನೆಟ್ ಮತ್ತು ಪಿಂಗಾಣಿ ಉದ್ಯಮಗಳನ್ನು ಇನ್ನೂ ವೃದ್ಧಿಗೊಳಿಸಲು ಬೇಕಾಗುವ ಬಿಳಿ ಜೇಡು, ಫೆಲ್ಸ್ಪಾರ್, ಮತ್ತು ಬೆಣಚುಕಲ್ಲುಗಳು ಸಾಕಷ್ಟಿವೆ. ಅಲ್ಲದೆ ಬಣ್ಣಗಳ, ಅಲ್ಯೂಮಿನಿಯಮ್ಮಿನ ಮತ್ತು ಮುಖ್ಯವಾದ ರಾಸಾಯನಿಕ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾಗುವ ಖನಿಜಗಳು (ಮ್ಯಾಗ್ನಸೈಟು, ಬಾಕ್ಸೈಟ್, ಬಣ್ಣದ ಮಣ್ಣುಗಳು) ಸಾಕಷ್ಟಿವೆ. ಕರ್ನಾಟಕದಲ್ಲಿ ಪುರಾತನ ಕಾಲದ ಅನೇಕ ಚಿನ್ನದ ಗಣಿಗಳಿದ್ದು ಈ ಶ್ರೇಷ್ಠವಾದ ಲೋಹದ ಉತ್ಪಾದನೆಯನ್ನು ನವೀನೀಕರಿಸಲು ಮಾರ್ಗದರ್ಶನವಾಗಿವೆ. ಇವೇ ಅಲ್ಲದೆ ಇನ್ನೂ ಅನೇಕ ಭಾಗಗಳಲ್ಲಿ ಪರಿಶೋಧನೆಗೆ ಅವಕಾಶವಾಗಿದ್ದು ಅಲ್ಲಿ ಭೂವಿಜ್ಞಾನರೀತ್ಯಾ ಮತ್ತು ಭೂ ಭೌತವಿಜ್ಞಾನರೀತ್ಯಾ ಪರಿಶೋಧನೆಗಳಾದಲ್ಲಿ ದೇಶಕ್ಕೆ ಬಹಳ ಉಪಯುಕ್ತವಾದ ಅನೇಕ ಖನಿಜನಿಕ್ಷೇಪಗಳು ದೊರೆಯಬಹುದು. ನಮ್ಮ ಖನಿಜ ಕೈಗಾರಿಕೆ ಇನ್ನೂ ಅಭಿವೃದ್ಧಿಹೊಂದಲು, ಕೆಲವು ಕಡೆಗಳಲ್ಲಿ ಸಾರಿಗೆ ಅನುಕೂಲತೆಗಳಿಲ್ಲದ್ದು, ವಿದ್ಯುಚ್ಛಕ್ತಿಯ ಕೊರತೆ ಮತ್ತು ಸರ್ವಋತುವಿನ ಬಂದರು ಇಲ್ಲದ್ದು ಮುಖ್ಯ ಆತಂಕಗಳಾಗಿವೆ. ಈ ಆತಂಕಗಳ ನಿವಾರಣೆಗಾಗಿ ಈಗ ಶ್ರಮಿಸಲಾಗುತ್ತಿದೆ.

## ಖನಿಜಗಳ ಉತ್ಪಾದನೆ

1964ನೇ ಇಸವಿಯಲ್ಲಿ ಉತ್ಪಾದಿಸಲಾದ ಮುಖ್ಯ ಖನಿಜಗಳು, ಜಿಲ್ಲಾವಾರು ವಿವರ ಮತ್ತು ಕರ್ನಾಟಕ ರಾಜ್ಯದ ಉತ್ಪಾದನೆಯನ್ನು 1964ನೇ ಇಸವಿಯಲ್ಲಿ ಭಾರತದ ಉತ್ಪಾದನೆಯೊಡನೆ (ಗೋವ ಹೊರತು) ಹೋಲಿಸಿದೆ.

| ಅನುಕ್ರಮ ಸಂಖ್ಯೆ | ಖನಿಜದ ಹೆಸರು | | ಜಿಲ್ಲೆಗಳ ಹೆಸರು | | ರಾಜ್ಯದಲ್ಲಿನ ಉತ್ಪಾದನೆ | ಭಾರತದಲ್ಲಿನ ಉತ್ಪಾದನೆ (ಗೋವ ಸೇರಿಲ್ಲ) |
|---|---|---|---|---|---|---|
| | | | | | ಟನ್ನುಗಳಲ್ಲಿ | ಟನ್ನುಗಳಲ್ಲಿ |
| **I** | ಅದುರುಗಳು | | | | | |
| ಕಬ್ಬಿಣ ಸಂಬಂಧ | | | | | | |
| 1. | ಕ್ರೋಮೈಟು | .... | ಹಾಸನ | | **2830** | **33167** |
| 2. | ಕಬ್ಬಿಣದ ಅದುರು | .... | ಬಳ್ಳಾರಿ | | 1958995 | |
| | | | ಬಿಜಾಪುರ | | 34543 | |
| | | | ಚಿತ್ರದುರ್ಗ | | 256811 | |
| | | | ಚಿಕ್ಕಮಂಗಳೂರು | | 182851 | |
| | | | ಉತ್ತರ ಕನ್ನಡ | | 25486 | |
| | | | ಶಿವಮೊಗ್ಗ | | 43320 | |
| | | | ತುಮಕೂರು | | 81758 | |
| | | | | ಜುಮ್ಲಾ | **2583764** | **14802000** |
| 3. | ಮ್ಯಾಂಗನೀಸ್ ಅದುರು | .... | ಬಳ್ಳಾರಿ | | 126520 | |
| | | | ಬೆಳಗಾಂ | | 324 | |
| | | | ಚಿತ್ರದುರ್ಗ | | 18499 | |
| | | | ಧಾರವಾಡ | | 80 | |
| | | | ಉತ್ತರ ಕನ್ನಡ | | 62583 | |
| | | | ಶಿವಮೊಗ್ಗ | | 45945 | |
| | | | ತುಮಕೂರು | | 5015 | |
| | | | | ಜುಮ್ಲಾ | **258966** | **1233000** |
| ಇತರ ಅದುರುಗಳು | | | | | | |
| 1. | ಬಾಕ್ಸೈಟು | .... | ಬೆಳಗಾಂ | | **16027** | **577769** |
| | | | | | ಗ್ರಾಂಗಳಲ್ಲಿ | ಗ್ರಾಂಗಳಲ್ಲಿ |
| 2. | ಚಿನ್ನ | .... | ಕೋಲಾರ | | 3725898 | |
| | | | ರಾಯಚೂರು | | 878499 | |
| | | | | ಜುಮ್ಲಾ | **4604397** | **4602000** |
| 3. | ಬೆಳ್ಳಿ | .... | ಕೋಲಾರ | | 281618 | |
| | | | ರಾಯಚೂರು | | 69755 | |
| | | | | ಜುಮ್ಲಾ | **351373** | **4735000** |

| ಅನುಕ್ರಮ ಸಂಖ್ಯೆ | ಖನಿಜದ ಹೆಸರು | ಜಿಲ್ಲೆಗಳ ಹೆಸರು | ರಾಜ್ಯದಲ್ಲಿನ ಉತ್ಪಾದನೆ | ಭಾರತದಲ್ಲಿನ ಉತ್ಪಾದನೆ (ಗೋವ ಸೇರಿಲ್ಲ) |
|---|---|---|---|---|
| | | | ಟನ್ನುಗಳಲ್ಲಿ | ಟನ್ನುಗಳಲ್ಲಿ |
| II | ಅದುರುಗಳಲ್ಲದ ಖನಿಜಗಳು | | | |
| 1. | ಕಲ್ನಾರು .... | ಹಾಸನ | **455** | **2774** |
| 2. | ಅಲ್ಯೂಮಿನಿಯಂ ಸಹಿತ ಮಣ್ಣು .... | ಹಾಸನ | 2936 | |
| | | ಶಿವಮೊಗ್ಗ | 1576 | |
| | | ಜುಮ್ಲ | **4532** | ..... |
| 3. | ಕ್ಯಾಲ್ಸೈಟು .... | ಬಿಜಾಪುರ | **410** | **12140** |
| 4. | ಡಾಲೋಮೈಟು .... | ಶಿವಮೊಗ್ಗ | 3551 | |
| | | ತುಮಕೂರು | 1358 | |
| | | ಜುಮ್ಲ | **4909** | **471428** |
| 5. | ಮೂಸೆ ಮಣ್ಣು (fire clay) | ಬೆಂಗಳೂರು | 202 | |
| | | ಬೆಳಗಾಂ | 247 | |
| | | ಶಿವಮೊಗ್ಗ | 961 | |
| | | ಜುಮ್ಲ | **1410** | **346297** |
| 6. | ಫೆಲ್ಸ್ಪಾರ್ .... | ಕೋಲಾರ | **1683** | **19605** |
| 7. | ಹಸಿರು ಕ್ವಾರ್ಟ್ಸೈಟ್ (ಮರಕತ) .... | ಚಿಕ್ಕಮಗಳೂರು | 71 | |
| 8. | ಬಿಳಿಜೇಡು .... | ಬೆಂಗಳೂರು | 11420 | |
| | | ಬೆಳಗಾಂ | 715 | |
| | | ಹಾಸನ | 1020 | |
| | | ಕೋಲಾರ | 19 | |
| | | ಶಿವಮೊಗ್ಗ | 775 | |
| | | ಉತ್ತರ ಕನ್ನಡ | 41 | |
| | | ತುಮಕೂರು | 3365 | |
| | | ಜುಮ್ಲ | **17335** | **223302*** |
| 9. | ಕಯನೈಟು .... | ಚಿಕ್ಕಮಗಳೂರು | **219** | **33302** |
| 10. | ಸುಣ್ಣಕಲ್ಲು .... | ಬಿಜಾಪುರ | 265466 | |
| | | ಚಿತ್ರದುರ್ಗ | 142 | |
| | | ಗುಲ್ಬರ್ಗ | 668710 | |
| | | ಶಿವಮೊಗ್ಗ | 119913 | |
| | | ತುಮಕೂರು | 109294 | |
| | | ಜುಮ್ಲ | **1163480** | **16804000** |

*ಬಿಳಿಜೇಡು ಶುದ್ಧಗೊಳಿಸಿದ್ದು

3

| ಅನುಕ್ರಮ ಸಂಖ್ಯೆ | ಖನಿಜದ ಹೆಸರು | | ಜಿಲ್ಲೆಗಳ ಹೆಸರು | | ರಾಜ್ಯದಲ್ಲಿನ ಉತ್ಪಾದನೆ | ಭಾರತದಲ್ಲಿನ ಉತ್ಪಾದನೆ (ಗೋವ ಸೇರಿಲ್ಲ) |
|---|---|---|---|---|---|---|
| | | | | | ಟನ್ನುಗಳಲ್ಲಿ | ಟನ್ನುಗಳಲ್ಲಿ |
| 11. | ಮ್ಯಾಗ್ನಸೈಟು | .... | ಮೈಸೂರು | | **6116** | **204792** |
| 12. | ಯರಕದ ಮರಳು | .... | ಬೆಳಗಾಂ | | 6305 | |
| | | | ಗುಲ್ಬರ್ಗ | | 13937 | |
| | | | | ಜುಮ್ಲ | **20242** | |
| 13. | ಬಣ್ಣದ ಮಣ್ಣು | .... | ಚಿಕ್ಕಮಗಳೂರು | | 240 | |
| | | | ಕೋಲಾರ | | 47 | |
| | | | | ಜುಮ್ಲ | **287** | **16992** |
| 14. | ಬೆಣಚುಕಲ್ಲು | .... | ಬೆಂಗಳೂರು | | 108 | |
| | | | ಗುಲ್ಬರ್ಗ | | 6973 | |
| | | | ಶಿವಮೊಗ್ಗ | | 28893 | |
| | | | | ಜುಮ್ಲ | **35974** | **223372†** |
| 15. | ಕೆಮ್ಮಣ್ಣು | .... | ಬಳ್ಳಾರಿ | | 4929 | |
| | | | ತುಮಕೂರು | | 3197 | |
| | | | | ಜುಮ್ಲ | **8126** | |
| 16. | ಹಸಿಮಣ್ಣು | .... | ಹಾಸನ | | 15738 | |
| | | | ಶಿವಮೊಗ್ಗ | | 10445 | |
| | | | | ಜುಮ್ಲ | **26183** | |
| 17. | ಬಳಪದ ಕಲ್ಲು | .... | ಬಳ್ಳಾರಿ | | 38 | |
| | | | ಚಿಕ್ಕಮಗಳೂರು | | 38 | |
| | | | ಹಾಸನ | | 150 | |
| | | | ಮೈಸೂರು | | 171 | |
| | | | | ಜುಮ್ಲ | **397** | |
| 18. | ಉಪ್ಪು | ..... | ಉತ್ತರ ಕನ್ನಡ | | **11916** | **133000** |

†ಬೆಣಚುಕಲ್ಲು ಮತ್ತು ಸಿಲಿಕ

ಮೂಲ ಲೇಖಕರು : ಎಂ. ಸದಾಶಿವಯ್ಯ
ಅನುವಾದಕರು : ಸೂರ್ಯನಾರಾಯಣ

## ಎರಡನೆಯ ಅಧ್ಯಾಯ

# ಪ್ರಾಕೃತಿಕ ಲಕ್ಷಣಗಳು

### ಭೌಗೋಳಿಕ ಅಂಶಗಳ ಪಾತ್ರ

**1956**ರಲ್ಲಿ ನಡೆದ ಭಾರತದ ರಾಜ್ಯಗಳ ಪುನರ್ವಿಂಗಡಣೆಯ ಪ್ರಕಾರ ಪ್ರಾದೇಶಿಕ ಹೊಂದಾಣಿಕೆಯನ್ನು ಮಾಡಿದುದರಿಂದ, ಈಗಿನ ಮೈಸೂರು ರಾಜ್ಯವು ರೂಪುಗೊಂಡಿತು. ಇದರಿಂದ ಕನ್ನಡ ಮಾತನಾಡುವ ಜನರ ಸಾಂಸ್ಕೃತಿಕ ಮತ್ತು ಆಡಳಿತದ ಐಕ್ಯವನ್ನು ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಈಡೇರಿಸಿದಂತಾಯಿತು. ಈ ರಾಜ್ಯವು ಭೌಗೋಳಿಕವಾಗಿ ಇಂಡಿಯಾ ಪರ್ಯಾಯ ದ್ವೀಪದ ದಕ್ಷಿಣ ಭಾಗದ ಮಧ್ಯಪ್ರದೇಶದಲ್ಲಿದೆ ; ಪೂರ್ವ ರೇಖಾಂಶ 14°—12' ರಿಂದ 78°—30'ರ ವರೆಗೂ, ಉತ್ತರ ಅಕ್ಷಾಂಶ 11°—30'ರಿಂದ 18°—45'ರ ವರೆಗೂ ವ್ಯಾಪಿಸಿರುವುದು. ಈ ರಾಜ್ಯದ ವಿಸ್ತೀರ್ಣವು 74·122 ಚದರ ಮೈಲಿಗಳು ; ಜನಸಂಖ್ಯೆ 2,35,25,081 (1961ರ ಜನಗಣತಿ). ಈ ರಾಜ್ಯವು ಪೂರ್ವ–ಪಶ್ಚಿಮವಾಗಿ ಸುಮಾರು 400 ಕಿಲೋಮೀಟರುಗಳಷ್ಟೂ (250 ಮೈಲುಗಳು) ದಕ್ಷಿಣೋತ್ತರವಾಗಿ ಸುಮಾರು 770 ಕಿಲೋ ಮೀಟರುಗಳಷೂ (480 ಮೈಲುಗಳು) ವಿಸ್ತರಿಸಿದೆ.

### ಭೌಗೋಳಿಕ ಸನ್ನಿವೇಶ

ಕರ್ಣಾಟಕದ ಪ್ರಾಕೃತಿಕ ಲಕ್ಷಣಗಳಲ್ಲಿ ಅನೇಕ ಸ್ವಾರಸ್ಯಕರವಾದ ವೈವಿಧ್ಯಗಳಿವೆ. ಇವು ಜನರ ಜೀವನದಲ್ಲಿ ಅಭಿವ್ಯಕ್ತಿ ಹೊಂದಿರುವುದು ಮಾತ್ರವಲ್ಲ ; ಕರ್ಣಾಟಕದ ಐತಿಹಾಸಿಕ ವಿಕಾಸದ ಮೇಲೂ ತಮ್ಮ ಪ್ರಭಾವವನ್ನು ಸಾಕಷ್ಟು ಬೀರಿವೆ. ನೆಲದ ಏರುತಗ್ಗುಗಳನ್ನು ಗಮನಿಸಿದಲ್ಲಿ ಈ ರಾಜ್ಯದ ಹೆಚ್ಚು ಭಾಗವು ದಕ್ಷಿಣ ಪ್ರಸ್ಥಭೂಮಿಗೆ ಸೇರಿದ್ದು ; ಕೇವಲ ಪಶ್ಚಿಮದ ಅಂಚು ಮಾತ್ರ ಸಮುದ್ರತೀರದ ಬಯಲು ಪ್ರದೇಶ.

ದಕ್ಷಿಣಕನ್ನಡ, ಉತ್ತರಕನ್ನಡಗಳ ತೀರಪ್ರದೇಶಕ್ಕೂ ಮೈಸೂರು ಪ್ರಸ್ಥಭೂಮಿಗೂ ಅನೇಕ ರೀತಿಯ ಗಾಢವಾದ ವ್ಯತ್ಯಾಸಗಳು ಕಂಡುಬರುತ್ತವೆ. ಮೈಸೂರು ಪ್ರಸ್ಥಭೂಮಿಯ ಪ್ರಾಕೃತಿಕ ಲಕ್ಷಣಗಳಲ್ಲಿಯೂ ಅನೇಕ ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ದಕ್ಷಿಣಾರ್ಧಭಾಗದ ಎತ್ತರವು ಉತ್ತರಾರ್ಧಕ್ಕಿಂತ ಹೆಚ್ಚು ; ಅದು ಪಶ್ಚಿಮದಲ್ಲಿ ಸಹ್ಯಾದ್ರಿ ಪರ್ವತಗಳಿಗೂ ಪೂರ್ವದಲ್ಲಿ ಪೂರ್ವಘಟ್ಟಗಳಿಗೂ ನಡುವೆ ಇರುವುದು ; ಅದರ ದಕ್ಷಿಣದ ಕೊನೆಯಲ್ಲಿ ಈ ಎರಡು ಪರ್ವತಗಳೂ ನೀಲಗಿರಿ ಪರ್ವತಗಳಲ್ಲಿ ಒಂದುಗೂಡುತ್ತವೆ. ಉತ್ತರಾರ್ಧಭಾಗವು ಪ್ರಸ್ಥಭೂಮಿಯಂತಿದ್ದು, ಸಾಧಾರಣ ಏರುತಗ್ಗುಗಳಿಂದ ಮತ್ತು ವಿಶಾಲವಾದ ಕಣಿವೆಗಳಿಂದ ಕೂಡಿರುವುದು. ಮೈಸೂರು ಪ್ರಸ್ಥಭೂಮಿಯ ಉತ್ತರ ಮತ್ತು ದಕ್ಷಿಣ ಭಾಗಗಳ ಲಕ್ಷಣಗಳಲ್ಲಿರುವ ವ್ಯತ್ಯಾಸಗಳು ಅನೇಕ ವಿಷಯಗಳಲ್ಲಿ ಪ್ರಕಟಗೊಂಡಿವೆ. ಹೀಗೆ ಭೂ ವಿನ್ಯಾಸಗಳ ಪ್ರಕಾರ, ರಾಜ್ಯದಲ್ಲಿ, ಈ ಕೆಳಗೆ ಕಂಡ ಸ್ಥೂಲ ವಿಭಾಗಗಳನ್ನು ನಾವು ಕಾಣಬಹುದು :—(1) ದಕ್ಷಿಣಕನ್ನಡ ಉತ್ತರಕನ್ನಡ ತೀರ ಮೈದಾನದ ಪಟ್ಟಿ (ಕರಾವಳಿ ಪ್ರದೇಶ), (2) ಸಹ್ಯಾದ್ರಿ ಪರ್ವತಶ್ರೇಣಿ, (3) ಪೂರ್ವ

ಘಟ್ಟಗಳು, (೪) ದಕ್ಷಿಣದ ಪ್ರಸ್ಥಭೂಮಿ, (೫) ಉತ್ತರದ ಪ್ರಸ್ಥಭೂಮಿ ಮತ್ತು (೬) ಬೆಟ್ಟಗಳ ತಪ್ಪಲುಗಳು.

## ಭೂವಿನ್ಯಾಸದ ಸಾಮಾನ್ಯ ಲಕ್ಷಣಗಳು, ಜಲಾನಯನ ಪ್ರದೇಶಗಳು ಮತ್ತು ಮೇಲ್ಮೈಯ ಸ್ವರೂಪ

ಸಹ್ಯಾದ್ರಿ ಅಥವಾ ಪಶ್ಚಿಮಘಟ್ಟಗಳು ರಾಜ್ಯದ ಉದ್ದಕ್ಕೂ ದಕ್ಷಿಣೋತ್ತರವಾಗಿ ಹಬ್ಬಿ ರಾಜ್ಯಕ್ಕೆಲ್ಲಾ ಬೆನ್ನೆಲುಬಿನಂತಿರುವುವು. ಇವು ಅನೇಕ ರೀತಿಯಲ್ಲಿ ರಾಜ್ಯದ ಸ್ಥಲವಿನ್ಯಾಸದ ಮೇಲೂ, ಮೇಲ್ಮೈಯ ಸ್ವರೂಪದ ಮೇಲೂ ಪ್ರಭಾವ ಬೀರಿರುವುವು. ಉತ್ತರದಲ್ಲಿ ಧಾರವಾಡ ಶಿಲಾ ನಿಕ್ಷೇಪಗಳ ರಚನೆಗಳನ್ನೂ ದಕ್ಷಿಣದಲ್ಲಿ ಗ್ರಾನೈಟ್ ಶಿಲಾರಚನೆಗಳನ್ನೂ ತಳಹದಿಯಾಗಿ ಉಳ್ಳ ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ ನಿರ್ದಿಷ್ಟ ಪ್ರಕೃತಿ ರೂಪಗಳು ಕಂಡುಬರುವುವು. ಇದು ಮೈಸೂರು ಪ್ರಸ್ಥಭೂಮಿಯಲ್ಲಿ ಪೂರ್ವಕ್ಕೆ ಹರಿಯುವ ನದಿಗಳಿಗೂ, ಪಶ್ಚಿಮಕ್ಕೆ ಹರಿದು ಅರಬೀಸಮುದ್ರಕ್ಕೆ ಸೇರುವ ನದಿಗಳಿಗೂ ನಡುವೆ ಇರುವ ಜಲವಿಭಾಜಕ ಕ್ಷೇತ್ರವಾಗಿದೆ. ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ ಸಾಮಾನ್ಯವಾಗಿ ಹೆಚ್ಚು ಕಠಿನವಾಗಿರುವ ಶಿಲೆಗಳು ಶಿಖರಗಳಂತೆ ಉಳಿದಿವೆ; ಮತ್ತು ಮೃದುಶಿಲಾಭಾಗಗಳು ಹಳ್ಳಗಳ ಕೊರೆತದಿಂದ ಸವೆದು ಹೋಗಿವೆ. ಶಿಲೆಗಳಲ್ಲಿ ಸ್ಥಳೀಯವಾಗಿರುವ ಸೀಳುಗಳು ಮತ್ತು ಬಿರುಕುಗಳಿಂದ ಏರುತಗ್ಗುಗಳ ವ್ಯತ್ಯಾಸವು ಹೆಚ್ಚಾಗಿದೆ. ಪೂರ್ವಭಾಗದ ಭೂದೃಶ್ಯವು ಸಾಧಾರಣ ಏರುತಗ್ಗುಗಳಿಂದ ಕೂಡಿದೆ. ಆದರೆ, ಪಶ್ಚಿಮ ಭಾಗದಲ್ಲಿ ಅತಿ ಕಡಿದಾದ ಶಿಲಾಮುಖಗಳಿದ್ದು, ಕಿರಿದಾದ ಅನೇಕ ಕೊಳ್ಳಗಳಂತೆ ಕೊರೆದು ಹೋಗಿರುತ್ತದೆ. ಸಹ್ಯಾದ್ರಿ ಬೆಟ್ಟಗಳ ಎರಡು ಪಾರ್ಶ್ವಗಳಲ್ಲೂ ಅಡ್ಡಲಾಗಿ ಹಬ್ಬಿರುವ ಬೆಟ್ಟಸಾಲುಗಳಿವೆ. ಆದರೆ ಈ ಬೆಟ್ಟಗಳ ಸಾಲು ಪಶ್ಚಿಮದಲ್ಲಿ ಸಮುದ್ರತೀರದ ಕಡೆಗೆ ಅಲ್ಲಿನ ಭೂವಿನ್ಯಾಸದ ವಿಷಯದಲ್ಲಿ ಹೆಚ್ಚು ಅಸ್ತವ್ಯಸ್ತವಾಗಿದೆ; ಸಾಧಾರಣ ಪ್ರಮಾಣದಲ್ಲಿ ಮಳೆಯನ್ನೂ ಪಡೆಯುವ ಪೂರ್ವ ಭಾಗದಲ್ಲಿ ಅಷ್ಟೊಂದು ವ್ಯತ್ಯಾಸಗಳಿಲ್ಲದೆ ಹೆಚ್ಚು ಸಮನಾಗಿ ತೋರುತ್ತದೆ. ಸಹ್ಯಾದ್ರಿಯ ಮುಖ್ಯ ಶ್ರೇಣಿಯು ಉತ್ತರದಿಂದ ದಕ್ಷಿಣಕ್ಕೆ ಅನೇಕ ಪ್ರಮುಖ ಶಿಖರಗಳಿಂದ ಅಲಂಕೃತವಾಗಿದೆ; ಅವುಗಳಲ್ಲಿ ಬಾಬಾಬುಡನ್ (6317ಅಡಿ) ಮತ್ತು ಕುದುರೆ ಮುಖ (6215 ಅಡಿ) ಶಿಖರಗಳು ಬಹು ಮುಖ್ಯವಾದವು.

ಸಹ್ಯಾದ್ರಿ ಬೆಟ್ಟಗಳು ಸಾಧಾರಣವಾಗಿ ದಕ್ಷಿಣದ ಕಡೆಗೆ ಹೆಚ್ಚು ಎತ್ತರವಾಗುತ್ತ ಹೋಗಿ ದಕ್ಷಿಣದ ತುದಿಯಲ್ಲಿ ನೀಲಗಿರಿ ಪರ್ವತಗಳಲ್ಲಿ ಲೀನವಾಗುತ್ತವೆ. ಸಹ್ಯಾದ್ರಿ ಪರ್ವತಗಳು ಉತ್ತರದಲ್ಲಿರುವುದ ಕ್ಕಿಂತಲೂ ಮೈಸೂರು ರಾಜ್ಯದಲ್ಲಿ ದಟ್ಟವಾದ ಕಾಡುಗಳಿಂದ ತುಂಬಿವೆ. ಹಾಗೂ, ಇವು ಕಾಫಿ ತೋಟ ಗಳಿಂದಲೂ ಗಣಿ ಉದ್ಯಮದಿಂದಲೂ ಜಲವಿದ್ಯುತ್ ಉತ್ಪಾದನೆಯಿಂದಲೂ ಹೆಚ್ಚು ಆರ್ಥಿಕಾಭಿವೃದ್ಧಿಗೆ ಕಾರಣವಾಗಿವೆ. ಆಗುಂಬೆ ಮತ್ತು ಚಾರ್ಮಾಡಿ ಕಣಿವೆ ಮಾರ್ಗಗಳು ಕರ್ನಾಟಕದ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿವೆ. ಮೈಸೂರು ಪ್ರಸ್ಥಭೂಮಿಯ ಪೂರ್ವ ಭಾಗದಲ್ಲಿ, ಪೂರ್ವಘಟ್ಟಗಳ ಕೆಲವು ನೈಋತ್ಯ ಶ್ರೇಣಿಗಳು ಹಬ್ಬಿವೆ. ಇವು ಕೋಲಾರ ಪ್ರದೇಶದಲ್ಲಿ ಪ್ರಮುಖವಾಗಿವೆ; ಪ್ರಸ್ಥಭೂಮಿಯ ತಲಮಟ್ಟದಿಂದ ಅವುಗಳ ಸರಾಸರಿ ಎತ್ತರ ಬಹಳ ಕಡಮೆ; ಮತ್ತು ಧಾರವಾಡದ ಶಿಲಾರಚನೆಯುಳ್ಳ ಪ್ರದೇಶಕ್ಕೆ ವಿಶಿಷ್ಟವಾಗಿರುವ ಭೂದೃಶ್ಯದಿಂದ ಕೂಡಿವೆ; 'ಹಂದಿ ಬೆನ್ನು' ಎಂದು ಕರೆಯಬಹುದಾದ, ಬಂಡೆಗಲ್ಲುಗಳಿಂದ ಕೂಡಿದ ಉದ್ದನೆಯ ಏಣುಗಳುಳ್ಳ ಬೆಟ್ಟಗಳು ಕಂಡುಬರುವುವು.

ದಕ್ಷಿಣದ ಪ್ರಸ್ಥಭೂಮಿಯ ಸರಾಸರಿ ಎತ್ತರ ಹೆಚ್ಚು; ಗ್ರಾನೈಟ್ ಮತ್ತು ಧಾರವಾಡದ ಶಿಲಾ ಭಾಗಗಳ ತಳಹದಿಯಿರುವುದರಿಂದ ಅಲ್ಲಿನ ಭೂಪ್ರದೇಶಗಳಲ್ಲಿ ವೈವಿಧ್ಯ ಕಂಡುಬರುತ್ತದೆ. ಅವಶೇಷ ಬೆಟ್ಟಗಳು ಒಂದಕ್ಕೊಂದು ಸೇರದೆ ಪ್ರತ್ಯೇಕವಾಗಿವೆ; ನಡುನಡುವೆ ಗ್ರಾನೈಟ್ ಶಿಲಾ ರಚನೆಯು ಬೋಳು

ಬಂಡೆಗಳ ಭೂಪ್ರದೇಶ. ಭೂ ಮಟ್ಟದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದು, ಅದು ಅಷ್ಟೇನೂ ಹೆಚ್ಚಿಲ್ಲದೆ ಇರುವುದರಿಂದ ಅಲ್ಲಿ ಕೆರೆ ನೀರಾವರಿ ಅಭಿವೃದ್ಧಿಗೆ ವಿಶೇಷ ಅವಕಾಶವಿದೆ. ದಕ್ಷಿಣ ಭಾಗದಲ್ಲಿ ಕಾವೇರಿ ಮತ್ತು ಅದರ ಉಪನದಿಗಳು ಹರಿಯುತ್ತವೆ. ದಕ್ಷಿಣ ಪ್ರಸ್ಥಭೂಮಿಯಲ್ಲಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹರಿಯುವ ಎರಡು ನದೀಶ್ರೇಣಿಗಳಿವೆ. ಕೇಂದ್ರದ ಅಕ್ಷರೇಖೆಯ ನೇರದಲ್ಲಿ ನಂದಿಬೆಟ್ಟಗಳ ಉನ್ನತ ಭೂಮಿಯಿಂದ ಅವು ಪ್ರತ್ಯೇಕಗೊಂಡಿವೆ. ಆದರೆ, ಆಗ್ನೇಯ ಅಂಚಿನಲ್ಲಿ ಪೆನ್ನಾರ್ ಮತ್ತು ಪಾಲಾರ್ ನದಿಗಳ ಮೇಲಿನ ಉಪನದಿಗಳು ಹರಿಯುತ್ತವೆ. ಉತ್ತರ ಭಾಗದಲ್ಲಿ ತುಂಗಭದ್ರಾ ಮತ್ತು ಪೆನ್ನಾರ್ ನದಿಗಳೂ ಅವುಗಳ ಉಪನದಿಗಳೂ ಹರಿಯುತ್ತವೆ.

ಹೀಗೆ ದಕ್ಷಿಣ ಪ್ರಸ್ಥಭೂಮಿಯಲ್ಲಿ, ಅಸ್ತವ್ಯಸ್ತವಾದ ಆಕಾರಗಳು, ಸಾಕಷ್ಟು ಕಾಡುಗಳಿಂದ ತುಂಬಿದ ಭಾಗಗಳು, ಸಣ್ಣ ಗುಡ್ಡಗಳು, ಕೆರೆಗಳು ಮತ್ತು ಕಂದುಬಣ್ಣದ ಮಣ್ಣುಗಳು ಪ್ರಮುಖ ಪ್ರಕೃತಿವಿಶೇಷಗಳಾಗಿವೆ. ಆದರೆ, ಉತ್ತರ ಪ್ರಸ್ಥಭೂಮಿಯಲ್ಲಿ, ವಿಶಾಲವಾದ ಕಣಿವೆಗಳು—ಏರುತಗ್ಗುಗಳಿಂದಲೂ ಕಪ್ಪು ಮಣ್ಣುಗಳಿಂದಲೂ ಕೂಡಿದ ಭೂಮಿ—ಅಲ್ಲಲ್ಲಿ ಸಾಲಾಗಿಯೂ ಪ್ರತ್ಯೇಕವಾಗಿಯೂ ಇರುವ ಹೆಚ್ಚಾಗಿ ಕೊರೆದು ಹೋಗಿ ಉಳಿದಿರುವ (ಅವಶೇಷ) ಬೆಟ್ಟಗಳ ಸಾಲುಗಳು—ಇವು ಸಾಮಾನ್ಯ ಲಕ್ಷಣಗಳು. ಪ್ರಸ್ಥಭೂಮಿಯ ಮಧ್ಯಭಾಗದಲ್ಲಿ, ತುಂಗಭದ್ರಾ ಮತ್ತು ಕೃಷ್ಣಾ ನದಿಗಳೂ, ಅವುಗಳ ಮುಖ್ಯ ಉಪನದಿಗಳಾದ ಘಟಪ್ರಭಾ ಮತ್ತು ಮಲಪ್ರಭಾ ಇವು ಹರಿಯುತ್ತವೆ. ಈ ಭಾಗವು ಭೂಮಿಯ ಸ್ಥಿತಿಯಲ್ಲಿಯೂ ಜನರ ಆರ್ಥಿಕ ಜೀವನದಲ್ಲಿಯೂ ದಕ್ಷಿಣ ಪ್ರಸ್ಥಭೂಮಿಗಿಂತ ಬಹುಮಟ್ಟಿಗೆ ಭಿನ್ನರೂಪದ್ದಾಗಿದೆ.

### ವಾಯುಗುಣ ಮತ್ತು ಜೈವಿಕ ಅಂಶಗಳು

ರಾಜ್ಯದಲ್ಲಿ ಪ್ರಾದೇಶಿಕ ಗುಣಲಕ್ಷಣಗಳ ವಿಕಾಸಕ್ಕೆ ವಾಯುಗುಣದ ಮತ್ತು ಜೈವಿಕ ಅಂಶಗಳು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ತಮ್ಮ ಪ್ರಭಾವವನ್ನು ಬೀರಿವೆ. ಈ ರಾಜ್ಯದಲ್ಲಿರುವ ಉಷ್ಣವಲಯದ ಮಾನ್‌ಸೂನ್ ಮಾದರಿಯ ವಾಯುಗುಣದಲ್ಲಿ, ತಂಪುಹವೆ, ಉಷ್ಣತೆ ಮತ್ತು ಮಳೆ ಪ್ರಮಾಣಗಳಲ್ಲಿ ಸ್ಥಳೀಯವಾಗಿ, ಹೆಚ್ಚು ವ್ಯತ್ಯಾಸಗಳು ಕಂಡುಬರುವುವು. ಕೆನರಾ ತೀರಪ್ರದೇಶದಲ್ಲಿ ಅಧಿಕ ಆರ್ದ್ರತೆಯಿಂದಲೂ, ಉಷ್ಣತೆಯಿಂದಲೂ ಅತಿ ಕಡಮೆ ಋತುಭೇದಗಳ ವ್ಯತ್ಯಾಸದಿಂದಲೂ ಕೂಡಿದ ವಾಯುಗುಣವು ವರ್ಷವೆಲ್ಲಾ ಕಂಡುಬರುತ್ತದೆ. ಪ್ರಸ್ಥಭೂಮಿಯು ಎತ್ತರವಾಗಿರುವುದರಿಂದ ಅಲ್ಲಿ ಉಷ್ಣತೆಯು ಅಷ್ಟು ಪ್ರಖರವಾಗಿಲ್ಲ. ಸಹ್ಯಾದ್ರಿ ಪರ್ವತಗಳ, ಬಾಬಾಬುಡನ್‌ಗಿರಿ ಮೊದಲಾದ ಶ್ರೇಣಿಗಳು, ನಂದಿಬೆಟ್ಟಗಳು, ಮಡಿಕೇರಿಯ ಉನ್ನತ ಭಾಗಗಳು ಮತ್ತು ಬೆಂಗಳೂರಿನ ಸುತ್ತಲಿನ ಪ್ರದೇಶ ಈ ಮೊದಲಾದ ಎತ್ತರ ಪ್ರದೇಶಗಳಲ್ಲಿ ಉಷ್ಣತೆ ಕಡಮೆಯಾಗಿ ತಂಪಾದ ವಾಯುಗುಣವು ಕಂಡುಬರುತ್ತದೆ. ಉತ್ತರ ಪ್ರಸ್ಥಭೂಮಿಯ ಭಾಗದಲ್ಲಿ, ಋತುಭೇದಗಳಲ್ಲಿನ ಉಷ್ಣಾಂಶ ವ್ಯತ್ಯಾಸಗಳು ಅತಿಯಾಗಿರುವುವು. ಬೇಸಗೆಯಲ್ಲಿ ಅನೇಕ ವೇಳೆ ತಡೆಯಲಸಾಧ್ಯವಾಗಿರುವುದು. ಮಳೆಯ ವಾರ್ಷಿಕ ಪ್ರಮಾಣದಲ್ಲೂ, ಮಳೆಯಾಗುವ ರೀತಿಯಲ್ಲೂ ಇರುವ ವ್ಯತ್ಯಾಸಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾದ ಬಹುಮುಖ್ಯ ಅಂಶ. ಕೆನರಾ ತೀರಭಾಗದಲ್ಲಿ, ವಾರ್ಷಿಕ ಮಳೆ ಪ್ರಮಾಣವು 150 ಇಂಚುಗಳಿಗೂ ಮೀರಿದೆ, ಮತ್ತು ನೈಋತ್ಯ ಮಾನ್‌ಸೂನ್ ಮಳೆಗಾಲದ ನಾಲ್ಕು ತಿಂಗಳಲ್ಲಿ ಅತ್ಯಧಿಕ ಪ್ರಮಾಣದ ಮಳೆ ಬೀಳುತ್ತದೆ. ಸಹ್ಯಾದ್ರಿ ಪರ್ವತಗಳ ಪಶ್ಚಿಮದ ಇಳಿಜಾರುಗಳ ಮೇಲೆ ನೈಋತ್ಯ ಮಾನ್‌ಸೂನ್ ಮಳೆಗಾಳಿಗಳ ಪೂರ್ಣ ಹೊಡೆತ ಬೀಳುವುದರಿಂದ ಅತ್ಯಧಿಕ ಮಳೆಯಾಗುತ್ತದೆ. ಅಲ್ಲಿ ಕೆಲವು ಕಡೆ ವರ್ಷಕ್ಕೆ 200 ಇಂಚುಗಳಿಗೂ ಹೆಚ್ಚು ಮಳೆ ಪ್ರಮಾಣವಿರುವುದು. ಪೂರ್ವದ ಕಡೆಯಲ್ಲಿ ಮಳೆಯ ಪ್ರಮಾಣವು ಆಶ್ಚರ್ಯವೆನ್ನುವಷ್ಟು ಬಹು ಶೀಘ್ರಗತಿಯಲ್ಲಿ ಕಡಮೆಯಾಗುತ್ತದೆ. ಚಿಕ್ಕಮಗಳೂರಿನಲ್ಲಿ 75 ಇಂಚು ಮಳೆಯಿದ್ದರೆ, ಅಲ್ಲಿಂದ ಸುಮಾರು 75 ಮೈಲು ಪೂರ್ವಕ್ಕಿರುವ

ಚಿತ್ರದುರ್ಗದಲ್ಲಿ ಕೇವಲ 25–30 ಇಂಚು ಮಳೆ ಬೀಳುತ್ತದೆ. ಸಮುದ್ರ ತೀರದಿಂದ ಒಳನಾಡಿನ ಕಡೆಗೆ ಅಧಿಕ ಮಳೆ ಬೀಳುವ ಕಾಲವು ಜುಲೈಯಿಂದ ಆಗಸ್ಟ್‌ವರೆಗೂ ಅನೇಕ ಭಾಗಗಳಲ್ಲಿ ಸೆಪ್ಟಂಬರ್ ತಿಂಗಳ ವರೆಗೂ ಇರುತ್ತದೆ. ಪೂರ್ವದ ಕಡೆಗೆ ಬರುಬರುತ್ತ ಹಿಂಗಾರು ಮಳೆ ಮತ್ತು ಈಶಾನ್ಯ ಮಾನ್‌ಸೂನ್ ಮಳೆಗಾಲವು ಅಲ್ಲಿನ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಮುಖ್ಯವಾಗಿ ಪರಿಣಮಿಸುವುದು. ಹೀಗೆ 20–19 ಇಂಚು ವಾರ್ಷಿಕ ಮಳೆಯನ್ನು ಪಡೆಯುವ ಬಿಜಾಪುರಕ್ಕೆ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಅಧಿಕ ಮಳೆಯಾಗುವದು. ಪೂರ್ವಪ್ರದೇಶಗಳಲ್ಲೂ ಆಗ್ನೇಯ ಪ್ರದೇಶ ಗಳಲ್ಲೂ ಮಳೆಯ ಹಂಚಿಕೆ ಇದೇ ರೀತಿ ಇರುತ್ತದೆ. ಕೆನರಾ ತೀರಭಾಗದ (ಕರಾವಳಿ ಪ್ರದೇಶ) ಮತ್ತು ಸಹ್ಯಾದ್ರಿ ಪರ್ವತ ಪ್ರದೇಶಗಳಲ್ಲಿ ಬೀಳುವ ಅತ್ಯಧಿಕ ಮಳೆಯು ಪ್ರಮಾಣವು ಬತ್ತ ಬೆಳೆಯುವುದಕ್ಕೂ ಅರಣ್ಯಸಂಪತ್ತಿನ ಆದಾಯಕ್ಕೂ ಸಹಾಯಮಾಡುತ್ತದೆ. ದಕ್ಷಿಣದ ಪ್ರಸ್ಥಭೂಮಿಯಲ್ಲಿ ಸಾಧಾರಣ ಮಳೆ ಬೀಳುವುದಲ್ಲದೆ, ಅದರ ಜೊತೆಗೆ ಕೆರೆ ನೀರಾವರಿಯೂ ಇರುವುದರಿಂದ, ಅಲ್ಲಿನ ಗೋಧಿ ಬಣ್ಣದ ಮಣ್ಣುಗಳಲ್ಲಿ ರಾಗಿ ಮತ್ತು ಭತ್ತ ಮುಂತಾದ ವಿವಿಧ ಬೆಳೆಗಳು ಬೆಳೆಯುತ್ತವೆ. ಸಾಧಾರಣ ಮಳೆ ಪಡೆಯುವ ಉತ್ತರ ಪ್ರಸ್ಥಭೂಮಿಯ ಕಪ್ಪು ಮಣ್ಣುಗಳು ಜೋಳ ಮತ್ತು ಹತ್ತಿಯನ್ನು ಬೆಳೆಯಲು ಸಹಾಯಕವಾಗಿರುತ್ತವೆ. ಈ ಪ್ರಸ್ಥಭೂಮಿಯ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಮಳೆಯು ತಡವಾಗಿ ಬೀಳುವುದರಿಂದಲೂ ಸಾಧಾರಣ ಉಷ್ಣತೆಯುಳ್ಳ ಚಳಿಗಾಳಿಗಳಿರುವುದರಿಂದಲೂ ವ್ಯಾಪಕವಾಗಿ ಗೋಧಿಯನ್ನು ಬೆಳೆಸಲು ಅನುಕೂಲವಾಗಿರುತ್ತದೆ. ಪ್ರಸ್ಥಭೂಮಿಯ ಒಳಭಾಗದ ಕಡೆಗೆ ಹೋದಂತೆಲ್ಲಾ ವಿಶೇಷತಃ ತುಂಗಭದ್ರಾ ಮತ್ತು ಕೃಷ್ಣಾನದಿ ಬಯಲಿನ ಪೂರ್ವಭಾಗಗಳಲ್ಲಿ ಮಾನ್‌ಸೂನ್ ಮಳೆಯು ಅನಿಶ್ಚಯ ಹೆಚ್ಚುತ್ತದೆ. ಅದರ ಜೊತೆಗೆ ಕ್ಷಾಮಪರಿಸ್ಥಿತಿಯೂ ಹೆಚ್ಚಾಗುತ್ತದೆ.

ಸಸ್ಯವರ್ಗವು ವಾಯುಗುಣದ ಅಂಶಗಳನ್ನು ಅವಲಂಬಿಸಿರುತ್ತದೆ. ಅನೇಕ ಕಡೆಗಳಲ್ಲಿ ಗಿಡ ಮರ ಗಳನ್ನೂ ಸಾಧಾರಣ ಕಾಡುಗಳನ್ನೂ ಜನರು ವ್ಯಾಪಕವಾಗಿ ಕಡಿದು ಬಯಲು ಮಾಡಿರುವುದರಿಂದ ಸ್ವಾಭಾ ವಿಕವಾದ ಸಮತೋಲನವು ಏರುಪೇರಾಗಿದೆ. ಕೆನರಾ ತೀರಭಾಗದಲ್ಲೂ, ಪ್ರಸ್ಥಭೂಮಿಯ ಒಳನಾಡಿನಲ್ಲೂ ಇರುವ ಉತ್ತಮ ಮಣ್ಣಿನ ಪ್ರದೇಶಗಳನ್ನು ಸಾಂದ್ರ ಬೇಸಾಯಕ್ಕಾಗಿ ಉಪಯೋಗಿಸಲಾಗಿದೆ. ಸಾಕಷ್ಟು ಭಾಗದಲ್ಲಿ ಕಾಡುಗಳನ್ನು ಕಡಿದು ಹಾಕಿದ್ದರೂ, ಅಲಕ್ಷ್ಯ ತೋರುತ್ತಿದ್ದರೂ, ತಲುಪಲು ದುಸ್ಸಾಧ್ಯ ವಾದ ಸಹ್ಯಾದ್ರಿಗಳ ಮೇಲೂ, ಕಡಮೆ ಫಲವತ್ತಾದ ಪ್ರಸ್ಥಭೂಮಿಯಲ್ಲಿರುವ ಅವಶೇಷ ಬೆಟ್ಟಗಳ ಮೇಲೂ ಸ್ವಾಭಾವಿಕ ಸಸ್ಯವರ್ಗವು ಸ್ವಲ್ಪ ಮಟ್ಟಿಗೆ ಉಳಿದುಕೊಂಡಿದೆ. ಸಹ್ಯಾದ್ರಿ ಪರ್ವತಗಳ ಮೇಲೆ ಮಳೆಯಿಂದ ಪೋಷಿತವಾದ ನಿತ್ಯ ಹರಿದ್ವರ್ಣದ ವಿವಿಧ ಜಾತಿಯ ಮರಗಳಿಂದ ಕೂಡಿದ ಅರಣ್ಯ ಸಂಪತ್ತು ವಿಪುಲವಾಗಿದೆ. ಅರಣ್ಯ ರಕ್ಷಣಾನೀತಿಯನ್ನು ಯೋಜಿತರೀತಿಯಲ್ಲಿ ಅನುಸರಿಸಿದಲ್ಲಿ ತೇಗ ಮತ್ತು ಗಂಧದ ಮರಗಳಂತಹ ಉಪಯುಕ್ತ ಮರಗಳು ಸರ್ಕಾರಕ್ಕೆ ನಿತ್ಯಾದಾಯದ ಮೂಲವಾಗುತ್ತವೆ. ಇತರ ಬೆಟ್ಟಗುಡ್ಡಗಳ ಮೇಲೆ ಮಳೆ ಕಡಮೆ ಬೀಳುವುದರಿಂದ, ಕೇವಲ ಉರುವಲಿಗಾಗಿ ಉಪಯೋಗಿಸ ಬಹುದಾದ ಕುರುಚಲು ಗಿಡಗಳು ಮತ್ತು ಕೀಳುವರ್ಜೆಯ ಹುಲ್ಲುಗಳನ್ನು ಮಾತ್ರ ಪೋಷಿಸಬಲ್ಲವಾಗಿವೆ. ಕರ್ನಾಟಕ ರಾಜ್ಯದ ಅರಣ್ಯಗಳು, ಆನೆ, ಹುಲಿ, ಕಾಡೆಮ್ಮೆ ಮುಂತಾದ ವನ್ಯಪ್ರಾಣಿಗಳಿಗೆ ಪ್ರಸಿದ್ಧವಾಗಿವೆ. ಕೀಳುಬಗೆಯ ಹುಲ್ಲುಮಾತ್ರ ಬೆಳೆಯುವ ಬೆಟ್ಟಗುಡ್ಡಗಳಿಂದ ಕೂಡಿದ ಬಯಲುಸೀಮೆಯ ಕೆಲಕೆಲವು ಕಡೆಗಳಲ್ಲಿ ಕುರಿಸಾಕಣೆ ಮುಖ್ಯವಾಗಿದೆ. ಗ್ರಾಮಾಂತರ ಆರ್ಥಿಕೋತ್ಪನ್ನದಲ್ಲಿ ಪಶುಪಾಲನೆಯು ಬಹು ಮುಖ್ಯ ಪಾತ್ರವನ್ನು ವಹಿಸಿದೆ; ಕರ್ನಾಟಕ ಪ್ರಸ್ಥಭೂಮಿಯು ಅನೇಕ ಉತ್ತಮ ತಳಿಯ ದನಗಳಿಗೆ ಹೆಸರುವಾಸಿಯಾಗಿದೆ.

ಕರ್ನಾಟಕ ರಾಜ್ಯದ ವಿವಿಧ ಭಾಗಗಳ ಆರ್ಥಿಕ ಬೆಳವಣಿಗೆಯು ಈ ಎಲ್ಲ ಸ್ವಾಭಾವಿಕ ಪರಿಸ್ಥಿತಿಗಳ ಪ್ರತೀಕವಾಗಿರುತ್ತದೆ. ಅಲ್ಲಲ್ಲಿ ಮನುಷ್ಯನ ಪ್ರಯತ್ನಗಳಿಂದ ಅಭಿವೃದ್ಧಿಗೊಂಡ ಭಾಗಗಳು ಕಂಡು

ಬರುತ್ತವೆ. ಕೆನರಾ ತೀರ (ಕರಾವಳಿ) ಪ್ರದೇಶ, ಸಹ್ಯಾದ್ರಿ ಬೆಟ್ಟಗಳಲ್ಲಿರುವ ಕಾಫಿ ಬೆಳೆಯುವ ಪ್ರದೇಶ, ಉತ್ತರ ಪ್ರಸ್ಥಭೂಮಿಯ ಜೋಳ–ಹತ್ತಿ ಬೆಳೆಯುವ ಭಾಗಗಳು, ದಕ್ಷಿಣ ಪ್ರಸ್ಥಭೂಮಿಯ ರಾಗಿ–ಬತ್ತ ಬೆಳೆಯುವ ಭಾಗಗಳು–ಇವೆಲ್ಲ ವ್ಯವಸಾಯ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವುವು. ಕೈಗಾರಿಕೆಯಲ್ಲಿ, ಕೋಲಾರದ ಚಿನ್ನದ ಗಣಿಗಳ ಭಾಗ, ಬೆಂಗಳೂರು ಪ್ರದೇಶ, ಬೆಂಗಳೂರಿನಿಂದ ಮೈಸೂರಿನ ವರೆಗಿನ ಭಾಗ ಮತ್ತು ರಾಜ್ಯದ ಎಲ್ಲಾ ಮುಖ್ಯ ಮುಖ್ಯ ಪಟ್ಟಣಗಳು—ಇವೆಲ್ಲಾ ಗಣನೀಯವಾದ ಪ್ರಗತಿಯನ್ನು ಹೊಂದಿರುತ್ತವೆ. ಕೈಗಾರಿಕೆಯ ಪ್ರದೇಶಗಳ ಅಭಿವೃದ್ಧಿಯಲ್ಲಿ, ಜೋಗ, ಶಿವಸಮುದ್ರ ಮತ್ತು ಶಿಂಷಾ ಜಲವಿದ್ಯುಚ್ಛಕ್ತಿಯ ಉತ್ಪಾದನೆಯು ಪ್ರಧಾನ ಸಹಾಯಕಾಂಶವಾಗಿರುವುದು. ರಾಜ್ಯದಲ್ಲಿರುವ ಮಾರ್ಗ ಸೌಕರ್ಯಗಳ ರಚನೆ ಬಹು ಮಟ್ಟಿಗೆ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ. ಪ್ರಸ್ಥಭೂಮಿಯ ಭಾಗದಲ್ಲಿ, ರಸ್ತೆ ಮತ್ತು ರೈಲುಮಾರ್ಗಗಳು ಅಭಿವೃದ್ಧಿ ಹೊಂದಿದ ಸಂಪದ್ಯುಕ್ತ ಭಾಗಗಳಿಗೆ ಸಂಬಂಧ ಕಲ್ಪಿಸುತ್ತವೆ. ಸಹ್ಯಾದ್ರಿ ಬೆಟ್ಟಗಳನ್ನು ದಾಟುವಲ್ಲಿ ಘಟ್ಟದ ಕಣಿವೆಗಳು ಆರ್ಥಿಕ ಸಾಗಾಣಿಕೆಗೆ ಮಾರ್ಗ ಕಲ್ಪಿಸುತ್ತವೆ. ಕೆನರಾದ ತೀರಭಾಗದಲ್ಲಿ ರಸ್ತೆಗಳಿಗಿಂತಲೂ ತೀರವನ್ನು ಹೊಂದಿಕೊಂಡಿರುವ ಜಲಮಾರ್ಗಗಳು ಹೆಚ್ಚು ಪ್ರಾಮುಖ್ಯ ಪಡೆದಿವೆ; ಈ ಜಲಮಾರ್ಗಗಳು ಕರಾವಳಿ ಪ್ರದೇಶಕ್ಕೇ ಹೆಚ್ಚಾಗಿ ಸಂಬಂಧಿಸಿವೆ. ಇತ್ತೀಚಿನ ವರೆಗೂ (1956ರ ವರೆಗೂ) ಮದ್ರಾಸು ಪ್ರಾಂತದ ಆಡಳಿತದಲ್ಲಿದ್ದುದರಿಂದ ಮಂಗಳೂರಿನಿಂದ ಹೊರಡುವ ರೈಲುಮಾರ್ಗವು ಮದ್ರಾಸು ರಾಜ್ಯಕ್ಕೇ ಹೆಚ್ಚು ಹೊಂದಿದಂತಿದೆ. ರಾಜ್ಯದ ಜನಸಾಂದ್ರತೆಯೂ ಬಹುಮಟ್ಟಿಗೆ ನಾನಾಭಾಗಗಳ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ. ಕೆನರಾದ ತೀರಭಾಗಗಳು, ಮಧ್ಯಂತರದ ವಲಯ, ಮತ್ತು ಬೆಂಗಳೂರಿನಿಂದ ಮೈಸೂರಿನ ವರೆಗಿರುವ ಭಾಗಗಳಲ್ಲಿ ಹೆಚ್ಚು ಜನ ಸಾಂದ್ರತೆಯುಂಟು. ಸಹ್ಯಾದ್ರಿ ಬೆಟ್ಟಗಳಲ್ಲಿ ಜನ ಸಾಂದ್ರತೆ ಕಡಮೆ ; ಕಾರಣ ಸುಸ್ಪಷ್ಟ. ಪ್ರಸ್ಥಭೂಮಿಯ ಮಧ್ಯದ ಮತ್ತು ಪೂರ್ವದ ಭಾಗಗಳಲ್ಲಿ ಮುಖ್ಯವಾಗಿ ವ್ಯವಸಾಯದ ಅನುಕೂಲತೆಗಳನ್ನವಲಂಬಿಸಿ ಸಾಧಾರಣವಾದ ಜನ ಸಾಂದ್ರತೆಯು ಕಂಡುಬರುತ್ತದೆ.

ಈ ಒಂದೊಂದು ಪ್ರದೇಶದ ಮುಖ್ಯ ಗುಣಲಕ್ಷಣಗಳನ್ನೂ ಈಗ ಸ್ಥೂಲವಾಗಿ ಸೂಚಿಸಬಹುದು.

## 1. ಕೆನರಾದ ತೀರ (ಕರಾವಳಿ) ಪ್ರದೇಶ

ಸುಮಾರು 160ಮೈಲು ಉದ್ದವಿರುವ, 15ರಿಂದ 20ಮೈಲು ಅಗಲವಿರುವ ಮತ್ತು ಸಹ್ಯಾದ್ರಿ ಪರ್ವತಗಳ ತಪ್ಪಲುಗಳ ಅಂಚಿಗೆ ಒತ್ತಿಕೊಂಡಿರುವ ಇಕ್ಕಟ್ಟಾದ ಈ ಪ್ರದೇಶವು ಅರಬೀ ಸಮುದ್ರಕ್ಕೆ ಅಭಿಮುಖವಾಗಿದೆ. ಈ ತೀರಪ್ರದೇಶದ ಮೈದಾನಲಕ್ಷಣಗಳನ್ನು ಸಹ್ಯಾದ್ರಿ ಬೆಟ್ಟಗಳಿಂದ ಅಡ್ಡಲಾಗಿ ಹಬ್ಬಿರುವ ಬೆಟ್ಟಗಳು ಮತ್ತು ಸಾಧಾರಣ ಎತ್ತರವುಳ್ಳ ಲ್ಯಾಟರೈಟ್ ಪ್ರಸ್ಥಭೂಮಿಗಳು ನಿಯಂತ್ರಿಸುತ್ತವೆ. ಬಹು ಮಿತವಾದ ಸಮನೆಲವುಳ್ಳ ಕರಿಯ ನೆಲದ ಈ ತೀರಪ್ರದೇಶದಲ್ಲಿ ಸಾಂದ್ರಕ್ರಮದಲ್ಲಿ ಬೇಸಾಯವನ್ನು ನಡೆಸಲಾಗುತ್ತಿದೆ. ಬತ್ತ ಮತ್ತು ತೆಂಗು ಇಲ್ಲಿನ ಮುಖ್ಯಬೆಳೆಗಳು. ಈ ಭಾಗದಲ್ಲಿರುವ ಕಿರಿದಾದ ಕಣಿವೆಗಳು ಅಧಿಕ ಜನಸಾಂದ್ರತೆಯಿಂದ ಕೂಡಿದ್ದು ಈ ಪ್ರದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿವೆ. ಈ ಭಾಗದ ಉತ್ತರ ಮತ್ತು ದಕ್ಷಿಣದ ತುದಿಗಳಲ್ಲಿ ಕಾರವಾರ ಮತ್ತು ಮಂಗಳೂರು ಪಟ್ಟಣಗಳಿದ್ದು, ಅವುಗಳ ನಡುವೆ ಕುಮಟ, ಹೊನ್ನಾವರ, ಭಟ್ಕಳ, ಮತ್ತು ಕುಂದಾಪುರ ಮುಂತಾದ ಚಿಕ್ಕ ಊರುಗಳು ಕಂಡುಬರುತ್ತವೆ. ಈ ಭಾಗದಲ್ಲಿ ಬಹುಮಟ್ಟಿಗೆ ಎಲ್ಲ ಅಳಿವೆಗಳಲ್ಲಿಯೂ ಚಿಕ್ಕ ಬಂದರುಗಳುಂಟು ; ಆದರೆ, ಅವುಗಳು ಸಮುದ್ರದ ಕಡೆಗೆ ಹೆಚ್ಚು ಆಳವಿಲ್ಲದೆ ಮರಳಿನಿಂದ ತುಂಬಿವೆ. ಕಾರವಾರ, ಭಟ್ಕಳ ಮತ್ತು ಮಲ್ಪೆಗಳಲ್ಲಿ ಅಭಿವೃದ್ಧಿಗೊಳಿಸಲು ಬೇಕಾದ ಅನುಕೂಲತೆಗಳಿವೆ. ಐತಿಹಾಸಿಕವಾಗಿ ಈ ಪ್ರದೇಶವು ಎರಡು ರೀತಿಯಲ್ಲಿ ಪ್ರಭಾವವನ್ನು ಬೀರಿದೆ. ಚರಿತ್ರೆಯ ಹಿಂದಿನ ಅವಧಿಯಲ್ಲಿ ಇದು ಒಳನಾಡಿನ ರಾಜ್ಯಗಳ ಅಧೀನದಲ್ಲಿದ್ದಿತು. ಆದ್ದರಿಂದ ಒಳನಾಡಿನಲ್ಲಿ ಆಳುತ್ತಿದ್ದ ಹಿಂದಿನ ಹಿಂದೂ ರಾಜವಂಶಗಳ ಅಧೀನದಲ್ಲಿದ್ದ ಪಾಳೆಯಗಾರರು ಈ ಭಾಗದಲ್ಲಿದ್ದರು. ಗೇರಸೊಪ್ಪೆ, ನಗರಬಸ್ತಿಕೆರೆ,

ಮತ್ತು ಕಾರ್ಕಳಗಳಲ್ಲಿರುವ ಅನೇಕ ಹಿಂದೂ ಮತ್ತು ಜೈನ ವಾಸ್ತುಶಿಲ್ಪಗಳ ಪಳೆಯುಳಿಕೆಗಳು ಈಗಲೂ ಆಗಿನ ಕಾಲದ ಉಚ್ಛ್ರಾಯಸ್ಥಿತಿಯನ್ನು ಸೂಚಿಸುವ ಸಾಕ್ಷಿಗಳಾಗಿವೆ. ಅನಂತರ ಕಾಲದಲ್ಲಿ ಕೂಡ ಬಹಮನಿ ರಾಜರ ಪ್ರಭಾವವೂ ಸ್ವಲ್ಪಕಾಲದ ವರೆಗೆ ಇಲ್ಲಿಯ ವರೆಗೆ ಹಬ್ಬಿದ್ದಿತು. ವಾಣಿಜ್ಯ ದೃಷ್ಟಿಯಿಂದ ನೋಡಿದರೆ, ಈ ಭಾಗವು ಗ್ರೀಕ್ ಮತ್ತು ರೋಮನರ ನಾಗರಿಕತೆಯ ಕಾಲದಿಂದ ಬ್ರಿಟಿಷ್ ಮತ್ತು ಯುರೋಪಿಯನ್ನರ ಕಾಲದ ವರೆಗೂ ಯಾವಾಗಲೂ ವಿದೇಶಗಳೊಡನೆ ತನ್ನ ಸಂಬಂಧವನ್ನಿಟ್ಟು ಕೊಂಡಿದ್ದಿತು. ವಾಣಿಜ್ಯದ ಮೂಲಕ ತೀರಪ್ರದೇಶವು ಹೊರಗಿನ ಸಂಪರ್ಕವನ್ನು ಪಡೆಯಿತು ; ಆಫ್ರಿಕದ ಜನಾಂಗಗಳು, ಇಸ್ಲಾಂಮತ, ಅನಂತರ ಪೋರ್ಚುಗೀಸರು ಮತ್ತು ಇಂಗ್ಲೀಷರು, ಕ್ರೈಸ್ತಮತ—ಇವೆಲ್ಲವುಗಳ ಸಂಪರ್ಕವೂ ಈ ಕರಾವಳಿಪ್ರದೇಶಕ್ಕೆ ಉಂಟಾದುದು ಹೀಗೆಯೇ. ಈ ಪ್ರದೇಶದ ಜನಜೀವನ ದಲ್ಲಿ ಸಾಂಸ್ಕೃತಿಕ ವೈವಿಧ್ಯ ಹೆಚ್ಚಾಗಿ ಕಂಡುಬರುತ್ತಿರುವುದು ಈ ಕಾರಣದಿಂದಲೇ.

## 2. ಸಹ್ಯಾದ್ರಿ ಪರ್ವತಗಳ ಪ್ರದೇಶ

ಸಹ್ಯಾದ್ರಿ ಪ್ರದೇಶದಲ್ಲಿ ಅರಣ್ಯ ಸಮೃದ್ಧಿ ಬಹು ಮುಖ್ಯ ಅಂಶ. ಮಾನ್‌ಸೂನ್ ಮಳೆ ಸುರಿಯುವ ದಟ್ಟವಾದ ಕಾಡುಗಳಲ್ಲಿ ತೇಗದ ಮರ ಅಲ್ಲಿನ ಬಹುಪ್ರಧಾನ ವಸ್ತು. ನಿತ್ಯ ಹರಿದ್ವರ್ಣದ ದಟ್ಟ ಕಾಡುಗಳು ಅಲ್ಲಲ್ಲಿ ಬೆಳೆದಿವೆ. ಸಾಮಾನ್ಯವಾಗಿ ದುರ್ಗಮವಾದ ಒಳಭಾಗಗಳ ಕಡೆಗೂ, ಉತ್ತರದಿಂದ ದಕ್ಷಿಣದ ಕಡೆಗೂ ಹೋದ ಹೋದಂತೆಲ್ಲ ಅರಣ್ಯ ಸಂಪತ್ತು ಬಹು ಸಮೃದ್ಧವಾಗುತ್ತದೆ. ಪಶ್ಚಿಮದ ಕಡೆಗಿರುವ ಅತಿ ಕಡಿದಾದ ಇಳಿಜಾರುಗಳು ಬಹುಪಾಲು ಬೋಳಾಗಿರುವುವು. ಕಡಮೆ ಮಳೆಬೀಳುವ ಪೂರ್ವದ ಕಡೆಗೆ ಹೋದಂತೆಲ್ಲ, ಅರಣ್ಯದ ದಟ್ಟಣೆ ಕ್ಷೀಣಿಸುತ್ತಿರುತ್ತದೆ ; ಕೋಲುಗಳಂತಿರುವ ಮರಗಳೂ ಕುರುಚಲು ಗಿಡಗಳೂ ಬೆಳೆದ ಕಾಡಾಗಿ ಪರಿಣಮಿಸುತ್ತದೆ. ಈ ಕಾಡುಗಳಲ್ಲಿ ತೇಗವು ಹೆಚ್ಚು ಬೆಲೆಬಾಳುವ ಮುಖ್ಯ ಉತ್ಪನ್ನ. ರಸ್ತೆ ನಿರ್ಮಾಣ ಮತ್ತು ಕಾಡಿನ ಇತರ ಎಲ್ಲಾ ಚಟುವಟಿಕೆಗಳಿಗೂ ಬಹು ಅಮೂಲ್ಯವಾದ ಈ ಮರ ನೆಡುವುದು, ಬೆಳಸುವುದು, ಬೆಳೆದಮೇಲೆ ಕಡಿದು ಪೇಟೆಗೆ ಸಿದ್ಧಮಾಡುವುದು-ಇವೇ ಅಲ್ಲಿ ಮುಖ್ಯೋದ್ದೇಶ. ಹೀಗೆ ಅನೇಕ ಪ್ರದೇಶಗಳು ಅಲ್ಲಿನ ತೇಗಕ್ಕಾಗಿಯೇ ಬಹಳ ಪ್ರಸಿದ್ಧವಾಗಿವೆ. ತೇಗವನ್ನು ಬಿಟ್ಟರೆ ಗಂಧದ ಮರವು ಎರಡನೆಯ ಸ್ಥಾನವನ್ನು ಪಡೆದಿದೆ. ಬಹುತೇಕ ದಕ್ಷಿಣ ಭಾಗದಲ್ಲಿ ಇದನ್ನು ಹೆಚ್ಚು ಅಭಿವೃದ್ಧಿ ಪಡಿಸುತ್ತಾರೆ. ಶಿವಮೊಗ್ಗದಲ್ಲಿ ಹೆಚ್ಚು ಲಾಭದಾಯಕವಾಗಿ ಬಳಸುತ್ತಾರೆ. ಇತ್ತೀಚೆಗೆ, ಬಿದಿರು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯಕ್ಕೆ ಬಂದಿದೆ. ದಾಂಡೇಲಿ ಮತ್ತು ಭದ್ರಾವತಿಗಳಲ್ಲಿ ಅಭಿವೃದ್ಧಿ ಗೊಂಡಿರುವ ಕಾಗದದ ಕಾರ್ಖಾನೆಗಳ ಮೂಲಕ ಇದು ವ್ಯಕ್ತವಾಗುತ್ತದೆ. ಸ್ಥಳೀಯ ಸಂಪತ್ಸಾಧನಗಳಲ್ಲಿ ಖನಿಜ ಉತ್ಪನ್ನಗಳೂ ಹೆಚ್ಚು ಪ್ರಾಮುಖ್ಯವನ್ನು ಪಡೆದಿವೆ. ಆದರೆ ಮುಖ್ಯವಾಗಿ ಉತ್ತರ ಭಾಗದಲ್ಲಿ ಗಣಿಗಳನ್ನು ಅಲಕ್ಷ್ಯದಿಂದ ತೋಡಿ, ಪ್ರಕೃತಿ ರೂಪಗಳನ್ನು ಕುರೂಪಗೊಳಿಸಲಾಗಿದೆ. ಮ್ಯಾಂಗನೀಸ್ ಅದುರು ಮುಖ್ಯ ಖನಿಜವಾಗಿದೆ. ಭದ್ರಾವತಿಯ ಹತ್ತಿರವೂ ಇನ್ನೂ ಅನೇಕ ಸ್ಥಳಗಳಲ್ಲಿಯೂ ಸಿಕ್ಕುವ ಕಬ್ಬಿಣದ ಅದುರು ಎರಡನೆಯ ಸ್ಥಾನವನ್ನು ಪಡೆದಿರುವ ಖನಿಜ. ಅನ್ವೇಷಣೆ ಮಾಡಿದರೆ ಈ ಭಾಗದಲ್ಲಿ ಇನ್ನೂ ಕೆಲವು ಖನಿಜನಿಕ್ಷೇಪಗಳು ದೊರೆಯುವ ಸಂಭವವುಂಟು. ಜೋಗದ ಜಲವಿದ್ಯುಚ್ಛಕ್ತಿಯ ಕೇಂದ್ರ, ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ, ಕಾಗದದ ಕಾರ್ಖಾನೆಗಳು—ಇವೆಲ್ಲ ಕರ್ನಾಟಕದ ಸಹ್ಯಾದ್ರಿ ಪ್ರದೇಶದ ಹೊಸ ಪರಿಸ್ಥಿತಿಯನ್ನು ಸೂಚಿಸುತ್ತವೆ. ಅಲ್ಲದೆ, ಸ್ಥಳೀಯವಾಗಿ ದೊರೆಯುವ ಖನಿಜಗಳನ್ನು ಮತ್ತು ಅರಣ್ಯೋತ್ಪಾದನೆಗಳನ್ನು ಅವಲಂಬಿಸಿ ಸ್ಥಳೀಯವಾಗಿ ಅಭಿವೃದ್ಧಿಗೊಂಡಿರುವ ಕೈಗಾರಿಕೆಗಳು ಈ ಪ್ರದೇಶದ ಮುಂದಿನ ಏಳಿಗೆಯನ್ನು ಸೂಚಿಸುತ್ತವೆ. ಈ ಪ್ರದೇಶದಲ್ಲಿ ಜನಸಾಂದ್ರತೆ ಕಡಮೆ. ಹುಬ್ಬಳ್ಳಿ ಮತ್ತು ಕಾರವಾರ, ಶಿವಮೊಗ್ಗ ಮತ್ತು ಉಡುಪಿ, ಚಿಕ್ಕಮಗಳೂರಿನ ಮೂಲಕ ಕಡೂರು ಮತ್ತು ಉಡುಪಿ, ಮಡಿಕೇರಿಯ ಮೂಲಕ ಮೈಸೂರು ಮತ್ತು ಮಂಗಳೂರು—ಇವಕ್ಕೆ ಸಂಬಂಧ ಕಲ್ಪಿಸುವ ಕಣಿವೆ ಮಾರ್ಗಗಳಲ್ಲಿ ಜನಸಾಂದ್ರತೆಯು ಹೆಚ್ಚಾಗಿದೆ.

### 3. ಮಧ್ಯಂತರದ ಪ್ರದೇಶ

ಸಹ್ಯಾದ್ರಿ ಪರ್ವತಗಳ ಪೂರ್ವಭಾಗದ ಪಟ್ಟಿಯಂತಿರುವ ಭಾಗದಲ್ಲಿ ಬೆಟ್ಟತಪ್ಪಲುಗಳಿವೆ. ಈ ಪಟ್ಟಿಯು ಉತ್ತರದಲ್ಲಿ 20 ಮೈಲು ಅಗಲವಿದ್ದು ದಕ್ಷಿಣದಲ್ಲಿ 30 ಮೈಲು ಅಗಲವಾಗಿದೆ. ಈ ತಪ್ಪಲುಗಳನ್ನುಳ್ಳ ಪಟ್ಟಿಯು ಎತ್ತರವಾದ ಪರ್ವತಪ್ರದೇಶಕ್ಕೂ ಪ್ರಸ್ಥಭೂಮಿ ಅಥವಾ ಮೈದಾನ ಪ್ರದೇಶಕ್ಕೂ ನಡುವೆ ಮಧ್ಯಂತರದ ಪ್ರದೇಶವಾಗಿರುವುದು. ಈ ಭಾಗದಲ್ಲಿ ಅನೇಕ ಬೆಟ್ಟಸಾಲುಗಳು ಕ್ರಮೇಣ ಕಿರಿದಾಗುತ್ತಾ ಬಂದು ಕಡೆಯಲ್ಲಿ ಕೇವಲ ಚಿಕ್ಕ ಏರುತಗ್ಗುಗಳಿಂದ ಕೂಡಿದ ಭೂವಿನ್ಯಾಸಕ್ಕೆ ಎಡೆಮಾಡಿವೆ. ಅಲ್ಲಲ್ಲಿ ಧಾರವಾಡದ ಶಿಲಾರಚನೆಯಿಂದ ಕೂಡಿದ ಬಂಡೆ ತುಂಬಿದ 'ಹಂದಿಬೆನ್ನು' ಗುಡ್ಡಗಳು ಕಂಡುಬರುವುವು. ಈ ವಿಭಾಗದಲ್ಲಿ ಮಿಶ್ರವರ್ಗಗಳ ಮಣ್ಣುಗಳು ಮತ್ತು ಸಾಧಾರಣ ಮಳೆ ಬೀಳುವ ವಾಯುಗುಣ ಇರುವುದರಿಂದ ತರಿಬೆಳೆಯಾದ ಬತ್ತ ಮೊದಲುಗೊಂಡು ಖುಷ್ಕಿ ಬೆಳೆಯಾದ ಜೋಳ ಮೊದಲಾದ ಅನೇಕ ಬಗೆಯ ಪೈರುಗಳು ಬೆಳೆಯುತ್ತವೆ. ಕೆರೆ ನೀರಾವರಿಯೂ ಮುಖ್ಯವಾಗಿರುವದು. ಬೆಟ್ಟಗುಡ್ಡಗಳ ಮೇಲೆ ಕಾಡುಗಳಿವೆ. ಆದರೆ ಮರಗಳು ಸ್ವಲ್ಪ ಕೀಳುದರ್ಜೆಯವು. ಅಡೆತಡೆಯಿಲ್ಲದೆ ಕಡಿದು ಉಪಯೋಗಿಸುವುದರಿಂದ, ಈ ಮರಗಿಡಗಳೂ ಬಹು ವಿರಳವಾಗುತ್ತಲಿವೆ. ಕಿರಿದಾದ ಈ ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವ ಪಶ್ಚಿಮ ಭಾಗದ ಸೌಕರ್ಯ, ಹಾಗೂ ಕಡಮೆ ಮಳೆ ಬೀಳುವ ಪೂರ್ವಭಾಗದ ಸೌಕರ್ಯ—ಈ ಎರಡೂ ಬಗೆಯ ಸ್ವಾಭಾವಿಕ ಸೌಕರ್ಯಗಳೂ ಇವೆ. ಇಲ್ಲಿ ವಾಯುಗುಣ ಹಿತವಾಗಿದೆ. ಆದುದರಿಂದ ಈ ಪ್ರದೇಶದಲ್ಲಿ ಜನಸಂದಣಿ ಹೆಚ್ಚಾಗಿದೆ. ಮಾರ್ಗಸೌಕರ್ಯಗಳ ಮತ್ತು ಕೈಗಾರಿಕೆಗಳ ಅಭಿವೃದ್ಧಿಯು ಶೀಘ್ರಗತಿಯಲ್ಲಿ ಪಟ್ಟಣಗಳ ಬೆಳವಣಿಗೆಗೆ ಅವಕಾಶಮಾಡಿಕೊಟ್ಟಿದೆ. ಹೀಗೆ ಈ ಭಾಗವು ಎರಡು ಉದ್ದೇಶಗಳನ್ನು ಈಡೇರಿಸಿಕೊಡುತ್ತಿದೆ. ಇದು ಸಹ್ಯಾದ್ರಿ ಪರ್ವತಪ್ರದೇಶಕ್ಕೂ ಪ್ರಸ್ಥಭೂಮಿಗೂ ಸಂಪರ್ಕವನ್ನು ಕಲ್ಪಿಸುತ್ತದೆ, ಮತ್ತು ಪೂನಾದಿಂದ ಹರಿಹರದ ವರೆಗಿರುವ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲುಮಾರ್ಗಗಳನ್ನನುಸರಿಸಿ ದಕ್ಷಿಣೋತ್ತರ ಸಂಪರ್ಕಕ್ಕೆ ಅನುಕೂಲವಾಗಿದೆ. ಇದರ ಪರಿಣಾಮವಾಗಿ ಈ ಪಟ್ಟಿ ಪ್ರದೇಶದಲ್ಲಿ ಅನೇಕ ಊರು ಪಟ್ಟಣಗಳು ಬೆಳೆದು ಅಭಿವೃದ್ಧಿಹೊಂದುತ್ತಿವೆ. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ರಾಣಿಬೆನ್ನೂರು, ಹರಿಹರ, ದಾವಣಗೆರೆ, ಕಡೂರು, ಶಿವಮೊಗ್ಗ, ಹಾಸನ, ಮತ್ತು ಮೈಸೂರು—ಇವು ವಾಣಿಜ್ಯದ ಕೈಗಾರಿಕೆಗಳ ಮತ್ತು ಸಂಸ್ಕೃತಿಯ ಮುಖ್ಯ ಕೇಂದ್ರಗಳಾಗಿ ಬೆಳೆದಿವೆ. ಐತಿಹಾಸಿಕವಾಗಿಯೂ ಈ ಕಿರಿದಾದ ಪ್ರದೇಶವು ಸಾಕಷ್ಟು ಪ್ರಾಮುಖ್ಯವನ್ನು ಪಡೆದಿದ್ದಿತೆಂದು ಇಲ್ಲಿನ ಹಳೆಯ ಊರುಗಳು ಮತ್ತು ಪಟ್ಟಣಗಳ ಚರಿತ್ರೆಯಿಂದ ತಿಳಿಯಬರುತ್ತದೆ. ಉತ್ತರದಲ್ಲಿರುವ ಹಲ್ಸಿ, ಮಧ್ಯಭಾಗದಲ್ಲಿರುವ ಬನವಾಸಿ, ಬೇಲೂರು, ಮತ್ತು ಹಳೆಬೀಡು, ದಕ್ಷಿಣದಲ್ಲಿರುವ ತಲಕಾಡು ಮತ್ತು ಪುನ್ನಾಟ—ಇವುಗಳ ಚರಿತ್ರೆ ಇದಕ್ಕೆ ನಿದರ್ಶನ. ಈ ಪಟ್ಟಣಗಳು ಪುರಾತನಕಾಲದಲ್ಲಿ ಅವುಗಳ ಸ್ಥಾನಬಲದಿಂದ ಅಭಿವೃದ್ಧಿ ಹೊಂದಿದುವು. ಅವುಗಳ ಹತ್ತಿರದಲ್ಲಿರುವ, ಕಾಡು ಬೆಳೆದಿರುವ ಬೆಟ್ಟಗಳು, ಅವುಗಳಿಗೆ ಉತ್ತಮ ರಕ್ಷಣೆಯನ್ನು ಒದಗಿಸಿದುವು; ಹಾಗೂ ಅವು ಮೈದಾನ ಭಾಗಗಳಿಗೆ ಅನತಿ ದೂರದಲ್ಲಿದ್ದುದ್ದರಿಂದ ಆರ್ಥಿಕ ಆಕರ್ಷಣೆ ಮತ್ತು ಸುಲಭ ಸಂಚಾರಸೌಕರ್ಯಗಳೂ ಅವಕ್ಕೆ ದೊರೆತವು. ಇದರ ಜೊತೆಗೆ, ಪಟ್ಟಿಯಂತಿರುವ ಈ ಪ್ರದೇಶವು ಉತ್ತರದಿಂದ ದಂಡೆತ್ತಿಬಂದ ಮುಸಲ್ಮಾನ ಮತ್ತು ಮರಾಠಾ ದಾಳಿಕಾರರ ಬಲಿಷ್ಠ ದಂಡಯಾತ್ರೆಗಳಿಗೆ ನುಸುಳಿ ಬರುವ ಮಾರ್ಗಕ್ಕೂ ಆಸ್ಪದಮಾಡಿಕೊಟ್ಟಿತು. ಇತಿಹಾಸಕಾಲದಲ್ಲಿ ಈ ಪ್ರದೇಶವು ಬಹು ಪ್ರಾಮುಖ್ಯ ಪಡೆದಿತ್ತು. ಹೆಚ್ಚುಕಡಮೆ ಈ ಪ್ರದೇಶದ ಎಲ್ಲ ಭಾಗಗಳನ್ನೂ ಬಲಿಷ್ಠರಾದ ಪ್ರಬಲ ರಾಜರು ಅಧೀನದಲ್ಲಿಟ್ಟುಕೊಂಡಿರುತ್ತಿದ್ದರು; ತಮಗಿಂತಲೂ ಬಲಿಷ್ಠವಾದ ರಾಜಮನೆತನಗಳ ಏಳುಬೀಳಿಗನುಸಾರವಾಗಿ ತಮ್ಮ ನಿಷ್ಠೆಯನ್ನು ಮಾರ್ಪಡಿಸಿಕೊಳ್ಳುತ್ತಿದ್ದರು. ಚಾಲುಕ್ಯರು, ಹೊಯ್ಸಳರು, ವಿಜಯನಗರದರಸರು, ಬಿಜಾಪುರದ ರಾಜರು, ಮರಾಠರು—ಈ ರಾಜರುಗಳ ಬಲಾಬಲಗಳ ಕ್ರಮವನ್ನನುಸರಿಸಿ ಆಗಾಗ್ಗೆ ತಮ್ಮ ಧೋರಣೆಗಳನ್ನು ಬದಲಾವಣೆ ಮಾಡಿಕೊಂಡು ಶಕ್ತಿಯುತ ಬಣಗಳನ್ನು ಸೇರುತ್ತಿದ್ದರು. ಈ ಪಟ್ಟಿ ಪ್ರದೇಶದ ಐತಿಹಾಸಿಕ

ಕಾಲದ ಸಾಂಸ್ಕೃತಿಕ, ಅಭಿವೃದ್ಧಿ ಬಹು ಉನ್ನತವಾಗಿತ್ತು. ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಹಿಂದೂ ಮತ್ತು ಜೈನರ ಅನೇಕ ಶ್ರೇಷ್ಠಸ್ಮಾರಕ ಕೃತಿಗಳಿವೆ ; ಹೇಳಬಹುದಾದರೆ, ಬೇಲೂರು ದೇವಸ್ಥಾನ ಮತ್ತು ಶ್ರವಣ ಬೆಳಗೊಳದ ಶಿಲಾಮೂರ್ತಿ—ಇವು ಆ ಪ್ರಸಿದ್ಧ ಸ್ಮಾರಕಗಳಲ್ಲಿ ಮುಖ್ಯವಾದ ಎರಡು ಮಾತ್ರ.

## 4. ದಕ್ಷಿಣದ ಪ್ರಸ್ಥಭೂಮಿ

ಪ್ರಾಕೃತಿಕ ವೈವಿಧ್ಯತೆಯೊಡನೆ ಸರಾಸರಿ ಎತ್ತರ, ಎರಡೂ ಮಳೆ ಮಾರುತಗಳ ಸಂಬಂಧದ ಸನ್ನಿವೇಶ ಇವುಗಳಲ್ಲಿ ದಕ್ಷಿಣ ಪ್ರಸ್ಥಭೂಮಿಯು ಉತ್ತರ ಪ್ರಸ್ಥಭೂಮಿಗಿಂತ ಪ್ರತ್ಯೇಕ ವೈಲಕ್ಷಣ್ಯವುಳ್ಳದ್ದಾಗಿದೆ. ಈ ಪ್ರದೇಶದಲ್ಲಿ ವ್ಯವಸಾಯವು ಬಹುಪಾಲು ಕೆರೆ ನೀರಾವರಿಯನ್ನವಲಂಬಿಸಿದ್ದು. ರಾಗಿ, ಬತ್ತ ಮತ್ತು ತೆಂಗು ಇವು ಇಲ್ಲಿನ ಮುಖ್ಯ ಆರ್ಥಿಕ ಬೆಳೆಗಳಾಗಿರುತ್ತವೆ. ಆದರೆ, ಈ ಪ್ರಸ್ಥಭೂಮಿಯ ಮಣ್ಣುಗಳ ಉತ್ಪಾದನಾ ಸಾಮರ್ಥ್ಯವು ಉತ್ತರ ಪ್ರಸ್ಥಭೂಮಿಯ ಮಣ್ಣಿಗಿಂತಲೂ ಬಹು ಕಡಮೆಯಾಗಿರುತ್ತದೆ. ಈ ಭಾಗದ ಜನಸಂಖ್ಯೆ ಕಡಮೆ. ಉತ್ತರಕ್ಕೆ ಹೋಲಿಸಿದರೆ ಇಲ್ಲಿ ಜನರು ಚಿಕ್ಕ ಗ್ರಾಮಗಳಲ್ಲಿ ನೆಲಸಿರುವರು. ಆರ್ಥಿಕವಾಗಿಯೂ ಸಾಕಷ್ಟು ಅಭಿವೃದ್ಧಿ ಹೊಂದಿಲ್ಲ. ಕುರುಚಲುಗಿಡಗಳಿಂದ ಮತ್ತು ವಿರಳ ಮರಗಳಿಂದ ಕೂಡಿದ ಕಾಡುಗಳೂ, ಹುಲ್ಲುಗಾವಲೂ ಈ ಪ್ರದೇಶದಲ್ಲಿ ಮತ್ತೆ ಮತ್ತೆ ಕಂಡುಬರುವ ಭೂದೃಶ್ಯ. ಆದರೂ ಈ ಪ್ರದೇಶದಲ್ಲಿ ಬೆಂಗಳೂರು—ಮೈಸೂರು ನಗರ ಪ್ರದೇಶದ ಪಟ್ಟಿಯೂ ಕೋಲಾರ ಚಿನ್ನದ ಗಣಿಯ ಪ್ರದೇಶವೂ ಇರುವುವು. ಶಿವಸಮುದ್ರದಿಂದ ವಿದ್ಯುಚ್ಛಕ್ತಿ ಸರಬರಾಜಾಗುವುದಕ್ಕೆ ಪ್ರಾರಂಭ ವಾದ ಮೇಲೆ ಈ ಪ್ರದೇಶದಲ್ಲಿ ಶೀಘ್ರಗತಿಯಿಂದ ಆರ್ಥಿಕಾಭಿವೃದ್ಧಿಯಾಗತೊಡಗಿತು. ಈ ವಿದ್ಯುಚ್ಛಕ್ತಿ ಯಿಂದ ಬೆಂಗಳೂರಿನಲ್ಲಿ ಹಲವು ಕೈಗಾರಿಕೆಗಳೂ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯೂ, ಕೋಲಾರದ ಪ್ರಸಿದ್ಧ ಚಿನ್ನದ ಗಣಿಗಳೂ ಅಭಿವೃದ್ಧಿ ಹೊಂದುವುದಕ್ಕೆ ಸಹಾಯವಾಗಿದೆ. ವ್ಯವಸಾಯದ ಉತ್ಪನ್ನಗಳನ್ನವಲಂಬಿಸಿರುವ ವನಸ್ಪತಿ ಎಣ್ಣೆ ತಯಾರಿಕೆ ಮುಂತಾದ ಕೈಗಾರಿಕೆಗಳು ಕೂಡ ಹೊಸ ಹಜ್ಜೆಯನ್ನಿಟ್ಟಿವೆ. ಪ್ರಾದೇಶಿಕವಾಗಿ ಮೈಸೂರು—ಮಂಡ್ಯ—ಬೆಂಗಳೂರು ಪ್ರದೇಶವು ಅಭಿವೃದ್ಧಿ ಹೊಂದುತ್ತಲಿರುವ ಒಂದು ಆರ್ಥಿಕ ಕ್ಷೇತ್ರವಾಗಿದೆ. ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ನಗರಕ್ಕೆ ಆಡಳಿತದ ಕೇಂದ್ರವೆಂಬ ಪ್ರಾಮುಖ್ಯತೆ ಮಾತ್ರವೇ ಅಲ್ಲ; ಅದು ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಕ್ಲಿಷ್ಟರಚನೆಯುಳ್ಳ ಭಾರಿ ಕೈಗಾರಿಕೋದ್ಯಮಗಳ ನೆಲೆಯೂ ಆಗಿದೆ. ಕೋಲಾರ ಚಿನ್ನದ ಗಣಿಗಳು ಚಿನ್ನದ ಉತ್ಪಾದನೆಗೆ ಪ್ರಸಿದ್ಧಿಪಡೆದಿವೆ. ಐತಿಹಾಸಿಕವಾಗಿ ಕೋಲಾರ್ ಅಥವಾ ಕೋಲಾರ (ಅದರ ಹಳೆಯ ಹೆಸರು 'ಕುವಲಾಲ') ಬಹು ಪುರಾತನ ಪಟ್ಟಣ ; ಒಂದಾನೊಂದು ಕಾಲದಲ್ಲಿ ಅದು ರಾಜಧಾನಿಯಾಗಿತ್ತು ; ಮತ್ತು ಚೋಳಮಂಡಲ ಪ್ರಾಂತದ ರಾಜಪ್ರತಿನಿಧಿಯ ರಾಜಧಾನಿಯಾಗಿತ್ತು. ಇದರಂತೆಯೇ, ದೇವರಾಯನ ದುರ್ಗ, ದೊಡ್ಡಬಳ್ಳಾಪುರ, ನಂದಿದುರ್ಗ, ಮಧುಗಿರಿ ಮತ್ತು ಶಿರಾ— ಈ ಪಟ್ಟಣಗಳಿಗೂ ಐತಿಹಾಸಿಕ ಪ್ರಾಮುಖ್ಯವಿದೆ. ವಾಸ್ತವವಾಗಿ, ಎಲ್ಲ ಕೋಟೆಗಳಿಗೂ—ಮುಖ್ಯವಾಗಿ ಪ್ರತ್ಯೇಕವಾಗಿರುವ ಗುಡ್ಡ ಅಥವಾ ಬೆಟ್ಟಗಳ ಸಾಲುಗಳ ಮೇಲಿರುವವುಗಳಿಗೆ, ಸ್ಥಳೀಯವಾದ ಐತಿಹಾಸಿಕ ಮಹತ್ವವುಂಟು.

## 5. ಉತ್ತರದ ಪ್ರಸ್ಥಭೂಮಿ

ಚಿಕ್ಕಮಗಳೂರಿನಿಂದ ಚಿತ್ರದುರ್ಗದ ವರೆಗೂ, ಇನ್ನೂ ಮುಂದುವರಿಸಿ, ರಾಜ್ಯದ ಈಶಾನ್ಯದ ಮೇರೆಯವರೆಗೂ ಎಳೆಯಬಹುದಾದ ರೇಖೆಯು ದಕ್ಷಿಣದ ಪ್ರಸ್ಥಭೂಮಿಯಿಂದ ಉತ್ತರ ಪ್ರಸ್ಥಭೂಮಿಯನ್ನು ಸ್ಥೂಲವಾಗಿ ಪ್ರತ್ಯೇಕಿಸುವ ಮೇರೆಗೆರೆಯಾಗುತ್ತದೆ. ಬೆಟ್ಟಗುಡ್ಡಗಳಿಂದ ತುಂಬಿ ಕಾಡು ಬೆಳೆದು ಕೆರೆ ನೀರಾವರಿಯ ಕೆಂಪುಮಣ್ಣಿನ ಭೂದೃಶ್ಯದಿಂದ ಕೂಡಿದ ಪ್ರದೇಶಕ್ಕೆ ಬದಲಾಗಿ

ಸಾಧಾರಣ ಏರು ತಗ್ಗುಗಳಿಂದ ಕೂಡಿದ ಕಪ್ಪುಮಣ್ಣಿನ ವಿಶಾಲ ಬಯಲುಪ್ರದೇಶ ;ಪ್ರಾರಂಭವಾಗುತ್ತದೆ. ಅಲ್ಲೊಂದಿಲ್ಲೊಂದು ಅಲ್ಲಲ್ಲಿ ಗುಡ್ಡ ಅಥವಾ ಸವೆದು ಹೋಗಿ ಉಳಿದಿರುವ ಬೆಟ್ಟಗಳ ಸಾಲು ಈ ಬಯಲು ದೃಶ್ಯದ ಬೇಸರಿಕೆಯನ್ನು ನೀಗಿಸುತ್ತದೆ. ಬತ್ತ–ರಾಗಿ–ತೆಂಗು ಮುಂತಾದ ಆರ್ಥಿಕ ಉತ್ಪಾದನೆ ಇಲ್ಲಿಲ್ಲ. ಇದು ಜೋಳ–ಗೋಧಿ–ಹತ್ತಿ ಮತ್ತು ಎಣ್ಣೆಯ ಬೀಜಗಳ ಮೇಲೆ ಅವಲಂಬಿಸಿದ ಪ್ರದೇಶ. ಅತಿ ಚಿಕ್ಕ ಗ್ರಾಮಗಳು ಮರೆಯಾಗಿ ದೊಡ್ಡದೊಡ್ಡ ಊರುಗಳು ಕಾಣಿಸಿಕೊಳ್ಳುತ್ತವೆ. ಕಡಮೆ ಉತ್ಪಾದನೆಯನ್ನು ಕೊಡುವ “ ತರಿ ” ಬೇಸಾಯಕ್ಕೆ ಬದಲಾಗಿ, ಹತ್ತಿ ಮತ್ತು ಎಣ್ಣೆಕಾಳುಗಳು ಗ್ರಾಮೀಣ ಆರ್ಥಿಕೋತ್ಪಾದನೆ ಯಲ್ಲಿ ಪ್ರಧಾನವಾಗಿರುವ “ ಖುಷ್ಕಿ ” ಬೇಸಾಯಕ್ಕೆ ಎಡೆಕೊಟ್ಟಿವೆ. ದೊಡ್ಡ ಪಟ್ಟಣಗಳು, ಮಾರ್ಗ ಕೇಂದ್ರಗಳೂ ವಾಣಿಜ್ಯ ಕೇಂದ್ರಗಳೂ ಆಗಿದ್ದು, ಬಹುತೇಕ ಅವುಗಳಲ್ಲಿ ಕೈಗಾರಿಕೆಯ ಕಡೆಗೆ ಒಲವು ಬೆಳೆದಿದೆ. ಈ ಪ್ರದೇಶದಲ್ಲಿ ಮೂರು ಒಳ ವಿಭಾಗಗಳಿವೆ : ಚಿತ್ರದುರ್ಗ ಪ್ರದೇಶ, ಧಾರವಾಡ–ಬಿಜಾಪುರದ ಹತ್ತಿಯ ಪ್ರದೇಶ, ಮತ್ತು ಗುಲ್ಬರ್ಗ–ರಾಯಚೂರು–ಬೀದರ್ ಪ್ರದೇಶ.

ಐತಿಹಾಸಿಕವಾಗಿ, ದೊಡ್ಡಕೋಟೆಗೆ ಪ್ರಸಿದ್ಧವಾದ ಚಿತ್ರದುರ್ಗವು, ಈಗ ಹತ್ತಿ ಮತ್ತು ಎಣ್ಣೆ ಕಾಳುಗಳನ್ನವಲಂಬಿಸಿರುವ ವಾಣಿಜ್ಯಕ್ಕೆ ಮತ್ತು ಕೈಗಾರಿಕೆಗೆ ಪ್ರಸಿದ್ಧವಾಗಿದೆ. ಧಾರವಾಡ–ಬಿಜಾಪುರ ಪ್ರದೇಶವು ಹತ್ತಿ, ಜೋಳ ಮತ್ತು ಎಣ್ಣೆಕಾಳುಗಳಿಗೆ ಹೆಚ್ಚು ಪ್ರಸಿದ್ಧವಾಗಿದೆ. ಈ ಪ್ರದೇಶದಲ್ಲಿರುವ ಕಪ್ಪು ಮಣ್ಣಿನ ಭೂದೃಶ್ಯವು ಅಲ್ಲಲ್ಲಿ ಕೆಂಪು ಮಣ್ಣಿರುವ ಸ್ಥಳಗಳಿಂದ ಕೂಡಿದೆ ; ಮತ್ತು ಅಲ್ಲಲ್ಲಿ ಕಲದ್ಗಿ ಬೆಣಚು ಕಲ್ಲಿನಿಂದ ಕೂಡಿದ ಶಿಥಿಲವಾಗಿ ಉಳಿದಿರುವ ಬೆಟ್ಟಗಳ ಸಾಲುಗಳಿವೆ. ದಟ್ಟವಾದ ಕಾಡುಗಳನ್ನುಳ್ಳ ಸ್ಥಳಗಳಿವೆ. ಆದರೆ ಅವು ಫಲವತ್ತಾಗಿರದ ಮಣ್ಣಿನಿಂದ ಕೂಡಿವೆ. ಬೆಟ್ಟಗಳ ನಡುವೆ ಇರುವ ಕಣಿವೆಗಳು ಆಯಕಟ್ಟಿನ ಭಾಗಗಳಾಗಿದ್ದು, ಸವದತ್ತಿ ಮತ್ತು ಬಾದಾಮಿಯಂತಹ ಕೋಟೆಗಳಿಗೆ ಬಹಳ ಪ್ರಯೋಜನ ಕಾರಿಗಳಾಗಿದ್ದವು. ಗುಲ್ಬರ್ಗ–ರಾಯಚೂರು–ಬೀದರ್ ಪ್ರದೇಶವು, ಬಿಜಾಪುರದ ಕಪ್ಪುಮಣ್ಣಿನ ಭಾಗದ ವಿಸ್ತರಣೆಯಾಗಿದೆ. ಐತಿಹಾಸಿಕವಾಗಿ, ಇದು, ಅನೇಕ ಹೆಸರಾಂತ ರಾಜಧಾನಿಗಳ, ದೊಡ್ಡ ದಂಡಯಾತ್ರೆಗಳ ಮತ್ತು ಯುದ್ಧಗಳ ಹಾಗೂ ಪ್ರಸಿದ್ಧ ರಾಜವಂಶಗಳ ಪ್ರದೇಶವಾಗಿರುತ್ತದೆ. ಇದರ ಆಗ್ನೇಯ ಮೂಲೆಯ ಭಾಗವು, ಚೋಳ, ಗಂಗ ಮತ್ತು ಪಲ್ಲವ ವಂಶಗಳ ನಡುವೆ ನಡೆದ ಅನೇಕ ಯುದ್ಧಗಳ ಕ್ಷೇತ್ರವಾಗಿದ್ದಿತು. ಈ ಪ್ರದೇಶದ ಪೂರ್ವದ ಅಂಚಿನ ಭಾಗವು, ಪುರಾತನ ಕಾಲದಲ್ಲಿ ಎಂದರೆ ಬಾದಾಮಿಯ ಚಾಳುಕ್ಯರ ಮತ್ತು ರಾಷ್ಟ್ರಕೂಟರ ಏಳಿಗೆಯ ಕಾಲದಲ್ಲಿ ಹೆಚ್ಚು ಪ್ರಾಮುಖ್ಯಕ್ಕೆ ಬಂದಿದ್ದಿತು. ವಿಜಯನಗರ ಸಾಮ್ರಾಜ್ಯದ ಅಭ್ಯುದಯದ ಕಾಲದಲ್ಲಿ ಹಿಂದೂ ಆಳ್ವಿಕೆಯು, ಉಚ್ಛ್ರಾಯಸ್ಥಿತಿಯನ್ನು ಮುಟ್ಟಿತ್ತು. ಬಿಜಾಪುರ, ಗುಲ್ಬರ್ಗ ಮತ್ತು ಬೀದರ್‌-ಇವು ಬಹಮನಿ ರಾಜರ ರಾಜಧಾನಿಗಳಾಗಿದ್ದವು ; ಅಲ್ಲದೆ ಬಿಜಾಪುರದ ಅಧಿಕಾರ ಪಶ್ಚಿಮದ ಕಡೆಗೆ, ವಾಸ್ತವವಾಗಿ ಉತ್ತರ ಕರ್ಣಾಟಕವನ್ನೆಲ್ಲಾ ಆವರಿಸುವಂತೆ ವಿಸ್ತರಿಸಿತ್ತು ; ಮತ್ತು ಬಹುಕಾಲದ ವರೆಗೆ ಆ ಅಧಿಕಾರವನ್ನು ಉಳಿಸಿಕೊಂಡೇ ಇತ್ತು. ಬಿಜಾಪುರದ ಅಧಿಕಾರವು ಕ್ಷೀಣಿಸಿದನಂತರ, ನಡೆದ ಮೊಗಲರ ಮತ್ತು ಮರಾಠರ ದಂಡಯಾತ್ರೆಗಳು, ಬೇರೆ ಭಾಗಕ್ಕಿಂತಲೂ ಹೆಚ್ಚಾಗಿ ಈ ಪ್ರದೇಶದ ಮೂಲಕವೇ ಸಾಗಿದವು. ದಕ್ಷಿಣ ಕರ್ಣಾಟಕದಲ್ಲಿ ಹೈದರ್ ಆಲಿ ಮತ್ತು ಟಿಪ್ಪು–ಇವರ ಬಲ ಹೆಚ್ಚಾದಾಗ, ಉತ್ತರ ಪ್ರಸ್ಥಭೂಮಿಯು—ಎಂದರೆ, ಕೃಷ್ಣಾ ಮತ್ತು ತುಂಗಭದ್ರಾನದಿಗಳ ನಡುವಿನ ಬಯಲು ಪ್ರದೇಶವು—ರಾಜ್ಯಶಕ್ತಿಯ ಏಳುಬೀಳಿನ ಬಲಾಬಲಗಳನ್ನು ನಿರ್ಧರಿಸುವ ಕ್ಷೇತ್ರವಾಯಿತು. ಈ ಕಾಲದಲ್ಲಿಯೇ, ಮರಾಠರು ಉತ್ತರ ಕರ್ಣಾಟಕದ ಮೇಲೆ ಅಧಿಕಾರವನ್ನು ಪಡೆದರು ; ಮತ್ತು ಅನಂತರ ಕಾಲದಲ್ಲಿ ಮರಾಠರನ್ನು ಬ್ರಿಟಿಷರು ಗೆದ್ದು ದೇಶವನ್ನು ಆಕ್ರಮಿಸಿಕೊಂಡಾಗ, ಉತ್ತರಕರ್ಣಾಟಕವು ಬೊಂಬಾಯಿ ಆಧಿಪತ್ಯದ ಆಡಳಿತ ವ್ಯಾಪ್ತಿಗೆ ಸೇರುವಂತಾಯಿತು.

## ಪ್ರಾಕೃತಿಕ ಸನ್ನಿವೇಶ ಮತ್ತು ಕರ್ನಾಟಕದ ಇತಿಹಾಸ ಸಂಸ್ಕೃತಿಗಳ ಮುಖ್ಯ ಎಳೆಗಳು

ಈಗ, ಮೇಲೆ ವಿವರಿಸಿರುವ ಕರ್ನಾಟಕದ ಭೌಗೋಳಿಕ ಆವರಣದ ರೂಪರೇಖೆಗಳ ಆಧಾರದ ಮೇಲೆ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳು ಕಾಲಕ್ರಮದಲ್ಲಿ, ಆ ಪ್ರಾಕೃತಿಕ ಅಂಶಗಳ ಪ್ರಭಾವದಿಂದ ರೂಪುಗೊಂಡ ರೀತಿಯನ್ನು ಪರಿಶೀಲಿಸೋಣ. ಮೊತ್ತಮೊದಲು "ಭೂಗೋಳದ ನಿರ್ಧಾರಕಗುಣದ" ಪ್ರಕಾರ ಐತಿಹಾಸಿಕ ಘಟನೆಗಳನ್ನು ಅರ್ಥಮಾಡಿಕೊಳ್ಳುವ ಬಗ್ಗೆ ಮತ್ತು ಭೌಗೋಳಿಕ ಅಂಶಗಳನ್ನನುಸರಿಸಿ ಇತಿಹಾಸವನ್ನೆಲ್ಲ ವಿವರಿಸುವ ಬಗ್ಗೆ ನಾವು ಬಹಳ ಎಚ್ಚರ ವಹಿಸಬೇಕು ; ಯಾಕೆಂದರೆ, ಮಾನವ ಇತಿಹಾಸದ ನಡಿಗೆಯು, ಕೇವಲ ಪ್ರಾಕೃತಿಕ ಅಂಶಗಳನ್ನು ಮಾತ್ರ ಅವಲಂಬಿಸದೆ, ಮನುಷ್ಯನ ಬುದ್ಧಿಶಕ್ತಿ, ಸನ್ನಿವೇಶಕ್ಕನು ಗುಣವಾದ ವರ್ತನೆ, ಜಾಣತನ, ನಿರ್ಧಾರವನ್ನು ತೆಗೆದುಕೊಳ್ಳುವ ಬುದ್ಧಿ ಅಥವಾ ಆ ಶಕ್ತಿಯಿಲ್ಲದ ಬುದ್ಧಿಶೂನ್ಯತೆ ಮುಂತಾದ ಅನೇಕ ಅಂಶಗಳನ್ನು ಅವಲಂಬಿಸಿರುವುದು ಎಲ್ಲರಿಗೂ ತಿಳಿದ ಸಂಗತಿ. ಇತಿಹಾಸ ಮತ್ತು ಸಂಸ್ಕೃತಿಗಳ ಬಗ್ಗೆ, ನಿಜವಾದ ಭೌಗೋಳಿಕ ನಿರೂಪಣೆ ಎಂದರೆ, "ಆವರಣ" ಮತ್ತು ಮನುಷ್ಯ—ಇವುಗಳ ನಡುವೆ ಬದಲಾವಣೆ ಹೊಂದುತ್ತಿರುವ ಸಂಬಂಧಗಳನ್ನು ಪರೀಕ್ಷಿಸುವುದಾಗಿರುತ್ತದೆ. ಎರಡನೆಯ ಮುಖ್ಯಾಂಶವೆಂದರೆ, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳು, ಕೇವಲ ಹಿಂದಿನ ಕಾಲದ ರಾಜ್ಯ ಆಡಳಿತದ ಮೇರೆಗಳಿಂದ ನಿರ್ಧಾರವಾಗಿರುವದಿಲ್ಲ ಎಂಬುದು. ವಾಸ್ತವವಾಗಿ, ಬ್ರಿಟಿಷ್ ಇಂಡಿಯಾದ ಪ್ರಾದೇಶಿಕ ರಾಜವಂಶಗಳು ಮತ್ತು ಸಂಸ್ಕೃತಿಗಳು ಅನುಕೂಲಕರವಾದ ಸ್ಥಳಗಳಲ್ಲಿ ಹುಟ್ಟಿ, ಆಯಾ ಕಾಲದಲ್ಲಿದ್ದ ರಾಜಕೀಯ ಪರಿಸ್ಥಿತಿಗಳನ್ನನುಸರಿಸಿ, ಪ್ರಾದೇಶಿಕವಾಗಿ ವಿಸ್ತರಿಸಲ್ಪಡುತ್ತಿದ್ದವು ಮತ್ತು ಕುಗ್ಗುತ್ತಿದ್ದವು. ಚಾಳುಕ್ಯರು ಮತ್ತು ರಾಷ್ಟ್ರಕೂಟರು ತಮ್ಮ ಅಧಿಕಾರವನ್ನು ಗೋದಾವರಿ ನದಿಯ ಮೇಲ್ಕಣಿವೆಯನ್ನೂ ಒಳಗೊಳ್ಳುವಂತೆ ವಿಸ್ತರಿಸಿದ್ದರು. ಚೋಳರು, ಪಾಂಡ್ಯರು, ಪಲ್ಲವರು ಮತ್ತು ಗಂಗರು ಈಗ ಬೇರೆ ಬೇರೆಯಾಗಿರುವ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡುಗಳಿಗೆ ಸೇರಿದ ಪ್ರದೇಶ ಗಳನ್ನೂ ಆಳುತ್ತಿದ್ದರು. ಮೊದಲಿಗೆ ರಾಜ್ಯ ಮತ್ತು ಸಂಸ್ಕೃತಿ ಎಂಬವು ಯಾವ ಪ್ರಾದೇಶಿಕ ಮೇರೆ ಗಳೊಡನೆಯೂ ಸಂಬಂಧಿಸಿರಲಿಲ್ಲವೆಂಬ ಸತ್ಯವನ್ನು ನಾವು ನೆನಪಿಟ್ಟುಕೊಳ್ಳುವುದು ಒಳ್ಳೆಯದು. ಕನ್ನಡ ರಾಜವಂಶಗಳ ಇತಿಹಾಸ ಮತ್ತು ಸಂಸ್ಕೃತಿಯೂ ಅವುಗಳ ಏಳುಬೀಳುಗಳೂ ಪ್ರಾದೇಶಿಕ ನಿಷ್ಠೆಗಳನ್ನವಲಂಬಿಸಿ ನಿಯಂತ್ರಿತವಾಗಿರಲಿಲ್ಲ. ವಿಜಯನಗರ ಮತ್ತು ಬಿಜಾಪುರ ಸಾಮ್ರಾಜ್ಯಗಳ ಚರಿತ್ರೆಯಲ್ಲಿಯೂ ಹಾಗೂ ಮರಾಠರಿಗೆ ಮತ್ತು ಇತರ ಬಲಗಳಿಗೆ ಕರ್ನಾಟಕ ಮತ್ತು ಡೆಕ್ಕನ್ ಪ್ರದೇಶಗಳ ಸ್ವಾಮಿತ್ವಕ್ಕಾಗಿ ನಡೆದ ಹೋರಾಟದಲ್ಲಿಯೂ ಈ ವಿಷಯ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

18ನೆಯ ಶತಮಾನದಲ್ಲಿ ಮೈಸೂರು, ಸಾರ್ವಭೌಮತ್ವಕ್ಕಾಗಿ ಸ್ಪರ್ಧಿಸಿದ ಶಕ್ತಿಗಳ ನಡುವಿನ ಹೋರಾಟದ ಕ್ಷೇತ್ರವಾಯಿತು. ಇಂಡಿಯಾದ ಇತರ ಬಹುಪಾಲು ಭಾಗಗಳಲ್ಲಿದ್ದಂತೆಯೇ ಇಲ್ಲಿಯೂ ಸ್ಥಳೀಯ ರಾಜರುಗಳಲ್ಲಿ, ಪಕ್ಷ ಬದಲಾಯಿಸುವ ಗುಣವಿದ್ದರೂ, ಅವರು ಅನುಸರಿಸುತ್ತಿದ್ದ ಆಡಳಿತ ಪದ್ಧತಿಯ ಮೂಲಕ ಸ್ವಲ್ಪಮಟ್ಟಿಗೆ ರಾಜಕೀಯ ಭದ್ರತೆಯು ಸಾಧ್ಯವಾಯಿತು. ಮೈಸೂರಿನ ಅತಿ ದಕ್ಷಿಣದಲ್ಲಿ, ಒಡೆಯರ ವಂಶವು ಅಧಿಕಾರಕ್ಕೆ ಬಂದುದು, ಇಂತಹ ಸುಸಂದರ್ಭಗಳಲ್ಲಿ ಒಂದು. ಇದರಿಂದ ಒಂದು ಸ್ಥಳೀಯ ವಂಶವು ಕನ್ನಡ ಮಾತನಾಡುವ ಜನರನ್ನುಳ್ಳ ಪ್ರದೇಶದ ಬಹುಭಾಗವನ್ನು ಆವರಿಸಿತು ; ಮತ್ತು ಸಾಕಷ್ಟು ಕನ್ನಡಿಗರಲ್ಲಿ ರಾಜಕೀಯ ಐಕಮತ್ಯವನ್ನು ಭದ್ರಪಡಿಸಿತು ; ಹಾಗೂ ಅವರಿಗೆ ಸಾಂಸ್ಕೃತಿಕ ಐಕ್ಯ ಮತ್ತು ದೃಢತೆಯನ್ನು ಕೊಟ್ಟಿತು. ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರು ಆಳುತ್ತಿದ್ದಾಗ—ಮೈಸೂರಿನ ರಾಜಕೀಯ ಅವ್ಯವಸ್ಥೆಯ ಕಾಲದಲ್ಲಿ—ಮೈಸೂರಿನ ರಾಜಕೀಯ ಚೌಕಟ್ಟು ಸ್ವಲ್ಪಕಾಲದ ವರೆಗೆ ಭದ್ರ ವಾಯಿತು ; ಇದು ವಿಚಿತ್ರವಾಗಿ ಕಾಣುವುದಾದರೂ ನಿಜ. ಹೈದರಾಲಿ ನೆರೆಹೊರೆಯ ಪ್ರದೇಶಗಳನ್ನು ಗೆದ್ದುಕೊಂಡದ್ದರಿಂದ ಇದು ಸಾಧ್ಯವಾಯಿತು. ಆದರೆ ಬ್ರಿಟಿಷರು ದಕ್ಷಿಣ ಇಂಡಿಯಾವನ್ನು ಸ್ವಲ್ಪಸ್ವಲ್ಪ ವಾಗಿ ಆಕ್ರಮಿಸಿಕೊಳ್ಳುತ್ತ ಬಂದದ್ದರಿಂದ ಕನ್ನಡ ಮಾತನಾಡುವ, ಜನರ ಪ್ರದೇಶವು ಛಿದ್ರಛಿದ್ರವಾಗಿ

ಹಲವು ಕಡೆಗೆ ಹಂಚಿಹೋಯಿತು ; ಆಗ ಮೈಸೂರು ಒಂದಾಗಿ ಉಳಿಯಿತು ; ಅದರ ಸುತ್ತಮುತ್ತಲಿನ ಪ್ರದೇಶಗಳು ಮದ್ರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳ ಮತ್ತು ನಿಜಾಂ ರಾಜ್ಯದ ಭಾಗಗಳಾದವು ; ಕೊಡಗು ಉಳಿದ ಪ್ರದೇಶಗಳ ಸಂಪರ್ಕವಿಲ್ಲದಂತೆ ಪ್ರತ್ಯೇಕವಾಗಿ ಉಳಿಯಿತು. ಮುಧೋಳ, ಜಮಖಂಡಿ, ಮುಂತಾದ ಸುಮಾರು 15 ಚಿಕ್ಕದೊಡ್ಡ ದೇಶೀಯ ಸಂಸ್ಥಾನಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಆಡಳಿತ ನಡಸತೊಡಗಿದವು. ಕರ್ಣಾಟಕವು ಸರಿಯಾದ ರೀತಿಯಲ್ಲಿ, ಒಂದೇ ಆಡಳಿತಕ್ಕೆ ಸೇರಿದ ಅಸ್ತಿತ್ವ ಪಡೆದದ್ದು ಇತ್ತೀಚೆಗೆ—ರಾಜ್ಯಗಳ ಪುನರ್ವಿಂಗಡಣೆ ಆದ ಮೇಲೆ ಮಾತ್ರ.

ಮೇಲ್ಕಂಡ ಭೌಗೋಳಿಕ ವಿನ್ಯಾಸದ ಪರಿಶೀಲನೆಯಿಂದ, ಕರ್ಣಾಟಕವನ್ನು ರೂಪಿಸುವುದರಲ್ಲಿ, ಭೌಗೋಳಿಕ ಅಂಶಗಳ ಪ್ರಭಾವಕ್ಕೆ ಸಂಬಂಧಿಸಿದಂತೆ ಕೆಲವು ಪ್ರಧಾನ ಅಂಶಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಕರ್ಣಾಟಕ ಇತಿಹಾಸದ ಸಂಗತಿಗಳನ್ನು ವಿವರಿಸಬಲ್ಲ ಭೌಗೋಳಿಕವಾದ ಕಡ್ಡಾಯ ಪ್ರಭಾವಗಳನ್ನು (ಭೂಗೋಳ ಪರಿಸ್ಥಿತಿ ಹೀಗಿದ್ದುದರಿಂದ ಹೀಗೆ ಆಗಲೇಬೇಕಾಯಿತೆಂಬಂಥ ಪ್ರಧಾನ ಪ್ರಭಾವವನ್ನು) ಕಂಡುಹಿಡಿಯ ಹೊರಡುವುದು ವ್ಯರ್ಥಪ್ರಯತ್ನವಾಗುತ್ತದೆ ; ಏಕೆಂದರೆ, ಭೌಗೋಳಿಕ ಅಂಶಗಳು ಮಾನವನನ್ನು ರೂಪಿಸುವುದರಲ್ಲಿ ಎಷ್ಟು ಪರಿಣಾಮಕಾರಿಯಾಗಿದ್ದರೂ, ಮನುಷ್ಯನು ಭೌಗೋಳಿಕ ವಿನ್ಯಾಸದ ಮೇಲೆ ತನ್ನದೇ ಆದ ವಿವಿಧ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುತ್ತಾನೆ. ಮತ್ತು ಅನೇಕ ವೇಳೆ ಮಹತ್ವಾಕಾಂಕ್ಷೆಯಿಂದ ಅವುಗಳನ್ನು ಮೀರಲೂ ಯತ್ನಿಸುತ್ತಾನೆ.

ಕರ್ಣಾಟಕದ ಇತಿಹಾಸದಿಂದ ಕೆಲವು ಭೌಗೋಳಿಕ ಅಂಶಗಳ ಪ್ರಭಾವವನ್ನು ಅರಿಯಲು ಸ್ವಲ್ಪಮಟ್ಟಿಗೆ ಸಾಧ್ಯವಾಗುತ್ತದೆ. ಮೊತ್ತಮೊದಲನೆಯದಾಗಿ, ಕರ್ಣಾಟಕದ ರಾಜಕೀಯ ಘಟನೆಗಳ ಮತ್ತು ಅವುಗಳ ಸ್ವರೂಪಗಳ ವಿಕಾಸದ ಮೇಲೆ ಉಂಟಾಗಿರುವ ಭೌಗೋಳಿಕ ಅಂಶಗಳ ಪ್ರಭಾವವನ್ನು ಅಳೆದು ನೋಡಲು ಸಾಧ್ಯವಿದೆ. ಸ್ಥೂಲವಾಗಿ ಹೇಳಬಹುದಾದರೆ ಪ್ರಧಾನವಾದ ರಾಜಕೀಯ ಶಕ್ತಿಗಳು ಉತ್ತರದ ಪ್ರಸ್ಥಭೂಮಿ ಪ್ರದೇಶದಿಂದ ಕರ್ಣಾಟಕದ ಮಧ್ಯಭಾಗದ ಕಡೆಗೆ ವಿಸ್ತರಿಸಿ, ಅಲ್ಲಿಂದ ಪೂರ್ವಕ್ಕೂ, ಪಶ್ಚಿಮಕ್ಕೂ ಅಧಿಕಾರವನ್ನು ವ್ಯಾಪಿಸಿದವೆಂದು ತೋರುತ್ತದೆ. ಸಹ್ಯಾದ್ರಿ ಬೆಟ್ಟಗಳ ಪೂರ್ವದಲ್ಲಿರುವ ಮಧ್ಯಂತರ ವಿಭಾಗದಲ್ಲಿ, ಪ್ರಾಕೃತಿಕ ಆತಂಕಗಳಿಲ್ಲದಿರುವುದರಿಂದಲೂ, ಅಧಿಕ ಪ್ರಮಾಣದಲ್ಲಿ ಆಹಾರ ದೊರೆಯುವುದರಿಂದಲೂ, ಅದು ಅತಿ ಸುಲಭವಾದ ಸಂಪರ್ಕಮಾರ್ಗವಾಯಿತು. ಅಭಾವ ಪರಿಸ್ಥಿತಿಗಳು ಬಹುಮಟ್ಟಿಗೆ ಅಡ್ಡಿಪಡಿಸುವ ಪ್ರತಿಕೂಲ ಸಂಗತಿಗಳಾಗಿದ್ದವು. ಹೀಗೆ, ಒಬ್ಬರಾದ ಮೇಲೊಬ್ಬರಂತೆ ಉತ್ತರದಿಂದ ದಾಳಿಯಿಟ್ಟು ಬಂದ ರಾಜರುಗಳಿಗೆ ಕರ್ಣಾಟಕದ ಪ್ರಸ್ಥಭೂಮಿಯು ಯಾವ ರೀತಿ ರಾಜಕೀಯ ಚದುರಂಗದ ಮಣೆಯಾಯಿತೆಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು. ಆದಿಕಾಲದಲ್ಲಿ, ಉತ್ತರದಿಂದ ಬಂದ ಇಂತಹ ದಾಳಿಯನ್ನು ಎರಡು ರಾಜಮನೆತನದವರು ತಡೆದು ಹಿಂದಕ್ಕಟ್ಟಿದರು. ಅವರು, ಪಲ್ಲವರು ಮತ್ತು ಗಂಗ ರಾಜಮನೆತನಕ್ಕೆ ಸೇರಿದವರು ; ಜೊತೆಗೆ ಚೋಳರೂ ಸ್ವಲ್ಪಮಟ್ಟಿಗೆ ಪ್ರಯತ್ನಿಸಿದರು. ದಕ್ಷಿಣದ ಈ ಮೂರು ರಾಜವಂಶಗಳವರೂ ಮೈಸೂರಿನ ಪ್ರಸ್ಥಭೂಮಿಗೆ ಸೇರಿರದೆ, ದಕ್ಷಿಣತೀರದ ಮತ್ತು ನದಿಗಳ ಬಯಲು ಪ್ರದೇಶಗಳಿಂದ ಬಂದವರೆಂಬ ವಿಷಯ ಗಮನಾರ್ಹವಾಗಿದೆ. ಹಾಗೆಯೇ 14ನೆಯ ಶತಮಾನದಲ್ಲಿ ಎರಡು ಶತಮಾನಗಳಿಗಿಂತಲೂ ಹೆಚ್ಚುಕಾಲ, ಉತ್ತರದಿಂದ ಘಟ್ಟನೆ ಮೇಲೆ ಬೀಳುತ್ತಿದ್ದ ಮುಸಲ್ಮಾನರ ದಾಳಿಯನ್ನು ತಡೆದ, ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದವರು ಕೂಡ ಮೈಸೂರಿನ ಪ್ರಸ್ಥಭೂಮಿಗೆ ಸೇರದೆ, ತುಂಗಭದ್ರಾ ನದಿಯ ಮೈದಾನಕ್ಕೆ ಮತ್ತು ಹೊಯ್ಸಳರ ರಾಜಧಾನಿಯಿದ್ದ ಸಹ್ಯಾದ್ರಿಪರ್ವತಗಳ ಅಂಚಿನ ಪ್ರದೇಶಕ್ಕೆ ಸೇರಿದ್ದರು.

ದೊಡ್ಡ ದೊಡ್ಡ ರಾಜರ ಚಲನವಲನಗಳು ಮತ್ತು ಆಕ್ರಮಣಗಳು ಉತ್ತರ-ದಕ್ಷಿಣದ ಅಕ್ಷವನ್ನನುಸರಿಸಿದ್ದಾಗ, ಸ್ಥಳೀಯವಾದ ಆಡಳಿತಕ್ರಮ ಮತ್ತು ಸ್ಥಳೀಯ ರಾಜಕೀಯ ಘಟನೆಗಳನ್ನು ರೂಪುಗೊಳಿಸುವು

ದರಲ್ಲಿ ಪ್ರಾಕೃತಿಕ ಲಕ್ಷಣಗಳು ಪ್ರಮುಖ ಪಾತ್ರವನ್ನು ವಹಿಸಿದವು. ಪ್ರಾಚೀನ ಮತ್ತು ಮಧ್ಯಕಾಲೀನ ಇಂಡಿಯಾದಲ್ಲಿ ವಿಶಾಲ ಪ್ರದೇಶಗಳನ್ನು ಆಕ್ರಮಿಸಿ ಗೆದ್ದುಕೊಂಡಂತೆಲ್ಲ, ಆ ಪ್ರದೇಶಗಳಲ್ಲಿ ಊಳಿಗಮಾನ್ಯ ಪದ್ಧತಿಯೂ, ಹಿಂಬಾಲಿಸಿ ವಿಸ್ತರಿಸುತ್ತಿತ್ತು. ಈ ಮಾದರಿಯ ಬೆಳವಣಿಗೆಗೆ ಕರ್ಣಾಟಕವು ಅಪವಾದ ವಾಗಲಿಲ್ಲ. ಕದಂಬರು, ನಾಯಕರು, ಮುಸಲ್ಮಾನ ದೊರೆಗಳು, ಪಾಳೆಯಗಾರರು, ನವಾಬರು ಮತ್ತು ಮರಾಠಾಯೋಧರು ಈ ಮೊದಲಾದ ಸ್ಥಳೀಯ ಆಳರಸರೆಲ್ಲ ತಮ್ಮ ರಾಜಧಾನಿಗಳನ್ನು ತಪ್ಪದೆ ಆಯಕಟ್ಟಿನ ಸ್ಥಳಗಳಲ್ಲಿಯೇ ಕಟ್ಟಿಕೊಂಡಿದ್ದರು. ತಮ್ಮ ಅಧಿರಾಜನ ಅಧಿಕಾರ ವ್ಯಾಪ್ತಿಯಲ್ಲಿದ್ದುಕೊಂಡು ಆಡಳಿತ ನಡೆಸುತ್ತಿದ್ದ ಅಂಥ ಅಧೀನ ರಾಜರ ಸ್ಥಳಗಳು ಅವುಗಳನ್ನು ಸೇರಿಸುವ ಮಾರ್ಗಗಳೂ ಒಂದು ಭೌಗೋಳಿಕ ಅಚ್ಚಿನಂತಾಗುತ್ತವೆ. ಈ ದೃಷ್ಟಿಯಿಂದ ವಿಚಾರಮಾಡಿದರೆ, ಪೂರ್ವ ಮತ್ತು ಪಶ್ಚಿಮ ಘಟ್ಟಗಳ ಮಾರ್ಗಗಳ ಪ್ರಾಮುಖ್ಯ ಎದ್ದುಕಾಣುತ್ತದೆ.

ಕರ್ಣಾಟಕ ಇತಿಹಾಸ ಮತ್ತು ಸಂಸ್ಕೃತಿಗಳ ಹುಟ್ಟು ಮತ್ತು ಬೆಳವಣಿಗೆಯ ಮೇಲೆ ಭೌಗೋಳಿಕ ಅಂಶಗಳು ಎಷ್ಟರ ಮಟ್ಟಿಗೆ ತಮ್ಮ ಪ್ರಭಾವವನ್ನು ಬೀರಿವೆ ಎಂಬುದನ್ನು ನಿರ್ದಿಷ್ಟವಾಗಿ ನಿರ್ಧರಿಸುವುದು ದುಸ್ಸಾಧ್ಯ. ಕನ್ನಡ ಭಾಷೆಯು ದಕ್ಷಿಣ ಪ್ರಸ್ಥಭೂಮಿಯಲ್ಲಿ ಮೊದಲು ಬೆಳವಣಿಗೆ ಹೊಂದಿತು. ಅದು ಉತ್ತರಾಭಿಮುಖವಾಗಿ ಗಣನೀಯ ಪ್ರಮಾಣದಲ್ಲಿ ವಿಸ್ತರಿಸಿತು ; ಗೋದಾವರಿ ಕಣಿವೆಯ ವರೆಗೂ ಹರಡಿತು. ಪಶ್ಚಿಮ ತೀರದಲ್ಲಿ ಅದರ ಜೊತೆಗೆ ತುಳು ಮತ್ತು ಇತರ ಉಪಭಾಷೆಗಳು ಇದ್ದವು. ಪೂರ್ವದ ಕಡೆ ಯಾದರೋ ಈ ಭಾಷೆಗಳು ಪಟ್ಟಿಯಂತಹ ದ್ವಿಭಾಷಾ ಪ್ರದೇಶದಲ್ಲಿ ತೆಲುಗು ಮತ್ತು ತಮಿಳು ಭಾಷೆಗಳೊಡನೆ ಒಂದುಗೂಡಿದವು. ಆದುದರಿಂದ, ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಗಳು ಉತ್ತರಾಭಿ ಮುಖವಾಗಿ ಬೆಳೆಯುವಂತೆ ಭೂಸ್ವರೂಪವು ಅನುಕೂಲಕರವಾಗಿದ್ದಿತೆಂದು ಹೇಳಬಹುದು. ಪ್ರಸ್ಥಭೂಮಿ ಪ್ರದೇಶಗಳ ಅಡೆತಡೆಯಿಲ್ಲದೆ ಅದೇ ಲಕ್ಷಣವು ಅನಂತರಕಾಲದಲ್ಲಿ ಮರಾಠರ ಅಧಿಕಾರ, ಅವರ ಭಾಷೆ ಮತ್ತು ಸಂಸ್ಕೃತಿಗಳು ಒಳನುಗ್ಗಿ ಮುಂಬರಿದು ಬರುವುದಕ್ಕೂ, 1956ನೇ ಇಸವಿಗಿಂತಲೂ ಹಿಂದೆ ಬೊಂಬಾಯಿ ಕರ್ಣಾಟಕವೆಂಬ ಹೆಸರುಹೊಂದಿದ್ದ ಪ್ರದೇಶದಲ್ಲಿ ಭಾಷಾ ಸಂಸ್ಕೃತಿಗಳು ಖಚಿತವಾಗಿ ರೂಪುಗೊಂಡು ನಿಲ್ಲುವುದಕ್ಕೂ ಕಾರಣವಾಯಿತೆಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಪುರಾತನ ಸ್ಮಾರಕಗಳು, ರಾಜಧಾನಿಯ ಸ್ಥಳಗಳು, ಧಾರ್ಮಿಕ ಮಠ ದೇವಾಲಯಗಳು ಮತ್ತು ಯಾತ್ರಾಸ್ಥಳಗಳು, ಒಂದು ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಯ ಚಿಹ್ನೆಗಳೆಂದು ಒಪ್ಪುವುದಾದರೆ, ಉಳುವಿ, ಬನವಾಸಿ, ಶೃಂಗೇರಿ, ಶ್ರವಣಬೆಳಗೊಳ ಮುಂತಾದ ಸ್ಥಳಗಳುಳ್ಳ ಮಧ್ಯಂತರದ ಪಟ್ಟಿ ಪ್ರದೇಶವೂ, ಪ್ರಸ್ಥಭೂಮಿಯ ದಕ್ಷಿಣದ ಅಂಚೂ ಹೆಚ್ಚು ಅನುಕೂಲ ಸನ್ನಿವೇಶವುಳ್ಳವೆನ್ನಬಹುದು ; ಸ್ಥಳೀಯ ಶಿಲಾ ಸಾಮುಗ್ರಿಗಳು, ಅರಣ್ಯವಿರುವ ಆವರಣ ಮತ್ತು ನದಿ ದಾಟುವ ಹಾಯ್ಗಡಗಳು (ಕಾಲ್ಕಡವುಗಳು) ಇವು ಕೂಡ ಈ ಎಲ್ಲ ಪ್ರಾದೇಶಿಕ ಬೆಳವಣಿಗೆಗಳಿಗೂ ಬಹುಮಟ್ಟಿಗೆ ಕಾರಣವಾಗಿವೆ.

ಕರ್ಣಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಮೇಲಿನ ಭೌಗೋಳಿಕ ಅಂಶಗಳ ಪ್ರಭಾವವನ್ನು ಕುರಿತ ಈ ಅಧ್ಯಯನದ ಸಾರಾಂಶವನ್ನು ಹೀಗೆ ಸಂಗ್ರಹವಾಗಿ ಹೇಳಬಹುದು : ರಾಜಕೀಯ ಮತ್ತು ಸಾಂಸ್ಕೃತಿಕ ಆಂದೋಲನಗಳು ಉತ್ತರ-ದಕ್ಷಿಣ ಅಕ್ಷವನ್ನನುಸರಿಸಿ, ವ್ಯಾಪಕವಾಗಿ ಹಬ್ಬುವುದಕ್ಕೆ ಪ್ರಸ್ಥಭೂಮಿಯು ಅನುಕೂಲವಾಗಿತ್ತು. ಈ ಉನ್ನತ ಕ್ಷೇತ್ರದಲ್ಲಿ ಉತ್ತರದ ಮತ್ತು ದಕ್ಷಿಣದ ಶಕ್ತಿಗಳು ಅಧಿಕಾರಕ್ಕಾಗಿ ಪರಸ್ಪರ ಸ್ಪರ್ಧಿಸುತ್ತಿದ್ದವು; ಉತ್ತರದ ಶಕ್ತಿಗಳೇ ಹೆಚ್ಚು ಪ್ರಬಲವಾಗಿದ್ದವು. ಪ್ರಸ್ಥಭೂಮಿಯ ಪಶ್ಚಿಮ, ದಕ್ಷಿಣ ಮತ್ತು ಪೂರ್ವದ ಪರ್ವತಗಳು ತಮ್ಮ ಅಂಚಿನಲ್ಲಿ ಛಿದ್ರಗೊಂಡ ಸ್ಥಳೀಯವಾದ ರಾಜಕೀಯ ವಿಭಾಗಗಳುಂಟಾಗುವಂತೆ ಮಾಡಿದವು. ಕಣಿವೆ ಮಾರ್ಗಗಳಿಂದ ಕೂಡಿದ ಅಂಚಿನಲ್ಲಿರುವ ಈ ಬೆಟ್ಟಗಳೂ ಪ್ರಸ್ಥಭೂಮಿಯ ಮೂಲಕ ಅಡ್ಡಹಾಯುವ ಅವಶೇಷ ಬೆಟ್ಟ ಸಾಲುಗಳೂ ಆಯಕಟ್ಟಿನ ಸ್ಥಳಗಳಾಗಿ ಪ್ರಾಮುಖ್ಯವನ್ನು ಪಡೆದವು ; ಸಾಂಸ್ಕೃತಿಕ ಪ್ರಗತಿಯು, ಇತರ ಭಾಗಗಳಿಗಿಂತಲೂ

ಹೆಚ್ಚಾಗಿ ಈ ಮಧ್ಯಂತರದ ಪಟ್ಟಿ ಪ್ರದೇಶ ಮತ್ತು ದಕ್ಷಿಣ ಪ್ರಸ್ಥಭೂಮಿಯ ಅಂಚುಗಳಿಂದ ದೊರೆಯಿತು. ಪ್ರಾಚೀನ ಕಾಲದಲ್ಲಿ ಮತ್ತು ಮಧ್ಯ ಯುಗದಲ್ಲಿ, ರಾಜರುಗಳ ಮತ್ತು ಪಾಳೆಯಗಾರರ ರಾಜಕೀಯ ಮಹತ್ವಾಕಾಂಕ್ಷೆಗಳು ಕೇವಲ ಸಾಮ್ರಾಜ್ಯಗಳನ್ನೂ ಊಳಿಗ ಮಾನ್ಯ ಪದ್ಧತಿಯ ರಚನೆಗಳನ್ನೂ ಸೃಷ್ಟಿಸಿದವು ಅಥವಾ ಅವುಗಳನ್ನು ತಡೆಹಿಡಿದವು. ಆದರೆ, ಭೌಗೋಳಿಕ ಅಂಶಗಳು ಕನ್ನಡ ಮಾತನಾಡುವ ಜನರನ್ನು ಎಷ್ಟರ ಮಟ್ಟಿಗೆ ಒಂದೇ ಆಡಳಿತದಲ್ಲಿ ಒಟ್ಟುಗೂಡಿಸಿದವು ಅಥವಾ ಐಕ್ಯವನ್ನು ತಡೆದವು ಎಂಬುದನ್ನು ನಿರ್ಧರಿಸುವುದು ದುಸ್ಸಾಧ್ಯ. ಆದರೆ ಬ್ರಿಟಿಷರ ಮತ್ತು ಅವರ ಪರವಾಗಿ ಕಾರ್ಯಮಾಡಿದ ಪ್ರತಿನಿಧಿಗಳ ಉನ್ನತ ಮಟ್ಟದ ಆಡಳಿತಚಾತುರ್ಯದ ಸಂಪರ್ಕವುಂಟಾದುದರ ಪರಿಣಾಮವಾಗಿ ಪ್ರಾದೇಶಿಕ ವಿಭಾಗಗಳು ಸ್ಥಿರಗೊಂಡವು ; ಆದರೆ, ಈ ಪರಿಣಾಮ ಸರಣಿಯು ಮೊದಲಿನಿಂದ ಇದ್ದ ಕರ್ಣಾಟಕದ ಸಂಸ್ಕೃತಿಯ ಏಕತೆಯ ಮೃದುಧಾರೆಯನ್ನು ತಡೆಗಟ್ಟಿತು. ಹೀಗೆ, ಕನ್ನಡ ಮಾತನಾಡುವ ಜನರನ್ನು ಒಂದುಗೂಡಿಸುವಂತೆ ನವಕರ್ಣಾಟಕವಾದ ಮೈಸೂರಿನ ನಿರ್ಮಾಣವಾದ ಮೇಲೆಯೂ, ಬೊಂಬಾಯಿ ಕರ್ಣಾಟಕ, ಮದ್ರಾಸು ಕರ್ಣಾಟಕ, ಹೈದರಾಬಾದು ಕರ್ಣಾಟಕ ಮತ್ತು ಮೈಸೂರು ಎಂಬ ರಾಜಕೀಯ ಜಡತೆಯ ಶೇಷ ಇನ್ನೂ ಉಳಿದಿದೆ. ಇಂತಹ ಪ್ರತ್ಯೇಕತೆಯ ಮೇರೆಗಳು ಅಳಿಸಿಹೋಗಿ, ಕನ್ನಡ ಮಾತನಾಡುವ ಜನರ ಸಾಂಪ್ರದಾಯಿಕ ಸಂಸ್ಕೃತಿ ಹಾಗೂ ರಾಜಕೀಯ, ಸಾಮಾಜಿಕ, ಆಕಾಂಕ್ಷೆಗಳನ್ನು ಪ್ರತಿನಿಧಿಸುವಂತಿರುವ ಜೀವಂತ ಕರ್ಣಾಟಕವನ್ನೂ ಕರ್ಣಾಟಕದ ಐಕ್ಯವನ್ನೂ ಕಾಲದ ಮುನ್ನಡೆ ಮತ್ತು ಜಾಣ್ಮೆಯ ರಾಜನೀತಿ ಪಟುತ್ವಗಳಿಂದ ಮಾತ್ರ ಸಾಧಿಸಬಹುದಾಗಿದೆ.

ಮೂಲ ಲೇಖಕರು : ಸಿ. ಡಿ. ದೇಶಪಾಂಡೆ
ಅನುವಾದಕರು : ಎ. ಕುಮಾರಸ್ವಾಮಿ

# ವಾಯುಗುಣ, ಮಳೆ ಮತ್ತು ನೀರಾವರಿ

ಈ ವರೆಗೆ ನಾವು ಕರ್ಣಾಟಕದ ಭೂಗರ್ಭಶಾಸ್ತ್ರದ ಮತ್ತು ಭೌಗೋಳಿಕ ಅಂಶಗಳನ್ನು ವಿವರಿಸಿದೆವು. ಈಗ ಈ ಸಮೃದ್ಧ ಪ್ರದೇಶದ ಸಸ್ಯ ಮತ್ತು ಪ್ರಾಣಿ ಸಂಪತ್ತನ್ನು ಕುರಿತು ಹೇಳುವ ಮೊದಲು, ಈ ರಾಜ್ಯದ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಸ್ವರೂಪವನ್ನು ಬಹುಮಟ್ಟಿಗೆ ನಿರ್ಧರಿಸುವ ವಾಯುಗುಣ, ಮಳೆಯ ಪ್ರಮಾಣ ಮತ್ತು ನೀರಾವರಿಯ ಅನುಕೂಲತೆಗಳ ವಿಷಯವನ್ನು ಸಂಕ್ಷೇಪವಾಗಿ ತಿಳಿದು ಕೊಳ್ಳುವುದು ಪ್ರಯೋಜನಕಾರಿಯಾಗಿರುತ್ತದೆ.

### ವಾಯುಗುಣ

ಹವಾಮಾನದ ಮತ್ತು ವಾಯುಗುಣದ ಪರಿಸ್ಥಿತಿಗಳನ್ನನು ಸರಿಸಿ ವರ್ಷವನ್ನು ನಾಲ್ಕು ಅವಧಿಗಳನ್ನಾಗಿ ಮಾಡಬಹುದು. (1) ನೈಋತ್ಯ (ಮಾನ್ಸೂನ್) ಮಳೆ ಮಾರುತಗಳ ಕಾಲ—ಜೂನ್ ತಿಂಗಳಿನಿಂದ ಪ್ರಾರಂಭಿಸಿ ಮೂರು ತಿಂಗಳಿಗೂ ಹೆಚ್ಚು ಕಾಲ; ಈ ಕಾಲದಲ್ಲಿ ರಾಜ್ಯದ ಪಶ್ಚಿಮದ ಭಾಗಗಳಿಗೆ ಅಧಿಕ ಮಳೆಯಾಗುತ್ತದೆ. (2) ಹಿಂಗಾರು ಅಥವಾ ಈಶಾನ್ಯ (ಮಾನ್ಸೂನ್) ಮಳೆಮಾರುತಗಳ ಕಾಲ—ಅಕ್ಟೋಬರಿನಿಂದ ಎರಡು ತಿಂಗಳಿಗೂ ಸ್ವಲ್ಪ ಹೆಚ್ಚು ಕಾಲದ ವರೆಗೆ; ಈ ಕಾಲದಲ್ಲಿ ರಾಜ್ಯದ ಈಶಾನ್ಯಭಾಗ ಗಳಿಗೆ ಅತ್ಯಾವಶ್ಯಕವಾದ ಮಳೆ ದೊರೆಯುತ್ತದೆ; ಕಡಮೆ ಪ್ರಮಾಣದ್ದಾದರೂ ಈ ಮಳೆ ಅತ್ಯಾವಶ್ಯಕ. (3) ಡಿಸೆಂಬರ್ ಮಧ್ಯದಿಂದ ಫೆಬ್ರವರಿ ಕೊನೆಯ ವರೆಗೆ ಚಳಿಗಾಲ, ಮತ್ತು (4) ಮಾರ್ಚಿ-ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬೇಸಗೆ ಕಾಲ.

ರಾಜ್ಯದ ಬಹುಭಾಗವು ಸಮುದ್ರ ಮಟ್ಟಕ್ಕಿಂತ ಬಹಳ ಎತ್ತರವಾಗಿರುವುದರಿಂದ, ಆ ಎತ್ತರದ ಕಾರಣದಿಂದಲೇ ವರ್ಷದುದ್ದಕ್ಕೂ ಸಮಧಾತುವಾದ ವಾಯುಗುಣವಿರುತ್ತದೆ. ರಾಜ್ಯದಲ್ಲಿ ಸಮುದ್ರತೀರ ದಿಂದ ದೂರವಿರುವ, ಅತ್ಯಂತ ಒಳನಾಡಿನ ಭಾಗಗಳಲ್ಲಿ ಕೂಡ, ವಾಯುಗುಣದ ವೈಪರೀತ್ಯಗಳು ಕಂಡುಬರುವುದಿಲ್ಲ. ಮಧ್ಯಇಂಡಿಯಾ ಮತ್ತು ಉತ್ತರ ಇಂಡಿಯಾದ ಅನೇಕ ಭಾಗಗಳಲ್ಲಿರುವಂತಹ ವೈಪರೀತ್ಯಗಳಂತೂ ಇಲ್ಲವೇ ಇಲ್ಲ. ಪರಮಾವಧಿ ಉಷ್ಣಾಂಶ ಮತ್ತು ಕನಿಷ್ಠ ಉಷ್ಣಾಂಶಗಳ ವ್ಯತ್ಯಾಸವು ಫ್ಯಾರನ್‌ಹೀಟ್ 30°ಗಳಿಗಿಂತ ಮೀರುವುದು ಬಹು ಅಪರೂಪ. ಅಂತಹ ಗಣನೀಯ ವ್ಯತ್ಯಾಸವು ಬೆಳಗಾವಿಯಲ್ಲಿ ಅಥವಾ ಬಳ್ಳಾರಿಯಲ್ಲಿ ಅಥವಾ ಗುಲ್ಬರ್ಗಾದಲ್ಲಿ ಕಂಡುಬರುತ್ತದೆ. ಎಂದರೆ, ಬೆಳಗಾವಿಯಲ್ಲಿ ಚಳಿಗಾಲದಲ್ಲಿ 95° F ಪರಮಾವಧಿ ಉಷ್ಣಾಂಶ ಮತ್ತು 60° F ಕನಿಷ್ಠ ಉಷ್ಣಾಂಶ ವಿರುವುದು; ಬಳ್ಳಾರಿಯಲ್ಲಿ ಫೆಬ್ರವರಿಯಲ್ಲಿ ಪರಮಾವಧಿ ಉಷ್ಣಾಂಶವು ಸುಮಾರು 100° F, ಕನಿಷ್ಠ ಉಷ್ಣಾಂಶವು 70° F; ಗುಲ್ಬರ್ಗಾದಲ್ಲಿ ಮಾರ್ಚ್ ತಿಂಗಳಲ್ಲಿ ರಾಜ್ಯದಲ್ಲಿಯೇ ಅತ್ಯಧಿಕ ಉಷ್ಣಾಂಶವಾದ 110° F ಗಳಷ್ಟಿದ್ದು, ಕನಿಷ್ಠ ಉಷ್ಣಾಂಶವು 70° F ಆಗಿರುವುದು. ಇದು ಕೇವಲ ಅಪವಾದ ಮಾತ್ರ; ಎಲ್ಲಕಡೆಗೂ ಅನ್ವಯಿಸುವ ನಿಯಮವಲ್ಲ. ಮಧ್ಯ ಪ್ರಸ್ಥಭೂಮಿಯ ಪ್ರದೇಶದಲ್ಲಿ ಮತ್ತು ಕೊಡಗು, ಹಾಸನ, ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ಧಾರವಾಡ, ಬೀದರ್ ಜಿಲ್ಲೆಗಳ ಭಾಗಗಳಲ್ಲಿ ವರ್ಷವೆಲ್ಲಾ ಸಮಧಾತುವಾದ ವಾಯುಗುಣವಿರುತ್ತದೆ. ಹಾಗೂ ಆ ಭಾಗಗಳು, ಬೇಸಗೆಯಲ್ಲಿ ಗಿರಿಧಾಮ ಗಳಿಗೆ ಹೋಗಲಾರದ ಬಹು ಜನರಿಗೆ ಉತ್ತಮವಾದ ಬೇಸಗೆಯ ತಾಣಗಳಾಗಿರುತ್ತವೆ.

## ಮಳೆ

ಸರಾಸರಿ ವಾರ್ಷಿಕ ಮಳೆ ಪ್ರಮಾಣವು ರಾಜ್ಯದಲ್ಲಿ ಪಶ್ಚಿಮ ಭಾಗಗಳಿಂದ ಪೂರ್ವ ಭಾಗಗಳ ಕಡೆಗೆ ನಡೆದಂತೆಲ್ಲಾ ಅತಿ ತೀವ್ರಗತಿಯಲ್ಲಿ ವ್ಯತ್ಯಾಸವಾಗುತ್ತದೆ. ಪಶ್ಚಿಮ ಘಟ್ಟಗಳ ಪ್ರದೇಶಗಳು ಎಂದರೆ, ಉತ್ತರಕನ್ನಡ, ದಕ್ಷಿಣಕನ್ನಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಭಾಗಗಳು ಮತ್ತು ಕೊಡಗು—ಇವು ವರ್ಷಕ್ಕೆ ಸರಾಸರಿ 150"ಕ್ಕಿಂತಲೂ ಹೆಚ್ಚಾಗಿರುವಂತೆ ಅಧಿಕ ಮಳೆಯನ್ನು ಪಡೆಯುತ್ತವೆ. ವಾರ್ಷಿಕ ಮಳೆಯ ಪ್ರಮಾಣವು ಆಗುಂಬೆಯಲ್ಲಿ 300"ಗಳಷ್ಟು ; ಅಲ್ಲಿ 1946ರಲ್ಲಿ 509"ರಷ್ಟು ಅತ್ಯಧಿಕ ಮಳೆಯಾಗಿದ್ದಿತು. ಮಧ್ಯದ ಮತ್ತು ಆಗ್ನೇಯ ಭಾಗಗಳಲ್ಲಿ ಅಂದರೆ ಬೆಂಗಳೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸುಮಾರು 30"ರಷ್ಟು ಸಾಧಾರಣ ಮಳೆ ಬೀಳುತ್ತದೆ. ಉಳಿದ ಭಾಗಗಳಲ್ಲಿ, ವಿಶೇಷವಾಗಿ, ಉತ್ತರ ಮತ್ತು ಈಶಾನ್ಯ ಭಾಗಗಳಲ್ಲಿ ಎಂದರೆ, ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಿಗೆ ಮತ್ತು ಧಾರವಾಡ, ತುಮಕೂರು ಜಿಲ್ಲೆಗಳ ಭಾಗಗಳಿಗೆ 25''ಕ್ಕಿಂತಲೂ ಕಡಮೆ ಮಳೆಯಾಗುತ್ತದೆ. ಹಾಗೂ ಅವುಗಳ ಕೆಲವು ಭಾಗಗಳಿಗೆ 15''ಕ್ಕಿಂತಲೂ ಕಡಮೆ ವಾರ್ಷಿಕ ಮಳೆ ಬೀಳುತ್ತದೆ. ಈ ಪ್ರದೇಶವು ದಕ್ಷಿಣಇಂಡಿಯಾ ಪರ್ಯಾಯದ್ವೀಪದ, 'ಮಳೆಯ ನೆರಳಿನ' ಪ್ರದೇಶವಾಗಿದ್ದು, 'ಥಾರ್' ಭೂಮಿಯನ್ನು ಬಿಟ್ಟರೆ, ಈ ಭಾಗವೇ ಅತಿ ಶುಷ್ಕ ಭಾಗವಾಗಿರುತ್ತದೆ. ಈ ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ನಾಲ್ಕನೆಯ ಒಂದು ಭಾಗವು ವರ್ಷಕ್ಕೆ 25"ಕ್ಕಿಂತಲೂ ಕಡಮೆ ಮಳೆ ಪಡೆಯುವುದೆಂದು ಅಂದಾಜು ಮಾಡಲಾಗಿದೆ.

## ನೀರಾವರಿ

ಇಂಡಿಯಾದ ಇತರ ಭಾಗಗಳಲ್ಲಿರುವಂತೆ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 70ಕ್ಕೂ ಮೀರಿದ ಸಂಖ್ಯೆಯಷ್ಟು ಜನರು ತಮ್ಮ ನಿತ್ಯಜೀವನಕ್ಕೆ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಈ ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ನೀರಾವರಿ ಸೌಲಭ್ಯಗಳನ್ನೊದಗಿಸುವುದು ಅತ್ಯಂತ ಪ್ರಮುಖ ಕಾರ್ಯವಾಗಿರುತ್ತದೆ.

ಬಹುಪಾಲು ಬೆಟ್ಟಗಳಿಂದ ಮತ್ತು ಏರು ತಗ್ಗುಗಳಿಂದ ಕೂಡಿದ ಭೂದೃಶ್ಯವಿರುವ ಕರ್ಣಾಟಕದಲ್ಲಿ ವ್ಯವಸಾಯದ ಕಾರ್ಯಗಳಿಗೆ ಅನುಕೂಲವಾಗುವಂತೆ, ಮಳೆ ನೀರನ್ನು ಶೇಖರಿಸುವ ಅನೇಕ ಕೆರೆಗಳಿವೆ. ಹೀಗೆ, 25,880 ಹಳ್ಳಿಗಳನ್ನೂ, 221 ಪಟ್ಟಣಗಳನ್ನೂ ಹೊಂದಿದ ಈ ರಾಜ್ಯದಲ್ಲಿ, ಒಟ್ಟು 10.89 ಲಕ್ಷ ಎಕರೆಗಳಷ್ಟು ಅಚ್ಚುಕಟ್ಟಿರುವ (ನೀರಾವರಿಯ ಸಾಮರ್ಥ್ಯ) ಪ್ರದೇಶವನ್ನುಳ್ಳ, ಒಟ್ಟು 37,328 ಚಿಕ್ಕ ದೊಡ್ಡ ಕೆರೆಗಳಿವೆ. ಈ ಕೆರೆಗಳು ಹಿಂದಿನ ಕಾಲದಿಂದ ಬಂದಿರುವ ಒಂದು ಪರಂಪರೆಯ ಆಸ್ತಿಯಾಗಿದೆ. ಕಳೆದ ಶತಮಾನಗಳಲ್ಲಿ, ರಾಜರು, ಪಾಳೆಯಗಾರರು, ಐಶ್ವರ್ಯವಂತರು ಮತ್ತು ವ್ಯಾಪಾರಿಗಳು, ಸಾರ್ವ ಜನಿಕರಿಗೆ ಉಪಯೋಗವಾಗುವ ಕೆರೆಗಳನ್ನು ನಿರ್ಮಿಸುವುದು ಮತ್ತು ಇತರ ಕೆಲಸಗಳನ್ನು ಕೈಗೊಳ್ಳುವುದು ಪುಣ್ಯಕಾರ್ಯವೆಂದು ಪರಿಗಣಿಸಿದ್ದರು. ಈಗಿನ ಮತ್ತು ಮುಂದಿನ ಪೀಳಿಗೆಯ ಜನರು ಮಾಡಬೇಕಾದದ್ದೇ ನೆಂದರೆ, ಈ ಕೆರೆಗಳಿಂದ ಹೂಳು ತೆಗೆಸುವುದು ಮತ್ತು ಆಗಾಗ ದುರಸ್ತಿ ಕೆಲಸಗಳನ್ನು ಮಾಡಿಸುವುದು, ಅವುಗಳನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬರುವುದೆಷ್ಟೋ ಅಷ್ಟೇ. ಹಳೆಯ ಈ ಕೆರೆಗಳಲ್ಲಿ, ಅನೇಕ ಕೆರೆಗಳು ಈಗಲೂ ನೀರಾವರಿಯ ಏಕೈಕ ಮೂಲಗಳಾಗಿರುತ್ತವೆ. ಅವು 3,59,621 ಹೆಕ್ಟೇರು ಗಳಿಗೆ ಅಥವಾ ಸುಮಾರು 8,88,264 ಎಕರೆಗಳಿಗೆ ನೀರನ್ನೊದಗಿಸುತ್ತವೆ. ಸರ್ಕಾರ ಮತ್ತು ಖಾಸಗಿ ಜನರು ನಿರ್ಮಿಸಿರುವ ಕಾಲುವೆಗಳು ದ್ವಿತೀಯ ಸ್ಥಾನವನ್ನು ಪಡೆದು, ಸುಮಾರು 2,64,102 ಹೆಕ್ಟೇರು ಗಳಿಗೆ ಅಥವಾ 6,52,332 ಎಕರೆಗಳಿಗೆ ನೀರನ್ನು ಒದಗಿಸುತ್ತವೆ. ಬಾವಿಗಳಿಂದ ಸುಮಾರು 1,49,640

ಹೆಕ್ಟೇರುಗಳು ಅಥವಾ 3,69,611 ಎಕರೆಗಳು ನೀರಾವರಿ ಸೌಲಭ್ಯವನ್ನು ಪಡೆದಿವೆ. (ಈ ಅಂಕಿಗಳು 1961–62 ರ ಅವಧಿಗೆ ಸೇರಿದುವು.)

1947 ರಲ್ಲಿ ಸ್ವಾತಂತ್ರ್ಯವು ಪ್ರಾಪ್ತವಾದ ಬಳಿಕ ಈ ದೇಶವು ಯೋಜಿತ ಆರ್ಥಿಕಾಭಿವೃದ್ಧಿಯ ಕಾಲವನ್ನು ಕಂಡಿತು. ಜನರ ಆರ್ಥಿಕಾಭಿವೃದ್ಧಿಯ ಇತರ ಬಾಬುಗಳಲ್ಲಿ ಹೇಗೋ ಹಾಗೆ ಆಹಾರೋತ್ಪಾದನೆಗೂ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೂ ಗುರಿಗಳನ್ನು ಸಿದ್ಧಪಡಿಸಲಾಯಿತು. 1947 ನೆಯ ವರ್ಷಕ್ಕಿಂತ ಹಿಂದೆ ಇದ್ದ ಅನುಕೂಲತೆಗಳು ನಮ್ಮ ಆವಶ್ಯಕತೆಗಳಿಗಿಂತಲೂ ಅತಿ ಕಡಮೆಯಾಗಿರುವುವೆಂದು ವ್ಯಕ್ತವಾಯಿತು. ಹೀಗೆ ರಾಜ್ಯದಲ್ಲಿ 17 ಲಕ್ಷ ಎಕರೆಗಳಷ್ಟು ಎಂದರೆ, ಒಟ್ಟು ವ್ಯವಸಾಯದ ಭೂಮಿಯ ಕೇವಲ ಶೇಕಡ 4.9 ರಷ್ಟು ಭೂಮಿಗೆ ಮಾತ್ರ ನೀರಾವರಿ ಅನುಕೂಲತೆಗಳಿದ್ದವು, ಈ ಪ್ರಮಾಣವು ಅಕ್ಕಪಕ್ಕದ ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಿಗಿಂತಲೂ ಬಹು ಕಡಮೆ ಆಗಿದ್ದು, ಇಂಡಿಯಾ ದೇಶಕ್ಕೆ ಯೋಜಿಸಲಾದ ಶೇಕಡ 24 ರಷ್ಟು ಗುರಿಗಿಂತಲೂ ಅತಿ ಕಡಮೆಯಾಗಿದ್ದಿತು. ರಾಜ್ಯದಲ್ಲಿ ನೀರಾವರಿ ದೊರೆಯಬಹುದಾದ ಪರಮಾವಧಿ ಭೂಮಿಯು ಸುಮಾರು 82 ಲಕ್ಷ ಎಕರೆಗಳು, ಅಥವಾ ರಾಜ್ಯದ ವ್ಯವಸಾಯ ಯೋಗ್ಯವಾದ 35 ದಶಲಕ್ಷ ಎಕರೆಗಳಲ್ಲಿ ಸುಮಾರು ಶೇಕಡ 23½ ಯಷ್ಟು ಎಂಬುದಾಗಿ ಅಂದಾಜು ಮಾಡಲಾಗಿದೆ.

ಮೂರು ಪಂಚವಾರ್ಷಿಕ ಯೋಜನೆಗಳ ಪ್ರಕಾರ ಬಹುಪಾಲು ನದಿಗಳಿಗೆ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸುವುದರ ಮೂಲಕ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಪ್ರಯತ್ನಗಳನ್ನು ಮಾಡಲಾಗಿದೆ ; ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ (1966) ವೇಳೆಗೆ 30.3 ದಶಲಕ್ಷ ಎಕರೆಗಳಿಗೆ ನೀರಾವರಿ ಸೌಲಭ್ಯವನ್ನೊದಗಿಸುವ ನಿರೀಕ್ಷೆಯಿದೆ. ಪರಮಾವಧಿ ಸಾಮರ್ಥ್ಯವಾದ 82ಲಕ್ಷ ಎಕರೆಗಳಿಗೆ ನೀರನ್ನೊದಗಿಸುವ ಕಾರ್ಯಕ್ಕೆ ಇನ್ನೂ ಬಹುಕಾಲ ಬೇಕು ; 1980ರ ವೇಳೆಗೆ ಅದನ್ನು ಈಡೇರಿಸುವ ನಿರೀಕ್ಷೆಯಿದೆ.

ಈ ಕೆಳಗೆ ಕಂಡವುಗಳು, ಈಗ ಕೈಗೊಳ್ಳಲಾಗಿರುವ ಯೋಜನೆಗಳು :—

| ನಂ. | ಯೋಜನೆ | | ಅಂದಾಜು ವೆಚ್ಚ (ರೂಪಾಯಿ) | ಅಂತಿಮ ಘಟ್ಟದಲ್ಲಿ ನೀರಾವರಿ ಸಾಮರ್ಥ್ಯ (ಎಕರೆಗಳು) |
|---|---|---|---|---|
| 1 | ತುಂಗಭದ್ರ ಯೋಜನೆ (ಎಡದಂಡೆ) | .... | 31,00,00,000 | 5,80,000 |
| 2 | ,, (ಬಲದಂಡೆ) | .... | 6,88,40,000 | 91,×54 |
| 3 | ಘಟಪ್ರಭಾ I ಘಟ್ಟ | .... | 5,45,00,000 | 1,20,000 |
| 4 | ಭದ್ರಾ ಯೋಜನೆ | .... | 33,53,00,000 | 2,44,663 |
| 5 | ಘಟಪ್ರಭಾ II ಘಟ್ಟ | .... | 13,18,00,000 | 1,78 000 |
| 6 | ತುಂಗಾ ಅಣೆಕಟ್ಟು | .... | 2,31,12,000 | 21,500 |
| 7 | ನುಗು ಜಲಾಶಯ | .... | 3,11,00,000 | 20,000 |
| 8 | ತುಂಗಭದ್ರ ಮೇಲ್ದಂಡೆ ಕಾಲುವೆ I ಘಟ್ಟ | .... | 2,58,40,000 | 70,339 |
| 9 | ಕಪಿನಿ ಯೋಜನೆ | .... | 3,20,00,000 | 30,000 |
| 10 | ಧರ್ಮಾ ಯೋಜನೆ | .... | 69,14,000 | 14,000 |
| 11 | ಹಾರಂಗಿ ಯೋಜನೆ | .... | 10,50,00,000 | 1,05,000 |

| ನಂ. | ಯೋಜನೆ | | ಅಂದಾಜು ವೆಚ್ಚ (ರೂಪಾಯಿ) | ಅಂತಿಮ ಘಟ್ಟದಲ್ಲಿ ನೀರಾವರಿ ಸಾಮರ್ಥ್ಯ (ಎಕರೆಗಳು) |
|---|---|---|---|---|
| 12 | ಕೃಷ್ಣಾ ಯೋಜನೆ ಮೇಲ್ದಂಡೆ | .... | 40,150,00,000 | 5,33,000 |
| 13 | ಮಲಪ್ರಭಾ ಯೋಜನೆ | .... | 20,00,00,000 | 3,00,000 |
| 14 | ಹೇಮಾವತಿ ಯೋಜನೆ | .... | 3,90,00,000 | 22,500 |
| 15 | ಕಂಬಡಕಾಡು ಯೋಜನೆ | .... | 1,90,00,000 | 33,000 |
| 16 | ಹರಿನಾಲ | .... | 75,00,000 | 10,500 |
| 17 | ಇತರ ಎಲ್ಲ ಮಧ್ಯಮ ಪ್ರಮಾಣದ ಯೋಜನೆಗಳು (10,000 ಎಕರೆಗಿಂತ ಕಡಮೆಯಾವು) | .... | 4,30,32,000 | 79,157 |
| | | | 5,44,79,38,000 | 24,53,513 |

ಈ ಎಲ್ಲ ದೊಡ್ಡ ಯೋಜನೆಗಳಲ್ಲದೆ, ಈ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿಯೂ ಹಳೆಯ ಕೆರೆಗಳನ್ನು ಸರಿಪಡಿಸುವ, ಹೊಸ ಬಾವಿಗಳನ್ನೂ ಕೊಳವೆ ಬಾವಿಗಳನ್ನೂ ನಿರ್ಮಿಸುವ ಯೋಜನೆಗಳಿಗೂ ಅವಕಾಶವನ್ನು ಕಲ್ಪಿಸಲಾಗಿದೆ. ಈ ಎಲ್ಲ ಯೋಜನೆಗಳು ರಾಜ್ಯದಲ್ಲಿ ಒಟ್ಟು ಸುಮಾರು 30ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯವನ್ನು ವಿಸ್ತರಿಸುವವೆಂದು ಅಂದಾಜು ಮಾಡಲಾಗಿದೆ.

ಈ ದೊಡ್ಡ ಯೋಜನೆಗಳು, ಅವುಗಳಿಗೆ ಸೇರಿದ ಮೇಲ್ದಂಡೆ ಮತ್ತು ಕೆಳದಂಡೆಯ ಕಾಲುವೆ ಜಾಲಗಳೂ ಸೇರಿ ದೇಶದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ, ದೇಶದ ಸ್ವರೂಪವನ್ನೇ ಮಾರ್ಪಡಿಸಿ ಬಿಡುತ್ತವೆ. ಇದರಿಂದ, ಮನುಷ್ಯನು ತನ್ನ ವೈಜ್ಞಾನಿಕ ಜ್ಞಾನ ಮತ್ತು ಆಧುನಿಕ ಯಂತ್ರಗಳ ಸಹಾಯದಿಂದ ಪ್ರತಿಕೂಲವಾದ ನೈಸರ್ಗಿಕ ಪರಿಸ್ಥಿತಿಗಳನ್ನು ಅನುಕೂಲಕರವಾಗಿ ಮಾರ್ಪಡಿಸಿಕೊಂಡು ಪ್ರಕೃತಿದತ್ತವಾದ ಸಕಲ ಸೌಲಭ್ಯಗಳನ್ನೂ ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಬಲ್ಲನೆಂದು ಸಿದ್ಧವಾಗುತ್ತದೆ.

**ಅಂಕಿಅಂಶಗಳ**

1964 ರಲ್ಲಿ, ಸರಾಸರಿ ಪರಮಾವಧಿ ಮತ್ತು ಕನಿಷ್ಠ ಉಷ್ಣಾಂಶಗಳನ್ನು ಆಯಾ

| | | ಜನವರಿ | | ಫೆಬ್ರುವರಿ | | ಮಾರ್ಚ್ | | ಏಪ್ರಿಲ್ | | ಮೇ | |
|---|---|---|---|---|---|---|---|---|---|---|---|
| | | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ |
| 1 | ಹೊನ್ನಾವರ (ಉ. ಕನ್ನಡ ಜಿಲ್ಲೆ) | 31.4 | 18·0 | 31.3 | 18.7 | 32·8 | 22·6 | 33.0 | 25.3 | 32·9 | 27·0 |
| 2 | ಮಂಗಳೂರು .... | 31.5 | 21·3 | 31.5 | 22.8 | 33·4 | 25.0 | 33.7 | 27.8 | 33.6 | 27·3 |
| 3 | ಬೀದರ್ .... | 30.2 | 16 8 | 28.5 | 18.3 | 35.8 | 22·7 | 38.5 | 24·9 | 39.0 | 27·1 |
| 4 | ಗುಲ್ಬರ್ಗ .... | 31.8 | 16·4 | 33.0 | 18.7 | 37.6 | 24·0 | 39·7 | 25.8 | 41.2 | 26·9 |
| 5 | ರಾಯಚೂರು .... | 31.6 | 18·9 | 32·9 | 21·0 | 37.6 | 24.8 | 40.1 | 27.3 | 40·8 | 27.2 |
| 6 | ಬಿಜಾಪುರ .... | 31·2 | 16.4 | 32.6 | 18·3 | 37·2 | 23·2 | 39.2 | 24.5 | 40.4 | 24.0 |
| 7 | ಬೆಳಗಾವಿ .... | 30.6 | 14·0 | 31.4 | 16.4 | 35.5 | 19.3 | 36·5 | 21·1 | 34.0 | 22.0 |
| 8 | ಗದಗ (ಧಾರವಾಡ) ... | 31·2 | 16.5 | 30.8 | 19.0 | 35·9 | 21.7 | 38·2 | 22.9 | 36.8 | 22.4 |
| 9 | ಬಳ್ಳಾರಿ .... | 31.1 | 18.9 | 32.9 | 20.0 | 36.8 | 22.4 | 40.8 | 26.3 | 39.8 | 26.3 |
| 10 | ಚಿತ್ರದುರ್ಗ .... | 29.7 | 17·8 | 31.4 | 19.8 | 35.0 | 21·9 | 36.9 | 23.5 | 35.7 | 22·8 |
| 11 | ಬೆಂಗಳೂರು .... | 27.8 | 14.2 | 29.1 | 15.9 | 32.6 | 19.5 | 34.7 | 22.1 | 34.3 | 21.7 |
| 12 | ಮೈಸೂರು .... | 29·3 | 16·0 | 30·9 | 17.8 | 33·9 | 21.2 | 35·8 | 22·5 | 34·1 | 21.4 |
| 13 | ಮಡಿಕೇರಿ (ಕೊಡಗು) .... | 26·4 | 13·3 | 27.3 | 14·6 | 29·6 | 17·1 | 30·0 | 18.5 | 28.1 | 18.5 |

**ಪಟ್ಟಿ 2**

ವೀಕ್ಷಣಾಲಯಗಳಲ್ಲಿ ಕಂಡಂತೆ ತೋರಿಸುವ ಪಟ್ಟಿ. (ಸೆಂಟಿಗ್ರೇಡ್ ಡಿಗ್ರಿಗಳಲ್ಲಿ)

| ಜೂನ್ | | ಜುಲೈ | | ಆಗಸ್ಟ್ | | ಸೆಪ್ಟೆಂಬರ್ | | ಅಕ್ಟೋಬರ್ | | ನವೆಂಬರ್ | | ಡಿಸೆಂಬರ್ | |
|---|---|---|---|---|---|---|---|---|---|---|---|---|---|
| ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ | ಪರಮ | ಕನಿಷ್ಠ |
| 29.3 | 23.6 | 28.2 | 23.3 | 27.9 | 23.2 | 28.2 | 22.9 | 28.8 | 23.6 | 30.8 | 20.7 | 32.1 | 20.0 |
| 30.5 | 23.8 | 31.2 | 23.7 | 28.8 | 29.1 | 29.1 | 23.2 | 30.3 | 23.7 | 30.1 | 22.2 | 32.5 | 21.0 |
| 35.2 | 23.8 | 29.6 | 21.2 | 27.2 | 20.7 | 28.1 | 20.6 | 29.4 | 20.9 | 27.2 | 17.2 | 27.1 | 15.7 |
| 36.9 | 24.3 | 31.6 | 22.5 | 29.8 | 21.7 | 29.8 | 22.0 | 31.9 | 21.3 | 30.1 | 17.0 | 29.3 | 14.6 |
| 35.9 | 25.2 | 31.9 | 22.9 | 31.4 | 22.7 | 30.4 | 22.2 | 32.0 | 22.9 | 29.9 | 19.2 | 28.8 | 18.0 |
| 34.0 | 23.6 | 30.2 | 21.8 | 28.4 | 21.0 | 28.7 | 21.2 | 30.7 | 21.3 | 28.5 | 17.3 | 28.1 | 14.9 |
| 29.8 | 21.2 | 26.1 | 20.6 | 24.5 | 20.1 | 26.8 | 19.8 | 28.6 | 19.5 | 28.8 | 16.4 | 28.5 | 13.7 |
| 30.8 | 21.7 | 27.7 | 21.1 | 25.5 | 20.6 | 26.2 | 20.4 | 28.0 | 20.5 | 29.5 | 17.3 | 28.9 | 16.0 |
| 35.2 | 25.2 | 31.7 | 23.9 | 30.5 | 23.6 | 31.0 | 22.8 | 31.4 | 22.1 | 29.1 | 19.0 | 29.4 | 16.6 |
| 31.3 | 21.8 | 28.0 | 21.2 | 26.8 | 20.0 | 26.9 | 20.2 | 29.0 | 20.5 | 27.3 | 17.9 | 26.9 | 16.0 |
| 29.9 | 19.7 | 28.4 | 20.6 | 26.3 | 19.5 | 26.9 | 19.4 | 28.1 | 19.5 | 25.9 | 16.7 | 25.2 | 15.5 |
| 30.1 | 20.4 | 28.9 | 20.3 | 27.2 | 19.8 | 28.0 | 19.9 | 28.8 | 19.8 | 27.3 | 17.3 | 26.8 | 15.6 |
| 23.6 | 16.9 | 22.0 | 17.1 | 20.0 | 16.5 | 22.1 | 16.4 | 23.9 | 16.7 | 24.0 | 14.9 | 23.7 | 11.4 |

ಮೂಲ ಲೇಖಕರು : ಶ್ರೀ ಕೆ. ಸಂಪದ್ಗಿರಿರಾವ್
ಅನುವಾದಕರು : ಶ್ರೀ ಎ. ಕುಮಾರಸ್ವಾಮಿ

## ಅಂಕಿ ಅಂಶಗಳ ಪಟ್ಟಿ

ಸರಾಸರಿ ಮತ್ತು ಸಾಮಾನ್ಯ ಮಳೆಯನ್ನು ಜಿಲ್ಲಾವಾರು ತೋರಿಸುವ ಪಟ್ಟಿ.

(ಮಳೆಯನ್ನು ಮಿ. ಮೀಟರ್‌ಗಳಲ್ಲಿ ಕೊಡಲಾಗಿದೆ)

| ನಂ. | ಜಿಲ್ಲೆಗಳು | 1964ರ ವಾರ್ಷಿಕ ಸರಾಸರಿ ಮಳೆ | ಸಾಮಾನ್ಯವಾದ ಮಳೆ ಪ್ರಮಾಣ |
|---|---|---|---|
| 1 | ಬೆಂಗಳೂರು | 1111·3 | 777.3 |
| 2 | ಕೋಲಾರ | 912·7 | 720·9 |
| 3 | ತುಮಕೂರು | 858·2 | 668·7 |
| 4 | ಮೈಸೂರು | 973·1 | 757.5 |
| 5 | ಮಂಡ್ಯ | 866·4 | 687·9 |
| 6 | ಹಾಸನ | 1143.8 | 1015.2 |
| 7 | ಶಿವಮೊಗ್ಗ | 1836.4 | 1461 0 |
| 8 | ಚಿಕ್ಕಮಗಳೂರು | 1965.3 | 1890.7 |
| 9 | ಚಿತ್ರದುರ್ಗ | 583·9 | 566·8 |
| 10 | ಬಳ್ಳಾರಿ | 787.3 | 571.7 |
| 11 | ಬೀದರ್ | 1209.4 | 857.0 |
| 12 | ಗುಲ್ಬರ್ಗ | 937.0 | 717·7 |
| 13 | ರಾಯಚೂರು | 718.5 | 579·3 |
| 14 | ದಕ್ಷಿಣ ಕನ್ನಡ | 3413.3 | 3870.8 |
| 15 | ಕೊಡಗು | 2823.0 | 2702.7 |
| 16 | ಧಾರವಾಡ | 864·8 | 684.4 |
| 17 | ಉತ್ತರ ಕನ್ನಡ | 2932·3 | 2714.4 |
| 18 | ಬಿಜಾಪುರ | 874.6 | 569.9 |
| 19 | ಬೆಳಗಾವಿ | 989.5 | 791·7 |

# ಕರ್ನಾಟಕದ ಸಸ್ಯ ಸಂಪತ್ತು

ಕರ್ನಾಟಕದಲ್ಲಿ ಅತಿ ಶೈತ್ಯದಿಂದ ಹಿಡಿದು ಬಹಳ ಶುಷ್ಕವಾದ ಹವಾಗುಣದ ವರೆಗೆ ಬಗೆಬಗೆಯಾದ ವಾಯುಗುಣವಿದೆ; ಅದೇ ರೀತಿ ವಿವಿಧ ಭೂಗುಣಗಳೂ ಉಂಟು. ಇದು ಕರ್ನಾಟಕದ ನಾನಾ ಭಾಗಗಳಲ್ಲಿ ಕಾಣಬರುವ ಸ್ವಾಭಾವಿಕ ಹಾಗೂ ಕೃಷಿಮಾಡಿದ ಸಸ್ಯಜೀವನದ ಪ್ರಮುಖ ಸಂಪತ್ತಿಗೆ ಕಾರಣವಾಗಿದೆ. ಭೂಭಾಗವು ಪಶ್ಚಿಮಕಡೆ ಸಮುದ್ರತೀರದಿಂದ ಹಿಡಿದು ಬಾಬಾಬುಡನ್‌ಗಿರಿಯಲ್ಲಿ 6,000 ಅಡಿಗಳೆತ್ತರಕ್ಕೆ ಮೇಲೇರಿ ಸರಾಸರಿ ಸಮುದ್ರ ಮಟ್ಟಕ್ಕೆ 2,000 ಅಡಿಗಳೆತ್ತರ ಬರುವುದು. ವಾಯುಗುಣದಂತೆ ಮಳೆ ಬೀಳುವುದು ಕೂಡ ಬಹಳ ವ್ಯತ್ಯಾಸವಾಗಿರುವುದು. ರಾಜ್ಯದ ಬಹುಭಾಗವು ಮಳೆಯ ಅಭಾವದಿಂದ ತೊಂದರೆಗೀಡಾಗಿರುವುದರಿಂದ, ಕೆರೆಗಳು, ಜಲಾಶಯಗಳು ಅಥವಾ ಕಾಲುವೆಗಳಿಂದ ನೀರೆತ್ತಿ ವ್ಯವಸಾಯ ಮಾಡಬೇಕಾಗುವುದು.

ಕರ್ನಾಟಕದಲ್ಲಿ ಎರಡು ವಿಶೇಷ ಬಗೆಯ ಕಾಡುಗಳನ್ನು ನೋಡಬಹುದು. ಮೊದಲನೆಯದು ಸಹ್ಯಾದ್ರಿಶ್ರೇಣಿಯನ್ನೊಳಗೊಂಡ ಪಶ್ಚಿಮಘಟ್ಟಗಳ ಇಕ್ಕಟ್ಟಾದ ಶೀತಲ ಅರಣ್ಯಗಳ ವಲಯ. ವಿಶೇಷವಾಗಿ ತೇಗ ಹಾಗೂ ಇತರ ಮರಮಟ್ಟುಗಳಿಗೂ ಈ ಅರಣ್ಯವೇ ಆಶ್ರಯ. ಇದು ಅಧಿಕ ವನಸಂಪತ್ತಿನಿಂದ ಕೂಡಿದ ಪ್ರದೇಶ. ಎರಡನೆಯದು ಶುಷ್ಕವಾತಾವರಣವಿರುವ ಪೂರ್ವಭಾಗದ ಕಾಡುಗಳು. ಈ ಎರಡು ಭಾಗಗಳಲ್ಲಿರುವ ಕಾಡುಗಳು ಸಸ್ಯಜೀವನದ ಬೆಳವಣಿಗೆಯ ಭಿನ್ನಪರಿಸ್ಥಿತಿಗೆ ಒಳಪಟ್ಟಿರುವುವು. ಶೈತ್ಯ ಪ್ರದೇಶಗಳಲ್ಲಿ ದಟ್ಟವಾಗಿ ದೊಡ್ಡ ದೊಡ್ಡ ಮರಗಳು ಬೆಳೆದಿರುತ್ತವೆ. ಫಲವತ್ತಾದ ಮಣ್ಣು ಮತ್ತು ತೇವ ಇರುವುದರಿಂದ, ಸಸ್ಯಗಳು ಪರಸ್ಪರ ಪೈಪೋಟಿಯಿಂದ ಬಾಳಬೇಕಾಗುವುದು. ಮತ್ತೊಂದೆಡೆ ಶುಷ್ಕಪ್ರದೇಶದಲ್ಲಿ ಸಸ್ಯಗಳು ಅತಿ ವಿರಳವಾಗಿರುತ್ತವೆಯಾಗಿ, ಇತರ ಸಸ್ಯಗಳ ಬೆಳವಣಿಗೆಗೆ ಬೇಕಾದಷ್ಟು ಸ್ಥಳಾವಕಾಶವಿರುತ್ತದೆ.

ಆದರೆ ಈ ಹೊಸ ಹಾಗೂ ಹಳೆಯ ಸಸ್ಯಗಳೆಲ್ಲಾ ಅತಿ ಕಠಿನವಾದ ಪ್ರಕೃತಿಯ ಸನ್ನಿವೇಶವನ್ನು ಎದುರಿಸಿ ನಿಲ್ಲಬೇಕಾಗುತ್ತದೆ. ಆದುದರಿಂದ ದೃಢವಾದ ಸಸ್ಯಗಳು ಮಾತ್ರ ಉಳಿದು ಬಾಳುವುವು. ಕರ್ನಾಟಕದ ಇಡೀ ಪಶ್ಚಿಮಭಾಗವೆಲ್ಲ ಬೆಟ್ಟಗಳಿಂದ ತುಂಬಿದೆ. ಈ ಪರ್ವತ ಶ್ರೇಣಿಗಳು ಹೆಚ್ಚು ವಾಯುಭಾರದ ಇಳಿತವಿರುವ ಪೂರ್ವದೆಸೆಯ ಒಣಹವೆಯ ಪ್ರದೇಶದ ಕಡೆಗೆ ಚಾಚಿಕೊಂಡಿವೆ. ಒಟ್ಟಿಗೆ ಈ ಎರಡು ಭಾಗಗಳಲ್ಲೆಲ್ಲಾ ಸುಮಾರು 4000 ಬೇರೆ ಬೇರೆ ಜಾತಿಯ ಹೂ ಬಿಡುವ ಗಿಡಮರಗಳು ಉಂಟೆಂದು ತಿಳಿದು ಬಂದಿದೆ.

ಕರ್ನಾಟಕದ ಪಶ್ಚಿಮ ಘಟ್ಟಗಳ ಕಾಡುಗಳು ಬಹಳ ಗಾತ್ರವಾಗಿ ಬೆಳೆದ ಗಿಡಮರಗಳಿಂದ ದಟ್ಟವಾಗಿ ಪ್ರವೇಶಿಸಲು ಕೂಡ ಸಾಧ್ಯವಾಗದಂತಹವು. ಈ ಕಾಡುಗಳ ಕೆಲವು ಪ್ರದೇಶಗಳಲ್ಲಿ ಹುಲ್ಲು ಮತ್ತು ಬಳ್ಳಿಗಳು ಹೇರಳವಾಗಿ ಬೆಳೆಯುವುವು. ದೈತ್ಯಾಕಾರದ ವೃಕ್ಷಗಳಿಂದ ಸುತ್ತಲು ಹರಡಿದ ರೆಂಬೆಗಳಿಗೆ ಹೆಣೆದುಕೊಂಡಿರುವ ಬಿದಿರಿನ ಪೊದೆಗಳು ಮೇಲ್ಪಾವಣಿಯಂತಿರುವುದರಿಂದ, ಅವುಗಳ ಮೂಲಕ ನೆಲದ ಮೇಲೆ ಸೂರ್ಯನ ಕಿರಣಗಳು ನುಸುಳಿ ಬರುವುದೇ ಕಷ್ಟ. ಇಂಥಾ ಕಾಡುಪ್ರದೇಶದಲ್ಲಿ ಪ್ರವೇಶ ಮಾಡುವುದು ಅತಿ ದುಸ್ತರ. ಕಾಡುಮೃಗಗಳ ಜಾಡು (ನಡೆದ ದಾರಿ) ಮತ್ತು ಇತರ ಇಕ್ಕಟ್ಟಾದ

ದಾರಿಗಳಿಂದಲೇ ಪ್ರವೇಶಿಸಲು ಸಾಧ್ಯ. ಇಂಥಾ ಜಾಡುಗಳು ಇಲ್ಲದ ಕಡೆಗಳಲ್ಲಿ ಮರಗಳನ್ನು ಕಡಿದು ದಾರಿಮಾಡಿಕೊಂಡು ಹೋಗಬೇಕಾಗುವುದು. ಈ ದಟ್ಟವಾದ ಕಾಡುಗಳಲ್ಲಿ ಮುಖ್ಯವಾಗಿ ಪಶ್ಚಿಮ ಕರಾವಳಿಯ ಕಾಡುಗಳಲ್ಲಿ ಅನೇಕ ಬಗೆಬಗೆಯ ಅತಿಸಣ್ಣ ಮರಗಳೂ, ಪೊದೆಗಳೂ, ಪರಾಶ್ರಯ ಸಸ್ಯಗಳೂ ಬಳ್ಳಿಗಳೂ ದೊರಕುತ್ತವೆ.

ಈ ಕರಾವಳಿಯ ಕಾಡುಗಳು ಪಶ್ಚಿಮಘಟ್ಟಗಳ ಅಂಚಿನಲ್ಲಿ 6ರಿಂದ 60 ಮೈಲಿಗಳಷ್ಟು ಅಗಲ ವಾಗಿರುತ್ತವೆ. ಈ ಪ್ರದೇಶದಲ್ಲಿ ಮಳೆಗಾಲದಾದ್ಯಂತ ವಿಪರೀತ ಮಳೆ ಬೀಳುವುದು. ಸಾಮಾನ್ಯವಾಗಿ ಇಲ್ಲಿನ ವೃಕ್ಷಸಮೂಹವನ್ನು ಮೂರು ಶ್ರೇಣಿಗಳಾಗಿ ವಿಂಗಡಿಸಬಹುದು. ಪ್ರತಿ ಶ್ರೇಣಿಯೂ ತನ್ನದೇ ಆದ ವಿಶಿಷ್ಟ ಜಾತಿಯ ಮರಗಿಡಗಳನ್ನು ಹೊಂದಿರುತ್ತದೆ. ಅತಿ ಮೇಲಿನ ಶ್ರೇಣಿಯಲ್ಲಿ ನೆಲದಿಂದ 150 ಅಡಿಗಿಂತಲೂ ಎತ್ತರವಾಗಿ ಬೆಳೆಯುವ ಸದಾ ಹಸುರಾಗಿರುವ ಮರಗಳಿರುತ್ತವೆ. ಕೆಲವು ವೇಳೆ ಇವು ಎಲೆಗಳನ್ನು ಉದುರಿಸುವಂಥವೂ ಆಗಿರುತ್ತವೆ. ಇವುಗಳ ಕಾಂಡ ಮತ್ತು ರೆಂಬೆಗಳು ಯಾವಾಗಲೂ ಚಿತ್ರವಿಚಿತ್ರವಾದ ಹೂಗಳುಳ್ಳ ಸಸ್ಯಗಳು ಹಾಗೂ ಜರಿಗಿಡಗಳಿಂದ ಆವೃತವಾಗಿರುವುವು.

ಅರಣ್ಯಾಚ್ಛಾದನದ ಕೆಳಭಾಗದ ಉಷ್ಣತೆ ಮತ್ತು ಆರ್ದ್ರತೆಗೂ ಅದರ ತುದಿಯ ಮೇಲ್ಭಾಗದವಕ್ಕೂ ಗಮನಾರ್ಹವಾದ ವ್ಯತ್ಯಾಸ ಉಂಟು. ವರ್ಷದ ಬಹುಭಾಗದಲ್ಲಿ ಗಾಳಿಯು ತುಂಬಾ ನೀರಿನ ಆವಿಯಿಂದ ಕೂಡಿರುವುದರಿಂದ ಉಷ್ಣತೆಯು ಬಯಲಿನ ಗಾಳಿಯ ಉಷ್ಣತೆಗಿಂತ ಬಹಳ ಕಡಮೆ ಇರುವುದು. ಉತ್ತುಂಗ ಶ್ರೇಣಿಯ ಮರಗಳ ಮೇಲ್ಭಾಗದಲ್ಲಿರುವ (ನೆಲದ ಮಟ್ಟದಿಂದ ಮೇಲೆ 150 ರಿಂದ 200 ಅಡಿ) ಗಾಳಿಯನ್ನು ಅದರೊಡನೆ ಹೋಲಿಸಿದರೆ ಶುಷ್ಕ ಅಥವಾ ಒಣಹವೆಯಾಗಿರುವುದು. ಹೀಗೆ ಕಾಡುಗಳ ಒಳಭಾಗವು ತನ್ನದೇ ಆದ ವಾಯುಗುಣವನ್ನು ಹೊಂದಿರುವುದು. ಇಲ್ಲಿ ಬಳ್ಳಿಗಳು ದೊಡ್ಡ ಮರಗಳ ತಲೆಯ ಮೇಲೆ ಬೆಳಕು ಬೀಳುವ ಸ್ಥಳವನ್ನು ಆಕ್ರಮಿಸಲು ಒಂದಕ್ಕೊಂದು ಪೈಪೋಟಿ ಮಾಡುವುದನ್ನು ನೋಡಬಹುದು. ಇದೇ ದಾರಿಯನ್ನನುಸರಿಸಿ ಇತರ ಸಸ್ಯಗಳು ದೊಡ್ಡ ಮರಗಳ ಕಾಂಡಗಳನ್ನಾಶ್ರಯಿಸಿ, ಅವುಗಳ ತಲೆಯ ಮೇಲೆ ಪ್ರಸರಿಸುವದರಿಂದ, ಇಲ್ಲಿ ಹೂಬಿಡುವ ಮತ್ತು ಹೂಬಿಡದ ಬಗೆಬಗೆಯ ಗಿಡಬಳ್ಳಿಗಳನ್ನೂ ಕಾಣಬಹುದು. ಸಣ್ಣ ಸಣ್ಣದಾದರೂ ಕಣ್ಣಿಗೆ ಅಂದವಾದ ಈ ಪರಾವಲಂಬಿ ಸಸ್ಯಗಳು ಆವರಿಸಿ ಮುತ್ತಿಕೊಂಡಿರುವ ಮರಗಳ ಕಾಂಡದ ಮೇಲೂ ನೆತ್ತಿಯ ಮೇಲೂ ಸೂರ್ಯನ ಬೆಳಕಿಗೋಸ್ಕರ ನಡೆಯುವ ಹೋರಾಟದ ದೃಶ್ಯವು ಬಹಳ ಚೆನ್ನಾಗಿ ಕಾಣುವುದು. ಅಪ್ಪು ಗಿಡಗಳೂ ಈ ಹೋರಾಟದಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ.

ಘಟ್ಟ ಪ್ರದೇಶವು ಮುಂಗಾರು ಮಳೆಗೆ ಒಡ್ಡಿದ ರೀತಿಗನುಸಾರವಾಗಿ ಕಾಡಿನ ಲಕ್ಷಣವು ಬದಲಾಯಿಸು ತ್ತದೆ ಎಂಬುದು ಕಂಡುಬರುತ್ತದೆ. ಮರಗಿಡಗಳ ಅತ್ಯುತ್ತಮವಾದ ಬೆಳವಣಿಗೆಗೆ ಅಗತ್ಯವಾದ ಉಷ್ಣತೆ ಮತ್ತು ನೀರಿನ ಜೊತೆಗೆ ಗಾಳಿಯ ವೇಗದ ಪರಿಣಾಮವೂ ಸಹ, ಕಾಡಿನ ಹಂಚಿಕೆ, ಎತ್ತರ, ಹಾಗೂ ಅದರೊಳಗಣ ಗಿಡಮರಗಳ ಆಕಾರ ಮತ್ತು ಗಾತ್ರ ಇವುಗಳ ಮೇಲೆ ನಿಚ್ಚಳವಾದ ಪ್ರಭಾವವನ್ನು ಬೀರುವುವು.

ಬೆಳಗಾಂ, ಚಿಕ್ಕಮಗಳೂರು ಮತ್ತು ಶಿವಮೊಗ್ಗಾ ಈ ಕೆಲವು ಜಿಲ್ಲೆಗಳಿಗೆ ಸೇರಿದ ಕಾಡುಗಳ ಮಣ್ಣಿನ ಒತ್ತಟ್ಟಿನ ರೂಪದ ಇತ್ತೀಚಿನ ಪರಿಶೋಧನೆಯಿಂದ ಬಹುಮಟ್ಟಿಗೆ ಇಲ್ಲಿನ ಮಣ್ಣೆಲ್ಲಾ ಹುಳಿಯಾಗಿ, ಪಿಎಚ್. 4.5 ರಿಂದ 6.5 ವರೆಗೆ ಇರುವುದೆಂದು ತಿಳಿದಿದೆ. ಸುಣ್ಣದ ಅಂಶವು ಸದಾ ಹಸುರಾದ ಕುರುಚಲು ಕಾಡಿನ ನೆಲಕ್ಕಿಂತ (20%) ಹುಲ್ಲುಗಾವಲು ಮತ್ತು ಎಲೆಯುದುರುವ ಕಾಡಿನ ನೆಲದಲ್ಲಿ (30%)

ಹೆಚ್ಚಾಗಿರುವುದು. ಸದಾ ಹಸುರು ಕಾಡಿನ ನೆಲದಲ್ಲಿ ಕುರುಚಲು ಕಾಡಿನ ನೆಲಕ್ಕಿಂತ ಹೆಚ್ಚು ಮ್ಯಾಗ್ನಿಸಿಯಂ (14%), ಪೊಟಾಸಿಯಂ (6.5%) ಇರುತ್ತವೆ.

ಅತ್ಯುತ್ತಮವಾದ ಮಳೆಯ ಕಾಡುಗಳು ಪಶ್ಚಿಮ ಘಟ್ಟಗಳ ಶಿಖರದ ಸುತ್ತಮುತ್ತಲು ಮತ್ತು ಘಟ್ಟದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ತುಂಬಾ ಇರುತ್ತವೆ. ಇಲ್ಲಿನ ಕೆಲವು ಪ್ರದೇಶಗಳಲ್ಲಿ ವರ್ಷದ ಸರಾಸರಿ ಮಳೆಯು 300 ಅಂಗುಲಗಳಿಗೂ ಮೀರಿರುವುದು. ಘಟ್ಟದ ಶಿಖರಗಳಲ್ಲೂ ಅದರ ಕಡಿದಾದ ಇಳಿಜಾರು ಪ್ರದೇಶಗಳಲ್ಲಿಯೂ ಮಣ್ಣು ಬಹಳ ಆಳವಿಲ್ಲದುದರಿಂದ ಎತ್ತರವಾದ ಮರಗಳು ಬೆಳೆಯಲು ಸಹಾಯಕವಾಗಲಾರದು. ಆದರೆ ಕಣಿವೆ ಪ್ರದೇಶಗಳಲ್ಲೂ ತಗ್ಗು ಭೂಮಿಯಲ್ಲೂ ಮಣ್ಣು ಆಳವಾಗಿರುವುದರಿಂದ ದೊಡ್ಡ ಮರಗಳು ನಿಲ್ಲಬಲ್ಲವು. ಶಿವಮೊಗ್ಗಾ ಜಿಲ್ಲೆಯ ಆಗುಂಬೆಯಂಥ ಪ್ರದೇಶದಲ್ಲಿ ಗಿಡಗಳ ಬೆಳವಣಿಗೆಯಲ್ಲಿ ಮೂರು ನಮೂನೆಯ ಭಾಗಗಳನ್ನು ನೋಡಬಹುದು. ಉದಾ: ತುಂಬಾ ಇಳಿಜಾರಾದ ಬಂಡೆಗಳಿಂದ ಕೂಡಿದ ಘಟ್ಟದ ತಪ್ಪಲುಭಾಗ, ಶ್ರೇಷ್ಠವಾದ ಮಣ್ಣಿನಿಂದ ಕೂಡಿದ ಘಟ್ಟ ಪ್ರದೇಶ ಮತ್ತು ಅತಿ ವೇಗವಾಗಿ ಬೀಸುವ ಗಾಳಿಗೆ ಎದುರಾಗಿರುವ ಬೆಟ್ಟಗಳ ತೆರೆದ ಶಿಖರ ಪ್ರದೇಶ.

ಸದಾ ಹಸುರಾದ ಶೈತ್ಯಾರಣ್ಯಗಳ ಎತ್ತರವಾದ ಮೊದಲನೆಯ ಶ್ರೇಣಿಯಲ್ಲಿ ಅನೇಕ ದೊಡ್ಡ ಮರಗಳಿರುತ್ತವೆ. ಇಲ್ಲಿಯ ಸರ್ವಸಾಮಾನ್ಯವಾದ ಮರಗಳು ಇವು: ಧೂಮ (ಡಿಪ್ಟೆರೋಕಾರ್ಪಸ್ ಇಂಡಿಕಸ್), ಕಲ್ಲುಹೊನ್ನೆ (ಕ್ಯಾಲೋಫಿಲಮ್ ಎಪ್ಟೆಲಮ್), ಬಲಗಿ (ಪಿಸಿಲೋನ್ಯೂರನ್ ಇಂಡಿಕಮ್), ಧೂಪದ ಮರ (ವೆಟೇರಿಯೂ ಇಂಡಿಕ), ಸಟಗದ ಮರ (ಇಲಿಯೋಕಾರ್ಪಸ್ ಟುಬರ್‌ಕ್ಯುಲೇಟಸ್), ಹಾಲು ಮಡ್ಡಿ ಮರ (ಕೆನೇರಿಯಮ್ ಸ್ಟ್ರಿಕ್ಟಮ್), ಹಲಗೇರು (ಹೊಲಿಗಾರ್ನ ಕಾಸ್ಟಿಕ), ಮತ್ತು ಹಲಸು (ಆಟೋಕಾರ್ಪಸ್) ಜಾತಿಯವು. ಈ ವರ್ಷಾರಣ್ಯಗಳ ಕೆಲವು ಪ್ರದೇಶಗಳಲ್ಲಿ ಭಿನ್ನ ಜಾತಿಯ ಮರಗಳು ಬೆಳೆಯುವುವು. ಇಲ್ಲಿ ಕಾಣಬಹುದಾದ ಮರಗಳಲ್ಲಿ ಮುಖ್ಯವಾದುವು: ನಾರು ಬೇರು (ಅಕ್ರೊಕಾರ್ಪಸ್ ಫ್ರಾಕ್ಸಿನಿಫೋಲಿಯಸ್), ಕಾಡು ಪಿಂಡಿ (ಕೀಮ ಅಟನಿಯೋಟ), ಕಂಟದ ಮರ ಅಥವಾ ಪುತ್ರಜೀವಿ (ಪಾಲ್‌ಯಾಲ್‌ಥಿಯಾ ಲಾಂಗಿಫೋಲಿಯಾ) ಮೊದಲಾದುವು.

ಸದಾ ಹಸುರಾದ ಮಳೆಕಾಡುಗಳು ಘಟ್ಟದ ಮೇಲಿದ್ದು, ಇವುಗಳ ಎರಡನೆ ಶ್ರೇಣಿಯಲ್ಲಿ ಮಧ್ಯಮ ತರದ ಮರಗಳು ಎಂದರೆ 50–70 ಅಡಿಗಳೆತ್ತರ ಬೆಳೆಯುವ ಕೂಟಗೇರು (ಹೊಲಿಗಾರ್ನ ಆರ್ನೊಟಿಯಾನ), ಬೈರಿ (ಆಂಟಿಯಾರಿಸ್ ಟಾಕ್ಸಿಕಾರಿಯ), ಬಿಳಿ ದೇವದಾರು (ದೈಸೋಸೈಲಮ್ ಮಲಬಾರಿಕಮ್), ಹೆಬ್ಬಲಸು (ಆರ್ಟೊಕಾರ್ಪಸ್ ಹರ್‌ಸೂಟ), ಕಾಡುಲವಂಗ (ಮಾಚಿಲಸ್ ಮೈಕ್ರಾಂತ), ಇಳಿಸಿಂಗಿ (ಟೊಡಾಲಿಯ ಬೈಲಾಕುಲಾರಿಸ್), ಮೊದಲಾದವುಗಳಿರುವುವು. ಕಡಮೆ ಮಳೆ ಬೀಳುವ ಘಟ್ಟಗಳಿಂದ ಕೆಲವು ಮೈಲಿ ಪೂರ್ವ ಪ್ರದೇಶದಲ್ಲಿ ಮೇಲೆ ಹೇಳಿದ ಮತ್ತು ಇತರ ಜಾತಿಯ ಮರಗಳೂ ಬೆಳೆಯುವುವು. ಎಲೆಯುದುರುವ ಶೈತ್ಯಾಟವಿಯ ಸಸ್ಯ ಸಂಪತ್ತು ಘಟ್ಟಗಳವುಗಳಿಗಿಂತ ಬೇರೆಯಾಗಿದ್ದು ಈ ಕೆಳಗಿನ ಮರಗಳನ್ನೊಳಗೊಂಡಿರುವುದು: ಗಲವಾರ (ಆಕ್ಟಿನೋಡಾಫ್ನಿ ಹೂಕರಿ), ಸಪ್ತಪರ್ಣ (ಆಲ್‌ಸ್ಟೋನಿಯ ಷೊಲಾರಿಸ್), ಮಾಸ್ಸಿ (ಆಲ್‌ಸಿಡಾಫ್ನಿ ಸೆಮಿಕಾರ್ಪಿಫೋಲಿಯ), ದಿಂಡಿಗ (ಅನೋಗೈಸಿಸ್ ಲಾಟಿಫೋಲಿಯ), ಸಳ್ಳೆ (ಅಪರೋಸ ಲಿಂಡ್ಲಿಯಾನ), ಹೆಣ್ಣುಮತ್ತಿ (ಕ್ಯಾರಿಯ ಆರ್‌ಬೋರಿಯ), ಕಾಡು ಕಣಿಗಲು (ಡೆಲಿನಿಯ ಪೆಂಟಗೈನ), ಹೆಣ್ಣುಸಂಪಿಗೆ (ಫ್ಲಕೂರ್ಷಿಯ ಮೊಂಟಾನ), ಮಕ್ಕಿಮರ (ಗಾರ್ಸೀನಿಯ ಮೊರೆಲ್ಲ), ನಂದಿ (ಲಾಗರ್‌ಸ್ಟ್ರೋಮಿಯ ಲಾಂಸಿಲೇಟ), ವಿಷಮುಷ್ಟಿ (ಸ್ಟ್ರಿಕ್‌ನಾಸ್ ನಕ್ಸ್‌ವಾಮಿಕ), ಮತ್ತು ಅನೇಕ ಮತ್ತಿ ಜಾತಿ (ಟರ್ಮಿನ್ಯಾಲಿಯಾಸ್) ಮರಗಳು.

ಘಟ್ಟದ ಕಾಡುಗಳ ಮೂರನೇ ಶ್ರೇಣಿಯಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಮರಗಳು ಇರುತ್ತವೆ:

ಕೆಂದಾಳೆ (ಷ್ಲೈಷಿರ ಒಲಿಯೋಸ), ಹಲಸು (ಆರ್‌ಟೊಕಾರ್‌ಪಸ್ ಹೆಟರೋಫಿಲಸ್), ಪಾಚಿಗಿಡ (ಆರ್‌ಟೊಕಾರ್‌ಪಸ್ ಲಕೂಚ), ದೊಡ್ಡಜಾಜಿ (ಮಿರಿಸ್ಟಿಕ ಮಲಬಾರಿಕ), ಕದಂಬ (ಅಂಥೊಸಿಫಲಸ್ ಕದಂಬ) ಮತ್ತು ಪಾಟಗಣಿ (ಓರೋಸೈಲಮ್ ಇಂಡಿಕಮ್).

ಮಳೆಯ ಕಾಡಿನ ಬಹುಭಾಗವನ್ನು ಆಕ್ರಮಿಸಿಕೊಂಡಿರುವ ಅತಿ ಎತ್ತರದ ಮರಗಳಲ್ಲದೆ, ಕಾಡಿನ ನೆಲದಲ್ಲಿ ದಟ್ಟವಾಗಿ ಬೆಳೆಯುವ ಪೊದೆಗಳೂ ಬಳ್ಳಿಗಳೂ ಹೆಚ್ಚಾಗಿರುವುವು. ಇವುಗಳಿಂದ ರಾಜ್ಯಕ್ಕೆ ಆದಾಯವಿರುವುದಿಲ್ಲ. ಆದರೂ ಕೆಲವು ಜಾತಿ ಬೆತ್ತದ ಗಿಡಗಳಿಂದ ಬುಟ್ಟಿಗಳನ್ನೂ ಚಾಪೆಗಳನ್ನೂ ತಯಾರಿಸುವ ಉಪಯುಕ್ತವಾದ ಸಣ್ಣ ಕೈಗಾರಿಕೆಯು ಅಭಿವೃದ್ಧಿಯಾಗುತ್ತಿದೆ; ಮತ್ತೆ ಕೆಲವು ಬಳ್ಳಿಗಳು—ನಾಗಮುಷ್ಟಿ (ಸ್ಟ್ರಿಕ್‌ನಾಸ್ ಕಾಲುಬ್ರೈನ್), ಧಗಡಿ ಬಳ್ಳಿ (ಕಾಕುಲಿಸ್ ಹರ್‌ಸೂಟಸ್), ಅಮೃತ ಬಳ್ಳಿ (ಟಿನೋಸ್ಪೋರ ಕಾರ್‌ಡಿಫೋಲಿಯ) ಮೊದಲಾದವುಗಳಿಂದ ಸ್ಥಳೀಯ ಜನರು ಔಷಧಿಗಳನ್ನು ತಯಾರಿಸುತ್ತಾರೆ. ಹಸಿಯಾಗಿರುವಾಗ ಕೀಳಲು ಸಾಧ್ಯವಾಗದ ಮತ್ತು ಗಟ್ಟಿಯಾದ ಬಳ್ಳಿ(ನೀಟಮ್ ಯೂಲ) ಕಾಡುಬಳ್ಳಿ ಅಥವಾ ಕೂವೆ ಬಳ್ಳಿಯನ್ನು ಆನೆಗಳನ್ನು ಕಟ್ಟಿ ಪಳಗಿಸಲು ಉಪಯೋಗಿಸುತ್ತಾರೆ.

ಘಟ್ಟದ ತಲೆ ಭಾಗದ ಮತ್ತು ಬಯಲಾದ ಬೆಟ್ಟಗಳ ಮೇಲ್ಭಾಗದ ಮಣ್ಣೆಲ್ಲಾ ಸಂಪೂರ್ಣವಾಗಿ ಕೊಚ್ಚಿಹೋಗಿ, ವರ್ಷದ ಏಳೆಂಟು ತಿಂಗಳ ಕಾಲ ಬಹಳ ವೇಗವಾಗಿ ಬೀಸುವ ಗಾಳಿಗೆ ಈ ಭಾಗಗಳು ಒಡ್ಡಿಕೊಂಡಿರುವುವು. ಮೋಡಗಳಿಂದ ಕೂಡಿದ ಈ ಗಾಳಿಯು ಕಾಡನ್ನು ತಲುಪಿದ ಕೂಡಲೆ ಮೇಲಕ್ಕೆ ಏರಿ ವೇಗವಾಗಿ ಬಯಲ ಪ್ರದೇಶಕ್ಕೆ ನುಗ್ಗುವುದು. ಇಲ್ಲಿ ಬೆಳೆಯುವ ಗಿಡಮರಗಳ ಗಿಡ್ಡ ಬೆಳವಣಿಗೆಗೆ ಮತ್ತು ಎಲೆಗಳು ಸಣ್ಣವಾಗಿ ಕಾಂಡದ ಮೇಲಿರುವ ಅನೇಕ ಸಣ್ಣ ಪೊಟರೆಗಳನ್ನು ತುಂಬಿರುವುದಕ್ಕೆ ಜೋರಾಗಿ ಬೀಸುವ ಗಾಳಿಯೇ ಕಾರಣವಾಗಿದೆ. ಇಂಥಾ ಪ್ರದೇಶ ಮತ್ತು ಸನ್ನಿವೇಶದಲ್ಲಿ ಗಾಳಿಯ ಎದುರು ಕಡೆಗಿಂತ, ಮರೆಯಾದ ಕಡೆ ಮರಗಿಡಗಳು ಬಹಳ ಎತ್ತರದ ವರೆಗೂ ಬೆಳೆಯುವುವು.

4000 ಅಡಿಗಳೆತ್ತರಕ್ಕಿಂತಲೂ ಮಿಗಿಲಾದ ಬೆಟ್ಟಗುಡ್ಡಗಳ ತಲೆಭಾಗವು ಎತ್ತರವಾಗಿಯೂ ದಟ್ಟವಾಗಿಯೂ ಬೆಳೆಯುವ ಹುಲ್ಲಿನಿಂದ ಆಚ್ಛಾದಿತವಾಗಿರುವುದು. ಈ ಹುಲ್ಲುಗಾವಲಿನ ಇಳಿಜಾರು ಪ್ರದೇಶದಲ್ಲಿ ಎಲ್ಲಿಯಾದರೂ ಒಂದು ಝರಿ ಅಥವಾ ಹರಿಯುವ ಹಳ್ಳವಿದ್ದಲ್ಲಿ, ಅದರ ಬದಿಯಲ್ಲಿ ಅನೇಕ ಮರಗಳು ಬೆಳೆಯುವುವು. ಇಂಥಾ ಸಸ್ಯ ಸಮೂಹವನ್ನುಳ್ಳ ಪ್ರದೇಶವನ್ನು 'ಷೋಲಾ' ಎಂದು ಕರೆಯುತ್ತಾರೆ. ಷೋಲಾದ ಮೇಲ್ಭಾಗದಿಂದ ನೀರು ಹರಿಯುವ ಝರಿಯ ಕಡೆಗೆ ಇಳಿಜಾರಿನಲ್ಲಿ ನಡೆದು ಬಂದರೆ, ಹುಲ್ಲುಗಾವಲು ಕೊನೆಯಾಗಿ, ಗುಂಪು ಗುಂಪಾಗಿ ಬೆಳೆಯುವ ಪೊದೆಗಳು ಪ್ರಾರಂಭವಾಗುವುವು. ಈ ಪೊದೆಗಳು ಮೂರರಿಂದ ಏಳು ವರ್ಷಗಳಿಗೊಮ್ಮೆ ಹೂ ಬಿಡುವುವು. ಹೂವುಗಳು ಕೆಂಪು ಮತ್ತು ನೀಲಿ ಬಣ್ಣವಾಗಿದ್ದು ಆ ಪ್ರದೇಶವೆಲ್ಲಾ ಬಣ್ಣದಿಂದ ಹರಡಿದಂತೆ ಬಹಳ ಚೆನ್ನಾಗಿ ಕಾಣುವುದು.

4000 ಅಡಿಗಳೆತ್ತರವಿರುವ ಬೆಟ್ಟಗಳ ಮೇಲ್ಭಾಗಗಳು, ಅಥವಾ ಕಡೆಯ 1000 ಅಡಿಗಳು ಬಹಳ ಕಡಿದಾಗಿದ್ದು, ಆ ಪ್ರದೇಶಗಳಲ್ಲಿ ಹುಲ್ಲುಮಾತ್ರ ಬೆಳೆಯುತ್ತದೆ. ಗಿಡ್ಡ ಮರಗಳು ಇಳಿಜಾರಿನಲ್ಲಿರುತ್ತವೆ. ತಪ್ಪಲಲ್ಲಿ ಜರಿಗಿಡಗಳು (ಟೆರಿಡಿಯಮ್) ಮಾತ್ರ ಬೆಳೆಯುವುವು.

ವರ್ಷಕ್ಕೆ 40 ರಿಂದ 100 ಅಂಗುಲಗಳ ವರೆಗೆ ಮಳೆ ಬೀಳುವ ಎಲೆಯುದುರುವ ಕಾಡಿನಿಂದ ಕೂಡಿದ 'ಮಳೆಯ ಮರೆಯ ಮಂಡಲ' (ರೈನ್ ಪ್ಯಾಡೋ ಬೆಲ್ಟ್) ಒಂದಿರುವುದು. ಈ ಮಂಡಲವು ಚೆನ್ನಾಗಿ ಬೆಳೆದು, ತೆರೆದು ನಿಂತ ಮಿಶ್ರ ಜಾತಿಯ ಎಲೆಯುದುರುವ ಕಾಡುಗಳಿಂದ ಕೂಡಿದುದು. ಈ

ಪ್ರದೇಶವು ಬಹಳ ಉಪಯುಕ್ತವಾದ ಭಾಗವಾಗಿರುವುದರಿಂದಲೇ ಬೊಂಬುಗಳೂ ಮರಮುಟ್ಟುಗಳೂ ಒದಗಿಸಲ್ಪಡುವುವು. ಇಲ್ಲಿ ಸಾಧಾರಣ ಎತ್ತರವಾಗಿ ಬೆಳೆಯುವ ಮತ್ತಿ (ಟೆರ್ಮಿನೇಲಿಯ ಟೊಮೆಂಟೋಸಾ), ದಿಂಡಿಗ (ಅನೋಗೈಸಿಸ್ ಲ್ಯಾಟಿಫೋಲಿಯ), ತೇಗ ಅಥವಾ ಟೀಕ್ (ಟೆಕ್‌ಟೋನ ಗ್ರಾಂಡಿಸ್), ನೆಲ್ಲಿ (ಎಂಬ್ಲಿಕ ಅಫಿಸಿನಾಲಿಸ್), ಕೆಂದಾಳೆ (ಸ್ಲೈಷೀರ ಒಲಿಯೋಸ), ತಡಸಲು (ಗ್ರೂವಿಯ ಟೆಲಿಯ ಫೋಲಿಯ), ಮುತ್ತುಗ (ಬೂಟಿಯ ಮಾನೋಸ್ಪರ್ಮ), ಕಕ್ಕೆಗಿಡ (ಕ್ಯಾಸಿಯ ಫಿಶ್ಚುಲ), ವನಸಂಪಿಗೆ (ಬಾಹೀನಿಯ ರೆಸಿಮೋಸ), ಪಾರ್‌ಪಾಲಿ (ಜಿಜಿಫಸ್ ಸೈಲೋಫೊರಸ್) ಮತ್ತು ಹುಚ್ಚನಿಂಬೆ (ಅಟಲಾಂಟಿಯ ರೆಸಿಮೋಸ) ಮೊದಲಾದ ಮರಗಳು ಮತ್ತು ಮಧ್ಯೆ ಮಧ್ಯೆ ಗಂಡುಬಿದಿರು (ಡೆಂಡ್ರೋಕಲೆಮಸ್ ಸ್ಟ್ರಿಕ್‌ಟಸ್) ಮತ್ತು ಬೊಂಬು ಅಥವಾ ಬಿದಿರು (ಬಾಂಬೂಸ ಬಾಂಬಾಸ್) ಪೊದೆಗಳೂ ಬೆಳೆಯುತ್ತವೆ. ಈ ಭಾಗದಲ್ಲಿ ಬೆಳೆಯುವ ಬಳ್ಳಿಗಳು ಮತ್ತು ಪೊದೆಗಳಲ್ಲಿ ಮುಖ್ಯವಾದವುಗಳು—ಮಿರಿಡಿಗಿಡ (ಫ್ಲಕೂರ್‌ಷಿಯ ಇಂಡಿಕ), ಮಂಗಾರೆಕಾಯಿ ಅಥವಾ ಗಿಡ (ರಾಂಡಿಯ ಡುಮೆಟೋರಮ್), ಕಾರೆಗಿಡ (ಕ್ಯಾಂಥಿಯಮ್ ಡಿಕಾಕಮ್) ಕಲ್ಲಿನ ಹಂಬು ಅಥವಾ ಅಚ್ಚೆಗಿಡ (ಆರ್‌ಗೈರಿಯ ಕೂನಿಏಟ), ಶತಾವರಿ (ಆಸ್‌ಪರಾಗಸ್ ಏಷ್ಯಾಟಿಕಸ್), ಹಲವು ಮಕ್ಕಳ ಬಳ್ಳಿ (ಆಸ್‌ಪರಾಗಸ್ ರೇಸಿಮೋಸಸ್) ಸೊಗದೇಬೇರು (ಹೆಮಿಡೆಸ್‌ಮಸ್ ಇಂಡಿಕಸ್), ಸಂಬಾರ ಬಳ್ಳಿ (ಆಂಪೆಲೋಸಿಸಸ್ ಟೋಮೆಂಟೋಸ), ಪರಂಗಿಚೆಕ್ಕೆ (ಸ್ಮೈಲಾಕ್ಸ್ ಮಾಕ್ರೊಫಿಲ). ಇವುಗಳಲ್ಲಿ ಅನೇಕ ಜಾತಿಯವು ಸಾಧಾರಣ ವನ್ಯಪದಾರ್ಥಗಳ ಉತ್ಪತ್ತಿಗೆ ಕಾರಣವಾಗಿದ್ದು ಸ್ಥಳೀಯ ಮಿತವ್ಯಯಾಡಳಿತಕ್ಕೆ ಉಪಯೋಗವಾಗಿರುವುವು.

ಕರ್ನಾಟಕದ ಪೂರ್ವ ಭಾಗದ ಅನೇಕ ಜಿಲ್ಲೆಗಳು ಪೊದರು ಕಾಡಿನಿಂದ ಕೂಡಿ ಅಲ್ಲಲ್ಲಿ ಸಾಗುವಾನಿ ಅಥವಾ ತೇಗ ಮರಗಳು ಬೆಳೆಯುವುದನ್ನು ನೋಡಬಹುದು. ಈ ಕಾಡಿನ ಬಹು ಭಾಗವು ಸಣ್ಣ ಮರಗಳು, ಪೊದರುಗಳು ಮತ್ತು ಇತರ ಸಸ್ಯಗಳಿಂದ ಕೂಡಿದ ಕುರುಚಲು ಕಾಡಾಗಿರುವುದಲ್ಲದೆ, ಬೇಸಗೆ ಕಾಲದಲ್ಲಿ ಎಲೆಗಳುದುರಿ ಅಥವಾ ಬೆಂಕಿಯಿಂದ ಸುಟ್ಟು ಹೋಗಿರುತ್ತದೆ. ವರ್ಷದ ಏಳು ತಿಂಗಳು ಅಥವಾ ಇನ್ನೂ ಹೆಚ್ಚು ಕಾಲ ಈ ಭಾಗವು ಮಳೆ ಇಲ್ಲದೆ ಒಣಗಿರುತ್ತದೆ. ಫಲವತ್ತಾದ ಮಣ್ಣು ಇಲ್ಲದೆ ಇರುವುದರಿಂದ, ಸ್ವಾಭಾವಿಕವಾದ ಸಸ್ಯಗಳು ಏನಿದ್ದರೂ ಸಣ್ಣ ಗುಡ್ಡಗಳ ಮೇಲ್ಭಾಗದಲ್ಲಿ ಮಾತ್ರ ಇರುತ್ತವೆ. ಈ ಭಾಗದ ಎಲ್ಲಾ ಪ್ರದೇಶಗಳಲ್ಲಿಯೂ ಕೇವಲ ಕೆಲವೇ ಜಾತಿಯ ಗಿಡಗಳು ಅನಿಶ್ಚಿತವಾದ ಜೀವನವನ್ನು ನಡೆಸುತ್ತಿರುವುವು. ಈ ಭಾಗದ ಮುಖ್ಯವಾದ ಮರಗಳು ಈ ರೀತಿ ಇವೆ: ಜಾಲಿ (ಅಕೇಸಿಯಾ ಜಾತಿಯವು), ಮಿರಿಡಿಗಿಡ (ಫ್ಲಕೂರ್‌ಷಿಯ ಇಂಡಿಕ), ರೆಪ್ಪೆಗಿಡ (ಕೆಪ್ಪಾರಿಸ್ ಡೈವಾರಿಕೇಟ), ಬಂದರೆ ಅಥವಾ ಹಂಗರಿಕೆ (ಡೋಡೋನಿಯ ವಿಸ್‌ಕೋಸ), ಚಿಕ್ಕಗರಿಕೆಲೆ (ಗ್ರೂವಿಯ ಫ್ಲಾವಿಸೆನಸ್) ಇತ್ಯಾದಿ. ಈ ಕಾಡನ್ನು ಸಂರಕ್ಷಿಸಿದರೆ, ಇದರಲ್ಲಿ ದಿಂಡಿಗ (ಅನೊಗೈಸಿಸ್ ಲಾಟಿಫೋಲಿಯ), ಶ್ರೀಗಂಧ (ಸಾಂಟಾಲಮ್ ಆಲ್‌ಬಮ್), ಅರಿಶಿನ ಬೂರುಗ (ಕಾಕ್ಲೊಸ್ಪರ್‌ಮ್ ಗಾಸಿಪಿಯುಮ್), ಬೂರುಗ ಅಥವಾ ಶಾಲ್ಮಲಿ (ಶಾಲ್ಮಾಲಿಯ ಮಲಬಾರಿಕ), ಕಕ್ಕೆ ಗಿಡ (ಕ್ಯಾಸಿಯ ಫಿಶ್ಚುಲ), ಮುತ್ತುಗ (ಬೂಟಿಯ ಮನೋಸ್ಪರ್ಮ), ಜಗಳಗಂಟೆ (ದಿಯೋಸ್ಪಿರಸ್ ಮಂಟಾನ) ಮತ್ತು ಅಂಕೋಲೆ ಮರ (ಅಲಾಂಜಿಯಮ್ ಲಮಾರ್ಕ್ಕಿಯೈ) ಮುಂತಾದ ಮರಗಳು ಬೆಳೆಯುವುವು. ಕೆಲವು ಕಾಡುಗಳಲ್ಲಿ ಬಿದಿರು ಯಥೇಚ್ಛವಾಗಿ ಬೆಳೆದಿರುವುದು.

ಎಲೆಯುದುರುವ ಈ ಕಾಡಿನಿಂದಲೇ ಕರ್ನಾಟಕದ ಬೆಳೆಯುತ್ತಿರುವ ಜನಸಂಖ್ಯೆಗೆ ಬಹಳ ಹಿಂದಿನ ಕಾಲದಿಂದಲೂ ಸೌದೆ ಮತ್ತು ಕಟ್ಟಿಗೆ ಸರಬರಾಜಾಗುತ್ತಿರುವುದು. ಎಲ್ಲಿ ಸ್ವಾಭಾವಿಕವಾಗಿ ಬೆಳೆದ ಮರಗಿಡಗಳನ್ನು ಕಡಿಯುತ್ತಾರೋ ಅಂಥಾ ಬಯಲು ಪ್ರದೇಶಗಳನ್ನು ಲಂಟಾನಾ ಗಿಡವು ಆಕ್ರಮಿಸಿಕೊಳ್ಳುವುದು. ಅಂಥ ಕಡೆ ಇತರ ಜಾತಿಯ ಮರಗಳು ನಿರ್ಮೂಲವಾಗುತ್ತವೆ. ಗಂಧದ ಸಸಿಗಳಿಗೆ ಲಂಟಾನಾ ಗಿಡವು ಬಲವಾದ ಬೇಲಿಯಾಗಿ ಪರಿಣಮಿಸುವುದು. ಬರಡು ಮೈದಾನ ಪ್ರದೇಶದಲ್ಲಿ ಮರಗಿಡಗಳು ಅಲ್ಲಲ್ಲಿ ತೇಪೆ ಹಾಕಿದಂತೆ ತಗ್ಗು ಭೂಮಿಯಲ್ಲೂ ಕಣಿವೆಗಳಲ್ಲೂ ಬೆಳೆಯುವುವು.

ಇನ್ನೂ ಅನೇಕ ಕಡೆಗಳಲ್ಲಿ ಹೆಂಡ ಇಳಿಸಲು ಯೋಗ್ಯವಾದ ಬಗನಿ (ಕ್ಯಾರಿಯೋಟ ಯುರೆನಸ್) ಮತ್ತು ಈಚಲು (ಫೀನಿಕ್ಸ್ ಸಿಲ್‌ವೆಸ್ಟ್ರಿಸ್) ಗಿಡಗಳು ಅಲ್ಲಿ ಇಲ್ಲಿ ಚದುರಿಕೊಂಡಂತೆ ಬೆಳೆದಿರುವುವು.

ಸಾಧಾರಣವಾಗಿ ಹಳ್ಳಿಗಳ ಸುತ್ತಮುತ್ತಲು ಬರಡು ಬಯಲಿನ ದೃಶ್ಯಕ್ಕೆ ವ್ಯತಿರಿಕ್ತವಾಗಿ ಅನೇಕ ಮರಗಳನ್ನು ನೋಡಬಹುದು. ಇವುಗಳಲ್ಲಿ ಮುಖ್ಯವಾದುವು : ಮಾವಿನ ಮರ (ಮಾಂಜಿಫೆರ ಇಂಡಿಕ), ಹಲಸಿನಮರ (ಆರ್‌ಟೊಕಾರ್‌ಪಸ್ ಇಂಟಗ್ರಿಫೋಲಿಯ), ಹುಣಿಸೆಮರ (ಟಾಮರಿಂಡಸ್ ಇಂಡಿಕಸ್), ಪರಂಗಿಮರ (ಕಾರಿಕ ಪಪಾಯ), ಬಾಳೆಗಿಡ (ಮ್ಯೂಸ ಸೇಪಿಯಂಟಮ್) ಮತ್ತು ಹೊಂಗೆಮರ (ಪೋಂಗೇಮಿಯ ಪಿನ್ನೇಟ) ಮುಂತಾದುವು. ತೆಂಗಿನಮರ (ಕೊಕೋಸ್ ನ್ಯುಸಿಫೆರ) ಮತ್ತು ಅಡಕೆ ಮರ (ಅರಿಕ ಕಾಟಿಚು) ಇವುಗಳ ತೋಟಗಳೂ ಇರುತ್ತವೆ. ಹೊರದೇಶಗಳಿಂದ ಬಂದು ನೆಲಸಿ ಅಭಿವೃದ್ಧಿಯಾಗಿ ಬೆಳೆಯುವ ಕ್ಯಾಸರಿಕೆ (ಕ್ಯಾಸುರೈನ ಇಕ್ವಿಸಿಟಿಫೋಲಿಯ) ಮತ್ತು ನೀಲಗಿರಿ ತೈಲದ ಮರ (ಯೂಕಲಿಪ್ಟಸ್ ಗ್ಲೋಬೋಸ) ಇವುಗಳು ಇಲ್ಲಿನ ಜನಸಮೂಹದ ಕ್ಷೇಮಕ್ಕೆ ಹೆಚ್ಚು ಹೆಚ್ಚಾಗಿ ಸಹಕಾರಿಯಾಗಿವೆ.

ಕರ್ಣಾಟಕದ ಉತ್ತರ ಭಾಗದಲ್ಲಿ ವಿಶಾಲವಾದ ಹುಲ್ಲುಗಾವಲುಗಳಿವೆ. ಶುಷ್ಕವಾದ ಮತ್ತು ಸಾರರಹಿತ ಮಣ್ಣಿರುವುದರಿಂದ, ಹುಲ್ಲು ಮತ್ತು ಕುರುಚಲು ಪೊದೆಗಳು ಗುಂಪು ಗುಂಪಾಗಿ ಬೆಳೆಯುವುವು. ಸಾಕಾದಷ್ಟು ತೇವವಿರುವ ಕಡೆಗಳಲ್ಲಿ ಮತ್ತಿಮರ (ಟರ್ಮಿನೇಲಿಯ ಕ್ರಿನ್ಯುಲೇಟ), ದಿಂಡಿಗ (ಅನೋಗೈಸಿಸ್ ಲಾಟಿಫೋಲಿಯ) ಮತ್ತು ಕರಿಹೊನ್ನೆಮರ (ಊಜಿನಿಯ ಊಜಿನೆನ್‌ಸಿಯ) ಇವುಗಳು ಕಂಡುಬರುವುವು. ಇಲ್ಲದಿದ್ದರೆ, ಈ ನಿಸ್ಸಾರವಾದ ಶುಷ್ಕ ಮಣ್ಣಿನಲ್ಲಿ ಧೂಪದ ಮರ (ಬಾಸ್ವೆಲಿಯ ಸೆರ್ರೇಟ) ಒಂದೇ ಬೆಳೆಯುವುದು. ಬಯಲು ಪ್ರದೇಶದಲ್ಲಿ ಪ್ರಸರಿಸುವ ಹುಲ್ಲುಗಳಲ್ಲಿ ಉರುಕುನ ಹುಲ್ಲು (ಡೈಕಾಂಥಿಯಮ್ ಆನ್ಯುಲೇಟಮ್), ಗಂಜಿಗರಿಕೆ ಹುಲ್ಲು (ಕ್ರೈಸೋಪೋನಾಂ ಮೊಂಟಾನಸ್), ತೆಂಗಿನ ನಾರು ಹುಲ್ಲು (ಐಸೆಲೀಮ ಲಾಕ್ಸಮ್), ಪೊರೆಹುಲ್ಲು (ಬ್ರಾಕಿಏರಿಯ ಇಸಾಕ್ಕಿ) ಮತ್ತು ಸುಂಕಾರಿಹುಲ್ಲು (ಹೆಟಿರೋಪೊಗಾಂ ಕಂಟಾರ್‌ಟಸ್) ಇವೇ ಮುಖ್ಯವಾದುವು.

ಪೂರ್ವಭಾಗದ ಶುಷ್ಕ ಪ್ರದೇಶದ ಪ್ರತಿ ಪಟ್ಟಣ ಮತ್ತು ಹಳ್ಳಿಗಳ ಹತ್ತಿರ ಕೆರೆಗಳು ಇದ್ದೇ ಇರುತ್ತವೆ. ತುಂಬಿದ ಕೆರೆಗಳಲ್ಲಿ ಅನೇಕ ಜಾತಿಯ ನೀರು ಗಿಡಗಳು ಬೆಳೆಯುವುವು. ಇವುಗಳಲ್ಲಿ ಕೆಲವು ನೀರಿನ ಕೆಳಗೆ ಬೇರು ಬಿಟ್ಟು ಬೆಳೆಯುವುವು ; ಮತ್ತೆ ಕೆಲವು ನೀರಿನ ಮೇಲೆ ತೇಲಾಡುತ್ತ ಬೆಳೆಯುವುವು. ಕೆರೆಗಳ ಅಂಚಿನಲ್ಲಿ ಜೌಗು ಅಥವಾ ಕೆಸರು ಪ್ರದೇಶವಿದ್ದು, ಅದರಲ್ಲಿ ಜೊಂಡು, ಮಂದಲಿಗೆ ಹುಲ್ಲು ಮತ್ತು ಹೂವಿನ ಗಿಡಗಳು ಬೆಳೆಯುವುವು.

ಜೌಗು ಪ್ರದೇಶಕ್ಕೆ ಸೇರಿದ ಹಾಗೆ ನೀರಿನ ಅಂಚಿನಲ್ಲಿ ಬಹಳ ಗಿಡಗಳು ಬೆಳೆಯುವುವು. ಅವುಗಳಲ್ಲಿ ಅತಿ ಮುಖ್ಯವಾದುದು ತಾವರೆಗಿಡ. ಇದು ಜಲಾಶಯವನ್ನೇ ಆವರಿಸಿಕೊಂಡಿದ್ದರೂ, ಆಳವಿಲ್ಲದ ನೀರಿನಲ್ಲಿ ಬೆಳೆಯುವ ಗಿಡ. ಅದರ ಬೇರು ನೆಲದಲ್ಲಿ ನಾಟಿಕೊಂಡಿರಲೇ ಬೇಕಾಗಿದೆ. ಜೌಗುಸ್ಥಳದಲ್ಲಿ ಇತರ ಗಿಡಗಳೂ ಉಂಟು. ಅವು ಕೊಳದ ಮೇಲೆ ಉದ್ದಕ್ಕೂ ದಾರಿ ಮಾಡಿಕೊಂಡು ಹಬ್ಬುವುವು. ಜೌಗು ನೆಲದಲ್ಲಿ ಹುಟ್ಟಿ, ನೀರಿನ ಮೇಲೂ ತೇಲಾಡ ಬಲ್ಲ ಇಂಥಾ ಜಲಸ್ಥಳೀಯಗಳು ನೀರಿನ ಮೇಲೆ ಪರದೆಯಂತೆ ಬೆಳೆಯುವ ಗಿಡಗಳಲ್ಲಿ ಮುಖ್ಯವಾದುವು—ನೀರುದಂಟು (ಜಸ್ಸಿಯ ರಾಫೆನ್ಸ್), ಕೆಸರಿನ ಗೆಡ್ಡೆ (ಕಲೋಕೇಸಿಯ ಆಂಟಿಕೋರಮ್), ಬಿಳಿಹಂಬು (ಮಾರ್ಸಿಲಿಯ ಕ್ವಾಡ್ರುಫೋಲಿಯ, ಐಪೋಮಿಯ ರೆಪ್‌ಟಾನ್ಸ್), ಜಲಬ್ರಾಹ್ಮಿ (ಮೊನಿರ ಕ್ಯೂನಿಫೋಲಿಯ), ಪಾಚಿಹುಲ್ಲು (ಲೀರ್‌ಸಿಯ ಹೆಕ್ಸಾಂಡ್ರ),

ನೀರುಕಣಿಗಲು (ಪಾಲಿಗೋನು ಓರಿಯಂಟಾಲ್), ಮತ್ತು ಬೆಂಡು ಕಸ ಅಥವಾ ಬೆಂಡುಗಿಡ (ಎಸ್ಕಿನೋಮಿನಿ ಇಂಡಿಕ) ಇತ್ಯಾದಿ.

ಮೇಲೆ ಹೇಳಿದ ಹಾಗೆ, ಒಂದು ಕೆರೆಯ ಹೆಚ್ಚು ನೀರು ಇನ್ನೊಂದು ಕೆರೆಗೆ ಚಿಕ್ಕ ನದಿ ಅಥವಾ ಕಾಲುವೆಯ ಮೂಲಕ ಹರಿದು ಹೋಗುವುದು. ಇಂಥಾ ನದಿ ಅಥವಾ ಕಾಲುವೆಯ ದಡಗಳಲ್ಲಿ ಅನೇಕ ಮರಗಿಡಗಳೂ ಹುಲ್ಲೂ ನಿಯತ ಕಾಲಗಳಲ್ಲಿ ಬೆಳೆಯುವುವು. ಕೆಲವು ಬಗೆಯಹುಲ್ಲು ವರ್ಷವೆಲ್ಲ ಬೆಳೆಯುತ್ತದೆ. ಇವುಗಳಲ್ಲಿ ಮುಖ್ಯವಾದುವು ಡಬ್ಬೆಜಂಬು ಹುಲ್ಲು (ಸೈಪರಸ್ ಐರಿಯ), ವಿಷ ಬಿದುರು (ಕ್ರೈನಮ್ ಏಷ್ಯಾಟಿಕಮ್), ಕಾಡು ಸಣ್ಣಸಾಮೆ ಹುಲ್ಲು (ಐಸಾಕ್ಕಿ ಡಿಸ್ಪಾರ್), ಕಾವಕೂಲ (ಜಸ್ಸಿಯ ಸಪ್ರೂಟಿಕೋಸ), ಹಾರಕ (ಪಾಸ್‌ಪಾಲಮ್ ಸಾಕ್ರೊಬೈಕುಲೇಟಮ್), ಬೆಟ್ಟಂಚಿ ಹುಲ್ಲು (ಥೆಮಿಡಾ ಟ್ರೈಯಾಂಡ್ರ). ಬೇಸಿಗೆಯಲ್ಲಿ ಒಣಗಿ ಬಿರಿದಿರುವ ಕೆರೆಗಳ ಅಂಗಳದಲ್ಲೂ ನದಿಗಳ ಪಾತ್ರದಲ್ಲೂ ಸಾಧಾರಣವಾಗಿ ಬಿಳಿಸೂಲಿಗಿಡ (ಬ್ರೆನಿಯ ರಾಂನಾಯಿಡಿಸ್), ಜರೀಹುಲ್ಲು (ಇರಾಗ್ರಾಸ್‌ಟಿಸ್ ಜಪಾನಿಕ), ಚಂದ್ರಕಾಶಿಸೊಪ್ಪು ಅಥವಾ ಗಿಡ (ಮೊಲ್ಲಗೊ ಲೊಟಾಯಿಡಿಸ್), ನೀರಣಿಗೆ ಸೊಪ್ಪು (ಪಾಲಿಗೋನಂ ಪ್ಲೆಬಿಜಮ್) ಮತ್ತು ಮೂಡಿಗಿಡ ಅಥವಾ ಬೋಡು ಕಡಲೆ ಸೊಪ್ಪು ಇವುಗಳು ಪ್ರಸರಿಸದಂತೆ ಬೆಳೆದಿರುವುದನ್ನು ಕಾಣಬಹುದು.

ಮನುಷ್ಯನ ವ್ಯಾಧಿಗಳನ್ನು ಹೋಗಲಾಡಿಸಲು ಸಸ್ಯಗಳು, ಸಸ್ಯಭಾಗ ಮತ್ತು ಅವುಗಳ ಉತ್ಪನ್ನಗಳನ್ನು ಅನಾದಿ ಕಾಲದಿಂದಲೂ ಉಪಯೋಗಿಸುವುದು ರೂಢಿಯಲ್ಲಿದೆ. ಬಾಬಾಬುಡನ್‌ಗಿರಿ ಮತ್ತು ಕಪ್ಪದ ಗುಡ್ಡ ಅಥವಾ ಕಪೋತಗಿರಿ (ಗದಗಿನ ಹತ್ತಿರ) ಯಲ್ಲಿ ಅನೇಕಾನೇಕ ಮೂಲಿಕೆಗಳಿವೆಯೆಂದು ಪ್ರಸಿದ್ಧವಾಗಿದೆ. ರಾಮರಾವಣರ ಯುದ್ಧದಲ್ಲಿ ಮೂರ್ಛೆಗೊಂಡ ಲಕ್ಷ್ಮಣನನ್ನು ಎಚ್ಚರಿಸಲು ಹನುಮಂತನು ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಚಂದ್ರದ್ರೋಣ ಪರ್ವತದಿಂದ ಸಂಜೀವಿನಿ ಮೂಲಿಕೆಯನ್ನು ತಂದನೆಂದು ಜನರ ಪರಂಪರಾಗತವಾಗಿ ಬಂದ ನಂಬಿಕೆ. ಬೆಟ್ಟ ಗುಡ್ಡಗಳಲ್ಲಿರುವ ಮೂಲಿಕೆಗಳಲ್ಲದೆ, ಸಾಮಾನ್ಯ ಜನಗಳ ವಾಸಸ್ಥಳದ ಸಮೀಪದಲ್ಲಿ ಸಿಕ್ಕುವ ಅನೇಕಾನೇಕ ಕಾಡುಗಿಡಗಳನ್ನು ಔಷಧಿಯಾಗಿ ಉಪಯೋಗಿಸುವುದನ್ನು ನೋಡಿದ್ದೇವೆ. ಪಾಳುಭೂಮಿ ಹಾಗೂ ತೋಟಗಳಲ್ಲಿ ಸಾಧಾರಣವಾಗಿ ಕಂಡುಬರುವ ಕುಪ್ಪಿಗಿಡ ಅಥವಾ ಸೊಪ್ಪಿನ ಕಷಾಯವು ಹಾವಿನ ವಿಷಕ್ಕೆ ಗುಣಕಾರಿ ಎಂದೂ ಅದರ ಎಲೆಗಳನ್ನು ಒಣಗಿಸಿ ಪುಡಿಮಾಡಿ ಉಪಯೋಗಿಸಿದರೆ ಗಾಯಗಳು ಮಾಯುವುವೆಂದೂ ತಿಳಿದು ಬರುತ್ತದೆ. ಇದರಂತೆ ಎಲ್ಲಾ ಕಡೆಗಳಲ್ಲೂ ಬೆಳೆಯುವ ಉತ್ತರಾಣಿ ಗಿಡ (ಅಖೈರಾಂಕಸ್ ಆಸ್ಪೆರ) ವು ಜಲೋದರ ರೋಗಕ್ಕೆ ಗುಣಕಾರಿಯೆಂದು ತಿಳಿದು ಬಂದಿದೆ. ಆಡುಸೋಗೆ (ಅಡತೋಡ ವಸಿಕ) ಸೊಪ್ಪಿನ ರಸವು ಕೆಮ್ಮು, ಗಂಟಲುನೋವು ಮತ್ತು ಗೂರ್ಲು ರೋಗಗಳಿಗೆ ಪರಮೌಷಧಿ ಎಂದು ಎಲ್ಲರಿಗೂ ತಿಳಿದೇ ಇದೆ. ಬಿಲ್ವಪತ್ರೆ ಗಿಡದ ಎಳನಾರು ದಿನ ಬಿಟ್ಟು ದಿನ ಬರುವ ಜ್ವರಕ್ಕೆ ಒಳ್ಳೆಯದು ; ಮತ್ತು ಇದರ ಹಣ್ಣು ಮಲಬದ್ಧತೆಯನ್ನು ನಿವಾರಿಸ ಬಲ್ಲದು. ಸಪ್ತಪರ್ಣ (ಅಲ್‌ಸ್ಟೋನಿಯ ಷೊಲಾರಿಸ್) ಗಿಡವು ಖಾಯಿಲೆಯಿಂದ ಗುಣಮುಖವಾಗಿರುವವರಿಗೂ, ಜ್ವರ ಮತ್ತು ನಿಶ್ಯಕ್ತಿ ಇವುಗಳಿರುವವರಿಗೂ ಒಳ್ಳೆಯದು. ಅನೇಕ ಹಳ್ಳಿಗಳ ಸುತ್ತಮುತ್ತಲ ಬಯಲು ಪ್ರದೇಶಗಳಲ್ಲಿ ಬೆಳೆಯುವ ಮಾಚೀಪತ್ರೆಗಿಡ (ಆರ್ಟಿಮಿಸಿಯ) ದ ಹೂವುಗಳಲ್ಲೂ ಎಲೆಗಳಲ್ಲೂ ಸ್ಯಾಂಟೋನಿನ್ ಎಂಬ ರಾಸಾಯನಿಕ ಪದಾರ್ಥವು ಹೆಚ್ಚಾಗಿರುವುದರಿಂದ, ಇವನ್ನು ಕರುಳಿನ ಜಂತುಹುಳುಗಳ ನಿವಾರಣೆಗೆ ಉಪಯೋಗಿಸುತ್ತಾರೆ. ಇನ್ನೊಂದು ಕಳೆಗಿಡವೆಂದು ಪರಿಗಣಿಸಲ್ಪಟ್ಟಿರುವ ರಕ್ತಪುನರ್ನವ (ಬೋಯರ್‌ಹೀವಿಯ ರಿಪೆನ್ಸ್) ಗಿಡದ ಬೇರು ಮೂತ್ರ ರೋಗಕ್ಕೂ ಕರುಳಿನ ಕ್ರಿಮಿನಾಶಕ್ಕೂ ಉಪಯೋಗವಾಗುವುದಲ್ಲದೆ ಮಲಬದ್ಧತೆಯನ್ನು ಗುಣಮಾಡುವುದು. ಲಿಂಗತೊಂಡೆ ಬಳ್ಳಿ (ಬಯೋನಿಯ ಡೈಯೋಕ) ಸೊಪ್ಪನ್ನು ಕೆಮ್ಮು ಮತ್ತು ಗಂಟಲುನೋವಿಗೆ ಉಪಯೋಗಿಸುತ್ತಾರೆ. ಕರಿ ಉಮ್ಮತ್ತಿ (ದತೂರ ಫಾಸ್ಟಿಯೋಸ) ಗಿಡದ ಎಲೆಗಳು ಮತ್ತು ಬೀಜಗಳು

ತುಂಬಾ ವಿಷಭರಿತವಾಗಿದ್ದು ಅವುಗಳ ಭಟ್ಟಿ ಇಳಿಸಿದ ಸಾರವು ಗೂರ್ಲು ರೋಗ ಮತ್ತು ನಾಯಿಕೆಮ್ಮಲಿಗೆ ಬಹಳ ಉಪಯುಕ್ತವಾಗಿರುವುದು. ನೀರು ಬ್ರಾಹ್ಮಿ (ಬಾಕೊಪ ಮೊನ್ನೇರಿ) ಗಿಡವು ಜೌಗು ಪ್ರದೇಶದಲ್ಲಿ ಬೆಳೆಯುವುದು. ಇದರ ಎಲೆಯ ರಸವನ್ನು ಮೂರ್ಛೆರೋಗ ಮತ್ತು ಉನ್ಮಾದ ರೋಗಗಳಿಗೆ ಕಾರಣವಾದ ನರಗಳ ಬಲಹೀನತೆಯನ್ನು ಹೋಗಲಾಡಿಸುವುದಕ್ಕೆ ಉಪಯೋಗಿಸುತ್ತಾರೆ. ಇದೇ ರೀತಿ ಇನ್ನೊಂದು ಮೂಲಿಕೆಗಿಡ ಒಂದೆಲಗ (ಸೆಂಟೆಲ ಏಷ್ಯಾಟಿಕ) ಇದನ್ನು ಶಕ್ತಿವರ್ಧಕ ಮತ್ತು ಉತ್ತೇಜನಕಾರಿಯಾಗಿ ಉಪಯೋಗಿಸುತ್ತಾರೆ. ತುಲಸಿಗಿಡವನ್ನು (ಆಸಿಮಮ್ ಸಾಂಕ್ಟಮ್) ಪ್ರತಿಯೊಂದು ಮನೆಯಲ್ಲೂ ಜಠರ ವ್ಯಾಧಿಗಳ ನಿವಾರಣೆಗೆ ಉಪಯೋಗಿಸುವರು. ಹರಳು ಗಿಡವನ್ನು (ರೆಸಿನಸ್ ಕಮುನಿಸ್) ಅದರ ಬೀಜಗಳಿಂದ ಬರುವ ಎಣ್ಣೆಗೋಸ್ಕರ ಉಪಯೋಗಿಸುವರಲ್ಲದೆ ಅದರ ಬೇರುಗಳು ಸಂಧಿವಾತ ರೋಗಕ್ಕೆ ಉಪಯೋಗವಾಗುವುವು. ಲಕ್ಕಿಗಿಡ ಅಥವಾ ನೆಕ್ಕಿ (ವೈಟೆಕ್ಸ್ ನಿಗಂಡೊ) ಗಿಡದ ಎಲ್ಲಾ ಭಾಗಗಳೂ— ಉಪಯೋಗಕ್ಕೆ ಬರುತ್ತವೆ. ಬೇರುಗಳು ಶಕ್ತಿವರ್ಧಕವಾಗಿದ್ದು ಜ್ವರಕ್ಕೂ, ಮೂತ್ರರೋಗಕ್ಕೂ ಔಷಧಿಗೆ ಬರುತ್ತವೆ. ಅದರ ಎಲೆಗಳ ಪುಡಿಯು ಗುದರೋಗಕ್ಕೂ, ಎಲೆಗಳು ವಾಯುರೋಗಕ್ಕೂ ಮತ್ತು ಹೂವುಗಳು ಯಕೃತ್ತಿನ ಶಕ್ತಿವರ್ಧಕವೆಂದೂ ಪರಿಗಣಿಸಲ್ಪಟ್ಟಿವೆ. ಹೊರದೇಶಗಳಿಂದ ಬಂದಿರುವ ಗಿಡಮರಗಳಲ್ಲಿ ಸಿಂಕೋನಾ, ಯೂಕಲಿಪ್ಟಸ್ ಮತ್ತು ಡಿಜಿಟಾಲಿಸ್ ಪರ್‌ಪೂರಿಯ ಇವೇ ಮುಖ್ಯವಾದ ಔಷಧಿಯ ಗಿಡಗಳು. ಹೀಗೆ ಕಾಡಾಗಿ ಬೆಳೆಯುವ ಇನ್ನೂ ಅನೇಕ ಮೂಲಿಕೆ ಮತ್ತು ಔಷಧಿ ಗಿಡಗಳನ್ನು ಪತ್ತೆ ಹಚ್ಚಿ, ಬೆಳೆಸಿ ಅಭಿವೃದ್ಧಿಪಡಿಸಲು ಕೇಂದ್ರ ಸರಕಾರವು ಒಂದು ಸಂಶೋಧನಾಲಯ ಮತ್ತು ಅದಕ್ಕೆ ಸೇರಿದ ತೋಟವನ್ನು ಹೊಸದಾಗಿ ಬೆಂಗಳೂರಿನಲ್ಲಿ ಪ್ರಾರಂಭಿಸಿದೆ. ಈ ಸಂಸ್ಥೆಯು ಸ್ವದೇಶದ ಮೂಲಿಕಾಭಿವೃದ್ಧಿಗೂ, ಅವುಗಳ ಬಳಕೆಗೂ ಹೆಚ್ಚು ಉತ್ತೇಜನ ಕೊಡುತ್ತದೆಂದು ಆಶಿಸೋಣ.

ಕರ್ಣಾಟಕದಲ್ಲಿ ಶ್ರೀಗಂಧದ ಮರ (ಸಾಂಟಾಲಮ್ ಆಲ್‌ಬಮ್)ವು ಹೇರಳವಾಗಿದೆ. ಅದರ ಬೆಳವಣಿಗೆ ಕರ್ಣಾಟಕಕ್ಕೆ ಮೀಸಲಾಗಿದೆಯೆನ್ನಬಹುದು. ಶ್ರೀಗಂಧದ ಮರವು ಕರ್ಣಾಟಕದ ಪಶ್ಚಿಮ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಬೆಳೆದು ಎಲೆಯುದುರುವ ಕಾಡು ಮತ್ತು ಇತರ ಬೆರಕೆ ಕಾಡುಗಳ ಮುಖಾಂತರ, ಅವಿಚ್ಛಿನ್ನವಾಗಿ ಶಿವಮೊಗ್ಗ, ಕಡೂರು, ಹಾಸನ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಸರಿಸಿರುವುದು.

ಈ ಮರವು ಸಮುದ್ರ ಮಟ್ಟಕ್ಕಿಂದ ಸುಮಾರು 2000 ಅಡಿಗಳ ಎತ್ತರದಿಂದ 4000 ಅಡಿಗಳ ಎತ್ತರವಿರುವ ಪ್ರದೇಶಗಳಲ್ಲಿ ಬೆಳೆಯುತ್ತದೆ. 25 ರಿಂದ 35 ಅಡಿಗಳೆತ್ತರ ಬೆಳೆಯುವುದು. ಒಳ್ಳೆಯ ಭೂಮಿಯಲ್ಲಿ ಅದಕ್ಕಿಂತಲೂ ಎತ್ತರ ಬೆಳೆಯುವುದು. ಗಿಡದ ಒಳಭಾಗವು ಅದರಲ್ಲೂ ಕೆಚ್ಚು ಮರವು ಸುವಾಸನೆಯುಳ್ಳ ಎಣ್ಣೆಯಿಂದ ಕೂಡಿರುವುದರಿಂದ ಬಹಳ ಬೆಲೆ ಬಾಳುತ್ತದೆ. ಈ ಎಣ್ಣೆಗೆ ಔಷಧಿ ತಯಾರಿಕೆ ಮತ್ತು ಸುವಾಸನಾದ್ರವ್ಯಗಳ ತಯಾರಿಕೆಯಲ್ಲಿ ಬಹಳ ಪ್ರಾಧಾನ್ಯವಿದೆ. ಅದರ ಬಣ್ಣ ಮತ್ತು ಮರದ ಮೈಯ ನಮೂನೆ ಇವುಗಳ ಆಧಾರದ ಮೇಲೆ, ಶ್ರೀಗಂಧದ ಮರವನ್ನು 4 ಜಾತಿಗಳಾಗಿ ವಿಂಗಡಿಸುವರು : ಬಿಳಿ, ಕೆಂಪು, ನವಿಲು ಮತ್ತು ನಾಗ ಎಂದು. ಶ್ರೀಗಂಧದ ವೃಕ್ಷವು ಮೂಲದಲ್ಲಿ ಪರಾಶ್ರಯಿ. ಲಾಂಟಾನದಂತಹ ಪೊದೆಗಳೊಂದಿಗೆ ಅದು ಚೆನ್ನಾಗಿ ಬೆಳೆಯುವುದು. ಮರದ ಕೆಚ್ಚು ಬಲಿತು ವ್ಯಾಪಾರಕ್ಕೆ ಲಾಭದಾಯಕವಾಗಬೇಕಾದರೆ ಮರಕ್ಕೆ 25 ರಿಂದ 35 ವರ್ಷ ವಯಸ್ಸಾಗಬೇಕು. ಮೈಸೂರು ಮತ್ತು ಶಿವಮೊಗ್ಗ ಪಟ್ಟಣಗಳಲ್ಲಿ ಸರ್ಕಾರಿ ಗಂಧದೆಣ್ಣೆ ಕಾರ್ಖಾನೆಗಳಿರುವುವು. ಇವುಗಳಲ್ಲಿ ವರ್ಷಕ್ಕೆ ಸರಾಸರಿ 2,00,000 ಪೌಂಡುಗಳಷ್ಟು ಎಣ್ಣೆಯನ್ನು ತಯಾರಿಸುತ್ತಾರೆ. ಇದರ ಶೇಕಡ 70 ರಷ್ಟು ಭಾಗವು ಹೊರದೇಶಗಳಿಗೆ ಕಳುಹಿಸಲ್ಪಡುವುದು. ಶೇಕಡ 30 ರಷ್ಟು ಮಾತ್ರ ನಮ್ಮ ದೇಶದಲ್ಲಿ ಉಪಯೋಗಿಸಲ್ಪಡುವುದು. ಶ್ರೀಗಂಧದ ಮರಕ್ಕೆ 'ಸ್ಪೈಕ್' ಎಂಬ ರೋಗವು ತಗಲಿ ಕೆಲವು ಪ್ರದೇಶಗಳಲ್ಲಿ ಗಂಧದ ಮರವು ಸಂಪೂರ್ಣವಾಗಿ ನಾಶವಾಗುವ ಭಯವಿರುತ್ತದೆ.

**ಹಿಪ್ಪೆ ನೇರಳೆಗಿಡ (ಮೊರಸ್ ಆಲ್ಬ)**

ಹಳೆಯ ಮೈಸೂರು ಪ್ರದೇಶದಲ್ಲಿ ರೇಶ್ಮೆ ಕೈಗಾರಿಕೆಯು ಬಹಳ ಪುರಾತನವಾದದ್ದು. ಮೈಸೂರು ರೇಶ್ಮೆಯು ಪ್ರಪಂಚದಲ್ಲೆಲ್ಲಾ ವಿಖ್ಯಾತವಾಗಿದೆ. ಹಿಪ್ಪನೆರಳೇಗಿಡದ ಸೊಪ್ಪು ರೇಷ್ಮೆ ಹುಳುಗಳಿಗೆ ಅತ್ಯುತ್ತಮವಾದ ಆಹಾರ. ಆದುದರಿಂದ, ರೇಶ್ಮೆ ಹುಳುಗಳನ್ನು ಸಾಕುವ ಮೈಸೂರು, ಬೆಂಗಳೂರು, ಕೋಲಾರ ಮತ್ತು ತುಮಕೂರು ಮೊದಲಾದ ಜಿಲ್ಲೆಗಳಲ್ಲಿ ಹಿಪ್ಪನೇರಳೆ ಗಿಡವನ್ನು ಯಥೇಚ್ಛವಾಗಿ ಬೆಳೆಸುತ್ತಾರೆ. ಸ್ಥಳೀಯ ಜಾತಿಯ ಹಿಪ್ಪನೇರಳೆ ಗಿಡವು ಸಣ್ಣ ಪೊದೆಯಾಗಿ ಕೆಂಪು ಕರಳು ಅಥವಾ ಕಪ್ಪು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುವುದು. ವರ್ಷಕ್ಕೆ ನಾಲ್ಕು ಬಾರಿ ಸೊಪ್ಪನ್ನು ಕೊಯ್ದು ಉಪಯೋಗಿಸುತ್ತಾರೆ ; ಮತ್ತು ತೋಟವನ್ನು ಕಳೆಕಿತ್ತು ಚೊಕ್ಕಟವಾಗಿಟ್ಟಿರುವುದಲ್ಲದೆ, ಅಗತೆ ಮಾಡಿ, ನೀರು ಹಾಯಿಸಲು ಅವಕಾಶವಿರುವೆಡೆಗಳಲ್ಲೆಲ್ಲಾ, ನೀರು ಹಾಯಿಸುತ್ತಾರೆ. ಉಳಿದೆಡೆಗಳಲ್ಲೆಲ್ಲಾ ಮಳೆಯೇ ಈ ಫಸಲಿಗೆ ಆಧಾರ. ಚೈನ, ಜಪಾನ್ ಮತ್ತು ಕಾಶ್ಮೀರ ದೇಶಗಳಿಂದ ರೇಶ್ಮೆ ಹುಳುಗಳ ಹೊಸ ತಳಿಗಳನ್ನು ತಂದಿರುವುದರಿಂದ, ಅವುಗಳಿಗೆ ಬೇಕಾಗುವ ಹೊಸ ಜಾತಿಯ ಹಿಪ್ಪನೇರಳೆ ಗಿಡಗಳನ್ನು ಕರ್ನಾಟಕಕ್ಕೆ ತರಲಾಯಿತು. ಇವುಗಳಲ್ಲಿ ಕೆಲವು ಸಣ್ಣ ಮರಗಳಂತೆ ಬೆಳೆಯುವುವು. ಇನ್ನೂ ಕೆಲವಕ್ಕೆ ತಂಪಾದ ವಾಯುಗುಣವು ಆವಶ್ಯಕವಾಗಿ ಕಂಡುಬಂದಿದೆ. ಗಿಡಗಳನ್ನು, ಕತ್ತರಿಸಿದ ಕಾಂಡಭಾಗಗಳಿಂದ ಬೆಳೆಸುತ್ತಾರೆ. ಹೊರದೇಶಗಳಿಂದ ಬಂದಿರುವ ಸೂಕ್ಷ್ಮ ಜಾತಿಯವುಗಳನ್ನು, ಸ್ಥಳೀಯ ಒರಟು ಜಾತಿಯ ಮೇಲೆ ಕಸಿ ಮಾಡಿ ಬೆಳೆಸುತ್ತಾರೆ. ಇದು ನಗದು ಹಣವನ್ನು ಕೊಡುವ ಲಾಭದಾಯಕ ಫಸಲು.

**ತೇಗ ಅಥವಾ ಟೀಕ್ (ಟೆಕ್ಟೋನ ಗ್ರಾಂಡಿಯಸ್)**

ಮೈಸೂರು, ಶಿವಮೊಗ್ಗ, ಹಾಸನ, ಕೊಡಗು, ಕಡೂರು, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಬಹು ವಿಸ್ತಾರವಾದ ತೇಗಿನ ಮರದ ಕಾಡುಗಳಿವೆ. ಪಶ್ಚಿಮ ಘಟ್ಟಗಳನ್ನು ಹೊಂದಿಕೊಂಡೇ ತೇಗದ ಮರವು ಬೆಳೆಯುವುದು. 2000 ಅಡಿಗಳಿಂದ 3000 ಅಡಿಗಳೆತ್ತರದ ಕೆಲವು ಘಟ್ಟ ಪ್ರದೇಶಗಳ ಮೇಲೂ ಅವುಗಳ ಸಮೀಪದಲ್ಲಿಯೂ ಈ ಮರಗಳು ಬೆಳೆಯುವುವಲ್ಲದೆ, ಅತಿ ದೊಡ್ಡದಾಗಿ ಕೂಡ ಬೆಳೆಯುವುವು. ಇತರ ಕಡೆಗಳಲ್ಲಿ ಬೆಳವಣಿಗೆಯು ಗಿಡ್ಡಾಗಿದ್ದು ಮರವು ಗಂಟುಗಳಿಂದ ಕೂಡಿರುವುದು. 150 ಅಡಿಗಳೆತ್ತರದ, ಚೆನ್ನಾಗಿ ಬೆಳೆದು ನಿಂತಿರುವ ಮರವು ಹೂವು ಬಿಟ್ಟಾಗ ನೋಡುವುದಕ್ಕೆ ಬಹಳ :ಭವ್ಯವಾಗಿ ಕಾಣುವುದು. ಮೊದಲನೇ 6ರಿಂದ 8 ವರ್ಷಗಳ ವರೆಗೆ ಸಸಿಯು ನೇರವಾಗಿ ಅಥವಾ ನೆಟ್ಟಗೆ ಬೆಳೆದು 50 ಅಡಿಗಳೆತ್ತರವನ್ನು ಮುಟ್ಟುವುದು. ಅನಂತರ ನಿಧಾನವಾಗಿ ಗಾತ್ರದಲ್ಲಿ ದಪ್ಪವಾಗತೊಡಗುವುದು. 200 ವರ್ಷಗಳ ಮರವೂ ಕೂಡ ನಾಲ್ಕೇ ಅಡಿಗಳ ವ್ಯಾಸವುಳ್ಳದ್ದಾಗಿರುವುದು. ತೇಗದ ಮರವು ಬಹಳ ಬೆಲೆಯುಳ್ಳ ಸಾಗುವಾನಿಯಾಗಿದೆ. ಈ ಮರದ ಮುಖ್ಯ ಸಾಗುವಾನಿ ಗುಣಗಳು ಎಂದರೆ ಹಗುರವಾಗಿರುವುದು, ಗೆದ್ದಲು ತಿನ್ನದಿರುವುದು, ಮೃದುತ್ವ, ಸುಲಭವಾಗಿ ಮೆರುಗನ್ನು ತೆಗೆದುಕೊಳ್ಳುವುದು ಮತ್ತು ಉಪ್ಪು ನೀರಿನಿಂದ ಕೆಡದಿರುವುದು—ಇವೇ ಈ ಮರದ ಹೆಚ್ಚು ಬೆಲೆಗೆ ಕಾರಣವಾಗಿವೆ. ಹಿಂದಿನ ಕಾಲಗಳಲ್ಲಿ ಕೂಡ ಹಡಗುಗಳನ್ನು ಕಟ್ಟಲು, ಪಶ್ಚಿಮ ಘಟ್ಟದಲ್ಲಿ ಬೆಳೆದ ತೇಗದ ಮರವನ್ನೇ ಮೇಲೆ ಹೇಳಿದ ಗುಣಗಳಿಗೋಸ್ಕರ ವಿಶೇಷವಾಗಿ ಉಪಯೋಗಿಸುತ್ತಿದ್ದರು.

**ವ್ಯವಸಾಯ : ಕರ್ನಾಟಕದ ಬೆಳೆಗಳು**

ಕರ್ನಾಟಕದ ಮುಖ್ಯವಾದ ಬೆಳೆ ಅಥವಾ ಫಸಲನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಬಹುದು. ಖುಷ್ಕಿ ವ್ಯವಸಾಯ, ತರಿ ವ್ಯವಸಾಯ, ಬಾಗಾಯ್ತು ಅಥವಾ ತೋಟಗಳು ಮತ್ತು ಪ್ಲಾಂಟೇಷನ್ ಅಥವಾ ತೋಪುಗಳು.

ಖುಷ್ಕಿ ವ್ಯವಸಾಯದಲ್ಲಿ ಈ ಬೆಳೆಗಳನ್ನು ಸೇರಿಸಿದ್ದಾರೆ. (1) ಜೋಳ (ಜವಾರ್), (2) ಸಾಮೆ, ನವಣೆ, ಬರಗು, ಹಾರಕ ಮತ್ತು ಸಜ್ಜೆ ಅಥವಾ (ಬಾಜ್ರ ಅಥವಾ ಮಿಲೆಟ್), (3) ಗೋಧಿ (ವೀಟ್), (4) ಕಾಳುಗಳು : (ಪಲ್‌ಸಸ್–ತೊಗರಿ, ಕಡಲೆ, ಹುರುಳಿ, ಅವರೆ, ಹೆಸರು, ಉದ್ದು ಮತ್ತು ಹಲಸಂದೆ), (5) ರಾಗಿ, (6) ಹತ್ತಿ (ಕಾಟನ್), (7) ಎಣ್ಣೆ ಬೀಜಗಳು : [ಆಯಿಲ್ ಸೀಡ್ಸ್–ಹುಚ್ಚೆಳ್ಳು, ಅಚ್ಚೆಳ್ಳು ಹರಳು, ನೆಲಗಡಲೆ (ಗ್ರೌಂಡ್‌ನಟ್), ಅಗಸೇ ಬೀಜ (ಲಿನ್‌ಸೀಡ್ಸ್), ಕುಸುಮೆ], (8) ಸಂಬಾರ ಪದಾರ್ಥಗಳು : [ಸಾಸುವೆ, ಮೆಣಸಿನಕಾಯಿ, ಕ್ಯಾರಮ್ (Carum) ಕೊತ್ತಂಬರಿ, ಜೀರಿಗೆ, ಮೆಂತೆ, ಸೋಂಪು] ಮತ್ತು ಹೊಗೆಸೊಪ್ಪು.

ಭತ್ತ ಮತ್ತು ಕಬ್ಬು ಇವೆರಡೂ ತರಿ ವ್ಯವಸಾಯದಲ್ಲಿ ಸೇರಿವೆ.

ತೋಟದ ವ್ಯವಸಾಯದಲ್ಲಿ ಅಡಿಕೆ, ತೆಂಗು, ಬಾಳೆ, ಮತ್ತು ಹಿಪ್ಪನೇರಳೆ ಇವುಗಳು ಮೇಲೆ ಹೇಳಿದ ಸಂಬಾರ ಪದಾರ್ಥಗಳ ಜೊತೆಗೆ ಸೇರಿವೆ.

ಪ್ಲಾಂಟೇಷನ್ ಅಥವಾ ತೋಪಿನ ವ್ಯವಸಾಯದಲ್ಲಿ ಕಾಫಿ, ಟೀ, ಏಲಕ್ಕಿ, ಮೆಣಸು, ವೀಳೆಯದೆಲೆ ಮತ್ತು ಸಿಂಕೋನಾ ಇವುಗಳು ಸೇರಿವೆ.

**ಜೋಳ**

ಆಹಾರ ಧಾನ್ಯಗಳಲ್ಲಿ ರಾಗಿ ಮತ್ತು ಭತ್ತ ಇವೆರಡನ್ನು ಬಿಟ್ಟರೆ ಜೋಳ, ನವಣೆ ಮೊದಲಾದ ಆದಿ ಧಾನ್ಯಗಳು ಕರ್ನಾಟಕದ ವ್ಯವಸಾಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಉತ್ತರ ಕರ್ನಾಟಕದ ಕಪ್ಪು ಮಣ್ಣಿನ ಭೂಮಿಯಲ್ಲಿ ಪ್ರಬಲವಾಗಿ ಬೆಳೆಯುವ ಈ ಫಸಲು ದಕ್ಷಿಣ ಭಾಗದಲ್ಲಿ ಅಷ್ಟು ಫಲವತ್ತಾಗಿ ಬೆಳೆಯುವುದಿಲ್ಲ. ಚಿತ್ರದುರ್ಗ ಜಿಲ್ಲೆ ಮತ್ತು ಕಾವೇರೀ ತೀರದ ದಕ್ಷಿಣ ಮೈಸೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಕಪ್ಪುಮಣ್ಣಿನ ಪ್ರದೇಶಗಳುಂಟು. ಇವಕ್ಕೆ ಪಶ್ಚಿಮದಲ್ಲಿ ಘಟ್ಟಗಳೇ ಮೇರೆಯಾಗಿವೆ. ಈ ಮಧ್ಯಪ್ರದೇಶದಲ್ಲಿ ಬೆಳೆಯುವ ಜೋಳವು, ಮಳೆ ಕಮ್ಮಿಯಾದ ಕಡೆಗಳಲ್ಲೆಲ್ಲಾ ಇತರ ಸಾಮೆ, ನವಣೆ ಮತ್ತು ಹಾರಕ ಇವುಗಳಿಗೆ ಎಡೆಮಾಡಿ ಕೊಡುತ್ತದೆ. ಅಂದರೆ ಇತರ ಆದಿ ಧಾನ್ಯಗಳ ಬೆಳೆಗೆ ಅಷ್ಟು ಮಳೆ ಬೇಕಾಗುವುದಿಲ್ಲ. ಇವುಗಳೆಲ್ಲಾ ಜೋಳದ ಕೊರತೆಯನ್ನು ಪೂರೈಸುವ ಧಾನ್ಯಗಳು.

**ಅಕ್ಕಿ**

ಭತ್ತ ಮತ್ತು ರಾಗಿ ಇವುಗಳು ಜೋಳ ಮತ್ತು ಇತರ ಆದಿ ಧಾನ್ಯಗಳು ಬೆಳೆಯದ ಕಡೆಗಳಲ್ಲಿ ಬೆಳೆಯುತ್ತವೆ, ಮತ್ತು ಅವುಗಳ ಜೊತೆಗೆ ಪೂರಕವಾಗಿವೆ. ಇವುಗಳಿಗೆ ಕೆಂಪು ಮಣ್ಣೂ ಹೆಚ್ಚು ಮಳೆಯೂ ಅಗತ್ಯ. ಭತ್ತವು ಜೋಳದಂತೆ ಫಲವತ್ತಾದ ಮಣ್ಣಿನಲ್ಲಿ ಬೆಳೆದರೆ ರಾಗಿಯು ಆದಿ ಧಾನ್ಯಗಳಂತೆ ಫಲವತ್ತಲ್ಲದ ಮಣ್ಣಿನಲ್ಲಿ ಕೂಡ ಬೆಳೆಯುವುದು. ಮೈಸೂರು ದೇಶದಲ್ಲಿ ಕೆರೆಯ ನೀರಾವರಿಯಿಂದ ಭತ್ತವನ್ನು ಬೆಳೆಯುವುದು ಅತಿ ಪುರಾತನಕಾಲದಿಂದಲೂ ಪ್ರಸಿದ್ಧವಾಗಿದೆ. ನದೀತೀರಗಳಲ್ಲಿ ಕಾಲುವೆಗಳಿಂದ ನೀರು ಹಾಯಿಸಿ ವ್ಯವಸಾಯ ಮಾಡುವುದೂ ಬಹಳ ಹಳೆಯ ಪದ್ಧತಿಯಾಗಿದೆ. ಘಟ್ಟಗಳ ಪಶ್ಚಿಮಕಡೆ ಇಳಿಜಾರಿನಲ್ಲಿ ಮುಂಗಾರು ಮಳೆಯ ಸಹಾಯದಿಂದ ಕೊಂಚ ಪ್ರದೇಶದಲ್ಲಿ ಭತ್ತವನ್ನು ಬೆಳೆಯುತ್ತಾರೆ.

**ರಾಗಿ**

ತುಂಬಾ ಗಟ್ಟಿಯಾದ ಮಣ್ಣಿನಲ್ಲಿ ರಾಗಿಯನ್ನು ಬೆಳೆಸಬಹುದು. ಅಲ್ಲಿ ಅದರ ಫಸಲು ಬಹಳ ಹುಲುಸು. ಆದರೆ ರಾಗಿಯು ಶುಷ್ಕ ಭೂಮಿಯ ಬೆಳೆಗೆ ಮಾದರಿಯಾಗಿದೆ. ಭತ್ತವು ಬೆಳೆಯುವ

ಪ್ರದೇಶದ ವಿಸ್ತೀರ್ಣಕ್ಕಿಂತ ರಾಗಿಯ ಬೆಳೆಯ ಪ್ರದೇಶವು ಬಹಳ ಹೆಚ್ಚು ವಿಸ್ತೀರ್ಣವಾದುದು. ರಾಗಿಯ ಬೆಳೆಯು ನಾಲ್ಕು ತಿಂಗಳು ಕಾಲದಲ್ಲಿ ಕೊಯಿಲಿಗೆ ಬಂದಿರುವುದರಿಂದಲೂ ಇದು ಬಡವರ ಆಧಾರ ಧಾನ್ಯವಾಗಿರುವುದರಿಂದಲೂ ಇದರ ಬೆಳೆ ಬಹಳ ಬೆಲೆಯುಳ್ಳದ್ದು. ಇದರ ಒಂದು ಜಾತಿಯನ್ನು ನೀರು ಹಾಯಿಸಿ ಗದ್ದೆಗಳಲ್ಲಿ ಬೆಳೆಯುತ್ತಾರೆ. ಇದು ಹೆಚ್ಚಾಗಿ ಧಾನ್ಯವನ್ನು ಕೊಡುತ್ತದೆ, ಸಸಿಗಳನ್ನು ಒಟ್ಟಲಿನಿಂದ ಕಿತ್ತು ನಾಟಿಹಾಕುವ ಪದ್ಧತಿಯು ಈಗೀಗ ರೂಢಿಗೆ ಬರುತ್ತಿದೆ. ಈ ಪದ್ಧತಿಯಿಂದ ಫಸಲೂ ಹೆಚ್ಚಾಗಿ ಬರುವುದು. ಸರ್ಕಾರಿ ಸಂಸ್ಥೆಯೊಂದರಿಂದ ಹೊಸಜಾತಿಯ "ಹಂಸ" ಎಂಬ ಬಿಳಿಯ ರಾಗಿಯು ಉತ್ಪನ್ನವಾಗಿ, ರೈತರಿಗೆ ವ್ಯವಸಾಯಕ್ಕೆ ಸರಬರಾಜಾಗುತ್ತಿದೆ. ಇದು ಅನೇಕ ಸ್ವಂತ ವೈಶಿಷ್ಟ್ಯಗಳನ್ನು ಹೊಂದಿ ಜನಪ್ರಿಯವಾಗುತ್ತಿದೆ.

### ಗೋಧಿ

ಗೋಧಿಯು ಸಮಶೀತೋಷ್ಣವಲಯದ ಬೆಳೆ. ಇಂಡಿಯಾ ದೇಶದಲ್ಲಿ ಗೋಧಿ ಬೆಳೆಯುವ ಪ್ರದೇಶಗಳು ವಿಂಧ್ಯಪರ್ವತದ ಉತ್ತರ ಭಾಗದಲ್ಲಿ ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿರುವುವು. ಕರ್ನಾಟಕದಲ್ಲಿ ಗೋಧಿಯನ್ನು ಮುಖ್ಯವಾಗಿ ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮುಖ್ಯವಾಗಿಯೂ ಇತರ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿಯೂ ಬೆಳೆಯುತ್ತಾರೆ.

### ಹತ್ತಿ

ಇದು ಸಾಧಾರಣವಾಗಿ ಪಶ್ಚಿಮ ಘಟ್ಟಗಳ ಪೂರ್ವಭಾಗದಲ್ಲಿ ಮುಂಗಾರು ಮಳೆಯ ಹೊಡೆತಕ್ಕೆ ಸಿಕ್ಕದ ಕಡೆಗಳಲ್ಲಿ ಬೆಳೆಯುತ್ತದೆ. ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳು ಹತ್ತಿಯ ಬೆಳೆಯ ಮುಖ್ಯ ಕೇಂದ್ರಗಳು. ಬಳ್ಳಾರಿ, ಚಿತ್ರದುರ್ಗ ಮತ್ತು ಗದಗ ಜಿಲ್ಲೆಗಳಲ್ಲಿ ಕೂಡ ಇದನ್ನು ಹೇರಳವಾಗಿ ಬೆಳೆಸುತ್ತಾರೆ. ಧಾರವಾಡ್—ಅಮೆರಿಕನ್ ಎಂಬ ಜಾತಿಯ ಹತ್ತಿಯನ್ನು ಇಲ್ಲಿ ಎಲ್ಲರೂ ಬೆಳೆಸುತ್ತಾರೆ. ಇದರ ನಾರಿನ ಉದ್ದವು 7/8 ಅಂಗುಲ ಇರುವುದು (staple length of the fibre). ನಾರಿನ ಉದ್ದವನ್ನು ಹೆಚ್ಚಿಸಲು ಮತ್ತು ಸ್ವದೇಶದ ಹತ್ತಿಯ ಬೆಳೆಯನ್ನು ಉತ್ತಮಪಡಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಪ್ರಪಂಚದ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಬಹುದು. 'ಸೀ ಐಲೆಂಡ್' ಎಂಬ ಹೊಸ ಜಾತಿಯನ್ನು ಕೆಲವು ಭಾಗಗಳಲ್ಲಿ ಪ್ರಾಯೋಗಿಕವಾಗಿ ಬೆಳೆಸಲಾಗಿದೆ. ಇದು ಮೈಸೂರು, ಧಾರವಾಡ ಜಿಲ್ಲೆಗಳಲ್ಲಿ ಚೆನ್ನಾಗಿ ಬೆಳೆಯುವಂತೆ ತೋರುತ್ತದೆ.

### ಎಣ್ಣೆ ಬೀಜಗಳು

ಎಣ್ಣೆಬೀಜಗಳನ್ನು ಆಹಾರದ ಫಸಲಾಗಿಯೂ ನಗದು ಫಸಲಾಗಿಯೂ ಬೆಳೆಯುತ್ತಾರೆ. ಇವೆಲ್ಲಾ ಖುಷ್ಕಿ ಜಮೀನಿನಲ್ಲಿ ಬೆಳೆಯುವ ಬೆಳೆಗಳು. ಈ ಬೆಳೆಯು ಕರ್ನಾಟಕದ ಪೂರ್ವಭಾಗದಲ್ಲಿ ಬೆಳೆಯುವುದಿಲ್ಲ. ಇದಕ್ಕೆ ಅಲ್ಲಿನ ಭೂಗುಣ ಮತ್ತು ಸಾಕಷ್ಟು ಮಳೆ ಬೀಳದಿರುವುದೇ ಕಾರಣ.

### ಕಬ್ಬು

ಕರ್ನಾಟಕದಲ್ಲಿ ಕಬ್ಬನ್ನು ಅನೇಕ ಕಡೆಗಳಲ್ಲಿ ನೀರು ಹಾಯಿಸಿ ವಿಶೇಷವಾಗಿ ಬೆಳೆಸುತ್ತಾರೆ. ಬೆಳೆಯು ಕೈಗೆ ಬರಬೇಕಾದರೆ ಸುಮಾರು ಒಂದು ವರ್ಷಕಾಲ ಬೇಕಾಗುತ್ತದೆ. ಈ ಮಧ್ಯೆ ತುಂಬಾ ನೀರು ಹಾಯಿಸ ಬೇಕಾಗುವುದು. ಇದರಿಂದಲೇ ಎಲ್ಲೆಲ್ಲಿ ನೀರು ಹಾಯಿಸಲು ಅನುಕೂಲವಿರುವುದೋ ಅಂಥ ಕಡೆಗಳಲ್ಲಿ ಮಾತ್ರ ಕಬ್ಬನ್ನು ಬೆಳೆಸಲು ಸಾಧ್ಯವಾಗುವುದು.

**ಕಾಫಿ**

ದಕ್ಷಿಣ ದೇಶವು ಅದರಲ್ಲೂ ಮುಖ್ಯವಾಗಿ ಮೈಸೂರು ದೇಶವು ಕಾಫಿ ಬೆಳೆಗೆ ಮಾತೃಭೂಮಿಯಾಗಿದೆ. ಕಾಫಿಬೀಜವನ್ನು 18ನೇ ಶತಮಾನದಲ್ಲಿ ಮೈಸೂರಿಗೆ ತರಲಾಯಿತೆಂದು ನಂಬಿಕೆ. ಬಾಬಾಬುಡನ್ ಬೆಟ್ಟಗಳೇ ಕೇಂದ್ರವಾಗಿ ಅದರ ಸುತ್ತಲೂ ಅನೇಕಾನೇಕ ತೋಟಗಳು ಬೆಳೆದಿವೆ. ಈ ಬೆಟ್ಟಗಳ ಉತ್ತರ ಮತ್ತು ಪೂರ್ವ ಇಳಿಜಾರು ಪ್ರದೇಶಗಳಲ್ಲಿ ಮತ್ತು ನೀರು ನಿಲ್ಲದ, 1500 ಅಡಿಗಳೆತ್ತರದಿಂದ 5500 ಅಡಿಗಳೆತ್ತರದ ವರೆಗಿನ ಬೆಟ್ಟದ ಸಾಲುಗಳಲ್ಲಿ ಕಾಫಿ ಗಿಡಗಳು ಹುಲುಸಾಗಿ ಬೆಳೆಯುವುವು. ಆದಿಯಲ್ಲಿದ್ದ ' ಅರಾಬಿಕಾ ' ಜಾತಿಯ ಗಿಡಗಳಿಗೆ ಕೆಲವು ರೋಗಗಳು ಸುಲಭವಾಗಿ ತಗಲುವುದರಿಂದ, ಹೊಸ ಜಾತಿಯ ' ರೋಬಸ್ಟಾ ' ಕಾಫಿ ಗಿಡಗಳನ್ನು ಬೆಳೆಸಿ ಅದು ಬಹಳ ಅಭಿವೃದ್ಧಿಯಾಗುವಂತೆ ಮಾಡಲಾಯಿತು.

**ಟೀ**

ಟೀ ಎಲೆಯ ಗಿಡವು ಕಾಫಿ ಬೆಳೆಯುವ ಸ್ಥಳದಲ್ಲೆಲ್ಲಾ ಬೆಳೆಯುವುದು. ಈಗ ಟೀ ಗಿಡವು ಮೈಸೂರು ದೇಶದಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತಿದೆ.

**ಏಲಕ್ಕಿ**

ಪಶ್ಚಿಮ ಘಟ್ಟಗಳ ಅನೇಕ ಕಣಿವೆ ಪ್ರದೇಶಗಳಲ್ಲಿ ಏಲಕ್ಕಿ ಗಿಡಗಳನ್ನು ಬೆಳೆಯುತ್ತಾರೆ. ಇದನ್ನು ತೋಟಗಳಲ್ಲಿ ಅಡಕೆ ಮರಗಳ ಸಂಗಡ ಬೆಳೆಸುತ್ತಾರೆ. ಇಂಡಿಯಾ ದೇಶದಲ್ಲಿ ಬೆಳೆಯುವ ಏಲಕ್ಕಿಯ ಅರ್ಧಭಾಗದಷ್ಟನ್ನು ಕರ್ಣಾಟಕದೇಶ ಒಂದೇ ಬೆಳೆದು ಸರಬರಾಜು ಮಾಡುವುದು. ಗಿಡಗಳ ಕಾಂಡವನ್ನು ತುಂಡುಗಳಾಗಿ ಮಾಡಿ ಅವುಗಳಿಂದ ಹೊಸ ಗಿಡಗಳನ್ನು ಬೆಳೆಸುತ್ತಾರೆ. ಹೊಸ ಗಿಡಗಳು ಮೂರು ನಾಲ್ಕು ವರ್ಷಗಳಲ್ಲಿ ಫಲಬಿಟ್ಟು ಫಸಲಿಗೆ ಬರುವುವು.

**ಮೆಣಸು**

ಕರಿ ಮೆಣಸಿನ ಗಿಡ ಅಥವಾ ಬಳ್ಳಿಯನ್ನು ಮಲೆನಾಡಿನ ಪ್ರದೇಶಗಳಲ್ಲಿ ಒಂದು ಸಹಾಯಕ ಬೆಳೆಯಾಗಿ ವ್ಯವಸಾಯ ಮಾಡುತ್ತಾರೆ. ಮೆಣಸಿನ ಬಳ್ಳಿಯ ಚೂರು ಅಥವಾ ತುಂಡುಗಳನ್ನು ಆಶ್ರಯ ಕೊಡುವ ಮರದ ಹತ್ತಿರ ಸಾಧಾರಣವಾಗಿ ಅಡಕೆ ಮರದ ಬಳಿ ನೆಡುತ್ತಾರೆ. ಹೀಗೆ ನೆಟ್ಟ ಬಳ್ಳಿ ಬೇರು ಬಿಟ್ಟು ಮರದ ಮೇಲೆ ಹಬ್ಬುವತನಕ ಅದನ್ನು ಬಹಳ ಜಾಗರೂಕತೆಯಿಂದ ಕಾಪಾಡುವರು. ಕರ್ಣಾಟಕದಲ್ಲಿ ಸಾಕಷ್ಟು ಮೆಣಸು ಬೆಳೆಯುತ್ತದೆ. ಮೆಣಸಿನ ಬಳ್ಳಿಯಂತೆ, ವೀಳೆಯದೆಲೆ ಬಳ್ಳಿಯನ್ನೂ ನಾನಾ ಕಡೆಗಳಲ್ಲಿ ನೆರಳು ಕೊಡುವ ಚಪ್ಪರಗಳ ಕೆಳಗೆ ಬೆಳೆಸುತ್ತಾರೆ.

**ತೆಂಗಿನ ಮರ**

ತೆಂಗಿನ ಮರಕ್ಕೆ ಸಮುದ್ರತೀರವೇ ಸಹಜವಾದ ನಿವಾಸ. ಆದರೂ ಇದು ಒಳಪ್ರಾಂತಗಳಲ್ಲಿಯೂ ಚೆನ್ನಾಗಿ ಬೆಳೆಯುವುದು. ಕೆಲವು ಹೆಸರುವಾಸಿಯಾದ ಜಾತಿಯ ತೆಂಗಿನ ಮರಗಳನ್ನು ತುಮಕೂರು ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಅವುಗಳಲ್ಲಿ ಮುಖ್ಯವಾದುದು " ಗಂಗಾ ಪಾಣಿ " ಎಂಬ ಜಾತಿಯದು. ಪ್ರತಿಕೂಲವಾದ ಹವಾಗುಣ ಹಾಗೂ ಮಣ್ಣಿನ ಸ್ವಭಾವಗಳ ದೆಸೆಯಿಂದ ಉತ್ತರ ಕರ್ಣಾಟಕದ ಶುಷ್ಕಪ್ರದೇಶಗಳಲ್ಲಿ ತೆಂಗಿನ ಮರವು, ಅಭಿವೃದ್ಧಿಯಾಗುವುದಿಲ್ಲ. ಸರ್ಕಾರವು ಹೊಸ ಜಾತಿಯ ಗಿಡಗಳನ್ನು ಹೊರ ದೇಶಗಳಿಂದ ತರಿಸಿ ಬೆಳೆಸಲು ಪ್ರಯತ್ನಿಸಿದೆ. ಈ ಜಾತಿಗಳಲ್ಲಿ ಮುಖ್ಯವಾದುದು " ಬಾನ್‌ಸ್ಕಾ "

ಜಾತಿಯ ಗಿಡ. ಇದು ಮೂರು ನಾಲ್ಕು ಅಡಿಗಳೆತ್ತರ ಬೆಳೆಯುವಷ್ಟರಲ್ಲಿಯೇ ಗಾತ್ರವಾದ ಕಾಯಿಗಳನ್ನು ಬಿಡುವುದು. ಕೇಂದ್ರ ತೆಂಗಿನ ಪರಿಶೋಧನಾ ಆಯೋಗದ ಮತ್ತು ತೆಂಗಿನ ನಾರಿನ ಆಯೋಗದ ಶ್ರಮದ ಫಲವಾಗಿ ಈ ಬೆಳೆಯು ಇನ್ನು ಮುಂದೆ ತುಂಬಾ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ತೆಂಗಿನ ಗಿಡಕ್ಕೆ ತಗಲುವ ಅನೇಕ ರೋಗಗಳನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ. ತೆಂಗಿನ ನಾರು ಇತ್ತೀಚೆಗೆ ಕೈಗಾರಿಕೆಯ ಪ್ರಮುಖ ಕಚ್ಚಾವಸ್ತುವಾಗಿದೆ. ನಾರಿನಿಂದ ತಯಾರಾದ ಇತರ ಪದಾರ್ಥಗಳು ದೇಶದ ಕೈಗಾರಿಕಾ ಅಭಿವೃದ್ಧಿಯೊಂದಿಗೆ ನಾರು ಹೆಚ್ಚು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತಿದೆ.

### ಅಡಕೆ ಮರ

ಅಡಕೆ ಅಥವಾ ಸುಪಾರಿ ಮರಗಳನ್ನು ನೀರು ಹಾಯಿಸಿ ಬೆಳೆಸುತ್ತಾರೆ. ಈ ಮರಗಳನ್ನು ಹೆಚ್ಚಾಗಿ ಮಲೆನಾಡಿನಲ್ಲಿ ಏಲಕ್ಕಿ, ಮೆಣಸು, ಬಾಳೆಗಿಡಗಳ ಜೊತೆಗೆ ಬೆಳೆಸುತ್ತಾರೆ. ಮೈದಾನ ಪ್ರದೇಶಗಳಲ್ಲೂ, ನೀರಿನ ಸೌಕರ್ಯವಿರುವ ನದಿಗಳ ಕಣಿವೆಗಳಲ್ಲೆಲ್ಲಾ ಅವು ಬೆಳೆಯುತ್ತವೆ. ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಡಕೆಯು ಉತ್ಪನ್ನವಾಗುತ್ತದೆ. ಅಡಕೆ ಮರಕ್ಕೆ "ಕೊಳೆರೋಗ" ವೆಂಬ ಒಂದು ಶಿಲೀಂದ್ರ ರೋಗವು ಕಾಣಿಸಿಕೊಂಡು ತೋಟಗಳಲ್ಲೆಲ್ಲಾ ಹರಡಿ ತುಂಬಾ ನಷ್ಟವನ್ನುಂಟುಮಾಡಿತ್ತು. ಅಂಥಾ ಸಮಯದಲ್ಲಿ ಮೈಸೂರು ಸರ್ಕಾರದ ವ್ಯವಸಾಯದ ಇಲಾಖಾಧಿಕಾರಿಗಳು ಮತ್ತು ವಿಜ್ಞಾನ ವೇತ್ತರು, ಈ ರೋಗದ ಮೂಲವನ್ನು ಕಂಡು ಹಿಡಿದು ತಕ್ಕ ರಕ್ಷಣಾ ಕ್ರಮವನ್ನು ರೈತರಿಗೆ ತಿಳಿಸಿ ಅನೇಕ ತೋಟಗಳನ್ನು ಅಪಾಯದಿಂದ ಪಾರು ಮಾಡಿದ್ದಾರೆ.

### ತೋಟಗಾರಿಕೆ

1760ರಲ್ಲಿ ಪ್ರಾರಂಭವಾದ ದಿನದಿಂದ ಲಾಲ್‌ಬಾಗ್ ತೋಟವೇ ಎಲ್ಲ ವಿಧವಾದ ತೋಟಗಾರಿಕೆ ಚಟುವಟಿಕೆಗಳಿಗೆ ಕೇಂದ್ರವಾಗಿದೆ. ಆದರೂ, 1856ರಲ್ಲಿ ಲಾಲ್‌ಬಾಗ್ ತೋಟವು "ಸ್ಟೇಟ್ ಬೊಟಾನಿಕಲ್ ಗಾರ್ಡನ್" ಆದಾಗ ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಕೆಲಸ ಕಾರ್ಯಗಳು ಪ್ರಾರಂಭಿಸಲ್ಪಟ್ಟವೆಂದು ಹೇಳಬಹುದು. ಈ ತೋಟದ ಮತ್ತು ತೋಟಗಾರಿಕೆ ಸೊಸೈಟಿ ಅಥವಾ ಸಂಘದ ಶಾಖೆಗಳು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಇವೆ. ಈ ತೋಟವೇ ಮೊತ್ತ ಮೊದಲಿಗೆ ಹತ್ತಿ, ಕಾಫಿ, ಮತ್ತು ಹಿಪ್ಪನೇರಳೆ ಗಿಡಗಳ ಹೊಸ ಜಾತಿಗಳನ್ನು ಹೊರದೇಶಗಳಿಂದ ತರಿಸಿ ಬೆಳೆಯಿಸಿತು. ಕಾಫಿ ಗಿಡದ ಮೇಲೆ ಕಸಿ ಕಟ್ಟುವುದನ್ನು ಪ್ರಾರಂಭಿಸಿತು. ಅಮೆರಿಕ ದೇಶದ ಅಪ್‌ಲಾಂಡ್, ಈಜಿಪ್ಷಿಯನ್, ಸೀ ಐಲೆಂಡ್ ಮತ್ತು ಪೆರೂವಿಯನ್ ಜಾತಿಯ ಹತ್ತಿಗಿಡಗಳನ್ನು ಬೆಳೆಸಿ ಅವುಗಳು ಹೇಗೆ ಹತ್ತಿಬಿಡುತ್ತವೆಯೆಂಬುದನ್ನು ಅಧ್ಯಯನ ನಡೆಸಿತು. ಹಿಪ್ಪನೇರಳೆ ಗಿಡವನ್ನು ಬೆಳೆಸುವುದರಲ್ಲಿ ಬಹಳ ಉಪಯುಕ್ತವಾದ ಪ್ರಯೋಗಗಳನ್ನು ನಡೆಸಿತು. ಹೆಚ್ಚಿನ ಈ ಬೆಳೆಗಳ ಮುಂದಿನ ಅಭಿವೃದ್ಧಿ ಕಾರ್ಯಗಳನ್ನು ಆಯಾ ಸರ್ಕಾರಿ ಇಲಾಖೆಗಳಿಗೆ ವಹಿಸಿಕೊಟ್ಟಿತು. ಬೆಂಗಳೂರಿನಲ್ಲಿ ಅತ್ಯುತ್ತಮವಾದ ಸಮಶೀತೋಷ್ಣತೆಯ ವಾಯುಗುಣವಿರುವ ಕಾರಣ ಅನೇಕಾನೇಕ ಪರದೇಶದ ಹಣ್ಣು ಹಂಪಲು ತರಕಾರಿ ಇವುಗಳ ಬೀಜಗಳನ್ನು ತರಿಸಿ, ಹರಡಿಸಲು ಪ್ರಯತ್ನಿಸಿದ ದೇಶಗಳಲ್ಲಿ ಮೈಸೂರು ರಾಜ್ಯವು ಮೊದಲನೆಯದು. ಈ ಕೆಲಸವನ್ನು ಲಾಲ್‌ಬಾಗ್ ತೋಟದಲ್ಲಿಯೂ ಹೆಸರುಘಟ್ಟದಲ್ಲಿರುವ ಫಲ ಪರಿಶೋಧನಾಲಯದಲ್ಲೂ ಮಾಡಲಾಯಿತು. ನಾವು ಸಾಧಾರಣವಾಗಿ ಉಪಯೋಗಿಸುವ ಹಣ್ಣುಗಳು—ಸಪೋಟ, ಸೇಬು ಮತ್ತು ಪರಂಗಿ ಹಣ್ಣು ಮೊದಲಾದುವೆಲ್ಲ ಪರದೇಶದಿಂದ ಬಂದವು. ಕಳೆದ ಶತಮಾನದಲ್ಲಿ ಇವನ್ನು ಪ್ರಚುರಗೊಳಿಸಲಾಯಿತು.

ಕಳೆದ ಒಂದು ಶತಮಾನಕ್ಕಿಂತಲೂ ಹಿಂದಿನಿಂದ ಬೆಂಗಳೂರು, ಅದರ ಸುತ್ತಮುತ್ತಲೂ ಸೇಬಿನ ಹಣ್ಣನ್ನು ಬೆಳೆಸುತ್ತಿದ್ದಾರೆ. 1897ರಲ್ಲಿ ತಲೆದೋರಿದ ಒಂದು ರೋಗವು ಸಾಂಕ್ರಾಮಿಕವಾಗಿ ಪರಿಣಮಿಸಿ

ಸೇಬು ಬೆಳೆಸುವವರಿಗೆ ತುಂಬಾ ನಷ್ಟವನ್ನುಂಟುಮಾಡಿತು. 1914ರಲ್ಲಿ ಇಲಾಖೆಯು ಈ ಬೆಳೆಯ ಪುನರಾರಂಭ ಮಾಡಲು, ಆಸ್ಟ್ರೇಲಿಯಾ ದೇಶದಿಂದ "ರೋಂ ಬ್ಯೂಟಿ" ಎಂಬ ಹೆಸರಾದ ಜಾತಿಯನ್ನು ತರಿಸಿ ಪ್ರಸಾರ ಮಾಡಿತು. ಈ ಜಾತಿಯು ರೋಗವನ್ನು ಎದುರಿಸಬಲ್ಲ ಅಥವಾ ಪೂರ್ಣವಾಗಿ ತಡೆಯಬಲ್ಲ ಒರಟು ಸೇಬಿನ ಗಿಡದ ಕಾಂಡದ ಮೇಲೆ ಕಸಿ ಮಾಡಿ ಬೆಳೆಸಲಾಗಿತ್ತು. ಈ ಜಾತಿಯ ಸೇಬಿನ ಗಿಡವು ಮನೋರಂಜಕವಾದ ಬಣ್ಣದಿಂದ ಕೂಡಿದ ಹಣ್ಣುಗಳನ್ನು ಸಮೃದ್ಧಿಯಾಗಿ ಕೊಡುವುದು. ಈ ಹಣ್ಣುಗಳನ್ನು ಬೆಂಗಳೂರಿನ ಹವಾಗುಣದಲ್ಲಿ ಇತರ ಯಾವ ಸಲಕರಣೆಯೂ ಇಲ್ಲದೆ ಒಂದು ತಿಂಗಳವರೆಗೆ ಕೊಠಡಿಯಲ್ಲಿ ಚೆನ್ನಾಗಿಟ್ಟಿರಬಹುದು.

### ದ್ರಾಕ್ಷೆ

ದ್ರಾಕ್ಷೆಗಿಡಗಳನ್ನು ದಕ್ಷಿಣ ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳೆಸುತ್ತಾರೆ. "ಬೆಂಗಳೂರು ಬ್ಲೂ" ಅಥವಾ "ಬೆಂಗಳೂರು ನೀಲಿ" ಎಂಬ ಜಾತಿಯ ಗಿಡವು ಬಹಳ ಒಳ್ಳೆಯದು. ಇದು ವರ್ಷಕ್ಕೆ ಎರಡು ಫಸಲನ್ನು ಕೊಡುವುದು. ಅಲ್ಲದೆ ರೋಗಗಳನ್ನು ಸಂಪೂರ್ಣವಾಗಿ ತಡೆಯಬಲ್ಲದು. ಒಂದು ಎಕರೆಗೆ 5,000 ದಿಂದ 10,000 ರೂಪಾಯಿಗಳ ವರೆಗೆ ಲಾಭ ಕೊಡುವುದು.

ಇವುಗಳ ಹಾಗೆ ಸೀಬೆ, ಸಪೋಟ, ಪರಂಗಿ, ಬಾಳೆ, ದಾಳಿಂಬ, ಮಾವು, ಅನಾನಸ್, ಹಲಸು, ನಿಂಬೆ, ಕಿತ್ತಳೆ, ಅಂಜೂರ, ಸೀತಾಫಲ, ಕಮರೇಖ್, ಲಕೋಟ್ ಮತ್ತು ಬಟರ್‌ಫ್ರೂಟ್ ಮೊದಲಾದುವುಗಳನ್ನು ಹೊಸದಾಗಿ ತರಿಸಿ ಪ್ರಸಾರಮಾಡಿ ಅವುಗಳ ವ್ಯವಸಾಯಗಾರರು ಸ್ಥಳೀಯ ಜಾತಿಗಳಿಗಿಂತ ಹೆಚ್ಚು ಫಸಲನ್ನು ಪಡೆಯುವಂತೆ ಸಹಾಯಮಾಡಿದೆ.

ಸ್ಥಳೀಯ ತರಕಾರಿಗಳನ್ನು ಚೆನ್ನಾಗಿ ಪೋಷಿಸಿ ಬೆಳೆಸುವುದಲ್ಲದೆ, ಆಗಾಗ್ಗೆ ಅನೇಕ ಹೊಸ ಜಾತಿಯ ಐರೋಪ್ಯದೇಶದ ತರಕಾರಿಗಳನ್ನು ತರಿಸಿ ಬೆಳೆಸಿದ್ದಾರೆ.

### ಹೂವುಗಳು

ಬೆಂಗಳೂರು ಹೂವಿಗೆ ಬಹಳ ಪ್ರಸಿದ್ಧವಾಗಿದೆ. ಸ್ಥಳೀಯ ಜಾತಿ ಹೂಗಿಡಗಳನ್ನು ಚೆನ್ನಾಗಿ ಬೆಳೆಸುವುದರಲ್ಲಿಯೂ ಅನೇಕಾನೇಕ ಹೊರದೇಶದ ಹೂಗಿಡಗಳನ್ನು ರಫ್ತುಮಾಡುವ ಕೆಲಸದಲ್ಲಿಯೂ ತೃಪ್ತಿಕರವಾದ ಫಲ ಸಿಕ್ಕಿದೆ. ಹೊಸತರದ ಬೊಗೈನ್‌ವಿಲಿಯ, ಕ್ರೋಟನ್, ಕ್ಯಾನ, ಡೇಲಿಯಾ, ಗ್ಲಾಡಿಯೋಲೈ, ತಾಳೆಗಿಡ ಮತ್ತು ಆರ್ಕಿಡ್ (ಸೀತಾದಂಡೆ) ಗಿಡಗಳನ್ನು ತೋಟದಲ್ಲಿ ಬೆಳೆಸಿ, ಪ್ರಯೋಗಾನಂತರ, ತೋಟಗಾರರು ಬೆಳೆಸುವಂತೆ ಪ್ರಸಾರ ಮಾಡಿದ್ದಾರೆ. ಹೂವಿನ ಗಿಡಗಳನ್ನು ಬೆಳೆಸುವುದರಲ್ಲಿ ಮತ್ತು ಹೂವಿನ ವ್ಯಾಪಾರವನ್ನು ಮಾಡುವುದರಲ್ಲಿ ಕರ್ಣಾಟಕವು ಇಂಡಿಯಾದೇಶದ ಇತರ ಭಾಗಗಳಿಗೆ ದಾರಿ ತೋರಿಸಲು ಸಮರ್ಥವಾಗಿದೆ. ಮಲ್ಲಿಗೆ, ಸುಗಂಧರಾಜ, ಸೇವಂತಿಗೆ, ಕನಕಾಂಬರ ಮತ್ತು ಗುಲಾಬಿ ಇವೆಲ್ಲವೂ ಸ್ಥಳೀಯವಾಗಿದ್ದು, ಬಹಳ ಜನಗಳ ಮನಸ್ಸನ್ನು ಆಕರ್ಷಿಸಿವೆ. ಮೈಸೂರಿನ ಹೂವಿನ ಹಾರಗಳು ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಮೂಲ ಲೇಖಕರು ಮತ್ತು ಅನುವಾದಕರು :
**ಡಾ॥ ಎಲ್. ನಾರಾಯಣ ರಾವ್**

# ಕರ್ಣಾಟಕದ ಪ್ರಾಣಿ ಸಂಪತ್ತು

ಕರ್ಣಾಟಕದ ಪ್ರಾಣಿವರ್ಗವು ಹೆಚ್ಚುಕಡಮೆ ಡೆಕ್ಕನ್ನಿನ ಇತರ ಭಾಗದಂತೆಯೇ ಇದೆ. ಪ್ರಾಣಿಗಳು ಎರಡು ವಿಧಗಳಾಗಿರುತ್ತವೆ.—ನಡುವಿನ ತೆರೆದ ಭೂಭಾಗದ ಅಥವಾ ಮೈದಾನದ ಪ್ರಾಣಿಗಳು ಮತ್ತು ಪಶ್ಚಿಮದ ದಟ್ಟಕಾಡಿನ ಹಾಗೂ ಬೆಟ್ಟಸೀಮೆಯ ಪ್ರದೇಶ ಅಥವಾ ಮಲೆನಾಡಿನಲ್ಲಿ ವಾಸಿಸುವವುಗಳು. ಕರಾವಳಿ ಪ್ರದೇಶವು ಇಕ್ಕಟ್ಟಾಗಿದೆ ಮತ್ತು ಉದ್ದಕ್ಕೂ ಅಲ್ಲಲ್ಲಿ ಪಶ್ಚಿಮದ ಬೆಟ್ಟಸಾಲುಗಳು ಹಬ್ಬಿ ಒಡೆದಿವೆ. ಈ ಭಾಗದ ಪ್ರಾಣಿಸಂಪತ್ತು ಪಶ್ಚಿಮ ಘಟ್ಟ ಪ್ರದೇಶದಿಂದ ತೀರಾ ಭಿನ್ನವಾಗಿಲ್ಲ. ಕಶೇರುಕಗಳಲ್ಲಿ ತುಂಬಾ ಮುಖ್ಯವಾದವುಗಳನ್ನು ಕೆಳಗೆ ತಿಳಿಸಲಾಗಿದೆ :—

## ಸಸ್ತನಿಗಳು (ಮ್ಯಾಮ್ಮೆಲಿಯ)

ಈ ಗುಂಪಿನ ಹೆಚ್ಚು ಪ್ರಾಣಿಗಳಲ್ಲಿ ಸ್ತನಗಳು ಅಥವಾ ಹಾಲುಗ್ರಂಥಿಗಳಿರುವುದು ಇವುಗಳ ಮುಖ್ಯ ಲಕ್ಷಣ. ಸುಮಾರು ಆರು ಪ್ರಭೇದಗಳಿರುವ ಎರಡು ಜಾತಿಗಳಿವೆ. (ಮೆಕಾಸಸ್ ಮತ್ತು ಪಿತಿಕಸ್) ಸಿಂಹದಂತೆ ಕುಚ್ಚುಬಾಲದ ಕೋತಿ (ಮೆ. ಫೆರಾಕ್ಸ್—ಕಾರ್ಗ್ಗೊಡಗ) ಪಶ್ಚಿಮ ಘಟ್ಟದ ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ. ಕರಿಯ ಕೂದಲು ಮತ್ತು ಕಂದು ಬಣ್ಣದ ಗಡ್ಡ ಇವೆರಡರ ವಿನಾ ಇದು ಬಬೂನನ್ನು ಹೋಲುತ್ತದೆ. ಸಾಮಾನ್ಯವಾಗಿ ದೊರಕುವುದು ಮುಸುಕುಮಂಗ (ಮೆ. ಸಿನಿಕ—ಮಂಗ) ಇದನ್ನೂ ಭಿಕ್ಷುಕರು ಆಟವಾಡಲು ಕಲಿಸುತ್ತಾರೆ. ಲಂಗೂರು ಅಥವಾ ಮಾನವ ಮಂಗ (ಮೆ. ಎಂಟೆಲ್ಲಸ್ ಆಂಕಿಸಿಸ್—ಕೊಂಡ ಮುಚ್ಚು) ಇದಕ್ಕೆ ಕಪ್ಪು ಮುಖವೂ, ಕಿವಿಗಳೂ ಅಂಗೈ—ಅಂಗಾಲುಗಳೂ ಇವೆ. ಇದು ಕೂಡ ಈ ದೇಶದಲ್ಲಿ ಇದೆ.

## ಕಾಡುಪಾಪಗಳು (ಲೆಮುರ್‌ಗಳು)

ಪ್ರತಿನಿಧಿಗಳಾಗಿ ತೆಳು ಲೋರೆಸ್‌ಗಳು ಇವೆ. ಇವು ಕೊಡಗಿನಲ್ಲಿ ಇವೆ. ಇವುಗಳ ಬಾಚಿಹಲ್ಲುಗಳ ಪ್ರದೇಶದಲ್ಲಿ ಕಂಡಿ ಇರುವುದು ಮತ್ತು ಕಾಲಿನ ಎರಡನೆಯ ಬೆರಳಿನಲ್ಲಿ ಉಗುರಿನ ಬದಲು ಕೊಂಡಿಯುಗುರು ಇರುವುದು ಇವುಗಳ ವಿಶೇಷ ಲಕ್ಷಣಗಳು. ಬಾಲ ಇಲ್ಲ.

## ಮಾಂಸಾಹಾರಿಗಳು (ಕಾರ್ನಿವೋರ)

ಬೆಕ್ಕು ಜಾತಿಯ ವಿಶೇಷ ಲಕ್ಷಣಗಳೆಂದರೆ ದುಂಡು ತಲೆ ಮತ್ತು ಒಳಸೆಳೆದುಕೊಳ್ಳಬಹುದಾದ ಹುಲಿಯುಗುರುಗಳು. ದಂಡಕಾರಣ್ಯದ ದಟ್ಟವಾದ ಕಾಡುಗಳಲ್ಲಿ ಸಿಂಹಗಳಿದ್ದವೆಂದು ರಾಮಾಯಣದಲ್ಲಿ ಉಲ್ಲೇಖವಿದ್ದರೂ ವಾಸ್ತವವಾಗಿ ಈಭಾಗಕ್ಕೆ ಸಿಂಹವು ಹೊಕ್ಕುದಿಲ್ಲ. ಆದರೆ ಹುಲಿಯು (ಫೆಲಿಸ್ ಟೈಗ್ರಿಸ್) ಈ ಪ್ರಾಂತದ ದಟ್ಟಕಾಡುಗಳಲ್ಲಿ ಹೆಚ್ಚಾಗಿ ದೊರಕುತ್ತದೆ. ಮೀಸಲು ಕಾಡುಗಳ ಅಂಚಿನಲ್ಲಿ ಬೆಳೆಗಳನ್ನು ಹಾಳು ಮಾಡುವ ಜಿಂಕೆಯ ಹಿಂಡುಗಳನ್ನೂ ಕಾಡುಹಂದಿ ಹಿಂಡುಗಳ ಸಂಖ್ಯೆಯನ್ನೂ ಇದು ಹತೋಟಿಯಲ್ಲಿ ಇಡುತ್ತದೆ. ಪ್ರಾಂತದ ಅನೇಕ ಭಾಗಗಳಲ್ಲಿ, ವಿಶೇಷವಾಗಿ ಗುಡ್ಡ ಸೀಮೆಯಲ್ಲಿ ಚಿರತೆಗಳು (ಎಫ್. ಪಾರಡಿಸ್) ತುಂಬಾ ಸಾಮಾನ್ಯ. ಇದು ಬಹಳ ಚತುರವಾದ ಮತ್ತು ಕ್ರೂರವಾದ ಪ್ರಾಣಿ. ಇದು

ರೈತರ ಪಶುಸಂಪತ್ತಿಗೆ ನಿಜವಾದ ಅಪಾಯ. ಕಪ್ಪುಚಿರತೆ ನಿಜಕ್ಕೂ ಒಂದು ಭಿನ್ನಪಂಗಡ. ಆದರೆ ಇದು ಬಹಳ ಅಪರೂಪ. ಮೈಸೂರು ಮತ್ತು ಕೊಡಗಿನ ಹುಳಿಬೆಕ್ಕು (ಎಫ್. ಬೆಂಗಾಲೆನ್ಸಿಸ್) ಎರಡೇ ಅಡಿಉದ್ದ ವಿದ್ದರೂ ತುಂಬಾ ಕ್ರೂರವಾದ ಪ್ರಾಣಿ. ಚಿಕ್ಕಬೆಕ್ಕು (ಫಿ. ರುಬಿಜಿನೋಸ್) ಸಾಕಿದ ಬೆಕ್ಕಿಗಿಂತಲೂ ಚಿಕ್ಕದು ಮತ್ತು ಸುಲಭವಾಗಿ ಪಳಗಿಸಬಹುದೆಂದು ಹೇಳುತ್ತಾರೆ. ಸಾಮಾನ್ಯವಾದ ಭಾರತದ ಮಾದರಿಯು (ಫಿ. ಅಫಿನಿಸ್) ಕಾಡಿನಲ್ಲಿಯೂ ಬಯಲು ಪ್ರದೇಶದಲ್ಲಿಯೂ ದೊರಕುತ್ತದೆ. ಕಿವಿಗಳ ತುದಿಯಲ್ಲಿರುವ ಕುಚ್ಚು ಕೂದಲಿನಿಂದಾಗಿ ಇದು ಲಿಂಕ್ಸಿನಂತೆ ಕಾಣಿಸುತ್ತದೆ. ಇದು ಬೇಟೆಯ ಹಕ್ಕಿಗಳನ್ನು ಮತ್ತು ಕೋಳಿಗಳನ್ನು ನಾಶ ಮಾಡುತ್ತದೆ. ಚಿರತೆ ಅಥವಾ ಬೇಟೆಯಾಡುವ ಚಿರತೆ (ಅಸಿನೊನಿಕ್ಸ ವೆನೆಟಿಕಸ್)ಗೆ ಒಳ ಸೆಳೆದುಕೊಳ್ಳಲಾರದ ಅಥವಾ ಒಳಸೆಳೆದುಕೊಳ್ಳಬಹುದಾದ ಹುಲಿಯುಗುರುಗಳು ಮತ್ತು ತೆಳುವಾದ ಕಾಲುಗಳಿವೆ. ಸ್ವಲ್ಪದೂರವಾದರೆ ಹೆಚ್ಚು ವೇಗವಾಗಿ ಓಡಬಲ್ಲದು. ಇದು ಜಿಂಕೆಗಳೇ ಗಜೆಲ್ಲೆಗಳೇ ಮುಂತಾದ ಬೇಟೆ ಪ್ರಾಣಿಗಳನ್ನು ಹಿಂಬಾಲಿಸಿ ಹಿಡಿಯುತ್ತದೆ. ಇದು ಬೇಗ ಕಣ್ಮರೆಯಾಗುತ್ತದೆ.

ಚಿಕ್ಕ ಇಂಡಿಯಾದ ಸಿವೆಟ್ (ವೈವೆರಿಕ್ಯುಲ ಮಾಲಸ್ಸೆನ್ಸಿಸ್–ಪುನುಗು ಬೆಕ್ಕು), ಇಂಡಿಯಾದ ಸೇಂದಿಬೆಕ್ಕು (ಪೆರಡಾಕ್ಸುರಸ್ ನೈಗರ್–ಕಪ್ಪು ಬೆಕ್ಕು) ಮತ್ತು ಮುಂಗುಸಿ (ಮುಂಗಾಸ್ ಎಲ್ಲಿಯೋಟಿ)ಗಳಿಗೆ ಉದ್ದವಾದ ಮೂತಿ, ಹಿಂದೆ ಸೆಳೆದುಕೊಳ್ಳಲಾರದ ಹುಲಿಯುಗುರುಗಳು ಮತ್ತು ಹೆಚ್ಚು ಸಂಖ್ಯೆಯ ದವಡೆ ಹಲ್ಲುಗಳಿವೆ. ಬಾಲದ ಬುಡದಲ್ಲಿರುವ ಪೆರಿನಿಯಲ್ ಗ್ರಂಥಿಯಿಂದ ಸುಗಂಧ ದ್ರವ್ಯದ ವಸ್ತುವನ್ನು ಸ್ರವಿಸುವ ಸಿವೆಟ್ ಬೆಕ್ಕು ಪ್ರತ್ಯೇಕ ಕಾಡುಗಳಲ್ಲಿ ವಾಸಿಸುತ್ತದೆ. ಇವು ಇಲಿಗಳು, ಅಳಿಲುಗಳು ಮತ್ತು ಪಕ್ಷಿಗಳ ತತ್ತಿಗಳನ್ನು ತಿನ್ನುತ್ತವೆ. ಸೇಂದಿ ಬೆಕ್ಕಿಗೆ ಹೊಸ ಈಚಲ ರಸವನ್ನು ಕಂಡರೆ ತುಂಬಾ ಆಸೆ ಎಂದು ಹೇಳಲಾಗಿದೆ.

ಕಿರುಬ ಜಾತಿಯಲ್ಲಿ ಒಂದೇ ಒಂದು ಪ್ರತಿನಿಧಿ ಇದೆ (ಹೈನಿಡೆ). ಇದು ಕರ್ನಾಟಕ ಮತ್ತು ಅದರ ಒಣ ಜಿಲ್ಲೆಗಳಲ್ಲಿ ವಾಸಿಸುತ್ತದೆ. ಇದಕ್ಕೆ ಬಲವಾದ ದವಡೆಗಳಿವೆ ಮತ್ತು ಇವು ಸತ್ತಪ್ರಾಣಿಗಳನ್ನು ತಿನ್ನಲು ಸಹಾಯಮಾಡುತ್ತವೆ.

ನಾಯಿ ಕುಟುಂಬದಲ್ಲಿ ತೋಳ (ಕ್ಯಾನಿಸ್ ನಾರಿಯ), ನರಿ (ಕ್ಯಾನಿಸ್ ಇಂಡಿಕಸ್), ಸೀಳು ನಾಯಿ (ಕುವಾನ್ ಡುಕುನೆನ್ಸಿಸ್) ಮತ್ತು ಕೆಂಪುನರಿ (ವಲ್ಪಿಸ್ ಬೆಂಗಾಲೆನ್ಸಿಸ್) ಗಳಿವೆ. ಇವು ಮಲೆನಾಡು ಪ್ರದೇಶದಲ್ಲಿವೆ ; ಚತುರವಾದ ಬುದ್ಧಿವಂತ ಪ್ರಾಣಿಗಳು. ಕೆಲವೊಮ್ಮೆ ನರಿ ಮತ್ತು ಕೆಂಪು ನರಿಗಳು ಸಸ್ಯಾಹಾರಕ್ಕೆ ತೊಡಗಿ ಕಬ್ಬು,!ಕಾಫಿ ಮತ್ತು ಕಡಲೆಕಾಯಿಗಳನ್ನು ಸಾಕಷ್ಟು ನಾಶಪಡಿಸುತ್ತವೆ. ತೋಳಗಳು ಮತ್ತು ಸೀಳು ನಾಯಿಗಳು ಹಿಂಡಾಗಿ ಬೇಟೆಯಾಡುತ್ತವೆ. ಇವು ಜಿಂಕೆ, ಸಾರಗಗಳಂತಹ ಬೇಟೆಪ್ರಾಣಿಗಳಿಗೆ ತುಂಬಾ ಅಪಾಯಕಾರಿ.

ಮಾರ್ಟಿನ್‌ಗಳ ಕುಟುಂಬದಲ್ಲಿ, ದಕ್ಷಿಣ ಭಾರತದ ಮಾರ್ಟಿನ್ (ಮಾರ್ಟಿಸ್ ಗ್ವಾಕ್ಕಿನ್ಸಿ) ನೀಲಗಿರಿಯ ಮತ್ತು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ದೊರಕುತ್ತವೆ. ನೀರು ನಾಯಿ (ಲುಟ್ರ ಲುಟ್ರ) ಗಳು ನದಿಗಳಲ್ಲಿನ ಮತ್ತು ದೊಡ್ಡ ಕೆರೆಗಳಲ್ಲಿನ ಮೀನುಗಳನ್ನು ನಾಶಪಡಿಸುತ್ತವೆ. ಇವು ನೀರಿನ ದಂಡೆಯ ಮೇಲೆ ಬಿಲಗಳಲ್ಲಿ ವಾಸಿಸುತ್ತವೆ. ಹುಲಿಯುಗುರಿಲ್ಲದ ನೀರು ನಾಯಿಯೊಂದು ಕೊಡಗಿನಲ್ಲಿ ದೊರಕುವುದಾಗಿ ತಿಳಿಸಲಾಗಿದೆ.

ಕರಡಿಕುಟುಂಬವು ಹೆಚ್ಚು ಏನನ್ನು ಬೇಕಾದರೂ ತಿನ್ನಬಲ್ಲ ದಂತಪಂಕ್ತಿಯ ವಿಶೇಷ ಲಕ್ಷಣವನ್ನು ಹೊಂದಿದೆ. ಇದರ ಪ್ರತಿನಿಧಿಯಾಗಿ ಕರಡಿ ಒಂದಿದೆ (ಮೆಲುರ್ಸಸ್—ಉರ್ಸಿನಸ್). ಇವು ಗುಡ್ಡಗಾಡಿನ

ಶಿಲಾಗುಹೆಗಳಲ್ಲಿ ವಾಸಿಸುತ್ತವೆ. ಇವು ಹಣ್ಣು, ಕೀಟಕಗಳು ಮತ್ತು ಜೇನು ತುಪ್ಪಗಳನ್ನು ತಿಂದು ಜೀವಿಸುತ್ತವೆ.

**ಕೀಟಾಹಾರಿಗಳು (ಇನ್ಸೆಕ್ಟಿವೋರ)**

ಈ ಪುಟ್ಟ ನಿಶಾಚರ ಪ್ರಾಣಿಗಳ ಗುಂಪಿಗೆ ಸೇರಿದ, ದಕ್ಷಿಣ ಭಾರತದ ಮುಳ್ಳಿಲಿ (ಎರಿನೇಸಿಯಸ್ ಮೈಕ್ರೊಪ್ರಿಸ್) ಗಳು ಪೂರ್ವಘಟ್ಟ ಪ್ರದೇಶಗಳಲ್ಲಿ ದೊರಕುತ್ತವೆ. ಮದ್ರಾಸಿನ ಮರಮುಳ್ಳಿಲಿ (ಅನತಾನ ಎಲ್ಲಿಯೋಟಿ) ಅಳಿಲಿನಂತಿದೆ. ಕಂದು ಮೂಗಿಲಿ (ಪ್ಯಾಚಿಯೂರ ಮ್ಯುರಿನ) ಗಳು ಸಾಮಾನ್ಯವಾಗಿ ಕಾಡುಗಳಲ್ಲಿ ಮತ್ತು ಅಪರೂಪಕ್ಕೆ ಕಾಡಿನ ಸಮೀಪದ ಮನೆಗಳ ಬಳಿಯೂ ದೊರಕುತ್ತವೆ. ಕಂದು ಪುನುಗು ಮೂಗಿಲಿ (ಪ್ಯಾ. ಕೋಯರುಲ್ರಿಯ) ಕೆಲವೊಮ್ಮೆ ಮನೆಗಳಲ್ಲಿದ್ದು ಒಂದೇ ರೀತಿಯ ಪಿಚಪಿಚ ಶಬ್ದ ಮಾಡುತ್ತದೆ, ಮತ್ತು ಹುಳು ಹುಪ್ಪಟೆಗಳನ್ನು ನಾಶಪಡಿಸುತ್ತದೆ.

ಬಾವಲಿಗಳು (ಕೈರಾಪ್ಟೆರ) ಹಾರುವ ಸಸ್ತನಿಗಳು. ಇವುಗಳ ಬೆರಳುಗಳು ಲಂಬವಾಗಿ ಜಾಲಪಟಲವೊಂದು ಹಿಂಗಾಲುಗಳ ಮೇಲೆ ಹಾಗೂ ಬಾಲಗಳ ಮೇಲೆ ಹರಡಿದೆ. ಮಂಡಿಯು ಹಿಮ್ಮುಖನಾಗಿದೆ. ಆದುದರಿಂದ ನೆಲದ ಮೇಲೆ ವಕ್ರವಾಗಿ ಕಾಲೆಳೆದುಕೊಂಡು ಓಡಾಡುತ್ತವೆ. ಇವಕ್ಕೆ ತುಂಬಾ ತೀಕ್ಷ್ಣವಾದ ಸ್ಪರ್ಶಜ್ಞಾನವಿದೆ. ಇರುವ ಅನೇಕ ವಿಧಗಳಲ್ಲಿ ಇಲ್ಲಿ ಎರಡನ್ನು ವಿವರಿಸಬಹುದು : ಹಾರು ನರಿ ಅಥವಾ ಹಣ್ಣುಬಾವಲಿ (ಟಿರೊಪಸ್ ಜೈಜಾಂಟಿಯಸ್) ಗಳು ಹೆಚ್ಚು ಸಂಖ್ಯೆಗಳಲ್ಲಿ ಒಟ್ಟಾಗಿ ವಾಸಿಸುತ್ತವೆ. ಹಗಲಿನಲ್ಲಿ ಮರಗಳ ರೆಂಬೆಗಳಿಗೆ ನೇತುಬಿದ್ದಿರುತ್ತವೆ. ಇವು ಹಣ್ಣು ತೋಟಗಳಿಗೆ ತುಂಬಾ ಕೇಡುಂಟುಮಾಡುತ್ತವೆ. ಗುಹೆಗಳಲ್ಲಿ ವಾಸಿಸುವ ಕಂದುಬಣ್ಣದ ಹಣ್ಣುಬಾವಲಿಗಳು (ರೊಸೆಟ್ಟಸ್ ಲೆಕ್ಕೆನಾಲಿಟ) ಮತ್ತು ದಕ್ಷಿಣ ಭಾರತದ ಹಣ್ಣುಬಾವಲಿಗಳು ಬಾಳೆ, ಸೀಬೆ ಮತ್ತು ಮಾವಿನ ತೋಟಗಳಿಗೆ ಹಾನಿಕಾರಕಗಳು.

ರೊಡೆಂಟಗಳು ನಾಶಕಾರಕ ಪಿಡುಸುಗಳು. ದಕ್ಷಿಣ ಭಾರತದ ಹಾರಳಿಲು (ಪೆಟಾರಿಸ್ಟ ಫಿಲಿಪ್ಪೆನೆಸ್ಸಿಸ್) ನಿಶಾಚರಿ ; ಕೊಡಗಿನ ಪಟ್ಟೆ ಅಳಿಲುಗಳು (ಫೂನಾಂಬುಲಸ್ ರಫ್ಫೋನಿ) ಮತ್ತು ಮೂಸಲುಪಟ್ಟೆ ಅಳಿಲುಗಳು (ಫು. ಟ್ರೈಸ್ಟ್ರಾಟಸ್ ನ್ಯೂಮೆರಿಯಸ್—ಕಾಡು ಅಳಿಲು) ಹಣ್ಣು ಮತ್ತು ಬೀಜ ತಿಂದು ಜೀವಿಸುತ್ತವೆ. ಭಾರತದ ದೊಡ್ಡಳಿಲು (ಸೈಯೂರಸ್ ಮಲಬಾರಿಕಸ್), ಭಾರತದ ಬೂದು ಅಳಿಲು (ಎಸ್. ಸಿಲೋನಿಕಸ್) ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ, ಮತ್ತು ಮರಗಳಲ್ಲಿ ಪೊಟರೆಗಳನ್ನು ತೋಡುತ್ತದೆ. ಜರ್ಬಿಲ್ ಅಥವಾ ಸಾರಗ ಇಲಿ (ಬಿಲ ಇಲಿ) ಬೆಳೆಗಳನ್ನು ತಿಂದು ನಾಶಪಡಿಸುತ್ತದೆ. ಬಯಲಿನ ಇಲಿಗಳು ಬೆಳೆಗಳನ್ನು ತಿಂದು ಕಣಜಗಳನ್ನು ಆಕ್ರಮಿಸುತ್ತವೆ. ಇತರ ವಿಧಗಳೆಂದರೆ–ಕಚ್ಚಬಂಡೆ ಇಲಿಗಳು, ಹೆಗ್ಗಣಗಳು, ದಕ್ಷಿಣ ಭಾರತದ ಮೋಟಿಲಿ, ಡೆಕ್ಕನ್ನಿನ ಮರ ಇಲಿ, ಬಿಳಿಬಾಲದ ಇಲಿ,ಭಾರತದ ಸಾಮಾನ್ಯ ಇಲಿ, ದಕ್ಷಿಣಭಾರತದ ಬಯಲಿಲಿ, ಭಾರತದ ಸಾಮಾನ್ಯ ಮನೆಇಲಿ, ಮತ್ತು ಉದ್ದಬಾಲದ ಮರದ ಇಲಿ (ಮ. ಬಾಡಿಯಸ್). ಆಗಾಗ ಕಾಣಸಿಗುವ ಭಾರತದ ಮುಳ್ಳುಹಂದಿ (ಹಿಸ್‌ಟ್ರಿಕ್ಸ್ ಲ್ಯೂಕ್ರ)ಯನ್ನು ಅದರ ಮುಳ್ಳುಗಳು ರಕ್ಷಿಸಿವೆ. ಇದು ಕಾಫಿ ಮತ್ತು ಕಬ್ಬಿನ ತೋಟಗಳಲ್ಲಿ ತುಂಬಾ ಉಪದ್ರವಕಾರಿ. ಮೊಲಗಳಲ್ಲಿ ಸಾಮಾನ್ಯ ಭಾರತದ ಮೊಲ (ಲಿಪಸ್ ರೂಫಿಕಾಡೇಟಸ್ ಮತ್ತು ಕಪ್ಪುಗೊರಲಿನ ಮೊಲ (ಲಿ. ನೈಗ್ರಿಕೊಲ್ಲಿಸ್) ಗಳು ತೆರೆದ ಬೆಂಗಾಡಿನಲ್ಲಿ ಜೀವಿಸುತ್ತವೆ. ಇವನ್ನು ನಾಯಿಗಳ ಸಹಾಯದಿಂದ ಬೇಟೆಯಾಡುತ್ತಾರೆ.

ಕರ್ನಾಟಕದ ಕಾಡುಗಳಲ್ಲಿ ದೊರಕುವ ಪ್ರಾಣಿಗಳಲ್ಲಿ ತುಂಬಾ ದೊಡ್ಡ ಪ್ರಾಣಿಗಳೆಂದರೆ ಆನೆಗಳು.

ಅವು ಸಸ್ಯಾಹಾರಿಗಳು. ಭಾರತದ ಆನೆ (ಎಲಿಫಾಸ್ ಮ್ಯಾಕ್ಸಿಮಸ್) ಪಶ್ಚಿಮ ಘಟ್ಟದ ತಪ್ಪಲು ಗುಡ್ಡಗಳಲ್ಲಿ ಹಾಸನ, ಮೈಸೂರು, ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ದೊರಕುತ್ತದೆ.

ಟೊಳ್ಳು ಕೊಂಬಿನ ಮೆಲುಕು ಹಾಕುವ ಪ್ರಾಣಿಗಳಾದ ಎತ್ತು, ಕುರಿ, ಆಡು, ಜಿಗರೆ ಮತ್ತು ಸಾರಗಗಳು—ಪ್ರಾಣಿಗಳ ಒಂದು ಕುಟುಂಬಕ್ಕೆ ಸೇರುತ್ತವೆ. ಕಾಡುಕೋಣ (ಬೈಬಾಸ್ ಗೌರಾಸ್) ಗಳು ಆನೆಗಳ ಜೊತೆಯಲ್ಲಿ ದಟ್ಟ ಕಾಡುಗಳಲ್ಲಿ ದೊರಕುತ್ತವೆ. ಇವು ದನದ ಕುಟುಂಬಕ್ಕೆ ಸೇರುತ್ತವೆ.

ನಾಲ್ಕು ಕೊಂಬಿನ ಸಾರಗಗಳು ಗುಡ್ಡಗಾಡಿನಲ್ಲಿ ವಾಸಿಸುತ್ತವೆ. ಚಿಗರಿ (ಸರ್ವಿಕಾಪ್ರ) ಯು ಪೂರ್ಣ ಭಾರತದ ಪ್ರಾಣಿ. ಇದಕ್ಕೆ ಬಾಗಿದ ಕೊಂಬುಗಳಿವೆ. ಶಂಕುಹುಲ್ಲೆ (ಜ. ಬೆನಿಟ್ಟಿ) ಗಳು ಚಿಗರಿಗಳಂತೆ ಸಂಘಜೀವಿಗಳಲ್ಲ.

ಜಿಂಕೆ ಜಾತಿಗೆ (ಸರ್ವಿಡೆ) ಗಟ್ಟಿಯಾದ ಕೊಂಬುಗಳಿವೆ. ಇವು ಗಂಡುಗಳಿಗೆ ಮಾತ್ರ ಮೀಸಲು. ಬಗುಳುವ ಜಿಂಕೆ ಅಥವಾ ಕಾಡುಕುರಿ (ಮುಂಟಿಯಾಕಸ್ ವೆಜೈನಾಲಿಸ್) ನಾಯಿ ಬಗುಳಿದಂತೆಯೇ ಕೂಗುತ್ತದೆ. ಗಂಡುಗಳಿಗೆ ಉದ್ದವಾದ ದಂತದಂತಿರುವ ಮೇಲಿನ ಕೋರೆಹಲ್ಲುಗಳಿವೆ. ಇವು ಒಳ್ಳೆಯ ರಕ್ಷಣಾಂಗಗಳಾಗುತ್ತವೆ. ಸಾಂಬಾರ್ ಅಥವಾ ರೂಸ್ ಜಿಂಕೆಯು ಈ ಜಾತಿಯಲ್ಲಿಯೇ ಅತಿ ದೊಡ್ಡದು. ಗಂಡಿಗೆ ಕೇಸರ ಇದೆ. ಇದು ಸಾಮಾನ್ಯವಾಗಿ ಕಾಡಿನಲ್ಲಿ ವಾಸಿಸುವ ಪ್ರಾಣಿ. ಚುಕ್ಕಿಜಿಂಕೆ (ಆಕ್ಸಿಸ್ ಆಕ್ಸಿಸ್—ಸಾರಂಗ) ಗಳು ಡೆಕ್ಕನ್ನಿನ ಜಾತಿಯವಕ್ಕಿಂತ ಚಿಕ್ಕವು. ಇವಕ್ಕೆ ಸುಂದರವಾದ ಬಣ್ಣ ಮತ್ತು ಮೈಕಟ್ಟು ಇವೆ. ಅವು ಸಾಮಾನ್ಯವಾಗಿ ನೀರು ಹರಿಯುವೆಡೆ ಹೆಚ್ಚು; ಮತ್ತು ಗುಂಪು ಗುಂಪಾಗಿ ಓಡಾಡುತ್ತವೆ. ಕೂರ್ಪಂದಿ (ಟಾಗುಲಸ್ ಮೆಮಿನ್ನ) ಯು ಹೆಚ್ಚಾಗಿ ಹಂದಿಯಂತೆ ಕಾಣಿಸುತ್ತದೆ. ಇದಕ್ಕೆ ಕೊಂಬುಗಳಿಲ್ಲ, ಕಾಲಿನಲ್ಲಿ ನಾಲ್ಕು ಬೆರಳುಗಳಿವೆ. ಇದು ಹೆಚ್ಚಾಗಿ ಕಾಡುಗಳಲ್ಲಿರುತ್ತದೆ.

ಭಾರತದ ಕಾಡುಹಂದಿಯು (ಸಸ್ ಕ್ರಿಸ್ಟೇಟಸ್) ಒಂಟಿ ಜೀವಿ. ಆದರೆ ಹೆಣ್ಣುಗಳು ಸಂಘ ಜೀವಿಗಳು. ಗೆಡ್ಡೆ ಗೆಣಸುಗಳನ್ನು ಹುಡುಕುವ ಸಲುವಾಗಿ ತಮ್ಮ ಕೋರೆಗಳಿಂದ ನೆಲವನ್ನು ಕೆದಕುತ್ತವೆ. ಬಹಳ ಅಪರೂಪವಾಗಿ ಸತ್ತ ಜೀವಿಗಳನ್ನು ತಿನ್ನುತ್ತವೆ. ಪಿಪೀಲಿಕಾ ಭಕ್ಷಿಗಳಲ್ಲಿ ಭಾರತದ ಚಿಪ್ಪುಹಂದಿ (ಮೇನಿಸ್ ಪೆಂಟ ಡಾರ್ಕ್ಟೈಲ್) ಯು ತಲೆ, ಮುಂಡ, ಬಾಲ ಮತ್ತು ಕಾಲುಗಳ ಮೇಲೆ ಹೆಂಚಿನಂತೆ ಹೊದಿಸಿದ ದೊಡ್ಡ ಹುರುಪೆಗಳಿವೆ. ಇವು ಇರುವೆ ಗೆದ್ದಲುಗಳನ್ನು ತಿನ್ನಲು ಹುತ್ತಗಳನ್ನು ಬಗೆಯುತ್ತವೆ.

**ಪಕ್ಷಿಗಳು**

ಪಕ್ಷಿ ಸಂಪತ್ತು ಬಹಳ ಶ್ರೀಮಂತವಾದುದು ಮತ್ತು ಭಿನ್ನ ವಿಭಿನ್ನವಾದುದು. ಅದರಲ್ಲಿಯೂ ಕೀಟಕಗಳು ಮತ್ತು ಸಸ್ಯಾಹಾರ ಹೇರಳವಾಗಿ ದೊರಕುವ ಕಾಡು ಪ್ರದೇಶದಲ್ಲಿ ಹೆಚ್ಚಾಗಿ ದೊರಕುತ್ತವೆ.

ಈ ಗಣದಲ್ಲಿ ಕಾಗೆ (ಕೊರ್ವಿಡೆ) ಗಳದು ಉತ್ಕೃಷ್ಟವಾದ ಗುಂಪು. ಗರಿಗಳು ಕಪ್ಪು ಮತ್ತು ಬಾಲವು ಹಾಲವಾಣ ಹಕ್ಕಿಗಳಷ್ಟು ಉದ್ದವಾಗಿಲ್ಲ. ಸಾಮಾನ್ಯ ಊರಿನ ಕಾಗೆಗಳಲ್ಲಿ (ಕೊರ್ವಸ್ ಸ್ಪೆಂಡಿಯಸ್) ಬೂದು ಬಣ್ಣದ ಕಂಠ ಇದೆ. ಕಾಡು ಕಾಗೆ (ಕೊ. ಮ್ಯಾಕ್ರೊರಿಂಕ್ಕಸ್) ಗೆ ಕಪ್ಪು ಕಂಠ ಇದೆ. ಈ ಎರಡೂ ಪ್ರಭೇದಗಳು ಹಳ್ಳಿ ಪಟ್ಟಣಗಳಲ್ಲಿ ದೊರಕುತ್ತವೆ. ಗಂಡು ಹೆಣ್ಣುಗಳು ಒಂದೇ ತೆರನಾಗಿವೆ. ಮರದ ಪೈ (ಡೆಂಡ್ರೊಸಿಟ್ಟ ವ್ಯಾಗ ಬಾಂಡಸ್) ತೆರೆದ ಕಾಡುಗಳ ನಿವಾಸಿ. ಆದರೆ ಕೆಲವೊಮ್ಮೆ ತೋಟಗಳಿಗೂ ಬರುತ್ತದೆ. ದೇಹ ಕೆಂಪು ಮಿಶ್ರಿತ ಬೂದು ಬಣ್ಣವಾಗಿದೆ; ಮತ್ತು ತಲೆ ಹಾಗೂ ಕತ್ತುಗಳು

ಶ್ಯಾಮಲ. ಕಂದು ಟಿಟ್ಟಿಭ ಮತ್ತು ಅರಿಸಿಣ ಕೆನ್ನೆಯವು (ಮ್ಯಾಕ್ರೊಲೋಫಸ್ ಕ್ಯಾಂ ಥೊಜೆನಿಸ್) ಗಳು ದೇಶಪೂರ್ತಿ ದೊರಕುತ್ತವೆ. ಥ್ರಶಗಳು ಮತ್ತು ಉಲಿಯಕ್ಕಿಗಳ ಪ್ರತಿನಿಧಿಯಾಗಿ, ಸಾಮಾನ್ಯವಾಗಿ ಚಿಕ್ಕಪುಟ್ಟ ಗುಂಪುಗಳಲ್ಲಿ ಚಲಿಸುವ ಕಾಡು ಉಲಿಯಕ್ಕಿಗಳು (ಟರ್‌ಡಾಯಿಡಿಸ್ ಸೋಮರ್‌ವಿಲ್ಲೈ), ಬಯಲು ಪ್ರದೇಶದ ಸಾಮಾನ್ಯ ಉಲಿಯಕ್ಕಿ (ಆರ್ಗ್ಗಿಯ ಕೌಡೇಟ), ದಖ್ಖಿನ್ಸ ದಟ್ಟಕಾಡುಗಳ ಕುಡುಗೋಲು ಉಲಿಯಕ್ಕಿಗಳು (ಡ್ಯುಮಿಟಿಯ ಹೈಪರೆತ್ರ), ಬಯಲುಗಳಲ್ಲಿ ಮತ್ತು ಗುಡ್ಡಗಾಡುಗಳಲ್ಲಿ ಚಳಿಗಾಲವನ್ನು ಕಳೆಯುವ ಅರಿಸಿಣ ಕಣ್ಣಿನ (ಕ್ರೈಸೋಮ ಸೈನೆನ್‌ಸಿಸ್) ಮತ್ತು ನೀಲ ಶಿಲಾಥ್ರಶಗಳು (ಆಂಟೊಂಟಿಕೋಲ ಕೋಲಿಟೇರಿಯ), ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ವಾಸಿಸುವ ಮಲಬಾರಿನ ನೆಳ್ಳುಥ್ರಶಗಳು (ಮೈಯಿಯೊ ಫೊನಸ್ ಹಾರ್ಸ್ ಫೀಲ್ಡಿ) ಇವೆ.

ಬಣ್ಣಬಣ್ಣದ ಪೊದೆಯ ಹರಟುಹಕ್ಕಿಯು (ಸ್ಯಾಕ್ಸಿಕೋಲ ಕ್ಯಾಪ್ರೇಟ) ಮಿಡಿತೆಗಳು ಮತ್ತು ಗಿಡದ ತಿಗಣೆಗಳನ್ನು ಅರಸುತ್ತ, ತೆರೆದ ಕಲ್ಲು ಕಾಡಿನಲ್ಲಿ ವಾಸಿಸುತ್ತದೆ. ಆದರೆ ಕಂಠಪಟ್ಟಿಯಿರುವ ಪೊದೆಯ ಹರಟುಹಕ್ಕಿಯು (ಸ್ಯಾ. ಟಾರ್‌ಕ್ವೇಟ) ಬಯಲು ಪ್ರದೇಶಕ್ಕೆ ಕೇವಲ ಚಳಿಗಾಲದಲ್ಲಿ ಮಾತ್ರ ಭೇಟಿ ಕೊಡುತ್ತಿದೆ. ನೀಲಿಯ ಗಂಧರ್ವಪಕ್ಷಿಯು ನಿರಂತರ ಹಸುರು ಕಾಡುಗಳಲ್ಲಿ ವಾಸಿಸುತ್ತದೆ. ಬುಲ್‌ಬುಲ್ ಹಕ್ಕಿಗಳಲ್ಲಿ ಆರು ವಿಧಾನಗಳಿವೆ : ಹಸುರು ಬುಲ್‌ಬುಲ್ ಹಕ್ಕಿಯು (ಕ್ಲೋರೊಪ್ಸಿಸ್ ಆರಿಫ್ರಾನ್ಸ್) ದಟ್ಟ ಕಾಡುಗಳಲ್ಲಿ ವಾಸಿಸುತ್ತದೆ. ಜೆರ್ಡನರ ಕ್ಲೊರೋಪಿಸ್ ಹಕ್ಕಿಯು ಭಾರತದ ಪರ್ಯಾಯ ದ್ವೀಪದ ಎಲ್ಲೆಡೆಗಳಲ್ಲಿಯೂ ವಾಸಿಸುತ್ತದೆ. ಇದು ಹೂವುಗಳ ಮಧುವನ್ನು ಹೀರಿ ಜೀವಿಸುತ್ತದೆ. ಕೆಂಪು ಕಂಡಿಯ ಬುಲ್‌ಬುಲ್ ಕೂಡ ತೋಟಗಳಲ್ಲಿ ಮತ್ತು ಕಾಡುಗಳಲ್ಲಿ ವಾಸಿಸುವ ಹಕ್ಕಿ. ಕೆಂಪುಮೀಸೆ ಬುಲ್ ಬುಲ್ ಹಕ್ಕಿಯು 6,000 ಅಡಿಗಳಷ್ಟು ಎತ್ತರದ ವರೆಗೆ, ಹೆಚ್ಚಾಗಿ ತೇವತುಂಬಿದ ಹವೆ ಇರುವ ಪ್ರದೇಶಗಳನ್ನು ಆಕ್ರಮಿಸುತ್ತದೆ. ಬಿಳಿಯ ಕಂಠದ ಬುಲ್‌ಬುಲ್ ಹಕ್ಕಿಯು ತೆರೆದ ಕುರುಚಲು ಕಾಡುಗಳಲ್ಲಿ ಹೇರಳವಾಗಿ ಹರಡಿದೆ. ಕೆಂಪು ಚಿಮ್ಮುಹಕ್ಕಿಯು ದಖ್ಖಿನ್ನಿಗೆ ಚಳಿಗಾಲದಲ್ಲಿ ಭೇಟಿ ನೀಡುವ ಹಕ್ಕಿ. ಭಾರತದ ರಾಬಿನ್ (ಸೆಕ್ಸಿಕೋಲಾಯಿಡಿಸ್ ಪುಲಿಕೇಟ) ಮತ್ತು ದಯಾಲ್ ಅಥವಾ ಹಾಲುಹಕ್ಕಿ (ಕೊಪ್ಸಿಕಸ್ ಸಾಲಾರಿಸ್)ಗಳು ಎಲ್ಲಾ ಪ್ರದೇಶಗಳಲ್ಲಿಯೂ ಇವೆ. ಇವು ಮಿಡಿತೆಗಳನ್ನು ತಿನ್ನುತ್ತವೆ. ಶ್ಯಾಮಲ ಹಕ್ಕಿಯು ಅಪರೂಪವಾಗಿ ಕಣಿವೆಗಳಲ್ಲಿ, ಬೊಂಬು ಬೆಳೆಯುವ ಪೊದೆಗಳಲ್ಲಿ ದೊರಕುತ್ತದೆ. ತೆಂಕಣದ ಕಪ್ಪಕ್ಕಿ (ಟರ್ಡಸ್ ಮೆರುಲ) ಕಣಿವೆಗಳಲ್ಲಿ ವಾಸಿಸುವ ಮತ್ತು ಚಳಿಗಾಲದಲ್ಲಿ ಬಯಲು ಸೀಮೆಗೆ ಭೇಟಿ ಕೊಡುತ್ತದೆ.

ಕಾಡು-ಕಡುಕಗಳ ಗುಂಪಿನಲ್ಲಿ ಗುಡ್ಡಗಾಡಿನಲ್ಲಿರುವ ಚೆಸ್ಟ್‌ನಟ್ ಬಣ್ಣದ ಹೊಟ್ಟೆಯ ಕಾಳುಕುಟುಕ (ಸಿಟ್ಟಕ್ಯಾಸ್ಟೇನಿಯ), ಮುಖ್ಯವಾಗಿ ಕಣಿವೆಗಳಲ್ಲಿ ವಾಸಿಸುವ ವೆಲ್ವೆಟ್ ದೇಹದ ಕಾಳು ಕುಟುಕ (ಸಿ. ಫ್ರಾಂಟ ಲಿಸ್)ಗಳು ಇವೆ. ರಾಜಕಾಗೆ ಅಥವಾ ಕಪ್ಪು ಡ್ರಾಂಗೊ ಕಳಿಂಗ ಪಕ್ಷಿಗೆ (ಡ್ರೊ ಕ್ರೂರಸ್ ಮಾಕ್ರೊ ಸೆರ್ಕಸ್) ಹೊಳೆಯುವ ಕಪ್ಪು ಬಣ್ಣವಿದೆ, ಕವಲುತೋಕೆ ಇದೆ. ದಟ್ಟಕಾಡುಗಳ ವಿನಾ ಮಿಕ್ಕೆಡೆಗಳಲ್ಲಿ ಎಲ್ಲಾ ವಾಸಿಸುತ್ತದೆ. ಬಿಳಿಯ ಹೊಟ್ಟೆಯ ಹಕ್ಕಿಯು ವ್ಯವಸಾಯ ಮಾಡಿದ ಮತ್ತು ಮರಗಳಿಲ್ಲದ ಪ್ರದೇಶವನ್ನು ಬಿಟ್ಟು ಬೇರೆಡೆಗಳಲ್ಲಿ ವಾಸಿಸುತ್ತದೆ. ಅಂಬುಬಾಲದ ಡ್ರಾಂಗೊ ಅಪರೂಪವಾಗಿ ದಟ್ಟಕಾಡುಗಳಲ್ಲಿ ದೊರಕುತ್ತದೆ. ದರ್ಜಿಹಕ್ಕಿ (ಆರ್ಥಿಟೋಮಸ್ ಸುಟೊರಿಸ್) ಗಳು ಕುರುಚಲು ಕಾಡುಗಳಲ್ಲಿ ತೋಟಗಳಲ್ಲಿ ಸಿಕ್ಕುತ್ತವೆ. ಇವು ಎಲೆಗಳನ್ನು ಜೋಡಿಸಿ ಹೊಲಿದು ಗೂಡುಕಟ್ಟುತ್ತವೆ. ಬೀಸಣಿಗೆ ಬಾಲದ ಉಲಿಯಕ್ಕಿಗಳು (ಸ್ಸಿಸ್ಟಿಕೋಲ ಜನ್ಸಿಡಿಯ) ಬತ್ತದ ಗದ್ದೆಗಳಲ್ಲಿಗೆ ಬರುವ ಬಹಳ ಪುಟ್ಟ ಹಕ್ಕಿಗಳು. ಇವು ಹುಲ್ಲುಗಳ ಕೀಟಕಗಳನ್ನು ತಿನ್ನುತ್ತವೆ. ಬೂದುಬಣ್ಣದ ರೆನ್ ಉಲಿಯಕ್ಕಿ (ಪ್ರಿನಿಯ ಸೋಷಿಯಲಿಸ್) ಮತ್ತು ಭಾರತದ ರೆನ್ ಉಲಿಯಕ್ಕಿ (ಪಿ. ಸಬ್—ಪ್ಲೇವ್) ಗಳೆರಡೂ ಬಹಳ ಸಾರಿ ತೆರೆದ ಹುಲ್ಲುಗಾವಲು ಮತ್ತು ಬಯಲಿನಲ್ಲಿ ದೊರಕುತ್ತವೆ. ಕಳಿಂಗ ಹಕ್ಕಿ ಅಥವಾ ಕಟುಕ ಹಕ್ಕಿಗಳು (ಲ್ಯಾನಿಡೆ) ತುಂಬಾ

ಜಗಳಗಂಟಿ ಹಕ್ಕಿಗಳು. ಬಯಲು ಸೀಮೆಯಲ್ಲಿ ಕಂದು ಬಣ್ಣದ ಕಳಿಂಗ ಹಕ್ಕಿ, ಪಿಂಗಲ ಬಣ ದ ಬೆನ್ನಿನ ಕಳಿಂಗ ಹಕ್ಕಿ, ಕೆಂಗಂದು ಬಣ್ಣದ ಬೆನ್ನಿನ ಕಳಿಂಗಹಕ್ಕಿ, ಮತ್ತು ಕಾಡು ಕಳಿಂಗಹಕ್ಕಿಗಳು ದೊರಕುತ್ತವೆ. ಕರಿತಲೆಯ ಕೋಗಿಲೆ ಮಾದರಿಯ ಕಳಿಂಗ ಹಕ್ಕಿಗಳು ನಿಬಿಡವಾದ (ಎಲೆಗಳುದುರುವ) ಕಾಡುಗಳಲ್ಲಿ ವಾಸಿಸುತ್ತವೆ. ದೊಡ್ಡವಾದ ಕೋಗಿಲೆ ಕಳಿಂಗ ಹಕ್ಕಿಗಳು ಮತ್ತು ಮಿನಿವೆಟ್‌ಗಳು ಪಶ್ಚಿಮಘಟ್ಟಗಳಲ್ಲಿ ವಾಸಿಸುತ್ತವೆ. (ಓರಿಯೋಲಿಡೆ) ಓರಿಯೋಲ್‌ಗಳು ಉಲ್ಲಾಸದ ಸಿಳ್ಳು ಹಾಕುತ್ತವೆ. ಬಂಗಾರ ಅಥವಾ ಮಾನಿನ ಹಕ್ಕಿಗಳಿಗೆ ಹಣ್ಣುತೋಟಗಳೆಂದರೆ ತುಂಬಾ ಪ್ರೀತಿ. ಕಪ್ಪುತಲೆಯ ಓರಿಯೋಲ್‌ಗಳು ದಟ್ಟವಾದ ಕಾಡು ಪ್ರದೇಶಗಳಲ್ಲಿ ದೊರಕುತ್ತವೆ. ಗುಲಾಬಿ ಕಾಕ ಅಥವಾ ಮೈನಾಗಳು (ಪ್ಯಾಸ್ಟರ್ ರೈಸಿಯಸ್) ಆಷಾಢ ಶ್ರಾವಣಗಳಲ್ಲಿ ಬಲಿತ ಜೋಳವನ್ನು ತಿನ್ನಲು ನಮ್ಮ ಪ್ರಾಂತ್ಯಕ್ಕೆ ಬರುತ್ತವೆ. ಕಂದು ತಲೆಯ ಮೈನಾ (ಸ್ಟರ್ನಿಯ ಮಲಬಾರಿಕ್) ಗಳು ತೆರೆದ ನಿಬಿಡ ಕಾಡಿನ ಪ್ರದೇಶಗಳಲ್ಲಿ ವಾಸಿಸುತ್ತವೆ. ಕರಿಯ ಶಿರದ ಮೈನಾ (ಟೆಮೆನುಚಸ್ ಪಗೋಡೆರಂ) ಗಳು ನಮ್ಮ ಪ್ರಾಂತದ ಬಯಲು ಸೀಮೆಗಳಲ್ಲಿ ದೊರಕುತ್ತವೆ. ಮತ್ತು ಅಪರೂಪವಾಗಿ ತೋಟಗಳಲ್ಲಿಯೂ ಕಾಣಸಿಗುತ್ತವೆ. ಸಾಮಾನ್ಯವಾದ ಮೈನಾಹಕ್ಕಿಯು (ಆಕ್ರಿಡೊಥಿರಿಸ್ ಟ್ರಿಸ್ಟಿಸ್) ಪ್ರಾಂತ್ಯದ ಎಲ್ಲಾ ಭಾಗದಲ್ಲಿಯೂ ಹರಡಿದೆ. ಇದು ಸರ್ವಭಕ್ಷಕ ಮತ್ತು ವಿಶೇಷತಃ ಸಂಘಜೀವಿ. ಕೆಲವು ಸಾರಿ ಇದಕ್ಕೆ ಮಾತು ಕಲಿಸುವುದೂ ಉಂಟು. ಕಿನ್ನರ ನೊಣ ಹಿಡುಕ (ಟರ್ಪ್ಸಿಫೋನ್ ಪ್ಯಾರಾಡೈಸಿ) ಗಳು ನಿಬಿಡವಾದ ಅಸ್ಥಿರ ಕಾಡುಗಳಲ್ಲಿ ಮತ್ತು ಬಹಳಸಾರಿ ಮನೆಗಳ ಬಳಿ ಸಿಕ್ಕುತ್ತವೆ. ಇವು ಬಾಲದಲ್ಲಿರುವ ಬಿಳಿಯ ಚೂಪುಗರಿಗಳಿಗೆ ಪ್ರಸಿದ್ಧಿಯಾಗಿವೆ. ಬಿಳಿಯ ಚುಕ್ಕಿಯ, ಬೀಸಣಿಗೆ ಬಾಲದ ನೊಣಹಿಡುಕ (ರ್ಹೈಪಿಡುರ ಆಲ್ಬೊಗ್ಯುಲಾರಿಸ್) ಗಳು ಕೂಡ ಇದೇ ರೀತಿ ಹರಡಿವೆ. ಎರಡಕ್ಕೂ ನಾಸಿಕದ ಮೇಲೆ ಕೂದಲಿನ ಕುಚ್ಚಿದೆ. ಟಿಕೆಲ್ಲನ ನೀಲಿ ನೊಣಹಿಡುಕಗಳು ನಿಬಿಡ ಕಾಡುಗಳಲ್ಲಿ ವಾಸಿಸುತ್ತವೆ. ಎಲ್ಲವೂ ಕೀಟಾಹಾರಿಗಳು. ಬಾಯಾ ಅಥವಾ ಗೀಜಗನ ಹಕ್ಕಿಗಳು (ಪೊಸಿಯಸ್ ಫಿಲ್ಲಿಪ್ಪೈನಸ್) ಕೃಷಿಮಾಡಿದ ಬಯಲುಗಳಲ್ಲೆಲ್ಲಾ ದೊರಕುತ್ತವೆ. ಇವು ಆಕರ್ಷಕವಾದ ಬಟ್ಟಿಪಾತ್ರೆ ಮಾದರಿಯ ಗೂಡುಗಳನ್ನು ಕಟ್ಟುತ್ತವೆ. ಪಟ್ಟೆಗೀಜಗನ ಹಕ್ಕಿಗಳನ್ನು (ಪಿ. ಮನ್ಯಾರ್) ಹಲವು ಸಾರಿ ಪ್ರೀತಿಯ ಪ್ರಾಣಿಯಾಗಿ ಸಾಕುತ್ತಾರೆ. ಮತ್ತು ಇದು ಬಹಳ ಸಾಮಾನ್ಯ. ಮುನಿಯಗಳು ತುಂಬಾ ಸುಂದರವಾದ ಹಕ್ಕಿಗಳು. ಬಿಳಿಯ ಬೆನ್ನಿನ, ಬಿಳಿಯ ಕಂಠದ, ಚುಕ್ಕೆಯ ಮತ್ತು ಕೆಂಪುಮುನಿಯ ಅಥವಾ ಮೇಣ ಕೊಕ್ಕಿನ ಹಕ್ಕಿಗಳು ಗುಂಪು ಗುಂಪಾಗಿ ಹುಲ್ಲುಬೀಜಗಳನ್ನು ತಿನ್ನುತ್ತಿರುವುದು ಸಾಮಾನ್ಯ.

ಚಟಕಗಳಿಗೆ (ಕುಟುಂಬ : ಫ್ರಿಂಜಿಲ್ಲಿಡೆ) ಕಾಳಿನ ಸಿಪ್ಪೆ ಬಿಡಿಸಲು ಭಾರವಾದ ಕೊಕ್ಕುಗಳಿವೆ. ಗುಲಾಬಿ ಚಟಕ ಹಣ್ಣುಗಳನ್ನು ಮತ್ತು ಮಧುವನ್ನು ಉಣ್ಣುತ್ತದೆ. ಇದು ದಕ್ಷಿಣ ಭಾರತಕ್ಕೆ ಚಳಿಗಾಲದಲ್ಲಿ ಭೇಟಿಕೊಡುತ್ತದೆ. ಹಳದಿ ಕಂಠದ ಗುಬ್ಬಚ್ಚಿಗೆ ರೆಕ್ಕೆಗಳ ಮೇಲೆ ಎರಡು ಬಿಳಿಯ ಪಟ್ಟಿಗಳಿವೆ, ಮತ್ತು ಕಂಠದ ಮೇಲೆ ನಿಂಬೆ ಹಳದಿ ಗುರುತಿದೆ. ಇದು ಹೆಚ್ಚಾಗಿ ಕುರುಚಲು ಪ್ರದೇಶದಲ್ಲಿ ವಾಸಿಸುತ್ತದೆ.

ಚಟಕ ಕುಟುಂಬದಲ್ಲಿ ತುಂಬಾ ಪರಿಚಿತವಾದ ಹಕ್ಕಿ ಎಂದರೆ ಮನೆಯ ಗುಬ್ಬಚ್ಚಿ (ಪ್ಯಾಸ್ಸರ್ ಡೊಮೆಸ್ಟಿಕಸ್) ಇದು ಹೆಚ್ಚಾಗಿ ಮನುಷ್ಯನ ಸುತ್ತಮುತ್ತ ವಾಸಿಸುತ್ತದೆ. ಕೆಂಪು ತಲೆಯ ಮತ್ತು ಕಪ್ಪು ತಲೆಯ ಬಂಟಿಂಗ್‌ಗಳು ಹೆಚ್ಚಾಗಿ ಗುಬ್ಬಚ್ಚಿಗಳನ್ನೇ ಹೋಲುತ್ತವೆ. ಇವು ಚಳಿಗಾಲದಲ್ಲಿ ಬಂದು ಬಲಿಯುತ್ತಿರುವ ಧಾನ್ಯಗಳನ್ನು ತಿನ್ನುತ್ತವೆ. ಬಾಗಕ್ಕಿ (ಪೈಪಾರಿಯ ಕಂಕಲರ್)ಗಳು ಭಾರತ ಪೂರ್ತಿ ದೊರಕುತ್ತವೆ. ಇವನ್ನು ಹಳೆಯ ಕಲ್ಲುಕಟ್ಟಡಗಳು ಮತ್ತು ಬಂಡೆಗಳಿಂದ ಪ್ರತ್ಯೇಕಿಸುವುದು ಕಷ್ಟ. ಕವಲು ತೋಕೆಗಳು ಇಲ್ಲಿಯೇ ವಾಸಿಸುವ ಹಕ್ಕಿಗಳು. ಪಿಪೀಟ (ಆಂಥಸ್‌ರುಪುಲಸ್) ಮತ್ತು ದಾಸರಿಹಕ್ಕಿ (ಮೊಟಸಿಲ್ಲ ಕೈನೀರಿಯ)ಗಳು ನೆಲದ ಮೇಲಿನ ಕೀಟಕಗಳನ್ನು ಅರಸುತ್ತ ಹಳ್ಳಪಕ್ಕಗಳಲ್ಲಿ ವಾಸಿಸುತ್ತವೆ. ಪುಟ್ಟ ಬಾನಾಡಿಗಳು (ಅಲೌ ಡಗುಲ್ ಗುಲ) ಸಾಮಾನ್ಯವಾಗಿ ಒಣ ಬಯಲು ಪ್ರದೇಶಗಳಲ್ಲಿ ವಾಸಿಸುತ್ತವೆ. ಇವು ಚೆನ್ನಾಗಿ ಹಾಡುತ್ತವೆ. ಶಿಖೆಯ ಚಿನ್ನಾಡಿಯು (ಗಲೇರಿಡ ಕ್ರಿಸ್ಟೇಟ) ಸಾಮಾನ್ಯವಾಗಿ ಮರಳುಪ್ರದೇಶದಲ್ಲಿ

ವಾಸಿಸುತ್ತದೆ. ಮತ್ತು ಆಗಸದಲ್ಲಿ ಏರುವಾಗ ಸುಂದರವಾಗಿ ಸಿಳ್ಳುಹಾಕುತ್ತದೆ. ಬೂದು ಕಿರೀಟದ ಚಟಕ ಚಿನ್ನಾಡಿಗಳು ವ್ಯವಸಾಯ ಪ್ರದೇಶದಲ್ಲಿ ಕಾಣಸಿಗುತ್ತದೆ. ಇವು ಮುಖ್ಯವಾಗಿ ಕಾಳುಗಳನ್ನು ತಿನ್ನುತ್ತವೆ. "ಬಿಳಿ ಕಣ್ಣು" ಚಿನ್ನಾಡಿಗಳು ಹೆಚ್ಚು ಮರಗಿಡಗಳಿರುವ ಪ್ರದೇಶಗಳಲ್ಲಿ ಮತ್ತು ತೋಟಗಳಲ್ಲಿ ಸಿಕ್ಕುತ್ತವೆ. ಕೆನ್ನೀಲಿ ಕದಿರು ಗಿಣಿ ಮತ್ತು ಕೆನ್ನೀಲಿಕೆದುರು ಕದಿರುಗಿಣಿಗಳು ಮಧುವನೀಂಟುವ ಹಕ್ಕಿಗಳು. ಇವು ತೋಟ ವಲ್ಲಿ ಹೂವಿಂದ ಹೂವಿಗೆ ಹಾರುತ್ತಿರುವುದು ಸಾಮಾನ್ಯ ದೃಶ್ಯ. ಹೂಕುಟಿಕ (ಡೈಸಿಮ ಕನಕಲರ್) ಕೂಡ ಮಧುವನ್ನೇ ಕುಡಿಯುತ್ತದ. ಭಾರತದ ಪಿಟ್ಟ (ಪಿಟ್ಟ ಬ್ರಾಕಿಯಾರ) ವು ಕಾಡಿನಲ್ಲಿ ಅಥವಾ ಕುರುಚಲು ಕಾಡಿನಲ್ಲಿ ವಾಸಿಸುತ್ತದೆ. ಹೆಚ್ಚಾಗಿ ನೆಲದ ಮೇಲಿನ ಕೀಟಗಳನ್ನು ಅವುಗಳ ತತ್ತಿಡಿಂಬಗಳನ್ನು ತಿನ್ನುತ್ತಿರುತ್ತದೆ. ಹಳದಿ ಮುಖದ ಮರಕುಟಿಕ (ಪಿಸಿಗಣದ) ಮರಗಿಡಗಳ ತೊಗಟೆಯಲ್ಲಿರುವ ಕೀಟಗಳನ್ನು ತಿನ್ನುತ್ತ, ತೆರೆದ ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಕೀಟಕಗಳನ್ನರಸುತ್ತ ತೋಟಗಳಿಗೆ ಬಂಗಾರ ಬೆನ್ನಿನ ಮರಕುಟಿಕಗಳೂ ಬರುತ್ತವೆ. ಕಡು ಕೆಂಪೆದೆಯ ಬಾರ್ಬೆಟ್ ಅಥವಾ ತಾಮ್ರ ಪಕ್ಷಿಯು (ಕ್ಯಾಪಿಟೊನಿಡೊ ಗಣಕ್ಕೆ ಸೇರಿದ್ದು) ಪ್ರಾಂತದಲ್ಲೆಲ್ಲಾ ದೊರಕುತ್ತದೆ. ಸಾಮಾನ್ಯವಾದ ಗಿಡುಗ ಕೋಗಿಲೆ ಅಥವಾ ಮಿದುಳು ಜ್ವರ ಪಕ್ಷಿ (ಕುಕುಲಸ್ ವೇರಿಯಸ್) ಯು ಸ್ಥಾನಿಕ ವಲಸೆ ಹೋಗುವ ಪಕ್ಷಿ. 'ಇದು ಕುರುಚಲು ಕಾಡು, ತೋಟ ಮತ್ತು ತೋಪುಗಳಲ್ಲಿ ವಾಸಿಸುತ್ತದೆ. ಚಳಿಗಾಲದಲ್ಲಿ ಸುಮ್ಮನಿದ್ದು ದಿನಗಳು ಶಾಖಪೂರಿತವಾದಾಗ ತನ್ನ ಹಾಡನ್ನು ಆರಂಭಿಸುತ್ತದೆ. ಗಟ್ಟಶಿಖೆಯೂ ದಕ್ಷಿಣ ಭಾರತದ ವಾಸಿ. ಕೋಗಿಲೆಯು ಕವಿಗಳಿಂದ ಹೊಗಳಲ್ಪಡುವ ಚಿರಪರಿಚಿತವಾದ ಪಕ್ಷಿ. ಗೂಡುಕಟ್ಟುವ ಅಭ್ಯಾಸದಲ್ಲಿ ಮೇಲೆ ತಿಳಿಸಿದ ಮೂರೂ ಪರತಂತ್ರ ಜೀವಿಗಳು ತಮ್ಮ ಮೊಟ್ಟೆಗಳನ್ನು ಇತರ ಪಕ್ಷಿಗಳ (ಸಾಮಾನ್ಯವಾಗಿ ಮನೆಯ ಕಾಗೆ) ಗೂಡಿನಲ್ಲಿ ಇಟ್ಟು ಕಾವುಕೊಡಲು ಬಿಡುತ್ತವೆ. ಕಾಗೆ ಫೆಸೆಂಟ್ ಕೋಳಿ ಅಥವಾ ಗೌಜಲಹಕ್ಕಿ (ಸೆಂಟ್ರೊಪಸ್ ಸೈನೆನ್ಸಿಸ್) ಗಳು ವ್ಯವಸಾಯದ ಬಯಲಿನ ಬಳಿ ಪೊದೆಗಳಲ್ಲಿ ದೊರಕುತ್ತವೆ. ಇವು ಕೀಟಕಗಳನ್ನು ತಿಂದು ಜೀವಿಸುತ್ತವೆ. ಭಾರತದ ದೊಡ್ಡಗಿಳಿ (ಸಿಟ್ಟಾಸಿ ಗಣಕ್ಕೆ ಸೇರಿದ್ದು) ಗಳು ಕಾಡುಪ್ರದೇಶ ಮತ್ತು ಹಣ್ಣು ತೋಟಗಳಲ್ಲಿ ಎಲ್ಲಾ ಸಿಗುತ್ತವೆ. ಗುಲಾಬಿ ಉಂಗುರದ ಗಿಳಿಯು ಹಣ್ಣುಗಳಿಗೆ ಮತ್ತು ಬಲಿತ ಕಾಳುಗಳಿಗೆ ಮಾರಕವಾದ ಪರಿಚಿತವಾದ ಹಕ್ಕಿ. ಕೆಂಪುತಲೆಯ ಗಿಳಿಯು ಹೆಚ್ಚಾಗಿ ಮರಕಾಡು ಪ್ರದೇಶ ಗಳಲ್ಲಿ ಕಾಣಸಿಗುತ್ತದೆ. ಲಾರಿಕ್ವೆಟ್ (ಲೋರಿಕ್ಯುಲಸ್ ವರ್ನಾಲಿಸ್) ಪಕ್ಷಿಯು ಸುಮಾರು ಗುಬ್ಬಚ್ಚಿ ಗಾತ್ರವಿದ್ದು ಹೆಚ್ಚಾಗಿ ರಬ್ಬರ್ ಮತ್ತು ಕಾಫಿ ತೋಟಗಳಲ್ಲಿ ವಾಸಿಸುತ್ತದೆ.

ಉರುಳಕ್ಕಿ ಅಥವಾ ನೀಲ ಜೇ (ಕೋರಾಸಿಯಸ್ ಇಂಡಿಕ) ಹಕ್ಕಿ ಪಾರಿವಾಳದಷ್ಟೆ ದೊಡ್ಡದು. ಪಟ್ಟಣಗಳ ಮತ್ತು ಹಳ್ಳಿಗಳ ಬಳಿ ತೆರೆದ ವ್ಯವಸಾಯ ಭೂಮಿಯಲ್ಲಿ, ಜಿಲ್ಲಿ, ಕುದುರೆ ಹುಳು ಮತ್ತು ಇತರ ಕೀಟಕಗಳನ್ನು ತಿಂದು ಜೀವಿಸುತ್ತದೆ. ಸಾಮಾನ್ಯವಾದ 'ಜೇನು ಮುಕ್ಕ' ಗಳು (ಮಿರಾಪ್ಸ್ ಒರಿಯಂಟಾಟಿಸ್) ಪಟ್ಟಣ ಮತ್ತು ಹಳ್ಳಿಗಳ ಬಳಿಯ ಬಯಲಿನಲ್ಲಿ ವಾಸಿಸುತ್ತವೆ. ಹಾರುವಾಗಲೇ ಕೀಟಕಗಳನ್ನು ಹಿಡಿಯು ತ್ತವೆ. ಕೆಂಗಂದು ಬಣ್ಣದ ಜೇನುಮುಕ್ಕ (ಮೀ. ಲೆಶೆನಾಲ್ಟಿ) ಬೆಳಗಾಮ್‌ವರೆಗೆ ಹರಡಿದೆ. ಇದು ಸಾಮಾನ್ಯವಾಗಿ ಮರ ಗಿಡಗಳಿರುವ ಭಾಗವನ್ನು ಆಶಿಸುತ್ತದೆ. ಪೈಡ್ ಮೀಂಚುಳ್ಳಿಯು (ಸಿರೈಲ್ ರೂಡಿಸ್) ನದಿಗಳು, ಹಳ್ಳಿಗಳು ಮತ್ತು ಕಡಲ ಹಿನ್ನೀರಿನ ಪ್ರದೇಶದಲ್ಲಿ ವಾಸಿಸುತ್ತದೆ. ನೀರಿನ ಮೇಲೆ ಹೊಂಚು ಹಾಕುತ್ತಿದ್ದು ಫಕ್ಕನೆ ಇಳಿದು ಮೀನುಗಳನ್ನು ಹಿಡಿಯುತ್ತದೆ. ಬಿಳಿ ಎದೆಯ ಮೀಂಚುಳ್ಳಿಯು (ಹ್ಯಾಲ್ಸಿಯಸ್ ಸೀರ್ನೆನ್‌ಸಿಸ್) ಕೂಡ ಇದೇರೀತಿ ಹರಡಿದೆ. ಇದಕ್ಕೆ ಹವಳ ಕೆಂಪು ಬಣ್ಣದ ಕೊಕ್ಕಿದೆ. ತುಂಬಾ ಒಳಗೆ ಬಂದಾಗ ಅದು ಕೀಟಕಗಳನ್ನು ಮತ್ತು ಹಲ್ಲಿಗಳನ್ನು ತಿನ್ನುತ್ತದೆ. ಇನ್ನೊಂದು ಸಾಮಾನ್ಯ ಮೀಂಚುಳ್ಳಿ ಎಂದರೆ ಬೂದುತಲೆಯ ಕೊಕ್ಕರೆ ಕೊಕ್ಕಿನ ಮೀಂಚುಳ್ಳಿ (ಪೆಲಾರ್ಗೊಪ್ಸಿಸ್ ಕ್ಯಾಪೆನ್ಸಿಸ್). ಇದು ಹೆಚ್ಚಾಗಿ ಕಾಡಿನಲ್ಲಿ, ನೆರಳಿನಲ್ಲಿರುವ ಹೊಳೆಗಳ ಬಳಿ ಮತ್ತು ಉಬ್ಬರವಿಳಿತದ ಸಿಹಿನೀರ ಬಳಿ ಇರುತ್ತದೆ.

ಸಾಮಾನ್ಯ ಕಂದು ಮಲೆಹಕ್ಕಿ (ಟೋಕಸ್ ಬೈರೊಸ್ಟ್ರಿಸ್) ಬಯಲಾದ ಕಾಡುಗಳಲ್ಲಿ ಮತ್ತು

ಮಾವಿನ ತೋಪುಗಳಲ್ಲಿ ವಾಸಿಸುತ್ತದೆ. ಪಶ್ಚಿಮ ತೀರದಲ್ಲಿ ಹರಡಿರುವ ಮಲಬಾರ್ ಜಾತಿಗೆ ಶಿರಸ್ತ್ರಾಣ ಇಲ್ಲ. ಹೂಪೀ (ಉಪುಪ ಇಪಾಪ್ಸ್, ಮೈನಾ ಗಾತ್ರದ್ದು) ಹಕ್ಕಿಯು ಪ್ರಾಂತದಲ್ಲೆಲ್ಲಾ ದೊರಕುತ್ತದೆ. ಇದನ್ನು ಅನೇಕ ವೇಳೆ ಹುಲ್ಲುಗಾವಲು ಮತ್ತು ತೋಟಗಳಲ್ಲಿ ನೋಡಬಹುದು.

ಮನೆಯ ಅಂಬಕ್ಕಿ (ಅಪಸ್ ಅಫಿನಿಸ್) ತುಂಬಾ ಪುಟ್ಟ ಹಕ್ಕಿ. ಇದಕ್ಕೆ ಮಾಸಲು ಕಪ್ಪು ಬಣ್ಣ, ಬಿಳಿಯ ಕಂಠ ಇದೆ. ವಾಸಿಸುವ ಅಥವಾ ಬಿಟ್ಟ ಮನೆಗಳ ಬಳಿ ಕಾಣಸಿಗುತ್ತದೆ. ಹಾರುವಾಗಲೇ ಕೀಟಕಗಳನ್ನು ಹಿಡಿಯುತ್ತದೆ. ಈಚಲ ಅಂಬಕ್ಕಿಗಳಿಗೂ (ಸಿಪ್ಸಿಯೂರಸ್ ಪಾರ್ವಸ್) ಈಚಲ ಮರಕ್ಕೂ ತುಂಬಾ ನಿಕಟವಾದ ಸಂಬಂಧ. ಹೆಸರೇ ಸೂಚಿಸುವಂತೆ ಇವು ತುಂಬಾ ವೇಗವಾಗಿ ಗಂಟೆಗೆ 100 ಮೈಲಿಗಳಿಗೂ ವೇಗವಾಗಿ ಹಾರಬಲ್ಲ ಹಕ್ಕಿಗಳು. ರಾತ್ರಿಯ ತಿರುಗುಟ್ಟಕ್ಕಿಗಳು (ಕ್ಯಾಪ್ರಿಮಲ್‌ಗಸ್ ಏಸಿಯಾಟಿಕಸ್) ಗೂಬೆಗಳಂತೆ ನಿಶಾಚರ ಹಕ್ಕಿಗಳು. ಇವು ಕುರುಚಲು ಕಾಡು ಪ್ರದೇಶ ಮತ್ತು ಅದರ ಸುತ್ತಮುತ್ತ ವಾಸಿಸುತ್ತವೆ.

ಗೂಬೆಗಳಿಗೆ ವಿಶೇಷವಾದ ಮುಂದಿರುವ ವಿಶಾಲವಾದ ಕಣ್ಣುಗಳಿವೆ. ಮತ್ತು ಹಿಂದಿರುಗುವ ಹೊರ ಕಾಲುಬೆರಳಿದೆ. ಕಿರುಚುವ ಬಿಳಿಗೂಬೆ (ಟೈಲೊ ಆಲ್ಬ) ಕಾಗೆಯ ಗಾತ್ರವಿರುತ್ತದೆ. ಮತ್ತು ಎಲ್ಲೆಲ್ಲಿಯೂ ದೊರಕುತ್ತದೆ. ಹಾಳು ಮನೆ–ಮಂಟಪಗಳು, ಹಳೆಯ ಸಮಾಧಿಗಳು ಮತ್ತು ಕೋಟೆಗಳು ಇವು ಸಾಮಾನ್ಯವಾಗಿ ಇರುವ ಕಡೆಗಳು. ಬೂದು ಮೀನುಗೂಬೆ (ಕೆಲುಪ ಜೈಲೊನೆನ್ಸಿಸ್) ದಟ್ಟ ಕಾಡುಗಳಲ್ಲಿರುವುದಿಲ್ಲ. ಇದುಕೂಡ ಎಲ್ಲೆಡೆಯಲ್ಲಿಯೂ ಸಾಮಾನ್ಯ. ಚುಕ್ಕಿಗೂಬೆ (ಅಥೆನಿ ಬ್ರಾಮ) ಕೂಡ ಎಲ್ಲೆಡೆಯಲ್ಲಿಯೂ ದೊರಕುವುದು. ಇದು ಅರ್ಧಂಬರ್ಧ ಹಗಲು ಓಡಾಡುವುದರಿಂದ ಮನುಷ್ಯನ ತಾಣಗಳ ಬಳಿ ಇರಲು ಹೆದರುವುದಿಲ್ಲ. ತನ್ನ ಬಡಬಡಿಕೆಯೊಡನೆ ಬೀದಿ ದೀಪಗಳ ಬಳಿ ಗೆದ್ದಲನ್ನು ಹುಡುಕುತ್ತಿರುತ್ತದೆ. ರಣಹದ್ದುಗಳ ತಲೆ ಮತ್ತು ಕುತ್ತಿಗೆಗಳು ಬೋಳು (ಇವು ಅಕ್ಕಿಪಿಟರ್ಸ್ ಗಣಕ್ಕೆ ಸೇರಿದವು). ಇವು ಹಗಲಿನ ಹಕ್ಕಿಗಳು. ಇವಕ್ಕೆ ಸಿಗಿಯುವ ಕೊಕ್ಕಿದೆ, ಬಲವಾದ ಕಾಲುಗುರುಗಳಿವೆ ಮತ್ತು ಬಹಳಕಾಲ ಒಂದೇ ಸಮನೆ ಹಾರಬಲ್ಲವು. ಕಪ್ಪು ಅಥವಾ ರಾಜರಣಹದ್ದು ಭಾರತದಲ್ಲೆಲ್ಲಾ ಇದೆ. ಆದರೆ ದಟ್ಟ ಕಾಡುಗಳಲ್ಲಿರುವುದಿಲ್ಲ. ಇದು ತಿನ್ನುವ ಪ್ರಾಣಿ. ಬಿಳಿಕೊಕ್ಕಿನ ರಣಹದ್ದುಗಳು ದಟ್ಟವಾದ ತೇವ ಕಾಡುಗಳ ವಿನಾ ಮಿಕ್ಕೆಡೆಗಳಲ್ಲೆಲ್ಲಾ ದೊರಕುತ್ತವೆ. ಬಿಳಿಯ ಜಾಡಮಾಲಿ ರಣಹದ್ದುಗಳು ಕೂಡ ಎಲ್ಲೆಡೆಯಲ್ಲಿಯೂ, ಹೆಚ್ಚಾಗಿ ಮನುಷ್ಯ ವಾಸಿಸುವೆಡೆಗಳಲ್ಲಿ ಸಿಕ್ಕುತ್ತವೆ. ದೊಡ್ಡ ಗಿಡುಗಗಳು ಎಲ್ಲೆಡೆಯೂ ವಾಸಿಸುತ್ತವೆ. ಇದು ತನ್ನ ಹಾರಿಕೆಯ ವೇಗದಿಂದ ಸಣ್ಣಪುಟ್ಟ ಹಕ್ಕಿಗಳನ್ನು ಹಿಡಿದು ತಿನ್ನುತ್ತದೆ. ಡೇಗೆ ಜಾನೆಗಳು ತೋಪುಗಳಲ್ಲಿ ಮತ್ತು ಬಟ್ಟಬಯಲಿನಲ್ಲಿ, ಇಲಿ, ಜೀರುಂಡೆ ಮತ್ತು ಹಲ್ಲಿಗಳನ್ನು ತಿಂದು ಜೀವಿಸುತ್ತವೆ. ಕಂದುಹದ್ದುಗಳೂ ಕೂಡ ಹೆಚ್ಚು ಮಳೆ ಬೀಳುವೆಡೆಗಳ ವಿನಾ ಎಲ್ಲೆಡೆಯೂ ಸಾಮಾನ್ಯವಾಗಿ ದೊರಕುವ ಹಕ್ಕಿಗಳು. ಇದೇ ರೀತಿ ಮೋಟುಬೆರಳು ಹದ್ದುಗಳು ಕೂಡ ಒಣ ಬಯಲು, ಗುಡ್ಡದ ತಪ್ಪಲು, ಮತ್ತು ಉತ್ತ ಭೂಮಿಯ ಬಳಿ ವಾಸಿಸುತ್ತವೆ. ಏಡಿಗಳು, ಪುಟ್ಟಹಕ್ಕಿಗಳು ಮತ್ತು ಇಲಿಗಳೇ ಇವುಗಳ ಆಹಾರ. ಇದು ಸುಂದರ ಶಿಖೆಯ ಹಾವುಹದ್ದು ಕೂಡಿರುವ ಕಮರಿ ಮತ್ತು ಮರಗಳಿರುವ ಹಳ್ಳಗಳ ಬಳಿ ವಾಸಿಸುತ್ತದೆ. ಇದು ಹಾರುವುದರಲ್ಲಿ ಬಲಶಾಲಿ. ಒಣ ಸ್ಥಳಗಳಲ್ಲಿ ಬಿಳಿಯ ಕಣ್ಣಿಗೆ ಡೇಗೆ ಹದ್ದುಗಳು ಅಪರೂಪವಾಗಿ ಸಿಗಬಹುದು. ಗರುಡ ಎಲ್ಲೆಡೆಯಲ್ಲಿಯೂ ದೊರಕುತ್ತದೆ. ಇದು ದಟ್ಟ ಕಾಡುಗಳನ್ನು ಇಷ್ಟಪಡುವುದಿಲ್ಲ. ಮನುಷ್ಯನ ವಾಸಸ್ಥಳದ ಬಳಿ ಹೆಚ್ಚಾಗಿ ವಾಸಿಸುವ ಹಕ್ಕಿ ಎಂದರೆ ಗಬ್ಬುಹದ್ದು. ಪಶ್ಚಿಮ ಘಟ್ಟಗಳ ಬಳಿ ಕರಿರೆಕ್ಕೆಯ ಹದ್ದುಗಳಿವೆ. ಕೋಳಿ ಮತ್ತು ಸಣ್ಣಹಕ್ಕಿಗಳನ್ನು ತಿನ್ನುವ ಶಿಕ್ರ ಬಯಲು ಕಾಡಿನಲ್ಲಿ ವಾಸಿಸುತ್ತದೆ.

ಪಾರಿವಾಳ ಮತ್ತು ಕಪೋತಗಳು (ಕೊಲಂಬೋ ಗಣಕ್ಕೆ ಸೇರಿದವು) ಹಣ್ಣು ಮತ್ತು ಕಾಳು ತಿನ್ನುವ

ಹಕ್ಕಿಗಳು. ಸಾಮಾನ್ಯವಾದ ಹಸುರು ಪಾರಿವಾಳ ಸಂಪೂರ್ಣ ಮರವಾಸಿ; ಮತ್ತು ಇದು ಚೆನ್ನಾಗಿ ಮರ ಗಿಡಗಳಿರುವ ಪ್ರದೇಶದಲ್ಲಿ ವಾಸಿಸುತ್ತದೆ. ನೀಲಿಯ ಬಂಡೆಪಾರಿವಾಳ ತುಂಬಾ ಪರಿಚಿತವಾದ ಹಕ್ಕಿ. ವನ್ಯಾವಸ್ಥೆಯಲ್ಲಿ ಕಲ್ಲು ಬಂಡೆಗಳಿರುವ ಪ್ರದೇಶದಲ್ಲಿ ಹೆಚ್ಚಾಗಿ ಇರುತ್ತದೆ. ಇಲ್ಲದಿದ್ದರೆ ಇದು ಅರ್ಧಂಬರ್ಧ ಪಳಗಿದ ಪ್ರಾಣಿ. ಚಿಕ್ಕೆಗಳಿರುವ ಕಪೋತಗಳು ಕೂಡ ಉಳುಮೆ ಮಾಡಿದ ಭೂಭಾಗಗಳ ಬಳಿ ಹೆಚ್ಚು ಇರುತ್ತವೆ. ಮರಳು ತುಪ್ಪುಳಕ್ಕಿ (ಟೆರೋಕ್ಲಿಟಿಸ್ ಗಣಕ್ಕೆ ಸೇರಿದ್ದು) ಒಣ ಬಯಲುಗಳಲ್ಲಿ ಇರುತ್ತದೆ.

ಕಾಡು ಕೋಳಿಗಳು (ಗ್ಯಾಲ್ಲಿನೆ) ಬಹಳ ನಾಚಿಕೆಯ ಹಕ್ಕಿಗಳು. ಹೆಚ್ಚಾಗಿ ಬಿದಿರು ಮೆಳೆಗಳಲ್ಲಿರುತ್ತವೆ. ನವಿಲು (ಪೇವೊ ಕ್ರಿಸ್ಟೇಟಸ್) ಬಹಳ ಸುಂದರವಾದ ಹಕ್ಕಿ. ತನ್ನ ಗಮನೀಯವಾದ ಕಣ್ಣುಗರಿಗಳಿಂದ ವೈಭವಯುತವಾಗಿದೆ. ಇದು ದಟ್ಟವಾದ ಕುರುಚಲು ಕಾಡುಗಳಲ್ಲಿ ಜೀವಿಸುತ್ತದೆ. ಇದನ್ನೂ ಕೂಡ ಪಳಗಿಸಬಹುದು. ಕಂದು ಕಾಡುಕೋಳಿ ಮತ್ತು ಕೆಂಗಾಲು ಕಾಡುಕೋಳಿಗಳು ಅಸ್ಥಿರ ಕಾಡುಗಳಲ್ಲಿ ವಾಸಿಸುತ್ತವೆ. ಬೆಳೆದ ಬೆಳೆಗಳ ಭಾಗಕ್ಕೆ ಚಳಿಗಾಲದಲ್ಲಿ ಭೇಟಿ ಕೊಡುವ ಹಕ್ಕಿ ಎಂದರೆ ಲಾವಕ್ಕಿ. ಆದರೆ ಅದೇ ಕಪ್ಪೆದೆಯ ಅಥವಾ ಮಳೆ ಲಾವಕ್ಕಿ ಹುಲುಸಾದ ಹುಲ್ಲುಗಾವಲುಗಳ ಮತ್ತು ಬೆಳೆಗಳ ಪಕ್ಕದಲ್ಲಿ ವಾಸಿಸುತ್ತದೆ. ಕಾಡಿನ ಪೊದರು ಲಾವಕ್ಕಿಗಳು ತೆರೆದ ಕಾಡು ಪ್ರದೇಶಗಳಲ್ಲಿ ಗುಂಪುಗುಂಪಾಗಿ ವಾಸಿಸುತ್ತವೆ. ನೀಲಕಾಲುಗಳ ಬಸ್ಟರ್ಡ್ ಲಾವಕ್ಕಿ (ಟರ್ನಿಕ್ಸ ಸಸ್ಕಿಟೇಟರ್) ಹಿಂದಿನ ಬೆರಳಿಲ್ಲದ ಮೂರು ಕಾಲುಬೆರಳುಗಳುಳ್ಳ ಹಕ್ಕಿ. ಇದು ಪ್ರಾಂತದಲ್ಲೆಲ್ಲಾ ದೊರಕುತ್ತದೆ. ಬಿಳಿ ಎದೆಯ ನೀರು ಹ್ಯಾಟೆ (ಅಮೌರಾರ್ನಿಸ್ ಪೊನಿಕ್ಯೂರಸ್)ಯು ತೆಳು ಕಂದುಬಣ್ಣದ, ಜೌಗು ಪ್ರದೇಶದಲ್ಲಿ ವಾಸಿಸುವ ಹಕ್ಕಿ. ಕುರುಚಲು ಹ್ಯಾಟೆ ಮತ್ತು ಕೆನ್ನೀಲಿ ಕುರುಚಲುಹ್ಯಾಟೆಗಳು ಕೆರೆ-ಕಟ್ಟೆಗಳ ಪಕ್ಕದಲ್ಲಿರುವ ದಟ್ಟವಾದ ಜೊಂಡುಗಳ ನಡುವೆ ವಾಸಿಸುತ್ತದೆ.

ಬಳಕೆಯಾಗಿ ಕೊಕ್ಕರೆಯು (ಆಂತ್ರೊ ಫಾಯಿಡಿಸ್ ವಿರ್ಗೊ) ನಮ್ಮ ಬಯಲು ಸೀಮೆಗೆ ಚಳಿಗಾಲದಲ್ಲಿ ಭೇಟಿಕೊಡುತ್ತದೆ. ತೆರೆದ ಅರೆಮರಳು ಕಾಡುಗಳಲ್ಲಿ ಭಾರತದ ಬೃಹತ್ ಬಸ್ಟರ್ಡ್ (Bustard) (ಕೊರಿಯೊಟಿಸ್ ನೈಗ್ರಿಸೆಪ್ಸ) ಕಾಣಸಿಗುತ್ತದೆ. ಇದು ತುಂಬಾ ದೊಡ್ಡದಾದ ಎಳೆಯ ಉಷ್ಟ್ರಪಕ್ಷಿಯಂತೆ ಕಾಣಿಸುತ್ತದೆ. ಹುಲ್ಲುಗಾವಲು ಮತ್ತು ಬಹಳೊಮ್ಮೆ ಬಯಲು ಸೀಮೆಗಳಲ್ಲಿ ಪ್ಲೋರಿಕಾನ್‌ಗಳು (ಸೈಫಿಯೊಟೈಡಿಸ್ ಇಂಡಿಕ) ವಾಸಿಸುತ್ತವೆ. ಬಂಡೆಕೌಂಚ ಪಕ್ಷಿಗಳು (ಆಕ್ಡಿನೆಮಸ್‌ಕ್ಲೋಸೀಲೋಸ್ಯಾಕ್ಸ) ತೆರೆದ ಬಯಲು ಗಾಡಿನಲ್ಲಿ ವಾಸಿಸುತ್ತವೆ. ಒಣಸೀಮೆಯಲ್ಲಿ ಭಾರತದ ಕೋರ್ಸರ್ (Corser) ಕರ್ಸೋರಿಯ (ಕೋರೋಮ್ಯಾಂಡಿಲಿಕಸ್) ಗಳು ಸಿಗುತ್ತವೆ. ಕಪ್ಪುತಲೆಯ ಗಲ್‌ಗಳು ನಮ್ಮ ಕರಾವಳಿಗೆ ಚಳಿಗಾಲದಲ್ಲಿ ಭೇಟಿಗೊಡುತ್ತವೆ. ನದಿಟರ್ನ ಮತ್ತು ಮೀಸೆಟರ್ನಗಳೆಂದು ನದಿಗಳ ಬಳಿ ಮತ್ತು ಜವುಗು ಪ್ರದೇಶದ ಬಳಿ ಎರಡು ರೀತಿಯ ಟರ್ನ್‌ಗಳಿವೆ. ಪುಟ್ಟ ಉಂಗುರ ನೀಳಗಾಲುಗಳವು ನದಿಗಳ ಬಳಿ ಮರಳು ದಿಬ್ಬಗಳಲ್ಲಿ ವಾಸಿಸುತ್ತವೆ. ಕೆಂಪು ಹೆಣಿಗೆ ಮತ್ತು ಹಳದಿ ಹೆಣಿಗೆ ಟಿಟ್ಟಿಭಗಳು ದೇಶಪೂರ್ತಿ ವಾಸಿಸುತ್ತವೆ. ಕರಿರೆಕ್ಕೆಯ ನೀಳಗಾಲುಗಳು (ಹಿಮ್ಯಾಂಟೊಪಸ್) ಪೂರ್ಣ ಜವುಗು ಪ್ರದೇಶ ವಾಸಿಗಳು. ಇವು ಆಳವಿಲ್ಲದ ನೀರಿನಲ್ಲಿ ಓಡಾಡುತ್ತವೆ. ಚಳಿಗಾಲದಲ್ಲಿ ಝರಿಗಳ ಬಳಿ ಮತ್ತು ಜೌಗು ಪ್ರದೇಶದಲ್ಲಿ ಮರಳೂದಗಳು (ಟ್ರಿಂಗ ಹೈಪೊಲ್ಯೂಕಾಸ್) ಬಹಳ ಸಾಮಾನ್ಯ. ಪುಟ್ಟ ನೀಲಗಾಲಿ, ನಡೆಯುವ ನೀರಕ್ಕಿ ಇನ್ನೊಂದು ಚಳಿಗಾಲದಲ್ಲಿ ಭೇಟಿಕೊಡುವ ಹಕ್ಕಿ (ಕ್ಯಾಲಿಡ್ರಿಸ್ ಮೈನ್ಯೂಟಸ್). ಬೀಸಣಿಗೆ–ಬಾಲದ ಉಲ್ಲಂಗಿ (ಕಪೆಲ್ಲ ಗಾಲ್ಲಿನಾಗೊ) ಗಳು ಕೂಡ, ಬತ್ತದ ಗದ್ದೆಗಳಿಗೆ ಮತ್ತು ಲಾಳ ಬೆಳೆದ ಜೌಗುಪ್ರದೇಶಗಳಿಗೆ ಬರುವ ಚಳಿಗಾಲದ ಹಕ್ಕಿಗಳು. ಕಾರ್ಮೊರ್ಯಾಂಟ್‌ಗಳು (ಫಾಲಕ್ರೊಕೊರ್ಯಾಕ್ಸ ಜಾವನಿಕಸ್) ತುಂಬಾ ಒಳ್ಳೆಯ ಈಜುಗಾರ ಹಕ್ಕಿಗಳು. ಇವು ಕೆರೆಗಳ ಬಳಿ ದೊಡ್ಡ ನದಿಗಳ ಬಳಿ ಮತ್ತು ಕೆಲವೊಮ್ಮೆ ಕಡಲ ಹತ್ತಿರದಲ್ಲಿ ಕಾಣಸಿಗುತ್ತವೆ. ನದಿಗಳು, ಕೆರೆಗಳು ಮತ್ತು ಝರಿಗಳ ಬಳಿ ದೊರಕುವ ಇನ್ನೊಂದು ನೀರ ಹಕ್ಕಿ ಎಂದರೆ ಫಣಿಕಂಠ ಅಥವಾ ನಾಗಹಕ್ಕಿ. ಇದಕ್ಕೆ ಉದ್ದವಾದ 'S' ಆಕಾರದ ಕುತ್ತಿಗೆ ಮತ್ತು ಚಾಕುವಿನಾಕಾರದ ಕೊಕ್ಕು ಇದೆ.

ಚಮಚಮುಖಿ (ಪ್ಲೆಟೇಲಿಯ ಲ್ಯೂಕೊರೊಡಿಯ) ಮರಳು ದಿಬ ಮತ್ತು ಜೌಗುಗಳಲ್ಲಿರುವ ಚಪ್ಪಟೆ ಕೊಕ್ಕಿನ ಬೆಳ್ಳಕ್ಕಿ. ಬಿಳಿ ಕತ್ತಿನ ಕರಿ ಕೊಕ್ಕರೆಗಳು (ಕ್ಸೆನೊರ್‍ಹಿಂಕಸ್ ಏಸಿಯಾಟಿಕಸ್) ಅಪರೂಪವಾಗಿ ನದಿಗಳ ಬದುವಿನಲ್ಲಿರುತ್ತವೆ. ಇದೇ ಸಂದರ್ಭ, ಅಷ್ಟು ಸಾಮಾನ್ಯವಾಗಿ ಅಲ್ಲದಿದ್ದರೂ ಕಂದುಕ್ರೌಂಚ (ಆರ್ಡಿಯ ಸಿನೆರಿಯ) ದೊರಕುತ್ತದೆ. ಇದಕ್ಕೆ ಉದ್ದವಾದ ಕಪ್ಪು ನೆತ್ತಿಯ ಕುಚ್ಚಿದೆ. ಪುಟ್ಟ ಎಗ್ರೆಟ್‌ಗಳು ಬಹಳ ಸಾಮಾನ್ಯವಾಗಿ ಕೆರೆಯಕ್ರೌಂಚಗಳೊಡನೆ ಅದೇ ರೀತಿಯ ಸನ್ನಿವೇಶಗಳಲ್ಲಿ ದೊರಕುತ್ತವೆ. ಇವು ವ್ಯಾಪಾರ ಯೋಗ್ಯವಾದ ' ಐಗ್ರೆಟ್ಟೆ' ಪುಕ್ಕಗಳನ್ನು ಒದಗಿಸುತ್ತವೆ. ಕೆರೆಯಕ್ರೌಂಚ ಅಥವಾ ಬತ್ತದ ಹಕ್ಕಿಗಳು ವಿಶ್ರಮಿಸುತ್ತಿರುವಾಗ ಮಾಸಲು ಹಳದಿ ಬಣ್ಣವಿದೆ. ಸದಾ ನೀರಿನ ಬಳಿಯೇ ಇರುತ್ತವೆ. ನಕ್ತ ಅಥವಾ ಹಣಿಗೆಬಾತು (ಸರ್ಕಿಡಿಯಾರ್ನಿಸ್ ಮೆಲನೊಟಾಸ್) ಮಲೆನಾಡಿನಂತೆ ಹೇರಳವಾಗಿ ನೀರಿರುವ ಪ್ರದೇಶಗಳಲ್ಲಿ ವಾಸಿಸುತ್ತವೆ. ಅರಳೆಬಾತುಕೋಳಿ (ನೆಟ್ಟೋಪಸ್) ಎಲ್ಲೆಡೆಯೂ ದೊರಕುತ್ತದೆ. ಮಿರುಗೆಂಪಿಗೆ ಕಾಡುಬಾತು ಅಥವಾ-ಬಾಹ್ಮಿನಿ ಬಾತು (ಅನಾಸ್‌ಕ್ರೆಕ್ಕಾ) ಚಳಿಗಾಲದಲ್ಲಿ ವಲಸೆಬರುವ ಹಕ್ಕಿ. ಹೇರಳವಾಗಿ ದೊರಕುವ ಸಾಮಾನ್ಯ ಬಾತುಕೋಳಿ ಮತ್ತು ಚೂಪುಬಾಲದ ಬಾತು (ಅನಾಸ್‌ಅಕ್ಯೂಟ) ಗಳು ಚಳಿಗಾಲದಲ್ಲಿ ಈ ಪ್ರಾಂತ್ಯಕ್ಕೆ ಬರುತ್ತವೆ. ಪುಟ್ಟಮುಜ್ಜೂಕ ಅಥವಾ ಡಾಬ್ಚಿಕ್ (ಪೊಡಿಸೆಪ್ಸ ರುಫಿಕೊಲೀಸ್) ನಮ್ಮ ಪ್ರಾಂತ್ಯದಲ್ಲಿಯೇ ವಿಶೇಷವಾಗಿ ಸದಾ ನೀರಿರುವ ಭಾಗಗಳಲ್ಲಿ ವಾಸಿಸುತ್ತದೆ. ಇದು ಒಳ್ಳೆಯ ಈಜುಗಾರ ಮತ್ತು ಪ್ರವೀಣ ಮುಳುಕ.

**ಸರೀಸೃಪಗಳು (ತಂಪುರಕ್ತದ, ಹುರುಪೆ ಹೊದಿಕೆಯ ಗಾಳಿ ಉಸಿರಾಡುವುವು)**

ಮಗ್ಗರ್ ಅಥವಾ ಜೌಗು ಮೊಸಳೆಯು (ಕ್ರೊಕೊಡೈಲಸ್ ಪಾಲಿಟ್ರಸ್) ಎಲ್ಲಾ ದೊಡ್ಡನದಿಗಳಲ್ಲಿಯೂ ಮತ್ತು ಕೆರೆಗಳಲ್ಲಿಯೂ ದೊರಕುತ್ತದೆ. ತಲೆಯು ಅಗಲವಾಗಿ ತ್ರಿಕೋಣಾಕಾರವಾಗಿದೆ. ಅದರ ಮೂತಿಯೂ ಸುಮಾರು ಎರಡು ಅಡಿ ಉದ್ದವಿದೆ. ಕಣ್ಣಿನ ಮುಂಭಾಗದಲ್ಲಿ ಗುರುತರವಾದ ಏಣಿದೆ. ಕ್ರೊ. ಪೊರೊಸಸ್ ಉಪ್ಪುನೀರಿನ ಮೊಸಳೆ. ಇದು ಕಡಲಿನ ಖಂಡಾಂತರ ನೀರಿನಲ್ಲಿಯೂ ದೊರಕುತ್ತದೆ. ಇದರ ತುದಿಯು ಸ್ವಲ್ಪ ಚೂಪಾಗಿದೆ. ಇದು ಹೆಚ್ಚುದೂರ ಖಂಡಾಂತರದಲ್ಲಿ ಇರುವುದಿಲ್ಲ.

ಉದ್ದವಾದ ಕತ್ತಿನ, ಹಿಂದೆ ಸೆಳೆದುಕೊಳ್ಳಬಹುದಾದ ಕಾಲುಗಳುಳ್ಳ ಆಮೆಗಳನ್ನು ಸುಲಭವಾಗಿ ಗುರುತಿಸಬಹುದು. ಮೃದು ಚಿಪ್ಪಿನ (ಟ್ರಿಯೊನೆಕ್ಸ ಲೈಥಿ ಮತ್ತು ಇಮಿಡ) ಆಮೆಗಳು ನದಿಗಳಲ್ಲಿ ದೊರಕುತ್ತವೆ. ಇವು ತುಂಬಾ ಗಲಾಟೆ ಪ್ರಾಣಿಗಳು. ನೆಲದ ಮೇಲೆ ವಾಸಿಸುವ ಆಮೆಗಳು ಬೆಟ್ಟದ ತಪ್ಪಲುಗಳಲ್ಲಿ ಹುಲ್ಲುಗಾವಲುಗಳಲ್ಲಿ ವಾಸಿಸುತ್ತವೆ. ಕಾವೇರಿಯಲ್ಲಿ ತೊಗಲು ಚಿಪ್ಪು ಇರುವ ಇನ್ನೊಂದು ಜಾತಿ ಇದೆ. ಗಿಡುಗಮೂತಿ ಆಮೆಯ ವ್ಯಾಪಾರಕ್ಕೆ ಮುಖ್ಯವಾದ ಆಮೆ ಚಿಪ್ಪನ್ನು ಒದಗಿಸುತ್ತದೆ. ಇದೂಕೂಡ ಪಕ್ಕದ ಕಡಲಿನಲ್ಲಿ ದೊರಕುತ್ತದೆ.

ಕೊಳವೆ ಬೆರಳುಗಳುಳ್ಳ ಹಲ್ಲಿಗಳು (ಸ್ಕ್ವಾಮೇಟ) ಕಾಡುಗಳಲ್ಲಿ ದೊರಕುತ್ತವೆ. ಹರಡಿದ ಬೆರಳುಗಳಿರುವ ಮತ್ತು ಅಂಟು ಸಿಂಬಿಗಳಿರುವ ಗೌಳಿಗಳು ಮನೆಗಳಲ್ಲಿ ವಾಸಿಸುತ್ತವೆ.

ಅಗಾಮಿಡೆ ಗುಂಪಿಗೆ ಮರವಾಸಿಗಳಾದ, ಪಕ್ಕದಲ್ಲಿ ಚಪ್ಪಟೆ ದೇಹದ ಹಲ್ಲಿಗಳು ಸೇರುತ್ತವೆ. ಹಾರುಹಲ್ಲಿಯು ಬೆಟ್ಟಕಾಡುಗಳಲ್ಲಿ ಸಿಗುತ್ತದೆ. ಇದು ಮರದಿಂದ ಮರಕ್ಕೆ ಜಾರಿ ಹಾರುತ್ತದೆ. ನೆಲದ ಹಲ್ಲಿ (ಸಿಟಾನ ಪಾಂಟಿಸೆರಿಯಾನ) ಪ್ರಾಂತ್ಯಪೂರ್ತಿ ದೊರಕುತ್ತದೆ. ಮರದ ಹಲ್ಲಿಯು ಮೈಸೂರಿನಲ್ಲಿ ಅಪರೂಪ. ರಕ್ತಪೀಲಿಕಾ ಹಲ್ಲಿ (ಹೆಂಟೆಗೊದ್ದ-ಕೆಲೊಟಿಸ್ ವರ್ಸಿಕೊಲಾರ್) ಬಹಳ ಸಾಮಾನ್ಯ.

ಬಂಡೆಹಲ್ಲಿಯ ದೇಹವು ಚಪ್ಪಟೆಯಾಗಿದೆ. ಇದುಕೂಡ ಸಾಮಾನ್ಯವಾಗಿ ದೊರಕುತ್ತದೆ. ದಕ್ಷಿಣ ಭಾರತದ ಉಡವು ಬಾಲ ಬಿಟ್ಟು 2½ ಅಡಿ ಉದ್ದ ಬೆಳೆಯುತ್ತದೆ. ನಿಜವಾದ ಹಲ್ಲಿಗಳು ಒಣಬಂಜರು ಭೂಮಿಯಲ್ಲಿ ಸಿಗುತ್ತವೆ. ಕೆಂಪು ಬಾಲದ ಹಾವು ಹಲ್ಲಿಗಳು (ಸ್ಕಿಂಕ್–ಸ್ಕಿನಿಡೊ) ಮೈಸೂರು ಪ್ರಾಂತ್ಯ ಪೂರ್ತಿ ದೊರಕುತ್ತವೆ. ಗೋಸುಂಬೆಯು ಮರವಾಸಿ. ಇದು ಪರಿಸರಣಕ್ಕೆ ತಕ್ಕಂತೆ, ಬಣ್ಣ ಬದಲಾಯಿಸ ಬಲ್ಲುದು, ಮತ್ತು ಕಾಡುಗಳಲ್ಲಿ ವಾಸಿಸುತ್ತದೆ.

### ಹಾವುಗಳು

ಇವು ಕಾಲಿಲ್ಲದ ಮತ್ತು ಕಾಲುಪಟ್ಟಿಗಳಿಲ್ಲದ ಹಲ್ಲಿಗಳು. ಬಿಲವಾಸಿಗಳಲ್ಲಿ ಸೊಂಟಪಟ್ಟಿಯ ಕುರುಹುಗಳಿವೆ.

ಹೆಬ್ಬಾವುಗಳಲ್ಲಿ ಹದಿನೆಂಟು ಅಡಿ ಉದ್ದ ಬೆಳೆಯುವ ಬಂಡೆಹಾವುಗಳಿವೆ. ಪಟ್ಟೆಯ ಲೈಕೊಡಾನ್ ಸುಲಿಕಸ್ ಬಹಳೊಮ್ಮೆ ಇಲಿ ಮತ್ತಿತರ ಪಿಡುಸುಗಳನ್ನು ತಿನ್ನಲು ಮನೆಗೆ ನುಗ್ಗುತ್ತದೆ. ಇಲಿಹಾವು ನಾಗರಹಾವನ್ನೇ ಹೋಲುತ್ತದೆ. ಇದು ಇಲಿ ಪಿಡುಸುಗಳನ್ನು ತಿಂದು ಮಾನವನಿಗೆ ಉಪಕಾರಿಯಾದರೂ ನಾಗರಹಾವಿನ ಹೋಲಿಕೆಯಿಂದಾಗಿ ಕೆಡುಕನ್ನು ಅನುಭವಿಸುತ್ತದೆ. ತಾಳೆಹಾವು (ಡೆಂಡ್ರೊಫಿಸ್ ಪಿಕ್ಟಸ್) ಮರವಾಸಿ. ಹಸುರು ಹಾವು (ಟ್ರೊಪಿಡೊನೊಟಸ್ ಸ್ಟೊಲೇಟಸ್), ಕೆರೆಹಾವು (ಟ್ರೊ. ಪಿಸ್ಕೇಟರ್) ದಪ್ಪಹಸುರುಹಾವು (ಟ್ರೊ. ಪ್ಲಂಬಿಕೊಲಾರ್) ಇವು ಕಲ್ಲುಬಿಲಗಳಲ್ಲಿರುತ್ತವೆ.

ದವಡೆಯ ಹಿಂಭಾಗದಲ್ಲಿ ವಿಷಹಲ್ಲುಗಳಿರುವ ಹಾವುಗಳೆಂದರೆ : ಸಾಮಾನ್ಯವಾದ ಚಾಟಿ ಹಾವು (ಡ್ರೈಯೊಫಿಸ್ ಮೈಕ್ಟೆರಿಜಾನ್ಸ್) ಗಳು ಮರಗಳಲ್ಲಿ ಮತ್ತು ನದಿಯ ಉಸುಕಿನಲ್ಲಿ ಇರುತ್ತವೆ. ಅಪಾಯ ಕಾರಿಯಾದ, ಮುಂಭಾಗದಲ್ಲಿ ವಿಷಹಲ್ಲಿರುವ ಪ್ರೊಟಿರೊಗ್ಲೈಫದಲ್ಲಿ, ಕಟ್ಟುಹಾವು, ನಾಗರಹಾವುಗಳು, ಮಂಡಲದ ಹಾವುಗಳು, ಮತ್ತು ಹವಳದ ಹಾವುಗಳು ಪ್ರಾಂತ್ಯದಲ್ಲೆಲ್ಲಾ ದೊರಕುತ್ತವೆ. ಇವು ತುಂಬಾ ವಿಷಪೂರಿತವಾದವುಗಳು. ಕಡಲ ಹಾವುಗಳೆಲ್ಲಾ ಅಪಾಯಕಾರಿಗಳು.

ಕಪ್ಪು ಮತ್ತು ಬಿಳಿ ಪಟ್ಟೆಗಳಿರುವ ಕಟ್ಟುಹಾವು (ಬಂಗಾರಸ್ ಕೋಎರುಲಿಯಸ್) ಬಹಳ ನಾಚಿಕೆಯ ಪ್ರಾಣಿ. ಹೆಡೆಯಿರುವ ನಾಗರಹಾವು ನಿಜಕ್ಕೂ ಭಯಂಕರ ಮತ್ತು ಪ್ರಾಂತದಲ್ಲೆಡೆ ದೊರಕುತ್ತದೆ. ಕೆಂಪು ಹೊಟ್ಟೆಯ ಹಮಿಬಂಗಾರಸ್ ನೈಗ್ರೆಸೆನ್ಸ್ ಮಲೆನಾಡಿನಲ್ಲಿ ಮಾತ್ರ ಇದೆ. ದಬೋಯ ಅಥವಾ ರಸ್ಸಲ್‌ರ ಮಂಡಲದ ಹಾವನ್ನು ಅದರ ವಜ್ರಾಕೃತಿಯ ಬಣ್ಣದಿಂದ ಬೇಗ ಗುರುತಿಸ ಬಹುದು. ಇದು ಐದು ಅಡಿ ಉದ್ದ ಬೆಳೆಯುತ್ತದೆ. ಬಹಳ ಸೋಮಾರಿ. ಗರಗಸದಾಕಾರದ ಹುರುಪೆ ಗಳುಳ್ಳ ಎಕಿಸ್‌ಕ್ಯಾರಿನೇಟ ಬಹಳ ದುಷ್ಟ, ಆದರೆ ಮನುಷ್ಯನಿಗೆ ಮಾರಕವಲ್ಲದ ಹಾವು. ಕುಳಿ ಮಂಡಲಗಳು ಮಲೆನಾಡಿನಲ್ಲಿವೆ. ಇದರಲ್ಲಿ ಗೂನುಮೂತಿಮಂಡಲ ಮುಂತಾದ ಜಾತಿಗಳಿವೆ. ಅವುಗಳ ವಿಷವು ಮಾರಕವಲ್ಲದಿದ್ದರೂ ದೈಹಿಕವಾಗಿ ಅಪಾಯಕಾರಿ.

### ದ್ವಿಚರಿಗಳು

ಕೆರೆಯ ಹಸುರು ಕಪ್ಪೆ (ರಾನ ಹೆಕ್ಸಡ್ಯಾಕ್ಟೈಲ) ಮತ್ತು ಬಸವ ಕಪ್ಪೆ (ರಾ ಟೈಗ್ರಿನ) ಗಳು ನೀರಿನಲ್ಲಿ ವಾಸಿಸುತ್ತವೆ ಮತ್ತು ಬಹಳ ಗಾತ್ರವಾಗಿ ಬೆಳೆಯುತ್ತವೆ. ರಸ್ತೆಯ ಗುಂಡಿಗಳಲ್ಲಿ ಮತ್ತು ಬತ್ತದ ಗದ್ದೆಗಳಲ್ಲಿ ಇತರ ಜಾತಿಯವು ದೊರಕುತ್ತವೆ.

**ಮೀನುಗಳು**

ಮೀನು ಸಂಪತ್ತು ಹೇರಳ ಮತ್ತು ತುಂಬ ಭಿನ್ನವಾದುದು. ಸೊರ ಮೀನುಗಳು ಉಷ್ಣವಲಯದ ಕಡಲಿನಲ್ಲಿ ಹೇರಳ. ಅವುಗಳ ಪಿತ್ತಕೋಶದಿಂದ ತೆಗೆದ ಎಣ್ಣೆ ಬಹಳ ಬೆಲೆಬಾಳುವುದು. ನೆಲಸೊರಮೀನು (ಕಾರ್ಕೇರಿಯಸ್ ಗ್ಯಾಂಜೆಟಿಕಸ್) ನದಿಗಳಿಗೂ ಬರುತ್ತದೆ. ಸುತ್ತಿಗೆತಲೆ ಸೊರಮೀನು (ಲೈಗೋನಬ್ಲಾಚಿ) ನಮ್ಮ ಕಡಲಿನಲ್ಲಿ ತುಂಬಾ ಸಾಮಾನ್ಯ. ಗರಗಸದ ಮೀನು (ಪ್ರಿಸ್ಟೀಸ್ ಕಸ್ಪಿಡೇಟಸ್) ಆಹಾರವನ್ನು ಹುಡುಕಿಕೊಂಡು ನದಿಗಳಿಗೂ ಬರುತ್ತದೆ ಎಂದು ಹೇಳಲಾಗಿದೆ. ಕಂಟಕ-ರಶ್ಮಿ (ಟ್ರೈಬಾನ್-ಸೀಫೆನ್) ಯ ದೇಹ ಪೂರ್ತಿ ಚಪ್ಪಟೆಯಾಗಿದೆ.

ಹಾವು ಮೀನುಗಳು ಕಡಲ ಪ್ರಾಣಿಗಳು. ಅವಕ್ಕೆ ಹಾವಿನಂತಿರುವ ದೇಹವಿದೆ. ಇವು ತಿನ್ನಲು ಯೋಗ್ಯವಲ್ಲವೆಂದು ಹೇಳುತ್ತಾರೆ. ಥೇಡೆ (ಏರಿಯಸ್ ಡಸ್ಸುಮಿಯರಿ) ಎಂಬುದು ' ದೊರಾಬ ' (ಕಾರ್ಲಿ) (ಕೈರೊಸೆಂಟ್ರಸ್ ಡೋರಾಬ್) ಎಂಬುದರೊಂದಿಗೆ ಸಾಮಾನ್ಯವಾಗಿ ಪಶ್ಚಿಮ ತೀರದಲ್ಲಿ ದೊರಕುವ ಕಡಲುಪ್ರಾಣಿ. ಹೆರ್ರಿಂಗ್‌ಗಳಲ್ಲಿ ಕ್ಲೂಪಿಯ ಲಾಂಗಿಸೆಪ್ಸ್ (ಪೇಡಿ) ಕ್ಲೂ ಫ್ರೈಂಬ್ರಿಯೋಟ ಮತ್ತು ' ಮಲ್ಲಸು ' ತಿನ್ನಲು ಯೋಗ್ಯವಾದುವು. ಆಂಚೊವಿಗಳಲ್ಲಿ (ಮೂನಂಗು), ಎಂಗ್ರೆಲಿಸ್ ಪುರುವ ಬಹಳ ಸಾಮಾನ್ಯವಾದುದು. ಮ್ಯಾಕರೆಲ್ಲ ಗುಂಪಿನಲ್ಲಿ ' ಬಾಂಗಡ ' ಸಾಮಾನ್ಯ (ಸ್ಕಾಂಬರ್ ಮೈಕ್ರೊಲೆಪಿಡೋಟಸ್). ಸೀರ್‌ಮೀನು ಸೈಬಿಯಂ ಗಟ್ಟಾಟಂ (ಖುಲ್ ಖುಲ್) ಅನ್ನು ಎರಡು ಅಂಗುಲ ಉದ್ದ ಇದ್ದಾಗ ತಿನ್ನಲು ಚೆನ್ನು. ಆರ್ಕುಲೈ (ಸೈ ಕಾಮ್ಮರ್ ಸೋನು) ಕೂಡ ತಿನ್ನಲು ಚೆನ್ನು. ಹಿಂದೂ ಸಾಗರದಲ್ಲಿ ಪರ್ಚ್‌ಗಳಿವೆ. ಲಾಡಿಮೊನು, ಕೊಲಾಜಿ (ಪಾಂಬೋಲ) ಮತ್ತು ಕುದುರೆ ಮ್ಯಾರ್ಕಲ್ (ತಿರಿಯಂಡೆ) ಗಳೂ ಕೂಡ ಇವೆ. ಬಿಳಿ ಹೊಟ್ಟೆ (ಕುರಿಚ್ಚಿ) ಬಹಳ ಪುಟ್ಟ ಮೀನು. ಪಾಂಫ್ರೆಟ್‌ಗಳಲ್ಲಿ (ಸ್ಟ್ರೊನೇಟಿಯಸ್ ಸಿನೇರಿಯಸ್) ಬಿಳಿಯವು (ಚಂವ) ಮತ್ತು ಕಪ್ಪು (ಚಂದ್ರುತ್ಯ) ಮೀನುಗಳಿವೆ. ಸೋಲ್ (ನಂಗು) (ಪ್ಲಾಗ್ಯೂಸಿಯ ಬಿಲಿನಿಯೇಟ) ಚಪ್ಪಟೆ ಮೀನು.

ಮುಲ್ಲೆಟ್‌ಗಳು (ಶೆವುಟ) ಕಡಲು ಮೀನುಗಳು. ಸಾಲಮಾನ್ (ವಾಮೀನು) ಮತ್ತು ದವಡೆ-ಮೀನು (ಬಲ್ಡೆ) ಉಕ್ಕಾ ನದಿಗಳನ್ನು ಹತ್ತುತ್ತವೆ.

ಬಾಯಿಯ ಸುತ್ತಲೂ ಮೀಸೆಗಳಿರುವವು (Catfish) ಗಳು ಹೆಚ್ಚಾಗಿ ಕೆರೆಗಳಲ್ಲಿರುತ್ತವೆ. ಮಾಗುರ್ (ಆಣಿಮೀನು) ಮತ್ತು ಸ್ಯಾಕ್ಕೊಟ್ರಾಂಕಸ್ ಫಾಸಿಲ್ಲಿಸ್ (ಚೇಳು ಮೀನು) ಬಹಳ ಪೋಷಕಾಹಾರವೆನ್ನುತ್ತಾರೆ. ಇವಕ್ಕೆ ಆನುಷಂಗಿಕ ಶ್ವಾಸಾಂಗಗಳಿವೆ. ಎರಡನೆಯದಕ್ಕೆ ಬುಡದಲ್ಲಿ ವಿಷಗ್ರಂಥಿ ಇರುವ ಭುಜದ ಮುಳ್ಳಿದೆ. ಬೆಣ್ಣೆ ಮೀನು (ಕಾಲ್ಲಿಕ್ರೋಸ್ ಬಿಮಕ್ಯುಲೇಟಸ್) ತಿನ್ನಲು ಚೆನ್ನು. ಇದು ದೊಡ್ಡ ಕೆರೆಗಳಲ್ಲಿ ಮತ್ತು ನದಿಗಳಲ್ಲಿ ಇರುತ್ತದೆ. ರಿಟಹೆಸ್ಟೇಟ ತುಂಗಾನದಿಯಲ್ಲಿ ದೊರಕುತ್ತದೆ. ನೀರಿಲ್ಲದೆ ತುಂಬಾ ದೂರ ಕೊಂಡೊಯ್ಯಬಹುದು. ಗ್ಲೈಪ್ಟೊಸ್ಟರ್ನಂ ಲಿನ ಮತ್ತು ಗ್ಲೈ. ಮದ್ರಾಸ್ ಪಟ್ಟಣಂಗಳಿವೆ. ಇವಕ್ಕೆ ವೇಗವಾಗಿ ಹರಿಯುವ ನೀರಿನಲ್ಲಿ ವಾಸಿಸಲು ಹೊಟ್ಟೆಭಾಗದಲ್ಲಿ ಅಂಟು ಸಿಂಬಿಗಳಿವೆ. ಇವು ಕಾವೇರಿ ಮತ್ತು ಭದ್ರಾ ನದಿಯ ಉಪನದಿಗಳಲ್ಲಿ ದೊರಕುತ್ತವೆ.

ಕಾರ್ಪೊಗಳಿಗೆ ಹಲ್ಲುಗಳಿಲ್ಲ. ಚಿಕ್ಕ ಮೀನುಗಳು ಸೊಳ್ಳೆ ಡಿಂಬಗಳನ್ನು ನಾಶಪಡಿಸುತ್ತವೆ. ಹಂದಿಯ ಮೂತಿಯಂತಿರುವ ಲೇಬಿಯೊಗಳಲ್ಲಿ ಹಂದಿ-ಕರ್ಲು (ಲೇಟೈನಸ್), ಮಡಕರ್ಲು (ರುಹು) ಮತ್ತು ಕುರಿಮೀನು (ಲೇ. ಕಾಲ್ಬುಪ್) ಗಳಿವೆ. ಇವು ನಾಲ್ಕು ಅಡಿ ಉದ್ದ ಬೆಳೆಯುತ್ತವೆ. ಇವನ್ನು ಬಡ ಜನರು ತಿನ್ನುತ್ತಾರೆ. ಆಹಾರವಾಗಿ ಬಹಳ ಇಷ್ಟಪಡುವ ಕಾಟ್ಲ ಕಾಟ್ಲ ಕಾವೇರಿಯಲ್ಲಿದೆ. ದೊಡ್ಡ

ನದಿಗಳಲ್ಲಿ ಬಾರ್ಬಸ್ ಜಾತಿಯ ಪ್ರಭೇದಗಳು ಹೇರಳವಾಗಿವೆ. ಇವುಗಳಲ್ಲಿ ಮಶೀರ್ (ಅರಲೆ ಅಥವಾ ಹಳ್ಳಮೀನು) ಬಹಳ ಚಿರಪರಿಚಿತ. ಈ ಜಾತಿಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಪ್ರಭೇದಗಳು ಮೈಸೂರು ದೇಶದಲ್ಲಿ ದೊರಕುತ್ತವೆ. ಬೆಸ್ತರಲ್ಲಿ ಸಾಮಾನ್ಯವಾದ (ಪರಗ) ಸೊಳ್ಳೆಡಿಂಬಗಳನ್ನು ನಾಶಪಡಿಸುವ ಮೇಲೆ ತಿನ್ನುವ ಮೀನು. ಬಾವಿಗಳಲ್ಲಿ, ಕೆರೆಗಳಲ್ಲಿ ಮತ್ತು ನಾಲೆಗಳಲ್ಲಿ ದೊರಕುವ ರಾಸ್ಬೊರೆ ಡಾನಿಕೋನಿ ಮನುಷ್ಯನಿಗೆ ಅದೇ ರೀತಿಯ ಉಪಕಾರಿ. ಚೇಲದ ಪ್ರಭೇದಗಳಿಗೆ (ಕೆಂಡೆ) ಮಾರುಕಟ್ಟೆಯಲ್ಲಿ ಹೆಚ್ಚಿನ ಗಿರಾಕಿ ಇದೆ.

ನೋಟಾಪ್ಟೆರಸ್ ಪಲ್ಲಾಸ್ ಮತ್ತು ನೋ ಚಿಟಾಲ (ನಾಲ್ಕು ಅಡಿ ಉದ್ದ) ಗಳು ನದಿಗಳಲ್ಲಿ ಮತ್ತು ದೊಡ್ಡ ಕೆರೆಗಳಲ್ಲಿ ಹೆಚ್ಚು ಮತ್ತು ಇವನ್ನು, ಮೂಳೆ ಹೆಚ್ಚಿದ್ದರೂ ಜನ ಬಹಳ ಇಷ್ಟಪಡುತ್ತಾರೆ. ಹ್ಯಾಪ್ಲೊಕೈಲಸ್ ಮಲನೊಗ್ಸ್ಟೀಗ್ಮ ಬತ್ತದ ಗದ್ದೆಗಳಲ್ಲಿ ಸೊಳ್ಳೆ ಡಿಂಬಗಳನ್ನು ನಾಶಪಡಿಸುವ ಸಣ್ಣಮೀನು.

ಮಸ್ಟಸೆಂಬ್ಲಸ್ ಪಂಕಾಲಸ್ (ಹಾವುಬಟ್ಟಿ) ಸಾಮಾನ್ಯವಾದ ಹಾವುಮೀನು–ರಚನೆಯ ಮೀನು. ಇದು ನದಿಗಳಲ್ಲಿ ಮತ್ತು ಕೆರೆಗಳಲ್ಲಿ ದೊರಕುವ ಆಹಾರಯೋಗ್ಯವಾದ ಮೀನು. ಒ. ಪಂಕ್ಟೇಟಸ್ (ಹೂಮೀನು) ಶಿವಮೊಗ್ಗದ ಬಳಿ ದೊರಕುವ ಸಾಮಾನ್ಯ ಮೀನು. ಎಸ್ಟ್ರೊಪ್ಲಸ್ ಸುರಟೆನಿಸ್ (ಬಾಚಣಿಗೆ ಮೀನು) ಕೂಡ ತಿನ್ನಲು ಯೋಗ್ಯವಾದ ಮೀನು ಎಂದು ಹೇಳುತ್ತಾರೆ.

ಮೂಲ ಲೇಖಕರು : ಡಾ॥ ಬಿ. ತಿರುಮಲಾಚಾರ್
ಅನುವಾದಕರು : ಶ್ರೀ ದೇವರಾಜ ಸರ್ಕಾರ್

# ಅಧ್ಯಾಯ 3

## ಕರ್ನಾಟಕದ ಬುಡಕಟ್ಟುಗಳು ಮತ್ತು ಜನಾಂಗಗಳು

ಕರ್ನಾಟಕ ಮಾನವರ ನೆಲೆಯಾಗಿ ಪರಿಣಮಿಸಿದ್ದು ಯಾವಾಗ? ಇದಕ್ಕೆ ಉತ್ತರ ಬಹುಮಟ್ಟಿಗೆ ಪ್ರಾಚೀನ ಅವಶೇಷಗಳು ನೀಡುವ ಸಾಕ್ಷ್ಯಗಳ ಮೇಲೆ ನಿಂತಿದೆ. ಭಾರತದಲ್ಲಿ ಹಳೆಯ ಮತ್ತು ಹೊಸ ಶಿಲಾಯುಗಗಳಿಗೆ ಸಂಬಂಧಿಸಿದ ಅಸ್ಥಿಯ ಅವಶೇಷಗಳು ಆಫ್ರಿಕಾದಲ್ಲಿ ದೊರೆಯುವಂತೆ ವಿಪುಲ ಪ್ರಮಾಣ ದಲ್ಲಿ ಸಿಗದೆ ತೀರ ಅಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಕರ್ನಾಟಕದಲ್ಲಿ ಹಳೆಯ ಶಿಲಾಯುಗದ ಉಳಿಕೆಗಳು ಸಿಗುವುದೇ ಇಲ್ಲ. ಆದರೆ ಬ್ರಹ್ಮಗಿರಿ, ಪಿಕ್ಲಿಹಲ್, ಮಾಸ್ಕಿ ಮತ್ತು ಟಿ ನರಸೀಪುರಗಳಲ್ಲಿ ಹೊಸ ಶಿಲಾಯುಗ ಮತ್ತು ತಾಮ್ರಯುಗಕ್ಕೆ ಸೇರಿದ ಮಾನವರ ಅಸ್ಥಿಯ ಉಳಿಕೆಗಳು ಸಿಕ್ಕಿವೆ. ಅವುಗಳೆಲ್ಲ ಸುಮಾರು ಕ್ರಿ. ಪೂ. 2500ರಿಂದ ಕ್ರಿ. ಪೂ. 1000ದ ನಡುವಿನ ಕಾಲಕ್ಕೆ ಸೇರುತ್ತವೆ. ಆದರೆ ಅವುಗಳನ್ನು ಕುರಿತ ಮಾನವಶಾಸ್ತ್ರ ಸಂಬಂಧವಾದ ಸಂಶೋಧನೆಗಳು ಇನ್ನೂ ಪ್ರಕಟವಾಗಿಲ್ಲ. ಆದುದರಿಂದ ಆ ಜನಾಂಗದ ವಾಂಶಿಕ ಮತ್ತು ದೈಹಿಕ ಲಕ್ಷಣಗಳನ್ನು ತಿಳಿಯುವುದು ಸಾಧ್ಯವಾಗಿಲ್ಲ.

ಕರ್ನಾಟಕಕ್ಕೆ ನೆರೆಹೊರೆಯ ಪ್ರದೇಶಗಳ ಜನ ವಲಸೆ ಬಂದಿರಬೇಕೆಂಬುದನ್ನು ಅದರ ಭೌಗೋಳಿಕ ಸ್ವರೂಪವೇ ಸ್ಪಷ್ಟಪಡಿಸುತ್ತದೆ. ಪೂರ್ವಭಾಗದಲ್ಲಿ ತೆಲುಗು ಪ್ರದೇಶಗಳಾದ ಕರ್ನೂಲು ಹಾಗೂ ಕಡಪ ಜಿಲ್ಲೆಗಳು, ದಕ್ಷಿಣದಲ್ಲಿ ತಮಿಳು ಪ್ರದೇಶಗಳಾದ ಕೊಯಮತ್ತೂರು ಹಾಗೂ ನೀಲಗಿರಿ ಜಿಲ್ಲೆಗಳು ಮತ್ತು ಪಶ್ಚಿಮದಲ್ಲಿ ಮಲೆಯಾಳ ಪ್ರದೇಶವಾದ ಕೊಚ್ಚಿನ್—ಈ ಸ್ಥಳಗಳಿಂದ ವಲಸೆಗಾರರು ಬಂದಿರಬೇಕು. ಇದಕ್ಕೆ ಪ್ರತಿಯೆಂಬಂತೆ ಕರ್ನಾಟಕದಿಂದಲೂ ಮೇಲೆ ತಿಳಿಸಿದ ಬಹುಮಟ್ಟಿನ ಎಲ್ಲ ಸ್ಥಳಗಳಿಗೆ ಜನ ವಲಸೆ ಹೋಗಿದ್ದಾರೆ. ಎಮ್ಮೆಗಳನ್ನು ಸಾಕಿ ಬೆಳೆಸುವುದರಲ್ಲಿ ತೋದರಿಗಿರುವ ವಿಶೇಷ ಆಸಕ್ತಿ ಪರಿಶ್ರಮಗಳ ಆಧಾರದ ಮೇಲೆ ಮಹಿಷಮಂಡಲ ಅವರ ಮೂಲಸ್ಥಳವಾಗಿದ್ದಿರಬೇಕೆಂದು ಇಕ್‌ಸ್ಟೆಡ್ (Eickstedt) ಎಂಬ ವಿದ್ವಾಂಸರು ಸೂಚಿಸಿದ್ದಾರೆ. ತೋದರು ಮೊದಲಲ್ಲಿ ಮೈಸೂರಿನಲ್ಲಿದ್ದು ಅಲ್ಲಿಂದ ನೀಲಗಿರಿಗೆ ಹೋಗಿರಬೇಕೆಂಬುದನ್ನು ಈ ಹೇಳಿಕೆ ಸೂಚಿಸುತ್ತದೆ. ಅವರ ಭಾಷೆಯಲ್ಲಿ ಕನ್ನಡಪದಗಳ ಮಿಶ್ರಣ ವಾಗಿರುವುದೂ ಉಂಟು.

ತೋದರನ್ನು ಬಿಟ್ಟರೂ ಈಗಲೂ ಇತರ ಅನೇಕ ಬುಡಕಟ್ಟುಗಳು ಕರ್ನಾಟಕದ ಕಾಡುಗಳಲ್ಲಿ ಮತ್ತು ಬೆಟ್ಟಪ್ರದೇಶಗಳಲ್ಲಿ ವಾಸವಾಗಿವೆ. ಆದರೆ ಅವುಗಳ ಸಂಖ್ಯೆಮಾತ್ರ ಕ್ರಮೇಣ ಕರಗುತ್ತಿದೆ. 1940ರಿಂದ ಈಚೆಗೆ ಲಂಬಾಣಿಗಳು, ಕೊರಚರು, ಕೊರಮರು ಮತ್ತು ಒಡ್ಡರು ಹಳ್ಳಿಗಳಲ್ಲಿರುವ ಇತರ ಹಿಂದುಳಿದ ಜನಾಂಗಗಳ ಜೊತೆಗೆ ತಾವೂ ಸೇರಿಕೊಳ್ಳುವುದಾಗಿ ಸರ್ಕಾರಕ್ಕೆ ಬರೆದುಕೊಳ್ಳುತ್ತಿದ್ದಾರೆ.

ಈ ಎಲ್ಲ ಅರಣ್ಯವಾಸಿಗಳು ಗಿರಿವಾಸಿಗಳು ಕರ್ನಾಟಕಕ್ಕೆ ಹೇಗೆ ಬಂದರೆಂಬ ಬಗ್ಗೆ ಏನೂ ತಿಳಿದಿಲ್ಲ. ಬಹಳ ಹಿಂದೆ ಯಾವಾಗಲೋ ಬಂದಿರಬೇಕು. ಬಹು ಪ್ರಾಚೀನ ಜನಾಂಗಗಳ ಚಟುವಟಿಕೆಗಳನ್ನು ಕುರಿತು ವಿಚಾರ ಮಾಡುವಾಗ ಎಫ್. ಜೆ. ರಿಚರ್ಡ್ ಎಂಬ ವಿದ್ವಾಂಸರು ನಿರ್ಮೂಲನ (Annhilation),

ಜೀರ್ಣೀಕರಣ (Assimilation) ಮತ್ತು ಪ್ರತ್ಯೇಕೀಕರಣ (Isolation) ಎಂದು ಮೂರು ವಿಧಾನಗಳನ್ನು ಹೇಳುತ್ತಾರೆ. ಈ ಆದಿವಾಸಿಗಳು ವಾಸವಾಗಿದ್ದ ಫಲವತ್ತಾದ ಭೂಮಿಗಳ ಮೇಲೆ ಬೇರೆ ಜನಾಂಗಗಳು ಧಾಳಿ ನಡೆಸಿ, ಆದಿವಾಸಿಗಳನ್ನು ಅಟ್ಟಿದಾಗ ಅವರು ಇಲ್ಲಿ ಬಂದು ಆಶ್ರಯ ಪಡೆದಿರಬೇಕು. ಎಡ್ಗರ್ ಥರ್ಸ್ಟನ್ ಮತ್ತು ಅನಂತಕೃಷ್ಣ ಅಯ್ಯರರು ತಮ್ಮ ಉದ್ಗ್ರಂಥಗಳಲ್ಲಿ ಈ ಬುಡಕಟ್ಟುಗಳ ಬಹು ಸಮರ್ಪಕವಾದ ವರ್ಣನೆಯನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಬಹು ಮುಖ್ಯವಾದ ಕೆಲವು ಬುಡಕಟ್ಟುಗಳ ಸಾಂಸ್ಕೃತಿಕ ಮತ್ತು ದೈಹಿಕ ಸ್ವರೂಪಗಳ ವಿಶಿಷ್ಟತೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ತಿಳಿಸಬಹುದು.

ಬಿಳಿಗಿರಿ ರಂಗನ ಬೆಟ್ಟದ ಪ್ರಾಂತ್ಯದಲ್ಲಿ ಸೋಲಿಗರೆಂಬ ಜನರಿದ್ದಾರೆ. ಬುಕನನ್ (Buchanan) ಇವರನ್ನು ನೋಡಿ ಬಂದಮೇಲೆ ಈ ಜನ ಬಹಳ ಬದಲಾಗಿದ್ದಾರೆ. ಸೋಲಿಗರು ಕನ್ನಡದ ಪ್ರಾಚೀನ ಭಾಷಾಭೇದವೊಂದನ್ನು ಆಡುತ್ತಾರೆ; ತೀರ ಸ್ವಲ್ಪ ಬಟ್ಟೆ ಬಳಸುತ್ತಾರೆ; ಬಾಳೆಎಲೆ ಹಾಸಿಕೊಂಡು ಬೆಂಕಿಯ ಸುತ್ತ ಮಲಗುತ್ತಾರೆ—ಹೀಗೆಂದು ಬುಕನನ್ ಅವರನ್ನು ವರ್ಣಿಸಿದ್ದಾನೆ.

ಈಗಲೂ ಸೋಲಿಗರು ಬೊಂಬಿನ ಗುಡಿಸಲುಗಳಲ್ಲಿಯೇ ವಾಸಮಾಡುತ್ತಾರೆ. ಅವರ ಆರೋಗ್ಯವನ್ನು ನೋಡಿಕೊಳ್ಳಲು ಸರ್ಕಾರದಿಂದ ನೇಮಕಗೊಂಡ ವೈದ್ಯರು ಅವರ ವಾಸಸ್ಥಳಕ್ಕೆ ನಿಯತ ಅವಧಿಗೆ ಹೋಗಿ ಬರುತ್ತಾರೆ. ಸರ್ಕಾರ ಅವರಿಗಾಗಿ ಹೆಂಚಿನ ಮನೆಗಳಿಂದ ಕೂಡಿದ ಒಂದು ಕಾಲೋನಿಯನ್ನೇ ಮಾಡಿಕೊಟ್ಟಿದೆ; ವಿದ್ಯೆಯನ್ನು ಕಲಿಯಲು ಪ್ರೋತ್ಸಾಹ ನೀಡಿದೆ; ಅವರ ಮಕ್ಕಳಿಗೆ ಉಚಿತ ಆಹಾರ, ವಸ್ತ್ರ, ವಿದ್ಯೆಗಳ ಸೌಲಭ್ಯವನ್ನು ಒದಗಿಸಿದೆ. ಆದರೆ ಈ ಬದಲಾವಣೆಗೆ ಸೋಲಿಗರು ತೀರ ನಿಧಾನವಾದ ಪ್ರತಿಕ್ರಿಯೆ ತೋರುತ್ತಿದ್ದಾರೆ. ಪ್ರಾಚೀನವಾದ ವರ್ಗವ್ಯವಸ್ಥೆಯಲ್ಲಿ ಬಾಳುವುದರಲ್ಲೇ ಅವರಿಗೆ ಹೆಚ್ಚು ಪ್ರೀತಿ. ಸಾಮಾನ್ಯವಾಗಿ ಪಂಚಕುಲ ಸೋಲಿಗರು ಬಿಳಿಗಿರಿ ರಂಗನ ದೇವಾಲಯ ಮತ್ತು ಬೆಟ್ಟದ ಪ್ರದೇಶದಲ್ಲಿಯೂ ಸಪ್ತಕುಲ ಸೋಲಿಗರು ಬೇಡಗುಳಿಯಲ್ಲಿಯೂ ವಾಸಮಾಡುತ್ತಾರೆ. ಒಂದು ಕುಲಕ್ಕೆ ಸೇರಿದವರೆಲ್ಲ ಅಣ್ಣತಂಗಿ ಇಲ್ಲವೆ ಅಕ್ಕತಮ್ಮಂದಿರಂತೆ. ಒಂದೇ ಕುಲದೊಳಗೆ ವೈವಾಹಿಕ ಸಂಬಂಧ ನಿಷಿದ್ಧ. ಅವರ ಜಗಳ ವಿವಾದಗಳಿಗೆಲ್ಲ ಯಜಮಾನ ತೀರ್ಪುಗಾರ.

ಒಂದು ಸ್ವಾರಸ್ಯಕರವಾದ ಸಂಗತಿಯೆಂದರೆ ಪಂಚಕುಲ ಸೋಲಿಗರಲ್ಲಿ 'ಐದು' ಸಂಖ್ಯೆಯನ್ನೇ ಆಧಾರವಾಗಿಟ್ಟುಕೊಂಡು ಎಲ್ಲವೂ ಜರಗುತ್ತವೆ. ಸಪ್ತಕುಲದವರ ವಿಷಯವೂ ಇದರಂತೆಯೇ. ಉದಾಹರಣೆಗೆ, ಪಂಚಕುಲ ಸೋಲಿಗರಲ್ಲಿ ಮಗು ಜನಿಸಿದಾಗ ಐದನೆಯ ದಿನ ಐದು ಜನ ಹಿರಿಯರಿಗೆ ಊಟಹಾಕಿ ಮಗುವಿಗೆ ಅವರಿಂದ ಆಶೀರ್ವಾದ ಮಾಡಿಸುತ್ತಾರೆ. ವಿವಾಹದಲ್ಲಿ ವಧುವನ್ನು ಮದುವೆ ಚಪ್ಪರಕ್ಕೆ ಕರೆತರಲು ವರನ ಸಂಬಂಧಿಗಳು ಐದು ಜನ ಹೋಗುತ್ತಾರೆ. ಸತ್ತವರನ್ನು ಹೊರುವಾಗ ಐದು ಕಡೆ ಇಳಿಸುತ್ತಾರೆ; ಚಟ್ಟಕ್ಕೆ ಐದು ಬೊಂಬು ಬಳಸುತ್ತಾರೆ; ಐದು ದಿನ ಶೋಕ ಆಚರಿಸುತ್ತಾರೆ.

ಸುತ್ತಮುತ್ತಲ ಹಳ್ಳಿಗಳ ಸಂಪರ್ಕದಿಂದ ಅವರ ಜೀವನ ವ್ಯವಸ್ಥೆಯಲ್ಲಿ ಎಷ್ಟೋ ಹೊಸರೀತಿಗಳು ಇಣುಕಿವೆ, ನಿಜ. ಆದರೆ ಈಗಲೂ ಗಂಡು ಹೆಣ್ಣು ಪರಸ್ಪರ ಒಪ್ಪಿ, ಗಂಡು ಹೆಣ್ಣನ್ನು ಹಾರಿಸಿಕೊಂಡು ಹೋಗಿ ಮದುವೆಯಾಗುವ ಪದ್ಧತಿಯೇ ಬಳಕೆಯಲ್ಲಿದೆ. ಕಾಡಿನಲ್ಲಿ ಎರಡು ಮೂರು ದಿನ ಇದ್ದನಂತರ ಅವರು ನೆಲೆಗೆ ಹಿಂತಿರುಗಿ ಹಿರಿಯರಿಗೆ ಒಂದು ಊಟ ಹಾಕುತ್ತಾರೆ. ಮತ್ತೊಂದು ಸ್ವಾರಸ್ಯದ ಸಂಗತಿಯೆಂದರೆ ವಿಧವಾ ವಿವಾಹ, ಬಹುಪತ್ನಿತ್ವ ಬಳಕೆಯಲ್ಲಿವೆ. ಆದರೆ ಬಹುಪತಿತ್ವ ರೂಢಿಯಲ್ಲಿಲ್ಲ.

ಸರ್ವಚೇತನವಾದಿಗಳಾದರೂ ಸೋಲಿಗರು ಬಿಳಿಗಿರಿ ರಂಗನನ್ನು ಪೂಜಿಸುತ್ತಾರೆ; ಅಷ್ಟೇ ಅಲ್ಲ, ಆ ದೇವರನ್ನು ತಮ್ಮ ಭಾವನೆಂದು ಕಾಣುತ್ತಾರೆ. ಕಾರಯ್ಯ ಮತ್ತು ಮಾದೇಶ್ವರ ಸೋಲಿಗ ಬುಡಕಟ್ಟಿನ

ದೇವತೆಗಳು. ಇವಲ್ಲದೆ ಅವರು ದೊಡ್ಡ ಸಂಪಿಗೆ ಮರವನ್ನು ಪೂಜಿಸುತ್ತಾರೆ. ಕೆಲಸದ ಹಂಚಿಕೆಯಲ್ಲಿ ಅವರಿಗೆ ವಿಶೇಷ ತಿಳಿವಳಿಕೆಯಿದೆ. ಗಂಡ ಅರಣ್ಯಶಾಖೆಯವರ ಜೊತೆಗೋ ಕಾಡುಕಡಿಸುವ ಕಂತ್ರಾಟುದಾರರ ಬಳಿಯೋ ದುಡಿಯುವುದಕ್ಕೆ ಹೋಗುತ್ತಾನೆ, ಇಲ್ಲವೆ ಬೇಟೆಯಾಡಲು ಅಥವಾ ಜೇನುಕೀಳಲು ಹೋಗುತ್ತಾನೆ. ಹೆಂಡತಿ ತಿನ್ನಬಹುದಾದ ಗೆಡ್ಡೆಗೆಣಸುಗಳನ್ನು ಕೀಳಲು ಅಥವಾ ಹಣ್ಣುಹರಿಯಲು ಹೋಗುತ್ತಾಳೆ.

ಬಡಗರು ಉದ್ದತಲೆಯ ಜನವೇ ಹೊರತು ಕನ್ನಡ ಮಾತನಾಡುವ ಪ್ರದೇಶದ ಜನರಂತೆ ದುಂಡನೆಯ ಅಥವಾ ಮಧ್ಯಮ ರೀತಿಯ ತಲೆಯವರಲ್ಲವೆಂದು ಥರ್ಸ್ಟನ್ ಬರೆಯುತ್ತಾರೆ. ಆದರೂ ಬಡಗರು ಹಳಗನ್ನಡಕ್ಕೆ ಸಂಬಂಧಿಸುವ ಭಾಷೆಯೊಂದನ್ನು ಆಡುವುದರಿಂದ ಮೈಸೂರಿನಿಂದಲೇ ಹೊರಹೋದವರಿರಬೇಕು. ಬಡಗರು ಮುಖ್ಯವಾಗಿ ವಲಸೆ ಜನಾಂಗವೇ ಆದರೂ ಅನೇಕ ಉದ್ಯೋಗಗಳನ್ನು ಕೈಗೊಂಡು ಸ್ವಲ್ಪ ಮುಂದುವರಿದ ಜನವಾಗಿದ್ದಾರೆ. ಅನೇಕರು ಕಾಫಿ ಮತ್ತು ಟೀ ತೋಟಗಳಲ್ಲಿ ಕೆಲಸಮಾಡುತ್ತಾರೆ; ಅಲ್ಲದೆ ವೆಲ್ಲಿಂಗ್‌ಟನ್ ಬಳಿಯಿರುವ ಸಿಡಿಮದ್ದಿನ ಕಾರ್ಖಾನೆಯಲ್ಲಿ ದುಡಿದು ಒಳ್ಳೆಯ ಕೂಲಿ ಸಂಪಾದಿಸುತ್ತಾರೆ. ಈ ತಲೆಮಾರಿನ ಮಕ್ಕಳು ಕೆಲಮಟ್ಟಿಗೆ ತಮಿಳು ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿಯುತ್ತಿದ್ದಾರೆ. 1904–5 ರಲ್ಲಿಯೇ ಬಡಗರಿಗೆಂದು 39 ಶಾಲೆಗಳಿದ್ದು ಸುಮಾರು 1,222 ಜನ ವಿದ್ಯಾರ್ಥಿಗಳಿದ್ದರು. 1903 ರ ಹೊತ್ತಿಗೆ ಒಬ್ಬ ಬಡಗರ ಹುಡುಗ ಮದರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸುಮಾಡಿ ಉದಕಮಂಡಲದ ಸಬ್ ಜಡ್ಜ್ ಕೋರ್ಟಿನಲ್ಲಿ ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿದ್ದ.

ಹೆಂಡ ತೆಗೆಯುವ ಕೆಲಸ ಮಾಡುವ ಮತ್ತು ತುಳು ಮಾತನಾಡುವ ಬಿಲ್ಲವರು ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿದ್ದಾರೆ. ಕುಂದಾಪುರದ ಹಳೆಪೈಕರು ಬಿಲ್ಲವರನ್ನು ಹೋಲುವರಲ್ಲದೆ ಬಂಟರಲ್ಲಿರುವಂತೆ ಅವರಲ್ಲಿಯೂ ಬಹುಸಂಖ್ಯೆಯ ಪಂಗಡಗಳು ಅಥವಾ ಕುಲ (ಬಳಿ) ಗಳು ಇವೆ. ಇವುಗಳಲ್ಲಿ ಈಗಲೂ ಅಳಿಯಸಂತಾನ ಪದ್ಧತಿ (ಹೆಣ್ಣಿನ ಕಡೆಯಿಂದ ಆಸ್ತಿ ಪಡೆಯುವುದು) ಬಳಕೆಯಲ್ಲಿದೆ.

ಕನ್ಯೆಯರ ವಿವಾಹದಲ್ಲಿ ಕೈಧಾರೆ (ನೀರೆರೆಯುವ) ಪದ್ಧತಿ ಮತ್ತು ವಿಧವಾ ವಿವಾಹದಲ್ಲಿ ಬಿಡುಧಾರೆ ಪದ್ಧತಿಗಳು ಬಿಲ್ಲವರಲ್ಲಿ ಈಗಲೂ ಆಚರಣೆಯಲ್ಲಿವೆ.

ಬಂಟರಂತೆ ಬಿಲ್ಲವರೂ ಭೂತಪೂಜೆ ಮಾಡುತ್ತಾರೆ. ಎರಡು ಬುಡಕಟ್ಟಿನವರೂ ಕೋಟಿವೈದ್ಯ ಮತ್ತು ಚೆನ್ನಯವೈದ್ಯ ದೇವತೆಗಳನ್ನು ಪೂಜಿಸುತ್ತಾರೆ. ಬಿಲ್ಲವರ ಭೂತಗಳಲ್ಲೆಲ್ಲ ಬಹು ಭಯಂಕರವಾದುದೆಂದರೆ ಕಲ್‌ಕುಟಿ. ಕೊಡನನಿತಾಯ, ಕುಂಡಲತಾಯ ಹಾಗೂ ಕಾಡಿನ ಭೂತಗಳಾದ ಹಕ್ಕೇರ್ಲು ಮತ್ತು ಬ್ರಹ್ಮೇರ್ಲುಗಳು ಇತರ ಭೂತಗಳು. ದಕ್ಷಿಣ ಕನ್ನಡ ಜಿಲ್ಲೆಯ ಭೂತಪೂಜೆಯಲ್ಲಿ ಕೋಲ, ಬಂಡಿ, ನೇಮ ಮತ್ತು ಅಗೆಲು ತಂಬಿಲ ಎಂದು ನಾಲ್ಕು ವಿಧಗಳಿವೆ. ಕೋಲ, ಬಂಡಿ ಮತ್ತು ನೇಮಗಳಲ್ಲಿ ಯಾವ ಭೂತದ ಆವಾಹನೆಯೂ ಆಗುತ್ತದೆ. ಆದರೆ ಅಗೆಲು–ತಂಬಿಲ ಭದೇರ್ಲು ಭೂತಕ್ಕೆ ಮಾತ್ರ ಸಲ್ಲುವಂಥದು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಮೂಡಬಿದ್ರೆ, ಉಪ್ಪಿನಂಗಡಿಗಳಲ್ಲಿ ವಾಸಮಾಡುವ ಮತ್ತೊಂದು ಆದಿವಾಸಿ ಬುಡಕಟ್ಟು ಎಂದರೆ ಕೊರಗರದು. ಭಾರತದ ಇತರ ಅನೇಕ ಬುಡಕಟ್ಟುಗಳ ಜನರಂತೆ ಈ ಕೊರಗರೂ ಬಹು ಸತ್ಯನಿಷ್ಠೆಯುಳ್ಳವರು. ಅವರಲ್ಲಿ ಮೂರು ಕುಲಗಳಿವೆ. ಒಂದೊಂದು ಕುಲವೂ ಬಳಿಗಳೆಂಬ ಪ್ರತ್ಯೇಕ ಗೋತ್ರವರ್ಗಗಳಾಗಿ ಒಡೆದಿದೆ. ಒಂದು ಸೋಜಿಗವೆಂದರೆ, ಈ ಕುಲದವರಲ್ಲಿ ಒಬ್ಬರು ಮತ್ತೊಬ್ಬರಲ್ಲಿ ಊಟ ಮಾಡಬಹುದು, ಆದರೆ ವಿವಾಹ ಸಂಬಂಧ ಮಾಡುವಂತಿಲ್ಲ. ವಿಧವಾವಿವಾಹ

ರೂಢಿಯಲ್ಲಿದ್ದರೂ ವಿವಾಹ ವಿಚ್ಛೇದನವಿಲ್ಲ ಎಂದು ಥರ್ಸ್ಟನ್ ತಿಳಿಸುತ್ತಾರೆ. ಕೊರಗರು ಸೂರ್ಯಾರಾಧಕರಾಗಿದ್ದಂತೆ ತೋರುತ್ತದೆ, ಮನುಷ್ಯರಿಗೆ ದಿನಗಳ ಹೆಸರನ್ನು ಕೊಡುವುದು ಇನ್ನೂ ಅವರಲ್ಲಿ ರೂಢಿಯಲ್ಲಿದೆ. ಐತ್ತ (ಆದಿತ್ಯ ಅಥವಾ ಸೂರ್ಯ), ಚೋಮ (ಸೋಮ ಅಥವಾ ಚಂದ್ರ), ಅಂಗಾರ (ಮಂಗಳ) ಮತ್ತು ತುಕ್ರ (ಶುಕ್ರ) ಚನಿಯ (ಶನಿ)—ಇವು ಅಂಥ ಕೆಲವು ಹೆಸರುಗಳು.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲೆನಾಡುಗಳಲ್ಲಿರುವ ಮಲೇರು ಬುಡಕಟ್ಟಿನಲ್ಲಿ ವಿವಾಹಕ್ರಮ ಸ್ವಾರಸ್ಯಕರವಾಗಿದೆ. ಯಜಮಾನ ಮತ್ತು ಜೋಯಿಸರಿಬ್ಬರೂ ವರವಧುಗಳನ್ನು ಕರೆಸಿ ಅಲ್ಲಿಂದ ಮುಂದೆ ಅವರಿಬ್ಬರೂ ಗಂಡ ಹೆಂಡಿರೆಂದು ತಿಳಿಸುತ್ತಾರೆ. ಇದು ತೀರ ಸರಳವಾದ, ಏನೂ ಖರ್ಚಿಲ್ಲದ ಆಕರ್ಷಕ ವಿವಾಹಪದ್ಧತಿಯಾಗಿದೆ. ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವ ಮತ್ತೊಂದು ಜನಾಂಗವಾದ ಕುಡಿಯರು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಮತ್ತು ಇತರ ಸ್ಥಳಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ವರನ ತಂದೆ ವೀಳೆಯದೆಲೆ, ಅಡಕೆ, ಎಳ್ಳೆಣ್ಣೆ ತೆಗೆದುಕೊಂಡು ಇಬ್ಬರು ಹೆಂಗಸರೊಡನೆ ಹೆಣ್ಣಿನ ಮನೆಗೆ ಹೋಗುತ್ತಾನೆ. ಹೆಣ್ಣಿನ ತಂದೆ ತಾಯಿಗಳು ಎಣ್ಣೆಯನ್ನು ತೆಗೆದುಕೊಂಡರೆ ಅವರು ವಿವಾಹಕ್ಕೆ ಒಪ್ಪಿದಂತೆ.

ಹಸಲರು, ಕಾಡು ಕುರುಬರು ಮತ್ತು ಯರವರು ಇತ್ಯಾದಿಯಾಗಿ ಮೈಸೂರು ರಾಜ್ಯಕ್ಕೆ ಸೇರಿದ ಇನ್ನೂ ಕೆಲವು ಬುಡಕಟ್ಟುಗಳ ವಿವರಣೆ ಮಾಡಲಾಗಿದೆ. ಹಿಂದಿನ ಮಾನವ ಶಾಸ್ತ್ರಜ್ಞರು ಈ ಎಲ್ಲ ಬುಡಕಟ್ಟುಗಳ ಜನರನ್ನು ಒಂದು ಗುಂಪಾಗಿ ಮಾಡಿ, ಅವರನ್ನು ಪೂರ್ವದ್ರಾವಿಡ ಬುಡಕಟ್ಟಿಗೆ ಸೇರಿದವರೆಂದು ಕರೆದರು. ಆದರೆ ನೀಗ್ರೋಯಿಡ್ ಮತ್ತು ಪೂರ್ವ ಆಸ್ಟ್ರೋಲಾಯಿಡ್ ಎಂಬ ಎರಡು ಭೇದಗಳು ಕಲೆತು ಆದ ದೇಹರಚನೆ ಈ ಜನರದ್ದಾಗಿದೆ. ಅಗಲಮೂಗು, ಗುಂಗುರು ಕೂದಲು, ದಪ್ಪತುಟಿ ಮತ್ತು ಗಿಡ್ಡ ನಿಲುವು—ಇವು ನೀಗ್ರೋಯಿಡ್ ಭೇದದ ಲಕ್ಷಣಗಳು. ಪೂರ್ವ ಆಸ್ಟ್ರೋಲಾಯಿಡ್ ಲಕ್ಷಣವೆಂದರೆ ವಿಶಾಲವಾದ ಗುಂಗುರು.

ಇವುಗಳಲ್ಲಿ ಮೊದಲಿನದನ್ನು ಮಾಲಿಡ್ (Molid) ಎಂದೂ ಕಡೆಯದನ್ನು ಗೊಂಡಿಡ್ (Gondid) ಎಂದೂ ಕರೆಯುತ್ತಾರೆ. ಮೈಸೂರಿನ ಆದಿವಾಸಿಗಳಲ್ಲಿ ಮೊದಲ ಭೇದದ ಲಕ್ಷಣಗಳು ಎದ್ದು ಕಾಣುವುದಿಲ್ಲ.

ಸರ್ ಹರ್ಬರ್ಟ್ ರಿಸ್ಲಿ (Sir Herbert Risley) ಯವರು ಭಾರತದ ಜನತೆಯಲ್ಲಿ ದ್ರಾವಿಡ ಜನಾಂಗವನ್ನು ಸೇರಿಸಿಕೊಳ್ಳುತ್ತಾರೆ. ಆದರೆ ಈಗಿನ ಮಾನವ ಶಾಸ್ತ್ರಜ್ಞರು ಶುದ್ಧದ್ರಾವಿಡ ಜನಾಂಗವೊಂದರ ಅಸ್ತಿತ್ವವನ್ನು ಒಪ್ಪುವುದಿಲ್ಲ. ಕರ್ಣಾಟಕದ ಜನತೆ ಸ್ಪಷ್ಟ ದೇಹಲಕ್ಷಣಗಳಿಂದ ಕೂಡಿದ ಒಂದು ನಿರ್ದಿಷ್ಟ ಮೂಲ ಜನಾಂಗಕ್ಕೆ ಸೇರುವುದಿಲ್ಲ. ಕರ್ಣಾಟಕದಲ್ಲಿ ವಿಭಿನ್ನ ಜನಾಂಗಗಳ ಅಂಶಗಳು ಮಿಶ್ರಣಗೊಂಡಿರಬೇಕು. ಆದರೆ ಒಟ್ಟಿನಲ್ಲಿ ಉದ್ದತಲೆ, ಮಧ್ಯಮ ನಿಲುವು, ಮಟ್ಟಸವಾದ ಮೂಗು, ಕಂದು ಬಣ್ಣ—ಇವು ಕರ್ಣಾಟಕದ ಜನತೆಯ ವಿಶಿಷ್ಟ ಮೈಲಕ್ಷಣಗಳಾಗಿವೆ. ಇಕ್‌ಸ್ಟೆಡ್ ಈ ಬಗೆಗೆ ಇಂಡಿಡ್ (Indid) ಎಂಬ ಹೆಸರನ್ನು ಬಳಸುತ್ತಾರೆ.

ಅಲ್ಲಲ್ಲಿ, ವಿಶೇಷವಾಗಿ ಕರ್ಣಾಟಕದ ಮುಸ್ಲಿಮರಲ್ಲಿ ಮತ್ತು ಕ್ರಿಶ್ಚಿಯನರಲ್ಲಿ ದುಂಡುತಲೆಯ ಜನರೂ ದೊರೆಯುತ್ತಾರೆ. ಇದು ಬಹುಶಃ ಆಲ್ಪೈನ್ (Alpine) ಇಲ್ಲವೆ ಆರ್ಮೆನಾಯಿಡ್ (Armenoid) ಬಗೆಯನ್ನು ಸೂಚಿಸುತ್ತದೆ.

ಕರ್ನಾಟಕದ ಜನತೆಯಲ್ಲಿ ನಾರ್ಡಿಕ್ ಮೂಲಕ್ಕೆ ಸೇರಿದ ಲಕ್ಷಣಗಳಿವೆಯೇ ಎಂಬುದನ್ನು ನಿರ್ಧರಿಸಬೇಕಾದಲ್ಲಿ ಮಾನವ ವಿಜ್ಞಾನಕ್ಕೆ ಸಂಬಂಧಿಸಿದಂತೆ ಈಗ ದೊರೆತಿರುವುದಕ್ಕಿಂತ ಹೆಚ್ಚಿನ ವಿಷಯಗಳನ್ನು ಸಂಗ್ರಹಿಬೇಕಾಗುತ್ತದೆ. ಬಹುದೀರ್ಘವಾದ ತಲೆ ಮತ್ತು ಅತಿ ಎತ್ತರವಾದ ನಿಲುವು ಈ ನಾರ್ಡಿಕ್ ವರ್ಗದ ವೈಶಿಷ್ಟ್ಯ. ದಕ್ಷಿಣಭಾರತದ ಚಿತ್ಪಾವನ ಬ್ರಾಹ್ಮಣರಲ್ಲಿ ಈ ಲಕ್ಷಣ ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತದೆ. ಕೊಂಕಣಿಯಂಥ ಕೆಲವು ಪಂಗಡಗಳು ಈ ವರ್ಗಕ್ಕೆ ಸೇರಿರುವ ಸಾಧ್ಯತೆಗಳಿವೆ.

ಮೂಲಲೇಖಕರು : ಡಾ॥ ಎಂ. ಶೇಷಾದ್ರಿ,
ಅನುವಾದಕರು : ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

# ಭಾಷೆಗಳು

ಮೈಸೂರು ರಾಜ್ಯ 1956 ರಲ್ಲಿ ಅಸ್ತಿತ್ವಕ್ಕೆ ಬಂತು. ಕನ್ನಡವೇ ಪ್ರಧಾನವಾಗಿ ಆಡುನುಡಿಯಾಗಿರುವ ಎಲ್ಲ ಭಾಗಗಳೂ ಹೆಚ್ಚು ಕಡಮೆ ಮೈಸೂರು ರಾಜ್ಯದಲ್ಲಿ ಸೇರಿವೆ. ಆದುದರಿಂದ ರಾಜ್ಯದ ಈಗಿನ ಗಡಿಗಳು ಇಂದಿನ ಕರ್ಣಾಟಕದ ಗಡಿಗಳು ಎಂದು ಹೇಳಬಹುದು. ಕನ್ನಡ ಆಡುನುಡಿಯಾಗಿರುವ ಕೆಲವು ನೆರೆ ಪ್ರದೇಶಗಳು ಈ ಗಡಿಯ ಆಚೆಗೆ ಉಳಿದಿವೆ ಎಂಬುದು ನಿಜ. ಆದರೆ ರಾಜ್ಯದ ಈಗಿನ ಗಡಿಯೊಳಗಿರುವ ಕೆಲವು ಪ್ರದೇಶಗಳ ಬಗ್ಗೆ ಅನ್ಯಭಾಷೆಗಳ ಪರವಾಗಿಯೂ (ವಿಶೇಷವಾಗಿ ಮರಾಠಿ ತೆಲುಗುಗಳ ಪರವಾಗಿ) ಇಂಥದೇ ನ್ಯಾಯದ ಮಾತು ಎದ್ದಿದೆ. ಅನೇಕ ಭಾಷೆಗಳಿರುವ ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಇಂಥ ಪರಿಸ್ಥಿತಿ ತೀರ ಅನಿವಾರ್ಯವಾದುದು. ಭಾಷೇತರವಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆಯೇ ಪ್ರಾಂತ್ಯ ನಿರ್ಮಾಣಮಾಡಿದರೂ ಭಾಷೆಯ ಗಡಿಗಳನ್ನು ಅಡ್ಡಹಾಯುವ ದ್ವಿಭಾಷಾ ಪ್ರದೇಶಗಳು ಇದ್ದೇ ಇರುತ್ತವೆ.

ಭಾಷಾವಾರು ಪ್ರಾಂತ್ಯಯೋಜನೆಯ ಪ್ರಕಾರ ರಚಿತವಾದ ಮೈಸೂರು ರಾಜ್ಯದಲ್ಲಿ ಸುಮಾರು 170 ಭಾಷೆಗಳಿರುವುದಾಗಿ 1961ರ ಭಾರತೀಯ ಜನಗಣತಿ ತಿಳಿಸುತ್ತದೆ. ಈ ಭಾಷೆಗಳನ್ನು ಆಡುವ ಜನರೇ ಅವುಗಳ ಹೆಸರುಗಳನ್ನು ತಿಳಿಸಿದ್ದಾರೆ. ಜನಗಣತಿಯಲ್ಲಿರುವ ಪ್ರಾದೇಶಿಕ ಭಾಷೆಗಳ ಪಟ್ಟಿಯಲ್ಲಿ 'ಬುಡುಬುಡಿಕೆ', 'ಉಡುಪಿ' ಇಂಥ ಹೆಸರುಗಳೆಲ್ಲ ಸೇರಿವೆ. ಇವೆರಡೂ ಕ್ರಮವಾಗಿ ಕನ್ನಡ ಮತ್ತು ತುಳು ಭಾಷೆಗಳ ಬೇರೆ ಬೇರೆ ಭೇದಗಳೇ ಹೊರತು ಸ್ವತಂತ್ರಭಾಷೆಗಳಲ್ಲ. ವಿಭಾರತೀಯ (Non-Indian) ಭಾಷೆಗಳಾದ ಬರ್ಮೀಸ್, ಜೆಕ್, ಹೀಬ್ರೂ, ಟರ್ಕಿಷ್ ಮತ್ತು ಯುಗೋಸ್ಲಾವಿಯನ್ ಭಾಷೆಗಳೂ ಅದರಲ್ಲಿ ತಪ್ಪಾಗಿ ಸೇರಿಬಿಟ್ಟಿವೆ. ಈ ಭಾಷಾಸಮೂಹದಲ್ಲಿ ನಮ್ಮ ದೃಷ್ಟಿಯಿಂದ ಮುಖ್ಯವೆನಿಸುವ ಹನ್ನೊಂದು ಭಾಷೆಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು. ಇವುಗಳಲ್ಲಿ ಒಂದೊಂದು ಭಾಷೆಯನ್ನೂ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಜನರು ಆಡುತ್ತಾರೆ. ಕೆಲವು ಭಾಷೆಗಳಲ್ಲಿಯಂತೂ ಆಡುವವರ ಸಂಖ್ಯೆ ಅನೇಕ ಲಕ್ಷಗಳಿಗೆ ಮೀರುತ್ತದೆ.

1961ರ ಜನಗಣತಿಯ ಪ್ರಕಾರ ಮೈಸೂರು ರಾಜ್ಯದ ಒಟ್ಟು ಜನಸಂಖ್ಯೆ 2,35,86,772. ಕೆಳಗೆ ಕೆಲವು ಭಾಷೆಗಳ ಹೆಸರುಗಳನ್ನೂ ಅವುಗಳನ್ನು ಮಾತನಾಡುವ ಜನರ ಸಂಖ್ಯೆಯನ್ನೂ ತೋರಿಸಿದೆ.

| ಭಾಷೆ | ಮಾತನಾಡುವ ಜನರ ಸಂಖ್ಯೆ |
|---|---|
| ಕನ್ನಡ | 1,53,71,753 |
| ತೆಲುಗು | 20,47,379 |
| ಉರ್ದು | 20,34,482 |
| ಮರಾಠಿ | 10,56,498 |
| ತಮಿಳು | 8,54,227 |
| ತುಳು | 8,50,474 |
| ಕೊಂಕಣಿ | 4,91,535 |
| ಮಲಯಾಳಂ | 2,90,586 |
| ಬಂಜಾರಿ | 2,88,012 |
| ಹಿಂದಿ–ಹಿಂದೂಸ್ಥಾನಿ | 93,830 |
| ಕೊಡಗು | 78,192 |

ಇವುಗಳಲ್ಲಿ ಕನ್ನಡ, ತುಳು ಮತ್ತು ಕೊಡಗು ಭಾಷೆಗಳು—ಮೂರೂ ದ್ರಾವಿಡಭಾಷಾವಂಶಕ್ಕೇ ಸೇರಿದ ಭಾಷೆಗಳಾಗಿದ್ದು—ರಾಜ್ಯದಲ್ಲಿ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿವೆ. ಆಗಲೇ ತಿಳಿಸಿದಂತೆ ಈ ಭಾಷೆಗಳನ್ನಾಡುವ ಜನರು ಮೈಸೂರುರಾಜ್ಯದ ಹೊರಭಾಗದಲ್ಲಿಯೂ (ವಿಶೇಷವಾಗಿ ಮದರಾಸು, ಆಂಧ್ರಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಪ್ರದೇಶಗಳಲ್ಲಿ) ಇದ್ದಾರೆ. ಆದರೆ ಮೈಸೂರಿನಲ್ಲಿ ಇರುವವರ ಸಂಖ್ಯೆಗೆ ಹೋಲಿಸಿದರೆ ಅವರ ಸಂಖ್ಯೆ ಹೆಚ್ಚಿನದೇನಲ್ಲ. ಕನ್ನಡ ಭಾಷೆಯ ವಿಷಯಕ್ಕೆ ಮೈಸೂರಿನ ಅನಂತರ ಮದರಾಸು ರಾಜ್ಯವನ್ನು ಗಣಿಸಬೇಕಾಗುತ್ತದೆ. ಅಲ್ಲಿ 9,47,828 ಜನ ಕನ್ನಡಿಗರಿದ್ದರೆ—ಅನಂತರದ ಸ್ಥಾನಗಳಿಸುವ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಕ್ರಮವಾಗಿ 6,33,244 ಮತ್ತು 3,82,142 ಜನ ಕನ್ನಡಿಗರಿದ್ದಾರೆ. ಉಳಿದ ರಾಜ್ಯಗಳಲ್ಲಿರುವ ಕನ್ನಡಿಗರ ಸಂಖ್ಯೆ ತೀರ ಅಲ್ಪ. ಭಾರತದಲ್ಲಿ ಕನ್ನಡ ಮಾತನಾಡುವವರ ಒಟ್ಟು ಸಂಖ್ಯೆ 1,74,15,827. ಇವರಲ್ಲಿ ಶೇಕಡ 88.2 ಜನರು ಈಗಿನ ಮೈಸೂರುರಾಜ್ಯದಲ್ಲಿಯೇ ಇದ್ದಾರೆ. ಹೊರದೇಶಗಳಲ್ಲಿರುವ ಕನ್ನಡಿಗರ ಸಂಖ್ಯೆ ಎಷ್ಟೆಂದು ತಿಳಿದಿಲ್ಲ.

ಕನ್ನಡದ ವ್ಯಾಪ್ತಿಯನ್ನು ಕುರಿತು ಮಾತನಾಡುವಾಗ ಮದರಾಸು ರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ಸ್ವಾರಸ್ಯವಾದ ಸಂಗತಿಯನ್ನು ಪ್ರಸ್ತಾವಿಸಬಹುದು. ಕೆಲವು ಶತಮಾನಗಳ ಹಿಂದೆ ಕನ್ನಡದಿಂದ ಬೇರ್ಪಟ್ಟ, ನಿಸ್ಸಂದೇಹವಾಗಿ ಕನ್ನಡದ ಉಪಭಾಷೆಯಾದ ಬಡಗಭಾಷೆಯನ್ನು ಆಡುವ ಜನರು ಹೆಚ್ಚುಕಡಮೆ ಪೂರ್ಣವಾಗಿ ನೀಲಗಿರಿ ಜಿಲ್ಲೆಯಲ್ಲಿಯೇ ಇದ್ದಾರೆ. ಬಡಗಭಾಷೆಯನ್ನಾಡುವ ಒಟ್ಟು 85,463 ಜನರಲ್ಲಿ ಮದರಾಸು ರಾಜ್ಯದ ಹೊರಗಿರುವವರು ನೂರಕ್ಕೂ ಕಡಮೆ.

ತುಳು ಮಾತನಾಡುವ 9,34,849 ಜನರಲ್ಲಿ ಶೇಕಡ ಸುಮಾರು 91ರಷ್ಟು ಜನರು ಮೈಸೂರು ರಾಜ್ಯದಲ್ಲಿ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದಾರೆ. 58,284 ಜನ ತುಳುವರು ಕೇರಳದಿಂದ ವಾಪಸ್ಸಾಗಿದ್ದಾರೆ. ಇವರಲ್ಲಿ ಬಹುಪಾಲು ಜನರು 1956ರಲ್ಲಿ ನಡೆದ ರಾಜ್ಯಪುನರ್ವಿಂಗಡಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ಸೇರಿಹೋದ ಕಾಸರಗೋಡು ತಾಲೂಕಿನಲ್ಲಿ ಇದ್ದಾರೆಂದು ಹೇಳಬಹುದು.

ಕೊಡಗು ಭಾಷೆಯನ್ನು ಆಡುವವರ ಬಗ್ಗೆ ಹೇಳುವುದಾದರೆ ಹೊರ ಸಂಸ್ಥಾನಗಳಲ್ಲಿ ನೆಲಸಿರುವ ಎಲ್ಲೋ ಕೆಲವರನ್ನು ಬಿಟ್ಟು ಉಳಿದವರೆಲ್ಲ ಮೈಸೂರುರಾಜ್ಯದ ಕೊಡಗು ಜಿಲ್ಲೆಯಲ್ಲಿಯೇ ಇದ್ದಾರೆ.

ತೆಲುಗು, ತಮಿಳು ಮತ್ತು ಮಲಯಾಳ ಭಾಷೆಗಳು ವಿಶಾಲವಾದ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದು ಅವುಗಳಿಗೆ ಸುದೀರ್ಘವಾದ ಇತಿಹಾಸವಿದೆ. ಕನ್ನಡದಂತೆ ಅವುಗಳೂ ದ್ರಾವಿಡಭಾಷೆಗಳಾಗಿವೆ. ಇವುಗಳು ಮೈಸೂರಿನ ನೆರೆಯಲ್ಲಿರುವ ರಾಜ್ಯಗಳ (ಕ್ರಮವಾಗಿ ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳಗಳ) ಮುಖ್ಯವಾದ ಆಡುನುಡಿಯಾಗಿದ್ದು ಲಕ್ಷಗಟ್ಟಲೆ ಜನರು ಈ ಭಾಷೆಗಳಲ್ಲಿ ಮಾತನಾಡುತ್ತಾರೆ. ಅವರಲ್ಲಿ ಗಮನಾರ್ಹ ಸಂಖ್ಯೆಯ ಜನ ಮೈಸೂರಿನ ಗಡಿಯೊಳಗೂ ವಾಸಿಸುತ್ತಿದ್ದಾರೆ. ಈ ಭಾಷೆಗಳಲ್ಲಿ ತೆಲುಗಿಗೆ ವಿಶಿಷ್ಟಸ್ಥಾನ ಸಲ್ಲುತ್ತದೆ. ಏಕೆಂದರೆ ಅದನ್ನು ಆಡುವ ಜನರು ಶೇಕಡಾ 9ರಷ್ಟು ಇದ್ದು ಸಂಖ್ಯೆಯಲ್ಲಿ ಕನ್ನಡಿಗರಿಗೆ ಎರಡನೆಯವರಾಗಿದ್ದಾರೆ. ರಾಜ್ಯದ ಪೂರ್ವಪ್ರದೇಶಗಳಲ್ಲಿ ತೆಲುಗು ಹೆಚ್ಚು ಬಳಕೆಯಲ್ಲಿದೆ.

ಇಂಡೋ–ಆರ್ಯನ್ ಭಾಷೆಗಳಲ್ಲಿ ಮೊದಲು ನಮ್ಮ ಗಮನ ಸೆಳೆಯುವ ಭಾಷೆಯೆಂದರೆ ಕೊಂಕಣಿ ಭಾಷೆ. ಭಾರತದಲ್ಲಿರುವ ಒಟ್ಟು 13,52,363 ಜನ ಕೊಂಕಣಿ ಮಾತನಾಡುವ ಜನರಲ್ಲಿ 4,91,355 (ಎಂದರೆ ಶೇಕಡ 37.1ರಷ್ಟು) ಜನರು ಮೈಸೂರುರಾಜ್ಯದಲ್ಲಿ ಇದ್ದಾರೆ. ಮಹಾರಾಷ್ಟ್ರದಲ್ಲಿ 2,14,686 ಜನರು ಕೊಂಕಣಿಗರಿದ್ದರೆ, ಕೇರಳದಲ್ಲಿ ಇನ್ನೂ ಕಡಮೆ (ಎಂದರೆ 77,593) ಜನರಿದ್ದಾರೆ. ಗೋವಾದಲ್ಲಿ ಮಾತ್ರ

5,56,557 ಜನ ಕೊಂಕಣಿಗರಿದ್ದು ಸ್ವಾಭಾವಿಕವಾಗಿಯೇ ಅವರ ಸಂಖ್ಯೆ ಮೈಸೂರಿನ ಕೊಂಕಣಿಗರ ಸಂಖ್ಯೆಯನ್ನು ಮೀರಿಸಿದೆ. ಭಾರತದಲ್ಲಿರುವ ಒಟ್ಟು ಕೊಂಕಣಿಗರ ಸಂಖ್ಯೆಯಲ್ಲಿ (ಗೋವಾದವರನ್ನು ಬಿಟ್ಟು) ಶೇಕಡ 9ರಷ್ಟು ಜನರು ಕನ್ನಡವನ್ನು ಮರುಭಾಷೆಯಾಗಿ ಬಳಸುತ್ತಿರುವುದಾಗಿ ತಿಳಿಸಿದ್ದಾರೆ. (ಗೋವಾದಲ್ಲಿ ಎರಡೂ ಭಾಷೆಯಾಡುವ ಜನರ ಸಂಖ್ಯೆ ಎಷ್ಟಿದೆಯೆಂಬುದನ್ನು ಸಂಗ್ರಹಿಸಿಲ್ಲ).

ಇದಾದಮೇಲೆ ರಾಜ್ಯದ ಎಲ್ಲೆಡೆಯಲ್ಲಿಯೂ ಹರಡಿದ್ದು ಮೂರನೆಯ ಸ್ಥಾನ ಪಡೆಯುವ ಉರ್ದು ಭಾಷೆಯನ್ನು ಉಲ್ಲೇಖಿಸಬೇಕು. ಹಿಂದೂಸ್ಥಾನಿ ತಮ್ಮ ಮಾತೃಭಾಷೆ ಎಂದು ತಿಳಿಸಿರುವ ಜನರ ಸಂಖ್ಯೆ ಬಹಳ ಸ್ವಲ್ಪ. ಈ ಹಿಂದೂಸ್ಥಾನಿಯು ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಯಾವುದಕ್ಕೆ ಹೆಚ್ಚು ಸಮೀಪವಾದದ್ದು ಎಂಬುದು ಸ್ಪಷ್ಟವಾಗಿಲ್ಲ. ಮೇಲೆ ಮಾಡಿರುವಂತೆ ನಾವು ಅದನ್ನು ಹಿಂದಿಯ ಜೊತೆಗೇ ಸೇರಿಸಿದರೂ ಹಿಂದಿ ಮಾತೃಭಾಷೆಯಾಗಿರುವವರ ಸಂಖ್ಯೆ ಒಂದು ಲಕ್ಷವೂ ಆಗುವುದಿಲ್ಲ.

ರಾಜಾಸ್ಥಾನಿಯ ಉಪಭಾಷೆಗಳಲ್ಲಿ ಒಂದಾದ ಬಂಜಾರಿಯು ಬಹುಮುಖ್ಯವಾದ ಗಿರಿಜನಾಂಗವೊಂದರ ಭಾಷೆಯಾಗಿದೆ. ಭಾರತದಲ್ಲಿರುವ ಬಂಜಾರಿಗಳ ಒಟ್ಟು ಜನಸಂಖ್ಯೆ 5,92,654. ಇದರ ಶೇಕಡ 48.9 ರಷ್ಟು ಜನರು ಮೈಸೂರಿನಲ್ಲಿಯೇ ಇದ್ದಾರೆ. **ಭಾರತದ ಜನಗಣತಿಯು** ಲಮಾಣಿ/ಲಂಬಾಡಿಯನ್ನು ರಾಜಾಸ್ಥಾನಿಯ ಇನ್ನೊಂದು ಉಪಭಾಷೆಯೆಂದು ಪಟ್ಟಿಮಾಡಿದೆ. ಮೈಸೂರಿನ ಬಹು ಭಾಗಗಳಲ್ಲಿ ಬಂಜಾರರನ್ನು ಲಂಬಾಣಿಗಳೆಂದೇ ಕರೆಯುತ್ತಾರೆ. ಬಂಜಾರಿ ಮತ್ತು ಲಂಬಾಣಿಗಳೆರಡೂ ವಾಸ್ತವವಾಗಿ ಒಂದೇ ಭಾಷೆಗೆ ಕೊಟ್ಟ ಎರಡು ಹೆಸರುಗಳಾಗಿದ್ದು ಅವುಗಳ ನಡುವೆ ಕೇವಲ ಔಪಭಾಷಿಕ ವ್ಯತ್ಯಾಸ ಗಳಿರುವಂತೆ ತೋರುತ್ತದೆ. ಲಂಬಾಣಿ ಭಾಷೆ ಮೈಸೂರು ರಾಜ್ಯದಲ್ಲಿ ಇದೆಯೆನ್ನುವ ವಿಷಯ ಜನಗಣತಿಯ ವರದಿಯಲ್ಲಿ ಇಲ್ಲದಿರುವುದು ಲಕ್ಷಿಸಬೇಕಾದ ಸಂಗತಿಯಾಗಿದೆ.

ಮರಾಠಿಯು ತೆಲುಗು ತಮಿಳು ಮತ್ತು ಮಲಯಾಳಂ ಮೊದಲಾದ ದ್ರಾವಿಡ ಭಾಷೆಗಳಂತೆ ಮೈಸೂರು ರಾಜ್ಯದ ಗಣನೀಯ ಗಡಿ ಭಾಗಕ್ಕೆ ಒತ್ತಿನಲ್ಲಿದೆ. ಮೈಸೂರು ರಾಜ್ಯದಲ್ಲಿ ಅದನ್ನು ಆಡುವವರ ಸಂಖ್ಯೆ ಹತ್ತುಲಕ್ಷಕ್ಕಿಂತ ಹೆಚ್ಚಿಗೆ ಇದೆ. ಅದು ಮಹಾರಾಷ್ಟ್ರದ ಮುಖ್ಯ ಭಾಷೆಯಾಗಿದ್ದು ಅನೇಕ ಶತಮಾನ ಗಳಿಂದಲೂ ಉತ್ತರಕರ್ಣಾಟಕ ಪ್ರದೇಶದ ಜೊತೆ ಸಾಂಸ್ಕೃತಿಕ ಸಂಪರ್ಕ ಬೆಳಸಿಕೊಂಡಿದೆ.

ಈ ಭಾಗವನ್ನು ಮುಗಿಸುವ ಮುಂಚೆ ಸಂಸ್ಕೃತವನ್ನು ಕುರಿತು ಪ್ರತ್ಯೇಕವಾಗಿ ಹೇಳಬೇಕು. ಸಂಸ್ಕೃತವು ಸಾಮಾನ್ಯ ಜನರ ಆಡುನುಡಿಯ ಸ್ಥಾನದಿಂದ ಸರಿದು ಎರಡು ಸಾವಿರ ವರ್ಷಗಳ ಮೇಲಾಗಿದ್ದರೂ ದ್ರಾವಿಡ ಭಾಷೆಗಳೂ ಸೇರಿ ಭಾರತದ ಎಲ್ಲ ಭಾಷೆಗಳ ಮೇಲೆ ಅದು ಉದ್ದಕ್ಕೂ ಪ್ರಭಾವ ಬೀರಿಕೊಂಡು ಬಂದಿದೆ. 1961 ರ ಜನಗಣತಿಯಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಕುತೂಹಲಕರವಾದ ಅಂಶವೊಂದಿದೆ. ಅದೆಂದರೆ ಮೈಸೂರು ರಾಜ್ಯದ 79 ಜನ ಗಂಡಸರು ಮತ್ತು 46 ಜನ ಹೆಂಗಸರು ಸಂಸ್ಕೃತವನ್ನು ತಮ್ಮ ಮಾತೃಭಾಷೆ ಯೆಂದು ತಿಳಿಸಿದ್ದಾರೆ. ಭಾರತದಲ್ಲಿ ಸಂಸ್ಕೃತವನ್ನು ತಮ್ಮ ಮಾತೃಭಾಷೆಯಾಗಿ ಬರೆಸಿದವರ ಒಟ್ಟುಸಂಖ್ಯೆ 2,544. ಇವರಲ್ಲಿ 1849 ಜನ ಗಂಡಸರು, 695 ಜನ ಹೆಂಗಸರು. ಮೇಲೆ ತಿಳಿಸಿದ ಜನರೆಲ್ಲ ಪರಂಪರಾ ಗತವಾಗಿ ಬಂದ ಬೇರೆ ಯಾವ ಭಾಷೆಯನ್ನೂ ಮಾತೃಭಾಷೆಯಾಗಿ ಬಳಸದೆ ಸಂಸ್ಕೃತವನ್ನೆ ಆಡುವರೇ ಎಂಬುದು ಪರಿಶೀಲಿಸಿ ತಿಳಿಯಬೇಕಾದ ಅಂಶ.

ಮುಂಡಾ ಅಥವಾ ಟಿಬೆಟೋ–ಬರ್ಮನ್ ಭಾಷಾವರ್ಗಕ್ಕೆ ಸೇರಿದ ಯಾವ ಭಾಷೆಯೂ ಮೈಸೂರಲ್ಲಿ ನೆಲೆಗೊಂಡಿಲ್ಲ. ಈಚೆಗೆ ಕೆಲವು ನೂರುಮಂದಿ ಟಿಬೆಟನ್ನರು ಮೈಸೂರು ಜಿಲ್ಲೆಯಲ್ಲಿ ವಾಸ ನಿಂತಿದ್ದಾರೆ.

18,297 ಜನರು ಇಂಗ್ಲಿಷ್ ತಮ್ಮ ಮಾತೃಭಾಷೆಯೆಂದು ತಿಳಿಸಿದ್ದಾರೆ.

## 2

ತಮಿಳು, ಮಲಯಾಳಂ, ತೆಲುಗು, ತುಳು, ಕೊಡಗು, ತೊದ, ಗೊಂಡಿ, ಕೋಲಾಮಿ, ಕೂಈ, ಕುರುಖ್, ಮಲ್ತೊ, ಬ್ರಾಹೂಈ ಮತ್ತು ಇತರ ಕೆಲವು ಭಾಷೆಗಳಂತೆ ಕನ್ನಡವೂ ಒಂದು ದ್ರಾವಿಡ-ಭಾಷೆ. ಇವುಗಳ ಮೂಲಭಾಷೆಯಾದ ಪೂರ್ವ ದ್ರಾವಿಡಭಾಷೆಯು ಇತಿಹಾಸ ಪೂರ್ವಕಾಲದಲ್ಲಿ, ಅನೇಕ ಸಹಸ್ರ ವರ್ಷಗಳ ಹಿಂದೆ ಹೊರಗಿನಿಂದ ಭಾರತಕ್ಕೆ ಬಂತೆಂದು ಭಾವಿಸಲಾಗಿದೆ. ಕೆಲವರು ವಿದ್ವಾಂಸರು ಸಿಂಧೂ ಸಂಸ್ಕೃತಿಯ ಭಾಷೆಯೂ ಒಂದು ಬಗೆಯ ದ್ರಾವಿಡಭಾಷೆಯಾಗಿತ್ತೆಂದು ಅಭಿಪ್ರಾಯಪಡುತ್ತಾರೆ. ಆದರೆ ಸಿಂಧೂಲಿಪಿಯನ್ನು ತೃಪ್ತಿಕರವಾಗಿ ಓದುವವರೆಗೆ ಈ ಬಗ್ಗೆ ನಿಶ್ಚಿತವಾಗಿ ಏನನ್ನೂ ಹೇಳುವಂತಿಲ್ಲ. ಈಗ ಪಾಕಿಸ್ಥಾನದಲ್ಲಿರುವ ಬ್ರಾಹೂಈ ಭಾಷೆಯೂ ಸೇರಿ ಎಲ್ಲ ದ್ರಾವಿಡ ಭಾಷೆಗಳೂ ಭಾರತದಲ್ಲಿಯೇ ಬೆಳೆದುವು. ಅಷ್ಟೇ ಅಲ್ಲ, ಚಾರಿತ್ರಿಕ ಯುಗದಲ್ಲಿ ಸಿಲೋನಿಗೆ ಮತ್ತು ಇನ್ನು ಕೆಲವು ಹೊರದೇಶಗಳಿಗೆ ಹೋದ ತಮಿಳು ಮಾತನಾಡುವ ಕೆಲವು ಜನರನ್ನು ಬಿಟ್ಟರೆ ಈ ಭಾಷೆಗಳೆಲ್ಲ ಭಾರತಕ್ಕೇ ಸೀಮಿತವಾಗಿವೆ. ದ್ರಾವಿಡ ಭಾಷೆಗಳಿಗೆ ಸ್ವವಿಶಿಷ್ಟವಾದ ಕೆಲವು ಸಾಮಾನ್ಯ ಲಕ್ಷಣಗಳಿದ್ದು ಜಗತ್ತಿನ ಬೇರೆ ಯಾವ ಭಾಷಾವಂಶಗಳ ಜೊತೆಗೂ ಅವುಗಳಿಗೆ ವಂಶಸಂಬಂಧವಿರುವಂತೆ ಕಾಣುವುದಿಲ್ಲ. ಮುಂದುವರಿದ ದ್ರಾವಿಡ ಭಾಷೆಗಳಲ್ಲಿ ಕನ್ನಡ ಮತ್ತು ತಮಿಳುಗಳಿಗೆ ಆಪ್ತಸಂಬಂಧವಿದೆ. ಈ ಎರಡು ಭಾಷೆಗಳೂ ತೊದ, ತುಳು, ಕೊಡಗು ಮೊದಲಾದ ಭಾಷೆಗಳ ಜೊತೆ ದಕ್ಷಿಣ ದ್ರಾವಿಡಭಾಷಾವರ್ಗಕ್ಕೆ ಸೇರುತ್ತವೆ. ತಮಿಳು ಕನ್ನಡಗಳು ಯಾವಾಗ ಬೇರ್ಪಟ್ಟು ಪ್ರತ್ಯೇಕ ಭಾಷೆಗಳಾದುವು ಎನ್ನುವುದು ತಿಳಿದಿಲ್ಲ. ಆದರೆ ಕ್ರಿ.ಪೂ. ಮೊದಲ ಸಹಸ್ರ ವರ್ಷಗಳ ಮಧ್ಯಭಾಗ ತೀರ ದೂರದ ಕಾಲ ಎನ್ನುವಂತಿಲ್ಲ.

**ಕನ್ನಡ** ಶಬ್ದವನ್ನು ಕುರಿತು ಅನೇಕ ನಿಷ್ಪತ್ತಿಗಳನ್ನು ಹೇಳಲಾಗಿದೆ. ಭಾಷಾಶಾಸ್ತ್ರದ ದೃಷ್ಟಿಯಿಂದ ಹೆಚ್ಚು ಸಂಭಾವ್ಯವಾದ ಮೂಲರೂಪವೆಂದರೆ ಕರಿಯ ನೆಲ ಎಂಬ ಅರ್ಥಕೊಡುವ **ಕರ್-ನಾಡು** ಎಂಬ ಪದ. ಇದೇ ಸಂಸ್ಕೃತೀಕರಣಗೊಂಡು **ಕರ್ನಾಟ** ಎಂಬುದಾಗಿ, ನಾಡು, ನುಡಿ ಎರಡನ್ನೂ ಸೂಚಿಸುವ ಪದವಾಯಿತು. **ಕನ್ನಡ** ಎಂಬುದು **ಕರ್ನಾಟ** ಎಂಬ ಪದದ ಕ್ರಮಬದ್ಧ ಬೆಳವಣಿಗೆಯಾಗುತ್ತದೆ.

ಕನ್ನಡ ಒಂದು ಸ್ವತಂತ್ರಭಾಷೆಯಾಗಿ ಬೆಳೆದ ಮೇಲೆ ಅನೇಕ ಶತಮಾನಗಳ ಕಾಲ ಲಿಖಿತ ರೂಪಕ್ಕಿಳಿಯದೆ ಕೇವಲ ಆಡುನುಡಿಯಾಗಿಯೇ ಉಳಿದಿದ್ದಂತೆ ತೋರುತ್ತದೆ. ಸು. ಕ್ರಿ.ಶ. 450 ರ ಹಲ್ಮಿಡಿ ಶಾಸನವು ಸದ್ಯಕ್ಕೆ ಲಭ್ಯವಾಗಿರುವ ಅತ್ಯಂತ ಪ್ರಾಚೀನವಾದ ಕನ್ನಡ ಲೇಖನವಾಗಿದೆ. ಆದರೆ ಕೆಲವರು ವಿದ್ವಾಂಸರು ಇನ್ನೂ ಪ್ರಾಚೀನವಾದ ಪ್ರಾಕೃತ ಮತ್ತು ಸಂಸ್ಕೃತ ಶಾಸನಗಳಿಂದಲೂ ಕೆಲವು ವಿದೇಶೀ ಮೂಲಗಳಿಂದಲೂ ಕನ್ನಡದ ಕೆಲವಾದರೂ ರೂಪಗಳನ್ನು ಪಡೆಯುವುದು ಸಾಧ್ಯವಿದೆ ಯೆಂದು ಅಭಿಪ್ರಾಯಪಡುತ್ತಾರೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ (ಕ್ರಿ.ಪೂ. ಮೂರನೆಯ ಶತಮಾನ) ದೊರೆಯುವ ‘ ಇಸಿಲ ’ ಅಂಥ ಒಂದು ಶಬ್ದ. ಇಸಿಲ ಎನ್ನುವುದು ಈಗ ಕನ್ನಡ ಆಡುನುಡಿಯಾಗಿರುವ ಪ್ರದೇಶದೊಳಗೇ ಇದ್ದ ಒಂದು ಸ್ಥಳದ ಹೆಸರು. ಕೆಲವರು ವಿದ್ವಾಂಸರು ಅದು ಚಿತ್ರದುರ್ಗ ಜಿಲ್ಲೆ ಯಲ್ಲಿರುವ ಸಿದ್ದಾಪುರ ಎಂಬುದಾಗಿ ಹೇಳುತ್ತಾರೆ. ಇಸಿಲ ಶಬ್ದವನ್ನು ಪ್ರಾಕೃತವೆಂದು ಹೇಳಿ ರಿಸಿ ಎಂಬ ಶಬ್ದದಿಂದ ನಿಷ್ಪನ್ನವಾಗಿದೆಯೆಂದು ಹೇಳುವುದು ರೂಢಿ. ಆದರೆ ಈ ನಿಷ್ಪತ್ತಿಯಲ್ಲಿ ಕೆಲವು ತೊಂದರೆಗಳಿವೆ. ಪ್ರೊ. ಡಿ. ಎಲ್. ನರಸಿಂಹಾಚಾರ್ಯರು (ಖಚಿತಕಾಲದ ಪ್ರಾಚೀನತಮ ಕನ್ನಡ ಶಬ್ದ ಎಂಬ ತಮ್ಮ ಅಪ್ರಕಟಿತ ಲೇಖನದಲ್ಲಿ) ತಮಿಳಿನ ಎಯಿಲ್ ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದು ಅದರ ಜ್ಞಾತಿ ಶಬ್ದವಾದ ಕನ್ನಡದ ಎಸಿಲ್ ಎಂಬ ಶಬ್ದವೇ ಆರ್ಯೀಕರಣಗೊಂಡು ‘ ಇಸಿಲ ’ ಎಂಬ ರೂಪ ತಾಳಿದೆ ಎಂದು ಪ್ರತಿಪಾದಿಸಿದ್ದಾರೆ. ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ವಿದ್ವತ್ಪೂರ್ಣವಾದ ಊಹೆ ಸರಿಯಾಗಿದ್ದ ಪಕ್ಷದಲ್ಲಿ (ಇದನ್ನು ಅಲ್ಲಗಳೆಯುವ ಬೇರಾವುದಾದರೂ ಸಮರ್ಥ ಪ್ರತಿಪಾದನೆಗಳಿರುವುದು ಈ

ಲೇಖಕನಿಗೆ ತಿಳಿಯದು) ಎಸಿಲ್ ಎನ್ನುವುದು ವಿಶ್ವಾಸಾರ್ಹವಾದ ಮೊದಲ ಕನ್ನಡ ಪದಗಳಲ್ಲಿ ಒಂದೆಂದು ಹೇಳಬಹುದು.

19 ನೆಯ ಶತಮಾನದ ಕೊನೆಯಲ್ಲಿ ಈಜಿಪ್ಟಿನ ಆಕ್ಸಿರಿಂಖಸ್ ಎಂಬ ಸ್ಥಳದಲ್ಲಿ ನಡೆದ ಸಂಶೋಧನೆಗಳ ಫಲವಾಗಿ 'ಆಕ್ಸಿರಿಂಖಸ್ ಲೇಖನಗಳು' (Oxyrhynchus Papyri) ಎಂದು ಕರೆಯಲಾಗಿರುವ ಕೆಲವು ಹಸ್ತ ಪ್ರತಿಗಳು ಬೆಳಕಿಗೆ ಬಂದುವು, ಇವುಗಳಲ್ಲಿ ಒಂದು ಹಸ್ತಪ್ರತಿಯಲ್ಲಿ (ಕ್ರಿ. ಶ. 2ನೆಯ ಶತಮಾನದಲ್ಲಿ ರಚಿತವಾದ) ಗ್ರೀಕ್ ಪ್ರಹಸನವೊಂದಿದ್ದು ಅದರಲ್ಲಿ ವಿದೇಶೀ ಭಾಷೆಯೊಂದರ ಅನೇಕ ವಾಕ್ಯಗಳಿವೆ. ಪ್ರಹಸನದಲ್ಲಿ ವರ್ಣಿತವಾದ ಸ್ಥಳ ಭಾರತದ ಪಶ್ಚಿಮ ಕರಾವಳಿಯಾಗಿದ್ದು ಮೇಲೆ ತಿಳಿಸಿದ ವಾಕ್ಯಗಳನ್ನು ಭಾರತದ ಪಾತ್ರಗಳು ಆಡುತ್ತವೆ. ಪ್ರಖ್ಯಾತ ಲಿಪಿಶಾಸ್ತ್ರಜ್ಞರಾದ ಡಾ. ಹುಲ್ಷ್ ಅವರು 1904ರಲ್ಲಿ ಈ ಕೆಲವು ವಾಕ್ಯಗಳನ್ನು ಕನ್ನಡದ ವಾಕ್ಯಗಳಾಗಿ ಓದಿದಾಗಿನಿಂದ ವಿದ್ವಾಂಸರು ಈ ಪ್ರಹಸನದಲ್ಲಿ ಮತ್ತು ಅದರಲ್ಲಿ ಸೇರಿರುವ ವಿದೇಶೀ ಭಾಷೆಯ ವಾಕ್ಯಗಳಲ್ಲಿ ವಿಶೇಷ ಆಸಕ್ತಿ ತೋರಿಸಿದ್ದಾರೆ. ಈ ವಿಷಯವನ್ನು ಕುರಿತು ಅನೇಕರು ಅಭ್ಯಾಸ ನಡೆಸಿದ್ದಾರೆ. ಅವರಲ್ಲಿ ಎಂ. ಗೋವಿಂದ ಪೈಯವರ ಅಭ್ಯಾಸ ಬಹು ಬೆಲೆಯುಳ್ಳದ್ದಾಗಿದೆ. ಆದರೆ ಅವರ ನಿರ್ಣಯಗಳನ್ನು ಒಪ್ಪುವುದಕ್ಕೂ ಅನೇಕ ದೊಡ್ಡ ಅಡಚಣೆಗಳಿವೆ. ವಿಸ್ತಾರಭಯದಿಂದಾಗಿ ಅವುಗಳನ್ನೆಲ್ಲ ಇಲ್ಲಿ ಹೇಳುವುದು ಸಾಧ್ಯವಿಲ್ಲ. ಇದನ್ನು ಕುರಿತು ಎಲ್.ಡಿ. ಬಾರ್ನೆಟ್ ಅವರು 'ತಿಳಿಯದ ಭಾಷೆಯದೆಂದು ಹೇಳಲಾದ ಭಾಗಗಳ ಪುನಾರಚನೆಯು ಕನ್ನಡದ ಪ್ರಾಚೀನತಮ ಶಬ್ದರೂಪಗಳಿಂದ ಕೂಡಿರಬೇಕು; ಆ ಭಾಗಗಳಿಗೆ ಮಾಡಿದ ವ್ಯಾಖ್ಯಾನಕ್ಕೆ ಸಮಂಜಸವಾದ ಅರ್ಥವಿದ್ದು ಆ ಅರ್ಥ ಪ್ರಯತ್ನದಿಂದ ಹೇರಿದ್ದಾಗಿರದೆ ಸಹಜವಾಗಿ ಹೊರಡುವಂತಿರಬೇಕು' ಎಂದು ಹೇಳಿ ಆ ಭಾಗಗಳ ಸ್ವರೂಪ ನಿರ್ಣಯಕ್ಕೆ ಕೆಲವು ಮಾನದಂಡಗಳನ್ನು ಒದಗಿಸುತ್ತಾರೆ. ಅವು ತುಂಬ ಉಚಿತವಾದುವೇ ಆಗಿವೆ. ಈ ಬಗ್ಗೆ ಬಾರ್ನೆಟ್ ಅವರೇ ಹೇಳುವ ಮಾತು ಹೀಗಿದೆ. "ಇವು ಕನ್ನಡದ ಪಾಠಗಳೆಂಬುದೇ ತುಂಬ ಅನುಮಾನದ ವಿಷಯ. ಇದನ್ನು ಕುರಿತ ವಾಖ್ಯಾನದ ರೀತಿಗಳಲ್ಲಿ ತುಂಬ ಅಂತರವಿರುವುದಲ್ಲದೆ ವ್ಯಾಖ್ಯಾನಕಾರರನ್ನು ಬಿಟ್ಟು ಬೇರೆ ಯಾರಿಗೂ ವಿಶ್ವಾಸಾರ್ಹವಾಗಿ ಕಾಣುವುದಿಲ್ಲ. ..............." ಮೇಲಿನ ಪಾಠಕ್ಕೆ ಸಂಬಂಧಿಸಿದಂತೆ ಈ ಮಾತೇ ಕೊನೆಯದೆನ್ನಬಹುದು. (ಪ್ರಹಸನದಲ್ಲಿ ಕಾಣುವ ಭಾಷೆ ನಿಜವಾಗಿಯೂ ಅನ್ಯಭಾಷೆಯಾಗಿದ್ದು, ಆ ಅನ್ಯಭಾಷೆ ಭಾರತೀಯ ಭಾಷೆಯೇ ಆಗಿದ್ದರೆ ಅದು ಪ್ರಾಚೀನ ಕನ್ನಡವಾಗಿರುವುದಕ್ಕಿಂತ ಪ್ರಾಚೀನ ತುಳುವಾಗಿರುವ ಸಂಭವವೇ ಜಾಸ್ತಿ ಎಂಬ ಸಾಹಸದ ಅಭಿಪ್ರಾಯವೂ ಸಾಧ್ಯವಿದೆ.)

ಮೊದಲೇ ತಿಳಿಸಿದಂತೆ ಸದ್ಯಕ್ಕೆ ಲಭ್ಯವಿರುವ ಕನ್ನಡದ ಪ್ರಾಚೀನತಮ ಲೇಖನವೆಂದರೆ ಹಲ್ಮಿಡಿ ಶಾಸನ. ಶಾಸನದಲ್ಲಿ ಕಾಲವನ್ನು ಹೇಳಿರದಿದ್ದರೂ ಅದರಲ್ಲಿ ಬರುವ ರಾಜರ ಹೆಸರುಗಳ ಮೇಲೆ ಮತ್ತು ರಾಜವಂಶಗಳ ಆಧಾರದ ಮೇಲೆ ಅದನ್ನು ಕ್ರಿ. ಶ. ಐದನೆಯ ಶತಮಾನದ ಮಧ್ಯಭಾಗದ್ದೆಂದು ಸಾಮಾನ್ಯವಾಗಿ ಗಣಿಸಲಾಗುತ್ತದೆ. ಭಾಷಾಧ್ಯಯನದ ದೃಷ್ಟಿಯಿಂದ ಇದು ಅತ್ಯಂತ ಮುಖ್ಯವಾದ ಕನ್ನಡದ ಲೇಖನ. ಇದರ ಪ್ರಾರ್ಥನಾಪದ್ಯ ಸಂಸ್ಕೃತದಲ್ಲಿದೆ; ಉಳಿದ ಪಾಠ ಹೇರಳ ಸಂಸ್ಕೃತ ಶಬ್ದಗಳಿಂದಲೂ, ಸಮಾಸಗಳಿಂದಲೂ ಕೂಡಿದ ಕನ್ನಡದಲ್ಲಿದೆ. ಇದರಿಂದ ಆ ಕಾಲದ ಗ್ರಾಂಥಿಕ ಕನ್ನಡದಲ್ಲಿ ಸಂಸ್ಕೃತ ಎಷ್ಟು ಬಲವಾಗಿ ಕಾಲೂರಿತ್ತು ಎನ್ನುವುದು ತಿಳಿಯುತ್ತದೆ. ಇದು ಕೇವಲ ಕನ್ನಡ ಪದಗಳ ವಿಷಯಕ್ಕೇ ಸೀಮಿತವಾಗಿರಲಿಲ್ಲ. ಶಾಸನದಲ್ಲಿ "(ದಾನ) **ಪಶುಪತಿಯೆಂದು ಪೊಗಳೆಪ್ಪೊಟ್ಟನ**" ಎಂಬ ಮಾತಿದ್ದು, ಅದು **ಪೊಗಳೆಪ್ಪಟ್ಟನ** (ಹೊಗಳಲ್ಪಟ್ಟವನ) ಎಂಬುದರ ಅಪಪ್ರಯೋಗವಾಗಿದೆ. **ಪೊಗಳೆಪ್ಪಟ್ಟನ** ಎಂಬ ಪದ ಕರ್ಮಣೀಪ್ರಯೋಗದಲ್ಲಿದೆಯೆಂಬುದನ್ನು ಗಮನಿಸಬೇಕು. ಇಂದಿಗೂ ದ್ರಾವಿಡ ಭಾಷೆಗಳಲ್ಲಿ ಕರ್ಮಣೀಪ್ರಯೋಗದ ಬಳಕೆಯಿಲ್ಲವೆಂಬುದು ಸ್ಪಷ್ಟವಾದ ವಿಷಯ. ಗ್ರಾಂಥಿಕ ಕನ್ನಡವಲ್ಲಿಯೂ ಅದು

ಬಹಳ ವಿರಳ. ಇಷ್ಟಾಗಿಯೂ ಕನ್ನಡದ ಪ್ರಾಚೀನತಮ ಲೇಖನದಲ್ಲಿಯೇ ಅದು ಕಾಣಿಸಿಕೊಂಡಿದೆಯೆಂದರೆ ಸಂಸ್ಕೃತದ ಪ್ರಭಾವ ಎಷ್ಟು ವ್ಯಾಪ್ತವಾದದ್ದಾಗಿರಬೇಕು! ಈ ಶಾಸನದಲ್ಲಿ ಕನ್ನಡ ವ್ಯಾಕರಣದ ದೃಷ್ಟಿಯಿಂದ ಗಮನಾರ್ಹವಾದ ಕೆಲವು ರೂಪಗಳಿವೆ. **ಎರಿದು, ಕೊಟ್ಟಾರ್, ಅದಾನ್**, ಮೊದಲಾದುವು ಹಳಗನ್ನಡದಲ್ಲಿ ಅವುಗಳ ಸಂವಾದಿ ರೂಪಗಳಾದ **ಇರಿದು, ಕೊಟ್ಟರ್, ಅದಂ**—ಮೊದಲಾದುವುಗಳಿಂದ ಭಿನ್ನವಾಗಿವೆ. ವಿದ್ವಾಂಸರು ' ಪೂರ್ವದ ಹಳಗನ್ನಡ ' ಅಥವಾ ' ಪೂರ್ವದ ಕನ್ನಡ ' ಎಂದು ಕರೆಯುವ ಕನ್ನಡದ ಪ್ರಾಚೀನ ಭಾಷಾವಸ್ಥೆಯೊಂದನ್ನು ಇವು ಪ್ರತಿನಿಧಿಸುತ್ತವೆ.

ಲಭ್ಯವಾಗಿರುವ ಅತ್ಯಂತ ಪ್ರಾಚೀನ ಕನ್ನಡ ಗ್ರಂಥವೆಂದರೆ **ಕವಿರಾಜಮಾರ್ಗ**. ಇದನ್ನು ರಚಿಸಿದವನು ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ಅಮೋಘವರ್ಷ ನೃಪತುಂಗನೆಂದು (ಕ್ರಿ.ಶ. 814—879) ಈ ಗ್ರಂಥ ಅಧಿಕೃತವಾಗಿ ತಿಳಿಸುತ್ತದೆಯಾದರೂ ನೃಪತುಂಗನ ಆಸ್ಥಾನ ಕವಿಯಾದ ಶ್ರೀವಿಜಯನೇ ಇದನ್ನು ಬರೆದಿರುವ ಸಂಭಾವ್ಯವೆ ಹೆಚ್ಚು. **ಕವಿರಾಜಮಾರ್ಗವು** ತನಗೆ ಮುಂಚೆ ಗದ್ಯಪದ್ಯಗಳಲ್ಲಿ ರಚಿತವಾಗಿದ್ದ ಕೃತಿಗಳನ್ನು ಪ್ರಸ್ತಾವಿಸುತ್ತದೆ; ಆದರೆ ಅವುಗಳಲ್ಲಿ ಒಂದೂ ದೊರೆತಿಲ್ಲ. **' ಹಳಗನ್ನಡದ '** ಕೆಲವು ವ್ಯಾಕರಣ ರೀತಿಗಳು, ಮಾತಿನ ರೀತಿಗಳು ಆ ಕಾಲಕ್ಕೆ ಮರೆಯಾಗಿರುವುದನ್ನು ತಿಳಿಸಿ ಅವನ್ನು ಬಳಸುವುದರ ವಿರುದ್ಧ ಸಾಹಿತ್ಯಾಭ್ಯಾಸಿಗಳಿಗೆ ಎಚ್ಚರಿಕೆ ಕೊಡುತ್ತದೆ. **ಕವಿರಾಜಮಾರ್ಗ** ತಿಳಿಸುವ ' ಹಳಗನ್ನಡದ ' ಕೃತಿಗಳು ದೊರೆತಿಲ್ಲವಾದರೂ ಕ್ರಿ.ಶ. 450ರ ಹಲ್ಮಿಡಿ ಶಾಸನದಿಂದ ಹಿಡಿದು ಸುಮಾರು ಕ್ರಿ.ಶ. 750ರ ವರೆಗೆ ಉದ್ದಕ್ಕೂ ರಚಿತವಾಗಿರುವ ಅನೇಕ ಶಾಸನಗಳು ದೊರೆಯುತ್ತವೆ. ಈ ಶಾಸನಗಳ ಪಾಠ **ಕವಿರಾಜಮಾರ್ಗ** ತಿಳಿಸುವ ಹಳಗನ್ನಡದ ಭಾಷಾವಸ್ಥೆಯನ್ನು.ಪ್ರತಿನಿಧಿಸುತ್ತದೆ. ಅದರ ಕೆಲವು ವಿಶಿಷ್ಟ ಲಕ್ಷಣಗಳನ್ನು ಇಲ್ಲಿ ಹೇಳಬಹುದು. ಪೂರ್ವದ್ರಾವಿಡಭಾಷೆಯ **' ವ '** ಕಾರವು ಪ್ರಾಚೀನ ಕನ್ನಡದಲ್ಲಿ ಕಾಣುವುದು ಬಹು ಗಮನಾರ್ಹವಾದ ಅಂಶ. ಸಾಮಾನ್ಯವಾಗಿ ಶಾಸನಗಳ ಅಂತ್ಯದಲ್ಲಿ ಇರುವ **ವಿತ್ತಿದಲ್ಲಿ ವೆಳೆಯಾದೆ ಕೆಡುಗೆ** (ಬಿತ್ತಿದ ಕಡೆ ಬೆಳೆ ಏಳದೆ ಹಾಳಾಗಲಿ) ಎಂಬ ಶಾಪವಾಕ್ಯದಲ್ಲಿ ಇದನ್ನು ಕಾಣಬಹುದು. ಹಳಗನ್ನಡದ ಶಿಷ್ಟಭಾಷೆಯಲ್ಲಿ ಇದು **ಬಿತ್ತಿದಲ್ಲಿ ಬೆಳೆಯುದೆ ಕಿಡುಗೆ** ಎಂಬ ರೂಪ ತಾಳುತ್ತದೆ. **ಕೆಡು** ಎಂಬ ರೂಪವನ್ನು ಗಮನಿಸಬಹುದು. ಆರಂಭದ ಉಚ್ಚಾರಾಂಶದಲ್ಲಿರುವ ಎ ಕಾರ ಇ ಕಾರಕ್ಕೆ ತಿರುಗಿ ಹಳಗನ್ನಡದಲ್ಲಿ ಅದು **ಕಿಡು** ಎಂದಾಯಿತು (ಅನಂತರದ ಕನ್ನಡದಲ್ಲಿ ಪುನಃ **ಕೆಡು** ಎಂಬ ರೂಪಕ್ಕೆ ತಿರುಗಿತು). ಇದೇ ರೀತಿ **ಒ** ಕಾರ ಉಕಾರಕ್ಕೆ ತಿರುಗಿತು (ಈ ಎರಡೂ ಧ್ವನಿವ್ಯತ್ಯಾಸಗಳು ನಿರ್ದಿಷ್ಟ ಕಾಲದೇಶಗಳಲ್ಲಿ ನಿರ್ದಿಷ್ಟ ಧ್ವನಿಸ್ಥಾನದಲ್ಲಿ ಆದುವು). ಇಲ್ಲಿ ಕೆಲವು ನಿದರ್ಶನಗಳಿವೆ. ಹಳ್ಳಿಯೊಂದರ ಹೆಸರಾದ ' ಕೆಸುಗೊಳ ' ಎಂಬ ಶಬ್ದದಲ್ಲಿ ಕೆಂಪು ಎಂಬ ಅರ್ಥದಲ್ಲಿ ನಿಂತಿರುವ **ಕೆಸು** ಹಳಗನ್ನಡದಲ್ಲಿ **ಕಿಸು** ಎಂದಾಯಿತು. ಹಾಗೆಯೇ **ಎರಿ (ಹ. ಗ. ಇರಿ)**; **ತೊರು** (ಹ. ಗ. **ತುರು**); **ಪೋಗು** (ಹ. ಗ. **ಪುಗು**); **ಕೊರಿ** (ಹ. ಗ. **ಕುರಿ**). ಕೆಲವು ಶಬ್ದರೂಪಗಳಲ್ಲಿದ್ದ **ಆ** ಕಾರ **ಅ** ಕಾರವಾಗುವುದೂ ಗಮನಾರ್ಹವಾದ ಬದಲಾವಣೆ. ಉದಾ: **ಏರಿದಾರ್** (ಹ. ಗ. **ಏರಿದರ್**); **ವೆಳೆಯಾದೆ** (ಹ. ಗ. **ಬೆಳೆಯುದೆ**); **ಅದಾನ್** (ಹ. ಗ. **ಅದಂ**); **ಏಳನೆಯಾ** (ಹ. ಗ. **ಏಳನೆಯ**)—ಇತ್ಯಾದಿ.

ಪೂರ್ವದ ಹಳಗನ್ನಡದ ಅದಾನ್ ಎಂಬ ರೂಪ ಹಳಗನ್ನಡದಲ್ಲಿ ಅದಂ ಎಂದಾಗುವ ನಿದರ್ಶನದಿಂದ ಪೂ. ಹ. ಗ. ದ ಇನ್ನೊಂದು ವೈಲಕ್ಷಣ್ಯ ಸ್ಪಷ್ಟವಾಗುತ್ತದೆ. ಪೂ. ಹ. ಗ. ದ ಪ್ರಕಾರ ಕೆಲವು ವಿಭಕ್ತಿ ರೂಪಗಳಲ್ಲಿ ಮತ್ತು ಕ್ರಿಯಾಪದದ ಪುರುಷಪ್ರತ್ಯಯಗಳಲ್ಲಿ **' ನ್ '** ಇದ್ದರೆ ಹ. ಗ. ದಲ್ಲಿ ಅದೇ ಸ್ಥಳದಲ್ಲಿ **' ಮ್ '** ಕಾಣಿಸಿಕೊಳ್ಳುತ್ತದೆ. ಇನ್ನೂ ಕೆಲವು ನಿದರ್ಶನಗಳನ್ನು ಕೊಡುವುದಾದರೆ: ಪೂ. ಹ. ಗ. **ಮಗನ್**—ಹ. ಗ. **ಮಗಂ**; ಪೂ. ಹ. ಗ. **ದೇಗುಲಮಾನ್**—ಹ. ಗ. **ದೇಗುಲಮಂ**; ಪೂ. ಹ. ಗ. **ಪಡೆದಾನ್**-ಹ. ಗ. **ಪಡೆದಂ**. ಪಾರಿಭಾಷಿಕವಾಗಿ ಹೇಳುವುದಾದರೆ ಹ. ಗ. ದಲ್ಲಿ ಕೆಲವು ಪದಾಂತ್ಯ ಸ್ಥಾನಗಳಲ್ಲಿ **ನ್** ಮತ್ತು **ಮ್** ಗಳ ಭೇದ ಸ್ಪಷ್ಟವಾಗುವುದಿಲ್ಲ. ಆದರೆ ಪೂ. ಹ. ಗ. ದಲ್ಲಿ ಈ ಅಸ್ಪಷ್ಟತೆಯಿಲ್ಲ.

ಪೂರ್ವದ ಹಳಗನ್ನಡದ ಇನ್ನೂ ಕೆಲವು ವೈಲಕ್ಷಣ್ಯಗಳಿವೆಯಾದರೂ ಅವುಗಳನ್ನೆಲ್ಲ ಇಲ್ಲಿ ಹೇಳುವುದು ಸಾಧ್ಯವಾಗದು. ಒಂದೇ ಒಂದು ಮುಖ್ಯ ವೈಲಕ್ಷಣ್ಯವನ್ನು ಮಾತ್ರ ಇಲ್ಲಿ ಹೇಳಬಹುದು. **ವೆಟ್ಟದುಳ್** ಎಂಬ ರೂಪದಲ್ಲಿ ಕಾಣುವ ಪೂ. ಹ. ಗ. ದ **ಉಳ್** ಎಂಬ ಸಪ್ತಮೀ ವಿಭಕ್ತಿ ಪ್ರತ್ಯಯ ಹ. ಗ. ದಲ್ಲಿ (**ಬೆಟ್ಟದೊಳ್** ಎಂಬಲ್ಲಿ ಕಾಣುವಂತೆ) **ಒಳ್** ಎಂದಾಗುತ್ತದೆ.

ಮೇಲೆ ತಿಳಿಸಿದ ಅನೇಕ ಅಂಶಗಳಲ್ಲಿ ಪೂರ್ವದ ಹಳಗನ್ನಡಕ್ಕೆ ತಮಿಳಿನೊಡನೆ ಹೆಚ್ಚು ಸಾದೃಶ್ಯವಿರುವುದು ಸ್ವಾರಸ್ಯಕರವಾದ ವಿಷಯ. ಈ ಸಾದೃಶ್ಯ ತಮಿಳು ಮತ್ತು ಕನ್ನಡಗಳು ಒಂದೇ ಭಾಷೆಯ ಎರಡು ಉಪಭಾಷೆಗಳಾಗಿದ್ದ ಕಾಲವೊಂದನ್ನು ಸೂಚಿಸುತ್ತದೆ. ಪೂರ್ವದ ಹಳಗನ್ನಡಕಾಲದ ಶಾಸನಗಳು ಕಾಲದಲ್ಲಿ ಈಚಿನವಾಗುತ್ತ ಹೋದಂತೆ ಅವುಗಳಲ್ಲಿ ಹಳೆಯ ಭಾಷಾವೈಲಕ್ಷಣ್ಯಗಳೂ ಕಡಮೆಯಾಗುತ್ತ ಹೋಗುತ್ತವೆ. ಕೆಲವು ಶಾಸನಗಳಲ್ಲಿಯಂತೂ ಎರಿ ಮತ್ತು ಕೆಡು ಇಂಥ ರೂಪಗಳು ಹಳಗನ್ನಡದ ಇರಿ ಮತ್ತು ಕಿಡುಗಳ ಜೊತೆಜೊತೆಗೇ ಸಿಗುತ್ತವೆ. ಇದರಿಂದ ಪೂರ್ವದ ಹಳಗನ್ನಡ ಎನ್ನುವುದು ಕ್ರಿ. ಶ. ಆರಂಭದ ಶತಮಾನಗಳಲ್ಲಿದ್ದ 'ಪ್ರಾಚೀನ ಕನ್ನಡ' ಹಳಗನ್ನಡಕ್ಕೆ ತಿರುಗುತ್ತಿದ್ದ ಸಂಧಿಕಾಲದ ಭಾಷೆಯೆಂದು ಹೇಳಬಹುದು. ಈ ವಿಷಯದಲ್ಲಿ ಪೂರ್ವದ ಹಳಗನ್ನಡವು ಹಳಗನ್ನಡ ಮತ್ತು ಹೊಸಗನ್ನಡಗಳ ಸಂಧಿಕಾಲದ ಭಾಷೆಯಾದ ನಡುಗನ್ನಡವನ್ನು ಹೋಲುತ್ತದೆಯೆನ್ನಬಹುದು. ನಡುಗನ್ನಡದ ವಿಷಯ ಮುಂದೆ ಹೇಳಿದೆ.

ಪೂರ್ವದ ಹಳಗನ್ನಡದ ಸ್ಥಿತಿಯಿಂದ ಭಾಷೆಯು ಕ್ರಮೇಣ ಬದಲಿಸುತ್ತ ಹೋಯಿತು. ತೀರ ಮುಂಚೆಯಲ್ಲದಿದ್ದರೂ ಸುಮಾರು ಎಂಟನೆಯ ಶತಮಾನದ ವೇಳೆಗೆ ಅದು ಬಹುಮಟ್ಟಿನ ಹಳೆಯ ವೈಲಕ್ಷಣ್ಯಗಳನ್ನೆಲ್ಲ ಕೊಡವಿಕೊಂಡು ಸಾಮಾನ್ಯ ಹಳಗನ್ನಡವಾಗಿ ಬಳಕೆಗೆ ಸಂದಿತ್ತೆನ್ನಬಹುದು. ಈ ಮುಂಚೆ ತಿಳಿಸಿರುವಂತೆ **ಕವಿರಾಜಮಾರ್ಗ** (ಸು. ಕ್ರಿ. ಶ. 850) ಕ್ಕಿಂತ ಮುಂಚಿನ ಯಾವ ಗ್ರಂಥವೂ ಉಳಿದು ಬಂದಿಲ್ಲ. **ಕವಿರಾಜಮಾರ್ಗವೇ** ಹಳಗನ್ನಡ ಸಾಹಿತ್ಯದ ವೈಭವಪೂರ್ಣಯುಗಕ್ಕೆ ನಾಂದಿ ಹಾಡಿತು ಎನ್ನಬಹುದು.

ಹತ್ತನೆಯ ಶತಮಾನ :ವಾಸ್ತವವಾಗಿ ಪ್ರಾಚೀನಸಾಹಿತ್ಯಯುಗದ ಅತ್ಯಂತ ಉಚ್ಛ್ರಾಯಕಾಲವಾಗಿತ್ತು. ವಿಶೇಷ ಪ್ರತಿಭಾಸಂಪನ್ನರಾದ ಪಂಪ (ಜನನ 902), ರನ್ನ (ಜನನ 949) ರಂಥ ಕವಿಗಳು ಹಳಗನ್ನಡದಲ್ಲಿ ತಮ್ಮ ಉದ್ಧಕೃತಿಗಳನ್ನು ರಚಿಸಿದರು ; **ವಡ್ಡಾರಾಧನೆ** ಯಂಥ ಉತ್ಕೃಷ್ಟ ಗದ್ಯ ಕೃತಿ (ಸು. 930) ಹಳಗನ್ನಡದಲ್ಲಿ ರಚಿತವಾಯಿತು.

ಹನ್ನೆರಡನೆಯ ಶತಮಾನದ ಮಧ್ಯಭಾಗಕ್ಕಿಂತ ಮುಂಚೆ ಪೂರ್ಣರೂಪದ ವ್ಯಾಕರಣವೊಂದು ರಚಿತವಾದಂತೆ ಕಂಡುಬರದಿರುವುದು ಆಶ್ಚರ್ಯಕರವಾದ ವಿಷಯ. ಹನ್ನೆರಡನೆಯ ಶತಮಾನದ ನಡುಗಾಲಕ್ಕಾಗಲೇ ಹಳಗನ್ನಡವು ಭಾಷೆಯಲ್ಲಿ ಪೂರ್ತಿಯಾಗಿ ಮತ್ತು ಬರೆವಣಿಗೆಯಲ್ಲಿ ಭಾಗಶಃ ನಡುಗನ್ನಡಕ್ಕೆ ತಿರುಗಿಬಿಟ್ಟಿತ್ತು. ವೈಯಾಕರಣ, ಅಲಂಕಾರ ಶಾಸ್ತ್ರಜ್ಞ, ಛಾಂದಸಿಕ, ನಿಘಂಟುಕಾರ (ಜೊತೆಗೆ ಕವಿ!) ಈ ಎಲ್ಲವೂ ಆಗಿದ್ದ ನಾಗವರ್ಮ ಮೊದಲ ಬಾರಿಗೆ ಹಳಗನ್ನಡ ವ್ಯಾಕರಣವನ್ನು ತನ್ನ ಕಾವ್ಯಾವಲೋಕನದ (**ಶಬ್ದಸ್ಮೃತಿ** ಎಂಬ) ಒಂದು ದೀರ್ಘ ಅಧ್ಯಾಯದಲ್ಲಿಯೂ, ಸಂಸ್ಕೃತದಲ್ಲಿ ರಚಿಸಿದ **ಕರ್ಣಾಟಕ ಭಾಷಾಭೂಷಣ** ವೆಂಬ ಮತ್ತೊಂದು ಸ್ವತಂತ್ರ ಕೃತಿಯಲ್ಲಿಯೂ ಬಹುಮಟ್ಟಿಗೆ ಪೂರ್ಣವಾಗಿ ನಿರೂಪಿಸಿದ್ದಾನೆ. ಇವನಾದ ಸುಮಾರು ಒಂದು ಶತಮಾನದ ಅನಂತರ ಕೇಶಿರಾಜನೆಂಬ ವೈಯಾಕರಣ ವ್ಯಾಕರಣಕ್ಷೇತ್ರದಲ್ಲಿನ ಅತ್ಯುಚ್ಚ ಕೃತಿಗಳಲ್ಲಿ ಒಂದಾದ **ಶಬ್ದಮಣಿದರ್ಪಣ** ವೆಂಬ ವ್ಯಾಕರಣ ಕೃತಿಯನ್ನು ರಚಿಸಿದ. ಕೇಶಿರಾಜನ ಹೇಳಿಕೆಗಳು ಕೆಲವು ಸಲ ಅಷ್ಟೊಂದು ಖಚಿತವೆನಿಸದಿದ್ದರೂ **ಶಬ್ದಮಣಿದರ್ಪಣವು**

ಹಳಗನ್ನಡವನ್ನು ಕುರಿತು ಬರೆದ ಬಹು ಸಮಗ್ರವಾದ ವ್ಯಾಕರಣಗ್ರಂಥ. ವ್ಯಾಕರಣದ ಲಕ್ಷಣಗಳಿಗೆ ಅವನು ನೀಡುವ ಲಕ್ಷ್ಯಪ್ರಯೋಗಗಳು ಅನ್ಯಾದೃಶವಾಗಿವೆ. ಇದಾದ ಸಾಕಷ್ಟು ಕಾಲದ ಮೇಲೆ ಕ್ರಿ. ಶ. 1604ರಲ್ಲಿ ಭಟ್ಟಾಕಳಂಕನ **ಶಬ್ದಾನುಶಾಸನ** ರಚಿತವಾಯಿತು. ಇದನ್ನು ಪಾಣಿನೀಯ ಶೈಲಿಯಲ್ಲಿ ಬಹಳ ಅಡಕವಾದ ಸಂಸ್ಕೃತ ಸೂತ್ರಗಳಲ್ಲಿ ಬರೆದಿದೆ. ಆದರೆ ಹಳಗನ್ನಡಭಾಷೆಯ ನಿಷ್ಕೃಷ್ಟ ಪೂರ್ಣ ವಿವರಣೆಯಾಗುವಲ್ಲಿ ಇದು **ಶಬ್ದಮಣಿದರ್ಪಣ** ವನ್ನು ಮೀರುವುದಿರಲಿ, ಅದರ ಮಟ್ಟಕ್ಕೆ ತಲಪುವುದಿಲ್ಲ. ಅಲ್ಲದೆ 16ನೆಯ ಶತಮಾನದ ಹೊತ್ತಿಗೆ ಭಾಷೆಯಲ್ಲಾಗಿದ್ದ ದೊಡ್ಡ ವ್ಯತ್ಯಾಸಗಳನ್ನು **ಶಬ್ದಾನುಶಾಸನ** ಲಕ್ಷ್ಯಕ್ಕೇ ತೆಗೆದುಕೊಳ್ಳುವುದಿಲ್ಲ.

ಹಳಗನ್ನಡದ ಬಹು ಸಂಕ್ಷಿಪ್ತವಾದ ಸ್ವರೂಪ ಚಿತ್ರಣಕ್ಕೂ ಇಲ್ಲಿ ಸ್ಥಳ ಸಾಲುವುದಿಲ್ಲ. ಆದುದರಿಂದ ನಾವು ಮಾಡಬಹುದಾದುದು ಏನಿದ್ದರೂ ಹಳಗನ್ನಡ ಭಾಷೆಗೇ ವಿಶಿಷ್ಟವಾದ ಕೆಲವು ಧ್ವನಿ ವೈಲಕ್ಷಣ್ಯಗಳನ್ನೂ ಮುಂದಿನ ಶತಮಾನಗಳಲ್ಲಿ ಅವುಗಳಲ್ಲಾದ ವ್ಯತ್ಯಾಸಗಳನ್ನೂ ಕುರಿತು ಹೇಳಿದೆ. ತಟ್ಟನೆ ಮನಸ್ಸಿಗೆ ಹೊಳೆಯುವ ಧ್ವನಿವೈಲಕ್ಷಣ್ಯವೆಂದರೆ ೞ (Azure ಎಂಬ ಪದದಲ್ಲಿರುವ 'Zh' ಧ್ವನಿಗೆ ಸಮಾನವಾದದ್ದು) ಎಂಬ ಧ್ವನಿಮಾ. ಸಾಮಾನ್ಯರ ದೃಷ್ಟಿಯಲ್ಲಿ ಈ ಧ್ವನಿಮಾ (ಇತರ ಕೆಲವು ವ್ಯಂಜನಾಂತಗಳೊಡನೆ) ಹಳಗನ್ನಡವನ್ನು ಪ್ರತಿನಿಧಿಸುತ್ತದೆ. ಬಾೞೆ ಮತ್ತು ಬಾಳೆಗಳು ಹಳಗನ್ನಡದಲ್ಲಿ ಭಿನ್ನಾರ್ಥಕಗಳಾಗಿವೆ, ಮೊದಲನೆಯದಕ್ಕೆ (ಸಸ್ಯ) ಬಾಳೆಯೆಂದೂ ಎರಡನೆಯದಕ್ಕೆ ಒಂದು ಬಗೆಯ ಮೀನೆಂದೂ ಅರ್ಥವಿದೆ. ಇದು ಪೂರ್ವದ್ರಾವಿಡದಲ್ಲಿದ್ದ ಒಂದು ಧ್ವನಿಮಾ. ಇದನ್ನು ಹೆಚ್ಚು ಕಡಮೆ ಪ್ರತಿವೇಷ್ಟಿತ 'ರ್' ಧ್ವನಿಮಾ ಎಂಬುದಾಗಿ ವಿವರಿಸಬಹುದು. ಈಗಲೂ ತಮಿಳು ಮತ್ತು ಮಲಯಾಳ ಭಾಷೆಗಳಲ್ಲಿ ಈ ಧ್ವನಿಮಾ ಇದೆ. ಆದರೆ ಅವುಗಳ ಉಪಭಾಷೆಗಳಲ್ಲಿ ಒಂದರಿಂದ ಮತ್ತೊಂದಕ್ಕೆ ಈ ಧ್ವನಿಮಾದ ಉಚ್ಚಾರಣೆ ವ್ಯತ್ಯಾಸಗೊಳ್ಳುತ್ತದೆ. ಕ್ರಿ. ಶ. 9ನೆಯ ಶತಮಾನದ ಮಧ್ಯದ ವರೆಗಿನ ತೆಲುಗು ಶಾಸನಗಳಲ್ಲಿಯೂ ಇದು ಕಂಡುಬರುತ್ತದೆ. ಅನಂತರ 'ಡ' ಧ್ವನಿಮಾ ಇದರ ಸ್ಥಾನವನ್ನು ಆಕ್ರಮಿಸಿಬಿಟ್ಟಿದೆ. ಈ 'ೞ' ಧ್ವನಿಮಾ ಹಳಗನ್ನಡದ ವಿಶಿಷ್ಟ ಧ್ವನಿಯಾಗಿದ್ದು ಇದನ್ನೂ ಇನ್ನೊಂದು ಪ್ರತಿವೇಷ್ಟಿತ ಧ್ವನಿಯಾದ ಪಾರ್ಶ್ವಿಕ 'ಲ' ವನ್ನೂ ಕವಿಗಳು (ಆದಿ) ಪ್ರಾಸಸ್ಥಾನದಲ್ಲಿ ಬಹಳ ಎಚ್ಚರದಿಂದ ಬಳಸುತ್ತಿದ್ದರು.

ಆದರೆ 'ೞ' ಧ್ವನಿಮಾ ಜನಗಳ ಮಾತಿನಲ್ಲಿ ಹಳಗನ್ನಡ ಕಾಲದಲ್ಲಿಯೇ ಬದಲಾವಣೆಗೊಳ್ಳತೊಡಗಿತು. ಇದಕ್ಕೆ ಆ ಕಾಲದ ಶಾಸನಗಳಲ್ಲಿ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಸಂಯುಕ್ತಾಕ್ಷರದಲ್ಲಿ ಬಂದಾಗ ಅದು 'ರ' ಧ್ವನಿಗೆ ಎಡೆಗೊಟ್ಟು ತಾನು ಮರೆಯಾಗತೊಡಗಿತು. 'ಗೞ್ದೆ' ಎಂಬುದ 'ಗರ್ದೆ' ಯಾಗಿ ಹೊಸಗನ್ನಡದಲ್ಲಿ ಅದೇ ಗದ್ದೆಯಾಯಿತು. 'ಅೞ್ತಿ' ಎಂಬುದು 'ಅರ್ತಿ' ಯಾಯಿತು. ಸ್ವರಗಳ ನಡುವೆ ಇದ್ದಾಗ ಅದು 'ಳ' ಆಗಿ ಪರಿವರ್ತನೆಗೊಂಡಿತು, ಉದಾ, 'ಇೞಿ' ಎಂಬುದು 'ಇಳಿ' ಯಾಗಿ 'ಮೞೆ' ಎಂಬುದು 'ಮಳೆ' ಯಾಯಿತು. ಜನರ ಉಚ್ಚಾರಣೆಯಲ್ಲಿ ಈ ಎರಡು ಧ್ವನಿಗಳಿಗಿದ್ದ ವ್ಯತ್ಯಾಸ ಅಳಿಸಿಹೋದ ಮೇಲೂ ಬಹುಕಾಲದ ವರೆಗೆ ಕವಿಗಳು ಇವುಗಳನ್ನು ಬೆರಸಬಾರದೆಂಬ ನಿಯಮವನ್ನು ಪಾಲಿಸುತ್ತ ಹೋದರು. ಆದರೆ ಹರಿಹರ ಕವಿ (ಸು. ಕ್ರಿ. ಶ. 1200) ಈ ಧ್ವನಿಗಳು ಒಂದಾಗಿಬಿಟ್ಟಿರುವುದರಿಂದಲೂ 'ೞ' ವನ್ನು ಉಚ್ಚರಿಸುವುದು ಕಷ್ಟವಾದುದರಿಂದಲೂ ಅವುಗಳ ನಡುವಿನ ವ್ಯತ್ಯಾಸವನ್ನು ತಾನು ಪಾಲಿಸುವುದಿಲ್ಲವೆಂದು ಸಾರಿದನು. ಈ ನಿರಾಕರಣೆ ಸಾಹಿತ್ಯದಲ್ಲಿಯೂ 'ೞ' ಕ್ಕೆ ಸಮಾಪ್ತಿ ಹಾಡಿತು. ಪ್ರಾಚೀನ ರೂಪಗಳ ಬಗ್ಗೆ ತುಂಬ ಆಸ್ಥೆಯುಳ್ಳ ವೈಯಾಕರಣ ಕೇಶಿರಾಜನು 'ೞ' ಧ್ವನಿಯಿರುವ ಪ್ರಾಚೀನ ಪದಗಳ ದೀರ್ಘಪಟ್ಟಿಯನ್ನೇ ಕೊಟ್ಟು ಇಂಥಿಂಥ ಕಡೆ 'ೞ' ಧ್ವನಿಯೇ ಬರಬೇಕು, 'ಳ' ಬರಬಾರದು ಎಂದು ತೋರಿಸಿಕೊಟ್ಟು 'ೞ' ವನ್ನು ಉಳಿಸಿಕೊಳ್ಳಲು ಹೋರಾಡಿದರೂ ಅವನ ಶ್ರಮವೆಲ್ಲ ವ್ಯರ್ಥವಾಯಿತು. ಈಗ ಆ ಅಕ್ಷರಗಳ ನಡುವಿನ ವ್ಯತ್ಯಾಸವನ್ನು

ಗಮನಿಸುವವರೇನಿದ್ದರೂ ಕೇವಲ ವಿದ್ವಾಂಸರು ಮತ್ತು ಹಳಗನ್ನಡ ಗ್ರಂಥಗಳನ್ನು ಸಂಪಾದಿಸುವವರು ಮಾತ್ರ.

'ೞ' ದ ಗತಿಯನ್ನೇ ಅನುಸರಿಸಿದ ಇನ್ನೊಂದು ಧ್ವನಿಮಾ ಎಂದರೆ 'ಱ'. ಆದರೆ ಇದು 'ೞ' ಕ್ಕಿಂತ ಕೆಲವು ಶತಮಾನಗಳ ಕಾಲ ಹೆಚ್ಚು ಬಾಳಿತು (16ನೆಯ ಶತಮಾನದಲ್ಲಿ ಅದು ಮರೆಯಾದ ಕಾಲವನ್ನು ನಡುಗನ್ನಡ ಕಾಲದ ಕೊನೆಯೆಂದು ಗುರುತಿಸಬಹುದು). ಈ ಧ್ವನಿಯ ಮೂಲರೂಪ ಪೂರ್ವದ್ರಾವಿಡದಲ್ಲಿ ವರ್ತ್ಸ್ಯಸ್ಪರ್ಶವಾಗಿ (Tin, Tip ಗಳಲ್ಲಿ ಕಾಣುವ ಇಂಗ್ಲಿಷಿನ T ಯಂತೆ) ಉಚ್ಚರಿತವಾಗುತ್ತಿತ್ತೆಂದು ತೋರುತ್ತದೆ. ಪಂದಿ ಎಂಬಲ್ಲಿ ನೋಡುವಂತೆ (ತಮಿಳಿನ ಪನ್ಱಿ ಹೋಲಿಸಿ) ಪೂರ್ವದ್ರಾವಿಡ 'ನ್ಱ' ಧ್ವನಿಯು ಕನ್ನಡದಲ್ಲಿ ಆಗಲೇ 'ನ್ದ' ಆಗಿ ಪರಿಣಮಿಸಿತ್ತು. 'ಱ್ಱ' ಎನ್ನುವುದು ನೆತ್ತಿ (ತಮಿಳಿನ 'ನೆಱ್ಱಿ' ಯನ್ನು ಹೋಲಿಸಿ) ಎಂಬಲ್ಲಿ ಕಾಣುವಂತೆ 'ತ್ತ' ಆಗಿತ್ತು. ಬಿಡಿ 'ಱ' ಕಾರವು ಹಳಗನ್ನಡದಲ್ಲಿ ಸ್ವಲ್ಪ ಕಠಿನವಾದ 'ರ' ಆಗಿದ್ದು ಸಾಮಾನ್ಯ 'ರ' ಕಾರದಿಂದ ಅದನ್ನು ಜಾಗರೂಕತೆಯಿಂದ ಪ್ರತ್ಯೇಕಿಸಲಾಗುತ್ತಿತ್ತು. ಅಱಿ = ತಿಳಿ, ಅರಿ = ಕತ್ತರಿಸು ; ಪಱಿ = ಸೀಳು, ಪರಿ = ಸಾಗು—ಇತ್ಯಾದಿ ರೂಪಗಳನ್ನು ಗಮನಿಸಬೇಕು. ಆಗಲೇ ತಿಳಿಸಿದಂತೆ ಈ ಎರಡೂ ಕನ್ನಡ ಧ್ವನಿಮಾಗಳು ನಡುಗನ್ನಡದ ಕೊನೆಯ ಹೊತ್ತಿಗೆ ಒಂದಾಗಿಬಿಟ್ಟುವು. ಆಧುನಿಕ ಕನ್ನಡದಲ್ಲಿ ಹರಿ (ಹಳಗನ್ನಡದ ಪಱಿ ಮತ್ತು ಪರಿ) ಎನ್ನುವುದು ಸೀಳು ಮತ್ತು ಸಾಗು ಎಂಬ ಎರಡು ಅರ್ಥಗಳನ್ನೂ ಕೊಡುತ್ತದೆ.

ಪರಿ ಮತ್ತು ಅದರ ಈಗಿನ ರೂಪವಾದ ಹರಿಗಳನ್ನು ಸ್ವಲ್ಪ ಗಮನಿಸೋಣ. ಇಲ್ಲಿ ಪಕಾರ ಹಕಾರಕ್ಕೆ ತಿರುಗಿರುವ ಮತ್ತೊಂದು ಧ್ವನಿವ್ಯತ್ಯಾಸವನ್ನು ಕಾಣುತ್ತೇವೆ. ಪಕಾರವು ಪದದ ಪ್ರಥಮಾಕ್ಷರವಾಗಿ ಪಾಲ್, ಪಿಡಿ, ಪೆಣ, ಪೊಗೆ ಮೊದಲಾದ ಅನೇಕ ಶಬ್ದಗಳಲ್ಲಿತ್ತು. ಆದರೆ ಕ್ರಮೇಣ ಪಕಾರ ಹಕಾರಕ್ಕೆ ಎಡೆಕೊಟ್ಟು ಮೇಲೆ ಹೇಳಿದ ಪದಗಳು ಕ್ರಮವಾಗಿ ಹಾಲು, ಹಿಡಿ, ಹೆಣ, ಹೊಗೆ ಇತ್ಯಾದಿ ರೂಪ ತಾಳಿದುವು. ಹಳಗನ್ನಡದ ಕೊನೆಗಾಲದ ಹೊತ್ತಿಗೆ ಈ ವ್ಯತ್ಯಾಸ ಒಂದು ಸ್ಥಿರತೆಯನ್ನು ಪಡೆಯಿತು. ಆಡುಮಾತಿನಲ್ಲಿ ಕ್ರಿ. ಶ. 1000ದ ಹೊತ್ತಿಗೆ ಈ ಬದಲಾವಣೆ ಸಮಗ್ರವಾಗಿ ಆಗಿಹೋಗಿತ್ತು. ಧ್ವನಿವ್ಯತ್ಯಾಸಗಳ ಪ್ರಸಂಗದಲ್ಲಿ ಸಾಮಾನ್ಯವಾಗಿ ಆಗುವಂತೆ ಈ ವ್ಯತ್ಯಾಸಕ್ಕೆ ಮುಂಚೆಯೇ ಕನ್ನಡವನ್ನು ಪ್ರವೇಶಿಸಿ ಅದರಲ್ಲಿ ಮಿಳಿತವಾಗಿ ಹೋಗಿದ್ದ ಕೆಲವು ಸಂಸ್ಕೃತ ಪದಗಳೂ ಈ ಧ್ವನಿಕ್ರಾಂತಿಯ ಪ್ರಭಾವಕ್ಕೆ ಸಿಕ್ಕಿದವು. ಧ್ವನಿವ್ಯತ್ಯಾಸದ ಪ್ರಸಂಗಗಳಲ್ಲಿ ಇಂಥ ಘಟನೆಗಳು ಸಾಮಾನ್ಯ. ಹ. ಗ. ಪಸು (ಸಂ. ಪಶು) ; ಹೊ. ಗ. ಹಸು. ಹ. ಗ. ಪಗ್ಗ (ಸಂ. ಪ್ರಗ್ರಹ) ; ಹೊ. ಗ. ಹಗ್ಗ.

ಕನ್ನಡದ ದೇಸಿ ಶಬ್ದಕೋಶದಲ್ಲಿ ಈ ಮಹಾಪ್ರಾಣೋಚ್ಚಾರದ ಹಕಾರ (ಪಾರಿಭಾಷಿಕವಾಗಿ ಹೇಳುವುದಾದರೆ ಕಾಕಲ್ಯಘರ್ಷ) ಕಾಣಿಸಿಕೊಂಡುದು ಒಂದು ಅನಿರೀಕ್ಷಿತ ವೈಚಿತ್ರ್ಯ. ಏಕೆಂದರೆ (ತಮಿಳು ಮತ್ತು ಇತರ ದ್ರಾವಿಡ ಭಾಷೆಗಳಂತೆ) ಕನ್ನಡದಲ್ಲಿಯೂ ಮಹಾಪ್ರಾಣದ ಉಚ್ಚಾರಣೆ ಇರಲಿಲ್ಲ. ಹನುಮಾನ್ ಮತ್ತು ಹಾರ—ಇಂಥ ಸಂಸ್ಕೃತ ಶಬ್ದಗಳು ಆರಂಭದಲ್ಲಿ ಹಳಗನ್ನಡವನ್ನು ಪ್ರವೇಶಿಸಿದಾಗ ತಮ್ಮ ಹಕಾರವನ್ನು ಕಳೆದುಕೊಂಡು ಅಣುವ ಮತ್ತು ಆರ ಗಳಾಗಿದ್ದುವು. ಆದರೆ ಹಳಗನ್ನಡದಿಂದ ನಡುಗನ್ನಡಕ್ಕೆ (ಹೊಸಗನ್ನಡಕ್ಕೆ) ದಾಟುವಾಗ ಹಕಾರ ದೇಶಿಯ ಧ್ವನಿವ್ಯವಸ್ಥೆಯಲ್ಲಿ ಸ್ಥಾನ ಪಡೆಯಿತು. (ಹೀಗಿದ್ದರೂ ಖ, ಘ, ಥ, ಧ—ಇತ್ಯಾದಿ ಧ್ವನಿಗಳು ಸಂಸ್ಕೃತ ಶಬ್ದಗಳಲ್ಲಿ ಮಾತ್ರವೇ ಉಳಿದುವು) ಈ ಹಕಾರ ಎಲ್ಲ ವರ್ಗದ ಜನರ ಬಾಯಿಯಲ್ಲಿ ಬಹಳಕಾಲ ಉಳಿಯಲಿಲ್ಲ. ಕೆಲವು ಉಪಭಾಷೆಗಳಲ್ಲಿ ಈ ಹಕಾರ ಅಕಾರಕ್ಕೆ ಸ್ಥಳ ತೆರವು ಮಾಡಿ ತಾನು ಮಾಯವಾಯಿತು. ಉದಾ : ಅಣ್ಣು (ಹಣ್ಣು < ಪಣ್) ; ಆಲು (ಹಾಲು < ಪಾಲ್) ; ವುಲಿ (ಹುಲಿ < ಪುಲಿ) ಇತ್ಯಾದಿ. ಆದರೆ ಅದು ಇಂದಿಗೂ ಗ್ರಾಂಥಿಕ ಭಾಷೆಯಲ್ಲಿ ಮತ್ತು ಶಿಷ್ಟ ವ್ಯಾವಹಾರಿಕ ಭಾಷೆಯಲ್ಲಿ ಉಳಿದುಬಂದಿದೆ.

ಹಳಗನ್ನಡದಲ್ಲಿ ಶಬ್ದಗಳು ಕ್, ಚ್, ಟ್, ಲ್. ಪ್, ವ್ ಮತ್ತು ಸ್—ಇಂಥ ವ್ಯಂಜನಗಳನ್ನು ಅಂತ್ಯದಲ್ಲಿ ಪಡೆಯದಿದ್ದರೂ ನ್, ಮ್, ಯ್, ರ್, ಟ್, ಳ್ ಮೊದಲಾದ ವ್ಯಂಜನಗಳನ್ನು ಕಡೆಯಲ್ಲಿ ಪಡೆಯುತ್ತಿದ್ದವು. (ನೇಸರ್, ಬಸಿರ್, ಮೊದಲಾದ ಪದಗಳಲ್ಲಿ ಕಾಣುವಂತೆ ರ್ ಕೂಡ ಕೆಲವೆಡೆ ಅಂತ್ಯ ವ್ಯಂಜನವಾಗಿರುತ್ತಿತ್ತು). ಆದರೆ ನಡುಗನ್ನಡದಲ್ಲಿ ಈ ವೈಲಕ್ಷಣ್ಯ ಮಾಯವಾಗಿ ಪ್ರತಿ ಶಬ್ದವೂ ಅಂತ್ಯದಲ್ಲಿ ಸ್ವರವನ್ನು ವಿಶೇಷವಾಗಿ ' ಉ ' ಕಾರವನ್ನು ಪಡೆಯತೊಡಗಿತು. ಈ ಕೆಲವು ನಿದರ್ಶನಗಳನ್ನು ಹೋಲಿಸಿ ನೋಡಬಹುದು. ಕಣ್—ಕಣ್ಣು ; ಕಾಣ್—ಕಾಣು ; ಪೊನ್—ಹೊನ್ನು ; ಮೀನ್—ಮೀನು ; ಉಸಿರ್—ಉಸಿರು ; ಕಲ್—ಕಲ್ಲು ; ಕಾಲ್—ಕಾಲು ; ಮುಳ್—ಮುಳ್ಳು ; ಏಳ್—ಏಳು—ಇತ್ಯಾದಿ. ಅಂತ್ಯದಲ್ಲಿ ಯ್ ಇದ್ದ ಅಕ್ಷರಗಳು ಇಕಾರಾಂತವಾದುವು. ಉದಾ : ಬಯ್—ಬಯ್ಯಿ ; ಬಾಯ್—ಬಾಯಿ ಇತ್ಯಾದಿ.

ಉಚ್ಚಾರಾಂಶಗಳ ಓಟಕ್ಕೆ ವೈವಿಧ್ಯವನ್ನು ನೀಡುವ ಮತ್ತೊಂದು ವೈಲಕ್ಷಣ್ಯ ಹಳಗನ್ನಡದಲ್ಲಿತ್ತು. ಪದಮಧ್ಯದಲ್ಲಿ ಸಂಯುಕ್ತ ವ್ಯಂಜನಗಳು ಬರುತ್ತಿದ್ದವು. ಉದಾ : ಕರ್ತ್ತು, ಚೆಲ್ವು—ಇತ್ಯಾದಿ. ನಡುಗನ್ನಡ ಮತ್ತು ಹೊಸಗನ್ನಡಗಳಿಗೆ ಭಾಷೆ ಹೊರಳುತ್ತಿದ್ದಂತೆ ನಡುವಿನ ವ್ಯಂಜನ (ಕರ್ತೆಯ ಮೂಲಕ) ಕತ್ತೆ ಎಂಬಲ್ಲಿರುವಂತೆ ದ್ವಿತ್ವವಾಯಿತು, ಇಲ್ಲವೆ ಚೆಲುವು ಎಂಬ ರೂಪದಲ್ಲಿರುವಂತೆ ಸ್ವರವನ್ನು ಸೇರಿಸಿಕೊಂಡಿತು. ಹಳಗನ್ನಡ ಭಾಷಾವಸ್ಥಾನದಿಂದ ನಡುಗನ್ನಡ (ಹೊಸಗನ್ನಡ)ಕ್ಕೆ ಅನೇಕ ಧ್ವನಿ ಪರಿವರ್ತನೆಗಳಾದುವು. ಅಂಟುಪ್ರತ್ಯಯ ಹಾಗೂ ನಿಷ್ಪನ್ನ ಪ್ರತ್ಯಯಗಳಲ್ಲಿ, ವಾಕ್ಯರಚನಾಕ್ರಮದಲ್ಲಿ, ಶಬ್ದಕೋಶದಲ್ಲಿ—ಇನ್ನೂ ಅನೇಕ ಅಂಶಗಳಲ್ಲಿ ಬದಲಾವಣೆಗಳಾದುವು. ಇವುಗಳೆಲ್ಲದರ ಒಟ್ಟು ಪರಿಣಾಮ ವಾಗಿ ಹಳಗನ್ನಡದ ಬರೆಹ ಇಂದಿನವರೆಗೆ ತೀರ ಭಿನ್ನವಾಗಿ ಕಾಣುತ್ತದೆ. ಆದರೆ ಆ ಪರಿವರ್ತನೆಗಳನ್ನೆಲ್ಲ ಇಲ್ಲಿ ಹೆಸರಿಸುವುದೂ ಸಾಧ್ಯವಿಲ್ಲ.

ಕ್ರಿ. ಶ. 12ನೆಯ ಶತಮಾನದ ಮಧ್ಯಭಾಗವು ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜೀವನ ದಲ್ಲಿ ದೊಡ್ಡ ಕ್ರಾಂತಿಕಾಲವಾಗಿದ್ದು ಅದು ಸಾಮಾನ್ಯರು, ಉಚ್ಚವರ್ಗದವರು ಎಲ್ಲರನ್ನೂ ತಟ್ಟಿತು. ಭಾಷೆಯ ಮೇಲೂ ಅದರ ಪರಿಣಾಮವಾಯಿತು. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿಯರಂಥ ವೀರಶೈವ ಅನುಭಾವಿಗಳು ಹಾಗೂ ಸಮಾಜಸುಧಾರಕರು ತಮ್ಮ ಆಧ್ಯಾತ್ಮಿಕ ಹಂಬಲಗಳನ್ನು ಮತ್ತು ತಾತ್ವಿಕ ಚಿಂತನೆಗಳನ್ನು ವಚನಗಳ ರೂಪದಲ್ಲಿ ಹೊರಹರಿಸಿದರು. ಆ ಹೊತ್ತಿಗೆ ಕನ್ನಡ ಭಾಷೆಯಲ್ಲಿ ಘಟಿಸಿದ್ದ ಪರಿವರ್ತನೆಗಳೆಲ್ಲ ಈ ವಚನ ಸಾಹಿತ್ಯದಲ್ಲಿ ಪ್ರತಿಫಲಿತವಾಗಿವೆ. ಅದು ಪರಿಪೂರ್ಣವಾಗಿ ಬೆಳೆದುನಿಂತ ನಡುಗನ್ನಡವಾಗಿದ್ದು ಒಂದೆರಡು ತಲೆಮಾರುಗಳ ಅನಂತರ ಬಂದ ಹರಿಹರ ಮತ್ತು ರಾಘವಾಂಕರಂಥ ಕವಿಗಳ ಕಾವ್ಯಸೃಷ್ಟಿಗೆ ಹದವಾದ ಮಾಧ್ಯಮವಾಗಿ ಪರಿಣಮಿಸಿತು. ಈ ಭಾಷಾಸ್ವರೂಪ ಅನಂತರದ ಕನ್ನಡವನ್ನು ಕೆಲವು ಶತಮಾನಗಳ ವರೆಗೆ ತನ್ನ ಅಂಕೆಯಲ್ಲಿಟ್ಟುಕೊಂಡಿತು. ಮಹಾಕಾವ್ಯ ವಾದ **ಕುಮಾರವ್ಯಾಸ ಭಾರತವು** (ಸು. ಕ್ರಿ. ಶ. 1430) ಅದರಲ್ಲಿ ರಚಿತವಾಯಿತು. ಅಲ್ಲದೆ ಬೃಹತ್ತು ಮಹತ್ತುಗಳೆರಡರಲ್ಲೂ ದೊಡ್ಡದೆನಿಸಿದ ಇನ್ನೂ ಕೆಲವು ಕಾವ್ಯಗಳು ಅದೇ ಭಾಷೆಯನ್ನು ಬಳಸಿದುವು.

ನಡುಗನ್ನಡ ಹೊಸಗನ್ನಡಗಳ ನಡುವಿನ ಸಂಧಿಕಾಲ ಸಹಜವಾಗಿಯೇ ತುಂಬ ದೀರ್ಘವಾದದ್ದಾಗಿದೆ. ನಡುಗನ್ನಡ ಯಾವಾಗ ಹೊಸಗನ್ನಡವಾಯಿತೆಂದು ಥಕ್ಕನೆ ಗುರುತಿಸುವಂತಿಲ್ಲ. ಎರಡು ರಕಾರಗಳ (ಱ, ರ) ಏಕೀಕರಣ ಈ ಕಾಲದ ಹಲವು ಭಾಷಾವೈಲಕ್ಷಣ್ಯಗಳಲ್ಲಿ ಕೇವಲ ಒಂದು ಮಾತ್ರವೇ ಆದರೂ ಅದು ಒಂದು ಹಿರಿಯ ಧ್ವನಿವೈಲಕ್ಷಣ್ಯವೆಂಬುದು ನಿಜ. ನಡುಗನ್ನಡ, ಕೆಲವುಸಲ ಹೊಸಗನ್ನಡವೂ—ಚಿಕ್ಕದೇವರಾಜ ಒಡೆಯರ (1672-1704) ಕಾಲದ ಕೃತಿಗಳಲ್ಲಿ ಕಾಣುವಂತೆ, ಅವುಗಳನ್ನು ಸಾಹಿತ್ಯದಲ್ಲಿ ಪ್ರತ್ಯೇಕಾಕ್ಷರ ಗಳಾಗಿ ಬಳಸಿದುವು. ಆದರೆ ಆಡುನುಡಿಯಲ್ಲಿ ಮಾತ್ರ ತುಂಬಾ ಬೆಳವಣಿಗೆಯಾಯಿತೆಂಬುದು ಅನಂತರದ

ಶಾಸನಗಳಿಂದಲೂ, ಚಾರಿತ್ರಿಕ ದಾಖಲೆಗಳಿಂದಲೂ ಸಾಹಿತ್ಯಕೃತಿಗಳಲ್ಲಿ ಘಟಿಸಿರುವ ಆಕಸ್ಮಿಕ 'ತಪ್ಪು' ಗಳಿಂದಲೂ ತಿಳಿದು ಬರುತ್ತದೆ.

ಕ್ರಿ. ಶ. 1799ರಲ್ಲಿ ಟಿಪ್ಪೂಸುಲ್ತಾನನ ಪತನವಾಗಿ ಮೈಸೂರು ಸಿಂಹಾಸನ ಮುಮ್ಮಡಿ ಕೃಷ್ಣರಾಜ ಒಡೆಯರ ವಶಕ್ಕೆ ಬಂದಮೇಲೆ ಅವರ ಆಸ್ಥಾನದಲ್ಲಿ ಹೊಸಗನ್ನಡದ ಗ್ರಾಂಥಿಕ ಭಾಷೆಯೊಂದು ರೂಪುಗೊಳ್ಳ ತೊಡಗಿತು. ಕೃಷ್ಣಮಾಚಾರ್ಯನು ತನ್ನ '**ಹೊಸಗನ್ನಡ ನುಡಿಗನ್ನಡಿ**ಯಲ್ಲಿ (1838) ತನ್ನ ಕಾಲದ ಹಿರಿಯರ ಆಡುಮಾತನ್ನೇ ಆಧರಿಸಿ ಮೊದಲ ಬಾರಿಗೆ ಹೊಸಗನ್ನಡದ ಚಿತ್ರವೊಂದನ್ನು ಕೊಡುವ ಪ್ರಯತ್ನ ಮಾಡಿದನು. ಕೆಲವು ಸಲ ಅವನು 'ಹನ್ನಿಬ್ಬರು' (ಹನ್ನೆರಡುಜನ) ಮತ್ತು ಮಿಳಿರ್ತು (ಸುತ್ತಾಡಿ)—ಇಂಥ ಹಳೆಯ ರೂಪಗಳನ್ನು ಒಪ್ಪಿಬಿಡುತ್ತಾನಾದರೂ ಇಂದಿಗೂ ಆಡುಮಾತಲ್ಲಿ ಮಾತ್ರ ಇದ್ದು ಗ್ರಾಂಥಿಕ ಭಾಷೆಯಲ್ಲಿ ಬಳಕೆಯಾಗದಿರುವ 'ತಿಂತಾನೆ' ಕೆಟ್ಹೋಯ್ತು—ಎಂಬಂಥ ರೂಪಗಳನ್ನೂ ಕೊಡುತ್ತಾನೆ. ಇವುಗಳಿಗೆ ಕ್ರಮವಾಗಿ 'ತಿನ್ನುತ್ತಾನೆ', 'ಕೆಟ್ಟುಹೋಯಿತು' ಎಂಬವು ಶಿಷ್ಟ ಗ್ರಾಂಥಿಕ ರೂಪಗಳು. ಆಡುನುಡಿ ಮತ್ತು ಉಪಭಾಷೆಗಳಲ್ಲಿ ಕಾಣುವ ರೂಪಗಳನ್ನು ಆಧುನಿಕ ಬರೆವಣಿಗೆಯಲ್ಲಿ ಸಾಮಾಜಿಕನಾಟಕ, ಕಾದಂಬರಿ ಮತ್ತು ಸಣ್ಣ ಕಥೆಗಳಂಥ ಸಾಹಿತ್ಯಪ್ರಕಾರಗಳ ಸಂಭಾಷಣೆಗಳಲ್ಲಿ ಯಥೇಚ್ಛವಾಗಿ ಬಳಸುತ್ತಾರೆ.

ಕನ್ನಡನಾಡು ವಿಶಾಲ ಪ್ರದೇಶದ ಉದ್ದಗಲಕ್ಕೆ ಹರಡಿದೆ. ಈಗಿನ ಮೈಸೂರು ರಾಜ್ಯದ ವಿಸ್ತೀರ್ಣ 74,861 ಚದರ ಮೈಲಿಗಳು. ಇಂಥ ಸನ್ನಿವೇಶದಲ್ಲಿ ಭಾಷಾ ಪ್ರಭೇದಗಳು ಬೆಳೆಯುವುದು ಅನಿವಾರ್ಯ. ಅಲ್ಲದೆ ಇವು ಬಹು ಪ್ರಾಚೀನಕಾಲದಿಂದಲೂ ಇರುವುದಾಗಿ ತೋರುತ್ತದೆ. **ಕವಿರಾಜಮಾರ್ಗವು** ಕರ್ಣಾಟಕದ ದಕ್ಷಿಣ, ಉತ್ತರ ಮತ್ತು ತೀರ ಉತ್ತರದ ಜನರ ಭಾಷಾರೀತಿಗಳಲ್ಲಿ ಕ್ರಿಯಾರೂಪಗಳಲ್ಲಿ ಇದ್ದ ಕೆಲವು ವ್ಯತ್ಯಾಸಗಳನ್ನು ಕುರಿತು ಹೇಳುತ್ತದೆ. ಇದು ಬಹಳ ಕುತೂಹಲಕರವಾದ ವಿಷಯ. ಆದರೆ ದುರದೃಷ್ಟವಶಾತ್ ಇದರ ಬಗ್ಗೆ ದೊರೆಯುವ ಸಂಗತಿ ತೀರ ಅಲ್ಪ.

ಹೊಸಗನ್ನಡದಲ್ಲಿ ಸುಸ್ಪಷ್ಟವಾದ ಮೂರು ಪ್ರಾಂತೀಯ ಭೇದಗಳಿದ್ದು ಅವುಗಳಿಗೆ ಮೈಸೂರು ಕನ್ನಡ, ಧಾರವಾಡ ಕನ್ನಡ ಮತ್ತು ಮಂಗಳೂರು ಕನ್ನಡಗಳೆಂಬ ಹೆಸರು ಜನಸಾಮಾನ್ಯವಾಗಿ ಬಂದಿದೆ. ಈ ಮೂರು ಭಾಷಾರೀತಿಗಳ ಹೆಸರುಗಳೂ ಕ್ರಮವಾಗಿ ದಕ್ಷಿಣ ಕರ್ಣಾಟಕ, ಉತ್ತರ ಕರ್ಣಾಟಕ ಮತ್ತು ಘಟ್ಟದ ಕರ್ಣಾಟಕಗಳ ಸಾಂಸ್ಕೃತಿಕ ಕೇಂದ್ರಗಳನ್ನು ಸೂಚಿಸುವಂತೆ ಇವೆ. ತುಂಗಭದ್ರಾನದಿ ದಕ್ಷಿಣ ಮತ್ತು ಉತ್ತರ ಕರ್ಣಾಟಕಗಳನ್ನು ಪ್ರತ್ಯೇಕಿಸುವ ರೇಖೆಯಾದರೆ, ಪಶ್ಚಿಮಘಟ್ಟಗಳ ಸಾಲು ಪಶ್ಚಿಮ ತೀರದ ಪ್ರಾಂತ್ಯವನ್ನು ಪ್ರತ್ಯೇಕಿಸಿ ತೋರುತ್ತದೆ. ಈ ಒಂದೊಂದು ವಿಶಾಲಪ್ರದೇಶದಲ್ಲಿಯೂ ಅನೇಕ ಔಪಭಾಷಿಕ ಉಪಭೇದಗಳಿವೆಯೆಂಬುದನ್ನು ನೆನಪಿನಲ್ಲಿ ಇಡಬೇಕು. ಬಿಜಾಪುರದ ಉಪಭಾಷೆಗೆ ಉದಾಹರಣೆಗೆ, ಅದರದೇ ಆದ ಕೆಲವು ವಿಶಿಷ್ಟ ಲಕ್ಷಣಗಳಿವೆ.

ಇವುಗಳಲ್ಲದೆ ಸಾಮಾಜಿಕ ಭಾಷಾ ಭೇದಗಳೂ ಇವೆ. ಸಾಮಾನ್ಯವಾಗಿ ಎಲ್ಲ ಕಡೆಯೂ ಇರುವ ವರ್ಗಭಾಷಾಭೇದಗಳಲ್ಲದೆ ಕೆಲವು ಪ್ರತ್ಯೇಕ ಭಾಷೆಗಳೇ ಇವೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹವ್ಯಕ ಜನಾಂಗ ಮಾತನಾಡುವ ಕನ್ನಡಭಾಷೆ ಇದಕ್ಕೊಂದು ಉತ್ಕೃಷ್ಟ ಉದಾಹರಣೆ. ಈ ಭಾಷೆ ಕನ್ನಡದ ಕೆಲವು ಪ್ರಾಚೀನ ಭಾಷಾವೈಲಕ್ಷಣ್ಯಗಳನ್ನು ಉಳಿಸಿಕೊಂಡಿರುವುದಲ್ಲದೆ ಕೆಲವು ಹೊಸ ವೈಶಿಷ್ಟ್ಯಗಳನ್ನೂ ಬೆಳೆಸಿಕೊಂಡಿದೆ. ಹೀಗಾಗಿ ಇದು ಕನ್ನಡ ಭಾಷೆಯ ಸಾಮಾನ್ಯ ಸ್ವರೂಪದಿಂದ ಭಿನ್ನವಾಗಿದೆ. ಹವ್ಯಕ ಭಾಷೆಯಲ್ಲಿ ಅದೂ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಆರೇಳು ಉಪಭೇದಗಳಿವೆ.

ಉಪಭಾಷಾ ಅಧ್ಯಯನವು ನಮ್ಮ ದೇಶದಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿದೆ. ಆಳವಾದ ಅಭ್ಯಾಸಗಳು

ನಡೆದಿರುವುದೇ ಕಡಮೆ. ನಡೆಸಿದ ಕೆಲವೇ ಅಭ್ಯಾಸಗಳ ಫಲಿತಾಂಶ ಕೂಡ ಅಚ್ಚಾಗಿಲ್ಲ. ಇಡಿಯ ಕರ್ನಾಟಕದ ಎಲ್ಲ ಉಪಭಾಷೆಗಳ ವ್ಯವಸ್ಥಿತ ಅಧ್ಯಯನ ನಡೆದಲ್ಲದೆ ಕನ್ನಡದ ಉಪಭಾಷೆಗಳ ಸ್ವರೂಪ ಮತ್ತು ವ್ಯಾಪ್ತಿಗಳ ಬಗ್ಗೆ ಖಚಿತವಾದ ಮಾತುಗಳನ್ನು ಹೇಳುವುದು ಸಾಧ್ಯವಿಲ್ಲ.

**ಕವಿರಾಜಮಾರ್ಗದ** ಹೇಳಿಕೆಯಂತೆ ಕಿಸುವೊಳಲ್ (ಬಿಜಾಪುರ ಜಿಲ್ಲೆಯ ಪಟ್ಟದ ಕಲ್ಲು), ಕೊಪಣ ನಗರ (ರಾಯಚೂರು ಜಿಲ್ಲೆಯ ಕೊಪ್ಪಲ್), ಪುಲಿಗೆರೆ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ) ಮತ್ತು ಒಂಕುಂದ (ಬೆಳಗಾಂ ಜಿಲ್ಲೆಯ ಒಕ್ಕುಂದ) ಇವು ಸೇರಿ ತಿರುಳುಗನ್ನಡದ ನಾಡಾಗಿತ್ತು. ಪಂಪನು ಕಾವ್ಯರಚನೆ ಮಾಡಿದ್ದು ಈ ಶಿಷ್ಟಭಾಷೆಯಲ್ಲಿ. ಶತಮಾನಗಳು ಉರುಳಿದಂತೆ ಈ ಗುರುತ್ವಕೇಂದ್ರ ದಕ್ಷಿಣದ ಕಡೆಗೆ ಹೆಚ್ಚು ಹೆಚ್ಚಾಗಿ ರಿಯಿತುಸ. ಒಂದು ಆಶ್ಚರ್ಯಕರವಾದ ವಿಷಯವೆಂದರೆ ನಾಡಿನಾದ್ಯಂತ ಇಷ್ಟೆಲ್ಲ ಭಾಷಾಭೇದಗಳಿದ್ದರೂ ಶಿಷ್ಟಕನ್ನಡ ಮಾತ್ರ ಉದ್ದಕ್ಕೂ ರಕ್ಷಿತವಾಗಿ ಸಾಗಿಬಂದಿದೆ. ಈಗ ಮೈಸೂರು, ಧಾರವಾಡ, ಮಂಗಳೂರು—ಮೂರು ಪ್ರಧಾನ ಭಾಗಗಳಲ್ಲಿ ಬಳಕೆಯಲ್ಲಿರುವ ಶಿಷ್ಟ ಕನ್ನಡದಲ್ಲಿ ಸಹಜವಾಗಿಯೇ ಕೆಲವು ಪ್ರಾಂತೀಯ ಭೇದಗಳು, ಅದೂ ಶಬ್ದಕೋಶ ಸಂಬಂಧದಲ್ಲಿ ಇವೆ. ಆದರೆ ಸಂಸ್ಥಾನದ ಒಂದು ತುದಿಯಿಂದ ಮತ್ತೊಂದು ತುದಿವರೆಗೆ ಇರುವ ಶೀಘ್ರಪ್ರಯಾಣ ಮತ್ತು ಸಂಪರ್ಕ ವ್ಯವಸ್ಥೆಗಳ ಫಲವಾಗಿ ಈ ವ್ಯತ್ಯಾಸಗಳು ಮಾಯವಾಗುತ್ತಿವೆ. ರಾಜಕೀಯ ಪುನರ್ಯೋಜನೆ ಮತ್ತು ಕನ್ನಡ ಆಡುನುಡಿಯಾಗಿರುವ ಭಾಗಗಳ ಏಕೀಕರಣದ ಫಲವಾಗಿ ಎಲ್ಲವರ್ಗದ ಜನರಿಗೂ ಸಮ್ಮತ ವಾಗುವ ಏಕರೀತಿಯ ಶಿಷ್ಟಕನ್ನಡ ಭಾಷೆಯೊಂದು ತೊಡಕಿಲ್ಲದೆ ಶೀಘ್ರವಾಗಿ ರೂಪುಗೊಳ್ಳುವುದೆಂದು ಆಶಿಸಲು ಸಾಧ್ಯ.

## 3

ಕನ್ನಡವಲ್ಲದೆ ವಿಶಾಲ ಮೈಸೂರು ರಾಜ್ಯದ ಗಡಿಗಳೊಳಗೆ ಬಹುಮಟ್ಟಿಗೆ ಬಳಕೆಯಲ್ಲಿರುವ ಇನ್ನೆರಡು ದ್ರಾವಿಡ ಭಾಷೆಗಳ ಬಗ್ಗೆ ಇಲ್ಲಿ ಸ್ವಲ್ಪ ವಿವರವಾಗಿ ಪ್ರಸ್ತಾವಿಸುವುದು ಅಗತ್ಯ. ಆ ದ್ರಾವಿಡ ಭಾಷೆಗಳು ತುಳು ಮತ್ತು ಕೊಡಗು. ತುಳು ಬಹುಮಟ್ಟಿಗೆ ಕಡಲತೀರದ ದಕ್ಷಿಣ ಕನ್ನಡ ಜಿಲ್ಲೆಗೇ ಸೀಮಿತವಾಗಿದೆ. ಕಲ್ಯಾಣಪುರಿ ನದಿಯು ಅದರ ಉತ್ತರ ಗಡಿಯಾಗಿದೆ. ಅದರ ಆಚೆಗೆ ಸಂಪೂರ್ಣವಾಗಿ ಕನ್ನಡ ಮಾತನಾಡುವ ಪ್ರದೇಶವಿದೆ. ಆದರೆ ತುಳು ಪ್ರದೇಶದಲ್ಲಿ ಕನ್ನಡ ಮಾತನಾಡುವವರೂ ಇದ್ದಾರೆ. (ಈಗ ಕೇರಳ ರಾಜ್ಯಕ್ಕೆ ಸೇರಿರುವ) ಕಾಸರಗೋಡು ತಾಲೂಕಿನಲ್ಲಿ ಹರಿಯುವ ಚಂದ್ರಗಿರಿ (ಅಥವಾ ಪಯಸ್ವಿನೀ) ನದಿಯು ತುಳುನಾಡಿನ ದಕ್ಷಿಣಗಡಿಯಾಗಿದೆ.

ತುಳುಭಾಷೆ ಎಲ್ಲಿ ಬಳಕೆಯಲ್ಲಿದೆಯೋ ಅಲ್ಲೆಲ್ಲ ಅದು ಎಲ್ಲ ವರ್ಗದ ಜನರ ಮನೆ ಮಾತಾಗಿದೆ. ತುಳುಭಾಷೆಯಲ್ಲಿ ಕನಿಷ್ಠ ಮೂರು ಸಾಮಾಜಿಕ ಭಾಷಾಭೇದಗಳಿವೆ. ಭೌಗೋಳಿಕ ಭಾಷಾಭೇದಗಳು ಇರುವುದೂ ಉಂಟು. ಬ್ರಾಹ್ಮಣವರ್ಗ ಬಳಸುವ ತುಳುವಿನಲ್ಲಿ ಸಂಸ್ಕೃತ ಶಬ್ದಗಳ ಪ್ರಮಾಣ ಎದ್ದು ಕಾಣುವಷ್ಟು ಹೆಚ್ಚಿನ ಪ್ರಮಾಣದಲ್ಲಿದೆ.

ತುಳುನಾಡು ಪ್ರಾಚೀನ ಕಾಲದಿಂದಲೂ ಇರುವುದಾಗಿ ತಿಳಿಯುತ್ತದೆ. ಕ್ರಿ.ಶ. 2 ನೆಯ ಶತಮಾನಕ್ಕೆ ಸೇರುವ, ತಮಿಳಿನ ಪ್ರಸಿದ್ಧ ಕಾವ್ಯಗಳಲ್ಲಿ ಒಂದಾದ **ಅಕನಾನೂರು** ಗ್ರಂಥವು ಹಣ್ಣುಗಳನ್ನು ತಿನ್ನುವ ನವಿಲುಗಳಿಂದ ನಿಬಿಡವಾದ ತೋಪುಗಳಿಗೆ ಪ್ರಸಿದ್ಧವಾದ ತುಳುನಾಡನ್ನು ಪ್ರಸ್ತಾವಿಸುತ್ತದೆ. (**ಅಕನಾನೂರು** 15). ಆ ಕಾಲಕ್ಕಾಗಲೇ ತುಳುದೇಶಕ್ಕೆ ಒಂದು ಪ್ರತ್ಯೇಕ ಅಸ್ತಿತ್ವವಿತ್ತೆಂಬುದು ಇದರಿಂದ ತಿಳಿಯುತ್ತದೆ. ಇದಲ್ಲದೆ ಕ್ರಿ.ಶ. 1012 ರ ಶಾಸನವೊಂದರಲ್ಲಿ ತುಳುವರ ಪ್ರಸ್ತಾಪವಿದೆ (ಎಪಿಗ್ರಾಫಿಯ ಕರ್ನಾಟಿಕ, III'

ಶ್ರೀರಂಗಪಟ್ಟಣ 140). ಹರಿಹರನ ಸು.ಕ್ರಿ.ಶ. 1200 (**ಬಸವರಾಜದೇವರರ ಗಳೆಯಲ್ಲಿಯೂ** ತುಳುವ ದೇಶದ ಪ್ರಸ್ತಾಪವಿದೆ.

ಈ ಪ್ರದೇಶದ ಭಾಷೆಯೂ ಸಹ-ಕೇವಲ ಒಂದು ಪ್ರಾಂತೀಯ ಭಾಷಾಭೇದವಾಗಿರದೆ ಪ್ರಾಚೀನ ಕಾಲದಿಂದಲೂ ಅದಕ್ಕೊಂದು ಪ್ರತ್ಯೇಕ ಅಸ್ತಿತ್ವವಿದ್ದಿರಬೇಕು. ತುಳುವಿನ ಕೆಲವು ಧ್ವನಿಗಳು ಪ್ರಾಚೀನ ತಮಿಳು ಅಥವಾ ಕನ್ನಡದ ಮುಂದುವರಿದ ರೂಪಗಳು ಮಾತ್ರವಾಗಿ ಕಾಣದಿರುವುದು ಇದಕ್ಕೊಂದು ಸಾಕ್ಷಿ. ಅಲ್ಲದೆ ತುಳುವಿನ ಕೆಲವು ವ್ಯಾಕರಣಾಂಶ (ಮಧ್ಯಮ ಪುರುಷದ ರೂಪಗಳಾದ 'ಇ' ಮತ್ತು 'ಇರು' ವಿನಂಥ ರೂಪಗಳು ದಕ್ಷಿಣ ದ್ರಾವಿಡಭಾಷೆಯಲ್ಲಿರುವ ಸಂವಾದಿ ಅಂಶಗಳಿಗಿಂತ ಮಧ್ಯ ದ್ರಾವಿಡಭಾಷೆಯ ಸಂವಾದಿ ಅಂಶಗಳನ್ನು ಹೆಚ್ಚಾಗಿ ಹೋಲುತ್ತವೆ. ಆಗಲೇ ತಿಳಿಸಿದಂತೆ **'ಆಕ್ಸಿರಿಂಖಸ್ ಲೇಖನ'** ದಲ್ಲಿರುವ ಭಾರತೀಯ ಭಾಷೆ, ಅದು ವಿಶ್ವಾಸಾರ್ಹವೇ ಆದುದಾದರೆ ಪೂರ್ವ ತುಳುವಾಗಿರಬೇಕು.

ಇದನ್ನೆಲ್ಲ ನೋಡಿದಾಗ ತುಳುಭಾಷೆ ಒಂದೂಮುಕ್ಕಾಲು ಸಹಸ್ರ ವರ್ಷಗಳ ಕಾಲ ಒಂದು ಸ್ವತಂತ್ರ ಭಾಷೆಯಾಗಿ ಬಾಳಿ ಬಂದಿದ್ದರೂ ಒಂದು ಗ್ರಾಂಥಿಕ ಭಾಷೆಯನ್ನು ರೂಪಿಸಿಕೊಳ್ಳದಿರುವುದು ಸೋಜಿಗವಾಗಿ ತೋರುತ್ತದೆ. ಸುಮಾರು 14ನೆಯ ಶತಮಾನದ ಹೊತ್ತಿಗೆ ವಿದ್ವಾಂಸರು ಸಂಸ್ಕೃತ ಗ್ರಂಥಗಳನ್ನು ಬರೆಯಲು ಮಲಯಾಳದ ಲಿಪಿಯನ್ನು ಹೋಲುವ ಲಿಪಿಯೊಂದನ್ನು ತುಳುನಾಡಿನಲ್ಲಿ ಬಳಸಿದರು. ಆದರೆ ಈ ಲಿಪಿಯಲ್ಲಿ ರಚಿತವಾದ ಒಂದೇ ಒಂದು ಹಳೆಯ ಗ್ರಂಥವೂ ಈಗ ಇಲ್ಲವೆಂದು ತಿಳಿಯುತ್ತದೆ. ತುಳುವಿನಲ್ಲಿ ಬೇಕಾದಷ್ಟು ಲಾವಣಿಗಳು, ಜಾನಪದ ಗೀತಗಳು ಇದ್ದು ಅವುಗಳಲ್ಲಿ ಕೆಲವು ಅನೇಕ ಶತಮಾನಗಳಷ್ಟು ಹಿಂದಿನವು. ಕೋಟಿ ಮತ್ತು ಚನ್ನಯರ ಕಥೆಗಳಂಥ ಪಾರ್ದನಗಳು ಬಹು ಚೇತೋಹಾರಿ ಯಾಗಿವೆ. ಆದರೆ ಇವೆಲ್ಲವೂ ಕೇವಲ ಬಾಯಿಂದ ಬಾಯಿಗೆ ಹರಿದುಬಂದಿವೆ. ತುಳು ಮಾತನಾಡುವ ವಿದ್ವಾಂಸರು (ಸಂಸ್ಕೃತವನ್ನು ಬಿಟ್ಟರೆ) ಕನ್ನಡವನ್ನೇ ಬಹು ಕಾಲದಿಂದಲೂ ಪ್ರಕಟನ ಮಾಧ್ಯಮವಾಗಿ ಬಳಸುತ್ತ ಬಂದಿದ್ದಾರೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ದೊರೆಯುತ್ತ ಬಂದಿರುವ ಶಾಸನ ಗಳೆಲ್ಲ ಕನ್ನಡ ಲಿಪಿಯಲ್ಲೇ ಇವೆ.

ಸುಮಾರು 19ನೆಯ ಶತಮಾನದ ಮಧ್ಯಭಾಗಕ್ಕೆ ತುಳುಭಾಷೆಯಲ್ಲಿ (ಕನ್ನಡ ಲಿಪಿಯು) ಕೆಲವು ಗ್ರಂಥಗಳು ರಚಿತವಾದವು. ಈ ಕೆಲಸ ಮಾಡಿದ ಸಾಹಸಿಗಳು ಮಂಗಳೂರಿನ ಕ್ರೈಸ್ತಪಾದ್ರಿಗಳು. ರೆವರೆಂಡ್ ಜೆ. ಬ್ರಿಗೆಲ್ ಅವರು ಇಂಗ್ಲಿಷಿನಲ್ಲಿ ರಚಿಸಿದ ಮೊದಲನೆಯ ತುಳು ವ್ಯಾಕರಣ 1872ರಲ್ಲಿ ಪ್ರಕಟವಾಯಿತು. ಎಸ್. ಯು. ಪಣಿಯಾಡಿಯವರು ತುಳುವಿನಲ್ಲಿಯೇ ರಚಿಸಿದ ಮತ್ತೊಂದು ವ್ಯಾಕರಣ ಅರುವತ್ತು ವರ್ಷಗಳನಂತರ ಪ್ರಕಟವಾಯಿತು. ಇಂದಿಗೂ ತುಳುವಿನಲ್ಲಿ ಗ್ರಂಥರಚನೆ ತುಂಬ ಕಡಮೆ.

ಪರಿಸ್ಥಿತಿಯಲ್ಲಿ ತುಳುವನ್ನೇ ಹೋಲುವ ಮತ್ತೊಂದು ಭಾಷೆಯೆಂದರೆ ಕೊಡಗು. ಇದರ ಜನಸಂಖ್ಯೆ ತುಳುವಿನದಕ್ಕಿಂತ ಕಡಮೆ. ಇದನ್ನಾಡುವ ಜನರೆಲ್ಲ ಪುಟ್ಟಜಿಲ್ಲೆಯಾದ ಕೊಡಗಿನಲ್ಲಿಯೇ ಇದ್ದಾರೆ. ಕ್ರಿ.ಶ. 1174ರ ಕನ್ನಡ ಶಾಸನವೊಂದರಲ್ಲಿ ಮೊದಲ ಬಾರಿಗೆ ಕೊಡಗರ ಪ್ರಸ್ತಾಪವಾಗಿದೆ (**ಎಪಿಗ್ರಾಫಿಯ ಕರ್ಣಾಟಿಕ**, IV, ಹುಣಸೂರು 20). ಭಾಷಾಸಂಬಂಧವಾದ ಆಧಾರಗಳ ಮೇಲೆ ಕೊಡಗು ಭಾಷೆಯನ್ನು ಒಂದು ಸ್ಪಷ್ಟಭಾಷೆಯಾಗಿ ಕರೆಯಲಾಗಿದೆ. ಕೊಡಗು ತುಳುವಿಗಿಂತ ಕನ್ನಡಕ್ಕೇ ಸ್ವಲ್ಪ ಹತ್ತಿರದ್ದಾಗಿ ಕಾಣುತ್ತದೆ.

ಪ್ರಾಚೀನ ಕನ್ನಡ ಹಳಗನ್ನಡಕ್ಕೆ ತಿರುಗುವಾಗ ಘಟಿಸಿದ ವಿಶಿಷ್ಟ ಧ್ವನಿವೈಲಕ್ಷಣ್ಯವಾದ ಸಂವೃತಸ್ವರ ಪರಿವರ್ತನೆಯ (Close vowel mutation) ಯಾವ ಸೂಚನೆಯನ್ನೂ ಕೊಡಗುಭಾಷೆ ತೋರದಿರುವುದು

ಕನ್ನಡ ಧ್ವನಿಶಾಸ್ತ್ರದ ದೃಷ್ಟಿಯಿಂದ ಸ್ವಾರಸ್ಯಕರ ಸಂಗತಿಯಾಗಿದೆ. ಇದಕ್ಕೆ—ಕೊ. ಎಲಿ—ಹ.ಗ. ಇಲಿ ; ಕೊ. ಕೊರಿ—ಹ.ಗ. ಕುರಿ—ಇತ್ಯಾದಿ ನಿದರ್ಶನಗಳನ್ನು ನೋಡಬಹುದು. ಅಲ್ಲದೆ ಹಳಗನ್ನಡ ನಡುಗನ್ನಡವಾಗುವಾಗ ಪದಾದಿಯ ಪಕಾರ ಹಕಾರವಾಯಿತು. ಆದರೆ ಕೊಡಗಿನಲ್ಲಿ ಪದಾದಿಯ ಪಕಾರ ಹಾಗೆಯೇ ಇದೆ. ಕೊ. ಪತ್ತು—ಹೊ.ಗ. ಹತ್ತು ; ಕೊ. ಪೊಲ ; ಹೊ.ಗ. ಹೊಲ—ಇತ್ಯಾದಿಗಳನ್ನು ಹೋಲಿಸಬಹುದು.

ಕೊಡಗಿಗೆ ಲಿಖಿತ ಸಾಹಿತ್ಯವಿಲ್ಲ. ಕೊಡಗು ಜಿಲ್ಲೆಯಲ್ಲಿ ಶಾಸನಗಳಿಗೆ ಮತ್ತು ಸಾಮಾನ್ಯ ಬರೆಹಕ್ಕೆ ಉದ್ದಕ್ಕೂ ಕನ್ನಡವನ್ನೇ ಬಳಸಲಾಗಿದೆ. ಇತರ ಭಾರತೀಯ ಭಾಷೆಗಳಲ್ಲಿರುವಂತೆ ಕೊಡಗಿನಲ್ಲಿಯೂ ಲಾವಣಿಗಳು, ಜಾನಪದ ಕಥೆಗಳು ಹೇರಳವಾಗಿವೆ. ನಡಿಕೇರಿಯಂಡ ಚಿನ್ನಪ್ಪ ಎನ್ನುವವರು ಇವನ್ನೆಲ್ಲ ಸಂಗ್ರಹಿಸಿ 1924 ರಲ್ಲಿ “ **ಕೊಡವದ ಪತ್ತೋಲೆ ಪಳಮೆ** ” ಯಲ್ಲಿ ಪ್ರಕಟಿಸಿದರು. ಕೊಡಗು ದೇಶದ, ಅದರ ಇತಿಹಾಸದ ಮತ್ತು ಸಾಂಪ್ರದಾಯಿಕ ಪದ್ಧತಿಗಳ ವಿವರವನ್ನು ಈ ಕೃತಿಯಲ್ಲಿ (ಕನ್ನಡದಲ್ಲಿ) ಕೊಟ್ಟಿದೆ. ಕ್ಯಾಪ್ಟನ್ ಆರ್. ಎ. ಕೊಲೆ (R. A. Cole) ಯವರು ಇಂಗ್ಲಿಷಿನಲ್ಲಿ ರಚಿಸಿದ **ಕೊಡಗು ಭಾಷೆಯ ಸಾಮಾನ್ಯ ವ್ಯಾಕರಣ (An Elementary Grammar of the Coorg Language)** ಎಂಬ ಗ್ರಂಥ 1867 ರಷ್ಟು ಹಿಂದೆಯೇ ಪ್ರಕಟವಾಯಿತು.

ಅನೇಕ ಶತಮಾನಗಳಿಂದಲೂ ಕನ್ನಡದೊಡನೆ ಆಪ್ತಸಂಬಂಧವನ್ನು ಬೆಳೆಸಿಕೊಂಡು ಬಂದ ತಮಿಳು, ತೆಲುಗು ಮತ್ತು ಮಲೆಯಾಳಗಳಂಥ ಹಿರಿಯ ದ್ರಾವಿಡಭಾಷೆಗಳ ವಿಷಯವನ್ನಾಗಲೀ ಕರ್ಣಾಟಕದಲ್ಲಿ ಬಳಕೆಯಲ್ಲಿರುವ ಅವುಗಳ ಕೆಲವು ಭಾಷಾಭೇದಗಳ ಬಗ್ಗೆಯಾಗಲೀ ಸಂಕ್ಷಿಪ್ತವಾಗಿ ತಿಳಿಸುವುದಕ್ಕೂ ಇಲ್ಲಿ ಸ್ಥಳವಿಲ್ಲ. ಅಥವಾ ಕನ್ನಡದೊಡನೆ ಬಹುಕಾಲ ನಿಕಟಸಂಪರ್ಕ ಪಡೆದಿರುವ ಸಂಸ್ಕೃತ, ಪ್ರಾಕೃತಗಳು, ಮರಾಠಿ, ಹಿಂದಿ–ಉರ್ದು (ವಿಶೇಷವಾಗಿ ಅದರ ದಖನೀ ರೂಪ) ಇತ್ಯಾದಿ ಇಂಡೋ ಆರ್ಯನ್ ಭಾಷೆಗಳ ವಿಷಯವನ್ನೂ ಪ್ರಸ್ತಾವಿಸುವಂತಿಲ್ಲ. ಆದರೆ ಆಗಲೇ ತಿಳಿಸಿದಂತೆ ಕೊಂಕಣಿ ಭಾಷೆಯಾಡುವ ಜನರಲ್ಲಿ ಸುಮಾರು ಶೇಕಡ 37 ರಷ್ಟು ಜನ ಮೈಸೂರು ರಾಜ್ಯದಲ್ಲಿ ಇರುವುದರಿಂದ ಅದರ ಬಗ್ಗೆ ಮಾತ್ರ ಕೆಲವು ಮಾತುಗಳನ್ನು ಹೇಳಬಹುದು.

ಪ್ರಸಿದ್ಧರಾದ ಆಧುನಿಕ ಭಾಷಾವಿಜ್ಞಾನಿಗಳ ವಿಚಾರಪೂರ್ಣಮತದಂತೆ ಕೊಂಕಣಿಯು ಕೇವಲ ಬೇರೆ ಭಾಷೆಯೊಂದರ ಉಪಭಾಷೆಯಾಗಿರದೆ ಖಚಿತ ಸ್ಥಾನಮಾನಗಳಿರುವ ಒಂದು ಸ್ವತಂತ್ರಭಾಷೆಯಾಗಿದೆ. ಡಾ. ಎಸ್.ಎಮ್. ಕತ್ರೆಯವರ ಮಾತುಗಳಲ್ಲಿ ಹೇಳುವುದಾದರೆ ಕೊಂಕಣಿಯ ಭಾಷಾವೈಲಕ್ಷಣ್ಯಗಳನ್ನೆಲ್ಲ ಪರಿಶೀಲಿಸಿದನಂತರ (ಮರಾಠಿ ಮತ್ತು ಗುಜರಾತಿಗಳನ್ನು ಹತ್ತಿರದ ಸಂಬಂಧಿಗಳಾಗಿ ಪಡೆದ) ಮತ್ತು ಮಧ್ಯಭಾಷಾವರ್ಗದ (ವಿಶೇಷವಾಗಿ ಹಿಂದಿಯ ಚತುರ್ಥೀ ವಿಭಕ್ತಿ ಪ್ರತ್ಯಯ ‘ ಕಾ ’ ದ) ಸಂಪರ್ಕ ಪಡೆದ ಕೊಂಕಣಿಯನ್ನು ನೈಋತ್ಯ ಭಾಗದ ಭಾಷಾಸಮೂಹಕ್ಕೆ ಸೇರಿಸಬಹುದು. ವಿಸ್ತೃತರೂಪದ ಪುಲ್ಲಿಂಗ ಏಕವಚನ ನಾಮರೂಪಗಳ ರಚನೆಯಲ್ಲಿ ಕಾಣುವ ವ್ಯತ್ಯಾಸ ಮತ್ತು ಚತುರ್ಥೀ ವಿಭಕ್ತಿಗೆ ಹತ್ತುವ ಭಿನ್ನ ಪ್ರತ್ಯಯಗಳು–ಇವು ಕೊಂಕಣಿಯನ್ನು ಮರಾಠಿಯಿಂದ ಸ್ವತಂತ್ರವಾದ ಮತ್ತು ಪ್ರಾಚೀನ ಭಾಷಾವಸ್ಥಾನದ ಕೆಲವು ವೈಲಕ್ಷಣ್ಯಗಳನ್ನು ಉಳಿಸಿಕೊಂಡು ಬಂದಿರುವ ಭಾಷೆಯೆಂಬುದನ್ನು ತೋರಿಸುತ್ತವೆ. ಕೊಂಕಣಿ ಒಂದು ಉಪಭಾಷೆಯಾಗಿರದೆ ಸ್ವತಂತ್ರ ಭಾಷೆಯಾಗಿದೆಯೆಂಬುದು ಇದರಿಂದ ಸಿದ್ಧವಾಗುತ್ತದೆ. ಆದರೆ ಧ್ವನಿಸಂಬಂಧವಾದ ಪರಿಗಣನೆಗಳು ಈ ಎರಡೂ ಭಾಷೆಗಳಿಗೆ ಪ್ರಾಕೃತವೇ ಮೂಲ ಎನ್ನುವುದನ್ನು ತೋರುತ್ತವೆ. (The formation of Konkani, ಪುಟ 152).

ಕೊಂಕಣಿ ಎಂದರೆ ಪಶ್ಚಿಮ ಕಡಲ ತಡಿಯ ಕೊಂಕಣ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷೆ ಎಂದರ್ಥ

ಪ್ರಾಚೀನ ಕಾಲದಿಂದ ಬಂದ ಕೊಂಕಣದ ಗಡಿಗಳು ಯಾವುವೆಂಬುದು ಆಳವಾಗಿ ವಿಚಾರ ಮಾಡಬೇಕಾದ ಅಂಶವಾಗಿದ್ದು ಅದಕ್ಕೆ ಇದು ಸ್ಥಳವಲ್ಲ. ಕೊಂಕಣ ಶಬ್ದದ ನಿಷ್ಪತ್ತಿಕೂಡ ವಿವಾದಾಸ್ಪದ ವಿಷಯವಾಗಿದೆ. ಕ್ರಿ.ಶ. 5ನೆಯ ಶತಮಾನಕ್ಕಿಂತ ಈಚಿನದಲ್ಲದ ಪ್ರಾಚೀನ ತಮಿಳು ಗ್ರಂಥವಾದ ಶಿಲಪ್ಪದಿಕಾರಂನಲ್ಲಿ ಕೊಂಕಣರ್ (ಕೊಂಕಣದ ಜನರ) ಬಗ್ಗೆ ಪ್ರಸ್ತಾಪವಿದೆ. ಕ್ರಿ.ಶ. 6ನೆಯ ಶತಮಾನದ ವರಾಹಮಿಹಿರನ **ಬೃಹತ್ಸಂಹಿತೆಯಲ್ಲಿಯೂ** ಕೊಂಕಣ ಶಬ್ದ ಬರುತ್ತದೆ. ಆದರೆ ಕೊಂಕಣದ ಜನ ಅಥವಾ ಕರ್ಣಾಟಕಕ್ಕೆ ಸೇರಿರುವ ಕೊಂಕಣ ಪ್ರದೇಶದಲ್ಲಿರುವ ಜನರು ಆರಂಭದ ಶತಮಾನಗಳಲ್ಲಿ ಇವತ್ತಿನ ಕೊಂಕಣಿಗಾಗಲೀ ಅದರ ಪ್ರಾಚೀನರೂಪಕ್ಕಾಗಲೀ ಸಂಬಂಧಿಸಿದ ಭಾಷೆಯನ್ನು ಆಡುತ್ತಿದ್ದರೇ ಎಂಬುದು ಅನಿಶ್ಚಿತವಾದ ವಿಷಯ. 1186ರ ಶಾಸನವೊಂದು, ಅದೇ ಶಾಸನದಲ್ಲಿ ಕೊಂಕಣ ಚಕ್ರವರ್ತಿ ಎಂದು ಕರೆಯಲ್ಪಟ್ಟ ಅಪರಾದಿತ್ಯನಿಗೆ ಸಂಬಂಧಿಸಿದ್ದು ಅದರಲ್ಲಿರುವ ಕೆಲವು ವಾಕ್ಯಗಳನ್ನು ಕೊಂಕಣಿಭಾಷೆಯ ಪ್ರಾಚೀನ ರೂಪವೆಂದು ಹೇಳಲಾಗಿದೆ. ಆದರೆ ಈ ವಿಷಯದಲ್ಲಿ ಅಧಿಕಾರದಿಂದ ಮಾತಾಡಬಲ್ಲ ವಿದ್ವಾಂಸರೊಬ್ಬರ (ಡಾ॥ ಎಸ್. ಎಮ್. ಕತ್ರೆಯವರ) ಪ್ರಕಾರ ಮೇಲೆ ತಿಳಿಸಿದ ವಾಕ್ಯಗಳ ಭಾಷೆಯು ಪ್ರಾಚೀನ ಮರಾಠಿಯೇ ಹೊರತು ಕೊಂಕಣಿಯಲ್ಲ.

ಪೋರ್ಚುಗೀಸರು ಗೋವೆಯನ್ನು ಆಕ್ರಮಿಸಿಕೊಂಡಮೇಲೆ ಮತ್ತು ಜನರನ್ನು ಕ್ರೈಸ್ತಮತಕ್ಕೆ ಏಕಪ್ರಕಾರವಾಗಿ ಸೇರಿಸತೊಡಗಿದ ಮೇಲೆ ಕೊಂಕಣಿ ಜನರು ದಕ್ಷಿಣಕ್ಕೆ, ಉತ್ತರಕ್ಕೆ ಮತ್ತು ದಕ್ಷಿಣ ಕರ್ಣಾಟಕ ಜಿಲ್ಲೆಗಳಿಗೆ, ಅಲ್ಲದೆ ಕೇರಳಕ್ಕೂ ಸಹ ಓಡಿಹೋದರು. ಕೊಂಕಣಿಯಲ್ಲಿ ಬಹುಶಃ ಆ ಮೊದಲೂ ಭಾಷಾ ಭೇದಗಳು ಇದ್ದಿರಬಹುದು. ಆದರೆ ಈಗ ಕೊಂಕಣಿ ಜನ ವಿಶಾಲವಾದ ಪ್ರದೇಶದಲ್ಲಿ ಹರಡಿ ಹೋದುದ ರಿಂದಲೂ ಅವರ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿರುವ ವಿವಿಧ ವರ್ಗಗಳ ಕಾರಣ ದಿಂದಲೂ ಸುತ್ತ ಇರುವ ಹೊಸ ಪ್ರದೇಶಗಳಲ್ಲಿನ ಭಾಷಾಪ್ರಭಾವಗಳಿಂದಲೂ ಕೊಂಕಣಿ ಭಾಷೆಯು ಅನೇಕ ಉಪಭೇದಗಳು ಸ್ಪಷ್ಟವಾಗಿ ಹರಳುಗೊಂಡವು. ಈಗ ಕೊಂಕಣಿಯಲ್ಲಿ ಕನಿಷ್ಠ ಆರು ಉಪಭೇದ ಗಳಂತೂ ಇವೆ.

ಕೊಂಕಣಿಯನ್ನು ಬರೆಯಲು ಬಳಸುವ ಲಿಪಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಬೇರೆ ಬೇರೆ ಭಾಗಗಳಲ್ಲಿರುವ ಕೊಂಕಣಿಗರ ಬೇರೆ ಬೇರೆ ವರ್ಗಗಳು ದೇವನಾಗರಿ, ಕನ್ನಡ ಮತ್ತು ರೋಮನ್ ಲಿಪಿಗಳನ್ನು ತಾವಿರುವ ಸ್ಥಳಗಳಿಗೆ ಅನುಗುಣವಾಗಿ ಬಳಸುತ್ತಾರೆ. ಗೋವೆಯಲ್ಲಿ ಕೂಡ ತೀರ ಈಚಿನ ವರೆಗೂ ಲೆಕ್ಕಪತ್ರಗಳಿಗೆ ಮತ್ತು ಲೇಖನ ವ್ಯವಹಾರಗಳಿಗೆ ಕನ್ನಡವನ್ನೇ ಬಳಸುತ್ತಿದ್ದರೆಂಬುದನ್ನು ಇಲ್ಲಿ ಗಮನಿಸಬಹುದು. ಕದಂಬ ರಾಜರ ಕಾಲದಿಂದಲೂ ಗೋವೆಯಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು.

ಫಾದರ್ ಥಾಮಸ್ ಸ್ಟೀಫನ್ಸ್ ಎನ್ನುವವರು ರಚಿಸಿದ '**Art de Lingua Canarian**' ಎಂಬ ಗ್ರಂಥ 1640 ರಲ್ಲಿ ಪ್ರಕಟವಾಯಿತು. ಭಾರತೀಯ ಭಾಷೆಗಳನ್ನು ಕುರಿತ ವ್ಯಾಕರಣಗಳಲ್ಲೆಲ್ಲ ಮೊದಲು ಮುದ್ರಿತವಾದ ವ್ಯಾಕರಣ ಇದೇ ಆಗಿದೆ. ಹದಿನೇಳನೆಯ ಶತಮಾನದಿಂದ ಕೊಂಕಣಿ ಭಾಷೆ ಆಗಾಗ್ಗೆ ಸಾಹಿತ್ಯೋದ್ದೇಶಗಳಿಗೆ ಬಳಕೆಯಾಗತೊಡಗಿತು. ಅದಕ್ಕಿಂತ ಮುಂಚೆ ಕೊಂಕಣಿ ಸಾಹಿತ್ಯವೆಂಬುದೇ ಇರಲಿಲ್ಲವೆಂದು ತಿಳಿಯುತ್ತದೆ. ಈಗಲೂ ಕೊಂಕಣಿಯಲ್ಲಿ ಹೆಚ್ಚು ಬರೆಹ ಬರುತ್ತಿಲ್ಲ.

ಈ ಲೇಖನವನ್ನು ಮುಗಿಸುವ ಮುಂಚೆ ಒಂದು ಮಾತು ಹೇಳಬೇಕು. ಕನ್ನಡ ಜಿಲ್ಲೆಗಳಲ್ಲಿರುವ ಕೊಂಕಣಿ ಮಾತನಾಡುವ ಜನತೆ ಕನ್ನಡ ಸಾಹಿತ್ಯವನ್ನು ಬೆಳೆಸಿದ, ಬೆಳೆಸುತ್ತಿರುವ ಮತ್ತು ಕನ್ನಡದ ನಿಷ್ಠೆ ಯಲ್ಲಿ ಬೇರಾರಿಗೂ ಕಡಮೆಯಲ್ಲದ ಹಲವು ಪ್ರಸಿದ್ಧ ಬರೆಹಗಾರರಿಗೆ ಜನ್ಮವಿತ್ತಿದೆ. ಈ ಮಾತಿನ ಸತ್ಯತೆಗೆ ದಿ॥ ಪಂಜೆ ಮಂಗೇಶ ರಾವ್ ಮತ್ತು ದಿ॥ ಎಂ. ಗೋವಿಂದ ಪೈ ಈ ಇಬ್ಬರ ಹೆಸರೇ ಸಾಲದೆ ?

1961ರ ಭಾರತೀಯ ಜನಗಣತಿಯ ಪ್ರಕಾರ ಭಾರತದ ಮುಖ್ಯ ಭಾಷೆಗಳು ಮತ್ತು ಅವುಗಳನ್ನು ಮಾತೃಭಾಷೆಯಾಗಿ ಬಳಸುವ ಜನರ ಸಂಖ್ಯೆ.

| | |
|---|---|
| ಅಸ್ಸಾಮಿ | 58,03,465 |
| ಬಂಗಾಳಿ | 3,38,88,939 |
| ಗುಜರಾತಿ | 2,03,04,464 |
| ಹಿಂದಿ | 13,34,35,360 |
| ಕನ್ನಡ | 1,74,15,827 |
| ಕಾಶ್ಮೀರಿ | 19,56,115 |
| ಮಲಯಾಳಂ | 1,70,15,782 |
| ಮರಾಠಿ | 3,32,66,771 |
| ಒರಿಯ | 1,57,19,398 |
| ಪಂಜಾಬಿ | 1,09,50,826 |
| ಸಂಸ್ಕೃತ | 2,544 |
| ತಮಿಳು | 3,05,62,706 |
| ತೆಲುಗು | 3,76,68,732 |
| ಉರ್ದು | 2,33,23,518. |

ಮೂಲ ಲೇಖಕರು : ಪ್ರೊ॥ ಟಿ. ಎನ್. ಶ್ರೀಕಂಠಯ್ಯ
ಅನುವಾದಕರು : ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

# ಅಧ್ಯಾಯ 4

## ಕರ್ಣಾಟಕದ ಪ್ರಾಕ್ಚಾರಿತ್ರಿಕ ಸಂಸ್ಕೃತಿಗಳು

ಪ್ರಾಕ್ಚಾರಿತ್ರೆಯ ವಿದ್ಯಾರ್ಥಿಗೆ ಅಂದಿನ ಸನ್ನಿವೇಶದ ಅಧ್ಯಯನವು ಅತಿ ಮುಖ್ಯವೆಂಬುದು ಸ್ಪಷ್ಟವಾಗುತ್ತಿದೆ.

ಸಂಸ್ಕೃತಿಯು ಮಾನವ ಕುಲದ ಒಂದು ಫಲ ಎಂದು ತಿಳಿಯಬೇಕಾದರೆ ಅದು ಅಂದಿನ ಸನ್ನಿವೇಶಕ್ಕೆ ಹೇಗೆ ಹೊಂದಾಣಿಕೆಯಾಗಿತ್ತೆಂಬುದನ್ನು ಊಹೆಯ ಮೂಲಕ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ವಾಸ್ತವಿಕ ವಾಗಿ ಹೇಳಬೇಕಾದರೆ ಮಾನವನ ಭೂಗೋಳಶಾಸ್ತ್ರವು, ಪ್ರಾಕೃತಿಕಕ್ಷೇತ್ರಗಳಿಗೂ ಸಾಂಸ್ಕೃತಿಕ ವಿಚಾರ ಗಳಿಗೂ ಜೀವನ ವಿಧಾನಗಳಿಗೂ ಇರುವ ಸಂಬಂಧವನ್ನು ನಿರ್ಣಯಿಸುವ ಅತಿ ಮುಖ್ಯವಾದ ತತ್ವಗಳಲ್ಲಿ ಒಂದು.

ಪ್ರಾಕ್ಚಾರಿತ್ರ್ಯಯುಗದ ಕಾಲಗಣನೆಯ ಶಾಸ್ತ್ರವು ನದಿಯ ಕಾಲಗಣನಾ ಶಾಸ್ತ್ರಕ್ಕೆ ನಿಕಟ ಸಂಬಂಧ ಹೊಂದಿರುವುದರಿಂದ ನದಿಯ ವ್ಯೂಹದ ಅಧ್ಯಯನವು ಪ್ರಾಗೈತಿಹಾಸಕಾರನಿಗೆ ಅತಿ ಮುಖ್ಯವಾದುದು. ಎಲ್ಲ ಕಾಲಗಳಲ್ಲಿ ನದಿಗಳು ಮನುಷ್ಯನಿಗೆ ನೀರಿನ ಪೂರೈಕೆ ಆಹಾರ ಮತ್ತು ಸಂಪರ್ಕ ಗಳನ್ನು ಒದಗಿಸಿವೆ. ಮೇಲಾಗಿ ನದಿಯ ಉರುಟುಕಲ್ಲುಗಳು ಆದಿಮಾನವನಿಗೆ ತನ್ನ ಆಯುಧಗಳನ್ನು ತಯಾರಿಸಲು ಮುಖ್ಯವಾದ ಮೂಲವಸ್ತುಗಳಾಗಿದ್ದವು. ಪುರಾತನ ಶಿಲಾಯುಗದ ಮಾನವನು ತ್ಯಜಿಸಿದ ಆಯುಧಗಳು ಹೆಚ್ಚಾಗಿ ನದಿಯ ಪ್ರವಾಹ ಮೈದಾನಗಳಲ್ಲಿ ನಮಗೆ ದೊರಕುತ್ತವೆ. ಅತಿಮುಖ್ಯವಾದ ಉದಾಹರಣೆಗಳೆಂದರೆ : ಪಂಜಾಬಿನಲ್ಲಿ ಸಿಂಧೂ ಮತ್ತು ಸನ್, ಗುಜರಾತಿನಲ್ಲಿ ಸಬರ್ಮತಿ, ಮಧ್ಯಭಾರತದಲ್ಲಿ ನರ್ಮದಾ, ದಕ್ಷಿಣ ಭಾರತದಲ್ಲಿ ಕೋರ್ತ್ತಲ್ಲಯ್ಯೆಯಾರ್, ಪಾಲಾರ್, ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ಪಾತ್ರಗಳು. ಸ್ತರಾನುಕ್ರಮರೀತಿಯಲ್ಲಿ ಅಧ್ಯಯನ ಮಾಡಿರುವ ಪುರಾತನ ಶಿಲಾಯುಗದ ನಿವೇಶನ ವೆಂದರೆ ತುಂಗಭದ್ರಾದಂಡೆಯ ಮೇಲಿರುವ ಹಂಪಸಾಗರವನ್ನು ಉದಾಹರಣೆಯಾಗಿ ಕೊಡಬಹುದು. ಅದರ ನಿಷ್ಕೃಷ್ಟವಾದ ಸ್ಥಳ ಗೌರಿನಲ್ಲದ ಪೂರ್ವದಿಕ್ಕಿಗಿರುವ ಎರಡು ಅಂತಸ್ತಿನ ಮೆಕ್ಕಲುಮಣ್ಣು. ಈ ವಿಭಾಗವು ಎತ್ತರ ಮಟ್ಟಕ್ಕೆ ವ್ಯಾಪಿಸಿದಂತೆಲ್ಲಾ ಶಿಲೆಯ ಮೇಲೆ ಸಡಿಲವಾದ ಕರಲು, ಅನಂತರ ಕಂಕರ್ (Kankar) ಮಿಶ್ರವಾದ ಕರಲು, ಮತ್ತು ಇದರ ಮೇಲೆ 10 ಅಡಿ ದಪ್ಪದ ಕಂಕರ್ ಮಿಶ್ರವಾದ ಮೆಕ್ಕಲು ಮಣ್ಣಿದೆ. ಇದರಲ್ಲಿ ಮಣ್ಣಿನ ಎರಡು ಭಾಗಗಳನ್ನು ಗುರುತಿಸಬಹುದು. ಒಂದನೆಯದು ಬೂದಿ ಬಣ್ಣದ್ದು (2ಅಡಿ ದಪ್ಪ), ಎರಡನೆಯದು ಕಂದುಬಣ್ಣದ್ದು (7 ಅಡಿ). ಕೇವಲ ಕೆಲವೇ ಅಡಿ ದಪ್ಪದ ಸಡಿಲವಾದ ಕರಲುಮಣ್ಣಿನಲ್ಲಿ ಪುರಾತನ ಶಿಲಾಯುಗದ ಉಪಕರಣಗಳು ಸಿಕ್ಕಿವೆ. ದಕ್ಷಿಣ ಭಾರತದ ಒಳಪ್ರದೇಶದ ಅನೇಕ ನದಿಗಳ ಪುರಾತನ ಶಿಲಾಯುಗದ ಕರಲು ಮಣ್ಣು ತೆಳುವಾಗಿರುವುದು ಒಂದು ವೈಶಿಷ್ಟ್ಯವಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ಈ ಕರಲು ಮಣ್ಣಿನ ಪದರವು ಕೇವಲ ಶೇಖರಣೆಯಿಂದ ಆಗದೆ ನದಿಯ ಪಾತ್ರದ ಪದರವಾಗಿ ಉತ್ಪನ್ನವಾಗಿದೆ. ಈಗಿನ ನದಿಗಳಲ್ಲಿಯೂ ಅದೇ ರೀತಿಯ ಉರುಟುಕಲ್ಲು ಪದರ ಇದೆ. ನದಿಯು ಪ್ರವಾಹದಲ್ಲಿದ್ದಾಗ, ಈ ಉರುಟುಕಲ್ಲಿನ ಪದರವು ಜರುಗುತ್ತದೆ. ಆದರೆ ಬೇಸಗೆಕಾಲ

ವಲ್ಲಿ ಇದು ಒಣಗಿ ಮನುಷ್ಯನ ಪ್ರವೇಶಕ್ಕೆ ಅನುಕೂಲವಾಗುತ್ತದೆ. ಅಂತಹ ನಿವೇಶನಗಳಲ್ಲಿ ಪುರಾತನ ಶಿಲಾಯುಗದ ವಸ್ತುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿರುವುದನ್ನು ಸ್ಪಷ್ಟಪಡಿಸುತ್ತದೆ. ಪುರಾತನ ಶಿಲಾಯುಗದ ಮಾನವ ಉರುಟುಕಲ್ಲುಗಳನ್ನು ಸಂಗ್ರಹಿಸಿದ ಸ್ಥಳಗಳಲ್ಲಿಯೇ ಉಪಕರಣಗಳನ್ನಾಗಿ ಮಾರ್ಪಡಿಸುತ್ತಿದ್ದನು. ಅನಂತರ ಅವುಗಳಲ್ಲಿ ಅನೇಕವು ನದಿಗಳಲ್ಲಿ ಕೊಚ್ಚಿಹೋಗುತ್ತಿದ್ದವು. ಪುರಾತನ ಶಿಲಾಯುಗದಲ್ಲಿ ವಾಯುಗುಣವು ಇಂದಿಗಿಂತ ಬಹಳಮಟ್ಟಿಗೆ ಬೇರೆಯಾಗಿರಲಾರದು. ನಿಸ್ಸಂದೇಹವಾಗಿ ಅಂದಿನ ವಾತಾವರಣವು ಮುರಕಲ್ಲು (laterite) ರೂಪುಗೊಳ್ಳುವಷ್ಟು ತೇವಾಂಶವನ್ನೊಂದಿರಲಿಲ್ಲ ಮತ್ತು ಒಣ ಹವೆ ಕಾಲನಿಯತವಾಗಿ ಸಂಭವಿಸುತ್ತಿತ್ತು.

ಅಲ್ಲದೆ ಶಿಲಾಮುಟ್ಟುಗಳನ್ನು ಉಪಯೋಗಿಸುವ ಜನರ, ಮೂಲವಸ್ತುಗಳ ಹಂಚಿಕೆ ಮತ್ತು ಪೂರೈಕೆಯನ್ನು ಆಯಾ ಪ್ರದೇಶದ ಭೂಲಕ್ಷಣ ನಿಶ್ಚಯಿಸುತ್ತದೆ. ಎಲ್ಲಾ ಶಿಲೆಗಳೂ ಒಂದೇ ಮಟ್ಟದ ಕಾಠಿನ್ಯವನ್ನು ಹೊಂದಿರುವುದಿಲ್ಲ ಮತ್ತು ಒಂದೇ ರೀತಿಯಲ್ಲಿ ಸೀಳಿಕೊಳ್ಳುವುದಿಲ್ಲ. ನವಶಿಲಾಯುಗಕ್ಕೆ ಮುಂಚೆ ಉತ್ತರ ಯೂರೋಪಿನಲ್ಲಿ ಆಯುಧಗಳನ್ನು ಮಾಡಲು ಚಕಮುಕಿ ಕಲ್ಲನ್ನು [Flint] ಬಳಸಿಕೊಂಡಿದ್ದಾರೆ. ಕಾರಣ, ಅದನ್ನು ಕತ್ತರಿಸುವುದರಿಂದ ಅಥವಾ ಒತ್ತಡದಿಂದ ಪೊರೆ ಎಬ್ಬಿಸುವುದರಿಂದ ಸುಲಭವಾಗಿ ವ್ಯವಸ್ಥಿತ ರೂಪಕೊಡಬಹುದು. ಭಾರತ ಮತ್ತು ದಕ್ಷಿಣ ಆಫ್ರಿಕದಲ್ಲಿ ಆದಿಮಾನವನು ಸಾಮಾನ್ಯವಾಗಿ ಕೀಳುಮಟ್ಟದ ಸ್ಥಳೀಯ ವಸ್ತುಗಳನ್ನು ಉಪಯೋಗಿಸಬೇಕಾಗಿತ್ತು. ಈ ಮೂಲವಸ್ತುಗಳ ವ್ಯತ್ಯಾಸದ ಪರಿಣಾಮವು ಆಯುಧಗಳ ಅಂತಿಮರೂಪದಲ್ಲಿ ಗೋಚರವಾಗುತ್ತದೆ ಮತ್ತು ಕೆಲವು ಮೂಲವಸ್ತುಗಳ ಮೇಲೆ ತಾಂತ್ರಿಕ ದೃಷ್ಟಿಯಿಂದ ವಿಶಿಷ್ಟ ಉಪಾಯಗಳನ್ನು ಉಪಯೋಗಿಸುವುದು ಅನಿವಾರ್ಯವಾಗಿತ್ತು. (ಬುರ್ಕಿಕ್ 1928) ಕೈಗೊಡಲಿ ಮತ್ತು ಅಗಲವಾದ ಅಲಗಿನ ತುಂಡುಕೊಡಲಿಗಳು, ಭಾರತದಲ್ಲಿ ಪುರಾತನ ಶಿಲಾಯುಗದ ಕೈಗಾರಿಕೆಯ ವೈಶಿಷ್ಟ್ಯವಾಗಿವೆ. ಕೈಗೊಡಲಿಗಳೆ ಪ್ರಧಾನವಾಗಿರುವುದು ದಕ್ಷಿಣ ಪ್ರಸ್ಥಭೂಮಿ, ಕರ್ನಾಟಕ ಮತ್ತು ದಕ್ಷಿಣ ಭಾರತದ ಸಾಂಕೇತಿಕ ವೈಶಿಷ್ಟ್ಯವಾಗಿದೆ. ಈ ಕೈಗೊಡಲಿ ಸಂಕೀರ್ಣವು ಯೂರೋಪ್ ಮತ್ತು ಆಫ್ರಿಕದೇಶಗಳ ಕೊಡಲಿಗಳನ್ನು ನೆನಪಿಗೆ ತರುವುವು, ಆದರೆ ಉರುಟುಗಲ್ಲಿನ ಅಗಲವಾದ ಅಲಗಿನ ಆಯುಧವು ಜಾವಾ ಮತ್ತು ಬರ್ಮಾದೇಶಗಳ ಆಯುಧಗಳನ್ನು ಹೋಲುವುವು.

ಕರ್ನಾಟಕದಲ್ಲಿ ಪುರಾತನ ಶಿಲಾಯುಗದ ಮಾನವ ಮಾಡಿಕೊಂಡಿದ್ದ ಅತಿ ಮುಖ್ಯವಾದ ಬಯಲು ನಿವೇಶನಗಳಲ್ಲೊಂದೆಂದರೆ ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಕಿಬ್ಬನಹಳ್ಳಿಯಲ್ಲಿನ ಬೆಟ್ಟ ನಿವಾಸ. ಈ ನಿವೇಶನವು ಬಾಣಸಂದ್ರ ಬೆಟ್ಟಗಳ ತಪ್ಪಲಿನಲ್ಲಿದೆ. ಈ ಸ್ಥಳದಲ್ಲಿ ಬತ್ತಿ ಹೋಗಿರುವ ಅನೇಕ ಹೊಳೆಗಳಿವೆ. ಈ ಹೊಳೆಗಳ ಕರಲು ಮಣ್ಣಿನಲ್ಲಿ ಅನೇಕ ಆಯುಧ ಮತ್ತು ಸಲಕರಣೆಗಳು ದೊರಕಿವೆ. ಈ ಆಯುಧ ಸಮೂಹದಲ್ಲಿ ರೋಸ್ಟ್ರೊಕ್ಯಾರಿನೇಟ್ (Rostro carinate-like tools) ಮಾದರಿಯ ಆಯುಧಗಳಿವೆ. ಬಹುಶಃ ಈ ಆಯುಧಗಳನ್ನು ಬೇರುಗಳನ್ನು ಅಗೆಯಲು ಉಪಯೋಗಿಸುತ್ತಿದ್ದರು. ಕೆಲವು ಆಯುಧಗಳು ಕೊಕ್ಕಿನಂತಿದ್ದು ಇಂಗ್ಲೆಂಡಿನ ಕ್ಲ್ಯಾಕ್ಟಾನ್-ಆನ್-ಸೀ (Clacton-on-sea) ಯನ್ನು ಹೋಲುತ್ತವೆ. ಅಬ್ಬೆವಿಲ್ಲಿಯನ್ (Abbevillian) ಕೈಗೊಡಲಿಗಳು ಹೇರಳವಾಗಿವೆ. ತೆಳುವಾಗಿ ಮಾಡಿರುವ ಕತ್ತರಿಸುವ ಉಪಕರಣಗಳಿರುವುದು ಬಹುಶಃ ಮರಗಳನ್ನು ಮತ್ತು ಕೊಂಬೆಗಳನ್ನು ಕತ್ತರಿಸುವುದಕ್ಕೆ. ಅಂಡಾಕಾರದ ಕೆಲವು ಉಪಕರಣಗಳು ಅಂತ್ಯ ಅಷ್ಯೂಲಿಯನ್ ನೈಪುಣ್ಯವನ್ನು ಸೂಚಿಸುತ್ತವೆ.

ತೆಳು ಚಕ್ಕೆ ಉಪಕರಣಗಳಲ್ಲಿ ಅನೇಕ ಕೆರೆಯುವ ಉಪಕರಣಗಳು ದೊರಕಿವೆ. ಬಹುಶಃ ಇವುಗಳನ್ನು ಪ್ರಾಣಿಗಳ ಚರ್ಮವನ್ನು ಕೆರೆಯಲು ಉಪಯೋಗಿಸಿರಬಹುದು. ಟೊಳ್ಳಾದ ಕೆರೆಯುವ ಉಪಕರಣ

ಒಂದು ವೈಶಿಷ್ಟ್ಯ ಮತ್ತು ಅವುಗಳು ಇಲ್ಲಿ ಸಿಗುವುದನ್ನು ನೋಡಿದರೆ, ಕಿಬ್ಬನ ಹಳ್ಳಿಯ ಪುರಾತನ ಶಿಲಾಯುಗದ ಮಾನವನು ಶಿಲಾಉಪಕರಣಗಳ ಜೊತೆಗೆ, ಮರದ ಉಪಕರಣಗಳನ್ನು ಉಪಯೋಗಿಸುತ್ತಿದ್ದನೆಂಬುದನ್ನು ಸೂಚಿಸುತ್ತದೆ. ಟೊಳ್ಳಾದ ಕೆರೆಯುವ ಉಪಕರಣವನ್ನು ಮರದ ಭಲ್ಲೆಯ ಬುಡವನ್ನು ನುಣುಪು ಮಾಡಲು ಉಪಯೋಗಿಸುತ್ತಿದ್ದನು. ಇಂಗ್ಲೆಂಡಿನಲ್ಲಿ ಈ ಉಪಕರಣ ಮತ್ತು ಮರದ ಭಲ್ಲೆಗಳು ಒಟ್ಟಿಗೆ ದೊರೆತಿವೆ. ಆದರೆ ಭಾರತದಲ್ಲಿ ಮರವು ಉಷ್ಣವಲಯದ ವಾತಾವರಣದಿಂದ ಕೆಡುತ್ತದೆ. ಭೈರಿಗೆಯು ಮತ್ತೊಂದು ಗಮನಿಸಬೇಕಾದ ಉಪಕರಣ. ಬೇಟೆಯಾಡಿದ ಪ್ರಾಣಿಗಳ ಚರ್ಮವನ್ನು, ಸಂಪೂರ್ಣವಾಗಿ ಕೆರೆದನಂತರ ಅದಕ್ಕೆ ರಂಧ್ರ ಹಾಕಲು ಈ ಭೈರಿಗೆಯನ್ನು ಉಪಯೋಗಿಸಿರಬಹುದು.

1955ರಲ್ಲಿ ಜೋಶಿಯವರು ಮಲಪ್ರಭಾ ದಂಡೆಯ ಮೇಲಿನ ಇಪ್ಪತ್ತೊಂದು ನಿವೇಶನಗಳನ್ನು ಪರಿಶೋಧಿಸಿದ್ದಾರೆ. ಅವುಗಳಲ್ಲಿ ಮನಾಸ್ಗಿ (ಮೇಗೂರ್ ಅಸೋಕಿ) ಮತ್ತು ಖ್ಯಾದ್, ಮಲಪ್ರಭಾ ಕಣಿವೆಯ ಪುರಾತನ ಶಿಲಾಯುಗದ ಮಾನವನ ಅತಿ ಮುಖ್ಯವಾದ ವಾಸಸ್ಥಳಗಳು. ಅಂತ್ಯ ಅಷ್ಯೂಲಿಯನ್ ಕಾಲದ ಖ್ಯಾದ್ ನಿವೇಶನದ ಉಪಕರಣಗಳು, ಆಸಕ್ತಿವಹಿಸುವಂತಹ, ಬಹಳ ನಯವಾಗಿ ಮಾಡಲ್ಪಟ್ಟಿರುವ ಕೈಗೊಡಲಿಗಳು ಮತ್ತು ಸೀಳುವ ಉಪಕರಣಗಳು. ಶ್ರೀ ಫೂಟ್‌ಅವರಿಂದ ಬೆಳಕಿಗೆ ಬಂದಿರುವ ಇತರ ಮುಖ್ಯವಾದ ನಿವೇಶನಗಳೆಂದರೆ ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಮತ್ತು ಬಳ್ಳಾರಿಯ ನೈಋತ್ಯಕ್ಕೆ ಆರು ಮೈಲಿಯಲ್ಲಿರುವ ಹಾಲಕುಂಡಿ. ಚಿತ್ರದುರ್ಗ ಜಿಲ್ಲೆಯ ತಾಳ್ಯ, ಚಿಕ್ಕಮಗಳೂರು ಜಿಲ್ಲೆಯ ನಿಡಘಟ್ಟ ಶಿವಮೊಗ್ಗ ಜಿಲ್ಲೆಯ ನ್ಯಾಮತಿ, ಬಳ್ಳಾರಿ ಜಿಲ್ಲೆಯ ಕುರಿಕುಪ್ಪ, ಗಾಡಿಗನೂರು, ದರೋಜಿ ಮತ್ತು ಅಂಗೂರು ಇವುಗಳು ಫೂಟ್‌ಅವರಿಂದ ಗಮನಿಸಲ್ಪಟ್ಟ ಇತರ ಅಮುಖ್ಯವಾದ ನಿವೇಶನಗಳು.

ಇತ್ತೀಚೆಗೆ ಮೈಸೂರಿನ ಪುರಾತತ್ವ ಶೋಧನೆಯ ವಿಭಾಗದವರು ಪರಿಶೋಧಿಸಿರುವ ಒಂದು ಮುಖ್ಯವಾದ ನಿವೇಶನವು ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ಹೊರವಲಯದಲ್ಲಿದೆ.

ಘಟಪ್ರಭಾ ನದಿಯ ಪಾತ್ರದ ಮಧ್ಯೆ ಉರುಟುಗಲ್ಲಿನ ನಿಸ್ಸಾರವಾದ ಸ್ಥಳವೊಂದು ಕಾಣುತ್ತದೆ. ಈ ಸ್ಥಳದಿಂದ ಅಬ್ಬೆವಿಲಿಯನ್ ಮತ್ತು ಆದಿ ಅಷ್ಯೂಲಿಯನ್ನಿನ ಉಪಕರಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹಿಸಿದ್ದಾರೆ. ಇವುಗಳಲ್ಲಿ ಅನೇಕ ಆಯುಧಗಳನ್ನು ಮರಳು ಶಿಲೆಯಿಂದ ಮಾಡಿದ್ದಾರೆ. ಅಂತ್ಯ ಅಷ್ಯೂರಿಯನ್ ಕಾಲದ ಅಂಡಾಕೃತಿಯ ಉಪಕರಣಗಳು ಇಲ್ಲಿ ದೊರಕುತ್ತವೆ. ಆದರೆ ಅವುಗಳ ಸಂಖ್ಯೆ ಬಹಳ ಕಡಮೆ.

ಸದ್ಯದಲ್ಲಿ ಕರ್ನಾಟಕದ ಪುರಾತನ ಶಿಲಾಯುಗದ ಮಾನವನ ಹೆಚ್ಚಿನ ವಿವರಣೆಗಳು ನಮಗೆ ತಿಳಿದಿಲ್ಲ. ಅವನ ಜೀವನ ದುಸ್ಸಹವಾಗಿದ್ದು, ಹೆಚ್ಚಿನ ಜೀವಮಾನ ಬೇಟೆಯಾಡುವುದರಲ್ಲಿಯೂ ಮೀನು ಹಿಡಿಯುವುದರಲ್ಲಿಯೂ ನಿರತವಾಗಿದ್ದುದಲ್ಲದೆ ದಿನದಿನಕ್ಕೂ ತನಗೂ ತನ್ನ ಸಂಸಾರಕ್ಕೂ ಆಹಾರ ಸಂಗ್ರಹಿಸುವುದರಲ್ಲೆ ಕಳೆದಿತ್ತು. ನಮಗೆ ಅವನ ಅವಶೇಷಗಳು ದೊರಕಿದರೆ ಅವನ ಶಾರೀರಿಕ ಆಕೃತಿಯನ್ನು ತಿಳಿಯಲು ಸಾಧ್ಯವಾಗುತ್ತಿತ್ತು.

### ಕರ್ನಾಟಕದಲ್ಲಿ ಮಧ್ಯ ಶಿಲಾಯುಗ

ಆಹಾರವನ್ನು ಸಂಗ್ರಹಿಸುವ ಘಟ್ಟವಾದ ಪುರಾತನ ಶಿಲಾಯುಗಕ್ಕೂ ಆಹಾರವನ್ನು ಉತ್ಪಾದಿಸುವ ಘಟ್ಟವಾದ ನವಶಿಲಾಯುಗಕ್ಕೂ ಮಧ್ಯೆ ಸಣ್ಣ ಶಿಲಾ ಕೈಗಾರಿಕೆಗಳಿದ್ದವು. ಈ ಘಟ್ಟಕ್ಕೆ, ಯೂರೋಪಿನಲ್ಲಿ ಮಧ್ಯಶಿಲಾಯುಗವೆಂದು ಕರೆದಿದ್ದಾರೆ. ಆದರೆ ಅದು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ


ಪ್ರಾಗೈತಿಹಾಸಿಕ
ಕರ್ನಾಟಕ
ಬೀದರ್
ಕಲ್ಬುರ್ಗಿ
ಭೀಮಾನದಿ
ಬಿಜಾಪುರ
ಸಲವಡಗಿ
ಸಪ್ತಸಾಗರ
ಘಟಪ್ರಭಾ ನದಿ
ಬಾಗಲಕೋಟೆ
ಕೃಷ್ಣಾನದಿ
ಪಿಕ್ಲಿಹಾಳ
ರಾಯಚೂರು
ಕೋಡೆಕಲ್
ವಾಟ್ಗಲ್
ಶಿವಯೋಗಮಂದಿರ
ಮಸ್ಕಿ
ಆನಂದಗಲ್
ಬೆಳಗಾಂ
ಮಲಪ್ರಭಾ ನದಿ
ಧಾರವಾಡ
ತುಂಗಭದ್ರಾ ನದಿ
ದಾರೋಜಿ
ಸಂಗನಕಲ್ಲು
ಬಳ್ಳಾರಿ
ಹಂಪಸಾಗರ
ಹಲಕುಂದಿ
ಬ್ರಹ್ಮಗಿರಿ
ಕಾರವಾರ
ಚಿತ್ರದುರ್ಗ
ತಾಳ್ಯ
ಜಾನಗಲ್ಲು
ಶಿವಮೊಗ್ಗ
ಲಿಂಗದಹಳ್ಳಿ
ಚಿಕ್ಕಮಗಳೂರು
ತುಮಕೂರು
ಕಿಬ್ಬನಹಳ್ಳಿ
ಜಾಲಹಳ್ಳಿ
ಕೋಲಾರ
ಹಾಸನ
ಮಂಗಳೂರು
ಬೆಂಗಳೂರು
ಮಂಡ್ಯ
ಕಾವೇರಿ ನದಿ
ಮೈಸೂರು
ಟಿ. ನರಸೀಪುರ
ಮಡಿಕೇರಿ
ಕಪಿಲಾನದಿ
ಸೂಚನೆ
ಜಿಲ್ಲಾಮುಖ್ಯಸ್ಥಳ
ಮಧ್ಯ ಶಿಲಾಯುಗ
ನವ ಶಿಲಾಯುಗ
ನವ ಶಿಲಾಯುಗ ಮತ್ತು ತಾಮ್ರ ಶಿಲಾಯುಗ
ಪುರಾತನ ಶಿಲಾಯುಗ
ಕ್ಷುದ್ರ ಶಿಲಾಯುಗ

ಇರುವುದೆ ? ಇದುವರೆಗಿನ ನಿದರ್ಶನ ಸ್ಥಿರೀಕರಿಸುವಂತಿಲ್ಲ. ಬಿಜಾಪುರ ಜಿಲ್ಲೆಯ ತಾಳಿಕೋಟೆಯ ಸಮೀಪದಲ್ಲಿರುವ ಸಾಲ್ವಡಗಿಯಲ್ಲಿ, ಇತ್ತೀಚೆಗೆ ಸಿಕ್ಕಿರುವ ಸಲಕರಣೆಗಳು ಆಸಕ್ತಿವಹಿಸುವಂತಹವುಗಳಾಗಿವೆ. ಚಾಕುವಿನ ಅಲಗುಗಳು, ಬೈರಿಗೆಗಳು ಮತ್ತು ಕೆರೆಯುವ ಉಪಕರಣಗಳು ಸಮೃದ್ಧಿಯಾಗಿರುವುದರಿಂದ ಈ ಆಯುಧ ಸಮೂಹವು 2ನೆಯ ಮತ್ತು ಮೂರನೆಯ ಶಿಲಾವರ್ಗಕ್ಕೆ ಸೇರುವ ಸಂಭವವಿದೆ. ಈ ಆಯುಧಗಳು ದೊಡ್ಡದಾಗಿವೆ ಮತ್ತು ತೆಳುಚಕ್ಕೆ ಅಲಗುಗಳು ಹೆಚ್ಚಾಗಿ ದೊರಕುತ್ತವೆ. ಮೇಲಾಗಿ ಅರ್ಧ ಚಂದ್ರಾಕೃತಿಯ ಮತ್ತು ಚೂಪಾದ ಆಯುಧಗಳು ದೊರೆತಿಲ್ಲ. ಹರಪ್ಪ ಮಾದರಿಯ ಉದ್ದವಾದ ಅಲಗುಗಳು, ಕೊಳಲಿನ ಮಾದರಿಯ ಕೋರ್‌ಗಳು (Fluted cores) ಮತ್ತು ಚಾಕುವಿನ ಅಲಗುಗಳು ಸಿಂಧೂ ಕಣಿವೆಯ ತಾಮ್ರ ಶಿಲಾಯುಗದ ಸಂಸ್ಕೃತಿಯ ಸಂಬಂಧವನ್ನು ಸೂಚಿಸುತ್ತವೆ. ಆದರೆ ಇದು ದಖನ್ನಿನ ಕಪ್ಪು ಬಣ್ಣದಿಂದ ಸಿಂಗರಿಸಿದ ಕೆಂಪು ಕುಂಭಗಳ (Black–on–red–pottery) ಮಾದರಿಯ ತಾಮ್ರ ಶಿಲಾಯುಗ ಹಾಗೂ ಬ್ರಹ್ಮಗಿರಿ ಮಾದರಿಯ ಕ್ಷುದ್ರ ಶಿಲಾಯುಗಗಳ ಸಂಬಂಧವನ್ನು ಸೂಚಿಸುವುದಿಲ್ಲ. ಕರ್ನಾಟಕದಲ್ಲಿ ಮಧ್ಯ ಶಿಲಾಯುಗದ ಕುರುಹುಗಳನ್ನು ಇನ್ನೂ ಸ್ಥಿರಪಡಿಸಬೇಕಾಗಿದೆ.

**ಕರ್ನಾಟಕದಲ್ಲಿ ನವಶಿಲಾಯುಗ**

ಬೇರೆ ಪ್ರದೇಶಗಳಿಗಿಂತ ಹೆಚ್ಚಾಗಿ ಕರ್ನಾಟಕವು ನವಶಿಲಾಯುಗದ ಮಾನವನನ್ನು ಆಕರ್ಷಿಸಿದಂತೆ ತೋರುತ್ತದೆ. ಇದಕ್ಕೆ ಒಂದು ಮುಖ್ಯವಾದ ಕಾರಣವೆಂದರೆ, ಸಮೃದ್ಧಿಯಾಗಿ ದೊರಕುವ ಟ್ರ್ಯಾಪ್‌ಡೆಕ್ ಶಿಲೆಗಳು. ಈ ಶಿಲೆಗಳೆ ನವಶಿಲಾಯುಗದ ಮಾನವನು ತಯಾರಿಸಿದ ಬಾಚಿ, ಕೊಡಲಿ ಮತ್ತು ಉಳಿಗಳ ಮೂಲವಸ್ತುಗಳು. ಈ ಆಯುಧಗಳ ಅದರಲ್ಲೂ ಕತ್ತರಿಸುವ ಆಯುಧದ ಬಾಯಿಯ ಸಾಮರ್ಥ್ಯವನ್ನು ಹೆಚ್ಚಿಸಲು ಮೆರುಗು ಕೊಟ್ಟಿದ್ದನು. ಕರ್ನಾಟಕದ ನವಶಿಲಾಯುಗದ ಮಾನವ ತನ್ನ ಆಯುಧಗಳಿಗೆ ಮೆರುಗುಕೊಡಲು ಬಂಡೆಯ ಮೇಲೆ ಉಜ್ಜಿದ ಗೆರೆಗಳು ಬಳ್ಳಾರಿಯ ಉತ್ತರ ಬೆಟ್ಟದಲ್ಲಿ ಸಿಕ್ಕಿವೆ. ಇವುಗಳನ್ನು ಫೂಟ್‌ಅವರು (1916) 1889ನೇ ಇಸವಿ ಫೆಬ್ರುವರಿ 19ನೇ ತಾರೀಖು ಆಲೂರು ತಾಲೂಕು ಹೆಲಾಳ ಗುಂಡಿಯಲ್ಲಿ ಕಂಡುಹಿಡಿದರು. ಕರ್ನೂಲು ಜಿಲ್ಲೆಯ ಪತ್ತಿಕೊಂಡ ತಾಲೂಕಿನ ಕಪ್ಪತರಲ ಬೆಟ್ಟದಲ್ಲಿಯೂ ಹೈದರಾಬಾದಿನ ಪುಲ್ಲಯ್ಯನ ಗುಡ್ಡದಲ್ಲಿಯೂ ಅತ್ಯುತ್ತಮವಾಗಿ ರಕ್ಷಿಸಲ್ಪಟ್ಟಿರುವ ಆಯುಧಗಳನ್ನು ನಯ ಮಾಡಲು ಉಜ್ಜಿದ ಗೆರೆಗಳು ಬಂಡೆಯಲ್ಲಿ ಕಂಡುಬಂದಿವೆ. ಡಿಟೆರ್ರ (1942) ಅವರ ಸಂಶೋಧನೆಯಿಂದ ಈ ಗೆರೆಗಳು ಕೊಡಲಿ ತಯಾರಿಕೆಗೆ ಸಂಬಂಧಪಟ್ಟವೆಂದು ದೃಢಪಟ್ಟಿವೆ. ಇವರು ಕಾಶ್ಮೀರದಲ್ಲಿ ಮತ್ತೊಂದು ಮುಖ್ಯವಾದ ನವಶಿಲಾಯುಗದ ನಿವೇಶನವಾದ ಬುರ್ಜಹಾಮ್‌ನ ಹತ್ತಿರ ಒಂದು ದೊಡ್ಡ ಕ್ವಾರ್ಟ್ಜೈಟ್ ಬಂಡೆಯಲ್ಲಿ ಏಳುಗೆರೆಗಳನ್ನು ಗುರುತಿಸಿದ್ದಾರೆ. ಈ ಪ್ರತಿಯೊಂದು ಗೆರೆಯೂ ಒಂದೂವರೆ ಅಂಗುಲ ಆಳ ಆರು ಅಂಗುಲ ಉದ್ದವನ್ನು ಹೊಂದಿದೆ.

ಟ್ರಾಪ್ ಎನ್ನುವ ಪದವು ಹಳೆಯ ಸ್ವೀಡಿಷ್‌ಪದ ‘ ಟ್ರಾಪ್ಪ ’ ಎನ್ನುವುದರಿಂದ ಹುಟ್ಟಿದೆ. ಟ್ರಾಪ್ಪ ಎಂದರೆ ಮೆಟ್ಟಲು ಎಂದು ಅರ್ಥ. ಶಿಲಾಶಾಸ್ತ್ರದ ಪ್ರಕಾರ ಟ್ರ್ಯಾಪ್ ಶಿಲೆಯ ಸಂಯೋಜನೆಯ ವೈವಿಧ್ಯದಿಂದ ಟ್ರ್ಯಾಕೈಟ್, ಆಂಡಿಸೈಟ್ ಮತ್ತು ಬೆಸಾಲ್ಟ್ ಎಂಬ ಶಿಲೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ವಿಶಾಲವಾದ ಟ್ರ್ಯಾಪ್ ಶಿಲಾಪದರಗಳು ರಂಧ್ರಗಳನ್ನೊಂದಿರುವುದರಿಂದ ಆಯುಧಗಳನ್ನು ಮಾಡಲು ಯೋಗ್ಯವಲ್ಲ. ಶಿಲಾರಸವು, ಆರ್ಷೇಯಿ ಶಿಲಾಸ್ತೋಮ ತೊಡಕನ್ನು ಭೇದಿಸಿಕೊಂಡು ಬಂದು ಟ್ರ್ಯಾಪ್‌ಡೈಕ್ ಶಿಲೆಗಳಾಗಿರುವುದರಿಂದ ಅವುಗಳಿಗೆ ಒತ್ತುಕೂಡಿದ ರಚನೆಯಿದೆ, ಮತ್ತು ಅವು ಬಹಳ ಉತ್ತಮವಾದ ಮೂಲವಸ್ತುಗಳು. ಫೂಟ್ (1895) ಅವರು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಹಿಡಿದ 260 ಡೈಕ್‌ಗಳಲ್ಲಿ, ಗೊಲ್ಲ ಲಿಂಗದಹಳ್ಳಿ ಡೈಕ್ ಶಿಲೆಯು ಸಂಡೂರು ಅಧರಾವನತ (Sandur synchine)ದ ದಕ್ಷಿಣದಿಂದ ಪ್ರಾರಂಭವಾಗಿ ರಾಯದುರ್ಗದ ಪಶ್ಚಿಮಕ್ಕಿರುವ ಕೈಲಾಸಕೊಂಡದ ವರೆಗೆ ಸುಮಾರು 3 ಮೈಲಿ

ಉದ್ದವಿವೆ. ಇವುಗಳಲ್ಲದೆ ಜಟಿಂಗ ರಾಮೇಶ್ವರ ಬೆಟ್ಟದ ಹತ್ತಿರವಿರುವ ವದ್ದರ ಹಳ್ಳಿಯ ಡೈಕ್ ಶಿಲೆಯು ಕೂಡ ಬ್ರಹ್ಮಗಿರಿಯ ನವಶಿಲಾಯುಗದ ಮಾನವನ ಬಳಕೆಯಲ್ಲಿತ್ತು.

ಭೂಶೋಧನೆಯ ಪರಿಮಿತಿಯಿಂದ ಯಾವ ವಿಧವಾದ ಕಟ್ಟಡಗಳು ಸಿಕ್ಕದಿದ್ದರೂ, ತೋಡುದಾರಿ ಯೊಂದರಲ್ಲಿ ದೊರೆತಿರುವ ಒಂದೇ ಸಾಲಿನಲ್ಲಿರುವ ಕಂಭದ ಗುಳಿಗಳಿಂದ ಕೆಲವು ನಿವಾಸಗಳು ಆಯತಾಕಾರದ ವ್ಯವಸ್ಥೆಯನ್ನೊಂದಿದ್ದವೆಂದು ತಿಳಿದುಬರುತ್ತದೆ. ಹೆಚ್ಚಿನ ಎತ್ತರವಿಲ್ಲದ ಗೋಡೆಗಳಿಗೆ ಮರದ ದಿಮ್ಮಿ ಗಳನ್ನೂ ಒರಟು ಗ್ರ್ಯಾನೈಟ್ ಶಿಲೆಗಳನ್ನೂ ಉಪಯೋಗಿಸಿದ್ದಾರೆ. ನಿರ್ದಿಷ್ಟವಾದ ಸಮಸ್ಯೆಗಳನ್ನು ಬಗೆ ಹರಿಸಲು ಸಮತಲ ಭೂಶೋಧನೆಯು (horizontal excavation) ಗಣನೀಯವಾದ ಉಪಯೋಗ ವಾಗಬಹುದು.

ಹೆಣವನ್ನು ಹೂಳುವುದು ಮತ್ತು ಕುಂಭ ಶವಸಂಸ್ಕಾರ ಇವುಗಳು ನವಶಿಲಾಯುಗ ಮತ್ತು ತಾಮ್ರ ಶಿಲಾಯುಗದ ಜನರಲ್ಲಿ ವಾಡಿಕೆಯಾಗಿದ್ದವು. ಕೇವಲ ಎರಡು ಶವಸಂಸ್ಕಾರ ಉದಾಹರಣೆಗಳು ಮಾತ್ರ ಸಿಕ್ಕಿವೆ. ಅವುಗಳಲ್ಲೊಂದರಲ್ಲಿ, ಎಂಟು ಅಥವಾ ಹತ್ತು ವರ್ಷದ ಬಾಲಕನ ಪೂರ್ಣ ಅಸ್ಥಿ ಪಂಜರವೊಂದು ಕಂಡುಬಂದಿದೆ. ಆ ಬಾಲಕನ ತಲೆಯು ಪೂರ್ವಾಭಿಮುಖವಾಗಿದ್ದು ಅವನ ತಲೆಯ ಹತ್ತಿರ ನಳಿಕೆಯಿರುವ ಕುಂಭಗಳು ಮತ್ತು ತೊಡೆಯ ಹತ್ತಿರ ಎರಡು ಮಣ್ಣಿನ ಸಣ್ಣ ಬಟ್ಟಲುಗಳಿರುವುದು ಒಂದು ರೀತಿಯ ಶವಸಂಸ್ಕಾರವನ್ನು ಸೂಚಿಸುತ್ತದೆ. ಕುಂಭ ಶವಸಂಸ್ಕಾರವು ಹೆಚ್ಚಾಗಿ ರೂಢಿಯಲ್ಲಿತ್ತು. ಆದರೆ ಅದು ಶಿಶುಗಳ ಶವಸಂಸ್ಕಾರಕ್ಕೆ ಮಾತ್ರ ಮೀಸಲಾಗಿತ್ತು. ಬಾಯಿ ಅಗಲವಾದ ಒರಟು ಕುಂಭಗಳಲ್ಲಿ ಶವವನ್ನು ಅಡಗಿಸುತ್ತಿದ್ದರು.

ನವಶಿಲಾಯುಗದ ಮಾನವನು ಬೂದುಬಣ್ಣದ ಒರಟು ರಚನೆಯ, ಉಜ್ಜಿದ, ಕೈಯಿಂದ ಮಾಡಿದ ಕುಂಭಗಳನ್ನು ಉಪಯೋಗಿಸುತ್ತಿದ್ದನು. ಕುಂಭದ ಆಕೃತಿಗಳೂ ಕೂಡ ಸರಳವಾಗಿವೆ. ಅಗಲ ಬಾಯಿಯ ಕುಡಿಯುವ ಬಟ್ಟಲುಗಳು, ಸುರಿವ ನಳಿಕೆಯಿರುವ ಮತ್ತು ಸಾಧಾರಣ ಕುಂಡಗಳು, ಬಟ್ಟಲುಗಳು, ಆಡಂಬರದ ಬಾಯಿಯಿರುವ ದೊಡ್ಡ ಕುಂಭಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಕಂದು ಬಣ್ಣದ ಈ ಒರಟು ಕುಂಭಗಳು, ಕೆಲವು ಸಂದರ್ಭಗಳಲ್ಲಿ ಕೆತ್ತಿದ ಅಡ್ಡಗೆರೆಗಳಿಂದಲೂ ಹೆರಿಂಗ್ ಮೀನಿನ ಎಲುಬುಗಳ ಮಾದರಿಯಲ್ಲಿ ಸಿಂಗರಿಸಲ್ಪಟ್ಟಿವೆ.

ಇವುಗಳಲ್ಲಿ ಕೆಲವು ಉಜ್ಜಿರುವ, ಬೂದಿ ಬಣ್ಣದ ಬೋಗುಣಿ ಮತ್ತು ಬಟ್ಟಲುಗಳ ಕಂಠಗಳಿಗೆ ಕಾವಿ ಮಣ್ಣಿನ ಬಣ್ಣ ಹಚ್ಚಿರುವುದು ಸ್ವಾರಸ್ಯವಾಗಿದೆ. ಟಿ. ನರಸೀಪುರದ ಹತ್ತಿರ ಭೂಶೋಧನೆಯಿಂದ, ಉಜ್ಜಿದ ಬೂದುಬಣ್ಣದ ಕುಂಭಗಳನ್ನು ತೆಗೆದಿದ್ದಾರೆ. ಲಿಂಗಸುಗೂರು ತಾಲೂಕಿನ ವೊಟ್ಟುಗಲ್ಲಿನ ನವಶಿಲಾಯುಗದ ನಿವೇಶನದಿಂದ ಸಂಗ್ರಹಿಸಿದ ಕೆಲವು ಬೂದಿ ಬಣ್ಣದ ಉಜ್ಜಿದ ಕುಂಭದ ಕಂಠದ ಚೂರುಗಳ ಕೆಳಭಾಗದಲ್ಲಿ ನೇರಳೆ ಬಣ್ಣದ ಗೆರೆಯಿದೆ. ಈ ಆಶಾದಾಯಕ ನಿವೇಶನವು ಭೂಶೋಧನೆಗೆ ಅರ್ಹವಾಗಿದೆ. ಟಿ. ನರಸೀಪುರದ ನಿವೇಶನದಲ್ಲಿ ಸುರಿವ ನಳಿಕೆಯುಳ್ಳ ಉಜ್ಜಿದ, ಬೂದಿ ಬಣ್ಣದ ಅಥವಾ ಮಾಸಲು ಕೆಂಪು ಬಣ್ಣದ ಕುಂಭಗಳು ಗಣನೀಯ ಸಂಖ್ಯೆಯಲ್ಲಿ ಸಿಕ್ಕಿವೆ. ಟಿ. ನರಸೀಪುರ ನಿವೇಶನದಲ್ಲಿ ಮೂರು–ನಾಲ್ಕು ಬಾರಿ ಭೂಶೋಧನೆ ನಡೆಸಿದಾಗ್ಯೂ ಮೆರುಗು ಕೊಟ್ಟಿರುವ ಕಲ್ಲಿನ ಆಯುಧ (celts) ಗಳನ್ನುಳಿದು ಆಹಾರ ಉತ್ಪಾದನಾ ನಿದರ್ಶನಗಳ ಕೊರತೆಯಿದ್ದರೂ, ತಾಮ್ರ ಅಥವಾ ಕಂಚು ಸಂಪೂರ್ಣವಾಗಿ ದೊರೆತಿಲ್ಲದಿರುವುದು ಗಮನಿಸಬೇಕಾದ ಸಂಗತಿ. ಈ ನಿವೇಶನವು ಲೋಹಗಳನ್ನು ಉಪಯೋಗಿಸದಿದ್ದ ಜನರ ನೆಲೆಯಾಗಿತ್ತು ಮತ್ತು ಕುಂಭಶಾಸ್ತ್ರ ನಿದರ್ಶನದಿಂದ ಇವರು ನವಶಿಲಾಯುಗಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಅನಂತರ ತಾಮ್ರ ಶಿಲಾಯುಗದ ಜನರು ದಖನ್ ಅಥವಾ ಮಧ್ಯಭಾರತದಿಂದ ಬಂದು ಈ ನಿವೇಶನದಲ್ಲಿ

ಸ್ವಲ್ಪಕಾಲದವರೆಗೆ ತಂಗಿದ್ದರು. ಈ ವಿಷಯವು ನವಶಿಲಾಯುಗ ಮತ್ತು ತಾಮ್ರ ಶಿಲಾಯುಗದ ಸ್ತರಗಳು ಒಂದರ ಮೇಲೊಂದು ಪ್ರಸರಿಸಿರುವುದರಿಂದ ತಿಳಿದು ಬರುತ್ತದೆ.

## ಕರ್ನಾಟಕದ ತಾಮ್ರ ಶಿಲಾಯುಗದ ಸಂಸ್ಕೃತಿ

ಅನೇಕ ನಿವೇಶನಗಳಲ್ಲಿ ನವಶಿಲಾಯುಗ ಮತ್ತು ತಾಮ್ರ ಶಿಲಾಯುಗಗಳನ್ನು ಪ್ರತ್ಯೇಕ ಮಾಡಲು ಸ್ಪಷ್ಟವಾದ ನಿದರ್ಶನಗಳು ಕಂಡುಬರುವುದಿಲ್ಲ. ಬ್ರಹ್ಮಗಿರಿ, ಸಂಗನಕಲ್ಲು ಮತ್ತು ಮಾಸ್ಕಿ ನಿವೇಶನಗಳನ್ನು ಉತ್ಕೃಷ್ಟ ಉದಾಹರಣೆಗಳಾಗಿ ಕೊಡಬಹುದು. ಧಾರವಾಡ ಜಿಲ್ಲೆಯ ಹಲ್ಲೂರು ಮತ್ತು ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟ ಎಂಬ ಸ್ಥಳಗಳಲ್ಲಿ ನಡೆಸಿದ ಭೂಶೋಧನೆ ಇದನ್ನು ಪುಷ್ಟೀಕರಿಸಿದೆ. ಈ ನಿವೇಶನಗಳಲ್ಲಿ ಸಿಕ್ಕಿರುವ, ಕೆಳಗೆ ಕಂಡ ವಸ್ತುಗಳಿಂದ ತಾಮ್ರ ಶಿಲಾಯುಗದ ಸಂಸ್ಕೃತಿಯ ವೈಶಿಷ್ಟ್ಯವು ಕಂಡುಬರುತ್ತದೆ:—

(ಅ) ಸ್ವಲ್ಪ ಪ್ರಮಾಣದಲ್ಲಿ ಸಿಕ್ಕಿರುವ ತಾಮ್ರ ಮತ್ತು ಕಂಚು.

(ಆ) ಕಪ್ಪು ಬಣ್ಣದಿಂದ ಸಿಂಗರಿಸಿದ ಕೆಂಪು ಕುಂಭಗಳು.

(ಇ) ಸಮಾನಾಂತರ ಅರಗುಳ್ಳ ಕ್ಷುದ್ರ ಶಿಲಾ ಅಲಗುಗಳು ಕೆಲವನ್ನು ಹಾಗೆಯೇ ಉಪಯೋಗಿಸುತ್ತಿದ್ದರು, ಮತ್ತೆ ಕೆಲವನ್ನು ಹಿಂಭಾಗದಲ್ಲಿ ಮೊಂಡು ಮಾಡಿ ಉಪಯೋಗಿಸುತ್ತಿದ್ದರು.

(ಈ) ಟ್ರ್ಯಾಪ್ ಶಿಲೆಯ ಮೆರುಗುಕೊಟ್ಟ ಕಲ್ಲು ಕೊಡಲಿಗಳು.

ಮೈಸೂರಿನ ಪುರಾತತ್ವ ವಿಭಾಗದವರು 1959ರಲ್ಲಿ ಟಿ. ನರಸೀಪುರದ ಹತ್ತಿರ ಕಾವೇರಿ ನದಿಯ ಎಡ ದಂಡೆಯ ಮೇಲಿರುವ ನಿವೇಶನದಲ್ಲಿ ಭೂಶೋಧನೆಯನ್ನು ನಡೆಸಿದರು. ಇದು ಒಂದು ಅಪೂರ್ವ ನಿವೇಶನ ಮತ್ತು ಇಲ್ಲಿ ಶುದ್ಧ ನವಶಿಲಾಯುಗದ ಒಂದು ಘಟ್ಟವಿರುವುದು ತಿಳಿದುಬಂದಿದೆ. ಇಲ್ಲಿ ಇದುವರೆಗೆ ಪರೀಕ್ಷಿಸಿರುವ ನವಶಿಲಾಯುಗದ ಸ್ತರಗಳಲ್ಲಿ ತಾಮ್ರ ಅಥವಾ ಕಂಚು ಸಂಪೂರ್ಣವಾಗಿ ಕಂಡುಬರುವುದಿಲ್ಲ. ಆದರೆ ಇಲ್ಲಿದ್ದ ಒಂದು ತಳುವಾದ ಪದರದಲ್ಲಿ ಕಪ್ಪು ಬಣ್ಣದಿಂದ ಸಿಂಗರಿಸಲ್ಪಟ್ಟ ಕೆಂಪು ಕುಂಭಗಳು ಮತ್ತು ಉಪಯೋಗಿಸಿದ ಹಾಗೂ ಉಪಯೋಗಿಸದ ಸಮಾನಾಂತರ ಅಲಗುಳ್ಳ ಕ್ಷುದ್ರ ಶಿಲಾ ಅಲಗುಗಳು ದೊರೆತಿವೆ. ಇದು ಬೃಹತ್ ಶಿಲಾಯುಗದ ಪದರಗಳ ಕೆಳಗಿರುವ ತಾಮ್ರ ಶಿಲಾಯುಗದ ಸಾಂಕೇತಿಕವಾಗಿದೆ. ಇದರ ಕೆಳಗಿರುವ ಪದರಗಳಲ್ಲಿ, ಮೆರುಗು ಕೊಟ್ಟಿರುವ ಕಲ್ಲು ಕೊಡಲಿಗಳು, ಬೂದಿ ಬಣ್ಣದ ಒರಟು ಕುಂಭಗಳು, ಅಧಿಕ ಸಂಖ್ಯೆಯಲ್ಲಿರುವ ಪ್ರಾಣಿಗಳ ಮೂಳೆಗಳು ತುಂಬಿ ತುಳುಕುತ್ತವೆ. ಕಾವೇರಿ ನದಿಯ ದಂಡೆಯ ಪಕ್ಕದಲ್ಲೆ ಇರುವ ಕಂಕರಿ ಸುಣ್ಣಕಲ್ಲಿನಲ್ಲಿ (Kankary Limestone) ದನಗಳ ಮೂಳೆಯ ಅವಶೇಷಗಳು ಮೇಲ್ಭಾಗದಲ್ಲೇ ಸಿಕ್ಕಿರುವುದು ಆಸಕ್ತಿವಹಿಸುವಂತಹದು.

ಭಾರತ ಸರ್ಕಾರದ ಪುರಾತತ್ವ ಶೋಧನೆಯ ವಿಭಾಗದವರು ವ್ಯವಸ್ಥೆ ಮಾಡಿದ ತೀವ್ರ ಪರಿಶೋಧನೆಯ ಫಲವಾಗಿ, ಇತ್ತೀಚೆಗೆ ಅನೇಕ ತಾಮ್ರ ಶಿಲಾಯುಗದ ನಿವೇಶನಗಳು ಬೆಳಕಿಗೆ ಬಂದಿವೆ. ಆರ್ಕಿಯಾಲಜಿ-ಎರೆವ್ಯೂ (1959–60) ಈ ಕೆಳಗೆ ಕಂಡ ಪಟ್ಟಿಯನ್ನು ಕೊಟ್ಟಿದೆ.

| | | | |
|---|---|---|---|
| 1 | ಹಿಂಗಾಣಿ | ಇಂಡಿತಾಲೂಕು ಭೀಮಾನದಿಯ ಬಲದಂಡೆಯ ಮೇಲಿವೆ. | ಬಿಜಾಪುರ ಜಿಲ್ಲೆ |
| 2 | ಅನಾಚಿ | | ,, |
| 3 | ಚಿಕ್ಕಮಾನೂರು | | ,, |
| 4 | ರೋಡ್ಗಿ | | ,, |
| 5 | ಅಲ್ಮೇಲ್ | ಸಿಂಧ್ಗಿ ತಾಲೂಕು | ,, |

| | | | |
|---|---|---|---|
| 6 | ಗುಂಡ್ಗಿ | ಸಿಂದ್ಗಿ ತಾಲೂಕು | ಬಿಜಾಪುರ ಜಿಲ್ಲೆ |
| 7 | ಬೂದಿಹಾಳ್ | ಡಾನ್ ನದಿಯ ದಂಡೆಯ ಮೇಲೆ | ,, |
| 8 | ಚೊಕಾವಿ | ಮುದ್ದೇ ಬಿಹಾಳ್ ತಾಲೂಕು | ,, |
| 9 | ಹುಲಗ ಬಾಳ | ಮುದ್ದೇ ಬಿಹಾಳ್ ತಾಲೂಕು | ,, |
| 10 | ಹಾದರಗೇರಿ | | ಧಾರವಾಡ ಜಿಲ್ಲೆ |
| 11 | ಆಸುಂದಿ | | ,, |
| 12 | ಮೇದನೂರು | | ,, |
| 13 | ಉಡ್ಚಾಣ | ಅಫ್ಜಲಪುರ ತಾಲೂಕು | ಗುಲ್ಬರ್ಗ ಜಿಲ್ಲೆ |

ಮೇಲೆ ತಿಳಿಸಿರುವ ಕೆಲವು ಮುಖ್ಯವಾದ ನಿವೇಶನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಭೂಶೋಧನೆ ಮಾಡಿದರೆ ತಾಮ್ರ ಶಿಲಾಯುಗದಿಂದ ನವಶಿಲಾಯುಗವನ್ನು ಪ್ರತ್ಯೇಕಿಸಲು ಖಂಡಿತವಾಗಿ ನಿದರ್ಶನಗಳು ದೊರಕುತ್ತವೆ.

ಮೂಲ ಲೇಖಕರು : ಡಾ।। ಎಂ. ಶೇಷಾದ್ರಿ
ಅನುವಾದಕರು : ಶ್ರೀ ಎಲ್. ಸೀಬಯ್ಯ

# ಐತಿಹ್ಯಗಳು ಮತ್ತು ಆಖ್ಯಾನಗಳು

ಒಂದು ತಲೆಮೊರೆಯಿಂದ ಮುಂದಿನ ತಲೆಮೊರೆಗೆ ಬಾಯಿಮಾತಿನಲ್ಲಿ ಮುಂದುವರಿದು ಬರುವ ಕೆಲವು ಘಟನೆಗಳ ನಿರೂಪಣೆ ಅಥವಾ ಕಥೆಗಳೇ ಐತಿಹ್ಯಗಳು. ಸಾಧುಸಂತರು, ಋಷಿಗಳು ಅಥವಾ ಇತರ ಮಹಾಪುರುಷರನ್ನು ಕುರಿತ ಕಾಲ್ಪನಿಕ ಕಥೆಗಳು ಅಥವಾ ಪುರಾಣ ಕಥೆಗಳನ್ನು ಆಖ್ಯಾನಗಳೆನ್ನಬಹುದು. ಇವು ಮ್ಯಾಕ್ಸ್‌ಮುಲರ್ ಪಂಡಿತರು ಹೇಳಿದಂತೆ 'ಸಂವಾದ ವಿಧಾನ' ದಿಂದ ಬೆಳೆದು ಬರುತ್ತವೆ. ಸಾಮಾನ್ಯವಾಗಿ ಇವು ಮಹಾಪುರುಷರ ಅದ್ಭುತ ಸಾಮರ್ಥ್ಯಗಳನ್ನು ಕುರಿತವುಗಳಾಗಿದ್ದು ಜನರಲ್ಲಿ ಅವರ ಪ್ರಸಿದ್ಧಿ, ಕೀರ್ತಿಗಳನ್ನು ಹೆಚ್ಚಿಸುತ್ತವೆ. ಪುರಾಣ ಕಥೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸತ್ಯದ ಕಣಗಳನ್ನು ಕಾಣಬಹುದಾದರೂ ಇತಿಹಾಸದ ರಚನೆಯಲ್ಲಾಗಲಿ, ವ್ಯಾಖ್ಯಾನದಲ್ಲಾಗಲಿ ಅವು ಸಂಪೂರ್ಣ ವಿಶ್ವಾಸಾರ್ಹವಾಗಲಾರವು. ಆದಿಕಾಲದ ಭಾರತೀಯ ಇತಿಹಾಸದಲ್ಲಿ ಹಲವು ಐತಿಹ್ಯಗಳ ಮತ್ತು ಪುರಾಣ ಕಥೆಗಳ ಉಲ್ಲೇಖವಿದೆ. ಬೇರಾವುದೂ ಸಾಕ್ಷ್ಯಾಧಾರಗಳಿಲ್ಲದಿರುವ ಕಡೆಗಳಲ್ಲಿ ಇವುಗಳಿಂದ ಅಲ್ಪ ಸ್ವಲ್ಪ ಸಹಾಯವಾದೀತು. ಐತಿಹ್ಯಗಳ ಚಾರಿತ್ರಿಕ ಸತ್ಯ ಏನೇ ಇರಲಿ, ಜನರ ಜೀವನ ಮತ್ತು ನಡೆನುಡಿಗಳನ್ನು ರೂಪಿಸುವುದರಲ್ಲಿ ಅವು ಮಹತ್ವದ ಪಾತ್ರ ವಹಿಸಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ವೇದೋಕ್ತವಾದ ಮತ್ತು ಮಹಾಕಾವ್ಯಗಳಲ್ಲಿ ನಿರೂಪಿತವಾದ ಐತಿಹ್ಯಗಳು ತಲೆತಲಾಂತರಗಳಿಂದ ಸತತವಾಗಿ ಜನರಲ್ಲಿ ಜೀವನಶ್ರದ್ಧೆ ಮತ್ತು ಚೈತನ್ಯಗಳನ್ನು ತುಂಬುತ್ತ ಬಂದಿವೆ. ಈ ಪ್ರದೇಶದಲ್ಲಿ ಪ್ರಚಲಿತವಾಗಿರುವ ಜಾನಪದ ಸಾಹಿತ್ಯ ಮತ್ತು ಸ್ಥಳಪುರಾಣಗಳ ಅಧ್ಯಯನವು ಜನರ ಜೀವನದಲ್ಲಿ ಶ್ರೇಷ್ಠ ಸಾಂಸ್ಕೃತಿಕ ಅಂಶಗಳ ಹೊಂದಾಣಿಕೆಯಿದ್ದುದನ್ನು ಮನಗಾಣಿಸುತ್ತದೆ.

ಸಾಹಿತ್ಯ ಮತ್ತು ಶಾಸನಗಳಲ್ಲಿ ಲಿಖಿತವಾಗಿರುವಂತೆ ಇತಿಹಾಸದ ಆರಂಭಕಾಲದಿಂದಲೂ ಕರ್ಣಾಟಕವು ಭರತವರ್ಷದ ಅವಿಭಾಜ್ಯ ಅಂಗವಾಗಿದೆ. ಈ ಪ್ರದೇಶದ ಸಾಂಸ್ಕೃತಿಕ ಮತ್ತು ರಾಜಕೀಯ ಘಟನೆಗಳು, ಭಾರತದ ಇತರ ಪ್ರದೇಶಗಳಲ್ಲಿಯಂತೆಯೇ ವೈದಿಕ ಮತ್ತು ವೇದೋತ್ತರ ಸಂಪ್ರದಾಯಗಳು ಮತ್ತು ಐತಿಹ್ಯಗಳಿಂದ ಪ್ರಭಾವಿತವಾಗಿವೆ. ಇವುಗಳಲ್ಲಿ ವೇದೋತ್ತರ ಕಾಲದವುಗಳನ್ನು ಹೀಗೆ ವಿಂಗಡಿಸಿ ಪರಿಶೀಲಿಸಬಹುದು :—(1) ರಾಜಕೀಯ ಸ್ವರೂಪ (2) ಆಡಳಿತ ವ್ಯವಸ್ಥೆ (3) ಧಾರ್ಮಿಕ ಪದ್ಧತಿ (4) ಗೃಹಕೃತ್ಯ ಮತ್ತು (5) ಕಲೆ, ಶಿಲ್ಪ ಇತ್ಯಾದಿ. ಇವೆಲ್ಲವುಗಳಲ್ಲಿಯೂ ಮಹಾಕಾವ್ಯ ಮತ್ತು ಪೌರಾಣಿಕ ಸಂಪ್ರದಾಯಗಳು ಮಹತ್ವದ ಪಾತ್ರ ವಹಿಸಿವೆ.

ಕರ್ಣಾಟಕದ ರಾಜಕೀಯ ಇತಿಹಾಸವು ಕ್ರಿ.ಶ. ಎರಡನೆಯ ಶತಮಾನದಲ್ಲಿ ದಖಿನ್‌ನಲ್ಲಿ ಶಾತವಾಹನರ ಉದಯದೊಂದಿಗೆ ಆರಂಭವಾಗುತ್ತದೆ. ಇವರ ಅನಂತರ ಬಂದ ಕದಂಬರು ಉತ್ತರ ಕರ್ಣಾಟಕದ ವೈಜಯಂತಿ (ಬನವಾಸಿ) ಯಲ್ಲಿ ಆಳಿದ ಪ್ರಥಮ ಕನ್ನಡ ದೊರೆಗಳು. ನಾಗಾಂಕನ ನಾನಘಾಟ್ ಶಾಸನವು ಧರ್ಮ, ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ ಸೂರ್ಯರು ಮತ್ತು ನಾಲ್ವರು ದಿಕ್ಪಾಲಕರಾದ ಯಮ, ವರುಣ, ಕುಬೇರ, ಹಾಸವ ಇವರುಗಳಿಗೆ ಪ್ರಾರ್ಥನೆ ಪ್ರಣಾಮಗಳಿಂದ ಆರಂಭವಾಗುತ್ತದೆ. ಇವರೆಲ್ಲರೂ ವೈದಿಕ ಇಲ್ಲವೆ ಪೌರಾಣಿಕ ದೇವತೆಗಳು. ನಾಸಿಕದ ಪುಲಮಾಯಿ ಶಾಸನದಲ್ಲಿ ಶಾತಕರ್ಣಿಯನ್ನು ರಾಮ, ಕೇಶವ, ಅರ್ಜುನ ಮತ್ತು ಭೀಮಸೇನರಂತೆ ಮಹಾಶಕ್ತ ಸಾಮ್ರಾಟನೆಂದು ವರ್ಣಿಸಲಾಗಿದೆ. ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಕರ್ಣಾಟಕದ ರಾಜಮನೆತನಗಳ ಮೇಲೆ ವೈದಿಕ ಮತ್ತು ಪೌರಾಣಿಕ

ಸಂಪ್ರದಾಯಗಳು ಮಹತ್ವದ ಪ್ರಭಾವ ಬೀರಿದ್ದುವೆಂಬುದನ್ನು ಇದು ಸಮರ್ಥಿಸುತ್ತದೆ. ಕದಂಬರ ಮೂಲಪುರುಷರು ಮಾನವ್ಯರ ಅಂದರೆ ವೇದದರ್ಶಕರಾದ ಋಷಿಗಳ ಸಂತತಿಯವರಂತೆ. ತಲಕಾಡಿನ ಗಂಗರು ಕಲ್ಯಾಣ ಮತ್ತು ಬಾದಾಮಿಯ ಚಾಲುಕ್ಯರು, ಮಾಲ್ಖೇಡಿನ ರಾಷ್ಟ್ರಕೂಟರು, ಕಲ್ಯಾಣದ ಕಳಚುರ್ಯರು, ಯಾದವರು, ಹೊಯ್ಸಳರು ಮತ್ತು ಕೊನೆಕೊನೆಯದಾಗಿ ವಿಜಯನಗರದ ಅರಸರು ಈ ಯಾವುದೇ ರಾಜಮನೆತನದ ಶಾಸನಗಳ ಅವತರಣಿಕೆಯನ್ನು ನೋಡಿದಾಗ ಆಯಾ ರಾಜಮನೆತನದ ಮೂಲಪುರುಷನು ಒಬ್ಬಾನೊಬ್ಬ ವೈದಿಕ ಅಥವಾ ಪೌರಾಣಿಕ ನಾಯಕನೆಂದು ಹೇಳುವುದು ಕಂಡುಬರುತ್ತದೆ. ಚಾಲುಕ್ಯರಿಗೆ ತಮ್ಮ ಮನೆತನದ ಹಿರಿಮೆಯನ್ನು ಭಗವಾನ್ ವಿಷ್ಣುವಿಗೇ ಅಧ್ಯಾರೋಪಿಸುವುದರಲ್ಲಿ ವಿಶೇಷ ಆಸಕ್ತಿ. ವಿಷ್ಣುವು ವರಾಹಾವತಾರವೆತ್ತಿದಾಗ ದಖನ್ನಿನಲ್ಲಿ ರಾಜ್ಯವೊಂದನ್ನು ಇವರಿಗೆ ಅನುಗ್ರಹಿಸಿದನಂತೆ. ವೈದಿಕ ದೇವತೆಯಾದ ವಿಷ್ಣುವು ವರಾಹಾವತಾರವನ್ನೆತ್ತಿ, ಅಸುರ ಹಿರಣ್ಯಾಕ್ಷನು ಸಾಗರದಡಿಯಲ್ಲಿ ಅಡಗಿಸಿಟ್ಟಿದ್ದ ಭೂಮಿಯನ್ನು ಮೇಲಕ್ಕೆ ಎತ್ತಿ ಪುನಃ ಸ್ಥಾಪಿಸಿದನೆಂಬ ಪೌರಾಣಿಕ ಕಲ್ಪನೆ ತುಂಬ ಜನಪ್ರಿಯವಾದುದು. ತಮ್ಮ ವಂಶದ ಕೀರ್ತಿಸ್ಥಾಪನೆಗೆ ರಾಜಮನೆತನಗಳವರು ವಿಷ್ಣುವಿನ ಸಾಹಸಗಳನ್ನು ಬಳಸಿಕೊಳ್ಳುವುದರ ಹಿನ್ನೆಲೆಯಲ್ಲಿ ಈ ಪೌರಾಣಿಕ ಕಥೆಯನ್ನು ಸ್ಪಷ್ಟವಾಗಿ ಕಾಣಬಹುದು. ರಾಷ್ಟ್ರಕೂಟರು, ಯಾದವರು ಮತ್ತು ಹೊಯ್ಸಳರು ಯದುವಂಶದ ಕೃಷ್ಣನೇ ತಮ್ಮ ಮೂಲಪುರುಷನೆಂದು ಹೇಳುವುದರ ಮೂಲಕ ತಮ್ಮ ಮನೆತನದ ಗೌರವ, ಘನತೆಗಳನ್ನು ಹೆಚ್ಚಿಸಿಕೊಳ್ಳುತ್ತಾರೆ. ಹೀಗೆ ಕರ್ಣಾಟಕದ ರಾಜಮನೆತನಗಳ ಇತಿಹಾಸವು ಆದಿಕಾಲದಿಂದಲೂ ಆಯಾ ಯುಗದಲ್ಲಿ ಪ್ರಚಲಿತವಾಗಿದ್ದ ಶೈವ ಅಥವಾ ವೈಷ್ಣವ ಪೌರಾಣಿಕ ಸಂಪ್ರದಾಯಗಳು ಜನಜೀವನದ ಮೇಲೆ ಬೀರಿದ್ದ ಪ್ರಭಾವವನ್ನು ಸ್ಪಷ್ಟಪಡಿಸುತ್ತದೆ.

ಮಹಾಕೂಟದ ಸ್ತಂಭಶಾಸನದಲ್ಲಿ ಪ್ರಸಿದ್ಧ ಚಾಲುಕ್ಯ ಚಕ್ರವರ್ತಿಯಾದ ಮಂಗಳೇಶನನ್ನು ಮಹೇಂದ್ರನಂತೆ ಅಜೇಯ, ಪರಶುರಾಮನಂತೆ ಅಸಾಧ್ಯ, ಔಷಿನರ ಶಿಬಿಗಳಂತೆ ಉದಾರಿ, ಯುಧಿಷ್ಠಿರನಂತೆ ಸತ್ಯಸಂಧ ಇತ್ಯಾದಿಯಾಗಿ ಅರ್ಥಪೂರ್ಣವಾದ ವಿಶೇಷಣಗಳ ಮಾಲಿಕೆಯಿಂದ ಕೊಂಡಾಡಲಾಗಿದೆ. ಮಹಾಭಾರತ, ರಾಮಾಯಣವೇ ಮೊದಲಾದ ಮಹಾಕಾವ್ಯಗಳ ಹಿರಿಮೆ, ಆದರ್ಶಗಳನ್ನು ರಾಜರಾಣಿಯರಿಗೆ ಬೋಧಿಸಲಾಗುತ್ತಿತ್ತು. ಅವುಗಳ ನಾಯಕರ ಶ್ರೇಷ್ಠ ನಡೆನುಡಿಗಳು, ಆದರ್ಶಜೀವನ, ಅಲ್ಲಿನ ಸಂಪ್ರದಾಯಗಳು ಅವರ (ರಾಜರಾಣಿಯರ) ಚಾರಿತ್ರ್ಯವನ್ನು ರೂಪಿಸುವುದರಲ್ಲಿ ನೆರವಾಗುತ್ತಿದ್ದವು.

ಇದೇ ಸಂದರ್ಭದಲ್ಲಿ ರಾಜಚಿಹ್ನೆಗಳು ಮತ್ತು ನಾಣ್ಯಗಳ ಅಧ್ಯಯನವನ್ನು ಸಹ ಪ್ರಸ್ತಾವಿಸಬಹುದಾಗಿದೆ. ಸಿಂಹ, ಗರುಡ, ಹನುಮಂತ, ಚಕ್ರ, ತ್ರಿಶೂಲ, ವರಾಹ ಮೊದಲಾದವುಗಳು ಕರ್ಣಾಟಕದ ರಾಜಮನೆತನಗಳ ನಾಣ್ಯಗಳು ಮತ್ತು ಮುದ್ರೆಗಳ ಮೇಲೆ ಚಿತ್ರಿತವಾಗಿರುವುದನ್ನು ಕಾಣಬಹುದು. ಇವುಗಳಿಗೆ ಸಂಬಂಧಿಸಿದ ಐತಿಹ್ಯಗಳು ಮತ್ತು ಅವುಗಳೊಂದಿಗೆ ಸಂಬಂಧ ಕಲ್ಪಿಸುವುದು ಭಾರತದ ಸ್ಥಳವೃತ್ತಾಂತಗಳಲ್ಲಿ ಬಹು ಸಾಮಾನ್ಯ. ಇವೇ ಸಂಗತಿಗಳು ಪ್ರಬಲ ಪ್ರಭುತ್ವಗಳ ಉದಯಕ್ಕೂ ರಾಜವಂಶಗಳಲ್ಲಿ ಅವಿಚ್ಛಿನ್ನವಾದ ಆತ್ಮವಿಶ್ವಾಸಕ್ಕೂ ಪೋಷಕವಾಗಿವೆ.

ಕರ್ಣಾಟಕದ ರಾಜಕೀಯ ಮತ್ತು ಸಾಮಾಜಿಕ ಆಡಳಿತ ವ್ಯವಸ್ಥೆಗಳು 'ಜನಪದ' ಮತ್ತು 'ಮಹಾಜನಪದ'ಗಳ ಮೂಲಕವಾಗಿ ನಡೆದುಬಂದ ಸಂಘಟಿತ ಜವಾಬ್ದಾರಿ ತತ್ವವನ್ನು ಆಧರಿಸಿಯೇ ರೂಪಿತವಾಗಿವೆ. ಕನ್ನಡನಾಡಿನ 'ಮಹಾಜನ' ಮತ್ತು 'ದೈವ' ವ್ಯವಸ್ಥೆಗಳು ವೈದಿಕ ಮತ್ತು ಬೌದ್ಧ ಸಂಪ್ರದಾಯಗಳ ಅವಶೇಷಗಳು. ಇವುಗಳ ಪ್ರಕಾರ ಹಳ್ಳಿಯ ಇಡೀ ಜನತೆ ಗ್ರಾಮದ ಆಡಳಿತ ನಡೆಸಲು ಅಧಿಕಾರ ಹೊಂದಿದ್ದಿತು. ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಂಡುಬರುವ 'ಪದಿನೆಣ್ಬರುಂ ಪದಿನಾರ್ವರುಂ ಕಾಪಾಡುವರ್' (ಹದಿನೆಂಟು ಮತ್ತು ಹದಿನಾರು ಜನರು (ಪ್ರತಿನಿಧಿಗಳು) ಈ ಕೊಡುಗೆಯನ್ನು ದುರುಪಯೋಗವಾಗದಂತೆ ರಕ್ಷಿಸಬೇಕು) ಎಂಬ ವಿಧಿವಚನಗಳು ವೈದಿಕ ಮತ್ತು ಬೌದ್ಧೀಯ ರೀತಿಯಲ್ಲಿ

ಭಾರತವನ್ನು ಹದಿನೆಂಟು ಮತ್ತು ಹದಿನಾರು ಸಮಾನಾಧಿಕಾರವುಳ್ಳ ಜನಪದಗಳಾಗಿ ವಿಭಾಗಿಸಿದ್ದುದನ್ನು ಸೂಚಿಸುತ್ತವೆ. ಈ ಪುರಾತನ ಸಂಪ್ರದಾಯ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ಣಾಟಕದಲ್ಲಿ ಮಾತ್ರ ಉಳಿದುಕೊಂಡು ಬಂದಿದೆ.

ಚಾರಿತ್ರಿಕ ಮೌಲ್ಯವುಳ್ಳ ಇನ್ನು ಕೆಲವು ಐತಿಹ್ಯಗಳು ಕೂಡ ಇದೇ ಸಂದರ್ಭದಲ್ಲಿ ಗಮನಿಸಲು ತಕ್ಕುವಾಗಿವೆ. ಮೌರ್ಯರು ಮತ್ತು ಕರ್ಣಾಟಕರಿಗೆ ಬೆಳೆದಿದ್ದ ಸಂಪರ್ಕವು 'ಮೋರೆರಂಗಡಿ' (ಮೋರೇರ ಅಥವಾ ಮೌರ್ಯರ ಮಳಿಗೆಗಳು) ಎಂಬ ಸ್ಥಳೀಯ ಸಂಪ್ರದಾಯಗಳಲ್ಲಿ ಪ್ರತಿಬಿಂಬಿತವಾಗಿದೆ. ಬಹು ಪ್ರಾಚೀನ ಕಾಲದಲ್ಲೇ ಕರ್ಣಾಟಕದ ಚಿನ್ನದ ಗಣಿಗಳನ್ನು ಶೋಧಿಸಿದ ಈಜಿಪ್ಟ್ ವ್ಯಾಪಾರಿಗಳು ಪ್ರಾಕ್ ಚಾರಿತ್ರಿಕಯುಗದ ಅವಶೇಷಗಳಲ್ಲಿ ತಮ್ಮ ಸಂಪ್ರದಾಯಗಳ ನೆನಪನ್ನು ಉಳಿಸಿ ಹೋಗಿದ್ದಾರೆ. ವಿಚಿತ್ರ ಆಕಾರದ ಸಮಾಧಿ ದಿಬ್ಬಗಳಾದ ಕೇರನ್ ಮತ್ತು ಕಿಸ್ಟವನ್ (Cairns and Kistevans) ಎಂಬ ಒರಟುಕಲ್ಲು ಗುಡ್ಡೆಗಳು ಈ ಜಾತಿಗೆ ಸೇರಿದ ಅವಶೇಷಗಳು. ಹಾವೇರಿ ತಾಲೂಕಿನ (ಧಾರವಾಡ ಜಿಲ್ಲೆ) ಅಗಡಿ ಮತ್ತು ಅದರ ಸುತ್ತಮುತ್ತಲ ಕಾಡುಪ್ರದೇಶಗಳಲ್ಲಿ ಕಂಡುಬಂದಿರುವ ಶಿಲಾವೃತ್ತಗಳನ್ನು ಇಲ್ಲಿ ಉದಾಹರಿಸಬಹುದು.

ಕರ್ಣಾಟಕದ ಭೌಗೋಳಿಕ ವಿಭಾಗಗಳ ಮತ್ತು ಸ್ಥಳಗಳ ಹೆಸರುಗಳ ಅಧ್ಯಯನವು ಸಹ ಚರಿತ್ರೆಯ ದೃಷ್ಟಿಯಿಂದ ಬಹಳ ಪ್ರಯೋಜನಕಾರಿ. ಹೆಚ್ಚುಕಡಮೆ ಪ್ರತಿಯೊಂದು ಹಳ್ಳಿಗೂ ತನ್ನದೇ ಆದ ಒಂದು ಹೆಮ್ಮೆಯ ಕಥೆಯಿದೆ. ಒಬ್ಬಾನೊಬ್ಬ ಮಹಾಕಾವ್ಯ ನಾಯಕನಿಗೂ ಅಥವಾ ವೇದಕಾಲದ ಋಷಿಗೂ ಆ ಹಳ್ಳಿಗೂ ಇರುವ ಸಂಬಂಧ ಚಿತ್ರಿತವಾಗಿರುತ್ತದೆ ಇಂಥ ಕಥೆಯಲ್ಲಿ. ವಿಷಯವನ್ನು ಖಚಿತಪಡಿಸಲು ಕೆಲವು ಉದಾಹರಣೆಗಳನ್ನು ಕೊಡಬಹುದು: ಗಲಗಲಿ ಎಂಬ ಹಳ್ಳಿ ಗಾಲವ ಋಷಿಯ ವಾಸಸ್ಥಾನವಂತೆ; ಹಾಗೆಯೇ ಮಾಸೂರ್ ಮಾಂಡವ್ಯ ಋಷಿಯದು. ವಾತಾಪಿ (ಬಾದಾಮಿ) ಎಂಬುದು ದಂಡಕಾರಣ್ಯದಲ್ಲಿ ಅಗಸ್ತ್ಯಋಷಿಯಿಂದ ಹತನಾದ ವಾತಾಪಿ ಎಂಬ ರಾಕ್ಷಸನ ಊರು. ಬಾದಾಮಿಯ ಕೆರೆ 'ಅಗಸ್ತ್ಯತೀರ್ಥ' ವೆಂದು ಋಷಿಯ ಹೆಸರಿನಿಂದ ತುಂಬಿದೆ. ಕೊಡಗಿನ ಬ್ರಹ್ಮಗಿರಿಯಿಂದ ಕಾವೇರಿ ನದಿ ಹುಟ್ಟಿದುದರ ಐತಿಹ್ಯ ಹೀಗಿದೆ: ಅಗಸ್ತ್ಯ ಪತ್ನಿಯಾದ ಲೋಪಾಮುದ್ರಾದೇವಿಯು ಋಷಿಯ ಕಮಂಡಲದಲ್ಲಿದ್ದ ಗಂಗಾಜಲದಲ್ಲಿ ಅಡಕವಾಗಿದ್ದಳು. ಕಮಂಡಲವನ್ನು ಗಿರಿಯ ಮೇಲಿಟ್ಟಾಗ ಆಕೆಯು ನದಿಯ ರೂಪ ತಳೆದು ಕಾವೇರಿಯಾಗಿ ಹರಿಯತೊಡಗಿದಳಂತೆ.

ಶ್ರೀ ಶಂಕರಾಚಾರ್ಯರ ಪ್ರಮುಖ ಮಠಗಳಲ್ಲೊಂದು ಸ್ಥಾಪಿತವಾಗಿರುವ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯು ವಿಭಾಂಡಕ ಮತ್ತು ಋಷ್ಯಶೃಂಗ ಮುನಿಗಳೊಡನೆ ಸಂಬಂಧ ಹೊಂದಿದೆ. ತುಂಗಾ ಮತ್ತು ಭದ್ರಾನದಿಗಳು ಹುಟ್ಟುವ ವರಾಹ ಪರ್ವತವು ವಿಷ್ಣುವಿನ ವರಾಹಾವತಾರದ ನೆನಪು ತಳೆದು ನಿಂತಿದೆ. ಈ ನದಿಗಳೆರಡೂ ವರಾಹದ ದೇಹದ ಬೆವರಿನಿಂದಲೇ ಉದ್ಭವಿಸಿದವೆಂಬ ಕಲ್ಪನೆ ಪ್ರಚಲಿತವಿದೆ.

ಪ್ರಾಚೀನ ಮಹಾಕಾವ್ಯಗಳಲ್ಲಿಯೂ, ಪುರಾಣಗಳಲ್ಲಿಯೂ ಹೆಸರಾಗಿರುವ ಕೆಲವರು ದೈತ್ಯರು ಅಥವಾ ಅಸುರರ ನೆನಪು ಸಹ ಕರ್ಣಾಟಕದ ಹಲವು ಸ್ಥಳಗಳಲ್ಲಿ ಕಂಡುಬರುತ್ತದೆ. ಹರಿಹರದಲ್ಲಿ ಗುಹಾಸುರನ, ಚಿತ್ರದುರ್ಗದಲ್ಲಿ ಹಿಡಿಂಬಾಸುರನ ನೆನಪನ್ನು ಕಾಣಬಹುದು. ಕೈವಾರ (ಕೋಲಾರ ಜಿಲ್ಲೆ) ದ ಬಳಿಯ ಬೆಟ್ಟಕ್ಕೆ ಬಕಾಸುರನ ಸಂಬಂಧವಿದೆ. ಈ ಊರು ಮಹಾಭಾರತದ ಏಕಚಕ್ರನಗರವಾಗಿದ್ದಿತಂತೆ. ಮೈಸೂರು ಎಂಬ ಹೆಸರು ಮಹಿಷಾಸುರನಿಂದ ಬಂದುದು. ಚಾಮುಂಡಿ ಬೆಟ್ಟ ಭಾರತದ ಶಕ್ತಿದೇವತಾ ಆರಾಧಕರಿಗೆ ಪವಿತ್ರಸ್ಥಳ.

ಬೊಂಬಾಯಿಯಿಂದ ಕನ್ಯಾಕುಮಾರಿಯ ವರೆಗೆ ಹರಡಿರುವ ಪಶ್ಚಿಮ ಕರಾವಳಿಯ ತೀರಪ್ರದೇಶವು ಪುರಾತನ ಕಾಲದಿಂದಲೂ ಪರಶುರಾಮಕ್ಷೇತ್ರವೆಂದು ಪ್ರಸಿದ್ಧವಿದೆ. ಪರಶುರಾಮನು ಕರಾವಳಿಯ ಈ ಪ್ರದೇಶವನ್ನು ಪಡೆದುಕೊಂಡು ಅಲ್ಲಿ ಸಪ್ತಕೊಂಕಣಗಳನ್ನು ಸ್ಥಾಪಿಸಿದನೆಂದು ಸ್ಕಾಂದಪುರಾಣದ ಈ ಶ್ಲೋಕ ವರ್ಣಿಸುತ್ತದೆ—

ಕರಾಟಂ ಚ-ವಿರಾಟಂ ಚ
ಮರಾಠಂ-ಕೊಂಕಣಂ ತಥಾ
ಹವ್ಯಿಗಂ-ತೌಳವಂಚೈವ
ಕೇರಳಂ ಚೇತಿ ಸಪ್ತಕಂ ॥

ಇವುಗಳ ಪೈಕಿ ವಿರಾಟ, ಕರಾಟವ ಸ್ವಲ್ಪಭಾಗ, ಹವಿಗ (ಉತ್ತರ ಕನ್ನಡ) ಮತ್ತು ತೌಳವ (ದಕ್ಷಿಣ ಕನ್ನಡ) ಗಳು ಕರ್ಣಾಟಕದಲ್ಲಿವೆ. ಕನ್ನಡನಾಡಿನಲ್ಲಿ ಪರಶುರಾಮನ ಹೆಸರು ತಳೆದಿರುವ ಇನ್ನೂ ಹಲವು ಸ್ಥಳಗಳಿವೆ. ಸೌಂದತ್ತಿಯ ಸಮೀಪದಲ್ಲಿ ಪರಸಗಡವೆಂಬ ಪಟ್ಟಣವಿದೆ. ಇದು ರೇಣುಕಾದೇವಿ (ಪರಶುರಾಮನ ತಾಯಿ) ನೆಲಸಿರುವ ಯಲ್ಲಮ್ಮನ ಗುಡ್ಡಕ್ಕೆ ಹೊಂದಿಕೊಂಡಂತೆಯೇ ಇದೆ. ಅಲ್ಲದೆ ಇದರ ಪಕ್ಕದಲ್ಲಿಯೇ ಪರಶುರಾಮನಿಗಾಗಿ ಕಟ್ಟಿಸಿದ ದೇವಾಲಯವೂ ಒಂದಿದೆ.

ಚಿತ್ರದುರ್ಗ ಜಿಲ್ಲೆಯ ಜಟಂಗರಾಮೇಶ್ವರ ಗುಡ್ಡವು ಜಟಾಯುವು ರಾವಣನೊಂದಿಗೆ ಹೋರಾಡಿ ಪ್ರಾಣವನ್ನರ್ಪಿಸಿದ ಸ್ಥಳವೆಂದು ನಂಬಲಾಗಿದೆ. ಇದಕ್ಕೆ ಹತ್ತನೆಯ ಶತಮಾನದ ಶಾಸನವೊಂದರ ಆಧಾರವೂ ಉಂಟು. [E. I. ಮೊಳಕಾಲ್ಮೂರು ಕ್ರಿ. ಶ. 961]

ಲಕ್ಕುಂಡಿ (ಪ್ರಾಚೀನ ಶಾಸನಗಳ ಲೊಕ್ಕಿಗುಂಡಿ) ಗೂ ಶ್ರೀರಾಮನಿಗೂ ಇರುವ ಸಂಬಂಧವನ್ನು "ರಾಮದತ್ತಿ ಮಹಾಗ್ರಹಾರ ಲೊಕ್ಕಿಗುಂಡಿ" ಎಂಬ ಹೇಳಿಕೆಯಲ್ಲಿ ಕಾಣಬಹುದು. ಕ್ರತುಪುರ (ಗದಗ್)ವು ಜನಮೇಜಯನ ಅಗ್ರಹಾರ. ಪನುನ್ಗಲ್ (ಧಾರವಾಡ ಜಿಲ್ಲೆಯ ಹಾನಗಲ್)ನ್ನು ಮಹಾಭಾರತದ ವಿರಾಟನ ರಾಜಧಾನಿಯೆಂದು ಈಗಲೂ ನೆನೆಸಿಕೊಳ್ಳುತ್ತಾರೆ. ರಾಜ್ಯವನ್ನು ಕಳೆದುಕೊಂಡಿದ್ದ ಪಾಂಡವರು ತಮ್ಮ ಅಜ್ಞಾತವಾಸದ ಒಂದು ವರ್ಷವನ್ನು ಕಳೆದದ್ದು ಮತ್ತು ದುಷ್ಟ ಕೀಚಕನನ್ನು ಕೊಂದದ್ದು ಇಲ್ಲೇ. ಪುರಾತನ ಕಾಲದಲ್ಲಿ ಐತಿಹ್ಯಗಳು ಆಖ್ಯಾನಗಳು ಜನಮನದ ಮೇಲೆ ಬೀರಿದ್ದ ಪ್ರಭಾವವನ್ನು ಸ್ಪಷ್ಟಪಡಿಸಲು ಇಂತಹ ಉದಾಹರಣೆಗಳನ್ನು ವಿಪುಲವಾಗಿ ಕೊಡಬಹುದು. ಕೃಷ್ಣಾನದಿ ದಂಡೆಯಲ್ಲಿ ಬಿಜಾಪುರ ಜಿಲ್ಲೆಯ ಸೀತಿಮನಿ, ಮುದ್ದೇಬಿಹಾಳದ ಸಮೀಪದ ಛಾಯಾ ಭಗವತಿ, ಬಾಗಲ್ಕೋಟೆ ತಾಲೂಕಿನ ಬಿರಕಬ್ಬಿ ಮೊದಲಾದ ಪವಿತ್ರ ಸ್ಥಳಗಳು ಶ್ರೀರಾಮಚಂದ್ರ ಮತ್ತು ಹನುಮಂತರು ಬೀಡು ಬಿಟ್ಟಿದ್ದರ ಸ್ಮರಣೆಯನ್ನು ಉಳಿಸಿಕೊಂಡು ಬಂದಿವೆ. ಹೊಸಪೇಟೆಯ ಸಮೀಪದ ಹಂಪಿ ಅಥವಾ ಪಂಪಾಕ್ಷೇತ್ರವು ರಾಮಾಯಣಕಾಲದ ಸವಿನೆನಪುಗಳಿಂದ ತುಂಬಿದೆ. ಮತಂಗ ಋಷ್ಯಮೂಕ ಪರ್ವತಗಳು, ಕಿಷ್ಕಿಂಧ (ಆನೆಗುಂದಿ), ವಾಲಿಭಂಡಾರ, ವಾಲಿದಿಬ್ಬ (ರಾಮ ಮತ್ತು ಆಂಜನೇಯರ ಪ್ರಥಮ ಸಂದರ್ಶನ ಸ್ಥಳ), ಅಂಜನಾದೇವಿಯು ತಪಸ್ಸುಮಾಡಿ ಆಂಜನೇಯನನ್ನು ಪಡೆದ ಅಂಜನಿಪರ್ವತ, ಪಂಪಾಸರೋವರ ಇವೆಲ್ಲವೂ ಸೇರಿ ರಾಮಾಯಣದ ಪರಂಪರೆಯನ್ನು ಜೀವಂತವಾಗಿಸಿವೆ. ಮೇಲೆ ಹೇಳಿದ ಹಲವು ಪ್ರೇಕ್ಷಣೀಯ ಸ್ಥಳಗಳ ಕಣ್ಣಿಗೆ ಕಟ್ಟುವಂತಹ ವರ್ಣನೆ, ವಾಲ್ಮೀಕಿ ರಾಮಾಯಣ ಚಿತ್ರಗಳಿಂದ ಪುಷ್ಟಿಗೊಂಡು ವಿಶ್ವಾಸಾರ್ಹವಾಗುತ್ತದೆ. ಈ ಸ್ಥಳಗಳಲ್ಲಿ ಇಂದಿಗೂ ಲಭ್ಯವಿರುವ ಸ್ಮಾರಕಗಳನ್ನು ಕಂಡಾಗ ಪೌರಾಣಿಕ ನಾಯಕರೊಡನೆ ಅವುಗಳ ಸಂಬಂಧವನ್ನು ಕುರಿತು ಸಂಶಯ ತಾಳುವುದು ಅಸಾಧ್ಯವಾಗುತ್ತದೆ.

ವೇದೋಕ್ತ ಯಜ್ಞಯಾಗಾದಿ ವಿಧಿಗಳು ವೇದಯುಗ ಮತ್ತು ಬುದ್ಧಪೂರ್ವಯುಗಗಳಲ್ಲಿ ರಾಜರುಗಳು ಮಾಡುತ್ತಿದ್ದ ಯಜ್ಞಯಾಗಾದಿಗಳ ಪ್ರಬಲ ಸಾಕ್ಷ್ಯಾಧಾರಗಳನ್ನು ಉಳಿಸಿಹೋಗಿವೆ. ಕರ್ಣಾಟಕದಲ್ಲೇ ಇರುವ ಇಷ್ಟಗಿ (ಇಷ್ಟಿಕಾ-ಇಟ್ಟಿಗೆ) ಎಂಬ ಸ್ಥಳವು ಗರುಡಚಯನ ಮತ್ತು ಅಗ್ನಿಷ್ಟೋಮ ಯಾಗಗಳು ಆಚರಣೆಯಲ್ಲಿದ್ದುದನ್ನು ಸೂಚಿಸುತ್ತದೆ. ಶ್ರೌತಸೂತ್ರಗಳಲ್ಲಿ ವಿಧಿಸಿರುವಂತೆ ಈ ಯಾಗಗಳ ಆಚರಣೆಗೆ ಇಟ್ಟಿಗೆಯಿಂದ ರಚಿತವಾದ ವೇದಿಕೆ ಅತ್ಯಗತ್ಯ. ತುಂಗಭದ್ರಾ ತೀರದ ಸಿರಹಟ್ಟಿಯ ಸಮೀಪದ ಇಟ್ಗಿಯಲ್ಲಿ ಕ್ರಿ. ಶ. 1ನೇ ಶತಮಾನಕ್ಕೆ ಸೇರಿದ "ಉಖಪಾತ್ರ"ಎಂದು ಕರೆಯುವ ಯಜ್ಞಪಾತ್ರೆಯು ಇಟ್ಟಿಗೆಗಳ ಕುಳಿಯೊಂದರಲ್ಲಿ ಸಿಕ್ಕಿತೆಂಬ ಅಂಶ ಗಮನಾರ್ಹವಾಗಿದೆ. ಅಕ್ಷರಗಳನ್ನು ಕೆತ್ತಿದ, ಯೂಪಸ್ತಂಭ ಗಳೆಂದು ಕರೆಯುವ ಯಾಗದ ಕಂಬಗಳು ಕರ್ಣಾಟಕದ ಹಲವು ಸ್ಥಳಗಳಲ್ಲಿ ಕಂಡುಬಂದಿವೆ. ವಡ್ಗಾನ್ ಮಾಧವಪುರದ ಷಡ್ಭುಜಾಕೃತಿಯ ಅಗ್ನಿಶಿಲಾಸ್ತಂಭದ ಮೇಲೆ ಪ್ರಾಕೃತ-ಬ್ರಾಹ್ಮೀಲಿಪಿಗಳನ್ನು ಕೊರೆದಿದೆ. ಒಟ್ಟಿನಲ್ಲಿ ವೈದಿಕ ಪರಂಪರೆ ಕರ್ಣಾಟಕದಲ್ಲಿ ಅವಿಚ್ಛಿನ್ನವಾಗಿ ಮುಂದುವರಿದಿದೆ. ಒಂದನೆಯ ಪುಲಿಕೇಶಿ, ಮೊದಲನೆಯ ಕೀರ್ತಿವರ್ಮ ಮೊದಲಾದ ರಾಜರು ಅಶ್ವಮೇಧ, ಪೌಂಡರಿಕ, ವಾಜಪೇಯ ಮುಂತಾದ ಹಲವು ವೇದೋಕ್ತ ಯಾಗಗಳನ್ನು ನಡೆಸಿ ಪ್ರಖ್ಯಾತರಾಗಿದ್ದಾರೆ.

ಕರ್ಣಾಟಕದ ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯಗಳು ಸಹ ವೇದಗಳಿಂದಲೂ, ಮಹಾಕಾವ್ಯ ಗಳಿಂದಲೂ ಸಾಕಷ್ಟು ಪ್ರಭಾವಿತವಾಗಿವೆ. ಇಲ್ಲಿನ ಕಲೆಗಾರರು ಮತ್ತು ಶಿಲ್ಪಿಗಳು ಪ್ರಾಚೀನ ಪರಂಪರೆ ಯಿಂದ ಸ್ಫೂರ್ತಿ, ಪ್ರೇರಣೆಗಳನ್ನು ಪಡೆದಿದ್ದಾರೆ. ಕರ್ಣಾಟಕದ ದೇವಾಲಯಗಳ ರಚನಾಪದ್ಧತಿ, ವಿನ್ಯಾಸಗಳು ವೈದಿಕ ಮತ್ತು ಪೌರಾಣಿಕ ಪರಂಪರೆಯಲ್ಲಿ ಕಂಡುಬರುವ ವಿಶಿಷ್ಟಲಕ್ಷಣಗಳಿಗೆ ಅನುಗುಣ ವಾಗಿಯೇ ಇವೆ. ಪಟ್ಟದಕಲ್ಲಿನ ವಿರೂಪಾಕ್ಷದೇವಾಲಯದ ಎದುರಿನ ನಂದಿಕೇಶ್ವರ ಮಂದಿರದ ಗೋಡೆಗಳ ಮೇಲೆ ಇರಿಸಿರುವ ಸೂಕ್ಷ್ಮಪ್ರಮಾಣದ ದೇವಾಲಯ ಮಾದರಿಗಳು ಆ ಕಾಲದಲ್ಲಿ ಪ್ರಚಲಿತವಾಗಿದ್ದ ವಿವಿಧ ಸ್ಥಳೀಯ ಪದ್ಧತಿಗಳನ್ನು ಪರಿಚಯ ಮಾಡಿಕೊಡುವಂತಿವೆ. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಕ್ರಿ. ಶ. 6-8ನೇ ಶತಮಾನಗಳ ಮೂರ್ತಿಶಿಲ್ಪ, ಕೆತ್ತನೆ ಮತ್ತು ದೇವಾಲಯಗಳು ಪ್ರಾಚೀನ ಪರಂಪರೆಯ ದೃಷ್ಟಾಂತಗಳಾಗಿವೆ. ಎಲ್ಲೋರಾದ ಗುಹಾಂತರ ದೇವಾಲಯಗಳಂತೂ ಕಲಾಪರಂಪರೆಯ ಅಮೂಲ್ಯ ನಿಧಿ. ಇಲ್ಲಿ ಪುರಾಣಗಳ ಸಮಸ್ತ ದೇವತೆಗಳು ಹಾಗೂ ದೈವಾಂಶವ್ಯಕ್ತಿಗಳು ಅತ್ಯಂತ ಕುಶಲ ಹಸ್ತಗಳಿಂದ ಚಿತ್ರಿತರಾಗಿದ್ದಾರೆ. ಪೌರಾಣಿಕ ಕಥೆಗಳೇ ಅಲ್ಲದೆ ಬುದ್ಧಜಾತಕಗಳಲ್ಲಿ ಬರುವ ಐತಿಹ್ಯಗಳು ಮತ್ತು ಪಂಚತಂತ್ರದ ಕಥೆಗಳು ಸಹ ದೇವಾಲಯದ ಚಿತ್ರಗಳಿಗೆ ವಸ್ತುವಾಗಿವೆ.

ಹೀಗೆ ಕರ್ಣಾಟಕದಲ್ಲಿ ವಾಡಿಕೆಯಾಗಿರುವ ಐತಿಹ್ಯಗಳು ಸಮಾಜದ ಉಚ್ಚ ನೀಚ ವರ್ಗಗಳೆಲ್ಲದರ ಮೇಲೆಯೂ ಪ್ರಭಾವ ಬೀರಿವೆ. ವೈವಿಧ್ಯಪೂರ್ಣವಾದ ಕರ್ಣಾಟಕದ ಸಾಂಸ್ಕೃತಿಕ ಇತಿಹಾಸವು ಬಹು ಪುರಾತನ ಕಾಲದಿಂದಲೂ ಕೊಡುಗೆಯಾಗಿ ಬಂದಿರುವ ವೇದಗಳು, ಪುರಾಣಗಳು, ಮಹಾಕಾವ್ಯಗಳು ಮತ್ತು ಐತಿಹ್ಯಗಳಿಂದ ವಿಶೇಷ ಸ್ಫೂರ್ತಿ, ಚೈತನ್ಯಗಳನ್ನು ಪಡೆದಿದೆ.

ಮೂಲ ಲೇಖಕರು : ಡಾ॥ ಆರ್. ಎಸ್. ಪಂಚಮುಖಿ
ಅನುವಾದಕರು : ಶ್ರೀ ಕೆ. ಎಲ್. ಗೋಪಾಲಕೃಷ್ಣಯ್ಯ

# ಅಧ್ಯಾಯ 5

## ಚಾರಿತ್ರಿಕ ಯುಗ

### ಮೌರ್ಯರ ಮತ್ತು ಶಾತವಾಹನರ ನಿವಾಸ ಸ್ಥಳಗಳು

ಚಾರಿತ್ರಿಕ ಯುಗದಲ್ಲಿ ಕರ್ಣಾಟಕವು ಉತ್ತರಭಾರತದೊಡನೆ ಮೊತ್ತ ಮೊದಲು ಸಂಪರ್ಕ ಪೊಂದಿದ ಕಾಲ ಯಾವುದು ? ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಅಶೋಕನ ಶಾಸನಗಳು ಕನ್ನಡನಾಡಿನ ಅನೇಕ ಭಾಗಗಳಲ್ಲಿ ನಮಗೆ ದೊರೆತಿವೆಯಾದರೂ ಅವನ ಆಳ್ವಿಕೆಗೆ ಮುಂಚಿನ ವಿಚಾರ ವೇನು ?—ಈ ಪ್ರಶ್ನೆ ನಮ್ಮ ಮುಂದಿದೆ. ನಂದರು ಕರ್ಣಾಟಕ (ಕುಂತಲ)ವನ್ನು ಆಳಿದರೆಂಬ ಅಂಶ ಶಿವಮೊಗ್ಗ ಜಿಲ್ಲೆಯಲ್ಲಿ (ಎಫಿಗ್ರಾಫಿಯಾ ಕರ್ಣಾಟಿಕ. ಸಂಪುಟ 7, ಶಿಕಾರಿಪುರ 225) ದೊರೆತ 12 ಮತ್ತು 13ನೇ ಶತಮಾನಗಳ ಕೆಲವು ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ. ಅಶೋಕನು ಕಳಿಂಗ ದೇಶವನ್ನು ಮಾತ್ರ ಗೆದ್ದನು. ಮೌರ್ಯ ದೊರೆಗಳಲ್ಲಿ ದಕ್ಷಿಣವನ್ನು ಗೆದ್ದವರಾರು ಎಂಬುದು ತಿಳಿದುಬಂದಿಲ್ಲ. ಪ್ರೊಫೆಸರ್ ನೀಲಕಂಠ ಶಾಸ್ತ್ರಿಯವರ ಅಭಿಪ್ರಾಯದಂತೆ ನಂದರನ್ನು ನಿರ್ಮೂಲ ಮಾಡಿದ ಮೌರ್ಯರು ಅನುಕ್ರಮವಾಗಿ ದಕ್ಷಿಣದ ವರೆಗೂ ವಿಸ್ತಾರವಾಗಿ ವ್ಯಾಪಿಸಿದ್ದ ಮಗಧರಾಜ್ಯಕ್ಕೆ ಒಡೆಯರಾದರು. ಈ ಸೂಚನೆ ಒಪ್ಪಿಗೆಯಾದರೆ ಮೇಲೆ ಹೇಳಿದ ಶಿವಮೊಗ್ಗ ಜಿಲ್ಲೆಯಲ್ಲಿ ದೊರೆತ ಕನ್ನಡ ಶಾಸನಗಳಲ್ಲಿ ಉಲ್ಲೇಖಿಸಿರುವ ಅಂಶಕ್ಕೆ ಸಾಂಪ್ರದಾಯಿಕ ಪುಷ್ಟಿ ಲಭಿಸಿದಂತಾಗುತ್ತದೆ.

ಉತ್ತರ ಭಾರತದಲ್ಲಿ ಭೀಕರ ಕ್ಷಾಮ ತಲೆದೋರುವುದೆಂದು ಮೊದಲೇ ಅರಿತ ಮೌರ್ಯಚಂದ್ರಗುಪ್ತನು ರಾಜ್ಯ ಪರಿತ್ಯಜಿಸಿ, ತನ್ನ ಗುರುವಾದ ಜೈನಮುನಿ ಭದ್ರಬಾಹುವಿನೊಡನೆ ದಕ್ಷಿಣದ ಕಡೆಗೆ ಬಂದು ಶ್ರವಣಬೆಳಗೊಳದಲ್ಲಿ ನೆಲಸಿದುದು ಈ ಭಾಗ ಮೌರ್ಯಸಾಮ್ರಾಜ್ಯದ ಒಂದು ಭಾಗವಾಗಿತ್ತೆಂದು ಊಹಿಸುವ ಕಾರಣ ಅಸಹಜವಾದುದೇನಲ್ಲ. ಭದ್ರಬಾಹು ಸಲ್ಲೇಖನ ಪಡೆಯುವುದಕ್ಕೆ ಮುಂಚೆ ಗುರು ಶಿಷ್ಯರು ವಾಸವಾಗಿದ್ದ ಶ್ರವಣಬೆಳಗೊಳದ ಚಿಕ್ಕ ಬೆಟ್ಟವನ್ನು ' ಕಟವಪ್ರ ' ಎಂದು ಕರೆಯಲಾಗಿದೆ. ಭದ್ರಬಾಹುವಿನನಂತರ ಚಂದ್ರಗುಪ್ತ ಹನ್ನೆರಡು ವರ್ಷಗಳ ಕಾಲ ಅಲ್ಲಿದ್ದು ಕೊನೆಯಲ್ಲಿ ಸಲ್ಲೇಖನ ವ್ರತವನ್ನು ಕೈಕೊಂಡು ಮರಣವನ್ನು ಪಡೆದನು. ಆ ಬಳಿಕ ಆ ಬೆಟ್ಟಕ್ಕೆ ' ಚಂದ್ರಗಿರಿ ' ಎಂಬ ಹೆಸರು ಬಂದಿತು. ಶ್ರವಣಬೆಳಗೊಳದ ಅತಿ ಪ್ರಾಚೀನ ಕಟ್ಟಡಗಳಲ್ಲೊಂದಾದ ಬಸದಿಗೂ ಚಂದ್ರಗುಪ್ತನ ಹೆಸರಿದೆ.

ಮೌರ್ಯ ಚಂದ್ರಗುಪ್ತನ ಜೀವನ ಚರಿತ್ರೆಯ ಈ ಉಪಕಥೆ ಪುರಾಣವಲ್ಲ, ಚಾರಿತ್ರಿಕ ವಿರಬಹುದೆಂಬುದಕ್ಕೆ ಸಮಕಾಲೀನವಲ್ಲದ ಕೆಲವು ಸಾಹಿತ್ಯ ಮತ್ತು ಶಾಸನಗಳ ಸೂಚನೆಗಳಿವೆ. ಕ್ರಿ.ಶ. 600ಕ್ಕೆ ಸೇರಿದ ಒಂದು ಶಾಸನ ಅಂತಹ ಪ್ರಾಚೀನ ಶಾಸನಗಳಲ್ಲೊಂದು ಎಂದು ರೈಸನು ಅಭಿಪ್ರಾಯ ಪಟ್ಟಿದ್ದಾನೆ. ಶ್ರೀರಂಗಪಟ್ಟಣದ ಸಮೀಪದಲ್ಲಿನ ಸುಮಾರು ಕ್ರಿ.ಶ. 900ರ ಎರಡು ಶಾಸನಗಳು ಭದ್ರಬಾಹು ಚಂದ್ರಗುಪ್ತಮೌರ್ಯರ ಪಾದಚಿಹ್ನಗಳಿಂದ ಗುರುತಿಸಲ್ಪಟ್ಟಿರುವ ಚಿಕ್ಕಬೆಟ್ಟದ ವಿಷಯವನ್ನು

ಕುರಿತದ್ದಾಗಿವೆ. ಕ್ರಿ.ಶ. 931ರ ಹರಿಸೇನನ ‘ ಬೃಹತ್ ಕಥಾಕೋಶ ’ ಮತ್ತು ಕ್ರಿ.ಶ. 1450ರ ರತ್ನನಂದಿಯ ‘ ಭದ್ರಬಾಹು ಚರಿತ ’ಗಳು ಶಾಸನಗಳಲ್ಲಿ ಉಲ್ಲೇಖಿಸಿರುವ ಪ್ರಮುಖ ಸಂಗತಿಗಳನ್ನು ವರ್ಣಿಸುತ್ತವೆ. ಆದರೆ ಚಂದ್ರಗುಪ್ತ ಮೌರ್ಯನು ಶ್ರವಣಬೆಳಗೊಳಕ್ಕೆ ಬಂದ ಬಗ್ಗೆ ಇರುವ ಆಖ್ಯಾನದ ಆಧಾರಕ್ಕೆ ಶಾಮಾಶಾಸ್ತ್ರಿ ಮತ್ತು ಫ್ಲೀಟರು ಸವಾಲು ಹಾಕಿದ್ದಾರೆ. ಆರ್. ನರಸಿಂಹಾಚಾರ್ ಮತ್ತು ರೈಸರು ಅನುಮೋದಿಸಿರುವ ಈ ಆಧಾರವನ್ನು ನಂಬದೆ ಹೋದ ಸ್ಮಿತ್ತನು ತನ್ನ ‘ ಪ್ರಾಚೀನ ಭಾರತದ ಇತಿಹಾಸ ’ ಎಂಬ ಪುಸ್ತಕದ ನಾಲ್ಕನೆ ಮುದ್ರಣದಲ್ಲಿ ಮತ್ತೆ ಅದರ ಚಾರಿತ್ರಿಕೆಯನ್ನು ಪ್ರಮಾಣೀಕರಿಸಿದ್ದಾನೆ. ಟಿಬೆಟ್ಟಿನ ಚರಿತ್ರಕಾರ ತಾರಾನಾಥ, ತಮಿಳು ಕವಿ ಮಾಮೂಲ್‌ನಾರ್ ಇವರುಗಳು ಕೊಟ್ಟಿರುವ ಆಧಾರದ ಮೇಲೆ ಚರಿತ್ರಕಾರರು ಬಿಂದುಸಾರನ (ಕ್ರಿ.ಪೂ. 298–272) ರಾಜ್ಯ ಬಹುಶಃ ಈಗಿರುವ ಮೈಸೂರು ಸಂಸ್ಥಾನದ ಒಂದು ಭಾಗವನ್ನೊಳಗೊಂಡು ದಕ್ಷಿಣದಲ್ಲಿ ಹಬ್ಬಿತ್ತೆಂಬ ಅಭಿಪ್ರಾಯಕ್ಕೆ ಸ್ಥೂಲವಾಗಿ ಬಂದಿದ್ದಾರೆ. ನಂದರ ಮರಣಾನಂತರ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದ ದಕ್ಷಿಣದಲ್ಲಿದ್ದ ರಾಜ್ಯಗಳ ಮೇಲೆ ತನ್ನ ಒಡೆತನವನ್ನು ಸ್ಥಾಪಿಸುವುದಕ್ಕೆ ಬಿಂದುಸಾರನು ಪ್ರಾಯಶಃ ಪ್ರಯತ್ನಿಸಿದನು. ಮಹಿಷಮಂಡಲ (ಮೈಸೂರು) ಅವನ ಚಕ್ರಾಧಿಪತ್ಯಕ್ಕೆ ಸೇರಿದ್ದಿರಬಹುದು. ಇದು ಅಸಂಭವವಲ್ಲ.

ಕರ್ನಾಟಕ ರಾಜ್ಯದ ಕೆಲವು ಸ್ಥಳಗಳಲ್ಲಿ ದೊರೆಯುವ ಅಶೋಕನ ಶಾಸನಗಳನ್ನು ಸಂಕ್ಷೇಪವಾಗಿ ವಿಮರ್ಶಿಸೋಣ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರಗಳಲ್ಲಿ ಸಿಕ್ಕಿರುವ, ಆ ಜಿಲ್ಲೆಯಲ್ಲಿ ಒಂದರ ಬಳಿ ಒಂದಿರುವ ಈ ಮೂರು ಶಾಸನಗಳನ್ನೂ ಕಂಡುಹಿಡಿದ ರೈಸನು ಎಪಿಗ್ರಾಫಿಯಾ ಕರ್ಣಾಟಿಕ ಸಂಪುಟ 11 ರಲ್ಲಿ ಅವುಗಳನ್ನು ಪ್ರಕಟಿಸಿದ್ದಾನೆ. ಕೊಪ್ಪಳದಲ್ಲಿ ಸಿಕ್ಕಿರುವ ಎರಡು ಬಂಡೆಯ ಶಾಸನಗಳೂ ರಾಯಚೂರು ಜಿಲ್ಲೆಯಲ್ಲಿ ಮಾಸ್ಕಿ ಎಂಬಲ್ಲಿ ಸಿಕ್ಕಿರುವ ಒಂದು ಶಾಸನವೂ ಈಗಿನ ಕರ್ಣಾಟಕದ ಭಾಗಗಳಿಗೇ ಸೇರಿದವುಗಳಾಗಿವೆ. ಅಶೋಕನ ಶಾಸನಗಳಲ್ಲಿ ಸಾಮಾನ್ಯವಾಗಿ ಬರುವ ‘ ದೇವಾನಾಂ ಪ್ರಿಯ ’ ಎಂಬ ಬಿರುದನ್ನು ಅಶೋಕನ ಹೆಸರಿಗೆ ಸಂಬಂಧಿಸುವ ಈ ಮಾಸ್ಕಿ ಶಾಸನ ಬಹಳ ಮುಖ್ಯವಾದುದು. ಕೆಲವು ರಾಜಾಜ್ಞೆಗಳು ಮೊದಲು ಸುವರ್ಣಗಿರಿ (ಈಗಿನ ಮಾಸ್ಕಿ–ಹಂಪೆ ನಡುವೆ ಇರುವ ಕನಕಗಿರಿ) ಪ್ರಾಂತಾಧಿಕಾರಿಗೆ ತಲಪಿ, ಅನಂತರ ಅದನ್ನು ಇಸಿಲ ಅಧಿಕಾರಿಗಳಿಗೆ ಕಳುಹಿಸಿರುವುದು ಚಿತ್ರದುರ್ಗ ಜಿಲ್ಲೆಯಲ್ಲಿರುವ ಶಿಲಾಶಾಸನಗಳಲ್ಲಿ ಉಕ್ತವಾಗಿದೆ. ಇದನ್ನು ನೋಡಿದರೆ ಬ್ರಹ್ಮಗಿರಿಯ ಹತ್ತಿರ ಇರುವ ಇಸಿಲ ಎಂಬ ಪಟ್ಟಣ ಅಶೋಕ ಚಕ್ರವರ್ತಿಯ ಪ್ರಾಂತಾಧಿಕಾರಿಯ ರಾಜಧಾನಿಯಾಗಿತ್ತೆಂದು ಸ್ಪಷ್ಟವಾಗುತ್ತದೆ. ಹಾಗಾದರೆ ಇಸಿಲ ಇರುವುದೆಲ್ಲಿ ? ಶಾಸನಗಳು ದೊರೆತ ಸ್ಥಳದ ಹತ್ತಿರದಲ್ಲೇ ಪಟ್ಟಣವು ಇದ್ದಿರಬೇಕೆಂದು ವಿನ್‌ಸೆಂಟ್ ಸ್ಮಿತ್ತನು ಅಭಿಪ್ರಾಯ ಪಟ್ಟಿದ್ದಾನೆ. ಡಾ॥ ಎಂ. ಎಚ್. ಕೃಷ್ಣ ಅವರು ಮತ್ತು ಈ ಲೇಖನವನ್ನು ಬರೆದವರು 1939 ರಲ್ಲಿ ಶಾಸನ ದೊರೆತ ಸ್ಥಳದಲ್ಲೇ ಭೂಸಂಶೋಧನೆಯನ್ನು ನಡೆಸಿದಾಗ ಕಟ್ಟಡಗಳ ಅವಶೇಷಗಳೆಂದು ನಿರ್ದಿಷ್ಟವಾಗಿ ಹೇಳಬಹುದಾದ ವಸ್ತುಗಳು ದೊರಕದಿದ್ದರೂ ಪಟ್ಟಣದ ಅಸ್ತಿತ್ವಕ್ಕೆ ಸಾಕಾಗುವಷ್ಟು ಆಧಾರಗಳನ್ನು ಕಂಡುಹಿಡಿದಿದ್ದಾರೆ. ಮರದಿಂದ ನಿರ್ಮಿತವಾದ ಕಟ್ಟಡಗಳು ಬಹುಶಃ ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ನಾಶವಾಗಿರಬಹುದು.

ಮೈದಾನದಿಂದ 600 ಅಡಿ ಎತ್ತರದ ಕಲ್ಲು ಬಂಡೆಯ ಮೇಲಿರುವ ಬ್ರಹ್ಮಗಿರಿ ಚಿತ್ರದುರ್ಗ ಜಿಲ್ಲೆಯಲ್ಲಿರುವ ಮೊಳಕಾಲ್ಮುರು ತಾಲೂಕಿನಲ್ಲಿದೆ. ಪ್ರಾಚೀನ ಕಾಲದ ಇಲ್ಲಿನ ನಿವಾಸಿಗಳ ಹೆಗ್ಗುರುತುಗಳಂತಿರುವ ಮಡಕೆಗಳು ದೊರೆತಿವೆ. ಬೆಟ್ಟದ ಇಳಿಜಾರಿನಲ್ಲಿ ಅಶೋಕನ ಶಾಸನವಿರುವ ಬಂಡೆಗೆ ಆಗ್ನೇಯದಲ್ಲಿ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಇಟ್ಟಿಗೆಯಿಂದ ಕಟ್ಟಿದ :ಒಂದು ಚೈತ್ಯಾಲಯವಿದೆ. ಶಿಥಿಲವಾಗಿದ್ದರೂ ಇಸಿಲ ಪಟ್ಟಣದಲ್ಲಿ ಕಂಡುಬರುವ ಏಕೈಕ ವಾಸ್ತುಶಿಲ್ಪವಿದು. 1939 ರಲ್ಲಿ ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖೆಯವರೂ, 1947 ರಲ್ಲಿ ಭಾರತದ ಪ್ರಾಚ್ಯ ಸಂಶೋಧನಾ



ಕರ್ನಾಟಕದಲ್ಲಿ ಮೌರ್ಯ ಮತ್ತು
ಶಾತವಾಹನರ ನೆಲೆಗಳು
ವಿವರಣೆ
ಅಶೋಕನ ಶಿಲಾಶಾಸನಗಳು
ಮೌರ್ಯ
ಶಾತವಾಹನ
ಜಿಲ್ಲೆಯ ಇಂದಿನ ಕೇಂದ್ರಸ್ಥಾನ
ಬೀದರ್
ಕಲ್ಬುರ್ಗಿ
ಬಿಜಾಪುರ
ಭೀಮಾ ನದಿ
ಕೃಷ್ಣಾ ನದಿ
ರಾಯಚೂರು
ಮಸ್ಕಿ
ಘಟಪ್ರಭಾ ನದಿ
ಬೆಳಗಾಂ
ವಡಗಾಂವ
ಮಲಪ್ರಭಾ ನದಿ
ಧಾರವಾಡ
ತುಂಗಭದ್ರಾ ನದಿ
ಪಾಲ್ಕಿಗುಂಡು
ಕೊಪ್ಪಳ
ಗವಿಮಠ
ಬಳ್ಳಾರಿ
ಬ್ರಹ್ಮಗಿರಿ
ಜಟಿಂಗರಾಮೇಶ್ವರ
ಸಿದ್ದಾಪುರ
ಕಾರವಾರ
ಬನವಾಸಿ
ಚಿತ್ರದುರ್ಗ
ಚಂದ್ರವಳ್ಳಿ
ಶಿವಮೊಗ್ಗ
ಅರಬ್ಬೀ ಸಮುದ್ರ
ಚಿಕ್ಕಮಗಳೂರು
ತುಮಕೂರು
ಕೋಲಾರ
ಬೆಂಗಳೂರು
ಹಾಸನ
ಶ್ರವಣಬೆಳಗೊಳ
ಮಂಗಳೂರು
ಮಂಡ್ಯ
ಕಾವೇರಿ ನದಿ
ಮಡಿಕೇರಿ
ಮೈಸೂರು


ಚಿತ್ರ 7

ಇಲಾಖೆಯವರೂ ಬ್ರಹ್ಮಗಿರಿಯಲ್ಲಿ ಭೂ ಸಂಶೋಧನೆ ನಡೆಸಿ, ಹೊರಗಡೆಯ ಪದರದಲ್ಲಿ ಮೌರ್ಯರ ಮತ್ತು ಶಾತವಾಹನರ ಕಾಲಕ್ಕೆ ಸೇರಿದ ವಸ್ತುಗಳನ್ನು ಬೆಳಕಿಗೆ ತಂದಿದ್ದಾರೆ. ಸರ್ ಮಾರ್ಟಿಮರ್ ವೀಲರನು ಮೆಗಾಲಿತಿಕ್ ನಾಗರಿಕತೆಯ ಕೆಲವು ಅವಶೇಷಗಳನ್ನು ಸಂಶೋಧನೆಯಲ್ಲಿ ಪತ್ತೆಹಚ್ಚಿ, ಅದು ಅಶೋಕನ ಕಾಲಕ್ಕೆ ಸೇರಿದ್ದೆಂದು ಅಭಿಪ್ರಾಯಪಟ್ಟಿದ್ದಾನೆ. ಈ ಮೆಗಾಲಿತಿಕ್ ಸ್ಮಾರಕಗಳನ್ನು ಸ್ಥಳೀಯ ಜನರು ' ಮೌರ್ಯರ ಅಥವಾ ಮೊರೇರ ಮನೆ ' ಎಂದು ಕರೆದಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾದ ಸಂಗತಿ. ಮೌರ್ಯರೊಂದಿಗೆ ಇಂದು ಸಂಬಂಧವನ್ನು ಸೂಚಿಸುತ್ತದೆ.

ಮೆಗಾಲಿತಿಕರ ಸಂಸ್ಕೃತಿಯ ತರುವಾಯ ಪಿಂಗಾಣಿ ಮಣ್ಣಿನಿಂದ ನಿರ್ಮಿತವಾದ ಮಡಕೆಗಳನ್ನು ಬಳಸುತಿದ್ದ ನಾಗರಿಕತೆಯ ಹಂತವನ್ನು ಬ್ರಹ್ಮಗಿರಿ ಮುಟ್ಟಿತು. ಚಂದ್ರವಳ್ಳಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ನಡೆದ ಸಂಶೋಧನೆಯಿಂದ ಅಂತ್ಯಶಾತವಾಹನರ ಕಾಲದಲ್ಲಿ ಈ ಮಡಕೆಗಳು ಬಳಕೆಯಲ್ಲಿದ್ದವೆಂಬುದು ತಿಳಿದುಬರುತ್ತದೆ. ಮಡಕೆಗಳು ದೊರೆತ ಪದರದಲ್ಲಿಯೇ ಶಾತವಾಹನರ ಒರಟಾದ ಸೀಸದ ನಾಣ್ಯಗಳು ಸಿಕ್ಕಿವೆ. ಅಗಸ್ಟಸ್, ಟೈಬಿರಿಯಸ್ಸರ (ರೋಮ್ ಚಕ್ರವರ್ತಿಗಳ) ಬೆಳ್ಳಿಯ ನಾಣ್ಯಗಳು, ಮಡಕೆಗಳು, ಸೀಸದ ನಾಣ್ಯಗಳು–ಇವುಗಳ ಆಧಾರದ ಮೇಲೆ ಚಂದ್ರವಳ್ಳಿಯಲ್ಲಿ ಈ ಮಡಕೆಗಳನ್ನು ಬಳಸುತ್ತಿದ್ದ ಸಂಸ್ಕೃತಿಯ ಕಾಲವನ್ನು ನಿರ್ಣಯಿಸಬಹುದು. ಸುಮಾರು ಕ್ರಿ. ಶ. 200 ರ ತರುವಾಯ ಶಾತವಾಹನರು ಚಂದ್ರವಳ್ಳಿಯನ್ನು ವಾಸಸ್ಥಾನವಾಗಿ ಹೊಂದಿದರೆಂದು ಮಾರ್ಟಿಮರ್ ವೀಲರನು ತಿಳಿಸಿದ್ದಾನೆ.

ರಾಯಚೂರು ಜಿಲ್ಲೆಯಲ್ಲಿರುವ ಲಿಂಗಸಗೂರ್ ತಾಲೂಕಿನ ಮಾಸ್ಕಿ ಮೊದಲನೆ ಜಯಸಿಂಹ ಜಗದೇಕಮಲ್ಲನ (1015–42) ಸುಪ್ರಸಿದ್ಧ ರಾಜಧಾನಿಯಾಗಿತ್ತು. (' ರಾಜಧಾನಿ ಪ್ರಿಯ ಮೊಸಂಗಿ ') ಅಶೋಕನ ಕಾಲದಲ್ಲಿ ಇದು ಕನ್ನಡ ನಾಡಿನ ಮತ್ತೊಂದು ಪ್ರಸಿದ್ಧ ಪಟ್ಟಣವಾಗಿತ್ತು. ಇಸಿಲದಂತೆ ಇಲ್ಲಿಯೂ ಕಟ್ಟಡಗಳ ಸುಳಿವೇ ಕಂಡುಬರುವುದಿಲ್ಲ.

ಕರ್ಣಾಟಕವನ್ನಾಳಿದ ಶಾತವಾಹನರ ಇತರ ನಿವಾಸಸ್ಥಳಗಳ ಇತಿಹಾಸವನ್ನು ಕುರಿತು ವಿಮರ್ಶಿಸೋಣ. ಚಿಕ್ಕಮಗಳೂರಿನ 1717ರ ಶಾಸನವೊಂದು (E. C. VI–Kadur) ಮೈಸೂರು ರಾಜ್ಯ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂದು ಪ್ರತಿಧ್ವನಿಸುತ್ತದೆ. ಹಾರಿತೀಪುತ್ರ ಸಾತಕರ್ಣಿಯು ದಾನ ಕೊಟ್ಟಿರುವ ಅಂಶವನ್ನು ಉಲ್ಲೇಖಿಸುವ ಪ್ರಾಕೃತ ಭಾಷೆಯಲ್ಲಿರುವ ಮಳವಳ್ಳಿ (ಶಿವಮೊಗ್ಗ ಜಿಲ್ಲೆ) ಶಾಸನ ಮೈಸೂರನ್ನಾಳಿದ ಶಾತವಾಹನರ ಪ್ರಭುತ್ವಕ್ಕೆ ಸಾಕ್ಷಿಯಾಗಿದೆ. ಹಾರಿತೀಪುತ್ರನೂ ಅವನ ಮಗಳು ನಾಗಶ್ರೀಯೂ ದಾನ ಕೊಟ್ಟಿರುವ ಅಂಶ ಬನವಾಸಿಯಲ್ಲಿ ನಾಗಪ್ರತಿಮೆಯ ಮೇಲಿರುವ ಶಾಸನದಲ್ಲಿ ಉಕ್ತವಾಗಿದೆ. ತಾಳಗುಂದದ ದೇವಾಲಯದಲ್ಲಿ ಶಾತವಾಹನರ ಸಾತಕರ್ಣಿಯು ಲಿಂಗವನ್ನು (ಪ್ರಣವೇಶ್ವರನನ್ನು) ಉಪಾಸಿಸಿದ್ದು ಉಕ್ತವಾಗಿರುವ ತಾಳಗುಂದದ ಸ್ತಂಭಶಾಸನವನ್ನು ಇಲ್ಲಿ ಪ್ರಸ್ತಾವಿಸಬೇಕು.

ಶಾತವಾಹನರ ವಂಶದ ರಾಜರ ಹೆಸರುಗಳು ಅವರವರ ತಾಯಂದಿರ ಹೆಸರುಗಳೊಂದಿಗೆ ಸೇರಿಕೊಂಡಿವೆ. ಆದುದರಿಂದ ಗೌತಮೀ ಪುತ್ರ ಸಾತಕರ್ಣಿ, ವಾಸಿಷ್ಠೀ ಪುತ್ರ ಪುಲಮಾಯಿ, ಹಾರಿತೀ ಪುತ್ರ ಸಾತಕರ್ಣಿ– ಎಂಬ ಹೆಸರುಗಳು ಕಂಡುಬಂದಿವೆ.

ಪುಲುಮಾಯಿಯು ದಕ್ಷಿಣಕ್ಕೆ ದಂಡಯಾತ್ರೆ ಬಂದಿದ್ದಾಗ ಶಾತವಾಹನರ ಅಧಿಕಾರಿಗಳು ಕನ್ನಡ ರಾಜ್ಯದಲ್ಲಿ ನೆಲಸಿದ್ದರೆಂದು ಕಾಣುತ್ತದೆ. ಕದಂಬರಿಗಿಂತ ಮುಂಚೆ ಕನ್ನಡ ರಾಜ್ಯದಲ್ಲಿ ' ಚುಟು ' ಕುಲದ ಅರಸುಗು ಇದ್ದರೆಂದು ಶಾಸನಗಳಿಂದ ಗೊತ್ತಾಗುತ್ತದೆ. ಚುಟು ಅರಸರು ಮಹಾರಥಿಗಳೊಡನೆ ಸಂಬಂಧ

ಬೆಳೆಸಿದ್ದರು. ಚುಟು ಅರಸರು ಶಾತವಾಹನರಿಗೆ ರಕ್ತಸಂಬಂಧಿಗಳೆಂದು ಹೇಳಬಹುದು. ಕನ್ನಡ ರಾಜ್ಯದಲ್ಲಿ ಶಾತವಾಹನರ ಒಬ್ಬ ವೈಸರಾಯ್ ಇದ್ದನು. ಮುದಾನಂದನು ಶಾತವಾಹನರ ವೈಸರಾಯನನ್ನು ಓಡಿಸಿರಬೇಕು. ಚುಟುಕುಲಾನಂದನು ಇವನನ್ನು ತಳ್ಳಿ ಅಧಿಕಾರಕ್ಕೆ ಬಂದಿರಬಹುದು.

ಚಂದ್ರವಳ್ಳಿಯಲ್ಲಿ ನಡೆದ ಭೂಸಂಶೋಧನೆಯಿಂದ ಶಾತವಾಹನರ ಆಳ್ವಿಕೆಯ ಮೇಲೆ ಹೆಚ್ಚು ಬೆಳಕು ಬೀಳುವುದು ಸಾಧ್ಯವಾಗಿದೆ. ಶಾತವಾಹನರ ನಾಣ್ಯಗಳು ಅಲ್ಲಿ ದೊರೆತು ಅದು ಅವರ ರಾಜಧಾನಿಗಳಲ್ಲಿ ಒಂದಾಗಿದ್ದಿರಬೇಕೆಂದು ಹೇಳಲು ಅವಕಾಶವಿದೆ. ಈ ನಾಣ್ಯಗಳ ಮೇಲೆ ಕಂಡುಬರುವ ಸದಕನ ಕಲಲಾಯ ಮಹಾರಥಿ, ಮುದಾನಂದ, ಚುಟುಕುದಾನಂದ ಮೊದಲಾದ ಹೆಸರುಗಳು ಗೋದಾವರಿ ತೀರದಲ್ಲಿರುವ ಪೈಠನ್ ಅಥವಾ ಪ್ರತಿಷ್ಠಾನದಲ್ಲಿ ಆಳಿದ ಶಾತವಾಹನರ ಪ್ರಾಂತಾಧಿಕಾರಿಗಳು ಅಥವಾ ಶಾತವಾಹನರ ರಾಜವಂಶದವರಾಗಿದ್ದಿರಬೇಕು.

ಚಂದ್ರವಳ್ಳಿಯಲ್ಲಿ ಮಾರ್ಟಿಮರ್ ವೀಲರನು ನಡೆಸಿದ ಭೂ ಸಂಶೋಧನೆಯಿಂದ ಐವತ್ತೈದು ನಾಣ್ಯಗಳು ದೊರೆತಿವೆ. ಅವುಗಳಲ್ಲಿ ಸ್ಪಷ್ಟವಾಗಿರುವ ನಲವತ್ತೈದು ನಾಣ್ಯಗಳು ಶಾತವಾಹನರ ಮತ್ತು ಅವರ ಸಾಮಂತರಾಜರ ನಾಣ್ಯಗಳಾಗಿವೆ. ಶಾತವಾಹನರ ಮೂರು ನಾಣ್ಯಗಳಲ್ಲಿ ಒಂದು ಪುಲುಮಾಯಿಗೂ ಮತ್ತೆರಡು ನಾಣ್ಯಗಳು ಯಾಜ್ಞಶಾತಕರ್ಣಿಗೂ ಸೇರಿದವು. ಹದಿನೈದು ನಾಣ್ಯಗಳು ಸಾಮಂತ ರಾಜರದು. ಅನಂತರದ ನಾಣ್ಯಗಳು ಮೊದಲನೆ ಪದರಗಳಿಂದ ದೊರೆತವು. ಅವುಗಳು ಪುಲುಮಾಯಿಯ ನಾಣ್ಯಗಳಿಗಿಂತ ಮುಂಚಿನವೆಂದು ಲಿಪಿ ಶಾಸ್ತ್ರಗಳ ಆಧಾರದ ಮೇಲೆ ನಿರ್ಧರಿಸಬಹುದು. ಕ್ರಿ. ಪೂ. 50 ರ ಸದಕನ ಸಾಂಚಿಶಾಸನಗಳೊಡನೆ ಹೋಲಿಸಬಹುದೆಂದು ಎನ್. ಜಿ. ಮಜುಂದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸದಕನ ಕಲಲಾಯ ಮಹಾರಥಿಯು ಹೊರಡಿಸಿದ ನಾಣ್ಯಗಳಲ್ಲಿ ಒಂಬತ್ತು ನಾಣ್ಯಗಳು ಒಂದು ಬಗೆಯವು. ಒಂದು ಮಾತ್ರ ಗುರುತಿಸಲು ಆಗಲಿಲ್ಲ. ಇವೆಲ್ಲಕ್ಕಿಂತ ಸ್ವಾರಸ್ಯವಾದ ಅಂಶವೆಂದರೆ, ಈವರೆಗೆ ಬಹಿರಂಗಕ್ಕೆ ಬಾರದೆ ಇದ್ದ ಸದಕನ ಚುಟು ಕನ್‌ಹ ಮಹಾರಥಿ ಮತ್ತು ಸದಕನ ಕನಸ ಮಹಾರಥಿಪುತ ಎಂಬ ಇಬ್ಬರು ಅಧಿಕಾರಿಗಳ ಹೆಸರುಗಳನ್ನು ತಿಳಿಸುವ ನಾಣ್ಯಗಳಿವೆ. ಭೂ ಗರ್ಭದ ಏಳು–ಹತ್ತು ಪದರಗಳಲ್ಲಿ ಅವು ಸಿಕ್ಕಿವೆ. ಆರನೆ ಪದರದಲ್ಲಿ ದೊರೆತ ಚುಟುಕಲಾನಂದನ (ಕುಲಾನಂದನ) ನಾಣ್ಯ ಮಹಾರಥಿಗಳ ತರುವಾಯದ ಕಾಲಕ್ಕೆ ಸೇರುತ್ತದೆಂದು ವೀಲರನಿಂದ ನಿರ್ಧರಿಸಲಾಗಿದೆ.

ಚಂದ್ರವಳ್ಳಿಯ ಸಂಶೋಧನೆಯಲ್ಲಿ ಕಂಡುಬರುವ ಶಾತವಾಹನರು ಮತ್ತು ಅವರ ಸಾಮಂತರಾಜರು, ನಾಣ್ಯಗಳ ಮೇಲುಭಾಗದಲ್ಲಿ ನಂದಿಯು ಹಿಂಭಾಗದಲ್ಲಿ ಗುಡ್ಡದ ಮೇಗಡೆ ಬಾಲಚಂದ್ರನ ಚಿತ್ರವಿರುವ ನಾಣ್ಯಗಳನ್ನು ಅಚ್ಚು ಹಾಕಿಸಿದ್ದಾರೆ. ಲಿಪಿಗಳು ಅವುಗಳಲ್ಲಿ ಕಂಡುಬರುವುದಿಲ್ಲ. ಅವುಗಳ ಗಾತ್ರ, ತೂಕ ಚಿಕ್ಕದಾಗಿವೆ. ದೊಡ್ಡ ನಾಣ್ಯಗಳ ಜೊತೆ ಉಪಯೋಗಿಸುವುದಕ್ಕಾಗಿ ತಯಾರಿಸಿದ ಚಿಕ್ಕ ನಾಣ್ಯಗಳೆಂದು ಕಾಣುತ್ತವೆ.

ಕನ್ನಡ ನಾಡಿನ ಹೊರವಲಯದಲ್ಲಿ ಶಾತವಾಹನ ಸ್ಥಳಗಳಾದ ಆಂಧ್ರ ಪ್ರದೇಶವಲ್ಲಿರುವ ಕೊಂಡಾಪುರ, ಕೊಲ್ಲಾಪುರದ ಹತ್ತಿರವಿರುವ ಬ್ರಹ್ಮಪುರಿಗಳಲ್ಲಿ ದೊರೆತಿರುವಂತೆಯೇ ಚಂದ್ರವಳ್ಳಿಯ ಭೂ ಸಂಶೋಧನೆಯಲ್ಲಿಯೂ ಇಟ್ಟಿಗೆಗಳು, ಹೆಂಚುಗಳು ವಿಧವಿಧವಾದ ಮೋಹಕ ಬಣ್ಣದ ಗಾಜಿನ ಬಳೆಗಳು, ಕಪ್ಪೆಚಿಪ್ಪುಗಳು, ಅಂದವಾದ ಮಣಿಗಳು ದೊರೆತಿವೆ. ಆದರೆ ದುರದೃಷ್ಟದಿಂದ ಇವುಗಳನ್ನು ಡಾ॥ ಎಂ. ಹೆಚ್. ಕೃಷ್ಣ ಅವರು ಪ್ರಕಟಿಸಿಲ್ಲ. ಶಾತವಾಹನರು ಬಳಸುತ್ತಿದ್ದ ಮಡಕೆಗಳು ಪಿಂಗಾಣಿ ಮಣ್ಣಿನಿಂದ ರಚಿತವಾದುವು. ವಿವಿಧ ರೀತಿಯ ಮಡಕೆಗಳ ಮೇಲೆ ವರ್ಣಾಲಂಕಾರಗಳೂ ಉಂಟು.

ಮಣ್ಣಿನ ಜಾಡಿಗಳು, ಬಟ್ಟಲು, ತಟ್ಟೆಗಳು, ಪಾತ್ರೆಗಳೂ ದೊರೆತಿವೆ. ಮೊಗಲರ ಹಾಗೂ ಆಧುನಿಕ ಕಾಲದಲ್ಲಿ ಪಿಂಗಾಣಿ ಪಾತ್ರೆಗಳು ಬಳಕೆಯಲ್ಲಿರುವಂತೆ ಆಗಲೂ ಇದ್ದಿರಬೇಕು. ಈ ವಸ್ತುಗಳು ಶಾತವಾಹನರ ಮತ್ತು ಅವರ ವರ್ಣರಂಜಿತವಾದ ಸಾಮಾಜಿಕ ಜೀವನದ ಪರಿಚಯವನ್ನು ಮಾಡಿಕೊಡುತ್ತವೆ.

ಮೂರು ಶತಮಾನಗಳ ವರೆಗೆ ರಾಜ್ಯ ವಿಸ್ತರಿಸಿ ಅದನ್ನು ಭದ್ರಪಡಿಸಿದ ಶಾತವಾಹನರು ಸಾಹಿತ್ಯ ದಲ್ಲಿಯೇ ಅಲ್ಲದೆ, ಆರ್ಥಿಕ ರಂಗದಲ್ಲಿಯೂ ಹಿರಿದಾದುದನ್ನು ಸಾಧಿಸಿದ್ದಾರೆ. ಅತ್ಯಾಶ್ಚರ್ಯಕರವಾದ ಮಟ್ಟಕ್ಕೆ ನಗರ ಜೀವನ ಬೆಳೆಯಿತು. ಹಳೆಯ ಪಟ್ಟಣಗಳು ವಿಸ್ತರಿಸಲ್ಪಟ್ಟು ಹೊಸ ಪಟ್ಟಣಗಳು ನಿರ್ಮಿತ ವಾದುವು. ಪ್ರತಿಷ್ಠಾನ, ಜುನ್ನಾರ್, ಕರಹಕಟಕ (ಕರಾಡ್) ನಾಸಿಕ್, ಗೋವರ್ಧನ, ಧಾನ್ಯಕಟಕ (ಈಗಿನ ಧರಣಿಕೋಟ) ಮತ್ತು ವೈಜಯಂತಿ (ಬನವಾಸಿ) ಪಟ್ಟಣಗಳು ವ್ಯಾಪಾರ ಕೇಂದ್ರಗಳಾಗಿದ್ದವು.

ಶಾತವಾಹನರು ದಕ್ಷಿಣದಲ್ಲಿ ಸ್ಥಾಪಿಸಿದ ಶಾಂತಿ ಅಭಿವೃದ್ಧಿಗಳ ಪರಿಣಾಮವಾಗಿ ಹೊರದೇಶಗಳೊಡನೆ ವ್ಯಾಪಾರವು ಪ್ರಮುಖ ಸ್ಥಾನ ಪಡೆಯಿತು. ಗ್ರೀಕರ ಮತ್ತು ರೋಮನರ ಸಾಮ್ರಾಜ್ಯದೊಡನೆ ಸಮುದ್ರ ವ್ಯಾಪಾರ ಚೆನ್ನಾಗಿ ಬೆಳೆಯಿತು. ಕ್ರಿ. ಶ. 45ರಲ್ಲಿ ಹಿಪ್ಪಾಲಸ್ ಎಂಬವನು ಅರಬೀ ಸಮುದ್ರದಲ್ಲಿ ಬೀಸುವ ಗಾಳಿಗಳ ಋತುಮಾನವನ್ನು ಕಂಡು ಹಿಡಿದನು. ಇದರಿಂದ ಸಮುದ್ರಯಾನಕ್ಕೆ ಉತ್ತೇಜನ ದೊರೆಯಿತು. ಇದರಿಂದಲೇ ಪಶ್ಚಿಮ ತೀರಪ್ರದೇಶವು ಉತ್ತಮ ರೇವು ಪಟ್ಟಣಗಳಿಂದ ತುಂಬಿತು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ : ಭರುಕಚ್ಛ (ಬ್ರೋಚ್), ಸೋಪಾರಕ (ಬೊಂಬಾಯಿಗೆ ಎಂಟು ಮೈಲಿ ದೂರದಲ್ಲಿರುವ ಸೋಪಾರ), ಕಲ್ಯಾಣ್, ಏಗಿಡಿ (ಗೋವ), ಚರ್ ಸೋನಿಸಸ್ (ಕಾರವಾರ). ಮಸ್ಲಿನ್ ಬಟ್ಟೆ, ಮೆಣಸು, ಏಲಕ್ಕಿ ಮುಂತಾದ ಪದಾರ್ಥಗಳನ್ನು ಹೊತ್ತ ಹಡಗುಗಳು ಕಾರವಾರದಿಂದ ಸಾಗುತ್ತಿದ್ದುವು. ಕರ್ಣಾಟಕದಲ್ಲಿ ಶಾತವಾಹನರ ಈ ಪ್ರಸಿದ್ಧ ರೇವುಪಟ್ಟಣದಲ್ಲಿಯೇ ಚುಟುಕುಲಾನಂದನಿಗೆ ಸೇರಿದ ಅನೇಕ ಸೀಸದ ನಾಣ್ಯಗಳು ದೊರೆತಿವೆ.

ಕರ್ಣಾಟಕದಲ್ಲಿ ಶಾತವಾಹನರು ನೆಲಸಿದ ಇತರ ಮುಖ್ಯ ಸ್ಥಳಗಳು ಯಾವುವೆಂದರೆ : ಬಾಗಲ್ ಕೋಟೆಯ ಹತ್ತಿರ ಇರುವ ಹೀರಕಲ್, ಬೆಳಗಾಂ ಹತ್ತಿರ ಇರುವ ವಡಗಾಂ. ಇಲ್ಲಿಯೂ ಶಾತವಾಹನರ ಕಾಲಕ್ಕೆ ಸೇರಿದ ಬಳೆಯ ಚೂರು, ಮಣಿ, ಹೆಂಚು, ಮಡಕೆ ಇತ್ಯಾದಿಗಳನ್ನು ಸಂಶೋಧನೆಯಲ್ಲಿ ಡಾ॥ ಪಂಚಮುಖಿಯವರು ಸಂಗ್ರಹಿಸಿದ್ದಾರೆ. ಈ ವಸ್ತುಗಳೆಲ್ಲಾ ಈಗ ಧಾರವಾಡದ ಸಂಶೋಧನಾ ಸಂಗ್ರಹಾಲಯದಲ್ಲಿವೆ.

ಇತ್ತೀಚೆಗೆ ಪ್ರಾಚ್ಯ ಸಂಶೋಧನಾ ಇಲಾಖೆಯ ಡಾ॥ ಎಂ. ಶೇಷಾದ್ರಿಯವರು ಅವರ ಸಹೋದ್ಯೋಗಿ ಗಳೊಂದಿಗೆ ನಡೆಸಿದ ಭೂಗರ್ಭ ಶೋಧನೆಯ ಫಲವಾಗಿ ಗುಲ್ಬರ್ಗ ಜಿಲ್ಲೆಯಲ್ಲಿರುವ ಚಿತಪೂರಿಗೆ ಇಪ್ಪತ್ತೈದು ಮೈಲು ದೂರದಲ್ಲಿರುವ ಸನ್ನತಿ ಎಂಬ ಶಾತವಾಹನರ ನಿವಾಸ ಸ್ಥಾನವೊಂದು ಬೆಳಕಿಗೆ ಬಂದಿದೆ.

ಆ ಸ್ಥಳದ ಭೂಮಿಯ ಮೇಲುಗಡೆ ಪದರವನ್ನು ಪರೀಕ್ಷಿಸಿದಾಗ ಬಣ್ಣದ ಚುಕ್ಕೆಯ ಪಾತ್ರೆಗಳು, ಸ್ಫಟಿಕ ಹಾಗೂ ಜೇಡಿಮಣ್ಣಿನ ಪಾತ್ರೆ, ಮಣಿಗಳು, ಕಪ್ಪೆ ಚಿಪ್ಪಿನ ಬಳೆಗಳು, ಶಾತವಾಹನರ ಕಾಲದ ವೈಶಿಷ್ಟ್ಯಗಳಾದ ಹೆಂಚಿನ ಚೂರುಗಳು ದೊರೆತಿವೆ.

ಬೌದ್ಧ ಸ್ಮಾರಕಗಳ ಅವಶೇಷಗಳು ಈ ಸ್ಥಳದಲ್ಲಿ ದೊರೆತಿವೆ. ಇಲ್ಲಿರುವ ಚಂದ್ರಾಲಂಬ ದೇವಾಲಯ ಬಹಳ ಜನ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ. ದುರ್ಗಾದೇವಿಗೆ ಮೊದಲು ಕಟ್ಟಿದ ಈ ದೇವಾಲಯ ಕ್ರಿ. ಶ. 8 ಅಥವಾ 9ನೆ ಶತಮಾನಕ್ಕೆ ಸೇರಿದ್ದಿರಬಹುದು. ದೇವಾಲಯದ ಒಳ ಅಂಗಣದಲ್ಲಿ ಶಾತವಾಹನರ

ಕಾಲದ ಬೌದ್ಧ ಸ್ತೂಪಗಳ ಮೇಲ್ಭಾಗದ ಹೊದಿಕೆಗಳಾಗಿದ್ದ ಬಹು ಸಂಖ್ಯೆಯ ಕಲ್ಲಿನ ಚಿತ್ರಪಟ್ಟಿಕೆಗಳು ಇವೆ. ಇವುಗಳಲ್ಲಿ ಮಧ್ಯೆ ಭಿನ್ನವಾಗಿರುವ ಒಂದು ಚಿತ್ರಪಟ್ಟಿಕೆ ಬುದ್ಧನ ಜನನವನ್ನು ಚಿತ್ರಿಸುತ್ತದೆ. ಬೋಧಿವೃಕ್ಷ, ಪಾದಗಳ ಗುರುತು ಮತ್ತು ಸಿಂಹಾಸನದ ಈ ಕೆತ್ತನೆಗಳಿಂದ ಕೂಡಿದ ಒಂದು ದೊಡ್ಡ ಕಲ್ಲಿನ ಚಿತ್ರಪಟ್ಟಿಕೆ ದೇವಾಲಯದ ಹೊರಗೆ ಬೇವಿನ ವೃಕ್ಷದ ಕೆಳಗೆ ಬಿದ್ದಿದೆ. ಕೆಲವು ಚಿತ್ರಪಟ್ಟಿಕೆಗಳು ದೇವಾಲಯದ ಹತ್ತಿರವಿರುವ ಕಲ್ಯಾಣಿಯ ಮೆಟ್ಟಲುಗಳಿಗೆ ಬಳಸಲಾಗಿದೆ.

ಭೀಮಾನದೀ ಪಾರ್ಶ್ವದಲ್ಲೇ ವರ್ತುಲಾಕಾರದ ಕಟ್ಟಡವೊಂದಿತ್ತು, ಹಳ್ಳಿಯ ನಿವಾಸಿಗಳು ಇದನ್ನು ಸಂಪೂರ್ಣ ನಾಶಮಾಡಿದ್ದಾರೆ. ಗುಂಡಗಿರುವ ತಳಭಾಗ ಬಿಟ್ಟು ಕಟ್ಟಡದ ಮುಖ್ಯ ರಚನೆಯೆಲ್ಲಾ ನಾಶವಾಗಿದೆ. ರೂಪು ಕೊಟ್ಟು ಸಿದ್ಧಪಡಿಸಿದ ಸುಣ್ಣದ ಕಲ್ಲು ಮತ್ತು ಗಾರೆಯಿಂದ ಈ ಬೌದ್ಧಸ್ತೂಪದ ಮೇಲ್ಭಾಗದ ಹೊದಿಕೆಯನ್ನು ನಿರ್ಮಿಸಿದ್ದರೆಂಬುದು ನಿರ್ಧಾರವಾದ ಸಂಗತಿ. ವರ್ತುಲಾಕಾರದ ಸ್ತೂಪದ ತಳಭಾಗ ಒಳ್ಳೆಯ ಸ್ಥಿತಿಯಲ್ಲಿರುವ ಕಲ್ಲಿನ ಚಿತ್ರಪಟ್ಟಿಕೆಗಳನ್ನು ಪಡೆದಿದೆ. ನಾಗಾಲೋಟದಿಂದ ಓಡುತ್ತಿರುವ ಕಾಡುಕೋಣ ಮತ್ತು ರೆಕ್ಕೆಗಳುಳ್ಳ ಕುದುರೆ ಇವುಗಳಲ್ಲಿ ಮುಖ್ಯವಾದುದು. ಸ್ತೂಪದ ಕೆಲವು ಚಿತ್ರಪಟ್ಟಿಕೆಗಳು, ಆಯತಸ್ತಂಭದ ಭಾಗಗಳು, ಇತರ ಕಲಾ ವಸ್ತುಗಳು ಈ ಭಗ್ನ ಸ್ಮಾರಕದ ಕೇವಲ ಐವತ್ತು ಗಜ ದೂರದಲ್ಲಿ ಮೇಲ್ಛಾವಣಿಯಿಲ್ಲದೆ ನಿರ್ಮಿತವಾಗಿರುವ ಮಹಿಷಾಸುರಮರ್ದಿನಿ ದೇವಿಯ ಕಟ್ಟಡಕ್ಕೆ ಅಸ್ತವ್ಯಸ್ತವಾಗಿ ಉಪಯೋಗಿಸಲ್ಪಟ್ಟಿವೆ.

ನದಿಯ ಪಾರ್ಶ್ವದ ಅದೇ ಸ್ಮಾರಕಕ್ಕೆ ಪ್ರಾಯಶಃ ಸೇರಿದ್ದ ಪ್ರಾಕೃತಭಾಷೆಯಲ್ಲಿ ಶಾಸನಗಳನ್ನೊಳಗೊಂಡ ಎರಡು ಆಯತಸ್ತಂಭಗಳು ಮೈದಾನದಲ್ಲಿ ಬಿದ್ದಿರುವುದು ಕಂಡು ಬಂದಿದೆ. ಕೆಲವು ಕಡೆ ಆಯತ ಕಂಬಗಳ ಮೇಲುಭಾಗ ಕೆತ್ತನೆಗಳಿಂದ ಅಲಂಕೃತವಾಗಿದೆ. ಸನ್ನತಿಯಲ್ಲಿರುವ ಆಯತಸ್ತಂಭಗಳು ಆಂಧ್ರ ಪ್ರದೇಶದಲ್ಲಿರುವ ನಾಗಾರ್ಜುನಕೊಂಡ ಮತ್ತು ಅಮರಾವತಿಯಲ್ಲಿರುವ ಬೌದ್ಧ ಸ್ಮಾರಕಗಳ ಹೋಲಿಕೆಯನ್ನೇ ಹೊಂದಿವೆ. ಸಾಮಾನ್ಯವಾಗಿ ಅವು (ಆಯಕಟ್ಟಿನ) ಪ್ರಮುಖ ನಾಲ್ಕು ದಿಕ್ಕುಗಳಲ್ಲಿ ಜೋಡಿಸಲ್ಪಡುತ್ತವೆ. ಬುದ್ಧನ ಜೀವನದ ಮುಖ್ಯ ಘಟನೆಗಳ ಸಾಂಕೇತಿಕ ನಿರೂಪಣೆಯನ್ನು ಕೊಡುವ ಈ ಸ್ತಂಭಗಳ ಸಂಖ್ಯೆ ಐದು. ಘಟನೆಗಳು ಯಾವುವೆಂದರೆ :—ಜನನ, ಮಹಾಭಿನಿಷ್ಕ್ರಮಣ (ವೈರಾಗ್ಯ), ಸಮ್ಯಕ್ ಸಂಬೋಧಿ (ಬುದ್ಧನಾಗುವುದು), ಧರ್ಮ ಚಕ್ರ ಪ್ರವರ್ತನ (ಮೊದಲ ಉಪದೇಶ), ಮಹಾ ಪರಿನಿರ್ವಾಣ.

ಶಾತವಾಹನ ಕಾಲಕ್ಕೆ ಸೇರಿದ ಈ ವಿಶಿಷ್ಟ ಚಿತ್ರಪಟ್ಟಿಕೆಗಳು ಕರ್ನಾಟಕ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರದಿವೆ. ಶಿಲ್ಪ ರೀತಿಯ ಆಧಾರದಿಂದ ಕ್ರಿ. ಪೂ. ಮೊದಲನೇ ಶತಮಾನದಿಂದ ಕ್ರಿ. ಶ. ಮೂರನೇ ಶತಮಾನಕಾಲದ ಅಂತರಕ್ಕೆ ಅವು ಸೇರಿದುವಾಗಿವೆ. ಪ್ರಾಕೃತ ಭಾಷೆಯನ್ನು ಬಳಸಿರುವ ಆ ಶಾಸನಗಳ ಬರೆವಣಿಗೆಯ ರೀತಿ, ಚಿತ್ರಪಟ್ಟಿಕೆಗಳಿಗೆ ನಿರ್ಧರಿಸಿರುವ ಕಾಲಕ್ಕೆ ತಾಳೆಯಾಗುತ್ತದೆ.

ಚಾಮರದಿಂದ ಬೀಸುವ ಗಾಳಿಯನ್ನು ಸೇವಿಸುತ್ತಾ ಮಾದಕದ ಬಟ್ಟಲನ್ನು ಕೈಯ್ಯಲ್ಲಿ ಹಿಡಿದು ಆರಾಮವಾಗಿ ವಿಶ್ರಾಂತಿ ಪಡೆಯುತ್ತಿರುವ ಶ್ರೀಮಂತ ಹಾಗೂ ರಾಜಮನೆತನದ ಸ್ತ್ರೀ ಪುರುಷರ ಜೀವನ ದೃಶ್ಯವನ್ನು ಈ ಚಿತ್ರಪಟ್ಟಿಕೆಗಳು ಸರಳ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತವೆ. ಒಮ್ಮೊಮ್ಮೆ ಮಿಥುನ ದೃಶ್ಯವೂ ಕಂಡು ಬರುತ್ತದೆ. ಪುರುಷರ ಶಿರೋಭೂಷಣ, ಸ್ತ್ರೀಯರ ಕೇಶಮುಡಿ, ಭಾರದ ಸೊಂಟದ ಪಟ್ಟಿ, ಕರ್ಣಾಭರಣ, ಕೈಕಡಗ, ಕಾಲಂದಿಗೆ ಮೊದಲಾದ ಆಭರಣಗಳನ್ನು ಧರಿಸಿರುವ ಸ್ತ್ರೀಯರ ಚಿತ್ರಗಳು ಪ್ರಾಚೀನ ಮಥುರಾ ಮತ್ತು ಅಮರಾವತಿಗಳನ್ನು ನೆನಪಿಗೆ ತಂದುಕೊಡುತ್ತವೆ. ತುಂಬಿದ ಎದೆ ಹಾಗೂ

ಆಕೃತಿಗಳು ಅವುಗಳ ಪ್ರಾಚೀನತೆಯನ್ನು ಸ್ಥಿರಪಡಿಸುತ್ತವೆ. ದುರದೃಷ್ಟದಿಂದ ಅನೇಕ ಚಿತ್ರ ಪಟ್ಟಿಕೆಗಳು ಒಡೆದು ಚೂರು ಚೂರಾಗಿವೆ.

ಲಿಪಿ ಇರುವ ಕೆಲವು ಕಲ್ಲಿನ ಪಟ್ಟಿಕೆಗಳು ಗಮನಾರ್ಹವಾದುವು. ಈ ಲಿಪಿಗಳ ಅಧ್ಯಯನ ನಡೆಯುತ್ತಿದೆ. ಈ ಪಟ್ಟಿಕೆಗಳು ಬೌದ್ಧಸ್ತೂಪವನ್ನು ಮುಚ್ಚಲು ಕೊಟ್ಟ ಇತರ ಅಲಂಕಾರ ವಸ್ತುಗಳನ್ನೂ ದಾನವಾಗಿ ಕೊಟ್ಟದಾನಿಯ ಹೆಸರುಗಳನ್ನೂ ಹೊರಗೆಡಹುತ್ತವೆ. ಗೃಹಸ್ಥನಾದ ಸುಸಾಲ ಅಂತಹ ದಾನಿಗಳಲ್ಲಿ ಒಬ್ಬನೆಂದು ತಿಳಿದು ಬರುತ್ತದೆ.

ಆ ಹಳ್ಳಿಯ ಹತ್ತಿರ ಎರಡು ದಿಣ್ಣೆಗಳಿವೆ. ಗೋಳಾಕಾರವಾಗಿರುವ ದಿಣ್ಣೆಗಳ ಮಡಿಲಲ್ಲಿ ಬೌದ್ಧ ಸ್ತೂಪಗಳಿರಬಹುದು. ದಿಣ್ಣೆಗಳ ಸಂಶೋಧನೆ ನಡೆದರೆ ಬೌದ್ಧಕಟ್ಟಡಗಳ ವಿನ್ಯಾಸ, ವಾಸ್ತುಶಿಲ್ಪಗಳ ಮೇಲೂ ಕರ್ನಾಟಕದಲ್ಲಿ ಬೌದ್ಧ ಧರ್ಮದ ಇತಿಹಾಸದ ಮೇಲೂ ಅದರಿಂದ ಸಾಕಷ್ಟು ಬೆಳಕು ಬೀಳಬಹುದು.

ಮೂಲ ಲೇಖಕರು : ಡಾ॥ ಎಂ. ಶೇಷಾದ್ರಿ
ಅನುವಾದಕರು : ಶ್ರೀಮತಿ ಎಸ್. ಕೆ. ಕಿಟ್ಟಮ್ಮ

# ಶಾತವಾಹನರ ಕಾಲದ ಕರ್ಣಾಟಕದ ಧರ್ಮ ಮತ್ತು ಸಮಾಜ

ಶಾತವಾಹನರಿಗೆ ಆಂಧ್ರರು, ಆಂಧ್ರಭೃತ್ಯರು ಅಥವಾ ಶಾತಕರ್ಣಿಗಳು ಎಂಬ ಹೆಸರುಗಳೂ ರೂಢಿಯಲ್ಲಿವೆ. ಇವರು ಕ್ರಿ. ಪೂ. 121ರಿಂದ ಕ್ರಿ. ಶ. 174ರ ವರೆಗೂ ದಕ್ಷಿಣ ಭಾರತದಲ್ಲಿ ಆಳಿಕೆ ನಡೆಸುತ್ತಿದ್ದರು. ಈ ವಂಶದ ಸಿಮುಕ ಮತ್ತು ಕೃಷ್ಣ ಎಂಬ ಮೊದಲ ಇಬ್ಬರು ದೊರೆಗಳು ಅಶೋಕನ ಸಮಕಾಲೀನರಾಗಿದ್ದರು. ಅಶೋಕನ ಮರಣಾನಂತರ ಮೌರ್ಯಸಾಮ್ರಾಜ್ಯವು ಒಡೆದುಹೋದುದರಿಂದ ಶಾತವಾಹನರು ದಕ್ಷಿಣಭಾರತದ ಒಡೆಯರಾದರು. ಹೀಗೆ ಇವರು ಮೌರ್ಯರ ಉತ್ತರಾಧಿಕಾರಿಗಳಾದರು. ಔರಂಗಬಾದ್ ಜಿಲ್ಲೆಯಲ್ಲಿ ಗೋದಾವರೀತೀರದಲ್ಲಿರುವ ಪೈಠಣ ಅಥವಾ ಪ್ರತಿಷ್ಠಾನಪುರ ಇವರ ರಾಜಧಾನಿಯಾಗಿತ್ತು. ವಿಂಧ್ಯಪರ್ವತದ ದಕ್ಷಿಣದಲ್ಲಿ ಕೃಷ್ಣಾನದಿಯ ವರೆಗೂ ಪೂರ್ವ ಪಶ್ಚಿಮಗಳಲ್ಲಿ ಸಮುದ್ರದ ವರೆಗೂ ವ್ಯಾಪಿಸಿ ಅಶೋಕನ ಸಾಮ್ರಾಜ್ಯದ ಭಾಗವಾಗಿದ್ದ ದೇಶವು ಶಾತವಾಹನರ ಪಾಲಿಗೆ ಬಂತು. ಈಗಿನ ಬಳ್ಳಾರಿ ಜಿಲ್ಲೆ ಶಾತವಾಹನೀಹರ ಎಂದು ಕರೆಯಲ್ಪಡುತ್ತಿದ್ದು, ಪುಳುಮಾಯಿಯ ಮ್ಯಾಕದೋನಿ ಶಾಸನದಲ್ಲಿ ಹೇಳಿರುವಂತೆ ಅದು ಆಂಧ್ರ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿರುವ ಹಿರೇಹಡಗಲಿಯ ಶಾಸನಗಳ ಪ್ರಕಾರ ಬನವಾಸಿ ಅಥವಾ ವೈಜಯಂತಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳು ಶಾತವಾಹನಸಾಮ್ರಾಜ್ಯಕ್ಕೆ ಸೇರಿದ್ದುವು. ಬಹುಶಃ ಶಾತವಾಹನ ವಂಶದವನೇ ಆದ ಹಾರಿತೀಪುತ್ತವಿಣ್ಹುಕಡ ಚುಟುಕುಲಾನಂದ ಶಾತಕರ್ಣಿ—ಎಂಬವನು ದೊರೆಯಾಗಿದ್ದನು. ಚಿತ್ರದುರ್ಗದ ಬಳಿಯ ಚಂದ್ರವಳ್ಳಿಯಲ್ಲಿ 1888ರಲ್ಲಿ ದೊರೆತಿರುವ ಕೆಲವು ನಾಣ್ಯಗಳಿಂದ ಈ ಶಾತಕರ್ಣಿಗಳ ಇನ್ನೊಂದು ಶಾಖೆ ಇದ್ದಿತೆಂಬುದು ಸ್ಪಷ್ಟವಾಗುತ್ತದೆ. ಮಹಾರಥಿ ಸದಕನ ಕಲಲಾಯ ಎಂಬವನು ಚಂದ್ರವಳ್ಳಿಯಲ್ಲಿ ಆಂಧ್ರರ ರಾಜಪ್ರತಿನಿಧಿಯಾಗಿದ್ದನು. ರಣೋ ಮುದಾನಂದಸ, ರಣೋ ಚುಟು ಕುಲಾನಂದಸ-ಇವರಿಬ್ಬರ ಹೆಸರುಳ್ಳ ಎರಡು ನಾಣ್ಯಗಳಿಂದ ಚಂದ್ರವಳ್ಳಿಯ ಪ್ರದೇಶವನ್ನು ಆಂಧ್ರರ ಸಾಮಂತರು ಆಳುತ್ತಿದ್ದರೆಂಬುದು ತಿಳಿದುಬರುತ್ತದೆ. ಕೊಲ್ಲಾಪುರದ ನಾಣ್ಯಗಳಿಂದ ಮೂವರು ರಾಜರ ಹೆಸರುಗಳು ಬೆಳಕಿಗೆ ಬಂದಿವೆ. ಅವರು ಯಾರೆಂದರೆ : ರಾಜ ವಾಸಿಷ್ಠೀಪುತ್ರ ವಿಲ್ಲಿವಾಯಕುರ, ರಾಜ ಮಾಥರೀ ಪುತ್ರ ಶಿವಾಲಕುರ ಮತ್ತು ರಾಜ ಗೌತಮೀಪುತ್ರವಿಲ್ಲಿವಾಯಕುರ. ಇವರು ಆಂಧ್ರರಾಜಪ್ರತಿನಿಧಿಗಳೋ ಅಥವಾ ಸ್ಥಳೀಯ ರಾಜಪಾಲರೋ ಸ್ಪಷ್ಟವಾಗಿಲ್ಲ. ಮುಖ್ಯ ರಾಜವಂಶಕ್ಕೆ ಸಂಬಂಧಿಸಿದವರೋ ಅಲ್ಲವೋ ಎಂಬುದು ಕೂಡ ಇನ್ನೂ ಸರಿಯಾಗಿ ನಿರ್ಧಾರವಾಗಿಲ್ಲ. ಶಾತವಾಹನ ರಾಜ್ಯದ ದಕ್ಷಿಣದ ಮೇರೆಯು ಕೊಲ್ಲಾಪುರ, ಬನವಾಸಿ ಮತ್ತು ಚಿತ್ರದುರ್ಗ ಪ್ರದೇಶಗಳನ್ನು ಹಾದು ಹೋಗುತ್ತದೆ. ಅಶೋಕನ ಸಾಮ್ರಾಜ್ಯದ ದಕ್ಷಿಣ ಗಡಿಯೂ ಬಹುಮಟ್ಟಿಗೆ ಇದೇ ಆಗಿತ್ತು. ಈ ಗಡಿಯ ಉತ್ತರಭಾಗದ ಕನ್ನಡ ದೇಶಕ್ಕೆ ಕುಂತಳರಾಜ್ಯವೆಂಬ ಹೆಸರಿತ್ತು. ಮತ್ಸ್ಯಪುರಾಣದ ಪ್ರಕಾರ ಹದಿಮೂರನೆಯ ದೊರೆಯ ಹೆಸರು ಕುಂತಳ ಸ್ವಾತಿ. ವಾತ್ಸ್ಯಾಯನನು ಕಾಮಸೂತ್ರದಲ್ಲಿ ಇವನನ್ನು ಕುಂತಳ ಶಾತಕರ್ಣಿ ಎಂದು ಕರೆದಿದ್ದಾನೆ. ಡಾ॥ ಫ್ಲೀಟ್ ಅವರು ಹೇಳುವ ಪ್ರಕಾರ ಕುಂತಳ ರಾಜ್ಯವು ಈ ಭಾಗಗಳನ್ನೊಳಗೊಂಡಿದೆ : " ದಕ್ಷಿಣಕ್ಕೆ ಉತ್ತರಕನ್ನಡದಲ್ಲಿ ಬನವಾಸಿ; ಶಿವಮೊಗ್ಗ ಜಿಲ್ಲೆಯಲ್ಲಿ ಬಳ್ಳಿಗಾಮೆ ಮತ್ತು ಹರಿಹರ; ಬಳ್ಳಾರಿ ಜಿಲ್ಲೆಯಲ್ಲಿ ಹಂಪಿ (ಅಥವಾ ವಿಜಯನಗರ) ; ಇವುಗಳ ಉತ್ತರಕ್ಕೆ ಧಾರವಾಡ ಜಿಲ್ಲೆಯಲ್ಲಿ ಹಾನಗಲ್ಲು, ಲಕ್ಷ್ಮೇಶ್ವರ, ಲಕ್ಕುಂಡಿ ಮತ್ತು ಗದಗು ; ಇನ್ನೂ ಉತ್ತರಕ್ಕೆ ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ, ಸೌಂದತ್ತಿ, ಮನೋಲಿ, ಕೊಣ್ಣೂರು ; ಬಿಜಾಪುರ ಜಿಲ್ಲೆಯಲ್ಲಿ ಪಟ್ಟದಕಲ್ಲು ಮತ್ತು ಐಹೊಳೆ ; ಇನ್ನೂ ಉತ್ತರಕ್ಕೆ ಸಾಂಗ್ಲಿಯಲ್ಲಿ ತೆರದಾಳ ; ಬಿಜಾಪುರ ಮತ್ತು ಕಲ್ಯಾಣಿ." ಸುಮಾರು 12ನೆಯ ಶತಮಾನದ ವೇಳೆಗೆ

ಕುಂತಳದೇಶ ಮತ್ತು ಕರ್ಣಾಟಕ ಎಂಬೆರಡೂ ಸಮಾನ ಪದಗಳಾದವು. ಈ ಮೇಲೆ ಹೇಳಿರುವುದರ ಪ್ರಕಾರ ತುಂಗಭದ್ರೆಯ ಉತ್ತರಕ್ಕಿರುವ ಮತ್ತು ಅದಕ್ಕೆ ನೇರ ಕೆಳಗಿರುವ ಕನ್ನಡರಾಜ್ಯ ಭಾಗವು ಶಾತವಾಹನ ಸಾಮ್ರಾಜ್ಯದ ಒಂದು ಭಾಗವಾಗಿತ್ತು ಎಂದು ಸ್ಪಷ್ಟವಾಗುತ್ತದೆ.

ಶಾತವಾಹನರ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ತಿಳಿಯಲು ನೆರವಾಗುವ ಸಹಾಯಕ ಸಾಮಗ್ರಿಗಳು ಅತ್ಯಲ್ಪ. ಸುಮಾರು 450 ವರ್ಷಗಳ ಕಾಲ ಆಳಿದ ಈ ವಂಶದ ಮೂವತ್ತು ಮಂದಿ ದೊರೆಗಳು ಇದ್ದ ಈ ಮನೆತನದ ಬಗೆಗೆ ದೊರೆತಿರುವ ಶಾಸನಗಳು ಸುಮಾರು ಮೂವತ್ತರಷ್ಟಿವೆ. ಶಾತವಾಹನರ ಕಾಲದ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯ ನಿರೂಪಣೆಗೆ ಇವು ಮುಖ್ಯ ಮೂಲ ಸಾಮಗ್ರಿಗಳಾಗಿವೆ. ಶಾತವಾಹನರ ವಿಚಾರವಾಗಿ ಇತ್ತೀಚೆಗೆ ಶೋಧನೆ ನಡೆಸಿರುವ ಪ್ರೊ॥ ಗುರ್ತಿ ವೆಂಕಟರಾವ್ ಅವರು ಶಾತವಾಹನರನ್ನು ಕುರಿತು ಹೀಗೆ ಹೇಳುತ್ತಾರೆ: "ಈ ಕಾಲದ ಸಾಂಸ್ಕೃತಿಕ ಇತಿಹಾಸ ರಚನೆಗೆ ರಾಜಕೀಯ ಇತಿಹಾಸದ ರಚನೆಗೆ ದೊರೆತಿರುವುದಕ್ಕಿಂತ ಹೆಚ್ಚಿನ ಸಾಕ್ಷ್ಯಾಧಾರಗಳು ದೊರೆಯುವುದಿಲ್ಲ. ವಾಸ್ತವವಾಗಿ ನೋಡಿದರೆ ಅದಕ್ಕಿಂತ ಕಡಮೆ ಎಂದರೂ ತಡೆದೀತು. ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡುವುದಕ್ಕೆ ಹೋದರೆ ಪುರಾಣ ಗ್ರಂಥಗಳಂತಹ ಅಲ್ಪಸ್ವಲ್ಪ ಬೆಳಕು ಕೂಡ ಇಲ್ಲವಾಗಿದೆ. ಶಾಸನಗಳಾಗಲೀ, ನಾಣ್ಯಗಳಾಗಲೀ, ಸ್ಮಾರಕಗಳಾಗಲೀ ತುಂಬಾ ಕಡಮೆ ಸಂಖ್ಯೆಯಲ್ಲಿದ್ದು ಅವು ಆಗೊಮ್ಮೆ ಈಗೊಮ್ಮೆ ಮಾತ್ರ ಕಾಣಿಸಿಕೊಂಡಿರುವುದರಿಂದ ಜನತೆಯ ಜೀವನದ ನಾನಾ ಮುಖಗಳ ಮೇಲೆ ಬೆಳಕು ಚೆಲ್ಲಲು ತೀರಾ ಅಸಮರ್ಥವಾಗಿವೆ."

ಭಾರತೀಯ ಸಮಾಜ ಮತ್ತು ಸಂಸ್ಥೆಗಳು ಸಾಮಾನ್ಯವಾಗಿ ತೀವ್ರಗತಿಯ ಅಥವಾ ಕ್ರಾಂತಿಕಾರಕ ಬದಲಾವಣೆಗಳಿಗೆ ಒಳಗಾಗುವುದಿಲ್ಲ. ಆಗಿರುವ ಬದಲಾವಣೆಗಳು ಒಳಗಿನಿಂದಲೇ ನಿಧಾನವಾಗಿ ವಿಕಾಸಗೊಂಡ ಪರಿಣಾಮವಾಗಿ ಆದವು. ಮೌರ್ಯರ ಕಾಲದ ಪದ್ಧತಿಗಳೇ ಅಲ್ಪ ಸ್ವಲ್ಪ ಸ್ಥಳೀಯ ಬದಲಾವಣೆಗಳೊಂದಿಗೆ ಶಾತವಾಹನರ ಕಾಲದಲ್ಲೂ ಉಳಿದಿದ್ದುವು. ಕೌಟಿಲ್ಯನ 'ಅರ್ಥಶಾಸ್ತ್ರ'ದ ಆಧಾರದ ಮೇಲೆ ಸಾರ್ವಜನಿಕ ಆಡಳಿತ ವ್ಯವಸ್ಥೆ ನಡೆಯುತ್ತಿದ್ದಿತು. ಬೇರೆ ಬೇರೆ ಸಂಸ್ಥೆಗಳ ನಡೆವಳಿಕೆಗಳೆಲ್ಲ ಮಾನವ ಧರ್ಮಶಾಸ್ತ್ರದ ನಿಯಮೋಪದೇಶಗಳಿಗೆ ಅನುಗುಣವಾಗಿದ್ದವು. ಆರ್ಯರ ರಾಜಕೀಯ, ಸಾಮಾಜಿಕ ತತ್ವಗಳು ಮತ್ತು ಸಮಾಜರಚನೆ ಕ್ರಮೇಣ ದಕ್ಷಿಣದಲ್ಲಿ ರೂಢಿಗೊಳ್ಳುತ್ತಾ ಬಂದವು. ಶಾತವಾಹನರ ಕಾಲದ ಸಾಂಸ್ಕೃತಿಕ ಚರಿತ್ರೆಯೆಂದರೆ ಬಹುಮಟ್ಟಿಗೆ ನೂರಾರು ವರ್ಷಗಳಲ್ಲಿ ಕ್ರಮಕ್ರಮವಾಗಿ ಸ್ಥಳೀಯ ವೈಶಿಷ್ಟ್ಯಗಳನ್ನು ಅರಗಿಸಿಕೊಂಡು ಹರಡುತ್ತಿದ್ದ ಆರ್ಯಸಂಸ್ಕೃತಿಯ ಅಭಿವೃದ್ಧಿಯೆಂದೇ ಹೇಳಬಹುದು. ಶಾತವಾಹನ ಸಾಮ್ರಾಜ್ಯದ ಕುಂತಳ ಪ್ರದೇಶಕ್ಕೂ ಈ ಮಾತು ಅನ್ವಯಿಸುತ್ತದೆ. ಈ ಭಾಗದಲ್ಲಿ ಕಂಡು ಬಂದಿರುವ ಶಾತವಾಹನರ ಕಾಲದ ದಾಖಲೆಗಳು ಬಹಳ ಕಡಮೆ ಸಂಖ್ಯೆಯಲ್ಲಿವೆ. ಆದರೂ ರಾಜ್ಯದ ಪೂರ್ವ ಪಶ್ಚಿಮ ಭಾಗಗಳಲ್ಲಿ ಇದ್ದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳೇ ಬಹುಮಟ್ಟಿಗೆ ಕುಂತಲದಲ್ಲೂ ಇದ್ದವೆಂದು ಇಟ್ಟುಕೊಳ್ಳಬಹುದು.

## ವೈದಿಕ ಧರ್ಮ

ಅಶೋಕನ ಕಾಲದಲ್ಲಿ ಬೌದ್ಧ ಮತಕ್ಕೆ ದೊರೆತ ಪ್ರೋತ್ಸಾಹ ಮತ್ತು ಪ್ರಚಾರಗಳಿಗೆ ಪ್ರತಿಕ್ರಿಯೆ ಎಂಬಂತೆ ಶಾತವಾಹನರ ಕಾಲದಲ್ಲಿ ವೈದಿಕ ಅಥವಾ ಬ್ರಾಹ್ಮಣ ಮತವು ಪುನರುಜ್ಜೀವನಗೊಂಡಿತು. ಈ ಸಂತತಿಯ ಅನೇಕ ದೊರೆಗಳು ನಿಷ್ಠಾವಂತ ವೈದಿಕ ಮತಾನುಯಾಯಿಗಳಾಗಿದ್ದರೂ ಕೂಡ ಬೌದ್ಧ ಮತ್ತು ಜೈನ ಧರ್ಮಗಳಿಗೂ ಪ್ರೋತ್ಸಾಹವನ್ನು ಕೊಟ್ಟು ಮತೀಯ ವಿಚಾರದಲ್ಲಿ ಉದಾರ ಬುದ್ಧಿಯನ್ನು ತೋರಿದರು. ಎರಡನೆಯ ಶಾತಕರ್ಣಿಯ ರಾಣಿ ನಾಗಣಿಕೆಯ ನಾನಘಾಟ್ ಶಾಸನದಲ್ಲಿ (ಕ್ರಿ. ಪೂ. 184–125)

ರಾಜನು ಸುಮಾರು ಇಪ್ಪತ್ತರಷ್ಟು ಯಾಗಗಳನ್ನು ಮಾಡಿದನೆಂದೂ ಅಗ್ನ್ಯಾಧೇಯ, ರಾಜಸೂಯ, ಅಪ್ತೋರ್ಯಾಮ ಮೊದಲಾದ ಯಾಗಗಳೇ ಅಲ್ಲದೆ ಗವಾಮಾಯನ, ಅಶ್ವಮೇಧ ಇವುಗಳನ್ನು ಎರಡು ಬಾರಿ ಮಾಡಲಾಯಿತೆಂದು ಹೇಳಿದೆ. ಯಾಗಗಳಲ್ಲಿ ಭಾರಿಯ ದಾನಸನ್ಮಾನಗಳು ನಡೆಯುತ್ತಿದ್ದುವು. ಹಲವಾರು ಗ್ರಾಮಗಳು, ಹಸುಗಳು, ಆನೆಗಳು, ಕುದುರೆಗಳು, ಬೆಳ್ಳಿಯ ಕೊಡ ಮತ್ತು ಆಭರಣಗಳು, ರಥಗಳು, ನಾಣ್ಯಗಳು (ಕಾರ್ಷಾಪಣ) ಮತ್ತು ವಸ್ತ್ರಗಳು ದಾನ ವಸ್ತುಗಳಾಗಿದ್ದುವು. ಯಾಗ ಶುಲ್ಕವಾಗಿ ಕೊಟ್ಟ ಅತಿ ಹೆಚ್ಚಿನ ಹಸುಗಳ ಸಂಖ್ಯೆ ಹನ್ನೊಂದು ಸಾವಿರದಷ್ಟಿದ್ದರೆ, ನಾಣ್ಯಗಳ ಸಂಖ್ಯೆ ಇಪ್ಪತ್ತನಾಲ್ಕು ಸಾವಿರದ ನಾನೂರು. ಮೇಲ್ಕಂಡ ಶಾಸನದಲ್ಲಿ ದಕ್ಷಿಣಾಪಥದ ಒಡೆಯ ಶಾತಕರ್ಣಿಯ ಕಾಲದ ಪೂಜಾ ಮೂರ್ತಿಗಳ ಉಲ್ಲೇಖವಿದೆ. ಈ ಶಾಸನವು ಧರ್ಮವನ್ನು ಪ್ರಶಂಸಿಸುವ ಒಂದು ಶ್ಲೋಕದಿಂದ ಆರಂಭ ವಾಗಿದೆ. ಇದರಲ್ಲಿ ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರವಂಶೀಯರು, ಲೋಕಪಾಲರು, ಯಮ, ವರುಣ, ಕುಬೇರ, ವಾಸವ ಇವರುಗಳ ಸ್ತುತಿ ಕಂಡು ಬರುತ್ತದೆ. ದಕ್ಷಿಣಾಪಥದ ಪ್ರಭುವಾದ ಎರಡನೆಯ ಶಾತಕರ್ಣಿಯ ಕಾಲದಲ್ಲಿ ವೇದೋಕ್ತ ದೇವರುಗಳಾದ ಇಂದ್ರಾದಿಗಳೂ, ಪುರಾಣೋಕ್ತ ಶ್ರೀಕೃಷ್ಣ ಮತ್ತು ಕುಟುಂಬದವರು ಪೂಜೆಗೆ ಅರ್ಹರಾದ ವ್ಯಕ್ತಿಗಳಾಗಿದ್ದರೆಂಬುದು ತಿಳಿದು ಬರುತ್ತದೆ. ಇಂದ್ರದೇವ, ಅಗ್ನಿಮಿತ್ರ, ಮಿತ್ರದೇವ, ಇಂದ್ರಾಗ್ನಿದತ್ತ—ಮೊದಲಾದ ವ್ಯಕ್ತಿನಾಮಗಳು ಆಯಾ ವೈದಿಕದೇವತೆಗಳ ಬಗೆಗೆ ಜನರಲ್ಲಿದ್ದ ಗೌರವ ಭಾವವನ್ನು ಸೂಚಿಸುತ್ತವೆ. ಗೋಪಾಲ, ವಿಷ್ಣುಸ್ವಾಮಿ, ವಿಷ್ಣುದತ್ತ, ವಿಷ್ಣುಪಾಲಿತ—ಮೊದಲಾದ ಹೆಸರುಗಳು ಭಾಗವತ ಧರ್ಮದ ಅಸ್ತಿತ್ವವನ್ನು ಸೂಚಿಸುತ್ತವೆ. ಶಾತವಾಹನ ರಾಜನಾದ ಹಾಲನ ಗಾಥಾಸಪ್ತಶತಿ ಎಂಬ ಕಾವ್ಯವು ಪಶುಪತಿ ಮತ್ತು ಅವನ ಪತ್ನಿ ಗೌರಿ ಇವರ ಸ್ತೋತ್ರ ದಿಂದ ಆರಂಭವಾಗುತ್ತದೆ. ಶಿವದತ್ತ, ಶಿವಕದಿಲ, ಕುಮಾರ, ಸ್ಕಂದ ಮುಂತಾದ ಶಾಸನೋಕ್ತ ಹೆಸರುಗಳು ಶಾತವಾಹನರ ಕಾಲದಲ್ಲಿ ಶೈವಧರ್ಮವು ರೂಢಿಯಲ್ಲಿತ್ತೆಂಬುದನ್ನು ಸೂಚಿಸುತ್ತವೆ. ಗೌರೀ ದೇವಾಲಯಗಳ ಉಲ್ಲೇಖವಿದ್ದು ಬೂದಿ ಬಳಿದುಕೊಂಡು ಕಪಾಲಗಳನ್ನು ಹಿಡಿದ ಕಪಾಲೀಸ್ತ್ರೀಯರ ವಿಚಾರವು ಆ ಕಾಲದ ಗ್ರಂಥಗಳಲ್ಲಿ ಬಂದಿದೆ. ಹಾರಿತೀಪುತ್ರ ವಿನ್ಹುಕದ, ಚುಟುಕುಲಾನಂದ ಶಾತಕರ್ಣಿಯ ಮಳವಳ್ಳಿ ಸ್ತಂಭ ಶಾಸನವು ಮಳವಳ್ಳಿಯ ದೇವರಿಗೆ 'ಬ್ರಹ್ಮದೇಯದಾನ' ವಾಗಿ ಕೌಂಡಿನ್ಯ ಗೋತ್ರದ ಕೊಂಡಮಾನ ಎಂಬವನಿಗೆ ಭೂಮಿಯನ್ನು ದಾನಮಾಡಿದ ವಿಚಾರವನ್ನು ತಿಳಿಸುತ್ತದೆ. ಇವುಗಳಿಂದ ವೈದಿಕ ಧರ್ಮವು ಶಾತವಾಹನರ ಕಾಲದಲ್ಲಿ ಏಳಿಗೆ ಪಡೆದಿತ್ತೆಂಬುದು ಸ್ಪಷ್ಟವಾಗಿದೆ.

## ಬೌದ್ಧ ಮತ

ಶಾತವಾಹನರ ಕಾಲದಲ್ಲಿ ಬೌದ್ಧ ಮತವು ದಕ್ಷಿಣದೇಶದಲ್ಲಿ ಅತ್ಯಂತ ಜನಪ್ರಿಯವಾದ ಧರ್ಮವಾಗಿತ್ತು. ರಾಜರು, ಅಧಿಕಾರಿಗಳು, ರಾಜತಾಂತ್ರಿಕರು, ರಾಯಭಾರಿಗಳು, ಮತ್ತು ವಿವಿಧ ಉದ್ಯೋಗಗಳನ್ನವಲಂಬಿಸಿ ವಿವಿಧ ಪಂಗಡಗಳಿಗೆ ಸೇರಿದ ಸಮಾಜದ ಸಾಮಾನ್ಯ ಜನರು—ಎಲ್ಲಾ ಮತದ ಬಗೆಗೆ ತುಂಬಾ ಆದರಾಭಿಮಾನಗಳನ್ನು ತಾಳಿದ್ದರು. ಪ್ರಾಚೀನ ಗುಹೆಗಳನ್ನೆಲ್ಲಾ ಶೋಧಿಸಿ ಬೌದ್ಧ ಗುಹೆಗಳಾಗಿ ರೂಪುಗೊಳಿಸಿದುದು ಈ ಶಾತವಾಹನರ ಕಾಲದಲ್ಲೇ. ಈ ಗುಹೆಗಳು ಎರಡು ಬಗೆಯವು : ಒಂದು, ಪ್ರವೇಶದ್ವಾರದ ಮೇಲೆ ಕಮಾನು ಛಾವಣಿಗಳಿಂದಲೂ ಕುದುರೆಯ ಲಾಳದಾಕಾರದ ಕಿಟಿಕಿಗಳಿಂದಲೂ ಕೂಡಿದ 'ಚೇತಿಯ—ಘರ' (ಚೈತ್ಯಾಗಾರ) ಎಂಬ ಗುಹಾಲಯ. ಎರಡನೆಯದು, 'ಬಿಕ್ಖು' ಎಂದರೆ ಬೌದ್ಧ ಭಿಕ್ಷುಗಳ ವಸತಿ ಗೃಹಗಳಾಗಿದ್ದ ಲಯನ (ಲೇನಾ) ಎಂಬ ಗುಹೆಗಳು. 'ಲಯನ' ಎಂಬುದು ಸುತ್ತಲೂ ಅನೇಕ ಕೊಟಡಿಗಳುಳ್ಳ ದೊಡ್ಡ ಹಜಾರ. ಪ್ರತಿಯೊಂದು ಕೊಟಡಿಯಲ್ಲೂ ಭಿಕ್ಷುವಿಗೆ ಮಲಗಲು ಒಂದು ಹಾಸುಗಲ್ಲು, ಬಂಡೆಗಲ್ಲಿನಿಂದ ಕೆತ್ತಲಾದ ಪ್ರತಿಯೊಂದು ಲಯನದಲ್ಲೂ 'ಪೋಧಿ' ಎಂಬ ನೀರಿನ ಕಲ್ಲುತೊಟ್ಟಿ ಒಂದೋ ಎರಡೋ ಇರುತಿದ್ದುವು. ಮಳೆಗಾಲದಲ್ಲಿ ಬೌದ್ಧ ಭಿಕ್ಷುಗಳು ಲಯನದಲ್ಲಿವಾಸಮಾಡುತ್ತಿದ್ದರು. ಬಂಡೆಗಳನ್ನು ಕೊರೆದು ಇಂತಹ

ಚೈತ್ಯಾಗಾರಗಳನ್ನೂ ಲಯನಗಳನ್ನೂ ಕಟ್ಟಿಸುವುದೆಂದರೆ ತುಂಬಾ ಶ್ರಮದ ಮತ್ತು ವೆಚ್ಚದ ಕೆಲಸವಾಗಿತ್ತು. ರಾಜ್ಯದ ಎಲ್ಲವರ್ಗದ ಜನರೂ ಸಂತೋಷದಿಂದ ಈ ವೆಚ್ಚವನ್ನು ವಹಿಸಿಕೊಳ್ಳುತ್ತಿದ್ದರು. ಈ ಗುಹಾಲಯಗಳ ದುರಸ್ತು ಮತ್ತು ಗುಹಾವಾಸಿಗಳಾದ ಭಿಕ್ಷುಗಳ ಜೀವನ ನಿರ್ವಹಣೆಗಳಿಗೆ ಜನರು ಉದಾರವಾಗಿ ವ್ಯವಸ್ಥೆ ಮಾಡುತ್ತಿದ್ದರು. ಕೆಲವು ಹಳ್ಳಿಗಳನ್ನು ಈ ಉದ್ದೇಶಕ್ಕಾಗಿಯೇ ಮೀಸಲಾಗಿಡಲಾಗಿತ್ತು. ಪ್ರತಿಯೊಬ್ಬ ಭಿಕ್ಷುವಿಗೂ 'ಚೀವರ' ಎಂಬ ಹೊಸ ವಸ್ತ್ರ ಮತ್ತು ಒಂದೊಂದು ನಾಣ್ಯವನ್ನು ಕೊಡುತ್ತಿದ್ದರು. ನೆರೆಹೊರೆಯ ಪಟ್ಟಣಗಳಲ್ಲಿ ವ್ಯಾಪಾರ ಸಂಸ್ಥೆಗಳಲ್ಲಿ ತೊಡಗಿಸಿದ್ದ ಭಾರಿಯ ಹಣದ ಮೊತ್ತದಿಂದ ಬಂದ ಬಡ್ಡಿಯನ್ನು ಇವುಗಳಿಗಾಗಿ ಬಳಸಲಾಗುತ್ತಿತ್ತು. ಬೌದ್ಧ ಭಿಕ್ಷುಗಳಲ್ಲಿ ಅನೇಕ ಪಂಗಡಗಳಿದ್ದು ಪ್ರತಿಯೊಂದಕ್ಕೂ ಪ್ರತ್ಯೇಕವಾಗಿ ಒಂದೊಂದು ಗುಹೆಯನ್ನು ಕೊಡಲಾಗಿತ್ತು. ಗೌತಮೀಪುತ್ರ ಶಾತಕರ್ಣಿಯ ತಾಯಿಯು ಭದ್ರಾಯನೀಯ ಪಂಗಡಕ್ಕೆ ನಾಸಿಕದ ಮೂರನೆಯ ಗುಹೆಯನ್ನು ಕೊಟ್ಟಿದ್ದಳು. ಕರ್ಲೆಯ ಗುಹೆ ಮಹಾಸಾಂಘಿಕ ಪಂಗಡಕ್ಕೆ ಸೇರಿತ್ತು. ಧರ್ಮೋತ್ತರೀಯ ಪಂಗಡಕ್ಕೆ ಕೊನೆಯ ಪಕ್ಷ ಜುನ್ನಾರಿನ ಒಂದು ಗುಹೆ ಸೇರಿದ್ದಿರಬೇಕು. ಈ ಭಿಕ್ಷುಗಳು ನಿರ್ಭಯವಾಗಿ ಎಲ್ಲ ಸ್ಥಳಗಳಲ್ಲೂ ಸಂಚರಿಸುತ್ತಿದ್ದರು. ಚಿಪ್ಲೂನ್, ಮಹದ್ ಮತ್ತು ಕುಡಾ ಪ್ರದೇಶಗಳ ಗುಹೆಗಳಿಂದ ಇವರು ಸಮುದ್ರಯಾನ ಮಾಡಿದರೆಂಬುದೂ ಸ್ಪಷ್ಟವಾಗುತ್ತದೆ. ಚೈತ್ಯ ವಿಹಾರ ಮತ್ತು ಬೌದ್ಧಸಂಘಗಳಿಗೆ ದಾನ ಮಾಡಲು ಹೆಂಗಸರು ಸ್ಪರ್ಧೆಯಿಂದ ಮುಂದೆ ಬರುತ್ತಿದ್ದರು. ಡಾ॥ ಕೆ. ಗೋಪಾಲಾಚಾರಿಯವರ ವಿವರಣೆಯಂತೆ ಅಮರಾವತಿಯ 145 ಶಾಸನಗಳಲ್ಲಿ 72, ಕುಡಾದಲ್ಲಿನ 30ರಲ್ಲಿ 13, ನಾಸಿಕದಲ್ಲಿನ 29ರಲ್ಲಿ 16,—ಈ ಶಾಸನಗಳಲ್ಲಿ ಹೆಚ್ಚಿನವುಗಳಲ್ಲಿ ಸ್ತ್ರೀಯರು ಸ್ವತಃ ದಾನಮಾಡಿರುವ ಅಥವಾ ಸ್ತ್ರೀಯರು ಸೇರಿ ದಾನಮಾಡಿರುವ ಸಂಗತಿಗಳ ಉಲ್ಲೇಖವಿದೆ. ಅಮರಾವತಿಯ ಶಿಲಾಲೇಖಗಳಿಂದ ದಖನ್ನಿನ ಪೂರ್ವಭಾಗದಲ್ಲಿ ಕೂಡ ಅನೇಕ ಬೌದ್ಧ ಪಂಗಡಗಳಿದ್ದ ಸಂಗತಿ ತಿಳಿದುಬರುತ್ತದೆ. ಚೇತಿಕ, ಅಂಧಕ, ಪುಬ್ಬಸೇಲ, ಅವರ ಸೇಲ, ಆಯಿರ ಉದಯಪಭಾಹ ಇವು ಕೆಲವು ಪಂಗಡಗಳು. "ಸಣ್ಣ ದೊಡ್ಡ ಸ್ತೂಪಗಳು, ಮಹಾವೃಕ್ಷದ ಮುಂದೆ ಬರಿಯ ಸಿಂಹಾಸನ, ಸಿಂಹಾಸನದ ಮುಂದೆ ಮಂಡಿಸಲಾದ ಬುದ್ಧನ ಪಾದುಕೆಗಳು, ತ್ರಿಶೂಲಲಾಂಛನ, ಒಂದು ಸ್ತಂಭದ ಮೇಲೆ ಧರ್ಮಚಕ್ರ ಅದರ ಎದುರಿಗೆ ಒಂದು ಸಿಂಹಾಸನ, ಬುದ್ಧನ ಮತ್ತು ಇತರ ಮಹಾ ಗುರುಗಳ ಅವಶೇಷ ವಸ್ತುಗಳು, ಸ್ವಸ್ತಿಕಪಟ್ಟಗಳು, ಶಿರದ ಮೇಲ್ಭಾಗದಲ್ಲಿ ಹಾವಿನ ಹೆಡೆಗಳಿರುವ ಬುದ್ಧ ಅಥವಾ ನಾಗರಾಜರ ಮೂರ್ತಿಗಳು ಬುದ್ಧ ಮತ್ತು ಪ್ರವಚನಕಾರ ಬುದ್ಧ ಇವರ ಜೀವಪ್ರಮಾಣದ ಪ್ರತಿಮೆಗಳು" ಇವೇ ಬೌದ್ಧರ ಪೂಜಾವಸ್ತುಗಳು. ಗಾಥಾ ಸಪ್ತಶತಿಯಲ್ಲಿ (4—8) ಬುದ್ಧನ ಪಾದಗಳಿಗೆ ಭಕ್ತಿಯಿಂದ ಮಣಿದಿರುವ ಭಿಕ್ಷುಸಂಘದ ವಿಚಾರ ಪ್ರಸ್ತಾಪಗೊಂಡಿದೆ. ಒಬ್ಬ ಮಹಾರಾಜನ ಮಗಳಾದ ಮಹಾಭೋಜಿಯು ನಾಗ, ತಟಾಕ, ವಿಹಾರಗಳನ್ನು ದಾನ ಮಾಡಿದ ಸಂಗತಿ ಬನವಾಸಿಯ ಶಾಸನದಲ್ಲಿ (ಲೂಡರ್ಸರ ಪಟ್ಟಿಯ 1186ನೆಯ ಶಾಸನ) ಕಂಡು ಬಂದಿದೆ. ಪಶ್ಚಿಮ ದಖನ್ನಿನಲ್ಲಿನ ಬೌದ್ಧರ ಪ್ರಾಚೀನ ಅವಶೇಷಗಳು ಕೊಲ್ಹಾಪುರದಲ್ಲಿವೆ. ಅಲ್ಲಿಯ ಶೋಧನೆಗಳಿಂದ ಒಂದು ಸ್ತೂಪದಲ್ಲಿ ಕಲ್ಲಿನ ಪೆಟ್ಟಿಗೆ ಮತ್ತು ಮುಚ್ಚಳದ ಮೇಲೆ ಮೌರ್ಯರ ಕಾಲದ ಬರಹವಿರುವ ಒಂದು ಸ್ಮಾರಕ ಸಂಪುಟ ದೊರಕಿವೆ.

ಇವೆಲ್ಲಾ ಅಂಶಗಳಿಂದ ಬೌದ್ಧಧರ್ಮವು ಶಾತವಾಹನರ ಕಾಲದಲ್ಲಿ ದಕ್ಷಿಣದಲ್ಲಿ ತುಂಬಾ ಉಚ್ಛ್ರಾಯಸ್ಥಿತಿಯಲ್ಲಿದ್ದಿತೆಂದೂ ಶಾತವಾಹನರ ಆಳ್ವಿಕೆಯಲ್ಲಿ ಕುಂತಳದೇಶವು ಈ ವೈಭವದಲ್ಲಿ ಪಾಲ್ಗೊಂಡಿದ್ದಿತ್ತೆಂದೂ ಹೇಳಬಹುದು.

**ಜೈನಧರ್ಮ**

ವೈದಿಕ ಬೌದ್ಧಧರ್ಮಗಳಂತೆ ಜೈನಧರ್ಮಕ್ಕೆ ಶಾತವಾಹನರ ಆಳ್ವಿಕೆಯಲ್ಲಿ ಅದೇ ರೀತಿಯ

ಜನಾದರ ಮತ್ತು ಪ್ರೋತ್ಸಾಹವಿದ್ದಿತೆಂಬುದಕ್ಕೆ ಆಧಾರಗಳು ಸಾಕಷ್ಟಿಲ್ಲ. ದಕ್ಷಿಣದಲ್ಲಿ ಆಂಧ್ರರ ಕಾಲದ ಜೈನ ಶಾಸನಗಳ ಸಂಖ್ಯೆ ಹೆಚ್ಚಾಗಿಲ್ಲ, ಈ ಸಾಮ್ರಾಜ್ಯದ ಹೊರಗೆ ಮಾಳವ ಕಳಿಂಗಗಳಲ್ಲಿ ಜೈನ ಧರ್ಮ ಪ್ರಬಲವಾಗಿತ್ತು. ಕಳಿಂಗದ ದೊರೆ ಖಾರವೇಲನ ಹಾತಿಗುಂಫಾ ಶಾಸನವು ಅರ್ಹಂತ ಮತ್ತು ಸಿದ್ಧರ ಸ್ತೋತ್ರದಿಂದ ಆರಂಭವಾಗುತ್ತದೆ. ನೂರ ಹದಿಮೂರು ವರ್ಷಗಳಿಂದ ನಿಂತುಹೋಗಿದ್ದ ಜಿನಪೂಜೆ ಯನ್ನು ಪಿಥೂಡ ಎಂಬಲ್ಲಿ ಆರಂಭಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಬಹಳ ಹಿಂದೆಯೂ ಮಗಧದ ಚಕ್ರವರ್ತಿ ನಂದನು ಪಿಥೂಡದಿಂದ ತೆಗೆದುಕೊಂಡು ಹೋಗಿದ್ದ ಜಿನವಿಗ್ರಹವನ್ನು ಖಾರವೇಲನು ಹಿಂದಕ್ಕೆ ತಂದನು. ಒರಿಸ್ಸಾದ ಉದಯಗಿರಿ ಮತ್ತು ಖಂಡಗಿರಿ ಬೆಟ್ಟಗಳಲ್ಲಿ ಜೈನ ಸನ್ಯಾಸಿಗಳಿಗಾಗಿ ರಚಿಸಲಾದ ಅನೇಕ ಗುಹೆಗಳಿವೆ. ಬೌದ್ಧ ಗುಹೆಗಳಂತೆಯೇ ಇವುಗಳನ್ನು 'ಲಯನ ಅಥವಾ ಲೇನ' ಎಂದು ಕರೆಯು ತ್ತಿದ್ದರು. [ಈ 'ಲಯನ' ಎಂಬ ಶಬ್ದವು ಕೆಲವು ಧ್ವನಿ ಮತ್ತು ಉಚ್ಚಾರವ್ಯತ್ಯಾಸಗಳನ್ನು ಪಡೆದು 'ನಯನ' ಎಂಬ ರೂಪದಲ್ಲಿ ಕನ್ನಡಕ್ಕೆ ಬಂದಿರುವುದು ಕುತೂಹಲಕರವಾಗಿದೆ. ನಾಗರಾಜ ಕವಿಯ ಪುಣ್ಯಾಸ್ರವ ಎಂಬ ಗ್ರಂಥದಲ್ಲಿ (ಕ್ರಿ. ಶ. 1331) ಎರಡನೆಯ ಅಧ್ಯಾಯದ 88ನೆಯ ಪದ್ಯದ ಅನಂತರ ಬರುವ ಗದ್ಯಭಾಗದಲ್ಲಿ ಈ ಶಬ್ದವು ಮೂರು ಬಾರಿ ಬಂದಿದೆ.] ಲಯನಗಳನ್ನು ನಿರ್ಮಿಸುವ ಪದ್ಧತಿ ಮುಂದೆ ಅನೇಕ ವರ್ಷಗಳ ವರೆಗೆ ಜಾರಿಯಲ್ಲಿತ್ತು. ಭದ್ರಬಾಹುವಿನೊಡನೆ ದಕ್ಷಿಣದ ಶ್ರವಣಬೆಳಗೊಳಕ್ಕೆ ಬಂದ ಚಂದ್ರಗುಪ್ತನು ಅಲ್ಲಿ ಒಂದು ಜೈನ ಕ್ಷೇತ್ರವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ಈ ಚಂದ್ರಗುಪ್ತನು ಅಶೋಕನ ಮೊಮ್ಮಗನೂ ಉಜ್ಜಯಿನಿಯ ದೊರೆಯೂ ಆದ ಸಂಪ್ರತಿ ಚಂದ್ರಗುಪ್ತನೇಂದು ಕೆಲವು ಜೈನ ಕಥೆಗಳು ಹೇಳುತ್ತವೆ. ಬಹುಶಃ ಕ್ರಿಸ್ತಶಕದ ಮೊದಲ ಕೆಲವು ಶತಮಾನಕಾಲದ ವಾಗಿರಬಹುದಾದ ಪ್ರಾಕೃತ ಸಂಸ್ಕೃತ ಭಾಷೆಗಳ ಅನೇಕ ಜೈನ ಗ್ರಂಥಗಳು ಉಪಲಬ್ಧವಾಗಿವೆ. ದಕ್ಷಿಣ ಭಾರತದಲ್ಲಿ ಪ್ರಚಾರವಾಗಿದ್ದ ದಿಗಂಬರ ಶಾಖೆಗೆ ಸೇರಿದ ಭೂತಬಲಿ, ಪುಷ್ಪದಂತ, ಉಮಾಸ್ವಾತಿ, ವಟ್ಟಕೇರ, ಸಮಂತಭದ್ರ, ಶಿವಕೋಟಿ, ಯತಿವೃಷಭ ಮೊದಲಾದ ಜೈನಾಚಾರ್ಯರೇ ಈ ಗ್ರಂಥಗಳ ಕರ್ತೃಗಳು. ಇವರಲ್ಲಿ ಕುಂದಕುಂದ, ಸಮಂತಭದ್ರ ಮೊದಲಾದ ಕೆಲವರು ಜೈನಯತಿಗಳು ಕನ್ನಡ ದೇಶದಲ್ಲಿ ಇದ್ದವರು. ವಟ್ಟಕೇರ ಎಂಬಾತನು ಧಾರವಾಡ ಜಿಲ್ಲೆಯ ಬೆಟಗೇರಿಯವನೆಂದು ಪಂಡಿತ ನಾಥುಲಾಲ್ ಪ್ರೇಮ್‌ಜೀ ಹೇಳುತ್ತಾರೆ.

**ಸಾಮಾಜಿಕ ಪರಿಸ್ಥಿತಿ**

ಶಾತವಾಹನರ ಕಾಲದ ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಗಗಳ ಸಂಪ್ರದಾಯವೇ ಮುಂದುವರಿದು ಜನರು ತಮ್ಮತಮ್ಮ ರೂಢಿಯ ವೃತ್ತಿಗಳಲ್ಲಿ ತೊಡಗಿ ಆಯಾ ವರ್ಗದ ಸೌಲಭ್ಯಗಳನ್ನು ಹೊಂದಿದ್ದರು. ಹೆಚ್ಚಿನ ಜನರು ವ್ಯಾಪಾರ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಹಲವು ಉದ್ಯೋಗಗಳಲ್ಲಿ ತೊಡಗುತ್ತಿದ್ದರು. ಆ ಕಾಲದ ಶಾಸನಗಳಲ್ಲಿ ಅನೇಕ ಉದ್ಯೋಗಗಳ ಹೆಸರು ಕಂಡು ಬರುತ್ತದೆ. ಧನ್ನಿಕ (ಧಾನ್ಯ ವ್ಯಾಪಾರಿ), ಮಾಲಕಾರ (ಹೂವಾಡಿಗ), ಕೋಲಿಕ (ನೇಕಾರ), ತಿಲಪಿಸಕ (ಗಾಣದವನು), ಕಾಸಕಾರ (ಕಂಚುಕಾರ), ಕಮಾರ (ಕಮ್ಮಾರ), ಚಮ್ಮಕಾರ (ಚರ್ಮದ ಕೆಲಸದವನು), ಗಾಂಧಿಕ (ಸುಗಂಧಕಾರ), ಸುವರ್ಣಕಾರ (ಅಕ್ಕಸಾಲೆ), ಮಣಿಕಾರ (ರತ್ನದ ಕೆಲಸ ದವನು), ಮಿಥಿಕ (ಹರಳು ಹೊಳಪುಗಾರ), ಸೆಲವಧಕಿ (ಕಲ್ಲು ಕುಟಿಗ), ವಧಕಿ (ಬಡಗಿ), ಒದಯಂತ್ರಿಕ (ನೀರಿನ ಯಂತ್ರಗಾರ), ದಾಶಕ (ಬೆಸ್ತ)—ಇತ್ಯಾದಿ. ಮೇಲ್ಕಂಡ ಹೆಸರುಗಳೆಲ್ಲಾ ಸಂಸ್ಕೃತ ಮೂಲದ ಶಬ್ದಗಳಾಗಿವೆ. ಈ ಜನರಲ್ಲಿ ಅನೇಕ ಬೌದ್ಧ ಗೃಹಸ್ಥವರ್ಗಕ್ಕೆ ಸೇರಿದವರು, ಭಿಕ್ಷುಸಂಘಗಳಿಗೆ ಮತ್ತು ವಿಹಾರಗಳಿಗೆ ಅನೇಕ ದಾನ ದತ್ತಿಗಳನ್ನು ಕೊಟ್ಟಿದ್ದಾರೆ.

ಆಡಳಿತ ವರ್ಗದಲ್ಲಿ ಅನೇಕ ಅಧಿಕಾರದ ಹಂತಗಳಿದ್ದುವು. ಮಹಾರಥಿ ಮತ್ತು ಮಹಾಭೋಜ

ಇವರುಗಳು ಬಹುಶಃ ಸಾಮಂತರಾಗಿದ್ದುಕೊಂಡು ವಂಶಪಾರಂಪರ್ಯವಾಗಿ ತಾವು ಆಳುವ ನೆಲದ ಒಡೆಯ ರಾಗಿದ್ದರೆಂದು ಕಾಣುತ್ತದೆ. ಸ್ತ್ರೀಯರು ಕೂಡ ಅಂಥ ಉನ್ನತ ಅಧಿಕಾರ ಸ್ಥಾನಗಳನ್ನು ಪಡೆದಿದ್ದರು. ಬನವಾಸಿ ಶಾಸನದ ದಾನಿಯು ಒಬ್ಬ ರಾಜನ ಮಗಳಾದ ಮಹಾಭೋಜಿಯಾಗಿದ್ದಳೆಂದು ತಿಳಿದುಬಂದಿದೆ. ಅದೇ ಶಾಸನದಲ್ಲಿ ಬರುವ ಮಂತ್ರಿ (ಅಮಾಚ) ಅಧಿಕಾರದಲ್ಲಿ ಇನ್ನೂ ಕೆಳಗಿನ ಶ್ರೇಣಿಯವನು. ಮಹಾರಥಿಗೆ ಇರುವಷ್ಟು ಜಾಗೀರು ಇಲ್ಲದಿದ್ದರೂ ಮಹಾಸೇನಾಪತಿಯು ಮಹಾರಥಿಯಷ್ಟೇ ದೊಡ್ಡ ಸ್ಥಾನವನ್ನು ಪಡೆದವನಾಗಿದ್ದನೆಂದು ತೋರುತ್ತದೆ. ಶಾತವಾಹನೀಯರಲ್ಲಿ ಅಧಿಕಾರ ನಡೆಸುತ್ತಿದ್ದ 'ಖಂಡನಕ' ಎಂಬ ಮಹಾಸೇನಾಪತಿಯ ಉಲ್ಲೇಖವು ಮ್ಯಾಕದೋಣಿ ಶಾಸನದಲ್ಲಿ ಬರುತ್ತದೆ. ಮಹಾಸೇನಾಪತಿಯು ಒಂದು 'ಆಹರ'ಕ್ಕೆ (ಜಿಲ್ಲೆಗೆ) ಮುಖ್ಯನಾಗಿದ್ದನು. ಅದೇ ಶಾಸನದಲ್ಲಿ ಉಕ್ತನಾಗಿರುವ ಕುಮಾರದತ್ತ ಎಂಬವನು ವೇಪೂರಕ ಗ್ರಾಮದ ಅಧಿಕಾರಿಯಾಗಿದ್ದನು. ಅವನನ್ನು ಗಾಮಿಕ (ಗುಮಿಕ) ಎಂದು ಕರೆಯಲಾಗಿದೆ. ಮಹಾತಾರಕ (ದರ್ಬಾರ್ ಭಕ್ಷಿ), ಭಾಂಡಾಗಾರಿಕ, (ಉಗ್ರಾಣದ ಅಧಿಕಾರಿ), ಹೇರಾಣಿಕ (ಖಜಾಂಚಿ), ಮಹಾಮಾತ್ರ (ಬೌದ್ಧ ಸನ್ಯಾಸಿಗಳ ವಿಷಯವನ್ನು ನೋಡಿಕೊಳ್ಳುವ ಅಧಿಕಾರಿ), ನಿಬಂಧಕಾರ (ಪತ್ರಾಧಿಕಾರಿ), ಪ್ರತೀಹಾರ ಮತ್ತು ದೂತಕ (ರಾಜರ ಅಪ್ಪಣೆಗಳನ್ನು ತಲಪಿಸುವವರು) ಮೊದಲಾದವರು ಇತರ ಅಧಿಕಾರಿಗಳು. ಇವುಗಳಲ್ಲಿ 'ಹೇರಾಣಿಕ' ಎಂಬುದು ಸ್ವಾರಸ್ಯವಾದ ಶಬ್ದ ; ಕನ್ನಡ ಸಾಹಿತ್ಯ ದಲ್ಲಿಯೂ ಶಾಸನಗಳಲ್ಲಿಯೂ ಇದು 'ಏರಣಿಗ' ಎಂಬ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದು 'ಅಕ್ಕಸಾಲೆ' ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಪ್ರತಿಯೊಂದು ಉದ್ಯೋಗವರ್ಗಕ್ಕೂ ಸಂಬಂಧಪಟ್ಟಂತೆ ಅನೇಕ ವೃತ್ತಿಸಂಘಗಳ 'ಶ್ರೇಣಿ' ಗಳು ಇದ್ದವು. ನಾಸಿಕದ ಒಂದು ಶಾಸನದಲ್ಲಿ 'ಕೋಲಿಕ ನಿಕಾಯ' ಅಥವಾ 'ಶ್ರೇಣಿಯು' (ನೇಕಾರರ ಸಂಘ) ಉಲ್ಲೇಖವಿದೆ. ಅದೇ ಸ್ಥಳದ ಇನ್ನೊಂದು ಶಿಲಾಲೇಖದಲ್ಲಿ 'ಕುಲಕಾರಿಕ ಶ್ರೇಣಿ' (ಕುಂಬಾರರ ಸಂಘ) ಎಂಬ ಮಾತಿದೆ. ಜುನ್ನಾರಿನ ಒಂದು ದಾಖಲೆಯಲ್ಲಿ 'ಧನ್ನಿಕ ಶ್ರೇಣಿ' (ಧಾನ್ಯವರ್ತಕರ ಸಂಘ) ಯ ಪ್ರಸ್ತಾವವಿದೆ. ಹಾಗೆಯೇ 'ಕಾಸಕಾರ ಶ್ರೇಣಿ' (ಕಂಚುಕಾರರ ಸಂಘ) 'ವಸಾಕರ ಶ್ರೇಣಿ' (ಬಿದಿರಿನ ಕೆಲಸಗಾರರ ಸಂಘ) ಗಳನ್ನು ಮತ್ತೊಂದು ದಾಖಲೆಯಲ್ಲಿ ಪ್ರಸ್ತಾವಿಸಿದೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಈ ಸಂಘಗಳು ಮಹತ್ವದ ಪಾತ್ರ ವಹಿಸಿದ್ದವು. ಬೌದ್ಧ ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ಸಾರ್ವಜನಿಕರು ದತ್ತಿಯಾಗಿ ಕೊಟ್ಟ ನಿಧಿಯನ್ನು ಅಧಿಕ ಕಾಲಾವಧಿಯ ಠೇವಣಿಗಳ ರೂಪದಲ್ಲಿ ಈ ಸಂಘಗಳು ಪಡೆದು, ಬಡ್ಡಿಯ ಹಣವನ್ನು ಆಯಾ ಸಂಸ್ಥೆಗಳಿಗೆ ದತ್ತಿಯಲ್ಲಿ ಉದ್ದೇಶಿಸಿದ ಖರ್ಚುಗಳಿಗೆಂದು ಕೊಡುತ್ತಿದ್ದುವು. ಈ ಸಂಘಗಳ ಬಗೆಗೆ ಹೀಗೆ ಹೇಳಲಾಗಿದೆ : "ಈ ಸಂಘಗಳು ಬಹುಕಾಲದಿಂದ ಅಸ್ತಿತ್ವದಲ್ಲಿದ್ದು ವ್ಯಾಪಾರಗಳನ್ನು ರೂಢಿಸಿಕೊಂಡ ಸಂಸ್ಥೆಗಳಾಗಿದ್ದು ವ್ಯವಹಾರದಲ್ಲಿ ಪ್ರಾಮಾಣಿಕತೆ ದಕ್ಷತೆಯನ್ನು ಹೊಂದಿದ್ದವು. ಇಲ್ಲದಿದ್ದರೆ ಜನರು ಇಷ್ಟೊಂದು ಶಾಶ್ವತ ನಿಧಿಯನ್ನು ಇವುಗಳಲ್ಲಿ ತೊಡಗಿಸುತ್ತಿರಲಿಲ್ಲ. ಈ ನಿಧಿಗಳಿಂದ ವ್ಯಾಪಾರಿಗಳಿಗೆ ಒಳ್ಳೆಯ ಬಂಡವಾಳ ಒದಗಿ ವಾಣಿಜ್ಯದ ವಹಿವಾಟಿಗೆ ತುಂಬಾ ಪ್ರೋತ್ಸಾಹ ದೊರಕಿತ್ತು."

ಶಾತವಾಹನರ ರಾಜ್ಯದ ಉತ್ತರ ಭಾಗಗಳಲ್ಲಿ ಯವನರು, ಗ್ರೀಕರು, ಶಕರು ಮತ್ತು ಪಾರ್ಥಿಯನ್ನರು ಬಹುಮಂದಿ ಬಂದು ನೆಲಸಿದ್ದರು. ಅವರು ಬೌದ್ಧ ಅಥವಾ ಹಿಂದೂ ಧರ್ಮಕ್ಕೆ ಹೊಂದಿಕೊಂಡು ಭಾರತೀಯರ ಸಂಪ್ರದಾಯಗಳನ್ನೇ ಅನುಸರಿಸಿದರು. ಭಾರತೀಯ ದೇವ–ದೇವಿಯರ ಹೆಸರುಗಳನ್ನೇ ಇಟ್ಟುಕೊಂಡರು ; ಹಿಂದೂ ಸಮಾಜದೊಳಕ್ಕೆ ಒಂದಾಗಿ ಸೇರಿಕೊಂಡರು. ಇದರಿಂದ ಆ ಕಾಲದಲ್ಲಿ ಹಿಂದೂ ಜಾತಿ ಪದ್ಧತಿಯಲ್ಲಿ ಅಷ್ಟೊಂದು ಕಟ್ಟುಪಾಡುಗಳಿರಲಿಲ್ಲವೆಂದು ತಿಳಿದುಬರುತ್ತದೆ.

ಸಮಾಜದ ಕೆಲವು ವರ್ಗಗಳಲ್ಲಿ ಅವಿಭಕ್ತ ಕುಟುಂಬಪದ್ಧತಿ ಇದ್ದಂತೆ ಕಂಡುಬರುತ್ತದೆ. ಅಮರಾವತಿಯ ಅನೇಕ ಶಾಸನಗಳಲ್ಲಿ ದಾನಿಗಳು ತಮ್ಮ ಹೆಂಡಿರು, ಹೆಣ್ಣುಮಕ್ಕಳು, ಗಂಡುಮಕ್ಕಳು, ಅಣ್ಣ-ತಮ್ಮಂದಿರು, ಮೊಮ್ಮಕ್ಕಳು, ಸಂಬಂಧಿಗಳು ಇವರ ಜೊತೆ ಸೇರಿ ದಾನಮಾಡಿದ ವಿಚಾರ ಬರುತ್ತದೆ.

ಮುಂದಿನ ಕಾಲವವರಿಗಿಂತ ಆ ಕಾಲದ ಹೆಂಗಸರು ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದರು; ಅವರಲ್ಲಿ ಅನೇಕರು ತುಂಬಾ ಆಸ್ತಿವಂತರಾಗಿದ್ದರು. ಬೌದ್ಧ ದೇವಾಲಯಗಳಿಗೆ ಅವರು ಕೊಟ್ಟಿರುವ ಭಾರಿಯ ದ್ರವ್ಯಸಹಾಯ, ಕಟ್ಟಿಸಿಕೊಟ್ಟಿರುವ ಚೈತ್ರಿಯ ಘರಗಳು (ಚೈತ್ಯಾಗಾರಗಳು), ಉದಾರವಾದ ದಾನದಿಂದ ಕಟ್ಟಿಸಿಕೊಟ್ಟಿರುವ ಸುಂದರವಾದ ಕೆತ್ತನೆಯ ಕೆಲಸದಿಂದ ಕೂಡಿದ ಸ್ತಂಭಗಳು, ದ್ವಾರಗಳು ಮತ್ತು ಸ್ತೂಪ ಶಿಲಾಪಟ್ಟಿಕೆಗಳು-ಇವೆಲ್ಲಾ ಈ ಶ್ರೀಮಂತ ಮಹಿಳೆಯರ ಉನ್ನತ ಸಾಮಾಜಿಕ ಸ್ಥಿತಿಯನ್ನು ವಿವರಿಸುತ್ತವೆ.

ಸ್ತ್ರೀ ಪುರುಷರು ಅನೇಕ ಬಗೆಗಳಲ್ಲಿ ಶೃಂಗಾರ ಮಾಡಿಕೊಳ್ಳುತ್ತಿದ್ದರು. ಹೆಂಗಸರು ಚಿನ್ನದ ಕಿವಿಯುಂಗುರಗಳು, ಕಡಗ, ಬಳೆ, ಕಾಲೊಂದಿಗೆಗಳು, ಮುತ್ತು ರತ್ನಗಳ ಕಂಠಹಾರಗಳನ್ನೂ, ಸುವರ್ಣ ಪುಷ್ಪ ಹವಳದ ಮಣಿಗಳನ್ನೂ ಧರಿಸುತ್ತಿದ್ದರು. ಗಂಡಸರು ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು. ತಲೆಗೆ ಪೇಟಗಳನ್ನು ಸುತ್ತಿಕೊಳ್ಳುತ್ತಿದ್ದರು. ಹೆಂಗಸರೂ ಗಂಡಸರೂ ಮಿತವಾಗಿ ಉಡುಪು ಧರಿಸುತ್ತಿದ್ದರು. ಅಮರಾವತಿ ಮತ್ತು ಇತರ ಪ್ರದೇಶಗಳ ಶಿಲ್ಪಗಳು ಇವರ ವಸ್ತ್ರ, ವೇಷ ಭೂಷಣಗಳ ಬಗೆಗೆ ಹೆಚ್ಚು ಬೆಳಕನ್ನು ಚೆಲ್ಲುತ್ತವೆ. ಹೆಂಗಸರು ಅನೇಕ ಭಂಗಿಗಳಲ್ಲಿ ಸುಂದರವಾಗಿ ಕೇಶ ಶೃಂಗಾರ ಮಾಡಿಕೊಳ್ಳುತ್ತಿದ್ದರೆಂಬುದು ಅವುಗಳಲ್ಲಿ ಕಂಡುಬರುತ್ತದೆ.

### ಭಾಷೆ ಮತ್ತು ಸಾಹಿತ್ಯ

ಶಾತವಾಹನರ ಕಾಲದಲ್ಲಿ ಬೆಳಕಿಗೆ ಬಂದಿರುವ ಎಲ್ಲಾ ಶಾಸನಗಳೂ ಪ್ರಾಕೃತ ಭಾಷೆಯಲ್ಲಿರುವುದನ್ನು ನೋಡಿದರೆ, ಪ್ರಾಕೃತವು ರಾಜ್ಯದ ಅಧಿಕೃತ ಭಾಷೆಯಾಗಿತ್ತು ಎನಿಸುತ್ತದೆ. ಕನ್ನಡ ಅಥವಾ ತೆಲುಗು ಎಂದು ನಿರ್ದಿಷ್ಟವಾಗಿ ಗುರುತಿಸಬಹುದಾದ ಯಾವುದೇ ಶಬ್ದ, ಸ್ಥಳನಾಮ ಅಥವಾ ವ್ಯಕ್ತಿನಾಮಗಳು ಈ ಶಾಸನಗಳಲ್ಲಿ ಕಂಡುಬರುವುದಿಲ್ಲ.

ಕ್ರಿ. ಶ. ನಾಲ್ಕನೆಯ ಶತಮಾನಕ್ಕೆ ಮುಂಚೆ ಕನ್ನಡ ಅಥವಾ ತೆಲುಗು ಭಾಷೆಗಳಲ್ಲಿ ಸಾಹಿತ್ಯವಿದ್ದಿತು ಎಂದು ಹೇಳಲು ಆಧಾರಗಳು ಸಾಲವು. ಶಾತವಾಹನರ ಶಾಸನಗಳಲ್ಲಿ ಬರುವ ಎಲ್ಲ ವ್ಯಕ್ತಿಗಳ ಮತ್ತು ಸ್ಥಳಗಳ ಹೆಸರುಗಳನ್ನು ಭಾಷಾದೃಷ್ಟಿಯಿಂದ ಪರೀಕ್ಷೆಗೆ ಒಳಪಡಿಸಿ ವಿವೇಚಿಸಬೇಕಾಗಿದೆ. ಈ ಕೆಲಸ ಇನ್ನೂ ಆಗಿಲ್ಲ. ಕೊಲ್ಹಾಪುರದ ನಾಣ್ಯಗಳಲ್ಲಿ ಬರುವ 'ವಿಳ್ವಾಯಕುರ' ಎಂಬ ಶಬ್ದ ಬಹುಶಃ ಕನ್ನಡ ಅಥವಾ ತೆಲುಗು ಇರಬಹುದು ಎಂದು ವಿ.ಎ. ಸ್ಮಿತ್ ಅಭಿಪ್ರಾಯ ಪಡುತ್ತಾರೆ. 'ಪುಳುಮಾಯಿ' ಎಂಬ ಶಬ್ದವೂ ಈ ಗುಂಪಿನದೇ ಆಗಿದೆ. ಟಾಲೆಮಿಯು (ಸುಮಾರು ಕ್ರಿ.ಶ. 150) ವೈಡೂರ್ಯಗಳು ದೊರೆಯುವ 'ಪೌನ್ನಾಟೆ' ಎಂಬ ಪ್ರಸಿದ್ಧ ಪ್ರದೇಶವನ್ನು ಹೆಸರಿಸಿದ್ದಾನೆ. ಕದಂಬವಂಶದ ಮೂಲ ಪುರುಷನಾದ ಮಯೂರಶರ್ಮನ ಚಂದ್ರವಳ್ಳಿಯ ಶಾಸನದಲ್ಲಿ ಉಕ್ತವಾಗಿರುವ "ಪುನ್ನಾಟ" ಎಂಬ ಶಬ್ದದ ಗ್ರೀಕ್ ಅಪಭ್ರಂಶ ರೂಪವೇ ಈ ಪೌನ್ನಾಟೆ. ಈಗಿನ ಹೆಗ್ಗಡೆದೇವನ ಕೋಟೆಗೆ ಆಗ ಪುನ್ನಾಟ ಎಂದು ಹೆಸರಾಗಿತ್ತು. ಇದನ್ನು ಪುನಲ ನಾಟ (ನದಿಗಳ ನಾಡು) ಎಂದು ಬಿಡಿಸಬಹುದು. ಕ್ರಿ. ಶ. ಆರನೆಯ ಶತಮಾನದ ತಮಿಳು ಕೃತಿ 'ಕಳಾವಳಿ' ಎಂಬ ಕಾವ್ಯದಲ್ಲಿ ಚೋಳ ಚೆಂಗಣ್ಣನ್ ಎಂಬವನು ಪುನಲ್ ನಾಡಿನ ದೊರೆ ಎಂದು ಹೇಳಲಾಗಿದೆ (I.A. XIII, ಪುಟ 258–265). ಹಾಗೆಯೇ ಅಶೋಕನ ಬ್ರಹ್ಮಗಿರಿ ಶಾಸನದ ಮೊದಲನೆಯ ಸಾಲಿನಲ್ಲಿ ಬರುವ ಆತನ ಮಹಾಮಾತ್ರರು ವಾಸವಾಗಿದ್ದ ಇಸಿಲ ಎಂಬ ಊರು ಕನ್ನಡದ 'ಎಸಿಲ್' ಎಂಬ ಶಬ್ದದ ಪ್ರಾಕೃತ ರೂಪವೆಂದು ತೋರಿಸಬಹುದು. 'ಎಸಿಲ್' ಎಂಬ ಶಬ್ದಕ್ಕೆ ತಮಿಳಿನ ಜ್ಞಾತಿ ಶಬ್ದ 'ಎಯಿಲ್' ಎಂದಿದ್ದು ಅದರ ಅರ್ಥ ಕೋಟೆ ಅಥವಾ ಕೋಟೆಯಿರುವ ಪಟ್ಟಣ ಎಂದಾಗುತ್ತದೆ. ಎಯಿಲ್ ನಾಡು ಎಂಬ ಶಬ್ದವು ಕೋಲಾರ ಜಿಲ್ಲೆಯ ತಮಿಳು ಶಾಸನಗಳಲ್ಲಿ

ಎರಡು ಬಾರಿ ಉಕ್ತವಾಗಿದೆ.* ಈ ಉದಾಹರಣೆಗಳು ಕನ್ನಡವು ಕ್ರಿ. ಪೂ. 250 ರಿಂದಲೇ ಅಸ್ತಿತ್ವದಲ್ಲಿದ್ದು ಮುಂದೆ ಶಾತವಾಹನರ ಕಾಲದಲ್ಲೂ ಇದ್ದಿತೆಂಬುದನ್ನು ಶ್ರುತಪಡಿಸುತ್ತವೆ.

ಶಾತವಾಹನರ ಕಾಲದಲ್ಲಿ ಪ್ರಾಕೃತಸಾಹಿತ್ಯ ತುಂಬಾ ಏಳಿಗೆಯ ಸ್ಥಿತಿಯಲ್ಲಿತ್ತು. ಹಾಲನು ಸಂಕಲಿಸಿದ ಗಾಥಾಸಪ್ತಶತಿ ಇಂದಿಗೂ ಉಳಿದುಕೊಂಡು ಬಂದಿದೆ. ಪ್ರಾಕೃತದ ಅನೇಕ ಕವಿಗಳ ಗ್ರಂಥಗಳಿಂದ ಎತ್ತಿಕೊಂಡ ಏಳುನೂರು ಪದ್ಯಗಳ ಸಂಗ್ರಹ ಇದು. ಶತ ಶತಮಾನಗಳಿಂದ ಅನೇಕ ಕವಿಗಳ ಮತ್ತು ವಿದ್ವಾಂಸರ ಮನ್ನಣೆ ಹೊಗಳಿಕೆಗಳಿಗೆ ಈ ಗ್ರಂಥ ಪಾತ್ರವಾಗಿದೆ. ಇದರಿಂದ ಆಗ ಮಹಾರಾಷ್ಟ್ರೀ ಪ್ರಾಕೃತದಲ್ಲಿ ವಿಪುಲ ಸಾಹಿತ್ಯರಚನೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಪೈಶಾಚೀ ಪ್ರಾಕೃತದಲ್ಲಿ ಬರೆಯಲಾದ ಗುಣಾಢ್ಯನ ಬೃಹತ್ ಕಥೆಯು ಶಾತವಾಹನರ ಕಾಲದ ಒಂದು ಮಹತ್ವದ ಕೃತಿಯಾಗಿದೆ. ಸಾಹಿತ್ಯಮೌಲ್ಯ ಮತ್ತು ಜನಪ್ರಿಯತೆಗಳಲ್ಲಿ ಇದನ್ನು ರಾಮಾಯಣ ಮಹಾಭಾರತಗಳ ಸಾಲಿನಲ್ಲಿ ನಿಲ್ಲಿಸಬಹುದಾಗಿದೆ. ಮೂಲ ಪ್ರಾಕೃತಭಾಷೆಯ ಗ್ರಂಥ ಕಣ್ಮರೆಯಾಗಿದ್ದರೂ ಸೋಮದೇವ, ಕ್ಷೇಮೇಂದ್ರ, ಬುದ್ಧಸ್ವಾಮಿ–ಇವರುಗಳ ಸಂಸ್ಕೃತ ಅನುವಾದಗಳಲ್ಲಿ ಬೃಹತ್‌ಕಥೆಯ ಒಳತಿರುಳು ಉಳಿದುಕೊಂಡು ಬಂದಿದೆ. ಈ ಗ್ರಂಥದ ಒಂದು ಭಾಗವಾದ ಉದಯನನ ಕಥೆ ತಮಿಳಿನಲ್ಲೂ ದೊರೆಯುತ್ತದೆ. ಸಂಸ್ಕೃತದಲ್ಲಿ ಕಾತಂತ್ರ ವ್ಯಾಕರಣವನ್ನು ಬರೆದಿರುವ ಶರ್ವವರ್ಮನು ಶಾತವಾಹನ ದೊರೆಯೊಬ್ಬನ ಆಶ್ರಿತನಾಗಿದ್ದನು. ಸಂಸ್ಕೃತ ವ್ಯಾಕರಣಗಳಲ್ಲಿ ಇದು ಒಂದು ಮಹತ್ವದ ಸ್ಥಾನವನ್ನು ಪಡೆದು ಕೊಂಡಿದೆ ಮತ್ತು ಕೆಲವು ದ್ರಾವಿಡ ಭಾಷೆಗಳ ವ್ಯಾಕರಣಗಳ ರಚನೆಗೆ ಮಾದರಿಯಾಗಿದೆ. ಒಬ್ಬ ಶಾತವಾಹನ ದೊರೆಯ ಸಮಕಾಲೀನನಾದ ನಾಗಾರ್ಜುನ ಎಂಬ ಕವಿ ಕೆಲವು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾನೆ.

ಶಾತವಾಹನರು ಸಾಹಿತ್ಯ ಕಲೆಗಳ ಮಹಾಪೋಷಕರಾಗಿದ್ದರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅಜಂತದ ಕೆಲವು ವರ್ಣಚಿತ್ರಗಳು, ಬನವಾಸಿಯ ನಾಗವಿಗ್ರಹ, ತಗರನಗರದ ಬೌದ್ಧಸ್ತೂಪಗಳು, ಬಳ್ಳಿಗಾವೆಯ ತಾರಾಭಗವತಿಯ ಪ್ರತಿಮೆ, ಕೊಲ್ಲಾಪುರದ ಬಳಿಯ ಭಗ್ನಸ್ತೂಪ–ಇವನ್ನು ಕನ್ನಡದೇಶದಲ್ಲಿ ಶಾತವಾಹನರ ಕಲಾ ಮತ್ತು ಶಿಲ್ಪ ಗುಣಗಳನ್ನು ತೋರಿಸಲು ಉಳಿದುಕೊಂಡಿರುವ ಸಂಪತ್ತು ಎನ್ನಬಹುದು.

ಮೂಲ ಲೇಖಕರು : ಶ್ರೀ ಡಿ. ಎಲ್. ನರಸಿಂಹಾಚಾರ್
ಅನುವಾದಕರು : ಶ್ರೀ ಅ. ರಾ. ಮಿತ್ರ

---

* ಎಪಿಗ್ರಾಫಿಯ ಕರ್ನಾಟಿಕ, X, ಚಿಕ್ಕಬಳ್ಳಾಪುರ 20, ಕಾಲ ಶಕ 1224 ಅಥವಾ ಕ್ರಿ. ಶ. 1302.
ಎಲವುರ್-ನಾಡು, ಎಯಿಲ್ ನಾಡು, ತಗಡೈನಾಡು ಇತ್ಯಾದಿ.
ಅದೇ. ಕೋಲಾರ 111 : ಕಾಲ ಕ್ರಿ. ಶ. 1027. ಕೋಲಾರದಲ್ಲಿ ಕೋಲಾರಮ್ಮನ ದೇವಾಲಯದ ಹೊರಗೋಡೆ
ಎಯಿನಾಟ್ಟು = ಎಯಿಲ್ + ನಾಟ್ಟು.

# ಅಧ್ಯಾಯ 6

## ರಾಜಕೀಯ ಚರಿತ್ರೆ

### ಕದಂಬರು

ಕರ್ಣಾಟಕ ಮತ್ತು ದಕ್ಷಿಣ ಭಾರತದ ಪೂರ್ವ ಇತಿಹಾಸದಲ್ಲಿ, ಶಾತವಾಹನರನಂತರ ರಾಜ್ಯಭಾರ ಮಾಡಿದ ಬನವಾಸಿಯ ಕದಂಬರು ಹೆಚ್ಚಿನ ಮಹತ್ವವನ್ನು ಹೊಂದಿದ್ದಾರೆ. ಅವರು ಕ್ರಿ. ಶ. ನಾಲ್ಕನೆ ಶತಮಾನದಿಂದ ಕ್ರಿ. ಶ. ಆರನೆ ಶತಮಾನದ ವರೆಗೆ (ಸುಮಾರು 150 ವರ್ಷಗಳ ಕಾಲ) ಪ್ರಮುಖ ಪಾತ್ರ ವನ್ನು ವಹಿಸಿದ್ದರು. ಧರ್ಮ, ಕಲೆ ಮತ್ತು ಸಾಹಿತ್ಯ ಪ್ರಕಾರಗಳಲ್ಲಿ ಕರ್ಣಾಟಕ ಸಂಸ್ಕೃತಿಯ ಕೆಲವು ಪ್ರಮುಖ ಲಕ್ಷಣಗಳಿಗೆ ಬಹುಮಟ್ಟಿಗೆ ಕದಂಬರ ಆಶ್ರಯ ಮತ್ತು ಪ್ರೋತ್ಸಾಹಗಳು ಪ್ರೇರಕ.

ಮೈಸೂರು ರಾಜ್ಯದ ಪಶ್ಚಿಮ ಗಡಿಯಲ್ಲಿರುವ ಸೊರಬ ತಾಲೂಕಿನ ಬನವಾಸಿ ಬಹಳ ಪುರಾತನ ವಾದುದು. ಮಹಾಭಾರತದಲ್ಲಿ ಅದನ್ನು 'ವನವಾಸ'ಎಂದು ವರ್ಣಿಸಲಾಗಿದೆ. ಬೌದ್ಧ ಕೃತಿಗಳಲ್ಲಿ ಅಶೋಕನು ಪಶ್ಚಿಮ ಕರಾವಳಿಯ ಅಪರಾಂತ ಮತ್ತು ವನವಾಸಕ್ಕೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದನೆಂದು ಉಲ್ಲಿಖಿತವಾಗಿದೆ. ಇದೇ ರೀತಿ, ದಕ್ಷಿಣಭಾರತದ ಪೂರ್ವಭಾಗದಲ್ಲಿ ಸಹ ಬೌದ್ಧಮತದ ಪ್ರಭಾವವನ್ನು ಕಾಣಬಹುದಾಗಿತ್ತು. ನಾಗಾರ್ಜುನಕೊಂಡದಲ್ಲಿ, ಕ್ರಿ. ಶ, ಮೂರನೆಯ ಮತ್ತು ನಾಲ್ಕನೆಯ ಶತಮಾನದ ಪ್ರಾಕೃತ ಶಾಸನಗಳಲ್ಲಿ, ವನವಾಸದ ಯಾತ್ರಾರ್ಥಿಗಳು ಇಕ್ಷ್ವಾಕುವಂಶದ ರಾಜರಿಂದ ನಿರ್ಮಿತವಾದ ಬೌದ್ಧ ದೇವಾಲಯಗಳನ್ನು ಸಂದರ್ಶಿಸಿದರೆಂದು ಹೇಳಲಾಗಿದೆ. ಕ್ರಿ. ಶ. ಎರಡನೆ ಶತಮಾನದಲ್ಲಿ ಟಾಲೆಮಿ ತನ್ನ "ಜಿಯಾಗ್ರಫಿ" ಗ್ರಂಥದಲ್ಲಿ, ಬೈಜಾಂಟಿಯನ್ ಎಂಬ ಹೆಸರನ್ನು ಉಲ್ಲೇಖಿಸಿದ್ದಾನೆ. ಇದು ಬನವಾಸಿಗೆ ಮತ್ತೊಂದು ಹೆಸರಾದ ವೈಜಯಂತಿಯ ಗ್ರೀಕ್ ರೂಪಾಂತರವಾಗಿದೆ. ಜಿನಸೇನನು ತನ್ನ "ಮಹಾಪುರಾಣ"ದಲ್ಲಿ ಬನವಾಸಿಯನ್ನು ಭರತ ಜಯಿಸಿದ ವೈಜಯಂತಿ ಮಹಾದ್ವಾರವೆಂದು ವರ್ಣಿಸಿ ದ್ದಾನೆ. ಚೀಣಾದೇಶದ ಬೌದ್ಧಯಾತ್ರಿಕ ಹೂಯನ್‌ತ್ಸಾಂಗನು, ತನ್ನ ದಕ್ಷಿಣ ಭಾರತದ ಪ್ರವಾಸ ಕಥನದಲ್ಲಿ ಬನವಾಸಿಯನ್ನು ಕೋನ್‌ಕಿನಾಪುಲೋ ಅಥವಾ ಕೊಂಕಣಪುರ (ಕೊಂಕಣಪಟ್ಟಣ)ವೆಂದು ಕರೆದಿದ್ದಾನೆ. ಒಂದು ಶತಮಾನಕ್ಕೆ ಮುಂಚೆಯೇ ಅಲ್ಲಿ ಕದಂಬರ ಆಳಿಕೆ ಕೊನೆಗೊಂಡಿದ್ದರೂ, ಅವನು ಅಲ್ಲಿನ ಅರಮನೆ, ಬೌದ್ಧ ದೇವಾಲಯ ಮತ್ತು ಮಠಗಳ ಬಗ್ಗೆ ಪ್ರಸ್ತಾವಿಸಿದ್ದಾನೆ.

ಅನಂತರದ ಕೆಲವು ಶಾಸನಗಳು ಮತ್ತು ಸಾಹಿತ್ಯಕೃತಿಗಳಲ್ಲಿ, ಕದಂಬರ ಪೌರಾಣಿಕ ಮೂಲದ ಬಗ್ಗೆ ಹಲವಾರು ದಂತಕಥೆಗಳಿವೆ. ಉದಾಹರಣೆಗೆ, ಮಹಾಭಾರತದ ಅಶ್ವತ್ಥಾಮನು ಶಿವನನ್ನು ಪ್ರಾರ್ಥಿಸಿದ ನೆಂದೂ, ಆಗ ಕದಂಬ ಪುಷ್ಪಗಳು ಆಗಸದಿಂದ ಮಳೆಗರೆದವೆಂದೂ, ಆ ಪುಷ್ಪಗಳಿಂದ ಮುಕ್ಕಣ್ಣ ಕದಂಬ ಅಥವಾ ಮೂರು ಕಣ್ಣಿನ ಕದಂಬನೆಂಬ ಮಹಾವೀರನು ಉದ್ಭವಿಸಿದನೆಂದೂ ಅವನೇ ಕದಂಬವಂಶಕ್ಕೆ ಮೂಲ ಪುರುಷನೆಂದೂ ಹೇಳಲಾಗಿದೆ. ಆದರೆ ಕಾಕುತ್ಸ್ಥವರ್ಮನ ತಾಳಗುಂದ ಶಾಸನದಲ್ಲಿ ಕದಂಬರ ನೈಜ ಇತಿಹಾಸ ತಿಳಿದು ಬರುತ್ತದೆ. ಅದರಂತೆ ಮಾನವ್ಯಗೋತ್ರಕ್ಕೆ ಸೇರಿದ ಹಾರಿತೀಪುತ್ರರೆಂಬ ಸನಾತನ ಬ್ರಾಹ್ಮಣ ಕುಟುಂಬದವರು ಬಹುಕಾಲ ಪಶ್ಚಿಮ ಕರಾವಳಿಯಲ್ಲಿ ವಾಸಿಸುತ್ತಿದ್ದರು. ಅವರ ಮನೆಯ

ಬಳಿ ಇದ್ದ ಕದಂಬವೃಕ್ಷದ ಕಾರಣದಿಂದ, ಆ ವಂಶಜರಿಗೆ ಕದಂಬರೆಂಬ ಹೆಸರು ಬಂದಿತು. ‘ಕದಂಬ ವನವಾಸಿನಿ’ ಅಥವಾ ಕದಂಬವೃಕ್ಷಗಳ ವನದಲ್ಲಿ ವಾಸಿಸುವಳಾದ ಲಲಿತೆಯ ಆರಾಧನೆಗೂ ಕದಂಬವೃಕ್ಷಕ್ಕೂ ಸಂಬಂಧವಿದೆ. ಅಂತೆಯೇ, ಅನಂತರದ ಕದಂಬರು ಪೂಜಿಸಿದ ಶಿವನನ್ನು ಮಧುಕೇಶ್ವರ ಅಥವಾ ‘ಮೋಹುವಾ ವೃಕ್ಷದ’ದ ಅಧಿದೇವತೆಯೆಂದು ಕರೆಯಲಾಗಿದೆ. ಆದುದರಿಂದ ಕದಂಬವೃಕ್ಷವು ಆ ವಂಶದ ಪವಿತ್ರ ಲಾಂಛನವಾಗಿದ್ದಿರಬಹುದು. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಒಬ್ಬ ತಮಿಳು ದೊರೆಯು ಕದಂಬ ಕಡಲುಗಳ್ಳರನ್ನು ಸೋಲಿಸಿ, ಕದಂಬ ವೃಕ್ಷವನ್ನು ಕಡಿದು, ಅದರಿಂದ ರಣದುಂದುಭಿಯನ್ನು ನಿರ್ಮಿಸಿದ ನೆಂದು ನಿರೂಪಿಸಲಾಗಿದೆ. ಕೆಲವು ವಿದ್ವಾಂಸರು ಅಭಿಪ್ರಾಯಪಡುವಂತೆ, ಕುರುಂಬ ಅಥವಾ ಕಲಾಭ್ರರು ಐತಿಹಾಸಿಕ ಕದಂಬರಿಗೆ ಮೂಲಪುರುಷರೆಂದು ಭಾವಿಸುವದು ಸತ್ಯಕ್ಕೆ ಸ್ವಲ್ಪ ದೂರವೇ ಆದೀತು.

ಹಲವಾರು ಪೀಳಿಗೆಗಳನಂತರ, ಈ ಬ್ರಾಹ್ಮಣ ಕುಟುಂಬದಲ್ಲಿ ಮಯೂರಶರ್ಮನು ಜನಿಸಿದನು. ಅವನು ಧರ್ಮಶಾಸ್ತ್ರಗಳಿಗೆ ಅನುಸಾರವಾಗಿ, ತನ್ನ ಜಾತಿಧರ್ಮದ ಕರ್ತವ್ಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಒಮ್ಮೆ ಅವನು ತನ್ನ ವಿದ್ಯಾಗುರು ವೀರಶರ್ಮನೊಂದಿಗೆ ಪಲ್ಲವರ ರಾಜಧಾನಿಯಾದ ಕಂಚಿಯ ಘಟಿಕಕ್ಕೆ ಭೇಟಿಕೊಟ್ಟನು. ಆ ಪಲ್ಲವರಾಜಧಾನಿಯಲ್ಲಿ ಕೆಲವು ಅಧಿಕಾರಿಗಳು ಅವನ ಬಗ್ಗೆ ತೋರಿದ ನಡೆವಳಿಕೆಯಿಂದ ತೀವ್ರವಾಗಿ ಅಸಮಾಧಾನಗೊಂಡ ಮಯೂರಶರ್ಮನು ಕಂಚಿಯನ್ನು ತ್ಯಜಿಸಿ ಹೊರಟುಹೋದನು. ಬ್ರಾಹ್ಮಣನಾಗಿ ಜನಿಸಿದ್ದರೂ, ಅವನು ಕ್ಷತ್ರಿಯಧರ್ಮವನ್ನು ಕೈಗೊಂಡು ಕೆಲಕಾಲಾನಂತರ ಅಶ್ವಮೇಧಯಾಗವನ್ನು ಸಹ ಮಾಡಿದನು. ದರ್ಭೆಯ ಹುಲ್ಲನ್ನೇ ಹಿಡಿದು ಅಭ್ಯಾಸವಾಗಿದ್ದ ಕೈಗಳು ಈಗ ಖಡ್ಗವನ್ನು ಹಿಡಿದು ದುರಭಿಮಾನಿ ಕ್ಷತ್ರಿಯರನ್ನು ಸದೆಬಡಿಯಲು ಪಣತೊಟ್ಟವು. ಮಯೂರಶರ್ಮನು ಕರ್ನೂಲಿನ ಬಳಿ ಇರುವ ಶ್ರೀ ಪರ್ವತದ ದಟ್ಟಡವಿಯನ್ನು ಹೊಕ್ಕು, ಅಲ್ಲಿ ಒಂದು ಸಶಸ್ತ್ರಪಡೆಯನ್ನು ಒಟ್ಟುಗೂಡಿಸಿದನು. ಕ್ರಮೇಣ ಅವನು ಬಾಣರು ಮತ್ತಿತರ ಆಶ್ರಿತರ ಮೇಲೆ ಕಪ್ಪವನ್ನು ವಿಧಿಸಿದನು. ಇದರಿಂದ ಕೋಪಗೊಂಡ ಪಲ್ಲವರು ಅವನಿಗೆ ವಿರುದ್ಧವಾಗಿ ಒಂದು ಸೈನ್ಯವನ್ನು ಕಳುಹಿಸಿದರು. ಆದರೆ ಮಯೂರಶರ್ಮನು ಪಲ್ಲವರ ಮೇಲೆ ಗಿಡುಗನಂತೆ ಹಾರಿ, ಅವರನ್ನು ಹಿಮ್ಮೆಟ್ಟಿಸಿ ದನು. ಆಗ ಪಲ್ಲವರಿಗೆ ಯುದ್ಧಕ್ಕಿಂತ ಒಪ್ಪಂದವೇ ಲೇಸೆಂದು ಅರಿವಾಯಿತು. ಅವರು ತಾವಾಗಿ ಪಶ್ಚಿಮ ಕರಾವಳಿಯಿಂದ ಪ್ರೆಹಾರ (ಮಲಪ್ರಭಾ)ದ ವರೆಗಿನ ಪ್ರದೇಶಕ್ಕೆ ಮಯೂರಶರ್ಮನನ್ನು ರಾಜನನ್ನಾಗಿ ನೇಮಿಸಿದರು. ಆ ಸಮಯದಲ್ಲಿ ಪಲ್ಲವರು ಪ್ರೆಹಾರದಿಂದ ಪಶ್ಚಿಮ ಕರಾವಳಿಯ ವರೆಗಿನ ಪ್ರದೇಶಕ್ಕೆ ಆಳರಸರಾಗಿದ್ದರು. ತಾಳಗುಂದದ ಶಾಸನದಂತೆ, ಈ ಪ್ರದೇಶವನ್ನು ಅವರು ಮಯೂರಶರ್ಮನಿಗೆ ಒಪ್ಪಿಸಿದರು. ಇದರಿಂದ ಕದಂಬರು ಹಾಗೂ ಆದಿ ಚಾಲುಕ್ಯರ ಆಳಿಕೆಗೆ ಮೊದಲೇ, ಪಲ್ಲವರು ಕರ್ಣಾಟಕ ವನ್ನು ಆಳುತ್ತಿದ್ದರೆಂದು ಊಹಿಸಬಹುದಾಗಿದೆ.

ಚಿತ್ರದುರ್ಗದ ಚಂದ್ರವಳ್ಳಿಯ ಶಾಸನ, ಕ್ರಿ. ಶ. 345ರಿಂದ 360ರ ವರೆಗೆ ಆಳಿದ ಮಯೂರಶರ್ಮನು ಚಂದ್ರವಳ್ಳಿಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದನೆಂದು ಹೇಳುತ್ತದೆ. ಆ ಶಾಸನದ ಒಂದು ಪರಿಪಾಠದಂತೆ ಮಯೂರಶರ್ಮನು ಉತ್ತರಭಾರತದ ಶಕಸ್ಥಾನ, ಪಾರಿಯಾತ್ರ, ಮುಖಾರಿ ಪ್ರದೇಶಗಳನ್ನೂ ದಕ್ಷಿಣ ಭಾರತದ ಸೇಂದ್ರಕ, ಪುನ್ನಾಟ ಮತ್ತು ಪಲ್ಲವರನ್ನೂ ಪಶ್ಚಿಮತೀರದ ತ್ರಿಕೂಟ ಮತ್ತು ಆಭೀರರನ್ನೂ ಜಯಿಸಿದನೆಂದು ತಿಳಿದು ಬರುತ್ತದೆ. ಆದರೆ ಅವನು ಉತ್ತರ ಭಾರತದ ಪ್ರಾಂತ್ಯಗಳನ್ನು ಗೆದ್ದನೆಂಬುದು ಸಂಶಯಾತ್ಮಕವಾಗಿದೆ. ಅನಂತರದ ಕದಂಬ ಶಾಸನಗಳಲ್ಲೆಲ್ಲೂ ಈ ವಿಜಯಗಳ ಬಗ್ಗೆ ಪ್ರಸ್ತಾಪವೇ ಇಲ್ಲ.

ಮಯೂರಶರ್ಮನನಂತರ ಅವನ ಮಗ ಕೊಂಗುಣಿವರ್ಮನ್ ಮತ್ತು ಮೊಮ್ಮಗ ಭಗೀರಥ ಒಬ್ಬೊಬ್ಬರೂ ಇಪ್ಪತ್ತೈದು ವರ್ಷಗಳ ಕಾಲ ರಾಜ್ಯಭಾರ ಮಾಡಿದರು.

ಕದಂಬರು ಈಗ ಕ್ಷತ್ರಿಯ ಧರ್ಮ ಸಂಕೇತವಾಗಿ 'ವರ್ಮ' ಎಂಬ ಹೆಸರನ್ನು ಬಳಸತೊಡಗಿದರು. ಆ ವಂಶಜರಾದ ಭಗೀರಥ, ರಘು ಮತ್ತು ಕಾಕುತ್ಸ್ಥ–ಈ ಹೆಸರುಗಳು ರಾಮಾಯಣದ ಪ್ರಭಾವವನ್ನು ತೋರಿಸುತ್ತವೆ. ಐದನೆಯ ಶತಮಾನದ ಸುಪ್ರಸಿದ್ಧ ಅರಸರಲ್ಲಿ ಒಬ್ಬನಾದ ಕಾಕುತ್ಸ್ಥವರ್ಮನು ರಘುವಿನ ಸಹೋದರ. ಅವನು ಕ್ರಿ. ಶ. 425ರಿಂದ 450ರ ವರೆಗೆ ರಾಜ್ಯಭಾರಮಾಡಿದನು. ಅವನು ಅಪ್ರತಿಮ ವೀರನೆಂದೂ ಶ್ರೇಷ್ಠಕವಿಯೆಂದೂ ತಾಳಗುಂದದ ಶಾಸನ ತಿಳಿಸುತ್ತದೆ. ಅವನು ತನ್ನ ಹೆಣ್ಣುಮಕ್ಕಳನ್ನು ಗುಪ್ತ ಅರಸುಮನೆತನದವರಿಗೆ ವಿವಾಹ ಮಾಡಿಕೊಟ್ಟನು. ಎರಡನೆಯ ಚಂದ್ರಗುಪ್ತವಿಕ್ರಮಾದಿತ್ಯನ ಮಗ ಮೊದಲನೆ ಕುಮಾರಗುಪ್ತನು, ಕಾಕುತ್ಸ್ಥವರ್ಮನ ಒಬ್ಬ ಅಳಿಯನಾಗಿದ್ದಿರಬಹುದು. ಪಶ್ಚಿಮ ಕರಾವಳಿಯ ಅಲೂಪ ಮತ್ತು ತಲಕಾಡಿನ ಗಂಗರ ಇಮ್ಮಡಿ ಮಾಧವನು ಸಹ, ಕಾಕುತ್ಸ್ಥವರ್ಮನ ಅಳಿಯಂದಿರು. ಒಂದು ಸಲ ಕಾಕುತ್ಸ್ಥವರ್ಮನು ಬೇಟೆಗಾಗಿ ಹೊರಟು 'ಸ್ಥಾನ ಕುಂದೂರು' ಅಥವಾ ತಾಳಗುಂದ (ಶಿವಮೊಗ್ಗ ಜಿಲ್ಲೆ) ಕ್ಕೆ ಬಂದನೆಂದು ಆ ಶಾಸನ ತಿಳಿಸುತ್ತದೆ. ಆ ತಾಳಗುಂದವು ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಆ ಊರಿನ ಅಧಿದೇವತೆ ಪ್ರಣವೇಶ್ವರ (ಮಹದೇವ) ನನ್ನು ಶಾತವಾಹನರು ಮತ್ತು ಇತರ ಪ್ರಾಚೀನ ಅರಸರು ಪೂಜಿಸುತ್ತಿದ್ದರೆಂದು ಆ ಶಾಸನ ತಿಳಿಸುತ್ತದೆ. ಕಾಕುತ್ಸ್ಥವರ್ಮನು ಈಗ ಪ್ರಣವನ ಕೆರೆ ಅಥವಾ 'ಪ್ರಣವೇಶ್ವರ ಕೆರೆ'ಯೆಂದು ಕರೆಯಲಾಗುತ್ತಿರುವ ಕೆರೆಯನ್ನು ನಿರ್ಮಿಸಿದನು. ಸುಮಾರು ಕ್ರಿ.ಶ. 450ರಲ್ಲಿ, ಅವನ ಹಿರಿಯ ಮಗನು ಕುಬ್ಜನೆಂಬ ಕವಿಯಿಂದ ಒಂದು ಶಾಸನವನ್ನು ಬರೆಯಿಸಿ, ಅಲ್ಲಿನ ಒಂದು ಸ್ತಂಭದ ಮೇಲೆ ಕೆತ್ತಿಸಿ, ಆ ಸ್ಥಳದಲ್ಲಿ ಸ್ಥಾಪಿಸಿದನು.

ವೃದ್ಧಾಪ್ಯದಲ್ಲಿ ಕಾಕುತ್ಸ್ಥವರ್ಮನು ಸಿಂಹಾಸನವನ್ನು ತ್ಯಜಿಸಿ, ಅದನ್ನು ತನ್ನ ಹಿರಿಯ ಮಗನಾದ ಶಾಂತಿವರ್ಮನಿಗೆ ಬಿಟ್ಟುಕೊಟ್ಟನೆಂದು ತಿಳಿಯಬರುತ್ತದೆ. ಆದರೆ ಹಲ್ಮಿಡಿ (ಸುಮಾರು ಕ್ರಿ. ಶ. 450) ಶಾಸನವು ಶಾಂತಿವರ್ಮನ ಹೆಸರನ್ನು ಪ್ರಸ್ತಾವಿಸಿಲ್ಲ. ಅಲ್ಲದೆ ಆ ಶಾಸನದಂತೆ, ಕಾಕುತ್ಸ್ಥವರ್ಮನು ರಾಜ್ಯವಾಳುತ್ತಿದ್ದಾಗ, ಶಾಂತಿವರ್ಮನ ಮಗ ಮೃಗೇಶವರ್ಮನು ಒಂದು ಜಿಲ್ಲೆಯ ಅಧಿಪತಿಯಾಗಿದ್ದನೆಂದು ತಿಳಿಯಬರುತ್ತದೆ. ಆದುದರಿಂದ ತಂದೆಯಿಂದ ಅಭಿಷಿಕ್ತನಾದರೂ ತಾಳಗುಂದ ಶಾಸನವನ್ನು ಬರೆಯಿಸಿದ ತರುಣದಲ್ಲೇ ಶಾಂತಿವರ್ಮನು ಮರಣಹೊಂದಿದನೆಂದು ಊಹಿಸಬಹುದಾಗಿದೆ.

ಕಾಕುತ್ಸ್ಥವರ್ಮನಿಗೆ ಕುಮಾರವರ್ಮ (ಮಾಂಧಾತ) ಮತ್ತು ಕೃಷ್ಣವರ್ಮನೆಂಬ ಇಬ್ಬರು ಕಿರಿಯ ಮಕ್ಕಳಿದ್ದರು. ಉಚ್ಚಂಗಿಯ ಅಧಿಪತಿಯಾದ ಕೃಷ್ಣವರ್ಮನು ತನ್ನ ಹಿರಿಯಣ್ಣ ಮತ್ತು ಅವನ ಮಗ ಮೃಗೇಶನಿಗೆ ವಿರುದ್ಧವಾಗಿ, ಪಲ್ಲವರ ಕಡೆ ಸೇರಿಕೊಂಡನು. ಆದುದರಿಂದ ಕಾಕುತ್ಸ್ಥನು ಮೃಗೇಶ ಬನವಾಸಿಯನ್ನಾಳಲು ಪ್ರಾಪ್ತ ವಯಸ್ಕನಾಗುವ ವರೆಗೆ ಮತ್ತೆ ರಾಜ್ಯಾಡಳಿತವನ್ನು ವಹಿಸಿಕೊಂಡಂತೆ ಕಂಡು ಬರುತ್ತದೆ. ಹೀಗೆ ಕದಂಬ ರಾಜ್ಯವು ಇಬ್ಭಾಗವಾಯಿತು. ಒಂದು ಭಾಗವು ತಲಕಾಡಿನ ಗಂಗರ ಬೆಂಬಲ ಪಡೆದ ಬನವಾಸಿ ಶಾಖೆ; ಮತ್ತೊಂದು ಪಲ್ಲವರ ಹಾಗೂ ಪಾರಿವಿಗಂಗರ ಬೆಂಬಲ ಪಡೆದ ಉಚ್ಚಂಗಿ ಶಾಖೆ. ಕದಂಬ ಹಾಗೂ ಗಂಗರಾಜ ಮನೆತನಗಳ ನಡುವಿನ ವೈಷಮ್ಯದಿಂದ ಪಲ್ಲವರು ಲಾಭ ಪಡೆದರು. ಮೃಗೇಶ ವರ್ಮನು ಪಲ್ಲವರನ್ನೂ ಗಂಗರನ್ನೂ ಸೋಲಿಸಿದನೆಂದು ಹೇಳಲಾಗಿದೆ. ಪಲ್ಲವ ಶಾಂತಿವರ್ಮನು ಉಚ್ಚಂಗಿಯ ಕದಂಬ ವಿಷ್ಣುವರ್ಮನಿಗೆ ರಾಜ್ಯಾಭಿಷೇಕ ಮಾಡಿಸಿದನು. ಅವನ ಮಗ ಸಿಂಹವರ್ಮನಿಗೂ ಪಲ್ಲವರ ನೆರವು ದೊರೆಯಿತು. ಮೃಗೇಶವರ್ಮನ ಮಗ ಕದಂಬ ರವಿವರ್ಮನು (ಕ್ರಿ. ಶ. 500–538) ಪಲ್ಲವ ಚಂಡದಂಡನನ್ನು ಸೋಲಿಸಿ, ಕದಂಬ ಸಾಮ್ರಾಜ್ಯವನ್ನು ಸುಭದ್ರಗೊಳಿಸಿದನು. ಅಲ್ಲದೆ ಕದಂಬರ ಉಚ್ಚಂಗಿ ಶಾಖೆಯನ್ನು ನಿರ್ಮೂಲಗೊಳಿಸಿ, ಕದಂಬರಾಜ್ಯವನ್ನು ನರ್ಮದಾನದಿ ಹಾಗೂ ಅಜಂತದ ವರೆಗೆ ವಿಸ್ತರಿಸಿದಂತೆ ತೋರುತ್ತದೆ. ಆದರೆ ಅವನ ಮರಣಾನಂತರ ಮೊದಲನೆ ಪುಲಿಕೇಶಿ, ಅವನ ಮಗ ಮೊದಲನೆ ಕೀರ್ತಿವರ್ಮ ಹಾಗೂ ಅವನ ಮಗ ಇಮ್ಮಡಿ ಪುಲಿಕೇಶಿ ಕದಂಬರನ್ನು ಮೇಲಿಂದ ಮೇಲೆ ಸೋಲಿಸಿದರು. ಕ್ರಿ. ಶ. 550–565ರ ವರೆಗೆ ಆಳಿದ, ಕದಂಬರ ಕಿರಿಯ ಶಾಖೆಯ ಇಮ್ಮಡಿ ಕೃಷ್ಣ

ವರ್ಮನೇ ಕದಂಬರ ಕೊನೆಯ ದೊರೆ. ಆದರೆ ಕದಂಬಸಂತತಿಯ ಹಲವಾರು ಕಿರಿಯ ಶಾಖೆಗಳು ಗೋವ ಹಾನಗಲ್ ಮತ್ತಿತರ ಪ್ರದೇಶಗಳಲ್ಲಿ, ವಿಜಯನಗರ ಕಾಲದ ವರೆಗೂ ಕರ್ಣಾಟಕ ರಾಜಮನೆತನ ಗಳ ಸಾಮಂತರಾಗಿ ಮುಂದುವರಿದರು.

ಕರ್ಣಾಟಕ ಮತ್ತು ಭಾರತೀಯ ಸಂಸ್ಕೃತಿಗೆ ಕದಂಬರ ಕೊಡುಗೆ ವೈಶಿಷ್ಟ್ಯಪೂರ್ಣವಾಗಿದೆ. ಶಾತ ವಾಹನರನಂತರ, ಕದಂಬರ ಆಳ್ವಿಕೆಯಲ್ಲಿ ಸುಮಾರು ಮೂರು ಶತಮಾನಗಳ ಕಾಲ ರಾಜಕೀಯ ಐಕ್ಯ ಸಾಧ್ಯವಾಗಿತ್ತು. ಕದಂಬರು ವೇದಧರ್ಮದ ನಿಷ್ಠಪರಿಪಾಲಕರಾಗಿದ್ದರು. ಕದಂಬವಂಶ ಸಂಸ್ಥಾಪಕನಾದ ಮಯೂರಶರ್ಮನಿಂದ ಪೋಷಿತವಾದ ವೇದ ಸಂಪ್ರದಾಯವನ್ನು ಕದಂಬ ಅರಸರು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದರು. ಅವರ ಬಿರುದಾವಳಿಗಳಲ್ಲಿ ಒಂದು ಬಿರುದಿನನ್ವಯ, ಅವರು ವೇದಪಠನ ಹಾಗೂ ವ್ಯಾಖ್ಯಾನಗಳಲ್ಲಿ ನಿಷ್ಣಾತರಾಗಿದ್ದರು. ಶೈವ ಮತ್ತು ವೈಷ್ಣವ ಮತಧರ್ಮಗಳೆರಡೂ ಕದಂಬರ ಕೃಪಾಶ್ರಯವನ್ನು ಪಡೆದಿದ್ದವು. ಹಲ್ಮಿಡಿ ಶಾಸನದಲ್ಲಿ ಅಚ್ಯುತ ಮತ್ತು ಸುದರ್ಶನಚಕ್ರದ ಬಗ್ಗೆ ಒಂದು ಮನೋಹರವಾದ ನಾಂದಿಪದ್ಯವಿದೆ. ಸುದರ್ಶನಚಕ್ರವು ದುಷ್ಟರಿಗೆ ವಿನಾಶಕಾರಕ ಅಗ್ನಿ ಯಂತೆಯೂ, ಭಕ್ತರಿಗೆ ಸು–ದರ್ಶನ (ನೋಡಲು ಸುಂದರವಾದುದು) ದಂತೆಯೂ ಕಾಣುವುದೆಂದು ಆ ಪದ್ಯದಲ್ಲಿ ನಿರೂಪಿಸಲಾಗಿದೆ. "ಜಯತಿ ಶ್ರೀಪರಿಷ್ವಂಗ ಶಾರ್ಙ್ಗವ್ಯಾನತಿರಚ್ಯುತಃ ॥ ದಾನವಾಕ್ಷ್ಣೋ ರ್ಯುಗಾಂತಾಗ್ನಿಃ ಶಿಷ್ಟಾನಾಂ ತು ಸುದರ್ಶನಃ" (ಮಹಾಲಕ್ಷ್ಮಿಯಿಂದ ಆಲಿಂಗಿತನಾಗಿರುವವನೂ ಶಾರ್ಙ್ಗ ವೆಂಬ ಧನುಸ್ಸನ್ನು ಸದಾ ಬಗ್ಗಿಸಿ ಬಳಸಲು ಸಿದ್ಧಪಡಿಸಿಕೊಂಡಿರುವವನೂ, ಯುಗಾಂತ್ಯದಲ್ಲಿ ದಾನವರಿಗೆ ಮಾರಕವಾಗುವ ಅಗ್ನಿಯೋಪಾದಿಯಲ್ಲಿರುವವನೂ, ಸಜ್ಜನರಿಗೆ ಹಿತಕಾರಿಯಾದ ಪರಿಪಾಲಕನೂ ಆದ ಅಚ್ಯುತನು ವಿಜಯಿಯಾಗಿರುತ್ತಾನೆ.)

ಜೈನ ಹಾಗೂ ಬೌದ್ಧ ಧರ್ಮಗಳನ್ನು ಸಹ ಕದಂಬರು ಪ್ರೋತ್ಸಾಹಿಸಿದರು. ಹಾನಗಲ್, ಪುಲಿಗೆರೆ ಮುಂತಾದ ಸ್ಥಳಗಳಲ್ಲಿ ಜೈನ ದೇವಾಲಯಗಳಿಗೆ ಮತ್ತು ವಿದ್ವಾಂಸರಿಗೆ ಅನೇಕ ದಾನದತ್ತಿಗಳನ್ನು ಕೊಟ್ಟರು. ಕದಂಬರ ದತ್ತಿಶಾಸನಗಳಲ್ಲಿ ಪೂಜ್ಯಪಾದ, ನಿರವದ್ಯ ಪಂಡಿತ ಮತ್ತಿತರ ಜೈನ ಮುನಿಗಳ ಹೆಸರುಗಳನ್ನು ನಿರೂಪಿಸಲಾಗಿದೆ.

ಬೌದ್ಧಧರ್ಮದ ಎರಡು ಪ್ರಮುಖ ಕೇಂದ್ರಗಳಾದ ಅಜಂತ ಮತ್ತು ಬನವಾಸಿಯನ್ನು ಒಳಗೊಂಡಿದ್ದ ಕದಂಬ ರಾಜ್ಯದಲ್ಲಿ ಬೌದ್ಧಮತವು ಉಚ್ಛ್ರಾಯಸ್ಥಿತಿಯಲ್ಲಿತ್ತು. ಏಳನೆಯ ಶತಮಾನದ ಚೀಣಾಪ್ರವಾಸಿ ಹೂಯನ್-ತ್ಸಾಂಗನು ಕೊಂಕಣಪುರ ಅಥವಾ ಬನವಾಸಿಯ ಪ್ರಸ್ತಾಪದಲ್ಲಿ, ಅಲ್ಲಿ ಸುಮಾರು ಒಂದುನೂರು ಸಂಘಾರಾಮಗಳಿದ್ದವೆಂದೂ, ಮಹಾಯಾನ ಮತ್ತು ಹೀನಯಾನ ಪಂಥಗಳೆರಡಕ್ಕೂ ಸೇರಿ ಹತ್ತು ಸಹಸ್ರ ಬೌದ್ಧಭಿಕ್ಷುಗಳಿದ್ದರೆಂದೂ ತಿಳಿಸಿದ್ದಾನೆ. ಒಂದು ಬೌದ್ಧ ವಿಹಾರದಲ್ಲಿ ಸರ್ವಾರ್ಥಸಿದ್ಧನ ಅತ್ಯಮೂಲ್ಯ ಕಿರೀಟವಿತ್ತೆಂದೂ ತಿಳಿಸಿದ್ದಾನೆ. ಮತ್ತೊಂದು ವಿಹಾರದಲ್ಲಿ ಪವಾಡಶಕ್ತಿಯನ್ನು ಹೊಂದಿದ್ದನೆಂದು ಹೇಳಲಾದ ಮೈತ್ರೇಯನ ಶ್ರೀಗಂಧದ ಪ್ರತಿಮೆ ಇತ್ತು. ಬುದ್ಧ ಹಾಗೂ ಅರ್ಹತ್ ಶ್ರುತವಿಂಶತಿ ಕೋಟಿ ಮುಂತಾದ ಮಹಾತ್ಮರ ಅವಶೇಷಗಳನ್ನೊಳಗೊಂಡು ಅಶೋಕನಿಂದ ನಿರ್ಮಿತವಾದ ಸ್ತೂಪಗಳೂ ಇದ್ದವು.

ಆದಿ ಕದಂಬರ ಕಾಲದಲ್ಲಿ ಪ್ರಾಕೃತಭಾಷೆ ಆಡಳಿತಭಾಷೆಯ ಸ್ಥಾನಮಾನ ಗಳಿಸಿತ್ತು. ಆದರೆ ಕ್ರಮೇಣ ಸಂಸ್ಕೃತವು ರಾಜಭಾಷೆಯಾಯಿತು. ಕಾಕುತ್ಸ್ಥವರ್ಮನ ಕಾಲದ ವೇಳೆಗೆ ಶಾಸನಗಳಲ್ಲಿ ಸಂಸ್ಕೃತವನ್ನೇ ಬಳಸಲಾಗುತ್ತಿತ್ತು. ಮಯೂರವರ್ಮನ ಚಂದ್ರವಳ್ಳಿ ಶಾಸನವು ಪ್ರಾಕೃತಭಾಷೆಯಲ್ಲೇ ಇದ್ದರೂ, ಕುಬ್ಜಕವಿ ವಿರಚಿತ ತಾಳಗುಂದ ಶಾಸನವು ಸಂಸ್ಕೃತದ ಚಂಪೂ ಶೈಲಿಯಲ್ಲಿದೆ. "ಕುಂತಳೇಶ್ವರ ದೌತ್ಯಂ"

ಗ್ರಂಥದಂತೆ, ಕಾಳಿದಾಸನು ಕುಂತಳರಾಜನ ಆಸ್ಥಾನಕ್ಕೆ ಭೇಟಿಕೊಟ್ಟನೆಂದು ಹೇಳಲಾಗಿದೆ. ಈ ಕುಂತಳ ರಾಜನು ವಾಕಾಟಕ ರಾಜನೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೂ, ಕುಂತಳವು ಕರ್ಣಾಟಕದ ಒಂದು ಭಾಗವಾಗಿತ್ತೆಂದೂ ಕಾಳಿದಾಸನು ಬನವಾಸಿಗೆ ಭೇಟಿಕೊಟ್ಟಿದ್ದನೆಂದೂ ಊಹಿಸುವುದು ತಪ್ಪಾಗಲಾರದು.

ಶಿಲ್ಪ ಮತ್ತು ವಾಸ್ತುಶಿಲ್ಪಗಳಿಗೂ ಸಹ ಕದಂಬರ ಕೊಡುಗೆ ವೈಶಿಷ್ಟ್ಯಪೂರ್ಣವಾಗಿದೆ. ಕದಂಬರ ವಾಸ್ತುಶಿಲ್ಪ, ಅನಂತರ ಬಳಕೆಗೆ ಬಂದು ವಾಸ್ತುಶಿಲ್ಪದ ಆಧಾರ ಗ್ರಂಥಗಳಲ್ಲಿ 'ವೇಸರ' ವೆಂದು ವರ್ಣಿಸಲಾಗಿರುವ, ಚಾಲುಕ್ಯ-ಹೊಯ್ಸಳ ವಾಸ್ತುಶಿಲ್ಪಕ್ಕೆ ಅಡಿಗಲ್ಲನ್ನಿಟ್ಟಿತ್ತು.

## ಕದಂಬರ ವಂಶವೃಕ್ಷ

- ಮಯೂರಶರ್ಮನ್ (ಕ್ರಿ. ಶ. 345—360)
  - ಕೊಂಗವರ್ಮನ್ (ಕ್ರಿ. ಶ. 360—385)
    - ಭಗೀರಥ (ಕ್ರಿ. ಶ. 385—410)
      - ರಘು (ಕ್ರಿ. ಶ. 410—425)
      - ಕಾಕುತ್ಸ್ಥವರ್ಮನ್ (ಕ್ರಿ. ಶ. 425—450
        - ಶಾಂತಿವರ್ಮನ್ (ಕ್ರಿ. ಶ. 450—475)
          - ಮೃಗೇಶವರ್ಮನ್ (ಕ್ರಿ.ಶ. 470—488)
            - ರವಿವರ್ಮನ್ (ಕ್ರಿ.ಶ. 500—538)
              - ಹರಿವರ್ಮನ್ (ಕ್ರಿ. ಶ. 538—550)
            - ಭಾನುವರ್ಮನ್
            - ಶಿವರಥ
        - ಕುಮಾರವರ್ಮನ್
          - ಮಾಂಧಾತೃವರ್ಮನ್ (ಕ್ರಿ. ಶ. 488—500)
        - ಮೊದಲನೆ ಕೃಷ್ಣವರ್ಮನ್
          - ವಿಷ್ಣುವರ್ಮನ್
            - ಸಿಂಹವರ್ಮನ್
              - ಎರಡನೆ ಕೃಷ್ಣವರ್ಮನ್ (ಕ್ರಿ. ಶ. 550—565)
                - ಅಜವರ್ಮನ್
          - ದೇವವರ್ಮನ್

ಮೂಲ ಲೇಖಕರು : ಡಾ॥ ಎಸ್. ಶ್ರೀಕಂಠ ಶಾಸ್ತ್ರಿ
ಅನುವಾದಕರು : ಶ್ರೀ ಕೆ. ಟಿ. ರಾಮಸ್ವಾಮಿ

# ತಲಕಾಡಿನ ಗಂಗರು

## (ಕ್ರಿ. ಶ. 350-1050)

ಗಂಗರಾಜವಂಶದ ಉನ್ನತಿ ಮತ್ತು ಅವನತಿ ಕರ್ನಾಟಕದ ಇತಿಹಾಸದ ಆದಿಭಾಗದ ಒಂದು ಮುಖ್ಯ ಅಧ್ಯಾಯವಾಗಿದೆ. ದಂತಕಥೆಗಳು, ಪುರಾಣಗಳು ಮತ್ತು ನಾಗಾರ್ಜುನಕೊಂಡದ ಶಾಸನಗಳಲ್ಲಿ ನಿರೂಪಿತ ವಾಗಿರುವ ಕಾಲವನ್ನು ಅವಲೋಕಿಸಿದರೆ, ದಕ್ಷಿಣಭಾರತದ ಕೆಲವು ಪ್ರದೇಶಗಳಲ್ಲಿ ಕ್ರಿ. ಶ. ಮೂರು ಮತ್ತು ನಾಲ್ಕನೆಯ ಶತಮಾನಗಳ ನಡುವೆ ಇಕ್ಷ್ವಾಕುವಂಶದ ರಾಜರು ರಾಜ್ಯಭಾರ ಮಾಡುತ್ತಿದ್ದರೆಂದು ಊಹಿಸಬಹುದಾಗಿದೆ. ಗಂಗವಂಶದ ಸಂಸ್ಥಾಪಕರು ಇಕ್ಷ್ವಾಕುವಂಶದವರೆಂದು ಹೇಳಿಕೊಂಡಿರುವುದಕ್ಕೆ ಸ್ವಲ್ಪ ಸಮರ್ಥನೆ ಇದೆ. ಚಾಲುಕ್ಯರು ಮತ್ತು ಗಂಗರು ಇಕ್ಷ್ವಾಕುರಾಜರೊಂದಿಗೆ ವಿವಾಹಸಂಬಂಧವನ್ನು ಬೆಳೆಸಲು ಪ್ರಸ್ತಾಪಮಾಡಲು ಉತ್ಸುಕರಾಗಿದ್ದುದು ಇಕ್ಷ್ವಾಕು ರಾಜರ ಉತ್ತಮ ಪರಂಪರೆ ಹಾಗೂ ಖ್ಯಾತಿಗೆ ನಿದರ್ಶನವಾಗಿದೆ.

ಒಂದುಕಡೆ ಕದಂಬ-ವಾಕಾಟಕರ ವಿಸ್ತರಣೆ, ಮತ್ತೊಂದೆಡೆ ಸಾಲಂಕಾಯನರು ಮತ್ತು ಸಮುದ್ರ ಗುಪ್ತನು ಧೂಮಕೇತುವಿನಂತೆ ದಕ್ಷಿಣದ ಮೇಲೆರಗಿ ಪ್ರಮುಖ ರಾಜ್ಯಪ್ರಭುತ್ವಗಳನ್ನುರುಳಿಸಿದುದು, ಇಕ್ಷ್ವಾಕು ಆಳ್ವಿಕೆಯನ್ನು ಕೊನೆಗಾಣಿಸಿದುದು ಮಾತ್ರವಲ್ಲದೆ, ಆ ಕಾಲದ ಪ್ರಬಲ ರಾಜರುಗಳಿಗೆ ಇತರ ರಾಜ್ಯಗಳ ಮೇಲೆ ಆಕ್ರಮಣ ನಡೆಸಲು ಅನುಕೂಲವಾದ ಅವಕಾಶವನ್ನು ಕಲ್ಪಿಸಿಕೊಟ್ಟಂತಾಯಿತು. ಇಕ್ಷ್ವಾಕುವಂಶಸ್ಥರೆಂದು ಹೇಳಿಕೊಂಡ ದಡಿಗ ಮತ್ತು ಮಾಧವರು ಪೆರೂರಿಗೆ ಬಂದು ಅಲ್ಲಿ ಜೈನ ಆಚಾರ್ಯ ಸಿಂಹನಂದಿಯನ್ನು ಭೇಟಿಯಾದರು. ಈ ರಾಜಕುಮಾರರ ಚರಿತ್ರೆಯಲ್ಲಿ ಆಸಕ್ತಿ ತೋರಿಸಿದ ಸಿಂಹನಂದಿ, ಅವರಿಗೆ ಸೂಕ್ತ ಸೂಚನೆಗಳನ್ನು ನೀಡಿ ಪದ್ಮಾವತಿ ದೇವತೆಯ ವರಪ್ರಸಾದವನ್ನು ದೊರಕಿಸಿಕೊಟ್ಟನು. ಇದಕ್ಕೆ ಸಮರ್ಥನೆಯೆಂಬಂತೆ, ಅವರಿಗೆ ಒಂದು ಕತ್ತಿಯನ್ನು ಕೊಟ್ಟು, ರಾಜ್ಯವನ್ನು ದೊರಕಿಸಿಕೊಡುವ ಭರವಸೆಯನ್ನೂ ನೀಡಿದನು. ಮಾಧವನು ಆ ಕತ್ತಿಯಿಂದ ಒಂದು ಕಲ್ಲಿನ ಕಂಭವನ್ನು ಒಡೆದು ಎರಡು ಭಾಗಗಳನ್ನಾಗಿ ಸೀಳಿದನೆಂದು ಹೇಳಲಾಗಿದೆ. ಇದನ್ನು ಶುಭಶಕುನವೆಂದು ಪರಿಗಣಿಸಿದ ಸಿಂಹನಂದಿ ಕರ್ಣಿಕಾರ ಪುಷ್ಪಗಳಿಂದ ಒಂದು ಕಿರೀಟವನ್ನು ಮಾಡಿ, ಅದನ್ನು ಆ ಸಹೋದರರ ತಲೆಯ ಮೇಲಿಟ್ಟು ಅವರಿಗೆ ತನ್ನ ಮಯೂರಪಂಖವನ್ನು ಲಾಂಛನವನ್ನಾಗಿ ಕೊಟ್ಟನು. "ನೀವು ಕೊಟ್ಟ ಮಾತಿಗೆ ತಪ್ಪಿದರೆ, ಜಿನಶಾಸನದಂತೆ ನಡೆಯದಿದ್ದರೆ, ಪರಸ್ತ್ರೀಯರನ್ನು ಮೋಹಿಸಿದರೆ, ಮದ್ಯ ಮಾಂಸಾದಿಗಳನ್ನು ಸೇವಿಸಿದರೆ, ದುಷ್ಟರ ಸಂಗಮಾಡಿದರೆ, ಬಡಬಗ್ಗರಿಗೆ ದಾನ ಮಾಡದಿದ್ದರೆ, ಯುದ್ಧರಂಗದಿಂದ ಹಿಮ್ಮೆಟ್ಟಿದರೆ, ನಿಮ್ಮ ವಂಶ ನಿರ್ನಾಮವಾಗುತ್ತದೆ." ಎಂದು ಎಚ್ಚರಿಕೆಯ ಮಾತುಗಳನ್ನು ಹೇಳಿ, ಅವರನ್ನು ಬೀಳ್ಕೊಟ್ಟನು.

ಹೀಗೆ ಸಿಂಹನಂದಿಯ ಸಹಾಯದಿಂದ ಸ್ಥಾಪಿತವಾದ ರಾಜ್ಯವೇ 96,000 ದೇಶವೆನಿಸಿದ ಗಂಗವಾಡಿ. ಉತ್ತರದಲ್ಲಿ ಮರಾಂಡಳೆ, ದಕ್ಷಿಣದಲ್ಲಿ ಕೊಂಗುನಾಡು; ಪೂರ್ವದಲ್ಲಿ ತೊಂಡಮಂಡಳ ಮತ್ತು ಪಶ್ಚಿಮದಲ್ಲಿ ಚೇರದ ಕಡೆಯ ಸಾಗರ—ಈ ರಾಜ್ಯದ ಎಲ್ಲೆಗಳು. ಸ್ಥಾಪನೆಯ ಕಾಲದಲ್ಲಿ ಕುವಲಾಲ (ಈಗಿನ ಕೋಲಾರ) ರಾಜಧಾನಿಯಾಗಿತ್ತು. ಅನಂತರ ತಳವನಪುರ (ತಲಕಾಡು) ರಾಜಧಾನಿಯಾಯಿತು. ಏಳನೆಯ ಶತಮಾನದಲ್ಲಿ ಮಾನಕುಂಡ (ಚನ್ನಪಟ್ಟಣದ ಪಶ್ಚಿಮಕ್ಕೆ), ಅನಂತರ ಮಾನ್ಯಪುರ (ಬೆಂಗಳೂರು ಜಿಲ್ಲೆಯ ಮಾನೇ) ಗಂಗರಸರ ವಾಸಸ್ಥಾನವಾಗಿತ್ತು. ಮದಗಜೇಂದ್ರ ಅವರ ಲಾಂಛನ; ನವಿಲುಗರಿಯ

ಗಂಗರು
ಕ್ರಿ.ಶ. 500 ರಲ್ಲಿ
ಕ್ರಿ.ಶ. 875 ರಲ್ಲಿ
ನರ್ಮದಾ ನದಿ
ತಪತಿ ನದಿ
ನಾಸಿಕ್
ಅಜಂತಾ
ಎಲ್ಲೋರ
ಗೋದಾವರಿ ನದಿ
ಮಹಾನದಿ
ಕೃಷ್ಣಾ ನದಿ
ಬಾದಾಮಿ
ಗೋವೆ
ತುಂಗಭದ್ರಾ ನದಿ
ಕದಂಬರು
ಬನವಾಸಿ
ಗಂಗವಾಡಿ
ಗಂಗರು
ತಲಕಾಡು
ಬಾಣರು
ಕಾಂಚಿ
ತಂಜಾವೂರು
ಮಧುರೆ
ಪಾಂಡ್ಯರು
ಅನುರಾಧ
ಪುರ

ಚಿತ್ರ 8

ಪಿಂಛ ಧ್ವಜವೇ ಅವರ ಪತಾಕೆ. ಗಂಗವಾಡಿಯ ಜನರಲ್ಲಿ ಜೈನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಜೈನ ಧರ್ಮದ ಆಗಿನ ಆಚಾರ್ಯ ಸಿಂಹನಂದಿಯು, ಜನರು ಆ ಧರ್ಮವನ್ನು ಅಂಗೀಕರಿಸಲು ಮೇಲ್ಪಂಕ್ತಿಯಾಗುವಂತೆ, ದಡಿಗ ಮತ್ತು ಮಾಧವರು ಜೈನಮತವನ್ನವಲಂಬಿಸಿ ಪ್ರೋತ್ಸಾಹಿಸಬೇಕೆಂದು ಒತ್ತಾಯ ಪಡಿಸಿದನು.

ಆದಿಗಂಗರ ಕಾಲ ಮತ್ತು ಇತಿಹಾಸ ಹೆಚ್ಚಿನ ವಿವಾದಕ್ಕೆಡೆಕೊಟ್ಟಿದೆ. ಆ ಕಾಲದ ತಾಮ್ರಫಲಕಗಳಲ್ಲಿ ಉಲ್ಲಿಖಿತವಾಗಿರುವ ರಾಜರ ಹೆಸರುಗಳನ್ನು ಸಮರ್ಥಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ಆದರೆ ಶಾಸನಗಳು ಮತ್ತು ಸ್ಮಾರಕಗಳ ಆಧಾರದಂತೆ ಗಂಗರಸರಲ್ಲಿ ತಲಕಾಡಿನ ಗಂಗರು ಮತ್ತು ಕಳಿಂಗದ ಗಂಗರೆಂದು ಎರಡು ಮುಖ್ಯ ಶಾಖೆಗಳು ಕಂಡು ಬರುತ್ತವೆ.

ಗಂಗವಂಶದ ಸ್ಥಾಪಕನಾದ ದಡಿಗನಿಗೆ ಕೊಂಗುಣಿವರ್ಮ ಅಥವಾ ಕೊಂಕೊಣಿವರ್ಮನೆಂಬ ಹೆಸರಿತ್ತು. ಆ ಇರ್ವರು ಸಹೋದರರು ಪಾಲಾರ್‌ನದಿಯ ಪೂರ್ವಕ್ಕೆ ಬಾಣ ಅಥವಾ ಮಹಾಬಲಿ ರಾಜರನ್ನು ಎದುರಿಸಬೇಕಾಯಿತು. ಕೊಂಕಣ ತೀರದ ಮೇಲೆ ಮತ್ತೊಂದು ದಂಡಯಾತ್ರೆಯನ್ನು ನಡೆಸಬೇಕಾಯಿತು. ದಡಿಗನ ಮಗ ಕಿರಿಯ ಮಾಧವ, ತಂದೆಯನಂತರ ಪಟ್ಟಕ್ಕೆ ಬಂದು ಪ್ರಜೆಗಳ ಹಿತರಕ್ಷಣೆಯ ಪಣತೊಟ್ಟನು. ಪ್ರಜಾಹಿತವೇ ರಾಜ್ಯದ ಉಪಯುಕ್ತತೆಯ ಅಳತೆಗೋಲೆಂಬ ಪ್ರಾಚೀನ ಹಿಂದೂರಾಜರ ಸತ್ಸಂಪ್ರದಾಯಗಳನ್ನು ಗಂಗರಸರು ಪಾಲಿಸಲು ಯತ್ನಿಸಿದರು. ನೀತಿಶಾಸ್ತ್ರ, ಉಪನಿಷತ್ತುಗಳು ಮತ್ತು ಪ್ರಾಚೀನ ಪೂಜ್ಯಗ್ರಂಥಗಳಲ್ಲಿ ಅವರು ಪಾರಂಗತರಾಗಿದ್ದರು. ಅವರಲ್ಲಿ ಕೆಲವರು ಜಿನಧರ್ಮವನ್ನವಲಂಬಿಸಿದ್ದರೂ ಎಲ್ಲ ಗಂಗರಸರೂ ನಾಡಿನ ಎಲ್ಲ ಧರ್ಮಗಳಿಗೂ ರಕ್ಷಣೆ ಮತ್ತು ಪ್ರೋತ್ಸಾಹಗಳನ್ನು ನೀಡುತಿದ್ದರು. ಗಂಗರಸರು ಪರಮತ ಸಹಿಷ್ಣುಗಳಾಗಿದ್ದರು. ಕ್ರಿ. ಶ 435ರನಂತರ, ಮಾಧವನ ತರುವಾಯ ಕ್ರಮವಾಗಿ ಹರಿವರ್ಮ, ವಿಷ್ಣುಗೋಪ ಮತ್ತು (ತಡಂಗಾಲ) ಮೂರನೆಯ ಮಾಧವ ಸುಮಾರು ಕ್ರಿ. ಶ 500ರ ವರೆಗೆ ರಾಜ್ಯಭಾರ ಮಾಡಿದರು. ಕ್ರಿ. ಶ ಐದನೆ ಮತ್ತು ಆರನೆಯ ಶತಮಾನಗಳಲ್ಲಿ ಪಲ್ಲವರು ಕುಂತಳ ಮತ್ತು ಕದಂಬನಾಡುಗಳನ್ನು ತಮ್ಮ ಅಧಿಕಾರಕ್ಕೆ ಒಳಪಡಿಸಲು ಯತ್ನಿಸಿದರು. ಕ್ರಿ.ಶ 476 ರನಂತರ ಕುಂತಳ ರಾಜ್ಯದ ಪರಮಾಧಿಕಾರಕ್ಕಾಗಿ ಪಲ್ಲವರಿಗೂ ಕದಂಬರಿಗೂ ಘರ್ಷಣೆಯುಂಟಾಯಿತು. ಕದಂಬ ಮೃಗೇಶ, ಮಾಂಧಾತೃ ಮತ್ತು ರವಿವರ್ಮನ ಸಮಕಾಲೀನರಾದ ಸಿಂಹವರ್ಮ ಮತ್ತು ಸ್ಕಂದವರ್ಮ ಪಲ್ಲವರ ಕಾಲದಲ್ಲಿ ಪಲ್ಲವರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು. ತಡಂಗಾಲ ಮಾಧವನು ಓರ್ವ ಕದಂಬ ರಾಜಪುತ್ರಿಯನ್ನು ಮದುವೆಯಾದುದೂ, ಮೂರನೆಯ ಸ್ಕಂದವರ್ಮನಿಂದ ಅವನು ರಾಜ್ಯಾಭಿಷಿಕ್ತನಾದುದೂ, ಆ ಕಾಲದಲ್ಲಿ ಕುಂತಳ ಮತ್ತು ಗಂಗವಾಡಿಯಲ್ಲಿ ಪಲ್ಲವರ ಪ್ರಾಬಲ್ಯಕ್ಕೆ ಸಾಕ್ಷಿ. ಈ ಅರಸರು ವಿಷ್ಣುಪೂಜೆಗೆ ವಿಶೇಷ ಮಹತ್ವವನ್ನು ನೀಡಿದಂತೆ ಕಾಣುತ್ತದೆ. ವಿಷ್ಣುಗೋಪ ಮತ್ತಿತರರ ಬಿರುದು ಬಾವಲಿಗಳಲ್ಲಿ ಇಂದ್ರನಂತೆ ಪರಾಕ್ರಮಶಾಲಿ, ನಾರಾಯಣನ ಪಾದಾರವಿಂದಗಳ ಪೂಜೆಯಲ್ಲಿ ಸದಾನಿರತ ಎಂದು ವರ್ಣಿಸಲಾಗಿದೆ.

ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಮತ್ತು ಪಲ್ಲವರಾಜರ ಅತಿಕ್ರಮಣವನ್ನು ಎದುರಿಸುವ ಉದ್ದೇಶದಿಂದ ಕದಂಬರ ಇಮ್ಮಡಿ ಕೃಷ್ಣವರ್ಮನು ತನ್ನ ಸಹೋದರಿಯನ್ನು ತಡಂಗಾಲ ಮಾಧವನಿಗೆ ವಿವಾಹ ಮಾಡಿಕೊಟ್ಟನು. ಇವರ ಮಗನೇ ಗಂಗವಂಶದ ಅತಿ ಶ್ರೇಷ್ಠ ಅರಸರಲ್ಲೊಬ್ಬ ಅವಿನೀತ. ಇವನು ದಕ್ಷಿಣ ಮೈಸೂರಿನಲ್ಲಿ ಕಪಿನೀ ನದಿಯ ತೀರದ ಕಿತ್ತೂರು ರಾಜಧಾನಿಯಾಗಿದ್ದ ಪುನ್ನಾಟದ ಸ್ಕಂದವರ್ಮನ ಮಗಳನ್ನು ಮದುವೆಯಾದನು. ಅವಿನೀತನು ಐವತ್ತು ವರ್ಷಗಳಿಗೂ ಹೆಚ್ಚಿನ ಕಾಲ (ಕ್ರಿ. ಶ. 430–482) ರಾಜ್ಯವಾಳಿದನು. ಅವನು ಅಪ್ರತಿಮ ಶೂರನೆಂದು ವರ್ಣಿಸಲ್ಪಟ್ಟಿದ್ದಾನೆ. ಗಜಶಾಸ್ತ್ರ, ಅಶ್ವವಿದ್ಯೆ ಮತ್ತು ಶರವಿದ್ಯೆಗಳಲ್ಲಿ ಅವನು ಏಕಮೇವಾದ್ವಿತೀಯ. ಅತ್ಯಂತ ಉದಾರಿಯಾಗಿದ್ದ ಅವಿನೀತನು ರಾಷ್ಟ್ರರಕ್ಷಣೆ

ಮತ್ತು ವರ್ಣಾಶ್ರಮ ಧರ್ಮಪರಿಪಾಲನೆಯಲ್ಲಿ ನಿರತನಾಗಿದ್ದನೆಂದು ಶಾಸನಗಳು ಮತ್ತು ತಾಮ್ರದ ಫಲಕಗಳಿಂದ ತಿಳಿಯಬರುತ್ತದೆ. ಜೈನಗುರು ವಿಜಯಕೀರ್ತಿಯಿಂದ ಪ್ರಭಾವಿತನಾದ ಅವಿನೀತನು ಜೈನ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿ, ಜೈನಮತವನ್ನು ಪ್ರೋತ್ಸಾಹಿಸಿದರೂ, ಶಿವಪೂಜೆಯಲ್ಲೂ ಆಸಕ್ತನಾಗಿದ್ದನೆಂದು ತೋರುತ್ತದೆ. ತಾಮ್ರದ ಫಲಕಗಳು ಅವನನ್ನು "ಹರಚರಣಾರವಿಂದ ಪ್ರಣಿಪಾತ"ನು (ಶಿವನ ಅಡಿದಾವರೆಗಳಿಗೆ ಎರಗುವವನು) ಎಂದು ಉಲ್ಲೇಖಿಸುತ್ತವೆ.

ಅವನ ಮಗ ದುರ್ವಿನೀತನು ದೀರ್ಘಕಾಲ ರಾಜ್ಯಭಾರ ಮಾಡಿದನು. (482–522) ಅವನು ಆದಿ ಗಂಗರ ಶ್ರೇಷ್ಠ ಅರಸರಲ್ಲೊಬ್ಬನಾಗಿದ್ದ. ಅವನ ಆಳ್ವಿಕೆಯಲ್ಲಿ ಸನಾತನ ಧರ್ಮದ ಕಾಠಿನ್ಯವನ್ನು ಸಡಿಲಿಸಿ, ಆತ್ಮದ ಸರ್ವವ್ಯಾಪಕತೆಗೆ ಮಹತ್ವಕೊಡುವ ಒಂದು ವ್ಯಾಪಕ ಚಳವಳಿ ನಡೆಯಿತು. ದೇಶದ ರಾಜಕೀಯ ಏಕತೆಗೂ ಧಕ್ಕೆ ಬಂದು, ಸಣ್ಣ ಸಣ್ಣ ರಾಜ್ಯಗಳು ಹುಟ್ಟಿಕೊಂಡು ಪ್ರಬಲರಾದ ಹಾಗೂ ಮಹದಾಕಾಂಕ್ಷೆಯುಳ್ಳ ಅರಸರಿಗೆ ಸಾಮ್ರಾಜ್ಯವನ್ನು ಕಟ್ಟಲು ಅವಕಾಶವನ್ನೊದಗಿಸಿತು. ಪಲ್ಲವರಿಗೂ, ತೊಂಡಮಂಡಲದ ಕಲಭ್ರರಿಗೂ ಬಹುಕಾಲ ಘೋರಯುದ್ಧ ನಡೆಯಿತು. ಗಂಗ ಹಾಗೂ ಕದಂಬರ ಮೇಲೆ ಪಲ್ಲವರ ಪ್ರಭುತ್ವ ದೃಢವಾಯಿತು. ಈ ಕಾಲದಲ್ಲೇ ಪಲ್ಲವರಾಜ್ಯದಲ್ಲಿ ಒಂದು ಹೊಸ ಶಾಖೆ ಸಿಂಹವಿಷ್ಣುವಿನಿಂದ ಸ್ಥಾಪಿತವಾಯಿತು. ಈ ಹೊಸ ವಂಶದ ಉದಯವಾದಾಗಲೇ ಚಾಲುಕ್ಯರೂ ಪ್ರಬಲರಾಗಿ, ಎರಡು ರಾಜ್ಯಗಳಿಗೂ ವೈಷಮ್ಯ ಮೊದಲಾಯಿತು.

ಪಲ್ಲವ–ಚಾಲುಕ್ಯರು ಪರಸ್ಪರ ವೈರಿಗಳಾಗಿದ್ದುದು ಮಾತ್ರವಲ್ಲದೆ, ಈರ್ವರೂ ರಾಷ್ಟ್ರವಿಸ್ತರಣಾ ನೀತಿಯನ್ನವಲಂಬಿಸಿದ್ದರು. ಪಲ್ಲವರು ಉತ್ತರದ ಕಡೆಯೂ, ಚಾಲುಕ್ಯರು ದಕ್ಷಿಣದ ಕಡೆಯೂ, ಆಕ್ರಮಣ ನಡೆಸಿ, ದಕ್ಷಿಣ ರಾಜ್ಯಗಳ ಧಾಳಿಗೆ ಮೈಯೊಡ್ಡಿ ಪ್ರದೇಶಗಳನ್ನು ಮತ್ತೆ ಪಡೆಯಲು ಉದ್ಯುಕ್ತರಾದರು. ದುರ್ವಿನೀತನು ತನ್ನ ಮಗಳನ್ನು ಚಾಲುಕ್ಯ ವಿಜಯಾದಿತ್ಯನಿಗೆ ವಿವಾಹ ಮಾಡಿ ಕೊಟ್ಟು ಚಾಲುಕ್ಯರೊಂದಿಗೆ ಸೇರಿದನು. ಅವನ ಸಹಾಯದಿಂದ ದುರ್ವಿನೀತನು ತನ್ನ ಸಿಂಹಾಸನಾರೋಹಣವನ್ನು ವಿರೋಧಿಸಿದ ತನ್ನ ಮಲತಮ್ಮನ ಸಂಚನ್ನು ಮುರಿದನು. ಪಲ್ಲವರು ದುರ್ವಿನೀತನ ಸಹೋದರನಿಗೆ ಬೆಂಬಲ ಕೊಟ್ಟು, ಕುಂತಳ ರಾಜ್ಯದಲ್ಲಿ ಚಾಲುಕ್ಯರೊಂದಿಗೆ ಯುದ್ಧ ಮಾಡಿದರು. ದೀರ್ಘಕಾಲ ಆ ಯುದ್ಧ ನಡೆದಾಗ, ವಿಜಯಾದಿತ್ಯನ ಮಗನಾದ ಜಯಸಿಂಹವಲ್ಲಭ ಕೀರ್ತಿವರ್ಮನು ಸಿಂಹಾಸನವನ್ನೇರಿದನು. ಚಾಲುಕ್ಯ ಸಾಮ್ರಾಜ್ಯದ ಮೇಲೆ ಮೊದಲು ದಂಡೆತ್ತಿ ಹೋಗಿ ಆಕ್ರಮಣ ನಡೆಸಿದ್ದ ಕಂಚಿಯ ಕಾಡುವೆಟ್ಟಿಯನ್ನು ದುರ್ವಿನೀತನು ಸೋಲಿಸಿದನು. ಪಲ್ಲವರೊಂದಿಗೆ ಯುದ್ಧವನ್ನು ಪುಲಿಕೇಶಿ ಮತ್ತು ಅವನನಂತರ ರಾಜ್ಯವಾಳಿದ ಕೀರ್ತಿವರ್ಮ ಮಂಗಳೇಶ ಮತ್ತು ಅವನ ಅಣ್ಣನ ಮಗ ಇಮ್ಮಡಿ ಪುಲಿಕೇಶಿ ಮುಂದುವರಿಸಿದರು. ಬಹುಶಃ ಈ ಎಲ್ಲ ಅರಸರ ಸಮಕಾಲೀನನಾದ ದುರ್ವಿನೀತನು ಕೊಂಗುನಾಡನ್ನು ಮತ್ತೆ ವಶಪಡಿಸಿಕೊಂಡು, ರಾಜ್ಯವನ್ನು ವಿಸ್ತರಿಸುವ ಉದ್ದೇಶ ಹೊಂದಿದ್ದನು. ಆದರೆ ಆರನೆಯ ಶತಮಾನದ ಅಂತ್ಯ ಮತ್ತು ಏಳನೆಯ ಶತಮಾನದ ಆದಿಯಲ್ಲಿ ಚಾಲುಕ್ಯರಾಷ್ಟ್ರದಲ್ಲಿ ಮಂಗಳೇಶ ಮತ್ತು ಇಮ್ಮಡಿ ಪುಲಿಕೇಶಿಯರ ನಡುವೆ ಅಂತರ್ಯುದ್ಧ ಪ್ರಾರಂಭವಾದುದರಿಂದ ದುರ್ವಿನೀತನ ಯೋಜನೆಗೆ ತಡೆಯುಂಟಾಯಿತು. ಮಂಗಳೇಶನು ತನ್ನ ಅಣ್ಣನ ಮಗ ಪುಲಿಕೇಶಿಯನ್ನು ದೇಶಭ್ರಷ್ಟನನ್ನಾಗಿ ಮಾಡಿದನು. ಆದರೆ ತನ್ನ ಅದಮ್ಯ ಸಾಮರ್ಥ್ಯ ಹಾಗೂ ರಾಜಕೀಯ ವಿವೇಚನೆಗಳಿಂದ ಪುಲಿಕೇಶಿಯು ಗಂಗರ ಮತ್ತು ಆಳುಪರ ನೆರವನ್ನು ಪಡೆದು ಚಾಲುಕ್ಯ ಸಿಂಹಾಸನಕ್ಕಾಗಿ ಮಂಗಳೇಶನೊಡನೆ ಯುದ್ಧ ಹೂಡಿದನು. ಈ ಯುದ್ಧದಲ್ಲಿ ಮಂಗಳೇಶನು ಮರಣ ಹೊಂದಿದನು.

ದುರ್ವಿನೀತನು ಅಂದಾರಿ, ಅಲತೂರು (ಕೊಯಮತ್ತೂರು ಜಿಲ್ಲೆ) ಮತ್ತಿತರ ಪ್ರದೇಶಗಳನ್ನು ಗೆದ್ದು ತನ್ನ ಪ್ರತಿಷ್ಠೆಯನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡನು. ಅವನು ಪುನ್ನಾಟವನ್ನು ಗೆದ್ದು, ಆ

ರಾಜ್ಯವನ್ನಾಳುವ ನ್ಯಾಯವಾದ ಹಕ್ಕನ್ನು ಪಡೆದುಕೊಂಡನು. ಅವನ ತಾಯಿ ಜ್ಯೇಷ್ಠೆಯು ಆ ರಾಜ್ಯದ ಅರಸ ಸ್ಕಂದವರ್ಮನ ಒಬ್ಬಳೇ ಮಗಳಾದುದರಿಂದ ಆಕೆ ಆ ರಾಜ್ಯದ ವಾರಸುದಾರಳಾಗಿದ್ದಳು.

ದುರ್ವಿನೀತನು ಕೇವಲ ಯುದ್ಧಪ್ರಿಯ ಹಾಗೂ ಆಕ್ರಮಣಕಾರನಾಗಿರಲಿಲ್ಲ. ಸ್ವತಃ ಮಹಾ ವಿದ್ವಾಂಸನೂ, ವಿದ್ವಜ್ಜನರಿಗೆ ಆಶ್ರಯದಾತನೂ ಆಗಿದ್ದನು. 'ಅವಿನೀತಸ್ಥಿರಪ್ರಜ್ವಲ' 'ಅನೀತ' 'ವಿನೀತ' ಮತ್ತು 'ಅರಿನೃಪನಿರ್ವಿನೀತ' ಮುಂತಾದ ಬಿರುದಾವಳಿಗಳಿಂದ ಅಲಂಕೃತನಾಗಿದ್ದ ದುರ್ವಿನೀತನು ಶಕ್ತಿ, ಪರಾಕ್ರಮ, ಕೀರ್ತಿ, ವಿದ್ವತ್ತು ಮತ್ತು ಔದಾರ್ಯಗಳಲ್ಲಿ ಅದ್ವಿತೀಯನೆಂದು ಶಾಸನಗಳಲ್ಲಿ ನಿರೂಪಿತವಾಗಿದೆ. ಮೊದಲನೆಯ ರಾಜವರ್ಮನ ಮನ್ನೇದತ್ತಿಯಲ್ಲಿ ಯುಧಿಷ್ಠಿರನೆಂದೂ, ರಾಜನೀತಿ ಶಾಸ್ತ್ರದಲ್ಲಿ ಮಹಾಪರಿಣತನೆಂದೂ ವರ್ಣಿಸಲಾಗಿದೆ. ಸುಪ್ರಸಿದ್ಧ ಸಂಸ್ಕೃತಕವಿ ಭಾರವಿಯು ದುರ್ವಿನೀತನ ಆಸ್ಥಾನದಲ್ಲಿ ಕೆಲಕಾಲವಿದ್ದನೆಂದೂ, ಅವನು ಪೂರ್ವಚಾಲುಕ್ಯದೊರೆ ಮೊದಲನೆ ವಿಷ್ಣುವರ್ಧನ ಮತ್ತು ಕಂಚಿಯ ಪಲ್ಲವಪ್ರಭು ಸಿಂಹವಿಷ್ಣುವಿನ ಸಮಕಾಲೀನನೆಂದೂ "ಅವಂತಿ-ಸುಂದರಿ-ಕಥಾಸಾರ"ದ ಪೀಠಿಕಾಪ್ರಕರಣದಲ್ಲಿ ಪ್ರಸ್ತಾವಿಸಲಾಗಿದೆ. ಪೂರ್ವ ಚಾಲುಕ್ಯರಾಜ ಮೊದಲ ವಿಷ್ಣುವರ್ಧನನು, ರಾಂಚಿಯ ಪಲ್ಲವರಾಜನಾದ ಸಿಂಹವಿಷ್ಣುವು, ದುರ್ವಿನೀತ ಮತ್ತು ಕವಿ ಭಾರವಿ ಸಮಕಾಲೀನರೆಂದು ಕೃತಿಯ ಕರ್ತೃ ದಂಡಿಯು ಸೂಚಿಸಿದ್ದಾನೆ. ಭಾರವಿಯ ಸಂಸ್ಕೃತಕಾವ್ಯ ಕಿರಾತಾರ್ಜುನೀಯದ ಹದಿನೈದನೆಯ ಸರ್ಗಕ್ಕೆ ದುರ್ವಿನೀತನು ಭಾಷ್ಯವನ್ನು ಬರೆದನೆಂದು ತೋರುತ್ತದೆ.

ಪ್ರಸಿದ್ಧ ಜೈನ ವೈಯಾಕರಣ ಪೂಜ್ಯಪಾದನು ಅವನ ಗುರುವಾಗಿದ್ದನು. ಪೈಶಾಚಿಭಾಷೆಯ ಬೃಹತ್‌ಕಥೆಯ ಸಂಸ್ಕೃತ ರೂಪಾಂತರವನ್ನು ದುರ್ವಿನೀತನು ಬರೆದನಂತೆ. ಆತನು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದನು. ನೃಪತುಂಗನ ಕವಿರಾಜಮಾರ್ಗದಲ್ಲಿ, ದುರ್ವಿನೀತನು ಕನ್ನಡದ ಉತ್ತಮ ಲೇಖಕರಲ್ಲೊಬ್ಬನೆಂದು ಸೂಚಿತವಾಗಿದೆ. ಆರನೆ ಶತಮಾನದ ಅಂತ್ಯ ಮತ್ತು ಏಳನೆ ಶತಮಾನದ ಆದಿಭಾಗದಲ್ಲಿ, ದಕ್ಷಿಣ ಭಾರತವನ್ನಾಳಿದ ಅತಿಶ್ರೇಷ್ಠ ಅರಸರಲ್ಲಿ ಗಂಗರಸ ದುರ್ವಿನೀತನೂ ಒಬ್ಬ.

ದುರ್ವಿನೀತನನಂತರ ಪಟ್ಟಕ್ಕೆ ಬಂದವನು ಕೆಲವೊಮ್ಮೆ ಕಾಂತಾವಿನೀತನೆಂದೂ ಕರೆಯಲ್ಪಟ್ಟ, ಅವನ ಮಗ ಮುಷ್ಕರ. ಸಿಂಧುರಾಜನ ಪುತ್ರಿಯನ್ನು ವಿವಾಹವಾಗಿ, ಗಂಗರಾಜ್ಯವನ್ನು ಬಳ್ಳಾರಿ ಮತ್ತು ಧಾರವಾಡದ ವರೆಗೆ ವಿಸ್ತರಿಸಿದನು. ಅವನ ಮಗ ಶ್ರೀವಿಕ್ರಮನು ಸ್ವಲ್ಪಕಾಲ ರಾಜ್ಯವಾಳಿದನು. ಅನಂತರ ಭೂವಿಕ್ರಮ ಮತ್ತು ಶಿವಮಾರರು ಪಟ್ಟಕ್ಕೆ ಬಂದರು. ಭೂವಿಕ್ರಮನ ದೀರ್ಘ ಆಳ್ವಿಕೆಯಲ್ಲಿ (ಕ್ರಿ.ಶ. 620—670) ಕದಂಬರು, ಗಂಗರಾಜ್ಯದ ಮೇಲೆ ಆಕ್ರಮಣ ನಡೆಸಿದರು. ದಕ್ಷಿಣದ ಮೇಲೆ ಧಾಳಿ ನಡೆಸಿದ್ದ ಚಾಲುಕ್ಯರು ಕದಂಬರನ್ನು ಸದೆಬಡಿದು ಗಂಗರ ಸ್ನೇಹವನ್ನು ಬೆಳೆಸಿದರು. ಭೂವಿಕ್ರಮನು ಇಮ್ಮಡಿ ಪುಲಿಕೇಶಿಯ ಸಮಕಾಲೀನನಾಗಿದ್ದು, ಅವನ ಆಳ್ವಿಕೆಯಲ್ಲಿ ಪಲ್ಲವ–ಚಾಲುಕ್ಯರ ಹೋರಾಟ ತೀವ್ರವಾಗಿ ಸುಮಾರು ಒಂದೂವರೆ ಶತಮಾನಗಳಿಗಿಂತ ಹೆಚ್ಚುಕಾಲ ಅನವರತವಾಗಿ ಮುಂದುವರಿಯಿತು.

ಸಂಗ್ರಾಮದ ಮೊದಲ ಹಂತದಲ್ಲಿ, ಪುಲಿಕೇಶಿ ಮಹೇಂದ್ರವರ್ಮ ಪಲ್ಲವನನ್ನೆದುರಿಸಿ ಸೋಲಿಸಿದನು. ಈ ಸಂಗ್ರಾಮದಲ್ಲಿ ಭೂವಿಕ್ರಮನು ಪ್ರಮುಖ ಪಾತ್ರ ವಹಿಸಿದ್ದನೆಂದು ಕಂಡುಬರುತ್ತದೆ. ಆದರೆ ಪುಲಿಕೇಶಿಯು ತನ್ನ ಆಳ್ವಿಕೆಯ ಕೊನೆಯ ಹಂತದಲ್ಲಿ ದಂಡೆತ್ತಿ ಹೋದಾಗ, ನರಸಿಂಹವರ್ಮನು ಚಾಲುಕ್ಯ ರಾಜ್ಯದೊಳಗೆ ನುಗ್ಗಿ ಅಪಾರ ನಷ್ಟವನ್ನುಂಟುಮಾಡಿದನು. ಮಣಿಮಂಗಲ, ಪರಿವಾಲ, ಸುರಮಾರ ಯುದ್ಧಗಳಲ್ಲಿ ಪುಲಿಕೇಶಿಯನ್ನು ಸೋಲಿಸಿ ವಾತಾಪಿಯನ್ನು ವಶಪಡಿಸಿಕೊಂಡನು. ಯುದ್ಧದಲ್ಲಿ ಪುಲಿಕೇಶಿಯು ನರಸಿಂಹವರ್ಮನಿಂದ ಕೊಲ್ಲಲ್ಪಟ್ಟನು. ಮುನ್ನುಗ್ಗಿ ಬರುತ್ತಿದ್ದ ಪಲ್ಲವಸೇನೆ, ಗಂಗವಾಡಿಯ

ಮೇಲೂ ಆಕ್ರಮಣ ನಡೆಸಿತು. ಆದರೆ ಈ ಸಮರದಲ್ಲಿ ಭೂವಿಕ್ರಮನ ಪಾತ್ರ ಮತ್ತು ಪಲ್ಲವರನ್ನು ತಡೆಹಿಡಿಯಲು ಅವನು ಕೈಗೊಂಡ ಕ್ರಮಗಳ ಬಗೆಗೆ ಹೆಚ್ಚಿನ ವಿವರಗಳು ದೊರೆತಿಲ್ಲ. ಪಲ್ಲವರೊಡನೆ ಕಲಹವನ್ನು ಮುಂದುವರಿಸುವುದು ಚಾಲುಕ್ಯರಂತೆಯೇ ಗಂಗರಸರ ದೃಢ ನಿಲುವು ಆಗಿತ್ತು. ಭೂವಿಕ್ರಮನೂ ಸಹ ಪಲ್ಲವ ನರಸಿಂಹ ಪೋತವರ್ಮನೊಂದಿಗೆ ವಿಲಿಂದ ಮತ್ತಿತರ ಸ್ಥಳಗಳಲ್ಲಿ ಹಲವಾರು ಬಾರಿ ಯುದ್ಧ ಮಾಡಿ, 'ಶ್ರೀವಲ್ಲಭ' ಮತ್ತು 'ದುಗ್ಗ' ಎಂಬ ಬಿರುದುಗಳನ್ನು ಪಡೆದನು.

ಭೂವಿಕ್ರಮನ ಸಹೋದರ ಶಿವಮಾರ (ಕ್ರಿ.ಶ. 670—726) ಗಂಗರ ಮುಂದಿನ ದೊರೆ. ಅವನ ಆಳ್ವಿಕೆಯಲ್ಲಿ ಪಲ್ಲವರ ಆಕ್ರಮಣ ನಡೆಯಿತು. ಆದರೆ ಶಿವಮಾರನು ತನ್ನ ಶಕ್ತಿ ಸಾಮರ್ಥ್ಯಗಳಿಂದ ಗಂಗರಾಜ್ಯವನ್ನು ರಕ್ಷಿಸಿದನು. ಚಾಲುಕ್ಯ ದಾಖಲೆಗಳು ವಿನಯಾದಿತ್ಯನನ್ನು ಗಂಗರ ಅಧಿಪತಿಯೆಂದು ಸಾರಿದರೂ, ಗಂಗರು ಇದನ್ನು ಎಂದೂ ಒಪ್ಪಿಕೊಳ್ಳಲಿಲ್ಲ. ಸೌಮ್ಯ ಸ್ವಭಾವದ ಶಿವಮಾರನು 'ಅವನಿ ಮಹೇಂದ್ರ' 'ಶಿಷ್ಟಪ್ರಿಯಃ' ಮತ್ತು 'ನವಕಾಮ' ಎಂಬ ಹೆಸರುಗಳಿಂದ ಪ್ರಸಿದ್ಧನಾಗಿದ್ದನು.

ಶಿವಮಾರನ ಮೊಮ್ಮಗ ಶ್ರೀಪುರುಷ ಈ ವಂಶದ ಅತ್ಯುತ್ತಮ ದೊರೆಗಳಲ್ಲೊಬ್ಬ. ಅವನ ಕಾಲದಲ್ಲಿ ರಾಜ್ಯ ಹಿಂದೆಂದೂ ಇಲ್ಲದಷ್ಟು ಉಚ್ಚ್ರಾಯಸ್ಥಿತಿಯನ್ನು ಹೊಂದಿತು. ಸಿಂಹಾಸನವನ್ನೇರುವ ಮೊದಲು ಅವನು ಗಂಗವಾಡಿಯ ಪೂರ್ವಕ್ಕೆ, ಗಂಗರ ವೈರಿಗಳಾದ ಬಾಣರ ರಾಜ್ಯಕ್ಕೆ ಸಮೀಪದಲ್ಲಿದ್ದ ಕೆರೆಕುಂದ 300, ಎಳೆನಾಗರನಾಡು 70, ಅವನ್ಯನಾಡು 300, ಪೊನ್‌ಕುಂಡ 12, ಮುಂತಾದ ವಿವಿಧ ಪ್ರದೇಶಗಳನ್ನು ಮುತ್ತರಸನೆಂಬ ಹೆಸರಿನಿಂದ 'ಪೃಥ್ವಿಕೊಂಗಾಣಿ' ಆಳುತ್ತಿದ್ದನು. ಕ್ರಿ.ಶ. 726ರಲ್ಲಿ, ಪಟ್ಟಕ್ಕೆ ಬಂದಂದಿನಿಂದ, ಕ್ರಿ. ಶ. 789ರಲ್ಲಿ ಅವನ ಮರಣದ ವರೆಗೆ ಅವನು ರಟ್ಟರ ಮತ್ತು ಪಲ್ಲವರ ಆಕ್ರಮಣವನ್ನು ಎದುರಿಸಬೇಕಾಯಿತು. ಚಾಲುಕ್ಯರು ಆಗಲೇ ದಕ್ಷಿಣದಲ್ಲಿ ಪ್ರಬಲರಾಗಿದ್ದು, ಅವರ ರಾಜ್ಯದ:ಎಲ್ಲೆಗಳು ಗಂಗರಾಜ್ಯದ ಎಲ್ಲೆಗಳಿಗೆ ಸರಿಸಮನಾಗಿದ್ದವು. ಹಾಗೆಯೇ ನಂದಿವರ್ಮ ಪಲ್ಲವನು ನಿರಂತರವಾದ ಆಕ್ರಮಣ ನೀತಿಯನ್ನು ಅವಲಂಬಿಸಿ, ಚಾಲುಕ್ಯರಾಜ್ಯಕ್ಕೆ, ಹೊಂದಿಕೊಂಡಂತಿದ್ದ ತನ್ನ ರಾಜ್ಯದ ವಾಯುವ್ಯ ಗಡಿಯನ್ನು ಭದ್ರಪಡಿಸಿಕೊಳ್ಳಲು ಹವಣಿಸಿದನು. ದಕ್ಷಿಣದ ಕೊಂಗುನಾಡಿನ ಒಡೆತನಕ್ಕಾಗಿ ಶ್ರೀಪುರುಷನಿಗೂ, ನಂದಿವರ್ಮ ಪಲ್ಲವನಿಗೂ ಕದನ ನಡೆಯಿತು.

ಕೊಂಗುನಾಡಿನ ಒಡೆತನಕ್ಕಾಗಿ ಹಾಗೂ ಆ ರಾಜ್ಯದ ನ್ಯಾಯವಾದ ಹಕ್ಕುದಾರ ಚಿತ್ರಮಾಯನನ್ನು ಮತ್ತೆ ಕೊಂಗು ರಾಜನನ್ನಾಗಿ ಮಾಡುವುದಕ್ಕಾಗಿ ಪಾಂಡ್ಯರು ನಂದಿವರ್ಮನೊಂದಿಗೆ ಬಹುಕಾಲ ಯುದ್ಧ ಮಾಡುತ್ತಲೇ ಇದ್ದರು. ಚಾಲುಕ್ಯರು ತಮ್ಮ ಸಾಮಂತ ರಾಜ್ಯವೆಂದು ಪರಿಗಣಿಸಿದ್ದ ಗಂಗವಾಡಿಯ ಅಂಚಿನಲ್ಲಿದ್ದ ಕೊಂಗು ನಾಡಿನಲ್ಲಿ ಪರಕೀಯ ಆಳ್ವಿಕೆ ಸ್ಥಾಪಿತವಾದುದರಿಂದ, ಮತ್ತೊಂದು ಚಾಲುಕ್ಯ ಆಕ್ರಮಣ ಪ್ರಾರಂಭವಾಯಿತು. ನಂದಿವರ್ಮನು ಕೊಂಗುನಾಡಿನಲ್ಲಿ ಶಾಂತಿಸ್ಥಾಪನೆಯ ಕಾರ್ಯದಲ್ಲಿ ತೊಡಗಿದ್ದಾಗ ಎರಡನೆಯ ಚಾಲುಕ್ಯ ವಿಕ್ರಮಾದಿತ್ಯನು ಕಾಂಚಿಯ ಮೇಲೆ ಆಕ್ರಮಣ ನಡೆಸಿ, ಆ ನಗರದಲ್ಲಿ ತಾತ್ಕಾಲಿಕವಾದ ಲಷ್ಕರಿ ಆಡಳಿತ ನಡೆಸಿ, ತನ್ನ ರಾಜ್ಯಕ್ಕೆ ವಿಜಯಶಾಲಿಯಾಗಿ ಹಿಂತಿರುಗಿದನು. ಪಲ್ಲವರಿಗಾದ ಈ ಅಪಮಾನಕ್ಕೆ ಪ್ರತಿಕಾರಮಾಡಲು ನಂದಿವರ್ಮನು ಗಂಗರು ಮತ್ತು ಪಾಂಡ್ಯರೊಂದಿಗೆ ಒಪ್ಪಂದಮಾಡಿಕೊಂಡನು. ದಕ್ಷಿಣದ ಎಲ್ಲಾ ರಾಜ್ಯಗಳ ಪ್ರಬಲ ಒಕ್ಕೂಟದ ನಾಯಕನಾಗಿ, ಅವನು ಎರಡನೆಯ ಚಾಲುಕ್ಯ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿದನು. ಕೀರ್ತಿವರ್ಮನ ಸಾಮಂತನಾದ ದಂತಿದುರ್ಗನು ನಂದಿವರ್ಮ ಪಲ್ಲವನೊಂದಿಗೆ ವಿವಾಹಸಂಬಂಧವನ್ನು ಬೆಳೆಸಿ ತನ್ನ ಪ್ರಭಾವವನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡನು. ಪಲ್ಲವ ಪ್ರದೇಶದಲ್ಲಿ ಬಹುಬೇಗ ತನ್ನ ಅಧಿಕಾರವನ್ನು ಅಭಿವೃದ್ಧಿ ಪಡಿಸಿಕೊಂಡ ರಾಜಸಿಂಹ ಮಾರವರ್ಮನ್ ಪಾಂಡ್ಯನ ಯೋಜನೆಗಳನ್ನು ವಿಫಲಗೊಳಿಸುವುದಕ್ಕಾಗಿಯೂ, ತಾನು ಹೊಸತಾಗಿ ಪಡೆದ ಅಧಿಕಾರವನ್ನು ದೃಢಪಡಿಸಿಕೊಳ್ಳುವುದಕ್ಕಾಗಿಯೂ ನಂದಿವರ್ಮನು

ಗಂಗರಸರೊಡನೆ ವಿವಾಹ ಸಂಬಂಧ ಬೆಳೆಸುವ ಯೋಚನೆ ಮಾಡಿದನು. ಶ್ರೀಪುರುಷ ಮತ್ತು ಮಾಲವ ರಾಜಪುತ್ರಿಯ ಮಗಳು ಕೋನಾರ್ಕಳನ್ನು ಪಾಂಡ್ಯರ ರಾಜಪುತ್ರ ಜಟಿಲ ಪರಾಂತಕ (ರಾಜಸಿಂಹನ ಪುತ್ರ ಮತ್ತು ಪಾಂಡ್ಯ ಸಿಂಹಾಸನಕ್ಕೆ ಉತ್ತರಾಧಿಕಾರಿ) ನಿಗೆ ಕೊಟ್ಟು ವಿವಾಹ ನಡೆಯಿತೆಂದು ಊಹಿಸಬಹುದಾಗಿದೆ.

ಚಾಲುಕ್ಯ–ಪಲ್ಲವರ ಹೋರಾಟ, ಪಾಂಡ್ಯ–ಪಲ್ಲವರ ವೈರ ಮತ್ತು ಪಲ್ಲವ–ರಾಷ್ಟ್ರಕೂಟ ಆಕ್ರಮಣ ಯುದ್ಧಗಳಲ್ಲಿ ಗಂಗರಸರು ಮತ್ತಿತರ ಸಣ್ಣ ಪುಟ್ಟ ಸಾಮಂತರಾಜರು ಅನಿವಾರ್ಯವಾಗಿ ಪಾಲುಗೊಳ್ಳಬೇಕಾಯಿತು. ನಂದಿವರ್ಮನು ಗಂಗರಾಜ್ಯದ ಮೇಲೆ ಧಾಳಿ ನಡೆಸಿ 'ಉಗ್ರೋದಯ' ಎಂಬ ಅನರ್ಘ್ಯ ರತ್ನವನ್ನು ಹೊಂದಿದ್ದ ಕಂಠಾಭರಣವನ್ನು ಕೊಂಡೊಯ್ದನೆಂದು ಕಂಡುಬರುತ್ತದೆ. ಶ್ರೀಪುರುಷನ ಮಗ ಕಿಸುಮಣ್ಣುನಾಡಿನ ಅಧಿಪತಿಯಾದ ಸಿಯಗಲ್ಲನು ಪಲ್ಲವರನ್ನು ವಿಳಂದೆಯಲ್ಲಿ ಸೋಲಿಸಿ ಅಪ್ರತಿಮ ವೀರನಾಗಿ ಮೆರೆದನು. ಶ್ರೀಪುರುಷನು, ವೀರ ಕಾಡುವೆಟ್ಟಿಯನ್ನು ಕೊಂದು, ಅವನಿಗಿದ್ದ 'ಪೆರ್ಮಾನಡಿ' ಮತ್ತು 'ಭೀಮಕೋಪ' ಗಳೆಂಬ ಬಿರುದುಗಳನ್ನು ಕಿತ್ತುಕೊಂಡನು. ರಾಷ್ಟ್ರಕೂಟರು ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣದಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡು ದಖನ್ನಿನಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಅವರ ಆಕ್ರಮಣವನ್ನು ತನ್ನ ಆಳ್ವಿಕೆಯ ಉತ್ತರಾರ್ಧದಲ್ಲಿ ಎದುರಿಸಬೇಕಾಯಿತು—ಶ್ರೀಪುರುಷ.

ಚಾಲುಕ್ಯರ ಅಧೀನದಲ್ಲಿದ್ದ ಎಲ್ಲಾ ಪ್ರದೇಶಗಳ ಮೇಲೂ ತಮ್ಮ ಒಡೆತನವನ್ನು ಸ್ಥಾಪಿಸುವುದೇ ರಾಷ್ಟ್ರಕೂಟರ ಮುಖ್ಯ ಉದ್ದೇಶವಾಗಿತ್ತು. ಆದುದರಿಂದ ಕ್ರಿ.ಶ. 760 ರನಂತರ ಶ್ರೀಪುರುಷನು ತನ್ನ ಆಳ್ವಿಕೆಯ ಕೊನೆಯ ವರೆಗೆ ರಾಷ್ಟ್ರಕೂಟರ ಆಕ್ರಮಣ ಯುದ್ಧಗಳನ್ನು ಎದುರಿಸಬೇಕಾಯಿತು. ರಾಷ್ಟ್ರಕೂಟರ ಈ ಆಕ್ರಮಣ ಭೀತಿಯೇ ಗಂಗರ ರಾಜಧಾನಿಯನ್ನು ಮಾಕುಂದದಿಂದ ಮಾನ್ಯಪುರಕ್ಕೆ (ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲೂಕಿನ ಮಾನೆ) ವರ್ಗಾಯಿಸಲು ಕಾರಣವಾಗಿದ್ದಿರಬಹುದು. ಶ್ರೀಪುರುಷ ಮತ್ತು ಕನ್ನರಸಬಲ್ಲಹನೆಂದೆನಿಸಿಕೊಂಡ ರಾಷ್ಟ್ರಕೂಟರ ಮೊದಲನೆಯ ಕೃಷ್ಣರಿಗೆ ಭೀಕರ ಕದನಗಳು ನಡೆದವು. ಮಾನೆಯಿಂದ ಕೃಷ್ಣನು ಹೊರಡಿಸಿದ ತಾಳೆಗಾಂ ಫಲಕಗಳಲ್ಲಿ ರಾಷ್ಟ್ರಕೂಟರು ಗಂಗವಾಡಿಯಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರೆಂದು ಸೂಚಿತವಾಗಿದೆ. ಪಲ್ಲವ, ರಾಷ್ಟ್ರಕೂಟ ಮತ್ತು ಚಾಲುಕ್ಯರೊಂದಿಗೆ ನಡೆದ ನಿರಂತರ ಹಾಗೂ ದೀರ್ಘ ಸಮರಗಳಿಂದಾಗಿ ಗಂಗವಾಡಿಯ ಅದೃಷ್ಟ ಬದಲಾಗುತ್ತಿದ್ದುದರಿಂದ ಶ್ರೀಪುರುಷನ ಆಳ್ವಿಕೆಯ ಕೊನೆಯ ದಿನಗಳು ದುಃಖಮಯವಾಗಿದ್ದಿರಬೇಕು.

ಶ್ರೀಪುರುಷನು ಆನೆಗಳ ಬಗ್ಗೆ ವಿಶೇಷ ಪರಿಜ್ಞಾನವನ್ನು ಹೊಂದಿದ್ದು, ಗಜಶಾಸ್ತ್ರವೆಂಬ ವಿದ್ವದ್ಗ್ರಂಥವನ್ನು ರಚಿಸಿದನು. ಸ್ವಯಂ ವಿದ್ವಾಂಸನಾದ ಅವನು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಅವನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಅವನು 'ಕೊಂಗಾಣಿ ರಾಜಾಧಿರಾಜ ಪರಮೇಶ್ವರ ಶ್ರೀಪುರುಷ' ನೆಂಬ ಚಕ್ರವರ್ತಿಯೋಗ್ಯ ಬಿರುದನ್ನು ಪಡೆದನು. ಅವನಿಗೆ ಇಮ್ಮಡಿ ವಿನೆಯೆಟ್ಟನ್ ಮತ್ತು ಚಾಲುಕ್ಯ ವಂಶದ ವಿಜಯ ಮಹಾದೇವಿಯೆಂಬ ಇಬ್ಬರು ರಾಣಿಯರಿದ್ದು, ಹಲವಾರು ಗಂಡುಮಕ್ಕಳಿದ್ದರು. ಅವನ ಜ್ಯೇಷ್ಠಪುತ್ರ ಶಿವಮಾರನು ತಂದೆಯ ಅವಸಾನ ಕಾಲದಲ್ಲಿ ಕದಂಬೂರು ಮತ್ತು ಕುಣಿಂಗಲ್ ನಾಡುಗಳಿಗೆ ಅಧಿಪತಿಯಾಗಿದ್ದನು. ವಿಜಯಮಹಾದೇವಿಯ ಮಗನಾದ ವಿಜಯಾದಿತ್ಯನು ಕೆರಗೋಡುನಾಡು ಮತ್ತು ಅಸಂದಿನಾಡುಗಳಿಗೆ ಅಧಿಪತಿಯಾಗಿದ್ದನು. ದುಗ್ಗಮಾರನು ಕುವಳಾಲನಾಡು, ಬೆಳತೂರುನಾಡು ಮತ್ತು ಪುಲವಕಿನಾಡುಗಳಿಗೆ ರಾಜಪ್ರತಿನಿಧಿಯಾಗಿದ್ದನು. ಶ್ರೀಪುರುಷನ ಕಿರಿಯ ಮಗನಾದ ಸಿಯಗಲ್ಲನು ತಂದೆಗಿಂತ ಮೊದಲೇ ಕಾಲವಾಗಿದ್ದುದರಿಂದ ತನ್ನ ಅಣ್ಣಂದಿರೊಂದಿಗೆ ಸಿಂಹಾಸನಕ್ಕಾಗಿ ಕಾದಾಡುವುದು ಸಾಧ್ಯವಾಗಲಿಲ್ಲ.

ಶ್ರೀಪುರುಷನ ಹಿರಿಯ ಮಗ ಶಿವಮಾರನು ಕ್ರಿ.ಶ. 788 ರಲ್ಲಿ ಸಿಂಹಾಸನವನ್ನೇರಿದಾಗ ತನ್ನ ತಮ್ಮ ದುಗ್ಗಮಾರನನ್ನು ಎದುರಿಸಬೇಕಾಯಿತು. ಶಿವಮಾರನ ಸಾಮಂತರಲ್ಲೊಬ್ಬನಾದ ಸಿಂಗಪೋತನು ತನ್ನ ಸೈನ್ಯವನ್ನು ತಂದು ದುಗ್ಗಮಾರನನ್ನು ಸೋಲಿಸಿ, ದಂಗೆಯನ್ನಡಗಿಸಿದನು. ಶಿವಮಾರನ ಆಳ್ವಿಕೆಯ ಕಾಲದಲ್ಲಿ ರಾಜ್ಯದ ಅದೃಷ್ಟ ಬುಡಮೇಲಾಗಿ ಅನೇಕ ದುರ್ಘಟನೆಗಳಿಗೆ ಈಡಾಗಬೇಕಾಯಿತು. ಗಂಗ ವಂಶವೇ ನಿರ್ನಾಮವಾಗುವ ಪರಿಸ್ಥಿತಿ ಬಂದಿತ್ತು. ಮುಖ್ಯವಾಗಿ ರಾಷ್ಟ್ರಕೂಟರೇ ಈ ಅನರ್ಥಗಳಿಗೆ ಕಾರಣರಾದರು. ರಾಷ್ಟ್ರಕೂಟರಲ್ಲಿಯೇ ಗೋವಿಂದ ಮತ್ತು ಧ್ರುವರ ನಡುವೆ ಭೀಕರ ಕಲಹ ಉಂಟಾಗಿ, ಧ್ರುವನು ತನ್ನ ಅಣ್ಣ ಗೋವಿಂದನನ್ನು ಸೋಲಿಸಿದನು. ಗೋವಿಂದನಿಗೆ ನೇರವಾಗಿ ಸಹಾಯ ಮಾಡಿದ್ದ ಎಲ್ಲಾ ನೆರೆಹೊರೆಯ ರಾಜ್ಯಗಳ ಮೇಲಣ ಆಕ್ರಮಣ ನಡೆಸಿದನು. ಹೀಗೆ ಸಹಾಯ ಮಾಡಿದವರಲ್ಲಿ ಅತಿ ಪ್ರಬಲನಾದ ಶಿವಮಾರನನ್ನು ಸೆರೆ ಹಿಡಿದು, ರಾಷ್ಟ್ರಕೂಟ ಕಾರಾಗೃಹದಲ್ಲಿಡಲಾಯಿತು. ಧ್ರುವನ ಮಗ ಯುವರಾಜ ಗೋವಿಂದ (ಮುಂದೆ ಮೂರನೆಯ ಗೋವಿಂದ) ಮತ್ತು ಧ್ರುವನ ಹಿರಿಯ ಮಗ ಕಂಭರ ನಡುವೆ ದಖನ್ನಿನ ರಟ್ಟರ ಮೇಲಿನ ಪರಮಾಧಿಕಾರಕ್ಕಾಗಿ ಕಲಹವುಂಟಾಗಿ ಅದರಿಂದ ಏನೂ ಪ್ರಯೋಜನ ವಾಗದೆ ಶಾಂತಿಸಂಧಾನಗಳು ನಡೆದು ಕಂಭನಿಗೆ ಗಂಗವಾಡಿಯನ್ನು ನೀಡಲಾಯಿತು. ತನ್ನ ತಂದೆಯ ಮರಣದ ವರೆಗೂ ಕಂಭನು (ರಣಾವಲೋಕ ಕಂಬಯ್ಯ) ಗಂಗವಾಡಿಯನ್ನು ರಾಜ ಪ್ರತಿನಿಧಿಯಂತೆ ಆಳುತ್ತಿದ್ದನು. ಕ್ರಿ.ಶ. 794 ರಲ್ಲಿ ತಂದೆಯ ಮರಣಾನಂತರ, ತಮ್ಮ ಗೋವಿಂದನು ರಾಷ್ಟ್ರಕೂಟ ಸಿಂಹಾಸನವನ್ನೇರಿದಾಗ, ಕಂಬಯ್ಯನು ಹನ್ನೆರಡು ರಾಜರ ಪ್ರಬಲ ಒಕ್ಕೂಟವನ್ನು ಸ್ಥಾಪಿಸಿ, ಸಿಂಹಾಸನದ ಮೇಲೆ ತನಗಿದ್ದ ನ್ಯಾಯವಾದ ಹಕ್ಕನ್ನು ಪಡೆಯಲು ತಮ್ಮನ ವಿರುದ್ಧ ದಂಗೆಯೆದ್ದನು.

ರಾಜನೀತಿಗನುಗುಣವಾಗಿ ಮೂರನೆಯ ಗೋವಿಂದನು ಶಿವಮಾರನನ್ನು ಕಾರಾಗೃಹದಿಂದ ಬಿಡುಗಡೆ ಮಾಡಿ, ಅವನ ರಾಜ್ಯಕ್ಕೆ ಕಳುಹಿಸಿಕೊಟ್ಟನು. ಗಂಗವಾಡಿಯ ನ್ಯಾಯವಾದ ರಾಜ ಶಿವಮಾರನು, ಅಲ್ಲಿ ರಾಜಪ್ರತಿನಿಧಿಯಾಗಿದ್ದ ಕಂಭನಿಗೆ ವೈರಿಯಾಗಲೆಂದು ಹೀಗೆ ಮಾಡಿದ್ದಿರಬಹುದು. ಸಹೋದರರ ನಡುವೆ ಯುದ್ಧ ಅನಿವಾರ್ಯವೆಂಬುದನ್ನರಿತ ಶಿವಮಾರನು ಬಿಡುಗಡೆ ಹೊಂದಿದೊಡನೆಯೇ ತನ್ನ ಬಿರುದುಗಳನ್ನು ಮತ್ತೆ ಹೊಂದಿ, ಕಂಭನ ಜೊತೆ ಸೇರಿದನು. ಮಂಡ್ಯ ತಾಲೂಕು ಮುದುಗುಂದೂರಿನ ಬಳಿ ಬೀಡು ಬಿಟ್ಟಿದ್ದ ಚಾಲುಕ್ಯ ಮತ್ತು ಹೈಹಯ ಸೈನ್ಯಗಳನ್ನೊಳಗೊಂಡ ರಾಷ್ಟ್ರಕೂಟರ ಸೇನೆಯ ಮೇಲೆ ಶಿವಮಾರನು ಜಯಪ್ರದವಾಗಿ ಆಕ್ರಮಣ ನಡೆಸಿದನು. ಆದರೆ ಪರಾಕ್ರಮಿ ಗೋವಿಂದನಿಗೆದುರಾಗಿ, ಬಹುಕಾಲ ಅವನಿಂದ ನಿಲ್ಲಲಾಗಲಿಲ್ಲ. ಈ ಅವಿಧೇಯತೆಗಾಗಿ ಅವನು ಮತ್ತೆ ಸೆರೆಯಾದನು. ಮಹಾ ಪರಾಕ್ರಮಿಯೂ, ಚತುರಸೇನಾನಿಯೂ ಆದ ಮೂರನೆಯ ಗೋವಿಂದನು, ಸಂಧಾನ ನೀತಿಯನ್ನನುಸರಿಸಿ, ತನ್ನ ಅಣ್ಣನ ಬೆಂಬಲಿಗರನ್ನೆಲ್ಲಾ ತನ್ನ ಕಡೆಗೆ ಒಲಿಸಿಕೊಂಡನು. ರಾಜ್ಯದಲ್ಲೆದ್ದಿದ್ದ ದಂಗೆಯನ್ನು ಸುಲಭವಾಗಿ ಅಡಗಿಸಿ, ಗಂಗವಾಡಿಯ ಪರಮಾಧಿಕಾರವನ್ನು ಶಿವಮಾರನಿಗೆ ಉದಾರವಾಗಿ ಬಿಟ್ಟುಕೊಟ್ಟನು. ಇದರ ಸಂಕೇತವಾಗಿ ಗೋವಿಂದ ಮತ್ತು ಪಲ್ಲವರಾಜ ನಂದಿವರ್ಮರಿಬ್ಬರೂ ರಾಜಮುಕುಟವನ್ನು ಸ್ವಹಸ್ತ ದಿಂದ ಶಿವಮಾರನ ತಲೆಯ ಮೇಲಿರಿಸಿ ಗೌರವಿಸಿದರು. ಶಿವಮಾರನು ರಾಷ್ಟ್ರಕೂಟ ಅರಸನಿಗೆ ನಿಷ್ಠ ಸಾಮಂತನಾಗಿ ಮುಂದುವರಿದನು.

ಶಿವಮಾರನ ಅದೃಷ್ಟಗತಿ ಮತ್ತೆ ಒಳಿತಿನ ಕಡೆಗೆ ಓಡಿತು. ಹೊಸತಾಗಿ ಲಭಿಸಿದ್ದ ಪ್ರಭುತ್ವವನ್ನು ಬಲಪಡಿಸಿಕೊಳ್ಳಲು ಮತ್ತು ಪೂರ್ವಚಾಲುಕ್ಯರನ್ನು ಅಡಗಿಸಲು ಸಹಾಯಕವಾಗುವ ಎಲ್ಲ ಮಿತ್ರರ ಆವಶ್ಯಕತೆಯೂ ಮೂರನೆಯ ಗೋವಿಂದನಿಗಿತ್ತು (ಕ್ರಿ.ಶ. 792–814).

ಮತ್ತೆ ಅಧಿಕಾರವನ್ನು ವಹಿಸಿಕೊಂಡ ಶಿವಮಾರನು, ಚಾಲುಕ್ಯರಿಂದ ಇತ್ತೀಚೆಗೆ ಬೇರೆಯಾಗಿದ್ದ ಬಾಲವರ್ಮನ ಮೇಲೆ ಯುದ್ಧ ಮಾಡಬೇಕಾಯಿತು. ಅವನು ತನ್ನ ಪ್ರಭು ಗೋವಿಂದನೊಡಗೂಡಿ

ಪೂರ್ವಚಾಲುಕ್ಯ ಸಾಮ್ರಾಟ, ಎರಡನೆಯ ನರೇಂದ್ರ ಮೃಗರಾಜ ವಿಜಯಾದಿತ್ಯನ ಮೇಲೆ ಕ್ರಿ.ಶ. 808ರ ವರೆಗೆ ದೀರ್ಘವಾದ ಹಾಗೂ ರಕ್ತಪಾತಮಯವಾದ ಯುದ್ಧವನ್ನು ಯಶಸ್ವಿಯಾಗಿ ಮಾಡಿದನು. ಚಾಲುಕ್ಯರ ಇಮ್ಮಡಿ ನರೇಂದ್ರ ಮೃಗರಾಜ ವಿಜಯಾದಿತ್ಯನು ಗಂಗರ ಮತ್ತು ರಾಷ್ಟ್ರಕೂಟರ ವಿರುದ್ಧ ಹನ್ನೆರಡು ವರ್ಷಗಳ ಕಾಲ 108 ಯುದ್ಧಗಳನ್ನು ಮಾಡಿದನೆಂದು ಶಾಸನ ಮತ್ತು ಫಲಕಗಳಲ್ಲಿ ನಿರೂಪಿತವಾಗಿದೆ.

ನಿರಂತರವಾಗಿ ಸಾಗಿದ್ದ ಈ ಯುದ್ಧಗಳ ಕಾಲದಲ್ಲಿಯೇ ರಾಷ್ಟ್ರಕೂಟ ಗೋವಿಂದನು ತನ್ನ ರಾಜಧಾನಿಯನ್ನು ಅಚಲಾಪುರ, ಎಲ್ಲೋರ ಮತ್ತು ಮಯೂರ್ ಖಂಡದಿಂದ ಮಾನ್ಯಖೇಟಕ್ಕೆ ವರ್ಗಾಯಿಸಿದನು. ಮಾನ್ಯಖೇಟವು ವ್ಯೂಹಯುಕ್ತಿಯ ದೃಷ್ಟಿಯಿಂದ ಅತಿ ಮಹತ್ವಪೂರ್ಣವಾಗಿತ್ತು. ಪೂರ್ವಚಾಲುಕ್ಯರನ್ನು ಯಶಸ್ವಿಯಾಗಿ ಎದುರಿಸಲು ಗೋವಿಂದನಿಗೆ ಇದರಿಂದ ಅನುಕೂಲವಾಯಿತು. ಕೆಲಕಾಲಾನಂತರ ಗೋವಿಂದನು ಉತ್ತರ ಭಾರತದಲ್ಲಿ ಯುದ್ಧಮಾಡುತ್ತಿದ್ದಾಗ, ಅವನ ವಿರುದ್ಧವಾಗಿ ಗಂಗ, ಕೇರಳ, ಚೋಳ, ಪಾಂಡ್ಯ ಮತ್ತು ಕಂಚಿರಾಜರು ಒಂದು ಪ್ರಬಲವಾದ ಒಕ್ಕೂಟವನ್ನು ಸ್ಥಾಪಿಸಿಕೊಂಡರು. ಇದರಿಂದಾಗಿ, ಹಿಂತಿರುಗಿದ ತತ್‌ಕ್ಷಣವೇ ಗೋವಿಂದನು ಕ್ರಿ.ಶ. 808ರಲ್ಲಿ ಗಂಗವಾಡಿಯ ಮೇಲೆ ದಂಡೆತ್ತಿ ಹೋಗಲು ವಿಶೇಷ ಸನ್ನಾಹಗಳನ್ನು ನಡೆಸಿದನು. ಗಂಗವಾಡಿಯ ಬಯಲು ಸೀಮೆಯನ್ನು ಪ್ರವೇಶಿಸಿ, ಕೆಲಕಾಲ ಶ್ರೀಭವನದಲ್ಲಿ ತಂಗಿ (ಚಿತ್ರದುರ್ಗ ಜಿಲ್ಲೆಯ ಕವಲೆದುರ್ಗವೆಂದು ಗುರುತಿಸಲಾಗಿದೆ.) ಒಕ್ಕೂಟದ ಸೇನೆಯನ್ನು ಸದೆಬಡಿದನು. ಈ ಕದನದಲ್ಲಿ ಗಂಗಸೇನೆಯ ಹಾಗೂ ಅರಸುಮನೆತನದ ಹಲವಾರು ಮಂದಿ ಮೃತಪಟ್ಟರು. ಗೋವಿಂದನ ಈ ಪ್ರಮುಖ ಸಮರದಲ್ಲಿ ಶಿವಮಾರನ ಪಾತ್ರದ ಬಗ್ಗೆ, ಅಮೋಘವರ್ಷನ ಸಂಗಮ ಫಲಕಗಳಲ್ಲಿ ಯಾವ ಪ್ರಸ್ತಾಪವೂ ಇಲ್ಲ. ಶಿವಮಾರನ ಆಳ್ವಿಕೆಯ ಕೊನೆಯ ದಿನಗಳು ಮೋಡ ತುಂಬಿದ ದಿನಗಳಾಗಿದ್ದವು. ಆದರೆ ಆ ಕಾಲದ ಶಾಸನಗಳು ವಾಸ್ತವರೀತಿಯಲ್ಲಿ, ಸಮರದಲ್ಲಿ ಶಿವಮಾರನ ಕೋಪವು ಶತ್ರುರಾಜರನ್ನು ಕ್ಷಣಮಾತ್ರದಲ್ಲಿ ಯಮನ ಬಾಯಿಗೆ ನೂಕುತ್ತಿತ್ತೆಂದೂ, ಆಗಿನ ಚಿತ್ರ ಅತಿ ಭೀಕರವಾಗಿರುತ್ತಿತ್ತೆಂದೂ, 'ಭೀಮಕೋಪ' ನೆಂಬ ಬಿರುದು ಅವನಿಗೆ ಅನ್ವರ್ಥನಾಮವಾಗಿತ್ತೆಂದೂ ತಿಳಿಸುತ್ತವೆ. ಶಿವಮಾರನು ಯುದ್ಧರಂಗದಲ್ಲಿ ಮಾತ್ರವಲ್ಲದೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲೂ ಪ್ರಸಿದ್ಧನಾಗಿದ್ದನು. ಅವನು ಪದಚ್ಯುತನಾಗಿದ್ದಾಗ ಸೆರೆಯಲ್ಲಿದ್ದ, ಕುಮ್ಮದವಾಡದಲ್ಲಿ ಒಂದು ಜೈನ ದೇವಾಲಯವನ್ನು ಕಟ್ಟಿಸಿದನು. ಶ್ರವಣಬೆಳಗೊಳ ಮತ್ತಿತರ ಸ್ಥಳಗಳಲ್ಲಿ ಕೆಲವು ಬಸದಿಗಳನ್ನೂ ಕಟ್ಟಿಸಿದನು. ಅವನು ಜೈನಧರ್ಮ ಸಂರಕ್ಷಕನೆಂದೂ, ಹಲವಾರು ಬ್ರಾಹ್ಮಣ ದೇವಾಲಯ ಮತ್ತಿತರ ಸಂಸ್ಥೆಗಳಿಗೆ ಕೊಡುಗೈಯಿಂದ ದಾನ ದತ್ತಿಗಳನ್ನು ನೀಡುತ್ತಿದ್ದನೆಂದೂ, ಶಾಸನಗಳು ಅವನನ್ನು ಶ್ಲಾಘಿಸುತ್ತವೆ. ಅವನು ನಿಸ್ಸಂದೇಹವಾಗಿ ಆ ಕಾಲದ ಅತ್ಯಂತ ಸಮರ್ಥ ಅರಸರಲ್ಲೊಬ್ಬನಾಗಿದ್ದ. ಮನ್ಮಥನನ್ನು ನಾಚಿಸುವ ಸುಂದರ ಆಕೃತಿ, ಅಸಾಧಾರಣ ಜ್ಞಾಪಕಶಕ್ತಿ, ಸೂಕ್ಷ್ಮ ಹಾಗೂ ಕುಶಾಗ್ರಮತಿ, ಎಲ್ಲ ತೆರನಾದ ವಿದ್ಯೆಯನ್ನು ಸುಲಭವಾಗಿ ಅರಿಯುವ ಪ್ರತಿಭೆ, ಶಿವಮಾರನಿಗೆ ದೈವದತ್ತವಾಗಿದ್ದುವು. ಮಾರಸಿಂಹನ ದತ್ತಿಯಲ್ಲಿ ಶಿವಮಾರನು, ಅದ್ವಿತೀಯ ಪಂಡಿತನೆಂದೂ, ಸಂಸ್ಕೃತಿಪ್ರಿಯನೆಂದೂ, ಕವಿತಾ ರಚನೆಯ ಸಾಮರ್ಥ್ಯವುಳ್ಳವನೆಂದೂ, ತರ್ಕ, ವೇದಾಂತ, ತತ್ವ, ವ್ಯಾಕರಣ ಮತ್ತಿತರ ವಿಷಯಗಳಲ್ಲೂ ಪರಿಣತನಾದುದು ಮಾತ್ರವಲ್ಲದೆ ನಾಟಕ ಮತ್ತು ರಂಗಭೂಮಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ನಿಪುಣನೆಂದೂ ವರ್ಣಿಸುತ್ತವೆ.

ಶಿವಮಾರನ ಅಸಾಧಾರಣ ಕಲ್ಪನಾಶಕ್ತಿಯನ್ನು ಎಂತಹ ಪ್ರತಿಭಾನ್ವಿತ ಭಾಷಾವಿದ್ವಾಂಸರೂ ಮೀರಿಸಲು ಸಾಧ್ಯವಿರಲಿಲ್ಲವೆಂದು ತಿಳಿದುಬರುತ್ತದೆ. ಅವನು ಬರೆದನೆಂದು ಹೇಳಲಾದ ಕನ್ನಡದ ಗಜಾಷ್ಟಕ, ಉತ್ತಮ ಸಾಹಿತ್ಯ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಅವನು 'ಸೇತುಬಂಧನ' ವೆಂಬ ಕೃತಿಯ ಕರ್ತೃವೂ ಆಗಿದ್ದನು. ಅವನು ಗಜಶಾಸ್ತ್ರಪರಿಣತ ಮಾತ್ರವಲ್ಲದೆ, ಅಶ್ವವಿದ್ಯೆ ಹಾಗೂ

ಧನುರ್ವಿದ್ಯೆಗಳಲ್ಲಿ ನಿಪುಣನಾಗಿದ್ದನು. ಸುದೀರ್ಘ ವ್ಯಾಸಂಗದನಂತರ ಅವನು ಅತಿ ಕ್ಲಿಷ್ಟವಾದ 'ಫಣಿಸೂತಮತ' ಮತ್ತು ಪತಂಜಲಿಯ 'ಯೋಗಶಾಸ್ತ್ರ' ದಲ್ಲೂ ಪರಿಣತನಾಗಿದ್ದನೆಂದು ಹೇಳಲಾಗಿದೆ.

ಶಿವಮಾರನನಂತರ ಗಂಗ ರಾಜ್ಯವು ಇಬ್ಭಾಗವಾಯಿತು. ಗಂಗ ರಾಜ್ಯದ ಭದ್ರತೆಗಾಗಿ ಶಿವಮಾರನ ಮಗ ಮಾರಸಿಂಹನೂ, ಶಿವಮಾರನ ಸಹೋದರ ವಿಜಯಾದಿತ್ಯನೂ ರಾಜ್ಯವನ್ನು ಹಂಚಿಕೊಂಡರು. 'ಲೋಕತ್ರಿನೇತ್ರ' ನೆಂಬ ಬಿರುದಾಂಕಿತ ಮಾರಸಿಂಹ ಎರೆಯಪ್ಪನು, ತನ್ನ ತಂದೆಯು ರಾಷ್ಟ್ರಕೂಟರಿಂದ ಸೆರೆಹಿಡಿಯಲ್ಪಟ್ಟಿದ್ದ ಕಾಲದಲ್ಲಿ ಗಂಗರಾಜ್ಯಾಧಿಪತಿಯಾಗಿದ್ದನೆಂದು ಹೇಳಿಕೊಂಡಿದ್ದಾನೆ. ಆದರೆ ಶಿವಮಾರನ ರಾಜ್ಯಾಡಳಿತ ಕಾಲದಲ್ಲಿ ರಾಜ್ಯದ ಏರಿಳಿತಗಳ ಪರಿಣಾಮವಾಗಿ ಮಾರಸಿಂಹ ಮತ್ತು ವಿಜಯಾದಿತ್ಯನ ಮಗ ರಾಜಮಲ್ಲರು ರಾಜ್ಯವನ್ನು ಹಂಚಿಕೊಳ್ಳುವುದು ಅನಿವಾರ್ಯವಾಗಿದ್ದಿರಬೇಕು. ಮಾರಸಿಂಹನ ಕಿರಿಯ ಸಹೋದರರಲ್ಲೊಬ್ಬನಾದ ದಿಂಡಿಗನು 'ಪೃಥ್ವೀಪತಿ' ಅಥವಾ ಪೊಡವಿಪತಿ ಎಂಬ ಆಡಂಬರದ ಬಿರುದಿನಿಂದ ರಾಜ್ಯವಾಳಿದನು. ಅವನಿಗೆ ಹಸ್ತಿಮಲ್ಲನೆಂಬ ಹೆಸರೂ ಇತ್ತು. ದಿಂಡಿಗನು ಜೈನ ಧರ್ಮದ ಆಶ್ರಯದಾತನಾಗಿದ್ದನು. ಅನಂತರ ಪಲ್ಲವರ ಜೊತೆಗೂಡಿ ಪಾಂಡ್ಯರ ವಿರುದ್ಧ ಹೋರಾಡಿದನು. ಪಲ್ಲವ ರಾಜ ಅಪರಾಜಿತನು ಮುನ್ನುಗ್ಗಿ ಬರುತ್ತಿದ್ದ ಪಾಂಡ್ಯ ರಾಜನ ಅತಿಕ್ರಮಣವನ್ನು ತಡೆಗಟ್ಟಿದನು. ಪಾಂಡ್ಯರ ವಿರುದ್ಧ ಪಲ್ಲವರಾಜನಿಗೆ ಸಹಾಯ ಮಾಡಿದ ಆದಿತ್ಯಚೋಳನು, ಪಲ್ಲವ (ರಾಜ್ಯದ ಒಂದು ಭಾಗವನ್ನು ಕಾಣಿಕೆಯಾಗಿ ಪಡೆದನು. ಕೊನೆಯ ದೊರೆ ಎರಡನೆಯ ಪೃಥ್ವೀಪತಿಯು ಪಲ್ಲವ ಹೋರಾಟದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದನು. ಅವನು ಚೋಳರಾಜ ವೀರನಾರಾಯಣನ ಮೊದಲನೆ ಪರಾಂತಕ) ನೆರವನ್ನು ಪಡೆದನು. ಅನಂತರ ರಾಜ್ಯದ ಮೇಲೆ ನೊಳಂಬ ಪೊಲವೀರನು ದಂಡೆತ್ತಿ ಬಂದಾಗ, ಪೃಥ್ವೀಪತಿಯು ಗಂಗರಾಜ ಮೂರನೆಯ ರಾಜಮಲ್ಲನ ಸ್ನೇಹ ಬೆಳೆಸಿ, ಕ್ರಮೇಣ ಅವನನ್ನು ತನ್ನ ಪ್ರಭುವೆಂದು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದ್ದಿರಬೇಕು.

ವಿಜಯಾದಿತ್ಯನ ಮಗ ರಾಜಮಲ್ಲನು ಕ್ರಿ. ಶ. 818ರಲ್ಲಿ ಪಟ್ಟಕ್ಕೆ ಬಂದನು. ಅವನು ರಾಷ್ಟ್ರಕೂಟರ ವಿರುದ್ಧ ಹೋರಾಡಬೇಕಾಯಿತು. ರಾಷ್ಟ್ರಕೂಟ ರಾಜ್ಯದ ಪರಿಸ್ಥಿತಿ, ಮಂತ್ರಿಗಳ ಸ್ವಾಮಿದ್ರೋಹ, ಸಾಮಂತರಾಜರು ಅವಿಧೇಯರಾಗಿ ಸ್ವತಂತ್ರರೆಂದು ಘೋಷಿಸಿದುದು, ನೆರೆಹೊರೆಯ ಪ್ರಬಲ ರಾಜರು ರಾಷ್ಟ್ರಕೂಟ ರಾಜ್ಯದ ಪರಮಾಧಿಕಾರವನ್ನು ಛಿದ್ರಗೊಳಿಸಲು ಪ್ರಯತ್ನಿಸಿದುದು—ಈ ಎಲ್ಲಾ ಅಂಶಗಳು ಶಿವಮಾರನು ಕಳೆದುಕೊಂಡಿದ್ದ ಎಲ್ಲ ಪ್ರದೇಶಗಳನ್ನು ಮತ್ತೆ ಹಿಂದಕ್ಕೆ ಪಡೆಯಲು ರಾಜಮಲ್ಲನಿಗೆ ದಾರಿ ಮಾಡಿಕೊಟ್ಟವು. ರಾಷ್ಟ್ರಕೂಟರ ಆಳ್ವಿಕೆಯಿಂದ ಗಂಗವಾಡಿಯನ್ನು ರಾಜಮಲ್ಲನು ಪಾರುಮಾಡಿದನು.

ರಾಜಮಲ್ಲನು ಪರಾಕ್ರಮಿ ಹಾಗೂ ಬುದ್ಧಿವಂತನಾಗಿದ್ದನು. ಅವನು ಧರ್ಮಪ್ರವರ್ತಕ. ಅವನ ನಂತರ ಪಟ್ಟಕ್ಕೆ ಬಂದ ಅವನ ಮಗ ನೀತಿಮಾರ್ಗನು (ಕ್ರಿ. ಶ. 837–870) ತಂದೆಯ ನೀತಿಯನ್ನೇ ಮುಂದುವರಿಸಿ, ಮರೆಯಾಗಿದ್ದ ಗಂಗವಾಡಿಯ ಕೀರ್ತಿಯನ್ನು ಮತ್ತೆ ಬೆಳಗಿಸಿದನು. ಕೈಬಿಟ್ಟು ಹೋಗಿದ್ದ ಎಲ್ಲಾ ಪ್ರದೇಶಗಳನ್ನು ಮತ್ತೆ ಗಂಗಲಾಂಛನದಡಿಯಲ್ಲಿ ಒಟ್ಟುಗೂಡಿಸಿದನು. ಬಾಣರೊಡನೆ ಯುದ್ಧ ಮಾಡಿ ಯಶಸ್ವಿಯಾದನು. ರಾಷ್ಟ್ರಕೂಟ ದೊರೆಯನ್ನೂ ಸಹ, ಅವನು ಸದೆಬಡಿದನು. ಅಮೋಘ ವರ್ಷನು ವೈರವನ್ನು ಬಿಟ್ಟು, ಗಂಗರೊಂದಿಗೆ ಸ್ನೇಹ ಬೆಳಸುವ ಉದ್ದೇಶದಿಂದ, ಗಂಗ ಯುವರಾಜ ಬೂತುಗನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು. ನೀತಿಮಾರ್ಗನು ಜಿನಧರ್ಮದ ಅನುಯಾಯಿ. ಉತ್ತಮ ರಾಜಕಾರಣಿ ಹಾಗೂ ಆಡಳಿತಗಾರನಾದ ಅವನು ಕಲೆ ಮತ್ತು ಸಾಹಿತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದನು.

ಕ್ರಿ.ಶ. 870 ರಲ್ಲಿ ನೀತಿಮಾರ್ಗನ ಮಗ ಇಮ್ಮಡಿ ರಾಜಮಲ್ಲ ಸತ್ಯವಾಕ್ಯನು ಪಟ್ಟಕ್ಕೆ ಬಂದ ಕಾಲ

ದಲ್ಲೇ ವೆಂಗಿಯ ಚಾಲುಕ್ಯ (ಪೂರ್ವಚಾಲುಕ್ಯ)ರನ್ನು ಎದುರಿಸಬೇಕಾಯಿತು. ಈ ಯುದ್ಧಗಳಲ್ಲಿ ಯುವರಾಜ ಬೂತುಗನೂ ಅವನ ಸಹೋದರನೂ ಪ್ರಮುಖಪಾತ್ರ ವಹಿಸಿದ್ದರು. ಅವನು ಕೊಂಗು ನಾಡಿನಲ್ಲೂ ಸಹ ತನ್ನ ಪ್ರಭಾವವನ್ನು ವಿಸ್ತರಿಸಿದನು. ಅವನು ತನ್ನ ಶಕ್ತಿ ಸಾಮರ್ಥ್ಯಗಳಿಂದ ಪಲ್ಲವ ಅರಸರನ್ನು ಕೋಟಲೆಗೊಳಿಸುತ್ತಿದ್ದನೆಂದು ಕೂಡ್ಲೂರು ಮತ್ತು ಕೆರೆಗೋಡು ರಂಗಪುರ ಫಲಕಗಳು ತಿಳಿಸುತ್ತವೆ. ಅಜೇಯನೆನಿಸಿಕೊಂಡ ರಾಜರಾಜ (ಬಹುಶಃ ಚೋಳರಾಜನಿದ್ದಿರಬೇಕು) ನನ್ನು ಪರಾಭವಗೊಳಿಸಿದನು. ಪಲ್ಲವ, ಚೋಳ, ಕಳಿಂಗ ಮತ್ತು ಮಗಧರಾಜರೊಂದಿಗೆ ಸೇರಿದ ಪಾಂಡ್ಯರಸ ಶ್ರೀಮಾರನ ಮೇಲೆ ಅವನು ಯುದ್ಧವನ್ನು ಮುಂದುವರಿಸಿ, ಸೋತುಹೋದನು. ಅನಂತರ, ತನ್ನ ಸೋದರಳಿಯನೂ, ರಾಷ್ಟ್ರಕೂಟ ರಾಜಪುತ್ರಿ ಶಂಖಳ ಮಗನೂ ಆದ ನೃಪತುಂಗ ವರ್ಮನಿಗೆ, ಶ್ರೀಮಾರನ ವಿರುದ್ಧವಾಗಿ ಸಹಾಯ ಮಾಡಿದನು.

ಯುದ್ಧರಂಗದಲ್ಲಿ ಬೂತುಗನು ಮಡಿದನಂತರ, ಎರೆಗಂಗ ಅಥವಾ ಎರೆಯಪ್ಪನು ಕ್ರಿ. ಶ. 887 ರಲ್ಲಿ ಯುವರಾಜನಾದನು. ರಾಷ್ಟ್ರಕೂಟ ರಾಜಪುತ್ರಿಯ ಮಗನಾದ ಎರೆಗಂಗನು ರಾಜ್ಯಪರಿಪಾಲನೆಯಲ್ಲಿ ತನ್ನ ಚಿಕ್ಕಪ್ಪ ಸತ್ಯವಾಕ್ಯನಿಗೆ ನೆರವಾದನು.

ಕ್ರಿ. ಶ. 907 ರಲ್ಲಿ ಎರಡನೇ ನೀತಿಮಾರ್ಗ ಎರೆಯಪ್ಪನು ಸಿಂಹಾಸನವನ್ನೇರಿ, ಆಕ್ರಮಣ ಹಾಗೂ ರಾಜ್ಯವನ್ನು ಭದ್ರಗೊಳಿಸುವ ನೀತಿಯನ್ನು ಅನುಸರಿಸಿದನು. ಆದರೆ ನೀತಿಮಾರ್ಗ ಮತ್ತು ರಾಜಮಲ್ಲರ ನಾಯಕತ್ವದಲ್ಲಿ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಬಹುವಾಗಿ ಶ್ರಮಿಸಿದರೂ, ವಾಸ್ತವವಾಗಿ ಗಂಗರು ಅಮೋಘವರ್ಷನ ವಿವಾಹನೀತಿಯಿಂದಾಗಿ ರಾಷ್ಟ್ರಕೂಟರ ಸಾಮಂತರಾಗಬೇಕಾಯಿತು.

ಎರೆಯಪ್ಪನ ಮತ್ತೊಬ್ಬ ಪ್ರಬಲ ವೈರಿಯೆಂದರೆ, ನೊಳಂಬಾಧಿರಾಜ ಪೊಳಲ್‌ಚೋರ ಮತ್ತು ಗಂಗ ರಾಜಪುತ್ರಿ ಜಯಬ್ಬೆಯ ಮಗ ಮಹೇಂದ್ರ. ಇವನು ತಾನು ಸ್ವತಂತ್ರನೆಂದು ಘೋಷಿಸಿಕೊಂಡು ಗಂಗ ಪರಮಾಧಿಕಾರವನ್ನು ವಿರೋಧಿಸಿದನು. ಅವನು ಬಾಣರನ್ನು ನಿರ್ಮೂಲಗೊಳಿಸಿ, ತನ್ನ ರಾಜ್ಯವನ್ನು ಧರ್ಮಪುರಿ ಮತ್ತು ಕಂಚಿಯ ವರೆಗೆ ವಿಸ್ತರಿಸಿದನು. ಆದರೆ ಕೊನೆಯಲ್ಲಿ ನೀತಿಮಾರ್ಗನು ಮಹೇಂದ್ರನನ್ನು ಸೋಲಿಸಿ, ಕೊಂದುಹಾಕಿ "ಮಹೇಂದ್ರಾಂತಕ" ನೆಂಬ ಬಿರುದನ್ನು ಪಡೆದನು. ಪ್ರಾಸಂಗಿಕವಾಗಿ ಆ ಕಾಲದ ವೀರಗಲ್ಲೊಂದು (ಸುಮಾರು ಕ್ರಿ. ಶ. 890) "ಬೆಂಗಳೂರಿ" ನ ಬಗ್ಗೆ ಪ್ರಸ್ತಾವಿಸಿರುವುದರಿಂದ ಬೆಂಗಳೂರಿನ ಪ್ರಾಚೀನತೆ ತಿಳಿದುಬರುತ್ತದೆ.

ಇಮ್ಮಡಿ ನೀತಿಮಾರ್ಗನು ತಂದೆಯಂತೆಯೇ ಪರಮವೀರನಾಗಿದ್ದನು. ಅವನು ವೀರಸೇನಾನಿಯೆಂದೂ ಕದನಗಳಲ್ಲಿ ನಿರ್ಭೀತನೆಂದೂ, ಸಂಗೀತ ನೃತ್ಯಗಳಲ್ಲಿ ಭರತನೆಂದೂ, ವ್ಯಾಕರಣ ಮತ್ತು ರಾಜನೀತಿ ಶಾಸ್ತ್ರಗಳಲ್ಲಿ ಪರಿಣತನೆಂದೂ, ಮಾರಸಿಂಹನ ಕೂಡ್ಲೂರು ಫಲಕಗಳಲ್ಲಿ ನಿರೂಪಿಸಲಾಗಿದೆ. ಅವನಿಗೆ ನಿಷ್ಠಾವಂತ ಹಾಗೂ ಉದಾತ್ತ ಮಂತ್ರಿಗಳ ಬೆಂಬಲವಿತ್ತು. ಇಮ್ಮಡಿ ನೀತಿಮಾರ್ಗನ ಮಕ್ಕಳಲ್ಲೊಬ್ಬನಾದ ನರಸಿಂಹ ದೇವನೂ ಸಹ, ತನ್ನ ಪರಾಕ್ರಮ ಹಾಗೂ ಆಡಳಿತ ದಕ್ಷತೆಗೆ ಹೆಸರಾಗಿದ್ದನು. ಆದರೆ ಅವನ ಆಳಿಕೆ ಸ್ವಲ್ಪಕಾಲ ಮಾತ್ರವೇ ಇತ್ತು. ಅವನ ತಮ್ಮ ಮೂರನೆಯ ರಾಜಮಲ್ಲನು ಅವನನಂತರ ಕ್ರಿ. ಶ. 920 ರಲ್ಲಿ ಸಿಂಹಾಸನವನ್ನೇರಿ 937ರ ತನಕ ರಾಜ್ಯಭಾರ ಮಾಡಿದನು. ಅವನ ಆಳಿಕೆಯ ಕಾಲದಲ್ಲಿ ರಾಷ್ಟ್ರಕೂಟರು ಮತ್ತು ಚಾಲುಕ್ಯರೊಂದಿಗೆ ಹೋರಾಟ ಮುಂದುವರಿಯಿತು.

ರಾಜಮಲ್ಲನನಂತರ ಎರಡನೆಯ ಬೂತುಗನು ಪಟ್ಟಕ್ಕೆ ಬಂದನು. ಸಾಹಸಮಯ ಕಾರ್ಯ ಚಟುವಟಿಕೆಗಳಿಂದ ಕೂಡಿದ್ದ ಬೂತುಗನ ಆಳಿಕೆ ಗಂಗವಾಡಿಯ ಇತಿಹಾಸದಲ್ಲೇ ಅದ್ವಿತೀಯವಾಗಿತ್ತು.

ಅವನು ರಾಜಮಲ್ಲನ ಸಹೋದರನಾಗಿದ್ದು, ಗಂಗರಸರ ಇತಿಹಾಸದಲ್ಲಿ ಗಂಗಗಾಂಗೇಯ ಮತ್ತು ನನ್ನಿಯ ಗಂಗನೆಂದು ಪ್ರಸಿದ್ಧನಾಗಿದ್ದಾನೆ. ಅವನು ರಾಷ್ಟ್ರಕೂಟರೊಡನೆ ಮೈತ್ರಿಯ ನೀತಿಯನ್ನು ಅನುಸರಿಸಿ, ಎರಡು ವಂಶಗಳ ನಡುವೆ ವಿವಾಹ ಸಂಬಂಧಗಳ ಮೂಲಕ ಆ ಮೈತ್ರಿಯನ್ನು ಸ್ಥಿರಪಡಿಸಿದನು. ಅವನು ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನಿಗೆ, ದುರಾಕ್ರಮಣ ಮಾಡಲು ಹವಣಿಸಿದ್ದ ಲಲ್ಲಿಯನನ್ನು ಸೋಲಿಸಲು, ಸಾಮ್ರಾಜ್ಯದ ಪುನರ್ವ್ಯವಸ್ಥೆ ಮಾಡಲು ನೆರವಾದನು. ಮುಮ್ಮಡಿ ಕೃಷ್ಣನ ಸಹಾಯದಿಂದ ಬೂತುಗನು ತೊಂಡಮಂಡಲವನ್ನು ಆಕ್ರಮಿಸಿಕೊಂಡು ಕಂಚಿ, ತಂಜಾವೂರು ಮತ್ತು ನಲ್ಲಕೋಟೆಗಳನ್ನು ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡನು.

ಕೀರ್ತಿವಂತರಾದ ತನ್ನ ಪೂರ್ವಜರಂತೆಯೇ ಬೂತುಗನು ಸಹ, ಉದಾರವಾದ ಆಡಳಿತನೀತಿಯನ್ನೇ ಅನುಸರಿಸಿದನು. ಜೈನಧರ್ಮಶಾಸ್ತ್ರಗಳಲ್ಲಿ ಅವನು ವಿಶೇಷಪಾಂಡಿತ್ಯ ಹೊಂದಿದ್ದನು. ಅವನನಂತರ ಪಟ್ಟಕ್ಕೆ ಬಂದವನು ಅವನ ಮಗ ಮಾರಸಿಂಹ. ಗಂಗವಾಡಿಯ ಇತಿಹಾಸದಲ್ಲಿ ಗುಟ್ಟಿಯ ಗಂಗ ಮತ್ತು ನೊಳಂಬಾಂತಕನೆಂದು ಈ ಮಾರಸಿಂಹನು ಪ್ರಸಿದ್ಧನಾಗಿದ್ದಾನೆ. ಅವನ ಆಳ್ವಿಕೆಯು ಮುತ್ತಿಗೆ, ದಂಡಯಾತ್ರೆ ಮತ್ತಿತರ ರಣರಂಗಕಾರ್ಯಗಳಿಂದ ತುಂಬಿಹೋಗಿತ್ತು. ಅನಂತರ ಗುರ್ಜರರ ಆಕ್ರಮಣದಿಂದ ಕಲಚೂರಿಯರನ್ನು ರಕ್ಷಿಸಲು ಮುಮ್ಮಡಿಕೃಷ್ಣನು ಗುಜರಾತಿನ ಮೇಲೆ ನಡೆಸಿದ ದಂಡಯಾತ್ರೆಗೆ ಮಾರಸಿಂಹನನ್ನೇ ನಾಯಕನನ್ನಾಗಿ ಆರಿಸಲಾಗಿತ್ತು. ಗುರ್ಜರರನ್ನು ಸೋಲಿಸಿದನಂತರ ಮಾರಸಿಂಹನು "ಗುರ್ಜರಾಧಿರಾಜ" ನೆನಿಸಿಕೊಂಡನು. ಅಲ್ಲದೆ, ಮಾರಸಿಂಹನು ಪಾತಾಳಮಲ್ಲನ ಕಿರಿಯ ಸಹೋದರ ವಜ್ಜಲನನ್ನು ಸೋಲಿಸಿ, ಬನವಾಸಿ ರಾಜ್ಯಾಧಿಪತಿಯ ಸಕಲಸಂಪತ್ತನ್ನೂ ನಗನಾಣ್ಯಗಳನ್ನೂ ಆನೆ ಪಡೆಗಳನ್ನು ಸಹ ವಶಪಡಿಸಿಕೊಂಡನೆಂದು ಶಾಸನಗಳು ತಿಳಿಸುತ್ತವೆ. ಈ ಅಂಶಗಳು ಮಾರಸಿಂಹನು ಎಂಥ ಸ್ವಾಮಿನಿಷ್ಠ ಸಾಮಂತನೆಂಬುದಕ್ಕೂ, ದಖನ್ನಿನಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ಆಧಾರ ಸ್ತಂಭ ನೆಂಬುದಕ್ಕೂ ಸಾಕ್ಷಿಯಾಗಿವೆ. ಮಾರಸಿಂಹನು ಚೋಳರಾಜ ರಾಜಾದಿತ್ಯನ ಮೇಲೆ ಯುದ್ಧಮಾಡಿ, ಅವನನ್ನು ಸೋಲಿಸಿ, ಉಚ್ಚಂಗಿಯ ಪರ್ವತ ಕೋಟೆಯನ್ನು ವಶಪಡಿಸಿಕೊಂಡನು. ಅವನು ಅನೇಕ ಯುದ್ಧಗಳಲ್ಲಿ ಕಾದಾಡಿ ಹಲವಾರು ಚಿಕ್ಕಪುಟ್ಟ ಪಾಳೆಯಗಾರರ ದಂಗೆಯನ್ನು ಅಡಗಿಸಿದನು. ಕ್ರಿ.ಶ. 966ರಲ್ಲಿ ರಾಷ್ಟ್ರಕೂಟರ ಮುಮ್ಮಡಿಕೃಷ್ಣನ ಅವಸಾನದನಂತರದ ಸ್ಥಿತಿಗತಿಗಳು ರಾಷ್ಟ್ರಕೂಟ ಸಾಮ್ರಾಜ್ಯದ ಏಕತೆಗೆ ಅನುಕೂಲವಾಗಿರಲಿಲ್ಲ. ಬೂತುಗ ಮತ್ತು ಮಾರಸಿಂಹನ ಪ್ರಬಲ ನೆರವಿನಿಂದ ಮುಮ್ಮಡಿ ಕೃಷ್ಣನು ಶ್ರಮದಿಂದ ಕಟ್ಟಿದ್ದ ರಾಷ್ಟ್ರಕೂಟ ಮಹಾಸಾಮ್ರಾಜ್ಯದಿಂದ, ಹಲವಾರು ಸಣ್ಣಪುಟ್ಟ ರಾಜ್ಯಗಳು ಹುಟ್ಟಿಕೊಂಡು, ತಮ್ಮ ಸ್ವಾತಂತ್ರ್ಯವನ್ನು ಸಾರಿದವು. ಯಾವೊಂದು ನೀತಿಧರ್ಮದಿಂದಲೂ ಈ ರಾಜ್ಯಗಳು ಒಂದಾಗಿರಲಿಲ್ಲ. ಕೃಷ್ಣನು ಮರಣಹೊಂದಿ ಎಂಟುವರ್ಷಗಳ ವರೆಗೆ ಮಾತ್ರ ಅವನ ಉತ್ತರಾಧಿಕಾರಿಯು ಮಾರಸಿಂಹನ ಅವಿಶ್ರಾಂತ ನೆರವಿನಿಂದ, ರಾಷ್ಟ್ರಕೂಟರ ಪರಮಾಧಿಕಾರವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಅನಂತರ ಉತ್ತರದಲ್ಲಿ ಪರಮಾರರು ಮತ್ತು ಚೇದಿವಂಶದವರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು. ಕೊಂಕಣದ ಶಿಲಾಹಾರರು, ಸೌಂದತ್ತಿಯ ರಟ್ಟರು ಮತ್ತು ಯಾದವರು ಸ್ವತಂತ್ರರಾದರು. ಕೃಷ್ಣನನಂತರ ಬಂದ ರಾಷ್ಟ್ರಕೂಟ ಅರಸರು ದುರ್ಬಲರಾದುದರಿಂದ, ಚಾಲುಕ್ಯವಂಶಕ್ಕೆಸೇರಿದ ಎರಡನೆಯ ತೈಲನ ಆಕ್ರಮಣಾಕಾಂಕ್ಷೆಗೆ ಅನುಕೂಲವಾಯಿತು. ರಾಷ್ಟ್ರಕೂಟರ ರಾಜ್ಯಗಳು ಹರಿದು ಹಂಚಿಹೋದುದರಿಂದ, ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು, ರಾಷ್ಟ್ರಕೂಟರ ಸ್ನೇಹವನ್ನವಲಂಬಿಸಿದ್ದ ಮಾರಸಿಂಹನಿಗೆ ಬಹಳ ತೊಂದರೆಯುಂಟಾಯಿತು.

ಆದರೂ ಮೊದಲನೆಯ ಮಹೇಂದ್ರನ ವಂಶಜನಾದ ನೊಳಂಬ ಮಾರಸಿಂಹನ ವಿರುದ್ಧ ಮಾರ ಸಿಂಹನು ಏಕಾಂಗಿಯಾಗಿ ಯುದ್ಧಮಾಡಿ, ನೊಳಂಬ ಸೈನ್ಯವನ್ನು ನಾಶಮಾಡಿ, 'ನೊಳಂಬ ಕುಲಾಂತಕ' ನೆಂಬ ವಿಶೇಷ ಬಿರುದನ್ನು ಪಡೆದನು.

ಆದರೆ ಮಾರಸಿಂಹನ ಸಾಧನೆ ಬಹುಕಾಲ ಉಳಿಯಲಿಲ್ಲ. ಅವನು ಯೋಜನೆಯಲ್ಲಿ ರಾಜ್ಯಗಳನ್ನು ಗೆಲ್ಲುವುದಕ್ಕೆ ಹೆಚ್ಚು ಮಹತ್ವಕೊಟ್ಟು, ಗೆದ್ದರಾಜ್ಯಗಳ ಸಂಘಟನೆಗೆ ಗಮನ ನೀಡಲಿಲ್ಲ. ಈ ಕಾರಣದಿಂದಲೇ ಅವನು ನಿರ್ಮಿಸಿದ್ದ ಪ್ರಬಲರಾಜ್ಯ ದುರ್ಬಲ ಉತ್ತರಾಧಿಕಾರಿಗಳಿಂದಾಗಿ ಅತಿ ಶೀಘ್ರವಾಗಿ ಮುರಿದು ಮೂರಾಬಟ್ಟೆಯಾಯಿತು.

ಕ್ರಿ. ಶ. 974 ರಲ್ಲಿ ಮಾರಸಿಂಹನ ಮರಣಾನಂತರ, ಹಲವಾರು ಹಳ್ಳಿಗಳ ಅಧಿಪತಿಯಾದ ಪಾಂಚಾಲ ದೇವನು ಸ್ವತಂತ್ರನಾಗಿ, ತಾನೇ ರಾಜನೆಂದು ಸಾರಿದನು. ಆದರೆ ಚಾವುಂಡರಾಯನೆಂಬ ಗಂಗರ ಮಂತ್ರಿಯು ಎಲ್ಲಾ ವೈರಿಗಳನ್ನು ಸೋಲಿಸಿ, ಅಡ್ಡಿ ಆತಂಕಗಳನ್ನು ನಿವಾರಿಸಿ, ನಾಲ್ಕನೆಯ ರಾಜಮಲ್ಲನು ಪಟ್ಟಕ್ಕೆ ಬರಲು ಅವಕಾಶ ಮಾಡಿಕೊಟ್ಟನು.

ಗಂಗರಸರ ಇತಿಹಾಸದಲ್ಲಿ ಚಾವುಂಡರಾಯನ ಪಾತ್ರ ವೈಶಿಷ್ಟ್ಯಪೂರ್ಣವಾದುದು. ಅವನು ಗಂಗ ರಾಜ್ಯಕ್ಕೆ ಸಲ್ಲಿಸಿದ ಪ್ರಾಮಾಣಿಕ ಹಾಗೂ ವಿಶೇಷ ಸೇವೆ ಆ ವಂಶದ ಇತಿಹಾಸದಲ್ಲೇ ಅಪೂರ್ವ. ಮಾರ ಸಿಂಹನ ಮರಣಾನಂತರ, ದುರಾಕ್ರಮಣ ಮಾಡಿ, ಸಿಂಹಾಸನವನ್ನೇರಲು ಪ್ರಯತ್ನಿಸಿದವರನ್ನೆಲ್ಲಾ ಅವನು ಸದೆಬಡಿದನು. ರಾಜ್ಯದ ನೆರೆಹೊರೆಯ ಶತ್ರುಗಳ, ಸಾಮಂತರು ಮತ್ತಿತರ ಅಧಿಕಾರಿಗಳ ವಿರುದ್ಧ ಅವನು ಸತತವಾಗಿ ಹೋರಾಡಿದನು. ಅಪ್ರತಿಮ ಸೇನಾನಿ ಹಾಗೂ ರಾಜಕಾರಣಿಯಾಗಿದ್ದರೂ, ಚಾವುಂಡರಾಯ ವಿದ್ಯಾಪ್ರಿಯನಾಗಿ, ತರ್ಕ, ವ್ಯಾಕರಣ, ಗಣಿತ, ವೈದ್ಯಶಾಸ್ತ್ರ ಮತ್ತು ಸಾಹಿತ್ಯಗಳಲ್ಲಿ ಪಾರಂಗತನಾದನು. ಅವನು ನಿಷ್ಠ ಜೈನಮತಸ್ಥನಾಗಿದ್ದು ಚಾವುಂಡರಾಯ ಪುರಾಣವನ್ನು ರಚಿಸಿದನು. ಕ್ರಿ ಶ. 973 ರಲ್ಲಿ ಶ್ರವಣಬೆಳಗೊಳದಲ್ಲಿ, ಗೋಮಟೇಶ್ವರನ ಬೃಹದಾಕೃತಿಯ ಪ್ರತಿಮೆಯನ್ನು ನಿರ್ಮಿಸಿದವನು ಚಾವುಂಡ ರಾಯ.

ನಾಲ್ಕನೆಯ ರಾಜಮಲ್ಲನ ಮರಣಾನಂತರ ಅವನ ಸಹೋದರ ರಕ್ಕಸಗಂಗ ಕ್ರಿ. ಶ. 985 ರಲ್ಲಿ ಸಿಂಹಾಸನವನ್ನೇರಿದನು. ಅವನ ಆಳ್ವಿಕೆಯ ಮೊದಲ ಕೆಲವು ವರ್ಷಗಳು ಶಾಂತಿಯುತವಾಗಿದ್ದು, ಅವನು ರಚನಾತ್ಮಕ ಕಾರ್ಯಗಳಲ್ಲಿ ನಿರತನಾಗಿದ್ದನು. ಕ್ರಿ. ಶ. 985 ರಿಂದ 1024ರ ವರೆಗೆ ರಾಜ್ಯವಾಳಿದ ರಕ್ಕಸ ಗಂಗನು, ಪ್ರಾರಂಭದಲ್ಲಿ ಸ್ವತಂತ್ರ ರಾಜನಾಗಿಯೂ ಅನಂತರ ಚೋಳರ ಸಾಮಂತನಾಗಿಯೂ ಇದ್ದನು. ಏಕೆಂದರೆ, ಚಾವುಂಡರಾಯನ ಮರಣಾನಂತರ ಗಂಗರಾಜ್ಯದ ಶಕ್ತಿ ಸಂಬದ್ಧತೆಗಳು ಮಾಯವಾಗಿದ್ದವು.

ಕ್ರಿ. ಶ. 990 ರನಂತರ ಪ್ರಬಲರಾದ ಚೋಳರು ಮತ್ತು ಚಾಲುಕ್ಯರು ರಾಜ್ಯವಿಸ್ತರಣೆಯಲ್ಲಿ ನಿರತರಾದುದರಿಂದ, ಗಂಗರಸರು ಪ್ರಬಲರಾದ ಶತ್ರುಗಳನ್ನೆದುರಿಸಬೇಕಾಯಿತು. ರಾಷ್ಟ್ರಕೂಟರು ಮತ್ತು ಪಲ್ಲವರಂತೆ, ಸಾಧಾರಣವಾದ ಸಾಮಂತರಲ್ಲಿ ತೃಪ್ತಿಹೊಂದದೆ ಚೋಳರು ಗಂಗವಾಡಿಯನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಹವಣಿಸಿದರು. ಕ್ರಿ.ಶ. 1004ರಲ್ಲಿ ರಾಜೇಂದ್ರ ಚೋಳನು ತಲಕಾಡನ್ನು ವಶಪಡಿಸಿಕೊಂಡು ಗಂಗಪರಮಾಧಿಕಾರವನ್ನು ನಿರ್ಮೂಲಮಾಡಿದನು.

ಹೀಗೆ ಗಂಗರಾಜ್ಯವು ಕ್ರಮೇಣ ಛಿದ್ರಛಿದ್ರವಾದರೂ, ಅದು ಇತಿಹಾಸದ ಪುಟಗಳಿಂದ ಮರೆಯಾಗಲಿಲ್ಲ. ಕೆಲವು ಕಾಲಾನಂತರ ಗಂಗರಸರು ಚಾಲುಕ್ಯರೊಂದಿಗೆ ವಿವಾಹಸಂಬಂಧ ಬೆಳೆಸಿದರು. ಚೋಳರ ಆಳಿಕೆಯಲ್ಲಿ ಅವರು ಕೋಲಾರ ಜಿಲ್ಲೆಯಲ್ಲಿ ಅಧಿಕಾರಹೊಂದಿದ್ದರು. ಗಂಗರಸರಲ್ಲೊಬ್ಬನು ಸ್ವತಂತ್ರನಾಗಿ, ಶಿವನಸಮುದ್ರದಲ್ಲಿ ಒಂದು ಸಣ್ಣಪಾಳೆಯಪಟ್ಟವನ್ನು ಸ್ಥಾಪಿಸಿದನು. ಆದರೆ ಅದು ಕೆಲವು ಕಾಲದನಂತರ ತಲಕಾಡಿನ ಶ್ರೀರಂಗರಾಜನ ರಾಜ್ಯದಲ್ಲಿ ವಿಲೀನಗೊಂಡಿತು.

# ಗಂಗರ ವಂಶಾವಳಿ

- ಪದ್ಮನಾಭ
  - ದಡಿಗ
    - 2. ಎರಡನೇ ಮಾಧವ
      - 3. ಹರಿವರ್ಮ
        - 4. ವಿಷ್ಣುಗೋಪ
          - ಪೃಥಿವಿ ಗಂಗ
            - 5. ಮೂರನೆಯ ಮಾಧವ
              - 6. ಅವಿನೀತ
                - 7. ಒಬ್ಬ ಮಗ
                - 8. ದುರ್ವಿನೀತ
                  - 9. ಮುಷ್ಕರ
                    - 10. ಶ್ರೀ ವಿಕ್ರಮ
                      - 11. ಭೂವಿಕ್ರಮ
                      - 12. ಶಿವಮಾರ
                        - ಎರೆಗಂಗ
                          - 13. ಶ್ರೀ ಪುರುಷ
                            - 14. ಶಿವಮಾರ II
                            - ವಿಜಯಾದಿತ್ಯ
                              - ಮಾರಸಿಂಹ ದುರ್ವಿನೀತ
                              - ದಂಡಿಕ
                                - ಮೊದಲನೆ ಪೃಥಿವಿಪತಿ
                                  - ಎರಡನೆ ಮಾರಸಿಂಹ
                                    - ಎರಡನೆ ಪೃಥಿವಿಪತಿ
                                      - 17. ಎರಡನೆ ರಾಜಮಲ್ಲ
                                      - ಬೂತುಗೇಂದ್ರ
                                        - 18. ಎರೆಯಪ್ಪ
                                          - ಎರಡನೆ ನೀತಿಮಾರ್ಗ
                                            - 19. ನರಸಿಂಹದೇವ
                                            - 20. ಮೂರನೆ ರಾಜಮಲ್ಲ ಶುಭೋದಯ
                                              - ಎರೆಯಂಗ
                                                - ಒಬ್ಬ ಮಗ
                                                  - ಕೈಗೊಟ್ಟ ರಾಚಮಲ್ಲ
                                            - ಕಾಂಬಬ್ಬೆ
                                            - 21. ಎರಡನೆ ಬೂತುಗ
                                              - 22. ಮೂರನೆ ಮಾರಸಿಂಹ
                                                - 23. ನಾಲ್ಕನೆ ರಾಚಮಲ್ಲ
                                                  - ಸತ್ಯವಾಗೀಶ
                                                - 24. ರಕ್ಕಸಗಂಗ
                                                  - 25. ಎರಡನೆ ನೀತಿಮಾರ್ಗ
                              - 15. ರಾಜಮಲ್ಲ ಸತ್ಯವಾಕ್ಯ
                                - 16. ಒಂದನೆ ನೀತಿಮಾರ್ಗ
        - ಸಿಂಹವರ್ಮ
  - 1. ಮಾಧವ I

ಮೂಲ ಲೇಖಕರು : ಡಾ॥ ಎಂ. ವಿ. ಕೃಷ್ಣರಾವ್
ಅನುವಾದಕರು : ಶ್ರೀ ಕೆ. ಟಿ. ರಾಮಸ್ವಾಮಿ

# ಬಾಣರು

ಪೂರ್ವ ಮೈಸೂರು ಮತ್ತು ಪಶ್ಚಿಮ ಆಂಧ್ರಮಂಡಲದ ಮಧ್ಯೆ ಏಳೂವರೆ ಲಕ್ಷ ಪ್ರಾಂತವನ್ನು "ಮಹಾವಲಿ" ಎಂದೂ ಕರೆಯಲ್ಪಡುವ ಬಾಣರು ಆಳುತ್ತಿದ್ದರು. ಇವರು ಪ್ರಾಚೀನ ವಂಶಕ್ಕೆ ಸೇರಿದವರು. ಬಾಣರ ಅನೇಕ ಶಾಸನಗಳು ಈ ಸ್ಥಳಗಳಲ್ಲಿ ಅದರಲ್ಲಿಯೂ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ದೊರೆತಿವೆ. ಬಾಣರ ರಾಜ್ಯ ಪಾಲಾರ್‌ನದಿಯ ಉತ್ತರ ಮತ್ತು ಪೂರ್ವ ಭಾಗದಲ್ಲಿತ್ತು. ಕ್ರಿಸ್ತಶಕದ ಪ್ರಾರಂಭದಲ್ಲಿ ರಾಜಕೀಯ ಶಕ್ತಿಯಾಗಿ ತಲೆಯೆತ್ತಿದ ಬಾಣರು ಹತ್ತನೆ ಶತಮಾನದ ವರೆಗೆ ರಾಜಕೀಯ ರಂಗದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಬನವಾಸಿಯ ಕದಂಬರಿಗೆ ಮೊದಲು ಅಧೀನರಾಗಿದ್ದು, ರಾಜಕೀಯ ಸ್ಥಿತಿಗತಿಗಳು ಬದಲಾಯಿಸಿದಂತೆಲ್ಲಾ ಬಾಣರು ತಮ್ಮ ಪ್ರಭುಗಳನ್ನು ಬದಲಾಯಿಸಿಕೊಂಡು ಹೋದರು[1]. ವಾತಾಪಿ ಅಥವಾ ಬಾದಾಮಿ ಚಾಳುಕ್ಯರಿಗೆ, ಮಾನ್ಯಖೇಟದ ರಾಷ್ಟ್ರಕೂಟರಿಗೆ, ಕಾಂಚಿಯ ಪಲ್ಲವರಿಗೆ, ಹೀಗೆ ಒಬ್ಬರಾದ ಮೇಲೊಬ್ಬರಿಗೆ ಅಧೀನರಾಗುತ್ತಾ ಬಂದರು. ಕಡೆಗೆ ಚೋಳರಾಜ ಒಂದನೇ ಪರಾಂತಕನು (ಕ್ರಿ. ಶ. 907–962) ಬಾಣರನ್ನು ಸಂಪೂರ್ಣವಾಗಿ ಸೋಲಿಸಿದನು. ಆಗ ಬಾಣರ ರಾಜವಂಶವೊಂದು ಉತ್ತರಕ್ಕೆ ಹೋಗಿ ಚೋಳ ಸಾಮ್ರಾಜ್ಯದ ಉತ್ತರ ಗಡಿಯಿಂದಾಚೆ ಆಂಧ್ರದೇಶದಲ್ಲಿ ರಾಜ್ಯವೊಂದನ್ನು ಕಟ್ಟಿತು. ಬಾಣರ ಮತ್ತೊಂದು ಶಾಖೆ ಚೋಳರಾಜರ ಪ್ರಭುತ್ವವನ್ನು ಒಪ್ಪಿಕೊಂಡು ಉನ್ನತ ಅಧಿಕಾರಗಳಲ್ಲಿ ತನ್ನ ಸೇವೆಯನ್ನು ಸಲ್ಲಿಸಿತು. ಚೋಳರ ಪ್ರಾಬಲ್ಯ ನಶಿಸಿಹೋಗಿ ಪಾಂಡ್ಯರು ತಲೆಯೆತ್ತಿದಾಗ ಬಾಣರು ಅವರಿಗೆ ಸಾಮಂತರಾಜರಾಗಿದ್ದರು. ಬಾಣರು ದೀರ್ಘಕಾಲದ ಇತಿಹಾಸವನ್ನು ಪಡೆದಿದ್ದರೂ ಕರ್ಣಾಟಕದಲ್ಲಿ ಸಾಮ್ರಾಟರ ಪದವಿಗೆ ಎಂದೂ ಏರಲಿಲ್ಲ.

ಬಾಣರು ಪುರಾಣದ ಕಥೆಯಲ್ಲಿ ಉಕ್ತವಾಗಿರುವಂತೆ–ವಾಮನ ಅವತಾರದಲ್ಲಿ ವಿಷ್ಣುವು ಪಾತಾಳಕ್ಕೆ ತಳ್ಳಿದ ವಿರೋಚನನ ಮಗನೂ, ಪ್ರಹ್ಲಾದನ ಮೊಮ್ಮಗನೂ ಆದ ಮಹಾಬಲಿ ಚಕ್ರವರ್ತಿಯ ವಂಶಜರು[2].

ಮಹಾವಲಿಯರ ಕ್ರಿ. ಶ. 339ರ ಪ್ರಾಚೀನ ಶಾಸನವು ಮುಳಬಾಗಿಲು ತಾಲೂಕಿನಲ್ಲಿರುವ ಮುದನೂರಿನಲ್ಲಿ ದೊರೆತಿದೆ. ಅದರೆ 'ಶಿಲಪ್ಪದಿಕಾರಂ' ಮತ್ತು 'ಮಣಿಮೇಖಲೈ' ಎಂಬ ತಮಿಳು ಕೃತಿಗಳಲ್ಲಿ ಬಾಣರ ವಂಶದ ಉಲ್ಲೇಖವಿದೆ. ಪೆರುಂಬನಪ್ಪಾಡಿ ಅಥವಾ ಬಾಣರ ರಾಜ್ಯದಲ್ಲಿರುವ ವಾನಪುರಂ[3] (ಬಾಣಪುರಂ) ಎಂಬ ಸ್ಥಳದ ವರ್ಣನೆ ಕೋಲಾರ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಉಕ್ತವಾಗಿದೆ. ಕದಂಬರ ದೊರೆ ಶ್ರೀಪರ್ವತನು ಬಾಣರ ದೊರೆಯಿಂದ ಕಪ್ಪಕಾಣಿಕೆಗಳನ್ನು ಪಡೆದುದು, ಗಂಗರ ಮೊದಲನೆ ದೊರೆ ಬಾಣರ ರಾಜ್ಯವನ್ನು ಗೆದ್ದುದು, ಏಳನೆ ಶತಮಾನದಲ್ಲಿ ಆಳುತ್ತಿದ್ದ ಚಾಳುಕ್ಯ ದೊರೆ ಮೊದಲನೆ ವಿಕ್ರಮಾದಿತ್ಯನು ಮಹಾವಲಿ ವಂಶದ ರಾಜಮಲ್ಲನನ್ನು ಅಪಜಯಗೊಳಿಸಿದುದು, ಒಂಬತ್ತನೆಯ ಶತಮಾನದ ಅಂತ್ಯದಲ್ಲಿ ಬಾಣರನ್ನು ಚೋಳದೊರೆ ವೀರನಾರಾಯಣನು ನಿರ್ಮೂಲಗೊಳಿಸಿದುದು ಮತ್ತು ಗಂಗರ ದೊರೆ ಹಸ್ತಿಮಲ್ಲನು ಬಾಣರ ರಾಜ್ಯವನ್ನು ಅವರಿಗೆ ಹಿಂತಿರುಗಿಸಿ ಕೊಟ್ಟುದು– ಈ ಅಂಶಗಳೆಲ್ಲಾ ನಿರೂಪಿತವಾಗಿವೆ[4].

ದೊರೆತಿರುವ ಬಾಣರ ಶಾಸನಗಳಿಂದ ಮತ್ತು ಸಮಕಾಲೀನ ರಾಜಕೀಯ ಶಕ್ತಿಗಳೊಡನೆ ಅವರು ಬೆಳೆಸಿದ್ದ ಸಂಬಂಧದಿಂದ ತಿಳಿದುಬರುವುದೇನೆಂದರೆ: ಪ್ರಾರಂಭದಶೆಯಲ್ಲಿ ದಖನ್ನಿನ ದಕ್ಷಿಣ ತುದಿಯ ಚಿಕ್ಕ ಭಾಗದಲ್ಲಿ ಬಾಣರು ಒಂದು ಸಣ್ಣ ಗುಂಪಾಗಿ ವಾಸಿಸುತ್ತಿದ್ದರು. ಅವರ ರಾಜ್ಯವು ಪುದಲಿ, ಪುದಲ್‌ನಾಡ್

ವಿಷಯ ಅಥವಾ ಮಹಾವಿಷಯ, ಎಂದು ಕರೆಯಲ್ಪಡುವ ಆ ಭಾಗ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು, ಕೋಲಾರ ತಾಲೂಕು, ಮರುಕರ ವಿಷಯ[5], ಗುಬ್ಬಿ ತಾಲೂಕು—ಕೈವಾರ ವಿಷಯ[6], ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲೂಕುಗಳನ್ನು ಒಳಗೊಂಡಿತ್ತು. ಪೂರ್ವದಲ್ಲಿ ಶ್ರೀಪರ್ವತ ಬೆಟ್ಟದ ವರೆಗೆ (ಕರ್ನೂಲ್ ಜಿಲ್ಲೆ) ಮತ್ತು ಆಗ್ನೇಯದಲ್ಲಿ ಚಿತ್ತೂರ್ ಜಿಲ್ಲೆಯ ಪಶ್ಚಿಮ ಭಾಗದ ವರೆಗೆ ಬಾಣರ ರಾಜ್ಯ ಹಬ್ಬಿತ್ತು. ದಟ್ಟವಾದ ಕಾಡು, ಕಲ್ಲುಬಂಡೆಗಳಿಂದ ಕೂಡಿದ ಮೈಸೂರು ಪ್ರಸ್ಥಭೂಮಿ ಮತ್ತು ಪೂರ್ವಘಟ್ಟಗಳನ್ನು ದಾಟಿ ಬಾಣರ ರಾಜ್ಯಕ್ಕೆ ಹೋಗಲಸಾಧ್ಯವಾಗಿದ್ದುದರಿಂದ ಮೆಗಾಸ್ತನೀಸನ ಇಂಡಿಕದಲ್ಲಿಯಾಗಲೀ, ಅಶೋಕನ ಶಾಸನಗಳಲ್ಲಿಯಾಗಲೀ ಇವರ ರಾಜ್ಯದ ಉಲ್ಲೇಖ ಕಂಡುಬರುವುದಿಲ್ಲ. ತಮಿಳು ಶಾಸನದಲ್ಲಿ ಉಲ್ಲೇಖಿಸಿರುವ ಪೆರುಂಬನಪ್ಪಾಡಿ ಎಂಬ ಪದ ಕದಂಬರ ದೊರೆ ಕಾಕುತ್ಥ್ಸವರ್ಮನ ತಾಳಗುಂದ ಶಾಸನದಲ್ಲಿ ಉಕ್ತವಾಗಿರುವ "ಬೃಹತ್‌ಬಾಣ" ಎಂಬ ಪದದ ತಮಿಳಿನ ಸ್ವರೂಪವಾಗಿದೆ[7]. ಇದನ್ನು ವಡುಗವಲ್ಲಿ 1,200 ಎಂದು ಕರೆಯಲಾಗಿದೆ. "ವಡುಗವಲ್ಲಿ ಮೇರ್‌ಕು" ಎಂಬ ಪದ ಸಂಸ್ಕೃತದಲ್ಲಿ "ಉತ್ತರ ಪಶ್ಚಿಮತಃ" ಎಂಬ ಅರ್ಥವನ್ನು ಕೊಡುತ್ತದೆ[8] ಇವುಗಳೆಲ್ಲಾ ಆಂಧ್ರ ಪಶ್ಚಿಮಕ್ಕಿರುವ ಆಂಧ್ರಪಥ[9] ಎಂದು ಕರೆಯುವ ಭಾಗಕ್ಕೆ ಅನ್ವಯಿಸುತ್ತವೆ.

ಬಾಣರು ಮೊದಲು ಶಾತವಾಹನರ, ಪಲ್ಲವ ರಾಜರ ಸಾಮಂತರಾಗಿದ್ದರು. ಆದರೆ ಏಳನೆ ಶತಮಾನ ದಲ್ಲಿ ದಕ್ಷಿಣದಲ್ಲಿ ಚಾಳುಕ್ಯರ ಪ್ರಾಬಲ್ಯ ಹೆಚ್ಚಿದಂತೆಲ್ಲಾ ಬಾಣರು ಇನ್ನೂ ದಕ್ಷಿಣಕ್ಕೆ ತಳ್ಳಲ್ಪಟ್ಟರು. ಬಾಣರ ಮೂಲ ರಾಜಧಾನಿ ಪರಿಯಪುರಿ ಅಥವಾ ವಂಗಿಪುರ, ಅಂದರೆ ಅನಂತಪುರ ತಾಲೂಕಿನಲ್ಲಿರುವ ಪರಿಗಿ ಎಂಬುದು[10]. ಬಾಣರ ಪ್ರಾಬಲ್ಯ ದಕ್ಷಿಣ ಆರ್ಕಾಟ್ ಜಿಲ್ಲೆಯ ವರೆಗೆ ವ್ಯಾಪಿಸಿತ್ತೆಂಬ ಅಂಶ ಜೈನ ಜಗದ್ವಿವರಣೆ ಕೊಡುವ "ಲೋಕವಿಭಾಗ" ಎಂಬುದರಲ್ಲಿ ಉಕ್ತವಾಗಿದೆ. ಅದನ್ನು ಇದ್ದ ಹಾಗೆಯೇ ಬರೆದ ಪಾಟಲಿಕ ಗ್ರಾಮದ ಜೈನಮುನಿ ಸರ್ವನಂದಿ ಎಂಬವನು ಇದನ್ನು ಬಾಣರಾಷ್ಟ್ರವೆಂದು ಕರೆದಿದ್ದಾನೆ. ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಪಾಟಲೀಪುರವೆಂದು ಗುರುತಿಸಲ್ಪಟ್ಟಿರುವ ಈ ಹಳ್ಳಿ ಏಳನೆ ಶತಮಾನದಲ್ಲಿ ಜೈನ ಬಸ್ತಿಗಳ ಕೇಂದ್ರಸ್ಥಾನವಾಗಿತ್ತೆಂದು ಪೆರಿಯಪುರಾಣದಿಂದ ತಿಳಿದು ಬರುತ್ತದೆ[11].

ಬೃಹದ್ಬಾಣ ಮತ್ತಿತರರಿಂದ ಮಯೂರಶರ್ಮನು ಕಪ್ಪಕಾಣಿಕೆಗಳನ್ನು ಪಡೆಯುತ್ತಿದ್ದನು. ಆಗ ಗಂಗರು ಪಲ್ಲವರ ಸಾಮಂತರಾಜರಾಗಿದ್ದರೆಂದು ಗಂಗರ ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಕದಂಬರ ಪ್ರಾಬಲ್ಯವನ್ನು ತಡೆಗಟ್ಟುವ ಉದ್ದೇಶದಿಂದ ಕೊಂಗುಣಿವರ್ಮ ಗಂಗನನ್ನು (ಕ್ರಿ. ಶ.390–424) ಪಲ್ಲವರ ದೊರೆಗಳು ಬಾಣರ ರಾಜ್ಯವನ್ನು ವಶಪಡಿಸಿಕೊಳ್ಳುವಂತೆ ಪ್ರಚೋದಿಸಿದರು. ಆಗ ಗಂಗರು ಪಲ್ಲವರ ಸಾಮಂತ ರಾಜರಾಗಿದ್ದರೆಂದು ಗಂಗರ ಶಾಸನಗಳಿಂದ ತಿಳಿದು ಬರುತ್ತದೆ[12].

ಪಲ್ಲವರ ಮಿತ್ರನಾದ ಕೊಂಗುಣಿ ವರ್ಮನು ಬಾಣರ ರಾಜ್ಯಕ್ಕೆ ಮುತ್ತಿಗೆ ಹಾಕಿ ಅವರನ್ನು ಸೋಲಿಸಿ ಕುಂತಲಪುರವನ್ನು ವಶಪಡಿಸಿಕೊಂಡನು. ಬಾಣರನ್ನು ಕೋಲಾರದಿಂದ ಓಡಿಸಿ ಅದನ್ನು ವಶಪಡಿಸಿ ಕೊಂಡುದು ಕೂಡ್ಲೂರ್ ಶಾಸನ, ಮಳವಳ್ಳಿಶಾಸನ, ದೇವನಹಳ್ಳಿ ಶಾಸನಗಳಲ್ಲಿ ಉಕ್ತವಾಗಿದೆ[13].

ಚಾಳುಕ್ಯ ಎರಡನೆ ಪುಲಕೇಶಿಯು (ಕ್ರಿ. ಶ. 608–642) ತನ್ನ ದಿಗ್ವಿಜಯದ ಕಾಲದಲ್ಲಿ ವೆಂಗಿ ದೇಶವನ್ನು ಗೆದ್ದು ಪಲ್ಲವರ ರಾಜ್ಯವನ್ನು ಮತ್ತು ಕಾಂಚಿಯನ್ನು ವಶಪಡಿಸಿಕೊಂಡು ಬಾಣರೊಡನೆ ವ್ಯವಹಾರ ನಡೆಸಿದಾಗ ಮತ್ತೆ ಏಳನೆ ಶತಮಾನದಲ್ಲಿ ಬಾಣರ ಇತಿಹಾಸ ಕರ್ನಾಟಕದಲ್ಲಿ ಪ್ರಾರಂಭ ವಾಗುತ್ತದೆ. ಸತ್ಯಾಶ್ರಯ ಪೃಥಿವೀವಲ್ಲಭ ಎರೆಯಿಟ್ಟಿಯಡಿಗಲ್ ಅವನು ಎಲುಪಟ್ಟು ಮತ್ತು ಸಿಮ್ಮಿಗೆ ಎಂಬ ಕದನಗಳಲ್ಲಿ ರಣವಿಕ್ರಮನನ್ನು ಸೋಲಿಸಿ ಬಾಣರಾಜವಿಷಯವನ್ನು ಪರಾಭವಗೊಳಿಸಿ, ಆ ಸ್ಥಳದ ಎಲ್ಲಾ ಹಳ್ಳಿಗಳಿಂದ ತೆರಿಗೆಗಳನ್ನು ಚಿನ್ನದ ರೂಪದಲ್ಲಿ ಪಡೆದ ಅಂಶವು ಅನಂತಪುರ ಜಿಲ್ಲೆಯ ಶಾಸನ

ದಲ್ಲಿ ಉಕ್ತವಾಗಿದೆ[14]. ಹಿಂತಿರುಗಿ ತಮ್ಮ ರಾಜ್ಯವನ್ನು ಪಡೆದ ಬಾಣರು ವಾತಾಪಿಯ ಚಾಳುಕ್ಯರಿಗೆ ಸಾಮಂತ ರಾಜರಾದರು. ಚಾಳುಕ್ಯ ಶ್ರೀವಲ್ಲಭ ಮಹಾರಾಜಾಧಿರಾಜನ ಶಾಸನವೊಂದರಲ್ಲಿ (ಪೆರ್ಬಾಣ) ಬೃಹತ್ ಬಾಣನ ವಂಶದ ಉಲ್ಲೇಖವಿದೆ. ಬಾಣರಾಜನೊಬ್ಬ ತಿರುಮರ ವಿಷಯದಲ್ಲಿ ರಾಜ್ಯವಾಳುತ್ತಿದ್ದಾಗ ಒಂದನೆ ಪೃಥಿವೀವಲ್ಲಭ ವಿಕ್ರಮಾದಿತ್ಯನು ಭೂಮಿಯನ್ನು ದಾನವಾಗಿ ಕೊಟ್ಟ ಅಂಶ ಅವನ ಮೊಮ್ಮಗ ವಿಜಯಾದಿತ್ಯ ಸತ್ಯಾಶ್ರಯನ ಶಾಸನದಲ್ಲಿ ಕಂಡುಬರುತ್ತದೆ[15]. ತಿರುಮರ ವಿಷಯ ಅಂದರೆ ಈಗಿನ ಗೂಟಿ ಮತ್ತು ಅನಂತಪುರ ಜಿಲ್ಲೆಯಲ್ಲಿರುವ ಜಮ್ಮಲಮಡಗು. ಈ ಶಾಸನದಲ್ಲಿ ಉಕ್ತವಾಗಿರುವ ಬಾಣ ರಾಜನು ವಿಜಯಾದಿತ್ಯನ ಶಾಸನವೊಂದರಲ್ಲಿ ಉಲ್ಲೇಖಿಸಿರುವ ಬಲಿಕುಲತಿಲಕ ಬಾಣರಾಜನ ಮಗನಾದ ವಿಕ್ರಮಾದಿತ್ಯ ಬಲೀಂದ್ರ ಬಾಣರಾಜನೇ. ಚಾಳುಕ್ಯರ ಒಡೆತನವನ್ನು ಒಪ್ಪಿಕೊಂಡ ಬಾಣರು ತಮ್ಮನ್ನು ತಾವೇ "ತರುಣವಸಂತಂ" ಮತ್ತು "ಸಾಮಂತ ಕೇಸರಿ" ಎಂದು ಹೆಮ್ಮೆಯಿಂದ ಹೇಳಿ ಕೊಳ್ಳುತ್ತಿದ್ದರು.

ಚಾಳುಕ್ಯ ಸತ್ಯಾಶ್ರಯ ವಿಜಯಾದಿತ್ಯನ (ಕ್ರಿ. ಶ. 696–733) ಕಾಲದಲ್ಲಿ ದಂಗೆ ಎದ್ದ ತಿರುಮರ ವಿಷಯದ ಪಾಳೆಯಗಾರರನ್ನು ಸದೆಬಡಿದ ಬಾಣರ ಸ್ವಾಮಿನಿಷ್ಠೆಯನ್ನು ಅನಂತಪುರ ಜಿಲ್ಲೆಯಲ್ಲಿರುವ ಕೆಲವು ಶಾಸನಗಳು ಸಾರುತ್ತವೆ. ತೆಲುಗು ಚೋಳರನ್ನು ಸೋಲಿಸಿ ಅವರನ್ನು ತಮ್ಮ ಆಧಿಪತ್ಯಕ್ಕೆ ಒಳಪಡಿಸಿಕೊಂಡ ಬಾಣರು "ರೇನಾಡು" ಎಂದು ಕರೆಯಲ್ಪಡುವ ಕಡಪದ ಮೇಲೆ ತಮ್ಮ ಅಧಿಕಾರವನ್ನು ಪ್ರಸರಿಸಿದರು. ಬಾಣರ ರಾಜವಂಶಕ್ಕೆ ಸೇರಿದ ಹಲವರು ದಂಡನಾಯಕರಾದ ಮಹಾಬಲಿ ಮನೆತನದ ಧವಲಯರಸ, ಹಂಬುಲಿಗೆಯ ಮಹಾಬಲಿವಂಶಕ್ಕೆ ಸೇರಿದ ಮಹಾಮಂಡಲೇಶ್ವರ ಚಿಕ್ಕರಸ—ಇವರುಗಳು ಮೂರು ಶತಮಾನಗಳ ಕಾಲ ಬ್ರಾಹ್ಮಣರಿಗೆ ಜಮೀನುಗಳನ್ನು ದಾನವಾಗಿ ಕೊಡುತ್ತಿದ್ದ ಅಂಶಗಳು ದಾನಶಾಸನಗಳಲ್ಲಿ ಉಕ್ತವಾಗಿವೆ.

**ಗಂಗ–ಬಾಣರ ಸಂಬಂಧಗಳು**

ಕಟವಪುರ ಬೆಟ್ಟದಲ್ಲಿ (ಶ್ರವಣ ಬೆಳಗೊಳ) ಒಬ್ಬ ಜೈನ ಗುರುವಿನ ಅವಸಾನ ಕಾಲದಲ್ಲಿ ದಿಂಡಿಗ ರಾಜನೆಂಬ ದೊರೆ ಹಾಜರಿದ್ದನೆಂದು ಶ್ರವಣಬೆಳಗೊಳ ಶಾಸನದಲ್ಲಿ[16] ಕಂಡುಬರುತ್ತದೆ. ಶಾಸನ ರಚಿತವಾದ ಕಾಲ ಕಂಡುಬರದಿದ್ದರೂ ಲಿಪಿಶಾಸ್ತ್ರದ ಆಧಾರದಿಂದ ಏಳನೆ ಶತಮಾನದ ಮಧ್ಯಭಾಗಕ್ಕೆ ಇದು ಸೇರಿದ್ದೆಂದು ನಿರ್ಧರಿಸಲಾಗಿದೆ. ಗಂಗರ ದೊರೆ ಶ್ರೀಪುರುಷನ (ಕ್ರಿ.ಶ. 726–778) ಕಾಲದಲ್ಲಿ ಕಳಬಪ್ಪುನಾಡನ್ನುಆಳುತ್ತಿದ್ದ ಬಾಣರ ವಂಶಕ್ಕೆ ಸೇರಿದ ದಿಂಡಿಗರೂರ್ ಎಂಬ ದಂಡನಾಯಕ ಬ್ರಹ್ಮಾದೇಯ ದಾನವನ್ನು ಮಾಡಿದನು. ಗಂಗರಾಜ ಎರಡನೆ ಪೃಥ್ವೀಪತಿಯ ಉದಯೇಂದಿರಂ ಶಾಸನದಲ್ಲಿ ಉಕ್ತವಾಗಿರುವ ದಿಂಡಿಗರಾಜ ದಿಂಡಿ ಅಥವಾ ದಿಂಡಿಗೇಂದ್ರನೇ ಇವನು. ರಾಷ್ಟ್ರಕೂಟ ಅಮೋಘವರ್ಷನು ದಂಡೆತ್ತಿ ಬಂದಾಗ ದಿಂಡಿಯ ಮಗನಲ್ಲೊಬ್ಬನಾದ ಇರಿಗನನ್ನು ಗಂಗರಾಜ ಮೊದಲನೆ ಪೃಥ್ವೀಪತಿ ರಕ್ಷಿಸಿದನೆಂಬ ಅಂಶವು ಇದೇ ಶಾಸನದಲ್ಲಿ ಕಂಡುಬರುತ್ತದೆ[17]

ಶಿವಮಾರನ ಕಾಲದಲ್ಲಿಯೂ ಕೂಡ (ಕ್ರಿ. ಶ. 679–725) ಬಾಣರು ಗಂಗರ ಸಾಮಂತರಾಗಿ ಮುಂದುವರಿಯುತ್ತಿದ್ದರು. ಶ್ರೀಪುರುಷನು ಪಟ್ಟಾಭಿಷಿಕ್ತನಾಗುವುದಕ್ಕೆ ಮುಂಚೆ, ಮಾಧವ ಮುತ್ತರಸನ ಕಾಲದಲ್ಲಿ ಪಾಲಾರ್ ನದಿಯ ಪಾತ್ರದಲ್ಲಿ ಬಾಣರ ರಾಜ್ಯದ ಪಕ್ಕಕ್ಕೇ ಇದ್ದ ಎಳೆನಗರ್‌ನಾಡು 70, ಅವನ್ಯನಾಡು 300, ಮತ್ತು ಪೊನ್‌ಕುಂಡ 12, ಇವುಗಳನ್ನೊಳಗೊಂಡ ಸ್ಥಳಕ್ಕೆ ಅಧಿಪತಿಯಾಗಿದ್ದನು. ಮುತ್ತರಸನು ಶತ್ರುಗಳಾದ ಬಾಣರ ಮೇಲೆ ದಂಡೆತ್ತಿಹೋಗಿ ಪರಮಗಲ್ ಪೃಥಿವೀ ನಿರ್ಗುಂಡರಾಜ, ಮತ್ತಿತರರ ಸಹಾಯದಿಂದ ಕೊಯಲ್‌ತೆರ್ (ಪುಂಗನೂರ್), ತಂಡೇಕಲ್

ಮತ್ತು ಮನಯುತೂರ್[18] ಕದನಗಳಲ್ಲಿ ಬಾಣರನ್ನು ಸೋಲಿಸಿದನು. ಈ ದಂಡಯಾತ್ರೆಯಲ್ಲಿಯೂ ವಾತಾಪಿಯ ಚಾಳುಕ್ಯದೊರೆ ಎರಡನೆ ಕೀರ್ತಿವರ್ಮನು ಕಾಂಚಿಯ ಪಲ್ಲವರ ಮೇಲೆ ನಡೆಸಿದ ಧಾಳಿಯಲ್ಲಿಯೂ ಶ್ರೀಪುರುಷನು ಭಾಗವಹಿಸಿ ಇವರುಗಳಿಗೆ ಸಹಾಯಮಾಡಿದನು. ಬಾಣರಸನು ಆಕ್ರಮಿಸಿ ಕೊಂಡಿದ್ದ ನೆಕ್ಕುಂಡಿಯನ್ನು ಇವನು ಧಾಳಿಮಾಡಿದಾಗ ಸ್ವಾಮಿನಿಷ್ಠನೊಬ್ಬನು ಬಾಣರಾಜನ ಪರವಾಗಿ ನಿಂತು ಶತ್ರುಗಳೊಡನೆ ಹೋರಾಡಿ ಮರಣವನ್ನಪ್ಪಿದನು. ಮಡಿದ ವೀರಪುರುಷನ ಸ್ಮಾರಕಕ್ಕಾಗಿ ಒಂದು ವೀರಗಲ್ಲನ್ನು ಸ್ಥಾಪಿಸಿದರು. ಈ ವಿವರಗಳನ್ನು ಕೊಡುವ ಚಿಂತಾಮಣಿ ತಾಲೂಕು ನೆಕ್ಕುಂಡಿಯಲ್ಲಿರುವ ವೀರಗಲ್ಲಿನಲ್ಲಿ ಮಡಿದ ಯೋಧನಿಗೆ ಕೊಟ್ಟ ಪ್ರಶಸ್ತಿಯ ಉಲ್ಲೇಖವಿದೆ[19]. ಬಾದಾಮಿ ಚಾಳುಕ್ಯರ ಚಕ್ರಾಧಿಪತ್ಯವನ್ನು ರಾಷ್ಟ್ರಕೂಟರು ಕೊನೆಗಾಣಿಸಿದರು. ರಾಷ್ಟ್ರಕೂಟರ ರಾಜ್ಯಸ್ಥಾಪನೆಗೆ ತಳಹದಿ ಹಾಕಿದ ಒಂದನೆಯ ಕೃಷ್ಣನು (ಕ್ರಿ.ಶ. 760–775) ಕ್ರಿ. ಶ. 768 ರಲ್ಲಿ ಗಂಗರ ರಾಜ್ಯಕ್ಕೆ ಮುತ್ತಿಗೆ ಹಾಕಿ ಅವರ ರಾಜಧಾನಿಯನ್ನಾಕ್ರಮಿಸಿದನು. ಈ ಸಂದಿಗ್ಧ ಸಮಯವನ್ನು ಉಪಯೋಗಿಸಿಕೊಂಡು ಬಾಣರು ತತ್‌ಕ್ಷಣ ಪಲ್ಲವರಾಜ ಒಂದನೆ ನಂದಿವರ್ಮಪಲ್ಲಮಲ್ಲನೊಡನೆ ಸ್ನೇಹಬೆಳೆಸಿದರು (ಕ್ರಿ. ಶ. 730-795). ನಂದಿವರ್ಮನು ಗಂಗವಾಡಿಗೆ ಮುತ್ತಿಗೆ ಹಾಕಿ ವಿಲಂದ ಎಂಬಲ್ಲಿ ಶ್ರೀಪುರುಷನನ್ನು ಸೋಲಿಸಿದನು. ಅಪಜಯಗೊಂಡ ಶ್ರೀಪುರುಷನು ಮೊದಲು ಗಂಗರಾಜ ಭೂವಿಕ್ರಮನಿಂದ ಸೆಳೆಯಲ್ಪಟ್ಟಿದ್ದ ಉಗ್ರೋದಯ ರತ್ನದಿಂದ ಖಚಿತವಾದ ಪಲ್ಲವರ ಹಾರವನ್ನು ಸಕಲ ಐಶ್ವರ್ಯದೊಂದಿಗೆ ಒಪ್ಪಿಸ ಬೇಕಾಯಿತು.[20] ಪಲ್ಲವರಿಗೆ ಮಾಡಿದ ಈ ಉಪಕಾರದ ಪ್ರತಿಫಲವಾಗಿ ಗಂಗರಾಜ ದುಗ್ಗಮಾರ ಎರೆಯಪ್ಪನ ಆಧಿಪತ್ಯಕ್ಕೆ ಸೇರಿದ್ದ ಗಂಗವಾಡಿ 6,000ನ್ನು ನಂದಿವರ್ಮನು ಬಾಣರಿಗೆ ಬಿಟ್ಟುಕೊಟ್ಟನು.[21]

ಪಲ್ಲವರ ಒಡೆತನವನ್ನು ಬಾಣರು ಒಪ್ಪಿಕೊಂಡರು. ಜಯನಂದಿವರ್ಮನ್‌ಬಾಣನು (ಎಂಟನೆ ಶತಮಾನದ ಉತ್ತರಾರ್ಧದಲ್ಲಿ ಪೆರುಂಬನಪ್ಪಾಡಿಯಲ್ಲಿ ಆಳಿದ ಜಯನಂದಿವರ್ಮನ್ ಬಾಣನು) ಬಾಣ ರಾಜರ ಐತಿಹಾಸಿಕ ಮೂಲಪುರುಷನಾದನು. ಒಡೆಯನ ನಾಮಧೇಯವನ್ನು ತಮ್ಮ ಹೆಸರೊಂದಿಗೆ ಸೇರಿಸಿಕೊಳ್ಳುವ ಮಧ್ಯಕಾಲೀನ ಯುಗದ ಪಾಳೆಯಗಾರಿಕೆ (ಫ್ಯೂಡಲಿಜಂ) ಪದ್ಧತಿಯಂತೆ ಈ ವಂಶದ ಮೂಲಪುರುಷನನ್ನು ನಂದಿವರ್ಮನ್ ಎಂದು ಕರೆಯಲಾಗಿದೆ.

ಜಯನಂದಿವರ್ಮನ ಆಳಿಕೆಯ ವರೆಗೆ ನಮಗೆ ಬಾಣರ ಇತಿಹಾಸಕ್ಕೆ ಹೆಚ್ಚು ಆಧಾರಗಳು ದೊರೆತಿಲ್ಲ. ಇವನನಂತರ ವಿಜಯಾದಿತ್ಯನು (ಕ್ರಿ.ಶ. 796–835) ಪಟ್ಟಾಭಿಷಿಕ್ತನಾದನು. ಗಂಗರನ್ನು ಸೋಲಿಸಿ ಅವರನ್ನು ತನ್ನ ಅಧೀನಕ್ಕೊಳಪಡಿಸಿಕೊಂಡ ರಾಷ್ಟ್ರಕೂಟ ಮೂರನೇ ಗೋಂವಿದನೇ (ಕ್ರಿ.ಶ. 785–813) ಇವನ ಸಮಕಾಲೀನನು. ಕ್ರಿ. ಶ. 814ರಲ್ಲಿ ಅಮೋಘವರ್ಷನು ರಾಜನಾದಾಗ ಗಂಗರ ದೊರೆ ಮೊದಲನೆ ರಾಚಮಲ್ಲನು ರಾಷ್ಟ್ರಕೂಟರ ಹಿಡಿತದಿಂದ ಸ್ವತಂತ್ರನಾಗಿ ತನ್ನ ತಂದೆಯ ಮರಣಾನಂತರ ರಾಜನಾದನು. ರಾಷ್ಟ್ರಕೂಟರಿಂದ ಸ್ವತಂತ್ರರಾಗಿ ಗಂಗರು ಪುನಃ ತಮ್ಮ ಆಳಿಕೆಯನ್ನು ಸ್ಥಾಪಿಸಿದಾಗ ಬಾಣರು ಪಲ್ಲವರ ಕಡೆ ಸೇರಿಕೊಂಡರು. ಬಾಣ ವಿಜಯಾದಿತ್ಯನು ಸಮರ್ಥ ದೊರೆ ಮತ್ತು ಶ್ರೇಷ್ಠ ಯೋಧನು.

ಬಾಣರ ಏಳಿಗೆಯನ್ನು ತಿಳಿಯಲು ಆ ಕಾಲದ ರಾಜಕೀಯ ಹಿನ್ನೆಲೆಯನ್ನು ಗಮನಿಸುವುದು ಅಗತ್ಯ. ವಿಜಯಾದಿತ್ಯನ ಕಾಲದಲ್ಲಿ ದಖನ್ನಿನ ಪ್ರಸ್ಥಭೂಮಿ ಮತ್ತು ಅದರ ದಕ್ಷಿಣಭಾಗ ಎರಡು ಶತ್ರುಪಂಗಡಗಳ ನಡುವೆ ಇಬ್ಭಾಗವಾಯಿತು. ಕರ್ನಾಟಕದ ಆಗ್ನೇಯದಲ್ಲಿ ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗಂಗರಾಜ ಶಿವಮಾರನ ಮಗ ಮೊದಲನೆ ಪೃಥಿವೀಪತಿಯು ಗಂಗರ ವಂಶವೊಂದನ್ನು ಸ್ಥಾಪಿಸಿ ಪಲ್ಲವರ ಒಡೆತನವನ್ನು ಒಪ್ಪಿಕೊಂಡನು. ಆಗ ನೊಳಂಬರು ಪ್ರಮುಖತೆಗೆ ಬರುತ್ತಿದ್ದರು. ನಿಡುಗಲ್, ಹೆಂಜೇರುಗಳನ್ನು ಅವರು ರಾಜಧಾನಿಯನ್ನಾಗಿ ಮಾಡಿಕೊಂಡು ಕೋಲಾರದ ಅನಂತಪುರ ಜಿಲ್ಲೆಯ ಭಾಗ ಗಳನ್ನು ಆಳುತ್ತಿದ್ದರು. ನೊಳಂಬರ ದಂಡನಾಯಕ ನೊಳಂಬಾಧಿರಾಜ ಪೊಳಾಳ್ ಚೋರನು ಗಂಗ

ಮೊದಲನೆ ರಾಚಮಲ್ಲನ ಅಳಿಯನು. ತೆಲುಗು ಚೋಳರ ಶತ್ರುಗಳಾದ ವೈದುಂಬರು, ವೈದುಂಬರೋಲು ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮದನಪಲ್ಲಿ ಮತ್ತು ಈಗಿನ ಚಿತ್ತೂರ್ ಡಿಸ್ಟ್ರಿಕ್ಟುಗಳನ್ನು ಆಳುತ್ತಿದ್ದರು. ಮಿತ್ರಪಕ್ಷಕ್ಕೆ ಸೇರಿದ ಗಂಗ ಪೃಥ್ವೀಪತಿ, ಬಾಣರು ಮತ್ತು ವೈದುಂಬರು ಗಂಗ ರಾಚ ಮಲ್ಲನ ಮೇಲೆ ಯುದ್ಧಮಾಡಿದರು. ಇದರಿಂದ ಗಂಗರ ರಾಜ್ಯ ಒಡೆಯಿತು. ಮುಂದೆತ್ತ (ಮದ್ದೆ) ಮದುಮಡುಗು, ಮನ್ನೆ, ಮಂಗಳ ಮೊದಲಾದ ಸ್ಥಳಗಳಲ್ಲಿ ರಾಚಮಲ್ಲನಿಗೂ, ಪೃಥಿವೀಪತಿಗೂ ಕದನಗಳು ನಡೆದುವು. ಸೋರೆಮನಿ ಎಂಬಲ್ಲಿ[22] ಪೃಥಿವೀಪತಿ, ಬಾಣರು ಮತ್ತು ವೈದುಂಬರು ರಾಚಮಲ್ಲನ ದಂಡನಾಯಕನಿಂದ ಸಂಪೂರ್ಣ ಸೋಲಿಸಲ್ಪಟ್ಟರು. ಸೋರೆಮನಿಯ ಹೆಸರು ಪ್ರಮುಖ ಶಾಸನಗಳಲ್ಲಿ ಉಕ್ತವಾಗಿದೆ. ಸೋರೆಮನಿ, ನೊಳಂಬವಾಡಿಗೆ ಪ್ರವೇಶಿಸುವ ದ್ವಾರದಲ್ಲಿ ಪೆನುಗೊಂಡ ತಾಲೂಕಿನಲ್ಲಿರುವ ಚೋಳಮನ್ ಎಂಬುದು. ರಾಚಮಲ್ಲನು ಶತ್ರುಗಳನ್ನು ನಿರ್ಮೂಲ ಮಾಡಿದ್ದು ಮತ್ತು ಅನೇಕ ಕದನ ಗಳಲ್ಲಿ ದಿಗ್ವಿಜಯ ಪಡೆದುದರ ವರ್ಣನೆ ಕ್ರಿ. ಶ. 828ರ ರಾಚಮಲ್ಲನ ಮನ್ನೆಶಾಸನದಲ್ಲಿ ಬರುತ್ತದೆ.

ಕ್ರಿ. ಶ. 838ರಲ್ಲಿ ವಿಜಯಾದಿತ್ಯನು ಮರಣ ಹೊಂದಲು ಜಗದೇಕಮಲ್ಲನೆಂದು ಕರೆಯಲ್ಪಡುವ ಮಲ್ಲದೇವ ಸಿಂಹಾಸನಾರೂಢನಾಗಿ ಹದಿನೈದು ವರ್ಷಗಳ ಕಾಲ ರಾಜ್ಯವಾಳಿದನು. ಇವನ ಕಾಲದಲ್ಲಿ ಪಲ್ಲವರ ರಾಜ್ಯವನ್ನು ಆಕ್ರಮಿಸುವ ಪ್ರಯತ್ನ ನಡೆದಾಗ ತೇಕಲ್‌ನಾಡಿನ ರಾಜ ಅಗ್ಗಲರಸನನ್ನು, ಶತ್ರು ಸೈನ್ಯದ ಮುನ್ನಡೆಯನ್ನು ತಡೆಗಟ್ಟಲು ಕಳುಹಿಸಲಾಯಿತು. ಬಾಣರೊಂದಿಗೂ ಪಲ್ಲವರೊಂದಿಗೂ ರಾಚಮಲ್ಲನು ಬೆಳೆಸಿದ ಶತ್ರುತ್ವ ಅವನನಂತರ ದೊರೆಯಾದ ಎರೆಗಂಗ ನೀತಿಮಾರ್ಗನ ಕಾಲದಲ್ಲಿಯೂ ಮುಂದುವರಿಯಿತು. ಪೊಳಾಳ್‌ಚೋರನ ಸಹಾಯಪಡೆದ ನೀತಿಮಾರ್ಗನು ಬಾಣರನ್ನು ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡನು. ಅನಂತರ ಪಲ್ಲವರ ಮೇಲೆ ದಂಡೆತ್ತಿಹೋಗಿ ತಿರುವಲ್ಲಂ[24] ಹತ್ತಿರ ಇರುವ ಅವರ ರಾಜ್ಯವನ್ನು ಹಿಡಿದನು. ತನ್ನ ದಿಗ್ವಿಜಯದ ಜ್ಞಾಪಕಾರ್ಥವಾಗಿ ನೊಳಂಬರ ರಾಜನು ನಂದಿಯಲ್ಲಿ ಭೋಗನಂದೀಶ್ವರ ದೇವಾಲಯವನ್ನು ಕಟ್ಟಿಸಿದನು. ಕಾಂಚಿಪುರದಲ್ಲಿರುವ ಕೈಲಾಸನಾಥ ದೇವಾಲಯವನ್ನು ಇದು ಹೋಲುತ್ತದೆ.

ಮಲ್ಲದೇವನ ಕಾಲದಲ್ಲಿ ಪ್ರಮುಖ ಗಂಗವಂಶದವರೊಂದಿಗೆ ಬೆಳೆಸಿದ ಶತ್ರುತ್ವದ ಫಲವಾಗಿ ಬಾಣರು ರಾಜ್ಯವನ್ನು ಕಳೆದುಕೊಂಡರೂ ತಲಕಾಡಿನಲ್ಲಿ ಆಳುತ್ತಿದ್ದ ಗಂಗರೊಡನೆ ಅವರು ಮೈತ್ರಿಯನ್ನು ಮುಂದು ವರಿಸಿದ್ದರು. ಬಾಣವಿದ್ಯಾಧರನು ಶಿವಮಾರನ ಮಗ ಪೃಥಿವೀಪತಿಯ ಅಳಿಯನೆಂದು ಕೆಲವು ಶಾಸನ ಗಳಲ್ಲಿ ಉಕ್ತವಾಗಿದೆ.

ಗುಡಿಮಲ್ಲಂ ಶಾಸನದಲ್ಲಿ ಉಲ್ಲೇಖಿಸಿರುವ ವಿಕ್ರಮಾದಿತ್ಯ ಜಯಮೇರು ಕ್ರಿ. ಶ. 850ರಲ್ಲಿ ಸಿಂಹಾಸನಾರೂಢನಾಗಿ ಕ್ರಿ. ಶ. 895ರ ವರೆಗೆ ರಾಜ್ಯವಾಳಿದನು. ಈತನಿಗೆ ಬಾಣವಿದ್ಯಾಧರ, ಬಾಣ ಕಂದರ್ಪ ಮೊದಲಾದ ಬಿರುದುಗಳಿದ್ದವು. ಇವನು ತನ್ನ ತಂದೆ ಅಜ್ಜಂದಿರಂತೆಯೇ ಮೂರನೇ ನಂದಿವರ್ಮ (844-866 ಕ್ರಿ.ಶ.) ಮತ್ತು ನೃಪತುಂಗವರ್ಮ (ಕ್ರಿ. ಶ. 886-885) ಪಲ್ಲವ ರಾಜರಿಗೆ ಸಾಮಂತನಾಗಿ ಮುಂದುವರಿದನು. ತನ್ನ ರಾಜ್ಯವಾದ ಗಂಗ 6,000ವನ್ನು ಹಿಂತಿರುಗಿ ಪಡೆಯುವುದಕ್ಕೋಸ್ಕರ ಗಂಗರೊಡನೆ ಯುದ್ಧಮಾಡಿದನು. ಆಗ ಪಲ್ಲವ ರಾಜ್ಯದ ಕೆಲವು ಭಾಗಗಳ ಮೇಲೆ ಒಡೆತನವನ್ನು ಪಡೆದಿದ್ದ ನೊಳಂಬ ರೊಡನೆ ಯುದ್ಧಮಾಡಿ ಅವರಿಂದ ಪೆರನಗರನ್ನು ವಶಪಡಿಸಿಕೊಂಡನು. ಜಯಮೇರು ತನ್ನ ಸ್ವಾತಂತ್ರ್ಯ ವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಗಂಗರೊಡನೆ ಮತ್ತು ನೊಳಂಬರೊಡನೆ ತನ್ನ ದೀರ್ಘ ಆಳಿಕೆ ಪೂರ್ತಿ ಯುದ್ಧಮಾಡಬೇಕಾದ ಪ್ರಸಂಗ ಬಂದೊದಗಿದರೂ ಕೈಬಿಟ್ಟುಹೋಗಿದ್ದ ತನ್ನ ಪಲವು ರಾಜ್ಯಗಳನ್ನು ಮತ್ತೆ ಪಡೆದನು.

ಗಂಗದೊರೆ ಜಯತೇಜನ ಕ್ರಿ. ಶ. 810ರ ಚಿಕ್ಕಬಳ್ಳಾಪುರದ ಶಾಸನದಲ್ಲಿ ಬಾಣ ವಿದ್ಯಾಧರನ ಮತ್ತು ಅವನ ರಾಣಿ ರತ್ನಾವಳಿಯ ಮಗ ದೊಡ ನರಾಧಿಪನ ಹೆಸರಿನ ಉಲ್ಲೇಖವಿದೆ. ಪೃಥಿವೀಪತಿಯ ಮಗಳು ಕುಂದವ್ವಿ ಇವನ ಮತ್ತೊಬ್ಬ ರಾಣಿ. ದೊಡ್ಡ ನರಾಧಿಪತಿ ಬಹುಶಃ ಪ್ರಭುಮೇರುವಿದ್ದಿರಬಹುದು[25]. ಮೂರನೇ ಗೋವಿಂದನ ನಂದಿಶಾಸನದಲ್ಲಿ ದೊಡ್ಡ ನರಾಧಿಪನ ತಾಯಿ ರತ್ನಾವಳಿಯನ್ನು ಮಾಣಿಕಬ್ಬೆ ಎಂದು ಉಲ್ಲೇಖಿಸಲಾಗಿದೆ. ನಂದಿಯಲ್ಲಿರುವ ಶಿವದೇವಾಲಯ ಅವಳಿಗಾಗಿ ರಚಿತವಾದುದೆಂಬ ವರ್ಣನೆ ಆ ದೇವಾಲಯದ ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತದೆ. ಗುಜರಾತಿನ ರಾಷ್ಟ್ರಕೂಟರ ಮೂಲ ಪುರುಷನೂ, ಮೂರನೆ ಗೋವಿಂದನ ಸಹೋದರನೂ ಆದ ಇಂದ್ರನೆಂದು ಪರಿಗಣಿಸಲ್ಪಡುವ ಇಂದ್ರಪ್ಪರಸನು ರತ್ನಾವಳಿಯ ಪಿತನೆಂದು ಶಾಸನದಲ್ಲಿ ಕೊಡಲಾಗಿದೆ. ಮಹಾಬಾಣರಾಜ ಶ್ರೀಪರ್ವನ ಅಭೀಷ್ಟದಂತೆ ಮೂರನೆ ಗೋವಿಂದನು ರತ್ನಾವಳಿಯಿಂದ ಕಟ್ಟಲ್ಪಟ್ಟ ಶಿವದೇವಸ್ಥಾನಕ್ಕೆ ಕ್ರಿ. ಶ. 806 ರಲ್ಲಿ ದಾನಕೊಟ್ಟ ವಿಷಯಕ್ಕೆ ಆಧಾರವಿದೆ. ಈ ಬಾಣರಾಜನೇ ರತ್ನಾವಳಿಯ ಪತಿ ಬಾಣ ವಿದ್ಯಾಧರನಾಗಿರ ಬೇಕು.[26] ಗಂಗ 6,000ದ ರಾಜ ಬಾಣರಸನಿಗೂ ಕ್ರಿ. ಶ. 817ರಲ್ಲಿ ಪಟ್ಟಾಭಿಷಿಕ್ತನಾದ ಗಂಗರಾಜ ರಾಚಮಲ್ಲ ಪೆರ್ಮಾಡಿಗೂ ನಡೆದ ಕದನದ ವರ್ಣನೆ ಬೂದಿಕೋಟೆ ಶಾಸನದಲ್ಲಿ ಕಂಡುಬರುತ್ತದೆ[27].

ಜಯಮೇರುವಿನ ಕಾಲದಲ್ಲಿ ಪುಲಿಂದ ಮತ್ತಿತರ ರಾಜ್ಯಗಳನ್ನು ವಶಪಡಿಸಿಕೊಳ್ಳುವುದಕ್ಕೋಸ್ಕರ ನೊಳಂಬರು ಬಾಣರ ರಾಜ್ಯದ ಮೇಲೆ ಧಾಳಿ ಮಾಡುವುದು ಪ್ರಾರಂಭವಾಯಿತು. ರಾಷ್ಟ್ರಕೂಟ ಮೂರನೆ ಇಂದ್ರನು ಬಾಣರ ಮೇಲೆ ಯುದ್ಧಕ್ಕೆ ಹೋಗಿ ಜಯಮೇರುವನ್ನು ಸೋಲಿಸಿ, ರಾಷ್ಟ್ರಕೂಟರ ಒಡೆತನವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಪಾಂಡ್ಯರೊಡನೆ, ರಾಷ್ಟ್ರಕೂಟರೊಡನೆ ನಡೆದ ಬಂದ ದೀರ್ಘ ಕಾಲದ ಹೋರಾಟದಲ್ಲಿ ಪಲ್ಲವರು ತಮ್ಮ ರಾಜ್ಯಗಳನ್ನು ಕಳೆದುಕೊಂಡು ಕ್ಷೀಣದಶೆಯಲ್ಲಿದ್ದರು. ಕುಂದಿದ ಪಲ್ಲವರ ಶಕ್ತಿಯು ಬಾಣವಿದ್ಯಾಧರನ ಮಗ ಎರಡನೆ ವಿಜಯಾದಿತ್ಯ ಪ್ರಭುಮೇರುವಿಗೆ ಅವರ ಹಿಡಿತದಿಂದ ಸ್ವತಂತ್ರ ನಾಗಲು ಸಹಾಯಕವಾಯಿತು. ಇವನ ಹದಿನೈದು ವರ್ಷದ ಆಳಿಕೆ ನೊಳಂಬ ಮತ್ತು ಗಂಗರೊಡನೆ ನಡೆಸಿದ ಸತತ ಹೋರಾಟದಲ್ಲಿ ಪರ್ಯವಸಾನಗೊಂಡಿತು. ಕ್ರಿ.ಶ. 910ರಲ್ಲಿ ಪಟ್ಟಾಭಿಷಿಕ್ತನಾದ ಇವನ ಮಗ ಎರಡನೆ ವಿಕ್ರಮಾದಿತ್ಯನು ಕಷ್ಟಕಾಲವನ್ನು ಅನುಭವಿಸಬೇಕಾಯಿತು. ಏಕೆಂದರೆ, ಹಳೆಯ ಶತ್ರು ಗಳನ್ನಲ್ಲದೆ ವೀರನಾರಾಯಣ ಪರಾಂತಕನ (ಕ್ರಿ.ಶ. 907–935) ನಾಯಕತ್ವದಲ್ಲಿ ತಲೆ ಎತ್ತುತ್ತಿದ್ದ ಚೋಳರನ್ನು ಎದುರಿಸಬೇಕಾಯಿತು. ಚೋಳರಿಗೆ ವಿರುದ್ಧವಾಗಿ ಬಾಣರು ರಾಷ್ಟ್ರಕೂಟರು ಒಂದು ಗೂಡಿದರು. ಇದರಿಂದ ಉದ್ರಿಕ್ತನಾದ ಪರಾಂತಕನು, ಬಾಣರ ರಾಜ್ಯವನ್ನು ಮುತ್ತಲು ಗಂಗ ಪೃಥ್ವೀ ಪತಿಯ ಸಹಾಯ ಪಡೆದನು. ಪರಾಂತಕನು ಚೋಳಿಂಗಪುರ (ಶೋಲಿಂಗರ್) ಶಾಸನ ಮತ್ತು ಪೃಥ್ವೀ ಪತಿಯ ಉದಯೇಂದಿರಂ ಶಾಸನಗಳಲ್ಲಿ ಪರಾಂತಕನು ಬಾಣರನ್ನು ಸೋಲಿಸಿದುದರ ಸ್ಪಷ್ಟವಾದ ಉಲ್ಲೇಖ ವಿದೆ. ಕ್ರಿ.ಶ. 913ರಲ್ಲಿ ವಲ್ಲಾಳ ಎಂಬ ಕದನದಲ್ಲಿ ಗಂಗಪೃಥ್ವೀಪತಿಯು ತೋರಿಸಿದ ಪರಾಕ್ರಮದ ಫಲವಾಗಿ ಅವನಿಗೆ ದೊರೆತ "ಬಾಣಾಧಿರಾಜ" (ಬಾಣರ ದೊರೆ) ಮತ್ತು "ಸೆಂಬಿಯನ್ ಮಹಾಬಲಿ ಬಾಣರಸ" ಎಂಬ ಬಿರುದುಗಳು ಶಾಸನಗಳಲ್ಲಿ ಕಂಡುಬರುತ್ತವೆ. ರಾಷ್ಟ್ರಕೂಟ ಎರಡನೆ ಕೃಷ್ಣ ಮತ್ತು ಬಾಣರು ವಲ್ಲಾಳ ಕದನದಲ್ಲಿ ಪರಾಜಿತರಾದರು. ಇದರಿಂದ ಗಂಗ ದೊರೆಗಳ ಪ್ರತಿಷ್ಠೆ ಹೆಚ್ಚಿ ಗಂಗ ಮತ್ತು ಚೋಳರ ಮೈತ್ರಿ ಬಲಗೊಂಡಿತು. ಬಾಣರ ರಾಜ್ಯದ ಅಧಿಪತಿಯಾದ ಪೃಥಿವೀಪತಿಯು "ಕೃಷ್ಣಧ್ವಜಃ ಪರವಿಪುರಾಧಿಪತಿ" ಮತ್ತು "ನಂದಿನಾಥ" ಎಂಬ ಬಿರುದುಗಳನ್ನು ಪಡೆದನು.

ಬಾಣರು ಈ ಪರಾಭವದಿಂದ ಚೇತರಿಸಿಕೊಳ್ಳಲಿಲ್ಲ. ಬಾಣ ವಿಕ್ರಮಾದಿತ್ಯ ಮತ್ತು ಅವನ ಮಗ ಮೂರನೆ ವಿಕ್ರಮಾದಿತ್ಯರು "ಬಿರುದು ಪುಗಳ್ವಿಪ್ಪವರ ಗಂಡ" ಎಂಬ ಬಿರುದುಗಳನ್ನು ಹೊತ್ತರು. ಅವರ ಪಿತ್ರಾರ್ಜಿತ ರಾಜ್ಯಗಳನ್ನು ಮತ್ತೆ ವಶಪಡಿಸಿಕೊಳ್ಳಲಾರದೆ ಹೋದರು. ಉದಯೇಂದಿರಂ ಶಾಸನವಲ್ಲಿ ಮೂರನೆ ಕೃಷ್ಣನ ಪರಮ ಮಿತ್ರನೆಂದು (ಕೃಷ್ಣರಾಜಪ್ರಿಯ) ಉಲ್ಲೇಖಿಸಿರುವ ವಿಜಯಬಾಹು ಮೂರನೇ

ವಿಕ್ರಮಾದಿತ್ಯನೇ, ಈ ವಂಶದಲ್ಲೆಲ್ಲಾ ಹೆಸರುವಾಸಿಯಾದ ದೊರೆ. ರಾಜ್ಯ ಆಕಾಂಕ್ಷೆಯಿಂದ ಪ್ರವರ್ಧಮಾನಕ್ಕೆ ಬರುತ್ತಿದ್ದ ಪರಾಂತಕನ ಪ್ರಾಬಲ್ಯವನ್ನು ನೋಡಿ ಬಾಣರು ರಾಷ್ಟ್ರಕೂಟ ಚಕ್ರವರ್ತಿಗಳ ಮರೆಹೊಕ್ಕರು. ಈ ವೇಳೆಗೆ ರಾಷ್ಟ್ರಕೂಟ ದೊರೆ ಕೃಷ್ಣನ ಸಹೋದರಿ ರೇವಕಳನ್ನು ಗಂಗರಾಜ ಬೂತುಗನು ಮದುವೆಯಾಗಿ ಕೃಷ್ಣನ ಪರಮಮಿತ್ರನಾದನು. ಈ ಹೊಸ ಸಂಘಟನೆ ಚೋಳರ ಪ್ರಾಬಲ್ಯ ಉತ್ತರಕ್ಕೆ ಪ್ರಸರಿಸುವುದನ್ನು ತಡೆಗಟ್ಟಿತು. ಕ್ರಿ. ಶ. 949ರಲ್ಲಿ ರಾಷ್ಟ್ರಕೂಟರಿಗೂ, ಚೋಳರಿಗೂ ಭಯಂಕರ ಯುದ್ಧಗಳು ನಡೆದವು. ಚೋಳಯುವರಾಜ ರಾಜಾದಿತ್ಯ ಪ್ರಮುಖ ವಿರೋಧಿಯಾಗಿ ನಿಂತಿದ್ದನು. ಇತ್ತ ಮೂರನೇ ಕೃಷ್ಣನಿಗೆ ಗಂಗರಾಜ ಬೂತುಗನ ಸಹಾಯವಿತ್ತು. ಬೂತುಗನು ರಾಜಾದಿತ್ಯನನ್ನು 'ತಕ್ಕೋಳಂ' ಯುದ್ಧದಲ್ಲಿ ಕೊಂದನು. ಬೂತುಗನ ಸಹಾಯಕ್ಕೆ ಪ್ರತಿಫಲವಾಗಿ ಕೃಷ್ಣನು ಆತನಿಗೆ, ಬನವಾಸಿ, 12,000 ಬೆಳುವೊಲ 300, ಇವುಗಳನ್ನು ಬಿಟ್ಟುಕೊಟ್ಟನು. ಕೃಷ್ಣನು ಕಾಂಚಿಪುರ ತಂಜಾವೂರುಗಳ ಅಧಿಪತಿಯಾಗಿ ತೊಂಡಮಂಡಲದಲ್ಲಿ ಚೋಳರ ಪ್ರಾಬಲ್ಯವನ್ನು ನುಚ್ಚುನೂರು ಮಾಡಿದನು. ತನ್ನ ದಿಗ್ವಿಜಯದಲ್ಲಿ ಬಾಣರು ಮಾಡಿದ ಸಹಾಯಾರ್ಥವಾಗಿ ಕೃಷ್ಣನು, ಮೂರನೆ ಬಾಣ ವಿಜಯಬಾಹು ವೀರರಣಾದಿತ್ಯನಿಗೆ ಪೆರುಂಬನಪ್ಪಾಡಿಯನ್ನು ಕೊಟ್ಟನು. ಕೆಲವು ಕಾಲ ಕಳೆದನಂತರ ಚೋಳರ ಕುವರಿಯೊಬ್ಬಳು ಬಾಣರ ರಾಜಕುಮಾರನನ್ನು ಮದುವೆಯಾದಾಗ, ಇವರ ರಾಜನೀತಿಯಲ್ಲಿ ಬದಲಾವಣೆ ಕಂಡು ಬರುತ್ತದೆ. ಅರಿಕುಲ ಕೇಸರಿ ಅರಿಂಜಿಗೈ ಪಿರಾಟ್ಟ್ಯಿಯರ್ ಎಂಬವನ ಮಗಳು ಬಾಣ ರಾಜನನ್ನು ಮದುವೆಯಾದದ್ದು ಒಂದು ಶಾಸನದಲ್ಲಿ ಉಕ್ತವಾಗಿದೆ. ಈ ಹೊಸ ಸಂಬಂಧ ಬೆಳೆದರೂ ಬಾಣರು ತಮ್ಮ ರಾಜ್ಯದ ಮೇಲೆ ಅಧಿಕಾರವನ್ನು ಪಡೆಯಲಾಗಲಿಲ್ಲ. ನಮಗೆ ದೊರೆತಿರುವ ಆಧಾರಗಳಿಂದ ಕರ್ಣಾಟಕದ ಪೂರ್ವಭಾಗವನ್ನು ಆಳಿದ ಬಾಣರ ವಂಶದಲ್ಲಿ ಮೂರನೇ ವಿಕ್ರಮಾದಿತ್ಯನೇ ಕೊನೆಯವನು.

ವೈದ್ಯನಾಥನು ತನ್ನ "ಪ್ರತಾಪರುದ್ರೀಯ" ದಲ್ಲಿ ಹನ್ನೆರಡನೆ ಶತಮಾನದ ದಕ್ಷಿಣ ಭಾರತದ ರಾಜ್ಯಗಳನ್ನು ಉಲ್ಲೇಖಿಸುವಾಗ ಬಾಣರ ರಾಜ್ಯವನ್ನು ಹೆಸರಿಸಿರುವುದು ತಿಳಿದುಬಂದಿದೆ[28]. ಪ್ರಾಯಶಃ ಹದಿನೈದನೆ ಶತಮಾನಕ್ಕೆ ಸೇರಿದ ಪ್ರಾಕೃತ ಭಾಷೆಯಲ್ಲಿರುವ ವ್ಯಾಕರಣ "ತ್ರಿವಿಕ್ರಮವಿಟ್ಟ"ದ ಕರ್ತೃ ತ್ರಿವಿಕ್ರಮದೇವ, ಬಾಣರ ವಂಶಕ್ಕೆ ಸೇರಿದವನು.[29] ಸುಂದ್ರತೊಳ್ ಮತ್ತು ಮುತ್ತರಸ ತಿರುಮಲ ಎಂಬ ಇಬ್ಬರು ದೊರೆಗಳು 1453ರಲ್ಲಿ ಮತ್ತು 1476ರಲ್ಲಿ ಪಾಂಡ್ಯರ ಸಿಂಹಾಸನವನ್ನು ಪಡೆದು ತಮ್ಮನ್ನು ಮಹಾಬಲಿ ಬಾಣಾಧಿರಾಜ ಎಂದು ಕರೆದುಕೊಂಡಿರುವುದು ತಿನ್ನವೆಲ್ಲಿ ಜಿಲ್ಲೆಯಲ್ಲಿರುವ ಶ್ರೀವಿಲ್ಲಿ ಪುತ್ತೂರ್ ಶಾಸನಗಳಲ್ಲಿ ಕಂಡುಬರುತ್ತದೆ[30].

## ಬಾಣರ ವಂಶವೃಕ್ಷ

ಮಹಾಬಲಿ

|

ಬಾಣಾಧಿರಾಜ ನಂದಿವರ್ಮನ್

|

ಜಯನಂದಿವರ್ಮನ್

|

ಮೊದಲನೆ ವಿಜಯಾದಿತ್ಯ ಮಹಾಬಲಿ (ಕ್ರಿ. ಶ. 796-835)

|

ಮಲ್ಲದೇವ ಜಗದೇಕಮಲ್ಲ (ಕ್ರಿ. ಶ. 835–850)

|

ಬಾಣ ವಿದ್ಯಾಧರ ವಿಕ್ರಮಾದಿತ್ಯ ಜಯಮೇರುಬಾಣ (ಕ್ರಿ. ಶ. 850–895)

|

ಎರಡನೆ ವಿಜಯಾದಿತ್ಯ ಪ್ರಭುಮೇರುದೇವ (ಕಿ. ಶ. 895–910)

|

ಪ್ರಭುಮೇರು (ಚಿಕ್ಕ ವಯಸ್ಸಿನಲ್ಲೇ ಸತ್ತನು)

|

ಎರಡನೇ ವಿಕ್ರಮಾದಿತ್ಯ ಮಹಾಬಲಿ ಬಾಣ (ಕ್ರಿ. ಶ. 910–916)

|

ಮೂರನೇ ವಿಜಯಾದಿತ್ಯ (916- ? )

|

ಪುಗಳ್ವಿಪ್ಪವರ ಗಂಡ ವಿಜಯಬಾಹು

|

ಮೂರನೆ ವಿಕ್ರಮಾದಿತ್ಯ (949- ? )

|

ಸಂಬಯ (ಕ್ರಿ. ಶ. 916)

# FOOT NOTES

## THE BANAS

1. *South Indian Inscription.* III, 90.
2. Captain Carvi: *Seven Pagodas* 13.
3. *E.C.*, Srinivasapur 5, 6.
4. *I.A.*, XIII, 6—187.
5. *M.A.R.*, 1916, Part II, Para 33.
6. *M.A.R.*, 1914, Para 67—69.
7. *E.I.*. VIII, Pp. 24—36; *E.C-*, VIII, Sk. 76.
8. *S.I.I.*, III, P. 90—91; *E.I.* XIII, P. S.
9. *E.C.*, X Mb. 157.
10. Sewell *Hist. of Antiquities* I, P. 22.
11. *E.I.*, XIV, P. 324.
12. Pennugonda Grant 12, 1913—14; *J.R.A.S.* 1915, Pp. 471—85.
13. Kolar Grant Mys. Arch. Report 1930; *E.C.*, IX—Db. 67.
    *E.C.*, IV Ng. 85. *I.A.*, V, Pp. 136—138; *I.A.*, II—V, 156.
14. *S.I.I.*, 343 of 1920; IX—I No. 46.
15. 338 of 1920; 1921 Para 2.
16. *Sravanabelagola Ins.*, II Intro. P. 68.
17. *S.I.I.*, II, P. 382.
18. *E.C.I.*, Hk. 86. X. Bp. 13. *M.A.R.* 1925 Insc—31, *E.C.*, IV, No. 85.
19. *E.C.*, X, 100 & 200 Bowringpet 13; *M.A.R.* 1916—17.
20. *E.C.*, XIII T. 23. III Md, V3; *S.I.I.*, II. p. 517.
21. *E.C.*, X, Mb. 80.
22. *S.I.I.*, IX. *E.I.* XXIV, P. 192.
23. *M.A.R.*, 1910; Journal of the Madras University, Vol. XII, P. 193—219.
24. *E.C.*, IX, Mb. 80.
25. *E.I.*, III. 74 *E.C.*, IX Srinivasapur 5, Chintamani 107, Nandi Plates of Govinda III.
26. *M.A.R.*, 1913—1914.
27. *E.C.*, X, Bowringpet 86.
28. *E.I.*, V., P. 162; I.A., XIII, P. 190; *E.I.*, IV, P. 224.
29. *I.A.*, XIII, 18.
30. *I,A.*, XV., 173.

ಮೂಲ ಲೇಖಕರು : ಡಾ॥ ಎಂ. ವಿ. ಕೃಷ್ಣರಾವ್
ಅನುವಾದಕರು : ಶ್ರೀಮತಿ ಎಸ್. ಕೆ. ಕಿಟ್ಟಮ್ಮ.

# ಪಲ್ಲವರು ಮತ್ತು ಕರ್ನಾಟಕ

ಪ್ರಾಯಶಃ ಪಲ್ಲವರು ವಿದೇಶೀಯ ಮೂಲದವರು. ಪಲ್ಲವ ಅಥವಾ ಶಕ–ಪಾರ್ಥಿಯನರ ಜೊತೆ ಇವರ ಸಂಬಂಧವಿದ್ದಿರಬೇಕೆಂದು ಊಹೆ. ಶಾತವಾಹನರ ಆಳ್ವಿಕೆಯ ಕಾಲದಲ್ಲಿ ಶಕ–ಕ್ಷಾತ್ರಪರು ಪಶ್ಚಿಮ ಕರಾವಳಿಯ ಗುಂಟ ದಖ್ಖಣದಲ್ಲಿ ಪ್ರವೇಶಮಾಡಿದರು. ಹಿರೇಹಡಗಲಿ, ಮೈದಾವೋಲು ಮತ್ತು ಇತರ ಪ್ರಾಚೀನ ಪ್ರಾಕೃತ ಶಾಸನಗಳು ಪಲ್ಲವರು ಸಾತಹನಿಹರ ಅಥವಾ ಶಾತವಾಹನ ರಾಷ್ಟ್ರದಲ್ಲಿ ಆಳುತ್ತಿದ್ದರೆಂದು ತಿಳಿಸುತ್ತವೆ. (ಈ ಪ್ರದೇಶವು ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿದೆ.) ಬನವಾಸಿಯ ಚುಟು ಮತ್ತು ನಾಗರ ಜೊತೆ ಇವರಿಗಿದ್ದ ಸಂಬಂಧದಿಂದಾಗಿ ಇವರು ಪೂರ್ವ ದೆಸೆಗೆ ಹರಡಿದರು. ವೀರ ಕೂರ್ಚನ ಪೂರ್ವಜನು ಚುಟು ಪಲ್ಲವನೆಂದು ಹೇಳಲಾಗಿದೆ. ಕದಂಬ ಮಯೂರಶರ್ಮನ ಕಾಲದಷ್ಟು ಹಿಂದೆಯೂ ಕೂಡ, ಪಲ್ಲವರು ಪ್ರೇಹಾರ (ಮಲಾಪಹಾರಿ) ದಿಂದ ಪಶ್ಚಿಮ ಸಾಗರದ ವರೆಗಿನ ಪ್ರದೇಶಕ್ಕೆ ಅಧಿಪತಿಗಳಾಗಿದ್ದರು. ತಾಳಗುಂದ ಶಾಸನವು ಹೇಳುವಂತೆ ಈ ಪ್ರದೇಶವನ್ನು ಅವರು ಮಯೂರಶರ್ಮನಿಗೆ ಬಿಟ್ಟುಕೊಟ್ಟರು. ಹೀಗೆ ಮೂಲತಃ ಪಲ್ಲವರು ಕರ್ನಾಟಕದಲ್ಲಿದ್ದರು. ಕಾಂಚಿಯ ಘಟಿಕಸ್ಥಾನವನ್ನು ಆಕ್ರಮಿಸಿ ಅವರು ಪೂರ್ವ ಹಾಗೂ ಉತ್ತರದೆಡೆ ವಲಸೆ ಹೋದರು. ಶ್ರೀ ಪರ್ವತ (ನಾಗಾರ್ಜುನ ಕೊಂಡ) ದ ಸುತ್ತಣ ಆಂಧ್ರ ದೇಶದಲ್ಲಿ ನೆಲಸಿದರು.

ಈ ಪ್ರಾಕೃತ ಶಾಸನಗಳ ಪಲ್ಲವರು ಕದಂಬ ಮತ್ತು ಗಂಗವಂಶಗಳ ನಡುವಣ ಯಾದವೀಕಲಹಗಳಲ್ಲಿ ಆಗಾಗ ಮಧ್ಯಪ್ರವೇಶ ಮಾಡುತ್ತಿದ್ದರು. ಪಶ್ಚಿಮ ಪ್ರದೇಶಗಳ ಸ್ವಾಮಿತ್ವವನ್ನು ಕೊಡಮಾಡಿ ಮಯೂರಶರ್ಮನ ಜೊತೆ ಸ್ನೇಹದಿಂದಿರಬಯಸಿದ ಪಲ್ಲವರು ಆತನಿಗೆ ರಾಜ್ಯಾಭಿಷೇಕ ಮಾಡಿದರೆಂದು ಹೇಳಲಾಗುತ್ತದೆ. ಮಯೂರಶರ್ಮನು ಪಲ್ಲವರ ಅಥವಾ ಪಲ್ಲವಪುರಿ (ಕಾಂಚಿ)ಯ ಮೇಲೆ ವಿಜಯ ಸಾಧಿಸಿದನೆಂದು ಚಂದ್ರವಳ್ಳಿಯ ಶಾಸನ ತಿಳಿಸುತ್ತದೆ. ಕದಂಬ ರಘುವು ಪಲ್ಲವರ ಜೊತೆ ಯುದ್ಧ ಮುಂದುವರಿಸಿದನು. ಕಾಕುತ್ಸ್ಥವರ್ಮನು ಕಳಭ್ರರ ವಿರುದ್ಧ ಹೋರಾಟ ನಡೆಸಿದನೆಂದೂ ಉಲ್ಲೇಖವಿದೆ. ಕೆಲಕಾಲ ಕಳಭ್ರರ ಆಳ್ವಿಕೆ ನಡೆದನಂತರ ಸಂಸ್ಕೃತ ಶಾಸನಗಳ ಪಲ್ಲವರು ಆಳಿದರು. ಕಾಂಚಿಯ ಸಿಂಹವಿಷ್ಣುವಿಗೆ ರಾಜ್ಯವನ್ನು ದೊರಕಿಸಿಕೊಡಲು ಪ್ರಾಯಶಃ ಕಾಕುತ್ಸ್ಥವರ್ಮನು ನೆರವು ನೀಡಿರಬೇಕು.

ಕದಂಬ ಮತ್ತು ಗಂಗರಾಜರ ಹಗೆತನವನ್ನು ಸ್ವಪ್ರಯೋಜನಕ್ಕೆ ಪಲ್ಲವರು ಬಳಸಿಕೊಂಡರು. ಕದಂಬ ವಂಶದ ಉಚ್ಚಂಗಿಯ ದೊರೆಗಳೂ ಗಂಗವಂಶದ ಪರಿವಿ ದೊರೆಗಳೂ ಸಿಂಹವಿಷ್ಣುವಿನ ವಂಶದ ಪಲ್ಲವರಿಂದ ನೆರವು ಪಡೆದರು. ಮೃಗೇಶವರ್ಮನು ಪಲ್ಲವರನ್ನೂ ಗಂಗರನ್ನೂ ಸೋಲಿಸಿದನೆಂದು ಹೇಳಲಾಗಿದೆ. ಆತನ ರಾಣಿ ಪ್ರಭಾವತಿ ಕೇಕಯ ಮನೆತನದವಳು. ಪಲ್ಲವ ನಣಕ್ಕಾಸನಿಂದ ಸೋಲಿಸಲ್ಪಟ್ಟ ಕೇಕಯ ಶಿವನಂದಿವರ್ಮನು ಆತ್ಮಹತ್ಯೆಮಾಡಿಕೊಂಡನು. ಉಚ್ಚಂಗಿಯ ವಿಷ್ಣುವರ್ಮ ಕದಂಬನಿಗೆ ಶಾಂತಿವರ್ಮ ಪಲ್ಲವನು ಪಟ್ಟಕಟ್ಟಿದ. ವಿಷ್ಣುವರ್ಮನ ಮಗ ಸಿಂಹವರ್ಮನಿಗೂ ಪಲ್ಲವರು ನೆರವು ನೀಡಿದರು. ಮೃಗೇಶವರ್ಮನ ಮಗ ರವಿವರ್ಮ ಕದಂಬನು ಪಲ್ಲವವಂಶದ ಚಂಡದಂಡನೆಂಬವನನ್ನು ಸೋಲಿಸಿ ಕದಂಬರಾಜ್ಯವನ್ನು ಒಟ್ಟುಗೂಡಿಸಿದನು.

ಗಂಗವಂಶದ ಪೆರೂರು ಶಾಖೆಯ ರಾಜರಿಗೆ ನೆರವನ್ನಿತ್ತು ಗಂಗರ ಆಂತರಿಕ ಕಲಹಗಳಲ್ಲೂ ಪಲ್ಲವರು

ಸಕ್ರಿಯವಾಗಿ ಹಸ್ತಕ್ಷೇಪ ಮಾಡಿದರು. ಪಲ್ಲವ ಸಿಂಹವರ್ಮನು ಅಯ್ಯವರ್ಮನಿಗೆ ಪಟ್ಟಕಟ್ಟಿದನು. ಪೆನುಕೊಂಡ ಮತ್ತು ನಿಟ್ಟೂರು ಶಾಸನಗಳ ದಾತೃವಾದ ಮಾಧವ (ಅಯ್ಯವರ್ಮನ ಮಗ)ನಿಗೆ ಸ್ಕಂದವರ್ಮ ಪಲ್ಲವನು ರಾಜ್ಯಾಭಿಷೇಕ ಮಾಡಿದನು. ಈ ಮೊದಲ ಪಲ್ಲವ ದೊರೆಯನ್ನು ಯುವಮಹರಾಜ ವಿಷ್ಣುಗೋಪನ ಅಣ್ಣನಾದ ಸಿಂಹವರ್ಮನೆಂದು ಗುರುತಿಸಬಹುದು. (ಇವರುಗಳ ಕಾಲ ಸುಮಾರು ಕ್ರಿ. ಶ. 450.)

ಆರನೆ ಶತಮಾನದಲ್ಲಿ ಕದಂಬರ ಪ್ರಭಾವ ಕುಂದಿತು. ಇದೇ ಕಾಲದಲ್ಲಿ ಬಾದಾಮಿಯ ಚಾಲುಕ್ಯರು, ತಲಕಾಡಿನ ಗಂಗರು ಮತ್ತು ರಾಷ್ಟ್ರಕೂಟರು ಕರ್ಣಾಟಕದಲ್ಲಿಯೂ ಸಂಸ್ಕೃತಶಾಸನಗಳ ಪಲ್ಲವರು ತಮಿಳುನಾಡಿನಲ್ಲಿಯೂ ಪ್ರಬಲ್ಯಕ್ಕೆ ಬಂದರು. . ಕಡಪಾ ಜಿಲ್ಲೆಯ ಮುಡಿವೇಮು ಗ್ರಾಮವು ಪಲ್ಲವರ ವಶದಲ್ಲಿತ್ತು. . ಚಾಲುಕ್ಯವಂಶದ ವಿಜಯಾದಿತ್ಯನು ಗಂಗ ದುರ್ವಿನೀತನ ಜಾಮಾತ (ಅಳಿಯ)ನಾಗಿದ್ದನು. ಈ ಚಾಲುಕ್ಯರಾಜನು ತ್ರಿನೇತ್ರ ಪಲ್ಲವನೊಡನೆ ಯುದ್ಧಮಾಡಿ ರಣರಂಗದಲ್ಲಿ ಮಡಿದನು. ಈ ಮೃತ ರಾಜನ ಗರ್ಭಿಣಿಯಾಗಿದ್ದ ರಾಣಿಯನ್ನು ಮುಡಿವೇಮುವಿನ ವಿಷ್ಣುಭಟ್ಟ ರಕ್ಷಿಸಿದ. ಇಲ್ಲಿಯೇ ವಿಜಯಾದಿತ್ಯನಿಗೆ ಒಬ್ಬ ಮಗನೂ ತಂದೆಯ ಮರಣಾನಂತರ ಜನಿಸಿದ. ವಿಷ್ಣುವರ್ಧನನೆಂಬ ಹೆಸರಿನ ಈ ರಾಜಪುತ್ರನಿಗೆ ಇಲ್ಲಿಯೇ ಶಿಕ್ಷಣ ನೀಡಲಾಯಿತು. ವಿಷ್ಣುವರ್ಧನ ಎಂಬ ಬಿರುದು ಜಯಸಿಂಹನದೆಂದು ಕನ್ನಡಕವಿ ರನ್ನ ತಿಳಿಸುತ್ತಾನೆ. ಕಾಡುವೆಟ್ಟಿಯನ್ನು ಸೋಲಿಸಿ, ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದ ಜಯಸಿಂಹ ವಿಷ್ಣುವರ್ಧನನಿಗೆ ಅವನ ತಾಯಿಯ ತಂದೆ ಗಂಗದುರ್ವಿನೀತ ನೆರವು ನೀಡಿದನು. (ಕಾಡುವೆಟ್ಟಿ ಎಂದರೆ ಕಾಡನ್ನು ನಾಶಮಾಡಿದವ - ಪಲ್ಲವ ರಾಜ).

ಗಂಗ ಅವಿನೀತನ ತಾಯಿಯು ಪಲ್ಲವ ರಾಜಕುಮಾರಿಯಿದ್ದಿರಬೇಕೆಂದು ಕಂಡುಬಂದರೂ ತಲಕಾಡಿನ ಗಂಗರು ಪಲ್ಲವರ ಶತ್ರುಗಳಾಗಿದ್ದರು. ಕವಿ ಭಾರವಿಯ ಬಗೆಗಿನ ದಂತಕಥೆಯಲ್ಲಿ ದುರ್ವಿನೀತ ಮತ್ತು ಪಲ್ಲವರ ನಡುವಿನ ಸಂಬಂಧವು ಸೂಚಿತವಾಗಿದೆ. ವಿಷ್ಣುವರ್ಧನ (ಬಹುಶಃ ಚಾಲುಕ್ಯ ಜಯಸಿಂಹ ವಿಷ್ಣುವರ್ಧನ)ನ ಜೊತೆ ದಕ್ಷಿಣಕ್ಕೆ ಮೃಗಯಾ ವಿಹಾರಕ್ಕೆ ಬಂದಿದ್ದ ಭಾರವಿಯು ದುರ್ವಿನೀತನನ್ನು ಭೇಟಿಯಾಗಿದ್ದನೆಂದು ದಂಡಿಯ 'ಅವಂತಿ ಸುಂದರಿ ಕಥಾ'ದಲ್ಲಿ ಹೇಳಿದೆ. ಭಾರವಿಯ 'ಕಿರಾತಾರ್ಜುನೀಯ'ದ ಹದಿನೈದನೆ ಅಧ್ಯಾಯದ ಮೇಲೆ ಟೀಕೆಯೊಂದನ್ನು ದುರ್ವಿನೀತನು ಬರೆದಿದ್ದನೆಂದು ಗಂಗಶಾಸನವೊಂದು ಹೇಳುತ್ತದೆ. ಕಂಚಿಯ ಸಿಂಹವರ್ಮನು ಅಥವಾ ಸಿಂಹವಿಷ್ಣುವು ಭಾರವಿಯನ್ನು ಗಂಗರ ಆಸ್ಥಾನದಿಂದ ತನ್ನಲ್ಲಿಗೆ ಬರುವಂತೆ ಆಮಂತ್ರಿಸಿದನು (Sources of Karnatak History, I, p. 33 ; Trivandrum Sanskrit Series, 172, 1954). ದುರ್ವಿನೀತನು ಇಮ್ಮಡಿ ಪುಲಿಕೇಶಿಯ ಸೋದರ ಕುಬ್ಜ ವಿಷ್ಣುವರ್ಧನನ ಸಮಕಾಲೀನನಾಗಿರಲಾರ. ಭಾರವಿಯು ಇದಕ್ಕೂ ಮೊದಲು ದುರ್ವಿನೀತ ಹಾಗೂ ಚಾಲುಕ್ಯ 1ನೆ ಜಯಸಿಂಹನ ಕಾಲದಲ್ಲಿ ಜೀವಿಸಿದ್ದಿರಬೇಕು.

ದಕ್ಷಿಣದ ಮೇಲಣ ಸ್ವಾಮ್ಯಕ್ಕಾಗಿ ಚಾಲುಕ್ಯರು ಮತ್ತು ಪಲ್ಲವರ ನಡುವೆ ಎರಡು ಶತಕಗಳಷ್ಟು ಕಾಲ ನಡೆದಿದ್ದ ಯುದ್ಧವು ಕಾಂಚಿಯ ಸಿಂಹವಿಷ್ಣುವಿನ ಕೊನೆಯ ದಿನಗಳಲ್ಲಿ ಆರಂಭವಾಗಿರಬೇಕು. ಮಧ್ಯಕಾಲದ ಕಳಭ್ರರ ಆಳಿಕೆಯನ್ನು ಪಲ್ಲವ ಸಿಂಹವಿಷ್ಣುವು ಪ್ರಾಯಶಃ ಕೊನೆಗಾಣಿಸಿ, ದಕ್ಷಿಣದಲ್ಲಿ ಸಿಂಹಳದ ವರೆಗೂ ವಿಜಯಗಳಿಸಿರಬೇಕು. ಸುಮಾರು ಕ್ರಿ, ಶ. 609ರಲ್ಲಿ ತನ್ನ ಮಗ ಮಹೇಂದ್ರ ವರ್ಮನನ್ನು ಇವನು ಕರ್ಣಾಟಕಕ್ಕೆ ಕಳುಹಿಸಿರಬೇಕು. ಉತ್ತರ ಭಾರತದಲ್ಲಿ ಕನೋಜದ ಶಿಲಾದಿತ್ಯ ಹರ್ಷನು ತನ್ನ ಪ್ರಾಬಲ್ಯ ಪ್ರಸ್ಥಾಪನೆಗಾಗಿ ಹೋರಾಟ ನಡೆಸುತ್ತಿದ್ದನು. ಅವನು ಬಹುಶಃ ದಕ್ಷಿಣವನ್ನು ನುಗ್ಗಿ ಚಿತ್ರದುರ್ಗದ ವರೆಗೂ ಬಂದಾಗ, ಚಾಲುಕ್ಯ ಮತ್ತು ಪಲ್ಲವರಿಂದ ಎದುರಿಸಲ್ಪಟ್ಟಿರಬೇಕು. ಶಿಲಾದಿತ್ಯನು ಯುದ್ಧಕ್ಕೆ ಬಂದಾಗ ಮಹೇಂದ್ರನು (ಪಲ್ಲವ ರಾಜನೆಂಬುದು ಸ್ಪಷ್ಟ) ಭಯದಿಂದ

ಓಡಿದನೆಂದು ಗುಡ್ಡೆಮನೆ ಶಾಸನ ತಿಳಿಸುತ್ತದೆ. ಸತ್ಯಾಂಕ (ಇದು ಚಾಲುಕ್ಯರ ಒಂದು ಬಿರುದು)ನೂ ಬೇಡರೂ ಶಿಲಾದಿತ್ಯನೊಡನೆ ಹೋರಾಡಿದರು. (S. Srikanta Shastri, J.R.A.S., July 1926, M.A.R ; 1923, Sa. 64, E.C. ; VIII). ಈ ಸಂದಿಗ್ಧ ಕಾಲದಲ್ಲಿ ಚಾಲುಕ್ಯ ಮಂಗಲೇಶನು ಕಲಚೂರಿಗಳ ವಿರುದ್ಧ ಹೋರಾಡುತ್ತಲಿದ್ದನು ; ಹಾಗೂ ಇಮ್ಮಡಿ ಪುಲಿಕೇಶಿಯು ದೇಶಭ್ರಷ್ಟನಾಗಿದ್ದ, ಎಂದೂ ಐಹೊಳೆ ಶಾಸನ ತಿಳಿಸುತ್ತದೆ.

ತನ್ನ ಉತ್ತರದ ದಿಗ್ವಿಜಯದನಂತರ ಇಮ್ಮಡಿ ಪುಲಿಕೇಶಿಯು ಹರ್ಷನನ್ನು ಸೋಲಿಸಿ ಆತನನ್ನು ನರ್ಮದೆಯ ಆಚೆಗೆ ಅಟ್ಟಿದನು. ಅಲ್ಲಿಂದ ಪೂರ್ವಕ್ಕೆ ಹೊರಳಿ ಅವನು ಕಳಿಂಗ, ಆಂಧ್ರಗಳನ್ನು ಗೆದ್ದು ಪಲ್ಲವರ ರಾಜಧಾನಿ ಕಾಂಚಿಯನ್ನು ಆಕ್ರಮಿಸಿದನು. ಬಹುಶಃ ಮಹೇಂದ್ರನು ಹತನಾದನು. ಪುಲಿಕೇಶಿಯು ಚೋಳ, ಕೇರಳ ಮತ್ತು ಚೋಳರ ಆಶ್ರಿತರಾದ ಪಾಂಡ್ಯರನ್ನು ಸೋಲಿಸಿದನು. ಪರಿಯಾಲ, ಮಣಿಮಂಗಲ ಮತ್ತು ಸೂರಮಾರ ಯುದ್ಧಗಳಲ್ಲಿ ತಮಗೆ ಜಯವಾಯಿತೆಂದು ಪಲ್ಲವರು ಹೇಳಿ ಕೊಂಡಿದ್ದಾರೆ. ನರಸಿಂಹವರ್ಮ ವಾತಾಪಿಕೊಂಡನ ಕಾಲದಲ್ಲಿ ಮುಂದಿನ ಶಕ್ತಿಪರೀಕ್ಷೆ ನಡೆಯಿತು. ಶಿರುತ್ತೊಂಡನ ದಂಡಯಾತ್ರೆಯು ಕೊಂಚ ಅನಂತರ ನಡೆಯಿತೆನ್ನಲಾಗಿದೆ. ನರಸಿಂಹನು ಕರ್ನಾಟಕದ ಮೇಲೆ ದಂಡೆತ್ತಿ ಬಂದನು, ಮತ್ತು ಬಹುಶಃ ಪುಲಿಕೇಶಿಯನ್ನು ಯುದ್ಧದಲ್ಲಿ ಕೊಂದನು. ಕೆಲವರ್ಷಕಾಲ ಬಾದಾಮಿ ಪಲ್ಲವರ ವಶದಲ್ಲಿತ್ತು. ಪುಲಿಕೇಶಿಯ ಮಕ್ಕಳಾದ ಆದಿತ್ಯವರ್ಮ ಮತ್ತು ವಿಕ್ರಮಾದಿತ್ಯರು ದಕ್ಷಿಣಕ್ಕೆ ಹಿಮ್ಮೆಟ್ಟಿದರು. ವಿಕ್ರಮಾದಿತ್ಯನು ತನ್ನ ಖಡ್ಗ ಮತ್ತು ರಣತುರಗ ಚಿತ್ರಕಂಠದ ನೆರವಿನಿಂದ ಚೇರ, ಚೋಳ ಮತ್ತು ಪಾಂಡ್ಯರನ್ನು ಸೋಲಿಸಿ ಪಲ್ಲವರನ್ನು ಬಾದಾಮಿಯಿಂದ ಹೊರಗಟ್ಟಿ ತನ್ನ ರಾಜ್ಯವನ್ನು ಪುನಃಸ್ಥಾಪನೆಗೈದನು.

ಕಾವೇರ, ಪರಾಸೀಕ, ಸಿಂಹಳ ಮತ್ತು ತ್ರೈರಾಜ್ಯ ಪಲ್ಲವರಿಂದ ಕಪ್ಪಪಡೆದುದಾಗಿ ಹೇಳಿಕೊಳ್ಳುವ ಚಾಲುಕ್ಯ ವಿನಯಾದಿತ್ಯನ ಜೊತೆ ಯುದ್ಧವನ್ನು ಪಲ್ಲವ ಮಹೇಂದ್ರವರ್ಮ 2ನೆ ಮತ್ತು 1ನೆ ಪರಮೇಶ್ವರ ವರ್ಮರು ಮುಂದುವರಿಸಿದರು. ವಿನಯಾದಿತ್ಯನ ಮಗ ಇಮ್ಮಡಿ ವಿಜಯಾದಿತ್ಯನು ತನ್ನ ಬಾಲ್ಯದಿಂದಲೂ ಯುದ್ಧದಲ್ಲಿ ತೊಡಗಿದ್ದನು. ಪಲ್ಲವರು ಚಾಲುಕ್ಯರ 'ಸಹಜ ಶತ್ರು' (ಪ್ರಕೃತ್ಯಮಿತ್ರ) ಗಳಾಗಿದ್ದರು. ಇಮ್ಮಡಿ ವಿಕ್ರಮಾದಿತ್ಯನು ಪಲ್ಲವ ನಂದಿವರ್ಮನ ಕಾಲದಲ್ಲಿ ಪಲ್ಲವ ರಾಜ್ಯದ ಮೇಲೆ (ತುಂಡಕ ವಿಷಯ) ಅನಿರೀಕ್ಷಿತವಾದ ದಾಳಿ ಮಾಡಿದನು. ಪಲ್ಲವ ಲಾಂಛನಗಳಾದ 'ಕನಕಮುಖ ಸಮುದ್ರ ಘೋಷ ವಾದಿತ್ರ' ಇತ್ಯಾದಿಗಳನ್ನು ವಶಪಡಿಸಿಕೊಂಡನು. ಕಾಂಚಿಯನ್ನು ನಾಶಮಾಡದೆ ಅದನ್ನು ಪ್ರವೇಶಿಸಿದನು. ನರಸಿಂಹವರ್ಮ ದೇವಾಲಯಕ್ಕೆ ದತ್ತಿಯನ್ನು ಇತ್ತನು. ಕೊನೆಯ ಚಾಲುಕ್ಯ ದೊರೆ ಇಮ್ಮಡಿ ಕೀರ್ತಿವರ್ಮನು ನಂದಿವರ್ಮನ ಜೊತೆ ಯುದ್ಧ ಮುಂದುವರಿಸಿದನು. ಪಲ್ಲವ ರಾಜನು ಅಡವಿಯಲ್ಲಿ ಅವಿತುಕೊಂಡನು. ಆದರೆ ಅವನ ಸೇನೆ ನಾಶವಾಯಿತು. 'ಸಾರ್ವಭೌಮ' ಎಂಬ ಬಿರುದನ್ನು ಕೀರ್ತಿವರ್ಮನು ಪರಿಗ್ರಹಿಸಿದನು.

ರಾಷ್ಟ್ರಕೂಟ ದಂತಿದುರ್ಗನು ತಲೆಯೆತ್ತಿದಾಗ ಬಾದಾಮಿಯ ಚಾಲುಕ್ಯರ ವಂಶ ಕೊನೆಗೊಂಡಿತು. ಅಂತೆಯೇ ಚೋಳ ವಿಜಯಾದಿತ್ಯನು ಉಚ್ಛ್ರಾಯಕ್ಕೆ ಬಂದಾಗ ಪಲ್ಲವರ ಮೂಲ ಶಾಖೆಯು ನಾಮಶೇಷವಾಯಿತು. ದಂತಿದುರ್ಗನು ವಲ್ಲಭ (ಚಾಲುಕ್ಯ)ರನ್ನೂ ದಕ್ಷಿಣದಲ್ಲಿ ಕಾಂಚಿ (ಪಲ್ಲವ), ಕೇರಳ, ಚೋಳ ಮತ್ತು ಪಾಂಡ್ಯರನ್ನೂ ಸೋಲಿಸಿದನೆಂದು ದಂತಿದುರ್ಗನ ಸಾಮನ್‌ಗಡ್ ಶಾಸನ ಹೇಳುತ್ತದೆ. ತಲಕಾಡಿನ ಗಂಗ ಸೈಗೊಟ್ಟ ಶಿವಮಾರನಿಗೆ ಪಲ್ಲವ ಮುಮ್ಮಡಿ ನಂದಿವರ್ಮನು ನೆರವಿತ್ತಂತೆ ತೋರುತ್ತದೆ (ಮಾರಸಿಂಹನ ಆಲೂರು ಶಾಸನ). ಅಮೋಘವರ್ಷ ನೃಪತುಂಗನು ತನ್ನ ಪುತ್ರಿ ಶಂಖಳನ್ನು ಪಲ್ಲವ

ನಂದಿವರ್ಮನಿಗೆ ಸುಮಾರು ಕ್ರಿ.ಶ. 850ರಲ್ಲಿ ಮದುವೆ ಮಾಡಿಕೊಟ್ಟನು. ಕರ್ನಾಟಕಕ್ಕೆ ಸಂಬಂಧಿಸಿ ಪಲ್ಲವ ಸಾಮ್ರಾಟರ ಇನ್ನಾವ ಚಟುವಟಿಕೆಯ ವಿಚಾರವೂ ಅನಂತರ ತಿಳಿಯುವುದಿಲ್ಲ.

ಪಲ್ಲವ ವಂಶದ ಕಿರುಶಾಖೆಯಾದ ನೊಳಂಬ ಪಲ್ಲವರು ಕರ್ನಾಟಕದಲ್ಲಿ ಆಳಿದರು. ಖಟ್ವಾಂಗಧ್ವಜರಾದ ಇವರು ಲಲಾಟನಯನ ಅಥವಾ ತ್ರಿಲೋಚನ ಪಲ್ಲವನ ವಂಶಜರೆಂದೂ ಕಾಂಚಿಯ ಪ್ರಭುಗಳೆಂದೂ ಕರೆದುಕೊಂಡಿದ್ದಾರೆ. ಹೇಮಾವತಿ ಇವರ ರಾಜಧಾನಿ (S. Srikanta Shastri, Sraddhanjali, p. 277). ಇವರ ಲಾಂಛನ ನಂದಿ. ಈ ಶಾಖೆಯ ಆಳಿಕೆ ಸುಮಾರು ಕ್ರಿ.ಶ. 700ರಲ್ಲಿ ಆರಂಭವಾಯಿತು. ಕೊನೆಗೆ ಹೊಯ್ಸಳರಲ್ಲೂ ಕಲ್ಯಾಣದ ಚಾಲುಕ್ಯರಲ್ಲೂ ಐಕ್ಯವಾಯಿತು.

# ನೊಳಂಬ ಪಲ್ಲವರು

ಕರ್ನಾಟಕದ ಇತಿಹಾಸದಲ್ಲಿ ಮೂರು ಶತಮಾನಗಳ ಕಾಲ (ಸುಮಾರು ಕ್ರಿ. ಶ. 750ರಿಂದ 1055ರ ವರೆಗೆ) ಪ್ರಧಾನ ಪಾತ್ರವಹಿಸಿದ ಒರಿಯ ಸಾಮಂತ ರಾಜಮನೆತನಗಳ ಪೈಕಿ ನೊಳಂಬ ಪಲ್ಲವರ ಮನೆತನವೂ ಒಂದು. ಬಾಣರು, ರಾಷ್ಟ್ರಕೂಟರು, ಗಂಗರು, ತಲಕಾಡಿನ ಗಂಗರು ಮತ್ತು ವೈಡುಂಬರೇ ಮೊದಲಾದ ದಕ್ಷಿಣ ಭಾರತದ ರಾಜ ಮನೆತನಗಳ ಜೊತೆ ಇವರು ನಿಕಟ ಸಂಬಂಧ ಹೊಂದಿದ್ದರು. ತಲಕಾಡಿನ ಪಶ್ಚಿಮ ಗಂಗರ ಆಶ್ರಿತರಾಗಿ ಇವರು ತಮ್ಮ ಆಳಿಕೆಯನ್ನು ಆರಂಭಿಸಿದರು. ಇಂದಿನ ಆಂಧ್ರಪ್ರದೇಶದಲ್ಲಿನ ಅನಂತಪುರ ಹಾಗೂ ಮೈಸೂರು ರಾಜ್ಯದ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಭಾಗಗಳನ್ನೊಳಗೊಂಡ ನೊಳಂಬಳಿಗೆ 1,000ದ ಮೇಲೆ ಇವರು ಆಳುತ್ತಿದ್ದರು. ಬಹುಶಃ ಪೂರ್ವದಲ್ಲಿ ಪೆನ್ನಾರ್ ಮತ್ತು ಪಶ್ಚಿಮದಲ್ಲಿ ಹಗರಿ ನದಿಗಳು ಈ ಪ್ರದೇಶದ ಗಡಿಗಳಾಗಿದ್ದಿರಬೇಕು. ಕಾಲಕ್ರಮದಲ್ಲಿ ಇವರು ಹೆಚ್ಚು ಭೂಭಾಗವನ್ನು ವಶಪಡಿಸಿಕೊಂಡರು. ಹತ್ತನೆ ಶತಮಾನದ ಆರಂಭದ ಹೊತ್ತಿಗೆ ಇವರ ಆಡಳಿತ ಪ್ರದೇಶವು 32,000ದ ಜಿಲ್ಲೆಯಾಯಿತು. ಹೀಗಾಗಿ ನೊಳಂಬಳಿಗೆ 32,000ವು ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಜೊತೆ ಬಳ್ಳಾರಿ, ಅನಂತಪುರ, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡಿತ್ತು.

ಈ ಭಾಗದಲ್ಲಿ ಪಲ್ಲವರ ಆಡಳಿತ ಕುಸಿದಾಗ ನೊಳಂಬರು ಪ್ರಾಮುಖ್ಯ ಪಡೆದರು. ಶಾಸನಗಳ ಆಧಾರದಂತೆ ಸೇಲಂ ಜಿಲ್ಲೆಯ ಧರ್ಮಪುರಿಯ ವರೆಗೂ ಅವರ ಆಡಳಿತ ವ್ಯಾಪಿಸಿತ್ತು. ಹೆಂಜೇರು (ಅಥವಾ ಪೆಂಜೇರು) ಅಥವಾ ಹೇಮಾವತಿ ಅವರ ಮೊದಲ ರಾಜಧಾನಿ. ಸಿರಾ ತಾಲೂಕಿನ ಉತ್ತರಕ್ಕೆ ಇಂದಿನ ಅನಂತಪುರ ಜಿಲ್ಲೆಯಲ್ಲಿ ಈ ಸ್ಥಳವಿದೆ.

ನೊಳಂಬರು ತಮ್ಮನ್ನು ಪಲ್ಲವರೆಂದು ಕರೆದುಕೊಂಡಿದ್ದಾರೆ. ಹೇಮಾವತಿಯ ಸ್ತಂಭಶಾಸನದಲ್ಲಿ ಅವರ ವಂಶವೃಕ್ಷವನ್ನು ಕೊಡಲಾಗಿದೆ.

ತ್ರಿನಯನನಿಂದ ಈ ವಂಶ ಆರಂಭವಾಯಿತೆಂದು ಶಾಸನ ಹೇಳುತ್ತದೆ. ನೊಳಂಬಾಧಿರಾಜ ಅಥವಾ ಮಂಗಲನು ಮೊದಲ ರಾಜನೆಂದು ಹೇಳಿದೆ. ಅನಂತರ ಸಿಂಹಪೋತ, ಚಾರುಪೊನ್ನೇರ, ಪೊಳಾಳಚೋರ, ಮಹೇಂದ್ರ, ನನ್ನಿಗ ಅಯ್ಯಪ್ಪದೇವ, ಅಣ್ಣಿಗ ಮತ್ತು ದಿಲೀಪ ಇವರು ಅನುಕ್ರಮವಾಗಿ ಆಳಿದ ರಾಜರೆಂದು ತಿಳಿಸಲಾಗಿದೆ.

ಈ ವಂಶದ ಸ್ಥಾಪಕ ತ್ರಿನಯನ ಪಲ್ಲವನನ್ನು, ಎಂಟನೆ ಶತಮಾನದ ಆದಿಭಾಗದಲ್ಲಿ ಚಾಲುಕ್ಯ ವಿಜಯಾದಿತ್ಯನಿಂದ ಸೋಲಿಸಲ್ಪಟ್ಟ ತ್ರಿನಯನನೆಂದು ಗುರುತಿಸಲಾಗಿದೆ. ಸಿಂಹಪೋತ ಅಥವಾ ಸಿಂಗಪೋತನು ಗಂಗರಾಜ ಶಿವಮಾರ ಸೈಗೊಟ್ಟನ ಆಶ್ರಿತನು. ತನ್ನ ಕಿರಿ ಸೋದರ ದುಗ್ಗಿಮಾರನು ಸ್ವತಂತ್ರನಾಗಬಯಸಿದಾಗ ಶಿವಮಾರನು ಈತನನ್ನು ಅವನ ವಿರುದ್ಧ ಯುದ್ಧ ಮಾಡಲು ಕಳುಹಿಸಿದ್ದನು. ಶಿವಮಾರನನ್ನು ರಾಷ್ಟ್ರಕೂಟರು ಬಂಧಿಸಿ ಅವನ ರಾಜ್ಯವನ್ನು ವಶಪಡಿಸಿಕೊಂಡಾಗ, ಸಿಂಹಪೋತನ ಮಗನೂ ಮೊಮ್ಮಗನೂ ರಾಷ್ಟ್ರಕೂಟರ ಆಶ್ರಿತರಾದರು. ನೊಳಂಬಳಿಗೆ 1,000 (ಗಂಗ ಸಾಸಿರ) ಮತ್ತು ಇತರ

ಪ್ರಾಂತಗಳ ಮೇಲೆ ಅವರು ಆಡಳಿತ ಆರಂಭಿಸಿದರು. ಇದೇ ನೊಳಂಬವಾಡಿ ಪ್ರಾಂತದ ಕೇಂದ್ರ ಭಾಗವಾಗಿರಬೇಕೆಂದು ರೈಸ್ ಸೂಚಿಸಿದ್ದಾರೆ. ಇದಾದ ಮೇಲೆ ಚಾರುಪೊನ್ನೇರ ಮತ್ತು ಪೊಳಾಳಚೋರನ ಆಳಿಕೆ ನಡೆಯಿತು.

ಗಂಗರಾಜನಾದ 1ನೆ ರಾಜಮಲ್ಲ ಸತ್ಯವಾಕ್ಯನು (ಸುಮಾರು ಕ್ರಿ.ಶ. 820) ತನ್ನ ರಾಜ್ಯವನ್ನು ಮರಳಿ ಪಡೆದಾಗ ಸಿಂಹಪೋತನ ಮೊಮ್ಮಗಳನ್ನು ಮದುವೆಯಾದನು. ತನ್ನ ಮಗಳಾದ ಜಯಬ್ಬೆ (ಈಕೆ ನೀತಿಮಾರ್ಗನ ತಂಗಿ)ಯನ್ನು ನೊಳಂಬಾಧಿರಾಜ ಪೊಳಾಳಚೋರನಿಗೆ ಮದುವೆ ಮಾಡಿಕೊಟ್ಟನು. ಗಂಗರಾಜ ನೀತಿಮಾರ್ಗನ ಕೈಕೆಳಗೆ ಗಂಗ 6,000ವನ್ನು ಪೊಳಾಳ ಚೋರನು ಆಳುತ್ತಿದ್ದನು ಎಂದು ಹೇಳಲಾಗಿದೆ. ಈತನ ಪರ್ಯಾಯ ನಾಮವು ನೊಳಂಬಾಧಿರಾಜ ಎಂದಿತ್ತು. ಗಂಗರಾಜಕುಮಾರಿಯಿಂದ ಇವನಿಗೆ ಜನಿಸಿದ ರಾಜಕುಮಾರನೇ ಮಹೇಂದ್ರ, ಅಥವಾ ಬೀರಮಹೇಂದ್ರ ಅಥವಾ ಮಹೇಂದ್ರವರ್ಮ. ಗಂಗರ ಸಾಮಂತನಾಗಿ ಈತನು ಗಂಗ 6,000ದ ಮೇಲೆ ತನ್ನ ತಂದೆಯಂತೆ ಆಳುತ್ತಿದ್ದನು (E.C.X, Bowringpet 64). ಪೊಳಾಳಚೋರನ ಅಗ್ರಮಹಿಷಿಯಾದ ಕದಂಬವಂಶದ ದೇವಬ್ಬರಸಿಗೆ ಹುಟ್ಟಿದ (' ಪುಟ್ಟಿದ ಮಗಂ ')ವನು ಇವನೆಂದು ಕೋಲಾರ ಜಿಲ್ಲೆಯ ಆವಣಿಯಲ್ಲಿನ ಶಾಸನ ಹೇಳುತ್ತದೆ. ನೊಳಂಬಾಧಿರಾಜ ಅಥವಾ ನೊಳಂಬ ನಾರಾಯಣ ಎಂಬ ಹೆಸರುಗಳು ಮಹೇಂದ್ರನಿಗೆ ಇದ್ದಂತೆ ತೋರುತ್ತದೆ. ಈತನಿಗೆ ಕ್ರಿ.ಶ. 897ರಲ್ಲಿ ಆಳುತ್ತಿದ್ದ ನೊಳಂಬಾಧಿರಾಜ ನೊಳಿಪಯ್ಯ ಎಂಬ ಸೋದರನಿದ್ದು ಈ ಸೋದರನಿಗೆ ಅಂಕಯ್ಯನೆಂಬ ಮಗನಿದ್ದನು. ಮಹೇಂದ್ರನು ಭಾರಿ ವಿಸ್ತರಣವಾದಿ. ಸರ್ವತಂತ್ರ ಸ್ವತಂತ್ರ ರಾಜನಾಗುವ ಯತ್ನದಲ್ಲಿ ಅವನು ಸಾಧಿಸಿದ ಪ್ರಗತಿಯನ್ನು ಅನೇಕ ಶಾಸನಗಳು ಬಣ್ಣಿಸಿವೆ. ಮಹಾಬಲಿ ವಂಶ (ಬಾಣ)ವನ್ನು ಅವನು ನಾಶ ಮಾಡಿದ. ಇದರಿಂದ 'ಮಹಾಬಲಿ ಕುಲ ವಿಧ್ವಂಸ' ನೆಂಬ ಬಿರುದು ಅವನಿಗೆ ಬಂತು. ವಿರೂಪಾಕ್ಷಿಪುರ ಸ್ತಂಭಶಾಸನಗಳ ಪೈಕಿ ಒಂದರಂತೆ ಮಹೇಂದ್ರನು ಗಂಗಮಂಡಳದ 96,000ದ ಸಾರ್ವಭೌಮನಾಗಿದ್ದ. ಬಾಣರಾಜ ಬಾಣವಿದ್ಯಾಧರ (ಕ್ರಿ. ಶ. 861-895)ನ ಕಾಲದಲ್ಲಿ ಮಹೇಂದ್ರನು ಪುಳಿಂದನಾಡು ಅಥವಾ ಪುಂಗನೂರನ್ನು ಆಕ್ರಮಿಸಿ ಗೆದ್ದುಕೊಂಡ.

ಬಾಣಕುಲವಿಧ್ವಂಸನೆಂಬ ಬಿರುದನ್ನು ಪಡೆದ ಮಹೇಂದ್ರನ ರಾಜ್ಯ ಸೇಲಂ ಜಿಲ್ಲೆಯ ಧರ್ಮಪುರಿಯ ವರೆಗೆ ವಿಸ್ತರಿಸಿತ್ತು. ಇದಕ್ಕೆ ಸಮೀಪದ ಅದೈಮಾಂಕೋಟೆ ಗ್ರಾಮವು ಮಹೇಂದ್ರಮಂಗಲಂ ಎಂದು ಕರೆಯಲ್ಪಡುತ್ತಿತ್ತೆಂದು ಹೊಯ್ಸಳರ ಶಾಸನಗಳಿಂದ ಗೊತ್ತಾಗುತ್ತದೆ. ಇದೇ ರೀತಿ ಒಂದು ಶಿವ ದೇವಾಲಯವನ್ನು ಮಾಯಿಂದೀಸುರಂ ಉಡೈಯರ್ ಎಂದು ಕರೆಯಲಾಗುತ್ತಿತ್ತು. ಪಲ್ಲವರಂತೆ ನೊಳಂಬರು ದೇವಾಲಯಗಳ ರಚನೆಯಲ್ಲಿ ಆಸ್ಥೆಯುಳ್ಳವರು. ಅನಂತಪುರ ಜಿಲ್ಲೆಯ ಕಂಬದೂರಿನ ಮಲ್ಲಿಕಾರ್ಜುನ ದೇವಸ್ಥಾನ ಮತ್ತು ನಂದಿಯ ಭೋಗನಂದೀಶ್ವರ ದೇವಸ್ಥಾನಗಳು ಇವರ ರಚನೆಯ ಶ್ರೇಷ್ಠ ಉದಾಹರಣೆಗಳು.

ಗಂಗರಾಜ ಬೂತುಗನು ಮಹೇಂದ್ರನೊಡನೆ ಹೋರಾಡಿದ. ಮುಂದೆ ಬೂತುಗನ ಮಗ ಎರೆಯಪ್ಪನು ಅವನನ್ನು ಕೊಂದು ' ಮಹೇಂದ್ರಾಂತಕ ' ಎಂಬ ಬಿರುದನ್ನು ಪಡೆದನು.

ಮಹೇಂದ್ರನು ಕದಂಬರಾಜಕುಮಾರಿ ದೇವಾಂಬಿಕೆಯನ್ನೂ ಗಂಗರಾಜಕುಮಾರಿ ಗೋಮಬ್ಬೆ ಯನ್ನೂ ಮದುವೆಯಾಗಿದ್ದನು. ಅಯ್ಯಪ್ಪ ಅಥವಾ ನನ್ನಿಗ ಎಂಬ ಅವನ ಮಗನು ಗೋಮಬ್ಬೆಯ ಮಗ. ಈತ ಕ್ರಿ. ಶ. 934 ಮತ್ತು 945ರ ನಡುವೆ ಪೂರ್ವದ ಚಾಲುಕ್ಯ ಇಮ್ಮಡಿ ಭೀಮನ ಜೊತೆ ಹೋರಾಡಿ ಮಡಿದನು. ನನ್ನಿಗನು ಗಂಗರಾಜಕುಮಾರಿ ಪೊಲ್ಲಬ್ಬರಸಿಯನ್ನು ವರಿಸಿದ್ದು ಅವಳಿಂದ ಆತನಿಗೆ ಅಣ್ಣಿಗ ಎಂಬ ಮಗನಿದ್ದನು. ಅಣ್ಣಿಗನು ತನ್ನ ತಂದೆಯ ಕೈಕೆಳಗೆ ಮಾಂಡಲಿಕನಾಗಿದ್ದು, ಅನಂತರ ತನ್ನ

ತಂದೆಯ ರಾಜ್ಯಕ್ಕೆ ಉತ್ತರಾಧಿಕಾರಿಯಾದನು. ಅಣ್ಣಿಗನಿಗೆ ಅಣ್ಣಯ್ಯ ಅಥವಾ ಬೀರನೊಳಂಬ ಎಂಬ ಹೆಸರೂ ಇತ್ತು. ಇವನು ಗಂಗ ಮತ್ತು ರಾಷ್ಟ್ರಕೂಟರ ಜೊತೆ ಯುದ್ಧ ನಡೆಸಿದನು. ಆದರೆ ರಾಷ್ಟ್ರಕೂಟ ದೊರೆ ಕೃಷ್ಣ ಅಥವಾ ಮುಮ್ಮಡಿ ಕನ್ನನು ಕ್ರಿ.ಶ. 940 ರಲ್ಲಿ ಇವನನ್ನು ಸೋಲಿಸಿದನು. ತುಮಕೂರು ಜಿಲ್ಲೆಯ ಹಿರೇಗುಂಡಗಲ್ಲಿನ ಒಂದು ವೀರಗಲ್ಲು ಅವನ ಮರಣದ ಸ್ಮಾರಕವಾಗಿದೆ. ತನ್ನ ಅಜ್ಜ ಮಹೇಂದ್ರನು ಗಳಿಸಿದ್ದ ವಿಶಾಲ ರಾಜ್ಯದ ಮೇಲೆ ಈತನು ಆಡಳಿತ ನಡೆಸಿದನು.

ಅಣ್ಣಿಗನು 'ಚಾಲುಕಿ' ರಾಜಕುಮಾರಿ ಅತ್ತಿಯಬ್ಬರಸಿಯನ್ನು ವರಿಸಿದನು. ಇವರಿಗೆ 'ಪಲ್ಲವ ವಂಶಾಭರಣ'ನಾದ ಇರುಳನು ಜನಿಸಿದನು. ದಾಖಲೆಗಳಲ್ಲಿರುವ ತಾರೀಕಿನಂತೆ ವಂಶದ ಕೊನೆಯ ರಾಜನೆಂದು ಹೇಳಲಾದ ದಿಲೀಪರಸನ ಮೊದಲು ಇರುಳನು ಆಳಿರಬೇಕು. ಅವನಿಗೆ ಏನಾಯಿತು, ಎಷ್ಟುಕಾಲ ಆಳಿದನು ಎಂಬುದು ತಿಳಿಯದು. ಇರುಳನನಂತರ ಅವನ ಸೋದರನ ಮಗ ಇರಿವನೊಳಂಬ ಅಥವಾ ದಿಲೀಪ ಕ್ರಿ.ಶ. 943 ರಲ್ಲಿ ಪಟ್ಟಕ್ಕೆ ಬಂದನು. ಇವನನ್ನು ನೊಳಪಯ್ಯ ಅಥವಾ ನೊಳಿಪಯ್ಯ ಎಂದೂ ಕರೆಯಲಾಗುತ್ತಿತ್ತು. ಇವನು ವೈಡುಂಬ ಮತ್ತು ಮಹಾವಳಿಗಳ ಮೇಲೆ ಅಧಿಕಾರ ನಡೆಸಿದನು. ಆವಣಿಯ ಶೈವಗುರು ತ್ರಿಭುವನಕರ್ತಾರ ದೇವನು ಇವನ ಸಮಕಾಲೀನನು. ಕಲಿಯುಗ ರುದ್ರನೆಂದು ಕರೆಯಲಾದ ಈತನು ದಿಲೀಪನ ಗುರುವಾಗಿದ್ದಿರಬೇಕು. ಈ ಗುರುಗಳು ಕ್ರಿ. ಶ. 961 ರ ವರೆಗೆ ಜೀವಿಸಿದ್ದರು. ದಿಲೀಪನು ಗಂಗರಾಜ ಬೂತುಗ ಅಥವಾ ಅವನ ಮಗ ಮಾರಸಿಂಹನ ವಿರುದ್ಧ ಯುದ್ಧಮಾಡಿದನು. ಅವನ ರಾಜ್ಯಭಾರದ 20ನೆ ವರ್ಷದ ಒಂದು ಶಾಸನವು ಹೊಸಕೋಟೆ ತಾಲೂಕಿನ ಬಾಣಹಳ್ಳಿಯ ಕೆರೆಯ ತೂಬಿನಲ್ಲಿದ್ದು, ಕೆಲವು ಸ್ಥಳೀಯ 'ಗಾವುಂಡ'ರು ಆ ಕೆರೆಯನ್ನು ಕಟ್ಟಿದ ವಿಚಾರವನ್ನು ಅದು ತಿಳಿಸುತ್ತದೆ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ನೇತೃತ್ವದಲ್ಲಿ ಅವನು ಚೋಳರೊಡನೆ ಯುದ್ಧ ನಡೆಸಿದನು. ಚೋಳರಾಜ್ಯದ ಭಾಗವಾದ ತೊಂಡೈಮಂಡಲವನ್ನು ಕೃಷ್ಣನು ವಶಪಡಿಸಿ ಕೊಂಡಿದ್ದನು. ಅನಂತಪುರ ಜಿಲ್ಲೆಯ ಮಡಕಶಿರಾದಲ್ಲಿನ ಒಂದು ಶಾಸನದಂತೆ (ಕ್ರಿ.ಶ. 948) ದಿಲೀಪನು ಗಜಾಂಕುಶ ಚೋಳನ ವಿರುದ್ಧ ಇಪಿಲಿ ಯುದ್ಧವನ್ನು ನಡೆಸಿದನು. (ಈ ಗಜಾಂಕುಶನು 1ನೆ ಪರಾಂತಕನ ಮಗ ರಾಜಾದಿತ್ಯನೆಂದು ಗುರುತಿಸಲಾಗಿದೆ). ಬಲ್ಲಹ ದೊರೆಯ ಇಚ್ಛೆಯಂತೆ ಕೆಲವು ಶ್ರೇಷ್ಠ ಬಿಲ್ಲಾಳುಗಳು ಅವನ ಕೈಕೆಳಗೆ ಹೋರಾಡಿದರು. (ಬಲ್ಲಹನೆಂದರೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣ).

ದಿಲೀಪನನಂತರ ಯಾರು ಆಳಿದರೆಂದು ಸ್ಪಷ್ಟವಾಗಿ ತಿಳಿಯದು. ದಿಲೀಪನನಂತರ ಅವನ ಮಗ ನನ್ನಿನೊಳಂಬನು ಆಳಿದನೆಂದು ಕರಶನಪಳ್ಳಿ ಕಲ್ಲುಶಾಸನ ಹೇಳುತ್ತದೆ. ಅನಂತರ ಅವನ ಮೊಮ್ಮಗ ಪೊಳಾಳಚೋರನೂ ಮರಿಮಗ ವೀರಮಹೇಂದ್ರ ನೊಳಂಬಾಧಿರಾಜನೂ ಆಳಿದರೆಂದು ತಿಳಿಯುತ್ತದೆ. ರಾಜ್ಯದ ಹೊರಗೂ ಒಳಗೂ ದೊರೆತ ಶಾಸನಗಳು ಈ ಮಾತನ್ನು ಸಮರ್ಥಿಸುತ್ತವೆ. ನನ್ನಿ ನೊಳಂಬನು 969ರ ವೇಳೆಗೆ ಪಟ್ಟಕ್ಕೆ ಬಂದ. 'ಚಲದಂಕಕಾರ' ಮತ್ತು 'ಪಲ್ಲವ ರಾಮ' ಎಂದು ಕಂಬದೂರು ಶಾಸನ ಅವನನ್ನು ಸಂಬೋಧಿಸಿದೆ. ಕ್ರಿ. ಶ. 965ರ ಕದಂಬದೂರು ಶಾಸನದಲ್ಲಿ ಹೇಳಿರುವಂತೆ 'ಕಾಂಚಿ ವಲ್ಲಭ' ಮತ್ತು ಆಳುವ ದೊರೆಯ ಮೊಮ್ಮಗ ಎಂಬುದಾಗಿ ಪೊಳಾಳಚೋರನ ವಿಚಾರ ನಮಗೆ ತಿಳಿಯುತ್ತದೆ. ಇದಕ್ಕೂ ಹೆಚ್ಚಾಗಿ ಯಾವ ವಿಚಾರವೂ ತಿಳಿದು ಬರುವುದಿಲ್ಲ. ರಾಷ್ಟ್ರಕೂಟರ ಸಾಮಂತ ನಾಗಿದ್ದ (ಪೊಳಾಳಚೋರನ ಮಗ) ವೀರ ಮಹೇಂದ್ರನು ಚೋಳರಾಜ್ಯದ ಉತ್ತರ ಭಾಗವಾದ ಕಾಂಚಿಯ ಸುತ್ತಲ ತೊಂಡೈಮಂಡಲವನ್ನು ಗೆದ್ದನೆಂದು ತಿಳಿಯುತ್ತದೆ. ವೀರ ಮಹೇಂದ್ರನು ಈ ವಂಶದ ಕೊನೆಯ ರಾಜ. ಕೋಲಾರ ಜಿಲ್ಲೆಯೊಳಗಿನ ಅನೇಕ ಶಾಸನಗಳಂತೆ ಕ್ರಿ.ಶ. 974 ರ ಹೊತ್ತಿಗೆ ಗಂಗರಾಜ ಮಾರಸಿಂಹನು ನೊಳಂಬ ಪಲ್ಲವರನ್ನು ಸೋಲಿಸಿ ನೊಳಂಬಕುಲಾಂತಕ ಎಂಬ ಬಿರುದನ್ನು ಧರಿಸಿದನು.

ಈ ಗಂಗರ ವಿಜಯದ ಕೆಲಕಾಲದನಂತರವೇ ಚೋಳರು ನೊಳಂಬ ರಾಜ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ.

ಚೋಳರು ಬಿಜಯತಿಮಂಗಲ (ಇಂದಿನ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಬೇತಮಂಗಲ) ತಲಪಿದ್ದು ನೊಳಂಬಸೇನೆಯನ್ನು ಸೋಲಿಸಿದನಂತರವೇ.

ಇದೇ ಕಾಲಕ್ಕೆ ನೊಳಂಬರು ತಮ್ಮ ನಿಷ್ಠೆಯನ್ನು ಕಲ್ಯಾಣದ ಚಾಲುಕ್ಯರಿಗೆ ವರ್ಗಾಯಿಸಿದ್ದು ಕಾಣಿಸುತ್ತದೆ. ಬಳ್ಳಾರಿ ಜಿಲ್ಲೆಯ ಕಂಪಿಲಿಯಲ್ಲಿ ಅವರು ಆಳತೊಡಗಿದ್ದು ಕಂಡುಬರುತ್ತದೆ. ಕ್ರಿ.ಶ. 1022ರಲ್ಲಿ ಜಗದೇಕಮಲ್ಲ ನೊಳಂಬ ಪಲ್ಲವನೂ, 1035ರಲ್ಲಿ ಉದಯಾದಿತ್ಯನೂ (ನೊಳಂಬ ಪಲ್ಲವ ಪೆರ್ಮಾನಡಿ), 1037 ರಲ್ಲಿ ನೊಳಂಬ ಪಲ್ಲವ ಪೆರ್ಮಾನಡಿಯೂ 1042 ರಲ್ಲಿ ನನ್ನಿನೊಳಂಬ ಪಲ್ಲವನೂ ಆಳುತ್ತಿದ್ದುದು ಕಂಡುಬರುತ್ತದೆ. ಇವರು ತಮ್ಮ ಚಾಲುಕ್ಯ ಅಧಿಪತಿಗಳ ಬಿರುದುಗಳನ್ನೇ ಧರಿಸಿದ್ದರು.

ಮೂಲ ನೊಳಂಬ ವಂಶದ ದೊರೆಗಳು ಈ ರೀತಿ ಚಾಲುಕ್ಯರ ಕೈಕೆಳಗೆ ಒಂದಲ್ಲ ಒಂದು ಪ್ರದೇಶದ ಮೇಲೆ ರಾಜ್ಯಭಾರ ನಡೆಸುತ್ತಿದ್ದರು. ಆದರೆ 1057ರಲ್ಲಿ ನೊಳಂಬವಾಡಿ 32,000ವು ಚಾಲುಕ್ಯ ಆರ್ಮಡಿ ವಿಕ್ರಮಾದಿತ್ಯನ ನೇರ ಆಡಳಿತಕ್ಕೆ ಒಮ್ಮೆಗೇ ಒಳಪಟ್ಟದ್ದು ಕಂಡು ಬರುತ್ತದೆ. ಕ್ರಿ.ಶ. 1064ರಲ್ಲಿ (ಶಕವರ್ಷ 986) ಆರ್ಮಡಿ ವಿಕ್ರಮಾದಿತ್ಯನ ಸೋದರ ವಿಷ್ಣುವರ್ಧನ ವಿಜಯಾದಿತ್ಯನು ತನ್ನ ತಂದೆ 1ನೆ ಸೋಮೇಶ್ವರನ ಕೈಕೆಳಗೆ ನೊಳಂಬವಾಡಿ 32,000ದ ಮಾಂಡಳಿಕನಾಗಿದ್ದುದು ಕಾಣಿಸುತ್ತದೆ. ಶಕವರ್ಷ 990 (ಕ್ರಿ.ಶ. 1068) ರಲ್ಲಿ ಆರನೇ ವಿಕ್ರಮಾದಿತ್ಯನ ಇನ್ನೊಬ್ಬ ಸೋದರನಾದ ಜಯಸಿಂಗ ದೇವನು ದೊರೆ ಇಮ್ಮಡಿ ಸೋಮೇಶ್ವರ ಭುವನೈಕಮಲ್ಲನ ಕೈಕೆಳಗೆ ಇದೇ ಪ್ರದೇಶದ ಮಾಂಡಳಿಕನಾಗಿದ್ದನು. ಅವನು ನೊಳಂಬರ ಎಲ್ಲ ಬಿರುದುಗಳನ್ನೂ ಧರಿಸಿದ್ದನು. ಈ ರೀತಿ ಶಕವರ್ಷ 978 (ಕ್ರಿ.ಶ. 1057) ರ ಅನಂತರ ನೊಳಂಬವಾಡಿಯು ಚಾಲುಕ್ಯರ ನೇರ ಆಡಳಿತಕ್ಕೆ ಒಳಪಟ್ಟಿತು. ಚಾಲುಕ್ಯರು ತಮ್ಮ ವಂಶದವರನ್ನೇ ಕಂಪಲಿಯು ರಾಜಧಾನಿಯಾಗಿರುವ ನೊಳಂಬವಾಡಿಯ ಮೇಲೆ ಮಾಂಡಳಿಕರನ್ನಾಗಿ ನೇಮಿಸುತ್ತಿದ್ದರು.

ಚೋಳರು ಚಾಲುಕ್ಯರ ರಾಜ್ಯದ ಮೇಲೆ ಆರಂಭಿಸಿದ ದಂಡಯಾತ್ರೆಯು 1064ರಲ್ಲಿ ಕೂಡಲ ಸಂಗಮದ ಬಳಿ ಚಾಲುಕ್ಯರನ್ನು ಸೋಲಿಸಿ ಕೊನೆಗೊಂಡಾಗ ಕಂಪಿಲಿಯ ಸೂರೆಯಾಯಿತು. ಇದರಿಂದ ನೊಳಂಬವಾಡಿ ಮಂಡಲದ ರಾಜಧಾನಿ ಬದಲಾಯಿತು. ಉಚ್ಚಂಗಿಯ ಪಾಂಡ್ಯರನ್ನು ಈ ಪ್ರದೇಶದ ಮಾಂಡಳಿಕರಾಗಿ ನೇಮಿಸಲಾಯಿತು. ಹನ್ನೆರಡನೆ ಶತಕದನಂತರ ನೊಳಂಬವಂಶವು ಇತಿಹಾಸದಿಂದ ಮಾಯವಾಯಿತು.

## ನೊಳಂಬ ಪಲ್ಲವರ ವಂಶವೃಕ್ಷ



# ಪುನ್ನಾಟ

ಪುನ್ನಾಟವು ಮೈಸೂರಿನ ದಕ್ಷಿಣಕ್ಕಿರುವ ಒಂದು ಪ್ರಾಚೀನ ರಾಜ್ಯ. ಭದ್ರಭಾಹುವಿನ ನೇತೃತ್ವದಲ್ಲಿ ಕ್ರಿ. ಪೂ. ಮೂರನೆ ಶತಮಾನದಲ್ಲಿ ಜೈನರು ಉತ್ತರದಿಂದ ವಲಸೆ ಬಂದುದು ಇದೇ ಪುನ್ನಾಟಕ್ಕೆ. ಶ್ರವಣಬೆಳಗೊಳದಿಂದ ಪುನ್ನಾಟಕ್ಕೆ ಹೋಗಲು ಭದ್ರಬಾಹು ತನ್ನ ಶಿಷ್ಯರಿಗೆ ಆಣತಿಯಿತ್ತನು (ಬೃಹತ್ ಕಥಾಕೋಶ ಕ್ರಿ.ಶ. 931). ಪುಷ್ಯರಾಗ ದೊರೆಯುವ ನಾಡೆಂದು ಟಾಲೆಮಿ ಉಲ್ಲೇಖಿಸಿರುವ 'ಪೌನ್ನಾಟ' ಇದೇ ಪ್ರದೇಶ. ಕೀರ್ತಿಪುರವು (ಕಪಿನಿ ನದಿಯ ದಂಡೆಯಲ್ಲಿರುವ ಹೆಗ್ಗಡದೇವನ ಕೋಟೆ ತಾಲೂಕಿನ ಕಿತ್ತೂರು) ರಾಜಧಾನಿಯಾಗಿರುವ 6,000ದ ಪ್ರಾಂತವೆಂದು ಪುನ್ನಾಟದ ಬಗ್ಗೆ ಗಂಗರಾಜ ಅವಿನೀತನ ಒಂದು ಶಾಸನ ಹೇಳುತ್ತದೆ. ಪುನ್ನಾಟವ ದೊರೆ ಸ್ಕಂದವರ್ಮನ ಮಗಳನ್ನು ಅವಿನೀತನು ಮದುವೆಯಾದನು. ಇವರ ಮಗನೇ ಖ್ಯಾತನಾದ ದುರ್ವಿನೀತ. ಸುಮಾರು ಕ್ರಿ. ಶ. 500ರಲ್ಲಿ ಪುನ್ನಾಟವನ್ನು ಗಂಗರಾಜ್ಯದಲ್ಲಿ ವಿಲೀನಗೊಳಿಸಲಾಯಿತು.

ಪುನ್ನಾಟದ ದೊರೆಗಳ ಒಂದೇ ಒಂದು ತೇದಿಯಿಲ್ಲದ ಶಾಸನವಿದೆ. ಈ ಶಾಸನದಲ್ಲಿ ಪುನ್ನಾಟದ ದೊರೆಗಳ ಪಟ್ಟಿಯಿದೆ: ರಾಷ್ಟ್ರವರ್ಮ, ಅವನ ಮಗ ನಾಗದತ್ತ, ಅವನ ಮಗ ಭುಜಗ. ಭುಜಗನು ಶ್ರೀನಾಗವರ್ಮನ ಮಗಳನ್ನು ಮದುವೆಯಾದ. ಭುಜಗನ ಮಗ ಸ್ಕಂದವರ್ಮ ಮತ್ತು ಈತನ ಮಗ ರವಿದತ್ತ. ಇವೇ ಆ ಪಟ್ಟಿಯಲ್ಲಿರುವ ಹೆಸರುಗಳು.

ಮೂಲ ಲೇಖಕರು : ಡಾ॥ ಎಸ್. ಶ್ರೀಕಂಠ ಶಾಸ್ತ್ರಿ
ಅನುವಾದಕರು : ಡಾ॥ ಸೂರ್ಯನಾಥ ಕಾಮತ್

# ಮತ, ಸಮಾಜ ಮತ್ತು ಸಂಸ್ಕೃತಿ

ಆದಿಕಾಲದಲ್ಲಿ ಕರ್ಣಾಟಕದ ಬೇರೆಬೇರೆ ಪ್ರದೇಶಗಳಲ್ಲಿ ರಾಜ್ಯವಾಳಿದ ಚಿಕ್ಕ ದೊಡ ರಾಜ್ಯವಂಶಗಳ ಚರಿತ್ರೆಯ ವಿಷಯವಾಗಿ ಇದುವರೆಗೂ ನಾವು ವಿಚಾರ ಮಾಡಿದ್ದೇವೆ. ಕರ್ಣಾಟಕ ದೇಶದ ಐತಿಹ್ಯ ಮತ್ತು ಪುರಾಣಕಥೆಗಳನ್ನು ವಿವರಿಸುವ ಈ ಗ್ರಂಥ ಭಾಗದಲ್ಲಿ, ಹಾಗೆ ರಾಜ್ಯವಾಳಿದವರೆಲ್ಲರೂ ವೈದಿಕ ಸಂಸ್ಕೃತಿಯ ಪ್ರಭಾವಕ್ಕೆ ಗಾಢವಾಗಿ ಒಳಗಾಗಿದ್ದರೆಂದೂ ಅವರಲ್ಲಿ ಬಹುಪಾಲಿನವರು ತಮ್ಮ ವಂಶಕ್ಕೆ ವೇದಕಾಲದ ಯಾರಾದರೊಬ್ಬ ಪ್ರಸಿದ್ಧ ಋಷಿಯೇ ಮೂಲಪುರುಷನೆಂದು ಹೇಳಿಕೊಳ್ಳುವರೆಂದೂ ಕಂಡುಕೊಂಡಿದ್ದೇವೆ. ಮತನಂಬಿಕೆಗಳು ಮತ್ತು ಧರ್ಮಾಚರಣೆಗಳಿಗೆ ಸಂಬಂಧಪಟ್ಟಂತೆ ವಿಚಾರ ಮಾಡಿದರೆ, ಸಮಾಜದ ಮುಂದಾಳುಗಳಾದ ರಾಜರು ಮತ್ತು ವಿದ್ವಾಂಸರುಗಳು ವೈದಿಕಸಂಪ್ರದಾಯಗಳಿಗೆ ಅನುಸಾರವಾದ ಭಾವನೆಗಳನ್ನೂ ಜೀವನಕ್ರಮಗಳನ್ನೂ ಮೈಗೂಡಿಸಿಕೊಂಡಿದ್ದರೆಂಬುದು ಸ್ಪಷ್ಟವಾಗಿದೆ. ಉತ್ತರ ಭಾರತದಲ್ಲಿ ಅದುವರೆಗಾಗಲೆ ಪ್ರಚಾರದಲ್ಲಿದ್ದ ಮತಗಳು–ವೈದಿಕ ನಂಬಿಕೆಗಳ ಪರಿಣಾಮದಿಂದ ರೂಪುಗೊಂಡ ಶೈವ ವೈಷ್ಣವ ಮೊದಲಾದವೂ, ವೈದಿಕಮೂಲವಲ್ಲದ ಜೈನ ಬೌದ್ಧಮತಗಳೂ, ಸ್ಥಳೀಯವಾದ ನಂಬಿಕೆಗಳಿಗೆ ಸೇರಿದ ಹಲಕೆಲವು ಆಚರಣೆಗಳೂ ಪ್ರಚಾರದಲ್ಲಿದ್ದವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಈ ಮತಗಳೆಲ್ಲವೂ ಕ್ರಿಸ್ತಶಕ ಪ್ರಾರಂಭವಾಗುವುದಕ್ಕೆ ಎಷ್ಟೋ ಮುಂಚೆಯೇ ದಕ್ಷಿಣಭಾರತಕ್ಕೆ ಬಂದವು. ಜೈನರು ದಕ್ಷಿಣಕ್ಕೆ ವಲಸೆ ಬಂದಾಗ ಕರ್ಣಾಟಕ ದೇಶವು ಅವರಿಗೆ ಆಶ್ರಯ ಕೊಟ್ಟು ಆದರಿಸಿತೆಂಬುದು ಗಮನಾರ್ಹವಾದ ಸಂಗತಿ. ಶ್ರವಣಬೆಳಗೊಳವು ಜೈನಧರ್ಮದ ಒಂದು ಪ್ರಧಾನ ಕೇಂದ್ರವಾಯಿತು. ನಾವು ಈಗಾಗಲೆ ಅರಿತುಕೊಂಡಿರುವಂತೆ ಹಲವಾರು ರಾಜಮನೆತನಗಳು ಜೈನಮತವನ್ನು ಅವಲಂಬಿಸಿದವು. ಈಗಲೂ ಈ ಮತ ಕರ್ಣಾಟಕದಲ್ಲಿ ಜೀವಂತವಾಗಿದೆ ; ಗಣನೀಯ ಸಂಖ್ಯೆಯಲ್ಲಿ ಈ ಮತಕ್ಕೆ ಅನುಯಾಯಿಗಳಿದ್ದಾರೆ. ಬೌದ್ಧಮತವಿಷಯದಲ್ಲಾದರೋ, ಅದು ಕರ್ಣಾಟಕದಲ್ಲಿ ಹರಡಿತ್ತೆಂಬುದಕ್ಕೂ, ಸುಮಾರು 12ನೆಯ ಶತಮಾನದ ವರೆಗೆ ಪ್ರಚಾರದಲ್ಲಿತ್ತೆಂಬುದಕ್ಕೂ, ಆ ಶತಮಾನದಲ್ಲಿ ಭಾರತದ ಇತರ ಪ್ರದೇಶಗಳಿಂದ ಹೇಗೋ ಹಾಗೆ ಕರ್ಣಾಟಕದಿಂದಲೂ ಅದು ಕಣ್ಮರೆಯಾಯಿತೆಂಬುದಕ್ಕೂ ನಮಗೆ ತಕ್ಕಷ್ಟು ಆಧಾರಗಳಿವೆ.

ಈಗ ಈ ಮತಗಳಲ್ಲಿ ಪ್ರತಿಯೊಂದರ ಚಾರಿತ್ರಿಕ ಬೆಳವಣಿಗೆ ಮತ್ತು ಅವುಗಳ ತತ್ತ್ವಸಿದ್ಧಾಂತಗಳನ್ನು ಕುರಿತು ವಿಚಾರಮಾಡೋಣ.

## ಶೈವ ಮತ

ಶೈವವು ಬಹು ಪುರಾತನವಾದ ಮತ. ಅದರ ಮೂಲ ಯಾವುದೆಂದು ಗೊತ್ತುಮಾಡುವುದು ಕಷ್ಟ. ಅದು ವೈದಿಕಪೂರ್ವಕಾಲದ್ದೆಂದೂ ಆರ್ಯೇತರವೆಂದೂ ಕೆಲವರು ವಿದ್ವಾಂಸರು ಪ್ರತಿಪಾದಿಸುತ್ತಾರೆ. ಅವರ ವಾದಗಳನ್ನು ಒಪ್ಪಲಾಗುವುದಿಲ್ಲ ; ಅವಕ್ಕೆ ನಿರ್ದಿಷ್ಟ ಆಧಾರಗಳಿಲ್ಲ. ಅವರವರು ಹೀಗಿರಬೇಕೆಂದು ಇಟ್ಟುಕೊಂಡ ಕಾಲ್ಪನಿಕ ಆಧಾರಗಳ ಮೇಲೆ ಆ ವಾದಗಳು ನಿಂತಿವೆ.

ವೈದಿಕ ದೇವತೆ ರುದ್ರನು ಅಪಕಾರಿಯಾದ ದುಷ್ಟ ದೇವತೆಯೆಂದೂ (ಮುಯಿರ್) ಕೇಡಿಗೆ ಕಾರಣನಾದವನೆಂದೂ (ವೇಬರ್) ಅನುಮಾನಿಸುವುದು ಸರಿಯಲ್ಲ ; ಏಕೆಂದರೆ, ಋಗ್ವೇದದಲ್ಲಿ ರುದ್ರನಿಗೆ ಸಂಬಂಧಿಸಿದ ಸಂದರ್ಭಗಳಲ್ಲಿ ಅದಕ್ಕೆ ಸಮರ್ಥನೆ ದೊರೆಯುವುದಿಲ್ಲ. ಅವನಿಗೆ ದ್ವಿಮುಖವಾದ

ಕಾರ್ಯವಿದೆ. ಒಂದು, ಅವನ ಭಕ್ತರಿಗೆ ಅಭಿವೃದ್ಧಿಯನ್ನು ಕೊಡುವುದು ; ಮತ್ತೊಂದು ಅವರ ಕಷ್ಟಗಳನ್ನು ಪರಿಹಾರಮಾಡುವುದು. ಸಂಪತ್ತನ್ನೂ ಕ್ಷೇಮವನ್ನೂ ಅನುಗ್ರಹಿಸುವ ಸಂದರ್ಭಗಳಲ್ಲಿ ಅವನೊಬ್ಬ ಉಪಕಾರಿ ದೇವತೆಯೆಂದೂ, ಅಧರ್ಮಿಗಳನ್ನು ಶಿಕ್ಷಿಸುವ ಸಂದರ್ಭಗಳಲ್ಲಿ ಕೋಪಿಷ್ಠದೇವತೆ ಯೆಂದೂ ಭಾವಿಸಲಾಗಿದೆ.

ಮೊಹೆಂಜೊದಾರೋದಲ್ಲಿ ದೊರೆತ ಕೆಲವು ಮುದ್ರಿಕೆಗಳಲ್ಲಿ ಪ್ರಾಣಿಗಳಿಂದ ಸುತ್ತುವರಿಯಲ್ಪಟ್ಟು ಮೂರು ತಲೆಗಳುಳ್ಳ ಒಂದು ಆಕೃತಿ ಕಂಡುಬರುತ್ತದೆ. ಆ ಆಕೃತಿ 'ಪಶುಪತಿ'ಯ ಮೂರ್ತಿಯೆಂದು ಸರ್ ಜಾನ್ ಮಾರ್ಷಲ್ ನಿರ್ಣಯಿಸಿದ್ದಾರೆ. ಈ ನಿರ್ಣಯ ಸಮರ್ಪಕವಾಗಿಲ್ಲ. ಅವರು ಊಹಿಸಿರುವಂತೆ ಅದು ಪಶುಪತಿಯ ಮೂರ್ತಿಯಾಗಿರಲಾರದು, ಆ ಜನಗಳ ಮತ ಮತ್ತು ಆ ಮುದ್ರಿಕೆಗಳ ಅರ್ಥ ಏನೆಂಬುವರ ಬಗ್ಗೆ ಕಟ್ಟಕಡೆಯ ನಿರ್ಣಾಯಕ ಅಭಿಪ್ರಾಯವನ್ನು ಹೇಳುವುದಕ್ಕೆ, ಆ ಮುದ್ರಿಕೆಗಳ ಮೇಲಿನ ಬರಹವನ್ನು ಸರಿಯಾಗಿ ಅರಿತು ಓದಿದ ಮೇಲೆ ಮಾತ್ರವೇ ಸಾಧ್ಯವಾಗುತ್ತದೆ. ಅಲ್ಲಿಯ ವರೆಗೆ ಅವುಗಳ ಆಧಾರದ ಮೇಲೆ ಕಟ್ಟಿದ ವಾದಗಳೆಲ್ಲಾ ಕಾಲ್ಪನಿಕಗಳೇ, ವಾದಕ್ಕೆ ಮಾತ್ರ ಇಟ್ಟುಕೊಂಡವುಗಳೇ.

ಶಿವನ ಚಿಹ್ನೆಯಾಗಿ ಲಿಂಗವನ್ನು ಪೂಜಿಸುವ ಸಂಗತಿಯನ್ನು ಕೂಡ ಬಹಳ ತಪ್ಪರ್ಥ ಮಾಡಿಕೊಂಡಿದ್ದಾರೆ. ಅದನ್ನು ಶಿಶ್ನಶಬ್ದಕ್ಕೆ ಸಮಾನವಾಗಿ ಪರಿಗಣಿಸುವುದು ಸರಿಯಲ್ಲ. ಋಗ್ವೇದದಲ್ಲಿ ಎರಡು ಸಲ ಮಾತ್ರ (VII–21 ; 5· X–99;3) ಆ ಶಬ್ದ ಪ್ರಯೋಗವಾಗಿದೆ. ಮೆಸೊಪೊಟೇಮಿಯ, ಈಜಿಪ್ಟ್, ಗ್ರೀಸ್ ಮೊದಲಾದ ಭಾರತದ ಹೊರಗಿನ ದೇಶಗಳಲ್ಲಿ ಪ್ರಚಾರದಲ್ಲಿದ್ದ ಶಿಶ್ನಪೂಜೆಯ ಪದ್ಧತಿಗೂ ಈ ಲಿಂಗಪೂಜೆಗೂ ಸಂಬಂಧ ಕಲ್ಪಿಸಲಾಗುವುದಿಲ್ಲ. ಚರಿತ್ರ ಪೂರ್ವಯುಗದ ಬುಡಕಟ್ಟು ಜನವರ್ಗಗಳಲ್ಲಿ ಶಿಶ್ನಪೂಜಾಪದ್ಧತಿ ಪ್ರಚಾರದಲ್ಲಿತ್ತೆಂಬುದರ ಕುರುಹಾಗಿ ಅಲ್ಲೊಮ್ಮೆ ಇಲ್ಲೊಮ್ಮೆ ಶಿಶ್ನಪೂಜಾ ಪದ್ಧತಿಗೆ ಸಂಬಂಧಿಸಿದ ವಸ್ತುಗಳು ದೊರೆತಿರುವುದು ಶಿವಲಿಂಗವು ಮೂಲದಲ್ಲಿ ಶಿಶ್ನಕ್ಕೆ ಸಂಕೇತವಾಗಿತ್ತೆಂದು ಭಾವಿಸುವುದಕ್ಕೆ ಕಾರಣವಾಗಿದೆ. ಪುರಾತನವಾದ ಕೆಲವು ಮತಪದ್ಧತಿಗಳಲ್ಲಿ ಭಾವೋನ್ಮತ್ತತೆಯಿಂದ ಕೂಡಿ ನಡಸುವ ಕೆಲವು ಪೂಜಾವಿಧಾನಗಳಿರುವುದನ್ನು ಗಮನಿಸಿದ ಪಂಡಿತರು ಶೈವ ಮತವನ್ನು ಅಧ್ಯಯನ ಮಾಡಿ ಆ ತಿಳಿವಳಿಕೆಯಿಂದ ಪ್ರಭಾವಿತರಾಗಿ ಶಿವಲಿಂಗವು ಶಿಶ್ನಸಂಕೇತವೆಂದು ಒಪ್ಪಿಕೊಳ್ಳುವಂತಾಗಿರ ಬಹುದು. ಆದರೆ, ಮೂಲತಃ ಲಿಂಗವು ಕೇವಲ ಶಿವನಿಗೆ ಸಂಕೇತ ಮಾತ್ರವಾಗಿದ್ದಿರಬಹುದು ; ಅದಕ್ಕೆ ಮತ್ತೇನೂ ಅರ್ಥ ವಿಲ್ಲದಿದ್ದಿರಬಹುದು. ಲಿಂಗಪೂಜೆ ಪ್ರಾರಂಭವಾದ ಮೇಲೆ ಜನಸಾಮಾನ್ಯರ ಮನಸ್ಸಿನಲ್ಲಿ ಶಿಶ್ನಪೂಜೆಗೂ ಶಿವಚಿಹ್ನೆಯಾದ ಈ ಲಿಂಗದ ಪೂಜೆಗೂ ಭೇದ ತಿಳಿಯದೆ ಗೊಂದಲವುಂಟಾಗಿರುವುದು ಸಾಧ್ಯ; ಎರಡು ಪೂಜಾಪದ್ಧತಿಗಳನ್ನೂ ಸಮೀಕರಿಸುವ ಕಥೆಗಳು ಸೃಷ್ಟಿಯಾಗಿರಬಹುದು. ಬೇರೆ ಬೇರೆ ಮತಗಳ ಅನುಯಾಯಿಗಳಲ್ಲಿದ್ದ ಸ್ವಮತಾತಿನಿಷ್ಠೆಯಿಂದ ಅವರು ಅನ್ಯಮತಗಳ ಪೂಜಾ ವಸ್ತುಗಳನ್ನು ಹೀನಯಿಸುವುದಕ್ಕೆ ಕಾರಣವಾಯಿತು. ಮಹಾಭಾರತದಲ್ಲಿಯೂ ಕೆಲವು ಪುರಾಣಗಳಲ್ಲಿಯೂ ಕಾಣಬರುವ ಕೆಲವು ಪ್ರಕರಣಗಳು ಶಿವಲಿಂಗವು ಶಿಶ್ನಚಿಹ್ನೆಯೆಂದು ಅರ್ಥಮಾಡುವುದಕ್ಕೆ ಅವಕಾಶ ಕಲ್ಪಿಸುವಂತಿವೆ; ಇಂಥ ಭಾಗಗಳು ಬಹಳವೇನಿಲ್ಲ ; ಇವು ಮೂಲದಲ್ಲಿರದೆ ಅನಂತರ ಕಾಲಗಳಲ್ಲಿ ಸೇರಿಸಿದ ಪ್ರಕ್ಷಿಪ್ತಗಳಾಗಿರಬೇಕೆಂದು ಸಮಾಧಾನ ಹೇಳಬಹುದು. ಬಾರ್ತ್ ಹೀಗೆ ಹೇಳುತ್ತಾನೆ: "ಭಗವಂತನ ಪ್ರತೀಕವಾಗಿ ಭಾರತವು ಕಲ್ಪಿಸಿರುವವುಗಳಲ್ಲೆಲ್ಲಾ ಇವು (ಲಿಂಗಗಳು) ನೋಡುವುದಕ್ಕೆ ಅತ್ಯಂತ ಕಡಮೆ ಅಹಿತಕರಗಳಾಗಿವೆ. ಯಾವುದು ಹೇಗಾದರೂ, ಇವುಗಳಲ್ಲಿ ಭೌತಿಕತ್ವ ಅತ್ಯಂತ ಕಡಮೆ ಪ್ರಮಾಣದಲ್ಲಿದೆ. (ಬಾರ್ತ್ : ರಿಲಿಜನ್ಸ್ ಆಫ್ ಇಂಡಿಯ, ಪು. 262).

ಮಹಾಭಾರತದ ಸಂಕಲನಕಾಲದ ಸರಿಸುಮಾರಿನಲ್ಲಿ ಲಿಂಗಪೂಜೆಯು ಹಿಂದೂ ಧರ್ಮದ ಅಂಗವಾಗಿ ಅಂಗೀಕೃತವಾಯಿತೆಂದು ಸರ್ ಚಾರ್ಲ್ಸ್ ಎಲಿಯಟ್ ಅಭಿಪ್ರಾಯ ಪಡುತ್ತಾನೆ. ಆತ ಹೀಗೆನ್ನುತ್ತಾನೆ :

"ಮೂಲನಿವಾಸಿಗಳಿಂದ, ವಿಶೇಷವಾಗಿ ದ್ರಾವಿಡವರ್ಗದ ಬುಡಕಟ್ಟು ಜನವರ್ಗಗಳಿಂದ ಇದನ್ನು ತೆಗೆದುಕೊಳ್ಳಲಾಯಿತೆಂಬ ಹಳೆಯ ವಾದ ಈಗ ನಿರಾಕೃತವಾಗಿದೆ. ಮೊದಲನೆಯದಾಗಿ, ಮೂಲನಿವಾಸಿ ಬುಡಕಟ್ಟುಗಳಲ್ಲಿ ಶಿಶ್ನಪೂಜೆ ರೂಢಿಯಾಗಿತ್ತೆಂಬುದಕ್ಕೆ ಆಧಾರವಾಗಿ ಕೊಡುವ ಸಂಗತಿಗಳು ಸಾಕಷ್ಟು ಸಂಖ್ಯೆಯಲ್ಲೂ ಇಲ್ಲ, ಸಾಕಷ್ಟು ಪರಿಣಾಮಕಾರಿಯೂ ಆಗಿಲ್ಲ. ಎರಡನೆಯದಾಗಿ, ಲಿಂಗಪೂಜೆಯು ದಕ್ಷಿಣದಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವುದಾದರೂ ಅಲ್ಲಿಗೆ ಮಾತ್ರ ಸೀಮಿತವಾಗಿಲ್ಲ; ಭಾರತದ ಎಲ್ಲಾ ಭಾಗಗಳಲ್ಲಿಯೂ ಹರಡಿದೆ; ಅಸ್ಸಾಮ್ ನೇಪಾಳಗಳಲ್ಲಿ ಕೂಡ ರೂಢಿಯಾಗಿದೆ. ಮೂರನೆಯದಾಗಿ, ಇದು ಕೀಳು ಜಾತಿಯವರಲ್ಲಿ ಮಾತ್ರವೇ ಪ್ರಚಾರದಲ್ಲಿಲ್ಲ; ಭಾವೋನ್ಮತ್ತತೆಯ, ಅಶ್ಲೀಲವಾದ ಮತ್ತು ರಕ್ತಪಿಪಾಸೆಯ ಪೂಜಾ ವಿಧಾನಗಳಿಂದ ಕೂಡಿಲ್ಲ; ಮತ್ತು 'ಅನಾರ್ಯ'ವೆಂದು ಕರೆಯಬಹುದಾದ ಯಾವ ವಿಷಯದ ಸೋಂಕೂ ಇದರಲ್ಲಿಲ್ಲ. ಅತ್ಯಂತ ನಿಷ್ಠಾವಂತರಾದ ಬ್ರಾಹ್ಮಣರ ಅಂತರಂಗ ಪೂಜೆಯ ಅಂಗವಾಗಿದೆ ಇದು. ಪ್ರತೀಕದ ಸೂಚನೆ ಏನೇ ಇರಬಹುದಾದರೂ ಅದಕ್ಕೆ ಅರ್ಪಿಸುವ ಪೂಜೋಪಚಾರಗಳು ಔಚಿತ್ಯ ಪೂರ್ಣವಾಗಿವೆ. ಈ ಸಾಕ್ಷಿಗಳನ್ನೆಲ್ಲ ಗಮನಿಸಿದರೆ, ಈ ಪೂಜಾ ಪದ್ಧತಿಯು ನಮ್ಮ ಶಕದ ಆದಿ ಶತಮಾನಗಳಲ್ಲಿ ಹಿಂದೂ ಬ್ರಾಹ್ಮಣ ವರ್ಗದಲ್ಲಿ ರೂಪುಗೊಂಡು ಪ್ರಚಾರಕ್ಕೆ ಬಂತೆಂದು ಸೂಚಿತವಾಗುತ್ತದೆ. ಪೌರುಷ ಮತ್ತು ಸೃಷ್ಟಿಕಾರ್ಯದಲ್ಲಿ ಏನೋ ಒಂದು ಭಗವದಂಶವಿದೆಯೆಂಬ ಭಾವನೆ ಆಗಲೇ ರೂಢವಾಗಿತ್ತು. ಅದಕ್ಕೆ ಪ್ರತೀಕವಾಗಿ ಕಲ್ಲುಕಂಬವೊಂದನ್ನು ಆಯ್ದುದಕ್ಕೆ ಎರಡು ಸಂಗತಿಗಳು ಪ್ರೇರಕವಾಗಿದ್ದಿರಬಹುದು. ಮೊದಲನೆಯದಾಗಿ, ಸ್ತೂಪಗಳನ್ನು ಅವರಲ್ಲೂ ಲಘು ರೂಪದ ಸ್ತೂಪಗಳನ್ನು ಬೌದ್ಧರು ಪವಿತ್ರವೆಂದು ಪರಿಗಣಿಸಿ ಪೂಜಿಸುತ್ತಿದ್ದುದರಿಂದ ಶಂಖಾಕಾರ ಅಥವಾ ಸ್ತಂಭಾಕಾರವು ಧಾರ್ಮಿಕ ಚಿಹ್ನೆಯೆಂಬ ಭಾವನೆ ಜನರಲ್ಲಿ ಬಹಳ ಪರಿಚಿತವಾಗಿದ್ದಿರಬೇಕು. ಎರಡನೆಯದಾಗಿ, ಮಹಾವಿಷ್ಣುವಿನ ಜ್ಞಾಪಕಾರ್ಥವಾಗಿ ನೆಲೆನಿಲ್ಲಿಸುತ್ತಿದ್ದ ಕೆತ್ತನೆಕೆಲಸ ಮಾಡಿದ ಕಂಬ ಅಥವಾ ಶಿಲಾ ದಂಡಕ್ಕೆ ಈ ಲಿಂಗವನ್ನು ಹೋಲಿಸಬಹುದಾಗಿತ್ತು. ಕೆಲವು ಲಿಂಗಗಳ ಮೇಲೆ ಕೆತ್ತನೆ ಕೆಲಸಮಾಡಿ ಮೂರು ಅಥವಾ ನಾಲ್ಕು ಮುಖಗಳನ್ನು ಕಡೆದಿರುವುದುಂಟು. ಅದರ ಪರಿಣಾಮವಾಗಿ ಲಿಂಗದಲ್ಲಿ ಶಿಶ್ನ ರೂಪ ಸಂಪೂರ್ಣವಾಗಿ ಮಾಯವಾಗಿಬಿಡುತ್ತದೆ. ಈ ಲಿಂಗಪೂಜೆಯ ಆರಂಭ ಈಚಿನ ಕಾಲದ್ದೆನ್ನಬಹುದಾದರೂ ಇದರ ವ್ಯಾಪ್ತಿ ಬಹು ವಿಸ್ತಾರವಾಗಿದೆ; ವಿಶೇಷ ಗಮನಾರ್ಹವಾಗಿದೆ". (Sir Charles Eliot: Hinduism and Buddhism–Vol. II Pages 143–4). ಲಿಂಗವು ಮೂಲತಃ ಶಿಶ್ನ ಸಂಬಂಧವುಳ್ಳದ್ದೆಂಬ ಭಾವನೆಯೇ ಎಂಥ ಶೈವನಿಗಾದರೂ ಅಸಹ್ಯವಾಗಿರುವುದು. ಲಿಂಗದ ಬಗ್ಗೆ ಆತನ ಕಲ್ಪನೆ ಸಂಪೂರ್ಣ ಬೇರೆ ರೀತಿಯದು. ಕಠ (6—8) ಮತ್ತು ಶ್ವೇತಾಶ್ವತರ ಉಪನಿಷತ್ತು (3—9) ಗಳಲ್ಲಿ ಕಾರಣಗಳಿಗೆಲ್ಲ ಕಾರಣನಾದ ವಿರಾಟ್ಪುರುಷನನ್ನು 'ಲಿಂಗ'ವೆಂದು ವರ್ಣಿಸಲಾಗಿದೆ.

ಶೈವಸಾಹಿತ್ಯದಲ್ಲಿ ಲಿಂಗವನ್ನು ಬೆಳಕಿನ ಕಂಬವೆಂದು ವರ್ಣಿಸಿದೆ. ಬ್ರಹ್ಮವಿಷ್ಣುಗಳಿಬ್ಬರೂ ಜ್ಯೋತಿರ್ಲಿಂಗದ ತುದಿಬುಡಗಳನ್ನು ಕಾಣಹೊರಟು ಪ್ರಯತ್ನಮಾಡಿ ಕಾಣಲಾರದೆ ಸೋತುಹೋದರೆಂಬ ಪುರಾಣಕಥೆ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ವೀರಶೈವ ಶರಣರು ಅದನ್ನು ಈ ಅರ್ಥದಲ್ಲಿ ತಿಳಿದುಕೊಂಡಿದ್ದರು. ಅವರಿಗೆ ಲಿಂಗವು ಪರಶಿವನ ಪ್ರತ್ಯಕ್ಷರೂಪ, ಪರಬ್ರಹ್ಮ, ಜ್ಯೋತಿಗೇ ಜ್ಯೋತಿಯಾದ ಪರಂಜ್ಯೋತಿ, ನಿರಂತರವಾದ ಪರಮಾನಂದ, ಇತ್ಯಾದಿ, ಇತ್ಯಾದಿ. ಹೃದಯಾಂತರಾಳದಲ್ಲಿ ನೆಲಸಿರುವ ಪರಂಜ್ಯೋತಿಯನ್ನು ಗುರು ಹೊರದೆಗೆದು ರೂಪುಕೊಟ್ಟದ್ದು ಆ 'ಲಿಂಗ' ಎಂದು, ಅವರು ನಂಬುತ್ತಾರೆ. ವಚನಶಾಸ್ತ್ರದಲ್ಲಿಯೂ ಅನೇಕ ಕಡೆಗಳಲ್ಲಿ ಲಿಂಗವು ಅಗ್ನಿಸ್ತಂಭವೆಂದು ವರ್ಣಿತವಾಗಿದೆ. ಲಿಂಗವು ಜಗಜಗಿಸುತ್ತಿರುವ ಬೆಳಕಿನ ರಾಶಿಯೆಂದೂ, ಪರಬ್ರಹ್ಮವೆಂದೂ, ವಿಶ್ವವೆಲ್ಲವೂ ಯಾವುದರಿಂದ ಮೂಡಿ ಬಂದಿದೆಯೋ ಯಾವುದರಲ್ಲಿ ಅದು ಹೋಗಿ ಐಕ್ಯವಾಗುವುದೋ ಆ ಪರಾತ್ಪರ ವಸ್ತುವೆಂದೂ ಅಲ್ಲಿ ವಿವರಿಸಲ್ಪಟ್ಟಿದೆ. ಲಿಂಗದ ಮೂಲವನ್ನು ಅಥರ್ವವೇದದ ಸ್ಕಂಭದಲ್ಲಿ (X–7 : 8) ಕಾಣಬಹುದೆಂದು ವೀರಶೈವ ಶರಣರು ನಂಬಿದ್ದರೆಂದು ತೋರುತ್ತದೆ.

ಮೇಲಿನ ಚರ್ಚೆಯಿಂದ ಶೈವಮತದ ಮೂಲವು ಮುಸುಕಿನಲ್ಲಿ ಮುಚ್ಚಿ ಮರೆಯಾಗಿ ಹೋಗಿದೆಯೆಂದು ತಿಳಿಯಬಹುದಾಗಿದೆ. ಸ್ಪಷ್ಟವಾದ ಆಧಾರಕ್ಕೆ ನಾವು ವೈದಿಕಯುಗಕ್ಕೆ, ಋಗ್ವೇದಕ್ಕೆ ಹೋಗಬೇಕು. ಭಾರತ ದೇಶದ ಚರಿತ್ರೆಯಲ್ಲಿ ವೈದಿಕಯುಗವು ಪ್ರಾಚೀನತಮವೆಂದು ಎಲ್ಲಾ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಡಾ॥ ಮ್ಯಾಕ್‌ಡೊನೆಲ್ಲರ ಪ್ರಕಾರ ವೈದಿಕ ದೇವತೆಗಳು ಬಹುಮಟ್ಟಿಗೆ ಮೂರ್ತೀಕರಿಸಿದ ಪ್ರಾಕೃತಿಕ ಶಕ್ತಿಗಳು. ಬಾಹ್ಯ ಪ್ರಕೃತಿಯ ಕೆಲವು ಅಭಿವ್ಯಕ್ತಿಗಳು ಹರ್ಷದಾಯಕಗಳೂ ಮನಸ್ಸನ್ನರಳಿಸುವಂಥಹವೂ ಶುಭದಾಯಿಗಳೂ ಆಗಿರುತ್ತವೆ ; ಉಳಿದವು ಭಯಂಕರವೂ ಮನ ಕುಗ್ಗಿಸುವಂಥವೂ ವಿನಾಶಕಾರಿಗಳೂ ಆಗಿರುತ್ತವೆ. ಆರ್ಯರು ಹಗಲ ಮೊದಲಿನ ಮುಂಬೆಳಕಿನಲ್ಲಿ ಸುಂದರಿ ಉಷಾದೇವಿಯನ್ನು ಕಂಡುಕೊಂಡರು ; ಉಷೆಯನ್ನು ಬೆಂಬತ್ತಿಬರುವ ಸೂರ್ಯನಲ್ಲಿ ಉಷೆಯ ಪ್ರೇಮಿ ಸೂರ್ಯದೇವನನ್ನು ಕಂಡರು ; ಉದಯ ಸೂರ್ಯನಲ್ಲಿ ಮಿತ್ರನನ್ನು–ಸ್ನೇಹಿತನಾದ ದೇವನನ್ನು, ಕಂಡರು ; ತನ್ನ ಕರಗಳನ್ನು ಚಾಚಿ ಭೂಮ್ಯಾಕಾಶಗಳನ್ನೆಲ್ಲಾ ತುಂಬುವ ಸೂರ್ಯನಲ್ಲಿ ಸವಿತೃದೇವತೆಯನ್ನು ಕಂಡರು. ಘೋರವಾದ ವಿನಾಶಕಾರಿ ಪ್ರಕೃತಿದೃಶ್ಯಗಳೆಂದರೆ, ಸಾಧಾರಣವಾಗಿ ಬಿರುಗಾಳಿ ಮಳೆಗಳು ; ಅವು ಮರಗಳನ್ನುರುಳಿಸುತ್ತವೆ. ಮನೆಗಳನ್ನೂ ಕೆಡವಿಹಾಕುತ್ತವೆ. ಬಿರುಗಾಳಿಮಳೆಯನ್ನು ಹಿಂಬಾಲಿಸಿ ಬರುವ ಸಿಡಿಲು ಕ್ಷಣಮಾತ್ರದಲ್ಲಿ ಮನುಷ್ಯರನ್ನೂ ಇತರ ಪಶುಪ್ರಾಣಿಗಳನ್ನೂ ಹೊಡೆದುರುಳಿಸಿಬಿಡುತ್ತದೆ ; ಇದರ ಜೊತೆ ಜೊತೆಗೇ ಹರಡಿ ಬರುವ ಸಾಂಕ್ರಾಮಿಕ ರೋಗಗಳು ಅಸಂಖ್ಯಾತ ಜನರನ್ನು ಬಲಿ ತೆಗೆದುಕೊಳ್ಳುತ್ತವೆ. ಪುರಾತನ ಆರ್ಯರು ಈ ಪ್ರಕೃತಿ ದೃಶ್ಯಗಳಲ್ಲಿ ರುದ್ರನನ್ನು ಕಂಡರು ; ಸುಂಟರಗಾಳಿಗಳೊಡನೆ (ಮರುತರೊಡನೆ) ಗೋಳಾಡುತ್ತ ಸುತ್ತಾಡುವ ರುದ್ರನನ್ನು ಕಂಡರು. ರುದ್ರನ ಜೊತೆಯಲ್ಲಿ ಅಲೆಯುವ ಈ ಮರುತರೇ ಅವನ ಮಕ್ಕಳು, ರುದ್ರೀಯರು. ಆದರೆ, ಕೇವಲ ದುಷ್ಟಶಕ್ತಿಯೇ ಈ ವಿಶ್ವವನ್ನು ಆಳುತ್ತಿರುವುದೆಂದು ಮಾನವರು ನಂಬಲಾರರು. ಈ ಘೋರದೃಶ್ಯಗಳು ದೇವರ ಕೋಪದಿಂದುಂಟಾದವೆಂದು ಅವರು ಭಾವಿಸುತ್ತಾರೆ. ಆದರೆ, ಪ್ರಾರ್ಥನೆ, ಸ್ತೋತ್ರ ಮತ್ತು ಕಾಣಿಕೆಗಳನ್ನರ್ಪಿಸಿ ಆ ಕೋಪವನ್ನು ಶಮನಗೊಳಿಸಬಹುದೆಂದೂ ನಂಬುತ್ತಾರೆ. ಕೋಪ ಶಮನ ಮಾಡಿದ ಮೇಲೆ ದೇವರು 'ಶಿವ' ಎಂದರೆ 'ಮಂಗಳಕರ' ನಾಗುತ್ತಾನೆ. ಈ ರೀತಿಯ ಸ್ವಾಭಾವಿಕ ಕ್ರಮದಿಂದಲೇ ಪುರಾತನ ಭಾರತದಲ್ಲಿ ರುದ್ರ–ಶಿವನಂಥ ದೇವತೆಯಲ್ಲಿ ನಂಬಿಕೆ ನೆಲೆಗೊಂಡಿತ್ತೆಂದು ತೋರುತ್ತದೆ.

ಈ ದೇವರಿಗೆ ಸಂಬಂಧಿಸಿದ ಭಾವನೆ ವಿಕಾಸಹೊಂದಿದ ರೀತಿಯನ್ನು–ಕಟ್ಟಕಡೆಗೆ ಈ ದೇವರು ವಿಶ್ವದ ಪರಮೋಚ್ಚ ಸೃಷ್ಟಿಕರ್ತನೂ ಶಾಸಕನೂ ವಿಶ್ವವ್ಯಾಪಕನೂ ಆಗಿ ಪರಿಣಮಿಸಿ, ಅವನನ್ನು ಅರಿತುಕೊಳ್ಳುವುದರಿಂದ ಶಾಶ್ವತಾನಂದ ದೊರೆಯುವುದೆಂಬ ನಂಬಿಕೆಯುಂಟಾಗುವ ವರೆಗೂ ಕ್ರಮಕ್ರಮವಾಗಿ ಭಾವನೆ ಬೆಳೆದು ಬಂದ ರೀತಿಯನ್ನು, ನಾವು ಸ್ಪಷ್ಟವಾಗಿ ಗುರುತಿಸಬಹುದು.

ಋಗ್ವೇದದಲ್ಲಿ ಇಂದ್ರ, ಅಗ್ನಿ ಅಥವಾ ವರುಣನಿಗಿರುವಂತೆ ರುದ್ರನಿಗೆ ಉನ್ನತಸ್ಥಾನವೇನೂ ಇಲ್ಲ. ಮೂರು ಪೂರ್ಣ ಸೂಕ್ತಗಳಲ್ಲಿ (I–114 : II–33 : VII : 46) ಮತ್ತು ಇತರ ದೇವತೆಗಳಿಗೆ ಮೀಸಲಾದ ಸೂಕ್ತಗಳ ಕೆಲವು ಮಂತ್ರಗಳಲ್ಲಿ ರುದ್ರನ ಪ್ರಸ್ತಾಪ ಬರುತ್ತದೆ. ಅವನ ವ್ಯಕ್ತಿತ್ವ ಸ್ಫುಟವಾಗಿ ಚಿತ್ರಿತವಾಗಿದೆ. ಅವನ ಕೈಗಳು, ತೋಳುಗಳು ಮತ್ತು ಅವಯವಗಳ ಪ್ರಸ್ತಾಪ ಬರುತ್ತದೆ. ಅವನಿಗೆ ಸುಂದರವಾದ ತುಟಿಗಳಿವೆ ; ಅವನು ಜಟೆಯನ್ನು ಧರಿಸಿದ್ದಾನೆ ; ಅವನದು ಕಂದು ಬಣ್ಣ ; ಅವನ ಆಕಾರ ಜಾಜ್ವಲ್ಯಮಾನವಾದದ್ದು ; ಅವನು ಕಳೆಬೆಳಗುವ ಸೂರ್ಯನಂತೆ ಹೊಳೆಯುತ್ತಾನೆ ; ಅವನು ಚಿನ್ನದಂಥವನು ; ಚಿನ್ನದ ಆಭರಣಗಳನ್ನು ಅಲಂಕರಿಸಿಕೊಂಡಿದ್ದಾನೆ ; ಸೊಗಸಾದ ಕಂಠಮಾಲಿಕೆಯನ್ನು (ನಿಷ್ಕಾ) ಧರಿಸಿದ್ದಾನೆ ; ರಥದಲ್ಲಿ ಸಾಗುತ್ತಾನೆ ; ಕೈಯಲ್ಲಿ ಸಿಡಿಲನ್ನು ಹಿಡಿದು ಆಕಾಶದಿಂದ ತನ್ನ ಮಿಂಚು ಬಾಣಗಳನ್ನು ಬಿಡುತ್ತಾನೆ : ಆದರೆ, ಅವನು ಬಿಲ್ಲು ಬಾಣಗಳನ್ನು ಹಿಡಿದಿರುವನೆಂದೂ ಅವನ ಬಾಣಗಳು ಬಲವತ್ತಾದುವೆಂದೂ ವೇಗಶಾಲಿಗಳೆಂದೂ ವರ್ಣಿಸಿರುವುದು ಹೆಚ್ಚು ಸಾಧಾರಣ. ಅವನು ಮರುತರ ತಂದೆ.

ಅವರನ್ನು ಹಸುವಿನ (ಪೃಶ್ನಿಯ) ಹೊಳೆಹೊಳೆಯುವ ಕೆಚ್ಚಲಿನಿಂದ ಸೃಷ್ಟಿಸಿದನು ಎಂದು ಹೇಳಿದೆ. ರೌದ್ರ ಮೃಗದಂತೆ ಅವನು ಬಹು ಭಯಂಕರನಾದವನು, ವಿನಾಶಕಾರಿ; ವೃಷಭ (ಗೂಳಿ) ಎಂದೂ, ಗಗನತಳದ ಕೆಂಪು ವರಾಹನೆಂದೂ ಕರೆಯಲ್ಪಡುತ್ತಾನೆ. ಬಲಿಷ್ಠರಲ್ಲಿ ಬಲಿಷ್ಠ; ಪರಮವೇಗಶಾಲಿ; ಅಳತೆಗೆ ಸಿಕ್ಕದ ಅಮೇಯ; ಶಕ್ತಿಯಲ್ಲಿ ಮೀರಲಾರದವನು. ಅವನು ತರುಣ, ಮುಪ್ಪಾಗದವನು; ಒಡೆಯ (ಈಶಾನ) ಮತ್ತು ಲೋಕಪಿತ. ವಿಶ್ವಕ್ಕೆಲ್ಲ ತಾನೇ ಒಡೆಯನಾಗಿ ಆಳುತ್ತಿರುವುದರಿಂದ ಮಾನವರು ಮತ್ತು ದೇವತೆಗಳು ಮಾಡುವುದನ್ನೆಲ್ಲಾ ಅರಿತಿರುವವನು. ಅವನು ಬಹು ಉದಾರಿ (ಮೀಢ್ವಮಸ), ಸುಲಭವಾಗಿ ಪ್ರೀತನಾಗುವನು ಮತ್ತು ಶುಭಕಾರಿ (ಶಿವ).

ರುದ್ರನು ಬಿಡುವ ಬಾಣಗಳು ಭೂಮ್ಯಾಕಾಶಗಳನ್ನು ಆವರಿಸುತ್ತವೆ (VII–46,3). ಅವನ ಹತ್ತಿರ ಗೋವುಗಳನ್ನೂ ಮನುಷ್ಯರನ್ನೂ ಕೊಲ್ಲುವಂಥ ಆಯುಧಗಳಿವೆ (I–114,10). ಸಿಡಿಲಿನ ವಿನಾಶಕಾರಿ ಪರಿಣಾಮವನ್ನು ಇಲ್ಲಿ ಕಾಣಬಹುದು. ಬಾಣಗಳನ್ನೂ ಇತರ ಆಯುಧಗಳನ್ನೂ ಮನುಷ್ಯರ ಮೇಲೆ ಪ್ರಯೋಗಿಸದೆ ತಡೆದಿಟ್ಟುಕೊಳ್ಳುವಂತೆ ಅವನನ್ನು ಪ್ರಾರ್ಥಿಸಲಾಗಿದೆ. ದ್ವಿಪಾದಿ ಮತ್ತು ಚತುಷ್ಪಾದಿ ಪ್ರಾಣಿಗಳನ್ನೂ ಅವನು ಕಾಪಾಡುತ್ತಾನೆ (I–114,2). ಅವನು ' ಪಶುಪ ', ದನಕರುಗಳನ್ನು ಕಾಪಾಡುವವನು (I–114,9). ರೋಗಗಳು ಮಕ್ಕಳಿಗೆ ತಟ್ಟದಂತೆ ದೂರವಿರಿಸಲೂ (VII-46,2) ಎಲ್ಲಾ ಹಳ್ಳಿಗಳಿಗೆ ಸೋಂಕದಂತೆ ದೂರವಿರಿಸಲೂ (I–114) ರುದ್ರನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ವಾಸಿಮಾಡುವ ಔಷಧಿಗಳನ್ನು ಬಲ್ಲವನೆಂದು ಅವನಿಗೆ ಸ್ತೋತ್ರ ಸಲ್ಲುತ್ತದೆ (I–43-4). ವೈದ್ಯರಲ್ಲೆಲ್ಲಾ ಅವನು ಅತ್ಯುತ್ತಮನಾದ ವೈದ್ಯ (II–22–4). ಅವನಲ್ಲಿ ಸಾವಿರಾರು ಔಷಧಿಗಳಿವೆ. ವೈದಿಕ ಗಾಯಕನು ರುದ್ರನನ್ನು ಹೀಗೆ ಸ್ತುತಿಸುತ್ತಾನೆ: " ಓ! ರುದ್ರಾ! ಕೋಪದಿಂದ ನಮ್ಮ ಮಕ್ಕಳನ್ನು, ನಮ್ಮ ಸಂತತಿಯನ್ನು, ನಮ್ಮ ಜನರನ್ನು, ನಮ್ಮ ದನಕರುಗಳನ್ನು, ನಮ್ಮ ಮನೆಗಳನ್ನು ಹಿಂಸಿಸಬೇಡ. ನಮ್ಮ ಜನರನ್ನು ಕೊಲ್ಲಬೇಡ. ಕಾಣಿಕೆಗಳನ್ನರ್ಪಿಸಿ ನಿನ್ನನ್ನು ಸ್ತುತಿಸುತ್ತೇವೆ (I–114,3)."

ಋಗ್ವೇದದಲ್ಲಿ ರುದ್ರನ ವಿಷಯವಾಗಿ ಹೇಳಿರುವುದನ್ನೆಲ್ಲಾ ಪರಿಶೀಲಿಸಿದರೆ, ಅವನನ್ನು ಕುರಿತು ಹಾಡಿರುವ ಸೂಕ್ತಗಳು ಕೆಲವೇ ಆಗಿದ್ದರೂ, ಅವನೊಬ್ಬ ಅಪ್ರಧಾನ ದೇವತೆಯೆಂದು ಪರಿಗಣಿತನಾಗಿದ್ದರೂ ಅವನಿಗೆ ಸರ್ವೋಚ್ಚ ಅಧಿಕಾರವನ್ನು ಆರೋಪಿಸುವುದಕ್ಕೆ ತಕ್ಕಷ್ಟು ಸೂಚನೆಯಿದೆಯೆಂಬುದು ಸ್ಪಷ್ಟವಾಗುತ್ತದೆ.

ಯಜುರ್ವೇದದಲ್ಲಿ ರುದ್ರನನ್ನು ಚಿತ್ರಿಸಿಕೊಂಡಿರುವ ಕಲ್ಪನೆ ಇನ್ನೂ ಹೆಚ್ಚು ವಿಕಾಸಹೊಂದಿದ ರೂಪದಲ್ಲಿ ಕಂಡುಬರುತ್ತದೆ. ಶತರುದ್ರೀಯವು (5ನೆ ಅಧ್ಯಾಯ, 16) ರುದ್ರನನ್ನು ಶುಭಕರವಾದ ರೂಪದಲ್ಲಿ (ಶಿವತನುಃ ಎಂದು) ಕಾಣಿಸುತ್ತದೆ.

ಶತಪಥ ಬ್ರಾಹ್ಮಣ ಮತ್ತು ಕೌಶೀತಕಿ ಬ್ರಾಹ್ಮಣಗಳಲ್ಲಿ ಪ್ರಜಾಪತಿಯು ರುದ್ರನಿಗೆ ಎಂಟು ಹೆಸರುಗಳನ್ನು ಕೊಟ್ಟನೆಂದು ಹೇಳಿದೆ. ಈ ಎಂಟರಲ್ಲಿ ನಾಲ್ಕು—ರುದ್ರ, ಶರ್ವ, ಉಗ್ರ, ಅಶನಿ ಎಂಬಿವು—ವಿನಾಶಕಾರಿ ಶಕ್ತಿಯನ್ನು ಸೂಚಿಸುತ್ತವೆ; ಉಳಿದ ನಾಲ್ಕು—ಭವ, ಪಶುಪತಿ, ಮಹಾದೇವ, ಈಶಾನ ಎಂಬಿವು—ಹಿತಕರವಾದ ರೂಪವನ್ನು ಸೂಚಿಸುತ್ತವೆ. ಇವುಗಳ ಜೊತೆಗೆ ಅವನಿಗೆ ಅನ್ವಯಿಸಿರುವ ಹರ, ಮಹಾದೇವ, ಶಿವ, ಭೀಮ, ಶಂಕರ—ಈ ಐದು ಹೆಸರುಗಳೂ ಗೃಹ್ಯಸೂತ್ರಗಳಲ್ಲಿ ಸಿಕ್ಕುತ್ತವೆ. ಪರಾಶರ ಗೃಹ್ಯಸೂತ್ರದಲ್ಲಿ ಇಂದ್ರಾಣಿ, ರುದ್ರಾಣಿ, ಶರ್ವಾಣಿ, ಭವಾನಿ ಎಂಬ ಹೆಸರುಗಳು ದೊರೆಯುತ್ತವೆ. ಇವರು ಕ್ರಮವಾಗಿ ಇಂದ್ರ, ರುದ್ರ, ಶರ್ವ, ಮತ್ತು ಭವ ಎಂಬವರ ಪತ್ನಿಯರು (P.G. III–8). ಗೃಹ್ಯಸೂತ್ರಗಳ ಕಾಲದಲ್ಲಿ ರುದ್ರನು ಘೋರದೇವತೆಯಾಗಿದ್ದನು; ಅವನನ್ನು

ಶಾಂತಗೊಳಿಸಬೇಕಾಗಿತ್ತು. ಮನೆಯಿಂದ ಹೊರಗಿನ ಪ್ರದೇಶಗಳ ಮೇಲೆ, ಬಯಲುಗಳು, ಕಾಡುಗಳು, ಏನೂ ಬೆಳೆಯದ ಕ್ಷುದ್ರಪ್ರದೇಶಗಳು, ಶ್ಮಶಾನಗಳು, ಪರ್ವತಗಳು, ಹಳೆಯ ಮರಗಳು ಮತ್ತು ಹೊಳೆಗಳು—ಈ ಪ್ರದೇಶಗಳ ಮೇಲೆಲ್ಲಾ ಅಧಿಕಾರ ನಡೆಸುತ್ತಿದ್ದ ದೇವತೆ ಅವನೇ. ಮಹಾ ಭಯವನ್ನುಂಟುಮಾಡುವಂಥದು ಏನಾದರೂ ಎದುರಿಸಿದಾಗಲೆಲ್ಲ ರಕ್ಷಣೆಗಾಗಿ ಪ್ರಾರ್ಥಿಸಬೇಕಾಗಿದ್ದದ್ದು ರುದ್ರದೇವನನ್ನೇ. ಪುರಾತನ ಭಾರತೀಯರ ಈ ಭಾವನೆಯೇ ಮುಂದಿನ ಕಾಲದಲ್ಲಿ ರುದ್ರನಿಗೆ ಇತರ ವೈದಿಕ ದೇವತೆಗಳೆಲ್ಲರಿಗಿಂತಲೂ ಹೆಚ್ಚಿನ ಸ್ಥಾನ ಕೊಡುವುದಕ್ಕೆ ಕಾರಣವಾಗಿರಬೇಕು. ರುದ್ರನೇ ಸರ್ವವ್ಯಾಪಿಯಾದ ವಿಶ್ವೇಶ್ವರನೆಂದೂ, ಇತರ ಯಾವ ದೇವತೆಯೂ ಅಲ್ಲವೆಂದೂ ಈಚಿನ ಕಾಲದವರು ನಂಬುವುದರ ಮೂಲ, ಪುರಾತನ ಭಾರತೀಯರ ಈ ಭಾವನೆಯೇ ಎನ್ನಬಹುದು.

ಶ್ವೇತಾಶ್ವತರೋಪನಿಷತ್ತಿನಲ್ಲಿ ರುದ್ರನು ಸರ್ವೇಶ್ವರನೆಂದು ವರ್ಣಿಸಲಾಗಿದೆ. ಈ ಲೋಕಗಳನ್ನೆಲ್ಲಾ ತನ್ನ ಪ್ರಭುಶಕ್ತಿಯಿಂದ ಆಳುವವನು ಯಾರೋ, ಎಲ್ಲಾ ಮಾನವರಿಗೂ ಅಂತರಾತ್ಮನು ಯಾರೋ, ಸಮಸ್ತ ಪ್ರಾಣಿಗಳನ್ನೂ ಸೃಷ್ಟಿಸಿ ರಕ್ಷಿಸುವವನು ಯಾರೋ, ಅವನು ರುದ್ರನೊಬ್ಬನೇ; ಬೇರೆ ಯಾರೂ ಅಲ್ಲ. ಬೇರೆ ಯಾರನ್ನೂ ಹಾಗೆಂದು ಅವರು ಅಂಗೀಕರಿಸುವುದಿಲ್ಲ. ಯಾರೂ ಅವನನ್ನು ಕಣ್ಣಿನಿಂದ ಕಾಣಲಾರರು. ಅವನು ಹೃದಯಮಂದಿರದಲ್ಲಿ ವಾಸಮಾಡುತ್ತಿರುವುದನ್ನು ತಮ್ಮ ಅಂತರಂಗಾನುಭೂತಿಯಿಂದ ಯಾರು ಕಂಡುಕೊಳ್ಳುತ್ತಾರೋ ಅವರು ಅಮರ್ತ್ಯರಾಗುತ್ತಾರೆ (IV, 20). ಸೂರ್ಯನಾಗಲಿ ಚಂದ್ರನಾಗಲಿ, ನಕ್ಷತ್ರಗಳಾಗಲಿ, ಮಿಂಚೇ ಆಗಲಿ ಅವನನ್ನು ಬೆಳಗಿಸಲಾರವು. ಅವನು ಹೊಳೆದಾಗ ಅವನನ್ನನುಸರಿಸಿ ಉಳಿದೆಲ್ಲವೂ ಹೊಳೆಯುತ್ತವೆ; ಅವನ ಪ್ರಕಾಶದಿಂದಲೇ ಉಳಿದ ವಸ್ತುಗಳೆಲ್ಲವೂ ಗೋಚರವಾಗುತ್ತವೆ (IV,14). ಯಾವ ದೇವನು ತನ್ನ ಜ್ಞಾನದೀಪ್ತಿಯಲ್ಲಿ ಬೆಳಗುತ್ತಿರುವನೋ, ಯಾರು ಮೊದಲು ಬ್ರಹ್ಮದೇವನನ್ನು ಸೃಷ್ಟಿಸಿ ವೇದಗಳನ್ನು ಹೊರಹೊಮ್ಮಿಸಿದನೋ, ಯಾವ ದೇವನು ಅಂಶಗಳಿಲ್ಲದೆ ಅಖಂಡನಾಗಿರುವನೋ, ಯಾರು ವ್ಯತ್ಯಾಸಹೊಂದದ ಅವಿಕಾರಿಯೋ, ಯಾರು ಪೂರ್ಣ ಶಾಂತನೋ, ಯಾರಲ್ಲಿ ಯಾವ ನ್ಯೂನತೆಯೂ ಇಲ್ಲವೋ, ಯಾರು ನಿರ್ಮಲನೋ, ಯಾರು ಅಮೃತತ್ವಕ್ಕೆ ದಾಟಿ ಹೋಗುವ ಸೇತುವೆಯಾಗಿದ್ದಾನೆಯೋ, ಯಾರು ಎಲ್ಲಾ ಇಂಧನವನ್ನೂ ಸುಟ್ಟುಹಾಕಿರುವ ಬೆಂಕಿಯಂತಿದ್ದಾನೆಯೋ, ಅಂಥ ದೇವನಿಗೆ ಶ್ವೇತಾಶ್ವತರಕಾರನು ತನ್ನನ್ನು ತಾನೇ ಅರ್ಪಿಸಿಕೊಂಡುಬಿಡುತ್ತಾನೆ (VI–18, 19).

ಶ್ವೇತಾಶ್ವತರೋಪನಿಷತ್ತಿನಲ್ಲಿ ಋಗ್ವೇದ ಮತ್ತು ಯಜುರ್ವೇದ ಸಂಹಿತೆಗಳಿಂದ ಆಯ್ದುಕೊಂಡ ಮಂತ್ರಗಳಿವೆ. ಅದೇ ರೀತಿಯಲ್ಲಿ ಮುಂಡಕ ಮತ್ತು ಕಠೋಪನಿಷತ್ತುಗಳು ಕೂಡ ಶಿವನೊಡನೆ ಸಮೀಕರಿಸಿರುವ ಪರಮೇಶ್ವರ, ಆ ಪರಮಾತ್ಮನಿಂದ ಬೇರೆಯಾದ ಜೀವ, ಜಡಜಗತ್ತು—ಇವುಗಳ ಸ್ವಭಾವವನ್ನು ವರ್ಣಿಸುವಾಗಲೂ, ಇವರ ಪರಸ್ಪರಸಂಬಂಧಗಳನ್ನು ವಿವರಿಸುವಾಗಲೂ, ಈ ಸಂಹಿತೆಗಳಿಂದಲೂ ಇತರ ಕಡೆಗಳಿಂದಲೂ ಶ್ಲೋಕಗಳನ್ನು ಆಯ್ದು ಉಪಯೋಗಿಸಿಕೊಳ್ಳುತ್ತವೆ. ಶ್ವೇತಾಶ್ವತರೋಪನಿಷತ್ತು ಭಕ್ತಿಯ ಬೀಜಗಳನ್ನೊಳಗೊಂಡ ಅತ್ಯಂತ ಪ್ರಾಚೀನ ಗ್ರಂಥವೆಂದೂ ಇಲ್ಲಿರುವ ಭಕ್ತಿಬೀಜಗಳೇ ಮೊಳೆತು, ಬೇಗಬೇಗ ಬೆಳೆದು ವೈಯಕ್ತಿಕ ದೇವತೋಪಾಸನೆಯನ್ನು ಆರಂಭಗೊಳಿಸಿದವೆಂದೂ ಎಲ್ಲರೂ ಒಪ್ಪಿದ್ದಾರೆ. ಮೊದಮೊದಲಿನ ಉಪನಿಷತ್ತುಗಳಲ್ಲೊಂದಾದ ಕೇನೋಪನಿಷತ್ತಿನಲ್ಲಿ ಶಿವನ ಪತ್ನಿಯಾದ ಉಮಾ ಹೈಮವತಿಯ ಹೆಸರು ಹೇಳಿದೆ. ಅಗ್ನಿ, ವಾಯು, ಇಂದ್ರರ ತತ್ವಸ್ವರೂಪವನ್ನು ಅವಳು ವ್ಯಕ್ತಪಡಿಸಿ ತೋರಿಸಿದಳು. ಕೇನೋಪನಿಷತ್ತಿನ ರಚನೆಯಾಗುವುದಕ್ಕೆ ಸ್ವಲ್ಪಕಾಲ ಮೊದಲಿನಲ್ಲೇ ಅವಳು ಹಿಮವಂತನ ಮಗಳೆಂದೂ ರುದ್ರ-ಶಿವನ ಪತ್ನಿಯೆಂದೂ ಭಾವಿಸಿದ್ದರೆಂದು ತೋರುತ್ತದೆ.

ಅಥರ್ವ ಶಿರೋಪನಿಷತ್ತಿನಲ್ಲಿ ರುದ್ರನು ಅದ್ವಿತೀಯನೆಂದೂ ಈಶಾನ, ಭಗವಂತ, ಮಹಾದೇವ, ಮಹೇಶ್ವರ ಎಂದು ಮುಂತಾಗಿಯೂ ವರ್ಣಿಸಲಾಗಿದೆ. ಎಲ್ಲವನ್ನೂ ಸೃಷ್ಟಿಸಿ ಕಡೆಗೆ ತನ್ನಲ್ಲಿ ಅಡಗಿಸಿ ಕೊಳ್ಳುವವನು ಅವನೊಬ್ಬನೇ. ಅವನೇ ಅನನ್ಯನಾದ ಏಕೈಕ ದೇವರು. ಬೇರೆ ದೇವರಿಲ್ಲ. ಅವನನ್ನು ಅರಿಯುವುದಕ್ಕೆ ಪಾಶುಪತ ವ್ರತವನ್ನಾಚರಿಸಬೇಕು. ಅಥರ್ವಶಿರೋಪನಿಷತ್ತು ಈಚಿನ ಕಾಲದ್ದು; ಪಾಶುಪತಪಂಥಕ್ಕೆ ಸೇರಿದುದು. ಪಾಶುಪತವ್ರತವು ಪಶುಪಾಶವಿಮೋಚನೆಗಾಗಿ, ಎಂದರೆ ಸಂಸಾರ ಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಪಶುಪತಿಯ ಭಕ್ತನು ಆಚರಿಸಬೇಕೆಂದು ವಿಧಿಸಿರುವ ಒಂದು ವ್ರತ.

ಇತಿಹಾಸಕಾಲದಲ್ಲಿ ಶೈವೋಪಾಸನೆಯು ವೇದಕಾಲ ಮತ್ತು ಸೂತ್ರಕಾಲಗಳಲ್ಲಿದ್ದುದಕ್ಕಿಂತಲೂ ಹೆಚ್ಚು ವಿಶಾಲ ವ್ಯಾಪ್ತಿಯನ್ನು ತಳೆದಿತ್ತೆಂದು ತೋರುತ್ತದೆ. ರಾಮಾಯಣದಲ್ಲಿ ರುದ್ರನ ಹೆಸರು ಕಾಣುವುದಿಲ್ಲ. ಆದರೆ, ಅವನ ಸ್ಥಾನದಲ್ಲಿ ಸರ್ವೋಚ್ಚ ದೇವನಾಗಿ, ಪರಮೇಶ್ವರನಾಗಿ ಶಿವನನ್ನು ಕಾಣುತ್ತೇವೆ. ಅವನನ್ನು ಮಹಾದೇವ, ಮಹೇಶ್ವರ, ಶಂಕರ, ತ್ರ್ಯಂಬಕ–ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ರುದ್ರನಿಗೆ ಘೋರ ಸ್ವರೂಪವಿತ್ತು; ಆದರೆ ಶಿವನು ಸೌಮ್ಯರೂಪಿಯೆಂದೂ ಮಂಗಳ ದಾಯಕನೆಂದೂ (ಶಂಭು) ಖ್ಯಾತನಾಗಿದ್ದಾನೆ. ದೇವರ ಹೆಸರಿನಲ್ಲಿ ಮಾತ್ರವೇ ಅಲ್ಲ ವ್ಯತ್ಯಾಸವಾಗಿರುವುದು; ಉಪಾಸನಾ ಕ್ರಮದಲ್ಲಿಯೂ ಮಾರ್ಪಾಟಾಗಿದೆ. ರಾಮಾಯಣದ ನಾಯಕನಾದ ಮಹಾವಿಷ್ಣುವಿನ ಅವತಾರ ಪುರುಷನಾದ ಶ್ರೀರಾಮನು ರಾವಣನ ಲಂಕಾನಗರದ ಮೇಲೆ ದಾಳಿಯಿಡುವುದಕ್ಕೆ ಸಾಗರವನ್ನು ದಾಟುವ ಮೊದಲು 'ಶಿವಲಿಂಗ'ವನ್ನು ಪೂಜಿಸಿದನು. ಇಂದು ಕೂಡ ಈ ಲಿಂಗವನ್ನು ಪರಮಪವಿತ್ರವಾದ ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದೆಂದು ಭಾವಿಸಿ ಸಮಸ್ತ ಹಿಂದುಗಳೂ ಪೂಜಿಸುತ್ತಿದ್ದಾರೆ.

ಉಪನಿಷತ್ತುಗಳಲ್ಲಿ ವರ್ಣಿಸಿರುವ ಶಿವಯೋಗವು ರಾಮಾಯಣದಲ್ಲಿ ಹೆಚ್ಚು ಸ್ಪಷ್ಟರೂಪವನ್ನು ತಾಳಿದೆ; ಪರಮೋಚ್ಚ ಮಟ್ಟವನ್ನು ಮುಟ್ಟಿದೆ. ಶಿವನು ಮಹಾಯೋಗಿ; ಅವನನ್ನು ತೃಪ್ತಿಪಡಿಸುವುದಕ್ಕೆ ತಪಸ್ಸು ಮಾಡಬೇಕು. ಭಗೀರಥನು ಹೀಗೆ ತಪಸ್ಸು ಮಾಡಿದನು (ಬಾಲಕಾಂಡ, 42 : 22, 23). ಮಹಾಭಾರತದಲ್ಲಿ ಶಿವಮತವು ಇನ್ನೂ ವಿಕಾಸಹೊಂದಿದೆ. ಅದನ್ನು ವಿವರಿಸಿರುವ ರೀತಿ ಹೆಚ್ಚು ಹಿತಕರ ವಾಗಿದೆ; ಹೆಚ್ಚು ಹಿತಕರವಾದ ರೂಪದಲ್ಲಿ ಅದನ್ನು ಕಾಣುತ್ತೇವೆ. ಅಲ್ಲಿ ಶಿವೋಪಾಸನೆ ದ್ವಿಮುಖವಾಗಿ ಗೋಚರಿಸುತ್ತದೆ; ಒಂದು ತಾತ್ವಿಕರೂಪ, ಇನ್ನೊಂದು ಜನಪ್ರಿಯರೂಪ. ಆದರೆ, ಇವೆರಡಕ್ಕೂ ಸಂಬಂಧವೇರ್ಪಡುವಂತೆ, ಒಂದೇ ಎಂದು ಸಮೀಕರಿಸಿ ನಿರೂಪಿಸಿದೆ.

ಜನರ ಬಳಕೆಯಲ್ಲಿನ ಶಿವೋಪಾಸನೆಯನ್ನು ಗಮನಿಸಿದಾಗ ತಿಳಿಯಬರುವುದೇನೆಂದರೆ: ಅವನೇ ಸರ್ವೋಚ್ಚನಾದ ದೇವರು, ಪರಮೇಶ್ವರ; ಅವನನ್ನು ಸದಾಕಾಲವೂ, ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲೆಲ್ಲಾ ಪೂಜಿಸುತ್ತಿರಬೇಕು (ಕರ್ಣಪರ್ವ 24, 62). ಅವನಿಗೆ ಎಲ್ಲೆಕಟ್ಟಿಲ್ಲ, ಅವನು ಅಸೀಮ; ಯೋಚಿಸಿ ತಿಳಿಯದಕ್ಕಾಗದವನು, ಅಚಿಂತ್ಯ; ಸಮೀಪಿಸಲಾಗದವನು, ಅನಧಿಗಮ್ಯ (ಅನುಶಾಸನ ಪರ್ವ, 23–27). ಅವನಿಗೆ ಈಶಾನ, ಮಹೇಶ್ವರ, ಮಹಾದೇವ, ಭಗವಾನ್, ಶಿವ—ಎಂಬ ಹೆಸರುಗಳಿವೆ. ಬ್ರಹ್ಮವಿಷ್ಣುಗಳು ಅವನ ಅಂಶಭೂತರು, ಎಂದರೆ ಅವನ ಭಾಗಮಾತ್ರವಾದವರು. ಅವರೂ ಉಳಿದ ದೇವತೆಗಳೂ ಅವನ ಶರಣವನ್ನು, ಎಂದರೆ ರಕ್ಷಣೆಯನ್ನು ಪ್ರಾರ್ಥಿಸುತ್ತಾರೆ (ಅನುಶಾಸನಪರ್ವ 22, 144-145). ಅವನಲ್ಲಿ ಭಕ್ತಿಯಿಡುವುದೇ ಅವನಿಗೆ ಸಲ್ಲಿಸುವ ಪೂಜೆ.

ಪುರಾಣಗಳಲ್ಲಿ ಶಿವೋಪಾಸನೆಯು ಬಹುಮಟ್ಟಿಗೆ ಬೆಳೆದು ವೃದ್ಧಿಗೊಂಡಿದೆ. ಶೈವ ಪುರಾಣಗಳಲ್ಲಿ

ಶಿವನೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ ಸರ್ವಶಕ್ತನಾದ ಪರದೇವತೆಯೆಂದು ವರ್ಣಿಸಿದೆ (ವಾಯು 66 ; 108 ; ಲಿಂಗ 1 : 1, 1). ಅವನೇ ಏಕೈಕ ದೈವ; ಉಳಿದ ಎಲ್ಲ ದೇವತೆಗಳೂ ಅವನ ಸೃಷ್ಟಿ. ವೇದಕಾಲಾನಂತರದ ಶೈವಮತವು ಪುರಾಣಗಳಲ್ಲಿ ಹೆಚ್ಚು ವಿಕಾಸಹೊಂದಿದ ರೂಪದಲ್ಲಿ ಕಾಣಬರುತ್ತದೆ. ವೇದ ಮತ್ತು ಇತಿಹಾಸ ಸಾಹಿತ್ಯಗಳಲ್ಲಿ ಶಿವನ ಬಗೆಗೆ ಸೂಚ್ಯವಾಗಿ ಹೇಳಿರುವ ಸಂಗತಿಗಳನ್ನೆಲ್ಲಾ ಪುರಾಣಗಳಲ್ಲಿ ಪೂರ್ಣವಾಗಿ ವ್ಯಕ್ತವಾಗಿ ವಿವರಿಸಿದೆ.

ಶಿವನೇ ಪರಬ್ರಹ್ಮ, ಪರಮ ಪುರುಷ, ಸರ್ವೋಚ್ಚ ದೇವತೆ. ಅವನು ವಿಶ್ವಕ್ಕೆ ಮೂಲಕಾರಣ. ಅವನ ಮಹಿಮೆಗಳನ್ನು ಹಾಡಿ ಹೊಗಳಲು ವೇದಗಳಿಗೆ ಸಾಮರ್ಥ್ಯವಿಲ್ಲ (ಸೌರ, 7 ; 10 ; 38 : 1, 33, 90 ; ಲಿಂಗ 21 : 16 ;ಅಗ್ನಿ, 88 : 2). ಅವನು ಆತ್ಮ, ಸರ್ವವ್ಯಾಪಿ, ಸರ್ವಶಕ್ತ, ಸರ್ವಜ್ಞ, ಸಮಸ್ತ ಪ್ರಾಣಿಗಳ ಹೃದಯವಲ್ಲೂ ನೆಲಸಿದ್ದಾನೆ (ವಾಯು, 30 ; 283–88). ಅವನು ತಾನೇ ತಾನಾಗಿ ಇರುವವನು, ತನ್ನನ್ನು ನಾನಾರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ ; ತತ್ವಸ್ವರೂಪಿ ; ಏಕೈಕ ದೇವರು.

ಪುರಾಣಗಳ ಕಾಲದಲ್ಲಿ ಶಿವನ ಈ ಸರ್ವೋಚ್ಚ ಭಾವನೆಯ ಜೊತೆಗೆ ಇನ್ನೂ ಬೇರೆ ಬೇರೆ ಹಲವು ರೂಪಗಳಲ್ಲೂ ಅವನನ್ನು ಪೂಜಿಸುತ್ತಿದ್ದರು. ಅರ್ಧಶಿವ ಅರ್ಧವಿಷ್ಣು ಸೇರಿದ ಹರಿಹರನ ರೂಪ ಒಂದು ; ಅರ್ಧ ಗಂಡಸು, ಅರ್ಧ ಹೆಂಗಸು ಆದ ಅರ್ಧನಾರೀಶ್ವರರೂಪ ಇನ್ನೊಂದು ; ಬ್ರಹ್ಮ, ವಿಷ್ಣು, ಶಿವ ಈ ಮೂವರೂ ಒಂದುಗೂಡಿರುವ ಮಹೇಶ್ವರ ಅಥವಾ ತ್ರಿಮೂರ್ತಿ ರೂಪ ಮತ್ತೊಂದು. ಅವನನ್ನು ಲಿಂಗರೂಪದಲ್ಲೂ ಪೂಜಿಸುತ್ತಿದ್ದರು. ಪುರಾಣಗಳಲ್ಲಿ ನಾನಾ ಬಗೆಯ ಲಿಂಗಗಳ ವರ್ಣನೆಯುಂಟು. ಕೆಲವು ಚಿಕ್ಕವು ; 'ಚಲಲಿಂಗ'ಗಳೆಂದು ಅವಕ್ಕೆ ಹೆಸರು ; ಅವನ್ನು ಯಾವ ಪೂಜಾಸ್ಥಾನಗಳಿಗಾದರೂ ತೆಗೆದುಕೊಂಡು ಹೋಗಬಹುದು. ಕೆಲವು ದೊಡ್ಡವು : ಅವು 'ಅಚಲಲಿಂಗ'ಗಳು ; ಅವು ದೇವಾಲಯಗಳಲ್ಲಿ ಸ್ಥಾಪಿತವಾಗಿರುವವು. ಲಿಂಗಗಳ ಆಕಾರವೂ ಬೇರೆ ಬೇರೆ ; ಕೆಲವು ಗುಂಡಗಿರುವವು ; ಕೆಲವು ಕಂಬದ ಹಾಗಿರುವವು (ಸ್ತಂಭಾಕಾರ) ; ಕೆಲವು ಶಂಖಾಕಾರ. ಲಿಂಗಗಳನ್ನು ಮಾಡುವ ವಸ್ತು ಕೂಡ ಬೇರೆ ಬೇರೆ : ಮಣ್ಣುಮುದ್ದೆ, ಮರ, ಕಲ್ಲು, ಸ್ಫಟಿಕ, ಲೋಹ, ತಾಮ್ರ, ಹಿತ್ತಾಳೆ, ಬೆಳ್ಳಿ, ಚಿನ್ನ ಅಥವಾ ರತ್ನಗಳು (ಅಗ್ನಿ, 54 ; 1). ಮಾನವಾಕಾರದಲ್ಲಿ ಕೂಡ ಶಿವನನ್ನು ಪೂಜಿಸುವುದುಂಟು. ಅವನಿಗೆ ಎರಡು ತೋಳುಗಳು, ನಾಲ್ಕು ತೋಳುಗಳು, ಅಥವಾ ನಟರಾಜ ಮೂರ್ತಿಯಲ್ಲಿರುವಂತೆ ಹಲವು ತೋಳುಗಳು ಉಂಟು. ಅವನು ಮಹಾಯೋಗಿ ; ಧ್ಯಾನ, ಯೋಗಸಮಾಧಿ ಮತ್ತು ತಪಶ್ಚರ್ಯೆಗಳಲ್ಲಿ ಧ್ಯಾನಿಸಬೇಕಾದ ದೇವತೆ ಅವನು.

ಬೌದ್ಧ ಸಾಹಿತ್ಯದಲ್ಲಿ ದೊರೆಯುವ ಶಿವನ ಸಂಬಂಧವಾದ ಸಂಗತಿಗಳನ್ನು ಪರಿಶೀಲಿಸಿದರೆ, ಆ ಕಾಲದಲ್ಲಿ ಶೈವ ಮತವು ವಿಕಾಸಹೊಂದಿದ ರೂಪದಲ್ಲಿತ್ತೆಂದೂ ಅದೊಂದು ಪ್ರಮುಖ ಮತವಾಗಿತ್ತೆಂದೂ ಕಂಡು ಬರುತ್ತದೆ. ತ್ರಿಪಿಟಕಗಳಲ್ಲಿ, ಜಾತಕಗಳಲ್ಲಿ, ಮತ್ತು ದೀರ್ಘನಿಕಾಯದಲ್ಲಿ ಶಿವನ ಪ್ರಸ್ತಾಪವಿದೆ. ಅಶ್ವಘೋಷನು ಬುದ್ಧಚರಿತದಲ್ಲಿ ಶಿವನನ್ನು ವೃಷಧ್ವಜನೆಂದೂ (10 ; 3), ಭವನೆಂದೂ (1 : 92), ಪಾರ್ವತಿಯನ್ನು ಸ್ಕಂದಮಾತೆಯೆಂದೂ (1 : 66) ಕರೆದಿದ್ದಾನೆ.

ಮಹಾ ವೈಯಾಕರಣಿಯಾದ ಪಾಣಿನಿಯು ಶಿವಭಕ್ತನಾಗಿದ್ದನು. ಅವನ ಅಷ್ಟಾಧ್ಯಾಯಿಯಲ್ಲಿ ಶಿವನ ಬಗೆಗೆ ಸ್ಪಷ್ಟಸಂಗತಿ ದೊರೆಯುತ್ತದೆ. ಅವನ ವ್ಯಾಕರಣಕ್ಕೆ ಮೂಲಾಧಾರವಾದ ಸೂತ್ರಗಳು ಶಿವನಿಂದ ಅನುಗ್ರಹಿಸಲ್ಪಟ್ಟವಂತೆ ; ಅವಕ್ಕೆ "ಮಾಹೇಶ್ವರ ಸೂತ್ರಗಳು" ಎಂದು ಹೆಸರು. ಮಹೇಶ್ವರನು ತನ್ನ ಕೈಯ ಡಮರುಗವನ್ನು ಹತ್ತು ಸಲ ಆಡಿಸಿ ಧ್ವನಿಮಾಡಿದಾಗ ಆ ಸೂತ್ರಗಳು ಆವಿರ್ಭವಿಸಿದವಂತೆ. ಭವ, ರುದ್ರ, ಶರ್ವ ಎಂಬಂಥ ಶಿವನ ಹೆಸರುಗಳು ಅವನ ಸೂತ್ರಗಳಲ್ಲಿಯೇ ದೊರೆಯುತ್ತವೆ.

ಆ ಕಾಲದಲ್ಲಿ ಮಾತಾಡುವ ಶಕ್ತಿ (ವಾಕ್) ಶಿವನಿಂದ ಮೂಡಿ ಬಂತೆಂಬ ನಂಬಿಕೆಯಿತ್ತು. ಪಾಣಿನಿಯಿದ್ದ ಕಾಲ ಕ್ರಿ. ಪೂ. 4ನೆಯ ಶತಮಾನಕ್ಕಿಂತ ಈಚಿನದಲ್ಲವೆಂದು ಪಂಡಿತರು ಹೇಳುತ್ತಾರೆ. ಕ್ರಿ. ಪೂ. 3ನೆಯ ಶತಮಾನದ್ದೆಂದು ಹೇಳುವ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶಿವನ ಪ್ರಸ್ತಾಪಗಳಿವೆ. (3 : 22 ; 2 : 90) ಈ ಪ್ರಸ್ತಾಪಗಳಿಂದ ಕ್ರಿಸ್ತಶಕಕ್ಕೆ ಪೂರ್ವದಲ್ಲಿಯೇ ಶೈವಮತವು ಪೂರ್ಣವಾಗಿ ವಿಕಾಸಹೊಂದಿತ್ತೆಂದು ಸಿದ್ಧವಾಗುತ್ತದೆ. ಆದಿಕಾಲದ ಸಾಹಿತ್ಯವನ್ನು ಇಣಿಕಿ ನೋಡಿದರೆ ಕೂಡ ಶೈವಮತವು ಜನಪ್ರಿಯವಾದ ಮತವಾಗಿತ್ತೆಂದೂ, ಅದು ಭಾರತರಾಷ್ಟ್ರದಲ್ಲೆಲ್ಲಾ ಹರಡಿತ್ತೆಂದೂ ಸಿದ್ಧವಾಗುತ್ತದೆ. 'ಮೃಚ್ಛಕಟಿಕ' (ಮಣ್ಣಿನಗಾಡಿ) ನಾಟಕದ ಕರ್ತೃವಾದ ಶೂದ್ರಕನು ಶಿವ, ಶಕ್ತಿ ಮತ್ತು ಸ್ಕಂದರ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಕಾಳಿದಾಸ, ಬಾಣ, ಮಯೂರ, ಭವಭೂತಿಗಳಂಥ ಪ್ರಸಿದ್ಧ ಸಂಸ್ಕೃತ ಕವಿಗಳು ತಮ್ಮ ಕೃತಿಗಳಲ್ಲಿ ಶಿವನನ್ನೂ ಶಿವನ ಕಾರ್ಯಗಳನ್ನೂ ವರ್ಣಿಸುತ್ತಾರೆ ; ಇವರೆಲ್ಲರನ್ನೂ ಶೈವರು ಮಹಾ ಶಿವಭಕ್ತರೆಂದು ಅಂಗೀಕರಿಸಿದ್ದಾರೆ.

ಕನಿಷ್ಕಪಕ್ಷ ಕ್ರಿ. ಪೂ. ಒಂದನೆಯ ಶತಮಾನದಿಂದಲಾದರೂ ಶಿವಮತ ರೂಢಿಯಲ್ಲಿತ್ತೆಂಬುದಕ್ಕೂ ಆಗ ಅದಕ್ಕೆ ಪ್ರಾಮುಖ್ಯವಿತ್ತೆಂಬುದಕ್ಕೂ ಪ್ರಾಚೀನಾನ್ವೇಷಣ ವಿದ್ಯೆ, ಶಿಲಾಶಾಸನ ವಿದ್ಯೆ, ನಾಣ್ಯವಿದ್ಯೆ— ಇವುಗಳು ತಕ್ಕಷ್ಟು ಆಧಾರಗಳನ್ನು ಒದಗಿಸುತ್ತವೆ. ವಸೀರಿಸ್ತಾನದಲ್ಲಿ ಸಿಕ್ಕಿರುವ ಚಿಕ್ಕಚಿಕ್ಕ ಮಣ್ಣಿನ ಬೊಂಬೆಗಳು ದೇವಿಯ ಮತ್ತು ವೃಷಭನ ಆಕೃತಿಗಳೆಂದು ಸರ್ ಟಿ. ಸ್ಟೈಯ್ನ್ ಗುರುತಿಸುತ್ತಾರೆ. ಮತ್ತು ಅವು ಮೊಹೆಂಜೊದಾರೋ ಕಾಲಕ್ಕೆ ಸೇರಿದುವೆಂದು ಅವರು ಅಭಿಪ್ರಾಯಪಡುತ್ತಾರೆ. (The Memoir of Achaeological Survey of India No. 37, plates 9 and 10). ಕ್ರಿ.ಪೂ. ಮೂರನೆಯ ವರ್ಷದ್ದೆಂದು ನಿರ್ಧರಿಸಿರುವ ಒಂದು ತಾಮ್ರದ ನಾಣ್ಯದ ಮೇಲೆ ಒಂದು ಗೂಳಿಯ ಆಕೃತಿಯಿದೆ. (Catalogue of Indian coins, British Museum Introduction, P 18, Plate I No. 20, 23). ಕ್ರಿ.ಪೂ. ಎರಡನೆಯ ಶತಮಾನದ್ದೆಂದು ಹೇಳುವ ಅಲೆಗ್ಸಾಂಡರನ ಉತ್ತರಾಧಿಕಾರಿಗಳ ನಾಣ್ಯಗಳ ಮೇಲೂ ಅದೇ ರೀತಿಯ ಗೂಳಿಯ ಚಿತ್ರವಿದೆ (Coins of Alexander's Successors in the East. Cunningham Plate VIII No. 12, Plate IX No. 4) ನಾಣ್ಯಗಳ ಮೇಲಿನ ಬರಹ ಬ್ರಾಹ್ಮೀಲಿಪಿಯಲ್ಲಿದೆ, ಸಂಸ್ಕೃತ ಭಾಷೆಯಲ್ಲಿದೆ. ಇದರಿಂದ ಈ ಗ್ರೀಕರು ಭಾರತೀಯರಾಗಿ ಪರಿವರ್ತನ ಹೊಂದಿದ್ದರೆಂದೂ ಶೈವಮತವನ್ನು ತಮ್ಮ ಮತವಾಗಿ ಅಂಗೀಕರಿಸಿದ್ದರೆಂದೂ ಅನುಮಾನಿಸ ಬಹುದು. ಕ್ರಿ.ಪೂ. ಮೂರನೆಯ ಶತಮಾನಕ್ಕೆ ಸೇರಿದ ಒಂದು ಬೆಳ್ಳಿಯ ನಾಣ್ಯದ ಮೇಲೆ ಸ್ಕಂದ ಅಥವಾ ಕಾರ್ತಿಕೇಯನ ಚಿತ್ರವಿದೆ. ಆ ಕಾಲದಲ್ಲಿ ಯುದ್ಧದೇವತೆ ಕಾರ್ತಿಕೇಯನ ಪೂಜೆ ಪ್ರಚಾರದಲ್ಲಿತ್ತೆಂಬುದನ್ನು ಇದು ಸೂಚಿಸುತ್ತದೆ. ಮಹಾಭಾಷ್ಯಕರ್ತನಾದ ಪತಂಜಲಿಯು ಕೂಡ ಸ್ಕಂದನು ಆ ಕಾಲದಲ್ಲಿ ಪೂಜೆಗೊಳ್ಳುತ್ತಿದ್ದ ದೇವತೆಯೆಂದು ಹೇಳುತ್ತಾನೆ.

ಗೊಂಡೊಫರ್ನೆಸನ ಒಂದು ನಾಣ್ಯದ ಮೇಲೆ ನಿಂತಿರುವ ಶಿವನ ಒಂದು ಮೂರ್ತಿಯಿದೆ. ಅವನಿಗೆ ಎರಡು ಕೈಗಳು ; ಒಂದು ಕೈ ತ್ರಿಶೂಲವನ್ನು ಹಿಡಿದು ಕೊಂಡಿದೆ (Catalogue of Indian Coins, British Museum–Class I Group 3, Plate XII Ind. P. 75, Plate 2 etc.). ಕುಶಾನರಾಜ ವೇಮ ಕಾಡ್ಫಿಸಿಸನ ಎರಡು ಚಿನ್ನದ ನಾಣ್ಯಗಳು ಗಮನೀಯವಾಗಿವೆ. ಒಂದರ ಮೇಲಿರುವ ಶಿವನ ಮೂರ್ತಿಗೆ ಒಂದು ಕೈಯಲ್ಲಿ ತ್ರಿಶೂಲವೂ ಇನ್ನೊಂದರಲ್ಲಿ ಕಮಂಡಲವೂ ಇದೆ. ಇನ್ನೊಂದು ನಾಣ್ಯದ ಮೇಲೆ ಶಿವನ ಪಕ್ಕದಲ್ಲಿ ಒಂದು ಗೂಳಿ (ವೃಷಭ) ನಿಂತು ಕೊಂಡಿದೆ [Lahore Museum Catalogue of coins (whitehead) : Plate XXII Nos. 31, 33 ; Calcutta Museum Catalogue of coins (smith) P. 68 ; Nos. 1, 12]. ಈ ಎರಡು ನಾಣ್ಯಗಳಲ್ಲಿನ ಶಿವನ ಮೂರ್ತಿಗೆ ಎರಡು ಕೈಗಳಿವೆ. ನಾಣ್ಯಗಳ ಮೇಲಿನ

ಬರಹವನ್ನು 'ಮಹೇಶ್ವರ' ಎಂದು ಓದಿದ್ದಾರೆ. ಕನಿಷ್ಕನಿಗೆ ಸಂಬಂಧಿಸಿದ ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಶಿವನ ಮೂರ್ತಿಗಳಿಗೆ ನಾಲ್ಕು ಕೈಗಳಿವೆ ; ಅವುಗಳಲ್ಲಿ ತ್ರಿಶೂಲ, ಡಮರು, ಕಮಂಡಲ, ಮತ್ತು ಪಾಶಗಳನ್ನು ಹಿಡಿದುಕೊಂಡಿದ್ದಾನೆ ; ಅವನಿಗೆ ನಾಲ್ಕು ಸುತ್ತಿನ ಪ್ರಭಾವಳಿಯಿದೆ (Lahore Museum Catalogue of Coins (whitehead) Plate XVII No. 65 ; XVIII-106, 108 ; Calcutta Museum Catalogue of coins (Smith), P. 74 Nos. 64–77). ಈ ನಾಣ್ಯಗಳ ಮೇಲೆ ದೊರೆತಿರುವ 'ಓ ಫೋಲ್' (Ohpol) ಎಂಬ ಗ್ರೀಕ್ ಬರವಣಿಗೆಗೆ 'ಈಶ' ಎಂದು ಅರ್ಥಮಾಡಿದ್ದಾರೆ. ಕನಿಷ್ಕನ ಒಂದು ನಾಣ್ಯದ ಮೇಲೆ ಶಿವಮೂರ್ತಿಯ ಪಕ್ಕದಲ್ಲಿ ಒಂದು ಜಿಂಕೆಯಿದೆ; ಶಿವನಿಗೆ ಎರಡು ಕೈಗಳಿವೆ ; ಒಂದರಲ್ಲಿ ತ್ರಿಶೂಲವೂ ಇನ್ನೊಂದರಲ್ಲಿ ಕಮಂಡಲವೂ ಇದೆ (Lahore Museum Catalogue of coins ;Plate XVIII, Nos. 110–114). ಕನಿಷ್ಕನ ಉತ್ತರಾಧಿಕಾರಿಗಳಾದ ಹುವಿಷ್ಕ ಮತ್ತು ಇಮ್ಮಡಿ ವಾಸುದೇವರ ನಾಣ್ಯಗಳಲ್ಲಿ ಚಂದ್ರಮೌಳಿ, ಪಿನಾಕಪಾಣಿ, ವಿರೂಪಾಕ್ಷ ಇವೇ ಮೊದಲಾದ ನಾನಾರೂಪದಶಿವಮೂರ್ತಿಗಳಿವೆ. ಇದೆಲ್ಲದರಿಂದ ಸಿದ್ಧವಾಗುವುದು ಇಷ್ಟೆ : ಯವನರೆಂದು ಹೆಸರುಗೊಂಡಿದ್ದ ವಿದೇಶೀಯರು ಕೂಡ ಕ್ರಿ.ಪೂ. 2ನೆಯ ಶತಮಾನದಷ್ಟು ಹಿಂದೆಯೇ, ಶೈವ ಮತವನ್ನೇ ತಮ್ಮ ಮತವಾಗಿ ಅಂಗೀಕರಿಸಿದ್ದರೆಂದೂ ಮಾನವಾಕಾರದ ಶಿವನ ಪೂಜೆ ಜನರಲ್ಲಿ ಬಳಕೆಯಾಗಿತ್ತೆಂದೂ ಸಿದ್ಧವಾಗುತ್ತದೆ.

ಮುಂಚಿನ ಕಾಲಕ್ಕೆ ಸೇರಿದ್ದೆಂದು ಗೊತ್ತುಮಾಡಿರುವ ಒಂದು ನಾಣ್ಯದಲ್ಲಿ ಪೀಠದ ಮೇಲೆ ಸ್ಥಾಪಿತವಾಗಿರುವ ಲಿಂಗದ ಆಕೃತಿಯಿದೆ (Catalogue of Indian Coins, British Museum of Ancient India : class I Group 3, Plate XII ; Introduction p.75 pl. II, 2 etc.). ಗುಡಿಮಲ್ಲಂನಲ್ಲಿ ಸಿಕ್ಕಿದ ಒಂದು ಲಿಂಗವು ಕ್ರಿ. ಪೂ. 3ನೆಯ ಶತಮಾನದ್ದೆಂದು ಟಿ. ವಿ. ಗೋಪಿನಾಥರಾವ್ ನಿರ್ಧರಿಸಿದ್ದಾರೆ (Indian Iconography : Vol II, p.63—66). ಬಹಳ ಹಿಂದಿನ ಕಾಲಕ್ಕೆ ಸೇರಿದ ಎಷ್ಟೋ ಲಿಂಗಗಳು ಸಿಕ್ಕಿವೆ ; ಅವನ್ನು ಮ್ಯೂಸಿಯಮ್‌ಗಳಲ್ಲಿ ರಕ್ಷಿಸಿಡಲಾಗಿದೆ. ಒಂದು ಮೂರ್ತಿಯನ್ನೂ ಶಾಸನವನ್ನೂ ಕೆತ್ತಿರುವ ಒಂದು ಲಿಂಗ ಮಥುರೆಯ ಮ್ಯೂಸಿಯಮಿನಲ್ಲಿದೆ. ಇದು ಕ್ರಿ. ಶ. ಎರಡನೆಯ ಶತಮಾನದ್ದೆಂದು ಹೇಳಲಾಗಿದೆ. ವಾಕಾಟಕರೊಡನೆ ವಿವಾಹ ಸಂಬಂಧ ಮಾಡಿಕೊಂಡಿದ್ದ ಭರಶಿವರು ಶಿವನ ಅನುಗ್ರಹದಿಂದ ತಮಗೆ ರಾಜ್ಯ ದೊರೆಯಿತೆಂದೂ, ಶಿವನ ಚಿಹ್ನೆಯಾದ ಲಿಂಗವನ್ನು ತಾವು ತೋಳುಗಳಲ್ಲಿ ಧರಿಸುತ್ತಿದ್ದರೆಂದೂ ಹೇಳಿಕೊಳ್ಳುತ್ತಾರೆ (ವಾಕಾಟಕರ ಇಮ್ಮಡಿ ಪ್ರವರಸೇನನ ಚಮ್ಮಕ್ ಶಾಸನಗಳು-ಗುಪ್ತರ ಶಾಸನ). ಕ್ರಿ. ಪೂ. ಮೂರನೆಯ ಶತಮಾನದಿಂದಲೂ ಭಾರತದಲ್ಲೆಲ್ಲಾ ಲಿಂಗಪೂಜೆಯು ಪ್ರಚಾರದಲ್ಲಿವೆಯೆಂಬುದನ್ನು ಇದು ಸಿದ್ಧಮಾಡಿ ತೋರಿಸುತ್ತದೆ.

**ಕರ್ಣಾಟಕದಲ್ಲಿ ಈ ಮತದ ಅಭಿವೃದ್ಧಿ ಮತ್ತು ವ್ಯಾಪನೆ**

ಹೀಗೆ, ಶಿವಪೂಜೆಯು ಲಿಂಗರೂಪದಲ್ಲಿ ಮತ್ತು ಮೂರ್ತಿ ರೂಪದಲ್ಲಿ ಕೂಡ, ಕ್ರಿಸ್ತಪೂರ್ವ ಕಾಲದಿಂದಲೂ ಭಾರತದೇಶದಲ್ಲಿ ಜನಪ್ರಿಯವಾಗಿತ್ತೆಂದು ಸ್ಪಷ್ಟವಾಗುತ್ತದೆ. ಶಿವನ ಜೊತೆಯಲ್ಲೇ ಸ್ಕಂದ, ಶಕ್ತಿ, ವೃಷಭ, ಗಣಪತಿ—ಇವರಿಗೂ ಪೂಜೆ ಸಲ್ಲುತ್ತಿತ್ತು. ಕ್ರಿ.ಶ. ಎರಡನೆಯ ಶತಮಾನದಿಂದ 5ನೆಯ ಶತಮಾನದ ವರೆಗೂ ಭಾರತದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ವಿಶಾಲ ಪ್ರದೇಶಗಳನ್ನು ಆಳುತ್ತಿದ್ದ ಗುಪ್ತರು, ಭರಶಿವರು, ವಾಕಾಟಕರು, ತ್ರೈಕೂಟರು—ಈ ಆದಿಕಾಲದ ರಾಜವಂಶಗಳು ಶೈವಮತಕ್ಕೆ ಆಶ್ರಯ ಕೊಡುತ್ತಿದ್ದವು.

ದಕ್ಷಿಣ ಭಾರತದಲ್ಲಿ ಚರಿತ್ರ ಪೂರ್ವಕಾಲದಿಂದಲೂ ಶೈವಮತ ಪ್ರಚಾರದಲ್ಲಿತ್ತೆಂದು ಸಂಪ್ರದಾಯ ಪರಂಪರೆ ಹೇಳುತ್ತದೆ. ತನ್ನ ತಾಯಿಯ ಲಿಂಗಪೂಜೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರಾವಣನು ಶಿವನ ಪ್ರಾಣಲಿಂಗವನ್ನೇ ಪಡೆದುಕೊಂಡು ಬಂದನೆಂದೂ, ಆದರೆ ಗೋಕರ್ಣದಿಂದ ಮುಂದಕ್ಕೆ ಅದನ್ನು ತಗೆದುಕೊಂಡು ಹೋಗಲಾರದಾದನೆಂದೂ, ಗೋಕರ್ಣದಲ್ಲಿ ಆ ಪ್ರಾಣಲಿಂಗವು ಮಹಾಬಲೇಶ್ವರ ಲಿಂಗವೆಂಬ ಹೆಸರಿನಿಂದ ಸ್ಥಾಪಿತವಾಯಿತೆಂದೂ ನಿರೂಪಿಸುವ ಪುರಾಣಕಥೆಯಿಂದ, ದಕ್ಷಿಣದಲ್ಲಿ ಶೈವಮತದ ಪ್ರಾಚೀನತೆಯೂ ಜನಪ್ರಿಯತೆಯೂ ಸಿದ್ಧವಾಗುತ್ತದೆ. ಕರ್ಣಾಟಕ ದೇಶವನ್ನು-ಇದಕ್ಕೆ ಕುಂತಲದೇಶವೆಂದೂ ಹೆಸರಿತ್ತು—ಆಳುತ್ತಿದ್ದ ಆದಿಕಾಲದ ರಾಜವಂಶದವರು ಶಾತವಾಹನರು, ಪಲ್ಲವರು ಮತ್ತು ಕದಂಬರು. ಶಾತವಾಹನರ ಕಾಲದಲ್ಲಿ ಶೈವಮತವು ಸರ್ವಪ್ರಧಾನವಾಗಿತ್ತೆಂದೂ ಬಹು ಜನಪ್ರಿಯವಾಗಿತ್ತೆಂದೂ ಬೃಹತ್‌ಕಥೆಯಿಂದ—ಈಗ ನಮಗೆ ದೊರೆಯುತ್ತಿರುವ ಬೃಹತ್ಕಥೆಯ ಸಂಸ್ಕೃತ ಭಾಷಾಂತರವಾದ ಬೃಹತ್ಕಥಾಸರಿತ್ಸಾಗರದಿಂದ—ತಿಳಿಯಬರುತ್ತದೆ. ಕಂಚಿಯ ಕೆಲವು ಪಲ್ಲವರಾಜರು ಶೈವಮತಾನುಯಾಯಿಗಳಾಗಿದ್ದರು ; ಅವರು ಕಟ್ಟಿಸಿದ ಆದಿಕಾಲದ ಶಿವದೇವಾಲಯಗಳೇ ಇದಕ್ಕೆ ಸಾಕ್ಷಿ. ಮಹೇಂದ್ರವರ್ಮನೆಂಬ ಪಲ್ಲವರಾಜನು ರಚಿಸಿದ ಮತ್ತವಿಲಾಸವೆಂಬ ನಾಟಕದಲ್ಲಿ ಕಾಪಾಲಿಕರನ್ನೂ ಬೌದ್ಧರನ್ನೂ ಹಾಸ್ಯಮಾಡುವ ಒಂದು ವಿಡಂಬನೆಯಿದೆ, ಶಿರುತ್ತೊಂಡರ್ ಅಥವಾ ಪರಂಜ್ಯೋತಿ ಎಂಬ ಶೈವಶರಣನು ಮಹೇಂದ್ರವರ್ಮನ ಮಗನಾದ ನರಸಿಂಹವರ್ಮನ ಸಮಕಾಲಿಕನೆಂದು ಹೇಳುತ್ತಾರೆ. ಈ ಮಹೇಂದ್ರವರ್ಮನು ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಸಮಕಾಲಿಕ. ಕ್ರಿ.ಶ. 642ರಲ್ಲಿ ಚಾಲುಕ್ಯರಿಗೂ ಪಲ್ಲವರಿಗೂ ನಡೆದ ಬಾದಾಮಿಯ ಕಾಳಗದಲ್ಲಿ ಶರಣ ಶಿರುತ್ತೊಂಡರ್ ಭಾಗವಹಿಸಿದ್ದರೆಂದು ಶಿಲಾಶಾಸನ ತಜ್ಞರು ಒಪ್ಪಿಕೊಳ್ಳುತ್ತಾರೆ. ಕರ್ಣಾಟಕದ ಮೊದಮೊದಲಿನ ರಾಜವಂಶಗಳಲ್ಲೊಂದಕ್ಕೆ ಸೇರಿದ ಆದಿ ಕದಂಬರು ತ್ರಿಣೇತ್ರ ಅಥವಾ ಮುಕ್ಕಣ್ಣ ಕದಂಬನಿಂದ ತಮ್ಮ ವಂಶ ಆರಂಭವಾಯಿತೆನ್ನುತ್ತಾರೆ. ಈ ಮುಕ್ಕಣ್ಣ ಕದಂಬನೂ ತಾಳಗುಂದ ಶಾಸನದ ಮಯೂರಶರ್ಮನೂ ಒಬ್ಬನೇ ಎಂದು ಗೊತ್ತಾಗಿದೆ. ತ್ರಿಪುರಗಳನ್ನು ನಾಶಮಾಡಿದ ಮೇಲೆ ಶಿವನ ಬೆವರು ಹನಿಯೊಂದು ಕದಂಬ ವೃಕ್ಷದ ಕೆಳಗೆ ಬಿತ್ತೆಂದೂ ಅದರಿಂದ ಈ ವಂಶದ ಮೂಲಪುರುಷನು ಹುಟ್ಟಿ ಬಂದನೆಂದೂ ಐತಿಹ್ಯ. ತಾಳಗುಂದದ ಶಾಸನವು "ನಮಃ ಶಿವಾಯ" ಎಂಬ ಪ್ರಾರ್ಥನೆಯಿಂದ ಪ್ರಾರಂಭವಾಗುತ್ತದೆ. ಬಾದಾಮಿಯ ಚಾಲುಕ್ಯರು ಶೈವಮತಕ್ಕೆ ಆಶ್ರಯದಾತರಾಗಿದ್ದರು. ಬಾದಾಮಿಯ ಮೊದಮೊದಲಿನ ಗವಿಗಳಲ್ಲೊಂದರಲ್ಲಿ ನಟರಾಜ, ಹರಿಹರ, ಅರ್ಧನಾರೀಶ್ವರ, ಮಹಿಷಾಸುರ ಮರ್ದಿನಿ—ಈ ಮೂರ್ತಿಗಳಿವೆ. ಬಾದಾಮಿ ಮಹಾಕೂಟ, ಪಟ್ಟದಕಿಸುವೊಳಲು—ಇವುಗಳಲ್ಲಿ ಶೈವಮತ ವಿಶೇಷ ಜನಪ್ರಿಯವಾಗಿತ್ತೆಂಬುದಕ್ಕೆ ಬೇಕಾದಷ್ಟು ಸಾಕ್ಷಿಗಳಿವೆ.

ಅಥರ್ವಶಿರೋಪನಿಷತ್ತು ಪಾಶುಪತ ಪಂಥಕ್ಕೆ ಸೇರಿದ್ದೆಂದೂ, ಬಂಧನದಿಂದ ಬಿಡುಗಡೆ ಮಾಡುವ ಪಾಶುಪತವ್ರತವನ್ನು ಅದು ವಿವರಿಸುವುದೆಂದೂ ಮೇಲಿನ ವಿವರಣೆಗಳಿಂದ ತಿಳಿದುಕೊಂಡಿದ್ದೇವೆ. ಪಾಶುಪತ ಮತವು ರುದ್ರನಿಂದ ಉಪದೇಶಿಸಲ್ಪಟ್ಟಿತೆಂದೂ, ಕೆಲವು ವಿಷಯಗಳಲ್ಲಿ ಅದು ವರ್ಣಾಶ್ರಮ ಧರ್ಮಕ್ಕೆ ಅನುಸಾರವಾಗಿತ್ತೆಂದೂ, ಮತ್ತೆ ಕೆಲವು ವಿಷಯಗಳಲ್ಲಿ ಅದಕ್ಕೆ ವ್ಯತಿರಿಕ್ತವಾಗಿತ್ತೆಂದೂ ಮಹಾಭಾರತದಲ್ಲಿ ಹೇಳಿದೆ (ಮಹಾಭಾರತ ಶಾಂತಿಪರ್ವ. 185 : 124).

ಈ ಪಾಶುಪತಧರ್ಮವೇ ಮೂಲವೆಂದೂ, ಈ ಮೂಲಧರ್ಮದಿಂದ ನಾನಾ ಶೈವಪಂಥಗಳು ಬೆಳೆದು ಬಂದವೆಂದೂ ತೋರುತ್ತದೆ. ನ್ಯಾಯ, ವೈಶೇಷಿಕ, ಯೋಗದರ್ಶನಗಳು ಮೂಲಪಾಶುಪತದಿಂದ ಕವಲೊಡೆದ ಶಾಖೆಗಳು ; ಇವುಗಳ ಅಂಶಗಳು ಶೈವ ಉಪನಿಷತ್ತುಗಳಲ್ಲಿಯೂ ಮಹಾಭಾರತದಲ್ಲಿಯೂ ದೊರೆಯುತ್ತವೆ. ಶೈವಪಂಥಗಳಲ್ಲೆಲ್ಲಾ ಲಕುಲೀಶನಿಂದ ಸ್ಥಾಪಿತವಾದದ್ದೇ ಬಹಳ ಹಳೆಯದೆಂದೂ ತನ್ನದೇ ಆದ ತತ್ವವಿಚಾರವನ್ನೊಳಗೊಂಡಿರುವುದೆಂದೂ ತೋರುತ್ತದೆ. ಈ ಶಾಖೆಯ ಸ್ಥಾಪಕನಾದ ಭಟ್ಟಾರ

ಲಕುಲೀಶನು ವಾಯುಪುರಾಣದಲ್ಲಿಯೂ (23 : 217–21), ಲಿಂಗಪುರಾಣದಲ್ಲಿಯೂ (ಭಾಗ 2 : 24 ; 124–32), ಸೂತಸಂಹಿತೆಯಲ್ಲಿಯೂ (4 : 45–17) ಉಕ್ತನಾಗಿದ್ದಾನೆ. ಅವನು ಶ್ರೀಕೃಷ್ಣನ ಸಮಕಾಲೀನನಾಗಿ ದ್ವಾಪರಯುಗದ ಅಂತ್ಯದಲ್ಲಿ ಬದುಕಿದ್ದನು. ಅವನು ರುದ್ರನ ಒಂದು ಅವತಾರವಾಗಿ ಕಾಯಾವರೋಹಣದಲ್ಲಿ ಆವಿರ್ಭವಿಸಿದನು ; ಈ ಕಾಯಾವರೋಹಣವು ಗುಜರಾತು ದೇಶದ ದಭೋಲ್ ತಾಲೂಕಿನಲ್ಲಿ ನರ್ಮದಾನದಿಯ ತೀರದಲ್ಲಿರುವ ಈಗಿನ ಕರ್ವಾನ್ ಎಂಬ ಸ್ಥಳವೆಂದು ಗೊತ್ತುಮಾಡಿದ್ದಾರೆ. ಅವನಿಗೆ ಕುಶಿಕ, ಗಾರ್ಗ್ಯ, ಕೌರುಷ, ಮೈತ್ರೇಯ–ಎಂಬ ನಾಲ್ಕುಮಂದಿ ಶಿಷ್ಯರಿದ್ದರು. ಅವನು ಆ ಶಿಷ್ಯರಿಗೆ ಪಾಶುಪತಪದ್ಧತಿಯನ್ನು ಬೋಧಿಸಿದನು. ಈ ನಾಲ್ಕು ಮಂದಿಗಳಲ್ಲಿ ಪ್ರತಿಯೊಬ್ಬರಿಗೂ ಬೇರೆ ಹಲವರು ಶಿಷ್ಯರಿದ್ದರು, ಇವರೆಲ್ಲ ಪಾಶುಪತ ಪಂಥದ ತತ್ತ್ವವಿಚಾರವನ್ನು ಲೋಕದಲ್ಲೆಲ್ಲಾ ಪ್ರಚಾರ ಪಡಿಸಿದರು. ಲಕುಲೀಶನು 28 ಮಂದಿ ಯೋಗಾಚಾರ್ಯರಲ್ಲಿ ಒಬ್ಬ. ಇವರಲ್ಲಿ ಒಬ್ಬೊಬ್ಬರಿಗೂ ನಾಲ್ಕು ನಾಲ್ಕು ಮಂದಿ ಶಿಷ್ಯರಿದ್ದರು. ಕರವಣ ಮಾಹಾತ್ಮ್ಯದಲ್ಲಿಯೂ ಹಲವಾರು ಶಾಸನಗಳಲ್ಲಿಯೂ ಅವನನ್ನು ವಿವರವಾಗಿ ವರ್ಣಿಸಿದ್ದಾರೆ. ಈ ಶಾಸನಗಳಲ್ಲೊಂದರ ಕಾಲ ಕ್ರಿ.ಶ. 1287. ಇದು ಈಗ ಪೋರ್ಚುಗಲ್ಲಿನ ಸಿಂಟ್ರ (Cintra) ಮ್ಯೂಸಿಯಮಿನಲ್ಲಿ ರಕ್ಷಿಸಿಡಲಾಗಿದೆ. ಇದನ್ನು ಡಾ॥ ಬುಲ್ಲರ್ ಪ್ರಕಟಿಸಿದ್ದಾರೆ (E. 1. Vol. I, P. 271). ಇನ್ನೊಂದು ಉದಯಪುರಕ್ಕೆ ಉತ್ತರದಲ್ಲಿ 14 ಮೈಲಿ ದೂರದಲ್ಲಿರುವ ಏಕಲಿಂಗಜಿ ದೇವಸ್ಥಾನದ ಹತ್ತಿರ ಇರುವ ನಾಥ ದೇವಾಲಯದಲ್ಲಿದೆ. ಇದರ ಕಾಲ ಕ್ರಿ.ಶ. 971. ಲಕುಲೀಶಪಂಥವು ಕರ್ಣಾಟಕದಲ್ಲಿ ಬಹು ಪ್ರಭಾವಶಾಲಿಯೂ ಜನಪ್ರಿಯವೂ ಆಗಿದ್ದ ಶೈವಮತ. ಕ್ರಿ.ಶ. ಆರನೆಯ ಶತಮಾನದಿಂದ ಹದಿನೈದನೆಯ ಶತಮಾನದ ವರೆಗೂ ಅದರ ವಿಷಯವಾಗಿ ಬೇಕಾದಷ್ಟು ಶಾಸನಾಧಾರಗಳು ಸಿಕ್ಕಿವೆ. ಮಹಾಕೂಟದಲ್ಲಿ ಲಕುಲೀಶನಿಗೆ ಸಮರ್ಪಿತವಾದ ಒಂದು ದೇವಾಲಯವಿದೆ. ಅದು ಬಹು ಮುಂಚಿನ ಕಾಲಕ್ಕೆ ಸೇರಿದ್ದೆನ್ನುತ್ತಾರೆ. ಬಾದಾಮಿ ಚಾಳುಕ್ಯ ಮಹಾರಾಜ ಕೀರ್ತಿವರ್ಮನ ತಮ್ಮ ಮಂಗಳೀಶನ ಕ್ರಿ.ಶ. 602ರ ಒಂದು ಶಾಸನವು ಮಹಾಕೂಟವು ಪುಣ್ಯಕ್ಷೇತ್ರವೆಂದು ವರ್ಣಿಸುತ್ತದೆ. ಈ ಸ್ಥಳದಲ್ಲಿ ಕ್ರಿ.ಶ. ಏಳನೆಯ ಅಥವಾ ಎಂಟನೆಯ ಶತಮಾನದಷ್ಟು ಹಿಂದಿನ ಕಾಲದಲ್ಲಿ ಕಟ್ಟಿದ ದೇವಸ್ಥಾನಗಳಲ್ಲಿ ಲಕುಲೀಶನ ಮೂರ್ತಿಗಳನ್ನು ಕೆತ್ತಿದೆ. ಕ್ರಿ.ಶ. ಎಂಟನೆಯ ಶತಮಾನದಲ್ಲಿ ನಿರ್ಮಿಸಿದ ಪಟ್ಟದಕಲ್ಲು ಮತ್ತು ಮಲ್ಲಿಕಾರ್ಜುನ ದೇವಸ್ಥಾನಗಳಲ್ಲಿ ಗೋಡೆಗಳ ಮೇಲೆ ಲಕುಲೀಶನ ಮೂರ್ತಿಗಳಿವೆ. ಹೊಂಬಳದ ಶಾಸನದಲ್ಲಿ ಅರ್ಚಕ ಬೊಂತೆಯದೇವನು ಲಕುಲೀಶನ ಮತ್ತೊಂದು ಅವತಾರ (ಅಪರಾವತಾರ) ಎಂದು ಕೀರ್ತಿತನಾಗಿದ್ದಾನೆ. ಶಿರಾ ತಾಲೂಕಿನ ಹೇಮಾವತಿಯಲ್ಲಿ ದೊರೆತ ಕ್ರಿ.ಶ. 943ರ ಮತ್ತೊಂದು ಶಾಸನದಲ್ಲಿ ಮುನಿನಾಥ ಚಿಲ್ಲುಕನು ಲಕುಲೀಶನ ಅವತಾರವೆಂದು ಭಾವಿಸಿದ್ದಂತೆ ಹೇಳಿದೆ. ಈ ಪಂಥದ ಆಚಾರ್ಯರುಗಳ ವಿಷಯದಲ್ಲಿ ಹೆಚ್ಚು ಕಡಮೆ ಎಲ್ಲಾ ಶಾಸನಗಳಲ್ಲಿಯೂ ಇವರು "ಲಾಕುಲ ಸಮಯಸ್ತಂಭ" ರೆಂದೂ " ಲಾಕುಲಾಗಮಪಂಡಿತ "ರೆಂದೂ ವರ್ಣನೆಯಿದೆ. ಇದು ಬಹು ಪ್ರಬಲವಾಗಿದ್ದ ಶೈವಪಂಥ ; ಜನಗಳೂ ರಾಜ್ಯವಾಳುವ ದೇಶಾಧಿಪತಿಗಳೂ ಈ ಪಂಥಕ್ಕೆ ವಿಶೇಷ ಗೌರವ ಸಲಿಸುತ್ತಿದ್ದರು. ಈ ಪಂಥದ ಆಚಾರ್ಯರುಗಳ ಪಾದ ತೊಳೆದು (ಕಾಲಂ ಕರ್ಚಿ) ದೇವಸ್ಥಾನಗಳಿಗೆ ದತ್ತಿ ಬಿಡುತ್ತಿದ್ದರು. ಅವರು ಬಹು ಉನ್ನತಮಟ್ಟದ ವಿದ್ವಾಂಸರಾಗಿದ್ದರು ; ವೇದಗಳು, ವೇದಾಂಗಗಳು, ಉಪನಿಷತ್ತುಗಳು, ಕಾವ್ಯಗಳು, ನಾಟಕಗಳು, ನ್ಯಾಯ, ವೈಶೇಷಿಕ, ಮೀಮಾಂಸೆ ಮೊದಲಾದವುಗಳಲ್ಲೆಲ್ಲಾ ಪರಿಣತರಾಗಿದ್ದರು. ಕರ್ಣಾಟಕದಲ್ಲಿ ಬಾದಾಮಿಯ ಚಾಲುಕ್ಯರಿಂದ ಹಿಡಿದು, ವಿಜಯನಗರದ ಅರಸರ ವರೆಗೂ ಎಲ್ಲಾ ರಾಜವಂಶಗಳ ದೊರೆಗಳೂ ಈ ಪಂಥದ ಆಚಾರ್ಯರುಗಳನ್ನು ಗೌರವಿಸಿ ಆಶ್ರಯ ನೀಡುತ್ತಿದ್ದರು. ಶಾಸನಗಳಲ್ಲಿ ಇವರನ್ನು ರಾಜಗುರುಗಳೆಂದೋ ರಾಯ ರಾಜಗುರುಗಳೆಂದೋ ವರ್ಣಿಸಿದ್ದಾರೆ. ಸಾಮಾನ್ಯವಾಗಿ ಅವರು ಮಠಗಳ ಅಧಿಪತಿಗಳಾಗಿರುತ್ತಿದ್ದರು.; ದೇವಸ್ಥಾನಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಪಂಥದ ಯತಿಗಳಲ್ಲಿ ಕೆಲವರನ್ನು ಕಾಲಾಮುಖ ಆಚಾರ್ಯರೆಂದು ಕರೆದಿದ್ದಾರೆ. ಕಾಲಾಮುಖ ಪಂಥವು ಲಾಕುಲ ಶೈವರ ಒಂದು ಶಾಖೆಯೆಂದು ಕಾಣುತ್ತದೆ. ಆದರೆ ಅವರನ್ನು ತಪ್ಪಾಗಿ ತಿಳಿದುಕೊಂಡಿದ್ದರು ; ರಾಮಾನುಜಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ

(2 : 1, 37–42) ಅವರನ್ನು ಕಾಪಾಲಿಕರೊಡನೆ ಅಭೇದವಾಗಿ ಗಣಿಸಿ ಬಿಟ್ಟಿದ್ದಾರೆ. ಡಾ॥ ಭಂಡಾರ್‌ಕರ್ ಕೂಡ ಅವರನ್ನು ತಪ್ಪಾಗಿ ತಿಳಿದುಕೊಂಡು ಕಾಪಾಲಿಕರೆಂದು ಕರೆದರು. ಕಾಪಾಲಿಕರೂ ಕಾಲಾಮುಖರೂ ಸಂಪೂರ್ಣವಾಗಿ ಬೇರೆ ಬೇರೆ. ಕಾಪಾಲಿಕರು ಶಿವನ ಘೋರರೂಪವಾದ ಭೈರವನನ್ನು ತಮ್ಮ ಪರಮ ದೇವತೆಯೆಂದು ಅಂಗೀಕರಿಸುತ್ತಾರೆ. ಮಹೇಂದ್ರವರ್ಮನ ಮತ್ತವಿಲಾಸದಲ್ಲಿಯೂ ಭವಭೂತಿಯ ಮಾಲತೀಮಾಧವದಲ್ಲಿಯೂ ಈ ಪಂಥದ ಒಂದು ಇಣುಕುನೋಟವನ್ನು ಕಾಣಬಹುದು. ಲಕುಲೀಶ ಶೈವರನ್ನು ಮಹೇಶ್ವರರೆಂದು ಕರೆಯುತ್ತಿದ್ದರು; ಅವರಿಗೆ ತಮ್ಮದೇ ಆದ ತತ್ವಶಾಸ್ತ್ರವಿತ್ತು. ಆ ತತ್ತ್ವಗಳನ್ನು ಭಟ್ಟಾರಕ ಲಕುಲೀಶನು ಪಾಶುಪತ ಸೂತ್ರಗಳಲ್ಲಿ ಸಂಗ್ರಹಿಸಿ ನಿರೂಪಿಸಿದ್ದಾನೆ. ಈ ಸೂತ್ರಗಳಿಗೆ ಕ್ರಿ.ಶ. 3ನೆಯ ಅಥವಾ 4ನೆಯ ಶತಮಾನಕ್ಕೆ ಸೇರಿದವನೆಂದು ಹೇಳುವ ಕೌಂಡಿನ್ಯನು ರಚಿಸಿದ ಒಂದು ವ್ಯಾಖ್ಯಾನವಿದೆ. ಕೌಂಡಿನ್ಯನಲ್ಲದೆ ಈ ಪಂಥಕ್ಕೆ ಸೇರಿದ ಅನೇಕ ಮಂದಿ ಆಚಾರ್ಯರುಗಳಿದ್ದರು. ಅವರಲ್ಲಿ ಈಶಾನ, ಪರಾಗವ್ಯ, ಕಪಿಲಾಂಡ, ಅತ್ರಿ, ಪಿಂಗಳ, ಪುಷ್ಟಕ, ಅಗಸ್ತಿ, ಸನ್ತಾನ ಮೊದಲಾದವರು ಈ ಪಂಥದ ಮಹಾಚಾರ್ಯರುಗಳೆಂದು ಪ್ರಸಿದ್ಧರಾಗಿದ್ದಾರೆ. ಈಗ ನಮಗೆ ದೊರೆತಿರುವ ಮತ್ತೊಂದು ಮುಖ್ಯ ಗ್ರಂಥ ಹರದತ್ತಾಚಾರ್ಯ ವಿರಚಿತವಾದ 'ಗಣಕಾರಿಕ'. ಈ ಗ್ರಂಥಕ್ಕೆ ಕ್ರಿ.ಶ. 925ರಲ್ಲಿದ್ದನೆಂದು ಹೇಳಲಾದ ಭಾಸರ್ವಜ್ಞನು ವ್ಯಾಖ್ಯಾನ ಬರೆದಿದ್ದಾನೆ. ಸಾಯಣ ಮಾಧವರು ಈ ಪಂಥದ ತತ್ತ್ವಗಳನ್ನು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ಸಂಗ್ರಹವಾಗಿ ನಿರೂಪಿಸಿದ್ದಾರೆ.

### ತತ್ತ್ವಗಳು

ಪಾಶುಪತ ಪಂಥವು ಆಸ್ತಿಕಮತ; ಪರಮ ಪ್ರಭುವಾದ ದೇವರ ಅಸ್ತಿತ್ವವನ್ನು ಅಂಗೀಕರಿಸುತ್ತದೆ. ಈ ದೇವರಿಗೆ 'ಪಶುಪತಿ' (ಪಶುಗಳ ಒಡೆಯ) ಎಂದು ಹೆಸರು; ಇದು ಶಿವನ ಇನ್ನೊಂದು ಹೆಸರು. ಪಶುಪತಿಯೆಂದರೆ ಪಶುಗಳ ಯಜಮಾನ ಅಥವಾ ಪ್ರಭು; ಸಂಸಾರದಲ್ಲಿ ಸಿಲುಕಿಕೊಂಡಿರುವ ವೈಯಕ್ತಿಕ ಜೀವಗಳೇ ಪಶುಗಳು; ಪ್ರಾಪಂಚಿಕ ಅಸ್ತಿತ್ವವೇ ಸಂಸಾರ. ಇದಕ್ಕೆ 'ಪಾಶ' ಎಂದರೆ ಹಗ್ಗ, ಬಂಧನ ಎಂದು ಹೆಸರು. ಪತಿ, ಪಶು, ಪಾಶ—ಈ ಮೂರೂ ಹೆಚ್ಚುಕಡಮೆ ಎಲ್ಲಾ ಶೈವ ಪಂಥಗಳೂ ಒಪ್ಪಿಕೊಂಡಿರುವ ತತ್ತ್ವಗಳು.

ಲಾಕುಲೀಶ ಪಂಥದ ಪಾಶುಪತರು ಐದು ಪದಾರ್ಥಗಳನ್ನು ಅಂಗೀಕರಿಸುತ್ತಾರೆ. ಅವು ಯಾವುವೆಂದರೆ :—

1. **ಕಾರ್ಯ :** ಎಂದರೆ, ಪರಿಣಾಮ ಅಥವಾ ಫಲ. ಸಾಂಖ್ಯರು ಹೇಳುವ, ಪ್ರಧಾನದಿಂದ ಉದ್ಭವಿಸುವ 'ಮಹತ್ತು' ಮತ್ತು ಉಳಿದವಕ್ಕೆ ಇದನ್ನು ಹೋಲಿಸಬಹುದು. ಬೇರೆ ರೀತಿಯಿಂದಲೂ ಇದನ್ನು ವಿವರಿಸುತ್ತಾರೆ. ಕಾರ್ಯವು ಸ್ವತಂತ್ರವಲ್ಲ; ಅದು ಮೂರು ಬಗೆಯಾಗಿದೆ. ಯಾವುವೆಂದರೆ :

(1) 'ವಿದ್ಯೆ', ತಿಳಿದುಕೊಳ್ಳುವುದು. 'ಅರಿತ'. (2) 'ಕಲಾ' ಅವಯವ. (3) ಪಶು, ವೈಯಕ್ತಿಕ ಜೀವ.

ಕಾರ್ಯವೆಂಬ ಈ ಪದಾರ್ಥವು ಸಾಂಖ್ಯರ ಎಲ್ಲಾ ತತ್ತ್ವಗಳನ್ನೂ ಮಾನಸಿಕ ಮತ್ತು ಭೌತಿಕ. ಪ್ರಪಂಚಗಳೆರಡರ ವಿಕಾಸವನ್ನೂ ಒಳಗೊಳ್ಳುತ್ತದೆ.

2. **ಕಾರಣ :** ಪ್ರಧಾನ ಕಾರಣ. ಸೃಷ್ಟಿಸುವುದು, ನಾಶಮಾಡುವುದು ಮತ್ತು ಸರ್ವಕ್ಕೂ

ಅನುಗ್ರಹ ತೋರುವುದು—ಈ ಶಕ್ತಿಯನ್ನೇ 'ಕಾರಣ' ಎಂದು ವಿವರಿಸಲಾಗಿದೆ. ಅದು ಒಂದು. ಆದರೂ ಅದರ ಕಾರ್ಯಭೇದದಿಂದ ಅದಕ್ಕೆ ಹಲವು ರೂಪಗಳುಂಟು : ಪತಿ (ಒಡೆಯ), ಸಾಧ್ಯ (ಸ್ವಾಭಾವಿಕವಾಗಿಯೇ ಶಕ್ತಿವಂತವಾಗಿರುವುದು) ಮೊದಲಾದ ರೂಪಗಳನ್ನು ಅದು ತಾಳುತ್ತದೆ. ಪತಿಗೆ ಅಪರಿಮಿತವಾದ 'ದೃಕ್' ಎಂದರೆ ಜ್ಞಾನಶಕ್ತಿಯೂ ಅಪರಿಮಿತವಾದ ' ಕ್ರಿಯಾ ' ಎಂದರೆ ಕಾರ್ಯ ಮಾಡುವ ಶಕ್ತಿಯೂ ಉಂಟು. ಅವನು ಶಾಶ್ವತಪ್ರಭು, ನಿರಂತರವಾಗಿ ಆಳುತ್ತಿರುವವನು ಅವನಿಗೆ ಪರಮಪ್ರಭುತ್ವಾಧಿಕಾರವುಂಟು. ಆ ಅಧಿಕಾರ ಇತರಾವಲಂಬಿಯಲ್ಲ ; ಸ್ವಾಭಾವಿಕವಾಗಿಯೇ ಇರುವಂಥದು.

3. **ವಿಧಿ :** ಇವು ಆದೇಶಗಳು, ಅಪ್ಪಣೆಗಳು. ಧರ್ಮ ನೀತಿಗಳನ್ನು ಅಸ್ತಿತ್ವಕ್ಕೆ ತರುವ ಕ್ರಮಾನುಸರಣೆಯೆ ವಿಧಿ. ಪಾಶುಪತಶಾಸ್ತ್ರದಲ್ಲಿ ಹೇಳಿರುವ ನಿಯಮಗಳನ್ನು ಅನುಸರಿಸಿ ನಡೆಯು ವುದರಿಂದ ಮಾನಸಿಕ ಮತ್ತು ದೈಹಿಕ ಪರಿಶುದ್ಧಿಯನ್ನು ಸಾಧಿಸಬಹುದು. ಅಹಿಂಸೆ, ಸತ್ಯ, ನಿತ್ಯ ಕರ್ಮಾನುಷ್ಠಾನ—ಈ ಮೊದಲಾದವಕ್ಕೆಲ್ಲಾ ವಿವರವಾದ ನಿಯಮಗಳನ್ನು ಹೇಳಿದೆ.

4. **ಯೋಗ :** ಒಂದುಗೂಡಿಕೆ, ಐಕ್ಯ. ಪ್ರತ್ಯೇಕವಾಗಿರುವ ವೈಯಕ್ತಿಕ ಜೀವವು ' ಚಿತ್ತ 'ದ ಮೂಲಕ ದೇವರಲ್ಲಿ ಸೇರಿ ಒಂದಾಗಿ ಹೋಗುವ ಸಾಧನವೇ ಯೋಗ. ಧ್ಯಾನ ಸಮಾಧಿಗಳೆಂಬ ಯೋಗ ಮಾರ್ಗದಿಂದ ಭಗವಂತನೊಡನೆ ಐಕ್ಯವನ್ನು ಸಾಧಿಸಬಹುದು. ಮೋಕ್ಷಸಾಧನೆಗೆ ಇದು ಪೂರ್ವಸಿದ್ಧತೆ.

5. **ದುಃಖಾಂತ :** ದುಃಖದ ಕೊನೆ. ಸಮಸ್ತ ಸಂಕಟಗಳಿಂದಲೂ ಬಿಡುಗಡೆ ಮತ್ತು ಅಪ್ರಾಕೃತ ಶಕ್ತಿಗಳ ಸಂಪಾದನೆ ; ಪಾಶುಪತದರ್ಶನದ ಸರ್ವೋಚ್ಚಶಿಖರ ಇದು. ಗಾಣಕಾರಿಕವು ದುಃಖಾಂತವನ್ನು ಎರಡು ಬಗೆಯಾಗಿ ವಿವರಿಸುತ್ತದೆ. ಒಂದು, ಎಲ್ಲಾ ಬಗೆಯ ದುಃಖಗಳ, ಸಂಕಟಗಳ ಸಂಪೂರ್ಣ ಪರಿಹಾರ, ನಿಶ್ಶೇಷ ವಿನಾಶ. ಇದು ನಕಾರಾತ್ಮಕ ವಿವರಣೆ. ಇನ್ನೊಂದು ' ಅಸ್ತಿ' ರೂಪ ವಿವರಣೆ ; ಶಿವನ ಹಾಗೆ ಅಪ್ರಾಕೃತ ಶಕ್ತಿಗಳನ್ನು ಪಡೆಯುವುದು. ಈ ಅಪ್ರಾಕೃತ ಶಕ್ತಿಗಳ ಪಡವು ಅಥವಾ ' ಸಿದ್ಧಿ'ಯು ಐದು ಬಗೆಯ ಲಾಭಗಳಲ್ಲಿ ಒಂದು. ಈ ಐದು ಲಾಭಗಳು ಯಾವುವೆಂದರೆ : 1 ಜ್ಞಾನ, 2 ತಪಸ್ಸು, 3 ನಿತ್ಯತ್ವ, 4 ಸ್ಥಿತಿ ಮತ್ತು 5 ಸಿದ್ಧಿ. ಸತ್ಯದ ಅರಿವೇ ಜ್ಞಾನ. ಭಸ್ಮಧಾರಣೆ, ಸ್ನಾನ ಮೊದಲಾಗಿ ಧರ್ಮಾಚರಣೆಯಲ್ಲಿ ನಿಯಮನಿಷ್ಠನಾಗಿರುವುದೇ ತಪಸ್ಸೆಂದು ಹೇಳಲಾಗಿದೆ. ದೇವರಲ್ಲಿ ನಿರಂತರವಾಗಿ ಭಕ್ತಿ ಮಾಡುವುದೇ ನಿತ್ಯತ್ವ. ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡು ರುದ್ರನಲ್ಲಿ ಸ್ಥಿರವಾಗಿ ನೆಲೆಗೊಳಿಸಿರುವುದಕ್ಕೆ ' ಸ್ಥಿತಿ ' ಎಂದು ಹೆಸರು. ಪರಿಪೂರ್ಣತೆಯನ್ನೂ ಅದರೊಡನೆ ತಾವಾಗಿಯೇ ಸೇರಿಬರುವ ಅಪ್ರಾಕೃತ ಶಕ್ತಿಗಳನ್ನೂ ಪಡೆಯುವುದು ' ಸಿದ್ಧಿ'ಯೆನಿಸುತ್ತದೆ. ಪಾಶುಪತ ಮಾರ್ಗದಲ್ಲಿ ಕಟ್ಟುನಿಟ್ಟಾದ ಧರ್ಮಾಚರಣೆಗೆ ವಿಶೇಷ ಪ್ರಾಮುಖ್ಯ ಕೊಡಲಾಗುತ್ತದೆ.

ಕೌಂಡಿನ್ಯನು ಪಾಶುಪತರ ನೀತಿಧರ್ಮಾಚರಣೆಯ ಕಟ್ಟುನಿಟ್ಟಿನ ಕ್ರಮವನ್ನು ಬಹು ವಿಸ್ತಾರವಾಗಿ ವಿವರಿಸುತ್ತಾನೆ. ಆತ್ಮಸಂಯಮವೇ ಅದರ ಅಡಿಗಲ್ಲು. ಅಹಿಂಸೆ, ಬ್ರಹ್ಮಚರ್ಯ, ಸತ್ಯ, ಅಸಂವ್ಯವಹಾರ, ಶೌಚ, ಆಹಾರಲಾಘವ, ಮತ್ತು ಅಪ್ರಮಾದ—ಇವು ಆ ಸಂಯಮದ ರೂಪಗಳು. ಪಾಶುಪತರ ಅಹಿಂಸೆಯು ಜೈನರು ವಿವರಿಸುವ ಅಹಿಂಸೆಯಷ್ಟೇ ವಿಶಾಲವ್ಯಾಪ್ತಿಯುಳ್ಳದ್ದು. ಚೈತನ್ಯವುಳ್ಳ ವಸ್ತು ಯಾವುದಕ್ಕಾದರೂ ತೊಂದರೆಯಾದೀತೆಂದು ಅದಕ್ಕೆ ಆಗಬಹುದಾದ ಹಿಂಸೆಯನ್ನು ತಪ್ಪಿಸುವುದಕ್ಕಾಗಿ, ಬೆಂಕಿ ಹಚ್ಚುವುದನ್ನು ನಿಷೇಧಿಸಲಾಗಿದೆ. ಉಪಯೋಗಿಸುವ ಮೊದಲು ನೀರನ್ನು ಸೋಸಬೇಕೆಂದು ನಿಯಮ. ಆಹಾರಯೋಗ್ಯವಾದ ಶಾಕಗಳ ಕಾಂಡ, ಬೆಳೆಯುತ್ತಿರುವ ಗೆಡ್ಡೆಗಳು, ಬಲಿತ ಬೀಜಗಳು, ಇವನ್ನು ತಿನ್ನಬಾರದೆಂದು ನಿಷೇಧವಿದೆ (ಪಾಶುಪತ ಸೂತ್ರಗಳು 5.16). ಪಾಶುಪತದ ಪ್ರಕಾರ

ಅಹಿಂಸೆಯೆಂದರೆ, ಎಲ್ಲ ಬಗೆಯ ಜೀವಿಗಳಿಗೂ ಮಾನಸಿಕವಾಗಿಯಾಗಲಿ ವಾಚಿಕವಾಗಿಯಾಗಲಿ ದೈಹಿಕವಾಗಿಯಾಗಲಿ ಯಾವ ರೀತಿಯಿಂದಲೂ ನೋವಾಗದಂತೆ ನೋಡಿಕೊಳ್ಳುವುದು.

ಕೌಂಡಿನ್ಯನು ಪಾಶುಪತ ಸೂತ್ರಗಳ ಮೇಲಿನ ತನ್ನ ವ್ಯಾಖ್ಯಾನದಲ್ಲಿ ಸ್ವರ್ಣಮಯವಾದ ಮೇರು ಪರ್ವತವನ್ನು ದಾನಮಾಡುವುದಕ್ಕಿಂತಲೂ, ಸಮಸ್ತ ಭೂಮಂಡಲವನ್ನೇ ಕೊಡುವುದಕ್ಕಿಂತಲೂ, ರತ್ನಗಳಿಂದ ತುಂಬಿದ ಸಮುದ್ರವನ್ನೇ ದಾನಮಾಡುವುದಕ್ಕಿಂತಲೂ ಅಹಿಂಸೆ ಹೆಚ್ಚಿನದು ಎನ್ನುತ್ತಾನೆ. ಕ್ರಿ.ಶ. 960ರಲ್ಲಿದ್ದನೆನ್ನಲಾದ ಷಡ್ದರ್ಶನಸಮುಚ್ಚಯ ಕರ್ತನಾದ ಹರಿಭದ್ರ ಸೂರಿಯೆಂಬ ಜೈನಗ್ರಂಥಕಾರನು ಶೈವಪಂಥದ ಆಚಾರ್ಯರುಗಳ ವಿಷಯವಾಗಿ ಹೀಗೆ ಹೇಳುತ್ತಾನೆ:

"ಈ ಪಂಥದ ಆಚಾರ್ಯರುಗಳು ಒಂದು ದಂಡವನ್ನು ಹಿಡಿದಿರುತ್ತಾರೆ. ದಪ್ಪ ಬಟ್ಟೆಯ ಕೌಪೀನ ಕಟ್ಟಿಕೊಂಡಿರುತ್ತಾರೆ. ಮೈಗೆ ಕುರಿ ತುಪ್ಪಟದ ಕಂಬಳಿ ಸುತ್ತಿಕೊಂಡಿರುತ್ತಾರೆ. ಮೈಗೆಲ್ಲ ಭಸ್ಮ ಬಳಿದುಕೊಳ್ಳುತ್ತಾರೆ. ಯಜ್ಞೋಪವೀತ ಧರಿಸುತ್ತಾರೆ. ಸಪ್ಪೆ ಆಹಾರ ತಿನ್ನುತ್ತಾರೆ. ಬಹುಮಟ್ಟಿಗೆ ಕಾಡುಗಳಲ್ಲಿ ವಾಸಮಾಡುತ್ತಾರೆ. ಕಂಕುಳಲ್ಲಿ ಸೋರೆಬುರುಡೆ ಕಮಂಡಲಗಳನ್ನು ಅವಚಿಕೊಂಡಿರುತ್ತಾರೆ. ಗೆಡ್ಡೆಗೆಣಸು ಬೇರು ಹಣ್ಣುಗಳ ಮೇಲೆ ಜೀವಿಸುತ್ತಾರೆ. ಅತಿಥಿ ಸತ್ಕಾರದಲ್ಲಿ ವಿಶೇಷ ಆಸಕ್ತರಾಗಿರುತ್ತಾರೆ. ಅವರಲ್ಲಿ ಎರಡು ವಿಧಗಳುಂಟು: ಹೆಂಡಿರೊಡನೆ ಬಾಳುವವರು ಒಂದು ಪಂಗಡ, ಹೆಂಡಿರಿಲ್ಲದೆ, ಎಂದರೆ, ಬ್ರಹ್ಮಚಾರಿಗಳಾಗಿಯೇ ಇರುವವರು ಇನ್ನೊಂದು ಪಂಗಡ. ಬ್ರಹ್ಮಚಾರಿಗಳಾಗಿರುವವರೇ ಉತ್ತಮರು. ಅವರು ಸಂಸ್ಕಾರದಿಂದ ಪರಿಪೂತವಾದ ಪ್ರಾಣಲಿಂಗವನ್ನು ತೋಳುಗಳಲ್ಲಾಗಲಿ, ತಲೆಯ ಮೇಲಾಗಲಿ, ತಮ್ಮ ಜಟೆಗಳಲ್ಲಾಗಲಿ ಧರಿಸುತ್ತಾರೆ. ಕಾಮಕ್ರೋಧಾದಿ ಎಲ್ಲ ಭಾವರಾಗಗಳನ್ನು ಸಂಪೂರ್ಣವಾಗಿ ಸ್ವಾಧೀನಮಾಡಿಕೊಂಡಿರುವವರು ದಿಗಂಬರರಾಗಿಯೇ ಸಂಚರಿಸುತ್ತಾರೆ. ಬೆಳಗ್ಗೆ ಹಲ್ಲುಜ್ಜಿ ಕೈಕಾಲು ಮುಖ ತೊಳೆದುಕೊಂಡ ಬಳಿಕ, ಶಿವನನ್ನು ಧ್ಯಾನಿಸುತ್ತ ಮೈಗೆಲ್ಲಾ ವಿಭೂತಿ ಬಳಿದುಕೊಳ್ಳುತ್ತಾರೆ. ಸಂನ್ಯಾಸಿಗಳಲ್ಲದ ಗೃಹಸ್ಥ ಭಕ್ತರು ಕೈ ಮುಗಿದುಕೊಂಡು, 'ನಮಃ ಶಿವಾಯ' ಎಂಬ ಮಂತ್ರವನ್ನು ಹೇಳಿಕೊಂಡು ಜಪ ಮಾಡುತ್ತಾರೆ. ಶಿವನ ಹದಿನೆಂಟು ಅವತಾರಗಳನ್ನು ಹೇಳಲಾಗಿದೆ."

ಪಾಶುಪತಪಂಥದ ಸಾಹಿತ್ಯವೆಲ್ಲವೂ ಪೂರ್ತಿಯಾಗಿ ಸಿಕ್ಕಿಲ್ಲ, ಮತ್ತು ಬಳಕೆಗೆ ಒದಗುತ್ತಿಲ್ಲ. ಇದು ವಿಷಾದಕರವಾಗಿದೆ. ಟೀಕಾಕಾರರಿಂದ ನಮಗೆ ತಿಳಿದುಬರುವ ಪಾಶುಪತ ಮತದ ಚಿತ್ರವು ಅನೇಕ ವೇಳೆ ವಿಕೃತವಾಗಿರುತ್ತದೆ.

ಆದಿಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಇನ್ನೂ ಬೇರೆ ಶೈವಪಂಥಗಳೂ ಇದ್ದವು. ಅವುಗಳಲ್ಲಿ ಕೆಲವು 8ನೆಯ ಶತಮಾನದ ಅನಂತರದಲ್ಲಿ ಪೂರ್ಣವಾಗಿ ಬೆಳೆದು ವಿಕಾಸಹೊಂದಿದವು. ಕರ್ನಾಟಕದಲ್ಲಿ ದೊರೆಯುವ ಶಾಸನಗಳಲ್ಲಿ ಕಾಶ್ಮೀರ ಶೈವ ಮತ್ತು ಶೈವಸಿದ್ಧಾಂತಗಳನ್ನು ಕೂಡ ಹೆಸರಿಸಲಾಗಿದೆ. ಆದರೆ ಅಂಥ ಶಾಸನಗಳೆಲ್ಲವೂ ಆಮೇಲಿನ ಶತಮಾನಗಳಿಗೆ ಸೇರಿದವು.

ಮೂಲ ಲೇಖಕರು : ಡಾ॥ ಎಸ್. ಸಿ. ನಂದಿಮಠ
ಅನುವಾದಕರು : ಶ್ರೀ ಎಲ್. ಗುಂಡಪ್ಪ

# ವೈಷ್ಣವ ಧರ್ಮ

ನಾವಿನ್ನು ನಮ್ಮ ಲಕ್ಷ್ಯವನ್ನು ವೈಷ್ಣವ ಧರ್ಮದ ಕಡೆಗೆ ತಿರುಗಿಸೋಣ. ಈ ಧರ್ಮದ ಸಿದ್ಧಾಂತದ ಪ್ರಕಾರ ವಿಷ್ಣುವೇ ಸರ್ವೋತ್ತಮ ಮತ್ತು ಸರ್ವಶ್ರೇಷ್ಠ ಪೂಜಾರ್ಹ ದೇವರು. ವಿಷ್ಣು ಎಂಬ ಶಬ್ದವು ಸರ್ವವ್ಯಾಪಕತ್ವವನ್ನು ಸೂಚಿಸುವ "ವಿಷ್" ಎಂಬ ಮೂಲ ಧಾತುವಿನಿಂದ ಹುಟ್ಟಿದೆ. ವಿಷ್ಣು ಭಕ್ತಿಯೇ ಅಥವಾ ವಿಷ್ಣುವಿನ ಯಾವುದೇ ಅವತಾರರೂಪದಲ್ಲಿಟ್ಟ ಭಕ್ತಿಯೇ, ಆಧ್ಯಾತ್ಮಿಕ ಸಾಫಲ್ಯ ಒದಗಿಸುವದು ಎಂದು ವೈಷ್ಣವ ಧರ್ಮ ಪರಿಗಣಿಸುತ್ತದೆ.

ವೈಷ ವ ಧರ್ಮದ ಪ್ರಾಚೀನತೆಯನ್ನು ಭಾರತದ ಪವಿತ್ರ ಧರ್ಮಗ್ರಂಥಗಳಲ್ಲಿ ಬೇಕಾದಷ್ಟು ಕಾಣಬಹುದು. ಋಗ್ವೇದದಲ್ಲಿ ವಿಷ್ಣುವೂ ಒಬ್ಬ ದೇವತೆಯಾಗಿ ಕಾಣಿಸಿಕೊಳ್ಳುತ್ತಾನೆ. ಆದರೆ ಸರ್ವಶ್ರೇಷ್ಠ ದೇವತೆಯಾಗಿ ಅಲ್ಲ. ವೈದಿಕ ಸ್ತೋತ್ರಗಳಲ್ಲಿ ಬೇರಾವ ದೇವತೆಗಿಂತ ಇಂದ್ರನನ್ನೇ ಹೆಚ್ಚಾಗಿ ಸ್ತುತಿಸಲಾಗಿದೆ. ಆದರೆ ಒಂದು ಅಂಶವು ಗಮನಾರ್ಹವಾಗಿದೆ. ಅದೆಂದರೆ, ವಿಷ್ಣುವನ್ನು ಕುರಿತು ಕೆಲವೇ ಕೆಲವು ಸ್ತೋತ್ರಗಳಿದ್ದರೂ, ಆತ ಇಂದ್ರನ ಮಿತ್ರನೆಂದು ವರ್ಣಿತನಾಗಿದ್ದಾನೆ. ಅಲ್ಲದೆ, ಇಂದ್ರನೊಂದಿಗೆ ವಿಷ್ಣುವೂ ಲೋಕಾಧಿಪತ್ಯವನ್ನು ಅನುಭವಿಸುತ್ತಾನೆ[1] ಮತ್ತು ವೃತ್ರಾಸುರನನ್ನು ಗೆಲ್ಲಲು ವಿಷ್ಣುವು ಇಂದ್ರನಿಗೆ ಬಹಳ ಸಹಾಯಕನಾಗಿ ನಿಲ್ಲುತ್ತಾನೆ.[2] ವಿಷ್ಣುವಿನ ವೈಶಿಷ್ಟ್ಯಪೂರ್ಣ ಉಲ್ಲೇಖಗಳು ಬ್ರಾಹ್ಮಣಗಳಲ್ಲಿ, ಸೂತ್ರಗಳಲ್ಲಿ, ಪುರಾಣಗಳಲ್ಲಿ ಬರುತ್ತಿದ್ದು, ಅವುಗಳಲ್ಲಿ ಆತನಿಗೆ ಆಮೇಲೆ ಕೊಡಲಾದ ಪ್ರಾಶಸ್ತ್ಯದ ಇಂಗಿತಗಳನ್ನು ಗುರುತಿಸಬಹುದಾಗಿದೆ. ಇದಕ್ಕೆ ನಿದರ್ಶನ ಎಂದರೆ, ವಿಷ್ಣುವು ತ್ರಿವಿಕ್ರಮನಾದದ್ದು. ಇದರಿಂದಾಗಿ ಈತ ಸರ್ವೋತ್ತಮ ದೇವ ಎಂದು ಮನ್ನಣೆ ಪಡೆದಿದ್ದಾನೆ. ಎರಡು ಪಾದಗಳಿಂದ ಈತನು ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿಬಿಡುತ್ತಾನೆ; ಇನ್ನು ಆತನ ಮೂರನೆಯ ಪಾದದ ವಿಷಯ ಕೇವಲ ಋಷಿ ಮುನಿಗಳಿಗೆ ಮಾತ್ರ ತಿಳಿದುದು. ವಿಷ್ಣುವು ಧರ್ಮಾಧಾರ[3]; ಆತ ಮಹತ್ತಮ ಎಂದು ಕೀರ್ತಿತನು ಮತ್ತು ಆತ ನೀತಿನಿಯಾಮಕನು (ಋತ)[4]. ಇಂದ್ರನೊಂದಿಗೆ ಇದ್ದ ಈತನ ನಿಕಟ ಸಂಪರ್ಕದಿಂದಾಗಿ, ಈತನು ಉಪೇಂದ್ರ ಎಂಬ ನಾಮ ಪಡೆದಿದ್ದಾನೆ. ವಿಷ್ಣುವು ಜಗತ್ತನ್ನು ಮೂರು ಪಾದಗಳಿಂದ ಅಳೆದಾಗ, ಇಂದ್ರ ಮತ್ತು ವಿಷ್ಣುವು ಹೇಗೆ ಹಯದ್ವಯಗಳನ್ನು ತಂದರು ಎಂಬ ಸಂಗತಿ ಇನ್ನೊಂದು ಸ್ತೋತ್ರದಲ್ಲಿ ವರ್ಣಿತವಾಗಿದೆ (ಋ. ವೇ., III. 12,27)[5]. ವಾಮನಾವತಾರದ ಕಥೆಗೆ ಇದೇ ಮೂಲ ಬೀಜ ಒದಗಿಸಿದ್ದು. ಅವತಾರಗಳಲ್ಲಿ ವಾಮನಾವತಾರವು ಐದನೆಯದು. ಇದರಲ್ಲಿ, ವಿಷ್ಣುವೇ ಪುಟ್ಟ ವಟುವಾಗಿ, ಮೂರು ಪಾದ ಭೂಮಿಯನ್ನು ದಾನ ಕೊಡಬೇಕೆಂದು ಬಲಿಯ ಬಳಿ ಬೇಡುತ್ತಾನೆ, ಮತ್ತು ಸಮಸ್ತ ಭೂಮ್ಯಾಕಾಶಗಳನ್ನು ತನ್ನ ಎರಡು ಪಾದಗಳಿಂದ ಅಳೆದುಬಿಟ್ಟು, ಮೂರನೆಯ ಪಾದವನ್ನು ಬಲಿಯ ತಲೆಯ ಮೇಲೆಯೇ ಇಟ್ಟು ಬಲಿಯನ್ನು ಪಾತಾಳಕ್ಕೆ ಮೆಟ್ಟಿದನು. ವಿಷ್ಣುವು ವಾಮನನಾಗಿ ಬಂದ ಈ ಕಥೆಯು "ಶತಪಥ ಬ್ರಾಹ್ಮಣ" ದಲ್ಲಿ [6] ಬೇರೊಂದು ಬಗೆಯಾಗಿ ನಿರೂಪಿತವಾಗಿದೆ. ಸುರರು ಮತ್ತು ಅಸುರರು, ಒಂದು ಯಾಗಕ್ಕಾಗಿ ತಕ್ಕ ಸ್ಥಳ ಸಂಧಾನದಲ್ಲಿದ್ದರು. ಅಸುರರು ಅಗ:ಮನಸ್ಸಿಲ್ಲದ ಮನಸ್ಸಿನಿಂದ, ಒಬ್ಬ ಕುಳ್ಳನು ವ್ಯಾಪಿಸುವಷ್ಟು ಭೂಮಿಯನ್ನು ಸುರರು ತೆಗೆದುಕೊಳ್ಳಬಹುದೆಂದು ಒಪ್ಪಿದರು. ವಿಷ್ಣುವು ವಾಮನನಾಗಿ ಮಲಗಬೇಕೆಂದು ಗೊತ್ತಾಯಿತು. ಹಾಗೆ ಮಲಗಿದ ವಾಮನ ಕ್ರಮೇಣ ಬೆಳೆಯುತ್ತ ಬೆಳೆಯುತ್ತ ಭೂಮಿಯನ್ನೆಲ್ಲ ವ್ಯಾಪಿಸಿಬಿಟ್ಟನು. ತನ್ಮೂಲಕ ದೇವತೆಗಳು ತಮ್ಮ ಯಾಗಕ್ಕೆ ಸಮಸ್ತ ಭೂಲೋಕವನ್ನೇ ಹೊಂದಿದರು.

ವಿಷ್ಣುವಿನ ತ್ರಿಪಾದದ ಮಾತು, ವೇದವಾಙ್ಮಯದಲ್ಲಿ ಮತ್ತೆ ಮತ್ತೆ ಬರುತ್ತದೆ. ಮೂರನೆಯ ಪಾದವನ್ನು 'ಪರಮಂ ಪದಂ' ಎಂದು ಕರೆಯಲಾಗುತ್ತಿದ್ದು, ಅದು ಒಂದು ನಿಗೂಢಾರ್ಥ ಪಡೆದಿದೆ. ಅಲ್ಲಿ, ಆ ತಾಣದಲ್ಲಿ 'ಮಧುಕೂಪ' ಇದೆ, ಅಲ್ಲಿಯೇ ದೇವತೆಗಳು ಆನಂದಲೋಲರಾಗಿರುತ್ತಾರೆ[7] ವಿಷ್ಣುವಿನ ಮೂರನೆಯ ಪಾದದ ಈ ಕಲ್ಪನೆಯು ಉಪನಿಷತ್ ಕಾಲದಲ್ಲಿ ಬಹಳ ಬಳಕೆಯಲ್ಲಿ ಬಂದಿತು. ಕಠೋಪನಿಷತ್ತಿನಲ್ಲಿ[8] ಬರುವ ಇದರ ಉಲ್ಲೇಖದ ಪ್ರಕಾರ, ಮಾನವ ಜೀವಿತದ ಅತ್ಯುಚ್ಚ ಸಾಕ್ಷಾತ್ಕಾರ ಎಂದರೆ, 'ತದ್ ವಿಷ್ಣೋಃ ಪರಮಂ ಪದಂ' ಹೊಂದುವದೇ ಆಗಿದೆ. ಬರಬರುತ್ತ 'ವಿಷ್ಣು ಪಾದ'ವು, ವೈಯಕ್ತಿಕ ಅಧ್ಯಾತ್ಮ ಸಾಧನೆಯ ಮಾರ್ಗ ಕ್ರಮಣದಲ್ಲಿ ಸ್ವರ್ಗದ ಸಂಕೇತವಾಗಿ ಪರಿಣಮಿಸಿತು. ವಿಷ್ಣುವಿನ ಪಾದದ್ವಯಗಳು, ಗಯಾದಲ್ಲಿಯ ಹಾಗೆ, ಪೂಜಾ ಚಿಹ್ನಗಳಾದವು. ಸಾಮಾನ್ಯವಾಗಿ ಅವುಗಳನ್ನು ಬೆಟ್ಟದ ನೆತ್ತಿಯ ಮೇಲೆ ಕೆತ್ತುವದು ವಾಡಿಕೆಯಾಯಿತು. ಇದು ಬೌದ್ಧರಿಗೂ ಮೇಲ್ಪಂಕ್ತಿಯಾಗಿ ಪರಿಣಮಿಸಿದಂತೆ ತೋರುತ್ತದೆ. ಏಕೆಂದರೆ, ಅವರು ಕೂಡ ಬುದ್ಧನ ಪಾದದ್ವಯಗಳನ್ನು, ಬೋಧಿವೃಕ್ಷ ಮತ್ತು ಧರ್ಮ ಚಕ್ರದ ಜೊತೆ ಜೊತೆಗೆ ಪವಿತ್ರವೆಂದು ಪರಿಗಣಿಸಲು ಪ್ರಾರಂಭಿಸಿದ್ದುಂಟು.

ಅಖಂಡ ಬ್ರಹ್ಮಾಂಡವು ಭಗವದ್ವ್ಯಾಪ್ತಿಯನ್ನು ಹೊಂದಿದೆ ಎಂಬುದು ವೇದಗತ ಕಲ್ಪನೆ ಆಗಿದ್ದು, ಇದಕ್ಕೆ ಉದಾಹರಣೆ, 'ಈಶಾವಾಸ್ಯ ಉಪನಿಷತ್ತಿ'ನ ಸುಪ್ರಸಿದ್ಧವಾದ ಪ್ರಾರಂಭಿಕ ಶ್ಲೋಕ. ಇದು ಯಜುರ್ವೇದದ ಭಾಗವಾದ್ದರಿಂದ, ಇದಕ್ಕೆ 'ಸಂಹಿತೋಪನಿಷತ್' ಎಂದೂ ಹೆಸರು. ಭಗವಂತನ ಸರ್ವವ್ಯಾಪಕತ್ವವನ್ನು ವ್ಯಕ್ತ ಪಡಿಸಲಾಗಿದೆ,—'ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್' (ವಿಶ್ವದಲ್ಲಿ ಇದ್ದುದೆಲ್ಲ ಭಗವಂತನ ಆವಾಸ ಸ್ಥಾನವಾಗಿದೆ) ಎಂಬ ಉಕ್ತಿಯಲ್ಲಿ.

ಉಪನಿಷತ್ತುಗಳು, ಬ್ರಾಹ್ಮಣಗಳು ಮತ್ತು ಆ ತರುವಾಯದ ಕಾಲದಲ್ಲಿ ಬಂದ ಸೂತ್ರಗಳು—ಇವೇ ಮೊದಲಾದವುಗಳಲ್ಲಿದ್ದ ಹಾಗೆ ವೇದದ ಸ್ತೋತ್ರಗಳಲ್ಲಿ ಧಾರ್ಮಿಕ ಮತ್ತು ತಾತ್ವಿಕ ವಿಷಯಗಳ ಬಗ್ಗೆ ವಿವರಗಳು ಬಂದಿಲ್ಲ. ಆದಾಗ್ಯೂ ವಿಶ್ವಾಂತರ್ಗತವಾದ ಒಂದು ಭಗವತ್ ಚೈತನ್ಯದ ವಿಚಾರ, ನಾನಾ ನಾಮಗಳಿಂದ[8] ಅದನ್ನು ತಿಳಿಸುವ ಅಂಶ, ಮತ್ತು ಅದೇ ಧರ್ಮನೀತಿಗಳನ್ನು ಎತ್ತಿ ಹಿಡಿಯುವ ಶಕ್ತಿ[9] ಎಂಬಿವೇ ಮೊದಲಾದ ವಿಷಯಗಳು ವೇದಗಳಿಗೆ ಚೆನ್ನಾಗಿ ಗೊತ್ತು. ವೇದಗಳ ಸ್ತೋತ್ರಗಳೆಂದರೆ. ಆದಿಮಾನವರು ನಿಸರ್ಗದ ಅದ್ಭುತಕ್ಕೆ ಬೆಚ್ಚಿ ತಬ್ಬಿಬ್ಬಾಗಿ ಹೊರಹೊಮ್ಮಿಸಿದ ಮಾತುಗಳೆಂದು ಕೆಲವರು ಪ್ರಾಚ್ಯಸಂಬಂಧೀಯ ಹಳೆಯ ಪಂಡಿತರ ಮತ. ಆದರೆ ಈ ಅಭಿಪ್ರಾಯವೀಗ ಸಾಕಷ್ಟು ಖಂಡಿಸಲ್ಪಟ್ಟಿದೆ. ಶ್ರೀ ಮಧ್ವಾಚಾರ್ಯರ "ಋಗ್ಭಾಷ್ಯ" ಗ್ರಂಥದಲ್ಲಿ, ವೇ॰ ಮಂತ್ರಗಳಿಗೆ ಮೂರು ಬಗೆಯ ಅರ್ಥಗಳುಂಟೆಂದು ಸ್ಪಷ್ಟವಾಗಿ ಹೇಳಲಾಗಿದೆ. ಒಂದು ಭೌತಿಕ, ಇನ್ನೊಂದು ಮನಸ್ಸಿಗೆ ಸಂಬಂಧಿಸಿದ್ದು. ಮೂರನೆಯದು ಆಧ್ಯಾತ್ಮಕ್ಕೆ ಸಂಬಂಧಿಸಿದ್ದು. ಐತಿಹಾಸಿಕ ಸಂಶೋಧನೆಯ ನಿಖರವಾದ ಪದ್ಧತಿಗಳನ್ನು ಚೆನ್ನಾಗಿ ಮೈಗೂಡಿಸಿಕೊಂಡ ಭಾರತದ ಇತ್ತೀಚಿನ ಮೇಧಾವಿಗಳ ಪರಿಶ್ರಮ, ಮತ್ತು ದಯಾನಂದ ಸರಸ್ವತಿ ಹಾಗೂ ಶ್ರೀ ಅರವಿಂದರಂಥ ಋಷಿ ಸಮಾನರಾದ ಅನುಭಾವಿಗಳು ನೀಡಿದ ವೇದಾರ್ಥಗಳು, ವೇದ ಮಂತ್ರಗಳಿಗೆ ನಾನಾರ್ಥಗಳು ಉಂಟೆಂಬ ಅಂಶವನ್ನು ಸಮರ್ಥಿಸುವ ಜೊತೆಗೆ ವೇದಮಂತ್ರಗಳ ರಹಸ್ಯದ ಬಗೆಗೆ ಹೊಸ ಬೆಳಕನ್ನೇ ಬೀರಿವೆ. ವೇದಮಂತ್ರಗಳ ನಾನಾ ದೇವತೆಗಳನ್ನು ಕುರಿತ ಸ್ತೋತ್ರಗಳಾದ್ದರಿಂದ ಅವು ಬಹುದೇವತಾವಾದಿತ್ವವನ್ನು ಸೂಚಿಸುವ ಸಂಭವವಿದೆ. ಆದರೆ, ಅನಂತರದ ಮಂತ್ರಗಳು ಏಕೇಶ್ವರತ್ವವನ್ನೂ ಏಕದೇವತಾ ಪೂಜೆಯನ್ನೂ ಸಾರುತ್ತವೆ. ಆ ಏಕೇಶ್ವರನನ್ನು ಕರೆವ ಬಗೆ ಇದು,—ವಿಶ್ವದೇವ, ವಿಶ್ವಕರ್ಮ, ಬ್ರಾಹ್ಮಣಸ್ಪತಿ, ಪ್ರಜಾಪತಿ ಮತ್ತು ಈಶ. ವಾಸ್ತವಿಕವಾಗಿ ಕೆಲವೊಂದು ಮಂತ್ರಗಳಲ್ಲಿ, ಸಮಸ್ತ ನಾಮರೂಪಗಳನ್ನೂ ಮಿಕ್ಕಿ ಮೀರಿದ ಏಕೈಕ ಸತ್ಯವೊಂದರ ಅಸ್ತಿತ್ವವನ್ನು ಖಚಿತಪಡಿಸುವ ಅಭಿಪ್ರಾಯ ನಮಗೆ ಸಿಕ್ಕುತ್ತದೆ. ಇಲ್ಲಿ ದ್ರಷ್ಟಾರರಾದ ಉಪನಿಷತ್‌ಕಾರರ ಬ್ರಹ್ಮನ ಸ್ವರೂಪ ನಮಗೆ ಭಾಸವಾಗುವುದು.[10]

ವಿಷ್ಣುವಿನ ವಿಷಯವಾಗಿ ಸರ್ ಆರ್.ಜಿ. ಭಂಡಾರಕರರು ಹೀಗೆ ಅಂದಿದ್ದಾರೆ—"ತುಲನಾತ್ಮಕ ದೃಷ್ಟಿಯಿಂದ ನೋಡಿದರೆ, ಈತನಿಗೆ ಋಗ್ವೇದದಲ್ಲಿ ಗೌಣಸ್ಥಾನ ಕೊಟ್ಟಿದ್ದರೂ, ಬ್ರಾಹ್ಮಣಗಳ ಕಾಲದಲ್ಲಿ ಈತನಿಗೆ ಮಹತ್ವ ಬರತೊಡಗಿತು. ಮುಂದೆ ಮಹಾಕಾವ್ಯ ಮತ್ತು ಪುರಾಣಗಳ ಸಮಯದಲ್ಲಂತೂ ಈತನು ಪರಮಾತ್ಮ ಪಟ್ಟಕ್ಕೇ ಏರಿದನು.[11]"

ಮಂತ್ರಾನಂತರದ ಕಾಲವೆಂದರೆ ಬ್ರಾಹ್ಮಣಗಳ ಕಾಲ. ಆಗ ವೇದೋಕ್ತವಾದ ಯಾಗಗಳಿಗೆ ಬಹಳ ಮಹತ್ವ ಬಂದಿತು. ಈ ಯಾಗಗಳನ್ನು ದೇವತೆಗಳ ಪ್ರೀತ್ಯರ್ಥಕ್ಕಾಗಿ ಜರುಗಿಸಿ, ಜೀವನಕ್ಕೆ ಕಲ್ಯಾಣಕಾರಕ ಆದುದನ್ನೆಲ್ಲಾ ಹೊಂದಲು ಹವಣಿಸಲಾಗುತ್ತಿತ್ತು. ಬರಬರುತ್ತ ವಿಷ್ಣು ಎಂದರೆ ಯಜ್ಞ, ಯಜ್ಞ ಎಂದರೆ ವಿಷ್ಣು ಎಂಬಂತಾಗಿ, ಆತನನ್ನು ಯಜ್ಞ, ಯಜ್ಞಪುರುಷ, ಯಜ್ಞೇಶ್ವರ, ಯಜ್ಞಕ್ರತು, ಯಜ್ಞವಾಹನ, ಯಜ್ಞಭೋಕ್ತೃ[12] ಇತ್ಯಾದಿಯಾಗಿ ಸಂಬೋಧಿಸಿದ್ದಿದೆ. ಇದರಿಂದಾಗಿ, ಯಜ್ಞದ ಕಲ್ಪನೆಯು ಆಗಲೇ ಪರಿಷ್ಕೃತವಾಗಿ ಆಧ್ಯಾತ್ಮಿಕತೆಯಲ್ಲಿ ಪರಿಣತಿಹೊಂದಿದ ಸಂಗತಿಯು ತಿಳಿದು ಬರುವುದು. ಶತಪಥ ಬ್ರಾಹ್ಮಣದಲ್ಲಿ (XIV–1–III) ದೇವತೆಗಳು ತಮ್ಮ ಅಭ್ಯುದಯಕ್ಕೆ ಕುರುಕ್ಷೇತ್ರದಲ್ಲಿ ಯಜ್ಞಮಾಡಿದ ಬಗೆಗೆ ಒಂದು ಕಥೆಯಿದೆ.

ದೇವತೆಗಳು ಅಂದರು: ಯಾರು ನಮ್ಮಲ್ಲಿ, ಶ್ರಮ, ಘೋರತಪಸ್ಸು, ಶ್ರದ್ಧೆ, ತ್ಯಾಗ ಮತ್ತು ಹವನ ಮೂಲಕ ಯಜ್ಞರಹಸ್ಯವನ್ನು ಮೊತ್ತಮೊದಲಿಗೆ ತಿಳಿಯುವನೋ ಅವನೇ ನಮ್ಮಲ್ಲಿ ಶ್ರೇಷ್ಠನಾಗಲಿ .............. ವಿಷ್ಣುವು ಆ ಉದ್ದೇಶವನ್ನು ಈಡೇರಿಸಿದ್ದರಿಂದ ಆತನೇ ನಮ್ಮಲ್ಲಿ ಶ್ರೇಷ್ಠನಾದನು. ವಿಷ್ಣುವು ಆ ಉದ್ದೇಶವನ್ನು ಈಡೇರಿಸಿದ್ದರಿದ ದೇವತೆಗಳಲ್ಲಿ ಸರ್ವ ಶ್ರೇಷ್ಠನಾದನು. ಈ ವಿಷ್ಣುವೇ ಯಜ್ಞಸ್ವರೂಪನು, ಮತ್ತು ಈ ಯಜ್ಞಸ್ವರೂಪನಾಗಿದ್ದವನೇ ಆದಿತ್ಯನು[13]."

ಇಲ್ಲಿ ವಿಷ್ಣು ಆರಾಧನೆಯು ಸೂರ್ಯಾರಾಧನೆಯೊಂದಿಗೆ ಬೆರೆತುಕೊಂಡಿದೆ. ಸೂರ್ಯನು ವಿಷ್ಣುವಿನ ಪ್ರತ್ಯಕ್ಷ ಸಂಕೇತವಾಗುತ್ತಾನೆ; ವಿಷ್ಣುವು ಸೂರ್ಯನಲ್ಲಿ ಅಂತರ್ನಿಹಿತ ನಿವಾಸಿಯಾಗಿ ನಿಲ್ಲುತ್ತಾನೆ. ವೈಷ್ಣವ ಧರ್ಮದ ವಿಶೇಷ ಲಕ್ಷಣಗಳಲ್ಲಿ ಒಂದು ಲಕ್ಷಣ, ಯಜ್ಞವೇ ಪೂಜೆಯೆಂಬುದು ಮತ್ತು ದೇವತಾ ತುಷ್ಟಿಗಾಗಿ ಯಜ್ಞದಲ್ಲಿ ಪಶುಬಲಿ ನಿಷಿದ್ಧ ಎಂಬುದು. ವೈಷ್ಣವ ಧರ್ಮವು, ದೇವತೆಗಳಿಗೆ ಯಜ್ಞದಲ್ಲಿ ಪಶುಬಲಿಯನ್ನು ನಿಷೇಧಿಸಿದ್ದೇ ಅಲ್ಲದೆ, ರಾಜಸಿಕ, ತಾಮಸಿಕ ಆರಾಧನೆಯ ಬದಲಾಗಿ ಸಾತ್ವಿಕ ಆರಾಧನಾ ವಿಧಾನವನ್ನು ಪುರಸ್ಕರಿಸಿದ್ದಾಗಿ ಹೇಳಿಕೊಳ್ಳುತ್ತದೆ. ಅದೇ ಬಗೆಯಾಗಿ, ಏಕದೇವೋಪಾಸನೆಯೇ ಪೂಜೆಯ ಅನಿವಾರ್ಯ ಅಂಗವೆಂದು ಇದು ಬಲು ಕಟ್ಟುನಿಟ್ಟಾಗಿ ವಿಧಿಸುತ್ತದೆ. ಇದರಿಂದಾಗಿ, 'ದೇವತಾಂತರ ಪರಿತ್ಯಾಗ'ವು, ಅಂದರೆ ಅನ್ಯ ದೇವತೆಗಳನ್ನು ಅಂಗೀಕರಿಸದೆ ಇರುವದು, ಈ ಧರ್ಮದ ಒಂದು ಬಗೆಯ ಪೂರ್ವಭಾವಿ ನಿಯಮವಾಗಿಬಿಟ್ಟಿತು. ಮತ್ತು ವಿಷ್ಣು ಸರ್ವೋತ್ತಮತ್ವವು ಅಂದರೆ, ವಿಷ್ಣುವೇ ದೇವದೇವನೆಂದು ಸಾರಲಾಯಿತು.

ವೈಷ್ಣವ ಧರ್ಮವು ಅಭಿವೃದ್ಧಿ ಹೊಂದಿದಂತೆ ಅದು ನಾರಾಯಣ ಕಲ್ಪನೆಯನ್ನು ಮೈಗೂಡಿಸಿ ಕೊಂಡಿತು. ನಾರಾಯಣನು ನರನ ಹೃದಯಸ್ಥ ಎಂದು ಅರ್ಥೈಸಲಾಗುತ್ತದೆ; ಇಷ್ಟೇ ಅಲ್ಲ, ಕೃಷ್ಣ ವಾಸುದೇವರೊಂದಿಗೆ ನಾರಾಯಣನನ್ನು ಬೆರೆಯಿಸಿ ಬಿಡಲಾಯ್ತು. ಇದು ಭಾಗವತ ಧರ್ಮದಲ್ಲಿ ಪರಿಣತಿ ಹೊಂದಿ ಇದಕ್ಕೆ "ಓಂ ನಮೋ ಭಗವತೇ ವಾಸುದೇವಾಯ' ಎಂಬುದೇ ಮಂತ್ರವಾಯಿತು. ಈ ಧರ್ಮದ ಕೂಲಂಕಷ ವಿವರಣೆಯನ್ನು, ಮಹಾಭಾರತದ ಶಾಂತಿಪರ್ವದಲ್ಲಿ ನಾರಾಯಣೀಯ ಎಂಬ

ವಿಭಾಗವು ನೀಡುತ್ತದೆ. ಭಗವದ್ಗೀತೆಯು ಮಹಾಭಾರತದ್ದೇ ಸುಮನೋಹರವಾದ ಪುಷ್ಪವಾಗಿದೆ. ಇಲ್ಲಿ ಒಂದು ವಿಷಯವನ್ನು ಲಕ್ಷಿಸಬಹುದು. ಅದೆಂದರೆ, ಸುಪ್ರಸಿದ್ಧವಾದ ಪುರುಷಸೂಕ್ತದ ಕರ್ತೃವಾದ ಋಷಿಯ ಹೆಸರು ನಾರಾಯಣ ಎಂದು (ಋ.ವೇ. X–90). ಬ್ರಹ್ಮಾಂಡದ ಉತ್ಪತ್ತಿಯು ಪುರುಷನ ವಿಶ್ವರೂಪದಿಂದ ಆಗಿದೆ ಎಂದು ಪುರುಷಸೂಕ್ತವು ನಿರ್ದೇಶಿಸುತ್ತದೆ. ಈಗಾಗಲೇ ಹೇಳಿದಂತೆ, ನಾರಾಯಣ ಶಬ್ದದ ಅರ್ಥ, ಮಾನವರ ಮತ್ತು ದೇವತೆಗಳ ವಿಶ್ರಾಮಸ್ಥಾನ ಎಂದು. ಸಮಸ್ತ ಜೀವರಾಶಿಯ ಮೇಲೆ ಪ್ರಭುತ್ವ ಪಡೆಯಲು ಮತ್ತು ಸಮಸ್ತ ಜೀವಕೋಟಿಯೇ ಆಗಲು ಪಾಂಚರಾತ್ರ ಸತ್ರದ, ಅಂದರೆ ಐದು ದಿನಗಳ ಕಾಲ ಮಾಡಬೇಕಾದ ಯಾಗದ ಕಲ್ಪನೆಯನ್ನು ಈತನೇ ಮಂಡಿಸಿದನು. ಸಮಸ್ತ ಅಸ್ತಿತ್ವದಲ್ಲಿ ಅಂತರ್ಗತನಾಗಿರುವ ಪರಮ ಆತ್ಮ ಈತನು ಎಂಬ ಭಾವನೆ ಬೆಳೆದು ಬಂದಿತು.

ನಾರಾಯಣನಿಂದ ಮಾಡಲಾದ ಯಜ್ಞದ ಮೂಲಕ, ಮೇಲೆ ಹೇಳಿದಂತೆ, 'ಪಾಂಚರಾತ್ರ' ಪದದ ಉತ್ಪತ್ತಿ ಆಯಿತೆಂದು ತಿಳಿಯಲಾಗುತ್ತದೆ. ಪಾಂಚರಾತ್ರ ವಿಷಯಕ ದೇವತಾ ವಿದ್ಯೆ ಮತ್ತು ತತ್ವಜ್ಞಾನವನ್ನು ತಿಳಿಸಿ ಹೇಳಲು ಆ ಮೇಲೆ ವಿಪುಲ ವಾಙ್ಮಯ ಹುಟ್ಟಿಕೊಂಡಿತು. ಎರಡುನೂರಕ್ಕಿಂತ ಹೆಚ್ಚು ಸಂಹಿತೆಗಳ ಮತ್ತು ತಂತ್ರಗಳ ಪಟ್ಟಿ ಈ ಬಗ್ಗೆ ಮಾಡಲಾಗಿದ್ದು ಅವು, 15 ಲಕ್ಷಕ್ಕೂ ಮಿಕ್ಕಿದ ಶ್ಲೋಕಗಳು ಆಗುವವೆಂದು[14] ಗಣಿಸಲಾಗಿದೆ. ಅವು ಚರ್ಚಿಸುವ ವಿಷಯಗಳು—ತತ್ವಜ್ಞಾನ, ಮಂತ್ರಶಾಸ್ತ್ರ, ಮಾಯಾಯೋಗ, ಯೋಗ, ದೇವಾಲಯ ನಿರ್ಮಾಣ, ಮೂರ್ತಿಶಿಲ್ಪ, ಗಾರ್ಹಸ್ಥ್ಯಧರ್ಮ ಮತ್ತು ಮನೆವಾಳ್ತೆಯ ನಿಯಮ ನಿರ್ಬಂಧಗಳು, ವರ್ಣಾಶ್ರಮಧರ್ಮ, ಉತ್ಸವ[15] ಇವೇ ಮೊದಲಾದವುಗಳು. ಈ ಪದ್ಧತಿಯ ಪ್ರಕಾರ, ಆ ಪರಮ ಸತ್ತೆಯ ಆವಿರ್ಭಾವವು ಐದುಮಡಿ ಆಗಿದೆ: 1. ಪರಾ, 2. ವ್ಯೂಹ, 3. ವಿಭಾವ, 4. ಅಂತರ್ಯಾಮಿನ್, 5. ಅರ್ಚಾ. 'ಪರಾ' ಎಂಬುದು ದೇವರ ಇಂದ್ರಿಯಾತೀತವಾದ ಪರಮೋಚ್ಚ ಸತ್ತೆಯು. ವ್ಯೂಹಗಳು ಎಂದರೆ, ವಾಸುದೇವ (ಕೃಷ್ಣ), ಸಂಕರ್ಷಣ (ಬಲರಾಮ), ಪ್ರದ್ಯುಮ್ನ (ಕೃಷ್ಣಪುತ್ರ) ಮತ್ತು ಅನಿರುದ್ಧ (ಪ್ರದ್ಯುಮ್ನ ಪುತ್ರ). ಇವರು ಅನುಕ್ರಮವಾಗಿ ತಮ್ಮ ಕ್ರಮಾಗತ ಪ್ರಕಟರೂಪಗಳಲ್ಲಿ ದೇವ, ಆತ್ಮ, ಮನಸ್ಸು, ಮತ್ತು ಅಹಂಕಾರ ಇವುಗಳ ಸಂಕೇತ ಸ್ವರೂಪರಾಗಿದ್ದಾರೆ. ವಾಸುದೇವನು ಮಾತ್ರ ಆರು ಬಗೆಯ ಉತ್ತಮ ಗುಣಗಳನ್ನು ಹೊಂದಿದವನಾಗಿದ್ದಾನೆ. ಅವೆಂದರೆ: ಜ್ಞಾನ, ಶಕ್ತಿ, ಬಲ, ಐಶ್ವರ್ಯ, (ಪ್ರಭುತ್ವ), ವೀರ್ಯ, (ಪ್ರತಾಪ), ಮತ್ತು ತೇಜ (ವೈಭವ). ಈ ಗುಣವಿಶೇಷಗಳು ಏಕತ್ರ ಮಿಲಿತವಾದಾಗ 'ಭಗವಾನ್' ಎಂಬ ಪದ ಪ್ರಯೋಗಕ್ಕೆ ಅರ್ಹತೆ ಉಂಟಾಗುವದು. ಸಾಕಾರ ದೇವತೆಯೆಂದು ಭಾವಿಸಲಾದ ವಾಸುದೇವನ ದೇಹವು, ಈ ಆರು ಬಗೆಯ ಉತ್ತಮ ಗುಣಗಳ ಸಮಷ್ಟಿಯಿಂದಲೂ, ಆತನ ಅರ್ಧಾಂಗಿ ಲಕ್ಷ್ಮಿಯಿಂದಲೂ ರೂಪಿತವಾಗಿದೆ. ಲಕ್ಷ್ಮಿ ಅಲ್ಲದೆ ಭೂದೇವಿ ಮತ್ತು ನೀಲಾದೇವಿಯರೂ ಇದ್ದಾರೆ. ಇನ್ನುಳಿದ ವ್ಯೂಹಗಳು ಅಥವಾ ವಿಷ್ಣುವಿನಿಂದ ನಿರ್ಗತವಾದ ಪ್ರಕಟ ಸ್ವರೂಪಗಳು, ಪ್ರತಿಯೊಂದೂ ಪರ್ಯಾಯಕ್ರಮದಲ್ಲಿ ಮೇಲೆಣಿಸಿದ ಉತ್ತಮ ಗುಣಗಳ ಎರಡೆರಡು ಮಾತ್ರ ಹೊಂದಿರುತ್ತವೆ. 'ವಿಭವ' ಎಂದರೆ ಭಗವಂತನು ಅವತಾರಗಳ ರೂಪದಲ್ಲಿ ಭೂಮಿಗೆ ಇಳಿದುಬರುವದು. ಕೆಲವು ಅವತಾರಗಳು ಕೃಷ್ಣನ ಹಾಗೆ ಪೂರ್ಣಾವತಾರಗಳು, ಇನ್ನು ಕೆಲವು ಆಂಶಿಕ ಅವತಾರಗಳು; ಮತ್ತೆ ಕೆಲವು, ಕೇವಲ ತಾತ್ಪೂರ್ತಿಕ ಅವತಾರಗಳಾಗಿದ್ದು ಕ್ಲಪ್ತ ಕಾಲದ ಮಟ್ಟಿಗೆ ಮಾತ್ರ ಇರತಕ್ಕಂಥವು. 'ಅಂತರ್ಯಾಮಿನ್' ಎಂದರೆ ಮಾನವ ಹೃದಯಸ್ಥನಾಗಿರುವ ಭಗವಂತ. ಈ ವಿಷಯವನ್ನು ಉಪನಿಷತ್ತುಗಳಲ್ಲಿ ಮತ್ತು ಗೀತೆಯಲ್ಲಿ ಕಾಣಬಹುದು. 'ಅರ್ಚಾ' ಎಂದರೆ ಸೂಕ್ತ ಸಮರ್ಪಣ ಆರಾಧನಾನಂತರ ಪ್ರತಿಮೆಗಳಲ್ಲಿ ಉಂಟಾಗುವ ದೇವಸಾನ್ನಿಧ್ಯ. ಚಕ್ರಾಂಕಿತವಾದ ಸಾಲಿಗ್ರಾಮವು ಅತ್ಯುತ್ತಮ ಅರ್ಚಾ ರೂಪವೆಂದು ಮನ್ನಿಸಲಾಗಿತ್ತಲ್ಲದೆ, ಅದರಲ್ಲಿ ವಿಷ್ಣು ಸಾನ್ನಿಧ್ಯವು ಸ್ವತಃ ಸಿದ್ಧವೆಂದು ನಂಬಲಾಗಿತ್ತು. ಅರ್ಚಾ, ಅತ್ಯಂತ ಸಮೀಪಗತ ದೃಗ್ಗೋಚರ ಸಾಕಾರ ಭಗವತ್ ಸಾನಿಧ್ಯವಾದರೆ, 'ಪರಾ' ಭಗವಂತನ ಕೇವಲವೂ ಇಂದ್ರಿಯಾತೀತವೂ ಆದ ರೂಪವು.

ಈಗಾಗಲೇ ಉಲ್ಲೇಖಿಸಿದಂತೆ, ನಾರಾಯಣೀಯ ಭಾಗದಲ್ಲಿ ಮಹಾಭಾರತವು, ಋಷಿ ನಾರಾಯಣನ ವಿಷಯಕ್ಕೆ ಹೆಚ್ಚಿನ ವಿವರಗಳನ್ನು ನೀಡುತ್ತದೆ.

ಇನ್ನು ನಾವು ಸಾಕ್ಷಾತ್ ಭಗವಂತನೆಂದು ಪರಿಗಣಿಸಲ್ಪಟ್ಟ ವಸುದೇವ ಪುತ್ರನಾದ ವಾಸುದೇವನ ಅಥವಾ ಕೃಷ್ಣನ ವಿಷಯವನ್ನು ವಿವೇಚಿಸೋಣ. ಕೃಷ್ಣನು ಭಾಗವತ ಧರ್ಮದ ಆರಾಧನಾ ಕೇಂದ್ರವೇ ಆದನು.

ಛಾಂದೋಗ್ಯ ಉಪನಿಷತ್ತಿನಲ್ಲಿ (III : 7–6), ದೇವಕೀಸುತ ಕೃಷ್ಣನ ಉಲ್ಲೇಖ ಬರುವದು. ಅವನು ಘೋರ ಆಂಗೀರಸನ ಶಿಷ್ಯನು. ತಪಸ್ಸು, ದಾನ, ಆರ್ಜವ (ಪ್ರಾಮಾಣಿಕತೆ), ಅಹಿಂಸಾ ಮತ್ತು ಸತ್ಯ ವಚನ, ಇವನ್ನು ಘೋರ ಅಂಗೀರಸನು ಪುರಸ್ಕರಿಸುತ್ತಾನೆ, ಮತ್ತು ಇವು ಭಗವದ್ಗೀತೆಯ ಭಾವಗಳನ್ನು ಪ್ರತಿಧ್ವನಿಸುವ ಹಾಗಿವೆ. ಅಲ್ಲದೆ ಇವು ಕೃಷ್ಣನು ಗೀತೆಯಲ್ಲಿ ನಿರ್ದೇಶಿಸುವ (XVI : 1–3) ದೈವೀ ಸಂಪದವನ್ನು ಒಳಗೊಂಡಿವೆ. ಘೋರ ಆಂಗೀರಸ, ವಿಧಿಪೂರ್ವಕ ಯಜ್ಞಕ್ಕೆ ಮಹತ್ವ ಕೊಡುವದಿಲ್ಲ. ಇದೇ ಬಗೆಯಾಗಿ ಭಗವದ್ಗೀತೆಯು ಕೂಡ ದ್ರವ್ಯಮಯ ವಿಧಿಪೂರ್ವಕ ಯಜ್ಞಕ್ಕೆ ಮಹತ್ವ ಕೊಡುವದಿಲ್ಲ—(IV–33). ಈ ಉಪದೇಶಗಳು ಒಂದು ಹೊಸ ದೃಷ್ಟಿಕೋನವನ್ನೇ ತೆರೆದು ತೋರಿಸುತ್ತವೆ. ; ಈ ಛಾಂದೋಗ್ಯ ಉಪನಿಷತ್ತಿನ ಕೃಷ್ಣನು ಮತ್ತು ಸಾತ್ವತರು ಭಗವಂತನೆಂದು ತಿಳಿದ ವ್ಯಕ್ತಿ, ಒಬ್ಬನೇ ಇರುವ ಹಾಗು ಆತನು ಓರ್ವ ಮಹಾಪುರುಷನಾಗಿ ಇರುವ ಸಂಭವವಿದೆ. ಈ ಬಗೆಗೆ ಶ್ರೀ ಆರ್.ಜಿ. ಭಂಡಾರಕರ ಅವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ :

“ ಮಹಾಭಾರತದ ಅನೇಕ ಕಡೆಗಳಲ್ಲಿ ಕೃಷ್ಣನ ದೈವತ್ವವನ್ನು ನಿರಾಕರಿಸಲಾಗಿದೆ. ಆದರೆ ಸಂಜಯ ಮತ್ತು ಭೀಷ್ಮರು ಕೃಷ್ಣನ ದೈವತ್ವವನ್ನು ಸ್ಥಿರೀಕರಿಸಲು ಬಹಳ ಪರಿಶ್ರಮ ಪಡುತ್ತಾರೆ. ನಿಜಾಂಶವು ಏನಿರಬಹುದು ಎಂದರೆ, ದೈವೀ ಗೌರವ ವಿಶೇಷಗಳನ್ನು ಕೊಡಲಾದ ವಾಸುದೇವ ಧರ್ಮವನ್ನು ಪ್ರಕಟ ಪಡಿಸಿದವರು ಸಾತ್ವತರು...... ನಾಡಿನ ಇನ್ನುಳಿದ ಜಾತಿಸಮೂಹ ಮತ್ತು ಕುಲಗೋತ್ರಗಳಲ್ಲಿ ಈ ಧರ್ಮಪ್ರಸರಣದ ಪೂರ್ವಭಾವಿ ಸೂಚನೆ ಈ ಮಹಾಕಾವ್ಯದ ಭಾಗ ಭಾಗಗಳಲ್ಲಿ ಬಂದದ್ದಿದೆ. ಪೌರಾಣಿಕ ಕಾಲದಲ್ಲಿ ವಾಸುದೇವ ಧರ್ಮವು ಸಮರ ಪರಾಙ್ಮುಖವಾಯಿತು, ಮತ್ತು ಮೂರು ಬಗೆಯ ಧಾರ್ಮಿಕ ವಿಚಾರ ಧಾರೆಗಳು ನಿಶ್ಚಿತವಾಗಿ ಒಟ್ಟುಗೂಡಿದವು. ಆ ಮೂರು ಧಾರೆಗಳು ಇವು : ಒಂದು, ಮೂಲತಃ ವೇದ ದೇವತೆಯಾದ ವಿಷ್ಣುವಿನಿಂದ ಹರಿದು ಬಂದದ್ದು ; ಎರಡು, ವಿಶ್ವಾತ್ಮಕ ಮತ್ತು ತಾತ್ತ್ವಿಕ ದೇವತೆಯಾದ ನಾರಾಯಣನಿಂದ ಬಂದದ್ದು ; ಮೂರು, ಐತಿಹಾಸಿಕ ದೇವತೆಯಾದ ವಾಸುದೇವನಿಂದ ಹರಿದು ಬಂದದ್ದು. ಈ ಮೂರು ಧಾರೆಗಳ ಮಿಲನವೇ ಅನಂತರದ ವೈಷ್ಣವ ಧರ್ಮ. ಇಷ್ಟೇ ಅಲ್ಲ, ನಾಲ್ಕನೆಯ ಧಾರೆಯೂ ಒಂದಿದ್ದು, ಅದು ಆಧುನಿಕ ಕಾಲದಲ್ಲಿ ತಾನೇ ತಾನೆನ್ನುವ ಮಟ್ಟಿಗೆ ಪ್ರಾಶಸ್ತ್ಯ ಪಡೆಯಿತು. ಅದೇಂದರೆ: ವಾಸುದೇವ, ಕೃಷ್ಣ ಮತ್ತು ಗೋಪಾಲಕೃಷ್ಣ (ಗೋವಳರ ದೇವತೆ)[16], ಅಭಿನ್ನರೆಂದು ಭಾವಿಸುವ ವಿಚಾರಧಾರೆ.” ಇದಕ್ಕೆ ಇನ್ನೂ ಒಂದು ವಿಚಾರಧಾರೆಯನ್ನು ಸೇರಿಸಬಹುದು ; ಅದೇಂದರೆ, ಉಪನಿಷತ್ತುಗಳ ಚಿಂತನಶೀಲ ವಿಚಾರಧಾರೆ. ಇದು ವೈಷ್ಣವ ವೈಚಾರಿಕರು ನಿರ್ಮಿಸಿದ ಈ ಸಿದ್ಧಾಂತ ಸಂಬಂಧೀಯ ವೇದಿಕೆಯ ತಳಹದಿ ಆಯಿತು. ಇವರು ಉಪನಿಷತ್ತಿನ ‘ ಬ್ರಹ್ಮ ’ನ ಸ್ಥಾನದಲ್ಲಿ ನಾರಾಯಣನನ್ನು, ಅಥವಾ ವಾಸುದೇವನನ್ನು—ಹರಿಯನ್ನು ಕೂರಿಸಿದರು. ಅಥವಾ ಕೇಶವ ನಾಮದಿಂದ ಪ್ರಾರಂಭವಾಗುವ, ಆ ಪರಮ ಸತ್ತೆಗೆ ಕೊಡಲಾದ 24 ನಾಮಗಳಲ್ಲಿ ಯಾವುದಾದರೂ ಒಂದನ್ನು ಕೂರಿಸಿದರು. ಇದಕ್ಕೂ ಮುಂದಿನ ಹೆಜ್ಜೆ ಎಂದರೆ, ಈ 24 ನಾಮಗಳ ಉಚ್ಚಾರಣೆಯು, ವೈಷ್ಣವ ಆರಾಧನೆಯ ಒಂದು ಅವಿಭಕ್ತ ಅಂಗವೇ ಆಗಿಹೋಯಿತು. ನಾರಾಯಣ, ವಾಸುದೇವ, ವಿಷ್ಣು, ಈ

ನಾಮಗಳು ಕ್ರಮೇಣ ಪರ್ಯಾಯ ನಾಮಗಳೆಂದು ಪರಿಗಣನೆಗೆ ಬಂದವು. ಈ ಮಾತನ್ನು ಈ ಮುಂದಿನ ಮಂತ್ರವು ಮನಗಾಣಿಸಿಕೊಡುತ್ತದೆ :

"ನಾರಾಯಣಾಯ ವಿದ್ಮಹೇ, ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್" ಈ ಮಂತ್ರ ತೈತ್ತಿರೀಯ ಆರಣ್ಯಕದಲ್ಲಿ (X-11) ಬರುತ್ತದೆ.

ಕೃಷ್ಣ ಅಥವಾ ವಾಸುದೇವ ಆರಾಧನೆಯ ಪ್ರಾಚೀನತೆಯು, ಈ ವಿಷಯಕ್ಕೆ ಪಾಣಿನಿಯಲ್ಲಿ ಬಂದ ಉಲ್ಲೇಖದಿಂದ ಸಿದ್ಧವಾಗುತ್ತದೆ. ಅದರಲ್ಲಿನ ಒಂದು ಸೂತ್ರವು 'ವಾಸುದೇವಕ' ಎಂಬ, ಎಂದರೆ ವಾಸುದೇವನ ಆರಾಧಕ ಎಂಬ ಶಬ್ದೋತ್ಪತ್ತಿಯ ವಿಷಯಕ್ಕೆ ಇದೆ[17]. ಇನ್ನು ಪಾಣಿನಿಯ ಕಾಲ ನಿರ್ಣಯ ಮಾಡುತ್ತ ಪಂಡಿತರು ಅದು ಕ್ರಿಸ್ತಪೂರ್ವ 5 ನೆಯ ಶತಕ ಎಂದಿದ್ದಾರೆ. ಕ್ರಿಸ್ತಪೂರ್ವ ನಾಲ್ಕನೆಯ ಶತಕದ ಮೆಗಾಸ್ಥನಿಸ್ ಕೂಡ ಹೆರಾಕ್ಲಿಜ್ (Herakles) ಅಂದರೆ ಕೃಷ್ಣನ ಆರಾಧನೆಯನ್ನು ಮಥುರಾ ಪ್ರದೇಶದ ಜನ ಮಾಡುತ್ತಿದ್ದರೆಂದು ತಿಳಿಸಿದ್ದಾನೆ. ಮೇಲಾಗಿ, ಕ್ರಿಸ್ತಪೂರ್ವ ಎರಡನೆಯ ಶತಕದ ಶಿಲಾಲೇಖ ಒಂದು ಬೇಸನಗರ (Besnagar) ಎಂಬಲ್ಲಿ ದೊರಕಿದ್ದು ಅದರ ಆಧಾರವೂ ಈ ಬಗ್ಗೆ ಇದೆ. ಅದರಲ್ಲಿ, ಹೆಲಿಯೊಡೋರಸ್—(Heliodorus) ಎಂಬ ಗ್ರೀಕರಾಯಭಾರಿಯು ತನ್ನನ್ನು ಭಾಗವತ ಎಂದು ಕರೆದುಕೊಂಡಿದ್ದಾನೆ. ಮತ್ತು ಆತನು, ಒಂದು ಗರುಡಧ್ವಜವನ್ನು ನಿಲ್ಲಿಸಿ, ದೇವತೆಗಳಿಗೆ ದೇವನಾದ ವಾಸುದೇವನಿಗೆ ಪರಮ ಗೌರವ ವ್ಯಕ್ತಪಡಿಸಿದ್ದಾನೆ.[18]

ರಾಮ ಮತ್ತು ಕೃಷ್ಣರಂಥ ಅವತಾರಿಕರ ಆರಾಧನೆಯು, ವೈಷ್ಣವ ಧರ್ಮದ ಅವಿಭಾಜ್ಯ ಅಂಗವಾಯಿತು. ಪುರಾಣಗಳಲ್ಲಿ ಹೇಳಿರುವಂತೆ ಅವತಾರಗಳು ಹತ್ತಾಗಿದ್ದರೂ, (ಮತ್ತು ಭಾಗವತದಲ್ಲಿ (1–3) ಹೇಳಿದಂತೆ-ಕಪಿಲ, ದತ್ತಾತ್ರೇಯ, ಋಷಭ, ವ್ಯಾಸ—ಇವರೇ ಮೊದಲಾಗಿ 22 ಅವತಾರಗಳು ಇದ್ದರೂ) ರಾಮ ಮತ್ತು ಕೃಷ್ಣ ಅಲ್ಲದೆ ವರಾಹ ಮತ್ತು ನಾರಸಿಂಹ ಈ ಅವತಾರಗಳು ಆರಾಧನಾರ್ಹ ಆದವು. ಇದನ್ನು ದಕ್ಷಿಣ ಭಾರತದಲ್ಲಿ ಆಯಾ ದೇವತೆಗಳಿಗೆ ಮೀಸಲಾಗಿರುವ ದೇವಾಲಯಗಳಿಂದ ಮನಗಾಣಬಹುದು. ಕೆಲವು ಪಂಡಿತರು ಹೀಗೂ ಅಭಿಪ್ರಾಯಪಡುತ್ತಾರೆ—ಅದೆಂದರೆ, ಗುಪ್ತ ರಾಜರ ಕಾಲದಲ್ಲಿ ಘಟಿಸಿದ ವೈದಿಕ ಧರ್ಮದ ಪುನರುಜ್ಜೀವನದ ಫಲವಾಗಿ, ಮತ್ತು ಶಂಕರಾಚಾರ್ಯರ ಬೋಧನೆಯ ಫಲವಾಗಿ, ಅಸಂಖ್ಯಾತ ಬೌದ್ಧರನ್ನು ಹಿಂದು ಧರ್ಮಕ್ಕೆ ಪುನಃ ಸೇರಿಸಿಕೊಳ್ಳಲಾಯ್ತು. ಆ ಸಂದರ್ಭದಲ್ಲಿ ಬೌದ್ಧರಿಗೂ ಆಸ್ಪದ ಕಲ್ಪಿಸುವ ದೃಷ್ಟಿಯಿಂದ ಬುದ್ಧನು 9ನೆಯ ಅವತಾರವೆಂದು ಪರಿಗಣಿಸಲಾಯಿತು. ಆದರೂ ಧರ್ಮನಿಷ್ಠರಾದ ಹಿಂದುಗಳಿಂದ ಬುದ್ಧನಿಗಾಗಿ ಎಲ್ಲಿಯೂ ದೇವಾಲಯಗಳ ನಿರ್ಮಾಣ ಆದದ್ದು ಕಂಡುಬರುವದಿಲ್ಲ. ಕ್ಷೀರಸಾಗರದಲ್ಲಿ ಶೇಷಶಾಯಿಯಾದ ನಾರಾಯಣನು ವಿಷ್ಣುವೇ. ಆತನ ಪಾದದ ಬಳಿ ಲಕ್ಷ್ಮಿಯು ಕುಳಿತಿರಲು, ತನ್ನ ನಾಭಿಯಿಂದ ಉದ್ಭವಿಸಿದ ಕಮಲದಲ್ಲಿ ಬ್ರಹ್ಮನು ಹುಟ್ಟಿ ಬಂದಿರಲು, ನಾರಾಯಣನು ಮಲಗಿದ್ದಾನೆ. ವಿಷ್ಣುವಿನ ಈ ರೂಪವನ್ನು ಶ್ರೀರಂಗನಾಥನೆಂದು ಆರಾಧಿಸಲಾಗುತ್ತದೆ. ಶ್ರೀರಂಗನಾಥ ಎಂಬುದು ನಾರಾಯಣನ ಮತ್ತೊಂದು ನಾಮವಾಗಿದೆ.

ಭಗವದ್ಗೀತೆ, ಮಹಾಭಾರತದ ಶಾಂತಿಪರ್ವದ ನಾರಾಯಣೀಯ ವಿಭಾಗ, ಭಾಗವತ ಮತ್ತು ವಿಷ್ಣುಪುರಾಣ-ಇವು ವೈಷ್ಣವರ ಪವಿತ್ರ ಶಾಸ್ತ್ರ ವಿಧಾನಗಳಾಗಿ ಪರಿಣಮಿಸಿದವು. ಅದು ಎಷ್ಟರ ಮಟ್ಟಿಗೆ ಎಂದರೆ ಅವು ಅವರಿಗೆ ಶ್ರುತಿಪ್ರಾಯವಾದವು ; ಅಂದರೆ ವೇದಗಳು ಮತ್ತು ಉಪನಿಷತ್ತುಗಳಂತೆ ಮತ್ತು ಬ್ರಹ್ಮಸೂತ್ರಗಳಂತೆ ಆದವು. ಇನ್ನು ಪಾಂಚರಾತ್ರ ಸಂಹಿತೆಗಳು ಇವರ ನಿತ್ಯ ನೈಮಿತ್ತಿಕ ಧರ್ಮ ಕರ್ಮಗಳಿಗೂ ಅನುಷ್ಠಾನಕ್ಕೂ ಪೂಜಾಪುರಸ್ಕಾರಗಳಿಗೂ ಪ್ರಮಾಣಗಳಾದವು. ದೇವಾಲಯಗಳು

ನಿರ್ಮಿತವಾಗಿ, ಮತ್ತು ಪೂಜಾವಿಧಾನಗಳು ವೈಭವೋಪೇತವಾಗಿ ರೂಪಗೊಂಡು, ದೊಡ್ಡ ಜನ ಸಂದಣಿಯನ್ನು ಆಕರ್ಷಿಸುವಂತಾಯಿತು. ಇದರಿಂದ ಜನಸಾಮಾನ್ಯರು ಧಾರ್ಮಿಕ ಭಾವನೆಯಿಂದ ಪ್ರೇರಿತರಾಗಿ, ಅವರಲ್ಲಿ ಹುದುಗಿದ್ದ ಕಲೆ ಸಂಸ್ಕೃತಿ ಇತ್ಯಾದಿ ಅಭಿರುಚಿಗಳನ್ನು ಅಭಿವ್ಯಕ್ತಗೊಳಿಸಲು ಅವರಿಗೆ ಸುಯೋಗ ಸದವಕಾಶಗಳು ಲಭಿಸಿದವು. ದೇವಾಲಯಗಳಲ್ಲಿ ನಡೆಯುವ ಉತ್ಸವಗಳಲ್ಲಿ, ಅಂತಃಕರಣ ಪೂರ್ವಕವಾಗಿ ಹೊರಟ ಸುಮಧುರ ನಾದ ಸ್ವರಸಮ್ಮಿಲನದೊಂದಿಗೆ ಸ್ತುತಿಪಾಠಗಳು, ಪವಿತ್ರ ಧರ್ಮಗ್ರಂಥಗಳ ಪಠನಗಳು, ಮಂತ್ರಘೋಷಗಳು, ಸಂಗೀತ ನೃತ್ಯಾದಿಗಳು ಸಮಾವೇಶ ಗೊಂಡಿರುತ್ತಿದ್ದವು. ವೈಷ್ಣವ ಧರ್ಮವು ಯಾವಾಗಲೂ ಭಗವಂತನ ಅನಂತ ಮಹಿಮಾವಿಭವವನ್ನೂ, ಆತನ ಸೃಷ್ಟಿಯ ವೈಪುಲ್ಯ ವೈವಿಧ್ಯಗಳನ್ನೂ, ಆತನ ಕಲ್ಯಾಣಕಾರಕ ಗುಣವಿಶೇಷಗಳನ್ನೂ ಕೊಂಡಾಡುತ್ತ, ಬಂದಿದೆ. ಈ ಎಲ್ಲ ಭಾವನೆಗಳಿಗೂ ಮಂತ್ರಗಳಲ್ಲಿ ಮತ್ತು ನಾನಾ ಭಕ್ತಿಗೀತೆಗಳಲ್ಲಿ ಅಭಿವ್ಯಕ್ತಿ ಕೊಡಲಾಗಿದ್ದು, ಅವು ಸಂಸ್ಕೃತ ಮತ್ತು ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ವಿಪುಲವಾಗಿವೆ.

ಈ ಸಂದರ್ಭದಲ್ಲಿ ವೈಖಾನಸ ಸೂತ್ರದ ಉಲ್ಲೇಖ ಅಗತ್ಯ. ಅದು ಕೂಡ ವೈಷ್ಣವ ಸಂಬಂಧೀಯ ವಾದದ್ದು. ಅದರ ಪ್ರಕಾರ, ಭಕ್ತನಿಗೆ ನಾರಾಯಣನೇ ಪರಮ ಆರಾಧ್ಯದೈವತ, ಅಂದರೆ ಭಕ್ತನು ನಾರಾಯಣಪರಾಯಣನಾಗಿ ಇರುತ್ತಾನೆ. ವೈಖಾನಸ ಪಂಥವನ್ನು ಪ್ರತಿಷ್ಠಾಪನೆ ಮಾಡಿದ ವಿಖಾನಸನ ವಿಷಯಕ್ಕೆ ಹೀಗೊಂದು ಆಖ್ಯಾಯಿಕೆ ಉಂಟು. ವಿಖಾನಸನು ಧರೆಯೊಳಗೆ ಉದಯಿಸಿ, ವಿಷ್ಣುವಿನ ವಿಗ್ರಹದ ಆರಾಧನಾ ಪದ್ಧತಿಯನ್ನು—'ಅರ್ಚಾ' ಪದ್ಧತಿಯನ್ನು, ಕ್ರಮಪಡಿಸಬೇಕೆಂದು ಸ್ವಯಂ ವಿಷ್ಣುವೇ ಅಪ್ಪಣೆ ಕೊಟ್ಟನಂತೆ. ವೈಖಾನಸ ಪಂಥವನ್ನು ಅನುಸರಿಸುವ ಜನರು ಅಷ್ಟೇನೂ ಬಹಳವಿಲ್ಲ. ಆದರೂ, ಪಾಂಚರಾತ್ರ ಪೂಜಾವಿಧಾನಕ್ಕಿಂತ ಹೆಚ್ಚಾಗಿ ವೈಖಾನಸ ಪೂಜಾ ವಿಧಾನವನ್ನೇ ದಕ್ಷಿಣಭಾರತದ ದೇವಾಲಯಗಳಲ್ಲಿ ಅನುಸರಿಸಲಾಗುತ್ತದೆ. ಪ್ರಸಿದ್ಧವಾದ ತಿರುಪತಿಯ ದೇವಾಲಯದಲ್ಲಿಯೂ ವೈಖಾನಸ ಪೂಜಾಪದ್ಧತಿಯನ್ನೇ ಅನುಸರಿಸಲಾಗುತ್ತಿದೆ.

ಶ್ರೀ ಅಥವಾ ಲಕ್ಷ್ಮಿಯು ನಾರಾಯಣನ ಅವಿಭಾಜ್ಯ ಅಂಗವಾಗಿದ್ದು, ವೈಖಾನಸರ ಪ್ರಕಾರ ಆಕೆಯನ್ನು ಸಹಸಾ ಪ್ರತ್ಯೇಕವಾಗಿ ಪೂಜಿಸುವದಿಲ್ಲ. ದೇವಾಂಶ ಸಂಭೂತ ವಿಭೂತಿಗಳ, ಅಥವಾ ಅಂತರ್ಯಾಮಿಯ ಸಾಕ್ಷಾತ್ಕಾರವನ್ನು ಭಕ್ತಿ ಮತ್ತು ಆತ್ಮಸಮರ್ಪಣಗಳ ಮೂಲಕ ತಾತ್ವಿಕವಾಗಿ ಒಪ್ಪಿದ್ದರೂ ವೈಖಾನಸ ಸೂತ್ರವು, ಮೂರ್ತಿಯಲ್ಲಿ ಮೂಲತಃ ಆಹ್ವಾನಿಸಲಾದ ದೇವತೆಗೇ ಹೆಚ್ಚಿನ ಪ್ರಾಶಸ್ತ್ಯ ಕೊಡುವದು. ಇನ್ನುಳಿದ ದೇವತೆಗಳ ಅಥವಾ ಸತ್‌ಪುರುಷರ ಪ್ರತ್ಯೇಕ ಪೂಜೆಗೆ ಆಯಾ ದೇವಾಲಯಗಳ ಆವರಣಗಳಲ್ಲಿ ವೈಖಾನಸ ಪದ್ಧತಿ ಆಸ್ಪದ ನೀಡುವದಿಲ್ಲ. ಹೀಗಿದ್ದೂ, ಬರಬರುತ್ತ ರಾಮಾನುಜರ ಪ್ರಭಾವದಿಂದ ವೈಖಾನಸ ದೇವಾಲಯಗಳಲ್ಲಿ ಕೂಡ ಸಂತರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಅವರಿಗೂ ಪೂಜೆ ಸಲ್ಲಿಸುವಂತಾಯಿತು. ಇದನ್ನು ತಿರುಪತಿಯಲ್ಲೂ ಕಾಣಬಹುದು. ವೈಷ್ಣವ ಪಂಥಗಳಲ್ಲಿ ಪ್ರಚಲಿತ ವಿರುವ ದೇಹಕ್ಕೆ ಶಂಖ ಚಕ್ರಗಳ ಮುದ್ರಾಧಾರಣೆಯ ಪದ್ಧತಿಯನ್ನು ವೈಖಾನಸ ಸೂತ್ರವು ಮನ್ನಿಸುವದಿಲ್ಲ. ಶಂಖ ಚಕ್ರಗಳ ಮುದ್ರಾಂಕನವು, ವೈಷ್ಣವ ಧರ್ಮದ ದೀಕ್ಷೆ ಹೊಂದಿದ್ದರ ಸಂಕೇತವಾಗಿದೆ. ಇದೇ ರೀತಿ ಯಾಗಿ ವೈಖಾನಸ ಪದ್ಧತಿಯು, ಪೂಜಾ ಪ್ರಸಂಗದಲ್ಲಿ ತಮಿಳು ಪ್ರಬಂಧಗಳ ಪಠನಕ್ಕೂ ಅನುವು ಕೊಡುವದಿಲ್ಲ.

ಹೀಗೆ, ಪರಮನೂ ಸರ್ವವ್ಯಾಪಿಯೂ ಆದ ವಿಷ್ಣುವಿನ ಕಲ್ಪನೆಯು ತೀರ ಜಟಿಲವಾದದ್ದು, ಮತ್ತು ವಿಮಿಶ್ರಿತವಾದದ್ದು. ಇದರಲ್ಲಿ ಭಾರತೀಯರ ನಾನಾವಿಧದ ಚಿಂತನಶೀಲ ಭಾವನೆಗಳೆಲ್ಲ ಅತ್ಯಂತ ಸಮಂಜಸವಾಗಿ, ಸುಸಂಗತವಾಗಿ ಸಮ್ಮಿಳಿತವಾಗಿದ್ದುಂಟು. ವೇದಗತವಾದ, ಮತ್ತು ವೇದಾನಂತರದ

ಕಲ್ಪನೆಗಳು, ಕ್ರಿಯಾಕಲಾಪ ಪ್ರಧಾನವಾದ ಮತ್ತು ಆಧ್ಯಾತ್ಮಿಕ, ತಾತ್ವಿಕ, ಸಾಂಸ್ಕೃತಿಕ ಕಲ್ಪನೆಗಳು—ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಪ್ರೇರಣೆಗಳೆಲ್ಲ ಈ ವಿಷ್ಣುಕಲ್ಪನೆಯಲ್ಲಿ ಸಮರಸ ಹೊಂದಿದ್ದು ಕಂಡುಬರುವದು. ಇಂತಹ ಸುಮಧುರವಾದ ಸಮನ್ವಯವು, ಭಗವದ್ಗೀತೆಯಲ್ಲಿ ಅಲ್ಲದೆ ಇನ್ನೆಲ್ಲಿಯೂ ಅಷ್ಟೊಂದು ಚೆನ್ನಾಗಿ ಪ್ರತಿಬಿಂಬಿತವಾಗಿಲ್ಲ.

ವೈದಿಕ ಧರ್ಮ ತಮ್ಮದೆಂದು ಹೇಳಿಕೊಳ್ಳುವವರಿಗೆಲ್ಲ ಉಪನಿಷತ್ತುಗಳೊಂದಿಗೆ ಮತ್ತು ಬ್ರಹ್ಮ ಸೂತ್ರಗಳೊಂದಿಗೆ, ಭಗವದ್ಗೀತೆಯೂ ಒಂದು ಸರ್ವಮಾನ್ಯವಾದ ಅಧಿಕೃತ ಸಂಪತ್ತಿಯಂತಿದೆ. ಗೀತೆಯ ಕೇಂದ್ರವರ್ತಿಯಾಗಿದ್ದ ಭಗವಂತನ ವಿಶ್ವರೂಪ ದರ್ಶನದಿಂದಾಗಿಯಂತೂ, ವೈಷ್ಣವ ಧರ್ಮಾನುಯಾಯಿ ಗಳಿಗೆ ಭಗವದ್ಗೀತೆಯು ಇನ್ನೂ ವಿಶೇಷಾರ್ಥದಲ್ಲಿ ಪ್ರಮಾಣಗ್ರಂಥವಾಗಿದೆ.

ಭಗವಂತನ ಸರ್ವಾಂತರ್ಯಾಮಿತ್ವವು ಸಹ, ಆತನ ಇಂದ್ರಿಯಾತೀತ ಮಹಿಮೆ ಮತ್ತು ಅಗಮ್ಯ ಸಾಮರ್ಥ್ಯದಷ್ಟೇ, ·ಗೀತೆಯಲ್ಲಿ ಒತ್ತಿ ಒತ್ತಿ ಹೇಳಲ್ಪಟ್ಟಿದೆ. ಸ್ವಾರ್ಥಸಾಧನೆಗಾಗಿ ಮಾಡಲಾಗುವ ಕ್ರಿಯಾಕರ್ಮಗಳನ್ನು ಗೀತೆಯು ಉಪೇಕ್ಷೆಯಿಂದ ಕಾಣುತ್ತದೆ. ನಿಃಸ್ವಾರ್ಥಸೇವೆಯ (ಪರಾರ್ಥ ಬುದ್ಧಿ) ಅಥವಾ ಕರ್ಮಫಲ ತ್ಯಾಗದ ತಳಹದಿಯ ಮೇಲೆ ನಿಂತ ಶ್ರೇಷ್ಠ ನೈತಿಕ ಗುಣ ವಿಶೇಷಗಳನ್ನೇ ಗೀತೆಯು ಬೋಧಿಸುವದು. ಸತ್ಕರ್ಮಕ್ಕೂ ನೈಜಜ್ಞಾನಕ್ಕೂ ಗೀತೆಯಲ್ಲಿ ತಕ್ಕ ತಾಣ ಕೊಡಲಾಗಿದ್ದರೂ ದೈವಭಕ್ತಿ ಮತ್ತು ಆತ್ಮಸಮರ್ಪಣ, ಇವುಗಳ ಮಹತ್ವವನ್ನು ಅಸಂದಿಗ್ಧ ಭಾಷೆಯಲ್ಲಿ ಪುನಃ ಪುನಃ ಹೇಳಲಾಗಿದೆ. ಎಲ್ಲಕ್ಕೂ ಮಿಗಿಲಾದ ಮಾತೆಂದರೆ, ಧರ್ಮಾನುಸಂಧಾನದ ವಿಷಯದಲ್ಲಿ ಗೀತೆಯು ತಾಳಿದ ಉದಾತ್ತವಾದ ಸಹಿಷ್ಣುತಾಭಾವ. ಈ ನಿಲುಮೆಯಿಂದಾಗಿ, ಭಾರತೀಯ ಆಧ್ಯಾತ್ಮಿಕ ಅನ್ವೇಷಕರಿಗೆ ಮಾತ್ರವಲ್ಲ ಜಗದಾದ್ಯಂತ ಸಮಸ್ತ ಅನ್ವೇಷಕರಿಗೂ ಗೀತೆ ಅತ್ಯಂತ ಜನಪ್ರಿಯವಾಗಿದೆ.

ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮವು ಯಾವ ಕಾಲಕ್ಕೆ ಹಬ್ಬಿತು ಎಂಬ ವಿಷಯದಲ್ಲಿ ಕೇವಲ ಊಹೆ ಮಾಡಬಹುದು ಅಷ್ಟೇ. ಕನ್ನಡ ನಾಡಿನಲ್ಲಿ ದೊರೆತ ಅಶೋಕನ ಶಾಸನಗಳಿಂದಲೂ ಭದ್ರಬಾಹುವು ಶ್ರವಣಬೆಳಗೊಳಕ್ಕೆ ಆಗಮಿಸಿದ ಕಥೆಯಿಂದಲೂ ಒಂದು ಅಂಶವು ಸ್ಪಷ್ಟವಾಗುವದು. ಅದೆಂದರೆ, ಜೈನ ಮತ್ತು ಬೌದ್ಧ ಧರ್ಮಗಳು ಕರ್ಣಾಟಕಕ್ಕೂ ದಕ್ಷಿಣಭಾರತಕ್ಕೂ ಕ್ರಿಸ್ತಪೂರ್ವ ಕೆಲವು ಶತಮಾನಗಳ ಹಿಂದೆ ಬಂದವು ಎಂಬುದು. ವೈದಿಕ ಧರ್ಮದ ಸಿದ್ಧಾಂತಗಳು ಮತ್ತು ಆಚಾರ ಪ್ರಣಾಲಿಕೆಗಳು, ಬೌದ್ಧ ಮತ್ತು ಜೈನ ಧರ್ಮಗಳ ಜಾಗರಣ ಕಾಲದಲ್ಲಿಯೇ ಬಂದುವೋ ಅಥವಾ ತತ್‌ಪೂರ್ವದಲ್ಲೋ ಅನಂತರದಲ್ಲೋ— ಈ ವಿಷಯದಲ್ಲಿ ಒಂದು ಖಚಿತ ನಿರ್ಧಾರಕ್ಕೆ ಬರಲು ನಮಗೆ ಸಾಕಷ್ಟು ಪ್ರಮಾಣಭೂತ ಆಧಾರಗಳು ಲಭ್ಯವಿಲ್ಲ. ಶಾತವಾಹನರು ಬಹಳ ಹಳೆಯ ಕಾಲದ ಅರಸರು. ಅವರಿಗೆ ಆಂಧ್ರಭೃತ್ಯರೆಂದೂ ಹೇಳಲಾಗುತ್ತದೆ. ಇವರ ಬಗ್ಗೆ ನಿಶ್ಚಿತವಾದ ಶಿಲಾಲೇಖಗಳ ಉಲ್ಲೇಖ ದೊರಕಿದ್ದು, ಇವರು ಕ್ರಿಸ್ತಪೂರ್ವ ಎರಡನೆಯ ಶತಕದಲ್ಲಿ ಇಂದಿನ ಆಂಧ್ರ ಮತ್ತು ಕರ್ಣಾಟಕದ ಬಹು ಭಾಗಗಳನ್ನು ಆಳಿದ್ದಾಗಿ ಗೊತ್ತಾಗಿದೆ. ಅವರು ವೈದಿಕಧರ್ಮವನ್ನು ಎತ್ತಿ ಹಿಡಿದವರು. 2ನೆಯ ಶಾತಕರ್ಣಿಯು, ಕ್ರಿಸ್ತಪೂರ್ವ 1ನೆಯ ಅಥವಾ 2ನೆಯ ಶತಕದ "ನಾನಾಘಟ" ಎಂಬಲ್ಲಿಯ ಶಿಲಾಲೇಖವು, ಆ ಅರಸರು ಅಶ್ವಮೇಧ ಮತ್ತು ರಾಜಸೂಯ ಗಳಂಥ ವೈದಿಕ ಯಜ್ಞಗಳನ್ನು ಮಾಡಿದ್ದಾಗಿ ತಿಳಿಸುತ್ತದೆ. ಅದರೊಳಗಿನ ಪ್ರಾರಂಭಿಕ ಪ್ರಾರ್ಥನಾಪರ ಪದ್ಯಗಳು ಇಂದ್ರ, ಸಂಕರ್ಷಣ, ವಾಸುದೇವ ಮತ್ತು ಇನ್ನಿತರ ದೇವತೆಗಳನ್ನು ಹೆಸರಿಸುತ್ತವೆ.[19] ಶಾತವಾಹನರ ತರುವಾಯ ಕ್ರಿಸ್ತಕಾಲದ ಆದಿಭಾಗದಲ್ಲಿ ಬಂದ ಕದಂಬರಾಜರು ಸಹ ವೈದಿಕ ಧರ್ಮದ ಪರಿಪಂಥಿಗಳು, ಮತ್ತು ವರ್ಣಾಶ್ರಮಧರ್ಮದಲ್ಲಿ ನಂಬಿಕೆ ಇದ್ದವರು. ಇದು ಅವರ ಹೆಸರುಗಳಿಂದಲೂ ಅವರೇ ತಳೆದ ಬಿರುದುಗಳಿಂದಲೂ ತಿಳಿದು ಬರುವಂತಿದೆ ; ಅವೆಂದರೆ : ಕೃಷ್ಣವರ್ಮ, ರಘು, ಕಾಕುತ್ಸ್ಥ,

ವರ್ಮ, ಹರಿವರ್ಮ ಇತ್ಯಾದಿ. ಇದರಿಂದ ಕದಂಬರು ವೈದಿಕಧರ್ಮದಲ್ಲಿಯೂ ವೈಷ್ಣವಪಂಥದಲ್ಲಿಯೂ ಶ್ರದ್ಧೆ ಇದ್ದವರು ಎಂಬುದು ವ್ಯಕ್ತವಾಗುತ್ತದೆ. ಇದೇ ಬಗೆಯಾಗಿ, ಸ್ವಲ್ಪ ಕಾಲಾನಂತರ ಬಂದ ಗಂಗರಾಜರು, ಜೈನರು ಮತ್ತು ಜೈನಧರ್ಮದ ಪರಿಪೋಷಕರು. ಆದರೂ ಇವರಲ್ಲಿ ಕೃಷ್ಣಶರ್ಮ ಎಂಬ ಒಬ್ಬಾತನನ್ನು ಕಾಣುತ್ತೇವೆ. ಇನ್ನು ಪಶ್ಚಿಮ ಚಾಲುಕ್ಯರ ಬಗೆಗೆ ಹೇಳುವುದಾದರೆ, ಅವರು ಕ್ರಿಸ್ತವರ್ಷ ಆರನೆಯ ಶತಕದ ಮಧ್ಯ ಕಾಲದಿಂದ ಬಾದಾಮಿಯಲ್ಲಿ ಆಳಿದ ಅರಸರು. ಇವರ ಧಾರ್ಮಿಕ ಒಲವು ನಿಲುವುಗಳು ಏನು ಎಂಬುದು, ಇಂದಿಗೂ ಜೀವಂತವಾಗಿ ಇರುವ, ಅವರು ನಿರ್ಮಿಸಿದ ಗುಹೆ, ಗೋಪುರ, ಗುಡಿಗಳಿಂದ ಚೆನ್ನಾಗಿ ಮನದಟ್ಟಾಗುವಂತಿದೆ. "ಪರಮಭಾಗವತ". ಮತ್ತು "ಶ್ರೀ ಪೃಥಿವೀವಲ್ಲಭ" ಇತ್ಯಾದಿ ಪದವಿ, ಉಪಾಧಿಗಳು ಪುನಃಪುನಃ ಅವರ ಉಪನಾಮಗಳಂತೆ ಬರುತ್ತವೆ. ಲಕ್ಷ್ಮೀ ಮತ್ತು ಭೂದೇವೀ ವಲ್ಲಭ ಎಂಬುದಂತೂ ವೈಷ್ಣವ ಧಾರ್ಮಿಕ ಕಲ್ಪನೆಯ ವೈಶಿಷ್ಟ್ಯಪೂರ್ಣ ಸಂಕೇತವೇ ಆಗಿದೆ. ಪೂರ್ವಚಾಲುಕ್ಯರು, ಕ್ರಿಸ್ತವರ್ಷ 7ನೆಯ ಶತಕದಿಂದ ಆಂಧ್ರದೇಶದಲ್ಲಿ ತಮ್ಮ ರಾಜ್ಯಭಾರ ನೆಲೆಗೊಳಿಸಿದರು. ಅವರಲ್ಲಿಯೂ ವಿಷ್ಣುವರ್ಧನ ಎಂಬ ನಾಮವು ಸರ್ವಸಾಮಾನ್ಯವಾಗಿತ್ತು. ಇದೇ ಮೇರೆಗೆ ಕ್ರಿಸ್ತವರ್ಷ 4ನೆಯ ಶತಕದಲ್ಲಿ ಆಳಿದ ಪಲ್ಲವರಾಜರ ಮೊದಲಿಗರಲ್ಲಿ ಒಬ್ಬನ ಹೆಸರು ವಿಷ್ಣುಗೋಪ ಎಂದಿತ್ತು. ಇವೆಲ್ಲ ಅಂಶಗಳು ಒಂದು ನಿಷ್ಪತ್ತಿಗೆ ಆಧಾರ ಒದಗಿಸುವುವು. ಅದೆಂದರೆ, ಶಿವ ಮತ್ತು ಇತರ ವೈದಿಕ ಧರ್ಮಗಳೊಂದಿಗೆ, ದಕ್ಷಿಣ ಭಾರತದಲ್ಲಿಯೂ ಕರ್ಣಾಟಕದಲ್ಲಿಯೂ ಕ್ರಿಸ್ತಕಾಲದ ಆದಿ ಶತಕಗಳಿಂದಲೇ ವೈಷ್ಣವಧರ್ಮವು ಪ್ರಚಲಿತವಿತ್ತು ಎಂಬ ಸಂಗತಿ.

ದಕ್ಷಿಣ ಭಾರತವು ಭಕ್ತಿಪ್ರಧಾನ ಧರ್ಮವು ಬೆಳೆಯಲು ಅನುಕೂಲ ಭೂಮಿಕೆಯನ್ನು ಒದಗಿಸಿತು. ಈ ಪರಂಪರೆಯನ್ನು ಕುರಿತು ಭಾಗವತದಲ್ಲಿ ಹೀಗೆ ಉಲ್ಲೇಖಿಸಲಾಗಿದೆ : "ತಾಮ್ರಪರ್ಣಿ, ಕೃತಿಮಾಲಾ (ವೈಗಾಯಿ), ಪಯಸ್ವಿನಿ (ಪಾಲಾರ), ಮತ್ತು ಅತ್ಯಂತ ಪಾವನಳಾದ ಕಾವೇರಿ, ಹಾಗು ಪಶ್ಚಿಮದ ಮಹಾನದಿ ಯಾವ ನೆಲದಲ್ಲಿ ಹರಿಯುವವೋ, ಯಾರು ಈ ನದಿಗಳ ನೀರನ್ನು ಕುಡಿಯುವರೋ ಅವರು ಪವಿತ್ರ ಮಾನಸರಾಗುತ್ತಾರೆ; ಅಲ್ಲದೆ ಅವರು ಬಹುಶಃ ಸರ್ವಸಮರ್ಥನಾದ ವಾಸುದೇವನ ಭಕ್ತರಾಗುತ್ತಾರೆ".

## FOOT NOTES

1. *R.V.*, VI—69 : VII—99.
2. *R.V.*, IV—18—11.
3. *R.V.*, I—22—18—19.
4. *R.V.*, I—150—3.
5. Bhagavata—Vamana Avatara (Skandha.IX 1821)
5. Satapatha Brahmana. 1—2—5.
7. *R.V.*, I—154—5.
8. *R.V.*, I—164—16. Yajurveda. 32—1.
9. *R.V.*, I—165—3.
   I—147—1.
   IV—40—5. The deity addressed is Surya and the divine spirit is called Hamsa.
   V—10.
   VI—39—4. a hymn addressed to Indra.
10. *R.V.*, X—129—1—2 ; *R.V.*, VIII—58—2.
11. *R.V.*, 1—164—46 : *R.V.*, II—7—I—11.
11. Vaishnavism., Saivism and Minor Religious systems by R. G. Bhandarker, 1913. Pages 33, 34.
12. Cultural Heritage of India, Vol. IV. P. 110, (article by D. C. Sirkar).
13. Studies in Indo-Aryan Mythology by Narayana Iyengar (1898) quoted from.
14. Introduction to the Panchatantra and Ahirbudhnya Samhita by Otto Schrader, Adyar Library. pages—1—11.
15. *Ibid.* P. 14.
16. Vaishnavism, Saivism and minor Religious Systems by R. G. Bhandakar, P. 35.
17. Panini, IV—3—98.
18. Luder's List of Brahmi Inscriptions No. 669 quoted by R. G. Bhandarkar.
19. The Early History of the Deccan-Yazdani, Page 131. (1960)

ಮೂಲ ಲೇಖಕರು : ಶ್ರೀ ಕೆ. ಸಂಪದ್ಗಿರಿ ರಾವ್
ಅನುವಾದಕರು : ಶ್ರೀ ನಾರಾಯಣ ಸಂಗಮ

# ಜೈನಧರ್ಮ

ಜೈನಧರ್ಮವು, ಈಗಾಗಲೇ ತಿಳಿದಂತೆ, ಕರ್ಣಾಟಕಕ್ಕೆ ಕ್ರಿಸ್ತಪೂರ್ವಕಾಲದಲ್ಲಿಯೇ ಪ್ರವೇಶಿಸಿತು. ಕ್ರಮೇಣ ಅದಕ್ಕೆ ತುಂಬ ಅನುಯಾಯಿಗಳೂ ಇಲ್ಲಿ ದೊರೆತರು. ಮುಂದೆ ಶತಮಾನಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿ ಅದು ಈ ನೆಲದಲ್ಲಿ ರಾರಾಜಿಸಿತು. ಜನತೆಯ ಸಾಕಷ್ಟು ದೊಡ್ಡ ವರ್ಗದ ಮೇಲೆ ಅದು ಪ್ರಮುಖ ಮತವಾಗಿ ತನ್ನ ಪ್ರಭಾವ ಬೀರಿತು. ಅನೇಕ ರಾಜರೂ, ರಾಜಮನ್ನೆಯರೂ ಜೈನಧರ್ಮವನ್ನು ಅನುಸರಿಸಿದರು. ರಾಜಕೀಯ ಇತಿಹಾಸವನ್ನು ಓದುವಾಗ ಇದನ್ನು ಈಗಾಗಲೇ ನಾವು ಮನವರಿಕೆ ಮಾಡಿಕೊಂಡಿದ್ದೇವೆ. ಹಲವು ಶತಕಗಳ ವರೆಗೆ ಕರ್ಣಾಟಕದ ಕಲೆ ಸಾಹಿತ್ಯಗಳ ಮೇಲೆ ಅವರು ತಮ್ಮ ಆಳವಾದ ಪ್ರಭಾವ ಪರಿಣಾಮಗಳನ್ನು ಉಂಟುಮಾಡಿದರು. ಆರಂಭದ ಸಾಹಿತ್ಯ ಕೃತಿಗಳಿಗೆ ಕರ್ಣಾಟಕವು ನಿಜವಾಗಿ ಜೈನ ಬರಹಗಾರರಿಗೆ ಮತ್ತು ಪಂಡಿತರಿಗೆ ಋಣಿಯಾಗಿದೆ; ಕರ್ಣಾಟಕ ಸಾಹಿತ್ಯಕ್ಕೆ ಜೈನರೇ ಆದ್ಯರು. ಅಲ್ಲದೆ ಕರ್ಣಾಟಕದಲ್ಲಿಯೇ ವಾಸಿಸುತ್ತಿದ್ದ ಜೈನತತ್ವಜ್ಞಾನಿಗಳೂ ವಿದ್ವಾಂಸರೂ ಆಚಾರ್ಯರೂ ಧರ್ಮದರ್ಶನಗಳಿಗೆ, ತತ್ವಸಿದ್ಧಾಂತಗಳಿಗೆ ತಮ್ಮ ಅಮೋಘವಾದ ಕಾಣಿಕೆಯನ್ನಿತ್ತರು. ಮತ್ತು ಅವರ ಕೃತಿಗಳನ್ನು ಇಂದಿಗೂ ಸಮಗ್ರ ಭಾರತದ ಜೈನರೆಲ್ಲರೂ ಭಕ್ತಿಗೌರವಗಳಿಂದ ಕಾಣುತ್ತಾರೆ.

ಜೈನಧರ್ಮ ಮತ್ತು ದರ್ಶನಗಳ ತತ್ವಸಿದ್ಧಾಂತಗಳನ್ನು ನಾವೀಗ ವಿವೇಚಿಸೋಣ.

ಜೈನವಾದವು ವಿವೇಕವಾದ ಮತ್ತು ವಾಸ್ತವವಾದಗಳ ದರ್ಶನ. ಒಂದು ಪಂಥವಾಗಿ ಅದು ವೇದಗಳ ಅಧಿಕಾರಕ್ಕೂ ಮತ್ತು ಅರ್ಧ ಆಧ್ಯಾತ್ಮಿಕವಾದ ವಿಸ್ತೃತ ಯಜ್ಞಯಾಗಾದಿ ಕರ್ಮಕಾಂಡದ ಪೂಜಾವರಣ ಪದ್ಧತಿಗೂ ವಿರುದ್ಧವಿರುವ ತರ್ಕ ಅಥವಾ ಸಿದ್ಧಾಂತ. ಅದು ಬಹಳ ಹಳೆಯ ಧರ್ಮ ದರ್ಶನ. ಕೊನೆಯ ಇಬ್ಬರು ತೀರ್ಥಂಕರರಾದ ಪಾರ್ಶ್ವನಾಥ ಮತ್ತು ವರ್ಧಮಾನರಿಗಿಂತಲೂ ಮುಂಚಿನಿಂದಲೇ ಅದು ವ್ಯಾಪಿಸಿದ್ದಿತು. ಯಜುರ್ವೇದದಲ್ಲಿ ಋಷಭ, ಅಜಿತ ಮತ್ತು ಅರಿಷ್ಟನೇಮಿ ಇವರ ಹೆಸರುಗಳ ಉಲ್ಲೇಖ ಬರುತ್ತದೆ, ತೀರ್ಥಂಕರರೆಂದು. ಭಾಗವತ ಪುರಾಣವು ಜೈನಧರ್ಮದ ಸಂಸ್ಥಾಪಕ ಋಷಭನ ಉಲ್ಲೇಖ ಮಾಡುತ್ತದೆ.

**ಐತಿಹಾಸಿಕ**

ಜೈನ ವಿಚಾರಧಾರೆಯು ಭಾರತದ ಈಶಾನ್ಯದೆಸೆಗೆಯೇ ಸೀಮಿತವಾಗಿರಲಿಲ್ಲ. ಬೌದ್ಧಧರ್ಮದಂತೆ ಅದು ಭಾರತದ ಉದ್ದಗಲಗಳಲ್ಲೆಲ್ಲ ಪಸರಿಸಿದ್ದಿತು. ಕರ್ಣಾಟಕದ ಇತಿಹಾಸವು ಜೈನಪಂಥದ ಪ್ರಸಾರ ಮತ್ತು ಉತ್ಕರ್ಷಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಜೈನಮತವು ದಕ್ಷಿಣಕ್ಕೆ, ಅದರಲ್ಲಿಯೂ ಕರ್ಣಾಟಕಕ್ಕೆ ಯಾವಾಗ ಬಂದಿತೆಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. *

---

* ವಾದೀಭಸಿಂಹಸೂರಿಯ ಕ್ಷಾತ್ರಚೂಡಾಮಣಿಯೆಂಬ ಸಂಸ್ಕೃತಗ್ರಂಥ ಮತ್ತು ಭಾಸ್ಕರನ ಕವಿಯ ಕನ್ನಡ ಕೃತಿ ಜೀವಂಧರ ಚರಿತೆ ಹಾಗೂ ತಿರುತ್ತಕ್ಕ ದೇವರ ಜೀವಕ ಚಿಂತಾಮಣಿ ಎಂಬ ತಮಿಳು ಕೃತಿ ಇವುಗಳ ಪ್ರಕಾರ ಕರ್ಣಾಟಕವು ಹೇಮಾಂಗದ ದೇಶವೆಂದು ಹೆಸರು ಹೊಂದಿದ್ದು ಜೀವಂಧರನು (ಕ್ರಿ.ಪೂ. 6ನೆಯ ಶತಮಾನ), ಅದನ್ನು ಆಳುತ್ತಿದ್ದನೆಂದೂ, ಅವನು ಸ್ವತಃ ಜೈನನಾಗಿದ್ದನೆಂದೂ, ದಕ್ಷಿಣಕ್ಕೆ ಮಹಾವೀರರು ಬಂದಾಗ ಅವರನ್ನು ಸಂದರ್ಶಿಸಿ ಅವರಿಂದ ದೀಕ್ಷೆ ತೆಗೆದುಕೊಂಡು ಮುನಿಯಾದನೆಂದೂ ಜೈನ ಪರಂಪರೆಯ ಆಖ್ಯಾಯಿಕೆಯಿದೆ.

ಶ್ರುತ ಕೇವಲಿಗಳಲ್ಲಿ ಕೊನೆಯವರಾದ ಭದ್ರಬಾಹುಸ್ವಾಮಿಗಳು ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳ ಕ್ಷಾಮಡಾಮರಗಳುಂಟಾಗುವುವೆಂದು ಕಾಲಜ್ಞಾನದಿಂದ ಮನಗಂಡು ತಮ್ಮ 'ಸಂಘ'ದೊಂದಿಗೆ ದಕ್ಷಿಣಕ್ಕೆ ಹೊರಟರೆಂದು ತಿಳಿಯುತ್ತದೆ[1].

ಅವರು ಹಂತ ಹಂತಗಳಲ್ಲಿ ಪಾದಯಾತ್ರೆ ಮಾಡುತ್ತ ಸಂತುಷ್ಟ ಜನತೆಯಿಂದ ಕೂಡಿದ ದೇಶವೊಂದನ್ನು ಮುಟ್ಟಿದರು[2]. ಅವರೊಡನೆ ಮೌರ್ಯ ಚಂದ್ರಗುಪ್ತನು ಬಂದಿದ್ದನು[3]. ಕ್ರಿಸ್ತಪೂರ್ವ 297ರಲ್ಲಿ ಭದ್ರಬಾಹುಸ್ವಾಮಿಗಳು ಚಂದ್ರಗಿರಿ ಪರ್ವತದ ಮೇಲೆ ಸಲ್ಲೇಖನ ವ್ರತವನ್ನು ಆಚರಿಸಿದರು[4]. ದಕ್ಷಿಣದಲ್ಲಿ ಜೈನಧರ್ಮದ ಪ್ರಭಾವ ಇಲ್ಲಿಂದ ಮೊದಲಾಯಿತು. ಅಶೋಕನ ಶಾಸನಗಳಲ್ಲಿ ಬೌದ್ಧರೊಂದಿಗೆ ಶ್ರವಣರೂ ದಕ್ಷಿಣದಲ್ಲಿದ್ದರೆಂಬ ಉಲ್ಲೇಖಗಳು ಬರುತ್ತವೆ, ಮೊದಲು ಜೈನನಾಗಿದ್ದ ಅಶೋಕನ ಮೊಮ್ಮಗ ಸಂಪ್ರತಿಯು ದಕ್ಷಿಣಕ್ಕೆ ಮತಪ್ರಚಾರಕರನ್ನು ಕಳಿಸಿಕೊಟ್ಟನು.

ಸುಮಾರು ಹನ್ನೆರಡು ಶತಮಾನಗಳ ಕಾಲ (ಅಂದರೆ 2ನೆಯ ಶತಮಾನದಿಂದ 13ನೆಯ ಶತಮಾನದ ವರೆಗೆ) ಜೈನಧರ್ಮವು ಕರ್ಣಾಟಕದಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಪ್ರಭು ಮತ್ತು ಪ್ರಜೆಗಳ ಮೇಲೆಲ್ಲ ಸಮಾನವಾಗಿ ತನ್ನ ವರ್ಚಸ್ಸನ್ನು ಬೀರಿತು. ಜೈನಧರ್ಮದ ಅತ್ಯಂತ ಪ್ರಾಚೀನ ರಾಜಕೀಯ ಪ್ರಭಾವದ ಬಗ್ಗೆ ಉದಾಹರಣೆಯಾಗಿ ಜೈನ ರಾಜಮನೆತನವೊಂದು ಸ್ಥಾಪಿತವಾದುದು ದಕ್ಷಿಣದ ಇತಿಹಾಸದಲ್ಲಿ ಸಿಗುತ್ತದೆ. ಸುಮಾರು ಕ್ರಿ. ಶ. ಮೂರನೆಯ ಶತಮಾನದಲ್ಲಿ ಗಂಗಮನೆತನದ ಇಬ್ಬರು ರಾಜಕುಮಾರರು ದಕ್ಷಿಣದ ಪೇರೂರಿಗೆ ಬಂದರು. ಆಚಾರ್ಯ ಸಿಂಹನಂದಿಯವರು ಅವರಿಬ್ಬರಲ್ಲಿ ಒಬ್ಬನಿಗೆ ಜೈನಪಂಥದ 'ಸ್ಯಾದ್ವಾದ ಸಿದ್ಧಾಂತ'ವನ್ನು ಬೋಧಿಸಿ ಅವರಿಗೆ ಒಂದು ರಾಜ್ಯವನ್ನೇ ಕೊಟ್ಟರು[5]. ಮೊದಲನೆಯ ಕೊಂಗುಣಿವರ್ಮನು ಸಿಂಹನಂದಿ ಆಚಾರ್ಯರ ಆಶೀರ್ವಾದ ಬಲದಿಂದ ಗಂಗರಾಜ ಮನೆತನವನ್ನು ಸ್ಥಾಪಿಸಿದನು. ಆ ಕಾಲದಲ್ಲಿ ಕರ್ಣಾಟಕದ ಜನತೆಯಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಜೈನಮತಾನುಯಾಯಿಗಳಿದ್ದಿರಬೇಕೆಂದೂ ಸಿಂಹನಂದಿ ಆಚಾರ್ಯರು ದಕ್ಷಿಣದಲ್ಲಿ ಗಂಗಮನೆತನದ ಸ್ಥಾಪನೆಗೆ ನೆರವು ನೀಡಿರಬೇಕೆಂದೂ ರೈಸ್ ಮಹಾಶಯನ ಅಭಿಮತ[6]. ಗಂಗರು ಜೈನಧರ್ಮಕ್ಕೆ ತಮ್ಮ ಉದಾರಾಶ್ರಯವನ್ನು ನೀಡುತ್ತಲೇ ಬಂದರು. ಮೊದಲನೆಯ ಕೊಂಗುಣಿವರ್ಮನ ಕಾಲಾನಂತರವೂ ಅನೇಕ ಶತಮಾನಗಳ ವರೆಗೂ ಗಂಗ ಅರಸರು ಜೈನಧರ್ಮಕ್ಕೆ, ಕೆಲವೇ ಸಂದರ್ಭಗಳಲ್ಲಿ ಹೊರತು, ಉದಾರ ರಾಜಾಶ್ರಯವನ್ನಿತ್ತಿದ್ದರು. ಪೆರ್ಬೊಳೆಯಲ್ಲಿ ಜೈನ ಬಸದಿಯೊಂದಕ್ಕೆ ರಾಜ ತಡಂಗಾಲ ಮಾಧವನು (ಕ್ರಿ. ಶ. 460–500) ಹಳ್ಳಿಯೊಂದರಲ್ಲಿ ಜಮೀನು ಕೊಟ್ಟಿದ್ದನು. ಅವಿನೀತ (ಕ್ರಿ. ಶ. 500–540) ಮತ್ತು ದುರ್ವಿನೀತ (ಕ್ರಿ. ಶ. 550–600)ರಿಬ್ಬರೂ ನಿಷ್ಠಾವಂತ ಜೈನರು. ಪ್ರಸಿದ್ಧ ಜೈನ ವೈಯಾಕರಣಿ ಪೂಜ್ಯಪಾದರೇ ಅವರ ಧಾರ್ಮಿಕ ಗುರುಗಳಾಗಿರಬೇಕೆಂದು ರೈಸ್ ಅಭಿಪ್ರಾಯ ಪಡುತ್ತಾರೆ. ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿ ಬಸದಿಯೊಂದನ್ನು ಎರಡನೆಯ ಶಿವಮಾರ ಅರಸನು ಕಟ್ಟಿಸಿದನು[7].

ಜೈನಮತವು ಗಂಗರ ರಾಜಾಶ್ರಯವನ್ನು ಪಡೆಯುತ್ತಿದ್ದಂತೆ ಕದಂಬರ ಮತ್ತು ರಾಷ್ಟ್ರಕೂಟರ ಬೆಂಬಲವನ್ನೂ ಗಳಿಸಿತು. ಕದಂಬರು ಮೂಲತಃ ಬ್ರಾಹ್ಮಣ ಧರ್ಮದವರು. ಆದರೂ ಅವರಲ್ಲಿ ಕೆಲವರು ಕರ್ಣಾಟಕದಲ್ಲಿ ಜೈನಧರ್ಮಕ್ಕೆ ಅನುಕೂಲ ಮಾಡಿಕೊಟ್ಟರು. ಪವಿತ್ರ ಅರ್ಹಂತರಿಗೆ ಸೇರಿದ್ದ ಬದೋವರಾ ಕ್ಷೇತ್ರವೆಂದು ಹೆಸರಾದ ಜಮೀನನ್ನು ಶ್ರುತಕೀರ್ತಿಮುನಿಗಳಿಗೆ ರಾಜ ಕಾಕುತ್ಸ್ಥವರ್ಮನು ಕೊಟ್ಟನು[8]. ಅವನ ಮೊಮ್ಮಗ ಮೃಗೇಶವರ್ಮನು ಜಿನಾಲಯದ ಪೂಜೆಗೆ ಪುಷ್ಪ ಸಮರ್ಪಣೆ ಮತ್ತು ಜೀರ್ಣೋದ್ಧಾರವೇ ಮೊದಲಾಗಿ, ಶುಚಿಯಾಗಿಡುವುದಕ್ಕಾಗಿಯೇ ತಗಲುವ ವೆಚ್ಚಕ್ಕಾಗಿ ಕೆಲವು ಹೊಲಗದ್ದೆಗಳನ್ನು ಕೊಡಮಾಡಿದನು. ರವಿವರ್ಮನ ಕಾಲದಲ್ಲಿಯೂ ಜೈನಧರ್ಮವು ಉಚ್ಛ್ರಾಯಸ್ಥಿತಿಯಲ್ಲಿದ್ದಿತು. ಅವನು ಬೆಳಗಾಂವ ಜಿಲ್ಲೆಯ ಪಲಾಸಿಕದಲ್ಲಿ (ಇಂದಿನ ಹಲಸಿಯಲ್ಲಿ) ಜೈನಮಂದಿರವೊಂದನ್ನು

ಕಟ್ಟಿಸಿದನು. ರಾಜ ಹರಿವರ್ಮನು ತನ್ನ ತಂದೆಯ ಪರಂಪರೆಯನ್ನು ಹಾಗೆಯೇ ಮುನ್ನಡೆಯಿಸಿದನು ; ಮತ್ತು ಹಳ್ಳಿಯ ಕಂದಾಯಗಳಲ್ಲಿ ಉದಾರವಾಗಿ ದೇಣಿಗೆ ಕೊಡುತ್ತಿದ್ದುದಲ್ಲದೆ, ಜಿನೇಂದ್ರನ ಭಕ್ತರಿಗೆ ಮತ್ತಿತರ ಅನುಯಾಯಿಗಳಿಗೆ ಕಾಣಿಕೆಗಳನ್ನೂ ದಕ್ಷಿಣೆಗಳನ್ನೂ ಕೊಡುತ್ತಿದ್ದನು.

## 3. ಜೈನದರ್ಶನ

ಜೈನಧರ್ಮದ ದರ್ಶನವನ್ನು ಕೆಳಗಿನ ಮುಖ್ಯ ವಿಭಾಗಗಳಲ್ಲಿ ಅಧ್ಯಯನ ಮಾಡಬಹುದು : (ಅ) ಅನೇಕಾಂತ ದೃಷ್ಟಿ, (ಆ) ಅಧಿಭೌತಶಾಸ್ತ್ರ ಮತ್ತು (ಇ) ನೀತಿತತ್ವ

### (ಅ) ಅನೇಕಾಂತ ದೃಷ್ಟಿ

ಜೀವನ ಮತ್ತು ಅನುಭವಗಳನ್ನು ಜೈನಧರ್ಮದ ದರ್ಶನವು ಆಧಾರವಾಗಿ ಅವಲಂಬಿಸಿದೆ. ಮೋಕ್ಷವೇ ಜೀವನದ ಪರಮೋದ್ದೇಶ. ಅದನ್ನು ತ್ರಿವಿಧ ಪಥಗಳಿಂದ ಸಾಧಿಸಬಹುದು. ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಗ್ ಚಾರಿತ್ರ[9]. ಜೀವನದ್ಸಸಮಸ್ಯೆಗಳ ಬಗ್ಗೆ ಸರಿಯಾದ ಮಾರ್ಗದಲ್ಲಿ ನಡೆದರೆ ಪರಮಗುರಿಯನ್ನು ಮುಟ್ಟಬಹುದು. ಅನೇಕಾಂತವನ್ನು ಅಂದರೆ ಅನೇಕ ಮಾರ್ಗಗಳಿಂದ ಪರೀಕ್ಷಿಸಿ ನೋಡುವುದರಿಂದಲೇ ಗುರಿಸೇರುವುದಕ್ಕೇ ಸರಿಯಾದ ದೃಷ್ಟಿದೊರೆಯುವುದೆಂಬುದನ್ನು ಜೈನರು ನಂಬುತ್ತಾರೆ.

ವಸ್ತುಸ್ಥಿತಿಯು ಬಹುಮುಖವಾದುದು ಎಂಬುದನ್ನು ಎತ್ತಿಹೇಳುವ ಅನೇಕಾಂತವಾದದ ಕಾರಣವಾಗಿಯೇ ಜೈನರ ಮೂಲಭೂತವಾದ ಅಹಿಂಸಾದೃಷ್ಟಿ ಉಗಮಿಸಿರುವುದು. ಈ ಮೂಲಭೂತ ದರ್ಶನದ ಇಮ್ಮೊಗಗಳೇ 'ನಯವಾದ' ಮತ್ತು 'ಸ್ಯಾದ್ವಾದ'ಗಳು. 'ನಯವು' ನೋಡುವ ದೃಷ್ಟಿಕೋನವನ್ನು ಕುರಿತು ಹೇಳುತ್ತದೆ. ಒಂದು ವಸ್ತುವನ್ನು ಬೇರೆಬೇರೆ ಹಲವು ದೃಷ್ಟಿಕೋನಗಳಿಂದ ನೋಡಬಹುದು. ಆಗಮಗಳ ಪ್ರಕಾರ ಎರಡು ದೃಷ್ಟಿಕೋನಗಳಿವೆ[10]. ಇನ್ನೊಂದು ಪ್ರಮುಖ ವ್ಯತ್ಯಾಸವೆಂದರೆ, ನಿಶ್ಚಯನಯ ಮತ್ತು ವ್ಯವಹಾರನಯ. ನಿಶ್ಚಯನಯವೆಂಬುದು ಅಂತಸ್ಸತ್ವ ; ಅಂದರೆ ಇಂದ್ರಿಯ ಗೋಚರವಾದ ಬಾಹ್ಯ ಪ್ರಪಂಚಕ್ಕೆ ಆಧಾರವಾಗಿ, ಆದರೆ ಆ ಪ್ರಪಂಚದ ಮೂಲಕ ತಿಳಿಯಲು ಸಾಧ್ಯವಾಗದೆ ಬುದ್ಧಿಯ ಸಹಜಶಕ್ತಿಯೊಂದರಿಂದಲೇ ಗ್ರಾಹ್ಯವಾಗುವ–ಪಾರಮಾರ್ಥಿಕ ವಿಷಯ. ವ್ಯವಹಾರನಯ ಎಂದರೆ, ಇಂದ್ರಿಯ ಗೋಚರವಿಷಯಗಳೇ ಜ್ಞಾನವಿಷಯಗಳೆಂಬ ಪ್ರಕೃತಿಗೋಚರಾನುಭವವಾದ. ಇದು ಕೇವಲ ಸಮೀಕ್ಷೆಯನ್ನೂ ಪ್ರಯೋಗಗಳನ್ನೂ ಅವಲಂಬಿಸಿ ಆಧರಿಸಿರುವ ಪ್ರಯೋಗಸಿದ್ಧವಾದ ಅಥವಾ ಅನುಭವೈಕವಾದ ಪ್ರತಿಯೊಂದು ನಯವೂ ಒಂದು ವಸ್ತುವನ್ನು ಯಾವುದಾದರೊಂದು ಮಾರ್ಗದಿಂದ ನೋಡುವ ಹಲವಾರು ಮಾರ್ಗಗಳಲ್ಲಿ ಒಂದನ್ನು ಹೇಳುತ್ತದೆ. ನಯಗಳ ಪ್ರಕಾರ ನಮ್ಮ ದೃಷ್ಟಿಕೋನಗಳು ಒಂದು ವಸ್ತುವನ್ನು ನೋಡುವುದರಲ್ಲಿ ಸಂಬಂಧಾತ್ಮಕ ಅಥವಾ ತುಲನಾತ್ಮಕವಾದುವೆಂದೂ ಯಾವುದಾದರೊಂದು ದೃಷ್ಟಿಕೋನದಿಂದ ಮಾತ್ರ ಒಂದು ವಸ್ತುವನ್ನು ನೋಡುವುದಾಗಲಿ ಅದರ ಬಗ್ಗೆ ಒತ್ತಿ ಹೇಳುವುದಾಗಲಿ, ಅಂದರೆ ಅದೊಂದೇ ಸರಿಯಾದ ದೃಷ್ಟಿಕೋನ ಅಥವಾ ಪರಿಪೂರ್ಣ ಮಾರ್ಗವೆಂದು ಹೇಳುವುದಾಗಲಿ, ವಾಸ್ತವತೆಯಿಂದ ದೂರ ಹೋದ ಹಾಗೆ—ಎಂದೂ ಮನದಟ್ಟಾಗುತ್ತದೆ.

ನಯವಾದದ ತರ್ಕಬದ್ಧವಾದ ಪರಿಣಾಮವೇ ಸ್ಯಾದ್ವಾದ. ವಸ್ತುವನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವುದರಿಂದ ಅದರ ಸಮಗ್ರತೆಯು ಅರಿವಾಗುತ್ತದೆ ; ಅದರ ಸಂಪೂರ್ಣ ಅರಿವಿಗೆ ಅವಕಾಶ

ವಾಗುತ್ತದೆ. ಸ್ಪಷ್ಟತೆ ಮತ್ತು ಅನುಗಮ್ಯತೆಗಳ ದೃಷ್ಟಿಗಳಿಂದ ಇಂಥ ದೃಷ್ಟಿಕೋನ ಅಭಿವ್ಯಕ್ತಗೊಳ್ಳ ಬೇಕಾಗುತ್ತದೆ. ಏಳು ವಿಧವಾದ ಆಖ್ಯಾತಕಗಳಿಂದ ಇದು ಸಾಧ್ಯ. ಇದನ್ನೇ ಸಪ್ತಭಂಗಿ ಎನ್ನುವುದು. ಪೂರ್ಣ ವಸ್ತುವಿನಲ್ಲಿ ತೋರುವ ವಿರೋಧಾಭಾಸಗಳನ್ನು ಹೊಂದಿಸುವ ಸಾಧ್ಯತೆಯನ್ನು ರೂಪಿಸುವುದೇ ಈ ಮಾರ್ಗ. ಒಂದು ವಸ್ತುವನ್ನು ಮತ್ತು ಅದರ ಗುಣ ಸ್ವಭಾವಗಳನ್ನು ವರ್ಣಿಸುವುದರಲ್ಲಿ ಏಳು ರೀತಿಗಳಿರುವುವೆಂಬುದನ್ನು ಸ್ಯಾದ್ವಾದವು ತೋರಿಸುತ್ತದೆ. ಅವು ಹೀಗಿವೆ:

1. ಸ್ಯಾದ್‌ಅಸ್ತಿ : ವಸ್ತುವಿನ ಇರವನ್ನು ಹೇಳುತ್ತದೆ.
2. ಸ್ಯಾದ್‌ನಾಸ್ತಿ : ಇತರ ಸಂದರ್ಭಗಳಲ್ಲಿ ವಸ್ತುವಿನ ಅಭಾವವನ್ನು ಹೇಳುತ್ತದೆ.
3. ಸ್ಯಾದ್ ಅಸ್ತಿನಾಸ್ತಿ : 'ಅದು ಇದೆ, ಅದು ಇಲ್ಲ'. ಅಂದರೆ ವಿವಿಧ ಸಂದರ್ಭಗಳ ಬಗ್ಗೆ ಏಕಕಾಲದಲ್ಲಿ ಹೇಳುವಂತಹದು. ಒಂದರ್ಥದಲ್ಲಿ ಘಟ ಇರುತ್ತದೆ. ಇನ್ನೊಂದರ್ಥದಲ್ಲಿ ಅದು ಇರುವುದಿಲ್ಲ. ಒಂದು ಕಟ್ಟಡವು ವಾಸಕ್ಕೆ ಬಳಸಿದಾಗ ಮನೆಯಾಗುತ್ತದೆ. ವಸ್ತುಗಳನ್ನು ತುಂಬಿಡುವುದಕ್ಕೆ ಬಳಸಿದಾಗ ಉಗ್ರಾಣವಾಗುತ್ತದೆ, ಮನೆಯಾಗುವುದಿಲ್ಲ.
4. ಸ್ಯಾದ್ ಅವಕ್ತವ್ಯಮ್ : ಅಂದರೆ ವಸ್ತುವಿನ ಗುಣಸ್ವರೂಪಗಳನ್ನು ವರ್ಣಿಸಿ ವ್ಯಕ್ತಪಡಿಸಲು ಆಗದಿರುವುದು.
5. ಸ್ಯಾದ್ ಅಸ್ತಿ ಅವಕ್ತವ್ಯಮ್ : ಅಂದರೆ ಅಸ್ತಿತ್ವವಿರುವುದು ಮತ್ತು ಹೇಳಲು ಆಗದಿರುವುದು.
6. ಸ್ಯಾದ್ ನಾಸ್ತಿ ಅವಕ್ತವ್ಯಮ್ : ಅಂದರೆ ಇಲ್ಲದಿರುವುದು ಮತ್ತು ಅದನ್ನು ಹೇಳಲು ಆಗದಿರುವುದು.
7. ಸ್ಯಾದ್ ಅಸ್ತಿನಾಸ್ತಿ ಅವಕ್ತವ್ಯಮ್ : ಅಂದರೆ ಅಸ್ತಿನಾಸ್ತಿಗಳೆರಡೂ ಹೇಳಲು ಆಗದಿರುವುದು.

ಇವೆಲ್ಲ ಆಖ್ಯಾತಕಗಳನ್ನು ನಾವು ಬಳಸಿದ ವಸ್ತುಗಳ ಸಂದರ್ಭಕ್ಕನುಸಾರವಾಗಿ ಅರ್ಥಮಾಡಿಕೊಳ್ಳಬೇಕು. ಅವೆಂದರೆ ಪುದ್ಗಲ, ರೂಪ, ಕ್ಷೇತ್ರ ಮತ್ತು ಕಾಲ.

ವಸ್ತುವಿನ ಬಗ್ಗೆ ಹಲವು ನೋಟಗಳಿಂದ ನೋಡುವ ಜೈನರ ದೃಷ್ಟಿ ವಿವಿಧ ಮತ ಪಂಥಗಳ ರಾಜ ಪ್ರಜರ ಬಗ್ಗೆ ಸಹಿಷ್ಣುತೆ ಬೆಳೆಸಿತು.

## (ಆ) ಜೈನ ಅಧ್ಯಾತ್ಮ ತತ್ವಶಾಸ್ತ್ರ

ವ್ಯಕ್ತಿಗಳ ನೈತಿಕ ಹೊಣೆಯನ್ನು ಒತ್ತಿ ಹೇಳದ ಎಲ್ಲ ಸಿದ್ಧಾಂತಗಳಿಗೂ ಜೈನದರ್ಶನವು ವಿರುದ್ಧವಾಗಿದೆ. ಪ್ರತಿ ಆತ್ಮವೂ ತನ್ನ ಮಟ್ಟಿಗೆ ತಾನೇ ಹೊಣೆ, ತನ್ನ ಅದೃಷ್ಟವನ್ನು ತಾನೇ ರೂಪಿಸಿ ಕೊಳ್ಳುವುದು. ಆದುದರಿಂದ ಜೈನರು ಯಾವ ಉನ್ನತ ವ್ಯಕ್ತಿಯ ಕೃಪಾಕಟಾಕ್ಷಕ್ಕೂ ಅನುಗ್ರಹಕ್ಕೂ ಕಾಯುವುದಿಲ್ಲ. ಆತ್ಮದ ನಿಷ್ಕ್ರಿಯತೆಯ ಆಧಾರದ ಮೇಲೆ ವಿವೇಚಿಸುವುದಾದರೆ, ನೀತಿ ತತ್ವಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುವುವು.[11]

ಜೈನಧರ್ಮವು ದ್ವಂದ್ವಾತ್ಮಕ. ವಸ್ತುಗಳನ್ನು ಜೀವ ಅಜೀವ ಎಂದು ಎರಡು ಬಗೆಯಾಗಿ ವಿಂಗಡಿಸ ಲಾಗುತ್ತದೆ. ಅಜೀವವಸ್ತುವನ್ನು ರೂಪಿ (ಆಕಾರವುಳ್ಳದ್ದು) ಅರೂಪಿ (ಆಕಾರರಹಿತವಾದದ್ದು) ಎಂದು ಮತ್ತೆ ಎರಡಾಗಿ ಎಂಗಡಿಸಲಾಗುತ್ತದೆ. ಪುದ್ಗಲವು ರೂಪಸಹಿತವಾದ ಅಜೀವವಸ್ತು. ರೂಪರಹಿತ ಅಜೀವವನ್ನು 1 ಧರ್ಮ (ಅಂದರೆ ಪ್ರವರ್ತನ ತತ್ವ), 2 ಅಧರ್ಮ (ಅಂದರೆ ಜಡತತ್ವ), 3 ಆಕಾಶ (ಸ್ಥಳ) ಮತ್ತು 4 ಕಾಲ—ಎಂದು ವಿಂಗಡಿಸಲಾಗಿದೆ.

ಈ ವಿಂಗಡಣೆಯಲ್ಲಿ ಸೂಕ್ಷ್ಮತೆ, ಸಾಂದ್ರತೆ, ಆಕಾರ, ವಿಭಾಗ ಮುಂತಾದ ಗುಣಗಳನ್ನು ನಿರ್ದೇಶಿಸುವ ಒಳ ವಿಂಗಡಣೆಗಳಿವೆ. ಆದರೆ ದ್ರವ್ಯ ಅಥವಾ ಪದಾರ್ಥವು ಶಾಶ್ವತವಾದುದು. ಅದರ ಗುಣ ಪ್ರಮಾಣಗಳ ಬಗ್ಗೆ ನಿರ್ಧಾರವಿಲ್ಲ. ' ಪುದ್ಗಲ 'ವು ಶಕ್ತಿ ಅಥವಾ ಚೈತನ್ಯದ ವಾಹಕ. ಅದರ ಪ್ರಕೃತಿ ಚಲನಾತ್ಮಕ.

ಜೈನರಲ್ಲಿ ವಿಶ್ವಸಂಬಂಧವಾದ ಅಣುಸಿದ್ಧಾಂತವಿದೆ. ಇಂದ್ರಿಯಗಮ್ಯವಾದ ಭೌತಿಕ ವಸ್ತುಗಳು ಪರಮಾಣುಗಳಿಂದ ಕೂಡಿದವು. ಪರಮಾಣುಗಳು ಶಾಶ್ವತ ಮತ್ತು ಅಂತಿಮ, ಅವು ಅಳತೆಯಿಲ್ಲದವು, ಆದಿಮಧ್ಯಾಂತ ರಹಿತವಾದವು. ಅವು ಅಮೂರ್ತ (ರೂಪವಿಲ್ಲದವು). ಸರ್ವಜ್ಞರಾದ ಕೇವಲಿಗಳಿಗೆ ಮಾತ್ರ ಗೋಚರವಾದುವು. ಪರಮಾಣುಗಳಿಗೆ ಭಾರವಿದೆ. ಹೆಚ್ಚು ಭಾರವಿರುವಂತಹವು ಅಧೋಮುಖವಾಗಿ ಚಲಿಸುತ್ತವೆ. ಆಕಾಶ, ಧರ್ಮ, ಅಧರ್ಮಗಳ ಮೂಲಕ ಪರಮಾಣುಗಳ ಚಲನವಲನಗಳಾಗುತ್ತವೆ. ಪರಮಾಣುಗಳು ಒಂದೇ ಸ್ವಭಾವದವು. ಆದರೆ ಅವು ಪಂಚಭೂತಗಳ ಗುಣಗಳನ್ನು ಪಡೆದು ವ್ಯತ್ಯಾಸ ಹೊಂದುತ್ತವೆ.

**ಧರ್ಮ**ವೆಂದರೆ ಪ್ರವರ್ತನ ತತ್ವ ಅಥವಾ ಚಲನ ತತ್ವ. ಅದು ಸಮಗ್ರ ವಿಶ್ವವನ್ನು ವ್ಯಾಪಿಸಿರುವುದು ಮತ್ತು ನಿರಂತರವಾದುದು. ಅದೇ ಚಲನಶೀಲತೆಯ ಅಥವಾ ಪ್ರವರ್ತನದ ಮೂಲ. ಆದರೆ ಅದು ಸ್ವತಃ ಚಲನಶೀಲವಲ್ಲ. ನೀರು ಮೀನಿನ ಚಲನದ ಒಂದು ಆಧಾರ ಹೇಗೋ ಹಾಗೆ[12]. ಧರ್ಮವೇ ಚಲನದ ಮಾಧ್ಯಮ. ಆದರೆ ಅದು ಚಲನಕ್ಕೆ ಕಾರಣವಲ್ಲ. **ಅಧರ್ಮ**ವು ಜಡತೆ ಅಥವಾ ನಿಶ್ಚಲತೆಯ ತತ್ವ.

**ಕಾಲ**ವು ರೂಪರಹಿತವಾದುದು. ಅದು ವಿಶ್ವದಲ್ಲಿ ಸರ್ವವ್ಯಾಪಕವಾಗಿದೆ. ಅದರ ಮೇಲೆಯೇ ಒಂದರ ಮೇಲೊಂದರಂತೆ ಬರುವ ವಿಶ್ವದ ಸರ್ವ ಚಲನಗಳೂ ಆಧಾರಗೊಂಡಿವೆ. ಕಾಲಕ್ಕೆ ಅಸ್ತಿತ್ವವಿದೆ ; ಆದರೆ ಅದಕ್ಕೆ ಕಾಯತ್ವವಿಲ್ಲ. ಕಾಲವನ್ನು ಎರಡು ಬಗೆಯಾಗಿ ವಿಂಗಡಿಸಲಾಗಿದೆ. ಒಂದು ಅನಂತಕಾಲ, ಅದು ಆದ್ಯಂತರಹಿತವಾದುದು. ಮತ್ತೊಂದು ತುಲನಾತ್ಮಕ ಕಾಲ, ಆದಿ ಅಂತ್ಯಗಳುಳ್ಳದ್ದು. ಅದನ್ನು ಘಟಕಗಳಲ್ಲಿ ಅಳೆಯಬಹುದು. ಅದೇ ಸಮಯ. ಕಾಲವು ಸಮಯದ ಅಂತಸ್ಸತ್ವದ ಕಾರಣ. ಈ ತುಲನಾತ್ಮಕ ಕಾಲ ಅಥವಾ ಸಮಯವೆಂಬುದು ವಸ್ತುಗಳ ಚಲನೆಯಿಂದ ನಿರ್ಧರಿಸಲ್ಪಡುವುದು. ಕಾಲಚಕ್ರವು ವಸ್ತುಗಳ ಪರಿವರ್ತನೆ ಮತ್ತು ವಿಲಯನಗಳಿಗೆ ಅವಕಾಶ ಮಾಡಿಕೊಡುತ್ತದೆ. ಆದುದರಿಂದಲೇ ಕಾಲವನ್ನು ಲಯಕಾರಿಯೆಂದು ಕರೆಯಲಾಗಿದೆ.

ಜೀವಗಳು ಜಡವಸ್ತುಗಳಿಗಿಂತ ಬೇರೆಯಾದವುಗಳು. ಅವುಗಳನ್ನು ಎರಡು ದೃಷ್ಟಿಗಳಿಂದ ಪರಿಗಣಿಸಲಾಗಿದೆ. ಒಂದು ನಿಶ್ಚಯನಯದ ದೃಷ್ಟಿ, ಮತ್ತೊಂದು ವ್ಯವಹಾರನಯದ ದೃಷ್ಟಿ. ನಿಶ್ಚಯನಯ ದೃಷ್ಟಿಯಿಂದ ಆತ್ಮವು ಪರಿಪೂರ್ಣ ಮತ್ತು ಪರಿಶುದ್ಧ. ಅದು ಉಪಯೋಗವುಳ್ಳದ್ದು. ಎಂದರೆ, ಸ್ವಂತ ಉದ್ದೇಶದಿಂದ ಕಾರ್ಯ ಮಾಡುವಂಥದು. ಅದೇ ಎಲ್ಲ ಅನುಭವಗಳ ಮೂಲ. ಜೀವವೆಂಬುದು ಪರಿಶುದ್ಧ ಪ್ರಜ್ಞೆ. ಅದು ವ್ಯವಹಾರನಯದ ದೃಷ್ಟಿಯಿಂದ ಜೀವನೇ ಸ್ವಾಮಿ, ಕರ್ತ ಮತ್ತು ಕರ್ಮದ ಫಲಗಳನ್ನು ಅನುಭವಿಸುವವನು. ದೇಹ ಸಣ್ಣದು ಅಥವಾ ದೊಡ್ಡದರಲ್ಲಿ ಯಾವುದೇ ಆಗಿರಲಿ, ಜೀವ ಆ ಸಮಗ್ರ ದೇಹವನ್ನೂ ಆವರಿಸಿರುತ್ತದೆ. ಅದು ಕರ್ಮದಿಂದ ಬಂದು ಸೇರಿದ ಕೊಳೆಗಳಿಂದ ಮುಕ್ತವಾದಾಗ ಲೋಕದ ತುತ್ತತುದಿಗೆ ಹೋಗುವ ಊರ್ಧ್ವಗತಿಶೀಲವಾದುದು[13]. ಆವರಣದ ಸಂಪರ್ಕ ಸನ್ನಿವೇಶಗಳಿಂದ ಜೀವವು ಅನುಭವಗಳನ್ನು ಪಡೆಯುತ್ತದೆ. ತನ್ನ ಚಟುವಟಿಕೆಗಳಿಂದ ಅದು ಕರ್ಮಸಂಗ್ರಹ ಮಾಡುತ್ತದೆ. ಅಲ್ಲಿಂದ ಅದು ಸಂಸಾರಚಕ್ರದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಈ ಪರಿಬಂಧನಕ್ಕೆ ಆದಿಯಿಲ್ಲ. ಆದರೆ ಅಂತ್ಯವಿದೆ.

ಜೀವಗಳನ್ನು ಸಂಸಾರಚಕ್ರದಲ್ಲಿ ಸಿಕ್ಕಿರುವುವೆಂದೂ ಸಂಸಾರಚಕ್ರದಿಂದ ತಪ್ಪಿಸಿಕೊಂಡು ಮುಕ್ತವಾಗಿರುವುವೆಂದೂ ವಿಂಗಡಿಸಿದ್ದಾರೆ. ಸಂಸಾರದಿಂದ ವಿಮುಕ್ತವಾದ ಜೀವಗಳು 'ಸಿದ್ಧ' ವರ್ಗಕ್ಕೆ ಸೇರಿದುವು. ಸಂಸಾರಕ್ಕೇ ಸಿಲುಕಿರುವಂಥವು ಇನ್ನೊಂದು ವರ್ಗಕ್ಕೆ ಸೇರಿರುವುವು. ಸಂಸಾರ ಜೀವಗಳನ್ನು ಬೇರೆಬೇರೆ ತತ್ವಗಳ ತಳಹದಿಯ ಮೇಲೆ, ಉದಾಹರಣೆಗೆ ಅವುಗಳ ಅಂತಸ್ತು ಮತ್ತು ಅವುಗಳಿಗಿರುವ ಇಂದ್ರಿಯಗಳ ಸಂಖ್ಯೆ ಮತ್ತು ಶಕ್ತಿಗಳಿಗೆ ಅನುಗುಣವಾಗಿ ವಿಂಗಡಿಸಲಾಗಿದೆ. ಜೀವಗಳನ್ನು ಸ್ಥಾವರ (ಅಚಲವಾದುವು) ಮತ್ತು 'ತ್ರಸ' (ಚಲನೆಯುಳ್ಳವು) ಎಂದು ಎರಡು ಗುಂಪಾಗಿ ವಿಂಗಡಿಸಲಾಗಿದೆ. ಸ್ಥಾವರ ಜೀವಗಳು ಏಕೇಂದ್ರಿಯ ಘಟಕಗಳು. ತ್ರಸಜೀವಗಳು ಎರಡರಿಂದ ಐದರ ವರೆಗೆ ಇಂದ್ರಿಯಗಳಿರುವಂತಹವು. ಪಂಚೇಂದ್ರಿಯ ಜೀವಗಳು ಸಮನಸ್ಕ ಅಂದರೆ ಮನಸ್ಸನ್ನುಳ್ಳಂಥವು ಆಗಿರಬಹುದು ; ಅಥವಾ ಅಮನಸ್ಕ, ಅಂದರೆ ಮನಸ್ಸನ್ನು ಹೊಂದಿರದವೂ ಆಗಿರಬಹುದು. ಪೂರ್ಣವಿಕಾಸವಿಲ್ಲದೆ ಬೇರೆ ಬೇರೆ ಹಂತದಲ್ಲಿರುವಂಥ ಜೀವಗಳನ್ನು 'ಅಪರ್ಯಾಪ್ತ'ವೆಂತಲೂ ಪೂರ್ಣ ವಿಕಾಸಹೊಂದಿದವನ್ನು 'ಪರ್ಯಾಪ್ತ'ವೆಂತಲೂ ಕರೆಯಲಾಗಿರುವುದು[14]. ಜೀವ, ಪುದ್ಗಲ, ಧರ್ಮ ಅಧರ್ಮ ಮತ್ತು ಆಕಾಶ ಇವೆಲ್ಲ ಅಸ್ತಿಕಾಯಗಳು ; ಏಕೆಂದರೆ ಇವೆಲ್ಲಕ್ಕೂ ಘನತೆಯಿದೆ.

ಸಂಸಾರವಲ್ಲಿರುವ ಜೀವಗಳಿಗೆ ಸಂತತವಾಗಿ ಕರ್ಮದ್ರವ್ಯ ಬಂದು ಸೇರುತ್ತಲೇ ಇರುತ್ತದೆ. ಜೀವಗಳ ಚಟುವಟಿಕೆಯ ಫಲವಾಗಿ ಕರ್ಮ ಕೂಡಿಬಂದು ಸಂಗ್ರಹವಾಗುತ್ತಿರುವುದರಿಂದ ಅವು ಸಂಸಾರದಲ್ಲಿ ಸಿಕ್ಕಿಕೊಂಡಿರುತ್ತವೆ. ಸಾಮಾನ್ಯಸ್ಥಿತಿಗಳಲ್ಲಿ ಇವಕ್ಕೆಲ್ಲ ಅಂತಪಾರಗಳಿಲ್ಲ. ಆದರೆ ಸ್ವಯಂ ಪ್ರೇರಣೆಯ ಸ್ವಪ್ರಯತ್ನದಿಂದ ಆತ್ಮನಿಗೆ ತನ್ನನ್ನು ಈ ಸಂಸಾರ ಚಕ್ರದಿಂದ ಬಿಡುಗಡೆಮಾಡಿಕೊಳ್ಳಲು ಶಕ್ಯವಿರುವುದು.

ಜೈನರು ಕರ್ಮಸಿದ್ಧಾಂತವನ್ನು ವಿಸ್ತಾರವಾಗಿ ಮತ್ತು ವ್ಯವಸ್ಥಿತವಾಗಿ ಬೆಳಸಿರುವರು. ಪ್ರತಿಂಸೊಂದು ಆತ್ಮವೂ ಅನಂತ ಜ್ಞಾನಸಂಪನ್ನ, ಅನಂತ ಶಕ್ತಿಸಂಪನ್ನ, ಮತ್ತು ಅನಂತ ಆನಂದಸಂಪನ್ನ. ಆದರೆ ಈ ಲೋಕದಲ್ಲಿ, ಜ್ಞಾನ ಮತ್ತು ಸ್ವಾತಂತ್ರ್ಯದಲ್ಲಿ ಅದು ಸೀಮಿತ. ಆತ್ಮೋದ್ಧಾರ ಅಥವಾ ಆತ್ಮಸಾಕ್ಷಾತ್ಕಾರದ ಅದರ ಪಥದಲ್ಲಿ ಕರ್ಮವು ಸದಾ ಬಾಧಿಸುತ್ತಿರುತ್ತದೆ. ಕರ್ಮವು ಸ್ವರೂಪದಲ್ಲಿ ಭೌತ ಪ್ರಕೃತಿಯದು. ಅದು ಸೂಕ್ಷ್ಮವಾದ ಅಗೋಚರವಾದ ರೇಣುಗಳಿಂದ ಕೂಡಿದೆ. ಮೈ ಮಾತು ಮನಸ್ಸುಗಳ ಚಟುವಟಿಕೆಗಳ ಫಲವಾಗಿ ಕರ್ಮವು ಆತ್ಮಕ್ಕೆ ಅಂಟಿಕೊಂಡಿರುತ್ತದೆ. ಇಲ್ಲಣದ ಕಣಗಳು ವಸ್ತುವನ್ನು ಆವರಿಸಿ ಅಂಟಿಕೊಂಡಿರುವ ಹಾಗೆ. ಇದೇ ಕರ್ಮದ ಒಳಹರಿತ. ಇದನ್ನು 'ಆಸ್ರವ'ಎನ್ನುತ್ತಾರೆ. ನೆರೆಯ ನೀರು ಹಲವು ಹತ್ತು ಹಳ್ಳಿಗಳಿಂದ ಕೊಳದೊಳಕ್ಕೆ ರಭಸದಿಂದ ಹರಿದು ಬರುವಂತೆ ಕರ್ಮವು ರಭಸದಿಂದ ಆತ್ಮದೊಳಕ್ಕೆ ಹರಿಯುತ್ತಿರುತ್ತದೆ.

ಆತ್ಮದ ಈ ಕರ್ಮಬಂಧನವು ಚತುರ್ವಿಧ. ಅವುಗಳು ಯಾವುವೆಂದರೆ: ಪ್ರಕೃತಿ (ಸ್ವಭಾವ) ಸ್ಥಿತಿ (ಅವಧಿ), ಅನುಭಾಗರಸ (ತೀವ್ರತೆ) ಮತ್ತು ಪ್ರಮಾಣ (ಪ್ರದೇಶ)[15].

ಕರ್ಮವನ್ನು ಎಂಟು ಬಗೆಯಾಗಿ ವಿಂಗಡಿಸಬಹುದು :

1. ಜ್ಞಾನಾವರಣೀಯ—ಸಮ್ಯಗ್‌ಜ್ಞಾನವನ್ನು ಆಕುಂಚನಗೊಳಿಸುವಂತಹದು.
2. ದರ್ಶನಾವರಣೀಯ—ಸಮ್ಯಗ್‌ದರ್ಶನವನ್ನು ಕ್ಷೀಣಗೊಳಿಸುವಂತಹದು.
3. ವೇದನೀಯ—ಕಲ್ಪನೆ ಮತ್ತು ಭಾವನೆಗಳಂಥ ಪರಿಣಾಮಕಾರಿಯಾಗಿರುವ ಸ್ಥಿತಿಯನ್ನು ನಿರ್ಮಿಸುವುದು.

4. ಮೋಹನೀಯ—ಸರಿಯಾದ ನಂಬುಗೆಯನ್ನು ಭ್ರಾಂತಿಗೊಳಿಸುವಂತಹದು.
5. ಆಯುಃಕರ್ಮ—ವ್ಯಕ್ತಿಯ ವಯೋನಿರ್ಧಾರ ಮಾಡುವಂತಹದು.
6. ನಾಮಕರ್ಮ—ವೈಯಕ್ತಿಕ ಅಸ್ತಿತ್ವಕ್ಕೆ ಕಾರಣವಾದ ತಕ್ಕ ಶರೀರ ಮತ್ತು ಇತರ ಗುಣವಿಶೇಷ ಗಳಿಂದ ಪರಿಸ್ಥಿತಿಯನ್ನು ನಿರ್ಮಿಸುವಂತಹದು.
7. ಗೋತ್ರಕರ್ಮ—ಪ್ರತಿವ್ಯಕ್ತಿಯ ಮನೆತನ ಸಾಮಾಜಿಕ ಸ್ಥಾನಮಾನ ಇತ್ಯಾದಿಗಳನ್ನು ನಿರ್ಧರಿಸುವಂತಹದು.
8. ಅಂತರಾಯಕರ್ಮ—ಆತ್ಮದ ಅಂತರ್ಗತ ಶಕ್ತಿ ಚೈತನ್ಯಸಾಮರ್ಥ್ಯಗಳನ್ನು ಕುಂಠಿತಗೊಳಿಸಿ ಸತ್ಕರ್ಮಮಾಡದಂತೆ ತಡೆಯುವಂತಹದು. ಕರ್ಮವು ಗುಣಶೀಲವಾದ ಬಲ. ಅದು ಪುಣ್ಯಪಾಪಗಳೆರಡಕ್ಕೂ ಕಾರಣವಾಗಬಲ್ಲುದು. ಕರ್ಮಾಂಶಗಳು ಅಥವಾ ಕರ್ಮ ಪರ ಮಾಣುಗಳು ಒಂದು ವಿಶಿಷ್ಟ ಶರೀರವನ್ನು ನಿರ್ಮಿಸುತ್ತವೆ. ಅದನ್ನು ಕರ್ಮಶರೀರವೆಂದು ಕರೆಯಬಹುದು. ಆತ್ಮವು ಪರಮಮೋಕ್ಷವನ್ನು ಪಡೆಯುವ ವರೆಗೂ ಕರ್ಮಶರೀರ ಅದನ್ನು ಬಿಡದೆ ಅಂಟಿಕೊಂಡೇ ಇರುತ್ತದೆ. ಕರ್ಮವು ಮಾನಸಿಕ ಪರಿಣಾಮ ಫಲದ್ದು ಕೂಡ. 'ಭಾವಕರ್ಮ'ವೆಂಬುದು ಜೀವಗಳಿಗೆ ನಿಕಟ ಸಂಬಂಧವುಳ್ಳದ್ದು. 'ದ್ರವ್ಯಕರ್ಮ'ವು ದೇಹಗಳಿಗೆ ಸಂಬಂಧಿಸಿದುದು.

ಆದುದರಿಂದ ನಾವು ಪಾಪಪುಣ್ಯಗಳ ಲೇಪವಿಲ್ಲದಿರುವಂತೆ ಆಗಬೇಕಾದರೆ ಪೂರ್ವಸಂಚಿತ ಕರ್ಮ ವಿಮುಕ್ತರಾಗಬೇಕು ಮತ್ತು ಹೊಸ ಕರ್ಮ ಬಂದು ಕೂಡದಂತೆ ನೋಡಿಕೊಳ್ಳಬೇಕು, ಕರ್ಮದ ನಿರಂತರ ಪ್ರವಾಹದಿಂದ ಆತ್ಮ ಬಂಧಿತವಾಗುತ್ತದೆ. ಅದನ್ನು ಬಂಧವೆಂದು ಕರೆದಿದೆ. ಮದ, ಲೋಭ, ಮೋಹ, ಮಾತ್ಸರ್ಯಾದಿ ಮಾನಸಿಕ ಸ್ಥಿತಿಗಳು ಅನೇಕವು ಕರ್ಮಬಂಧಕ್ಕೆ ಸದಾ ಸಿದ್ಧಪಡಿಸುತ್ತಿರುತ್ತವೆ. ಇದನ್ನೇ ಭಾವಬಂಧವೆಂದು ಕರೆಯುವುದು. ಕರ್ಮದ ರೇಣುಗಳಿಂದ ಬಂಧಿತವಾಗುವುದಕ್ಕೆ ದ್ರವ್ಯಬಂಧವೆನ್ನುವುದು, ಭಾವಬಂಧವಾದೊಡನೆ ಕರ್ಮಬಂಧ ಪ್ರಾಪ್ತವಾಗುತ್ತದೆ. ಏಕೆಂದರೆ, ಆ ಮೂಲಕ ಕರ್ಮದ ರೇಣುಗಳು ಆತ್ಮವನ್ನು ಆವರಿಸಿ ಅಂಟಿಕೊಳ್ಳುತ್ತವೆ; ಕಾಯ್ದ ಕಬ್ಬಿಣದ ಗುಂಡು ನೀರಿನಲ್ಲಿ ಅದ್ದಿದಾಗ ನೀರನ್ನು ಹೀರುವಂತೆ, ಆತ್ಮವು ಕರ್ಮಬಂಧಕ್ಕೆ ಒಳಗಾಗುತ್ತದೆ. ಆದುದರಿಂದ ಆತ್ಮಸಾಕ್ಷಾತ್ಕಾರದ ಮೊದಲ ಹೆಜ್ಜೆಯೆಂದರೆ ಕರ್ಮವು ಒಳಕ್ಕೆ ಪ್ರವಹಿಸುತ್ತಿದ್ದ ಮಾರ್ಗಗಳನ್ನೆಲ್ಲ ತಡೆಗಟ್ಟುವುದು, ಇದರಿಂದ ಹೊಸಕರ್ಮ ಕೂಡಿಬೀಳದಂತೆ ಮಾಡಿದಂತಾಗುವುದು. ಅಂದರೆ ಕರ್ಮ ಸಂಚಯವಾಗದಂತೆ ನೋಡುವುದು. ಇದು ಮಮತೆಯಿಂದ ಮುಕ್ತರಾಗುವುದರಿಂದ ಮತ್ತು ಆತ್ಮನಿಗ್ರಹದಿಂದ ಸಾಧ್ಯ. ವ್ರತ (ಪತಿಜ್ಞಾಪಾಲನೆ), ಸನ್ನೀತಿ (ಎಚ್ಚರದಿಂದಿರುವುದು), ಗುಪ್ತಿ (ಆತ್ಮನಿಗ್ರಹ), ದಶಧರ್ಮಗಳ ಆಚರಣೆ, ಧ್ಯಾನ (ಅನುಪ್ರೇಕ್ಷೆ) ಮತ್ತು ಹಸಿವು ತೃಷ್ಣೆ ಕಾಮ ಮುಂತಾದ ಆತಂಕಗಳಿಂದ ವಿಮುಕ್ತಿ—ಇವೆಲ್ಲ ಕರ್ಮ ಒಳಹರಿಯದಂತೆ ತಡೆಯುವುವು; ಹೊಸಕರ್ಮದ ದೋಷವಿಲ್ಲದಂತೆ ಕಾಪಾಡುವುವು. ಇಲ್ಲಿ ಸಮ್ಯಕ್ ಚಾರಿತ್ರವು ತುಂಬ ಉಪಯುಕ್ತವಾಗುವುದು.

ಇನ್ನು ಮುಂದಿನ ಮುಖ್ಯಕಾರ್ಯವೆಂದರೆ, ಇದುವರೆಗೆ ಆಗಲೇ ಸಂಚಿತವಾಗಿರುವ ಕರ್ಮವನ್ನು ವಿಸರ್ಜಿಸುವುದು. ಕರ್ಮನಾಶವನ್ನು 'ನಿರ್ಜರ'ವೆಂದು ಕರೆಯಲಾಗಿದೆ. ಕರ್ಮವು ಸ್ವಭಾವದಿಂದ, ತಾನಾಗಿಯೇ ನಿರ್ನಾಮವಾಗಬಹುದು. ಅದು ಯಾವಾಗೆಂದರೆ ಕರ್ಮಫಲಗಳೆಲ್ಲ ಸಂಪೂರ್ಣವಾಗಿ ಮುಗಿದಾಗ. ಶೇಷಕರ್ಮಸಂಚಯವನ್ನು ತಪದಿಂದ ವಿಸರ್ಜಿಸಬೇಕು. ಕೊಳೆ ಹತ್ತಿದ ಕನ್ನಡಿ ಮಂಕಾಗಿ ತೋರುವಂತೆ ಆತ್ಮವು ಕರ್ಮದ ಕೊಳೆ ಸಂಚಿತಗೊಂಡು ಕುಳಿತಾಗ ಮಂಕಾಗಿ ತೋರುತ್ತದೆ. ಆತ್ಮವು ಕರ್ಮದಿಂದ ಮುಕ್ತವಾದಾಗ ತನ್ನ ಪರಿಶುದ್ಧ ಪರಮ ತೇಜೋರೂಪದಿಂದ ಪ್ರಕಾಶಿಸುವುದು. ಅದು ಆಗ ಮೋಕ್ಷವನ್ನು ಪಡೆಯುತ್ತದೆ.

## (೩) ಜೈನ ನೀತಿತತ್ವ

ಮೋಕ್ಷವು ಲಭಿಸಬೇಕಾದರೆ ಆತ್ಮವು ದ್ರವ್ಯವನ್ನು ಜಯಿಸಬೇಕು. ರತ್ನತ್ರಯಗಳನ್ನು ಆಶ್ರಯಿಸುವುದರಿಂದಲೇ ಮೋಕ್ಷಪ್ರಾಪ್ತಿ. ಅವೆಂದರೆ: ಸಮ್ಯಗ್‌ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ. ತತ್ವಗಳಲ್ಲಿ ಸರಿಯಾದ ನಂಬುಗೆ ಹೊಂದಿರುವುದೇ ಸಮ್ಯಗ್ ದರ್ಶನ. ಸತ್ಯಸ್ಥಿತಿಯ ಚೆನ್ನಾದ ಅರಿವೇ ಸಮ್ಯಗ್ ಜ್ಞಾನ. ರಾಗದ್ವೇಷ ರಹಿತನಾಗಿರುವುದೇ ಸಮ್ಯಕ್ ಚಾರಿತ್ರ[16]. ಧರ್ಮ ಪಥಾನುಸರಣೆಯೇ ಆತ್ಮ ಸಾಕ್ಷಾತ್ಕಾರಕ್ಕೆ ದಾರಿ. ಜೈನರಿಗೆ ಪಂಚವ್ರತಗಳು ಮೂಲಭೂತ ಮಹತ್ವದವು: 1. ಅಹಿಂಸೆ—ಯಾವ ನೋವಿಗೂ ಕಾರಣವಾಗದಿರುವುದು. 2. ಸತ್ಯ—ಯಾವಾಗಲೂ ಎಲ್ಲಬಗೆಯಲ್ಲೂ ಇದ್ದುದನ್ನೇ ನುಡಿಯುವುದು. 3. ಅಸ್ತೇಯ—ಇತರರಿಗೆ ಸೇರಿದ್ದನ್ನು ಕದಿಯದಿರುವುದು. 4. ಬ್ರಹ್ಮಚರ್ಯ—ಇಂದ್ರಿಯ ಪಿಪಾಸೆಗಳನ್ನು ನಿಗ್ರಹಿಸುವುದು. 5. ಅಪರಿಗ್ರಹ—ಐಹಿಕದಿಂದ ಭೌತಪ್ರಪಂಚದ ಸಂಪತ್ತುಗಳ ಸಂಗ್ರಹಕ್ಕಾಗಿ ಹಾತೊರೆಯದಿರುವುದು. ಈ ವ್ರತಗಳನ್ನು ಆಚರಿಸುವುದರಲ್ಲಿಯೂ ಹಂತಗಳಿರುವುವು: ಗೃಹಸ್ಥರಿಗೊಂದು, ಸನ್ಯಾಸಿಗಳಿಗೆ ಇನ್ನೊಂದು[17]. ಇದರ ಉದ್ದೇಶವೆಂದರೆ, ಸಮುನ್ನತವಾದುದನ್ನು ಸಾವಕಾಶವಾಗಿ ಸುಲಭವಾಗಿ ಸಾಧಿಸಲು ಜನರಿಗೆ ಸಾಧ್ಯವಾಗುವಂತೆ ಮಾಡುವುದು. ಗೃಹಸ್ಥರಿಗಿಂತಲೂ ಸಂನ್ಯಾಸಿಗಳು ವ್ರತಗಳನ್ನು ಅತ್ಯಂತ ಉಗ್ರರೀತಿಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕು. ಆದರೆ ಗೃಹಸ್ಥನು ಸಾಧ್ಯವಿದ್ದಮಟ್ಟಿಗೆ ಆಚರಿಸಿದರೆ ಸಾಕು. ಹೀಗೆ ಮಾಡುವಾಗ ಧರ್ಮದ ಆವಶ್ಯಕ ಅಂಶಗಳನ್ನು ಬಿಡದೆ ಅನುಸರಿಸಬೇಕು. ಅವರಿಗೆ ಆಚರಣೆಯ ಉಗ್ರತೆಯನ್ನು ತುಂಬ ಕಡಮೆ ಮಾಡಲಾಗಿದೆ. ಆದರೆ ಗೃಹಸ್ಥರು ಕೂಡ ಯಾವುದಾದರೂ ಒಂದು ಉಗ್ರವ್ರತವನ್ನು ಸಾಮಾನ್ಯವಾದುದಕ್ಕಿಂತ ಹೆಚ್ಚು ಉಗ್ರರೀತಿಯಲ್ಲಿ ಗೊತ್ತಾದ ಒಂದು ಕಾಲಾವಧಿಯ ವರೆಗೆ ಆಚರಣೆಗೆ ತೆಗೆದುಕೊಳ್ಳಬಹುದು—ಇದಕ್ಕೆ ಶೀಲವ್ರತವೆಂದು ಹೆಸರು. ಗೃಹಸ್ಥನು ಮೋಕ್ಷವನ್ನು ಸಾಧಿಸಬೇಕಾದರೆ ಸಂನ್ಯಾಸಿ ಜೀವನಕ್ಕೆ ಬರಬೇಕಾಗುವುದು. ಅದರ ಮುನ್‌ಸೂಚನೆಯನ್ನು ಈ ಶೀಲವ್ರತವು ಗೃಹಸ್ಥನಿಗೆ ಒದಗಿಸುವುದು.

ಜೈನಧರ್ಮವು ಸ್ವಯಂ ಪ್ರೇರಣೆಯ ಪ್ರಯತ್ನವನ್ನು ಎತ್ತಿ ಹೇಳುತ್ತದೆ. ವ್ಯಕ್ತಿ ತನ್ನ ಮೋಕ್ಷಕ್ಕೆ ತಾನೇ ಹೊಣೆ. ಸ್ವರ್ಗದಲ್ಲಿರುವ ಯಾವ ದೇವ ದೇವತೆಗಳಾಗಲಿ ಇನ್ನು ಯಾರೇ ಆಗಲಿ, ನಮ್ಮನ್ನು ಉದ್ಧರಿಸಿ ಮೋಕ್ಷವನ್ನು ಒದಗಿಸಲಾರರು. ತಾನೇ ಮೋಕ್ಷವನ್ನೈದಬೇಕು. ಅನುಗ್ರಹವೆಂಬುದಕ್ಕೆ ಜೈನಧರ್ಮದಲ್ಲಿ ಸ್ಥಾನವಿಲ್ಲ.

ಹಿಂಸೆಯಿಂದ ಬಿಡುಗಡೆ ಹೊಂದುವುದಕ್ಕೆ ಜೈನಧರ್ಮ ಮಹತ್ವ ಕೊಡುತ್ತದೆ. ಅಂದರೆ, ಈ ಲೋಕದ ನೋವಿನಿಂದ ಪಾರಾಗಬೇಕು. ಆ ನೋವು ಅಂತಗಾಣಬೇಕು. ಬದುಕೆಂಬುದು:ಆತ್ಮನಿರ್ಮಾಣದ ಕಂದರ. ಅಲ್ಲಿ ಆತ್ಮಗಳು ವಿಮೋಚನೆಗಾಗಿ ಪ್ರಯತ್ನಿಸಬೇಕು. ತನ್ಮೂಲಕ ಮೋಕ್ಷದ ಸಮುನ್ನತ ಹಂತದಲ್ಲಿ ಆತ್ಮದ ನೈಜತೆಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

## FOOT NOTES

1. Radhakrishnan, S. : *Indian Philosophy*, Vol. 1, Page 287
2. *Inscription in Chandragiri*, Sravanabelagola.
3. Smith (Vincent) : *Early History of India*, (Revised Ed., Pp. 154).
4. Jacob, H. : *Kalpa Sutra—Introduction.*
5. *Epigraphia Carnatica*, VII, Nr. 46, P. 139, 'Gangarajyamam madida Simhanandi Acharyar'.
6. Rice: *Mysore Gazetteer*, I. P. 308
7. *Epigraphia Carnatica*, II, Int.
8. Salctore, B.A. : *Mediaeval Jainism*, P. 31.
9. *Tattvarthadhigamasutra*, 'Samyagdarsanajananacharitranimoksha margah'
10. *Tattvarthadhigamasutra*, 34—35.
11. *Sutrakrtanga*, I, i—1—13.
12. *Panchastikayasara*, 85, 95 and *Dravyasamgraha.*
13. *Dravyasamgraha*, 264.
    *Panchastikayasara*, 27, 28.
14. *Gommatasara* ; Jeevakanda.
15. *Karma Grantha*, 3, 2.
16. *Panchastikayasara*, 125.
17. *Tattvarthadhigamasutra*, VII, 20.

ಮೂಲ ಲೇಖಕರು : ಶ್ರೀ ಟಿ. ಜಿ. ಕಲಘಟಗಿ
ಅನುವಾದಕರು : ಶ್ರೀ ಹಂಪ. ನಾಗರಾಜಯ್ಯ

# ಕರ್ನಾಟಕದಲ್ಲಿ ಬೌದ್ಧಧರ್ಮ ಮತ್ತು ಅಲ್ಪಸಂಖ್ಯಾತ ಮತಗಳು

ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳು ಮತ್ತು ಬೌದ್ಧ ಗ್ರಂಥಗಳಲ್ಲಿ ಬರುವ ಸಾಂಪ್ರದಾಯಿಕ ನಿರೂಪಣೆಗಳು, ಕರ್ನಾಟಕವು ಕ್ರಿ.ಪೂ. ಮೂರನೆಯ ಶತಮಾನದ ಹೊತ್ತಿಗೆ ಮೌರ್ಯರ ಆಡಳಿತದ ಪ್ರಭಾವಕ್ಕೆ ಒಳಗಾಗಿತ್ತೆಂಬುದಕ್ಕೆ, ಬೌದ್ಧಧರ್ಮದ ಪ್ರಭಾವಕ್ಕೂ ಒಳಗಾಗಿತ್ತೆಂಬುದಕ್ಕೆ ಸಾಕ್ಷಿಗಳಾಗಿವೆ. ಮೌರ್ಯರ ಆಡಳಿತ ನಿಂತ ಮೇಲೆ, ಈ ನಾಡು ವೈದಿಕ ಮತಗಳನ್ನು ನಿಷ್ಠೆಯಿಂದ ಆಚರಿಸುತ್ತಿದ್ದ ಶಾತವಾಹನ, ಕದಂಬ ಮತ್ತು ಪಲ್ಲವರ ಮತ್ತು ಜೈನ ಧರ್ಮದ ಕಡೆ ಹೆಚ್ಚು ಒಲವಿದ್ದ ಗಂಗರ ಆಡಳಿತಕ್ಕೆ ಒಳಪಟ್ಟಿತು. ಆದರೂ ಬೌದ್ಧಧರ್ಮದ ಬೆಳವಣಿಗೆ ಮಾತ್ರ ಕುಂಠಿತವಾಗಲಿಲ್ಲ. ಏಳನೆ ಶತಮಾನದಲ್ಲಿ ಹ್ಯೂಯೆನ್‌ತ್ಸಾಂಗನ ಪ್ರಕಾರ, ಅಲ್ಲಿ ಅನೇಕ ವಿಹಾರಗಳೂ ಭಿಕ್ಷುಗಳೂ ಇದ್ದರು. ಕ್ರಿ.ಶ. 12 ನೆ ಶತಮಾನದ ವರೆಗೆ ಬೌದ್ಧದೇವಾಲಯಗಳೂ ವಿಹಾರಗಳೂ ಇದ್ದುವೆಂಬುದಕ್ಕೆ ಆಧಾರಗಳು ದೊರೆಯುತ್ತವೆ. ಮುಂದೆ ಕಾರಣಾಂತರಗಳಿಂದ ಬೌದ್ಧಧರ್ಮವು ಕರ್ನಾಟಕದಿಂದ ಮಾಯವಾಯಿತು.

ಬೌದ್ಧಧರ್ಮದ ಜೊತೆಗೆ, ಉತ್ತರದಿಂದ ಬಂದ ಅನೇಕ ಮತಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಪ್ರಚಾರದಲ್ಲಿದ್ದು ಜನತೆಯ ಧಾರ್ಮಿಕ ಜೀವನದ ಮೇಲೆ ತಮ್ಮ ಪ್ರಭಾವದ ಮುದ್ರೆಯನ್ನೊತ್ತಿದವು. ಈ ಬೌದ್ಧ ಮತ್ತು ಇತರ ಮತಗಳು ಕರ್ನಾಟಕದಲ್ಲಿ ವಹಿಸಿದ ಪಾತ್ರವೇನೆಂಬುದನ್ನು ಈಗ ಪರಿಶೀಲಿಸೋಣ.

## ಬೌದ್ಧಧರ್ಮ

ಕರ್ನಾಟಕಕ್ಕೆ ಬೌದ್ಧಧರ್ಮದ ಆಗಮನವನ್ನು ಕುರಿತು ಈಗ ವಿಚಾರ ಮಾಡೋಣ. ಬೌದ್ಧಧರ್ಮದ ಆಗಮನವನ್ನು ಕುರಿತ ಅತ್ಯಂತ ಪ್ರಾಚೀನ ಉಲ್ಲೇಖವಿರುವುದು ಸಿಲೋನಿನ ಇತಿಹಾಸ ಗ್ರಂಥಗಳಾದ **ಮಹಾವಂಶ** ಮತ್ತು **ದೀಪವಂಶ**ಗಳಲ್ಲಿ. ಮೌರ್ಯದೊರೆ ಅಶೋಕನು ಕ್ರಿ.ಪೂ. 3 ನೆ ಶತಮಾನದಲ್ಲಿ ಮಹೇಂದ್ರನನ್ನು ಸಿಲೋನಿಗೆ ಮತಪ್ರಚಾರಕ್ಕೆ ಕಳುಹಿಸಿದ ಕಾಲದಲ್ಲೇ ಭಿಕ್ಷು ಮಹಾದೇವನನ್ನು ಮಹಿಷ ಮಂಡಲಕ್ಕೂ ಭಿಕ್ಷು ರಕ್ಷಿತನನ್ನು ಬನವಾಸಿಗೂ ಕಳುಹಿಸಿದನೆಂದು ಆ ಗ್ರಂಥಗಳಲ್ಲಿ ಹೇಳಿದೆ. ಈ ಮಹಿಷ ಮಂಡಲ ಮತ್ತು ಬನವಾಸಿಗಳೆರಡೂ ಈಗಿನ ಕರ್ನಾಟಕದಲ್ಲಿವೆ. ದಕ್ಷಿಣಭಾರತದ ಈ ಭಾಗಕ್ಕೂ ಉತ್ತರದ ಬೌದ್ಧಧರ್ಮಕ್ಕೂ ಇದ್ದ ಸಂಪರ್ಕಕ್ಕೆ ಇನ್ನೂ ಹೆಚ್ಚಿನ ಆಧಾರಗಳೆಂದರೆ, ಕರ್ನಾಟಕದಲ್ಲಿ ದೊರಕಿರುವ ಅಶೋಕನ ಐದು ಬ್ರಾಹ್ಮೀಶಾಸನಗಳು (ಇವು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಸಿದ್ಧಾಪುರ, ಬ್ರಹ್ಮಗಿರಿ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ರಾಯಚೂರು ಜಿಲ್ಲೆಯ ಕೊಪ್ಪಳ ಮತ್ತು ಮಸ್ಕಿಗಳಲ್ಲಿ ದೊರಕಿವೆ). ಕ್ರಿಸ್ತಶಕದ ಆರಂಭದಲ್ಲಿ ಇಲ್ಲಿ ಬೌದ್ಧಧರ್ಮಾನುಯಾಯಿಗಳಿದ್ದರೆಂಬುವನ್ನು ಚಂದ್ರವಳ್ಳಿ ಶಾಸನಗಳು ಸ್ಪಷ್ಟಪಡಿಸುತ್ತವೆ. ಆ ಭಾಗದಲ್ಲಿ ಬೌದ್ಧಧರ್ಮವಿದ್ದಿತೆಂಬುದಕ್ಕೆ ಚಂದ್ರವಳ್ಳಿಯ ಅಂಕ್ಲೇ ಗುಹೆಗಳು ಸಾಕ್ಷ್ಯಾಧಾರಗಳಾಗಿವೆ. ಆದರೆ ಬೌದ್ಧಧರ್ಮವು ಇಲ್ಲಿನ ಜನತೆಯ ಮೇಲೆ ಹೆಚ್ಚು ಪರಿಣಾಮವನ್ನು ಬೀರಿದಂತೆ ಕಾಣುವುದಿಲ್ಲ. ಏಕೆಂದರೆ ಅಶೋಕನ ತಾತನಾದ ಚಂದ್ರಗುಪ್ತನಿಂದ ಪ್ರಚಾರಗೊಂಡ ಜೈನಧರ್ಮವು ಇಲ್ಲಿ ನೆಲೆಯಾಗಿ ನಿಂತುಬಿಟ್ಟಿದ್ದಿತು. ಅದು ಹನ್ನೆರಡನೆಯ ಶತಮಾನದ ಕೊನೆಯವರೆಗೆ ಪ್ರಬಲ ಧರ್ಮವಾಗಿ ಪ್ರಚಾರದಲ್ಲಿದ್ದಿತು. ಹಾಗೆ ನೋಡಿದರೆ ಬೌದ್ಧಧರ್ಮವು ಕರ್ನಾಟಕದಲ್ಲಿದ್ದಷ್ಟು ಕಾಲವೂ ಒಂದು ಅಲ್ಪಸಂಖ್ಯಾತ ಮತವಾಗಿಯೇ ಬದುಕಿತೆಂದು ಹೇಳಬಹುದು.

ಕ್ರಿಸ್ತಶಕದ ಮೊದಲ ಎರಡು ಶತಕಗಳಲ್ಲಿ ಬೌದ್ಧಧರ್ಮವು ದಕ್ಷಿಣ: ಭಾರತದಲ್ಲಿ ಪ್ರಚಾರವನ್ನು ಪಡೆದಿತ್ತು. ಅಮರಾವತಿಯ ಸುಪ್ರಸಿದ್ಧ ಸ್ತೂಪಗಳೂ ವಿಹಾರಗಳೂ ನಿರ್ಮಾಣವಾದದ್ದು ಇದೇ ಕಾಲದಲ್ಲಿಯೇ. ಶಾತವಾಹನ ವಂಶದ ಮೊದಮೊದಲ ದೊರೆಗಳು ಬೌದ್ಧಧರ್ಮದ:ಬಗ್ಗೆ ಪಕ್ಷಪಾತ ವುಳ್ಳವರಾಗಿದ್ದರು. ಅಂತೆಯೇ ಪಲ್ಲವ ಮತ್ತು ಬಾಣ ದೊರೆಗಳು. ಕ್ರಿ.ಶ. 338ರ ಒಂದು ಶಾಸನವು ಬಾಣದೊರೆಯೊಬ್ಬನನ್ನು ಪ್ರಾಣಿದಯೆಯಲ್ಲಿ ಅವನು 'ಬೋಧಿಸತ್ವ'ನಾಗಿದ್ದಾನೆ ಎಂದು ಹೊಗಳುತ್ತದೆ (E.c. X, Mb-157). ನಾಡಿನ ಈ ಭಾಗದಲ್ಲಿ ಬೋಧಿಸತ್ವನ ಆದರ್ಶ ಜನಪ್ರಿಯವಾಗಿದ್ದಿತೆಂಬುದು ಇದರಿಂದ ಗೊತ್ತಾಗುತ್ತದೆ. ಗಂಗವಂಶದ ತಡಂಗಾಲ ಮಾಧವನಿಗೆ (ಕ್ರಿ. ಶ.450–75) ಸಂಬಂಧಿಸಿದ ಶಾಸನದಲ್ಲಿ ಬೌದ್ಧವಿಹಾರವೊಂದಕ್ಕೆ ಬಿಟ್ಟುಕೊಟ್ಟ ದತ್ತಿಯ ಪ್ರಸಂಗ ಬಂದಿರುವುದು ಮಾತ್ರವಲ್ಲದೆ (E.c.,XVI,Tm.78) 'ಶಾಸನಬುದ್ಧಸತ್ವ' ಮತ್ತು 'ಶಾಕ್ಯಶಿಲಾ' ಎಂಬ ಉಕ್ತಿಗಳೂ ಅಲ್ಲಿ ಬಂದಿವೆ. ಈ ಎರಡನೆಯ ಉಕ್ತಿಯ ಅರ್ಥ ಅಸ್ಪಷ್ಟವಾಗಿದ್ದರೂ ಅದು ಬೌದ್ಧದತ್ತಿಗಳ ಗಡಿಕಲ್ಲುಗಳನ್ನು ಸೂಚಿಸುತ್ತದೆ ಎಂಬ ಊಹೆಯಿದೆ. ಈ ಅರ್ಥಗರ್ಭಿತ ಶಾಸನಗಳಲ್ಲದೆ, ಕ್ರಿ. ಶ. 1888ರಲ್ಲಿ ನಡೆದ ಚಂದ್ರವಳ್ಳಿಯ ಭೂಶೋಧನೆಯಲ್ಲಿ ದೊರೆತ ಸೀಸದ ನಾಣ್ಯಗಳೂ ಗಮನಾರ್ಹವಾಗಿವೆ. ಅವುಗಳಲ್ಲಿ ಒಂದು ಕಡೆ ಒಳ್ಳೆ ಮದಿಸಿದ ಗೂಳಿಯ ಚಿತ್ರ ಅದರ ಸುತ್ತ ಆಂಧ್ರರ ರಾಯಭಾರಿಯಾಗಿದ್ದ 'ಸದಕನ ಕಲಲಾಯ ಮಹಾರಥಿಶ' ಎಂಬ ಯಾವನೋ ಸಾತಕರ್ಣಿ ರಾಜನ ಹೆಸರು ಇದೆ. ಆ ನಾಣ್ಯಗಳ ಇನ್ನೊಂದು ಮಗ್ಗುಲಲ್ಲಿ ಖಚಿತವಾಗಿ ಬೌದ್ಧ ಸಂಕೇತಗಳು ಎಂದು ಹೇಳಬಹುದಾದ ಬೋಧಿವೃಕ್ಷ ಮತ್ತು ಕಲ್ಲುಗುಡ್ಡೆಗಳ ಚಿತ್ರವಿದೆ. ಹೀಗೆ ಕ್ರಿ. ಶ. ಆರಂಭದ ಶತಕಗಳಲ್ಲಿ ಬೌದ್ಧಧರ್ಮವು ರಾಜಾಶ್ರಯವನ್ನು ಪಡೆದಿದ್ದಿತು. ಅನೇಕರು ಅದರ ಅನುಯಾಯಿಗಳಾಗಿಯೂ ಇದ್ದರು.

ಐದನೆಯ ಶತಮಾನದಲ್ಲಿ ಜೈನಧರ್ಮಕ್ಕೂ ಬೌದ್ಧಧರ್ಮಕ್ಕೂ ಘರ್ಷಣೆ ನಡೆಯಿತು. ಇದು ಆ ಶತಮಾನದ ವಿಶೇಷವೂ ಹೌದು. ಕರ್ಣಾಟಕದೊಂದಿಗೆ ಸಂಪರ್ಕವನ್ನು ಹೊಂದಿರುವ ಕಾಂಚೀಪುರವು ಒಂದು ಬೌದ್ಧ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆಯುತ್ತಿತ್ತು. ಸುಪ್ರಸಿದ್ಧ ಬೌದ್ಧತಾರ್ಕಿಕ ದಿಙ್ನಾಗನು ಕಾಂಚೀಪುರದ ಪಕ್ಕದ ಗ್ರಾಮವಾದ ಸಿಂಹವಕ್ತ್ರದವನು. ಬೌದ್ಧರು ಜೈನರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದರು. ಜೈನರು ಅದನ್ನು ಎದುರಿಸುವಷ್ಟು ಶಕ್ತರಾಗಿದ್ದರು. ಈ ವಾದವಿವಾದಗಳಲ್ಲಿ ಜೈನರದು ಮೇಲುಗೈಯಾಯಿತೆಂದು ಶಾಸನಗಳಲ್ಲಿ ಸೂಚನೆಯಿದೆ. ಮೈಸೂರಿನ ಕಾವೇರಿ ನದಿಯ ದಡದಲ್ಲಿರುವ ತಲಕಾಡಿನ ಸು. ಕ್ರಿ. ಶ. 430ರ ಶಾಸನವೊಂದರಲ್ಲಿ ಮಾಧವನೆಂಬವನೊಬ್ಬನು 'ವಾದಿಮದಗಜೇಂದ್ರ' ನೆಂದು ಹೆಸರಾಗಿದ್ದ ಬೌದ್ಧತಾರ್ಕಿಕನೊಬ್ಬನ ಮೇಲೆ ವಿಜಯಿಯಾದನೆಂದೂ ಅದರ ಫಲವಾಗಿ ರಾಜನಿಂದ 'ವಾದೀಭಸಿಂಹ' ನೆಂಬ ಬಿರುದನ್ನು ಪಡೆದನೆಂದೂ ಹೇಳಿದೆ (1.A., VIII, 212).

ಸುಮಾರು ಕ್ರಿ. ಶ. 640ರಲ್ಲಿ: ದಕ್ಷಿಣ ಭಾರತವನ್ನು ಪ್ರವಾಸಮಾಡಿದ ಹ್ಯೂಯೆನ್‌ತ್ಸಾಂಗನು ಕಾಂಚೀಪುರದ ಬಗ್ಗೆ ಪ್ರಶಂಸಾಪರವಾದ ಅನೇಕ ಭಾವನೆಗಳನ್ನು ಬರೆದಿಟ್ಟು ಹೋಗಿದ್ದಾನೆ. ಅವನ ಕಾಲದಲ್ಲಿ ದೇಶದ ಈ ಭಾಗದಲ್ಲಿ (ಇದರಲ್ಲಿ ಕರ್ಣಾಟಕವೂ ಸೇರಿದೆ) ಬೌದ್ಧಧರ್ಮ, ಅದರಲ್ಲೂ ಮಹಾಯಾನ ಪಂಥದ 'ಸ್ಥವಿರವಾದ' ಶಾಖೆಯು, ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು ; ಅವನ ಪ್ರಕಾರ, ಈ ಭಾಗದಲ್ಲಿ ಹತ್ತುಸಾವಿರ ಭಿಕ್ಷುಗಳಿದ್ದ ನೂರು ಸಂಘಾರಾಮಗಳಿದ್ದುವು. ಕಾಂಚೀಪುರದ ಹತ್ತಿರ ಅಶೋಕ ಕಟ್ಟಿಸಿದನೆಂದು ಪ್ರಸಿದ್ಧವಾಗಿದ್ದ ನೂರಡಿ ಎತ್ತರದ ಒಂದು ಬೃಹದಾಕಾರದ ಸ್ತೂಪವನ್ನು ನೋಡಿದ ಬಹು ಪ್ರಖ್ಯಾತವಾಗಿದ್ದ ನಲಂದ ವಿಶ್ವವಿದ್ಯಾನಿಲಯದ ಅತ್ಯಂತ ಸಮರ್ಥ ಕುಲಪತಿಯಾಗಿದ್ದ ಧರ್ಮಪಾಲನು (ಸು. ಕ್ರಿ. ಶ. 600) ಕಾಂಚೀಪುರದವನೆಂದು ಅವನು ತಿಳಿಸುತ್ತಾನೆ. ಹ್ಯೂಯೆನ್‌ತ್ಸಾಂಗ್ ಕರ್ಣಾಟಕದ ಬನವಾಸಿಯ ಬಗ್ಗೆ ಪ್ರಸ್ತಾವಿಸುತ್ತ ಅಲ್ಲಿ ಹೀನಯಾನ ಮತ್ತು ಮಹಾಯಾನಗಳಿಗೆ ಸೇರಿದ

ಅಸಂಖ್ಯಾತ ಸಂಘಾರಾಮಗಳಿದ್ದುವೆಂದೂ ಬರೆಯುತ್ತಾನೆ. ಅಷ್ಟೇ ಅಲ್ಲದೆ, ಅಲ್ಲಿ ಶ್ರುತ (ಶ್ರೋಣ ಎಂಬ ನಾಮಾಂತರವೂ ಉಂಟು) ವಿಂಶತಿಕೋಟಿ ಎಂಬ ಮುನಿಯಿಂದ ಕೊರೆಯಲ್ಪಟ್ಟ ಮೈತ್ರೇಯನ (ಇವನು ಭವಿಷ್ಯತ್ ಕಾಲದ ಬುದ್ಧ.) ಶ್ರೀಗಂಧದ ಒಂದು ಅದ್ಭುತ ಪ್ರತಿಮೆಯಿದ್ದ ಸಂಗತಿಯನ್ನು ವರದಿಯಲ್ಲಿ ನಿರೂಪಿಸುತ್ತಾನೆ. ಆದುದರಿಂದ ಆರು ಮತ್ತು ಏಳನೆಯ ಶತಮಾನಗಳಲ್ಲಿ ಕಾಂಚೀಪುರವೂ ಅದರ ಪಕ್ಕದ ಕರ್ಣಾಟಕದ ಭಾಗಗಳೂ ಬೌದ್ಧ ಪರಂಪರೆಯ ಪ್ರಭಾವಕ್ಕೆ ಒಳಗಾಗಿದ್ದುವೆಂಬ ಸಂಗತಿಯಲ್ಲಿ ಸಂದೇಹಕ್ಕೆಡೆಯಿಲ್ಲ. ಕಾಂಚೀಪುರವು ಹೆಚ್ಚುಕಡಮೆ ಹದಿನಾಲ್ಕನೆ ಶತಮಾನದ ವರೆಗೆ ಬೌದ್ಧ ವಿದ್ವತ್ತು ಮತ್ತು ಚಟುವಟಿಕೆಗಳ ಪ್ರಧಾನಕೇಂದ್ರವಾಗಿ ಉಳಿದುಕೊಂಡು ಬಂದಿತು. ಏಳನೆಯ ಶತಮಾನದ ಸುಪ್ರಸಿದ್ಧ ಬೌದ್ಧ ತತ್ವಜ್ಞನಾದ ಧರ್ಮಕೀರ್ತಿಯು (ಇವನನ್ನು ಷೆರ್ಬಟ್ಸ್ಕಿಯು-Stcherbatsky-ಭಾರತದ ಕ್ಯಾಂಟ್ ಎಂದು ಹೊಗಳಿದ್ದಾನೆ) ಚೋಳದೇಶದ ತಿರುಮಲೆಯವನು ಎಂಬುದು ಸ್ವಾರಸ್ಯವಾದ ಮತ್ತು ಸ್ಮರಣೀಯವಾದ ಸಂಗತಿ.

ಧರ್ಮಕೀರ್ತಿ ತನ್ನ ಸಾಮರ್ಥ್ಯ ಮತ್ತು ಪ್ರಭಾವಗಳ ಪರಿಣಾಮವಾಗಿಯೇ ಜೈನಧರ್ಮೋತ್ಸಾಹಿಗಳ, ಶಂಕರನಂತಹ ವೈದಿಕ ದಾರ್ಶನಿಕರ ಕಟುಟೀಕೆಗೆ ಗುರಿಯಾಗಬೇಕಾಯಿತು. ಈ ಎರಡು ವಿರೋಧಪಕ್ಷಗಳಿಂದ ಈ ಪ್ರದೇಶದಲ್ಲಿ ದಿನೇ ದಿನೇ ಹೆಚ್ಚು ಪ್ರಭಾವಶಾಲಿಯಾಗುತ್ತಿದ್ದ ಬೌದ್ಧ ನ್ಯಾಯಶಾಸ್ತ್ರದ ಪ್ರಗತಿಯನ್ನು ಕುಂಠಿತಗೊಳಿಸುವ ಕಾರ್ಯ ಅಷ್ಟೇನೂ ಸುಲಭವಾದುದಾಗಿರಲಿಲ್ಲವಾದರೂ ಅಂತಿಮವಾಗಿ ಅವು ಬೌದ್ಧಧರ್ಮವನ್ನು ಕೆಳಗಿಳಿಸುವುದರಲ್ಲಿ ವಿಜಯಿಗಳಾದುವು. ಬೌದ್ಧಧರ್ಮವು ಒಂದು ಬಹುಸಂಖ್ಯಾತ ಧರ್ಮವಾಗಬಹುದಾಗಿದ್ದ ಇನ್ನೊಂದು ಅವಕಾಶವು ಹೀಗೆ ವ್ಯರ್ಥವಾಯಿತು. ಬೌದ್ಧಧರ್ಮವು ಗ್ರಾಮಾಂತರ ಕಾಡು ಪ್ರದೇಶಗಳ ಅಜ್ಞಾತ ಪ್ರದೇಶಗಳಲ್ಲಿ ಆಶ್ರಯವನ್ನು ಹುಡುಕಿಕೊಂಡು ಹೋಗಬೇಕಾದ ಪ್ರಸಂಗ ಒದಗಿತು. ತುಳುಪ್ರದೇಶದಲ್ಲಿ ಬೌದ್ಧಧರ್ಮವು ಸ್ವಲ್ಪಕಾಲ ಉಳಿದುಕೊಂಡು ಬಂದಿತು. ಮಂಗಳೂರು ಸಮೀಪದ ಕದರಿಕೆ ಹತ್ತನೆ ಶತಮಾನದ ವರೆಗೆ ಬೌದ್ಧಧರ್ಮದ ಪ್ರಬಲ ಕೇಂದ್ರವಾಗಿ ಮುಂದುವರಿಯಿತು. ಧರ್ಮಸ್ಥಳದ ಸುಪ್ರಸಿದ್ಧ ದೇವರು ಮಂಜುನಾಥನು ಮೂಲತಃ ಬೌದ್ಧರ ಮಂಜುಶ್ರೀಯೆಂಬುದು ಸ್ಪಷ್ಟವಾಗಿದೆ. ಈ ದೇವರನ್ನು ಹಿಂದುಗಳು ತಮ್ಮವನನ್ನಾಗಿ ಮಾಡಿಕೊಂಡಿದ್ದಾರೆ. ಈ ದೈವ ಮೂಲತಃ ಕದರಿಕೆಗೆ ಸೇರಿದ್ದು ಎಂಬ ಸಂಗತಿ ಗಮನಾರ್ಹವಾದುದು. ಆ ಪ್ರದೇಶದ ಅನೇಕ ದೇವಾಲಯುಗಳು, ಶಾಸ್ತಾವು ಕಲ್ಲು ಅಥವಾ ಶಾಸ್ತಾವುಗುಡಿ*ಗಳು ಬುದ್ಧನನ್ನು ಒಳಗೊಂಡಿದ್ದುವು.

ಕೊಲ್ಲೂರಿನ ದೇವಾಲಯದಲ್ಲಿ ಮೊದಲು ಇದ್ದುದು ಬೌದ್ಧದೇವತೆ 'ಮಂಜುಶ್ರೀ.' ಮುಂದೆ ಇದೇ ದೈವವನ್ನು ಹಿಂದೂ ಸಂಪ್ರದಾಯದ ಮೂಕಾಂಬಿಕೆಯನ್ನಾಗಿ ಪರಿವರ್ತಿಸಿದರು. ಕಾಂಚೀಪುರದ ಸುಪ್ರಸಿದ್ಧ ಕಾಮಾಕ್ಷಿಯೂ ಕೂಡ ಮೂಲತಃ ಬೌದ್ಧರ 'ತಾರಾ' ಆಗಿದ್ದಳು ಎಂದೂ, ಶಂಕರಾಚಾರ್ಯರ ಆದೇಶದಂತೆ ಅವಳನ್ನು ಹಿಂದೂ ದೇವತೆಯಾಗಿ ಮಾಡಲಾಯಿತೆಂದೂ ತರ್ಕಿಸಲಾಗಿದೆ.

ಹೀಗೆ ಒಂಬತ್ತನೆಯ ಶತಮಾನದ ಆರಂಭದ ಹೊತ್ತಿಗೆ ಬೌದ್ಧಧರ್ಮ ಕರ್ಣಾಟಕದಿಂದ ಮಾಯವಾಗುವುದರಲ್ಲಿತ್ತು. ಅದ್ವೈತ ಸಿದ್ಧಾಂತದ ಆಗಮನ, ಜೈನಧರ್ಮದ ಪ್ರಾಬಲ್ಯ, ಭಕ್ತಿಯೇ ಪ್ರಧಾನ ಲಕ್ಷಣವಾದ ಅನೇಕ ಅಲ್ಪಸಂಖ್ಯಾತ ಮತಗಳ ಉದಯ—ಇವೆಲ್ಲವೂ ಮಿನುಗುತ್ತಿದ್ದ ಬೌದ್ಧಧರ್ಮದ ಕುಡಿಯನ್ನು ಆರಿಸಲು ಒಟ್ಟುಗೂಡಿದಂತಾದವು. ಆದರೆ ಅಲ್ಲಿ ಇಲ್ಲಿ ಶಾಕ್ಯಮತದ ಅನುಯಾಯಿಗಳು

*ಶಾಸ್ತಾ (ಅಯ್ಯಪ್ಪನ್ ಅಥವಾ ಹರಿಹರ ಪುತ್ರ) ಎಂದರೆ ' ಶಾಸನಗಳನ್ನು ಮಾಡುವವನು ' ಎಂದು ಅರ್ಥವಾಗಬಹುದು. ಇವನು ಬುದ್ಧನ ಸ್ಥಾನಕ್ಕೆ ಈಚೆಗೆ ಬಂದ ದೇವತೆ. ಕೇರಳ ಮತ್ತು ತುಳುನಾಡಿನಲ್ಲಿ ಈ ದೈವ ಬಹು ಜನಪ್ರಿಯವಾಗಿದೆ. ಅವನ ಸಂಕೇತವಾಗಿ ಒಂದು ಒಂಟೀದ ಎತ್ತರದ ಕಲ್ಲುಕಂಬವನ್ನು ನಿಲ್ಲಿಸುತ್ತಾರೆ. ಇದೇ ' ಶಾಸ್ತಾವುಕಲ್ಲು'.

ಇನ್ನೂ ಉಳಿದುಕೊಂಡಿದ್ದರು. ಈ ಸಂಗತಿ ತಿಳಿದುಬರುವುದು ಸ್ವತಃ ದಿಗಂಬರ ಜೈನಪಂಥೀಯನಾಗಿದ್ದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ (ನೃಪತುಂಗ ಕ್ರಿ.ಶ. 815–878) ನದೆಂದು ಭಾವಿಸಲಾಗಿರುವ **ಕವಿರಾಜಮಾರ್ಗ**ದಿಂದ. ಶಾಸನಗಳು ಕೂಡ ಬೌದ್ಧ ಜೈನಧರ್ಮಗಳ ಮಧ್ಯೆ ನಡೆಯುತ್ತಿದ್ದ ಮತೀಯ ಸ್ಪರ್ಧೆಗಳು ಪೂರ್ತಿ ನಿಂತಿರಲಿಲ್ಲವೆಂಬುದನ್ನು ತಿಳಿಸುತ್ತವೆ. ಉದಾಹರಣೆಗೆ, ಜೈನಧರ್ಮೀಯನಾದ ಎರಡನೆಯ ಬೂತುಗನು (925–60)—ಇವನಿಗೆ ಬೂತಯ್ಯ, ನನ್ನಿಯ ಗಂಗ ಅಥವಾ ಗಂಗನಾರಾಯಣ ಎಂಬ ಹೆಸರುಗಳೂ ಉಂಟು—"ಏಕಾಂತ ಮತ (ಎಂದರೆ ಬೌದ್ಧಧರ್ಮ, ಇದರ ವಿರುದ್ಧವಾದುದು 'ಅನೇಕಾಂತ ಮತ') ಗರ್ವದ ಮಿಥ್ಯಾವಾದಗಳೆಂಬ ಮದ್ದಾನೆಗಳ ಕುಂಭಸ್ಥಲಗಳನ್ನು ಶಾಸ್ತ್ರಸಮ್ಮತವಾದ ಪ್ರತಿವಾದಗಳೆಂಬ ಸಿಡಿಲುಗಳಿಂದ ಬಿರಿಯುವಂತೆ ಮಾಡಿದನು" ಎಂದು ಒಂದು ಶಾಸನ ಹೊಗಳಿದೆ (Mysore Gazetteer. Vol II; p,675).

ಟಿಬೆಟ್ ಮತ್ತು ಚೀಣಗಳಲ್ಲಾದಂತೆ ಕರ್ಣಾಟಕದಲ್ಲಿ ಕೂಡ, ಬೌದ್ಧಧರ್ಮ ಯಾವುದಾದರೂ ರೂಪದಲ್ಲಿ ಉಳಿಯಬೇಕಾದರೆ ತನ್ನ ತತ್ವಗಳನ್ನು ಸರಳಗೊಳಿಸುವುದು ಮಾತ್ರವಲ್ಲದೆ ಭಕ್ತಿಪ್ರಧಾನವೂ ಆಗುವುದು ಅನಿವಾರ್ಯವಾಯಿತು. ಈ ದಿಕ್ಕಿನಲ್ಲಿ ನಡೆಸಿದ ಪ್ರಯತ್ನವು ಯಶಸ್ವಿಯೂ ಆಯಿತು.

ಸೊರಬದ ಬಳಿಯ ಬನವಾಸಿಯು ಈ ಸುಧಾರಿತ ಮತದ ನಿದರ್ಶನವಾಗಿರುತ್ತ ಹನ್ನೊಂದನೆ ಶತಮಾನದ ವರೆಗೆ ಅಷ್ಟೊಂದು ಅಪ್ರಸಿದ್ಧವೇನೂ ಅಲ್ಲದ ಬೌದ್ಧ ಕೇಂದ್ರವಾಗಿ ಮುಂದುವರಿಯಿತು. ಇದು ಬಳ್ಳಿಗಾವೆಯ ಶಾಸನದಲ್ಲಿ ಉಕ್ತವಾಗಿದೆ. ಕ್ರಿ.ಶ. 1065ರ ಬಳ್ಳಿಗಾವೆಯ ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿ ಆಹವಮಲ್ಲನ ಮಂತ್ರಿ, ರೂಪಭಟ್ಟಯ್ಯನು ಜಯಂತಿ-ಪ್ರಬುದ್ಧವಿಹಾರವೆಂಬ ಭವ್ಯ ಬೌದ್ಧ ವಿಹಾರವನ್ನು ಕಟ್ಟಿಸಿದಂತೆ ಉಕ್ತವಾಗಿದೆ. ಜಯಂತಿ (ಅಥವಾ ವೈಜಯಂತಿ) ಎಂಬುದು ವರದಾನದಿಯ ತೀರದ ಬನವಾಸಿಗಿದ್ದ ಇನ್ನೊಂದು ಹೆಸರು. ಆದರೆ ಈ ವಿಹಾರದಲ್ಲಿ ಪೂಜೆನಡೆಯುತ್ತಿದ್ದುದು ಬುದ್ಧನಿಗೆ ಮಾತ್ರವಲ್ಲ. ಹಾಗೆ ನೋಡಿದರೆ ಬುದ್ಧನಿಗಿಂತ ತಾರಾಭಗವತಿ, ಲೋಕೇಶ್ವರ ಮತ್ತು ಕೇಶವರು ಅಲ್ಲಿ ಪ್ರಧಾನರಾಗಿದ್ದರು (E.C., VII SK. 170).

ಅವಲೋಕಿತೇಶ್ವರನಿಗೆ ಹೊಂದಿಕೊಂಡಂತೆ ತಾರಾಭಾಗವತಿಯ ಆರಾಧನೆ ಕರ್ಣಾಟಕದ ಒಳಗೆ ಮತ್ತು ಅದರ ಸುತ್ತ ಮುತ್ತ ಹೇಗೆ ಬೆಳೆದುಕೊಂಡು ಬಂದಿತೆಂಬ ಸಂಗತಿ ಸ್ವಾರಸ್ಯವಾಗಿದೆ. (ಇದಕ್ಕೆ ಸದೃಶವಾದ ಬೆಳವಣಿಗೆ ಬಂಗಾಳ, ನೇಪಾಳ, ಟಿಬೆಟ್ಟುಗಳಲ್ಲೂ ಉಂಟು.) ಪರಸ್ಪರ ಸಂಬಂಧಿಸಿರುವ ಈ ಎರಡು ಅಭಿವ್ಯಕ್ತಿಗಳಲ್ಲಿ (ಅವಲೋಕಿತೇಶ್ವರ ಮತ್ತು ತಾರಾ) ಬೌದ್ಧದರ್ಮದ ವಜ್ರಯಾನ ಶಾಖೆಯು ಖಚಿತ ರೂಪವನ್ನು ಪಡೆಯಿತು. ತಾರಾಭಗವತಿಗೆ ಮೀಸಲಾದ ಅನೇಕ ದೇವಾಲಯಗಳು ಕರ್ಣಾಟಕ ದಲ್ಲಿದ್ದುವು. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು ಕ್ರಿ.ಶ. 1095ರಲ್ಲಿ ಧಾರವಾಡ ಜಿಲ್ಲೆಯ ಡಂಬಳದಲ್ಲಿ ಆರ್ಯ-ತಾರಾ-ದೇವಿಗಾಗಿ ನಿರ್ಮಾಣವಾದ ದೇವಾಲಯ. ಕೋಳಿವಾಡದಲ್ಲಿ ಅಂತಹದು ಇನ್ನೊಂದಿದ್ದಿತು. ಸು. 1098ರಲ್ಲಿ ಬಳ್ಳಿಗಾವೆಯ ಹಂಪಚೆಟ್ಟಿಯ ಹೆಂಡತಿ ಬಪ್ಪುರೆ ನಾಗಿಯಕ್ಕನೆಂಬ ಭಕ್ತೆ, ತಾರಾದೇವಿಯ ಒಂದು ಸುಂದರ ವಿಗ್ರಹವನ್ನು ಮಾಡಿಸಿದಳು. (ಈ ವಿಗ್ರಹವನ್ನು ರೈಸ್ ಅವರು 1830ರಲ್ಲಿ ಕಂಡುಹಿಡಿದರು.) ಈಕೆ ತನ್ನನ್ನು ತಾನು ಬೌದ್ಧಾಲಯದ ಸಾಮಾಸಿ ಎಂದು ವರ್ಣಿಸಿಕೊಂಡಿದ್ದಾಳೆ (E.C., VII, Sk. 106). ಮಂಗಳೂರಿನ ಮಂಗಳಾದೇವಿಯ (ಅಥವಾ ಮಾಯಾದೇವಿ ಅಥವಾ ಆದಿದೇವಿ) ದೇವಸ್ಥಾನವೂ ಕೂಡ ಮೂಲತಃ ತಾರಾಭಗವತಿಯ ದೇವಾಲಯವಾಗಿದ್ದಿತೆಂದು ಊಹಿಸಲಾಗಿದೆ. ಈ ದೇವಸ್ಥಾನಕ್ಕೆ ಎರಡೂವರೆ ಮೈಲಿ ದೂರದಲ್ಲಿರುವ ಕದರಿಕೆಯಲ್ಲಿನ ದೈವ ಲೋಕೇಶ್ವರ (ಅವಲೋಕಿತೇಶ್ವರ ಬೋಧಿಸತ್ವ) ಎಂಬುದನ್ನು ಜ್ಞಾಪಿಸಿಕೊಂಡರೆ ಮೇಲಿನ ಊಹೆ ಇನ್ನೂ ಪುಷ್ಟವಾಗುತ್ತದೆ. ಡಂಬಳದ ಶಾಸನದಲ್ಲಿ ತಾರಾಳನ್ನು 'ಪ್ರಜ್ಞಾ' ಎಂದು, ಬುದ್ಧನಿಗೆ ವೈಭವವನ್ನು

ಕೊಡತಕ್ಕವಳೆಂದು (' ಬುದ್ಧಸ್ಯ ವಿಭೂತಿದಾ '), ' ಬೋಧಿ ' ಎಂದು, ತಥಾಗತನ ಹೃದಯಸ್ಥಳೆಂದು ವರ್ಣಿಸಲಾಗಿದೆ. ಅವಳು ತತ್ವಶಃ ಬೌದ್ಧ ದೇವತೆಯಾದರೂ ವರ್ಣನೆಯಲ್ಲಿ ಮಾತ್ರ ಸಂಪೂರ್ಣವಾಗಿ ಹಿಂದೂ ದೇವತೆಗಳಂತೆ ಕಾಣಿಸುತ್ತಾಳೆ.

ಬಾದಾಮಿಯ ಗುಹೆಗಳೊಂದರಲ್ಲಿ ಪದ್ಮಪಾಣಿಯ ಅರೆಮುಗಿದ ವಿಗ್ರಹವಿದೆ. ಬಾದಾಮಿ ಬೆಟ್ಟದ ಮೇಲೆ ಗುಪ್ತಲಿಪಿಯ ಅಕ್ಷರಗಳುಳ್ಳ ಅನೇಕ ಬೌದ್ಧ ಗುಹೆಗಳಿವೆ. ಲೋಣಾವಳ ಹತ್ತಿರದ ಸುಪ್ರಸಿದ್ಧ ಕಾರ್ಲಾ ಗುಹೆಗಳ ಕಂಬವೊಂದನ್ನು 'ವೈಜಯಂತಿ'ಯ ಎಂದರೆ ಬನವಾಸಿಯ ವರ್ತಕನೊಬ್ಬನು ಮಾಡಿಸಿದ್ದಾನೆ. ಬಿಜಾಪುರ ಜಿಲ್ಲೆಯಲ್ಲಿ ಲೋಕಾಪುರ್ ಎಂಬ ಹೆಸರಿನ ಒಂದು ಹಳ್ಳಿಯಿದೆ. ಅಲ್ಲಿ ಲೋಕೇಶ್ವರನಿಗೆ ಮೀಸಲಾದ ಒಂದು ದೇವಾಲಯವಿದೆ. ಈಗ ಅದು ಶಿವದೇವಸ್ಥಾನವಾಗಿದ್ದರೂ ಮೂಲತಃ ಅದು ಬೌದ್ಧ ದೈವವಾಗಿದ್ದಿರಬಹುದು. ಈ ಭಾಗದಲ್ಲಿ ಲೋಕಪ್ಪ ಅಥವಾ ಲೋಕಯ್ಯ ಎಂಬ ಹೆಸರಿನ ಅನೇಕ ವ್ಯಕ್ತಿಗಳಿದ್ದಾರೆ. ಅವರೆಲ್ಲರ ಮನೆ ದೇವರು ಲೋಕೇಶ್ವರ. ಬೆಳಗಾಂ ಆಚೆಯ ಮತ್ತು ಗೋವಾದಲ್ಲಿನ ಕೊಂಕಣ ಪ್ರದೇಶದಲ್ಲಿ ಬೌದ್ಧಧರ್ಮ ಪ್ರಚಾರದಲ್ಲಿದ್ದಿತೆಂದು ತೋರಿಸಲು ಸಾಕಷ್ಟು ಸಾಮಗ್ರಿಗಳಿವೆ. (ಬಾದಾಮಿ) ಚಾಲುಕ್ಯರ ಆರಂಭದ ಕಾಲದಲ್ಲಿ ದೊರೆಗಳು ಬೌದ್ಧ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಉದಾಹರಣೆಗೆ, ಮಂಗಲೇಶ. ಶಾತವಾಹನರು, ಮೌರ್ಯರು ಮತ್ತು ಕಲಚುರಿಗಳು ಬೌದ್ಧ ಧರ್ಮದ ಕಡೆ ಒಲವುಳ್ಳವರಾಗಿದ್ದರು. ಹಿಂದೆ ಅಚ್ಚಗನ್ನಡ ಪ್ರದೇಶವಾಗಿದ್ದ ಕೊಲ್ಲಾಪುರದಲ್ಲಿ ಶಾತವಾಹನರ ಅನೇಕ ಸಂಖ್ಯೆಯ ಸೀಸದ ನಾಣ್ಯಗಳು ದೊರಕಿವೆ. ಬಾಗಲಕೋಟೆಯ ಹೊರಕಲ್ ಎಂಬ ಬಹುಮಟ್ಟಿಗೆ ಹಾಳಾಗಿ ಹೋಗಿರುವ ಹಳ್ಳಿಯಲ್ಲಿ ಕ್ರಿ. ಪೂ. ಎರಡನೆಯ ಶತಕದಷ್ಟು ಹಿಂದಕ್ಕೆ ಹೋಗುವ ಅನೇಕ ಅವಶೇಷಗಳು ದೊರಕಿವೆ. ಆ ಭಾಗದಲ್ಲಿ ಬೌದ್ಧಧರ್ಮವಿದ್ದಿತೆಂಬುದಕ್ಕೆ ಅವು ಸ್ಪಷ್ಟಾಧಾರಗಳ ನ್ನೊದಗಿಸುತ್ತವೆ. ಹ್ಯಾವೆಲ್ ಮತ್ತು ಫರ್ಗ್ಯುಸನ್ ಅವರ ಪ್ರಕಾರ ಐಹೊಳೆಯ ಸುಪ್ರಸಿದ್ಧ ದುರ್ಗಾ ದೇವಾಲಯವು ವಾಸ್ತುರಚನೆಯಲ್ಲಿ ಬೌದ್ಧ ದೇವಾಲಯವನ್ನು ಹೋಲುತ್ತದೆ. ಜೈನ ಧರ್ಮದ ಜೊತೆಗೆ ಬೌದ್ಧಧರ್ಮವೂ ಬೆಳೆದುಕೊಂಡು ಬಂದಿತು. ಜೈನಧರ್ಮ ಉಳಿಯಿತು. ಬೌದ್ಧಧರ್ಮ ನಾಡಿನಲ್ಲಿ ಪ್ರಚಲಿತವಾಗಿದ್ದ ಬೇರೆ ಮತಗಳಲ್ಲಿ ಕ್ರಮೇಣ ಲೀನವಾಯಿತು.

ಹೀಗೆ ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ ಬೌದ್ಧಧರ್ಮ ಇಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನ ಬಾಳಿನ ಉದ್ದಕ್ಕೂ ಹೋರಾಡಬೇಕಾಯಿತು. ಅಂತಿಮವಾಗಿ ಅದು ತನ್ನ ಸೋಲನ್ನೊಪ್ಪಿಕೊಂಡು ಹನ್ನೆರಡನೆಯ ಶತಮಾನದ ಹೊತ್ತಿಗೆ ನಿರ್ನಾಮವಾಯಿತು.

### ಕಾಳಾಮುಖರು

ಮಧ್ಯಯುಗದ ಕಾಲದಲ್ಲಿ ಕರ್ನಾಟಕದಲ್ಲಿ ಬೆಳಗಿದ ಅಲ್ಪಸಂಖ್ಯಾತ ಮತಗಳಲ್ಲಿ ' ಕಾಳಾಮುಖ ' ಎಂಬುದು ಅತ್ಯಂತ ಪ್ರಮುಖವಾದುದು. ಮುಖ್ಯವಾಗಿ ಪಾಶುಪತರ ಆಚರಣೆಗಳುಳ್ಳ ಸನ್ಯಾಸ ಧರ್ಮವಾಗಿದ್ದ ಇದು ಲಕುಲೀಶನ (ಕ್ರಿ.ಶ. 1ನೆ ಶತಮಾನ) ಉಪದೇಶದಿಂದ ಹುಟ್ಟಿ ಬೆಳೆಯಿತೆಂದು ಹೇಳಲಾಗಿದೆ. ಗಮನಾರ್ಹ ಸಂಗತಿಯೆಂದರೆ ಇದು ದಕ್ಷಿಣಭಾರತಕ್ಕೆ, ಅದರಲ್ಲೂ ಆಂಧ್ರ-ಕರ್ನಾಟಕ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದಿತು. ಕಾಶ್ಮೀರ ಶೈವದೊಡನೆ ಅದು ಒಂದು ರೀತಿಯ ಸಂಬಂಧವನ್ನು ಪಡೆದಿದ್ದಿತೆಂಬುದಕ್ಕೆ ಸೂಚನೆಗಳೇನೋ ಇವೆ. ಇದನ್ನು ಯಾವಾಗ ಕರ್ನಾಟಕಕ್ಕೆ ತಂದರೋ ತಿಳಿಯದು. ಈ ಮುನಿಗಳು ' ಪರ್ವತಾವಳಿ 'ಯ ' ದೇವವ್ರತ ಮುನಿಸಂತತಿ 'ಗೆ (ಈ ಸಂತತಿಯಲ್ಲಿ ಕಾಶ್ಮೀರದ ದಿವ್ಯಜ್ಞಾನಿ ಕಾಶ್ಮೀರದೇವನೆಂಬವನು ಪ್ರಮುಖ.) ಸೇರಿದವರಾಗಿದ್ದರೆಂದು ಒಂದು ಶಾಸನವೇನೋ (ಶಿಕಾರಿಪುರ, 99) ಸೂಚನೆ ಕೊಡುತ್ತದೆ. ಈ ಮತ ಸಾಕಷ್ಟು ಶಕ್ತಿಪೂರ್ಣವಾಗಿದ್ದುದಲ್ಲದೆ ಏಳನೆಯ

ಶತಮಾನದಿಂದ ಸುಮಾರು ಐನೂರು ವರ್ಷಗಳ ವರೆಗೆ ಕರ್ನಾಟಕದಲ್ಲಿ ಜೈನ ಬೌದ್ಧಧರ್ಮಗಳ ಪ್ರಬಲ ವಿರೋಧವನ್ನು ಎದುರಿಸಿ ಉಳಿದುಕೊಂಡು ಬಂದಿತು.

ಅದರ ಪ್ರಬಲ ಕೇಂದ್ರಗಳು ಬನವಾಸಿ, ನೊಳಂಬವಾಡಿ ಮತ್ತು ಅವುಗಳ ಅಕ್ಕ ಪಕ್ಕದ ಪ್ರದೇಶಗಳಲ್ಲಿದ್ದುವು. ಬೆಂಗಳೂರು ಸಮೀಪದ ನಂದಿ, ಹಿಂದೂಪುರಕ್ಕೆ ಸಮೀಪದ ಲೇಪಾಕ್ಷಿ ಮತ್ತು ಶಿಕಾರಿಪುರಗಳೂ ಅವರ ಪ್ರಮುಖ ಕೇಂದ್ರಗಳಾಗಿದ್ದವು. ಬಳ್ಳಿಗಾವೆಯ (ಶಾಸನದಲ್ಲಿ ' ಬಲಿಗ್ರಾಮ ') ಕೇದಾರೇಶ್ವರ ದೇವಾಲಯವು ಕಾಳಾಮುಖ ಪಂಥದ ಅತ್ಯುನ್ನತ ಸ್ಥಾನವಾಗಿದ್ದಿತು. ಬನವಾಸಿ ಪ್ರಾಂತದಲ್ಲಿ ಶಿವದೇವಸ್ಥಾನಗಳಿಗೆ. ಜಮೀನುಗಳಿಗೆ, ಮತ್ತು ಅಪಾರ ಐಶ್ವರ್ಯಾದಿಗಳಿಗೆ ಒಡೆಯರಾಗಿದ್ದ ಅನೇಕ ಮಠಾಧಿಪತಿಗಳಿದ್ದರು. ಬಾಣ ದೊರೆಯೊಬ್ಬನ ತಾಯಿ ರತ್ನಾವಳಿಯ ದತ್ತಿಶಾಸನವೊಂದರಲ್ಲಿ (ಸು. ಕ್ರಿ. ಶ. 640) ಕಾಳಾಮುಖಗುರು ಕಾಲಶಕ್ತಿಯ ಮುಖ್ಯ ಶಿಷ್ಯ ಈಶ್ವರದೇವನನ್ನು — ಇವನೇ ದತ್ತಿಯನ್ನು ಸ್ವೀಕರಿಸಿದ್ದು — ' ನಂದಿ ದೇವಾಲಯುದ ಮಠದ ಅಧ್ಯಕ್ಷನೆಂದು ವಿವರಿಸಲಾಗಿದೆ. ಬೂತರಸನ ಕಾಲದ (ಕ್ರಿ. ಶ. 870–907 ಕರೆಗೋಡಿರಂಗಪುರದ ತಾಮ್ರಪಟಗಳಲ್ಲಿ ತ್ರಿಪುರಹರ ಶಿವನ ಶಿಷ್ಯನಾದ ಸಕರಿ ಭಟ್ಟಾರಕನ ಶಿಷ್ಯ ಕಾಳಾಮುಖಮುನಿ ನೇತ್ರಶಿವಾಚಾರ್ಯನಿಗೆ ಇಡೀ ಗ್ರಾಮವೊಂದನ್ನು ದತ್ತಿಯಾಗಿ ಕೊಟ್ಟ ವಿಷಯವಿದೆ. ಕ್ರಿ.ಶ. 943ರ ಇನ್ನೊಂದು ಶಾಸನದಲ್ಲಿ, ಕ್ಷೀಣವಾಗಿದ್ದ ಕಾಳಾಮುಖ ಮತವು, ಸ್ವತಃ ಲಕುಲೀಶನ ಅವತಾರವಾದ ಮುನಿನಾಥ ಚಿಲ್ಲುಕನಿಂದ ಉದ್ಧರಿಸಲ್ಪಟ್ಟಿತು ಎಂಬುದಾಗಿ ಹೇಳಿದೆ. ಇನ್ನೊಬ್ಬ ಮುನಿ ಸೋಮೇಶ್ವರ ಸೂರಿ ಲಾಕುಳ ಸಿದ್ಧಾಂತವನ್ನು ಅರಳಿಸಿದನೆಂದು ಹೇಳಲಾಗಿದೆ (E.C., VII, I; P. 64 . ಈ ಪಂಥದ ಮುನಿಗಳು ರಾಶಿ ಮತ್ತು ಶಕ್ತಿ ಎಂಬ ಹೆಸರಿನ ಎರಡು ಬೇರೆ ಬೇರೆ ಗುಂಪುಗಳಿಗೆ ಸೇರಿದ್ದರೆಂದು ಕಾಣುತ್ತದೆ.

ಕಾಳಾಮುಖರು ರಾಜ ಮನೆತನಗಳಲ್ಲಿ ಪ್ರಭಾವವನ್ನು ಬೀರಲು ಸಾಧ್ಯವಾದದ್ದು ಚಾಲುಕ್ಯ ಚಕ್ರವರ್ತಿ ಎರಡನೆಯ ಜಗದೇಕಮಲ್ಲ ಜಯಸಿಂಹನ (ಕ್ರಿ.ಶ, 1015 – 42) ಅನಂತರವೆಂದು ಕಾಣುತ್ತದೆ. ಇವನು ತನ್ನ ಮನೆತನದ ಧರ್ಮವಾದ ಜೈನಧರ್ಮದಿಂದ ಶೈವಧರ್ಮದ ಕಾಳಾಮುಖ ಪಂಥಕ್ಕೆ ತನ್ನ ಹೆಂಡತಿ ಸುಗ್ಗಲಾದೇವಿಯಿಂದಾಗಿ ಮತಾಂತರವನ್ನು ಹೊಂದಿದನು. ಈ ಸಂದರ್ಭದಲ್ಲಿ ವಾದಿ ರುದ್ರಗಣನ (ಲಕುಲೀಶ ಪಂಡಿತ) ಹೆಸರು ಉಕ್ತವಾಗಿದೆ (Shikarpur, 126).

ಈ ಮತ ಪ್ರಬಲವಾಗಿ ಬೆಳೆಯಲು ಆರಂಭವಾದದ್ದು ಕಲ್ಯಾಣ ಚಾಲುಕ್ಯರ ಎರಡನೆಯ ಭುವನೈಕ ಮಲ್ಲ ಸೋಮೇಶ್ವರನ (1068–1076) ಕಾಲದಲ್ಲಿ ಎಂಬ ಬಗ್ಗೆ ಸಂದೇಹವೇ ಇಲ್ಲ. ಈ ಮತ ಅತ್ಯಂತ ಪ್ರಭಾವಶಾಲಿಯಾಗಿದ್ದುದು ಮಾತ್ರವಲ್ಲದೆ ಜನಪ್ರಿಯವೂ ಆಗಿದ್ದಿತು. ' ರಾಜಗುರು ' ವೆಂದೂ, ಎಪ್ಪತ್ತೇಳು ದೇವಾಲಯಗಳಿಗೆ ಒಡೆಯನೆಂದೂ ಪ್ರಕೀರ್ತಿತನಾಗಿದ್ದ ಕಾಳಾಮುಖಗುರು ಸರ್ವೇಶ್ವರ ಶಕ್ತಿ ದೇವನ (ಸು.ಕ್ರಿ.ಶ. 1070) ಮಹಿಮೆಯನ್ನು ಶಾಸನಗಳು ಕೊಂಡಾಡಿವೆ (E.C., VIII, Sorab 276). ಅವನು ಕುಪ್ಪಟೂರು ಅಗ್ರಹಾರದವನೆಂದೂ ಅವನು ಅನಂತಕೋಟಿ ಭುವನೇಶ ದೇವಾಲಯಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನೆಂದೂ ಶಾಸನಗಳು ತಿಳಿಸುತ್ತವೆ. ಎರಡನೆಯ ಸೋಮೇಶ್ವರ ಈ ಗುರುವಿನ ಬಗ್ಗೆ ಅಪಾರ ಮೆಚ್ಚುಗೆಯುಳ್ಳವನಾಗಿದ್ದನೆಂಬುದು ಖಚಿತ. ಅವನ ಬಳಿಕ ಬಂದ ತ್ರಿಭುವನ ಮಲ್ಲ ಪೆರ್ಮಾಡಿಯು (ಆರನೆಯ ವಿಕ್ರಮಾದಿತ್ಯ ಕ್ರಿ.ಶ. 1076–1127) ಜೈನಧರ್ಮದ ಬಗ್ಗೆ ವಿಶ್ವಾಸವುಳ್ಳವನಾದರೂ ಕಾಳಾಮುಖರಿಗೂ ಮನಃಪೂರ್ವಕವಾಗಿ ಪ್ರೋತ್ಸಾಹವನ್ನು ಕೊಟ್ಟನು.

ಕರ್ನಾಟಕದ ಅನೇಕ ಶಾಸನಗಳಲ್ಲಿ ಹಲವಾರು ಕಾಳಾಮುಖ ಗುರುಗಳ ಹೆಸರುಗಳು ಕಂಡುಬರುತ್ತವೆ. ಕೆಲವರ ಹೆಸರುಗಳು ಇಂತಿವೆ : ಕಲಾಶಕ್ತಿ (ಸು.ಕ್ರಿ.ಶ. 640), ನೇತ್ರಶಿವಾಚಾರ್ಯ (ಸು.ಕ್ರಿ.ಶ. 900),

ಈಶ್ವರ ದೇವ ರುದ್ರಗಣ (ಸು.ಕ್ರಿ.ಶ. 1030), ಲೋಕನಾಥ ಪಂಡಿತ (ಸು.ಕ್ರಿ.ಶ. 1065), ಸರ್ವೇಶ್ವರ ಶಕ್ತಿ (ಸು.ಕ್ರಿ.ಶ. 1070), ಪೂರ್ಣಾನಂದ ಭಟ್ಟಾರಕ (ಸು.ಕ್ರಿ.ಶ. 1075), ಚಂದ್ರಭೂಷಣ ಪಂಡಿತ, ನಾರಾಯಣದೇವ, ಪದ್ಮಶಿವ ಪಂಡಿತನ ಶಿಷ್ಯ ನಾಗಶಿವ ಪಂಡಿತ (ಕ್ರಿ.ಶ. 1183). ಕರ್ಣಾಟಕದ ಕಾಳಾಮುಖ ಮತದ ಇತಿಹಾಸದಲ್ಲಿ ಕೊನೆಯ ದೊಡ್ಡ ಹೆಸರು ಕ್ರಿಯಾಶಕ್ತಿಯದು (ಸು.ಕ್ರಿ.ಶ. 1370). ಇವನನ್ನು ಶಾಸನಗಳಲ್ಲಿ ‘ ಶ್ರೀಮದ್ ರಾಜಗುರು ಮಹಾಮಂಡಲಾಚಾರ್ಯ ವಾಣೀವಿಲಾಸ ಕ್ರಿಯಾಶಕ್ತಿ ’ ಯೆಂದೂ ‘ ಶಿವಗುರು ಕಾಶೀವಿಲಾಸ ಕ್ರಿಯಾಶಕ್ತಿ ’ ಯೆಂದೂ ‘ ರಾಜರಾಜ ಗುರು ’ ವೆಂದೂ ವಿಶೇಷಿಸಿದ್ದಾರೆ. ಅವನು ಸುಪ್ರಸಿದ್ಧ ವಿದ್ಯಾರಣ್ಯರ ಸಮಕಾಲೀನನಾಗಿದ್ದ. ಅವರಿಬ್ಬರೂ ಒಂದೇ ಎಂದು ಹೇಳುವವರೂ ಉಂಟು. ಶಾಸನಗಳನ್ನು ನಂಬುವುದಾದರೆ ಅವನು ಮೊದಲನೆಯ ಹರಿಹರ, ಬುಕ್ಕ, ಎರಡನೆಯ ಹರಿಹರ—ಇವರ ಕುಲಗುರುವಾಗಿದ್ದ. ಅವರು ಅವನನ್ನು ಗಿರೀಶ (ಶಿವ) ನ ಅವತಾರವೆಂದೇ ಆರಾಧಿಸುತ್ತಿದ್ದರು. ಅವನು ಸ್ವತಃ ವಗಟದ ಸ್ವಯಂಭೂ ತ್ರ್ಯಂಬಕದೇವನ ಆರಾಧಕನಾಗಿದ್ದ. ಎರಡನೆಯ ಬುಕ್ಕನ ಮೇಲೆ ಅವನ ಪ್ರಭಾವ ಎಷ್ಟಿದ್ದಿತೆಂದರೆ; ಅವನ ಒಪ್ಪಿಗೆ ಪಡೆದ ಮೇಲೆಯೇ 1389ರಲ್ಲಿ ಶೃಂಗೇರಿಯ ವಿದ್ಯಾಶಂಕರ ದೇವಾಲಯಕ್ಕೆ ಬುಕ್ಕ ದತ್ತಿಯನ್ನು ಬಿಟ್ಟುಕೊಟ್ಟನೆಂದು ಶಾಸನವೊಂದು ಹೇಳುತ್ತದೆ (E.C., X, Mulbagal, 11).

ಕಾಳಾಮುಖಪಂಥವು ಕರ್ಣಾಟಕದಲ್ಲಿ ಸುಮಾರು ಐದುನೂರು ವರ್ಷಗಳ ವರೆಗೆ ಬೆಳಗಿ ಧಾರ್ಮಿಕ ಮತ್ತು ಸಾಮಾಜಿಕ ಭಾವನೆಗಳ ಬೆಳವಣಿಗೆಗೆ ಕಾರಣವಾಗಿ ಹದಿನಾಲ್ಕನೆಯ ಶತಮಾನದ ಅಂತ್ಯದ ಹೊತ್ತಿಗೆ ಇದ್ದಕ್ಕಿದ್ದಂತೆ ಮಾಯವಾದಂತೆ ಕಾಣುತ್ತದೆ.

ಮೂಲ ಲೇಖಕರು : ಪ್ರೊ॥ ಎಸ್.ಕೆ. ರಾಮಚಂದ್ರರಾವ್
ಅನುವಾದಕರು : ಡಾ॥ ಎಂ. ಚಿದಾನಂದಮೂರ್ತಿ

# ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿ

ಪ್ರಾಚೀನ ಕಾಲದ ರಾಜಕೀಯ ಚರಿತ್ರೆಯನ್ನು ವಿವರಿಸುವಾಗ ಒಟ್ಟಿನಲ್ಲಿ ಬಹುಮಟ್ಟಿಗೆ ನಮ್ಮ ಗಮನವಿದ್ದುದು ಅರಸರ ಮತ್ತು ಅರಸುಮನೆತನಗಳ ಆಗು–ಹೋಗುಗಳನ್ನು ಚಿತ್ರಿಸುವುದರಲ್ಲಿ; ಅವರ ವೀರಕೃತ್ಯ ಮತ್ತು ಉದಾತ್ತ ಗುಣಗಳನ್ನು ಬಣ್ಣಿಸುವುದರಲ್ಲಿ. ಆದರೆ ಯಾವುದೇ ಕಾಲದ ಚರಿತ್ರೆ ಬರಿ ಚಕ್ರವರ್ತಿಗಳ ಆಡಳಿತದ ಪುರೋವೃದ್ಧಿಯನ್ನಷ್ಟೇ ಒಳಗೊಳ್ಳುವುದೆಂದಲ್ಲ; ಆಡಳಿತದ ಪ್ರಗತಿ ಅದೆಷ್ಟೇ ಪ್ರಭಾವಶಾಲಿಯಾಗಿದ್ದರೂ ಆಯಾಕಾಲದ ಸಾಮಾನ್ಯ ಜನಜೀವನದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ನಿರೂಪಣೆ ಆ ಚರಿತ್ರೆಯಲ್ಲಿ ಅಡಕವಾಗಲೇಬೇಕು. ಈ ಜೀವನ ಚಿತ್ರದ ಪುನರ್‌ನಿರ್ಮಿತಿ ಸುಲಭಸಾಧ್ಯವೇನಲ್ಲ. ಶಾಸನಗಳನ್ನು ಮತ್ತು ಇಂದು ಉಪಲಬ್ಧವಿರುವ ತತ್ಕಾಲೀನ ಸಾಹಿತ್ಯದಲ್ಲಿಯ ಸಂಬಂಧಪಟ್ಟ ಅಲ್ಪಸ್ವಲ್ಪ ಉಲ್ಲೇಖಗಳನ್ನು ನಾವು ಮುಖ್ಯವಾಗಿ ಅವಲಂಬಿಸಬೇಕಾಗುತ್ತದೆ.

ಆ ಪ್ರಾಚೀನ ಕಾಲದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮುಖ್ಯಾಂಶಗಳನ್ನೀಗ ವಿವೇಚಿಸುವ:

ಭಾರತ ಮತ್ತು ಆದಿಪುರಾಣಗಳ ಕರ್ತೃವಾದ ಆದಿಪಂಪನು (10 ನೆಯ ಶತಕ) ಬನವಾಸಿಯ ಜನ ಸಾಮಾನ್ಯರನ್ನು ಹೀಗೆ ಬಣ್ಣಿಸುತ್ತಾನೆ: 'ತ್ಯಾಗ, ಭೋಗ, ಪಾಂಡಿತ್ಯ, ಸಂಗೀತ, ಸಂಸ್ಕೃತಿ, ವಿದ್ವದ್ಗೋಷ್ಠಿ,—ಇತ್ಯಾದಿಗಳಿಗೆ ಆಗರವೆನಿಸಿರುವ ಜನ ಅಲ್ಲಿಯವರು. ಅಲ್ಲಿ ಮನುಷ್ಯರಾಗಿ ಹುಟ್ಟು ವುದೇ ಕಠಿನ; ಅದು ಅಸಾಧ್ಯವೆನಿಸಿದಲ್ಲಿ, ಕೊನೆಯಪಕ್ಷಕ್ಕೆ ಮರಿದುಂಬಿಯಾಗಿ, ಕೋಗಿಲೆಯಾಗಿಯಾದರೂ ಬನವಾಸಿದೇಶದಲ್ಲಿರುವ ಆ ನಂದನದಲ್ಲಿ ಹುಟ್ಟಬೇಕು.'[1]—ಇದು ಪಂಪನ ಕಾಲದ ಕರ್ಣಾಟಕ ಜನತೆಯ ಆದರ್ಶ ಮಾತ್ರವಲ್ಲ, ಅದಕ್ಕೂ ಪ್ರಾಚೀನ ಕಾಲದ ಕನ್ನಡಿಗರ ಆದರ್ಶವೂ ಆಗಿತ್ತು. ಕರ್ಣಾಟಕದ ಹಾಗೂ ಇತರ ಭಾರತೀಯ ಜನಸಾಮಾನ್ಯರಿಗೆ ಚೈತನ್ಯವಿತ್ತ ಮಹೋನ್ನತ ಆದರ್ಶಗಳನ್ನು ಪಂಪನು ಇಲ್ಲಿ ಸಾರಾಂಶ ರೂಪದಲ್ಲಿ ಹೇಳಿದ್ದಾನೆ ಎನ್ನಬಹುದು.

ಅತಿ ಪ್ರಾಚೀನ ಕಾಲದಿಂದಲೇ ಜಾತಿಪದ್ಧತಿ ರೂಢವಾಗಿತ್ತೆಂಬುದಕ್ಕೆ ಸಂದೇಹವಿಲ್ಲ. ನಾಲ್ಕು ಮುಖ್ಯವರ್ಣಗಳು ಒಂದರಿಂದೊಂದು ಭಿನ್ನವಾಗಿ ಸ್ಪಷ್ಟವಾಗಿ ನೆಲಸಿದ್ದವು. ಜಾತಿಪದ್ಧತಿ ಅಂತರ್ಜಾತೀಯ ವಿವಾಹಗಳನ್ನು ನಿಷೇಧಿಸಿತ್ತು. ಆದರೆ ಆಯಾ ವ್ಯಕ್ತಿಯ ಉದ್ಯೋಗ ಇಂಥದೇ ಇರಬೇಕೆಂಬ ಬಗ್ಗೆ ಕಟ್ಟುನಿಟ್ಟಿನ ನಿಯಮವೇನಿರಲಿಲ್ಲ. ಉದಾಹರಣೆಗೆ,—ಪ್ರಾಚೀನ ಧರ್ಮಶಾಸ್ತ್ರಕಾರರ ಅಭಿಮತದಂತೆ ಬ್ರಾಹ್ಮಣರು ಬಿಕ್ಕಟ್ಟಿನ ಕಾಲಗಳಲ್ಲಿ ಹೊರತು ಉಳಿದ ಸಾಧಾರಣ ಸಮಯಗಳಲ್ಲಿ ವ್ಯಾಪಾರೋದ್ಯಮ, ಕೃಷಿ, ಯುದ್ಧಕಲೆ, ಮತ್ತು ಇನ್ನಿತರ ಇಂಥ ಕಸಬುಗಳಲ್ಲಿ ತೊಡಗಕೂಡದೆಂಬ ನಿರ್ಬಂಧವಿತ್ತು. ಆದರೆ ಬ್ರಾಹ್ಮಣಯೋಧರು ಶಾಂತಿಕಾಲದಲ್ಲಿ ಕೆಲವೊಂದು ನಾಗರಿಕ ಉದ್ಯೋಗಗಳಲ್ಲಿ ತೊಡಗಿದ್ದುದಲ್ಲದೆ ಬೇಸಾಯವನ್ನೂ ಮಾಡುತ್ತಿದ್ದುದು ಕಂಡುಬರುತ್ತದೆ. ರಾಜನಾಗುವ ಹಕ್ಕು ಕೇವಲ ಕ್ಷತ್ರಿಯನದಷ್ಟೇ ಆಗಿರಲಿಲ್ಲ. ಏಕೆಂದರೆ, ಕದಂಬ ಮಯೂರಶರ್ಮನು ಸಂಪ್ರದಾಯಬದ್ಧ ಬ್ರಾಹ್ಮಣನಾಗಿದ್ದನು. ಅಂತರ್ಜಾತೀಯ ಮದುವೆಗಳು ಮೇಲಿಂದ ಮೇಲೆ ನಡೆಯದಿದ್ದರೂ ಆಗೊಮ್ಮೆ ಈಗೊಮ್ಮೆ ಸಂಭವಿಸುತ್ತಲೇ ಇದ್ದವು.

ಅವಿಭಕ್ತ ಕುಟುಂಬ ಪದ್ಧತಿ ಅಂದಿನ ಸಮಾಜಜೀವನದಲ್ಲಿ ಸರ್ವಮಾನ್ಯವೆನಿಸಿತ್ತು. ಆದರೆ, ಒಂದು ಕುಟುಂಬದ ಸದಸ್ಯರು ಬೇರೆ ಬೇರೆಯಾಗಿ ಜೀವಿಸುತ್ತಿದ್ದ ಉದಾಹರಣೆಗಳೂ ಕೆಲವಿದ್ದವು. ತಂದೆಯೇ

ಮನೆತನದ ಯಜಮಾನನೆನಿಸಿದ್ದ. ಪಿತೃಪ್ರಧಾನ ಕೌಟುಂಬಿಕ ಸ್ವರೂಪ ಅಂದಿನದಾಗಿತ್ತು; ಎಂದರೆ ಸ್ತ್ರೀಯರನ್ನು ಬಹು ಕೀಳುದರ್ಜೆಯ ಸ್ಥಾನಕ್ಕೆ ತಳ್ಳಿಬಿಡಲಾಗಿತ್ತೆಂದು ಇದರರ್ಥವಲ್ಲ. ಗಂಡುಮಕ್ಕಳು ಕುಟುಂಬದ ಆಸ್ತಿ ಪಾಸ್ತಿಗಳಿಗೆ ಕಾನೂನುಬದ್ಧ ಹಕ್ಕುದಾರರಾಗಿದ್ದರು. ಅವರ ತರುವಾಯದಲ್ಲಿ ತಾಯಿಗೆ, ಮತ್ತು ಆ ಬಳಿಕ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲುದೊರೆಯುತ್ತಿತ್ತು.

ಆ ಕಾಲದ ಶಿಲ್ಪದಲ್ಲಿಯ ಅಸಂಖ್ಯ ಸ್ತ್ರೀ–ಪುರುಷ ವಿಗ್ರಹಗಳಿಂದ ಅಂದಿನ ಜನರು ಧರಿಸುತ್ತಿದ್ದ ಬಟ್ಟೆ ಅತ್ಯಲ್ಪವಾಗಿದ್ದು, ಅವರು ಹೆಚ್ಚಾಗಿ ಆಭರಣಪ್ರಿಯರಾಗಿದ್ದರೆಂದು ತಿಳಿದುಬರುತ್ತದೆ. ಗಂಡಸರು ಬರಿ ಎರಡು ತುಂಡು ಬಟ್ಟೆಗಳನ್ನು ಮಾತ್ರ ಉಡುತ್ತಿದ್ದರು. ಒಂದು–ನಡುವಿನಿಂದ ಮೊಳಕಾಲುವರೆಗೆ ಸುತ್ತಿಕೊಳ್ಳುವ ಪಂಚೆ, ಇನ್ನೊಂದು ಉತ್ತರೀಯ. ಇದಕ್ಕೂ ಪ್ರಾಚೀನವಾಗಿರುವ ಶಿಲ್ಪಗಳಿಂದ ತಿಳಿದು ಬರುವುದೇನೆಂದರೆ, ನಡುವಿಗೆ ಸುತ್ತುವ ಒಂದೇ ಒಂದು ಪಂಚೆ ಸಾಕಾಗಿತ್ತು; ಅದರ ಮುಂದಿನ ಚುಂಗನ್ನು ಹೆಗಲ ಮೇಲೆ ಒಗೆದುಕೊಂಡರಾಯಿತು. ಹೆಂಗಸರು ನಡುವಿನ ಕೆಳಗೆ ಬಟ್ಟೆ ಧರಿಸುತ್ತಿದ್ದರು. ಅನಂತರದ ಕಾಲದಲ್ಲಿ ಮೈಯ ಮೇಲ್ಭಾಗವನ್ನು ಮುಚ್ಚುವುದಕ್ಕೋಸುಗ ಕುಪ್ಪಸಗಳು ಬಳಕೆಯಲ್ಲಿ ಬಂದವೆಂದು ತೋರುತ್ತದೆ. ಹೆಂಗಸರು ಕಿವಿಯೋಲೆ, ತೋಳಬಂದಿ, ಕೊರಳ ಸರ, ಮೊಳಕೈಯವರೆಗೆ ಬಳೆಗಳು, ಕಾಲಲ್ಲಿ ಕಾಲಂದುಗೆ,—ಮುಂತಾದ ಆಭರಣಗಳನ್ನು ಧರಿಸುತ್ತಿದ್ದರು. ಹೊಕ್ಕಳ ಕೆಳಗೆ ತೊಡುತ್ತಿದ್ದ ಟೊಂಕಪಟ್ಟಿ ಅಮೂಲ್ಯ ಮುತ್ತು–ರತ್ನಗಳ ಸಾಲುಗಳಿಂದ ಕಟ್ಟಿದುದಾಗಿತ್ತು[2]. ಗಂಡಸರು ಕೂಡ ಕರ್ಣಾಭರಣಗಳನ್ನೂ ಕೈಕಡಗಗಳನ್ನೂ ಧರಿಸುತ್ತಿದ್ದರು. ಗಡ್ಡ ಬೆಳೆಸುವುದು ಒಂದು ಮೆಚ್ಚಿಕೆಯ ರೂಢಿಯಾಗಿತ್ತೆಂದು ಅಂದಿನ ಚಿತ್ರ ಮತ್ತು ಶಿಲ್ಪಕೃತಿಗಳಿಂದ ತಿಳಿದುಬರುತ್ತಿದೆ.

ಆ ಕಾಲದ ಸ್ತ್ರೀಯರಿಗೆ ತುಂಬ ಗೌರವದ ಸ್ಥಾನ ಮಾನಗಳಿದ್ದು, ಅವರು ಸಾಮಾಜಿಕ ಜೀವನದಲ್ಲಿ ಬಹು ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಸ್ತ್ರೀ ಶಿಕ್ಷಣವು ಆಗ ಸಾಮಾನ್ಯವಾಗಿ ಬಳಕೆಯಲ್ಲಿತ್ತು. ಮೇಲ್ತರಗತಿಯ ವರ್ಗಗಳಲ್ಲಿ ಅದು ವಿಶೇಷ ರೂಢಿಯಲ್ಲಿತ್ತು. ಋಷಭದೇವನು ಬ್ರಾಹ್ಮೀ ಮತ್ತು ಸುಂದರಿಯರೆಂಬ ತನ್ನಿಬ್ಬರು ಹೆಣ್ಣುಮಕ್ಕಳಿಗೆ ಪಾಠ ಹೇಳುತ್ತಿದ್ದ ವಿಷಯವನ್ನು ಆದಿಪಂಪನು ಬಣ್ಣಿಸುತ್ತಾನೆ. ಮೊದಲನೆಯ ಮಗಳಿಗೆ ಅನೇಕ ಲಿಪಿಗಳನ್ನೂ ಎರಡನೆಯ ಮಗಳಿಗೆ ಗಣಿತಶಾಸ್ತ್ರವನ್ನೂ ಆತ ಕಲಿಸಿದ[3]. ಸ್ತ್ರೀಯರು ಆಗ ನುರಿತ ಆಡಳಿತಗಾರರೂ ಆಗಿದ್ದರು. ಅಮೋಘವರ್ಷನ ಮಗಳೂ ಎರೆಯಂಗನ ಹೆಂಡತಿಯೂ ಆಗಿದ್ದ ರೇವಕನಿಮ್ಮಡಿ ಎಂಬವಳು ಎಡೆದೊರೆ ನಾಡನ್ನು ಕ್ರಿ.ಶ. 837 ರಲ್ಲಿ ಆಳುತ್ತಿದ್ದಳು[4]. ಇವರಲ್ಲಿ ಕೆಲಸ್ತ್ರೀಯರು ನೃತ್ಯ, ಸಂಗೀತ, ಚಿತ್ರ ಮೊದಲಾದ ಅನೇಕ ಲಲಿತಕಲೆಗಳಲ್ಲಿ, ಇನ್ನಿತರ ಆಲಂಕಾರಿಕ ಕುಶಲಕಲೆಗಳಲ್ಲಿ ವಿದುಷಿಯರಾಗಿದ್ದರು. ಈ ಎಲ್ಲ ಲಲಿತಕಲೆಗಳೂ ಆಗ ಜನಪ್ರಿಯತೆಯನ್ನು ಪಡೆದಿದ್ದುವೆಂಬುದು ಸಾಹಿತ್ಯಾಧಾರಗಳಿಂದ ಸ್ಪಷ್ಟವಾಗುತ್ತದೆ.

ಕೊಳಲು, ಕಟುಮುಖ, ಸಮುದ್ರಘೋಷ, ತ್ರಿವಳಿ, ತೂರ್ಯ ಮತ್ತು ಮೃದಂಗ—ಮೊದಲಾದವು ಆ ಕಾಲದ ಕೆಲವು ಪ್ರಚಲಿತ ವಾದ್ಯಗಳು. ಆಗ ಘೋಷಾಪದ್ಧತಿ ಇರಲಿಲ್ಲ. ವಿಧವೆಯರ ವಿಚಾರದಲ್ಲಿ ಕಡ್ಡಾಯದ ಮುಂಡನಪದ್ಧತಿ ಆಗ ರೂಢಿಯಲ್ಲಿರಲಿಲ್ಲವೆಂದು ತೋರುತ್ತದೆ.

ಆರಂಭದಲ್ಲಿ ಉದಾಹರಿಸಿದ ಪಂಪನ ಪದ್ಯದ ತಾತ್ಪರ್ಯಾರ್ಥದಲ್ಲಿ ಚಿತ್ರಣಗೊಂಡ ಜನಸಾಮಾನ್ಯರ ಹಲವು ಸಂಸ್ಕೃತಿಲಕ್ಷಣಗಳು ಯಥಾರ್ಥವಾದುವೆಂದು ಆ ಕಾಲದ ಶಾಸನಗಳಿಂದಲೂ ಖಚಿತವಾಗುತ್ತದೆ. ಕರ್ಣಾಟಕದ ಜನರು ಸತ್ಯಶೀಲತೆ, ಸ್ವಾಮಿನಿಷ್ಠೆ, ಪರಾಕ್ರಮ, ಸ್ವಾಭಿಮಾನ, ದೃಢಸಂಕಲ್ಪ ಮತ್ತು ತಾಳ್ಮೆ ಮುಂತಾದ ಸದ್ಗುಣಗಳಿಗಾಗಿ ಪ್ರಖ್ಯಾತರಾಗಿದ್ದರು. ಪಂಪನ ಕಾಲ ಕ್ಷಾತ್ರಯುಗವೆಂದು ವರ್ಣಿತವಾಗಿದೆ. ತಮ್ಮಭೂಮಿ, ಆಸ್ತಿ ಮತ್ತು ಸ್ತ್ರೀಜನಾಂಗದ ಮಾನಮರ್ಯಾದೆ ಇವುಗಳನ್ನು ಸಂರಕ್ಷಿಸುವುದಕ್ಕೋಸುಗ

ತಮ್ಮ ಪ್ರಾಣಗಳನ್ನೂ ಬಲಿಕೊಡುತ್ತಿದ್ದ ವೀರರ ಕಾಲ ಅದಾಗಿತ್ತು. ಈ ನಾಡಿನಲ್ಲಿ ಎಲ್ಲೆಡೆಗಳಲ್ಲೂ ಕಾಣಸುವ ಅಸಂಖ್ಯ ವೀರಗಲ್ಲುಗಳು ಕನ್ನಡ ವೀರರ ಶೌರ್ಯ-ಸಾಹಸಾದಿ ಸದ್ಗುಣಗಳನ್ನು ಹಾಡಿ ಹೊಗಳುತ್ತವೆ. ಯುದ್ಧದಲ್ಲಿ ಮಡಿದ ಎರೆಯಮ್ಮನೆಂಬವನ ವೀರಮರಣವನ್ನು ಬಣ್ಣಿಸುವ ಶಾಸನವೊಂದು ಹೇಮಾವತಿಯಲ್ಲಿ ದೊರೆತಿದೆ[6]. ಆತನು ಎಲ್ಲರ ಹೊಗಳಿಕೆಗೆ ಪಾತ್ರನಾಗಿದ್ದ; ಮತ್ತು ಆತನ ವೀರಮರಣದ ಸುದ್ದಿ ಶೌರ್ಯ ಸಾಹಸಗಳ ಕಥೆಯಂತೆ ದೇಶದ ತುಂಬ ಹರಡಿತು. ಇದಕ್ಕಿಂತ ಎಪ್ಪತ್ತು ವರ್ಷಗಳ ಹಿಂದಿನ ಕಾಲದ (ಕ್ರಿ.ಶ. 923-924) ಒಂದು ಖಿಲವಾದ ಶಾಸನವು ಅದೇ ಸ್ಥಳದಲ್ಲಿ ದೊರೆತಿದೆ. ಎಡೆಯಮ್ಮನು ಧೈರ್ಯದಿಂದ ಸೇವುಣ ಸೈನ್ಯವೊಂದರ ವಿರುದ್ಧವಾಗಿ ಹೋರಾಡಿ ವೀರಮರಣ ಹೊಂದಿದನೆಂದೂ ಇದರಿಂದಾಗಿ ಎಲ್ಲರ ಕಣ್ಣುಗಳಲ್ಲೂ ಕಂಬನಿ ತುಂಬಿ ಹರಿಯುವಂತಾಯಿತೆಂದೂ ಆ ಶಾಸನವು ವಿವರಿಸುತ್ತಿದೆ[7]. ತನ್ನ ಸ್ವಾಮಿಯ ಇಚ್ಛೆಯನ್ನು ಪೂರೈಸುವುದಕ್ಕಾಗಿ ಸೇವಕನೊಬ್ಬನು ತನ್ನ ಪ್ರಾಣಾಹುತಿಯನ್ನಿತ್ತಂತಹ ಹಲವಾರು ಉದಾಹರಣೆಗಳು ಉಪಲಬ್ಧವಿವೆ. ಸಿಂಗಪೋತಕಲಿನೊಳಂ ಬಾಡಿಯರಸನು ಪೆರ್ಮಾನಡಿಯ ಆದೇಶದಂತೆ ದುಗ್ಗಮಾರ ಎರೆಯಪ್ಪನ ಮೇಲೆ ಏರಿಹೋದನೆಂದೂ ಉಳ್ವರ್ತೆಯ ಶಾಸನದಲ್ಲಿ ಉಕ್ತವಾಗಿದೆ[8]. ಸ್ವಾಮಿನಿಷ್ಠ ಸೇವಕರು ತಮ್ಮ ದೊರೆಗಳ ಮುಂದೆ ತಮ್ಮ ನಿಷ್ಠೆಯ ಬಗೆಗೆ ಪ್ರಾಣಪಣವಿಟ್ಟು ಪಂಥತೊಡುತ್ತಿದ್ದರು. ಅದಕ್ಕನುಗುಣವಾಗಿ ತಮ್ಮ ಒಡೆಯರು ನಿಧನ ಹೊಂದಿದಾಗ, ಇಲ್ಲವೆ ತಾವು ಕೊಟ್ಟ ಪ್ರತಿಜ್ಞೆಯನ್ನು ಪೂರೈಸಲು ಅಸಮರ್ಥರಾದಾಗ ಪ್ರಾಣತ್ಯಾಗ ಗೈಯಲು ಸಿದ್ಧರಾಗುತ್ತಿದ್ದರು. ಈ ಬಗೆಯ ಸ್ವಾಮಿನಿಷ್ಠೆ ಪ್ರತಿಜ್ಞಾಪೂರೈಕೆಗಳು ಅಂದಿನ ಸಾಮಾಜಿಕ ಜೀವನದ ವಾಡಿಕೆಯ ಅಂಶವೆನಿಸಿತ್ತು. ಶಾಸನಗಳಲ್ಲಿ 'ಕೀಳ್ಗುಂಟೆ' ಮತ್ತು 'ವೇಳವಾಳಿ' ಎಂಬ ಪದಗಳು ಇಂಥ ವೀರಮರಣಗಳಿಗಾಗಿ ಪ್ರಯೋಗಿಸಲ್ಪಟ್ಟಿವೆ. ಗಂಗರಾಜ ರಾಚಮಲ್ಲನ ನಿಧನಕಾಲಕ್ಕೆ ಇಬ್ಬರು ವೀರರು ಚಿತೆಗೆ ಆಹುತಿಯಾಗಿ ಪ್ರಾಣತೆತ್ತರು. ಅನಂತರದ ಕಾಲದಲ್ಲಿ ರೂಢಿಗೆ ಬಂದ ಸತೀಪದ್ಧತಿ (ಎಂದರೆ ಹೆಂಡತಿ ಪತಿಯ ಮರಣಾನಂತರ ಆತನ ಚಿತೆಯಲ್ಲಿ ಹಾರಿಕೊಂಡು ಸಹಗಮನ ಗೈಯುವ ಪದ್ಧತಿ) ಆ ಕಾಲದಲ್ಲಿ ಅಷ್ಟೊಂದು ಪ್ರಚಲಿತವಿರಲಿಲ್ಲ. ರವಿವರ್ಮನ ಹೆಂಡತಿ ಪತಿಯ ಮರಣಾನಂತರ ಆತನ ಚಿತೆಯಲ್ಲಿ ಸಹಗಮನಗೈದು ಮಹಾಸತಿ ಎನಿಸಿಕೊಂಡಳು[9]. ಸತೀಪದ್ಧತಿಯ ಈ ಉದಾಹರಣೆಯೊಂದು ಬಹು ಅಪರೂಪದ್ದಾಗಿದೆ. 'ಸಲ್ಲೇಖನ' ವಿಧಿ ಎಂದರೆ ಅನ್ನ ನೀರುಗಳನ್ನು ತ್ಯಜಿಸಿ, ಸ್ವಯಂಪ್ರೇರಣೆಯಿಂದ ಪ್ರಾಣತ್ಯಾಗಗೈಯುವುದು ಜೈನಮತೀಯರಲ್ಲಿ ವಾಡಿಕೆಯ ಸಂಪ್ರದಾಯ ವಾಗಿತ್ತು. ನಿಜದ ಸಂಗತಿಯೆಂದರೆ, ಕಾರಣಾಂತರಗಳಿಂದ 'ಬದುಕಿರುವುದು ತೀರ ಅಸಹನೀಯವೆನಿಸಿದಾಗ ದೇಹಬಂಧದಿಂದ ಬಿಡುಗಡೆಹೊಂದುವುದು ಅವರಲ್ಲಿ ಒಂದು ಧಾರ್ಮಿಕ ವಿಧಿಯೆನಿಸಿತ್ತು'.

ಸಾಮಾಜಿಕ ಧರ್ಮ ಪ್ರಜ್ಞೆಯೇ ಜೀವನಸ್ವರೂಪದ ಬಹು ಮುಖ್ಯ ಅಂಶವಾದುದರಿಂದ ಶಿಕ್ಷಣ, ಲಲಿತ ಕಲೆ, ಸಮಾಜಸೇವೆ,—ಇವುಗಳ ದೃಷ್ಟಿಯಿಂದ ದೇವಾಲಯವು ದೈವತಾರಾಧನೆಯ ಸ್ಥಳವಾಗಿದ್ದೂ ಸಮಾಜಜೀವನದಲ್ಲಿ ಬಹು ಮಹತ್ವದ ಸ್ಥಾನವನ್ನಾಕ್ರಮಿಸಿತ್ತು. ಬಜಂತ್ರಿಗಾರ, ಹರೆಕಾರ, ವಂಶಿಗ (ಕೊಳಲೂದುವವ)—ಮುಂತಾದವರಲ್ಲದೆ ಹೂವಡಿಗ, ತೋಟಗಾರ, ಗಂಧಕಾರ, ಕುಂಬಾರ—ಮತ್ತು ಇನ್ನಿತರ ಹಲವಾರು ದೇವಾಲಯ ಸೇವಕರಿಗೆ ಅದೊಂದು ಜೀವನಾಧಾರವಾಗಿತ್ತು. ಭಕ್ತಿಸಾಧಕರಿಗೆ, ಮತ್ತು ಸದ್ಗುಣಿಗಳಿಗೆ ದೇವಾಲಯುವೇ ವಾಸಸ್ಥಾನವಾಗಿತ್ತು. ದೇವಾಲಯದಲ್ಲಿ ಜೀವಿಸುತ್ತಿದ್ದ ಸಾಧು–ಸನ್ಯಾಸಿಗಳು ನಿಯಮಬದ್ಧ ಧಾರ್ಮಿಕ ಜೀವನವನ್ನು ನಡೆಸಲೇಬೇಕಾಗಿತ್ತು ಎಂಬುದಕ್ಕೆ ಶಾಸನಾಧಾರಗಳಿವೆ. ದೇವಾಗಾರದ ಆವಾರದಲ್ಲಿ ವಾಸಮಾಡುತ್ತಿದ್ದ ಸಾಧು–ಸಂನ್ಯಾಸಿಗಳ ಜೀವನಕ್ರಮದ ಮೇಲ್ವಿಚಾರಣೆ ನಡೆಸುತ್ತಲಿದ್ದ ನಾಡರಸನು ಅವರು ಬ್ರಹ್ಮಚರ್ಯವ್ರತವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳುತ್ತಿದ್ದನು[10].

ಬೇಟೆಯಾಡುವುದು ಅರಸರ ಬಹು ಮೆಚ್ಚಿಗೆಯ ಕ್ರೀಡೆಯೆನಿಸಿತ್ತು. ಬ್ರಿಟಿಷ್ ವಸ್ತುಸಂಗ್ರಹಾಲಯ

ದಲ್ಲಿರುವ ಮೂರನೆಯ ಗೋವಿಂದನ ತಾಮ್ರಶಾಸನಗಳಿಂದ ಆ ಕಾಲದ ಬೇಟೆಯ ವ್ಯವಸ್ಥೆಯ ಬಗೆಗೆ ವಿವರಗಳು ತಿಳಿದುಬಂದಿವೆ. ಅರಸರ ಬೇಟೆಯ ಕ್ರೀಡಾವಿಹಾರಕ್ಕೆಂದು ಕೆಲವು ಅರಣ್ಯಭಾಗಗಳು ಪ್ರತ್ಯೇಕವಾಗಿ ಕಾದಿಡಲ್ಪಡುತ್ತಿದ್ದವು. ಅಲ್ಲಿಯ ಕಾಡುಪ್ರಾಣಿಗಳು ತುಂಬ ಕೊಬ್ಬಿ ಬೆಳೆಯುವಂತೆ ಅವುಗಳನ್ನು ಯೋಗ್ಯರೀತಿಯಲ್ಲಿ ಸಂರಕ್ಷಿಸಲಾಗುತ್ತಿತ್ತು. ಹೀಗೆ ಬೆಳೆದು ಕೊಬ್ಬಿದ ಕಾಡುಪ್ರಾಣಿಗಳನ್ನು ಬೇಟೆಯಾಡಿ ಕೊಲ್ಲುವುದೇ ಅರಸರ ಹಾಗೂ ಉನ್ನತ ರಾಜ್ಯಾಧಿಕಾರಿಗಳ ಕ್ರೀಡಾವಿಹಾರವಾಗಿತ್ತು[11]. ನಾಲ್ಕನೆಯ ಇಂದ್ರನು ಒಂದು ಪ್ರಕಾರದ ಚೆಂಡಿನಾಟದಲ್ಲಿ ಕುಶಲ ಆಟಗಾರನಾಗಿದ್ದನೆಂದು ಆತನ ಶ್ರವಣಬೆಳಗೊಳದ ಶಾಸನವೊಂದು ಬಣ್ಣಿಸುತ್ತದೆ. ಆ ಚೆಂಡಿನಾಟದಲ್ಲಿ ಕುದುರೆಗಳನ್ನು ಉಪಯೋಗಿಸಲಾಗುತ್ತಿತ್ತೆಂದು ಉಲ್ಲೇಖವಿದೆ. ಇದರಿಂದ ಆ ಚೆಂಡಿನಾಟವು ಇಂದಿನ ' ಪೋಲೊ ' ಆಟವನ್ನು ಹೋಲುವಂಥದಿರಬೇಕು.

ಸಾಮಾನ್ಯ ಜನರು ಡೊಂಬರಾಟದಲ್ಲಿ ಆಸಕ್ತಿ ವಹಿಸುತ್ತಿದ್ದರು. ನಾನಾಪ್ರಕಾರದ ' ಡೊಂಬರಲಾಗ ' ಅಥವಾ ' ಪಲ್ಟಿ ' ಹೊಡೆಯುವುದು ಒಂದು ಮನೋರಂಜಕ ಆಟವೆನಿಸಿದ್ದರಿಂದ ' ಡೊಂಬದೆರೆ ' ಎಂಬ ಉದ್ಯೋಗಕರವನ್ನು ಡೊಂಬರ ಮೇಲೆ ಹೇರುವುದು ಬಳಕೆಗೆ ಬಂತು. ಜಾತ್ರೆ, ಉತ್ಸವಾದಿಗಳು ನಿಯಮಿತವಾಗಿ ಏರ್ಪಡುತ್ತಿದ್ದವು. ಇವುಗಳಲ್ಲಿ ಪಾಲುಗೊಳ್ಳುವವರು ಪರಸ್ಪರ ಸಹಕಾರಭಾವದಿಂದ ಕೂಡಿ ದುಡಿಯುತ್ತಿದ್ದರು. ಇದರಿಂದ ಒಂದು ರೀತಿಯ ವಿಹಾರವಿಶ್ರಾಂತಿಗಳಿಗೆ ಅವಕಾಶ ವುಂಟಾಗುತ್ತಿತ್ತು. ಅಲ್ಲದೆ, ಲಲಿತಕಲೆ-ಕುಶಲಕಲೆಗಳ ಪ್ರದರ್ಶನಕ್ಕೂ ಸುಸಂಧಿ ದೊರೆಯುತ್ತಿತ್ತು.

ಜನಸಾಮಾನ್ಯರು ಜಾದೂಗಾರಿಕೆ, ಅಲೌಕಿಕ ಶಕ್ತಿ-ಸಾಮರ್ಥ್ಯ, ಮಂತ್ರ-ತಂತ್ರಾದಿಗಳಲ್ಲಿ ನಂಬಿಕೆ ಯುಳ್ಳವರಾಗಿದ್ದರು. ಪ್ರತಿಯೊಂದು ಊರಲ್ಲಿಯೂ ಇರುವ ವಿಲಕ್ಷಣ ರೇಖಾಕೃತಿಯುಳ್ಳ 'ಗೋಕಲ್ಲು'ಗಳು ಇದಕ್ಕೆ ನಿದರ್ಶನಗಳಾಗಿವೆ. ಈ ' ಗೋಕಲ್ಲು 'ಗಳನ್ನು ನೆಡುವುದರಿಂದ ಆ ಹಳ್ಳಿಯ ದನಕರುಗಳ ರಕ್ಷಣೆ ಯಾಗುವುದೆಂಬ ನಂಬಿಕೆಯಿತ್ತು. ' ಗೋಕಲ್ಲುಗಳ ಮೇಲಿನ ರೇಖಾಚಿತ್ರಗಳನ್ನು ಭಕ್ತಿಯಿಂದ ತೊಳೆದ ನೀರಿನಿಂದ ದನಕರುಗಳ ರೋಗನಿವಾರಣೆಯಾಗುವುದೆಂಬುದು ಸಾಮಾನ್ಯ ತಿಳಿವಳಿಕೆಯಾಗಿತ್ತು.'[12]

ಚಕ್ಕಡಿ ಅಥವಾ ಎತ್ತಿನ ಬಂಡಿ ಜನಸಾಮಾನ್ಯರ ಪ್ರಯಾಣದ ಮತ್ತು ಸರಕು ಸಾಗಿಸುವ ಬಹು ಮುಖ್ಯ ವಾಹನಸೌಕರ್ಯವಾಗಿತ್ತು. ಪಲ್ಲಕ್ಕಿ ಮತ್ತು ರಥಗಳನ್ನು ಉನ್ನತ ದರ್ಜೆಯ ಜನರು ಮಾತ್ರ ಬಳಸುತ್ತಿದ್ದರು. ಆನೆ ಕುದುರೆಗಳ ಬಳಕೆ ಯುದ್ಧಭೂಮಿಯಲ್ಲಿ ವಿಶೇಷವಾಗಿತ್ತೆಂಬುದು ಆ ಕಾಲದ ವೀರಗಲ್ಲುಗಳ ಮೇಲಿನ ಶಿಲ್ಪಚಿತ್ರಗಳಿಂದ ವ್ಯಕ್ತವಾಗುತ್ತದೆ.

ಪ್ರಜಾಸಂರಕ್ಷಣೆ ಅರಸನ ಕರ್ತವ್ಯಗಳಲ್ಲಿ ಬಹು ಮುಖ್ಯವಾದುದು. ಈ ಉದ್ದೇಶ ಸಿದ್ಧಿಗಾಗಿ ಆತನು ಕೆಲವೊಂದು ಧಾರ್ಮಿಕ ಸಮಾರಂಭಗಳನ್ನು ಆಗಾಗ ಹೂಡುತ್ತಿದ್ದನು. ಕೆಲವೊಂದು ವ್ಯಕ್ತಿಗಳಿಗೂ ಸಂಸ್ಥೆಗಳಿಗೂ ಈ ಸಮಾರಂಭಗಳಲ್ಲಿ ದಾನ-ದತ್ತಿಗಳನ್ನು ನೀಡಿ ಸನ್ಮಾನಿಸುವುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿತ್ತು. ವೇದಕಾಲದ ಯಜ್ಞಯಾಗಾದಿಗಳ ಸ್ಥಾನವನ್ನು ಬರುಬರುತ್ತ ಈ ಧಾರ್ಮಿಕ ಸಮಾರಂಭಗಳೇ ಆಕ್ರಮಿಸತೊಡಗಿದವು. ನೃಪತುಂಗನು ತನ್ನ ' ತುಲಾಪುರುಷ ' ಸಮಾರಂಭದಲ್ಲಿ ಗೋಳೆಯಭಟ್ಟನೆಂಬ ಬ್ರಾಹ್ಮಣನಿಗೆ ಒಂದು ದತ್ತಿಯನ್ನು ಬಿಟ್ಟನೆಂದು ಹೂವಿನ ಹಿಪ್ಪರಗಿಯ ಶಾಸನವು ತಿಳಿಸುತ್ತಿದೆ[13]. ಇತ್ತ ಜನಸಾಮಾನ್ಯರು ಕೂಡ ತಮಗೆ ಅನುಕೂಲವಿರುವ ಸಂದರ್ಭಗಳಲ್ಲಿ ಪುರೋಹಿತರಿಗೂ ದೇವಾಲಯಗಳಿಗೂ ದಾನ-ಧರ್ಮಗಳನ್ನು ನೀಡುವ ಸದವಕಾಶಗಳನ್ನು ಪಡೆಯುತ್ತಲೇ ಇದ್ದರು. ಯಾವುದೊಂದು ವೀರಮರಣ ಸಂಭವಿಸಿದಾಗಲೆಲ್ಲ ಆ ವೀರನ ಸ್ಮಾರಕಾರ್ಥವಾಗಿ ಕೂಡಲೇ ವೀರಗಲ್ಲನ್ನು ನೆಟ್ಟು ದತ್ತಿಯನ್ನು ಸ್ಥಾಪಿಸುವಲ್ಲಿ ಹಳ್ಳಿಗರೆಲ್ಲರೂ ಒಕ್ಕಟ್ಟಿನಿಂದ ಪರಸ್ಪರ ಸಹಕಾರ ಭಾವದಿಂದ ಕೂಡಿ ಕಾರ್ಯ ಪೂರೈಸುತ್ತಿದ್ದರು. ಆ ಕಾಲದ ಮುಖ್ಯ ದತ್ತಿಗಳೆಂದರೆ ' ಗೋಸಾಹಸ್ರ '

(ಗೋದಾನ), 'ಪೃಥ್ವೀದಾನ' (ಭೂದಾನ) ಎಂಬವಾಗಿದ್ದವು. ಆಗ ಸ್ಥಾನಿಕಸಂಸ್ಥೆಯ ಆಡಳಿತವು ಮುಖ್ಯವಾಗಿ 'ಮಹಾಜನ'ರ (ಊರ ಹಿರಿಯರ ಸಂಘದ) ಕೈಯಲ್ಲಿತ್ತು. 'ಮಹಾಜನ' ಎಂಬ ಪದ ಬಹು ಪ್ರಾಚೀನ ಕಾಲದಲ್ಲಿ ಅಷ್ಟೊಂದು ಪ್ರಚಾರದಲ್ಲಿರಲಿಲ್ಲ. 'ಮಹಾಜನ'ಕ್ಕೆ ಬದಲಾಗಿ 'ಊರ್' ಎಂಬ ಪದ ಬಳಕೆಯಲ್ಲಿತ್ತು. ಮಹಾಜನಸಂಸ್ಥೆಯ ಕರ್ತವ್ಯಗಳು ನಾನಾರೀತಿಯವಾಗಿದ್ದವು. ದೇವಾಲಯ ವ್ಯವಸ್ಥೆ, ಗ್ರಾಮನೈರ್ಮಲ್ಯ, ಕೆರೆಕಾಲುವೆಗಳ ನಿರ್ಮಿತಿ, ಮತ್ತು ಶಿಕ್ಷಣಸಂಸ್ಥೆಗಳ ಏರ್ಪಾಟು—ಇವೇ ಮೊದಲಾದ ಸಮಾಜಕಲ್ಯಾಣದ ಆವಶ್ಯಕತೆಗಳನ್ನು ಪೂರೈಸುವ ಹೊಣೆ ಅವರದಾಗಿತ್ತು. ಆಯಾ ಉದ್ಯೋಗ ವೃತ್ತಿಗಳಿಗೆ ಸಂಬಂಧಪಟ್ಟ ಜನರು ಸೇರಿ ತಂತಮ್ಮ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳನ್ನು 'ಶ್ರೇಣಿ'ಗಳೆಂದು ಕರೆಯುತ್ತಿದ್ದರು.

ಈ ಶ್ರೇಣಿಗಳು ಶುದ್ಧ ಆರ್ಥಿಕ ಸಂಸ್ಥೆಗಳು. ಇವು ಅನೇಕ ಸಣ್ಣ-ದೊಡ್ಡ ನಗರಗಳ ಪೌರಾಡಳಿತವನ್ನು ನಿರ್ವಹಿಸುತ್ತಿದ್ದವು. ಈ ಕಾಲದಲ್ಲಿ 'ಮೇಳಿ' ಎಂಬುದು ಈ ಶ್ರೇಣಿಗಳಲ್ಲಿ ಬಹು ಪ್ರಧಾನವಾಗಿತ್ತು. ಈ ಕಾಲದ ಅನೇಕ ಶಾಸನಗಳಲ್ಲಿ 'ಮೇಂಟಿ'ಯ ಸ್ಥಾಪನೆಯನ್ನು ಕುರಿತು ಉಲ್ಲೇಖಗಳು ಬಂದಿವೆ. 'ಮೇಳಿ' 'ಮೇಂಟಿ' ಎರಡೂ ಒಂದೇ. ತಮಿಳಿನ 'ಮೇಳಿ'ಯೇ ತೆಲುಗಿನ 'ಮೇಡಿ' ಯಾಗಿದೆ. ಇದರರ್ಥ ನೇಗಿಲು ಎಂದು. 'ಮೇಂಟಿ' ಅಥವಾ ನೇಗಿಲು ಬೇಸಾಯದ ಪ್ರತೀಕ. ಮೇಟಿಯನ್ನು ನಿಲ್ಲಿಸುವ ಸಂಪ್ರದಾಯವು ಕೃಷಿಗೆ ಸಂಬಂಧಪಟ್ಟ ಶ್ರೇಣಿಗಳಿದ್ದವೆಂಬುದನ್ನು ಸೂಚಿಸುತ್ತದೆ. ಈ ಕೃಷಿ-ಶ್ರೇಣಿಗಳಿಗೆ ಆಯಾ ಭಾಗದ ಬೇಸಾಯಗಾರರೆಲ್ಲರೂ ಸದಸ್ಯರಾಗಿರುತ್ತಿದ್ದರು.

ಒಕ್ಕಲುತನ ಅಥವಾ ಬೇಸಾಯವೇ ಜನಸಾಮಾನ್ಯರ ಮುಖ್ಯ ಉದ್ಯೋಗವಾದುದರಿಂದ ರಾಜ್ಯದ ಆದಾಯದ ಬಹುಪಾಲು ಭೂಕಂದಾಯದಿಂದಲೇ ಬರುತ್ತಿತ್ತು. ಭೂಮಿಯನ್ನು ಅನೇಕ ವರ್ಗಗಳಲ್ಲಿ ವಿಭಜಿಸಲಾಗಿತ್ತು. ಕೇವಲ ತರಿಜಮೀನು (Wet land), ಮತ್ತು ಖುಷ್ಕಿಜಮೀನು (Dry land) ಎಂದಲ್ಲದೆ, ಫಲವತ್ತತೆಯ ಆಧಾರದ ಮೇಲಿಂದಲೂ ಭೂಮಿಯ ವರ್ಗೀಕರಣವಾಗಿತ್ತು ; ಮತ್ತು ಆಯಾ ವರ್ಗಗಳಿಗನುಸಾರವಾಗಿ ಭೂಕಂದಾಯವನ್ನು ಗೊತ್ತುಪಡಿಸಲಾಗಿತ್ತು. ಡಾ॥ ಅಳ್ತೇಕರರು 'ಉದ್ರಂಗ' ಮತ್ತು 'ಉಪರಿಕರ' ಎಂಬವನ್ನು ಕ್ರಮವಾಗಿ 'ಭಾಗಕರ' ಮತ್ತು 'ಭೋಗಕರ'ಗಳಿಗೆ ಸಮವೆಂದು ಹೇಳಿದ್ದಾರೆ. ಮೊದಲನೆಯದು ಭೂಕಂದಾಯ ; ಎರಡನೆಯದು ಪದಾರ್ಥರೂಪದಲ್ಲಿ ಸಲ್ಲಿಸಲಾಗುತ್ತಿದ್ದ ಚಿಕ್ಕಪುಟ್ಟ ಕರಗಳು. ಹಳ್ಳಿಯ ಅಧಿಕಾರಿವರ್ಗಗಳ ಸಂಬಳ-ಸಾರಿಗೆಗಾಗಿ ಎತ್ತುತ್ತಿದ್ದ ಹೆಚ್ಚಿನ ಕರಗಳೂ ಎರಡನೆಯ ವರ್ಗದವೇ ಆಗಿದ್ದವು[14]. ಸಾಮಾನ್ಯವಾಗಿ ಭೂಮಿಯು ಹುಟ್ಟುವಳಿಯ ಆರರಲ್ಲಿ ಒಂದಂಶವು ಅರಸನ ಪಾಲಿನದಾಗಿತ್ತು. ಭೂಮಿಯ ಹಿಡುವಳಿಯ ಕೆಲವು ವಿಶೇಷ ವಿಧಾನಗಳಲ್ಲಿ ಭೂಕಂದಾಯದಲ್ಲಿ ಪೂರ್ತಿ ವಿನಾಯಿತಿ ಇಲ್ಲವೆ ಸಾಂಕೇತಿಕ ವಸೂಲಿ ನಡೆಯುತ್ತಿತ್ತು. 'ಮಾನ್ಯ' (ಮನ್ನೆಯ), 'ಅರ್ಧಮಾನ್ಯ', ಮತ್ತು 'ಸರ್ವಮಾನ್ಯ' ಎಂಬವು ಇಂತಹ ತೆರಿಗೆಗಳು. 'ದಶಬಂಧ' ಎಂಬುದು ವಾಡಿಕೆಯ ಕಂದಾಯ ದರದ ಹತ್ತರಲ್ಲಿ ಒಂದಂಶದ ತೆರಿಗೆ. 'ಬಿತ್ತುಕಟ್ಟ' ಎಂಬುದು ಕೆರೆಗಳಿಗಾಗಿ ಕೊಡುವ ಸಹಾಯದ್ರವ್ಯ ವಾಗಿದ್ದು ಅದು 'ದಶಬಂಧ'ವನ್ನು ಹೋಲುವಂಥದೆಂದು ತಿಳಿಯಲಾಗಿದೆ. 'ಬಿತ್ತು' ಎಂದರೆ ಬೀಜ ಬಿತ್ತುವುದು ಇಲ್ಲವೇ ಭೂಸಾಗುವಳಿ ಮಾಡುವುದು ಎಂದರ್ಥ. ಬಿತ್ತನೆಯ ಅಥವಾ ಸಾಗುವಳಿಯಾದ ಭೂಮಿಯ ವಾಡಿಕೆಯ ಕಂದಾಯ ದರವನ್ನು ಕಡಮೆ ಮಾಡಿರುವುದೇ 'ಬಿತ್ತುಕಟ್ಟ' ; 'ಕೆರೆ ಕೊಡಗೆ' ಅಥವಾ 'ಕತ್ತುಕೊಡಗೆ'ಗಳು ಕಂದಾಯರಹಿತ ಭೂದಾನಗಳು. ಇವು ಕೆರೆಗಳ ನಿರ್ಮಿತಿಗೆ ಇಲ್ಲವೆ ಅವುಗಳ ಸಂರಕ್ಷಣೆಯ ಕಾರ್ಯಕ್ಕಾಗಿ ಕೊಟ್ಟ ವೃತ್ತಿ-ದಾನಗಳು[15], ಆದರೆ 'ಬಿತ್ತುವಟ್ಟ' ಅಥವಾ 'ಬಿತ್ತುಕಟ್ಟೆ' ಎಂಬ ಪದಗಳು ಕೆರೆಯ ನೀರುಣ್ಣುವ ಭೂಮಿಗಳ ಹುಟ್ಟುವಳಿಯ ಒಂದಂಶ ಎಂಬುದನ್ನು ಸೂಚಿಸುತ್ತಿರ ಬಹುದು. ಆದುದರಿಂದ 'ಬಿತ್ತುವಟ್ಟ' ಮತ್ತು 'ಬಿತ್ತುಕಟ್ಟೆ' ಎಂಬವು ಕೆರೆಕಟ್ಟಿದ ಇಲ್ಲವೇ ದುರಸ್ತಿ ಮಾಡಿದವನಿಗೆ ಕೊಡಮಾಡಿದ ವೃತ್ತಿ-ದಾನಗಳೆಂದಲ್ಲದೆ[16], ಹಿಡುವಳಿ ಎಂಬರ್ಥದವಲ್ಲವೆಂದು ತೋರುತ್ತದೆ.

'ಬಾಳ್ಗಲ್ಚು' ಮತ್ತು 'ಕಲ್ನಾಡು' ಎಂಬವು ಆ ಕಾಲದ ವಿಶೇಷ ಪ್ರಕಾರದ ದತ್ತಿಗಳು. ಯುದ್ಧಭೂಮಿಯಲ್ಲಿ ತೋರಿದ ಶೌರ್ಯಸಾಹಸಾದಿಗಳಿಗಾಗಿ ಯೋಧರಿಗೆ 'ಖಡ್ಗಗಳನ್ನು ತೊಳೆಯುವ ಸಮಾರಂಭ' ಸಂದರ್ಭಗಳಲ್ಲಿ ನೀಡುತ್ತಿದ್ದ ದತ್ತಿಯೇ ಮೊದಲನೆಯದು. 'ಭೂತೋಪಟ್ಟ ಪ್ರತ್ಯಯ', 'ಚಾಟಭಟ ಪ್ರವೇಶದಂಡ', 'ರಾಜಸೇವಕಾನಾಂ ವಸಂತಿದಂಡ' ಅಥವಾ 'ಪ್ರಯಾಣದಂಡ' ಮತ್ತು 'ಉತ್ಸಂಗ'—ಇವು ಕ್ರಮವಾಗಿ ಸಾಮಾನ್ಯ ಒಳಸುಂಕ ಮತ್ತು ಹೊರಸುಂಕ, ನಿಯತ ಹಾಗೂ ಅನಿಯತ ಸೈನಿಕ ಹಾಗೂ ಕಾವಲುದಳ (Police)ಗಳ ಆಗಮನಕಾಲಕ್ಕೆ ಎತ್ತುವ ತೆರಿಗೆ, ರಾಜಸೇವಕರ ಆತಿಥ್ಯಕ್ಕಾಗಿ ಎತ್ತುವ ಕರ, ಉತ್ಸವಾದಿಗಳ ಕಾಲಕ್ಕೆ ಸಂಗ್ರಹಿಸುವ ವಾಡಿಕೆಯ ಚಂದಾಹಣ—ಎಂಬರ್ಥದವೆಂದು ತಿಳಿದುಬಂದಿದೆ[17]. 'ಸಿದ್ಧಾಯ', 'ದೇವಸಾಯದ', 'ಸುಂಕ', 'ಪನ್ನಾಯ' 'ಪೆರ್ಜುಂಕ', 'ವಡ್ಡರಾವುಲ', 'ತಾನೋಘ', ಮತ್ತು 'ಬಿಲ್ಕೊಡ'—ಮುಂತಾದುವು ಈ ಕಾಲದ ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ವಿಧವಿಧದ ತೆರಿಗೆಗಳಾಗಿವೆ. 'ದಂಡಾಯ' ಎಂಬುದು ದಂಡದ ಹಣ; 'ಕೂಲಿಯ ಸುಂಕ' ಮತ್ತು 'ನೀರುಣಿಸುಂಕ'ಗಳು ಬೇಸಾಯಗಾರನಿಗೆ ಒದಗಿಸಿದ ಅನುಕೂಲತೆಗಳಿಗಾಗಿ ಆತನಿಂದ ಎತ್ತುವ ಸುಂಕಗಳಿರಬೇಕು. 'ಸಂತೆವಣ' (ಸಂತೆಯ ಸುಂಕ), 'ಮನೆದೆರೆ' (ಮನೆಯ ತೆರಿಗೆ), 'ಹಂದರುವಣ' (ಕಟ್ಟಿದ ಹಂದರುಗಳಿಗಾಗಿ ಎತ್ತುವ ಕರ)—ಇವು ಸ್ಥಳೀಯ ಆಡಳಿತದ ಕರಗಳು. 'ಡೊಂಬದೆರೆ', 'ಘಾಣದೆರೆ', 'ಕನ್ನಡಿವಣ' ಮುಂತಾದವು 'ಬಿಟ್ಟಿಬಿರಾಡ' 'ಬಿಡುಗಡೆ'. 'ಸಮುದಾಯವೊಸಗೆ', —ಇತ್ಯಾದಿಗಳಂತೆ ಔದ್ಯೋಗಿಕ ಕರಗಳಾಗಿವೆ. ಇವುಗಳಲ್ಲಿ 'ಬಿಟ್ಟಿ' ಎಂಬುದು ಒತ್ತಾಯದ ಊಳಿಗಗೆಲಸ; ಈ ಊಳಿಗಗೆಲಸದಿಂದ ಬಿಡುಗಡೆ ಹೊಂದಬೇಕಾದಾಗ 'ಬಿಡುಗಡೆ' ಎಂಬ ಕರದ ರೂಪದಲ್ಲಿ ಕೆಲವೊಂದು ಹಣವನ್ನು ತೆರಬೇಕಾಗುತ್ತಿತ್ತು. ಹತ್ತಿ, ಉಪ್ಪು, ಅರಿಸಿನ, ಮೆಣಸು, ಎಣ್ಣೆ, ಶುಂಠಿ, ಬೆಲ್ಲ, ಅಡಕೆ, ವೀಳ್ಯದೆಲೆ, ಸಕ್ಕರೆ, ಉರವಲು ಸವುದೆಯ ಹೊರೆಗಳು—ಮುಂತಾದ ವ್ಯಾಪಾರದ ಸರಕುಗಳು ಪೇಟೆಗೆ ಬಂದಾಗ ಅವುಗಳ ಮೇಲೆ ಕರ ಹೇರಲಾಗುತ್ತಿತ್ತು.

ಬಂಗಾರದ ನಾಣ್ಯಗಳು ಆಗ ಬಳಕೆಯಲ್ಲಿದ್ದವು. ಅನಂತರದ ಕಾಲದಲ್ಲಿ ಬೆಳ್ಳಿಯ ನಾಣ್ಯಗಳೂ ಚಲಾವಣೆಯಲ್ಲಿದ್ದವೆಂದು ಶಾಸನಗಳು ಹೇಳುತ್ತವೆ. 'ಬೆಳ್ಳಿಗಮ್ಮಟ' ಎಂಬುದು ಬೆಳ್ಳಿನಾಣ್ಯಗಳ ಟಂಕಸಾಲೆ ಇರಬೇಕು. ದ್ರಾಮ, ಗದ್ಯಾಣ, ಪಣ, ಪೊನ್, ಸುವರ್ಣ, ಸಾಹನಿಕಾತಿ, ಸಲಿಕೆ, ಗುಳಿಕೆ, ಕಾಗಿಣಿ, ಪ್ರತಾಪ ಮತ್ತು ಧರಣ—ಇವು ಕೆಲವು ನಾಣ್ಯಗಳ ಹೆಸರುಗಳು. ಭೂಮಿ, ದ್ರವಪದಾರ್ಥ ಮತ್ತು ಧಾನ್ಯ ಇವುಗಳನ್ನು ಅಳೆಯುವ ವಿಚಾರದಲ್ಲಿ ಶಾಸನಗಳು ವಿವಿಧ ಪಾರಿಭಾಷಿಕ ಪದಗಳನ್ನು ಕೊಡುತ್ತವೆ. ಇವುಗಳ ಅರ್ಥಗಳು ಸ್ಪಷ್ಟವಿಲ್ಲ. ಮತ್ತರ, ಕುಲ, ಕೊಂಡುಗ ಮತ್ತು ಅಡಯ—ಇವು ಭೂಮಿಯಳತೆಯ ಹೆಸರುಗಳು. ಆದರೆ ಅಳತೆಯ ಕೋಲು ಮಾತ್ರ ಎಲ್ಲೆಡೆಗಳಲ್ಲಿಯೂ ಒಂದೇ ಅಳತೆಯದಲ್ಲವೆಂದು ಕಂಡು ಬರುತ್ತದೆ. 'ಕಚ್ಚವಿಯಘಳೆ' ಮತ್ತು 'ಅಣ್ಣಿಗೆರೆಯ ಕೋಲು' ಎಂಬವು ಬೇರೆ ಬೇರೆ ಅಳತೆಯ ಕೋಲುಗಳಾಗಿದ್ದು ಧಾರವಾಡಜಿಲ್ಲೆಯ ಕಚ್ಚವಿಯಲ್ಲೊಂದು, ಅಣ್ಣಿಗೆರೆಯಲ್ಲಿ ಮತ್ತೊಂದು ಉಪಯೋಗದಲ್ಲಿದ್ದವು. ಹಾಗೆಯೆ 'ಭೇರುಂಡ ಪೊಲೆ'. 'ಗಂಗಪೊಲೆ' ಮತ್ತು 'ಮಾವ್ಗಂಡಿಪೊಲೆ', 'ಸತ್ತುಯ' 'ಸೊಲಿಗೆ', 'ಸೊಲೊಸ', 'ಬಿಸಿಗೆ', 'ಮಣ', ಮತ್ತು 'ಸಾಂಗುಡಿ',—ಇತ್ಯಾದಿಗಳು ಇನ್ನಿತರ ಅಳತೆಯ ಹೆಸರುಗಳಾಗಿವೆ.

ನಾಡಿನ ಆರ್ಥಿಕ ಜೀವನದಲ್ಲಿ ಒಕ್ಕಲುತನದ ತರುವಾಯ ವಾಣಿಜ್ಯೋದ್ಯಮಗಳ ಸ್ಥಾನವು ಮಹತ್ವದ್ದು. ಕುಂಬಾರಿಕೆ, ಗಾಣಗಾರಿಕೆ, ನೆಯ್ಗೆಯ ವ್ಯವಹಾರ, ಹಿತ್ತಾಳೆಗಾರನ ಕಸಬು,—ಮುಂತಾದವು ಮಹತ್ವದ ಕೆಲವು ಉದ್ಯೋಗಗಳಾಗಿದ್ದವು. ಶ್ರೇಣಿಗಳು ಬ್ಯಾಂಕಿನ ವ್ಯವಹಾರ ಮಾಡುತ್ತಿದ್ದುವಲ್ಲದೆ ಉದ್ಯಮಗಳನ್ನು ಪ್ರೋತ್ಸಾಹಿಸುತ್ತಿದ್ದವು. ನಿಜವಾಗಿಯೂ ಶ್ರೇಣಿಗಳು ಬಹು ಸತ್ವಯುತವಾಗಿದ್ದವು.

ನಾಡಿನ ಅರಸು ಅಥವಾ ದೊಡ್ಡ ದೊಡ್ಡ ರಾಜ್ಯಾಧಿಕಾರಿಗಳು,—ಕರಹೇರುವುದಕ್ಕೆ ಮತ್ತು ಕರದಲ್ಲಿ ವಿನಾಯಿತಿ ನಿರ್ಣಯಿಸುವುದಕ್ಕೆ ಮೊದಲು ಈ ಶ್ರೇಣಿಗಳ ಸದಸ್ಯರ ಸಲಹೆ ಕೇಳುತ್ತಿದ್ದರು.

ಕೂಲಿಯಾಳುಗಳಿಗೆ ಹೆಚ್ಚಾಗಿ ಪದಾರ್ಥರೂಪದಲ್ಲಿ ಕೂಲಿ ದೊರೆಯುತ್ತಿತ್ತು. ರಾಜ್ಯಾಧಿಕಾರಿಗಳಿಗೆ ನಾಡಿನ ಕೆಲಪ್ರದೇಶಗಳ ಆಡಳಿತಹಕ್ಕನ್ನು ವಹಿಸಿಕೊಟ್ಟು, ಅವುಗಳಿಂದ ಬರುವ ಉತ್ಪನ್ನವನ್ನು ಆಯಾ ವ್ಯಕ್ತಿಗಳ ಸ್ಥಾನಮಾನಕ್ಕನುಗುಣವಾಗಿ ಇಡಿಯಾಗಿ ಇಲ್ಲವೆ ಇಂತಿಷ್ಟು ಪಾಲು ಎಂದು ಅವರ ಜೀವಿತಕ್ಕಾಗಿ ಕೊಡಲಾಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ಗಮನದಲ್ಲಿಡಬೇಕಾದ ಸಂಗತಿಯೆಂದರೆ, ಆಯಾ ಅಧಿಕಾರಿಗೆ ಕೊಡಮಾಡಿದ್ದು ಸರಕಾರದ ಉತ್ಪನ್ನದ ಒಂದು ಭಾಗವನ್ನು ಮಾತ್ರ; ಆ ಭೂಮಿಯ ಸ್ವಾಮ್ಯವನ್ನಲ್ಲ ಎಂಬುದು. ಆದರೆ ಲೆಕ್ಕಪತ್ರಗಳ ಪರಿಶೀಲನೆಯಿಂದ ಅವರ ಸಂಬಳ–ಸಾರಿಗೆಗಳ ಪ್ರಾಪ್ತಿ ಬಹು ಧಾರಾಳವಾಗಿತ್ತು ಮತ್ತು ಅದು ಅವರ ಜೀವಿತದ ವೆಚ್ಚಕ್ಕಿಂತ ಬಹಳಷ್ಟು ಹೆಚ್ಚಿನದಾಗಿತ್ತು ಎಂದು ತಿಳಿದುಬರುತ್ತಿದೆ.

## ಅಡಿಟಿಪ್ಪಣಿಗಳು

1. ಪಂಪಭಾರತ: ಆಶ್ವಾಸ 4—29.
   Epigraphia Indica, Vol. XXIX P. 138
3. ಆದಿಪುರಾಣ: ಆಶ್ವಾಸ 8-ಪದ್ಯ 59-60 ಮತ್ತು ವಚನ.
4. S.I.I. Vol. XI Pt. I, P. 4.
5. ಆದಿಪುರಾಣ: ಆಶ್ವಾಸ 9-ಪದ್ಯ 26-29.
6. S.I.I. Vol, IX Pt. I No. 31.
7. ಅದೇ ನಂ. 25.
8. Epigraphia Carnatica, Vol. XI MK. 8.
9. Epigraphia Carnatica, Vol. VIII, Sb 523.
10. S.I.I. Vol. IX Pt. I, No. 101; Epigraphia Indica, Vol. XVIII, Pp. 7 fl
11. Indian Antiquary Vol. XI, P. 127.

ಆ ಗದ್ಯಭಾಗವಿದು: "ರಾಮೇಶ್ವರ ಎಂಬ ತೀರ್ಥದ ಮೊದಲೊಳ್ ಮೆಪ್ಪಿಕಿ ಪೊರದ ಪಂದಿಗಳ ನಿಜಿಯಲ್ ಬಂದಲ್ಲಿ" ಇದರ ಸರಿಯಾದ ಅರ್ಥವಿದು: "ಆ ಹಂದಿಗಳು ಚೆನ್ನಾಗಿ ಮೇಯಿಸಲ್ಪಟ್ಟು ಬೇಟೆಯು ನಿಷಿದ್ಧ ಸ್ಥಳ (Sanctuary) ವಾದ ರಾಮೇಶ್ವರ ತೀರ್ಥದಲ್ಲಿ ಮುಂಬರುವ ಬೇಟೆಯಾಟದ ಉದ್ದೇಶಕ್ಕಾಗಿ ಮೀಸಲಾಗಿಡಲ್ಪಡುತ್ತಿದ್ದವು." ಹೋಲಿಸಿ: Epigraphia Indica, Vol. XXXIII Pp. 328–9.

12. M.A.R. 1947 P. 21.
13. S.I I. Vol. XI, Pt. I, No. 9.
14. Rashtrakutas and their times, P. 215-6.
15. ಎಂ.ವಿ. ಕೃಷ್ಣರಾವ್ : Gangas of Talkad P. 155-6
16. Mysore Arch. Report 1931, P. 172.
17. ಅಲ್ಟೆಕರ್ ; Rashtrakutas and their times. Op. Cit, P. 228, 233-4.
18. A.R.S.I.E., B.K. No. 55 of 1926-27.

ಮೂಲಲೇಖಕರು : ಡಾ|| ಬಿ. ಆರ್. ಗೋಪಾಲ್
ಅನುವಾದಕರು : ಎಸ್. ಆರ್. ಮಳಗಿ

# ಕನ್ನಡ (ಆದಿಕಾಲ)

ಕನ್ನಡವು ತಮಿಳಿನಂತೆಯೇ ಭಾರತದಲ್ಲಿ ಬಳಕೆಯಿರುವ ಅತ್ಯಂತ ಪ್ರಾಚೀನಭಾಷೆಗಳಲ್ಲಿ ಒಂದು ; ಕನಿಷ್ಠಪಕ್ಷ ಕ್ರಿ. ಶ. 9ನೆಯ ಶತಮಾನದಷ್ಟು ಹಿಂದಿನಿಂದಲೂ ಅವ್ಯಾಹತವಾದ ಸಾಹಿತ್ಯದ ಇತಿಹಾಸವನ್ನು ಪಡೆದಿದೆ. ಕನ್ನಡದ ಕೆಲವು ಪ್ರಾಚೀನ ಕೃತಿಗಳನ್ನು ಕುರಿತು ನಂಬಲರ್ಹವಾದ ಉಲ್ಲೇಖಗಳಿವೆಯಾದರೂ ಅವು ಇದುವರೆಗೆ ನಮಗೆ ದೊರಕಿಲ್ಲ ; ಇನ್ನು ಮೇಲೆ ಹುಡುಕಿ ಕಾಣಬೇಕಾಗಿದೆ.

ಕನ್ನಡದಲ್ಲಿ ನಮಗೆ ಸಿಕ್ಕಿರುವ ಅತ್ಯಂತ ಪ್ರಾಚೀನಕೃತಿ **ಕವಿರಾಜಮಾರ್ಗ.** ಅದಕ್ಕಿಂತ ಹಿಂದಿನ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುರಿತ ಅಲ್ಪಸ್ವಲ್ಪ ಸಂಗತಿಗಳನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನ ಮಾಡಲಾಗಿದೆ.

ಕರ್ಣಾಟಕವು ಒಂದು ಕಾಲದಲ್ಲಿ ಉತ್ತರದ ಗೋದಾವರಿಯಿಂದ ದಕ್ಷಿಣದ ಕಾವೇರಿಯ ವರೆಗೂ, ಪಶ್ಚಿಮದಲ್ಲಿ ಅರಬೀಸಮುದ್ರದಿಂದ ಪೂರ್ವದಲ್ಲಿ ಮದರಾಸು ಮತ್ತು ಆಂಧ್ರಪ್ರದೇಶಗಳ ಈಗಿನ ಎಲ್ಲೆಕಟ್ಟಿನ ವರೆಗೂ ವ್ಯಾಪಿಸಿ, ವೈವಿಧ್ಯಪೂರ್ಣ ಹಾಗೂ ಶ್ರೀಮಂತ ಸಂಸ್ಕೃತಿ ಮತ್ತು ಜ್ಞಾನಕ್ಕೆ ಮೂಲಸ್ಥಾನವಾಗಿತ್ತು. ಅನೇಕ ಧಾರ್ಮಿಕ ಪಂಥಗಳು ಇಲ್ಲಿ ಪರಸ್ಪರ ಸಂಧಿಸಿ ಆಶ್ರಯ ಪಡೆದವು ; ವೈವಿಧ್ಯಪೂರ್ಣ ಬೆಳವಣಿಗೆಯಿಂದ ಕೂಡಿದ ಆ ಅನೇಕ ಧಾರ್ಮಿಕ ಪಂಥಗಳ ಪ್ರಭಾವಗಳು ಒಂದುಗೂಡಿ, ನಿಜವಾಗಿಯೂ 'ವಿಶ್ವಸಂಸ್ಕೃತಿ' ಎನ್ನಬಹುದಾದ ಒಂದು ಅಪೂರ್ವ ಸಂಸ್ಕೃತಿಯ ಉದಯಕ್ಕೆ ಕಾರಣವಾಯಿತು. ಈ ಬಗೆಯ ಒಕ್ಕೂಟದಿಂದ ಉದಾರ ದೃಷ್ಟಿ, ಸಾಮರಸ್ಯ ಮತ್ತು ಸಹಿಷ್ಣುತೆಗಳಿಂದ ಕೂಡಿದ ಸಾಹಿತ್ಯರಚನೆ ಆರಂಭವಾಗಿ ಬೆಳೆಯುತ್ತ ಬಂತು. ಈ ಸಾಹಿತ್ಯ ಮೊದಮೊದಲು ಕಿರುಝರಿಗಳಂತೆ, ಆ ಮೇಲೆ ಕ್ರಮಕ್ರಮವಾಗಿ ತುಂಬುಹೊಳೆಯಂತೆ ಪ್ರವಾಹವಾಗಿ ಹರಿಯತೊಡಗಿತು.

ಕನ್ನಡ ಭಾಷಾಸಾಹಿತ್ಯಗಳು ಬಹು ಪ್ರಾಚೀನವಾದವು. ಅದರ ಪ್ರಾಚೀನತೆ ಸಂಸ್ಕೃತ ಪ್ರಾಕೃತಗಳಿಗೆ ಮಾತ್ರ, (ತಮಿಳಿಗೂ ಎಂದರೂ ಸಲ್ಲುತ್ತದೆ) ಎರಡನೆಯದಾಗಿದೆ. ಕನ್ನಡನಾಡು ಮತ್ತು ಸಂಸ್ಕೃತಿಗಳನ್ನು ಕುರಿತ ಹಳೆಯ ಉಲ್ಲೇಖಗಳನ್ನು ಬೌದ್ಧಧರ್ಮದ ದಾಖಲಾತಿಗಳಲ್ಲೂ ತಮಿಳಿನ ಮಹಾಕಾವ್ಯಗಳಲ್ಲೂ ಕಾಣಬಹುದಾಗಿದೆ. ಕ್ರಿ.ಪೂ. 3ನೆಯ ಶತಮಾನದಲ್ಲಿ ಮೌರ್ಯ ಚಕ್ರವರ್ತಿ ಅಶೋಕನು ವನವಾಸಕ್ಕೆ (ಎಂದರೆ ಬನವಾಸಿಗೆ) ರಖ್ಖಿತನೆಂಬ ಬೌದ್ಧಭಿಕ್ಷುವನ್ನೂ, ಮಹಿಷಮಂಡಲಕ್ಕೆ (ಎಂದರೆ ಮೈಸೂರಿಗೆ) ಮಹಾದೇವನೆಂಬ ಭಿಕ್ಷುವನ್ನೂ ಧರ್ಮ ಪ್ರಚಾರಕ್ಕಾಗಿ ಕಳಿಸಿಕೊಟ್ಟನೆಂದು **ಮಹಾವಂಶ**ದಿಂದ ಗೊತ್ತಾಗುತ್ತದೆ[1]. ಕ್ರಿ.ಪೂ. 205ರಲ್ಲಿ 'ಏಲಾಳ' ಎಂಬ ಚೋಳದೊರೆ ಸಿಂಹಳವನ್ನು ಆಕ್ರಮಿಸಿದಾಗ ಮೈಸೂರಿನ ಸೈನ್ಯದಿಂದ ನೆರವು ಪಡೆದಂತೆ ಸಿಂಹಳದ ಚಾರಿತ್ರಿಕ ಲೇಖನಗಳಿಂದ ತಿಳಿಯಬರುತ್ತದೆ, ಇಳಂಗೋ ಅಡಿಗಳ (ಸು. ಕ್ರಿ.ಶ. 465) **ಶಿಲಪ್ಪದಿಕಾರಮ್** ಮಹಾಕಾವ್ಯದಲ್ಲಿ ಕ್ರಿ.ಶ. 2ನೆಯ ಶತಮಾನದಲ್ಲಿದ್ದ ಚೇರ ರಾಜ ಶೆಂಗುಟ್ಟವನು ಕನ್ನಡಿಗರ ನೃತ್ಯವೊಂದನ್ನು ವೀಕ್ಷಿಸಿದನೆಂಬ ಪ್ರಸ್ತಾಪ ಬರುತ್ತದೆ[2]. ಕ್ರಿ.ಶ, 2ನೆಯ ಶತಮಾನದಲ್ಲಿದ್ದ ಅವ್ವೈಯಾರ್ ಹೆಸರಿಗೆ ಆರೋಪಿಸಲಾದ ಮತ್ತು **ತೊಲ್‌ಕಾಪ್ಪಿಯಮ್** ಗ್ರಂಥದ (ಇದು ಈಗ ಇರುವ ತಮಿಳು ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದದ್ದು) ವ್ಯಾಖ್ಯಾನವೊಂದರಲ್ಲಿ ಉದ್ಧೃತವಾದ ಹೇಳಿಕೆಯೊಂದರಲ್ಲಿ ಕನ್ನಡಿಗರನ್ನು ಕುರಿತ ಅನುದಾರವಾದ ಒಂದು ಪ್ರಸ್ತಾಪವಿದೆ. ಆ ಪದ್ಯದಲ್ಲಿ ಹೀಗೆ ಹೇಳಿದೆ :—"ಬುದ್ಧಿವಂತರು ಈ ಕೆಳಗಿನ ಆರು ಕಡೆ ಸುಳಿಯುವುದಿಲ್ಲ : ವಡುಗರ್

(ತೆಲುಗರು), ಅರುವಲರ್ (ಒಂದು ಬಗೆಯ ತಮಿಳು ಮೂಲನಿವಾಸಿಗಳು), ಕರುನಾಟರ್ (ಕನ್ನಡಿಗರು), ಶ್ಮಶಾನ, ಪಿಶಾಚಿಗಳು ಮತ್ತು ಎಮ್ಮೆಕೋಣಗಳು"[3]. ಪ್ರಥಮ ತೀರ್ಥಂಕರ ಋಷಭದೇವನ ಪುತ್ರಿ ಬ್ರಾಹ್ಮಿಯಿಂದ ಕನ್ನಡ ಲಿಪಿ ಕಂಡುಹಿಡಿಯಲ್ಪಟ್ಟಿತೆಂದು ಹೇಳುತ್ತಾರೆ[4]. ಈ ಬಗೆಯ ಪೌರಾಣಿಕ ದಂತಕಥೆಗಳಿಗೆ ಐತಿಹಾಸಿಕ ಸತ್ಯವೆಂಬ ಮಹತ್ವ ಕೊಡಬೇಕಾಗಿಲ್ಲವಾದರೂ ಕನ್ನಡಕ್ಕೆ ಬಹು ಪ್ರಾಚೀನವಾದ ಪರಂಪರೆಯುಂಟೆಂಬುದು ಇದರಿಂದ ಸೂಚಿತವಾಗುತ್ತದೆ.

ಕನ್ನಡಭಾಷೆ ಮತ್ತು ಸಾಹಿತ್ಯಗಳ ಐತಿಹಾಸಿಕ ಬೆಳವಣಿಗೆಯನ್ನು ಪ್ರಾಚೀನಕಾಲದಿಂದ ಪ್ರಾರಂಭಿಸಿ ಅಭ್ಯಸಿಸುವುದು ಬಹು ಕಷ್ಟಕರವಾದ ಕೆಲಸ. ಉಪಲಬ್ಧವಾಗಿರುವ ಪ್ರಾಚೀನ ಕೃತಿಗಳನ್ನು ಗಮನಿಸಿದಾಗ, ಅಲ್ಲಿ ಕಂಡುಬರುವ ಬೆಳವಣಿಗೆಯ ಮತ್ತು ಪರಿಪೂರ್ಣತೆಯ ಮಟ್ಟವು, ಕನ್ನಡಭಾಷೆಯು ನಿಸ್ಸಂದೇಹವಾಗಿ ಕ್ರಿಸ್ತಶಕೆಯ ಆರಂಭಕಾಲದಿಂದಲೂ ಪ್ರಚಾರದಲ್ಲಿದ್ದಿರಬೇಕೆನ್ನಲು ಬಲವಾದ ಆಧಾರವಾಗಿ ಪರಿಣಮಿಸುತ್ತದೆ; ಮತ್ತು ಅಂಥ ಪ್ರೌಢಾವಸ್ಥೆಯನ್ನು ಮುಟ್ಟುವುದು ಕೇವಲ ಎರಡು ಮೂರು ಶತಮಾನಗಳಷ್ಟು ಅಲ್ಪಕಾಲದಲ್ಲಿಯೇ ಸಾಧ್ಯವಾಗಲಾರದೆಂಬುದು ಸುಸ್ಪಷ್ಟ. ಕ್ರಿಸ್ತಶಕ ಒಂಬತ್ತನೆಯ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ **ಕವಿರಾಜಮಾರ್ಗ** (ಕವಿಗಳ ರಾಜಮಾರ್ಗ)ವು ಈಗ ಸಿಕ್ಕಿರುವ ಅತ್ಯಂತ ಪ್ರಾಚೀನ ಸಾಹಿತ್ಯಕೃತಿಯೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪಿದ್ದಾರೆ[5]. ಇದು ಚಿಕ್ಕದಾದರೂ ಪಾಂಡಿತ್ಯಪೂರ್ಣವಾದ ಕೃತಿ ; ಸಾಹಿತ್ಯಮೀಮಾಂಸೆಯ ಮೂಲಾಂಶಗಳನ್ನು ವಿವರಿಸುವ ಪ್ರೌಢಕೃತಿ. ಈ ಕೃತಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಈ ಬಗೆಯ ಸಾಹಿತ್ಯ ಮಾರ್ಗದರ್ಶಕ ಕೃತಿಯೊಂದರ ಅಗತ್ಯವುಂಟಾದದ್ದೂ ಆ ಕಾಲಕ್ಕೆ ಮುಂಚೆ ಇದ್ದ ಕನ್ನಡಸಾಹಿತ್ಯದ ದಿಗ್ದಂತಿಗಳನ್ನು ಕುರಿತು ಅದರಲ್ಲಿ ಪ್ರಸ್ತಾವಿಸಿರುವುದೂ ಕನ್ನಡಭಾಷೆ ಅಷ್ಟು ಹೊತ್ತಿಗಾಗಲೇ ಸಾಕಷ್ಟು ಬೆಳೆದಿತ್ತೆಂಬುದನ್ನು ಚರ್ಚೆಗೆ ಆಸ್ಪದವಿಲ್ಲದಂತೆ ಸಿದ್ಧಪಡಿಸುತ್ತದೆ. ಆದರೆ **ಕವಿರಾಜಮಾರ್ಗ**ದಲ್ಲಿ ಉಲ್ಲೇಖಿಸಲ್ಪಟ್ಟ ಯಾರೊಬ್ಬರ ಕೃತಿಗಳೂ ದುರದೃಷ್ಟವಶದಿಂದ ದೊರಕದೆ ಇರುವುದು ನಮ್ಮ ಅಭ್ಯಾಸಕ್ಕೆ ಬಹು ದೊಡ್ಡ ಅಡ್ಡಿಯಾಗಿ ಪರಿಣಮಿಸಿದೆ.

ಆದುದರಿಂದ, ಈ ಸಂಬಂಧದಲ್ಲಿ ಅವಶ್ಯವಾದ ಸಾಮಗ್ರಿಗಾಗಿ ಸ್ವಾಭಾವಿಕವಾಗಿಯೇ ಬೇರೆ ವಿಷಯಮೂಲಗಳತ್ತ ದೃಷ್ಟಿಹರಿಸಬೇಕಾಗುತ್ತದೆ. ಅಂಥ ಸಂಶೋಧನೆಗಳ ಫಲವಾಗಿ ತಿಳಿಯಬಂದಿರುವ ಆಧಾರಾಂಶಗಳ ಮೂಲವನ್ನು ನಾಲ್ಕು ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದು. 1) ವಿದೇಶಗಳಲ್ಲಿ ಮತ್ತು ಅನ್ಯಭಾಷೆಗಳಲ್ಲಿ ಪತ್ತೆಹಚ್ಚಲಾದ ಆಧಾರಗಳು. 2) ಶಾಸನಾಧಾರಗಳು. 3) **ಕವಿರಾಜಮಾರ್ಗ**ದಿಂದ ಸಂಗ್ರಹಿಸಿದ ಸಂಗತಿ, 4) ಇನ್ನಿತರ ಕೃತಿಗಳಲ್ಲಿ ದೊರಕುವ ಉಲ್ಲೇಖಗಳು.

ವೇದಕಾಲದಲ್ಲಿಯೂ ಕನ್ನಡಭಾಷೆಯಿತ್ತೆಂದು ಸ್ಥಾಪಿಸಲು ಹಿಂದೆ ಪ್ರಯತ್ನಗಳು ನಡೆದಿದ್ದವು. ರೆ॥ ಹೆರಾಸರಂಥ ಘನ ವಿದ್ವಾಂಸರು ವೇದಪೂರ್ವಕಾಲದ (?) ಮೊಹೆಂಜೊದಾರೊ ಮತ್ತು ಹರಪ್ಪ ಸಂಸ್ಕೃತಿಗಳಿಗೆ ಸೇರಿದ ಮುದ್ರಿಕೆಗಳಲ್ಲಿ ಕನ್ನಡ ಜನಗಳ ಉಲ್ಲೇಖವಿದೆಯೆಂದು ಭಾವಿಸಿದ್ದರು. ಆದರೆ ಇವೆಲ್ಲಾ ಇನ್ನೂ ಊಹಾ ಪ್ರಪಂಚದಲ್ಲೇ ಇರುವ ವಾದಗಳು. ಈಜಿಪ್ಟಿನ ಆಕ್ಸಿರಿಂಖಸಿನಲ್ಲಿ ದೊರೆತ ಗ್ರೀಕ್ ಪ್ರಹಸನವೊಂದರಲ್ಲಿ ಸಿಕ್ಕುವ ಸಾಮಗ್ರಿಯೇ ಕನ್ನಡದ ಆರಂಭಕ್ಕೆ ಸಂಬಂಧಿಸಿದ ಮೊತ್ತಮೊದಲನೆಯ ದೃಢವಾದ ಆಧಾರವೆನ್ನುತ್ತಾರೆ. ಭಾರತದ ಕರಾವಳಿ ಪ್ರದೇಶಕ್ಕೆ ಓಡಿಸಿಕೊಂಡು ಬಂದ ಗ್ರೀಕ್ ಹುಡುಗಿಯೊಬ್ಬಳ ಕತೆಯನ್ನು ಕುರಿತದ್ದು ಈ ಪ್ರಹಸನ. ಈ ಕತೆ ನಡೆಯುವ ಸ್ಥಳ ಮೈಸೂರು ಕರಾವಳಿ ಪ್ರದೇಶದ ಉಡುಪಿಯ ಹತ್ತಿರದ ಮಲ್ಪೆ. ಈ ಪ್ರಹಸನ ಕ್ರಿ.ಶ. 2ನೆಯ ಶತಮಾನಕ್ಕೆ ಸೇರಿದ್ದೆಂದು ನಿರ್ಧರಿಸಲಾಗಿದೆ. ಈ ಪ್ರಹಸನದ ಸಾಕಷ್ಟು ಭಾಗದ ಸಂಭಾಷಣೆ ಗ್ರೀಕ್ ಭಾಷೆಗಿಂತ ಬೇರೆಯಾದ ಮತ್ತೊಂದು ಭಾಷೆಯಲ್ಲಿದೆ. ಈ ಭಾಷೆ ಕನ್ನಡವೆಂದು ದಿವಂಗತ ಡಾ॥ ಹುಲ್ಷ್ ನಿರ್ಧರಿಸಿದರು[6].

ಈ ನಿಲುವನ್ನೇ ಸಮರ್ಥಿಸಿದವರು ದಿವಂಗತ ಶ್ರೀ ಎಂ. ಗೋವಿಂದ ಪೈಗಳು. ಅವರು ಗ್ರೀಕ್ ಪ್ರಹಸನದಲ್ಲಿ ಬರುವ ಆ ಗ್ರೀಕೇತರ ಭಾಷೆಯನ್ನು ಆಳವಾಗಿ ಅಭ್ಯಾಸಮಾಡಿ, ಅದು ಕನ್ನಡವೇ ಎಂದೂ ಬೇರೆ ಯಾವ ಭಾಷೆಯಾದರೂ ಆಗಿರಲು ಸಾಧ್ಯವಿಲ್ಲವೆಂದೂ ಹೆಚ್ಚುಕಡಮೆ ಕೊನೆಯ ತೀರ್ಮಾನವಾಗಿಯೇ ಸಿದ್ಧಮಾಡಿದರು[7]. ಈ ವಿಷಯದಲ್ಲಿ ಆಕ್ಷೇಪಣೆಯೆತ್ತುವ ಬೇರೆ ಕೆಲವು ಸೂಚನೆಗಳು ತಲೆದೋರುತ್ತಿದ್ದವಾದರೂ, ಕ್ರಮೇಣ ಅಭಿಪ್ರಾಯ ಮಾರ್ಪಡುತ್ತ ಬಂದು, 'ಇಲ್ಲಿ ಚರ್ಚೆಗೆ ವಿಷಯವಾಗಿರುವ ಭಾಷೆ ಕನ್ನಡವಾಗಿರುವುದು ಅಸಂಭವವೇನಲ್ಲ' ಎಂಬ ಅಭಿಪ್ರಾಯಕ್ಕೆ ಹೆಚ್ಚು ಹೆಚ್ಚು ಹತ್ತಿರವಾಗುತ್ತ ಬಂತು. ಈ ಆಧಾರದ ಮೇಲೆ, ದಿವಂಗತ ಡಾ॥ ಎಲ್. ಡಿ. ಸ್ವಾಮಿಕಣ್ಣು ಪಿಳ್ಳೆಯವರು ದಿಟ್ಟತನದಿಂದ ಕನ್ನಡವು ತಮಿಳಿನ ಹಿರಿಯ ಸೋದರಿಯಾಗಿದ್ದಿರಬೇಕೆಂದು ಸಲಹೆಯನ್ನು ಮುಂದಿಟ್ಟರು[8]. ಕ್ರಿಸ್ತಶಕ ಒಂದು ಅಥವಾ ಎರಡನೆಯ ಶತಮಾನಕ್ಕೆ ಸೇರಿದ ಪ್ರಾಕೃತ ಕವನ ಸಂಕಲನ 'ಗಾಥಾಸಪ್ತಶತಿ'ಯಲ್ಲಿ ಪ್ರಯೋಗವಾಗಿರುವ ಅನೇಕ ಶಬ್ದಗಳ ಮೂಲ ಯಾವುದೆಂಬುದರಲ್ಲಿ ಸಂದೇಹಕ್ಕಾಸ್ಪದವಿದೆ; ಉದಾಹರಣೆಗೆ: ತುಪ್ಪ, ಪೊಟ್ಟೆ (ಹೊಟ್ಟೆ), ತೀರ್ (ಸಾಧ್ಯಮಾಡು) ಮುಂತಾದವುಗಳು. ಇವು ಪ್ರಾಕೃತದಲ್ಲಿ ಯಾವ ಅರ್ಥದಲ್ಲಿ ಪ್ರಯೋಗವಾಗಿವೆಯೋ ಅದೇ ಅರ್ಥದಲ್ಲಿ ಕನ್ನಡ ಪ್ರೌಢಕಾವ್ಯಗಳಲ್ಲಿ ಪ್ರಯೋಗಿಸಲ್ಪಟ್ಟಿವೆ. ಈ ಪದಗಳು ಕನ್ನಡದಿಂದ ಪ್ರಾಕೃತಕ್ಕೆ ಸ್ವೀಕೃತ ಪದಗಳಾಗಿ ಹೋಗಿರಬಹುದೆಂಬ ಊಹೆಯನ್ನು ಸಂದೇಹಿಸಬಹುದಾದರೂ ಪೂರ್ತಿಯಾಗಿ ನಿರಾಕರಿಸುವಂತಿಲ್ಲ. ಕ್ರಿಸ್ತಶಕದ ಆರಂಭಕಾಲದಲ್ಲಿ ಪ್ರಾಕೃತಭಾಷೆ ಕರ್ಣಾಟಕದಲ್ಲೆಲ್ಲ ಹರಡಿ, ವಿಶೇಷವಾಗಿ ವ್ಯಾಪಿಸಿದುದರ ಫಲವಾಗಿ ಪರಸ್ಪರ ಪ್ರತಿಕ್ರಿಯೆ ನಡೆದು, ಕೊಳುಕೊಡೆಯೇರ್ಪಟ್ಟು ಅಂದಿನ ಪ್ರಾದೇಶಿಕ ಭಾಷೆಯಾದ ಕನ್ನಡದ ಗ್ರಾಂಥಿಕ ಅಥವಾ ಆಡುಮಾತಿನಲ್ಲಿದ್ದ ಶಬ್ದಗಳು ಅತಿಥಿ ಭಾಷೆಯಲ್ಲಿ ಸೇರಿಹೋಗಿದ್ದಿರಬೇಕು. ಹಾಗೆಯೇ ಪ್ರಾಕೃತದ ಶಬ್ದಗಳು ಕನ್ನಡದಲ್ಲಿ ಸೇರಿಹೋಗಿರಬೇಕು.

ಕನ್ನಡದ ಪ್ರಾಚೀನತೆಗೆ ಇವೆಲ್ಲವುಗಳಿಗಿಂತ ಬಲವಾದ ನಂಬಲರ್ಹವಾದ ಆಧಾರವೆಂದರೆ, ಕದಂಬ ಕಾಕುತ್ಸ್ಥವರ್ಮನ ಹಲ್ಮಿಡಿಶಾಸನ; ಇದರ ಕಾಲ ಸುಮಾರು ಕ್ರಿ.ಶ. 450 ಎಂದು ಹೇಳಲಾಗಿದೆ. ಪ್ರಾಚೀನ ಕನ್ನಡದ ವಿಶಿಷ್ಟ ರೂಪಕ್ಕೆ ಸಾಕ್ಷಿಯಂತಿರುವ ಈ ಶಾಸನವು ಭಾಷೆಯ ಹಿಂದಿನ ಸ್ವರೂಪದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಆಗ ಕನ್ನಡದ ಮೇಲಿದ್ದ ಸಂಸ್ಕೃತ ಭಾಷೆಯ ಆಳವಾದ ಪ್ರಭಾವವನ್ನು ಅಲ್ಲಿ ಕಾಣಬಹುದು. ಈ ಶಾಸನದ ಭಾಷೆಯ ವಿಷಯವಾಗಿ ಹಿಂದಿನ ಅಧ್ಯಾಯವೊಂದರಲ್ಲಿ **(ಭಾಷೆಗಳು, ಪುಟ91,92ರಲ್ಲಿ)** ಚರ್ಚಿಸಲಾಗಿದೆ.

ಹಲ್ಮಿಡಿ ಶಾಸನದಂತೆಯೇ ಎಲ್ಲಾ ಹಳೆಯ ಶಾಸನಗಳೂ ಭಾಷಾ ಬೆಳವಣಿಗೆಯ ಅಭ್ಯಾಸದ ದೃಷ್ಟಿಯಿಂದ ಮುಖ್ಯವಾಗಿವೆ. ಅವುಗಳಲ್ಲಿ ಕೆಲವು ಶಾಸನಗಳು ಉತ್ತಮ ಕಾವ್ಯಾಂಶಗಳನ್ನೂ ಒಳಗೊಂಡಿವೆ. ತಮಟಕಲ್ಲಿನ ಶಾಸನ (ಕ್ರಿ.ಶ. 500) ಮೇಲಿನ ಮಾತಿಗೆ ಉದಾಹರಣೆಯಾಗಿದೆ. ಅದರಲ್ಲಿ ಗುಣಮಧುರ ಎಂಬಾತನ ಬಹುಮುಖ್ಯವಾದ ಗುಣಗಳನ್ನು ಈ ಮಾತುಗಳಲ್ಲಿ ಅತಿ ಸುಂದರವಾಗಿ ಚಿತ್ರಿಸಲಾಗಿದೆ:

ಫಣಿಮಣಿ ಅನ್ತು ಭೋಗಿಫಣದುಳ್‌ಮಣಿ ವಿಲ್ಮನದೋನ್
ರಣಮುಖದುಳ್ಳೆ ಕೋಲನೆರಿಯಕ್ಕುರ್ವಮನಿನ್ದ್ಯಗುಣನ್
ಪ್ರಣಯಿಜನಕ್ಕೆ ಕಾಮನಸಿತೋತ್ಪಲ ವರ್ಣ್ಣನವನ್
ಗುಣಮಧುರಾಙ್ಕದಿವ್ಯಪುರುಷನ್ ಪುರುಷಪ್ರವರನ್ ॥9.

"ಸರ್ಪರಾಜನಂತೆ ಭೋಗಿ, ನಾಗಮಣಿಯನ್ನು ಧರಿಸಿದವನು; ಧನುರ್ವಿದ್ಯೆಯಲ್ಲಿ ಆಸಕ್ತಿಯುಳ್ಳವನು; ಸಮರಮುಖದಲ್ಲಿ ಅವನ ಪರಾಕ್ರಮವೇ ಮೇಲುಗೈ; ಅನಿಂದ್ಯಗುಣವುಳ್ಳವನು; ಪ್ರಣಯಿ ಜನರಿಗೆ ಕಾಮದೇವ; ಉತ್ಪಲವರ್ಣದವನು—ಹೀಗೆ ಗುಣಮಧುರನು ದಿವ್ಯಪುರುಷ; ಪುರುಷರಲ್ಲಿ ಶ್ರೇಷ್ಠ"[10].

ಶ್ರವಣಬೆಳಗೊಳದ 88 ನೆಯ ಶಾಸನ (ಸುಮಾರು ಕ್ರಿ.ಶ, 700) ಈ ಬಗೆಯ ಕಾವ್ಯಗುಣದಿಂದ ಕೂಡಿದ ಮತ್ತೊಂದು ರಚನೆ. ನಂದಿಸೇನಮುನಿ ಜೀವನದ ನಶ್ವರತೆಯನ್ನು ಮನಗಂಡು ಸಾವೊಂದೇ ಪರಿಪೂರ್ಣವೆಂದು ನಂಬಿ ಶ್ರದ್ಧೆಯಿಂದ ಅದನ್ನು ಬಯಸಿ ಉಪವಾಸ (ಸಲ್ಲೇಖನ)ದ ಮೂಲಕ ದೇಹತ್ಯಾಗ ಮಾಡಿದ ಘಟನೆಯನ್ನು ಈ ಶಾಸನ ಬಣ್ಣಿಸುತ್ತದೆ. ಆ ಪದ್ಯ ಹೀಗಿದೆ :

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೊಲ್ ಮಂಜುವೋಲ್ ತೋಱಿ ಬೇಗಂ
ಪರಿಗುಂ ಶ್ರೀ ರೂಪ ಲೀಲಾ ಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗ್ಗಂ
ಪರಮಾರ್ಥಂ ಮೆಚ್ಚೆನಾನೀ ಧರಣಿಯುಳಿರವಾನೆಂದು ಸನ್ಯಾಸನಂ ಗೆ
ಯ್ದುರುಸತ್ತ್ವನ್ ನಂದಿಸೇನ ಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್ ॥ 11

"ಶ್ರೀ ರೂಪಲೀಲಾಧನವಿಭವಗಳು ಕಾಮನಬಿಲ್ಲಿನಂತೆ, ಮಿಂಚಿನಂತೆ, ಮಂಜಿನಂತೆ ತೋರಿ ಬೇಗ ಮರೆಯಾಗುತ್ತವೆ. ಯಾರಿಗೂ ಇವು ಶಾಶ್ವತವಾಗಿ ನಿಲ್ಲವು. ಇದೇ ಪರಮ ಸತ್ಯ. ಆದುದರಿಂದ ಈ ಭೂಮಿಯಲ್ಲಿರುವುದನ್ನು ನಾನು ಮೆಚ್ಚೆನು." ಎಂದು ಹೇಳಿ, ದೃಢಮನಸ್ಸಿನ ನಂದಿಸೇನ ಮುನಿಶ್ರೇಷ್ಠನು ಸನ್ಯಾಸವನ್ನು ಸ್ವೀಕರಿಸಿ ದೇವಲೋಕಕ್ಕೆ ಸಂದನು[12].

ಕಪ್ಪೆ ಅರಭಟ್ಟನ ಅಡಗಿಸಲಾಗದ ಪರಾಕ್ರಮವನ್ನು ವರ್ಣಿಸುವ ತಟ್ಟುಕೋಟಿ ಶಾಸನವು (ಸುಮಾರು ಕ್ರಿ.ಶ. 700)[13] ಮನೋಹರವಾದ ಕವಿತೆಗೆ ಮತ್ತೊಂದು ಉದಾಹರಣೆಯೆಂದು ಎತ್ತಿ ಹೇಳಬಹುದು.

ಮೇಲೆ ಹೇಳಿದ ಕಾಲಾವಧಿಯಲ್ಲಿ ಕನ್ನಡ ಭಾಷೆಯ ಸ್ಥಿತಿ ಹೇಗಿತ್ತೆಂಬ ವಿಚಾರದಲ್ಲಿ '**ಕವಿರಾಜಮಾರ್ಗ**'ವು ಮೌನವನ್ನೇನೂ ಅವಲಂಬಿಸಿಲ್ಲ. 'ಹಳಗನ್ನಡ'ವನ್ನು ಕುರಿತು ಪ್ರಸ್ತಾವಿಸಿರುವುದರ ಜೊತೆಗೆ, ಕನ್ನಡಿಗರ ಸಾಹಿತ್ಯಾಭಿರುಚಿಯನ್ನು ಮುಕ್ತಕಂಠದಿಂದ ಹೀಗೆ ಪ್ರಶಂಸಿಸಿದೆ : 'ಈ ನಾಡಿನ ಜನಗಳು ವಿಷಯಗಳನ್ನು ಚೆನ್ನಾಗಿ ಹೇಳುವುದರಲ್ಲಿಯೂ ಇತರರು ಹೇಳಿದ್ದನ್ನು ಒಡನೆಯೇ ತಿಳಿದುಕೊಳ್ಳುವುದರಲ್ಲಿಯೂ ಜಾಣರು, ಸಹಜವಾಗಿಯೇ ಚುರುಕುಬುದ್ಧಿಯುಳ್ಳವರು. ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡದಿದ್ದರೂ ಒಳ್ಳೆಯ ಸಾಹಿತ್ಯಾಭಿರುಚಿಯುಳ್ಳವರಾಗಿ, ಕಾವ್ಯಪ್ರಯೋಗದಲ್ಲಿ ಗಟ್ಟಿಗರಾಗಿದ್ದರು. ವಿದ್ವಾಂಸರು ಹಾಗಿರಲಿ, ಸಾಮಾನ್ಯ ಗಂಡು ಹೆಣ್ಣುಗಳು ಕೂಡ, ಮಾತೃಭಾಷೆಯನ್ನು ಬಳಸುವುದರಲ್ಲಿ ಬಹಳ ಚತುರರಾದವರು. ಚಿಕ್ಕಮಕ್ಕಳು ಮತ್ತು ಮೂಕರು ಸಹ ವಿವೇಕ ಹೇಳಬಲ್ಲವರಾಗಿದ್ದರು. ಬುದ್ಧಿ ಚಮತ್ಕಾರವಿಲ್ಲದ ದಡ್ಡರು ಕೂಡ ಸಾಹಿತ್ಯದ ದೋಷಗಳನ್ನು ಗುರುತಿಸಬಲ್ಲವರಾಗಿದ್ದು, ದೋಷಯುಕ್ತವಾದ ಕೃತಿಯನ್ನು ವಿದ್ವಾಂಸರಂತೆ ಸಾಧಾರಣವಾಗಿ ಖಂಡಿಸಲು ಶಕ್ತರಾಗಿರುವರು' (ಕವಿರಾಜಮಾರ್ಗ I, ಪದ್ಯಗಳು 38–40)[14]. ವಿಮಲೋದಯ, ನಾಗಾರ್ಜುನ, ಜಯಬಂಧು ಮತ್ತು ದುರ್ವಿನೀತರಂಥ ಹಲವರನ್ನು ಅಂದಿನ ಶ್ರೇಷ್ಠ ಗದ್ಯ ಲೇಖಕರೆಂದು ಹೆಸರಿಸಿರುವುದಲ್ಲದೆ, ಪ್ರಾಚೀನ ವಿದ್ವಾಂಸರಿಗೆ (ಚಿರಂತನಾಚಾರ್ಯರುಗಳಿಗೆ) ಅಲ್ಲಿ ಅಪಾರ ಗೌರವವನ್ನು ತೋರಿಸಲಾಗಿದೆ. ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ ಮತ್ತು ಲೋಕಪಾಲರು ಪ್ರತಿಭಾವಂತರಾದ ಆದಿಕವಿಗಳೆಂದು ಹೇಳಿರುವುದಲ್ಲದೆ ಅವರ ಗ್ರಂಥಗಳು ಆದಿಕಾಲದ ಕವಿತೆಯ ಮಾದರಿಗಳೆಂದು ಪ್ರಸ್ತಾವಿಸಲಾಗಿದೆ. ಆದರೆ, ಅಷ್ಟೊಂದು ಸಂಖ್ಯೆಯಲ್ಲಿ ಆದಿಕಾಲದ ಲೇಖಕರ ಹೆಸರುಗಳನ್ನು ಹೇಳಿದ್ದರೂ, ಅವರುಗಳಲ್ಲಿ ಯಾರೊಬ್ಬರ ಯಾವುದೊಂದು ಕೃತಿಯನ್ನೂ ನಿರ್ದಿಷ್ಟವಾಗಿ ಹೆಸರಿಸಿಲ್ಲವಾದ್ದರಿಂದ ಅವರೆಲ್ಲಾ 'ನಾಮಮಾತ್ರ' ಕವಿಗಳಾಗಿ ಉಳಿಯಬೇಕಾಗಿರುವುದು ವಿಷಾದಕರ ಸಂಗತಿಯಾಗಿದೆ. ಆ ಕವಿಗಳನ್ನು ಕುರಿತ ಆಧುನಿಕ ಸಂಶೋಧನೆಯು ಕೂಡ ಅವರು ಯಾರೆಂಬ ವ್ಯಕ್ತಿನಿರ್ದೇಶವನ್ನಾಗಲಿ, ಸಾಹಿತ್ಯಕ್ಕೆ ಅವರ ವೈಯಕ್ತಿಕ ಕೊಡುಗೆಯೇನೆಂಬುದನ್ನಾಗಲಿ ಸ್ಪಷ್ಟವಾಗಿ ನಿರ್ಧರಿಸುವುದಕ್ಕೆ ಇನ್ನೂ ಸಮರ್ಥವಾಗಿಲ್ಲ[15]. ಆದರೆ, ಗದ್ಯ ಲೇಖಕರಲ್ಲಿ ಒಬ್ಬನೆಂದು **ಕವಿರಾಜಮಾರ್ಗ**ವು ಹೆಸರಿಸಿರುವ ದುರ್ವಿನೀತನು, ನಲ್ಲಾಲ ತಾಮ್ರಶಾಸನದಲ್ಲಿ ಬಹುಮುಖಪ್ರತಿಭೆಯುಳ್ಳ:ಶ್ರೇಷ್ಠವ್ಯಕ್ತಿಯೆಂದು ವರ್ಣಿಸಲ್ಪಟ್ಟಿರುವ ಕ್ರಿ.ಶ. 7ನೆಯ ಶತಮಾನದ ಪ್ರಸಿದ್ಧ

ಗಂಗದೊರೆಯೇ ಆಗಿರುವ ಸಂಭವವಿದೆ. ಭಾರವಿ ವಿರಚಿತವಾದ ಸಂಸ್ಕೃತ ಮಹಾಕಾವ್ಯ **ಕಿರಾತಾರ್ಜುನೀಯದ** ಆರನೆಯ ಆಶ್ವಾಸಕ್ಕೆ ಈತ ವ್ಯಾಖ್ಯಾನವನ್ನು ರಚಿಸಿದನೆಂದು ಪ್ರತೀತಿಯಿದೆ. ದಂಡಿಯ '**ಅವಂತಿಸುಂದರೀ ಕಥಾ**' ಎಂಬ ಗ್ರಂಥದಲ್ಲಿ ಈ ಭಾರವಿಯು ದುರ್ವಿನೀತನ ಆಸ್ಥಾನಕವಿಯಾಗಿದ್ದನೆಂದು ಹೇಳಿದೆ. ದುರ್ವಿನೀತನ ಆ ವ್ಯಾಖ್ಯಾನವು ಕನ್ನಡದಲ್ಲೇ ಇದ್ದಿರಬೇಕೆಂದು ಶ್ರೀ ಬಿ.ಎಲ್. ರೈಸ್ ಅವರು ಖಚಿತವಾಗಿ ಅಭಿಪ್ರಾಯಪಟ್ಟಿದ್ದರು. ಆದರೂ, ಈ ಅಭಿಪ್ರಾಯಕ್ಕೆ ಇನ್ನೂ ಹೆಚ್ಚಿನ ರುಜುವಾತು ಅವಶ್ಯವಾಗಿದೆ. ದುರ್ವಿನೀತನು ಇನ್ನೂ ಎರಡು ಗ್ರಂಥಗಳನ್ನು ರಚಿಸಿದ್ದಂತೆ ತಿಳಿಯ ಬರುತ್ತದೆ ; ಒಂದು, ಗುಣಾಢ್ಯನ **ಬೃಹತ್ಕಥೆಯ** ಸಂಸ್ಕೃತ ಭಾಷಾಂತರ, (ಇದು ಈಗ ಉಪಲಬ್ಧವಾಗಿಲ್ಲ) ; ಮತ್ತೊಂದು **ಶಬ್ದಾವತಾರ** ಎಂಬ ವ್ಯಾಕರಣಗ್ರಂಥ ; ಇದನ್ನೂ ಸಂಸ್ಕೃತದಲ್ಲೆ ರಚಿಸಿದ್ದಿರಬಹುದು (ಇದು ಕೂಡ ಇನ್ನೂ ನಮಗೆ ದೊರಕಿಲ್ಲ). ಈ ಸಂದೇಹಗಳು ಉಳಿದಿರುವುವಾದರೂ. ದುರ್ವಿನೀತನು ಬಹುಶ್ರುತನಾದ ವಿದ್ವಾಂಸನೂ ಸಾಹಿತ್ಯಾಭಿಮಾನಿಯೂ ಸಾಹಿತ್ಯಪೋಷಕನೂ **ಕವಿರಾಜಮಾರ್ಗ**ದಲ್ಲಿ ಹೇಳಿರುವ ಪ್ರಕಾರ ಕನ್ನಡದ ಪ್ರಸಿದ್ಧ ಗದ್ಯಲೇಖಕನೂ ಆಗಿದ್ದನೆಂದು ಧಾರಾಳವಾಗಿ ನಂಬಬಹುದು.

**ಕವಿರಾಜಮಾರ್ಗ**ದಲ್ಲಿ ಉಲ್ಲೇಖಿಸಿರುವ ಮತ್ತೊಬ್ಬ ಕವಿ ಶ್ರೀ ವಿಜಯನು, ಕವಿರಾಜಮಾರ್ಗದ ಕರ್ತೃ ಅಥವಾ ಅದರ ರಚನೆಯಲ್ಲಿ ಸಹಾಯಕನಾಗಿದ್ದ ಅದೇ ಹೆಸರಿನ ಕವಿಯಾಗಿದ್ದಿರಬಹುದೆಂದು ಊಹಿಸ ಬಹುದಾಗಿದೆ. ಅದು ನಿಜವಾದರೆ, ಅವನು ರಾಷ್ಟ್ರಕೂಟವಂಶದ ಪಂಡಿತರಾಜನಾದ ಅಮೋಘವರ್ಷ ನೃಪತುಂಗನ ಆಸ್ಥಾನ ಕವಿಯೆಂದು ನಂಬಬಹುದು.

**ಕವಿರಾಜಮಾರ್ಗ**ದಲ್ಲಿ ಅನೇಕಪದ್ಯಗಳನ್ನು ಉದಾಹರಣೆಗಾಗಿ ಎತ್ತಿಹೇಳಿದೆ. ಅವುಗಳಲ್ಲಿ ಕೆಲವಾದರೂ ಗ್ರಂಥಕರ್ತನು ತಾನೇ ರಚಿಸಿದ ಸ್ವಂತ ಪದ್ಯಗಳಾಗಿರಬೇಕೆಂದು ಬಲವಾಗಿ ನಂಬಲಾಗಿದೆ. ಉಳಿದವು ಪ್ರಾಚೀನ ಕವಿಗಳ ಮತ್ತು ಸಮಕಾಲೀನ ಕವಿಗಳ ಗ್ರಂಥಗಳಿಂದ ಎತ್ತಿ ತೆಗೆದುಕೊಂಡ ಉದ್ಧರಣಗಳಾಗಿರಬೇಕು. ಅವುಗಳಲ್ಲಿ ರಾಮಾಯಣದ ಘಟನೆಗಳಿಗೆ ಸಂಬಂಧಿಸಿದ ಕೆಲವು ಪದ್ಯಗಳಿವೆ ; **ಮಹಾಭಾರತ**ಕ್ಕೆ ಸಂಬಂಧಿಸಿದ ಒಂದು ಪದ್ಯವಿದೆ. ಆ ಕಾಲಕ್ಕೆ ಮೊದಲೇ ರಾಮಾಯಣ ಮಹಾಭಾರತ ಮಹಾಕಾವ್ಯಗಳು (ಇವು ಜೈನಸಂಪ್ರದಾಯದವಾಗಿದ್ದರೂ ಇರಬಹುದು) ಕನ್ನಡದಲ್ಲಿ ರಚಿತವಾಗಿದ್ದಿರ ಬೇಕೆಂಬ ಊಹೆಗೆ ಇದು ಅವಕಾಶಮಾಡಿಕೊಡುತ್ತದೆ. ಕವಿರಾಜಮಾರ್ಗದಲ್ಲಿ ರಾಜನೀತಿಯನ್ನು ಕುರಿತ ಪದ್ಯಗಳೂ ಇವೆ, ಮತ್ತು ಉತ್ತಮ ಜೀವನಕ್ಕೆ ಮಾರ್ಗದರ್ಶಕವಾದವೂ ಕೆಲವಿವೆ. ಇವುಗಳಲ್ಲಿ ಕೆಲವನ್ನು ಗ್ರಂಥಕಾರನೇ ಸ್ವತಃ ರಚಿಸಿರುವ ಸಂಭವವಿದೆ.

**ಕವಿರಾಜಮಾರ್ಗ**ದಲ್ಲಿ ಚತ್ತಾಣ ಮತ್ತು ಬೆದಂಡೆ ಎಂಬ ಎರಡು ಕಾವ್ಯಪ್ರಕಾರಗಳ ಬಗ್ಗೆ ಪ್ರಸ್ತಾವಿಸಲಾಗಿದೆ. ಪ್ರಾಚೀನಕವಿಗಳು ಈ ಬಗೆಯ ಕಾವ್ಯಗಳನ್ನು ರಚಿಸುತ್ತಿದ್ದುದಾಗಿ ಹೇಳಿದೆ. ಕಂದ, ಅಕ್ಕರ, ಚೌಪದಿ, ಗೀತಿಕೆ ಮತ್ತು ತಿವದಿ ಛಂದಸ್ಸಿನ ಅನೇಕ ಪದ್ಯಗಳನ್ನೊಳಗೊಂಡ ರಚನೆ ಮೊದಲನೆಯದು (ಚತ್ತಾಣ) ಎಂದೂ ಕಂದ, ವೃತ್ತ ಮತ್ತು ಜಾತಿ ಛಂದಸ್ಸಿನ ಪದ್ಯಗಳಿಂದ ಕೂಡಿದ್ದು ಎರಡನೆಯದು (ಬೆದಂಡೆ) ಎಂದೂ ಅಲ್ಲಿ ವಿವರಿಸಲಾಗಿದೆ. ಈ ಲಕ್ಷಣನಿರೂಪಣೆಗಳು ಹೊರತು ಬೇರೆ ಯಾವ ಸಂಗತಿಯೂ ನಮಗೆ ಸಿಕ್ಕುವುದಿಲ್ಲ. ಆ ಬಗೆಯ ರಚನೆಗಳ ರೀತಿ ವಿಷಯಗಳ ಬಗೆಗಾಗಲಿ, ಅವುಗಳನ್ನು ರಚಿಸಿ ಪ್ರಸಿದ್ಧರಾಗಿದ್ದ ಕವಿಗಳ ವಿಷಯವಾಗಿಯಾಗಲಿ ಹೆಚ್ಚಿಗೆ ಏನೂ ತಿಳಿಯುಬರುವುದಿಲ್ಲ.

ಒಂಬತ್ತನೆಯ ಶತಮಾನಕ್ಕಿಂತ ಹಿಂದಿನ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಕುರಿತು **ಕವಿರಾಜಮಾರ್ಗ**ದಿಂದ ನಾವು ಸಂಗ್ರಹಿಸಬಹುದಾದ್ದು ಮೇಲೆ ಹೇಳಿರುವುದೆಷ್ಟೋ ಅಷ್ಟೇ ಸರಿ ಎಂದು ಹೇಳಬಹುದು. ಆದರೆ ಆ ಕಾಲದ ಬರವಣಿಗೆಯ ವೈವಿಧ್ಯದ ಮೇಲೆ ಬೆಳಕುಚೆಲ್ಲುವ ಬೇರೆ ಒಂದೆರಡು

ಮೂಲಗಳೂ ನಮಗೆ ದೊರಕಿವೆ. ಕನ್ನಡವ್ಯಾಕರಣವನ್ನು ಕುರಿತು ಸಂಸ್ಕೃತದಲ್ಲಿ **ಶಬ್ದಾನುಶಾಸನ**ವೆಂಬ ಉದ್ಗ್ರಂಥವನ್ನು ರಚಿಸಿರುವ 17ನೆಯ ಶತಮಾನದ ಭಟ್ಟಾಕಳಂಕನು ಆ ಗ್ರಂಥದಲ್ಲಿ **ಚೂಡಾಮಣಿ** ಎಂಬ ಕನ್ನಡದ ಒಂದು ಮಹಾಗ್ರಂಥವನ್ನು ಹೆಸರಿಸಿದ್ದಾನೆ. ಕನ್ನಡದ ಶ್ರೀಮಂತಿಕೆಯನ್ನು ಕುರಿತು ಹೇಳುತ್ತ ಪ್ರಾಸಂಗಿಕವಾಗಿ "ಕರ್ಣಾಟಕವು (ಕನ್ನಡ ಭಾಷೆಯು) ಶಾಸ್ತ್ರ ನಿರೂಪಣೆಯ ಉದ್ದೇಶಕ್ಕೆ ಬಳಸದ ಹೊರತಾಗಿಯೇನೂ ಇಲ್ಲ". ಏಕೆಂದರೆ, ಅದರಲ್ಲಿ, 96,000 ಶ್ಲೋಕ ಪರಿಮಿತಿಯ **ಚೂಡಾಮಣಿ**ಯೆಂಬ ಮಹಾಗ್ರಂಥವು **ತತ್ತ್ವಾರ್ಥಮಹಾಶಾಸ್ತ್ರ**ಕ್ಕೆ ವ್ಯಾಖ್ಯಾನರೂಪವಾಗಿ ರಚಿತವಾಗಿದೆ" ಎನ್ನುತ್ತಾನೆ. ದೇವಚಂದ್ರನ (ಕ್ರಿ.ಶ. 1838) **ರಾಜಾವಳಿ ಕಥೆ** ಮತ್ತು ಇಂದ್ರನಂದಿಯ **ಶ್ರುತಾವತಾರ**ಗಳಿಂದ ಈ ಮಹಾವ್ಯಾಖ್ಯಾನ ಕೃತಿಕರ್ತೃ ತುಂಬುಲೂರಾಚಾರ್ಯ ಎಂಬವನೆಂದು ತಿಳಿಯ ಬರುತ್ತದೆ. ತುಂಬುಲೂರಾಚಾರ್ಯನ ಕಾಲ 7ನೆಯ ಶತಮಾನವೆಂದು ಗೊತ್ತು ಮಾಡಲಾಗಿದೆ. ಇಂದ್ರನಂದಿಯ ಹೇಳಿಕೆಯಿಂದ, 7ನೆಯ ಶತಮಾನಕ್ಕೆ ಸೇರಿದ ಶ್ಯಾಮಕುಂದಾಚಾರ್ಯನು **ಕಾಷಾಯ ಪ್ರಭಾತ** ಎಂಬ ಕೃತಿಗೆ 6,000 ಗ್ರಂಥಪ್ರಮಾಣದ ಕನ್ನಡ ವ್ಯಾಖ್ಯಾನವೊಂದನ್ನು ರಚಿಸಿದಂತೆ ತಿಳಿಯಬರುತ್ತದೆ. ಈ ಗ್ರಂಥಗಳು ಅವುಗಳ ವಸ್ತು ವಿಷಯದಲ್ಲಿ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟವುಗಳಾದ್ದರಿಂದ ಸಾಹಿತ್ಯದೃಷ್ಟಿಯಿಂದ ಅವು ಅಷ್ಟು ಮುಖ್ಯವಲ್ಲವೆನ್ನ ಬಹುದಾದರೂ 7ನೆಯ ಶತಮಾನದ ಕನ್ನಡ ಭಾಷಾಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ, ಅವು ನಮಗೆ ಸಿಕ್ಕಿದ ಪಕ್ಷದಲ್ಲಿ, ಅವುಗಳಿಂದ ತುಂಬ ಸಹಾಯವಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲ; ಇದರ ಜೊತೆಗೆ, ಒಂಬತ್ತನೆಯ ಶತಮಾನಕ್ಕೆ ಹಿಂದೆ ಕನ್ನಡದಲ್ಲಿದ್ದ ಅಮೂಲ್ಯವಾದ ಅಧ್ಯಾತ್ಮಶಾಸ್ತ್ರಗ್ರಂಥ ದೊರೆತಂತೆಯೂ ಆಗುತ್ತದೆ. 7ನೆಯ ಶತಮಾನದಷ್ಟು ಹಿಂದೆಯೇ ಮೇಲೆ ವಿವರಿಸಿದಂಥ ಗಂಭೀರ ವಿಷಯಗಳಿಂದ ಕೂಡಿದ ಮಹತ್ತಾದ ಮತ್ತು ಬೃಹತ್ತಾದ ಗ್ರಂಥಗಳು ಕನ್ನಡದಲ್ಲಿ ರಚಿತವಾಗಿದ್ದವೆಂಬ ಸಂಗತಿಯು ಕನ್ನಡ ಭಾಷೆಯ ಪರಿಪಕ್ವತೆಗೂ ಕನ್ನಡ ಪರಂಪರೆಗೂ ಸಂಶಯಕ್ಕೆ ಆಸ್ಪದವೇ ಇಲ್ಲದಂಥ ಸಾಕ್ಷಿಯಾಗಿ ಪರಿಣಮಿಸುತ್ತದೆ. ಅಷ್ಟುಹೊತ್ತಿಗಾಗಲೇ ಕನ್ನಡದಲ್ಲಿ ಸಾಕಷ್ಟು ಪ್ರಮಾಣದ ಭಾಷಾಕೃಷಿ ನಡೆದಿರದೆ ಇದ್ದಿದ್ದರೆ, ಮತ್ತು ಕನ್ನಡದಲ್ಲಿ ತಕ್ಕಷ್ಟು ಸಾಹಿತ್ಯರಚನೆ ಆಗಿರದೆ ಇದ್ದರೆ, ಶ್ರೀ ಬಿ.ಎಲ್. ರೈಸ್ ಅವರು ಅಭಿಪ್ರಾಯ ಪಡುವಂತೆ, ಆ ಗ್ರಂಥಗಳ ರಚನೆಯಾಗುತ್ತಲೇ ಇರಲಿಲ್ಲ; ಅವುಗಳಿಗೆ ಆವಶ್ಯಕತೆಯೂ ಇರುತ್ತಿರಲಿಲ್ಲ[17].

ನಾವೀಗ ನೃಪತುಂಗಪೂರ್ವಯುಗದ ಕೊನೆಯನ್ನು ಸಮೀಪಿಸುತ್ತಿದ್ದೇವೆ. ಸರಿಸುಮಾರು ಇದೇ ಕಾಲದಲ್ಲಿ ಮಹಾ ಪರಾಕ್ರಮಿಯೂ ಬಹುಮುಖ ಪಾಂಡಿತ್ಯವುಳ್ಳ ವಿದ್ವಾಂಸನೂ ಆಗಿದ್ದ ಗಂಗದೊರೆ ಸೈಗೊಟ್ಟ ಶಿವಮಾರನು (ಸುಮಾರು ಕ್ರಿ.ಶ. 800) **ಗಜಾಷ್ಟಕ**ವೆಂಬ ಚಿಕ್ಕಕೃತಿಯನ್ನು ರಚಿಸಿದನೆಂದು ತಿಳಿಯಬರುತ್ತದೆ. ಆನೆಗಳನ್ನು ಪಳಗಿಸಿ ಪೋಷಿಸುವುದಕ್ಕೆ ಸಂಬಂಧಿಸಿದ ಎಂಟು ಪದ್ಯಗಳುಳ್ಳ ಕೃತಿ ಇದು. ಕೃತಿ ಚಿಕ್ಕದಾದರೂ ಇದು ಲಯಬದ್ಧವಾಗಿ ಉಕ್ತಿವಿಶೇಷದಿಂದ ಕೂಡಿ, ಪಾಂಡಿತ್ಯಪೂರ್ಣವಾಗಿದೆಯೆಂದು ಹೇಳಲಾಗಿದೆ[18]. ಒಂದು ಶಾಸನದಲ್ಲಿ ಹೇಳಿರುವ ಪ್ರಕಾರ, ಇದು ಈ (ಗಜಾಷ್ಟಕ) 'ಒವನಿಗೆ' ಮತ್ತು 'ಒನಕೆವಾಡು'ಗಳ ಹಾಗೆಯೇ ಜನಪ್ರಿಯವಾಗಿತ್ತೆಂದು ತಿಳಿಯಬರುತ್ತದೆ. ಶಿವಮಾರನು **ಸೇತುಬಂಧ** ಎಂಬ ಇನ್ನೊಂದು ಕೃತಿಯನ್ನು ರಚಿಸಿದ್ದನಂತೆ[20].

**ಕವಿರಾಜಮಾರ್ಗ**ಕ್ಕಿಂತ ಹಿಂದೆ, ಅಥವಾ ಅದಕ್ಕೆ ಸಮಕಾಲೀನವಾಗಿ ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಕೃತಿ ಕನ್ನಡದಲ್ಲಿ ಇದ್ದಿರಬೇಕೆಂದು ತೋರುತ್ತದೆ. ಏಕೆಂದರೆ, 11ನೆಯ ಶತಮಾನದವನಾದ ಅಮೃತಸಾಗರನೆಂಬ ಜೈನಕವಿ **ಯಾಪ್ಪರುಙ್ಗಲಕ್ಕಾರಿಗೈ** ಎಂಬ ತನ್ನ ಛಂದಶ್ಶಾಸ್ತ್ರಗ್ರಂಥದಲ್ಲಿ **ಗುಣಗಾಂಕಿಯಂ** ಎಂಬ ಹೆಸರಿನ ಕನ್ನಡ ಛಂದೋಗ್ರಂಥವನ್ನು ಹೆಸರಿಸುತ್ತಾನೆ. ಈ ಕೃತಿ ಇನ್ನೂ ದೊರಕಿಲ್ಲ; ಕೃತಿಕಾರನ ವಿಷಯವಾಗಿಯೂ ಏನೂ ಗೊತ್ತಾಗಿಲ್ಲ. ಇದು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ

ಬಿರುದುಗಳನ್ನು ಹೊಂದಿದ್ದ ಪೂರ್ವಚಾಲುಕ್ಯರಾಜ ವಿಜಯಾದಿತ್ಯನಿಗೆ (ಸುಮಾರು ಕ್ರಿ.ಶ. 844–888) ಅರ್ಪಿತವಾದ ಕೃತಿಯಾಗಿರುವ ಸಂಭವವೂ ಉಂಟು.

ಹನ್ನೊಂದನೆಯ ಶತಮಾನದ ಜಯಕೀರ್ತಿಯು ತನ್ನ **ಛಂದೋನುಶಾಸನದ** 7ನೆಯ ಅಧ್ಯಾಯದಲ್ಲಿ 'ಕರ್ಣಾಟಕ ವಿಷಯ ಭಾಷಾಜಾತಿ'ಯನ್ನು ಕುರಿತು ವಿವರಿಸುವಾಗ 'ಪ್ರಭುಸೇನಿಯ' ಎಂಬ ಒಂದು ಹೆಸರನ್ನು ಹೇಳುತ್ತಾನೆ. ಅವನು ಒಬ್ಬ ಕನ್ನಡ ಗ್ರಂಥಕರ್ತೃವೆಂದು ನಂಬಿಕೆ ; ಅವನ ಕಾಲವಿನ್ನೂ ಗೊತ್ತಾಗಿಲ್ಲ.

**ಕವಿರಾಜಮಾರ್ಗ**ಕ್ಕಿಂತ ಹಿಂದಿನ ಕಾಲದ ಸಾಹಿತ್ಯದ ಬೆಳವಣಿಗೆ ಕ್ರಮಕ್ರಮವಾಗಿ ರೂಪುಗೊಳ್ಳುತ್ತಿತ್ತೆಂದು ತೋರುತ್ತದೆ. ಅದರ ಹೆಸರೇ ಸೂಚಿಸುವಂತೆ **ಕವಿರಾಜಮಾರ್ಗ**ವು ಯಶಸ್ಸು ಪಡೆಯಬೇಕೆಂಬ ಅಪೇಕ್ಷೆಯುಳ್ಳ ಕವಿಗಳಿಗೆ ರಾಜಮಾರ್ಗವನ್ನು ತೆರೆದುಕೊಟ್ಟಿತು. 'ಪೂರ್ವದ ಹಳಗನ್ನಡ'ದಿಂದ 'ಹಳಗನ್ನಡಕ್ಕೆ' ಭಾಷೆ ಮಾರ್ಪಡುತ್ತಿದ್ದ ಕಾಲ ಅದು. ಭಾಷಾ ಸಾಹಿತ್ಯಗಳ ಆ ಸಂಕ್ರಮಣಕಾಲದಲ್ಲಿ ಮಾರ್ಪಟ್ಟಿದ್ದ ಮತ್ತು ಮಾರ್ಪಡುತ್ತಿದ್ದ ಸಂಪ್ರದಾಯಗಳನ್ನು **ಕವಿರಾಜಮಾರ್ಗ** ಗುರುತಿಸಿ ವಿವರಿಸುತ್ತದೆ. ಹಿಂದಿನದನ್ನು ಪ್ರತಿಬಿಂಬಿಸುವುದರ ಜೊತೆಗೆ ಮುಂದೆ ಬರಲಿರುವ ಹೊಸ ಯುಗಕ್ಕೆ, 'ವರ್ಣರಂಜಿತವಾಗಿ ಸಂಕೀರ್ಣವಾದ ಭಾರತ ಸಂಸ್ಕೃತಿಯಲ್ಲಿ ಎದ್ದುಕಾಣುವಂತಿರುವ' ಸುಸಮೃದ್ಧ ಪ್ರೌಢ ಕೃತಿಗಳಿಂದ ತುಂಬಿದ ಪ್ರೌಢ ಸಾಹಿತ್ಯಯುಗಕ್ಕೆ ಮುನ್ಸೂಚನೆಯಾಗಿ ಪರಿಣಮಿಸಿತು.

## ಅಡಿ ಟಿಪ್ಪಣಿಗಳು

1. ಗೇಗರ್ ಅವರ ಮಹಾವಂಶ, ಪು. 82
2. ಆರ್. ನರಸಿಂಹಾಚಾರ್ಯ: History of the Kannada Language, ಪು. 47–48
3. ಡಿ. ಎಲ್. ನರಸಿಂಹಾಚಾರ್: 'ಹಳಗನ್ನಡ ಸಾಹಿತ್ಯ—ಒಂದು ಲಘು ಸಮೀಕ್ಷೆ' ಕರ್ಣಾಟಕ ದರ್ಶನ ಪು. 83
4. ಆರ್. ನರಸಿಂಹಾಚಾರ್ಯ: History of the Kannada Language, ಪು. 36
5. ಇದು ಈಗ ಚರ್ಚಾಸ್ಪದಅಂಶ. ಇತ್ತೀಚೆಗೆ ದೊರೆತ 'ವಡ್ಡಾರಾಧನೆ' ಎಂಬ ಗದ್ಯಕೃತಿ ಕೆಲವು ವಿದ್ವಾಂಸರ ಪ್ರಕಾರ 'ಕವಿರಾಜಮಾರ್ಗ' ಕ್ಕಿಂತ ಪ್ರಾಚೀನ ಕಾಲಕ್ಕೆ ಸೇರಿರುವ ಸಂಭವವಿದೆ.
6. Journal of the Royal Asiatic Society, 1904, ಪು. 399
7. ಪ್ರಬುದ್ಧ ಕರ್ಣಾಟಕ, ಸಂ. II
8. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, The beginnings of South Indian History, P. 293
9. Epigraphia Carnatica, ಸಂ. XI, ಚಿತ್ರದುರ್ಗ ಜಿಲ್ಲೆ, ನಂ. 43
10. ಅದೇ, ಅನುವಾದ, ಪು. 12.
11. Epigraphia Carnatica ಸಂ. II
12. ಅದೇ ಅನುವಾದ, ಪು. 42.
13. Indian Antiquary, X, P. 61
14. ಡಾ॥ ಕೆ. ಕೃಷ್ಣಮೂರ್ತಿಯವರ 'ಕನ್ನಡ ಮತ್ತು ಸಂಸ್ಕೃತ' (ಕರ್ಣಾಟಕ ದರ್ಶನ ಪು. 205—206) ಎಂಬ ಲೇಖನದಿಂದ ತೆಗೆದು ಕೊಳ್ಳಲಾಗಿದೆ.
15. ಮೇಲೆ ಕಾಣಿಸಿದ ಕೆಲವು ಕವಿಗಳು ಬೌದ್ಧರೆಂಬ ಭಾವನೆ ಕೆಲವು ಕಾಲವಿದ್ದು, ಆ ನಂಬಿಕೆಗನುಸರಿಸಿ ಕನ್ನಡ ಸಾಹಿತ್ಯದಲ್ಲಿ ಬೌದ್ಧಯುಗವೆಂಬ ಕಾಲವಿದ್ದಿರಬೇಕೆಂಬ ಕಲ್ಪನೆಗೆ ದಾರಿಯಾಗಿತ್ತು. ಆದರೆ ಇತ್ತೀಚೆಗೆ ಈ ಅಭಿಪ್ರಾಯಕ್ಕೆ ಅಷ್ಟಾಗಿ ಬೆಂಬಲವಿಲ್ಲ. ಏಕೆಂದರೆ ಬೌದ್ಧಧರ್ಮ ಯಾವ ಕಾಲದಲ್ಲೂ ಕರ್ಣಾಟಕದಲ್ಲಿ ಬೇರೂರಿರುವ ಸಂಭವ ಅತಿ ಕಡಮೆ.
16. ನಾಗವರ್ಮನು (ಸುಮಾರು ಕ್ರಿ. ಶ. 1150) ತನ್ನ ಕಾವ್ಯಾವಲೋಕನದಲ್ಲಿ ಇನ್ನಿತರ ಪ್ರಕಾರಗಳ ಜೊತೆಗೆ ಕಾವ್ಯದ ಮೂರು ಪ್ರಕಾರಗಳನ್ನಾಗಿ ಮೆಲ್ವಾಡು, ಬೆದಂಡೆ, ಮತ್ತು ಬಾಜನೆಗಬ್ಬಗಳನ್ನು ಹೆಸರಿಸುತ್ತಾನೆಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಕವಿರಾಜಮಾರ್ಗದ ಚತ್ತಾಣ ಮತ್ತು ಬೆದಂಡೆಗಳಿಗೆ ಸಂವಾದಿಯಾಗಿರುವಂತೆ ಬಾಜನೆಗಬ್ಬ ಮತ್ತು ಮೆಲ್ವಾಡುಗಳನ್ನು ವಿವರಿಸಿರುವಂತೆ ತೋರುತ್ತದೆ (ನೋಡಿ: ಆರ್. ನರಸಿಂಹಾಚಾರ್, ಕರ್ಣಾಟಕ ಕವಿಚರಿತೆ ಪು 13. ಮುಳಿಯ ತಿಮ್ಮಪ್ಪಯ್ಯ, ಕವಿರಾಜಮಾರ್ಗವಿವೇಕ ಭಾಗ I ಪು. 118–123, ಮತ್ತು ಕನ್ನಡನಾಡೂದೇಸಿ ಸಾಹಿತ್ಯವೂ, ಪು. 46–51. ಶ್ರೀ ಆರ್. ನರಸಿಂಹಾಚಾರ್ ಅವರು ಗಮನಿಸಿರುವಂತೆ ಜನ್ನನ ಯಶೋಧರ ಚರಿತೆ (ಸುಮಾರು ಕ್ರಿ. ಶ. 1209) ಮಾತ್ರ ಮೆಲ್ವಾಡಿನ (ಅಥವಾ ಬೆದಂಡೆಯ) ವಿವರಣೆಗೆ ಹೊಂದುವಂತಿದೆ.
17. ಬಿ. ಎಲ್. ರೈಸ್, Mysore and Coorg Inscriptions, p. 198
18. ಎಂ. ವಿ. ಕೃಷ್ಣರಾವ್, Gangas of Talkad, p. 66
19. Epigraphia Carnatica, Vol. VIII, N.R. 35
20. ಎಂ. ವಿ. ಕೃಷ್ಣರಾವ್, Gangas of Talkad, p. 66

ಮೂಲಲೇಖಕರು: ಶ್ರೀ ಎಂ. ಕೇಶವ ಭಟ್
ಅನುವಾದಕರು: ಶ್ರೀ ಕೆ. ಮುರುಳಸಿದ್ದಪ್ಪ

# ಸಂಸ್ಕೃತ (ಪ್ರಾಚೀನ ಕಾಲ)

ಈಗ ಪ್ರಾಚೀನ ಕಾಲದಲ್ಲಿ ಸಂಸ್ಕೃತಕ್ಕೆ ಕರ್ಣಾಟಕದ ಕೊಡುಗೆಯೇನೆಂದು ವಿಚಾರಿಸಲು ಹೊರಡೋಣ.

ಭಾರತದಲ್ಲಿ ಆರ್ಷ ಮಹಾಕಾವ್ಯಗಳ ಯುಗವಾದ ಮೇಲೆ ಸುಮಾರು ಕ್ರಿ.ಶ. ಆರನೆಯ ಶತಮಾನದ ವರೆಗೂ ಸಂಸ್ಕೃತದಲ್ಲಿ ಯಾವದೂ ಗಮನಾರ್ಹವಾದ ಕೃತಿಯಿಲ್ಲವೆಂದು ತೀವ್ರವಾಗಿ ಮನಗಂಡ ಪ್ರೊಫೆಸರ್ ಮ್ಯಾಕ್ಸ್ ಮ್ಯುಲರ್ ಮುಂತಾದ ಮುಂಚಿನ ಪಾಶ್ಚಾತ್ಯ ವಿದ್ವಾಂಸರು ಸಂಸ್ಕೃತ ವಿದ್ಯೆಯ ಪುನರುತ್ಥಾನ ವಾದವನ್ನು ಪುರಸ್ಕರಿಸಿದರು. ಕಾಲದ ಉಲ್ಲೇಖಗಳಿದ್ದ ಸಂಸ್ಕೃತ ಶಿಲಾಶಾಸನಗಳ ಆಧಾರದ ಮೇಲಿಂದ ಈ ಊಹೆ ನಿರಾಧಾರವಾದುದೆಂದು ಸಿದ್ಧಪಡಿಸಿದವರಾದ ಬ್ಯುಲೆರ್ ಮೊದಲಾದ ಮುಂಚಿನ ಪ್ರಾಚ್ಯ ವಿದ್ಯಾಸಂಶೋಧಕರೂ ಶಾಸನವೇತ್ತರೂ ಕೂಡ, ಸಂಸ್ಕೃತ ಕಾವ್ಯಕ್ಕೆ ದಕ್ಷಿಣ ಭಾರತದ ಕೊಡುಗೆಯ ಬಗೆಗೆ ಕಡಮೆ ಬೆಲೆಯಿತ್ತಿರುವುದನ್ನೇ ಕಾಣುತ್ತೇವೆ. ಬ್ಯುಲೆರ್ ಹೇಳುವುದೇನೆಂದರೆ:—"ಉತ್ತರ ಭಾರತದ ವಿಶಿಷ್ಟ ವಿದ್ಯಾಕೇಂದ್ರಗಳಲ್ಲಿ ಯಾವ ಪರಿಷ್ಕಾರದ ಮಟ್ಟವನ್ನು ಕಾವ್ಯಕಲೆ ಮುಟ್ಟಿದ್ದಿತೋ ಆ ಮಟ್ಟವನ್ನು ದಕ್ಷಿಣಭಾರತದಲ್ಲಿಯೂ ಅದು ಮುಟ್ಟಿತೆನ್ನುವುದು ಮಾತ್ರ ಸಂಶಯಾಸ್ಪದವಾಗಿದೆ." ಆದರೆ, ಡಾ॥ ಡಿ. ಸಿ. ಸರ್ಕಾರ್ ಅವರು ಸಮರ್ಥ ರೀತಿಯಿಂದ ಪ್ರತಿಪಾದಿಸಿರುವ ಹಾಗೆ, ಈಚಿನ ಸಂಶೋಧನೆಗಳು ಬ್ಯುಲೆರ್ ಅವರ ಸಂಶಯಗಳಿಗೆ ಬುಡವಿಲ್ಲವೆಂಬುದನ್ನು ತೋರಿಸುತ್ತವೆ. ದಕ್ಷಿಣ ಭಾರತದಲ್ಲಿ ಸಂಸ್ಕೃತದ ಕಾವ್ಯಶೈಲಿ ಪುರಸ್ಕೃತವಾಗಿತ್ತೆಂಬುದನ್ನು ಕರ್ಣಾಟಕದ ಅನೇಕ ಶಾಸನಗಳು ಸಂಪೂರ್ಣವಾಗಿ ಸಿದ್ಧಪಡಿಸುತ್ತವೆ. ಕದಂಬರಾಜ ಶಾಂತಿವರ್ಮನ (ಕ್ರಿ.ಶ. ಐದನೆಯ ಶತಮಾನ) ತಾಳಗುಂದ ಶಿಲಾಲೇಖ ಪ್ರಶಸ್ತಿಯ ಕವಿಯಾದ ಕುಬ್ಜನು ವಿವಿಧ ಛಂದೋಬಂಧಗಳಲ್ಲಿ ಪ್ರವೀಣನಾಗಿದ್ದನಲ್ಲದೆ ವಿವಿಧಾಲಂಕಾರಗಳ ಪ್ರಯೋಗದಲ್ಲಿಯೂ ಕುಶಲನಾಗಿದ್ದನು; ಇಮ್ಮಡಿ ಪುಲಿಕೇಶಿಯ ಪ್ರಖ್ಯಾತ ಆಸ್ಥಾನಕವಿಯಾದ ರವಿಕೀರ್ತಿಯು ತನ್ನ ಪ್ರಸಿದ್ಧ ಐಹೊಳೆ ಶಾಸನ (ಕ್ರಿ.ಶ. 637) ರಚನೆಯ ಮೇಲಿಂದ ಕಾಳಿದಾಸ ಭಾರವಿಗಳ ಕೀರ್ತಿಗೆ ತನ್ನದೂ ಸರಿಸಮವೆಂದು ಹೇಳಿಕೊಳ್ಳುವಷ್ಟು ಔಚಿತ್ಯ ಅದರಲ್ಲಿದ್ದಿತು.

ಇಂತಹ ಅಸಾಮಾನ್ಯ ಕಾವ್ಯ ಪರಿಪಾಕವುಳ್ಳ ಉದಾಹರಣೆಗಳು ನಾವು ಅವಲೋಕಿಸುತ್ತಿರುವ ಕಾಲಾವಧಿಯಲ್ಲಿ ಈ ದೇಶದಲ್ಲಿಯೂ ಸಂಸ್ಕೃತ ಕಾವ್ಯವು ನಿರಂತರವಾಗಿ ಪುರಸ್ಕೃತವಾಗಿದ್ದುದನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಈ ಶತಮಾನದಲ್ಲಿ ಸಿಕ್ಕಿರುವ ಎಷ್ಟೋ ಪ್ರಾಚೀನ ಕಾವ್ಯನಾಟಕಗಳ ಹಸ್ತಲಿಖಿತ ಪ್ರತಿಗಳು ಕೂಡ ಇದೇ ನಿರ್ಣಯವನ್ನು ಬೆಂಬಲಿಸುತ್ತವೆ; ವಸ್ತುತಃ ಶಿಲಾಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಎಷ್ಟೋ ಮಹಾ ಕೃತಿಗಳು ಈಗ ಸಿಕ್ಕುವ ಆಸೆಯೂ ಉಳಿಯದಂತೆ ಲುಪ್ತವಾಗಿ ಹೋಗಿವೆ:—ಗಂಗರಾಜ ಇಮ್ಮಡಿ ಮಾಧವನು (ಸುಮಾರು ಕ್ರಿ.ಶ. ನಾಲ್ಕನೆಯ ಶತಮಾನ) ಬರೆದ **ದತ್ತಕಸೂತ್ರವೃತ್ತಿ** ಅಥವಾ ಕಾಮಶಾಸ್ತ್ರದ "ವೈಶಿಕ" ಪ್ರಕರಣದ ಮೇಲೆ ಬರೆದ ಟೀಕೆ, ಗುಣಾಢ್ಯನ ಪ್ರಖ್ಯಾತ ಕೃತಿಯಾದ (ಪೈಶಾಚೀ ಪ್ರಾಕೃತದ) **ಬೃಹತ್ಕಥಾ** ಗ್ರಂಥಕ್ಕೆ ಗಂಗರಾಜ ದುರ್ವಿನೀತನು (ಸುಮಾರು ಕ್ರಿ.ಶ. ಆರನೆಯ ಶತಮಾನ) ರಚಿಸಿದ ಸಂಸ್ಕೃತ ಭಾಷಾಂತರ ಮತ್ತು ಆತನೇ ಭಾರವಿಯ **ಕಿರಾತಾರ್ಜುನೀಯ** ವೆಂಬ ಮಹಾಕಾವ್ಯದ ಹದಿನೈದನೆಯ ಸರ್ಗದ ಮೇಲೆ ಬರೆದ **ಟೀಕೆ**, ಹಾಗು ಗಂಗರಾಜ ಶ್ರೀಪುರುಷನ ಕೃತಿಯಾದ **ಗಜಶಾಸ್ತ್ರ** (ಆನೆಗಳನ್ನು ಪಳಗಿಸುವ ತಂತ್ರವಿಧಾನ)—ಇವೆಲ್ಲ

ನಮಗಿಂದು ಬರಿಯ ಹೆಸರುಗಳೇ ವಿನಾ ಬೇರೆಯಲ್ಲ. ಈ ವಿವರಗಳನ್ನು ಕೊಡುವ ಕೆಲವೊಂದು ತಾಮ್ರ ಶಾಸನಗಳು ಖೊಟ್ಟಿಯೆಂದು ಭಾವಿಸಿದರೂ ಅಲ್ಲಿ ಉಲ್ಲಿಖಿತವಾಗಿರುವ ಈ ಸಂಗತಿಗಳು ಪರಂಪರಾಗತವಾದ ಸತ್ಯ ಐತಿಹ್ಯವನ್ನೇ ಪ್ರತಿನಿಧಿಸುತ್ತವೆಯೆನ್ನಬಹುದು.

ತಮಿಳು ಭಾಷೆಯಲ್ಲಿ **ಪೆರುಂಗತೈ** (=ಬೃಹತ್ಕಥೆ) ಎಂಬ ಅನುವಾದ ಕೃತಿ (ಸುಮಾರು ಎಂಟನೆಯ ಶತಮಾನ) ಉಪಲಬ್ಧವಿದೆ; ಇದು ಸಂಸ್ಕೃತ ಭಾಷಾಂತರವನ್ನಾಧರಿಸಿ ರಚಿತವಾದಂತೆ **ಅದರಲ್ಲಿಯೇ ಉಕ್ತವಾಗಿದೆ**; ಕ್ರಿ.ಶ. ಹತ್ತು ಅಥವಾ ಹನ್ನೊಂದನೆಯ ಶತಮಾನದ ವರೆಗೆ ಮತ್ತಾವ ಬೃಹತ್ಕಥಾ ಭಾಷಾಂತರವೂ ಸಂಸ್ಕೃತದಲ್ಲಿ ಉಪಲಬ್ಧವಿಲ್ಲದಿರುವುದನ್ನು ಗಮನಿಸಿದರೆ ಪೆರುಂಗತೈಗೆ ಮೂಲವಾದ ಸಂಸ್ಕೃತ ಭಾಷಾಂತರವನ್ನು ದುರ್ವಿನೀತನೇ ಬರೆದವನಾಗಿರಬೇಕೆಂಬ ಊಹೆ ಪ್ರಬಲವೆನಿಸುತ್ತದೆ.

ಈ ಸಂದರ್ಭದಲ್ಲಿ ಉಲ್ಲೇಖನಾರ್ಹವಾದ ಮತ್ತೊಂದು ಸ್ವಾರಸ್ಯದ ವಿಷಯವೆಂದರೆ ಇದು :— ಮೂಲಕೃತಿಯಾದ **ಬೃಹತ್ಕಥೆ** ಕೂಡ ಸುಮಾರು ಕ್ರಿ.ಶ. ಒಂದನೆಯ ಶತಮಾನದ ವೇಳೆಗೆ ಒಬ್ಬ ಸಾತವಾಹನ ರಾಜನಾಳುತ್ತಿದ್ದ ಕುಂತಳದೇಶದಲ್ಲಿ (ಇದು ಕರ್ಣಾಟಕದ ಕೆಲವು ಪ್ರಾಂತಗಳ ಪ್ರಾಚೀನ ಹೆಸರು) ಆವಿರ್ಭವಿಸಿತು. ಮುಂದೆ ರಚಿತವಾದ ಐತಿಹ್ಯಗಳು ಗುಣಾಢ್ಯನನ್ನು **ಕಾತಂತ್ರ–ವ್ಯಾಕರಣದ** ವಿಖ್ಯಾತ ಲೇಖಕನಾದ ಸರ್ವವರ್ಮನ ಪ್ರತಿಸ್ಪರ್ಧಿಯೆಂದೂ, ಇಬ್ಬರೂ ಒಬ್ಬ ಸಾತವಾಹನನ ಆಸ್ಥಾನ ಪಂಡಿತರೆಂದೂ ವರ್ಣಿಸುತ್ತವೆ. ನಿಜವಾಗಿಯೂ ಈ ವ್ಯಾಕರಣವು ಗಾತ್ರದಲ್ಲಿ ಕಿರಿದು ಹಾಗು ಶೈಲಿಯಲ್ಲಿ ಸರಳವಾಗಿರುವಂತೆ ವ್ಯವಹಾರಯೋಗ್ಯವೂ ಜನಪ್ರಿಯವೂ ಆಗಿದೆ. ಟಿಬೆಟ್, ಕಾಶ್ಮೀರ, ಬಂಗಾಳ ಮುಂತಾದ ದೂರದೇಶಗಳಲ್ಲಿ ಕೂಡ ಅನಂತರದ ಶತಮಾನಗಳಲ್ಲಿ ಇದಕ್ಕೆ ದೊರೆತ ಅದ್ಭುತ ಜನಪ್ರಿಯತೆಯು ಅತಿಗಹನವೂ ಜಟಿಲವೂ ಆದ ಪಾಣಿನಿ ವ್ಯಾಕರಣಕ್ಕಿಂತ ಅದೆಷ್ಟು ಉಪಯುಕ್ತವೆನಿಸಿತ್ತೆನ್ನಲು ಸಾಕ್ಷಿಯಾಗಿದೆ. **ಬೃಹತ್ಕಥೆ**ಯ ಬಗೆಗೆ ಇನ್ನೊಂದು ಮಾತು ಹೇಳುವುದಾದರೆ, ಅದು ಅದ್ಭುತ ಹಾಗು ನೀತಿಕಥೆಗಳನ್ನು ಹೇಳುವ ಕಲೆಯಲ್ಲಿ ದಕ್ಷಿಣದೇಶದವರ ಪ್ರತಿಭೆಗೆ ಅಪೂರ್ವ ಹಾಗು ಗಣನೀಯ ಸ್ಮಾರಕವೆನ್ನಬಹುದು; ಏಕೆಂದರೆ ಸರಸ ಸುಂದರವಾದ ಹಾಸ್ಯದ ಮಿಂಚು ಅಲ್ಲಿ ಯಾವಾಗಲೂ ಬೆಳಗುತ್ತಿರುತ್ತದೆ. ಸುಬಂಧು ಮತ್ತು ಬಾಣರಂತೆ ಉತ್ತರ ಭಾರತದ ಮಹಾಕವಿಗಳಿರಲಿ, ಅಥವಾ ದಂಡಿಯಂತೆ ದಕ್ಷಿಣಭಾರತದ ಮಹಾಕವಿಗಳೇ ಇರಲಿ, ಲೌಕಿಕ ವಸ್ತುಗಳನ್ನು ವರ್ಣಿಸಹೊರಟವರಿಗೆ ಸಮಾನವಾಗಿಯೇ ಅದು ಮಾದರಿಯನ್ನೊದಗಿಸಿದ್ದರಲ್ಲಿ ಯಾವ ಸೋಜಿಗವೂ ಇಲ್ಲ. ಮತ್ತೊಂದು ಉಲ್ಲೇಖನಾರ್ಹ ಸಂಗತಿಯಿದು :— ಸಾತವಾಹನರ ಆಸ್ಥಾನದಲ್ಲಿಯೇ ಪ್ರಾಕೃತ ಭಾಷೆಯ ಏಳುನೂರು ಸುಭಾಷಿತಗಳ ಪ್ರಥಮ ಸಂಗ್ರಹವಾದ **ಗಾಥಾಸಪ್ತಶತಿ** (ಅಥವಾ **ಸತ್ತಸಈ**) ಯೂ ರಚಿತವಾಯಿತು. ಈ ಶೃಂಗಾರ ಸೂಕ್ತಿಗಳು ಅತ್ಯಂತ ಕೋಮಲ ಹಾಗೂ ಮಧುರವಾಗಿವೆ. ಗ್ರಾಮಾಂತರಗಳಲ್ಲಿ ನಿಸರ್ಗದ ನಡುವಿರುವ ಭಾರತೀಯ ಜನತೆಯ ಪ್ರಶಾಂತ ಮತ್ತು ಮುಗ್ಧ ಜೀವನವು ಇಲ್ಲಿ ಕಲಾಪೂರ್ಣವಾಗಿ ಚಿತ್ರಿತವಾಗಿದೆ. ಒಮ್ಮೊಮ್ಮೆ ಗಂಡಿನ ದನಿಯಿದ್ದರೂ, ಹೆಚ್ಚಾಗಿ ಹೆಣ್ಣಿನ ದನಿಯೇ ಕೇಳಿಬರುತ್ತದೆ. ಎಳವೆಣ್ಣುಗಳೂ ವಯಸ್ಸಾದವರೂ ಎಲ್ಲರೂ ತರುಣರನ್ನು ಕುರಿತು ನುಡಿಯುತ್ತಾರೆ; ಇಲ್ಲವೆ ಕಾಮಿನಿಯರನ್ನು ನುಡಿಸುತ್ತಾರೆ; ಇಲ್ಲವೆ ತಮ್ಮ ಹೃದಯಗಳಿಗೇ ಹೇಳಿಕೊಳ್ಳುತ್ತಾರೆ. ಏನಾದರೂ ಇರುವದೆಲ್ಲ ಒಂದೇ ವಸ್ತು :—ಪ್ರಣಯ. ಈ ಸರಸ ಸೂಕ್ತಿಗಳು ಮುಂದಿನ ಭಾವಗೀತಗಳ ಕವಿಗಳ ಮೇಲೆಲ್ಲ, ಸಂಸ್ಕೃತಕವಿಗಳಿರಲಿ ಇಲ್ಲವೆ ಅರ್ವಾಚೀನರಾದ ಹಿಂದೀ ಮುಂತಾದ ಭಾಷಾಕವಿಗಳಿರಲಿ, ತಮ್ಮ ಪ್ರಭಾವವನ್ನು ಬೀರಿವೆ. ತನ್ನ **ಹರ್ಷಚರಿತೆ**ಯಲ್ಲಿ ಬಾಣನು ಗಾಥಾಸಪ್ತಶತಿಗೆ ಅಮೋಘವಾದ ಪ್ರಶಸ್ತಿಯನ್ನಿತ್ತಿದ್ದಾನೆ—' ಅವಿನಾಶಿ ಮತ್ತು ಅಗ್ರಾಮ್ಯವಾದ ಸುಂದರ ಸೂಕ್ತಿಗಳ ಕೋಶ 'ವೆಂಬುದಾಗಿ. ಈ ಕೋಶವು ಕ್ರಿ.ಶ. ನಾಲ್ಕನೆಯ ಅಥವಾ ಐದನೆಯ ಶತಮಾನದ್ದು ಇದ್ದರೂ ಇರಬಹುದೆಂದು ವಿದ್ವಾಂಸರಲ್ಲಿ ಕೆಲವರು ಅಭಿಪ್ರಾಯಪಡುತ್ತಾರೆ.

**ಅವಂತಿಸುಂದರೀಕಥಾ** ಎಂಬ ಗ್ರಂಥವು ಇತ್ತೀಚೆಗೆ ಉಪಲಬ್ಧವಾಗಿ ಸಂಪಾದಿತವಾಗಿದೆ. ಇದು ಉಲ್ಲೇಖಿಸುವ ಐತಿಹ್ಯದ ಪ್ರಕಾರ ಅದರ ವಿಖ್ಯಾತ ಕವಿಯಾದ ದಂಡಿಯು ದಾಮೋದರನ ಮರಿಮಗ; ದಾಮೋದರನು ಬಹುಶಃ ಗುರ್ಜರ ದೇಶದಿಂದ ಪಲ್ಲವರಾಜ ನರಸಿಂಹವರ್ಮನ ಆಸ್ಥಾನಕ್ಕೆ ವಲಸೆ ಬಂದವನು; ಮತ್ತು ಮಹಾಕವಿ ಭಾರವಿಯ ಪರಮಮಿತ್ರ ; ಈ ಭಾರವಿಯು ಗಂಗ ದುರ್ವಿನೀತ, ಪೂರ್ವದ ಚಾಳುಕ್ಯ ವಿಷ್ಣುವರ್ಧನ ಮತ್ತು ಪಲ್ಲವ ಸಿಂಹವಿಷ್ಣುಗಳ ರಾಜಾಸ್ಥಾನಗಳಲ್ಲಿ ಮನ್ನಣೆ ಪಡೆದು ಕಡೆಗೆ ಕಾಂಚಿಯಲ್ಲಿ ನೆಲಸಿದನು. ಈ ಮೂವರು ರಾಜರೂ ಸಮಕಾಲದಲ್ಲಿದ್ದವರೆಂಬುದನ್ನು ನಮಗೆ ಅವರ ಬಗೆಗೆ ಈವರೆಗೆ ಶಾಸನಗಳಿಂದ ಲಬ್ಧವಾದ ಸಂಗತಿಗಳೊಡನೆ ಸಮನ್ವಯಗೊಳಿಸುವುದು ಸಾಧ್ಯವಾಗಿಲ್ಲ. ಆದರೂ ಭಾರವಿ ಮತ್ತು ದಂಡಿಗಳು ದಕ್ಷಿಣದೇಶದ ಮಹಾಕವಿಗಳೆಂಬುದನ್ನೂ ಕರ್ಣಾಟಕದ ಅರಸರ ಆಸ್ಥಾನಗಳಲ್ಲಿ ಅವರಿಗೆ ಮನ್ನಣೆ ದೊರೆತಿತ್ತೆಂಬುದನ್ನೂ ಸಿದ್ಧಪಡಿಸಲು ಇದು ಸಾಕಾಗುತ್ತದೆ.

ಭಾರವಿಯ **ಕಿರಾತಾರ್ಜುನೀಯವು** ಸಂಸ್ಕೃತದ ಪರಿಷ್ಕೃತ ಮಹಾಕಾವ್ಯಗಳಲ್ಲೆಲ್ಲ ಬಹುಪ್ರಸಿದ್ಧಿಯಾಂತ ಒಂದು ಕೃತಿಯಾಗಿದೆ. ಶೈಲಿಗಿಂತ ಅರ್ಥಕ್ಕೆ ಪ್ರಾಶಸ್ತ್ಯವೀಯುವ ಒಂದು ಹೊಸ ಪರಂಪರೆಯನ್ನೇ ಅದು ಸಂಸ್ಕೃತ ಮಹಾಕಾವ್ಯಕ್ಷೇತ್ರದಲ್ಲಿ ಆರಂಭಿಸಿತು (**ಭಾರವೇರರ್ಥಗೌರವಂ**); ಮತ್ತು ಅದು ಘಟನೆಗಳ ನಿರೂಪಣೆಗಿಂತ ನೈಸರ್ಗಿಕ ವಸ್ತುಗಳ ವರ್ಣನೆಗೆ ಹೆಚ್ಚಿನ ಮಹತ್ವವೀಯುವ ಪರಂಪರೆಯನ್ನು ಕೂಡ ಪ್ರೋತ್ಸಾಹಿಸಿತು. ಅಲ್ಲದೆ 'ಏಕಾಕ್ಷರೀ' (ಒಂದೇ ಅಕ್ಷರದ ವಿವಿಧ ಸ್ವರಯುಕ್ತ ಪ್ರಯೋಗದಿಂದ ಇಡಿಯ ಪದ್ಯರಚನೆಯಾಗಿರುವುದು), 'ಗತಪ್ರತ್ಯಾಗತ' (ಮುಂದೆ ಮುಂದಕ್ಕೆ ಓದಿದರೂ ತಲೆಕೆಳಗಾಗಿ ಹಿಂದು ಮುಂದೆ ಓದಿದರೂ ಒಂದೇ ಸಮವಾಗಿರುವ ಪದ್ಯ) ಮುಂತಾದ ದುಷ್ಕರ ಚಿತ್ರಬಂಧಗಳ ರಚನೆ ಮೊತ್ತಮೊದಲಿಗೆ ಕಾಣಬರುವ ಗ್ರಂಥವೂ (ವಿಶೇಷವಾಗಿ ಹದಿನೈದನೆಯ ಸರ್ಗದಲ್ಲಿ) ಭಾರವಿಯದೇ ಆಗಿದೆ. ಇದಕ್ಕಿಂತ ಹೆಚ್ಚಾಗಿ, ಭಾರವಿಯು ಶಕ್ತಕವಿ; ಓಜಸ್ವಿಯಾದ ಶೈಲಿಯಲ್ಲಿ ಕಿಡಿಗುಟ್ಟು ಸಂವಾದಗಳನ್ನು ರಚಿಸಬಲ್ಲವನು ; ಮತ್ತು ಪ್ರತಿಯೊಂದು ಪದ್ಯದಲ್ಲಿಯೂ ಎನ್ನುವಂತೆ ಸುಂದರ ರೂಪಕಾದಿ ಪ್ರತಿಮೆಗಳನ್ನು ನೀಡಬಲ್ಲವನು ; ಒಮ್ಮೊಮ್ಮೆ ಆಧುನಿಕ ಅಭಿರುಚಿಗೆ ಅವನ ಉತ್ಪ್ರೇಕ್ಷೆಗಳು ಅತಿರಂಜಿತವೆನಿಸುವುದೂ ಉಂಟೆಂದೊಪ್ಪಬೇಕು, ಹೀಗೆ ಸಂಸ್ಕೃತ ಮಹಾಕಾವ್ಯದ ಇತಿಹಾಸದಲ್ಲಿ ಭಾರವಿಯು 'ಕವಿಗಳ ಕವಿ'ಯೆಂದೆನಿಸಿ ಮುಂದಿನವರಿಗೆಲ್ಲ ಮಾರ್ಗದರ್ಶಕನಾದನು.

ಕ್ರಿ.ಶ. 1129 ರಲ್ಲಿ ಬರೆಯಲಾದ ಶ್ರವಣಬೆಳಗೊಳದ ಒಂದು ಶಾಸನದಲ್ಲಿ (ಎಪಿಗ್ರಾಫಿಯಾ ಕರ್ಣಾಟಿಕ, II. ನಂ. 67), "ಚೂಡಾಮಣಿ"ಯೆಂಬ ಬೃಹತ್ಕಾವ್ಯವನ್ನು ಬರೆದ ಶ್ರೀವರ್ಧದೇವನೆಂಬ ಜೈನಕವಿಯ ಉಲ್ಲೇಖ ಬರುತ್ತದೆ. ಇವನ ಪ್ರಶಸ್ತಿಯನ್ನು ಸಾಕ್ಷಾತ್ ದಂಡಿಯೇ ಹೀಗೆ ರಚಿಸಿದ್ದನಂತೆ :—

> "ಪರಮೇಶ್ವರನು ಗಂಗೆಯನ್ನು ತನ್ನ ತಲೆಯ ಮೇಲಿನ ಜಡೆಯ ತುದಿಯಲ್ಲಿ ಧರಿಸಿದಂತೆ,
> ಈ ಶ್ರೀವರ್ಧದೇವನು ಸರಸ್ವತಿಯನ್ನು ತನ್ನ ನಾಲಗೆಯ ತುದಿಯಲ್ಲಿ ಧರಿಸಿದ್ದಾನೆ."

> ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ।
> ಶ್ರೀವರ್ಧದೇವಃ ಸಂಧತ್ತೇ ಜಿಹ್ವಾಗ್ರೇಣ ಸರಸ್ವತೀಮ್॥

ಶ್ರೀವರ್ಧದೇವನ ಈ ಚೂಡಾಮಣಿ ಕಾವ್ಯ ಈಗ ದೊರೆಯದಿರುವುದು ಒಂದು ದುರದೃಷ್ಟ.

ಸಾಹಿತ್ಯರಚನೆಯಲ್ಲಿ ಜೈನರು ಗಮನಾರ್ಹವಾದ ಆಸಕ್ತಿಯನ್ನು ತಳೆಯಲು ಮುಖ್ಯಕಾರಣವೆಂದರೆ, ಅವರಿಗೆ ಕರ್ಣಾಟಕದ ಅರಸರಿಂದ ದೊರೆತ ಪ್ರೋತ್ಸಾಹವೇ ಸರಿ ; ಈ ಕಾಲದ ಅರಸರೂ ಪ್ರಾಯಿಕವಾಗಿ

ಜೈನರೇ ಆಗಿರುತ್ತಿದ್ದರು. ಗಂಗರ ರಾಜವಂಶವನ್ನು ಪ್ರತಿಷ್ಠಾಪಿಸಿದವನು ಸಿಂಹನಂದಿಯೆಂಬ ಜೈನ ಆಚಾರ್ಯನೆಂದು ಎಷ್ಟೋ ಕನ್ನಡ ಶಿಲಾಶಾಸನಗಳು ಹೇಳುತ್ತವೆ.

ಜಟಾಸಿಂಹನಂದಿಯೆಂಬ ಜೈನ ಆಚಾರ್ಯನು ಈ ಸಿಂಹನಂದಿಗಿಂತ ಭಿನ್ನನು; ಜಟಾಸಿಂಹನಂದಿಯ ಮಹಾಕಾವ್ಯವಾದ **ವರಾಂಗಚರಿತ**ದಲ್ಲಿ ಮೂವತ್ತೊಂದು ಸರ್ಗಗಳಿವೆ; ಇದನ್ನು ಡಾ॥ ಎ.ಎನ್. ಉಪಾಧ್ಯೆ ಅವರು ಈಚೆಗೆ ಸಂಪಾದಿಸಿದ್ದಾರೆ. ಈ ಗ್ರಂಥಕಾರನ ಕಾಲ ಕ್ರಿ.ಶ. ಏಳನೆಯ ಶತಮಾನದ ಅಂತ್ಯಭಾಗ ವಿರಬಹುದೆಂದೂ, ಇಂದು ಕೂಡ ನಾವು ಕಾಣುವಂತೆ ಕೊಪ್ಪಳದಲ್ಲಿ ಇವನ ಶಿಲಾಸ್ಮಾರಕವೊಂದು ಇರುವದೆಂದೂ ಡಾ॥ ಉಪಾಧ್ಯೆ ಅವರು ನಿರೂಪಿಸಿದ್ದಾರೆ. ಈ ಕಾವ್ಯದಲ್ಲಿ ಅಶ್ವಘೋಷನ **ಬುದ್ಧಚರಿತ** ಮತ್ತು **ಸೌಂದರನಂದ** ಕಾವ್ಯಗಳ ಮಾರ್ದನಿಗಳಿವೆ; ಇದರಲ್ಲಿ ಪದ್ಯಗಳ ಓಟ ಸೊಗಸಾಗಿದ್ದು ಓದಲು ಹಿತವಾಗಿದೆ; ಅಲ್ಲೊಮ್ಮೆ ಇಲ್ಲೊಮ್ಮೆ ನೀತಿಯ ಉಪದೇಶಗಳು ಕಥೆಯ ಓಟವನ್ನು ತಡೆಯುತ್ತವೆ. ಇದನ್ನು "ಪುರಾಣಕಾವ್ಯ" (ಅಥವಾ ಆರ್ಷ ಕಥನಕಾವ್ಯ)ದ ಪ್ರತಿನಿಧಿಯೆಂದು ಭಾವಿಸಬಹುದು; ಏಕೆಂದರೆ, ಇಲ್ಲಿ ಆಗಮಿಕ ಪ್ರಕ್ರಿಯೆಗಳಿಗೂ ವಾದಮಯ ಚರ್ಚೆಗಳಿಗೂ ಪ್ರವೇಶವುಂಟು. ಆದರೂ ಇದರ ಕಾವ್ಯಗುಣ ಮೇಲ್ಮಟ್ಟದ್ದಾಗಿದ್ದು ಪದ್ಯಗಳು ಮಧುರವಾಗಿವೆ.

ಇಂತಹ ಪುರಾಣಕಾವ್ಯಗಳನ್ನು ಬರೆದ ಎಷ್ಟೋ ಜೈನ ಗ್ರಂಥಕಾರರನ್ನು—ಉದಾಹರಣೆಗೆ, ಕವಿ ಪರಮೇಶ್ವರ (ಅಥವಾ ಕವಿಪರಮೇಷ್ಠಿ)ಯನ್ನು ಹೇಳಬಹುದು. ಮುಂದಿನ ಕವಿಗಳಾದ ಜಿನಸೇನ (9ನೆಯ ಶತಮಾನ; ಇವನ ಕೃತಿ **ಆದಿಪುರಾಣ**), ಚಾವುಂಡರಾಯ (10ನೆಯ ಶತಮಾನ), ವಾದಿರಾಜ (11ನೆಯ ಶತಮಾನ) ಮುಂತಾದವರು ಹೆಸರಿಸುತ್ತಾರೆ. ಆದರೆ ದುರ್ದೈವದಿಂದ ಅವರ ಕೃತಿಗಳೆಲ್ಲ ನಷ್ಟವಾಗಿವೆ.

ವ್ಯಾಕರಣ, ಛಂದಶ್ಶಾಸ್ತ್ರ, ವೈದ್ಯಶಾಸ್ತ್ರ ಮುಂತಾದ ವಿಷಯಗಳಲ್ಲಿ ಉಪಯುಕ್ತವಾದ ಲೌಕಿಕ ಗ್ರಂಥಗಳನ್ನು ರಚಿಸುವುದರಲ್ಲಿಯೂ ಜೈನರು ಮೊದಲಿಗರಾಗಿದ್ದರು. ಪಾಣಿನಿಯ ವ್ಯಾಕರಣಕ್ಕೆ **ಶಬ್ದಾವತಾರ**ವೆಂಬ **ನ್ಯಾಸ** ಅಥವಾ ಟೀಕೆಯನ್ನು ಬರೆದನೆಂದು ಪೂಜ್ಯಪಾದ ಅಥವಾ ದೇವನಂದಿಯನ್ನು (ಕ್ರಿ.ಶ. 5 ಅಥವಾ 6ನೆಯ ಶತಮಾನ) ಶಿಲಾಶಾಸನಗಳು ಹೇಳುತ್ತವೆ; ಒಮ್ಮೊಮ್ಮೆ ಗಂಗರಾಜ ದುರ್ವಿನೀತನನ್ನೇ 'ಶಬ್ದಾವತಾರಕಾರ'ನೆಂದೂ ಸಂಬೋಧಿಸಲಾಗಿದೆ. ಈ ದೇವನಂದಿ–ಪೂಜ್ಯಪಾದನೇ ಇತ್ತೀಚೆಗೆ ಪ್ರಕಾಶನಗೊಂಡಿರುವ "ಜೈನೇಂದ್ರ ವ್ಯಾಕರಣ" ವೆಂಬ ಹೊಸ ವ್ಯಾಕರಣ ಪ್ರಕಾರದ (ಭಾರತೀಯ ವಿದ್ಯಾಪೀಠ, ಕಾಶಿ) ಪ್ರವರ್ತಕನೆಂಬುದು ನಿಸ್ಸಂಶಯ. ಈ ಗ್ರಂಥದ ಅವಲೋಕನದಿಂದ ಇವನು ಹೇಗೆ ಸಂಕ್ಷೇಪವಿಷಯದಲ್ಲಿ ಪಾಣಿನಿಯನ್ನು ಕೂಡ ಮೀರಿಸಲು ಹೊರಟನೆಂಬುದು ವ್ಯಕ್ತವಾಗುತ್ತದೆ. ಪಾಣಿನಿಯಲ್ಲಿದ್ದ ಸೂತ್ರಗಳನ್ನು ಮತ್ತಷ್ಟು ಸಣ್ಣನಾಗುವಂತೆ ಈತನು ದೀರ್ಘಸಂಜ್ಞೆಗಳನ್ನೆಲ್ಲ ಮಾರ್ಪಡಿಸಿದ್ದಾನೆ. ಮುಂದಿನ ಶತಮಾನಗಳಲ್ಲಿ ವಿಸ್ತೃತವಾದ ವ್ಯಾಕರಣವ್ಯಾಖ್ಯಾನಗಳು ಉದಿಸಲು ಇದು ಕೇಂದ್ರಬಿಂದುವನ್ನೊದಗಿಸಿತು. ವಸ್ತುತಃ ಸ್ಥೂಲದೃಷ್ಟಿಗೆ ಅದು ಪಾಣಿನಿವ್ಯಾಕರಣದ ಸಂಗ್ರಹ ದಂತೆಯೇ ಇದೆ.

ಸಂಸ್ಕೃತ ಗದ್ಯಕಾವ್ಯದ ಮಹಾಕವಿಯೂ ಪ್ರಾಚೀನ ಸಾಹಿತ್ಯಶಾಸ್ತ್ರದ ಗ್ರಂಥಕಾರರಲ್ಲೊಬ್ಬನೂ ಆಗಿರುವ ದಂಡಿ ಈಗ ನಮ್ಮ ಅವಗಾಹನೆಗೆ ಅರ್ಹನಾಗಿದ್ದಾನೆ. ಭಾರವಿಯ ಜೀವನ ಮತ್ತು ಕಾಲಗಳನ್ನು ವಿಮರ್ಶಿಸುತ್ತ ಈಗಾಗಲೇ ಈಚೆಗೆ ಪ್ರಕಾಶಿತವಾಗಿರುವ ಅವನ **ಅವಂತಿಸುಂದರೀಕಥೆ**ಯ ಬಗೆಗೆ ಹೇಳಲಾಯಿತು. ಈ ಕ್ಷೇತ್ರದಲ್ಲಿ ಇತ್ತೀಚಿನ ಸಂಶೋಧನೆಗಳು ಈ **ಅವಂತಿಸುಂದರೀಕಥೆಯೇ** ದಂಡಿಯ ಪ್ರಸಿದ್ಧ **ದಶಕುಮಾರಚರಿತೆ**ಯಲ್ಲಿ ಕಳೆದುಹೋಗಿರುವ **ಪೂರ್ವಪೀಠಿಕೆ** ಯಾಗಿರಬೇಕೆಂಬುದನ್ನು

ನಿರ್ದೇಶಿಸುತ್ತವೆ. ಪಲ್ಲವರಾಜ ನರಸಿಂಹವರ್ಮನ (ಸುಮಾರು ಕ್ರಿ.ಶ. 630–668) ಆಸ್ಥಾನದಲ್ಲಿ ದಂಡಿಯು ಮನ್ನಣೆ ಪಡೆದನು ; ಆತನ ಕೀರ್ತಿಯು ಕರ್ಣಾಟಕದಲ್ಲೆಲ್ಲ ಪಸರಿಸಿತ್ತೆಂಬುದನ್ನು ವಿಜಯಾದೇವಿ (ಸುಮಾರು ಕ್ರಿ. ಶ. 650) ಯೆಂಬ ಕವಯಿತ್ರಿಯು–ಈಕೆ ಚಾಲುಕ್ಯರ ಮಹಾಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಸೊಸೆ, ಚಂದ್ರಾದಿತ್ಯನ ಪತ್ನಿ–ಸುಭಾಷಿತವೊಂದು ಎತ್ತಿತೋರಿಸುತ್ತದೆ.

" ನೀಲೋತ್ಪಲದ ದಳದಂತೆ ಶ್ಯಾಮವರ್ಣೆಯಾಗಿರುವ ನನ್ನನ್ನು ಕಾಣದೆ ಹೋದ ಫಲವಾಗಿಯೇ ದಂಡಿಯು ಸರಸ್ವತಿ ಸರ್ವಶುಕ್ಲೆಯೆಂದು ತಪ್ಪುತಪ್ಪಾಗಿ ವರ್ಣಿಸಿದನು ".

ದಂಡಿಯ ಪ್ರಖ್ಯಾತ ಸಾಹಿತ್ಯಶಾಸ್ತ್ರಗ್ರಂಥ **ಕಾವ್ಯಾದರ್ಶ**ದ ಮಂಗಳಶ್ಲೋಕವನ್ನಿಲ್ಲಿ ಕಟಾಕ್ಷಿಸಿ ಹಾಸ್ಯಮಾಡಿದೆ. **ಕಾವ್ಯಾದರ್ಶ**ವೇ ನೃಪತುಂಗ ಅಥವಾ ಅಮೋಘವರ್ಷನು ಬರೆದನೆನ್ನಲಾಗಿರುವ (ಕ್ರಿ.ಶ. 9ನೆಯ ಶತಮಾನ) ಕನ್ನಡ ಲಕ್ಷಣಗ್ರಂಥ **ಕವಿರಾಜಮಾರ್ಗ**ಕ್ಕೂ ಮಾದರಿಯಾಯಿತು.

ಬಾಣನನ್ನು ನೆನಪಿಗೆ ತರುವ ಕೆಲವು ಶಬ್ದಸಾಮ್ಯಗಳಿರುವ **ಕಾವ್ಯಾದರ್ಶ**ವು ಮೂರು ಅಧ್ಯಾಯಗಳಲ್ಲಿದೆ. ಮೊದಲನೆಯದರಲ್ಲಿ ದಂಡಿಯು ಕಾವ್ಯಶಾಸ್ತ್ರದ ಪ್ರಯೋಜನಗಳನ್ನು ನಿರ್ದೇಶಿಸುತ್ತಾನೆ; ಕಾವ್ಯಪ್ರಭೇದಗಳನ್ನು ವಿಂಗಡಿಸಿಕೊಡುತ್ತಾನೆ ; ವೈದರ್ಭಿ ಹಾಗು ಗೌಡಿ ಎಂಬೆರಡು ಕಾವ್ಯಮಾರ್ಗಗಳನ್ನು ವಿಸ್ತಾರವಾಗಿ ವಿವರಿಸುತ್ತಾನೆ. ಎರಡನೆಯದರಲ್ಲಿ, ಅವನು ಮೂವತ್ತಕ್ಕೂ ಹೆಚ್ಚು ' ಅರ್ಥಾಲಂಕಾರ'ಗಳ ಬಗೆಗೆ ಪ್ರೌಢವೂ ಮನೋಹರವೂ ಆದ ನಿರೂಪಣೆಯನ್ನು ನೀಡುತ್ತಾನೆ. ಕಡೆಯ ಅಧ್ಯಾಯದಲ್ಲಿ ಯಮಕ, **ಅನುಪ್ರಾಸ**, ಮುಂತಾದ ' ಶಬ್ದಾಲಂಕಾರ'ಗಳ ಪ್ರಭೇದಗಳನ್ನೆಲ್ಲ ಪ್ರತಿಪಾದಿಸುತ್ತಾನೆ.

ದಂಡಿಯ ಜನಪ್ರಿಯ ಗದ್ಯಕೃತಿಯೇ **ದಶಕುಮಾರಚರಿತೆ.** ಹತ್ತು ರಾಜಕುಮಾರರ ಕಥೆಗಳೂ ಬಾಣನ ಕಥೆಗಿಂತ ಜೀವನಕ್ಕೆ ಹೆಚ್ಚು ನಿಕಟವಾಗಿವೆ ; ಅವುಗಳ ಶೈಲಿಯೂ ಅಷ್ಟು ಗಡುಚಲ್ಲ. ದಂಡಿಯ ಶೈಲಿಯು ವಿಲಾಸ ಮತ್ತು ಪ್ರಸನ್ನತೆಗಳಿಗೆ ಬಹು ಪ್ರಸಿದ್ಧವಾಗಿದೆ: 'ದಂಡಿನಃ ಪದಲಾಲಿತ್ಯಮ್'. ಅವನಲ್ಲಿ ಬೆಳಗುವ ಹಾಸ್ಯಪ್ರವೃತ್ತಿ ಮತ್ತು ವಿಡಂಬನ ದೃಷ್ಟಿಗಳು ಆಧುನಿಕ ವಾಚಕರ ಮೆಚ್ಚುಗೆಯನ್ನು ಕೂಡ ಗಳಿಸುವಂತಿವೆ. ದಶಕುಮಾರಚರಿತೆಯ ಆದ್ಯ ಶ್ಲೋಕವೊಂದನ್ನು ಎಂಟನೆಯ ಶತಮಾನದ ಅಮರಾವತಿ ಪಲ್ಲವ ಶಿಲಾಶಾಸನವೊಂದು (ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್, I. 26; ಕೀಲ್‌ಹಾರನ್ ಪಟ್ಟಿ ನಂಬರು–1903) ಉದಾಹರಿಸಿದೆ. ಹೀಗೆಯೇ ಅಚಲನೆಂಬ ಕವಿಯೊಬ್ಬನು ನಾಟ್ಯಾಚಾರ್ಯ ಭರತನನ್ನು ಪ್ರಶಂಸಿಸುವ ಎರಡು ಶ್ಲೋಕಗಳು ಏಳನೆಯ ಶತಮಾನದ ಪಟ್ಟದಕಲ್ಲಿನ ಶಿಲಾಸ್ತಂಭವೊಂದರ ಮೇಲೆ (ಕೀಲ್‌ಹಾರನ್ ಪಟ್ಟಿ ನಂಬರು 1042) ಕೊರೆಯಲ್ಪಟ್ಟಿವೆ.

ಡಾ॥ ಎ. ವೆಂಕಟಸುಬ್ಬಯ್ಯನವರ ಸಂಶೋಧನೆಗಳಿಂದ ಹತ್ತನೆಯ ಶತಮಾನದ ಅಂತ್ಯದಲ್ಲಿದ್ದ ಗಂಗರಸರಾದ ಬೂತುಗ ಮತ್ತು ರಕ್ಕಸಗಂಗರ ಆಸ್ಥಾನಗಳಲ್ಲಿ ಅನೇಕ ಸಂಸ್ಕೃತ ಮಹಾಗ್ರಂಥಕರ್ತೃಗಳಾದ ಜೈನರಿಗೆ ರಾಜಾಶ್ರಯ ದೊರೆತಿದ್ದಿತು. ಹೇಮಸೇನ ಉರುಫ್ ವಿದ್ಯಾಧನಂಜಯ ಉರುಫ್ ಧನಂಜಯನು ಸಂಸ್ಕೃತಮಹಾಕಾವ್ಯಗಳ ಇತಿಹಾಸದಲ್ಲಿ ಮೊತ್ತಮೊದಲ ದುಷ್ಕರಕವಿತ್ವಯತ್ನವಾಗಿರುವ **ರಾಘವ ಪಾಂಡವೀಯ**ವನ್ನು ರಚಿಸಿದನು ; ಇದಕ್ಕೆ ' ದ್ವಿಸಂಧಾನಕಾವ್ಯ 'ವೆಂದೂ ಹೆಸರು. ಶ್ಲೇಷೆಯಿಂದ ಒಂದೊಂದು ಪದ್ಯವೂ ಒಮ್ಮೆ ರಾಮಾಯಣಕಥೆ, ಇನ್ನೊಮ್ಮೆ ಮಹಾಭಾರತ ಕಥೆ ಹೀಗೆ ಎರಡನ್ನೂ ಏಕಕಾಲದಲ್ಲಿ ನಿರೂಪಿಸುತ್ತದೆ. ಅವನ ಶಿಷ್ಯನೇ ವಾದೀಭಸಿಂಹ ಉರುಫ್ ಒಡೆಯದೇವ ಉರುಫ್ ಶ್ರೀವಿಜಯ ; ಈತನು ಬಾಣನ ಮಾದರಿಯನ್ನನುಸರಿಸಿ **ಗದ್ಯಚಿಂತಾಮಣಿ** ಮತ್ತು **ಕ್ಷತ್ರಚೂಡಾಮಣಿ** ಎಂಬ ಎರಡು ಗದ್ಯಕಾವ್ಯಗಳನ್ನು ರಚಿಸಿ ಪ್ರಖ್ಯಾತನಾಗಿರುವನು. ಇವುಗಳ ವಸ್ತು ಜೈನ ನೀತಿಕಥೆಗಳು. ಇಲ್ಲಿ

ಉಲ್ಲೇಖಾರ್ಹರಾದ ಇತರರೆಂದರೆ ಬಹುಪ್ರಸಿದ್ಧ **ಚಂದ್ರಪ್ರಭಪುರಾಣವನ್ನು** ಬರೆದ ವೀರನಂದಿ ಮತ್ತು ಸಂಸ್ಕೃತದಲ್ಲಿ **ವರ್ಧಮಾನಪುರಾಣವನ್ನು** ಬರೆದ ಅಸಗ. ಅಸಗನು ಎಷ್ಟು ಪ್ರಸಿದ್ಧಿಗೆ ಬಂದಿದ್ದನೆನ್ನುವುದನ್ನು ಅವನ ಬಗೆಗೆ ಕನ್ನಡ ಕವಿಚಕ್ರವರ್ತಿ ಪೊನ್ನನು ಹೆಸರಿಸುವುದು ಎತ್ತಿತೋರಿಸುತ್ತದೆ.

ಪ್ರಾಚೀನಯುಗದ ಧಾರ್ಮಿಕಸಾಹಿತ್ಯ ಮತ್ತು ತತ್ತ್ವಶಾಸ್ತ್ರದ ಸಾಹಿತ್ಯದ ಕಡೆಗೆ ತಿರುಗಿದರೆ, ಈಗಿನ ವಿದ್ವತ್ತೆಯ ಪರಿಸ್ಥಿತಿಯಲ್ಲಿ ಯಾವ ಗ್ರಂಥಕಾರರು ಕರ್ಣಾಟಕದವರಾಗಿದ್ದರೆಂದು ಖಚಿತವಾಗಿ ಹೇಳುವುದು ದುಷ್ಕರವಾಗಿವೆ ; ಸಾಮಾನ್ಯವಾಗಿ ತಿಳಿಯುವ ವಿಷಯವಿಷ್ಟು :—ಸೂತ್ರಕಾರರಲ್ಲಿ (ಸೂತ್ರಗಳನ್ನು ಬರೆದವರಲ್ಲಿ) ಆಪಸ್ತಂಭ ಮತ್ತು ಹಿರಣ್ಯಕೇಶಿಗಳು, ವೈಯಾಕರಣರಲ್ಲಿ ಕಾತ್ಯಾಯನ, ಬೌದ್ಧತಾರ್ಕಿಕರಲ್ಲಿ ನಾಗಾರ್ಜುನ, ದಿಙ್ನಾಗ ಮತ್ತು ಧರ್ಮಕೀರ್ತಿ, ಜೈನ ದಾರ್ಶನಿಕರಲ್ಲಿ ಸಮಂತಭದ್ರ—ಮುಂತಾದವರೆಲ್ಲರೂ ದಕ್ಷಿಣ ಭಾರತದಲ್ಲಿದ್ದವರು. ಆದರೆ ಬಹಳ ಪ್ರಾಚೀನಕಾಲದಿಂದಲೂ ವೇದವೇದಾಂಗಗಳ ಮತ್ತು ಸಂಸ್ಕೃತದ ಶಾಸ್ತ್ರ ಪುರಾಣಗಳ ಅಧ್ಯಯನವು ಕರ್ಣಾಟಕದಲ್ಲಿ ಪ್ರಚಲಿತವಿತ್ತೆಂಬುದಕ್ಕೆ ಅಸಂಖ್ಯ ಶಿಲಾ ಶಾಸನಗಳು ಆಧಾರವನ್ನೊದಗಿಸುತ್ತವೆ.

ಶೃಂಗೇರಿಯು ಶಂಕರಾಚಾರ್ಯರ ವೇದಾಂತ ಪ್ರಸಾರಕಾರ್ಯಕ್ಕೆ ಕ್ಷೇತ್ರವನ್ನೊದಗಿಸಿತೆಂದು ಊಹಿಸಿದರೆ ತಪ್ಪಾಗದು; ಅವರ ಶಿಷ್ಯರಾದ ಪದ್ಮಪಾದ, ಸುರೇಶ್ವರ ವಿಶ್ವರೂಪ ಮುಂತಾದವರಿಗೂ ಅದು ಕ್ಷೇತ್ರವನ್ನೊದಗಿಸಿರಬಹುದು.

ಕಾಲದ ದುಷ್ಪರಿಣಾಮದಿಂದ ಅನೇಕ ಕೃತಿಗಳು ನಷ್ಟವಾಗಿ ಹೋಗಿದ್ದರೂ, ಮೇಲೆ ಅವಲೋಕಿಸಿದ ಕೆಲವೇ ಉಪಲಬ್ಧ ಕೃತಿಗಳು ಕೂಡ ಈ ಕಾಲಾವಧಿಯಲ್ಲಿ (ಕ್ರಿ.ಶ. 4ರಿಂದ 10ನೆಯ ಶತಮಾನದವರೆಗೆ, ಸಾತವಾಹನ, ಕದಂಬ, ಪಲ್ಲವ, ಗಂಗ ರಾಜರ ಆಶ್ರಯದಲ್ಲಿ) ಸಂಸ್ಕೃತದ ಮೂಲಕ ಭಾರತೀಯ ಸಂಸ್ಕೃತಿಗೆ ಕರ್ಣಾಟಕವಿತ್ತ ಕಾಣಿಕೆ ಸಣ್ಣದಲ್ಲ, ಉಪೇಕ್ಷಾರ್ಹವೂ ಅಲ್ಲವೆಂಬುದನ್ನು ತೋರಿಸುತ್ತವೆ.

ಮೂಲಲೇಖಕರು ಮತ್ತು ಅನುವಾದಕರು :
ಡಾ॥ ಕೆ. ಕೃಷ್ಣಮೂರ್ತಿ

# ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ (ಆರಂಭಕಾಲ)

ಲಲಿತಕಲೆಗಳಲ್ಲಿ ಪಡೆದ ಸಿದ್ಧಿಯು ಸಾಮಾನ್ಯವಾಗಿ ದೇಶದ ಸಂಸ್ಕೃತಿ ಹಾಗೂ ನಾಗರಿಕತೆಗಳ ಮಟ್ಟವನ್ನು ಪ್ರತಿಬಿಂಬಿಸುತ್ತದೆ. ಈ ಸೂತ್ರವನ್ನನುಸರಿಸಿ ನಿರ್ಣಯಿಸುವುದಾದರೆ ಕರ್ಣಾಟಕವು ಬಹು ಹಿಂದಿನಿಂದಲೂ ಈ ದಿಶೆಯಲ್ಲಿ ಉನ್ನತ ಮಟ್ಟದ ಸಿದ್ಧಿಯನ್ನು ಗಳಿಸಿರುವುದು ಕಂಡುಬರುತ್ತದೆ. ಭಾರತ ದ್ವೀಪಕಲ್ಪದ ನೈಋತ್ಯ ಭಾಗದಲ್ಲಿರುವ ಕರ್ಣಾಟಕದ ಪ್ರಸ್ಥಭೂಮಿಯು ಉತ್ತರದಿಂದ ದಕ್ಷಿಣಕ್ಕೂ ದಕ್ಷಿಣದಿಂದ ಉತ್ತರಕ್ಕೂ ಸಾಗಿಬರುತ್ತಿದ್ದ ಸಂಸ್ಕೃತಿ ಪ್ರವಾಹಗಳ ಸಂಗಮ ಕ್ಷೇತ್ರವಾಯಿತು. ಈ ಮಾತು ಧಾರ್ಮಿಕ ಹಾಗೂ ದಾರ್ಶನಿಕ ಚಲನವಲನಗಳಿಗೆ ಅನ್ವಯಿಸುವಷ್ಟೇ ಮಟ್ಟಿಗೆ ವಾಸ್ತುಶಿಲ್ಪ, ಮೂರ್ತಿಶಿಲ್ಪ, ವರ್ಣಚಿತ್ರಣ ಹಾಗೂ ಸಂಗೀತ ಕಲೆಗಳ ಅಭಿವ್ಯಕ್ತಿಗೂ ಅನ್ವಯಿಸುತ್ತದೆ. ಪ್ರಾಚೀನ ಕಾಲದ ವರ್ಣಚಿತ್ರಣ ಮತ್ತು ಸಂಗೀತ ಕಲೆಗಳ ಅಭಿವ್ಯಕ್ತಿಯನ್ನು ದೃಢಪಡಿಸುವ ಅಂಗೀಕಾರಯೋಗ್ಯವಾದ ಸಾಕಷ್ಟು ಸಾಕ್ಷಿ ಪ್ರಮಾಣಗಳು ದುರದೃಷ್ಟದಿಂದ ನಮ್ಮಲ್ಲಿ ಉಳಿದುಬಂದಿಲ್ಲ. ಆದರೆ ಬಹುಕಾಲ ಬಾಳತಕ್ಕ ಕಲ್ಲು ವೊದಲಾದ ಸಾಮಗ್ರಿಗಳಿಂದ ಮಾಡಿದ ಮೂರ್ತಿಶಿಲ್ಪ ವಾಸ್ತುಶಿಲ್ಪದ ಮಾದರಿಗಳು ತಕ್ಕಮಟ್ಟಿಗೆ ಉಳಿದುಬಂದಿವೆ.

ಈಗ ಕರ್ಣಾಟಕದ ಆರಂಭಕಾಲದ ವಾಸ್ತುಶಿಲ್ಪ ಮೂರ್ತಿಶಿಲ್ಪಗಳನ್ನು ಪರಿಶೀಲಿಸೋಣ.

ಪುರಾತನ ಭಾರತೀಯ ಶಿಲ್ಪಕಲೆಯ ಮೇಲಿನ ಮುಖ್ಯ ಆಧಾರ ಗ್ರಂಥವಾದ 'ಮಾನಸಾರ'ದ ಪ್ರಕಾರ ಮೂರ್ತಿಶಿಲ್ಪಕ್ಕೂ ವಾಸ್ತುಶಿಲ್ಪಕ್ಕೂ ಅಷ್ಟೇನೂ ವ್ಯತ್ಯಾಸವಿಲ್ಲ. ವಾಸ್ತವವಾಗಿ 'ವಾಸ್ತು' ಎಂಬ ಮಾತು ಎರಡನ್ನೂ ಒಳಗೊಂಡಿದೆ. ಭಾರತದ ಹಾಗೂ ಕರ್ಣಾಟಕದ ಚರಿತ್ರೆಯ ಆರಂಭಕಾಲದ ವಾಸ್ತು ಶಿಲ್ಪಕಲೆಯನ್ನು ವಿವೇಚಿಸುವಾಗ ಈ ಮಾತಿನ ವಿಶೇಷಾರ್ಥವನ್ನು ಜ್ಞಾಪಕದಲ್ಲಿಟ್ಟಿರಬೇಕು.

ಕರ್ಣಾಟಕದಲ್ಲಿ ವಾಸ್ತುಶಿಲ್ಪವು ಕಾಣಿಸಿಕೊಂಡದ್ದು ಯಾವಾಗ ? ಅಶೋಕನ ಕಾಲಕ್ಕೂ ಮೊದಲು ಇಲ್ಲಿ ವಾಸ್ತುಶಿಲ್ಪವಿದ್ದುದುಂಟೆ ? ಹಾಗಿದ್ದುದಾದರೆ ಅವು ಉಳಿದುಬಂದಿಲ್ಲ. ಆಗಿನ ಕಟ್ಟಡಗಳು ಭರತ ಖಂಡದ ಬೇರೆ ಭಾಗಗಳಂತೆ ಇಲ್ಲಿಯೂ ಬಹುಶಃ ಮರಮಟ್ಟುಗಳಿಂದ ಕಟ್ಟಿದವಾಗಿದ್ದು ನಾಶವಾಗಿರ ಬಹುದು. ಅಶೋಕನ ಕಾಲದಲ್ಲಿ ಕರ್ಣಾಟಕದಲ್ಲಿಯೂ ಸ್ತೂಪಗಳನ್ನು ಕಟ್ಟಿದ್ದಿರಬಹುದು. ಅಶೋಕನ ಕಾಲದ ಮುಖ್ಯ ಪ್ರಾದೇಶಿಕ ಪಟ್ಟಣವಾಗಿದ್ದ ಮಾಸ್ಕಿಯಂಥ ಸ್ಥಳಗಳಲ್ಲಿಯೂ ಸ್ತೂಪವಿನ್ಯಾಸದ ಗುರುತು ಕೂಡ ದುರದೃಷ್ಟದಿಂದ ಉಳಿದಿಲ್ಲ. ಬ್ರಹ್ಮಗಿರಿ (ಅಶೋಕನ ಇಸಿಲ)ಯಲ್ಲಿ ಸರ್‌ಮಾರ್ಟಿಮರ್ ವ್ಹೀಲರ್ (Sir Mortimer Wheeler) ನಡೆಸಿದ ಭೂಶೋಧನೆಯಲ್ಲಿ ಕಟ್ಟಡದ ವಿನ್ಯಾಸಗಳು ಸಾಮಾನ್ಯವಾಗಿ ಕಂಡುಬರದಿದ್ದರೂ ಇಟ್ಟಿಗೆಯ ಸಣ್ಣ ಚೈತ್ಯವೊಂದು ಕಂಡುಬಂದಿತು. ಅದೂ ವಿಷಾದವೆನಿಸುವಷ್ಟು ನಾಶವಾಗಿದ್ದುದು ದುರ್ದೈವದ ಸಂಗತಿ.

ಕರ್ಣಾಟಕದಲ್ಲಿ ಶಾತವಾಹನರ ಕಾಲದ ಶಿಲ್ಪ ಸ್ಮಾರಕಗಳ ವಿಷಯದಲ್ಲಿಯೂ ನಾವು ಇದೇ ರೀತಿಯ ಅನಿಶ್ಚಿತ ಸ್ಥಿತಿಯಲ್ಲಿದ್ದೇವೆ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯಲ್ಲಿ ನಡೆಸಿದ ಭೂಶೋಧನೆಗಳಲ್ಲಿ

ಶಾತವಾಹನರ ಕಾಲದ ಕಟ್ಟಡಗಳ ಅವಶೇಷಗಳು ಕಂಡುಬರದಿದ್ದರೂ, ಕೆಲವು ದೊಡ್ಡ ಅಳತೆಯ (16"×10"×3") ಇಟ್ಟಿಗೆಗಳು ದೊರಕಿದವು. ಇದರಿಂದ ಆ ಕಾಲದಲ್ಲಿ ಇಟ್ಟಿಗೆಯ ಕಟ್ಟಡಗಳಿದ್ದ ವೆಂಬುದು ಸೂಚಿತವಾಗುತ್ತದೆ.

ಕದಂಬರು ಕರ್ನಾಟಕದ ವಾಸ್ತುಶಿಲ್ಪಕಲೆಯ ತಳಹದಿಯನ್ನು ಹಾಕಿದರು. ಅವರು ಬನವಾಸಿ ಯಲ್ಲಿಯೂ ಹಲವು ದೇವಾಲಯಗಳನ್ನು ಕಟ್ಟಿದರು. ವಾಸ್ತುಶಿಲ್ಪದ ವಿಚಾರವಾಗಿ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಬರೆದ ಫರ್ಗ್ಯುಸನ್, ಅನಂತರ ಇಪ್ಪತ್ತನೆಯ ಶತಕದಲ್ಲಿ ಬರೆದ ಡಾ|| ಕಸಿನ್ಸ್ ಇವರುಗಳು ಕದಂಬರ ಕಟ್ಟಡಗಳನ್ನು ಚಾಲುಕ್ಯರ ಕಟ್ಟಡಗಳಿಂದ ಪ್ರತ್ಯೇಕಿಸಲಿಲ್ಲ. ದೇವಾಲಯದ ಒಳ ಸಂಪುಟವಾದ ಗರ್ಭಗೃಹದಿಂದ ಅದರ ಹೊರಗಿನ ಕಂಬಸಾಲಿನ ತೊಟ್ಟಿಯಾದ ಸುಖನಾಸಿಯನ್ನು ಮೊತ್ತ ಮೊದಲು ಬೇರ್ಪಡಿಸಿದವರು ಕದಂಬರೆಂದು ಡಾ|| ಮೊರೇಸ್ ಸೂಚಿಸಿದ್ದಾರೆ.

ಕದಂಬರ ಪ್ರಾರಂಭಕಾಲದ ಕೆಲವು ಕಟ್ಟಡಗಳು ಇನ್ನೂ ಉಳಿದುಬಂದಿದೆ. ಕದಂಬರಾಜರಾದ ಕಾಕುತ್ಸ್ಥ ಹಾಗೂ ಶಾಂತಿವರ್ಮರ (ಕ್ರಿ.ಶ. 5ನೆಯ ಶತಕ) ತಾಳಗುಂದ ಶಿಲಾಲೇಖದಲ್ಲಿ ಶಾತಕರ್ಣಿ ಮತ್ತು ಇನ್ನೂ ಕೆಲವರು ಪೂಜೆ ಸಲ್ಲಿಸಿದ ಪ್ರಣವೇಶ್ವರ ದೇವಾಲಯದ ಪ್ರಸ್ತಾಪವಿದೆ. ಕ್ರಿ.ಶ. 450 ಕ್ಕೂ ಹಿಂದೆ ಈ ದೇವಾಲಯವಿದ್ದಿತೆಂಬುದು ಇದರಿಂದ ಗೊತ್ತಾಗುತ್ತದೆ. ಈ ದೇವಾಲಯದ ಗರ್ಭಗೃಹದ ಬಾಗಿಲವಾಡದ ಮೇಲೆ ಶಾಂತಿವರ್ಮನ ಮಗನೂ ಉತ್ತರಾಧಿಕಾರಿಯೂ ಆದ ಮೃಗೇಶವರ್ಮನ ರಾಣಿ ಪ್ರಭಾವತಿಯ ಒಂದು ಶಾಸನವಿದೆ. ಹಲಸಿಯಲ್ಲಿರುವ ಜೈನಬಸದಿಯೂ ಕದಂಬರ ಆರಂಭಕಾಲದ ಒಂದು ಕಟ್ಟಡ. ಇದನ್ನು ಮೃಗೇಶವರ್ಮನು ಕಟ್ಟಿಸಿದನೆಂದು ಶಾಸನಾಧಾರದಮೇಲೆ ಡಾ|| ಫ್ಲೀಟ್ ಅಭಿಪ್ರಾಯ ಪಟ್ಟಿದ್ದಾರೆ. ಐಹೊಳೆಯ ದುರ್ಗಾದೇವಾಲಯವೂ ಮಾಮಲ್ಲಪುರದ ಒಂದೊಂದೇ ಬಂಡೆಯಲ್ಲಿ ಕೊರೆದ ಹಲವು ಗುಡಿಗಳೂ ಈ ಎರಡು ಕದಂಬ ದೇವಾಲಯಗಳಷ್ಟು ಪ್ರಾಚೀನವಾದವುಗಳಲ್ಲ.

ಕದಂಬರ ವಾಸ್ತುಶಿಲ್ಪಕಲೆಯ ಮುಂದಿನ ಹಂತವನ್ನು ಘನಾಕೃತಿಯ ಮತ್ತು ಅಷ್ಟಾಸ್ರಾಕೃತಿಯ ಕಂಬಗಳಿಂದ ಕೂಡಿದ ಹಲಸಿಯ ಕಲ್ಲೇಶ್ವರ ದೇವಾಲಯದಲ್ಲಿ ಕಾಣುತ್ತೇವೆ. ಗರ್ಭಗೃಹ ಸುಖನಾಸಿಗಳಿಗೆ ಮಂಟಪವನ್ನೂ ಸೇರಿಸಿರುವುದನ್ನು ಇಲ್ಲಿ ನೋಡಬಹುದು.

ಯಲವಟ್ಟಿಯ ಕದಂಬ ದೇವಾಲಯದಲ್ಲಿ ಸಮತಲವಾದ ಮೆಟ್ಟಿಲುಗಳುಳ್ಳ ಸೂಚ್ಯಾಕಾರದ (ಪಿರಮಿಡ್ ಆಕಾರದ) ಶಿಖರವನ್ನು ಕಾಣುತ್ತೇವೆ. ಇದು ಪೂರ್ಣವಿಕಾಸಗೊಂಡ ಕದಂಬ ವಾಸ್ತುಶಿಲ್ಪ ರೀತಿಯ ವೈಶಿಷ್ಟ್ಯ. ಈ ವೈಶಿಷ್ಟ್ಯವನ್ನು ದಕ್ಷಿಣ್ ಪ್ರದೇಶದ ಇತರ ಶಿಲ್ಪ ಶಾಖೆಗಳವರು ಅಳವಡಿಸಿ ಕೊಂಡರೆಂದೂ ಇದು ಹೊಯ್ಸಳ ವಂಶದ ವಿಷ್ಣುವರ್ಧನನು (ಕ್ರಿ.ಶ. 1110–52) ಕಟ್ಟಿಸಿದ ಹಾಸನ ಜಿಲ್ಲೆಯ ದೊಡ್ಡಗದ್ದವಳ್ಳಿ ಲಕ್ಷ್ಮೀ ದೇವಾಲಯದಲ್ಲಿ ನಿದರ್ಶನಕ್ಕೆ ಬರುವದೆಂದೂ ಡಾ|| ಮೊರೇಸ್ ಅವರು ಅಭಿಪ್ರಾಯಪಡುತ್ತಾರೆ.

ಮೈಸೂರಿನ ಗಂಗರು (ಕ್ರಿ.ಶ. ಸು. 400–1000) ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಹೆಚ್ಚಿನ ಪ್ರಗತಿಗೆ ಕಾರಣರಾದರು. ಆದರೆ ಅವರ ಅನೇಕ ಭವ್ಯ ಮಂದಿರಗಳು ಅವರ ರಾಜಧಾನಿಯಾದ ತಲಕಾಡಿನ ಮರಳಿನಲ್ಲಿ ಹೂತುಹೋಗಿವೆ. ಆ ಊರಿನ ಸುತ್ತಮುತ್ತಲೂ ಚೆದರಿ ಬಿದ್ದಿರುವ ಕಗ್ಗಲ್ಲಿನ, ಹೆಚ್ಚು ದಪ್ಪ ವಿಲ್ಲದ ಅನೇಕ ಕಂಬಗಳನ್ನು ನೋಡಬಹುದು. ಇವು ಬುಡದಲ್ಲಿ ಚಚ್ಚೌಕವಾಗಿದ್ದು, ಕ್ರಮೇಣ ತುದಿಯ ಕಡೆಗೆ ಗಾತ್ರವು ಕಡಮೆಯಾಗಿ, ಮೇಲುಗಡೆ ಬೋದಿಗೆಯ ಕೆಳಗೆ ಗಾಲಿಯನ್ನು ಒತ್ತಿ ಕೂಡಿಸಿರುವಂತೆ ಇರುತ್ತವೆ. ಇವುಗಳಲ್ಲಿ ಅರ್ಧ ಒಡೆದುಹೋಗಿರುವವೂ ಕೆಲವುಂಟು. ಹಲವು ಕಂಬಗಳನ್ನು ಕಿತ್ತು

ಅನಂತರದ ಕಟ್ಟಡಗಳಿಗೆ ಉಪಯೋಗಿಸಲಾಗಿದೆ. ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ ದೇವಾಲಯಗಳನ್ನು ಈ ಕಾಲದವೆಂದು ಹೇಳಬಹುದು. ಗಂಗರ ಸುಪ್ರಸಿದ್ಧ ರಾಜಧಾನಿಯಾದ ಮನ್ನೆ ಎಂಬಲ್ಲಿರುವ ಕಪಿಲೇಶ್ವರ ದೇವಾಲಯವೂ ಹಾಗೂ ಅದೇ ಊರಿನ ಸೋಮೇಶ್ವರ ದೇವಾಲಯವೂ ಇಟ್ಟಿಗೆಯ ಕಟ್ಟಡಗಳು. ಇವು ಬಹುಶಃ ಕ್ರಿ.ಶ. 8ನೆಯ ಶತಮಾನದವೆಂದು ಹೇಳಬಹುದು.

ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಗಂಗರ ಕಾಲದ ಕೆಲವು ಕಟ್ಟಡಗಳಿವೆ. ಚಂದ್ರಪ್ರಭ ಬಸದಿ ಕ್ರಿ.ಶ. 800 ರ ಸುಮಾರಿನಲ್ಲಿ ಶಿವಮಾರನು ಕಟ್ಟಿಸಿದ್ದು. ಎರಡು ಉಪ್ಪರಿಗೆಗಳಿಂದ ಕೂಡಿದ ಚಾವುಂಡರಾಯ ಬಸದಿಯನ್ನು ಕ್ರಿ.ಶ. 982 ರಲ್ಲಿ ಚಾವುಂಡರಾಯನು ಕಟ್ಟಿಸಿದನು. ಅದೇ ಊರಿನ ದೊಡ್ಡ ಬೆಟ್ಟದ ಮೇಲಿರುವ ಜಗತ್ಪ್ರಸಿದ್ಧವಾದ ಗೊಮ್ಮಟ ವಿಗ್ರಹವು ಕಗ್ಗಲ್ಲಿನ ಕೋಡು ಬಂಡೆಯನ್ನು ಕೊರೆದು ಮಾಡಿದ್ದು. ಇದನ್ನು ಗಂಗರಾಜ ರಾಚಮಲ್ಲನ (ಕ್ರಿ.ಶ. 974–994) ಮಂತ್ರಿ ಚಾವುಂಡರಾಯನು ಮಾಡಿಸಿದನು. ಬೃಹತ್ತು ಮಹತ್ತಿನಿಂದ ಕೂಡಿದ ಈ ಅದ್ಭುತ ಮೂರ್ತಿಶಿಲ್ಪಸೃಷ್ಟಿಯು ಕ್ರಿ.ಶ. 983ರಲ್ಲಿ ಮುಗಿಯಿತು. ಮೂರ್ತಿಶಿಲ್ಪ ಕಲಾಕ್ಷೇತ್ರದಲ್ಲಿ ಪ್ರಾಚೀನ ಕರ್ಣಾಟಕವು ಸಾಧಿಸಿದ ಮಹತ್ ಸಿದ್ಧಿಗಳಲ್ಲಿ ಇದೂ ಒಂದೆಂದು ಧೈರ್ಯವಾಗಿ ಹೇಳಬಹುದು.

ಮಾರಸಿಂಹನ ಗೌರವಾರ್ಥವಾಗಿ ಕ್ರಿ.ಶ. 974 ರಲ್ಲಿ ನಿರ್ಮಿಸಿದ ಬೃಹದಾಕಾರದ ಬ್ರಹ್ಮದೇವರ ಕಂಬವೂ ಹಾಗೂ ಕ್ರಿ.ಶ. 986ರ ಚಾವುಂಡರಾಯನ ತ್ಯಾಗದ ಬ್ರಹ್ಮದೇವರ ಕಂಬವೂ ಜೈನಮತೀಯರ ವೈಶಿಷ್ಟ್ಯವಾದ, ಕೊರೆದು ನಿಲ್ಲಿಸಿದ ಕಂಬಗಳ ಶ್ರೇಷ್ಠವಾದ ಮಾದರಿಗಳು. ತ್ಯಾಗದ ಬ್ರಹ್ಮದೇವರ ಕಂಬವು ಗುಂಡಾಗಿದೆ. ಈ ಕಂಬದಲ್ಲಿ ಅನೇಕ ಕವಲುಗಳನ್ನೊಳಗೊಂಡ ಬಳ್ಳಿಯು, ಸುರುಳಿ ಸುರುಳಿಯಾಗಿ ಸುತ್ತಿಕೊಂಡು ಹಬ್ಬಿರುವಂತೆ ಸುಂದರವಾಗಿ ಕೊರೆದಿರುವ ಪಟ್ಟಿಕೆಯಿದೆನ ಕಂಬದ ತಳಭಾಗದ ಒಂದು ಪಕ್ಕದಲ್ಲಿ ಚಾವುಂಡರಾಯನ ಮತ್ತು ಆತನ ಗುರು ನೇಮಿಚಂದ್ರ ಇಬ್ಬದಿಗಳಲ್ಲೂ ಚಾಮರಧಾರಿಗಳಿರುವಂತೆ ಕೆತ್ತಲಾಗಿದೆ.

ತುಮಕೂರು ಜಿಲ್ಲೆಯ ಬಾಣಸಂದ್ರದ ಪಶ್ಚಿಮಕ್ಕೆ ಮೂರುವರೆ ಮೈಲಿಗಳ ದೂರದಲ್ಲಿರುವ ಅರಳಗುಪ್ಪೆಯಲ್ಲಿ ಕಲ್ಲೇಶ್ವರ ದೇವಾಲಯವಿದೆ. ಇದನ್ನು ಬಹುಮಟ್ಟಿಗೆ ಪುನಃ ರಚಿಸಲಾಗಿದೆ. ಆದರೂ ಒಳಭಾಗದಲ್ಲಿ ಇದರ ರಚನಾ ವೈಶಿಷ್ಟ್ಯಕ್ಕೆ ಒಟ್ಟಿನಮೇಲೆ, ನ್ಯೂನತೆ ಬಂದಿಲ್ಲ. ಸುಂದರವಾಗಿ ಕಂಡರಿಸಿರುವ ಕಗ್ಗಲ್ಲಿನ ದ್ವಾರಬಂಧ, ಶ್ರವಣಬೆಳಗೊಳದವುಗಳಿಗೆ ಹೋಲಿಸಬಹುದಾದ ಹೆಚ್ಚು ದಪ್ಪವಲ್ಲದ ಸುಂದರವಾದ ಕಂಬಗಳು, ಇವುಗಳಿಂದ ಕೂಡಿದ ಅಂದವಾಗಿ ಕೆತ್ತನೆಯ ಕೆಲಸ ಮಾಡಿದ ಮೇಲ್ಚಾವಣಿಯುಳ್ಳ ನವರಂಗ, ಇವು ಈ ದೇವಾಲಯವು ಗಂಗರ ಕಾಲದ್ದೆಂದು ಹೇಳುವುದಕ್ಕೆ ಸಹಕಾರಿಯಾಗಿವೆ. ರಚನಾರೀತಿಯ ಸಾಕ್ಷ್ಯವೇ ಅಲ್ಲದೆ, ಈ ದೇವಾಲಯದ ಆವರಣದಲ್ಲಿ ಗಂಗರಾಜ ಸತ್ಯವಾಕ್ಯ ರಾಚಮಲ್ಲ ಪೆರ್ಮಾನಡಿಯ ಆಳಿಕೆಯ ಕಾಲದ ಒಂದು ವೀರಗಲ್ಲೂ ಇದೆ. ಈ ರಾಜನ ಕಾಲ ಕ್ರಿ.ಶ. 10ನೆಯ ಶತಮಾನದ ಉತ್ತರಾರ್ಧದ ಮೊದಲ ವರ್ಷಗಳು.

ನವರಂಗದ ಮೇಲ್ಚಾವಣಿಯಲ್ಲಿ ತಟ್ಟೆಯಾದ ಒಂಬತ್ತು ಭುವನೇಶ್ವರಿಗಳಿವೆ. ಮಧ್ಯದಲ್ಲಿರುವ ಭುವನೇಶ್ವರಿಯಲ್ಲಿ ಉಭಯ ಪಾರ್ಶ್ವಗಳಲ್ಲಿಯೂ ಅಷ್ಟದಿಕ್ಪಾಲಕರುಗಳಿಂದ ಕೂಡಿ ತಾಂಡವ ನೃತ್ಯದಲ್ಲಿ ತೊಡಗಿರುವ ಶಿವನ ಮೂರ್ತಿ ಇದೆ. ಅಷ್ಟದಿಕ್ಪಾಲಕರುಗಳು ಸುಂದರವಾಗಿವೆ. ಪ್ರತಿಯೊಬ್ಬ ದಿಕ್ಪಾಲಕನೂ ಹೆಂಡತಿಯೊಡನೆ ತನ್ನ ವಾಹನದ ಮೇಲೆ ಕುಳಿತು ಶಿವನನ್ನು ಅಭಿವಂದಿಸಲೋ ಎಂಬಂತೆ ಬಲಗೈಯನ್ನು ಮೇಲೆತ್ತಿರುವ ಹಾಗೆ ಕೊರೆಯಲಾಗಿದೆ. ಇವುಗಳಲ್ಲಿ ಮೊಸಳೆಯ ವಾಹನವುಳ್ಳ ವರುಣನ ಹಾಗೂ ಐರಾವತವನ್ನೇರಿದ ಇಂದ್ರನ ಆಕೃತಿಗಳು ಬಹು ಸೊಗಸಾದ ಕಲಾಸೃಷ್ಟಿಗಳು ; ದಕ್ಷಿಣ ಭಾರತದ ಆ ಕಾಲದ

ಮೂರ್ತಿಶಿಲ್ಪದಲ್ಲಿ ಇಂಥವು ಬೇರೆ ಎಲ್ಲಿಯೂ ಕಂಡುಬರಲಾರವು. ಶಿವನ ಜಟಾಮಕುಟವು ಪಟ್ಟಿಯಿಂದ ಕಟ್ಟಲ್ಪಟ್ಟಿದೆ. ಇದರಲ್ಲಿ ಖಂಡಚಂದ್ರಬಿಂಬವೂ ಇದೆ. ಇಷ್ಟೇ ಅಲ್ಲದೆ, ಶಿವಮೂರ್ತಿಯನ್ನು ಆಭರಣಗಳಿಂದ ಪರಿಪೂರ್ಣವಾಗಿ ಅಲಂಕರಿಸಲಾಗಿದೆ. ಕಂಠ, ಬಾಹುಗಳು ಹಾಗೂ ಸೊಂಟದಲ್ಲಿ ಸೊಗಸಾದ ಆಭರಣಗಳಿವೆ. ಕೊರಲಿನಲ್ಲಿ ಸುಂದರವಾದ ಕಂಠೀಹಾರವಿದೆ; ಬಲಗಿವಿಯಲ್ಲಿ ಮಕರಕುಂಡಲವೂ ಎಡಗಿವಿಯಲ್ಲಿ ನಾಗಕುಂಡಲವೂ ಇವೆ. ಸೊಂಟದ ಉಡಿಗೆಯ ಇಬ್ಬದಿಗಳಲ್ಲಿಯೂ ಒಂದೊಂದು ಗಂಟಿದೆ. ಗಂಟಿನ ಮೇಲೆ ಕಿರೀಟಾಕಾರದ ಒಂದು ಆಭರಣವಿದೆ. ಇದನ್ನು ಸೊಂಟಪಟ್ಟಿಯಿಂದ ಬಿಗಿದಿದೆ. ಪಟ್ಟಿಯ ಕೊಂಡಿ ಸಿಂಹಶಿರದಂತೆ ಕಾಣಿಸುತ್ತದೆ. ಅದರ ಬಾಯಿಂದ ರತ್ನಖಚಿತವಾದ ದಾರಗಳು ಇಳಿಯ ಬಿದ್ದಿವೆ. ಈ ಮೂರ್ತಿ ಕೈಬಳೆಗಳನ್ನೂ ಕಾಲಂದಿಗೆಗಳನ್ನೂ ಕಾಲುಂಗುರಗಳನ್ನೂ ಅಂಗುಲೀಯಕಗಳನ್ನೂ ಧರಿಸಿದೆ. ಶಿವನ ಕೈಗಳು ಉಚಿತ ಭಂಗಿಯಲ್ಲಿ ಸಮತೋಲದಲ್ಲಿವೆ. ನೃತ್ಯಕ್ಕೆ ಗತಿಸಮತೆಯನ್ನುಂಟುಮಾಡುವುದಕ್ಕೋ ಎಂಬಂತೆ ತಾಂಡವಮೂರ್ತಿಯ ಎಡಬಲಗಳ ಹಿಂದಿನ ಎರಡು ಕೈಗಳಲ್ಲಿಯೂ ತ್ರಿಶೂಲವಿದೆ. ಎಡದ ಮುಂದಿನ ಕೈ ಗಜಹಸ್ತ ಭಂಗಿಯಲ್ಲಿದೆ. ಬಲಗೈಯಲ್ಲಿ ಕಪಿತ್ಥವಿದೆ.

ಶಿವತಾಂಡವವಿರುವ ಈ ಭುವನೇಶ್ವರಿಯ ನಾಲ್ಕು ಮೂಲೆಗಳಲ್ಲಿಯೂ ಪುಷ್ಪಹಾರಗಳನ್ನು ಸಮರ್ಪಿಸುತ್ತಿರುವ ರೀತಿಯಲ್ಲಿ ಹಾರುತ್ತಿರುವ ನಾಲ್ವರು ಗಂಧರ್ವರ ಆಕೃತಿಗಳಿರುವುದು ಪ್ರತಿಭಾವಿಶೇಷದಿಂದಲೂ ಭವ್ಯತೆಯಿಂದಲೂ ಕೂಡಿದ ಕಲಾಕೌಶಲ; ಅತ್ಯಂತ ಮೇಲ್ಮಟ್ಟದ ಸೃಜನಾತ್ಮಕ ಕಲಾವಿದನಿಗೂ ಗೌರವ ತರುವಂಥದು.

ಬೂತುಗನ ಕಾಲದ ಆತ್ಕೂರು ಶಿಲಾಶಾಸನದಲ್ಲಿ ಕೊರೆದಿರುವ ಹಂದಿ ಹಾಗೂ ಬೇಟೆಯ ನಾಯಿಯ ಆಕೃತಿಗಳು ಅಪೂರ್ವನೈಸರ್ಗಿಕತೆಯಿಂದ ಕೂಡಿವೆ. ದೊಡ್ಡಹುಂಡಿ ಶಿಲಾಶಾಸನದಲ್ಲಿ ಕೆತ್ತಿರುವ ನೀತಿಮಾರ್ಗನ ಮರಣದೃಶ್ಯವು ಸರಳತೆ ಗಾಂಭೀರ್ಯಗಳಿಂದ ಕೂಡಿದೆ. ಇದಕ್ಕೆ ಸಮಾನವಾದ ಶಿಲ್ಪ ಮತ್ತೊಂದಿಲ್ಲವೆನ್ನಬಹುದು. ರಾಜನು ದೇಹದ ಬಳಲಿಕೆಯನ್ನು ಅನುಭವಿಸುತ್ತ ಜೋಡಿದಿಂಬನ್ನು ಒರಗಿಕೊಂಡಿರುವುದು, ತಂದೆಯ ಮರಣ ಸನ್ನಿಹಿತವಾಗಿರುವುದನ್ನು ತಿಳಿದ ಸತ್ಯವಾಕ್ಯನ ವ್ಯಥೆ, ಒಡೆಯನೊಡನೆ ಅಸುನೀಗುವ ಅವಕಾಶ ದೊರೆತುದಕ್ಕಾಗಿ ಮನೆತನದ ಆಳು ಅಗರಯ್ಯನ ಆನಂದ–ಎಲ್ಲವೂ ಕಣ್ಣಿಗೆ ಕಟ್ಟುವಂತೆ ಕೊರೆಯಲ್ಪಟ್ಟಿವೆ.

ಶ್ರವಣಬೆಳ್ಗೊಳದ ಜೈನ ಮಠದಲ್ಲಿರುವ ಶ್ರೇಷ್ಠವಾದ ಕಂಚಿನ ವಿಗ್ರಹಗಳನ್ನು ಕುರಿತು ಈಗ ಹೇಳಬಹುದಾಗಿದೆ. ಅವುಗಳಲ್ಲಿ ಒಂದನ್ನು ಮಿ. ಕ್ರಾಫರ್ಡ್ ಈ ಮಠಕ್ಕೆ ಕೊಟ್ಟರು. ಅವರ ಕಾಫೀ ತೋಟದಲ್ಲಿ ಅಗೆಯುತ್ತಿದ್ದಾಗ ಅದು ಅವರಿಗೆ ಸಿಕ್ಕಿತು. ಅದೊಂದು ನಿಂತ ನಿಲುವಿನ ಜಿನವಿಗ್ರಹ. ಎರಡು ಅಡಿ ಎತ್ತರವಿದೆ. ಅದರ ಪೀಠದ ಸುತ್ತಲೂ ಒಂದು ಶಾಸನವಿದೆ. ಇದರಲ್ಲಿ ಗಂಗರಾಜ ನೊಳಂಬಕುಲಾಂತಕ ಮಾರಸಿಂಹ ಅಥವಾ ಎರಡನೆಯ ಮಾರಸಿಂಹನ (ಕ್ರಿ.ಶ. 961–974) ಅಕ್ಕ ಕುಂದಣ ಸೋಮಿದೇವಿಯ ಪ್ರಶಂಸೆಯಿದೆ. ಇದು ಗಂಗರ ಕಾಲದ್ದೆಂದು ನಿಷ್ಕೃಷ್ಟವಾಗಿ ಹೇಳಬಹುದಾದ ಒಂದು ಲೋಹವಿಗ್ರಹವಾಗಿರುವುದೇ ಇದರ ಪ್ರಮುಖತೆಗೆ ಕಾರಣವಾಗಿದೆ.

ಮೂಲ ಲೇಖಕರು: ಡಾ॥ ಎಂ. ಶೇಷಾದ್ರಿ
ಅನುವಾದಕರು: ಶ್ರೀ ಬಿ. ರಾಮಸ್ವಾಮಿ

# ಅಧ್ಯಾಯ 7

## ರಾಜಕೀಯ ಇತಿಹಾಸ

## ಬಾದಾಮಿಯ ಚಾಲುಕ್ಯರು

ಈ ಮೊದಲಿನ ಪ್ರಕರಣದಲ್ಲಿ, ಕದಂಬರ, ಗಂಗರ, ಮತ್ತು ಚಿಕ್ಕ ರಾಜವಂಶಗಳಾದ ಬಾಣರ ಹಾಗು ನೊಳಂಬರ ರಾಜಕೀಯ ಇತಿಹಾಸದ ವಿವೇಚನೆಯನ್ನು ಮಾಡಲಾಗಿದೆ. ಅದು ನಮ್ಮನ್ನು ಕ್ರಿ ಶ. ಹತ್ತನೆಯ ಶತಮಾನದ ಎಷ್ಟೋ ಹಿಂದಿನ ಕಾಲಕ್ಕೆ ಕರೆದೊಯ್ದಿತು. ಈ ರಾಜವಂಶಗಳು ಬಹುಮಟ್ಟಿಗೆ ಕರ್ಣಾಟಕದ ದಕ್ಷಿಣ ಪ್ರದೇಶಗಳಲ್ಲಿ ಪ್ರಭುತ್ವ ನಡೆಸಿದವು. ಪಲ್ಲವರ ವಿಷಯ ಹೇಳುವಾಗ, ಅವರು ಕ್ರಿ. ಶ. ಆರನೆಯ ಶತಕದ ಕೊನೆಗೆ ತಲೆಯೆತ್ತಿದ ಬಾದಾಮಿಯ ಚಾಲುಕ್ಯರ ಕಡು ಹಗೆಗಳಾಗಿ ಹೇಗೆ ಅವರೊಂದಿಗೆ ಸೆಣಸುತ್ತಿದ್ದರು ಎಂಬುದನ್ನು ಅರಿತಿದ್ದೇವೆ. ಹಲವು ಶತಮಾನ ಕಾಲ ನಡೆದ ಪಲ್ಲವರ ಮತ್ತು ಚಾಲುಕ್ಯರ ನಡುವಣ ಘರ್ಷಣೆಯ ವಿಷಯವನ್ನು ನಿರೂಪಿಸುವಾಗ ನಾವಾಗಲೇ ಬಾದಾಮಿಯ ಚಾಲುಕ್ಯರ ರಾಜಕೀಯ ಇತಿಹಾಸವನ್ನು ತಕ್ಕಷ್ಟು ಗ್ರಹಿಸಿದ್ದೇವೆ.

ಕರ್ಣಾಟಕದ ನಾನಾ ಭಾಗಗಳನ್ನು ಆಳಿದ ನಾನಾ ರಾಜವಂಶಗಳ ಏರಿಳಿತಗಳ ಮತ್ತು ರಾಜಕೀಯ ಇತಿಹಾಸದ ಅಂಶಗಳು, ಕಾಲಾನುಕ್ರಮದ ಕಟ್ಟಿಗೆ ಸುಲಭವಾಗಿ ಸಿಕ್ಕುವದಿಲ್ಲ.

ಆದುದರಿಂದ ಬಾದಾಮಿಯ ಚಾಲುಕ್ಯರ ವಿಷಯವನ್ನು ವಿವರಿಸುವಾಗ ನಾವು ಸ್ವಲ್ಪ ಹಿಂದಿನ ಕಾಲದಲ್ಲಿ ಅಡಿಯಿಡಬೇಕಾಗುತ್ತದೆ. ಈ ಚಾಲುಕ್ಯರು ಪ್ರಾಬಲ್ಯಕ್ಕೆ ಬಂದುದು, ದಕ್ಷಿಣ ಕರ್ಣಾಟಕದಲ್ಲಿ ಗಂಗರು ಪ್ರಬಲರಾಗಿದ್ದಾಗಲೇ. ಇನ್ನು ಗಂಗರಾದರೋ ಪ್ರಾಚೀನ ಕರ್ಣಾಟಕದಲ್ಲಿ ಬಹಳ ವೈಶಿಷ್ಟ್ಯ ಪೂರ್ಣ ಪಾತ್ರವಹಿಸಿದಂಥವರು.

ಬಾದಾಮಿಯ ಚಾಲುಕ್ಯರ ಆಳಿಕೆಯಿಂದಲೇ ದಕ್ಷಿಣಾಪಥ ಮತ್ತು ಕರ್ಣಾಟಕದ ಇತಿಹಾಸ ಪ್ರಾರಂಭ ಎಂದು ಹೇಳಬಹುದು. ತತ್ಪೂರ್ವದಲ್ಲಿ ಕೆಲವೊಂದು ಅರಸು ಮನೆತನಗಳು ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿ ಅರಸೊತ್ತಿಗೆ ನಡೆಸುತ್ತಿದ್ದವು ಎಂಬ ಮಾತೂ ನಿಜವೇ. ಆದರೆ ಕ್ರಿ.ಶ. ಐದನೆಯ ಶತಕದಲ್ಲಿ ಚಾಲುಕ್ಯರ ಉದಯದಿಂದಾಗಿ ಕರ್ಣಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬಂದಿತು.

ಈ ರಾಜವಂಶದ ಇತಿಹಾಸದ ಪುನರ್ನಿರ್ಮಾಣಕ್ಕೆ ಮೂಲ ಸಾಮಗ್ರಿಗಳು ಎಂದರೆ ಹಳೆಯ ಶಾಸನಗಳು. ಅವು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಬರೆಯಲ್ಪಟ್ಟಿದ್ದು ಅವುಗಳಲ್ಲಿ ಶಕವರ್ಷ ಉಲ್ಲೇಖಿಸಲಾಗಿದೆ. ಆ ಶಾಸನಗಳು ಚಾಲುಕ್ಯರ[1] ವಂಶ ವಿಚಾರವಾಗಿ ಹೀಗೆ ಹೇಳುತ್ತವೆ : ಚಾಲುಕ್ಯರು ವೈಭವಶಾಲಿಗಳು ಲೋಕಪೂಜ್ಯ ಮಾನವ್ಯ ಗೋತ್ರರು, ಹಾರಿತೀಪುತ್ರರು, ಮನುಕುಲದ ಮಾತೆಯರಾದ ಸಪ್ತಮಾತೆಯರಿಂದ ಅವರು ಪೋಷಿತರು, ಕಾರ್ತಿಕೇಯನ ರಕ್ಷಾಕೃಪೆಯಿಂದ ಅವರು ಅಖಂಡ ಉತ್ಕರ್ಷಕ್ಕೆ ಪಾತ್ರರಾದವರು. ದಿವ್ಯ ನಾರಾಯಣನ ಅನುಗ್ರಹದಿಂದ ಅವರಿಗೆ ಲಭಿಸಿದ ವರಾಹಲಾಂಛನ ದರ್ಶನ ಮಾತ್ರದಿಂದ ಎಲ್ಲ ಜನರೂ ಅವರ ಪ್ರಜಾಕೋಟಿಗೆ ಸೇರುವಂತಾಯಿತು. ಸಾಮಾನ್ಯವಾಗಿ ಅವರ ವಂಶ

ನಾಮವು 'ಚಾಲುಕ್ಯ' ಎಂದು. ಆದರೆ ಆ ಹೆಸರು ಶಾಸನಗಳಲ್ಲಿ ಚಲುಕ್ಯ, ಚಾಲಿಕ್ಯ, ಚಾಲುಕ್ಯ, ಮತ್ತು ಚಾಲೋಕ್ಯ[2] ಎಂದು ಮೊದಲಾಗಿ ಲಿಖಿತವಾಗಿದೆ. ಆ ಮೇಲೆ ಬರೆಯಲಾದ ಶಾಸನಗಳಲ್ಲಿ ಈ ವಂಶನಾಮದ ಶಬ್ದೋತ್ಪತ್ತಿಯನ್ನು 'ಚಲುಕ್ಯ' ಪದಕ್ಕೆ ಜೋಡಿಸಲಾಗಿದೆ. ಇದರರ್ಥ 'ಜಲಪಾತ್ರ' ಅಥವಾ 'ನೀರು ಹಿಡಿಯುವ ಬೊಗಸೆ' ಎಂದು. ಈ ಬಗ್ಗೆ ಒಂದು ಕಥೆ ಹೀಗಿದೆ : ಹಿರಣ್ಯಗರ್ಭ(ಬ್ರಹ್ಮ) ನಿಂದ ಉದ್ಭವಿಸಿದ ಹಾರೀತ ಪಂಚಶಿಖನು ಸಂಧ್ಯಾವಂದನೆ ಮಾಡುತ್ತಿದ್ದನು. ಅವನು ಅರ್ಘ್ಯಕೊಡು ತ್ತಿರುವಾಗ ಅವನ "ಚುಲಕ"ದಿಂದ ಅಂದರೆ ಅಂಜಲಿಯಿಂದ ಒಬ್ಬ ಯೋಧನು ಉದ್ಭವಿಸಿದನು. ಅವನನ್ನು 'ಚಲುಕ' ಎಂದು ಕರೆಯಲಾಯ್ತು ; ಅವನ ವಂಶಜರು "ಚಾಲುಕ್ಯ" ರಾದರು[3]. 6ನೆಯ ವಿಕ್ರಮಾದಿತ್ಯನ ಆಸ್ಥಾನದ ಪ್ರಧಾನ ಪಂಡಿತನೂ ಕವಿಯೂ ಆದ ಬಿಲ್ಹಣನು ಬೇರೆ ವಿವರಣೆ ನೀಡುತ್ತಾನೆ : "ಬ್ರಹ್ಮನು ಸಂಧ್ಯಾವಂದನೆ ಮಾಡುತ್ತಿದ್ದಾಗ ಇಂದ್ರನು ಬಂದು, ಪೃಥ್ವಿಯೆಲ್ಲ ದೇವಲಂಡರಿಂದ (ದೇವರಿಲ್ಲ ವೆನ್ನುವವರಿಂದ) ತುಂಬಿ ಹೋಗಿದೆ ಎಂದು ದೂರಿದನು. ಓರ್ವ ವೀರನ ನಿರ್ಮಾಣದ ಮೂಲಕ ಇವನ್ನು ತೊಲಗಿಸಬೇಕೆಂದೂ ಪ್ರಪಂಚವನ್ನು ದುಷ್ಟರಿಂದ ಸಂರಕ್ಷಿಸಬೇಕೆಂದೂ ಕೇಳಿಕೊಂಡನು. ಆಗ ಬ್ರಹ್ಮನು ತನ್ನ ಚುಲಕದತ್ತ ನೋಡುತ್ತಲೇ ಅದರೊಳಗಿಂದ ಒಬ್ಬ ಯೋಧನು ಉದ್ಭವಿಸಿದನು. ಚಾಲುಕ್ಯರು ಅವನ ವಂಶಜರು"[4].

ಚಾಲುಕ್ಯ ಶಬ್ದದ ಬಗೆಗಿರುವ ಈ ಕಾಲ್ಪನಿಕ ಪೌರಾಣಿಕ ವ್ಯುತ್ಪತ್ತಿಯನ್ನು ಅಂಗೀಕರಿಸುವ ಅಗತ್ಯವಿಲ್ಲ[5]. ಇದಕ್ಕೆ ಬದಲಾಗಿ ಪ್ರಾಚೀನ ಶಾಸನಗಳನ್ನು ಲಕ್ಷ್ಯಪೂರ್ವಕವಾಗಿ ಅವಲೋಕಿಸಿದನಂತರ ಒಂದು ಸೂಚನೆಯನ್ನು ಮುಂಡಿಸಬಹುದಾಗಿದೆ. ಅದೆಂದರೆ, ಅವರ ಮೂಲನಾಮವು ಚಲುಕಿ, ಚಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ. ಇದು ಹಾರೆಯಂತಹ ಒಂದು ಕೃಷಿಯ ಉಪಕರಣದ[6] ಹೆಸರು. ಈ ಮನೆತನದ ಮೂಲ ಪುರುಷನು ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರಬೇಕು. ಈ ರೀತಿ ಹೆಸರಿಟ್ಟು ಕೊಳ್ಳುವುದು ಈಗಲೂ ಕರ್ಣಾಟಕದಲ್ಲಿ ಬಳಕೆಯಲ್ಲಿದೆ. ಸಲ್ಕೆಪ್ಪ, ಗುದ್ಲೆಪ್ಪ ಎಂಬ ಹೆಸರುಗಳು ಬಹಳ ಸಾಮಾನ್ಯ. ಕೃಷಿ ಉಪಕರಣದ ಜೊತೆಗೆ, 'ಅಪ್ಪ' (ಆರ್ಯ) ಎಂಬ ಗೌರವದ ಪದ ಜೋಡಿಸುವದು ವಾಡಿಕೆ. ಮೂಲತಃ ಚಾಲುಕ್ಯರು ಬಾದಾಮಿಯ ಕೆಲಬಲದಲ್ಲಿ ವಾಸಿಸುವ ಒಕ್ಕಲಿಗರ ಬಣಕ್ಕೆ ಸಂಬಂಧಿಸಿದವರಿರಬೇಕು. ಆದರೆ ಬರುಬರುತ್ತ ಈ ಮನೆತನ ಪ್ರಬಲವಾಗಿ, ವಿಶಾಲ ಪ್ರದೇಶಗಳನ್ನು ಆಳಲು ಪ್ರಾರಂಭಿಸಿದಾಗ, ಈ ಮನೆತನಕ್ಕೆ ಪೌರಾಣಿಕತೆಯನ್ನೂ ಪಾವಿತ್ರ್ಯವನ್ನೂ ಕೊಡುವುದಕ್ಕೋಸ್ಕರ ದಂತಕಥೆ ಹುಟ್ಟಿಕೊಂಡಿರಬೇಕು. ಇವರ ಮನೆತನದ ವಂಶಾವಳಿ ಕೂಡ, ಪೌರಾಣಿಕ ದಂತಕಥೆಗಳಿಂದ ಬೆರೆತುಹೋಗಿದೆ. ಇವರ ಮನೆತನದ ಪೂರ್ಣ ವಿವರವು, ಪೂರ್ವ ಚಾಲುಕ್ಯ ಶಾಖೆಯ 1ನೇ ವಿಷ್ಣುವರ್ಧನ ರಾಜರಾಜನ (ಕ್ರಿ.ಶ. 1022–1063) ದಾನ ಲೇಖನದಲ್ಲಿ ಸಿಕ್ಕುತ್ತದೆ.[7] ಈ ವಂಶಾವಳಿಯ ಪ್ರಾರಂಭ, ವಿಷ್ಣುವಿನ ನಾಭಿಕಮಲದಿಂದ ಉದ್ಭವಿಸಿದ ಬ್ರಹ್ಮನಿಂದ ಸೋಹು, ಬುಧ, ಪುರೂರವಸ್, ಆಯು, ಆಯುಷ—ಇವರು ಅನುಕ್ರಮವಾಗಿ ಬ್ರಹ್ಮನಿಂದ ಬಂದವರು. ಈ ವಂಶದಲ್ಲಿ ಶತಾನೀಕನ ಮಗ ಉದಯನ ಜನಿಸಿದನು. ಅವನನ್ನು ಒಳಗೊಂಡು, ಐವತ್ತೊಂಬತ್ತು ಮಂದಿ ರಾಜರು ಒಬ್ಬರಾದ ಮೇಲೆ ಒಬ್ಬರು ಅನುಸ್ಯೂತವಾಗಿ ಅಯೋಧ್ಯೆಯಲ್ಲಿ ಅರಸೊತ್ತಿಗೆ ಮಾಡಿದರು. ಈ ವಂಶದ ವಿಜಯಾದಿತ್ಯನೆಂಬವನು ದೇಶವನ್ನು ಗೆಲ್ಲುವ ಆಕಾಂಕ್ಷೆಯುಳ್ಳವನಾಗಿ ದಕ್ಷಿಣದ ಕಡೆಗೆ ಬಂದನು. ಅವನು ತ್ರಿಲೋಚನ ಪಲ್ಲವನೊಂದಿಗೆ ಹೋರಾಡಿ ಅಸು ತೆತ್ತನು. ವಿಜಯಾದಿತ್ಯನ ಗರ್ಭಿಣಿ ರಾಣಿಯು ತನ್ನ ಪರಿವಾರದೊಂದಿಗೆ ಪಾರಾಗಿ, ವಿಷ್ಣುಭಟ್ಟ ಸೋಮಯಾಜಿ ಎಂಬ ಒಬ್ಬ ಮಹಾತ್ಮನ ಆಶ್ರಯ ಪಡೆದಳು. ಅವಳಿಗೆ ಆ ಮೇಲೆ ಪುತ್ರೋತ್ಸವ ವಾಯಿತು. ವಿಷ್ಣುಭಟ್ಟನ ವಿಷಯಕವಾಗಿದ್ದ ತನ್ನ ಕೃತಜ್ಞತೆಯ ದ್ಯೋತಕವಾಗಿ ಆಕೆ ಆ ಶಿಶುವಿಗೆ, ವಿಷ್ಣುವರ್ಧನ ಎಂದು ನಾಮಕರಣಮಾಡಿದಳು. ಈ ತರುಣ ರಾಜಕುಮಾರನನ್ನು ಕ್ಷತ್ರಿಯ ಪರಂಪರೆಗೆ ತಕ್ಕಂತೆ ಬೆಳೆಸಲಾಯಿತು. ಅವನು ಮುಂದೆ ತಂದೆಯ ಮರಣದ ಸೇಡು ತೀರಿಸಿಕೊಳ್ಳಲು ತುಂಬ ತವಕಿಸ ತೊಡಗಿದನು. ಈ ರಾಜಕುಮಾರನು ಚಾಲುಕ್ಯಗಿರಿಯಲ್ಲಿ ನಿಂತು ನಂದೀ ಭಗವತಿಯ ಉಪಾಸನೆ


ಬಾದಾಮಿಯ ಚಾಳುಕ್ಯರ
ಸಾಮ್ರಾಜ್ಯ------
ಮಾಳವ
ಗುರ್ಜರ
ಧಾರಾ
ನರ್ಮದಾ ನದಿ
ಅಜಂತಾ
ಎಲ್ಲೋರ
ಕಳಿಂಗ
ಮಹಾನದಿ
ವೆಂಗಿ
ಪಿಷ್ಟಪುರಂ
ಪಟ್ಟದಕಲ್ಲು
ಬಾದಾಮಿ
ಕಾಂಚಿ
ತಂಜಾವೂರು
ಮಧುರೆ
ರಾಮೇಶ್ವರ
ಕನ್ಯಾಕುಮಾರಿ
ಅನುರಾಧ
ಪುರ
NN

ಚಿತ್ರ 9

ಮಾಡಿದನು. ಆಕೆಯ ಅನುಗ್ರಹದಿಂದ ರಾಜಕುಮಾರ ವಿಷ್ಣುವರ್ಧನನು ಕದಂಬ ಗಂಗರೇ ಮೊದಲಾದ ರಾಜರನ್ನು ಗೆದ್ದನು. ಅವನು ಪಲ್ಲವರನ್ನು ಜಯಿಸಿ ಅವರ ಕನ್ಯೆಯನ್ನು ಮದುವೆಯಾದನು. ಅವರ ಉದರದಲ್ಲಿ ವಿಜಯಾದಿತ್ಯ ಎಂಬ ಮಗನಾದನು; ಅವನ ಮಗನೇ ಪುಲಿಕೇಶಿ. ವಿಜಯಾದಿತ್ಯನು ವಂಶದ ರಾಜಚಿಹ್ನೆಗಳನ್ನೆಲ್ಲ ಹೊಂದಿ ಸಾರ್ವಭೌಮನೆನಿಸಿಕೊಂಡು ದಕ್ಷಿಣಾಪಥದ ಚಕ್ರಾಧಿಪತ್ಯವನ್ನು ನೆಲೆಗೊಳಿಸಿದನು. ದಕ್ಷಿಣಾಪಥದಲ್ಲಿ,—ಉತ್ತರಕ್ಕೆ ನರ್ಮದಾ ಮತ್ತು ದಕ್ಷಿಣಕ್ಕೆ ಸೇತು—ಇವುಗಳ ಮಧ್ಯದಲ್ಲಿ,—ಏಳು ಲಕ್ಷ ಐವತ್ತು ಸಾವಿರ ಹಳ್ಳಿಗಳಿದ್ದವು. ಕ್ರಿ.ಶ. 1009ರ ಐದನೆಯ ವಿಕ್ರಮಾದಿತ್ಯನ ಕವುತೇಮ ಎಂಬಲ್ಲಿಯ ದಾನಲೇಖನದ[8] ಪ್ರಕಾರ, 59ಮಂದಿ ಚಾಲುಕ್ಯ ರಾಜರು ಅಯೋಧ್ಯೆಯಲ್ಲಿದ್ದು ಆಳಿದರೆಂದೂ ತರುವಾಯ 16ಮಂದಿ ಚಾಲುಕ್ಯರಾಜರು ದಕ್ಷಿಣಾಪಥದ ಮೇಲೆ ಆಧಿಪತ್ಯ ನಡೆಸಿದರೆಂದೂ ತಿಳಿದು ಬರುತ್ತದೆ. ಅವರ ಆಳ್ವಿಕೆಯು ತಾತ್ಕಾಲಿಕವಾಗಿ ಕಳೆಗುಂದಿತ್ತು. ಅದು ಜಯಸಿಂಹನಿಂದ ಪುನರುಜ್ಜೀವಗೊಂಡಿತು. ಎರಡನೆಯ ಜಯಸಿಂಹನ ಕ್ರಿ.ಶ. 1019ರ[9] ಶಾಸನವು ಸಹ, 59ಮಂದಿ ಚಾಲುಕ್ಯ ರಾಜರು ಅಯೋಧ್ಯೆಯಲ್ಲಿ ಆಳಿದರೆಂದು ಹೇಳುತ್ತದೆ; ಮತ್ತು ತದನಂತರ ಈ ವಂಶಾವಳಿಯಲ್ಲಿ ಸತ್ಯಾಶ್ರಯ ಎಂಬವನು ಜನಿಸಿದನು. ಮತ್ತು ಅವನಿಂದಾಗಿ ಆ ವಂಶಕ್ಕೆ ಸತ್ಯಾಶ್ರಯವಂಶ ಎಂದು ಹೆಸರು ಬಂದಿತೆಂದೂ ಹೇಳುತ್ತದೆ. ಕ್ರಿ.ಶ. 1025–26ರ ಇನ್ನೊಂದು ಶಾಸನವು[10] ಹೀಗೆ ಹೇಳುತ್ತದೆ:—ಬ್ರಹ್ಮನ ಮಾನಸ ಪುತ್ರ ಸ್ವಯಂಭು ಮನು; ಅವನ ಮಗ ಮಾನವ್ಯ; ಅವನ ವಂಶಜರು ಮಾನವ್ಯ ಗೋತ್ರದವರು ಎಂದು ಖ್ಯಾತರಾದರು. ಮಾನವ್ಯನ ಮಗ ಹಾರಿತ; ಅವನ ಮಗನು ಪಂಚಶಿಖಾ ಹಾರಿತ; ಅವನ ಮಗನು ಚಾಲುಕ್ಯ; ಅವನಿಂದ ಚಾಲುಕ್ಯ ವಂಶವು ಉದ್ಭವಿಸಿ ವರ್ಧಿಷ್ಣುವಾಯಿತು. ಕನ್ನಡ ಕವಿ ರನ್ನನು[11] ಕೂಡ ಈ ವಂಶ ವಿವರವನ್ನು ಕೊಡುತ್ತಾನೆ. ಈತನ ವಂಶವೃತ್ತದ ಪ್ರಕಾರ, ಸತ್ಯಾಶ್ರಯ ವಿಷ್ಣುವರ್ಧನನು ಅಯೋಧ್ಯೆಯಲ್ಲಿ ರಾಜ್ಯಭಾರ ಮಾಡುತ್ತಿದ್ದನು; ಇವನ ಮಗನು ರಣರಾಗಸಿಂಹನು.

ಈ ದಂತಕಥೆಗಳು ಹುಟ್ಟಿದ್ದು ಬಹಳ ಕಾಲಾನಂತರ, ಮತ್ತು ಕೆಲವೊಂದು ಮಹತ್ವದ ಅಂಶಗಳಲ್ಲಿ ಒಂದೊಂದಕ್ಕೂ ಬಹಳ ಭೇದಗಳು ಕಂಡುಬರುವವು. ಹತ್ತನೆಯ ಶತಮಾನದಲ್ಲಿ ಅಥವಾ ಅದರ ಸಮೀಪವರ್ತಿ ಕಾಲದಲ್ಲಿ, ಎರಡನೆಯ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿದ ತರುವಾಯ ಈ ದಂತಕಥೆಗಳು ಪ್ರಚಲಿತವಾದವು. ಹೆಚ್ಚು ಕಡಮೆ ಈ ಸಮಯದಲ್ಲಿ ರಾಜ್ಯಭಾರ ಮಾಡುತ್ತಿದ್ದ ದಕ್ಷಿಣದ ಎಲ್ಲ ರಾಜವಂಶಗಳೂ ತಮ್ಮ ವಂಶಮೂಲವನ್ನು ಉತ್ತರ ದೇಶದೊಂದಿಗೇ ಜೋಡಿಸಲು ಯತ್ನಿಸುತ್ತ ಇದ್ದರು [12].

ಇದಕ್ಕೂ ಹಳೆಯ ಉಲ್ಲೇಖಗಳಲ್ಲಿ ಕೂಡ ವಂಶಮೂಲದ ವಿಚಾರದಲ್ಲಿ ಈ ಬಗೆಯ ಭಾವನೆಗಳ ಅಸ್ಪಷ್ಟ ಸೂಚನೆಗಳನ್ನು ಗುರುತಿಸಬಹುದಾಗಿದೆ. ಮಹಾಕೂಟದ ಒಂದು ಸ್ತಂಭ ಶಾಸನದಲ್ಲಿ, ಮೊದಲನೆಯ ಪುಲಿಕೇಶಿಯು ಹಿರಣ್ಯಗರ್ಭಬ್ರಹ್ಮನ ಸಂತತಿಯಿಂದ ಬಂದವನೆಂದು ವರ್ಣಿಸಲಾಗಿದೆ[13]. ಐಹೊಳೆಯ ಶಿಲಾಶಾಸನವು, ಮೊದಲನೆಯ ಜಯಸಿಂಹನಿಗಿಂತ ಮುಂಚೆ ಅವನ ವಂಶಜರನೇಕರು ಆಳಿ ಹೋದರೆಂದು ಹೇಳುತ್ತದೆ[14]. ವಿನಯಾದಿತ್ಯನ ದಾನಲೇಖನದಲ್ಲಿ ಈ ಬಗೆಯ ಬಣ್ಣನೆ ಇದೆ:— ಅವನ ತಂದೆ ಮೊದಲನೆಯ ವಿಕ್ರಮಾದಿತ್ಯನು, ಚಾಲುಕ್ಯರ ಮಾನಭಂಗಕ್ಕೂ ಅವರ ವಂಶವಿನಾಶಕ್ಕೂ ಕಾರಣನಾದ ಪಲ್ಲವಾಧಿಪತಿಯನ್ನು ಪರಾಜಿತಗೊಳಿಸಿದನು. ಚಾಲುಕ್ಯವಂಶವು ಚಂದ್ರಕಿರಣಗಳಂತೆ ಪರಿಶುದ್ಧ[15]. ಇತ್ಯಾದಿ. ಈ ಉಲ್ಲೇಖಗಳು ತೀರ ಸಂದಿಗ್ಧವಾಗಿದ್ದು ಇವು ಎರಡನೆಯ ತೈಲಪನ ತರುವಾಯ ದೊರಕಿದ ಪರಿಷ್ಕಾರಯುತ ವಿವರಗಳ ಲೇಖನಗಳೊಂದಿಗೆ ಹೊಂದುವದಿಲ್ಲ.

ಅಧಿಕೃತವಾಗಿ ಗೊತ್ತಿದ್ದ ಈ ವಂಶದ ಅತಿ ಹಿಂದಿನ ವ್ಯಕ್ತಿ ಎಂದರೆ ಮೊದಲನೆಯ ಜಯಸಿಂಹನು.

ಈತನ ಮಗ ರಣರಾಗ. ಈ ಇಬ್ಬರ ವಿಷಯಕ್ಕೂ ಮಂಗಲೀಶನ ಮಹಾಕೂಟದ ಸ್ತಂಭಲಿಪಿಯಲ್ಲಿಯೂ ಇಮ್ಮಡಿ ಪುಲಿಕೇಶಿಯ ಐಹೊಳೆಯ ಶಾಸನದಲ್ಲಿಯೂ ನಿಜಾಂಶಗಳಿಂದ ಕೂಡಿದ ಸಂಗತಿಗಳಿವೆ. ಜಯಸಿಂಹನನ್ನು ವಲ್ಲಭೇಂದ್ರ ಎಂದು ಕರೆಯಲಾಗಿದೆ. ಈತನು ಬನವಾಸಿಯ ಕದಂಬರ ರಾಜ್ಯದಲ್ಲಿ ಸೈನ್ಯಾಧಿಕಾರಿ ಆಗಿಯೋ ಕಾರ್ಯನಿರ್ವಾಹಕ ಅಧಿಕಾರಿ ಆಗಿಯೋ ಇದ್ದಿರಬೇಕು. ಇವನಾಗಲೀ ಇವನ ಮಗ ರಣರಾಗನಾಗಲೀ ಎಂದೂ ಸ್ವತಂತ್ರ ಅಧಿಕಾರ ಹೊಂದಿದ ರಾಜರಾಗಿರಲಿಲ್ಲ ಎಂದು ತೋರುತ್ತದೆ. ಇವರ ತರುವಾಯದ ಶಾಸನಗಳಲ್ಲಿ ಇವರ ಹೆಸರು ಪ್ರಮುಖವಾಗಿ ಬರುವವು, ಮತ್ತು ಇವರು ವಂಶದ ಪ್ರಮುಖ ಪುರುಷರೆಂದೂ ಅವುಗಳಲ್ಲಿ ನಿರ್ದೇಶಿಸಲಾಗಿದೆ. ಈ ಇಬ್ಬರಿಂದ ಕೊಡಲ್ಪಟ್ಟ ದತ್ತಿ–ದಾನಾದಿಗಳ ವಿಷಯ ಈ ವರೆಗೆ ಎಲ್ಲಿಯೂ ದೊರಕಿಲ್ಲ.

ಮಂಗಲೀಶನಿಂದ ಕೊರೆಯಿಸಲ್ಪಟ್ಟ ಮಹಾಕೂಟದ ಸ್ತಂಭಶಾಸನದಲ್ಲಿ, ರಣರಾಗನ ಪುತ್ರನಾದ ಮೊದಲನೆಯ ಪುಲಿಕೇಶಿಯನ್ನು 'ಪ್ರಿಯತನುಜ' ಎಂದು ಬಣ್ಣಿಸಲಾಗಿದೆ. ದಾನಲೇಖನಗಳಲ್ಲಿ ಈತನ ಹೆಸರನ್ನು, ಪೊಲೆಕೇಶಿನ್, ಪುಲಿಕೇಶಿನ್, ಪುಲಕೇಶಿನ್—ಎಂದು ಬಗೆಬಗೆಯಾಗಿ ಬರೆಯಲಾಗಿದೆ. ಈತನಿಗೆ ಸತ್ಯಾಶ್ರಯ, ರಣವಿಕ್ರಮ, ಶ್ರೀಪೃಥ್ವೀವಲ್ಲಭ ಮೊದಲಾದ ಬಿರುದುಗಳಿದ್ದವು. ಐಹೊಳೆಯ ಶಾಸನದಲ್ಲಿ ಈತನನ್ನು ಕೇವಲ 'ಶ್ರೀವಲ್ಲಭ' ಎಂದು ಕರೆಯಲಾಗಿದೆ, ಮಂಗಲೀಶನ ನೆರೂರು ಎಂಬಲ್ಲಿನ ದಾನಲಿಪಿಯಲ್ಲಿ, ಈತನನ್ನು ವಲ್ಲಭ ಎಂದು ಉಲ್ಲೇಖಿಸಿದೆ. ಈತನ ಹೆಂಡತಿಯ ಹೆಸರು ದುರ್ಲಭಾದೇವಿ. ಈಕೆ ಬಟ್ಪುರ (Batpura) ಅಥವಾ ಬಂಥೂರ (Banthura) ವಂಶಜಳು. ಈತನ ವರ್ಣನೆಯನ್ನು ಮುಂದುವರಿಸುತ್ತ, ಹಿರಣ್ಯಗರ್ಭ ಸಂತಾನಜಾತನೀತ ಎಂದದ್ದಿದೆ. ಈತನು ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಬಹುಸುವರ್ಣ, ಪೌಂಡರೀಕ, ಅಶ್ವಮೇಧಯಾಗಗಳನ್ನು ಮಾಡಿದನು. ನೇರೂರು ದಾನಲಿಪಿಯಲ್ಲಿ ಈತ ಮನುಸ್ಮೃತಿ, ಪುರಾಣಗಳು, ರಾಮಾಯಣ, ಮಹಾಭಾರತಾದಿಗಳಲ್ಲಿ ಮತ್ತು ಇತಿಹಾಸಗಳಲ್ಲಿ ನಿಷ್ಣಾತನೆಂದು ಬಣ್ಣಿಸಿದ್ದಿದೆ. ಈತನು ವಾತಾಪಿಯ ಅಂದರೆ ಇಂದಿನ ಬಾದಾಮಿಯ ಅಧಿಪತಿ ಆದನೆಂದು ಐಹೊಳೆಯ ಶಾಸನದಲ್ಲಿ ಹೇಳಿದೆ. ಬೇರೆ ಮಾತಿನಲ್ಲಿ ಹೇಳುವದಾದರೆ, ಬಾದಾಮಿಯನ್ನು ಈತನು ವಶಪಡಿಸಿಕೊಂಡು ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು ಎಂದಾಯಿತು. ಬಹುಶಃ, ಈತನು ಬಾದಾಮಿಯನ್ನು ಬನವಾಸಿಯ ಕದಂಬರಿಂದ ಕಸಿದುಕೊಂಡನೆಂದು ತೋರುತ್ತದೆ. ಮೊದಲನೆಯ ಪುಲಿಕೇಶಿಯ ಕಾಲದಿಂದ ಮುಂದೆ ಶಾಸನಗಳಲ್ಲಿ ಈತನ ಹೆಸರಿಗೆ ಮಹಾರಾಜ ಎಂಬ ಬಿರುದು ಜೋಡಿಸಿದ್ದಿದೆ. ಇದರಿಂದಾಗಿ ಈತನು ಬಹುಶಃ ಸಾರ್ವಭೌಮ ಅಧಿಕಾರ ಸಂಪನ್ನನಾಗಿರ ಬೇಕೆಂದು ವ್ಯಕ್ತವಾಗುವದು. ಆದುದರಿಂದ, ಈತನೇ ಈ ವಂಶದ ಮೂಲ ಪುರುಷನೆಂದೂ, ಈತನೇ ಈ ಮನೆತನದ ಅರಸರಲ್ಲಿ ಮೊದಲಿಗನೆಂದೂ ಗ್ರಹಿಸಬಹುದಾಗಿದೆ. ಈತನಿಗೆ ಮೊದಲನೆಯ ಕೀರ್ತಿವರ್ಮ ಮತ್ತು ಮಂಗಲೀಶ ಎಂಬ ಇಬ್ಬರು ಮಕ್ಕಳು. ಈತನ ಕಾಲವನ್ನು ಕ್ರಿ.ಶ. 550ರ ಸಮೀಪ ಎಂದು ನಿರ್ಧರಿಸಬಹುದಾಗಿದೆ.

ಮೊದಲನೆಯ ಕೀರ್ತಿವರ್ಮನು ಅವನ ತಂದೆಯಾದ ಮೊದಲನೆಯ ಪುಲಿಕೇಶಿಯ ತರುವಾಯ ಸುಮಾರು ಕ್ರಿ.ಶ. 566ರಲ್ಲಿ ಪಟ್ಟಕ್ಕೆ ಬಂದನು. ದಾನಶಾಸನಗಳಲ್ಲಿ ಈತನ ಹೆಸರು ಕೀರ್ತಿರಾಜ ಎಂದೂ, ಕೀರ್ತಿವರ್ಮನ್ ಎಂದೂ ಉಲ್ಲಿಖಿತವಾಗಿದೆ. ಕೊಡಚಿಯ ತಾಮ್ರ ಪಟಗಳಲ್ಲಿ ಈತನನ್ನು ಕತ್ತಿಯರಸ ಎಂದು ಕರೆಯಲಾಗಿದೆ. ಪುರುರಣಪರಾಕ್ರಮ ಎಂದೂ ಸತ್ಯಾಶ್ರಯ ಎಂದೂ ಪೃಥ್ವೀವಲ್ಲಭ ಎಂದೂ ಈತನಿಗೆ ಬಿರುದುಗಳು. ದಾನಲಿಪಿಗಳಲ್ಲೆಲ್ಲ ಈತನನ್ನು 'ಮಹಾರಾಜ' ಎಂದು ಹೇಳಲಾಗಿದೆ. ಇದರಿಂದ ಈತನು ಅಧಿರಾಜ ಸಾರ್ವಭೌಮ ಎಂದು ತಿಳಿದುಬರುವದು. ಮಹಾಕೂಟದ ಸ್ತಂಭ ಶಾಸನದಲ್ಲಿ, ಈತನು ಬಹುಸುವರ್ಣ, ಮತ್ತು ಅಗ್ನಿಷ್ಟೋಮ ಯಾಗ ಮಾಡಿದ ಉಲ್ಲೇಖವಿದೆ. ಈತನು ಸೇಂದ್ರಕ ಎಂಬ ವಂಶದ ರಾಜ ಶ್ರೀವಲ್ಲಭ ಸೇನಾನಂದ ಎಂಬಾತನ ಸೋದರಿಯನ್ನು ಮದುವೆಯಾದನು. 'ವಾತಾಪ್ಯಃ

ಪ್ರಥಮ ವಿಧಾತಾ ' ಎಂದು ಹೇಳಿರುವದರಿಂದ ಈತನೇ ವಾತಾಪಿಯ ಪ್ರಥಮ ನಿರ್ಮಾತೃ ಎಂದು ತಿಳಿಯುತ್ತದೆ. ಇವನ ಕಾಲದಲ್ಲಿ ಮತ್ತು ಬಹುಶಃ ಇವನ ಅಪ್ಪಣೆಯ ಮೇರೆಗೆ ಬಾದಾಮಿಯ ಪ್ರಸಿದ್ಧ ವೈಷ್ಣವ ಗುಹಾಲಯ ಕಟ್ಟಿ ಮುಗಿಸಲಾಯಿತು. ಐಹೊಳೆಯ ಶಿಲಾಲಿಪಿಯು ಈತನನ್ನು ನಳರ, ಮೌರ್ಯರ, ಕದಂಬರ ' ಕಾಳರಾತ್ರಿ ' ಎಂದು ಕರೆಯುತ್ತದೆ. ಕ್ರಿ. ಶ. 590ರ ಕೆಲಬಲದ ಕಾಲದಲ್ಲಿ, ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮ ಎಂಬ ಓರ್ವನನ್ನು ನಾಲ್ಕು ಪ್ರಾಂತಗಳಿಗೆ ರಾಜ್ಯಪಾಲನನ್ನಾಗಿ ನಿಯಮಿಸಿದನೆಂದು ತೋರುತ್ತದೆ[16]. ಮಹಾಕೂಟದ ಶಾಸನವು ಈತನು ವಂಗ, ಅಂಗ, ಕಲಿಂಗ, ವತ್ತುರ, ಮಗಧ, ಮದ್ರಕ, ಕೇರಳ, ಗಂಗ, ಮುಸಕ, ಪಾಂಡ್ಯ, ದ್ರಾಮಿಳ, ಚೋಳಿಯ, ಅಲುಕ ಮತ್ತು ವೈಜಯಂತಿ ರಾಜರನ್ನು ಜಯಿಸಿದ್ದನೆಂದು ಹೇಳುತ್ತದೆ. ಇದು ನಿಜಾಂಶಕ್ಕಿಂತ ಒಂದು ಬಗೆಯ ಸಾಂಪ್ರದಾಯಿಕವಾದ ಹೊಗಳಿಕೆಯ ರೂಢಿ ಎಂದು ತೋರುತ್ತದೆ. ಏಕೆಂದರೆ ಇಲ್ಲಿ ನಿರ್ದೇಶಿಸಲಾದ ಕೆಲವು ಪ್ರಾಂತ ಪ್ರದೇಶಗಳು ಬಹಳ ದೂರವರ್ತಿ ಆದಂಥವು. ಈತನು, ಬಹಳವಾದರೆ ತನ್ನ ಪ್ರದೇಶಕ್ಕೆ ಹತ್ತಿರವಾಗಿದ್ದ ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರು ಮೊದಲಾದ ರಾಜರುಗಳನ್ನು ಮಾತ್ರ ಗೆದ್ದಿರಬಹುದು. ಬಾದಾಮಿಯ ವೈಷ್ಣವ ಗುಹಾಮಂದಿರದಲ್ಲಿನ ಸ್ತಂಭ ಶಿಲಾಲಿಪಿ ಆ ಗುಹಾಮಂದಿರ ರಚನೆಯು ಆತನ ರಾಜ್ಯಭಾರದ ಹನ್ನೆರಡನೆಯ ವರ್ಷ ಮುಕ್ತಾಯವಾಯಿತೆಂದೂ ಅಂದು ಕಾರ್ತಿಕ ಪೂರ್ಣಿಮೆ, ಶಕಸಂವತ್ಸರ 500 ಎಂದೂ ಹೇಳಿದ್ದು, ಅದು ಕ್ರಿ. ಶ. 31–10–578ಕ್ಕೆ ಸರಿಸಮ ನಾಗುತ್ತದೆ [17].

ಕೀರ್ತಿವರ್ಮನಿಗೆ ನಾಲ್ವರು ಮಕ್ಕಳು: ಪುಲಿಕೇಶಿ, ವಿಷ್ಣುವರ್ಧನ, ಧಾರಾಶ್ರಯ ಜಯಸಿಂಹ, ಮತ್ತು ಬುದ್ಧವರಸ[18]. ಅವನ ತಾಯಿ ಬಟ್ಟುರ ವಂಶದ ದುರ್ಲಭಾದೇವಿಯು. ಅವನ ಹೆಂಡತಿ ಸೇಂದ್ರಕ ವಂಶದ ರಾಜಕುಮಾರಿ, ಶ್ರೀ ವಲ್ಲಭಸೇನಾನಂದನ ಸೋದರಿ. ಈತನ ಅವಸಾನ ಕಾಲ ಕ್ರಿ. ಶ. 596–7 ; ಇವನು ತೀರಿಕೊಂಡಾಗ ಇವನ ಮಗ ಪುಲಿಕೇಶಿಯು ತೀರ ಚಿಕ್ಕವ.

ಮೊದಲನೆಯ ಕೀರ್ತಿವರ್ಮನ ತಮ್ಮನಾದ ಮಂಗಲೀಶ ರಾಜ್ಯದ ಆಡಳಿತ ಸೂತ್ರಗಳನ್ನು ವಹಿಸಿಕೊಂಡು ರಾಜ್ಯಭಾರ ನಡೆಸಿದನು[19]. ಈತನು ಮೊದಲನೆಯ ಕೀರ್ತಿವರ್ಮನ ಮಲತಮ್ಮನೆಂದು ತೋರುತ್ತದೆ[20]. ಈತನನ್ನು ಮಂಗಲರಾಜ, ಮಂಗಲೀಶ, ಮಂಗಲಾರ್ಣವ, ಮತ್ತು ಮಂಗಲೇಶ್ವರ ಎಂದು ಕೂಡ ಕರೆಯಲಾಗುತ್ತಿತ್ತು. ಈತನು ' ರಣವಿಕ್ರಾಂತ ', ' ಉರುರಣ ವಿಕ್ರಾಂತ ' ' ಪೃಥಿವೀವಲ್ಲಭ ', ' ಶ್ರೀಪೃಥಿವೀವಲ್ಲಭೇಂದ್ರ ' ಎಂಬ ಬಿರುದುಗಳನ್ನು ಹೊಂದಿದ್ದನು. ಈತನನ್ನು ಪರಮಭಾಗವತ ಎಂದು ಬಣ್ಣಿಸಲಾಗಿದೆ. ಮಂಗಲೀಶನು ಬಹಳ ಬಲಶಾಲಿಯಾದ ರಾಜನಾಗಿದ್ದನೆಂದು ತೋರುತ್ತದೆ. ಇವನು ಕಲಚೂರಿಗಳನ್ನು ಗೆದ್ದನು[21]. ಆ ಕಾಲಕ್ಕೆ ಶಂಕರಗಣನೆಂಬವನ[22] ಮಗ ಬುದ್ಧ ಎಂಬವ ಕಲಚೂರ್ಯ ರಾಜನಾಗಿದ್ದನು. ಕಲಚೂರಿಗಳನ್ನು ಗೆದ್ದದ್ದರ ಫಲವಾಗಿ ಮಂಗಲೀಶನ ರಾಜ್ಯ ವಿಸ್ತಾರವು ಉತ್ತರದಿಶೆಯಲ್ಲಿ ಕಿಮ್ ನದಿಯ ವರೆಗೆ, ಅಥವಾ ಬಹುಶಃ ಮಹೀನದಿಯ ವರೆಗೆ ಇರುವ ಸಮಸ್ತ ಪ್ರದೇಶಗಳಲ್ಲಿಯೂ ವ್ಯಾಪಿಸುವಂತಾಯಿತು. ಈ ಘಟನೆಯು ಕ್ರಿ.ಶ. 602ರಲ್ಲಿ ನಡೆಯಿತೆಂದು ತೋರುತ್ತದೆ. ಅವನು ಸಂಗ್ರಾಮದಲ್ಲಿ, ಹದಿನೆಂಟು ಯುದ್ಧಗಳಲ್ಲಿ ಜಯಶಾಲಿಯಾದ ಮತ್ತು ಚಾಲುಕ್ಯ ವಂಶದವನಾದ, ಸ್ವಾಮಿರಾಜ ಎಂಬ ಓರ್ವ ಪಾಳೆಯಗಾರನನ್ನು ಕೊಂದನು[23] ಎಂದು ತಿಳಿಯುತ್ತದೆ. ಕೊಂಕಣದಲ್ಲಿ ನೆಲಸಿದ್ದ ಈ ಸ್ವಾಮಿರಾಜನ ವಿಷಯಕ್ಕೆ ಹೆಚ್ಚಿನ ವಿವರಗಳು ತಿಳಿದಿಲ್ಲ. ಮಂಗಲೀಶನು ಕಲಚೂರಿಗಳನ್ನು ಜಯಿಸಿ ತಂದ ಸಂಪತ್ತನ್ನೆಲ್ಲ ತನ್ನ ಕುಲ ದೇವತೆಯ ಪ್ರೀತ್ಯರ್ಥ ಪೂಜಾದಿ ಉತ್ಸವಗಳನ್ನು ಮಾಡುವದರಲ್ಲಿ ವಿನಿಯೋಗಿಸಿದನು. ಮಂಗಲೀಶನು ಗಂಗಾತೀರದಲ್ಲಿ ಒಂದು ಜಯಸ್ತಂಭವನ್ನು ನಿಲ್ಲಿಸ ಬೇಕೆಂದಿದ್ದನು. ಅದರ ಬದಲು, ಅವನು ತನ್ನ ಅರಸೊತ್ತಿಗೆಯ ನೆಲದಲ್ಲಿಯೇ, ಬಾದಾಮಿಯ ಪೂರ್ವಕ್ಕೆ ಮೂರು ಮೈಲಿಗಳಾಚೆ ಇರುವ ಮಹಾಕೂಟೇಶ್ವರ ದೇವಾಲಯದಲ್ಲಿ ಆ ಜಯಸ್ತಂಭವನ್ನು

ನಿಲ್ಲಿಸಿದನು[24]. ಅವನು ಬಾದಾಮಿಯ ಬೆಟ್ಟದಲ್ಲಿ ವೈಷ್ಣವ ಗುಹಾ ದೇವಾಲಯವನ್ನು ನಿರ್ಮಿಸಿದನು[25]. ಅವನು 'ರೇವತೀ ದ್ವೀಪ' ಎಂಬ ಭೂಭಾಗವನ್ನು ಗೆದ್ದುಕೊಂಡನು[26]. ಈ ರೇವತೀ ದ್ವೀಪವು ಪಶ್ಚಿಮ ಕರಾವಳಿಯಲ್ಲಿ ನೆಲಸಿದ್ದು, ಇದು ಆಧುನಿಕ ರೇದಿ ಎಂಬುದೇ ಆಗಿದೆ. ಇಂದಿನ ಈ ರೇದಿಯು, ಮಹಾರಾಷ್ಟ್ರ ರಾಜ್ಯದ ರತ್ನಗಿರಿಜಿಲ್ಲೆಯ ವೆಂಗುರ್ಲಾದಿಂದ ದಕ್ಷಿಣಕ್ಕೆ ಎಂಟು ಮೈಲಿ ದೂರದಲ್ಲಿರುವ ಕೋಟೆಯಿಂದ ಭದ್ರವಾದ ಒಂದು ಭೂಶಿರ. ಕವುರೇಮ ಎಂಬಲ್ಲಿಯ ದಾನಶಾಸನದಲ್ಲಿ, ಕೀರ್ತಿವರ್ಮನು ಕಾಲವಾದಾಗ ಅವನ ಮಗ ಪುಲಿಕೇಶಿಯು ಪ್ರಾಪ್ತವಯಸ್ಕನಲ್ಲದ ಎಳೆಯನಾಗಿದ್ದನೆಂದೂ, ಮಂಗಲೀಶನನ್ನು ರಾಜಪಾಲಕನಾಗಿ ನಿಯಮಿಸಲಾಯಿತು ಎಂದೂ ಉಲ್ಲೇಖಿಸಲಾಗಿದೆ. ಐಹೊಳೆಯ ಶಾಸನವು ಒಂದು ಸಂಗತಿಯನ್ನು ಸ್ಪಷ್ಟವಾಗಿ ನಿವೇದಿಸುತ್ತದೆ. ಅದೇಂದರೆ, ಪ್ರಬುದ್ಧನಾದ ಪುಲಿಕೇಶಿಗೆ ರಾಜ್ಯಭಾರವನ್ನು ಮಂಗಲೀಶನು ಒಪ್ಪಿಸಲಿಲ್ಲ. ಅವನು ತನ್ನ ಮಗನನ್ನೇ ಪಟ್ಟಕ್ಕೆ ಕುಳ್ಳಿರಿಸಿ ರಾಜತ್ವವನ್ನು ತನ್ನ ಸಂತತಿಗೇ ಉಳಿಸಿಕೊಳ್ಳಲು ಹೆಣಗಿದನು. ಆದುದರಿಂದ, ಪುಲಿಕೇಶಿಯು ತನ್ನ ಅಧಿಕಾರಕ್ಕಾಗಿ ಮಂಗಲೀಶನೊಂದಿಗೆ ಹೋರಾಡಿ ಅವನನ್ನು ಸೋಲಿಸಬೇಕಾಯಿತು. ಈ ಅಂತಃಕಲಹದಲ್ಲಿ ಮಂಗಲೀಶನು ಮಡಿದನು. ಇದು ಬಹುಶಃ ಕ್ರಿ.ಶ. 608 ರಲ್ಲಿ ಸಂಭವಿಸಿರಬೇಕು.

ಮಂಗಲೀಶನ ಶಾಸನಗಳಲ್ಲಿ ಮಹಾಕೂಟದ ಸ್ತಂಭಲಿಪಿಯು ಮಹತ್ವದ್ದು. ಈ ಲಿಪಿಯು ವಂಶಾವಳಿಯ ಮತ್ತು ಐತಿಹಾಸಿಕ ಅಂಶಗಳ ದೃಷ್ಟಿಯಿಂದ ಬಹಳ ಪ್ರಯೋಜಕ ಉಲ್ಲೇಖವಾಗಿದ್ದು ಈ ಸ್ತಂಭವನ್ನು ನಿಲ್ಲಿಸಿದ ಕಾರಣವನ್ನೂ ಇದರಲ್ಲಿ ಕೊಡಲಾಗಿದೆ. ಬುದ್ಧ ಎಂಬ ರಾಜನ ಸ್ವಾಧೀನದಲ್ಲಿದ್ದ ಉತ್ತರದ ಪ್ರದೇಶವನ್ನೂ ಅವನ ಸಮಸ್ತ ಸಂಪತ್ತನ್ನೂ ವಶಪಡಿಸಿಕೊಂಡು ಮಂಗಲೀಶನು ಭಾಗೀರಥೀ ನದಿಯ ದಂಡೆಯ ಮೇಲೆ ಒಂದು ಜಯಸ್ತಂಭವನ್ನು ನಿಲ್ಲಿಸ ಬಯಸಿದ್ದನು. ಆದರೆ ಮೊದಲು ಧರ್ಮಸ್ತಂಭ ನಿಲ್ಲಿಸುವುದು ಯುಕ್ತವೆಂದು ಅವನಿಗೆ ತೋರಿತು. ಆಗ ಮಂಗಲೀಶನು ತನ್ನ ತಂದೆಗೆ ಹೆಂಡತಿಯಾದ ದುರ್ಲಭಾ ದೇವಿಯನ್ನು ಕರೆಯಿಸಿ—ಕಲಚೂರ್ಯರಿಂದ ಗೆದ್ದು ತಂದ ಸಂಪತ್ತೆಲ್ಲ ಬೇರೆ ಬಗೆಯಾಗಿ ವಿನಿಯೋಗವಾದ ಸಂಗತಿಯನ್ನು, ಆಕೆಗೆ ನೆನಪು ಮಾಡಿಕೊಟ್ಟನು. ಈ ಕಾರಣದಿಂದಾಗಿ ಮಂಗಲೀಶನು, ತನ್ನ ತಂದೆ ಮತ್ತು ತನ್ನ ಅಣ್ಣ ಈಗಾಗಲೆ ಮಹಾಕೂಟೇಶ್ವರನಾಥನಿಗೆ ಕೊಟ್ಟ ದಾನಕ್ಕೆ ತಾನೂ ಇನ್ನಷ್ಟನ್ನು ಕೊಡಲು ಮುಂದಾಗುವುದಾಗಿ ತಿಳಿಸಿದನು. ಆಗ ಅವನು ಮಹಾಕೂಟೇಶ್ವರನಾಥನಿಗೆ ದಾನವಾಗಿ ಕೊಟ್ಟದ್ದು ಹತ್ತು ಹಳ್ಳಿಗಳನ್ನು. ಅವುಗಳಲ್ಲಿ ಶ್ರೇಯಂಬಾಟಕ, ವ್ರೀಹಿಮುಖಗ್ರಾಮ, ಕಿಸುವೊಳಲ್, ಕೆಂದೊರಮಾನ್ಯ ಮತ್ತು ನಂದಿಗ್ರಾಮ ಇವು ಸಮಾವೇಶಗೊಂಡಿದ್ದವು. ಕೊನೆಯ ಮೂರು ಗ್ರಾಮಗಳು ಈಗಲೂ ಇವೆ. ಅವು ಇಂದಿನ ಮಹಾಕೂಟದ ಸಮೀಪದಲ್ಲಿ ನೆಲಸಿವೆ. ಸ್ತಂಭ ನಿಲ್ಲಿಸಿದ ದಿನಾಂಕವು ಶಾಸನದಲ್ಲಿ ಉಲ್ಲಖಿತವಾಗಿದ್ದು ಅದು ಇಂತಿದೆ: ವೈಶಾಖ ಪೂರ್ಣಿಮೆ, ಸಿದ್ಧಾರ್ಥಿ ಸಂವತ್ಸರ, ಮಂಗಲೀಶನ ಆಳಿಕೆಯ ಐದನೆಯ ವರ್ಷ; ಇದಕ್ಕೆ ಸರಿಹೊಂದುವ ಆಂಗ್ಲದಿನಾಂಕ, 12ನೆಯ ಏಪ್ರಿಲ್ 602. ಐಹೊಳೆಯ ಶಾಸನದ ಪ್ರಕಾರ ಮಂಗಲೀಶನು ಕಾಲವಾದ ಮೇಲೆ ಅರಾಜಕತೆ ಮತ್ತು ಗೊಂದಲ ತಲೆದೋರಿತ್ತು. ಶಾಸನದ ಶಬ್ದಪ್ರಯೋಗ ಹೀಗಿವೆ: "ತವಚ್ಛತ್ರ ಭಂಗೇ ಅಂಧಕಾರಾತಿರುದ್ಧಂ[28]."

ಮೊದಲನೆಯ ಕೀರ್ತಿವರ್ಮ ಮತ್ತು ಮಂಗಲೀಶರಿಂದ ಪರಾಜಿತರಾಗಿ ಅಧೀನರಾದ ಪರಪ್ರದೇಶಗಳ ರಾಜರುಗಳು, ರಾಜನಿಷ್ಠೆಯನ್ನು ತೊರೆದು ಮಂಗಲೀಶ ಮತ್ತು 2ನೆಯ ಪುಲಿಕೇಶಿಯ ನಡುವಿನ ಅಂತಃಕಲಹದ ಪ್ರಯೋಜನ ಪಡೆದು ಬಂಡೆದ್ದಿರಬೇಕು. ಇಂಥವರಲ್ಲಿ ಇಬ್ಬರ ಹೆಸರುಗಳನ್ನು ಶಾಸನ ಲಿಪಿಯಲ್ಲಿ ಪ್ರತ್ಯೇಕಿಸಿ ಹೇಳಲಾಗಿದೆ. ಅವರು ಅಪ್ಪಯಿಕ ಮತ್ತು ಗೋವಿಂದ. ಅವರು ಚಾಲುಕ್ಯರ ಪ್ರದೇಶವನ್ನು ಭೀಮಾನದಿಯ ಬಳಿಯಿಂದ ಮುತ್ತಿದರು. ಪುಲಿಕೇಶಿಯು ಬಹಳ ಕಠಿನಕಾಲ ಎದುರಿಸಬೇಕಾಯಿತು. ಅವರನ್ನು ರಣರಂಗದಲ್ಲಿ ಪುಲಿಕೇಶಿಯು ಎದುರಿಸಿ ಒಬ್ಬನನ್ನು ಸೋಲಿಸಿದನು, ಮತ್ತು ಇನ್ನೊಬ್ಬನನ್ನು

ತನ್ನ ಮಿತ್ರನನ್ನಾಗಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆದನು. ಆ ಮೇಲೆ, ಬಂಡೇಳುವ ಲಕ್ಷಣ ತೋರಿದ ರಾಜರನ್ನು ದಮನ ಮಾಡಲು ಮುಂದಾದನು. ಅವನು ಕದಂಬರ ರಾಜಧಾನಿಯಾದ ಬನವಾಸಿಗೆ ಮುತ್ತಿಗೆಹಾಕಿ ಅದನ್ನು ವಶಪಡಿಸಿಕೊಂಡನು. ಗಂಗರನ್ನೂ ಆಳುಪರನ್ನೂ ದಮನಿಸಿದನು. ಅವನು ಕೊಂಕಣದ ಮೌರ್ಯರನ್ನು ಬಗ್ಗುಬಡಿದುದೇ ಅಲ್ಲದೆ, ಪಶ್ಚಿಮ ಕರಾವಳಿಯಲ್ಲಿದ್ದ ಪುರಿ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡನು. ಈ ಪುರಿ ಪಟ್ಟಣವೆಂದರೆ, ಮುಂಬಯಿ ಬಳಿ ಇರುವ ಪ್ರಖ್ಯಾತ ಎಲಿಫಂಟಾ ಗುಹಾಮಂದಿರಗಳ ಸಮೀಪದಲ್ಲಿರುವ ಆಧುನಿಕ ಘರಪುರಿ ಎಂಬ ಸ್ಥಳವೇ ಆಗಿದೆ. ಆ ತರುವಾಯ, ಪುಲಿಕೇಶಿಯು ಲಾಟರು, ಮಾಳವರು, ಗುರ್ಜರರೇ ಮೊದಲಾದವರನ್ನು ತನ್ನ ಅಂಕೆಗೆ ತಂದನು. ಪುಲಿಕೇಶಿಯು, ಕನೋಜದ ಮಹಾಮಹಿಮ ರಾಜ ಹರ್ಷವರ್ಧನನ ವಿರುದ್ಧ 'ರಣಂದೇಹಿ' ಎನ್ನುವ ಪ್ರಸಂಗ ಬಂದಿತು. ಚೀನದ ಪ್ರವಾಸಿ ಹುಯೆನ್‌ತ್ಸಾಂಗ್ ಹೇಳಿರುವಂತೆ, ಸ್ವಯಂ ರಾಜ ಹರ್ಷವರ್ಧನನೇ ದಂಡಿಗೆ ಮುಂದಾಳಾಗಿ ನಿಂತನು, ಎರಡನೆಯ ಪುಲಿಕೇಶಿಯು ನರ್ಮದಾನದಿಯ ದಡದಲ್ಲಿ ಬೀಡಾರ ಹೂಡಿ, ಹರ್ಷವರ್ಧನನಿಗೆ ನದಿಯನ್ನು ದಾಟಗೊಡಲಿಲ್ಲ. ಪುಲಿಕೇಶಿಯು ಆ ಯುದ್ಧದಲ್ಲಿ ಹರ್ಷವರ್ಧನನನ್ನು ಸೋಲಿಸಿದನೆಂದೂ ಪರಮೇಶ್ವರ ಎಂಬ ಬಿರುದನ್ನು ಧರಿಸಿದನೆಂದೂ ಚಾಲುಕ್ಯ ಶಾಸನಗಳು ಹೇಳುತ್ತವೆ. ಆ ಮೇಲೆ ಬಂದ ಈ ವಂಶದ ರಾಜರೆಲ್ಲ ಈ ಘಟನೆ ಒಂದು ಮಹತ್ಸಾಧನೆ ಎಂದು ಪರಿಗಣಿಸಿ. ಎರಡನೆಯ ಪುಲಿಕೇಶಿಯ ಪರಾಕ್ರಮವನ್ನು ವರ್ಣಿಸುತ್ತ, ತಾವಿತ್ತ ದಾನದ ತಾಮ್ರಪಟಗಳಲ್ಲೆಲ್ಲ ಎದ್ದುಕಾಣುವಂತೆ ಈ ಅಂಶವನ್ನು ಉಲ್ಲೇಖಿಸಿದ್ದಾರೆ. ಅವನು 99 ಸಾವಿರ ಗ್ರಾಮಗಳನ್ನು ಒಳಗೊಂಡ ಮೂರು "ಮಹಾರಾಷ್ಟ್ರ"ಗಳಿಗೆ ಅಧಿಪತಿಯಾಗಿದ್ದನು. ಅವನು ಕೋಸಲರನ್ನೂ ಕಲಿಂಗರನ್ನೂ ಹಣ್ಣಿಗೆ ತಂದನು. ಅವನು ಪಿಷ್ಟಪುರದ ದುರ್ಗವನ್ನು ಅಂದರೆ, ಪೂರ್ವ ಕರಾವಳಿಯಲ್ಲಿರುವ ಇಂದಿನ ಪಿಟ್ಟಾಪುರಂ ದುರ್ಗವನ್ನು ವಶಪಡಿಸಿಕೊಂಡನು. ಕಾಂಚಿಕೋಟೆಯ ಆಶ್ರಯ ಪಡೆದಿದ್ದ ಪುಲಿಕೇಶಿಯು ಪಲ್ಲವರನ್ನು ತಾಗಿದನು. ಅವರ ರಾಜ ಮೊದಲನೆಯ ಮಹೇಂದ್ರವರ್ಮನು ಕಾಂಚೀಪುರದ ಕೋಟೆಯಲ್ಲಡಗಿ ರಕ್ಷಣೆ ಹೊಂದಬೇಕಾಯಿತು. ಅವನು ಕಾವೇರೀನದಿಯನ್ನು ದಾಟಿ ಚೋಳರ ರಾಜ್ಯಕ್ಕೆ ದಾಳಿಯಿಟ್ಟನು. ಚೋಳರು, ಕೇರಳರು, ಪಾಂಡ್ಯರು 2ನೆಯ ಪುಲಿಕೇಶಿಯ ಗರಿಮೆಯನ್ನು ಒಪ್ಪಿ ಅವನ ಮಿತ್ರರಾದರು. ಈ ಬಗೆಯಾಗಿ 2ನೆಯ ಪುಲಿಕೇಶಿಯ ಸಮಸ್ತ ರಾಜ್ಯವನ್ನೂ ಪುನಃ ತನ್ನ ಚಕ್ರಾಧಿಪತ್ಯಕ್ಕೆ ಒಳಪಡಿಸಿಕೊಂಡನು. ಅವನು ಈ ದಂಡಯಾತ್ರೆಯಲ್ಲಿ ಜಯಶೀಲನಾಗಿ ಬಾದಾಮಿಗೆ ಬಂದು ಅಲ್ಲಿಯೇ ನೆಲಸಿದನು. 2ನೆಯ ಪುಲಿಕೇಶಿಯ ರಾಜ್ಯಾಭಿಷೇಕವು ಬಹುಶಃ ಕ್ರಿ.ಶ. 609ರ ಉತ್ತರಾರ್ಧದಲ್ಲಿ ನೆರವೇರಿತೆಂದು ತೋರುತ್ತದೆ. ಆ ಮೇಲಿನ ಎಲ್ಲ ಶಾಸನಗಳಲ್ಲಿಯೂ "ಸತ್ಯಾಶ್ರಯ" ಎಂಬ ಹೆಸರಿನಿಂದ ಅವನು ಪ್ರಖ್ಯಾತನಾದನು. ಅವನಿಗೆ ಬಳಸಲಾದ ಇನ್ನುಳಿದ ಬಿರುದಾವಳಿಗಳು ಎಂದರೆ, 'ವಲ್ಲಭ', ವಲ್ಲಭೇಂದ್ರ, 'ಶ್ರೀಪೃಥ್ವೀವಲ್ಲಭ', 'ಮಹಾರಾಜ', 'ಮಹಾರಾಜಾಧಿರಾಜ', 'ಪರಮೇಶ್ವರ', 'ಭಟ್ಟಾರಕ', 'ಪರಮಮಾಹೇಶ್ವರ' ಇತ್ಯಾದಿ.

ಸಾತಾರಾ ದಾನಶಾಸನದಂತೆ, ಅವನ ತಮ್ಮ 'ಪ್ರಿಯಾನುಜ' ಮೊದಲನೆಯ ವಿಷ್ಣುವರ್ಧನನು,—ಇವನನ್ನು 'ವಿಷಮಸಿದ್ಧಿ' ಎಂದೂ ಕರೆಯಲಾಗುತ್ತಿತ್ತು—ಕ್ರಿ.ಶ. 615 ರಲ್ಲಿ ರಾಜ್ಯಾಡಳಿತದಲ್ಲಿ ನೆರವಿಗೆ ಬಂದನು. ಆ ಪ್ರಕಾರ, ಕ್ರಿ.ಶ. 616–17 ರ ವರೆಗೆ ಯುವರಾಜನಾಗಿ ಪಶ್ಚಿಮ ಪ್ರದೇಶದ ಭಾಗವನ್ನು ಆಳುತ್ತಿದ್ದನು. ಆ ಸಮಯದ ಸ್ವಲ್ಪ ತರುವಾಯವೇ ವೆಂಗಿಮಂಡಲವನ್ನು ಯುವರಾಜನಿಗೆ ಆಳಲು ಅಲ್ಲಿಗೆ ಅವನನ್ನು ಕಳುಹಿಸಲಾಯಿತು. ಏಕೆಂದರೆ, ಅಷ್ಟೊಂದು ವಿಸ್ತಾರದ ಪ್ರದೇಶವನ್ನು ಬಾದಾಮಿಯಿಂದಲೇ ನಿಯಂತ್ರಿಸುವದು ಕಷ್ಟಕರವೆಂದು ತೋರಿರಬೇಕು. ಆದರೆ, ಕ್ರಿ.ಶ. 632 ರ ಕೆಲಬಲದಲ್ಲಿ, ಪ್ರಿಯಾನುಜ 1 ನೆಯ ವಿಷ್ಣುವರ್ಧನನು ಪ್ರಬಲನಾಗಿ, ಪೂರ್ವ ಕರಾವಳಿ ಪ್ರದೇಶಕ್ಕೆಲ್ಲ ತಾನೇ ಸ್ವತಂತ್ರ ಪ್ರಭುವಾಗಿ ತನ್ನ ಸ್ವಾಮಿತ್ವವನ್ನು ಸ್ಥಿರಪಡಿಸಿಕೊಂಡನು. ಇವನೇ ಪೂರ್ವ ಚಾಲುಕ್ಯರ[27] ವಂಶಕ್ಕೆ ಮೂಲಪುರುಷ. ಈ ವಂಶ ಮುಂದೆ ಐದು ಶತಕಗಳ ಕಾಲ ಆ ಪ್ರದೇಶದಲ್ಲಿ ರಾಜ್ಯಭಾರ ನಡೆಸಿತು. ಈ

ಮನೆತನವು ಪಶ್ಚಿಮ ಚಾಲುಕ್ಯ ಮನೆತನದಿಂದ ಪ್ರತ್ಯೇಕವಾಗಿ ಸ್ವತಂತ್ರವಾಗಿಯೇ ಉಳಿಯಿತು. 2 ನೆಯ ಪುಲಿಕೇಶಿಯ ಆಳಿಕೆಯಲ್ಲಿ ಇದೊಂದು ಅತ್ಯಂತ ಮಹತ್ವದ ಘಟನೆಯಾಗಿದೆ.

2 ನೆಯ ಪುಲಿಕೇಶಿಯ ಕೀರ್ತಿ ಬಹುದೂರದ ವರೆಗೂ ವ್ಯಾಪಿಸಿತು. ಅರಬ್ಬಿ ಭಾಷೆಯ ಒಂದು ಐತಿಹಾಸಿಕ ಉಲ್ಲೇಖದ ಪ್ರಕಾರ, ಪರ್ಶಿಯಾ ದೇಶದ ದೊರೆ 2 ನೆಯ ಖುಸ್ರು ಎಂಬಾತನು ತನ್ನ ಆಳಿಕೆಯ ಮೂವತ್ತಾರನೆಯ ವರ್ಷ, ಎರಡನೆಯ ಪುಲಿಕೇಶಿಯೊಂದಿಗೆ ಪತ್ರಗಳನ್ನೂ ಕಾಣಿಕೆಗಳನ್ನೂ ವಿನಿಮಯ ಮಾಡಿಕೊಂಡನು ಎಂದು ತಿಳಿಯಬರುತ್ತದೆ. ಅಜಂತಾ ಗುಹೆಗಳಲ್ಲಿ ಒಂದು ವರ್ಣರಂಜಿತ ಭಿತ್ತಿಚಿತ್ರವು, ಓರ್ವ ಪರ್ಶಿಯನ್ ರಾಜನಿಂದ, ಓರ್ವ ಭಾರತೀಯ ರಾಜನಿಗಾಗಿ ತಂದ ಪತ್ರವನ್ನು ಒಪ್ಪಿಸುತ್ತಿರುವ ಘಟನೆಯನ್ನು ತೋರಿಸುತ್ತದೆ. ಈ ಚಿತ್ರವು 2 ನೆಯ ಪುಲಿಕೇಶಿಗೆ ಸಂಬಂಧಿಸಿದ್ದೆಂದು ಖಚಿತಪಟ್ಟಿದ್ದು ಇದು ಪುಲಿಕೇಶಿಯ ಕೀರ್ತಿವಿಸ್ತಾರವನ್ನು ಸ್ಥಿರಪಡಿಸುತ್ತದೆ. ಖುಸ್ರುವಿನ ಆಳಿಕೆಯ 36 ನೆಯ ವರ್ಷ ಎಂದರೆ ಕ್ರಿ.ಶ. 625-26. ಆ ಹೊತ್ತಿಗೆ 2 ನೆಯ ಪುಲಿಕೇಶಿಯು ಸಿಂಹಾಸನವೇರಿ ಹದಿನಾರು ವರ್ಷಗಳಾಗಿದ್ದವು. ಈತನ ಆಳಿಕೆಯಲ್ಲಿಯೇ ಚೀನಾ ಪ್ರವಾಸಿ ಹುಯೆನ್‌ತ್ಸಾಂಗ್ ಭಾರತದಲ್ಲಿ ಪ್ರವಾಸ ಮಾಡಿದನು. ಅದು ಕ್ರಿ.ಶ. 629 ರ ಮತ್ತು 645 ರ ಮಧ್ಯಕಾಲ. ಈ ಪ್ರವಾಸಿಯು ಕ್ರಿ.ಶ. 639 ರ ಕೆಲಬಲಕ್ಕೆ ಎಂದರೆ ಐಹೊಳೆಯ ಶಾಸನವನ್ನು ಬರೆಸಿದ ಐದು ವರ್ಷಗಳ ಅನಂತರ 2 ನೆಯ ಪುಲಿಕೇಶಿಯ ಮಹತ್ವದ ಪಟ್ಟಣಗಳಲ್ಲಿ ಒಂದನ್ನು ಕಂಡನು. ಅಂದಿನ ದೇಶ ಮತ್ತು ರಾಜ್ಯದ ಸ್ಥಿತಿಗತಿಯ ಬಗೆಗೆ ಆ ಪ್ರವಾಸಿಯ ಸ್ಪಷ್ಟ ಉಲ್ಲೇಖ ಹೀಗುಂಟು :—ಈ ದೇಶವು ಸುಮಾರು ಐದುಸಾವಿರ 'ಲಿ' ಸುತ್ತಳತೆ ಉಳ್ಳದ್ದು (ಒಂದು 'ಲಿ' = 633 ಗಜ). ರಾಜಧಾನಿಯು, ಪಶ್ಚಿಮದಲ್ಲಿ ಒಂದು ದೊಡ್ಡ ನದಿಯ ದಂಡೆಗೆ ಉಂಟು. ಅದರ ಸುತ್ತಳತೆ ಸುಮಾರು 30 ಲಿ. ನೆಲವು ಫಲವತ್ತಾಗಿದೆ. ತಪ್ಪದೆ ಒಕ್ಕಲುತನ ನಡೆಯುತ್ತಿದ್ದು ಅದು ಉತ್ತಮ ಉತ್ಪನ್ನ ಕೊಡುತ್ತದೆ. ಹವೆಗೆ ಕಾವು ಹೆಚ್ಚು. ಜನರು ಪ್ರಾಮಾಣಿಕರು ಮತ್ತು ಸರಳ ಸ್ವಭಾವದವರು. ಅವರದು ಎತ್ತರದ ನಿಲುವು. ಅವರು ಅನ್ಯಾಯವನ್ನು ಪ್ರತಿಭಟಿಸುವ ಕಠಿಣ ಸ್ವಭಾವರು. ತಮಗೆ ಉಪಕಾರ ಮಾಡಿದವರಿಗೆ ಅವರು ತುಂಬ ಕೃತಜ್ಞರು. ಆದರೆ ವೈರಿಗಳಿಗೆ ನಿಷ್ಕರುಣರು. ಅಪಮಾನವಾದರೆ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಸೇಡು ತೀರಿಸಿಕೊಳ್ಳುವ ಕೆಚ್ಚು ಅವರದು. ಒಬ್ಬರಿಗೆ ಸಹಾಯ ನೀಡಬೇಕೆಂದು ಅವರಿಗೆ ಹೇಳಿದ್ದಾದರೆ, ಆ ಸಹಾಯ ನೀಡುವ ತವಕದಲ್ಲಿ ಅವರು ತಮ್ಮನ್ನೇ ತಾವು ಮರೆತುಬಿಡುತ್ತಾರೆ. ಅವರು ಸೇಡು ತೀರಿಸಿಕೊಳ್ಳ ಬಗೆದರೆ, ಮೊದಲು ತಮ್ಮ ವೈರಿಗೆ ಅವರು ಮುನ್ನೆಚ್ಚರಿಕೆ ನೀಡುವರು ; ಆ ಮೇಲೆ ಇಬ್ಬರೂ ಶಸ್ತ್ರಸಜ್ಜಿತರಾಗಿ ಒಬ್ಬರನ್ನೊಬ್ಬರು ಭಲ್ಲೆಯಿಂದ ತಾಗುತ್ತಾರೆ. ಅವರಲ್ಲಿ ಒಬ್ಬನು ಓಡತೊಡಗಿದರೆ ಇನ್ನೊಬ್ಬನು ಅವನನ್ನು ಬೆನ್ನಟ್ಟುವನು. ಆದರೆ ಸೋಲೊಪ್ಪಿ ಬಿದ್ದವನನ್ನು ಅವರು ಕೊಲ್ಲುವುದಿಲ್ಲ. ಒಬ್ಬ ದಳಪತಿಯು ಕಾಳಗದಲ್ಲಿ ಸೋತರೆ ಅವನನ್ನು ಶಿಕ್ಷೆಗೆ ಗುರಿಪಡಿಸುವದಿಲ್ಲ. ಆದರೆ, ಅವನಿಗೆ ಸ್ತ್ರೀ ವಸ್ತ್ರಗಳ ಉಡುಗೊರೆ ಕೊಡಲಾಗುವದು ; ತನ್ಮೂಲಕ ಆ ದಳಪತಿಯು ತಾನೇ ಅಸು ನೀಗಲು ಮುಂದಾಗುವದು. ನೂರಾರು ಮಂದಿ ಜಟ್ಟಿಗಳನ್ನು ಸಾಕಲು ನಾಡಿನಲ್ಲಿ ಏರ್ಪಾಡುಂಟು. ಮಸೆದಾಟಕ್ಕೆ ತೊಡಗುವಾಗಲೆಲ್ಲ ಆ ಜಟ್ಟಿಗಳು ಕಳ್ಳುಕುಡಿದು ಮದ ಬರಿಸಿಕೊಂಡು, ಕೈಯಲ್ಲಿ ಭಲ್ಲೆ ಹಿಡಿದು ಹತ್ತುಸಾವಿರ ಜನರ ನಡುವೆ ಬಂದು ತಾನು ಒಬ್ಬನೇ ಇದ್ದರೂ ಅವರಿಗೆ ಕಾದಾಟಕ್ಕೆ ಕರೆ ಕೊಡುವನು. ಈ ಜಟ್ಟಿಗಳಲ್ಲಿ ಒಬ್ಬ ಯಾರನ್ನಾದರೂ ಎದುರಿಸಿ ಕೊಂದದ್ದೆ ಆದರೆ, ದೇಶದ ಶಾಸನಗಳು ಅವನಿಗೆ ಶಿಕ್ಷೆ ವಿಧಿಸುವದಿಲ್ಲ. ಅವರು ಹೊರಗೆ ಹೊರಟಾಗಲೆಲ್ಲ ಅವರ ಮುಂದೆ ಡೋಲು ಬಾರಿಸುವರು. ಇಷ್ಟೇ ಅಲ್ಲ, ಅವರು ನೂರಾರು ಆನೆಗಳಿಗೆ ಮದ ಬರಿಸಿ ಕಾಳಗಕ್ಕೆ ಅವನ್ನು ಕರೆನೊಯ್ದು, ಮೊದಲು ತಾವೂ ಮದ್ಯ ಕುಡಿದು, ಗುಂಪುಗೂಡಿ ಮುನ್ನುಗ್ಗುತ್ತ, ಎಲ್ಲವನ್ನೂ ತೊತ್ತಳದುಳಿದುಬಿಡುತ್ತಾರೆ. ಇದರಿಂದಾಗಿ ಯಾವ ಹಗೆಯೂ ಅವರೆದುರು ನಿಲ್ಲಲಾರದವನಾಗುವನು. ಈ ರಾಜನು ಈ ಬಗೆಯ ಜಟ್ಟಿಗಳನ್ನೂ ಆನೆಗಳನ್ನೂ ಹೊಂದಿದ್ದರ ಫಲವಾಗಿ ತನ್ನ ನೆರೆಹೊರೆಯುವರೊಂದಿಗೆ ತೀರ ತಿರಸ್ಕಾರದಿಂದ ನಡೆದುಕೊಳ್ಳುತ್ತಾನೆ. ಈತನು ಕ್ಷತ್ರಿಯ

ಕುಲದವನು, ಹೆಸರು ಪುಲಿಕೇಶಿ (ಪು-ಲೊ-ಕಿ-ಶೆ), ಈತನ ಯೋಜನೆಗಳು ಮತ್ತು ಕೈಕೊಂಡ ಕಾರ್ಯಗಳು ಚತುರ್ದಿಶೆಗಳಲ್ಲಿಯೂ ವ್ಯಾಪ್ತವಾಗಿದ್ದು, ಈತನ ಜನೋಪಕಾರಿ ಕೃತಿಗಳು ದೂರ ದೂರಾಂತರದಲ್ಲಿಯೂ ಅನುಭವಕ್ಕೆ ಬರುವಂತಿವೆ. ಈತನ ಪ್ರಜೆಗಳು ವಿನಯ ಪೂರ್ವಕವಾಗಿ ಈತನ ಆಜ್ಞೆಯನ್ನು ಶಿರಸಾ ವಹಿಸುತ್ತಾರೆ".

ಪುಲಿಕೇಶಿಯು ಹರ್ಷವರ್ಧನನನ್ನು ಎದುರಿಸಿದ್ದರ ಬಗೆಗೆ ಹುಯೆನ್‌ತ್ಸಾಂಗನು ಹೀಗೆ ಹೇಳಿದ್ದಾನೆ:—
" ಈಗ ಶಿಲಾದಿತ್ಯ ಮಹಾರಾಜನು ಪೂರ್ವದಿಂದ ಪಶ್ಚಿಮದ ವರೆಗಿನ ನಾಡುಗಳನ್ನು ಜಯಿಸಿದ್ದಾನೆ, ಮತ್ತು ತನ್ನ ಸೈನ್ಯಗಳನ್ನು ಇನ್ನೂ ದೂರದ ಜಿಲ್ಲೆಗಳಿಗೆ ಅಟ್ಟಿದ್ದಾನೆ. ಆದರೆ ಈ ನಾಡಿನ ಜನ ಮಾತ್ರ ಅವನಿಗೆ ವಶವರ್ತಿಗಳಾಗಿಲ್ಲ. ಅವನು ಐದು ಕಡೆಗಳಿಂದ ತನ್ನ ಸೈನ್ಯವನ್ನು ಸಂಗ್ರಹಿಸಿ, ಎಲ್ಲ ನಾಡು ಗಳಿಂದಲೂ ಉತ್ತಮೋತ್ತಮ ನಾಯಕರನ್ನು ಕರೆಯಿಸಿಕೊಂಡಿದ್ದಾನೆ, ಮತ್ತು ಸ್ವತಃ ತಾನೇ ಸೈನ್ಯದ ಮೇಲ್ವಿಚಾರಕ ನೇತಾರನಾಗಿ, ಈ ಜನರನ್ನು ನಿಗ್ರಹಿಸಿ ಶಿಕ್ಷಿಸಹೊರಟಿದ್ದಾನೆ. ಆದರೂ ಅವನು ಇನ್ನೂ ಅವರ ಸೈನ್ಯವನ್ನು ಸೋಲಿಸಿಲ್ಲ".

ಮುಂದೆ ಈ ಪ್ರವಾಸಿಯು ಆ ಪಟ್ಟಣವನ್ನು ಅದರ ಸುತ್ತಲಿನ ಪ್ರದೇಶವನ್ನು ಹೀಗೆ ಬಣ್ಣಿಸಿದ್ದಾನೆ :—

" ಇಷ್ಟು ಅವರ ರೂಢಿ ಅಭ್ಯಾಸಗಳ ವಿಷಯ : ಜನರು ವಿದ್ಯಾಪ್ರಿಯರು. ಶಾಸ್ತ್ರಸಮ್ಮತ ವಿದ್ಯೆ ಮತ್ತು ಲೌಕಿಕ ಅನ್ಯವಿದ್ಯೆಯನ್ನು ಅಭ್ಯಾಸ ಮಾಡುತ್ತಾರೆ. ಅಲ್ಲಿ ಸುಮಾರು ನೂರು ಸಂಘಾರಾಮ ಗಳುಂಟು. ಅಲ್ಲಿ ಐದು ಸಾವಿರದಷ್ಟು ಆಚಾರ್ಯರಿರುವರು. ಅವರು ಮಹಾಯಾನ, ಮತ್ತು ಹೀನಯಾನ ಎರಡನ್ನೂ ಅನುಸರಿಸುತ್ತಾರೆ. ಅಲ್ಲಿ ಸುಮಾರು ನೂರು ದೇವಮಂದಿರಗಳಿದ್ದು ಅಲ್ಲಿ ಶಾಸ್ತ್ರಸಮ್ಮತ ವಲ್ಲದ ಬೌದ್ಧೇತರ ಅನ್ಯಮತೀಯರು ವಾಸಿಸುತ್ತಾರೆ. ರಾಜಧಾನಿಯ ಒಳಗೂ ಹೊರಗೂ ಐದು ಸ್ತೂಪಗಳಿದ್ದು, ನಾಲ್ವರು ಗತಬುದ್ಧರು ನಡೆದಾಡಿದ ಮತ್ತು ಕುಳಿತ ಸ್ಥಳಗಳನ್ನು ಅವು ಸಂಕೇತಿಸುತ್ತವೆ. ಅವು ಅಶೋಕ ರಾಜನಿರ್ಮಿತಗಳು. ಇವಲ್ಲದೆ ಇನ್ನೂ ಕೆಲವು ಇಟ್ಟಿಗೆ ಮತ್ತು ಕಲ್ಲುಗಳಿಂದ ಕಟ್ಟಲಾದ ಸ್ತೂಪಗಳಿವೆ. ಅವು ಹೆಸರಿಸಿ ಹೇಳಲು ಬಾರದಷ್ಟು ಅಸಂಖ್ಯಾತವಾಗಿವೆ. ಪಟ್ಟಣದ ದಕ್ಷಿಣಕ್ಕೆ ಅನತಿ ದೂರದಲ್ಲಿ ಒಂದು ಸಂಘಾರಾಮ. ಅದರಲ್ಲಿ ಬೋಧಿಸತ್ವನ (ಕ್ವನ್–ತ್ಸಝುಃ–ತ್ಸಾಯ್) ಶಿಲಾಮೂರ್ತಿ ಇದೆ. ಅದರ ಆಧ್ಯಾತ್ಮಿಕ ಶಕ್ತಿ ಪ್ರಭಾವಗಳು ನಾಲ್ದೆಸೆಗೂ ಪಸರಿದ್ದುಂಟು. ಅನೇಕರು ಆ ಬೋಧಿ ಸತ್ವನಿಗೆ ಗುಪ್ತ ಪ್ರಾರ್ಥನೆ ಸಲ್ಲಿಸಿ ತಮ್ಮ ಮನೋವಾಂಛಿತಗಳನ್ನು ಪಡೆದುಕೊಂಡಿದ್ದಾರೆ. ಆ ನಾಡಿನ ಮೂಡಣ ಗಡಿಯಲ್ಲಿ ಎತ್ತರದ ಕೋಡುಗಲ್ಲುಗಳಿಂದ ಕೂಡಿದ ಕಡಿದಾದ ಇಳುಕಲಿನ ದೀರ್ಘ ಶೈಲಾವಳಿ ಉಂಟು. ಇಲ್ಲಿ ಕತ್ತಲಿನ ಕಣಿವೆಯೊಂದರಲ್ಲಿ ಒಂದು ಸಂಘಾರಾಮವನ್ನು ರಚಿಸಲಾಗಿದೆ. ಅದರ ಸಮುಚ್ಚ ಪ್ರಶಸ್ತ ರಂಗಶಾಲೆ, ಮತ್ತು ಅದರ ಪಾರ್ಶ್ವದ ಅಂಗಳಗಳು ಪ್ರಕಾಂಡ ಪ್ರಸ್ತರಗಳ ಮುಖದುದ್ದಕ್ಕೂ ರಚಿಸಲಾಗಿವೆ. ಒಂದರ ಮೇಲೊಂದರಂತೆ ಮಹಡಿ, ಹಿಂದುಗಡೆಗೆ ಬಂಡೆಗಲ್ಲು; ಮುಂದುಗಡೆ ಕಣಿವೆ, ಜಲಪ್ರವಾಹ. ಈ ವಿಹಾರವು ಅರ್ಹತ್ ಅಚರ (ಓ-ಚೆ-ಲೋ) ಎಂಬವರಿಂದ ನಿರ್ಮಿತವಾಯಿತು. ಇಲ್ಲಿಂದ ಒಂದುನೂರು 'ಲಿ' ಅಷ್ಟು ಪಡುವಲಿಗೆ ನರ್ಮದಾ (ನೈ-ಮೊ-ಟೊ) ನದಿಯನ್ನು ದಾಟಿ ಹೋದರೆ (ಪೋ–ಲು–ಲೀ–ಚೆ–ಪೊ) ಅಂದರೆ ಭರುಕಚ್ಛವ, (ಬರಿಗಝಾ, ಬ್ರೋಚ್) ರಾಜ್ಯ ಸಲುಪುತ್ತೇವೆ[29]".

ಕ್ರಿ.ಶ. 611ರಲ್ಲಿ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನು ನಾಲ್ಕು ವಿಷಯಗಳ ಮತ್ತು ಮಂಡಲಗಳ ರಾಜ್ಯಪಾಲನಾಗಿದ್ದನು. ಅವನ ಮುಖ್ಯ ಠಾಣ್ಯ ರೇವತೀದ್ವೀಪ[30] ಎಂಬ ಸ್ಥಳ. ಅವನು

ಚಾಲುಕ್ಯ ವಂಶಕ್ಕೆ ಸಂಬಂಧಿಸಿದವನೆಂದು ತೋರುತ್ತದೆ. ಡಾ|| ಫ್ಲೀಟ್ ಅವರ ಪ್ರಕಾರ, ಇವನು ಮಂಗಲೀಶನ ಮಗನಿರಬಹುದು, ಹಾಗು ಮಂಗಲೀಶನು ಇವನಿಗೇ ಚಾಲುಕ್ಯ ಸಿಂಹಾಸನದ ಉತ್ತರಾಧಿಕಾರ ದೊರಕಿಸಿಕೊಡಲು ಬಯಸಿದ್ದನು[31].

ನಾಸಿಕ ಜಿಲ್ಲೆಯ ನಿರ್ಪನ [32] ಎಂಬಲ್ಲಿಯ ದತ್ತಿ ಸಂಬಂಧೀಯ ತಾಮ್ರಪಟದಂತೆ, ಧಾರಾಶ್ರಯ ಜಯಸಿಂಹ ವರ್ಮನು ಎರಡನೆಯ ಪುಲಿಕೇಶಿಯ ಸೋದರನೆಂದೂ ನಾಸಿಕದ ಸುತ್ತುವಲಯದ ಪ್ರದೇಶವನ್ನು ಸಾಮಂತನಂತೆ ಆಳುತ್ತಲಿದ್ದನೆಂದೂ ಹೇಳಿದ್ದಿದೆ. ಡಾ. ಫ್ಲೀಟ್ ಅವರು ಈ ದಾನಲೇಖನ ಕೃತಕ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕೈರಾ ದತ್ತಿ ಶಾಸನ ಹೀಗೆ ಹೇಳುತ್ತದೆ: ಸಾಮಂತರಾಜರಾದ ಗುಜರಾತಿನ ಚಾಲುಕ್ಯ ಮನೆತನದ ಶಾಖೆಗೆ ಸಂಬಂಧಿಸಿದ ವಿಜಯವರ್ಮ ಎಂಬಾತನು, ಲಾಟ ಪ್ರದೇಶವನ್ನು, ಅಂದರೆ ಸೂರತ್ ಮತ್ತು ಬ್ರೋಚ್ ಜಿಲ್ಲೆಗಳ ಸುತ್ತಲಿನ ಪ್ರದೇಶವನ್ನು ಎರಡನೆಯ ಪುಲಿಕೇಶಿಯ ರಾಜ್ಯಭಾರದ ಕಾಲದಲ್ಲಿ ಆಳುತ್ತಿದ್ದನು[33]. ಆ ದತ್ತಿಯ ದಿನಾಂಕ, ವೈಶಾಖ ಪೂರ್ಣಿಮೆ, ಕಲಚೂರ್ಯ ವರ್ಷ 394ಕ್ಕೆ ಹೊಂದುವ ಕ್ರಿ.ಶ. 9ನೆಯ ಎಪ್ರಿಲ್ 643. ಡಾ. ಭಂಡಾರಕರರಂತೆ ಈಶಾಸನವು ಕೃತಕ[34]. ಆದರೆ ಡಾ. ಫ್ಲೀಟ್ ಅವರು ಇದು ಕೃತಕ ಅಲ್ಲವೆಂದೂ ಅಧಿಕೃತವೆಂದೂ ಹೇಳುತ್ತಾರೆ[35]. ಎರಡನೆಯ ಪುಲಿಕೇಶಿಯು ಲಾಟರನ್ನೂ ಗುರ್ಜರರನ್ನೂ ಜಯಿಸಿದನು ಎಂದು ಐಹೊಳೆಯ ಶಾಸನದಲ್ಲಿ ಹೇಳಲಾದ ಸಂಗತಿಯನ್ನು ಈ ಕೈರಾ ದತ್ತಿಲಿಪಿ ಪುಷ್ಟೀಕರಿಸುತ್ತದೆ.

ರತ್ನಗಿರಿ ಜಿಲ್ಲೆಯ ಚಿಪ್ಲುಮ್ ಎಂಬಲ್ಲಿಯ ದತ್ತಿಶಾಸನವು [36] ಹೇಳುತ್ತದೆ, ಸೇಂದ್ರಕ ವಂಶಜನಾದ ಶ್ರೀವಲ್ಲಭ ಸೇನಾನಂದರಾಜನು ಎರಡನೆಯ ಪುಲೀಕೇಶಿಯ ಸೋದರ ಮಾವ ಎಂದು. ಸೇಂದ್ರಕರು, ಬಾದಾಮಿ ಚಾಲುಕ್ಯರ ಸಾಮಂತರಾಗಿ ಚಾಲುಕ್ಯರ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಕಾಲಗಳಲ್ಲಿ ಆಳುತ್ತ ಇದ್ದರು. ನವುಸರಿ ಜಿಲ್ಲೆಯ ಬಗುಮ್ರ[37] ಎಂಬಲ್ಲಿಯ ದತ್ತಿಶಾಸನದಂತೆ, ಸೇಂದ್ರಕ ವಂಶದ ಆದಿತ್ಯಶಕ್ತಿಯ ಮಗನಾದ ಪೃಥಿವೀವಲ್ಲಭ ನಿಕುಂಭಲ್ಲ ಶಕ್ತಿ ಎಂಬವನು, ಕ್ರಿ. ಶ. 655ರಲ್ಲಿ ಬಡೋದೆಯ ಸುತ್ತುವಲಯದ ಪ್ರದೇಶವನ್ನು ಆಳುತ್ತಿದ್ದನು.

ಪುಲಿಕೇಶಿಯ ರಾಜ್ಯಭಾರವು ಹೇಗೆ ಕೊನೆಗೊಂಡಿತು ಎಂಬುದು ಸ್ಪಷ್ಟವಿಲ್ಲ. ಆದರೆ ಪಲ್ಲವರ ಶಾಸನಗಳಿಂದ ತಿಳಿದು ಬರುವ ಸಂಗತಿಯಂತೆ ಪುಲಿಕೇಶಿಯ ಆಳಿಕೆಯು ದುರಂತದಲ್ಲಿ ಕೊನೆಗೊಂಡಿತೆಂದು ತೋರುತ್ತದೆ. ಚಾಲುಕ್ಯರ ಮತ್ತು ಪಲ್ಲವರ ನಡುವೆ ವಂಶಪರಂಪರಾಗತ ವೈರವಿತ್ತು. ಎರಡನೆಯ ಪುಲಿಕೇಶಿಯು ತನ್ನ ಆಳಿಕೆಯ ಪ್ರಾರಂಭಿಕ ಕಾಲದಲ್ಲಿ ಪಲ್ಲವರನ್ನು ಸೋಲಿಸಿ, ಅವರ ಮಹತ್ವ ಮತ್ತು ಪ್ರಭಾವ ದಕ್ಷಿಣದೇಶದಲ್ಲಿ ಇಲ್ಲದಂತೆ ಮಾಡಿಬಿಟ್ಟನು[38]. ಇದರ ಸೇಡುತೀರಿಸಿಕೊಳ್ಳಲು ಪಲ್ಲವರು ಮೊದಲನೆಯ ನರಸಿಂಹನ ನೇತೃತ್ವದಲ್ಲಿ, ಪುಲಿಕೇಶಿಯೊಂದಿಗೆ ಪರಿಯಲ, ಮಣಿಮಂಗಲ, ಸುರಮಾರ, ಇವೇ ಮೊದಲಾದಲ್ಲೆಲ್ಲ ಕಾಳಗ ಮಾಡಿದರು. ಪಲ್ಲವರ ಶಾಸನಗಳು ಹೇಳುತ್ತವೆ:—ಒಂದು ಪಟದ ಮೇಲೆ 'ವಿಜಯ' ಎಂದು ಬರೆಯಿಸಿ ಪುಲಿಕೇಶಿಯ ಬೆನ್ನಿಗೆ ತಗುಲಿಸಲಾಯ್ತು, ಮತ್ತು ಅಗಸ್ತ್ಯನು ವಾತಾಪಿಯನ್ನು ನಾಶಗೊಳಿಸಿದ ಹಾಗೆ ಬಾದಾಮಿಯನ್ನು ಮುತ್ತಿ ಬೀಳುಗೆಡವಲಾಯಿತು. ನರಸಿಂಹ ವರ್ಮನು, 'ವಾತಾಪಿಕೊಂಡನ್'—ಬಾದಾಮಿಯನ್ನು ವಶಪಡಿಸಿಕೊಂಡವ—ಎಂದು ಬಿರುದು ತಳೆದನು[39]. ಐಹೊಳೆಯ ಶಾಸನದ ಕಾಲ ಕ್ರಿ.ಶ. 634-35. ಮೊದಲನೆಯ ವಿಕ್ರಮಾದಿತ್ಯನು ಬರೆಯಿಸಿದ ಮೊದ ಮೊದಲಿನ ಶಾಸನ ಕಾಲವು ಕ್ರಿ.ಶ. 655. ಬಾದಾಮಿಯನ್ನು ವಶಪಡಿಸಿಕೊಂಡದ್ದು ಇವೆರಡು ದಿನಾಂಕಗಳ ಮಧ್ಯಕಾಲದಲ್ಲಿ ಇರಬೇಕು. ಚೀನಾ ಪ್ರವಾಸಿ ಹುಯೆನ್‌ತ್ಸಾಂಗ್, ಎರಡನೆಯ ಪುಲಿಕೇಶಿಯ ಸಾಮ್ರಾಜ್ಯವನ್ನು ಸಂದರ್ಶಿಸಿದ್ದು ಕ್ರಿ ಶ. 639 ರಲ್ಲಿ[40]. ಅವನ ವರ್ಣನೆಯಂತೆ ಒಂದು ಸಂಗತಿ ಸ್ಪಷ್ಟ ವಾಗುವದು. ಅದೇನೆಂದರೆ, ಎರಡನೆಯ ಪುಲಿಕೇಶಿಯು ಮತ್ತು ಅವನ ಸಾಮ್ರಾಜ್ಯದ ವೈಭವವು ಉತ್ಕರ್ಷದ

ಶಿಖರ ಮುಟ್ಟಿತ್ತು. ಕ್ರಿ.ಶ. 643 ರ ವಿಜಯರಾಜನ ಕೈರಾ ದತ್ತಿಶಾಸನದಿಂದ ಒಂದು ಅಂಶವನ್ನು ಊಹಿಸಬಹುದು, ಅದೇಂದರೆ, ಬಾದಾಮಿಯ ಪತನವು ಆ ಕಾಲದ (ಕ್ರಿ.ಶ. 643) ಮೊದಲು ಸಂಭವಿಸಿರ ಬೇಕು. ಬಹುಶಃ ಕ್ರಿ.ಶ. 642 ರಲ್ಲಿ ಬಾದಾಮಿಯ ಪತನ ಆಗಿರಬೇಕೆಂದು ಡಾ॥ ಫ್ಲೀಟರು ಸೂಚಿಸುತ್ತಾರೆ[41].

ಎರಡನೆಯ ಪುಲಿಕೇಶಿಯು ತನ್ನ ವಂಶದ ಸರ್ವಶ್ರೇಷ್ಠ ಸಾಮ್ರಾಟ ಎಂಬುದರಲ್ಲಿ ಮತ್ತು ಅವನ ಕಾಲದಲ್ಲಿ ಚಾಲುಕ್ಯ ಸಾಮ್ರಾಜ್ಯ ಅತ್ಯಂತ ಉಚ್ಛ್ರಾಯಕ್ಕೆ ತಲುಪಿತ್ತೆಂಬುದರಲ್ಲಿ ಸಂದೇಹವಿಲ್ಲ. ಆದರೆ ಬಾದಾಮಿಯನ್ನು ವಶಪಡಿಸಿಕೊಳ್ಳುವದರಲ್ಲಿ ಪಲ್ಲವರು ಜಯಶೀಲರಾದದ್ದರ ಪರಿಣಾಮವಾಗಿ, ಚಾಲುಕ್ಯರ ಪ್ರತಾಪ ಪ್ರಭೆಯು 15 ವರ್ಷಗಳ ವರೆಗೆ ಕಂದಿದಂತಾಯಿತು.

ಎರಡನೆಯ ಪುಲಿಕೇಶಿಗೆ ನಾಲ್ವರು ಗಂಡುಮಕ್ಕಳೆಂದು ತೋರುತ್ತದೆ. ಅವರ ಹೆಸರು : ಆದಿತ್ಯ ವರ್ಮ, ಚಂದ್ರಾದಿತ್ಯ, ವಿಕ್ರಮಾದಿತ್ಯ ಮತ್ತು ಧಾರಾಶ್ರಯ ಜಯಸಿಂಹ. ಇವರಲ್ಲದೆ ಅಂಬರಾ ಎಂಬ ಒಬ್ಬ ಮಗಳಿದ್ದಳು. ಈ ವಿಷಯ ಸೇಲಂ ಜಿಲ್ಲೆಯ ಹೊಸೂರು ಎಂಬಲ್ಲಿ ದೊರೆತ ತಾಮ್ರಪಟದಿಂದ ತಿಳಿಯುತ್ತದೆ. ಆದರೆ ಇದು ಕೃತಕ ಶಾಸನ ಎಂದೂ ಹೇಳುತ್ತಾರೆ[42]. ಕರ್ನೂಲ ದತ್ತಿ ಶಾಸನದ ಪ್ರಕಾರ[43], ಆದಿತ್ಯವರ್ಮನಿಗೆ, ' ಮಹಾರಾಜಾಧಿರಾಜ ', ' ಪರಮೇಶ್ವರ ', ' ಪೃಥಿವೀ ವಲ್ಲಭ ', ಎಂಬ ಬಿರುದಾವಳಿಗಳು ಇದ್ದವು. ಆದರೆ ಅವನು ಎಲ್ಲಿ ಮತ್ತು ಯಾವಾಗ ಆಳಿದನು ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ. ನೆರೂರು ಮತ್ತು ಕೊಚ್ಚೆಮ ಎಂಬಲ್ಲಿ ದೊರೆತ ದತ್ತಿಲಿಪಿಯಲ್ಲಿ ಹೀಗೆ ಉಲ್ಲೇಖಿಸಿದೆ,—ಚಂದ್ರಾದಿತ್ಯನು ಕೊಂಕಣದಲ್ಲಿದ್ದನು, ಮತ್ತು ಅವನ ಪತ್ನಿ ವಿಜಯಭಟ್ಟಾರಿಕಾ, ಆಳಿಕೆಯ ಐದನೆಯ ವರ್ಷ ಬ್ರಾಹ್ಮಣರಿಗೆ ಭೂಮಿ ಮೊದಲಾದುವನ್ನು ದಾನ ಮಾಡಿದಳು. ಈ ಆಳಿಕೆ ಬಹುಶಃ ವಿಕ್ರಮಾದಿತ್ಯನದೇ ಇರಬೇಕು[44]. ಧಾರಾಶ್ರಯ ಜಯಸಿಂಹನು ಲಾಟಮಂಡಲವನ್ನು ಆಳುತ್ತಿದ್ದನು. ಕ್ರಿ.ಶ. 642—655ರ ನಡುವಿನ 13 ವರ್ಷಗಳ ಕಾಲಾವಧಿಯಲ್ಲಿ, ಚಾಲುಕ್ಯ ಸಾಮ್ರಾಜ್ಯವು ಪಲ್ಲವರ ವಶದಲ್ಲಿತ್ತು; ಮತ್ತು ಬಹುಶಃ ಚೋಳ, ಚೇರ, ಮತ್ತು ಪಾಂಡ್ಯ—ಈ ಮೂವರು ರಾಜರುಗಳ ಒಕ್ಕೂಟವು (CONFEDERACY) ಅದರ ರಾಜ್ಯಾಡಳಿತವನ್ನು ನಿರ್ವಹಿಸುತ್ತಿತ್ತು ಎಂದು ತೋರುತ್ತದೆ. ಎರಡನೆಯ ಪುಲಿಕೇಶಿಯ ಪ್ರೀತಿಪಾತ್ರ ಪುತ್ರ ವಿಕ್ರಮಾದಿತ್ಯನು, ತನ್ನ ತಂದೆಯ ಸಾಮ್ರಾಜ್ಯವನ್ನು ಪುನಃ ಪಡೆಯಲು ಅವಿಶ್ರಾಂತ ಹೋರಾಟ ನಡೆಸಿದನು. ಅವನು ಪಲ್ಲವರೊಂದಿಗೆ ಅನೇಕ ಕಾಳಗ ನಡೆಸಿದನು. ಕೆಲವೊಂದು ಕದನಗಳಲ್ಲಿ ವಿಕ್ರಮಾದಿತ್ಯನು ಹಿಮ್ಮೆಟ್ಟಿರಲೂಬೇಕು. ಮೊದಲನೆಯ ಪರಮೇಶ್ವರವರ್ಮನು ಪೆರುವಲಮತ್ತೂರ್ ಎಂಬಲ್ಲಿನ ಕಾಳಗದಲ್ಲಿ ವಿಕ್ರಮಾದಿತ್ಯನನ್ನು ಸೋಲಿಸಿದನು ಎಂದು ಪಲ್ಲವ ಶಾಸನಗಳು ಹೇಳುತ್ತವೆ. ಇನ್ನೊಂದು ಶಾಸನ ಹೇಳುತ್ತದೆ,—ಪರಮೇಶ್ವರ ವರ್ಮನು ಯಾರ ಸಹಾಯವೂ ಇಲ್ಲದೆ, ವಿಕ್ರಮಾದಿತ್ಯನು ಚಿಂದಿಹೊದ್ದು ಓಡಿಹೋಗುವಂತೆ ಮಾಡಿದನು[45]. ವಿಕ್ರಮಾದಿತ್ಯನ ಸೈನ್ಯಸಂಖ್ಯೆ ಅನೇಕ ಸಾವಿರವಿತ್ತು.

ವಿಕ್ರಮಾದಿತ್ಯನು ಸಿದ್ಧತೆಮಾಡಿಕೊಂಡನು, ಮತ್ತು ತನ್ನ ಮಗ ವಿನಯಾದಿತ್ಯನಿಗೂ, ಮೊಮ್ಮಗ ವಿಜಯಾದಿತ್ಯನಿಗೂ ಚೆನ್ನಾಗಿ ಸಮರಶಿಕ್ಷಣ ಕೊಟ್ಟನು[46]. ಅವನು ಪಲ್ಲವರ ರಾಜಧಾನಿ ಕಂಚಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಹೀಗೆ ಅವನು, ತಂದೆಯು ಕಳೆದುಕೊಂಡ ಸಾಮ್ರಾಜ್ಯ ವನ್ನು ಪುನಃ ಸ್ವಾಧೀನ ಪಡಿಸಿಕೊಂಡನು. ವಿಕ್ರಮಾದಿತ್ಯನು ತನ್ನ ತಂದೆಯ ಹಾಗೆ ' ಸತ್ಯಾಶ್ರಯ ' ಎಂಬ ಬಿರುದು ಹೊಂದಿದನು. ಅವನ ಇನ್ನುಳಿದ ಬಿರುದುಗಳೆಂದರೆ,—' ರಣರಸಿಕ ', ' ಶ್ರೀ ಪೃಥಿವೀ ವಲ್ಲಭ ', ' ಮಹಾರಾಜಾಧಿರಾಜ ', ' ಪರಮೇಶ್ವರ ಭಟ್ಟಾರಕ ', ' ಪರಮ ಮಾಹೇಶ್ವರ '.

ಒಂದನೆಯ ವಿಕ್ರಮಾದಿತ್ಯನು ತನ್ನ ಕಾಳಗದ ಕುದುರೆ ಚಿತ್ರಕಂಠ ಎಂಬುದರ ಸಹಾಯದಿಂದಲೂ, ತನ್ನ ಖಡ್ಗಧಾರೆಯಿಂದಲೂ ಅನೇಕ ಯುದ್ಧಗಳಲ್ಲಿ ವಿಜಯಿಯಾದನು[47]. ಮೂವರು ರಾಜರು ಕೂಡಿ ಕಬಳಿಸಿದ್ದ ತನ್ನ ತಂದೆಯ ರಾಜ್ಯವನ್ನು, ಮೊದಲನೆಯ ವಿಕ್ರಮಾದಿತ್ಯನು ತನ್ನ ಅಂಕೆಗೆ ತಂದುಕೊಂಡು ಅದಕ್ಕೆ ತಾನೇ ಸರ್ವಸ್ವಾಮಿ ಎನಿಸಿ ತನ್ನ ತಂದೆಯ ಸಮಾನ ಘನತೆ ಗೌರವವುಳ್ಳ ರಾಜನೆನಿಸಿಕೊಂಡನು. ದೇವರಿಗೂ ಬ್ರಾಹ್ಮಣರಿಗೂ ನೀಡಲಾಗಿದ್ದ ದತ್ತಿ ದಾನ ಮೊದಲಾದವನ್ನು ಆ ಮೂವರು ರಾಜರು ಕಸಿದು ಬಿಟ್ಟಿದ್ದರು. ಅವುಗಳನ್ನು ಪುನಃ ಅವರವರಿಗೆ ಕೊಡಮಾಡಿದನು. ಒಂದಾದಮೇಲೊಂದು ನಾಡಿನಲ್ಲಿ ಕಾಳಗ ನಡೆಸಿ ತನ್ನ ಹಗೆಗಳನ್ನೆಲ್ಲ ಗೆದ್ದು, ಅವನು ತನ್ನ ಪೂರ್ವಿಕರ ಸಾರ್ವಭೌಮತ್ವವನ್ನು ಸ್ವಾಯತ್ತ ಮಾಡಿಕೊಂಡನು. "ಅವನು ಈಶ್ವರ ಪೋತರಾಜನನ್ನು (1ನೆಯ ಪರಮೇಶ್ವರ ವರ್ಮನ್) ಗೆದ್ದು ಕಾಂಚಿಯನ್ನು ವಶಪಡಿಸಿಕೊಂಡನು. ಕಾಂಚಿಯ ಭವ್ಯವಾದ ಭಿತ್ತಿಗಳು ಅನುಲ್ಲಂಘನೀಯವೂ ಅಭೇದ್ಯವೂ ಆಗಿದ್ದವು. ಅದರ ಸುತ್ತೂ ಆಳವಾದ ಮತ್ತು ದಾಟಲು ಬಾರದ ಕಂದಕವಿತ್ತು. ಕಾಂಚಿಯು ದಕ್ಷಿಣ ದೇಶದ ಕಾಂಚೀದಾಮವದಂತೆ ಇತ್ತು[48]". ತರುವಾಯದ ಶಾಸನದಲ್ಲಿ ಮೊದಲನೆಯ ವಿಕ್ರಮಾದಿತ್ಯನು ಹೀಗೆ ವರ್ಣಿತನಾಗಿದ್ದಾನೆ: "ಕುಲ ಗೌರವಕ್ಕೂ ಘನತೆಗೂ ಭಂಗ ತಂದ, ವಂಶನಾಶಕ್ಕೆ ಕಾರಣನಾದ ಪಲ್ಲವಾಧಿಪನನ್ನು ಜಯಿಸಿ, ಶರಣಾಗತನಾದ ಅವನಿಂದ ಕಾಂಚೀ ಪಟ್ಟಣವನ್ನು ಸ್ವೀಕರಿಸಿದಂಥವನೀತ. ಚೋಳ, ಪಾಂಡ್ಯ, ಕೇರಳ ಈ ಮೂವರು ರಾಜರ ಗರ್ವಭಂಗಗೊಳಿಸಿದವನೀತ. ಇನ್ನಾರಿಗೂ ತಲೆಬಾಗದ ಕಾಂಚೀರಾಜನಿಂದ ಸಾಷ್ಟಾಂಗ ಹಾಕಿಸಿಕೊಂಡವನೀತ. ಈ ಬಗೆಯಾಗಿ, ಈತನು ಮೂರು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಭೂಭಾಗಕ್ಕೆಲ್ಲ ಅಧಿಪತಿಯಾದನು[49]". ಕಳೆದುಹೋದ ತನ್ನ ಸಾಮ್ರಾಜ್ಯವನ್ನು ಪುನಃ ಜಯಿಸಿಕೊಳ್ಳುವಾಗ ವಿಕ್ರಮಾದಿತ್ಯನಿಗೆ ಅವನ ಮಗ ಮತ್ತು ಮೊಮ್ಮಗ ಬಹಳ ನೆರವಾದರು. ಅವನ ಮಗ ವಿನಯಾದಿತ್ಯನು ಚೋಳ, ಪಾಂಡ್ಯ, ಕೇರಳ ಈ ಮೂವರು ರಾಜರ ಬಲವನ್ನು ಬಗ್ಗುಬಡಿದದ್ದೇ ಅಲ್ಲದೆ, ಪಲ್ಲವರನ್ನೂ ಹಣ್ಣಿಗೆ ತಂದು, ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿ ತನ್ನ ತಂದೆಗೆ ಸಂಪ್ರೀತಿ ಸಮಾಧಾನ ಉಂಟುಮಾಡಿದನು; ಮೊದಲ ವಿಕ್ರಮಾದಿತ್ಯನ ಮೊಮ್ಮಗನಾದ ವಿಜಯಾದಿತ್ಯನು ಸ್ವಂತ ಪ್ರಾಂತಗಳಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳುತ್ತಿರಲು, ವಿಕ್ರಮಾದಿತ್ಯನು ದಕ್ಷಿಣ ಪ್ರದೇಶಗಳಲ್ಲಿ ಹಗೆಗಳೊಂದಿಗೆ ಹೋರಾಡಿ [50] ಅವರನ್ನು ದಮನಿಸುತ್ತಿದ್ದನು.

ವಿಕ್ರಮಾದಿತ್ಯನು ವಂಶ ಪರಂಪರಾಗತವಾದ ಭಾಗ್ಯವನ್ನೂ ಸಾರ್ವಭೌಮ ಅಧಿಕಾರವನ್ನೂ ಕ್ರಿ.ಶ. 655ರ ಮೊದಲು ಪುನಃ ಪಡೆದನು, ಮತ್ತು ಆ ವರ್ಷದಿಂದ ಅವನು ತನ್ನ ರಾಜ್ಯಭಾರ ಪ್ರಾರಂಭಿಸಿದನೆಂದು ತೋರುತ್ತದೆ. ಚಂದ್ರಾದಿತ್ಯನ ಕ್ರಿ.ಶ. 23–9–659ರ ರಾಜಶಾಸನ ಒಂದರಲ್ಲಿ, ಆಳಿಕೆಯ ಐದನೆಯ ವರ್ಷವಿದು ಎಂದು ಉಲ್ಲೇಖಿಸಲಾಗಿದೆ[51]. ಇದು ಯಾರ ಆಳಿಕೆಯ ಐದನೆಯ ವರ್ಷ ಎಂಬುದು ಸ್ಪಷ್ಟವಾಗುವದಿಲ್ಲ. ಆದರೆ ಆ ಶಾಸನವು ಒಂದನೆಯ ವಿಕ್ರಮಾದಿತ್ಯನ ಉಲ್ಲೇಖ ಮಾಡುವದು. ಆದುದರಿಂದ, ಆ ವರ್ಷವು ವಿಕ್ರಮಾದಿತ್ಯನ ಆಳಿಕೆಯನ್ನೇ ಕುರಿತದ್ದು ಎಂದು ಊಹಿಸಲು ಅಡ್ಡಿಯಿಲ್ಲ. ಇದು, ಕ್ರಿ.ಶ. 641–42ರಿಂದ ಸುಮಾರು ಹದಿಮೂರು ವರ್ಷಗಳ ಕಾಲಾವಕಾಶವನ್ನು ನಿರ್ದೇಶಿಸುತ್ತದೆ. ಎರಡನೆಯ ಪುಲಿಕೇಶಿಗೆ ಸಂಬಂಧಿಸಿದಂತೆ ದೊರೆಯುವ ದಿನಾಂಕಗಳಲ್ಲಿ ಇದು ಕೊನೆಯದಾಗಿದೆ. ಬಡೋದಾ ಜಿಲ್ಲೆಯ ನವಸಾರಿ[52], ನೆರೂರ, ಮತ್ತು ಕೊಚ್ಚೆಮ (ರತ್ನಗಿರಿ ಜಿಲ್ಲೆ), ಮತ್ತು ರತ್ನಗಿರಿ [53] ಎಂಬ ಈ ಊರ ಹೆಸರುಗಳು ಶಾಸನದಲ್ಲಿ ನಿರ್ದೇಶಿತವಾಗಿವೆ. ಅನಂತಪುರ ಜಿಲ್ಲೆಯ ತೀರ ತೆಂಕಣಕ್ಕಿರುವ ಮಡಕಸಿರಾದಿಂದ ನೈಋತ್ಯಕ್ಕೆ 13 ಮೈಲಿಗಳಾಚೆ ರತ್ನಗಿರಿ ನೆಲಸಿದ್ದಿದೆ. ಇದರಿಂದ ಒಂದು ಊಹೆ ಮಾಡಬಹುದು. ಅದೆಂಪರೆ, ವಿಕ್ರಮಾದಿತ್ಯನು ನಿಜಕ್ಕೂ ಬಾದಾಮಿ ಚಾಲುಕ್ಯರ ಸಮಸ್ತ ರಾಜ್ಯವನ್ನೂ ಪುನಃ ಗೆದ್ದು ಸ್ವಾಧೀನಪಡಿಸಿಕೊಂಡನು. ಅವನ ಬಿರುದಾವಳಿಗಳು: 'ಶ್ರೀವಲ್ಲಭ', 'ಅನಿವಾರಿತ', 'ರಣರಸಿಕ,' ಮತ್ತು 'ರಾಜಮಲ್ಲ'. ಅವನ ಮಾಂಡಲಿಕ ರಾಜರಲ್ಲಿ, ಸೇಂದ್ರಕರ ಮತ್ತು ಗುಜರಾತಿನ ಚಾಲುಕ್ಯ ವಂಶದ ಶಾಖೆಯ ಹೆಸರುಗಳನ್ನು ನಿರ್ದೇಶಿಸಲಾಗಿದೆ. ಮೊದಲನೆಯ ವಿಕ್ರಮಾದಿತ್ಯನ ರಾಜ್ಯ

ಭಾರವು ಕ್ರಿ. ಶ. 682ರ ವರೆಗೂ [54] ವ್ಯಾಪಿಸಿತ್ತು. ಅವನು, ಹೆಚ್ಚುಕಡಮೆ 27 ವರ್ಷ ಸಿಂಹಾಸನದ ಮೇಲಿದ್ದನು. ಡಾ. ಫ್ಲೀಟರ ಪ್ರಕಾರ, ಅವನ ಆಳಿಕೆ ಕ್ರಿ.ಶ. 680ಕ್ಕೆ ಕೊನೆಗೊಂಡಿತು[55].

ನೆರೂರ ದತ್ತಿ ಶಾಸನವು [56] ಮೊದಲನೆಯ ವಿಕ್ರಮಾದಿತ್ಯನ ಹಿರಿಯಣ್ಣ ಚಂದ್ರಾದಿತ್ಯನ ಉಲ್ಲೇಖ ಮಾಡುತ್ತದೆ. ಅದರಲ್ಲಿ ಇವನನ್ನು, 'ಪೃಥ್ವೀವಲ್ಲಭ' ಮತ್ತು 'ಮಹಾರಾಜ' ಎಂದು ಕರೆಯಲಾಗಿದೆ. ಈ ದತ್ತಿ ಶಾಸನದ ದಿನಾಂಕವು, ಡಾ. ಫ್ಲೀಟರ ಪ್ರಕಾರ, ಕ್ರಿ.ಶ. 13–9–659ಕ್ಕೆ ಸರಿಹೊಂದುತ್ತದೆ. ಆ ಶಾಸನವು, ಮೊದಲನೆಯ ವಿಕ್ರಮಾದಿತ್ಯನನ್ನು ವರ್ಣಿಸುತ್ತ, ಅವನು ಎಂದೂ ಹಿಮ್ಮೆಟ್ಟದವನೆಂದೂ, ದೇಶ ದೇಶಗಳ ರಿಪು ರಾಜರುಗಳನ್ನು ಪರಾಜಯಗೊಳಿಸಿದವನೆಂದೂ, ತನ್ನ ಪೂರ್ವಜರ ಭಾಗ್ಯ ಮತ್ತು ಸಾರ್ವಭೌಮತ್ವವನ್ನು ಸಂಪಾದಿಸಿದವನೆಂದೂ ಹೇಳುತ್ತದೆ. ಇದರಿಂದ ತಿಳಿಯುವದೇನೆಂದರೆ, ಕಳೆದುಕೊಂಡ ಪ್ರದೇಶಗಳನ್ನು ವಿಕ್ರಮಾದಿತ್ಯನು ಪುನಃ ಜಯಿಸಿಕೊಂಡ ತರುವಾಯವೇ ಆ ದತ್ತಿಯನ್ನು ಕೊಟ್ಟದ್ದು ಎಂದು. ಚಂದ್ರಾದಿತ್ಯನ ವಿಷಯಕ್ಕೆ ಹೆಚ್ಚಿನ ಸಂಗತಿಗಳೇನೂ ದೊರಕಿಲ್ಲ. ಚಂದ್ರಾದಿತ್ಯನು ಒಂದು ಅಧೀನ ಸ್ಥಾನವನ್ನು ಅಂಗೀಕರಿಸಿದ್ದನು ಎಂದು ತರ್ಕಿಸಲಾಗಿದೆ. ಆದುದರಿಂದ, ಆಳಿಕೆಯ ಐದನೆಯ ವರ್ಷ ಎಂಬುದು, ಮೊದಲನೆಯ ವಿಕ್ರಮಾದಿತ್ಯನಿಗೇ ಸಂಬಂಧಿಸಿದ್ದು ಎಂದು ಗ್ರಹಿಸಲಾಗಿದೆ. ಕ್ರಿ.ಶ. 659ರಲ್ಲಿ ಚಂದ್ರಾದಿತ್ಯ ಅಥವಾ ಅವನ ಹೆಂಡತಿ ವಿಜಯಭಟ್ಟಾರಿಕಾ, ರತ್ನಗಿರಿ ಜಿಲ್ಲೆಯ ಸಾವಂತವಾಡಿಯ ಸುತ್ತಲಿನ ಪ್ರದೇಶವನ್ನು ಸಾಮಂತಾಧಿಕಾರದಲ್ಲಿ ಆಳುತ್ತಿದ್ದರು.

ಕರ್ನೂಲ ಜಿಲ್ಲೆಯ ದಾನಸಂಬಂಧದ ಒಂದು ತಾಮ್ರಪಟವು ಹೇಳುವಂತೆ, ಆದಿತ್ಯವರ್ಮನು 2ನೆಯ ಪುಲಿಕೇಶಿಯ ಮತ್ತೊಬ್ಬ ಮಗ; ಅವನು ಸಹ ದತ್ತಿನೀಡಿದ ಉಲ್ಲೇಖವು ಅದರಲ್ಲಿದೆ[57]. ಆದಿತ್ಯವರ್ಮನ ಬಿರುದಾವಳಿಗಳು : 'ಪೃಥಿವೀವಲ್ಲಭ', 'ಮಹಾರಾಜಾಧಿರಾಜ' ಮತ್ತು 'ಪರಮೇಶ್ವರ.' ಅವನನ್ನು 2ನೆಯ ಪುಲಿಕೇಶಿಯ 'ಪ್ರಿಯತನಯ' ಎಂದು ವರ್ಣಿಸಿದ್ದಿದೆ. ಅವನು ತನ್ನ ಬಾಹುಬಲದಿಂದಲೇ ಗೆದ್ದ ಭೂಮಿಯ ಸಾರ್ವಭೌಮತ್ವವನ್ನು ಭೋಗಿಸುತ್ತಿದ್ದನು ಎಂದೂ ಬಣ್ಣಿಸಿದೆ. ಆ ದತ್ತಿಲಿಪಿಯಲ್ಲಿ ವಿಕ್ರಮಾದಿತ್ಯನ ಉಲ್ಲೇಖವೇ ಇಲ್ಲ. ಶಕವರ್ಷದ ನಿರ್ದೇಶವು ಅದರಲ್ಲಿ ಇಲ್ಲದ ಕಾರಣ ದಿನಾಂಕವನ್ನು ನಿರ್ಧರಿಸುವದು ಅಶಕ್ಯವಾಗಿದೆ. ವಿಕ್ರಮಾದಿತ್ಯನ ಅನಂತರದ ಸಂತತಿಯವರ ದತ್ತಿಲಿಪಿಯಲ್ಲಿ ಆದಿತ್ಯವರ್ಮನ ನಾಮನಿರ್ದೇಶವೇ ಕಾಣಬರುವದಿಲ್ಲ. ಕ್ರಿ.ಶ. 1009ರ ಕವುತೇಮ ಎಂಬಲ್ಲಿಯ ದತ್ತಿಲಿಪಿಯು[58], 1ನೆಯ ವಿಕ್ರಮಾದಿತ್ಯನು ಆದಿತ್ಯವರ್ಮನ ಮಗನೆಂದು ಹೇಳುತ್ತದೆ. ಕನ್ನಡದ ಮಹಾಕವಿ ರನ್ನನು ತನ್ನ ಕಾವ್ಯ "ಗದಾಯುದ್ಧವನ್ನು ಬರೆದು ಮುಗಿಸಿದ್ದು, ಶುಕ್ರವಾರ 27ನೆಯ ಅಕ್ಟೋಬರ ಕ್ರಿ.ಶ. 982. ಈತನು ಆದಿತ್ಯವರ್ಮನ ವಿಷಯ ಪ್ರಸ್ತಾವಿಸುತ್ತ ಅವನು 2ನೆಯ ಸತ್ಯಾಶ್ರಯನ ಅಂದರೆ 2ನೆಯ ಪುಲಿಕೇಶಿಯ ಮಗನೆಂದೂ, ಮೊದಲನೆಯ ವಿಕ್ರಮಾದಿತ್ಯನು ಆದಿತ್ಯವರ್ಮನ ಮಗನೆಂದೂ [59] ಹೇಳಿದ್ದಾನೆ. ಇದು ಕವುತೇಮ ದತ್ತಿಲಿಪಿಯ ಹೇಳಿಕೆಯನ್ನು ಸಮರ್ಥಿಸುತ್ತದೆ. ಕ್ರಿ.ಶ. ಹತ್ತನೆಯ ಶತಕದಲ್ಲಿ, ಚಾಲುಕ್ಯ ಬಲ ಕಲ್ಯಾಣದಲ್ಲಿ ಪುನರುತ್ಥಾನ ಹೊಂದಿದ ತರುವಾಯ, ಆದಿತ್ಯವರ್ಮನು ಮೊದಲನೆಯ ವಿಕ್ರಮಾದಿತ್ಯನ ತಂದೆ ಎಂದು ಚಾಲುಕ್ಯ ವಂಶಾವಳಿಯು ಅಂಗೀಕರಿಸಿದಂತೆ ತೋರುತ್ತದೆ. ಆದರೆ, ಆದಿತ್ಯವರ್ಮನ ಹೆಸರೇಕೆ ವಿಕ್ರಮಾದಿತ್ಯನ ಮತ್ತು ಅವನ ಸಂತತಿಯ ಶಾಸನಗಳಲ್ಲಿ ಕಂಡುಬರುವದಿಲ್ಲ? ಹೀಗೂ ಒಂದು ಸೂಚನೆಯುಂಟು : ಆದಿತ್ಯವರ್ಮನು ಬಹುಶಃ ಎರಡನೆಯ ಪುಲಿಕೇಶಿಯ ಜ್ಯೇಷ್ಠ ಪುತ್ರನಿರಬೇಕೆಂದೂ, ತಂದೆ ತೀರಿದನಂತರ ಅವನೇ ಸಿಂಹಾಸನ ಏರಿರಬಹುದೆಂದೂ ಆ ಸೂಚನೆ. ಕಳೆದುಕೊಂಡ ಸಾಮ್ರಾಜ್ಯವನ್ನು ಅವನು ಪುನಃ ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿರಬೇಕು. ಡಾ. ಫ್ಲೀಟರು ಸೂಚಿಸುತ್ತಾರೆ, ವಿಕ್ರಮಾದಿತ್ಯನು ಪಲ್ಲವರಿಂದ ಪುನಃ ಗೆದ್ದು ಸ್ವಾಧೀನಪಡಿಸಿಕೊಂಡ ರಾಜ್ಯವನ್ನು, ಆದಿತ್ಯವರ್ಮನು ಅವನಿಂದ ಕಸಿದುಕೊಳ್ಳಲು ಪ್ರಯತ್ನಿಸಿರಬೇಕು[60] ಎಂದು.

ವಿನಯಾದಿತ್ಯನು ತನ್ನ ತಂದೆ ಒಂದನೆಯ ವಿಕ್ರಮಾದಿತ್ಯನನಂತರ ಕ್ರಿ.ಶ. 682ರಲ್ಲಿ ಪಟ್ಟಕ್ಕೆ ಬಂದನು[61]. ಅವನ ಬಿರುದುಗಳು, 'ಸತ್ಯಾಶ್ರಯ', ಮತ್ತು 'ರಾಜಾಶ್ರಯ'. ಕವುಠೇಮದ ದತ್ತಿಲಿಪಿಯಲ್ಲಿ ಅವನನ್ನು "ಯುದ್ಧಮಲ್ಲ" ಎಂದೂ ಕರೆಯಲಾಗಿದೆ. ರನ್ನಕವಿಯು ಅವನನ್ನು "ದುರ್ಧರ ಮಲ್ಲ" ಎಂದು ಕರೆದಿದ್ದಾನೆ. ತನ್ನ ತಂದೆಯ ಅಪ್ಪಣೆಯ ಮೇರೆಗೆ, ಚೋಳ, ಪಾಂಡ್ಯ, ಕೇರಳ ಈ ಮೂವರು ರಾಜರ, ಮತ್ತು ಪಲ್ಲವರ ಬಲಾಧಿಕ್ಯವನ್ನು ವಿನಯಾದಿತ್ಯನು ತಡೆಗಟ್ಟಿದನೆಂದು ಹೇಳಲಾಗಿದೆ. ಎಲ್ಲ ಪ್ರಾಂತಗಳಲ್ಲಿಯೂ ಶಾಂತಿ ಸಮಾಧಾನ ನೆಲೆಗೊಳಿಸಿ[62] ವಿನಯಾದಿತ್ಯನು ತನ್ನ ತಂದೆ 1ನೆಯ ವಿಕ್ರಮಾದಿತ್ಯನ ಮನಸ್ಸಿಗೆ ಸಂತೃಪ್ತಿ ಉಂಟುಮಾಡಿದನು. ತನ್ನ ವಂಶಪರಂಪರಾಗತ ಸಾಮಂತ ರಾಜರಾದ ಆಳುಪರು, ಗಂಗರು ಮತ್ತು ಇನ್ನಿತರರ ಸಹಾಯದಿಂದ ಈತನು ಪಲ್ಲವರು, ಕಳಭ್ರರು, ಕೇರಳರು, ಹೈಹಯರು, ವಿಲರು, ಮಾಳವರು, ಚೋಳರು, ಪಾಂಡ್ಯರು ಹಾಗು ಇನ್ನಿತರರನ್ನು ಜಯಿಸಿದನು. ಇವನ ತರುವಾಯದ ಶಾಸನಗಳು ಹೇಳುವ ಪ್ರಕಾರ, ಈತನು ಕಾವೇರರು, ಪಾರಸಿಕರು, ಸಿಂಹಳರು ಇವರೇ ಮೊದಲಾದವರ ರಾಜರುಗಳಿಂದ ಕಪ್ಪಕಾಣಿಕೆಗಳನ್ನು ಪಡೆಯುತ್ತಿದ್ದನು. ಇಷ್ಟೇ ಅಲ್ಲ: ಉತ್ತರ ಭಾರತದ ಓರ್ವ ರಾಜನನ್ನು ಪರಾಜಯಗೊಳಿಸಿ ಅವನ ಪಾಲಿಧ್ವಜ, ಮತ್ತು ಇನ್ನಿತರ ಶ್ವೇತಚ್ಛತ್ರ, ಚಾಮರ ಮೊದಲಾದ ರಾಜೇಶ್ವರ ಲಾಂಛನಗಳನ್ನು ಸಂಪಾದಿಸಿಕೊಂಡನು. ವಿನಯಾದಿತ್ಯನಿಗೆ, ವಿಜಯಾದಿತ್ಯ ಎಂಬ ಮಗನೂ, ಕುಂಕುಮ ಮಹಾದೇವಿ ಎಂಬ ಒಬ್ಬ ಮಗಳೂ ಇದ್ದರು. ಆಕೆಯು ಒಂದು ಜೈನ ಮಂದಿರ ಕಟ್ಟಿಸಿದಳು. ಆ ಮಂದಿರವು ಗುಣಿಗೇರಿ[63] ಎಂಬಲ್ಲಿದ್ದು ಅದರ ಹೆಸರು ಆನೆಸಜ್ಜೆ ಬಸದಿ ಎಂದು. ಆಕೆಯನ್ನು ಆಳುಪ ಅರಸನೊಬ್ಬನಿಗೆ ಕೊಟ್ಟು ಮದುವೆ ಮಾಡಲಾಗಿತ್ತು.

ವಿನಯಾದಿತ್ಯನ ತರುವಾಯ ಕ್ರಿ.ಶ. 696ರಲ್ಲಿ ಅವನ ಮಗ ವಿಜಯಾದಿತ್ಯನು ಪಟ್ಟಕ್ಕೆ ಬಂದನು[64]. ಈತನೇ ಬರೆಯಿಸಿದ ಶಾಸನಗಳಲ್ಲಿಯೂ ಈತನ ತರುವಾಯದ ವಂಶಜ ರಾಜರು ಬರೆಯಿಸಿದ ಶಾಸನಗಳಲ್ಲಿಯೂ ಈತನನ್ನು 'ಪ್ರಿಯತನಯ' ಎಂದು ಕರೆಯಲಾಗಿದೆ. ಈತನ ಬಿರುದಾವಳಿಗಳು: 'ಸತ್ಯಾಶ್ರಯ', 'ಸಮಸ್ತಭುವನಾಶ್ರಯ', 'ಶ್ರೀಪೃಥಿವೀವಲ್ಲಭ', 'ಮಹಾರಾಜಾಧಿರಾಜ', 'ಪರಮೇಶ್ವರ', 'ಭಟ್ಟಾರಕ', 'ಪಾರಮಭಟ್ಟಾರಕ', ಮತ್ತು ಸಾಹಸರಸಿಕ' ಮೊದಲಾದವು. ಇವನು ತನ್ನ ತಂದೆಗೂ ಅಜ್ಜನಿಗೂ ಶತ್ರುದಮನದ ಕಾರ್ಯದಲ್ಲಿ ಸಹಾಯಮಾಡಿದನು. ಇವನು ಕ್ರಿ.ಶ. 692ರಲ್ಲಿ ಯುವರಾಜನಾಗಿ ನಿಯೋಜಿತನಾದನು. ಇವನ ತಂದೆಯೂ ಅಜ್ಜನೂ ಕಳೆದುಕೊಂಡ ಸಾಮ್ರಾಜ್ಯವನ್ನು ಮರಳಿ ಪಡೆಯಲು ದಕ್ಷಿಣ ದೇಶದ ರಿಪುರಾಜರ ವಿರುದ್ಧ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಇವನು ತನ್ನ ಸ್ವಂತ ಪ್ರಾಂತಗಳಲ್ಲಿ ಶಾಂತಿಯನ್ನೂ ಸುವ್ಯವಸ್ಥೆಯನ್ನೂ ಕಾಪಾಡಿಕೊಂಡಿದ್ದನು. ಉತ್ತರದ ಒಂದು ಯುದ್ಧ ಸಂದರ್ಭದಲ್ಲಿ ಇವನು ತನ್ನ ತಂದೆಯೊಂದಿಗೆ ಹೋಗಿದ್ದನು. ಆಗ ತಂದೆಯನ್ನು ಹಿಂದೆ ಬಿಟ್ಟು, ತಾನು ಮುನ್ನುಗ್ಗಿ ನಡೆದು ಪಾಲಿಧ್ವಜವನ್ನೂ, ಗಂಗಾಯಮುನಾ ನದಿಗಳ ಲಾಂಛನಗಳನ್ನೂ ಪಂಪಾದಿಸಿದನು. ಒಂದು ಸಂದರ್ಭದಲ್ಲಿ ಇವನು ವೈರಿಗಳಿಂದ ಸೆರೆಹಿಡಿಯಲ್ಪಟ್ಟನು. ಇವನು ಪಾರಾಗುವ ಪ್ರಯತ್ನದಲ್ಲಿ ಜಯಶೀಲನಾದನು. ಇವನು ಅರಾಜಕ ಕ್ಷೋಭೆಗಳನ್ನು ದಮನಿಸಿ, ತನ್ನ ರಾಜ್ಯಗಳಲ್ಲೆಲ್ಲ ತನ್ನ ಅಧಿಕಾರ ದರ್ಪವನ್ನು ನೆಲೆಗೊಳಿಸಿದನು. ಇವನು, ತನ್ನ ರಾಜಧಾನಿಯಾದ ವಾತಾಪಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳನ್ನು ಪ್ರತಿಷ್ಠೆಗೊಳಿಸಿದನು[65] ಪಟ್ಟದಕಲ್ಲಿನಲ್ಲಿ[66] ವಿಜಯೇಶ್ವರ ಎಂಬ ಹೆಸರಿನ ಒಂದು ಘನವಾದ ಶಿವದೇವಾಲಯವನ್ನು ಕಟ್ಟಿಸಿದನು. ಈಗ ಈ ದೇವಾಲಯಕ್ಕೆ ಸಂಗಮೇಶ್ವರ ದೇವಾಲಯ ಎಂದು ಹೆಸರಾಗಿದೆ. ಲಕ್ಷ್ಮೇಶ್ವರದಲ್ಲಿ ದೊರಕಿದ ಅವನ ಶಾಸನ[67] ಒಂದರಲ್ಲಿ, ಪುಲಿಗೆರೆಯ ನೆರೆಯ ಕರ್ದಮ ಎಂಬ ಗ್ರಾಮವನ್ನು, ಅವನು ತನ್ನ ತಂದೆಯ ಗುರುವಾದ ನಿರವದ್ಯ ಅಥವಾ ಉದಯ ದೇವ ಪಂಡಿತನಿಗೆ ದಾನವಾಗಿ ನೀಡಿದನು ಎಂದು ಉಲ್ಲೇಖಿಸಲಾಗಿದೆ. ಈ ಉದಯದೇವ ಪಂಡಿತನು, ಪೂಜ್ಯಪಾದ ಎಂಬಾತನ ಶಿಷ್ಯನೆಂದು ಹೇಳಿದೆ. ಈ ಶಾಸನದ ದಿನಾಂಕವು, ಅವನ ಆಳಿಕೆಯ

ಮೂವತ್ತನಾಲ್ಕನೆಯ ವರ್ಷ; ಅಂದರೆ ಕ್ರಿ.ಶ. 730. ಇಲ್ಲಿ ನಿರ್ದೇಶಿಸಲಾದ ಪೂಜ್ಯಪಾದನು, 'ಜೈನೇಂದ್ರ ವ್ಯಾಕರಣ'ದ ಕರ್ತೃವಾದ ಲೋಕವಿಖ್ಯಾತ ಪೂಜ್ಯಪಾದನೇ ಇರದೇಕು.

ವಿಜಯಾದಿತ್ಯನ ತರುವಾಯ ಅವನ ಅಕ್ಕರೆಯ ಮಗ ಎರಡನೆಯ ವಿಕ್ರಮಾದಿತ್ಯನು ಕ್ರಿ.ಶ. 733–34ರಲ್ಲಿ ಪಟ್ಟಕ್ಕೆ ಬಂದನು. ಅವರ ಮನೆತನದ ವಾಡಿಕೆಯ ಬಿರುದಾವಳಿಗಳು ಅವನಿಗೂ ಬಂದವು. ಅವೆಂದರೆ,—ಸತ್ಯಾಶ್ರಯ, ಶ್ರೀಪೃಥಿವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ ಇತ್ಯಾದಿ. ಅವನು ಕಲಚುರಿ ಮನೆತನದ ರಾಜಕುಮಾರಿ ಲೋಕಮಹಾದೇವಿಯನ್ನು ಮದುವೆಯಾದನು. ಈಕೆಯ ವೈಪಿತ್ರೇಯ ಸೋದರಿ ತ್ರೈಲೋಕ್ಯ ಮಹಾದೇವಿ ಕೂಡ ಇವನ ರಾಣಿ. ತ್ರೈಲೋಕ್ಯಮಹಾದೇವಿಯ ಹೊಟ್ಟೆಯಲ್ಲಿ ಹುಟ್ಟಿದ ಇವನ ಮಗ ಎರಡನೆಯ ಕೀರ್ತಿವರ್ಮನು ಇವನ ತರುವಾಯ ಪಟ್ಟಕ್ಕೆ ಬಂದನು. ಲೋಕಮಹಾದೇವಿಯು ಪಟ್ಟದಕಲ್ಲಿನಲ್ಲಿ ಶಿವನ ಹೆಸರಿನಲ್ಲಿ ಲೋಕೇಶ್ವರ ದೇವಾಲಯ ಎಂಬ ಒಂದು ಗುಡಿ ಕಟ್ಟಿಸಿದಳು. ಈಕೆಯ ಸೋದರಿ, ತ್ರೈಲೋಕ್ಯ ಮಹಾದೇವಿಯು ಸಹ ಅದರ ಬಳಿ ಒಂದು ಶಿವದೇವಾಲಯವನ್ನು ಕಟ್ಟಿಸಿ ಅದಕ್ಕೆ ತ್ರೈಲೋಕೇಶ್ವರ ಎಂದು ನಾಮಕರಣ ಮಾಡಿದಳು. ಲೋಕಮಹಾದೇವಿಯು, ದೇವಾಲಯವನ್ನು ನಿರ್ಮಿಸಿದ ಸ್ಥಪತಿ 'ಗುಂಡ' ಎಂಬಾತನನ್ನು ಗೌರವಿಸುತ್ತ, ಆತನಿಗೆ, 'ತ್ರಿಭುವನಾಚಾರಿ,' 'ತೆಂಕಣದಿಶಾಸೂತ್ರಧಾರಿ', 'ಅನಿವಾರಿತಾಚಾರಿ' ಎಂಬೀ ಬಿರುದುಗಳನ್ನು ಕೊಟ್ಟು, "ಮುಮ್ಮೆ–ಪೆರ್ಜೆರೆಪ್ರಪಟ್ಟ"[68] ಎಂಬ ಬಿರುದಿನ ಪದಕನೀಡಿ ಮರ್ಯಾದೆ ಮಾಡಿದಳು. ಇಮ್ಮಡಿ ವಿಕ್ರಮಾದಿತ್ಯನು ತನ್ನ ಮನೆತನದ 'ಸಹಜವೈರಿ'ಗಳಾದ ಪಲ್ಲವರನ್ನು ನಿರ್ಮೂಲಗೊಳಿಸುವ ಪಣತೊಟ್ಟನು, ಮತ್ತು ಕಾಂಚಿಯ 'ತುಂಡಕ' ಎಂಬ ಪ್ರದೇಶವನ್ನು ಏಕಾ ಏಕಿ ಪ್ರವೇಶಿಸಿ, ನಂದಿಪೋತವರ್ಮನ ಮೇಲೆ ಮುಗಿಬಿದ್ದು ಅವನನ್ನು ಓಡಿಸಿದನು. ಅವನು ಅಲ್ಲಿಂದ "ಕಟುಮುಖ" ಮತ್ತು "ಸಮುದ್ರಘೋಷ" ಎಂಬ ವಾದ್ಯೋಪಕರಣಗಳನ್ನೂ ನೂರಾರು ಆನೆಗಳನ್ನೂ ರಾಶಿರಾಶಿ ಮಣಿ ಮಾಣಿಕ್ಯ ಮುತ್ತು ರತ್ನಗಳನ್ನೂ ವಶಪಡಿಸಿಕೊಂಡನು[69]. ಅವನು ಕಾಂಚೀ ಪುರವನ್ನು ಪ್ರವೇಶಿಸಿದನಾದರೂ ಅದನ್ನು ನಾಶಪಡಿಸಲಿಲ್ಲ. ಇಷ್ಟೇಅಲ್ಲ, ಅವನು ರಾಜಸಿಂಹೇಶ್ವರ ಮತ್ತು ಇನ್ನಿತರ ದೇವಾಲಯಗಳಿಗೆ ಸುವರ್ಣವನ್ನೂ ನಾನಾ ಅಭರಣಗಳನ್ನೂ ದಾನಮಾಡಿದನು[70]. ಈ ದೇವಾಲಯಗಳನ್ನು ನಿರ್ಮಿಸಿದವನು ಇಮ್ಮಡಿ ನರಸಿಂಹ ವರ್ಮನ್ ಎಂಬಾತ. ಇಮ್ಮಡಿ ವಿಕ್ರಮಾದಿತ್ಯನು, ಪಾಂಡ್ಯರನ್ನೂ, ಚೋಳರನ್ನೂ, ಕಳಭ್ರರನ್ನೂ, ಇನ್ನಿತರ ರಾಜರುಗಳನ್ನೂ ಸೋಲಿಸಿ, ದಕ್ಷಿಣ ಮಹಾಸಾಗರದ ದಡದಲ್ಲಿ ವಿಜಯಸ್ತಂಭವನ್ನು ನಿಲ್ಲಿಸಿದನು. ಕಾಂಚಿಯ ರಾಜಸಿಂಹೇಶ್ವರ ದೇವಾಲಯದಲ್ಲಿ ಅವನು ಬರೆಯಿಸಿ ಹಾಕಿದ ಶಾಸನದಲ್ಲಿ ಈ ಘಟನೆಗೆ ಪುಷ್ಟೀಕರಣ ದೊರೆಯುತ್ತದೆ. ಈತನ ಮಗ ಯುವರಾಜ ಇಮ್ಮಡಿ ಕೀರ್ತಿವರ್ಮ ತನ್ನ ತಂದೆಯ ಆಳಿಕೆಯ ಕಾಲದಲ್ಲಿ ಕಾಂಚಿಗೆ ಒಂದು ದಂಡಯಾತ್ರೆಯ ನೇತಾರನಾಗಿ ಹೋಗಿದ್ದನು. ಇಮ್ಮಡಿ ವಿಕ್ರಮಾದಿತ್ಯನ ಆಳಿಕೆಯಲ್ಲಿ ನಡೆದ ಇನ್ನೊಂದು ಮಹತ್ವದ ಘಟನೆ ಎಂದರೆ, ಗುಜರಾತಿಗೆ ದಂಡೆತ್ತಿಬಂದ ತೈಜಿಕರು ಅಥವಾ ಅರಬರನ್ನು ಪರಾಜಯ ಗೊಳಿಸಿದ್ದು[71]. ಅವರು ಆಗಲೇ ಸೈಂಧವರು, ಕಚಹೆಲ್ಲರು, ಸೌರಾಷ್ಟ್ರರು, ಚವೋಟಕರು ಮತ್ತು ಮೌರ್ಯಗುರ್ಜರ ರಾಜರುಗಳನ್ನು ಧ್ವಂಸಗೊಳಿಸಿದ್ದರು. ಸಾಮಂತ ರಾಜನಾದ ಅವನಿಜನಾಶ್ರಯ ಪುಲಿಕೇಶಿನ್ ಎಂಬ ಚಾಲುಕ್ಯ ರಾಜಕುಮಾರನು ಲಾಟ ರಾಜ್ಯವನ್ನು ಆಳುತ್ತಿದ್ದನು. ಆತನು ಅರಬರನ್ನು ಎದುರಿಸಿ, ಅವರನ್ನು ಸಂಪೂರ್ಣ ಸೋಲಿಸಿದನು. ಆ ಮೇಲೆ ಆತನು ಗುರ್ಜರ ಪ್ರಾಂತವನ್ನೂ ಸ್ವಾಧೀನಪಡಿಸಿಕೊಂಡು ಲಾಟ ಪ್ರಾಂತ್ಯಕ್ಕೆ ಅದನ್ನು ಜೋಡಿಸಿ ಲಾಟ ರಾಜ್ಯದ ಸೀಮೆಯನ್ನು ವಿಸ್ತರಿಸಿದನು. ಸಾಮ್ರಾಜ್ಯದ ಸೀಮಾ ವರ್ಧನೆ ಮಾಡಿದ್ದರ ಸಲುವಾಗಿ ಇಮ್ಮಡಿ ವಿಕ್ರಮಾದಿತ್ಯನು, ಚಾಲುಕ್ಯ ರಾಜಕುಮಾರ ಅವನಿಜನಾಶ್ರಯ ಪುಲಿಕೇಶಿಯನ್ನು ತುಂಬ ಗೌರವಿಸಿದನು.

ಇಮ್ಮಡಿ ಕೀರ್ತಿವರ್ಮನು ತನ್ನ ತಂದೆಯ ತರುವಾಯ ಕ್ರಿ.ಶ. 746ರಲ್ಲಿ ಪಟ್ಟವೇರಿದನು. ಅವನು

ತಂದೆಗೆ ಪ್ರೀತಿಪಾತ್ರ ಪುತ್ರ. "ಸತ್ಯಾಶ್ರಯ" ಎಂಬುದಾಗಿ ಅವನು ವಾಡಿಕೆಯ ಬಿರುದು ಧರಿಸಿದ್ದನು. ಅವನನ್ನು "ನೃಪಸಿಂಹ" ಎಂದೂ ಕರೆಯಲಾಗುತ್ತಿತ್ತು. ಅವನ ಇನ್ನಿತರ ಉಪಾಧಿ ವಿಶೇಷಗಳೆಂದರೆ,—ಶ್ರೀ ಪೃಥಿವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ[72]. ಅವನ ಹೆಸರಿಗೆ ಕನ್ನಡ ಪದ ಅರಸ ಎಂಬುದನ್ನು ಜೋಡಿಸಲಾಗಿದೆ[73]. ದಂತಿದುರ್ಗನ ಸಾಮಂಗಡದ[74] ದತ್ತಿಲಿಪಿಯು, ಅವನಿಗೆ 'ವಲ್ಲಭ' ಎಂದೂ ಅವನ ಸೈನ್ಯಕ್ಕೆ ಕರ್ಣಾಟಸೈನ್ಯ ಎಂದೂ ಪದಪ್ರಯೋಗ ಮಾಡಿದೆ. ಅವನು ಬಾಲಕನಿದ್ದಾಗಲೇ ಶಸ್ತ್ರಾಸ್ತ್ರ ಪ್ರಯೋಗಗಳನ್ನು ಕಲಿತು ತನ್ನ ತಂದೆಯ ಮೆಚ್ಚುಗೆ ಪಡೆದಿದ್ದನು. ಅವನ ತಂದೆಯು ಅವನನ್ನು ಯುವರಾಜನನ್ನಾಗಿ ಮಾಡಿ, ವಂಶವೈರಿಗಳಾದ ಕಾಂಚಿಯ ರಾಜರು ಪಲ್ಲವರ ವಿರುದ್ಧ ದಂಡಯಾತ್ರೆಯ ಆಧಿಪತ್ಯವನ್ನು ಅವನಿಗೆ ಒಪ್ಪಿಸಿ ಕಳುಹಿಸಿಕೊಟ್ಟನು. ಕೀರ್ತಿವರ್ಮನು ರಣರಂಗವನ್ನು ಪ್ರವೇಶಿಸಿದನು. ಆದರೆ ಕಾಂಚೀರಾಜನು ಮುಕ್ತ ರಣಕ್ಷೇತ್ರದಲ್ಲಿ ಯುದ್ಧಮಾಡಲಾರದೆ ಅವನು ತನ್ನ ದುರ್ಗದಲ್ಲಿ ಆಶ್ರಯ ಪಡೆದನು. ಇಮ್ಮಡಿ ಕೀರ್ತಿವರ್ಮನು ಹಿಂಡು ಹಿಂಡು ಆನೆಗಳನ್ನೂ ಮಣಿ ಮಾಣಿಕ್ಯ, ರತ್ನ ಸುವರ್ಣ ಸಂಪದವನ್ನೂ ಸ್ವಾಧೀನಪಡಿಸಿಕೊಂಡು ಅವೆಲ್ಲವನ್ನೂ ತನ್ನ ತಂದೆಗೆ ಕಾಣಿಕೆಯಾಗಿ ಒಪ್ಪಿಸಿದನು[75].

ಇಮ್ಮಡಿ ಕೀರ್ತಿವರ್ಮನು, ಚಾಲುಕ್ಯ ವಂಶದ ಬಾದಾಮಿ ಶಾಖೆಯ ಅರಸರಲ್ಲಿ ಕೊನೆಯವನು. ಸಾಮಂಗಡದ ದತ್ತಿಲಿಪಿಯಲ್ಲಿ[76] ಹೇಳಿದೆ,—ಖಡ್ಗಾವಲೋಕ ದಂತಿದುರ್ಗನು ವಲ್ಲಭನನ್ನು ಅಂದರೆ ಇಮ್ಮಡಿ ಕೀರ್ತಿವರ್ಮನನ್ನು ಗೆದ್ದನು, ಮತ್ತು ಕರ್ಣಾಟಕ ಸೈನ್ಯವನ್ನು ಸೋಲಿಸಿದನು. ಅರ್ಥಾತ್, ಕಾಂಚಿ ರಾಜನನ್ನೂ ಕೇರಳ, ಚೋಳ, ಪಾಂಡ್ಯ, ಹರ್ಷ, ಮತ್ತು ವಜ್ರತ ರಾಜರನ್ನೂ ಪರಾಜಯಗೊಳಿಸಿದ ಚಾಲುಕ್ಯ ಸೈನ್ಯವನ್ನು ಖಡ್ಗಾವಲೋಕ ದಂತಿದುರ್ಗನು ಸೋಲಿಸಿದನು. ಈ ದತ್ತಿಲಿಪಿಯಲ್ಲಿ ನಿರ್ದೇಶಿತವಾದ ದಿನಾಂಕವು ಒಂದು ಅಂಶವನ್ನು ಸಿದ್ಧಗೊಳಿಸುವದು. ಅದೆಂದರೆ, ಇಮ್ಮಡಿ ಕೀರ್ತಿವರ್ಮನು, ತಾನು ಕಳೆದುಕೊಂಡ ರಾಜ್ಯವನ್ನು, ದಂತಿದುರ್ಗನ ಮರಣಾನಂತರ ಅವನ ಉತ್ತರಾಧಿಕಾರಿಯಾದ ಮೊದಲನೆಯ ಕೃಷ್ಣನ ಕಾಲದಲ್ಲಿ, ಪುನರ್ವಶ ಮಾಡಿಕೊಳ್ಳಲು ಪ್ರಯತ್ನಿಸಿದನು. ಮೊದಲನೆಯ ಕೃಷ್ಣನನ್ನು, "ಮಹಾವರಾಹಮ್ ಹರಿಣೀಮ್ ಚಕಾರ" ಎಂದು ವರ್ಣಿಸಲಾಗಿದೆ. ಇದರರ್ಥ, ಚಾಲುಕ್ಯ ಲಾಂಛನವಾದ ಮಹಾವರಾಹವನ್ನು ಜಿಂಕೆಯಾಗಿ ಮಾರ್ಪಡಿಸಿದನು ಎಂದು. ಚಾಲುಕ್ಯ ಬಲವು ಕೃಷ್ಣನನ್ನು ಪ್ರಚಂಡ ಪ್ರತಾಪದಿಂದ ತಾಗಿತ್ತು[77]. ಆ ಕಾಲದಿಂದ ಮುಂದೆ ಕ್ರಿ.ಶ. ಹತ್ತನೆಯ ಶತಕದ ವರೆಗೆ ರಾಷ್ಟ್ರಕೂಟರು ಚಾಲುಕ್ಯ ಸಾಮ್ರಾಜ್ಯವನ್ನು ನಿರ್ವಿವಾದವಾಗಿ ತಮ್ಮ ಒಡೆತನಕ್ಕೆ ಸೇರಿಸಿಕೊಂಡರು.

ಈ ಸೋಲಿನ ತರುವಾಯ ಕೀರ್ತಿವರ್ಮನು ಎಷ್ಟುದಿನ ಜೀವಿಸಿದ್ದ, ಅವನಿಗೆ ಮಕ್ಕಳಿದ್ದರೋ ಇಲ್ಲವೋ ಎಂಬ ಯಾವ ಸಂಗತಿಗಳೂ ಉಪಲಬ್ಧವಿಲ್ಲ. ಈ ಕಾಲಾನಂತರ ಅವನ ನಿಕಟದ ಉತ್ತರಾಧಿಕಾರಿಗಳ ಉಲ್ಲೇಖಗಳಿಲ್ಲ. ಕ್ರಿ.ಶ. 757 ರಿಂದ 768 ರ ಮಧ್ಯಂತರದಲ್ಲಿ ಬಾದಾಮಿ ಚಾಲುಕ್ಯ ಸಾಮ್ರಾಜ್ಯವು ಮತ್ತೆ ಕಣ್ಮರೆಯಾಯಿತು.

## ಅಡಿಟಿಪ್ಪಣಿಗಳು

1. *I.A.*, Vol. VI, p. 74.
2. Dr. Fleet : *Dynasties of the Kanarese Districts*, p. 336, note 3.
3. W. Elliot; *Karn. Desha Insc.*, Vol. I, p. 642.
   Quoted by Dr. Fleet : *D.K.D.* p. 339.
4. *I.A.*, Vol. V, p. 317.
   *Vikramanka-deva-charita*, Ch. I., verses 31-58.
5. Dr. Hoernle ಅನ್ನುತ್ತಾರೆ :—

"ಚಾಲುಕ್ಯ ಶಬ್ದವು ಸಂಸ್ಕೃತ ಮೂಲದಿಂದ ಬಂದದ್ದೆಂದು ವಂಶಾವಳಿಕಾರನು ಪ್ರಯತ್ನ ಪಟ್ಟಿದ್ದರೂ, ನಾನು ಇದು ಸಂಸ್ಕೃತ ಶಬ್ದ ಅಲ್ಲ ಎಂದೂ ಗುರ್ಜರ ಅಥವಾ ಹೂಣ ಮೂಲದಿಂದ ಬಂದದ್ದೆಂದೂ ಸೂಚಿಸಬಯಸುತ್ತೇನೆ. ಅದು ತುರ್ಕೀಯ ಮೂಲದಿಂದಲೂ ಬಂದಿರಬಹುದು. ಚಪ್, ನಾಗಾಲೋಟ, ಚಪ್‌ಡುಲ್, ಸುಲಿಗೆಯು ದಾಳಿ ಕುದುರೆಯ ದಂಡಿನಿಂದ ಮುತ್ತಿಗೆ ಹಾಕುವುದು." (J. R. A. S., 1895, P. 12). ಚಾಲುಕ್ಯ ಶಬ್ದವು ಸಂಸ್ಕೃತವಲ್ಲ ಎಂಬ ಅವರ ಹೇಳಿಕೆಯನ್ನು ಅಂಗೀಕರಿಸಬಹುದು, ಆದರೆ ಅದರ ಮೂಲ ತುರ್ಕೀಯ ಎಂಬ ವಾದ ನಿಲ್ಲುವಂತಹದಲ್ಲ. ಈ ಮನೆತನದ ಪೂರ್ವಿಕರ ಯಾವ ಶಾಸನಗಳಲ್ಲಿಯೂ ಈ ಮಂಡನೆಯನ್ನು ಪುಷ್ಟೀಕರಿಸುವ ಪುರಾವೆಗಳು ಸಿಕ್ಕುವದಿಲ್ಲ. ಪುಲಿಕೇಶಿನ್ ಎಂಬ ಹೆಸರು, ಗುಜರಾತದ ಚಪ್ ವಂಶಾವಳಿಯಲ್ಲಿ ಬರುವದೆಂಬ, ಮತ್ತು ಚಪರು ಹಾಗು ಚಾಲುಕ್ಯರು ಒಂದೇ ಮನೆತನದ ಶಾಖೆಗಳು ಎಂಬ ಸೂಚನೆಯು ಅಸ್ಫುಟವಾಗಿದ್ದು, ಅದಕ್ಕೆ ನಿರ್ದಿಷ್ಟ ದೃಷ್ಟಾಂತಗಳ ಆವಶ್ಯಕತೆ ಇದೆ. Mr. Rice ಚಾಲುಕ್ಯ ಎಂಬ ಹೆಸರು, ಮತ್ತು ಗ್ರೀಕ್ ಹೆಸರು ಸೆಲೂಕಿಯ (Seleukeiae) ಇವೆರಡರಲ್ಲಿ ಸಾಮ್ಯವಿದೆ ಎಂದು ಸೂಚಿಸುತ್ತಾರೆ, (Mysore Gazetteer, Last Volume). Seleueidae ಮತ್ತು Arasacidae ಎಂಬ ಈ ಇಬ್ಬಣಗಳೂ ಕಾದಾಡಿದ Tigris ಮತ್ತು Euphrates ನದಿಗಳ ದಡಗಳಿಗೆ ಸಂಬಂಧಿಸಿದ Parthian ರು ಮತ್ತು ಪಲ್ಲವರು ಒಂದೇ ಎಂದು ಹೇಳಲಾಗುತ್ತದೆ. ಇವರಿಬ್ಬರೂ ಪರಂಪರಾಗತ ಹಗೆಗಳು. ಆದ ಕಾರಣ, ಚಾಲುಕ್ಯರು ಮತ್ತು ಪಲ್ಲವರ ನಡುವಿನ ಆನುವಂಶಿಕ ಬದ್ಧದ್ವೇಷವು ಈ ವಸ್ತುಸ್ಥಿತಿಯ ಮೂಲಕವೇ ಇರಬೇಕೆಂದು ಸೂಚಿಸಲಾಗಿದೆ.

ಇದೆಲ್ಲ ಕೇವಲ ಕಾಲ್ಪನಿಕ ಮತ್ತು ಬಹು ದೂರಕ್ಕೆ ಎಳೆದ ಊಹೆ. ಪಲ್ಲವರು ಮತ್ತು ಚಾಲುಕ್ಯರು ಇಬ್ಬರೂ ಭಾರತೀಯರು, ಅವರು ತಾವಿದ್ದ ದೇಶಕ್ಕೇ ಸರ್ವಥಾ ಸಂಬಂಧಿಸಿದವರು. ಅವರ ಭಾಷೆ, ಧರ್ಮ, ಸಾಮಾಜಿಕ ಜೀವನ, ಇವಾವವೂ ಅವರು ವಿದೇಶೀಯ ಮೂಲದವರು ಎಂಬ ವಾದಕ್ಕೆ ಪುಷ್ಟಿಕೊಡುವದಿಲ್ಲ.

6. ಡಾ॥ ಎನ್. ವೆಂಕಟರಾಮಯ್ಯ : "The Eastern Chalukyas of Vengi", p. 8. ಡಾ॥ ಆರ್.ಜಿ. ಭಂಡಾರಕರ್ ಅವರು ಹೇಳುವದೇನೆಂದರೆ,—"ಚಾಲುಕ್ಯ ಎಂಬುದು ನಾಡ ನುಡಿಯ ಒಂದು ಶಬ್ದ. ಅದು ಮುಂದೆ ಸಂಸ್ಕೃತದ ಮುದ್ರೆ ಪಡೆದು ನಮಗೆ ನಾನಾ ರೂಪಗಳಲ್ಲಿ ಸಿಕ್ಕುತ್ತದೆ" *Early History of Dekhan Section* X, Note I, p. 66 (Edition 1927).
7. *I.A.*, Vol. XIV, p, 48. See. also Vol. XIX, p. 42 and Vol. XX, p. 274.
8. *I.A.*, Vol. XVI, p. 21.
9. *I.A.*, Vol. V, p. 17.
10. W. Elliot : *Karn. Desha Iusc.*, Vol. O.P. Quoted by Dr. Fleet : *D.K.D.*, p. 339.
11. ರನ್ನ : ಗದಾಯುದ್ಧ ಆಶ್ವಾಸ 2ರಲ್ಲಿ 7ನೇ ಪದ್ಯದನಂತರದ ವಚನ.
12. Fleet : *D.K.D.* p. 342 and Notes 2 and 3 on p. 340.
13. *I.A.*, Vol. XIX, p. 19.
14. *I.A.*, Vol. VIII, p. 243.
15. *I.A.*, Vol. XIX, p. 151.
16. *I.A.*, Vol. XIX, p. 19
17. *I.A.*, Vol. VIII, p. 243.
18. Fleet : D.*K*.D., P. 343.
19. *I.A*., Vol. VII, P. 161.
20. *I.A.*, Vol. XIX, P. 19.
21. Bombay University Journal.

22. *E.I.*, Vol. XIII, P. 50.
23. *J.B.B.R.A.S.*, Vol. X, P. 348 Ind., & Ant., Vol. XIX, Pp. 11 and 12.
24. *I.A.*, Vol. III, P. 305 ; Vol. VI, P. 263 ; Vol. X, P. 57 ; Vol. XIX, P. 10.
25. *I.A.*, Vol. IX, P. 124.
26. *I.A.*, Vol. XIX, P. 10.
27. *I.A.*, Vol. XIX, P. 15.
28. *I.A.*, Vol. VIII, P. 237.
29. *I.A.*, Vol. XIX, P, 7.
30. *I.A.*, Vol. VII, P. 161.
31. *I.A.*, Vol. XIX, P. 7.
32. *I A.*, Vol. X, P. 59.
33. *I.A.*, Vol. VIII, P. 237.
34. Fleet: *D.K.D.*, P. 348.
35. *I.A.*, Vol. VII, P. 237.
36. *I.A.*, Vol. XIX, P. 303.
37. *I.A.*, Vol. XX, Pp. 1, 93, 266.
38. *J.R.A.S.* Vol. XI, Pp. 157, 165, 166, 167.
39. Beal: *Buddhist Records of the Western World*, Vol. II, P. 225.
    Reproduced by Dr. Fleet, *D.K.D.*, Pp. 353, 354.
40. Copper Plate Grant from Goa. *J.B.B.R.A.S.*, Vol. X, P. 348 and *Ind. Ant.*, Vol. XIX, P. 11, 12.
41. Dr. Fleet: *D.K.D.*, P. 349.
42. *I.A.*, Vol. IX, P. 123.
43. Dr. Fleet: *D.K.D.* P. 358, Note I.
44. *I.A.*, Vol. VII, P. 241.
45. Dr. R. G. Bhandarkar: *Early History of Dekhan*, P. 78. Note I ( 1927 Edn.)
46. Fleet: *D.K.D.*, P. 359, Note 2.
47. *E.I.*, Vol. III, p. 30.
48. *I.A.*, Vol. XVIII, p, 265.
49. Aihole Inscription : *I.A.*, Vol. VIII, p. 237.
50. Kuram Copper Plate Grants : *S.I.I.*, Vol. I, p. 144.
    also see Dr. Fleet : *D.K.D.*, p. 322.
51. Dr. Fleet : *D.K.D.*, p. 352.
52. Dr. Fleet : *D.K.D.*, p. 359.
53. Dr. Fleet : *D.K.D.*, p. 359.
54. *J.B.B.R.A.S.*, Vol. XVI, pp. 223, 233.
55. *S.I.I.*, Vol. I. p. 144, Dr. Fleet : *D.K.D.*, p. 362.
56. *J.B.B.R.A.S.*, Vol. X, p. 348.
57. *I.A.*, Vol., XIX, p. 151, 152.
58. *J.B.B.R.A.S.*, Vol. XVI, p. 226.
59. *I.A.*, Vol. VI, p. 78.
60. *I.A.*, Vol..XIX, pp. 151, 152.
61. *I.A.*, Vol. IX, p. 129.
62. Nerur Grant : *I.A.*, Vol. VII, p. 163.

63. *J.B.B.R.A.S.*, Vol. XVI, p. 1.
64. *I..A*, Vol., VII, pp. 44, 163.
65. *J.B.B.R.A.S.*, Vol. XVI, pp. 225, 235.
66. Inscription found at Dimmigudi, Gutti Taluk : *H.E.R.*, 1920 No. 364.
67. Dr. Fleet : *D.K.D.*, p. 367.
68. *I.A.*, Vol. VII, p. 163.
69. Dr. Fleet : *D.K.D.*, p. 365.
70. *J.B.B.R.A.S.*, Vol., XVI, pp. 223, 233.
71. *I.A.*, Vol. XVI, p. 7
72. ರನ್ನ : ಗದಾಯುದ್ಧ ಆ. 2ರಲ್ಲಿ 7ನೆಯ ಪದ್ಯದನಂತರದ ವಚನ.
73. Dr. Fleet : *D.K.D*. P. 367.
74. According to Dr. Fleet, it is 680 A.D., *D.K.D.*, P. 367.
75. *I.A.* Vol. VI, Pp. 87, 88.
76. Gudigeri Inscription : *I.A.*, Vol. XVIII, P. 38.
87. *I.A.*, Vol. VIII, P. 284 : Dr. Fleet : *D.K.D.*, P. 370, Note 5.

ಮೂಲ ಲೇಖಕರು : ಡಾ॥ ಎಸ್.ಸಿ. ನಂದಿಮಠ
ಅನುವಾದಕರು : ಶ್ರೀ ನಾರಾಯಣ ಸಂಗಮ

## ಬಾದಾಮಿ ಚಾಲುಕ್ಯರ ವಂಶಾವಳಿ

ಜಯಸಿಂಹ

ರಣರಾಗ

1. ಸತ್ಯಾಶ್ರಯ-ರಣವಿಕ್ರಮ-ಪುಲಿಕೇಶಿನ್ I
(ಕ್ರಿ.ಶ. 550) ಪತ್ನಿ ದುರ್ಲಭಾದೇವಿ

2. ರಣಪರಾಕ್ರಮ-ಕೀರ್ತಿವರ್ಮನ್ I
(ಕ್ರಿ.ಶ. 566-67 ರಿಂದ 597-98)

3. ರಣವಿಕ್ರಾಂತ-ಮಂಗಲೀಶ
(ಕ್ರಿ.ಶ. 597-98 ರಿಂದ 608)

ಸತ್ಯಾಶ್ರಯ-ಧ್ರುವರಾಜ-ಇಂದ್ರವರ್ಮನ್
(ಕ್ರಿ.ಶ. 590 ಮತ್ತು 610-611)

4. ಸತ್ಯಾಶ್ರಯ-ಪುಲಿಕೇಶಿನ್ II
(ಕ್ರಿ.ಶ. 609-642)

ಕುಬ್ಜ ವಿಷ್ಣುವರ್ಧನ I (ಕ್ರಿ.ಶ. 615-633)
ವೆಂಗಿಯಲ್ಲಿ ಈ ವಂಶದ ಪೂರ್ವಶಾಖೆಯ
ಸ್ಥಾಪಕ

ಆದಿತ್ಯವರ್ಮನ್

ಚಂದ್ರಾದಿತ್ಯ-ಪತ್ನಿ ವಿಜಯ ಮಹಾದೇವಿ
(ಕ್ರಿ.ಶ. 655 ಮತ್ತು 659)

5. ಸತ್ಯಾಶ್ರಯ ರಣರಸಿಕ ವಿಕ್ರಮಾದಿತ್ಯ I
(ಕ್ರಿ.ಶ. 655-680)

6. ಸತ್ಯಾಶ್ರಯ-ರಾಜಾಶ್ರಯ-ವಿನಯಾದಿತ್ಯ
(ಕ್ರಿ.ಶ. 680 ರಿಂದ 696)

7. ಸತ್ಯಾಶ್ರಯ-ಸಮಸ್ತಭುವನಾಶ್ರಯ
ವಿಜಯಾದಿತ್ಯ

? ಕುಂಕುಮಹಾದೇವಿ

8. ಸತ್ಯಾಶ್ರಯ-ವಿಕ್ರಮಾದಿತ್ಯ II
ಪತ್ನಿಯರು
ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿ
ಕ್ರಿ.ಶ. 733-44 ರಿಂದ 746-47)

9. ಸತ್ಯಾಶ್ರಯ-ನೃಪಸಿಂಹ-ಕೀರ್ತಿವರ್ಮನ್ II
(ಕ್ರಿ.ಶ. 746-47 ಮತ್ತು 757)

## ಗುಜರಾತಿನ ಮೊದಲನೆಯ ಶಾಖೆ

ಜಯಸಿಂಹ ರಾಜ

ರಣವಿಕ್ರಾಂತ-ಬುದ್ಧವರ್ಮ ರಾಜ

ವಿಜಯವರ್ಮ ರಾಜ
(ಕ್ರಿ.ಶ. 643)

## ಗುಜರಾತಿನ ಎರಡನೆಯ ಶಾಖೆ
(ಸಂಶಯಾಸ್ಪದ)

ಧಾರಾಶ್ರಯ-ಜಯಸಿಂಹವರ್ಮನ್

ಜಯಾಶ್ರಯ-ತ್ರಿಭುವನಾಶ್ರಯ ನಾಗವರ್ಧನ

ಮದನಂಗಾಶ್ರಯ ಬುದ್ಧವಸರ
(ಅಪರಾಂತ ಕೊಲಾಬ ಮತ್ತು ಠಾಣಾ ಜಿಲ್ಲೆಗಳನ್ನು ಆಳಿದ ರಾಜ)

## ಗುಜರಾತಿನ 3ನೆಯ ಶಾಖೆ

ಧಾರಾಶ್ರಯ ಜಯಸಿಂಹವರ್ಮನ್
(ಕ್ರಿ.ಶ. 671 ಮತ್ತು 692)

ಶ್ರಿಯಾಶ್ರಯ ಶಿಲಾದಿತ್ಯ
(ಕ್ರಿ.ಶ. 671 ಮತ್ತು 692

ವಿನಯಾದಿತ್ಯ-ಯುದ್ಧಮಲ್ಲ-ಜಯಾಶ್ರಯ
ಮಂಗಲರಸ
(ಕ್ರಿ.ಶ. 731-32)

ಅವನಿಜನಾಶ್ರಯ ಪುಲಿಕೇಶಿನ್
(ಕ್ರಿ.ಶ. 739)

ಮೂಲಲೇಖಕರು : ಡಾ॥ ಎಸ್. ಸಿ. ನಂದಿಮಠ
ಅನುವಾದಕರು : ಶ್ರೀ ನಾರಾಯಣ ಸಂಗಮ

# ಮತ, ಸಮಾಜ ಮತ್ತು ಸಂಸ್ಕೃತಿ

## ಮತ ಮತ್ತು ತತ್ತ್ವ

ಉತ್ತರ ಭಾರತದ ಆರ್ಯ ಸಂಸ್ಕೃತಿಯಂತೆ ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಯೂ ಅಧ್ಯಾತ್ಮ ಸ್ವರೂಪವುಳ್ಳದ್ದು. ಅದ್ಭುತ ಧಾರ್ಮಿಕ ಬುದ್ಧಿ ಮತ್ತು ತಾತ್ವಿಕ ಪ್ರತಿಭೆಯಿಂದ ಕೂಡಿದ ಕರ್ಣಾಟಕವು ಈ ಎರಡನ್ನೂ ಸಮನ್ವಯಗೊಳಿಸಿತು. ಪರಸ್ಪರ ಭಿನ್ನತೆಗಳಿಂದ ತುಂಬಿದ್ದ ವಿವಿಧ ಮತಗಳಿಗೆ ಕರ್ಣಾಟಕವು ಹಾರ್ದಿಕ ಸ್ವಾಗತವನ್ನು ನೀಡಿತು. ಸ್ವರೂಪತಃ ದೇಶೀಯವೆನಿಸಿದ್ದ ಅತಿ ಪುರಾತನ ಪೂಜಾ ಪದ್ಧತಿಗಳು ಹಾಗೂ ಮತಾಚಾರಗಳು ಅನೇಕವಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಅವೈದಿಕ ಮೂಲವಾದ ನಾಗರ ಪೂಜೆ ಮತ್ತು ಪವಿತ್ರ ವೃಕ್ಷಪೂಜೆಗಳು ನಡೆಯುತ್ತಿದ್ದವು. ಅಸಂಖ್ಯಾತ ಹೆಸರುಗಳನ್ನುಳ್ಳ ದೇವತೆಗಳ ಹಾಗೂ ಭೂತಗಳ ಆರಾಧನೆ ಮತ್ತು ತತ್ಸಂಬಂಧವಾದ ಉನ್ಮತ್ತ ನೃತ್ಯತಾಂಡವಗಳೂ, ಪಾನ ಮತ್ತು ಪ್ರಾಣಿ ಬಲಿಗಳೂ ಆಚರಣೆಯಲ್ಲಿ ಇದ್ದುವು. ಅವು ಇಂದಿಗೂ ಉಳಿದುಕೊಂಡು ಬಂದಿವೆ. ಇವುಗಳಲ್ಲದೆ, ಪವಿತ್ರವೆಂದು ಪರಿಗಣಿಸಲ್ಪಟ್ಟಿದ್ದ ಮಾತೃದೇವತೆ ಅಥವಾ ಸಪ್ತಮಾತೃಕೆಗಳ ಆರಾಧನೆಯೂ ಬಳಕೆಯಲ್ಲಿದ್ದಿತು. ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ಣಾಟಕದಲ್ಲಿ ಶಿವ ಮತ್ತು ಅವನ ಮಕ್ಕಳಾದ ಸ್ಕಂದ ಮತ್ತು ಗಣಪತಿಗಳ ಪೂಜೆಯು ಅದರಲ್ಲಿಯೂ ಕಾರ್ತಿಕೇಯ (ಸ್ಕಂದ) ನ ಆರಾಧನೆಯು ಸುಬ್ರಹ್ಮಣ್ಯ, ಮುರುಗ ಮುಂತಾದ ಹೆಸರುಗಳಿಂದ ವ್ಯಾಪಕವಾಗಿ ಎಲ್ಲೆಲ್ಲಿಯೂ ನಡೆಯುತ್ತಿದ್ದಿತು. ಕರ್ಣಾಟಕದಲ್ಲಿ ಸ್ಕಂದ, ಸ್ವಾಮಿ ಮಹಾಸೇನ ಮತ್ತು ಷಣ್ಮುಖನೆಂದೂ ದಕ್ಷಿಣ ಭಾರತದಲ್ಲಿ ಸುಬ್ರಹ್ಮಣ್ಯ, ಮುರುಗನೆಂದೂ ಕಾರ್ತಿಕೇಯ ಸ್ವಾಮಿ ಪ್ರಖ್ಯಾತನಾಗಿದ್ದಾನೆ. ಸ್ಕಂದನ ವಿಚಾರದಲ್ಲಿ ವಿಶೇಷವಾಗಿ ವೇದಾಂತ ಮತ್ತು ಭಕ್ತಿ ಸಾಹಿತ್ಯಗಳು (ಮುಖ್ಯವಾಗಿ ತಮಿಳು ನಾಡಿನಲ್ಲಿ) ಬೆಳೆದು ಬಂದಿವೆ. ದಾಕ್ಷಿಣಾತ್ಯರು ಅವನನ್ನು ರಕ್ಷಣಾದೇವತೆಯೆಂದು ಭಾವಿಸಿದ್ದಾರೆ.

ವೈಷ್ಣವ ಮತವೇ ಆಗಲಿ, ಶೈವ ಅಥವಾ ಶಾಕ್ತಮತಗಳೇ ಆಗಲಿ, ನಂಬಿಕೆ ಆರಾಧನೆಗಳನ್ನು ಬಿಟ್ಟರೆ ದಕ್ಷಿಣ ಭಾರತದ ಆಧ್ಯಾತ್ಮ ಸಂಸ್ಕೃತಿಯ ಅತ್ಯುತ್ತಮ ರೂಪಗಳು ಮುಖ್ಯವಾಗಿ ವೈದಿಕ ಮತಗಳಿಂದ ಕವಲೊಡೆದ ಭಾವನೆಗಳಿಂದಲೂ ಪೂಜಾ ವಿಧಿಗಳಿಂದಲೂ ಪೋಷಣೆ ಹೊಂದಿ ವೃದ್ಧಿಯಾಗುತ್ತಾ ಬಂದಿವೆ ಎಂಬುದು ಗಮನಿಸತಕ್ಕದ್ದೆ. ಪರಮತ ಸಹಿಷ್ಣುತೆಯಿಂದ ಕೂಡಿದ ವೈದಿಕ ಮತವು ಮೊದಲಿನಿಂದಲೂ ದಕ್ಷಿಣ ಭಾರತದಲ್ಲಿ ರೂಢಿಯಲ್ಲಿದ್ದ ಎಲ್ಲ ಪೂಜಾಪದ್ಧತಿಗಳನ್ನೂ ಒಟ್ಟುಗೂಡಿಸಿ ಸುಸಂಸ್ಕೃತಗೊಳಿಸಿತು. ಆದುದರಿಂದ ಉತ್ತರ ಭಾರತದಲ್ಲಿನಂತೆಯೇ ಕರ್ಣಾಟಕದ ತಾತ್ವಿಕ ಮತ್ತು ಧಾರ್ಮಿಕ ಚರಿತ್ರೆಯು ಒಂದು ವಿಶಾಲವಾದ ಅರ್ಥದಲ್ಲಿ ವೈದಿಕ ಧರ್ಮವು ಅದರ ನಾನಾರೂಪಗಳಲ್ಲಿ ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವದ ಚರಿತ್ರೆಯೆಂದರೆ ತಪ್ಪಾಗಲಾರದು.

ಕ್ರಿಸ್ತಶಕದ ಆರಂಭದಿಂದಲೇ ವೈದಿಕ ಮತಗಳಿದ್ದುವೆಂಬುದಕ್ಕೂ ಶಾತವಾಹನ ಮತ್ತು ಕದಂಬ ರಾಜಮನೆತನದಂಥವರು ಅವುಗಳನ್ನು ಆಚರಿಸುತ್ತಿದ್ದರೆಂಬುದಕ್ಕೂ ನಮ್ಮಲ್ಲಿ ಶಾಸನಾಧಾರಗಳಿವೆ.

ಸಿಂಧೂ ಮತ್ತು ಗಂಗಾನದಿಗಳ ಬಯಲಿನಲ್ಲಿ ಜನಿಸಿದ ಮತ ಧರ್ಮ ಮತ್ತು ದರ್ಶನಗಳ ಕೆಲವು ವ್ಯಾಖ್ಯಾನಕಾರರು ಹಾಗೂ ಅವುಗಳನ್ನು ಪ್ರತಿಪಾದನೆ ಮಾಡಿದ ಟೀಕಾಚಾರ್ಯರೂ ಕರ್ನಾಟಕದಲ್ಲಿ ಜನಿಸಿದವರು.

ಬಾದಾಮಿಯ ಚಾಲುಕ್ಯವಂಶದ ಮೊದಲ ಅರಸುಗಳು ಪುರಾತನ ಬ್ರಾಹ್ಮಣ ಮತಾವಲಂಬಿಗಳು. ಅವರು ವಿಷ್ಣು ಮತ್ತು ಶಿವನ ಮಹಾ ಭಕ್ತರು. ಬ್ರಹ್ಮ, ವಿಷ್ಣು ಮತ್ತು ಶಿವ ಎಂಬ ತ್ರಿಮೂರ್ತಿಗಳ ಪೌರಾಣಿಕ ಪೂಜಾಪಂಥ ಅವರ ಕಾಲದಲ್ಲಿ ರೂಢಿಯಲ್ಲಿದ್ದಿತು. ಕೋಮುವಾರು ಭಾವನೆಗಳು ಇರಲಿಲ್ಲ. ತಾವು ಹಾರಿತೀಪುತ್ರರಾಗಿದ್ದಾರೆಂದೂ ಹೇಳಿಕೊಳ್ಳುತ್ತಿದ್ದರು. ದೇವನಾದ ಸ್ಕಂದಮಹಾಸೇನ ಹಾಗೂ ಭಗವಾನ್ ನಾರಾಯಣನು ತಮ್ಮ ಮೇಲೆ ತೋರಿದ ಕೃಪಾ ಪರಿಪೋಷಣೆಯಿಂದಲೇ ಇತರ ರಾಜ ಪುತ್ರರುಗಳಿಗಿಂತ ಹೆಚ್ಚಾಗಿ ಅಭ್ಯುದಯ ಹಾಗೂ ಸಾಮರ್ಥ್ಯವನ್ನು ತಾವು ಗಳಿಸಿದವರೆಂದು ತಿಳಿದಿದ್ದರು. ಜೊತೆಗೆ ವರಾಹ ಲಾಂಛನವನ್ನು (ವಿಷ್ಣುವಿನ ಅವತಾರ ವರಾಹದ ಚಿಹ್ನೆ) ತಮ್ಮ ಮುದ್ರೆಗಳ ಮೇಲೆ ಹಾಕಿಸಿದ್ದರು. ಸಪ್ತ ಮಾತೃಕೆಯರು ತಮ್ಮನ್ನು ಪೋಷಿಸಿದರೆಂದೂ ವಾದಿಸಿದರು. ಅನೇಕ ವೇಳೆ ಸ್ವಾಮಿಯ ಅಥವಾ ಮುರುಗನ ಧ್ಯಾನಾಸಕ್ತರೆಂದೂ ಅವರನ್ನು ವರ್ಣಿಸಿದ್ದರೂ ಬಹುಮಟ್ಟಿನ ಅವರ ದಾಖಲೆಗಳ ಮೊದಲ ಪಾದದಲ್ಲಿ ಬರುವ ವರಾಹಾವತಾರದ ವಿಷ್ಣುವಿನ ಪ್ರಾರ್ಥನೆಗಳನ್ನು ನೋಡಿದರೆ ವಿಷ್ಣುವೇ ಅವರ ಕುಲದೇವತೆ ಎಂಬುದು ತಿಳಿದುಬರುತ್ತದೆ. ಬಾದಾಮಿಯ ಚಾಲುಕ್ಯರು ಕೆತ್ತಿಸಿದ ಅನೇಕ ಶಾಸನ ಅಥವಾ ತಾಮ್ರಪಟಗಳ ಆದಿಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಆರಂಭ ಶ್ಲೋಕಗಳು ಹೀಗಿವೆ.

> ಜಯುತಿ ಆವಿಷ್ಕೃತಂ ವಿಷ್ಣೋಃ ವಾರಾಹಂ ಕ್ಷೋಭಿತಾರ್ಣವಂ ।
> ದಕ್ಷಿಣೋನ್ನತ ದಂಷ್ಟ್ರಾಗ್ರೇ ವಿಶ್ರಾಂತ ಭುವನಂ ವಪುಃ ॥

(ಸಾಗರದ ನೀರನ್ನು ಕಲಕಿ ತನ್ನ ಬಲದ ಕೋರೆಯ ತುದಿಯ ಮೇಲೆ ಭೂಮಂಡಲವನ್ನು ನಿಲ್ಲಿಸಿದ ವಿಷ್ಣುವಿನ ಸಾಕ್ಷಾತ್ ಅವತಾರವೆನಿಸಿದ ವರಾಹನಿಗೆ ಮಂಗಳ).

ಕ್ರಿಸ್ತಶಕ ನಾಲ್ಕನೆ ಶತಮಾನದ ವೇಳೆಗಾಗಲೇ ಕರ್ನಾಟಕದಲ್ಲಿ ವೈಷ್ಣವ ಮತವು ಜನಪ್ರಿಯ ವಾಗಿದ್ದಿತು. ಚಾಲುಕ್ಯರಾಜರು ‘ಪರಮ ಭಾಗವತ’ (ವಿಷ್ಣುವಿನ ಅತ್ಯಂತ ಭಕ್ತ) ‘ಶ್ರೀವಲ್ಲಭ’ ‘ಶ್ರೀ ಪೃಥಿವೀವಲ್ಲಭ’ ‘ಪೃಥ್ವೀವಲ್ಲಭ’ ಮೊದಲಾದ ಬಿರುದುಗಳನ್ನು ಧರಿಸಿದುದು ಅವರು ವಿಷ್ಣುಭಕ್ತರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ವೈಷ್ಣವ ಮತದ ಮುಖ್ಯ ಲಕ್ಷಣಗಳು ವಿಷ್ಣುವಿನ ಅವತಾರಗಳ ಪೂಜೆ, ಶ್ರೀದೇವಿ ಮತ್ತು ಭೂದೇವಿಯರು ಅವನ ಮೊದಲನೆಯ ಮತ್ತು ಎರಡನೆಯ ಪತ್ನಿಯರೆಂಬ ಭಾವನೆ ಮೇಲಿನ ದಾಖಲೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಬಾದಾಮಿ (ಮೂರನೆಗುಹೆ) ಯಲ್ಲಿ ಸರ್ಪಶಯನನಾಗಿರುವ ವಿಷ್ಣುವಿನ ಪಾದದೆಡೆಯಲ್ಲಿ ಕುಳಿತ ಲಕ್ಷ್ಮಿ ಮತ್ತು ವಿಷ್ಣುವಿನ ಅವತಾರವಾದ ವರಾಹ ಮತ್ತು ನರಸಿಂಹ ದೇವರುಗಳ ಚಿತ್ರಪಟಿಕೆಗಳೂ ಅದೇ ಸ್ಥಳದ ಗುಹೆಗಳ ಸುಂದರವಾದ ಕಲ್ಲು ಕೆತ್ತನೆಯ ದೇವಾಲಯದ ವಿಷ್ಣುವಿನ ಅವತಾರವೆನಿಸಿದ ವರಾಹ ಹಾಗೂ ನರಸಿಂಹ ಮೂರ್ತಿಗಳ ಸುಂದರ ಕೆತ್ತನೆಯ ವಿಗ್ರಹಗಳೂ ಚಾಲುಕ್ಯರ ಕಾಲದ ವೈಷ್ಣವ ಮತದ ಜನಪ್ರಿಯತೆಯನ್ನು ತಿಳಿಸುತ್ತವೆ.

ಶೈವ ಧರ್ಮವೂ ಜನಪ್ರಿಯವಾಗಿದ್ದಿತು. ಫ್ಲೀಟ್ ಎಂಬವರು ಹೇಳಿದಂತೆ ‘ಚಾಲುಕ್ಯರ ಕುಲದೇವತೆ ವಿಷ್ಣು. ಅವರ ಶಾಸನಗಳ ಮತ್ತು ನಾಣ್ಯಗಳ ಮೇಲಿನ ಪ್ರಮುಖ ಮುದ್ರೆ, ಯಾವಾಗಲೂ ವಿಷ್ಣುವಿನ ಅವತಾರವಾದ ವರಾಹವಾಗಿದ್ದಿತು. ಇಷ್ಟಾದರೂ ಮೊದಮೊದಲು ಅವರು ಪರಮತಗಳ ವಿಚಾರದಲ್ಲಿ

ಬಹು ಸಹಿಷ್ಣುತೆಯನ್ನು ತೋರುತ್ತಿದ್ದರು. ಜೈನ ಮತ್ತು ಶೈವ ಮತಗಳನ್ನು ವೈಷ್ಣವ ಮತದಷ್ಟೇ ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು. ಅನಂತರ ಬಂದವರು ಮಾತ್ರ ಶಿವಭಕ್ತರಾದರು,' ಎಂದು ಹೇಳಿದ್ದಾರೆ. ಉದಾಹರಣೆಗೆ ಬಾದಾಮಿಯಲ್ಲಿರುವ ಮೊದಲನೆಯ ಗುಹೆಯು ನಟರಾಜ, ಹರಿಹರ, ಮಹಿಷಾಸುರಮರ್ದಿನಿಯರ ಚಿತ್ರಗಳಿಂದ ಅಲಂಕೃತವಾದ, ಶಿವಸಂಬಂಧಿಯಾದ ಗುಹೆ. ಒಳಗಿನ ದೇವಾಲಯದಲ್ಲಿ ಒಂದು ಲಿಂಗವಿದೆ. ಅದೇ ಕಾಲಕ್ಕೆ ಸೇರಿದ ಮಹಾಕೂಟ ದೇವಾಲಯಗಳೂ ಶೈವ ಮತದವು. ಮೊದಲನೆಯ ಪುಲಿಕೇಶಿ, ಮೊದಲನೆಯ ಕೀರ್ತಿವರ್ಮ ಮತ್ತು ಮಂಗಲೀಶರೂ ಶಿವಪೂಜಕ ರಾಗಿದ್ದರು. 'ಪರಮ ಮಾಹೇಶ್ವರ' ಎಂದು ಕರೆಯಲ್ಪಟ್ಟಿರುವ ಚಾಲುಕ್ಯರ ಮೊದಲನೆಯ ವಿಕ್ರಮಾದಿತ್ಯನು (ಕ್ರಿ.ಶ. 655–681) ಶಿವಾರಾಧಕನಾಗಿದ್ದನು. ದೊರೆಗಳು ಭವ್ಯವಾದ ಶಿವದೇವಾಲಯ ಗಳನ್ನು ಕಟ್ಟಿಸಿ ನಗರಗಳನ್ನು ಸುಂದರವಾಗುವಂತೆ ಮಾಡುತ್ತಿದ್ದರು. ದೊರೆಗಳೂ ಅವರ ಪ್ರಜೆಗಳೂ ಇಂತಹ ದೇವಾಲಯಗಳಿಗೆ ದೊಡ್ಡ ಕೊಡುಗೆಗಳನ್ನು ಕೊಟ್ಟು ನಿತ್ಯಪೂಜೆ ಹಾಗೂ ಕಾಲಕಾಲಕ್ಕೆ ಜರುಗ ಬೇಕಾಗಿದ್ದ ಉತ್ಸವಗಳನ್ನು ನಡೆಸುತ್ತಿದ್ದರು. ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟ ಮತ್ತಿತರ ಸ್ಥಳಗಳಲ್ಲಿ ಕಟ್ಟಿದ ದೇವಾಲಯಗಳು ಇಂದಿಗೂ ಅವರ ಮತಾಚರಣೆಗಳ ಸ್ಮಾರಕಚಿಹ್ನೆಗಳಾಗಿವೆ.

ವೇದಗಳಲ್ಲಿ ಪ್ರತಿಪಾದಿತವಾಗಿರುವ ಪೂಜಾವಿಧಿಗಳೂ ಜೊತೆಯಲ್ಲಿಯೇ ರೂಢಿಯಲ್ಲಿದ್ದವು. ಅಶ್ವಮೇಧ, ವಾಜಪೇಯ, ಪೌಂಡರೀಕ, ಅಗ್ನಿಚಯನ, ಅಗ್ನಿಷ್ಟೋಮ, ಬಹು ಸುವರ್ಣ-ಮುಂತಾದ ಅನೇಕ ಯಾಗಗಳನ್ನು ಚಾಲುಕ್ಯ ಅರಸರು ಮಾಡಿದರೆಂದು ಪ್ರತೀತಿ. ಪುರೋಹಿತ ವರ್ಗದವರಿಗೆ ಧಾರಾಳವಾಗಿ ಕೊಡುಗೆಗಳು ದೊರಕುತ್ತಿದ್ದವು. ಬ್ರಾಹ್ಮಣ ಪಂಡಿತರು ಯಜ್ಞಯಾಗಾದಿಗಳಿಗೆ ಸಂಬಂಧ ಪಟ್ಟ ಅನೇಕ ಉತ್ತಮ ಗ್ರಂಥಗಳನ್ನು ರಚಿಸಿದರು. ವ್ರತಗಳನ್ನು ಆಚರಿಸಿ, ಬಹುಮಾನಗಳನ್ನು ಮುಕ್ತ ಹಸ್ತಗಳಿಂದ ಕೊಡುತ್ತಿದ್ದುದುಂಟು. ಮೊದಲನೆಯ ಪುಲಿಕೇಶಿ 'ಹಿರಣ್ಯಗರ್ಭ ಪ್ರಸೂತ' ನೆಂದು ಪ್ರಸಿದ್ಧನಾಗಿದ್ದಾನೆ.

ಇದೇ ಕಾಲದಲ್ಲಿಯೇ ಜೈನಮತವೂ ಏಳಿಗೆಯಲ್ಲಿತ್ತು. ದಕ್ಷಿಣದ ರಾಜ ಮನೆತನದವರಿಂದ ಅದಕ್ಕೆ ಬಹಳ ಪ್ರೋತ್ಸಾಹ ದೊರೆಯುತ್ತಿತ್ತು. ಐಹೊಳೆಯ ಶಾಸನಕರ್ತೃವಾದ ಜೈನಮತಾವಲಂಬಿ ರವಿಕೀರ್ತಿಯು ಎರಡನೆಯ ಪುಲಿಕೇಶಿಯ ಅಪಾರ ಅನುಗ್ರಹಕ್ಕೆ ಪಾತ್ರನಾಗಿದ್ದನು.

ಈಗ ಜಿನಾಲಯ ಎಂದು ಪ್ರಸಿದ್ಧವಾಗಿರುವ ದೇವಾಲಯವನ್ನು ಅವನು ಕಟ್ಟಿಸಿದ್ದನು. ಚಾಲುಕ್ಯ ರಾಜರಾದ ವಿನಯಾದಿತ್ಯ, ವಿಜಯಾದಿತ್ಯ ಮತ್ತು ವಿಕ್ರಮಾದಿತ್ಯರು ಜೈನ ಗುರುಗಳಿಗೆ ಹೇರಳವಾಗಿ ದಾನ ವನ್ನು ಕೊಟ್ಟಿದ್ದುದಲ್ಲದೆ ಜೈನ ದೇವಾಲಯಗಳನ್ನು ಕಟ್ಟಲೂ ಸಹಾಯಮಾಡಿದರು. ಬಾದಾಮಿಯಲ್ಲಿರುವ ಇತ್ತೀಚಿನ ಜೈನ ಗುಹೆಯೊಂದರಲ್ಲಿನ ಮತ್ತು ಐಹೊಳೆಯಲ್ಲಿರುವ ತೀರ್ಥಂಕರರ ವಿಗ್ರಹಗಳು ಆ ಕಾಲದಲ್ಲಿದ್ದ ಅವರ ಮತಸಹಿಷ್ಣುತೆಯನ್ನು ಮತ್ತು ಜೈನಮತವು ಇತರರಿಂದ ಪಡೆಯುತ್ತಿದ್ದ ಗೌರವವನ್ನು ಸೂಚಿಸುತ್ತವೆ. ಪದ್ಮಪಾಣಿ ಎಂದು ಗುರುತಿಸಲ್ಪಟ್ಟ ಒಂದು ಬೌದ್ಧ ದೇವತೆ ಬಾದಾಮಿಯಲ್ಲಿದೆ. ಆದರೆ ಬೌದ್ಧಧರ್ಮವು ಹೆಚ್ಚು ಪ್ರೋತ್ಸಾಹ ಪಡೆಯುತ್ತಿದ್ದಿತೆಂದು ನಿರ್ಧರಿಸಲು ಸಾಕಷ್ಟು ಆಧಾರ ದೊರೆತಿಲ್ಲ. ಬೌದ್ಧಮತವು ಕ್ಷೀಣದಶೆಯಲ್ಲಿದ್ದರೂ ನಶಿಸಿಹೋಗಿರಲಿಲ್ಲ. ಬೌದ್ಧ ಸಂನ್ಯಾಸಿಗಳು ಮತ್ತು ವಿಹಾರಗಳ ವಿಚಾರದಲ್ಲಿ ಹೂಯೆನ್‌ತ್ಸಾಂಗನು ಮಾಡಿರುವ ಉಲ್ಲೇಖನಗಳು ಈ ಅಂಶವನ್ನು ಸ್ಪಷ್ಟೀಕರಿಸುತ್ತವೆ.

ಕ್ರಿಸ್ತಶಕ 740ರಲ್ಲಿ ಪಲ್ಲವ ರಾಜ್ಯದ ಮೇಲೆ ದಾಳಿ ಮಾಡಿ ಕಾಂಚೀನಗರವನ್ನು ಆಕ್ರಮಣ ಮಾಡಿದ ಚಾಲುಕ್ಯದೊರೆ ಎರಡನೆಯ ವಿಕ್ರಮಾದಿತ್ಯನ ಔದಾರ್ಯ ಹಾಗೂ ಪವಿತ್ರ ಭಾವನೆಗಳನ್ನು ವ್ಯಕ್ತಪಡಿಸುವ ಉದಾಹರಣೆ ಒಂದಿದೆ. ಹಿಂದೆ ಪಲ್ಲವ ರಾಜರು ಚಾಲುಕ್ಯರ ರಾಜಧಾನಿಯಾದ ಬಾದಾಮಿಯ ಮೇಲೆ

ಧಾಳಿ ನಡೆಸಿ ಕೆಲವು ವರ್ಷಗಳ ಕಾಲ ಅದನ್ನು ಆಕ್ರಮಿಸಿಕೊಂಡಿದ್ದ ಸೇಡನ್ನು ತೀರಿಸಲು ತಾನೂ ಕಂಚಿಯನ್ನು ಆಕ್ರಮಿಸಿದನು. ಪಲ್ಲವ ರಾಜನನ್ನು ಸೋಲಿಸಿ ನಗರವನ್ನು ಸ್ವಲ್ಪವೂ ಹಾಳುಮಾಡದೆ ರಾಜಾ ವಿಕ್ರಮಾದಿತ್ಯನು ಬಾದಾಮಿಯನ್ನು ಪ್ರವೇಶಿಸಿ ಅಲ್ಲಿನ ಬ್ರಾಹ್ಮಣರು, ಬಡವರು ಹಾಗೂ ದೀನವರ್ಗದವರಿಗೆ ಉದಾರವಾಗಿ ದಾನಮಾಡಿ ಸಂತುಷ್ಟರನ್ನಾಗಿ ಮಾಡಿದನು. ನರಸಿಂಹಪೋತವರ್ಮನು ಕಲ್ಲಿನಿಂದ ಕಟ್ಟಿಸಿದ್ದ ರಾಜಸಿಂಹೇಶ್ವರ (ಈಗ ಕೈಲಾಸನಾಥನೆಂದು ಕರೆಯಲ್ಪಡುವ) ದೇವಾಲಯ ಮತ್ತು ಇತರ ದೇವಾಲಯಗಳಿಗೆ ಸೇರಿದ ಸುವರ್ಣ ರಾಶಿಗಳನ್ನು ಹಿಂತಿರುಗಿಸಿ ಹೆಸರು ಗಳಿಸಿದನು. (Early History of the Dekhan : Edited by Yazdani P. 228).

ಎಲ್ಲೋರ ಮತ್ತು ಅಜಂತಗಳೆರಡೂ ಚಾಲುಕ್ಯರ ರಾಜ್ಯದಲ್ಲಿಯೇ ಇದ್ದುವು. ಅಜಂತದಲ್ಲಿನ ಬೌದ್ಧ ಶಿಲ್ಪ ಮತ್ತು ಚಿತ್ರಕಲೆಗಳೆರಡನ್ನೂ ಅನುಕರಣೆ ಮಾಡಿ ಜೈನ ಮತ್ತು ಹಿಂದೂ ದೇವತೆಗಳನ್ನು ಮೆರೆಸಲು ಬಳಸಿದರು. ಬೌದ್ಧರಿಗೊಂದು, ಜೈನರಿಗೊಂದು ಮತ್ತು ಬ್ರಾಹ್ಮಣ ದೇವತೆಗಳಿಗೆ ಮೂರು ಒಟ್ಟು ಐದು ಗುಹಾದೇವಾಲಯಗಳನ್ನು ಬಾದಾಮಿಯಲ್ಲಿ ಕಟ್ಟಿದರು. ವಿಷ್ಣು ಮತ್ತು ಶಿವರುಗಳಂತಹ ಬೇರೆ ಬೇರೆ ದೇವತೆಗಳ ಏಕತೆಯನ್ನು ಸ್ಥಾಪಿಸುವುದು ಮತ್ತು ಬೇರೆ ಬೇರೆ ದೇವತೆಗಳ ಗುಣಗಳನ್ನು ಒಂದೇ ಒಂದು ಮೂರ್ತಿಯಲ್ಲಿ ಕಂಡರಿಸುವುದು ಅವರ ಪರಮತ ಸಹಿಷ್ಣುತೆಯ ಒಂದು ಅಂಶ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ—ತ್ರಿಮೂರ್ತಿಗಳನ್ನೊಳಗೊಂಡ ದೇವಾಲಯಗಳು ನಿರ್ಮಿಸಲ್ಪಟ್ಟವು. ಐಹೊಳೆ ಮತ್ತು ಪಟ್ಟದ ಕಲ್ಲಿನ ಶೈವ ಮತ್ತು ವೈಷ್ಣವ ಶಿಲ್ಪಕಲೆಗಳು, ದಶಾವತಾರದ ಗುಹಾದೇಗುಲಗಳು, ಮಧ್ಯಮೂರ್ತಿಯ ಬಲಭಾಗದಲ್ಲಿ ಶೈವಲಕ್ಷಣ ಸಂಕೇತಗಳನ್ನು ಒಳಗೊಂಡ ಪಾರ್ವತಿ ನಂದಿಯರಿಂದ ಕೂಡಿದ ಹರನನ್ನೂ ಎಡಭಾಗದಲ್ಲಿ ವೈಷ್ಣವ ಲಕ್ಷಣ ಸಂಕೇತಗಳಿಂದ ಕೂಡಿದ ಲಕ್ಷ್ಮೀ ಗರುಡಸಮೇತನಾದ ಹರಿಯನ್ನೂ ತೋರಿಸುವ ಬಾದಾಮಿಯಲ್ಲಿನ ಗುಹೆಯ ಕೆಳಮಟ್ಟದಲ್ಲಿ ಕೆತ್ತಿರುವ ಹರಿಹರನ ಮೂರ್ತಿ, ಅದೇ ಸ್ಥಳದಲ್ಲಿ ಅಕ್ಕಪಕ್ಕದಲ್ಲಿರುವ ಇತರ ಶಿವ, ವಿಷ್ಣು ಮತ್ತು ಜೈನ ದೇವಾಲಯಗಳು—ಆ ಕಾಲದಲ್ಲಿದ್ದ ಪರಮತ ಸಹಿಷ್ಣುತೆಯ ಚಿತ್ತಾಕರ್ಷಕ ಉದಾಹರಣೆಗಳು.

ಮೂಲಲೇಖಕರು : ಪ್ರೊ॥ ಎಸ್. ಎಸ್. ರಾಘವಾಚಾರ್
ಅನುವಾದಕರು : ಡಾ॥ ಎಂ.ಎನ್. ನರಸಿಂಹನ್

# ಸಾಮಾಜಿಕ ಜೀವನ ಮತ್ತು ಆರ್ಥಿಕ ಪರಿಸ್ಥಿತಿ

## ಬಾದಾಮಿಯ ಚಾಲುಕ್ಯರ ಕಾಲ

ಕ್ರಿ.ಶ. ನಾಲ್ಕರಿಂದ ಹತ್ತನೆಯ ಶತಮಾನದ ವರೆಗೆ ಇದ್ದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಕೆಲವು ವೈಲಕ್ಷಣ್ಯಗಳನ್ನು ಕುರಿತು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಬಾದಾಮಿಯ ಚಾಲುಕ್ಯರ ಕಾಲವನ್ನೂ ಈ ಪರಿಶೀಲನೆ ಒಳಗೊಳ್ಳುವುದಾದರೂ ಚಾಲುಕ್ಯರ ಆಳಿಕೆಗೆ ಸಂಬಂಧಪಟ್ಟ ಇನ್ನು ಕೆಲವು ಕುತೂಹಲಕಾರಿ ವಿವರಗಳು ಶಾಸನಾಧಾರವುಳ್ಳವು ನಮಗೆ ದೊರೆತಿವೆ.

ಬಾದಾಮಿಯ ಚಾಲುಕ್ಯರ ಆಳಿಕೆಯ ಕಾಲದ ಈ ಇನ್ನಿತರ ಸಾಮಾಜಿಕ ಮತ್ತು ಆರ್ಥಿಕ ಜೀವನದ ವೈಲಕ್ಷಣ್ಯಗಳನ್ನು ಈಗ ಪರಿಶೀಲಿಸಬಹುದಾಗಿದೆ.

ಹೂಯೆನ್‌ತ್ಸಾಂಗನಂತಹ ವಿದೇಶೀಯ ಪ್ರವಾಸಿಕರ ವರದಿಗಳಿಂದಲೂ ಕ್ರಿ.ಶ. ಆರನೆಯ ಶತಕದಿಂದ ವಿಪುಲವಾಗಿ ಉಪಲಬ್ಧವಿರುವ ಶಾಸನಗಳಿಂದಲೂ ಈ ಕಾಲದ ಸಾಮಾಜಿಕ ಜೀವನದ ಪ್ರಮಾಣಬದ್ಧ ವರ್ಣನೆಗಳು ದೊರೆಯುತ್ತಿವೆ; ಅಲ್ಲದೆ, ತತ್ಕಾಲೀನ ಸಾಹಿತ್ಯದಲ್ಲೂ ಈ ಬಗೆಗೆ ವಿವರಗಳು ದೊರೆಯುತ್ತಿವೆ.

ಹೂಯೆನ್‌ತ್ಸಾಂಗನು ಇಮ್ಮಡಿ ಪುಲಿಕೇಶಿಯ ರಾಜ್ಯಕ್ಕೆ ಸಂದರ್ಶನವಿತ್ತು ಈ ನಾಡಿನ ಜನದ ಬಗೆಗೆ ಚಿಕ್ಕದಾದರೂ ಬಹು ಬೆಲೆಯುಳ್ಳ ವರದಿಯನ್ನು ಸಿದ್ಧಪಡಿಸಿ ಹೋಗಿದ್ದಾನೆ. ಭಾರತದ ಜನತೆಯ ಆಹಾರ ಮತ್ತು ವೇಷ–ಭೂಷಣಗಳ ಬಗೆಗೆ ಇದ್ದ ಆತನ ಸಾಮಾನ್ಯ ಅಭಿಪ್ರಾಯಗಳು ದಕ್ಷಿಣ ಭಾರತಕ್ಕೂ ಸಾಧಾರಣವಾಗಿ ಅನ್ವಯಿಸುವಂತಿವೆ. ದಕ್ಷಿಣದ ತಪ್ಪಲನ್ನು ಮತ್ತು ದಕ್ಷಿಣ ಭಾರತವನ್ನು ಇತ್ಸಿಂಗನು ಸಂದರ್ಶಿಸಲಿಲ್ಲ. ಆದರೆ ಆತನ ಹೇಳಿಕೆಗಳು ಈ ಪ್ರದೇಶಗಳಿಗೆ ಅನ್ವಯಿಸುತ್ತಿವೆ. ಭಾರತದ ಬೇರೆ ಬೇರೆ ಭಾಗಗಳ ಜನತೆಯೊಡನೆ ಎಚ್ಚರಿಕೆಯಿಂದ ವಿಷಯ ಸಂಗ್ರಹಮಾಡಿ, ತನ್ನ ವರದಿಯ ರಚನೆಗೆ ತೊಡಗಿದ ಆತನು ಹೀಗೆ ಬರೆಯುತ್ತಾನೆ :—

"ಭಾರತದ ಐದು ನಾಡುಗಳ ಬಗೆಗೆ ಹೇಳುವುದೇನೆಂದರೆ : ನಾನು ಕಣ್ಣಾರೆ ಈ ಎಲ್ಲ ಭಾಗಗಳನ್ನು ನೋಡದೆ ಇದ್ದರೂ ಲಕ್ಷ್ಯಪೂರ್ವಕವಾದ ವಿಚಾರಣೆಯ ಮೂಲಕ ನಾನು ಏನನ್ನಾದರೂ ಖಚಿತ ಪಡಿಸುವವನಾಗಿದ್ದ "[1].

ಶಾಸನಗಳು ದತ್ತಿ–ದಾನಗಳನ್ನು ಕುರಿತು ವಿವರಿಸುತ್ತಿದ್ದರೂ ಆಯಾ ಕಾಲದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗೆಗೆ ಆಗಾಗ ಹೊಸ ಬೆಳಕನ್ನು ನೀಡುತ್ತಿವೆ. ಸಮಕಾಲೀನ ಶಿಲ್ಪಕಲೆಯಿಂದಲೂ ಆಯಾ ಕಾಲದ ಜನರ ವೇಷ–ಭೂಷಣಗಳ ಬಗೆಗೆ ಒಂದು ನಸುನೋಟ ದೊರೆಯುತ್ತಿದೆ. ಇವಲ್ಲದೆ ತತ್ಕಾಲೀನ ಸಾಹಿತ್ಯವೂ ಅಮೂಲ್ಯ ವಿಷಯಸಂಗ್ರಹವನ್ನು ಒದಗಿಸುತ್ತಿದೆ.

**ಸಾಮಾಜಿಕ ವ್ಯವಸ್ಥೆ**

ಪ್ರಾಚೀನ ಕಾಲದಲ್ಲಿಯಂತೆ ಸಮಾಜವು ಈ ಕಾಲದಲ್ಲೂ ಸ್ಥೂಲವಾಗಿ ನಾಲ್ಕು ವರ್ಣಗಳಾಗಿ ವಿಭಜಿಸಲ್ಪಟ್ಟಿತ್ತು. ತತ್ಕಾಲೀನ ಸ್ಮೃತಿಗ್ರಂಥಗಳೂ ಶಾಸನಗಳೂ ಒಟ್ಟು ಜನಸಮುದಾಯವನ್ನು ಹದಿನೆಂಟು 'ಪ್ರಕೃತಿ'ಗಳಾಗಿ ವಿಭಜಿಸುತ್ತಿವೆ. ಕ್ರಿ.ಶ. 7ನೆಯ ಶತಕದ ಲಕ್ಷ್ಮೇಶ್ವರದ ಶಾಸನವು ವಿಕ್ರಮಾದಿತ್ಯನ 'ದಾಗಿದ್ದು. ಅದರಲ್ಲಿ ಹದಿನೆಂಟು 'ಪ್ರಕೃತಿ'ಗಳಿಗೆ ಅರಸನು 'ಮಹಾಜನ' ಮತ್ತು 'ನಕರ' ರೊಂದಿಗೆ ಹಕ್ಕು-ಬಾಧ್ಯತೆಗಳ ಶಾಸನ (charter) ಒಂದನ್ನು ದಯಪಾಲಿಸಿದ ವಿವರ ಉಲ್ಲೇಖಿಸಲ್ಪಟ್ಟಿದೆ[2]. ಈ ಹದಿನೆಂಟು 'ಪ್ರಕೃತಿ'ಗಳನ್ನು ಜನತಾಸಮೂಹ ಮತ್ತು ಅಧಿಕಾರಿವರ್ಗ ಎಂದು ಮೊದಲಾಗಿ ಬೇರೆ ಬೇರೆ ಪ್ರಕಾರಗಳಲ್ಲಿ ವ್ಯಾಖ್ಯಾನಿಸಲಾಗಿದೆ. ತತ್ಕಾಲೀನ ಪಿತಾಮಹನ ಸ್ಮೃತಿಗ್ರಂಥವು (ಕ್ರಿ.ಶ. 7ನೆಯ ಶತಕ) 'ಪ್ರಕೃತಿ'ಗಳನ್ನು ಹದಿನೆಂಟೆಂದು ಗಣನೆಮಾಡಿ ಹೇಳಿದೆಯೆಂದು 'ಸ್ಮೃತಿಚಂದ್ರಿಕೆ' ಉಲ್ಲೇಖಿಸುತ್ತಿದೆ[3]; ಅವು 'ವರ್ಣಾಶ್ರಮ'ದ ಹೊರವಲಯದಾಚೆಯಲ್ಲಿರುವ ಅಗಸ, ಚರ್ಮಕಾರ, ಇತ್ಯಾದಿ ಎಂದು. ಅನಂತರದ ಕಾಲಗಳಲ್ಲಿ ಹರಿಹರನಂತಹ ಕನ್ನಡ ಕವಿವರ್ಗ ಮತ್ತು ಶಾಸನಗಳು,–ಜನಸಮೂಹವು ಹದಿನೆಂಟು ಗುಂಪು ಇಲ್ಲವೆ 'ಸಮಯ'ಗಳಿಗೆ ಸಂಬಂಧಪಟ್ಟಿರುವಂತೆ ವಿವರಿಸುತ್ತ ಬಂದಿವೆ. ಬಾದಾಮಿಯಲ್ಲಿ ದೊರೆತ ಚಾಲುಕ್ಯರ ಶಾಸನಗಳಲ್ಲಿ ಈ ಹದಿನೆಂಟು ಶ್ರೇಣಿಗಳ ಅಥವಾ ಉದ್ಯೋಗ ಸಂಘಗಳಲ್ಲಿಯ ಹಲವಾರು ಹೆಸರುಗಳು ದೊರೆಯುತ್ತವೆ. ಉದಾ: ಚರ್ಮಕಾರರು, ಕಲ್ಕುಟಿಗರು, ಉಪ್ಪಾರರು, ಹಾಡುಗಾರರು, ನಟರು, ಮಾಲೆಗಾರರು, ಹೂವಡಿಗರು, ಮೊದಲಾದವರಲ್ಲದೆ ನಾಲ್ಕು ವರ್ಣಗಳೂ ಹೆಸರಿಸಲ್ಪಟ್ಟಿವೆ.

ಸಮಾಜದಲ್ಲಿ ಬ್ರಾಹ್ಮಣರು ಬಹು ಗೌರವಾನ್ವಿತರೆನಿಸಿದ್ದರು. ಹ್ಯೂಯೆನ್‌ತ್ಸಾಂಗನು ಸಮಾಜದಲ್ಲಿ ನಾಲ್ಕು ವರ್ಣಗಳ ಬಗೆಗೆ ಬರೆಯುತ್ತ, ಬ್ರಾಹ್ಮಣರು ಪರಿಶುದ್ಧ ಜೀವನವನ್ನು ನಡೆಸುತ್ತ,......ಇರಿಸಿಕೊಂಡ ತತ್ವಗಳನ್ನು ಆಚರಿಸುತ್ತ, ಬ್ರಹ್ಮಚರ್ಯದಿಂದಿದ್ದು ಶುದ್ಧ ಧರ್ಮಾಚರಣೆಗಳಲ್ಲಿ ತೊಡಗಿರುತ್ತಾರೆ'[4] ಎಂದು ಹೇಳುತ್ತಾನೆ. ಇತ್ಸಿಂಗನೂ ಸಹ, ಬ್ರಾಹ್ಮಣರು ಭಾರತದ ಐದು ಭಾಗಗಳಲ್ಲೂ ಅತ್ಯಂತ ಶ್ರೇಷ್ಠ ಜಾತಿಯವರೆಂದು ವಿವರಿಸುತ್ತಾನೆ[5]. ಪಂಡಿತ ಬ್ರಾಹ್ಮಣರಿಗೆ ನೀಡಿದ ದತ್ತಿದಾನಾದಿಗಳ ಶಾಸನಗಳು ಎಲ್ಲೆಲ್ಲೂ ಹರಡಿವೆ. ಧ್ರುವಶರ್ಮನೆಂಬ ಇಂತಹನೊಬ್ಬ ಬ್ರಾಹ್ಮಣನು ವೇದ, ವೇದಾಂಗ, ಕಾವ್ಯ, ಪುರಾಣ, ನ್ಯಾಯಶಾಸ್ತ್ರಾದಿ ಪವಿತ್ರಗ್ರಂಥಗಳಲ್ಲಿ ಪರಿಣತನಾಗಿದ್ದನೆಂದು ಉಲ್ಲೇಖಿಸಲ್ಪಟ್ಟಿದ್ದಾನೆ. ಈತನು ಅನೇಕ ಯಜ್ಞಯಾಗಾದಿಗಳನ್ನು ನಡೆಸಿದ್ದನು[6]. ಪರಮೇಶ್ವರ ಸರ್ವಕ್ರತುಯಾಜಿಯೆಂಬವನು 'ಘಟಿಕಾಸಾಸ' ನಾಗಿದ್ದ; ಎಂದರೆ 'ಘಟಿಕಾಸ್ಥಾನ' ಅಥವಾ ಸಂಸ್ಕೃತ ವಿದ್ಯಾಸಂಸ್ಥೆಯಲ್ಲಿ ವಿದ್ಯಾವ್ಯಾಸಂಗ ಪಡೆದ ಭಾಗ್ಯಶಾಲಿಯಾಗಿದ್ದ[7]. ಜಯದ್ವಿತ್ಥನು ನಾಲ್ನೂರು ಬ್ರಾಹ್ಮಣರಿಗೆ ಉಪಾಧ್ಯಾಯನಾಗಿದ್ದ. ಇವನು ವೇದಗಳಲ್ಲಿ ಮತ್ತು 'ತ್ರೈವಿದ್ಯೆ'ಗಳಲ್ಲಿ ಪಾರಂಗತನೆನಿಸಿದ್ದ[8].

ಬ್ರಾಹ್ಮಣರ ತರುವಾಯದಲ್ಲಿ ಕ್ಷತ್ರಿಯರು ಎಂದರೆ ಯೋಧವರ್ಗದವರು ಬರುತ್ತಾರೆ. "ಈ ವರ್ಗದವರು ಅನೇಕ ತಲೆಮಾರುಗಳಿಂದ ಸಾರ್ವಭೌಮತ್ವವನ್ನು ತಳೆದವರಾಗಿದ್ದರು. ಈ ವರ್ಗದವರ ಗುರಿ ಪರೋಪಕಾರ ಮತ್ತು ದಯೆ" ಎಂದು ಹ್ಯೂಯೆನ್‌ತ್ಸಾಂಗ್ ಹೇಳುತ್ತಾನೆ[9]. ಆ ಕಾಲದ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯನ್ನು ಕುರಿತು ಬರೆಯುತ್ತ, ಆತನು ಜನ್ಮದಿಂದ ಕ್ಷತ್ರಿಯನಾಗಿದ್ದನೆಂದು ಹೇಳುತ್ತಾನೆ. ಈ ಅರಸನ ಪ್ರಜಾಕಲ್ಯಾಣ ದೃಷ್ಟಿಯ ಆಳಿಕೆ ಬಹು ವಿಸ್ತಾರವಾಗಿ ಹರಡಿದ್ದು ಈತನ ಸಾಮಂತಾಧಿಕಾರಿ ವರ್ಗದವರು ಇವನನ್ನು ತುಂಬ ನಿಷ್ಠೆಯಿಂದ ಸೇವಿಸುತ್ತಿದ್ದರು. ಮೂರನೆಯ ವರ್ಗವೆಂದರೆ ವರ್ತಕ ಹಾಗೂ ಕೃಷಿಕ ಕುಲಗಳನ್ನೊಳಗೊಂಡುದು. 'ಪರದ' ('ಹರದ') ಎಂಬ ಪದವು 'ವರ್ತಕ' ಎಂಬರ್ಥವುಳ್ಳುದಾಗಿ ಒಂದು ಶಾಸನದಲ್ಲಿ ದೊರೆತಿದೆ[10].

**ಸಾಂಘಿಕ ಚಟುವಟಿಕೆಗಳು**

ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಮೊದಲಾದ ಜೀವನ ಕ್ಷೇತ್ರಗಳಲ್ಲಿ ಸಾಂಘಿಕ ಸಂಸ್ಥೆಗಳನ್ನು ನಾವು ಕಾಣುತ್ತೇವೆ. ಆರ್ಯಸಂಘಗಳು ಅಥವಾ ಬೌದ್ಧಭಿಕ್ಷುಗಳ ಸಂಘಾರಾಮಗಳು ಆಗ ಅಸ್ತಿತ್ವದಲ್ಲಿದ್ದವು[11]. ಹೂಯೆನ್‌ತ್ಸಾಂಗನು ಪುಲಿಕೇಶಿಯ ರಾಜ್ಯದಲ್ಲಿ ಸಹಸ್ರಾರು ಬೌದ್ಧ ಭಿಕ್ಷುಗಳಿದ್ದರೆಂದೂ ಒಂದು ನೂರು ಬೌದ್ಧ 'ವಿಹಾರ'ಗಳಿದ್ದವೆಂದೂ ಹೇಳುತ್ತಾನೆ. ಐಹೊಳೆಯ ಶಾಸನ ವೊಂದರಲ್ಲಿ ಆ ಅಗ್ರಹಾರದ 'ಚತುರ್ವೇದಿ'ಗಳ ಘನ ಸಂಸ್ಥೆಯ ಸದಸ್ಯರೆನಿಸಿದ್ದ 'ಐನೂರ್ವರಿಗೆ' ದತ್ತಿ ಬಿಟ್ಟ ವರ್ಣನೆ ಬಂದಿದೆ[12]. 'ಐನೂರ್ವರು' ಎಂಬೀ ವಿಶೇಷಪದದ ಅರ್ಥದ ಬಗೆಗೆ ತುಸು ವಾದವಿದೆ. ಈ ಗುಂಪು 'ಅಯ್ಯಾವೊಳೆ' (ಐಹೊಳೆ)ಯ ಒಂದು ಸುಭದ್ರವಾದ ಸಂಘವಾಗಿ ಮಾರ್ಪಟ್ಟು ದಕ್ಷಿಣ ಭಾರತದಲ್ಲೆಲ್ಲ ಅನಂತರದ ಶತಮಾನಗಳಲ್ಲಿ ಅನೇಕಾನೇಕ ಶಾಖೆಗಳನ್ನು ಸ್ಥಾಪಿಸಿರಬಹುದಾಗಿದೆ.

ಆ ಕಾಲದ ಸಂಸ್ಥೆಗಳು ಸಾಂಘಿಕಸ್ವರೂಪದವಾಗಿದ್ದವು. 'ಮಹಾಜನ'ರಲ್ಲಿ ಸಾಮಾನ್ಯವಾಗಿ ಬ್ರಾಹ್ಮಣ ಗೃಹಸ್ಥರು, 'ನಕರ'ರು (ನಾಗರಿಕರು) ಮತ್ತು 'ಪ್ರಜೆ' (ಸಾಮಾನ್ಯ ಜನತೆ) ಮುಂತಾದವರು ಬಹು ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ಲಕ್ಷ್ಮೇಶ್ವರದ ಶಾಸನವು ರಾಜ್ಯಾಧಿಕಾರಿಗಳ ಮತ್ತು 'ಮಹಾಜನ' ಹಾಗೂ 'ನಕರ'ರ ಕರ್ತವ್ಯ-ಹೊಣೆಗಾರಿಕೆಗಳನ್ನು ವಿವರಿಸುತ್ತಿದೆ[13]. ಅತಿ ಪ್ರಾಚೀನವಾದ ಒಂದು ಶಾಸನವು 'ಪ್ರಜೆ' ಎಂಬ ಪದವನ್ನು ಗ್ರಾಮಾಡಳಿತ ಎಂಬರ್ಥದಲ್ಲಿ ಬಳಸಿದೆ. (ಬಳ್ಳಿಗಾವೆಯ ಶಾಸನ[14]). 'ಮಹಾಜನ'ರು ಮತ್ತು 'ಪ್ರಜೆ'ಗಳು ಒಟ್ಟುಕೂಡಿ ಸ್ಥಾನಿಕ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ ಕೆಲವು ಉದಾಹರಣೆಗಳು ದೊರೆತಿವೆ.

ಮೇಲೆ ಉಕ್ತವಾಗಿರುವ ಲಕ್ಷ್ಮೇಶ್ವರದ ಶಾಸನದಲ್ಲಿ 'ಕಂಚುಗಾರ'ರ ಮತ್ತು 'ತೆಲ್ಲಿಗ' (ಎಣ್ಣೆಗಾಣಿಗ)ರ ಶ್ರೇಣಿಗಳು ಉಕ್ತವಾಗಿವೆ. ಬಾದಾಮಿಯ ಸುತ್ತಮುತ್ತಲಿನ ಪ್ರದೇಶದಲ್ಲಿಯ ದೇವಾಲಯಗಳನ್ನು ಕಟ್ಟಿದ ವಾಸ್ತು-ಶಿಲ್ಪಿಗಳಲ್ಲಿ ಅನೇಕರು 'ಸರ್ವಸಿದ್ಧ ಆಚಾರ್ಯ'ರೆಂಬ ಔದ್ಯೋಗಿಕ ಸಂಘಕ್ಕೆ ಸೇರಿದವರಾಗಿದ್ದರು[15].

ದೇವಾಲಯಗಳನ್ನು ಕಟ್ಟುತ್ತಿದ್ದ ಶಿಲ್ಪಿಗಳು ರಾಜರಿಂದ ವಿಶೇಷ ಆಶ್ರಯ ಪಡೆಯುತ್ತಿದ್ದು ಬಲ್ಲುಲಿಯ ಬಿರುದು ಬಾವಲಿಗಳನ್ನು ಅವರಿಂದ ಪಡೆಯುತ್ತಿದ್ದರು. 'ಚಟ್ಟರಸ-ರೇವಡಿ-ಓವಜ' ನೆಂಬವನು 'ತೆಂಕಣದಿಶೆ ಮಾಡಿದೋರ್' ಎಂದು ಪ್ರಸಿದ್ಧನಾಗಿದ್ದ[16]; ಮತ್ತು ಗುಂಡನೆಂಬವನು 'ತ್ರಿಭುವನಾಚಾರಿ' ಎಂದರೆ ಮೂರು ಲೋಕಗಳಲ್ಲಿ ಖ್ಯಾತನಾಗಿದ್ದ ಶಿಲ್ಪಿ ಎಂಬ ಬಿರುದನ್ನು ಧರಿಸಿದ್ದ[17]. ಇವರ ಕಲಾಚಾತುರ್ಯ ಬರಿ ದೇವಾಲಯಗಳ ನಿರ್ಮಿತಿಗೆ ಮಾತ್ರ ಸೀಮಿತವಾಗಿರಲಿಲ್ಲ. ಇವರಲ್ಲಿ ಕೆಲವರು ಮನೆ, ಅರಮನೆ, ಮೂರ್ತಿ, ರಥ, ಪೀಠ, ವಾಹನ ಮತ್ತು ಕಿರೀಟ ಮೊದಲಾದ ಕಲಾಕೃತಿಗಳನ್ನು ಸೃಷ್ಟಿಸುತ್ತಿದ್ದರು[18].

ಸಂಗೀತಗಾರರು ಸಾಮಾನ್ಯವಾಗಿ ದೇವಾಲಯಗಳಿಗೆ ಸಂಬಂಧಪಟ್ಟವರಾಗಿರುತ್ತಿದ್ದರು. 'ಅಚಲನ್[19]' ಎಂಬೊಬ್ಬ ಪ್ರಖ್ಯಾತ ನಟನ ಉಜ್ವಲ ವರ್ಣನೆಯೊಂದು ಕ್ರಿ.ಶ. 8ನೆಯ ಶತಕದ ಶಾಸನವೊಂದರಲ್ಲಿರುವುದು ಸ್ವಾರಸ್ಯಕರ ಸಂಗತಿಯಾಗಿದೆ. ಇವನು ಭರತನ ನಾಟ್ಯಶಾಸ್ತ್ರವನ್ನು ವಿವರವಾಗಿ ಅಭ್ಯಸಿಸಿದ್ದನಲ್ಲದೆ, ನಾಟಕ ಮತ್ತು ಅಭಿನಯಕಲೆಗಳ ತಂತ್ರವನ್ನೆಲ್ಲ ಬಲ್ಲವನಾಗಿದ್ದ. ಈತನು 'ನರ್ತಕ' ನಲ್ಲದೆ 'ನಟ'ನೂ ಆಗಿದ್ದ. ಭಾರತೀಯ ನಾಟಕ, ನೃತ್ಯ, ಸಂಗೀತಕಲೆಗಳ ಬಗೆಗೆ ಎಂದಿನಿಂದಲೂ

ಪ್ರಮಾಣಬದ್ಧ ಶಾಸ್ತ್ರಗ್ರಂಥವೆನಿಸಿದ್ದ ಭರತನ 'ನಾಟ್ಯಶಾಸ್ತ್ರ'ವು ಈ ಪ್ರದೇಶದಲ್ಲಿ ಪಡೆದಿದ್ದ ಲೋಕ ಪ್ರಿಯತೆಯ ಬಗೆಗೆ ಈ ಶಾಸನವು ಹೊಸ ಬೆಳಕನ್ನು ಚೆಲ್ಲಿದೆ. ಅಲ್ಲದೆ, ಕರ್ಣಾಟಕದ ಮೊತ್ತ ಮೊದಲನೆಯವನೆನ್ನಬಹುದಾದ ಶ್ರೇಷ್ಠ 'ನಟ' ಮತ್ತು 'ನರ್ತಕ' ನೊಬ್ಬನ ಉಲ್ಲೇಖವನ್ನು ಈ ಶಾಸನವು ಮಾಡುತ್ತಿದೆ. ನಾಟಕ ಪ್ರಪಂಚದಲ್ಲಿ ಈತನು ಎಷ್ಟೊಂದು ಪ್ರಬಲನಾಗಿದ್ದನೆಂದರೆ, ಈತನಿಗೆ 'ನಟಸೇವ್ಯ' ಎಂದರೆ ನಟರಿಂದ ಸೇವಿಸಲ್ಪಟ್ಟವನೆಂಬ ಮನ್ನಣೆಯ ಖ್ಯಾತಿಯೊದಗಿತ್ತು.

## ರಾಜಧಾನಿಗಳು ಮತ್ತು ಶಿಬಿರಗಳು

ಕರ್ಣಾಟಕದ ಭೌಗೋಲಿಕ ವರ್ಣನೆಯುನ್ನು ವಿವರವಾಗಿ ಕೊಡುವ ತತ್ಕಾಲೀನ ಶಾಸನಗಳು ಉಪ ಲಬ್ಧವಿಲ್ಲ. ಆದರೆ ಹೂಯೆನ್‌ತ್ಸಾಂಗನು ಬನವಾಸಿಯ ('ಕುಂಕನ್ನಪುಲೋ'ದ) ಸುತ್ತುಮುತ್ತಲಿನ ಪ್ರದೇಶದ ಬಗೆಗೆ ಕೆಲವೊಂದು ಅಮೂಲ್ಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ಈ ದೇಶವು ಉಷ್ಣವಾತಾ ವರಣವುಳ್ಳುದಿದ್ದು, ಬಹು ಫಲವತ್ತಾದ ಪ್ರದೇಶವಾಗಿದೆಯೆಂದು ಬಣ್ಣಿಸುತ್ತಾನೆ; ಇಲ್ಲಿ ನೆಲಸಿರುವ ಜನದ ಮೈಬಣ್ಣ ಕಪ್ಪು, ಇವರ ನಡೆ-ನುಡಿ ತುಸು ಒರಟು ಒರಟಾದುದು.

ತಮ್ಮ ಪಟ್ಟಣಗಳಿಗಾಗಿ ಚಾಲುಕ್ಯರು ಪ್ರಾಕೃತಿಕವಾಗಿ ಸುರಕ್ಷಿತವಾಗಿದ್ದ ನಿವೇಶನಗಳನ್ನು ಆಯ್ಕೆ ಮಾಡಿದ್ದಾರೆ. ಇದಕ್ಕೆ ಬಾದಾಮಿಯೇ ಒಂದು ಶ್ರೇಷ್ಠ ನಿದರ್ಶನ. ಬಾದಾಮಿಯ ಸುತ್ತಲಿನ ಬೆಟ್ಟ-ಗುಡ್ಡಗಳು ಈ ಸ್ಥಳವನ್ನು ಸುಭದ್ರಗೊಳಿಸಿವೆ. ವಾತಾಪಿಯು ಆ ಗುಡ್ಡದ ಬುಡದಿಂದ ತುದಿಯುವರೆಗೆ ಒಂದು ಇಕ್ಕಟ್ಟಾದ ಕಣಿವೆ ಮಾರ್ಗವನ್ನು ನಿರ್ಮಿಸಿಕೊಂಡು, ಮೊದಲನೆಯ ಪುಲಿಕೇಶಿ ಆ ಅತ್ಯುತ್ತಮ ಗುಡ್ಡವನ್ನು ಯಾರೂ ಗೆಲ್ಲಲಾರದ, ಯಾರಿಗೂ ಎಟುಕದ ಭವ್ಯಕೋಟೆಯನ್ನಾಗಿ ಮಾರ್ಪಡಿಸಿದ್ದ ; ಮತ್ತು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ.

'ಬಾದಾಮಿ'ಯೆಂಬ ಪ್ರಾಚೀನ ಹೆಸರು ಅನಂತರದಲ್ಲಿ 'ವಾತಾಪಿ' ಎಂದು ಸಂಸ್ಕೃತೀಕರಣ ಹೊಂದಿತೆಂದು ಕಾಣುತ್ತದೆ. 'ವಾತಾಪಿ' ಒಂದು 'ಅಧಿಷ್ಠಾನ' ಎಂದರೆ ರಾಜಧಾನಿನಗರ ಎಂದು ಬಣ್ಣಿಸಲ್ಪಟ್ಟದೆ. ಈ ನಗರದಲ್ಲಿ 2000 ಬ್ರಾಹ್ಮಣರ ವಾಸ್ತವ್ಯವಿತ್ತು. ಇದರಿಂದ ಇದು ಪಾಂಡಿತ್ಯದ ಪ್ರಮುಖ ಕೇಂದ್ರವಿದ್ದಿರಬೇಕೆಂದು ವ್ಯಕ್ತವಾಗುತ್ತಿದೆ. ವಿನಯಾದಿತ್ಯ (ಕ್ರಿ.ಶ, 681–696)ನ ರಾಣಿ ವಿನಯವತಿ ಈ ಪಟ್ಟಣದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಗುಡಿಗಳನ್ನು ಕಟ್ಟಿಸಿದ್ದಳು. ಹೂಯೆನ್‌ತ್ಸಾಂಗನು ಈ ನಗರದಲ್ಲಿದ್ದ 'ಪುಸ' ಎಂಬ ಬಹು 'ಜಾಗೃತ' ದೇವರ ಶಿಲಾವಿಗ್ರಹವನ್ನೂ 70 ಅಡಿ ಎತ್ತರದ ಬುದ್ಧ ವಿಗ್ರಹವನ್ನೂ ಉಲ್ಲೇಖಿಸುತ್ತಾನೆ[20]. ದುರ್ದೈವದಿಂದ ಈ ವಿಗ್ರಹಗಳಿಂದು ಕಣ್ಮರೆಯಾಗಿವೆ. ಮಹಾಕೂಟ, ಪಟ್ಟದಕಲ್ಲು, ಐಹೊಳೆಗಳು—ಇನ್ನಿತರ ಮಹತ್ವದ ರಾಜಧಾನಿಗಳು. ಒಂದು ಗುಡ್ಡದ ಕಾರಣದಿಂದಾಗಿ ಬೇರ್ಪಟ್ಟಿರುವ ಮಹಾಕೂಟವು ಪ್ರಾಚೀನ ರಾಜಧಾನಿ ಸ್ಥಳವೆಂದು ಕಂಡುಬರುತ್ತಿದೆ. ಮಂಗಲೀಶನು (ಕ್ರಿ.ಶ. 597-610) ತನ್ನ ತಾಯಿಯ ಅಪೇಕ್ಷೆಗನುಸಾರವಾಗಿ ಮಹಾಕೂಟೇಶ್ವರನಾಥನಿಗೆ ಅನೇಕ ದತ್ತಿಗಳನ್ನು ಬಿಟ್ಟನೆಂದು ತಿಳಿದು ಬರುತ್ತಿದೆ. 'ಮಾಕೂಟ' ಎಂಬುದು ಈ ರಾಜಧಾನಿಯ ಪ್ರಾಚೀನ ಹೆಸರು. ಆ ತರುವಾಯದಲ್ಲಿ ಅಲ್ಲಿ ನಿರ್ಮಾಣಗೊಂಡ ಹಲವಾರು ದೇವಾಲಯ ಮತ್ತು ದತ್ತಿಶಾಸನಗಳಿಂದಾಗಿ ಅದೊಂದು ಮಹತ್ವದ ಕೇಂದ್ರಸ್ಥಾನವೆನಿಸಿರಬೇಕು. ರಾಜಮನೆತನದವರು ಮತ್ತು ಉನ್ನತ ಅಧಿಕಾರಿವರ್ಗದವರು ಆಗಾಗ ಸಂದರ್ಶನವೀಯುತ್ತಿದ್ದ ಸ್ಥಳವಿದಾಗಿತ್ತು. ಮಹಾಕೂಟೇಶ್ವರ ದೇವರ ಪೂಜೆಗೋಸ್ಕರ ಮಹಾಸಾಮಂತ ಬಪ್ಪುವರಸನು ಮಹಾಕೂಟಕ್ಕೆ ಬಂದು ('ಮಾಗುಡಕೆ ವಂದು') ಹೋದನೆಂದು ಒಂದು ಶಾಸನದ ಉಲ್ಲೇಖವಿದೆ[21].

ಪಟ್ಟದಕಲ್ಲು ಅದರ ಹೆಸರೇ ಸೂಚಿಸುವಂತೆ ಪಟ್ಟಾಭಿಷೇಕದ ಪೀಠಸ್ಥಾನವಾಗಿತ್ತು. ಇಮ್ಮಡಿ ವಿಕ್ರಮಾದಿತ್ಯನ ರಾಣಿಯರಾಗಿದ್ದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿಯರು ಪಲ್ಲವರ ಮೇಲೆ ಅವರ ಪತಿ ಗಳಿಸಿದ ಗೆಲುವಿನ ಸ್ಮಾರಕಾರ್ಥವಾಗಿ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿಸಿದರು[22].

ಐಹೊಳೆ ಎಂಬುದು ಶಾಸನಗಳಲ್ಲಿ 'ಆರ್ಯಪುರ' ಎಂದು ಉಲ್ಲೇಖಿಸಲ್ಪಟ್ಟಿದೆ. ಇದು ಬಹುಶಃ ಅತಿ ಪ್ರಾಚೀನ ರಾಜಧಾನಿಯಾಗಿತ್ತೆಂದು ತೋರುತ್ತದೆ. ಯಾಕೆಂದರೆ, ಈ ಸ್ಥಳದ ದೇವಾಲಯಗಳು ದುರ್ಗೆಯ ಗುಡಿಗಳಂತೆ ಬಹು ಪ್ರಾಚೀನವಾದವುಗಳಾಗಿವೆ. ಈ ಭಾಗದ ದೇವಾಲಯಶಿಲ್ಪದ ಅತಿ ಪ್ರಾಚೀನವೆನಿಸುವ ಮಾದರಿಗಳಿಗಿಂತ ಇವು ಹೆಚ್ಚು ಪ್ರಾಚೀನತರವಾಗಿವೆ. ಐಹೊಳೆಯಾದರೊ ಒಂದು ವಿದ್ಯಾಕೇಂದ್ರವಾಗಿತ್ತು. ಈ ಸಂಗತಿ '500 ಮಂದಿ ಚತುರ್ವಿದ್ಯಾಸಮುದಾಯ' ಕ್ಕೆ ಈ ಪಟ್ಟಣವು ವಾಸ್ತವ್ಯ ಸ್ಥಾನವಾಗಿತ್ತೆಂಬುದರಿಂದ ನಿರ್ಣಯಿಸಲ್ಪಟ್ಟಿದೆ. ಐಹೊಳೆ ಒಂದು 'ಅಧಿಷ್ಠಾನ' ಎಂದರೆ ಸರಕಾರದ ಆಡಳಿತಾಧಿಕಾರದ ಒಂದು ಕೇಂದ್ರ ಅಥವಾ ರಾಜಧಾನಿನಗರ ಎನಿಸಿತ್ತು[23].

'ಪಾಂಡುರಂಗಪಳ್ಳಿ' ಅಥವಾ ಆಧುನಿಕ ಪಂಢರಪುರವು ಕ್ರಿ.ಶ. 6ನೆಯ ಶತಕದಿಂದಲೇ ಒಂದು ಮಹತ್ವದ ನಗರವಾಗಿತ್ತೆಂದು ಕಂಡು ಬರುತ್ತಿದೆ. ವಿಠ್ಠಲದೇವರು ಆಗಲೇ ಸುಪ್ರಸಿದ್ಧ ದೇವರೆನಿಸಿದ್ದ. ಮತ್ತು ಈ ಪ್ರದೇಶದ ಜನರಲ್ಲಿ ಅನೇಕರು ಈ ದೇವರ ಹೆಸರನ್ನು ಮಕ್ಕಳಿಗೆ ಇಡುವ ರೂಢಿ ಬೆಳೆದಿತ್ತು. ಈ ಮೊದಲೇ ತಿಳಿದು ಬಂದಿರುವಂತೆ ಈ ನಗರದ ಜಯದ್ವಿಟ್ಟನು 400 ಜನ ಬ್ರಾಹ್ಮಣರಿಗೆ 'ಆಚಾರ್ಯ' ನೆನಿಸಿದ್ದ. ಇಂತಹ ವಿದ್ವಾಂಸರ ವಾಸ್ತವ್ಯಕ್ಕೆ ನೆಲೆಯೆನಿಸಿದ್ದ ಪಾಂಡುರಂಗಪಳ್ಳಿ, ಇದರ ಚರಿತ್ರೆಯ ಆರಂಭದಲ್ಲಿಯೇ ಒಂದು ವಿದ್ಯಾಕೇಂದ್ರವಾಗಿ ವಿಕಾಸಗೊಂಡಿರಲೇಬೇಕು.

ರಾಜರ ಸೈನಿಕ ಶಿಬಿರಗಳನ್ನು 'ವಿಜಯಸ್ಕಂದಾವಾರಃ' ಎಂದು ಶಾಸನಗಳು ಉಲ್ಲೇಖಿಸುತ್ತಿವೆ. ಸೈನಿಕ ಆಕ್ರಮಣ ಕಾರ್ಯದಲ್ಲಿ ತೊಡಗಿರುವಾಗ ರಾಜರು ಈ ಶಿಬಿರಗಳಲ್ಲಿ ಬಹುಕಾಲ ತಂಗಿರುತ್ತಿದ್ದರೆಂಬುದು ಸುಸ್ಪಷ್ಟ. ಈ ಪಾಳ್ಯಗಳು ರಾಜಧಾನಿಗಳ ಹಾಗೆಯೇ ಉಪಯುಕ್ತವಾಗಿದ್ದು ಆಡಳಿತದ ಕಾರ್ಯಭಾರವು ಇಲ್ಲಿಂದಲೂ ನಿರ್ವಹಿಸಲ್ಪಡುತ್ತಿತ್ತು. ಈ ಶಿಬಿರಗಳಿಂದ ಜಾಹೀರು ಪಡಿಸಲ್ಪಟ್ಟ ತಾಮ್ರಶಾಸನಗಳಿಂದ ಈ ಕೆಳಗಿನವುಗಳು ಈ ಕಾಲದ ಪಾಳ್ಯಗಳಲ್ಲಿ ಕೆಲವೆಂದು ಕಂಡುಬರುತ್ತಿದೆ :—

(1) ರಾಸೇನಪುರ (ಮಹಾರಾಷ್ಟ್ರದ ಅಹಮ್ಮದನಗರ ಜಿಲ್ಲೆಯ ರಾಸಿನ್ ಎಂದು ಗುರುತಿಸಲ್ಪಟ್ಟುದು.)[24]
(2) ಕಾಂಚೀಪುರದ ಬಳಿಯ ಮಲ್ಲಿಯೂರು (ಮಹಾಸ್ಕಂದಾವಾರ)[25].
(3) ಪಂಪಾನದಿಯ ತೀರದಲ್ಲಿರುವ ಪಂಪಾತೀರ್ಥ (ಆಧುನಿಕ ಹಂಪೆ)[26].
(4) ಏಲಾಪುರ (ಎಲ್ಲೋರಾ)[27].
(5) 'ಹರೇಶಪುರ' (ಆಧುನಿಕ ಹರಿಹರ)ದ ಬಳಿಯ 'ಕರಂಜಪತ್ರ'ದ ಹತ್ತಿರದ ಸ್ಥಳ[28].
(6) ಸಿನ್ನಾನದೀತೀರದ ಪಾಳ್ಯ[29].

**ಕಟ್ಟಡಗಳು**

ನಗರಗಳ ಹಾಗೂ ಮನೆಗಳ ಸಾಮಾನ್ಯರಚನೆಯ ಸ್ವರೂಪದ ಬಗೆಗೆ ಹೂಯೆನ್‌ತ್ಸಾಂಗನ

ವರದಿಗಳಿಂದ ಕೆಲವು ಕುತೂಹಲಕಾರಿ ಅಂಶಗಳು ತಿಳಿದುಬರುತ್ತಿವೆ. ನಿಬಿಡ "ಜನವಸತಿಗಳುಳ್ಳ ಊರು ನಗರಗಳ ರಚನಾಸ್ವರೂಪದ ಬಗೆಗೆ ಹೇಳುವುದಾದಲ್ಲಿ, ನಗರಗಳ ಹೊರವಲಯದ ಚತುರ್ಭುಜಾಕಾರದ ಕೋಟೆಯ ಗೋಡೆಗಳು ವಿಸ್ತಾರವೂ ಉನ್ನತವೂ ಆಗಿದ್ದು, ನಗರಗಳ ಒಳಬೀದಿಗಳು ಮಾತ್ರ ಅತಿ ಇಕ್ಕಟ್ಟಾದ ಮತ್ತು ವಕ್ರ ವಕ್ರವಾಗಿರುವ ಸಂದಿಗೊಂದಿಯ ದಾರಿಗಳಾಗಿವೆ. ಹೆದ್ದಾರಿಗಳಲ್ಲಿ ಅಂಗಡಿ ಗಳಿದ್ದು ಅಲ್ಲಲ್ಲಿ ಸಾಲುಸಾಲಾಗಿ ತಂಗುದಾಣ ಇಲ್ಲವೆ ಧರ್ಮಶಾಲೆಗಳು ಇವೆ.......ಮನೆಗಳ ಹಾಗೂ ಅವುಗಳ ಗೋಡೆಗಳ ರಚನೆ ವಿಶಿಷ್ಟರೀತಿಯದು. ದೇಶದ ಈ ಭಾಗವು ತಗ್ಗು ಹಾಗೂ ಆರ್ದ್ರ ಪ್ರದೇಶವಾಗಿದ್ದು ಹೆಚ್ಚಾಗಿ ನಗರದ ಕೋಟೆಯ ಗೋಡೆಗಳು ಇಟ್ಟಿಗೆಗಳಿಂದಲೇ ಮಾಡಿದುವಾಗಿವೆ. ಆದರೆ ವಾಸದ ಮನೆಯ ಗೋಡೆಗಳು ಮತ್ತು ಬೇಲಿಗಳು ಬಿದಿರ ಹಾಗೂ ಮರದ ತಡಿಕೆಗಳಿಂದ ರಚಿತ ವಾಗಿವೆ. ಮನೆಯ ಒಳಭಾಗದ ಹಜಾರಗಳು ಮತ್ತು ಉಪ್ಪರಿಗೆಗಳು ಮರದ ಸಪಾಟಾದ ಮಾಳಿಗೆಗಳುಳ್ಳ ಕೋಣೆಗಳಿಂದ ಕೂಡಿದುವಾಗಿದ್ದು, ಸುಟ್ಟ ಇಲ್ಲವೆ ಸುಡದ ಹೆಂಚುಗಳ ಹೊದಿಕೆಯುಳ್ಳುವಾಗಿವೆ. ಉಪ್ಪರಿಗೆಗಳ ಹೊರಗೋಡೆಗಳ ಮೇಲೆ ಸುಣ್ಣದ ಸಾರಣೆಯಿದೆ. ಈ ಉಪ್ಪರಿಗೆಗಳು ಅತ್ಯುನ್ನತವಾಗಿದ್ದು ಇಂದಿನ ಚೀನಾದೇಶದ ಮಹಲುಗಳ ಮಾದರಿಯವಾಗಿವೆ. ಹುಲ್ಲುಚಪ್ಪರದ ಗುಡಿಸಲುಗಳು ಕೆಲವು ಕಡೆಗಳಲ್ಲಿ ಇಟ್ಟಿಗೆಗಳಿಂದಲೂ ಮರದ ಹಲಗೆಗಳಿಂದಲೂ ರಚಿತವಾಗಿವೆ. ಇವುಗಳ ಹೊರಗೋಡೆಗಳೂ ಸುಣ್ಣದ ಸಾರಣೆಗಳಿಂದಲಂಕೃತವಾಗಿವೆ. ಮನೆಗಳ ನೆಲಗಟ್ಟುಗಳು ಗೋಮಯದಿಂದ ಸಾರಿಸಿ ಶುದ್ಧ ಮಾಡಲ್ಪಟ್ಟು, ಆಯಾ ಋತುಮಾನದ ಹೂಗಳನ್ನು ಅವುಗಳ ಮೇಲೆ ಹರಡಿರುತ್ತಾರೆ. ಪಂಡಿತವರ್ಗದವರ ಮನೆಗಳು ಒಳಗೆ ಚೊಕ್ಕಟವಾಗಿದ್ದು ಹೊರಭಾಗಗಳಲ್ಲಿ ಸರಳ ಸುಂದರವಾಗಿವೆ.'' ವಿಶೇಷ ಗಮನಾರ್ಹ ಸಂಗತಿಯೆಂದರೆ, ಬಹುಕಾಲ ಬಾಳಬಹುದಾದ ಭದ್ರ ಕಟ್ಟಡಗಳು ದೇವಾಲಯಗಳು ಮಾತ್ರ. ಜನರ ವಾಸದ ಮನೆಗಳು ಒಳಭಾಗದಲ್ಲಿ ವಿಶಾಲವಾಗಿದ್ದರೂ ಹೊರಗೋಡೆಗಳಲ್ಲಿ ಯಾವ ವಿಧದ ವೈಭವ ಇಲ್ಲದೆ ಶ್ರೀಮಂತಿಕೆಯ ಆಡಂಬರವಿಲ್ಲದ ಕಟ್ಟಡಗಳಾಗಿದ್ದವು.

## ಸ್ಮಾರಕಮಂದಿರಗಳು

ಇಂದಿನವರೆಗೆ ಅಚ್ಚಳಿಯದೆ ನಿಂತಿರುವ ಶಿಲಾರಚಿತ ದೇವಾಲಯಗಳಲ್ಲದೆ, ದೊಡ್ಡ ಮನುಷ್ಯರ ಗೌರವಾರ್ಥವಾಗಿ ಕೆಲಸಲ ಸ್ಮಾರಕ ಕಟ್ಟಡಗಳು ಬಹುಕಾಲ ಬಾಳುವ ರೀತಿಯಲ್ಲಿ ನಿರ್ಮಾಣವಾಗುತ್ತಿದ್ದವು. ಇಮ್ಮಡಿ ಕೀರ್ತಿವರ್ಮನ ಆಳಿಕೆಯ ಕಾಲದಲ್ಲಿ ಅಣ್ಣಿಗೆರೆಯ ಚೈತ್ಯಾಲಯದ ಮುಂದೆ ಮಾಡಿಸಿದ್ದ 'ಕೀರ್ತನಮ್' ಎಂಬ ಶಿಲ್ಪಕೃತಿ ಇಂತಹ ಒಂದು ಉದಾಹರಣೆಯಾಗಿದೆ[30]. ಸಾರ್ವಜನಿಕ ಸ್ಥಳಗಳಲ್ಲಿ ಕೆಲಸಲ ದೇವಾಲಯಗಳಲ್ಲಿ ದೊಡ್ಡಮನುಷ್ಯರ ಸ್ಮರಣೆಯನ್ನು ಚಿರಕಾಲ ಉಳಿಯುವಂತೆ ಮಾಡವುದ ಕ್ಕೋಸುಗ ಶಿಲಾವಿಗ್ರಹಗಳನ್ನು ಸ್ಥಾಪಿಸುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಸಂಪ್ರದಾಯ ವೆಂದು ಕಂಡುಬರುತ್ತಿದೆ.

ವೀರಪುರುಷರ ಮರಣದ ಸ್ಮಾರಕಾರ್ಥವಾಗಿ 'ವೀರಗಲ್ಲು' ಗಳನ್ನು ನೆಡುತ್ತಿದ್ದ ಪದ್ಧತಿ ಕರ್ಣಾಟಕ ದೇಶದ ಒಂದು ವಿಶೇಷಾಂಶವಾಗಿದೆ. ಅಪಕೀರ್ತಿಗಿಂತ ಮರಣವೇ ಲೇಸೆಂದು ಬಗೆಯುತ್ತಿದ್ದ ಕಪ್ಪೆ ಅರಭಟ್ಟನೆಂಬ ಸಾಧುಪುರುಷನ ಕೀರ್ತಿಯನ್ನು ಹೊಗಳುವ ವೀರಗಲ್ಲು ಇಂತಹ ಸ್ಮಾರಕಗಳಲ್ಲಿ ಅತಿ ಪ್ರಾಚೀನತಮವಾದುದು[31]. ಮತ್ತು ಈ ವೀರಶಾಸನವು ಕನ್ನಡದ ಬಹು ಹಳೆಯ ಕಾಲದ ತ್ರಿಪದಿ ರೂಪದ ಪದ್ಯಗಳ ಮಾದರಿಯೊಂದನ್ನು ನೀಡುತ್ತಿದೆ. 'ಬಾದಾಮಿ' ಯ ಒಬ್ಬ 'ಮಾಣಿ' ಯ (—ತರುಣವೀರನ) ಸ್ಮರಣಾರ್ಥವಿರುವ ಇನ್ನೆರಡು ವೀರಗಲ್ಲುಗಳು ದೊರೆತಿವೆ. ಈ ವೀರನು "ತೊಟ್ಟ ಪ್ರತಿಜ್ಞೆಯನ್ನು ಪೂರೈಸುತ್ತಿದ್ದನಲ್ಲದೆ, ನುಡಿದಂತೆ—ನಡೆಯುವವನಾಗಿದ್ದ[32]." ಆ ಕಾಲದ ಕನ್ನಡ ಜನತೆ ಪಾಲಿಸಿಕೊಂಡು ಬಂದ ಉನ್ನತ ಆದರ್ಶಗಳನ್ನು ಉದ್ಘೋಷಿಸುವ ವೀರಶಾಸನಗಳಿವು.

ಹಿಂದೂದೇವಾಲಯಗಳೊಂದಿಗೆ ಜೈನಬಸದಿಗಳು ಬೌದ್ಧ ವಿಹಾರಗಳು ಆ ಕಾಲದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದವು. ಹೂಯನ್‌ತ್ಸಾಂಗನು ಪುಲಿಕೇಶಿಯ ರಾಜ್ಯದಲ್ಲಿ 5000 ಭಿಕ್ಷುಗಳಿಗೆ ಆಶ್ರಯಸ್ಥಾನವಾಗಿದ್ದ 100 ಬೌದ್ಧವಿಹಾರಗಳ ವಿಚಾರವನ್ನು ಉಲ್ಲೇಖಿಸುತ್ತಾನೆ.

ಆ ಕಾಲದ ಧಾರ್ಮಿಕ ಪ್ರವೃತ್ತಿ ದೇವಾಲಯ ನಿರ್ಮಿತಿಯೊಂದರಲ್ಲಷ್ಟೇ ಅಲ್ಲ, ಯಜ್ಞ-ಯಾಗಾದಿಗಳನ್ನು ನಡೆಸುತ್ತಿದ್ದ ಪಂಡಿತವರ್ಗದವರಿಗೆ ಸಲ್ಲಿಸುವ ದತ್ತಿದಾನಾದಿಗಳಲ್ಲೂ ವ್ಯಕ್ತವಾಗುತ್ತಿತ್ತು. ವಿದ್ವತ್ತೆಗಾಗಿ ಮತ್ತು ಅಗ್ನಿಷ್ಟೋಮ, ವಾಜಪೇಯ, ಪೌಂಡರೀಕ, ವೈಶ್ವದೇವ,[33] ಮೊದಲಾದ ಯಜ್ಞ-ಯಾಗಾದಿಯಲ್ಲದೆ ಬಲಿ, ಚರು, ಕೃಚ್ಛ್ರ, ಅತಿಕೃಚ್ಛ್ರ ಮೊದಲಾದ ದೇಹದಂಡನೆಯ ವ್ರತನಿಯಮಾಚರಣೆಗಾಗಿ ಬ್ರಾಹ್ಮಣರಿಗೆ ದತ್ತಿಗಳನ್ನು ನೀಡಲಾಗುತ್ತಿತ್ತು[34]. ಅಗ್ನಿಚಯನ, ಬಹುಸುವರ್ಣ, ಅಶ್ವಮೇಧ ಮೊದಲಾದವು ಮುಖ್ಯವಾಗಿ ರಾಜರು ನೆರವೇರಿಸುತ್ತಿದ್ದ ಯಜ್ಞ-ಯಾಗಾದಿಗಳು[35]. ಪಂಚಗ್ರಾಮದಾನವನ್ನು ಪಂಡಿತ ಬ್ರಾಹ್ಮಣರಿಗೆ ನೀಡುತ್ತಿದ್ದ ರೂಢಿ ಸರ್ವಸಾಮಾನ್ಯವಾಗಿತ್ತು.

**ರಾಣಿಯರು**

ಸಮಾಜದಲ್ಲಿ ಸ್ತ್ರೀಯರಿಗೆ ದೊರೆಯುತ್ತಿದ್ದ ಮಾನಮರ್ಯಾದೆಗಳು ಆ ಕಾಲದ ಸಮಾಜ ಜೀವನದಲ್ಲಿಯ ಸಂಸ್ಕೃತಿ ನಾಗರಿಕತೆಗಳ ನಿದರ್ಶನವಾಗಿದೆ. ಈ ಮಾನದಿಂದ ನೋಡಲಾಗಿ ಪ್ರಾಚೀನ ಕರ್ನಾಟಕದ ಚರಿತ್ರೆ ಹೆಮ್ಮೆಪಡುವಂತಹದಾಗಿದೆ. ಹಲವಾರು ಸ್ತ್ರೀಯರು ಉನ್ನತಸ್ಥಾನದಲ್ಲಿದ್ದು ಹೊಣೆಗಾರಿಕೆಯಿಂದ ಆಡಳಿತ ನಿರ್ವಹಿಸುತ್ತಿದ್ದರೆಂಬ ಬಗ್ಗೆ ಸುಸ್ಪಷ್ಟ ಆಧಾರಗಳಿವೆ. ರಾಣಿಯರು ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದರಲ್ಲದೆ ಸಾರ್ವಭೌಮಾಧಿಕಾರವನ್ನೂ ಒಮ್ಮೊಮ್ಮೆ ನಿರ್ವಹಿಸುತ್ತಿದ್ದರು. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಈ ಪದ್ಧತಿ ಪರಾಕಾಷ್ಠೆಗೆ ಮುಟ್ಟಿತ್ತು. ವಿಜಯಾದಿತ್ಯನ ಮಹಾಮಾತೆ ವಿನಯವತಿರಾಣಿ (ಕ್ರಿ.ಶ. 696–734) ವಾತಾಪಿಪುರದಲ್ಲಿ ಪ್ರತಿಷ್ಠಾಪಿಸಿದ್ದ ದೇವತಾವಿಗ್ರಹಗಳಿಗಾಗಿ ಅನೇಕ ಕರತೆರಿಗೆಗಳ ಮೂಲಕ ಉತ್ಪನ್ನ ದೊರೆಯುವಂತೆ ಏರ್ಪಾಟು ಮಾಡಿದ್ದಳು[36]. ಇಮ್ಮಡಿ ವಿಕ್ರಮಾದಿತ್ಯ (ಕ್ರಿ. ಶ. 734-745)ನ ರಾಣಿಯರಾಗಿದ್ದ ಲೋಕಮಹಾದೇವಿ ತ್ರೈಲೋಕ್ಯ ಮಹಾದೇವಿಯರು ಪಟ್ಟದ ಕಲ್ಲಿನ ಭವ್ಯದೇವಾಲಯಗಳ ರಚನೆಗೆ ಕಾರಣರಾಗಿದ್ದರು. ಚಂದ್ರಾದಿತ್ಯನ ರಾಣಿ ವಿಜಯಭಟ್ಟಾರಿಕೆ ತನ್ನ ಪತಿ ರಾಜಧಾನಿಯಲ್ಲಿಲ್ಲದಾಗ ಕೆಲಕಾಲ ರಾಜ್ಯಭಾರ ನಡೆಸಿದಂತೆ ಉಲ್ಲೇಖವಿದೆ[37]. ಸಂಸ್ಕೃತ ಸಾಹಿತ್ಯದಲ್ಲಿ 'ಕೌಮುದೀ ಮಹೋತ್ಸವ'ವೆಂಬ ಸುಪ್ರಸಿದ್ಧ ಐತಿಹಾಸಿಕ ಕಾವ್ಯದ ಕರ್ತೃವಾದ 'ವಿಜ್ಜಿಕಾ' ಎಂಬವಳು ವಿಜಯಭಟ್ಟಾರಿಕೆಯೇ ಎಂದು ಕೆಲ ವಿದ್ವಾಂಸರ ಅಭಿಪ್ರಾಯ.

**ವೇಶ್ಯಾಸ್ತ್ರೀಯರು**

ಆ ಕಾಲದ ಸಮಾಜದಲ್ಲಿ ವೇಶ್ಯಾಸ್ತ್ರೀಯರು ಉಚ್ಛ್ರಾಯಸ್ಥಿತಿಗೇರಿದ್ದು ವಿಶೇಷವಾಗಿ ಗೌರವಿಸಲ್ಪಡುತ್ತಿದ್ದರು. ವೇಶ್ಯಾವೃತ್ತಿ ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಎಲ್ಲೆಡೆಗೂ ಅಸ್ತಿತ್ವದಲ್ಲಿತ್ತು. ವೇಶ್ಯೆಯರು ರೂಪಲಾವಣ್ಯ, ಬುದ್ಧಿಕೌಶಲ ಮತ್ತು ಕಲಾಸಕ್ತಿಗಳಿಗಾಗಿ ಹೆಸರಾಗಿದ್ದರಲ್ಲದೆ, ಶ್ರೀಮಂತಿಕೆ, ವಿಲಾಸ ವೈಭವಗಳಿಗಾಗಿಯೂ ಪ್ರಖ್ಯಾತರೆನಿಸಿದ್ದರು. ಇಂದಿನ ಜಪಾನಿ 'ಗೀಶಾ'ಸ್ತ್ರೀಯರಂತೆ ಈ ವೇಶ್ಯೆಯರಿದ್ದರೆಂದು ಹೇಳಬಹುದಾಗಿದೆ. ಕ್ರಿ. ಶ. 4ನೆಯ ಶತಕದ ಶೂದ್ರಕನ 'ಮೃಚ್ಛಕಟಿಕ' ನಾಟಕದ ವಸಂತಸೇನೆಯ ಉದಾತ್ತಪಾತ್ರದ ಮಾದರಿಯನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಈ ವೇಶ್ಯಾಪದ್ಧತಿ ಆಧುನಿಕ ಮನಸ್ಸಿಗೆ ಜುಗುಪ್ಸಾರ್ಹವಾದುದು. ಆದರೂ ಇಂದಿನ ದಿನಮಾನಗಳಲ್ಲೂ

ವೇಶ್ಯಾಪದ್ಧತಿ ಕೆಲವು ಸಮಾಜಸ್ತರಗಳಲ್ಲಿ ವಿಲಾಸಮಯ ಜೀವನದೊಂದಿಗೆ ನೂತನ ರೀತಿಯಲ್ಲಿ ರೂಪಾಂತರಗೊಂಡುದು ಕಂಡುಬಾರದಿರದು. ವೇಶ್ಯಾಸ್ತ್ರೀ ವರ್ಗದವರು ಕಲೆ, ಸಂಸ್ಕೃತಿಗಳನ್ನು ಒದಗಿಸುವವರಾಗಿದ್ದರು. ಇದರಿಂದಾಗಿ, ಅವರು ಆದರಣೀಯರಾಗಿದ್ದರೆಂಬುದು ಐತಿಹಾಸಿಕ ಸಂಗತಿಯಾಗಿದೆ. ವಿನಾಪೋಟಿ ಎಂಬ ಹೆಸರಿನ 'ಸೂಳೆ' ವಿಜಯಾದಿತ್ಯನ 'ಪ್ರಾಣವಲ್ಲಭೆ'ಯೆನಿಸಿದ್ದಳು. ಮತ್ತು ಈಕೆ ಮಹಾಕೂಟದ ದೇವಾಲಯಕ್ಕೆ ಒಂದು ಸುವರ್ಣಪೀಠ, ಒಂದು ರಜತಚ್ಛತ್ರ ಮತ್ತು 800 ಮತ್ತರ ಭೂಮಿಯನ್ನು ದಾನವಾಡುವಷ್ಟು ಶ್ರೀಮಂತಳಾಗಿದ್ದಳು[38]. ಗೋವಿಂದ ಪೊಡ್ಡಿಯ ಮಗಳಾದ ಬದಿಪೊಡ್ಡಿಯೆಂಬವಳು ಒಂದು ದೇವಾಲಯಕ್ಕೆ ನೇಮಕಗೊಂಡ ಸೂಳೆಯಾಗಿದ್ದಳು. ಈಕೆ ಒಂದು ಉತ್ಕೃಷ್ಟ......(ಶಬ್ದಗಳು ಖಿಲವಾಗಿವೆ) ಕೊಟ್ಟಿದ್ದಳಲ್ಲದೆ, ಈ ಮೊದಲೇ ಅಶ್ವರಥ, ಗಜರಥಗಳನ್ನೂ ಭೂದಾನ, 'ಉಭಯಮುಖಿ'ದಾನ (ಗೋದಾನ)ಗಳನ್ನೂ ನೀಡಿದ್ದಳು[39]. ಚಾಲಬ್ಬೆ ಎಂಬ ಇನ್ನೊಬ್ಬ ಸೂಳೆ ವಿಜಯೇಶ್ವರ ದೇವರಿಗೆ ಹರಕೆ ಒಪ್ಪಿಸಲೆಂದು (ಆ ದೇವಾಲಯದ) ಸ್ತಂಭಗಳನ್ನು ಮಾಡಿಸಿ ಕೊಟ್ಟಿದ್ದಳು[40].

ಮೇಲಿನ ಈ ಉದಾಹರಣೆಗಳಿಂದ ಈ ಕಾಲದ ವೇಶ್ಯಾಸ್ತ್ರೀಯರು ಅನಂತರ ಕಾಲದ ಸೂಳೆಯರಂತೆ ಕೀಳರೆಂದು ಹೀಗಳೆಯಲ್ಪಡದೆ, ಸಮಾಜದಲ್ಲಿ ಎತ್ತರದ ಸ್ಥಾನವನ್ನಲಂಕರಿಸಿದ್ದರೆಂದು ಕಂಡುಬರುತ್ತಿದೆ. ವಿನಾಪೋಟಿಯ ತಾಯಿ ಮತ್ತು ಅಜ್ಜಿಯರ ಹೆಸರುಗಳು ಶಾಸ್ತ್ರವತ್ತಾದ ರೀತಿಯಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವುವಲ್ಲದೆ, ಈ ಮೂವರ ಹೆಸರುಗಳಿಗೂ ಗೌರವಸೂಚಕ ಬಹುವಚನ ಪ್ರತ್ಯಯಗಳನ್ನು ಹತ್ತಿಸಲಾಗಿದೆ[41]. ಸೇಂದ್ರಕರಾಜನೊಬ್ಬನು ರೂಪದಲ್ಲಿ ಮನ್ಮಥಪ್ರಾಯನಾಗಿದ್ದು ಸೂಳೆಯರ ಕಣ್ಮಣಿಯಾಗಿದ್ದನೆಂದು ವರ್ಣನೆ ಬಂದಿದೆ[42].

ಈ ಸ್ತ್ರೀಯರು ತಮ್ಮನ್ನು ಸೂಳೆಯರೆಂದು ಕರೆಯುವುದು ತಮ್ಮ ಮರ್ಯಾದೆಗೆ ಕುಂದು ಎಂದು ಬಗೆಯುತ್ತಿರಲಿಲ್ಲ. ರಾಜರು, ರಾಣಿಯರು, ಸಾಮಂತಾಧಿಕಾರಿಗಳು ಮೊದಲಾದವರ ಹಾಗೆ ಇವರೂ ದೇವರಿಗೆ ದತ್ತಿಗಳನ್ನಿತ್ತು ಶಿಲಾಶಾಸನಗಳನ್ನು ಮಾಡಿಸುತ್ತಿದ್ದರು.

### ಜನಸಾಮಾನ್ಯರು

ಚಾಲುಕ್ಯಸಾಮ್ರಾಜ್ಯದ ಜನತೆಯ ಸ್ವಭಾವ ವೈಲಕ್ಷಣ್ಯಗಳ ಬಗೆಗೆ ಇರುವ ಹೂಯೆನ್‌ತ್ಸಾಂಗನ ಪ್ರಖ್ಯಾತ ವರದಿಯನ್ನು ಬಿಟ್ಟರೆ ಈ ಜನಸಾಮಾನ್ಯರ ಬಗೆಗೆ ಮತ್ತಾವ ವಿವರಣೆಯೂ ಪೂರ್ಣವೆನಿಸದು. ಇವರು ಅಭಿಮಾನಿಗಳು, ಉತ್ಸಾಹಿಗಳು, ವೀರರು, ಉಪಕಾರಿಗೆ ಪ್ರತ್ಯುಪಕಾರಿಗಳು, ಅನ್ಯಾಯಕ್ಕೆ ಪ್ರತಿಯಾಗಿ ಸೇಡುತೀರಿಸಿಕೊಳ್ಳುವವರು. ಶರಣುಬಂದ ತ್ರಸ್ತರಿಗಾಗಿ ಸ್ವಾರ್ಥತ್ಯಾಗ ಮಾಡಬಲ್ಲವರು[43]". ಹೂಯೆನ್‌ತ್ಸಾಂಗನ ಸಮಕಾಲೀನ ಶಾಸನವೊಂದು ಆಶ್ಚರ್ಯಕರ ರೀತಿಯಲ್ಲಿ ಆತನ ಶಬ್ದಗಳನ್ನೇ ಪ್ರತಿಧ್ವನಿಸುತ್ತಿದೆ. ಈ ಶಾಸನವು ಜನತೆಯ ಮುಂದೆ ಈ ಆದರ್ಶಗಳನ್ನು ಇರಿಸುತ್ತಿದೆ. "ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ, ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್" ಎಂಬುದಾಗಿ[44].

### ಭಾಷೆಗಳು

ಚಾಲುಕ್ಯರ ಕಾಲದಲ್ಲಿ ಕನ್ನಡ, ಸಂಸ್ಕೃತ ಭಾಷೆಗಳೆರಡೂ ಪರಸ್ಪರ ಸಹಕರಿಸುತ್ತ ಬೆಳೆಯುತ್ತಿದ್ದವು. ಅಂತೇ ಈ ಕಾಲದ ಶಾಸನಗಳು ಎರಡೂ ಭಾಷೆಗಳಲ್ಲಿ ರಚಿತವಾಗಿರುವುದನ್ನು ಕಾಣುತ್ತೇವೆ. ವಾಡಿಕೆಯಾಗಿ ಬಳಸಲ್ಪಟ್ಟ ಭಾಷೆ ಸಂಸ್ಕೃತವಾಗಿದ್ದರೂ ಅದು ಕನ್ನಡ ಲಿಪಿಯಲ್ಲಿರುತ್ತಿತ್ತು. ಆದರೆ ಕನ್ನಡದಲ್ಲಿ ರಚಿತವಾದ

ಶಾಸನಗಳು ಇರಲಿಲ್ಲವೆಂದಲ್ಲ. ಒಂದು ಶಾಸನವು ಕನ್ನಡವನ್ನು 'ಪ್ರಾಕೃತ' ಭಾಷೆಯೆಂದು ಉಲ್ಲೇಖಿಸುತ್ತಿದೆ. ಮಾರ್ಗಪದ್ಧತಿಯ ಸಂಸ್ಕೃತ ಭಾಷೆಗೆ ರಾಜಾಶ್ರಯದ ಮನ್ನಣೆಯಿದ್ದರೂ ಪ್ರಾದೇಶಿಕಭಾಷೆಯೆಂದು ಕನ್ನಡವೂ ಪ್ರೋತ್ಸಾಹಿಸಲ್ಪಡುತ್ತಿತ್ತು. ಈ ರಾಜಾಶ್ರಯದಲ್ಲಿ ಸಂಸ್ಕೃತ, ಕನ್ನಡಗಳೆರಡಕ್ಕೂ ಆಡಳಿತ ಭಾಷೆಯ ಸ್ಥಾನಮಾನಗಳಿದ್ದು, ಅವೆರಡೂ ಶಾಸನಗಳಲ್ಲಿ ಬಳಸಲ್ಪಡುತ್ತಿದ್ದವು. ಜನರ ಹೆಸರುಗಳು, ಸಹ ಅರ್ಧಮರ್ಧ ಸಂಸ್ಕೃತ, ಅರ್ಧಮರ್ಧ ಕನ್ನಡ ಪದಗಳಿಂದ ಕೂಡಿದುವಾಗಿದ್ದವು. ಉದಾ : ಪುಲಿಕೇಶಿ, ಅಂಬೇರಾ, ವಲ್ಲಭ ಬಪ್ಪ ಇತ್ಯಾದಿ.

## ಆಹಾರ ಪದ್ಧತಿ

ಭಾರತದ ಸಾಮಾನ್ಯ ಹುಟ್ಟುವಳಿಯನ್ನು ಕುರಿತು ಹೂಯೆನ್‌ತ್ಸಾಂಗನು ಹೀಗೆ ಬರೆಯುತ್ತಾನೆ: "ಎಲ್ಲ ವಿಧದ ಹಣ್ಣು-ಹಂಪಲಗಳನ್ನು ಒಂದೊಂದಾಗಿ ಹೇಳುವುದು ಅಸಾಧ್ಯ. ಜನರಿಗೆ ಹೆಚ್ಚು ಮೆಚ್ಚಿಕೆಯಾದವುಗಳನ್ನು ಸ್ಥೂಲವಾಗಿ ವಿವರಿಸಬಹುದಾಗಿದೆ"—ಎಂದು ಹೇಳಿ, ಆತನು-ದಾಳಿಂಬ, ಕಿತ್ತೀಳೆಗಳು ಎಲ್ಲ ಪ್ರದೇಶಗಳಲ್ಲೂ ಬೆಳೆಯುವವೆಂದು ಹೇಳಿದ್ದಾನೆ; ಮತ್ತು ಅಕ್ಕಿ, ಗೋಧಿ, ಶುಂಠಿ, ಸಾಸುವೆ, ಕಲ್ಲಂಗಡಿ, ಕುಂಬಳ ಇತ್ಯಾದಿಗಳನ್ನು ಉಲ್ಲೇಖಿಸಿ, ಈರುಳ್ಳಿ-ಬೆಳ್ಳುಳ್ಳಿಗಳನ್ನು ಸೇವಿಸುವವರನ್ನು ಬಹಿಷ್ಕರಿಸುತ್ತಾರೆ[45] ಎಂದಿದ್ದಾನೆ. ಸಾಮಾನ್ಯ ಆಹಾರದ ಬಗೆಗೆ ಇವನು ಹೀಗೆ ಬರೆಯುತ್ತಾನೆ: "ಹಾಲು, ತುಪ್ಪ, ಬೆಲ್ಲ, ಸಕ್ಕರೆ, ರೊಟ್ಟಿ, ಅರಳು, ಸಾಸುವೆಕಾಳುಗಳು ಸಾಮಾನ್ಯ ಆಹಾರ; ಮೀನು, ಮಾಂಸ, ಜಿಂಕೆಯ ಮಾಂಸ,—ಇತ್ಯಾದಿಗಳು ಕೆಲವು ಸಂದರ್ಭಗಳಲ್ಲಿಯ ಮೃಷ್ಟಾನ್ನ"[46] ಎಂದಿದ್ದಾನೆ. ಇತ್ಸಿಂಗನು ಇದೇ ರೀತಿಯ ವಿವರಣೆಯನ್ನು ಕೊಡುತ್ತ, ಹೂಯೆನ್‌ತ್ಸಾಂಗನನ್ನು ಅನುಮೋದಿಸುತ್ತಾನೆ: "ಅಡುಗೆಯೆಲ್ಲ ಉತ್ಕೃಷ್ಟರೀತಿಯಲ್ಲಿ ತಯಾರಾಗುತ್ತಿದೆ. ತುಪ್ಪ, ಎಣ್ಣೆ, ಹಾಲು ಮತ್ತು ಬೆಣ್ಣೆ ಇವು ಎಲ್ಲೆಲ್ಲೂ ದೊರೆಯುತ್ತವೆ. ರೊಟ್ಟಿ ಮತ್ತು ಹಣ್ಣು ಹಂಪಲಗಳು ಅಸಂಖ್ಯವಾಗಿದ್ದು ಅವುಗಳನ್ನಿಲ್ಲಿ ಒಂದೊಂದಾಗಿ ಹೇಳುವುದು ದುಸ್ತರ. ಭಾರತದ ಐದೂ ಪ್ರದೇಶಗಳಲ್ಲಿ ಯಾರೂ ಯಾವ ಪ್ರಕಾರದ ಈರುಳ್ಳಿಯನ್ನೂ ತಿನ್ನುವುದಿಲ್ಲ"......[47]. ಶಾಸನಗಳು ಈ ವಿಷಯವನ್ನು ಕುರಿತು ಹೆಚ್ಚಿನದೇನನ್ನೂ ಹೇಳುವುದಿಲ್ಲ. ಆಕಸ್ಮಿಕವಾಗಿ ಸಾವೆ, ರಾಗಿ, ಅಕ್ಕಿ, ಸಕ್ಕರೆ, ಎಣ್ಣೆ, ಹುಣಿಸೆಹಣ್ಣು, ಇತ್ಯಾದಿ ಆಹಾರ ಪದಾರ್ಥಗಳನ್ನು ಮಾತ್ರ ಅವು ಉಲ್ಲೇಖಿಸುತ್ತಿವೆ.

ಕುಡಿತದ ವ್ಯಸನವನ್ನು ಕುರಿತು ಹೂಯೆನ್‌ತ್ಸಾಂಗನು 'ಪುಲಿಕೇಶಿಯ ರಾಜ್ಯದ ಕ್ಷತ್ರಿಯ ಯೋಧರು ಕುಡಿದು ಮತ್ತರಾಗುತ್ತಿದ್ದರಲ್ಲದೆ, ಯುದ್ಧಕ್ಕೆ ತೆರಳುವ ಮುನ್ನ ತಮ್ಮ ಯುದ್ಧದಾನೆಗಳನ್ನೂ ಕುಡಿಸಿ ಉನ್ಮತ್ತಗೊಳಿಸುತ್ತಿದ್ದರು' ಎಂದಿದ್ದಾನೆ. ತತ್ಕಾಲೀನಗ್ರಂಥವಾದ 'ಪುಲಸ್ತ್ಯ ಸ್ಮೃತಿ' ಅಮಲೇರಿಸುವ ಹನ್ನೊಂದು ವಿಧದ ಪಾನೀಯಗಳನ್ನು ಹನ್ನೆರಡನೆಯದಾದ 'ಸುರೆ' ಯೊಂದಿಗೆ ಹೆಸರಿಸುತ್ತಿದೆ. ಬೇರೆಬೇರೆ ವರ್ಗದವರಿಗೆ ಮೆಚ್ಚಿಕೆಯವಾದ ಪಾನೀಯಗಳನ್ನು ಹೂಯೆನ್‌ತ್ಸಾಂಗನು ಹೀಗೆ ವಿವರಿಸುತ್ತಾನೆ: "ದ್ರಾಕ್ಷೆ ಮತ್ತು ಕಬ್ಬುಗಳ ಮೂಲಕ ತಯಾರಿಸುವ ಮದ್ಯದ ಪ್ರಕಾರಗಳು ಕ್ಷತ್ರಿಯರ ಪಾನೀಯಗಳು; ವೈಶ್ಯರು ಅತ್ಯುಗ್ರವಾದ ಭಟ್ಟಿಯ ಸೆರೆಯನ್ನು ಕುಡಿಯುತ್ತಾರೆ. ಬೌದ್ಧಭಿಕ್ಷುಗಳು, ಮತ್ತು ಬ್ರಾಹ್ಮಣರು ದ್ರಾಕ್ಷಾರಸವನ್ನೂ ಕಬ್ಬಿನ ಹಾಲನ್ನೂ ಕುಡಿಯುತ್ತಾರೆ. ಕೆಳದರ್ಜೆಯ ಮಿಶ್ರಜಾತಿಯ ಜನರು ಕುಡಿಯುತ್ತಿರುವ ಮದ್ಯ ಇಂತಹದೇ ಇರಬೇಕೆಂದಿಲ್ಲ"[48].

## ವೇಷ-ಭೂಷಣಗಳು

ಕ್ಷತ್ರಿಯರು ಮತ್ತು ಬ್ರಾಹ್ಮಣರು ಶುದ್ಧ, ಸರಳ ಹಾಗೂ ಮಿತವ್ಯಯದ ಜೀವನ ನಡೆಸುವವರೆಂದು

ಹೂಯೆನ್‌ತ್ಸಾಂಗ್ ಹೇಳುತ್ತಾನೆ. ರಾಜ ಮಹಾರಾಜರ ಹಾಗೂ ಅತ್ಯುತ್ತಮ ದರ್ಜೆಯ ಘನವಂತ ಶ್ರೀಮಂತ ವ್ಯಕ್ತಿಗಳ ವೇಷ–ಭೂಷಣಗಳು ಅಸಾಮಾನ್ಯ ಮಾದರಿಯವಾಗಿದ್ದವು. ಬೆಲೆಯುಳ್ಳ ಮುತ್ತು–ಹವಳಗಳ ಗೊಂಡೆಗಳುಳ್ಳ ರತ್ನಖಚಿತ ಮಕುಟಗಳು ಅವರ ಶಿರೋಭೂಷಣಗಳಾಗಿದ್ದವು. ಅವರ ಮೈಕೈಗಳನ್ನು ಕಡಗ, ಕಂಕಣ, ತೋಳ್ಬಂದಿ, ಉಂಗುರ, ರತ್ನಹಾರ ಮುಂತಾದವು ಅಲಂಕರಿಸುತ್ತಿದ್ದವು[49]. ಜನಸಾಮಾನ್ಯರ ಒಳಉಡುಪು, ಹೊರಉಡುಪುಗಳು ಹೊಲಿಗೆಯನ್ನು ಕಾಣದ ವಸ್ತ್ರಗಳು. ಬಣ್ಣದ ಬಗೆಗೆ ಹೇಳುವುದಾದರೆ, ಶುಭ್ರ ವರ್ಣವು ಬಲು ಮೆಚ್ಚಿಕೆಯದು. ಬಣ್ಣ ಬಣ್ಣದ ಉಡಿಗೆಯನ್ನು ಅವರು ಮೆಚ್ಚರು. ಗಂಡಸರು ಒಂದು ತುಂಡು ವಸ್ತ್ರವನ್ನು ಟೊಂಕದ ಸುತ್ತ ಕಂಕುಳದ ವರೆಗೆ ಸುತ್ತಿಕೊಂಡು ಬಲದ ಬರಿತೋಳನ್ನು ಹೊರಗೆ ಬಿಟ್ಟುಕೊಳ್ಳುವರು. ಹೆಂಗಸರು ಬಲು ಉದ್ದವಾದ ವಸ್ತ್ರವನ್ನು ಎರಡೂ ಹೆಗಲುಗಳ ಮೇಲೆ ತುಂಬ ಹೊದೆದುಕೊಂಡು, ಅದು ಕೆಳಗೆ ಸಡಿಲಾಗಿ ಜೋಲುವಂತೆ ಮೈತುಂಬ ಉಟ್ಟು ಕೊಳ್ಳುವರು. ನಡುದಲೆಯ ಕೂದಲನ್ನು ಸುರುಳಿ ಸುರುಳಿಯಾಗಿ ಕಟ್ಟಿಕೊಂಡು, ಉಳಿದ ತಲೆಗೂದಲು ಸುತ್ತಲೂ ಜೋಲಾಡುವಂತೆ ಮಾಡಿಕೊಳ್ಳುವರು[50]. ಇತ್ಸಿಂಗನು ಹೂಯೆನ್‌ತ್ಸಾಂಗನನ್ನು ಅನುಮೋದಿಸುತ್ತ,—'ಭಾರತದ ಜನಸಾಮಾನ್ಯರು, ಅಧಿಕಾರಿವರ್ಗದವರು ಮತ್ತು ಉಚ್ಚ ವರ್ಗದವರು ತಮ್ಮ ಉಡುಪಿಗಾಗಿ ಒಂದು ಜೊತೆ ಮೆತ್ತನೆಯ ಶುಭ್ರ ವಸ್ತ್ರಗಳನ್ನು ಉಪಯೋಗಿಸುವರು, ಬಡ ಹಾಗೂ ಕೆಳದರ್ಜೆಯ ಜನರು ಕೇವಲ ಒಂದು ನಾರುಬಟ್ಟೆಯ ತುಂಡನ್ನು ಮಾತ್ರ ಬಳಸುವರು[51]. ದೇಶದ ಉಷ್ಣ ವಾತಾವರಣದಿಂದಾಗಿ ಅತ್ಯಲ್ಪ ಹೊದಿಕೆಯೇ ಸಾಕೆನಿಸಿದೆ. ವೇಷ-ಭೂಷಣಗಳ ಬಗೆಗೆ ಇರುವ ಹೂಯೆನ್‌ತ್ಸಾಂಗನ ಹೇಳಿಕೆಗಳಿಗೆ ಬಾದಾಮಿಯ ಮತ್ತು ಅದರ ನೆರೆಹೊರೆಯ ದೇವಾಲಯ ಶಿಲ್ಪಕಲಾ ಮಾದರಿಗಳಿಂದ ಪುಷ್ಟಿ ದೊರೆಯುತ್ತದೆ. ಬಂಡೆಗಲ್ಲುಗಳನ್ನು ಕೊರೆದು ಮಾಡಿದ ಆ ದೇವಾಲಯ ಗಳಲ್ಲಿಯ ಗಂಡು ಮತ್ತು ಹೆಣ್ಣು ವಿಗ್ರಹಗಳು ನಾನಾತರದ ಕರ್ಣಕುಂಡಲ, ಕೊರಳ ಹಾರ, ತೋಳ ಬಂದಿ, ಕಡಗ ಕಂಕಣ, ಒಡ್ಯಾಣ, ಉಂಗುರ, ನಯಪಡಿಸಿ ಮಾಡಿದ ವಿವಿರ ವಿವರವಾದ ಹೆಳಲ ತುರುಬು,—ಇತ್ಯಾದಿಗಳಿಂದಲಂಕೃತವಾಗಿವೆ. ಹೆಣ್ಣುವಿಗ್ರಹಗಳ ಉಡುಪಿನಲ್ಲಿಯ ಮಡಿಕೆಗಳು—ಅವು ಸೀರೆಯ ನಿರಿಗೆಗಳೇ ನಿಜ ;– ಅವು ಕಲ್ಲಿನಲ್ಲಿ ಬಹಳ ಜೋಕೆ ತೂಕಗಳಿಂದ ಕೆತ್ತಲ್ಪಟ್ಟು, ಕೆಲವೆಡೆ ಸೀರೆಗಳ ಮೇಲಿನ ಪಟ್ಟೆಯ ಗೆರೆಗಳೂ ಮನೋಹರವಾಗಿ ಕಂಗೊಳಿಸುತ್ತಿವೆ. ನಡುಪಟ್ಟಿಗಳು ಅಗ ವಿಶೇಷವಾಗಿ ಪ್ರಚಲಿತವಿದ್ದವು. ಅವುಗಳನ್ನು ನಡುವಿನ ಮೇಲೆ ಧರಿಸಿ, ಎರಡೂ ಹೆಗಲುಗಳ ಮೇಲೆ ಮತ್ತು ತೊಡೆಗಳ ಮೇಲೆ ಹಾಯ್ದು ಬರುವಂತೆ ಧರಿಸುತ್ತಿದ್ದರು.

### ಮಠದ ಜೀವನ

ಭಾರತದ ಮಠಗಳಲ್ಲಿ ಇತ್ಸಿಂಗನು ಸುಮಾರು ಹತ್ತು ವರುಷಗಳ ಕಾಲ ವಾಸಿಸಿದ್ದರಿಂದ, ಅವನು ಅವುಗಳಲ್ಲಿಯ ಜೀವನದ ಬಗೆಗೆ ವಿಶದವಾದ ವರ್ಣನೆಯನ್ನು ಕೊಡುತ್ತಾನೆ. ಹೂಯೆನ್‌ತ್ಸಾಂಗನು ಪುಲಿಕೇಶಿಯ ರಾಜ್ಯದ 100 ಬೌದ್ಧ ವಿಹಾರಗಳನ್ನು ಕುರಿತು ಬರೆಯುವುದರಿಂದ ಅವುಗಳಲ್ಲಿ ವಾಸಿಸುತ್ತಿದ್ದ ಭಿಕ್ಷುಗಳ ಜೀವನದ ಬಗೆಗೆ ಅಲ್ಪಸ್ವಲ್ಪ ವಿಷಯವನ್ನು ತಿಳಿದುಕೊಳ್ಳಬಹುದಾಗಿದೆ. ಸ್ವಚ್ಛತೆ, ಸ್ನಾನವ್ಯವಸ್ಥೆ ಮತ್ತು ನೀರನ್ನು ಶೋಧಿಸಿ ಸಿದ್ಧಪಡಿಸುವುದು—ಇತ್ಯಾದಿಗಳ ಬಗೆಗೆ ವಿಶೇಷ ಲಕ್ಷ್ಯ ಪೂರಯಿಸಲಾಗುತ್ತಿತ್ತು. ಭಾರತೀಯ ಪೀಠಾಲಂಕರಣ (Furniture) ಗಳ ಬಗೆಗೆ ಇತ್ಸಿಂಗನು ಹೀಗೆ ಬರೆಯುತ್ತಾನೆ: 'ಪಾಠ ಪ್ರವಚನಗಳು ನಡೆಯುವ ಭಾರತೀಯ ಸಭಾಂಗಣಗಳಲ್ಲಿ ಮತ್ತು ಊಟದ ಕೋಣೆಗಳಲ್ಲಿ ದೊಡ್ಡ ಆಸನ ಗಳಿಲ್ಲ. ಆದರೆ ಮರದ ದಿಮ್ಮಿಗಳೂ ಚಿಕ್ಕ ಕುರ್ಚಿಗಳೂ ಇವೆ. ಉಪನ್ಯಾಸಗಳನ್ನು ಕೇಳುವಾಗಲೂ ಈ ಆಸನಗಳ ಮೇಲೆ ಕುಳಿತುಕೊಳ್ಳುವರು. ಇದು ವಾಡಿಕೆಯ ಪದ್ಧತಿ.

## ವಾಣಿಜ್ಯ ವ್ಯವಹಾರ

**ಬಂದರುಗಳು :** ಪ್ರಾಚೀನ ಕಾಲದಿಂದಲೆ ಪಶ್ಚಿಮ ಭಾರತವು ಪಾಶ್ಚಾತ್ಯರೊಂದಿಗೆ ವಾಣಿಜ್ಯ-ವ್ಯವಹಾರಗಳನ್ನು ನಡೆಸುತ್ತ ಬಂದಿತ್ತು. ಈ ವ್ಯಾಪಾರ ಸಂಬಂಧವು ಪೂರ್ವದ ಚಾಲುಕ್ಯರ ಆಳಿಕೆಯಲ್ಲೂ ಮುಂದುವರಿದಿತ್ತು. ಕೋಸ್ಮಸ್-ಇಂದಿಕಪ್ಲುಸ್ಟಸ್ ಎಂಬ ಅಲೆಕ್ಸಾಂಡ್ರಿಯದ ವರ್ತಕನು ಭಾರತದ ಪಶ್ಚಿಮ ಸಮುದ್ರ ತೀರವನ್ನು ಕ್ರಿ.ಶ. 6ನೆಯ ಶತಕದಲ್ಲಿ ಸಂದರ್ಶಿಸಿದ. ಆತನು ಯಾವ ಯಾವ ಮಹತ್ವದ ಬಂದರುಗಳ ಮುಖಾಂತರ ಸರಕುಗಳು ನಿರ್ಯಾತವಾಗುವವೋ ಅವುಗಳನ್ನು ಉಲ್ಲೇಖಿಸುತ್ತಾನೆ. ಇವುಗಳಲ್ಲಿ ಮುಂಬಯಿಯ ಬಳಿಯ ಕಲ್ಯಾಣ, ಮಾಂಗರೂತ್ (ಮಂಗಳೂರು) ಮತ್ತು ಮಲೇ ಇವು ಚಾಲುಕ್ಯ ಸಾಮ್ರಾಜ್ಯದಲ್ಲಿ ನೆಲಸಿದ್ದವು.

**ವ್ಯಾಪಾರದ ಸರಕುಗಳು :** ನಿರ್ಯಾತವಾಗುತ್ತಿದ್ದ ಸರಕುಗಳನ್ನು ಕುರಿತು ಈ ವಿದೇಶಿವರ್ತಕನು ಹೀಗೆ ಬರೆಯುತ್ತಾನೆ : “ ಒಳದೇಶಗಳಿಂದ—ಎಂದರೆ ಚೀನಾ ಮೊದಲಾದ ಆ ದಿಕ್ಕಿನ ದೇಶಗಳ ವ್ಯಾಪಾರ ಸ್ಥಳಗಳಿಂದ ರೇಶಿಮೆ, ಲೋಳಿಸರದ ಔಷಧಗಳು (aloes), ಲವಂಗ, ಗಂಧದ ಮರ ಮತ್ತು ಅದರಿಂದ ಮಾಡಿದ ವಸ್ತುಗಳು—ಮುಂತಾದವನ್ನು ಆಯಾತಮಾಡಿಕೊಂಡು ಹೊರಗಿನ ಬಂದರುಗಳತ್ತ ಪಶ್ಚಿಮ ಭಾರತವು ಸಾಗಿಸುತ್ತದೆ. ಮೆಣಸು ಬೆಳೆಯುವ ‘ ಮಲೇ ’ ಬಂದರ ಪ್ರದೇಶಕ್ಕೆ ತಾಮ್ರ, ಸೀಸಮ್ ಮರ (Sesame wood) ಮತ್ತು ಉಡುಪಿಗೆ ಬೇಕಾಗುವ ವಸ್ತುಗಳು ದೊರೆಯುವ ‘ ಕಲ್ಲಿಯಾನ ’ ಮುಂತಾದ ಸ್ಥಳಗಳಿಗೆ ನಾನು ಹೋದೆ. ಇವು ಬಹು ದೊಡ್ಡ ವ್ಯಾಪಾರ ಕೇಂದ್ರಗಳು”. ಐದು ವ್ಯಾಪಾರ ಕೇಂದ್ರಗಳುಳ್ಳ ‘ ಮಲೇ ’ ಮೆಣಸನ್ನು ನಿರ್ಯಾತಮಾಡುವ ಪ್ರದೇಶ. ಇದು ಕರ್ಣಾಟಕದ ಪಶ್ಚಿಮ ಕರಾವಳಿ ಪ್ರದೇಶವಾಗಿದ್ದು ‘ ಮಲೇ ’ ರಾಜ್ಯವೆಂದು ಪ್ರಖ್ಯಾತವಾಗಿತ್ತೆಂದು ಡಾ. ಸಾಲೆತೊರೆಯವರು ಹೇಳಿದ್ದಾರೆ.

## ತೂಕ ಮತ್ತು ಅಳತೆಯ ಮಾಪಕಗಳು

ಕ್ರಿ ಶ. 732–3ರ ಒಂದು ಶಾಸನವು ಆ ಕಾಲದ ಕೆಲವು ಮಾಪಕಗಳ ಪಟ್ಟಿಯನ್ನು ಕೊಡುತ್ತದೆ; ಮಣ, ಸೇರು, ವೀಶ, ಭಾಂಡಪೇರು ಇವು ಉಲ್ಲೇಖಗೊಂಡಿವೆ. ಇವುಗಳಲ್ಲಿ ‘ ಮಣ ’ ಎಂಬುದು ಆಧುನಿಕ ಮಣದಳತೆಯೇ (11.2 ಕಿಲೋಗ್ರಾಂ) ಆಗಿದೆ. ‘ ಪೇರು ’ ಎಂಬುದು 64 ಸೇರಿನ ಒಂದು ಕಾಳಿನ ಮೂಟೆಗೆ ಸಮ. ‘ ವೀಸ ’ ಅಥವಾ ‘ವೀಸೆ’ ಎಂಬುದು ದಕ್ಷಿಣ ಕರ್ಣಾಟಕದಲ್ಲಿ ಮೊನ್ನೆಮೊನ್ನೆಯ ವರೆಗೆ ಪ್ರಚಲಿತವಿದ್ದ ಅಳತೆ. 120 ರೂಪಾಯಿಗಳ ತೂಕಕ್ಕೆ ಅಥವಾ 5 ಸೇರಿನಳತೆಗೆ ಸಮವಾದ ಪ್ರಮಾಣ. ‘ ಭಾಂಡಪೇರು ’ ಒಂದು ಭಂಡಿಯ ಭಾರದಳತೆ.

‘ ಕುಳ ’ ಎಂಬುದು ಧಾನ್ಯದಳತೆ. ಡಾ॥ ಫ್ಲೀಟರು ಇದನ್ನು 64 ಸೇರು ಅಥವಾ 17·28 ಕಿಲೋಗ್ರಾಂ ತೂಕದಳತೆಗೆ ಸಮವಾದ ‘ ಕೊಳಗ ’ ಎಂಬ ಅಳತೆಯೆಂದು ಗುರುತಿಸಿದ್ದಾರೆ. ‘ ಸೊಂಟಿಗೆ ’ ಎಂಬುದು ದ್ರವಪದಾರ್ಥಗಳ ಮಾಪಕ. “ ಎಲ್ಲಿದ್ದರೂ ಪ್ರತಿಯೊಂದು ಎಣ್ಣೆಗಾಣದವರು ಒಂದು ಸೊಂಟಿಗೆ ಎಣ್ಣೆಯ ದಾನವೀಯಬೇಕೆಂದು ” ಕ್ರಿ. ಶ. 718ರ ಶಾಸನವೊಂದು ಉಲ್ಲೇಖಿಸುತ್ತಿದೆ. ಡಾ. ಫ್ಲೀಟರು ‘ ಸೊಂಟಿಗೆ ’ ಎಂಬುದು ಇಂದಿನ ಒಂದು ‘ ಸವುಟು ’ ಎಂಬಳತೆಗೆ ಸಮ ಎಂದಿದ್ದಾರೆ. ಆದರೆ ‘ ಸವುಟು ’ ಎಂಬುದು ವಿವಿಧ ಆಕಾರದ ಮತ್ತು ಅಳತೆಯದಿರುವುದರಿಂದ ಒಂದು ನಿರ್ದಿಷ್ಟ ಅಳತೆಯ ‘ ಸೊಂಟಿಗೆ’ಯನ್ನು ಎಣ್ಣೆಯ ಮಾಪನಕ್ಕಾಗಿ ಬಳಸುತ್ತಿದ್ದಿರಬೇಕು.

ಶಾಸನಗಳು ಮೇಲಿಂದ ಮೇಲೆ 'ರಾಜಮಣ' ಎಂಬ ಅಳತೆಯನ್ನು ಉಲ್ಲೇಖಿಸುತ್ತಿವೆ. ಇದು ಬಹುಶಃ ಒಂದು ಆಡಳಿತದವರು ನಿರ್ದಿಷ್ಟಪಡಿಸಿದ್ದ ಅಳತೆ (Standard Measure) ಎಂದು ತೋರುತ್ತದೆ. 'ಮತ್ತರ'ವು ಅಥವಾ 'ಮತ್ತಲ' ಮತ್ತು 'ನಿವರ್ತನ'ಗಳು ಭೂಮಿಯಳತೆಯ ಮಾಪಕಗಳು. 'ಮತ್ತರ'ವು 4 ಅಥವಾ 5 ಎಕರೆ ಭೂಮಿಗೆ ಸಮ; ಎಂದರೆ ಒಂದು 'ನಿವರ್ತನ'ದ ಅಳತೆಗೆ ಸರಿಯಾದುದು. ಭೂಮಿಯನ್ನು ಅದರ ಸಾಗುವಳಿಯ ಯೋಗ್ಯತೆಯ ಪ್ರಕಾರವಾಗಿ 'ಖಜ್ಜನ' 'ವಾಗುಲಕಚ್ಛಕ್ಷೇತ್ರ', ಗಟ್ಟಿ', 'ನೆಲ್ಲುಗೆ' ಇತ್ಯಾದಿಯಾಗಿ ವಿಭಜಿಸುತ್ತಿದ್ದರು. ಈ ಪದಗಳಲ್ಲಿ 'ಗಟ್ಟಿ' ಎಂಬುದು ಕನ್ನಡದ 'ಗದ್ದೆ' ಎಂಬ ಪದದ ಪ್ರಾಚೀನ ರೂಪ. ಇದರ ಅರ್ಥ 'ತರಿಜಮೀನು' (Wetland) ಎಂದು. 'ನೆಲ್ಲುಗೆ' ಎಂದರೆ ಬತ್ತ ಬೆಳೆಯುವ ಭೂಮಿ. ನೆಲ್ಲು ಎಂದರೆ ಅಕ್ಕಿ ಎಂಬರ್ಥ ಇಂದಿಗೂ ಪ್ರಚಲಿತವಿದೆ. 'ವಾಕುಲ-ಕಚ್ಛ-ಕ್ಷೇತ್ರ' ಎಂಬುದು 'ವಾಕುಲ' ವೆಂಬ ಹುಲ್ಲು ಬೆಳೆಯುವ ಜವುಳು ಭೂಮಿ (Marshy land). 'ಖಜ್ಜನ' ಪದದ ಅರ್ಥ ತಿಳಿದಿಲ್ಲ.

## ಅಡಿಟಿಪ್ಪಣಿ

1. ತಕಕುಸು, ಜೆ., ಭಾರತ ಮತ್ತು ಮಲಯ ದ್ವೀಪಕಲ್ಪಗಳಲ್ಲಿ ಪ್ರಚಲಿತವಿರುವ ಬೌದ್ಧ ಧರ್ಮದ ದಾಖಲೆ ಇತ್ಸಿಂಗನಿಂದ ರಚಿತವಾದುದು. ಆಕ್ಸ್‌ಫರ್ಡ್ 1896 ಪು. 44.
2. E.I., IV, p. 189 ff.
3. Kane P. V: History of Dharmasastra, I, p. 227.
4. Watters T: On Yuvan Chwang's Travels in India, London.
5. Itsing, p. 182-3.
6. I.A., VII p. 192.
7. E.I., VI, p. 241 footnote 2.
8. M.A.R., 1929, p. 198.
9. Watters, T., p. 168.
10. K.I., I, p. 9
11. E.I., XXVIII, p. 70 ff.
12. I.A., VIII p. 288.
13. E.I., XIV, No. 14 p. 189.
14. E.C., VII, ಸಂಸ್ಕೃತ-ಕನ್ನಡ p. 261.
15. I.A., X, p. 165.
16. I.A., X, p. 170.
17. Ibid, p. 164. ಆತನು 'ತೆಂಕಣದಿಶೆಯ ಸೂತ್ರಧಾರಿ' ಎಂದು ಪ್ರಸಿದ್ಧನಾಗಿದ್ದ.
18. Ibid, p. 165.
19. Ibid, p. 167.
20. Watters, T: II. p. 23, ಇಲ್ಲಿ ಉಲ್ಲೇಖಗೊಂಡ ರಾಜಧಾನಿ ಬಾದಾಮಿ ಎಂದು ತಿಳಿಯಲಾಗಿದೆ.
21. I.A., X, p. 104
22. I.A., X, p. 163.
23. I.A., VIII, p. 287-8.
24. I.A., VII, p. 288 and Vijayaditya's Morum copper Plates (unpublished).
25. M.A.R., 1929, No. 30.

26. I.A., VI, p. 86-7.
27. 'Indian Historical Quarterly, Vol. IV p. 125
28. I.A., VI, p. 91.
29. K.I., II, No. 3. p. 9.
30. S.I.I., XI, (1) No. 5 p. 3.
31. I.A., X, p. 61 and K.I., I.
32. B.K., Ins., 1927-28. No. 278 p. 35 and Ibid No. 119. 1928-9.
33. I.A., VI, p. 91.
34. I.A., XIII, p. 330.
35. I.A., VI, p. 78.
36. K,I., I, p. 8.
37. I.A., VII p. 163-4.
38. I.A., X, p. 103.
39. I.A., XI, p. 125.
40. ಅದೇX, p. 170.
41. The Early History of the Dekhan I, p. 235.
42. I.A., XVIII, p. 269.
43. Watters II, p. 238.
44. ಕಪ್ಪೆ ಅರಭಟ್ಟನ ಶಾಸನ I.A., X, p. 61.
45. Watters I, p. 178.
46. Ibid.
47. Itsing : p. 44-5.
48. Watters I, p. 178
49. ಅದೇ p. 152.
50. Watters I, p. 151.
51. Itsing, p. 67.

ಮೂಲಲೇಖಕರು : ಶ್ರೀ ಜ್ಯೋತ್ಸ್ನಾ ಬುರುಡೇ
ಅನುವಾದಕರು : ಶ್ರೀ ಎಸ್.ಆರ್. ಮಳಗಿ

# ಸಂಸ್ಕೃತ—ಬಾದಾಮಿಚಾಲುಕ್ಯರ ಕಾಲ

ರಾಷ್ಟ್ರಕೂಟರ ಕಾಲಕ್ಕೂ ಪೂರ್ವದ, ಕನ್ನಡ ಭಾಷೆ ಮತ್ತು ಸಾಹಿತ್ಯಗಳ ವಿವರಣೆಯನ್ನು ಹಿಂದಿನ ಅಧ್ಯಾಯದಲ್ಲಿ ಕೊಟ್ಟಿದೆ. ಅದರಲ್ಲಿ ಬಾದಾಮಿಯ ಚಾಲುಕ್ಯರ ಉಚ್ಛ್ರಾಯ ಕಾಲದ ವಿವರಣೆಯೂ ಸೇರಿದೆ. ಆದುದರಿಂದ ಆ ವಿಷಯದ ಬಗೆಗೆ ಹೆಚ್ಚಿನದೇನನ್ನೂ ಈಗ ಹೇಳುವ ಆವಶ್ಯಕತೆ ಇಲ್ಲ. ಚಾಲುಕ್ಯರು ಸಂಸ್ಕೃತ ಕವಿಗಳಿಗೆ ಉದಾರಾಶ್ರಯಕೊಟ್ಟರು, ಸಂಸ್ಕೃತ ವಿದ್ಯಾವಂತಿಕೆ ಅಭಿವೃದ್ಧಿ ಹೊಂದುವುದಕ್ಕೆ ಬೇಕಾದ ಅನುಕೂಲವಾತಾವರಣವನ್ನು ಕಲ್ಪಿಸಿದರು, ಸಂಸ್ಕೃತ ಸಾಹಿತ್ಯಸೃಷ್ಟಿಯನ್ನು ಉತ್ತೇಜನಗೊಳಿಸಿದರು.

ಕರ್ಣಾಟಕ ಚರಿತ್ರೆಯಲ್ಲಿ ಬಾದಾಮಿ ಚಾಲುಕ್ಯರ ಆಳಿಕೆ ಅತ್ಯಂತ ಶ್ರೇಷ್ಠವೂ ವೈಭವಯುಕ್ತವೂ ಆದ ಒಂದು ಯುಗ. ಈ ಯುಗವು ಸೈನಿಕಕ್ಷೇತ್ರದಲ್ಲಿ ಹೇಗೋ ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿಯೂ ಹಾಗೆಯೇ ಗಮನಾರ್ಹವಾದುದು.

ಚಾಲುಕ್ಯವಂಶದ ಮೊತ್ತಮೊದಲನೆಯ ಮಹಾರಾಜ ಒಂದನೆಯ ಪುಲಿಕೇಶಿ (ಕ್ರಿ. ಶ. 535–66) 'ಪುರಾಣಕಾಲದ ಮಹಾಪುರುಷರಾದ ಯಯಾತಿ, ದಿಲೀಪ ಮೊದಲಾದವರಿಗೆ ಸಮಾನನು. ಮನುಸ್ಮೃತಿ, ಪುರಾಣಗಳು, ರಾಮಾಯಣ, ಮಹಾಭಾರತ ಮತ್ತು ಇತಿಹಾಸಗಳಲ್ಲಿ ಪರಿಣತನು' ಎಂದು ಶಾಸನಗಳಲ್ಲಿ ವರ್ಣಿತನಾಗಿದ್ದಾನೆ. ಇದರಿಂದ ಕ್ರಿ. ಶ. 6ನೆಯ ಶತಮಾನದಲ್ಲಿ ರಾಜನ ವಿದ್ಯಾಭ್ಯಾಸದ ಆವಶ್ಯಕ ಭಾಗವಾಗಿದ್ದ ಸಂಸ್ಕೃತ ಸಾಹಿತ್ಯದ ಕಲ್ಪನೆ ಬರುತ್ತದೆ. ಮಂಗಲೀಶನ (ಕ್ರಿ. ಶ. ಸುಮಾರು 600) ಮಹಾಕೂಟ ಸ್ತಂಭಶಾಸನದಲ್ಲಿ[1] ಒಂದನೆಯ ಕೀರ್ತಿವರ್ಮನ ದಿಗ್ವಿಜಯಗಳನ್ನು ಕಾಳಿದಾಸನ ರಘುವಂಶದಲ್ಲಿ ವರ್ಣಿತವಾಗಿರುವ ರಘುದಿಗ್ವಿಜಯದ ರೀತಿಯಲ್ಲಿ ಅತಿಶಯವಾಗಿ ವರ್ಣಿಸಿರುವುದೇ ಅಲ್ಲದೆ, ಆ ಮಹಾ ಕಾವ್ಯದಿಂದ ವಾಕ್ಯಭಾಗಗಳನ್ನು ಯಥಾವತ್ತಾಗಿ ಉದ್ಧರಿಸಿದೆ.

ಆದರೆ ದೂರದ ಹಾಗೂ ಹತ್ತಿರದ ಅನೇಕ ರಣರಂಗಗಳಲ್ಲಿ ಮಹತ್ತ್ವದ ಜಯಗಳಿಸಿದ ಎರಡನೆಯ ಪುಲಿಕೇಶಿಯನ್ನು ಹೊಗಳುವ ಜೈನಕವಿ ರವಿಕೀರ್ತಿಯ ಐಹೊಳೆ ಪ್ರಶಸ್ತಿ (ಕ್ರಿ. ಶ. 634–35)[2] ಅನೇಕ ವಿಧದಲ್ಲಿ ಗಮನಾರ್ಹವಾದ ಶಾಸನ. ಉತ್ತರದೇಶದ ದೊರೆ ಹರ್ಷನ ಆಸ್ಥಾನವನ್ನು ಅಲಂಕರಿಸಿದ್ದ ಬಾಣಕವಿಯೊಡನೆ ಅವನಿಗೆ ಸಮಾನಸ್ಥಾನದಲ್ಲಿದ್ದ ಕರ್ಣಾಟಕದ ಪ್ರಶಸ್ತಿಲೇಖಕ ರವಿಕೀರ್ತಿಯನ್ನು ಹೋಲಿಸಿದರೆ, ಇವನು ಅವನಿಗೇನೂ ಕಡಮೆಯಲ್ಲವೆಂಬುದು ಗೊತ್ತಾಗುತ್ತದೆ. ಪದವಿನ್ಯಾಸದ ಹೃದಯಂಗಮತೆ, ಭಾವನಾಸಮೃದ್ಧಿ, ಛಂದೋರೂಪಗಳ ವೈವಿಧ್ಯ ಇವುಗಳಿಂದ ತಾನು ಶ್ರೇಷ್ಠಕವಿಗಳಾದ ಕಾಳಿದಾಸ ಮತ್ತು ಭಾರವಿ ಇವರುಗಳಿಗೆ ಸರಿಸಮಾನನೆಂದು ರವಿಕೀರ್ತಿ ಹೇಳಿಕೊಂಡಿದ್ದಾನೆ. ಈ ಹೇಳಿಕೆ ಕಾಳಿದಾಸ ಮತ್ತು ಭಾರವಿ ಇವರು ಇನ್ನೂ ಇತ್ತೀಚಿನ ಕಾಲದವರೆಂದು ಹೇಳುವ ಊಹಾಪೋಹಗಳನ್ನು ತೊಡೆದು ಹಾಕುವುದರಲ್ಲಿಯೂ ಈ ಕವಿಗಳ ಕಾಲದ ಕೊನೆಯ ಗಡಿಯನ್ನು ಗೊತ್ತುಮಾಡುವುದರಲ್ಲಿಯೂ ಉಳಿದೆಲ್ಲ ಪ್ರಮಾಣಗಳಿಗಿಂತಲೂ ಸಾಹಿತ್ಯ ಚರಿತ್ರಕಾರರಿಗೆ ಹೆಚ್ಚು ಸಹಾಯಕವಾಗಿದೆ. ಸಂಸ್ಕೃತ ಮಹಾ

ಕಾವ್ಯಮಾರ್ಗವು ಕನ್ಯಾಕುಬ್ಜದಲ್ಲಿದ್ದಂತೆಯೇ ಕರ್ಣಾಟಕದಲ್ಲಿಯೂ ಬಳಕೆಯಲ್ಲಿದ್ದಿತೆಂಬುದೂ ಜೈನಧರ್ಮವು ಇಲ್ಲಿ ಈಗಾಗಲೆ ನೆಲೆಯಾಗಿ ನಿಂತಿದ್ದಿತೆಂಬುದೂ ಐಹೊಳೆಶಾಸನದಿಂದ ಖಚಿತವಾಗಿ ಗೊತ್ತಾಗುತ್ತದೆ. ಜೈನಕವಿ ರವಿಕೀರ್ತಿ ತನ್ನ ಸಾಹಿತ್ಯಕೃತಿಯನ್ನು ಪ್ರಖ್ಯಾತ ಜೈನೇತರ ಮಹಾಕವಿಗಳ ಕೃತಿಗಳ ಮಾದರಿಯಲ್ಲಿ ರಚಿಸಿದನು. ಯಮಕ, ಪ್ರಾಸ, ಅನುಪ್ರಾಸಗಳು ಮೊದಲಾದ ಶಬ್ದಾಲಂಕಾರಗಳು, ವಿರೋಧಾಭಾಸ, ಅತಿಶಯೋಕ್ತಿ, ರೂಪಕ, ಮೊದಲಾದ ಅರ್ಥಾಲಂಕಾರಗಳು, ಇವುಗಳನ್ನೊಳಗೊಂಡು ಕಾವ್ಯಮೀಮಾಂಸೆಯ ಎಲ್ಲ ಮುಖ್ಯ ಪ್ರಕರಣಗಳ ಪೂರ್ಣಪರಿಚಯವನ್ನು ರವಿಕೀರ್ತಿ ಹೊಂದಿದ್ದನೆಂಬುದು ಅವನ ಈ ಖಂಡಕಾವ್ಯವನ್ನು ಪರಿಶೀಲಿಸಿದರೆ ತಿಳಿದುಬರುತ್ತದೆ.

ಈ ಕಾಲದ ಅತ್ಯಂತ ಗಮನಾರ್ಹವಾದ ಸಾಹಿತ್ಯಕೃತಿ ಚಂದ್ರಾದಿತ್ಯರಾಜನ ಪತ್ನಿಯೂ ಎರಡನೆಯ ಪುಲಿಕೇಶಿಯ ಸೊಸೆಯೂ ಆದ ರಾಣಿ ವಿಜಯಾ ಅಥವಾ ಬಿಜ್ಜಾ ಅಥವಾ ಬಿಜ್ಜಕಾ ಎಂಬ ಕವಯಿತ್ರಿ ಬರೆದ ಕೌಮುದೀಮಹೋತ್ಸವ ಎಂಬ ನಾಟಕ. ಜಲ್ಹಣನ ಕವಿತಾಸಂಕಲನದಲ್ಲಿ[3] ಸೇರಿಸಿರುವ ಈ ರಾಣಿಯ ಒಂದು ಶ್ಲೋಕದಲ್ಲಿ ಹೀಗೆ ಹೇಳಿದೆ:—

ಕಪ್ಪಾಗಿ ನೈದಿಲೆಯ ಹೂವಿನಂತೆ
ಮೆರೆವೆನ್ನನರಿಯದಾ ದಂಡಿಕವಿಯುಂ
ತಪ್ಪಾಗಿ ಬಣ್ಣಿಸಿದ ಸರಸತಿಯನು
ಪೂರ್ತಿ ಬಿಳುಪೇ ಅವಳು ನಿಜದಿನೆಂದು

ದಂಡಿಯ ಕಾವ್ಯಾದರ್ಶವನ್ನು ಕುರಿತ ಈ ಚುಚ್ಚುಮಾತು ಉಜ್ವಲವೂ ಮಾರ್ಮಿಕವೂ ಆಗಿದೆ. ಬೇರೆ ಬೇರೆ ಕಾವ್ಯಸಂಕಲನಗಳಲ್ಲಿ ಹಾಸ್ಯಚತುರಳಾದ ಈ ರಾಣಿಯವೆಂದು ಹಲವು ಪದ್ಯಗಳನು . ಉದ್ಧರಿಸಲಾಗಿದೆ[4] ಅವುಗಳಲ್ಲಿ ಕೆಲವನ್ನು ಹೀಗೆ ಭಾಷಾಂತರಿಸಬಹುದು :—

1. ಕನ್ನಡಿತಿ ವಿಜಯಾಂಕೆ ಜಯಶೀಲೆಯಾಗಿಹಳು
ಕಾಳಿದಾಸಾನಂತರದ ಕಾಲದಲ್ಲಿಂದು
ವೈದರ್ಭಿರೀತಿಯೊಳಗಣ ಸವಿಯದೆಲ್ಲವುಂ
ತನ್ನೊಳೇ ಮೈಗೂಡಿರೆರಡನೆಯ ಸರಸತಿಯು

2. ಉದ್ದಾಮಕವಿಗಳವರಿರುವರೀ ಮೂವರೇ
ಕಮಲಸಂಭವನೊಬ್ಬ (ಬ್ರಹ್ಮ)
ಸೈಕತೋದ್ಭವನೊಬ್ಬ (ವ್ಯಾಸ)
ವಲ್ಮೀಕದಿಂದುದಿಸಿದವನು ತಾನೊಬ್ಬ (ವಾಲ್ಮೀಕಿ)
ನಾನಿವಂದಿರನೆಲ್ಲ ವಂದಿಪೆನು ತಲೆಬಾಗಿ
ಆದರೀಗಡಿನ ಮತ್ತೊರ್ವರಾರಾದರುಂ
ತಂತಮ್ಮ ಪದ್ಯಕ್ಕೆ ತಂತಮ್ಮ ಗದ್ಯಕ್ಕೆ
ಆ ಕವಿ ಶ್ರೇಷ್ಠರ್ಗೆ ಸಮನಾದ ಮೇಲ್ಮೆಯನು
ಸಿದ್ಧಗೊಳಿಸಲು ಮುಂದೆ ಬಂದಂದು ನಾನಿರ್ಪೆ
ಕರ್ಣಾಟ ಸಾಮ್ರಾಜ್ಞಿ, ನನ್ನಡದ ಕಾಲನ್ನು
ರಭಸದಿಂದಿಡಲವರ ತಲೆಯ ಮೇಲೊತ್ತಿ.

ಈಗ **ಕೌಮುದೀ ಮಹೋತ್ಸವ** ನಾಟಕದತ್ತ ತಿರುಗೋಣ. ಇದನ್ನು ರಾಮಕೃಷ್ಣಕವಿ ತಮಗೆ ದೊರೆತ ಒಂದೇ ಒಂದು ಕೈಬರಹದ ಪ್ರತಿಯ ತುಂಡುಗಳಿಂದ ಸಂಪಾದಿಸಿದ್ದಾರೆ[5]. ಪ್ರಕಟಿಸಿರುವ ಭಾಗದಲ್ಲಿ, ಅಪೂರ್ಣವಾಗಿರುವ '...... ಕಾವ್ಯನಿಬದ್ಧಂ ನಾಟಕಂ' ಎಂಬ ಸಮಾಪ್ತಿ ವಾಕ್ಯಭಾಗ ಮಾತ್ರ ಇದೆ;

ಗ್ರಂಥಕರ್ತೃವಿನ ಹೆಸರು ಬಿಟ್ಟುಹೋಗಿದೆ. ಆದರೆ ಪ್ರಾಜ್ಞರಾದ ಸಂಪಾದಕರು ಇದು ವಿಜ್ಜಿಕಾ ಎಂಬಾಕೆಯದೆಂದು ಊಹಿಸಿದ್ದಾರೆ.

ಈ ನಾಟಕದ ಕಥೆಯನ್ನು ಪಾಟಲಿಪುತ್ರ ನಗರದಲ್ಲಿ ನಡೆದಂತೆ ನಿಯೋಜಿಸಲಾಗಿದೆ. ಕಲ್ಯಾಣ ವರ್ಮನು ಸೇನಾಪತಿ ಚಂಡಸೇನನಿಂದಾದ ತನ್ನ ತಂದೆಯ ಕೊಲೆಯ ಸೇಡುತೀರಿಸಿಕೊಂಡು ತಾನು ಕಳೆದುಕೊಂಡಿದ್ದ ಸಿಂಹಾಸನವನ್ನು ಮತ್ತೆ ಪಡೆದುಕೊಂಡದ್ದು ಈನಾಟಕದ ಮುಖ್ಯ ಕಥಾವಸ್ತು. ಕಳೆದುಕೊಂಡ ಸಿಂಹಾಸನವನ್ನು ಮತ್ತೆ ಪಡೆದುಕೊಳ್ಳಲು ಹೂಡಿದ ಮಂತ್ರಿಯ ಹಂಚಿಕೆಯು ತುಂಬ ಸ್ವಾರಸ್ಯವಾಗಿ ಚಿತ್ರಿತವಾಗಿದೆ. ರಾಜಕೀಯ ಕಥಾವಸ್ತುವಿನೊಂದಿಗೆ ಶೂರಸೇನದೇಶದ ರಾಜಕುಮಾರಿ ಕೀರ್ತಿಮತಿಯ ಪ್ರೇಮಕಥೆಯೂ ಸರಿಯಾಗಿ ಸೇರುವಂತೆ ಜೋಡಿಸಿದೆ. ಕಥಾನಾಯಕಿಯ ಪರಿವಾರದಲ್ಲಿ ಯೋಗಸಿದ್ಧಿ ಎಂಬ ಸನ್ಯಾಸಿನಿಯೂ ಇದ್ದಾಳೆ.

ಭವಭೂತಿಯನ್ನು ಅನುಕರಿಸಿರುವುದು ಕಂಡು ಬರುವುದೆಂಬ ಕಾರಣದಿಂದ ವಿಜ್ಜಿಕೆಯೇ ಈ ನಾಟಕ ಕರ್ತಳು ಎಂಬ 'ವಾದವನ್ನು ಕೆಲವು ಮಂದಿ ವಿದ್ವಾಂಸರು ಒಪ್ಪುವುದಿಲ್ಲ. ಹೀಗೆಯೇ ಸರಿ ಎಂದು ಈ ವಿಷಯವನ್ನು ನಿರ್ಧರಿಸಿ ಹೇಳುವುದು ಸಾಧ್ಯವಿಲ್ಲ[6].

ನಾವುಪರಿಶೀಲಿಸುತ್ತಿರುವ ಈ ಕಾಲದ ಶಾಸನವೊಂದರಲ್ಲಿ ಬೇರೆ ಬೇರೆ ನಾಟ್ಯಪಂಥಗಳ ಪ್ರತಿಯಾಗಿ ಭರತನಾಟ್ಯ ಸಂಪ್ರದಾಯವು ಸ್ಥಾಪಿಸಿದ ಮೇಲ್ಮೆಯನ್ನು ಹೊಗಳುವ ಅಚಲದ ಎಂಬಾತನ ಎರಡು ಆರ್ಯಾವೃತ್ತಗಳಿವೆ. ಈ ಪದ್ಯಗಳು ವಿಶೇಷ ಗಮನಾರ್ಹವಾಗಿವೆ. ಏಕೆಂದರೆ, ಈ ಪದ್ಯಗಳಲ್ಲಿ ಸಾಹಿತ್ಯಗುಣವಿರುವುದಷ್ಟೇ ಅಲ್ಲದೆ, ಚಾಲುಕ್ಯರಾಜರ ಆಸ್ಥಾನಗಳಲ್ಲಿ ಅನೇಕ ನಾಟ್ಯ ಸಂಪ್ರದಾಯಗಳು ಪೋಷಿಸಲ್ಪಡುತ್ತಿದ್ದವೆಂಬುದನ್ನು ಖಚಿತವಾಗಿ ನಿರ್ದೇಶಿಸಲಾಗಿದೆ. ಈ ವಿಷಯವು ಸಂಸ್ಕೃತ ನೃತ್ಯನಾಟಕದ ಚರಿತ್ರೆಯಲ್ಲಿ ಮರೆತು ಹೋದ ಒಂದು ಅಧ್ಯಾಯಕ್ಕೆ ಗಮನಸೆಳೆಯುತ್ತದೆ[7].

ಹಾಗೆಯೇ ಕ್ರಿ.ಶ. 729ರ ಶಾಸನವೊಂದರಲ್ಲಿ ವಿಜಯಾದಿತ್ಯರಾಜನು ರಕ್ತಪುರದಲ್ಲಿ (ಲಕ್ಷ್ಮೇಶ್ವರ) ಬೀಡು ಬಿಟ್ಟಿದ್ದಾಗ ಸಂಸ್ಕೃತ ವ್ಯಾಕರಣ ಪರಂಪರೆಗಳಲ್ಲೊಂದಾದ ಪೂಜ್ಯಪಾದನ **ಜೈನೇಂದ್ರವ್ಯಾಕರಣದ** ಉಪಾಧ್ಯಾಯರಿಗೆ ಒಂದು ಗ್ರಾಮವನ್ನು ದಾನವಾಗಿ ಕೊಟ್ಟ ವಿಷಯದ ಪ್ರಸ್ತಾಪವಿದೆ[8]. ಸಂಸ್ಕೃತ ವ್ಯಾಕರಣ ಶಾಸ್ತ್ರವನ್ನು ಎಷ್ಟರ ಮಟ್ಟಿಗೆ ಶ್ರದ್ಧೆಯಿಂದ ಅಭ್ಯಾಸಮಾಡುತ್ತಿದ್ದರೆಂಬುದನ್ನೂ ಬೇರೆ ಬೇರೆ ಪರಂಪರೆಗಳಿಗೆ ಅರಸರು ಎಷ್ಟರ ಮಟ್ಟಿನ ಉತ್ತೇಜನ ಕೊಡುತ್ತಿದ್ದರೆಂಬುದನ್ನೂ ಇದು ಸೂಚಿಸುತ್ತದೆ. ಪೂಜ್ಯಪಾದ ದೇವನಂದಿಯು ತನ್ನ ವ್ಯಾಕರಣವನ್ನು ಬರೆದದ್ದು ಗಂಗ ದುರ್ವಿನೀತನ ಆಳಿಕೆಯಲ್ಲಲ್ಲ, ಕ್ರಿ.ಶ. 678ರಲ್ಲಿ ಮೊದಲನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಎಂದು ಕೆಲವು ಪಂಡಿತರು ಅಭಿಪ್ರಾಯ ಪಡುತ್ತಾರೆ[9]. ಪಾಣಿನಿಯ **ಸೂತ್ರಗಳು** ಮತ್ತು ಕಾತ್ಯಾಯನನ **ವಾರ್ತಿಕದಲ್ಲಿ** ಅಡಕವಾಗಿರುವ ಎಲ್ಲ ವಿಷಯಗಳನ್ನೂ ಅನಾವಶ್ಯಕವಾದ ವಿವರಣೆ ಹಾಗೂ ಪದಬಾಹುಳ್ಯವಿಲ್ಲದಂತೆ ಸಂಗ್ರಹವಾಗಿ ವಿಶ್ವಾಸಾರ್ಹವಾಗಿ ನಿರೂಪಿಸುವ ಒಂದು ಪ್ರಯತ್ನವನ್ನು ಈ ಗ್ರಂಥದಲ್ಲಿ ಕಾಣುತ್ತೇವೆ.

ಜೈನದರ್ಶನ ಚರಿತ್ರೆಯಲ್ಲಿಯೂ ಪೂಜ್ಯಪಾದನ ಹೆಸರು ಪುರಸ್ಕೃತವಾಗಿದೆ. ಉಮಾಸ್ವಾತಿಯ (ಸುಮಾರು ಕ್ರಿ. ಶ. 200) ಶ್ರೇಷ್ಠಕೃತಿ **ತತ್ತ್ವಾರ್ಥಸೂತ್ರಕ್ಕೆ** ಕರ್ನಾಟಕದ ಅನೇಕ ವಿದ್ವಾಂಸರು ಪ್ರಸಿದ್ಧ ಭಾಷ್ಯಗಳನ್ನು ಬರೆದಿದ್ದಾರೆ. ಇವರಲ್ಲಿ ಸಮಂತಭದ್ರನು ಮೊದಲನೆಯವನು. ಈತನ **ಗಂಧಹಸ್ತಿ ಮಹಾಭಾಷ್ಯ** ಎಂಬ ಬೃಹತ್ಕೃತಿ ಉಪಲಬ್ಧವಾಗಿಲ್ಲ. ಉಮಾಸ್ವಾತಿಯ ಗ್ರಂಥಕ್ಕೆ ಪೂಜ್ಯಪಾದನು ಬರೆದ ಭಾಷ್ಯದ ಹೆಸರು **ಸರ್ವಾರ್ಥಸಿದ್ಧಿ**. ಶ್ರೀವರ್ಧದೇವ ಅಥವಾ ತುಂಬುಲೂರಾಚಾರ್ಯನು ಇದೇ ಕೃತಿಗೆ

**ಚೂಡಾಮಣಿಯೆಂಬ** ಚಿರಸ್ಮರಣೀಯವಾದ ಬೃಹದ್ವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದನೆಂದೂ ಈತನು ದಂಡಿಗಿಂತಲೂ ಶ್ರೇಷ್ಠನೆಂದೂ ವಿಮರ್ಶಕರು ಹೊಗಳಿದರೆಂದು ಕನ್ನಡ ಶಾಸನಗಳಲ್ಲಿ ಉಲ್ಲೇಖಗಳಿವೆ. ಪ್ರಸಿದ್ಧ ತಾರ್ಕಿಕನಾದ ಅಕಳಂಕನು ಜೈನದರ್ಶನ ಮತ್ತು ತರ್ಕಶಾಸ್ತ್ರಗಳ ನಾಯಕ ಕೃತಿಯಾದ **ತತ್ತ್ವಾರ್ಥರಾಜವಾರ್ತಿಕ**ವನ್ನು ಈ ಯುಗದ ಕೊನೆಯ ಭಾಗದಲ್ಲಿ ರಚಿಸಿದನು[10]. ಜೈನ ತರ್ಕಶಾಸ್ತ್ರದ ಚರಿತ್ರೆಯಲ್ಲಿ ಅಕಳಂಕನ ಹೆಸರು ಸಮಂತಭದ್ರನಿಗೆ ಮಾತ್ರ ಎರಡನೆಯದಾಗಿ ಉತ್ಕೃಷ್ಟಸ್ಥಾನವನ್ನು ಗಳಿಸಿದೆ. ಆತನು ಪ್ರಸಿದ್ಧವಾಗ್ಮಿಯೂ ಶ್ರೇಷ್ಠವಿನ್ಯಾಸಕನೂ ಆಗಿದ್ದನು. ಅವನು ಅನೇಕ ಬೌದ್ಧ ಮತ್ತು ವೈದಿಕವಾದಿಗಳನ್ನು ವಾದದಲ್ಲಿ ಸೋಲಿಸಿದನು. ಬೌದ್ಧತರ್ಕಶಾಸ್ತ್ರದಲ್ಲಿ ಸುಪ್ರಸಿದ್ಧನಾದ ಧರ್ಮಕೀರ್ತಿಯನ್ನು ನೆನಪಿಗೆ ತರುವಂತಹ ಕೃತಿಗಳನ್ನು ರಚಿಸಿದನು.

ಅಕಳಂಕನ ಕಾಲವನ್ನು ಹೆಚ್ಚು ಖಚಿತವಾಗಿ ಗೊತ್ತುಮಾಡಬಹುದು. ಏಕೆಂದರೆ ಕ್ರಿ. ಶ. 676ರ **ನಿಶಿತಚೂರ್ಣಿ** ಗ್ರಂಥಕರ್ತನು ಇವನ ಹೆಸರನ್ನಾಗಲೆ ನಿರ್ದೇಶಿಸಿದ್ದಾನೆ[11]. ಇದರಿಂದ ಅಕಳಂಕನು ಟೀಕಿಸಿರುವ ಹಲವು ವೈದಿಕ ಹಾಗೂ ಬೌದ್ಧ ದಾರ್ಶನಿಕರ ಕಾಲವನ್ನು ಗೊತ್ತುಮಾಡಲು ಪರ್ಯಾಯ ವಾಗಿ ಸಹಾಯವಾಗುತ್ತದೆ. ಇವರಲ್ಲಿ ಮುಖ್ಯರಾದವರೆಂದರೆ ಸಾಂಪ್ರದಾಯಿಕ ಮೀಮಾಂಸಾದರ್ಶನದ ಪ್ರತಿಪಾದಕನಾದ ಕುಮಾರಿಲಭಟ್ಟ ಮತ್ತು ಬೌದ್ಧ ಅಥವಾ **ಸೌತ್ರಾಂತಿಕ** ಅಥವಾ **ಸ್ವತಂತ್ರ ವಿಜ್ಞಾನ** ಮತದ ಪ್ರತಿನಿಧಿಗಳಾದ ದಿಙ್ನಾಗ ಮತ್ತು ಧರ್ಮಕೀರ್ತಿ. ಈ ಕಾಲದ ಶಾಸನಗಳ ಅಭ್ಯಾಸದಿಂದ ಬ್ರಾಹ್ಮಣಧರ್ಮವು ವೇದಗಳನ್ನೂ ವೈದಿಕ ಕರ್ಮಗಳನ್ನೂ ಉಳಿಸಿಕೊಳ್ಳುವುದರಲ್ಲಿ ನಿರತವಾಗಿದ್ದಿತೆಂಬುದು ಗೊತ್ತಾಗುತ್ತದೆ. ಮೀಮಾಂಸೆಯ ಕುರಿತ ಹಲವು ಗ್ರಂಥಗಳನ್ನು—ಇವು ಈಗ ಉಪಲಬ್ಧ ವಾಗಿಲ್ಲದಿದ್ದರೂ—ಕರ್ಣಾಟಕದ ವಿದ್ವಾಂಸರು ರಚಿಸಿದರೆಂದು ಸೂಚಿಸುವುದು ಆಧಾರ ರಹಿತವಾದ ಊಹೆಯಾಗಲಾರದು.

ಈಗ ನಾವು ಕರ್ಣಾಟಕದ ಜನಸಾಮಾನ್ಯರ ಮತಧರ್ಮಗಳನ್ನು ಪರಿಶೀಲಿಸೋಣ. ಶಾಸನದಿಂದಲೂ ಸಾಹಿತ್ಯದಿಂದಲೂ ವ್ಯಕ್ತವಾಗುವ ಒಂದು ಸಂಗತಿ ಎಂದರೆ, ಒಂದಲ್ಲ ಒಂದು ರೂಪದಲ್ಲಿ ಲಾಕುಳ, ಕಾಳಾಮುಖ, ಮಹಾವ್ರತ ಹಾಗೂ ಶೈವಸಿದ್ಧಾಂತ ಮೊದಲಾದ ಹಲವು ಶೈವ ಪಂಥಗಳು ಪ್ರಚಲಿತ ವಾಗಿದ್ದವೆಂಬುದು[12]. ಇದರೊಂದಿಗೆ ಹಲವು ಶೈವಾಗಮಗಳ ಉಗಮವನ್ನು ಪರಿಗಣಿಸಿದರೆ[13] ತುಂಬ ದೊಡ್ಡವೂ ಬಹುಸಂಖ್ಯಾಕವೂ ಆದ ಈ ಆಗಮಗಳಲ್ಲಿ ಕೆಲವಾದರೂ ಕರ್ಣಾಟಕದಲ್ಲಿ ಈ ಕಾಲದಲ್ಲಿ ಹುಟ್ಟಿದವೆಂಬ ನಿರ್ಣಯಕ್ಕೆ ಪುಷ್ಟಿ ದೊರೆಯುತ್ತದೆ.

ಶೈವಾಗಮಧರ್ಮಕ್ಕೆ ಅನ್ವಯಿಸುವ ಈ ತಥ್ಯಾಂಶವು ವೈಷ್ಣವಾಗಮ ಧರ್ಮಕ್ಕೂ ಅಷ್ಟೇಮಟ್ಟಿಗೆ ಅನ್ವಯಿಸುತ್ತದೆ. ಶ್ರೇಡರ್ ಅವರು ಪಾಂಚರಾತ್ರ ಪಂಥದ ಅನೇಕ **ಸಂಹಿತೆ**ಗಳನ್ನು "ದಕ್ಷಿಣಭಾರತ ಸಂಹಿತೆ"ಗಳೆಂದು ಹೆಸರಿಸುವುದೇ ಅಲ್ಲದೆ, ಇವುಗಳ ಕಾಲವನ್ನು ಸುಮಾರಾಗಿ ಶಂಕರರ ಸಮಕಾಲವೆಂದೂ ಹೇಳಿದ್ದಾರೆ[14].

ಕರ್ಣಾಟಕದ ಜನಸಾಮಾನ್ಯರ ಮತಧರ್ಮವು ಆಸ್ತಿಕವಾಗಿತ್ತೆಂಬುದೂ ಶಿವ, ವಿಷ್ಣು, ಗಣಪತಿ, ಶಕ್ತಿ, ಸ್ಕಂದ, ಸೂರ್ಯ ಮೊದಲಾದ ದೇವರುಗಳ ಆರಾಧನೆಯನ್ನು ಒಳಗೊಂಡಿತ್ತೆಂಬುದೂ ಶಂಕರರು ಮತ್ತು **ಮತ್ತವಿಲಾಸ** ನಾಟಕ ಕರ್ತೃ ಪಲ್ಲವದೊರೆ ಮಹೇಂದ್ರ ವಿಕ್ರಮವರ್ಮನೂ ಈ ಆಸ್ತಿಕ ಮತ ಗಳನ್ನು ನಿರ್ದೇಶಿಸಿರುವುದರಿಂದ ಸ್ಥಿರಪಡುತ್ತದೆ.

ವೈಷ್ಣವ ಪಂಥದ ಬೃಹದ್ಗ್ರಂಥ ಭಾಗವತ ಪುರಾಣವು ಇಂದಿಗೂ ಜನಪ್ರಿಯವಾಗಿದೆ. ಈ

ಕಾಲದಲ್ಲಿ ಹಲವು ಹೊಸ ಪುರಾಣಗಳ ರಚನೆಯಾಯಿತೆಂದೂ ಅದರಲ್ಲಿ ಬರುವ ಕಾವೇರಿಯ ಉಲ್ಲೇಖ ಮೊದಲಾದ ಕಾರಣಗಳಿಂದ ಭಾಗವತ ಪುರಾಣವು ದಕ್ಷಿಣ ಭಾರತದಲ್ಲಿ ಹುಟ್ಟಿದ ಕುರುಹುಗಳಿವೆಯೆಂದೂ ವಿದ್ವಾಂಸರು ಒಪ್ಪುತ್ತಾರೆ. ಇದು ಇನ್ನೂ ಇತ್ತೀಚಿನ ಕೃತಿಯೆಂದು ಮೊದಮೊದಲು ಭಾವಿಸಿದ್ದರೂ ಈಚೆಗೆ ನಡೆದಿರುವ ಅನ್ವೇಷಣೆಗಳಿಂದ ಇದು ಹತ್ತನೆಯ ಶತಮಾನದಲ್ಲಿ (ಯಾಮುನಾಚಾರ್ಯರ ಕಾಲದಲ್ಲಿ) ಪ್ರಖ್ಯಾತವಾಗಿತ್ತೆಂದೂ 7ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತೆಂದೂ ತಿಳಿದುಬಂದಿದೆ[15]. ಈ ಸಂದರ್ಭದಲ್ಲಿ ಕರ್ಣಾಟಕವು ಭಾಗವತ ಪುರಾಣದ ಜನ್ಮಸ್ಥಳವೆಂದು ಹೇಳಿದರೆ ತಪ್ಪೆನಿಸಲಾರದು.

## ಅಡಿಟಿಪ್ಪಣಿಗಳು

1. I.A., XIX, P. 16.
2. I.A., V, P. 67.
3. ಸೂಕ್ತಿ ಮುಕ್ತಾವಲಿ, ಪುಟ. 47.
4. ಕಾಣೆ: History of Sanskrit Poetics, Pp. 128 ff.
5. ಸಂಪಾದಕರು : ಎಂ. ರಾಮಕೃಷ್ಣ ಕವಿ ಹಾಗೂ ಎಸ್. ಕೆ. ರಾಮನಾಥ ಶಾಸ್ತ್ರಿ, ಮದರಾಸು, 1929.
6. De : History of Sanskrit Literature, P. 477.
7. Yazdani : History of the Deccan, Vol. I, Pp. 477.
8. ಕೀಲ್ ಹಾರ್ನ್ ಅವರ ಪಟ್ಟಿ ನಂ. 26. ಕೆಲವು ಪಂಡಿತರು ಇದು ಕೃತಕಶಾಸನವೆಂದು ಅಭಿಪ್ರಾಯಪಡುತ್ತಾರೆ. The Classica! Age, P. 246 Note 4.
9. See the Classical Age, p. 320.
10. ತತ್ತ್ವಾರ್ಥಸೂತ್ರ, ಮೈಸೂರು ಮುದ್ರಣ, ಪೀಠಿಕೆ, ಪುಟ 5.
11. ನ್ಯಾಯ ವಿನಿಶ್ಚಯ ವಿವರಣ : ಭಾರತೀಯ ಜ್ಞಾನಪೀಠದ ಮುದ್ರಣ, ಮುನ್ನುಡಿ, ಪುಟ 57.
12. ನಂದೀಮಠ: A Handbook of Veerasaivism, P. 8.
13. ನಂದೀಮಠ: Saiva Agamas, Journal of the Karnataka University, 1962-64.
14. Introduction to the Pancharathra, P. 16.
15. ಬಿ.ಎನ್.ಕೆ. ಶರ್ಮ: A.B.O.R.I, Vol. XIV, P, 218.

ಮೂಲಲೇಖಕರು : ಡಾ॥ ಕೆ. ಕೃಷ್ಣಮೂರ್ತಿ
ಅನುವಾದಕರು : ಶ್ರೀ ಬಿ. ರಾಮಸ್ವಾಮಿ

# ಅಧ್ಯಾಯ 8

## ಮಳಖೇಡದ ರಾಷ್ಟ್ರಕೂಟರ ರಾಜಕೀಯ ಚರಿತ್ರೆ

ಚಾಲುಕ್ಯರಲ್ಲಿ ಕೊನೆಯ ದೊರೆ, ಇಮ್ಮಡಿ ಕೀರ್ತಿವರ್ಮನು ರಾಷ್ಟ್ರಕೂಟವಂಶದ ದಂತಿದುರ್ಗನಿಂದ ಸೋಲಿಸಲ್ಪಟ್ಟು, ಬಾದಾಮಿಯ ಚಾಲುಕ್ಯರ ಪ್ರಭುತ್ವವು ಸುಮಾರು ಕ್ರಿ.ಶ. 758ರಲ್ಲಿ ಹೇಗೆ ಕಡೆಗಂಡಿತೆಂದು ನಾವು ಹಿಂದಿನ ಪರಿಚ್ಛೇದದಲ್ಲಿ ನೋಡಿದ್ದೇವೆ.

ಈಗ ನಾವು ಮಳಖೇಡದ ರಾಷ್ಟ್ರಕೂಟರ ರಾಜಕೀಯ ಚರಿತ್ರೆಯನ್ನು ಪರಿಶೀಲಿಸೋಣ. ಕರ್ಣಾಟಕವನ್ನಾಳಿದ ರಾಜವಂಶಗಳಲ್ಲಿ ಪ್ರಾಯಶಃ ರಾಷ್ಟ್ರಕೂಟರೇ ಅಗ್ಗಳೆಯರು. ಅವರ ಆಳಿಕೆಗೆ ಸೇರಿದ್ದಷ್ಟು ಪ್ರಾಂತ್ಯವನ್ನು ಅವರ ಹಿಂದೆ ಅಥವಾ ಅವರ ಅನಂತರ ಆಳಿದ ಮತ್ತಾವ ಕರ್ಣಾಟಕ ರಾಜವಂಶವೂ ಆಳಲಿಲ್ಲ.

'ರಾಷ್ಟ್ರ' ಮತ್ತು 'ಕೂಟ', ಈ ಎರಡು ಪದಗಳು ಸೇರಿ ರಾಷ್ಟ್ರಕೂಟ, ಎಂದಾಗಿದೆ. ರಾಷ್ಟ್ರಕೂಟ ಎಂದರೆ, ಒಂದು ಪ್ರಾಂತ್ಯದ ಅಧಿಪತಿ. ಮೂಲತಃ ಅಧಿಕಾರ ಸೂಚಕವಾಗಿದ್ದ ಈ ಪದ, ಕಾಲಕ್ರಮೇಣ ಒಂದು ವಂಶಕ್ಕೇ ಅನ್ವಯಿಸಿತು. ಮತ್ತೆ, 'ರಾಷ್ಟ್ರ' ಎಂಬ ಪದದ ಚರಿತ್ರೆ ಬಹು ಹಿಂದಕ್ಕೆ, ಪುರಾತನಕಾಲಕ್ಕೆ ಹೋಗುತ್ತದೆ. ಅದು ಒಂದು ರಾಜ್ಯ, ಸಂಸ್ಥಾನವನ್ನಾಗಲಿ ಅಥವಾ ಒಂದು ಪ್ರಾದೇಶಿಕ ಹಾಗೂ ಆಡಳಿತದ ಒಂದು ಸಾಮಾನ್ಯಘಟಕವನ್ನಾಗಲಿ ನಿರ್ದೇಶಿಸುತ್ತಿತ್ತು. ಈ ಘಟಕ ಸಣ್ಣದಿರಬಹುದು, ಇಲ್ಲವೆ ದೊಡ್ಡದಾಗಿರಬಹುದು. ಒಂದು ರಾಷ್ಟ್ರದ ಪಾಲಕನೆ ರಾಷ್ಟ್ರಿಕ. ಇದರ ಪ್ರಾಕೃತ ರೂಪ ರಠಿ ಅಥವಾ ರಾಠಿಕ, ಎಂದಾಯಿತು. ಇಂಥ ಅಧಿಕಾರಿಗಳು ಮೌರ್ಯರ ಕಾಲದಿಂದಲೂ ಇದ್ದ ಹಾಗೆ ತಿಳಿಯಬರುತ್ತದೆ. ಈ ಅಧಿಕಾರಸೂಚಕ ಪದಗಳು ಉತ್ತರೋತ್ತರ ವಂಶದ ಹೆಸರುಗಳಾಗಿಯಾಗಲಿ, ರಾಷ್ಟ್ರಕೂಟರೆಂಬ ಬಿರುದುಗಳಾಗಿಯಾಗಲಿ ನೆಲೆಗೊಂಡವು.

ಹಿಂದಿನ ಚಾರಿತ್ರಿಕ ಕಾಲದಲ್ಲಿ ಹಲವಾರು ರಾಷ್ಟ್ರಕೂಟ ವಂಶಗಳು ಉತ್ತರ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ವರ್ಧಿಸಿದವು. ಇವುಗಳಲ್ಲೆಲ್ಲ ಹೆಚ್ಚು ಘನತೆ ಪಡೆದವರು, ಮಳಖೇಡದ ರಾಷ್ಟ್ರಕೂಟರು. ಇವರು ಭರತಖಂಡಕ್ಕೇ ಮುಖ್ಯ ಸಾಮ್ರಾಟವಂಶದವರಾಗಿದ್ದಾರೆ. ಈ ರಾಜವಂಶಕ್ಕೆ ತನ್ನ ಹೆಸರು ಬಂದುದು ಅದರ ಕೀರ್ತಿವೆತ್ತ ರಾಜಧಾನಿಯಾದ ಮಳಖೇಡ (ಮಾನ್ಯಖೇಟ) ದಿಂದ. ಇದು ಈಗಿನ ಮೈಸೂರು ರಾಜ್ಯಕ್ಕೆ ಸೇರಿದ ಗುಲ್ಬರ್ಗ ಜಿಲ್ಲೆಯಲ್ಲಿದೆ.

ಈ ರಾಜವಂಶದ ಕಾಗದ ಪತ್ರಗಳಲ್ಲಿ 'ಲಟ್ಟನೂರ (ಅಥವಾ ಲಟ್ಟಲೂರ) ಪುರವರಾಧೀಶ್ವರ' ಎಂಬ ಗುಣವಾಚಕವಿದೆ. ಇದರ ಅರ್ಥ, "ಮುಖ್ಯಪಟ್ಟಣ ಲಾಟನೂರಿನ (ಅಥವಾ ಲಟ್ಟಲೂರಿನ) ಪ್ರಭು" ಎಂದು. ಆ ಪಟ್ಟಣ ಈ ವಂಶದ ಪೂರ್ವಿಕರ ಸ್ಥಳವಾಗಿದ್ದಿತು ಎಂಬುದನ್ನು ಇದು ಸೂಚಿಸುತ್ತದೆ.ಲಟ್ಟ ಎಂಬ ಪದದಿಂದ ಲಟ್ಟನೂರ್ ಬಂದಿದೆ. ಮತ್ತೆ ಲಟ್ಟ ಎಂಬ ಪದ ರಟ್ಟ ಎಂಬುದರ ಇನ್ನೊಂದು ರೂಪ.

ರಟ್ಟ ಎಂಬುದು ' ರಾಷ್ಟ್ರಕೂಟ ' ಪದದ ಸಂಕ್ಷಿಪ್ತರೂಪ. ಲಟ್ಟನ ಸ್ಥಳ ಎಂಬ ಅರ್ಥ ಬರುವ ಲಟ್ಟನೂರು ನಮ್ಮ ಕಾಲದ ಲಾಟೂರೇ ಆಗಿದೆ. ಇದು ಈಗಿನ ಮಹಾರಾಷ್ಟ್ರ ಸಂಸ್ಥಾನದ ಉಸ್ಮಾನಾಬಾದ್ ಜಿಲ್ಲೆಯಲ್ಲಿದ್ದು, ಆ ಪದದ ವ್ಯುತ್ಪತ್ತಿಯ ಪರಿಶೀಲನೆಯಿಂದ ಇದು ಒಂದು ಕನ್ನಡ ಸ್ಥಲವಾಚಿಯಾಗಿದೆ ಎಂಬುದು ಕಂಡುಬರುತ್ತದೆ. ಈ ಪ್ರದೇಶ ಈಗ ಮಹಾರಾಷ್ಟ್ರದಲ್ಲಿದ್ದರೂ, ಹಿಂದೆ ಕರ್ಣಾಟಕದ ಎಲ್ಲೆಕಟ್ಟಾಗಿದ್ದಿತು.

ತಮ್ಮ ಪೂರ್ವಿಕರ ಸ್ಥಳ ಲಾಟೂರಿನಿಂದ ಹಿಂದಿನ ಈ ವಂಶಜರು ಸುಮಾರು ಕ್ರಿ.ಶ. ಏಳನೆಯ ಶತಕದ ಆರಂಭದಲ್ಲಿ ಉತ್ತರಕ್ಕೆ ವಲಸೆ ಹೊರಟು ಮಧ್ಯಭಾರತದಲ್ಲಿ ನೆಲಸಿದರು. ಹಿಂದೆ ತಿಳಿಯಪಡಿಸಿವಂತೆ, ರಾಷ್ಟ್ರಕೂಟರು ಕರ್ಣಾಟಕ ಪ್ರಾಂತ್ಯದಿಂದ ಬಂದವರು. ಅವರ ತಾಯ್ನುಡಿ ಕನ್ನಡವಿದ್ದಿರಬೇಕು. ವಿದರ್ಭದ ಮತ್ತು ಕನ್ನಡ ಭಾಷೆಯನ್ನಾಡದ ಬೇರೆ ಪ್ರಾಂತ್ಯಗಳ ಸಂಪರ್ಕ ಇವರಿಗೆ ಆ ಬಳಿಕ ಬಂದರೂ, ತಮ್ಮ ಮೂಲ ಕನ್ನಡ ಸಂಪ್ರದಾಯಗಳನ್ನು ಇವರು ಉಳಿಸಿಕೊಂಡರು. ಇದು ಕೆಳಗಿನ ಸಂಗತಿಗಳಿಂದ ಸ್ಪಷ್ಟ ಪಡುತ್ತದೆ : ಅವರ ಆಸ್ಥಾನದಲ್ಲಿ ಕನ್ನಡ ಸಾಹಿತ್ಯಕ್ಕೆ ಉದಾರ ಪೋಷಣೆ ದೊರೆಯಿತು. ಈ ವಂಶದ ನೃಪತುಂಗ ಮೊದಲನೆಯ ಅಮೋಘವರ್ಷನು ಕನ್ನಡದ ಮೊತ್ತಮೊದಲಿನ ಅಲಂಕಾರ ಗ್ರಂಥವಾದ ಕವಿರಾಜಮಾರ್ಗದ ಕರ್ತೃವೆಂದು ಪರಿಗಣಿಸಲ್ಪಟ್ಟಿದ್ದಾನೆ. ಈ ಮನೆತನದ ಶಾಸನಗಳು ಹೆಚ್ಚಾಗಿ ದಾಕ್ಷಿಣಾತ್ಯ ಅಥವಾ ಪ್ರಾಚೀನ ಕನ್ನಡ ಲಿಪಿಗಳಲ್ಲಿವೆ. ಅಚ್ಚಗನ್ನಡದಲ್ಲಿ ರಚಿಸಲಾದ ಮುಮ್ಮಡಿ ಕೃಷ್ಣನ ಉಲ್ಲೇಖನವೊಂದು ಜಬ್ಬಲ್‌ಪುರದ ಬಳಿ ಇರುವ ಜೂರದಲ್ಲಿ ಸಿಕ್ಕಿದೆ. ದೂರದ ಗುಜರಾತಿನಲ್ಲಿ ಆಳುತ್ತಿದ್ದ ಈ ವಂಶದ ಜ್ಞಾತಿಗಳು ತಮ್ಮ ಕಾಗದ ಪತ್ರಗಳಲ್ಲಿ ಕೈಬರಹಕ್ಕಾಗಿ ಬಳಸುತ್ತಿದ್ದ ಲಿಪಿ ಕನ್ನಡದ ಲಿಪಿಯೇ ಹೊರತು ಪ್ರಾದೇಶಿಕ ಲಿಪಿಯಲ್ಲ. ಇಷ್ಟೊಂದು ನಿರ್ವಿವಾದ ಸಾಕ್ಷ್ಯಾಧಾರಗಳಿಂದ ವಿಶದಪಟ್ಟ ತಿಳಿವಳಿಕೆಯಿಂದ ಬರ್ನೆಲ್, ವೈದ್ಯ ಮತ್ತು ಫ್ಲೀಟರಂತಹ ಪಂಡಿತರು ಈ ಮೊದಲು ಪ್ರತಿಪಾದಿಸಿರುವ ರಾಷ್ಟ್ರಕೂಟರು ತೆಲುಗು, ಮರಾಠ ಅಥವಾ ರಜಪೂತ ವಂಶದವರೆಂಬ ತಪ್ಪು ತಿಳಿವಳಿಕೆಯ ವಾದಗಳಿಗೆ ಸ್ವಲ್ಪವಾದರೂ ಸಮರ್ಥನೆ ದೊರೆಯದು.

ರಾಷ್ಟ್ರಕೂಟರು ತಾವು ಯದುವಂಶದಿಂದ ಬಂದವರು ಎಂದುಕೊಳ್ಳುತ್ತಾರೆ. ಆದರೆ ಆ ವಂಶ ತಮ್ಮದೆಂದು ಹೇಳಿಕೊಳ್ಳುವ ಈ ವಾದ ನಮ್ಮ ಅವಗಾಹನೆಗೆ ಬರುವುದು ಕೆಲವು ತಲೆಮಾರುಗಳು ಸಂದ ಅನಂತರವೆ; ಅದೂ ತಮ್ಮ ಮನೆತನವು ಸುಭದ್ರವಾಗಿ ನಿಂತ ಮೇಲೆಯೇ. ಕೆಲವು ಕಾಗದ ಪತ್ರಗಳಲ್ಲಿ ಈ ಮನೆತನ ತುಂಗ ಮತ್ತು ರಟ್ಟ ಎಂಬ ಪೂರ್ವಜರಿಂದ ಉದ್ಭವವಾದ ಹಾಗೆ ತಿಳಿಸಲಾಗಿದೆ. ಇದು ಪ್ರಾಯಶಃ ಒಂದು ಊಹೆ. ಊಹೆಯ ಉದ್ದೇಶ, ಅವರ ' ಶುಭತುಂಗ ' ಮತ್ತು ' ನೃಪತುಂಗ ' ಎಂಬ ಬಿರುದುಗಳ ಅಂತ್ಯ ಪದ ' ತುಂಗ ' ಕ್ಕೆ ವಿವರಣೆ ಕೊಡುವುದು, ಹಾಗೂ ರಟ್ಟ ಎಂಬ ಹೆಸರಿಗೆ ಒಂದು ಸಮರ್ಥನೆ ಕೊಡುವುದೇ ಆಗಿತ್ತು. ರಟ್ಟ ಎಂಬ ಅಭಿಧಾನ ರಾಷ್ಟ್ರಕೂಟ ಪದದ ಸಂಕ್ಷೇಪವಾಗಿದ್ದು, ಈ ವೇಳೆಗೆ ರೂಢಿಗೆ ಬಂದಿದ್ದಿತು. ಈ ರಾಷ್ಟ್ರಕೂಟ ರಾಜವಂಶದ ಲಾಂಛನವು ವಿಷ್ಣುವಿನ ವಾಹನವಾದ ಆದಿಗರುಡ. ಈ ಲಾಂಛನ ಇವರ ತಾಮ್ರಪತ್ರದ ಸನ್ನದುಗಳಲ್ಲಿ ಎದ್ದು ಕಾಣುತ್ತಿತ್ತು. ಕೆಲವು ವೇಳೆ ಈ ಚಿತ್ರಕ್ಕೆ ಬದಲು ಯೋಗದಲ್ಲಿರುವ ಶಿವನ ಪ್ರತಿಮೆಯನ್ನು ಕೆತ್ತಲಾಗಿದೆ. ಅವರ ಕಾಗದ ಪತ್ರಗಳ ಆರಂಭದಲ್ಲಿ ಈ ಇಬ್ಬರು ದೇವರುಗಳಿಗೂ ಪ್ರಾರ್ಥನೆ ಸಲ್ಲಿಸಲಾಗಿದೆ. ಅದು ಈ ಅರಸರ ಧಾರ್ಮಿಕದ ಧಾರಾಳತೆಯನ್ನು ತೋರಿಸುತ್ತದೆ. ಈ ರಾಜವಂಶದ ಈ ಮನೋವೈಶಾಲ್ಯವು ಜೈನಮತಕ್ಕೆ ಇವರ ಪ್ರಭುತ್ವದಲ್ಲಿ ದೊರೆತ ಉದಾರ ಪೋಷಣೆಯಿಂದಲೂ ವ್ಯಕ್ತವಾಗುತ್ತದೆ.

ಹಲವಾರು ವೇಳೆ ಈ ರಾಷ್ಟ್ರಕೂಟರನ್ನು ಪ್ರಭು, ದೊರೆ ಎಂಬ ಅರ್ಥ ಬರುವ ' ವಲ್ಲಭ ' ಎಂಬ ಸಾಮಾನ್ಯ ಅಭಿಧಾನದಿಂದ ಕರೆಯುತ್ತಿದ್ದರು. ಇದು ' ಶ್ರೀ ಪೃಥಿವೀವಲ್ಲಭ ' ಎಂಬ ಪೂರ್ಣ ಪದದ

ಸಂಕ್ಷೇಪ ರೂಪ; ಬಾದಾಮಿಯ ಚಾಲುಕ್ಯರು ಈ ಪೃಥಿವೀ ವಲ್ಲಭ ಎಂಬ ವಿಶಿಷ್ಟ ಬಿರುದನ್ನು ತಳೆದಿದ್ದ ರಷ್ಟೆ. ಇವರಿಂದ, ಇವರ ಅನಂತರ ಬಂದ ರಾಷ್ಟ್ರಕೂಟರಿಗೆ ಈ ಬಿರುದು ಬಂದಿತು. ಅರಬೀ ಗ್ರಂಥ ಕಾರರು "ಬಲ್ಹಾರ" ಎಂಬ ಪದದಿಂದ ರಾಷ್ಟ್ರಕೂಟ ರಾಜನನ್ನು ನಿರ್ದೇಶಿಸಿದ್ದಾರೆ. ಈ "ಬಲ್ಹಾರ" 'ಬಲ್ಲಹರಾಯ' ಎಂಬುದರ ಸಂಕ್ಷಿಪ್ತರೂಪ. 'ಬಲ್ಲಹರಾಯ', ಎಂಬುದು 'ವಲ್ಲಭರಾಜ' ಪದದ ಪ್ರಾಕೃತರೂಪ.

ಮಳಖೇಡದ ರಾಷ್ಟ್ರಕೂಟರ ಹಿಂದಿನ ಮೂಲಪುರುಷನಾದ ದಂತಿವರ್ಮನು ವಿದರ್ಭ ಪ್ರಾಂತದಲ್ಲಿ ಬಾದಾಮಿಯ ಚಾಲುಕ್ಯರ ಕೈಕೆಳಗೆ ಅಧಿಕಾರಿಯಾಗಿದ್ದ ಹಾಗೆ ಕಂಡು ಬರುತ್ತದೆ. ಇವನ ವಂಶಜರು : ಒಂದನೆಯ ಇಂದ್ರ, ಒಂದನೆಯ ಗೋವಿಂದ, ಒಂದನೆಯ ಕರ್ಕ ಮತ್ತು ಇಮ್ಮಡಿ ಇಂದ್ರ. ಇವರಲ್ಲಿ ಕಡೆಯವ, ಚಾಲುಕ್ಯರ ಅರಸುಗುವರಿಯನ್ನು,—ಪ್ರಾಯಶಃ ಗುಜರಾತ ಶಾಖೆಯ ಚಾಲುಕ್ಯ ಅರಸು ಗುವರಿಯನ್ನು—ಮದುವೆಯಾದ. ಇವರ ಮಗನೇ ದಂತಿದುರ್ಗ.

ದಂತಿದುರ್ಗನು, ಈ ರಾಜವಂಶದ ಮೂಲಪುರುಷನೂ, ಪ್ರಥಮ ಪ್ರಭುವೂ ಆಗಿದ್ದನು. ಇವನು ಬಾದಾಮಿಯ ಚಾಲುಕ್ಯರ ಕೈಕೆಳಗಿನ ಒಬ್ಬ ನಾಯಕನಂತೆ ತನ್ನ ಜೀವನ ಪಥವನ್ನು ಆರಂಭಿಸಿದನು. ಔರಂಗಾಬಾದ್ ಪ್ರಾಂತ್ಯದಲ್ಲಿ ಇವನು ಪ್ರಥಮತಃ ಕಾರ್ಯೋನ್ಮುಖನಾಗಿದ್ದಿರಬಹುದು. ಇವನು ತನ್ನ ಅಧಿರಾಜನ ಯುದ್ಧಗಳಲ್ಲಿ ಪಾಲ್ಗೊಂಡು ತನ್ನ ಸಾಹಸ ಕಾರ್ಯಗಳಿಂದ ಖ್ಯಾತಿಗೊಂಡನು. ಇವನು ಗುಜರಾತ ಪ್ರಾಂತ್ಯದಿಂದ ಅರಬ ಆಕ್ರಮಣಕಾರರನ್ನು ಹೊರದೂಡುವುದರಲ್ಲಿ, ಆ ಪ್ರಾಂತ್ಯದ ಚಾಲುಕ್ಯರ ಪ್ರಬಲ ಸ್ವತಂತ್ರಾಧಿಕಾರಿಯಾದ ಅವನಿಜನಾಶ್ರಯ ಪುಲಿಕೇಶಿಯ ಸಂಗಡಿಗನಾಗಿ ಹೋರಾಡಿದನು (ಕ್ರಿ.ಶ. 738). ಇವನು ತನ್ನ ಅಧಿರಾಜನಾದ ಇಮ್ಮಡಿ ವಿಕ್ರಮಾದಿತ್ಯನಿಗೆ, ಅವನು ಕಾಂಚಿಯ ಪಲ್ಲವರ ಮೇಲೆ ಧಾಳಿ ನಡೆಸಿದಾಗ, ನೆರವಾದನು (ಕ್ರಿ.ಶ. 743). ಇವನು ಗುಜರಾತಿನಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಗೂರ್ಜರ ಪ್ರತೀಹಾರ ನಾಯಕ, ಒಂದನೆಯ ನಾಗಭಟನೊಂದಿಗೆ ಘರ್ಷಣೆ ನಡೆಸಿದನು. ಇವನ ಅತ್ಯಾಶೆಯ ಮನದೆಣಿಕೆಗೆ, ಇಮ್ಮಡಿ ಕೀರ್ತಿವರ್ಮನು ಇಮ್ಮಡಿ ವಿಕ್ರಮಾದಿತ್ಯನನಂತರ ಚಾಲುಕ್ಯ ಸಾಮ್ರಾಜ್ಯಕ್ಕೆ ಅರಸಾಗಿ ಬಂದಾಗ (ಕ್ರಿ.ಶ. 747) ಪ್ರಚೋದನೆಯೊದಗಿತು. ಹೀಗೆ, ಕ್ರಿ.ಶ. 750 ರ ವೇಳೆಗೆ, ದಕ್ಷಿಣ ಗುಜರಾತ, ಮಧ್ಯಪ್ರದೇಶ ಮತ್ತು ಬೀರಾರನ್ನೂ ಒಳಗೊಂಡ ಚಾಲುಕ್ಯರ ಉತ್ತರ ಪ್ರಾಂತ್ಯದ ಮೇಲೆ ದಂತಿದುರ್ಗನು ತನ್ನ ಪರಮಾಧಿಕಾರವನ್ನು ಸ್ಥಾಪಿಸಿಕೊಂಡುದಲ್ಲದೆ, ಅವನ ಪ್ರಭಾವಕ್ಕೆ ಒಳಪಟ್ಟಿದ್ದ ಸೀಮೆ ಇನ್ನೂ ಮುಂದಕ್ಕೆ ಹಬ್ಬಿತ್ತು. ಇಂಥ ಪರಿಸ್ಥಿತಿ ಚಾಲುಕ್ಯದೊರೆಗೆ ಅಸಹನೀಯವಾಗಿ ಕಂಡುಬಂದು, ಅವನು ಒಂದು ಶಕ್ತಿಪರೀಕ್ಷೆಯನ್ನು ಮಾಡಲು ನಿರ್ಧರಿಸಿದನು. ಕ್ರಿ ಶ. 754ಕ್ಕೆ ಮೊದಲೇ ಒಂದು ಸೆಣಸಾಟ ನಡೆದು, ದಂತಿದುರ್ಗನು ಅದರಲ್ಲಿ ಜಯಶಾಲಿಯಾದನು. ಕ್ರಿ. ಶ. 757ರ ಮತ್ತೊಂದು ವಿಜಯವು ಚಾಲುಕ್ಯ ಸಾಮ್ರಾಜ್ಯವನ್ನು ಮಣ್ಣುಮುಕ್ಕಿಸಿತು.

ದಂತಿದುರ್ಗನಿಗೆ 'ಪೃಥಿವೀವಲ್ಲಭ' ಮತ್ತು 'ಖಡ್ಗಾವಲೋಕ' ಎಂಬ ಬಿರುದುಗಳಿದ್ದುವು. ಇವನು, ತಾನು ಮಾಳವವನ್ನು ಗೆದ್ದುದಕ್ಕಾಗಿ, ಉಜ್ಜಯಿನಿಯಲ್ಲಿ ಹಿರಣ್ಯಗರ್ಭ ಮಹಾದಾನ ಯಾಗವನ್ನು ನಡೆಸಿದನು. ಇವನು ಕಳಿಂಗ, ಕೋಸಲ ಮತ್ತು ಶ್ರೀಶೈಲದ ಮೇಲೆ ಜಯಗಳಿಸಿದನೆಂದು ಹೇಳಲಾಗಿದೆ. ಇವನ ಮಹೋನ್ನತ ಸಾಧನೆ,—ಅಜೇಯವೂ ಅಗಣಿತವೂ ಆದ ಚಾಲುಕ್ಯರ ನೇತೃತ್ವದಲ್ಲಿ ಜಮಾಯಿಸಿದ್ದ ಕರ್ಣಾಟಕದ ಸೈನ್ಯಗಳನ್ನು ಪ್ರಬಲವಾದ ಹೋರಾಟವಿಲ್ಲದೆ ಪರಾಜಯಗೊಳಿಸಿದುದೇ ಆಗಿದ್ದಿತು. ಇವನು ತನ್ನ ಸ್ವತಂತ್ರ ಆಳಿಕೆಯನ್ನು ಸ್ಥಾಪಿಸಿದ ಮೇಲೆ, 'ಮಹಾರಾಜಾಧಿರಾಜ ಪರಮೇಶ್ವರ', ಮತ್ತು 'ಪರಮಭಟ್ಟಾರಕ' ಎಂಬ ಸಾಮ್ರಾಜ್ಯಸೂಚಕ ಬಿರುದುಗಳನ್ನು ಧರಿಸಿದನು. ಆದರೆ ದಂತಿದುರ್ಗನು

ತನ್ನಸಾಧನೆಗಳನ್ನು ಅನುಭವಿಸಲು ಬಹುಕಾಲ ಬದುಕಲಿಲ್ಲ. ಇವನು ಕ್ರಿ. ಶ. 758ರಲ್ಲಿ ಮೃತನಾಗಿ ಇವನನಂತರ, ಇವನ ಚಿಕ್ಕಪ್ಪ ಒಂದನೆಯ ಕೃಷ್ಣನು,—ಒಂದನೆಯ ಕರ್ಕನ ಮಗ, ಅಧಿಕಾರಕ್ಕೆ ಬಂದನು.

'ಅಕಾಲವರ್ಷ' ಮತ್ತು 'ಶುಭತುಂಗ' ಎಂಬ ಬಿರುದುಗಳನ್ನು ಧರಿಸಿದ್ದ ಒಂದನೆಯ ಕೃಷ್ಣನು, ದಕ್ಷಿಣದಲ್ಲಿ ಚಾಲುಕ್ಯರ ಅಧಿಕಾರಾವಶೇಷಗಳನ್ನು ಅಳಿಸಿ, ಹೊಸತಾಗಿ ಕಟ್ಟಿದ್ದ ರಾಜ್ಯಕ್ಕೆ ಭದ್ರ ಬುನಾದಿ ಯೊದಗಿಸಿದನು. ಇವನು ಅಹಿತರಾಗಿದ್ದ ಅಕ್ಕಪಕ್ಕದವರನ್ನು ಸೋಲಿಸಿದನು ; ಹಾಗೂ ಹಿಂದಿನ ಚಾಲುಕ್ಯರ ಸಾಮಂತರಿಂದ ರಾಜಗೌರವವನ್ನು ಗಳಿಸಿದನು. ಇವನು ಗಂಗರಸರ ಮೇಲೆ ಒಂದು ದಂಡಯಾತ್ರೆಯನ್ನು ನಿರ್ದೇಶಿಸಿದನು. ಇವನ ಕುಮಾರ, ಹಾಗೂ ಯುವರಾಜನಾದ ಗೋವಿಂದನು, ಪೂರ್ವದ ಚಾಲುಕ್ಯದೊರೆ, ನಾಲ್ವಡಿ ವಿಷ್ಣುವರ್ಧನನನ್ನು ಸೋಲಿಸಿ, ಅವನ ಪ್ರಾಂತ್ಯದ ಒಂದು ಭಾಗವನ್ನು ಕಸಿದುಕೊಂಡನು. ದಕ್ಷಿಣ ಕೊಂಕಣವು ಇವನ ಅಂಕಿತಕ್ಕೆ ಬಂದು ಶಿಲಾಹಾರ ಅರಸು ಸಣಪುಲ್ಲನ ಜವಾಬ್ದಾರಿಯಲ್ಲಿಡಲಾಯಿತು. ಈ ಎಲ್ಲ ವಿಜಯಗಳಿಂದ ರಾಷ್ಟ್ರಕೂಟ ಸಾಮ್ರಾಜ್ಯವು ವಿಸ್ತರಿಸಿ, ಅದರ ಘನತೆ ಹೆಚ್ಚಿತು.

ಒಂದನೆಯ ಕೃಷ್ಣನು ಕ್ರಿ. ಶ. ಸುಮಾರು 773ರಲ್ಲಿ ಕಾಲವಾಗಿ, ಅವನ ಹಿರಿಯ ಮಗ, ಇಮ್ಮಡಿ ಗೋವಿಂದನು ಅಧಿಕಾರಾರೂಢನಾದನು. ಸುಖಲೋಲುಪನಾದ ಈ ಅರಸು, ಆಡಳಿತದಲ್ಲಿ ಅಸಮರ್ಥನಾದನು. ಆದುದರಿಂದ, ಆಡಳಿತದ ಸಂಪೂರ್ಣ ಜವಾಬ್ದಾರಿಯೆಲ್ಲ ಇವನ ತಮ್ಮ ಧ್ರುವನ ಕೈಗೆ ಬಂದಿತು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ಧ್ರುವನು ತನ್ನ ಸ್ಥಾನವನ್ನು ಬಲಪಡಿಸಿ ಕೊಂಡನು. ಇಮ್ಮಡಿ ಗೋವಿಂದನು ತನ್ನ ಸಹೋದರನನ್ನು ಅಧಿಕಾರದಿಂದ ತೆಗೆಯಲು ಪ್ರಯತ್ನ ಪಟ್ಟಾಗ, ಅವನು ದಂಗೆಯೆದ್ದನು. ಇಮ್ಮಡಿ ಗೋವಿಂದನು ತನ್ನ ಸಾಮಂತರ ಹಾಗೂ ಮಿತ್ರರ ಸಹಾಯ ಕೋರಿದನು. ಆದರೆ ಅವರು ತನ್ನ ಸುತ್ತ ಸೇರುವುದಕ್ಕೆ ಮುಂಚೆಯೇ ಧ್ರುವನು ಕೈಮಾಡಿ ಗದ್ದುಗೆಯನ್ನು ಕಿತ್ತುಕೊಂಡನು.

ಧ್ರುವನು ಕ್ರಿ.ಶ. 780ರಲ್ಲಿ ತನ್ನ ಪ್ರಭುತ್ವವನ್ನು ಆರಂಭಿಸಿದನು. ಇವನಿಗೆ 'ನಿರುಪಮ', 'ಧಾರಾವರ್ಷ', 'ಶ್ರೀವಲ್ಲಭ', ಮತ್ತು 'ಕಲಿವಲ್ಲಭ', ಎಂಬ ಬಿರುದುಗಳಿದ್ದವು. ತಾನು ದೊರೆ ತನಕ್ಕೆ ಬಂದ ಕೂಡಲೇ ಧ್ರುವನು ತನ್ನ ಸಹೋದರನ ಪಕ್ಷ ವಹಿಸಿದ್ದ ರಾಜರಿಗೆ ಬುದ್ಧಿ ಕಲಿಸತೊಡಗಿದನು. ಗಂಗರ ಅರಸು ಶ್ರೀಪುರುಷನು ಸೋಲಿಸಲ್ಪಟ್ಟನು; ಅವನ ಮಗ ಶಿವಮಾರನು ಸೆರೆಯಾದನು. ಗಂಗ ವಾಡಿ ಪೂರ್ಣವಾಗಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸೇರಿಹೋಯಿತು. ರಾಷ್ಟ್ರಕೂಟರು ಈಗ ಕಾವೇರಿ ನದಿಯನ್ನೇ ತಮ್ಮ ದಕ್ಷಿಣದ ಎಲ್ಲೆಯೆಂದು ಘೋಷಿಸಬಹುದಾಗಿತ್ತು. ಇದಾದ ಮೇಲೆ ಧ್ರುವನು ತನ್ನ ಸಹೋದರನ ಮಿತ್ರರ ಮೇಲೆ ತಿರುಗಿದನು. ಇವನು ಪಲ್ಲವ ದಂತಿವರ್ಮನ ಮೇಲ್ವಾಯ್ದು ಹೊರಟಾಗ, ಅವನು ಅಷ್ಟು ರಣದಂಡವನ್ನು ಅರ್ಪಿಸಿ, ಶಾಂತಿಯನ್ನು ಪಡೆದುಕೊಂಡನು. ವೆಂಗಿಯ ರಾಜ, ನಾಲ್ವಡಿ ವಿಷ್ಣುವರ್ಧನನು ಇವನ ಪ್ರತಾಪಕ್ಕೆ ಬಾಗಿದನು.

ಇದರನಂತರ ಧ್ರುವನು ಉತ್ತರದಲ್ಲಿ ಅಗ್ಗಳೆಯನಾಗಲು ಹಾರಯಿಸಿದನು. ಆಗಿನ ವೇಳೆಯಲ್ಲಿ ಇಬ್ಬರು ರಾಜರು ಘನ ಸಾಮ್ರಾಟನಗರಿಯಾದ ಕನೋಜಿಗಾಗಿ ಹೊಡೆದಾಡುತ್ತಿದ್ದರು. ಏಕೆಂದರೆ. ಕನೋಜವನ್ನು ಹಿಡಿದ ವಿಜಯಿಗೆ ಉತ್ತರಾಪಥೇಶ್ವರನ ಸ್ಥಾನ ಮುಡುಪಾಗಿತ್ತು. ರಜಪುತಾನದ ಗೂರ್ಜರ–ಪ್ರತೀಹಾರ ದೊರೆ ವತ್ಸರಾಜನು ಈ ಬಹುಮಾನವನ್ನು ಪಡೆದು, ಸ್ವಲ್ಪಕಾಲ ಆ ಸಮುಪ ಯೋಗವನ್ನು ಗಳಿಸಿದ್ದನು. ಇವನ ಪ್ರಾಬಲ್ಯಕ್ಕೆ ಸವಾಲು ಕೊಟ್ಟ ಇವನ ಪ್ರತಿಸ್ಪರ್ಧಿ, ಬಂಗಾಳದ ಧರ್ಮಪಾಲನು ಗಂಗಾ ಯಮುನಾ ಬಯಲಿನಿಂದ ಹಿಂದಕ್ಕೆ ದೂಡಲ್ಪಟ್ಟನು. ಈ ಪರಾಭವದಿಂದ ತೆಪ್ಪಗಾಗದೆ, ಧರ್ಮಪಾಲನು ಪಡೆಯಲಿಚ್ಛಿಸಿದ ಆ ತನ್ನ ಪ್ರಾಂತ್ಯದಲ್ಲಿ ತನ್ನ ಪ್ರತಿಸ್ಪರ್ಧಿಯನ್ನು

ಮತ್ತೊಂದು ಸಲ ಎದುರಿಸಲು ಹೊರಟನು. ಈ ಸಂದರ್ಭದಲ್ಲಿ ಧ್ರುವನು ರಣರಂಗಕ್ಕೆ ಮೂರನೆಯ ಸ್ಪರ್ಧಾಳುವಾಗಿ ಕಾಲಿಟ್ಟನು. ವತ್ಸರಾಜನು ದಕ್ಷಿಣದಿಂದ ಉತ್ತರಕ್ಕೆ ಬರುತ್ತಿದ್ದ ಧಾಳಿಕಾರನಿಗೆ ತಡೆಹಾಕಿದನು. ಗೂರ್ಜರ-ಪ್ರತೀಹಾರ ಸೈನ್ಯಗಳು ಎಷ್ಟು ಗಾಸಿಯ ಸೋಲನ್ನನುಭವಿಸಬೇಕಾಯಿತೆಂದರೆ, ಅರಸು ರಣರಂಗದಿಂದಲೆ ಕಾಲ್ತೆಗೆದು ಓಡಬೇಕಾಯಿತು. ಧ್ರುವನಿಟ್ಟ ಮುಂದಿನ ಹೆಜ್ಜೆ ಅವನನ್ನು ಪ್ರತ್ಯಕ್ಷ ಧರ್ಮಪಾಲನೆದುರಿಗೇ ನಿಲ್ಲಿಸಿತು. ಬಂಗಾಳದ ದೊರೆಯು ಓಡಿಸಲ್ಪಟ್ಟು, ರಾಜಲಾಂಛನವಾದ ಅವನ ಶ್ವೇತಚ್ಛತ್ರಗಳು ಶತ್ರುವಿನ ಕೈಸೇರಿದುವು. ಈ ಮಾರ್ಮೊಳೆವ ವಿಜಯಗಳಿಂದ ರಾಷ್ಟ್ರಕೂಟರಾಜನ ಪೂರ್ಣಪ್ರಭುತ್ವವು ಇಡೀ ಭರತಖಂಡದಲ್ಲೆಲ್ಲ ಸುಸ್ಥಿರವಾಗಿ ನೆಲಸಿ, ಅವನಿಗೆ ಅಭೂತಪೂರ್ವವಾದ ಕೀರ್ತಿಯ ಕಿರೀಟವನ್ನಿಟ್ಟಿತು. ಆ ನದೀದ್ವಯಗಳ ಪುಣ್ಯಭೂಮಿಯಲ್ಲಿ ಸ್ವಲ್ಪಕಾಲ ತಂಗಿದ್ದು, ಅನಂತರ ಈ ವಿಜಯಿಯು ತನ್ನ ರಾಜ್ಯಕ್ಕೆ ಹಿಂತಿರುಗಿದನು. ಧ್ರುವನು ಕೈಕೊಂಡ ಯುದ್ಧಗಳಲ್ಲಿ ಅವನ ಯೋಗ್ಯ ಪುತ್ರರಾದ—ಗೋವಿಂದ ಮತ್ತು ಇಂದ್ರ—ಇವರುಗಳು ಅವನಿಗೆ ನೆರವಾಗಿ ನಿಂತಿದ್ದರು. ಧ್ರುವನ ಉತ್ತರದಿಕ್ಕಿನ ವಿಜಯಗಳ ಕಾಲ ಸುಮಾರು ಕ್ರಿ.ಶ. 786 ರಿಂದ 790ರ ಒಳಗಿದ್ದಿರಬಹುದು.

ಧ್ರುವನು ತನ್ನ ಮೂರನೆಯ ಮಗ, ಮುಮ್ಮಡಿ ಗೋವಿಂದನನ್ನು ತನ್ನ ಉತ್ತರಾಧಿಕಾರಿಯಾಗಿ ಆರಿಸಿದನು. ಇವನು ಕ್ರಿ. ಶ. 792 ರಲ್ಲಿ ರಾಟ್ಟಕೂಟಸಿಂಹಾಸನವನ್ನೇರಿದನು. ಆದರೆ ಈ ವಿಪರ್ಯಾಯದ ಆಯ್ಕೆಯ ಕಾರ್ಯಕ್ಕೆ ಪ್ರತಿಭಟನೆ ಕಾಣಿಸಿಕೊಳ್ಳದೆ ಹೋಗಲಿಲ್ಲ. ಇವನ ಅಣ್ಣ ಸ್ತಂಭನು ಬಂಡಾಯದ ಧ್ವಜವನ್ನೆತ್ತಿದನಾದರೂ ಅದು ಅಧಃಪತನ ತಾಳಿತು. ಅವನಿಗೆ ಉದಾರತೆ ತೋರಿಸಿ, ಗಂಗವಾಡಿಯ ರಾಜ್ಯಪಾಲನಾಗಿ ಮತ್ತೆ ಅವನ ಅಧಿಕಾರದಲ್ಲಿ ಉಳಿಸಲಾಯಿತು. ಆದರೆ, ಗಂಗರ ಅರಸು ಶಿವಮಾರನನ್ನು ಗೋವಿಂದನು ಸೆರೆಯಿಂದ ಬಿಡಿಸಿದ್ದರೂ ಅವನು ದಂಗೆಕೋರರ ತಂಡವನ್ನು ಸೇರಿದ್ದುದರಿಂದ, ಅವನನ್ನು ಪುನಃ ಬಂಧನದಲ್ಲಿಡಲಾಯಿತು. ಇದಾದ ಮೇಲೆ ಗೋವಿಂದನು ಪಲ್ಲವರಾಜ ದಂತಿಗನನ್ನು ಸೋಲಿಸಿದನು. ವೆಂಗಿಯ ನಾಲ್ವಡಿ ವಿಷ್ಣುವರ್ಧನನು ರಾಷ್ಟ್ರಕೂಟ ದೊರೆಯ ಹಿರಿಯರಸಿಕೆಯನ್ನು ಒಪ್ಪಿಕೊಂಡನು. ಹೀಗೆ ದಕ್ಷಿಣದ ಮೇಲೆ ತಡೆಯಿಲ್ಲದ ಆಧಿಪತ್ಯವನ್ನು ಭದ್ರಪಡಿಸಿಕೊಂಡು, ಗೋವಿಂದನು ಉತ್ತರದ ರಾಜಕೀಯದಲ್ಲಿ ಬಿಗಿಮುಷ್ಟಿ ತೋರಿ ತನ್ನ ತಂದೆಯ ಮೇಲ್ಪಂಕ್ತಿಯನ್ನನುಸರಿಸಬೇಕೆಂದು ನಿರ್ಧರಿಸಿದನು.

ಗೋವಿಂದನು (ರಣ)ರಂಗದಲ್ಲಿ ಕಾಲಿಡುವ ಹೊತ್ತಿಗೆ, ವಿದ್ಯಮಾನ ಬದಲಾಯಿಸಿತ್ತು. ಧ್ರುವನು ಹಿಂತಿರುಗಿದ ಮೇಲೆ ಧರ್ಮಪಾಲನು ಕನೋಜನ್ನು ಹಿಡಿದು ಅದರ ಸಿಂಹಾಸನದ ಮೇಲೆ ತನ್ನಿಂದ ನೇಮಕನಾದ ಚಕ್ರಾಯುಧನನ್ನು ಕೂರಿಸಿ, ತಾನು ಉಚ್ಛ್ರಾಯ ಸ್ಥಿತಿಗೇರಿದನು. ಆದರೆ, ಅನತಿಕಾಲದಲ್ಲಿಯೇ ವತ್ಸರಾಜನನಂತರ ಬಂದ ಇಮ್ಮಡಿ ನಾಗಭಟನು ಹೊರಗಿನಿಂದ ನುಗ್ಗಿ ಬಂದವರನ್ನು ಓಡಿಸಿ, ಕನೋಜನ್ನು ಮತ್ತೆ ಹಿಡಿದು, ಕ್ಷೀಣಿಸಿದ್ದ ತನ್ನ ಮನೆತನದ ಗೌರವವನ್ನು ಎತ್ತಿ ಹಿಡಿದನು. ಆ ಸಮಯದಲ್ಲಿ ಗುಜರಾತ ಮತ್ತು ಮಾಳವದಲ್ಲಿ ರಾಜಪ್ರತಿನಿಧಿಯಾಗಿದ್ದ ತನ್ನ ತಮ್ಮ ಇಂದ್ರನಿಂದ ಒತ್ತಾಸೆ ಪಡೆದು, ಜಾಗೃತ ಚಲನ ವಲನದಿಂದ ಸಾಯುಧನಾಗಿ, ತನ್ನ ಸೇನೆಗಳ ಸೌಖ್ಯಸಂಚಾರಕ್ಕೆ ಬೇಕಾದ ಎಲ್ಲ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು, ಗೋವಿಂದನು ಕನೋಜದ ಕಡೆ ಹೊರಟನು. ಆಕ್ರಮಣಕಾರನ ಮುನ್ನುಗ್ಗುವಿಕೆಯನ್ನು ತಡೆಯಲು ಪ್ರಯತ್ನಿಸಿದ ನಾಗಭಟನು ರಣಾರಣಿಯಾಗಿ ಸೋಲಿಸಲ್ಪಟ್ಟನು. ಗೋವಿಂದನು ತನ್ನ ಮಾರ್ಗದಲ್ಲಿ ಸಣ್ಣ ಪುಟ್ಟ ಸಂಸ್ಥಾನಿಕರಿಂದ ಹಾಗೂ ಪ್ರಬಲರಿಂದ ಮರ್ಯಾದೆ ಪಡೆಯುತ್ತಾ ವಿಜಯಿಯಾಗಿ ಮುಂಬರಿದನು. ಇವನ ಎಣೆಯಿಲ್ಲದ ಶೌರ್ಯದಿಂದ ಅಧೀರರಾದ ಚಕ್ರಾಯುಧ ಮತ್ತು ಧರ್ಮಪಾಲರು ಪ್ರತಿಭಟಿಸದೆ ಶರಣಾದರು. ರಾಷ್ಟ್ರಕೂಟ ಯೋಧರು ಅಡೆತಡೆಯಿಲ್ಲದೆ ಹಿಮಾಲಯ ಪ್ರಾಂತ್ಯವನ್ನು ಮುಟ್ಟಿದರು. ರಾಷ್ಟ್ರಕೂಟರ ವಿಜಯದ ಪರಾಕಾಷ್ಠೆ ಆಸ್ಥಾನ ಕವಿಯಿಂದ ಈ ಕೆಳಗೆ ಕಂಡು ಬರುವ ಮನೋಮೋಹಕವಾದ ಪದಗಳಲ್ಲಿ ವರ್ಣಿತವಾಗಿದೆ :

"ಅವನ (ಗೋವಿಂದನ) ಕುದುರೆಗಳು ಹಿಮಾಲಯದ ತೊರೆಗಳಲ್ಲಿ ಗುಳುಗುಳು ಎಂದು ಶಬ್ದ ಮಾಡುವ ಶೀತಲಜಲವನ್ನು ಕುಡಿದುವು; ಮತ್ತು ಅವನ ಯುದ್ಧದ ಮದ್ದಾನೆಗಳು ಗಂಗಾನದಿಯ ಪುಣ್ಯತೀರ್ಥದ ರುಚಿ ನೋಡಿದವು. ಅವನ ಮಂಗಳ ಸ್ನಾನಕಾಲದಲ್ಲಿ ಬಾರಿಸಿದ ತುತೂರಿಗಳ ನಿನದವು ಆ ಮಹಾಪರ್ವತದ ಕಣಿವೆಗಳಲ್ಲಿ ಅತೀವವಾಗಿ ಮಾರ್ದನಿಗೆಯ್ದಿತು". (ಸಂಜನ್ ಫಲಕಗಳು, V, 23; E.I., XVIII, 235)

ಗೋವಿಂದನ ಉತ್ತರದ ದಾಳಿಯು ಸುಮಾರು ಕ್ರಿ.ಶ. 795ರಲ್ಲಿ ಪ್ರಾರಂಭಿಸಲ್ಪಟ್ಟು, ಕ್ರಿ.ಶ. 800ರ ಹೊತ್ತಿಗೆ ಮುಕ್ತಾಯಗೊಂಡಿತು.

ತನ್ನ ಉತ್ತರದ ದಂಡಯಾತ್ರೆಯಿಂದ ನರ್ಮದಾನದಿಯ ಬಳಿಗೆ ಹಿಂತಿರುಗಿದ ಮೇಲೆ ಗೋವಿಂದನು ಮಾಳವ, ಕೋಸಲ, ಕಳಿಂಗ, ವೆಂಗಿ, ದಹಲ ಮತ್ತು ಓಡ್ರರಾಜ್ಯಗಳ ಮೇಲ್ವಾಯ್ದು ಅವುಗಳನ್ನು ಪರಾಭವ ಗೊಳಿಸಿದನು. ಈ ವಿಜಯಗಳಾದ ಮೇಲೆ ಇವನು ತನ್ನ ಮುಖ್ಯಪಟ್ಟಣ ಮಯೂರಖಂಡಿಯಲ್ಲಿ ಸ್ವಲ್ಪಕಾಲ ಕಳೆದನು. ತರುವಾಯ ಇವನು ತುಂಗಭದ್ರಾ ತೀರದ ಆಲಂಪುರವನ್ನು ತನ್ನ ಯುದ್ಧಕಾರ್ಯ ಗಳ ಕಾರಕಸ್ಥಾನವನ್ನಾಗಿ ಮಾಡಿಕೊಂಡು, ಪುನಃ ತನ್ನ ದಕ್ಷಿಣದ ದಾಳಿಗಳನ್ನು ಆರಂಭಿಸಿದನು. ಗಂಗರು, ಕೇರಳದ ರಾಜ, ಚೋಳರು, ಪಾಂಡ್ಯರು, ಪಲ್ಲವರು,—ಹಾಗೂ ಲಂಕಾದ್ವೀಪದ ದೊರೆಯೂ ಇವನ ಪ್ರತಾಪದೆದುರಿಗೆ ತಲೆ ಬಾಗಿದರು. ಈ ಮಾರ್ಮೊಳೆವ ವಿಜಯಗಳು ಅವನಿಗೆ ಭರತವರ್ಷಕ್ಕೆಲ್ಲ ಪ್ರತಿ ಯಿಲ್ಲದ ರಾಯನೆಂಬ ಕೀರ್ತಿಯನ್ನು ತಂದುವು.

ಗೋವಿಂದನು ಹಲವಾರು ಬಿರುದು ಬಾವಲಿಗಳನ್ನು ತಳೆದನು; ಇವುಗಳಲ್ಲಿ ಮುಖ್ಯವಾದುವು 'ಜಗತ್ತುಂಗ', 'ಪ್ರಭೂತವರ್ಷ', ಮತ್ತು 'ಶ್ರೀವಲ್ಲಭ', ಎಂಬವು. ಇವನು ರಾಷ್ಟ್ರಕೂಟ ಸಾಮ್ರಾಟ ರಲ್ಲೆಲ್ಲ ಅಗ್ಗಳೆಯನಾಗಿದ್ದನು. ಇವನು ಧೈರ್ಯದಲ್ಲಿ, ಸೇನೆಯ ನೇತೃತ್ವದಲ್ಲಿ, ರಣಕೌಶಲದಲ್ಲಿ ಹಾಗೂ ರಾಜತಂತ್ರದಲ್ಲಿ ಎಣೆಯಿಲ್ಲದವನಾಗಿದ್ದನು. ಇವನು ಸೋಲುಗಳನ್ನು ಅರಿತವನಲ್ಲ. ಇವನ ಅಜೇಯ ವಾದ ಸೇನೆಗಳು ಕನ್ಯಾಕುಮಾರಿಯಿಂದ ಕನೋಜದ ವರೆಗಿನ ಮತ್ತು ವಾರಣಾಸಿಯಿಂದ ಬ್ರೋಚದ (ಬಾರುಕಚ್ಛ)ವರೆಗಿನ ವಿಶಾಲ ಪ್ರಾಂತ್ಯಗಳನ್ನು ಗೆದ್ದುವು. ಇವನ ಬಲಿಷ್ಠವಾದ ರಾಜದಂಡದ ಆಶ್ರಯದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ತನ್ನ ಉಚ್ಛ್ರಾಯಸ್ಥಿತಿಯನ್ನು ಕಂಡಿತು. ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಾಬಲ್ಯ ಹಾಗೂ ಘನತೆ ಮತ್ತೆಂದೂ ಆ ಎತ್ತರಕ್ಕೆ ಏರಲಿಲ್ಲ.

ಗೋವಿಂದನು ತನ್ನ ಸಹೋದರ ಇಂದ್ರನನ್ನು ದಕ್ಷಿಣ ಗುಜರಾತವನ್ನಾಳಲು ರಾಜ್ಯಪಾಲನನ್ನಾಗಿ ಸುಮಾರು ಕ್ರಿ.ಶ. 800ರಲ್ಲಿ ನೇಮಕಮಾಡಿದನು. ಈ ಆಳಿಕೆ ಇಂದ್ರನ ವಂಶಜರ ಕೈಯಲ್ಲಿ 80 ವರ್ಷ ಕ್ಕಿಂತಲೂ ಹೆಚ್ಚುಕಾಲ ಮುಂದುವರಿದು ಆ ವಂಶಕ್ಕೆ ಗುಜರಾತು ಶಾಖೆಯ ರಾಷ್ಟ್ರಕೂಟ ವಂಶ ಎಂದು ಹೆಸರಾಯಿತು.

ಮುಮ್ಮಡಿ ಗೋವಿಂದನನಂತರ ಕ್ರಿ.ಶ. 814ರಲ್ಲಿ ರಾಷ್ಟ್ರಕೂಟ ಸಿಂಹಾಸನಾಧಿಕಾರಿಯಾದವನು ಅವನ ಮಗ ಶರ್ವ, ಅಥವಾ ಒಂದನೆಯ ಅಮೋಘವರ್ಷನು ನೃಪತುಂಗ ಎಂಬ ಅವನ ಸುಪರಿಚಿತವಾದ ಬಿರುದಿನಿಂದಲೇ ಹೆಚ್ಚು ಪ್ರಖ್ಯಾತನಾದವನು. ಸಿಂಹಾಸನಾರೂಢನಾದಾಗ ಇವನು ಹದಿನಾರು ವರ್ಷದ ತರುಣನಾಗಿದ್ದನು. ಶಾಂತಿಪ್ರಿಯ ಪ್ರಕೃತಿಯವನಾದರೂ ಅಮೋಘವರ್ಷನು ಹಲವಾರು ಯುದ್ಧಗಳಲ್ಲಿ ಸಿಕ್ಕಿಕೊಂಡನು; ಇವುಗಳಲ್ಲಿ ಕೆಲವು ದೀರ್ಘಕಾಲ ನಡೆದು ಕಹಿಯಾಗಿದ್ದವು. ವೆಂಗಿಯ ಇಮ್ಮಡಿ ವಿಜಯಾದಿತ್ಯನು ಹೂಡಿದ ಹೇಯವಾದ ಸಂಚಿನ ಪರಿಣಾಮವಾಗಿ, ರಾಷ್ಟ್ರಕೂಟ ಪ್ರಭುತ್ವವು ಸ್ವಲ್ಪಕಾಲ


ರಾಷ್ಟ್ರಕೂಟರ
ಚಕ್ರಾಧಿಪತ್ಯ
ಕನೂಜ
ಪ್ರತೀಹಾರ ಸಾಮ್ರಾಜ್ಯ
ಮಾಳವ
ಪಾಲ ಸಾಮ್ರಾಜ್ಯ
ಉಜ್ಜಯಿನಿ
ಧಾರಾ
ಭಿಲ್ಸಾ
ಭೂಪಾಲ್
ನರ್ಮದಾ ನದಿ
ಬರೋಡಾ
ಇಂದೂರು
ಬ್ರೋಚ್
ನಾಂದೋಡ
ತಪತಿ ನದಿ
ಹೊಸಂಗಾಬಾದ
ಸೂರತ್
ಎಲಿಚಪುರ
ನಾಗಪುರ
ಅಜಂತಾ
ನಾಸಿಕ್
ಎಲ್ಲೋರ
ಚಂದ
ಬೊಂಬಾಯಿ
ಪೂನಾ
ಕಲ್ಯಾಣ
ಸಾತಾರ
ಲಾತೂರು
ಹೈದರಾಬಾದ್
ಕರಾಡ
ಬಿಜಾಪುರ
ಮಾಳಖೇಡ
ವೆಂಗಿ
ಸೌದತ್ತಿ
ಕೃಷ್ಣಾ
ಬಾದಾಮಿ
ತುಂಗಭದ್ರಾ ನದಿ
ಧಾರವಾಡ
ಬಂಕಾಪುರ
ಅನಂತಪುರ
ಚಿತ್ರದುರ್ಗ
ಬೆಂಗಳೂರು
ಕೋಲಾರ
ಮದ್ರಾಸು
ಕಾಂಚಿ
ಆರ್ಕಾಡು
ಮೈಸೂರು
ತಲಕಾಡು
ತಕ್ಕೋಲಂ
ಕೊಯಮತ್ತೂರು
ತಂಜಾವೂರು
ಮಧುರೆ
ಸಿಂಹಳ
ವಿವರಣೆ
ರಾಷ್ಟ್ರಕೂಟರ ಚಕ್ರಾಧಿಪತ್ಯ
ರಾಷ್ಟ್ರಕೂಟರ ಪ್ರಭಾವದ ವಲಯ

ಚಿತ್ರ 10

ಇವನ ಕೈತಪ್ಪಿಹೋಯಿತು. ಆದರೆ ಅದನ್ನು ಪುನಃ ಗಳಿಸಿದನು. ಆಗ ಆಕ್ರಮಣಕಾರನು ತನ್ನ ತಪ್ಪಿಗೆ ಹೆಚ್ಚಾಗಿ ದಂಡ ತೆರಬೇಕಾಯಿತು. ಗಂಗರು ರಾಷ್ಟ್ರಕೂಟರ ಅಧಿಕಾರವನ್ನು ಅಲ್ಲಗಳೆದರು ; ಸುಮಾರು ಎರಡು ದಶಕಗಳ ದೀರ್ಘಶತ್ರುತ್ವದ ಅನಂತರ, ಸಾಮ್ರಾಟನ ಕುಮಾರಿ ಚಂದ್ರೋಬಲಬ್ಬೆ ಮತ್ತು ಗಂಗರ ಅರಸು ಒಂದನೆಯ ಬೂತುಗನ ವಿವಾಹಮಂಗಳದಿಂದ ಈ ಎರಡು ಅರಸು ಮನೆತನಗಳು ಒಂದಾದುವು. ಸಾಮ್ರಾಟನ ಜ್ಞಾತಿ, ಗುಜರಾತ ಶಾಖೆಯ ಒಂದನೆಯ ಧ್ರುವನ ಕ್ಲೇಶಕಾರಿ ದಂಗೆಯು ಮುವ್ವತ್ತು ಕವರ್ಷಗಳ ವರೆಗೂ ಸಾಗಿದುದು ಒಂದು ವಿಷಾದದ ಸಂಗತಿ. ಅಮೋಘವರ್ಷನ ಸೇನೆಗಳು ಅಂಗ, ವಂಗ ಮತ್ತು ಮಗಧದಂತಹ ಅಕ್ಕಪಕ್ಕ ರಾಷ್ಟ್ರಗಳೊಂದಿಗೆ ಘರ್ಷಿಸತೊಡಗಿದವು. ಶ್ರೀಮಂತ-ಸಾಮಂತರ ನೆರವಿನಿಂದ ಯುವರಾಜ ಕೃಷ್ಣನು ದಂಗೆಯೆದ್ದುದು, ಎಲ್ಲಕ್ಕಿಂತಲೂ ಹೆಚ್ಚು ದುರಂತಮಯವಾದ ಸಂಗತಿಯಾಗಿದ್ದಿತು. ಗುಜರಾತ ಶಾಖೆಯ ಇಂದ್ರನ ಮಗ ಕರ್ಕನು, ಕಷ್ಟಕಾಲದಲ್ಲಿ ಅಮೋಘವರ್ಷನಿಗೆ ನೆರವಾಗಿ ನಿಂತನು. ಹಲವಾರು ಗಲಭೆಗಳನ್ನಡಗಿಸಿ ಖ್ಯಾತನಾದ, ಪ್ರಾಂತ್ಯಪಾಲಕನಾದ, ಚಲ್ಲಕೇತನ ವಂಶದವನಾದ ಬಂಕೆಯನು, ಸಾಮ್ರಾಜ್ಯದ ಸುಸ್ಥಿರತೆಗೆ ಅಮೋಘವಾದ ಸೇವೆ ಸಲ್ಲಿಸಿದನು.

ಅಮೋಘವರ್ಷನು ತನ್ನ ಒಡ್ಡೋಲಗಕ್ಕೆ ವಿವಿಧ ಮತಗಳ ಪಂಡಿತರನ್ನೂ ಕವಿಗಳನ್ನೂ ಬರಮಾಡಿ ಊಂಡನು. ಇವನ ಆಶ್ರಯದಲ್ಲಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳು ವರ್ಧಿಸಿದವು. ಇವನು ಹಿಂದು ಮತ್ತು ಜೈನಧರ್ಮಗಳನ್ನು ಒಂದೇ ವಿಧವಾಗಿ ಪುರಸ್ಕರಿಸಿದನು. ಇವನಿಗೆ ತನ್ನ ಪ್ರಜೆಗಳ ಕ್ಷೇಮಕ್ಕಿಂತ ಹೆಚ್ಚು ಹಿತವೆನಿಸಿದ ಸಂಗತಿ ಇರಲಿಲ್ಲ. ತನ್ನ ನಾಡಿನಲ್ಲಿ ಒಂದು ದಾರುಣ ಸಾಂಕ್ರಾಮಿಕ ರೋಗದ ವಿಪತ್ತನ್ನು ತಡೆಯಲು ಇವನು ಮಹಾಲಕ್ಷ್ಮೀದೇವಿಗೆ ತನ್ನ ಬೆರಳನ್ನು ಬಲಿಕೊಟ್ಟ ಪ್ರತೀತಿಯಿದೆ.

ಅಮೋಘವರ್ಷನು ಮಾನ್ಯಖೇಟ ಪಟ್ಟಣವನ್ನು ಕಟ್ಟಿ, ಅದು ಸಾಮ್ರಾಜ್ಯದ ಮುಖ್ಯಪಟ್ಟಣ ವಾಗುವ ಅರ್ಹತೆ ಪಡೆಯುವಂತೆ ಮಾಡಿದನು. ಅದಕ್ಕೆ ಮುನ್ನ ಯಾವ ಪಟ್ಟಣ ಅಥವಾ ಪಟ್ಟಣಗಳು ಈ ಹಿರಿಮೆಯನ್ನು ಪಡೆದಿದ್ದುವೆಂಬುದು ಇಂದಿಗೂ ಖಚಿತಪಟ್ಟಿಲ್ಲ. ಮಾನ್ಯಖೇಟವು ರಾಷ್ಟ್ರಕೂಟರ ರಾಜಧಾನಿಯೆಂದು ಪ್ರಥಮತಃ ದೃಢಪಡುವುದು ಈ ಅರಸನ ಆಳಿಕೆಯ ಕಾಗದ ಪತ್ರಗಳಲ್ಲಿಯೇ. ಅರಬ ಗ್ರಂಥಕರ್ತೃ ಸುಲೇಮಾನನು ಅಮೋಘವರ್ಷನನ್ನು ಪ್ರಪಂಚದ ದೊಡ್ಡ ಸಾಮ್ರಾಟರೊಂದಿಗೆ ಅಂದರೆ, ಚೀನ, ಬಗ್ದಾದ್ ಮತ್ತು ಕಾನ್‌ಸ್ಟಾಂಟಿನೋಪಲಿನ ರಾಜರುಗಳ ಸಹಪಂಕ್ತಿಯಲ್ಲಿ ಕೂಡಿಸಿದ್ದಾನೆ.

ಮಾನ್ಯಖೇಟವು ಸಾಮ್ರಾಜ್ಯದ ಮುಖ್ಯ ಸ್ಥಳವೆನಿಸಿ, ವಿಶಾಲವಾದ ದೊಡ್ಡ ಪಟ್ಟಣವಾಗಿ ಬೇಗ ಬೆಳೆದಂತೆ ಕಾಣುತ್ತದೆ. ಬೇರೆ ಬೇರೆ ಜಾಗಗಳಲ್ಲಿ ರಾಜ್ಯದ ಹಲವಾರು ಕಛೇರಿಗಳಿಗೆ ಸ್ಥಾನ ಕಲ್ಪಿಸಿದ್ದಂತೆ ವಿವರ ಕೊಡುವ ಸ್ಥಳಪುರಾಣ, ಈ ಸ್ಥಳದಲ್ಲಿ ಕೈಗೊಂಡ ತನಿಖೆಗಳಿಂದ ತಿಳಿದುಬಂದಿದೆ. ಹೀಗೆಯೇ ಆ ರಾಜರ ಮನೆಯು ಇಂದಿನ ಮಳಖೇಡ ಗ್ರಾಮದಲ್ಲಿದ್ದಿತೆಂದು ಹೇಳಲಾಗಿದೆ. ಇದರ ಪಕ್ಕದ ಹಳ್ಳಿಯಲ್ಲಿ ಕಾಗಿನ ನದಿಯ ಎದುರು ದಂಡೆಯ ಮೇಗಣ ದಂಡೋತಿಯಲ್ಲಿ ಸೈನ್ಯದ ಬೀಡಿದ್ದಿತು. ಈ ಹಳ್ಳಿಯ ಹೆಸರು, ಸೇನೆ ಎಂಬ ಅರ್ಥವುಳ್ಳ ಕನ್ನಡಪದ 'ದಂಡು' ಎಂಬುದರಿಂದ ಬಂದಿರುವಂತಿದೆ. ಕಾರ್ಯದರ್ಶಿಯ ಕಛೇರಿಯು ಮಳಖೇಡದಿಂದ ಸುಮಾರು ಹತ್ತು ಮೈಲಿಯಲ್ಲಿರುವ ಸೇಡಮದಲ್ಲಿತ್ತು. ಮೇಲಿನ ಎರಡು ಊರುಗಳ ನಡುವೆ, ಈಗಿನ ಜೋಡಿ ಊರುಗಳಾದ ನೀಲಹಳ್ಳಿ ಮತ್ತು ಕೊಂಕನಳ್ಳಿಗಳ ಬಳಿ ಕೋಶಾಗಾರವಿದ್ದಿತು.

ಅಮೋಘವರ್ಷನು ಸುಮಾರು ಕ್ರಿ.ಶ. 878 ರಲ್ಲಿ ಕಾಲವಾದನಂತರ, ಅವನ ಮಗ ಇಮ್ಮಡಿ ಕೃಷ್ಣನು ರಾಜ್ಯಸೂತ್ರಗಳನ್ನು ಹಿಡಿದನು. ಇವನು ಪೂರ್ವದ ಚಾಲುಕ್ಯರು, ಗೂರ್ಜರ ಪ್ರತೀಹಾರರು, ಹಾಗೂ ಚೋಳರ ಮೇಲೆ, ಕರಾಳ ಹಾಗೂ ದೀರ್ಘವಾದ ಯುದ್ಧಗಳನ್ನು ಮಾಡಬೇಕಾಯಿತು. ಎಲ್ಲೋ ಕೆಲವು

ಸಂದರ್ಭ ಹೊರತು, ಈ ಹಲವಾರು ಕದನಗಳಲ್ಲಿ ಇವನಿಗೆ ಸೋಲುಂಟಾಯಿತು. ಇವನು ಚೇದಿಯ ರಾಜ ಒಂದನೆಯ ಕೊಕ್ಕಲನ ಮಗಳನ್ನು ಮದುವೆಯಾಗಿದ್ದು, ಈ ಸಂಬಂಧದಿಂದ ಇವನ ಸೈನಿಕ ಹೋರಾಟಕ್ಕೆ ನೆರವು ದೊರೆಯಿತು. ಕ್ರಿ.ಶ. 914 ರಲ್ಲಿ ಇವನ ದೊರೆತನ ವಿಷಾದಕರವಾಗಿಯೇ ಕೊನೆಗೊಂಡಿತು.

ಇಮ್ಮಡಿ ಕೃಷ್ಣನ ಮಗ ಜಗತ್ತುಂಗನು ಅವನ ತಂದೆಗೆ ಮೊದಲೇ ತೀರಿಕೊಂಡಿದ್ದುದರಿಂದ, ಇವನ ನಂತರ, ಇವನ ಮೊಮ್ಮಗ, ಮುಮ್ಮಡಿ ಇಂದ್ರನು ಅಧಿಕಾರಕ್ಕೆ ಬಂದನು. ಇವನು ಸರ್ವಜನವಿದಿತವಾದ 'ನಿತ್ಯವರ್ಷ', ಎಂಬ ಬಿರುದನ್ನು ಧರಿಸಿದ್ದನು. ಇವನ ಆಳಿಕೆಯಲ್ಲಿ ಮನಮುಟ್ಟಿ ನಿಲ್ಲುವ ಸಂಗತಿ ಎಂದರೆ ಇವನ ಉತ್ತರ ಭಾರತದ ದಂಡಯಾತ್ರೆ. ಇವನು ಪ್ರಭುತ್ವಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ಗೂರ್ಜರ—ಪ್ರತೀಹಾರ ಪ್ರಾಂತ್ಯವನ್ನು ಆಕ್ರಮಣ ಮಾಡಿದನು. ಇವನ ಸೇನೆಗಳು ಯಮುನಾನದಿಯನ್ನು ದಾಟಿ ಕ್ರಿ.ಶ. 916-17ರ ಅವಧಿಯಲ್ಲಿ ಸಾಮ್ರಾಜ್ಯದ ಮುಖ್ಯ ಪಟ್ಟಣವಾದ ಕನೋಜನ್ನು ವಶಪಡಿಸಿಕೊಂಡುವು. ರಾಷ್ಟ್ರಕೂಟ ಸೇನೆಗಳ ಹೊಡೆತವನ್ನು ತಾಳಲಾರದೆ, ಗೂರ್ಜರ–ಪ್ರತೀಹಾರರಾಜ ಮಹೀಪಾಲನು ತನ್ನ ರಾಜ್ಯವನ್ನು ಶತ್ರುವಿನ ಕರುಣೆಗೆ ಬಿಟ್ಟು ಓಡಿಹೋದನು. ಇಂದ್ರನ ಸಾಮಂತನಾದ ವೇಮುಲವಾಡದ ಚಾಲುಕ್ಯವಂಶದ ನರಸಿಂಹನು ಈ ಯುದ್ಧಕಾರ್ಯದಲ್ಲಿ ಹೆಸರಾಂತನು. ಇದು ರಾಷ್ಟ್ರಕೂಟ ಚರಿತ್ರೆಯಲ್ಲಿ ಹಾಗೂ ಇಂಡಿಯಾದೇಶದ ಚರಿತ್ರೆಯಲ್ಲಿಯೇ ಮತ್ತೊಂದು ಸ್ಮರಣಾರ್ಹವಾದ ಘಟನೆ. ಈ ವಿಜಯ ಹಿಂದೆ ಎರಡು ಸಂದರ್ಭಗಳಲ್ಲಿ ಆದಹಾಗೆ, ಉತ್ತರ ಹಿಂದುಸ್ಥಾನದ ರಾಜ್ಯಗಳಲ್ಲಿ ಒಂದು ಅಧೀರತೆಯನ್ನುಂಟು ಮಾಡಿತು. ಇದು ಮತ್ತೊಮ್ಮೆ ರಾಷ್ಟ್ರಕೂಟವಂಶದ ಗೌರವವನ್ನು ವರ್ಧಿಸಿ, ವಿಜಯಿಯನ್ನು ತನ್ನ ಪೂರ್ವಿಕರಾದ ಧ್ರುವ ಮತ್ತು ಮುಮ್ಮಡಿ ಗೋವಿಂದರ ಸಾಲಿಗೆ ಸೇರಿಸಿತು. ಆದರೆ ಈ ಸಾಧನೆಯಿಂದ, ಇದರ ಹಿಂದಿನ ಸಾಧನೆಗಳಂತೆ ತಾತ್ಕಾಲಿಕವಾಗಿ ತೀವ್ರ ರಾಜಕೀಯ ಪ್ರತಿಕ್ರಿಯೆಗಳಾದರೂ ಪ್ರಾಂತ್ಯಗಳ ಲಾಭವೇನೂ ಆಗಲಿಲ್ಲ.

ಮುಮ್ಮಡಿ ಇಂದ್ರನು ಕ್ರಿ.ಶ. 928ರಲ್ಲಿ ಕೀರ್ತಿಶೇಷನಾಗಿ, ಇವನ ಮಗ ಇಮ್ಮಡಿ ಅಮೋಘ ವರ್ಷನು ಉತ್ತರಾಧಿಕಾರಿಯಾದನು. ಇವನು ಒಂದು ವರ್ಷ ಮುಗಿಯುವುದಕ್ಕೆ ಮುಂಚಿತವಾಗಿಯೇ, ಇವನ ತಮ್ಮ ನಾಲ್ವಡಿ ಗೋವಿಂದನ ಕುತಂತ್ರಗಳಿಗೆ ತುತ್ತಾದನು. ಕೆಟ್ಟವನಷ್ಟೇ ಆಗಿರದೆ, ಪ್ರಜಾಪೀಡಕನೆಂದೂ ತೋರಿಸಿಕೊಂಡ ಈ ಘಾತಕನ ರಾಜ್ಯಭಾರ, ಜನಗಳನ್ನು ತುಳಿದಿಟ್ಟಿತು. ಇದರಿಂದಾಗಿ ಇವನು ಸುಮಾರು ಕ್ರಿ.ಶ. 934ರಲ್ಲಿ ಬೇಸರಗೊಂಡಿದ್ದ ಶ್ರೀಮಂತ ವರ್ಗದವರ ಪ್ರಾರ್ಥನೆ ಮತ್ತು ತನ್ನ ಚೇದಿ ಬಾಂಧವರ ಸಹಾಯ ಪಡೆದ ಇವನ ಚಿಕ್ಕಪ್ಪನಾದ ಮುಮ್ಮಡಿ ಅಮೋಘವರ್ಷನಿಂದ ಪದಚ್ಯುತನಾದನು. ಇಮ್ಮಡಿ ಕೃಷ್ಣನ ಕಾಲದಿಂದಲೂ ರಾಷ್ಟ್ರಕೂಟ ಮತ್ತು ತ್ರಿಪುರಿಯ ಚೇದಿವಂಶಗಳ ನಡುವೆ ಮದುವೆ ಸಂಬಂಧಗಳು ಆಗಿದ್ದುವು. ಇಮ್ಮಡಿ ಕೃಷ್ಣನನಂತರದವರು ತ್ರಿಪುರಿಯ ಚೇದಿವಂಶದ ರಾಜಕುಮಾರಿಯರನ್ನು ಕೈಹಿಡಿದಿದ್ದರು.

ಮುಮ್ಮಡಿ ಅಮೋಘವರ್ಷನು ಸಿಂಹಾಸನಕ್ಕೆ ಬರುವ ವೇಳೆಗೆ ಹೆಚ್ಚು ವಯಸ್ಕನಾಗಿದ್ದು, ಧಾರ್ಮಿಕಪ್ರವೃತ್ತಿಯುಳ್ಳವನಾಗಿದ್ದನು. ಇದರಿಂದಾಗಿ, ಆಡಳಿತದ ಹೊಣೆ ಇವನ ಬಲಿಷ್ಠ ಉತ್ತರಾಧಿಕಾರಿಯಾದ ಮುಮ್ಮಡಿ ಕೃಷ್ಣನ ಮೇಲೆ ಬಿದ್ದು, ಅವನು ಉತ್ತರದ ಮತ್ತು ದಕ್ಷಿಣದ ನೆರೆಹೊರೆಯವರ ರಾಜಕೀಯದಲ್ಲಿ ಕೈಹಾಕಿದನು. ಈ ರಾಜಕುಮಾರನು ತನ್ನ ತಂದೆ ಕ್ರಿ.ಶ. 939ರಲ್ಲಿ ಕಾಲವಾದನಂತರ, ಸರಕಾರದ ಸೂತ್ರಗಳನ್ನು ಪೂರ್ಣವಾಗಿ ಹಿಡಿದನು.

ಮುಮ್ಮಡಿ ಕೃಷ್ಣನು ಪಟ್ಟಕ್ಕೆ ಬಂದ ಮೇಲೆ ರಾಷ್ಟ್ರಕೂಟ ಸಾಮ್ರಾಜ್ಯವು ಮತ್ತೊಮ್ಮೆ ಇಂಡಿಯಾದ ಗಣ್ಯ ರಾಜಕೀಯದಲ್ಲಿ ಪ್ರಸಿದ್ಧಿಯನ್ನು ಪಡೆಯಿತು. ರಾಚಮಲ್ಲನನ್ನು ತೆಗೆದುಹಾಕಿ, ಅವನ ಸೋದರನಾದ

ಇಮ್ಮಡಿ ಬೂತುಗನನ್ನು ಸಿಂಹಾಸನಕ್ಕೆ ತರುವ ಮೂಲಕ ಗಂಗವಂಶದ ರಾಜನಿಷ್ಠೆ ದೊರೆಯುವಂತೆ ದೃಢಪಡಿಸಲಾಯಿತು. ಮುಮ್ಮಡಿ ಕೃಷ್ಣನ ಸೋದರಿಯನ್ನು ಮದುವೆಯಾಗಿದ್ದ ಈ ಬೂತುಗನು ತನ್ನ ಬಂಧುವೂ ಪ್ರಭುವೂ ಆದ ಆತನ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಜೊತೆಗೂಡಿದನು.

ಕ್ರಿ. ಶ. ಸುಮಾರು 943ರಲ್ಲಿ ಕೃಷ್ಣನು ತಮಿಳುನಾಡಿನ ಮೇಲ್ವಾಯ್ದು, ಅದರ ಎರಡು ಮುಖ್ಯ ಪಟ್ಟಣಗಳಾದ ಕಾಂಚಿ ಮತ್ತು ತಂಜಾವೂರುಗಳನ್ನು ಹಿಡಿದನು. ಆ ಚೋಳರ ದೊರೆ ಪರಾಂತಕನು ತನ್ನ ರಾಜ್ಯದಿಂದ ಶತ್ರುವನ್ನು ಹೊರದೂಡುವ ಪ್ರಯತ್ನದಲ್ಲಿ ಶೋಚನೀಯವಾಗಿ ಸೋತನು. ತದನಂತರ, ಕ್ರಿ.ಶ. 949 ರಲ್ಲಿ ನಡೆದ ಹೆಸರಾಂತ ತಕ್ಕೋಲಂ ಕದನದಲ್ಲಿ (ಕಾಂಚಿಯ ಹತ್ತಿರ, ಉತ್ತರ ಆರ್ಕಾಟ್ ಜಿಲ್ಲೆಯಲ್ಲಿ) ಇವನು ಘೋರವಾಗಿ ಸೋತನು. ಇವನ ಮಗ, ಹಾಗೂ ಕಿರೀಟಕ್ಕೆ ಉತ್ತರಾಧಿಕಾರಿಯಾಗಿದ್ದ ರಾಜಾದಿತ್ಯನು ಗಂಗರ ಇಮ್ಮಡಿ ಬೂತುಗನಿಂದ ಹತನಾದನು. ಈ ಸೋಲು, ಬಲಿಷ್ಠರಾಗಿ ವರ್ಧಿಸುತ್ತಿದ್ದ ಚೋಳರಿಗೆ ಕುಠಾರಪ್ರಾಯವಾಗಿ ಪರಿಣಮಿಸಿತು. ಅವರು ನಾಲ್ಕು ದಶಕಗಳ ಕಾಲ, ಒಂದನೆಯ ರಾಜರಾಜನು ಪಟ್ಟಕ್ಕೆ ಬರುವ ವರೆಗೂ ತಲೆಯೆತ್ತಲಾಗಲಿಲ್ಲ. ರಾಷ್ಟ್ರಕೂಟ ವಿಜಿಗೀಷುವು ದಕ್ಷಿಣದ ಕೊನೆ ರಾಮೇಶ್ವರದ ವರೆಗೂ ತನ್ನ ಜಯಭೇರಿ ಹೊಡೆಯುವ ಸೈನ್ಯವನ್ನು ನಡೆಯಿಸಿ, ಅಲ್ಲಿ ಒಂದು ಜಯಸ್ತಂಭವನ್ನು ನಿಲ್ಲಿಸಿದನು.

ಮುಮ್ಮಡಿ ಕೃಷ್ಣನು, ತಾನು ಯುವರಾಜನಾಗಿದ್ದಾಗಲೇ ಆರಂಭ ಮಾಡಿದ್ದ ಉತ್ತರ ದೇಶದ ಧಾಳಿಗಳಲ್ಲಿಯೂ ಅಷ್ಟೇ ಯಶಸ್ವಿಯಾದನು. ಗೂರ್ಜರಪ್ರತೀಹಾರ ಸೈನ್ಯಗಳು ಸೋಲಿಸಲ್ಪಟ್ಟವು. ಕಲಚೂರಿಯವರು ಹಲವು ಸಾರಿ ಸೋಲುಂಡು, ಅವರ ಮುಖ್ಯಕೋಟೆಗಳಾದ ಕಾಲಂಜರ್ ಮತ್ತು ಚಿತ್ರ ಕೂಟಗಳನ್ನು ಹಿಡಿಯಲಾಯಿತು. ಇವನು ಇಮ್ಮಡಿ ಬೂತುಗನ ಉತ್ತರಾಧಿಕಾರಿ, ಗಂಗ-ಮಾರಸಿಂಹನ ಸಹಾಯ ಪಡೆದು, ಮಾಳವ ಮತ್ತು ಗುಜರಾತುಗಳ ಮೇಲ್ವಾಯ್ದು, ಮಾಳವದ ರಾಜಧಾನಿ ಉಜ್ಜಯಿನಿಯನ್ನು ಆಕ್ರಮಣ ಮಾಡಿದನು. ತನ್ನ ಆಶ್ರಿತ, ಬದಪನನ್ನು ಪೂರ್ವದ ಚಾಲುಕ್ಯ ಅರಸನನ್ನಾಗಿ ನಿಲ್ಲಿಸಿ, ವೆಂಗಿಯ ರಾಜ್ಯವನ್ನು ತನ್ನ ಅಂಕಿತಕ್ಕೆ ಒಳಪಡಿಸಲಾಯಿತು.

ಮುಮ್ಮಡಿ ಕೃಷ್ಣನು ಈ ರಾಜವಂಶದ ಕಡೆಯ ಮಹಾರಾಜನಾಗಿದ್ದನು. ಇವನ ಆಳಿಕೆಯಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಅದರ ಅತಿದೂರದ ಎಲ್ಲೆ ಕಟ್ಟುಗಳನ್ನು ಮುಟ್ಟಿತು. ಇವನ ಅಧಿಕಾರವ್ಯಾಪ್ತಿ, ಪರ್ಯಾಯದ್ವೀಪದ ಮೇಲೆಲ್ಲ ಹರಡಿತ್ತು ; ಹಾಗೂ, ಮಾಳವ ಮತ್ತು ತಮಿಳುನಾಡುಗಳ ಭಾಗಗಳು ಬಹುಕಾಲ ರಾಷ್ಟ್ರಕೂಟ ಸೇನಾಧಿಪತಿಗಳ ಪದಾಕ್ರಾಂತವಾಗಿದ್ದುವು. ಜಬ್ಬಲ್‌ಪುರದ ಬಳಿ ಜೂರದಲ್ಲಿ ಸಿಕ್ಕಿದ ಕನ್ನಡ ಶಾಸನವೊಂದು ಇವನ ಸಾಹಸಕೃತ್ಯಗಳನ್ನು ೨ಂದದ ಪದ್ಯಶೈಲಿಯಲ್ಲಿ ಬಿತ್ತರಿಸಿರುವುದು ಮನಸೆಳೆಯುವಂತಹದಾಗಿದೆ. ಇವನು 'ಅಕಾಲವರ್ಷ'ನೆಂಬ ಬಿರುದನ್ನು ತಳೆದಿದ್ದನು.

ಕ್ರಿ.ಶ. 967ರಲ್ಲಿ ಮುಮ್ಮಡಿ ಕೃಷ್ಣನು ಮಡಿದನು. ತತ್ಪರಿಣಾಮವಾಗಿ ಈಕೀರ್ತಿವೆತ್ತ ರಾಜ ವಂಶಕ್ಕೆ ಶೀಘ್ರಚ್ಯುತಿ ಬಂದಿತು. ಒಬ್ಬರ ಹಿಂದೆ ಒಬ್ಬರಾಗಿ ಇವನ ಉತ್ತರಾಧಿಕಾರಿಗಳಾಗಿ ಬಂದ ಇವನ ತಮ್ಮ ಕೊಟ್ಟಿಗ, ಅವನ ಸೋದರ ಮಗ ಇಮ್ಮಡಿ ಕರ್ಕ,—ಇವರಿಬ್ಬರೂ ಅಸಮರ್ಥರಾದ ಅರಸರಾಗಿದ್ದರು. ಈ ಸನ್ನಿವೇಶದಿಂದ ಬಲಾಢ್ಯರಾಗುತ್ತಿದ್ದ ಶತ್ರುಗಳಿಗೆ ಪ್ರೋತ್ಸಾಹ ಸಿಕ್ಕಿತು. ಕ್ರಿ. ಶ. 972,—ಕೊಟ್ಟಿಗನ ಆಳಿಕೆಯ ಕಡೆಯ ವರ್ಷದಲ್ಲಿ,—ಪರಮಾರ ಪ್ರಭು, ಸೀಯಕನು ರಾಷ್ಟ್ರಕೂಟ ಪ್ರಾಂತ್ಯಗಳ ಮೇಲ್ವಾಯ್ದು, ಮಳಖೇಡದ ವರೆಗೂ ಮುಂಬರಿದನು. ಸಾಮ್ರಾಜ್ಯದ ಮುಖ್ಯನಗರವು ಆಕ್ರಮಿತವಾಗಿ ಸೂರೆಗೊಂಡು, ಸಾಮ್ರಾಜ್ಯದ ಆಗು ಹೋಗುಗಳ ಮೇಲೆ ಭೀಕರ ಪರಿಣಾಮವನ್ನುಂಟುಮಾಡಿತು. ಇಮ್ಮಡಿ ಕರ್ಕನ ದುರ್ಬಲತೆ ದುರಾಡಳಿತಗಳು, ಇವನ ಸಾಮಂತ, ಚಾಲುಕ್ಯವಂಶದ ಇಮ್ಮಡಿ ತೈಲನ ಏಳ್ಗೆಗೆ ಹಾಗೂ ಕ್ರಿ, ಶ. 973ರಲ್ಲಿ ರಾಷ್ಟ್ರಕೂಟ ಪ್ರಭುತ್ವದ ಅಂತ್ಯಕ್ಕೂ ಅನುವುಮಾಡಿಕೊಟ್ಟವು.

## ರಾಷ್ಟ್ರಕೂಟರ ವಂಶವೃಕ್ಷ

ದಂತಿವರ್ಮನ್

ಇಂದ್ರ I

ಗೋವಿಂದರಾಜ I

ಕರ್ಕ I

ಇಂದ್ರ II

1. ದಂತಿದುರ್ಗ (ಸು. 752-756 ಕ್ರಿ.ಶ.)

ಬೇವ (ವಿವಾಹ—ನಂದಿವರ್ಮನ ಪಲ್ಲವ ಮಲ್ಲನೊಡನೆ)

ಗೋವಿಂದವರ್ಮಪಲ್ಲವ

2. ಕೃಷ್ಣ-I (756-775 ಕ್ರಿ.ಶ.)

3. ಗೋವಿಂದ II (775-780 ಕ್ರಿ.ಶ.)

4. ಧ್ರುವ (780-792 ಕ್ರಿ.ಶ.)

ಕಂಭ

ಕರ್ಕಸುವರ್ಣವರ್ಷ

5. ಗೋವಿಂದ III (792-814 ಕ್ರಿ.ಶ.)

ಇಂದ್ರರಾಜ

6. ಅಮೋಘವರ್ಷ I (814-8೬0. ಕ್ರಿ.ಶ.)

7. ಕೃಷ್ಣ. II (880-915 ಕ್ರಿ.ಶ.)

ಅಬ್ಬಲಬ್ಬೆ
ವಿವಾಹ ಗಂಗಬೂತುಂಗ

ಶಂಖ (ವಿವಾಹ)-ಪಲ್ಲವ
ನಂದಿವರ್ಮನ್ III)

ನೃಪತುಂಗ ಪಲ್ಲವ.

ವಿವಾಹಚೇದಿಲಕ್ಷ್ಮಿ ಜಗತ್ತುಂಗ-ವಿವಾಹ ಚೇದಿಗೋವಿಂದಾಂಬ

8. ಇಂದ್ರ III (935-928 ಕ್ರಿ.ಶ.)

11. ಅಮೋಘವರ್ಷ (935-939 ಕ್ರಿ.ಶ.)

9. ಅಮೋಘವರ್ಷ II
(928-930. ಕ್ರಿ.ಶ.)

10. ಗೋವಿಂದ IV
(930-934/5 ಕ್ರಿ.ಶ.)

12. ಕೃಷ್ಣ. III
(939-966 ಕ್ರಿ.ಶ.

1೩. ಖೊಟ್ಟಿಗ (967 ಕ್ರಿ.ಶ.

ನಿರುಪಮ

ಮಗ

14. ಕರ್ಕ (972-973 ಕ್ರಿ.ಶ.)

15.. ಇಂದ್ರ IV.

ಮೂಲ ಲೇಖಕರು : ಡಾ॥ ಪಿ.ಬಿ. ದೇಸಾಯಿ
ಅನುವಾದಕರು : ಶ್ರೀ ಬಿ.ಕೆ.ಸಿ. ಅಯ್ಯಂಗಾರ್

# ಧರ್ಮ ಮತ್ತು ಸಂಸ್ಕೃತಿ

## ಧರ್ಮ ಮತ್ತು ತತ್ವಶಾಸ್ತ್ರ—ರಾಷ್ಟ್ರಕೂಟರ ಕಾಲ

ಪೂರ್ವಕಾಲದ ಮೂಲಭೂತ ಧಾರ್ಮಿಕ ನಂಬಿಕೆ ಮತ್ತು ಅನುಸರಣೆಗಳು ಈ ಕಾಲದಲ್ಲೂ ಅವಿಚ್ಛಿನ್ನವಾಗಿ ಮುಂದುವರಿದವು. ಧಾರ್ಮಿಕ ಜೀವನದ ಎರಡು ಗಮನಾರ್ಹ ವೈಶಿಷ್ಟ್ಯಗಳಾಗಿದ್ದ ಅನ್ಯಧರ್ಮಸಹಿಷ್ಣುತೆ ಮತ್ತು ಮೂರ್ತಿಪೂಜೆಗಳು ಎಲ್ಲ ವಿಧದಿಂದಲೂ ಮುಂದುವರಿದವು. ಅವರವರ ಒಲವಿಗನುಸಾರವಾಗಿ ದೊರೆಗಳು ಶಿವನನ್ನು, ವಿಷ್ಣುವನ್ನು ಅಥವಾ ಇಬ್ಬರನ್ನೂ ಆರಾಧಿಸುತ್ತಿದ್ದರು. ಆ ಕಾಲಕ್ಕೆ ಸೇರಿದ ತಾಮ್ರಶಾಸನಗಳ ನಾಂದಿಪದ್ಯಗಳಲ್ಲಿ ವಿಷ್ಣು ಮತ್ತು ಶಿವ ಇಬ್ಬರ ಸ್ತುತಿಯೂ ಕಂಡುಬರುತ್ತದೆ ; ಈ ದೇವತೆಗಳ ಉಲ್ಲೇಖ ಶಾಸನಗಳಲ್ಲಿ ಅನೇಕ ಕಡೆ ಬಂದಿದೆ. ಅವರ ಮುದ್ರಿಕೆಗಳಲ್ಲಿ ವಿಷ್ಣುವಿನ ವಾಹನವಾದ ಗರುಡ ಅಥವಾ ಯೋಗಮುದ್ರೆಯಲ್ಲಿರುವ ಶಿವನ ಚಿತ್ರವಿರುತ್ತದೆ. ಬಾದಾಮಿ ಚಾಲುಕ್ಯರಂತೆ ವೇದಕಾಲದ ಯಜ್ಞಯಾಗಾದಿಗಳಲ್ಲಿ ರಾಷ್ಟ್ರಕೂಟರು ನಿರತರಾಗಿದ್ದಂತೆ ಯಾವ ಉಲ್ಲೇಖಗಳೂ ಕಂಡುಬರುವುದಿಲ್ಲ. ಯಜ್ಞಯಾಗಾದಿಗಳು ಸಾಮಾನ್ಯವಾಗಿ ಪ್ರಾಣಿಬಲಿಗೆ ಅವಕಾಶಕೊಡುತ್ತಿದ್ದು ಆಗಿನ ಕಾಲದ ಜೈನಧರ್ಮದ ಉಪದೇಶಗಳಿಗೆ ವಿರುದ್ಧವಾಗಿರುತ್ತಿದ್ದವು ; ಪರಿಣಾಮವಾಗಿ ಯಜ್ಞಯಾಗಾದಿಗಳನ್ನು ನಿಷೇಧಿಸಿರಬಹುದು.

ನೃಪತುಂಗನ ಆಳಿಕೆಯಲ್ಲಿ ಜೈನಧರ್ಮಕ್ಕೆ ಪ್ರಮುಖವಾದ ರಾಜಾಶ್ರಯ ದೊರೆಯಿತು ; ಆತನು ಜೈನದೀಕ್ಷೆ ಪಡೆದಿದ್ದ. ಆದುದರಿಂದ ಹಿಂದೂಧರ್ಮದ ಪುನರುಜ್ಜೀವನ, ಜೈನಧರ್ಮದ ಅಭ್ಯುದಯಕ್ಕೆ ಯಾವುದೇ ಧಕ್ಕೆಯನ್ನುಂಟುಮಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ಎರಡು ಪ್ರಮುಖವಾದ ಕಾರಣಗಳಿವೆ : ಮೊದಲನೆಯದಾಗಿ, ದಖನ್ನಿನ ಗಂಗರಿಂದ ರಾಜಾಶ್ರಯ ದೊರೆತದ್ದು ಜೈನಧರ್ಮದ ಅದೃಷ್ಟವೆನ್ನಬೇಕು. ಅಲ್ಲದೆ, ಈ ಧರ್ಮಕ್ಕೆ ಸಾಕಷ್ಟು ಜನಮನ್ನಣೆಯೂ ದೊರೆತು, ಕೆಲವು ರಾಷ್ಟ್ರಕೂಟ ಸೈನ್ಯಾಧಿಕಾರಿಗಳು ಜೈನಧರ್ಮವನ್ನು ಸೇರಿದರು. ಬನವಾಸಿಯ ಸಾಮಂತನಾಗಿದ್ದ ಬಂಕೇಶ ಮತ್ತು ಆತನ ಮಗ ಲೋಕಾದಿತ್ಯ ಇವರು ಈ ಪಂಥದ ನಿಷ್ಠಾವಂತ ಅನುಯಾಯಿಗಳಾಗಿದ್ದರು. ಎರಡನೆಯದಾಗಿ ಜೈನಸನ್ಯಾಸಿಗಳು, ತತ್ವಜ್ಞಾನಿಗಳು ಮತ್ತು ಕವಿಗಳ ಕೃತಿಗಳು ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಸಮಂತಭದ್ರದೇವ, ಅಕಳಂಕದೇವ, ವಿದ್ಯಾನಂದ, ಜಿನಸೇನ, ಗುಣಚಂದ್ರ, ಪಂಪ—ಇವರು ದಕ್ಷಿಣಭಾರತದಲ್ಲಿ ಜೈನಧರ್ಮದ ಪ್ರಭಾವವು ಪ್ರಬಲಗೊಳ್ಳಲು ಕಾರಣರಾದರು. ಪರಿಣಾಮವಾಗಿ ಜೈನಧರ್ಮ ಜನಪ್ರಿಯಗೊಂಡಿತು ; ಮತ್ತು ಗಣನೀಯ ಪ್ರಮಾಣದ ಅನುಯಾಯಿಗಳನ್ನು ಪಡೆಯಿತು.

ಬೌದ್ಧ ಧರ್ಮಾವಲಂಬಿಗಳ ಬಗ್ಗೆಯೂ ರಾಷ್ಟ್ರಕೂಟರು ಸಹನೆ ಹಾಗೂ ಸಹಕಾರ ಮನೋಭಾವನೆಯಿಂದ ವರ್ತಿಸುತ್ತಿದ್ದರು. ಮುಂಬೈ ಸಮೀಪದ ಕನ್ಹೇರಿ (Kanheri) ಎಂಬಲ್ಲಿ ಒಂದು ಬೌದ್ಧ ಸಂಘವಿತ್ತೆನ್ನಲು ಒಂದನೆ ಅಮೋಘವರ್ಷನ ಕಾಲದ ಮೂರು ಶಾಸನಗಳು ಆಧಾರವನ್ನೊದಗಿಸುತ್ತವೆ. ಆ ಕಾಲದಲ್ಲಿ ಸೊಲ್ಲಾಪುರ ಜಿಲ್ಲೆಯ ಕಂಪಿಲ ಮತ್ತು ಧಾರವಾಡ ಜಿಲ್ಲೆಯ ದಂಬಳ ಎಂಬೆರಡು ಕಡೆ ಮಾತ್ರ ಬೌದ್ಧಸನ್ಯಾಸಿ ಮಠಗಳಿದ್ದುವೆಂದು ಸಾಕ್ಷ್ಯಾಧಾರಗಳಿಂದ ಗೊತ್ತಾಗುತ್ತದೆ. ಹಿಂದೂ, ಜೈನ ಮತ್ತು ಬೌದ್ಧ ಧರ್ಮಗಳ ನಡುವೆ ಯಾವುದೇ ಬಗೆಯ ಸಾಂಸ್ಕೃತಿಕ ವ್ಯತ್ಯಾಸಗಳಿಲ್ಲವೆಂದು ಸಾಮಾನ್ಯ ಜನತೆ ಭಾವಿಸಿದ್ದಂತೆ ತೋರುತ್ತದೆ ; ಅವನವನ ಸಹಜ ಪ್ರವೃತ್ತಿಗನುಸಾರವಾಗಿ ಯಾವುದೇ ಒಂದು ಧರ್ಮವನ್ನು ಅಥವಾ ಮೂರನ್ನೂ ಅನುಸರಿಸಲು ವ್ಯಕ್ತಿಗೆ ಯಾವ ಅಡ್ಡಿಯೂ ಇರಲಿಲ್ಲ. ಅಮೋಘವರ್ಷನು ಜೈನ

ಧರ್ಮದ ನಿಷ್ಠಾವಂತ ಅನುಯಾಯಿಯಾಗಿದ್ದರೂ ಹಿಂದೂ ದೇವತೆಯಾದ ಮಹಾಲಕ್ಷ್ಮಿಯ ಆರಾಧಕನಾಗಿದ್ದು ತನ್ನ ರಾಜ್ಯವನ್ನು ತೊಳಲಿಸುತ್ತಿದ್ದ ಸಾಂಕ್ರಾಮಿಕ ರೋಗವನ್ನು ನಿವಾರಿಸುವ ನಂಬಿಕೆಯಿಂದ ಪ್ರಚೋದಿತನಾಗಿ, ಒಂದು ಕೈಬೆರಲನ್ನೇ ಕತ್ತರಿಸಿ ಆಕೆಗೆ ಬಲಿಯಾಗಿ ಅರ್ಪಿಸಿದ್ದನು[1]. ಆದರೆ ಅವನ ಒಲವು ಹಿಂದೂಧರ್ಮಕ್ಕಿಂತ ಹೆಚ್ಚಾಗಿ ಜೈನಧರ್ಮದ ಕಡೆಗಿದ್ದುದರಿಂದ ಒಂದೆರಡು ಬಾರಿ ಅಕಿಂಚನ (ಅಪರಿಗ್ರಹ) ವ್ರತ ಪರಿಪಾಲಿಸುವ ಉದ್ದೇಶದಿಂದ ರಾಜ್ಯತ್ಯಾಗಮಾಡಿ ಸ್ಯಾದ್ವಾದವನ್ನು ಅನುಸರಿಸಿದಂತೆ ಕಂಡುಬರುತ್ತದೆ. ಹೀಗೆ ವಿವಿಧ ನಂಬಿಕೆಗಳ ಸಂಯೋಗದ ಫಲವಾಗಿ ಹೊಂದಿಕೆ ಮತ್ತು ಸಾಮರಸ್ಯಗಳು ಬೆಳೆಯಲು ಅವಕಾಶವುಂಟಾಯಿತು. ಹಿಂದೂ ಮತ್ತು ಜೈನದೇವತೆಗಳೆರಡನ್ನೂ ಉಳ್ಳ ಸಂಕೀರ್ಣ ಪದ್ಧತಿಯ ದೇವಾಲಯಗಳು ಆಗ ಅಸ್ತಿತ್ವದಲ್ಲಿದ್ದವು.

ವಿವಿಧ ನಂಬಿಕೆ ಹಾಗೂ ಸಂಪ್ರದಾಯಗಳ ನಡುವೆ ಏಕತೆಯನ್ನು ಸಾಧಿಸುವುದೇ ಹಿಂದೂ ಧರ್ಮದ ಪ್ರಮುಖ ವೈಲಕ್ಷಣ್ಯವಾಗಿದೆಯೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದೇ ಸಹನೆಯ ಆದರ್ಶವನ್ನು ಇಸ್ಲಾಂ ಧರ್ಮಕ್ಕೂ ವಿಸ್ತರಿಸಲಾಯಿತು. ಎಂಟನೆ ಶತಮಾನದ ಪೂರ್ವಾರ್ಧದಲ್ಲಿ ಮುಸ್ಲಿಮರು ಭಾರತಕ್ಕೆ ಆಗಮಿಸಿ ಸಿಂಧೂ ಪ್ರದೇಶದಲ್ಲಿ ನೆಲಸಿದರು. ಅವರು ಇನ್ನೂ ಮುಂದಕ್ಕೆ ವಿಸ್ತರಿಸದಂತೆ ಗೂರ್ಜರ ದೊರೆಗಳು ವಿರೋಧಿಸಿದರು. ಆದರೆ ಗೂರ್ಜರ ದೊರೆಗಳೊಂದಿಗೆ ಸ್ನೇಹವಲ್ಲದ ಸಂಬಂಧ ಹೊಂದಿದ್ದ ರಾಷ್ಟ್ರಕೂಟ ದೊರೆಗಳು ಅರಬರಿಗೆ ಪಶ್ಚಿಮ ಕರಾವಳಿಯಲ್ಲಿ ಬಂದಿಳಿಯಲು ಅವಕಾಶಮಾಡಿಕೊಟ್ಟಿದ್ದು ಮಾತ್ರವಲ್ಲದೆ, ಪ್ರಾರ್ಥನಾಮಂದಿರಗಳನ್ನು ಕಟ್ಟಿಸಿಕೊಳ್ಳಲೂ ಅಪ್ಪಣೆ ಕೊಟ್ಟರು. ಒಂಬತ್ತನೆ ಶತಮಾನಕ್ಕೆ ಸೇರಿದ ಸುಲೇಮಾನನೆಂಬ ಮುಸ್ಲಿಂ ವ್ಯಾಪಾರಿಯೊಬ್ಬ ರಾಷ್ಟ್ರಕೂಟರನ್ನು ಆ ಕಾಲದ ಅತ್ಯಂತ ಪ್ರಬಲ ದೊರೆಗಳೆಂದು ಹೆಸರಿಸಿದ್ದಾನೆ; ಅವರ ಉದಾರತೆ ಮತ್ತು ಸಹನೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾನೆ. ಮುಸ್ಲಿಮರಿಗೆ ಬಹಿರಂಗವಾಗಿ ತಮ್ಮ ಮತಾನುಸರಣೆಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟದ್ದಲ್ಲದೆ ಅವರಿಗಾಗಿ ಜುಮ್ಮಾ ಮಸೀದಿಗಳನ್ನು ನಿರ್ಮಿಸಲೂ ಅವಕಾಶ ಕಲ್ಪಿಸಿಕೊಟ್ಟದ್ದಾಯಿತು. ತಮ್ಮ ಧರ್ಮಾವಲಂಬಿಗಳಿಗೆ ನ್ಯಾಯ ವಿತರಣೆ ಮಾಡುವ ಸಲುವಾಗಿ ಮುಸ್ಲಿಂ ನ್ಯಾಯಾಧೀಶರನ್ನು ನೇಮಕ ಮಾಡಲಾಯಿತು.[2] ಸಿಂಧುವಿನ ಮುಸ್ಲಿಂ ಆಕ್ರಮಣಕಾರರು ಹಿಂದೂ ದೇವಾಲಯಗಳನ್ನು ನೆಲಸಮಗೊಳಿಸಿ, ಜಿಜಿಯಾ ತೆರಿಗೆಯನ್ನು ಅವರ ಮೇಲೆ ಹೇರಿ, ಸಾವಿರಾರು ಹಿಂದೂ ನಾರಿಯರನ್ನು ತೊತ್ತಿರನ್ನಾಗಿ ಪರಿವರ್ತಿಸಿ, ಬಗ್ದಾದಿನ ಬೀದಿ ಬೀದಿಗಳಲ್ಲಿ ಮಾರಾಟಮಾಡಿದ ದೌರ್ಜನ್ಯದ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ರಾಷ್ಟ್ರಕೂಟರ ಸಹನೆಯನ್ನು ಪರಿಶೀಲಿಸಿದರೆ ಆಶ್ಚರ್ಯಚಕಿತರಾಗಬೇಕಾಗುತ್ತದೆ.[3]

ದೇವತಾಶಾಸ್ತ್ರಕ್ಕೆ ಸಂಬಂಧಿಸಿದ ಧಾರ್ಮಿಕ, ತಾತ್ವಿಕ ಮತ್ತು ಜನಪ್ರಿಯ ಎಂಬ ಮೂರು ಪ್ರಮುಖ ವಿಭಾಗಗಳನ್ನಾಗಿ ಮಾಡಿಕೊಂಡು ಈ ಕಾಲದ ಧರ್ಮ ಮತ್ತು ತತ್ವಜ್ಞಾನದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ.

ಶಂಕರಾಚಾರ್ಯರ ಹಿರಿಯ ಸಮಕಾಲೀನರಾಗಿದ್ದ ಕುಮಾರಿಲಭಟ್ಟರಿಂದ ಧಾರ್ಮಿಕ ಚಳವಳಿ ಆರಂಭವಾದಂತೆ ಕಂಡುಬರುತ್ತದೆ. ಅವರು ಶುದ್ಧ ವೈದಿಕಧರ್ಮ ಪ್ರತಿಪಾದಕರಾಗಿದ್ದು ಸನ್ಯಾಸವು ಅಶಾಸ್ತ್ರೀಯವೆಂದು ವಿರೋಧಿಸಿ ಆಜೀವಪರ್ಯಂತ ವೇದಸಮ್ಮತವಾದ ಪ್ರಾಣಿಬಲಿಯೇ ಮುಂತಾದ ವ್ರತನಿಯಮಗಳನ್ನು ಅನುಸರಿಸಲು ಬೋಧಿಸುತ್ತಿದ್ದಂತೆ ಕಂಡುಬರುತ್ತದೆ. ಆದರೆ ಆತನ ತೀಕ್ಷ್ಣವಾದ ತರ್ಕವೂ ಸಹ ಜನಸಾಮಾನ್ಯರನ್ನು ಶ್ರೌತಮತಕ್ಕೆ ಆಕರ್ಷಿಸುವಲ್ಲಿ ವಿಫಲವಾಯಿತು. ಅಮೋಘವರ್ಷನ ಸಂಜನ ತಾಮ್ರಶಾಸನಗಳು ಮತ್ತು ಗೋವಿಂದನ ದತ್ತಿಶಾಸನಗಳಲ್ಲಿ ಮಾತ್ರ ಸ್ಪಷ್ಟವಾಗಿ ರಾಜಸೂಯ, ವಾಜಪೇಯ ಮುಂತಾದ ವೈದಿಕ ಯಜ್ಞಯಾಗಾದಿಗಳಿಗಾಗಿ ದತ್ತಿಬಿಟ್ಟದ್ದಾಗಿ ತಿಳಿಸಲಾಗಿದೆ. ಅವುಗಳನ್ನು ಬಿಟ್ಟರೆ,

ರಾಷ್ಟ್ರಕೂಟರಿಂದ ಬಿಡಲ್ಪಟ್ಟ ಅಸಂಖ್ಯಾತ ದತ್ತಿಗಳಲ್ಲೆಲ್ಲಾ ಸ್ಮೃತಿಸಮ್ಮತವಾದ ಧಾರ್ಮಿಕ ವಿಧಿಗಳ ವ್ಯವಸ್ಥೆಗಾಗಿ ಬ್ರಾಹ್ಮಣರಿಗೆ ಬಿಟ್ಟ ದತ್ತಿಗಳೇ ಹೆಚ್ಚಾಗಿವೆ.

ಸ್ಮಾರ್ತಪುರಾಣಿಕವೆಂದು ಕರೆಯಬಹುದಾದ ಧರ್ಮವನ್ನು ಹೆಚ್ಚು ಜನ ಅಂದು ಅವಲಂಬಿಸಿದ್ದಂತೆ ಕಂಡುಬರುತ್ತದೆ. ಪುರೋಹಿತವರ್ಗವಂತೂ ಸ್ಮಾರ್ತ ಅಗ್ನಿಹೋತ್ರ ಸಂಪ್ರದಾಯದವರಿಂದಲೇ ಕೂಡಿರುತ್ತಿತ್ತು. ಅಲ್ಲದೆ ಸ್ತುತಿ. ಸಂಧ್ಯೆ ಮತ್ತು ವ್ರತಗಳ ಸಂಖ್ಯೆ ಹೆಚ್ಚಾಗುತ್ತಾ ನಡೆಯಿತು. ಕೆಲವು ವರ್ಗದ ಜನಗಳಾದರೂ ಸ್ಮೃತಿಗಳಿಂದ ವಿಧಿಸಲ್ಪಟ್ಟ ಅನೇಕ ಪ್ರಾಯಶ್ಚಿತ್ತ (ಶುದ್ಧೀಕರಣ ಸಮಾರಂಭ) ಗಳನ್ನು ಮಾಡಿಸಿಕೊಳ್ಳುತ್ತಿದ್ದರೆಂದು ಕ್ರಿ.ಶ. 939ರ ನರಗುಂದ ಶಾಸನದಿಂದಲೂ ನಾಲ್ಕನೆ ಗೋವಿಂದನ ಕೈಲಾಸ ಶಾಸನದಿಂದಲೂ ವ್ಯಕ್ತವಾಗುತ್ತದೆ. ಯಾತ್ರೆಹೋಗುವ ಸಂಪ್ರದಾಯವಂತೂ ಅತ್ಯಂತ ಜನಪ್ರಿಯ ವಾಗಿತ್ತು. ದಂತಿದುರ್ಗ ಮಹಾರಾಜನು (ಕ್ರಿ.ಶ. 750) ಉಜ್ಜಯಿನಿಗೆ ಹೋಗಿ 'ಹಿರಣ್ಯಗರ್ಭ ಮಹಾದಾನ' ಮಾಡಿದನೆಂದು ತಿಳಿದುಬಂದಿದೆ. ರಾಷ್ಟ್ರಕೂಟರ ದತ್ತಿಶಾಸನಗಳ ನಾಂದಿ ಪದ್ಯಗಳಲ್ಲಿ ಬರುವ ಶಿವ ಮತ್ತು ವಿಷ್ಣು ಸ್ತುತಿಗಳ ಸಂಗತಿಯನ್ನು ಗಮನಿಸಿ, ಅಂದು ಶೈವ ಮತ್ತು ವೈಷ್ಣವ ಧರ್ಮಗಳೇ ಪ್ರಮುಖವಾಗಿದ್ದುವೆಂದು ಹೇಳಬಹುದಾಗಿದೆ. ಈ ದೇವತೆಗಳೊಡನೆ ಸೂರ್ಯ, ಶಾರದೆ ಮತ್ತು ಕೆಲವು ಸ್ಥಳೀಯ ದೇವತೆಗಳನ್ನು ಆರಾಧಿಸುತ್ತಿದ್ದರು. ಸಾಮಾನ್ಯ ಜನರಂತೂ ಸರ್ಪಗಳು, ದೇವರ ಕಲ್ಲುಗಳು, ವೃಕ್ಷಗಳು ಮತ್ತು ಆದಿವಾಸಿ ದೇವತೆಗಳೇ ಮುಂತಾದ ಅಸಂಖ್ಯ ದೇವತೆಗಳನ್ನು ಪೂಜಿಸುತ್ತಿದ್ದರು.

ದೇವಸ್ಥಾನಗಳು ಸಾರ್ವಜನಿಕ ಆರಾಧನೆಯ ಕೇಂದ್ರಸ್ಥಾನವಾಗಿ ಪರಿಗಣಿಸಲ್ಪಟ್ಟು ಸಾಕಷ್ಟು ಸಂಪತ್ತನ್ನು ಗಳಿಸಲು ಅವುಗಳಿಗೆ ಅವಕಾಶವಾಯಿತು. ಆಳವಾದ ಧರ್ಮಶ್ರದ್ಧೆಯಿಂದ ಕೂಡಿದ ಜೀವನವನ್ನು ನಡೆಯಿಸುವ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ, ಉದಾರವಾಗಿ ದತ್ತಿ ಬಿಡುವ ಮೇಲ್ಪಂಕ್ತಿಯನ್ನು ಅಂದಿನ ರಾಜರುಗಳು ಸ್ವತಃ ಹಾಕಿಕೊಡುತ್ತಿದ್ದರು. ಈ ಬಗೆಯ ಮೇಲ್ಪಂಕ್ತಿ ಪ್ರಜೆಗಳ ಮೇಲೆ ತನ್ನ ಪ್ರಭಾವವನ್ನು ಬೀರದೆ ಇರಲಿಲ್ಲ. ಆದಕಾರಣ ರಾಷ್ಟ್ರಕೂಟರ ಪ್ರಥಮ ದೊರೆಯಾಗಿದ್ದ ದಂತಿದುರ್ಗನು ತನ್ನ ತಾಯಿಯ ಆದೇಶದಂತೆ ಅನೇಕ ಹಳ್ಳಿಗಳನ್ನು ಧರ್ಮಾರ್ಥವಾಗಿ ದತ್ತಿ ಬಿಟ್ಟು, ವಿವಿಧ ಧಾರ್ಮಿಕ ಸಮಾರಂಭಗಳನ್ನು— ಅವುಗಳ ಅತಿ ಸೂಕ್ಷ್ಮವಿವರಗಳಿಗೂ ಗಮನಕೊಟ್ಟು, ನಿರ್ವಹಿಸಿದಂತೆ ತಿಳಿದುಬರುತ್ತದೆ. ಆತನ ದೊಡ್ಡಪ್ಪನಾಗಿದ್ದ ಮೊದಲನೆ ಕೃಷ್ಣನು ತನ್ನ ಧರ್ಮಶ್ರದ್ಧೆಗೆ ಶಾಶ್ವತವಾದ ಸ್ಮಾರಕವೊಂದನ್ನು ಅಪಾರವಾದ ದ್ರವ್ಯವನ್ನು ಖರ್ಚುಮಾಡಿ ನಿರ್ಮಿಸಿದನು. ಪರ್ವತವೊಂದರ ಓರೆಯಿಂದ ಕೆತ್ತಿ ಬಿಡಿಸಲ್ಪಟ್ಟ ಕೃಷ್ಣೇಶ್ವರ (ಅಥವಾ ಕಾಮೇಶ್ವರ) ದೇವಸ್ಥಾನವು ಬೆಲೆಯುಳ್ಳ ಒಡವೆಗಳಿಂದಲೂ ಚಿನ್ನದ ಆಭರಣಗಳಿಂದಲೂ ಅಲಂಕರಿಸಲ್ಪಟ್ಟಿತು. ವಿನ್‌ಸೆಂಟ್ ಸ್ಮಿತ್ ಹೇಳುವಂತೆ, "ಕೈಲಾಸ ದೇವಸ್ಥಾನವು ವಿಶ್ವದ ಅದ್ಭುತಗಳಲ್ಲಿ ಒಂದಾಗಿದ್ದು, ಅದನ್ನು ನಿರ್ಮಿಸಲು ಆಶ್ರಯಕೊಟ್ಟ ದೊರೆಗೆ ಗೌರವ ತರುವಂತಿದೆ, ಮತ್ತು ಯಾವ ದೇಶವೂ ಹೆಮ್ಮೆ ಪಟ್ಟುಕೊಳ್ಳಬಹುದಾದ ಸಾಧನೆ[4]" ಯಾಗಿದೆ. ಕೃಷ್ಣರಾಜನು ಎಲ್ಲಾಪುರ ಪರ್ವತದ ಮೇಲೆ ಅತ್ಯದ್ಭುತ ಮಾದರಿಯ ದೇವಸ್ಥಾನವನ್ನು ಕಟ್ಟಿಸಿದಂತೆ ಬರೆದ ದತ್ತಿಶಾಸನಗಳಿಂದ ತಿಳಿದುಬರುತ್ತದೆ. ದೇವತೆಗಳು ಒಮ್ಮೆ ಆಕಾಶದಲ್ಲಿ ಪುಷ್ಪಕ ವಿಮಾನದಲ್ಲಿ ಹೋಗುತ್ತಿದ್ದಾಗ ಈ ದೇವಸ್ಥಾನ ಅವರ ಕಣ್ಣಿಗೆ ಬಿದ್ದು ಆಶ್ಚರ್ಯಚಕಿತರಾಗಿ ಹೀಗೆ ಹೇಳಿದರಂತೆ: "ಈ ಶಿವನ ದೇವಾಲಯ ತನ್ನಿಂದ ತಾನೇ ಅಸ್ತಿತ್ವಕ್ಕೆ ಬಂದಿದೆ; ಏಕೆಂದರೆ ಈ ಬಗೆಯ ಸೌಂದರ್ಯವು ಕಲಾಕೃತಿಯಿಂದ ಬರಲು ಸಾಧ್ಯವಿಲ್ಲ". ತನ್ನಿಂದ ನಿರ್ಮಿಸಲ್ಪಟ್ಟ ಕಲಾಕೃತಿಯನ್ನು ಕಂಡು ಈ ದೇವಸ್ಥಾನದ ಶಿಲ್ಪಿಯೇ ವಿಸ್ಮಿತನಾಗಿ ಈ ಬಗೆಯ ಮತ್ತೊಂದು ಅದ್ಭುತ ನಿರ್ಮಾಣ ತನ್ನಿಂದ ಸಾಧ್ಯವಿಲ್ಲವೆಂದು ಶಂಕೆಪಟ್ಟಿದ್ದಾನೆ. "ಗಂಗಾಜಲ, ಚಂದ್ರನ ಕಾಂತಿ, ಮತ್ತು ಹಾಲಾಹಲವಿಷ—ಇವುಗಳಿಂದ ಅಲಂಕೃತನಾಗಿದ್ದ ಶಿವನನ್ನು ದೊರೆಯಾದ ಕೃಷ್ಣನು ಪ್ರತಿಷ್ಠಾಪಿಸಿ ಸ್ವಹಸ್ತದಿಂದ ಚಿನ್ನ, ಪದ್ಮರಾಗ, ಮಾಣಿಕ್ಯಹಾಗೂ,

ಅಮೂಲ್ಯವಾದ ಒಡವೆಗಳಿಂದ ಮತ್ತೊಮ್ಮೆ ಅಲಂಕರಿಸಿದನಂತೆ! (ಮುಂಬೈ ಗಜೆಟಿಯರಿನಲ್ಲಿ ಪ್ರಸಿದ್ಧಿ ಸಲ್ಪಟ್ಟ ಆರ್. ಜಿ. ಭಂಡಾರಕರ್ ಅವರ The History of the Dekhan).

ಸುಮಾರು ಅರುವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ ರಾಷ್ಟ್ರಕೂಟರ ಅತ್ಯಂತ ಪ್ರಸಿದ್ಧ ದೊರೆಯಾದ ಅಮೋಘವರ್ಷನು ತನ್ನ ಅರುವತ್ತನೆ ವಯಸ್ಸಿನ ಬಳಿಕ ಆಗಾಗ ಲೌಕಿಕ ಜೀವನದಿಂದ ನಿವೃತ್ತನಾಗಿ, ಧಾರ್ಮಿಕ ಜೀವನದಲ್ಲಿ ಪ್ರವೃತ್ತನಾಗಿರುತ್ತಿದ್ದನಂತೆ. ನಾಲ್ಕನೆ ಗೋವಿಂದನು ತನ್ನ ಕಿರೀಟ ಧಾರಣೋತ್ಸವದ ಸಂದರ್ಭದಲ್ಲಿ ನಾಲ್ಕುನೂರು ಹಳ್ಳಿಗಳನ್ನೂ ಮೂವತ್ತೆರಡು ಲಕ್ಷವರಹಗಳನ್ನೂ ಅಸಂಖ್ಯಾತ ದೇವಾಲಯಗಳಿಗೆ ದಾನಮಾಡಿದಂತೆ ತಿಳಿದುಬರುತ್ತದೆ. ಕೇವಲ ಮೂರು ವರ್ಷಗಳ ಕ್ರಿ.ಶ. 936–939) ಕಾಲ ರಾಜ್ಯವಾಳಿದ ಮೂರನೆಯ ಅಮೋಘವರ್ಷನೂ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಅನೇಕ ದತ್ತಿಗಳನ್ನು ಬಿಟ್ಟದ್ದಲ್ಲದೆ, ತನ್ನ ಇಷ್ಟದೈವವಾದ ಶಿವನಿಗೆ ಅನೇಕ ದೇವಸ್ಥಾನಗಳನ್ನು ಕಟ್ಟಿಸಿಕೊಟ್ಟಂತೆ ಕಂಡುಬಂದಿದೆ. ಆತನ ಸಾವನ್ನು 'ಉದಾತ್ತ ಜೀವವೊಂದು ಭಗವಂತನ ತೇಜಸ್ಸಿನಲ್ಲಿ ಐಕ್ಯಗೊಂಡಿತು' ಎಂದು ಬಣ್ಣಿಸಲ್ಪಟ್ಟಿರುವುದನ್ನು ನೋಡಿದರೆ ರಾಷ್ಟ್ರಕೂಟ ದೊರೆಗಳಲ್ಲೆಲ್ಲಾ ಆತನ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಮತ್ತು ಧರ್ಮಶ್ರದ್ಧೆಗಳಿಗೆ ಹಿರಿದಾದ ಸ್ಥಾನವಿತ್ತೆಂಬುದರಲ್ಲಿ ಸಂದೇಹವಿಲ್ಲ[5].

ಮೂರನೆ ಅಮೋಘವರ್ಷನ ಮಗ ಮೂರನೆ ಕೃಷ್ಣನು ಚೋಳರನ್ನು ಸದೆಬಡಿದು, ತನ್ನ ರಾಜ್ಯವನ್ನು ಹತ್ತನೆ ಶತಮಾನದ ಮಧ್ಯಭಾಗದಲ್ಲಿ ಕೆಲವು ಕಾಲ ಇಡೀ ದಕ್ಷಿಣಭಾರತಕ್ಕೆ ವ್ಯಾಪಿಸಿದುದರಿಂದ, ತನ್ನ ವಿಜಯದ ಸಂಕೇತವಾಗಿ ರಾಮೇಶ್ವರದಲ್ಲಿ ಕೃಷ್ಣೇಶ್ವರ ಮತ್ತು ಗಂಡಮಾರ್ತಾಂಡ ದೇವಾಲಯಗಳನ್ನೂ ಕಾಂಚಿಯಲ್ಲಿ ಕಾಲಪ್ರಿಯ ದೇವಾಲಯವನ್ನೂ ಕಟ್ಟಿಸಿದನು. ಮದ್ರಾಸ್ ಸಮೀಪದಲ್ಲಿರುವ ತಿರುವಟ್ಟಿ ಯೂರಿನ ಶಿವದೇವಾಲಯಕ್ಕೆ ಆತನ ತಾಯಿಯಿಂದ ಮತ್ತು ಮಾನ್ಯಖೇಟದ (ಮಳಖೇಡ) ವ್ಯಾಪಾರಿ ಯೊಬ್ಬನಿಂದ ಬಳುವಳಿಗಳು ದೊರೆತಂತೆ ತಿಳಿದುಬರುತ್ತದೆ[6]. ಬ್ರಾಹ್ಮಣರನ್ನೇ ದೇವಸ್ಥಾನಗಳ ಪೂಜಾಕಾರ್ಯಕ್ಕೆ ನಿಯೋಜಿಸಲಾಗುತ್ತಿತ್ತು. ಆದರೂ ಕೆಲವು ವೈಷ್ಣವೇತರ ದೇವಾಲಯಗಳಿಗೆ ಗುರವರೆಂದು ಕರೆಯಲ್ಪಡುತ್ತಿದ್ದ ಬ್ರಾಹ್ಮಣೇತರರನ್ನು ಪೂಜಾರಿಗಳನ್ನಾಗಿ ನೇಮಿಸಿದ್ದಂತೆ ಹೇಳಲಾಗಿದೆ. (ನೋಡಿ, ಅಡಿಟಿಪ್ಪಣಿ, ಪುಟ 307 "Early History of Deccan" Yazdani ಯಾಜ್ದಾನಿ). ದೇವಮೂರ್ತಿಯನ್ನು ಅವರು ದಿನಕ್ಕೆ ಮೂರು ಬಾರಿ ದಿವ್ಯವಾಗಿ ಪೂಜಿಸುತ್ತಿದ್ದರು. "ಸುಗಂಧಜಲದಿಂದ ಪ್ರೋಕ್ಷಣೆ, ಬೆಲೆಯುಳ್ಳ ವಸ್ತ್ರಾಭರಣಗಳಿಂದ ಅಲಂಕಾರ ಮತ್ತು ಪುಷ್ಕಳವಾದ ನೈವೇದ್ಯ"ವನ್ನು ಒದಗಿಸಲಾಗುತ್ತಿತ್ತು. ಪೂಜೆಗೆ ಬಿಡಿಹೂಗಳು ಮತ್ತು ಹಾರಗಳು ಅನಿವಾರ್ಯವಾದುದರಿಂದ ಹೂ ದೋಟಗಳನ್ನು ಬೆಳೆಸಲು ರಾಷ್ಟ್ರಕೂಟರು ದತ್ತಿಬಿಡುತ್ತಿದ್ದರು; ಸಾಮಾನ್ಯವಾಗಿ ಅವು ದೇವಸ್ಥಾನದ ಆಸ್ತಿಗಳೇ ಆಗಿರುತ್ತಿದ್ದವು. ಹಬ್ಬ ಹರಿದಿನಗಳಲ್ಲಿ ಗೋವನ್ನು ವಿಶೇಷವಾದ ಪೂಜ್ಯವಸ್ತುವಾಗಿ ಪರಿಗಣಿಸಲಾಗುತ್ತಿತ್ತು. ಜಾತ್ರೆಗಳಲ್ಲಿ ರಥೋತ್ಸವವನ್ನು ಆಚರಿಸಲಾಗುತ್ತಿತ್ತು. ಮೂರ್ತಿಗಳನ್ನು ಹಿಂದೂಧರ್ಮವು ಕಣ್ಣಿಗೆ ಕಾಣುವಂಥ ಕೇವಲ ಸಂಕೇತಗಳೆಂದು ಸೈದ್ಧಾಂತಿಕವಾಗಿ ಭಾವಿಸುತ್ತದೆ. ಆದರೆ ಮೂರ್ತಿಗಳ ಸಲುವಾಗಿ ಒಡವೆವಸ್ತುಗಳು, ಅವುಗಳ ಆರಾಧನೆಯ ಸಲುವಾಗಿ ಸಿಬ್ಬಂದಿಯ ವ್ಯವಸ್ಥೆ, ಇವುಗಳಿಂದಾಗಿ ಕಣ್ಣಿಗೆ ಕಾಣುವ ಮೂರ್ತಿಯೇ ಸರ್ವಸ್ವ ಎಂಬ ನ್ಯೂನದೃಷ್ಟಿಯ ಭಾವನೆಯೇ ಕ್ರಮೇಣ ಬಲಿತು ಅವುಗಳ ಪಾವಿತ್ರ್ಯ ಮತ್ತು ರಕ್ಷಣೆ ಈ ಕಾಲದಲ್ಲಿ ಒಂದು ವಿಶೇಷ ಹೊಣೆಗಾರಿಕೆಯಾಗಿ ಪರಿಣಮಿಸಿತು[7]. ಪ್ರಸಿದ್ಧ ಪಂಢರಾಪುರದ ದೇವಾಲಯವು ಈ ಕಾಲಕ್ಕಾಗಲೇ ಸಾಕಷ್ಟು ಜನಪ್ರಿಯ ವಾಗಿತ್ತೆಂಬುದು ಕುತೂಹಲಕಾರಿ ಅಂಶವಾಗಿದೆ[8]. ಆದರೆ ಮುಂದೆ ಎಷ್ಟೋ ಕಾಲವಾದ ಬಳಿಕವೇ

ಮಹಾರಾಷ್ಟ್ರ ಮತ್ತು ಕರ್ನಾಟಕದ ಸಂತರ ಪ್ರಚಾರದಿಂದ ಅದು ಭಕ್ತಿಸಂಪ್ರದಾಯದ ಕೇಂದ್ರಸ್ಥಳವಾಗಿ ಪರಿಣಮಿಸಿತು.

ಧಾರ್ಮಿಕ ಮಹತ್ವವನ್ನು ಪಡೆಯಲು ದಾನಶೀಲರಾಗುವುದೇ ಪರಿಣಾಮಕಾರಿಯಾದ ಮತ್ತು ನಂಬಬಹುದಾದ ಮಾರ್ಗವೆಂಬ ತತ್ವ ದಿನಕಳೆದಂತೆ ಪ್ರಬಲಗೊಳ್ಳುತ್ತಿತ್ತು. ದಾನಧರ್ಮಗಳ ಸಲುವಾಗಿ ದೇವಾಲಯಗಳಿಗೆ ಮೀಸಲಾಗಿಡುತ್ತಿದ್ದ ಸಂಪತ್ತಿನ ಒಂದು ಅಂಶವನ್ನು ದಾರಿದ್ರ್ಯ ನಿರ್ಮೂಲನದ ಸಲುವಾಗಿ ವಿನಿಯೋಗಿಸಲಾಗುತ್ತಿತ್ತು. ಮೊದಲನೆಯ ರಾಷ್ಟ್ರಕೂಟ ದೊರೆಯಾದ ದಂತಿದುರ್ಗನು 'ಹಿರಣ್ಯಗರ್ಭ ಮಹಾದಾನ'ವನ್ನು ಕೊಟ್ಟರೆ ಇನ್ನುಳಿದ ದೊರೆಗಳಾದ ಇಂದ್ರ ಮತ್ತು ನಾಲ್ಕನೆ ಗೋವಿಂದರು ಇದೇ ದಾರಿಯನ್ನನುಸರಿಸಿ ತಾವೂ ಸಹ 'ತುಲಾ ಪುರುಷ ದಾನ'ವನ್ನು ಮಾಡಿದಂತೆ ತಿಳಿದು ಬರುತ್ತದೆ. ದಾನಧರ್ಮಕ್ಕೆ ಮೀಸಲಿಟ್ಟ ಸಂಪತ್ತಿನ ಒಂದು ಭಾಗವನ್ನು ತಪ್ಪದೆ ಸಾರ್ವಜನಿಕ ಅಭಿವೃದ್ಧಿಯ ಉದ್ದೇಶಗಳ ಕಡೆ ತಿರುಗಿಸಲಾಗುತ್ತಿತ್ತು[9].

ತತ್ವಶಾಸ್ತ್ರಕ್ಕೆ ಈ ಕಾಲದ ಕೊಡುಗೆ ತುಂಬಾ ಬೆಲೆಯುಳ್ಳದ್ದಾಗಿದೆಯೆನ್ನಬಹುದು. ಜ್ಞಾನದಾಹ ಮತ್ತು ಸತ್ಯಾನ್ವೇಷಣೆ ಅತ್ಯಂತ ತೀವ್ರಸ್ಥಿತಿಯಲ್ಲಿದ್ದಿತೆನ್ನಲು ಶಂಕರಾಚಾರ್ಯರಿಂದ ಆರಂಭಗೊಂಡ ಹೊಸ ತಾತ್ವಿಕ ಚಟುವಟಿಕೆಗಳೇ ಸಾಕ್ಷಿಯಾಗಿವೆ. ಜನತೆಯ ಧಾರ್ಮಿಕ ಜೀವನದ ಮೇಲೆ ಅಗಾಧ ಪ್ರಭಾವವನ್ನಿರಿಸಿ ಕೊಂಡಿದ್ದ ಮಹಾ ತತ್ವಜ್ಞಾನಿ ಶಂಕರಾಚಾರ್ಯರು ಅಂದು ಅಖಿಲ ಭಾರತ ವ್ಯಾಪ್ತಿಯುಳ್ಳ ವ್ಯಕ್ತಿತ್ವವನ್ನು ಪಡೆದಿದ್ದರು. ಅನೇಕ ಪೌರಾಣಿಕ ದೇವತೆಗಳ ಸ್ತುತಿಗಳನ್ನು ಅವರು ರಚಿಸಿದರು. ವಿವಿಧವಾದ ನಂಬಿಕೆ ಮತ್ತು ಪಂಥಗಳಿಗೆ ಸೇರಿದ್ದವರೂ ಸಹ, ಒಂದೇ ದೈವ ಹಲವು ವಿಧದಲ್ಲಿ ಮೈದೋರುವುದೆಂದು ನಂಬಿದ್ದರು. ಕ್ರಿ.ಶ. ಐದನೆ ಶತಮಾನದಿಂದ ಪುರಾಣಗಳೂ ಸಹ ಒಬ್ಬನೇ ಪರಮಾತ್ಮನ ವಿವಿಧ ರೂಪಗಳೇ ಬೇರೆಬೇರೆ ದೇವತೆಗಳಾಗಿರುವುದರಿಂದ ಅವುಗಳ ಅನುಯಾಯಿಗಳು ಯಾವ ಕಾರಣಕ್ಕೂ ಪರಸ್ಪರ ಕಚ್ಚಾಡಬಾರದಾಗಿ ಸಾರುತ್ತಿದ್ದವು; ಸಾರ್ವತ್ರಿಕವಾಗಿ ಈ ತತ್ವ ಮನ್ನಣೆ ಪಡೆದಿತ್ತು. ಸ್ವರ್ಗ-ನರಕ, ಪಾಪ-ಪುಣ್ಯ ಮತ್ತು ಪುನರ್ಜನ್ಮಕ್ಕೆ ಸಂಬಂಧಿಸಿದ ಸಿದ್ಧಾಂತಗಳೂ ಸಾಮಾನ್ಯ ಜನತೆಯ ನಂಬಿಕೆಯಲ್ಲಿ ಆಳವಾಗಿ ಬೇರೂರಿದ್ದು ಅವುಗಳನ್ನು ಪೋಷಿಸಿಕೊಂಡು ಬರಲಾಯಿತು.

ರಾಷ್ಟ್ರಕೂಟರ ಆಳಿಕೆಯಲ್ಲಿ ತತ್ತ್ವಶಾಸ್ತ್ರಾಧ್ಯಯನಕ್ಕೆ ವಿಶೇಷ ಪ್ರೋತ್ಸಾಹ ದೊರಕಿತು. ಮೇಲ್ಮಟ್ಟದ ಅಧ್ಯಯನ ಕ್ರಮದಲ್ಲಿ **ವೇದ, ವ್ಯಾಕರಣ, ಸಾಹಿತ್ಯ,** ಜ್ಯೋತಿಷ್ಯ, ಮೀಮಾಂಸೆ, ಪುರಾಣಗಳು, ಧರ್ಮ ಶಾಸ್ತ್ರಗಳು ಮತ್ತು ನ್ಯಾಯ (ತರ್ಕ) ಇವುಗಳನ್ನು ಪ್ರಾಚೀನ ಕಾಲದಂತೆಯೆ ಕಲಿಸಲಾಗುತ್ತಿತ್ತು. ಜೈನ ತಾತ್ವಿಕ ಸಾಹಿತ್ಯದ ರಚನೆಯನ್ನು ಈ ಕಾಲದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಕೈಗೊಳ್ಳಲಾಯಿತು. ತತ್ತ್ವಶಾಸ್ತ್ರ ಮತ್ತು ತರ್ಕಶಾಸ್ತ್ರಕ್ಕೆ ಜೈನಧರ್ಮದ ಕೊಡುಗೆ ಗಣನೀಯ ಪ್ರಮಾಣದಲ್ಲಿದೆ. ಸ್ಯಾದ್ವಾದದ ಕುತೂಹಲಕಾರಿ ವಿವರಣೆಯಿಂದ ಕೂಡಿದ ಸಮಂತಭದ್ರನ 'ಆಪ್ತ ಮೀಮಾಂಸೆ'ಗೆ ಅನೇಕ ವ್ಯಾಖ್ಯಾನಗಳು ರಚಿಸಲ್ಪಟ್ಟವು. ರಾಷ್ಟ್ರಕೂಟದ ಆಳಿಕೆಯ ಮೊದಲ ದಿನಗಳಲ್ಲಿ ಅಕಳಂಕದೇವನು ತನ್ನ ವ್ಯಾಖ್ಯಾನ ಗ್ರಂಥವಾದ 'ಅಷ್ಟಶತಿ'ಯನ್ನು ರಚಿಸಿದನು. ಇವುಗಳ ಜತೆಗೆ ತರ್ಕವನ್ನು ಕುರಿತ 'ಪರೀಕ್ಷಾ ಮುಖಸೂತ್ರ' ಎಂಬ ಗ್ರಂಥವನ್ನು ಮಾಣಿಕ್ಯನಂದಿಯೂ '**ಪ್ರಮೇಯ ಕಮಲ ಮಾರ್ತಾಂಡ**' ಎಂಬ ವ್ಯಾಖ್ಯಾನ ಗ್ರಂಥವನ್ನು ಹಾಗೂ 'ನ್ಯಾಯಕುಮುದ ಚಂದ್ರೋದಯ'ವನ್ನು ಪ್ರಭಾಚಂದ್ರನೂ ಬರೆದಿದ್ದಾರೆ. ಮತ್ತೊಬ್ಬ ಜೈನ ಗ್ರಂಥಕರ್ತೃವೆಂದರೆ, ಮಲ್ಲವಾದಿ. ಈತನು '**ಧರ್ಮೋತ್ತರ ಟಿಪ್ಪಣಕ**' ಎಂಬ ವ್ಯಾಖ್ಯಾನವನ್ನು ಧರ್ಮೋತ್ತರಾಚಾರ್ಯನ 'ನ್ಯಾಯಬಿಂದು ಟೀಕಾ' ಗ್ರಂಥಕ್ಕೆ ರಚಿಸಿದ್ದಾನೆ. 'ಬೌದ್ಧ ಧರ್ಮದವನಿಂದ ರಚಿಸಲ್ಪಟ್ಟ ತರ್ಕಶಾಸ್ತ್ರದ ಗ್ರಂಥವೊಂದಕ್ಕೆ ಜೈನನಿಂದ ವ್ಯಾಖ್ಯಾನರಚಿತವಾಗಿರುವುದು ಈ ಕಾಲದ ಆದರ್ಶವಾದ ಸಾಮರಸ್ಯತತ್ತ್ವಕ್ಕೆ ಅನುಗುಣವಾಗಿದೆ'[10].

ಮುಸ್ಲಿಂ ಹಾಗೂ ಚೀನೀಯರು ರಾಷ್ಟ್ರಕೂಟ ದೊರೆಗಳ ಗುಣಶೀಲಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿರುವ ಉಲ್ಲೇಖಗಳನ್ನು ಗಮನಿಸಿದರೆ, ಅವರು ತಮ್ಮ ಪ್ರಜೆಗಳ ಭೌತಿಕ ಪ್ರಗತಿಗೆ ಮಾತ್ರ ಗಮನ ಕೊಡದೆ, ಅವರ ನೈತಿಕ ಹಾಗೂ ಪಾರಮಾರ್ಥಿಕ ಅಭ್ಯುದಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ.

## ಅಡಿಟಿಪ್ಪಣಿಗಳು

1. *Rashtrakutas and their Times*: by Dr. A.S. Altekar, p. 273 and *E.I.*, XIII, p. 235.
2. *Ibid., p*. 187.
3. *Ibid.*, p. 276.
4. *Early History of India*, p. 147 : Vincent Smith.
5. *Early History of the Deccan* : by G. Yazdani, p. 292.
6. *Mysore Gazetteer :* by C. Hayavadana Rao, Vol. II. Part I, p. 756.
7. *Rashtrakutas and their Times*: by A.D. Altekar, p. 292-
8. *Early History of the Deccan* : by G. Yazdani, p. 307.
9. *Rashtrakutas and their Times* : by A.S. Altekar, p. 307.
10. *Ibid.*, p. 410.

ಮೂಲ ಲೇಖಕರು : ಶ್ರೀ ಎಸ್. ಎಸ್. ರಾಘುನಾಚಾರ್
ಅನುವಾದಕರು : ಶ್ರೀ ಕೆ. ಮರುಳಸಿದ್ದಪ್ಪ

# ರಾಷ್ಟ್ರಕೂಟ ಕಾಲದ ಕನ್ನಡ ಸಾಹಿತ್ಯ

## (ಕ್ರಿ.ಶ. 753–975)

ರಾಷ್ಟ್ರಕೂಟ ಕಾಲದ ಕನ್ನಡ ಸಾಹಿತ್ಯವನ್ನು ವಿಶಿಷ್ಟವಾಗಿ ಮಾಡಿದ ಲಕ್ಷಣಗಳು ಎರಡು. (1) ಗಾಢ ಮತನಿಷ್ಠೆ, (2) ಯುದ್ಧರಂಗದಲ್ಲಿ ಶೌರ್ಯ. ರಾಜರಲ್ಲಿ ಹಲವರು ಮಹಾ ಯೋಧರು. ಅವರ ಆಳಿಕೆಯ ಕಾಲದ ಬಹುಭಾಗ ಉತ್ತರ, ಪೂರ್ವ, ದಕ್ಷಿಣ, ಪಶ್ಚಿಮ ಭಾಗಗಳಿಗೆ ಸೈನ್ಯಗಳನ್ನು ತೆಗೆದು ಕೊಂಡುಹೋಗಿ ಯುದ್ಧ ಕಾರ್ಯಗಳಲ್ಲಿಯೇ ನಿಯುಕ್ತವಾಗಿತ್ತು. ಕವಂಬರ ಕಾಲದಲ್ಲಿ ತೊಡಗಿ ಗಂಗರು ಪ್ರಭಾವಗೊಂಡ ದಿನಗಳನ್ನು ಹಿಡಿದು ಅನೇಕ ಕನ ಡ ರಾಜರು ಜಿನದರ್ಶನದಲ್ಲಿ ನಿಷ್ಠರಾಗಿದ್ದವರು. ಅವರ ಉತ್ತೇಜನದಿಂದಲೂ ಸಹಾಯದಿಂದಲೂ ಜೈನಗುರುಗಳು ಜಿನ ಸಮಯವನ್ನು ಕನ್ನಡ ನಾಡಿನಲ್ಲಿ ಹರಡಿದರು. ಸಂಸ್ಕೃತದಲ್ಲಿ, ಕನ್ನಡದಲ್ಲಿ ಕೃತಿಗಳನ್ನು ಬರೆದು ನಾಡಿನಲ್ಲಿ ಪ್ರಸಾರಗೊಳಿಸಿದರು. ರಾಜರನ್ನು ಸಿಂಹಾಸನಗಳ ಮೇಲೆ ಏರಿಸಿ, ಕೂಡಿಸಿ, ಅವರು ತಮ್ಮ ಲೌಕಿಕ ಕೈದುಗಳೆಂಬಂತೆ ಮಾಡಿಕೊಂಡಿದ್ದರು. ಆ ಕಾಲದ ಕವಿತೆಗೆ ಪ್ರೇಮ ವಿಷಯವಾಗಬಹುದಿತ್ತು. ಆದರೆ ಬರೆವಣಿಗೆಗಳಲ್ಲಿ ಅದಕ್ಕೆ ದೊರೆತುದು ಎರಡನೆಯ ಸ್ಥಾನ. ಕವಿಗಳು ಮುಖ್ಯವಾಗಿ ಮತವನ್ನೂ ವೀರ ಕಥೆಗಳನ್ನೂ ಎತ್ತಿ ಬರೆದರು. ಆಗಾಗ ಅಲ್ಲಲ್ಲಿ, ನಡುನಡುವೆ ಪ್ರೇಮ ಕಥೆಗಳಿಗೆ ಅವಕಾಶಕೊಟ್ಟರು; ಅಥವಾ ತೊಟ್ಟಿಲಿಟ್ಟು ತೂಗಿದರು. ರಾಜಕೀಯ ಸಂಬಂಧಗಳಂತೆ ರಾಷ್ಟ್ರಕೂಟರ ಗಂಗರ ನಡುನಡುವೆ ಗೂರ್ಜರರ, ಲಾಟ, ವೆಂಗಿ ಪ್ರದೇಶ ಗಳಲ್ಲಿನ ಹಲವು ಶಾಖೆಯವರ ನಡುವೆ ವಿವಾಹಗಳು ಏರ್ಪಟ್ಟು ಶಾಖೆಗಳು ಹೆಚ್ಚು ಸಮೀಪಸ್ಥವೂ ಆಪ್ತವೂ ಆದರೂ ಮತ, ಯುದ್ಧ—ಇವು ಅವರ ಮುಖ್ಯ ಮನೋರ್ಥವಾಗಿ ಆ ಕಾಲದ ಕಾವ್ಯಗಳಲ್ಲಿ ಪ್ರಶಸ್ತಿಗೆ ಬಂದಿವೆ. ಪ್ರೌಢ ವಿದ್ವತ್ಕಾವ್ಯಗಳು ಸಂಸ್ಕೃತ ಕನ್ನಡ ಎರಡರಲ್ಲಿಯೂ ಹುಟ್ಟಿದುವು. ಈ ಲೇಖನದಲ್ಲಿ ಸಾಹಿತ್ಯವೆಂದು ಹೆಚ್ಚಾಗಿ ಯಾವುದನ್ನು ಕರೆಯಬಹುದೊ ಅದನ್ನು, ಅದರಲ್ಲಿ ದೊಡ್ಡದನ್ನು ಮಾತ್ರ ಕುರಿತು ನಾಲ್ಕು ಮಾತುಗಳಿವೆ.

ರಾಷ್ಟ್ರಕೂಟ ಕಾಲದ ರಾಜಕೀಯ ಮತ್ತು ಐತಿಹಾಸಿಕ ವಿಷಯಗಳನ್ನು ಕುರಿತ ಚರಿತ್ರೆಯ ಗ್ರಂಥ ಗಳಲ್ಲಿ, ಈ ರಾಜರಲ್ಲಿ ಕೆಲವರಂತೂ ವಿದ್ಯೆ, ಕಲೆ, ಸಾಹಿತ್ಯಗಳಿಗೆ ಪೋಷಕರಾಗಿದ್ದರೆಂಬುದು ಗೊತ್ತಾಗುತ್ತದೆ. ನೃಪತುಂಗ (814-878), ಮೂರನೆ ಕೃಷ್ಣ, ನಾಲ್ಕನೆ ಇಂದ್ರ—ಇವರಿಗೆ, ಅರಿಕೇಸರಿಯಂತಹ ಸಾಮಂತನಿಗೆ, ಚಾವುಂಡರಾಯನಂತಹ ಮಂತ್ರಿಗೆ, ಸಾಮಾನ್ಯವಾಗಿ ಆ ಕಾಲದ ಮುಖ್ಯ ಪ್ರಸಂಗಗಳಿಗೆ ಈ ಲೇಖನ ಗಮನಕೊಡುತ್ತದೆ. ಆ ಕಾಲದ ಶಾಸನಗಳು ಆ ಕಾಲದಲ್ಲಿ ಹುಟ್ಟಿದ ಸಂಸ್ಕೃತ, ಪ್ರಾಕೃತ ಕೃತಿಗಳು ಮಾದರಿಗಳನ್ನೂ ದಿಗ್ದರ್ಶನವನ್ನೂ ಸ್ಫೂರ್ತಿಯನ್ನೂ ಒದಗಿಸಿದವು; ಹಿನ್ನೆಲೆಯಾಗಿ ನಿಂತವು. ಕನ್ನಡ ಕೃತಿಗಳಿಗೆ ಸಾರಪೋಷಕವಾದವು. ಈ ಕಾಲದ ಕನ್ನಡ ಸಾಹಿತ್ಯವನ್ನು ನಿರ್ಮಿಸುವ ಕಾರ್ಯದಲ್ಲಿ ಸ್ಫೂರ್ತಿ ಸ್ಥಾನವಾಗಿ ಪಾಲು ಪಡೆದ ಗಂಗ, ಚಾಳುಕ್ಯ ಮಾನ್ಯರೂ ಅಷ್ಟೇ ದೊಡ್ಡ ದಾನಿಗಳು. ಸಂಸ್ಕೃತದಲ್ಲಿ ಪ್ರಖ್ಯಾತವಾದ ಚಂಪೂ ಕಾವ್ಯಗಳು ರಾಷ್ಟ್ರಕೂಟರ ಕಾಲದಲ್ಲಿಯೇ ಹುಟ್ಟಿದುವಾಗಿ, ನಮ್ಮ ಸಂಸ್ಕೃತದ ಚಂಪೂಗಳು ಸಮಕಾಲೀನವಾಗುತ್ತವೆ.

ಈ ಹೊತ್ತಿಗೆ, ಸಂಸ್ಕೃತ ಪ್ರಾಕೃತಗಳಲ್ಲಿ ಪೌರಾಣಿಕ ಕಾಲ—ಮಹಾ ಕಾವ್ಯಗಳ ಕಾಲ ಮುಗಿದಿತ್ತು. ಸಾಹಿತ್ಯ ರಚನೆಯ ಸಂಪ್ರದಾಯ ಒಂದು ಎರಕಕ್ಕೆ ಬಿದ್ದು ಘನಿಸಿತ್ತು. ಕವಿಸಮಯ, ಪ್ರೌಢಿಮೆ, ಕೃತಕತೆ

ಅಭಿವ್ಯಂಜನೆಯ ಮೇಲೆ ದಪ್ಪ ಬಣ್ಣ ತೊಡೆಯಲು ತೊಡಗಿದ್ದವು. ಕವಿತೆಯಲ್ಲಿ ಮಾಘ, ಗದ್ಯದಲ್ಲಿ ಬಾಣ–ಸುಬಂಧು, ಖಚಿತ ಖಂಡಕೃತಿ ನಿರ್ಮಾಣದಲ್ಲಿ ನೀತಿಬೋಧನೆಯಲ್ಲಿ ಭರ್ತೃಹರಿ, ಶಿಖರಸ್ಥಾನಗಳೆನ್ನ ಬಹುದಾದ ಪ್ರೌಢ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದರು. ಪ್ರಾಕೃತದ ಪ್ರಭಾವ ಕೂಡ ಕ್ಷೀಣಿಸುತ್ತಿತ್ತು. ಆದರೆ ಕರ್ಣಾಟಕದಲ್ಲಿ ಎಲ್ಲ ಕವಿಗಳಿಗೂ ವಿದ್ವಾಂಸರಿಗೂ ಮತವಳರಿಗೂ ಆ ಸಾಹಿತ್ಯ ಸಂಪತ್ತಿಯೆಲ್ಲ ಪರಿಚಿತವೇ. ಪ್ರಾಚೀನರ ಜ್ಞಾನವೆಲ್ಲವನ್ನು ಒಳಗೊಂಡಿದ್ದ ಅವರಲ್ಲಿ ಕೆಲವರು 3–4 ಭಾಷೆಗಳಲ್ಲಿ ಪರಿಣತರು. ಯಾವ ರಾಜರ ಆಶ್ರಯದಲ್ಲಿ ಜನರಿದ್ದರೊ, ಅವರಲ್ಲಿ ಜೈನ ಪ್ರಭಾವವನ್ನು ಹರಡಬೇಕೆಂದು ಇದ್ದುದರಿಂದ ಅದರ ಪ್ರತಿಪಾದನೆ ಮಾಡಲೂ ಜನರನ್ನು ಒಲಿಸಿಕೊಳ್ಳಲೂ ನಾಡಿನ ಭಾಷೆಯನ್ನು ಬಳಸಿಕೊಳ್ಳಬೇಕಿತ್ತು. ಲೇಖಕರು, ವಿದ್ವಾಂಸರು ಬಹುಶ್ರುತರೂ ಆಗಿದ್ದುದರಿಂದ ಸಂಸ್ಕೃತ ಪ್ರಾಕೃತ ಗಳಲ್ಲಿ ವಿದ್ವಾಂಸರಾಗಿದ್ದವರೊಡನೆ ಸ್ಪರ್ಧೆಗೆ ನಿಂತು ಗೆಲ್ಲಬೇಕಾದುದರಿಂದ ಅವರ ಬರವಣಿಗೆ ರಚನೆಯ ದೃಷ್ಟಿಯಿಂದಲೂ ಗುಣ ಮರ್ಯಾದೆಗಳ ದೃಷ್ಟಿಯಿಂದಲೂ ಮಹಾಕಾವ್ಯಗಳ ಮಾರ್ಗವನ್ನು ಅನುಸರಿಸ ಬೇಕಾಯಿತು. ಆದರೆ, ಆ ಪ್ರೌಢ ಭಾಷೆಗಳಿಂದ ಜನರ ಭಾಷೆಗೆ ಇವರು ತಿರುಗಬೇಕಾಯಿತು. ಇದು ಅವರ ಬರವಣಿಗೆಗೆ ಒಂದು ಔಚಿತ್ಯವನ್ನೂ ಪ್ರಾಮುಖ್ಯವನ್ನೂ ತಂದುಕೊಟ್ಟು ಹೊಸತಾಗಿ ರೂಪಗೊಳ್ಳು ತ್ತಿದ್ದ ಕನ್ನಡ ಭಾಷೆಗೆ ಹಿಂದೆ ಇಲ್ಲದಿದ್ದ ಒಂದು ಅರ್ಥವ್ಯಾಪ್ತಿಯನ್ನೂ ಅಭಿವ್ಯಂಜನೆಯನ್ನೂ ಜನ ಮನಸ್ಸನ್ನು ಒಲಿಸುವ ಶಕ್ತಿಯನ್ನೂ ಪಡೆವಂತೆ ಮಾಡಿತು. ಹೀಗೆ ಕನ್ನಡ ಸಾಹಿತ್ಯ ಮೊದಲ ಬಾರಿಗೆ ರಂಗಪ್ರವೇಶ ಮಾಡಿದುದು ಅತ್ಯುತ್ತಮವಾದ ಸನ್ನಿವೇಶದಲ್ಲಿ. ಪಂಪನಿಗೆ ಹಿಂದೆ ಅನೇಕ ಲೇಖಕರು ಬರೆದಿರ ಬಹುದು. ಆದರೂ ಕನ್ನಡಕ್ಕೆ ಆತ ಆದಿಕವಿ. ಆತನು ಕನ್ನಡ ಭಾಷೆಯಲ್ಲಿ ಬರೆದ ಮೊದಲ ಕವಿಯೇನೂ ಅಲ್ಲ. ' ಕವಿರಾಜಮಾರ್ಗ ' ಗ್ರಂಥವೇ ಇದೆ—ಹಾಗಲ್ಲವೆಂದು ತಿಳಿಸುವುದಕ್ಕೆ. ಆದರೆ ಅಚ್ಚವಾದ, ಅಪ್ರತಿಹತವಾದ ಯೋಗ್ಯತೆಯಲ್ಲಿ (ಕನ್ನಡವನ್ನು) ಸ್ಥಾಪಿಸಲು ಶಕ್ತರಾದವರಲ್ಲಿ ಅವನು ಮೊದಲಿಗ.

ಕನ್ನಡ ಮೂಲದ್ರಾವಿಡ ಶಾಖೆಯಿಂದ ತನ್ನ ಸಂಬಂಧವನ್ನು ಕತ್ತರಿಸಿಕೊಂಡು ಕ್ರಿ.ಶ. ಸುಮಾರು ಮೊದಲನೆ ಶತಕದಲ್ಲಿ ಹೊರಗೆ ಬಂದು, ಸಂಸ್ಕೃತ ಪ್ರಾಕೃತಗಳ ಪರಿಚಯವನ್ನೂ ಸಂಬಂಧಗಳನ್ನೂ ಬೆಳಸಿ ಕೊಂಡ ಹಾಗೆ ಕಾಣುತ್ತದೆ. ತನ್ನ ಉಕ್ತಿಶಕ್ತಿಯನ್ನು ಕೆಲವು ಶತಮಾನಗಳ ಕಾಲ ಬಳಸಿ, ಸಹಜ ಕನ್ನಡ ಭಕ್ತಿಯನ್ನು ಬೆಳಸಿಕೊಂಡು ಶಾಸನಗಳಲ್ಲಿ ಬೆಳಕಿಗೆ ಬರುವುದಕ್ಕೆ ಇನ್ನೂ ಕೆಲವು ಶತಮಾನ ಹಿಡಿದಿರಬೇಕು. ನಮಗೆ ಈಗ ದೊರೆತಿರುವ ಅತಿ ಹಳೆಯ ಶಾಸನ ಸುಮಾರು ಕ್ರಿ.ಶ. 450ರ ಹಲ್ಮಿಡಿಯದು. ಆ ಕಾಲದಿಂದ ' ಕವಿರಾಜ ಮಾರ್ಗ 'ದ ಕಾಲದ ವರೆಗೂ 400 ವರ್ಷಕಾಲ ಅನೇಕ ಲೇಖಕರು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರಬೇಕು. ಭಾರವಿಯ ಕಿರಾತಾರ್ಜುನೀಯದ ಸ್ವಲ್ಪ ಭಾಗದ ಮೇಲೆ ಗಂಗರಾಜ ದುರ್ವಿನೀತನು ಕನ್ನಡದಲ್ಲಿ ವ್ಯಾಖ್ಯಾನ ಮಾಡಿದನೆಂದು ಪ್ರತೀತಿಯಿದೆ. ಮತವನ್ನು ಛಂದಸ್ಸನ್ನು ಲಕ್ಷಿಸಿ ಉದ್ಗ್ರಂಥಗಳನ್ನು ಬರೆಯಲು ಕನ್ನಡಭಾಷೆ ಶಕ್ತವಾಗಿತ್ತು, ಸಿದ್ಧವಾಗಿತ್ತು–ಎಂಬುದನ್ನು ತಿಳಿಸುವ ಆಧಾರ ಗಳಿವೆ. ಅಂಥ ವಿದ್ವತ್ಕಾರ್ಯವನ್ನು ಕನ್ನಡ ನೆರವೇರಿಸಬಲ್ಲುದಿತ್ತು. ಬಹುಶಃ ರಾಮಾಯಣ, ಮಹಾಭಾರತಗಳ ಕೆಲವು ಉಪಾಖ್ಯಾನಗಳನ್ನು ಕುರಿತು ಬರೆದ ಗ್ರಂಥಗಳೂ ಇದ್ದಿರಬೇಕು. ' ಕವಿರಾಜ ಮಾರ್ಗ 'ದಲ್ಲಿ ರಾಮಾಯಣ ಕಥೆಂಸೊಂದರಿಂದ ಆರಿಸಿ ಬಂದಂತಹ ಪದ್ಯಗಳಿವೆ.

> ' ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ
> ವ್ಯಾಸನೆನೆಂಬ ಗರ್ವಮೆನಗಿಲ್ಲ... '

ಎಂದು ಪಂಪ ನುಡಿಯುತ್ತಾನೆ. ಸಂಸ್ಕೃತ ಕಾವ್ಯ ನಾಟಕಗಳಾಗಿರುವ ರತ್ನಾವಳಿ, ಉತ್ತರ ರಾಮ ಚರಿತೆ, ಮುಂತಾದವುಗಳಿಂದಲೂ ಉದ್ಧೃತ ಭಾಗಗಳು ಆ ಕಾಲಕ್ಕಾಗಲೇ ಸಿಕ್ಕುತ್ತವೆ. 'ಕವಿರಾಜ ಮಾರ್ಗ' ಹುಟ್ಟುವ ಕಾಲಕ್ಕೆ ಆಗಲೇ ಗದ್ಯ ಪದ್ಯ ಕಥಾರಚನೆ ಮಾಡಿ ಖ್ಯಾತರಾಗಿ ಹಲವು ಕವಿಗಳು ಆಗಿಹೋಗಿದ್ದರು. ಕೃತಿಕಾರರಿಗೆ ಆಧಾರ, ಪ್ರಮಾಣ, ನಿದರ್ಶನಗಳನ್ನೂ ಒದಗಿಸಿಕೊಟ್ಟು ಸುಲಲಿತ ಕಾವ್ಯಬಂಧ ಯಾವರೀತಿ

ಇರಬೇಕೆಂಬುದರ ತತ್ವಗಳನ್ನು ತಿಳಿಸುವುದಕ್ಕೆ ಸಾಕಾದಷ್ಟು ಆಧಾರವೂ ಸಾಮಗ್ರಿಯೂ ಇತ್ತು. ಆದುದರಿಂದಲೇ ಪಂಪನು ಹೇಳಿರುವ

'ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿ ದುವು'

ಎಂಬ ವಾಕ್ಯಕ್ಕೆ ಆತನ—'ಆದಿಪುರಾಣವೂ', 'ವಿಕ್ರಮಾರ್ಜುನ ವಿಜಯ'ವೂ—ವಿಶೇಷ ಬಗೆಯ ಸಾರ್ಥಕ್ಯವನ್ನು ತರುತ್ತವೆ. ಹಿಂದಿನವುಗಳಲ್ಲಿನ ದೋಷಗಳನ್ನೆಲ್ಲ ಬಿಟ್ಟು ಗುಣ ಪರಿಪುಷ್ಟಿಯನ್ನೆಲ್ಲ ಇವನ ಕೃತಿ ಮೈಗೊಂಡಿತು. ಅವನು ದೇಸಿ-ಮಾರ್ಗ ಎರಡನ್ನೂ ಮಾದರಿಗಾಗಿ ಬಳಸಿಕೊಂಡನು. ಅವಕ್ಕೆ ಹೋಲಿಸಿದರೆ ಈ ಹೊಸ ಕೃತಿಗಳ ಸಾಧನೆ ಎಷ್ಟೆಂಬುದು ಮೌಲ್ಯ ನಿರ್ಣಯಕ್ಕೆ ನೆರವಾಯಿತು. ಅವನ ಮತ್ತು ಅವನ ಸರಿಕರಾದ ಕವಿಗಳ ಕಾವ್ಯಗಳಿಗೆ ಹಿಂದಿನ ಉತ್ತಮ ಕವಿಗಳ ಸಾರಲಕ್ಷಣಗಳೆಲ್ಲವೂ ಸೇರಿ ಕೊಳ್ಳುವಂತಾಯಿತು.

## 2

ತನ್ನವರೆಗೂ ಬಂದಿದ್ದ ಸಾಹಿತ್ಯ ಸಾಧನೆಯ ಸ್ವರೂಪ ಎಂಥದೆಂಬುದನ್ನು 'ಕವಿರಾಜಮಾರ್ಗ' ತಿಳಿಸುತ್ತದೆ. ಕವಿಯ ಉಕ್ತಿಶಕ್ತಿಯನ್ನು ನಡೆಸುವಂಥ ಶಿಕ್ಷಣ, ಅಭಿರುಚಿ, ತೀರ್ಮಾನಶಕ್ತಿ, ಪ್ರತಿಭಾ ವ್ಯಾಪಾರ ಇದ್ದರೆ ಕನ್ನಡ ಕವಿತೆ ಯಾವ ರೀತಿ ಆಗಬಲ್ಲದೆಂಬುದನ್ನು ತಿಳಿಸಿತು. ನೃಪತುಂಗನಿಗೆ ಅತಿಶಯ ಧವಳ, ಅಮೋಘವರ್ಷ, ಶರ್ವ ಮುಂತಾದ ಹೆಸರುಗಳಿದ್ದವು. ಆತನ ಧರ್ಮಗುರು ಸಂಸ್ಕೃತದ 'ಆದಿ ಪುರಾಣ'ವನ್ನು ಬರೆದ ಜಿನಸೇನಮುನಿ. ನೃಪತುಂಗನು ಕವಿರಾಜಮಾರ್ಗದ ಕರ್ತೃ ಹೌದೊ, ಅಲ್ಲವೊ—ಆ ಗ್ರಂಥದಲ್ಲಿ ಹೇಳಿರುವ ಅಭಿಪ್ರಾಯಗಳಿಗೆ ನೃಪತುಂಗದೇವನ 'ಅಭಿಮತ'ವಿದೆ. ವಿದ್ವಾಂಸರಾದ ಅವನ ಸಭಾಸದರ ಮುಂದೆ ಅದು ಪ್ರಕಟವಾಗಿದೆ. ಆ ಸಭೆಯಲ್ಲಿ ಸಂಸ್ಕೃತ, ಪ್ರಾಕೃತ, ಕನ್ನಡ ಭಾಷೆಗಳಲ್ಲಿ ನಿಷ್ಣಾತರಾಗಿದ್ದ ಬಹು ದೊಡ್ಡ ವಿದ್ವಾಂಸರಿದ್ದರು. ಅವರಿಗೆ ದರ್ಶನದಲ್ಲಿ, ತತ್ತ್ವಶಾಸ್ತ್ರಗಳಲ್ಲಿ ಯಾವ ಪ್ರಾಗಲ್ಭ್ಯವಿದ್ದಿತೋ ಅದೇ ಯೋಗ್ಯತೆ ಸಾಹಿತ್ಯದಲ್ಲಿಯೂ ಅದರ ಉಪಾಂಗಗಳಲ್ಲಿಯೂ ಇದ್ದಿತು. ಅವನೆಯೊ, ಕವೀಶ್ವರನೆಂಬವನೊ, ಶ್ರೀ ವಿಜಯನೆಂಬವನೊ ಆ ಕೃತಿಯ ಕರ್ತೃ. ಒಂದು ಅಭಿಪ್ರಾಯದ ಪ್ರಕಾರ ಮೊದಲು ಮೂಲಗ್ರಂಥವನ್ನು ಶ್ರೀ ವಿಜಯನೆಂಬವನು ಬರೆದ; ಅದಕ್ಕೆ 'ಕವಿಮಾರ್ಗ' ವೆಂದು ಹೆಸರಿತ್ತು; ಆ ಮೇಲೆ ಇನ್ನೊಬ್ಬ ಕವೀಶ್ವರನೆಂಬ ಕವಿ 'ಕವಿರಾಜಮಾರ್ಗ'ವನ್ನು ಬರೆದ, ಅಥವಾ ಸಂಪಾದಿಸಿದ. ಈ ಕೃತಿಯ ಸಂಪೂರ್ಣ ನಿರ್ದುಷ್ಟ ತ್ರುಟಿತಭಾಗಗಳಿಲ್ಲದ ಪ್ರತಿ ಇನ್ನೂ ಸಿಕ್ಕಿಲ್ಲ. ಈಗ ದೊರೆತಿರುವ ಪ್ರತಿಗಳಲ್ಲಿ ಎಷ್ಟೋ ಭಾಗದ ಖಾಲಿ (Blank)—ತುಂಬಬೇಕಾಗಿದೆ. ಇತರರು ಆ ಮೇಲೆ ಸೇರಿಸಿದ ಭಾಗಗಳು ಸೇರಿಕೊಂಡಿದ್ದಾವು. ಆ ಹೆಸರು 'ಕವಿರಾಜ—ಮಾರ್ಗ' ವಾಗಿರಬಹುದು, ಅಥವಾ 'ಕವಿ—ರಾಜಮಾರ್ಗ'ವಾಗಿರಬಹುದು. ಅದಕ್ಕೆ ಆಧಾರ ಗ್ರಂಥಗಳು ಭಾಮಹ, ದಂಡಿಯವು; ವಿಶೇಷವಾಗಿ ದಂಡಿಯ ಕಾವ್ಯಾದರ್ಶ. ಈ ಕೃತಿಯನ್ನು ಬರೆದಾತ ಜೈನನಾದುದರಿಂದ ಅಲ್ಲಲ್ಲಿ ಮಾತು, ರಚನೆಗಳು ಮಾರ್ಪಡುತ್ತವೆ.

ಇಲ್ಲಿ ಮೂರು ಪರಿಚ್ಛೇದಗಳಿವೆ. ಮೊದಲಿನದರ ಆರಂಭದಲ್ಲಿ ಕೆಲವು ಸಂಗತಿಗಳು—ಎಂದರೆ ಕನ್ನಡ ನಾಡು, ನುಡಿ, ಜನಗಳನ್ನು ಕುರಿತವು ಇವೆ; 'ದೋಷಾದೋಷಾನುವರ್ಣನ'ಗಳಿವೆ; ಎರಡನೆಯದು ಶಬ್ದಾಲಂಕಾರ ನಿರ್ಣಯ; ಮೂರನೆಯದು ಅರ್ಥಾಲಂಕಾರ ಪ್ರಕರಣ. ಅರ್ಥಾಲಂಕಾರವನ್ನು ಕುರಿತ ಭಾಗ ದಲ್ಲಿ 35–36 ಅಲಂಕಾರಗಳ ನಿರ್ದೇಶವಿದೆ. ಧ್ವನಿ ಈತನಿಗೆ ಇನ್ನೂ ಒಂದು ಅಲಂಕಾರ. ಅದು 'ಭಾವಿಕ' ಎಂಬ ಅಲಂಕಾರದ ತರುವಾಯ ಬರುತ್ತದೆ. ಒಂದು ಮಹಾ ಕಾವ್ಯದಲ್ಲಿನ 18 ವರ್ಣನೆಗಳು ಅನಂತರ ವರ್ಣಿತವಾಗುತ್ತವೆ. ದೂರ ಕಾಶ್ಮೀರದಲ್ಲಿದ್ದ ಆನಂದವರ್ಧನನು ಈ ಗ್ರಂಥ ಕರ್ತೃವಿಗೆ ಸಮಕಾಲೀನ

ನಿರಬಹುದು; ಅಂತೂ ಸರ್ವತ್ರ ಪ್ರತಿಷ್ಠಿತನಾಗಿರಲಿಲ್ಲವೇನೋ. ಮೊದಲಾಗಿ, ರಸವದಲಂಕಾರದ ವರ್ಣನೆಯಲ್ಲಿ ರಸ ಪ್ರತೀತಿಯನ್ನು ವರ್ಣಿಸುತ್ತಾನೆ. ಇದರಿಂದ ಈ ಲೇಖಕ ಆಲಂಕಾರಿಕರಲ್ಲಿ ಇತರ ಪೂರ್ವ ಸಂಪ್ರದಾಯದವನೆಂಬುದು ಸ್ಪಷ್ಟ. ಶಾಂತರಸವನ್ನು ಕುರಿತ ಪದ್ಯ ಈ ಕೃತಿಗೆ ಮೌಲಿಕ ಹೌದೊ ಅಲ್ಲವೊ ಹೇಳುವ ಹಾಗಿಲ್ಲ. ದಂಡಿ ಎಂಟು ರಸಗಳನ್ನು ಹೇಳಿದ ; ಗಾಳಿಯಲ್ಲಿ ಅಥವಾ ಜನಜನಿತವಾಗಿ ಅದು (ಶಾಂತರಸ) ಇದ್ದಿತು. ಜೈನನಾಗಿದ್ದ ಈ ಲೇಖಕ ಅದಕ್ಕೆ ಆಕರ್ಷಣೆಗೊಂಡು ಒಂಬತ್ತನೆಯ ರಸವೆಂದು ಹೇಳಿರಬಹುದು. ಶಾಂತದ ಸ್ವೀಕಾರಕ್ಕೆ ಜಿನಧರ್ಮದ ಪ್ರಭಾವ ಬಹುವಾಗಿ ಕಾರಣವಿರಬಹುದು.

ಬಹುಮಟ್ಟಿನ ಈ ಕೃತಿಯ ರಚನೆ ಕಂದಗಳಲ್ಲಿದೆ. ವೃತ್ತಗಳಲ್ಲಿ ಕೆಲವು ಅಪರೂಪದವು – ಚಿಕ್ಕ ಚಿಕ್ಕವು. ಗೀತಿಕೆಯ ಹಲವು ಪ್ರಕಾರಗಳ ಉದಾಹರಣೆಗಳಿವೆ. ಕರ್ತೃ ಅನೇಕ ಶ್ಲೋಕಗಳನ್ನು ಉದ್ಧೃತ ಮಾಡುತ್ತಾನೆ. ಕನ್ನಡಕ್ಕೆ ವಿಶಿಷ್ಟವಾದ ಎರಡನೆಯ ಅಕ್ಷರದ ಪ್ರಾಸವಿದೆ. ಶ್ಲೋಕ ಕನ್ನಡ ಭಾಷೆಯಲ್ಲಿ ಎಷ್ಟು ಅಸುಖವಾಗಿ ಹೆಜ್ಜೆ ಹಾಕುತ್ತದೆ, ಎಷ್ಟು ಪರಕೀಯವಾಗಿ ಕಾಣುತ್ತದೆ ಎಂಬುದು ಮುಂದಟ್ಟಾಗುತ್ತದೆ. ಪ್ರತಿ ಪರಿಚ್ಛೇದವೂ ಕಡೆಗೆ ಪುಷ್ಪಿತಾಗ್ರವೃತ್ತದಿಂದ ಮುಂದುವರಿದು ಒಕ್ಕಣೆಯು ಗದ್ಯಖಂಡದಿಂದ ಮುಗಿಯುತ್ತದೆ.

ತನ್ನ ಕಾಲಕ್ಕೆ ಮುಂಚೆ ಇದ್ದ ಕನ್ನಡ ಕವಿಗಳ ಪ್ರಯೋಗವನ್ನು ಕುರಿತು ಈ ಗ್ರಂಥ ಒಂದು ಮಹಾಖನಿ. ಮೆಚ್ಚಿಕೆಗೊ ಅಥವಾ ರೀತಿರಚನೆ ಗುಣ ಅಥವಾ ನಯಗಳ ಟೀಕೆಗೊ ಉದಾಹರಣೆಗಳು ಬರುತ್ತವೆ. ತನ್ನ ಕಾಲದಲ್ಲಿ ಬಳಕೆಯಲ್ಲಿರುವ ಕೆಲವು ರೀತಿಗಳು ಹೇಗೆ ತಪ್ಪು–ಅಪೂರ್ಣ ಎಂಬುದನ್ನೂ ಟೀಕಿಸಿ ಅವನ್ನು ಹೀಗೆ ತಿದ್ದಬಹುದೆಂದು ಸೂಚಿಸುತ್ತಾನೆ. ಪ್ರದೇಶಭೇದಗಳು ಭಾಷೆಯಲ್ಲಿಯೇ ಇದ್ದಿರ ಬೇಕು. ಈ ಕೃತಿ ಕನ್ನಡದ ಬರವಣಿಗೆಯ ಭಾಷೆಯನ್ನು ವಿಶೇಷವಾಗಿ ಪ್ರಮಾಣಗೊಳಿಸುವಂತಿದೆ. ಕಡಮೆಯೆಂದರೆ ಕವಿತೆಯ ರಚನೆಯಲ್ಲಿ ಬಳಸುವಂಥದನ್ನು ನೇರ್ಪುಗೊಳಿಸುವ ಉದ್ದೇಶವುಳ್ಳುದು. ಕವಿಗಳಿಗೆ ಒಂದು ಕೈಪಿಡಿಯಂತೆ ಎಂದರೆ ಕವಿಶಿಕ್ಷಾಗ್ರಂಥದಂತೆ ಇದನ್ನು ಬರೆದಿರಬೇಕು. ಕಾವ್ಯರಚನೆಯಲ್ಲಿ ದಕ್ಷಿಣೋತ್ತರ ಮಾರ್ಗಗಳ ಹೇಳಿಕೆ ಬಹುಶಃ ದಂಡಿಯ ವೈದರ್ಭೀ ಗೌಡಿಗಳ ಪರ್ಯಾಯವಾಚಕ. ಈತನಿಗೆ ಸಂಸ್ಕೃತದಕಾವ್ಯ, ಲಕ್ಷಣಗ್ರಂಥ–ಎರಡೂ ಚೆನ್ನಾಗಿ ಗೊತ್ತಿತ್ತು. ಈ ಕಾಲದಲ್ಲಿ ಸುಮಾರು ಬಂದ ಎಲ್ಲ ಕೃತಿಗಳೂ ಚಂಪೂತರದವಾದರೂ ಚಂಪೂ ಎಂಬ ಹೆಸರಿನ ಸುಳಿವಿಲ್ಲ. ಕನ್ನಡದ ಮಹಾಕಾವ್ಯಗಳೆಲ್ಲ ಸುಮಾರು ಚಂಪೂ ಪ್ರಬಂಧಗಳು. ವಿದ್ವಾಂಸರಾದ ಆಲಂಕಾರಿಕರ ಉನ್ನತ ಶೈಲಿ ಈ ಪ್ರದೇಶದ ದೇಶಿ ಎರಡೂ ಲಕ್ಷಣಗಳಿಗಾಗಿ ಅಥವಾ ಗುಣಗಳಿಗಾಗಿ ಈ ಉದಾಹರಣೆಗಳಿವೆ. ಚತ್ತಾಣ, ಬೆದಂಡೆ ಎಂಬ ಎರಡು ಬಗೆಯ ಕನ್ನಡ ಪ್ರಕಾರಗಳನ್ನು ಕುರಿತು ಈ ಗ್ರಂಥ ತಿಳಿಸುತ್ತದೆ. ಬಹುತರ ಅವು ಹಾಡುಗಬ್ಬಗಳಾಗಿ ಅಥವಾ ಗಮಕಕ್ಕಾಗಿ ರಚಿತವಾಗಿ ಇರಬಹುದು. ಸೂತ್ರಗಳಲ್ಲಿ ನಿದರ್ಶನಗಳಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ಶುದ್ಧಿ, ದೋಷ, ಗುಣ, ಶ್ರುತಿಸುಭಗತೆಗಳಿಗೆ ಬೆಲೆ ದೊರೆಯುತ್ತದೆ. ಛಂದಸ್ಸಿನಲ್ಲಿ ಯತಿಯ ಬೆಲೆಯ ಬಗೆಬಗೆಯ ಪ್ರಾಸಗಳ ಒಕ್ಕಣೆ ಇದೆ. ಶಬ್ದಾಲಂಕಾರಗಳಲ್ಲಿ ಅಲಂಕರಣಕ್ಕಾಗಿಯೂ ರಸಸಾಧಕವಾಗಿಯೂ ಇರುವ ಅಂಶಗಳನ್ನು ತಿಳಿಸಿದೆ.

ಕನ್ನಡ ಭಾಷೆಯ ಮತ್ತು ಸಾಹಿತ್ಯದ ಚರಿತ್ರೆಯಲ್ಲಿ ಅದಕ್ಕಿರುವ ಸ್ಥಾನದಿಂದ ಕವಿರಾಜಮಾರ್ಗ ಬಹು ಮುಖ್ಯವಾದ ಒಂದು ಗ್ರಂಥ. ಒಂದು ಜಲಾನಯನ ಭೂಮಿ ಹೇಗೆ ಎರಡು ನಾಡುಗಳನ್ನು ಬೇರ್ಪಡಿಸುತ್ತದೆಯೊ ಹಾಗೆ ಈ ಗ್ರಂಥ ಪೂರ್ವದ ಹಳಗನ್ನಡ ಎಂಬ ಮಜಲಿಂದ ಹಳಗನ್ನಡ ಕಾಲಕ್ಕೆ ಇರುವ ವಿಶೇಷವನ್ನು ಬಿಡಿಸಿ ತೋರಿಸುತ್ತದೆ. ಆತನ ಕನ್ನಡವೂ ಸುಮಾರು 12ನೆಯ ಶತಮಾನದ ವರೆಗೂ ಬಳಕೆಯಲ್ಲಿದ್ದು ಆಧಿಪತ್ಯ ಮಾಡಿದ ಕನ್ನಡ—ಹಳಗನ್ನಡ; ಭಾಷೆಯ ಬೆಳವಣಿಗೆಯ ಸ್ವರೂಪವನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಆ ಸ್ಥಿತಿಗೆ ಅದು ಮುಟ್ಟುವುದಕ್ಕೆ ಒಂದೆರಡು ಶತಕಗಳಾದರೂ ಹಿಡಿದಿರಬೇಕು.

ಒಬ್ಬ ಚಕ್ರವರ್ತಿ ತನ್ನ ನಾಡು, ಜನ, ಭಾಷೆ ಸಾಹಿತ್ಯಗಳನ್ನು ಕುರಿತು ಏನು ಹೇಳುತ್ತಾನೊ ಆ ಆಧಿಕಾರಿಕ ವಾಣಿ ಈ ಗ್ರಂಥದಲ್ಲಿ ಸಿಕ್ಕುತ್ತದೆ. ಅಲ್ಲಿರುವ ಉದಾಹರಣೆಗಳೂ ಟಿಪ್ಪಣಿಗಳೂ ಅವನ ರುಚಿ, ಪಕ್ಷಪಾತ ಎಂಥವು, ಮೌಲ್ಯ ನಿರ್ಣಯದಲ್ಲಿ ಪ್ರಮಾಣಗಳಾವುವು, ಕಾವ್ಯ ರಚನೆಯ ಉದ್ದೇಶವೇನು ಮುಂತಾದುವನ್ನು ತಿಳಿಸುತ್ತವೆ. ನೃಪತುಂಗನ ಸ್ವಂತ ಜೀವನ, ಆತನ ಒಂದೆರಡು ಅನುಭವಗಳು, ಆತನನ್ನು ಹಿರಿಯ ರಾಜನನ್ನಾಗಿ ಮಾಡಿದ ವಿಶಿಷ್ಟಾಂಶವಾದ ಒಂದು ಉದಾರ ಸಹನೆ—ಇವುಗಳ ಇಣುಕು ನೋಟ ಇಲ್ಲಿ ಸಿಕ್ಕುತ್ತದೆ. ಶಾಂತಿಯು ಕಲೆಗಳನ್ನು ಕಂಡರೆ ನೃಪತುಂಗನಿಗೆ ಪ್ರೀತಿ. ವಿದ್ವತ್ತನ್ನೂ ತನ್ನ ಕಾಲದಲ್ಲಿ ಜನರಲ್ಲಿ ಹರಡಿದ್ದ ಮತ, ಧರ್ಮ ಸಂಪ್ರದಾಯಗಳನ್ನೂ ಕಂಡರೆ ಶ್ರದ್ಧೆ, ಆಸಕ್ತಿ. ತಾನೇ ವೈದಿಕ, ಜೈನ ಸಂಪ್ರದಾಯಗಳಲ್ಲಿ ಶ್ರೇಷ್ಠವಾದುವನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದವನು.

ಆ ಕಾಲಕ್ಕೆ ಮುಂಚೆ ಬರೆಯುತ್ತಿದ್ದ ಗದ್ಯಕಾರರು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ, ಮುಂತಾದವರು. ಈ ಯಾರ ಕೃತಿಗಳೂ ನಮಗೆ ಇಂದು ದೊರೆಯವು. ವಿಮಲೋದಯ ಎಂಬ ಹೆಸರು ಒಂದೆಯೋ ಅಥವಾ 'ವಿಮಲ' ಬೇರೆ, 'ಉದಯ' ಬೇರೆಯೊ ಗೊತ್ತಿಲ್ಲ. ಪದ್ಯ ರಚನಾಕಾರರಲ್ಲಿ 'ಶ್ರೀವಿಜಯ'ಕ್ಕೆ ಹಿಂದೆ 'ಪರಮ' ಎಂಬ ಗುಣವಾಚಕ ಇದೆ. ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಹೆಸರುಗಳಿವೆ. ಇಲ್ಲಿ ಯಾವ ಹೆಸರುಗಳನ್ನು ಸೇರಿಸಿ ಹೇಳಬೇಕೋ ಯಾವುದನ್ನು ಬಿಡಿಸಿ ಹೇಳಬೇಕೋ—ಖಚಿತವಿಲ್ಲ. ಅವರ ಕೃತಿಗಳೇನೊ ಮಾರ್ಗದರ್ಶಕವೆಂಬಂತೆ ಹೇಳಿದೆ. ಅಕ್ಕರ, ಚೌಪದಿ, ಗೀತಿಕೆ, ತಿವದಿ—ಇವು ಪ್ರಚಲಿತ ಛಂದೋರೂಪಗಳಲ್ಲಿವೆ. ಬಹುಶಃ ಸಹಜವಾಗಿ ಮೆಲ್ವಾಡೆಂಬ ಜಾನಪದ ಪ್ರಕಾರವಾಗಿ ಏಳೆ, ಒನಕೆವಾಡು, ಬಾಜನೆಗಬ್ಬ ಇದ್ದಿರುವಂತಿದೆ. ಇವುಗಳನ್ನು ಹೆಸರಿಸಿಲ್ಲ.

ಮೊದಲ ಪರಿಚ್ಛೇದದ ಆರಂಭ ಭಾಗದಲ್ಲಿ ನಾಡಿನ ಮೇರೆ ಉತ್ತರದಲ್ಲಿ ಗೋದಾವರಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ಎಂದು ನಿರ್ದೇಶವಾಗಿದೆ. ಇಂದಿಗೂ ಅವೇ ಕನ್ನಡನಾಡಿನ ಮೇರೆಗಳು. ಅದರಲ್ಲಿಯೂ ಕನ್ನಡದ ತಿರುಳು ಕಿಸುವೊಳಲು, ಕೊಪಣ, ಪುಲಿಗೆಱೆ, ಒಕ್ಕುಂದ,—ಇವುಗಳ ನಡುವೆ ಎಂದಿದೆ. ಇಂದು ಧಾರವಾಡ, ಬಿಜಾಪುರ, ರಾಯಚೂರು, ಬಳ್ಳಾರಿ, ಬೆಳಗಾಂ ಜಿಲ್ಲೆಗಳ ನಡುವಣ ಪ್ರದೇಶ ಅದು. ಕನ್ನಡದ ಜನತೆಯ ಗುಣವೇನೆಂಬುದನ್ನು ಗ್ರಂಥ ಹೇಳುತ್ತದೆ.

"ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್"

ಎಂಬುದು ಅಲ್ಲಿನ ಒಂದು ಪದ್ಯ. ಒಂದು ಪದ್ಯ ಕನ್ನಡಿಗರ ಜಾಣತನದ ಮಟ್ಟಗಳನ್ನೂ ಅರ್ಥ ಬಳಕೆಗಳನ್ನೂ ನುಡಿಗಟ್ಟುಗಳಲ್ಲಿ ಬಗೆಬಗೆಯ ಉನ್ನತಿಗಳ ನೆಲಸನ್ನೂ ವಿಶದಪಡಿಸುತ್ತದೆ; 'ನೀತಿವಿದರು ಯಾರು, ಅಮಲ ಕವಿತಾ ನೀತಿವಿದರು ಯಾರು, ಪರಮ ಕವಿ ವೃಷಭರ್ಕಳು ಯಾರು' ಎಂಬುದು ವಿವೇಚನೆ. ಹಿರಿಯ ಕವಿತೆಯ ಉದ್ದೇಶವಿದು :—

"ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್"

ಯಾವುದನ್ನು ಈ ವರೆಗೆ ಮಹಾಕೃತಿಲಕ್ಷಣವೆಂದು ಎಣಿಸುವುದು ವಾಡಿಕೆಯಾಗಿತ್ತೊ ಅಂಥದನ್ನು ಪ್ರತ್ಯಕ್ಷ

ವಾಗಿಯೊ ಪರೋಕ್ಷವಾಗಿಯೊ ಅದು ತಾನೆ ತೋರುತ್ತಿದ್ದುದು. ಇದಕ್ಕೆ ಆರ್ನಲ್ಡ್—‘ subject to the laws of poetic truth and poetic beauty ’—ಕಾವ್ಯ ಕ್ರಿಯಾ ಸೂತ್ರಗಳಿಗೂ ಚೆಲ್ವು ಗಣನೆಗೂ ಒಳಪಟ್ಟುದು ಎಂದು ಸೇರಿಸುತ್ತಿದ್ದನೇನೋ. ಒಂಬತ್ತನೆಯ ಶತಕಕ್ಕೆ ಮುಂಚಿತವಾಗಿಯೇ ಈ ನಾಡಿನ ಅಭ್ಯಾಸಿಗಳೆಲ್ಲರಿಗೂ ಇದು ತಿಳಿದಿದ್ದ ಸಂಗತಿ.

## 3

ಅಸಗ, ಗುಣನಂದಿ, ಗುಣವರ್ಮ ಎಂಬ ಮೂವರು ರಾಷ್ಟ್ರಕೂಟ ಕಾಲಕ್ಕೆ ಸೇರಿರುವಂತೆ ಕಾಣುತ್ತದೆ. ಗುಣವರ್ಮನ ಕೃತಿಗಳಿಂದ ಸೂಕ್ತಿ ಸುಧಾರ್ಣವ ಕೆಲವು ಪದ್ಯಗಳನ್ನು ಉದಾಹರಿಸುತ್ತದೆ. ಸಂಸ್ಕೃತದಲ್ಲಿ ವರ್ಧಮಾನ ಚರಿತವನ್ನು ಬರೆದ, ಛಂದೋನುಶಾಸನಕಾರ ಜಯಕೀರ್ತಿ ಹೇಳುವಂತೆ ಕರ್ಣಾಟ ಕುಮಾರ ಸಂಭವ ಕಾವ್ಯವೊಂದನ್ನು ಅಸಗ ಬರೆದಿರುವಂತೆ ಕಾಣುತ್ತದೆ. ಕಾಳಿದಾಸ, ಅಸಗರನ್ನು ಒಂದು ಬಾಯಲ್ಲಿ ಸ್ಮರಿಸಿ ತಾನು ‘ ಅಸಗಂಗಂ ನೂರ್ಮಡಿ ’ ಎಂದು ಹೇಳಿಕೊಂಡ ಕನ್ನಡ ಕವಿಪುಂಗವರಿದ್ದಾರೆ. ವಿದ್ಯಾನಂದನ ‘ ಕಾವ್ಯಸಾರ ’ ಗುಣವರ್ಮನಿಂದ ಪದ್ಯಗಳನ್ನು ಸಂಗ್ರಹಿಸಿದೆ. ಅವನು ಅಲಂಕಾರವನ್ನು ಕುರಿತು ಒಂದು ಗ್ರಂಥವನ್ನೂ ನೇಮಿನಾಥಪುರಾಣವೆಂಬ ಜೈನ ಹರಿವಂಶವನ್ನೂ ಬರೆದನೆಂಬ ಪ್ರತೀತಿಯಿದೆ. ಈ ಎರಡನೆಯ ಕಾವ್ಯದಲ್ಲಿ ಕವಿ ತನ್ನ ಒಡೆಯ ಗಂಗರಾಜ ಎರೆಯಪ್ಪನನ್ನು (886–913) ಶೂದ್ರಕನಿಗೆ ಹೋಲಿಸಿದ್ದಾನೆಂಬ ಮಾತು–ನಿಜವಾಗಿದ್ದರೆ ಕನ್ನಡ ಮಹಾಕಾವ್ಯಗಳಲ್ಲಿ ಸಂಪ್ರದಾಯವಾದ ಎರಡು ಕೃತಿಗಳನ್ನು ಬರೆಯುವ ವಾಡಿಕೆಗೆ—ಎಂದರೆ: ಒಂದು ಲೌಕಿಕ ಕಾವ್ಯ, ಒಂದು ಪುರಾಣ–ಬರೆಯುವ ಸಂಪ್ರದಾಯಕ್ಕೆ, ಆತನೇ ಮೊದಲಿಗನಾಗುತ್ತಾನೆ.

ಕನ್ನಡದ ಶ್ರೇಷ್ಠ ಕವಿ ಪಂಪ. ಅವನೇ ನಮ್ಮ “ ಆದಿಕವಿ ”ಯೂ ಹೌದು. ಅವನ ಪೂರ್ವಜರು ಕರ್ಣಾಟಕದ ತಿರುಳು ಸೀಮೆಗೆ ವೆಂಗಿಯಿಂದ ಬಂದವರು. ವೆಂಗಿ ಆ ಕಾಲದಲ್ಲಿ ಕನ್ನಡದ ಪ್ರದೇಶವಾಗಿದ್ದಿರ ಬೇಕು. ತಂದೆ ಬ್ರಾಹ್ಮಣ–ಅಭಿರಾಮ ದೇವರಾಯನೆಂಬವನು [ಭೀಮ ?]. ಆತನು ಜೈನ ಮತವನ್ನು ಸ್ವೀಕರಿಸಿ ತನ್ನ ತರುವಾಯ ತನ್ನ ಮನೆತನ ಜಿನಸಮಯದ್ದೆಂದು ಹೇಳಿದನು.

ಪಂಪ, ಚಾಲುಕ್ಯ ರಾಜಕುಮಾರನಾದ ಅರಿಕೇಸರಿಯ ಸ್ನೇಹಿತ, ಜೊತೆಗಾರ. ರಾಷ್ಟ್ರಕೂಟ ಸಾಮಂತರಲ್ಲಿ ಅರಿಕೇಸರಿ ಹೆಸರಾದ ವೀರ. ಈ ಗೆಳೆಯರು ಕನ್ನಡನಾಡಿನ ಮೇಲೆಲ್ಲ ಜೊತೆಯಲ್ಲಿ ತಿರುಗಾಡಿರಬಹುದು. ಹಿಂದಿನ ಕಾಲದ ಕದಂಬರಾಜರ ಪ್ರತಿಷ್ಠಾನವಾದ ಚೆಲುವ ಬನವಾಸಿಯಲ್ಲಿ (ವೈಜಯಂತಿಪುರ) ಸ್ವಲ್ಪಕಾಲವಿದ್ದಿರಬೇಕು. ಅರಿಕೇಸರಿ ರಾಜನಾದಾಗ ಮಿತ್ರನಾದ ಪಂಪ ಆತನ ಮಂತ್ರಿಯೂ ಸೇನಾಧಿಕಾರಿಯೂ ಆದ ಕಲಿ, ಕವಿ ಎರಡೂ ಆದಂತಾಯಿತು. ಅವನು ಹುಟ್ಟಿದ ವರ್ಷ ಕ್ರಿ.ಶ. 902. ಅವನು ಎರಡು ಗ್ರಂಥಗಳನ್ನು ಬರೆದ—ಆದಿಪುರಾಣ ಮೊದಲನೆಯದು. ಅದನ್ನು 942ರಲ್ಲಿ ಬರೆದ. ಎರಡನೆಯ ಕೃತಿ ಆ ಬಳಿಕ ಸ್ವಲ್ಪ ಕಾಲದಲ್ಲಿಯೇ ಬರೆದುದು. ಅದಕ್ಕೆ ‘ ವಿಕ್ರಮಾರ್ಜುನ ವಿಜಯ ’ (ಅಥವಾ ಜನಬಳಕೆಯಲ್ಲಿ ‘ ಪಂಪಭಾರತ ’) ಎಂಬ ಹೆಸರಿದೆ. ಕವಿ ಹೆಮ್ಮೆಯಿಂದ ತಾನು ಒಂದನ್ನು ಮೂರು ತಿಂಗಳಲ್ಲಿಯೂ, ಇನ್ನೊಂದನ್ನು ಆರು ತಿಂಗಳಲ್ಲಿಯೂ ಬರೆದು ಮುಗಿಸಿದೆನೆನ್ನು ತ್ತಾನೆ. ಹೇಗೆ ನೋಡಿದರೂ ಈ ಸಾಹಸ ವಿಸ್ಮಯಕರವಾದುದೇ. ಆದಿಪುರಾಣ ಆತ್ಮ ಕಲ್ಯಾಣಕ್ಕಾಗಿ ಬರೆದ ಗ್ರಂಥ. ಪಂಪ ಭಾರತವಾದರೊ ಪರೋಕ್ಷವಾಗಿ ತನ್ನ ಒಡೆಯನಾದ ಅರಿಕೇಸರಿಯ ಹಿರಿಮೆಯುನ್ನು ಕೀರ್ತಿಯನ್ನು ಮೆರೆಯಲು ಬರೆದದ್ದು. ಒಂದು ಗ್ರಂಥದಲ್ಲಿ ಧರ್ಮವನ್ನು-ಎಂದರೆ ಜಿನಾಗಮವನ್ನು, ಇನ್ನೊಂದರಲ್ಲಿ ಲೌಕಿಕವನ್ನು-ಎಂದರೆ ಲೋಕದ ವ್ಯಾಪಾರ ವ್ಯವಹಾರವನ್ನು, ನಯಗುಣ ಗರಿಮೆಗಳನ್ನು ತಿಳಿಯಬಹುದು–ಎಂದಿದ್ದಾನೆ. ಎರಡರಲ್ಲಿಯೂ ಕಾವ್ಯದ ಮಹಾವಿಲಾಸವಿದೆ.

ಆದಿಪುರಾಣ ಹದಿನಾರು ಆಶ್ವಾಸಗಳ ಚಂಪೂಕೃತಿ. ಅದರಲ್ಲಿ ಆದಿ ತೀರ್ಥಂಕರನಾದ ಪುರುದೇವ ಅಥವಾ ವೃಷಭನಾಥನ ಚರಿತ್ರೆ ಮತ್ತು ಸಿದ್ಧಿಯ ವರ್ಣನೆ ಇದೆ. ಜೈನ ಸಂಪ್ರದಾಯದ 24 ತೀರ್ಥಂಕರರಲ್ಲಿ ಪುರುದೇವ ಮೊದಲನೆಯವನು. ಅರ್ಹತ್ ಪ್ರಧಾನಾಂಶಗಳೆಲ್ಲ ಈ ಕೃತಿಯಲ್ಲಿ ಪ್ರತಿಪಾದಿತವಾಗಿವೆ. ಪುರುದೇವನ ಆತ್ಮವಿಕಾಸ ಹಿಂದಿನ ಒಂಬತ್ತು ಜನ್ಮಗಳಲ್ಲಿ ದಾಟಿ, ಮನುಷ್ಯನಂತೆ ಚರಮದೇಹಧಾರಿಯಾಗಿ ಬೆಳಗಿದ ಕಥೆ ಇದೆ. ಅಲ್ಲಿ ಅವನಿಗೆ ತೀರ್ಥಂಕರತ್ವ ಸಿದ್ಧಿಯಾಗುತ್ತದೆ. ಈ ಜನ್ಮದಲ್ಲಿ ಗರ್ಭಾವತರಣ. ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನೋತ್ಪತ್ತಿ, ಪರಿನಿರ್ವಾಣ—ಎಂಬ ಪಂಚಕಲ್ಯಾಣಗಳ ವರ್ಣನೆ ಇದೆ.

ಒಂಬತ್ತನೆಯ ಆಶ್ವಾಸದಲ್ಲಿ ಆತನು ಸಂಸಾರವನ್ನೂ ರಾಜ್ಯವನ್ನೂ ತ್ಯಾಗಮಾಡುವ ಸನ್ನಿವೇಶ ಬಹು ಹೃದಯಂಗಮವಾಗಿ ಚಿತ್ರಿತವಾಗಿದೆ. ಇದಕ್ಕೆ ಸಾಧಕವಾದ ನೀಲಾಂಜನೆಯ ನೃತ್ಯ ತುಂಬಾ ಮೋಹಕವಾದುದು. ಇಬ್ಬರು ಹೆಂಡಿರಲ್ಲಿ ಅವನಿಗೆ ಒಬ್ಬಳಲ್ಲಿ ಭರತ, ಇನ್ನೊಬ್ಬಳಲ್ಲಿ ಬಾಹುಬಲಿ ಎಂಬ ಮಕ್ಕಳು ಹುಟ್ಟಿದರು. ರಾಜ್ಯವನ್ನು ಬಿಟ್ಟು ಹೋಗುವಾಗ ರಾಜ್ಯವನ್ನು ಪುರುದೇವನು ಅವರಲ್ಲಿ ಹಂಚಿ ಹೋದ. ಸ್ವಲ್ಪ ಕಾಲದ ತರುವಾಯ ಚಕ್ರವರ್ತಿಯಾಗಬಯಸಿದ ಭರತ ಲೋಕವನ್ನು ಗೆಲ್ಲಲು ದಿಗ್ವಿಜಯ ಮಾಡಿ ಹಿಂದಿರುಗುವಾಗ ಕಡೆಯ ಮಜಲಾಗಿ ತನ್ನ ತಮ್ಮ ಬಾಹುಬಲಿಯನ್ನು ಗೆದ್ದ ಹೊರತು ತನಗೆ ಚಕ್ರವರ್ತಿತ್ವ ಸಿದ್ಧಿಸುವುದಿಲ್ಲವೆಂದು ಅರಿಯುತ್ತಾನೆ. ಅವರಿಬ್ಬರ ನಡುವೆ ನಡೆದ ಯುದ್ಧದಲ್ಲಿ ಮೂರೂ ಸಲ ಭರತ ಸೋಲುತ್ತಾನೆ. ಆದರೆ ತನಗೆ ಒದಗಿದ ಜಯದಿಂದ ಪ್ರೀತನಾಗದೆ, ಬಾಹುಬಲಿ ರಾಜ್ಯವನ್ನು ತ್ಯಾಗ ಮಾಡಿ ಕೇವಲಿಯಾಗುತ್ತಾನೆ. ಈ ಪ್ರಸಂಗ ನಮ್ಮ ಸಾಹಿತ್ಯದಲ್ಲಿ ಅತ್ಯುತ್ತಮವಾದ ಒಂದು ಪ್ರಕರಣ. ಕಡೆಯಲ್ಲಿ ತಂದೆ-ಮಕ್ಕಳ ಅಣ್ಣತಮ್ಮಂದಿರ ಪರಮಗತಿಯಿಂದ ಮುಗಿಯುತ್ತದೆ. ಕ್ಷತ್ರಿಯ ಮತ್ತು ಬ್ರಾಹ್ಮಣ ಧರ್ಮದ ಪ್ರತಿಪಾದನೆ ಇಲ್ಲಿ ವಿಶಾಲವಾಗಿ ವರ್ಣಿತವಾಗುತ್ತದೆ. ರಾಜನ ಔದಾರ್ಯದಿಂದ ದೇಶಕ್ಕೆ ಸ್ತಿಮಿತ, ಸುರಕ್ಷಣೆ, ಸಮೃದ್ಧಿ ಉಂಟಾಗುತ್ತದೆ.

ಆ ತರುವಾಯದ ಕಾಲದಲ್ಲಿ ಹುಟ್ಟಿದ ಎಲ್ಲ ಪುರಾಣ ಕಾವ್ಯಗಳಿಗೂ ಆದಿಪುರಾಣ ಮಾದರಿ. ಅಲ್ಲಿ ಪ್ರೇಮದ ಅನೇಕ ಉಪಾಖ್ಯಾನಗಳು ಬರುತ್ತವೆ. ಸ್ನೇಹ, ಶ್ರದ್ಧೆ, ಭಕ್ತಿಗಳು ಗ್ರಂಥದ ಪೂರ್ವಭಾಗದಲ್ಲಿ ಅನೇಕವಾಗಿ ವರ್ಣಿತವಾಗುತ್ತವೆ. ಶೃಂಗಾರ ಭೋಗ, ಆಟಪಾಟ, ವಿನೋದಗಳ ರಂಗುರಂಜನೆ ಸಿಕ್ಕುತ್ತದೆ. ಅಂತಃಪುರದವರೊಡನೆಯೂ ಅರಮನೆಯ ಇತರ ಸಿಬ್ಬಂದಿಯೊಡನೆಯೂ ಹೊರಟಿದ್ದ ಭರತನ ಪಾಳೆಯದಲ್ಲಿ ಸಂಪತ್ತು, ಭೋಗ, ಕ್ರೀಡಾವಿನೋದಗಳೂ ವೈಭವವೂ ಹರಡುತ್ತವೆ. ಕಡೆಕಡೆಯ ಭಾಗಗಳು ಅಪೂರ್ವವಾದ ಆಧ್ಯಾತ್ಮಿಕ ಮತ್ತು ನೈತಿಕ ಗುಣಮೌಲ್ಯಗಳ ಹಿರಿಮೆಯ ಚಿತ್ರವನ್ನು ಕೊಡುತ್ತವೆ. ಕೇವಲ ಕವಿತಾ ಸೌಂದರ್ಯದ ದೃಷ್ಟಿಯಿಂದಲೂ ಈ ಗ್ರಂಥದ ಕೆಲವು ಭಾಗಗಳನ್ನು ಮೀರಿಸುವ ಯಾವ ಗ್ರಂಥವೂ ಕನ್ನಡದಲ್ಲಿ ಹುಟ್ಟಿಲ್ಲ. ಜೈನಪುರಾಣದ ಒಂದು ರೂಢಿಯಲ್ಲಿ ಒಬ್ಬ ಮನುವನ್ನು ವರ್ಣಿಸುವುದುಂಟು. ಆ ಕಾಲದ ಮನು ಪುರುದೇವನ ತಂದೆ ನಾಭಿರಾಜ. ಹೀಗಿರುವುದು ತೀರ್ಥಂಕರರಲ್ಲಿ ಒಂದು ಬಗೆಯ ಅತ್ಯುನ್ನತಿಯನ್ನು ತೋರಿಸುವುದು. ಆ ತೀರ್ಥಂಕರನ ಕಾಲದ ಚಕ್ರವರ್ತಿಯನ್ನೂ ಕಾಮದೇವನನ್ನೂ ಮೆರೆಯುವುದು; ಪುರುದೇವನು ತೀರ್ಥಂಕರನಾದರೆ ಭರತನು ಚಕ್ರವರ್ತಿ ; ಬಾಹುಬಲಿ ಮನ್ಮಥ. ಈ ಕೃತಿಯ ಗುಣ ಹಿರಿಮೆಯ ಕಾರಣದಿಂದಲೇ ಪಂಪನಿಗೆ 'ಕವಿರತ್ನ' ಎಂಬ ಬಿರುದು ಬಂದಿದೆ (ಇನ್ನಿಬ್ಬರಿಗೆ—ಎಂದರೆ ಪೊನ್ನನಿಗೆ ರತ್ನನಿಗೆ—ಆ ಬಿರುದು ಬಂದಿದೆ).

ಪಂಪಭಾರತ ಮಹಾಭಾರತದ ಕತೆಯನ್ನು ಸಂಕ್ಷೇಪವಾಗಿ ತಿಳಿಸುತ್ತದೆ. ಮುಖ್ಯ ಪ್ರಸಂಗಗಳನ್ನು ಬಿಡದೆ ' ಸಮಸ್ತ ಭಾರತಸಾರ ' ವಾಗುತ್ತದೆ. ಈ ಕತೆಯ ನಾಯಕ ಅರ್ಜುನ. ಇಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದೆ. ಅರ್ಜುನ ಒಬ್ಬನಿಗೇ ದ್ರೌಪದಿಯ ವಿವಾಹವಾಗುವುದರಿಂದ ವಿರಾಟಪರ್ವದಲ್ಲಿ,

ದುಃಶಾಸನವಧ ಪ್ರಸಂಗದಲ್ಲಿ ಕೆಲವು ಅಸಮಂಜಸ ಸಂದರ್ಭಗಳು ಬರುತ್ತವೆ. ಈ ಕಾರಣದ ಜೊತೆಗೆ ಪುರಾಣಕಾವ್ಯದ ಆವರಣವನ್ನು ಬಿಟ್ಟು ಅರಿಕೇಸರಿಯ ಕಾಲದ ಚಾರಿತ್ರಿಕರಂಗಕ್ಕೆ ಕಥೆ ಇಳಿಯುವುದರಿಂದ ಸ್ವಲ್ಪ ಮಟ್ಟಿಗೆ ರಸಾಭಾಸವಾಗುತ್ತದೆ. ಆದರೆ ಕೃತಿ ಅನನ್ಯಸಾಧಾರಣವಾದ ಶಕ್ತಿಯಿಂದಲೂ ಸೌಂದರ್ಯ ದಿಂದಲೂ ಕೂಡಿದ್ದು, ಕೃತಿಯ ಕೊನೆಯಲ್ಲಿ ಅರ್ಜುನನೊಡನೆ ಸಿಂಹಾಸನಸ್ಥಳಾಗಿ ರಾಣಿ ಪಟ್ಟಕ್ಕೆ ಏರುವವಳು ಸುಭದ್ರೆ !

ಕೃಷ್ಣಾರ್ಜುನರು ಆ ಕಾಲದ ನಾರಾಯಣ-ನರ ಎಂಬ ವರ್ಣನೆಯೇನೊ ಇದೆ. ಒಂದು ಖಚಿತ ವಾದ ಪ್ರಕರಣದಲ್ಲಿಯಂತೂ ಅರ್ಜುನನು ತಾನು ತನ್ನ ರಾಮಾವತಾರದ ಸಂಸ್ಮೃತಿಗಳನ್ನೂ ಸಾಹಸಗಳನ್ನೂ ಮನಸ್ಸಿಗೆ ತಂದುಕೊಳ್ಳುವಂತೆ ಬರುತ್ತದೆ. ಅರ್ಜುನನು ಹುಟ್ಟುವಾಗ ಕುಂತಿಯ ವರ್ಣನೆ ಜಿನ ಜನನಿಯ ವೈಭವವನ್ನು ಹೋಲುತ್ತದೆ. ಕೃಷ್ಣ ಅರ್ಜುನನಿಗೆ ಕೊಟ್ಟ ಸಹಾಯ ಇಲ್ಲಿಯೂ ಅಪಾರವೇ. ಆದರೆ ಭಾರತವನ್ನು ಹಿರಿದು ಮಾಡಿದ ಆರೆಂಟು ಜನರಲ್ಲಿ ಕೃಷ್ಣನ ಹೆಸರು ಬಾರದು. ಮಹಾಭಾರತದಲ್ಲಿ ಪ್ರಖ್ಯಾತವಾದ ಭಗವದ್ಗೀತೆಯ ಸಾರ ಒಂದು ವೃತ್ತದ ಅರ್ಧಭಾಗಕ್ಕೆ ಸಂಕೋಚಗೊಂಡು ಮುಗಿಯುತ್ತದೆ. ಜೈನನಿಗೆ ಕೃಷ್ಣ ಇನ್ನೂ ವಾಸುದೇವ. ಅಲ್ಲದೆ, ಅವನ ಹೊಗಳಿಕೆಗೆ ಪ್ರಾಶಸ್ತ್ಯ ಕೊಟ್ಟರೆ ಪಂಪನ ಕಥಾ ನಾಯಕನಾದ ಅರ್ಜುನನ ಪ್ರಭಾವ ಮಸುಕಾಗುತ್ತದೆ. ಪ್ರಸಂಗಗಳು, ವ್ಯಕ್ತಿಚಾರಿತ್ರ್ಯಗಳ ಸಂಘರ್ಷಣ, ಕಥಾ ಸಂಗತಿಗಳ ಚಲನೆ, ಕಥನದ ಮಾತಿನ ಚಕಮಕಿ, ವಾದಗಳಲ್ಲಿಯೊ ಕೈದುಗಳಲ್ಲಿಯೊ ಬೀಳುವ ಬಲವಾದ ಪೆಟ್ಟುಗಳು, ಪ್ರಭಾವಗಳ ವಿಜೃಂಭಣೆ, ಜನ ನಿಲ್ಲುವ ನಿಲವು—ದೊಡ್ಡವಾಗಿ ಕಟ್ಟಿ ನಿಲ್ಲುತ್ತವೆ. ಒಂದು ಮಾತಿನ ಎರಕ ಒಂದು ಪದ್ಯದ ಕೆಲಸವನ್ನು ಮಾಡುತ್ತದೆ ; ಒಂದು ಪದ್ಯ ಒಟ್ಟು ಒಂದು ಪ್ರಸಂಗ ವನ್ನು ಚಿತ್ರಿಸಿ ಮುಗಿಯುತ್ತದೆ. ಪಂಪನ ಕಾವ್ಯರಚನೆ ಅಷ್ಟು ಅಡಕವಾದುದು ; ಅಷ್ಟು ಕಾರ್ಯಕಾರಿ. ಅವನ ಭಾಷೆ ನಿಶಿತವಾದ ಒಂದು ಆಯುಧ, ಮಾತುಗಳನ್ನೂ ನುಡಿಗಟ್ಟುಗಳನ್ನೂ ಲಯಗಾನವನ್ನೂ ಹೊಮ್ಮಿಸುವು ದರಲ್ಲಿ ಅವನ ಪದರಚನಾಶಕ್ತಿ ಎಷ್ಟು ಅದ್ಭುತವೆಂಬುದನ್ನು ತೋರಿಸುತ್ತದೆ. ಅಗತ್ಯಕ್ಕೆ ತಕ್ಕಂತೆ ಅದು ಹೇಗೆ ಹೊಂದಿಕೊಳ್ಳುತ್ತದೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಅವನ ಭಾಷಾ ಸಂಪತ್ತಿ; ಹೇಗೆಂದರೆ ಹಾಗೆ, ಅರ್ಥವತ್ತಾಗಬಲ್ಲ ಭಾಷಾ ಪ್ರೌಢಿಮೆಯಲ್ಲಿ ತಾನೇ ತಾನು. ಕನ್ನಡ ಭಾಷೆ ಇಷ್ಟು ಹೆಚ್ಚು ಶಕ್ತಿಯಿಂದ ಇನ್ನಾರಿಂದಲೂ ಪ್ರಯುಕ್ತವಾಗಿಲ್ಲ. ಈ ಕೃತಿಗಿಂತ ಉತ್ತಮವಾದ ಕಾವ್ಯ ಕಾರ್ಯಗಳಿಗೆ ಲಗ್ನಗೊಂಡಿಲ್ಲ. ಒಂದೇ ಒಂದು ಸಲ, ಬಹುಶಃ, ಸುಭದ್ರಾ ಪರಿಣಯ ಪ್ರಸಂಗದಲ್ಲಿ ಕವಿ ಕೈಗೊಳ್ಳುವ ಚಂದ್ರಿಕಾ ವಿಹಾರ ದಲ್ಲಿ ಮಾತ್ರ ಪ್ರಮಾಣ ಮೀರಿದಂತೆ, ಮುರಿದಂತೆ, ಹಿಂಜಿದಂತೆ ಕಾಣುತ್ತದೆ. ಇಲ್ಲಿ ಕರ್ಣ—ದುರ್ಯೋಧನರ ಸ್ನೇಹಾನುಬಂಧ ಬಹು ರಮಣೀಯವಾದುದು, ಹಾರ್ದವಾದುದು. ಭೀಷ್ಮ, ಕರ್ಣ, ದುರ್ಯೋಧನ, ಅರ್ಜುನ ಇವರು ಅತ್ಯುನ್ನತಿ, ತ್ಯಾಗ ಮತ್ತು ಸತ್ಯಸಂಧತೆ, ಛಲ, ಪರಾಕ್ರಮಗಳಿಗೆ ಸೀಮಾಪುರುಷರು. ಈ ಮಹಾಭಾರತದ ವೀರರ ಪ್ರಚಂಡ ಶಕ್ತಿಯನ್ನೂ ಮಾಹಾತ್ಮ್ಯವನ್ನೂ ಕುರಿತ ಪ್ರಸಂಗಗಳು ಮಹೋತ್ಸವ ಗಳಂತೆ ವರ್ಣಿತವಾಗಿವೆ. ಪಂಪನ ಈ ಎರಡು ಕೃತಿಗಳ ಹತ್ತಿರಕ್ಕೆ ಏಕಾಗ್ರತೆಯಲ್ಲಾಗಲಿ, ಕವಿತೆಯ ವೀರ್ಯ ದಲ್ಲಾಗಲಿ, ಭಾವಾಭಿವ್ಯಂಜನೆಯಲ್ಲಾಗಲಿ, ಇತರರ ಯಾವ ಕೃತಿಯೂ ಬಹುಶಃ ಬರಲಾರದು.

ಇಬ್ಬರಲ್ಲಿ ಒಬ್ಬರೂ ಪರಸ್ಪರವಾಗಿ ಹೆಸರನ್ನು ಹೇಳದಿದ್ದರೂ ಪೊನ್ನ, ಪಂಪ ಅತಿ ಹತ್ತಿರದ ಸಮಕಾಲೀನರು. ಪೊನ್ನನಿಗೆ ಮೂರನೆಯ ಕೃಷ್ಣನ ಸಭಾಸ್ಥಾನದಲ್ಲಿ (939–965) ಅಗ್ರಮಾನ್ಯತೆ ಇದ್ದಿತು. ಉಭಯ ಕವಿ ಚಕ್ರವರ್ತಿ ಎಂಬ ಪ್ರಶಸ್ತಿ ಇದ್ದಿತ್ತು, (ರನ್ನ, ಜನ್ನ ಇವರು ಆ ಬಿರುದು ಪಡೆದ ಇನ್ನಿಬ್ಬರು ಕವಿಗಳು). ಮುಮ್ಮಡಿ ಕೃಷ್ಣನಿಗೆ ರಾಷ್ಟ್ರಕೂಟ ದಿಗ್ವಿಜಯವನ್ನು ತೆಂಕಲಲ್ಲಿ ರಾಮೇಶ್ವರದವರೆಗೆ, ಬಡಗಿನಲ್ಲಿ ಕನ್ಯಾಕುಬ್ಜದವರೆಗೆ ಹರಡಿದ ಕೀರ್ತಿ ಉಂಟು. ಪೊನ್ನನ ಕಾವ್ಯವೂ ಅಸಾಧಾರಣವಾದುದೇ. ಆತನ ಗ್ರಂಥ ಶಾಂತಿ ಪುರಾಣ—(ಪುರಾಣನಾಮ ಚೂಡಾಮಣಿ ಎಂದು ಅದಕ್ಕೆ ಪರ್ಯಾಯನಾಮವುಂಟು). 12 ಆಶ್ವಾಸಗಳಲ್ಲಿರುವ ಈ ಚಂಪೂ 16ನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತದ್ದು. ಕವಿಯಲ್ಲಿ

ವಿದ್ವತ್ತು, ಪ್ರೌಢಿಮೆ, ಭಾಷೆ, ಛಂದಸ್ಸುಗಳ ಮೇಲೆ ಅಧಿಕಾರ ಎದ್ದು ಕಾಣುತ್ತದೆ. ಶಾಂತಿಯೇ ಆ ಕಾಲದ ತೀರ್ಥಂಕರ, ಚಕ್ರವರ್ತಿ, ಮನ್ಮಥ. ಮಲ್ಲಪ, ಪುನ್ನಿಮ ಎಂಬವರ ಪ್ರೋತ್ಸಾಹದಿಂದ ಅವರ ಪ್ರಚೋದನೆಯಂತೆ ಈ ಕೃತಿಯನ್ನು ಬರೆದಂತೆ ಕಾಣುತ್ತದೆ. ಅವರಿಗೆ ತಮ್ಮ ಗುರು ಜಿನಚಂದ್ರನನ್ನು ಮಾನ್ಯ ಮಾಡುವ ಉದ್ದೇಶವಿತ್ತು. ಆ ಗುರು ಪೂಜ್ಯಪಾದ, ಅಕಳಂಕ, ಸಮಂತಭದ್ರರಿಗೆ ಯೋಗ್ಯತೆಯಲ್ಲಿ ಸಮನೆಂಬುದು ಅವರ ಅಭಿಮತ.

ತೀರ್ಥಂಕರನಾಗಲಿರುವವನು ಆರನೆಯ ಜನ್ಮದಲ್ಲಿ ಅಪರಾಜಿತನಾಗಿ ಹುಟ್ಟಿದಂದಿನಿಂದ ಕಥೆ ಆರಂಭ ವಾಗುತ್ತದೆ. ಶಾಂತಿನಾಥನ ಸ್ವಂತ ಜೀವನವೂ ಸಿದ್ಧಿಯೂ ಕಡೆಯ ಮೂರು ಆಶ್ವಾಸಗಳಲ್ಲಿ (10—12) ಇವೆ. ಜೈನಧರ್ಮದ ತತ್ವಗಳನ್ನು ಉದ್ದಕ್ಕೂ ಕವಿ ಪ್ರತಿಪಾದಿಸಿದ್ದಾನೆ. ವಿಶೇಷ ಸಂಗತಿಗಳು ಕಡೆಯ್ಯ ಎರಡು ಆಶ್ವಾಸಗಳಲ್ಲಿವೆ. ವಾಸ್ತವವಾಗಿ ನೋಡಿದರೆ, ಮತ ಪ್ರಕ್ರಿಯೆಗಳಿಗೆ ಇಲ್ಲಿ ಕೊಟ್ಟಿರುವಷ್ಟು ಗಮನ ಜನಗಳ ಶೀಲಕ್ಕಾಗಲಿ ಮನೋಭಾವಕ್ಕಾಗಲಿ ಇಲ್ಲವೆನ್ನಬೇಕು. ಕವಿ ತಾನು ‘ ಅಸಗಂಗಂ ನೂರ್ಮಡಿ ಕಾಳಿದಾಸಂಗಂ ಸಾಸಿರ್ಮಡಿ ’ ಎಂದುಕೊಳ್ಳುತ್ತಾನಾದರೂ ಈ ಗ್ರಂಥದಲ್ಲಿ ಅನೇಕ ಸಂಸ್ಕೃತ ಕಾವ್ಯಗಳಿಗೆ ಋಣ ಕಾಣುತ್ತದೆ. 5ನೆಯ ಆಶ್ವಾಸದಲ್ಲಿ ಜ್ಯೋತಿಃ ಪ್ರಭೆಗೂ ಅರ್ಕಕೀರ್ತಿಗೂ ನಡೆವ ವಿವಾಹದ ವರ್ಣನೆಗೆ ರಘುವಂಶಕಾವ್ಯದಲ್ಲಿನ ಇಂದುಮತೀ ಸ್ವಯಂವರದಿಂದ ಉಪಕಾರ ದೊರೆತಿದೆ. ಅವನ ದಿಗ್ವಿಜಯದ ಪ್ರಕರಣದಲ್ಲಿಯೂ ರಘುವಂಶದ ಪ್ರಭಾವ ಕಾಣುತ್ತದೆ. ಕಾವ್ಯಸಿದ್ಧಿಯಲ್ಲಿ ಕೃತಿ ಯಾವ ಶಿಖರವನ್ನೂ ಮುಟ್ಟುವುದಿಲ್ಲ. ಆದರೂ ಕಥೆ ಶಕ್ತವಾಗಿದೆ ; ವರ್ಣನೆಗಳು ಜೀವಂತವಾಗಿವೆ. ಬಂಧ ಸುರಚಿತವಾಗಿದೆ. ಸನ್ನಿವೇಶಗಳನ್ನು ಕವಿ ದಕ್ಷವಾಗಿ ನಿರ್ವಹಿಸುತ್ತಾನೆ. ಪ್ರಾಚೀನ ಕಾಲದ ಸಂಸ್ಕೃತ ಕವಿಗಳ ಸಾಧನೆ ಎಷ್ಟೋ ಕಡೆ ಬೆಂಬಲವಾಗಿ ನಿಲ್ಲುತ್ತದೆ. ಕೃತಿಯ ಹಲವು ಭಾಗಗಳಲ್ಲಿ ಅವರಿಂದ ತೆಗೆದ ಎರವಲು ಖಚಿತವಾಗಿ ಕಾಣುತ್ತದೆ. ಆತನ ಹೆಸರಿಗೆ ಇನ್ನೊಂದು ಚಂಪೂ ಕಾವ್ಯವಿದೆ—14 ಆಶ್ವಾಸಗಳಲ್ಲಿನ ‘ ಭುವನೈಕ ರಾಮಾಭ್ಯುದಯ ’ ಎಂಬುದು. ಅದು ಅವನ ಕಾವ್ಯವಾಗಿರಬೇಕು. ಚಕ್ರವರ್ತಿ ಕೃಷ್ಣನ ಸಾಮಂತರಾಜ ನಾದ ಶಂಕರಗಂಡನ ಅಭ್ಯುದಯವನ್ನು ಕುರಿತುದೆನ್ನುತ್ತಾರೆ. ಇಂಥ ಒಬ್ಬ ಮಹಾಲೌಕಿಕನ ಜೀವನ ಚರಿತೆ ಯನ್ನು ಒಳಗೊಂಡುದೊ ಅಥವಾ ರಾಮಕಥೆಯನ್ನು ಕುರಿತುದೊ ಅಥವಾ ಅವನನ್ನು ರಾಮನಿಗೆ ಹೋಲಿಸಿ ಬರೆದುದೊ—ಸ್ಪಷ್ಟವಾಗಿ ಹೇಳುವ ಹಾಗಿಲ್ಲ. ಇನ್ನೂ ಒಂದು ಊಹೆ ಉಂಟು. ಚೋಳರಾಜ ರಾಜಾದಿತ್ಯನ ಮೇಲೆ ಮುಮ್ಮಡಿ ಕೃಷ್ಣ ತಕ್ಕೋಲದಲ್ಲಿ ಜಯಪಡೆದ ಕಥೆ ಇದ್ದರೂ ಇದ್ದೀತು. ರಾಜಾದಿತ್ಯನು ತನ್ನನ್ನು ಕೋದಂಡರಾಮ ಎಂದು ಕರೆದುಕೊಳ್ಳುತ್ತಿದ್ದನು. ಆ ಗ್ರಂಥದಿಂದ ಎತ್ತಿದುವೆಂಬ ಸಂದಿಗ್ಧವಾದ ಕೆಲವು ಉದಾಹರಣೆಗಳನ್ನು ಪದ್ಯಸಂಕಲನಗಳಲ್ಲಿಯೂ ವ್ಯಾಕರಣ, ಅಲಂಕಾರ ಮುಂತಾದ ಶಾಸ್ತ್ರಗ್ರಂಥಗಳಲ್ಲಿಯೂ ಕಾಣಬಹುದು. ಮಲ್ಲಪನ ಮಗಳಾದ ದಾನ ಚಿಂತಾಮಣಿ ಅತ್ತಿಮಬ್ಬೆ ಈ ಕೃತಿಯ ಸಾವಿರ ಪ್ರತಿಗಳನ್ನು ಮಾಡಿಸಿ, ಅವನ್ನು ಧರ್ಮಶ್ರದ್ಧೆಯುಳ್ಳವರಿಗೆ ಹಂಚಿದಳಂತೆ.

ಆತನ ಜಿನಾಕ್ಷರಮಾಲೆಯಲ್ಲಿ 39 ಕಂದಗಳಿವೆ. ಕಕಾರದಿಂದ ಹಿಡಿದು ಳಕಾರದ ವರೆಗೂ ಕ್ರಮವಾಗಿ ಒಂದೊಂದು ಪದ್ಯಾಕ್ಷರ ಆರಂಭವಾಗುತ್ತದೆ.

‘ ತ್ರಿಷಷ್ಟಿ ಲಕ್ಷಣ ಮಹಾಪುರಾಣ ’ ಎಂಬ ಒಂದು ಕೃತಿಯನ್ನು ಗಂಗರಾಜ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯ ಬರೆದನು. ಅವನು ಆಗಿನ ಕಾಲದ ಮಹಾವೀರನು. ಆತನೇ ಸುಮಾರು 982 ರಲ್ಲಿ ಶ್ರವಣಬೆಳಗೊಳದಲ್ಲಿ ಗೊಮ್ಮಟ ವಿಗ್ರಹವನ್ನು ಕೆತ್ತಿಸಿ ಪ್ರತಿಷ್ಠೆ ಮಾಡಿಸಿದನು. ವಿದ್ವತ್ತಿಗೂ ಸಾಹಿತ್ಯಕ್ಕೂ ಆತನು ಬಹು ದೊಡ್ಡ ಪೋಷಕನಾಗಿದ್ದನು.

‘ ಚಾವುಂಡರಾಯ ಪುರಾಣ ’ ಪ್ರಧಾನವಾಗಿ ಗದ್ಯಕೃತಿ. ಆರಂಭದಲ್ಲಿಯೂ ಕಡೆಯಲ್ಲಿಯೂ

ಒಮ್ಮೊಮ್ಮೆ ನಡುವೆಯೂ ಕೆಲವು ಪದ್ಯಗಳು ಇರುವುದುಂಟು. ಒಟ್ಟು ಕೃತಿ ಇನ್ನೂ ಅಚ್ಚಾಗಿಲ್ಲ. ಅದು ಜೈನದರ್ಶನದ ಒಂದು ಕೈಪಿಡಿಯಂತಿದೆ. 24 ತೀರ್ಥಂಕರರು, 12 ಮಂದಿ ಚಕ್ರವರ್ತಿಗಳು, ಪ್ರತಿ ಒಂಬತ್ತುಮಂದಿ ಬಲದೇವ, ವಾಸುದೇವ, ಪ್ರತಿ ವಾಸುದೇವರು—ಎಂದರೆ ಜೈನಧರ್ಮದ ಮಹಾ ಪುರುಷರಾದ 63 ಮಂದಿ ಶಲಾಕಾಪುರುಷರನ್ನು ಕುರಿತುದು. ಆದಿ ತೀರ್ಥಂಕರನ ಭಾಗ ಗಂಭೀರವಾಗಿಯೂ ಮನೋಹರವಾಗಿಯೂ ಇದೆ. ಇತರ ಕವಿಗಳು ಬರೆದ ಚಂಪೂ ಗದ್ಯಕ್ಕಿಂತ ಆ ಗದ್ಯ ಹೆಚ್ಚು ಆಕರ್ಷಕ ವಾಗಿದೆ. ಬಹುಶಃ ಇಲ್ಲಿನ ವರ್ಣನೆಗಳನ್ನು ರೂಪಿಸುವುದರಲ್ಲಿ ಪಂಪನ ಆದಿಪುರಾಣದ ಪ್ರಭಾವ ಇರುವಂತೆ ಕಾಣುತ್ತದೆ. ಆದರೆ, ಪಂಪನ ಗದ್ಯದಲ್ಲಿರುವ ವರ್ಣರಂಜನೆಯಾಗಲಿ, ವೀರ್ಯವಾಗಲಿ ಕಾಣದು. ವೃಷಭ, ಶಾಂತಿ, ರಾಮ, ನೇಮಿ, ವರ್ಧಮಾನ—ಇವರ ಕತೆಗಳು ಇತರ ಕತೆಗಳಿಗಿಂತ ಹೆಚ್ಚು ವಿಸ್ತಾರವಾದವು. ಈ ತೀರ್ಥಂಕರರ ಕತೆಗಳು ಹೆಚ್ಚು ಜನಪ್ರಿಯವಾದವು. ಆದುದರಿಂದಲೇ ಕವಿಗಳು ಅವರ ಚರಿತ್ರೆಗಳನ್ನು ಆರಿಸಿ ಕೊಂಡುದು. ಮತಪ್ರಕ್ರಿಯೆಗಳನ್ನೂ ವಿವರಗಳನ್ನೂ ಬೇಸರ ಬರುವಷ್ಟು ಮಟ್ಟಿಗೆ ಇಲ್ಲಿ ಪಟ್ಟಿಹಾಕಿ ಕಾಣಿಸ ಲಾಗುತ್ತದೆ. ಅಪರೂಪಕ್ಕೊಮ್ಮೆ ಸೀತೆಯ ವರ್ಣನೆಯಂತಹ ಪ್ರಸಂಗ ಬಂದು, ಹುಟ್ಟಿದಂದಿನಿಂದ ಹಿಡಿದು ಹೆಣ್ಣುಜೀವ ಯಾವ ಕರುಣಾಜನಕ ಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಕಾಣುತ್ತದೆ ಎಂಬ ಚಿತ್ರವಿದೆ. ಹೆಣ್ಣಿಗೆ ನಮ್ಮ ಸಮಾಜದಲ್ಲಿ ಎಂಥ ದುಸ್ಥಿತಿ ಎಂಬುದರ ವ್ಯಾಖ್ಯಾನ ಅದು.

ರಾಷ್ಟ್ರಕೂಟ ಕಾಲದ ಅತ್ಯಂತ ಸಂಪನ್ನವಾದ ಗದ್ಯ ಕೃತಿ ವಡ್ಡಾರಾಧನೆ. ಅದರ ಕಾಲವನ್ನು ಕುರಿತು ಬೇಕಾದಷ್ಟು ವಾದ ವಿವಾದ ಇದೆ. ಅಲ್ಲಿ ಬಳಸಿರುವ ಭಾಷಾರೂಪಗಳನ್ನೂ ಹೆಚ್ಚು ಪ್ರಾಚೀನ ವೆಂಬಂತೆ ಕಾಣುವ ಸಮಾಜ ಜೀವನ ಮುಂತಾದುವನ್ನೂ ನೋಡಿದರೆ, ಅದರ ಕಾಲ ಹಿಂದಿನ ಲಕ್ಷಣದ್ದು ; ಬಹುತರ 9ನೆಯ ಶತಮಾನ ಅಥವಾ ಅದಕ್ಕೂ ಹಿಂದಿನದೆಂದು ಊಹಿಸಲು ಅವಕಾಶವುಂಟು. ಭಾಷೆಯ ಲಕ್ಷಣಗಳೇ ನಿರ್ಣಾಯಕ ಸಂಗತಿಯಾಗಿದ್ದರೆ ಅದು 10ನೆಯ ಶತಮಾನದ ಆದಿಭಾಗಕ್ಕೆ ಸೇರಬಲ್ಲುದು.

ಇದರಲ್ಲಿ 19 ಕತೆಗಳಿವೆ. ಆ ಕತೆಗಳನ್ನು ಸಂಸ್ಕೃತದಲ್ಲಿನ ಹರಿಷೇಣನ ಬೃಹತ್ಕಥಾ ಕೋಶದಲ್ಲಿಯೂ ಕಾಣಬಹುದು. ಹೇಳಿರುವ ಕ್ರಮ ಇಲ್ಲಿ ಬೇರೆ, ಅಲ್ಲಿ ಬೇರೆ. ಕಥನದ ವಿವರಾಂಶಗಳಲ್ಲಿಯೂ ಕೆಲವು ವ್ಯತ್ಯಾಸಗಳುಂಟು. ವಿಸ್ತರಣಗಳೂ ಹಾಗೆಯೇ. ಹೆಸರುಗಳಲ್ಲಿಯೂ ಇಲ್ಲಿಗಲ್ಲಿಗೆ ವ್ಯತ್ಯಾಸ ಕಾಣುತ್ತದೆ. ಬಹುತರ ಈ ಕೃತಿಯ ಕರ್ತೃ ಶಿವಕೋಟಿಯೂ ಅಲ್ಲವೇನೊ. ಆತನ 'ಭಗವತೀ ಆರಾಧನಾ' ಎಂಬ ಗ್ರಂಥ ಈ ಕಥನಗಳ ರಚನೆಗೆ ಆಧಾರ ಕೊಟ್ಟಿರಬಲ್ಲುದು. ನಮ್ಮ ಗದ್ಯಸಾಹಿತ್ಯದಲ್ಲಿ ಇದು ಎಲ್ಲಕ್ಕಿಂತ ದೊಡ್ಡದು. ಒಂದೇ ಸಮನೆ ರಚಿತವಾದ ಗ್ರಂಥ. ವಸ್ತು, ರೀತಿ, ಕಾವ್ಯಗುಣ ಮಾನವ ಜೀವನದ ಗುಣವನ್ನೊಳಗೊಂಡ ನಾಗರಿಕತೆ— ಯಾವುದನ್ನು ತೆಗೆದುಕೊಂಡರೂ ಹಳಗನ್ನಡ ಸಾಹಿತ್ಯದಲ್ಲಿ ಅತ್ಯಂತ ದೊಡ್ಡ ಗದ್ಯರಚನೆ ಇದು. ಕರ್ಮ ಹೇಗೆ ದುರ್ವಾರ್ಯವಾಗಿ ನಡೆದು ಫಲ ಕೊಡುವುದೆಂದು, ತಪೋನಿಷ್ಠೆಗೆ ಎಷ್ಟು ಅಗತ್ಯ ವಿದೆಯೆಂದು, ಆತ್ಮಶಾಸನಕ್ಕಾಗಿ ಹೇಗೆ ತಮ್ಮನ್ನು ತಾವು ಮುಡಿಪು ಮಾಡಿಕೊಳ್ಳಬೇಕು-ಎಂಬುದನ್ನು ಕಾಣಬಹುದು.

ಅದರಲ್ಲಿ 19 ಉಪಸರ್ಗ ಕೇವಲಿಗಳೆಂಬವರ ಜನ್ಮಜನ್ಮಾಂತರ ಕಥೆಗಳಿವೆ. ಇವು ಕರ್ಮಾನುಸಾರ ಬೇರೆ ಬೇರೆ ಜನ್ಮಗಳಲ್ಲಿ ಹೇಗೆ ಹುಟ್ಟಿ ಕರ್ಮಫಲವನ್ನು ಅನುಭವಿಸಿ ಕಡೆಗೆ ಕವಿದ ಎಲ್ಲ ಹಿಂಸೆಗಳನ್ನೂ ನೋವುಗಳನ್ನೂ ಶಾಂತವಾಗಿ ಸಹಿಸಿಕೊಂಡು ಪರೀಷಹಗಳನ್ನು ಜಯಿಸಿ, ಶುಕ್ಲ ಧ್ಯಾನದಿಂದ ಮುಕ್ತಿ ಪಡೆಯುತ್ತಾರೆ ಎಂಬುದನ್ನು ವರ್ಣಿಸುತ್ತವೆ. ಇವು ಆರಾಧನಾ ಕಥೆಗಳು ಎಂಬ ವರ್ಗಕ್ಕೆ ಸೇರಿದವು. ಒಂದು ಬಗೆಯ ಕವಚಗ್ರಂಥ ಎಂಬ ಪ್ರಕಾರಕ್ಕೆ ಸೇರಿದುವು. ಪ್ರಾಚೀನ ಕಾಲದಿಂದಲೂ ನಡೆದು ಬಂದ ಯಾವುದೊ ಕೃತಿಯಿಂದಲೊ ಸಂಪ್ರದಾಯದಿಂದಲೊ ಎತ್ತಿದವು. ಕಥಾಪ್ರಪಂಚದ ಹರಿಷೇಣ, ವಡ್ಡಾರಾಧನೆಯ ಕರ್ತೃ—ಇಬ್ಬರಿಗೂ ಅವು ಮೂಲವಿರಬೇಕು. ಅವುಗಳನ್ನು ಹೇಳಿರುವುದರ ಉದ್ದೇಶ

ವ್ರತಿಗಳು ಪರೀಷಹ ಜಯವನ್ನೂ ಮುಕ್ತಿಯನ್ನೂ ಪಡೆಯಬೇಕೆಂದು. ವ್ರತತೊಟ್ಟು ಸಾಧನೆಗಳನ್ನು ನಡೆಸುತ್ತಿರುವವರ ಮನಸ್ಸಿನ ಸ್ಥೈರ್ಯಕ್ಕಾಗಿಯೂ ಶಾಂತಿಗಾಗಿಯೂ ಬಲಕ್ಕಾಗಿಯೂ ಸಾಂತ್ವನಕ್ಕಾಗಿಯೂ ಹೇಳಿದ ಪುರಾತನದ ಕಥೆಗಳು.

ಈ ಕಥೆಗಳ ರಚನೆ ಬಳಸು, ಬಹು ಸುತ್ತು. ಚಕ್ರಭೀಮನ ಕೋಟೆಯಂತೆ ಅಲ್ಲಿ ಕಥೆಯ ನೆಲೆ. ಅವುಗಳ ಅಂಗ ವಿವರಗಳಲ್ಲಿ ಅವುಗಳದೇ ಅನನ್ಯ ವಿಶೇಷವುಂಟು. ಕತೆಗಳೊಳಗೆ ಕತೆಗಳು, ಅವುಗಳಲ್ಲಿ ಒಳಕತೆಗಳು ; ಜಾನಪದ ಕಥೆಗಳಿಂದಲೂ ಪ್ರಾಣಿಕಥೆಗಳಿಂದಲೂ ನೀತಿ ಉಪದೇಶದ ಕತೆಗಳಿಂದಲೂ ತುಂಬಿದುವು. ಈ ಲಕ್ಷಣ ಭಾರತೀಯ ಕಥಾಸಂಪ್ರದಾಯಕ್ಕೆ—ಏಕೆ, ಪಾಶ್ಚಾತ್ಯದ ಎಲ್ಲಕ್ಕೂ ಸಾಮಾನ್ಯ ಲಕ್ಷಣವಾಗಿ ಬಳಕೆ ಯಾದುದೇ. ಆದುದರಿಂದ ಒಂದೊಂದು ಮಜಲಲ್ಲಿಯೂ ಸಂಗ್ರಹವಾಗಿ ಕಥೆಯ ಈ ಈ ಭಾಗ ಹೀಗೆ ಹೀಗೆ—ಎಂದು ಜಡಿತಿ ಮಾಡಿಕೊಂಡು ನಿಲ್ಲಬೇಕಾಗುತ್ತದೆ, ಮುಂದುವರಿಯಬೇಕಾಗುತ್ತದೆ. ಓದುಗರ ನೆರವಿಗಾಗಿ ಪ್ರಯೋಜನಕ್ಕಾಗಿ ಬರಹಗಾರನು ಅದನ್ನು ಮಾಡಿಕೊಡುತ್ತಾನೆ. ಸುಕುಮಾರಸ್ವಾಮಿ, ನಾಗಶ್ರೀ ಕಥೆಗಳು, ನಂದಿಮಿತ್ರ ಕತ್ತಯ್ಯನ ವಿದ್ಯಾಭ್ಯಾಸ—ವಿದ್ಯುಚ್ಚೋರನ ಕಥೆ, ಕಾರ್ತಿಕ ಋಷಿಯ ಕಥೆ—ಇವುಗಳ ಕಥನ ಭವ್ಯವಾದುದು. ಮಲಯಸುಂದರನೆಂಬ ಆನೆಯ, ಅದರ ಹೆಣ್ಣುಗಳಾದ ಮಲಯವತಿ, ಪದ್ಮಾವತಿ ಎಂಬ ಪಿಡಿಗಳ ಪ್ರೇಮಕಥೆಗೆ ಸಮನಾದುದು ನಮ್ಮ ಸಾಹಿತ್ಯ ಚರಿತ್ರೆಯಲ್ಲಿಯೇ ಬೇರೊಂದಿಲ್ಲ. ವಿದ್ಯುಚ್ಚೋರನ ಕತೆಯಲ್ಲಿನ ಸ್ನೇಹದ ಮಹಾವೈಭವ, ಕಾರ್ತಿಕ ಋಷಿಯ ಕತೆಯಲ್ಲಿನ ತಂದೆ-ಮಗಳ ಪ್ರೇಮದ ವಿಲೋಮ ಪ್ರವೃತ್ತಿಯ ದುಷ್ಪರಿಣಾಮ–ಮುಂತಾದವು ಸಾಹಿತ್ಯಕ್ಕೆ ಅಪರೂಪದ ಕಾಣಿಕೆಗಳು.

ಇಲ್ಲಿನ ಆವರಣದಲ್ಲಿ ಅತೀವ ವ್ರತನಿಷ್ಠೆ ಇದೆ. ಭೂಮಿಯ ಮೇಲಿನ ಬದುಕು ಹೀನವಾದುದು, ಕತ್ತಲಲ್ಲಿ ನಡೆಯುವ ಒಂದು ಆಟ—ಇದು ತ್ಯಾಜ್ಯ, ವರ್ಜ್ಯ ಎಂಬ ಭಾವನೆ ಬರುತ್ತದೆ. ಮೊದಲಿಂದ ಕಡೆಯ ವರೆಗೂ ಹುಟ್ಟಿನಿಂದ ಸಾವಿಗೆ, ಸಾವಿನಿಂದ ಮರುಹುಟ್ಟಿಗೆ ನಿರ್ಘೃಣವಾಗಿ ಕರ್ಮಚಕ್ರ ನಡಸುತ್ತದೆ. ಅದನ್ನು ಮುರಿದು ನಾಶಮಾಡದೆ ಮನುಷ್ಯನು ಬಿಡುಗಡೆ ಹೊಂದುವ ಹಾಗಿಲ್ಲ. ಕರ್ಮವೇ ವಿಧಿ, ವಿಧಿ ಕರ್ಮರೂಪವಾಗಿ ಎಲ್ಲವನ್ನೂ ನಡಸುತ್ತದೆ. ಜೀವಗಳು ತಮ್ಮ ಆಧ್ಯಾತ್ಮಿಕ ಚರಿತ್ರೆಯಲ್ಲಿ ಪರಿಣಾಮ ಗೊಳ್ಳುತ್ತಿರುವಾಗ ಕಲ್ಯಾಣಶಕ್ತಿಗಳ ನೆರವು ಸಿಕ್ಕುತ್ತದೆ. ವೈರಿವರ್ಗ ಅಡ್ಡಿ ಆತಂಕಗಳನ್ನು ಒಡ್ಡುತ್ತದೆ. ಋಷಿಗಳು, ಕಲ್ಯಾಣಮಿತ್ರರು ನಿರಂತರವಾಗಿ ನೆರವಿಗೆ ಒದಗುತ್ತಾರೆ. ಅಲೌಕಿಕ ಶಕ್ತಿಗಳು ಈ ಮನುಷ್ಯರ ಅದೃಷ್ಟಗಳೊಂದಿಗೆ ಬೆರೆದು ಕೆಲಸ ಮಾಡುತ್ತವೆ. ಇಲ್ಲಿನ ಸಮಾಜಚಿತ್ರದಲ್ಲಿ ಅನೇಕ ಸುಭಗವಾದ, ಗಂಭೀರವಾದ ದೃಶ್ಯಗಳು ಬರುತ್ತವೆ. ಬಹುವಾಗಿ ಇದು ಶ್ರೀಮಂತರ, ವೈಶ್ಯ ವಣಿಜರ ಪ್ರಪಂಚ. ಸಾಮಾನ್ಯ ಜನರ ಚಿತ್ರಣವೂ ಇಲ್ಲಿಗೆ ವಿಶಿಷ್ಟವಾದುದರಿಂದ ಆ ಕಾಲದ ಜನಜೀವನದ ಸಾಕ್ಷಿ ಚಿತ್ರಗಳಂತೆ ಕಾಣುತ್ತವೆ. ಈ ಕತೆಗಳನ್ನು ನಡಸುವ ಭಾಷಾ ಮಾಧ್ಯಮ ಹಳತು. ಶಬ್ದರಚನೆ, ನುಡಿಗಟ್ಟು, ವಾಕ್ಯಬಂಧ, ಒಟ್ಟು ಪ್ರಬಂಧದ ಸಾಹಿತ್ಯವಿಲಾಸ–ಚಾವುಂಡರಾಯ ಪುರಾಣಕ್ಕಿಂತ, ಕಡೆಗೆ ಪಂಪನ ಗದ್ಯಕ್ಕಿಂತ ಹೆಚ್ಚು ಹಳತೇನೊ.

9–10 ಶತಕದ ನಾಡಿನ ಶಾಸನಗಳು ಈ ಸಂಗತಿಗಳನ್ನು ಬಲಪಡಿಸುತ್ತವೆ. ಹಿಂದಿನ ಕಾಲದ ವ್ಯಾಕರಣ ಸಂಬಂಧವಾದ ಭಾಷಾರೂಪಕ್ಕೆ ಸಂಬಂಧಿಸಿದ ಬಾಂಧವ್ಯ ಚಂಪೂ ರೂಢಿಗಳದಕ್ಕಿಂತ ತಮಿಳು ರೂಪಗಳನ್ನು ಹೆಚ್ಚಾಗಿ ಹೋಲುತ್ತವೆ. ಉತ್ತಮ ಪುರುಷದ ವಿಭಕ್ತಿ ಪ್ರತ್ಯಯಗಳಲ್ಲಿ ಸ್ವರ ದೀರ್ಘ ವಾಗುವುದು. 'ಮ', 'ಮ್'ಗಿಂತ 'ನ್'; 'ಇ'ಗಿಂತ 'ಎ' ಹೆಚ್ಚು ರೂಢಿ. ದೀರ್ಘ 'ಓ' ಮತ್ತು ಪ್ರತ್ಯೇಕ 'ಏ' ನಿರ್ಧಾರಣೆ (Emphasis)ಗಾಗಿ ; ತೃತೀಯೆ ಷಷ್ಠಿ ಪ್ರತ್ಯಯಗಳಲ್ಲಿ ದೀರ್ಘ; 'ಬ'ಕ್ಕಿಂತ 'ವ' ಪ್ರಯೋಗ ; 'ಉವಜ'ಕ್ಕಿಂತ 'ಓಜ' ಬಳಕೆ. ಉತ್ತಮಪುರುಷದ ವಿಧ್ಯರ್ಥದಲ್ಲಿ

ಗ, ಕ ಗಳ ಬಳಕೆ; ವ್ಯಂಜನದ್ವಿತ್ವ—ಇಂಥವೂ ಇನ್ನೂ ಅನೇಕ ಭಾಷಾಭ್ಯಾಸಕ್ಕೆ ಆ ಕಾಲಕ್ಕೆ ಸಂಬಂಧಿಸಿದಂತೆಯೂ ಶಾಸನಗಳಿಗೆ ಸಂಬಂಧಿಸಿದಂತೆಯೂ ಗುರುತಿಸಿ ಪಟ್ಟಿ ಹಾಕಿಪ್ಪಾರೆ. ಈ ರೂಪ ವ್ಯತ್ಯಾಸಗಳು ಆ ಮೇಲಿನ ಹಳಗನ್ನಡ ರೂಪದಲ್ಲಿ ಚಂಪೂ ರೂಪಕ್ಕೆ ಪೂರ್ತಿಯಾಗಿ ಮಾರ್ಪಡುತ್ತವೆ. ಕಾಲಕ್ರಮದಲ್ಲಿ ಭಾಷೆ ಇನ್ನೂ ಬೇರೆಯ ರೂಪಪಕ್ಷಪಾತಗಳನ್ನು ತಳೆಯುತ್ತದೆ. ವಡ್ಡಾರಾಧನೆಯಲ್ಲಿ ನುಡಿ ಮತ್ತು ನುಡಿಗಟ್ಟಿನಲ್ಲಿ ಅನೇಕ ಬಗೆಯ ಸಹಜ ಸ್ವಾರಸ್ಯಗಳಿವೆ. ಭಾವಾಭಿವ್ಯಂಜನೆಯಲ್ಲಿಯೂ ಆವರಣಕಲ್ಪನೆಯಲ್ಲಿಯೂ ಅನೇಕ ಅಸಾಧಾರಣಗಳನ್ನು ತೋರಿಸಿ ಅಚ್ಚರಿಗೊಳಿಸುತ್ತವೆ. ಉಕ್ತಿ ವಾಕ್ಯ ನಿರ್ದಿಷ್ಟ; ದಘುವತ್ತು. ಅದು ಜನದ ಬದುಕಿನ ಹತ್ತಿರ, ನಡುವೆ ಸುಳಿದಾಡುವಂತಿರುತ್ತದೆ. ಕತೆ ಹೇಳುವಾಗ ಸನ್ನಿವೇಶದ ರಂಗು, ಬಿಗಿಪು ಚೆನ್ನಾಗಿ ಹೊಮ್ಮುತ್ತವೆ—ಅವುಗಳಲ್ಲದೇ ಒಂದು ವಿಶಿಷ್ಟ ರಸವೋ ಎಂಬಂತೆ. ಆಗಾಗ ಬೇಸರ ತರುವ ಮಾತುಗಳ ಅಥವಾ ಮಾತಿನ ಗೊಂಚಲುಗಳ ಬಳಕೆ ಕಾಣುವುದುಂಟು. ಮತದ ಪರಿಭಾಷೆ ಅಡಚಣೆಯಾಗುತ್ತದೆ. ಅಲ್ಲಿಗೇ ವಿಶೇಷವಾದ ಒಂದು ಸಮಯ ನುಡಿಯ ಮೇಲೆ ತನ್ನಮುದ್ರೆ ಒತ್ತುತ್ತದೆ. ಲೋಕದ ಮೇಲೆ ಮನುಷ್ಯನ ಬದುಕು ಸಾರವತ್ತಲ್ಲವೆಂದು ನಿರುತ್ತೇಜನಗೊಳಿಸುತ್ತದೆ. ಅಂತೂ ಒಂದು ಕಾಲದ ಆವರಣ ಬರವಣಿಗೆಯಲ್ಲಿ ಸಂಪನ್ನವಾಗಿದೆ.

ರಾಷ್ಟ್ರಕೂಟ ರಚನೆಯಲ್ಲಿ ಛಂದಃಪ್ರಕಾರ ಆಯ್ದು ಮಾಡಿದಂಥದು; ಉತ್ಕೃಷ್ಟವಾದ್ದು. ಕನ್ನಡ ಈವರೆಗೆ ಪ್ರಕಾಶಿಸಿರುವ ಕಾವ್ಯಾಭಿವ್ಯಂಜನೆಯಲ್ಲಿ ಅತಿಶಯವಾದ ನಯ-ನುಣುಪು ಉಳ್ಳದ್ದು; ವಾಗ್ಮಿತೆ ಉಳ್ಳದ್ದು. ಅವರೀಚೆಗೆ ಬಂದ ಯಾವುದೂ ಕೆಲವಂಶದಲ್ಲಿ ಅದಕ್ಕೆ ಹತ್ತಿರ ಬರಲಾರದು. ರಾಮಾಯಣ, ಮಹಾಭಾರತಗಳಲ್ಲಿ ಪುರಾಣಕಾಲದ ಸಂಸ್ಕೃತದಲ್ಲಿ ಶ್ಲೋಕ ಎಷ್ಟು ವಿವಿಧ ಕಾರ್ಯಗಳನ್ನು ಸುಲಭವಾಗಿ ಸಹಜವಾಗಿ ಮಾಡಿತೊ ಹಾಗೆ, ಈ ಕಾಲದ ಕಂದಗಳು ಸಕಲ ವಿಲಾಸಗಳನ್ನೂ ಉಳ್ಳವಾಗಿ, ಹೇಗೆಂದರೆ ಹಾಗೆ, ಬಗ್ಗಿ ಒಗ್ಗಿ ಹಿಗ್ಗಿ ಮಾಡಬೇಕಾದ ಕೆಲಸವನ್ನು ಸಮರ್ಪಕವಾಗಿ ದಕ್ಷವಾಗಿ ಕ್ರಿಯಾಸಾಧಕವಾಗಿ ಮಾಡುತ್ತವೆ. ಕನ್ನಡಕ್ಕೆ ಸಾಮಾನ್ಯವಾದ ದ್ವಿತೀಯಾಕ್ಷರ ಪ್ರಾಸ ಸುಖವಾಗಿ ಸುಭಗವಾಗಿ ಅಕೃತಕವಾಗಿ ಕಾಣುತ್ತದೆ; ಬಲವಂತವಾಗಿ ತಂದು ಹಾಕಿದಂತೆ ಕಾಣುವುದಿಲ್ಲ. ಱ, ೞ ಗಳ ಪ್ರಾಸ ತಪ್ಪದೆ ಶುದ್ಧವಾಗಿ ರೂಢಿಯಲ್ಲಿದೆ. ಗಡ, ವಲಂ, ದಲ್—ಎಂಬ ಅವ್ಯಯಗಳ ಪ್ರಯೋಗವೂ ಸಹಜವೇ. ಅವು ಭರ್ತಿಯ ಪದಗಳಾಗದೆ ಅರ್ಥಾನುಗುಣವಾಗಿ ಪ್ರಯುಕ್ತವಾಗುತ್ತವೆ. ಗಾಂಭೀರ್ಯ ಅಖಂಡ ಶೀಲ ಸಹಜತೆಗಳ ತಾಂಡವವಿದೆ. ಆ ಮೇಲಿನ ಕಾಲಗಳಲ್ಲಿ ತುಂಬ ಕಷ್ಟಪಟ್ಟು ಪ್ರೌಢ ಚಮತ್ಕಾರಗಳಿಂದ ಸಾಧಿಸಬೇಕಾಗಿ ಬಂದ ಒಂದು ನುಣುಪು, ಉನ್ನತಿ ಈ ಮಹಾಕಾವ್ಯದ ಸ್ವರೂಪಲಕ್ಷಣವಾಗಿ ಕಾಣುತ್ತವೆ. ಲೌಕಿಕ ಜೀವನದಲ್ಲಿ ರಾಷ್ಟ್ರಕೂಟ ರಾಜರ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಪರಮ ದರ್ಪವಿತ್ತೋ ಅದೇ ದರ್ಪ, ದಕ್ಷತೆ ಅವರ ಛಂದಸ್ಸಿನಲ್ಲಿದೆಯೆನ್ನಬೇಕು. ಅದೇ ವೈಭವ ಅವರ ಕಾಲದಲ್ಲಿ ಹುಟ್ಟಿದ ಕನ್ನಡ ಕವಿತೆಯಲ್ಲಿದೆ.

ಸಂಸ್ಕೃತದ ವರ್ಣವೃತ್ತಗಳಲ್ಲಿ ಮೂರು ಬೆಳೆದು ಕನ್ನಡದಲ್ಲಿ ಆರಾಗಿರುವುದು ಪ್ರಖ್ಯಾತ ಸಂಗತಿ. ಉತ್ಪಲಮಾಲೆ ಚಂಪಕಮಾಲೆಯಾಗಿ, ಶಾರ್ದೂಲವಿಕ್ರೀಡಿತ ಮತ್ತೇಭವಿಕ್ರೀಡಿತವಾಗಿ, ಸ್ರಗ್ಧರೆ ಮಹಾಸ್ರಗ್ಧರೆಯಾಗಿ ಬೆಳೆದು (ಆದಿ ಗುರುವನ್ನು ಎರಡು ಲಘುಗಳನ್ನಾಗಿ ವಿಸ್ತರಿಸಿಕೊಂಡು) ಕನ್ನಡಕ್ಕೆ ಬಹು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಅವುಗಳ ಪ್ರಾಬಲ್ಯವೇ ಈ ಚಂಪೂಗಳಲ್ಲಿ, ಇಲ್ಲಿ ಪ್ರಯೋಗಗೊಂಡ ಛಂದಸ್ಸಿನಲ್ಲಿ 10ಕ್ಕೆ 8 ಭಾಗಕ್ಕಿಂತ ಹೆಚ್ಚಿನದು. ಧ್ವನಿಯೊ ಅಗತ್ಯವೊ ವಿಕಾಸವೊ ಮನಸ್ಸೊ ಮಾರ್ಪಡುವಾಗ ಮಾತ್ರ ಪೃಥ್ವೀ, ಹರಿಣಪ್ಲುತ, ಮಲ್ಲಿಕಾಮಾಲೆ, ತರಳ ಅಥವಾ ಅನವದ್ಯ ತಲೆ ಹಾಕುತ್ತವೆ. ಇವುಗಳಲ್ಲಿ ಕೆಲವು ಸ್ವಭಾವಗುಣದಲ್ಲಿ ಕನ್ನಡಕ್ಕೆ ಹತ್ತಿರವಾಗುವವು. ಒಂದು ಬಗೆಯ ಮಾತ್ರಾ ಅಥವಾ ಅಂಶ ನಡೆ, ಲಯತಾನ ಅಲ್ಲಿ ಸಿಕ್ಕುತ್ತವೆಯಾಗಿ ಎಲ್ಲಕ್ಕಿಂತ ವಿಶೇಷವಾಗಿ ಉತ್ಸಾಹ ತರುವ ಸಂಗತಿ ಕನ್ನಡದ ಮೂಲ ಛಂದಸ್ಸಾದ ಪಿರಿಯಕ್ಕರದ ಮತ್ತು ರಗಳೆಗಳ ಪ್ರಯೋಗ. ಅತ್ಯಂತ ಸಹಜವಾಗಿ ಬರುವ ಇವು ಜೀವದ ಮಿಡಿತಕ್ಕೆ ಅತ್ಯಾಪ್ತ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ಆಚಿನ

ಕಾಲಗಳಲ್ಲಿ ರಚನಾ ಸೌಂದರ್ಯದಲ್ಲಾಗಲಿ, ಧ್ವನನದಲ್ಲಿಯಾಗಲಿ, ರಸಾಭಿವ್ಯಂಜನೆಯ ಶಕ್ತಿಯಲ್ಲಾಗಲಿ ಅವುಗಳಷ್ಟು ಸುಂದರವಾದುವನ್ನು ನಾವು ಕಾಣೆವು. (3+5) 8ರ 6 ಮಾತ್ರೆಗಳ ಸಂಯುಕ್ತ ಮಾತ್ರಾಗಣ ಪಂಪನ ರಗಳೆಗಳಲ್ಲಿ ಕಾಣುವಂತೆ ಇನ್ನೆಲ್ಲಿಯೂ ಕಾಣದು. ಅವುಗಳ ಓಟ ಕೆಚ್ಚು, ಸ್ವರವ್ಯಂಜನ ಸಾಮರಸ್ಯ, ಪ್ರಾಸವಿಲಾಸ, ಬಂಧದ ಸುರಸತೆ ಇವುಗಳಿಗೆ ಸಾಟಿಯೆಲ್ಲಿ ? ಸ್ವನಸೂಕ್ಷ್ಮತೆಗಳು ಅನೇಕ. ಅವುಗಳನ್ನು ಹೋಲುವ ಕೆಲವಕ್ಕಾಗಿ ನಮ್ಮ ಕಾಲದ ವರೆಗೂ ಕನ್ನಡ ಕಾಯಬೇಕಾಯಿತು.

ಆ ಕಾಲದ ಶಾಸನಗಳು ಈ ವರೆಗೆ ಹೇಳಿರುವ ಈ ಭಾಷಾ ಮತ್ತು ಬಂಧದ ರಕ್ಷಣೆಯಲ್ಲಿಯೇ ನಿಲ್ಲುತ್ತವೆ. ಅಲ್ಲಿನ ಕೆಲವು ಪದ್ಯಗದ್ಯಖಂಡಗಳು ದಕ್ಷ ರಚನೆಯುಳ್ಳವು. ಎಂಟನೆಯ ಶತಮಾನದ ಶ್ರವಣಬೆಳಗೊಳದ ಮಾಸೇನರದು, ಚೋಳರ ಮೇಲೆ ಯುದ್ಧ ಮಾಡುತ್ತ ಮಣಲೇರನ ಪರಾಕ್ರಮವನ್ನು ವರ್ಣಿಸುವ 949ರ ಮಂಡ್ಯದ ಶಾಸನಗಳು, 4ನೆಯ ಇಂದ್ರನ ಜಲಕಂದುಕಾಗಮನದ ವರ್ಣನೆ ಮತ್ತು ಅವನು ತೀರಿಕೊಂಡದ್ದನ್ನು ವರ್ಣಿಸುವ (ಶ್ರ. ಬೆ. 133), ಹೆಗ್ಗಡದೇವನಕೋಟೆಯ (800) ಶಿವಮಾರನ ಶಾಸನ, ಗಂಗರಾಜ ನೀತಿಮಾರ್ಗನ 921ನೆ ಶಾಸನ, 800ರ ವೀರಗಲ್ಲಲ್ಲಿರುವ ಗೋವಿಂದನ ಶಾಸನ—ನೊಳಂಬರಾಜನಿಗೂ ಚಿತ್ರವಾಹನನಿಗೂ ನಡೆದ ಯುದ್ಧದಲ್ಲಿ ವೀರನಾಯಕನು ಪೆರ್ಗುಂಜಿ ಕೋಟೆಯಲ್ಲಿ ಭೀಷ್ಮರಂತೆ ಬಿದ್ದು ಸಾಯುತ್ತಾನೆ ಎಂಬ ವರ್ಣನೆ—ಕಣ್ಣಿಗೆ ಕಟ್ಟಿದಂತೆ ಮನಸ್ಸನ್ನು ಸೆರೆಹಿಡಿವಂತೆ ವರ್ಣಿತವಾಗಿವೆ.

13ನೆಯ ಶತಮಾನದಲ್ಲಿ ಇದ್ದ ಶಬ್ದಮಣಿದರ್ಪಣದ ಕರ್ತೃವಾದ ಕೇಶಿರಾಜನು ಹಳಗನ್ನಡದ ಶುದ್ಧಿಯ ರಕ್ಷಕ ಮತ್ತು ಅದರ ಮನಸ್ಸಾಕ್ಷಿಯ ಕಾವಲುಗಾರನಂತೆ ಇರುವವನು. ಆ ಹಳಗನ್ನಡದ ಭಾಷೆ, ಅದರ ವ್ಯಾಕರಣ ನುಡಿಗಟ್ಟು, ರಚನೆಯ ಪಕ್ಷಪಾತಗಳು ಎಂಥವೆಂಬುದನ್ನು ಹೇಗೆ ವರ್ಣಿಸುತ್ತಾನೆಂದು ಹೇಳಿ ಇದನ್ನು ಮುಗಿಸಬಹುದು.

> ಗಮಕ ಸಮಾಸದಿಂ ಱಟ ಕುಳ ಕ್ಷಳದಿಂ ಶ್ರುತಿ ಸಹ್ಯ ಸಂಧಿಯಿಂ
> ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
> ವ ಮ ಹ ಪ ಭೇದದಿಂ ವಿರಹಿತಾವ್ಯಯ ಸಂಸ್ಕೃತಲಿಂಗದಿಂ ಪದೋ
> ತ್ರಮ ಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ

ನೃಪತುಂಗ, ಪಂಪ, ಪೊನ್ನ—ಅವರ ತರುವಾಯದ ಕಾಲದಲ್ಲಿ ಬಂದ ರನ್ನ, ನಾಗವರ್ಮರಂತೆ—ಈ ಮೇಲ್ಕಂಡ ಕಾವ್ಯಸೌಂದರ್ಯ ವೈಭವದ ಪ್ರಶಸ್ತಿಯನ್ನು ಉದಾಹರಿಸುವುದು ಮಾತ್ರವಲ್ಲದೆ ಅವರ ಕಾವ್ಯರಚನೆಯ ಪ್ರಯೋಗದಲ್ಲಿ ಈ ಲಕ್ಷಣಗಳೆಲ್ಲ ಸುಭಗವಾಗಿ ಕಾಣುತ್ತವೆ.

ಮೂಲಲೇಖಕರು ಮತ್ತು ಅನುವಾದಕರು : ಶ್ರೀ ವಿ. ಸೀತಾರಾಮಯ್ಯ

# ಸಂಸ್ಕೃತ (ರಾಷ್ಟ್ರಕೂಟರ ಕಾಲ)

ರಾಷ್ಟ್ರಕೂಟರ ವೈಭವಪೂರ್ಣ ಆಳಿಕೆಯಲ್ಲಿ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಸಾಹಿತ್ಯಕ್ರಿಯೆ ಏಕರೀತಿಯಾಗಿ ಅರಳಿತು. ಈ ಕಾಲದ ಪ್ರೌಢ ವ್ಯಾಸಂಗಕ್ರಮ ಎಷ್ಟು ವಿಶಾಲವಾಗಿತ್ತೆಂದರೆ : ಅದರಲ್ಲಿ ವೇದ, ವ್ಯಾಕರಣ, ಜ್ಯೋತಿಷ, ಸಾಹಿತ್ಯ, ಮೀಮಾಂಸಾ, ಧರ್ಮಶಾಸ್ತ್ರ, ಪುರಾಣ, ನ್ಯಾಯ ಮತ್ತು ಸ್ಮೃತಿ—ಇವೆಲ್ಲ ಸೇರುತ್ತಿದ್ದವು.[1]

ಈ ಕಾಲದ ಶಿಲಾಶಾಸನವೊಂದರಲ್ಲಿ ಆಗ ಕೌಮಾರ ಅಥವಾ ಕಾತಂತ್ರ ವ್ಯಾಕರಣದ ವಿದ್ವಾಂಸರು ಕರ್ಣಾಟಕದಲ್ಲಿದ್ದರೆಂದು ಹೇಳಲಾಗಿದೆ.[2] ಈ ಕಾಲದಲ್ಲಿ ಬಾಳಿದ ದುರ್ಗಸಿಂಹನು 'ಕಾತಂತ್ರಸೂತ್ರ'ಗಳ ಮೇಲೆ ಪ್ರಖ್ಯಾತವಾದ ತನ್ನ 'ವೃತ್ತಿ'ಯನ್ನು ರಚಿಸಿದನು. ಇದು ಮೂಲವನ್ನು ವಿವರಿಸುವುದೂ ಅಲ್ಲದೆ ವಿಸ್ತರಿಸುತ್ತದೆ.[3] ದುರ್ಗಸಿಂಹನು ತನ್ನ ವೃತ್ತಿಯ ಮೇಲೆ ತಾನೇ ಮತ್ತೊಂದು ವ್ಯಾಖ್ಯಾನವನ್ನೂ ರಚಿಸಿದ್ದಾನೆ.

'ಜೈನೇಂದ್ರ'ವೆಂಬ ಪ್ರಸ್ಥಾನದಂತೆ 'ಶಾಕಟಾಯನ'ವೆಂದು ಪ್ರಸಿದ್ಧವಾದ ಮತ್ತೊಂದು ವ್ಯಾಕರಣ ಪ್ರಸ್ಥಾನವನ್ನು ಕೂಡ ಕರ್ಣಾಟಕವೇ ಪ್ರವರ್ತಿಸಿತು. ಈ ಶಾಕಟಾಯನನು ಜೈನ ; ಇವನು ರಾಷ್ಟ್ರಕೂಟ ಚಕ್ರವರ್ತಿ ಮೊದಲನೆಯ ಅಮೋಘವರ್ಷನ ಆಸ್ಥಾನದಲ್ಲಿದ್ದನು. ಪಾಣಿನಿ ಮತ್ತು ಜೈನೇಂದ್ರರ ಸೂತ್ರಗಳನ್ನು ಅನುಕೂಲದೃಷ್ಟಿಯಿಂದ ಮತ್ತೆ ಅಳವಡಿಸಹೊರಟ ಈತನು ಎಷ್ಟೋ ವೇಳೆ ಮುಂದಿನ ಕೌಮುದೀಗ್ರಂಥಗಳಿಗೆ ಮಾದರಿಯಾಗುವಂತೆ ಪುನರ್ನಿಯೋಜನಾಕೌಶಲವನ್ನು ತೋರಿಸಿದ್ದಾನೆ. ವಿಷಯಗಳ ಅನುಕ್ರಮದಲ್ಲಿ ಸೂತ್ರಗಳನ್ನು ಪಠಿಸುವ ಈತನ ನೂತನ ಕ್ರಮವು ಸುಲಭಗ್ರಾಹ್ಯತೆಯನ್ನು ಹೆಚ್ಚಿಸಿದೆ. 'ಶಬ್ದಾನುಶಾಸನ'ವೆಂಬ ಸೂತ್ರಗ್ರಂಥವನ್ನು ರಚಿಸಿದ್ದಲ್ಲದೆ, ಶಾಕಟಾಯನನು ಅದರ ಮೇಲೆ ತನ್ನದೇ ಆದ ವೃತ್ತಿಯನ್ನೂ ಬರೆದನು ; ತನ್ನ ಆಶ್ರಯದಾತನ ಗೌರವಾರ್ಥವಾಗಿ ಆ ವೃತ್ತಿಗೆ 'ಅಮೋಘವೃತ್ತಿ'ಯೆಂದು ಹೆಸರಿಟ್ಟನು.[4]

ಕಳೆದ ಶತಮಾನದ ಕಡೆಯ ವರೆಗೂ ರಾಷ್ಟ್ರಕೂಟರ ಇತಿಹಾಸವು ಭಾರತೀಯ ಇತಿಹಾಸದಲ್ಲಿ ವಿಸ್ಮೃತಪ್ರಾಯವಾದ ಒಂದು ಅಧ್ಯಾಯವಾಗಿತ್ತು. ಈ ದೊಡ್ಡ ಅರಸುಮನೆತನದ ಸಾಧಾರ ಇತಿಹಾಸವನ್ನು ಬರೆಯಲು ತಕ್ಕಷ್ಟುಮಟ್ಟಿಗೆ ನೂರಾರು ಶಿಲಾಲೇಖಗಳೂ ತಾಮ್ರಶಾಸನಗಳೂ ಹೆಚ್ಚಾಗಿ ಸಂಸ್ಕೃತದಲ್ಲಿ ಸಂಶೋಧಕರಿಗೆ ಈ ಶತಮಾನದಲ್ಲಿಯೇ ಸಿಕ್ಕಿವೆ. ಸಂಸ್ಕೃತ ಶಿಲಾಲೇಖಗಳಲ್ಲಿ ಒಂದೊಂದೂ ಒಂದು ಪ್ರಶಸ್ತಿಕಾವ್ಯವೇ ಆಗಿದೆ. ಒಂದೊಂದು ತಾಮ್ರಶಾಸನವೂ ಸಂಸ್ಕೃತ ಮಹಾಕವಿಗಳಾದ ಬಾಣ, ಭಾರವಿಗಳ ಭಾಷಾವಿಲಾಸಗಾಂಭೀರ್ಯಗಳಿಂದ ಶೋಭಿಸುತ್ತವೆ. ಇಲ್ಲಿ ಒಂದನ್ನು ಮಾತ್ರ, ಕ್ರಿ.ಶ. 915ರಲ್ಲಿ ಮೂರನೆಯ ಇಂದ್ರನು ಬರೆಯಿಸಿದ ಬೇಗುಮ್ರಾ ತಾಮ್ರಶಾಸನವನ್ನು[5] ವಿಶೇಷತಃ ಉಲ್ಲೇಖಿಸಬಹುದು. ಇದನ್ನು ಬರೆದವನು ತ್ರಿವಿಕ್ರಮ ; ಈ ತ್ರಿವಿಕ್ರಮನೇ ಇಂದು ನಮಗೆ ಸಂಸ್ಕೃತ ಸಾಹಿತ್ಯದಲ್ಲಿ ಉಪಲಬ್ಧವಿರುವ ಚಂಪೂಕಾವ್ಯಗಳಲ್ಲೆಲ್ಲ ಪ್ರಪ್ರಥಮವಾದ ಮತ್ತು ನಿರ್ದಿಷ್ಟ ಕಾಲವುಳ್ಳ 'ನಳಚಂಪೂ' ಗ್ರಂಥವನ್ನು ಬರೆದವನು. ಹೀಗೆ ಶುದ್ಧ ಸಾಹಿತ್ಯರೂಪಗಳ ಕ್ಷೇತ್ರದಲ್ಲಿಯೂ ಕರ್ಣಾಟಕವು ತನ್ನದೇ ಆದ ಕೊಡುಗೆಯನ್ನು ನೀಡಿತೆಂಬುದು ಸಿದ್ಧವಾಗುತ್ತದೆ.

'ಚಂಪೂ' ಎಂಬ ಶಬ್ದದ ಮೂಲವೇನೆಂಬುದು ಕೂಡ ನಿಗೂಢವಾಗಿದೆ; ಆದರೆ ಪ್ರೊಫೆಸರ್ ಆರ್.ಎಸ್. ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಶಬ್ದವು ಕನ್ನಡ ಮೂಲದ್ದಿರ ಬಹುದೆಂದು ಊಹಿಸಿದ್ದಾರೆ.

ಗದ್ಯಪದ್ಯಾತ್ಮಕವೂ, ಅತ್ಯಂತ ಪ್ರೌಢವೂ, ಅಲಂಕಾರಭೂಯಿಷ್ಠವೂ ಆದ ತ್ರಿವಿಕ್ರಮನ ಚಂಪೂ ಕೃತಿಯು ಏಳು ದೀರ್ಘ ಅಧ್ಯಾಯಗಳಿಂದ ಕೂಡಿದೆ. ಆದಿಯಲ್ಲಿ ಅವನು ಬಾಣ ಸುಬಂಧುಗಳನ್ನು ಸ್ತುತಿಸುತ್ತಾನೆ. ನಳಕಥೆಯ ನಿರೂಪಣೆಯಲ್ಲಿ ಅವನು ಮೂಲ 'ಮಹಾಭಾರತ'ವನ್ನು ಯಥಾವತ್ತಾಗಿ ಏನೂ ಅನುಸರಿಸುವುದಿಲ್ಲ. ಅದ್ಭುತರಮ್ಯ ಹಾಗೂ ಪ್ರತಿಭೋನ್ಮೇಷಮಯವಾಗಿ ತನ್ನ ಮಾರ್ಪಾಡು ಗಳನ್ನು ಮಾಡಿಕೊಂಡಿದ್ದಾನೆ. ನಳದಮಯಂತಿಯರ ಸಮಾಗಮವನ್ನು ಸಾಧಿಸಲು ಶ್ರುತಶೀಲನೆಂಬ ನಳ ಮಹಾರಾಜನ ಮಂತ್ರಿಗೆ ಇಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಲಾಗಿದೆ. ಸಾಂಪ್ರದಾಯಿಕವಾದ ಪ್ರಕೃತಿವರ್ಣನೆಗಳಿವೆ; ದಮಯಂತಿಯು ದೇವತೆಗಳ ಪ್ರಣಯಸಂದೇಶವನ್ನು ನಿರಾಕರಿಸಿದಳೆಂಬ ಘಟ್ಟಕ್ಕೆ ಕಥೆ ಮುಗಿಯುತ್ತದೆ.

ಇದೇ ಕವಿಯ ಮತ್ತೊಂದು ಪರಿಷ್ಕೃತ ಕಾವ್ಯರಚನೆ—'ಮದಾಲಸಾ-ಚಂಪೂ'. ಮೊದಲನೆಯ ಅಮೋಘವರ್ಷ ಅಥವಾ ನೃಪತುಂಗನು (ಕ್ರಿ.ಶ. 814-878) ಸ್ವಯಂ ಉತ್ತಮವರ್ಗದ ಕವಿಯಾಗಿದ್ದನು. ಸಂಸ್ಕೃತದಲ್ಲಿ 'ಪ್ರಶ್ನೋತ್ತರ-ರತ್ನಮಾಲಿಕಾ' ಎಂಬ ಚಿಕ್ಕ ಹಾಗು ಮಧುರ ವೈರಾಗ್ಯ ಗೀತೆಯು ಅವನದೇ ರಚನೆ; ಕೆಲವೊಮ್ಮೆ ಈ ಕೃತಿಯನ್ನು ತಪ್ಪಾಗಿ ವಿಮಲ ಬರೆದನೆಂದೂ ಶಂಕರಾಚಾರ್ಯರು ಬರೆದರೆಂದೂ ಹೇಳುವುದುಂಟು. 'ಆರ್ಯಾ' ವೃತ್ತದಲ್ಲಿರುವ ಇಲ್ಲಿಯ ಪದ್ಯಗಳೆಲ್ಲವೂ ಪ್ರಶ್ನೆ-ಉತ್ತರಗಳ ಶೈಲಿಯಲ್ಲಿದ್ದು 'ಪ್ರಶ್ನೋತ್ತರಾಲಂಕಾರ'ಕ್ಕೆ ಉತ್ತಮ ಉದಾಹರಣೆಗಳಾಗಿವೆ. ಇವನ ಕನ್ನಡ ಕೃತಿ 'ಕವಿರಾಜ ಮಾರ್ಗ'ವು ದಂಡಿಯ ಪ್ರಖ್ಯಾತ 'ಕಾವ್ಯಾದರ್ಶ'ದ ಮಾದರಿಯಲ್ಲಿ ರಚಿತವಾಗಿದೆ.

ಈ ಪ್ರಸಿದ್ಧ ರಾಜನ ಆಶ್ರಯದಲ್ಲಿಯೇ ರಚಿತವಾದ ಒಂದು ಗಮನಾರ್ಹ ಗಣಿತಶಾಸ್ತ್ರದ ಗ್ರಂಥವೆಂದರೆ ಮಹಾವೀರಾಚಾರ್ಯನ 'ಗಣಿತ-ಸಾರ-ಸಂಗ್ರಹ'. ಅದು ಬ್ರಹ್ಮಗುಪ್ತನ ಗ್ರಂಥಕ್ಕಿಂತ ಸರಳವಾಗಿದೆ; ಭೂಮಿತಿಯ ಸಂಖ್ಯಾಪ್ರಸ್ತಾರ ಮುಂತಾದ ವಿಷಯಗಳನ್ನೊಳಗೊಂಡಿದೆ.

ಸ್ಮೃತಿಕಾರರಾದ ಕಾತ್ಯಾಯನ, ಆಂಗಿರಸ, ಯಮ, ವಿಷ್ಣು—ಇವರನ್ನು ಸಾಮಾನ್ಯವಾಗಿ ಇದೇ ಕಾಲದವರೆಂದು ಹೇಳುತ್ತಾರೆ; ಇವರಲ್ಲಿ ಯಾರಾದರೂ ಕರ್ಣಾಟಕದವರೋ ಎನ್ನುವದು ನಿಶ್ಚಿತವಲ್ಲ.

ಹಲಾಯುಧನು 'ಹಲಾಯುಧಕೋಶ'ವೆಂಬ ನಿಘಂಟು, 'ಕವಿರಹಸ್ಯ' ಹಾಗು 'ಮೃತಸಂಜೀವಿನಿ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. 'ಕವಿರಹಸ್ಯ'ವೆಂಬುದು ನಿಜವಾಗಿ ಒಂದು ಧಾತು-ಪಾಠವೇ; ಧಾತ್ವರ್ಥಗಳನ್ನು ಶ್ಲೋಕ ರೂಪದಲ್ಲಿ ಹೇಳಲಾಗಿದೆ. ಸಮಾನರೂಪದ ವಿಭಿನ್ನ ಧಾತುರೂಪಗಳ ವೈಲಕ್ಷಣ್ಯವನ್ನೂ ಅದು ವಿವರಿಸುತ್ತದೆ. ಅದರ ಪ್ರಸ್ತಾವನೆಯಲ್ಲಿ ಕಡೆಯ ರಾಷ್ಟ್ರಕೂಟ ರಾಜ ಮೂರನೆಯ ಕೃಷ್ಣನಿಂದ ತನಗೆ ದೊರೆತ ರಾಜಾಶ್ರಯವನ್ನು ಕವಿ ಸ್ಪಷ್ಟವಾಗಿ ತಿಳಿಸಿದ್ದಾನೆ. 'ಮೃತ ಸಂಜೀವಿನಿ'ಯೆಂಬುದು ಪಿಂಗಳನ 'ಛಂದಸ್ಸೂತ್ರ'ದ ಮೇಲೆ ರಚಿತವಾಗಿರುವ ಒಂದು ವ್ಯಾಖ್ಯಾನ.

ಈ ಸುವರ್ಣಯುಗದಲ್ಲಿಯೇ ಮಹಾ ಅದ್ವೈತಗುರುಗಳಾದ ಶಂಕರಾಚಾರ್ಯರ ಉದಯವಾಯಿತು. ಶೃಂಗೇರಿಯಲ್ಲಿ ಪೀಠವನ್ನು ಸ್ಥಾಪಿಸಲು ಅವರಿಗೆ ಉತ್ತೇಜನ ದೊರೆಯಿತು.

'ಉಪನಿಷತ್ತುಗಳು', 'ಬ್ರಹ್ಮಸೂತ್ರ'. 'ಭಗವದ್ಗೀತೆ' ಇವುಗಳ ಮೇಲೆ ರಚಿತವಾದ ಅವರ ಭಾಷ್ಯಗಳೂ, ಭಾವನಿರ್ಭರವಾದ ಅವರ ಭಕ್ತಿಸ್ತೋತ್ರಗಳೂ, ವೇದಾಂತ ಪ್ರಕರಣ ಗ್ರಂಥಗಳೂ ಎಲ್ಲವೂ ಕೂಡಿ ವೇದಾಂತ ವಿಚಾರ ಮತ್ತು ಆಚಾರಗಳಲ್ಲಿ ಹೊಸದೊಂದು ಯುಗಪ್ರವರ್ತನೆಯನ್ನು ಉಂಟು ಮಾಡಿದುವೆನ್ನಬಹುದು. ಆತನ ಶಿಷ್ಯೋತ್ತಮರಲ್ಲಿ ಕೆಲವರು, 'ಪಂಚಪಾದಿಕಾ' ಎಂಬ ಗ್ರಂಥಕಾರನಾದ ಪದ್ಮಪಾದ, 'ಬೃಹದಾರಣ್ಯಕ ಶ್ಲೋಕವಾರ್ತಿಕ', 'ತೈತ್ತಿರೀಯ ಶ್ಲೋಕವಾರ್ತಿಕ' ಮತ್ತು 'ನೈಷ್ಕರ್ಮ್ಯ ಸಿದ್ಧಿ' ಎಂಬ ಉದ್ಗ್ರಂಥಗಳನ್ನು ಬರೆದ ಸುರೇಶ್ವರ ಮುಂತಾದವರೂ ಕರ್ಣಾಟಕದಲ್ಲಿ ನೆಲಸಿದರು. ಹೀಗೆ ಅದ್ವೈತದ ಮಹಾ ಸಂಪ್ರದಾಯವು ಈ ನೆಲದಲ್ಲಿ ಹುಟ್ಟಿ ಪುಷ್ಟಿಗೊಂಡಿತು.

ಮಂಡನಮಿಶ್ರನೇ ಸುರೇಶ್ವರನಾಗಿರಬಹುದೋ ಮತ್ತು ವಿಶ್ವರೂಪನೆಂದು ಅವನಿಗೆ ನಾಮಾಂತರ ವಿದ್ದಿರಬಹುದೋ ಎಂಬ ವಿಷಯವು ವಿದ್ವಾಂಸರಲ್ಲಿ ತುಂಬಾ ವಾದಗ್ರಸ್ತವಾಗಿದೆ. ಸುರೇಶ್ವರ, ಉಮ್ವೇಕ ಮತ್ತು ಭವಭೂತಿಗಳ ಅಭೇದವನ್ನು ಕೂಡ ಕೆಲವು ವಿದ್ವಾಂಸರು ಸೂಚಿಸಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ.

'ಯಾಜ್ಞವಲ್ಕ್ಯ-ಸ್ಮೃತಿಯ'ಯ ಮೇಲೆ ಖ್ಯಾತಿಯಾಂತ ವ್ಯಾಖ್ಯಾನವಾದ 'ಬಾಲಕ್ರೀಡಾ' ಎಂಬುದು ಸುರೇಶ್ವರನಿಂದ ಅಭಿನ್ನನಾದ ವಿಶ್ವರೂಪನ ಕೃತಿ. ಮಹಾಮಹೋಪಾಧ್ಯಾಯ ಕಾಣೆ ಅವರ ಮಾತುಗಳಿವು :—"ವಿಶ್ವರೂಪನ ಶೈಲಿ ಸರಳ ಮತ್ತು ಸತ್ತ್ವಯುಕ್ತ; ಅದು ಮಹಾತ್ಮರಾದ ಶಂಕರಾ ಚಾರ್ಯರ ಶೈಲಿಯನ್ನೇ ಹೋಲುತ್ತದೆ. ಅವನು ಹೇರಳವಾಗಿ ವೇದ ಸಾಹಿತ್ಯದಿಂದ ಉದಾಹರಿಸುತ್ತಾನೆ; ಚರಕ, ವಾಜಸನೇಯ ಮತ್ತು ಕಾಠಕ ಶಾಖೆಗಳನ್ನು ಉಲ್ಲೇಖಿಸುತ್ತಾನೆ ಮತ್ತು ಬಹಳಷ್ಟು ಸಲ ತನ ಸಿದ್ಧಾಂತವನ್ನು 'ಋಗ್ವೇದ' 'ಬ್ರಾಹ್ಮಣಗಳು' ಮತ್ತು 'ಉಪನಿಷತ್ತು'ಗಳ ಅವತರಣಿಕೆಗಳಿಂದ ಸಮರ್ಥಿಸಿಕೊಳ್ಳುತ್ತಾನೆ. 'ಪೂರ್ವಮೀಮಾಂಸಾ' ಪರಿಭಾಷೆಯಿಂದ ತುಂಬಿದ್ದರೂ, ಅವನ ತಾತ್ತ್ವಿಕ ಸಿದ್ಧಾಂತಗಳು ಶಂಕರಾಚಾರ್ಯರವೇ ಆಗಿವೆ"[6].

ಶಂಕರಾಚಾರ್ಯರ ತತ್ತ್ವವಿಚಾರವನ್ನು ಶಾಸ್ತ್ರೀಯವಾಗಿ ವ್ಯವಸ್ಥೆಗೊಳಿಸಿದ 'ಸಂಕ್ಷೇಪ ಶಾರೀರಕ' ವೆಂಬ ಗ್ರಂಥವನ್ನು ಬರೆದ ಸರ್ವಜ್ಞಾತ್ಮನು ಸುರೇಶ್ವರನ ಶಿಷ್ಯನಾದ್ದರಿಂದ ಅವನೂ ಈ ಕಾಲದಲ್ಲಿಯೇ ಸೇರುತ್ತಾನೆ.

ರಾಷ್ಟ್ರಕೂಟರ ಮಾಂಡಲಿಕರಾಗಿದ್ದ ಲೇಮುಲವಾಡದ (ಅಥವಾ ವೇಮುಲವಾಡದ) ಚಾಲುಕ್ಯರ ಆಶ್ರಯದಲ್ಲಿ ಪ್ರಸಿದ್ಧಿಗೆ ಬಂದ ಇನ್ನೊಬ್ಬ ದೊಡ್ಡ ಗ್ರಂಥಕಾರನೆಂದರೆ ಜೈನ ಸೋಮದೇವಸೂರಿ. ತ್ರಿವಿಕ್ರಮನು ಆರಂಭಿಸಿದ್ದ ಚಂಪೂ ಕಾವ್ಯ ಸಂಪ್ರದಾಯವನ್ನು ಇವನು ಮುಂದುವರಿಸಿ ಅದನ್ನು ಭವ್ಯ ಉನ್ನತಿಗೆ ಕೊಂಡೊಯ್ದನು. ಅವನು ಕ್ರಿ. ಶ. 959ರಲ್ಲಿ, ತನ್ನ ಪ್ರಭು ಮೂರನೆಯ ಕೃಷ್ಣನು ಚಿತ್ತೂರು ಜಿಲ್ಲೆಯ ಮೇಲ್ಪಾಡಿಯೆಂಬ ಗ್ರಾಮದಲ್ಲಿ ಬೀಡು ಬಿಟ್ಟಿರುವಾಗ ತನ್ನ 'ಯಶಸ್ತಿಲಕ'ವನ್ನು ಬರೆದನು. ಈ ಕೃತಿಯು "ಬೌದ್ಧ, ಜೈನ ಮತ್ತು ಬ್ರಾಹ್ಮಣಧರ್ಮಗಳು ಹೋರಾಟದಲ್ಲಿ ನಿರತವಾಗಿ, ಎಲ್ಲ ವಿಚಾರಶೀಲರ ಗಮನವನ್ನು ಸೆಳೆಯುತ್ತ ಮತ್ತು ಅವರ ಬುದ್ಧಿಶಕ್ತಿಯನ್ನೆಲ್ಲ ಆಕರ್ಷಿಸುತ್ತ ಇದ್ದ ಸಮಯದಲ್ಲಿ ಭಾರತವು ಹೇಗಿತ್ತೆಂಬ ಒಂದು ಸರಸ ಚಿತ್ರವನ್ನು ಪ್ರತಿನಿಧಿಸುತ್ತದೆ."[7] ಇಲ್ಲಿಯ ಕಥೆ ಜೈನರಲ್ಲಿ ವಿಶೇಷ ಪ್ರಚಾರವಿದ್ದ ಕಥೆ; ಯಶೋಧರನೆಂಬ ನಾಯಕನು ಜನ್ಮಜನ್ಮಾಂತರಗಳಲ್ಲಿ ಪಟ್ಟ ಪಾಡೇ ಮುಖ್ಯ ವಸ್ತು. ಆದರೆ ಈ ವಸ್ತುವಿನ ನಿರೂಪಣೆಯಲ್ಲಿ ಸೋಮದೇವನು ಎಂತಹ ವಿಶ್ವಕೋಶಸದೃಶವಾದ ಪ್ರತಿಭೆಯನ್ನು ಮೆರೆದಿದ್ದಾನೆಂದರೆ, ಆಧುನಿಕ ವಿದ್ವಾಂಸನೊಬ್ಬನು ಈ ಒಂದೇ ಕೃತಿಯ ಸಂಶೋಧನೆಯಿಂದ ಅಂದಿನ ಭಾರತದ ಎಲ್ಲ ಪ್ರಕಾರದ ವೈದಿಕ, ಆಗಮಿಕ, ತಾಂತ್ರಿಕ, ಮತ್ತು ಜಾನಪದ ಸಿದ್ಧ ವಿಚಾರ ವಿಜ್ಞಾನ

ಗಳನ್ನೆಲ್ಲ ಕ್ರೋಡೀಕರಿಸಿ ಒಂದು ಸ್ವತಂತ್ರ ಗ್ರಂಥವನ್ನು ಬರೆಯುವುದು ಶಕ್ಯವಾಗಿದೆ.[8] ಈ ಮಹಾಕವಿಯ ವಿಸ್ತಾರವಾದ ಬಲೆಯಲ್ಲಿ ಸಿಕ್ಕಿಬೀಳದ ಧಾರ್ಮಿಕ, ಸಾಮಾಜಿಕ, ರಾಜಕೀಯ ವಸ್ತುವೇ ಇಲ್ಲ. ಇಡಿಯ ಸಂಸ್ಕೃತ ಸಾಹಿತ್ಯದಲ್ಲಿಯೇ ಇದೊಂದು ಅಪೂರ್ವ ಕೃತಿಯೆಂದು ಭಾವಿಸಬಹುದು.

ಸೋಮದೇವಸೂರಿಯು ಇನ್ನೂ ಹಲವಾರು ಕೃತಿಗಳನ್ನು ಬರೆದವನಾಗಿದ್ದನು. ಇಲ್ಲಿ ಉಲ್ಲೇಖಾರ್ಹವಾದ ಅವನ ಇನ್ನೊಂದು ಕೃತಿಯು ರಾಜನೀತಿಯನ್ನು ಕುರಿತಿರುವ 'ನೀತಿವಾಕ್ಯಾಮೃತ'ವಾಗಿದೆ. ಅದು ಕೌಟಿಲ್ಯನ 'ಅರ್ಥಶಾಸ್ತ್ರ'ದ ಮಾದರಿಯಲ್ಲಿ ರಚಿತವಾಗಿದ್ದು ಈಚೆಗೆ ಇಟಾಲಿಯನ್ ಭಾಷೆಗೂ ಅನುವಾದಿತವಾಗಿದೆ. ಕೇವಲ ರಾಜನೀತಿ ಮತ್ತು ರಾಜ್ಯತಂತ್ರಗಳಿಗಾಗಿಯೇ ಮೀಸಲಾಗಿರುವ ಕೆಲವೇ ಗ್ರಂಥಗಳಲ್ಲಿ ಅದು ಒಂದಾಗಿದ್ದು ಹೆಚ್ಚಿನ ಮಹತ್ವವನ್ನು ಪಡೆದಿರುವುದೇ ಆದರ ವೈಶಿಷ್ಟ್ಯ. ಅದರಲ್ಲಿ ಮೂವತ್ತೆರಡು ಅಧ್ಯಾಯಗಳಿವೆ ; ಇನ್ನೂ ಅನೇಕ ವಿಷಯಗಳ ಜತೆಗೆ ಪುರುಷಾರ್ಥಗಳು, ಶಾಸ್ತ್ರಗಳು, ಮಂತ್ರಿ, ಪುರೋಹಿತ, ದಂಡನಾಯಕ, ರಾಜದೂತ, ಗುಪ್ತಚಾರ, ರಾಜ್ಯದ ಸಪ್ತಾಂಗಗಳು, ನ್ಯಾಯಾಂಗ, ರಾಜನೀತಿ, ಯುದ್ಧ ಮತ್ತು ಸಂಧಿಗಳ ವಿಷಯ ಪ್ರತಿಪಾದಿತವಾಗಿದೆ.[9]

ಈಗ ಸಿಕ್ಕದೆ ಇರುವ ಈತನ ಮತ್ತೆ ಕೆಲವು ಗ್ರಂಥಗಳಿವು : —'ಷಣ್ಣವತಿ-ಪ್ರಕರಣ', 'ಯುಕ್ತಿಚಿಂತಾಮಣಿ' ಮತ್ತು 'ಮಹೇಂದ್ರ-ಮಾತಲಿ-ಸಂಜಲ್ಪ'.

ಆಗಮಶಾಸ್ತ್ರದ ಕ್ಷೇತ್ರದಲ್ಲಿಯೂ ಈ ಕಾಲದ ಜೈನರು ಮಹೋನ್ನತವಾದ ಕೃತಿಗಳನ್ನು ರಚಿಸಿದರು. 'ಷಟ್ಖಂಡಾಗಮ'ವೆಂದು ಪ್ರಖ್ಯಾತವಾಗಿರುವ ಜೈನಾಗಮದ ಮೇಲೆ ಅತ್ಯಂತ ಸಮಗ್ರವೂ ಪ್ರಮಾಣಭೂತವೂ ಆದ ಭಾಷ್ಯಗಳು ರಾಷ್ಟ್ರಕೂಟರ ಆಶ್ರಯದಲ್ಲಿಯೇ ರಚಿಸಲ್ಪಟ್ಟವು. ಗುರುಶಿಷ್ಯರಾಗಿದ್ದ ವೀರಸೇನ ಮತ್ತು ಜಿನಸೇನ ಎಂಬಿಬ್ಬರೂ ಕೂಡಿ 'ಧವಳಾ' ಮತ್ತು 'ಜಯಧವಳಾ' ಎಂಬ ಒಂದು ಲಕ್ಷ ಶ್ಲೋಕಪ್ರಮಾಣದ ಬೃಹದ್ಭಾಷ್ಯಗಳ ರಚನೆಯನ್ನು ಮುಗಿಸಿದರು[10].

ಜಿನಸೇನನು ಮಹಾಕವಿಯೂ ಆಗಿದ್ದನು. ಭರತ ಮತ್ತು ಬಾಹುಬಲಿಗಳ ಪುರಾಣಕಥೆಯನ್ನು ವರ್ಣಿಸುವ 'ಆದಿಪುರಾಣ'ವೆಂಬ ಮಹಾಕಾವ್ಯವನ್ನು ಈತನು ಬರೆದನು. ಇದು ಏಕಕಾಲದಲ್ಲಿ ಕಾವ್ಯವೂ ಆಗಿದೆ, ಪುರಾಣವೂ ಆಗಿದೆ. ಬಹು ವಿಸ್ತಾರವಾಗಿದ್ದರೂ ಈ ಕೃತಿ ಅಪೂರ್ಣವಾಗಿಯೇ ಉಳಿದಿದ್ದು, ಇವನ ಶಿಷ್ಯ ಗುಣಭದ್ರನು 'ಉತ್ತರಪುರಾಣವನ್ನು ಬರೆದು ಸೇರಿಸಿ ಇದನ್ನು ಸಂಪೂರ್ಣಗೊಳಿಸಬೇಕಾಯಿತು. ಇಡಿಯ ಹಳಗನ್ನಡ ಚಂಪೂಕಾವ್ಯದ ಸಂಪ್ರದಾಯವು, ಪಂಪನಿಂದಾರಂಭವಾಗಿ ನಾಲ್ಕು ಶತಮಾನಗಳ ಕಾಲ ಬೆಳೆದು ಬಂದಂಥದು, ಈ ಜಿನಸೇನನ 'ಆದಿಪುರಾಣದ ಪ್ರಚೋದನೆಯಿಂದಲೇ ಉಂಟಾಯಿತೆಂಬುದನ್ನು ಮನಗಂಡಾಗ ಈ ಕೃತಿಗಳ ಪ್ರಾಮುಖ್ಯದ ಅರಿವು ನಮಗಾಗುತ್ತದೆ.

ಅಷ್ಟೇ ಮಹತ್ತ್ವಪೂರ್ಣವಾದ ಇನ್ನೊಂದು ಜಿನಸೇನ ಕೃತಿಯೆಂದರೆ 'ಪಾರ್ಶ್ವಾಭ್ಯುದಯ ; ಇದು ಒಂದೇ ಕಾಲದಲ್ಲಿ ಪಾರ್ಶ್ವನಾಥನ ಜೀವನಚರಿತ್ರೆಯನ್ನೂ ಕಾಳಿದಾಸನ ಇಡಿಯ ಮೇಘದೂತ ಕಾವ್ಯದ ಪ್ರತಿಪಾದದ ಸಮಸ್ಯಾಪೂರ್ತಿಯನ್ನೂ ಒದಗಿಸುವ ಕೌಶಲಪೂರ್ಣ ಕೃತಿಯಾಗಿದೆ. (ಕೊಟ್ಟಿರುವ ಒಂದು ಪಾದಕ್ಕೆ ಉಳಿದ ಪಾದಗಳನ್ನು ಸ್ವಬುದ್ಧಿಯಿಂದ ಸೇರಿಸಿ ಅರ್ಥಪೂರ್ಣವಾಗಿ ಮಾಡುವ ಕಾವ್ಯತಂತ್ರವೇ 'ಸಮಸ್ಯಾಪೂರಣ'). ಕಾಳಿದಾಸನ ಪ್ರತಿಪಾದಕ್ಕೂ ಜಿನಸೇನನು ತನ್ನ ಮೂರು ಪಾದಗಳನ್ನು ಸೇರಿಸಿ ಪಾರ್ಶ್ವನಾಥನ ವರ್ಣನೆಯ ಅರ್ಥ ಬರುವಂತೆ ಮಾಡುತ್ತಾನೆ. ಕಾಳಿದಾಸನ ಕೃತಿಯ ಮೂಲಪಾಠಗಳನ್ನು ನಿರ್ಣಯಿಸುವಲ್ಲಿಯೂ ಈ ಕೃತಿಯಿಂದ ತುಂಬಾ ಲಾಭವಾಗಿದೆ.

ಸಂಸ್ಕೃತದಲ್ಲಿ ಅಸಗನು ಬರೆದಿರುವ 'ವರ್ಧಮಾನಪುರಾಣ'ವು ಕೂಡ ಈ ಕಾಲದಲ್ಲೇ ಬರೆಯಲಾದ

ಕೃತಿ. ಅಸಗನು ಕನ್ನಡದಲ್ಲಿಯೂ ದೊಡ್ಡ ಕವಿಯಾಗಿದ್ದನು. ಈ ಕೃತಿಯು ಜಯಕೀರ್ತಿಯ ಛಂದೋನುಶಾಸನದಲ್ಲಿ ಉದಾಹೃತವಾಗಿದೆ. ಛಂದೋನುಶಾಸನವು ಕೂಡ ಕನ್ನಡಿಗನೊಬ್ಬನು ಹತ್ತನೆಯ ಶತಮಾನದಲ್ಲಿ ಬರೆದ ಸಂಸ್ಕೃತ ಛಂದಶ್ಶಾಸ್ತ್ರಗ್ರಂಥವೆಂಬುದು ಕುತೂಹಲಕಾರಿಯಾಗಿದೆ. ಸಂಸ್ಕೃತ ಛಂದೋಬಂಧಗಳ ಸಂಕ್ಷಿಪ್ತ ವಿವೇಚನೆಯ ಜತೆಗೆ ಈ ಕೃತಿಯು ಕನ್ನಡ ಛಂದಸ್ಸಿಗೆ ಬಹಳ ಅಮೂಲ್ಯ ಹಾಗು ಮಹತ್ತ್ವಪೂರ್ಣವಾದ ಒಂದು ಅಧ್ಯಾಯವನ್ನು ವಿನಿಯೋಗಿಸಿದೆ.

ಕಡೆಯದಾಗಿ, ಜೈನ ತರ್ಕಶಾಸ್ತ್ರದಲ್ಲಿ ಉಂಟಾದ ಅದ್ಭುತ ಪ್ರಗತಿಯನ್ನು ನಿರ್ದೇಶಿಸದಿದ್ದರೆ ಈ ಅವಲೋಕನವು ಅಪೂರ್ಣವಾದೀತು. ಯಾವ ರೀತಿ ಈ ಕಾಲದ ಹಿಂದೂ ತತ್ತ್ವವಿವೇಚಕರಲ್ಲಿ ಸುರೇಶ್ವರನು ಅಗ್ರಸ್ಥಾನಕ್ಕೆ ಅರ್ಹನೋ, ಅದೇ ರೀತಿ ಜೈನ ತತ್ತ್ವಜ್ಞಾನದಲ್ಲಿ ವಿದ್ಯಾನಂದನು ಅವನಿಗೆ ಸರಿಸಮಾನನು. ವಿದ್ಯಾನಂದನು ಸಮಂತಭದ್ರನ 'ಆಪ್ತಮೀಮಾಂಸಾ' ಎಂಬ ಗ್ರಂಥದ ಮೇಲೆ 'ಅಷ್ಟ ಸಾಹಸ್ರೀ' ಎಂಬ ಭವ್ಯ ಭಾಷ್ಯವನ್ನೂ, **ಆಪ್ತಪರೀಕ್ಷಾ** ಮುಂತಾದ ಸ್ವತಂತ್ರ ಕೃತಿಗಳನ್ನೂ, ಎಷ್ಟೋ ಪ್ರೌಢವಾದ ಗ್ರಂಥಗಳನ್ನೂ ರಚಿಸಿದನು. ತನ್ನ ಹಿಂದಿನ ತಾರ್ಕಿಕನಾದ ಅಕಳಂಕನಂತೆ ವಿದ್ಯಾನಂದನೂ ಹಿಂದೂ ಮತ್ತು ಬೌದ್ಧ ದರ್ಶನಗಳನ್ನು ಕಟುವಾಗಿ ವಿಮರ್ಶಿಸುತ್ತಾನೆ. ಮಾಣಿಕ್ಯನಂದಿಯ 'ಪರೀಕ್ಷಾ-ಮುಖ-ಸೂತ್ರ' ಮತ್ತು ಪ್ರಭಾಚಂದ್ರನ 'ಪ್ರಮೇಯ-ಕಮಲ-ಮಾರ್ತಾಂಡ' ಎಂಬ ಪ್ರಖ್ಯಾತ ಜೈನ ಸಿದ್ಧಾಂತ ಗ್ರಂಥಗಳು ಕೂಡ ಈ ಕಾಲದವೆಂದು ಹೇಳಲಾಗಿದೆ.

## FOOT NOTES

1. A.S, Altekar: *The Rashtrakutas and their Times*. p. 400.
2. *E.I.*, V., p. 22.
3. S.K. Belvalkar: *Systems of Sanskrit Grammar*, p. 86.
4. *Op. Cit.*, p. 70.
5. *E.I.*, IX, p. 28.
6. P. V. Kane: *History of Dharmashastra*. Vol. I, p. 252 f.
7. Peterson's Report I, p. 33.
8. Handiqui: *Yasastilaka and Indian Culture*.
9. It is printed recently by the Oriental Research Institute, Mysore.
10. H. L. Jain: Introduction to *Shatkhandagama*, p. ii.
11. S. C., Vidyabhusana, *History of the Mediaeval School of Indian Logic*, Pp. 28-33.

ಮೂಲಲೇಖಕರು ಮತ್ತು ಅನುವಾದಕರು: **ಡಾ॥ ಕೆ. ಕೃಷ್ಣಮೂರ್ತಿ**

# ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

## ರಾಷ್ಟ್ರಕೂಟರ ಕಾಲ

ಬಾದಾಮಿಯ ಚಾಲುಕ್ಯರು ಸೋತು ಪರಾಜಿತರಾದನಂತರ, ರಾಷ್ಟ್ರಕೂಟರ ಆಳಿಕೆ ಪ್ರಾರಂಭವಾಗಿ ಕ್ರಿ.ಶ. 8ನೆಯ ಶತಮಾನದ ಕೊನೆಯ ವೇಳೆಗೆ ಅವರ ರಾಜ್ಯಾಧಿಪತ್ಯವು ನೆಲೆಗೊಂಡ ಮೇಲೆ, ಭಾರತೀಯ ಕಲೆ ಎಲ್ಲೋರ (ಇಲಾಪುರ) ಎಲಿಫ್ಯಾಂಟಾಗಳಲ್ಲಿ ಕಂಡುಬರುವಂತೆ ಮೇಲ್ಮಟ್ಟದ ಸಿದ್ಧಿಯನ್ನು ಪಡೆಯಿತು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಕಲಾಕೃತಿಗಳಲ್ಲಿ ಪ್ರತಿಬಿಂಬಿತವಾಗಿರುವ ಚಾಲುಕ್ಯರ ಕಲಾ ಸಂಪ್ರದಾಯಗಳಿಗೆ ರಾಷ್ಟ್ರಕೂಟರು ಬಹುಮಟ್ಟಿಗೆ ಉತ್ತರಾಧಿಕಾರಿಗಳಾದರು. ಕ್ರಮಪ್ರಾಪ್ತವಾಗಿ ಬಂದ ಈ ಕಲಾಸಂಪತ್ತನ್ನು ಅವರು ಇನ್ನೂ ಹೆಚ್ಚು ನವೀನವೂ ಉತ್ತಮವೂ ಆದ ರೀತಿಯಲ್ಲಿ, ಶ್ರೇಷ್ಠತೆಯನ್ನೂ ಸೊಬಗನ್ನೂ ಹೊಂದುವಂತೆ ಅಭಿವೃದ್ಧಿಗೊಳಿಸಿದರು. ಎಲ್ಲೋರ ಮತ್ತು ಎಲಿಫ್ಯಾಂಟಾಗಳ ಸೊಗಸಾದ ಮೂರ್ತಿ ಶಿಲ್ಪಗಳನ್ನು ಗಾಢವಾಗಿ ಅಭ್ಯಾಸಮಾಡಿ, ವಿಶ್ಲೇಷಿಸಿ ಪರಿಶೀಲಿಸಿದರೆ, ಭಾರತದಲ್ಲಿ ಕಲೆಯು ತನ್ನ ಅತ್ಯುಚ್ಚ ಅಭಿವ್ಯಕ್ತಿಯನ್ನೂ ಸಿದ್ಧಿಯನ್ನೂ ಉತ್ತರ ಭಾರತದ ಗುಪ್ತರ ಆಳಿಕೆಗಿಂತಲೂ ಹೆಚ್ಚಾಗಿ ರಾಷ್ಟ್ರಕೂಟರ ಆಳಿಕೆಯಲ್ಲಿ ಹೊಂದಿತೆಂಬುದು ಯಾರಿಗಾದರೂ ಮನವರಿಕೆಯಾಗುತ್ತದೆ–ಎಂದು ರಾಷ್ಟ್ರಕೂಟರ ಕಲೆಯ ಕುರಿತ ಗ್ರಂಥದ ಪ್ರಾಜ್ಞಸಂಪಾದಕರಾದ ಶ್ರೀ ಗೋಸ್ವಾಮಿ ಅವರು ಅಭಿಪ್ರಾಯಪಟ್ಟಿದ್ದಾರೆ. ಇದು ಉಭಯತ್ರರ ಮಹತ್ವಕ್ಕೂ ಮೆಚ್ಚಿಕೆ ಸಲ್ಲಿಸಿದಂತೆ.

ರಾಷ್ಟ್ರಕೂಟರ ವಿಶಿಷ್ಟ ಸಂಸ್ಕೃತಿ ಕೇಂದ್ರವಾದ ಎಲ್ಲೋರದಲ್ಲಿರುವ ಬೌದ್ಧಗುಹಾ ಚೈತ್ಯಾಲಯಗಳಲ್ಲಿ ಕೊನೆಯವಾದ 'ತೀನ್‌ತಾಲ್' ಅಥವಾ 'ತ್ರಿಸ್ಥಲ' ಹಾಗೂ 'ವಿಶ್ವಕರ್ಮ' ಎಂಬ ಎರಡು ಚೈತ್ಯಗಳಿವೆ. ಈ ಎರಡು ಗುಹಾಚೈತ್ಯಾಲಯಗಳಿಗೂ ಅಜಂತ ಮತ್ತು ಬಾಗ್ ಎಂಬಲ್ಲಿರುವ ಗುಹಾಲಯಗಳಿಗೂ ವಿನ್ಯಾಸ ಹಾಗೂ ರಚನೆಯಲ್ಲಿ ಹೆಚ್ಚಾದ ಹೋಲಿಕೆಯಿದೆ. ಆದರೂ ರಾಷ್ಟ್ರಕೂಟರ ಗುಹಾಲಯಗಳು ಬೇರೆ ರೀತಿಯವು. ಎಲ್ಲೋರದಲ್ಲಿರುವ ಧುಮರ್‌ಲೆನಾ ಇದಕ್ಕೆ ಉದಾಹರಣೆ. ಬೌದ್ಧ ಮತ್ತು ಬ್ರಾಹ್ಮಣ ಧರ್ಮಗಳ ಬೇರೆ ಬೇರೆ ರೀತಿಯ ಪೂಜಾವಿಧಾನಗಳ ಆವಶ್ಯಕತೆಗಳಿಗೆ ತಕ್ಕಂತೆ ವಾಸ್ತು ವಿನ್ಯಾಸವಿರಬೇಕಾಯಿತು. ಬೌದ್ಧರ ಪೂಜಾಕ್ರಮವು ಮುಖ್ಯವಾಗಿ ಸಾಮೂಹಿಕವಾದುದು. ಇದಕ್ಕೆ ಅಜಂತದ 16ನೆಯ ಚೈತ್ಯದ ಸಭಾಂಗಣದಂತೆ ಕಂಬಗಳ ಅಡಚಣೆಯಿಲ್ಲದ ವಿಸ್ತಾರವಾದ ಸಭಾಂಗಣವನ್ನು ಅಳವಡಿಸಬೇಕಾಗಿತ್ತು. ಅಲ್ಲಿ ಹೆಚ್ಚುಮಂದಿ ಬೌದ್ಧ ಭಕ್ತರು ಏಕಕಾಲದಲ್ಲಿ ಸೇರಿ, ಸಭಾಮಂಟಪದ ಹಿಂಬದಿಯ ಗರ್ಭಗೃಹದಲ್ಲಿರುವ ಬುದ್ಧವಿಗ್ರಹಕ್ಕೆ ಪೂಜೆ ಸಲ್ಲಿಸಲು ಅವಕಾಶವಿತ್ತು. ಭಕ್ತಸಮೂಹಕ್ಕೆ ಸುಮಾರು 65 ಅಡಿ ಚದರವುಳ್ಳ ಕಂಬಗಳ ಅಡಚಣೆಯಿಲ್ಲದ ಸ್ಥಳಾವಕಾಶ ಮಾಡಿಕೊಡಬೇಕಾಗಿತ್ತು. ರಾಷ್ಟ್ರಕೂಟರ ಗುಹಾಲಯದಲ್ಲಿ ಗರ್ಭಗುಡಿಯ ಮುಂದಿರುವ ಸಭಾಂಗಣವು ಬೃಹದಾಕಾರದ ಕಂಬಗಳ ಸಾಲುಗಳಿಂದ ಕೂಡಿದೆ. ರಚನಾ ವಿನ್ಯಾಸದ ಈ ವ್ಯತ್ಯಾಸವೇ ಅಲ್ಲದೆ, ರಾಷ್ಟ್ರಕೂಟರ ಕಂಬಗಳ ಆಕಾರ ಅಲಂಕಾರಗಳಿಗೂ ಬೌದ್ಧಗುಹಾಲಯದವುಗಳಿಗೂ ಗಣನೀಯವಾದ ವ್ಯತ್ಯಾಸವಿದೆ. ರಾಷ್ಟ್ರಕೂಟರ ವಿಶಿಷ್ಟರೀತಿಯ ಕಂಬವು ಚಾಳುಕ್ಯರೀತಿಯ ಕಂಬದ ಮಾದರಿಯಲ್ಲಿ ರೂಪಗೊಂಡದ್ದು ; ಬಹು ದಪ್ಪವಾಗಿಯೂ ಚಚ್ಚೌಕವಾಗಿಯೂ ಇದ್ದು ಮೇಲ್ಭಾಗದಲ್ಲಿ ಕೊರೆದ ಉದ್ದವಾದ ಅರೆನಳಿಗೆಗಳಿಂದ ಕೂಡಿ ತುದಿಯಲ್ಲಿ ಅಡಕವಾಗಿ ಒತ್ತಿದ ದಿಂಬಿನ ಆಕಾರದ ಬೋದಿಗೆಗಳಿಂದ ಕೊನೆಗೊಳ್ಳುವುದು. ಈ ಮಾದರಿಯ

ಕಂಬವನ್ನು ಬಾದಾಮಿಯ ಒಂದನೆಯ ಗುಹಾಲಯದಲ್ಲಿ ಮೊದಲು ಕಾಣುತ್ತೇವೆ. ರಾಷ್ಟ್ರಕೂಟರ ಗುಹಾಲಯುಗಳನ್ನು ಪ್ರತ್ಯೇಕಿಸುವ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ, ದ್ವಾರದಲ್ಲಿ ಅಲಂಕೃತವಾದ ಮುಂಗೋಡೆಯಿಲ್ಲದಿರುವುದು. ಬೌದ್ಧ ಗುಹಾಲಯಗಳ ದ್ವಾರದಲ್ಲಿ ಸಾಧಾರಣವಾದ ಅಥವಾ ವಿಶೇಷವಾದ ಅಲಂಕಾರಗಳಿಂದ ಕೂಡಿದ ಮುಂಗೋಡೆಯಿರುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಶೈವಧರ್ಮವು ಪುನರುಜ್ಜೀವಿತವಾದುದರಿಂದ ಮೂರ್ತಿಶಿಲ್ಪ ವಾಸ್ತುಶಿಲ್ಪ ಕಾರ್ಯ ಚಟುವಟಿಕೆಗಳು ಹೆಚ್ಚುವುದಕ್ಕೆ ಕಾರಣವಾಯಿತು. ಶಾಸನಗಳಲ್ಲಿ ಜಿಂಕೆಯ ಮುಂದೆ ಹಂದಿಯು ನಿಲ್ಲಲಾರದೆ ಓಡುವುದರ ನಿರ್ದೇಶನವಿದೆ. ಜಿಂಕೆಯು ಶೈವಮತವನ್ನು ಸಂಕೇತಿಸುತ್ತದೆ. ರಾಷ್ಟ್ರಕೂಟ ಮನೆತನದ ಮೂಲಪುರುಷನಾದ ದಂತಿದುರ್ಗನು ಪ್ರಸಿದ್ಧ ಉಜ್ಜಯಿನಿಯ ಮಹಾಕಾಲನ ಭಕ್ತನಾಗಿದ್ದನು. ಅವನನಂತರ ಪಟ್ಟಕ್ಕೆ ಬಂದ ಮೊದಲನೆಯ ಕೃಷ್ಣನೂ ಎಲ್ಲೋರದಲ್ಲಿ ಲೋಕವಿಖ್ಯಾತವಾದ ಕೈಲಾಸ ದೇವಾಲಯವನ್ನು ನಿರ್ಮಿಸಿ ತನ್ನ ಶಿವಭಕ್ತಿಯನ್ನು ಪ್ರಕಟಪಡಿಸಿದನು. ಆತನು ಇನ್ನೂ ಹದಿನೆಂಟು ಶಿವಾಲಯಗಳನ್ನು ಕಟ್ಟಿಸಿದ್ದಲ್ಲದೆ ಒಂದು ವಿದ್ಯಾಮಂದಿರವನ್ನೂ ಸ್ಥಾಪಿಸಿದನು. ಇಲ್ಲಿ ಬಹುಮಂದಿ ಪಂಡಿತರೂ ಶೈವ ಆಚಾರ್ಯರೂ ನೆಲಸಿ ಶೈವಧರ್ಮವನ್ನು ಪ್ರಸಾರಮಾಡುವುದರಲ್ಲಿ, ಸಾಮಾನ್ಯ ಜನರಿಗೂ ತಿಳಿಯುವಂತೆ ಮಾಡುವುದರಲ್ಲಿ ನಿರತರಾಗಿದ್ದರು. ತಮಿಳುನಾಡಿನ ಪ್ರಸಿದ್ಧ ಶಿವಭಕ್ತರಾದ ಅಪ್ಪರ್, ತಿರುಜ್ಞಾನ ಸಂಬಂಧರ್ ಮತ್ತು ಸುಂದರ ಮೂರ್ತಿ—ಇವರುಗಳ ಉತ್ಕಟವಾದ ಉಪದೇಶಗಳ ಪರಿಣಾಮವಾಗಿ ಪಲ್ಲವರ ಕಲೆಯಲ್ಲಿ ಶಿವನ ಹದಿನಾರು ರೂಪಗಳ ಕಲ್ಪನೆ ಮೂಡಿತ್ತು. ಅವು ಎಲ್ಲೋರ, ಎಲಿಫ್ಯಾಂಟಾಗಳಲ್ಲಿ ರಾಷ್ಟ್ರಕೂಟರ ಮೂರ್ತಿಶಿಲ್ಪವನ್ನೂ ವ್ಯಾಪಿಸಿದವು. ಇದರ ಜೊತೆಗೆ ಶಿವನು ಪಾಶುಪತ ಪಂಥಸ್ಥಾಪಕನಾದ, ಶಿವನ ಅವತಾರವೆಂದು ಪರಿಗಣಿತನಾದ ಲಕುಲೀಶನಾಗಿ, ರಾಷ್ಟ್ರಕೂಟ ಶಿಲ್ಪಗಳಲ್ಲಿ ಆದರಣೀಯನಾದನು. ಆ ಕಾಲದಲ್ಲಿ ಕರ್ಣಾಟಕದಲ್ಲಿ ಪಾಶುಪತ ಮತಾನುಯಾಯಿಗಳು ಹಲವರಿದ್ದರು.

ರಾಷ್ಟ್ರಕೂಟರ ಚಿರಸ್ಮರಣೀಯವಾದ ಮುಖ್ಯ ಕಟ್ಟಡಗಳು ಎಲ್ಲೋರ, ಮಳಖೇಡ, ಎಲಿಫ್ಯಾಂಟಾ, ಜೋಗೇಶ್ವರಿ ಮತ್ತು ಮಂಡಪೇಶ್ವರಗಳಲ್ಲಿವೆ. ಎಲ್ಲೋರದಲ್ಲಿರುವ ಗುಹಾಲಯುಗಳಲ್ಲಿ ಹದಿನೆಂಟು ಬ್ರಾಹ್ಮಣ (ಪೌರಾಣಿಕ) ಮತದವು. ನಾಲ್ಕು ಜೈನಮತಕ್ಕೆ ಸಂಬಂಧಿಸಿದವು. ಇವೆಲ್ಲವೂ ಒಂದೇ ಕಾಲದವಲ್ಲ. ರಾವಣನ ಗವಿ ಹಾಗೂ ದಶಾವತಾರ ಗವಿಗಳು ಕೈಲಾಸ ದೇವಾಲಯಕ್ಕಿಂತ ಮುಂಚಿನವು.

ರಾವಣನ ಗವಿಯ ಮುಂಭಾಗದಲ್ಲಿ ನಾಲ್ಕು ಕಂಬಗಳೂ ಸಭಾಮಂಟಪದಲ್ಲಿ (54'×55½') ಹನ್ನೆರಡು ಕಂಬಗಳೂ ಇವೆ. ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ಅರೆಗಂಬಗಳ ನಡುವಣ ಅಂಕಣಗಳಲ್ಲಿ ಉಬ್ಬು ಶಿಲ್ಪಗಳಿವೆ.

ಆಲಯದ ಮುಂಭಾಗದಲ್ಲಿ ಎತ್ತರವಾದ ಎರಡು ದ್ವಾರಪಾಲಕ ವಿಗ್ರಹಗಳನ್ನು ನೋಡುತ್ತೇವೆ. ಇದು ರಾಷ್ಟ್ರಕೂಟ ಸ್ಥಪತಿಗಳ ಪ್ರತಿಮಾಶಿಲ್ಪದ ಒಂದು ವಿಶಿಷ್ಟ ಲಕ್ಷಣ. ಇಂಥವು ಇತರ ಗುಹಾಲಯುಗಳಲ್ಲಿಯೂ, ಒಮ್ಮೊಮ್ಮೆ ಸ್ತ್ರೀವಿಗ್ರಹದೊಂದಿಗೆ, ಅನೇಕವೇಳೆ ಕಂಡುಬರುತ್ತವೆ. ಧುಮರ್‌ಲೆನಾದಲ್ಲಿ ಕಂಡುಬರುವ ಈ ಮಾದರಿಯು ಅತ್ಯಂತ ಪ್ರಮುಖವಾಗಿ ಎದ್ದುಕಾಣುವಂತಹದು. ದಶಾವತಾರ ಗುಹಾಲಯುವು ಎರಡು ಅಂತಸ್ತುಗಳುಳ್ಳದ್ದು. ಮೇಲಿನ ಅಂತಸ್ತು ಭವ್ಯವಾದ ಚಚ್ಚೌಕವಾಗಿರುವ (105'×95') ಒಂದು ಹಜಾರ. ಇದರಲ್ಲಿ ಸಾಲೊಂದಕ್ಕೆ ಒಂಬತ್ತು ಕಂಬಗಳಿರುವ ಆರು ಸಾಲುಗಳಲ್ಲಿ ಓರಣವಾಗಿ ಅಳವಡಿಸಿರುವ 54 ಕಂಬಗಳಿವೆ. ಇಲ್ಲಿ ಶೈವ ಹಾಗೂ ವೈಷ್ಣವ ವಿಗ್ರಹಗಳನ್ನು ಕೊರೆಯಲಾಗಿದೆ.

ಹಿರಣ್ಯಕಶಿಪುವಿನ ಮರಣದ ಭಿತ್ತಿಶಿಲ್ಪವು ಭವ್ಯವಾಗಿ ಕೊರೆಯಲ್ಪಟ್ಟಿದೆ. ಇದನ್ನು ಕುರಿತು ಡಾ॥ ಕುಮಾರಸ್ವಾಮಿ ಹೀಗೆ ಬರೆದಿದ್ದಾರೆ: "ದುಷ್ಟದಮನ ಮಾಡಲು ನೃಸಿಂಹಾವತಾರ ಮಾಡಿ ಬಂದ ದೇವರ ಕೈಯಿಂದ ಮಡಿದ ಈ ದುಷ್ಟ ರಾಕ್ಷಸ ರಾಜನ ಕಥೆಯನ್ನೊಳಗೊಂಡ ಪ್ರಸಿದ್ಧ ಪುರಾಣಕಥಾವಸ್ತುವನ್ನು ಇದಕ್ಕಿಂತ ಹೆಚ್ಚು ಸುಂದರವಾಗಿ ರೂಪಿಸಬಹುದೆಂಬುದನ್ನು ಊಹಿಸುವುದೂ ಅಸಾಧ್ಯ. ಭುಜದ ಮೇಲೆ ಕೈ, ಮುಖದ ಮೇಲಿನ ಅಣಕುನಗೆ ಬಾಡುವುದಕ್ಕೂ ಸಮಯವಿಲ್ಲದೆ ಕುಸಿಯುತ್ತಿರುವ ಮೂರ್ತಿ, ಇದಕ್ಕಿಂತಲೂ ಘೋರವಾದದ್ದೇನಿದ್ದೀತು?" ಈ ಶಿಲ್ಪವು ರಾಷ್ಟ್ರಕೂಟ ಕಲೆಯ ಅತ್ಯುತ್ತಮ ಕಲಾಕೃತಿಗಳಲ್ಲೊಂದು. ಮತ್ತೊಂದು ಸ್ವಾರಸ್ಯವಾದ ಪ್ರತಿಮಾಶಿಲ್ಪ ಶಿವತಾಂಡವ ನೃತ್ಯದ್ದು. ಶಿವನು ಚಲನ ಸೌಲಭ್ಯವಿರುವ ಅತಿಭಂಗದ ನಿಲುವಿನಲ್ಲಿ ದೇಹವನ್ನು ಬಗ್ಗಿಸಿ, ಆಧಾರಪೀಠದ ಮೇಲೆ ಪರಿಭ್ರಮಣದಲ್ಲಿ ತೊಡಗಿದ್ದಾನೆ. ಎರಡು ಪಕ್ಕಗಳಲ್ಲಿಯೂ ನಾಲ್ಕು ನಾಲ್ಕು ಕೈಗಳಿದ್ದು ಸಮತೋಲವೇರ್ಪಟ್ಟಿದೆ. ಮುಂದಿನ ಬಲಗೈ ಎದೆಗೆ ಅಡ್ಡಲಾಗಿ ಚಾಚಿದೆ. ಬಲಗಡೆ ಪಾರ್ವತಿ ನಿಂತು ನೋಡುತ್ತಿದ್ದಾಳೆ. ಗಣಗಳು ಹಿಮ್ಮೇಳದ ಸಂಗೀತವನ್ನೊದಗಿಸಿವೆ. ದೇವತೆಗಳು ತಾಂಡವವನ್ನು ನೋಡಲು ಗುಂಪು ಗುಂಪಾಗಿ ಇಳಿದು ಬಂದಿದ್ದಾರೆ.

ರಾಮೇಶ್ವರ ಗವಿಯು ಪ್ರಾರಂಭಕಾಲದ ಗುಹಾಲಯಗಳಲ್ಲಿ ಒಂದು. ಇದರ ಬಾಗಿಲಲ್ಲಿ ಮಕರವಾಹನೆಯಾದ ಗಂಗೆಯ ಬೃಹನ್ಮೂರ್ತಿಯೊಂದಿದೆ. ಇಲ್ಲಿ ಗಂಗೆ ಮೊಸಳೆಯ ಮೇಲೆ ನಿಂತು ಶರೀರ ಭಾರವನ್ನು ಎಡಗಾಲಿನ ಮೇಲೆ ಹಾಕಿ, ಅಭಂಗದ ಸೂಕ್ಷ್ಮವಾದ ಸಮಸ್ಥಿತಿಯಲ್ಲಿ ನಿಂತಂತೆ ರೂಪಿಸಿರುವುದು ಅತ್ಯಂತ ಸುಂದರವಾಗಿದೆ, ಘನತೆಯಿಂದ ಕೂಡಿದೆ. ದುರ್ದೈವದಿಂದ ಈ ವಿಗ್ರಹದ ಬಲಗೈ ಮುರಿದು ಹೋಗಿದೆ. ಎಡಗೈಯನ್ನು ಮಮತೆಯಿಂದ ಅನುಚರನ ತಲೆಯ ಮೇಲಿಟ್ಟಿದೆ. ಅವನಾದರೋ ಭಾವಾವೇಶದಿಂದ ಕೂಡಿದ ಭಂಗಿಯಲ್ಲಿ ಎರಡು ಕೈಗಳನ್ನೂ ತನ್ನ ಎದೆಯ ಮೇಲೆ ಸೇರಿಸಿಟ್ಟುಕೊಂಡು ನಿಂತಿದ್ದಾನೆ. ಈ ವಿಗ್ರಹಕ್ಕೆ ಚಪ್ಪಟೆಯಾದ ಮೆತ್ತೆಯಂತಿರುವ ವಿಚಿತ್ರವಾದ ತಲೆಯುಡಿಗೆ ಇದೆ. ಅದರ ಕೆಳಗಿನಿಂದ ಆಕೆಯ ತಲೆಗೂದಲು ಅಲಂಕಾರಯುತವಾಗಿ ಗುಂಗುರು ಗುಂಗುರಾಗಿ ಕೆಳಗೆ ಇಳಿದಿದೆ. ಆಕೆಯ ತಲೆಯ ಬಳಿ ಇರುವ ಹಾರುತ್ತಿರುವ ಮನೋಹರವಾದ ಗಂಧರ್ವಮೂರ್ತಿಯು ವಿಗ್ರಹದ ಪ್ರಸನ್ನತೆಯಿಂದ ಕೂಡಿದ ದೇವತ್ವವನ್ನು ಅಧಿಕಗೊಳಿಸುತ್ತದೆ. ಈಕೆಯ ವಾಹನವಾದ ಮೊಸಳೆಯು ಸುತ್ತಿಕೊಂಡ ಮೂತಿಯಿಂದಲೂ ತುಪ್ಪುಳು ತುಂಬಿದಂತಿರುವ ಹಿಂಭಾಗದ ಅವಯವಗಳಿಂದಲೂ ಕೂಡಿ, ಈ ಮಾದರಿಯ ಶ್ರೇಷ್ಠಕೃತಿಗಳಲ್ಲಿ ಒಂದಾಗಿದೆ. ಇದು ಗುಪ್ತ ಹಾಗೂ ಚಾಲುಕ್ಯರ ಮೂಲ ರೂಪಗಳಿಂದ ಎತ್ತಿ ರಚಿಸಿಕೊಂಡದ್ದು. ಸೊಬಗು, ಘನತೆ, ಸಮತೂಕಗಳ ದೃಷ್ಟಿಯಿಂದ ಈ ಉಬ್ಬುಶಿಲ್ಪವು ಒಂದು ಶ್ರೇಷ್ಠ ಕಲಾಕೃತಿ. ಇತ್ತೀಚಿನ ಯಾವ ನಿರೂಪಣವೂ ಇದನ್ನು ಮೀರಿಸಿಲ್ಲ.

ಎಲ್ಲೋರದ ಉಜ್ವಲವಾದ ಧುಮರ್‌ಲೆನಾವನ್ನು ಅನೇಕ ವೇಳೆ ಎಲಿಫ್ಯಾಂಟಾದಲ್ಲಿರುವ ರಾಷ್ಟ್ರಕೂಟರ ಗುಹಾಲಯದೊಂದಿಗೆ ಹೋಲಿಸುವುದುಂಟು. ಇವೆರಡಕ್ಕೂ ಹೆಚ್ಚಿನ ಹೋಲಿಕೆಯಿದೆ. ಆದರೆ ಸಿಮ್ಮರ್ ಹೇಳುವಂತೆ ಇದು ಹೆಚ್ಚು ಮನೋಹರವಾಗಿದೆ. ಇದರಲ್ಲಿ ಸ್ವಸ್ತಿಕಾಕಾರದ ಒಂದು ದೊಡ್ಡ ಶಾಲೆ ಇದೆ (149'×148'). ಇಪ್ಪತ್ತಾರು ದೊಡ್ಡ ಕಂಬಗಳು ಇದಕ್ಕೆ ಆಲಂಬನವಾಗಿವೆ. ಇದು ಈ ಆಲಯಕ್ಕೆ ಉಜ್ವಲ ಭವ್ಯತೆಯನ್ನು ತಂದು ಕೊಟ್ಟಿದೆ. ಡಾ॥ ಬರ್ಗೆಸ್ ಇದನ್ನು ಈಜಿಪ್ಟಿನ ಬೃಹದ್ರಚನೆಗಳಿಗೆ ಹೋಲಿಸಿದ್ದಾರೆ. ಇದರ ಪೂರ್ವದ ಕೊನೆಯಲ್ಲಿ ಶಿವಪಾರ್ವತಿಯರ ವಿವಾಹದ ಶ್ರೇಷ್ಠವಾದ ರೂಪಣವಿದೆ. ಇದನ್ನು ನೋಡಿದಾಗ, ಈ ಕಥೆಯನ್ನೊಳಗೊಂಡ ಕಾಳಿದಾಸನ ಅಮರಕಾವ್ಯ ಕುಮಾರಸಂಭವದ ಪದ್ಯಗಳು ಜ್ಞಾಪಕಕ್ಕೆ ಬರುತ್ತವೆ.

ಎಲ್ಲೋರದ ಕೈಲಾಸದೇವಾಲಯವು ಬಹುಶಃ ಭಾರತದ ಗುಹಾ ವಾಸ್ತುಶಿಲ್ಪದ ಅತ್ಯಂತ ಪ್ರಶಸ್ತವಾದ

ಉದಾಹರಣೆ. ಅದರ ರಚನೆಯ ಮಹಾಕಥೆ ಪರ್ಸಿಬ್ರೌನ್ ಅವರ ಮಾತಿನಲ್ಲಿ ಹೀಗಿದೆ: ‚‚ ಕೆಲಸದ ಮೊದಲನೆಯ ಹಂತ ಬಹುಪ್ರಯಾಸದ್ದಾದರೂ ಸುಲಭವಾಗಿತ್ತು. ಗುಡ್ಡದ ಬಂಡೆಯಲ್ಲಿ ಸಮಕೋನ ವಾಗಿ ಅಗಾಧವಾದ ಮೂರು ಕಂದಕಗಳನ್ನು ಗುಡ್ಡದ ತಳಮಟ್ಟದ ವರೆಗೂ ಲಂಬವಾಗಿ ಕಡಿದು 300’ × 175’ ಉಳ್ಳ ಒಂದು ದೀರ್ಘ ಚತುರಸ್ರವನ್ನು ಮಾಡಿಕೊಳ್ಳುವುದು ಮೊದಲ ಕೆಲಸ. ಇದರಿಂದ ಕಟ್ಟಡದ ಸುತ್ತಿನ ಅಂಗಳದ ರೂಪರೇಖೆ ಏರ್ಪಟ್ಟು ಮಧ್ಯದಲ್ಲಿ 200ಅಡಿ ಉದ್ದ 100ಅಡಿ ಅಗಲ, ಅಗ್ರಭಾಗದಲ್ಲಿ 100ಅಡಿ ಎತ್ತರಕ್ಕೂ ಹೆಚ್ಚಿನ ಗಾತ್ರದ ಕಲ್ಲುದಿಮ್ಮಿ ಉಳಿಯುವಂತಾಯಿತು. ವಿಷಮ ರೂಪದ ಈ ಕಲ್ಲುದಿಮ್ಮಿಯನ್ನು ತಮಗೆ ಬೇಕಾದ ಆಕಾರ ಬರುವಂತೆ ತಲೆಭಾಗದಿಂದ ಹಿಡಿದು ಕೆತ್ತುವ ಒರಟು ಕೆಲಸವನ್ನು ಅನಂತರ ಕೈಗೊಳ್ಳಲಾಯಿತು. ಓರೆಕೋರೆಗಳನ್ನು ಸರಿಪಡಿಸುವ ಕೆಲಸಗಾರರ ಜೊತೆ ಜೊತೆಗೇ ರೂವಾರಿಗಳೂ ತಮ್ಮ ಕೆತ್ತನೆಯ ಕೆಲಸವನ್ನು ಪ್ರಾರಂಭಿಸಿದರು. ಏಕೆಂದರೆ ಒಂದೊಂದು ಭಾಗದ ಕೆಲಸವು ಮೇಲುಗಡೆಯಿಂದ ಕೆಳಮುಖವಾಗಿ ಸಾಗಿದಂತೆಲ್ಲ ಸಾರುವೆ ಹಾಕಿಕೊಂಡು ಕೆಲಸಮಾಡುವ ಆವಶ್ಯಕತೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆಯಾ ಕೆಲಸವನ್ನು ಪೂರ್ತಿಯಾಗಿ ಮುಗಿಸುತ್ತಾ ಹೋದಂತೆ ಕಂಡುಬರುತ್ತದೆ. ಕೈಲಾಸದ ತಳವಿನ್ಯಾಸವು ಅಥೆನ್ಸಿನ ಪಾರ್ಥೆನಾನದ ಸರಿಸುಮಾರು ವಿಸ್ತೀರ್ಣದಷ್ಟೇ ಇದೆ ಎಂಬುದನ್ನೂ ಅದರ ಎತ್ತರವೂ ಅದೇ ಗ್ರೀಕ್ ಶ್ರೇಷ್ಠಕಲಾಕೃತಿಯ ಒಂದೂವರೆಯಷ್ಟಿದೆಯೆಂಬುದನ್ನೂ ನಾವು ಗಮನಿಸಿದರೆ ಅದರ ಮಹತ್ತ್ವದ ಹಾಗೂ ಬೃಹತ್ತ್ವದ ಕಲ್ಪನೆ ಉಂಟಾಗುತ್ತದೆ. ಅದು ಕಲಾತ್ಮಕ ರಚನೆ ಮಾತ್ರವೇ ಅಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅದೊಂದು ಮಹೋನ್ನತ ಆಧ್ಯಾತ್ಮಿಕ ಸಿದ್ಧಿ. ಅತ್ಯಂತ ಶ್ರೇಷ್ಠವಾದ ಆದರ್ಶಸಿದ್ಧಿಗಾಗಿ ಮಾನವನ ಬುದ್ಧಿ, ಹೃದಯ ಮತ್ತು ಕೈಗಳು ಒಂದೇ ಸ್ಥಾಯಿಯಲ್ಲಿ ಸೇರಿ ಹೊಂದಿಕೊಂಡು ಕೆಲಸಮಾಡಿದ ಅಪೂರ್ವ ಪ್ರಸಂಗವೊಂದರ ನಿದರ್ಶನವೇ ಕೈಲಾಸ ”.

ಕೈಲಾಸ ದೇವಾಲಯದ ಕೆಲವು ಮೂರ್ತಿಶಿಲ್ಪಗಳು ಬಹು ಆಕರ್ಷಕವಾಗಿವೆ. ರಾವಣನು ಕೈಲಾಸ ಪರ್ವತವನ್ನು ಎತ್ತುವ ವಿಷಯವು ರೂವಾರಿಗಳಿಗೆ ತುಂಬ ಅಚ್ಚುಮೆಚ್ಚಿನ ವಸ್ತು. ಅದು ಸಹಜವಾಗಿ ಎಲ್ಲೋರದಲ್ಲಿ ಅನೇಕ ಬಾರಿ ಕಂಡುಬರುತ್ತದೆ. ಕೈಲಾಸದೇವಾಲಯದಲ್ಲಿಯೇ ಎರಡು ಸಲ ಬಂದಿದೆ. ಶಿವ ಹಾಗೂ ಪಾರ್ವತಿಯರನ್ನು ಗಾಂಭೀರ್ಯ ಮತ್ತು ಸಮಸ್ಥಾಯಿಗಳಿಂದ ಕೂಡಿದಂತೆ ರೂಪಿಸಲಾಗಿದೆ. ಅವರ ನಿಲವು ಅನ್ಯೋನ್ಯತೆಯಿಂದ ಕೂಡಿದೆ. ಅವರ ಅಕ್ಕಪಕ್ಕಗಳಲ್ಲಿ ದ್ವಾರಪಾಲಕರೂ ಚಾಮರ ಧಾರಿಣಿಯೋರ್ವಳೂ ಇದ್ದಾರೆ. ತೀರ ಕೆಳಗೆ ಕೈಗಳನ್ನು ಚಾಚಿ ಕುಳಿತ ರಾವಣನಿದ್ದಾನೆ. ರಾವಣನ ಸಾಹಸಕಾರ್ಯವನ್ನು ನೋಡಲು ದೇವತೆಗಳೂ ದೇವತಾಸ್ತ್ರೀಯರೂ ಸ್ವರ್ಗದಿಂದ ಇಳಿದು ಬರುತ್ತಿರುವಂತೆ ಕಾಣುತ್ತಾರೆ. ಸಂಪೂರ್ಣವಾಗಿ ಇದೊಂದು ತೀರ ಹೊಂದಾಣಿಕೆಯಿಂದ ಕೂಡಿದ ಕೃತಿ. ಕೈಲಾಸದೇವಾಲಯದ ಗಜಾಸುರನನ್ನು ಸಂಹರಿಸುವ ಶಿವ, ತ್ರಿಪುರಾಂತಕ ಶಿವ, ಲಲಿತಭಂಗಿಯಲ್ಲಿ ನರ್ತಿಸುತ್ತಿರುವ ಶಿವ, ಗಿರಿಜಾಕಲ್ಯಾಣ—ಇವು ಕೈಲಾಸದೇವಾಲಯದಲ್ಲಿರುವ ಪ್ರಭಾವಯುಕ್ತವಾದ ಬೇರೆ ಕೆಲವು ಮೂರ್ತಿ ಶಿಲ್ಪಗಳು.

ಗೊಮ್ಮಟ, ಶಾಂತಿನಾಥ ಹಾಗೂ ಪಾರ್ಶ್ವನಾಥರ ಮೂರ್ತಿಗಳನ್ನುಳ್ಳ ಇಂದ್ರಸಭೆಯನ್ನೂ ಮಹಾ ವೀರನ ಮೂರ್ತಿಯಿರುವ ಜಗನ್ನಾಥ ಸಭೆಯನ್ನೂ ಬಹುಶಃ ಅಮೋಘವರ್ಷನ ಉದಾರ ಆಶ್ರಯದಲ್ಲಿ ಕೊರೆದಿರಬಹುದು. ಆದರೆ ಈ ಹೇಳಿಕೆಗೆ ಖಚಿತವಾದ ಆಧಾರವಿಲ್ಲ.

ಮುಂಬಯಿ ಬಂದರ ಬಳಿ ಇರುವ ಎಲಿಫ್ಯಾಂಟಾ ದ್ವೀಪದಲ್ಲಿ ರಾಷ್ಟ್ರಕೂಟರ ಕಲೆಯು ಪರಾಕಾಷ್ಠತೆಯ ತುತ್ತತುದಿಯನ್ನು ಮುಟ್ಟಿತು. ಕೆಲವುಕಾಲ ಈ ದ್ವೀಪವನ್ನು ಆಕ್ರಮಿಸಿಕೊಂಡಿದ್ದ ಪೋರ್ಚುಗೀಸರು ಇಲ್ಲಿದ್ದ ಅನೇಕ ಶಿಲ್ಪ ಕಲಾಕೃತಿಗಳನ್ನು ನಾಶಮಾಡಿದರು. ಅರ್ಧನಾರೀಶ್ವರಮೂರ್ತಿ ಫಲಕವು ಬಹುಕೆಟ್ಟದಾಗಿ ವಿರೂಪಗೊಳಿಸಲ್ಪಟ್ಟಿದ್ದರೂ ಭವ್ಯವಾಗಿದೆ. ಪುರುಷಾರ್ಧಭಾಗದಲ್ಲಿ ಎರಡು

ಕೈಗಳಿವೆ. ಒಂದು ಕೈಯಲ್ಲಿ ಸರ್ಪವಿದೆ. ಇನ್ನೊಂದು ಕೈ ನಂದಿಯ ತಲೆಯ ಮೇಲಿದೆ. ಸ್ತ್ರೀಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಕನ್ನಡಿ ಇದೆ; ಇನ್ನೊಂದರಲ್ಲಿ ನಿರಿಗೆಯಿರುವ ವಸ್ತ್ರಖಂಡವಿದೆ. ಸಮಗ್ರ ವಿನ್ಯಾಸವು ಅಸದೃಶವಾಗಿದೆ, ದೇವತೆಗಳ ಆಕೃತಿಗಳಿಂದ ತುಂಬಿದೆ.

ತ್ರಿಮೂರ್ತಿ ಎಂದು ಸಾಮಾನ್ಯವಾಗಿ ಹೇಳುವ ಮಹೇಶಮೂರ್ತಿಯ ವಿಗ್ರಹವು ವಿಸ್ಮಯಕರವಾದ ಬೃಹದಾಕಾರವುಳ್ಳದ್ದಾಗಿದೆ. ಈ ಮೂಮೊಗದ ಮೂರ್ತಿಯು 23 ಅಡಿ ಎತ್ತರವೂ 19½ ಅಡಿ ಅಗಲವೂ ಇದೆ. ಫ್ರೆಂಚ್ ವಿಮರ್ಶಕನೂ ಇತಿಹಾಸಕಾರನೂ ಆದ ರೆನೆಗ್ರೌಸೆ ಈ ಶ್ರೇಷ್ಠ ವಿಗ್ರಹದ ಮೇಲ್ಮೆಯ ಮಟ್ಟವನ್ನು ಕುರಿತು ಹೀಗೆ ಬರೆದಿದ್ದಾನೆ: "ಈ ಸರ್ವಾತ್ಮನ ಮೂರು ಮುಖ ಮುದ್ರೆಗಳನ್ನು ಇಲ್ಲಿ ಸ್ವಲ್ಪವೂ ಶ್ರಮವಿಲ್ಲದೆ ಸಮರಸಗೊಳಿಸಲಾಗಿದೆ. ಇದರಷ್ಟು ಸಮಗ್ರವೂ ಸುಸಂಗತವೂ ಆದ ದೇವತಾ ತತ್ತ್ವದ ಮೂರ್ತೀಕರಣವು ಬಹು ವಿರಳ. ಅಷ್ಟೇ ಅಲ್ಲ, ಇನ್ನೂ ವಿಶೇಷವೇನೆಂದರೆ—ಮನುಷ್ಯ ಕೃತವಾದ, ನಿರ್ವಿವಾದವಾಗಿ ಅತ್ಯಂತ ಭವ್ಯವಾದ ಆಸ್ತಿಕವಾದಿಗಳ ದೇವತಾಮೂರ್ತಿ ಇಲ್ಲಿದೆ."

ಎಲಿಫ್ಯಾಂಟದ ಮಹೇಶಮೂರ್ತಿಯ ಪಕ್ಕದಲ್ಲಿ ಗಿರಿಜಾಕಲ್ಯಾಣವನ್ನು ನಿರೂಪಿಸುವ ಭವ್ಯವಾದ ಇನ್ನೊಂದು ಭಿತ್ತಿಶಿಲ್ಪವಿದೆ. ವಧುವನ್ನು ದಾನಮಾಡುತ್ತಿರುವ ಪಾರ್ವತಿಯ ತಂದೆ ಆಕೆಯ ಹಿಂದೆ ನಿಂತಿದ್ದಾನೆ. ದೇವತೆಗಳು ಈ ಸಮಾರಂಭವನ್ನು ನೋಡುತ್ತಿದ್ದಾರೆ. ದುರದೃಷ್ಟದಿಂದ ಈ ಆಕೃತಿಗಳ ಕೆಳಭಾಗಗಳು ಊನವಾಗಿವೆ.

ಡಾ॥ ವಿ. ಎ. ಸ್ಮಿತ್ ಅವರ ಇಂಡಿಯಾ ಹಾಗೂ ಸಿಲೋನಿನ ಲಲಿತಕಲೆಗಳ ಚರಿತ್ರೆ (3 ನೆಯ ಮುದ್ರಣ, ಪು. 84) History of fine arts in India and Ceylon (3rd Edition P. 84)ಯ ಸಂಪಾದಕರಾದ ಕಾರ್ಲ್ ಖಂಡಲವಾಲ ಎಲಿಫ್ಯಾಂಟಾದ ಕಾಲವನ್ನು ಕ್ರಿ.ಶ. 650ಕ್ಕಿಂತ ಈಚಿನದಲ್ಲವೆಂದು ನಿರ್ದೇಶಿಸುತ್ತಾರೆ.

ಕ್ರಿ. ಶ. 9ನೆಯ ಶತಮಾನದ ಮೂರನೆಯ ಗೋವಿಂದನ ಆಳಿಕೆಗೆ ಸೇರಿದ ಶಿವಮೊಗ್ಗ ಜಿಲ್ಲೆಯ ಮಾವಳ್ಳಿಯ ಶಿಲ್ಪ ಫಲಕಗಳನ್ನು ನಾವು ಇಲ್ಲಿ ಸ್ಮರಿಸಬಹುದು.

ರಾಷ್ಟ್ರಕೂಟರ ಚಕ್ರಾಧಿಪತ್ಯವು ವಿಸ್ತಾರವಾಗಿದ್ದರೂ ಅವರ ಕಲೆಗೆ ಸಂಬಂಧಿಸಿದ ಕಾರ್ಯಕ್ಷೇತ್ರಗಳು ಕೆಲವು ಮಾತ್ರ ಇದ್ದವು. ಅವರ ರಾಜಧಾನಿಯಾಗಿದ್ದ ಮಳಖೇಡ (ಮಾನ್ಯಖೇಟ)ದಲ್ಲಿಯೂ ಶ್ರೇಷ್ಠವಾದ ಕಲಾಕೃತಿ ಯಾವುದೂ ಇಲ್ಲ. ಅದು ಪೂರ್ತಿ ಹಾಳಾಗಿದೆ. ಭೂ ಶೋಧನೆಯಿಂದ ಹಳೆಯ ಕಟ್ಟಡಗಳ ಅವಶೇಷಗಳು ಬೆಳಕಿಗೆ ಬರಬಹುದು. ರಾಷ್ಟ್ರಕೂಟರ ಕೈಕಟ್ಟಡದ ದೇವಾಲಯಗಳು ಬಹುವಿರಳ. ಹಾಗಿದ್ದರೂ ಸೊಂಡೂರಿನಲ್ಲಿ ಮೂರನೆಯ ಇಂದ್ರ ಹಾಗೂ ಅವನ ಮಂತ್ರಿಯೊಬ್ಬನ ಪ್ರತಿಮೆಗಳಿರುವ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ ದೇವಾಲಯವಿದೆಯೆಂದು ಹರ್ಮನ್ ಗೋಟ್ಸ್ (Herman Goetz) ಸೂಚಿಸಿದ್ದಾರೆ.

ಮೂಲ ಲೇಖಕರು: ಡಾ॥ ಎಂ. ಶೇಷಾದ್ರಿ
ಅನುವಾದಕರು: ಶ್ರೀ ಬಿ. ರಾಮುಸ್ವಾಮಿ

# ಅಧ್ಯಾಯ 9

## ರಾಜಕೀಯ ಚರಿತ್ರೆ

## ಕಲ್ಯಾಣದ ಚಾಲುಕ್ಯರು

**ಪೂರ್ವದ ಚಾಲುಕ್ಯರೊಂದಿಗೆ ಇರುವ ಸಂಬಂಧಕಗಳು**

'ಬಾದಾಮಿಯ ಚಾಲುಕ್ಯರು' ಎಂಬ ಅಧ್ಯಾಯದ ಕೊನೆಯಲ್ಲಿ ಹೀಗೆ ಹೇಳಲಾಗಿದೆ :— ರಾಷ್ಟ್ರಕೂಟ ಮನೆತನದ ರಾಜನಾದ ಖಡ್ಗಾವಲೋಕ ದಂತಿದುರ್ಗ ಇಲ್ಲವೆ ಇಮ್ಮಡಿ ದಂತಿವರ್ಮನು ಕ್ರಿ.ಶ. 754ರಲ್ಲಿ ಬಾದಾಮಿಯ ಚಾಲುಕ್ಯರಾಜ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ, ರಾಷ್ಟ್ರಕೂಟ[1]ರ ಪರಮಾಧಿಕಾರವನ್ನು ಸ್ಥಾಪಿಸಿದಾಗ ಬಾದಾಮಿಯ ಚಾಲುಕ್ಯ ಸಾಮ್ರಾಜ್ಯವು ಕ್ರಿ.ಶ. 754 ರಿಂದ 973 ರ ವರೆಗೆ ಸುಮಾರು 219 ವರುಷಗಳ ಕಾಲ ರಾಷ್ಟ್ರಕೂಟರ ವಶಕ್ಕೆ ಹೋಯಿತು—ಎಂದು. ಈ ಕಾಲಾವಧಿಯಲ್ಲಿ ಬಾದಾಮಿಯ ಚಾಲುಕ್ಯರ ಮೂಲ ಅರಸುಮನೆತನದ ಆಗು-ಹೋಗುಗಳನ್ನು ಗೊತ್ತುಪಡಿಸುವುದು ಕಷ್ಟಕರವಾಗಿದೆ. ಶಾಸನಗಳ ಆಧಾರದಿಂದ ನೋಡಲಾಗಿ ಹಲವಾರು ಬಾದಾಮಿಯ ಚಾಲುಕ್ಯ ಮನೆತನಗಳು ಅಲ್ಲಲ್ಲಿ ಚಿಕ್ಕದೊಡ್ಡ ಪ್ರದೇಶಗಳನ್ನು ಆಳುತ್ತಿದ್ದುದು ಕಂಡುಬರುತ್ತಿದೆ. ಇವುಗಳಲ್ಲಿ ಕೆಲವು ಮನೆತನಗಳ ರಾಜರು ಮಾಂಡಳಿಕರಾಗಿ, ಇನ್ನು ಕೆಲವರು ಬಹುಶಃ ಸ್ವತಂತ್ರ ಅರಸರಾಗಿ ಆಳುತ್ತಿದ್ದರೆಂದು ತಿಳಿದು ಬರುತ್ತಿದೆ. ಕ್ರಿ.ಶ. 900ರದೆಂದು ಹೇಳಲಾಗಿರುವ ಬೆಳಗಾಂವಿ ಜಿಲ್ಲೆಯ ಕೋಟೂರ ಶಿಲಾಶಾಸನವು ಪರಹಿತ ರಾಜನೆಂಬ ಚಾಲುಕ್ಯ ಅರಸನನ್ನು ಉಲ್ಲೇಖಿಸುತ್ತಿದೆ. ಇವನು ಬಹುಶಃ ಚಾಲುಕ್ಯ ಮನೆತನದ ಚಿಕ್ಕ ರಾಜ್ಯಾಧಿಕಾರಿಗಳಲ್ಲೊಬ್ಬನಾಗಿರಬೇಕು. ಕ್ರಿ.ಶ. 813 ರ ಕಡಬ ತಾಮ್ರಶಾಸನಗಳು ಯಶೋವರ್ಮನ ಮಗನೂ ಬಲವರ್ಮನ ಮೊಮ್ಮಗನೂ ಆಗಿದ್ದ ವಿನಯಾದಿತ್ಯನೆಂಬೊಬ್ಬ ಚಾಲುಕ್ಯರಾಜನು ಕುಣಿಗಲ್ (ತುಮಕೂರು ಜಿಲ್ಲೆಯ ಕುಣಿಗಲ್)[3] ದೇಶವನ್ನಾಳುತ್ತಿದ್ದನೆಂದು ಉಲ್ಲೇಖಿಸುತ್ತಿವೆ. ಡಾ. ಫ್ಲೀಟ್ ಅವರು ಈ ಶಾಸನದ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ[4]. ಮೈಸೂರು ಶಾಸನವೊಂದರಲ್ಲಿ ನರಸಿಂಹನೆಂಬ ಇನ್ನೊಬ್ಬ ಚಾಲುಕ್ಯ ಮಹಾಸಾಮಂತನ ಹೆಸರು ಬಂದಿದೆ[5]. ಇನ್ನು ಕೆಲವು ಶಾಸನಗಳಲ್ಲಿ ಗೊಗ್ಗಿ ಎಂಬ ಮತ್ತೊಬ್ಬ ಮಹಾಸಾಮಂತನ ಹೆಸರು ವರಾಹಮುದ್ರೆಯೊಂದಿಗೆ ಉಲ್ಲೇಖಿಸಲ್ಪಟ್ಟಿದೆ. ಆತನ ಬೆಂಬಲಿಗರಲ್ಲೊಬ್ಬನು ಪೊಲುಕೇಶಿ ಮತ್ತು ಬೂದಿಗ ಎಂಬವರೊಂದಿಗೆ ಕಾಳೆಗವೆಸಗಿ ಯುದ್ಧದಲ್ಲಿ ಮಡಿದುದರ ಸ್ಮಾರಕಾರ್ಥವಾಗಿರುವ ವೀರಗಲ್ಲೊಂದು ದೊರೆತಿದೆ[6]. ಕ್ರಿ.ಶ. 941-42 ರಲ್ಲಿ 'ಪಂಪಭಾರತ' ಇಲ್ಲವೆ 'ವಿಕ್ರಮಾರ್ಜುನ ವಿಜಯ'ವೆಂಬ ಕಾವ್ಯವನ್ನು ರಚಿಸಿದ ಪಂಪಕವಿ ತನ್ನ ಆಶ್ರಯದಾತ ಇಮ್ಮಡಿ ಅರಿಕೇಸರಿಯೆಂಬ ಚಾಲುಕ್ಯರಾಜನ[7] ವಂಶಾವಳಿಯನ್ನು ಹೀಗೆ ಕೊಟ್ಟಿದ್ದಾನೆ.—

ಯುದ್ಧಮಲ್ಲನು ಒಂದೂಕಾಲು ಲಕ್ಷ (ಸಪಾದಲಕ್ಷ) ದೇಶವನ್ನಾಳುತ್ತಿದ್ದ. ಆತನ ಮಗನು ಮೊದಲನೆಯ ಅರಿಕೇಸರಿ. 'ಸಮಸ್ತಲೋಕಾಶ್ರಯ', 'ತ್ರಿಭುವನ ಮಲ್ಲ', ಮತ್ತು 'ರಾಜತ್ರಿಣೇತ್ರ' ಎಂಬ ಬಿರುದುಗಳುಳ್ಳ ಅರಿಕೇಸರಿ ವೆಂಗಿ ಮತ್ತು ತ್ರಿಕಲಿಂಗಗಳನ್ನು ನಿರುಪಮದೇವನ ಮಾಂಡಳಿಕನಾಗಿ ಆಳುತ್ತಿದ್ದ. ಈ ನಿರುಪಮದೇವನು ಧಾರಾವರ್ಷ ಕಲಿವಲ್ಲಭ ನಿರುಪಮ ಧ್ರುವನೆಂಬ ಹೆಸರಿನ ರಾಷ್ಟ್ರಕೂಟ

ರಾಜನೆಂದು ತಿಳಿದುಬಂದಿದೆ[8]. ಇವನ ಕಾಲ ಕ್ರಿ.ಶ. 770-80 ಎಂದು ಗೊತ್ತುಪಡಿಸಲಾಗಿದೆ. ಇವನಿಗೆ ಮೊದಲನೆಯ ನರಸಿಂಹ ಮತ್ತು ಭದ್ರದೇವ ಇಲ್ಲವೆ ಬದ್ದೆಗ ಎಂಬಿಬ್ಬರು ಮಕ್ಕಳು ಇದ್ದರು. ಮೊದಲನೆಯ ನರಸಿಂಹನ ಮಗ ಇಮ್ಮಡಿ ದುಗ್ಧಮಲ್ಲ; ಈತನ ಮಗ ಇಮ್ಮಡಿ ಭದ್ರದೇವ ಇಲ್ಲವೆ ಇಮ್ಮಡಿ ಬದ್ದೆಗ. ಇವನು ನಲವತ್ತೆರಡು ಯುದ್ಧಗಳನ್ನೆಸಗಿ 'ಸೋಲದ ಗಂಡ'ನೆಂಬ ಬಿರುದಾಂಕಿತನಾಗಿದ್ದ. ಇವನು ಚಾಲುಕ್ಯ ಭೀಮನನ್ನು ನೀರೊಳಗೆ ಹೊಕ್ಕು ಮೊಸಳೆಯನ್ನು ಎಳೆದು ತಂದಂತೆ ಹಿಡಿದು ತಂದನಂತೆ[9]. ಈ ಭೀಮನು ಕ್ರಿ.ಶ. 888-918ರಲ್ಲಾಳಿದ ಪೂರ್ವದ ಚಾಲುಕ್ಯ ರಾಜನಾದ ಮೊದಲನೆಯ ಭೀಮನೆಂದು ನಿರ್ಣಯಿಸಲಾಗಿದೆ[10]. ಬದ್ದೆಗನ ಮಗ ಮುಮ್ಮಡಿ ಯುದ್ಧಮಲ್ಲ ಇಲ್ಲವೆ ದುಗ್ಧಮಲ್ಲ. ಇವನ ಮಗನು ಲಾಟರನ್ನು, ಏಳು ಮಾಳವರನ್ನು, ಗೂರ್ಜರರನ್ನು ಸೋಲಿಸಿದನಲ್ಲದೆ, ಮಹೀಪಾಲನನ್ನು ಗೆದ್ದು ದಹಲ ದೇಶದ ರಾಜನೊಂದಿಗೆ ಯುದ್ಧ ಮಾಡಿದ. ಅಲ್ಲದೆ ತನ್ನ ಕುದುರೆಗಳನ್ನು ಗಂಗೆಯಲ್ಲಿ ಮೀಯಿಸಿದ. ಈತನನ್ನು ಭದ್ರಾಂಕುಶ ಅಥವಾ ಲೋಕಾಶ್ರಯ ಎಂದು ಕರೆಯುತ್ತಾರೆ. ಇವನ ಜನಪ್ರಿಯ ಹೆಸರು 'ನರಗ' ಎಂದು. ಎರಪ ಇಲ್ಲವೆ ಪಶ್ಚಿಮ ಗಂಗರಾಜನಾದ ಎರೆಯಪ್ಪನಿಗೆ ಇವನು ಒಂದು ಪ್ರಾಂತ್ಯವನ್ನು ಕೊಟ್ಟಿದ್ದ. ಇವನ ಹೆಂಡತಿ ಜಾಕವ್ವೆ. ಈತನ ಮಗನೇ ಆದಿಪಂಪನ ಆಶ್ರಯದಾತನಾಗಿದ್ದು 'ಧರ್ಮಪುರ' ವೆಂಬ ಅಗ್ರಹಾರವನ್ನು ಇವನಿಗೆ ದಾನಕೊಟ್ಟ ಇಮ್ಮಡಿ ಅರಿಕೇಸರಿ. ಈ 'ಧರ್ಮಪುರ'ವು ಧಾರವಾಡ ಜಿಲ್ಲೆಯ ಗದಗಿನ ಬಳಿಯ ಡಂಬಳವೆಂದು ಗುರುತಿಸಲಾಗಿದೆ. ಗೊಜ್ಜಿಗನೆಂಬ ವೈರಿಯ ಕೈಯೊಳಗಿಂದ ತಪ್ಪಿಸಿಕೊಂಡು ಬಂದು ಮರೆಹೊಕ್ಕ ವಿಜಯಾದಿತ್ಯನೆಂಬ ರಾಜನಿಗೆ ಈ ಅರಿಕೇಸರಿ ಆಶ್ರಯವಿತ್ತನೆಂದು ಬಣ್ಣಿಸಲಾಗಿದೆ. ವಿಜಯಾದಿತ್ಯನು ಪೂರ್ವದ ಚಾಲುಕ್ಯ ಮನೆತನದ ವಿಜಯಾದಿತ್ಯ ನೆಂಬ ಬಾಲರಾಜನೆಂದು ಭಾವಿಸಲಾಗಿದೆ. ಗೊಜ್ಜಿಗನು ಸುವರ್ಣವರ್ಷ ನಾಲ್ವಡಿ ಗೋವಿಂದನೆಂಬ ರಾಷ್ಟ್ರಕೂಟ ರಾಜನಾಗಿರಬಹುದು[11]. ಆದರೆ ಈ ವಂಶಾವಳಿ ಪೂರ್ವದ, ಇಲ್ಲವೆ ಪಶ್ಚಿಮ ಚಾಲುಕ್ಯ ಮನೆತನಗಳಲ್ಲಿ ಯಾವುದಕ್ಕೂ ಸರಿಹೊಂದಲಾರದೆಂದು ಡಾ. ಫ್ಲೀಟರ ಅಭಿಪ್ರಾಯ[12]. ಈ ವಂಶಾವಳಿಯ ಪ್ರಾಮಾಣ್ಯವನ್ನಾಗಲಿ ನೈಜತೆಯನ್ನಾಗಲಿ ಯಾರೂ ಶಂಕಿಸುವಂತಿಲ್ಲ. ಏಕೆಂದರೆ ನಿರುಪಮ, ಭೀಮ ಮತ್ತು ಗೊಜ್ಜಿಗ ಮೊದಲಾದವು ಐತಿಹಾಸಿಕ ಹೆಸರುಗಳಾಗಿದ್ದು ಅವುಗಳನ್ನು ಆಯಾ ವ್ಯಕ್ತಿಗಳೊಂದಿಗೆ ಸರಿಹೊಂದಿಸಲು ಸಾಧ್ಯವಿದೆ. ಈ ಚಾಲುಕ್ಯ ಶಾಖೆಯ ಸಂಸ್ಥಾಪಕನಾಗಿರುವ ಯುದ್ಧಮಲ್ಲನು ಬಾದಾಮಿ ಚಾಲುಕ್ಯ ಮನೆತನದ ಇಮ್ಮಡಿ ವಿಕ್ರಮಾದಿತ್ಯನ ಮಗ ವಿನಯಾದಿತ್ಯ (ಕ್ರಿ.ಶ. 680-696)ನೇ ಆಗಿರ ಬೇಕೆಂದು ಸೂಚಿಸಲಾಗಿದೆ. ಆದರೆ ಈ ಸೂಚನೆ ಕೆಲವು ತಪ್ಪು ಗ್ರಹಿಕೆಗಳಿಂದ ಕೂಡಿದುದಾಗಿದೆ. ವಿನಯಾದಿತ್ಯನ ಕಾಲ ಹೆಚ್ಚು ಪ್ರಾಚೀನವಾದುದೆಂದು ಕಂಡುಬರುತ್ತಿದೆ. ಮೊದಲನೆಯ ಅರಿಕೇಸರಿ ರಾಷ್ಟ್ರಕೂಟರ ನಿರುಪಮರಾಜ (ಕ್ರಿ.ಶ. 780-893)ನ ಮಾಂಡಳಿಕನಾಗಿದ್ದನೆಂದು ಪಂಪಕವಿ ಹೇಳುತ್ತಾನೆ[13]. ಆತನು ವಿನಯಾದಿತ್ಯ (ಕ್ರಿ.ಶ. 680-696)ನ ಒಬ್ಬ ಮಗನೇ ಆಗಿದ್ದ ಪಕ್ಷದಲ್ಲಿ ಪಂಪನ ಹೇಳಿಕೆ ಸರಿಯಾಗದು. ಏಕೆಂದರೆ, ಇಲ್ಲಿ ಕಾಲದ ಅಂತರವು ಸುಮಾರು ಒಂದುನೂರು ವರುಷದ್ದಾಗಿದೆ.

ನೌಸಾರಿ, ಸೂರತ್ ಮತ್ತು ಬಲ್ಸಾರ್‌ಗಳಲ್ಲಿ ದೊರೆತ ಚಾಲುಕ್ಯ ರಾಜಮನೆತನದ ಕ್ರಿ. ಶ. 7ನೆಯ ಮತ್ತು 8ನೆಯ ಶತಕಗಳ ತಾಮ್ರಶಾಸನಗಳಿಂದ ಗುಜರಾತ ಪ್ರದೇಶಗಳಲ್ಲಿ ಸಾಮಂತರಾಜರಾಗಿ ಚಾಲುಕ್ಯರ ಒಂದು ಶಾಖೆಯವರು ಆಳುತ್ತಿದ್ದಂತೆ ತಿಳಿದುಬಂದಿದೆ. ಡಾ. ಫ್ಲೀಟ್ ಅವರು ಈ ಅರಸು ಮನೆತನವನ್ನು 3ನೆಯ ಗುಜರಾತ ಚಾಲುಕ್ಯ ಶಾಖೆಯೆಂದು ಗೊತ್ತುಪಡಿಸಿದ್ದಾರೆ[14]. ಈ ರಾಜಮನೆತನದ ಶಾಖೆಯ ಸಂಸ್ಥಾಪಕನು ಇಮ್ಮಡಿ ಪುಲಿಕೇಶಿಯ ಮಗ ಮತ್ತು ಮೊದಲನೆಯ ವಿಕ್ರಮಾದಿತ್ಯನ ತಮ್ಮ ಧಾರಾಶ್ರಯ ಜಯಸಿಂಹವರ್ಮ. ಆತನಿಗೆ ಮೂವರು ಗಂಡು ಮಕ್ಕಳಿದ್ದರು. ಅವರು ಯಾರೆಂದರೆ :—

(1) ಸತ್ಯಾಶ್ರಯ ಶಿಲಾದಿತ್ಯ (ಕ್ರಿ. ಶ. 692); (2) ಮಂಗಳರಸ—ಇವನಿಗೆ ವಿಜಯಾದಿತ್ಯ, ಯುದ್ಧಮಲ್ಲ ಮತ್ತು ಜಯಾಶ್ರಯ (ಕ್ರಿ. ಶ. 731–732) ಎಂದೂ ಹೆಸರುಗಳಿದ್ದವು; ಮತ್ತು

(3) ಅವನಿಜನಾಶ್ರಯ ಪುಲಿಕೇಶಿ (ಕ್ರಿ.ಶ. 739). ಮೊದಲನೆಯ ವಿಕ್ರಮಾದಿತ್ಯ ಮತ್ತು ಜಯಸಿಂಹ ವರ್ಮರ ನಡುವೆ ಒಳ್ಳೆಯ ಸೌಹಾರ್ದ ಸಂಬಂಧವಿದ್ದಿತೆಂದು ಕಾಣುತ್ತದೆ. ಏಕೆಂದರೆ, ನೌಸಾರಿ ದತ್ತಿ ಶಾಸನದಲ್ಲಿ ಜಯಸಿಂಹವರ್ಮನ ಗೌರವಾಭ್ಯುದಯಗಳು ಆತನ ಹಿರಿಯಣ್ಣನಾದ ಮೊದಲನೆಯ ವಿಕ್ರಮಾದಿತ್ಯನಿಂದ ಊರ್ಜಿತಗೊಂಡವೆಂದು ಬಣ್ಣಿಸಲಾಗಿದೆ. ಮತ್ತೆ ಜಯಸಿಂಹವರ್ಮನ ಮೂವರು ಗಂಡುಮಕ್ಕಳು ಉನ್ನತಾಧಿಕಾರದಲ್ಲಿದ್ದರೆಂದೂ ಆ ಶಾಸನದಿಂದ ತಿಳಿದುಬರುತ್ತದೆ. ಏಕೆಂದರೆ, ಅವರು ಬೇರೆ ಬೇರೆ ಕಾಲಗಳಲ್ಲಿ ಪ್ರತ್ಯೇಕವಾಗಿ ದತ್ತಿಶಾಸನಗಳನ್ನು ಮಾಡಿಸಿದ ಉಲ್ಲೇಖವಿದೆ. ಅವನಿಜನಾಶ್ರಯ ಪುಲಿಕೇಶಿಯು ಸಾಧಿಸಿದನೆಂದು ಹೇಳುವ ಬಹು ದೊಡ್ಡ ಸಿದ್ಧಿಯೆಂದರೆ ಆತನು ತಾಜಿಕರು ಅಥವಾ ಅರಬರನ್ನು ಸೋಲಿಸಿದುದು. ಈ ಅರಬರು ಸೈಂಧವ, ಕಚೆಹೆಲ, ಸೌರಾಷ್ಟ್ರ, ಚವೋಟಕ, ಮೌರ್ಯ, ಗೂರ್ಜರ ಮತ್ತು ಇತರ ಅರಸರನ್ನು ನಾಶಪಡಿಸಿ, ದಕ್ಷಿಣದ ಅರಸರನ್ನು ಗೆಲ್ಲುವುದಕ್ಕೆಂದು ದಕ್ಷಿಣಾಪಥದತ್ತ ಸಾಗಿದ್ದರು. ವಿಜಯಾದಿತ್ಯ ಇಲ್ಲವೆ ಇಮ್ಮಡಿ ವಿಕ್ರಮಾದಿತ್ಯನೆಂದು ಗುರುತಿಸಬಹುದಾದ ವಲ್ಲಭನರೇಂದ್ರನು ಈತನಿಗೆ 'ದಕ್ಷಿಣಾಪಥಸಾಧಾರ', 'ಚಾಲುಕ್ಯಕುಲಾಲಂಕಾರ', 'ಪೃಥ್ವೀವಲ್ಲಭ,' 'ಅನಿವಾರಿತನಿವರ್ತಯಿತೃ' ಮತ್ತು 'ಅವನಿಜನಾಶ್ರಯ'—ಇತ್ಯಾದಿ ಬಿರುದುಗಳನ್ನು ದಯೆಪಾಲಿಸಿದ್ದ. ಪುಲಿಕೇಶಿ ತಾಜಿಕರಿಂದ ಜಯಿಸಲ್ಪಟ್ಟ ಎಲ್ಲ ಪ್ರದೇಶಗಳನ್ನೂ ವಶಪಡಿಸಿಕೊಂಡು ತನ್ನರಾಜ್ಯದ ಗಡಿಗಳನ್ನು ವಿಸ್ತರಿಸಿಕೊಂಡ. ಅವನಿಜನಾಶ್ರಯನ ಮರಣಾನಂತರ ಆತನ ಸಹೋದರನ ಮಗ ಯುದ್ಧಮಲ್ಲ ಇಲ್ಲವೆ ಮಂಗಳರಸನು ಪಟ್ಟಕ್ಕೆ ಬಂದನೆಂದು ತೋರುತ್ತದೆ; ಮತ್ತು ಬಾದಾಮಿ ಚಾಲುಕ್ಯ ಅರಸುಮನೆತನದ ಮೂಲ ಶಾಖೆ ಕ್ರಿ. ಶ. 757ರಲ್ಲಿ ಪತನಗೊಂಡ ತರುವಾಯದಲ್ಲೂ ಬಹುಶಃ ಈ ಚಾಲುಕ್ಯಶಾಖೆಯ ರಾಜರು ಗುಜರಾತ ಮತ್ತು ರಾಜಪುತಾನಗಳ ಕೆಲ ಪ್ರದೇಶಗಳಲ್ಲಿ ಆಡಳಿತ ನಡೆಸುತ್ತಿದ್ದಂತೆ ಕಾಣುತ್ತದೆ. ಕೆಲಕಾಲಾನಂತರ ಈ ಚಾಲುಕ್ಯ ಶಾಖೆಯ ಒಬ್ಬ ರಾಜಪುತ್ರನು ವೆಂಗಿನಾಡಿಗೆ ಹೋಗಿ, ಅಲ್ಲಿ ಒಂದು ರಾಜ್ಯವನ್ನು ರೂಪಿಸಿಕೊಂಡಂತೆ ತೋರುತ್ತದೆ. ವಿನಯಾದಿತ್ಯ ಇಲ್ಲವೆ ಮಂಗಳರಾಜನೆಂದು ಕರೆಯಿಸಿಕೊಳ್ಳುತ್ತಿದ್ದ ಯುದ್ಧಮಲ್ಲನ ಪೀಳಿಗೆಯಲ್ಲಿ ಪಂಪನ ಆಶ್ರಯದಾತ ಅರಿಕೇಸರಿಯೂ ಇದ್ದುದಾದಲ್ಲಿ ಡಾ॥ ಫ್ಲೀಟರು ಈ ವಿಚಾರದಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಉತ್ತರವಿತ್ತಂತಾಗುತ್ತದೆ. ಈ ವಿನಯಾದಿತ್ಯ ಇಲ್ಲವೆ ಇವನ ವಂಶಸ್ಥನೊಬ್ಬನು ಉತ್ತರ ತೆಲಂಗಾಣದಲ್ಲಿ ನೆಲಸಿ ಬೋದನವನ್ನು ರಾಜಧಾನಿಯನ್ನಾಗಿಸಿ ಒಂದು ರಾಜ್ಯವನ್ನು ನಿರ್ಮಿಸಿಕೊಂಡಿರಬೇಕು. ಆ ತರುವಾಯದಲ್ಲಿ, ದೇಶದ ರಾಜಧಾನಿ ಲೆಂಬುಳವಾಟಕದ ಪೂರ್ವಕ್ಕೆ ಸ್ಥಳಾಂತರ ಹೊಂದಿತು. ಆ ಲೆಂಬುಳವಾಟಕವೇ ಇಂದಿನ ಆಂಧ್ರರಾಜ್ಯದ ವೇಮುಲವಾಡ. ಅವರು ಬೋದನವನ್ನು ತಮ್ಮ ಮೊದಲ ರಾಜಧಾನಿಯನ್ನಾಗಿ ಮಾಡಿಕೊಂಡು ಅನಂತರದಲ್ಲಿ ವೇಮುಲವಾಡಕ್ಕೆ ಅದನ್ನು ಸ್ಥಳಾಂತರಿಸಿಕೊಂಡರು[16]. ಈ ಚಾಲುಕ್ಯಶಾಖೆಯ ರಾಜರು ತಾವು ಮಹಾಸಾಮಂತರೆಂದು ಹೇಳಿಕೊಂಡಿರುವರಲ್ಲದೆ ಮೂಲ ರಾಷ್ಟ್ರಕೂಟ ಮನೆತನದವರೊಂದಿಗೆ ವಿವಾಹಸಂಬಂಧ ವಿರಿಸಿಕೊಂಡಿದ್ದರು. ಇಮ್ಮಡಿ ಅರಿಕೇಸರಿಯ ತಾಯಿ ಜಾಕವ್ವೆ ರಾಷ್ಟ್ರಕೂಟ ರಾಜನಾದ ನಾಲ್ವಡಿ ಇಂದ್ರರಾಜನ ತಂಗಿ. ಇಮ್ಮಡಿ ಅರಿಕೇಸರಿ ಇಂದ್ರರಾಜನ ಪ್ರೀತಿಯ ಪೋಷಣೆಯಲ್ಲಿ ಬಳೆದನೆಂದು ಪಂಪಕವಿ ಹೇಳುತ್ತಾನೆ. ಈ ಚಾಲುಕ್ಯಶಾಖೆಯ ರಾಜರು ಬಹುಪ್ರಬಲರಾಗಿದ್ದು ತಮ್ಮ ರಾಜ್ಯವನ್ನು ವಿಶೇಷವಾಗಿ ವಿಸ್ತರಿಸಿದ್ದರು. ಹಳೆಯ ಹೈದರಾಬಾದ ಸಂಸ್ಥಾನವನ್ನು ಮತ್ತು ಧಾರವಾಡ ಜಿಲ್ಲೆಯ ಅಂದಿನ ಪುಲಿಗೆರೆ 1,000 ಎಂಬ ಪ್ರದೇಶವನ್ನು ಅವನ ರಾಜ್ಯ ಒಳಗೊಂಡಿತ್ತು.

ಕ್ರಿ.ಶ.1009ರ ಕೌಥೇಮ್ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ಪೂರ್ವಜರ ಬಗೆಗೆ ಕೆಲ ವಿವರಗಳು ಬಂದಿದ್ದು ಅವುಗಳಿಂದ ಬಾದಾಮಿ ಚಾಲುಕ್ಯರ ಹಾಗೂ ಕಲ್ಯಾಣದ ಚಾಲುಕ್ಯರ ನಡುವಿನ ಪರಂಪರಾಗತ ಸಂಬಂಧವು ಸೂಚಿತವಾಗುತ್ತದೆ. ಕಲ್ಯಾಣದ ಚಾಲುಕ್ಯರ ವಂಶಾವಳಿ ಹೀಗಿದೆ:—ಮೊದಲನೆಯ ಭೀಮ, ಮುಮ್ಮಡಿ ಕೀರ್ತಿವರ್ಮ, ಮೊದಲನೆಯ ತೈಲ, ನಾಲ್ವಡಿ ವಿಕ್ರಮಾದಿತ್ಯ ಆಹವಮಲ್ಲ, ಸೂರ್ಮಡಿ

2ನೆಯ ತೈಲ. ಮೊದಲನೆಯ ಅಯ್ಯಣನು ಕೃಷ್ಣನ (—ಎಂದರೆ ರಾಷ್ಟ್ರಕೂಟರಾಜ ಇಮ್ಮಡಿ ಕೃಷ್ಣನ) ಒಬ್ಬ ಮಗಳನ್ನು ಮದುವೆಮಾಡಿಕೊಂಡು ತನ್ನ ಅರಸುಮನೆತನದ ಭಾಗ್ಯವನ್ನು ವೃದ್ಧಿಪಡಿಸಿದನು. ನಾಲ್ವಡಿ ವಿಕ್ರಮಾದಿತ್ಯನು ಲಕ್ಷ್ಮಣರಾಜನ ಮಗಳಾದ ಬೊಂತಾದೇವಿಯನ್ನು ಮದುವೆಯಾದ. ಈ ಲಕ್ಷ್ಮಣರಾಜನು ತ್ರಿಪುರಿ ಅಥವಾ ತೇವಾರದ ಕಲಚೂರಿಯರಸು ಮೊದಲನೆಯ ಕೊಕ್ಕಲನ ಮೊಮ್ಮಗ[19].

ಕಲ್ಯಾಣ ಚಾಲುಕ್ಯರಾಜಮನೆತನದ ಸಂಸ್ಥಾಪಕನಾದ ಇಮ್ಮಡಿ ತೈಲನ ವಂಶಾವಳಿ ಹೀಗಿದೆ :—

ವಿಜಯಾದಿತ್ಯ
- ಇಮ್ಮಡಿ ವಿಕ್ರಮಾದಿತ್ಯ
  - ಇಮ್ಮಡಿ ಕೀರ್ತಿವರ್ಮ
- ಭೀಮ ಪರಾಕ್ರಮ
  - 3ನೆಯ ಕೀರ್ತಿವರ್ಮ
    - ಮೊದಲನೆಯ ತೈಲ
      - ಮುಮ್ಮಡಿ ವಿಕ್ರಮಾದಿತ್ಯ
        - ಭೀಮ
          - ಅಯ್ಯಣ + ಹೆಂಡತಿ ಕೃಷ್ಣನಂದನೆ
            - ನಾಲ್ವಡಿ ವಿಕ್ರಮಾದಿತ್ಯ : + ಹೆಂಡತಿ ಬೊಂತಾದೇವಿ (ಚೇದಿಯರಸು ಲಕ್ಷ್ಮಣನ ಮಗಳು)
              - ಇಮ್ಮಡಿ ತೈಲ + ಹೆಂಡತಿ : ಲಕ್ಷ್ಮೀ—ರಾಷ್ಟ್ರಕೂಟ ರಾಜನ ಮಗಳು (ನೋಡಿ—ಕೌಠೇಮ್, ನೀಲಗುಂದ, ಎರಟೂರು ಮತ್ತು ಮಿರಜ ಶಾಸನಗಳು.)

ಇಮ್ಮಡಿ ತೈಲನ ಸಮಕಾಲೀನನಾಗಿದ್ದ ಕನ್ನಡ ಕವಿ ರನ್ನನು ತನ್ನ 'ಗದಾಯುದ್ಧ'ದಲ್ಲಿ ಈ ವಂಶಾವಳಿಯನ್ನು ಹೀಗೆ ವಿವರಿಸಿದ್ದಾನೆ[20] :—

## ಕಲ್ಯಾಣದ ಚಾಲುಕ್ಯರು

ಸತ್ಯಾಶ್ರಯ
|
ಜಯಸಿಂಹ
|
ರಣರಂಗಸಿಂಹ
|
ಪುಲಕೇಶಿದೇವ
|
ಕೀರ್ತಿವರ್ಮ
|
- ಇಮ್ಮಡಿ ಸತ್ಯಾಶ್ರಯ
  - ಆದಿತ್ಯವರ್ಮ
  - ವಿಕ್ರಮಾದಿತ್ಯ
  - ದುರ್ಧರಮಲ್ಲ
  - ವಿಜಯಾದಿತ್ಯ (ನಿರವದ್ಯ)
  - ಕೊಂಕಣಿವಿಕ್ರಮಾದಿತ್ಯ
  - ಇಮ್ಮಡಿ ಕೀರ್ತಿವರ್ಮ
    - ಅಜ್ಞಾತ
    - ಭೀಮಪರಾಕ್ರಮ
      - ಮುಮ್ಮಡಿ ಕೀರ್ತಿವರ್ಮ
      - ಪಿರಿಯ ತೈಲಪ
      - ಕುಂದಿಯಭೀಮ
      - ವಿಕ್ರಮಾದಿತ್ಯ
      - ಅಯ್ಯಣದೇವ
      - ಉತ್ತುಂಗಮಲ್ಲವಿಕ್ರಮಾದಿತ್ಯ + ಹೆಂಡತಿ ಬೊಂತಾದೇವಿ
      - ಇಮ್ಮಡಿ ತೈಲ
- ಮಂಗಲಾರ್ಣವ

**ಕಲ್ಯಾಣದ ಚಾಲುಕ್ಯರು :**

ಚಾಲುಕ್ಯಶಾಖೆಯ ಇಮ್ಮಡಿ ತೈಲನಿಂದ ರಾಷ್ಟ್ರಕೂಟರಾಜ ಕೊಕ್ಕಲ ಅಥವಾ ಇಮ್ಮಡಿ ಕಕ್ಕನು ಕ್ರಿ.ಶ. ಸುಮಾರು 973ರಲ್ಲಿ ಪರಾಜಯಗೊಂಡನಂತರ ಬಲಾಢ್ಯ ರಾಷ್ಟ್ರಕೂಟ ಸಾಮ್ರಾಜ್ಯವು ಕ್ಷೀಣಿಸಿತು[21]. ಇಮ್ಮಡಿ ಕಕ್ಕನ ಪೊದಲಿಗನಾಗಿದ್ದ ಖೊಟ್ಟಿಗನನ್ನು ಮಾಳವದ ರಾಜ ಸೀಯಕ ಹರ್ಷನು ಸೋಲಿಸಿದಾಗಲೇ ಈ ಸಾಮ್ರಾಜ್ಯದ ಅಡಿಗಲ್ಲು ಅಲ್ಲಾಡಿಹೋಗಿತ್ತು. ಹರ್ಷನಾಗಲಿ ಆತನ ತರುವಾಯ ಬಂದ ಮುಂಜನಾಗಲಿ ರಾಷ್ಟ್ರಕೂಟ ರಾಜಧಾನಿ ಮಳಖೇಡವನ್ನು ಮುತ್ತಿ ಸೂರೆಗೊಂಡನೆಂದು ಕಂಡುಬರುತ್ತಿದೆ[22].

ಇಮ್ಮಡಿ ತೈಲನು ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧವುಳ್ಳವನಾಗಿದ್ದು ಆ ರಾಜಮನೆತನದ ಬಹು ಸತ್ವಶಾಲಿಯಾದ ಮಾಂಡಳಿಕನಾಗಿದ್ದ. ಮಾಳವದ ರಾಜರಿಂದುಂಟಾದ ರಾಷ್ಟ್ರಕೂಟರ ಪರಾಜಯದ ಸಂಧಿಯನ್ನು ಸಾಧಿಸಿ ರಾಷ್ಟ್ರಕೂಟರ ಇನ್ನಿತರ ಮಾಂಡಳಿಕ ರಾಜರ ಸಹಾಯದೊಂದಿಗೆ ತೈಲಪನು ಇಮ್ಮಡಿ ಕಕ್ಕನನ್ನು ಪದಚ್ಯುತಿಗೊಳಿಸಿದ.

ಈ ಸಾಮ್ರಾಜ್ಯವು ಮತ್ತೆ ಚಾಲುಕ್ಯರ ಕೈಸೇರಿತು. ಈ ಚಾಲುಕ್ಯರು ಬಾದಾಮಿ ಚಾಲುಕ್ಯ ಮನೆತನದ ವಂಶಾವಳಿಗೆ ನೇರವಾಗಿ ಸಂಬಂಧಪಟ್ಟವರೆಂದು ಹೇಳಿಕೊಂಡಿದ್ದಾರೆ. ಇಮ್ಮಡಿ ತೈಲಪನು ತೈಲ, ತೈಲಪಯ್ಯ, ತೈಲಪ್ಪ ಮತ್ತು ನೂರ್ಮಡಿ ತೈಲ ಎಂಬಿವೇ ಮೊದಲಾದ ಹೆಸರುಗಳಿಂದ ಕರೆಯಲ್ಪಟ್ಟಿದ್ದಾನೆ. ಈತನಿಗೆ ಆಹವಮಲ್ಲ (ಎಂದರೆ ಯುದ್ಧದಲ್ಲಿ ಜಟ್ಟಿ) ಎಂಬ ಬಿರುದಿತ್ತು. ಇವನಿಗಿದ್ದ ಇತರ ಬಿರುದುಗಳೆಂದರೆ—" ಮಹಾರಾಜಾಧಿರಾಜ ", " ಪರಮೇಶ್ವರ " ಮತ್ತು " ಪರಮಭಟ್ಟಾರಕ " ಇತ್ಯಾದಿ. ಅಲ್ಲದೆ " ಸಮಸ್ತ ಭುವನಾಶ್ರಯ ", " ಶ್ರೀ ಪೃಥ್ವೀವಲ್ಲಭ ", " ಸತ್ಯಾಶ್ರಯ ಕುಲತಿಲಕ" ಮತ್ತು " ಚಾಲುಕ್ಯಾಭರಣ " ಮುಂತಾದ ಸಾರ್ಥಕನಾಮಗಳಿಂದ ಖ್ಯಾತನಾಗಿದ್ದ. ಇವನ ಹೆಂಡತಿ ರಟ್ಟರಾಜ ಭಾಮಹನ ಮಗಳಾದ ಜಾಕವ್ವೆ, ಜಕ್ಕಲದೇವಿ ಇಲ್ಲವೆ ಜಕ್ಕಲ ಮಹಾದೇವಿ. ಈ ಭಾಮಹನು " ರಾಷ್ಟ್ರಕೂಟ ವಂಶಾಲಂಕರಣ " ನೆನಿಸಿದ್ದ[23]. ಮಿರಜ ತಾಮ್ರ ಶಾಸನಗಳಿಂದ ಭಾಮಹನು ರಾಷ್ಟ್ರಕೂಟ ಮನೆತನದ ಕೊನೆಯರಸನೆಂದು ತಿಳಿದು ಬರುತ್ತದೆ[24]. ಭಾಮಹ ಎಂಬುದು ಕರ್ಕನ ಮತ್ತೊಂದು ಹೆಸರಿರಬಹುದೇ ಎಂಬ ಬಗ್ಗೆ ಸ್ಪಷ್ಟತೆಯಿಲ್ಲ. ತೈಲನಿಗೆ ಸತ್ಯಾಶ್ರಯ ಮತ್ತು ದಶವರ್ಮ ಎಂಬಿಬ್ಬರು ಗಂಡುಮಕ್ಕಳು. ತೈಲನು ಮೊದಮೊದಲು ಮಳಖೇಡದಲ್ಲಿದ್ದುಕೊಂಡೇ ರಾಜ್ಯಭಾರ ನಡೆಸುತ್ತಿದ್ದ. ಆದರೆ, ಅನಂತರದಲ್ಲಿ ಇವನ ವಂಶಜರಿಂದ ರಾಜಧಾನಿ ಮಳಖೇಡದಿಂದ ಕಲ್ಯಾಣಕ್ಕೆ ಸ್ಥಳಾಂತರಿಸಲ್ಪಟ್ಟಿತು. ಈತನಾಳಿಕೆಯಲ್ಲಿಯ ಶಾಸನಗಳಲ್ಲಿ ಉಕ್ತವಾಗಿರುವ ಪ್ರದೇಶಗಳಿಂದ ರಾಷ್ಟ್ರಕೂಟರ ವಶದಲ್ಲಿದ್ದ ದಕ್ಷಿಣದ ಪ್ರದೇಶಗಳೆಲ್ಲವನ್ನೂ ಈತನು ತನ್ನ ಅಂಕೆಯಲ್ಲಿ ತಂದುಕೊಂಡಿದ್ದನೆಂದು ಕಂಡುಬರುತ್ತದೆ. ಇವನ ಸಾಮಂತ ರಾಜರೆಂದರೆ :—1) ಸೌಂದತ್ತಿಯ ರಟ್ಟರು, ಕುಂಡಿದೇಶದ ರಾಜರು[25]; 2) " ತೈಲಪನ ಅಂಕಕಾರ "ನೆನಿಸಿದ್ದ ಭೀಮರಸ ; ಈತನು ಬನವಾಸಿ 12,000, ಧಾರವಾಡ ಜಿಲ್ಲೆಯ ಸಾಂತಲಿಗೆ 1000, ವಿಜಾಪುರ ಜಿಲ್ಲೆಯ ಪಟ್ಟದಕಲ್ಲಿನ ಸುತ್ತುಮುತ್ತಲಿನ ಪ್ರದೇಶವಾಗಿದ್ದ ಕಿಸುಕಾಡು 70[26]; 3) ಉತ್ತರ ಕೊಂಕಣ, ರತ್ನಗಿರಿ ಮತ್ತು ಕೋಲಾರ ಜಿಲ್ಲೆಗಳ ಪ್ರದೇಶಗಳನ್ನಾಳುತ್ತಿದ್ದ ಶಿಲಾಹಾರ ರಾಜವಂಶದ ಉತ್ತರದ ಶಾಖೆಯ ಮಹಾಮಂಡಲೇಶ್ವರ ಅಪರಾಜಿತ[27]; 4) ಸೇವುಣದೇಶದ ಯಾದವ ಮನೆತನದ ಮಹಾಸಾಮಂತ ಇಮ್ಮಡಿ ಭಿಲ್ಲಮ ;—ಈತನು ಮುಂಜನನ್ನು ಪರಾಜಯಗೊಳಿಸಿ ಇಂದಿನ ಔರಂಗಾಬಾದ, ನಾಸಿಕ, ಖಾಂದೇಶ ಜಿಲ್ಲೆಗಳ ಪ್ರದೇಶಗಳನ್ನು ಆಳುತ್ತಿದ್ದ[28]; 5) ಇಮ್ಮಡಿ ತೈಲನ ದಂಡಾಧಿಪನಾಗಿದ್ದ ಚಾಲುಕ್ಯ ರಾಜಪುತ್ರ ಬರಪನು ಲಾಟದೇಶವನ್ನು ಗೆದ್ದು ಆಳುತ್ತಿದ್ದನು[29]. ಇಮ್ಮಡಿ ತೈಲನು ಚೇದಿಯರಸು, ಉತ್ಕಲರು, ಚೋಳ ಮತ್ತು ನೇಪಾಳದರಸರನ್ನು ಜಯಿಸಿದ್ದನೆಂದು ತಿಳಿದುಬರುತ್ತದೆ[30]. ಡಾ. ಫ್ಲೀಟರು ಇದನ್ನೊಪ್ಪದೆ ಈ ಹೇಳಿಕೆ ಕವಿಕಲ್ಪಿತವೆಂದಿದ್ದಾರೆ[31]. ಇಡಿಯ ಕುಂತಲದೇಶವು ಇವರ ವಶಕ್ಕೊಳಗಾಗಿತ್ತಲ್ಲದೆ, ಈ ರಾಜಮನೆತನದ ಶಾಸನಗಳು ಈ ಅರಸರನ್ನು " ಕುಂತಲದ ದೊರೆ "ಗಳೆಂದು ಬಣ್ಣಿಸುತ್ತಿವೆ. ಕುಂತಲದೇಶದ ಕೆಲವು ಪ್ರಮುಖ ಹಾಗೂ ಸುಪ್ರಸಿದ್ಧ ವಿಭಾಗಗಳೆಂದರೆ,—ಬನವಾಸಿ 12,000, ಪಾನುಂಗಲ್ಲು 500, ಪುಲಿಗೆರೆ 300, ಬೆಳವೊಲ 300, ಕುಂಡಿ 3,000, ವೇಣುಗ್ರಾಮ ಅಥವಾ ಬೆಳಗಾಂವಿ 70, ತೊರಗಲೆ 6.000, ಕೆಲವಾಡಿ (ಬಾದಾಮಿಯ ಹತ್ತಿರದ್ದು) 300, ಕಿಸುಕಾಡು 30 (ಪಟ್ಟದ ಕಲ್ಲಿನ ಹತ್ತಿರದ್ದು), ಬಾಗಡಿಗೆ (ಅಥವಾ ಬಾಗಲಕೋಟೆ) 70, ಮತ್ತು ತರ್ದವಾಡಿ 1.000. ನಿಜದ ಸಂಗತಿಯೆಂದರೆ, ಇಮ್ಮಡಿ ತೈಲನು ಚೋಳರ ಶಾಸನ ವೊಂದರಲ್ಲಿ ಉಕ್ತವಾಗಿರುವಂತೆ ರಟ್ಟಪಾಡಿ ಏಳುವರೆ ಲಕ್ಷ ದೇಶವೆಂದು ಹೆಸರಾಗಿದ್ದ ರಾಷ್ಟ್ರಕೂಟ ಸಾಮ್ರಾಜ್ಯವೆಲ್ಲವನ್ನೂ ಕೈವಶಪಡಿಸಿಕೊಂಡಿದ್ದನು[32].

ಇಮ್ಮಡಿ ತೈಲನು ಮುಂಜನನ್ನು ಸೋಲಿಸಿ ಕೊಂದನು. ಈ ಮುಂಜನು ಮಾಳವದ ವಾಕ್ಪತಿ ಮುಂಜನೆಂದು ತಿಳಿಯಲಾಗಿದೆ. ಮಳಖೇಡವನ್ನು ಸುಲಿದು ರಾಷ್ಟ್ರಕೂಟ ರಾಜ ಖೊಟ್ಟಿಗನನ್ನು ಸೋಲಿಸಿದ್ದ ಸೀಯಕ ಹರ್ಷನ ತರುವಾಯದಲ್ಲಿ ಪಟ್ಟಕ್ಕೆ ಬಂದವನೇ ಈ ಮುಂಜನು. ಇಮ್ಮಡಿ ತೈಲನಿಂದ ಈ ದುರ್ಗತಿಗೆ ಈಡಾಗುವ ಮುನ್ನ ಹದಿನಾರಕ್ಕಿಂತ ಕಡಮೆಯಿಲ್ಲದಷ್ಟು ಸಲ, ಈ ಮುಂಜನು ಇಮ್ಮಡಿ ತೈಲನನ್ನು ಜಯಿಸಿದ್ದನೆಂದು ಕೆಲವರ ವಾದವಿದೆ[33]. ಮುಂಜನು ತನ್ನ ಅಮಾತ್ಯ ರುದ್ರಾದಿತ್ಯನೆಂಬಾತನ ಸಲಹೆಯನ್ನು ಧಿಕ್ಕರಿಸಿ ತೈಲನ ರಾಜ್ಯದ ಮೇಲೆ ಈ ಕೊನೆಯ ಆಕ್ರಮಣವನ್ನು ಕೈಕೊಂಡ. ಈತನು ಗೋದಾವರಿಯನ್ನು ದಾಟಿದಾಗಲೇ ತೈಲನ ಸೈನ್ಯವನ್ನು ಎದುರಿಸಬೇಕಾಗಿ ಬಂದು ಜಯಿಸಲ್ಪಟ್ಟ. ಆಗ ಈತನನ್ನು ಸೆರೆಹಿಡಿಯಲಾಯಿತು. ತೈಲನು ಮೊದಲು ಇವನನ್ನು ತಕ್ಕ ಮರ್ಯಾದೆಯಿಂದಲೇ ನಡೆಸಿಕೊಂಡ. ಆದರೆ ಮುಂಜನು ಸೆರೆಯಿಂದ ಪಾರಾಗಲು ಯತ್ನಿಸಿದಾಗ ಇವನನ್ನು ಮನೆ ಮನೆಗೆ ತಿರಿಯುವಂತೆ ಮಾಡಿ, ಅಪಮಾನಗೊಳಿಸಿ ಕೊನೆಯಲ್ಲಿ ಮರಣದಂಡನೆಗೀಡುಮಾಡಿದನು[34].

ತಲಕಾಡಿನ ಗಂಗರು ರಾಷ್ಟ್ರಕೂಟರೊಂದಿಗೆ ವೈವಾಹಿಕ ಸಂಬಂಧವನ್ನುಳ್ಳವರಾಗಿದ್ದುದರಿಂದ ರಾಷ್ಟ್ರಕೂಟರ ಪ್ರಮುಖ ಮಾಂಡಳಿಕರಾಗಿದ್ದರು. ರಾಷ್ಟ್ರಕೂಟರಾಜ ಖೊಟ್ಟಿಗನ ಕೈಕೆಳಗೆ ಗಂಗರಾಜ ಮಾರಸಿಂಹನು ಗಂಗವಾಡಿ 46,000, ಪುರಿಗೆರೆ 300 ಮತ್ತು ಬೆಳವೊಲ 300, ಮುಂತಾದವುಗಳ ಮಂಡಲಾಧಿಪತಿಯಾಗಿದ್ದನು. ಕ್ರಿ.ಶ. 973ರ ಅನಂತರದ ಅಲ್ಪಾವಧಿಯಲ್ಲಿಯೇ ಕಕ್ಕನ ಮಗ ಇಂದ್ರನನ್ನು ಇಮ್ಮಡಿ ತೈಲನ ವಿರುದ್ಧವಾಗಿ ಪಟ್ಟಕ್ಕೆ ತಂದು ರಾಷ್ಟ್ರಕೂಟರಾಜ್ಯವನ್ನು ಪುನರುತ್ಥಾನಗೊಳಿಸಲು ಯತ್ನಿಸಿ ಈ ಮಾರಸಿಂಹನು ವಿಫಲನಾದನು. ಪ್ರಾಯಶಃ ಈತನು ಅದೇ ವರುಷ ಮಡಿದನಾದ ಕಾರಣ ಪಾಂಚಾಳನೆಂಬವನು ಈತನ ತರುವಾಯ ಪಟ್ಟಕ್ಕೆ ಬಂದು ಮೂಡಲ-ಪಡುವಲ-ತೆಂಕಲ ಸಮುದ್ರಗಳಿಂದಾವೃತವಾದ ಇಡಿಯ ದೇಶವನ್ನು ಕ್ರಿ. ಶ. 974-975ರಲ್ಲಿ ಆಳುತ್ತಿದ್ದನೆಂದು ಮುಳಗುಂದದ ಶಾಸನದಿಂದ ತಿಳಿದುಬರುತ್ತದೆ[35]. ಈ ಪಾಂಚಾಳದೇವನು ಮಾರಸಿಂಹನ ಮರಣ ಮತ್ತು ರಾಷ್ಟ್ರಕೂಟರ ಪರಾಜಯಗಳ ತರುವಾಯದಲ್ಲುಂಟಾದ ಗೊಂದಲದ ಪರಿಸ್ಥಿತಿಯ ದುರ್ಲಾಭ ಪಡೆದು ಸ್ವತಂತ್ರ ರಾಜನಾಗಲು ಯತ್ನಿಸಿದನು. ಇಮ್ಮಡಿ ತೈಲನು ಇವನನ್ನೆದುರಿಸಿ ಯುದ್ಧದಲ್ಲಿ ಕೊಂದು ಹಾಕಿದನು. ಕನ್ನಡ ಕವಿ ರನ್ನನು ಈ ಸಂಗತಿಯನ್ನು ಉಲ್ಲೇಖಿಸುತ್ತಾನೆ[36].

ಇಮ್ಮಡಿ ತೈಲನು 24 ವರುಷಕಾಲ (ಕ್ರಿ.ಶ. 973 ರಿಂದ 997ರ ವರೆಗೆ) ರಾಜ್ಯವಾಳಿದ. ಬಳಿಕ ಕ್ರಿ.ಶ. 997ರ ಕೊನೆಯ ಸುಮಾರಿಗೆ ಈತನ ಹಿರಿಯ ಮಗ ಸತ್ಯಾಶ್ರಯನು ಪಟ್ಟಕ್ಕೆ ಅಧಿಕಾರಿಯಾದ. ಸತ್ಯಾಶ್ರಯನು ಕ್ರಿ.ಶ. 997 ರಿಂದ 1008ರ ವರೆಗೆ ರಾಜ್ಯವಾಳಿದ. ಇವನು ಸತ್ತಿಗ ಮತ್ತು ಸತ್ತಿಮ ಎಂದೂ ಕರೆಯಲ್ಪಡುತ್ತಿದ್ದ[37]. ಈತನಿಗೆ 'ಅಕಲಂಕ ಚರಿತ' ಮತ್ತು 'ಇರಿವ ಬೆಡಂಗ' ಎಂಬ ಬಿರುದುಗಳಿದ್ದವು. ಇಮ್ಮಡಿ ತೈಲನಾಳುತ್ತಿದ್ದ ಎಲ್ಲ ಪ್ರದೇಶಗಳೂ ಈತನ ವಶಕ್ಕೆ ಬಂದವು. ಇವನ ಮಹಾಸಾಮಂತ ಸೋಭನರಸನು ಕ್ರಿ.ಶ. 1002ರಲ್ಲಿ ಬೆಳವೊಲ 300, ಪುಲಿಗೆರೆ 200, ಕುಂದೂರು 500 ಮತ್ತು ಕುಕ್ಕನೂರು 30—ಈ ನಾಡುಗಳನ್ನು ಆಳುತ್ತಿದ್ದ[38]. ಇವನ ಮಾಂಡಳಿಕನಾಗಿದ್ದ ಮಹಾಸಾಮಂತ ಭೀಮರಾಜನು 'ತೈಲಪನ ಅಂಕಕಾರ' ನೆಂದೂ ಪ್ರಖ್ಯಾತನಾಗಿ ಇಮ್ಮಡಿ ತೈಲನ ಆಳಿಕೆಯಲ್ಲಿ ಆಳುತ್ತಿದ್ದ ಬನವಾಸಿ, ಸಾಂತಲಿಗೆ, ಮತ್ತು ಕಿಸುಕಾಡು—ಈ ಸಕಲ ಪ್ರದೇಶಗಳನ್ನು ಕ್ರಿ.ಶ. 1005-6 ರಲ್ಲಿ ಇನ್ನೂ ಆಳುತ್ತಿದ್ದನು[39]. ದಕ್ಷಿಣ ಶಾಖೆಯ ಶಿಲಾಹಾರ ರಾಜ ಮಾಂಡಳಿಕ ರಟ್ಟರಾಜನು ಕೊಂಕಣ ಪ್ರದೇಶವನ್ನು ಆಳುತ್ತಿದ್ದು ಇವನ ಅಂಕೆಗೊಳಪಟ್ಟಿದ್ದ[40]. ಇಮ್ಮಡಿ ತೈಲನ ಮಾಂಡಳಿಕನೆನಿಸಿದ್ದರೂ ಸೇವುಣದೇಶವನ್ನಾಳುತ್ತಿದ್ದ ಇಮ್ಮಡಿ ಭಿಲ್ಲಮನ ಕ್ರಿ. ಶ, 1000ದ ಸಂಗಮನೇರದ[41] ತಾಮ್ರಶಾಸನದಲ್ಲಿ ಸತ್ಯಾಶ್ರಯ ಸಾರ್ವಭೌಮನ ಹೆಸರು ಉಲ್ಲೇಖಿಸಲ್ಪಟ್ಟಿಲ್ಲ. ಸತ್ಯಾಶ್ರಯನು ರಾಜರಾಜ ರಾಜಕೇಸರಿ ವರ್ಮನೆಂಬ[42] ಚೋಳರಾಜನೊಂದಿಗೆ ಯುದ್ಧವೆಸಗಿ ರಾಜೇಂದ್ರಚೋಳನನ್ನು ಪರಾಜಯಗೊಳಿಸಿದನು[43].

ಬಹುಶಃ ಈ ಯುದ್ಧವು ಕ್ರಿ.ಶ. 1007–8ರಲ್ಲಿ ತಾವರೆಯ ಘಟ್ಟದಲ್ಲಿ ಸಂಭವಿಸಿರಬೇಕು. ಯಶೋವರ್ಮನೆಂದೂ ಹೆಸರುಗೊಂಡ ಇವನ ತಮ್ಮ ದಶವರ್ಮನು ಭಾಗ್ಯವತಿ ಇಲ್ಲವೇ ಭಾಗಲಾದೇವಿಯನ್ನು ಮದುವೆಯಾಗಿದ್ದ. ಈತನು ಪಟ್ಟವೇರಲಿಲ್ಲವೆಂದು ತೋರುತ್ತದೆ. ಈತನಿಗೆ ವಿಕ್ರಮಾದಿತ್ಯ, ಇಮ್ಮಡಿ ಅಯ್ಯಣ, ಅಕ್ಕಾದೇವಿ ಮತ್ತು ಇಮ್ಮಡಿ ಜಯಸಿಂಹ ಎಂಬ ನಾಲ್ವರು ಮಕ್ಕಳಿದ್ದರು.

ದಶವರ್ಮನ ಹಿರಿಯ ಮಗ 5ನೆಯ ವಿಕ್ರಮಾದಿತ್ಯನು ಕ್ರಿ.ಶ. 1009ರಲ್ಲಿ ಸತ್ಯಾಶ್ರಯನ ತರುವಾಯ ಪಟ್ಟಕ್ಕೆ ಬಂದ. ಕೆಲವು ವೇಳೆ ಈತನನ್ನು ಬರಿ ವಿಕ್ರಮನೆಂದೂ ಕರೆಯಲಾಗುತ್ತಿದೆ. ಇವನಿಗೆ 'ತ್ರಿಭುವನಮಲ್ಲ'ನೆಂಬ ಬಿರುದೂ ಇತ್ತು. ಇವನಾಳಿಕೆಯ ಶಾಸನಗಳಿವು: 1) ಮಿರಜ ತಾಲೂಕಿನ ಕೌಠೇಮ್ ತಾಮ್ರ ಶಾಸನ[43]; 2) ಸೂಡಿಯ ಶಾಸನ[44]; 3) ಧಾರವಾಡ ಜಿಲ್ಲೆಯ ಆಲೂರ ಶಾಸನ;[45] 4) ಗಳಗನಾಥದ ಶಾಸನ[46]. 'ಘಟೆಯ ಅಂಕಕಾರ' ನೆಂದು ಪ್ರಸಿದ್ಧನಾಗಿದ್ದ ಪಲ್ಲವಶಾಖೆಯ ಇರಿವ ನೊಳಂಬಾಧಿರಾಜನೆಂಬ ಮಾಂಡಳಿಕ ರಾಜನು ಇರಿವಬೆಡಂಗ ಸತ್ಯಾಶ್ರಯನ ಒಬ್ಬ ಮಗಳನ್ನು ಮದುವೆಯಾಗಿದ್ದು, ನೊಳಂಬವಾಡಿ 30,000, ಕೆಂಗಲಿ 500, ಬಳ್ಳಕುಂದೆ 300, ಕುಕ್ಕನೂರು 30 ಮತ್ತು ಮಾಸವಾಡಿ ದೇಶದ ಐದು ನಗರಗಳ ಅಧಿಪತಿಯಾಗಿದ್ದ. ಕ್ರಿ.ಶ. 1009 ರಿಂದ 1011ರ ವರೆಗೆ ಇವನು ಆಳುತ್ತಿದ್ದನೆಂಬ ಬಗೆಗೆ ಶಾಸನಾಧಾರಗಳಿವೆ.[47].

ಈ ವಂಶಾವಳಿಯಲ್ಲಿ ಅನಂತರದಲ್ಲಿ ಬರುವ ಹೆಸರು 5ನೆಯ ವಿಕ್ರಮಾದಿತ್ಯನ ತಮ್ಮ ಅಯ್ಯಣನದು. ಈತನಾಳಿಕೆ ಅಲ್ಪ ಕಾಲದ್ದಿದ್ದು ಇದರ ಬಗೆಗೆ ಶಾಸನಗಳು ಉಪಲಬ್ಧವಿಲ್ಲ.

ವಿಕ್ರಮಾದಿತ್ಯನ ತಂಗಿಯೂ ಇಮ್ಮಡಿ ಜಯಸಿಂಹನ ಅಕ್ಕನೂ ಆಗಿದ್ದ ಅಕ್ಕಾದೇವಿ ಅಯ್ಯಣನ ತರುವಾಯದಲ್ಲಿ ರಾಜ್ಯವಾಳುತ್ತಿದ್ದಳೆಂದು ಅನೇಕ ಶಾಸನಗಳು ಉಲ್ಲೇಖಿಸಿವೆ. ಈಕೆ ಬಹು ಪ್ರಖ್ಯಾತ ವ್ಯಕ್ತಿಯಾಗಿದ್ದಳೆಂದು ಕಂಡುಬರುವುದರಿಂದ ಈಕೆಯ ಬಗೆಗೆ ವಿವರಗಳನ್ನು ತಿಳಿದುಕೊಳ್ಳುವುದುಚಿತ. ಈಕೆ 'ಗುಣದ ಬೆಡಂಗಿ', 'ಏಕವಾಕ್ಯೆ', 'ರಣಭೈರವದೇವಿ' – ಇತ್ಯಾದಿ ಬಿರುದಾಂಕಿತಳಾಗಿದ್ದಳು. ಈಕೆ ಕ್ರಿ.ಶ. – 1021 ರಲ್ಲಿ ಕಿಸುಕಾಡು 20ನ್ನು ಆಳುತ್ತಿದ್ದಳು. ಕ್ರಿ.ಶ. 1047ರ ಶಾಸನವೊಂದರಲ್ಲಿ ಗೋಕಾಗೆಯೆಂಬ ಕೋಟೆಗೆ ಈಕೆ ಮುತ್ತಿಗೆ ಹಾಕಿದ್ದಳೆಂದು ಬಣ್ಣಿಸಲಾಗಿದೆ[48]. ಬಹುಶಃ ಆ ಕಾಲದ ಒಂದು ದಂಗೆಯನ್ನು ಅಡಗಿಸುವುದು ಈ ಮುತ್ತಿಗೆಯ ಉದ್ದೇಶವಿರಬೇಕು. ಕ್ರಿ.ಶ. 1050ರಲ್ಲಿ ಕಿಸುಕಾಡು 70 ತೊರಗೆರೆ 6, ಮಾಸವಾಡಿ 140 ಪ್ರದೇಶಗಳನ್ನು ಈಕೆ ಆಳುತ್ತಿದ್ದಳು[49]. ಕಿಸುಕಾಡು 70ನ್ನು ಈಕೆ ಆಳುತ್ತಿದ್ದ ಬಗೆಗೆ ಕ್ರಿ.ಶ. 1053ರ ಶಾಸನವೊಂದರಲ್ಲಿ ಉಲ್ಲೇಖ ಬಂದಿದೆ. ಹುನಗುಂದ ತಾಲೂಕಿನ ಅರಸೀಬೀದಿಯೆಂದು ಗುರುತಿಸಲಾಗಿರುವ ವಿಕ್ರಮಪುರ ಈಕೆಯ ರಾಜಧಾನಿಯಾಗಿತ್ತೆಂದು ತೋರುತ್ತದೆ[50]. ಕ್ರಿ.ಶ. 1066ರಲ್ಲಿ ಬನವಾಸಿ 12,000 ಮತ್ತು ಪಾನುಂಗಲ್ಲು 500 ಇವುಗಳನ್ನಾಳುತ್ತಿದ್ದ ಮಹಾಮಂಡಳೇಶ್ವರ ಕದಂಬ ತೋಯಿಮದೇವನು ಈಕೆಯ ಮಗನೆಂದು ಬಣ್ಣಿಸಲಾಗಿದೆ[51]. ಆ ಕಾರಣ ಈಕೆಯ ಪತಿ ಹಾನುಗಲ್ಲ ಕದಂಬ ವಂಶದವನೆಂದು ಹೇಳಬಹುದಾಗಿದೆ.

5ನೆಯ ವಿಕ್ರಮಾದಿತ್ಯನ ತರುವಾಯ ಆತನ ತಮ್ಮ ಇಮ್ಮಡಿ ಜಯಸಿಂಹ ಕ್ರಿ.ಶ. 1018ರಲ್ಲಿ ಪಟ್ಟಕ್ಕೆ ಬಂದ. ಈತನು 'ಜಗದೇಕಮಲ್ಲ' ನೆಂದು ಪ್ರಸಿದ್ಧನಾಗಿದ್ದ. ಈತನ ಹೆಂಡತಿ ಸುಗ್ಗಲಾದೇವಿ. ಈಕೆ ವೀರಶೈವ ಶರಣ ದೇವರ ದಾಸಿಮಯ್ಯನ ಭಕ್ತೆಯಾಗಿದ್ದಳು – 'ದೇವರ ದಾಸಿಮಯ್ಯ ಪುರಾಣ' ದಲ್ಲಿ ದೇವರ ದಾಸಿಮಯ್ಯನು ಇಮ್ಮಡಿ ಜಯಸಿಂಹನನ್ನು ಲಿಂಗಾಯತ ಮತಕ್ಕೆ ಮತಾಂತರಗೊಳಿಸಿದನೆಂದೂ ಉಕ್ತವಾಗಿದೆ[52]. ಜಯಸಿಂಹನಿಗೆ ಹಮ್ಮಾ ಇಲ್ಲವೆ ಅವ್ವಲದೇವಿಯೆಂಬ ಮಗಳಿದ್ದಳು.

ಸೇವುಣ ದೇಶದರಸು ಮುಮ್ಮಡಿ ಭಿಲ್ಲಮನನ್ನು ಈಕೆ ಮದುವೆಯಾಗಿದ್ದಳು[52a]. ಜಯಸಿಂಹನಾಳಿಕೆಯ ಹಲವಾರು ಶಿಲಾಶಾಸನಗಳು ತಾಮ್ರ ಪಟಗಳು ಉಪಲಬ್ಧವಿದ್ದು ಅವು ಕ್ರಿ.ಶ. ಏಪ್ರಿಲ್–ಮೇ 1018ರಿಂದ ಅಕ್ಟೋಬರ್–ನವಂಬರ್ 1042ರ ವರೆಗಿನವುಗಳಾಗಿವೆ. ವಾಕ್ಪತಿ ಮುಂಜನ ತಮ್ಮನ ಮಗ ಧಾರಾರಾಜ್ಯದ ಪರಮಾರ ಭೋಜರಾಜನ ವೈಭವವನ್ನೆಲ್ಲ ಈತನು ಹರಣ ಮಾಡಿದ್ದನೆಂದು ಬಣ್ಣಿಸಲಾಗಿದೆ[53]. ಈತನು ಚೋಳ ಮತ್ತು ಚೇರರನ್ನು ಗೆದ್ದು, ಮಾಳವರ ಸಕಲ ಪಡೆಗಳ ಮೋಸಕೂಟ (confederacy) ಗಳನ್ನು ಪಲಾಯನಗೊಳಿಸಿದ[54]. ಇವನು ಪಂಚದ್ರಾವಿಡರ ದೊರೆಯಾಗಿದ್ದ ಪ್ರಬಲ ಚೋಳರಾಜನನ್ನು ಸೋಲಿಸಿ, ಏಳು ಕೊಂಕಣಗಳ ಅಧಿಪತಿಯ ಸಕಲ ಸಂಪತ್ತನ್ನು ವಶಪಡಿಸಿಕೊಂಡನೆಂದು ಕ್ರಿ.ಶ. 1024ರ ಮಿರಜದ ಪತ್ರಿ ಶಾಸನವು ಹೇಳುತ್ತಿದೆ[55]. ಜಯಸಿಂಹನು ಯುದ್ಧದಲ್ಲಿ ಗೆದ್ದ ಚೋಳ ರಾಜನು ಮಧುರಾಂತಕ ಮತ್ತು ಪರಾಕೇಸರಿವರ್ಮನೆಂದು ಕರೆಯಲ್ಪಡುತ್ತಿದ್ದ ರಾಜೇಂದ್ರ ಚೋಳದೇವನು. ಈತನ ಶಿಲಾಶಾಸನಗಳಿಂದ ಈತನು ಚಾಲುಕ್ಯರ ಪ್ರದೇಶದೊಳಗೆ ಬನವಾಸಿಯ ವರೆಗೆ ನುಗ್ಗಿ ಇಡೈತುರೈಯನ್ನು ಗೆದ್ದು ರಟ್ಟಪಾಡಿಯನ್ನು ಕೈವಶಪಡಿಸಿಕೊಂಡನೆಂದು ತಿಳಿದುಬರುತ್ತಿದೆ[56]. ಜಯಸಿಂಹನ ಪ್ರಮುಖ ಮಂಡಳೇಶ್ವರರು ಮತ್ತು ಅಧಿಕಾರಿಗಳು ಇವರು: (1) ಗೋವೆಯ ಕದಂಬ ವಂಶದ ಚಟ್ಟಯ್ಯ ಅಥವಾ ಚಟ ಲದೇವ; (2) ಕ್ರಿ.ಶ.1019ರಲ್ಲಿ ಬನವಾಸಿ 12,000, ಸಾಂತಲಿಗೆ 1,000 ಮತ್ತು ಹವ್ಯೆ 500 ಇವುಗಳನ್ನಾಳುತ್ತಿದ್ದ ಮಹಾಮಂಡಳೇಶ್ವರ ಕುಂದಮರಸ; ಈತನು 'ಸತ್ತಿಗನ ಚಟ್ಟ'ನೆಂದೂ ಇರಿವ ಬೆಡಂಗದೇವನ ಮಗನೆಂದೂ ಕರೆಯಲ್ಪಡುತ್ತಿದ್ದ; (3) ಸಿಂಧಿನಗರ ಇಲ್ಲವೆ ನಾಸಿಕ ಜಿಲ್ಲೆಯ ಸಿನ್ನೇರದಿಂದ ತನ್ನ ಆನುವಂಶಿಕ ಪ್ರದೇಶವನ್ನಾಳುತ್ತಿದ್ದ ಸೇವುಣವಂಶದ ಯಾದವರ ಮಹಾಸಾಮಂತ ಮುಮ್ಮಡಿ ಭಿಲ್ಲಮ; (4) ಕ್ರಿ.ಶ. 1034ರಲ್ಲಿ ಪಾನುಂಗಲ್ 500 ನ್ನಾಳುತ್ತಿದ್ದ ಹಾನುಗಲ್ಲ ಕದಂಬರಾಜ ಮನೆತನದ ಮಹಾ ಮಂಡಳೇಶ್ವರ ಇಮ್ಮಡಿ ಮಯೂರವರ್ಮ; (5) ಕ್ರಿ. ಶ. 1037 ರಲ್ಲಿ ಬನವಾಸಿ 12,000 ಮತ್ತು ಪಾನುಂಗಲ್ 500 ನ್ನಾಳುತ್ತಿದ್ದ ಮಹಾಮಂಡಳೇಶ್ವರ ತೋಯಿಮದೇವ, ಈತ ಅಕ್ಕಾದೇವಿಯ ಮಗ. ಈತನ ಸ್ಥಾಯಿ ರಾಜಧಾನಿಯ ಉಲ್ಲೇಖವಿಲ್ಲದಿದ್ದರೂ ಬಳಗಾಂವೆ, ಪೊಟ್ಟಲಕೆರೆ ಮತ್ತು ಕೊಲ್ಲಿಪಾಕೆ ಇವು ಈತನ 'ನೆಲೆವೀಡು' ಗಳೆಂದು ಉಕ್ತವಾಗಿವೆ.

ಕ್ರಿ. ಶ. 1042ರಲ್ಲಿ ಇಮ್ಮಡಿ ಜಯಸಿಂಹನ ತರುವಾಯ ಆತನ ಮಗ ಮೊದಲನೆಯ ಸೋಮೇಶ್ವರ ಪಟ್ಟಕ್ಕೆ ಬಂದ. ಈತನಿಗೆ 'ತ್ರೈಲೋಕ್ಯಮಲ್ಲ' ಮತ್ತು 'ಆಹವಮಲ್ಲ' ಎಂಬ ಬಿರುದುಗಳಿದ್ದವು. ಇವನಾಳಿಕೆಯ ಶಾಸನಗಳಲ್ಲಿ ಇವನ ನಾಲ್ವರು ಹೆಂಡಿರ ಹೆಸರುಗಳು ಉಲ್ಲೇಖಗೊಂಡಿವೆ. :—ಇಮ್ಮಡಿ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ ಮತ್ತು ಮುಮ್ಮಡಿ ಜಯಸಿಂಹ ಇವರ ತಾಯಿಯಾದ ಬಾಚಲದೇವಿ ಇವನ ಮೊದಲ ಹೆಂಡತಿ ಇರಬೇಕು[57]. ಅದೇ ಸ್ಥಳದ ಕ್ರಿ.ಶ. 1098ರ ಇನ್ನೊಂದು ಶಾಸನವು ಸೋಮೇಶ್ವರ ಮತ್ತು ವಿಕ್ರಮಾದಿತ್ಯರು ಬಾಚಲದೇವಿಯ ಮಕ್ಕಳೆಂದು ಉಲ್ಲೇಖಿಸಿದೆ[58]. ಚಂದಲಾದೇವಿ ಇಲ್ಲವೆ ಚಂದ್ರಿಕಾದೇವಿ ಎಂಬವಳು 'ಪಿರಿಯರಸಿ' ಎಂದು ಕರೆಯಲ್ಪಟ್ಟಿದ್ದಾಳೆ[59]. ಮೈಳಾಲದೇವಿಯೆಂಬವಳನ್ನೂ 'ಪಿರಿಯರಸಿ'ಯೆಂದು ಕರೆಯಲಾಗಿದೆ[60]. ನಾಲ್ಕನೆಯವಳು ಕೇತಲದೇವಿ[61].

ಈತನಾಳಿಕೆಯ ಹಲವಾರು ಶಾಸನಗಳು ಶಾ.ಶ. 966[62] (ಕ್ರಿ.ಶ. 1044 ಅಕ್ಟೋಬರ್–ನವಂಬರ್) ರಿಂದ ಶಾ.ಶ. 990 (ಕ್ರಿ.ಶ. 1068 ಮಾರ್ಚ್–ಏಪ್ರಿಲ್)ರ ವರೆಗಿನವು ಉಪಲಬ್ಧವಿವೆ. ಇವನ ಪ್ರಮುಖ ಮಾಂಡಳಿಕ ಹಾಗೂ ಅಧಿಕಾರಿವರ್ಗದವರು ಇವರು :—1) ಕ್ರಿ.ಶ. 1034 ಮತ್ತು 1044ರಲ್ಲಿ ಪಾನುಂಗಲ್ 500ಗಳನ್ನಾಳುತ್ತಿದ್ದ ಹಾನುಗಲ್ಲ ಕದಂಬವಂಶದ ಮಹಾಮಂಡಳೇಶ್ವರ ಇಮ್ಮಡಿ ಮಯೂರವರ್ಮ; 2) ಕ್ರಿ.ಶ. 1045ರಲ್ಲಿ ಕಿಸುಕಾಡು 70, ಬನವಾಸಿ 12 000 ಮತ್ತು ಸಾಂತಳಿಗೆ 1000ಗಳನ್ನಾಳುತ್ತಿದ್ದ ಮಹಾಮಂಡಳೇಶ್ವರ ಸಿಂಗಣದೇವರಸ; 3) ಕ್ರಿ.ಶ. 1045 ಮತ್ತು 1062ರಲ್ಲಿ ಬನವಾಸಿ 12000ವನ್ನು

ಬಳ್ಳಿಗಾವೆಯಿಂದ ಆಳುತ್ತಿದ್ದ ಮಹಾಮಂಡಳೇಶ್ವರ ಚಾವುಂಡರಾಯ ; 4) ಕ್ರಿ.ಶ. 1045ರಲ್ಲಿ ಕೊಂಕಣದ ಕೆಲ ಭಾಗ, ತಲಕಾಡು ಮತ್ತು ಶಾವಿಮಲೆಗಳನ್ನು ಆಳುತ್ತಿದ್ದ ಹೊಯ್ಸಳ ಮಹಾಮಂಡಳೇಶ್ವರ ವಿನಯಾದಿತ್ಯ ; 5) ಕ್ರಿ.ಶ. 1052–53ರಲ್ಲಿ ಕೊಂಕಣದಲ್ಲಿ ತನ್ನ ಆನುವಂಶಿಕ ಪ್ರದೇಶವನ್ನು ಆಳುತ್ತಿದ್ದ ಗೋವೆಯ ಕದಂಬವಂಶದ ಮೊದಲನೆಯ ಜಯಕೇಶಿ[63].

ಸೋಮೇಶ್ವರನು ತನ್ನ ಕುಟುಂಬದ ಸದಸ್ಯರನ್ನು ತನ್ನ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ರಾಜ್ಯಪಾಲರನ್ನಾಗಿ ಮತ್ತು ಇತರ ಅಧಿಕಾರಿಗಳನ್ನಾಗಿ ನೇಮಿಸಿ, ರಾಜ್ಯಾಡಳಿತದಲ್ಲಿ ಅವರ ಸಂಬಂಧ ಉಂಟಾಗುವಂತೆ ಏರ್ಪಾಡುಮಾಡಿದನು. ಈತನ ಹೆಂಡತಿ ಮೈಳಾಲದೇವಿ ಬನವಾಸಿ 12,000ವನ್ನಾಳುತ್ತಿದ್ದಳೆಂದು ಕ್ರಿ. ಶ. 1053–54ರ ತಿಳವಲ್ಲಿಯ ಶಾಸನವೊಂದರಲ್ಲಿ ಉಕ್ತವಾಗಿದೆ. ಈತನ ಇನ್ನೊಬ್ಬ ಹೆಂಡತಿ ಕೇತಲದೇವಿ ಕ್ರಿ.ಶ. 1054ರಲ್ಲಿ 'ತ್ರಿಭೋಗಾಭ್ಯಂತರಸಿದ್ಧಿ'ಯ ಪ್ರಕಾರ ಪೊನ್ನವಾಡ ಅಗ್ರಹಾರವನ್ನು ಆಳುತ್ತಿದ್ದಳು[64]. ಇವನ ಹಿರಿಯ ಮಗ ಇಮ್ಮಡಿ ಸೋಮೇಶ್ವರನು ಕ್ರಿ.ಶ. 1050ರಲ್ಲಿ ಬೆಳವೊಲ 3000 ಮತ್ತು ಪುರಿಗೆರೆ 300ಗಳನ್ನಾಳುತ್ತಿದ್ದ. ಇವನ ಎರಡನೆಯ ಮಗ 6ನೆಯ ವಿಕ್ರಮಾದಿತ್ಯ ಕ್ರಿ.ಶ. 1055–56ರಲ್ಲಿ ಗಂಗವಾಡಿ 96,000 ಮತ್ತು ಬನವಾಸಿ 12,000ಗಳ ಒಡೆಯನಾಗಿದ್ದ. ಹಾನುಗಲ್ಲ ಕದಂಬವಂಶದ ಹರಿಕೇಸರಿ ಬನವಾಸಿಯ ರಾಜ್ಯಪಾಲನಾಗಿದ್ದು ವಿಕ್ರಮನ ಕೈಕೆಳಗಿನ ಅಧಿಕಾರಿಯಾಗಿದ್ದ[66]. ಇವನ ಮೂರನೆಯ ಮಗ ಮುಮ್ಮಡಿ ಜಯಸಿಂಹನು ಕ್ರಿ.ಶ. 1064ರಲ್ಲಿ ತರ್ದವಾಡಿ 1000ವನ್ನಾಳುತ್ತಿದ್ದ[67]. ಇವನ ನಾಲ್ಕನೆಯ ಮಗ ವಿಷ್ಣುವರ್ಧನ ವಿಜಯಾದಿತ್ಯನು ಕ್ರಿ.ಶ. 1064ರಲ್ಲಿ ನೊಳಂಬವಾಡಿ 32,000ವನ್ನಾಳುತ್ತಿದ್ದ. ಇವನು ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಬಿಲ್ಹಣನ 'ವಿಕ್ರಮಾಂಕದೇವಚರಿತ'ವೂ ಕೆಂಭಾವಿಯ ಒಂದು ಶಾಸನವೂ ಇದನ್ನು ಸ್ಥಿರಪಡಿಸುತ್ತವೆ[69].

ಈತನಾಳಿಕೆಯಲ್ಲಿ ಚೋಳರೊಂದಿಗೆ ನಡೆದ ಯುದ್ಧವು ಹಾಗೆಯೇ ಮುಂದುವರಿಯಿತು. ಕೊಪ್ಪದಲ್ಲಿ ನಡೆದ ಯುದ್ಧ (ಕ್ರಿ.ಶ. 1053–4)ದಲ್ಲಿ ಚೋಳರು ಮೊದಲನೆ ಸೋಮೇಶ್ವರನನ್ನು ಸೋಲಿಸಿದರೆಂದು ಚೋಳರ ಶಾಸನಗಳು ಉಲ್ಲೇಖಿಸುತ್ತವೆ. ಧಾರವಾಡ ಜಿಲ್ಲೆಯ ಅಣ್ಣಿಗೆರೆಯ ಶಾಸನದ ಪ್ರಕಾರ (ಕ್ರಿ.ಶ. 1071) ಮೊದಲನೆಯ ಸೋಮೇಶ್ವರನು ಚೋಳರಾಜನನ್ನು ಯುದ್ಧದಲ್ಲಿ ಕೊಂದನೆಂದು ತಿಳಿದುಬರುತ್ತದೆ. ಧಾರವಾಡ ಜಿಲ್ಲೆಯ ಸೂಡಿಯ ಇನ್ನೊಂದು ಶಾಸನವು (ಕ್ರಿ.ಶ. 1061) ಮೊದಲನೆಯ ಸೋಮೇಶ್ವರನು ದಕ್ಷಿಣ ದಿಗ್ವಿಜಯವನ್ನು ಸಾಧಿಸಿ ಚೋಳರನ್ನು ಗೆದ್ದು ಮರಳಿ ಬರುವಾಗ ದಾರಿಯಲ್ಲಿ ದತ್ತಿಯೊಂದನ್ನು ನೀಡಿದಂತೆ ಬಣ್ಣಿಸುತ್ತಿದೆ. ಬಿಲ್ಹಣನು ಈ ವಿಜಯವನ್ನು ತನ್ನ ಕಾವ್ಯದಲ್ಲಿ ವಿಶದವಾಗಿ ವಿವರಿಸುತ್ತಾನೆ[70]. ಮೊದಲನೆಯ ಸೋಮೇಶ್ವರನು ಚೋಳರಾಜ್ಯದಲ್ಲಿ ಕಾಂಚಿಯ ವರೆಗೆ ಒಳನುಗ್ಗಿ ಅಲ್ಲಿಯ ರಾಜನನ್ನು ಅಡವಿಪಾಲು ಮಾಡಿದನೆಂದು ಈ ಕವಿ ಬಣ್ಣಿಸುತ್ತಾನೆ. ಹಾಗೆಯೇ ಮೊದಲನೆಯ ಸೋಮೇಶ್ವರನು ಮಾಳವ ಪರಮಾರರಾಜನಾದ ಭೋಜನನ್ನು ಅವನ ರಾಜಧಾನಿ ಧಾರಾನಗರದಿಂದ ಓಡಿಸಿ, ಡಹಲದ ಕಲಚೂರಿಯರಸನಾದ ಕರ್ಣನ ಸಾಮರ್ಥ್ಯವನ್ನೆಲ್ಲ ಅಡಗಿಸಿದ್ದ. ತನ್ನ ಮೂವರು ಮಕ್ಕಳಲ್ಲಿ ಎರಡನೆಯ ಮಗ ಅಪ್ರತಿಮ ಸಾಹಸಿ ವಿಕ್ರಮಾದಿತ್ಯನನ್ನು ಯುವರಾಜನನ್ನಾಗಿ ಆಯ್ಕೆ ಮಾಡಿದ ಹಿರಿಯ ಮಗ ಸೋಮೇಶ್ವರನ ಹಕ್ಕನ್ನು ಅಲ್ಲಗಳೆದು, ತಂದೆ ತನಗೆ ಕೊಡಮಾಡಿದ ಪಟ್ಟಾಧಿಕಾರವನ್ನು ವಿಕ್ರಮಾದಿತ್ಯನು ಅದು ತನಗೆ ನ್ಯಾಯವಾಗಿ ಸಲ್ಲದೆಂದು ನಿರಾಕರಿಸಿದ. ಬಳಿಕ ಮೊದಲನೆಯ ಸೋಮೇಶ್ವರನು ತನ್ನ ಹಿರಿಯ ಮಗ ಇಮ್ಮಡಿ ಸೋಮೇಶ್ವರನನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ. ವಿಕ್ರಮಾದಿತ್ಯನು ಹಲವಾರು ದಾಳಿಗಳನ್ನೆಸಗಿ ವಿಷಮಜ್ವರದಿಂದ ಬಳಲುತ್ತಿದ್ದು ಯಾವ ಔಷಧೋಪಚಾರಕ್ಕೂ ಜ್ವರದ ಬಾಧೆ ಕುಗ್ಗಲಿಲ್ಲ. ಆಗ ಆತನು ತನ್ನ ಜೀವಿತವನ್ನು ಕೊನೆಗಾಣಿಸಲು ನಿಶ್ಚಯಿಸಿದ. ಆದುದರಿಂದ ಆತನು

ಧಾರವಾಡ ಜಿಲ್ಲೆಯ ತುಂಗಭದ್ರಾತೀರದ ಪವಿತ್ರಕ್ಷೇತ್ರವೆನಿಸಿದ್ದ ಕುರವತ್ತಿಗೆ ಹೊರಟು ಶೈವಧರ್ಮದ ಧರ್ಮದ ಶ್ರದ್ಧೆಗನುಸಾರವಾಗಿ ಆ ಪವಿತ್ರನದಿಯಲ್ಲಿ ಮುಳುಗಿ ಜಲಸಮಾಧಿಹೊಂದಿದ. ಈ ಘಟನೆ ನಡೆದದ್ದು ಕ್ರಿ. ಶ. 1069 ಜುಲೈ—ಅಗಸ್ಟ ತಿಂಗಳ ಮುನ್ನವೇ ಇರಬೇಕು.

ತಂದೆಯ ತರುವಾಯ ಇಮ್ಮಡಿ ಸೋಮೇಶ್ವರನು ಕ್ರಿ.ಶ. 1068ರಲ್ಲಿ ಪಟ್ಟಕ್ಕೆ ಬಂದು 'ಭುವನೈಕಮಲ್ಲ'ನೆಂದು ಬಿರುದಾಂಕಿತನಾದ. ಈತನಾಳಿಕೆಗೆ ಸಂಬಂಧಪಟ್ಟಂತೆ ಹಲವಾರು ಶಾಸನಗಳಿವೆ. ಅವು ಕ್ರಿ.ಶ. 1069ರ ಜುಲೈ–ಅಗಸ್ಟ್ ತಿಂಗಳಿಂದ 1036ರ ಅಗಸ್ಟ್–ಸಪ್ಟೆಂಬರ್ ವರೆಗಿನವಾಗಿವೆ. ಈತನು ಸುಮಾರು ಏಳು ವರುಷಕಾಲ ರಾಜ್ಯವಾಳಿದ. ಈತನಾಳಿಕೆ ಭ್ರಾತೃ ವರ್ಗದವರೊಂದಿಗೆ ನಡೆದ ಅಂತಃಕಲಹಗಳಿಂದ ತತ್ತರಿಸಿ ಹೋಗಿತ್ತು. ಈತನ ಮಾಂಡಳಿಕ ರಾಜರು ಹಾಗೂ ಅಧಿಕಾರಿವರ್ಗದವರಲ್ಲಿ ಮುಖ್ಯರಾದವರು ಇವರು: 1) ಕ್ರಿ.ಶ. 1069ರಲ್ಲಿ ಸೇವುಣ ದೇಶವನ್ನಾಳುತ್ತಿದ್ದ ಯಾದವ ವಂಶದ ಮಹಾಮಂಡಳೇಶ್ವರ ಇಮ್ಮಡಿ ಸೇವುಣಚಂದ್ರ; 2) ಕ್ರಿ.ಶ. 1071ರಲ್ಲಿ ಬೆಳವೊಲ 300 ಮತ್ತು ಪುರಿಗೆರೆ 300 ಗಳನ್ನಾಳುತ್ತಿದ್ದ ಮಹಾಮಂಡಳೇಶ್ವರ ಲಕ್ಷ್ಮರಸ. ಈತನು ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಚೋಳರಾಜನಿಂದ ಸುಡಿಸಲ್ಪಟ್ಟ ಜೈನಬಸದಿಗಳ ಜೀರ್ಣೋದ್ಧಾರ ಮಾಡಿದ; 3) ಕ್ರಿ.ಶ. 1071ರಲ್ಲಿ ಬಂಕಾಪುರದಲ್ಲಿದ್ದ ಮಹಾಮಂಡಳೇಶ್ವರ ಹಿರಿಯ ಸಂಧಿವಿಗ್ರಹಿ ಮನೆವೆರ್ಗಡೆ ಮತ್ತು ದಂಡನಾಯಕನೆನಿಸಿದ್ದ ಉದಯಾದಿತ್ಯ; 4) ಮಹಾಪ್ರಧಾನ ಹಿರಿಯ ಸಂಧಿವಿಗ್ರಹಿ, ಸೇನಾಧಿಪತಿ, ಕಡಿತವೆರ್ಗಡೆ ಮತ್ತು ದಂಡನಾಯಕನೆನಿಸಿದ್ದ ಬಲದೇವಯ್ಯ; 5) ಕ್ರಿ.ಶ. 1074ರಲ್ಲಿ ತರ್ದವಾಡಿ 1000ವನ್ನು ಆಳುತ್ತಿದ್ದ ಮಹಾಮಂಡಳಾಧಿಪತಿ ಮತ್ತು ದಂಡನಾಯಕನಾಗಿದ್ದ ನಾಕಿಮಯ್ಯ; 6) ಕ್ರಿ.ಶ. 1075ರಲ್ಲಿ ಬನವಾಸಿ 12,000, ಸಾಂತಲಿಗೆ 1000, ಮಂಡಲಿ 1000, ಮತ್ತು ಹದಿನೆಂಟು ಅಗ್ರಹಾರಗಳನ್ನಾಳುತ್ತಿದ್ದ ಗಂಗ ಪೆರ್ಮಾನಡಿ ಭುವನೈಕವೀರ ಉದಯಾದಿತ್ಯ; 7) ಸೌಂದತ್ತಿಯಲ್ಲಿ ಕುಂಡಿ 3,000 ವನ್ನಾಳುತ್ತಿದ್ದ ರಟ್ಟ ವಂಶದ ಮಹಾಮಂಡಳೇಶ್ವರ ಇಮ್ಮಡಿ ಕಾರ್ತವೀರ್ಯ.

ಈ ಅಧಿಕಾರಿಗಳಲ್ಲದೆ ಇವನ ತಮ್ಮಂದಿರಾಗಿದ್ದ ಜಯಸಿಂಹ ಮತ್ತು 6ನೆಯ ವಿಕ್ರಮಾದಿತ್ಯರು ಚಾಲುಕ್ಯ ಸಾಮ್ರಾಜ್ಯದ ಕೆಲಭಾಗಗಳನ್ನಾಳುತ್ತಿದ್ದರು. ಜಯಸಿಂಹನಿಗೆ ನೊಳಂಬವಾಡಿಯ ಆಡಳಿತಾಧಿಕಾರವನ್ನು ಒಪ್ಪಿಸಲಾಗಿದ್ದು ಇವನು ಕ್ರಿ.ಶ. 1,072ರಲ್ಲಿ ಆ ಪ್ರಾಂತ್ಯವನ್ನು ಗೌಡ ವಾಡಿಯಿಂದ ಆಳುತ್ತಿದ್ದ[71]. ಕ್ರಿ.ಶ. 1074ರಲ್ಲಿ ಬನವಾಸಿ 12,000 ನಾಡಿನ ಆಡಳಿತಾಧಿಕಾರವನ್ನು 6ನೆಯ ವಿಕ್ರಮಾದಿತ್ಯನಿಗೆ ವಹಿಸಿಕೊಟ್ಟಿದ್ದಂತೆ ತಿಳಿದುಬರುತ್ತಿದೆ[72]. ಇಮ್ಮಡಿ ಸೋಮೇಶ್ವರನು ಅಧಿಕಾರ ಲಾಲಸೆಯಿಂದ ಉನ್ಮತ್ತನಾಗಿ ಪ್ರಜಾಕಲ್ಯಾಣವನ್ನು ಕಡೆಗಣಿಸಿದ್ದನೆಂದು ಶಾಸನಗಳು ಉಲ್ಲೇಖಿಸುತ್ತಿವೆ[73]. ಈತನ ತಮ್ಮ ವಿಕ್ರಮಾದಿತ್ಯನು ಈತನನ್ನು ಯುದ್ಧದಲ್ಲಿ ಸೋಲಿಸಿ ಸಾರ್ವಭೌಮಾಧಿಕಾರವನ್ನು ವಹಿಸಿಕೊಂಡ[74]. ವಿಕ್ರಮಾಂಕದೇವ ಚರಿತದಲ್ಲಿ ಬಿಲ್ಹಣನು ಇದನ್ನು ಅನುಮೋದಿಸುತ್ತಾನೆ. ಇಮ್ಮಡಿ ಸೋಮೇಶ್ವರನ ಗತಿ ಏನಾಯಿತೆಂಬುದು ಮಾತ್ರ ತಿಳಿದುಬಂದಿಲ್ಲ. ಬಹುಶಃ ತನ್ನ ತಮ್ಮನ ಸೆರೆಯಾಳಾಗಿಯೇ ತನ್ನ ಜೀವಿತವನ್ನು ಕೊನೆಗಾಣಿಸಿರಬೇಕು.

ಇಮ್ಮಡಿ ಸೋಮೇಶ್ವರನ ಪರಾಜಯದ ತರುವಾಯ ಕ್ರಿ.ಶ. 1076ರಲ್ಲಿ 6ನೆಯ ವಿಕ್ರಮಾದಿತ್ಯನು ಕಲ್ಯಾಣನಗರದಲ್ಲಿ ಪಟ್ಟಾಭಿಷಿಕ್ತನಾದ. ಕ್ರಿ.ಶ. 1076ರ ಮಾರ್ಚ್ 9ನೆಯ ದಿನಾಂಕದಿಂದ ತನ್ನದೊಂದು ಶಕವನ್ನೇ ಪ್ರಾರಂಭಿಸಿದ[75]. ಬಿಲ್ಹಣನು 'ವಿಕ್ರಮಾಂಕದೇವ ಚರಿತ'ದಲ್ಲಿ ಈತನನ್ನು 'ಪರಮರ್ದಿ' ಎಂದು ಕರೆಯುತ್ತಾನೆ[76]. ಕ್ರಿ.ಶ. 1076ರಿಂದ 1126ರ ವರೆಗೆ ಸುಮಾರು 50 ವರುಷಕಾಲ ಈತನು ರಾಜ್ಯಭಾರ ಮಾಡಿದ. ಈ ರಾಜಮನೆತನದ ಅತ್ಯಂತ ಶ್ರೇಷ್ಠ ಚಕ್ರವರ್ತಿಯೀತ. ಈತನ ಆಸ್ಥಾನಕವಿ ಬಿಲ್ಹಣನು ವಿಕ್ರಮನ ವೈಭವಪೂರಿತ ಆಳಿಕೆಯನ್ನು ಬಣ್ಣಿಸಿದ್ದಾನೆ. ಈ ವೀರನನ್ನು ಬಣ್ಣಿಸುವಲ್ಲಿ ಕೆಲಮಟ್ಟಿಗೆ

ಕವಿಕಲ್ಪಿಕತೆಯ ಅತಿಶಯೋಕ್ತಿಯಿರಬಹುದು. ಆದರೂ ಇಲ್ಲಿ ಚಿತ್ರಿತವಾದ ಅರಸನ ಜೀವಿತದ ಅನೇಕ ಸಂಗತಿಗಳಿಗೆ ಶಾಸನಾಧಾರಗಳ ಸಮರ್ಥನೆಯಿದೆ. ಬಿಲ್ಹಣನ ಹೇಳಿಕೆಯಂತೆ ವಿಕ್ರಮನು ಮೊದಲನೆಯ ಸೋಮೇಶ್ವರನ ಪ್ರಿಯಪುತ್ರ ; ತನ್ನ ಹಿರಿಯ ಮಗನ ಸ್ಥಳದಲ್ಲಿ ಈತನನ್ನೇ ಯುವರಾಜನನ್ನಾಗಿ ನೇಮಕ ಮಾಡುವ ಇಚ್ಛೆ ಸೋಮೇಶ್ವರನಿಗಿತ್ತು. ತನ್ನ ತಂದೆಯ ಜೀವಿತಾವಧಿಯಲ್ಲಿ ವಿಕ್ರಮನು ಅನೇಕಾನೇಕ ದಾಳಿಗಳನ್ನೆಸಗಿ ಸುಪ್ರಸಿದ್ಧ ವೀರನೆನಿಸಿದ್ದ. ಈತನು ಚೋಳರನ್ನು ಮತ್ತೆ ಮತ್ತೆ ಸೋಲಿಸಿ ಕಾಂಚೀನಗರ ವನ್ನು ಸೂರೆಗೊಂಡಿದ್ದ. ಮಾಳವದ ರಾಜನಿಗೆ ನೆರವಿತ್ತು ಆತನು ತನ್ನ ರಾಜ್ಯವನ್ನು ಮರಳಿ ಪಡೆಯುವಂತೆ ಮಾಡಿದ್ದ. ಕಲಚೂರಿಯರಸರನ್ನು ಸದೆಬಡಿದು ತನ್ನ ಆಕ್ರಮಣವನ್ನು ಬಂಗಾಲ–ಆಸ್ಸಾಮ ಗಳ ವರೆಗೆ ವಿಸ್ತರಿಸಿದ್ದ. ದಕ್ಷಿಣಾಪಥವನ್ನೆಲ್ಲ ಆಕ್ರಮಣಮಾಡಿ, ಕೇರಳದರಸನನ್ನು ಸೋಲಿಸಿದ್ದ. ದಿಗ್ವಿಜಯಯಾತ್ರೆಯನ್ನು ಮುಗಿಸಿ ಮರಳಿ ಬರುವಾಗ ದಾರಿಯಲ್ಲಿ ಕೃಷ್ಣೆಯ ತೀರದಲ್ಲಿ ಬೀಡುಬಿಟ್ಟಿದ್ದಾಗ ತನ್ನ ತಂದೆಯ ದುರಂತ ಮರಣದ ದುಃಖವಾರ್ತೆಯನ್ನು ಕೇಳಿದ. ಬಳಿಕ ಈತನು ತನ್ನ ತಂದೆಯ ತರುವಾಯ ಪಟ್ಟಕ್ಕೆ ಬಂದ ಇಮ್ಮಡಿ ಸೋಮೇಶ್ವರನನ್ನು ಸಮಾಧಾನ ಪಡಿಸಲು ಕಲ್ಯಾಣನಗರಕ್ಕೆ ಧಾವಿಸಿದ. ಆ ತರುವಾಯ ಕೆಲಕಾಲ ಅವರಿಬ್ಬರೂ ಪರಸ್ಪರ ಸ್ನೇಹ-ಸೌಹಾರ್ದಗಳಿಂದಲೇ ಕೂಡಿ ಬಾಳಿದ್ದರು. ವಿಕ್ರಮನ ಪ್ರಭಾವ ಮತ್ತು ಪರಾಕ್ರಮಗಳು ಅತ್ಯಂತ ಮಹಿಮಾನ್ವಿತವಾದುದರಿಂದ ಇವನ ಸ್ವಂತ ಅಣ್ಣ ಸೋಮೇಶ್ವರನಲ್ಲೂ ಅವು ಮತ್ಸರಬುದ್ಧಿಯನ್ನು ಪ್ರೇರಿಸಿದ್ದವು. ತಂದೆಯ ಜೀವಿತಾವಧಿಯಲ್ಲಿ ಎಂದರೆ ಕ್ರಿ.ಶ. 1055–56ರಲ್ಲಿ ವಿಕ್ರಮಾದಿತ್ಯನು ಗಂಗವಾಡಿ 96,000 ಮತ್ತು ಬನವಾಸಿ 12,000ಗಳ ಆಡಳಿತವನ್ನು ಹಾನುಗಲ್ಲ ಕದಂಬವಂಶದ ಹರಿಕೇಸರಿಯೆಂಬ ಮಂಡಳೇಶ್ವರನೊಂದಿಗೆ ನಿರ್ವಹಿಸಿದ್ದನು. ಈ ಪ್ರದೇಶವನ್ನು ಇಮ್ಮಡಿ ಸೋಮೇಶ್ವರನು ವಿಕ್ರಮನಿಂದ ಕಿತ್ತುಕೊಂಡು, ತನ್ನ ತಂದೆಯ ಕಾಲದಿಂದಲೇ ರಾಜಕುಟುಂಬದ ಸದಸ್ಯರೊಂದಿಗೆ ಬಹುಮಟ್ಟಿಗೆ ಸಮಾನ ಸ್ಥಾನಮಾನವುಳ್ಳವ ನಾಗಿದ್ದ ಲಕ್ಷ್ಮಣನೆಂಬ ತನ್ನ ನಂಬುಗೆಯ ಮಂತ್ರಿಗೆ ಕೊಟ್ಟಿದ್ದ. ಈ ಪ್ರದೇಶಕ್ಕೆ ಪ್ರತಿಯಾಗಿ ವಿಕ್ರಮನಿಗೆ ನೊಳಂಬವಾಡಿ ಮತ್ತು ಸಿಂದವಾಡಿಗಳನ್ನು ಕೊಡಲಾಗಿತ್ತು. ಈ ಬದಲಾವಣೆ ವಿಕ್ರಮನ ಮನಸ್ಸಿಗೆ ಸರಿ ಬರಲಿಲ್ಲ. ಅನಂತರದಲ್ಲಿ ಇಮ್ಮಡಿ ಸೋಮೇಶ್ವರನ ಮನಸ್ಸೊಲಿಸಿ ಆತನ ತಮ್ಮ ವಿಕ್ರಮನಿಗೆ ತಂದೆಯಿಂದ ದೊರೆತಿದ್ದ ಆ ಪ್ರದೇಶಗಳನ್ನು ಮರಳಿ ಕೊಡಿಸುವ ಹಂಚಿಕೆಯೂ ನಡೆದಿತ್ತು[77]. ಆದರೂ ಇದರಿಂದ ಈ ಅಣ್ಣ-ತಮ್ಮಂದಿರ ಸಂಬಂಧವು ಪೆಚ್ಚಿಗೇನೂ ಸುಧಾರಿಸಲಿಲ್ಲ. ಇಮ್ಮಡಿ ಸೋಮೇಶ್ವರನು ಅಧಿಕಾರ ಮದದಿಂದ ಉನ್ಮತ್ತನಾಗಿ ಪ್ರಜೆಗಳ ಹಿತವನ್ನು ಅಲಕ್ಷಿಸತೊಡಗಿದ[78]. ಆಡಳಿತವರ್ಗದ ಬೆಂಬಲ ಕೋರುವ ಯತ್ನವನ್ನೂ ಆತ ನಡೆಸಿದ್ದ. ತಮ್ಮಂದಿರೊಡನೆ ಪತ್ರವ್ಯವಹಾರವೂ ನಡೆಯಿತು. ಇದರ ಪರಿಣಾಮವಾಗಿ ವಿಕ್ರಮ ಜಯಸಿಂಹರಿಬ್ಬರೂ ಕಲ್ಯಾಣಕ್ಕೆ ಬಂದರು. ಬಿಲ್ಹಣನ ಪ್ರಕಾರ ಸೋಮೇಶ್ವರನು ಈ ತಮ್ಮಂದಿರಿಗೆ ಕೇಡುಬಗೆಯಲೆಳಸಿದಂತೆ ತಿಳಿದುಬರುತ್ತಿದೆ. ವಿಕ್ರಮನು ಕಲ್ಯಾಣನಗರವನ್ನು ಬಿಟ್ಟು ಹೊರಟ. ಆಗ ತನ್ನ ಅನುಯಾಯಿಗಳನ್ನೂ ಜಯಸಿಂಹನನ್ನೂ ಹಿಂದಿರಿಸಿ ಹೊರಡುವುದು ಗಂಡಾಂತರಕಾರಿಯೆಂದು ಭಾವಿಸಿ ಅವರೆಲ್ಲರನ್ನು ತನ್ನ ಸಂಗಡ ಕರೆದೊಯ್ದ. ಸೋಮೇಶ್ವರನು ಅವರನ್ನು ಸೆರೆಹಿಡಿಯಲೆಂದು ಸೈನ್ಯವನ್ನು ಬೆನ್ನಟ್ಟಿಸಿದ. ಆದರೆ ಆತನ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಅಣ್ಣ ತಮ್ಮಂದಿರ ನಡುವೆ ಉಂಟಾಗಿದ್ದ ಈ ಒಡಕು ಹಾಗೆಯೇ ಮುಂದುವರಿದು ಅವರ ಭ್ರಾತೃಸಂಬಂಧವು ವಿಷಮಿಸಿತು. ವಿಕ್ರಮನು ಬನವಾಸಿಗೆ ತೆರಳಿ ಅಲ್ಲಿ ಕೆಲಕಾಲ ಕಳೆದ. ಆಗ ತನ್ನ ಪರಿಸ್ಥಿತಿಯನ್ನು ಬಲಪಡಿಸಿಕೊಳ್ಳಲೆಳಸಿ ತನ್ನ ಅಣ್ಣನ ಬೆಂಬಲಿಗರೆನಿಸಿಕೊಂಡವರ ಮೇಲೆ ದಾಳಿಗಳನ್ನು ಕೈಕೊಂಡ. ಕೊಂಕಣದ ಶಿಲಾಹಾರರನ್ನು ಮುತ್ತಿ ಅವರನ್ನು ಸದೆಬಡೆದ. ಬಳಿಕ ಕೊಂಕಣದ ದೊರೆಯೆನಿಸಿದ್ದ ಗೋವೆಯ ಕದಂಬ ವಂಶದ ಜಯಕೇಶಿಯನ್ನು ಗೆದ್ದ. ಆತನಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿದ. ಅನಂತರ ಆಳುಪರನ್ನು ಎದುರಿಸಿ ಅವರನ್ನು ಶರಣಾಗತರೆನಿಸಿದ. ಕೇರಳವರಸನನ್ನು ಸೋಲಿಸಿದ. ಕೊಂಕಣ ಮತ್ತು ಕೇರಳದ ಪ್ರದೇಶಗಳಲ್ಲಿ ತನ್ನ ಸತ್ತೆಯನ್ನು ಸ್ಥಾಪಿಸಿ ತನ್ನ ವಂಶವೈರಿಗಳಾಗಿದ್ದ

ಚೋಳರನ್ನೆದುರಿಸಲು ಮನಸ್ಸು ಮಾಡಿದ. ತುಂಗಭದ್ರೆಯನ್ನು ದಾಟಿ ಚೋಳರ ದೇಶವನ್ನು ಪ್ರವೇಶಿಸಿದ. ಆ ಕಾಲವು ಮುತ್ತಿಗೆಗೆ ತಕ್ಕುದಾಗಿತ್ತು. ಚೋಳರಲ್ಲಿ ಪಟ್ಟಾಧಿಕಾರಕ್ಕಾಗಿ ಒಳ ಜಗಳ ನಡೆದಿತ್ತು. ಕ್ರಿ.ಶ. 1060 ಕ್ಕೆ ತುಸು ಮೊದಲು ಕೋಪರಕೇಸರಿವರ್ಮ ರಾಜೇಂದ್ರದೇವ ಬೆಳವೊಲ ನಾಡನ್ನು ಮುತ್ತಿದಾಗ ಚಾಲುಕ್ಯರೊಂದಿಗೆ ನಡೆದ ಯುದ್ಧದಲ್ಲಿ ಮಡಿದಿದ್ದ[79]. ಮೊದಲನೆಯ ವೀರರಾಜೇಂದ್ರ ದೇವನೆಂದು ಕರೆಯಿಸಿಕೊಳ್ಳುತ್ತಿದ್ದ ರಾಜಕೇಸರಿವರ್ಮನು ಕೆಲವು ಸಾಮಂತಾಧಿಕಾರಿಗಳ ಸಹಾಯದಿಂದ ಪಟ್ಟವನ್ನು ಸಂಪಾದಿಸಿದ್ದ. ಇಮ್ಮಡಿ ರಾಜೇಂದ್ರ ಚೋಳನೆಂದು ಕರೆಯಿಸಿಕೊಳ್ಳುತ್ತಿದ್ದ ವೆಂಗಿಯ ಚಾಲುಕ್ಯರ ರಾಜಿಗನು ತಾನು ಮೊದಲನೆಯ ರಾಜೇಂದ್ರ ಚೋಳನ ಮಗಳ ಮಗನಾಗಿದ್ದರಿಂದ ತನಗೇ ಆ ಪಟ್ಟ ಸಲ್ಲಬೇಕೆಂದು ವಾದಿಸುತ್ತಿದ್ದ. ಈ ಜಗಳದಲ್ಲಿ ರಾಜಕೇಸರಿವರ್ಮನಿಗೆ ತನಗೆ ಬೆಂಬಲ ನೀಡಬಲ್ಲ ಒಬ್ಬ ಸತ್ವಶಾಲಿಯಾದ ಮಿತ್ರರಾಜನ ಆವಶ್ಯಕತೆಯಿತ್ತು. ಆದುದರಿಂದ ಆತ ವಿಕ್ರಮಾದಿತ್ಯ ನೊಂದಿಗೆ ಸ್ನೇಹ ಬೆಳೆಸುವುದು ಜಾಣತನವೆಂದು ಬಗೆದಿದ್ದ. ತನ್ನ ಮಗಳನ್ನು ವಿಕ್ರಮಾದಿತ್ಯನಿಗೆ ಮದುವೆ ಯಾಗಲೊಪ್ಪಿಸಿ ಒಂದು ಕರಾರನ್ನು ಮುಂದೊಡ್ಡಿದ್ದ. ಅದೇನೆಂದರೆ, ವಿಕ್ರಮಾದಿತ್ಯನು ತನ್ನ ಸೈನ್ಯಶಿಬಿರ ವನ್ನು ತುಂಗಭದ್ರೆಯ ಉತ್ತರತೀರಕ್ಕೆ ಸಾಗಿಸಬೇಕು; ಮತ್ತು ತನಗೆ ಅವಶ್ಯವೆನಿಸಿದಾಗಲೆಲ್ಲ ಸೈನಿಕ ನೆರವನ್ನೀಯಬೇಕು. ಈ ಕರಾರನ್ನು ವಿಕ್ರಮನು ಒಪ್ಪಿದ. ಚೋಳರ ರಾಜನು ತನ್ನ ಮಗಳೊಂದಿಗೆ ವಿಕ್ರಮನ ಶಿಬಿರಕ್ಕೆ ಬಂದ. ಮದುವೆ ವಿಜೃಂಭಣೆಯ ರಾಜವೈಭವದಿಂದ ನೆರವೇರಿತು. ವಿವಾಹಾನಂತರ ರಾಜಕೇಸರಿವರ್ಮನು ಕಾಂಚೀನಗರಕ್ಕೆ ಮರಳಿದ. ಬಳಿಕ ಅತ್ಯಲ್ಪ ಕಾಲದಲ್ಲಿಯೇ ರಾಜಕೇಸರಿವರ್ಮನು ಕೊಲ್ಲಲ್ಪಟ್ಟು ಚೋಳರಾಜ್ಯದಲ್ಲೆಲ್ಲ ಅರಾಜಕತೆಯುಂಟಾಯಿತೆಂದು ವಿಕ್ರಮನಿಗೆ ಸುದ್ದಿ ಬಂತು. ವಿಕ್ರಮನು ಕೂಡಲೇ ಕಾಂಚೀನಗರಕ್ಕೆ ಧಾವಿಸಿ, ಅಲ್ಲಿಯ ದಂಗೆಯನ್ನು ಹತ್ತಿಕ್ಕಿ ತನ್ನ ಹೆಂಡತಿಯ ಸಹೋದರ ಅಧಿರಾಜೇಂದ್ರದೇವನೆನಿಸಿದ ಪರಕೇಸರಿವರ್ಮನಿಗೆ ಪಟ್ಟ ದೊರೆಯುವಂತೆ ಮಾಡಿದ. ಅನಂತರ ತುಂಗಭದ್ರಾ ತೀರದ ತನ್ನ ಸೈನ್ಯ ಶಿಬಿರಕ್ಕೆ ಮರಳಿದ. ಆದರೆ, ಕೂಡಲೇ ಮತ್ತೊಂದು ಹೊಸ ದಂಗೆಯಲ್ಲಿ ಆತನ ಹೆಂಡತಿಯ ಸಹೋದರನೂ ಪ್ರಾಣ ಕಳೆದುಕೊಂಡನೆಂಬ ದುರ್ವಾರ್ತೆ ಬಂತು. ಮತ್ತೊಬ್ಬ ಪಟ್ಟಾಧಿಕಾರಿ ಯೆನಿಸಿದ್ದ ವೆಂಗಿಯ ದೊರೆ ರಾಜಿಗನು ಕಾಂಚೀನಗರವನ್ನು ಮುತ್ತಿ ಚೋಳರಾಜ್ಯದ ಅರಸು ತಾನೆಂದು ಸಾರಿದ. ರಾಜಿಗನನ್ನು ಎದುರಿಸಲು ವಿಕ್ರಮನು ನಿರ್ಣಯಿಸಿದ: ಆದರೆ ರಾಜಿಗನು ಇಮ್ಮಡಿ ಸೋಮೇಶ್ವರ ನೊಂದಿಗೆ ಮಿತ್ರತ್ವದ ಒಪ್ಪಂದ ಮಾಡಿಕೊಂಡ. ಅವರಿಬ್ಬರೂ ವಿಕ್ರಮನನ್ನು ಎದುರಿಸಲು ನಿಶ್ಚಯಿಸಿ, ಒಬ್ಬನು ಇದಿರಿನಿಂದಲೂ, ಇನ್ನೊಬ್ಬನು ಹಿಂದಿನಿಂದಲೂ ದಾಳಿಯಿಟ್ಟರು. ಎರಡೂ ಸೈನ್ಯಗಳ ನಡುವೆ ಒತ್ತಡಕ್ಕೆ ಸಿಕ್ಕಿ ವಿಕ್ರಮನು ಜಜ್ಜಿಹೋಗಬಹುದೆಂದು ಅವರು ನಂಬಿದ್ದರು. ಈ ಸೈನಿಕ ಗೂಢತಂತ್ರವನ್ನು ಗೊತ್ತುಹಚ್ಚಿದ ವಿಕ್ರಮನು ತನ್ನ ಸೋದರನನ್ನು ರಾಜಿಗನೊಂದಿಗೆ ಮಾಡಿಕೊಂಡ ಮಿತ್ರತ್ವದ ಒಪ್ಪಂದ ದಿಂದ ತಪ್ಪಿಸಲು ಮನವೊಲಿಸತೊಡಗಿದ. ಆದರೆ ಈ ಯತ್ನದಲ್ಲಿ ಯಶ ದೊರೆಯಲಿಲ್ಲ. ರಾಜಿಗನು ತುಂಗಭದ್ರೆಯನ್ನು ಸಮೀಪಿಸಿದಾಗ ವಿಕ್ರಮನು ಆತನನ್ನೆದುರಿಸಿ ವೀರಾವೇಶದಿಂದ ಕಾದಿದ. ಅದೇ ವೇಳೆಗೆ ಸರಿಯಾಗಿ ಈತನ ಅಣ್ಣ ಸೋಮೇಶ್ವರನು ಹಿಂದಿನಿಂದ ವಿಕ್ರಮನ ಮೇಲೆ ಬಿದ್ದ. ವಿಕ್ರಮನು ತನ್ನ ಸೈನ್ಯವನ್ನು ಎರಡು ಭಾಗಗಳಾಗಿ ವಿಭಜಿಸಿ, ಒಂದನ್ನು ರಾಜಿಗನೊಂದಿಗೆ ಕಾದಲು ಕಳಿಸಿ ಇನ್ನೊಂದಕ್ಕೆ ತಾನೇ ಸೇನಾಧಿಪತಿಯಾಗಿ ಸೋಮೇಶ್ವರನ ಸೈನ್ಯಕ್ಕೆ ಇದಿರಾದ. ಸಹೋದರನ ಸೈನ್ಯವನ್ನು ಚದರಿಸಿ ಅಣ್ಣನನ್ನು ಸೆರೆಹಿಡಿದ. ರಾಜಿಗನ ಸೈನ್ಯವೂ ಸೋತು ಪಲಾಯನಗೊಂಡಿತು. ವಿಕ್ರಮನು ಮೊದಮೊದಲು ತನ್ನ ಅಣ್ಣನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಮನಸ್ಸು ಮಾಡಿದ್ದನೆಂದೂ ಅನಂತರ ಮನಸ್ಸು ಬದಲಿಸಿ ತಾನೇ ಅರಸನೆಂದು ಸಾರಿದನೆಂದೂ ಬಿಲ್ಹಣ ಕವಿ ಹೇಳಿದ್ದಾನೆ. ವಿಕ್ರಮನು ಕಲ್ಯಾಣವತ್ತ ಸಾಗಿ, ತನ್ನ ಮಂತ್ರಿಗಳ ಹಾಗೂ ಉನ್ನತಾಧಿಕಾರಿಗಳ ಒಪ್ಪಿಗೆ ಪಡೆದು ಸ್ಥಾನಾಪನ್ನನಾದ. ಈ ಸಂಗರದಲ್ಲಿ ವಿಕ್ರಮಾದಿತ್ಯನು ಸೇವುಣ ದೇಶದ ದೊರೆ ಯಾದವ ರಾಜಪುತ್ರ ಇಮ್ಮಡಿ ಸೇವುಣಚಂದ್ರನಿಂದ ನೆರವು ಪಡೆದ. "ವ್ರತಖಂಡ" ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಹೇಮಾದ್ರಿ ಕವಿ ಸೇವುಣಚಂದ್ರನು

ವಿಕ್ರಮಾದಿತ್ಯನನ್ನು ಆತನ ಶತ್ರುಗಳ ಒಕ್ಕೂಟ ತಂತ್ರದ ದಾಳಿಯಿಂದ ಪಾರು ಮಾಡಿಸಿ, ಕಲ್ಯಾಣದ ಸಿಂಹಾಸನದ ಮೇಲೆ ಕುಳ್ಳಿರಿಸಿದ—ಎಂದು ಹೇಳಿದ್ದಾನೆ[80].

ವಿಕ್ರಮಾದಿತ್ಯನು ಪಟ್ಟಾಭಿಷಿಕ್ತನಾದ ಮೇಲೆ ಆತನು ಕೈಕೊಂಡ ಮೊತ್ತಮೊದಲ ಮಹತ್ವದ ಕಾರ್ಯವೆಂದರೆ,—ಶಕವರ್ಷಕ್ಕೆ ಬದಲಾಗಿ ಚಾಲುಕ್ಯ ವಿಕ್ರಮಕಾಲ ಅಥವಾ ಚಾಲುಕ್ಯ ವಿಕ್ರಮವರ್ಷವನ್ನು ಆರಂಭಿಸಿದುದು. ಈ ಹೊಸ ಮನ್ವಂತರದ ಮೊದಲ ವರ್ಷವು ಆತನ ಆಳಿಕೆಯ ಮೊದಲ ವರ್ಷವಾಗಿದೆ. ಅದಾವುದೆಂದರೆ, ಕ್ರಿ.ಶ. 1076–77 (ಚೈತ್ರ ಶುಕ್ಲ ಪ್ರತಿಪದೆ, ನಳಸಂವತ್ಸರ, ಶಕ 999). ಈತನು ಶಕವರ್ಷವನ್ನು ಅಳಿಸಿ "ವಿಕ್ರಮವರ್ಷ"ದ ರೂಪದಲ್ಲಿ ತನ್ನ ಹೆಸರನ್ನು ಪ್ರಕಟಿಸಿದ[81].

ಈ ಯುಗವು ಒಂದು ನೂರು ವರ್ಷಗಳ ವರೆಗೆ ಸಾಗಿ ಅನಂತರ ಕಣ್ಮರೆಯಾಯಿತು. ಈತನ ತರುವಾಯ ಬಂದ ಅರಸರು ಅವನ ಮಾದರಿಯನ್ನೇ ಅನುಸರಿಸಿ ತಂತಮ್ಮ ಆಳಿಕೆಯ ವರ್ಷಗಳನ್ನೇ ತಮ್ಮ ಶಾಸನಗಳಲ್ಲಿ ಹಾಕಿಕೊಂಡರು. ವಿಕ್ರಮಾದಿತ್ಯನು ಪಟ್ಟವೇರಿದ ಕೂಡಲೇ ತನ್ನ ತಮ್ಮ ಜಯಸಿಂಹನನ್ನು ಯುವರಾಜನನ್ನಾಗಿ ಮಾಡಿ ಬನವಾಸಿ 12,000 ನಾಡಿಗೆ ಆತನನ್ನು ಮಹಾಮಂಡಲೇಶ್ವರನನ್ನಾಗಿನೇಮಿಸಿದ. ಕರಹಾಟಕದ ಶಿಲಾಹಾರ ರಾಜ ಮಾರಸಿಂಹನ ಮಗಳಾಗಿರಬಹುದಾದ ಚಂದ್ರಲೇಖೆ ಅತಿಶಯ ಲಾವಣ್ಯವತಿಯೆಂದೂ ಆಕೆ ವಿಕ್ರಮನನ್ನು ಮದುವೆಯಾಗಲು ಬಯಸುತ್ತಿದ್ದಳೆಂದೂ ಈ ಕಾರಣಕ್ಕಾಗಿ ಆಕೆಯ "ಸ್ವಯಂವರ"ವನ್ನು ನಡೆಸಲಾಗುವುದೆಂದೂ ವಿಕ್ರಮನಿಗೆ ವಾರ್ತೆ ಬಂತು. ವಿಕ್ರಮನು ಅಲ್ಲಿಗೆ ಹೊರಟು "ಸ್ವಯಂವರ" ಮಂಟಪಕ್ಕೆ ಬಂದು ಕುಳಿತ. ಚಂದಲಾದೇವಿ (ಚಂದ್ರಲೇಖೆ) ಇತರ ರಾಜಪುತ್ರರನ್ನೆಲ್ಲ ತಿರಸ್ಕರಿಸಿ, ವಿಕ್ರಮನನ್ನೇ ಆಯ್ದುಕೊಂಡಳು. ವಿಕ್ರಮ-ಚಂದಲಾದೇವಿಯವರ ವಿವಾಹವು ವಿಜೃಂಭಣೆಯಿಂದ ಜರಗಿತು. ವಿಕ್ರಮನು ಕಲ್ಯಾಣಕ್ಕೆ ಮರಳಿ, ಕೆಲಕಾಲ ಸುಖವಾಗಿ ಜೀವನ ನಡೆಸಿದ.

ವಿಕ್ರಮನ ತಮ್ಮ ಜಯಸಿಂಹನು ಬನವಾಸಿ 12,000, ಸಾಂತಲಿಗೆ 1,000, ಬೆಳವೊಲ 300, ಪುಲಿಗೆರೆ 300, ಮತ್ತು ಬಾಸವಳ್ಳಿ 1,000 ಗಳ ಮಹಾ ಮಂಡಲೇಶ್ವರನಾಗಿ ಕ್ರಿ.ಶ. 1080ರ ವರೆಗೆ ರಾಜ್ಯಭಾರ ನಡೆಸಿದ. ಅನಂತರದಲ್ಲಿ ಆತನ ಹೆಸರು ಎಲ್ಲಿಯೂ ಉಲ್ಲೇಖಗೊಂಡಿಲ್ಲ. ಆದುದರಿಂದ ಆತನು ವಿಕ್ರಮಾದಿತ್ಯನ ವಿರುದ್ಧ ದಂಗೆಯೆಬ್ಬಿಸಿದನೆಂಬ ಬಿಲ್ಹಣನ ಹೇಳಿಕೆಯನ್ನು ಒಪ್ಪಬಹುದಾಗಿದೆ. ಜಯಸಿಂಹನು ತನ್ನ ಅಣ್ಣನ ವಿರುದ್ಧವಾಗಿ ರಾಜದ್ರೋಹದ ಚಿಂತನದಲ್ಲಿ ತೊಡಗಿದನೆಂದು ಬಿಲ್ಹಣನು ಹೇಳುತ್ತಾನೆ. ಪ್ರಜೆಗಳಿಂದ ಬಲಾತ್ಕಾರವಾಗಿ ದ್ರವ್ಯ ಸಂಗ್ರಹಮಾಡಿದ; ವಿಕ್ರಮನ ಶತ್ರುಗಳೊಂದಿಗೆ ಸ್ನೇಹ ಸಂಪಾದನೆಯಲ್ಲಿ ತೊಡಗಿದ. ವಿಕ್ರಮಾದಿತ್ಯನ ಸೈನ್ಯಪಡೆಗಳಲ್ಲಿ ರಾಜದ್ರೋಹ ಮತ್ತು ಒಳಸಂಚುಗಳನ್ನು ಹೊತ್ತಿಸಲೂ ಯತ್ನಿಸಿದ. ಈ ಎಲ್ಲಾ ವಿವರಗಳು ಅರಸನಿಗೆ ತಿಳಿದು ಬಂದಾಗ ಆತನು ತನ್ನ ತಮ್ಮನಿಗೆ ಈ ಪಾಪದ ಹಾದಿಯನ್ನು ಬಿಟ್ಟುಕೊಡಬೇಕೆಂದು ಬುದ್ಧಿ ಹೇಳಿದ; ಆದರೆ ಅದೆಲ್ಲ ವ್ಯರ್ಥವಾಯಿತು. ಜಯಸಿಂಹನು ತನ್ನ ಬಹುದೊಡ್ಡ ಸೈನ್ಯ ಹಾಗೂ ಬಹುಸಂಖ್ಯೆಯ ಮಿತ್ರರಾಜರಿಂದೊಡಗೂಡಿ ಕೃಷ್ಣೆಯ ತೀರದಲ್ಲಿ ಬೀಡು ಬಿಟ್ಟ. ವಿಕ್ರಮಾದಿತ್ಯನು ಆಗ ತನ್ನ ಸೈನ್ಯ ಪಡೆಯೊಂದಿಗೆ ಆತನಿಗೆ ಇದಿರಾಗಿ ಹೊರಟ. ನದೀತೀರದಲ್ಲಿ ಬೀಡು ಬಿಟ್ಟುಕೊಂಡು ಹಿಂಸೆಕೊಡುತ್ತಿದ್ದ ವೈರಿ ಪಡೆಗಳನ್ನು ಆತ ಚದರಿಸಿದ. ತನ್ನ ತಮ್ಮನ ಸೈನ್ಯವನ್ನು ಆತನು ಅವಲೋಕಿಸಿದಾಗ ಅದು ಅಪಾರವೂ, ಬಲಾಢ್ಯವೂ ಆಗಿರುವಂತೆ ತೋರಿತು. ಬಳಿಕ ಯುದ್ಧ ತೊಡಗಿತು. ಎಲ್ಲೆಡೆ ಗೊಂದಣದ ಪರಿಸ್ಥಿತಿಯಿಂದಾಗಿ ಕೋಲಾಹಲವುಂಟಾಯ್ತು. ಉಭಯ ಪಕ್ಷಗಳಲ್ಲೂ ಬಹು ದೊಡ್ಡ ಸಂಖ್ಯೆಯಲ್ಲಿ ಸಾವು—ನೋವುಗಳುಂಟಾದವು. ಗಜಘಟೆಗಳು ವಿಕ್ರಮನ ಪಡೆಗಳಲ್ಲಿ ನುಗ್ಗಿ ಹಾಹಾಕಾರವೆಸಗಿದವು. ವಿಕ್ರಮನ ಸೈನ್ಯ ಆತುರದಿಂದ ಹಿನ್ನಡೆಯತೊಡಗಿತು. ಆದರೆ ವಿಕ್ರಮನು ಆನೆಯೇರಿಕೊಂಡು ಅಸಾಧಾರಣ ಚಾತುರ್ಯ ಹಾಗೂ ವೀರ್ಯದಿಂದ ಮುನ್ನುಗ್ಗಿ ಕೆಲಬಲಗಳಲ್ಲಿದ್ದ ವೈರಿ

ಸೈನಿಕರನ್ನು ನುಚ್ಚುನೂರಾಗುವಂತೆ ಸದೆಬಡಿದ. ವೈರಿಸೈನ್ಯದ ಗಜಘಟೆಗಳು ಹಿಂತಿರುಗಿ ತಮ್ಮ ಸೈನಿಕರನ್ನೇ ಎದುರಿಸಿ ಕಾದಿದವು. ಜಯಸಿಂಹನ ಸೈನ್ಯ ಸೋತು ಆತನೂ ಆತನ ಅನುಯಾಯಿಗಳೂ ಪಲಾಯನ ಮಾಡಿದರು. ವಿಕ್ರಮನು ವೈರಿಗಳನ್ನು ಬೆನ್ನಟ್ಟದೆ ವೈರಿಶಿಬಿರಗಳಲ್ಲಿದ್ದುದೆಲ್ಲವನ್ನೂ ಸೂರೆಗೊಂಡು ಕಲ್ಯಾಣಕ್ಕೆ ಹಿಂತಿರುಗಿದ. ಕೆಲಕಾಲಾನಂತರ ಜಯಸಿಂಹನು ಸೆರೆಸಿಕ್ಕು ವಿಕ್ರಮಾದಿತ್ಯನ ಮುಂದೆ ತರಲ್ಪಟ್ಟನು. ವಿಕ್ರಮಾದಿತ್ಯನು ಆತನನ್ನು ಕ್ಷಮಿಸಿದನು. ಕೃಷ್ಣೆಯ ತೀರದ ಈ ಯುದ್ಧವು ಕ್ರಿ.ಶ. 1080ರ ಬಳಿಕ ಸಂಭವಿಸಿರಬೇಕು. ಡಾ. ಬ್ಯೂಲರ್ ಕ್ರಿ.ಶ. 1077ರಲ್ಲಿ ಜರಗಿರಬೇಕೆನ್ನುತ್ತಾರೆ[82]. ಆದರೆ ಕ್ರಿ.ಶ. 1080ರ ಶಾಸನಗಳು ಜಯಸಿಂಹನು ಯುವರಾಜನೂ ನಿಷ್ಠಾವಂತ ಸಹೋದರನೂ ಆಗಿದ್ದನೆಂದು ಹೇಳುತ್ತವೆ[83]. ಕೆಲವರ್ಷಗಳ ತರುವಾಯ ಚೋಳರಾಜ್ಯವನ್ನಾಕ್ರಮಿಸಿ ವಶಪಡಿಸಿಕೊಂಡಿದ್ದ ವೆಂಗಿಯ ರಾಜನು ಚಾಲುಕ್ಯ ಸಾಮ್ರಾಜ್ಯವನ್ನು ಮುತ್ತುವ ಸಿದ್ಧತೆಯಲ್ಲಿರುವನೆಂಬ ವಾರ್ತೆ ವಿಕ್ರಮನ ಕಿವಿಗೆ ಕೇಳಬಂತು. ಆಗ ಆತನು ಕಾಂಚಿಯ ವರೆಗೆ ಸೈನ್ಯವನ್ನು ಸಾಗಿಸಿ ವೈರಿಗಳನ್ನು ಹತ್ತಿಕ್ಕಿದ. ವೆಂಗಿಯ ರಾಜ ಓಡಿಹೋದ. ವಿಕ್ರಮನು ಆತನನ್ನು ವೆಂಗಿಯ ವರೆಗೆ ಬೆನ್ನಟ್ಟಿದನೆಂದು ತಿಳಿದುಬರುತ್ತದೆ. ಏಕೆಂದರೆ ಆತನ ಶಾಸನಗಳು ದ್ರಾಕ್ಷಾರಾಮವೇ ಮೊದಲಾದ ವೆಂಗಿನಾಡಿನ ಪ್ರದೇಶಗಳಲ್ಲಿ ದೊರೆಯುತ್ತವೆ.

ವಿಕ್ರಮಾದಿತ್ಯನ ಆಳಿಕೆಯ ಉತ್ತರಾರ್ಧದಲ್ಲಿ ಎಂದರೆ ಕ್ರಿ. ಶ. 1117ರ ಸುಮಾರಿಗೆ ಹೊಯ್ಸಳರಾಜ ವಿಷ್ಣುವರ್ಧನನ ಸೈನ್ಯದ ಆಕ್ರಮಣಕ್ಕೆ ಈತನ ಸಾಮ್ರಾಜ್ಯದ ಕೆಲಭಾಗ ಒಳಪಟ್ಟಿತ್ತು. ಆತನು ಉಚ್ಚಂಗಿ ಮತ್ತು ಬೆಳವೊಲ ನಾಡುಗಳ ಮೇಲೆ ದಾಳಿಯಿಟ್ಟು ಕೃಷ್ಣೆಯ ವರೆಗೆ ನುಗ್ಗಿ ಅದರ ಜಲದಲ್ಲಿ ತನ್ನ ಕುದುರೆಗಳನ್ನು ಮೀಯಿಸಿದನಂತೆ. ಆತನ ದಂಡನಾಯಕ ಗಂಗರಾಜನು ಕಣ್ಣೇಗಾಲ ವೆಂಬ ಸ್ಥಳದಲ್ಲಿ ಬೀಡುಬಿಟ್ಟಿದ್ದ ವಿಕ್ರಮಾದಿತ್ಯನ ಸೈನ್ಯ ಪಡೆಗಳನ್ನು ರಾತ್ರಿಯಲ್ಲಿ ಮುತ್ತಿ ಅಪಾರ ನಷ್ಟವುಂಟು ಮಾಡಿದನಂತೆ[84]. ಇದನ್ನು ಕೇಳಿ ವಿಕ್ರಮಾದಿತ್ಯನು ಸಿಂದವಂಶದ ನಾಯಕ ಇಮ್ಮಡಿ ಅಚುಗಿಯನ್ನು ಈ ದಂಗೆಯನ್ನಡಗಿಸಲು ಕಳಿಸಿದ. ಅಚುಗಿಯು ಹೊಯ್ಸಳನನ್ನು ಬೆನ್ನಟ್ಟಿ ಅವನು ಶರಣು ಬರುವಂತೆ ಮಾಡಿದ; ಗೋವೆ ಮತ್ತು ಉಪ್ಪಿನಕಟ್ಟೆಗಳನ್ನು ಕೊಂಡು ಸುಟ್ಟು ಹಾಕಿದ.; ಯುದ್ಧದಲ್ಲಿ ಲಕ್ಷ್ಮನನ್ನು ಪಲಾಯನಗೊಳಿಸಿದ; ಪಾಂಡ್ಯನನ್ನು ಬೆನ್ನಟ್ಟಿ, ಮಲೆಪರನ್ನು ಚದರಿಸಿ, ಕೊಂಕಣ "ಭೂತ"ವನ್ನು ಸೆರೆಹಿಡಿದ. ರಾಕ್ಷಸನಂತೆ ಭೋಜನನ್ನೂ ತನ್ನ ದೇಶವನ್ನಾಕ್ರಮಿಸಿದ ಆತನ ಸೇನಾಪಡೆಗಳನ್ನೂ ನುಂಗಿ ಮತ್ತೆ ಕಾರಿದ[85]. ಶಾಸನಗಳಲ್ಲಿ ಕಂಡುಬರುವ ಈ ವರ್ಣನೆಯಿಂದ ಗೋವೆಯ ಕದಂಬರು, ನೊಳಂಬವಾಡಿಯ ಪಾಂಡ್ಯರು, ಮತ್ತು ಕರಾಡ–ಕೊಲ್ಲಾಪುರಗಳ ಶಿಲಾಹಾರರು ಸಾರ್ವಭೌಮತ್ವದ ವಿರುದ್ಧವಾಗಿ ಹೊಯ್ಸಳರೊಂದಿಗೆ ಒಳಸಂಚಿನಲ್ಲಿ ಕೂಡಿಕೊಂಡಿದ್ದರೆಂದಾಗಲಿ, ಅಥವಾ ಹೊಯ್ಸಳರ ದಾಳಿಯ ದುರ್ಲಾಭ ಪಡೆದು ತಾವು ರಾಜ್ಯದಲ್ಲಿ ಉಪಟಳವುಂಟುಮಾಡಲು ಯತ್ನಿಸಿದರೆಂದಾಗಲಿ ಸೂಚಿತವಾಗುತ್ತದೆ[86].

ವಿಕ್ರಮಾದಿತ್ಯನು ತನ್ನೆಲ್ಲ ಶತ್ರುಗಳನ್ನು ಸದೆಬಡಿದು ತನ್ನ ರಾಜ್ಯದಲ್ಲೆಲ್ಲ ಶಾಂತಿ ಸುವ್ಯವಸ್ಥೆಗಳನ್ನು ಸ್ಥಾಪಿಸಿದ. ಸಾಂಸ್ಕೃತಿಕ ಕಾರ್ಯಕಲಾಪಗಳಿಗೆ ಗಮನವೀಯಲು ಆತನಿಗೆ ಬಿಡುವೂ ಸಮಯವೂ ಸಾಕಷ್ಟಿತ್ತು. ಆತನು ವಿಷ್ಣು-ಕಮಲ-ವಿಲಾಸಿಗೋಸ್ಕರ ಒಂದು ಸುಂದರ ದೇವಾಲಯವನ್ನು ಕಟ್ಟಿಸಿದ. ಒಂದು ದೊಡ್ಡ ಸರೋವರವನ್ನು ಕಟ್ಟಿಸಿದ ಮತ್ತು ವಿಕ್ರಮಪುರವೆಂಬ ನಗರವನ್ನು ನಿರ್ಮಿಸಿದ. ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಅರಸಿಬೀದಿಯೇ ಈ ವಿಕ್ರಮಪುರವೆಂದು ಗುರುತಿಸಲಾಗಿದೆ.

ವಿಕ್ರಮಾದಿತ್ಯನು ಪಾಂಡಿತ್ಯಕ್ಕೆ ಬಹು ದೊಡ್ಡ ಆಶ್ರಯದಾತನಾಗಿದ್ದ. ತನ್ನ ಆಸ್ಥಾನದಲ್ಲಿ ಆಶ್ರಯ ಪಡೆಯ ಬಂದ ವಿದ್ವಾಂಸರಿಗೆಲ್ಲ ನೆರವು ನೀಡಿದ. ಈ ವಿದ್ವಾಂಸರಲ್ಲಿ ಕಾಶ್ಮೀರದಿಂದ ಬಂದ ಬಿಲ್ಹಣನೂ

ಒಬ್ಬನಾಗಿದ್ದು ಇವನು ವಿಕ್ರಮನ ಆಸ್ಥಾನದಲ್ಲಿ ಇಪ್ಪತ್ತು ವರುಷಕಾಲ ಜೀವಿಸಿದ್ದ. ಬಿಲ್ಹಣನು ತನ್ನ ತಾಯ್ನಾಡಾದ ಕಾಶ್ಮೀರವನ್ನು ಕ್ರಿ.ಶ. 1063ರಲ್ಲಿ ಬಿಟ್ಟುಬಂದು ಚೇದಿಯರಸು ಕರ್ಣನಾಸ್ಥಾನದಲ್ಲಿ ಕೆಲಕಾಲ ಕಳೆದ. ಕರ್ಣನ ಪತನಾನಂತರ ಆತನು ರಾಮೇಶ್ವರದತ್ತ ತೀರ್ಥಯಾತ್ರೆ ಹೊರಟ. ಕಲ್ಯಾಣಕ್ಕೆ ಆತ ಕ್ರಿ.ಶ. 1077ಕ್ಕೆ ಬಂದ. ಆಗ ವಿಕ್ರಮಾದಿತ್ಯನು ಆತನನ್ನು ಆಸ್ಥಾನ ಕವಿಯಾಗಿ ನೇಮಿಸಿ 'ವಿದ್ಯಾಪತಿ' ಎಂಬ ಬಿರುದಿತ್ತು ಒಂದು ಆನೆಯನ್ನೂ ಒಂದು ನೀಲಚ್ಛತ್ರವನ್ನೂ ಆತನಿಗೆ ಕಾಣಿಕೆಯಾಗಿ ನೀಡಿದ. ಆತನು ತನ್ನ ಮಹಾ ಕಾವ್ಯವನ್ನು ಕ್ರಿ.ಶ. ಸುಮಾರು 1085ರಲ್ಲಿ ರಚಿಸಿದ. ವಿಕ್ರಮಾದಿತ್ಯನಿಂದ ಆಶ್ರಯ ಪಡೆದ ಇನ್ನೊಬ್ಬ ಪಂಡಿತನೆಂದರೆ 'ಮಿತಾಕ್ಷರ' ಕರ್ತೃ ವಿಜ್ಞಾನೇಶ್ವರ. ಮಿತಾಕ್ಷರವು ಯಾಜ್ಞವಲ್ಕ್ಯಸ್ಮೃತಿಯ ಮೇಲಣ ಭಾಷ್ಯ. ಇದು ಇಂದಿಗೂ ನ್ಯಾಯಸ್ಥಾನಗಳಲ್ಲಿ ಹಿಂದೂ ಕಾನೂನು ಪದ್ಧತಿಯ ಮೇಲಣ ಪ್ರಮಾಣ ಗ್ರಂಥವೆಂದು ಮನ್ನಣೆ ಪಡೆಯುತ್ತಿದೆ. ಇವನು ಕಲ್ಯಾಣದಲ್ಲಿ ವಾಸಿಸುತ್ತಿದ್ದು ಈ ನಗರವನ್ನು ಉಜ್ವಲ ಶೈಲಿಯಲ್ಲಿ ಇಂತು ಬಣ್ಣಿಸಿದ್ದಾನೆ: "ಈ ಭೂಮಿಯ ಮೇಲೆ ಕಲ್ಯಾಣನಗರಿಯಂತಹ ಪಟ್ಟಣವು ಹಿಂದೆಂದೂ ಇರಲಿಲ್ಲ, ಇಂದಿಲ್ಲ, ಇನ್ನು ಮುಂದೂ ಸಂಭವಿಸದು. ವೈಭವಾನ್ವಿತನಾದ ವಿಕ್ರಮಾಂಕನಂತಹ ಚಕ್ರವರ್ತಿಯ ಮಹಿಮೆಯನ್ನು ಹಿಂದೆಂದೂ ಯಾರೂ ಕಂಡಿಲ್ಲ, ಕೇಳಿಲ್ಲ. ಹೆಚ್ಚೇನು? ವಿಜ್ಞಾನೇಶ್ವರನ ಪಾಂಡಿತ್ಯದ ಮುಂದೆ ಯಾರ ಪಾಂಡಿತ್ಯವೂ ಹೋಲಿಕೆಗೆ ಬಾರದು. ಕಲ್ಪಲತೆಯಂತಿರುವ ಈ ಮೂರೂ ಆಕಲ್ಪಾಂತ ನೆಲಸಲಿ". ಸಂಸ್ಕೃತ ಕವಿಗಳು ಮತ್ತು ಪಂಡಿತರು ಯಾವಾಗಲೂ ಕಾವ್ಯಕಲ್ಪನೆಯಲ್ಲೂ ಸಾಂಪ್ರದಾಯಿಕ ಅತಿಶಯೋಕ್ತಿಯಲ್ಲೂ ಆಸಕ್ತರಾಗಿರುವುದುಂಟು. ಆದರೆ ವಿಜ್ಞಾನೇಶ್ವರನ ಧ್ವನಿಯ ಧೋರಣೆಯಿಂದ ಈತನು ಕಲ್ಯಾಣ ನಗರಿಯ ಬಗೆಗೆ ಮತ್ತು ತನ್ನ ಚಕ್ರವರ್ತಿಯ ಬಗೆಗೆ ನಿಜವಾದ ಹಾಗೂ ಉತ್ಸಾಹಭರಿತ ಅಭಿಮಾನವುಳ್ಳವನೆಂದು ಅಭಿಪ್ರಾಯವುಂಟಾಗುತ್ತದೆ. ಈ ಶ್ಲಾಘನೆಯಿಂದ ಮತ್ತು ಬಿಲ್ಹಣನ ಬಣ್ಣನೆಯಿಂದ ಅಲ್ಲದೆ ವಿಕ್ರಮಾದಿತ್ಯನ ಅಸಂಖ್ಯದತ್ತಿಶಾಸನಗಳಿಂದ, ಚಾಲುಕ್ಯ ರಾಜಮನೆತನದಲ್ಲಿ ವಿಕ್ರಮಾದಿತ್ಯನೇ ಅತ್ಯಂತ ಶ್ರೇಷ್ಠ ಹಾಗೂ ಮಹಿಮಾನ್ವಿತ ಚಕ್ರವರ್ತಿಯೆಂದು ಮುಕ್ತಕಂಠದಿಂದ ಉದ್ಘೋಷಿಸಬಹುದಾಗಿದೆ.

ವಿಕ್ರಮಾದಿತ್ಯನ ಶಾಸನಗಳು ಅಗಣಿತವಾಗಿದ್ದು ಬಹು ವಿಸ್ತಾರವಾದ ಪ್ರದೇಶದಲ್ಲೆಲ್ಲ ಹರಡಿವೆ. ವಿಕ್ರಮನಿಗೆ ಈ ಆರು ಜನ ರಾಣಿಯರಿದ್ದರೆಂದು ಅವು ಹೇಳುತ್ತಿವೆ:—

1. ಸಾವಲದೇವಿ: ಈಕೆ ಮಹಾಮಂಡಳೇಶ್ವರ ಜೋಗಮರಸನ ಮಗಳು. ಜೋಗಮರಸನು ಸೂರ್ಯವಂಶದವನಾಗಿದ್ದು "ದರಿಕಾಡು ನಾಡ ಅರಸ" ನಾಗಿದ್ದನು; ಅಲ್ಲದೆ ಆತ ಮಂಗಲವಾಡದ ಮಹಾಮಂಡಳೇಶ್ವರನಾಗಿದ್ದ. ಕ್ರಿ. ಶ. 1077–78ರಲ್ಲಿ ಸಾವಲದೇವಿ ತನ್ನ ಅಂಗಭೋಗಕ್ಕೋಸುಗ ನೀಡಿದ್ದ ನರೆಯಂಗಲ್ಲ ಅಗ್ರಹಾರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು.

2. ಲಕ್ಷ್ಮಾದೇವಿ: ಈಕೆ 'ಪಿರಿಯರಸಿ' ಎಂದರೆ ಪ್ರಧಾನ ರಾಣಿಯಾಗಿದ್ದಳು. ಕ್ರಿ.ಶ. 1084–85 ರಲ್ಲಿ ಡಂಬಳದೊಂದಿಗೆ ಹದಿನೆಂಟು ಅಗ್ರಹಾರಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು; ಮತ್ತು ಕ್ರಿ.ಶ. 1109–10ರಲ್ಲಿ ನಿಟ್ಟಸಿಂಗಿ ಗ್ರಾಮದ ವ್ಯವಸ್ಥೆಯೂ ಇವಳ ಕಡೆಗಿತ್ತು. ಕ್ರಿ.ಶ. 1125-26ರಲ್ಲಿ ಈಕೆ ಜೀವಿಸಿದ್ದಳು.

3. ಜಕ್ಕಲದೇವಿ: ಕದಂಬವಂಶದ ತಿಕ್ಕರಾಜನ ಮಗಳೀಕೆ. ಕ್ರಿ. ಶ. 1093 – 94ರಲ್ಲಿ "ತ್ರಿಭೋಗಾಭ್ಯಂತರ ಸಿದ್ಧಿ" ಗಾಗಿ ಇಂಗುಣಿಗೆ ಗ್ರಾಮದ ವ್ಯವಸ್ಥೆಯನ್ನು ಇವಳು ನೋಡಿಕೊಳ್ಳುತ್ತಿದ್ದಳು.

4. ಮಲ್ಲೆಯಮಹಾದೇವಿ ಅಥವಾ ಮಲಯಮತಿದೇವಿ : ಕ್ರಿ.ಶ. 1094–95ರಲ್ಲಿ ಕಿರಿಯ ಕರೆಯೂರ ಅಗ್ರಹಾರಕ್ಕೆ ಸಂಬಂಧಪಟ್ಟ ಭೂಮಿಗಳ ವ್ಯವಸ್ಥೆ ಈಕೆಯ ಕಡೆಗಿತ್ತು.

5. ಚಂದಲಾದೇವಿ : ಇವಳನ್ನೂ "ಪಿರಿಯರಸಿ" ಎಂದು ಕರೆಯಲಾಗುತ್ತಿತ್ತಲ್ಲದೆ 'ಅಗ್ರ ಮಹಾಮಹಿಷಿ' ಎಂದೂ ಈಕೆ ಹೆಸರಾಗಿದ್ದಳು. ಈಕೆಯ ಇನ್ನೊಂದು ಹೆಸರು ಚಂದ್ರಲೇಖೆ. ಈಕೆ ಕರಾಡದ ಶಿಲಾಹಾರ ರಾಜನ ಮಗಳು; ಜಯಕರ್ಣನ ತಾಯಿ. ಕ್ರಿ.ಶ. 1103–1104ರಲ್ಲಿ ಈಕೆ ರುದ್ರವಾಡಿ ಅಗ್ರಹಾರದ ಕೇಶವದೇವಾಲಯಕ್ಕೆ ದತ್ತಿಗಳನ್ನು ನೀಡಿದ್ದಳು.

6. ಮಾಳಲದೇವಿ ಅಥವಾ ಮಾಲಿಕಾ : ಸೇನಭೋಗ ರಾಯಣನ ಮಗಳೀಕೆ. ಈಕೆಗೆ ಮೈಳಾಲದೇವಿಯೆಂಬೊಬ್ಬ ಮಗಳಿದ್ದಳು. ಕದಂಬವಂಶದ ಇಮ್ಮಡಿ ಜಯಕೇಶಿಯನ್ನು ಮೈಳಾಲದೇವಿ ಮದುವೆಯಾಗಿದ್ದಳು.

ಕಲ್ಯಾಣವು ಕೊನೆಯ ವರೆಗೆ ರಾಜಧಾನಿಯಾಗಿ ಮುಂದುವರಿದಿತ್ತೆಂದೇ ಶಾಸನಗಳು ಹೇಳುತ್ತಿವೆ. ಅರಸನು ಕೆಲಕಾಲ ವಾಸಿಸಿ ರಾಜ್ಯಭಾರ ನಡೆಸುತ್ತಿದ್ದ ಇತರ ಸ್ಥಳಗಳಾವುವೆಂದರೆ,—ಬನವಾಸಿ, ಬಳ್ಳಿಗಾಮೆ, ನಡವಿಯಪ್ಪನ ಬೀಡು (ಕ್ರಿ.ಶ. 1077), ಎತಗಿರಿ (ಕ್ರಿ.ಶ. 1078), ವಿಜಯಪುರಿ (ಕ್ರಿ.ಶ. 1091–1092), ಮನ್ನೆಯಕೇರಿ (ಕ್ರಿ.ಶ. 1125–26) ಮತ್ತು ವಿಕ್ರಮಪುರ.

ಈ ಕಾಲದ ಶಾಸನಗಳು ಉಲ್ಲೇಖಿಸುವ ಮಂಡಳೇಶ್ವರರು ಮತ್ತು ಅಧಿಕಾರಿಗಳು ಈ ಕೆಳಗಿನಂತೆ ಇರುವರು :—

1. ಕ್ರಿ.ಶ. 1076–78ರಲ್ಲಿ ಬನವಾಸಿ 12,000ನ್ನು ಆಳುತ್ತಿದ್ದ ಹಾನುಗಲ್ಲ ಕದಂಬವಂಶದ ಮಹಾಮಂಡಳೇಶ್ವರ ಇಮ್ಮಡಿ ಕೀರ್ತಿವರ್ಮ.

2. ಕ್ರಿ.ಶ. 1082ರಲ್ಲಿ ವಿಜಾಪುರ ಜಿಲ್ಲೆಯ ತಿಡಗುಂಡಿಯ ಸುತ್ತಮುತ್ತಲಿನ ಪ್ರದೇಶವ ನ್ನಾಳುತ್ತಿದ್ದ ಸಿಂದವಂಶದ ಮಹಾಮಂಡಳೇಶ್ವರ ಮುಂಜರಾಜ.

3. ಕ್ರಿ.ಶ. 1087ರಲ್ಲಿ ನಾಗಪುರದ ಬಳಿಯ ಸೀತಾಬಲ್ದಿಯ ನೆರೆಯ ಪ್ರದೇಶವನ್ನಾಳುತ್ತಿದ್ದ ಪ್ರಸಿದ್ಧ ರಾಷ್ಟ್ರಕೂಟ ವಂಶದಲ್ಲಿ ಹುಟ್ಟಿದವನೆಂದು ಬಣ್ಣಿಸಲಾದ ಮಹಾಸಾಮಂತ ಧಲಿಭಡಕ ಅಥವಾ ಧಲಿಭಾಂಡಕ.

4. ಕ್ರಿ.ಶ. 1095ರಲ್ಲಿ ಕೊಂಕಣವನ್ನಾಳುತ್ತಿದ್ದ ಶಿಲಾಹಾರ ಮನೆತನದ ಮಹಾಸಾಮಂತಾಧಿಪತಿ ಮತ್ತು ಮಹಾಮಂಡಲಾಧಿಪತಿ ಅನಂತದೇವ.

5. ಕ್ರಿ.ಶ. 1096–97ರಲ್ಲಿ ಸೌಂದತ್ತಿಯಲ್ಲಾಳುತ್ತಿದ್ದ ರಟ್ಟವಂಶದ ಮಹಾಮಂಡಳೇಶ್ವರ ಇಮ್ಮಡಿ ಕಾರ್ತವೀರ್ಯ.

6. ಹೊಯ್ಸಳವಂಶದ ಮಹಾಸಾಮಂತ ಮೊದಲನೆಯ ಬಲ್ಲಾಳ. ಶಾಸನದಲ್ಲಿ ಉಕ್ತವಾಗಿರುವ ಈತನ ಕಾಲ ಕ್ರಿ.ಶ. 1103.

7. ಹಾನಗಲ್ಲ ಕದಂಬ ಮನೆತನದ ಮಹಾಮಂಡಳೇಶ್ವರ ಇಮ್ಮಡಿ ತೈಲಪ. ಕ್ರಿ.ಶ. 1103-1104ರಲ್ಲಿ ಮತ್ತು 1107–8ರಲ್ಲಿ ಈತನು ಪಾನುಂಗಲ್ಲ 500ನ್ನಾಳುತ್ತಿದ್ದ ; ಮತ್ತು ಕ್ರಿ.ಶ. 1108–9ರಲ್ಲಿ ಮತ್ತು 1124–25ರಲ್ಲಿ ಆ ಪ್ರದೇಶವನ್ನಲ್ಲದೆ ಬನವಾಸಿ 12,000ವನ್ನೂ ಆಳುತ್ತಿದ್ದ ; ಮತ್ತು ಇವೆರಡೂ ಪ್ರದೇಶಗಳನ್ನು ಕ್ರಿ.ಶ. 1125–26ರಲ್ಲೂ ಆಳುತ್ತಿದ್ದ.

8. ' ಮಾಹಿಷ್ಮತಿಯ ದೊರೆ ' ಎಂಬ ಬಿರುದಾಂಕಿತನಾದ ಹೈಹಯ ವಂಶದ ಮಹಾಮಂಡಳೇಶ್ವರ ಯನೆಮರಸ. ಈತನು ಕ್ರಿ.ಶ. 1045ರಲ್ಲಿ ಹಳೆಯ ಹೈದರಾಬಾದ ಸಂಸ್ಥಾನದಲ್ಲಿಯ ಕಮ್ಮರವಾಡಿಯ ನೆರೆಯ ಪ್ರದೇಶವನ್ನಾಳುತ್ತಿದ್ದ.

9. ಕರಾಡ—ಕೊಲ್ಲಾಪುರಗಳ ಶಿಲಾಹಾರವಂಶದ ಮಹಾಮಂಡಳೇಶ್ವರ ಗಂಡರಾದಿತ್ಯ—ಕ್ರಿ.ಶ. 1109ರಲ್ಲಿ ಮತ್ತು 1118-19ರಲ್ಲಿ ಈತನು ತನ್ನ ಆನುವಂಶಿಕ ಪ್ರದೇಶಗಳನ್ನಾಳುತ್ತಿದ್ದ.

10. ಪಾಂಡ್ಯ ಮಹಾಮಂಡಳೇಶ್ವರ ತ್ರಿಭುವನಮಲ್ಲ ಕಾಮದೇವ—'ನಗರೋತ್ತಮ ಗೋಕರ್ಣದ ದೊರೆ' ಎಂಬ ಬಿರುದುಳ್ಳವನೀತ. ಕೊಂಕಣ ರಾಷ್ಟ್ರಾಧಿಪನೆಂದೂ ಈತನಿಗೆ ಹೆಸರಿತ್ತು.

11. ಹೊಯ್ಸಳ ಮಹಾಮಂಡಳೇಶ್ವರ ವಿಷ್ಣುವರ್ಧನ—ಇವನು ಕ್ರಿ.ಶ. 1117ರಲ್ಲಿ ಗಂಗವಾಡಿ 96,000 ವನ್ನಾಳುತ್ತಿದ್ದ.

12. ಖಚರವಂಶದ ಜೀಮೂತವಾಹನನ ಪೀಳಿಗೆಯ ಮಹಾಮಂಡಳೇಶ್ವರ ಪೆರ್ಮಾಡಿ—ಕ್ರಿ.ಶ. 1121-22ರಲ್ಲಿ ಈತನು ಬಸವೂರು 140ನ್ನಾಳುತ್ತಿದ್ದ.

13. ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವ—ಇವನು ಕ್ರಿ.ಶ. 1121-22ರಲ್ಲಿ ನೊಳಂಬವಾಡಿ 32,000 ವನ್ನಾಳುತ್ತಿದ್ದ.

14. ಕೊಂಕಣ ಶಿಲಾಹಾರ ಮನೆತನದ ಮಹಾಮಂಡಳೇಶ್ವರ ಇಮ್ಮಡಿ ಜಯಕೇಶಿ — ಈತನು ಕೊಂಕಣ 900,ಪಲಸಿಗೆ 1200, ಪಪ್ಪೆ ಅಥವಾ ಹವ್ಯೆ 600 ಮತ್ತು ಕಾವಡಿ ದ್ವೀಪ ಒಂದೂಕಾಲು ಲಕ್ಷ ಗಳನ್ನಾಳುತ್ತಿದ್ದ.

ಧಾರವಾಡ ಜಿಲ್ಲೆಯ ಡಂಬಳದಲ್ಲೊಂದು ಕುತೂಹಲಕಾರಿಯಾದ ಶಾಸನವಿದೆ[೮೮]. ಅದರ ಕಾಲ ಕ್ರಿ.ಶ. 1095. ಆ ನಗರದಲ್ಲಿಯ ಬುದ್ಧವಿಹಾರಕ್ಕೆ ಮತ್ತು ಆರ್ಯ ತಾರಾದೇವಿಗೆ ಒಂದು ದತ್ತಿಯಿತ್ತ ಸಂಗತಿಯನ್ನು ಅದು ಉಲ್ಲೇಖಿಸುತ್ತಿದೆ. ಹನ್ನೆರಡನೆಯ ಶತಕದ ವರೆಗೆ ಕನ್ನಡ ನಾಡಿನಲ್ಲಿ ಬೌದ್ಧಮತವು ಪ್ರಚಲಿತವಿತ್ತೆಂದು ಇದರಿಂದ ತಿಳಿದುಬರುತ್ತಿದೆ. ಕ್ರಿ. ಶ. 1088 - 89ರ ಇನ್ನೊಂದು ಶಾಸನವು ವಿಕ್ರಮಾದಿತ್ಯನು ನರ್ಮದೆಯನ್ನು ದಾಟಿ ಹೋಗಿ, ಆ ನದಿಯ ಆಚೆಯ ದಡದ ರಾಜರನ್ನು ಗೆದ್ದನೆಂದು ತಿಳಿಸುತ್ತಿದೆ[೮೯]. ಕ್ರಿ.ಶ. 1098ರ ಮತ್ತೊಂದು ಶಾಸನವು ಆತನು ನರ್ಮದಾನದಿಯ ತೀರದಲ್ಲಿ ಇನ್ನೂ ವಾಸ್ತವ್ಯ ಮಾಡಿದ್ದುದಾಗಿ ಹೇಳುತ್ತಿದೆ[೯೦]. ಆತನಿಗೆ ಜಯಕರ್ಣ ಮತ್ತು ಸೋಮೇಶ್ವರ ಎಂಬಿಬ್ಬರು ಗಂಡುಮಕ್ಕಳೂ ಒಬ್ಬ ಹೆಣ್ಣು ಮಗಳೂ ಇದ್ದರು. ತನ್ನ ಮಗಳಾದ ಮೈಳಾಲದೇವಿಯನ್ನು ಈತನು ಇಮ್ಮಡಿ ಜಯಕೇಶಿಗೆ ಮದುವೆ ಮಾಡಿಕೊಟ್ಟಿದ್ದನು.

ಆಕೆ ಇಬ್ಬರು ಗಂಡುಮಕ್ಕಳಿಗೆ ಜನ್ಮಕೊಟ್ಟಳು. ಒಬ್ಬನು ಶಿವಚಿತ್ತ ಪೆರ್ಮಾಡಿ, ಇನ್ನೊಬ್ಬ ವಿಜಯಾದಿತ್ಯ. ಈತನ ಇನೊಂದು ಹೆಸರು ವಿಷ್ಣುಚಿತ್ತವಾಣಿಭೂಷಣ. ಧಾರವಾಡದ ಹತ್ತಿರದ ನರೇಂದ್ರದಲ್ಲಿ ಮೈಳಾಲದೇವಿ ಮತ್ತು ಆಕೆಯ ಪತಿ ಜಯಕೇಶಿ ಇವರು ಕೊಟ್ಟ ದತ್ತಿಗಳ ಶಿಲಾಶಾಸನಗಳು ದೊರೆತಿವೆ. ಕಾಳಗಿಯ ಕ್ರಿ.ಶ. 1102ರ, ಸಿಂದಗಿಯ ಕ್ರಿ.ಶ. 1120ರ ಮತ್ತು ಕೊಣ್ಣೂರ ಕ್ರಿ.ಶ. 1121ರ—ಈ ಮೂರು ಶಾಸನಗಳಲ್ಲಿ ಚಂದಲಾದೇವಿಗೆ ಹುಟ್ಟಿದ ಜಯಕರ್ಣನು ಉಲ್ಲೇಖ ಗೊಂಡಿದ್ದಾನೆ. ಆತನನ್ನು ಈ ಶಾಸನಗಳಲ್ಲಿ ಮಹಾಮಂಡಲೇಶ್ವರನೆಂದು ಕರೆಯಲಾಗಿದೆ. ಅನಂತರದ ಶಾಸನಗಳಲ್ಲಿ ಈತನ ಹೆಸರು ಕಂಡುಬಾರದ್ದರಿಂದ ಬಹುಶಃ ಈತನು ತಂದೆಗಿಂತ ಮೊದಲೇ ತೀರಿಕೊಂಡಿರಬೇಕು.

ವಿಕ್ರಮಾದಿತ್ಯನು ಕ್ರಿ.ಶ. 1126ರಲ್ಲಿ ಐವತ್ತು ವರುಷಗಳ ವೈಭವದ ಆಳಿಕೆಯ ತರುವಾಯ ಪಕ್ವವಾದ ವೃದ್ಧಾಪ್ಯದಲ್ಲಿ ನಿಧನಹೊಂದಿದ.

ವಿಕ್ರಮಾದಿತ್ಯನ ಉಳಿದ ಎರಡನೆಯ ಮಗನಾದ ಮುಮ್ಮಡಿ ಸೋಮೇಶ್ವರನು ಕ್ರಿ.ಶ. 1126ರಲ್ಲಿ ಪಟ್ಟಕ್ಕೆ ಬಂದ.[91] ಈತನು "ಭೂಲೋಕಮಲ್ಲ"ನೆಂಬ ಬಿರುದನ್ನು ಧರಿಸಿದ. ಈತನು "ಸರ್ವಜ್ಞ ಚಕ್ರವರ್ತಿ" ಎಂಬ ಇನ್ನೊಂದು ಬಿರುದಿನಿಂದಲೂ ಭೂಷಿತನಾಗಿದ್ದ. ಕನ್ನಡನಾಡಿನ ತುಂಬೆಲ್ಲ ಈತನಾಳಿಕೆಯ ಹಲವಾರು ಶಿಲಾಶಾಸನಗಳು ದೊರೆಯುತ್ತಿವೆ. ಇವುಗಳಲ್ಲನೇಕ ಶಾಸನಗಳು ಇವನಾಳಿಕೆಯ ವರ್ಷವನ್ನೊಳಗೊಂಡು ರಚಿತವಾಗಿದ್ದು ಶಕವರ್ಷವನ್ನೂ ತಳೆದಿವೆ.

ಇವನಾಳಿಕೆ ಶಾಂತಿಯುತವಾಗಿತ್ತೆಂದು ಕಂಡುಬರುತ್ತಿದೆ. ಈತನಾಳಿಕೆಯ ಕೊನೆಯ ವರೆಗೆ ಕಲ್ಯಾಣವೇ ಈತನ ರಾಜಧಾನಿಯಾಗಿತ್ತು. ಈತನು ಪಂಡಿತನಾಗಿದ್ದ. ಕ್ರಿ.ಶ. 1130ರಲ್ಲಿ ಎಂದರೆ ತನ್ನ ಆಳಿಕೆಯ ನಾಲ್ಕನೆಯ ವರುಷ "ಅಭಿಲಷಿತಾರ್ಥಚಿಂತಾಮಣಿ" ಅಥವಾ "ಮಾನಸೋಲ್ಲಾಸ" ಎಂಬ ಜ್ಞಾನಕೋಶದಂತಹ ಉದ್ಗ್ರಂಥವನ್ನು ರಚಿಸಿದ. ಈತನಾಳಿಕೆಯಲ್ಲಿ ಸೈನಿಕ ಆಕ್ರಮಣಗಳಾವುದನ್ನೂ ಈತ ಕೈಕೊಂಡಂತೆ ಕಂಡುಬರುವುದಿಲ್ಲ. ಆದರೆ ಬಳ್ಳಿಗಾವೆಯ ಶಾಸನವೊಂದು ಈತನು ದಕ್ಷಿಣಕ್ಕೆ ದಿಗ್ವಿಜಯ ಹೊರಟು ಹುಲ್ಲುನಿಯತೀರ್ಥ ಎಂಬಲ್ಲಿ ತಂಗಿದ್ದನೆಂದು ಉಲ್ಲೇಖಿಸುತ್ತದೆ.[92] ಕದಂಬತೈಲನ ಬಿನ್ನಹದಂತೆ ಈತ ಕೇದಾರೇಶ್ವರ ದೇವಾಲಯಕ್ಕೆ ದತ್ತಿಗಳನ್ನು ಬಿಟ್ಟನೆಂದೂ ತಿಳಿದುಬಂದಿದೆ. ಈತನಿಗೆ ಪೆರ್ಮ ಅಥವಾ ಹೆಮ್ಮಾಡಿ ಮತ್ತು ತೈಲಪ ಎಂಬಿಬ್ಬರು ಗಂಡುಮಕ್ಕಳಿದ್ದರು. ಒಂದು ಶಾಸನಗದ್ಯದಲ್ಲಿ ಸೋಮೇಶ್ವರನು ಚಂದ್ರನಿಗಿಂತ ಶ್ರೇಷ್ಠನೆಂದು ಬಣ್ಣಿಸಲ್ಪಟ್ಟಿದ್ದಾನೆ.[93] ಕ್ರಿ.ಶ. 1138ರಲ್ಲಿ ಈತನು ನಿಧನಹೊಂದಿರಬೇಕೆಂದು ಕಂಡುಬರುತ್ತಿದೆ. ಯಾಕೆಂದರೆ ಕ್ರಿ.ಶ. 1138ರ ಶಾಸನವೇ ಆತನ ಕೊನೆಯ ಶಾಸನವಾಗಿದೆ. ಆತನ ಕಾಲದ ಶಾಸನಗಳಿಂದ ಈ ಕೆಳಗಿನವರು ಆತನ ಮಂಡಲೇಶ್ವರರು ಮತ್ತು ಇತರ ಅಧಿಕಾರಿಗಳೆಂದು ತಿಳಿದುಬಂದಿದೆ :—

1. ಕಲಚೂರಿ ವಂಶದ ಮಹಾಮಂಡಲೇಶ್ವರ ಪೆರ್ಮಾಡಿ : ಕ್ರಿ.ಶ. 1128ರಲ್ಲಿ ಈತನು ತರ್ದವಾಡಿ ದೇಶವನ್ನು ಆಳುತ್ತಿದ್ದ.

2. ಗೋವೆಯ ಕದಂಬ ವಂಶದ ಮಹಾಮಂಡಲೇಶ್ವರ ಇಮ್ಮಡಿ ಜಯಕೇಶಿ : ಕ್ರಿ.ಶ. 1128ರಲ್ಲಿ ಈತನು ಕೊಂಕಣ 900 ಮತ್ತು ಪಲಸಿಗೆ 12,000ಗಳನ್ನಾಳುತ್ತಿದ್ದ.

3. ಹಾನಗಲ್ಲು ಕದಂಬವಂಶದ ಮಹಾಮಂಡಲೇಶ್ವರ ಇಮ್ಮಡಿ ತೈಲಪ : ಕ್ರಿ.ಶ. 1129ರಲ್ಲಿ ಈತನು ಬನವಾಸಿ 12,000 ಮತ್ತು ಪಾನುಂಗಲ್ಲ 500ಗಳನ್ನಾಳುತ್ತಿದ್ದ.

4. ಕದಂಬವಂಶದ ಇಮ್ಮಡಿ ತೈಲನ ಮಗ ಮಹಾಮಂಡಲೇಶ್ವರ ಮುಮ್ಮಡಿ ಮಯೂರವರ್ಮ: ...ಶ. 1131–32ರಲ್ಲಿ ಈತನು ಬನವಾಸಿ 12,000 ಮತ್ತು ಪಾನುಂಗಲ್ಲ 500 ಮತ್ತು ಸಾಂತಲಿಗೆ ...000ಗಳನ್ನಾಳುತ್ತಿದ್ದ.

5. ಕರಾಡ—ಕೊಲ್ಲಾಪುರಗಳ ಶಿಲಾಹಾರವಂಶದ ಮಹಾಮಂಡಲೇಶ್ವರ ಗಂಡರಾದಿತ್ಯ: ...ಶ. 1135-56ರಲ್ಲಿ ತನ್ನ ಆನುವಂಶಿಕ ಪ್ರಾಂತ್ಯಗಳನ್ನಾಳುತ್ತಿದ್ದ.

6. ಹೊಯ್ಸಳ ಮಹಾಮಂಡಲೇಶ್ವರ ವಿಷ್ಣುವರ್ಧನ, ಕ್ರಿ.ಶ. 1137ರಲ್ಲಿ ಗಂಗವಾಡಿ, ನೊಳಂಬ ಮತ್ತು ಬನವಾಸಿ ಪ್ರಾಂತ್ಯಗಳನ್ನು ಆಳುತ್ತಿದ್ದ.

7. ವೀರಪಾಂಡ್ಯದೇವ, ಕ್ರಿ.ಶ. 1138-39ರಲ್ಲಿ ನೊಳಂಬವಾಡಿ 32,000ನ್ನು ಉಚ್ಚಂಗಿದುರ್ಗದ ...ಲ್ಲಿಯ ವಾಸಸ್ಥಳದಿಂದ ಆಳುತ್ತಿದ್ದ.

...ಮ್ಮಡಿ ಸೋಮೇಶ್ವರನ ತರುವಾಯ ಆತನ ಹಿರಿಯ ಮಗ ಪೆರ್ಮ ಅಥವಾ ಹೆಮ್ಮಾಡಿಯು ...ಜಗದೇಕಮಲ್ಲನೆಂಬ ಬಿರುದಾಂಕಿತನಾಗಿ ಪಟ್ಟಕ್ಕೆ ಬಂದ. ಈತನ ಶಾಸನಗಳು ಈತನನ್ನು "ಪ್ರತಾಪ ..." ಎಂದು ಬಣ್ಣಿಸಿವೆ. ಕ್ರಿ.ಶ. 1138ರ ಕೊನೆಯಲ್ಲಿ ಇಲ್ಲವೆ 1139ರ ಆರಂಭದಲ್ಲಿ ಈತನು ...ಶ. ಈತನ ಆಳಿಕೆಯ ಎರಡನೆಯ ವರುಷದಲ್ಲಿ ರಚಿತವಾದ ಜೂನ್-ಜುಲೈ 1139ರದ್ದೇ ಈತನ ...ನಲನೆಯ ಶಾಸನ. ಈತನಾಳಿಕೆ ಕ್ರಿ.ಶ. 1149ರ ವರೆಗೆ ಎಂದರೆ ಹನ್ನೆರಡು ವರುಷಗಳ ಕಾಲ ... ಈತನ ಆಳಿಕೆ ತುಂಬ ಶಾಂತ ವಾತಾವರಣದಿಂದ ಕೂಡಿತ್ತೆಂದು ಕಾಣುತ್ತದೆ. ಈತನಾಳಿಕೆಗೆ ... ಶಾಸನಗಳು ಹಲವಾರಿವೆ. ಈತನು ತನ್ನ ಆನುವಂಶಿಕ ರಾಜಧಾನಿಯಾಗಿದ್ದ ಕಲ್ಯಾಣ ...ಜ್ಯಭಾರ ನಡೆಸಿದ್ದ. ಈತನ ಶಾಸನಗಳು ಈ ಕೆಳಗಿನ ಮಂಡಲೇಶ್ವರರನ್ನೂ ಅಧಿಕಾರಿಗಳನ್ನೂ ...ವೆ :—

...ವುಣ ದೇಶದ ಯಾದವ ವಂಶದ ಮಹಾಮಂಡಲೇಶ್ವರ ಸೇವುಣದೇವ. ಈತನು ತನ್ನ ...ದೇಶವನ್ನು ಕ್ರಿ.ಶ. 1142ರಲ್ಲಾಳುತ್ತಿದ್ದ.

...ಮಂಡಲೇಶ್ವರ ಕಪ್ಪದೇವರಸ: ಈತನು "ಪಟ್ಟಾಭಿಷಿಕ್ತರಾಣಿ"ಯ ಮಗನೆಂದು ...94.

...ಪ್ರಧಾನ ಸೇನಾಧಿಪತಿ ಕನ್ನಡ ಸಂಧಿವಿಗ್ರಹಿ ಮತ್ತು ಹಿರಿಯ ದಂಡನಾಯಕ ಬಮ್ಮನಯ್ಯ ...ರಸ : ಕ್ರಿ.ಶ. 1143-44ರಲ್ಲಿ ಈತನು ಬನವಾಸಿ 12000 ವನ್ನಾಳುತ್ತಿದ್ದ. ಕ್ರಿ.ಶ. ...ನು ತರ್ದವಾಡಿ 100, ಬೆಳವೊಲ 300, ಹುಲಿಗೆರೆ 300, ಪಾನುಂಗಲ್ಲು 500, ...ನ್ನು ಆಳುತ್ತಿದ್ದ.

...ಲ್ಲಿ ಶಿಲಾಹಾರ ವಂಶದ ಮಹಾಮಂಡಲೇಶ್ವರ ವಿಜಯಾದಿತ್ಯ: ಈತನು ...ನ್ನು ಆನುವಂಶಿಕ ಪ್ರಾಂತ್ಯವನ್ನಾಳುತ್ತಿದ್ದ.

5. ಸಿಂದವಂಶದ ಮಹಾಮಂಡಲೇಶ್ವರ ಜಗದೇಕಮಲ್ಲ ಪೆರ್ಮಾಡಿ: ಕ್ರಿ.ಶ. 1144-45ರಲ್ಲಿ ಈತನು ಕಿಸುಕಾಡು 60, ಬಾಗಡಿಗೆ 70, ಕೆಲವಾಡಿ 300 ಮತ್ತು ನರೆಯಂಗಲ್ 12ಗಳನ್ನು ಆಳುತ್ತಿದ್ದ.

6. ಮಹಾಪ್ರಧಾನ, ಹೆರಿಲಾಳ ಸಂಧಿವಿಗ್ರಹಿ, ಸೇನಾಧಿಪತಿ, ದಂಡನಾಯಕ ಕೇಶಿರಾಜ ಅಥವಾ ಕೇಶಿಮಯ್ಯ: ಕ್ರಿ.ಶ. 1147-48ರಲ್ಲಿ ಈತನು ಬೆಳವೊಲ 300, ಪಲಸಿಗೆ 12,000 ಮತ್ತು ಪಾನುಂಗಲ್ಲು 500ಗಳನ್ನು ಆಳುತ್ತಿದ್ದ.

7. ಮಹಾಮಂಡಲೇಶ್ವರ ವೀರಪಾಂಡ್ಯದೇವ: ಈತನು ನೊಳಂಬವಾಡಿ 32,000ವನ್ನಾಳುತ್ತಿದ್ದ.

8. ಪಟ್ಟಿ ಪೊಂಬುಚ್ಚಪುರದ ಸಾಂತರ ವಂಶದ ಮಹಾಮಂಡಲೇಶ್ವರ ತ್ರಿಭುವನಮಲ್ಲ ಜಗದ್ದೇವ: ಈತನು ಕ್ರಿ.ಶ. 1149ರಲ್ಲಿ "ಸೇತುವಿನ ತುಡು" ಎಂಬ ಸ್ಥಳವನ್ನು ಆಳುತ್ತಿದ್ದ. "ಸೇತುವಿನ ತುಡು" ಕನ್ನಡ ಜಿಲ್ಲೆಯಲ್ಲಿ ಎಲ್ಲಿಯೋ ಒಂದೆಡೆ ಇರುವುದೆಂದು ಬಿ. ರಾಯಿಸ್ ಅವರು ಗೊತ್ತು ಪಡಿಸಿದ್ದಾರೆ.

ಗೋವೆಯ ಕದಂಬ ಕುಲದ ಜಗದ್ದೇವ ಮತ್ತು ಇಮ್ಮಡಿ ಜಯಕೇಶಿ ಇವರು ಸಹೋದರಿಯರಾದ ಚಟ್ಟಲದೇವಿ ಮತ್ತು ಬಿಜ್ಜಳದೇವಿಯರ ಮಕ್ಕಳು[95]. ಜಗದೇಕಮಲ್ಲನ ಆಳಿಕೆಯಲ್ಲಿ ಕಲಚೂರಿ ವಂಶದ ಬಿಜ್ಜಳ ಅಥವಾ ಬಿಜ್ಜಣನು ಉನ್ನತಾಧಿಕಾರದಲ್ಲಿದ್ದ. ಬಿಜ್ಜಣನ ಕೈಕೆಳಗಿನಧಿಕಾರಿಯಾಗಿ ವಿಜಯಪಾಂಡ್ಯ ದೇವನು ನೊಳಂಬವಾಡಿಯನ್ನಾಳುತ್ತಿದ್ದನು. ಈತನಾಳಿಕೆಯಲ್ಲಿ ಹೊಯ್ಸಳ ವಿಷ್ಣುವರ್ಧನನು ಮತ್ತೆ ತೊಂದರೆಯುಂಟು ಮಾಡಿದನು. ಆತನು ಇವನ ನೆರೆಹೊರೆಯವರ ರಾಜ್ಯಗಳನ್ನು ಮುತ್ತಿ, ತನ್ನ ರಾಜ್ಯದ ಗಡಿಗಳನ್ನು ವಿಸ್ತರಿಸಿದನು. ಸಿಂದವಂಶದ ಮೊದಲನೆಯ ಪೆರ್ಮಾಡಿಗೆ ಈ ದಂಗೆಯನ್ನಡಗಿಸುವ ಕಾರ್ಯವನ್ನು ಮತ್ತೆ ಕೊಡಲಾಯಿತು. ಆತನು ಕುಲಶೇಖರಾಂಕನನ್ನು ಸದೆಬಡಿದು, ಚಟ್ಟನನ್ನು ಮುತ್ತಿ, ಜಯಕೇಶಿಯನ್ನು ಬೆನ್ನಟ್ಟಿದ. ಆತನು ಹೊಯ್ಸಳ ರಾಜಧಾನಿಯಾದ ದೋರಸಮುದ್ರದ ಮೇಲೆ ದಾಳಿಯಿಟ್ಟು ಬೇಲೂರನ್ನು ವಶಪಡಿಸಿಕೊಂಡ. ಬಿಟ್ಟಿಗ (ವಿಷ್ಣುವರ್ಧನ) ನು ವಹಡಿಯ ಬೆಟ್ಟಕ್ಕೆ ಓಡಿ ಹೋದ.

ಜಗದೇಕಮಲ್ಲನ ಹೆಂಡಿರ ಬಗೆಗಾಗಲಿ ಗಂಡು ಇಲ್ಲವೆ ಹೆಣ್ಣುಮಕ್ಕಳ ಬಗೆಗಾಗಲಿ ಶಾಸನಗಳು ಯಾವ ವಿವರಗಳನ್ನೂ ಕೊಡುವುದಿಲ್ಲ. ಈತನ ತೀರ ಇತ್ತೀಚಿನ ಶಾಸನವೆಂದರೆ ಕ್ರಿ.ಶ. 1149ರ ಡಿಸೆಂಬರ್ 24ನೆಯ ದಿನಾಂಕದ್ದು[96].

ಇಮ್ಮಡಿ ಜಗದೇಕಮಲ್ಲನ ತಮ್ಮ ಮುಮ್ಮಡಿ ತೈಲನು ಈತನ ತರುವಾಯ ಪಟ್ಟವೇರಿದ. ಇವನಿಗೂ ತೈಲಪ ಮತ್ತು ನೂರ್ಮಡಿ ತೈಲಪನೆಂದು ಹೆಸರುಗಳಿವೆ. ಇವನು "ತ್ರೈಲೋಕ್ಯಮಲ್ಲ" ನೆಂಬ ಬಿರುದನ್ನು ತಳೆದು, ಚಾಲುಕ್ಯ ಚಕ್ರವರ್ತಿಯೆನಿಸಿದ. ಕ್ರಿ. ಶ. 1150 ರಲ್ಲಿ ಇವನು ಸಿಂಹಾಸನವೇರಿದ. ಕಲಚೂರಿ ಬಿಜ್ಜಳನು ಈತನ ತಂದೆಯ ಆಳಿಕೆಯಲ್ಲಿ ಪ್ರಬಲ ಮಂತ್ರಿಯಾಗಿದ್ದು ಆಗಿನಿಂದಲೇ ತನ್ನ ಅಧಿಕಾರ ಸಂಗ್ರಹಣದಲ್ಲಿ ತೊಡಗಿದ್ದ. ಮಂಡಲೇಶ್ವರರಲ್ಲಿ ಅನೇಕರು ಬಿಜ್ಜಳನಿಗೆ ವಿಧೇಯರೆನಿಸಲು ಹವಣಿಸುತ್ತಿದ್ದರು. ತೈಲಪನು ಕೆಲಕಾಲ ಆತನೊಂದಿಗೆ ಸೌಹಾರ್ದದಿಂದಿದ್ದು ಕಲ್ಯಾಣದಿಂದಲೇ ಕ್ರಿ.ಶ. 1155ರ ವರೆಗೆ ರಾಜ್ಯಭಾರ ನಡೆಸಿದ[97]. ಕ್ರಿ.ಶ. 1155ರಲ್ಲಿ ಆತನೇ ಸಾರ್ವಭೌಮನೆಂದು ತಿಳಿಯಲಾಗಿತ್ತು[98]. ಕಾಕತೀಯ ಮತ್ತು ಬಳ್ಳಿಗಾವೆಯ ಶಾಸನಗಳಿಂದ ಕಾಕತೀಯ ರಾಜಮನೆತನದ ಪ್ರೋಲರಾಜನು ತೈಲಪನೊಂದಿಗೆ

ಯುದ್ಧಮಾಡಿ ಆತನನ್ನು ಸೆರೆಹಿಡಿದನೆಂದು ತಿಳಿದುಬರುತ್ತದೆ. ಚಾಲುಕ್ಯ ಸಾರ್ವಭೌಮತ್ವದ ಮೇಲಣ ನಿಷ್ಠೆಯಿಂದ ಆತನು ಅವನನ್ನು ಬಿಡುಗಡೆ ಮಾಡಿದ[೯೯]. ಬಹುಶಃ ಈ ಘಟನೆ ಬಿಜ್ಜಳನಿಗೆ ಇನ್ನಷ್ಟು ಅಧಿಕಾರಿಗಳನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಸಹಾಯಕವಾಯಿತು. ಬಿಜ್ಜಳನ ಹಿಡಿತದಿಂದ ತಪ್ಪಿಸಿಕೊಳ್ಳಲೆಂದು ಕ್ರಿ.ಶ. 1157ರಲ್ಲಿ ತೈಲನು ಕಲ್ಯಾಣವನ್ನು ಬಿಟ್ಟು ಅಣ್ಣಿಗೇರಿಗೆ ಓಡಿಹೋದ. ಬಿಜ್ಜಳನು ಆತನನ್ನು ಅಲ್ಲಿಯೂ ಬೆನ್ನಟ್ಟಿದಾಗ, ತೈಲನು ಇನ್ನಷ್ಟು ದಕ್ಷಿಣಕ್ಕೆ ಪಲಾಯನಮಾಡಿ ಬನವಾಸಿಯನ್ನು ಸೇರಿದ[೧೦೦]. ಕ್ರಿ.ಶ. 1155ರಿಂದ ತೈಲಪನ ಪ್ರಭಾವ ತಗ್ಗುತ್ತಲೇ ನಡೆಯಿತು. ಚಾಲುಕ್ಯ ಸಾಮ್ರಾಜ್ಯದ ಮಂಡಲೇಶ್ವರರಲ್ಲಿ ಅಧಿಕಾರಿ ವರ್ಗಗಳಲ್ಲಿ ಅನೇಕರು ಬಿಜ್ಜಳನೇ ತಮ್ಮ ಸಾರ್ವಭೌಮನೆಂದು ಗಣಿಸತೊಡಗಿದರು ; ಆದರೂ ತೈಲಪನಿಗೂ ಆತನ ಮಗನಿಗೂ ನಂಬಿಕೆಯ ಅಧಿಕಾರಿಗಳಿನ್ನೂ ಕೆಲವರಿದ್ದರು. ರುದ್ರದೇವನ ಕ್ರಿ.ಶ. 1163ರ ಜನವರಿ 10ನೆಯ ದಿನಾಂಕದ ಅನ್ಮಂಕೊಂಡದ ಶಾಸನವು ಮುಮ್ಮಡಿ ತೈಲಪನ ಮರಣವನ್ನು ಉಲ್ಲೇಖಿಸುತ್ತಿದೆ. ಮುಮ್ಮಡಿ ತೈಲಪನ ಆಳಿಕೆಯ ಹನ್ನೆರಡನೆಯ ವರುಷವು ಕ್ರಿ.ಶ. 1161. ಮುಮ್ಮಡಿ ತೈಲನ ಆಳಿಕೆಗೆ ಸಂಬಂಧಪಟ್ಟ ತೀರ ಇತ್ತೀಚಿನ ಕಾಲಮಿತಿಯಿದು. ಆದುದರಿಂದ ಈ ಕಾಲಮಿತಿಯ ತರುವಾಯದಲ್ಲಿ ಮತ್ತು ಅನ್ಮಂಕೊಂಡ ಶಾಸನದ ದಿನಾಂಕವಾದ ಕ್ರಿ.ಶ. 1163 ಜನವರಿ 9ನೆಯ ದಿನಾಂಕಕ್ಕೆ ಮೊದಲೇ ತೈಲನು ನಿಧನಹೊಂದಿರಬೇಕು.

ಮುಮ್ಮಡಿ ತೈಲನ ಮರಣಾನಂತರದಲ್ಲಿ ಬಿಜ್ಜಳನು ಸರ್ವತಂತ್ರ ಸ್ವತಂತ್ರ ಸಾರ್ವಭೌಮತ್ವದ ಸಕಲ ಬಿರುದು ಬಾವಲಿಗಳನ್ನು ಧರಿಸಿ, ಚಾಲುಕ್ಯ ಸಾಮ್ರಾಜ್ಯದ ಎಲ್ಲ ಪ್ರದೇಶಗಳ ಮೇಲೂ ತನ್ನ ಹಕ್ಕನ್ನು ಸ್ಥಾಪಿಸಿದ. ಇವನೂ ಇವನ ಮಕ್ಕಳೂ ಕ್ರಿ.ಶ. 1183ರ ವರೆಗೆ ಪಟ್ಟವನ್ನು ಭದ್ರವಾಗಿ ಹಿಡಿದಿದ್ದರು.

ಬಿಜ್ಜಳನಿಂದ ಆರಂಭವಾದ ಕಲಚೂರಿ ಮನೆತನದ ಆಳಿಕೆಯ ವೃತ್ತವನ್ನು ಈ ಕೆಳಗೆ ಬೇರೊಂದು ವಿಭಾಗದಲ್ಲಿ ವಿವರಿಸಲಾಗಿದೆ.

ಮಂಡಲೇಶ್ವರರಲ್ಲಿ ಕೆಲವರು ಬಿಜ್ಜಳನ ಆಕ್ರಮಣವನ್ನು ಸಹಿಸಲಾರದವರಾಗಿದ್ದರು. ಕ್ರಿ.ಶ. 1163 ರಲ್ಲಿ ಸಿಂದದ ಮಹಾಮಂಡಲೇಶ್ವರ ಇಮ್ಮಡಿ ಚೌಂಡನು ಮುಮ್ಮಡಿ ತೈಲನ ಸಾಮಂತಾಧಿಕಾರಿಯೆಂದೇ ಹೇಳಿಕೊಳ್ಳುತ್ತಿದ್ದ[೧೦೧]. ಹಾಗೆಯೇ, ಪಾಂಡ್ಯ ಮಹಾಮಂಡಲೇಶ್ವರ, ವಿಜಯ ಪಾಂಡ್ಯದೇವ ಮತ್ತು ಸಿಂದವಂಶದ ಬಿಜ್ಜಳದೇವ ಮತ್ತು ವಿಕ್ರಮದೇವ-ಮೊದಲಾದವರು ಚಾಲುಕ್ಯ ಮನೆತನಕ್ಕೆ ತಮ್ಮ ನಿಷ್ಠೆಯ ಬಲವನ್ನು ತೋರುತ್ತಿದ್ದರು[೧೦೨]. ಇವರೆಲ್ಲರು ಚಾಲುಕ್ಯ ಸಾರ್ವಭೌಮತ್ವವು ಪುನರುತ್ಥಾನಗೊಳ್ಳಬಹುದೆಂಬ ಆಕಾಂಕ್ಷೆಯುಳ್ಳವರಾಗಿದ್ದರು.

ಬಿಜ್ಜಳನ ಜೀವಿತಾವಧಿಯಲ್ಲಿ ಮತ್ತು ಆತನ ತರುವಾಯ ಪಟ್ಟಕ್ಕೆ ಬಂದ ಸೋವಿದೇವ ಅಥವಾ ಸೋಮೇಶ್ವರ ಮತ್ತು ಸಂಕಮ ಇವರ ಆಳಿಕೆಯ ಅವಧಿಯಲ್ಲಿ ಚಾಲುಕ್ಯರಾಳಿಕೆಯನ್ನು ಪುನರುಜ್ಜೀವನಗೊಳಿಸಲು ಕ್ರಿ.ಶ. 1183ರ ವರೆಗೆ ಒಳಗೊಳಗೇ ಹೋರಾಟ ನಡೆದೇ ಇತ್ತು. ಕ್ರಿ.ಶ. 1183ರಲ್ಲಿ ತೈಲಪನ ಮಗ ನಾಲ್ವಡಿ ಸೋಮೇಶ್ವರನು ಕಲಚೂರಿಯರಸನನ್ನು ಸೋಲಿಸಿ ತನ್ನ ರಾಜ್ಯಾಡಳಿತದ ಹಕ್ಕನ್ನು ಪುನರುಚ್ಚರಿಸಿಕೊಂಡ. ಸೋಮೇಶ್ವರನಿಗೆ ವೀರಸೋಮೇಶ್ವರನೆಂಬ ಹೆಸರಿತ್ತಲ್ಲದೆ " ತ್ರಿಭುವನ ಮಲ್ಲ "ನೆಂಬ ಬಿರುದನ್ನು ಆತ ತಳೆದಿದ್ದ. ಸೋಮೇಶ್ವರನ ಈ ಗೆಲುವಿಗೆಲ್ಲ ಕಾಮ ಅಥವಾ ಕಾವಣನ ಮಗ ದಂಡನಾಯಕ ಬ್ರಹ್ಮನೆಂಬವನು ಕಾರಣನಾಗಿದ್ದ. ಬ್ರಹ್ಮನು ಸೋಮೇಶ್ವರನ ದಂಡನಾಯಕನಾಗಿದ್ದನಲ್ಲದೆ ಮಂತ್ರಿಯೂ ಆಗಿದ್ದ. ಬ್ರಹ್ಮನ ಹೆಸರು ಶಾಸನಗಳಲ್ಲಿ ಬಮ್ಮ, ಬಮ್ಮಣ, ಬಮ್ಮಯ್ಯ, ಬಮ್ಮರಸ ಮತ್ತು ಬಮ್ಮಿದೇವ ಮೊದಲಾದ ನಾನಾ ರೂಪಗಳಲ್ಲಿ ಕಂಡುಬರುತ್ತಿದೆ. ಇವನನ್ನು " ಚಾಲುಕ್ಯರಾಜ್ಯ ಪ್ರತಿಷ್ಠಾಪಕ "ನೆಂದು ಕರೆಯಲಾಗಿದೆ[೧೦೩]. ಈತನ ತಂದೆ ಕಾವ ಅಥವಾ ಕಾವಣನು

ಕಲಚೂರ್ಯರಾಜ ಸಂಕಮನ ದಂಡನಾಯಕನಾಗಿದ್ದ. ಆತನು ಹರಿಹರದ ಶಾಸನದಲ್ಲಿ "ಕಲಚೂರ್ಯ ರಾಜ್ಯಸಮುದ್ಧರಣ"ನೆಂದು ಬಣ್ಣಿಸಲ್ಪಟ್ಟಿದ್ದಾನೆ[104]. ಅಲ್ಲದೆ ಅವನು ಸಂಕಮನ ಸಕಲ ಸೈನ್ಯ ಪಡೆಗಳ ಪ್ರಧಾನ ಗಂಡಾಧೀಶನೆಂದೂ ವರ್ಣಿಸಲ್ಪಟ್ಟಿದ್ದಾನೆ[105].

ನಾಲ್ವಡಿ ಸೋಮೇಶ್ವರನ ಶಾಸನಗಳ ಸಂಖ್ಯೆ ದೊಡ್ಡದಿಲ್ಲ. ಇವನನ್ನು "ಚಾಲುಕ್ಯ ಚಕ್ರವರ್ತಿ" ಮತ್ತು "ಚಾಲುಕ್ಯ ಪ್ರತಾಪ ಚಕ್ರವರ್ತಿ" ಎಂದು ಮೊದಲಾಗಿ ಉಲ್ಲೇಖಿಸಲಾಗಿದೆ. ಮೊದಮೊದಲು ಈತನು ಅಣ್ಣಿಗೇರಿಯಲ್ಲಿ ನೆಲಸಿ, ಅನಂತರ ಕಲ್ಯಾಣದ ರಾಜಧಾನಿಯನ್ನು ಮರಳಿ ಸಂಪಾದನೆ ಮಾಡಿದ.

ನಾಲ್ವಡಿ ಸೋಮೇಶ್ವರನ ಜೀವಿತಾವಧಿಯ ಕೊನೆಕೊನೆಯ ಕಾಲಮಿತಿಯ ದಿನಾಂಕ ಕ್ರಿ.ಶ. 1189ರ ಡಿಸೆಂಬರ್ 25[106]. ದೇವಗಿರಿ ಯಾದವ ಮನೆತನದ ಭಿಲ್ಲಮರಾಜನು ಈ ಹೊತ್ತಿಗೆ ಚಾಲುಕ್ಯ ರಾಜ್ಯದ ಉತ್ತರ ಮತ್ತು ಪೂರ್ವ ಪ್ರದೇಶಗಳನ್ನು ಆಕ್ರಮಿಸಿದ್ದ[107]. ಇಮ್ಮಡಿ ವೀರಬಲ್ಲಾಳನ ನೇತೃತ್ವದಲ್ಲಿ ಹೊಯ್ಸಳರು ಈ ರಾಜ್ಯದ ದಕ್ಷಿಣದ ಪ್ರದೇಶಗಳನ್ನು ವ್ಯಾಪಿಸಿದ್ದರು. ಗದಗಿನ ಶಾಸನವೊಂದು ಹೊಯ್ಸಳ ರಾಜನು ದಂಡಾಧಿಪ ಬ್ರಹ್ಮನನ್ನು ಸೋಲಿಸಿ, ಸಾರ್ವಭೌಮತ್ವವನ್ನು ಸಂಪಾದಿಸಿದನೆಂದು ಉಲ್ಲೇಖಿಸುತ್ತಿದೆ[108]. ದಕ್ಷಿಣದ ಕಡೆಯಿಂದ ಹೊಯ್ಸಳರು ಉತ್ತರದ ಕಡೆಯಿಂದ ಯಾದವರು ತಂತಮ್ಮ ರಾಜ್ಯವಿಸ್ತರಣೆಗಾಗಿ ಮುನ್ನುಗ್ಗುತ್ತಿರುವಾಗ, ನಾಲ್ವಡಿ ಸೋಮೇಶ್ವರನು ತನ್ನ ಆನುವಂಶಿಕ ರಾಜ್ಯದ ಅತ್ಯಲ್ಪ ಭಾಗವೊಂದರ ಮೇಲೆ ಸಾರ್ವಭೌಮತ್ವವನ್ನು ಉಳಿಸಿಕೊಂಡಿದ್ದ. ಅನಂತರದ ಅಲ್ಪಕಾಲಾವಧಿಯಲ್ಲಿಯೇ ಈತನು ನಿಧನಹೊಂದಿರಬೇಕು. ಈತನೊಂದಿಗೆ ಕಲ್ಯಾಣ ಚಾಲುಕ್ಯ ಮನೆತನವು ಕೊನೆಗೊಂಡಿತು.

## ಅಡಿ ಟಿಪ್ಪಣಿಗಳು

1. ಸವುನ್ಗಡ್ ದತ್ತಿಶಾಸನ : I.A. ಸಂ. XI ಪು. 108
2. I.A. ಸಂ. XX ಪು, 69
3. I.A. ಸಂ. XXI ಪು. 18
4. Dr. Fleet : D.K.D. ಪು. 399 ಟಿಪ್ಪಣಿ 7
5. E.C. ಸಂ. I ಮೈಸೂರು ನಂ. 35
6. E.C. ಸಂ. I ಮೈಸೂರು ನಂ. 36, 37, 41, ಮತ್ತು 44
7. ಪಂಪನ ವಿಕ್ರಮಾರ್ಜುನ ವಿಜಯ : ಆಶ್ವಾಸ 1 ಪದ್ಯ 15-50
8. Dr. Altekar : Rashtrakutas ಪು. 51, ಅಡಿಟಿಪ್ಪಣಿ 11
9. ಪಂಪ : ವಿಕ್ರಮಾರ್ಜುನ ವಿಜಯ, ಆ. 1, ಪ. 26
10. Dr. D.C. Ganguli : " Eastern Chalukyas'' "ಪೂರ್ವದ ಚಾಲುಕ್ಯರು, ಪು. 67-68
11. ಅದೇ ಪು. 75
12. Dr. Fleet : D.K.D. Bombay Gazetteer ಸಂ. 1. ಭಾ. 1, ಪು. 381
13. Dr. N. Venkataramaniah 'Eastern Chalukyas' ಪು. 85
14. Dr. Fleet : D.KD. Gazetteer ಸಂ. 1. ಭಾ. 1. ಪು, 364 ಮತ್ತು ಈ ರಾಜಮನೆತನದ ಪಟ್ಟಿಯನ್ನು ಇದರೊಂದಿಗೆ ಪು. 336 ರಲ್ಲಿ ಇರಿಸಿದೆ.

15. Dr. N. Venkataramaniah, 'Eastern Chalukyas', ಪು. 126
16. ವೇಮುಲವಾಡ ಶಾಸನ : H.J.A. H.R.S.
17. ಪಂಪ, 'ವಿಕ್ರಮಾರ್ಜುನ ವಿಜಯ' 1, 5, 44
18. I.A., ಸಂ. XVI. ಪು. 15
19. ನೋಡಿ : ಕೌಠೆಮ್, ನೀಲ್‌ಗುಂದ, ಯೇವೂರ್ ಮತ್ತು ಮಿರಜ ದತ್ತಿಶಾಸನಗಳು
20. ರನ್ನ : ಗದಾಯುದ್ಧ, ಆಶ್ವಾಸ II, ಪ. 7ರ ತರುವಾಯದ ವಚನ.
21. ಗದಗಿನ ವೀರನಾರಾಯಣ ದೇವಾಲಯದಲ್ಲಿ ದೊರೆತ ಕ್ರಿ.ಶ. 1098ರ ಶಾಸನವು ಇಮ್ಮಡಿ ತೈಲನ ಆಳಿಕೆ ಶ್ರೀಮುಖ ಸಂವತ್ಸರದಿಂದ ಪ್ರಾರಂಭವಾಯಿತೆಂದು ನಿರ್ಣಯಿಸುತ್ತಿದೆ. ಇದು ಶಕಸಂವತ್ಸರದ 896ರಲ್ಲಿ ಬರುವುದು. ಈ ಶಾಸನವು ಹೀಗೆ ಉಲ್ಲೇಖಿಸುತ್ತಿದೆ : "ಇವನು ರಟ್ಟರನ್ನು ಪದಚ್ಯುತಿಗೊಳಿಸಿ ನಾಶಪಡಿಸಿದ ; ಶೂರ ಮುಂಜನನ್ನು ಕೊಂದು ಹಾಕಿದ; ಯುದ್ಧದಲ್ಲಿ ಪಾಂಚಾಳನ ತಲೆಯನ್ನು ಕೊಂಡ ; ಮತ್ತು ಚಾಲುಕ್ಯ ಮನೆತನದ ಅರಸೊತ್ತಿಗೆಯ ಘನತೆಯನ್ನು ವಹಿಸಿ ಶ್ರೀಮುಖ ಸಂವತ್ಸರದಿಂದ ಇಪ್ಪತ್ತನಾಲ್ಕು ವರುಷ ಕಾಲ ರಾಜ್ಯಭಾರ ಮಾಡಿದ. ಡಾ. ಫ್ಲೀಟ್ : D.K.D. ಪು. 426.
22. E.I. ಸಂ. I. ಪು. 225-26
23. I.A. ಸಂ. XVI. ಪು. 19
24. J.R.A.S. ಸಂ. III, ಪು. 262 St. 30-35 I.A. ಸಂ. VIII. ಪು. 16-17
25. J.B.B.R.A.S. Soc. ಸಂ. X. ಪು. 204
26. ಧಾರವಾಡ ಜಿಲ್ಲೆಯ ನೀಲಗುಂದ ಮತ್ತು ತಾಳಗುಂದ (ಮೈಸೂರು)ದ ಶಾಸನಗಳು–ಫ್ಲೀಟ್ : P.S. ಮತ್ತು O.C. ಶಾಸನ ನಂ. 214
27. ಬಾಂಡಾರಶಾಸನ : E.I. ಸಂ. III, ಪು. 269
28. ಸಂಗಮನೇರ್ ದತ್ತಿಶಾಸನ : E.I. ಸಂ. II ಪು. 214-215
29. I.A. ಸಂ. XII, ಪು. 196
30. I.A. ಸಂ. V, ಪು. 17 ಮತ್ತು VIII ಪು. 15
31. Dr. Fleet : D.K.D. ಪು. 431
32. S.I.I. ಸಂ. I, ಪು. 63, 65
33. E.I. ಸಂ. I, ಪು. 227
34. ಮೇರುತುಂಗನ "ಭೋಜಪ್ರಬಂಧ" ಮತ್ತು ರಾಜವಲ್ಲಭನ "ಭೋಜಚರಿತ" E.I. ಸಂ. I, ಪು. 227
35. Dr. Fleet : D.K.D. ಪು. 307
36. "ಗದಾಯುದ್ಧ" ಆಶ್ವಾಸ II, 7ನೆಯ ಪದ್ಯದ ತರುವಾಯ ; "ಅಜಿತ ತೀರ್ಥಂಕರ ಪುರಾಣ" ಆ. I, 41-44
37. P.S. ಮತ್ತು O.C. ಶಾಸನ ನಂ. 178, 219 ಮತ್ತು 116
38. I.A. ಸಂ. II, ಪು. 297
39. K.D.I. ಸಂ. I, ಪು. 30-33
40. E.I. ಸಂ. III, ಪು. 292
41. E.I. ಸಂ. II, ಪು. 212
42. S.I.I. ಸಂ. I, ಪು. 51, 52, 63, 112 ; ಸಂ. II, ಪು. 2, 13
43. ಹೊಟ್ಟೂರು ಶಾಸನ : I.A. ಸಂ. XVI, ಪು. 15
44. K.D.I. ಸಂ. I, ಪು. 37
45. K.D.I. ಪು. 38
46. K.D.I. ಸಂ. I, ಪು. 40

47. ಸೌಮ್ಯ ಸಂವತ್ಸರ 931ರಿಂದ ವಿರೋಧಿಕೃತ್ ಸಂವತ್ಸರ 933
48. ಅರಸೀಬೀದಿ ಶಾಸನ
49. ಸೂಡಿ ಶಾಸನ
50. ಅರಸೀಬೀದಿ ಶಾಸನ
51. ಹೊಟ್ಟೂರು ಶಾಸನ
52. "ಬಸವ ಪುರಾಣ" ಆಶ್ವಾಸ 2 ಮತ್ತು "ಚೆನ್ನಬಸವಪುರಾಣ" ಆಶ್ವಾಸ. VII, ಪ. 10ನ್ನೂ ನೋಡಿ. ಹಿಪ್ಪರಿಗಿಯ ಶಾಸನದಲ್ಲೂ ಸುಗ್ಗಲದೇವಿಯ ಹೆಸರು ಬಂದಿದೆ.
52a. I.A. ಸಂ. XII, ಪು. 122
53. E,I. ಸಂ. I, ಪು. 223-230 ಬಳ್ಳಿಗಾಮೆಶಾಸನ E.C.
54. I.A. ಸಂ. XVII, ಪು. 17
55. I.A. ಸಂ. VIII, ಪು. 18
56. S.I.I. ಸಂ. I, ಪು. 51, 52, 94, 96, 113
57. ಗದಗಿನ "ತ್ರಿಕುಟೇಶ್ವರ ದೇವಾಲಯ"ದ ಕ್ರಿ.ಶ. 1102ರ ಶಾಸನ "ಚಾಲುಕ್ಯ ವಿಕ್ರಮ ಕಾಲ"ದ 27ನೆಯ ವರುಷ
58. I.A. ಸಂ. II, ಪು. 297
59. "ಪಟ್ಟದರಸಿ", ನಿಂಬರಗಿ ಶಾಸನ: ಕ್ರಿ.ಶ. 1047–48ರದ್ದು "Karn. Desa Inscr." ಸಂ. I, ಪು. 92
60. ತಿಳವಳ್ಳಿ ಶಾಸನ: ಕ್ರಿ.ಶ. 1053-54ರದ್ದು. "Karn Desa Inscr" ಸಂ.I, ಪು, 122
61. ಹೊನವಾಡದ ಶಾಸನ: I.A. ಸಂ. XIX ಪು. 268
62. ಅಕ್ಟೋ-ನವೆಂ. ಕ್ರಿ.ಶ. 1044
63. ಗುಡಿಕಟ್ಟಿ ಶಾಸನ: ಸಂಪಗಾಂವ್ ತಾಲೂಕು - ಬೆಳಗಾಂವಿ ಜಿಲ್ಲೆ. 'ಪಶ್ಚಿಮ ಭಾರತ'ದಲ್ಲಿ ಶಾಸನ ವರ್ಷವನ್ನು ಸೂಚಿಸಿರುವ ಸಂಖ್ಯಾವಾಚಿ ಶಬ್ದಗಳ ಬಳಕೆ ಇದ್ದ ಇದಕ್ಕೂ ಪ್ರಾಚೀನ ಶಾಸನ. Dr. Fleet: D.K.D.. B. 439
64. ಹೊನವಾಡ ಶಾಸನ: I.A. ಸಂ. XIX ಪು. 271
65. ಮುಳಗುಂದ ಶಾಸನ: K.D.I. ಸಂ. I, ಪು. 122
66. ಬಂಕಾಪುರ ಶಾಸನ: K.I.A. ಪು. 200
67. ದೇವೂರು ಶಾಸನ: K.D.I. ಸಂ. I, ಪು. 173
68. "ವಿಕ್ರಮಾಂಕ ದೇವಚರಿತ"
69. K.D.I. ಸಂ. I ಪು. 177
70. "ವಿಕ್ರಮಾಂಕದೇವಚರಿತ"
71. ಜಟಂಗ ರಾಮೇಶ್ವರ ಶಾಸನ: ಚಿತ್ರದುರ್ಗ. ಫ್ಲೀಟ್, D.K.D. ಪು. 443
72. ನೀರಲಗಿ ಶಾಸನ: D.K.D. ಪು 444
73. ಗದಗ ಶಾಸನ: ಕ್ರಿ.ಶ. 1098. D.P. 444 ಮತ್ತು 4 6
74. ಕಲಗಿ ಶಾಸನ: D.K.D. ಪು. 444
75. ಚೈತ್ರ ಶುಕ್ಲ 1 ನಳಸಂವತ್ಸರ ಶಕಸಂವತ್ 999. ಫ್ಲೀಟ್, D.K.D. ಪು. 446. ಆತನ ಹೆಸರು 'ವಿಕ್ರಮಾಂಕ (ವೀರಭಾಸ್ಕರ)' (Sun of Valour) ಮತ್ತು 'ಕಲಿವಿಕ್ರಮ' ಎಂದು ಬಂದಿದೆ. 'ಕಲಿಯುಗದ ವಿಕ್ರಮ' ಅಥವಾ 'ವೀರವಿಕ್ರಮ' (Brave Vikrama) 'ತ್ರಿಭುವನ ಮಲ್ಲ' ಎಂಬ ಬಿರುದು ಆತನಿಗಿತ್ತು. 'ಪೆರ್ಮ' ಎಂದೂ ಆತನನ್ನು ಕರೆಯಲಾಗಿದೆ. ಇದು ಕನ್ನಡದ ಪಿರಿದು—ಪೆರ್ (= ಘನ) ಪದದಿಂದ ಬಂದುದು. ಸಂಸ್ಕೃತದ 'ಮಹಾ' ಎಂಬರ್ಥದ್ದು: 'ಪೆರ್ಮಾಡಿ'

ಸಂಸ್ಕೃತ 'ಮಹ ಪಾದ'ದ ಸಂವಾದಿಶಬ್ದ. 'ಪಾದ' ಶಬ್ದ ಸಮಾಸದಲ್ಲಿ ಘನೆ ಇಲ್ಲವೆ 'ಪಾವನ (holiness) ಎಂಬರ್ಥದ ಸೂಚಕ. ಯಾವ ಮನುಷ್ಯನ ಹೆಸರಿನೊಂದಿಗೆ ಈ ಪದವು ಕೂಡಿರುವುದೊ ಆತನ 'ಮಹಿಮೆ' ಅಥವಾ 'ಪಾವನತೆ'ಯನ್ನು ಸೂಚಿಸುತ್ತದೆ. ಉದಾ :-'ಗೌಡಪಾದ', 'ಭಗವತ್ಪಾದ'

76. 'ವಿಕ್ರಮಾಂಕ ಚರಿತ'

77. ನೀಲಗಿರಿ ಶಾಸನ–ಅಕ್ಟೋಬರ್ ಕ್ರಿ.ಶ. 1074. Dr. Fleet : D.K.D., ಪು. 44

78. ಗದಗ ಶಾಸನ K.D.I., ಸಂ, I, ಪು. 370

79. ಸೂಡಿಶಾಸನ : ಅಣ್ಣಿಗೇರಿಶಾಸನ, K.D.I. ಸಂ. I, ಪು. 216

80. "Early History of Dekhan". Bhandarkar, 'Bombay Gazetteer' ಸಂ. I, ಭಾ I, ಪು. 224

81. ಕ್ರಿ.ಶ. 1098ರ ಗದಗಿನ ಶಾಸನ : ಕ್ರಿ.ಶ. 1094-95ರ ಎಡರಾವೆಯ ಶಾಸನ

82. "ವಿಕ್ರಮಾಂಕದೇವ ಚರಿತ"ದ ಮುನ್ನುಡಿ ಪು, 43

83. E.C. ಸಂ. VII, ಶಿಕಾರಿಪುರ 297 ; E.C. ಸಂ. VII. Sk. 297

84. ಶ್ರವಣಬೆಳಗೊಳದ ಶಾಸನ, ಮುನ್ನುಡಿ, ಪು. 39, E.C. ಸಂ. 2

85. J.B.B.R.A.S., ಸಂ. XI, ಪು. 24, 244, 269

86. I.A. ಸಂ. II, ಪು. 302

87. Bhandarkar : "History of the Dekhan" Bombay Gazetteer ಸಂ. I. ಭಾ 1, ಪು. 220

88. I.A., X, ಪು. 185

89. ಯಲವತ್ತಿ ಶಾಸನ, K.D.I., ಸಂ. I, ಪು. 315

90. ನಿಂಬರಗಿ ಶಾಸನ : K.D.I. ಸಂ. I, ಪು. 62

91. ಪ್ರಭವ ಸಂವತ್ಸರ : ಶಕಸಂವತ್ 1049

92. E.C. ಸಂ. VII, ಶಿಕಾರಿಪುರ ನಂ. 100

93. "ಶಾಸನ ಪದ್ಯಮಂಜರಿ", ಪು 65–66

94. "ಪಟ್ಟಮಹಿಷಿಯರಣಂಗಂ" ("ಶಾಸನ ಪದ್ಯಮಂಜರಿ")

95. Dr. Fleet : D.K.D., ಪು. 458, ಟಿಪ್ಪಣಿ 2

96. Dr. Fleet : D.K.D., ಪು. 459

97. ಕೆಂಭಾವಿ ಶಾಸನ : K.D.I. ಸಂ. II, ಪು. 4

98. P.S.O.C.I. : ನಂ. 181 : "Mysore Inscriptions" ನಂ. 45 ಪು. 100 : "Bombay Gazetteer" ಸಂ. I, ಭಾಗ I, ಪು. 460

99. I.A. ಸಂ. XI ಪು. 120/B

100. J.R.A.S., ಸಂ. IV, ಪು. 16

101. ಪಟ್ಟದಕಲ್ಲು ಶಾಸನ : J.B.B.R.A.S., ಸಂ. XI, ಪು. 259

102. "ದೇವನಾಗರಿ ಶಾಸನ". E.C. ಚಿತ್ರದುರ್ಗ "Bombay Gazetteer" ಸಂ. I, ಭಾ. I, ಪು. 463 ಐಹೊಳೆ ಶಾಸನ : I A. ಸಂ. IX, ಪು. 19

103. ಅಣ್ಣಿಗೇರಿ ಶಾಸನ : K.D.I., ಸಂ. II, ಪು. 37

104. E.C., ಹರಿಹರ

105. "ಸಮಗ್ರಸೇನಾಗ್ರೇಸರಮ್", I.A., ಸಂ. V, ಪು. 46

106. ಹಾನಗಲ್ಲ ಶಾಸನ, K.D.I., ಸಂ. II, ಪು. 49

107. "ಮುತ್ತಿಗಿ ಮತ್ತು ಅಣ್ಣಿಗೇರಿ ಶಾಸನಗಳು"

108. I.A., ಸಂ. II, ಪು. 299.

## ಕಲ್ಯಾಣದ ಚಾಲುಕ್ಯರ ವಂಶಾವಳಿ

(1) ಇಮ್ಮಡಿತೈಲ : ಹೆಂಡತಿ-ಬೊಂತಾದೇವಿ ಕ್ರಿ.ಶ. 973-992

(2) ಸತ್ಯಾಶ್ರಯ ಇರಿವಬೆಡಂಗ
ಕ್ರಿ.ಶ. 997-1008

ದಶವರ್ಮ : ಹೆಂಡತಿ-ಭಾಗ್ಯವತಿ

ಮಹಾದೇವಿ : ಗಂಡ-ಇರಿವನೊಳಂಬಾಧಿರಾಜ

(3) 5ನೆಯ ವಿಕ್ರಮಾದಿತ್ಯ
ಕ್ರಿ.ಶ. 1008-15

(8) ಅಯ್ಯಣ
ಕ್ರಿ.ಶ. 1015-?

ಅಕ್ಕಾದೇವಿ

(5) ಇಮ್ಮಡಿ ಜಯಸಿಂಹ
ಕ್ರಿ.ಶ. 1015-42

(6) ಮೊದಲನೆಯ ಸೋಮೇಶ್ವರ
ಕ್ರಿ.ಶ. 1042-68

ಅವ್ವಲದೇವಿ : ಗಂಡ-ಮುಮ್ಮಡಿ
ಸೇವುಣ ಭಿಲ್ಲಮ

(2) ಇಮ್ಮಡಿ ಸೋಮೇಶ್ವರ
ಕ್ರಿ.ಶ. 1068-76

(8) ಆರನೆಯ ವಿಕ್ರಮಾದಿತ್ಯ
ಕ್ರಿ.ಶ. 1076-1126

ಮುಮ್ಮಡಿ ಜಯಸಿಂಹ

ಜಯಕರ್ಣ

(9) ಮುಮ್ಮಡಿ ಜಗದೇಕಮಲ್ಲ

(10) ಪೆರ್ಮ-ಇಮ್ಮಡಿ ಜಗದೇಕಮಲ್ಲ
ಕ್ರಿ.ಶ. 1138-55

(11) ಮುಮ್ಮಡಿ ತೈಲಪ
ಕ್ರಿ.ಶ. 1149-63

(12) ಮುಮ್ಮಡಿ ಜಗದೇಕಮಲ್ಲ
ಕ್ರಿ.ಶ. 1163-82

(13) ನಾಲ್ವಡಿ ಸೋಮೇಶ್ವರ
ಕ್ರಿ.ಶ. 1184-1200

ಮೂಲ ಲೇಖಕರು : ಡಾ॥ ಎಸ್. ಸಿ ನಂದಿಮಠ
ಅನುವಾದಕರು : ಶ್ರೀ ಎಸ್.ಆರ್. ಮಳಗಿ

# ಕಲ್ಯಾಣದ ಕಲಚೂರಿಗಳು

ಈ ವಂಶಕ್ಕೆ ಸಾಮಾನ್ಯವಾಗಿ ಕಲಚೂರಿ ಎಂಬ ಪದವನ್ನು ಉಪಯೋಗಿಸಿದರೂ ಕೂಡ. ಕಟಚೂರಿ, ಕಲಟ್ಸೂರಿ, ಕಟಟ್ಚೂರಿ, ಕಲಿಚೂರಿ ಎಂಬ ಪದಗಳೂ ಶಾಸನಗಳಲ್ಲಿ ಕಂಡುಬಂದಿವೆ. ಈ ಪದವು ಹೇಗೆ ಬಂದಿತೆಂದು ತಿಳಿಸುವುದು ಕಷ್ಟ. ಕ್ರಿ.ಶ. 1174ರ ಬಂದಳಿಕೆ ಶಾಸನದಲ್ಲಿ, ಕಲಚೂರಿ ಎಂಬ ಪದವು ಹೇಗೆ ಬಂದಿತೆನ್ನುವುದಕ್ಕೆ ಒಂದು ವಿವರಣೆಯಿದೆ. ದ್ರೋಣಾಚಾರ್ಯರ ಮಗ ಅಶ್ವತ್ಥಾಮನ ಅನುಯಾಯಿ ಅಥವಾ ಶಿಷ್ಯ ಸೋಮನೆಂಬಾತನು ಈ ಸಂತತಿಯ ಸ್ಥಾಪಕನೆಂದು ತಿಳಿದುಬರುತ್ತದೆ. ಸೋಮನಿಗೆ ಗಡ್ಡ ಮತ್ತು ಮೀಸೆಗಳನ್ನು ಚೆನ್ನಾಗಿ ಬೆಳಸಿ ಬ್ರಾಹ್ಮಣನಂತೆ ನಟಿಸಲು ಆತನ ಗುರು ತಿಳಿಸುತ್ತಾನೆ. ಕ್ಷತ್ರಿಯರೆಲ್ಲರನ್ನೂ ಕೊಲ್ಲುವ ಪ್ರತಿಜ್ಞೆ ಮಾಡಿದ್ದ ಪರಶುರಾಮನ ಕ್ರೋಧದಿಂದ ಹೀಗೆ ಸೋಮನನ್ನು ಆತನ ಗುರು ಕಾಪಾಡಿದ್ದ. ಆತನ ಸಂತತಿಯವರು ಕಲ್ಲಿ (ಉದ್ದವಾದ ಮೀಸೆ) ಮತ್ತು ಚೂರಿ (ಕ್ಷೂರಿ–ಬಾಳು) ಹೆಸರನ್ನು ಪಡೆದು ಕಲಚೂರಿಯಾದರು. ಕ್ರಿ.ಶ. 1170ರ ರಾಯಮುರಾರಿ ಸೋವಿದೇವನ ಕಾಲದ ಹರಿಹರ ಶಿಲಾಶಾಸನದಲ್ಲಿ ಶಿವನಿಂದ ಈ ಸಂತತಿ ಉದ್ಭವಿಸಿತು—ಎಂದು ತಿಳಿದು ಬಂದಿದೆ. ಕಲಚೂರಿಗಳು ಶಿವನಿಂದಲೇ (ಶಿವಾಂಶ ಸಂಭೂತ) ಉದ್ಭವಿಸಿದರೆಂದು ಅವರ ಶಾಸನಗಳಲ್ಲಿ ವಿವರಿಸಲ್ಪಟ್ಟಿದೆ.

ಉತ್ತರ ಭಾರತದ ಕಲಚೂರಿಗಳು ಅನೇಕ ಶಾಖೆಗಳಾಗಿ ಒಡೆದು ಹೋಗಿ, ಮಧ್ಯ ಮತ್ತು ಉತ್ತರ ಭಾರತದ ವಿವಿಧ ಭಾಗಗಳನ್ನು ಆಳುತ್ತಿದ್ದರು. ಒಂದು ಶಾಖೆಯವರು ಸರಯೂಪುರದಲ್ಲಿ ಆಳುತ್ತಿದ್ದರು. ಅವರನ್ನು ಗೋರಖಪುರದ ಕಲಚೂರಿಗಳೆಂದು ಕರೆದರು. ಮತ್ತೊಂದು ಶಾಖೆಯವರು ರತ್ನಪುರದಿಂದ ಆಳುತ್ತಿದ್ದರು. ಅವರನ್ನು ರತ್ನಪುರ ಅಥವಾ ಟುಮ್ಮಾನಿನ ಕಲಚೂರಿಗಳೆಂದು ಕರೆಯುತ್ತಿದ್ದರು. ಅವರು ರಾಯಪುರ ಶಾಖೆ ಮತ್ತು ರತ್ನಪುರ ಶಾಖೆಯೆಂದೂ ವಿಭಾಗಿಸಲ್ಪಟ್ಟರು. ಅತಿ ಮುಖ್ಯವಾದ ಮತ್ತೊಂದು ಶಾಖೆಯು, ದಹಲ ಮಂಡಲವೆಂದು ಕರೆಯಲ್ಪಡುತ್ತಿದ್ದ ವಿಶಾಲ ರಾಜ್ಯ ವಿಂಧ್ಯಪ್ರದೇಶದಲ್ಲಿನ ಜಬ್ಬಲ ಪುರದ ಹತ್ತಿರದ ಇಂದಿನ ತೇವರ್ ಎಂಬ ತ್ರಿಪುರಿ ಪ್ರದೇಶದಿಂದ ಆಳುತ್ತಿದ್ದರು. ಇವರನ್ನು ಚೇದಿಯ ಕಲಚೂರಿಗಳೆಂದು ಕರೆಯುತ್ತಿದ್ದರು. ಶಾಸನಗಳಿಂದ ತಿಳಿದುಬಂದಿರುವ ಮತ್ತೊಂದು ಶಾಖೆಯು ಇದೆ. ಈ ಶಾಖೆಯವರು ಮಾಹಿಷ್ಮತಿಯ ಕಲಚೂರಿಗಳೆಂದು ಕರೆಯಲ್ಪಟ್ಟಿದ್ದಾರೆ. ಈ ಶಾಖೆಯೇ ಅತ್ಯಂತ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಇತಿಹಾಸದಲ್ಲಿ ಕಂಡು ಬರುವಂತೆ ಈ ಶಾಖೆಯಲ್ಲಿನ ಮೊದಲನೆಯವನ ಕಾಲವು ಕ್ರಿ.ಶ. 550–571 ಇರಬೇಕೆಂದು ಸೂಚಿತವಾಗಿದೆ. ಸುಮಾರು 650ರಲ್ಲಿ ಸರಯೂಪುರ ಶಾಖೆಯು ಅಸ್ತಿತ್ವಕ್ಕೆ ಬಂತು. ಈ ಶಾಖೆಯ ಒಂದನೆಯ ಶಂಕರಗಣ ಎಂಬವನ ಕಾಲ 620–650 ಇರಬೇಕೆಂದು ತಿಳಿದಿದೆ. ಮೂರನೆಯ ಶಾಖೆ, ಚೇದಿ ಕಲಚೂರಿ ಶಾಖೆಯು ವಾಮರಾಜ ಅಥವಾ ವಾಮದೇವನಿಂದ ಸುಮಾರು 675ರಲ್ಲಿ ಆರಂಭವಾಯಿತು. ಕೊನೆಯ ರತ್ನಪುರ ಶಾಖೆಯು ಕ್ರಿ.ಶ. ಸುಮಾರು 1000ದಲ್ಲಿ ಕಳಿಂಗರಾಜ ಎಂಬವನಿಂದ ಅಸ್ತಿತ್ವ ಪಡೆಯಿತು. ಈ ಎಲ್ಲ ಶಾಖೆಗಳೂ ಒಂದೇ ಮೂಲದಿಂದ ಬೆಳೆದಿವೆ. ಅವರ ಪರಂಪರೆ ಬ್ರಹ್ಮ, ಅತ್ರಿ, ಸೋಮ, ಬುಧ, ಪೂರೂರವ, ಆಯುಷ್, ನಹುಷ, ಯಯಾತಿ, ಯದು, ಸಹಸ್ರದಾ, ಹೈಹಯ, ಕಾರ್ತವೀರ್ಯ, ಅರ್ಜುನ—ಮುಂತಾದವರನ್ನು ಒಳಗೊಂಡಿದೆ. ಕ್ರಿ.ಶ. 6ನೆ ಶತಮಾನದಲ್ಲಿ ಕಲಚೂರಿ ವಂಶದವನೊಬ್ಬ ಕ್ರಮವಾಗಿ ಅಯೋಮುಖನನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಕಲಂಜರವನ್ನು ಆಕ್ರಮಿಸಿದನು. ಈ ಕುಟುಂಬದಲ್ಲಿ ಮೂಜಗಗಳಿಗೂ

ಭೂಷಣನಂತಿರುವ ಶಂಕರಗಣನು ಜನಿಸಿದನು. ಈತನ ಬಗ್ಗೆ ಸಂತುಷ್ಟನಾದ ಶಿವನು ತನ್ನ ಗೂಳಿಯ ಚಿಹ್ನೆಯನ್ನು ಇವನಿಗೆ ಕೊಟ್ಟನು. ಅಲಹಾಬಾದಿನಿಂದ ವಾಯುವ್ಯಕ್ಕೆ 90 ಮೈಲಿ ದೂರವಿರುವ ಬಂಡಾ ಜಿಲ್ಲೆಯಲ್ಲಿರುವ ಕಲಂಜರ ಕೋಟೆಯು ಶಿವಭಕ್ತರಿಗೆ ಪವಿತ್ರವಾದದ್ದು. ಅದು ಉತ್ತರ ಭಾರತದ ಒಂಭತ್ತು ಪುಣ್ಯ ಸ್ಥಳಗಳಲ್ಲಿ ಒಂದೆಂದು ಹೇಳಲಾಗಿದೆ (ಪದ್ಮಪುರಾಣ ನೋಡಿ: ಸ್ವರ್ಗಖಂಡ, 39–54). ಕಲಚೂರಿಗಳು ಕಲಂಜರವು ತಮ್ಮ ಮೂಲಸ್ಥಾನವೆಂದಿದ್ದಾರೆ. ಮತ್ತು ತಾವು ಹೈಹಯ ಪಂಗಡದಿಂದ ಬಂದವರೆಂದು ಹೇಳಿಕೊಂಡಿದ್ದಾರೆ. ಇತಿಹಾಸದಲ್ಲಿ ತಿಳಿದುಬಂದಿರುವ ಮೊದಲನೆ ರಾಜ ಕೃಷ್ಣರಾಜ (ಕ್ರಿ.ಶ. 550–571). ಅವನ ಮಗ ಶಂಕರಗಣ, ಮತ್ತು ಮೊಮ್ಮಗ ಬುದ್ಧರಾಜ—ಇವರು "ಪಶುಪತಿ" ಮಹೇಶ್ವರನನ್ನು ಪೂಜಿಸುತ್ತಿದ್ದರು.

ಕಲಚೂರಿಯವರ ಬಗ್ಗೆ ಮೊದಲ ಉಲ್ಲೇಖಗಳು ತಾರೀಕಿಲ್ಲದ ನೆರೂರು ತಾಮ್ರ ಶಾಸನದಲ್ಲಿಯೂ ಮಂಗಲೀಶನ ಕ್ರಿ.ಶ. 602ರ ಮಹಾಕೂಟ ಶಿಲಾಶಾಸನದಲ್ಲಿಯೂ ಕ್ರಿ.ಶ. 643ರ ಇಮ್ಮಡಿ ಪುಲಿಕೇಶಿಯ ಐಹೊಳೆ "ಪ್ರಶಸ್ತಿ"ಯಲ್ಲಿಯೂ ಕಂಡುಬರುತ್ತವೆ. ಇವುಗಳಲ್ಲಿ ತಿಳಿದು ಬರುವಂತೆ ಬಾದಾಮಿ ಚಾಲುಕ್ಯರ ರಾಜ ಮಂಗಲೀಶನು ಶಂಕರಗಣನ ಪುತ್ರ ಬುದ್ಧರಾಜನನ್ನು ಸೋಲಿಸಿ, ಕಲಚೂರಿಗಳ ಯಶೋಲಕ್ಷ್ಮಿಯನ್ನು ಅಪಹರಿಸಿದ. ಅಂದಿನ ಕಲಚೂರಿಗಳ ಸಮಕಾಲೀನ ಶಾಸನಗಳಂತೆ, ಕಲಚೂರಿ ಸಂತತಿಯ ಒಂದು ಶಾಖೆಯು ಗುಜರಾತ್, ಖಾನ್‌ದೇಶ ಮತ್ತು ಮಾಳವಗಳ ಕೆಲವು ಪ್ರದೇಶಗಳನ್ನು ಆಳುತ್ತಿತ್ತೆಂದು ತಿಳಿಯುತ್ತದೆ. ಮಂಗಲೀಶನಿಂದ ಸೋಲಿಸಲ್ಪಟ್ಟ ಬುದ್ಧರಾಜನು ಕಲಚೂರಿಗಳ ಈ ಶಾಖೆಗೆ ಸೇರಿದವನು.

ಒಂದನೆ ಸೋಮೇಶ್ವರನ ಮಹಾಮಂಡಲೇಶ್ವರನಾಗಿ ಬಿಜ್ಜಳದೇವನಿದ್ದನು. ಅವನು ಕ್ರಿ.ಶ. 1064ರಲ್ಲಿ ಬಳ್ಳಾರಿ ಜಿಲ್ಲೆಯ ಉತ್ತಂಗಿ ದುರ್ಗದ ಸುತ್ತಲ ಪ್ರದೇಶವನ್ನಾಳುತ್ತಿದ್ದನು. ಪೆರ್ಮ ಜಗದೇಕ ಮಲ್ಲನ ಕಾಲದಲ್ಲಿ ಮಹಾಮಂಡಲೇಶ್ವರ ರೇವರಸನು ಯೆವೂರಿನ ಹತ್ತಿರದ ಪ್ರದೇಶದಲ್ಲಿ ಆಳುತ್ತಿದ್ದನು. ಹೈಹಯ ಪಂಗಡಕ್ಕೆ ಸೇರಿದವನೆಂದು ಹೇಳಿಕೊಂಡು ಮಾಹಿಷ್ಮತಿಯ ದೊರೆಯೆಂದು ಕರೆದುಕೊಳ್ಳುತ್ತಿದ್ದನು. ಕ್ರಿ.ಶ. 11 ಮತ್ತು 12ನೆ ಶತಮಾನಗಳಲ್ಲಿ ಕಲಚೂರಿಯ ಒಂದು ಉಪಶಾಖೆಯವರು ಇಂದಿನ ಬಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳನ್ನೊಳಗೊಂಡ ತರ್ದವಾಡಿ ಪ್ರಾಂತ್ಯವನ್ನು, ಮಂಗಳವಾಡ ಕೇಂದ್ರದಿಂದ ಮಹಾಮಂಡಲೇಶ್ವರರಾಗಿ ಆಳುತ್ತಿದ್ದರು. ಸೊಲ್ಲಾಪುರ ಜಿಲ್ಲೆಯ ಪಂಡರಾಪುರ ಗ್ರಾಮದ ಹತ್ತಿರದ ಮಂಗಳವೇಡೆಯೇ ಮಂಗಳವಾಡವಾಗಿರಬೇಕೆಂದು ಊಹಿಸಲಾಗಿದೆ. ಈ ಕಲಚೂರಿ ಶಾಖೆಯು ದಖನ್ನಿನ ಇತಿಹಾಸದಲ್ಲಿ ಕ್ರಿ.ಶ. 12ನೆ ಶತಮಾನದಲ್ಲಿ ಒಂದು ಪ್ರಮುಖ ಪಾತ್ರ ವಹಿಸಿತು.

ಕಲ್ಯಾಣದಲ್ಲಿ ಕಲಚೂರಿಯರ ಆಳಿಕೆಯನ್ನಾರಂಭಿಸಿದ ಬಿಜ್ಜಳನ ಪೂರ್ವಿಕರು ಚೇದಿ ಕಲಚೂರಿ ರಾಜವಂಶಕ್ಕೆ ಸೇರಿದವರಾಗಿದ್ದರು. ಈ ಹೇಳಿಕೆಗೆ ಬಿಜ್ಜಳನ ಕನ್ನಡ ಶಾಸನಗಳು ಆಧಾರ ಒದಗಿಸುತ್ತವೆ. ಬಿಜಾಪುರ ಜಿಲ್ಲೆಯಲ್ಲಿನ ಮುತ್ತಗೆ ಶಾಸನ (1170 ಕ್ರಿ.ಶ.) ಮುಂದೆ ತಿಳಿಸಿದ ವಿಷಯವನ್ನು ಹೇಳುತ್ತದೆ. "ಕಲಚೂರಿಯ ಶಾಖೆಯ ರಾಜರೆಲ್ಲರೂ ಚಕ್ರವರ್ತಿಗಳು. ಅವರಲ್ಲಿ ಕೆಲವರು ದುರ್ಬಲರಾಗಿದ್ದರು. ಆದುದರಿಂದ ಅವರು ಮಾಂಡಲಿಕರ ಸ್ಥಾನಕ್ಕಿಳಿಸಲ್ಪಟ್ಟರು. ಮಾಂಡಲಿಕತ್ವವು ತನ್ನ ಕುಟುಂಬದ ಗೌರವಕ್ಕೆ ಧಕ್ಕೆ ತರುತ್ತದೆಂದು ಬಿಜ್ಜಳನು ಯೋಚಿಸಿದನು" (I.N.K.K. P. 31). ಈ ವಿಷಯವನ್ನು ಕ್ರಿ.ಶ. 1163ರ ಕದ್ಲಿವಾಡ ಶಾಸನ ಹಾಗೂ ಕ್ರಿ.ಶ. 1162ರ ಹರಿಹರ ಶಾಸನಗಳು ಸಮರ್ಥಿಸುತ್ತವೆ. ಈ ಶಾಸನಗಳಿಂದ ಬಿಜ್ಜಳ ಮತ್ತು ಆತನ ಉತ್ತರಾಧಿಕಾರಿಗಳು ಕಲಚೂರಿ ವಂಶದ ಘನತೆಯ ವಿಚಾರವನ್ನು ಅರಿತಿದ್ದರೆಂದು ತಿಳಿಯುತ್ತದೆ. ಮಾಂಡಲಿಕರಾಗಿ ಬೇರೆಯವರ ಅಡಿಯಾಳಾಗಿರುವ ಬಗ್ಗೆ ಅವರಿಗೆ ಸಮಾಧಾನವಿರಲಿಲ್ಲ.

ಕಲ್ಯಾಣದ ಕಲಚೂರಿಗಳು ಚೇದಿ ಕಲಚೂರಿ ಸಂತಾನಕ್ಕೆ ಸೇರಿದ್ದರೂ ಅವರು ಕರ್ನಾಟಕದಲ್ಲಿ ಯಾವಾಗ ಬಂದು ನೆಲಸಿದರು ಮತ್ತು ಅವರು ಯಾವ ಶಾಖೆಗೆ ಸೇರಿದವರೆಂಬುದು ಸರಿಯಾಗಿ ತಿಳಿದು ಬಂದಿಲ್ಲ. ಅವರ ಕನ್ನಡ ಶಾಸನಗಳಿಂದ ಅವರ ಪೂರ್ವಿಕರ ವಿಚಾರ ಕೆಲವು ತಲೆಮಾರುಗಳ ಹಿಂದಿನ ವರೆಗೆ ಮಾತ್ರ ತಿಳಿದಿದೆ. ವಿವರಗಳು ಗೊತ್ತಾಗುವುದಿಲ್ಲ. ಕ್ರಿ.ಶ. 1057ಕ್ಕೆ ಒಂದನೆಯ ಸೋಮೇಶ್ವರನ ಕಾಲದ ಚಡಚಣ ಶಾಸನವು ಮಂಗಳವಾಡದ ಮಹಾ ಮಂಡಲೇಶ್ವರ ಬಿಜ್ಜರಸನನ್ನು ಉಲ್ಲೇಖಿಸಿದೆ. ಅವನು ' ಕಲಂಜರ ಪುರವರಾಧೀಶ್ವರ '. ' ಕಲಚುರ್ಯ ಕುಲ ಕಮಲ ಮಾರ್ತಾಂಡ ' ಮುಂತಾದ ಬಿರುದು ಗಳನ್ನು ಹೊಂದಿದ್ದನು. ಇವುಗಳಿಂದ ಅವನು ಕಲ್ಯಾಣದ ಕಲಚೂರಿಗಳ ವಂಶಸ್ಥನೆಂದೂ ಕ್ರಿ.ಶ. 1057 ರಲ್ಲಿ ಮಂಗಳವಾಡದಿಂದ ಆಳುತ್ತಿದ್ದನೆಂದೂ ಸಿದ್ಧವಾಗುತ್ತದೆ. ಅಲ್ಲಿಯ ಮತ್ತೊಂದು ಶಾಸನದ ಪ್ರಕಾರ ಕನ್ನಮರಸ ಅಥವಾ ಕೃಷ್ಣರಾಜ ಮಂಡಲೇಶ್ವರನು ಮಂಗಳವಾಡದಿಂದ ಆಳುತ್ತಿದ್ದು, ಐವತ್ತೇಳು ಕದನ ಗಳಲ್ಲಿ ಗೆದ್ದು ಹನ್ನೆರಡು ಮನ್ನೆಯರನ್ನು ಕೊಂದನು. ಈ ಶಾಸನದ ಕಾಲ ಕ್ರಿ.ಶ. 1067 ಆಗಿರುತ್ತದೆ. ಕ್ರಿ.ಶ. 1162ರ ಬಿಜ್ಜಳನ ಕಾಲದ ಮತ್ತೊಂದು ಶಾಸನವು ಈ ಕೆಳಗಿನ ವಿಷಯವನ್ನು ಸೂಚಿಸುತ್ತದೆ :

" ಶಿವನು ತನ್ನ ಕನಸಿನಲ್ಲಿ ಚಿತ್ರಿಸಿಕೊಂಡ ಬ್ರಾಹ್ಮಣ ಕನ್ಯೆಯೊಬ್ಬಳು ಕೃಷ್ಣನೆಂಬ ಗಂಡು ಮಗುವನ್ನು ಪಡೆದಳು. ಈತನು ಕಲಂಜರದ ನರಭಕ್ಷಕ ದುಷ್ಟರಾಜನೊಬ್ಬನನ್ನು ಕೊಂದನು. ಕ್ಷೌರಿಕ ವೃತ್ತಿಯುವನಾದ ಕೃಷ್ಣನು ಒಂಬತ್ತು ಲಕ್ಷದ ಡಹಲು ದೇಶವನ್ನು ವಶಪಡಿಸಿಕೊಂಡನು. ಆತನ ಸಂತತಿಯ ಅನೇಕ ರಾಜರುಗಳು ಆಳಿದನಂತರ ಕನ್ನಮದೇವನು ಬಂದನು. ಅವನಿಗೆ ಬಿಜ್ಜ ಮತ್ತು ರಾಜ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಬಿಜ್ಜನು ರಾಜ್ಯವನ್ನು ಆಳುತ್ತಿದ್ದನು. ರಾಜ ಎಂಬವನನಿಗೆ ಅಮ್ಮುಗಿ, ಶಂಖವರ್ಮ, ಕನ್ನರ ಮತ್ತು ಜೋಗಮ ಎಂದು ನಾಲ್ಕು ಜನ ಗಂಡುಮಕ್ಕಳಿದ್ದರು. ಅಮ್ಮುಗಿ ಎಂಬವನು ಮೊದಲು ಆಳಿದನು. ಅನಂತರ ತರಿಕದ ಜೋಗಮ ಎಂದು ಕರೆಯಲ್ಪಟ್ಟ ಜೋಗಮನು ಮಂಗಳವಾಡದಿಂಡ ಆಳಿದನು. ಅವನಿಗೆ ಪೆರ್ಮಾಡಿ ಎಂಬ ಮಗನಿದ್ದನು. ಅವನ ಪುತ್ರನೇ ಬಿಜ್ಜಳದೇವ."

ಈ ಸಂತತಿಯ ನಿಜವಾದ ವಂಶಾವಳಿಯನ್ನು ಬಿಜ್ಜರಸ, ಕನ್ನಮ ಮತ್ತು 6ನೆ ವಿಕ್ರಮಾದಿತ್ಯನ ಮಾವ ಜೋಗಮನಿಂದ ಆರಂಭಿಸಬಹುದು. ಜೋಗಮನ ಮಗ ಪೆರ್ಮಾಡಿಯು ಮೂರನೆ ಸೋಮೇಶ್ವರನ ಸಮಕಾಲೀನನಾಗಿದ್ದು ಕ್ರಿ.ಶ. 1228ರಲ್ಲಿ ಮಂಗಳವಾಡದಿಂದ ತರ್ದವಾಡಿ ಅಥವಾ ತಡ್ಡವಾಡಿ 1,000ವನ್ನು ಆಳುತ್ತಿದ್ದನು. ಅವನನ್ನು ಪೆರ್ಮಾಡಿ, ಪರಮರ್ದಿ ಅಥವಾ ಹೆಮ್ಮಾಡಿ ರಾಯನೆಂದು ಕರೆಯುತ್ತಿದ್ದರು. ಕಲ್ಯಾಣಿ ಕಲಚೂರ್ಯರಲ್ಲಿ ಪ್ರಬಲನಾದ ಬಿಜ್ಜಳನೇ ಅವನ ಪುತ್ರ. ಅವನಿಗೆ ಬಿಜ್ಜ, ಬಿಜ್ಜಳ, ವಿಜ್ಜಳ ಮತ್ತು ಬಿಜ್ಜಣ ಎಂಬ ಇತರ ಹೆಸರುಗಳೂ ಇದ್ದವು. ಅವನ ಹೆಸರು ಮೊದಲು ಕ್ರಿ.ಶ. 1142ರ ಬಿಜಾಪುರದ ಶಾಸನದಲ್ಲಿ " ಬಿಜ್ಜಳ ಕ್ಷೋಣಿಪಾಲ " ಎಂದು ಸೂಚಿಸಲ್ಪಟ್ಟಿದೆ. ತರ್ದವಾಡಿಯನ್ನು ಆಳಲು ನೇಮಿಸಲ್ಪಟ್ಟ ಮೈತರಯ್ಯನೆಂಬ ಅಧಿಕಾರಿಯ ಹೆಸರಿನ ಜೊತೆ ಈ ಉಲ್ಲೇಖವಿದೆ. ಬಿಜ್ಜಳನನ್ನು ಮಹಾಮಂಡಲೇಶ್ವರನೆಂದು ಕರೆಯುತ್ತಿದ್ದರು. ಆದರೆ, ಅನಂತರ ದಂಡನಾಯಕ ಮತ್ತು ಮಹಾ ಪ್ರಧಾನನೆಂದು ಅವನನ್ನು ಕರೆಯಲಾಗಿದೆ. ವಳಸಂಗದ ಶಾಸನವೊಂದರಲ್ಲಿ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯು ಬಿಜ್ಜಳನ ಮುತ್ತಬ್ಬೆಯೆಂದು ತಿಳಿಸಲಾಗಿದೆ.

ಸುಮಾರು ಕ್ರಿ.ಶ. 1150ರಲ್ಲಿ ಮೂರನೆಯ ತೈಲಪನು ಕಲ್ಯಾಣದ ಚಕ್ರವರ್ತಿಯಾಗಿ ಜಗದೇಕ ಮಲ್ಲನ ಮರಣಾನಂತರ ಸಿಂಹಾಸನವೇರಿದನು. ಇಷ್ಟರಲ್ಲಿ ಬಿಜ್ಜಳನು ಪ್ರಭಾವ ಶಾಲಿಯಾಗಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಜಗದೇಕಮಲ್ಲನ ಕಾಲದ ಹರಿಹರದ ಶಾಸನದಲ್ಲಿ ನೊಳಂಬವಾಡಿ 3,200 ಎಂಬ ಪ್ರದೇಶವನ್ನು ಬಿಜ್ಜಳನ ಅಧೀನನಾದ ವೀರಪಾಂಡ್ಯದೇವ ಎಂಬ ಅಧಿಕಾರಿಯು ಆಳುತ್ತಿದ್ದನೆಂದು ಹೇಳಲಾಗಿದೆ. ಮೂರನೆಯ ತೈಲಪನ ಕಾಲದ ಹರಿಹರದಲ್ಲಿನ ಒಂದು ಶಾಸನವು ಬಿಜ್ಜಳನ

ಅಧೀನನಾದ ಬನವಾಸಿ 12,000ದ ಸಾಮಂತ ಕಸಪಯ್ಯ ನಾಯಕನನ್ನು ಉಲ್ಲೇಖಿಸುತ್ತದೆ. ಜಗದೇಕ ಮಲ್ಲ ಅಥವಾ ತೈಲಪನು ಚಕ್ರವರ್ತಿಯಾಗಿದ್ದರೂ, ನೊಳಂಬವಾಡಿ ಮತ್ತು ಬನವಾಸಿ ಮುಂತಾದ ಮುಖ್ಯ ಪ್ರದೇಶಗಳನ್ನಾಳಲು ಮಂಡಲೇಶ ರರನ್ನು ಬಿಜ್ಜಳನೇ ನೇಮಿಸಿದನೆಂದು ಇದರಿಂದ ತಿಳಿದುಬರುತ್ತದೆ. ಈ ಮಂಡಲೇಶ್ವರರು ಬಿಜ್ಜಳನಿಗೇ ನಿಷ್ಠರಾಗಿದ್ದರು. ಬಿಜ್ಜಳನು ಚಾಲುಕ್ಯರ ಇಡೀ ಸೈನ್ಯವನ್ನು ಕಾಪಾಡಿದನೆಂದು ಶಾಸನಗಳು ಹೇಳುತ್ತವೆ. ಬಿಜ್ಜಳನು ಚಾಲುಕ್ಯರ ಪೂರ್ತಿ ಸೈನ್ಯದ ಮಹಾದಂಡನಾಯಕ ನಾಗಿದ್ದನೆಂದೂ ತೈಲನು ಪಟ್ಟಕ್ಕೆ ಬಂದನಂತರ ಚಾಲುಕ್ಯ ಸಾಮ್ರಾಜ್ಯದ ಸೂತ್ರಗಳೆಲ್ಲವೂ ಅವನ ಕೈಯಲ್ಲೇ ಇದ್ದುವೆಂದೂ ಇದರಿಂದ ಅರ್ಥವಾಗುತ್ತದೆ. ಚಾಲುಕ್ಯರ ಪ್ರಮುಖ ಮಾಂಡಲಿಕರ ಬೆಂಬಲ ಪಡೆಯುತ್ತ ಬಿಜ್ಜಳನು ಬಲಶಾಲಿಯಾಗುತ್ತಿದ್ದಂತೆ ಕಾಣಿಸುತ್ತದೆ. ಕಪ್ಪವನ್ನು ಸಲ್ಲಿಸದಿದ್ದ ಕಾಕತೀಯರಾಜ ಪ್ರೋಲನನ್ನು ಶಿಕ್ಷಿಸಲು ಕ್ರಿ.ಶ. 1154–55ರಲ್ಲಿ ಮೂರನೆಯ ತೈಲಪನು ಒಂದು ದಂಡಯಾತ್ರೆಯನ್ನು ನಡೆಸಿದನು. ಆಗ ಅವನು ಬಂಧಿಸಲ್ಪಟ್ಟನು. ಆದರೆ ತೈಲಪನಿಗೆ ನಿಷ್ಠರಾದ ಮಾಂಡಲಿಕರು ಮಧ್ಯಪ್ರವೇಶಿಸಿದ್ದರಿಂದ ಆತನು ಬಿಡುಗಡೆ ಪಡೆದನು. ಬಿಜ್ಜಳನು ತನ್ನ ಸ್ವಾಮಿಯನ್ನು ಕಾಪಾಡಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಬದಲಾಗಿ ಸೈನ್ಯದೊಡನೆ ಕಲ್ಯಾಣವನ್ನು ಪ್ರವೇಶಿಸಿದನು. ತೈಲಪನು ತನ್ನ ಬಿಡುಗಡೆಯ ನಂತರ ಕಲ್ಯಾಣಕ್ಕೆ ಹೋಗಲಿಲ್ಲ, ಬಹುಶಃ ಅವನಿಗೆ ಬಿಜ್ಜಳನ ಮೇಲೆ ಅನುಮಾನ ಮೂಡಿತು. ಆತನು ಧಾರವಾಡ ಜಿಲ್ಲೆಯ ಅಣ್ಣಿಗೇರಿಗೆ ಹೋಗಿ ಅದನ್ನು ಕೆಲವು ದಿನಗಳ ಕಾಲ ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಅನಂತರ ಬನವಾಸಿಗೆ ಹೋದನು. ಬಿಜ್ಜಳನು ಅಕ್ಷರಶಃ ಚಾಲುಕ್ಯ ಸಾಮ್ರಾಜ್ಯದ ರಾಜನಾದನು, ಮತ್ತು ಮೂರು ಲೋಕಗಳನ್ನು ಗೆದ್ದವನು ಅಥವಾ 'ತ್ರಿಭುವನ ಮಲ್ಲ' ಎಂಬ ಬಿರುದನ್ನು ತಳೆದನು. 'ಭುಜಬಲ ಚಕ್ರವರ್ತಿ' ಮತ್ತು 'ಕಲಚೂರಿ ಚಕ್ರವರ್ತಿ' ಎಂಬ ಪ್ರಶಸ್ತಿಯನ್ನು ಧರಿಸಿದನು. ಇವೆರಡು ಪ್ರಶಸ್ತಿಗಳು ಸೇರಿ "ಕಲಚೂರ‍್ಯ ಭುಜಬಲ ಚಕ್ರವರ್ತಿ" ಎಂಬ ಹೆಸರು ಪ್ರಚಲಿತವಾಯಿತು. ಕ್ರಿ.ಶ. 1156–57ರ ಹೊತ್ತಿಗೆ ಈ ಬದಲಾವಣೆಯೆಲ್ಲ ಪೂರ್ಣವಾದಂತೆ ತೋರುತ್ತದೆ. ಮೂರನೆಯ ತೈಲಪನು ಕ್ರಿ.ಶ. 1161ರ ವರೆಗಿದ್ದನು. ಕ್ರಿ.ಶ. 1155ರಿಂದ 1161ರ ವರೆಗೆ ತೈಲಪನು ಹೆಸರಿಗೆ ಮಾತ್ರ ಚಕ್ರವರ್ತಿಯಾಗಿದ್ದನು. ಬಿಜ್ಜಳನು ತನ್ನ ಅಧಿಕಾರವನ್ನು ಕೇಂದ್ರೀಕರಿಸಿ ಕೊಂಡು ಚಾಲುಕ್ಯಸಾಮ್ರಾಜ್ಯದ ನೈಜ ಸಾಮ್ರಾಟನಾದನು. ಮೂರನೆಯ ತೈಲಪನ ಮರಣಾನಂತರ ಅವನು ನಿಯಮಬದ್ಧ ಸಾಮ್ರಾಟನಾಗಿ ಎಲ್ಲ ಸಾಮ್ರಾಟಯೋಗ್ಯ ಬಿರುದುಗಳನ್ನು ತಳೆದುಕೊಂಡು ತನ್ನದೇ ಆದ ಒಂದು ಶಕವನ್ನು ಆರಂಭಿಸಿದನು. ತಾನೇ ಚಕ್ರವರ್ತಿಯೆಂದು ಘೋಷಿಸಿಕೊಂಡು ಅನೇಕ ಆಡಂಬರದ ಬಿರುದುಗಳನ್ನು ಧರಿಸಿದನು. 'ಮಹಾರಾಜಾಧಿರಾಜ', 'ಕಲಂಜಪುರವರಾಧೀಶ್ವರ', 'ಸುವರ್ಣ ವೃಷಭಧ್ವಜ', 'ಡಮರುಕ ತೂರ‍್ಯನಿರ್ಘೋಷಣ', ಮುಂತಾದ ಬಿರುದುಗಳನ್ನು ಶಾಸನಗಳು ತಿಳಿಸುತ್ತವೆ.

ಬಿಜ್ಜಳನು ಸಮರ್ಥನಾದ ರಾಜನಾಗಿದ್ದು ತನ್ನ ಮಾಂಡಲಿಕರನ್ನೆಲ್ಲಾ ಹತೋಟಿಯಲ್ಲಿಟ್ಟಿದ್ದನು. ಆಡಳಿತದಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು. ವೀರಶೈವ ಧರ್ಮ ಅಥವಾ ಲಿಂಗಾಯತ ಪಂಥವೆಂದು ಇಂದು ಪರಿಚಿತವಾಗಿರುವ ಶೈವಧರ್ಮದ ಪುನರುಜ್ಜೀವನಕ್ಕೆ ಅವನ ಕಾಲವು ಪ್ರಸಿದ್ಧವಾಗಿದೆ. ಈ ಧಾರ್ಮಿಕ ಚಳವಳಿಯ ನಾಯಕರು ಆತನ ಮಂತ್ರಿಯಾಗಿದ್ದ ಶ್ರೀ ಬಸವೇಶ್ವರರು. ಬಸವೇಶ್ವರರು ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಮಾದರಸ ಮತ್ತು ಮಾದಲಾಂಬಿಕೆ ಎಂಬವರೇ ಅವರ ಮಾತಾಪಿತೃಗಳು. ಅವರು ಆರಾಧ್ಯ ಬ್ರಾಹ್ಮಣ ಜಾತಿಯ ಶ್ರದ್ಧಾವಂತ ಶೈವರಾಗಿದ್ದು, ತಮ್ಮ ಸ್ವಂತ ಸ್ಥಳದಲ್ಲಿ ಗಣ್ಯಸ್ಥಾನಮಾನದಲ್ಲಿದ್ದರು. ಶಿವನ ವಾಹನ ನಂದಿಯ ವರಪ್ರಸಾದದಿಂದ ಜನಿಸಿದ್ದರಿಂದ ತಮ್ಮ ಮಗನಿಗೆ ಅವರು ಬಸವ (ಸಂಸ್ಕೃತದ ವೃಷಭ ಎಂಬುದರಿಂದ ಬಂದಿದೆ) ಎಂದು ಹೆಸರಿಟ್ಟರು. ಅವನು ಪವಿತ್ರವಾದ ಪರಿಶುದ್ಧವಾದ ಶೈವಸಂಸ್ಕೃತಿಯ ವಾತಾವರಣದಲ್ಲಿ ಬೆಳೆಸಲ್ಪಟ್ಟನು. ಅವನು ಶೈವಗುರುವೊಬ್ಬರಿಂದ ತನ್ನ ವಿದ್ಯಾಭ್ಯಾಸ ಪಡೆದನೆಂದು ಹೇಳಲಾಗಿದೆ. ಶಿವನ ಭಕ್ತನೆಂಬ ಆತನ

... ಮತ್ತು ಕೋಶಾಧ್ಯ... ...ಅಧಿಕಾರಿಯೆನಿಸಿಕೊಂಡರು. ಆಡಳಿತವನ್ನು ಸುಧಾರಿಸಿ ...ದರು. ಶಿವನ ಭಕ್ತರಿಗೆ ಸಹಾಯ ಮಾಡಿದರು. ಆರಂಭದಲ್ಲಿ ಬಿಜ್ಜಳನು ಅವರ ಶೌರ್ಯದ ಬಗ್ಗೆ ಸಂತುಷ್ಟನಾಗಿದ್ದನು. ಅವರ ಕೆಲಸದಲ್ಲಿ ಮಧ್ಯ ಪ್ರವೇಶಿಸಲಿಲ್ಲ. ಬಸವೇಶ್ವರರ ಭಕ್ತಿಭಾವ ಮತ್ತು ಶಿವಭಕ್ತರಿಗೆ ಅವರು ಮಾಡುತ್ತಿದ್ದ ಸಹಾಯ—ಇವುಗಳ ವಾರ್ತೆ ಕೇಳಿ ಭಾರತದ ವಿವಿಧ ಭಾಗಗಳಿಂದ ಬಂದ ಜನ ಅವರ ಸುತ್ತ ನೆರೆದರು. ಅವರೆಲ್ಲರೂ ಮುಕ್ತ ಚಿಂತನೆಯ ಜನರಾಗಿದ್ದು ಜಾತಿನಿಯಮಗಳನ್ನೂ ಸಾಮಾಜಿಕ ಸಂಪ್ರದಾಯಗಳನ್ನೂ ಗಣಿಸದವರಾಗಿದ್ದರು. ಅವರೆಲ್ಲರೂ ಬಸವೇಶ್ವರರ ಹೊಸ ವಿಚಾರಗಳನ್ನು ಪ್ರಚಾರ ಮಾಡಲು ಸಹಾಯ ಮಾಡಿದರು. ಅಂದಿನ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಸುಧಾರಣೆಗೆ ಪಕ್ವವಾಗಿದ್ದವು. ಬಸವೇಶ್ವರರ ಮತ್ತು ಶಿವಶರಣರ ಬೋಧನೆಗಳು ಜನರಿಗೆ ಶೀಘ್ರ ಮನವರಿಕೆಯಾದವು. ಬಸವೇಶ್ವರರು ಬಹಳ ಜನಪ್ರಿಯರಾದರು. ಜನರು ಅವರನ್ನು ಸಂತರೆಂದೂ ಶಿವನ ವಾಹನ ನಂದಿಯ ಅವತಾರವೆಂದೂ ಭಾವಿಸಲಾರಂಭಿಸಿದರು.

ಈ ಹೊಸ ಬೋಧೆಗಳನ್ನು ಸಂಪ್ರದಾಯಸ್ಥರು ಸಹಿಸದಾದರು. ಅವರು ರಾಜನಲ್ಲಿ ದೂರಿತ್ತರು. ಇಷ್ಟರಲ್ಲಿ ಬಹುಶಃ ರಾಜನೂ ಕೂಡ, ಬಸವೇಶ್ವರರ ಬೆಳೆಯುತ್ತಿರುವ ಪ್ರಾಮುಖ್ಯವನ್ನು ನೋಡಿ ಅಸೂಯೆಗೊಂಡನು. ರಾಜನ ನಿಲುವನ್ನು ಅರ್ಥಮಾಡಿಕೊಂಡ ಬಸವೇಶ್ವರರು ತಮ್ಮ ಅಧಿಕಾರವನ್ನು ತ್ಯಜಿಸಿ ಕಲ್ಯಾಣವನ್ನು ಬಿಟ್ಟರು. ಅಲ್ಲಿಂದ ಅವರು ತಮ್ಮ ಇಷ್ಟದೈವದ ಯಾತ್ರಾಸ್ಥಳವಾಗಿದ್ದ ಕಪ್ಪಡಿ ಅಥವಾ ಕೂಡಲ ಸಂಗಮಕ್ಕೆ ಹೋಗಿ ಅಲ್ಲಿ ದೇವರಲ್ಲಿ ಐಕ್ಯರಾದರು. ಕ್ರಿ.ಶ. 1167ರ ಎರಡನೆ ಭಾಗದಲ್ಲಿ ಅವರ ಅವಸಾನವಾಯಿತು. ಅವರ ವಿರೋಧಿಗಳು ಅವರ ನಿರ್ಗಮನದಿಂದಲೂ ತೃಪ್ತರಾಗಲಿಲ್ಲ. ಅವರು ಆರಂಭಿಸಿ ಪ್ರೋತ್ಸಾಹಿಸಿದ್ದ ಧಾರ್ಮಿಕ ಚಳವಳಿಯನ್ನು ನಾಶಮಾಡಲು ಪ್ರಯತ್ನಿಸಿದರು. ಆದುದರಿಂದ ಕಲ್ಯಾಣದಲ್ಲಿ ವಾಸಿಸುತ್ತಿದ್ದ ಬಸವೇಶ್ವರರ ಅನುಯಾಯಿಗಳನ್ನು ರಾಜನು ಹಿಂಸಿಸಲು ಆರಂಭಿಸಿದನು. ಅಲ್ಲಿ ಹರಳಯ್ಯ ಮತ್ತು ಮಧುವಯ್ಯ ಎಂಬ ಇಬ್ಬರು ಶಿವಭಕ್ತರು ಇದ್ದರು. ಹರಳಯ್ಯನು 'ಅಸ್ಪೃಶ್ಯ' ಜಾತಿಯವನೂ, ಮಧುವಯ್ಯನು ಬ್ರಾಹ್ಮಣನೂ ಆಗಿದ್ದರು. ಹರಳಯ್ಯನ ಮಗನು ಮಧುವಯ್ಯನ ಮಗಳನ್ನು ಮದುವೆಯಾದನು. ಸಂಪ್ರದಾಯ ಶರಣ ಜನರು ಇದನ್ನು ತೀವ್ರವಾಗಿ ವಿರೋಧಿಸಿ, ಈ ಕ್ರಮವು ಧರ್ಮಶಾಸ್ತ್ರಕ್ಕೆ ವಿರೋಧವಾದುದೆಂದು ರಾಜನಿಗೆ ದೂರಿತ್ತರು. ರಾಜನು ಅವರನ್ನು ಕುರುಡರನ್ನಾಗಿ ಮಾಡಿಸಿ ಕೊಲ್ಲಿಸಿದನು. ಈ ಸುಧಾರಣಾ ಚಳವಳಿಯ ಬಗ್ಗೆ ಸಹಾನುಭೂತಿ ಹೊಂದಿದ್ದ ಜನರು ಕುಪಿತರಾಗಿ ನ್ಯಾಯಬೇಕೆಂದು ಕೋರಿದರು. ರಾಜನಿಗೆ ವಿರುದ್ಧವಾಗಿ ಬಹಿರಂಗವಾಗಿ ದಂಗೆಯುಂಟಾಯಿತು. ಅನಂತರ ಶಾಂತಿಯುು ಕದಡಿ ರಾಜನು ಕೊಲ್ಲಲ್ಪಟ್ಟನು. ಇದು ಕ್ರಿ.ಶ. 1167ರ ಎರಡನೆ ಭಾಗದಲ್ಲಿ ನಡೆಯಿತು.

ಬಿಜ್ಜಳನು ಇಬ್ಬರು ಪುತ್ರಿಯರು ಮತ್ತು ನಾಲ್ವರು ಅಥವಾ ಐವರು ಪುತ್ರರನ್ನು ಪಡೆದಿದ್ದನು. ಸೋಮೇಶ್ವರ ಅಥವಾ ಸೋವಿದೇವ, ಸಂಕಮ, ಆಹವಮಲ್ಲ ಅಥವಾ ವೀರನಾರಾಯಣ ಮತ್ತು ಸಂಗಮ ಇವರು, ಅವನ ಪುತ್ರರಾಗಿದ್ದರು. ಬಿಜ್ಜಳನ ಮರಣಾನಂತರ ಸಿಂಹಾಸನಕ್ಕಾಗಿ ಮೈಲುಗಿ ಕರ್ಮದೇವ ಮತ್ತು ಸೋವಿದೇವ—ಇವರುಗಳಲ್ಲಿ ಹೋರಾಟ ನಡೆದಂತೆ ಕಾಣುತ್ತದೆ. ಸೋವಿದೇವ ಅಥವಾ ಸೋಯಿದೇವ ಕ್ರಿ.ಶ. 1167ರಲ್ಲಿ ಸಿಂಹಾಸನವನ್ನೇರಿದನು. ಅವನನ್ನು ಸೋಮೇಶ್ವರ ಮತ್ತು

ುರಾರಿ ಸೋಯಿದೇವ ಎಂದು ಕರೆಯುತ್ತಿದ್ದರು. ಅವನ ಶಾಸನಗಳು ಕಲ್ಯಾಣದಿಂದ ಬಳ್ಳಿಗಾಮೆ
ಸ್ತಾರ ಪ್ರದೇಶದಲ್ಲಿ ದೊರತಿವೆ. ಸೋವಿದೇವನು ತನ್ನ ತಂದೆಯ ಕಾಲದಲ್ಲಿ ತರ್ದವಾಡಿಗೆ ಸೇರಿದ
ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಳುತ್ತಿದ್ದನು. ಚಿಕ್ಕಲಗಿ ಶಾಸನವು (S.I.I. Vol. XX,
) ಬಿಜ್ಜಳ ಮತ್ತು ಕುಮಾರ ಮೈಲುಗಿಯ ಸಹ ಆಳಿಕೆಯನ್ನು ಸೂಚಿಸುತ್ತದೆ. ಅದರ ಕಾಲ
7 ಅಕ್ಟೋಬರ್ 14. ಬಿಜ್ಜಳನ ಆಳಿಕೆಯ 11ನೇ ವರ್ಷದ, (13 ಜುಲೈ, 1166)
ಶಾಸನವು (S.I.I. Vol. XX No. 143) ಅವನನ್ನು 'ಕುಮಾರ ಮೈಲುಗಿ' ಎಂದು
ರೆ. ಈ ಎರಡು ಶಾಸನಗಳಿಂದ ಕುಮಾರ ಮೈಲುಗಿಯು ಬಿಜ್ಜಳನೊಡಗೂಡಿ ಕ್ರಿ.ಶ.
ಸಾಮ್ರಾಜ್ಯದ ಕೆಲಭಾಗಗಳನ್ನು ಆಳುತ್ತಿದ್ದನೆಂದು ತಿಳಿಯುತ್ತದೆ. ಸಂಕಮನ ಕಾಲದ
ಸನದಲ್ಲಿ ಅವನು ಬಿಜ್ಜಳನ ಸಹೋದರನೆಂದೂ ಎಲ್ಲಾ ಕಲೆಗಳಲ್ಲಿ ಪ್ರವೀಣನೆಂದೂ,
ು ಗುಣಗಳನ್ನು ಹೊಂದಿದ್ದು ಭೂರಮಣಿಯನ್ನು ತೋಳತಕ್ಕೆಯಲ್ಲಿ ಹಿಡಿದುಕೊಂಡು
ನೆಂದೂ ಹೇಳಿದೆ (E.C. Vol. XI, Davanagere 44). ಶಿವಮೊಗ್ಗ ಜಿಲ್ಲೆಯ
ರ 50ನೆ ಶಾಸನವು (E.C. Vol. VII, P. 394) ಮೈಲುಗಿಯು ಬಿಜ್ಜಳನ
ು ಸೂಚಿಸುತ್ತದೆ. ಆದುದರಿಂದ ಸಹಜವಾಗಿಯೆ ಅವನು ಸಿಂಹಾಸನವನ್ನು ತಾನೇ ಪಡೆಯ
ರಬಹುದು. ಬಿಜ್ಜಳನೊಡನೆ ಸಾಮ್ರಾಜ್ಯದ ಕೆಲವು ಭಾಗಗಳನ್ನು ಆಳುವುದರಲ್ಲಿ ಕ್ರಿ.ಶ.
ಾಗಿಯಾಗಿದ್ದ ಸೋವಿದೇವನಿಗೂ ಅವನಿಗೂ ಪಟ್ಟಕ್ಕಾಗಿ ಜಗಳವಾಯಿತೆನ್ನಬಹುದು.
ನ್ನು ಸೋವಿದೇವನ ಆಳಿಕೆಯ 4ನೆ ಶಕೆಯ ಕುತ್ತಗಿ ಶಾಸನವು (S.I.I. Vol. XX,
ಮೋದಿಸುತ್ತದೆ. ಮೈಲುಗಿ ದೇವನು ಕಳಚೂರಿ ಸಾಮ್ರಾಜ್ಯವನ್ನೆಲ್ಲಾ ಆಕ್ರಮಿಸಿದ
ಅವನ ಕೈಕೆಳಗಿನ ಅಧಿಕಾರಿ ವಸಿಷ್ಠಗೋತ್ರದ (ಗೋಪಾಲನಾಯಕನ ಮಗ)
ಡ ನಾಯಕನೂ, ಮಹಾಪ್ರಧಾನಿಯೂ ಸೇನಾಪತಿಯೂ ಆಗಿದ್ದು, ಅನಂತರ
ೋವಿದೇವನನ್ನು ಸೇರಿದನು. ಇಂತಹ ಅಧಿಕಾರಿಗಳ ಸಹಾಯದಿಂದ ಬಹುಶಃ
ುಗಿಯನ್ನು ಸೋಲಿಸಿದನು. ಆದರೂ ಮೈಲುಗಿಯು ಪುನಃ ತನ್ನ ಹಕ್ಕನ್ನು
ನ. ಸುಂಕದಿಂದ ಬರುವ ಆದಾಯವನ್ನು ದಾನ ನೀಡುವ ತೆನೆಹಳ್ಳಿಯ (S.I.I.,
ನವೆಂಬರ್ 1176ರ ಶಾಸನವು ಕಲಚೂರಿ ಭುಜಬಲ ಚಕ್ರವರ್ತಿ ಮೈಲುಗಿಯ
ರ್ಷದ್ದಾಗಿರುತ್ತದೆ. ಬಿಜಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ
(Slab. No. 56) ಕಲಚೂರ್ಯ ಪ್ರತಾಪ ಚಕ್ರವರ್ತಿ ಮಲ್ಲಿಕಾರ್ಜುನನು
ಶಕೆಯಲ್ಲಿ ಮಸನೂರಿನಿಂದ ತನ್ನ ಸಮೃದ್ಧ ಸಾಮ್ರಾಜ್ಯವನ್ನು ಸಂತೋಷದಿಂದ
ದೆ. ಆದರೆ ಸೋವಿದೇವನ ಶಿಲಾಶಾಸನಗಳಿಂದ, ಬಹುಸಂಖ್ಯ ಅಧಿಕಾರಿಗಳು
ಪ್ಪಿಕೊಂಡರೆಂದೂ, ಕಲ್ಯಾಣದಿಂದ ಬನವಾಸಿಯ ವರೆಗಿನ ಪ್ರದೇಶಗಳನ್ನೆಲ್ಲ
ಶದವಾಗಿದೆ. 24ನೆ ಏಪ್ರಿಲ್ 1168ರ ಬಳ್ಳಿಗಾಮೆ ಶಾಸನವು (D.K.D.
ನು ಸುಖದಿಂದ ಆಳುತ್ತಿದ್ದಾಗಲೇ ರಾಜ್ಯದ ಹೊಣೆಯನ್ನು ತನ್ನ ಪ್ರೀತಿಯ
ರ್ಗಯಿಸಿದನೆಂದು ತಿಳಿಸುತ್ತದೆ. ಈ ಶಾಸನವು ಸೋಮೇಶ್ವರನ ಮೊದಲ
ನ ಬೆಂಬಲಿಗನು ಮಾಡಿದ ದಾನದ ವಿಚಾರವನ್ನು ತಿಳಿಸುತ್ತದೆ. ಬಿಜ್ಜಳನು
ಅಧಿಕಾರಿಯನ್ನಾಗಿ ನೇಮಿಸಿದನೆಂದು ತೋರಿಸಲು "ರಾಜ್ಯದ ಅಧಿಕಾರ...
ರ್ಗಾಯಿಸಿದ" ಎಂಬ ಶಬ್ದಗಳನು ...
ನ ರಾಜ್ಯತ್ಯಾಗ...

ವಾಗಿರುತ್ತದೆ. ಆಗಿನ್ನು ಬಿಜ್ಜಳನು ಬದುಕಿದ್ದನು, ಅಥವಾ ಅವನ ಆಳಿಕೆಯು ಶಕದ ಗಣನೆ ಮುಂದುವರಿದಿತ್ತು. ಸೋವಿದೇವನ ಕೊನೆಯ ಕಾಲವೆಂದರೆ ದುರ್ಮುಖಿ ಸಂವತ್ಸರದ ಪೂರ್ಣಿಮೆಯ ದಿನ ಅಥವಾ ಆತನ ಹತ್ತನೆಯ ವರ್ಷ-ಕ್ರಿ.ಶ. 16ನೇ ಜನವರಿ 1177. ಆತನ ರಾಣಿ ಸವಲದೇವಿಯು ಸಂಗೀತ ಮತ್ತು ನೃತ್ಯದಲ್ಲಿ ನಿಪುಣತೆ ಹೊಂದಿದ್ದಳು. ಅವಳು ತನ್ನ ಪ್ರತಿಭೆಯನ್ನು ಸಾರ್ವಜನಿಕರಲ್ಲಿ ಪ್ರದರ್ಶಿಸಿದ್ದಳು (B.B.R.A.S., Vol. XVIII· PP 272 and 279).

ಸೋವಿದೇವನನಂತರ ಅವನ ಕಿರಿಯ ಸಹೋದರ ಸಂಕಮನು ಅಧಿಕಾರಕ್ಕೆ ಬಂದು ಸೋವಿದೇವನ ಬಿರುದುಗಳನ್ನೆಲ್ಲಾ ಪಡೆದನು. "ನಿಶ್ಶಂಕಮಲ್ಲ"ನೆಂಬುದು ಅವನ ಒಂದು ಬಿರುದಾಗಿತ್ತು (ಹೆದರಿಕೆಯಿಲ್ಲದೆ ಮಲ್ಲಯುದ್ಧಮಾಡುವವ). ಅವನ ಮೊದಲ ತಾರೀಖು ವಿಳಂಬಿ ಸಂವತ್ಸರದ ಭಾದ್ರಪದ ಶುದ್ಧ ಪ್ರತಿಪದೆ, ಶಕ ವರ್ಷ 1100ರ ಈ ತಿಥಿ ಸೆಪ್ಟಂಬರ್ 13, 1178ಕ್ಕೆ ಸರಿಹೋಗುತ್ತದೆ. ಆದರೆ ಅವನು 1177ರಲ್ಲೇ ಪಟ್ಟಕ್ಕೆ ಬಂದಿರಬೇಕು. ಅವನ ಕೊನೆಯ ಕಾಲವು ಶಾರ್ವರಿ ಸಂವತ್ಸರದ ಪುಷ್ಯಮಾಸವು ಅವನ ಆಳಿಕೆಯ 5ನೆ ವರ್ಷವಾಗಿದೆ. ಇದು 24ನೆ ಡಿಸೆಂಬರ್ 1180ಕ್ಕೆ ಸರಿಯಾಗುತ್ತದೆ.

ಸಂಕಮನನಂತರ ಆತನ ಕಿರಿಯ ಸೋದರನು ಅಧಿಕಾರಕ್ಕೆ ಬಂದನು. ಅವನು 'ಆಹವಮಲ್ಲ ವೀರನಾರಾಯಣ' ಎಂಬ ಬಿರುದಿನಿಂದಷ್ಟೇ ಪರಿಚಿತನಾಗಿದ್ದಾನೆ. ಅವನ ಶಾಸನಗಳ ಪ್ರಕಾರ ಅವನು ತನ್ನ ಪೂರ್ವಜರ ಎಲ್ಲ ಬಿರುದುಗಳನ್ನು ಧರಿಸಿದ್ದನು. ಅವನ ಮೊದಲ ಕಾಲ ಶಾರ್ವರಿ ಸಂವತ್ಸರದ ಕಾರ್ತಿಕವಾಗಿದ್ದು ಇದು ಕ್ರಿ.ಶ. 1180ರ ಅಕ್ಟೋಬರ್-ನವೆಂಬರಿಗೆ ಸರಿಹೋಗುತ್ತದೆ. ಅವನು ತನ್ನ ಸೋದರನ ಜೊತೆ ಆಡಳಿತದಲ್ಲಿ ಸಹಭಾಗಿಯಾಗಿದ್ದಿರಬೇಕು. ಅವನು ದಕ್ಷಿಣಭಾಗದ ಮೇಲೆ ಅಧಿಕಾರ ಹೊಂದಿದ್ದಂತೆ ತೋರುತ್ತದೆ. ಆತನ ಕೊನೆಯ ಕಾಲ ಶೋಭಕೃತು ಸಂವತ್ಸರದ ಭಾದ್ರಪದ ಬಹುಳ ತ್ರಯೋದಶಿಯಾಗಿದ್ದು ಕ್ರಿ.ಶ. 1183ರ ಸೆಪ್ಟಂಬರಿಗೆ ಸರಿಸುಮಾರಾಗಿ ಹೊಂದಾಣಿಕೆಯಾಗುತ್ತದೆ.

ಆಹವಮಲ್ಲನ ಕಿರಿಯ ಸಹೋದರ ಸಿಂಗಣನು ಅಣ್ಣನ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು, ತನ್ನ ಹಿಂದಿನವರ ಸಾಮ್ರಾಟಯೋಗ್ಯ ಬಿರುದುಗಳನ್ನೆಲ್ಲ ಧರಿಸಿದ್ದನು. ಅವನ ವಿಚಾರ ಹೆಚ್ಚಿಗೆ ತಿಳಿದಿಲ್ಲ. ಕ್ರಿ.ಶ. 1183ರಲ್ಲಿ ದಂಡನಾಯಕ ಬರ್ಮ ಅಥವಾ ಬರ್ಮರಸನಿಂದ ಅಧಿಕಾರವೆಲ್ಲವೂ, ಪಶ್ಚಿಮದ ಚಾಲುಕ್ಯರ ವಂಶದ ನಾಲ್ಕನೆಯ ಸೋಮೇಶ್ವರನಿಗೆ ವಹಿಸಲ್ಪಟ್ಟಿತು.

ಹೀಗೆ ಕಲಚೂರ್ಯರ ಆಳಿಕೆಯು ಕೇವಲ 26ವರ್ಷಗಳ ಸಂಕ್ಷಿಪ್ತ ಅವಧಿಯಾಗಿದ್ದರೂ ಕೂಡ ದಖ್ಖನ್ನಿನ ಇತಿಹಾಸದಲ್ಲಿ ಅದು ಮಹತ್ವಪೂರ್ಣವಾದುದೂ ಉಲ್ಲೇಖನೀಯವಾದುದೂ ಆಗಿದೆ. ಕಲಚೂರ್ಯರ ಪ್ರಾಬಲ್ಯವು ಚಾಲುಕ್ಯ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು. ದೇವಗಿರಿಯ ಯಾದವರ ದ್ವಾರಸಮುದ್ರದ ಹೊಯ್ಸಳರ ಏಳಿಗೆಗೆ ಅದು ಅವಕಾಶ ಮಾಡಿಕೊಟ್ಟಿತು. ಈ ಕಾಲದಲ್ಲಿ ಶೈವ ಧರ್ಮವು ವೀರಶೈವ ಪಂಥದ ಮೂಲಕ ಪುನರುಜ್ಜೀವನ ಪಡೆಯಿತು. ವೀರಶೈವ ಧರ್ಮದ ಏಳಿಗೆಯು ಬೌದ್ಧ ಮತ್ತು ಜೈನ ಧರ್ಮಗಳ ಪತನಕ್ಕೆ ಕಾರಣವಾಯಿತು. ಅದು ಜನಪ್ರಿಯ ಧರ್ಮವಾಗಿ ಅನೇಕ ಶತಮಾನಗಳ ಕಾಲ ಜನಸಾಮಾನ್ಯರ ಹೃದಯದಲ್ಲಿ ಸ್ಥಾನ ಪಡೆಯಿತು.

## ಕಲಚೂರಿಗಳ ವಂಶವೃಕ್ಷ

- ಜೋಗಮ
  - ಪೆರ್ಮಾಡಿ
    - ಬಿಜ್ಜಳ ಅಥವಾ ಬಿಜ್ಜಣ ಕ್ರಿ.ಶ. 1156-1167
      - ಸೋವಿದೇವ (ರಾಯಮುರಾರಿ ಅಥವಾ ಸೋಮೇಶ್ವರ,) ಕ್ರಿ.ಶ. 1167-1176
        - ? ಕಲಿದೇವ
      - ಮೈಲುಗಿ
      - ಸಂಕಮ ಕ್ರಿ.ಶ. 1176-81
      - ಆಹವಮಲ್ಲ 1181-83
      - ಸಿಂಗನ 1183
    - ಮೈಲುಗಿದೇವ

ಮೂಲಲೇಖಕರು : ಡಾ॥ ಎಸ್. ಸಿ. ನಂದಿಮಠ
ಅನುವಾದಕರು : ಡಾ॥ ಕೆ. ವೀರತ್ತಪ್ಪ

# ಸಣ್ಣಪುಟ್ಟ ರಾಜವಂಶಗಳು

**ಗೋವೆಯ ಕದಂಬರು**

ಕದಂಬವಂಶದ ಎಲ್ಲ ಶಾಖೆಗಳಿಗಿಂತಲೂ ಸುಮಾರು ಮೂರು ಶತಮಾನಗಳವರೆಗೆ ಪರಿಣಾಮಕಾರಿಯಾಗಿ ಆಳಿದವರೆಂದರೆ ಗೋವೆಯ ಅವಿಚ್ಛಿನ್ನ ರಾಜವಂಶಾವಳಿಯುಳ್ಳ ಕದಂಬರು. ಈ ಅರಸುಮನೆತನದವರಿಗೆ ವಂಶಾನುಗತವಾಗಿ ಬಂದ 'ಬನವಾಸಿಪುರವರಾಧೀಶ್ವರ' ಎಂಬ ಬಿರುದು ಇತ್ತು. ಅವರ ವಂಶ ಸಂಕೀರ್ತನ ವಾದ್ಯ 'ಪೆರ್ಮಟ್ಟಿತೂರ್ಯ'. ಅವರ ಲಾಂಛನ ಸಿಂಹ; ಪತಾಕೆ ವಾನರ ಮಹಾಧ್ವಜ. ಅವರ ನಾಣ್ಯ ಹಾಗೂ ಶಿರೋಲಾಂಛನಗಳ ಮೇಲೆ 'ಶ್ರೀಮಳಗೆ ಭೈರವ' ಮತ್ತು 'ಮಾಳವರ ಮಾರಿ' ಎಂಬ ವೀರೋಕ್ತಿಗಳಿವೆ. ಸಪ್ತಕೋಟೀಶ್ವರ ಎಂಬ ಹೆಸರಿನ ಶಿವನೇ ಅವರ ಮನೆತನದ ದೇವರಾದರೂ ಅವರು ನರಸಿಂಹ ಮತ್ತು ವರಾಹರೂಪಿ ವಿಷ್ಣುವನ್ನೂ ಪೂಜಿಸುತ್ತಿದ್ದರು. ಅಲ್ಲದೆ, ಈ ವಂಶದ ಕೆಲವು ರಾಜರಿಗೆ ಗೋಕರ್ಣೇಶ್ವರ ಮತ್ತು ಅಜ್ಜಾದೇವಿಯರು ಮನೆದೇವರಾಗಿದ್ದಂತೆ ತಿಳಿಯುತ್ತದೆ.

ತ್ರಿಲೋಚನ ಕದಂಬ ಎಂಬ ಹೆಸರನ್ನುಳ್ಳ ಜಯಂತನೇ ಈ ವಂಶದ ಮೂಲಪುರುಷ ಎನ್ನಲಾಗಿದೆ. ಗೋವೆ ಈ ವಂಶದ ಪರಂಪರಾಗತವಾಗಿ ಬಂದ ರಾಜಧಾನಿ ಎಂದು ಭಾವಿಸಲಾಗಿದೆ. ಆದರೆ ಅನಿಲಾಪುರ ಮತ್ತು ಚಂದ್ರಾಪುರಗಳೂ ಇವರ ರಾಜಧಾನಿಗಳಾಗಿದ್ದುವು. ಬಹುಶಃ ಧಾರವಾಡ ಜಿಲ್ಲೆಯ ಅಲ್ನಾವರ್ ಅನಿಲಾಪುರ, ಗೋವೆಯ ಸಲ್ಸೆತ್ತೆಯಲ್ಲಿರುವ ಚಂದೋರ್ ಚಂದ್ರಾಪುರವಿರಬೇಕು. ಕೊನೆಕೊನೆಗೆ ಕುಂದೂರ ಮತ್ತು ಸಂಪಗಡಿಗಳೂ ತಾತ್ಕಾಲಿಕ ರಾಜಧಾನಿಗಳಾಗಿದ್ದುವೆಂದು ತಿಳಿದುಬರುತ್ತದೆ. ಈಗಿನ ಧಾರವಾಡ ತಾಲೂಕಿನ 'ನರೇಂದ್ರ'ವೇ ಕುಂದೂರ, ಖಾನಾಪುರ ತಾಲೂಕಿನ 'ಬಿಡಿ' ಸಂಪಗಡಿ ಆಗಿದ್ದಿರಬಹುದು.

ಕೊಂಕಣ 900 ಮತ್ತು ಪಲಸಿಗೆ 12,000 ಪ್ರಾಂತ್ಯಗಳು ಇವರಿಗೆ ವಂಶಪಾರಂಪರ್ಯವಾಗಿ ಬಂದ ಆಡಳಿತ ಪ್ರದೇಶವಾಗಿದ್ದವು. ಈ ರಾಜ್ಯದ ಸ್ವಲ್ಪಭಾಗ 5, 6, 7ನೆಯ ಶತಮಾನಗಳಲ್ಲಿ ಭೋಜರ ಆಡಳಿತಕ್ಕೂ, ಅನಂತರ ದಕ್ಷಿಣದ ಶಿಲಾಹಾರರಿಗೂ ಒಳಪಟ್ಟಿತ್ತು. ಕಾವಡಿದ್ವೀಪ, ಪಾನುಂಗಲ್ 500, ಕೊಟಕುಲಿ 30, ಪವ್ಯೆ 500, ಮತ್ತು ವೇಣುಗ್ರಾಮ 70–ಇವುಗಳ ಮೇಲೂ ಕದಂಬರು ಕೆಲಕಾಲ ಪ್ರಭುತ್ವ ನಡೆಸಿದ್ದರು.

ಕಂಟಕಾಚಾರ್ಯನೆಂದು ಹೆಸರು ಪಡೆದಿರುವ ಒಂದನೆಯ ಶಾಸ್ಥ ಎಂಬ ಆ ವಂಶದ ಪ್ರಥಮರಾಜ ಧರ್ಮ ಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಲ್ಲಿ ಪರಿಣತಿ ಪಡೆದಿದ್ದನೆಂದೂ ರಾಜ್ಯ ಕಳೆದುಕೊಂಡಿದ್ದ ಅನೇಕ ರಾಜರನ್ನು ಪುನಃ ನೆಲೆಗೊಳಿಸಿದನೆಂದೂ ಮಾರ್ಸೆಲಾ ತಾಮ್ರಫಲಕ ಮತ್ತು ಗಣದೇವಿ ಶಾಸನಗಳಿಂದ ತಿಳಿದುಬರುತ್ತದೆ.

ತರುವಾಯ ಬಂದವನು ನಾಗವರ್ಮ. ಇವನು ಘನವಿದ್ವಾಂಸನೂ ಕಲಾವಿದನೂ ವಿವೇಕಿಯೂ ಪರಾಕ್ರಮಿಯೂ ಶ್ಲಾಘನೀಯ ಕಾರ್ಯಗಳನ್ನು ಮಾಡಿದವನೂ ಆಗಿದ್ದನೆಂದು ಆ ಎರಡು ಶಾಸನಗಳಿಂದಲೇ ತಿಳಿದುಬರುತ್ತದೆ.

ನಾಗವರ್ಮನ ಮಗನಾದ ಒಂದನೆಯ ಗುವಲದೇವ ಬಲಿಷ್ಠರಾಜನಾಗಿದ್ದನು. ಗಣನೀಯ ನೌಕಾಪಡೆಯನ್ನು ಹೊಂದಿದ್ದನು. 'ವ್ಯಾಘ್ರಮಾರಿ' ಎಂದೂ ಅವನನ್ನು ಕರೆಯಲಾಗಿದೆ. ಅವನು ಸೌರಾಷ್ಟ್ರದ ಸೋಮನಾಥ ದೇವಾಲಯಕ್ಕೆ ಯಾತ್ರೆಹೋಗಿದ್ದಂತೆ ತಿಳಿಯುತ್ತದೆ.

ಎರಡನೆಯ ಶಾಸ್ಥ [ಶಾಸ್ತ?] ಅಥವಾ ಚಟ್ಟಯ್ಯ ಒಂದನೆಯ ಗುವಲದೇವನ ಮಗ. ಅವನು ಕ್ರಿ.ಶ. 983ರಲ್ಲಿ ಹುಟ್ಟಿ ಕ್ರಿ.ಶ. 1072ರ ವರೆಗೂ ಜೀವಿಸಿದ್ದಂತೆ ತಿಳಿದುಬರುತ್ತದೆ. ಚಂದ್ರಾಪುರ ಅವನ ರಾಜಧಾನಿಯಾಗಿದ್ದಿರಬೇಕು. ಅಗಾಧ ದೇಹಶಕ್ತಿಗೂ ಮದಗಜಗಳನ್ನು ಅಂಕೆಗೆ ಒಳಪಡಿಸುವ ಸಾಹಸಕಾರ್ಯಕ್ಕೂ ಅವನು ಪ್ರಖ್ಯಾತ. ಆತನ ಸಮರ ಪರಾಕ್ರಮವನ್ನು ಕುರಿತು ಸೌರಾಷ್ಟ್ರ, ಅಂಗ, ಕಳಿಂಗ, ಮಾಳವ, ಮಹಾರಾಷ್ಟ್ರ, ಆಂಧ್ರ, ವಿಂಧ್ಯ, ಕಾಂಚಿ ಮತ್ತು ಕೇರಳ ರಾಜ್ಯಗಳ ರಾಜರುಗಳನ್ನು ಆತನು ಗೆದ್ದನೆಂದು ಗಣದೇವಿ ಶಾಸನದಲ್ಲಿ ಹೇಳಿದೆ. ಬಹುಶಃ ಅದು ಉತ್ಪ್ರೇಕ್ಷೆಯಿರಬಹುದು. ನೌಕಾಯುದ್ಧದಲ್ಲಿ ಸಿಂಹಳ, ಪಾರಸಿಕ ಮತ್ತು ಕನಕದ್ವೀಪಗಳ ರಾಜರುಗಳನ್ನೂ ಸೋಲಿಸಿದಂತೆ ಹೇಳಿದೆ. ಎರಡನೆಯ ಜಯಕೇಶಿಯ ನರೇಂದ್ರ ಶಾಸನದಲ್ಲಿ ಅವನನ್ನು 'ಪಶ್ಚಿಮಾಂಭೋಧಿಪತಿ' ಎಂದು ಕರೆಯಲಾಗಿದೆ. ಆ ಶಾಸನದಲ್ಲಿಯೇ ಅವನು ಲಂಕೆಯ ವರೆಗೆ (ಗೋವಾದ್ವೀಪ) ನೌಕಾಸೇತುವೆಯನ್ನು ಕಟ್ಟಿದನೆಂದೂ, ಅವನ ಬಳಿ ಸುಸಜ್ಜಿತವಾದ ನೌಕಾಪಡೆ ಇದ್ದಿತೆಂದೂ ಹೇಳಿದೆ. ಅವನು ಒಮ್ಮೆ ಸೌರಾಷ್ಟ್ರದ ಪ್ರಭಾಸ ಪಟ್ಟಣಕ್ಕೆ ಸಮುದ್ರಯಾನ ಮಾಡಿದನು.

ಅವನು ಗೋಕರ್ಣ, ಕೊಲ್ಲಾಪುರದ ಮಹಾಲಕ್ಷ್ಮೀ ದೇವಾಲಯ, ಠಾಣಾದ ಮಹಾದೇವ ದೇವಾಲಯ, ಸೌರಾಷ್ಟ್ರದ ಸೋಮನಾಥ ದೇವಾಲಯಗಳಲ್ಲಿ ಪೂಜೆಸಲ್ಲಿಸಿದನೆಂದು ಅವನ ಮಗ ಎರಡನೆಯ ಗುವಲದೇವನ ಮಾರ್ಸೆಲಾ ಫಲಕಗಳು ತಿಳಿಸುತ್ತವೆ. ಅವನನ್ನು ಧರ್ಮಾವತಾರ ಎಂದು ಕರೆಯಲಾಗಿದೆ. ಕೊನೆಗೆ ಅವನು ವಿರಕ್ತನಾದನೆಂದೂ ಹೇಳಲಾಗಿದೆ.

ಶಾಸ್ಥನಿಗೆ ಇಬ್ಬರು ಮಕ್ಕಳು. ಮೊದಲನೆಯವನು ಗುವಲದೇವ, ಎರಡನೆಯವನು 1ನೆ ಜಯಕೇಶಿ.

ಧಾರ್ಮಿಕ ಮನೋಭಾವದ ಶಾಸ್ಥ ತನ್ನ ಜೀವಿತಕಾಲದಲ್ಲಿಯೇ ಮಕ್ಕಳಿಗೆ ರಾಜ್ಯಾಧಿಕಾರವನ್ನು ಬಿಟ್ಟುಕೊಟ್ಟಂತೆ ತೋರುತ್ತದೆ.

ಶಾಸ್ಥ ಮತ್ತು ಅಕ್ಕ ಇವರಿಗೆ ಮಗನಾಗಿ ಕ್ರಿ.ಶ. 1008ರಲ್ಲಿ ಗುವಲದೇವ ಹುಟ್ಟಿದನು. ಸಪ್ತಮಲಯರೊಡನೆ ಯುದ್ಧಮಾಡಿ ಪ್ರಸಿದ್ಧಿಹೊಂದಿದನು. ಕ್ರಿ.ಶ.ಸು. 1035 ರಿಂದ ಕ್ರಿ.ಶ. 1050ರ ವರೆಗೆ, ತಂದೆ ಬದುಕಿದ್ದಾಗಲೇ ವಸ್ತುತಃ ಅವನು ರಾಜನಾಗಿದ್ದನೆಂದು ತೋರುತ್ತದೆ. ಸುಮಾರು ಕ್ರಿ.ಶ. 1050ರಲ್ಲಿ ಅವನು ನಡುವಯಸ್ಸಿನಲ್ಲೇ ಮರಣ ಹೊಂದಿದನೆಂದು ತೋರುತ್ತದೆ.

ಒಂದನೆಯ ಜಯಕೇಶಿ ಹುಟ್ಟಿದ್ದು ಕ್ರಿ.ಶ. 1010ರಲ್ಲಿ. ಅವನು ತಂದೆಗೆ ತಕ್ಕ ಮಗ. ಕ್ರಿ.ಶ.ಸು. 1050ರ ವೇಳೆಗೆ ಅಣ್ಣ ಗುವಲದೇವನಿಂದ ಅವನು ಆಡಳಿತ ಸೂತ್ರವನ್ನು ವಹಿಸಿಕೊಂಡಿರಬೇಕು. ಗೋವೆಯ ಹಿಂದಿನ ಪ್ರಭುಗಳಾಗಿದ್ದ ದಕ್ಷಿಣಕನ್ನಡದ ಶಿಲಾಹಾರರನ್ನೂ ಉತ್ತರ ಕೊಂಕಣದ ಶಿಲಾಹಾರರನ್ನೂ ಅವನು ಜಯಿಸಿದನು. ಚಂದ್ರಾಪುರ ಮತ್ತು ಅನಿಲಾಪುರಗಳು ರಾಜಧಾನಿಗಳಾಗಿದ್ದುವು. ಗೋವೆಯು ನೈಸರ್ಗಿಕ ಬಂದರಾದುದರಿಂದಲೂ, ಚಂದ್ರಾಪುರ ಅಥವಾ ಅನಿಲಾಪುರಗಳಿಗಿಂತಲೂ ಕರಾವಳಿಯ ಪ್ರಭುತ್ವಕ್ಕೆ ಹೆಚ್ಚಿನ ಅನುಕೂಲಗಳಿದ್ದುದರಿಂದಲೂ ಅದನ್ನೇ ಖಾಯಂ ರಾಜಧಾನಿಯನ್ನಾಗಿ ಸ್ಥಾಪಿಸಿದನು.

ಕ್ರಿ.ಶ. 1072ರ ನುಲ್ವಿ ಶಾಸನದ ಪ್ರಕಾರ, ಆತನ ರಾಣಿ ಬೊಪ್ಪಾದೇವಿಯೂ ಪತಿಯೊಡನೆ ರಾಜ್ಯವನ್ನು ಆಳುತ್ತಿದ್ದಳು.

ಪಾಂಡ್ಯ, ಪರಮಾರ, ಲಾಟ, ಚೋಳ, ಪಲ್ಲವ ಮತ್ತು ಕಿಷ್ಕಿಂಧೆಯ ಪರ್ವತವಾಸಿಗಳನ್ನು ಒಂದನೆಯ ಜಯಕೇಶಿ ಸೋಲಿಸಿದನೆಂದು ಪಂಜಿಯ ಫಲಕಗಳು ಹೇಳುತ್ತವೆ. ಅಲ್ಲದೆ ಅವನು ಯುದ್ಧ ನೌಕೆಗಳ ಪಡೆಯೊಂದನ್ನು ಪಡೆದಿದ್ದನೆಂದೂ, ಅವನ ಪಡೆ ನಡುಗಡಲಿನಲ್ಲೂ ಕಾರ್ಯ ಚಟುವಟಿಕೆಯಿಂದ ಕೂಡಿದ್ದಿತೆಂದೂ ಅದೇ ಶಾಸನ ತಿಳಿಸುತ್ತದೆ. ಅವನು ಚಾಲುಕ್ಯನನ್ನು ಅವನ ರಾಜ್ಯದಲ್ಲಿಯೇ ನೆಲೆಗೊಳಿಸಿ ಆಲುಪರನ್ನು ಗೆದ್ದು, ಕದಂಬರನ್ನು ಸಂಘಟಿಸಿದನೆಂದೂ ಹಲ್ಸಿಯ ಶಾಸನದಿಂದ ತಿಳಿದುಬರುತ್ತದೆ. ಬನವಾಸಿಯ ಕೀರ್ತಿರಾಜ ಗಡಿಯನ್ನು ದಾಟದಂತೆ ಮಾಡಿ, ಚೋಳರ ದಾಳಿಯನ್ನು ಶೀಘ್ರವಾಗಿ ತಡೆದನೆಂದು ನರೇಂದ್ರ ಶಾಸನ ಹೇಳುತ್ತದೆ. ಅವನು ಚಾಲುಕ್ಯ ಮತ್ತು ಚೋಳರ ನಡುವೆ ಸ್ನೇಹವನ್ನುಂಟುಮಾಡಿ 'ರಾಯಪಿತಾಮಹ' ಎಂದು ಪ್ರಖ್ಯಾತನಾದನೆಂದು ಕಿರಿಹಲಸಗೆ, ಮತ್ತಿತರ ದಾನಶಾಸನಗಳಿಂದ ತಿಳಿದುಬರುತ್ತದೆ.

ದಕ್ಷಿಣದ ಈ ಕಾಲದ ಘಟನೆಗಳು ಆರನೆಯ ವಿಕ್ರಮಾದಿತ್ಯನ ಭಾಗ್ಯದೊಂದಿಗೆ ಹೆಣೆದುಕೊಂಡಿವೆ. ಆರನೆಯ ವಿಕ್ರಮಾದಿತ್ಯನು ಜಯಕೇಶಿಯ ನಾಡಿಗೆ ಬಂದಾಗ, ಸುಮಾರು ಕ್ರಿ.ಶ. 1075ರಲ್ಲಿ ಆತನು ತನ್ನ ಮಗಳನ್ನು ಅವನಿಗೆ ಮದುವೆ ಮಾಡಿಕೊಟ್ಟು ಮುಂದೆ ಚಕ್ರವರ್ತಿಯಾಗಲಿದ್ದವನ ಸಂಬಂಧ ಬೆಳಸಿದನು. ವಿವಾಹ ಸಂಬಂಧ ಬೆಳೆದ ಮೇಲೆ ವಿಕ್ರಮಾದಿತ್ಯ ಕೇರಳ ಮತ್ತು ಆಲುಪ ದೇಶಗಳ ಕಡೆ ಹೊರಟನು. ಈ ದಂಡಯಾತ್ರೆಯಲ್ಲಿ ಅವನೊಡನೆ ಜಯಕೇಶಿಯೂ ಭಾಗವಹಿಸಿರಬೇಕು. ಕ್ರಿ.ಶ. 1076ರಲ್ಲಿ ಚಾಲುಕ್ಯರ ಪ್ರಭುತ್ವವನ್ನು ಕಲ್ಯಾಣದಲ್ಲಿ ಪುನಃ ಸ್ಥಾಪಿಸಲು ಜಯಕೇಶಿಯು ಪ್ರಮುಖ ಪಾತ್ರ ವಹಿಸಿರಬೇಕು.

ತಂದೆಯಂತೆ ಜಯಕೇಶಿಯೂ ಧಾರ್ಮಿಕ ಸ್ವಭಾವದವನೂ ದಾನಶೀಲನೂ ಆಗಿದ್ದನು. ಅವನು ಅನೇಕ ಯಾಗಗಳನ್ನು ನಡೆಸಿದನು. ವಿದ್ವಾಂಸರಿಗೆ ಬಹಳ ಆಶ್ರಯ ಕೊಟ್ಟಿದ್ದನು.

ಜಯಕೇಶಿಯ ಆಳಿಕೆ ಇದ್ದಕ್ಕಿದ್ದಂತೆ ಕೊನೆಗೊಂಡ ಹಾಗೆ ತೋರುತ್ತದೆ.

ಜಯಕೇಶಿಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದರು, ಮಯಣಲ್ಲದೇವಿಯೆಂಬ ಒಬ್ಬ ಮಗಳನ್ನು ಅನ್ಹಿಲ್ವಾಡದ ಚಾಲುಕ್ಯರ ಒಂದನೆಯ ಕರ್ಣನಿಗೆ ಮದುವೆಮಾಡಿ ಕೊಟ್ಟಿತ್ತು. ಎರಡನೆಯ ಮಗಳ ವಿವಾಹ ಆರನೆಯ ವಿಕ್ರಮಾದಿತ್ಯನೊಂದಿಗೆ ನಡೆದಿತ್ತು. ಮೂರನೆಯ ಗುವಲದೇವ ಮತ್ತು ವಿಜಯಾದಿತ್ಯ ಅವನ ಗಂಡು ಮಕ್ಕಳು.

ಕ್ರಿ.ಶ.ಸು. 1050ರಲ್ಲಿ ಹುಟ್ಟಿದ ಗುವಲದೇವ ಕ್ರಿ.ಶ. 1078ರಲ್ಲಿ ಸಿಂಹಾಸನವನ್ನೇರಿದನು. ಕ್ರಿ.ಶ. 1095ರ ವರೆಗೆ ಅವನ ರಾಜ್ಯ ಕೊಂಕಣ 900, ಪಲಸಿಗೆ 12000ಗಳಿಂದ ಕೂಡಿತ್ತು. ಕ್ರಿ.ಶ. 1095 ಮತ್ತು ಕ್ರಿ.ಶ. 1103ರ ನಡುವಣ ಕಾಲದಲ್ಲಿ ಅವನು ತನ್ನ ರಾಜ್ಯದ ಕೆಲವು ಭಾಗಗಳನ್ನು ಕಳೆದುಕೊಂಡಂತೆ ತೋರುತ್ತದೆ. ಕ್ರಿ.ಶ. 1098ರ ಕದ್ರೊಳ್ಳಿ ಶಾಸನದಿಂದ ಅವನ ಪ್ರಭುತ್ವ ಪಲಸಿಗೆ 12,000ಕ್ಕೆ ಮಾತ್ರ ಸೀಮಿತವಾಗಿದ್ದಂತೆ ತಿಳಿಯುತ್ತದೆ. ಸಿಂಧ ರಾಜಕುಮಾರನಾದ ಎರಡನೆಯ ಆಚುಗಿ ಗೋವೆಯನ್ನು ವಶಪಡಿಸಿಕೊಂಡು, ಮಲೆಪರನ್ನು ಚದುರಿಸಿ ಕೊಂಕಣವನ್ನು ಹಿಡಿದನೆಂದು ಹೇಳಲಾಗಿದೆ. ಅಲ್ಲದೆ ಅವನು ಗೋವೆಯನ್ನು ಅಗ್ನಿಗೆ ಆಹುತಿಗೊಟ್ಟನಂತೆ! ಗದಗಿನ ತ್ರಿಕೂಟೇಶ್ವರ ಶಾಸನವು (ಕ್ರಿ.ಶ. 1102) ಮಹಾಪ್ರಧಾನ ಭಿವಣ್ಣಯ್ಯ ನಾಯಕ ಪಲಸಿಗೆ 12000ದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನೆಂದು ತಿಳಿಸುತ್ತದೆ.

ಲಕ್ಷ್ಮೇಶ್ವರ ಶಾಸನವೂ (ಕ್ರಿ.ಶ. 1102) ಈ ಹೇಳಿಕೆಯನ್ನು ಸಮರ್ಥಿಸುತ್ತದೆ. ತಂಬೂರಿನ ಒಂದು ಶಾಸನವು ಆರನೆಯ ವಿಕ್ರಮಾದಿತ್ಯನು ಪಲಸಿಗೆ ನಾಡನ್ನು ಗುವಲದೇವನ ತಮ್ಮ ವಿಜಯಾದಿತ್ಯನ ಮಗನಾದ ಎರಡನೆಯ ಜಯಕೇಶಿಗೆ ವರದಕ್ಷಿಣೆಯಾಗಿ ಕೊಟ್ಟನೆಂದು ತಿಳಿಸುತ್ತದೆ. ಆದರೆ ಕ್ರಿ.ಶ. 1103ರ ಮುಕ್ಕಲ್ ಶಾಸನದಲ್ಲಿ ಗುವಲದೇವನ ಪ್ರಭುತ್ವದ ನಾಡನ್ನು ಕೊಂಕಣ 900 ಮತ್ತು ಪಲಸಿಗೆ 12,000 ಎಂದು ಹೇಳಿದೆ. ಆ ಕಾರಣ ಕ್ರಿ.ಶ. 1103ರ ವೇಳೆಗೆ ಗುವಲದೇವ ಆ ಎರಡು ಪ್ರಾಂತ್ಯಗಳ ಮೇಲೂ ಪುನಃ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದನು ಎನ್ನಬಹುದು. ಗುವಲದೇವನ ಕೊನೆಯ ದಿನಗಳಲ್ಲಿ, ಬಹುಶಃ ಅವನ ತಮ್ಮನ ಮಗನಾದ ಎರಡನೆಯ ಜಯಕೇಶಿಯ ಆಕ್ರಮಣ ನೀತಿಯ ನಿಮಿತ್ತ, ಕಾವಡಿ ದ್ವೀಪವೂ ಸೇರಿ ಸುತ್ತಮುತ್ತಲ ಪ್ರದೇಶದ ವರೆಗೂ ರಾಜ್ಯವನ್ನು ವಿಸ್ತರಿಸಿದಂತೆ ತೋರುತ್ತದೆ. ಅನಿಲಾಪುರ ರಾಜಧಾನಿಯಾಗಿತ್ತು (ಕ್ರಿ.ಶ. 1082); ತರುವಾಯ ಗೋವೆ.

ಮೂರನೆಯ ಗುವಲದೇವನ ತಮ್ಮ ಒಂದನೆಯ ವಿಜಯಾದಿತ್ಯ ರಾಜ್ಯವಾಳಲೇ ಇಲ್ಲ. ಪೆರ್ಮಾಡಿ ದೇವನ ದೇಗಾವೆ ಶಾಸನದಲ್ಲಿ ವಿಜಯಾದಿತ್ಯನು ಅನೇಕ ಯುದ್ಧನೌಕೆಗಳಿದ್ದ ತನ್ನ ನೌಕಾಪಡೆಯೊಡನೆ ಹಲವಾರು ದ್ವೀಪಗಳ ಮೇಲೆ ದಂಡಯಾತ್ರೆ ನಡೆಸಿದನೆಂದೂ, ಆತ ಮಹಾಯೋಧನಾಗಿದ್ದನೆಂದೂ ಹೇಳಿದೆ. ವಿಜಯಾದಿತ್ಯನ ನಾಲ್ವರು ಮಕ್ಕಳಲ್ಲಿ ಜಯಕೇಶಿ ಎರಡನೆಯವನು.

ಕ್ರಿ.ಶ. 1080ರಲ್ಲಿ ಹುಟ್ಟಿದ ಎರಡನೆಯ ಜಯಕೇಶಿ ಕದಂಬವಂಶದ ರಾಜರಲ್ಲಿ ಸುಪ್ರಸಿದ್ಧನಾದವನು. ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ ಮತ್ತು ಎರಡನೆಯ ಜಗದೇಕಮಲ್ಲ—ಈ ಮೂವರು ಚಕ್ರವರ್ತಿಗಳಿಗೆ ಅವನು ಸಾಮಂತನಾಗಿದ್ದನು.

ದೊಡ್ಡಪ್ಪನಾದ ಗುವಲದೇವನ ಜೀವಿತ ಕಾಲದಲ್ಲಿಯೇ ರಚಿತವಾದ, ಜಯಕೇಶಿಗೆ ಸಂಬಂಧಿಸಿದ, ದಾಖಲೆಗಳು ನರೇಂದ್ರ (ಕ್ರಿ.ಶ. 1122) ಮತ್ತು ಪೊಮಿಗಟ್ಟಿ (ಕ್ರಿ.ಶ. 1124)ಗಳಲ್ಲಿವೆ. ಕ್ರಿ.ಶ. 1125 ರಿಂದ ಕ್ರಿ.ಶ. 1144ರ ವರೆಗಿನ ಎರಡನೆಯ ಜಯಕೇಶಿಯ ಅನೇಕ ಶಾಸನಗಳು ನಮಗೆ ದೊರೆಯುತ್ತವೆ. ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಮಲೆನಾಡು ಪ್ರದೇಶ, ಇಡೀ ಕಾರವಾರ, ರತ್ನಗಿರಿ, ಗೋವೆಯೂ ಸೇರಿ ಕೊಲಾಬ ಮತ್ತು ಠಾಣಾ ಜಿಲ್ಲೆಗಳು ಮತ್ತು ಹಿಂದಿನ ಸಾವಂತವಾಡಿರಾಜ್ಯ—ಇವು ನರೇಂದ್ರ ಶಾಸನದ ಪ್ರಕಾರ ಅವನ ಆಳಿಕೆಗೆ ಒಳಪಟ್ಟ ಪ್ರದೇಶಗಳು. ಬಹುಶಃ ಇಷ್ಟು ವಿಸ್ತಾರವಾದ ಪ್ರದೇಶದ ಮೇಲೆ ಗೋವೆಯ ಕದಂಬರು ಎಂದೂ ಪ್ರಭುತ್ವ ನಡೆಸಿರಲಿಲ್ಲ.

ಎರಡನೆಯ ಜಯಕೇಶಿ ಮತ್ತು ಆತನ ರಾಣಿ ಮೈಳಾಲದೇವಿಯರಿಗೆ ಕ್ರಿ.ಶ. 1125ರ ವರೆಗೆ ಕುಂದೂರ ರಾಜಧಾನಿಯಾಗಿತ್ತು.

ಜಯಕೇಶಿಗೆ ಮೂವರು ಮಕ್ಕಳು ; ಅವರಲ್ಲಿ ಕೊನೆಯವನು ವಿಜಯಾದಿತ್ಯ.

ಗೋವೆಯ ಕದಂಬ ವಂಶದ ರಾಜಕುಮಾರಿಯರಲ್ಲಿ ಮೈಳಾಲದೇವಿ ಸುಪ್ರಸಿದ್ಧಳಾಗಿದ್ದಳೆಂಬುದು ನಿಸ್ಸಂದೇಹ. ಆಕೆ ಚಕ್ರವರ್ತಿಯಾದ ಆರನೆಯ ವಿಕ್ರಮಾದಿತ್ಯನ ಮಗಳಾಗಿದ್ದುದಲ್ಲದೆ, ಪ್ರಖ್ಯಾತ ರಾಜನ ಪತ್ನಿಯಾಗಿ ಅಪೂರ್ವ ಗುಣಗಳನ್ನುಳ್ಳ ಸ್ತ್ರೀಯಾಗಿದ್ದಳು.

ಆಕೆಯ ಜನನ ಕ್ರಿ.ಶ. 1086. ಕ್ರಿ.ಶ.ಸು. 1103ರಲ್ಲಿ ಜಯಕೇಶಿಯೊಡನೆ ವಿವಾಹ ನಡೆಯಿತು. ಮೂರನೆಯ ಗುವಲದೇವ ಆಕೆಯ ವಿವಾಹ ಸಂದರ್ಭದಲ್ಲಿ, ಸೌರಾಷ್ಟ್ರದ ಸೋಮನಾಥನ ಭೂಪಾ

ರಾಧನೆಯ ವೆಚ್ಚಕ್ಕೆಂದು ಕನಕಪುರವೆಂಬ ಗ್ರಾಮವನ್ನು ದತ್ತಿಬಿಟ್ಟದ್ದು ಸ್ವಾರಸ್ಯಕರವಾಗಿದೆ. ಪತಿಯ ವಶಕ್ಕೆ ಆಕೆ ವಿವಾಹದ ಬಳಿವಳಿಯಾಗಿ ಪಲಸಿಗೆ ನಾಡನ್ನು ತಂದಳು. ಗುವಲದೇವನ ಕೊನೆಯ ದಿನಗಳಲ್ಲಿ ಕುಂದೂರದಲ್ಲಿದ್ದು ಪತಿಪತ್ನಿಯರಿಬ್ಬರೂ ರಾಜ್ಯಭಾರ ನಡೆಸುತ್ತಿದ್ದರು. ಜಯಕೇಶಿ ಗೋವೆಯಲ್ಲಿ ಆಳಿಕೆ ಕೈಗೊಂಡ ಮೇಲೂ ಬಹುಕಾಲದ ವರೆಗೆ ವಾಸ್ತವವಾಗಿ ಕುಂದೂರ ಮೈಳಾಲದೇವಿಯ ರಾಜಧಾನಿ ಯಾಗಿ ಮುಂದುವರಿಯಿತು. ಗಂಡನು ವಹಿಸಿಕೊಟ್ಟಿದ್ದ ಧಾರವಾಡ, ಕಲ್ಘಟಗಿ ಮತ್ತು ಹುಬ್ಬಳ್ಳಿ ತಾಲೂಕು ಪ್ರದೇಶವನ್ನು ಕುಂದೂರದಿಂದಲೇ ಆಳುತ್ತಿದ್ದಳು.

ಕ್ರಿ.ಶ. 1124ರಲ್ಲಿ ಧಾರವಾಡ ತಾಲೂಕಿನ ಗುಗಿಕಟ್ಟಿಯಲ್ಲಿ 'ಕೇಶವದೇವ' ದೇವಾಲಯವನ್ನು ಕಟ್ಟಿಸಿದಳು. ಕ್ರಿ.ಶ. 1147ರ ಅನಂತರ ಜಯಕೇಶಿಯ ವಿಷಯವಾಗಿ ಏನೂ ತಿಳಿಯುವುದಿಲ್ಲ. ಆತನ ಅನಂತರವೂ ಮೈಳಾಲದೇವಿ ಬಹುಕಾಲದ ವರೆಗೆ ಜೀವಿಸಿದ್ದಳು. ಕ್ರಿ.ಶ. 1147ರಲ್ಲಿ ಆಕೆಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಪತಿಯ ಜೀವಿತಕಾಲದಲ್ಲಿ ಸುಖಸಂತೃಪ್ತಿಯ ದಿನಗಳನ್ನು ಕಂಡಿದ್ದಳು. ಆದರೆ ಆ ಅನಂತರವೂ ಆಕೆಯ ಮಕ್ಕಳಾದ ಪೆರ್ಮಾಡಿದೇವ ಮತ್ತು ವಿಜಯಾದಿತ್ಯರು ಆಕೆಯನ್ನು ಬಹು ಶ್ರದ್ಧೆಯಿಂದಲೂ ಅಕ್ಕರೆಯಿಂದಲೂ ನೋಡಿಕೊಂಡರು. ಅವರು ದಾನದತ್ತಿಗಳನ್ನು ಕೊಡುವ ಸಂದರ್ಭ ಗಳಲ್ಲಿ ಆಕೆಯ ಅಭಿಪ್ರಾಯ ಪಡೆಯುತ್ತಿದ್ದರು. ಕಲ್ಘಟಗಿ ತಾಲೂಕಿನ ದುಮ್ಮಗಳ್ಳಿ ಗ್ರಾಮದಲ್ಲಿ ಒಂದು ದೇವಾಲಯ ಕಟ್ಟಿಸಿ ಅದನ್ನು ಆಕೆಯ ಹೆಸರಿನಿಂದ 'ಮೈಳಾಲೇಶ್ವರ' ದೇವಾಲಯವೆಂದು ಕರೆದರು.

ಕ್ರಿ.ಶ. 1147-48ರಲ್ಲಿ ಪೆರ್ಮಾಡಿದೇವ ಸಿಂಹಾಸನವನ್ನೇರಿದನು. ಅವನು ಹುಟ್ಟಿದ್ದು ಸುಮಾರು ಕ್ರಿ.ಶ. 1110ರಲ್ಲಿ. ಅವನು ಸಣ್ಣ ವಯಸ್ಸಿನಲ್ಲಿಯೇ ಖ್ಯಾತಿ ಹೊಂದಿದನು. ಆತನ ಬಗೆಗೆ ಪ್ರಥಮ ಉಲ್ಲೇಖವಿರುವ ಹುಣಸಿಕಟ್ಟಿ ಶಾಸನವು (ಕ್ರಿ.ಶ. 1142) ಆತನನ್ನು ಉಜ್ವಲ ಭಾಷೆಯಿಂದ ಹೊಗಳಿದೆ ಆಗ ಇನ್ನೂ ತಂದೆಯಾದ ಜಯಕೇಶಿ ರಾಜ್ಯವಾಳುತ್ತಿದ್ದನು. ಪೆರ್ಮಾಡಿದೇವ ರಾಜನಾದ ಮೇಲೆ ಕಲ್ಘಟಗಿ ತಾಲೂಕಿನ ಬೆಲ್ವಂತರ್‌ನಲ್ಲಿ (ಕ್ರಿ.ಶ. 1149) ಅವನ ಮೊದಲ ಉಲ್ಲೇಖವಿದೆ; ಹುಬ್ಬಳ್ಳಿ ತಾಲೂಕಿನ ನುಲ್ವಿಯ (ಕ್ರಿ.ಶ. 1185-86) ಉಲ್ಲೇಖವೇ ಕೊನೆಯದು. ಇವೆರಡರ ನಡುವಣ ಕಾಲದ ಆತನ ಶಾಸನ ಮುಂತಾದ ಅನೇಕ ದಾಖಲೆಗಳು ದೊರೆತಿವೆ.

ಆಳಿಕೆಯ ಆರಂಭದಿಂದಲೂ ಪಲಸಿಗೆ 12,000, ಕೊಂಕಣ 900, ಮತ್ತು ಒಂದೂಕಾಲು ಲಕ್ಷ ನಾಡಾದ ಕಾವಡಿದ್ವೀಪ—ಈ ಮೂರು ಪ್ರಾಂತಗಳು ಅವನ ಪ್ರಭುತ್ವದಲ್ಲಿದ್ದುವು. ಆದರೆ ಸು.ಕ್ರಿ.ಶ. 1154ರ ವೇಳೆಗೆ ಕಾವಡಿ ದ್ವೀಪ ಅವನ ಕೈಬಿಟ್ಟಿತು. ಮುಂದೆ ಕ್ರಿ.ಶ. 1162ರಲ್ಲಿ ಅದನ್ನು ವಶಪಡಿಸಿ ಕೊಂಡು ಕ್ರಿ.ಶ. 1166ರ ವರೆಗೂ ಆಳುತ್ತಿದ್ದನು. ಆದರೆ ಕೆಲವು ವರ್ಷಗಳನಂತರ ಎಂದರೆ ಕ್ರಿ.ಶ 1174ರಲ್ಲಿ ಆತನ ಕೈತಪ್ಪಿ ಹೋದ ಕಾವಡಿ ದ್ವೀಪ ಕದಂಬವಂಶದ ಆಳಿಕೆಯಿಂದಲೇ ಬಹುಶಃ ಇದೇ ಕಟ್ಟಕಡೆಯದಾಗಿ ಕೈಬಿಟ್ಟುಹೋಯಿತು.

ಚಂದ್ರಾಪುರ ಮತ್ತು ಗೋವೆ ಈ ರಾಜನ ಆಳಿಕೆಯ ಕಡೆಯತನಕ ರಾಜಧಾನಿಯಾಗಿದ್ದುವು. ಸಿದ್ದಾಪುರ ಶಾಸನದ (ಕ್ರಿ.ಶ. 1158) ಪ್ರಕಾರ (ಖಾನಾಪುರ ತಾಲೂಕಿನ ಈಗಿನ ಬೇಡಿಯಾದ) ಸಂಪಗಡಿ ಎಂಬ ಮೂರನೆಯ ಸ್ಥಳವೂ ಆತನ ರಾಜಧಾನಿಯಾಗಿದ್ದಂತೆ ತಿಳಿದುಬರುತ್ತದೆ.

ಕ್ರಿ.ಶ. 1156ರಲ್ಲಿ ಬಿಜ್ಜಳನು ಚಾಲುಕ್ಯರ ಅಧಿಕಾರವನ್ನು ಕಿತ್ತುಕೊಳ್ಳುವ ವರೆಗೂ ಪೆರ್ಮಾಡಿದೇವ ಚಾಲುಕ್ಯರ ನೆಚ್ಚಿನ ಸಾಮಂತನಾಗಿದ್ದನು. ಅವನು ಚಕ್ರವರ್ತಿ ಬಿಜ್ಜಳನ ಪರಮಾಧಿಕಾರವನ್ನು ಒಪ್ಪಲಿಲ್ಲ.

ಕ್ರಿ.ಶ. 1183ರ ತರುವಾಯ ಆರನೆಯ ವಿಕ್ರಮಾದಿತ್ಯನಿಂದ ಚಾಲುಕ್ಯರ ಆಳಿಕೆ ಪುನಃ ಪ್ರಾರಂಭವಾಗುವ ವರೆಗೂ ತನ್ನ ರಾಜ್ಯವನ್ನು ಸ್ವತಂತ್ರವಾಗಿಯೇ ಆಳಿದನು.

ಪೆರ್ಮಾಡಿದೇವ ಶಿವನ ಪರಮಭಕ್ತ. ಅವನಿಗೆ 'ಶಿವಚಿತ್ತ' ಎಂಬ ವಿಶೇಷಣವಿತ್ತು. ಅವನು ಶೂರ, ಉದಾತ್ತ ವ್ಯಕ್ತಿ; ವಿದ್ಯಾವಂತ, ಕರುಣಿ, ಉದಾರಿ. ವಿದ್ಯೆಯ ಹಲವಾರು ಶಾಖೆಗಳಲ್ಲಿ ಪಾಂಡಿತ್ಯ ಸಂಪಾದಿಸಿದ್ದುದರಿಂದ ಅವನನ್ನು 'ಸರ್ವಜ್ಞಾವತಾರ' ಎಂದು ಕರೆಯಲಾಗಿದೆ. ನಾನಾ ಶಾಸನಗಳಲ್ಲಿ ಅವನಿಗೆ ಕೊಟ್ಟಿರುವ 'ಪಶ್ಚಿಮ ಸಮುದ್ರಾಧೀಶ್ವರ' ಎಂಬ ವಿಶೇಷಣದಿಂದ ಅವನು ನೌಕಾಬಲವನ್ನು ಹೊಂದಿದ್ದನೆಂದು ಸ್ಪಷ್ಟವಾಗುತ್ತದೆ.

ಕುಂತಲದೇಶದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯಿದ್ದರೂ ಪೆರ್ಮಾಡಿದೇವನ ಕೈಕೆಳಗಿನ ಪ್ರಾಂತ್ಯಗಳಲ್ಲಿ ಶಾಂತಿ ನೆಲಸಿತ್ತು. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಗಳು ಸಾಕಷ್ಟು ನಡೆದಿದ್ದವೆಂದು ಪೆರ್ಮಾಡಿದೇವ ಮತ್ತು ವಿಜಯಾದಿತ್ಯರ ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಶಾಸನಗಳಿಂದ ತಿಳಿದುಬರುತ್ತದೆ. ರಾಜನ ಹಸರಂಬಿ ಶಾಸನದಿಂದ (ಕ್ರಿ.ಶ. 1171) ಒಬ್ಬ ಹೆಂಗಸು ರಾಜ್ಯಾದಾಯ ವಸೂಲು ಮಾಡುವ ಅಧಿಕಾರಿ ಯಾಗಿದ್ದುದು ತಿಳಿಯುತ್ತದೆ. ಇದೊಂದು ಅಪೂರ್ವ ಉಲ್ಲೇಖ. ಇದರಿಂದ ಆಗ ರಾಜ್ಯಾಡಳಿತದ ಅಧಿಕಾರಸ್ಥಾನಗಳಿಗೆ ಸ್ತ್ರೀಯರನ್ನು ನೇಮಕ ಮಾಡುವುದು ಅಸಾಮಾನ್ಯ ವಿಷಯವೇನೂ ಆಗಿರಲಿಲ್ಲ ಎಂದು ತಿಳಿದುಬರುತ್ತದೆ.

ಪೆರ್ಮಾಡಿದೇವನ ಹಿರಿಯ ರಾಣಿ ಕಮಲಾದೇವಿ. ಬೆಳಗಾಂ ಜಿಲ್ಲೆಯ ಸಂಪಗಾಂವ್ ತಾಲೂಕಿನ ದೇಗಾಂವ್ ಹಳ್ಳಿಯಲ್ಲಿ ಆಕೆಯೇ ಕಟ್ಟಿಸಿದ ಕಲಾವೈಭವಯುಕ್ತವಾದ ಶ್ರೀ ಕಮಲನಾರಾಯಣ ದೇವಾಲಯದಿಂದ ಆಕೆಯ ಹೆಸರು ಅಮರವಾಗಿದೆ.

ಪೆರ್ಮಾಡಿದೇವನ ಇಡೀ ಆಳಿಕೆಯಲ್ಲಿ ಆತನ ಹೆಸರಿನೊಡನೆ ಅವನ ತಮ್ಮನಾದ ಎರಡನೆಯ ವಿಜಯಾದಿತ್ಯನ ಹೆಸರನ್ನು, ರಾಜನ ಬಿರುದುಗಳು ಹೊರತು–ಸಮಾನ ಸ್ಥಾನಮಾನಗಳಿಂದ ನಿರೂಪಿಸಿರು ವುದನ್ನು ಕಾಣಬಹುದು. ಈ ಅಣ್ಣ ತಮ್ಮಂದಿರ ಜೊತೆ ಅಪೂರ್ವವಾದುದು. ಈ ಅಪೂರ್ವ ಭ್ರಾತೃತ್ವದ ಕಾರಣವೇ ಗೋವೆಯ ಕದಂಬರು ಯಾವ ಅಡೆತಡೆಗಳು ಬಂದರೂ ಲೆಕ್ಕಿಸದೆ ಬಿಜ್ಜಳನ ಆಕ್ರಮಣ ವರ್ಷವಾದ ಕ್ರಿ.ಶ. 1156 ರಿಂದ ಚಟ್ಟಯ್ಯನ ಬದರ್‌ಸಿಂಗಿ ದಾನಶಾಸನದ ವರ್ಷವಾದ ಕ್ರಿ.ಶ. 1257ರ ವರೆಗೆ ಶತಮಾನದ ಬಹುಭಾಗ ಅವ್ಯಾಹತವಾಗಿ ಸ್ವತಂತ್ರವಾದ ರಾಜ್ಯಾಡಳಿತ ನಡೆಸುವಂತಾಯಿತು.

ವಿಜಯಾದಿತ್ಯನನ್ನು ಶಾಸನಗಳಲ್ಲಿ 'ಯುವರಾಜಕುಮಾರ' ಅಥವಾ 'ಕುಮಾರ' ಎಂದು ಕರೆದಿದೆ. ವಿವಿಧ ಯುದ್ಧಕಲೆ, ಸಂಗೀತ, ವಾದ್ಯ, ಕಾವ್ಯಮೀಮಾಂಸೆ, ಸ್ಮೃತಿ ಮತ್ತು ಪುರಾಣಗಳಲ್ಲಿ ಪರಿಣತಿ ಹೊಂದಿದ್ದುದು ಅವನ ವೈಯಕ್ತಿಕ ಸಾಧನೆಯೆನ್ನಬಹುದು. ಆದುದರಿಂದಲೇ ಅವನು 'ಬಹುವಿದ್ಯಾಧರ' ಎಂದು ಖ್ಯಾತನಾದ. ಸಾಹಿತ್ಯದಲ್ಲಿ ಗಾಢವಾದ ಆಸಕ್ತಿಯಿದ್ದುದರಿಂದ 'ಸಾಹಿತ್ಯನಿತ್ಯೋತ್ಸವ' 'ವಾಣಿಭೂಷಣಭೂಮಿಪಾಲ' ಎಂದು ಪ್ರಸಿದ್ಧಿಹೊಂದಿದನು. ಅವನು ಗೋಕರ್ಣೇಶ್ವರನ ಪರಮಭಕ್ತ. ಅವನು ಮನೋಮೋಹಕನೂ ಶೂರನೂ ಆಗಿದ್ದನು. 'ವಿಷ್ಣುಚಿತ್ತ' ಎಂಬುದು ಅವನ ವಿಶೇಷಣ.

ವಿಜಯಾದಿತ್ಯನ ಮಗ ಮೂರನೆಯ ಜಯಕೇಶಿ ಕ್ರಿ.ಶ. 1187–88ರಲ್ಲಿ ಸಿಂಹಾಸನವೇರಿದನು. ಕ್ರಿ.ಶ. 1150ರಲ್ಲಿ ಅವನು ಹುಟ್ಟಿದನು ; ವಂಶಪರಂಪರೆಯಿಂದ ಬಂದ ಹಲಸಿಗೆ 12,000 ಮತ್ತು ಕೊಂಕಣ 900 ಪ್ರಾಂತ್ಯಗಳು ಅವನ ಆಳಿಕೆಯ ಆರಂಭದಿಂದ ಅಂತ್ಯದ ವರೆಗೂ ಅವನ ವಶವಲ್ಲಿಯೇ ಇದ್ದುವು.

ಅವನು ನಾಲ್ಕನೆಯ ಸೋಮೇಶ್ವರನಲ್ಲಿ ಸ್ವಾಮಿನಿಷ್ಠೆಯುಳ್ಳವನಾಗಿದ್ದನು. ಗೋವೆಯೇ ಅವನ ರಾಜಧಾನಿಯಾಗಿ ಮುಂದುವರಿಯಿತು.

ಕನ್ನಡನಾಡಿನ ಮೇಲೆ ಪರಮ ಸ್ವಾಮ್ಯ ಸ್ಥಾಪಿಸುವುದಕ್ಕಾಗಿ ದೇವಗಿರಿಯ ಯಾದವರು, ದೋರಸಮುದ್ರದ ಹೊಯ್ಸಳರು ಮತ್ತು ಚಾಲುಕ್ಯಚಕ್ರವರ್ತಿ ನಾಲ್ಕನೆಯ ಸೋಮೇಶ್ವರ ಇವರ ನಡುವೆ ತ್ರಿಕೋನ ಹೋರಾಟ ನಡೆದಿತ್ತು. ದಿನದಿನವೂ ಬಲಿಷ್ಠರಾಗುತ್ತಿದ್ದ ಉತ್ತರದ ಯಾದವರನ್ನು ಮತ್ತು ದಕ್ಷಿಣದ ಹೊಯ್ಸಳರನ್ನು ಗೆಲ್ಲಲು ಸೋಮೇಶ್ವರನಿಗೆ ಸಾಧ್ಯವಾಗಲಿಲ್ಲ. ಅವನು ಭಿಲ್ಲಮ ಮತ್ತು ವೀರ ಬಲ್ಲಾಳರೊಡನೆ ನಡೆದ ಯುದ್ಧದಲ್ಲಿ ಸೋತು, ಕದಂಬರ ನಾಡಿನಲ್ಲಿದ್ದ ಗೋವೆಗೆ ಹೋಗಿ ಮೂರನೆಯ ಜಯಕೇಶಿಯ ಮರೆಹೊಕ್ಕಂತೆ ತೋರುತ್ತದೆ. ಮೂರನೆಯ ಜಯಕೇಶಿಯು ಭಿಲ್ಲಮ ಮತ್ತು ವೀರಬಲ್ಲಾಳರ ಅಗಾಧ ಸೈನ್ಯದೆದುರು ತನ್ನ ಪಡೆಯೊಡ್ಡಿ ಅವರನ್ನು ತಡೆದುದಲ್ಲದೆ, ಅವರ ತರುವಾಯ ಬಂದವರನ್ನೂ ಸುಮಾರು ಅರ್ಧ ಶತಮಾನಕಾಲ (ಕ್ರಿ.ಶ. 1187-88ರಿಂದ ಕ್ರಿ.ಶ. 1225-26ರ ವರೆಗೆ) ಎದುರಿಸಿದ್ದು ಅವನ ಘನತೆಯನ್ನು ಹೆಚ್ಚಿಸುತ್ತದೆ.

ಸಪ್ತಕೋಟೀಶ್ವರದೇವ ಜಯಕೇಶಿಯ ರಕ್ಷಕದೈವ. ಹಲ್ಸಿಯ ನರಸಿಂಹದೇವನ ಮುಂದೆ ವರಾಹ ದೇವನ ಸುಂದರ ವಿಗ್ರಹವನ್ನು ಪ್ರತಿಷ್ಠಾಪಿಸಿ, ದೇವಾಲಯ ನಿರ್ವಹಣೆಗೆ ಮತ್ತು ಉತ್ಸವಾಚರಣೆಗೆ ವಿಶೇಷ ವ್ಯವಸ್ಥೆ ಮಾಡಿದುದು ಅವನ ಉದಾರ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಈ ವರೆಗೆ ತಿಳಿದುಬಂದ ಅವನ ಕೊನೆಯ ದಾಖಲೆ ಮುತ್ತಗೆಯದು. ಅದರ ಕಾಲ ಕ್ರಿ.ಶ. 1233.

ವಜ್ರದೇವನು ತಂದೆಯ ಜೀವಿತಕಾಲದಲ್ಲಿಯೇ ಕ್ರಿ.ಶ.ಸು. 1215 ರಿಂದ 1225ರ ವರೆಗೆ ಆಳುತ್ತಿದ್ದನು. ಅವನ ತಮ್ಮ ಕ್ರಿ.ಶ. 1226-27ರಿಂದ ಆಳುತ್ತಿದ್ದ ಕಾರಣ, ಆತ ಚಿಕ್ಕ ವಯಸ್ಸಿನಲ್ಲಿಯೇ ಮರಣಹೊಂದಿದನೆಂದು ತೋರುತ್ತದೆ.

ತ್ರಿಭುವನ ಮಲ್ಲ, ತಂದೆ ಮೂರನೆಯ ಜಯಕೇಶಿಯಂತೆ, ವಂಶ ಪಾರಂಪರ್ಯವಾಗಿ ಬಂದ ರಾಜ್ಯ ವನ್ನು ಕ್ರಿ.ಶ. 1226-27 ರಿಂದ ಆಳತೊಡಗಿದನು. ಅವನ ಕಾಲದಲ್ಲಿ ಯಾದವರ ಚಕ್ರವರ್ತಿಯಾದ ಸಿಂಘಣ ರಾಜ್ಯದ ಗಡಿ ಪ್ರದೇಶದೊಳಕ್ಕೆ ಆಕ್ರಮಣಮಾಡಿ, ಸಿಂಘಣನ ಸೇನಾಧಿಪತಿಯಾದ ವಿಚಣನು ಕದಂಬರನ್ನು (ಕ್ರಿ.ಶ. 1237-38) ಗೆದ್ದುದಾಗಿ ಹೇಳಿಕೊಂಡಿರುವನು. ಆದರೆ ಕೊಂಕಣದಲ್ಲಿ ಕದಂಬರು ವೈಭವದಿಂದಿದ್ದರು ಎಂದು ಯಾದವರ ದಾಖಲೆಗಳಲ್ಲಿ ನಿರೂಪಿತವಾಗಿರುವುದು ತ್ರಿಭುವನಮಲ್ಲ ಬಲಿಷ್ಠ ರಾಜನಾಗಿದ್ದನೆಂಬುದನ್ನು ಸಮರ್ಥಿಸುತ್ತದೆ.

ತ್ರಿಭುವನಮಲ್ಲನ ಆಳಿಕೆ ಇನ್ನೂ ಹಲವು ವರ್ಷಗಳ ವರೆಗೆ ಮುಂದುವರಿಯಿತು. ಅವನ ಕತ್ತೂರು ದಾನಶಾಸನದ ಕಾಲ ಕ್ರಿ.ಶ. 1242. ಕೊನೆಯಪಕ್ಷ ಅಲ್ಲಿಯ ವರೆಗಾದರೂ ಅವನು ಆಳಿರಬೇಕು.

ತ್ರಿಭುವನ ಮಲ್ಲನ ಮಗ ಮೂರನೆಯ ಶಾಸ್ಥ ಅಥವಾ ಚಟ್ಟಯ್ಯನ ಆಳಿಕೆ ಕ್ರಿ.ಶ. 1246-47 ರಿಂದ ಆರಂಭವಾಯಿತು. ಸಿಂಹಾಸನವನ್ನು ಪಡೆಯಲು ಭಾವ ಮೈದುನನಾದ ಕಾಮದೇವನಿಂದ ಸಹಾಯ ದೊರೆತಿರಬೇಕು. ಕಾಮದೇವನನ್ನು 'ಶಾಸ್ಥ ಸಂಸ್ಥಾಪಕ' ಎಂದು ಕರೆದಿರುವುದು ಈ ಊಹೆಗೆ ಆಧಾರ.

ಚಟ್ಟಯ್ಯನ ರಕ್ಷಕದೈವ ಸಪ್ತಕೋಟೀಶ್ವರ. ಅವನು ಶಂಕರನ ಪರಮ ಭಕ್ತ. ಆತ ಉದಾರಿ, ಸತ್ಯವಂತ, ವೀರ. ಸಾಹಿತ್ಯದಲ್ಲಿ ಪಾಂಡಿತ್ಯಗಳಿಸಿದ್ದನು. ಆತನ ಬುದರ್‌ಸಿಂಗಿ ಶಾಸನದಲ್ಲಿ ಹನ್ನೆರಡನೆಯ

ಶತಮಾನದಲ್ಲಿದ್ದ ಕರ್ಮಯೋಗಿ, ಸತ್ಪುರುಷ, ವಚನಕಾರ ಹಾಗೂ ಬಸವಣ್ಣನ ಸಮಕಾಲೀನನೂ ಆದ ಸಿದ್ಧರಾಮನಾಥದೇವನ ವಚನವನ್ನು ಉದ್ಧರಿಸಲಾಗಿದೆ. ಸೊನ್ನಲಿಗೆಯಿಂದ (ಸೊಲ್ಲಾಪುರ) ದೂರ ವಿದ್ದರೂ ಈ ಪ್ರದೇಶದಲ್ಲಿ ಸಿದ್ಧರಾಮನ ಉಪದೇಶ ಜನಪ್ರಿಯವಾಗಿದ್ದಂತೆ ಕಾಣುತ್ತದೆ.

ಸಮಕಾಲೀನ ರಾಜನಾದ ಯಾದವ ಕೃಷ್ಣನು ಕದಂಬರ ನಾಡಿನ ಸುತ್ತಮುತ್ತ ಪರಮಾಧಿಕಾರವನ್ನು ನಡೆಸುತ್ತಿದ್ದನು. ಚಟ್ಟಯ್ಯನ ರಾಜ್ಯದ ಪೂರ್ವ ಗಡಿಯ ಬಳಿ ಯಾದವರ ಕೈಕೆಳಗೆ ಮಹಾ ಪ್ರಧಾನನಾದ ಬಾಚಿರಾಜ ಪುಲಿಗೆರೆ ನಗರದಿಂದ (ಲಕ್ಷ್ಮೇಶ್ವರ) ಕ್ರಿ.ಶ. 1247ರಲ್ಲಿ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದನು ಹೀಗಿದ್ದರೂ ಚಟ್ಟಯ್ಯನ ದೃಢಮನಸ್ಸು ಮತ್ತು ಸೈನ್ಯಶಕ್ತಿಯೇ ಆತನ ರಾಜ್ಯವು ಇಷ್ಟು ದೀರ್ಘಕಾಲ ಸುಭದ್ರವಾಗಿ ಉಳಿಯಲು ಮುಖ್ಯಕಾರಣ. ಇದುವರೆಗೆ ಉಳಿದು ಬಂದಿರುವ ಶಾಸನ ಇತ್ಯಾದಿ ದಾಖಲೆಗಳು ಮುಖ್ಯವಾಗಿ ಪೂರ್ವಗಡಿ ಪ್ರದೇಶವಾದ ಹುಬ್ಬಳ್ಳಿಯಿಂದಲೂ ಗೋವೆಯಿಂದಲೂ ದೊರೆತವು. ಬುದರ್‌ಸಿಂಗಿ ದಾನಶಾಸನದಲ್ಲಿ 'ಪಶ್ಚಿಮ ಸಮುದ್ರಾಧಿಪತಿ' ಎಂದು ಚಟ್ಟಯ್ಯನನ್ನು ಕುರಿತು ಹೇಳಿದೆ. ಆದರಿಂದ ಅವನೂ ಸಹ ನೌಕಾಪಡೆಯನ್ನು ಮುಂದುವರಿಸಿಕೊಂಡು ಬಂದನೆಂದು ಹೇಳಬಹುದು. ಆದರೆ ಚಟ್ಟಯ್ಯನೇ ಈ ಹಿರಿಯ ವಂಶದ ಕೊನೆಯ ರಾಜನಾಗಿದ್ದಂತೆ ತೋರುತ್ತದೆ. ಬುದರ್‌ಸಿಂಗಿ ದಾನಶಾಸನದ ಅನಂತರ ಈ ವಂಶದ ಬಗೆಗೆ ಏನೂ ತಿಳಿದುಬಂದಿಲ್ಲ.

ಅವರ ರಾಜ್ಯ ಯಾದವರ ಆಡಳಿತಕ್ಕೆ ಒಳಪಟ್ಟಿತು. ಅನಂತರ ಉತ್ತರದ ಮುಸ್ಲಿಮರ ವಶವಾಯಿತು. 15ನೆಯ ಶತಮಾನದ ಕೊನೆಯಲ್ಲಿ ಅಂತಿಮವಾಗಿ ಪೋರ್ಚುಗೀಸರ ಕೈಸೇರಿತು.

## ಗೋವೆಯ ಕದಂಬರ ವಂಶಾವಳಿ

ಶಾಸ್ಥ I ಅಥವಾ ಕಂಟಕಾಚಾರ್ಯ

ನಾಗವರ್ಮ
= ಮಲವ್ವದೇವಿ

ಗುವಲದೇವ I
= ಗೌರವ್ವದೇವಿ

ಶಾಸ್ಥ ಅಥವಾ ಚಟ್ಟಯ್ಯ ಅಥವಾ ಚಟ್ಟಯ್ಯದೇವ II
= ಅಕ್ಕಾದೇವಿ ಕ್ರಿ.ಶ. 100—1035

- ಗುಹಲ್ಲದೇವ ಅಥವಾ ಗುವಲದೇವ II ಕ್ರಿ.ಶ. 1038
- ಜಯಕೇಶಿ I ಕ್ರಿ.ಶ. 1050—1078 = ಬೊಪ್ಪದೇವಿ

ಜಯಕೇಶಿ I ರ ಮಕ್ಕಳು:

- ತ್ರಿಭುವನಮಲ್ಲ ಗುವಲದೇವ III ಕ್ರಿ.ಶ. 1078—1125
- ವಿಜಯಾದಿತ್ಯ I = ಚಟ್ಟಲದೇವಿ
- ಮಯನಲ್ಲದೇವಿ = ಅನ್ಹಿಲವಾಡದ ಚಾಲುಕ್ಯರ ಕರ್ಣ I ಕ್ರಿಶ. 1063-64ರಿಂದ ಕ್ರಿ.ಶ. 1093-94.
- ಮಗಳು ಆರನೆಯ ವಿಕ್ರಮಾದಿತ್ಯನನ್ನು ಕ್ರಿ.ಶ. 1076ಕ್ಕೆ ಹಿಂದೆ ಮದುವೆಯಾದಳು.

ವಿಜಯಾದಿತ್ಯ I ರ ಮಕ್ಕಳು:

- ಪದ್ಮಲಾದೇವಿ
- ಜಯಕೇಶಿ II = ಮೈಳಾಲದೇವಿ ಕ್ರಿ.ಶ.1126—1147
- ಉದಯರಾಮದೇವ ಕ್ರಿ.ಶ. 1126.
- ತ್ರಿಭುವನಮಲ್ಲ ಕ್ರಿ.ಶ. 1144

ಜಯಕೇಶಿ II ರ ಮಕ್ಕಳು:

- ಸಾವಿತ್ರಿ ಕ್ರಿ.ಶ. 1144 = ತೈಲನೃಪನ ಮಗ ಗಂಗಿದೇವ.
- ಪೆರ್ಮಾಡಿದೇವ = ಕಮಲಾದೇವಿ ಕ್ರಿ.ಶ. 1147—1187
- ವಿಜಯಾದಿತ್ಯ II = ಲಕ್ಷ್ಮೀದೇವಿ

ಜಯಕೇಶಿ III
ಕ್ರಿ.ಶ. 1187-1225-6
= ಮಹಾದೇವಿ

- ವಜ್ರದೇವ ಕ್ರಿಶ. 1214-15ರಿಂದ ಕ್ರಿ.ಶ. 1225-26 (ತಂದೆಯೊಡನೆ)
- ತ್ರಿಭವನಮಲ್ಲ ಕ್ರಿ.ಶ. 1226-27ರಿಂದ 1245-46. = ಮಾಣಿಕದೇವಿ.

ತ್ರಿಭವನಮಲ್ಲರ ಮಕ್ಕಳು:

- ಶಾಸ್ಥ ಅಥವಾ ಚಟ್ಟಯ್ಯ III ಕ್ರಿ.ಶ. 1246-47ರಿಂದ 1257-58ರವರೆಗೆ.
- ಒಬ್ಬ ಮಗಳು = ಲಕ್ಷ್ಮೀದೇವಿಯ ಮಗ ಕಾಮದೇವನನ್ನು ವಿವಾಹವಾದಳು.

## ಸೌಂದತ್ತಿಯ ರಟ್ಟರು

ಸೌಂದತ್ತಿಯ ರಟ್ಟರು ಕುಂತಲದೇಶದ ಒಂದು ಭಾಗವಾಗಿದ್ದ ಕುಂಡಿ 3,000 ಪ್ರಾಂತ್ಯವನ್ನು ಸುಮಾರು ಮುನ್ನೂರು ವರ್ಷಗಳ ಕಾಲ ಆಳಿದರು (ಕ್ರಿ.ಶ. 930 ರಿಂದ ಕ್ರಿ.ಶ. 1230ರ ವರೆಗೆ). ಅವರು ಮೊದಲು ರಾಷ್ಟ್ರಕೂಟರ ಸಾಮಂತರಾಗಿದ್ದು ಅನಂತರ ಪಶ್ಚಿಮ ಚಾಲುಕ್ಯ ಮತ್ತು ಕಲಚುರ್ಯರ ಅಧಿಕಾರಕ್ಕೆ ಒಳಪಟ್ಟರು. ತರುವಾಯ ಸ್ವಲ್ಪಕಾಲ ಸ್ವತಂತ್ರ ರಾಜರಾಗಿ ಆಳಿ, ಕೊನೆಯಲ್ಲಿ ದೇವಗಿರಿಯ ಯಾದವರಿಂದ ಸೋತರು.

ಕುಂಡಿ 3,000 ಪ್ರಾಂತ್ಯ ಅಥಣಿ, ಖಾನಾಪುರ ತಾಲೂಕುಗಳನ್ನು ಮತ್ತು ಸಂಪಗಾಂವ್ ತಾಲೂಕಿನ ದಕ್ಷಿಣ ಭಾಗವನ್ನು ಬಿಟ್ಟು ಉಳಿದ ಬೆಳಗಾಂ ಜಿಲ್ಲೆಯಿಂದ ಬಹುಮಟ್ಟಿಗೆ ಕೂಡಿತ್ತು. ಕ್ರಿ.ಶ. 980ರಲ್ಲಿ ಒಂದನೆಯ ಕಾರ್ತವೀರ್ಯ ಅದರ ಗಡಿಗಳನ್ನು ನಿರ್ಧರಿಸಿದನೆಂದು ಹೇಳಲಾಗಿದೆ. ಪಶ್ಚಿಮದಲ್ಲಿ ಕೊಲ್ಹಾಪುರದ ಶಿಲಾಹಾರರ ರಾಜ್ಯ, ಉತ್ತರದಲ್ಲಿ ಕಲಚೂರ್ಯರ ಮಂಗಳವೇಢೆ ಮತ್ತು ದಕ್ಷಿಣದಲ್ಲಿ ಕದಂಬರ ಗೋವೆ-ಇವುಗಳೇ ರಟ್ಟರ ರಾಜ್ಯದ ಮೇರೆಗಳಾಗಿದ್ದುವು. ಪೂರ್ವದ ಗಡಿ ಇಂದಿನ ಬೆಳಗಾಂ ಜಿಲ್ಲೆಗೆ ಸೀಮಿತ ವಾಗಿದ್ದಂತೆ ಕಾಣುತ್ತದೆ. ಕುಂಡಿನಾಡು ಎಂಬುದು ವಿಫಲವಾಗದ ಫಲಸಮೃದ್ಧಿಯಿಂದಲೂ ಸೊಂಪಾದ ಬೆಳೆಗಳಿಂದಲೂ ಸದಾ ನಗುನಗಿಸುತ್ತಿತ್ತೆಂಬುದು ನೇಸರ್ಗಿ ಶಾಸನವು ವರ್ಣಿಸಿದೆ. ಆ ನಾಡಿನ ಜನ ಶೀಲವಂತರೂ ಪ್ರಾಮಾಣಿಕರೂ ಆಗಿದ್ದರೆಂದು ಹೊಗಳಲಾಗಿದೆ. ಆ ನಾಡಿನಲ್ಲಿ ಬುದ್ಧ, ಮಾಧವ, ಅರ್ಕ (ಸೂರ್ಯ), ಶಂಕರ, ಜಿನ ದೇವಾಲಯಗಳನ್ನು ಅಧಿಕ ಸಂಖ್ಯೆಯಲ್ಲಿ ನಿರ್ಮಿಸಲಾಗಿತ್ತೆಂದು ತೇದಾರ್ಳಿನ ಶಾಸನದಿಂದ ತಿಳಿದುಬರುತ್ತದೆ.

ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲೂಕಿನ ಮುಖ್ಯಸ್ಥಳವಾದ ಸೌಂದತ್ತಿಯೇ ಆ ವಂಶದವರ ರಾಜಧಾನಿಯಾಗಿತ್ತು. ಅದನ್ನು ಸಂಸ್ಕೃತದಲ್ಲಿ 'ಸುಗಂಧವರ್ತಿ' ಎಂದೂ ಕರೆಯಲಾಗುತ್ತಿತ್ತು. ರಟ್ಟರು ತಮ್ಮ ಪ್ರಭುತ್ವದ ಕೊನೆಯ ಕಾಲದಲ್ಲಿ ವೇಲುಗ್ರಾಮ ಅಥವಾ ವೇಣುಗ್ರಾಮ ಎಂದು ಹೆಸರು ಹೊಂದಿದ್ದ ಬೆಳಗಾವಿಗೆ ಆಡಳಿತ ಕೇಂದ್ರವನ್ನು ವರ್ಗಾಯಿಸಿದರು.

ರಟ್ಟರು ಪೃಥಿವೀರಾಮ ಎಂಬವನಿಂದ ಪ್ರಕಾಶಕ್ಕೆ ಬಂದರು. ಅವನು ಮೈಲಪತೀರ್ಥರಿಂದ ಸ್ಥಾಪಿತವಾದ ಜೈನರ 'ಕರೆಯ' ಉಪಶಾಖೆಯ ಅನುಯಾಯಿ. ಅವನು ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೆಯ ಕೃಷ್ಣನಿಂದ ಸಾಮಂತರಾಜ ಪದವಿಗೇರಿದನು. ರಟ್ಟರ ಈ ಮೊದಲ ಶಾಖೆಯಲ್ಲಿ ನಾಲ್ವರಿದ್ದಾರೆ. ಮೆರದ, ಆತನ ಮಗ ಪೃಥಿವೀರಾಮ, ಅವನ ಮಗ ಪಿತ್ತುಗ ಮತ್ತು ಪಿತ್ತುಗನ ಪುತ್ರ ಶಾಂತಿವರ್ಮ. ಸೌಂದತ್ತಿಯ ಶಾಂತಿವರ್ಮನ ಕ್ರಿ.ಶ. 980ರ ಒಂದು ಶಾಸನದಲ್ಲಿ ಅವನು ಪಶ್ಚಿಮ ಚಾಲುಕ್ಯ ವಂಶವನ್ನು ಪುನಃ ಸ್ಥಾಪಿಸಿದ ತೈಲನ ಸಾಮಂತ ಎಂದು ಹೇಳಲಾಗಿದೆ.

ರಟ್ಟರ ಎರಡನೆಯ ಶಾಖೆ 'ನನ್ನ' ಎಂಬವನಿಂದ ಆರಂಭವಾಗುತ್ತದೆ. ಈ ವಂಶದವರು ಹದಿಮೂರನೆಯ ಶತಮಾನದ ಮೂರು ದಶಕಗಳ ವರೆಗೂ ಆಳಿದರು. ಬೆಳಗಾಂಜಿಲ್ಲೆ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ಈ ವಂಶಕ್ಕೆ ಸೇರಿದ ಅನೇಕ ಶಾಸನಗಳು ದೊರೆಯುತ್ತವೆ. ಒಂದನೆಯ

ಕಾರ್ತವೀರ್ಯನ ಕಾಲದ ಮೊದಲ ಉಲ್ಲೇಖ ಕ್ರಿ.ಶ. 980ಕ್ಕೆ ಸೇರಿದೆ. ತೈಲನ ಸಾಮಂತನಾಗಿ ಅವನು ಕುಂಡಿ 3,000 ಪ್ರಾಂತ್ಯವನ್ನು ಆಳುತ್ತಿದ್ದನೆಂದು ಅದರಲ್ಲಿ ಉಲ್ಲೇಖಿಸಲಾಗಿದೆ. ಅವನೇ ಎರಡನೆಯ ರಟ್ಟವಂಶದ ನಿಜವಾದ ಸ್ಥಾಪಕನಾಗಿರಬೇಕೆಂದು ತೋರುತ್ತದೆ.

ರಟ್ಟನ ಹಿರಿಯ ಮಗ ದಾಯಿಮಯ್ಯ ರಾಜ್ಯವನ್ನು ವಿಸ್ತರಿಸಿದನು. ಚುರುಕು ಬುದ್ಧಿಯ ಸಾಹಸ ಮನೋಭಾವದ ಅವನನ್ನು 'ರಟ್ಟರ ಮೇರು' ಎಂದು ಕರೆಯಲಾಗಿದೆ. ಉದಾರನೂ ಶೂರನೂ ಆದ ಕಣ್ಣ ರಟ್ಟನ ಕಿರಿಯ ಮಗ.

ತರುವಾಯ ಬಂದ ರಾಜ ಎರಗ ಅಥವಾ ಎರೆಯರಾಮ, ಸುಸಂಸ್ಕೃತ; ವಾದ್ಯ ಸಂಗೀತದಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದನು. ಕ್ರಿ.ಶ. 1040ರ ಅವನ ಮಂತೂರು ಶಾಸನದಲ್ಲಿ ಆತ ಪಶ್ಚಿಮ ಚಾಲುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನ ಸಾಮಂತನಾಗಿದ್ದನೆಂದು ಹೇಳಿದೆ.

ಎರಡನೆಯ ಕಣ್ಣಕೈರ ಮತ್ತು ಎರಡನೆಯ ಕಾರ್ತವೀರ್ಯ ಸೋದರರು ಒಟ್ಟಿಗೆ ರಾಜ್ಯವಾಳಿದಂತೆ ಕಾಣಬರುತ್ತದೆ. ಏಕೆಂದರೆ ಅವರ ಉಲ್ಲೇಖಗಳು ಏಕಕಾಲದಲ್ಲಿಯೇ ಒಟ್ಟೊಟ್ಟಿಗೆ ಕಂಡುಬರುತ್ತವೆ. ಕಣ್ಣ ಸಂಗೀತ ಮತ್ತು ನೃತ್ಯಗಳಲ್ಲಿ ಕುಶಲಿಯಾಗಿದ್ದನು. ಕ್ರಿ.ಶ. 1087ರ ಕಾರ್ತವೀರ್ಯನ ಎರಡು ಶಾಸನಗಳು ಆತ ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂದು ತಿಳಿಸುತ್ತವೆ.

ಕಟ್ಟ ಅಥವಾ ಕಟ್ಟಮ ಎಂಬ ಹೆಸರುಗಳನ್ನೂ ಉಳ್ಳ ಮೂರನೆಯ ಕಾರ್ತವೀರ್ಯನ ಕಾಲದ ಅನೇಕ ಶಾಸನಗಳು ದೊರೆತಿವೆ. ಅವುಗಳಲ್ಲಿ ಚಿಕ್ಕೋಡಿ ತಾಲೂಕಿನ ಏಕಾಂಬೆಯ ಕ್ರಿ.ಶ. 1165ರ ಶಾಸನ ಬಿಜ್ಜಳನ ಆಳಿಕೆಯನ್ನು ಉಲ್ಲೇಖಿಸುತ್ತದೆ. ಅದರಿಂದ ರಟ್ಟರು ಕಲಚೂರ್ಯರ ಕೈಕೆಳಗಿದ್ದರೆಂದು ತಿಳಿಯಬಹುದು. ಮತ್ತೊಂದು ಶಾಸನವು ಬಿಜ್ಜಳನ ಮಗನಾದ ಸೋವಿದೇವನ ಸಾಮಂತನಾಗಿ ಕಾರ್ತವೀರ್ಯನು ಕ್ರಿ.ಶ. 1170ರಲ್ಲಿ ಕುಂಡಿ 3,000 ಪ್ರಾಂತ್ಯವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.

ಒಂದನೆಯ ಲಕ್ಷ್ಮೀದೇವ ಅಥವಾ ಲಕ್ಷ್ಮಣನ ಹೆಸರು ಕ್ರಿ.ಶ. 1209ರ ಸಂಪಗಾಂವ್ ತಾಲೂಕಿನ ಹನ್ನಿಕೇರಿ ಶಾಸನದಲ್ಲಿದೆ. ಲಕ್ಷ್ಮೀದೇವನ ರಾಣಿ ಚಂದಲಾದೇವಿ ಅಥವಾ ಚಂದ್ರಿಕಾದೇವಿ ಸುಸಂಸ್ಕೃತಳೂ ದಾನಗುಣ ಸಂಪನ್ನಳೂ ಜೈನಧರ್ಮದಲ್ಲಿ ನಿಷ್ಠೆಯುಳ್ಳವಳೂ ಆಗಿದ್ದಳು.

ನಾಲ್ಕನೆಯ ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನರನ್ನು ರಾಜ ಮತ್ತು ಯುವರಾಜ ಎಂದು ಕರೆಯಲಾಗಿದೆ. ಈ ಸೋದರರ ಅನೇಕ ಶಾಸನಗಳು ದೊರೆತಿವೆ. ವೇಣುಗ್ರಾಮ ಅಂದರೆ ಈಗಿನ ಬೆಳಗಾಂ ಅವರ ರಾಜಧಾನಿಯಾಗಿತ್ತು; ಪರಮಾಧಿಕಾರವುಳ್ಳ ಸ್ವತಂತ್ರ ಸಾಮ್ರಾಜ್ಯ ಅವರದಾಗಿತ್ತು ಎಂದು ಆ ಶಾಸನಗಳಿಂದ ತಿಳಿಯಬಹುದು. ಬಹುಶಃ, ಹೊಯ್ಸಳ ಯಾದವರ ನಡುವೆ ಹೋರಾಟ ನಡೆಯುತ್ತಿದ್ದಾಗ ರಟ್ಟರು ಸ್ವತಂತ್ರರಾಗಿ ಸೌಂದತ್ತಿಯಿಂದ ಬೆಳಗಾವಿಗೆ ರಾಜಧಾನಿಯನ್ನು ಬದಲಾಯಿಸಿದರೆಂದು ತೋರುತ್ತದೆ. ಕಲಚೂರ್ಯರ ಕಡೆಕಡೆಯ ಕಾಲದಲ್ಲೂ ನಾಲ್ಕನೆಯ ಸೋಮೇಶ್ವರನ ಆಳಿಕೆಯ ಪ್ರಾರಂಭಕಾಲದಲ್ಲೂ ಪ್ರಸಿದ್ಧ ಸೇನಾಪತಿಯಾಗಿದ್ದ ತೇಜುಗಿದೇವನ ಮಗ ಭಾಯಿದೇವ ಕ್ರಿ.ಶ. 1187ರಲ್ಲಿ ನಾಲ್ಕನೆಯ ಸೋಮೇಶ್ವರನಿಂದ ಕೊಡುಗೆಯಾಗಿ ಬಂದಿದ್ದ ಕುಂಡಿ 3,000 ಪ್ರಾಂತ್ಯವನ್ನು ಆಳುತ್ತಿದ್ದನೆಂಬುದು ಗಮನಾರ್ಹವಾಗಿದೆ. ಈಗ ಲಂಡನ್ನಿನಲ್ಲಿ 'ಬ್ರಿಟಿಷ್ ಮ್ಯೂಸಿಯಂ'ನಲ್ಲಿರುವ ಬೆಳಗಾವಿನಲ್ಲಿ ದೊರೆತ ಎರಡು ಶಾಸನಗಳಿಂದ ನಾಲ್ಕನೆಯ ಕಾರ್ತವೀರ್ಯನ ಕಾಲ ಕ್ರಿ.ಶ. 1204 ಎಂಬುದಾಗಿ ತಿಳಿಯುತ್ತದೆ. ಕನ್ನಡದಲ್ಲಿರುವ ಆ ಶಾಸನಗಳ ಕವಿತಾರಚನೆ ಮೆಚ್ಚುವಂತಹುದು. ಲಾಟ ಕೇರಳ ನಾಡುಗಳ

ವರ್ತಕರುಗಳಿಂದ ಕೂಡಿರುವ ಬೆಳಗಾಂ ಉಚ್ಛ್ರಾಯಸ್ಥಿತಿಯಲ್ಲಿತ್ತೆಂದು ಹೇಳಿದೆ. ಈಗಲೂ ಉಳಿದು ಬಂದಿರುವ ಕಪಿಲೇಶ್ವರ ದೇವಸ್ಥಾನ, ನಗರದ ಕೆಲವು ಬೀದಿಗಳ ಹೆಸರುಗಳು, ಪರ್ವತಶ್ರೇಣಿಗಳು ಮುಂತಾದ ವಿವರಗಳೂ ಆ ಶಾಸನಗಳಲ್ಲಿ ನಿರೂಪಿತವಾಗಿವೆ. ಕಾರ್ತವೀರ್ಯನ ಆಶ್ರಯದಲ್ಲಿ ಕ್ರಿ.ಶ. 1222 ರಲ್ಲಿ ಪಾರ್ಶ್ವನಾಥ ಪುರಾಣವನ್ನು ಪೂರ್ಣಗೊಳಿಸಿದೆನೆಂದು ಪಾರ್ಶ್ವಪಂಡಿತ ಹೇಳುತ್ತಾನೆ.

ಕಾರ್ತವೀರ್ಯ ಮತ್ತು ಮಾದೇವಿಯರ ಮಗನಾದ ಎರಡನೆಯ ಲಕ್ಷ್ಮೀದೇವನ ವಿಷಯ ಕ್ರಿ.ಶ. 1228ರ ಅವನ ಸೌಂದತ್ತಿ ಶಾಸನದಿಂದ ತಿಳಿಯುತ್ತದೆ. ಆತನ ರಾಜಧಾನಿ ವೇಣುಗ್ರಾಮ. ಆ ಶಾಸನದಲ್ಲಿ ಕೇಶಿರಾಜನು ಹೇಗೆ ಮೂರುಸಲ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಯಾತ್ರೆಮಾಡಿ ದೇವರ ಎದುರು ದೃಢ ಪ್ರತಿಜ್ಞೆತೊಟ್ಟು, ಆ ಪವಿತ್ರ ಗಿರಿಯ ಶಿಲೆಯಿಂದ ನಿರ್ಮಿತವಾದ ಲಿಂಗವನ್ನು ತಂದು, ಸುಗಂಧವರ್ತಿ ಪಟ್ಟಣದ ಹೊರಗಡೆ ನಾಗರಕೆರೆಯ ಬಳಿ ತನ್ನ ತಂದೆಯ ಹೆಸರಿನಲ್ಲಿ, ಮಲ್ಲಿನಾಥ ದೇವಾಲಯದಲ್ಲಿ ಪ್ರತಿಷ್ಠಾಪಿಸಿದನೆಂಬುದರ ವಿವರವಿದೆ. ರಟ್ಟವಂಶದ ಉಲ್ಲೇಖವಿರುವ ಶಾಸನಗಳಲ್ಲಿ ಇದೇ ಕೊನೆಯದು. ಸಿಂಘಣನ ರಾಜಪ್ರತಿನಿಧಿಯಾಗಿ ದಕ್ಷಿಣ ಪ್ರಾಂತ್ಯಗಳ ಆಡಳಿತವನ್ನು ನಿರ್ವಹಿಸುತ್ತಿದ್ದ ವಿಚಣನು ರಟ್ಟರನ್ನು ಗೆದ್ದಿದ್ದನೆಂದು ಕ್ರಿ.ಶ. 1238ರ ಹರಳಹಳ್ಳಿ ದಾನಶಾಸನದಲ್ಲಿ ಸ್ಪಷ್ಟವಾಗಿ ಹೇಳಿದೆ.

ರಟ್ಟರು ಕವಿಗಳಿಗೆ ವಿದ್ವಾಂಸರಿಗೆ ಉದಾರ ಆಶ್ರಯಕೊಟ್ಟಿದ್ದರು. ಬಾಲಚಂದ್ರ, ಪಾರ್ಶ್ವಪಂಡಿತ, ಮುನಿಚಂದ್ರ ಮತ್ತು ಎರಡನೆಯ ಗುಣವರ್ಮ ನಾಲ್ಕನೆಯ ಕಾರ್ತವೀರ್ಯನ ಆಶ್ರಯದಲ್ಲಿ ತಮ್ಮ ಕೃತಿಗಳನ್ನು ರಚಿಸಿದರು. ಬಾಲಚಂದ್ರ ಬೆಳಗಾವಿನ ಶಾಸನಗಳನ್ನೂ ರಚಿಸಿದನು. ಪಾರ್ಶ್ವಪಂಡಿತ **ಪಾರ್ಶ್ವನಾಥ ಪುರಾಣ** ವನ್ನೂ ಕಲ್‌ಹೊಳೆ ಶಾಸನವನ್ನೂ ಬರೆದನು. ಮುನಿಚಂದ್ರ ಕಾರ್ತವೀರ್ಯನ ಆಚಾರ್ಯನಾಗಿದ್ದನು. ಅವನ ಮಗ ಲಕ್ಷ್ಮೀದೇವನಿಗೆ ಶಾಸ್ತ್ರ ಶಿಕ್ಷಾಗುರುವೂ ಮಂತ್ರಿಯೂ ಆಗಿದ್ದನು. ಮಾದಿರಾಜ ದೀರ್ಘವೂ ಮನೋಹರವೂ ಆದ ಸೌಂದತ್ತಿಯ ಶಾಸನವನ್ನು ರಚಿಸಿದನು. ರುದ್ರಭಟ್ಟ ಮತ್ತು ಮಾದಿರಾಜನ ಪೂರ್ವಜನಾದ ಶ್ರೀಧರ ರಟ್ಟರ ಆಶ್ರಯದಲ್ಲಿದ್ದ ಇತರ ಕವಿಗಳು. ಕಣ್ಣನು ರುದ್ರಭಟ್ಟನಿಗೆ ಹದಿನೆಂಟು ಹಳ್ಳಿಗಳ ಸಣ್ಣ ಸಂಸ್ಥಾನ ವನ್ನೆ ದಾನವಾಗಿ ಕೊಟ್ಟಿದ್ದನು.

ರಟ್ಟರು ಬಹುತೇಕ ಜೈನ ಧರ್ಮೀಯರು. ಅವರ ಆಳಿಕೆಯ ಕಾಲದಲ್ಲಿ ಅವರೂ ಅವರ ಸಾಮಂತರೂ ಅನೇಕ ಜಿನಾಲಯುಗಳನ್ನು ಕಟ್ಟಿಸಿದರು. ಶಿಲಾಹಾರ ವಿಜಯಾದಿತ್ಯನ ಮಂತ್ರಿಯಾದ ಕಲಿಯಣ್ಣನು ಏಕಾಂಬೆಯಲ್ಲಿ ಕಟ್ಟಿಸಿದ ನೇಮಿನಾಥ ಜಿನಾಲಯಕ್ಕೆ ಮೂರನೆಯ ಕಾರ್ತವೀರ್ಯನು ಭೂಮಿ ಯನ್ನು ದತ್ತಿಬಿಟ್ಟನು.

ಸಾಮಾನ್ಯವಾಗಿ ಜೈನ ಧರ್ಮಾವಲಂಬಿಗಳಾದರೂ ರಟ್ಟವಂಶದ ರಾಜರುಗಳಲ್ಲಿ ಒಬ್ಬಿಬ್ಬರಾದರೂ ಹಿಂದೂದೇವತೆಗಳನ್ನು ಪೂಜಿಸುತ್ತಿದ್ದರೆಂಬುದಕ್ಕೆ ಉಲ್ಲೇಖವಿದೆ. ಕಲ್‌ಹೊಳೆ ಮತ್ತು ಇತರ ಶಾಸನ ಗಳಲ್ಲಿ ನಾಲ್ಕನೆಯ ಕಾರ್ತವೀರ್ಯನನ್ನು ಕುರಿತು 'ಸಮಾರಾಧಿತ ಮಹಾಲಿಂಗ' ಎಂದು ಹೇಳಲಾಗಿದೆ. ರಟ್ಟರ ರಾಜ್ಯದಲ್ಲಿ ಹಿಂದೂ ದೇವಸ್ಥಾನಗಳನ್ನು ನಿರ್ಮಿಸಿದ ನಿದರ್ಶನಗಳಿಗೆ ಕೊರತೆಯೇನಿಲ್ಲ. ಹೆಬ್ಬೆಯ ನಾಯಕನ ಮಗ ಬಾಚಯನಾಯಕ, ನಾಲ್ಕನೆಯ ಕಾರ್ತವೀರ್ಯನ ನಿಷ್ಠಾವಂತ ಸೇವಕನೆಂದು ಹೆಸರಾಂತವನು, ನೇಸರಿಗೆಯಲ್ಲಿ ಹೆಬ್ಬೇಶ್ವರ ದೇವಾಲಯವನ್ನು ಕಟ್ಟಿಸಿದನು. ಅವನ ಪತ್ನಿಯಾದ ಮಾಯಿದೇವಿ ಅಲ್ಲಿಯೆ ಮದನಿಕೇಶ್ವರ ಮತ್ತು ಸಿದ್ಧೇಶ್ವರ ಎಂಬ ಎರಡು ದೇವಾಲಯಗಳನ್ನು ಕಟ್ಟಿಸಿದಳು. ಪಾಶುಪತರು, ಕಾಳಾಮುಖರು, ಶುದ್ಧಶೈವರು, ಜಂಗಮಲಿಂಗ–ಇವುಗಳಿಗೆ ಸಂಬಂಧಿಸಿದ ಉಲ್ಲೇಖಗಳಿಂದ ರಟ್ಟರ ಆಳಿಕೆಯ ಕೊನೆಕೊನೆಯಲ್ಲಿ ಶೈವಧರ್ಮದ ವಿವಿಧ ಪಂಥಗಳು ಪ್ರಚಲಿತವಾಗಿದ್ದುವು ಎಂದು ತಿಳಿದು ಬರುತ್ತದೆ.

## ಸೌಂದತ್ತಿಯ ರಟ್ಟರ ವಂಶಾವಳಿ

### ಪ್ರಥಮಶಾಖೆ

ಮೆರದ
|
ಪೃಥಿವೀರಾಮ
|
ಪಿತ್ತುಗ
|
ಶಾಂತಿವರ್ಮ
ಕ್ರಿ.ಶ. 980

### ದ್ವಿತೀಯ ಶಾಖೆ

ಮಿನ್ನ
|
ಕಾರ್ತವೀರ್ಯ I ಕ್ರಿ.ಶ. 980

- ದವರಿ ಅಥವಾ ದಾಯಿಮ
- ಕಣ್ಣಕೈರ I
  - ಎರಗ ಕ್ರಿ,ಶ. 1040
    - ಸೇನ I = ಮೈಳಾಲದೇವಿ
      - ಕಣ್ಣಕೈರ II (ಕ್ರಿ,ಶ.ಸು. 1069 ರಿಂದ 1076ರ ವರೆಗೆ ಮತ್ತು ಕ್ರಿ.ಶ. 1082ರಿಂದ 1087ರ ವರೆಗೆ)
      - ಕಾರ್ತವೀರ್ಯ II = ಭಾಗಲಾದೇವಿ ಕ್ರಿ.ಶ.ಸು. 1069ರಿಂದ 1076ರ ವರೆಗೆ ಮತ್ತು ಕ್ರಿ.ಶ. 1087)
        - ಸೇನ II= ಲಕ್ಷ್ಮೀದೇವಿ (ಕ್ರಿ.ಶ. 1096 ಮತ್ತು ಕ್ರಿ.ಶ.ಸು. 1102 ರಿಂದ 1121ರ ವರೆಗೆ)
          - ಕಾರ್ತವೀರ್ಯ III= ಪದ್ಮಲಾದೇವಿ ಕ್ರಿ.ಶ. 1143 ರಿಂದ 1165ರ ವರೆಗೆ
            - ಲಕ್ಷ್ಮೀದೇವ I ಕ್ರಿ.ಶ. 1209 = ಚಂದಲಾದೇವಿ
              - ಕಾರ್ತವೀರ್ಯ IV = ಏಚಲಾದೇವಿ ಮತ್ತು ಮಾದೇವಿ ಕ್ರಿ.ಶ. 1199 ರಿಂದ 1222ರ ವರೆಗೆ
                - ಲಕ್ಷ್ಮೀದೇವ II ಕ್ರಿ.ಶ. 1228
              - ಮಲ್ಲಿಕಾರ್ಜುನ
  - ಅಂಕ ಕ್ರಿ.ಶ. 1048

## ಎಲ್ಬುರ್ಗದ ಸಿಂದರು

' ಎರಂಬರಗೆ ' ಸಾಮಂತರಾಜರಾದ ಸಿಂದರ ರಾಜಧಾನಿಯಾಗಿತ್ತು. ರಾಯಚೂರು ಜಿಲ್ಲೆಯ ಈಗಿನ ಎಲ್ಬುರ್ಗವೆ ಆ ಎರಂಬರಗೆ. ಬಿಜಾಪುರ ಜಿಲ್ಲೆಯ ಆಗ್ನೇಯಭಾಗ, ಧಾರವಾಡ ಜಿಲ್ಲೆಯ ಈಶಾನ್ಯಭಾಗ, ಕಿಸುಕಾಡು 70 (ಆ ಪ್ರದೇಶದ ಮುಖ್ಯಸ್ಥಳ—ಪಟ್ಟದಕಲ್), ಕೇಲವಾಡಿ 3,000 (ಮುಖ್ಯಸ್ಥಳ—ಕೇಲವಾಡಿ), ಬಾಗಡೆ 70 (ಮುಖ್ಯಸ್ಥಳ—ಬಾಗಲ್‌ಕೋಟೆ), ಮತ್ತು ನರೆಯಂಗಲ್ 12 (ನರೆಗಲ್—ಕೇಂದ್ರ ಸ್ಥಳ)—ಈ ಪ್ರದೇಶಗಳಿಂದ ಕೂಡಿದ ರಾಜ್ಯವನ್ನು ಅವರು ಆಳುತ್ತಿದ್ದರು. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಪೂರ್ವದ ಕೊನೆಯ ಪ್ರದೇಶವೂ ಸೇರಿದ ಈ ನಾಡಿಗೆ ಸಿಂದವಾಡಿ ಎಂಬ ಹೆಸರಿತ್ತು.

ಪಶ್ಚಿಮ ಚಾಲುಕ್ಯರ ಕಾಲದಲ್ಲಿ ಈ ಕುಲದವರು ಪ್ರವರ್ಧಮಾನ ಸ್ಥಿತಿಗೆ ಬಂದರು. ಎರಡನೆಯ ಸಿಂಗನು ಎರಡನೆಯ ಸೋಮೇಶ್ವರನ ಮಹಾಮಂಡಲೇಶ್ವರನಾಗಿ ಕಿಸುಕಾಡು 70ನ್ನು ಕ್ರಿ.ಶ. 1076ರಲ್ಲಿ ಆಳುತ್ತಿದ್ದನೆಂದು ಧಾರವಾಡ ಜಿಲ್ಲೆಯ ರೋಣ ತಾಲೂಕಿನ ನಿಡಗುಂಡಿ ಶಾಸನದಲ್ಲಿ ಹೇಳಿದೆ.

ತ್ರಿಭುವನಮಲ್ಲಕೇಸರಿ ಎಂದು ಹೆಸರಾಂತ ಎರಡನೆಯ ಆಚುಗಿ ಆರನೆಯ ವಿಕ್ರಮಾದಿತ್ಯನ ಬಲಿಷ್ಠ ಸಾಮಂತನಾಗಿದ್ದನು. ಅವನ ಬಗೆಗೆ ಆ ವಂಶದ ದಾಖಲೆಗಳಲ್ಲಿ ಮುಂದೆ ಹೇಳಿರುವ ವಿವರಗಳು ನಿರೂಪಿತ ವಾಗಿವೆ: ಅವನು ಜಗ್ಗು ಎಂಬಾತನನ್ನು ಸೋಲಿಸಿ, ಹೊಯ್ಸಳರನ್ನು ಎದುರಿಸಿ ಅಟ್ಟಿದನು. ಗೋವೆಯನ್ನು ಹಿಡಿದನು. ಯುದ್ಧದಲ್ಲಿ ಲಕ್ಷ್ಮಣ ಎಂಬಾತನು ಓಡುವಂತೆ ಮಾಡಿ, ಪಾಂಡ್ಯರನ್ನು ಹಿಮ್ಮೆಟ್ಟಿಸಿದನು. ಮಲೆಪರನ್ನು ಚದರಿಸಿದನು. ಕೊಂಕಣವನ್ನು ವಶಪಡಿಸಿಕೊಂಡನು. ಗೋವೆ ಮತ್ತು ಉಪ್ಪಿನಕಟ್ಟೆಗಳಿಗೆ ಬೆಂಕಿಯಿಟ್ಟನು. ತನ್ನ ರಾಜ್ಯದ ಮೇಲೆ ದಾಳಿಯಿಟ್ಟ ಭೋಜನನ್ನು ಹಿಂದಕ್ಕಟ್ಟಿದನು.

ಎರಡನೆಯ ಆಚುಗಿಯ ಹಿರಿಯ ಮಗ ಒಂದನೆಯ ಪೆರ್ಮಾಡಿ. ಅವನು ಭೂಲೋಕಮಲ್ಲ ಮತ್ತು ಜಗದೇಕಮಲ್ಲರ ಸಾಮಂತನಾಗಿದ್ದನೆಂದು ಶಾಸನಗಳು ತಿಳಿಸುತ್ತವೆ. ಎರಂಬರಗೆ ಅವನ ರಾಜಧಾನಿ ಯಾಗಿತ್ತು. ಅವನು ಕುಲಶೇಖರಾಂಕನನ್ನು ಸೋಲಿಸಿ, ಜಯಕೇಶಿಯನ್ನು ಬೆನ್ನಟ್ಟಿ, ಚಟ್ಟನನ್ನು ಕೊಂದನೆಂದು ಶಾಸನಗಳು ಸಾರುತ್ತವೆ. ಹೊಯ್ಸಳರ ಲಾಂಛನ ಸಂಪತ್ತು ಮುಂತಾದವನ್ನು ಸ್ವಾಧೀನ ಪಡಿಸಿಕೊಂಡನೆಂದೂ ತಿಳಿದುಬರುತ್ತದೆ. ದೋರಸಮುದ್ರಕ್ಕೆ ಮುತ್ತಿಗೆ ಹಾಕಿ, ವಿಷ್ಣುವರ್ಧನನನ್ನು ಬೇಲಾಪುರದ (ಈಗಿನ ಬೇಲೂರು) ವರೆಗೆ ಬೆನ್ನಟ್ಟಿ ಹೋದನು. ಬೇಲಾಪುರವನ್ನು ವಶಪಡಿಸಿಕೊಂಡ ನಂತರ ಅಲ್ಲಿಂದಲೂ ಮುಂದಕ್ಕೆ ವಹದಿಘಾಟಿನ ವರೆಗೆ ಅಟ್ಟಿಹೋದನೆಂದೂ ತಿಳಿದುಬರುತ್ತದೆ.

ಎರಡನೆಯ ಚಾವುಂಡನು ಮೂರನೆಯ ತೈಲನ ಸಾಮಂತ ರಾಜನೆಂದು ಕ್ರಿ.ಶ. 1163ರ ಪಟ್ಟದಕಲ್ ಶಾಸನದಲ್ಲಿ ಹೇಳಿದೆ. ಕಿಸುಕಾಡು 76, ಬಾಗಡಿಗೆ 70, ಕೇಲವಾಡಿ 300 ಮತ್ತು ಇತರ ಪ್ರದೇಶಗಳು ಅವನ ಪ್ರಭುತ್ವದ ನಾಡಿನಲ್ಲಿ ಸೇರಿದ್ದುವು. ಮಹಾರಾಣಿ ದೇವಲದೇವಿ ಮತ್ತು ಆಕೆಯಲ್ಲಿ ಹುಟ್ಟಿದ ಮಕ್ಕಳಾದ ಮೂರನೆಯ ಆಚುಗಿ, ಎರಡನೆಯ ಪೆರ್ಮಾಡಿ, ಕಿಸುವೊಳಲ್ (ಪಟ್ಟದಕಲ್) ಪ್ರದೇಶವನ್ನು ಆಳುತ್ತಿದ್ದರೆಂದು ಅದೇ ಶಾಸನದಲ್ಲಿ ಹೇಳಿದೆ.

ಬಿಜ್ಜಳ ಮತ್ತು ವಿಕ್ಕಯ್ಯರ ಕಾಲದ ಅನೇಕ ಶಾಸನಗಳ ಪ್ರಕಾರ ಅವರು ಕಿಸುಕಾಡು, ಬೇಗಡಿಗೆ ಮತ್ತು ಕೇಲವಾಡಿಯನ್ನು ಆಳುತ್ತಿದ್ದರು. ಕ್ರಿ.ಶ. 1171ರ ನಿಡಗುಂಡಿ ಶಾಸನವೊಂದರಲ್ಲಿ ಅವರಿಬ್ಬರೂ ಬಿಜ್ಜಳನ ಮಗನಾದ ರಾಯಮುರಾರಿ ಸೋವಿದೇವನ ಸಾಮಂತರಾಗಿದ್ದರೆಂದು ಹೇಳಿದೆ.

ಎಲ್ಬುರ್ಗಿ ತಾಲೂಕಿನ ಕಲ್ಲೂರು ಶಾಸನದಲ್ಲಿ ಇಬ್ಬರು ಸೋದರರೂ ನಾಲ್ಕನೆಯ ಸೋಮೇಶ್ವರನ ಸಾಮಂತರಾಗಿದ್ದು ಎರಂಬರವಿ (ಎರಂಬರಗೆ)ಯಿಂದ ರಾಜ್ಯವಾಳುತ್ತಿದ್ದರೆಂದು ಹೇಳಿದೆ.

ಅವರು ಕಿಸುಕಾಡು, ಬೇಗಡಿಗೆ, ಕೇಲವಾಡಿ, ನರೆಯಂಗಲ್ 12 ಮತ್ತು ಕರಿವಾಡಿ 30ನ್ನು ಆಳುತ್ತಿದ್ದಾಗ ಎರಂಬರಗೆಯ ತೆಲ್ಲಿಗೇಶ್ವರ ದೇವರಿಗೆ ದತ್ತಿ ಬಿಟ್ಟರೆಂದು ಕ್ರಿ.ಶ. 1187ರ ಬೆಣಚಮಟ್ಟಿ ಶಾಸನವು ತಿಳಿಸುತ್ತದೆ. ಸಿಂದವಂಶಕ್ಕೆ ಸಂಬಂಧಿಸಿದ ಇನ್ನೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾವಿಸಬಹುದು. ಸಿಂದವಂಶೋದ್ಭವ ಮಹಾಮಂಡಲೇಶ್ವರ ಅಚಿದೇವರಸನು ನಾಲ್ಕನೆಯ ಸೋಮೇಶ್ವರನ ಆಳಿಕೆಯ ಹತ್ತನೆಯ ವರ್ಷದಲ್ಲಿ ದಾನಕೊಟ್ಟಿದ್ದನ್ನು ರೋಣ ತಾಲ್ಲೂಕಿನ ಕಲಕಪ್ಪನ ಗುಡ್ಡದ ಶಾಸನವು ತಿಳಿಸುತ್ತದೆ. ಅಂದರೆ ಸು.ಕ್ರಿ.ಶ. 1194ರಲ್ಲಿ ಎನ್ನಬಹುದು. ಮೂರನೆ ಆಚುಗಿಯೇ ಆ ಅಚಿದೇವರಸನೆಂದು ಕಾಣುತ್ತದೆ. ಅದೇ ಶಿಲೆಯ ಮೇಲೆ ಮತ್ತೊಂದು ಶಾಸನವಿದೆ. ಈ ಎರಡನೆಯ ಶಾಸನದಲ್ಲಿ ಸಿಂದಕುಲದ ಮಹಾಮಂಡಲೇಶ್ವರ ವಿಕ್ರಮಾದಿತ್ಯದೇವನು ಕ್ರಿ.ಶ. 1220ರಲ್ಲಿ ಯಾದವ ಸಿಂಘಣನ ರಾಜ್ಯಪಾಲನಾಗಿದ್ದನೆಂದು ಹೇಳಿದೆ. ವಿಕ್ಕಯ್ಯನೇ ಈ ಶಾಸನದ ವಿಕ್ರಮಾದಿತ್ಯನೋ ಅಥವಾ ಬೇರೊಬ್ಬ ವ್ಯಕ್ತಿಯೋ ಖಚಿತವಾಗುವುದಿಲ್ಲ. ಅಂತೂ ಕ್ರಿ.ಶ. 1220ರ ವೇಳೆಗೆ ಸಿಂದವಂಶದ ಆಳಿಕೆ ಕೊನೆಗೊಂಡಿತು.

ಸಿಂದವಂಶದ ರಾಜಗುರುಗಳಿಗೆ ಸಂಬಂಧಿಸಿದ ಕುತೂಹಲಕಾರಿ ವಿಷಯವೊಂದು ಕ್ರಿ.ಶ. 1179ರ ಎಲ್ಬುರ್ಗಿ ತಾಲೂಕಿನ ಕುಕ್ಕನೂರು ಶಾಸನದಲ್ಲಿ ನಿರೂಪಿತವಾಗಿದೆ. ಅವರು ಕಾಳಾಮುಖ ಪಂಥಕ್ಕೆ ಸೇರಿದ ಶೈವ ಗುರುಗಳು. ವಿಗ್ರಹೇಶ್ವರನು ಸೋಮೇಶ್ವರಾಚಾರ್ಯನ ಶಿಷ್ಯನೆಂದು ಹೀಗೆಯೆ ಹೇಳಲಾಗಿದೆ. ಕ್ರಿ.ಶ. 1084ರ ಸೂಡಿ ಶಾಸನದಲ್ಲೂ ಅವರ ಉಲ್ಲೇಖವಿದೆ. ಆ ಪೂಜ್ಯರಿಬ್ಬರೂ ಸುಂಡಿ (ಸೂಡಿ)ಯ ನಗರೇಶ್ವರ ದೇವಸ್ಥಾನದ ಕಾಳಾಮುಖ ಪಂಥದ ಆಚಾರ್ಯರೆಂದು ಹೇಳಿದೆ.

## ಎಲ್ಬುರ್ಗದ ಸಿಂದರ ವಂಶಾವಳಿ

(ಪೂರ್ವಿಕರನ್ನು ಹೆಸರಿಸಿಲ್ಲ)

- ಆಚುಗಿ I
  - ಬರ್ಮ ಕ್ರಿ.ಶ. 1104
  - ಸಿಂಗ II ಕ್ರಿ,ಶ. 1076
    - ಆಚುಗಿ II = ಮಾದೇವಿ ಕ್ರಿ.ಶ. 1113ರಿಂದ 1125ರ ವರೆಗೆ.
      - ಪೆರ್ಮಾಡಿ I ಕ್ರಿ.ಶ. 1132-1144
      - ಚಾವುಂಡ II ಕ್ರಿ.ಶ. 1156--1169
        - ಆಚುಗಿ III ಕ್ರಿ.ಶ, 1163
        - ಪೆರ್ಮಾಡಿ II
        - ಬಿಜ್ಜಳ ಕ್ರಿ.ಶ. 1169-87
        - ವಿಕ್ರಮ ಕ್ರಿ.ಶ. 1169-1187
- ನಾಕ
- ಸಿಂಗ I
- ದಾಸ (ದಸ ?)
- ದಾಮ (ದಮ ?)
- ಚಾವುಂಡ
- ಚಾವ

## ಗುತ್ತಲಿನ ಗುತ್ತರು

ಗುತ್ತರು ತಾವು ಚಂದ್ರಗುಪ್ತ ಮತ್ತು ಉಜ್ಜಯಿನಿಯ ವಿಕ್ರಮಾದಿತ್ಯರ ಸಂತತಿಯವರೆಂದು ಹೇಳಿಕೊಂಡಿದ್ದಾರೆ. ' ಉಜ್ಜಯಿನೀ ಪುರವರಾಧೀಶ್ವರ ' ಎಂಬುದು ವಂಶಪಾರಂಪರ್ಯವಾಗಿ ಬಂದ ಬಿರುದು. ಗುತ್ತವೊಳಲ್ (ಧಾರವಾಡ ಜಿಲ್ಲೆಯ ಕರಜಗಿ ತಾಲೂಕಿನ ಗುತ್ತಲ್) ಅವರ ಮುಖ್ಯ ಪಟ್ಟಣ. ಗುತ್ತಲಿನ ಸುತ್ತಮುತ್ತಲಿನ ಪ್ರದೇಶವನ್ನು ಮತ್ತು ಕೆಲವೊಮ್ಮೆ ಅದರ ನೆರೆಹೊರೆಯ ನಾಡನ್ನು ಅವರು ಹನ್ನೆರಡನೆಯ ಶತಮಾನದಲ್ಲಿಯೂ ಹದಿಮೂರನೆಯ ಶತಮಾನದಲ್ಲಿಯೂ ಕೆಲವು ಕಾಲ ಆಳಿದರು.

### ಗುತ್ತಲಿನ ಗುತ್ತರ ವಂಶಾವಳಿ

- ಮಗುತ್ತ
  - ಗುತ್ತ I ಮಲ್ಲಿದೇವ ಸು.ಕ್ರಿ.ಶ. 1115
    - ವೀರವಿಕ್ರಮಾದಿತ್ಯ I
      - ಜೋಯಿದೇವ I ಕ್ರಿ.ಶ. 1181
      - ಗುತ್ತ II = ಪದ್ಮಲಾದೇವಿ
        - ಆಹವಾದಿತ್ಯ ವೀರವಿಕ್ರಮಾದಿತ್ಯ II = ಪತ್ಮಮಾದೇವಿ ಕ್ರಿ.ಶ. 1182 ಮತ್ತು 1213
          - ತುಳುವಲಾದೇವಿ = ಸಂತಲಿಮಂಡಲದ ಸಿಂಹನ ಮಗ ಬಲ್ಲಾಳನನ್ನು ವರಿಸಿದಳು,
          - ಜೋಯಿದೇವ II ಕ್ರಿ.ಶ. 1238
          - ವಿಕ್ರಮಾದಿತ್ಯ III = ಮೈಳಾಲದೇವಿ
            - ಗುತ್ತ III ಕ್ರಿ.ಶ. 1262 ಮತ್ತು 1265.
            - ಹಿರಿಯದೇವ
            - ಜೋಯಿದೇವ III

**ಶಿಲಾಹಾರರು**

ಉತ್ತರ ಕೊಂಕಣ, ದಕ್ಷಿಣ ಕೊಂಕಣ ಮತ್ತು ಕೊಲ್ಲಾಪುರಗಳ ಶಿಲಾಹಾರ ರಾಜವಂಶಗಳು ಪ್ರಸಿದ್ಧವಾದವು. ಮುಂಬಯಿ ಕರ್ನಾಟಕ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲೂ ಶಿಲಾಹಾರವಂಶದ ಅನೇಕ ರಾಜರುಗಳು ಆಳುತ್ತಿದ್ದರು. ಇವರಲ್ಲಿ ಹಲವರ ಪೂರ್ವಿಕರ ಸ್ಥಳ 'ತಗರ' ಎಂಬ ಹೆಸರಿನ ಪ್ರಾಚೀನ ನಗರ. ಟಾಲೆಮಿ ಮತ್ತು ಪೆರಿಪ್ಲಸ್ ಗ್ರಂಥಕರ್ತರಿಬ್ಬರೂ ತಗರವನ್ನು ಹೆಸರಿಸಿದ್ದಾರೆ. ಉಸ್ಮಾನಾಬಾದ್ ಜಿಲ್ಲೆಯ 'ತೆರ್' ಎಂಬುದು ಪ್ರಾಚೀನ ತಗರವೆಂದು ಗುರುತಿಸಲಾಗಿದೆ.

ಶಿಲಾಹಾರರು ತಾವು ವಿದ್ಯಾಧರ ರಾಜಕುಮಾರನಾದ ಜೀಮೂತವಾಹನನ ಸಂತತಿಯವರೆಂದು ಹೇಳಿಕೊಂಡಿದ್ದಾರೆ. ಸುವರ್ಣಗರುಡಧ್ವಜ ಅವರ ಪತಾಕೆ.

**ದಕ್ಷಿಣ ಕೊಂಕಣದ ಶಿಲಾಹಾರರು**

ಶಿಲಾಹಾರ ವಂಶದ ಈ ಶಾಖೆಯವರು ತಾವು ಸಿಂಹಳ (ಗೋವೆ) ರಾಜರ ಸಂತತಿಯವರೆಂದು ಹೇಳಿಕೊಂಡಿರುವ ಕಾರಣ ಗೋವೆಯಿಂದ ಬಂದವರಾಗಿರಬೇಕು.

ರಟ್ಟರಾಜ ಎಂಬ ಕೊನೆಯ ರಾಜನ ಖಾರೆಪಟ್ಟಣ ಫಲಕಗಳಿಂದ ಈ ಶಾಖೆ ಮೊದಲ ಸಲ ಬೆಳಕಿಗೆ ಬಂದಿತು. ಆ ಫಲಕದಲ್ಲಿ ಅವ್ವೇಶ್ವರ ದೇವಸ್ಥಾನಕ್ಕೆ ಕೆಲವು ಹಳ್ಳಿಗಳನ್ನು ದಾನಕೊಟ್ಟ ವಿಷಯ ನಿರೂಪಿತವಾಗಿದೆ. (ಅವ್ವ ಎಂಬಾಕೆಯ ಹೆಸರಿನಿಂದ ಆ ದೇವಸ್ಥಾನವನ್ನು ಹಾಗೆ ಕರೆಯಲಾಯಿತು). ಈ ಶಾಖೆಯ ಪ್ರಥಮ ರಾಜನಾದ ಸಣಫುಲ್ಲ ಎಂಬವನು ರಾಷ್ಟ್ರಕೂಟ ಒಂದನೆಯ ಕೃಷ್ಣನ (ಕ್ರಿ.ಶ. 754–782) ಪ್ರೀತಿಗೆ ಪಾತ್ರನಾಗಿದ್ದನು. ತರುವಾಯ ಬಂದ ರಾಜ ದಮ್ಮಿಯರ ಎಂಬವನು ಪಶ್ಚಿಮ ಕರಾವಳಿಯಲ್ಲಿ ವಾಲಿಪಟ್ಟಣವೆಂಬ ದುರ್ಗವನ್ನು ಕಟ್ಟಿಸಿದನು. ಅಯ್ಯಪರಾಜ ಚಂದ್ರಪುರ ಯುದ್ಧದಲ್ಲಿ ಜಯಗಳಿಸಿದನು. ಚೆಮುಲ್ಯ ಮತ್ತು ಚಂದ್ರಪುರದ ಅರಸರಿಗೆ ಎರಡನೆಯ ಅವಸರ ಎಂಬಾತ ನೆರವು ನೀಡಿದನು. ಚಂದ್ರಮಂಡಲವನ್ನು ಸ್ವಾಧೀನಪಡಿಸಿಕೊಂಡು ಭೀಮ ಪ್ರಖ್ಯಾತನಾದನು. ತೈಲಪನ ಕಾಲದಲ್ಲಿ ಬೇಲಿನಗರ (ಹಿಂದೆ ಹೇಳಿದ ವಾಲಿಪಟ್ಟಣ) ದಿಂದ ರಾಜ್ಯವಾಳುತ್ತಿದ್ದ ಮೂರನೆಯ ಅವಸರ ಕ್ರಿ.ಶ. 988ರಲ್ಲಿ ಕೆಲವು ಗ್ರಾಮಗಳನ್ನು ದತ್ತಿಬಿಟ್ಟನು (ಚಿಕ್ಕೋಡಿ ತಾಮ್ರ ಫಲಕಗಳು). ರಟ್ಟರಾಜ ಕ್ರಿ.ಶ. 1008ರಲ್ಲಿ ಇರಿವ ಬೆಡಂಗ ಸತ್ಯಾಶ್ರಯನ ಸಾಮಂತನಾಗಿದ್ದನು.

ಈ ಶಾಖೆಯವರು ಆಳುತ್ತಿದ್ದ ರಾಜ್ಯವು ಕೊಂಕಣ 900, ಮೊದಲಿನ ಸಾಮಂತವಾಡಿ ಪ್ರಾಂತ ಮತ್ತು ರತ್ನಗಿರಿ ಜಿಲ್ಲೆಯೂ ಸೇರಿದ ಇರಿಡಿಗೆ ನಾಡುಗಳಿಂದ ಕೂಡಿದುದಾಗಿತ್ತು.

## ದಕ್ಷಿಣ ಕೊಂಕಣದ ಶಿಲಾಹಾರರ ವಂಶಾವಳಿ

ಸಣಫುಲ್ಲ
|
ದಮ್ಮಿಯರ
|
ಅಯ್ಯಪರಾಜ
|
ಅವಸರ I
|
ಆದಿತ್ಯವರ್ಮ
|
ಅವಸರ II
|
ಇಂದ್ರರಾಜ
|
ಭೀಮ
|
ಅವಸರ III (ಕ್ರಿ.ಶ. 988 ತಿಳಿದಿರುವ ಕಾಲ)
|
ರಟ್ಟರಾಜ (ಕ್ರಿ.ಶ. 1008 ತಿಳಿದಿರುವ ಕಾಲ)

### ಅಕ್ಕಲಕೋಟೆಯ ಶಿಲಾಹಾರರು

ಶಿಲಾಹಾರರ ಅತ್ಯಂತ: ಪ್ರಾಚೀನ ಮನೆತನವಾದ ಈ ವಂಶ ಇತ್ತೀಚೆಗೆ ಮಾತ್ರ ಬೆಳಕಿಗೆ ಬಂದಿತು. ಚಾಮುಂಡಿಕಾದೇವಿ ಈ ಕುಲದ ದೇವತೆ. ಈ ವಂಶದವರು ಆಳುತ್ತಿದ್ದ ನಾಡು ಆನಂದೂರು 300ರ ಅರಿಕುಲ್ಗೆನಾಡು (ಅಕ್ಕಲಕೋಟೆ ಪ್ರದೇಶ). 'ಸೆಲರ' ಎಂದು ವಂಶದ ಹೆಸರನ್ನು ಹೇಳ ಲಾಗಿದೆ. ಇವರು ಒಂದು ಶಾಸನದಲ್ಲಿ 'ವಿಜಯಪುರವರಾಧೀಶ್ವರ' ಎಂದರೆ ಬಿಜಾಪುರದ ಅಧಿಪತಿಗಳು ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಆ ಶಾಸನದಲ್ಲಿ ಪ್ರಥಮ ರಾಜನಾದ ಪಿತ್ತಮನಿಂದ (ಸು.ಕ್ರಿ.ಶ. 735) ಹದಿನೇಳು ತಲೆಮೊರೆಯ ವರೆಗೆ (ಸು.ಕ್ರಿ.ಶ. 1125) ಮನೆತನದ ಇತಿಹಾಸವನ್ನು ನಿರೂಪಿಸ ಲಾಗಿದೆ.

ಅಕ್ಕಲಕೋಟೆಯ ಒಂದು ಶಾಸನ ನಾಲ್ಕನೆಯ ಕೈಲಾಸರಸ ಕ್ರಿ.ಶ. 1093ರಲ್ಲಿ ಆರನೆಯ ವಿಕ್ರಮಾದಿತ್ಯನ ಮಹಾ ಮಂಡಲೇಶ್ವರನಾಗಿದ್ದನೆಂದು ತಿಳಿಸುತ್ತದೆ. ಅವನ ರಾಣಿ ಚಂದಲಾದೇವಿ ಎಂದೂ ಅವನ ಮಗನಾದ ಮೂರನೆಯ ಇಂದರಸನು ಕ್ರಿ.ಶ. 1114ರಲ್ಲಿ ಆರನೆಯ ವಿಕ್ರಮಾದಿತ್ಯನ ಕೈಕೆಳಗೆ ಆಳುತ್ತಿದ್ದನೆಂದೂ ಅಕ್ಕಲಕೋಟೆಯ ಇನ್ನೊಂದು ಶಾಸನವು ಹೇಳುತ್ತದೆ. ಮತ್ತೊಂದು ಶಾಸನದಲ್ಲಿ ಮೂರನೆಯ ಇಂದರಸ (ಕ್ರಿ.ಶ. 1122) ನೊಡನೆ ಅವನ ಸೋದರರು, ಮಕ್ಕಳು, ಮೊಮ್ಮಕ್ಕಳು ಮತ್ತು ಸೋದರಳಿಯಂದಿರ ಉಲ್ಲೇಖವಿದೆ.

ಜಗದೇಕಮಲ್ಲ ಜಯಸಿಂಹನ ಕೈಕೆಳಗೆ ಕ್ರಿ.ಶ. 1019ರಲ್ಲಿ ಮಹಾಮಂಡಲೇಶ್ವರ ಧನಸಂಗ್ರಹ ಎಂಬ ವನು ಇದ್ದನೆಂದು ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ರುಗಿಯಲ್ಲಿರುವ ಶಾಸನ ಹೇಳುತ್ತದೆ. ಸಿಂದಗಿ ತಾಲೂಕಿನ ತಡವಲಗದ ಒಂದು ಶಾಸನವು ಧನಸಂಗ್ರಹ ಮತ್ತು ಅವನ ತಂದೆಯಾದ ಕೈಲಾಸನನ್ನು

ಉಲ್ಲೇಖಿಸುತ್ತದೆ. ಇವರು ಇಂದರಸನಿಗೆ ಹಿಂದಿನ ಐದು ಮತ್ತು ಆರನೆ ತಲೆಮೊರೆಯವರಾದುದರಿಂದ ಅಕ್ಕಲಕೋಟೆ ಶಾಖೆಗೆ ಸೇರಿದವರೆಂದು ತೋರುತ್ತದೆ.

## ಅಕ್ಕಲಕೋಟೆಯ ಶಿಲಾಹಾರರ ವಂಶಾವಳಿ

- ಪಿತ್ತಮ I
  - ಅಜ್ಜ I
    - ನಾಗಾರ್ಜುನ
      - ಇಂದ I
        - ಕೈಲಾಸ I
          - ಬಿಬ್ಬಸ
            - ರಕ್ಕಸ
              - ಇಂದ II
                - ಸೋವಣ
                  - ಪಿತ್ತಮ II
                  - ಕೈಲಾಸ II
                    - ಧನಸಂಗ್ರಹ. ಕ್ರಿ.ಶ. 1019
                      - ಅಜ್ಜ II
                        - ಕೈಲಾಸ III
                          - ಪಂಕೆ I
                            - ಕೈಲಾಸ IV ಕ್ರಿ.ಶ. 1093
                              - ಇಂದರಸ (ಇಂದ) III
                                - ದಾಕರಸ II
                                  - ಇಂದರಸ
                                - ಕೈಲಾಸ V
                                - ಮಲ್ಲಿದೇವ
                                - ಅಜ್ಜ III
                              - ರಾಜರಸ
                                - ಕುಪ್ಪದೇವ
                                - ಇಂದರಸ IV
        - ಕಂಚ

**ಶಿಲಾಹಾರರು ಮತ್ತು ಇತರ ಶಾಖೆಗಳು**

ಎಲಮೇಲ (ಸಿಂದಗಿ ತಾಲೂಕಿನ ಅಲಮೇಲ), ಬಿಜಾಪುರ, ಧಾರವಾಡ ಜಿಲ್ಲೆಯ ಹಾವೇರಿ, ಜಮಖಂಡಿ ತಾಲೂಕಿನ ತೇರ್ದಾಳ್, ಅಥಣಿ ತಾಲೂಕಿನ ರಾಮತೀರ್ಥ ಮುಂತಾದ ಸ್ಥಳಗಳಲ್ಲೆಲ್ಲ ಚೆದರಿ ಹೋದ ಇತರ ಶಿಲಾಹಾರ ವಂಶಸ್ಥರು ಆಳುತ್ತಿದ್ದುದು ತಿಳಿದು ಬಂದಿದೆ.

ಶಿಲಾಹಾರ ಮನೆತನಗಳಿಗೆ ಸಂಬಂಧಿಸಿದ ಮುಂಬಯಿ ಮತ್ತು ಹೈದರಾಬಾದು ಕರ್ಣಾಟಕ ಪ್ರದೇಶಗಳ ಬಹುಪಾಲು ಶಾಸನಗಳು ಪ್ರಕಟವಾಗಿಲ್ಲ. ಅವುಗಳ ಸುವ್ಯವಸ್ಥಿತವಾದ ಅಧ್ಯಯನ ಇನ್ನೂ ನಡೆಯದಿರುವುದು ಒಂದು ದೊಡ್ಡ ಕೊರತೆ.

ಮೂಲ ಲೇಖಕರು: ಶ್ರೀ ಆರ್. ಎನ್. ಗುರವ್
ಅನುವಾದಕರು: ಶ್ರೀ ಎಂ. ಎಚ್. ಕೃಷ್ಣಯ್ಯ

**ಕರ್ಣಾಟಕದಲ್ಲಿ ಚೋಳರು**

ಪಲ್ಲವರು ಪ್ರಭಾವ ಕಳೆದುಕೊಂಡ ಅನಂತರ, ತುಂಗಭದ್ರೆಯ ದಕ್ಷಿಣದ ದಕ್ಷಿಣಭಾರತದ ಬಹು ಭಾಗದ ಮೇಲೆ ಚೋಳರದೇ ಪ್ರಾಬಲ್ಯವಿತ್ತು. ಕ್ರಿ.ಶ. 900ರಿಂದ ಮೂರು ಶತಮಾನಗಳ ಕಾಲ ಚೋಳರು ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಜೊತೆ ನಡೆಸಿದ ಹೋರಾಟಗಳೇ ಆ ಕಾಲದ ದಕ್ಷಿಣಭಾರತದ ಇತಿಹಾಸದಲ್ಲಿನ ಪ್ರಮುಖ ಘಟನೆಗಳು. ಪಲ್ಲವ ದೊರೆ ಅಪರಾಜಿತನನ್ನು ಕ್ರಿ.ಶ. 897ರಲ್ಲಿ ಮೊದಲನೆಯ ಆದಿತ್ಯ ಚೋಳನು (ಕ್ರಿ.ಶ. 871–907) ಸೋಲಿಸಿದಾಗ, ಪಲ್ಲವರ ಆಳಿಕೆ ಕೊನೆಗೊಂಡಿತು. ಆಗ ಗಂಗ ಇಮ್ಮಡಿ ಪೃಥಿವೀಪತಿಯು ಮೊದಲನೆಯ ಆದಿತ್ಯನನ್ನು ತನ್ನ ಅಧಿರಾಜನನ್ನಾಗಿ ಸ್ವೀಕರಿಸಬೇಕಾಯಿತು. ಆದಿತ್ಯನು ರಾಷ್ಟ್ರಕೂಟ ದೊರೆ ಇಮ್ಮಡಿ ಕೃಷ್ಣನ (ಕ್ರಿ.ಶ. 880–915) ಒಬ್ಬ ಮಗಳನ್ನು ವರಿಸಿ, ಅವಳಿಂದ ಕನ್ನರದೇವ ಎಂಬ ಕುಮಾರನನ್ನು ಪಡೆದನು. ಕ್ರಿ.ಶ. 907ರಲ್ಲಿ ಆದಿತ್ಯನು ತೀರಿಕೊಂಡಾಗ ಪಟ್ಟಕ್ಕೆ ಬಂದ ಪರಾಂತಕನ ಬದಲಿಗೆ ಈ ಕುಮಾರನು ಚೋಳ ಸಿಂಹಾಸನವನ್ನೇರುವಂತಾಗಬೇಕೆಂದು ಇಮ್ಮಡಿ ಕೃಷ್ಣನ ಇಚ್ಛೆಯಾಗಿತ್ತು. ಚೋಳರ ಸಾಮರ್ಥ್ಯ ಹೆಚ್ಚುತ್ತಲಿತ್ತು. ಈಗಣ ಅನಂತಪುರ ಚಿತ್ತೂರು ಜಿಲ್ಲೆಗಳ ಭಾಗಗಳಾಗಿರುವ ಪ್ರದೇಶದಲ್ಲಿ ಆಳುತ್ತಿದ್ದ ಬಾಣರು ಮತ್ತು ಇಂದಿನ ಚಿತ್ತೂರು ಜಿಲ್ಲೆಯ ಉತ್ತರ ಮತ್ತು ಪೂರ್ವಕ್ಕಿರುವ ಆಂಧ್ರಪ್ರಾಂತದಲ್ಲಿ ಆಳುತ್ತಿದ್ದ ವೈದುಂಬರು — ಇವರ ಪ್ರದೇಶಗಳ ಮೇಲೆ ಚೋಳರ ವಿಸ್ತರಣಯತ್ನ ನಡೆದಿತ್ತು. ಹೀಗಾಗಿ ಬಾಣರೂ ವೈದುಂಬರೂ ರಾಷ್ಟ್ರಕೂಟರ ಸಹಜಸ್ನೇಹಿಗಳಾದರು. ಆದರೆ ಉತ್ತರ ಆರ್ಕಾಡು ಜಿಲ್ಲೆಯ ತಿರುವಳ್ಳಂನಲ್ಲಿ ಕ್ರಿ.ಶ. 916ಕ್ಕೆ ಸ್ವಲ್ಪ ಮುಂಚೆ ನಡೆದ ಯುದ್ಧದಲ್ಲಿ ರಾಷ್ಟ್ರಕೂಟರಿಗೆ ಸೋಲಾಯಿತು. ಇಮ್ಮಡಿ ಪೃಥಿವೀಪತಿಯ ನೆರವು ಪಡೆದ ಪರಾಂತಕ ನಿರ್ಣಾಯಕವಾದ ವಿಜಯವನ್ನು ಪಡೆದ. ಇದರ ಫಲಿತಾಂಶವೆಂದರೆ, ಬಾಣರು ಗಂಗರ ಸಾಮಂತರಾಗಬೇಕಾಗಿ ಬಂದುದು. ಪೃಥಿವೀಪತಿಯು ಕ್ರಿ.ಶ. 940ರಲ್ಲಿ ತೀರಿಕೊಂಡಾಗ ಒಬ್ಬ ಸಾಮರ್ಥ್ಯಶಾಲಿ ಮಾಂಡಲಿಕನನ್ನು ಪರಾಂತಕನು ಕಳೆದುಕೊಳ್ಳುವಂತಾಯಿತು. ಬಾಣರೂ ವೈದುಂಬರೂ ಆಗಲೇ ರಾಷ್ಟ್ರಕೂಟರ ಪಕ್ಷದಲ್ಲಿದ್ದರು ; ಗಂಗ ಇಮ್ಮಡಿ ಬೂತುಗನು ರಾಷ್ಟ್ರಕೂಟ ಮುಮ್ಮಡಿಕೃಷ್ಣನ ಸೋದರಿಯನ್ನು ವರಿಸಿ, ರಾಷ್ಟ್ರಕೂಟರ ಬಲವನ್ನು ಇನ್ನಷ್ಟು ವರ್ಧಿಸಿದನು. ತನ್ನ ಉತ್ತರ ಮತ್ತು ವಾಯವ್ಯ ಗಡಿಗಳನ್ನು ರಕ್ಷಿಸಲು ಚೋಳ ದೊರೆಯು ಈ ಕಾರಣದಿಂದ ವಿಶೇಷ ಮುತುವರ್ಜಿವಹಿಸಬೇಕಾಯಿತು. ಪರಾಂತಕನು ತನ್ನ ಮಗ ರಾಜಾದಿತ್ಯನನ್ನು ತೊಂಡೈಮಂಡಲವನ್ನು ಭದ್ರಗೊಳಿಸಲು ಕಳುಹಿಸಿ ಕೊಟ್ಟನು.

ಕ್ರಿ.ಶ. 946ರಲ್ಲಿ ಆರಂಭವಾದ ಒಂದು ಯುದ್ಧದಲ್ಲಿ ರಾಷ್ಟ್ರಕೂಟ ಮುಮ್ಮಡಿಕೃಷ್ಣ ಅಕಾಲವರ್ಷನೂ ಅವನ ಆಧೀನನೂ ಭಾವನೂ ಆದ ಗಂಗ ಇಮ್ಮಡಿ ಬೂತುಗನೂ ರಾಜಾದಿತ್ಯನನ್ನು ಎದುರಿಸಿದರು. ಕ್ರಿ.ಶ. 949ರಲ್ಲಿ ತಕ್ಕೋಲಮಿನ ಪ್ರಸಿದ್ಧ ಯುದ್ಧ ನಡೆಯಿತು. ತಮಿಳು ಶಾಸನಗಳು ರಾಜಾದಿತ್ಯನನ್ನೇ ವಿಜಯಶಾಲಿಯೆಂದು ಕರೆದು ಆತ ರಣರಂಗದಲ್ಲಿ ಹತನಾದನೆಂದು ಹೇಳುತ್ತವೆ. ಆತ್ಕೂರಿನ ಕನ್ನಡ ಶಾಸನದಲ್ಲಿ ಗಂಗ ಬೂತುಗನು ‘‘ ಆನೆಯ ಅಂಬಾರಿಯನ್ನೆ ರಣರಂಗವಾಗಿ ಮಾಡಿದ ’’ ಎಂದರೆ ಅವನು ತನ್ನ ಆನೆಯ ಬೆನ್ನಮೇಲಿಂದ ರಾಜಾದಿತ್ಯನ ಆನೆಯ ಅಂಬಾರಿಯೊಳಗೆ ಜಿಗಿದು ರಾಜಾದಿತ್ಯನನ್ನು ಕೊಂದ, ಎಂದಿದೆ. ಕೃಷ್ಣನು ಪಾಂಡ್ಯ, ಸಿಂಹಳ, ಔಚ ಮತ್ತು ಬೇರರನ್ನು ಸೋಲಿಸಿ ರಾಮೇಶ್ವರದಲ್ಲಿ ಜಯಸ್ತಂಭವನ್ನು ನೆಟ್ಟು ಕ್ರಿ.ಶ. 960ರಲ್ಲಿ ಕರ್ಣಾಟಕಕ್ಕೆ ಮರಳಿದ, ಎಂದು ಸೋಮದೇವನ ‘‘ **ಯಶಸ್ತಿಲಕಚಂಪು** ’’

ವಿನಲ್ಲಿ ಹೇಳಿದೆ. ಕೃಷ್ಣನ ತಮಿಳು ಭಾಷೆಯ ಶಾಸನಗಳು ಪಾಂಡಿಚೆರಿಯ ಬಳಿಯ ಬಾಹೂರಿನಷ್ಟು ಪೂರ್ವ ದಲ್ಲೂ ಮಧುರೆಯವರೆಗೆ ದಕ್ಷಿಣದಲ್ಲೂ ದೊರಕಿವೆ; ಅವನು "ಕಾಂಚಿ ಮತ್ತು ತಂಜಾವೂರುಗಳ ವಿಜೇತ" ಎಂಬ ಬಿರುದನ್ನು ಧರಿಸಿದ್ದ. ಕೃಷ್ಣನು ಜೀವಿಸಿದ್ದಷ್ಟು ದಿನವೂ ಪರಾಂತಕನು ಕರ್ಣಾಟಕದ ಮೇಲೆ ದಂಡೆತ್ತಿ ಬರಲು ಯತ್ನಿಸಲಿಲ್ಲ. ಮುಮ್ಮಡಿ ಕೃಷ್ಣನು (ಕನ್ನರಸನು) ಅಧಿರಾಜನೆಂದು ಮಾನ್ಯತೆ ಪಡೆದಿದ್ದ ಸುಮಾರು 30 ವರ್ಷಗಳ ಕಾಲ, ಚೋಳರಾಜ್ಯವು ಕಾಂತಿಹೀನವಾಯಿತು. ಪೂರ್ವದ ಚೋಳರಾಜರು ಪ್ರಸ್ಥಾಪಿಸಿದ್ದ ಸುಯೋಜಿತ ಆಡಳಿತ ವ್ಯವಸ್ಥೆಯನ್ನು ಬದಲಾಯಿಸಲು ಕೃಷ್ಣನು ಯತ್ನಿಸಲಿಲ್ಲ. ಸ್ಥಳೀಯ ಆಡಳಿತಕ್ಕಾಗಿ ಗ್ರಾಮಸಮಿತಿಯನ್ನು ಸ್ಥಾಪಿಸಿದ ವಿಚಾರ ಹೇಳುವ ಪ್ರಸಿದ್ಧ ಉತ್ತರ ಮೇರೂರು ಶಾಸನವು ಇದೇ ಕಾಲದ್ದೆಂಬುದು ಗಮನಾರ್ಹವಾದ ಒಂದು ಸ್ವಾರಸ್ಯಕರ ಸಂಗತಿ.

ಖೊಟ್ಟಿಗ ಮತ್ತು ಕಮ್ಮ—ಇವರುಗಳ ಆಳಿಕೆಯ ಕಾಲದಲ್ಲಿ ರಾಷ್ಟ್ರಕೂಟರ ರಾಜ್ಯವು ದುರ್ಬಲವಾಗ ಲಾರಂಭವಾದಾಗ ಇಮ್ಮಡಿತೈಲನು ಕ್ರಿ.ಶ. 973ರಲ್ಲಿ ಕಲ್ಯಾಣ ಚಾಳುಕ್ಯರ ಶಾಖೆಯನ್ನು ಸ್ಥಾಪಿಸಿದನು. ಕ್ರಿ.ಶ. 985ರಲ್ಲಿ ರಾಜರಾಜ ಚೋಳನು ಪಟ್ಟಕ್ಕೆ ಬರುವಲ್ಲಿಯ ವರೆಗೆ ಚೋಳವಂಶದಲ್ಲೂ ದುರ್ಬಲ ಆಡಳಿತದ ಒಂದು ಅವಧಿ ಕಾಣಿಸಿತು. ಕ್ರಿ.ಶ. 969–70ರ ಹೊತ್ತಿಗೇ ರಾಜರಾಜನು ಪ್ರಬಲ ನಾಗುತ್ತಿದ್ದರೂ ಉತ್ತಮ ಚೋಳನ ಕಾಲದಲ್ಲಿ ಆತನು ರಾಜನ ಅಧೀನನಾಗಿಯೇ ಇರಲು ಇಷ್ಟಪಟ್ಟಿದ್ದನು. ಹತ್ತು ವರ್ಷಗಳಿಗೂ ದೀರ್ಘಕಾಲ ರಾಜರಾಜನು ಯುವರಾಜನೇ ಆಗಿದ್ದುಕೊಂಡು ಪ್ರಜೆಗಳು ವಿನಂತಿಸಿ ಕೊಂಡ ಅನಂತರ ಸಿಂಹಾಸನವೇರಿದನು. ಪಾಂಡ್ಯ ಅಮರಭುಜಂಗನನ್ನು ಸೋಲಿಸಿದ ಮೇಲೆ ಅವನು ಕರ್ಣಾಟಕದ ವಿರುದ್ಧ ದಂಡೆತ್ತಿ ಬಂದನು. ವೆಂಗಿ ಮತ್ತು ಕಳಿಂಗಗಳಿಗೆ ಹೋಗುವ ದಾರಿಯಲ್ಲಿ ತಾನು ಗಂಗವಾಡಿ, ಕೂಡುಮಲೆನಾಡು, ನೊಳಂಬವಾಡಿ ಮತ್ತು ತಡಿಗೈಪ್ಪಾಡಿಗಳ ಮೇಲೆ ದಾಳಿಮಾಡಿಸಿದ್ದಾಗಿ ಅವನು ಹೇಳಿಕೊಂಡಿದ್ದಾನೆ.

ಪೂರ್ವದ ಚಾಳುಕ್ಯರಲ್ಲಿನ ಮೇದವ್ವೆಯ ಶಾಖೆಯನ್ನು ಬೆಂಬಲಿಸುವ ಪಶ್ಚಿಮದ ಚಾಳುಕ್ಯರ ನೀತಿಯ ವಿರುದ್ಧ ವಿಮಲಾದಿತ್ಯ ಮತ್ತು ಕುಂದವ್ವೆಯ ಶಾಖೆಯನ್ನು ಬೆಂಬಲಿಸುವುದೇ ಚೋಳರ ನೀತಿಯಾಗಿತ್ತು. ಚೋಳ ರಾಜರಾಜನು ತನ್ನ ಒಂಬತ್ತು ಲಕ್ಷ ಸೇನೆಯೊಡನೆ ಪಶ್ಚಿಮ ಚಾಳುಕ್ಯ ಸತ್ಯಾಶ್ರಯನನ್ನು ಸೋಲಿಸಿದನೆಂದು ಚೋಳರ ಶಾಸನಗಳು ಹೇಳುತ್ತವೆ. ಆದರೆ ಚೋಳರ ದಂಡಯಾತ್ರೆಯ ನಾಯಕನಾದ ರಾಜೇಂದ್ರನಿಂದ ಚೇಬ್ರೋಲುವನ್ನು ತನ್ನ ತಂದೆಯಾದ ಎರಡನೆಯ ತೈಲಪನಿಗಾಗಿ ತಾನು ಕ್ರಿ.ಶ. 1006 ರಷ್ಟು ಹೊತ್ತಿಗೇ ಸೆಳೆದುಕೊಂಡುದಾಗಿ ಸತ್ಯಾಶ್ರಯ ಇರಿವಬೆಡಂಗ ಆಹವಮಲ್ಲನು ಹೇಳಿಕೊಂಡಿದ್ದಾನೆ. ಮೊದಲನೆಯ ರಾಜರಾಜ ಕ್ರಿ.ಶ. 1016ರಲ್ಲಿ ತೀರಿಕೊಂಡಾಗ ಕ್ರಿ.ಶ. 1012ರಿಂದ ಯುವರಾಜನಾಗಿದ್ದ ಮೊದಲನೆಯ ರಾಜೇಂದ್ರ ಚೋಳನು ಪಟ್ಟವೇರಿದನು. ಇಷ್ಟುಹೊತ್ತಿಗೆ ಚೋಳರು ಕರ್ಣಾಟಕದ ಪಶ್ಚಿಮ ಮತ್ತು ದಕ್ಷಿಣ ಭಾಗಗಳನ್ನು ವಶಪಡಿಸಿಕೊಂಡಿದ್ದರು. ರಾಜರಾಜನ ಸಾಮ್ರಾಜ್ಯದಲ್ಲಿ ತಡಿಗೈಪ್ಪಾಡಿ, ನೊಳಂಬವಾಡಿ, ಕೂಡುಮಲೆನಾಡು ಮತ್ತು ರಟ್ಟವಾಡಿ (ಏಳೂವರೆ ಲಕ್ಷ) ಎಂಬ ಕರ್ಣಾಟಕದ ಭಾಗಗಳು ಸೇರಿದ್ದುವು. ಇಡೈತ್ತುರೈನಾಡು, ಬನವಾಸಿ, ಕೊಲಿಪ್ಪಾಕ್ಕೈ (ದಕ್ಷಿಣದ ಹೆಬ್ಬಾಗಲು), ಮನ್ನೈಕ್ಕಡಕ್ಕಂ, ತಡಿಗೈಪ್ಪಾಡಿ—ಇತ್ಯಾದಿಗಳನ್ನು ತಾನು ಗೆದ್ದುಕೊಂಡದ್ದಾಗಿ ರಾಜೇಂದ್ರನ ಆಳಿಕೆಯ ಮೂರನೆಯ ಮತ್ತು ಆರನೆಯ ವರ್ಷಗಳ ನಡುವಣ ಚೋಳ ಶಾಸನಗಳು ಹೇಳುತ್ತವೆ. ಇಡೈತ್ತುರೈನಾಡೆಂದರೆ ರಾಯಚ್ಚೂರು ದೋಆಬ್ ಎಂದು ಡಾ॥ ಫ್ಲೀಟ್ ಅವರ ಅಭಿಪ್ರಾಯ. ಮನ್ನೈಕ್ಕಡಕ್ಕಂ ಎಂಬುದು ಬೆಂಗಳೂರು ಜಿಲ್ಲೆಯ ಮನ್ನೆಯೆಂದು ರೈಸ್ ಅವರು ಗುರುತಿಸಿದರೆ, ಎಸ್. ಕೆ. ಅಯ್ಯಂಗಾರ್ ಅವರು ಮಾನ್ಯಖೇಟ ವೆಂದು ಗುರುತಿಸಿದ್ದಾರೆ. ಬನವಾಸಿಯು ಪಶ್ಚಿಮ ಚಾಳುಕ್ಯರ ಮಾಂಡಲಿಕರಾದ ಕದಂಬರ ವಶದಲ್ಲಿತ್ತು. ರಟ್ಟಪಾಡಿ ಮತ್ತು ತಡಿಗೈಪ್ಪಾಡಿಗಳು ಧಾರವಾಡ ಮತ್ತು ಬಿಜಾಪುರ ಜಿಲ್ಲೆಯಲ್ಲಿರುವ ಪ್ರದೇಶಗಳನ್ನು ಒಳಗೊಂಡಿದ್ದುವು. ಗಂಗವಾಡಿಯು ಇಂದಿನ ಕೋಲಾರ ಜಿಲ್ಲೆಯ ಪ್ರದೇಶವನ್ನೂ ನೊಳಂಬವಾಡಿಯು

ಚಿತ್ರದುರ್ಗ ಜಿಲ್ಲೆಯ ಪ್ರದೇಶವನ್ನೂ ಹೊಂದಿದ್ದವು. ಆಹವಮಲ್ಲ ಇರಿವಬೆಡಂಗನ ಚಿಕ್ಕಕೆರೂರು ಶಾಸನದಂತೆ ಆತನು ಕ್ರಿ.ಶ. 1005ರಷ್ಟು ಹೊತ್ತಿಗೆ ದಕ್ಷಿಣ ಪ್ರದೇಶಗಳನ್ನು ವಶಪಡಿಸಿಕೊಂಡು ಅನಂತರವೇ ಮಾಳವದ ಮುಂಜ ಉತ್ಪಲನ ವಿರುದ್ಧ ಯುದ್ಧ ಸಾರಿದನೆಂದು ಗೊತ್ತಾಗುತ್ತದೆ. ಆಹವಮಲ್ಲ ಸತ್ಯಾಶ್ರಯನು ವೆಂಗಿಯ ಮೇಲೆ ದಂಡೆತ್ತಿ ನಡೆದು ಕ್ರಿ.ಶ. 1006ರಲ್ಲಿ ವೆಂಗಿಯಲ್ಲಿ ಶಕ್ತಿವರ್ಮನಿಗೆ ಪಟ್ಟ ಕಟ್ಟಿದನು. ಚೋಳರು ಶಕ್ತಿವರ್ಮನನ್ನು ಹೊರಗಟ್ಟಿ, ರಾಜರಾಜ ನರೇಂದ್ರನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಪಶ್ಚಿಮದ ಚಾಳುಕ್ಯ ಐದನೆಯ ವಿಕ್ರಮಾದಿತ್ಯ ಮತ್ತು ಇಮ್ಮಡಿ ಅಯ್ಯಣರ ಆಳಿಕೆಯ ಕಾಲದಲ್ಲಿ ಚೋಳರು ತಿರುಗಿ ಕರ್ಣಾಟಕದ ಮೇಲೆ ದಂಡೆತ್ತಿ ಬಂದರು. ಕ್ರಿ.ಶ. 1014ರಲ್ಲಿ ಬಂದ ಇಮ್ಮಡಿ ಜಯಸಿಂಹನು ಉತ್ತರದಲ್ಲಿ ಮಾಳವದ ಭೋಜನ ವಿರುದ್ಧವಾಗಿಯೂ ದಕ್ಷಿಣದಲ್ಲಿ ರಾಜೇಂದ್ರ ಚೋಳನ ವಿರುದ್ಧವೂ ಕ್ರಿ.ಶ. 1017ರಿಂದ 1021ರ ನಡುವಿನ ಅವಧಿಯಲ್ಲಿ ಹೋರಾಡಬೇಕಾಯಿತು. ಕ್ರಿ.ಶ. 1017ರಲ್ಲಿ ಚೋಳಮಂಡಲನಾಥನಾದ ಅಪ್ರಮೇಯನು ಪೊಯ್ಸಳ, ನಾಗಣ್ಣ, ಮಂಜುಗ ಮತ್ತು ಇತರರನ್ನು ಸೋಲಿಸಿದನೆಂದು ಒಂದು ಶಾಸನ ಹೇಳುತ್ತದೆ. ಚಾಳುಕ್ಯ ಜಯಸಿಂಹನ ವಿರುದ್ಧ ಮುಯ್ಯಂಗಿ ಅಥವಾ ಮುಸಂಗಿಯಲ್ಲಿ (ಮಾಸ್ಕಿ) ಯುದ್ಧ ನಡೆಯಿತೆಂದು ಹೇಳಲಾಗಿದೆ. ಜನರಿಗೂ ದೇವಾಲಯಗಳಿಗೂ ಭಾರಿ ಕೇಡು ಮಾಡಿದ್ದ ಚೋಳರನ್ನು ಹೊಡೆದಟ್ಟುವುದರಲ್ಲಿ ಜಯಸಿಂಹನು ಯಶಸ್ವಿಯಾದನೆಂದು ಕನ್ನಡ ಶಾಸನಗಳೂ ಸಾಹಿತ್ಯವೂ ತಿಳಿಸುತ್ತವೆ. ಕ್ರಿ.ಶ. 1028ರ ಬಳ್ಳಿಗಾವೆ ಶಾಸನದಂತೆ ಜಯಸಿಂಹನು ಧಾರಾದ ಭೋಜನನ್ನೂ ರಾಜೇಂದ್ರ ಚೋಳನನ್ನೂ ಸೋಲಿಸಿದ್ದಾಗಿ ಗೊತ್ತಾಗಿದೆ. ಕನ್ನಡ '**ಪಂಚತಂತ್ರ**'ದ ಲೇಖಕ ದುರ್ಗಸಿಂಹ, '**ಮದನ ತಿಲಕ**'ದ ಚಂದ್ರರಾಜ, '**ಯಶೋಧರ ಚರಿತ**'ದ ವಾದಿರಾಜ, ವಾದೀಭಸಿಂಹ, ನಾಗವರ್ಮ ಇವರೆಲ್ಲರೂ ಒಕ್ಕೊರಲಿನಿಂದ ಚೋಳರ ಮೇಲಿನ ಜಯಸಿಂಹನ ವಿಜಯದ ವಿಚಾರ ತಿಳಿಸುವರಲ್ಲದೆ, ಅವನಿಗೆ "ಚೋಳೋಗ್ರ ಕಾಲಾನಲ" ಎಂಬ ಬಿರುದನ್ನೂ ನೀಡುವರು. ಆದರೆ ಬನವಾಸಿಯ ಮೇಲೆ ಚೋಳರು ಆಕ್ರಮಣ ಮಾಡಿದ್ದರೆಂಬ ಹೇಳಿಕೆಗೆ ಕನ್ನಡ ಶಾಸನಗಳು ಆಧಾರ ಪೂರೈಸುವುದಿಲ್ಲ. ರಾಜೇಂದ್ರನ ದಂಡಯಾತ್ರೆಗಳು ಕರ್ಣಾಟಕದ ಪೂರ್ವ ಗಡಿಗಳಿಗಷ್ಟೇ ಸೀಮಿತವಾಗಿದ್ದುವು.

ಮೊದಲನೆಯ ರಾಜೇಂದ್ರನ ಅನಂತರ ರಾಜಾಧಿರಾಜನು (ಕ್ರಿ.ಶ. 1018–1053) ಪಟ್ಟಕ್ಕೆ ಬಂದನು. ಕರ್ಣಾಟಕದ ವಿರುದ್ಧ ಕ್ರಿ.ಶ. 1044ರಲ್ಲಿ ಮೊದಲನೆಯ ಸೋಮೇಶ್ವರನ ವಿರುದ್ಧ--ಯುದ್ಧ ಆರಂಭವಾಯಿತು. ಚೋಳರಾಜನು ಹಂಪೆಯ ಬಳಿಯ ಕಂಪಿಲಿಯಲ್ಲಿನ ಅರಮನೆಯನ್ನು ಸುಟ್ಟನೆಂದೂ ಕಂದರನ್, ದಿನಕರನ್, ನಾರಣನ್, ಗಣವದಿ ಮತ್ತು ಮಧುಸೂದನನ್ ಎಂಬ, ಪ್ರಾಯಶಃ ಪಶ್ಚಿಮ ಚಾಳುಕ್ಯರ, ಸೇನಾನಿಗಳನ್ನು ಸೋಲಿಸಿದನೆಂದೂ ಮಣಿಮಂಗಲಂ ಶಾಸನ ಹೇಳುತ್ತದೆ.

ಇಮ್ಮಡಿ ರಾಜೇಂದ್ರನು (ಕ್ರಿ.ಶ. 1052–1064) ತನ್ನ ಅಣ್ಣ ರಾಜಾಧಿರಾಜನಿಗೆ ಚಾಳುಕ್ಯರ ವಿರುದ್ಧ ಇನ್ನೊಂದು ದಂಡಯಾತ್ರೆ ನಡೆಸಲು ನೆರವಾದನು. "ಪ್ರಸಿದ್ಧ ತೀರ್ಥಕ್ಷೇತ್ರ"ವಾದ ಕೃಷ್ಣಾ ತೀರದ ಕೊಪ್ಪಂನಲ್ಲಿ (ಕೊಲ್ಲಾಪುರದಿಂದ 30 ಮೈಲು ಆಗ್ನೇಯಕ್ಕಿರುವ ಖಿದ್ರಾಪುರ) ನಡೆದ ಯುದ್ಧದಲ್ಲಿ ರಾಜಾಧಿರಾಜನನ್ನು ಸೋಮೇಶ್ವರನು ಕೊಂದನು. ಚೋಳಸೇನೆ ಪಲಾಯನ ಮಾಡಿತು. ಆದರೆ, ಇಮ್ಮಡಿ ರಾಜೇಂದ್ರನು ಚೋಳ ಸೇನೆಯನ್ನು ಮತ್ತೆ ಒಟ್ಟುಗೂಡಿಸಿ, ತಾನು ಭುಜ ಮತ್ತು ತೊಡೆಗಳಲ್ಲಿ ಬಾಣಗಳ ಪೆಟ್ಟಿನಿಂದ ಗಾಯಗೊಂಡಿದ್ದರೂ ಯುದ್ಧವನ್ನು ಗೆದ್ದನೆಂದೂ ಅನೇಕ ಹಿರಿಯ ಚಾಳುಕ್ಯ ಸೈನಿಕರನ್ನು ಕೊಂದನೆಂದೂ ತಮಿಳು ಶಾಸನಗಳು ಹೇಳುತ್ತವೆ. ಚೋಳರು ಸತ್ಯವ್ವೆ, ಸಂಗವ್ವೆ ಮುಂತಾದ ರಾಣಿಯರನ್ನೂ ಸೆರೆಹಿಡಿದರು. ರಾಜೇಂದ್ರನು ಹಿಂದೆಂದೂ ನಡೆಯದ ಒಂದು ಸಂಗತಿಯನ್ನು ಮಾಡಿದ; ರಣರಂಗದಲ್ಲೇ ಪಟ್ಟಾಭಿಷೇಕ ಮಾಡಿಸಿಕೊಂಡ. ಅಲ್ಲಿಂದ ಅವನು ಕೊಲ್ಲಾಪುರದ ಕಡೆ ದಂಡೆತ್ತಿ ನಡೆದು ಅಲ್ಲಿ ಒಂದು ಜಯಸ್ತಂಭವನ್ನು ನೆಟ್ಟನು. ಆ ಮೇಲೆ ಅವನು ಚೋಳ ರಾಜಧಾನಿ ಗಂಗಪುರಿಗೆ (ಗಂಗೈ

ಕೊಂಡ ಚೋಳಪುರಂಗೆ) ಮರಳಿದನೆಂದು ಹೇಳಲಾಗಿದೆ. ಹಿರಿಯ ಸೋದರನಾದ ರಾಜಾಧಿರಾಜನನ್ನು "ಆಹವಮಲ್ಲ ಕುಲಾಂತಕ", "ಕಲ್ಯಾಣಪುರಂಗೊಂಡ ಚೋಳ" ಮತ್ತು "ವಿಜಯ ರಾಜೇಂದ್ರ" ಎಂದು ಕರೆಯಲಾಗಿದೆ. ಚೋಳರ ಈ ದಂಡಯಾತ್ರೆ ಕ್ರಿ.ಶ. 1059ರ ಹೊತ್ತಿಗೆ ಮುಗಿದಂತೆ ಕಾಣುತ್ತದೆ.

ಕೆಲವರ್ಷಗಳನಂತರ ಸೋಮೇಶ್ವರನು ಯುದ್ಧವನ್ನು ಮತ್ತೆ ಆರಂಭಿಸಿದನು. ಬೆಳವೊಲ ನಾಡಿನ ಮೇಲೆ ದಂಡೆತ್ತಿ ಬಂದು ಜೈನ ಬಸದಿಗಳನ್ನು ನಾಶಮಾಡಿದ ಪಾಂಡ್ಯ ಮತ್ತು ಚೋಳರನ್ನು ತಾನು ಸೋಲಿಸಿದ್ದಾಗಿ ಅವನು ಹೇಳಿಕೊಂಡಿದ್ದಾನೆ.

ಚೋಳ ಸೇನಾನಿ ಬ್ರಹ್ಮಾಧಿರಾಜನು ಪುಲಿವೆಟ್ಟಿಯಲ್ಲಿ ಪುಲಿಕೇಶಿಯ ವಿರುದ್ಧ ಹೋರಾಡಿದನು. ಸೋಮೇಶ್ವರನು ಚೋಳರನ್ನು ಹೊಡೆದಟ್ಟಿ ಕ್ರಿ.ಶ. 1057ರಲ್ಲಿ ಶ್ರೀ ಶೈಲಕ್ಕೆ ತನ್ನ ರಾಣಿಯ ಜೊತೆ ತೀರ್ಥಯಾತ್ರೆ ಕೈಗೊಂಡನು.

ಇಮ್ಮಡಿ ರಾಜೇಂದ್ರನು ಕ್ರಿ.ಶ. 1063ರಲ್ಲಿ ವಿಕ್ರಮಾದಿತ್ಯ ಮತ್ತು ಜಯಸಿಂಹರನ್ನು ಗಂಗವಾಡಿ ಯಲ್ಲಿ ಯುದ್ಧಕ್ಕೆಳೆದ. ಮೊದಲನೆಯ ಸೋಮೇಶ್ವರ ನೊಳಂಬವಾಡಿ, ಗಂಗವಾಡಿ, ಬನವಾಸಿಗಳ ಮೇಲೆ ವಿಕ್ರಮನನ್ನು ಮಾಂಡಲಿಕನಾಗಿ ನೇಮಿಸಿದ್ದನು. ವಿಕ್ರಮನು ವೆಂಗಿಯ ಮೇಲೆ ದಾಳಿಮಾಡಿ ಏಳನೆಯ ವಿಜಯಾದಿತ್ಯನನ್ನು ಹೊರಕ್ಕಟ್ಟಿದನು. ವಿಜಯಾದಿತ್ಯನು ರಾಜೇಂದ್ರ ಚೋಳನ ಆಶ್ರಯ ಪಡೆದ. ಮೊದಲನೆಯ ವೀರರಾಜೇಂದ್ರನ ಮಣಿಮಂಗಳಂ ಶಾಸನ ಈ ರೀತಿ ಹೇಳುತ್ತದೆ: "ವಿಕ್ಕಲನ ಜೊತೆ ಅನೇಕ ಮಹಾ ಸಾಮಂತರನ್ನೂ ರಾಜೇಂದ್ರನು ಗಂಗವಾಡಿಯಿಂದ ತುಂಗಭದ್ರೆಯ ಆಚೆಗೆ ಓಡಿಸಿದ. ವೆಂಗಿನಾಡಿಗೆ ವಿಕ್ಕಲನು ಕಳುಹಿಸಿದ್ದ ಭಾರಿ ಸೇನೆಯನ್ನು ನಾಶಮಾಡಿದ; ಮಹಾ ದಂಡನಾಯಕ ಚಾಮುಂಡ ರಾಜನ ಶವದ ತಲೆಯನ್ನು ಕತ್ತರಿಸಿದ; ಇರುಗಯ್ಯನ ರಾಣಿಯಾಗಿದ್ದ ಚಾವುಂಡರಾಜನ ಏಕಮಾತ್ರ ಪುತ್ರಿ ನಾಗಲೆಯ ಮೂಗನ್ನು ಕೊಯ್ದು. ಶತ್ರುಗಳು ಮೂರನೆ ಬಾರಿ ಅವನನ್ನು ಎದುರಿಸಿದರು. ರಕ್ತದಿಂದ ಕಲಕಿಹೋದ ನದಿದಂಡೆಯ ಕೂಡಲಸಂಗಮದಲ್ಲಿ ಆಹವಮಲ್ಲನ ಇಬ್ಬರು ಮಕ್ಕಳಾದ ವಿಕ್ಕಲ ಮತ್ತು ಸಿಂಗಣರನ್ನು ಸೋಲಿಸಿದ. ಕೋಶಲೈಯ ರಾಜನಾದ ಸಿಂಗಣನನ್ನು ಚೂರುಚೂರಾಗಿ ಕಡಿದೊಗೆದ. ಮಧುವರ್ಣನ್, ವಿಕ್ಕಲನ್ ಮತ್ತು ಸಿಂಗಣರು ಪಲಾಯನ ಗೈದರು. ಆಹವಮಲ್ಲನು ಅದಕ್ಕೂ ಮೊದಲೇ ಓಡಿಬ. ಆಹವಮಲ್ಲನ ರಾಣಿಯರನ್ನು, ಭಂಡಾರ, ವರಾಹಕೇತನ ಮತ್ತು ಆನೆ ಪುಷ್ಪಕ—ಮೊದಲಾದ ವನ್ನು ಚೋಳರಾಜನು ವಶಪಡಿಸಿಕೊಂಡ."

ಕಂಪಿಲಿಯನ್ನು ಸುಟ್ಟನಂತರ ಕರಡಿಕಲ್ಲಿನಲ್ಲಿ ಒಂದು ಜಯಸ್ತಂಭವನ್ನು ನೆಟ್ಟುದಾಗಿ ವೀರರಾಜೇಂದ್ರನು ಹೇಳಿಕೊಂಡಿದ್ದಾನೆ. ಈಗ ಪಶ್ಚಿಮದ ಚಾಳುಕ್ಯ ವಿಕ್ರಮಾದಿತ್ಯನು ತನ್ನ ಸ್ಥಾನವನ್ನು ಭದ್ರಗೊಳಿಸುವ ಕಾರ್ಯದಲ್ಲಿ ತೊಡಗಿದ್ದು ವೀರರಾಜೇಂದ್ರನ ಕುಮಾರಿ (ಅಧಿರಾಜೇಂದ್ರನ ಸೋದರಿ)ಯನ್ನು ವರಿಸಿ ಚೋಳರ ಜೊತೆ ಒಪ್ಪಂದ ಮಾಡಿಕೊಂಡ.

ಮೊದಲನೆಯ ಸೋಮೇಶ್ವರ ಆಹವಮಲ್ಲನು ಚೋಳರಾಜನಿಗೆ ಒಂದು ಲಿಖಿತ ಪಂಥಾಹ್ವಾನವನ್ನು ಕಳುಹಿಸಿ, ಒಂದು ನಿರ್ದಿಷ್ಟ ದಿನ ಅದೇ ಕರಡಿಕಲ್ಲಿನಲ್ಲಿ ಹೋರಾಡಬರಲು ಕರೆದನು.

ವೀರರಾಜೇಂದ್ರ ನಿರ್ದಿಷ್ಟ ಸ್ಥಳವಾದ ಕರಡಿಕಲ್ (ತಮಿಳು ಶಾಸನಗಳಲ್ಲಿ ಕರಂಡೈ)ಗೆ ಪೂರ್ವನಿಶ್ಚಿತ ವಾದ ದಿನ ಬಂದಾಗ ಚಾಳುಕ್ಯ ದೊರೆ ಅವನನ್ನು ಬಂದು ಎದುರಿಸಲಿಲ್ಲವೆಂದು ಚೋಳ ಶಾಸನಗಳು

ಹೇಳುತ್ತವೆ. ಚಾಳುಕ್ಯದೊರೆ ಮನೋವ್ಯಥೆಗೆ ಒಳಗಾದ. "ಅಪಮಾನದಲ್ಲಿ ಬಾಳುವುದಕ್ಕಿಂತ ಸಾಯುವುದೇ ಮೇಲು" ಎಂದು ಅವನು ಹೇಳಿಕೊಂಡನಂತೆ. ಹಿಂದೆ ತಾನೂ ತನ್ನ ಮಕ್ಕಳೂ ಸೋತು ಪಲಾಯನಗೈದ ರಣರಂಗವಾದ ಕೂಡಲವೇ ಮುಂದಣ ರಣರಂಗವಾಗಬೇಕೆಂದು ಆತ ನಿರ್ಧರಿಸಿದ.

ಬಲ್ಲಭರ (ಚಾಳುಕ್ಯರ) ದೊರೆ "ಕಂಡೈ" (ಕರಡಿಕ್ಕಲ್ ?)ಗೆ ಬಾರದ್ದರಿಂದ ಚೋಳದೊರೆ ಪೂರ್ವನಿಶ್ಚಿತ ದಿನದಿಂದ ಒಂದು ತಿಂಗಳ ಕಾಲ ಅಲ್ಲಿಯೇ ಹಾದಿನೋಡುತ್ತ ಕುಳಿತ.

"ಚೋಳದೊರೆ ರಟ್ಟಪಾಡಿ ಏಳೂವರೆ ಲಕ್ಷವನ್ನು ಸೋಲಿಸಿದನು. ಗಂಡು ಹುಲಿಯ ಲಾಂಛನವುಳ್ಳ ಒಂದು ಜಯಸ್ತಂಭವನ್ನು ಅವನು ತುಂಗಭದ್ರೆಯ ದಡದಲ್ಲಿ ನಿಲ್ಲಿಸಿದ" (ವೀರರಾಜೇಂದ್ರನ ಮಣಿಮಂಗಳ ಶಾಸನ, S.I.I., III Pt. 1. p, 64). ಕೆಲವು ತಮಿಳು ಇತಿಹಾಸಕಾರರು ಸೋಮೇಶ್ವರನು ಹೇಡಿಯೆಂದು ಆಪಾದಿಸಿದ್ದಾರೆ. ಆದರೆ ಕನ್ನಡ ಶಾಸನಗಳು ಇದರ ಕಾರಣ ತಿಳಿಸುತ್ತವೆ.

ಸೋಮೇಶ್ವರನು ಗುಣಪಡಿಸಲಾಗದ ಒಂದು ಜ್ವರದಿಂದ ನರಳುತ್ತಿದ್ದನು. ಯಾವುದೇ ಚಿಕಿತ್ಸೆಯೂ ಯಶಸ್ವಿಯಾಗದಿರಲು ಸೋಮೇಶ್ವರನು ಶಿವನಲ್ಲಿ ತನ್ನ ಶ್ರದ್ಧೆಯನ್ನು ಪ್ರಕಟಿಸಿ, ಹುಲ್ಲುಣಿತೀರ್ಥದಲ್ಲಿ ಮುಳುಗಿ ಪ್ರಾಣಾರ್ಪಣೆ ಮಾಡಿಕೊಳ್ಳಲು ನಿರ್ಧರಿಸಿದನೆಂದು ಬಿಲ್ಹಣನ "ವಿಕ್ರಮಾಂಕದೇವ ಚರಿತ" ಹೇಳುತ್ತದೆ.

ನ್ಯಾಯವಾಗಿ ಪಟ್ಟವೇರಿದ ತನ್ನ ಅಣ್ಣ ಇಮ್ಮಡಿ ಸೋಮೇಶ್ವರನ ವಿರುದ್ಧ ವಿಕ್ರಮಾದಿತ್ಯನು ಒಳಸಂಚುಗಳನ್ನು ನಡೆಸುತ್ತಿದ್ದ. ಚೋಳರ ಜೊತೆ ರಕ್ತಸಂಬಂಧ ಬೆಳೆಸಿ ಅವರ ಸ್ನೇಹವನ್ನು ಅವನು ಸಂಪಾದಿಸಿದ್ದ. ಇಮ್ಮಡಿ ಸೋಮೇಶ್ವರನು ಚೋಳರನ್ನು ಗುತ್ತಿಯಲ್ಲಿ (ಬಹುಶಃ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ) ಕೆಣಕಿದ. ಆದರೆ ಅವನು ಅನಂತರ ಹಿಂದೊತ್ತಿದ. ತನ್ನ ಜಾಮಾತ ವಿಕ್ರಮಾದಿತ್ಯನಿಗೆ ವೀರರಾಜೇಂದ್ರನು ರಟ್ಟಪಾಡಿಯನ್ನು ಒಪ್ಪಿಸಿದ. ಚಾಳುಕ್ಯ ಸಾಮ್ರಾಜ್ಯವು ವಿಕ್ರಮಾದಿತ್ಯ ಮತ್ತು ಇಮ್ಮಡಿ ಸೋಮೇಶ್ವರರ ನಡುವೆ ವಿಭಜಿತವಾಯಿತೆಂಬ ಕೆಲವು ತಮಿಳು ಇತಿಹಾಸಕಾರರ ಊಹೆಗೆ ಕನ್ನಡ ಶಾಸನಗಳಲ್ಲಿ ಸಮರ್ಥನೆ ದೊರೆಯದು. ವೀರರಾಜೇಂದ್ರನು ಕ್ರಿ.ಶ. 1070ರಲ್ಲಿ ತೀರಿಕೊಂಡ. ಅವನ ಮಗ ಅಧಿರಾಜನು ಅದೇ ವರ್ಷ ಪಟ್ಟವೇರಿದ. ತನ್ನ ಭಾವಮೈದುನ ಅಧಿರಾಜನಿಗೆ ಬೆಂಬಲ ನೀಡಲು ವಿಕ್ರಮಾದಿತ್ಯನು ಕಾಂಚಿಗೆ ತೆರಳಿದ್ದಂತೆ ತೋರುತ್ತದೆ. ಆದರೆ ವಿಕ್ರಮನ ಅಣ್ಣ ಇಮ್ಮಡಿ ಸೋಮೇಶ್ವರನು ಕ್ರಿ.ಶ. 1070ರಲ್ಲಿ ರಾಜಿಗ ಕುಲೋತ್ತುಂಗ ಚೋಳನ ಹಕ್ಕನ್ನು ಬೆಂಬಲಿಸಿದ. ಇಮ್ಮಡಿ ಸೋಮೇಶ್ವರನು ಕ್ರಿ.ಶ. 1068ರಿಂದ 1076ರ ವರೆಗೆ ಆಳಿದ. ಅವನ ತಮ್ಮಂದಿರಾದ ವಿಕ್ರಮ ಮತ್ತು ಜಯಸಿಂಹನು ಈ ಕಾಲಕ್ಕೆ ಬನವಾಸಿ ಮತ್ತು ದಕ್ಷಿಣ ಕರ್ಣಾಟಕದಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದ್ದರು. ಸುಮಾರು 1072ರಲ್ಲಿ ವಿಕ್ರಮನು ತನ್ನ ಅಣ್ಣನ ವಿರುದ್ಧ ಬಂಡೆದ್ದ; ತುಂಗಭದ್ರೆಯ ದಡದಲ್ಲಿ ಇಬ್ಬರಿಗೂ ಯುದ್ಧ ವಾಯಿತು. ಕುಲೋತ್ತುಂಗ ಚೋಳನು ಸೋಮೇಶ್ವರನ ಪಕ್ಷವನ್ನು ತ್ಯಜಿಸಿದ; ಸೋಮೇಶ್ವರನು ಬಂಧಿತನಾಗಿ ಬಹುಶಃ ಕೊಲ್ಲಲ್ಪಟ್ಟನು. ತನ್ನ ಅಣ್ಣನೇ ರಾಜನಾಗಿ ಮುಂದುವರಿಯಬೇಕೆಂದು ತಾನು ಬಯಸಿದ್ದರೂ ಶಿವನು ಕನಸಿನಲ್ಲಿ ಕಾಣಿಸಿಕೊಂಡು ತನಗೆ ಪಟ್ಟವೇರಲು ಆಜ್ಞಾಪಿಸಿದನಾಗಿ ವಿಕ್ರಮಾದಿತ್ಯನು ಹೇಳಿಕೊಂಡಿದ್ದಾನೆಂದು ಬಿಲ್ಹಣನ "ವಿಕ್ರಮಾಂಕದೇವ ಚರಿತ" ತಿಳಿಸುತ್ತದೆ.

ವಿಕ್ಕಲನನ್ನು ತಾನು ನಂಗಲಿ (ಕೋಲಾರ ಜಿಲ್ಲೆ)ಯಿಂದ ತುಂಗಭದ್ರಾ ಮತ್ತು ಮಣಲೂರುಗಳಿಗೆ ಕ್ರಿ.ಶ. 1098ರಲ್ಲಿ ಓಡಿಸಿದ್ದಾಗಿ ಕುಲೋತ್ತುಂಗನು ಹೇಳಿಕೊಂಡಿದ್ದಾನೆ. ಎಂಟುವರ್ಷಗಳ ಕಾಲ ಗಂಗಮಂಡಲವು ಚೋಳರ ಕೈಸೇರಿತು. ಚೋಳ ಸೇನಾನಿಗಳಾದ ಅಡಿಯಮ, ದಾಮೋದರ ಮತ್ತು

ನರಸಿಂಹವರ್ಮರನ್ನು ಸೋಲಿಸಿ ಹೊಯ್ಸಳ ವಿಷ್ಣುವರ್ಧನನು 1116ರಲ್ಲಿ ಈ ಭಾಗವನ್ನು ಮತ್ತೆ ವಶಪಡಿಸಿಕೊಂಡ.

ಕುಲೋತ್ತುಂಗ ಚೋಳನು ಕ್ರಿ.ಶ. 1121ರಲ್ಲಿ ತೀರಿಕೊಂಡು ವಿಕ್ರಮ ಚೋಳನು ಪಟ್ಟಕ್ಕೆ ಬಂದ. ಅವನ ಸಾಮಂತನಾದ ನಂಬಯ್ಯನು "ಕೊಲ್ಲಿಪಾಕ್ಕೈಯ ಪ್ರಭು"ವಾಗಿದ್ದು ಕೃಷ್ಣೆಯ ದಕ್ಷಿಣಕ್ಕಿರುವ ಆರುಸಾವಿರ ಪ್ರಾಂತವನ್ನು ಆಳುತ್ತಿದ್ದ (E.I., VI. p. 225). ಆರನೆಯ ವಿಕ್ರಮಾದಿತ್ಯನು ಚೋಳರ ರಾಜ್ಯದ ಮೇಲೆ ದಂಡೆತ್ತಿ ನಡೆದಂತೆ ತೋರುತ್ತದೆ. ವಿಕ್ರಮ ಚೋಳನು ವೆಂಗಿಯಿಂದ ಕಾಂಚಿಗೆ ಪಲಾಯನ ಮಾಡಬೇಕಾಗಿ ಬಂತು. ಚಾಳುಕ್ಯ ಸೇನಾನಿಗಳಾದ ಅನಂತಪಾಲ ಮತ್ತು ಗೋವಿಂದರಸರು ವೆಂಗಿಯಿಂದ ಕ್ರಿ.ಶ. 1118ರಿಂದ 1126ರ ವರೆಗೆ ಆಳುತ್ತಿದ್ದುದು ಕಂಡುಬಂದಿದೆ. ವೀರಚೋಡನು ಜನನಾಥನಗರಿ (ರಾಜಮಹೇಂದ್ರಿ)ಯಲ್ಲಿ ಆಳುತ್ತಿದ್ದ. ವೆಂಗಿಯಲ್ಲಿ ಕ್ರಿ.ಶ. 1099ರಿಂದ 1127ರ ವರೆಗೆ ಪಶ್ಚಿಮದ ಚಾಳುಕ್ಯರ ಶಾಸನಗಳು ಕಾಣಬರುತ್ತವೆ.

ಪಶ್ಚಿಮ ಚಾಳುಕ್ಯರ ಜೊತೆಜೊತೆಯಾಗಿಯೇ ಚೋಳಸತ್ತೆಯೂ ಕ್ಷಯವಾಗತೊಡಗಿತು. ಕರ್ಣಾಟಕದಲ್ಲಿ, ದಕ್ಷಿಣದಲ್ಲಿ ಹೊಯ್ಸಳರೂ ಕಲ್ಯಾಣದಲ್ಲಿ ಕಳಚೂರ್ಯರೂ ದೇವಗಿರಿಯಲ್ಲಿ ಯಾದವರೂ ಪ್ರಬಲರಾದರು. ಪಶ್ಚಿಮದ ಚಾಳುಕ್ಯ ಸಾಮಂತರಾಗಿದ್ದ ವರಂಗಲ್ಲಿನ ಕಾಕತೀಯರೂ ಗಣಪತಿಯ ಕಾಲದಿಂದ ಸ್ವತಂತ್ರರಾದರು. ಚೋಳಸಾಮ್ರಾಜ್ಯವೂ ಇದೇ ರೀತಿ ಒಡೆದುಹೋಯಿತು. ತೆಲುಗು ಜಿಲ್ಲೆಗಳು ವೆಲನಾಡು ಚೋಳರು, ಒಡ್ಡವಾಡಿಯ ಮತ್ಸ್ಯರು ಮತ್ತು ಕಾಕತೀಯರು ಇವರ ಆಳಿಕೆಗೆ ಒಳಪಟ್ಟವು. ವಿಕ್ರಮ ಚೋಳನ (ಕ್ರಿ.ಶ. 1118–1135) ಅನಂತರ ಆಳಿದ ಇಮ್ಮಡಿ ಕುಲೋತ್ತುಂಗ (ಕ್ರಿ.ಶ. 1135–1145), ಇಮ್ಮಡಿ ರಾಜರಾಜ (ಕ್ರಿ.ಶ. 1145–1173) ಮತ್ತು ಇಮ್ಮಡಿ ರಾಜಾಧಿರಾಜ (ಕ್ರಿ.ಶ. 1168–79)—ಮುಂತಾದ ಚೋಳ ದೊರೆಗಳು ಕರ್ಣಾಟಕದ ರಾಜಕಾರಣದಲ್ಲಿ ಕೈಹಾಕಲಿಲ್ಲ. ಹೊಯ್ಸಳರು ಚೋಳರನ್ನು ಕರ್ಣಾಟಕದ ಪೂರ್ವಗಡಿಗಳಾಚೆಗೆ ಅಟ್ಟಿಬಿಟ್ಟಿದ್ದರು. ಹೊಯ್ಸಳರೇ ಮುಂದೆ ತಮಿಳುನಾಡಿನಲ್ಲಿ ದಂಡಯಾತ್ರೆಗಳನ್ನು ಆರಂಭಿಸಿದರು. ದೇವಗಿರಿಯ ಭಿಲ್ಲಮನನ್ನು ಕ್ರಿ.ಶ. 1110ರ ಸೊರಟೂರು ಕಾಳಗದಲ್ಲಿ ಸೋಲಿಸಿದ ಹೊಯ್ಸಳ ವೀರಬಲ್ಲಾಳನು ಸಮ್ರಾಟೋಚಿತ ಬಿರುದುಗಳಾದ 'ದಕ್ಷಿಣ ಸಮುದ್ರಾಧೀಶ್ವರ', 'ಪರಮೇಶ್ವರ'—ಇವುಗಳನ್ನೆಲ್ಲ ಧರಿಸಿ ಕೃಷ್ಣಾನದಿಯ ತೆಂಕಣ ಪ್ರದೇಶಗಳ ಮೇಲೆ ತನ್ನ ಹಿಡಿತವನ್ನು ಬಲಪಡಿಸಿ, ಚೋಳರ ವ್ಯವಹಾರಗಳಲ್ಲಿ ಕೈಯಿಕ್ಕಲು ಆರಂಭಿಸಿದ್ದ.

ಇಮ್ಮಡಿ ರಾಜೇಂದ್ರನ ವಿರುದ್ಧ ಹೋರಾಡುತ್ತಿದ್ದ ರಾಜರಾಜನನ್ನು (ಕ್ರಿ.ಶ. 1146–1173) ತಾನು ಸಿಂಹಾಸನದ ಮೇಲೆ ಕೂರಿಸಿದ್ದಾಗಿ ಹೊಯ್ಸಳ ಇಮ್ಮಡಿ ವೀರಬಲ್ಲಾಳನು ಹೇಳಿಕೊಂಡಿದ್ದಾನೆ. 'ರಾಜರಾಜ ಪ್ರತಿಷ್ಠಾನಿರತಂ' ಎಂಬುದಾಗಿ ರುದ್ರಭಟ್ಟನು '**ಜಗನ್ನಾಥ ವಿಜಯ**'ದಲ್ಲಿ ವೀರಬಲ್ಲಾಳನನ್ನು ಕರೆದಿದ್ದಾನೆ. ವೀರಬಲ್ಲಾಳನ ಶಾಸನಗಳು ಜಂಬುಕೇಶ್ವರಂ ಮತ್ತು ತಿರುವಾನೈಕ್ಕಾವಲ್‌ಗಳಲ್ಲಿ ದೊರೆತಿವೆ. ಚೋಳರು ಹೊಯ್ಸಳರ ಜೊತೆ ಬೀಗತನವನ್ನೂ ಬೆಳೆಸಿದರು. ಹೊಯ್ಸಳ ಸೋಮೇಶ್ವರನು ಶ್ರೀರಂಗದ ಎದುರು ದಿಕ್ಕಿನಲ್ಲಿರುವ ಕಾವೇರೀತಟದ ಕಣ್ಣನೂರ್ ಕೊಪ್ಪಂನಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಿದ; ಪಾಂಡ್ಯ ದೊರೆಗಳಾದ ಜಟಾವರ್ಮ ಸುಂದರ ಮತ್ತು ಮಾರವರ್ಮ ಸುಂದರರ ವಿರುದ್ಧ ಹೋರಾಡಿದ. ಚೋಳರ ರಾಜವಂಶವು ಮುಮ್ಮಡಿ ರಾಜರಾಜ ಮತ್ತು ಮುಮ್ಮಡಿ ರಾಜೇಂದ್ರರೊಂದಿಗೆ ಕೊನೆಗೊಂಡಿತು. ಶತಮಾನಗಳ ಕಾಲ ಕರ್ಣಾಟಕವನ್ನು ಪೀಡಿಸಿದ್ದ ಚೋಳರು ತಾವೇ ಹನ್ನೆರಡನೆಯ ಶತಮಾನದ ಅನಂತರ ಹೊಯ್ಸಳರ ರಕ್ಷಣೆಯನ್ನು ಪಡೆಯಬೇಕಾಗಿ ಬಂತು.

ಮೂಲ ಲೇಖಕರು : ಡಾ|| ಎಸ್. ಶ್ರೀಕಂಠ ಶಾಸ್ತ್ರಿ,
ಅನುವಾದಕರು : ಡಾ|| ಸೂರ್ಯನಾಥ ಕಾಮತ್

# ಚೋಳರ ವಂಶವೃಕ್ಷ



ಪರಾಂತಕ II ಕ್ರಿ.ಶ. 956-73
(ಸುಂದರ ಚೋಳ)
ಆದಿತ್ಯ II
(ಕರಿಕಾಲ)
ರಾಜರಾಜ I ಕ್ರಿ.ಶ. 985-1016
ರಾಜೇಂದ್ರ I ಕ್ರಿ.ಶ. 1012-44
ಕುಂದವ್ವೆ + ಪೂರ್ವದ ಚಾಳುಕ್ಯ
ವಿಮಲಾದಿತ್ಯ ಕ್ರಿ.ಶ. 1011-18
+ ಮೇಲಾಂಬೆ
ರಾಜಾಧಿರಾಜ
ರಾಜೇಂದ್ರದೇವ II
ಕ್ರಿ.ಶ. 1052-64
ವೀರರಾಜೇಂದ್ರ
ಕ್ರಿ.ಶ. 1063-69
ಅಮ್ಮಂಗದೇವಿ
+
ರಾಜರಾಜನರೇಂದ್ರ (ಪೂ. ಚಾಳುಕ್ಯ)
ಕ್ರಿ.ಶ. 1019-61
ವಿಜಯಾದಿತ್ಯ VII
ಕ್ರಿ.ಶ. 1061-75
ಶಕ್ತಿವರ್ಮ II
ಅಧಿರಾಜ
ಮಗಳು
ಅಧಿರಾಜೇಂದ್ರ
ಕ್ರಿ.ಶ. 1069-70
ಮಗಳು + ವಿಕ್ರಮಾದಿತ್ಯ VI
ಮಧುರಾಂತಕಿ
+
ರಾಜೇಂದ್ರ II (ಕುಲೋತ್ತುಂಗ) (ಪೂ. ಚಾಳುಕ್ಯ)
ಕ್ರಿ.ಶ. 1070-1118
ರಾಜರಾಜ
ಮುಮ್ಮಡಿ ಚೋಳ
ವೀರಚೋಳ
ವಿಕ್ರಮ ಚೋಳ
ಕ್ರಿ.ಶ. 1118-35
ಕುಲೋತ್ತುಂಗ II
ಕ್ರಿ.ಶ. 1133-50
ರಾಜರಾಜ II
ಕ್ರಿ.ಶ. 1146-73

**ಆಳುಪರು**

ಆಳುಪರು ಹದಿನೈದು ಶತಮಾನಗಳಷ್ಟು ದೀರ್ಘಕಾಲ ಕರ್ಣಾಟಕದ ಪಶ್ಚಿಮ ಕರಾವಳಿಯಲ್ಲಿ ಆಳಿದ ರಾಜವಂಶ. ಡಾ॥ ಬಿ. ಎ. ಸಾಲೆತ್ತೂರರು ಈ ವಂಶದ ವಿಸ್ತೃತ ಇತಿಹಾಸವನ್ನು 'ಹಿಸ್ಟರಿ ಆಫ್ ತುಳುವ" ಪುಸ್ತಕದಲ್ಲಿ ಮೊದಲ ಬಾರಿ ಬರೆದು ಪ್ರಕಟಿಸಿದರು (1936).

ತಮ್ಮನ್ನು 'ಸೋಮಕುಲ'ದವರೆಂದು (ARSIE, 374 of 1928) ಕರೆದುಕೊಂಡ ಈ ದೊರೆಗಳು ಎಂಟನೆ ಶತಮಾನದ ಅನಂತರ 'ಪಾಂಡ್ಯ' (102 of 1901; 98 of 1901) ಎಂಬ ಬಿರುದನ್ನು ತಳೆದರು. ಆರಂಭದಲ್ಲಿ ಉಡುಪಿಯ ಬಳಿಯ ಉದ್ಯಾವರ (ಒಡೆವುರ)ವನ್ನು ರಾಜಧಾನಿಯನ್ನಾಗಿ ಹೊಂದಿದ್ದ ಇವರು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶ, ಮತ್ತು ಕೆಲಕಾಲ ಇಂದಿನ ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳ ಮೇಲೆ ಅಧಿಕಾರ ಹೊಂದಿದ್ದರು.

ಗ್ರೀಕ್ ಭೂಗೋಲಜ್ಞ ಟಾಲೆಮಿ ಕ್ರಿ.ಶ. 130ರಲ್ಲಿ ಬರೆದ ಪುಸ್ತಕದಲ್ಲಿ "ಒಲೊಯ್‌ಖೊರಾ" ಎಂದು ಕರೆದಿರುವ ಪ್ರದೇಶವನ್ನು 'ಆಳ್ವಖೇಡ' ಎಂಬುದಾಗಿ ವಿದ್ವಾಂಸರು ಗುರುತಿಸಿದ್ದಾರೆ (Ind. Ant. XIX, ಪು. 14). ಈ ಕಾಲಕ್ಕೆ ಮೊದಲಿಂದಲೂ, ಎಂದರೆ ಕನಿಷ್ಠ ಕ್ರಿಸ್ತಶಕಾರಂಭದಿಂದಲಾದರೂ, ಈ ಭಾಗವು ಆಳ್ವ (ಆಳುಪ)ರ ಆಡಳಿತಕ್ಕೆ ಒಳಗಾಗಿದ್ದುದರಿಂದ ಆ ಹೆಸರನ್ನು ಪಡೆದಿರಬೇಕೆಂಬುದು ನಿರ್ವಿವಾದ.

ಐದನೆ ಶತಮಾನದ ಮಧ್ಯಕಾಲದ ಹಲ್ಮಿಡಿ ಶಾಸನದಲ್ಲೂ ಏಳನೆಯ ಶತಮಾನದ ಆದಿಭಾಗದ ಚಾಳುಕ್ಯ ದೊರೆ ಮಂಗಳೇಶನ ಶಾಸನದಲ್ಲೂ ಆಳುಪ ವಂಶದ ಉಲ್ಲೇಖಗಳಿವೆ. ಆದರೆ ಮೊದಲ ಬಾರಿ ಸ್ಪಷ್ಟವಾಗಿ ಶಾಸನಗಳಲ್ಲಿ ಕಾಣಬರುವ ಆಳುಪ ದೊರೆಯೊಬ್ಬನ ಹೆಸರು 'ಗುಣಸಾಗರ' ಎಂಬುದು (ಕೀ VI, KP. 38). ಈತ ಏಳನೆಯ ಶತಮಾನದಲ್ಲಿದ್ದಿರಬೇಕೆಂದು ಲಿಪಿತಜ್ಞರ ಅಭಿಮತ. ಈತನಿಗೂ ಮೊದಲು ಆಳುತ್ತಿದ್ದಿರಬಹುದಾದ ಕುಂದವರ್ಮರಸ ಎಂಬಾತನ ಹೆಸರು ಇದೇ ಶಾಸನದಲ್ಲಿ ಉಲ್ಲಿಖಿತವಾಗಿದೆ. ಎಂಟನೆಯ ಶತಮಾನದ ಆದಿಭಾಗದಲ್ಲಿ ಆಳಿದ ಚಿತ್ರವಾಹನನ ಶಾಸನಗಳಂತೆ (E.C., VI, KP. 37; EP. Ind. XXXII, P. 317) ಆಳುಪರು ಈ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಪ್ರದೇಶಗಳ ಮೇಲೆ ಅಧಿಕಾರ ಹೊಂದಿದ್ದರು. ಚಿತ್ರವಾಹನನು ಚಾಳುಕ್ಯ ರಾಜಕುಮಾರಿಯೊಬ್ಬಳನ್ನು ವರಿಸಿದ್ದ.

ಮುಂದಣ ಆಳುಪರ ಶಾಸನಗಳನ್ನು ಅವಲೋಕಿಸಿದಾಗ ರಣಸಾಗರ, ಪೃಥ್ವೀಸಾಗರ, ಶ್ವೇತವಾಹನ ಮುಂತಾದ ಈ ವಂಶದ ದೊರೆಗಳಲ್ಲಿ ಸಿಂಹಾಸನಕ್ಕಾಗಿ ದ್ವಂದ್ವ ನಡೆದ ಗೊಂದಲದ ಪರಿಸ್ಥಿತಿ ಕಾಣಿಸುತ್ತದೆ. ಕೊನೆಗೆ ವಿಜಯಾದಿತ್ಯ ಮಾರಮ್ಮ ಎಂಬ ದೊರೆಯ ಕಾಲದಲ್ಲಿ ಈ ಯಾದವೀಕಲಹ ಅಂತ್ಯವಾಗಿರಬೇಕು. (98 of 1901 EI, IX, P. 22). ಸರಿಸುಮಾರಾಗಿ ಇದೇ ಕಾಲಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಬಲ್ಯಕ್ಕೆ ಬಂದು "ಪಟ್ಟಿಪೊಂಬುಚ್ಚ ಪುರವರಾಧೀಶ್ವರ" ಎಂಬುದಾಗಿ ತಮ್ಮನ್ನು ಕರೆದುಕೊಂಡ ಶಾಂತರ ವಂಶದ ದೊರೆಗಳ ಜೊತೆ ಈ ದೊರೆಗಳು ರಕ್ತಸಂಬಂಧವನ್ನು ಬೆಳೆಸಿದರು. ಚಾಗಿ ಎಂಬ ಶಾಂತರ ದೊರೆ ರಣಂಜಯ

ಎಂಬ ಆಳುಪ ದೊರೆಯ ಮಗಳನ್ನು ಮದುವೆಯಾಗಿದ್ದ ವಿಚಾರ ಶಾಸನ ಒಂದರಿಂದ ನಮಗೆ ಗೊತ್ತಾಗುತ್ತದೆ (E.C., VIII, Nr. 35). ಈ ರಣಂಜಯನ ಕಾಲ ಸರಿಸುಮಾರು ಹತ್ತನೆಯ ಶತಮಾನದ ಆದಿಭಾಗ. ಅನಂತರ ದತ್ತಾಳುಪ ಮತ್ತು ಇಮ್ಮಡಿ ಕುಂದವರ್ಮ ಎಂಬ ದೊರೆಗಳು ಅನುಕ್ರಮವಾಗಿ ಆಳಿದರು. ಕ್ರಿ.ಶ. 968ರ ಮಂಗಳೂರ ಬಳಿಯ ಕದಿರೆಯ ಲೋಕೇಶ್ವರ ದೇವರ ಸುಂದರ ಕಂಚಿನ ವಿಗ್ರಹವನ್ನು ಕುಂದವರ್ಮನು ಪ್ರತಿಷ್ಠೆಮಾಡಿದ್ದನೆಂದು ಒಂದು ಶಾಸನ ಹೇಳುತ್ತದೆ. (S.I.I. VII, 191 'ತುಳುಲಿಪಿ' ಎಂದು ಪರಿಚಿತವಾದ ಗ್ರಂಥಲಿಪಿಯಲ್ಲಿ ದೊರೆತ ಕೆಲವೇ ಶಾಸನಗಳಲ್ಲಿ ಇದು ಒಂದು ; ಭಾಷೆ ಸಂಸ್ಕೃತ.)

ಹನ್ನೊಂದನೆಯ ಶತಮಾನದಲ್ಲಿ ಬಂಕಿದೇವ ಮತ್ತು ಜಯಸಿಂಗರಸ ಎಂಬ ದೊರೆಗಳು ಅನುಕ್ರಮವಾಗಿ ಆಳಿದರು. ಹನ್ನೆರಡನೆಯ ಶತಮಾನದಲ್ಲಿ ಭುಜಬಲಕವಿ ಆಳುಪೇಂದ್ರನು ರಾಜ್ಯಭಾರ ಮಾಡಿದನು, ಈತನ ಕಾಲದಲ್ಲಿ ಬಾರಕೂರು (ಬಾರಹ ಕನ್ಯಾಪುರ) ರಾಜಧಾನಿಯಾಗಿತ್ತೆಂದು ತಿಳಿಯುತ್ತದಲ್ಲದೆ 'ಪಾಂಡ್ಯ ಗದ್ಯಾಣ' ಎಂಬ ನಾಣ್ಯವು ಅವನ ರಾಜ್ಯದಲ್ಲಿ ಪ್ರಚಲಿತವಿತ್ತೆಂಬ ವಿಚಾರವು 1139ರ ಒಂದು ಶಾಸನದಿಂದ ತಿಳಿಯುತ್ತದೆ (176 of 1901 S.I.I. VII, 381). ಆ ಮೇಲೆ ಕುಲಶೇಖರ ಎಂಬ ದೊರೆ ಆಳಿದ. ಅವನ ಅನಂತರ ಆಳಿದ ಇಮ್ಮಡಿ ದತ್ತಾಳುಪ ಶ್ರೀಮಾರನ (1235) ಉತ್ತರಾಧಿಕಾರಿ ವೀರಪಾಂಡ್ಯದೇವನು ಬಹಳ ಪ್ರಭಾವಿಯಾದ ದೊರೆ. ಈತನ ಅನೇಕ ಶಾಸನಗಳು ದೊರೆತಿವೆ. ಹದಿಮೂರನೆ ಶತಮಾನದ ಮಧ್ಯಭಾಗದಲ್ಲಿ ಇವನ ಆಡಳಿತ ನಡೆಯಿತು. ಈತನು ತಮಿಳುನಾಡಿನ ಪಾಂಡ್ಯವಂಶದ ಬಲ್ಲಮಹಾದೇವಿ ಎಂಬವಳನ್ನು ವರಿಸಿದ್ದು, ಕೆಲಕಾಲ ಈ ರಾಣಿಯೇ ರಾಜ್ಯಭಾರ ನಿರ್ವಹಿಸಿದ್ದಳೆಂದು 1278 ಮತ್ತು 1281ರ ಶಾಸನಗಳಿಂದ ತಿಳಿಯುತ್ತದೆ. (336, 343 of 1932). ಅನಂತರ ಅಲ್ಪಕಾಲ ನಾಗದೇವರಸ ಎಂಬ ದೊರೆ ಆಳಿದಂತೆ ಕಂಡು ಬರುತ್ತದೆ.

ಹೊಯ್ಸಳ ವಿಷ್ಣುವರ್ಧನನ ಕಾಲದಿಂದಲೇ ಆಳುಪರಿಗೂ ಹೊಯ್ಸಳರಿಗೂ ಸೆಣಸಾಟ ನಡೆಯುತ್ತಿದ್ದುದು ಅನೇಕ ಹೊಯ್ಸಳ ಶಾಸನಗಳಿಂದ ಕಂಡು ಬಂದರೂ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದಲ್ಲಿ ಆಳುಪರು ಬಹುಶಃ ಹೊಯ್ಸಳರ ಸಾಮಂತರಾಗಿರಬೇಕು. ರಾಜಕುಮಾರ ವೀರಬಲ್ಲಾಳನು (ಮುಂದಣ ಮುಮ್ಮಡಿ ಬಲ್ಲಾಳ) ತುಳುವದಲ್ಲಿ ಹೊಯ್ಸಳ ಮಂಡಲಾಧಿಕಾರಿಯಾಗಿದ್ದಿರಬೇಕೆಂದು 1278 ಮತ್ತು 1281ರ ಎರಡು ಶಾಸನಗಳು ಸೂಚಿಸುತ್ತವೆ. (KI, 31 of 1940—41 ; APSIE 43 of 1901--S.I.I, VII, 213)

ಕನಿಷ್ಠ ಮೂರು ಶಾಸನಗಳಲ್ಲಿ ಉಲ್ಲಿಖಿತನಾದ ಇಮ್ಮಡಿ ಬಂಕಿದೇವನು (377 of 1928 ; 484 of 1929 ; 527 of 1930) ಮಂಗಳೂರು ರಾಜಧಾನಿಯಿಂದ ಆಳುತ್ತಿದ್ದ. ಇವನ ಅನಂತರ ಸೋಮಿದೇವ ಅಥವಾ ಸೋಯಿದೇವನು ಪಟ್ಟಕ್ಕೆ ಬಂದು 1316ರಿಂದ 1335ರ ವರೆಗೆ ರಾಜ್ಯಭಾರ ಮಾಡಿದ (151 of 1901 ; 461 of 1929). ಒರ್ವ ಆಳುಪ ರಾಜಕುಮಾರಿ (ಬಹುಶಃ ಸೋಮಿದೇವನ ಸೋದರಿ) ಕಿಕ್ಕಾಯಿ ತಾಯಿ ಅಥವಾ ಕೃಷ್ಣಾಯಿ ತಾಯಿ ಎಂಬಾಕೆಯು ಹೊಯ್ಸಳ ಮುಮ್ಮಡಿ ಬಲ್ಲಾಳನನ್ನು ವರಿಸಿ, ಹೊಯ್ಸಳ ಮತ್ತು ಆಳುಪರಲ್ಲಿ ಈ ಕಾಲದಲ್ಲಿ ರಕ್ತಸಂಬಂಧ ಉಂಟಾಯಿತು. ಹೊಯ್ಸಳ ಬಲ್ಲಾಳನ 'ಪಟ್ಟದ ಪಿರಿಯರಸಿ' ಯಾದ ಈಕೆ, ತುಳುನಾಡಿನಲ್ಲಿ ಆಗ ತಾನೇ ಜನಪ್ರಿಯವಾಗಿದ್ದ ಅಳಿಯ ಸಂತಾನ ಕಟ್ಟಿನಂತೆ ತನ್ನ ಪತಿಗೃಹಕ್ಕೆ ತೆರಳದೆ, ತುಳುನಾಡಿನಲ್ಲೇ ಉಳಿದಳು. ಸೋಯಿದೇವನ ಅನಂತರ ಪಟ್ಟಕ್ಕೆ ಬಂದ (ಬಹುಶಃ ಸೋಯಿದೇವನ ಸೋದರಳಿಯ) ಇಮ್ಮಡಿ ಕುಲಶೇಖರನ (ಕೃಷ್ಣಾಯಿಯ ಮಗ 240 of 1932) ಆಳಿಕೆಯ ಕಾಲದಲ್ಲಿ ಈ ಉತ್ತರಾಧಿಕಾರವು ಅಳಿಯಸಂತಾನ ಕಟ್ಟಿನಂತೆ ನಡೆಯಿತು. ಬಹುಶಃ ಸೋಯಿದೇವನ ಇತರ ಸೋದರಿಯರ

ಮಕ್ಕಳು ಇದನ್ನು ವಿರೋಧಿಸಿದರು. ಮುಮ್ಮಡಿ ಬಲ್ಲಾಳನು ತನ್ನ ಮಗ ಕುಲಶೇಖರನ ಉತ್ತರಾಧಿಕಾರದ ಬೆಂಬಲವಾಗಿ ಅಂಕೆಯನಾಯಕ ಎಂಬ ಸೇನಾನಿಯನ್ನು ಬಾರಕೂರಲ್ಲಿ ಇಟ್ಟಿದ್ದ—E.C., V, A.K. 183;—1338ರದು) ಕೃಷ್ಣಾಯಿಯು ತುಳುವರ ಸಾರ್ವಜನಿಕ ವ್ಯವಹಾರಗಳಲ್ಲಿ ಬಹಳ ಪ್ರಧಾನ ಪಾತ್ರ ವಹಿಸಿದ್ದಳೆಂಬುದು ಐದಾರು ಶಾಸನಗಳಿಂದ ಗೊತ್ತಾಗುತ್ತದೆ.

ಆ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರದ ಸಂಗಮ ಸೋದರರ ಉದಯೋನ್ಮುಖ ರಾಜಸತ್ತೆಗೆ ಹೊಯ್ಸಳವಂಶದ ಬೆಂಬಲವನ್ನು (1342ರಲ್ಲಿ ಮುಮ್ಮಡಿ ವೀರಬಲ್ಲಾಳನೂ 1345ರಲ್ಲಿ ವಿರೂಪಾಕ್ಷ ಬಲ್ಲಾಳನೂ ತೀರಿಕೊಂಡು ಹೊಯ್ಸಳವಂಶ ನಾಶವಾಗುತ್ತಿದ್ದಾಗ) ಈ ಆಳುಪ ರಾಜಕುಮಾರಿಯಾದ ಹೊಯ್ಸಳರಾಣಿ ಸೂಚಿಸಿದಳೆಂಬ ವಿಚಾರ 1346ರ ಶೃಂಗೇರಿ ಶಾಸನದಿಂದ ತಿಳಿಯುತ್ತದೆ (E.C., V, Sg. 1).

ಇಮ್ಮಡಿ ಕುಲಶೇಖರನ ಅನಂತರ ಇಮ್ಮಡಿ ಸೋಯಿದೇವನು ಆಳಿದ ವಿಚಾರ 1348ರ ಇಡಗುಂಜಿಯ ಶಾಸನದಿಂದ ಗೊತ್ತಾಗುತ್ತದೆ (KI, 48 of 1940-41). ಮುಮ್ಮಡಿ ಕುಲಶೇಖರ ಎಂಬ ದೊರೆಯು ಮೂಡಬಿದರೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದು ಈತನು ಜೈನನಾಗಿರ ಬೇಕೆಂದು ಡಾ. ಸಾಲೆತ್ತೂರರು ಊಹಿಸಿದ್ದಾರೆ. ಈತನ ಒಂದು ಶಾಸನ 1384ರದು (53A of 1901). "ಮಹಾರಾಜಾಧಿರಾಜ", "ಪರಮೇಶ್ವರ" ಮುಂತಾದ ಸ್ವತಂತ್ರ ಸತ್ತೆಯನ್ನು ಸೂಚಿಸುವ ಬಿರುದುಗಳನ್ನು ಈತ ಧರಿಸಿದ್ದಾನೆ. ಆ ಮೇಲಿನ ಇಮ್ಮಡಿ ವೀರಪಾಂಡ್ಯದೇವನೆಂಬ ದೊರೆಯ 1397ರ ಶಾಸನವು ದೊರೆತಿದೆ (50 of 1901).

ಆಳುಪರ ಕೊನೆಯ ಶಾಸನೋಲ್ಲಿಖಿತ ದೊರೆ ನಾಲ್ಮಡಿ ಕುಲಶೇಖರ. 1441 (53 of 1901) ಮತ್ತು 1444 (23B of 1901)ರ ಈ ದೊರೆಯ ಎರಡು ಶಾಸನಗಳು ದೊರೆತಿದ್ದು, ಈತನ 1444ರ ಮಂಗಳೂರು ಶಾಸನದ ಪ್ರಕಾರ ಈತ ಶೈವನಾಗಿದ್ದನೆಂದು ಊಹಿಸಬಹುದು.

ಈ ದೊರೆಯ ಅನಂತರ ಆಳುಪರು ಒಂದು ರಾಜವಂಶವಾಗಿ ನಾಮಶೇಷರಾದರು. ತುಳು ನಾಡಿನಲ್ಲಿ ಆಗಲೇ ಪ್ರಬಲರಾಗಿದ್ದ ಬಂಗರು, ಚೌಟರು, ಶಾಂತರಸರು ಮತ್ತು ಉತ್ತರ ಕನ್ನಡ ಜಿಲ್ಲೆಯ ಹಾಡುವಳ್ಳಿ ಮತ್ತು ಗೆರಸೊಪ್ಪೆಯ ಸಾಳುವರು ಹಾಗೂ ಇತರ ತುಂಡರಸರು ಈ ಪ್ರಾಚೀನ ರಾಜವಂಶವನ್ನು ದುರ್ಬಲ ಗೊಳಿಸಿದರು.

ಶೈವರಾಗಿದ್ದ ಈ ದೊರೆಗಳು ಮೂಲತಃ ಉದ್ಯಾವರದ ಶಂಭು(ಚಮ್‌ಕಲ್)ವಿನ ಭಕ್ತರು. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಅನೇಕ ದೇವಾಲಯಗಳಿಗೆ ದತ್ತಿ ದಾನಗಳನ್ನು ನೀಡಿದ ಈ ವಂಶದ ದೊರೆಗಳನ್ನು ಉಲ್ಲೇಖಿಸುವ ಸುಮಾರು ನೂರು ಶಾಸನಗಳಾದರೂ ಇವೆ.

ಹಿರಿಯ ರಾಜಮನೆತನದವರಾದ ಕದಂಬರು, ಚಾಳುಕ್ಯರು, ಶಾಂತರರು, ಹೊಯ್ಸಳರು ಮತ್ತು ಪಾಂಡ್ಯರ ಜೊತೆ ರಕ್ತ ಸಂಬಂಧಹೊಂದಿದ್ದ ಆಳುಪರು ಸುಮಾರು ಒಂದೂವರೆ ಸಾವಿರ ವರುಷಗಳ ಕಾಲ ಒಂದೇ ಪ್ರದೇಶದಲ್ಲಿ ಸತತವಾಗಿ ರಾಜ್ಯವಾಳಿದರು. ಭಾರತದ ಇನ್ನಾವ ರಾಜಮನೆತನವೂ ಪ್ರಾಯಶಃ ಇಂಥ ದಾಖಲೆಯನ್ನು ಹೊಂದಿರಲಿಕ್ಕಿಲ್ಲ!

**ಸೇನವರರು**

ಸೇನವರರು, ಸೇನಾವರರು ಅಥವಾ ಸೇಣವಾರರೆಂದು ತಮ್ಮನ್ನು ಕರೆದುಕೊಂಡ ಈ ವಂಶದ ದೊರೆಗಳು ಇಂದಿನ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲೂಕು ಮತ್ತು ಶಿವಮೊಗ್ಗ ಜಿಲ್ಲೆಯ ಕೊಪ್ಪ ತಾಲೂಕಿನ ಪ್ರದೇಶಗಳಲ್ಲಿ ಕ್ರಿ.ಶ, ಏಳನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ನಡುವಣ ಅವಧಿಯಲ್ಲಿ ಆಳುತ್ತಿದ್ದರು. ' ವಿದ್ಯಾಧರ ಲೋಕರಾಜ 'ರೆಂದು ಖ್ಯಾತರಾದ ಇವರು ಶಿಲಾಹಾರ ವಂಶದ ಜೊತೆ ಸಂಬಂಧವುಳ್ಳವರಾಗಿರಬೇಕು. ಬಾಸವೂರ—140 ಎಂಬ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ 11ನೆಯ ಶತಮಾನದಲ್ಲಿ ಆಳುತ್ತಿದ್ದ, ಕಲ್ಯಾಣದ ಚಾಳುಕ್ಯರ ಸಾಮಂತರಾಗಿದ್ದ 'ಖಚರವಂಶ'ದ ' ಪನ್ನಗಧ್ವಜ 'ರಿಗೂ ಸೇನವರರಿಗೂ ಸಂಬಂಧವಿರಬೇಕೆಂದು ಡಾ॥ ಬಾರ್ನೆಟ್ ಅವರು ಊಹಿಸಿದ್ದಾರೆ. (ಕ್ರಿ.ಶ. 1045ರಲ್ಲಿ ಆಳುತ್ತಿದ್ದ ಕಲಿಯಮ್ಮರಸ, ಇತ್ಯಾದಿ : E.I., X1X. P. 180–190).

ಸೇನವರರನ್ನು ಕುರಿತು ಮೊದಲ ಉಲ್ಲೇಖ ಕ್ರಿ.ಶ. ಏಳನೆಯ ಶತಮಾನದ ಕೊನೆಯ ಭಾಗದಲ್ಲಿ ಆಳುಪದೊರೆ ಚಿತ್ರವಾಹನನ ಕಿಗ್ಗ ಶಾಸನದಲ್ಲಿ ಕಾಣಬರುತ್ತದೆ. ಆಗ ಆಳುತ್ತಿದ್ದ ಸೇನವರ ದೊರೆಯ ಹೆಸರನ್ನು ಹೇಳಿದ ಈ ಶಾಸನವನ್ನು ಓದಿದಾಗ, ಬಾದಾಮಿಯ ಚಾಳುಕ್ಯರ ಬೀಗರೂ ವಿಶ್ವಾಸಪಾತ್ರ ಸೇನಾನಿಗಳೂ ಆದ ಆಳುಪರ ಅಧೀನರಾಗಿ ಸೇನವರರು ಕೊಪ್ಪದ ಸುತ್ತಲ ಪ್ರದೇಶದಲ್ಲಿ ಆಳುತ್ತಿರಬೇಕೆಂದು ಕಂಡುಬರುತ್ತದೆ.

ಖಚರ ವಂಶಜರೂ ಸಿಂಹಲಾಂಛನರೂ ಸರ್ಪಧ್ವಜರೂ ಆದ ಈ ದೊರೆಗಳು ತಮ್ಮನ್ನು ' ಹೇಮಕೂಟ ಪುರಾಧಿನಾಥ 'ರೆಂದೂ ' ಕೂಡಲೂರಪುರವರೇಶ್ವರ 'ರೆಂದೂ ಕರೆದುಕೊಂಡಿದ್ದಾರೆ. ಈ ಹೆಸರಿನ ಅವರ ರಾಜಧಾನಿ (ಅಥವಾ ಮೂಲಸ್ಥಾನ) ಯಾವುದೆಂದು ಊಹಿಸುವುದು ಕಷ್ಟ. (ರಾಜಧಾನಿಯು ವಸ್ತಾರೆ ಹೋಬಳಿಯ ತೂದವಳ್ಳಿಯಾಗಿರಲೂಬಹುದು.)

ಶಾಸನಗಳಲ್ಲಿ ಮೊದಲ ಬಾರಿ ಹೆಸರಿಸಲ್ಪಟ್ಟ ಸೇನವರ ದೊರೆಯೆಂದರೆ 'ಪೃಥ್ವೀವಲ್ಲಭ ಸೇಣವಾರ'. ಈತ ಚಾಳುಕ್ಯ ವಿಜಯಾದಿತ್ಯ ಸತ್ಯಾಶ್ರಯನ ಮಾಂಡಲಿಕನಾಗಿದ್ದ (E.C., VII, S.K. 278). ತಾರೀಕಿಲ್ಲದ ಈತನ ಶಾಸನ ಸುಮಾರು ಕ್ರಿ.ಶ. 700ರದೆಂದು ರೈಸ್ ಅವರ ಅಭಿಪ್ರಾಯ. ರಾಷ್ಟ್ರಕೂಟರ ಕಾಲದ ಇವರ ಶಾಸನಗಳೇ ಇಲ್ಲ. ಅನಂತರ ಆಳಿದ ಒಬ್ಬ ಸೇನವರ ದೊರೆಯು ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಕಲ್ಯಾಣದ ಇಮ್ಮಡಿ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂದು ಶಾಸನಗಳಿಂದ ತಿಳಿಯುತ್ತದೆ. ಇವನು ಬನವಾಸಿ 1,200ನ್ನು ಆಳುತ್ತಿದ್ದನು (E.C., VIII, Sb. 381). ಈತನ ಹೆಸರು ಶಾಸನದಲ್ಲಿ ಅಳಿಸಿಹೋಗಿದೆ.

ಇದಾದನಂತರ ಕ್ರಿ.ಶ. 1020ರ ಸುಮಾರಿಗೆ ಜೀವಿತವಾರ (ಜೀವಿತೇಶ್ವರ)ನೆಂಬ ದೊರೆ ಆಳುತ್ತಿದ್ದನೆಂದೂ ಆತ ಜೀವಿತೇಶ್ವರ ದೇವಾಲಯವನ್ನು ಕಟ್ಟಿದ್ದನೆಂದೂ ಕೊನೆಗೆ ಅವನ ಶತ್ರುಗಳಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟನೆಂದೂ ಅವನ ಮೊಮ್ಮಗನಾದ ಮಾರಸಿಂಘದೇವನ ಒಂದು ಶಾಸನದಿಂದ ತಿಳಿಯುತ್ತದೆ. (E.C., VI, Cm. 91). ಜೀವಿತವಾರನ ಅನಂತರ ಆಳಿದ ಅವನ ಮಗನಾದ ಜೀಮೂತವಾಹನನು ಚಿತ್ತವಳ್ಳಿಯ ಮಾರ್ಕಂಡೇಶ್ವರ ದೇವಸ್ಥಾನವನ್ನು ಕಟ್ಟಿಸಿ, ಅದಕ್ಕೆ ಮೂರು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟನು (E.C. VI, c.m. 95).

ಆ ಮೇಲೆ ಆಳಿದ ಮಾರ ಅಥವಾ ಮಾರಸಿಂಘದೇವನೆಂಬ ದೊರೆ ಈ ವಂಶದಲ್ಲಿ ಅತ್ಯಂತ ಪ್ರಧಾನಿ ಯಾದ ವ್ಯಕ್ತಿ. ಈತನ ಐದು ಶಾಸನಗಳು ದೊರೆತಿವೆ. ವಿಳಂಬಿ ಸಂವತ್ಸರದ (ಕ್ರಿ.ಶ. 1058) ಇವನ ಶಾಸನವೊಂದು ಇವನನ್ನು ಮಾರಸಿಂಹ ಎಂದು ಕರೆದಿದೆ (E.C., Cm. 62). ಇನ್ನೊಂದು ಶಾಸನ ದಿಂದ ಈತನು ಚಿತ್ರವಳ್ಳಿ, ಮಳ್ತವೂರ, ಚಕ್ಕವಿಟ್ಟ ಮುಂತಾದ ಕಡೆಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದನೆಂದು ತಿಳಿಯುತ್ತದೆ (ಮೇಲಿನದೇ 61). ಮತ್ತೊಂದು ಶಾಸನದಲ್ಲಿ ಅವನು 'ಮಾನಾಡದೇಗುಲ' ವನ್ನು ಕಟ್ಟಿಸಿದನೆಂದೂ 'ಚಿಕ್ಕಜೀಯಂಗೆ ಮಟದಪಳ್ಳಿಯ' ಬಿಟ್ಟನೆಂದೂ ಹೇಳಿದೆ (ಮೇಲಿನದೇ 76). ಖಾಂಡ್ಯ ಹೋಬಳಿಯ ಕಡವಂತಿಯ ಶಾಸನದಲ್ಲಿ 'ಖಚರ ಕಂದರ್ಪ ಸೇನಮಾರ' ಎಂದು ಕರೆಯಲ್ಪಟ್ಟ ಈ ದೊರೆ ಜೈನದೇವಾಲಯವೊಂದಕ್ಕೆ ದಾನನೀಡಲು ಜೈನವ್ಯಕ್ತಿಯೊಬ್ಬನಿಗೆ ಭೂಮಿಯನ್ನು ಕೊಟ್ಟನೆಂದು ಹೇಳಿದೆ (ಮೇಲಿನದೇ. 75). ಇನ್ನೊಂದು ಶಾಸನದಂತೆ ಅವನು ತನ್ನ ಅಜ್ಜನಾದ ಜೀವಿತವಾರನನ್ನು ಕೊಂದ ಶತ್ರುಗಳನ್ನು ಸೋಲಿಸಿ, ಸೇಡು ತೀರಿಸಿದನೆಂದು ತಿಳಿಯುತ್ತದೆ (ಮೇಲಿನದೇ, 94). 'ಪದ್ಮಾವತೀ ಚರಣಸರೋಜಭೃಂಗ', 'ರಣರಂಗರಾಘವ', 'ಕಲಿಮುಟ್ಟಿಗಂಡ', 'ಬಿರುದರಂಕುಸ' ಮುಂತಾದ ಬಿರುದನ್ನು ಧರಿಸಿದ್ದ. ಇವನ ಅನಂತರ ಸೇನವರರು ಈ ಭಾಗದಲ್ಲಿ ಆಳಿದ್ದಂತೆ ಶಾಸನಗಳಿಲ್ಲ.

ಸೇನವರರು ಜೈನರಾಗಿದ್ದರೆಂದು ಕೆಲ ಲೇಖಕರ ಅಭಿಪ್ರಾಯ. ಆದರೆ ಈ ಹೇಳಿಕೆಗೆ ಆಧಾರ ಕಾಣಿಸದು. ಸೇನವರ ದೊರೆಗಳು ಕಟ್ಟಿಸಿದ ದೇವಾಲಯಗಳಲ್ಲಿ ಹೆಚ್ಚಿನವು ಶಿವಾಲಯಗಳೇ. ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನ ಸೇನೇಶ್ವರ ದೇವಾಲಯವನ್ನು ಈ ವಂಶದವರೇ ಕಟ್ಟಿಸಿರಬೇಕೆಂದು ಡಾ॥ ಪಿ. ಗುರುರಾಜ ಭಟ್ಟರ ಅಭಿಪ್ರಾಯ.

ಲೇಖಕರು : ಡಾ॥ ಸೂರ್ಯನಾಥ ಕಾಮತ್

## ಮಹಾಮಂಡಲೇಶ್ವರರು

ಆಧುನಿಕ ಕಾಲದ ಕಲ್ಪನೆಗನುಗುಣವಾದ ರಾಷ್ಟ್ರೀಯ ಭಾವವು ಮಧ್ಯಯುಗದಲ್ಲಿ ಇರದ್ದರಿಂದ ಆಗ ಮಹಾಮಂಡಲೇಶ್ವರರ ವ್ಯವಸ್ಥೆಯು ತುಂಬಾ ಮಹತ್ವದ್ದಾಗಿತ್ತು. ತಮ್ಮ ರಾಷ್ಟ್ರೀಯತೆಯ ವಿಚಾರವನ್ನು ಅಷ್ಟೊಂದು ಗಮನಿಸದ ಆ ಕಾಲದ ಜನ ತಮಗೆ ನಿಕಟವಾಗಿರುವ ವರಿಷ್ಠ ದೊರೆಗೆ ನಿಷ್ಠೆಯನ್ನು ಪ್ರದರ್ಶಿಸುತ್ತಿದ್ದರು. ಈ ಸಾಮಂತ ದೊರೆಗಳು ತಮ್ಮ ಕ್ಷೇತ್ರಗಳ ಸ್ಥಾನೀಯ ಸಂಸ್ಕೃತಿಯನ್ನು ಕಾಪಾಡಿ, ಒಂದು ರೀತಿಯಿಂದ ಸಾಮ್ರಾಟರುಗಳ ರಾಜ್ಯಶಕ್ತಿಗೆ ಸ್ಥಿರತೆಯನ್ನು ನೀಡುತ್ತಿದ್ದರು. ಅವರು ತಮ್ಮ ದೇಶದ ಕಲೆ, ಸಾಹಿತ್ಯಗಳನ್ನು ಘೋಷಿಸಿದರು. ಕನ್ನಡ ಸಾಹಿತ್ಯ ಮತ್ತು ವಾಸ್ತುಶಿಲ್ಪದಲ್ಲಿನ ಕೆಲವು ಶ್ರೇಷ್ಠ ಸಾಧನೆಗಳು ಇಂಥ ಕೆಲವು ಮಾಂಡಲಿಕರ ಕೈಕೆಳಗೆ ಪೂರ್ಣವಾದವು; ಅವರುಗಳು ಸೇನಾಶಕ್ತಿಯ ಭಂಡಾರಗಳಂತೆ ಇದ್ದರು ; ಅವರ ಕೈಕೆಳಗಿದ್ದ ಸೇನಾನಿಗಳ ಮತ್ತು ದಂಡನಾಯಕರ ಸರಣಿ ಪ್ರಭಾವಶಾಲಿ ಯಾದುದು. ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಯೋಗ್ಯ ನಾಯಕತ್ವವು ಇಂಥ ಮಾಂಡಲಿಕರ ಪ್ರಾಂತೀಯ ಕೇಂದ್ರಗಳಾದ ಪಟ್ಟಣಗಳಲ್ಲಿ ವಿಕಸಿತವಾಗುತ್ತಲಿತ್ತು. ವಿದ್ಯೆ, ಧರ್ಮ, ನೀತಿ, ವಾಣಿಜ್ಯ, ಆಡಳಿತ, ಯುದ್ಧಶಾಸ್ತ್ರ, ಸಂಗೀತ, ನೃತ್ಯ ಮುಂತಾದ ಲಲಿತ ಕಲೆಗಳು ಈ ರೀತಿ ವಿಕಾಸಕ್ಕೊಳಪಟ್ಟ ಕ್ಷೇತ್ರಗಳು. ಜೀವನವನ್ನು ಅವರುಗಳು ದೂರದೃಷ್ಟಿ, ಧೈರ್ಯ ಮತ್ತು ಶ್ರದ್ಧೆಯಿಂದ ನಡೆಸುತ್ತಿದ್ದರು ; ಆಗಾಗ ನಡೆಯುತ್ತಿದ್ದ ಯುದ್ಧಗಳು ಮತ್ತು ಸ್ಪರ್ಧೆಗಳಿಂದಾಗಿ ಜೀವನವು ಚೈತನ್ಯಯುಕ್ತವಾಗಿತ್ತು. ದೇವಗಿರಿಯ ಯಾದವರು ಈ ಮಾಂಡಲಿಕ ವ್ಯವಸ್ಥೆಯನ್ನು ಕೊನೆಗೊಳಿಸಿದರು. ಮಾಂಡಲಿಕ ದೊರೆಗಳ ಬದಲಿಗೆ ಅವರು ಪ್ರಾಂತೀಯ ಅಧಿಕಾರಿಗಳನ್ನು ನೇಮಿಸಿದರು. ಇದರ ಫಲಿತಾಂಶವೆಂದರೆ ಯಾದವರ ಸಾಮ್ರಾಜ್ಯವು ಉತ್ತರದ ಮುಸ್ಲಿಂ ರಾಜರ ಒತ್ತಡದಿಂದಾಗಿ ಕುಸಿದಾಗ, ಯಾದವರ ರಾಜ್ಯದುದ್ದಕ್ಕೂ ಆಕ್ರಮಣಕಾರಿ ಗಳನ್ನು ಎದುರಿಸುವವರು ಯಾರೂ ಉಳಿಯಲಿಲ್ಲ. ಮುಸಲ್ಮಾನರು ಒಂದೇ ಏಟಿಗೆ ಎಂಬಂತೆ, ದಖ್ಖಣದ ಸ್ವಾಮಿಗಳಾದರು. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ - ಈ ರೀತಿ ಎಲ್ಲ ದೆಸೆಗಳಲ್ಲೂ ಒಂದು ಸಾವಿರ ವರ್ಷಗಳಿಗೂ ದೀರ್ಘಕಾಲ ಭಾರಿ ಪ್ರಭಾವ ಬೀರಿದ್ದ ಕನ್ನಡನಾಡು ರಾಜಕೀಯ ದೃಷ್ಟಿಯಿಂದ ಅಸ್ತಿತ್ವ ಕಳೆದುಕೊಂಡಿತು. ತುಂಗಭದ್ರೆಯ ಉತ್ತರಕ್ಕಿರುವ ಪ್ರದೇಶವು ಬಹಮನಿಗಳ ಮತ್ತು ಅನಂತರದ ಮುಸ್ಲಿಂ ಮನೆತನಗಳ ಆಡಳಿತಕ್ಕೆ ಒಳಗಾದ ಕಾಲದಲ್ಲಂತೂ ಈ ಮಾತು ತೀರ ಸತ್ಯ. ಘನವಂತಿಕೆಯ ಮಹಾಮಂಡಲೇಶ್ವರರನ್ನು ಯಾದವರು ಉಳಿಸಿಕೊಂಡಿದ್ದರೆ ದೇಶದ ರಾಜಕೀಯ ಸ್ವಾತಂತ್ರ್ಯವು ಅಷ್ಟೊಂದು ಸುಲಭವಾಗಿ ನಷ್ಟವಾಗುತ್ತಿರಲಿಲ್ಲ. ಮುಸ್ಲಿಂ ಶಕ್ತಿಗಳು ಪ್ರತಿಯೊಂದು ತುಣುಕು ನೆಲಕ್ಕಾಗಿಯೂ ಈ ಬಲಶಾಲಿಗಳಾದ ಮಹಾಮಂಡಲೇಶ್ವರರುಗಳ ವಿರುದ್ಧ ಸೆಣಸಬೇಕಾಗಿ ಬರುತ್ತಿತ್ತು. ನಮ್ಮ ಕಲೆ ಮತ್ತು ಸಾಹಿತ್ಯಗಳು, ಶತಮಾನಗಳು ಉರುಳಿದಂತೆ ರಾಜಾಶ್ರಯವಿಲ್ಲದೆ ಹೆಚ್ಚು ಹೆಚ್ಚು ಬಡವಾಗಿ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಪುನರುಜ್ಜೀವನ ಹೊಂದುವ ವರೆಗೆ ತೀರ ಸತ್ವಹೀನವಾಗಿರುತ್ತಿರಲಿಲ್ಲ.

ಮೂಲ ಲೇಖಕರು : ಶ್ರೀ ಆರ್. ಎನ್. ಗುರವ್
ಅನುವಾದಕರು : ಡಾ।। ಸೂರ್ಯನಾಥ ಕಾಮತ್

# ಧರ್ಮ ಸಮಾಜ ಮತ್ತು ಸಂಸ್ಕೃತಿ

# ಧರ್ಮ ಮತ್ತು ತತ್ತ್ವಜ್ಞಾನ

## ಕಲ್ಯಾಣದ ಚಾಲುಕ್ಯರ ಕಾಲ

ಹನ್ನೊಂದು ಹನ್ನೆರಡನೆಯ ಶತಮಾನಗಳು ಕರ್ಣಾಟಕದಲ್ಲಿ ಮತಧರ್ಮ ವಿಷಯವಾಗಿ ವಿಶೇಷ ವಿಚಾರಮಂಥನ ನಡೆದ ಕಾಲ. ಆಗ ದೇಶದಲ್ಲಿ ಪಾಶುಪತ ಶೈವಮತದ ಕಾಳಾಮುಖ ಪಂಥವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಕಾಳಾಮುಖ ಪಾಶುಪತ ಮತ ಸ್ಥಾಪಕನಾದ ಲಕುಲೀಶನ ಬಗ್ಗೆ ಕನ್ನಡ ಶಾಸನಗಳಲ್ಲಿ ಆಗಾಗ ಉಲ್ಲೇಖಗಳು ದೊರೆಯುತ್ತವೆ. ಅವನ ಅನಂತರ ಆ ಪಂಥದಲ್ಲಿ ಪ್ರಖ್ಯಾತರಾದ ಗುರುಗಳ ಒಂದು ಪರಂಪರೆ ಕಂಡುಬರುತ್ತದೆ. ಲಕುಲೀಶನು ಕ್ರಿಸ್ತಶಕದ ಆದಿಶತಮಾನಗಳಿಗೆ ಸೇರಿದವನೆಂದು ಹೇಳುತ್ತಾರೆ. ಪಾಶುಪತ ಮತವು ಶುಭಕರ, ಲಯಕರ ಎಂಬೆರಡು ಬಗೆಯಲ್ಲಿಯೂ ರೂಪುಗೊಳ್ಳುವ, ಶಿವ ಅಥವಾ ಪರಮಶಿವನೇ ಸರ್ವೋತ್ಕೃಷ್ಟ ಆರಾಧ್ಯದೈವವೆಂದು ಅಂಗೀಕರಿಸಿರುವ ಅದ್ವೈತ ಮತ. ಶಿವನು ಪಶುಪತಿ—ಪಶುಗಳಿಗೆ (ಎಂದರೆ ರಾಗದ್ವೇಷಾದಿ ಪಶುಪ್ರವೃತ್ತಿಗಳಿಗೆ) ಒಡೆಯ ; ಮಾನವನೇ ಪಶು. ಈ ಪಶುವನ್ನು ಪಾಶ (ಹಗ್ಗ)ದಿಂದ ಕಟ್ಟಿ ಅಂಕೆಯಲ್ಲಿಡಬೇಕಾಗಿದೆ. ಪರಮಶಿವನು ಪರಸ್ವರೂಪದಲ್ಲಿ ಸರ್ವಾತೀತನು ; ಪರಮಶಿವನ ಅರ್ಧಾಂಗಿ ಶಕ್ತಿ ; ಈ ಶಕ್ತಿ ಅವನ ಸರ್ವಾಂತರ್ಯಾಮಿ ಸ್ವರೂಪ. ಈ ಮತವು ಸರ್ವಾಂಗಯುಕ್ತವಾದ ಪರಿಪೂರ್ಣ ನೀತಿಪದ್ಧತಿ, ತತ್ವದರ್ಶನ, ಮತ್ತು ಆಚಾರ ಪೂಜಾ ವಿಧಾನಗಳನ್ನು ಸಿದ್ಧಗೊಳಿಸಿತು. ತನ್ನ ಅನುಯಾಯಿಗಳಲ್ಲಿ ಅದು ಕಠೋರ ವೈರಾಗ್ಯಮಾರ್ಗಾನುಸರಣೆಯನ್ನು ಪ್ರಚೋದಿಸಿತು.

ಶೈವಮತವು ಅನೇಕ ಅನುಯಾಯಿಗಳನ್ನು ಆಕರ್ಷಿಸಿಕೊಂಡಿತು. ಸಾಧಾರಣ ಜನ ಮಾತ್ರವೇ ಅಲ್ಲ. ರಾಜ ಮನೆತನಗಳವರೂ ಬಹು ಮಂದಿ ಆ ಮತವನ್ನವಲಂಬಿಸಿದರು. ಎರಡನೆಯ ಜಯಸಿಂಹನ ರಾಣಿ ಸುಗ್ಗಲಾದೇವಿಯು ತನ್ನ ಗಂಡನು ಜೈನಮತವನ್ನು ಬಿಟ್ಟು ಶೈವಮತವನ್ನು ಅವಲಂಬಿಸುವಂತೆ ಪರಿವರ್ತನೆಗೊಳಿಸಿದ್ದನ್ನು ಇದಕ್ಕೆ ನಿದರ್ಶನವಾಗಿ ಹೇಳಬಹುದು. ಶೈವಗುರುಗಳು ಘನವಿದ್ವಾಂಸರು ಮಾತ್ರವೇ ಅಲ್ಲ, ಮಹಾತಪಸ್ವಿಗಳೂ ಕಟ್ಟುನಿಟ್ಟಿನ **ಆತ್ಮಮಾರ್ಗ** ನಿಷ್ಠರೂ ಆಗಿದ್ದರು. ಅದರಿಂದ, ಅವರನ್ನು ಎಲ್ಲರೂ, ಶೈವಮತಾವಲಂಬಿಗಳು ಮಾತ್ರವೇ ಅಲ್ಲದೆ, ಇತರ ಮತಾನುಯಾಯಿಗಳು ಕೂಡ ಬಹು ಭಕ್ತಿಯಿಂದ ಕಂಡು ಗೌರವಿಸುತ್ತಿದ್ದರು. ಭಾರತದೇಶದಲ್ಲಿ ಹುಟ್ಟಿ ಬೆಳೆದ ಜೈನ, ಬೌದ್ಧ, ಶೈವ, ವೈಷ್ಣವ ಮೊದಲಾದ ಎಲ್ಲಾ ಮತಪಂಥಗಳ ಸಾಧಕರೂ ತಪಸ್ಸು, ಧ್ಯಾನ ಮತ್ತು ಸ್ವಾಧ್ಯಾಯ (ಮತ ಗ್ರಂಥಗಳ ಅಧ್ಯಯನ)ಗಳನ್ನು ಬಹು ಶ್ರೇಷ್ಠ ಲಕ್ಷಣಗಳೆಂದು ಭಾವಿಸಿದುದೇ ಇದಕ್ಕೆ ಕಾರಣ. ವಿಶಾಲ ಭಾವನೆಯಿಂದ ಕೂಡಿದ ಪರಧರ್ಮಸಹಿಷ್ಣುತ್ವ ಮತ್ತು ಪರಸ್ಪರ ಗೌರವಭಾವಗಳು ಆ ಕಾಲದ ಮುಖ್ಯ ಲಕ್ಷಣವಾಗಿರುವುದೂ ಇದರಿಂದಲೇ. ಅಂದಿನ ಶಾಸನಗಳಲ್ಲಿ ಇದು ಪ್ರಚುರವಾಗಿ ಪ್ರಕಟವಾಗಿದೆ.

ದಕ್ಷಿಣ ಕರ್ಣಾಟಕಕ್ಕೆ ಶ್ರೀ ರಾಮಾನುಜಾಚಾರ್ಯರು ಆಗಮಿಸಿದ್ದೂ ಬಿಟ್ಟಿದೇವನು ಮತಪರಿವರ್ತನೆ ಮಾಡಿಕೊಂಡು ವೈಷ್ಣವಮತವನ್ನಂಗೀಕರಿಸಿದ್ದೂ ಅನೇಕ ವೈಷ್ಣವದೇವಾಲಯಗಳ ನಿರ್ಮಾಣಕ್ಕೆ ಉತ್ತೇಜನ

ನೀಡಿದವು. ಈ ದೇವಾಲಯಗಳು ವಾಸ್ತುಶಿಲ್ಪದ ರತ್ನಗಳು ; ಅಷ್ಟೇ ಅಲ್ಲ, ಅವು ಸಮಾಜ ಜೀವನದ ಕೇಂದ್ರಸ್ಥಾನಗಳಾದವು. ಅಲ್ಲಿ ಎಲ್ಲಾ ಜಾತಿಯ, ಎಲ್ಲಾ ಬಗೆಯ ಜನರೂ ಬಂದು ಸೇರುತ್ತಿದ್ದರು ; ಎಲ್ಲರೂ ಪೂಜೋತ್ಸವಾದಿಗಳಲ್ಲಿ ಭಾಗಿಗಳಾಗುತ್ತಿದ್ದರು. ಈ ಪೂಜೋತ್ಸವಗಳಲ್ಲಿ ಸಂಗೀತ ನೃತ್ಯಗಳೂ ಅಡಕವಾಗಿದ್ದವು. ಭಗವಂತನು ಮೂರ್ತಸ್ವರೂಪನೆಂಬ ಕಲ್ಪನೆಯ ಸುತ್ತ ಈ ಕಲಾಭಿವ್ಯಕ್ತಿಗಳೆಲ್ಲ ಹೆಣೆದುಕೊಂಡಿವೆ. ಕಲೆಗಾರನು ಭಗವದ್ಭಕ್ತನಾಗಿ, ಭಗವಂತನ ಅನಂತಮಹಿಮೆ ಮತ್ತು ಅಪಾರ ಸೌಂದರ್ಯಗಳ ಪರಿಪರಿಯ ಆವಿರ್ಭಾವಗಳನ್ನು ತನ್ನ ಕಲೆಯಲ್ಲಿ ವ್ಯಕ್ತಪಡಿಸಿದ್ದುಂಟು. ವೈಷ್ಣವ ಮತವು ತನ್ನ ಪೂಜೋತ್ಸವಗಳಲ್ಲಿಯೂ ಆಚಾರ ಪೂಜಾತಂತ್ರಗಳಲ್ಲಿಯೂ ತನ್ನ ಅನುಯಾಯಿಗಳ ಭಾವನೆಗಳನ್ನು ಉಕ್ಕಿಹರಿಸಿ ಅವನ್ನು ಶುದ್ಧೀಕರಿಸಿತು. ಭಗವತ್ಸೃಷ್ಟಿಯಲ್ಲಿ ಸತ್ಯ ಯಾವುದೋ ಒಳ್ಳೆಯದು ಯಾವುದೋ ಸುಂದರವಾದದ್ದು ಯಾವುದೋ (ಸತ್ಯಂ, ಶಿವಂ, ಸುಂದರಂ) ಅದನ್ನು ಸಾಧಕರ ಅನುಭವಕ್ಕೆ ವೇದ್ಯವಾಗುವಂತೆ ಮಾಡಿತು. ಈ ವಿಧಾನವು ಸಮಾಜಜೀವನವನ್ನು ಸಮೃದ್ಧವಾಗಿ ಮಾಡುವುದಕ್ಕೆ ಸಹಕಾರಿಯಾಗಿ, ಜೈನ ಮತ್ತು ಶೈವಗುರುಗಳು ಅನುಸರಿಸಿದ ಮಾರ್ಗಕ್ಕೆ ಪೂರ್ಣ ವಿರುದ್ಧವೆಂದು ಹೇಳಲಾಗದಿದ್ದರೂ ಸ್ವಲ್ಪಮಟ್ಟಿಗೆ ಭಿನ್ನವಾದ ಪರಿಣಾಮವನ್ನು ಜನಮನದಲ್ಲಿ ಉಂಟುಮಾಡಿತು.

ವೀರಶೈವಮತ ತಲೆಯೆತ್ತಿ ಅಭಿವೃದ್ಧಿಗೊಂಡದ್ದು 12ನೆಯ ಶತಮಾನದ ಮತ್ತೊಂದು ಮುಖ್ಯ ಸಂಗತಿ. ಪಾಶುಪತಮತಪ್ರಚಾರ ಮತ್ತು ಕಾಳಾಮುಖರ ವಿದ್ಯಾಪ್ರಚಾರದ ಚಟುವಟಿಕೆಗಳು ಈ ವೀರಶೈವಮತದ ಉದಯಕ್ಕೆ ತಕ್ಕ ಭೂಮಿಕೆಯನ್ನು ಸಿದ್ಧಪಡಿಸಿದವೆಂದು ಹೇಳಬಹುದು. ಆ ಕಾಲದ ಶಿಲಾಶಾಸನಗಳಲ್ಲಿ ಕಾಳಾಮುಖ ಗುರುಗಳ ಬಗೆಗೆ ಅನೇಕ ಸಂಗತಿಗಳು ತಿಳಿಯಬರುತ್ತವೆ. ವೈಷ್ಣವಮತದ ಪ್ರಭಾವ ವಿಶೇಷವಾಗಿ ಹರಡಿದ್ದ ಹೊಯ್ಸಳ ರಾಜಧಾನಿ ಹಳೇಬೀಡಿನಲ್ಲಿ ಕ್ರಿ.ಶ. 1136ರಲ್ಲಿದ್ದ ಕಾಳಾಮುಖ ಪಂಥದ ಒಬ್ಬ ಗುರುಗಳ ವಿಷಯ ನಮಗೆ ತಿಳಿಯಬರುತ್ತದೆ. ಆ ಕಾಲದಲ್ಲಿ ಮತಗುರುಗಳು ರಾಜಕೀಯ ಗಡಿಗಳ ಇತಿಮಿತಿಗಳನ್ನು ಅತಿಕ್ರಮಿಸಿ, ದೇಶದ ಎಲ್ಲಾ ಕಡೆಗೂ ಹೋಗಿಬರುತ್ತಿದ್ದರು; ಅವರ ಉಪದೇಶಗಳು ದೇಶಾದ್ಯಂತದಲ್ಲೆಲ್ಲಾ ಪ್ರಚಾರವಾಗುತ್ತಿತ್ತು. ರಾಜರೂ ರಾಜ್ಯದ ಪ್ರತಿಷ್ಠಿತ ಮನ್ನೆಯರೂ ತಮ್ಮ ಸ್ವಂತ ರಾಜಕೀಯ ಎಲ್ಲೆಗಳ ಹೊರಗಡೆ ಇರುವ ದೇವಾಲಯಗಳಿಗೂ—ತಮ್ಮ ಸ್ವಂತ ಮತಕ್ಕಿಂತ ಭಿನ್ನವಾದ ಬೇರೆ ಮತದ ದೇವಾಲಯಗಳಿಗೆ ಕೂಡ—ದತ್ತಿ ಬಿಡುವುದು ಪುಣ್ಯಕಾರ್ಯವೆಂದು ಭಾವಿಸಿದ್ದರು. ಶ್ರವಣಬೆಳಗೊಳ, ಬಳ್ಳಿಗಾಮೆ ಮತ್ತು ಇತರ ಸ್ಥಳಗಳಲ್ಲಿ ಅಂಥ ದತ್ತಿಗಳ ಅಸಂಖ್ಯಾತ ಶಾಸನಗಳು ನಮಗೆ ದೊರೆತಿವೆ.

ಬಸವಣ್ಣನವರ ಭಗವದರ್ಪಿತ ಜೀವನ ಮತ್ತು ನಿರ್ಭರಭಗವದ್ಭಕ್ತಿಗಳು ಎಲ್ಲ ಪಂಗಡಗಳ ಜನರನ್ನೂ ವೀರಶೈವಮತದ ಕಡೆಗೆ ಆಕರ್ಷಿಸಿದವು ; ಶಿವಭಕ್ತಿಯ ಪುನರುತ್ಥಾನಕ್ಕೆ ಕಾರಣವಾದವು. ಶಿವನ ಚಿಹ್ನೆಯಾದ ಲಿಂಗವನ್ನು ದೇಹದ ಮೇಲೆ ಧರಿಸುವುದು, ಪ್ರತಿನಿತ್ಯವೂ (ಗಂಟೆಗಂಟೆಗೆ ಕೂಡ, ಎಂದರೂ ಸಲ್ಲುತ್ತದೆ) ಲಿಂಗವನ್ನು ಪೂಜಿಸಿ ಧ್ಯಾನಮಾಡುವುದು ; ಈ ಬಗೆಯ ಸರ್ವರೂ ಅನುಸರಿಸಬಹುದಾದ ಸುಲಭವಾದ ಪೂಜಾವಿಧಾನವನ್ನು ವೀರಶೈವಮತವು ಬಳಕೆಗೆ ತಂದಿತು. ಧರ್ಮಪುನರುತ್ಥಾನರೂಪವಾದ ಈ ವೀರಶೈವಮತವು ಜಾತಿಪಂಗಡಗಳನ್ನು ಗಮನಿಸದೆ, ಗಂಡು ಹೆಣ್ಣೆಂಬುದನ್ನು ಲಕ್ಷಿಸದೆ, ಎಲ್ಲರನ್ನೂ ತನ್ನ ಆವರಣದಲ್ಲಿ ಒಳಗೊಂಡಿತು ; ಹೀಗೆ ಜಾತ್ಯತೀತ ಸಮಾಜ ನಿರ್ಮಾಣದ ಗುರಿಯಿಟ್ಟುಕೊಂಡಿತು. ಇದು ಅದ್ಭುತವಾದ ಸಾಮಾಜಿಕ ಪರಿಣಾಮಗಳನ್ನುಂಟುಮಾಡಿತು. ಸಮಾಜದಲ್ಲಿ ಅದುವರೆಗೂ ಅಂತರ್ಗತವಾಗಿ ಅಡಗಿದ್ದ ಸುಪ್ತ ಚೈತನ್ಯಗಳನ್ನು ಈ ಮತವು ಹೊಸತಾಗಿ ಹೊರಹೊಮ್ಮಿಸಿತು. ಬಹುಬೇಗ ಅದೊಂದು ಸಾಮಾಜಿಕ ಆಂದೋಳನವಾಗಿಯೂ ಪರಿಣಮಿಸಿತು. ಈ ಆಂದೋಳನ ಜನ ಮಾತಾಡುವ ಬಳಕೆಯ ಕನ್ನಡವನ್ನೇ ತನ್ನ ವ್ಯವಹಾರಕ್ಕೂ ತತ್ತ್ವಪ್ರಚಾರಕ್ಕೂ ಬಳಸತೊಡಗಿತು. ಇದರ ಫಲವಾಗಿ ಬಹು ಸರಳವಾದ, ಆದರೆ ಸತ್ತ್ವಯುತವಾದ ಒಂದು ಸಾಹಿತ್ಯ ಪ್ರಕಾರ, ವಚನಸಾಹಿತ್ಯ ರೂಪುಗೊಂಡಿತು.

ನೇರವಾದ ವಿಷಯ ಪ್ರತಿಪಾದನೆ, ಮಾತಿನಲ್ಲಿ ಮಿತಿ, ಸರಳತೆ, ಯಾವ ರೀತಿಯ ಛಂದಸ್ಸಿನ ಕಟ್ಟಿಗೂ ಸಿಕ್ಕದ ಒಂದು ಬಗೆಯ ಲಯಬದ್ಧವಾದ ನುಡಿಗಳ ನಡೆ—ಈ ಲಕ್ಷಣಗಳಿಂದ ಕೂಡಿ, ಸೂತ್ರಪ್ರಾಯದಂತಿರುವವು ಈ ವಚನಗಳು. ಅನೇಕಾನೇಕ ಶರಣರು—ವೀರಶೈವ ಮತೋಪದೇಶಕರು—ನಾಡಿನಲ್ಲೆಲ್ಲಾ ಸಂಚರಿಸಿ ವಚನಗಳನ್ನು ಹಾಡಿ ಪ್ರಚಾರಮಾಡುತ್ತ ಜನಸಂಪರ್ಕವನ್ನು ಕಲ್ಪಿಸಿದರು. ಹೊಸ ಆಂದೋಳನದ ಸಂದೇಶಗಳನ್ನು ಜನಕ್ಕೆ ತಿಳಿಸಿ, ಧರ್ಮಸಮ್ಮತವಾಗಿಯೂ ಪರಿಶುದ್ಧವಾಗಿಯೂ ಬಾಳಬೇಕೆಂದು ಉಪದೇಶಿಸತೊಡಗಿದರು.

ಈ ಬಗೆಯ ವಿಚಾರಮಂಥನ ಮತ್ತು ಬೇರೆಬೇರೆ ಮತಗಳ ಉದಯ, ಅಭಿವೃದ್ಧಿ ಮತ್ತು ಪ್ರಚಾರಗಳು ನಡೆಯುತ್ತಿದ್ದರೂ ಅವೆಲ್ಲವುಗಳ ನಡುವೆ ಪರಸ್ಪರ ಕಲಹವಾಗಲಿ, ಮತಾಂಧತೆಯಾಗಲಿ ಅಥವಾ ಮತದ ಕಾರಣದಿಂದಾದ ಪೀಡನೆಯಾಗಲಿ ಒಂದೂ ಕಾಣದಿರುವುದು—ಇಂಥ ಒಂದೇ ಒಂದು ನಿದರ್ಶನವೂ ಇಲ್ಲದಿರುವುದು—ಗಮನಾರ್ಹವಾಗಿದೆ ; ಅತ್ಯಂತ ಶ್ಲಾಘ್ಯವಾಗಿದೆ. ರಾಜರುಗಳಲ್ಲಿ ಅನೇಕರು ಶೈವಮತಾವಲಂಬಿಗಳಾಗಿದ್ದರು. ಆದರೂ ಅವರು ಜೈನಧರ್ಮಕ್ಕೆ ಹೃತ್ಪೂರ್ವಕವಾಗಿ ಆಶ್ರಯ ನೀಡಿದರು. ಆಗ ಬೌದ್ಧಧರ್ಮದ ಪ್ರಭಾವ ಶೀಘ್ರಗತಿಯಿಂದ ಕ್ಷೀಣವಾಗುತ್ತಿದ್ದಿತಾದರೂ ಅವರು ಆ ಮತದ ಬಗ್ಗೆ ಸಹಿಷ್ಣುಗಳಾಗಿದ್ದದ್ದು ಮಾತ್ರವೇ ಅಲ್ಲದೆ, ಅದಕ್ಕೆ ಸಹಾಯವನ್ನೂ ನೀಡುತ್ತಿದ್ದರು. ವೈದಿಕ ಮತಕ್ಕೂ ಬೇರೆಬೇರೆ ವೇದಾಂತದರ್ಶನಗಳಿಗೂ ನಿಷ್ಪಕ್ಷಪಾತವಾಗಿ ಉತ್ತೇಜನ ಕೊಡುತ್ತಿದ್ದರು.

ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಶೈವಮತ ಬಹಳ ಉಚ್ಛ್ರಾಯಸ್ಥಿತಿಗೆ ಬಂತು. ನಾಲ್ಮಡಿ ವಿಕ್ರಮಾದಿತ್ಯನು ತನ್ನ ಜೀವನದ ಆದಿಭಾಗದಲ್ಲಿ ಜೈನಮತಕ್ಕೆ ಹೆಚ್ಚು ಅನುಕೂಲನಾಗಿದ್ದನೆಂದು ತೋರುತ್ತದೆ. ಆದರೆ, ಮುಂದೆ ಶೈವಮತದ ನಿಷ್ಠಾವಂತ ಭಕ್ತನಾದನು. ಒಟ್ಟಿನಲ್ಲಿ ರಾಜರಾಗಲಿ ಪ್ರಜೆಗಳಾಗಲಿ ಮತಸಂಬಂಧವಾದ ಕಾರಣದಿಂದ ಯಾರನ್ನೇ ಆದರೂ ಪೀಡನೆಗೆ ಒಳಪಡಿಸಿದ ಸಂದರ್ಭ ಕಾಣಬರುವುದೇ ಇಲ್ಲವೆಂದು ಹೇಳಬಹುದು.

ಚಾಲುಕ್ಯವಂಶದ ಜಯಸಿಂಹರಾಜನ ಆಸ್ಥಾನವು ವಿದ್ಯಾದೇವತೆ ಸರಸ್ವತಿಯ ಜನ್ಮಭೂಮಿಯೆಂದು ಪ್ರಖ್ಯಾತವಾಗಿತ್ತು. ವಾದೀಭಸಿಂಹ ಮತ್ತು ವಾದಿರಾಜರಂಥ ಜೈನ ಗುರುಗಳು, ನಾಗವರ್ಮ ಮೊದಲಾದ ವೇದಾಂತಿಗಳು, ದೇವರ ದಾಸಿಮಯ್ಯ, ಶಂಕರದಾಸಿಮಯ್ಯ ಮತ್ತು ಲಕುಲೀಶ್ವರ ಮೊದಲಾದ ಶೈವರು, ಮತ್ತು ಅವರ ಗ್ರಂಥಗಳು—ಇವೆಲ್ಲಾ ಆ ಕಾಲದ ನಾನಾ ಬಗೆಯ ಸಮೃದ್ಧ ಧಾರ್ಮಿಕ ಜೀವನಕ್ಕೂ ದಾರ್ಶನಿಕ ಸಾಹಿತ್ಯದ ಬೆಳವಣಿಗೆಗೂ ಸಾಕ್ಷಿಗಳಾಗಿವೆ.

**ಮಿತಾಕ್ಷರ**ವನ್ನು ರಚಿಸಿದ ವಿಜ್ಞಾನೇಶ್ವರನು ನಾಲ್ಮಡಿ ವಿಕ್ರಮಾದಿತ್ಯನ ಆಳಿಕೆಯಲ್ಲಿ ಬಾಳಿದನು. **ಯಾಜ್ಞವಲ್ಕ್ಯ ಸ್ಮೃತಿ**ಯ ಆಧಾರದ ಮೇಲೆ ರಚಿತವಾದ ಅವನ ಗ್ರಂಥ ನ್ಯಾಯಶಾಸ್ತ್ರ ವಿಷಯದಲ್ಲಿ ಬಹು ಮುಖ್ಯವಾಗಿದೆ. ಆ ಕಾಲದ ನ್ಯಾಯಶಾಸ್ತ್ರಕಾರರು ತಾವು ವಿಧಿಸಿದ ನ್ಯಾಯವಿಧಿ (ಕಾನೂನು)ಗಳಿಗೆ ನೀತಿಧರ್ಮಗಳನ್ನು ಆಧಾರವಾಗಿಟ್ಟುಕೊಂಡರೇ ಹೊರತು ಮತವಿಷಯಗಳನ್ನಲ್ಲ. ನೀತಿ, ಮತ, ಮತ್ತು ತತ್ತ್ವಜ್ಞಾನಗಳು ಪೂರ್ಣ ಪ್ರಾಬಲ್ಯದಿಂದಲೂ ಪೂರ್ಣಸ್ವಾತಂತ್ರ್ಯದಿಂದಲೂ ಬೆಳೆದು ಬಂದವೆಂಬುದಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ.

ಈ ಕಾಲದಲ್ಲಿ ನಮಗೆ ಗೋಚರಿಸುವುದು ಅನ್ಯಮತ ಸಹಿಷ್ಣುತೆ ಮಾತ್ರವಲ್ಲ ; ಒಬ್ಬನೇ ಒಬ್ಬವ್ಯಕ್ತಿ ಹಲವು ಮತಗಳಲ್ಲಿ ಏಕರೀತಿಯಾಗಿ ಶ್ರದ್ಧೆಯಿಟ್ಟುಕೊಂಡಿದ್ದ ಸಂದರ್ಭಗಳೂ ಕಾಣಬರುತ್ತವೆ. ಜಯಸಿಂಹನ ಕ್ರಿ.ಶ. 1022ನೆಯ ವರ್ಷದ ಬೇಲೂರು ಶಾಸನವು ಅತ್ಯಂತ ಸ್ವಾರಸ್ಯವಾಗಿದೆ : " ದಾನಕರ್ತೆ

ಅಕ್ಕಾದೇವಿಯು ...... ಜೈನ, ಬೌದ್ಧ, ಅನಂತ (ಎಂದರೆ, ವಿಷ್ಣು), ರುದ್ರ—ಈ ಸಂಬಂಧವಾದ ಪ್ರಕ್ರಿಯೆಗಳಲ್ಲಿ ವಿಧಿಸಿರುವ ಪ್ರಕಾರ ವ್ರತಗಳನ್ನು ನಡೆಸುತ್ತಿದ್ದಳೆಂದು" ಅಲ್ಲಿ ವರ್ಣಿಸಲಾಗಿದೆ. ಅವಳು ಕಟ್ಟಿಸಿದ್ದು 'ತ್ರಿಪುರುಷ' ದೇವಾಲಯ. ಎಂದರೆ ವಿಷ್ಣು, ಬ್ರಹ್ಮ, ಮಹೇಶ್ವರ ಈ ಮೂವರಿಗೂ ಸೇರಿದ ದೇವಾಲಯ. ಈಕೆ ಹಿಂದೂ ಧರ್ಮಪಂಥಗಳಲ್ಲಿ ಸಾಮರಸ್ಯವನ್ನೇರ್ಪಡಿಸುವುದಕ್ಕೆ ಪ್ರಯತ್ನಿಸಿದಳು. ಅಷ್ಟೇ ಅಲ್ಲ, ಆ ಕಾಲದಲ್ಲಿ ಪ್ರಚಾರವಾಗಿದ್ದ ಮುಖ್ಯ ಮತಗಳು ಎಂದರೆ ಬೌದ್ಧ, ಜೈನ, ವೈಷ್ಣವ ಮತ್ತು ಶೈವಮತಗಳ ಸಾಮರಸ್ಯಕ್ಕೂ ಪ್ರಯತ್ನಮಾಡಿದಳು. ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಸಮಾನಾಂಶಗಳನ್ನು ಗುರುತಿಸಿ ಸಾಮರಸ್ಯವನ್ನೇರ್ಪಡಿಸುವುದರ ಅಗತ್ಯವನ್ನು ಜನ ಎಷ್ಟುಮಟ್ಟಿಗೆ ಅರಿತಿದ್ದ ರೆಂಬುದನ್ನು ತೋರಿಸುವ ಒಂದು ಬಹು ಮುಖ್ಯ ನಿದರ್ಶನ ಇದು; ಅಪರೂಪದ್ದಾದರೂ ಬಹು ಮುಖ್ಯ ನಿದರ್ಶನ. ಜನನಾಯಕರು ಅನುಸರಿಸುತ್ತಿದ್ದ, 'ಬದುಕು, ಬದುಕಗೊಡು' ಎಂದರೆ ತಾನೂ ಬದುಕಿ ಇತರರನ್ನು ಬದುಕಗೊಡುವ ನೀತಿಯ ಮತ್ತೊಂದು ನಿದರ್ಶನವನ್ನು ಇಲ್ಲಿ ಎತ್ತಿ ಹೇಳಬಹುದು. ಕ್ರಿ.ಶ. 1129ರ ಒಂದು ಶಾಸನದಲ್ಲಿ ಬಳ್ಳಿಗಾವೆಯ ಜನರ ಒಂದು ಪ್ರಶಂಸೆಯಿದೆ: "ಅನ್ಯರನ್ನು (ಅಪರಿಚಿತರನ್ನು) ಆದರಿಸುತ್ತಾರೆ; ಸತ್ಯವಾಕ್ಯರತರು (ಸುಳ್ಳಾಡುವವರಲ್ಲ, ಒಳಗೊಂದು ಹೊರಗೊಂದು ರೀತಿ ನಡೆಯುವವರಲ್ಲ), ವಿವೇಕಶಾಲಿಗಳು; ಧರ್ಮನಿಷ್ಠರು"—ಎಂದು ವರ್ಣಿಸಲಾಗಿದೆ. ಆ ಶಾಸನ ಮುಂದುವರಿದು, "ಹರಿ–ಹರ–ಕಮಲಾಸನ–ವೀತರಾಗ–ಬೌದ್ಧಾಲಯಯಂಗಳಿಂದಿನ ವಸುಂಧರೆಗೆಸೆವ ಪಂಚಶರದಂತಿರೆ ಪಂಚಮಠಂಗಳೆಸೆವುವಾ ಪಟ್ಟಣದೊಳ್" (ಆ ಪಟ್ಟಣದಲ್ಲಿ ಹರಿ, ಹರ, ಬ್ರಹ್ಮ, ಜಿನ, ಬುದ್ಧ–ಈ ಐದು ದೇವಾಲಯಗಳು ಭೂಮಿಯಲ್ಲಿ ಶೋಭಿಸುವ ಐದು ಶರಗಳಂತೆ ಪ್ರಕಾಶಿಸುತ್ತಿರಲು, ಐದು ಮಠಗಳು ಶೋಭಿಸುತ್ತಿರುವುವು) ಎಂದು ಹೇಳುತ್ತದೆ.

ಇದನ್ನೇ, ಧರ್ಮಾವಲಂಬನೆಯಿಂದ ದಿವ್ಯಜೀವನವನ್ನು ಸಾಧಿಸುವ ಮಹತ್ವದ ಗುರಿ ಹೊಂದಿರುವ ಈ ಬೇರೆಬೇರೆ ಐದು ಮತಗಳೂ ಒಂದಕ್ಕೊಂದು ವಿರೋಧವಾಗದೆ, ಸ್ವತಂತ್ರವಾಗಿ ಮುಂಬರಿಯುವ ಐದು ನದಿಗಳಂತೆ ಪ್ರವಹಿಸುತ್ತ, ಮಾನವನ ಮನೋಭೂಮಿಯನ್ನು ಫಲವತ್ತಾಗಿ ಮಾಡುತ್ತಿವೆಯೆಂದು ವಿವರಿಸಿ ಹೇಳಬಹುದು.

ಮೂಲ ಲೇಖಕರು: ಶ್ರೀ ಎಸ್. ಎಸ್. ರಾಘವಾಚಾರ್
ಅನುವಾದಕರು: ಶ್ರೀ ಎಲ್. ಗುಂಡಪ್ಪ

# ಸಾಮಾಜಿಕ ಜೀವನ ಮತ್ತು ಆರ್ಥಿಕ ಪರಿಸ್ಥಿತಿ

## ರಾಷ್ಟ್ರಕೂಟ ಹಾಗೂ ಕಡೆಕಡೆಯ ಚಾಲುಕ್ಯರ ಕಾಲದಲ್ಲಿ

ಪ್ರಾಚೀನ ಕಾಲದ ಭಾರತದಲ್ಲಿ ಸಾಮಾಜಿಕ ಜೀವನ ಹಾಗೂ ಆರ್ಥಿಕ ವಿದ್ಯಮಾನಗಳು ಸಾಮಾನ್ಯವಾಗಿ ಯಾವ ಬದಲಾವಣೆಯನ್ನೂ ಹೊಂದಿರಲಿಲ್ಲ. ಜೀವನದ ಸಂಪ್ರದಾಯಬದ್ಧವಾದ ಆದರ್ಶ ಹಾಗೂ ವಿಧಾನಗಳು ತಲೆಮಾರಿನಿಂದ ತಲೆಮಾರಿಗೆ, ಶತಮಾನದಿಂದ ಶತಮಾನದ ವರೆಗೆ ಬಿಡದೆ ಸಾಗಿದವು. ದೇಶದಲ್ಲಿ ಆದ ರಾಜಕೀಯ ಹಾಗೂ ರಾಜಮನೆತನಗಳ ಬದಲಾವಣೆಗಳನ್ನೂ ಲಕ್ಷಿಸದೆ ಅವು ಮುಂದುವರಿದವು.

ಸುಮಾರು ಹತ್ತನೆಯ ಶತಮಾನದ ವರೆಗೆ ಸಾಧಿಸಿದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳ ಚಿತ್ರವನ್ನು ಹಿಂದಿನ ಅಧ್ಯಾಯಗಳಲ್ಲಿ ಕೊಡಲಾಗಿದೆ. ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಬಂದಾಗ, ಸಮಕಾಲದ ಜೀವನದ ಮೇಲೆ ಬೆಳಕು ಚೆಲ್ಲುವ ಹೆಚ್ಚು ದಾಖಲೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಆಸಕ್ತಿಯನ್ನು ಉಕ್ಕಿಸುವ ವಿವರಗಳು ದೊರೆಯುತ್ತವೆ. ಆದರೆ, ಮೂಲತಃ ಹಾಗೂ ಸ್ಥೂಲವಾಗಿ ನಿರೂಪಿತವಾಗಿರುವ ಹಿಂದಿನ ಕಾಲದ ಚಿತ್ರಕ್ಕೂ ಈ ಕೆಳಗೆ ಕೊಟ್ಟಿರುವ ಹನ್ನೆರಡನೆಯ ಶತಮಾನದ ವರೆಗಿನ ಚಿತ್ರಕ್ಕೂ ಹೆಚ್ಚು ವ್ಯತ್ಯಾಸವೇನೂ ತೋರದು. ಆದರೂ ದೊರೆಯುವ, ಹೆಚ್ಚಿನ ತಿಳಿಯಬೇಕಾದ ವಿಷಯಗಳು ಅಮೂಲ್ಯವಾದವು. ಅವುಗಳಿಂದ ಚಿತ್ರ ಮನಸ್ಸಿಗೆ ಹೆಚ್ಚು ಚೆನ್ನಾಗಿ ಹಿಡಿಸುವಂತಾಗುತ್ತದೆ.

ಕ್ರಿ.ಶ. 6ನೆಯ ಶತಮಾನದಿಂದ 12ನೆಯ ಶತಮಾನದ ವರೆಗೆ 600 ವರ್ಷಗಳ ದೀರ್ಘಾವಧಿಯಲ್ಲಿ ದಕ್ಷಿಣ ಭಾರತವು, ಕರ್ಣಾಟಕವೂ ಸೇರಿ, ಯಾವ ಪರಕೀಯರ ಆಕ್ರಮಣಕ್ಕೂ ತುತ್ತಾಗಿರಲಿಲ್ಲ. ಆ ಕಾರಣ ಸಕಲರಿಗೂ ಸಮಾನವಾದ ಸಂಸ್ಕೃತಿಯು ಸಾಗಿಬರುವುದಕ್ಕೂ ಬೆಳೆದು ಮುಂದುವರಿಯುವುದಕ್ಕೂ ಯಾವ ಅಡ್ಡಿಯೂ ಇರಲಿಲ್ಲ. ದೇಶದ ಈ ಭಾಗವನ್ನಾಳುತ್ತಿದ್ದ ರಾಜಮನೆತನಗಳ ಮಧ್ಯೆ ಅಂತಃಕಲಹಗಳೂ ಯುದ್ಧಗಳೂ ಆಗಾಗ ನಡೆಯುತ್ತಲಿದ್ದುದರಲ್ಲಿ ಸಂದೇಹವಿಲ್ಲ. ಆದರೆ, ಜನತೆಯ ಸಾಮಾನ್ಯ ಜೀವನಕ್ರಮ ಹಾಗೂ ಸಾಂಸ್ಕೃತಿಕ ನಿದರ್ಶನಗಳು ಮುಂದುವರಿಯುವುದಕ್ಕೆ ಅವುಗಳಿಂದ ಯಾವ ಅಡ್ಡಿಯೂ ಬರಲಿಲ್ಲ. ದಕ್ಷಿಣ ಭಾರತದಲ್ಲಿ ಎಂದರೆ ವಿಂಧ್ಯಪರ್ವತದ ದಕ್ಷಿಣದ ಪರ್ಯಾಯ ದ್ವೀಪದಲ್ಲಿ ದ್ರಾವಿಡ ಸಂಸ್ಕೃತಿಯನ್ನು ಆನುವಂಶಿಕವಾಗಿ ಪಡೆದ ಜನರೇ ಮುಖ್ಯವಾಗಿ ಹಿಂದಿನ ಕಾಲದಲ್ಲಿ ತುಂಬಿದ್ದರು. 6ನೆಯ ಶತಮಾನದ ವೇಳೆಗೆ ಅವರು ಬಹುಮಟ್ಟಿಗೆ ಸಂಪೂರ್ಣವಾಗಿ ಆರ್ಯವರ್ಗಕ್ಕೆ ಸೇರಿಹೋದವರೇ ಆಗಿದ್ದರು. ಜನಾಂಗಗಳ ಒಂದು ಸಮ್ಮಿಶ್ರಣವೇ ಅಲ್ಲಿ ಆಗಿದ್ದಿತು. ಆರ್ಯೇತರ ಅಂಶಗಳಿಂದ ಮಿಶ್ರಿತವಾದ ಆರ್ಯಸಂಸ್ಕೃತಿ ಸಾಧಾರಣ ವಾಗಿ ಸ್ವೀಕೃತವಾಗಿದ್ದಿತು. ಯಾವುದು ಆರ್ಯಸಂಸ್ಕೃತಿ ಯಾವುದು ಆರ್ಯೇತರ ಎಂದು ಬೇರೆ ಮಾಡಿ ತೋರಿಸಲಾಗದಷ್ಟು ಅವು ಒಂದರೊಡನೊಂದು ಸಂಪೂರ್ಣವಾಗಿ ಬೆರೆತು ಹೋಗಿದ್ದವು. ಜನರಲ್ಲಿ ಬಹು ಭಾಗ ವೈದಿಕಮತವನ್ನವಲಂಬಿಸಿದವರು. ಈ ವೇಳೆಗೆ ಅದೇ ಹಿಂದೂಧರ್ಮವೆನಿಸಿಕೊಂಡಿರಬಹುದು. ಕರ್ಣಾಟಕವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದ ಬೌದ್ಧರು ಮತ್ತು ಜೈನರು ಜನರ ಕೂಡೆ ಅಡೆತಡೆಗಳಿಲ್ಲದೆ ಬೆರೆತು, ಅವರೊಡನೆ ಸಾಮರಸ್ಯದಿಂದ ಬಾಳಿದರು. ಧಾರ್ಮಿಕ ಸ್ವಾತಂತ್ರ್ಯ ಮತ್ತು

ಅನ್ಯಮತ ಸಹಿಷ್ಣುತೆಗಳು ಈ ಯುಗದ ಪ್ರಧಾನ ಲಕ್ಷಣಗಳು. ರಾಜರು ಪರಮತ ಸಹಿಷ್ಣುಗಳಾಗಿ ಎಲ್ಲ ಮತೀಯರೂ ತಮ್ಮ ತಮ್ಮ ಧರ್ಮ ಹಾಗೂ ದೃಢ ನಂಬಿಕೆಗಳನ್ನು ಅನುಸರಿಸಲು ಅವಕಾಶವನ್ನಿತ್ತರು. ರಾಜಮನೆತನದವರು ಹಿಂದೂ, ಜೈನ ಮತ್ತು ಬೌದ್ಧ ದೇವತೆಗಳನ್ನು ಪೂಜಿಸಿ, ಈ ಮತಗಳ ಸಾಮಾನ್ಯ ಸಿದ್ಧಾಂತಗಳನ್ನು ಅನುಸರಿಸಿದರು. ಬಾದಾಮಿ ಚಾಲುಕ್ಯರ ಮೊದಲ ಶಾಸನಗಳಲ್ಲಿ ಭಗವನ್ನಾರಾಯಣ, ಕಾರ್ತಿಕೇಯ ಹಾಗೂ ಸಪ್ತಮಾತೃಕೆಯರನ್ನು ಪ್ರಾರ್ಥಿಸಿ ಕಾಪಾಡುವಂತೆ ಕೋರಿರುವುದನ್ನು ಕಾಣಬಹುದು. ಕೆಲವರು ತಮ್ಮನ್ನು ' ಪರಮ ಭಾಗವತ 'ರೆಂದು ಮತ್ತೆ ಕೆಲವರು 'ಪರಮ ಮಾಹೇಶ್ವರ'ರೆಂದು ಕರೆದು ಕೊಂಡಿರುವರು. ' ಪರಮ ಭಾಗವತ 'ನೆಂದು ತನ್ನನ್ನು ಕರೆದುಕೊಂಡು ಬಾದಾಮಿಯ ವೈಷ್ಣವ ಗುಹಾಲಯವನ್ನು ನಿರ್ಮಿಸಿದ ಮಂಗಳೇಶನು ಕಳಚೂರ್ಯರನ್ನು ಗೆದ್ದು ಮಹಾಕೂಟದ ಮಹಾಕೂಟೇಶ್ವರನ ಸಾನ್ನಿಧ್ಯದಲ್ಲಿ ತನ್ನ ವಿಜಯೋತ್ಸವವನ್ನು ಆಚರಿಸಿ, ಆ ದೇವರಿಗೆ ಹಳ್ಳಿಗಳನ್ನು ಕೊಡುಗೆಯಾಗಿತ್ತನು. ಆತನ ಸೋದರನಾದ ಕೀರ್ತಿವರ್ಮನು ' ಪರಮ ಮಾಹೇಶ್ವರ ' ಎಂದರೆ ಶಿವನಿಷ್ಠಾವಂತನೆಂದು ಶಾಸನ ಗಳಲ್ಲೊಂದರಲ್ಲಿ ತನ್ನನ್ನು ಕರೆದುಕೊಂಡಿರುವನು. ಎರಡನೆಯ ಪುಲಿಕೇಶಿಯ ಸಮಕಾಲೀನನಾದ ಹರ್ಷ ಅಥವಾ ಶಿಲಾದಿತ್ಯನು, ತನ್ನ ತಂದೆ ಪ್ರಭಾಕರವರ್ಧನನು ಶಿವಭಕ್ತನಾಗಿದ್ದರೂ, ತಾನು ಬೌದ್ಧಮತದ ಕಡೆಗೆ ಒಲವನ್ನು ಪಡೆದಿದ್ದನು. ಪುಲಿಕೇಶಿಯ ಮಂತ್ರಿ ರವಿಕೀರ್ತಿಯು ಐಹೊಳೆ ಪ್ರಶಸ್ತಿಯಲ್ಲಿ ತನ್ನನ್ನು ರಾಜನ ಪರಮ ಆಪ್ತಮಿತ್ರನೆಂದು ಹೇಳಿಕೊಂಡಿರುವನು. ಆತನು ಜೈನಧರ್ಮದವನು. ಬಾದಾಮಿ ಚಾಲುಕ್ಯ ರೊಡನೆ ವಿವಾಹ ಸಂಬಂಧವನ್ನು ಬೆಳೆಸಿದ್ದ ತಲಕಾಡಿನ ಗಂಗರು ಜೈನರು.

## ವರ್ಣಾಶ್ರಮ ಧರ್ಮ

ಸಮಾಜದ ಮೇಲೆ ಶ್ರುತಿ ಸ್ಮೃತಿಗಳ ಬಿಗಿಯಾದ ಹಿಡಿತ ಸಡಿಲವಾಗುತ್ತಿದ್ದರೂ ಜನಸಾಮಾನ್ಯರ ಮೇಲಿನ ವರ್ಣಾಶ್ರಮಧರ್ಮದ ಹತೋಟಿ ಸಾಕಷ್ಟು ಇದ್ದಿತು. ಸಾಮಾಜಿಕ ಬದಲಾವಣೆಗಳನ್ನು ಅಳವಡಿಸಿಕೊಂಡ ಹೊಸ ಸ್ಮೃತಿಗಳು ರಚಿತವಾಗುತ್ತಿದ್ದವು. ಆದರೂ ಹಿಂದೂ ಸಮಾಜವು ನಾಲ್ಕು ಪ್ರಧಾನವಾದ ವರ್ಣಗಳನ್ನೂ ಹಲವಾರು ಒಳಪಂಗಡಗಳನ್ನೂ ಮತ್ತಿತರ ಸಾಮಾಜಿಕ ತಂಡಗಳನ್ನೂ ಒಪ್ಪಿಕೊಂಡಿದ್ದಿತು. ಬ್ರಾಹ್ಮಣರ ಒಂದು ವರ್ಗ ವೈದಿಕ ಸಂಪ್ರದಾಯಬದ್ಧವಾಗಿತ್ತು. ಕೆಲವು ಬ್ರಾಹ್ಮಣರು ಬಹು ಉನ್ನತವಾದ ಸ್ಥಾನಗಳನ್ನು ಪಡೆದಿದ್ದರು. ಅವರು ಶ್ರುತಿ ಸ್ಮೃತಿಗಳು ವಿಧಿಸಿದ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪರಿಗ್ರಹಗಳೆಂಬ ಷಟ್ಕರ್ಮಗಳನ್ನು ಕಟ್ಟುಕಟ್ಟಳೆಗಳಿಂದ ಆಚರಿಸುತ್ತಿದ್ದರು. ವೇದಗಳ ಅಭ್ಯಾಸ, ಮತಸಂಬಂಧವಾದ ನಿಯಮಗಳ ಆಚರಣೆ, ದಾರ್ಶನಿಕ ತತ್ತ್ವಗಳ ವಿವರಣೆ ಹಾಗೂ ಪವಿತ್ರಗ್ರಂಥಗಳ ಬೋಧನೆ--ಇವುಗಳಲ್ಲಿ ಅವರು ನಿರತರಾಗಿದ್ದರು. ಅವರನ್ನು ಮತಾಚರಣೆಯ ವಿದ್ಯೆಯ ಪರಿಪಾಲಕರೆಂದೆನಿಸಿದ್ದರು. ಆ ವರ್ಗ ಸಾರ್ವಜನಿಕರಿಂದಲೂ ಸರ್ಕಾರದಿಂದಲೂ ಗೌರವವನ್ನು ಗಳಿಸಿದ್ದಿತು. ಅಲ್ಲದೆ ಭೂಮಿ ಹಾಗು ಗ್ರಾಮಗಳ ದಾನವನ್ನು ಪಡೆದಿದ್ದುದಕ್ಕೆ ಈ ಕಾಲಕ್ಕೆ ಸಂಬಂಧಪಟ್ಟು ದೊರಕುವ ಅನೇಕ ತಾಮ್ರ ಶಾಸನಗಳೇ ಸಾಕ್ಷಿ. ಬ್ರಾಹ್ಮಣರ ಇನ್ನೊಂದು ವರ್ಗ ಲೌಕಿಕವಿದ್ಯೆಯೆಂದೆನಿಸಿ ಅದರಲ್ಲಿ ಸೇರಿರುವ ನ್ಯಾಯ, ಸಾಹಿತ್ಯ, ಖಗೋಳಶಾಸ್ತ್ರ, ವೈದ್ಯ, ರಾಜನೀತಿಕುಶಲತೆ ಮೊದಲಾದವುಗಳನ್ನು ಅಭ್ಯಾಸಮಾಡಿತು. ಈ ವರ್ಗದಲ್ಲಿ ಸಮರ್ಥರಾದವರನ್ನು ರಾಜ್ಯಸೇವೆಯಲ್ಲಿ ಅಧಿಕಾರಿಗಳನ್ನಾಗಿ ನೇಮಿಸಿದರು.

ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಅನೇಕ ಬ್ರಾಹ್ಮಣರು ಮಹಾಪ್ರಧಾನರೂ ದಂಡನಾಯ ಕರೂ ಆಗಿ, ತಮ್ಮ ರಾಜರಿಗಾಗಿ ಯುದ್ಧವನ್ನು ಮಾಡುತ್ತಿದ್ದರು. 11ನೆಯ ಶತಮಾನದಲ್ಲಿ ಬ್ರಾಹ್ಮಣರು, ಅಲ್‌ಬರೂನಿ (ಹನ್ನೊಂದನೆಯ ಶತಮಾನ)ಯ ಹೇಳಿಕೆಯ ಪ್ರಕಾರ, ವೈಶ್ಯನನ್ನು ತಮಗಾಗಿ ವ್ಯಾಪಾರ

ಮಾಡುವಂತೆ ನೇಮಿಸಿ, ಬಟ್ಟೆ ಹಾಗೂ ಅಡಕೆಯ ವ್ಯಾಪಾರವನ್ನು ನಡೆಸುತ್ತಿದ್ದರು. ಬ್ರಾಹ್ಮಣರಿಗೂ, ದೇವಸ್ಥಾನಗಳಿಗೂ ಕೊಟ್ಟ ಭೂದಾನಗಳಲ್ಲಿ ಹಲವಕ್ಕೆ ಕಂದಾಯ ಮಾನ್ಯವಾಗಿತ್ತು. ಮರಣದಂಡನೆಯನ್ನು ಬ್ರಾಹ್ಮಣರಿಗೆ ವಿಧಿಸುವಂತಿರಲಿಲ್ಲ. ನ್ಯಾಯವಿಧಿಯ ಉಗ್ರಶಿಕ್ಷೆಯನ್ನು ಅವರಿಗೆ ಕೊಡುತ್ತಿರಲಿಲ್ಲ ವೆಂಬುದನ್ನು ಅಲ್‌ಬರೂನಿ ದೃಢಪಡಿಸಿದ್ದಾನೆ (Alberuni's India, Tr. by Sachan P 162). ಬ್ರಹ್ಮಹತ್ಯವು ಮಹಾಪಾತಕವೆಂದು ಪರಿಗಣಿಸಲ್ಪಟ್ಟಿತ್ತು.

ಬ್ರಾಹ್ಮಣರಾದ ಮೇಲೆ ಕ್ಷತ್ರಿಯರೇ ಎರಡನೆಯ ವರ್ಗದವರು. ಶತ್ರುಗಳನ್ನು ಯುದ್ಧದಲ್ಲಿ ಕೊಂದು ಜನರನ್ನು ರಕ್ಷಿಸಿ ಅವರನ್ನಾಳುವುದೇ ಅವರ ಪ್ರಮುಖ ಕಾರ್ಯವಾಗಿತ್ತು. ಅರಬ್ ಲೇಖಕರ ಪ್ರಕಾರ ಈ ಕಾಲದಲ್ಲಿ ಆಳುತ್ತಿದ್ದ ಕ್ಷತ್ರಿಯ ವರ್ಗದವರನ್ನು 'ಸತ್ ಕ್ಷತ್ರಿಯ'ರೆಂದು ಕರೆಯುತ್ತಿದ್ದರು. (The Bubkufrias of the Arab writers, Elliot and Dawson: History, I P. 16). ಅವರನ್ನು ಬ್ರಾಹ್ಮಣರಿಗಿಂತಲೂ ಹೆಚ್ಚು ಗೌರವದಿಂದ ಕಾಣುತ್ತಿದ್ದರು. ಸತ್ ಕ್ಷತ್ರಿಯರನ್ನು ರಾಜನ್ಯರಿಗೆ ಹೋಲಿಸಬಹುದು. ಆ ರಾಜನ್ಯರು ಅರಸುಮನೆತನದವರಾಗಿ ಇಲ್ಲವೆ ರಾಜವಂಶದಿಂದ ಬಂದ ಶ್ರೀಮಂತ ಮನೆತನಕ್ಕೆ ಸೇರಿದವರು. ಜೈನ ಮತ್ತು ಬೌದ್ಧರು ಕ್ಷತ್ರಿಯರನ್ನು ಬ್ರಾಹ್ಮಣರಿಗಿಂತ ಮೇಲೆಂದು ವಾದಿಸಿದರು. ರಾಜರು, ಅವರಲ್ಲಿ ಕೆಲವರ ವಂಶಮೂಲ ಸಂದೇಹಗ್ರಸ್ತವಾದರೂ ತಾವು ಶುದ್ಧ ಕ್ಷತ್ರಿಯ ವಂಶಕ್ಕೆ ಸೇರಿದವರೆಂದುಕೊಂಡು ಸೂರ್ಯ ಅಥವಾ ಚಂದ್ರರಂಥ ದೇವತೆಗಳ ಹಾಗೂ ದ್ವಿಜರ ವಂಶಪರಂಪರೆಯಲ್ಲಿ ಬಂದವರೆಂದು ಭಾವಿಸಿದರು. ಸ್ಮೃತಿಕಾರರು ಕ್ಷತ್ರಿಯರಿಗೆ ವೇದಾಭ್ಯಾಸ ಮಾಡುವುದು, ಯಜ್ಞಾದಿಗಳ ಕರ್ಮಗಳನ್ನಾಚರಿಸುವುದು, ದಾನ ನೀಡುವುದು—ಈ ಮೂರು ಕರ್ತವ್ಯಗಳನ್ನು ಒಪ್ಪಿಸಿ, ದ್ವಿಜರ ವರ್ಗದಲ್ಲಿ ಅವರನ್ನು ಸೇರಿಸಿದ್ದಾರೆ.

ಸತ್‌ಕ್ಷತ್ರಿಯರು ಹಾಗೂ ಬ್ರಾಹ್ಮಣರಿಗಿಂತ ಸಾಮಾನ್ಯ ಕ್ಷತ್ರಿಯರು ಕೆಳದರ್ಜೆಯಲ್ಲಿದ್ದರು. ಈ ಕಾಲದಲ್ಲಿ ದ್ವಿಜರಿಗೆ ನಿಯಮಿಸಿದ ಎಲ್ಲ ಕರ್ಮಗಳನ್ನು ಕ್ಷತ್ರಿಯರು ಆಚರಿಸಿದರು. ಆದರೆ, ಅವರು ವೇದಾ ಭ್ಯಾಸಮಾಡುವುದು ಕಡಮೆಯಾಯಿತು. ಪುರಾಣಗಳಲ್ಲಿ ಉಕ್ತವಾದ ನಿಯಮಗಳಂತೆ, ಅಗ್ನಿದೇವತೆಗೆ ಹವಿಸ್ಸನ್ನರ್ಪಿಸುವಂತಹ ಕರ್ಮಗಳನ್ನು ನೆರವೇರಿಸುತ್ತಿದ್ದರೆಂದು ಅಲ್‌ಬರೂನಿಯ ಹೇಳಿಕೆ. ಇದರಲ್ಲಿ ವೈದಿಕನಿಯಮಗಳಂತೆ ಕರ್ಮಗಳನ್ನಾಚರಿಸುವ ಧಾರ್ಮಿಕ ಹಕ್ಕುಗಳನ್ನು ಅವರು ಕಳೆದುಕೊಂಡರೆಂಬ ಸೂಚನೆಯಿದೆ. 8ನೆಯ ಶತಮಾನದ ಹಾಗೂ ಅನಂತರದ ತಾಮ್ರಶಾಸನ ಮತ್ತು ಶಿಲಾಶಾಸನಗಳಲ್ಲಿ ರಾಜರ ಗೋತ್ರಗಳು ಕಂಡುಬರುವುದಿಲ್ಲ. ವೈದಿಕ ಸಂಪ್ರದಾಯದ ಹಿಡಿತ ತಪ್ಪಿಹೋಗಿತ್ತು ಎಂಬುದನ್ನಿದು ವ್ಯಕ್ತಪಡಿಸುತ್ತದೆ. ಬಹುಶಃ ತಮ್ಮ ಗೋತ್ರ ಇದೇ ಎಂದು ನಿಶ್ಚಯಿಸಿ ಹೇಳಲಾರದವರು ಕೂಡ ರಾಜರಾಗಿ ಆಳುವವರಾದರು.

ವೈಶ್ಯರು ಅಥವಾ ವರ್ತಕವರ್ಗದವರು ಮೂರನೆಯ ಗುಂಪಿನವರು. ರಾಜ್ಯ ಹಾಗೂ ದೇಶದ ಒಳಗೂ ಹೊರಗೂ ವಿಪುಲವಾದ ವ್ಯಾಪಾರವನ್ನು ನಡೆಸಿದರು. ವ್ಯಾಪಾರಕ್ಕೆ ಸುಭದ್ರತೆ ದೊರಕಿ, ಸಾಮಗ್ರಿಗಳ ಸುರಕ್ಷಿತವಾದ ಸಾಗಾಣಿಕೆಗೆ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ದ್ವಿಜರಲ್ಲಿ ಅವರನ್ನೂ ಸೇರಿಸಿದ್ದರು. ಕ್ಷತ್ರಿಯರ ಹಾಗೆ ಅವರೂ ಆರು ಕರ್ಮಗಳಲ್ಲಿ ಮೂರನ್ನು ಆಚರಿಸಲು ಸ್ಮೃತಿಗಳೂ ವಿಧಿಸಿದ್ದವು. ಆದರೆ, ಈ ಕಾಲದಲ್ಲಿ ಕ್ಷತ್ರಿಯರಂತೆ ಅವರೂ ವೈದಿಕ ಕರ್ಮಗಳನ್ನು ತ್ಯಜಿಸಿದ್ದರು. ದರ್ಜೆಯಲ್ಲಿ ಅವರು ಕೆಳಮಟ್ಟದವರಾದರು. ಬೋಧಾಯನ ಧರ್ಮಸೂತ್ರವು (I, 11, 4) ವೈಶ್ಯನ ದರ್ಜೆಯು ಶೂದ್ರನ ದರ್ಜೆಗೆ ಸಮನೆಂದು ನಿರೂಪಿಸುತ್ತದೆ. ಏಕೆಂದರೆ, ಆ ಇಬ್ಬರು ವಿಚಾರ ಮಾಡದೆ ವಿವಾಹವಾಗುತ್ತಿದ್ದರಲ್ಲದೆ ಸೇವಕತನ, ಹೊಲ ಉಳುವ ಕೆಲಸಗಳಂತಹ ಸಮಾನ ವೃತ್ತಿಗಳನ್ನು ಅನುಸರಿ ಸುತ್ತಿದ್ದುದೆ ಅದಕ್ಕೆ ಕಾರಣ. ವೈಶ್ಯ ಮತ್ತು ಶೂದ್ರ—ಈ ಇಬ್ಬರಿಗೂ ವೇದಪಠನವನ್ನು ನಿಷೇಧಿಸ

ಲಾಗಿತ್ತೆಂದು ಅಲ್‌ಬರೂನಿ ತಿಳಿಸಿದ್ದಾನೆ. ಹಿಂದಿನ ಸ್ಮೃತಿಗಳು ಅವರಿಗೆ ತಮ್ಮ ಉದ್ಯಮ ಇತ್ಯಾದಿಗಳ ಜೊತೆಗೆ ಸೈನಿಕ ವೃತ್ತಿಯನ್ನು ಅವಲಂಬಿಸಲು ಅವಕಾಶವನ್ನಿತ್ತಿದ್ದವು. ಈ ಕಾಲದಲ್ಲಿ ಅನೇಕ ವೀರ ಬಣಂಜು (ವಣಿಕ ಸಂಘ) ಗಳಿದ್ದವು. ಅವು ತಮ್ಮ ಸಾರಿಗೆಯ ಸೇವೆಗೆ ರಕ್ಷಣೆ ನೀಡಲು ತಮ್ಮದೇ ಆದ ಸೈನ್ಯವನ್ನು ಸಾಕಿಕೊಂಡಿದ್ದವು.

ಶೂದ್ರರೆಂಬ ನಾಲ್ಕನೆಯ ವರ್ಗವೇ ಬಹು ದೊಡ್ಡದಾದ ತಂಡವಾಗಿತ್ತು. ಇದು ಸಮಾಜಕ್ಕೆ ಅಗತ್ಯವಾದ ದುಡಿಮೆ, ಉತ್ಪನ್ನ, ಸೇವೆ ಇತ್ಯಾದಿ ಎಲ್ಲವನ್ನೂ ಒದಗಿಸಿತು. ಆದರೆ ವೇದಗಳನ್ನು ಓದುವುದಕ್ಕಾಗಲಿ, ವೇದಮಂತ್ರಗಳನ್ನು ಪಠಿಸುವುದಕ್ಕಾಗಲಿ ಶೂದ್ರರಿಗೆ ಅನುಮತಿಯನ್ನು ಕೊಟ್ಟಿರ ಲಿಲ್ಲವೆಂಬ ಬಗ್ಗೆ ಎಲ್ಲ ಸ್ಮೃತಿಕಾರರೂ ಒಮ್ಮತವುಳ್ಳವರಾಗಿದ್ದಾರೆ. ಮೂರು ಉಚ್ಚ ವರ್ಗದವರ ಸೇವೆ ಮಾಡಿ, ತಮ್ಮ ಮುಕ್ತಿಯನ್ನು ಅವರು ಸಾಧಿಸಬೇಕಾಗಿತ್ತು. ಆದರೆ ಈ ಕಾಲದಲ್ಲಿ ಈ ನಿರ್ಬಂಧವು ಆದಷ್ಟು ಸಡಿಲವಾಯಿತು. 'ಜಾತಕರ್ಮ' 'ಔಶನಸ' 'ಲಘುವಿಷ್ಣು'ಗಳಂತಹ ಇತ್ತೀಚಿನ ಸ್ಮೃತಿಗಳು ಶೂದ್ರರನ್ನು ಸಚ್ಛೂದ್ರರೆಂದೂ, ಅಸಚ್ಛೂದ್ರರೆಂದೂ ವರ್ಗೀಕರಿಸಿರುವವು. ಸಚ್ಛೂದ್ರರಿಗೆ ಶ್ರಾದ್ಧ ಸಂಸ್ಕಾರಗಳನ್ನೂ ಪಾಕಯಜ್ಞಗಳನ್ನೂ ಮಾಡುವ ವಿಶೇಷ ಅಧಿಕಾರವನ್ನು ಕೊಟ್ಟರು. ಅಂತರಂಗ ಬಹಿರಂಗಗಳ ಶುದ್ಧಿಯು ಶೂದ್ರನನ್ನು ದೇವರಿಗೂ ಬ್ರಾಹ್ಮಣರಿಗೂ ಸಲ್ಲಿಸಬೇಕಾದ ಧಾರ್ಮಿಕ ಕರ್ತವ್ಯ ಗಳನ್ನು ನೆರವೇರಿಸಿ ತನ್ನ ತಪಶ್ಚರ್ಯ ಜೀವನವನ್ನು ನಡೆಸಲು ಅರ್ಹನನ್ನಾಗಿ ಮಾಡುತ್ತದೆಯೆಂದು ಈ ಕಾಲದ ಜೈನಕೃತಿಕಾರನಾದ ಸೋಮದೇವನು ತನ್ನ 'ನೀತಿವಾಕ್ಯಾಮೃತ'ದಲ್ಲಿ ಹೇಳಿದ್ದಾನೆ. ತಮ್ಮ ಧಾರ್ಮಿಕಾಚರಣೆಗಳಲ್ಲಿ ಶ್ರೌತಮಂತ್ರಗಳೆಂಬ ವೈದಿಕಮಂತ್ರಗಳನ್ನು ಅವರು ಪಠಿಸುವಂತಿರಲಿಲ್ಲವಾದರೂ ಸ್ಮಾರ್ತಮಂತ್ರಗಳೆಂಬ ಪೌರಾಣಿಕಮಂತ್ರಗಳನ್ನು ಬಳಸಬಹುದಾಗಿತ್ತು. ಅವರನ್ನು ಸೈನ್ಯಕ್ಕೆ ಧಾರಾಳವಾಗಿ ಸೇರಿಸಿಕೊಳ್ಳುತ್ತಿದ್ದುದು, ಈ ಕಾಲಕ್ಕೆ ಸೇರಿ ಕರ್ಣಾಟಕದಲ್ಲಿ ಇಂದಿಗೂ ದೊರೆಯುವ, ಅನೇಕ ವೀರಗಲ್ಲು ಗಳಿಂದ ಸ್ಪಷ್ಟಪಡುತ್ತದೆ. ಅವರಲ್ಲಿ ಅನೇಕರು ಸೇನಾನಾಯಕರ ಪದವಿಗೂ ಸಣ್ಣ ರಾಜರ ಪದವಿಗೂ ಏರಿದರು. ಹೂಯನ್‌ತ್ಸಾಂಗನು ತನ್ನ ಕಾಲದಲ್ಲಿ ಇಂಡಿಯಾದಲ್ಲಿ ಆಳುತ್ತಿದ್ದ ಇಬ್ಬರು ಶೂದ್ರರಾಜರನ್ನು ಹೇಳಿದ್ದಾನೆ. ಶೂದ್ರರ ಏಕೈಕ ವೃತ್ತಿಯಾದ ದ್ವಿಜಸೇವೆಯು ಈ ಕಾಲಕ್ಕೆ ಮೊದಲೆ ರೂಢಿಯಲ್ಲಿ ತಪ್ಪಿ ಇತರ ವೃತ್ತಿಗಳನ್ನು ಅವರು ಅವಲಂಬಿಸಲು ಅವಕಾಶವಿದ್ದಿತು. ಉದ್ದಿಮೆ, ಕಸಬು ಹಾಗೂ ಕೈಗಾರಿಕೆಗಳು ಈ ಜಾತಿಯ ಸಾಧಾರಣ ವೃತ್ತಿಗಳೇ ಹೊರತು ಅಪೂರ್ವವಾದವುಗಳಲ್ಲವೆಂದು ಸ್ಮೃತಿಕಾರರಾದ ಬೃಹದ್ಯಮ, ದೇವಲ, ಉಶನಸರು ತಿಳಿಸಿರುವರು. ಅವರನ್ನು ಪದಾತಿಬಲಕ್ಕೂ ಸೈನಿಕ ಜೀವನಕ್ಕೂ ಅಸಂಖ್ಯಾತವಾಗಿ ಸೇರಿಸಿಕೊಂಡಿದ್ದರಿಂದ ಸಹಜವಾಗಿ ಈ ವರ್ಗಕ್ಕೆ ರಾಜಸಿಂಹಾಸನ ದೊರೆಯುವ ಸಾಧ್ಯತೆಯಾಯಿತು. ಶೂದ್ರನು ಆಸ್ತಿಪಾಸ್ತಿಗಳನ್ನು ಹೊಂದಿರಬಾರದೆಂಬ ನಡೆವಳಿಕೆಯ ನಿಯಮ ಆಚರಣೆಯಲ್ಲಿಲ್ಲದ ಕಟ್ಟಳೆ ಯಾಯಿತು. ಆದರೂ ಅವರಲ್ಲಿ ದೊಡ್ಡ ಪಂಗಡದ ಸ್ಥಿತಿಗಳು ಹಿಂದಿನ ಸ್ಮೃತಿಗಳಲ್ಲಿ ವರ್ಣಿಸಿರುವಂತೆಯೇ ಇದ್ದವು. ಅವರಲ್ಲಿ ಅನೇಕರನ್ನು ಅಸ್ಪೃಶ್ಯಭಾವದಿಂದ ಕಂಡರು; ಕೆಲವರು ಹಳ್ಳಿ ಹಾಗೂ ಪಟ್ಟಣಗಳ ಹೊರ ವಲಯದಲ್ಲಿ ಅಸ್ಪೃಶ್ಯರಾಗಿ ವಾಸಮಾಡಬೇಕಾಗಿದ್ದಿತು. ಮೇಲೆ ಹೇಳಿದ ಎಲ್ಲದರಿಂದಲೂ ಚಾತು ವರ್ಣ್ಯ ವ್ಯವಸ್ಥೆಯ (Caste system) ನಿಯಮಗಳು ಹಿಂದಿನಂತೆ ಮುಂದೆಯೂ ನಿಷ್ಠುರವಾಗಿರಲಿಲ್ಲ. ಅಲ್ಲದೆ ಅವು ಸಾಕಷ್ಟು ಬದಲಾವಣೆಗಳನ್ನು ಹೊಂದಿದ್ದವು. ಹಿಂದೂ ಸಮಾಜವು ಚಾತುರ್ವರ್ಣ್ಯವನ್ನು ತಾನು ಅವಲಂಬಿಸಿದುದಾಗಿ ಹೇಳಿದರೂ ಆ ಬದಲಾವಣೆಗಳನ್ನು ಅಂಗೀಕರಿಸಿ ಮುಂದುವರಿಸಿತು. ಹೀಗೆ ಸಮಾಜದ ಪ್ರಗತಿಗೂ ನೆರವಾಯಿತು. ಈ ಕಾಲದಲ್ಲಿ ಬದುಕಿದ್ದರೆನ್ನುವ ಆದಿಶಂಕರಾಚಾರ್ಯರೂ ತಮ್ಮ ಬ್ರಹ್ಮ ಸೂತ್ರ ಭಾಷ್ಯ (1-3, 33)ದಲ್ಲಿ ಚತುರ್ವರ್ಣಗಳು ತಮ್ಮ ನಿಯತ ಕರ್ತವ್ಯ ಹಾಗೂ ಕರ್ಮಗಳನ್ನು ಮತ್ತೆ ಗೂ ಅನುಸರಿಸುತ್ತಿರಲಿಲ್ಲವೆಂಬ ಅರ್ಥಗರ್ಭಿತವಾದ ಹೇಳಿಕೆಯನ್ನು ಮಾಡಿದ್ದಾರೆ.

**ಮಹಿಳೆಯರ ಸ್ಥಾನ**

ಉಚ್ಚ ಸಮಾಜದ ಮಹಿಳೆಯರ ಜೊತೆಗೆ ಖಂಡಿತವಾಗಿ ಗಮನಿಸಲನರ್ಹವಲ್ಲದ ವಾರಾಂಗನೆಯರ ತಂಡವು ಹಿರಿಯ ನಗರಗಳ ಜೀವನಕ್ಕೆ ಚೇತನವನ್ನಿತ್ತಿತು. ದೇವಸ್ಥಾನಗಳಲ್ಲಿನ ನಿತ್ಯ ಪೂಜಾ ಸಮಯ ದಲ್ಲಿಯೂ ಉತ್ಸವಗಳ ಸಂದರ್ಭಗಳಲ್ಲಿಯೂ ವೇಶ್ಯೆಯರಿಗೆ ಕರ್ತವ್ಯಗಳ ನಿರ್ವಹಣೆಯನ್ನೊಪ್ಪಿಸಿದ್ದರು. ಸಂಗೀತ ಹಾಗೂ ನೃತ್ಯಕಲೆಗಳಿಗೆ ಅವರು ಅತ್ಯುನ್ನತ ಅಧಿಕಾರಿಗಳಾಗಿದ್ದರು. ಸಮಾಜದಲ್ಲಿ ಅವರು ಇತರ ಮಹಿಳೆಯರಿಗಿಂತ ಹೆಚ್ಚು ಪ್ರತಿಬಂಧಕಗಳಿಲ್ಲದೆ ಸುಲಲಿತವಾಗಿ ಬಾಳಿದರು. ಅಂದಿನ ಸಮಾಜದಲ್ಲಿ ಅವರಿದ್ದುದರಿಂದ ಆ ಸಮಾಜಕ್ಕೆ ನಗುಮುಖವೂ ಸುಖ ಸಂತೋಷಗಳೂ ಲಭಿಸಿದವು.

ಆ ಕಾಲದ ಸಾಮಾಜಿಕ ವಿದ್ಯಮಾನಗಳ ಮೇಲೆ ಸಂಸ್ಕೃತ ಸಾಹಿತ್ಯ ಅದರಲ್ಲಿಯೂ ನಾಟಕಸಾಹಿತ್ಯ ತುಂಬ ಬೆಳಕು ಬೀರುವುದು. ನಾಟಕ ಕಲೆಯನ್ನು ಕುರಿತ 'ದಶರೂಪಕ'ವು ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ಹಾಕಿದರೂ ನಾಟಕಗಳು ಆ ಕಾಲದ ಸಮಾಜದ ಸುಸ್ಪಷ್ಟವಾದ ಚಿತ್ರವನ್ನು ಕೊಡುತ್ತವೆ. ಈ ಸಾಹಿತ್ಯದಿಂದ ಕಾವ್ಯಕಲೆ ಹಾಗೂ ಸಂಸ್ಕೃತಿಯ ಶಿಕ್ಷಣವು ಕೇವಲ ಉಚ್ಚ ವರ್ಗಕ್ಕೆ ಮೀಸಲಾಗಿರಲಿಲ್ಲ ವೆಂಬುದು ನಿದರ್ಶನಕ್ಕೆ ಬರುತ್ತದೆ. ರಾಜರ ಅಂತಃಪುರಗಳಲ್ಲಿನ ಊಳಿಗದ ಸ್ತ್ರೀಯರೂ ಅರಮನೆಯ ಇತರ ಸೇವಕರೂ ಓದು ಬರಹ ಕಲಿತವರಾಗಿದ್ದರು. ಅವರು ಪುರಾಣಗಳಿಂದಲೂ ಮಹಾಭಾರತದಿಂದಲೂ ಉದಾಹರಣೆ ಹಾಗೂ ಕಥೆಗಳನ್ನು ಉದಾಹರಿಸಿ ಹೇಳಬಲ್ಲವರಾಗಿದ್ದರು. ಸಮಾಜದ ಕೆಳವರ್ಗದ ಜನರು ಬಳಸುತ್ತಿದ್ದ ಭಾಷೆ ಪ್ರಾಕೃತ; ಅದು ಪದ್ಯರಚನೆಗೆ ಚೆನ್ನಾಗಿ ಅಳವಟ್ಟಿತ್ತು. ಗುಣಾಢ್ಯನ 'ಬೃಹತ್ಕಥಾ' ಮತ್ತು ದಂಡಿಯ 'ದಶಕುಮಾರ ಚರಿತ' ಭಾರತದ ಆ ಕಾಲದ ಸಮಾಜದ ಚಿತ್ರವನ್ನು ನಮ್ಮ ಮುಂದಿಟ್ಟಿವೆ. ಯಾವ ಒಂದು ನಿರ್ದಿಷ್ಟ ಪ್ರದೇಶವನ್ನು ಅವು ಕುರಿತು ಹೇಳದಿರುವ ಕಾರಣ, ಅವುಗಳಲ್ಲಿ ಚಿತ್ರಿತವಾಗಿರುವ ಸ್ಥಿತಿಗಳು ಕರ್ಣಾಟಕಕ್ಕೂ ಅನ್ವಯಿಸಬಹುದು.

**ವಿದೇಶೀಯ ಯಾತ್ರಾರ್ಥಿಗಳ ಸಾಕ್ಷ್ಯಾಧಾರ**

ಪುಲಿಕೇಶಿಯ ಸಾಮ್ರಾಜ್ಯವನ್ನು ಸು.ಕ್ರಿ.ಶ. 640ರಲ್ಲಿ ಸಂದರ್ಶಿಸಿದ ಚೀಣಾ ದೇಶದ ಯಾತ್ರಿಕನಾದ ಹೂಯನ್‌ತ್ಸಾಂಗನು ಜನರ ಹಾಗೂ ಸಮಾಜದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಆತನು ಕಣ್ಣಾರೆ ಕಂಡವನಾದ ಕಾರಣ ಆ ವರ್ಣನೆ ಅತಿ ಅಮೂಲ್ಯವಾದ ತಿಳಿವಳಿಕೆಯನ್ನುಂಟುಮಾಡುವುದು. ಅದರಲ್ಲಿನ ಪ್ರಸಕ್ತ ಭಾಗವನ್ನಿಲ್ಲಿ ಉದ್ಧರಿಸುವುದು ಯೋಗ್ಯವೆನಿಸಿದೆ :

"ಆ ಕಾರಣ ಈ ದೇಶದಲ್ಲಿ ಸೈನ್ಯ ಹಾಗೂ ರಾಹುತರ ದಳವನ್ನು ಎಚ್ಚರಿಕೆಯಿಂದ ಸಜ್ಜುಗೊಳಿ ಸಿರುವರು. ಕದನದ ನಿಯಮಗಳನ್ನು ಸಂಪೂರ್ಣವಾಗಿ ಅರಿತು ಅನುಸರಿಸಿದರು. ಶತ್ರುವಿನ ಮೇಲೆ ಬೀಳುವ ಮುನ್ನ ಆತನಿಗೆ ಎಚ್ಚರಿಕೆ ಕೊಡುತ್ತಿದ್ದರು. ಆತನು (ದೊರೆ) ಕ್ಷತ್ರಿಯ ವಂಶಕ್ಕೆ ಸೇರಿದವನು. ಆತನ ಹೆಸರು ಪು-ಲೊಕಿ-ಶಿ. ಆತನ ಭಾವನೆ ವಿಶಾಲ ಹಾಗೂ ಅಗಾಧವಾದುದು. ಉದಾರ ಬುದ್ಧಿಯಿಂದ ಸರ್ವರಿಗೂ ಸಹಾನುಭೂತಿಯನ್ನು ತೋರಿ ಉಪಕಾರ ಮಾಡುವನು. ಆತನ ಪ್ರಜೆಗಳು ಪರಿಪೂರ್ಣವಾದ ನಿಷ್ಠೆಯಿಂದ ಆತನಿಗೆ ಸೇವೆ ಸಲ್ಲಿಸುವರು. ವಾಯುಗುಣ ಉಷ್ಣವಾದುದು. ಅವರ ನಡತೆ ಸರಳ ಹಾಗೂ ಪ್ರಾಮಾಣಿಕ. ಅವರ ನಿಲವು ಎತ್ತರ, ಸ್ವಭಾವ ಸಿಡುಕು ಸೊಕ್ಕು. ಅವರಿಗೆ ಯಾರು ಸೇವೆ ಸಲ್ಲಿಸುವರೊ ಅವರು ಕೃತಜ್ಞತೆ ಪಡೆಯುವ ಭರವಸೆ ಹೊಂದಿರಬಹುದು; ಆದರೆ ಯಾವನು ಅವರಿಗೆ ಮನನೋಯಿ ಸುವನೊ ಅವನು ಅವರ ಪ್ರತೀಕಾರವನ್ನು ತಪ್ಪಿಸಿಕೊಳ್ಳನು. ಅವರನ್ನು ಯಾವನಾದರೂ ತಿರಸ್ಕರಿಸಿದರೆ, ಆ ಅಪಮಾನವನ್ನು ತೊಡೆಯಲು ತಮ್ಮ ಪ್ರಾಣದ ಆಸೆಯನ್ನೇ ಬಿಡುವರು. ಕಷ್ಟಕ್ಕೆ ಸಿಕ್ಕಿದವರು ಮರೆ

ಹೊಕ್ಕಾಗ ಅವರಿಗೆ ನೆರವಾಗುವ ಸಲುವಾಗಿ ತಮ್ಮ ಕ್ಷೇಮವನ್ನು ಮರೆಯುವರು. ಸೇಡು ತೀರಿಸಿಕೊಳ್ಳಲು ಗಾಯಗೊಳಿಸುವಾಗ ಎಂದೂ ತಮ್ಮ ಶತ್ರುವಿಗೆ ಮುನ್ನೆಚ್ಚರಿಕೆ ಕೊಡದಿರರು. ಹಾಗೆ ಎಚ್ಚರಿಕೆ ಕೊಟ್ಟ ಮೇಲೆಯೆ ಪ್ರತಿಯೊಬ್ಬನೂ ತನ್ನ ಕವಚವನ್ನು ತೊಟ್ಟು ಕೈಯಲ್ಲಿ ಈಟಿಯನ್ನು ಹಿಡಿಯುವನು. ಯುದ್ಧದಲ್ಲಿ ಓಡಿಹೋಗುವವರನ್ನು ಅವರು ಅಟ್ಟಿಸಿಕೊಂಡು ಹೋಗುವರು. ಆದರೆ ಶರಣಾಗತರಾದವರನ್ನು ಕೊಲ್ಲರು. ಸೇನಾಧಿಪತಿ ಯುದ್ಧದಲ್ಲಿ ಸೋತಾಗ ಹಿಂಸೆಯಿಂದ ಅವನಿಗೆ ಶಿಕ್ಷೆ ಕೊಡುವ ಬದಲು, ಹೆಂಗಸರ ಉಡುಪನ್ನು ಆತನು ಧರಿಸುವಂತೆ ಮಾಡುವರು. ಹಾಗೆ ಮಾಡುವುದರಿಂದ ಆತನು ತಾನಾಗಿಯೆ ತನ್ನ ಪ್ರಾಣತ್ಯಾಗ ಮಾಡಿಕೊಳ್ಳುವಂತೆ ಆಗುತ್ತಿತ್ತು. ಸಹಸ್ರಾರು ಮಂದಿ ನಿರ್ಭೀತರಾದ ವೀರಭಟರ ತಂಡವನ್ನು ರಾಜ್ಯದ ಸರ್ಕಾರ ಪೋಷಿಸಿಕೊಂಡಿರುತ್ತದೆ. ಕದನಕ್ಕೆ ಸಿದ್ಧರಾದಾಗಲೆಲ್ಲ ಪ್ರತಿಸಲವೂ ಮದೋನ್ಮತ್ತರಾಗುವ ಸಲುವಾಗಿ ಮದ್ಯರಸವನ್ನು ಪಾನಮಾಡುವರು. ಆ ಬಳಿಕ ಇವರಲ್ಲೊಬ್ಬನು ಕೈಯಲ್ಲಿ ಈಟಿಯನ್ನು ಹಿಡಿದು, ಹತ್ತು ಸಾವಿರ ಶತ್ರುಗಳನ್ನು ನಿರ್ಲಕ್ಷ್ಯದಿಂದ ಕಾಳೆಗಕ್ಕೆ ಕರೆಕೊಡುವನು. ಸೈನ್ಯವು ದಾಳಿಯಿಡಲು ತೊಡಗಿದಾಗಲೆಲ್ಲ ಅದರ ವೀರಭಟರು ಮುಂಚೂಣಿಯಲ್ಲಿ ರಣಭೇರಿಯ ಶಬ್ದಕ್ಕನುಗುಣವಾಗಿ ಮುನ್ನುಗ್ಗುವರು. ಜೊತೆಗೆ, ಸ್ವಾಭಾವಿಕವಾಗಿ ಭಯಂಕರವಾದ ಸಾವಿರಾರು ಆನೆಗಳಿಗೂ ಮದ್ಯವನ್ನು ಕುಡಿಸಿ ಉನ್ಮತ್ತಗೊಳಿಸುವರು. ಒಬ್ಬರೊಡನೊಬ್ಬರು ಗುದ್ದಾಡುವಾಗ ಅಮಲೇರಿಸುವ ಮದ್ಯವನ್ನು ಪಾನಮಾಡುವರು. ಎಲ್ಲರೂ ಒಟ್ಟಿಗೆ ನುಗ್ಗಿ ಸಿಕ್ಕಿದ್ದನ್ನೆಲ್ಲಾ ಮೆಟ್ಟಿ ತುಳಿಯುವರು. ಅವರೆದುರಿಗೆ ಯಾವ ಶತ್ರುವೂ ನಿಲ್ಲಲಾರ. ಇಂತಹ ಯೋಧರನ್ನೂ ಮದ್ದಾನೆಗಳನ್ನೂ ಪಡೆದ ರಾಜ ಹೆಮ್ಮೆಯಿಂದ ನೆರೆಯ ರಾಜ್ಯಗಳನ್ನು ಹೀಯಾಳಿಸಿ ತಿರಸ್ಕರಿಸುವನು" (I.A.VII., P. 190). ಇತ್ಸಿಂಗ್ ಎಂಬ ಮತ್ತೊಬ್ಬ ಚೀಣಾದೇಶದ ಯಾತ್ರಿಕನು ಕ್ರಿ.ಶ. 7ನೆಯ ಶತಮಾನದ ಅಂತ್ಯದಲ್ಲಿ ಭಾರತದೇಶಕ್ಕೆ ಯಾತ್ರೆ ಬಂದಿದ್ದನು. ಆತನ ಹೇಳಿಕೆಯಂತೆ ವಲಭಿ ವಿಶ್ವವಿದ್ಯಾನಿಲಯದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಅಲ್ಲಿಂದ ಆಡಳಿತಾಧಿಕಾರಿಗಳ ಹುದ್ದೆಯಲ್ಲಿ ನೇಮಕಗೊಳ್ಳಲು ರಾಜರ ಆಸ್ಥಾನಕ್ಕೆ ಹೋಗುತ್ತಿದ್ದರು. ಅದೇ ರೀತಿಯಲ್ಲಿ ಮನಗೋಳಿ, ಸಾಲೋಟ್ಗಿ, ಬಾದಾಮಿ, ಐಹೊಳೆಯಂತಹ ಕರ್ಣಾಟಕದ ಸುಪ್ರಸಿದ್ಧ ಶಿಕ್ಷಣಕೇಂದ್ರಗಳು ಚಾಲುಕ್ಯ, ರಾಷ್ಟ್ರಕೂಟ ಹಾಗೂ ಅವರ ಸಾಮಂತ ಪಾಳೆಯಗಾರರಿಗೆ ಆಡಳಿತಗಾರರನ್ನೂ ಅಧಿಕಾರಿಗಳನ್ನೂ ಒದಗಿಸುತ್ತಿದ್ದವು.

ದೇಶದಾದ್ಯಂತ ಜನರಲ್ಲಿ ಕಲೆ, ಕೈಗಾರಿಕೆ ಹಾಗೂ ವ್ಯಾಪಾರ ವ್ಯಾಪಿಸಿತ್ತು. ಜನರ ಸ್ಥಿತಿ ಉತ್ತಮವಾಗಿ ಸಂಪದಭಿವೃದ್ಧಿಯಿಂದ ಕೂಡಿತ್ತು. ಇಂದಿಗೂ ಅಚ್ಚಳಿಯದೆ ಉಳಿದುಕೊಂಡು ಬಂದಿರುವ ಆ ಕಾಲದ ಸ್ಮಾರಕಗಳು ಕಲೆ, ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಅವರು ಸಾಧಿಸಿದ ಕುಶಲತೆಯ ಬಗೆಗೆ ವಿಶೇಷ ಅಭಿಪ್ರಾಯವನ್ನು ಮೂಡಿಸುತ್ತವೆ.

## ದೇವಾಲಯಗಳು ಹಾಗೂ ಜನೋಪಯೋಗಗಳು

ದಖನ್ನಿನ ಸಾಮಾಜಿಕ ವಿತ್ತನಿರ್ವಾಹಕ್ರಮದಲ್ಲಿ ದೇವಸ್ಥಾನಗಳು ಬಹು ಪ್ರಯೋಜನಕಾರಿ ಉದ್ದೇಶವನ್ನು ಸಾಧಿಸಿದವು. ಅವುಗಳ ಸುತ್ತಲೂ ಎಲ್ಲ ಕುಶಲಕಲೆಗಳೂ ಮೆರೆದವು. ದೇಶದಲ್ಲಿದ್ದ ಶ್ರೇಷ್ಠ ತಾಂತ್ರಿಕ ಪರಿಣತರಿಗೆ ಉದ್ಯೋಗ ದೊರೆಯುವಂತೆ ಮಾಡಿದವು. ಪ್ರತಿನಿತ್ಯವೂ ಅಸಂಖ್ಯಾತ ಪಂಡಿತವರ್ಗಕ್ಕೂ ಪವಿತ್ರಾತ್ಮರಿಗೂ ಸಂತರ್ಪಣೆಯಾಗುತ್ತಿತ್ತು. ಬಡವರಿಗೆ ದಾನಧರ್ಮಗಳನ್ನು ಮಾಡುತ್ತಿದ್ದರು. ಪ್ರತಿದಿನವೂ ನಾರಾಯಣ ಬಲಿಗಾಗಿ—ಎಂದರೆ ಷೋಡಶ ಬ್ರಾಹ್ಮಣರ ಹಾಗೂ ಪರಿವ್ರಾಜಕರ ಸಂತರ್ಪಣೆಗೋಸ್ಕರ ಲಂಜಿಗೇಶ್ವರ ಗ್ರಾಮವನ್ನು ದತ್ತಿಯಾಗಿ ಬಿಟ್ಟ ಉಲ್ಲೇಖವನ್ನು ಮಂಗಳೇಶನ ಶಾಸನದಲ್ಲಿ ಕಾಣಬಹುದು.

ಎರಡನೆಯ ವಿಕ್ರಮಾದಿತ್ಯನ ಲಕ್ಷ್ಮೇಶ್ವರದ ಶಾಸನ (1.A.VI–363) ಮತ್ತು ಎರಡನೆಯ ಕೀರ್ತಿವರ್ಮನ ಆದೂರು ಶಾಸನಗಳು (K.1, I, 7–8) ದಾನಶಾಲೆಗಳ ವಿಷಯ ತಿಳಿಸಿವೆ. ವಿಜಯಾದಿತ್ಯನು ದೇವಾಲಯಗಳ ಗಾಯಕರಿಗೆ (ಗಂಧರ್ವ)ರಿಗೆ ನೀಡಿದ ಕೆಲವು ಮಾನ್ಯಗಳನ್ನು ಲೋಕ ಮಹಾದೇವಿಯು ಸ್ಥಿರಪಡಿಸಿದಳು (1.A., X, P 166). ನಟರಿಗೂ ಉದಾರಸಹಾಯ ನೀಡಿ ಅವರನ್ನು ಗೌರವಿಸಲಾಗುತ್ತಿತ್ತು. ಶತ್ರುನಟ (ಪರನಟ) ಹಾಗೂ ಕುಟಿಲೋಪಾಯದಿಂದ ಪ್ರಸಿದ್ಧರಾದ (ಕುಟಿಲೋನ್ನತ) ನಟ—ಇವರನ್ನೂ ಕುರಿತು ಹೇಳಲಾಗಿದೆ. 'ಅಚಲ 'ನೆಂಬ ಒಬ್ಬನು ತನ್ನ ಹೆಸರನ್ನು ಆರ್ಯಾಚ್ಛಂದಸ್ಸಿನ ಎರಡು ಸುಂದರವಾದ ಪದ್ಯಗಳ ಅಂತ್ಯದಲ್ಲಿ ತಂದಿದ್ದಾನೆ. ದೇವಸ್ಥಾನದ ಗೋಡೆಯ ಮೇಲೆ ಕೆತ್ತಿರುವ ಈ ಪದ್ಯಗಳು ಪ್ರಾಚೀನ ಕರ್ಣಾಟಕದ ನೃತ್ಯಚರಿತ್ರೆಯಲ್ಲಿ ರೋಮಾಂಚಕಾರಿಯಾದ ಅಧ್ಯಯನದ ಉಜ್ವಲ ಸ್ಮಾರಕಗಳಾಗಿವೆ. ಭರತನಾಟ್ಯವು ಇತರ ಪ್ರತಿಸ್ಪರ್ಧಿಯಾದ ನೃತ್ಯಪದ್ಧತಿಗಳನ್ನು ನಿರ್ಣಾಯಕವಾಗಿ ಸೋಲಿಸಿ, ಗೆಲವು ಗಳಿಸಿತ್ತೆಂಬುದಕ್ಕೆ ಈ ಶ್ಲೋಕಗಳು ಸಾಕ್ಷಿಯಾಗಿವೆ. ಭರತನಾಟ್ಯದ ಜೊತೆಗೆ ಬೇರೆ ನೃತ್ಯಶಾಖೆಗಳೂ ಇದ್ದುವೆಂದು ತೋರುತ್ತದೆ. ಮಂಗಳೇಶನ ಕಾಲದ ಬಾದಾಮಿಯ ಗುಹಾಶಾಸನಗಳಲ್ಲೊಂದು ಹೂಗಳನ್ನು ದೇವಾಲಯಕ್ಕೆ ಸರಬರಾಜುಮಾಡಿದ ಮಾಲೆಗಾರರಿಗೆ ದತ್ತಿಯನ್ನು ಬಿಟ್ಟ ಉಲ್ಲೇಖನವನ್ನೊಳಗೊಂಡಿದೆ (I,A.,X,P.60). ದೇವಸ್ಥಾನಗಳು ಆರ್ಯ ಸಂಸ್ಕೃತಿಯ ಪ್ರಸಾರಕ್ಕೆ ಕೇಂದ್ರಗಳಾಗಿದ್ದವು. ಜನರು ದೇವರನ್ನು ಪೂಜಿಸಿ ಭಕ್ತಿಯನ್ನು ಸಲ್ಲಿಸುವುದಕ್ಕಲ್ಲದೆ ಪುರಾಣ ಪುಣ್ಯಕಥೆಗಳನ್ನು ಕೇಳಿ ಧರ್ಮೋಪದೇಶ, ನೀತಿ ಹಾಗೂ ತತ್ತ್ವಗಳಲ್ಲಿ ಶಿಕ್ಷಣವನ್ನು ಪಡೆಯುವುದಕ್ಕೂ ಅವರನ್ನು ದೇವಾಲಯಗಳು ಆಕರ್ಷಿಸಿದವು. ದೇವಸ್ಥಾನಕ್ಕೆ ಸೇರಿದ ವಿದ್ಯಾಮಂದಿರದಲ್ಲಿ ಪ್ರಾಥಮಿಕ ಮಟ್ಟದಿಂದ ಇಂದಿನ ವಿಶ್ವವಿದ್ಯಾನಿಲಯದ ಪದವಿಯ ಮಟ್ಟದ ವರೆಗೂ ಉಚಿತ ಶಿಕ್ಷಣವನ್ನು ಕೊಡಲಾಗಿತ್ತು. ಸ್ವರ್ಗಪ್ರಾಪ್ತಿಗೆ ದಾನ ಒಂದು ಸಾಧನವೆಂದೂ ದೈವೀಕೃಪೆ ಅದರಿಂದ ಲಭಿಸುವುದೆಂದೂ ಭಾವಿಸಲಾಗಿದ್ದಿತು. ದೇವಾಲಯಗಳ ನಿರ್ಮಾಣ, ವಿದ್ಯಾಮಂದಿರಗಳ ಧನಸಹಾಯ, ಬಾವಿಗಳನ್ನು ತೋಡುವುದು, ಕೆರೆಗಳನ್ನು ಕಟ್ಟಿಸುವುದು ಹಾಗೂ ಉಚಿತ ಧರ್ಮಶಾಲೆಗಳಿಗೆ ದತ್ತಿ ಬಿಡುವುದು—ಈ ಎಲ್ಲಕ್ಕೂ ಶ್ರೀಮಂತರಾದವರು ಹೇರಳವಾದ ಹಣವನ್ನು ನೀಡಿದರು. ಸಮಾಜದಲ್ಲಿ ವೃತ್ತಿಗಳ ಆಧಾರದ ಮೇಲೆ ಮೋಚಿಗಳು, ಮೇದರು, ಬೆಸ್ತರು, ಅಗಸರು, ಕಮ್ಮಾರರು, ಅಕ್ಕಸಾಲಿಗರು, ಬೇಡರು, ಹೂವಾಡಿಗರು ಇತ್ಯಾದಿ ವರ್ಗಗಳಾದವು. ತೀರ್ಥಯಾತ್ರೆಗಳು ಜನಪ್ರಿಯವಾಗಿದ್ದವು. ಗೋವನ್ನು ಪವಿತ್ರವಾದ ಪ್ರಾಣಿಯೆಂದು ಸಾರ್ವತ್ರಿಕವಾಗಿ ಪೂಜಿಸುತ್ತಿದ್ದರು. ಉದಾಹರಣೆಗೆ ಹಳಗನ್ನಡದ ಶಾಪಕರೆವ ಪದ್ಯಗಳಲ್ಲಿ ದಾನದ ಉದ್ದೇಶಕ್ಕೆ ಭಂಗವನ್ನುಂಟುಮಾಡಿದವನು ಗೋಬ್ರಾಹ್ಮಣರನ್ನು ಕೊಂದವನ ಲೋಕಕ್ಕೆ–ಎಂದರೆ ನರಕಕ್ಕೆ ಸಂದವನೆಂದು ಹೇಳಿದೆ.

ಸಮಾಜದ ಉಚ್ಚದರ್ಜೆಯ ಬಗೆಗೆ ನಾವು ಹೆಚ್ಚು ತಿಳಿಯಬಲ್ಲೆವು. ಆದರೆ ಜನಸಾಮಾನ್ಯರ ಜೀವನದ ಬಗೆಗೆ ಅಷ್ಟಾಗಿ ತಿಳಿದುಬರುವದಿಲ್ಲ. ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಸಮಾಜ ಜೀವನದ ಮುಖ್ಯಾಧಾರ. ನಾಗಯಿ ಶಾಸನದ ಪದ್ಯವು ಕಾಳಿದಾಸನನ್ನು ಅತ್ಯಂತ ಪರಿಶುದ್ಧನಾದ ಗೃಹಸ್ಥನೆಂದು ವರ್ಣಿಸಿದೆ (H.A.S., VII PP. 11–12; V, 31). ಇಹಪರಗಳಲ್ಲಿ ಪುಣ್ಯವನ್ನುಂಟುಮಾಡುವಂತಹ ಕಾರ್ಯಗಳನ್ನು ಕುರಿತು ಈ ಶಾಸನ ಪ್ರಸ್ತಾವಿಸಿದೆ. ಪ್ರಯಾಗ ಹಾಗೂ ಕುರುಕ್ಷೇತ್ರಗಳಲ್ಲಿ ಸಹಸ್ರ ಬ್ರಾಹ್ಮಣರಿಗೆ ಸಂತರ್ಪಣೆ ನಡೆಸುವುದನ್ನೂ ವಾರಣಾಸಿಯಲ್ಲಿ ಗೋದಾನ ಮಾಡುವುದನ್ನೂ ಅತ್ಯಂತ ಪುಣ್ಯಪ್ರದವಾದ ಕಾರ್ಯವೆಂದು ಪರಿಗಣಿಸಲಾಗಿದ್ದಿತು (S.1.1,, Vol. 75, 11–12–13, dated 787). ಅದರಂತೆ ದಾನಪಾಲನೆಯಿಂದ ಬರುವ ಪುಣ್ಯವು ವಾರಣಾಸಿಯಲ್ಲಿ ಸಾವಿರ ಅಶ್ವಮೇಧಯಾಗಗಳನ್ನು ಮಾಡಿದ ಪುಣ್ಯಕ್ಕೂ, ಕೊಂಬು ಹಾಗು ಗೊರಸುಗಳನ್ನು ಪಂಚವಿಧರತ್ನಗಳಿಂದ ಅಲಂಕರಿಸಿ ಸಾಸಿರ ಗೋವುಗಳನ್ನು ದಾನಮಾಡಿದ ಪುಣ್ಯಕ್ಕೂ ಸಮನೆಂದು ಭಾವಿಸಿದ್ದರು (S.I.1., IX, (1), 102: 11–27–9). ಜೈನರೂ ತೀರ್ಥಸ್ಥಾನದಲ್ಲಿ ಮಹಾಧ್ವಜವನ್ನು

ನಿರಿಸುವುದರಿಂದ ಪುಣ್ಯಲಭಿಸುತ್ತದೆಯೆಂಬ ಭಾವನೆಯಲ್ಲಿ ನಂಬಿಕೆಯನ್ನಿಟ್ಟಿದ್ದರು (ಡಂಬಳದ ಶಾಸನ, ಕ್ರಿ.ಶ 1059. S.1,1., V, 93–1–13). ದಾನಮಾಡುವುದು ಧನಿಕರ ಕರ್ತವ್ಯವೆಂದು ಎಣಿಸಿದ್ದರು. ದಾನಗಳ ಪಟ್ಟಿಯಲ್ಲಿ ಉದಕ, ಸುವರ್ಣ, ಅನ್ನ, ಗೋವು, ಭೂಮಿ, ವೃಕ್ಷ, ವಿವಿಧ ವಿದ್ಯೆ ಹಾಗೂ ಕನ್ಯಾದಾನಗಳೂ ಸೇರಿದ್ದವು. ಇಮ್ಮಡಿ ವಿಕ್ರಮಾದಿತ್ಯನ ಮತ್ತೊಂದು ಶಾಸನ (ಕ್ರಿ.ಶ. 1057)ದಲ್ಲಿ ಕೇಶಿರಾಜನು ಈ ಎಲ್ಲ ದಾನಗಳನ್ನೂ ನೀಡಿ, ಶಿವಾಲಯವೊಂದನ್ನು ಕಟ್ಟಿಸಿದನೆಂದು ತಿಳಿಸಿದೆ (E.1., XVI, pp 84–85 and 87–88–89). ಇತರರು ಕೊಟ್ಟ ದಾನಗಳನ್ನು ಪಾಲಿಸುವುದರಿಂದ ಬರುವ ಪುಣ್ಯವು ದಾನಮಾಡುವುದರಿಂದ ಬರುವ ಪುಣ್ಯಕ್ಕಿಂತಲೂ ಮಿಗಿಲು. ದೇವಸ್ಥಾನವ ಸ್ವತ್ತನ್ನು ಕಸಿದುಕೊಂಡರೆ ಇಲ್ಲವೆ ಸೂರೆಮಾಡಿದರೆ, ಅದು ವಿಷಕ್ಕಿಂತಲೂ ಹಾನಿಕರ. ಏಕೆಂದರೆ ವಿಷ ಒಬ್ಬನನ್ನು ಕೊಂದರೆ ದೇವಸ್ವ ಸೂರೆಗಾರನ ಇಡೀ ಕುಟುಂಬವನ್ನು, ಅವನ ಮುಂದಿನ ಪೀಳಿಗೆಯನ್ನು ವಿನಾಶ ಗೊಳಿಸುವುದು. ಈ ಎಲ್ಲ ಶಾಪಕರೆವ ಪದ್ಯಗಳು ದೈವದ ಮಹಿಮೆಯಲ್ಲಿ ಹಾಗೂ ಧರ್ಮದ ಮರ್ಮದಲ್ಲಿ ಇಟ್ಟ ಗುಪ್ತ ವಿಶ್ವಾಸವನ್ನು ವ್ಯಕ್ತಪಡಿಸುತ್ತವೆ. ಆಧ್ಯಾತ್ಮಿಕ ಶ್ರೇಯಸ್ಸು ಲೌಕಿಕ ಪ್ರೇಯಸ್ಸಿಗಿಂತಲೂ ಉತ್ತಮವೆಂದು ಜನರು ನಂಬಿದರು.

### ವೀರರಿಗೆ ಸ್ಮಾರಕಗಳು

ಮೃತರಾದ ವೀರರು, ಗುರುಗಳು, ಮಹಾಪುರುಷರು ಹಾಗೂ ಪತಿಯೊಡನೆ ಸಹಗಮನ ಮಾಡಿದ ಮಹಾಸತಿಯರ ನೆನಪಿಗೆ ಸ್ಮಾರಕಗಳು ಸ್ಥಾಪಿತವಾದವು. ಇವನ್ನು 'ಪರೋಕ್ಷವಿನಯ'ದ ಪ್ರಶಸ್ತ ಕಾರ್ಯಗಳೆಂದು ವರ್ಣಿಸಲಾಗಿದೆ. ಕರ್ಣಾಟಕ ದೇಶದಲ್ಲಿ ವೀರಗಲ್ಲುಗಳೂ ಮಾಸ್ತಿಕಲ್ಲುಗಳೂ ತುಂಬಿವೆ.

ಆತ್ಮಾರ್ಪಣೆಯು ಕೂಡ ರೂಢಿಯಲ್ಲಿದ್ದಿತು. ಸುಮಾರು ಕ್ರಿ.ಶ. 900ರ ಕೊಟೂರು ಶಾಸನವು ಶೈವಗುರು ಶಂಭುವಿನ ಮರಣವನ್ನು ವರ್ಣಿಸಿದೆ. ಸೋಮೇಶ್ವರ ಚಕ್ರವರ್ತಿಯು ಧಾರವಾಡ ಜಿಲ್ಲೆಯ ಕುರುವತ್ತಿಗ್ರಾಮದ ಬಳಿ ತುಂಗಭದ್ರಾನದಿಯಲ್ಲಿ ಶಾಸ್ತ್ರೋಕ್ತವಾಗಿ ಮುಳುಗಿಕೊಂಡು ಮಹಾಯೋಗದಿಂದ ಜೀವನಪರಿಸಮಾಪ್ತಿಯನ್ನು ಹೊಂದಿದನು (E.C. VII SK 136). ಆಮರಣಾಂತ ಉಪವಾಸ ಕೈಗೊಳ್ಳುವ ಜೈನರ ಸಲ್ಲೇಖನವ್ರತದ ಆಚರಣೆಯು ಕೂಡ ಇದ್ದಿತು. ಗಂಗರಾಜನಾದ ಮಾರಸಿಂಹನು ಬಂಕಾಪುರದಲ್ಲಿ ತನ್ನ ಗುರು ಅಜಿತಸೇನರ ಸನ್ನಿಧಿಯಲ್ಲಿ ಈ ವ್ರತವನ್ನು ಕೈಕೊಂಡು ಮಡಿದನು.

ಶೂಲಬ್ರಹ್ಮ ಹಾಗೂ ವೇಳೆವಾಕ್ಯ ಎಂಬ ವ್ರತಗಳನ್ನು ಜನರು ಸರ್ವೇಸಾಧಾರಣವಾಗಿ ಆಚರಿಸು ತ್ತಿದ್ದರೆಂಬುದೂ ಕಂಡು ಬರುತ್ತದೆ. ಶಿವಮೊಗ್ಗ ಜಿಲ್ಲೆಯ ಕ್ರಿ.ಶ. 1060ರ ಶಾಸನದಲ್ಲಿ (E.C. VII, SK. 136) ಎತ್ತರವಾದ ಸ್ಥಳದಿಂದ ಶೂಲದ ಮೊನೆಯ ಮೇಲೆ ಬಿದ್ದು ಮರಣಹೊಂದುವ ಪದ್ಧತಿಯಾದ ಶೂಲಬ್ರಹ್ಮದ ವಿಷಯವಿದೆ. ಕ್ರಿ.ಶ. 1130ರ ಮತ್ತೊಂದು ಶಾಸನದಲ್ಲಿ (E.C. VII, P 249) ವೇಳೆವಾಕ್ಯ ವ್ರತದ ಪ್ರಸ್ತಾಪವಿದೆ. ತನ್ನ ಒಡೆಯನೊಡನೆ ಸ್ವರ್ಗಕ್ಕೆ ಹೋಗಲು ಕೈಕೊಂಡ ವ್ರತವೇ ವೇಳೆವಾಕ್ಯ. ಕದಂಬ ರಾಜನಾದ ತೈಲಪನೊಡನೆ ಸ್ವರ್ಗಕ್ಕೆ ಹೋಗಲು ಬೊಪ್ಪಣ ಈ ವ್ರತವನ್ನು ಸ್ವೀಕರಿಸಿದನು (ಬೊಪ್ಪಣ ವೇಳೆವಾಕಿಯಂ ನಿಲಿಸಿ ತೈಲಪದೇವನ ಕೂಡೆ ಸ್ವರ್ಗಸ್ಥನಾಗಲು). ನಾಲ್ವಡಿ ವೀರಸೋಮೇಶ್ವರನ ರಾಣಿ ಲಚ್ಚಲದೇವಿಯ ವೇಳೈಕ್ಕಾರನಾದ ಬೋಕನು ಆಕೆಯೊಡನೆ ಮರಣಹೊಂದಲು ಪ್ರತಿಜ್ಞೆ ತೊಟ್ಟು, ಕ್ರಿ.ಶ. 1185ರಲ್ಲಿ ರಾಜನ ಆಳಿಕೆಯ ಐದನೆಯ ವರ್ಷದಲ್ಲಿ ಮೃತನಾದನು. ಪತಿಯೊಡನೆ ಸಹಗಮನಮಾಡುವ ಸತೀಪದ್ಧತಿಯು ರೂಢಿಯಲ್ಲಿದ್ದಿತೆಂದು ಹಿಂದೆಯೇ ತಿಳಿಸಿದೆ. ಒಂದನೆಯ ಸಿಂದ ರಾಚಮಲ್ಲನ ಮಂತ್ರಿ ಬೇಚಿರಾಜನ ಇಬ್ಬರು ಪತ್ನಿಯರಾದ ಬೈಲಿಯಕ್ಕ ಹಾಗೂ ಮಲಿಪನಿಯಕ್ಕ—ಇವರು

ಪತಿಯು ಶವದೊಡನೆ ಚಿತೆಯೇರಿ ಆತ್ಮಾರ್ಪಣೆ ಮಾಡಿಕೊಂಡರು (E. 1. IV, 273, 448-50). ಬೆಳತೂರಿನ ಮನಕರಗಿಸುವ ಕನ್ನಡ ಶಾಸನವೊಂದರಲ್ಲಿ ದೇಕಬ್ಬೆಯ ಸಹಗಮನದ ಉಲ್ಲೇಖವಿದೆ.

### ಆರ್ಥಿಕ ಪರಿಸ್ಥಿತಿ

ನೈಸರ್ಗಿಕ ಉತ್ಪನ್ನಗಳು, ಕೈಗಾರಿಕೆ, ವಾಣಿಜ್ಯ ಹಾಗೂ ಜಯಿಸಿ ತಂದ ವಸ್ತುಗಳಿಂದ ದೇಶಕ್ಕೆ ಸಂಪತ್ತನ್ನು ದೊರಕಿಸಲಾಗುತ್ತಿತ್ತು. ಪ್ರಕೃತಿಯು ಇಲ್ಲವೆ ನೈಸರ್ಗಿಕ ಉತ್ಪನ್ನಗಳೆಂದರೆ ಕೃಷಿ, ಆಹಾರಧಾನ್ಯ, ಹತ್ತಿ, ಎಣ್ಣೆಬೀಜ, ಸಾಗುವಾನಿ, ಗಿಡಮೂಲಿಕೆ, ತೆಂಗು ಮೊದಲಾದವು. ಕರ್ಣಾಟಕವು ಅತಿ ಪ್ರಾಚೀನ ಕಾಲದಿಂದಲೂ ಹತ್ತಿಬೆಳೆಗೆ ಪ್ರಸಿದ್ಧವಾಗಿದೆ. ಕ್ರಿ.ಶ. ಒಂದನೆಯ ಶತಮಾನಕ್ಕೆ ಸೇರಿದ 'ಪೆರಿಪ್ಲಸ್'ಎಂಬ ಗ್ರೀಕ್ ಯಾತ್ರಾಗ್ರಂಥದಲ್ಲಿ ದಕ್ಷಿಣ ಇಂಡಿಯಾದ ಬಂದರುಗಳಿಂದ ಹತ್ತಿಯ ನೂಲು ಹಾಗೂ ಬಟ್ಟೆಗಳನ್ನು ರಫ್ತು ಮಾಡುತ್ತಿದ್ದರೆಂದು ಹೇಳಿದೆ. ಬಟ್ಟೆಗೆ ಬಣ್ಣಹಾಕುವುದು ಪುರಾತನಕಾಲದಿಂದಲೂ ತಿಳಿದಿತ್ತು. ಬಟ್ಟೆಗೆ, ಅದರಲ್ಲಿ ಮಹಿಳೆಯರು ಉಡುತ್ತಿದ್ದ ವಸ್ತ್ರಕ್ಕೆ ಬಣ್ಣಹಾಕಲು, ನೀಲಿಗಿಡದ ಪುಡಿ ಅತ್ಯಗತ್ಯವಾಗಿತ್ತು. ಆ ಗಿಡ ದಖನ್ನಿನಲ್ಲಿ ಬೆಳೆಯುತ್ತಿತ್ತು. ಅಲ್ಲಿನ ಠಾಣದಂತಹ ಬಂದರುಗಳಿಂದ ಅದನ್ನು ರಫ್ತು ಮಾಡಲಾಗುತ್ತಿತ್ತು. ಈಗಿರುವಂತೆ ಆ ಕಾಲದಲ್ಲಿಯೂ ಜೋಳ, ಗೋಧಿ, ಸಜ್ಜೆ, ಬತ್ತ, ನಾನಾವಿಧವಾದ ದ್ವಿದಳ ಧಾನ್ಯ, ಕುಸುಮೆ, ಹರಳು (ಔಡಲ), ಸಾಸಿವೆ, ಎಳ್ಳು, ಪುಂಡಿ ಮೊದಲಾದ ಎಣ್ಣೆ ಬೀಜಗಳ ಬೆಳೆ ಮುಖ್ಯವಾದವುಗಳು ; ಕೊಂಕಣದಲ್ಲಿ ತೆಂಗು, ಅಡಕೆ, ಲವಂಗ, ಏಲಕ್ಕಿ, ಮೆಣಸು ಮೊದಲಾದವೂ ಮಾವು, ಹಲಸು, ಪೇರಿಳೆ, ಬಾಳೆ, ನಿಂಬೆ, ಕಿತ್ತಳೆ ಮೊದಲಾದ ಹಣ್ಣುಗಳೂ ನಾನಾ ಬಗೆಯ ಕಾಯಿಪಲ್ಯಗಳೂ ಔಷಧಿಗಿಡಗಳೂ ಬೆಲ್ಲಕ್ಕಾಗಿ ಕಬ್ಬೂ ಮುಖ್ಯವಾದ ಬೆಳೆಗಳು. ಪ್ರಾಗೈತಿಹಾಸಿಕ ಕಾಲದಿಂದಲೂ ರಫ್ತು ಮಾಡುತ್ತಿದ್ದ ಶ್ರೀಗಂಧ, ತೇಗ, ಬಿದಿರು--ಕರ್ಣಾಟಕದಲ್ಲಿ ಹೇರಳವಾಗಿ ಉತ್ಪನ್ನವಾಗುತ್ತಿದ್ದಿತು. ಔಷಧಿಯ ಗಿಡಗಳು ಕರ್ಣಾಟಕದಲ್ಲೆಲ್ಲಾ ತುಂಬಿವೆ. ಧಾರವಾಡ ಜಿಲ್ಲೆಯ ಗದುಗಿನ ಬಳಿಯಲ್ಲಿರುವ ಕಪ್ಪತ ಗುಡ್ಡದ ಬೆಟ್ಟದ ಸಾಲು ಹಾಗೆಯೇ ಸಹ್ಯಾದ್ರಿಯ ಶ್ರೇಣಿಯಲ್ಲಿನ ಬೆಳಗಾವಿಯ ಬಳಿಯ ವೈಜನಾಥ ಗುಡ್ಡ ಹಾಗು ಚಿಕ್ಕಮಗಳೂರಿನ ಬಳಿಯ ಬಾಬಾಬುಡನ್‌ಗಿರಿ--ಈಗಲೂ ಔಷಧಿಯ ಗಿಡಮೂಲಿಕೆಗಳಿಗೆ ಸುಪ್ರಸಿದ್ಧವಾಗಿವೆ. ಸತ್ತವರನ್ನು ಬದುಕಿಸುವ ಸಂಜೀವಿನಿಯ ಮೂಲಿಕೆಯು ಕರ್ಣಾಟಕದ ಬೆಟ್ಟಗುಡ್ಡಗಳಲ್ಲಿವೆಯೆಂಬುದು ಜನರ ನಂಬಿಕೆ.

### ಲೋಹಗಳು :

ಕಡಪ, ಬಳ್ಳಾರಿ, ಬಿಜಾಪುರ ಮತ್ತು ಧಾರವಾಡಗಳಲ್ಲಿ ತಾಮ್ರದ ಗಣಿಗಳಿರುವ ಕುರುಹುಗಳಿವೆ (Ball : A manual of Geology of India, Part III Chap· VI ; Tonehe : A Bibliography of India, Geology and Physical Geology, P 113–137). ತಾಮ್ರದ ಪಾತ್ರೆಗಳೂ ಆಭರಣಗಳೂ ಪುರಾತನ ಕಾಲದಿಂದಲೂ ಇಂಡಿಯಾದಲ್ಲಿ ವಾಡಿಕೆಯಾಗಿದ್ದುದರಿಂದ ತಾಮ್ರ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನವಾಗುತ್ತಿದ್ದಿತೆಂದು ತೋರುತ್ತದೆ. ಈ ಕಾಲದ ಕರ್ಣಾಟಕದ ಸಂಪತ್ತಿಗೆ ಈ ತಾಮ್ರದ ಗಣಿಗಳ ಹುಟ್ಟುವಳಿ ಪೂರಕವಾಗಿದ್ದಿರಬೇಕು. ಅದರ ಬೆಲೆ ಇಂದಿಗಿಂತ ಹೆಚ್ಚಾಗಿದ್ದಿತು. (Moreland : India at the Death of Akbar, P 147) ಪ್ರಾಗೈತಿಹಾಸಿಕ ಕಾಲದಿಂದಲೂ ದಖನ್ನಿನ ಜನರಿಗೆ ಬೆಳ್ಳಿ ಗೊತ್ತಿದ್ದಿತು. ಆದರೆ ಕರ್ಣಾಟಕದಲ್ಲಿ ಬೆಳ್ಳಿಯ ಗಣಿಗಳಿದ್ದುವೆಂಬುದಕ್ಕೆ ಸೂಚನೆ ಕೊಡುವ ಯಾವ ದಾಖಲೆಯೂ ಬೆಳಕಿಗೆ ಬಂದಿಲ್ಲ. ಸಂಸ್ಕೃತದಲ್ಲಿ 'ರಜತ'ವೆಂಬ ಪರ್ಯಾಯಪದವಿದ್ದರೂ ಬಿಳಿಯ ಲೋಹ (ಕನ್ನಡದಲ್ಲಿ ಬೆಳ್ಳಿ) ಎಂದೇ ಹೆಸರಾಂತಿದೆ. ಚಿನ್ನಕ್ಕಿಂತ ಹೆಚ್ಚು ಬೆಲೆಯುಳ್ಳದ್ದಾಗಿ ಇದ್ದುದೇ ಅದರ ಅಭಾವವನ್ನು ಸಾರುತ್ತದೆ. ಅಶೋಕನ ಕಾಲದಲ್ಲಿಯೂ (ಕ್ರಿ.ಪೂ. 3ನೆಯ ಶತಮಾನ)

ಕರ್ನಾಟಕವಲ್ಲಿ ಚಿನ್ನದ ಗಣಿಗಳು ಹೇರಳವಾಗಿದ್ದುವು. ರಾಯಚೂರು ಜಿಲ್ಲೆಯ ಮಸ್ಕಿ ಬಳಿಯಲ್ಲಿ ದೊರೆತ ಅಶೋಕನ ಸಣ್ಣ ಶಾಸನಗಳಲ್ಲೊಂದರಲ್ಲಿ ಸುವರ್ಣಗಿರಿಯೆಂಬ ಒಂದು ಸ್ಥಳವನ್ನು ಹೆಸರಿಸಿದೆ. ಮಸ್ಕಿಯ ಬಳಿ ಈಗಲೂ ಹಟ್ಟಿಯ ಚಿನ್ನದ ಗಣಿಗಳಿವೆ. ಗದುಗಿನ ಸಮೀಪದ ಕಪ್ಪತ ಗುಡ್ಡದಲ್ಲಿ ಚಿನ್ನದ ಗಣಿಗಳಿದ್ದವು. ಬಹು ಹಿಂದಿನಿಂದಲೂ ಕರ್ನಾಟಕದ ಅನೇಕ ನದಿಗಳ ಮರಳಿನಿಂದ ಚಿನ್ನದ ಹುಡಿಯನ್ನು ಬೇರ್ಪಡಿಸಿ ಬಂದ ಹಣದಿಂದ ಬದುಕುತ್ತಿದ್ದ ಅನೇಕ ಕುಟುಂಬಗಳಿದ್ದುವು ಎಂಬುದು ತಿಳಿದ ಸಂಗತಿಯೇ ಆಗಿದೆ. ಬಹುಶಃ ಈ ಕಾರಣದಿಂದಲೆ ಚಿನ್ನ ಮಿಕ್ಕವುಗಳಿಗಿಂತ ಅಗ್ಗವಾಗಿತ್ತು. ಬೃಹಸ್ಪತಿ ಹೇಳುವ ಪ್ರಕಾರ ಚಿನ್ನ ಮತ್ತು ತಾಮ್ರಗಳ ಪರಸ್ಪರ ಸಂಬಂಧದ ಬೆಲೆಯ ದರಗಳು 1 ; 48 (Dr. B. R. Bhandarkar : Carmichael Lectures, 1921, p. 189).

**ಉದ್ಯೋಗ ಮತ್ತು ವಾಣಿಜ್ಯ**

ಐಹೊಳೆ ಶಾಸನವು 'ಪುರಿ' ಪಟ್ಟಣವನ್ನು ಪಶ್ಚಿಮ ಸಮುದ್ರದ ಲಕ್ಷ್ಮಿಯೆಂದು ವರ್ಣಿಸಿದೆ. ಬೊಂಬಾಯಿ ಬಳಿಯ ಘಾರಾಪುರಿಯೇ ಆ ಪಟ್ಟಣವೆಂದು ಗುರುತಿಸಲಾಗಿದೆ. ಬೃಹತ್ಪ್ರಮಾಣದಲ್ಲಿ ಆಮದು ರಫ್ತುಗಳನ್ನು ಆ ಸ್ಥಳದ ಮೂಲಕ ಮಾಡುತ್ತಿದ್ದರು. ಆದರಿಂದ ಅಪಾರ ಸಂಪತ್ತು ಭಂಡಾರಕ್ಕೆ ಬರುತ್ತಿತ್ತು ಎಂದು ಆ ವರ್ಣನೆಯಿಂದ ಧ್ವನಿತವಾಗಿದೆ. ಸುಪಾರಕ—ಇಂದಿನ ಸೊಪಾರ—ಮತ್ತೊಂದು ಬಂದರು. ಆದರೆ ಇವು ಕರ್ನಾಟಕ ಸೀಮೆಯ ಉತ್ತರದಲ್ಲಿದ್ದುವು. ಅದೇ ಐಹೊಳೆ ಶಾಸನದಲ್ಲಿ ಡಾ. ಫ್ಲೀಟ್ ಅವರು ಕೊಲ್ಲಾಪುರದ ಜಿಲ್ಲೆಯ ವೆಂಗುರ್ಲ ಬಳಿಯಿರುವ ಇಂದಿನ ರೇದಿ ಎಂದು ಗುರುತಿಸಿರುವ ರೇವತೀದ್ವೀಪವನ್ನು ಪುಲಿಕೇಶಿಯು ವಶಪಡಿಸಿಕೊಂಡನೆಂದು ತಿಳಿಸಿದೆ. ಆತನ ಸೋದರನಾದ ಚಂದ್ರಾದಿತ್ಯನು ಪಶ್ಚಿಮ ಕರಾವಳಿಯನ್ನು ಆಳುತ್ತಿದ್ದನು. ಕರ್ನಾಟಕ ಮತ್ತು ಅರೇಬಿಯ, ಇಜಿಪ್ಟ್, ರೋಂ ಮೊದಲಾದ ದೂರ ದೇಶಗಳ ಮಧ್ಯೆ ವ್ಯಾಪಾರ ನಡೆಯುತ್ತಿದ್ದಿತು. ಪಾಂಡಿಚೆರಿಯ ದಕ್ಷಿಣಕ್ಕಿರುವ ಅರಿಕಾಮೇಡುವಿನಂತಹ ಪೂರ್ವದ ಕರಾವಳಿಯ ಪ್ರದೇಶದಲ್ಲಿದ್ದಂತೆ ಪಶ್ಚಿಮ ಸಮುದ್ರದ ತೀರದಲ್ಲಿಯೂ ರೋಮನರ ಕೆಲವು ನೆಲೆಗಳು ಇದ್ದಿರಬೇಕು. ಕ್ರಿ.ಪೂ. ಎರಡನೆಯ ಶತಮಾನದ ಆಕ್ಸಿರಿಂಕಸ್ (ಕೆಳಇಜಿಪ್ಟ್) ಎಂಬಲ್ಲಿ ಕಂಡುಹಿಡಿದ ಒಂದು ಗ್ರೀಕ್ ನಾಟಕವನ್ನುಳ್ಳ ಒಂದು ಪಪೈರಸ್ (ಜಂಬುಕಾಗದ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಬಳಿಯ ಮಲ್ಪೆ ಎಂಬಲ್ಲಿನ ಒಂದು ದೃಶ್ಯವನ್ನು ವರ್ಣಿಸುತ್ತದೆ. ಬಹುಶಃ ವ್ಯಾಪಾರೋದ್ಯಮವನ್ನು ಮುಂದುವರಿಸುವ ಉದ್ದೇಶದಿಂದ ಕರ್ನಾಟಕದ ಸಮುದ್ರ ತೀರದಲ್ಲಿ ಗ್ರೀಕರು ಹಾಗು ರೋಮನರು ತಮ್ಮ ನೆಲೆಗಳನ್ನು ಸ್ಥಾಪಿಸಿದರೆಂಬುದಕ್ಕೆ ಅದೊಂದು ಸೂಚನೆಯಾಗಿದೆ. ಪಶ್ಚಿಮ ಕರಾವಳಿಯನ್ನು ಪ್ರಾಕ್ತನ ವಸ್ತು ಸಂಶೋಧನಶಾಸ್ತ್ರದ ದೃಷ್ಟಿಯಿಂದ ಚೆನ್ನಾಗಿ ಪರಿಶೋಧಿಸಿಲ್ಲ. ಬನವಾಸಿ ಅಥವಾ ವೈಜಯಂತಿ ಕ್ರಿ.ಶ. 1ನೆಯ ಶತಮಾನದಿಂದ ಪ್ರಸಿದ್ಧವಾಗಿತ್ತು. ಬನವಾಸಿಯಿಂದ ಬಂದ ಭೂತಪಾಲನೆಂಬ ವರ್ತಕನು ಕಾರ್ಲಾಗುಹೆಗಳ ಬಳಿ ಒಂದು ಕಂಬವನ್ನು ಕಟ್ಟಲು ಧನಸಹಾಯ ಮಾಡಿದ ನೆಂಬುದರಿಂದ ಕರ್ನಾಟಕದ ವಣಿಜರು ಎಲ್ಲೆಲ್ಲೂ ವ್ಯಾಪಾರೋದ್ಯಮವನ್ನು ನಡೆಸಿಕೊಂಡು ಹೋದ ರೆಂಬುದಕ್ಕೆ ಸೂಚನೆ ದೊರೆಯುತ್ತದೆ. ಇಮ್ಮಡಿ ಪುಲಿಕೇಶಿಯ ಕ್ರಿ.ಶ. 643ರ ಐಹೊಳೆ ಶಾಸನವು ಬನವಾಸಿಯು ಸಂಪತ್ತಿನಲ್ಲಿ ಸುರಪುರವಾದ ಅಮರಾವತಿಯೊಡನೆ ಸ್ಪರ್ಧಿಸುತ್ತಿತ್ತು—ಎಂಬುದಾಗಿ ವರ್ಣಿಸಿದೆ (ಸುರಪುರ ಪ್ರಸ್ಪರ್ಧಿನೀ ಸಂಪದಾಂ).

ರಫ್ತಾಗುತ್ತಿದ್ದ ವಸ್ತುಗಳೆಂದರೆ ಹತ್ತಿಯ ನೂಲು, ಬಟ್ಟೆ, ಒರಟಾದ ಹಾಗೂ ನಯವಾದ ಮಸ್ಲಿನ್ ಬಟ್ಟೆ, ಚರ್ಮ, ಚಾಪೆ, ನೀಲಿ, ಧೂಪ, ಮುತ್ತು, ವೀಳೆಯದೆಲೆ, ಅಡಕೆ, ತೆಂಗಿನಕಾಯಿ, ಶ್ರೀಗಂಧ, ತೇಗ, ಎಳ್ಳೆಣ್ಣೆ, ದಂತ, ನವಿಲುಗರಿ ಮೊದಲಾದವು. ಕ್ರಿ.ಶ. ಒಂದನೆಯ ಶತಮಾನದ 'ಪೆರಿಪ್ಲಸ್' ಈ ಕೆಲವನ್ನು ತಿಳಿಸಿದೆ. ಅಲ್‌ಇದ್ರಿಸಿ, ಮಾರ್ಕೊಪೋಲೊ ಹಾಗೂ ಇಬ್ನ್ ಬತೂತ—ಇವರ ಹೇಳಿಕೆಯಂತೆ

ವಜ್ರವು ದಖನ್ನಿನ ಗಣಿಗಳಲ್ಲಿ ದೊರೆಯುತ್ತಿದ್ದುವೆಂದೂ ಅವನ್ನು ರಫ್ತುಮಾಡಲು ಅವಕಾಶವಿರಲಿಲ್ಲವೆಂದೂ ತಿಳಿದುಬರುತ್ತದೆ. ಪೆರಿಪ್ಲಸ್ ತಿಳಿಸಿರುವಂತೆ ಪರ್ಷಿಯನ್ ಕೊಲ್ಲಿಯಿಂದ ಆಮದಾಗುತ್ತಿದ್ದ ವಸ್ತುಗಳೆಂದರೆ: ಮುತ್ತು, ಖರ್ಜೂರ, ಚಿನ್ನ, ಗುಲಾಮರು, ಇಟಲಿಯ ದ್ರಾಕ್ಷಾರಸ, ತಾಮ್ರ, ತವರ, ಸತು, ಗೋಮೇಧಿಕ, ಬೆಳುಗಾರ, ಮಿಠಾಯಿ, ಲವಂಗ, ಗಟ್ಟಿಗಾಜು, ಆಂಟಿಮನಿ, ಚಿನ್ನದ ಹಾಗೂ ಬೆಳ್ಳಿಯ ನಾಣ್ಯಗಳು, ರಾಜರಿಗಾಗಿ ಹಾಡುವ ಹುಡುಗರು ಹುಡುಗಿಯರು (Periplus pp. 40–42). ಮಾರ್ಕೊಪೊಲೊ ಪ್ರಕಾರ, ಕುದುರೆಯ ವ್ಯಾಪಾರ ಬಿರುಸಾಗಿ ನಡೆಯುತ್ತಿತ್ತು. ದಖನ್ನಿನ ಬಂದರಿಗೆ ಬಂದು ಮುಟ್ಟಿದ ಪ್ರತಿಯೊಂದು ಹಡಗಿನ ಸರಕೂ ಕುದುರೆಗಳೆ. ಎತ್ತುಗಳೂ ಎತ್ತಿನ ಗಾಡಿಗಳೂ ಸಾರಿಗೆಯ ಸಾಧನಗಳಾಗಿದ್ದವು. ಕುದುರೆಗಳಿಗೆ ಬಹಳ ಬೆಲೆ. ಎತ್ತುಗಳನ್ನೂ ಕೀಳುತಳಿಯ ಒಜ್ಜೆಹೇರುವ ಕುದುರೆಗಳನ್ನೂ ಗುಡ್ಡಗಾಡಿನ ಪ್ರದೇಶಗಳಲ್ಲಿ ಸರಕು ಸಾಗಣೆಗಾಗಿ ಬಳಸುತ್ತಿದ್ದರು. ಹಲವಾರು ಜಾತಿಯವರು ವ್ಯಾಪಾರದ ಸರಕುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ಯಾತ್ರಾಪ್ರಯಾಣಿಕ ವರ್ತಕ ವೃತ್ತಿಯನ್ನು ಅನುಸರಿಸುತ್ತಿದ್ದರು. ಒಬ್ಬೊಬ್ಬನ ಬಳಿಯಲ್ಲಿ ನೂರಾರು ಎತ್ತುಗಳಿದ್ದುವು.

**ಆಂತರಿಕ ಆರ್ಥಿಕ ಆಡಳಿತ**

ಭೂಕಂದಾಯವೆ ಆದಾಯದ ಒಂದು ಪ್ರಧಾನ ಆಕರ. ಆ ಕಾರಣ ಅದೊಂದು ಗಣ್ಯವಾದ ಮೂಲ. ಭೂಹಿಡಿವಳಿಯ ರೀತಿ ರೈತವಾರಿ. ಭೂಕಂದಾಯ ಕೊಡುವ ಜಮೀನುದಾರರೂ ಇದ್ದರು. ಹಳ್ಳಿಗಳ ಕಂದಾಯದ ವಸೂಲಿಯ ಕೆಲಸವನ್ನು ಗ್ರಾಮಪತಿಗಳು ಮಾಡಬೇಕಾಗಿದ್ದಿತು. ಕ್ರಿ.ಶ. 10ನೆಯ ಶತಮಾನದ ಮಧ್ಯಕಾಲಕ್ಕೆ ಸೇರಿದ ತಿರುಕ್ಕಲವರ ಶಾಸನದಲ್ಲಿ ದಾಖಲೆಯಾಗಿರುವ ಪ್ರಕಾರ ರೈತನಿಗೆ ಎರಡು ಪಾಲು, ಭೂಮಾಲಿಕನಿಗೆ ಒಂದು ಪಾಲು ದೊರೆಯುವ ಆಧಾರದ ಮೇಲೆ ಭೂಮಿಯನ್ನು ಉಳುವವನ ವಶಕ್ಕೆ ಕೊಡಲಾಗಿತ್ತು. ಭೂವರ್ಗಾವಣೆಗೆ ಗ್ರಾಮದ ಮಹಾಜನರ ಒಪ್ಪಿಗೆ ಬೇಕಾಗಿತ್ತು. ಐವತ್ತು ಮಂದಿ ರೈತರ–ಬಹುಶಃ ಆ ಸ್ಥಳದ ಮಹಾಜನರಾದ ಅವರ–ಒಪ್ಪಿಗೆ ಪಡೆದು ಒಂದು ಜೈನ ಬಸದಿಗೆ ಕೊಡುಗೆ ಬಿಟ್ಟ ದಾಖಲೆ ಸೌಂದತ್ತಿಯ ಶಾಸನದಲ್ಲಿದೆ (B.B.R.A.S.X. 208). ನೇಸರಗಿ ಶಾಸನವು ಅದರ ಸಮೀಪದ ಒಂದು ದೇವಾಲಯಕ್ಕೆ 800 ಕಮ್ಮಗಳ ಭೂಮಿಯನ್ನು ರಟ್ಟರಾಜನಾದ ಕಾರ್ತವೀರ್ಯನು ಕೊಟ್ಟ ಸಮಯದಲ್ಲಿ ಆ ಹಳ್ಳಿಯ ಆರುಮಂದಿ ಮುಖ್ಯಸ್ಥರು ದ್ರವ್ಯದಾನವನ್ನು ಪಡೆದರೆಂಬ ಸಂಗತಿಯನ್ನು ತಿಳಿಸುತ್ತದೆ. ರಾಜರೂ ಭೂಮಿಯನ್ನು ದತ್ತಿಯಾಗಿ ಬಿಡುತ್ತಿದ್ದರು. ಗ್ರಾಮದ ಮುಖ್ಯಸ್ಥರೂ ಕೆಲವು ನಿರ್ದಿಷ್ಟ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಶಾಸನ ಹಾಗೂ ಸ್ಮೃತಿಗಳ ಸಾಕ್ಷ್ಯಾಧಾರಗಳ ಪ್ರಕಾರ ಭೂಮಾಲಿಕತ್ವವನ್ನು ಹಸ್ತಾಂತರಗೊಳಿಸುವಲ್ಲಿ ಗ್ರಾಮಸಮಾಜದ ಅಂಗೀಕಾರ ಅಗತ್ಯವಾಗಿತ್ತು. ಏಕೆಂದರೆ ಅದರ ರಕ್ಷಣೆ ಅವರಿಗೆ ಸೇರಿತ್ತು. ಕ್ರಿ.ಶ. 800ಕ್ಕೆ ಸೇರಿದ ಮಹಾಶಿವಗುಪ್ತನ ಶಿವಪುರದ ಶಾಸನವು ಐದುಗ್ರಾಮಗಳಲ್ಲಿನ ನಾಲ್ಕನೆಯ ಒಂದು ಪಾಲನ್ನು ಹದಿನೈದುಜನ ಬ್ರಾಹ್ಮಣರಿಗೆ ನೀಡಿದೆ. ಆ ದತ್ತಿಯನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬಹುದಾಗಿದ್ದಿತು. ಆದರೆ ದತ್ತಿ ಪಡೆದವರು ಹಾಗೂ ಅವರ ವಂಶಿಕರು ಸದಾ ಪಂಡಿತರಾಗಿಯೂ ಉದಾತ್ತ ನೈತಿಕ ಚಾರಿತ್ರ ವುಳ್ಳವರಾಗಿಯೂ ಇರಬೇಕೆಂಬ ನಿಯಮವಿತ್ತು. ಈ ದತ್ತಿಯ ಒಬ್ಬ ಪಾಲುದಾರನು ಸಂತಾನವಿಲ್ಲದೆ ಸತ್ತರೆ, ಇಲ್ಲವೆ ಅಜ್ಞಾನಿಯಾದರೆ ಅಥವಾ ಅನೀತಿಯವನಾದರೆ, ಆತನ ಪಾಲನ್ನು ಉಳಿದ ಪಾಲುದಾರರು ಮಾತ್ರ ಬೇರೆ ಯಾರಾದರೂ ಬಂಧುಗಳಿಗೆ ವಹಿಸಿಕೊಡಬೇಕಲ್ಲದೆ ರಾಜನಲ್ಲವೆಂದು ಸ್ಪಷ್ಟವಾಗಿ ಆ ಶಾಸನ ತಿಳಿಸಿದೆ (E. I. XI, P. 92). ಬಡಗಿ, ಕಮ್ಮಾರ, ಕುಂಬಾರ ಮೊದಲಾದ ಗ್ರಾಮಪಾಂಚಾಳರಿಗೆ ಅವರ ವೃತ್ತಿಸೇವೆಗಾಗಿ ನಿರ್ದಿಷ್ಟ ಧಾನ್ಯಭಾಗವನ್ನು ಹಂಚಿಕೊಡುತ್ತಿದ್ದರು.

**ನಾಣ್ಯಗಳು**

ರಾಜ್ಯದ ಕಂದಾಯವನ್ನು ಕೆಲವು ವೇಳೆಗೆ ಒಟ್ಟಿಗೂ ಕೆಲವು ವೇಳೆ ಸ್ವಲ್ಪಭಾಗದ ಮಟ್ಟಿಗೂ ಧಾನ್ಯರೂಪವಾಗಿ ತೆಗೆದುಕೊಳ್ಳುತ್ತಿದ್ದರು. ನಾಣ್ಯಗಳ ಮೂಲಕ ಕಂದಾಯವನ್ನು ಪಾವತಿಮಾಡುತ್ತಿದ್ದರೇ ಎಂಬುದು ತಿಳಿದುಬರದು. ನಾಣ್ಯಚಲಾವಣೆಯಿದ್ದಿತು. ಬೆಳ್ಳಿ, ಚಿನ್ನ, ತಾಮ್ರ ಹಾಗೂ ಸೀಸದ ಅನೇಕ ನಾಣ್ಯಗಳನ್ನು ಶಾಸನಗಳಲ್ಲಿ ತಿಳಿಸಲಾಗಿದೆ. ಆದರೆ ಅವುಗಳಲ್ಲಿ ಅನೇಕ ದೊರೆತಿಲ್ಲ (Rapson : Indian Coins, XIV, P. 27). 'ಪರಮಮಾಹೇಶ್ವರ ಮಹಾದಿತ್ಯಪಾದ (ಅಥವಾ ಮಾತಾಪಿತೃಪಾದ) ನುಧ್ಯಾತ ಶ್ರೀ ಕೃಷ್ಣರಾಜಃ' ಎಂಬ ಅಂಕಿತವನ್ನುಳ್ಳ ಬೆಳ್ಳಿನಾಣ್ಯಗಳ ಒಂದು ರಾಶಿ ದಖನ್ನಿನಲ್ಲಿ ಸಿಕ್ಕಿದೆ. ಅವು ಕೊನೆಯ ಗುಪ್ತರ ಕಾಲಕ್ಕೆ ಸೇರಿದುವೆಂದು ಹೇಳುವರು. ರಾಷ್ಟ್ರಕೂಟರ ಬೆಳ್ಳಿ ನಾಣ್ಯಗಳ ಮೇಲೆ ಅವುಗಳು ಅಚ್ಚಾದ ಕಾಲ ತಿಳಿಸಿದೆ (Sulaiman Saudagar : P.30). ದಖನ್ ಮತ್ತು ದಕ್ಷಿಣ ಇಂಡಿಯಾದಲ್ಲಿ ಬಹಳವಾಗಿ ಬಳಸುತ್ತಿದ್ದ ನಾಣ್ಯಗಳೆಂದರೆ ದ್ರಮ್ಮ, ಸುವರ್ಣ, ಗದ್ಯಾಣಕ, ಕಲಂಜು, ಕಾಸು ಮತ್ತು ವಿಸದಿ. ಇಂಡೊ-ಬ್ಯಾಕ್ಟ್ರಿಯನ್ ದೊರೆಗಳ ಸುಮಾರು 65 ಗ್ರೇಯ್ನುಗಳ ತೂಕದ ಗ್ರೀಕ್ ಡ್ರ್ಯಾಕ್ಮೆಯೇ ದ್ರಮ್ಮವೆಂದು ಗುರುತಿಸಲಾಗಿದೆ. ಅವೆರಡೂ ಬೆಳ್ಳಿ ಹಾಗೂ ಚಿನ್ನದ ನಾಣ್ಯಗಳು. ಕೌಟಿಲ್ಯ, ಮನು ಮೊದಲಾದವರು ಸುವರ್ಣನಾಣ್ಯಗಳನ್ನು ತಿಳಿಸಿರುವರು. ಅವುಗಳ ತೂಕ 80 ರಕ್ತಿಕ (ಗುಂಜಿ) ಗಳು ಅಥವಾ 146 ಗ್ರೇಯ್ನುಗಳು. ಈ ಕಾಲದ ಸುವರ್ಣನಾಣ್ಯಗಳು 45ರಿಂದ 50 ಗ್ರೇಯ್ನುಗಳ ತೂಕ ವುಳ್ಳವೆಂದು ಅಲ್ತೇಕರ್ ಅವರ ಅಭಿಪ್ರಾಯ (Altekar's Rashtrakutas). ಕನ್ನಡ ಶಾಸನಗಳು ಕಲಂಜು, ಗದ್ಯಾಣಕ ಮತ್ತು ಕಾಸುಗಳನ್ನು ದೇಶದ ಚಲಾವಣೆಯ ನಾಣ್ಯಗಳೆಂದು ಹೇಳಿವೆ. ಇವೆಲ್ಲವೂ ಚಿನ್ನದ ನಾಣ್ಯಗಳು. ಕಲಂಜು 45 ರಿಂದ 50 ಗ್ರೇಯ್ನುಗಳ ತೂಕವುಳ್ಳದ್ದು. ಅದು ತೂಕದಲ್ಲಿ ಸುಮಾರು $\frac{1}{4}$ ತೊಲ (Elliot : Coins of South India P. 46). ಗದ್ಯಾಣಕ ಎರಡು ಕಲಂಜುಗಳಿಗೆ ಸಮವಾಗಿ 90 ಗ್ರೇಯ್ನುಗಳ ತೂಕವುಳ್ಳ ಚಿನ್ನದ ನಾಣ್ಯ. ಕಾಸಿನ ತೂಕ ಸುಮಾರು 15 ಗ್ರೇಯ್ನ್. (20 ಕಾಸುಗಳು = 7 ಕಲಂಜುಗಳು). ಉಳಿದ ಮಂಜಾಡಿ ಮತ್ತು ಅಕ್ಕಮ್ ಎಂಬ ನಾಣ್ಯಗಳೂ ದೊರೆತಿವೆ. (ಮಂಜಾಡಿ = $\frac{1}{20}$ ಕಲಂಜು, $2\frac{1}{2}$ ಗ್ರೇಯ್ನುಗಳ ತೂಕವುಳ್ಳದ್ದು). ಅಕ್ಕಮ್ = $\frac{1}{12}$ ಕಾಸು, ತೂಕ $1\frac{1}{4}$ ಗ್ರೇಯ್ನುಗಳು. ಭಂಡಾರ್‌ಕರ್ ಅವರ ಅಭಿಪ್ರಾಯದಂತೆ ಬೆಳ್ಳಿ ಮತ್ತು ಚಿನ್ನದ ಪ್ರಮಾಣ 14 : 1.

ಟಂಕ ಒತ್ತಿ ನಾಣ್ಯಗಳನ್ನು ಮಾಡುತ್ತಿದ್ದರು (Sudi No. 154, B.K. Part II, Vol). ಸೂಡಿ ಶಾಸನ ತ್ರಿಭುವನಮಲ್ಲನ ಅಕ್ಕಸಾಲಿಗನಾದ ಉತ್ತವೋಜನು ರಾಜಮುದ್ರೆ (ಉಂಡಿಗೆ) ಯನ್ನುಳ್ಳ ಕಮ್ಮಟದಾಣೆಯಿಂದ ಚಿನ್ನವನ್ನೊತ್ತಿ ನಾಣ್ಯವನ್ನು ತಯಾರಿಸುತ್ತಿದ್ದನು. ಕಮ್ಮಟ ಎಂದರೆ ಟಂಕಶಾಲೆ. ಧಾರವಾಡದ ಲೊಕ್ಕಿಗುಂಡಿಯಲ್ಲಿ ಟಂಕಶಾಲೆಯಿದ್ದಿತಾದ ಕಾರಣ, ಲೊಕ್ಕಿಗುಂಡಿ ಗದ್ಯಾಣವೆಂಬ ನಾಣ್ಯ ಚಲಾವಣೆಯಲ್ಲಿದ್ದುದು ತಿಳಿದದ್ದೇ ಆಗಿದೆ. ಪಣಕ್ಕೂ ಗದ್ಯಾಣಕ್ಕೂ ಇದ್ದ ಸಂಬಂಧವೆಂದರೆ : 10 ಪಣಗಳು —ಒಂದು ಗದ್ಯಾಣ (Nidagundi Inscription No. 189 of B.K., Vol I Part II ; 5 ಗದ್ಯಾಣ—10 ಪಣಗಳು—6 ಗದ್ಯಾಣ). ಒಂದು ಪೊನ್ನಿ (ಹೊನ್ನಿ)ಗೆ ವರ್ಷಕ್ಕೆ ಬಡ್ಡಿ ಗದ್ಯ ಅಥವಾ ಗದ್ಯಾಣ. ಆದುದರಿಂದ 10 ಪಣಗಳಿಗೆ ಬಡ್ಡಿ 2 ಪಣಗಳು ($\frac{1}{5}$ ಅಥವಾ 20%) : ಸಂಗವಶೆಟ್ಟಿ ಕಟ್ಟಿಸಿದ ಒಂದು ಬುದ್ಧವಿಹಾರದಲ್ಲಿ ನಂದಾದೀವಿಗೆಗಾಗಿ ತೆಲ್ಲಿಗರ 50 ಕುಟುಂಬಗಳು ನೀಡಿದ ಗದುಗು ತಾಲೂಕಿನ ಡಂಬಳದ ಕ್ರಿ.ಶ. 1106ರ ದಾನ ಶಾಸನದ ಪ್ರಕಾರ (B.K., I, Vol, I, No. 144 dated 1098 A.D.).

ಡಾ. ಅಲ್ತೇಕರ್ ಅವರ 'ರಾಷ್ಟ್ರಕೂಟರು' ಎಂಬ ಗ್ರಂಥದಿಂದ ತೆಗೆದುಕೊಂಡ ಈ ಕೆಳಗಿನ ಬೆಲೆಗಳ ಪಟ್ಟಿಯಿಂದ ಪ್ರಯೋಜನವಾಗಬಹುದು.

1930ರಲ್ಲಿದ್ದ ದರಗಳಂತೆ ಬೆಲೆ ಸ್ವಲ್ಪ ಹೆಚ್ಚುಕಡಮೆ ಹಾಗೆಯೇ ಇದ್ದುವು.

| | ಹೆಸರು | ಲೋಹ | ಸರಿಸುಮಾರು ತೂಕ | ರೂ.ಗಳಲ್ಲಿ ಸರಿಸುಮಾರು ಬೆಲೆ |
|---|---|---|---|---|
| 1 | ದ್ರಮ್ಮ | ಬೆಳ್ಳಿ | 65 ಗ್ರೇಯ್ನುಗಳು ಅಥವಾ $\frac{1}{3}$ ತೊಲ | ಸುಮಾರು 6 ಆಣೆಗಳು |
| 2 | ದ್ರಮ್ಮ | ಚಿನ್ನ | 65 ಗ್ರೇಯ್ನುಗಳು ಅಥವಾ $\frac{1}{3}$ ತೊಲ | 7 ರೂ. ಗಳು |
| 3 | ಕಲಂಜು | ಚಿನ್ನ | 48 ಗ್ರೇಯ್ನುಗಳು ಅಥವಾ $\frac{1}{4}$ ತೊಲ | 5 ರೂ. ಗಳು |
| 4 | ಗದ್ಯಾಣಕ | ಚಿನ್ನ | 96 ಗ್ರೇಯ್ನುಗಳು ಅಥವಾ $\frac{1}{2}$ ತೊಲ | 10 ರೂ. ಗಳು |
| 5 | ಕಾಸು | ಚಿನ್ನ | 15 ಗ್ರೇಯ್ನುಗಳು | 1 ರೂ. 10 ಆಣೆಗಳು |
| 6 | ಮಂಜಾಡಿ | ಚಿನ್ನ | $2\frac{1}{2}$ ಗ್ರೇಯ್ನುಗಳು | 4 ಆಣೆಗಳು |
| 7 | ಅಕ್ಕಮ್ | ಚಿನ್ನ | $1\frac{1}{4}$ ಗ್ರೇಯ್ನುಗಳು | 2 ಆಣೆಗಳು |

ವಾಣಿಜ್ಯ ಹಾಗೂ ಕೈಗಾರಿಕೆಗಳಿಗೆ ಸರಾಫಿನ (ಬ್ಯಾಂಕಿನ) ಸೌಲಭ್ಯವಿದ್ದಿರಬೇಕೆಂದು ಊಹಿಸ ಬಹುದು. ಕರ್ಣಾಟಕದ ಉದ್ದಿಮೆ ಹಾಗೂ ಕೈಗಾರಿಕೆಗಳ ಸುಸ್ಪಷ್ಟವಾದ ಲಕ್ಷಣವಾದ ವಾಣಿಜ್ಯ ಸಂಘಗಳು ಈ ಹಣಕಾಸಿನ ಸೌಲಭ್ಯವನ್ನು ಒದಗಿಸಿದವು. ಕ್ರಿ.ಶ. 775ರಲ್ಲಿ ಲಕ್ಷ್ಮೇಶ್ವರದಲ್ಲಿ ನೆಯ್ಗೆಕಾರರ ವಾಣಿಜ್ಯ ಸಂಘವೊಂದಿತ್ತು (E.I.VI, 165). ಮುಳುಗುಂದದ ಕ್ರಿ.ಶ 880ರ ಶಾಸನ (B.B.R.A.S. X P. 192) ತನ್ನ ಆಡಳಿತಾಧಿಕಾರಕ್ಕೆ 360 ಪಟ್ಟಣಗಳನ್ನು ಒಳಪಡಿಸಿಕೊಂಡಿದ್ದ ಒಂದು ವಾಣಿಜ್ಯ ಸಂಘದ ನಾಲ್ವರು ಪ್ರಮುಖರು ಕೊಟ್ಟ ದಾನವನ್ನು ಉಲ್ಲೇಖಿಸಿದೆ. ಆ ಶಾಸನದಲ್ಲಿ 2,000 ವರ್ತಕರ ಒಪ್ಪಿಗೆ ತೆಗೆದುಕೊಂಡು ಕೆಲವು ಸ್ಥಳೀಯ ಬ್ರಾಹ್ಮಣರು ನೀಡಿದ ದತ್ತಿಯ ವಿಷಯವಿವೆ. ಅತಿ ವಿಶಾಲವಾದ ಪ್ರದೇಶ ಹಾಗೂ ಅಸಂಖ್ಯಾತ ವರ್ತಕರನ್ನುಳ್ಳ ಆ ವಾಣಿಜ್ಯಸಂಘ ಬಹು ದೊಡ್ಡದಾಗಿತ್ತೆಂಬುದು ಸುಸ್ಪಷ್ಟವಿದೆ. ವಾಣಿಜ್ಯ ಸಂಘವೊಂದು 18 ಪಟ್ಟಣಗಳಲ್ಲಿ ತನ್ನ ಕಾರ್ಯಾಲಯಗಳನ್ನು ಪಡೆದಿತ್ತೆಂದು ಬಳ್ಳಿಗಾಮೆಯ ಕ್ರಿ.ಶ. 1083ರ ಶಾಸನ ತಿಳಿಸುತ್ತದೆ. ಮನಗೋಳಿಯ ಮತ್ತೊಂದು ಶಾಸನ ಕ್ರಿ.ಶ. 1116ರಲ್ಲಿ (E.I.V.P. 22) ತೆಲ್ಲಿಗರು, ನೆಯ್ಗೆಕಾರರು, ಪಾಂಚಾಳರು, ಮೇದರು, ಚಾಪೆ ಹೆಣೆಯು ವವರು, ಹಣ್ಣು ಮಾರುವವರು—ಈ ಹಲವಾರು ಸಂಘಗಳವರು ನೀಡಿದ ದತ್ತಿಯನ್ನು ಉಲ್ಲೇಖಿಸಿದೆ. ಕ್ರಿ.ಶ. 1136ರ ಕೊಲ್ಹಾಪುರದ ಶಾಸನವೂ ಕ್ರಿ.ಶ. 1146ರ ಮೀರಜ್ ಶಾಸನವೂ (E.I.XI, P 33) ಇಂದಿನ ಬೆಳಗಾಂ, ಬಿಜಾಪುರ ಮತ್ತು ಕೊಲ್ಹಾಪುರ ಜಿಲ್ಲೆಗಳನ್ನೊಳಗೊಂಡ ಪ್ರದೇಶದಲ್ಲಿ ಸದಸ್ಯರನ್ನೊಳಗೊಂಡ ವೀರಬಣಜುಗಳ ವಾಣಿಜ್ಯ ಸಂಸ್ಥೆಯನ್ನು ಉಲ್ಲೇಖಿಸಿವೆ. ಅಯ್ಯಾವೊಳೆ (ಐಹೊಳೆ) 500ಕ್ಕೆ ವ್ಯಾಪಕ ವಾದ ಅಧಿಕಾರವಿತ್ತು. ಉದ್ದಿಮೆ ಹಾಗೂ ವಾಣಿಜ್ಯವನ್ನು ತನ್ನ ಅಂಕಿತಕ್ಕೊಳಪಡಿಸಿಕೊಂಡಿತ್ತಲ್ಲದೆ ದೇವಸ್ಥಾನ ಹಾಗೂ ಬ್ರಾಹ್ಮಣರಿಗೆ ಕೊಟ್ಟ ದತ್ತಿಗಳನ್ನು ಪರಿಪಾಲಿಸುವ ಹಾಗೂ ಅಂತರರಾಜ್ಯ ಕಲಹಗಳನ್ನು ನಿರ್ಣಯಿಸಿ ಬಗೆಹರಿಸುವ ಅಧಿಕಾರವನ್ನು ಪಡೆದಿತ್ತು. 'ಯಾಜ್ಞವಲ್ಕ್ಯಸ್ಮೃತಿ' (II, P 89) ಮತ್ತು ಸೋಮದೇವನ 'ನೀತಿ ವಾಕ್ಯಾಮೃತ' (XXX, P 9) ಗಳು ವಾಣಿಜ್ಯ ಸಂಘಗಳನ್ನು ಉಲ್ಲೇಖಿಸಿವೆ. ಶಾಸನ ಪಡೆದು ಸಂಘವಾದಂತಹ ಆ ಸಂಸ್ಥೆಗಳು ತಮ್ಮ ಸದಸ್ಯರು ತಪ್ಪದೆ ಪಾಲಿಸಬೇಕಾದ ನಿಯಮಗಳನ್ನು ರಚಿಸಬಲ್ಲವಾಗಿದ್ದುವು. ಬಳ್ಳಿಗಾಮೆಯ ವಾಣಿಜ್ಯ ಸಂಘ 500 ಆಜ್ಞೆಗಳನ್ನು ಮಾಡಿದ್ದಿತು. ಮನು (VIII, 41) ಮತ್ತು ಯಾಜ್ಞವಲ್ಕ್ಯರು (II-189) ಶಾಸನದ ಹೇಳಿಕೆಗಳನ್ನು ಸಮರ್ಥಿಸಿ ಈ ವಾಣಿಜ್ಯ ಸಂಘಗಳು ಮಾಡಿದ ನಿಯಮಗಳೂ ನಿಯಮಪಾಲನೆಯ ಕ್ರಮಗಳೂ ಸಾರ್ವಜನಿಕರ ಹಿತಕ್ಕೆ ವಿರುದ್ಧ ವಲ್ಲದಿದ್ದರೆ ಅವುಗಳನ್ನು ರಾಜರು ಗೌರವಿಸಬೇಕೆಂದು ತಿಳಿಸಿದ್ದಾರೆ. ಈ ಸಂಘಗಳಿಗೆ ತಮ್ಮದೇ ಆದ ತುರಾಯಿ ಧರಿಸಿದ ಧ್ವಜಗಳಿದ್ದುವು. ಬಳ್ಳಿಗಾಮೆ ಮತ್ತು ಕೊಲ್ಹಾಪುರದ ವೀರಬಣಜುಗಳ ವಾಣಿಜ್ಯ ಸಂಘಗಳ ಧ್ವಜಗಳ ಮೇಲೆ ಬೆಟ್ಟದ ಮುದ್ರೆಯಿತ್ತು. ಡಂಬಳದ ವಾಣಿಜ್ಯ ಸಂಘವು ಚಾಲುಕ್ಯ

ಚಕ್ರವರ್ತಿಯಾದ ಜಗದೇಕಮಲ್ಲ (ಕ್ರಿ.ಶ. 1018—1040)ನಿಂದ ರಾಜಶಾಸನ ಮಾಡಿಸಿ, ತನ್ನದೇ ಆದ ಛತ್ರ ಹಾಗೂ ಚಾಮರಗಳನ್ನು ಬಳಸುವ ಹಕ್ಕನ್ನು ಪಡೆದಿದ್ದಿತು (I.A,X, 188). ಶಾಸನಗಳಲ್ಲಿ ವಾಣಿಜ್ಯ ಸಂಘದವರನ್ನು ಪಟ್ಟಣ ಹಾಗೂ ನಗರಗಳ ಅಧಿಪತಿಗಳೆಂದು ವರ್ಣಿಸಿರುವುದರಿಂದ ದೊಡ್ಡ ಪಟ್ಟಣಗಳ ಹಾಗೂ ನಗರಗಳ ಸರ್ಕಾರದ ವಶಕ್ಕೆ ಆ ವಾಣಿಜ್ಯ ಸಂಘಗಳನ್ನು ಒಪ್ಪಿಸಿದ್ದಂತೆ ತೋರುತ್ತದೆ. ಡಂಬಳ ಹಾಗೂ ಕೊಲ್ಲಾಪುರ ಶಾಸನಗಳು ವೀರಬಣಜುಗಳನ್ನು ಮಹೋಗ್ರ ಧೈರ್ಯದೇವಿಯು ಆಲಿಂಗಿಸಿದ ವಕ್ಷಸ್ಥಳದವರೆಂದು ವರ್ಣಿಸಿದೆ. ತಮ್ಮದೇ ಆದ ಸೈನ್ಯ ಹಾಗೂ ಪೋಲೀಸ್ ಪಡೆ ಅವರಿಗಿತ್ತು. ಸುರಕ್ಷಿತವಾಗಿ ಸ್ಥಳದಿಂದ ಸ್ಥಳಕ್ಕೆ ಸರಕುಗಳ ಸಾಗಾಣಿಕೆಯಾಗುವುದನ್ನು ನೋಡಿಕೊಳ್ಳುವ ಕೆಲಸ ಅವುಗಳದು. ಕ್ರಿ.ಶ. 1092ರ ಕಟಿಗೇರಿಶಾಸನವು 500 ಮಹಾಜನರು ತಮಗೆ ಸಲ್ಲಬೇಕಾದ ಸುಂಕವನ್ನು ದೇವಾಲಯ ವೊಂದಕ್ಕೆ ಒಪ್ಪಿಸಿದರೆಂಬುದನ್ನು ನಮಗೆ ತಿಳಿಸುತ್ತದೆ. ಸರಾಫಿನ ಉದ್ಯಮವನ್ನು ಈ ವಾಣಿಜ್ಯ ಸಂಘಗಳು, ಖಾಸಗಿ ವ್ಯಕ್ತಿಗಳು ಹಾಗೂ ಕುಟುಂಬಗಳು ನಡೆಸುತ್ತಿದ್ದವು.

### ಬಡ್ಡಿದರ

ಕೌಟಿಲ್ಯ (II–15), ಯಾಜ್ಞವಲ್ಕ್ಯ (11–37) ಮತ್ತು ಮನು (VIII–41) ಇವರು ಅಸಲಿನ ಮೇಲೆ 15 ಬಡ್ಡಿಗೆ ಅನುಮತಿ ಕೊಟ್ಟಿದ್ದಾರೆ. ಅಮೋಘವರ್ಷನ ಒಂದು ಶಾಸನ (I.A., XIII, P. 133 and 136) 9ನೆಯ ಶತಮಾನದಲ್ಲಿ ವಿಧಿಸುತ್ತಿದ್ದ ಬಡ್ಡಿ ದರವನ್ನು ಕುರಿತ ವಿಷಯ ವನ್ನೊದಗಿಸುತ್ತದೆ. ಸ್ಥಳೀಯ ಶಿಲಾಹಾರ ರಾಜವಂಶದ ಮಂತ್ರಿ ಬುದ್ಧನ ಪೂಜೆಗೆ ವರ್ಷಕ್ಕೆ 20 ದ್ರಮ್ಮ ಗಳನ್ನೂ ಕಟ್ಟಡದ ದುರುಸ್ತಿಗೆ 3 ದ್ರಮ್ಮಗಳನ್ನೂ ಬೌದ್ಧ ಸಂನ್ಯಾಸಿಗಳ ಉಡುಪಿಗೆ 5 ದ್ರಮ್ಮಗಳನ್ನೂ ಗ್ರಂಥಗಳನ್ನು ಕೊಂಡುಕೊಳ್ಳುವುದಕ್ಕೆ 1 ದ್ರಮ್ಮವನ್ನೂ ಒದಗಿಸಲು 160 ದ್ರಮ್ಮಗಳನ್ನು ಧನಸಂಚಯವಾಗಿಟ್ಟನು. ಅದರಿಂದ 160 ದ್ರಮ್ಮಗಳಿಗೆ ವರ್ಷಕ್ಕೆ 29 ದ್ರಮ್ಮಗಳ ಆದಾಯವನ್ನು ಗಳಿಸಬಹುದಾಗಿತ್ತು. ಅದನ್ನು ಬಡ್ಡಿಯೆಂದು ಪರಿಗಣಿಸಬಹುದು. ಲೆಕ್ಕ ಹಾಕಿದರೆ ಬಡ್ಡಿಯ ದರ ವರ್ಷಕ್ಕೆ ಶೇಕಡ 17 ಆಗುತ್ತದೆ.

ಅಸಲು ಹಣದ ಮೇಲೆ ಹಾಗೂ ಎಲ್ಲ ಬಗೆಯ ಸಾಲಗಳ ಮೇಲೆ ಬರುವ ಬಡ್ಡಿಯನ್ನು ನಿಶ್ಚಯಿಸಲು ಸಹಾಯಕವಾದ ಶಾಸನಗಳು ಹೇರಳವಾಗಿವೆ. 9ನೆಯ ಶತಮಾನದ ಒಂದು ಶಾಸನ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಾಮಂತನಾದ ವೈದುಂಬ ಮಹಾರಾಜನ ರಾಣಿ ನೀಡಿದ ದತ್ತಿಯನ್ನು ಉಲ್ಲೇಖಿಸಿದೆ. ಅದರಲ್ಲಿ 20 ಕಟಂಜುಗಳ ಮೇಲಿನ ಬಡ್ಡಿ ಬತ್ತ 20 ಕಲಂಗಳೆಂದು ತಿಳಿಸಿದೆ. ಎಂದರೆ ಒಂದು ಕಟಂಜುವಿನ ಬಡ್ಡಿಗೆ 8ರಿಂದ 12 ಕಲಂಗಳಷ್ಟು ಬತ್ತವನ್ನು ಕೊಂಡುಕೊಳ್ಳಬಹುದಾಗಿತ್ತು. ಬಡ್ಡಿಯ ದರ ಶೇಕಡ 10ರಿಂದ 15 ಆಗುತ್ತದೆ. ಆದರೆ ಸ್ಥಳದಿಂದ ಸ್ಥಳಕ್ಕೆ ಬಡ್ಡಿ ವ್ಯತ್ಯಾಸವಾಗಿತ್ತು. ಕ್ರಿ.ಶ. 915ರ ಬಾಣ ಶಾಸನವೊಂದು (E.I., XI, P. 224) 20 ಕಟಂಜುಗಳ ಮೇಲಿನ ಬಡ್ಡಿ 5 ಕಟಂಜುಗಳೆಂದು ಎಂದರೆ ಶೇಕಡ 25 ಎಂದು ತಿಳಿಸಿದೆ. ಅದೇ ಕಾಲದಲ್ಲಿ ಬಡ್ಡಿಯ ದರ ತಮಿಳು ನಾಡಿನಲ್ಲಿ ಶೇಕಡ 40ರ ವರೆಗೂ ಇದ್ದಿತು. ಅಣ್ಣಾಮಲೆಯ ಒಂದು ದೇವಸ್ಥಾನ (S.I,I., III, P. 241) 15 ಇಲಕ್ಕಾಸು ಅಸಲಿನ ಮೇಲೆ 6 ಇಲಕ್ಕಾಸು ಬಡ್ಡಿಯನ್ನು ಎಂದರೆ ಶೇಕಡ 40 ಕೊಟ್ಟಿತು. ಮನು (VIII–41) ಮತ್ತು ಯಾಜ್ಞವಲ್ಕ್ಯ (11–37) ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಿಗೆ ಕ್ರಮವಾಗಿ ಶೇಕಡ 24, 36, 48 ಮತ್ತು 60 ಬಡ್ಡಿಯನ್ನು ವಿಧಿಸಬೇಕೆಂದು ತಿಳಿಸಿದ್ದಾರೆ. ಭದ್ರತೆ ಹೆಚ್ಚಾಗಿದ್ದಂತೆ ಅಸಲಿನ ಮೇಲಿನ ಬಡ್ಡಿ ಕಡಮೆಯಿದ್ದಿತೆಂದು ಅರ್ಥವಾಗುತ್ತದೆ.

**ಬೆಲೆಗಳು**

ಮೇಲೆ ಹೇಳಿದಂತೆ ಕಟಂಜು ಒಂದು ಚಿನ್ನದ ನಾಣ್ಯ; ಕಾಲು ತೊಲ ತೂಕವುಳ್ಳದ್ದು. ಒಂದು ಕಟಂಜುವಿಗೆ 150 ಸೇರು ಅಕ್ಕಿ ಬರುತ್ತಿತ್ತು. ಬೇರೆ ಮಾತಿನಿಂದ ಹೇಳುವುದಾದರೆ, ಅಕ್ಕಿ ಆಗ–ಚಿನ್ನದ ಬೆಲೆ ತೊಲಕ್ಕೆ 20 ರೂ. ಇದ್ದ 1930ರ (Altekar's Rashtrakutas, P. 379) ರೂಪಾಯಿಗೆ ಸುಮಾರು 130 ಸೇರೂ ಚಿನ್ನದ ಬೆಲೆ ತೊಲಕ್ಕೆ 150 ರೂ. ಇದ್ದ 1960ರ ರೂಪಾಯಿಗೆ 4 ಸೇರೂ ಬರುತ್ತಿತ್ತು. ಕ್ರಿ.ಶ. 915ರ ಒಂದು ಬಾಣ ಶಾಸನದಲ್ಲಿ 4 ಕಟಂಜುವಿಗೆ ಒಂದು ದೇವಾಲಯದಲ್ಲಿ ಇಡೀ ವರ್ಷ ನಂದಾದೀಪ ಉರಿಯಲು ಬೇಕಾದ 190 ನಾಟಿ ತುಪ್ಪ ಬರುತ್ತಿತ್ತು. 8 ನಾಟಿಗಳು 6 ಪೌಂಡಿಗೆ ಸಮ. 190 ನಾಟಿಗಳು ಸಮಾರು 142½ ಪೌಂಡುಗಳಿಗೆ ಸಮ. 4 ಕಟಂಜುಗಳು ಎಂದರೆ ಒಂದು ತೊಲ ಚಿನ್ನದ ಬೆಲೆ 1930ರ 20 ರೂ. 1960ರ 150 ರೂ. ಆಗ ಈ ಪ್ರಮಾಣದಷ್ಟು ತುಪ್ಪವನ್ನು ಕೊಂಡುಕೊಳ್ಳಲು ಸಾಕಾಗುತ್ತಿತ್ತು. ದಕ್ಷಿಣ ಇಂಡಿಯಾದ ಒಂದು ಶಾಸನದಲ್ಲಿ (S.I.I., II, P. 9), ಒಂದು ನಾಟಿ ಎಣ್ಣೆ ಒಂದು ತುಣಿ ಬತ್ತದ ಬೆಲೆಯಾಗುತ್ತಿತ್ತು. ಎಂದರೆ 32 ನಾಟಿ ಬತ್ತ 12½ ನಾಟಿ ಅಕ್ಕಿಗೆ ಸಮಾನವಾಗುತ್ತಿತ್ತು.

**ದ್ವಿದಳಧಾನ್ಯಗಳ ಬೆಲೆ**

ಸುಮಾರು 25 ಸೇರು ದ್ವಿದಳಧಾನ್ಯವನ್ನು 1930ರ ರೂ. ಗೂ ಸುಮಾರು 3½ ಸೇರನ್ನು 1960ರ ರೂ. ಗೂ ಕೊಂಡುಕೊಳ್ಳಬಹುದಾಗಿತ್ತು (Altekar: Rashtrakutas, P. 382). 1965ರಲ್ಲಿ ದ್ವಿದಳ ಧಾನ್ಯಗಳ ಬೆಲೆ ರೂಪಾಯಿಗೆ ಒಂದು ಸೇರಿಗಿಂತ ಕಡಮೆ.

1½ ಉಟಕ್ಕು ಬತ್ತಕ್ಕೆ ಅಷ್ಟೇ ಪ್ರಮಾಣದ ಉಪ್ಪು ಬರುತ್ತಿತ್ತೆಂದು ದಾಖಲೆಗಳಿಂದ ತಿಳಿದು ಬರುತ್ತದೆ. 75 ಸೇರು ಬತ್ತದ ಬೆಲೆ 1930ರಲ್ಲಿ ಒಂದು ರೂಪಾಯಿ. ಎಂದರೆ 1960ರಲ್ಲಿ ಅದೇ ಒಂದು ರೂಪಾಯಿಗೆ 10½ ಸೇರು. 10ನೆಯ ಶತಮಾನಕ್ಕಿಂತ ಕ್ರಿ.ಶ. 1930ರ ಬೆಲೆಯು ಮಟ್ಟ ಸುಮಾರು ಶೇಕಡ 700, 1960ರಲ್ಲಿ ಶೇಕಡ 5200. 1965ರಲ್ಲಿ ಶೇಕಡ 18,200 ಹೆಚ್ಚಾಗಿದ್ದಿತು.

**ಜೀವನ ವೆಚ್ಚ**

ಧರ್ಮಶಾಲೆಯಲ್ಲಿ 25 ಬ್ರಾಹ್ಮಣರ ಭೋಜನಕ್ಕಾಗಿ ಒಂದು ವರ್ಷಕ್ಕೆ ಬೇಕಾದ ಬತ್ತ 932½ ಕಲಂಗಳು. ತರಕಾರಿ, ಸೌದೆ, ತುಪ್ಪ, ಮೊಸರು, ಸಾಂಬಾರು ಪದಾರ್ಥ, ವೀಳೆಯದೆಲೆ, ಅಡಕೆ ಮತ್ತು ಅಡಿಗೆಯವರ ಸಂಬಳಕ್ಕಾಗಿ ಪ್ರತಿಯೊಬ್ಬನಿಗೆ ದಿನವೊಂದಕ್ಕೆ ಒಂದು ಕುರಣಿ ಹಾಗೂ ಎರಡು ನಾಟಿಯ ಪ್ರಮಾಣದಷ್ಟು ಬತ್ತ ಅಗತ್ಯವಾಗಿತ್ತು (S.I.I., III, No. 151). ಇನ್ನೊಂದು ಶಾಸನದಲ್ಲಿ (S.I.I., No. 28) 240 ಶಿವಯೋಗಿಗಳಿಗೆ ಒಪ್ಪೊತ್ತಿನ ದಾಸೋಹಕ್ಕೆ 25 ಕಲಂಗಳಷ್ಟು ಬತ್ತವನ್ನು ಕೊಂಡುಕೊಳ್ಳುವುದಕ್ಕೆ ಅವಕಾಶಮಾಡಿತ್ತು. ಇದರಿಂದ ಪ್ರತಿಯೊಬ್ಬ ವ್ಯಕ್ತಿಗೂ ದಿನವೊಂದಕ್ಕೆ 1½ ಸೇರು ಸಾಕಾಗುತ್ತಿತ್ತು. ಅದರಂತೆ ಒಬ್ಬ ಮನುಷ್ಯನಿಗೆ ವರ್ಷವೊಂದಕ್ಕೆ 540 ಸೇರು ಬತ್ತ ಬೇಕಾಗುತ್ತಿತ್ತು. ಎಂದರೆ ಒಂದು ರೂಪಾಯಿಗೆ 95 ಸೇರು ಬತ್ತ ಬರುತ್ತಿದ್ದಾಗ ಅದರ ಬೆಲೆ 7ರೂ. 3 ಆಣೆಗಳು.

ಮೂಲ ಲೇಖಕರು : ಡಾ॥ ಎಸ್. ಸಿ. ನಂದಿಮಠ
ಅನುವಾದಕರು : ಶ್ರೀ ಸಿ. ಮಹಾದೇವಪ್ಪ

# ಶಿಕ್ಷಣ ಮತ್ತು ವಿಜ್ಞಾನ

## (ಪ್ರಾಚೀನ ಕಾಲದಿಂದ ಕ್ರಿ.ಶ. 1200ರ ವರೆಗೆ)

ಈ ವಿಭಾಗದಲ್ಲಿ ನಾವು ನಮ್ಮ ಚರಿತ್ರೆಯ ಆದಿಭಾಗದಲ್ಲಿ ಇದ್ದ ಶಿಕ್ಷಣದ ವಿಷಯವಾಗಿ ಮತ್ತು ಧಾರ್ಮಿಕ ಹಾಗೂ ಪ್ರಾಪಂಚಿಕ ಜ್ಞಾನಸಂಪಾದನೆಗಳಿಗೆ ಇದ್ದಂತಹ ಅವಕಾಶಗಳ ವಿಚಾರವಾಗಿ ಪರ್ಯಾಲೋಚಿಸೋಣ. ಈ ವಿಚಾರವನ್ನು ನಾವು ಬಹಳ ಮಟ್ಟಿಗೆ ಶಾಸನಗಳಿಂದ ಸಂಗ್ರಹಿಸಬೇಕಾಗಿದೆ. ಇವುಗಳಲ್ಲಿ ಕೆಲವು ಸ್ವಾರಸ್ಯಪೂರ್ಣವಾದ ವಿವರಗಳನ್ನು ಒದಗಿಸುತ್ತವೆ. ಅಂದಿನ ಕಾಲದ ಸಮಕಾಲೀನ ಸಾಹಿತ್ಯವು ಈ ವಿಚಾರವಾಗಿ ಬೆಳಕನ್ನು ಚೆಲ್ಲುವುದಲ್ಲದೆ, ಆ ಕಾರ್ಯಕ್ಷೇತ್ರಗಳು ಸಾಧನೆಗಳಿಗೆ ನಿದರ್ಶನ ಪೂರ್ವಕವಾಗಿದೆ. ಈ ಶಿಕ್ಷಣದ ಚಟುವಟಿಕೆ, ದೇಶದ ಬೌದ್ಧಿಕ ಹಾಗೂ ನೈತಿಕ ಸಂಸ್ಕೃತಿಗಳ ನಿಜವಾದ ಆಧಾರವಾಗಿರುವುದಲ್ಲದೆ, ದೇಶದ ಪ್ರಾಪಂಚಿಕ ಪ್ರಗತಿಯ ಅಡಿಗಲ್ಲೂ ಆಗಿತ್ತು.

ಅನೇಕ ಶತಮಾನಗಳ ವರೆಗೆ, ರಾಜಕೀಯ ಕ್ಷೇತ್ರದಲ್ಲಿ ಅಥವಾ ಆಳಿದ ರಾಜವಂಶಗಳಲ್ಲಿ ಎಷ್ಟೇ ಬದಲಾವಣೆಗಳಾದರೂ, ಶಿಕ್ಷಣಕ್ರಮವು ಒಂದೇರೀತಿ ಮುಂದುವರಿಯುತ್ತಿತ್ತು. ಏಕೆಂದರೆ, ಶಿಕ್ಷಣವು ಸಮಾಜದ ಸಾಧನೆಯಾಗಿತ್ತು. ಇದರಿಂದ ಶಿಕ್ಷಣದ ಸಂಪ್ರದಾಯವು ಮುಂದುವರಿಯಲು ಸಹಾಯಕವಾಯಿತು. ಆ ಶಿಕ್ಷಣ ವ್ಯವಸ್ಥೆಯು ವಿಕೇಂದ್ರೀಕೃತವಾಗಿತ್ತು ಮತ್ತು ಅದು ರಾಜಕೀಯ ಆಜ್ಞೆಗಾಗಲಿ ಅಧೀನಕ್ಕಾಗಲಿ ಒಳಗಾಗಿರಲಿಲ್ಲ. ಆದರೂ ಅದು ರಾಜರುಗಳ, ಶ್ರೀಮಂತರ, ವ್ಯಾಪಾರಿಗಳ, ಮತ್ತು ಜನಸಾಮಾನ್ಯರ ಉದಾರವಾದ ಪೋಷಣೆಗೆ ಒಳಗಾಗಿತ್ತು. ಶಿಕ್ಷಣಕ್ಕೆ ಪುದವಟ್ಟುಕೊಡುವುದನ್ನು ಹೆಚ್ಚಿನ ಶ್ಲಾಘನೀಯಸೇವೆಯೆಂದು ಪರಿಗಣಿಸಲಾಗುತ್ತಿತ್ತು. ಧರ್ಮನಿಷ್ಠ ಸಂಸ್ಥೆಗಳು ಮತ್ತು ಸಮಾಜದ ಎಲ್ಲಾ ಕೋಮಿನ ನಾಯಕರುಗಳೂ ಬೌದ್ಧಿಕ, ನೈತಿಕ ಮತ್ತು ಧಾರ್ಮಿಕ ಶಿಕ್ಷಣಗಳಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಿದ್ದರು. ಯಾವುದನ್ನು ತಾಂತ್ರಿಕ ಶಿಕ್ಷಣವೆಂದು ಕರೆಯಬಹುದೋ, ಅದು ಬಹುಮಟ್ಟಿಗೆ ವಂಶ ಪಾರಂಪರ್ಯವಾಗಿ ತಮ್ಮ ಕಲೆಗಳ ಅಭ್ಯಾಸದಲ್ಲಿ ತೊಡಗಿದ ಕುಶಲಕಲೆಗಾರರ ಮನೆಗಳಲ್ಲಿ ಕಲಿಸಲಾಗುತ್ತಿತ್ತು. ಅವರು ಉತ್ತಮವ್ಯವಸ್ಥೆಗಳಿಂದ ಕೂಡಿದ್ದರಲ್ಲದೆ, ತಮ್ಮದೇ ಆದ ವೃತ್ತಿಸಂಘಗಳನ್ನು, ಹೊಂದಿದ್ದರು. ಅವು ವೃತ್ತಿಯ ಗೌರವ ಹಾಗೂ ದಕ್ಷತೆಯನ್ನು ಕಾಪಾಡುತ್ತಿದ್ದುವು. ಖಚಿತವಾದ ವಿಜ್ಞಾನಗಳಲ್ಲಿ ಎಂದರೆ ಗಣಿತ ಶಾಸ್ತ್ರ ಮತ್ತು ವೈದ್ಯಕೀಯ ಶಾಸ್ತ್ರಗಳಲ್ಲಿ ಆಗಿನ ಕಾಲದ ಭಾರತದ ಸಾಧನೆಗಳು ಯಾವ ರೀತಿಯಲ್ಲೂ ಉಪೇಕ್ಷಿಸಬಹುದಲ್ಲದ ಪ್ರಗತಿಪಡೆದಿದ್ದವಲ್ಲದೆ, ಭಾರತವು ಅಂದಿನ ಪ್ರಪಂಚದ ಇತರ ರಾಷ್ಟ್ರಗಳಿಗಿಂತ ಬಹಳ ಮುಂದುವರಿದಿತ್ತು.

ಈಗ ನಾವು ಕರ್ನಾಟಕದಲ್ಲಿ ಶಿಕ್ಷಣ ಮತ್ತು ವಿಜ್ಞಾನದ ಬೆಳವಣಿಗೆಯು ಪ್ರಾಚೀನ ಕಾಲದಿಂದ ಕ್ರಿ.ಶ. 1200ರ ವರೆಗೆ ಹೇಗೆ ನಡೆಯಿತೆಂದು ಆಲೋಚಿಸೋಣ.

### ಪ್ರಾರಂಭದಲ್ಲಿ

ಪ್ರಾಕೃತ ಭಾಷೆಯಲ್ಲಿದ್ದು, ಬ್ರಾಹ್ಮೀ ಲಿಪಿಯಲ್ಲಿ ಬರೆಯಲಾದ, ಅಶೋಕನ ಶಾಸನಗಳು ರಾಯಚೂರ್

ಜಿಲ್ಲೆಯ ಕೊಪ್ಪಳ ಮತ್ತು ಮಸ್ಕಿ ಎಂಬಲ್ಲಿಯೂ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಮತ್ತು ಸಿದ್ಧಾಪುರ ಎಂಬಲ್ಲಿಯೂ ಕಂಡುಬರುತ್ತವೆ.

ಶಾತವಾಹನ, ಮೊದಲಿನ ಕದಂಬ ಮತ್ತು ಮುಂಚಿನ ಪಲ್ಲವರ ಶಾಸನಗಳು, ಬನವಾಸಿ[1] ಮಳವಳ್ಳಿ[2] ಮತ್ತು ಹಿರೇಹಡಗಲಿ[3]ಗಳಲ್ಲಿ ಕಂಡುಬಂದಿವೆ. ಇವು ಸುಮಾರು ಕ್ರಿ.ಶ. 5ನೆ ಶತಮಾನದ ಮಧ್ಯ ಭಾಗದ ವರೆಗೆ ಸಂಸ್ಕೃತ ಮತ್ತು ಕನ್ನಡಗಳ ಜೊತೆಗೆ ಪ್ರಾಕೃತ ಭಾಷೆಯನ್ನು ಬಳಸುತ್ತ ಬಂದವು. ಈ ಶಾಸನಗಳನ್ನು ಜನಸಾಮಾನ್ಯರಿಗಾಗಿ ಹಾಕಿಸಿದ್ದುದರಿಂದ, ಈ ಭಾಷೆಗಳು ಆ ವಿಭಾಗದ ಜನರಿಗೆ ತಿಳಿದಿದ್ದುವೆಂದು ನಾವು ಭಾವಿಸಬಹುದು.

ಆ ಕಾಲದ ರಾಜರು ಜನಸಮಾನ್ಯರ ಶಿಕ್ಷಣದ ಪ್ರಗತಿಯಲ್ಲಿ ಬಹಳ ಹೆಚ್ಚಿನ ಪಾತ್ರ ವಹಿಸಿದರು. ರಾಜ ವಂಶದ ರಾಜಕುಮಾರಿಯರಿಗೆ, ಆಗಿನ ಕಾಲದಲ್ಲಿ ದೊರಕಬಹುದಾದ ಅತ್ಯುತ್ತಮ ಶಿಕ್ಷಣವನ್ನು ಕೊಡಲಾಗುತ್ತಿತ್ತು. ರಾಜಕುಮಾರರಿಗೆ ಕೊಡುತ್ತಿದ್ದ ಶಿಕ್ಷಣದ ಅವಕಾಶಗಳನ್ನು ಪರಿಶೀಲಿಸಿ ನೋಡಿದಾಗ, ಆಗಿನ ಕಾಲದಲ್ಲಿದ್ದ ಶಿಕ್ಷಣದ ವಸ್ತು ಮತ್ತು ವಿಧಾನಗಳ ಒಂದು ಕಲ್ಪನೆ ನಮಗೆ ಉಂಟಾಗುತ್ತದೆ.

ನಾಲ್ಕನೆಯ ಶತಮಾನದಲ್ಲಿ ಆಳುತ್ತಿದ್ದ ಕದಂಬವಂಶದ ಮಯೂರಶರ್ಮನೆಂಬ ರಾಜನು, ತನ್ನ ರಾಜ್ಯದಲ್ಲಿ ವೀರಶರ್ಮರೆಂಬವರ ಬಳಿ ಶಿಕ್ಷಣವನ್ನು ಆರಂಭಿಸಿದನು. ಅದನ್ನು ದಕ್ಷಿಣ ಭಾರತದ ಒಂದು ಪ್ರಸಿದ್ಧ ಕೇಂದ್ರವಾಗಿದ್ದ ಕಾಂಚಿಯ ಒಂದು ಘಟಿಕಸ್ಥಾನದಲ್ಲಿ (ವಿಶ್ವವಿದ್ಯಾಲಯ) ಪೂರ್ಣಗೊಳಿಸಬೇಕೆಂದಿದ್ದನು[4]. ಆದರೆ ಸಂದರ್ಭಕ್ಕನುಸಾರವಾಗಿ, ಅವನು ತನ್ನ ಯೋಜನೆಯನ್ನು ಕೈಬಿಟ್ಟು ಯುದ್ಧ ಶಾಸ್ತ್ರವನ್ನು ಕೈಗೊಂಡು, ಕದಂಬರಾಜ್ಯವನ್ನು ಸ್ಥಾಪಿಸುವ ಮೂಲಕ ತನ್ನ ಸಮರಜೀವನಕ್ಕೆ ಕಿರೀಟ ವಿಟ್ಟನು. ಇವನು ರಾಜನಾದ ಮೇಲೆ ತಾಳಗುಂದದ ಅಗ್ರಹಾರಕ್ಕೆ 144 ಹಳ್ಳಿಗಳನ್ನು ಕೊಟ್ಟಿರುವುದಾಗಿ ಹೇಳುವರು[5]. ಇವನ ಉತ್ತರಾಧಿಕಾರಿಗಳಲ್ಲಿ ಶಿಕ್ಷಣ ಮತ್ತು ಜ್ಞಾನಪ್ರಸಾರಕ್ಕೆ ಉತ್ತೇಜನ ಕೊಟ್ಟ ದೊರೆಗಳಲ್ಲಿ ರಾಜ್ಯಾಡಳಿತದ ಕಲೆಯಲ್ಲಿ ಕುಶಲಿಯಾಗಿದ್ದ, ಹಾಗೂ ತನ್ನ ಸಂಪತ್ತನ್ನು ಬ್ರಾಹ್ಮಣರು, ಯತಿಗಳು ಮತ್ತು ಗುರುಗಳೊಡನೆ ಹಂಚಿಕೊಂಡ ಮೃಗೇಶವರ್ಮನ ಹೆಸರನ್ನು ಪ್ರಸ್ತಾವಿಸಬಹುದು[6].

ತಲಕಾಡಿನ ಗಂಗರಲ್ಲಿ ಅನೇಕ ಸುಶಿಕ್ಷಿತ ರಾಜಕುಮಾರರನ್ನು ಕಾಣಬಹುದು. ಇತರರನ್ನು ಪ್ರತಿನಿಧಿಸುವುದಕ್ಕೆ ಹೇಳಬಹುದಾದ ಇಬ್ಬರು ರಾಜಕುಮಾರರು ದುರ್ವಿನೀತ (ಕ್ರಿ.ಶ. 485–522) ಮತ್ತು ನರಸಿಂಹದೇವ ಸತ್ಯವಾಕ್ಯ. ನಲ್ಲಾಳದ ಫಲಕವು[7] ದುರ್ವಿನೀತನ ವಿಚಾರವಾಗಿ ಹೀಗೆ ಹೇಳುತ್ತದೆ: "ತನ್ನ ಜ್ಞಾನದ ಮೂಲಕ ಪಡೆದ ಶಿಸ್ತಿನ ಸಾಮರ್ಥ್ಯದಿಂದ ತನ್ನ ಭಾವೋದ್ರೇಕಗಳನ್ನು (ಆಂತರಿಕ ಶತ್ರುಗಳನ್ನು) ಹಿಡಿತದಲ್ಲಿಟ್ಟುಕೊಂಡು...ಕಾವ್ಯ, ಕಥೆ ಮತ್ತು ನಾಟಕಗಳ ವಿವಿಧ ರೂಪಗಳ ರಚನೆಗಳಲ್ಲಿ ನಿಪುಣನಾಗಿಯೂ ರಾಜ್ಯಪದ್ಧತಿಯ ಶಾಸ್ತ್ರವಿಜ್ಞಾನದಲ್ಲಿ ವಾಖ್ಯಾನ ಮಾಡಿರುವ ತತ್ವಗಳ ಪ್ರಯೋಗದಲ್ಲಿ ವಿಷ್ಣುಗುಪ್ತನ ಅವತಾರವೋ ಎನ್ನುವಂತೆಯೂ,...ನೃತ್ಯ, ಸಂಗೀತ ಕಲೆಗಳ ತತ್ವಗಳ ವಾಖ್ಯಾನ ಹಾಗೂ ಪ್ರಯೋಗ ಮಾಡುವುದರಲ್ಲಿ ತುಂಬುರು, ನಾರದ, ಭರತದೇವ ಮತ್ತು ಕಂಬಲಾಚಾರ್ಯರನ್ನು ಮೀರಿಸಿದವನಾಗಿಯೂ....ಅಶ್ವ ಮತ್ತು ಗಜಗಳನ್ನು ಪಳಗಿಸುವ ಶಾಸ್ತ್ರದ ತತ್ವಗಳ ಪ್ರಯೋಗದಲ್ಲಿ ರಾಜಪುತ್ರ (?) ಮತ್ತು ಶಾಲಿಹೋತ್ರರಿಗೆ ಪ್ರತಿಸ್ಪರ್ಧಿ ಎಂಬಂತೆಯೂ ಅಸ್ತ್ರಗಳು, ಉಪಾಸ್ತ್ರಗಳು, ಮತ್ತು ಇತರ ಆಯುಧಗಳ ಉಪಯೋಗದಲ್ಲಿ ಪರಶುರಾಮನ ಅವತಾರ ಎನ್ನುವಂತೆಯೂ ಮಾನವ ಮುಖಸಾಮುದ್ರಿಕ ಹಾಗೂ ಅದಕ್ಕೆ ಸಂಬಂಧಿಸಿದ ಶಾಸ್ತ್ರಗಳಲ್ಲಿ ನಿಜವಾಗಿ ಸಾಮುದ್ರಸೂರಿ ಎಂಬಂತೆಯೂ ವೈದ್ಯಕೀಯ ಶಾಸ್ತ್ರದ ಜ್ಞಾನದಲ್ಲಿ ಆತ್ರೇಯ, ಧನ್ವಂತರಿ ಮತ್ತು ಚರಕರಿಗೆ ಸರಿಸಮನಾಗಿಯೂ ಇದ್ದನು".

ಅವನ ಉತ್ತರಾಧಿಕಾರಿಗಳಲ್ಲಿ ಒಬ್ಬನಾದ ನರಸಿಂಹದೇವ ಸತ್ಯವಾಕ್ಯನ ಪಾಂಡಿತ್ಯವು ಅಷ್ಟೇ ಗಮನಾರ್ಹವಾಗಿದೆ. " ಈ ಬುದ್ಧಿಶಾಲಿಯಾದ ರಾಜಕುಮಾರನು ತನ್ನ ಚಿಕ್ಕವಯಸ್ಸಿನಲ್ಲೆ ರಾಜನೀತಿ ಶಾಸ್ತ್ರ, ಗಜತುರಗಗಳ ಸವಾರಿ, ಚೆಂಡಾಟ, ಧನುರ್‌ವಿದ್ಯೆಯ ಚಮತ್ಕಾರ, ಮತ್ತು ಕತ್ತಿವರಸೆ, ನಾಟಕ, ವ್ಯಾಕರಣ, ವೈದ್ಯಶಾಸ್ತ್ರ, ಕಾವ್ಯ, ಗಣಿತ, ಭರತ ಶಾಸ್ತ್ರ, ಇತಿಹಾಸ ಮತ್ತು ಪುರಾಣಗಳು, ನೃತ್ಯ, ಗಾನ ಮತ್ತು ವಾದ್ಯಗಳಲ್ಲಿ ಪರಿಣತನಾಗಿದ್ದನು[8] ".

ನಮಗೆ ಇತರವಂಶದ ರಾಜಕುಮಾರರ ಶಿಕ್ಷಣ ಮತ್ತು ವಿದ್ವತ್ತಿನ ಬಗ್ಗೆ ಹೆಚ್ಚು ವಿವರವಾದ ಹೇಳಿಕೆಗಳು ಇಲ್ಲದಿದ್ದರೂ, ಅವರು ಪೂರ್ಣವಾಗಿ ಸುಶಿಕ್ಷಿತರಾಗಿದ್ದರು ಎಂಬುದಕ್ಕೆ ಸಾಕಷ್ಟು ಸೂಚನೆಗಳಿವೆ. ಬಾದಾಮಿಯ ಚಾಲುಕ್ಯರ ದೊರೆಗಳಲ್ಲಿ 1ನೆ ಪುಲಿಕೇಶಿ ಮನುಧರ್ಮ ಶಾಸ್ತ್ರ, ಪುರಾಣ, ಮಹಾಕಾವ್ಯಗಳಲ್ಲಿ ಪೂರ್ಣಪಂಡಿತನಾಗಿದ್ದನಲ್ಲದೆ, ರಾಜನೀತಿಶಾಸ್ತ್ರದಲ್ಲಿ ನಿಪುಣನೂ ಆಗಿದ್ದನು. ಮಂಗಲೀಶನಿಗೆ ಎಲ್ಲಾ ಶಾಸ್ತ್ರಗಳ ಅಧ್ಯಯನ ಶಿಕ್ಷಣದ ಪ್ರಜ್ಞಾಸಾಮರ್ಥ್ಯವೂ[10] ಅಂತರ ರಾಷ್ಟ್ರೀಯ ವ್ಯವಹಾರ ನಿರ್ವಹಣೆಯಲ್ಲಿ ಚಾತುರ್ಯವೂ ಇದ್ದಿತು[11]. ಪ್ರಸಿದ್ಧ ಐಹೊಳೆ ಶಾಸನದ ಕರ್ತೃವಾದ ರವಿಕೀರ್ತಿಗೆ ತನ್ನ ಆಸ್ಥಾನದಲ್ಲಿ ಆಶ್ರಯವನ್ನಿತ್ತುದು 2ನೆ ಪುಲಿಕೇಶಿಯ ವಿದ್ಯಾಭಿಮಾನಕ್ಕೆ ಒಂದು ನಿದರ್ಶನವಾಗಿದೆ.

ರಾಷ್ಟ್ರಕೂಟರಲ್ಲಿ ನೃಪತುಂಗ ಅಥವಾ ಮೊದಲನೆ ಅಮೋಘವರ್ಷನು ಒಬ್ಬ ಕವಿಯೂ, ಕವಿಗಳಿಗೆ ಆಶ್ರಯದಾತನೂ ಆಗಿದ್ದನೆಂದು ಪ್ರಸಿದ್ಧನಾಗಿದ್ದಾನೆ. ' ಆದಿಪುರಾಣ ' ದ ಗ್ರಂಥಕರ್ತನಾದ ಜಿನಸೇನನು ತಾನು ಅಮೋಘವರ್ಷನಿಗೆ ಬೋಧಕನಾಗಿದ್ದುದಾಗಿ ಹೇಳಿಕೊಂಡಿದ್ದಾನೆ. ಅಮೋಘವರ್ಷನು ತಾನೇ ಸ್ವತಃ ' ಕವಿರಾಜಮಾರ್ಗ 'ವನ್ನು ಬರೆದನು[12] ; ಅಥವಾ ತನ್ನ ಆಸ್ಥಾನದ ಕವಿಯೊಬ್ಬನು ರಚಿಸಲು ಸ್ಫೂರ್ತಿದಾಯಕನಾಗಿದ್ದನು. ಈ ಗ್ರಂಥವು ಕಾವ್ಯಶಾಸ್ತ್ರವನ್ನು ಕುರಿತಿರುವುದಲ್ಲದೆ, ಕನ್ನಡದಲ್ಲಿ ನಮಗೆ ದೊರಕಿರುವ ಮೊತ್ತಮೊದಲಿನ ಗ್ರಂಥವಾಗಿದೆ[13]. ಅವನು " ಪ್ರಶ್ನೋತ್ತರ ರತ್ನಮಾಲಿಕೆ"[14] ಗ್ರಂಥದ ಕರ್ತನೂ ಹೌದು. ' ಆದಿಪುರಾಣದ ' ಕೊನೆಯ ಐದು ಅಧ್ಯಾಯಗಳನ್ನು ರಚಿಸಿದ ಗುಣಭದ್ರನು ಎರಡನೆಯ ಕೃಷ್ಣ ಎಂಬ ದೊರೆಯ ಬೋಧಕನಾಗಿದ್ದನು[15]. ಇದೇ ವಂಶದ ಕೊನೆಯ ದೊರೆಗಳಲ್ಲಿ ಒಬ್ಬನಾದ 4ನೆ ಗೋವಿಂದನು ವಿದ್ವಾಂಸರಿಗೆ ಅನೇಕ ಹಳ್ಳಿಗಳನ್ನೂ ಸುವರ್ಣ ನಾಣ್ಯಗಳನ್ನೂ ಕೊಟ್ಟನೆಂದು ಖ್ಯಾತಿ ಪಡೆದಿದ್ದಾನೆ[16].

ಕಲ್ಯಾಣದ ಚಾಲುಕ್ಯರ ಇಬ್ಬರು ರಾಜಕುಮಾರರ ಶಿಕ್ಷಣದ ಬಗ್ಗೆ ನಮಗೆ ಹೆಚ್ಚು ತಿಳಿದುಬಂದಿದೆ. ಬಿಲ್ಹಣನು ತನ್ನ " ವಿಕ್ರಮಾಂಕದೇವ ಚರಿತ " ಎಂಬ ಗ್ರಂಥದಲ್ಲಿ 1ನೆ ಸೋಮೇಶ್ವರನು ವೇದ, ಆಗಮ, ಮತ್ತು ಇತಿಹಾಸಗಳಲ್ಲಿ ವಿದ್ವಾಂಸನಾಗಿದ್ದನೆಂದೂ ಅವನಿಗೆ ಗುರುಗಳ ವಿಷಯದಲ್ಲಿ ಪೂಜ್ಯಭಾವ ತುಂಬಿತ್ತೆಂದೂ ಹೇಳುತ್ತಾನೆ[17]. ಇದೇ ಕವಿಯು 6ನೆ ವಿಕ್ರಮಾದಿತ್ಯನು ಸಣ್ಣ ಮಗುವಾಗಿಯೇ ಎಲ್ಲಾ ಭಾಷೆಗಳಲ್ಲಿ ಅತ್ಯಂತ ಪಾರಂಗತನಾಗಿದ್ದುದಲ್ಲದೆ, ಕವಿ ಹಾಗೂ ವಾಗ್ಮಿಯಾಗಿ ಪ್ರಗತಿಹೊಂದಿದ್ದನೆಂದು ತಿಳಿಸುತ್ತಾನೆ[18].

' ಮಾನಸೋಲ್ಲಾಸ 'ದ ಗ್ರಂಥಕರ್ತನಾದ 3ನೆ ಸೋಮೇಶ್ವರನು, ತನ್ನ ಗ್ರಂಥದಲ್ಲಿ ಹೆಚ್ಚುಭಾಗ ವನ್ನು ರಾಜಕುಮಾರರ ಶಿಕ್ಷಣದ ವಿಚಾರಕ್ಕಾಗಿ ಮೀಸಲಾಗಿರಿಸಿದ್ದಾನೆ. ಅವನು ರಾಜಕುಮಾರರು ವೇದ, ವ್ಯಾಕರಣ, ಧರ್ಮ ಮತ್ತು ಕಲೆಯ ವಿಷಯಗಳಲ್ಲಿ ಶಿಕ್ಷಣ ಪಡೆದಿರಬೇಕಲ್ಲದೆ, ಅವರು ' ಧನುರ್ವೇದ ' ಅಥವಾ ಸೈನಿಕಶಾಸ್ತ್ರದ ತತ್ತ್ವಗಳು ಹಾಗೂ ಅವುಗಳ ಪ್ರಯೋಗದಲ್ಲಿ ಪಾರಂಗತರಾಗಿರಬೇಕೆಂದೂ (ತನ್ನ ಗ್ರಂಥದಲ್ಲಿ) ಹೇಳಿದ್ದಾನೆ[19]. ಮೇಲೆ ಉಲ್ಲೇಖಿಸಿದ ಉದಾಹರಣೆಗಳಿಂದ, ಮಾನಸೋಲ್ಲಾಸದಲ್ಲಿ ತಿಳಿಸಿದ ವಿಷಯಗಳನ್ನು ರಾಜಕುಮಾರರು ವಾಸ್ತವವಾಗಿ ವ್ಯಾಸಂಗ ಮಾಡುತ್ತಿದ್ದರೆಂದು ತಿಳಿಯಬಹುದು.

ಗಂಗರ ಆಸ್ಥಾನದಲ್ಲಿ ಪ್ರವರ್ಧಮಾನನಾಗಿದ್ದ ಹಾಗೂ ರಾಜಕುಮಾರರಿಗೆ ಶಿಕ್ಷಕನೊಬ್ಬನಾಗಿದ್ದ ವಾದಿಘಂಗಾಲ ಭಟ್ಟ ಎಂಬ ವಿದ್ವಾಂಸನನ್ನು ರಾಷ್ಟ್ರಕೂಟರ ಆಸ್ಥಾನದಲ್ಲಿಯೂ ಗೌರವಿಸಿದರೆಂದರೆ, ಶಿಕ್ಷಕನಾದ ಅವನ ಗುಣಗಳ ಬಗ್ಗೆ ತಿಳಿಯಲು ಸ್ವಾರಸ್ಯವಾಗಿದೆ. ಗಂಗಮಾರಸಿಂಹನ (ಕ್ರಿ.ಶ. 963) ಕೂಡಲ್ಲೂರ್ ಫಲಕಗಳು ಆ ಗುರುವಿನ ಶ್ರೇಷ್ಠತೆಯ ಬಗ್ಗೆ ಈ ರೀತಿ ತಿಳಿಸಿವೆ : "ಸಾಹಿತ್ಯದ ಸ್ಪಷ್ಟೀಕರಣ ದಲ್ಲಿ ಅವನ ವಾಗ್ಝರಿಯು, ಅವನ ಶಿಷ್ಯನಾದ ಗಂಗಗಾಂಗೇಯ ರಾಜನನ್ನು ಸಕಲ ಜ್ಞಾನಾನಂದತನ್ಮಯರೆಂಬ ಉಪವನದ ಕೋಗಿಲೆಯನ್ನಾಗಿ ಮಾಡಿತು. ರಾಜನೀತಿಶಾಸ್ತ್ರದಲ್ಲಿ ಅವನ ಬೋಧನೆಯು ರಾಷ್ಟ್ರಕೂಟರ ದೊರೆಯಾದ ವಲ್ಲಭರಾಜನ ರಾಜಧಾನಿಯ ಪಂಡಿತರ ಮನವೊಲಿಸಿ, ಅವನನ್ನು ಗೌರವಿಸು ವಂತೆ ಮಾಡಿದ್ದು ಅವನ ಘನತೆಯನ್ನೂ ಅಸಾಧಾರಣ ಪಾಂಡಿತ್ಯವನ್ನೂ ಪ್ರಪಂಚಕ್ಕೆ ತೋರಿಸಿತು "[20].

## ಬೌದ್ಧರ ಶಿಕ್ಷಣ ಕ್ರಮ

ಮೌರ್ಯರ ಕಾಲದಿಂದ, ರಾಷ್ಟ್ರಕೂಟರ ಕಾಲದ ವರೆಗೆ ಜೈನ ಮತ್ತು ವೈದಿಕ ಶಿಕ್ಷಣಗಳೊಡನೆ, ಬೌದ್ಧ ಶಿಕ್ಷಣಕ್ರಮವೂ ಅಸ್ತಿತ್ವದಲ್ಲಿದ್ದಿರಬಹುದೆಂದು ಕಾಣುತ್ತದೆ. ಎಲ್ಲರಿಗೂ ತಿಳಿದಿರುವಂತೆ ಬೌದ್ಧ ವಿಹಾರ ಅಥವಾ ಮಠಗಳು ಶಿಕ್ಷಣಕೇಂದ್ರಗಳಾಗಿದ್ದುವು. ಈಗಲೂ ಆಗಿವೆ. ಕ್ರಿ.ಶ. 3ನೆ ಶತಮಾನದ ಬನವಾಸಿಯ ಒಂದು ಶಾಸನದಂತೆ ಶಿವಸ್ಕಂದ ನಾಗಶ್ರೀ ಎಂಬ ಒಬ್ಬ ಚುಟುರಾಜಕುಮಾರಿಯು, ಆ ಜಾಗದಲ್ಲಿ ಒಂದು ಬೌದ್ಧವಿಹಾರವನ್ನು ದಾನಮಾಡಿದಳೆಂದು ತಿಳಿಯುತ್ತದೆ[21]. ಕರ್ನಾಟಕದಲ್ಲಿ ನಮಗೆ ತಿಳಿದಿರುವಂತೆ, ಬೌದ್ಧವಿಹಾರದ ನಿರ್ಮಾಣದಲ್ಲಿ ಇದೇ ಮೊದಲನೆಯ ನಿದರ್ಶನ. ತದನಂತರ ಬಂದ ದೊರೆಗಳ ಕಾಲದಲ್ಲಿ ಈ ವಿಹಾರಗಳು ಬೆಳೆದಿರುವುದನ್ನು ಗುರುತಿಸಲು ನಮಗೆ ಸರಿಯಾದ ಪುರಾವೆಗಳು ದೊರೆತಿಲ್ಲ. ಆದರೆ ಕ್ರಿ.ಶ. 7ನೆ ಶತಮಾನದಲ್ಲಿ ಎರಡನೆಯ ಪುಲಿಕೇಶಿಯ (ಈಗಿನ ಮಹಾರಾಷ್ಟ್ರ ಮತ್ತು ಕರ್ನಾಟಕ) ರಾಜ್ಯದಲ್ಲಿ 100 ಬೌದ್ಧವಿಹಾರಗಳೂ, 5,000 ಬೌದ್ಧಯತಿಗಳೂ ಇದ್ದರೆಂದು ಹೂಯನ್‌ತ್ಸಾಂಗನು ತಿಳಿಸಿದ್ದಾನೆ[22]. ಜನಸಾಮಾನ್ಯರು ಪಾಂಡಿತ್ಯಪ್ರಿಯರಾಗಿದ್ದರು ಎಂದು ಅವರನ್ನು ಅಭಿನಂದಿಸಿದ್ದಾನೆ[23]. ಅವನ ಪ್ರಕಾರ ಈ ಮಠಗಳಲ್ಲಿ ಶಿಕ್ಷಣ ಕ್ರಮವು ಈ ರೀತಿ ಇದ್ದಿತು: "ತಮ್ಮ ಮಕ್ಕಳ ಶಿಕ್ಷಣವನ್ನು ಪ್ರಾರಂಭಿಸಿ ಅವರನ್ನು ಪ್ರಗತಿಗೆ ಒಯ್ಯುವುದಕ್ಕಾಗಿ ಅವರು ಹನ್ನೆರಡು ಅಧ್ಯಾಯಗಳನ್ನು ಅನುಸರಿಸುತ್ತಿದ್ದರು ; ಮಕ್ಕಳಿಗೆ ಏಳುವರ್ಷ ವಯಸ್ಸಾಗುತ್ತಲೆ ಅವರಿಗೆ ಐದು ವಿಜ್ಞಾನಗಳ ಮಹಾ ಗ್ರಂಥಗಳನ್ನು ಕ್ರಮ ಕ್ರಮವಾಗಿ ತಿಳಿಸುತ್ತಿದ್ದರು. ಇವುಗಳಲ್ಲಿ ಮೊದಲನೆಯ ವಿಜ್ಞಾನ ವ್ಯಾಕರಣ. ಇದರಲ್ಲಿ ಪದಗಳನ್ನು ಕಲಿಸಿ ವಿವರಿಸಲಾಗುತ್ತದೆ. ಅವುಗಳ ಭಿನ್ನತೆಗಳ ವಿಂಗಡಣಗಳನ್ನು ಮಾಡಿ ತೋರಿಸುತ್ತದೆ. ಎರಡನೆಯದು ಕುಶಲವೃತ್ತಿಗಳು. ಇವುಗಳಲ್ಲಿ ಯಂತ್ರೋಪಕರಣ ಕಲೆಯ ಎರಡು ವಿಧಾನಗಳು ಮತ್ತು ಜ್ಯೋತಿಷ್ಯಶಾಸ್ತ್ರದ ತತ್ತ್ವಗಳಿಗೆ ಸಂಬಂಧಿಸಿದುವು. ಮೂರ ನೆಯದು ವೈದ್ಯಕೀಯ ಶಾಸ್ತ್ರ. ಇದರಲ್ಲಿ ಮಂತ್ರಪ್ರಯೋಗ, ಔಷಧಿಗಳು, ಶಿಲೆಗಳ ಉಪಯೋಗಗಳು, ಸೂಜಿಯ ಮತ್ತು ಮೋಕ್ಷದ (ಒಣಗಿದ ಎಲೆಗಳಿಂದ ತಯಾರಾದ ಮೃದುವಾದ ರೋಮಗಳಿಂದ ಕೂಡಿದ ಹಾಗೂ ಚರ್ಮದ ಮೇಲಿನ ಸುಟ್ಟಗಾಯಗಳನ್ನು ಕೆರಳಿಸದಿರಲು ಉಪಯೋಗಿಸುತ್ತಿದ್ದ ವಸ್ತು) ಉಪಯೋಗಗಳಿವೆ. ನಾಲ್ಕನೆಯ ವಿಜ್ಞಾನವು ತರ್ಕಶಾಸ್ತ್ರ. ಇದರ ಮೂಲಕ ಸಂಪ್ರದಾಯಬದ್ಧ ಹಾಗೂ ಸಂಪ್ರದಾಯ ವಿರುದ್ಧ ವಿಚಾರಗಳ ನಿಶ್ಚಯ, ಮತ್ತು ಸತ್ಯ ಮಿಥ್ಯೆಗಳ ಪೂರ್ಣವಾದ ಚರ್ಚೆ ನಡೆಯುತ್ತಿತ್ತು. ಐದನೆಯದು ಆಂತರಿಕ ಮನೋವಿಜ್ಞಾನ(ಆತ್ಮವಿಜ್ಞಾನ). ಇದು ಧಾರ್ಮಿಕಸಿದ್ಧಿಯ ಐದು ಶ್ರೇಣಿಗಳನ್ನು ಅನ್ವೇಷಿಸುವುದಲ್ಲದೆ, ಕರ್ಮತತ್ತ್ವಗಳ ಸೂಕ್ಷ್ಮವಿಚಾರಗಳನ್ನು ಪರಿಶೀಲಿ ಸುತ್ತಿತ್ತು[24].

ಈ ಶಿಕ್ಷಣಕ್ರಮವು ಕರ್ನಾಟಕದಲ್ಲಿ ಮೊದಲನೆಯ ಚಾಲುಕ್ಯರ ಆಳಿಕೆಯ ಕೊನೆಯ ವರೆಗೂ

ಉಚ್ಛ್ರಾಯಸ್ಥಿತಿಯಲ್ಲಿದ್ದು, ಕ್ರಮೇಣ ಅವನತಿಹೊಂದಿ, ವೈದಿಕ ಹಾಗೂ ಜೈನ ಕ್ರಮಕ್ಕೆ ಎಡೆಗೊಟ್ಟಿತು. ಬೌದ್ಧರ ಕೊನೆಯ ವಿಹಾರಗಳಲ್ಲಿ ಒಂದು ಧಾರವಾಡ ಜಿಲ್ಲೆಯಲ್ಲಿರುವ ಡಂಬಳ[25] (ಧರ್ಮವೊಳಲ್)ದಲ್ಲಿ ಕಟ್ಟಿಸಿದವನು ಸಂಗವಶೆಟ್ಟಿ (ಕ್ರಿ.ಶ. 1095-95ರ ಮೊದಲು). ಶಿಕ್ಷಣಕ್ರಮದಲ್ಲಿ ಬೌದ್ಧ ಧರ್ಮವು ವ್ಯಾಸಂಗದ ಒಂದು ವಿಷಯವಾಗಿ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮೆ ಎಂಬಲ್ಲಿ ಕ್ರಿ.ಶ. 12ನೆ ಶತಮಾನದ ವರೆಗೂ ಇತ್ತು [26].

## ಪ್ರಾಥಮಿಕ ಶಿಕ್ಷಣ

ಶಾಸನಗಳಲ್ಲಿ ಶಿಕ್ಷಣದ ಬಗ್ಗೆ ನಮಗೆ ತಿಳಿದಿರುವ ವಿಚಾರಗಳ ಅತಿ ಹೆಚ್ಚಿನ ಭಾಗವು ಮೇಲ್ಮಟ್ಟದ ಶಿಕ್ಷಣದ್ದು. ಅದರ ಕೇಂದ್ರಗಳೆಂದರೆ ಘಟಿಕಗಳು, ಅಗ್ರಹಾರಗಳು, ಮಠಗಳು ಮತ್ತು ದೇವಸ್ಥಾನಗಳು. ಈ ಕೆಲವಲ್ಲಿ ಪ್ರಾಸಂಗಿಕವಾಗಿ ಮಾತ್ರ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಇತ್ತೆಂದು ದಾಖಲೆಗಳು ಇವೆ. ಉಚ್ಚ ಶಿಕ್ಷಣವು ಸಂಸ್ಕೃತದಲ್ಲಿ ನಡೆಯುತ್ತಿದ್ದರೆ, ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ನಡೆಯುತ್ತಿತ್ತು. ಅದಕ್ಕೆ "ಕರ್ಣಾಟಕಶಿಕ್ಷೆ" [27] ಅಥವಾ ಬಾಲಶಿಕ್ಷೆ[28] ಅಥವಾ "ಕರ್ಣಾಟಕ ಬಾಲಶಿಕ್ಷೆ" [29] ಎಂದು ಕರೆಯಲಾಗುತ್ತಿತ್ತು. ಉಪಾಧ್ಯಾಯನಿಗೆ 'ಕನ್ನಡಪಂಡಿತ' ಎನ್ನುತ್ತಿದ್ದರು[30]. ಈ ಉದ್ದೇಶಕ್ಕಾಗಿ ಬೇರೆ ಶಿಕ್ಷಕರಿಲ್ಲದಿದ್ದಾಗ, "ಪುರಾಣ ಭಟ್ಟ" ಅಥವಾ ಸಹಪ್ರಾಧ್ಯಾಪಕರಿಗೆ ಇದನ್ನು ಅಧಿಕ ಕಾರ್ಯವಾಗಿ ವಹಿಸಲಾಗುತ್ತಿದ್ದುದಕ್ಕೆ ಈ ನಿದರ್ಶನವನ್ನು ಕೊಡಬಹುದು. ತುಮಕೂರು ಜಿಲ್ಲೆಯ ಶೆಟ್ಟಿಕೆರೆ ಎಂಬ ಗ್ರಾಮದಲ್ಲಿ ಅಲ್ಲಿನ ಪುರಾಣಭಟ್ಟನಿಗೆ ಸಾಯಂಕಾಲ 4 ಘಳಿಗೆ ಅಥವಾ ಸುಮಾರು $1\frac{1}{2}$ ಘಂಟೆಗಳ ಕಾಲ ಪುರಾಣಗಳನ್ನು ಓದುವುದಕ್ಕಾಗಿ ಮತ್ತು ಮಿಕ್ಕ ಹಗಲುವೇಳೆಗಳಲ್ಲಿ ಮಕ್ಕಳ ಪಾಠವನ್ನು ತಪ್ಪದೆ ಕೇಳುವುದಕ್ಕಾಗಿ, ಭೂಮಿಯನ್ನು ವಹಿಸಿಕೊಡಲಾಗಿತ್ತು [31].

ಅರಸಿಕೆರೆಯ ಬಳಿ ಇರುವ ನರಸಿಂಹಪುರದ ಅಗ್ರಹಾರದಲ್ಲಿ, ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಹಾಗೂ ತೃಪ್ತಿಕರವಾದ ಸೌಲಭ್ಯಗಳನ್ನು ಒದಗಿಸಲಾಗಿತ್ತು [32]. ಹೆಗ್ಗಡೆ ಎರೆಯಣ್ಣನು ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ. ಒಂದು ಅನ್ನಹಾಕಿ ವಿದ್ಯೆಕಲಿಸುವ ಪಾಠಶಾಲೆಯನ್ನು ಸ್ಥಾಪಿಸಿದನು [32]. ಅವನು ಇದಕ್ಕಾಗಿ ಆ ಅಗ್ರಹಾರದಲ್ಲಿ ಒಂದು ಮನೆಯನ್ನು ಕಟ್ಟಿ, ಆ ಪ್ರದೇಶದ ಬೋಳೆಯ ಸೋವಿಯಣ್ಣ ಎಂಬವನನ್ನು ಕನ್ನಡ (ಕರ್ಣಾಟ ಬಾಲಶಿಕ್ಷೆ)ವನ್ನು ಮಕ್ಕಳಿಗೆ ಪಾಠಹೇಳಿಕೊಡಲು ನೇಮಿಸಿದನೆಂದು ನಮಗೆ ತಿಳಿದುಬಂದಿದೆ. ಅವನಿಗೆ 20 ಹುಡುಗರಿಗೆ 12 ಗದ್ಯಾಣಗಳ ಸಂಬಳವೆಂದು ಗೊತ್ತಾಗಿತ್ತು. ಹುಡುಗರಿಗೆ ಆಹಾರವನ್ನು ತಯಾರಿಸಲು, ಮೂರು ಗದ್ಯಾಣಗಳ ಸಂಬಳದ ಮೇಲೆ ಒಬ್ಬ ಅಡಿಗೆಯವಳನ್ನು ಗೊತ್ತುಮಾಡಿ ನೇಮಿಸಿದ್ದರೆಂದು ತಿಳಿದುಬಂದಿದೆ. ಇದಲ್ಲದೆ ಎಲಿಯಾಪುರಬಳ್ಳಿ (ಹುಬ್ಬಳ್ಳಿ)ಯ ಮಹಾಜನಗಳೂ ಧಾರವಾಡದ ಹೊರವಲಯದಲ್ಲಿರುವ ನವಿಲೂರಿನ ಕುರುಬ ಶೇಣಿಗರು (ಕುರುಬರ ಶ್ರೇಣಿ) ಇಬ್ಬರೂ ಸೇರಿ ಕಟ್ಟಿಸಿಕೊಟ್ಟ ಪ್ರಾಥಮಿಕ ಶಾಲಾಕಟ್ಟಡದ ಅಳತೆಗಳು ದೊರಕಿವೆ. ಈ ಶಾಲೆಯು ಹುಬ್ಬಳ್ಳಿಯ ಹೊರವಲಯದ ಉಣಕಲ್ ಗ್ರಾಮದ ದೇವಸ್ಥಾನದ ಆವರಣದಲ್ಲಿತ್ತು. ಅದು 26 ಹಸ್ತ ಉದ್ದ, 21 ಹಸ್ತ ಅಗಲವಿತ್ತು [33].

ನರಸಿಂಹಪುರದಲ್ಲಿ ಉಪಾಧ್ಯಾಯನಿಗೆ 12 ಗದ್ಯಾಣಗಳು ದೊರಕುತ್ತಿದ್ದವು [34]. ಅವನು ಇತರ ಕಡೆಗಳಲ್ಲಿನ ತನ್ನ ಸಹೋದ್ಯೋಗಿಗಳಿಗಿಂತ, ಅದೃಷ್ಟಶಾಲಿಯೆಂದು ಕಾಣುತ್ತದೆ. ತಾಳಗುಂದದಲ್ಲಿ ಕನ್ನಡದ ಪಂಡಿತನಿಗೆ ಕಡಮೆ ಸಂಬಳ ಬರುತ್ತಿತ್ತು, ಅಂದರೆ 5 ಗದ್ಯಾಣಗಳಷ್ಟು ಸಂಬಳ ಬರುತ್ತಿತ್ತು [35]. ದೇಗಾಂವೆ ಅಗ್ರಹಾರದಲ್ಲಿ ಉಚ್ಚ ಶಿಕ್ಷಣದ ಉಪಾಧ್ಯಾಯರಿಗೆ ಒಬ್ಬೊಬ್ಬರಿಗೂ ಒಂದು ಭಾಗ ಅಥವಾ $\frac{3}{4}$ ಭಾಗವೂ ಮಕ್ಕಳಿಗೆ ಪಾಠ ಹೇಳುವ ಶಿಕ್ಷಕರಿಗೆ $\frac{1}{2}$ ಭಾಗವೂ ಸಿಗುತ್ತಿತ್ತು [36]. ಅವನು ಈಗಿನ ಕಾಲದ

ಅವನ ಸಹೋದ್ಯೋಗಿಗಿಂತ ಎಷ್ಟೋ ಮೇಲು. ಏಕೆಂದರೆ ಈಗಿನ ಕಾಲದ ಪ್ರಾಥಮಿಕ ಶಾಲೆಯ ಶಿಕ್ಷಕನಿಗೆ, ಕಾಲೇಜು ಶಿಕ್ಷಕರ ಸಂಬಳದ ಜೊತೆ ಹೋಲಿಸಿದಾಗ ಬಹಳ ಕಡಮೆ ಸಂಬಳ ಬರುತ್ತದೆ.

ಪ್ರಾಥಮಿಕ ಶಾಲೆಯ ಘಟ್ಟದ ಪಠ್ಯವಿಷಯಗಳ ಬಗ್ಗೆ ಹೇಳಬೇಕಾದರೆ, ಹರಿಹರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಅಕ್ಷರಾಭ್ಯಾಸದ ಶಿಕ್ಷಣವೆಂದು ಕರೆಯುತ್ತಿದ್ದರು. ಅಂದರೆ ಪ್ರಥಮತಃ ಅಕ್ಷರ ಮತ್ತು ಕಾಗುಣಿತಗಳನ್ನು ಹೇಳಿಕೊಡುತ್ತಿದ್ದರು. ಇದೇ ರೀತಿಯ ಶಿಕ್ಷಣದ ಕ್ರಮದ ಮತ್ತೊಂದು ಉಲ್ಲೇಖವು 'ನುರಿತ ಕನ್ನಡ ಪಂಡಿತರಿಗೆ' ದಾನಕೊಟ್ಟ ದಂಡನಾಯಕ ಕೇಶಿಮಯ್ಯನ ದಾಖಲೆಗಳಲ್ಲಿ ಕಂಡುಬರುತ್ತದೆ[37]. ಈ ಶಿಕ್ಷಣಕ್ರಮಕ್ಕೆ "ಕರ್ಣಾಟಕ ಬಾಲಶಿಕ್ಷೆ" ಎಂದು ಕರೆಯುತ್ತಿದ್ದುದರಿಂದ, ಅಕ್ಷರಗಳ ಅಭ್ಯಾಸವಾದ ನಂತರ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸುತ್ತಿದ್ದರು ಎಂದು ಊಹಿಸಬಹುದು[38].

ಈ ಕೆಳಗಿನ ಸಂದರ್ಭಕ್ಕನುಸಾರವಾಗಿ ಸಾಕ್ಷರತೆಯು ಬಹುಮುಖವಾಗಿ ಹರಡಿತ್ತು ಎಂದು ಊಹಿಸಬಹುದು. ಹೂಯನ್‌ತ್ಸಾಂಗನು ಅನೇಕ ಮಠಗಳ ಮತ್ತು ಸಾವಿರಾರು ಭಿಕ್ಷುಗಳ ವಿಚಾರ ತಿಳಿಸುತ್ತಾನೆ. ಬೌದ್ಧಮತ ಪ್ರಚಾರದಲ್ಲಿರುವ ದೇಶಗಳು ಎಂದರೆ ಬರ್ಮಾದಲ್ಲಿ ಇಂದಿಗೆ ಕೂಡ, ಸಾಕ್ಷರತೆಯ ಹೆಚ್ಚಿನ ಮಟ್ಟವನ್ನು ಕಾಣಬಹುದು[39]. ಅವರು ಎಲ್ಲೇ ಇರಲಿ ಬೌದ್ಧ ಭಿಕ್ಷುಗಳು ಸಾಕ್ಷರತೆಯ ಪ್ರಚಾರಕ್ಕೆ ಇಂದಿನ ಕಾಲದಲ್ಲಿ ಹೇಗೆ ಕಾರ್ಯನಿರತರಾಗಿರುತ್ತಿದ್ದಾರೋ ಅದೇ ರೀತಿ ಹಿಂದಿನ ಕಾಲದಲ್ಲಿಯೂ ಇರುತ್ತಿದ್ದರು.

## ಉಚ್ಚ ಶಿಕ್ಷಣದ ಸಂಸ್ಥೆಗಳು

ಹಿಂದೆ ತಿಳಿಸಿದಂತೆ ಘಟಿಕಗಳು, ಅಗ್ರಹಾರಗಳು, ಬ್ರಹ್ಮಪುರಿಗಳು, ಮಠಗಳು, ಮತ್ತು ದೇವಾಲಯಗಳು ಉಚ್ಚ ಶಿಕ್ಷಣ ಮಂದಿರಗಳಾಗಿದ್ದವು. ''ಶಾಲೆ'' ಎಂಬ ಪದವು ಉಚ್ಚ ಹಾಗೂ ಪ್ರಾಥಮಿಕ ಶಿಕ್ಷಣವನ್ನು ನೀಡುವ ಸಂಸ್ಥೆಗಳನ್ನು ವಿವರಿಸಲು ಬಳಸುತ್ತಿದ್ದ ಪದ. ಒಂದು ಶಾಸನವು ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹದಿಂದ ಅದರ ದಾನಿಗಳಿಗೆ ಹೇಗೆ ಪುಣ್ಯ ಬರುತ್ತಿತ್ತೆಂಬುದನ್ನು ತಿಳಿಸಿರುತ್ತದೆ. ಪುಣ್ಯ ತೀರ್ಥಗಳಲ್ಲಿ ಮೀಯಲು ಮಾಡುವ ತೀರ್ಥಯಾತ್ರೆಗಳಿಂದ ಯಾವ ಪುಣ್ಯ ಲಭಿಸುತ್ತದೋ ಯಾಗಗಳನ್ನು ಮಾಡುವುದರಿಂದ ಯಾವ ಪುಣ್ಯ ಲಭಿಸುತ್ತದೋ:ಶಿಕ್ಷಣಕ್ಕೆ ಕೊಡುಗೆ ನೀಡುವವನಿಗೆ ಅದಕ್ಕೆ ಕೋಟಿಗಟ್ಟಲೆಯಷ್ಟು ಪುಣ್ಯ ಬರುತ್ತದೆ ಎಂದು ತಿಳಿಸಿದೆ[40]. ಈ ಕಾರಣದಿಂದ ಶಿಕ್ಷಣದ ದತ್ತಿಗಾಗಿ ಮಾಡಿದ ಕೋರಿಕೆಗೆ ಯಾವಾಗಲೂ ಮನ್ನಣೆ ಇತ್ತು. ವಿಧ ವಿಧವಾದ ಉಚ್ಚ ಶಿಕ್ಷಣ ಕೇಂದ್ರಗಳಿಗೆ, ಅದರ ಸಂರಕ್ಷಣೆಗಾಗಿ ಭೂದಾನದ ಮೂಲಕ ವಿಶೇಷವಾದ ಪ್ರೋತ್ಸಾಹವನ್ನು ನೀಡುತ್ತಿದ್ದುದನ್ನು ನಾವು ಕಾಣಬಹುದು.

## ಘಟಿಕಗಳು

ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಘಟಿಕಗಳು ಬಹಳ ಕಡಮೆಯಾಗಿ ಕೇಳಿಬಂದರೂ, ದಾಖಲೆಗಳ ಪ್ರಸ್ತಾಪದಲ್ಲಿ ಅದು ಅತಿ ಪುರಾತನವಾದುದು. ಕದಂಬ ಮತ್ತು ಮೊದಲಿನ ಚಾಲುಕ್ಯರ ಕಾಲದ ದಾಖಲೆಗಳಲ್ಲಿ, ಕರ್ಣಾಟಕದ ಎಲ್ಲೆಯ ಹೊರಗಡೆ ಇದ್ದು ಪ್ರವರ್ಧಮಾನಕ್ಕೆ ಬಂದ ಕಾಂಚಿಯ ಘಟಿಕದ ಬಗ್ಗೆ ಪ್ರಸ್ತಾಪಿಸಿದೆ. ಅದು ಅನಂತರ ಸ್ಥಾಪಿಸಲಾದ ಘಟಿಕಗಳು ಹೇಗೆ ಕಾರ್ಯ ನಿರ್ವಹಣೆ ಮಾಡುತ್ತಿದ್ದವು ಎಂಬುದರ ಬಗ್ಗೆ ಬೆಳಕನ್ನು ಚೆಲ್ಲುವುದಲ್ಲದೆ, ಆ ಘಟಿಕಗಳಿಗೆ ಒಂದು ಮಾದರಿಯೂ ಆಗಿರಬಹುದು. ಮಯೂರಶರ್ಮನು ತನ್ನ ಆರಂಭದ ಶಿಕ್ಷಣವನ್ನು ಮುಗಿಸಿ, ಅದನ್ನು ಪ್ರವೇಶಿಸಲಿದ್ದನು ಇಲ್ಲದೆ ಪ್ರವೇಶಿಸಿದ್ದನು[41],

ಆದುದರಿಂದ ಅದು ನಳಂದ ವಿಶ್ವವಿದ್ಯಾಲಯದಂತೆ, ಶಿಕ್ಷಣದ ವ್ಯವಸ್ಥೆಯಲ್ಲಿ ಅಗ್ರಸ್ಥಾನವನ್ನು ಪಡೆದ ಸಂಸ್ಥೆಯಾಗಿತ್ತು. ಅದರ ಸಂರಕ್ಷಣೆಯ ಅಧಿಕಾರಿಗಳನ್ನು 'ಮಹಾಜನ'ರೆನ್ನುತ್ತಿದ್ದರು, ಮತ್ತು ಅಗ್ರಹಾರಗಳ ಆಡಳಿತ ನೋಡಿಕೊಳ್ಳುತ್ತಿದ್ದವರನ್ನು ಅವರಂತೆಯೇ ಘಟಿಕಗಳ ಮಹಾಜನರೆಂದು ಕರೆಯುತ್ತಿದ್ದರು. ಮಹಾಜನಗಳೂ ಸ್ವಯಂ ಶಾಸನದ ಅಧಿಕಾರ ಹೊಂದಿದ್ದರು ಎಂದು ಊಹಿಸಿದರೆ ತಪ್ಪಾಗಲಾರದು. ಘಟಿಕಗಳನ್ನು ದೇವಸ್ಥಾನಗಳಲ್ಲಿ ನಡೆಸುತ್ತಿದ್ದರು. ಅದೇ ಕಾರಣಕ್ಕಾಗಿ ಅದನ್ನು ದೇವಸ್ಥಾನದಷ್ಟೇ ಪವಿತ್ರವಾಗಿ ಪರಿಗಣಿಸಲಾಗುತ್ತಿತ್ತು [43].

ಕರ್ಣಾಟಕದಲ್ಲಿ ನಾಗೈ[44], ಕಡಿಯೂರ್[45], ಕುಕ್ನೂರ್[46], ಹೆಂಜೇರು[47], ಮೊರಿಗೆರೆ[48] ಮತ್ತು ರಾಯ್‌ಬಾಗ್ [49] ಮುಂತಾದ ಸ್ಥಳಗಳಲ್ಲಿದ್ದ ಘಟಿಕಗಳ ಬಗೆಗೆ ಇರುವ ಶಾಸನಗಳು ಅವುಗಳ ಹೆಚ್ಚಿನ ವೈಶಿಷ್ಟ್ಯಗಳನ್ನು ಒತ್ತಿ ಹೇಳುತ್ತವೆ. ಅವುಗಳಲ್ಲಿ ಒಂದು ವೈಶಿಷ್ಟ್ಯವೆಂದರೆ, ಆ ಘಟಿಕಗಳಲ್ಲಿ ಬಹಳ ವಿದ್ಯಾರ್ಥಿಗಳಿದ್ದರು ಎಂಬುದು. ಕರ್ಣಾಟಕದ ಅತ್ಯಂತ ಪ್ರಸಿದ್ಧವಾದ ಘಟಿಕವು ಗುಲ್ಬರ್ಗ ಜಿಲ್ಲೆಯ ನಾಗೈ ಎಂಬಲ್ಲಿತ್ತು[50]. ಅದರ ಒಂದು ಆವರಣದಲ್ಲಿ 257 ಸದಸ್ಯರೂ [51] ಮತ್ತೊಂದರಲ್ಲಿ 400 ವಿದ್ಯಾರ್ಥಿಗಳೂ ಇದ್ದರು. ಮಿಕ್ಕ ಘಟಿಕಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ನಮಗೆ ತಿಳಿದಿಲ್ಲ.

ಈ ಘಟಿಕಗಳಲ್ಲಿ ನಾವು ಕಾಣಬಹುದಾದ ಎರಡನೆಯ ವೈಶಿಷ್ಟ್ಯವೆಂದರೆ, ಅಲ್ಲಿ ವೇಳಾ ನಿಗದಿಕಾರರೂ ಕಾವಲುಗಾರರೂ ಇದ್ದದ್ದು. ನಾಗೈ[52] ಎಂಬಲ್ಲಿ ಒಬ್ಬರೂ ತುಮಕೂರು ಜಿಲ್ಲೆಯ ಹೆಂಜೇರು[53] ಎಂಬಲ್ಲಿ ನಾಲ್ಕು ಜನರೂ ಇದ್ದರು. ಗಂಗ ಶಿವಮಾರನ ಹಲ್ಲೆಗೆರೆ ಶಾಸನವು[54] ಮಾಧವ ಶರ್ಮರೆಂಬ ಬ್ರಾಹ್ಮಣರಿಗೆ "ಘಟಿಕಾಸಾಹಸ" (ಘಟಿಕದ ನಾಯಕ) ಎಂಬ ಬಿರುದನ್ನು ಕೊಟ್ಟಿದ್ದುದಾಗಿ ತಿಳಿಸುತ್ತದೆ. ಘಟಿಕದಲ್ಲಿ ಶಿಕ್ಷಣ ಪಡೆದ ಅದೃಷ್ಟವಂತ ಹಾಗೂ ಹೆಚ್ಚಿನ ಕೀರ್ತಿ ಪಡೆದ ವಿದ್ವಾಂಸರಿಗೆ ಈ ಬಿರುದನ್ನು ಅನುಗ್ರಹಿಸಿದ್ದಿರಬಹುದು.

ಘಟಿಕದ ವ್ಯವಸ್ಥೆಯ ವಿಚಾರವಾಗಿ ತಿಳಿಯಲು 'ನಾಗೈ'ಘಟಿಕವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅದನ್ನು 'ಘಟಿಕಾಶಾಲಾ' ಎನ್ನುತ್ತಿದ್ದರು.[55] ಅದರಲ್ಲಿ ವೇದಗಳನ್ನು ಕಲಿಯುತ್ತಿದ್ದ 200 ವಿದ್ವಾಂಸರೂ ಶಾಸ್ತ್ರಗಳನ್ನು ವ್ಯಾಸಂಗ ಮಾಡುತ್ತಿದ್ದ 52 ಮಂದಿ ವಿದ್ವಾಂಸರೂ ಇದ್ದರು. ಅಲ್ಲದೆ 3 ಜನ ವಿದ್ವಾಂಸರು ವೇದಗಳನ್ನೂ 3 ಜನ ಶಾಸ್ತ್ರಗಳನ್ನೂ ಹೇಳಿಕೊಡುತ್ತಿದ್ದರು. ಅವರು ಭಟ್ಟದರ್ಶನ, ನ್ಯಾಸ (ವ್ಯಾಕರಣ) ಮತ್ತು ಪ್ರಭಾಕರಗಳನ್ನು ಬೋಧಿಸುತ್ತಿದ್ದರು; ಮತ್ತು 6 ಜನ ಸರಸ್ವತಿ ಭಂಡಾರಿಕರೂ (ಪುಸ್ತಕಾಲಯದ ಅಧಿಕಾರಿಗಳು) ಒಬ್ಬ ವೇಳಾಪಟ್ಟಿ ಪಾಲಕನೂ (ಘಟಿಕಾ ಪ್ರಹಾರಿ) ಇದ್ದರು. ಅಲ್ಲಿನ ಶಿಕ್ಷಕರ ಪೋಷಣೆಗೂ ಸಂಸ್ಥೆಯನ್ನು ನಡೆಸುವುದಕ್ಕೂ ಆ ಘಟಕವನ್ನು ಹೊಂದಿದ ದೇವಸ್ಥಾನದ ರಕ್ಷಣೆಗಾಗಿಯೂ ಭೂಮಿಯನ್ನು ಈ ರೀತಿ ಹಂಚಲಾಗಿತ್ತು :—

| | | |
|---|---|---|
| 35 | ಮತ್ತರು ಮತ್ತು ಗವಿ— | ಭಟ್ಟದರ್ಶನದ ವಾಖ್ಯಾನಕಾರರಿಗೆ |
| 30 | ಮತ್ತರು ಮತ್ತು ಗವಿ — | ನ್ಯಾಸದ ವಾಖ್ಯಾನಕಾರರಿಗೆ |
| 45 | ಮತ್ತರು ಮತ್ತು ಗವಿ— | ಪ್ರಭಾಕರದ ವಾಖ್ಯಾನಕಾರರಿಗೆ |
| 30 | ಮತ್ತರು ಮತ್ತು ಗವಿ— | ಪ್ರತಿಯೊಬ್ಬ ಸರಸ್ವತಿ ಭಂಡಾರಿಕರಿಗೆ |
| 30 | ಮತ್ತರು ಮತ್ತು ಗವಿ— | ಘಟಕಾಪ್ರಹಾರಿಗೆ |
| 1,000 | ಮತ್ತರು ಮತ್ತು ಗವಿ— | 252 ಜನ ವಿದ್ವಾಂಸರ ಮತ್ತು ಇತರರ ಭೋಜನ ಮತ್ತು ವಸತಿಗೆ ಅಲ್ಲದೆ ದೇವಸ್ಥಾನಕ್ಕೆ ಸಂಬಂಧಿಸಿದ ಸೇವಾಕಾರ್ಯ ಹಾಗೂ ಜೀರ್ಣೋದ್ಧಾರಕ್ಕಾಗಿ. |

**ಅಗ್ರಹಾರಗಳು**

ಹೆಚ್ಚು ಪರಿಚಿತವಾದ ಅಗ್ರಹಾರಗಳ ಕಡೆಗೆ ಗಮನಿಸಿ ನೋಡಿದಾಗ, ಶಿವಮೊಗ್ಗ ಜಿಲ್ಲೆಯ ತಾಳಗುಂದ[56] ಅಗ್ರಹಾರವೇ ಪ್ರಾಚೀನ ಅಗ್ರಹಾರಗಳಲ್ಲಿ ಒಂದೆಂದು ಕಂಡುಬರುತ್ತದೆ. ಇದನ್ನು ಸ್ಥಾಪಿಸಿದವನು ಮಯೂರಶರ್ಮನ ಪೂರ್ವಿಕನಾದ ಮುಕ್ಕಣ್ಣ ಕದಂಬನು. ಅವನು ಉತ್ತರದ ಅಹಿಚ್ಛತ್ರ ಎಂಬ ಅಗ್ರಹಾರದಿಂದ 32 ಬ್ರಾಹ್ಮಣರ ಕುಟುಂಬಗಳನ್ನು ಕರೆದುಕೊಂಡು ಬಂದು, ತಾಳಗುಂದದ ಅಗ್ರಹಾರದಲ್ಲಿ ನೆಲಸುವಂತೆ ಮಾಡಿದನು. ಕ್ರಿ.ಶ. 1091ರ ಶಾಸನದಂತೆ ಆ ಬ್ರಾಹ್ಮಣರು ವೇದಗಳು, ವೇದಾಂಗಗಳು ಮತ್ತು ಉಪಾಂಗಗಳು, ಮೀಮಾಂಸೆ ಮತ್ತು ತರ್ಕದ ಆರು ಪದ್ಧತಿಗಳು, ಸ್ಮೃತಿಗಳು, ಪುರಾಣಗಳು ಮತ್ತು ನಾಟಕ ಕಲೆಗಳಲ್ಲಿ ಪರಿಣತರಾಗಿದ್ದರು[57].

ಮೊದಲನೆ ಕದಂಬರಿಗೆ ತಾಳಗುಂದ ಹೇಗೋ ಹಾಗೆ ಮೊದಲಿನ ಚಾಲುಕ್ಯರಿಗೆ ಬಾದಾಮಿ. ಅದನ್ನು ಅಗ್ರಹಾರವೆಂದು ಕರೆಯದಿದ್ದರೂ ಶಾಸನದಲ್ಲಿನ ಅದರ ವರ್ಣನೆಯಿಂದ ಅದು ಅಗ್ರಹಾರಕ್ಕೆ ಸದೃಶವಾದ ಸಂಸ್ಥೆಯಾಗಿತ್ತೆಂದು ತೋರುತ್ತದೆ. ಕ್ರಿ.ಶ. 699ರ ಶಾಸನದಂತೆ ವಾತಾಪಿ ಅಥವಾ ಬಾದಾಮಿಯನ್ನು ಅಧಿಷ್ಠಾನವೆಂದು ಕರೆದಿದೆ. ಅದು ಹಲವು ಸಾವಿರ ಉತ್ತಮೋತ್ತಮರಾದ ದ್ವಿಜರಿಂದ ಅಲಂಕರಿಸಿತ್ತಲ್ಲದೆ ಅವರು ಚತುರ್ದಶ ಶಾಸ್ತ್ರಗಳ ಅಥವಾ ವಿದ್ಯೆಗಳ ಜ್ಞಾನಸಂಪನ್ನರಾಗಿದ್ದರೆಂದು ತಿಳಿಸುತ್ತದೆ[58]. ಅಲ್ಲದೆ ಎಂಟನೆ ಶತಮಾನದ ಕ್ರಿ.ಶ. 759ರ ಶಾಸನವು ಮೇಲಿನ ಮಾತನ್ನು ಪುಷ್ಟೀಕರಿಸುವುದಲ್ಲದೆ ಅಲ್ಲಿ ಚತುರ್ವೇದಗಳಲ್ಲಿ ಪಾರಂಗತರಾದ 2,000 ಮಂದಿ ವಿದ್ವಾಂಸರಿದ್ದರೆಂದು ತಿಳಿಸುತ್ತದೆ[59]. ಮೊದಲಿನ ಶಾಸನದಲ್ಲಿ ಹೇಳಿದ 'ಅಧಿಷ್ಠಾನ' ಎಂಬ ಪದದಿಂದ ಅದು ಒಂದು ಧಾರ್ಮಿಕ ಹಾಗೂ ವೇದಶಿಕ್ಷಣ ಕೇಂದ್ರವೆಂಬುದರ ಸೂಚನೆಯೆಂದು ನಾವು ತಿಳಿಯಬಹುದು.

ಬಾದಾಮಿ ಅಲ್ಲದೆ, ಮೊದಲಿನ ಮತ್ತು ಅನಂತರದ ಚಾಲುಕ್ಯರ ಕಾಲದ ಮತ್ತೊಂದು ಜ್ಞಾನಕೇಂದ್ರವೆಂದರೆ ಐಹೊಳೆ. 8ನೆ ಇಲ್ಲವೆ 9ನೆ ಶತಮಾನದ ಶಾಸನವೊಂದು ಬೆಣ್ಣಮ್ಮ ಸೋಮಯಾಜಿ ಎಂಬವರು ಶ್ರೇಷ್ಠ ರಾಜಧಾನಿಯಾದ ಆರ್ಯಪುರ (ಐಹೊಳೆ)ದ 500 ಜನರ ಚತುರ್ವೇದಿಗಳ ಮಹಾ ತಂಡಕ್ಕೆ ದತ್ತಿಯನ್ನು ನೀಡಿದುದಾಗಿ ಹೇಳಿದೆ[60]. ಇದರಿಂದ ಅಯ್ಯಹೊಳೆ ಅಥವಾ ಐಹೊಳೆಯು 500 ಮಹಾಜನಗಳ ಒಂದು ಅಗ್ರಹಾರವಾಗಿರಬಹುದೆಂದು ತೋರುತ್ತದೆ. ಕ್ರಿ.ಶ. 1191ರ ಶಾಸನದಂತೆ, ಅನಂತರವೂ ಅದು ಅದೇ ಪ್ರಖ್ಯಾತಿಯನ್ನು ಮುಂದುವರಿಸಿಕೊಂಡು ಬಂದಿತ್ತೆಂದು ತಿಳಿದುಬರುವುದಲ್ಲದೆ, ಅದು '500 ಜನ ಸ್ವಾಮಿಗಳು ಇಲ್ಲವೆ ಪ್ರಭುಗಳ ಒಂದು ಅಗ್ರಹಾರ' ಎಂದು ಸೂಚಿಸುತ್ತದೆ[61].

ರಾಷ್ಟ್ರಕೂಟರ ಕಾಲದ ಅತ್ಯಂತ ಪ್ರಮುಖವಾದ ಅಗ್ರಹಾರವೆಂದರೆ ಬಿಜಾಪುರ ಜಿಲ್ಲೆಯ ಸಾಲೋಟಗಿ[62]. ಕ್ರಿ.ಶ. 945ರಲ್ಲಿ ಮೂರನೆ ಕೃಷ್ಣರಾಜನ ಮುಖ್ಯಮಂತ್ರಿಯಾದ ನಾರಾಯಣನು ಅಲ್ಲಿ ಭವ್ಯವೂ ಸುಂದರವೂ ಆದ ಶಾಲೆಯನ್ನು ಕಟ್ಟಿಸಿದನು. ಅಲ್ಲಿ ಅನೇಕ ನಾಡಿನ ವಿದ್ವಾಂಸರಿದ್ದರು. ಅವರ ಸಂರಕ್ಷಣೆಗೆ ಸಾಕಷ್ಟು ಭೂಮಿಯನ್ನು ಚೆನ್ನಾಗಿ ಒದಗಿಸಲಾಗಿತ್ತು. ಆ ಹಳ್ಳಿಯ ಮುಖ್ಯಸ್ಥನಾದ ಚಕ್ರಾಯುಧ ಬುದ್ಧ ಮತ್ತು ಆ ಅಗ್ರಹಾರದ 200 ಮಹಾಜನಗಳು ಅಥವಾ ಪಾಲುದಾರರುಗಳು, ಆ ವಿದ್ವಾಂಸರ ಸಮಾಜಕ್ಕೆ 500 ನಿವರ್ತನಗಳ ಮೊದಲನೆಯ ದರ್ಜೆಯ ಭೂಮಿಯನ್ನು ಕೊಟ್ಟರೆಂದು ತಿಳಿದುಬಂದಿದೆ. ಆ ಹಳ್ಳಿಯ ಮುಖ್ಯಸ್ಥನು 27 ಸುಸಜ್ಜಿತ ಗೃಹಗಳನ್ನೂ 4 ನಿವರ್ತನಗಳಷ್ಟು ಭೂಮಿಯನ್ನು ಹೂತೋಟಗಳಿಗಾಗಿಯೂ, ದೀಪಗಳಿಗಾಗಿ 12 ನಿವರ್ತನದಷ್ಟು ಭೂಮಿಯನ್ನೂ ಕೊಟ್ಟನೆಂದು ತಿಳಿದುಬಂದಿದೆ. ಈ ದಾನಗಳು ತೆರಿಗೆಗಳಿಂದ ವಿನಾಯತಿ ಪಡೆದಿದ್ದವು. ಗ್ರಾಮದಲ್ಲಿ ಮದುವೆ, ಮುಂಜಿ ಮತ್ತು ಚೌಲ ಸಮಾರಂಭಗಳಲ್ಲಿ ವಿದ್ವಾಂಸರಿಗೆ ಕಾಣಿಕೆಗಳನ್ನು ಕೊಟ್ಟು ಗೌರವಿಸುತ್ತಿದ್ದರು. ಅಗ್ರಹಾರದ

ಸಭೆಗಳು ಔತಣ ಕೊಟ್ಟಾಗ, ಈ ವಿದ್ವಾಂಸರನ್ನು ಕರೆಯಬೇಕಾಗಿತ್ತು. ಶಾಲೆಯ ಶಿಕ್ಷಕರಿಗೆ ಕಂದಾಯ ರಹಿತವಾಗಿದ್ದ 50 ನಿವರ್ತನದಷ್ಟು ಭೂಮಿಯನ್ನೂ ವಾಸಿಸಲು ಅದೇ ನಿಬಂಧನೆಯಂತೆ ಒಂದು ಮನೆಯನ್ನೂ ಕೊಡುತ್ತಿದ್ದರು.

ಗದುಗಿನ ಬಳಿ ಇರುವ ಉಮ್ಮಚಿಗೆ[63] ಎಂಬಲ್ಲಿ ಒಂದು ಅಗ್ರಹಾರವನ್ನು ಕೊನೆಯ ಚಾಲುಕ್ಯರ ಕಾಲ ದಲ್ಲಿ ಸ್ಥಾಪಿಸಲಾಯಿತು. ಇಲ್ಲಿ ಒಂದು ಮಹಾ ಪಾಠಶಾಲೆ (ಕಾಲೇಜ್) ಮತ್ತು ಅದಕ್ಕೆ ಸೇರಿದಂತೆ ಒಂದು ಉಚಿತ ವಿದ್ಯಾರ್ಥಿನಿಲಯವೂ ಇತ್ತು. ಇಲ್ಲಿ ಹೆಚ್ಚಿನ ಶಿಕ್ಷಣ ಕೊಡುತ್ತಿದ್ದ ಭಟ್ಟ ಅಥವಾ ಪ್ರಾಧ್ಯಾಪಕರಿಗೆ, 50 ಮತ್ತರುಗಳಷ್ಟು ಭೂಮಿ ಮತ್ತು ಒಂದು ಮನೆಯ ನಿವೇಶನವನ್ನು ಕೊಡಲಾಗಿತ್ತು. ಅವರು ನ್ಯಾಸ ಮತ್ತು ಪ್ರಭಾಕರಗಳನ್ನು ವಾಖ್ಯಾನಿಸಬಲ್ಲವರಾಗಿದ್ದರು. ಅವರ ಶಿಷ್ಯರು ತಮ್ಮ ನಿರ್ವಹಣೆಗಾಗಿ 25 ಮತ್ತರುಗಳಷ್ಟು ಭೂಮಿಯನ್ನು ಸ್ವೀಕರಿಸುತ್ತಿದ್ದರು. ಸರ್ವಸಾಮಾನ್ಯ ಶಿಕ್ಷಣವನ್ನು 'ಅಕ್ಕರಿಗ' ಅಥವಾ ಅಕ್ಷರ ಬೋಧಕ ಎಂಬವನು ಕೊಡುತ್ತಿದ್ದನು. ಇವನು ಗಣಿತಶಾಸ್ತ್ರ, ಖಗೋಳ ಶಾಸ್ತ್ರ, ಛಂದಸ್ಸು, ಕಾವ್ಯಶಾಸ್ತ್ರ ಮುಂತಾದವುಗಳಲ್ಲಿ ರಚನಕಾರನೂ ಬೋಧಕನೂ ಆಗಿದ್ದನು. ವ್ಯಾಕರಣ ಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ಅವನಿಗೆ 25 ಮತ್ತರುಗಳಷ್ಟು ಭೂಮಿಯನ್ನು ಕೊಡಲಾಗುತ್ತಿತ್ತು ಮತ್ತು ಈ ಸಂಭಾವನೆಯಲ್ಲಿ ಅವನು ತನ್ನ ಶಿಷ್ಯರಿಗೆ ಪಾಠ ಹೇಳಿಕೊಡಬೇಕಾದುದಲ್ಲದೆ, ಅವರಿಗೆ ದಿನಕ್ಕೆ ಒಮ್ಮೆ ಊಟ ಹಾಕಬೇಕಿತ್ತು; ಅಲ್ಲದೆ ಪ್ರತಿವರ್ಷವೂ ಅವರಿಗೆ (ಶಿಷ್ಯರಿಗೆ) ವಸ್ತ್ರಗಳನ್ನು ತೆಗೆದುಕೊಡಬೇಕಾಗಿತ್ತು.

ಇನ್ನೂ ಇತರ ಅನೇಕ ಅಗ್ರಹಾರಗಳ ಉದಾಹರಣೆಗಳನ್ನು ಕೊಡಬಹುದು. ಬೆಳಗಾಂ ಜಿಲ್ಲೆಯ ದೇಗಾಂವೆ ಎಂಬಲ್ಲಿ ಅಗ್ರಹಾರವು ಸ್ಥಾಪನೆಯಾದುದು ಆದರ್ಶಭೂತವಾಗಿದೆ. ಈ ಸಂಸ್ಥೆಯನ್ನು ಸ್ಥಾಪಿಸಲು ಮೊದಲ ಹೆಜ್ಜೆ ಇಟ್ಟವಳು ಕದಂಬರಾಜ್ಯದ ದೊರೆಯಾದ ಶಿವಚಿತ್ತನ ರಾಣಿಯಾದ ಕಮಲಾದೇವಿ. ಈ ಅಗ್ರಹಾರವನ್ನು ಅವಳು ದಾನಮಾಡಬೇಕೆಂದಿದ್ದ ಬ್ರಾಹ್ಮಣರೆಲ್ಲರೂ ಎಲ್ಲಾ ವೇದಗಳು, ವೇದಾಂಗಗಳು, ನ್ಯಾಯ, ಮೀಮಾಂಸೆ, ಸಾಂಖ್ಯ, ಯೋಗ, ವೇದಾಂತ, ಸ್ಮೃತಿ, ಇತಿಹಾಸ, ಪುರಾಣ, ಮತ್ತು ಖಗೋಳ ಶಾಸ್ತ್ರಗಳ ಪೂರ್ಣಪರಿಚಯದವರು; ಅಲ್ಲದೆ ತಮಗಾಗಿ ಮತ್ತು ಇತರರಿಗಾಗಿ ಎಲ್ಲರೂ ಮೆಚ್ಚಿಕೊಳ್ಳುವಂತೆ ಯಜ್ಞಗಳನ್ನು ಮಾಡುವವರೂ ಆರು ಕರ್ಮಗಳಲ್ಲಿ ಪ್ರವೀಣರೂ ವ್ಯಾಸಂಗ ಮತ್ತು ಬೋಧನೆಯಲ್ಲಿ ಹಾಗೂ ದಾನ ಮತ್ತು ಸ್ವೀಕಾರದಲ್ಲಿ ಪರಿಣತರಾಗಿದ್ದರು. ಅವರು ಅನೇಕ ರಾಜ್ಯಗಳಿಂದ ಬಂದಿದ್ದರು. ಅವಳ ಗಂಡನು ತನ್ನ ರಾಜಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದಾಗ, ಅವಳು ತನ್ನ ಗಂಡನಿಗೆ ತನ್ನ ಅಭಿಲಾಷೆಯನ್ನು ಹೀಗೆ ಪ್ರಕಟಪಡಿಸಿದಳು—"ನಾನು ದೇಗಾಂವೆ ಅಗ್ರಹಾರದ ಬ್ರಾಹ್ಮಣರಿಗೆ ದಾನಮಾಡಬೇಕೆಂದು ಇಚ್ಛಿಸುತ್ತೇನೆ". ಇದನ್ನು ಕೇಳಿದ ದೊರೆಯು, ನಮಗೆ ದಾಖಲೆಗಳು ಹೇಳುವಂತೆ, ತನ್ನ ಮಂತ್ರಿಗಳೊಡನೆ ಸಮಾಲೋಚಿಸಿ, ರಾಣಿಯ ಬೇಡಿಕೆಯನ್ನು ಪರ್ಯಾಲೋಚಿಸಿ, ತಮ್ಮ ಒಪ್ಪಿಗೆಯನ್ನು ಕೊಟ್ಟರೆಂದು ತಿಳಿದು ಬರುತ್ತದೆ. ದೊರೆಯು ತಾನೇ ಪ್ರತಿಯೊಬ್ಬ ಬ್ರಾಹ್ಮಣನ ವಿದ್ವತ್ತನ್ನು ಪರೀಕ್ಷಿಸಿ, ಅನಂತರ ರಾಣಿಯ ಸೂಚನೆಯನ್ನು ಒಪ್ಪಿಕೊಂಡನೆಂದು ತಿಳಿದುಬಂದಿದೆ. ಭಾಗಗಳ ವಿಭಾಗಗಳು ಈರೀತಿಯಲ್ಲಿ ಇದ್ದವು :—

| | | | |
|---|---|---|---|
| ಪ್ರತಿಯೊಬ್ಬ ಭಟ್ಟೋಪಾಧ್ಯಾಯರಿಗೆ | 1 | ಭಾಗ | (10 ಜನರ ಹೆಸರಿಸಿದೆ) |
| ,, ,, | $\frac{3}{4}$ | ,, | (22 ,, ) |
| ಸೂತ್ರಗಳ ವಿವರಣೆ ನೀಡಿದವರಿಗೆ | 1 | ಭಾಗ | |
| ಋಗ್ವೇದವನ್ನು ಬೋಧಿಸುವವರಿಗೆ | $\frac{3}{4}$ | ,, | |
| ಯಜುರ್ವೇದವನ್ನು ,, | $\frac{3}{4}$ | ,, | |
| ಮಕ್ಕಳಿಗೆ ಶಿಕ್ಷಣ ನೀಡುವವರಿಗೆ | $\frac{1}{2}$ | ,, | |
| ಕುಡಿಯುವ ನೀರಿನ ಹಂಚಿಕೆಗಾಗಿ | $\frac{1}{2}$ | ,, | |
| ಭೋಜನ ಶಾಲೆಯ ಖರ್ಚಿಗಾಗಿ | $3\frac{3}{4}$ | ,, | |
| ಮೂರು ದೇವಸ್ಥಾನಗಳ ಸೇವೆಗಳಿಗಾಗಿ | $12\frac{1}{2}$ | ,, | |

ತರ್ಕಶಾಸ್ತ್ರ, ತಂತ್ರಶಾಸ್ತ್ರ ಮತ್ತು ಕಾವ್ಯಶಾಸ್ತ್ರಗಳಲ್ಲಿ ಯಾರ ಪ್ರಜ್ಞೆ ಅಪರಿಮಿತವಾಗಿತ್ತೊ ಅಂತಹ ಗೋವಿಂದದೇವನು ಈ ದಾನಪತ್ರದ ಶಾಸನವನ್ನು ಬರೆದನು.

### ಬ್ರಹ್ಮಪುರಿಗಳು

ಬ್ರಹ್ಮಪುರಿಗಳಿಗೂ, ಅಗ್ರಹಾರಗಳಿಗೂ ಇದ್ದ ವ್ಯತ್ಯಾಸವೆಂದರೆ, ಅಗ್ರಹಾರಗಳು ತಾವೇ ಸ್ವತಃ ಒಂದು ಗ್ರಾಮವಾಗಿದ್ದರೆ, ಬ್ರಹ್ಮಪುರಿಗಳು ಒಂದು ಪಟ್ಟಣದ ಅಥವಾ ನಗರದ ಭಾಗವಾಗಿದ್ದವು. ಮಿಕ್ಕ ವಿಚಾರಗಳಲ್ಲೆಲ್ಲಾ ಬ್ರಹ್ಮಪುರಿಗಳು ಅಗ್ರಹಾರಗಳನ್ನು ಹೋಲುತ್ತಿದ್ದುವಲ್ಲದೆ, ಅದರಂತೆಯೇ ಉಚ್ಚ ಶಿಕ್ಷಣ ಕೇಂದ್ರಗಳಾಗಿದ್ದವು. ಅಂದಿನ ಕಾಲದಲ್ಲಿ ನಗರಗಳು ಕಡಮೆ ಇದ್ದುದರಿಂದ ಬ್ರಹ್ಮಪುರಿಗಳೂ ಕೂಡ ವಿರಳವಾಗಿದ್ದವು. ಬೆಳಗಾಮಿ 65 (ಹಿಂದಿನ ಬಳ್ಳಿಗಾಮೆ) ಬಳಿ ಸಿಕ್ಕಿದ ಶಾಸನವು ಬ್ರಹ್ಮಪುರಿಗಳು ಹೇಗೆ ಅಸ್ತಿತ್ವಕ್ಕೆ ಬಂದುವು ಎಂಬುದನ್ನು ವಿವರಿಸುತ್ತದೆ[65]. ಇದನ್ನು ಬಳ್ಳಿಗಾಮೆಯಲ್ಲಿ ತನ್ನ ನಿವಾಸ ಸ್ಥಾನವನ್ನು ಹೊಂದಿದ್ದ ಬನವಾಸಿಯ ಪ್ರಾಂತಾಧಿಕಾರಿಯಾದ ಕೇಶವದೇವನು ಸ್ಥಾಪಿಸಿದನು. ಆ ಬ್ರಹ್ಮಪುರಿಯು ಸಕಲ ಗುಣಸಂಪನ್ನರಾದ 38 ಮಂದಿ ಬ್ರಾಹ್ಮಣರಿಂದ ಕೂಡಿತ್ತು. ಅವರುಗಳು ಅನೇಕ ಪುರಾಣಗಳು, ಸ್ಮೃತಿಗಳು, ಕಾವ್ಯಗಳು, ನಾಟಕಗಳು, ಭಾಷ್ಯಗಳು, ಮತ್ತು ಮಂಜರಿಗಳಲ್ಲಿ ಪರಿಣತರಾಗಿದ್ದರು. ಅಲ್ಲದೆ ಚತುರ ವಾಗ್ಮಿಗಳೂ ಭಾಷಾಸಂಪನ್ನರೂ ಆಗಿದ್ದರು. ಅನೇಕ ಕವಿಗಳು, ಭಾಷಾ ಪ್ರವೀಣರು, ವಾಗ್ಮಿಗಳು ಮತ್ತು ಪಂಡಿತರುಗಳಿಗೆ ಅವರು ಆಧಾರವಾಗಿದ್ದರು. ಅವರಿಗೆ ಶಿಲಾಶಾಸನಗಳನ್ನು ಓದಿ ಗ್ರಹಿಸುವ ಶಕ್ತಿ ಇತ್ತು.

ಅವರ ವಸತಿಗಾಗಿ ಕೇಶವದೇವನು ಬಲಿಪುರದ (ಬಳ್ಳಿಗಾಮೆ) ದಕ್ಷಿಣ ಭಾಗದ ಫಲವತ್ತಾದ ಭೂಮಿಯನ್ನು ಪಡೆದಿದ್ದನು. ಆ ಪ್ರದೇಶದಲ್ಲಿ ಎಲ್ಲ ರೀತಿಯ ಹಣ್ಣುಗಳೂ ಬೆಳೆಯುತ್ತಿದ್ದುವಲ್ಲದೆ, ಅದು ವಿಶಾಲ, ಹಾಗೂ ಕನ್ನಡಿಯಂತೆ ಸಮಮಟ್ಟವಾದ ಭೂಮಿಯಾಗಿತ್ತು. ಅಲ್ಲಿ ಆ ಮನೋಹರವಾದ ಪ್ರದೇಶದಲ್ಲಿ ಅವನು ಒಂದು ಸುಂದರವಾದ ಕೇಶವನ ದೇವಾಲಯವನ್ನು ಕಟ್ಟಿಸಿದನು. ಆ ದೇವಾಲಯದ ಮುಂದಿನ ವಿಶಾಲವಾದ ಭೂಮಿಯಲ್ಲಿ ತನ್ನ ಹೆಸರಿನಲ್ಲಿ ವೀರಕೇಶವಪುರ ಎಂಬ ಪಟ್ಟಣವನ್ನು ನಿರ್ಮಾಣ ಮಾಡಿದನು. ಅವನು ಆ ಪಟ್ಟಣವನ್ನು ವಿಶಾಲವಾದ ಮನೆಗಳಿಂದ ತುಂಬಿ, ಪ್ರತಿಯೊಂದು ಕೊಠಡಿಯಲ್ಲೂ ಮೃದುವಾದ ಹಾಗೂ ಎತ್ತರವಾದ ಪೀಠಗಳನ್ನು ಇಡಿಸಿ, ಪಾತ್ರೆಗಳಿಂದ ಕೂಡಿದ ಆ ಮನೆಗಳನ್ನು ಮೇಲೆ ಹೇಳಿದ ಬ್ರಾಹ್ಮಣರಿಗೆ ದಾನಮಾಡಿದನು. ಇದೇ ರೀತಿಯ ಬ್ರಹ್ಮಪುರಿಗಳು ಸೂಡಿ, ಅರಸೀಬೀದಿ, ಅಥವಾ ವಿಕ್ರಮಪುರ, ತಲಕಾಡು ಮುಂತಾದ ಕಡೆಗಳಲ್ಲಿ ಇದ್ದವು.

### ಮಠಗಳು

ಹತ್ತನೆ ಶತಮಾನದಿಂದೀಚೆಗೆ ಮಠಗಳನ್ನು ಮತ್ತು ಆಶ್ರಮಗಳನ್ನು ದೇವಸ್ಥಾನಗಳಿಗೂ ಅಥವಾ ದೇವಸ್ಥಾನಗಳನ್ನು ಮಠ ಅಥವಾ ಆಶ್ರಮಗಳಿಗೂ ಸೇರಿಸುವುದು ರೂಢಿಯಾಯಿತು. ಒಂದು ಅತ್ಯಂತ ಪ್ರಖ್ಯಾತವಾದ ಮಠದ ಉದಾಹರಣೆಯೆಂದರೆ: ಬಳ್ಳಿಗಾಮೆಯ ಕೇದಾರೇಶ್ವರ ದೇವಾಲಯಕ್ಕೆ ಸೇರಿದ ಕೋಡಿಯಮಠ. ಕ್ರಿ.ಶ. 1162ರ ಶಾಸನವು ಅದನ್ನು ಈ ರೀತಿಯಲ್ಲಿ ವರ್ಣಿಸಿದೆ[66] : 'ಕೋಡಿಯ ಮಠದಲ್ಲಿ ಎಲ್ಲಾ ರೀತಿಯ ಜ್ಞಾನವಿಭಾಗಗಳಿದ್ದವು. ಈ ಮಠದಲ್ಲಿ: ಬಡವರಿಗೆ, ಮನೆಮಠಗಳಿಲ್ಲದವರಿಗೆ, ಅನಾಥರಿಗೆ, ಕುಂಟರಿಗೆ, ಕುರುಡರಿಗೆ, ಕಿವುಡರಿಗೆ, ಕಥೆ ಹೇಳುವವರಿಗೆ, ಗಾಯಕರಿಗೆ, ತಮಟೆ ಬಾರಿಸುವವರಿಗೆ, ಕೊಳಲು ಊದುವವರಿಗೆ, ನಾಟ್ಯಕಾರರಿಗೆ, ಸ್ತುತಿಗಾರರಿಗೆ, ಬಟ್ಟೆಬರೆ ಇಲ್ಲದವರಿಗೆ, ಗಾಯಗೊಂಡವರಿಗೆ, ಜೈನಸನ್ಯಾಸಿಗಳಿಗೆ, ಏಕದಂಡಿಗಳಿಗೆ, ತ್ರಿದಂಡಿಗಳಿಗೆ, ಹಂಸರಿಗೆ, ಪರಮಹಂಸರಿಗೆ, ಮತ್ತು ಎಲ್ಲಾ

ದೇಶಗಳಿಂದ ಬಂದ ಭಿಕ್ಷುಕರಿಗೆ ಉಚಿತವಾಗಿ ಆಹಾರವನ್ನು ಹಂಚುತ್ತಿದ್ದರು ಮತ್ತು ಇದು ಅನಾಥರಾಗಿ ಖಾಯಿಲೆ ಬಿದ್ದವರಿಗೆ ಚಕಿತ್ಸೆ ಮಾಡುತ್ತಿದ್ದ ಜಾಗವಾಗಿತ್ತು. ಎಲ್ಲ ಜೀವಿಗಳಿಗೂ ಭಯದಿಂದ ಬಿಡುಗಡೆ ಮಾಡುವ ಸುರಕ್ಷಿತ ಸ್ಥಳವಾಗಿತ್ತು. ಈ ದೀರ್ಘ ವಿವರಣೆಯಿಂದ ಕೋಡಿಯ ಮಠದ ವಿಚಾರವಾಗಿ ಹೀಗೆ ಊಹಿಸಬಹುದು : ಈ ಮಠವು—

1) ಜ್ಞಾನದ ಎಲ್ಲಾ ವಿಭಾಗಗಳ ಕೇಂದ್ರವೂ
2) ಎಲ್ಲಾ ದೇಶಗಳ, ವಿವಿಧ ಧರ್ಮಗಳ ಭಿಕ್ಷುಕರ ಸತ್ರವೂ
3) ಒಂದು ಉಚಿತ ವೈದ್ಯಾಲಯವೂ
4) ಎಲ್ಲಾ ಜೀವಿಗಳ ರಕ್ಷಣಾ ನಿಲಯವೂ--ಆಗಿತ್ತೆಂದು ತಿಳಿಯುತ್ತದೆ.

ಈ ರೀತಿಯಲ್ಲಿ ಅದು ಗಳಿಸಿದ ಕೀರ್ತಿಗೆ ಆ ಮಠಗಳ ಅಧ್ಯಕ್ಷತೆಯನ್ನು ವಹಿಸಿದ ವಿದ್ವಾಂಸರ ಪರಂಪರೆಯೇ ಕಾರಣ ; ಮತ್ತು ಅವರಲ್ಲಿ ಪ್ರಸಿದ್ಧನಾದವನು ವಾಮಶಕ್ತಿ. ಅವನು ವ್ಯಾಕರಣ ಶಾಸ್ತ್ರದಲ್ಲಿ ನಿಜವಾದ ಪಾಣಿನಿಯೂ, ವೇದಾಂತದಲ್ಲಿ ಭೂಷಣಾಚಾರ್ಯನೂ ನಾಟ್ಯ ಮತ್ತು ಇತರ ಭರತಶಾಸ್ತ್ರಗಳಲ್ಲಿ ಭರತನೂ ಕಾವ್ಯರಚನೆಯಲ್ಲಿ ಸುಬಂಧುವೂ ಸಿದ್ಧಾಂತದಲ್ಲಿ (ಶೈವಸಿದ್ಧಾಂತ) ಲಕುಲೀಶ್ವರನೂ ಶಿವಪದದಲ್ಲಿ ಸ್ಕಂದನೂ ಆಗಿದ್ದನು[67]. ಅವನ ಸುತ್ತಲೂ ಯಾವಾಗಲೂ ಅಷ್ಟಾಂಗ ಯೋಗದಲ್ಲಿ ಪೂರ್ಣಪಂಡಿತರಾದ ಬ್ರಹ್ಮಚಾರಿಗಳಾದ ಶಿಷ್ಯರ ತಂಡವು ಸುತ್ತುವರಿದಿರುತ್ತಿದ್ದಿತು[68]. ಅವನು ಹೇಗೆ ತನ್ನ ಶಿಷ್ಯರಿಗೆ ಅವರ ಸಾಮರ್ಥ್ಯದ ಆಧಾರವಾಗಿದ್ದನು ಎಂಬುದನ್ನು ಒಂದು ಶಾಸನದಲ್ಲಿ ಬರುವ 'ಅವನ ಶಿಷ್ಯರೆಲ್ಲರ ಭಾವನೆಗಳೂ ಬಯಕೆಗಳೂ ಕೇಂದ್ರೀಕರಿಸಿದ ಏಕೈಕ ವ್ಯಕ್ತಿ ಆತ, ಎಂಬ ಈ ಹೇಳಿಕೆ ವಿಶದಪಡಿಸುತ್ತದೆ[69].

ಅವನ ವಿದ್ವತ್ತನ್ನು ಕುರಿತು ಇದೇ ವರ್ಣನೆಯು ಈ ರೀತಿ ತಿಳಿಸುತ್ತದೆ : "ಮೊದಲಿಗೆ ಒಬ್ಬನು ವಿಜ್ಞಾನವನ್ನು ಕಂಡುಹಿಡಿಯುತ್ತಾನೆ ; ಇನ್ನೊಬ್ಬನು ಆ ಭಾವನೆಗಳಿಗೆ ತಕ್ಕ ಮಾತುಗಳನ್ನು ಜೋಡಿಸಿ ಅದಕ್ಕೆ ಒಂದು ರೂಪ ಅಥವಾ ಆಕಾರವನ್ನು ಕೊಡುತ್ತಾನೆ ; ಇನ್ನೊಬ್ಬನು ವಿಜ್ಞಾನದ ನಿಯಮಗಳನ್ನು ಸ್ಪಷ್ಟಗೊಳಿಸುತ್ತಾನೆ. ಆದರೆ ಗುರು ವಾಮಶಕ್ತಿಯಲ್ಲಿ ಮೇಲಿನ ಮೂರು ಗುಣಗಳೂ ಅಡಗಿದ್ದವು ಎಂಬುದು ಅದ್ಭುತ ಸಂಗತಿ. ಅಲ್ಲದೆ ಇವೆಲ್ಲಕ್ಕಿಂತ ಮೇಲಾಗಿ, ತಿಳಿವಳಿಕೆ ಇಲ್ಲದವರಿಗೆ ಅವನು ವಿಜ್ಞಾನವನ್ನು ಬೋಧಿಸುವುದರಲ್ಲಿ ನಿರತನಾಗಿದ್ದನು".

ಮಠಗಳಿಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ನಾವು ಮತ್ತೊಂದನ್ನು ಮಾತ್ರ ಅವಲೋಕಿಸೋಣ : ಇದು ನಾಗೈಯಲ್ಲಿರುವ ಮಧುಸೂದನ ದೇವಸ್ಥಾನಕ್ಕೆ ಸೇರಿದ ಮಠ[70]. ಅದಕ್ಕೆ ಒಂದು ನೃತ್ಯಶಾಲೆಯೂ, ಮೂರು ಅಂತಸ್ತಿನ ಪ್ರವೇಶದ ಸಭಾಂಗಣವೂ ಇತ್ತು. ಅಲ್ಲಿ ಏಕದಂಡಿ, ತ್ರಿದಂಡಿ ವಿರಕ್ತರ ಧಾರ್ಮಿಕ ಆಚರಣೆಗಳಿಗೆ ಬೇಕಾದ ಸೌಕರ್ಯಗಳಲ್ಲದೆ, ಆಗ ತಾನೇ ತಮ್ಮ ಶಿಕ್ಷಣ ಕ್ರಮವನ್ನು ಮುಗಿಸಿದ ವಿದ್ವಾಂಸರಿಗೆ (ಸ್ನಾತಕರಿಗೆ)....ಹಂಸ ಮತ್ತು ಪರಮ ಹಂಸ ವರ್ಗಗಳ ಬ್ರಹ್ಮಚಾರಿ ಮತ್ತು ವಿರಕ್ತ—ಇವರಿಗೂ ಸೌಲಭ್ಯಗಳಿದ್ದವು. ವೇದ ಮತ್ತು ಅದರ ಸಾವಿರಾರು ಶಾಖೆಗಳು ಅಂದರೆ ಋಕ್, ಯಜುಸ್, ಸಾಮ, ಅಥರ್ವ ವೇದಗಳು ಮತ್ತು ವೇದಾಂಗಗಳ ವ್ಯಾಸಂಗದಲ್ಲಿ ತೊಡಗಿದ್ದ ವಿದ್ವಾಂಸರುಗಳಿಗೆ ಆ ಮಠದಲ್ಲಿ ಸ್ಥಳಾವಕಾಶ ಮತ್ತು ಇತರ ಸೌಕರ್ಯಗಳು ಇದ್ದವು. ಆ ಮಠದಲ್ಲಿ ಎತ್ತರವಾದ ಮುಖಮಂಟಪಗಳೂ, ದ್ವಾರಹಜಾರಗಳೂ ವಠಾರಗೋಡೆಗಳೂ ಇದ್ದವು.

ಅದಕ್ಕೆ 1045 ಮತ್ತರುಗಳಷ್ಟು ಭೂಮಿಯು ಪುದವಟ್ಟು ಇತ್ತು. ಅದರ ಉದ್ಯೋಗಸ್ಥರ

ಮಂಡಲಿಯಲ್ಲಿ ಮೂವರು ಪ್ರಾಧ್ಯಾಪಕರೂ ಒಬ್ಬ ಪುರಾಣಭಟ್ಟರೂ ದೇವಸ್ಥಾನ, ಮಠ ಅಥವಾ ಕಾಲೇಜನ್ನು ನೋಡಿಕೊಳ್ಳಲು ನಾಲ್ಕು ಶಿಲಾಶಿಲ್ಪಕುಶಲಿಗಳೂ ಮಠದ ಭೂಮಿಯನ್ನು ನೋಡಿಕೊಳ್ಳಲು ಒಬ್ಬ ವ್ಯವಸ್ಥಾಪಕನೂ ಮೂವರು ಘಟಿಯಾರರೂ ಇದ್ದರು.

**ದೇವಸ್ಥಾನಗಳು**

ಕೆಲವು ದೇವಸ್ಥಾನಗಳು ಪ್ರಾಥಮಿಕ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು. ಆದರೆ ಅಗ್ರಹಾರ ಮತ್ತು ಮಠಗಳಂತೆಯೇ ಉಚ್ಚ ಶಿಕ್ಷಣ ಕೇಂದ್ರಗಳಾಗಿರುವವೂ ಇದ್ದವು[71]. ಎರಡನೆಯದಕ್ಕೆ ಒಂದು ಉದಾಹರಣೆ ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿನ ಹರಿಹರೇಶ್ವರ ದೇವಾಲಯ. ದೇವಸ್ಥಾನದ ಸೇವಕರಲ್ಲಿ ಋಗ್ವೇದ, ಯಜುರ್ವೇದ, ವ್ಯಾಕರಣ, ಮೀಮಾಂಸೆ, ಮತ್ತು ಅಕ್ಷರಶಿಕ್ಷೆ ಬೋಧಿಸುತ್ತಿದ್ದ ಆರು ಜನ ಪಂಡಿತರಿದ್ದರು.

ತಾಳಗುಂದದ ಪ್ರಣವೇಶ್ವರ ದೇವಾಲಯಕ್ಕೆ ಸೇರಿದ ದೇವಾಲಯದ ಕಾಲೇಜು ಮತ್ತೊಂದು ಉದಾಹರಣೆ. ಅದೇ ದೇವಾಲಯದಲ್ಲಿನ ಕ್ರಿ.ಶ. 1158ರ ಶಾಸನದ ಪ್ರಕಾರ[72] ಅಲ್ಲಿ ಆರು ಜನ ಪಂಡಿತರು ಋಗ್ವೇದ, ಯಜುರ್ವೇದ, ಪದಪಾಠ, ಸಾಮವೇದ, ಕಲ್ಪ, ವ್ಯಾಕರಣ, ರೂಪಾವತಾರ, ನ್ಯಾಸ, ಪ್ರಭಾಕರ, ಮತ್ತು ವೇದಾಂತಗಳನ್ನು ಹೇಳಿಕೊಡುತ್ತಿದ್ದರು. ಅಕ್ಷರಗಳನ್ನು ಮತ್ತು ಕನ್ನಡವನ್ನು ಅನುಕ್ರಮವಾಗಿ ಹೇಳಿಕೊಡುತ್ತಿದ್ದ ಬೋಧಕರು ಅಲ್ಲಿ ಇದ್ದರು. ದೇವಸ್ಥಾನದ ಆದಾಯದ ಒಂದು ಭಾಗವು ಅಲ್ಲಿ ಇದ್ದ 48 ಜನ ವಿದ್ಯಾರ್ಥಿಗಳ ಊಟ ಮತ್ತು ಬಟ್ಟೆಗಳಿಗಾಗಿ ಖರ್ಚಾಗುತ್ತಿತ್ತು—ಮೇಲೆ ಹೇಳಿದ ಆರು ವಿದ್ವಾಂಸರುಗಳಿಗೆ (ಪಂಡಿತರಿಗೆ) ಒಬ್ಬೊಬ್ಬರಿಗೆ ಎಂಟೆಂಟು ವಿದ್ಯಾರ್ಥಿಗಳನ್ನು ವಹಿಸಲಾಗಿತ್ತು.

**ಶಿಕ್ಷಣದ ವ್ಯವಸ್ಥೆ**

ಆ ಎಲ್ಲ ವಿದ್ಯಾಸಂಸ್ಥೆಗಳಿಗೂ ಸಮಾನವಾದ ಕೆಲವು ಶಿಕ್ಷಣವ್ಯವಸ್ಥೆಯ ಸಮಸ್ಯೆಗಳನ್ನು ಈಗ ನಾವು ಗಮನಿಸೋಣ—

**ಕಾರ್ಯಕಾರಿ ವರ್ಗ**

ಈ ಸಂಸ್ಥೆಗಳಲ್ಲಿ ಅನೇಕವು ನಿವಾಸ ಸಹಿತ ಸಂಸ್ಥೆಗಳು. ಅವುಗಳಲ್ಲಿ ವಿದ್ಯಾರ್ಥಿಗಳು, ಬೋಧಕರು ಮತ್ತು ವ್ಯವಸ್ಥಾಪಕರು ಇದ್ದರು. ಉದ್ಯೋಗಸ್ಥರ ಮಂಡಲಿಗೆ ಈ ಕೆಲವು ಶಬ್ದಗಳನ್ನು ಉಪಯೋಗಿಸುತ್ತಿದ್ದರು. ವಿದ್ಯಾರ್ಥಿಗಳು—ಸ್ನಾತಕರು ಅಥವಾ ಪದವಿ ಪಡೆದನಂತರ ವ್ಯಾಸಂಗ ಮಾಡುವವರು, ಬ್ರಹ್ಮಚಾರಿಗಳು (ಮಾಣಿಗಳು ಅಥವಾ ಪದವೀಧರರಲ್ಲಿ ಕಿರಿಯರು)[73]. ಉಪಾಧ್ಯಾಯರನ್ನು ಆಚಾರ್ಯ, ಭಟ್ಟ, ಉಪಾಧ್ಯಾಯ ಅಥವಾ ಭಟ್ಟೋಪಾಧ್ಯಾಯ ಮತ್ತು ಅಕ್ಕರಿಗ ಎಂದು ಕರೆಯುತ್ತಿದ್ದರು. ವಿರಕ್ತರು ವಿದ್ಯಾರ್ಥಿಗಳೂ ಆಗಬಹುದಾಗಿತ್ತು. ಅವರು ಹಂಸ, ಪರಮಹಂಸ, ಏಕದಂಡಿ ಮತ್ತು ತ್ರಿದಂಡಿಗಳೆಂದು ಹೆಸರಾಗಿದ್ದರು. ನಾಗೈಯಲ್ಲಿನ ಆಡಳಿತಗಾರರ ಉದ್ಯೋಗಮಂಡಲಿಯಲ್ಲಿ ಕಾಲೇಜಿನ ಮತ್ತು ಅದಕ್ಕೆ ಸೇರಿದ ದೇವಸ್ಥಾನದ ಭೂಮಿಯನ್ನು ನೋಡಿಕೊಳ್ಳಲು ಒಬ್ಬ ಆಡಳಿತಗಾರನಿದ್ದನು. ಕಾವಲುಗಾರರಾಗಿದ್ದ ಘಟಿಯಾರರು, ಆರುಮಂದಿ ಪುಸ್ತಕಾಲಯದ ಅಧಿಕಾರಿಗಳು, ಕಟ್ಟಡದ ದುರುಸ್ತಿ ನೋಡಿಕೊಳ್ಳುವವರು, ಮತ್ತು ಚೊಕ್ಕಟ ಮಾಡುವವರೂ ಇದ್ದರು[74]. ಇವೆಲ್ಲಕ್ಕಿಂತಲೂ ಮಿಗಿಲಾಗಿ ಸೂಡಿಯಲ್ಲಿನಂತೆ

ವಿದ್ಯಾರ್ಥಿಗಳು ಕ್ರಮಬದ್ಧವಾಗಿ ವ್ಯಾಸಂಗಮಾಡಲೂ ಹಾಗೆ ಅವರು ಸಮರ್ಪಕವಾಗಿ ಕೆಲಸ ಮಾಡದಿದ್ದರೆ ಅವರನ್ನು ಶಿಕ್ಷಿಸಲೂ ಮೇಲ್ವಿಚಾರಕರು ಇದ್ದರು[75].

## ವಿದ್ವಾಂಸರಿಗೆ ಸೌಕರ್ಯಗಳು

ಭಾರತದ ವಿದ್ವಾಂಸರುಗಳು ತಮ್ಮ ವಿಷಯಗಳಲ್ಲಿ ಸಂಪೂರ್ಣಪಾಂಡಿತ್ಯ ಪಡೆಯಲು ಹೂಯನ್‌ತ್ಸಾಂಗನು ಉಲ್ಲೇಖಿಸುವ ಒಂದು ಕಾರಣವೆಂದರೆ, ಅವರಿಗೆ ಯಾವ ಕೊರತೆಯ ಬಾಧೆಯೂ ಉಂಟಾಗದಂತೆ ಮಾಡಿದುದು, ಇದರಿಂದ ಅವರಿಗೆ ತಮ್ಮ ವ್ಯಾಸಂಗದಲ್ಲಿ ಏಕಾಗ್ರ ಚಿತ್ತವಿಡಲು ಅವಕಾಶ ವಾಯಿತು—ಎನ್ನುತ್ತಾನೆ[76]. ಇದು ಕರ್ಣಾಟಕದಲ್ಲೂ ನಿಜವಾಗಿತ್ತು. ನಿವಾಸಸಹಿತ ಶಾಲೆಗಳಲ್ಲಿ ಉಚಿತ ವಸತಿ, ಭೋಜನ ಸೌಕರ್ಯ, ನೀರಿನ ಪೂರೈಕೆ, ಬಟ್ಟೆಗಳ ಏರ್ಪಾಡು, ವೈದ್ಯಕೀಯ ಸಹಾಯ, ಬೆಳಕಿನ ಏರ್ಪಾಡು, ಅಭ್ಯಂಜನಸ್ನಾನ[77], ಕಾವಲುಗಾರರು ಮತ್ತು ಹಜಾಮರು[78]—ಈ ಎಲ್ಲ ಸೌಕರ್ಯ ಗಳಿದ್ದವು. ಸಾಲೊಟ್ಗಿ ಮತ್ತು ನಾಗೈಗಳಲ್ಲಿದ್ದಂತೆ ಈ ಸಂಸ್ಥೆಗಳ ಆವರಣಗಳು ಪುಷ್ಪೋದ್ಯಾನಗಳಿಂದ ಆವರಿಸಿ, ಅಲಂಕಾರಪೂರ್ಣವಾಗಿದ್ದವು. ಮನೆಗಳ ಒಳಭಾಗದಲ್ಲಿ ಕೇಶವಪುರ ಮತ್ತು ಬಳ್ಳಿಗಾಮೆಯಂತೆ ಎಲ್ಲ ರೀತಿಯ ಅನುಕೂಲತೆಗಳೂ ದೊರಕುತ್ತಿದ್ದವು.

ಎಷ್ಟು ಜನ ವಿದ್ಯಾರ್ಥಿಗಳಿಗೆ ಅನುಕೂಲತೆಯಿತ್ತೊ ಅಷ್ಟೇ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿದ್ದರೆಂದು ಕೂಡ ನಾವು ಊಹಿಸಬಹುದು. ಅದೇ ರೀತಿ ತಾಳಗುಂದದ ಪ್ರಣವೇಶ್ವರ ದೇವಾಲಯದ ಕಾಲೇಜಿನಲ್ಲಿ ಆರು ಶಾಸ್ತ್ರಶಾಖೆಗಳಿದ್ದು, ಪ್ರತಿಯೊಂದರಲ್ಲೂ ಎಂಟು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿತ್ತು[79]. ನಾಗೈಯಲ್ಲಿನ ಒಂದು ಆವರಣದಲ್ಲಿ 252ಜನ ವಿದ್ಯಾರ್ಥಿಗಳಿಗೆ ಅನುಕೂಲತೆಯಿತ್ತು[80]; ಮತ್ತು ಅದೇ ಜಾಗದ ಎರಡನೆಯ ಆವರಣದಲ್ಲಿ 400 ಜನ ವಿದ್ಯಾರ್ಥಿ ಗಳಿದ್ದರು[81]–ನಾಲ್ಕು ವಿಭಾಗಗಳಲ್ಲಿ ಒಂದೊಂದರಲ್ಲೂ 100 ಜನರಿದ್ದರು. ವಿದ್ಯಾರ್ಥಿಗಳು ಶಾಲೆಗೆ ಸೇರುವ ಮೊದಲು ತಮ್ಮ ಅರ್ಹತೆಯ ಬಗೆಗೆ ಒಂದು ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಇದು ಸೂಚಿಸುತ್ತದೆ.

## ಅಧ್ಯಯನ ವಿಷಯಗಳು

ಅನೇಕ ಸಾಧಾರಣವಾಗಿ ರೂಢಿಯಲ್ಲಿರುವ ವಿಷಯಗಳು ಅಂದರೆ: ವೇದಗಳು, ವೇದಾಂಗಗಳು, ವ್ಯಾಕರಣ, ವೇದಾಂತ, ಪುರಾಣ, ಕಾವ್ಯ, ನಾಟಕ ಮತ್ತು ಸಂಗೀತ; ಅಲ್ಲದೆ, ರೂಢಿಯಲ್ಲಿನ ಪಠ್ಯಪುಸ್ತಕಗಳು ಎಂದರೆ: ವ್ಯಾಕರಣಕ್ಕೆ ಪಾಣಿನಿ, ಕೌಮಾರ ಮತ್ತು ನ್ಯಾಸ, ಮೀಮಾಂಸೆಗೆ ಪ್ರಭಾಕರವೂ ಇದ್ದವು. ಅಲ್ಲದೆ ವ್ಯಾಸಂಗದ ವಿಷಯಗಳಲ್ಲಿನ ವ್ಯತ್ಯಾಸಗಳು ಬಹಳ ಸ್ವಾರಸ್ಯಪೂರ್ಣವಾಗಿವೆ. ಉದಾಹರಣೆಗೆ, ಧಾರವಾಡ ಜಿಲ್ಲೆಯ ಲೊಕ್ಕಿಗುಂಡಿಯಲ್ಲಿ ಪ್ರಭಾಕರವನ್ನು ವಿಶೇಷವಾಗಿ ವ್ಯಾಸಂಗ ಮಾಡುತ್ತಿದ್ದರು[82]. ಬಳ್ಳಿಗಾಮೆಯ 'ಕೋಡಿಯ ಮಠ'ದಲ್ಲಿ ಭಾರತದ ಷಡ್ದರ್ಶನಗಳ ಜೊತೆಯಲ್ಲಿ ಬೌದ್ಧತತ್ವಶಾಸ್ತ್ರದರ್ಶನ ಮತ್ತು ಲಕುಲರ ಯೋಗಸೂತ್ರಗಳನ್ನೂ ವ್ಯಾಸಂಗ ಮಾಡುತ್ತಿದ್ದರು[83]. ಕೇಶವಪುರ ಮತ್ತು ಬಳ್ಳಿಗಾಮೆಯಲ್ಲಿ ಚತುರ ಸಂಭಾಷಣೆಯ ತಾರ್ಕಿಕರಿಗೂ ವಾಗ್ಮಿಗಳಿಗೂ ಹೆಚ್ಚಿನ ಪ್ರೋತ್ಸಾಹವಿತ್ತು. ಅಲ್ಲಿನ ಪ್ರಾಧ್ಯಾಪಕರು ಅನೇಕ ಭಾಷೆಗಳನ್ನು ತಿಳಿದಿದ್ದರು. ಅವರು ಶಿಲೆಗಳ ಮೇಲಿನ ಅಕ್ಷರಗಳನ್ನು ಓದಿ ಅರ್ಥ ಮಾಡಿಕೊಳ್ಳುತ್ತಿದ್ದರು (ಬಹುಶಃ ಹಳೆಯ ಶಾಸನವಿರಬಹುದು)[84]. ಶಿವಮೊಗ್ಗ ಜಿಲ್ಲೆಯ ಕುಪ್ಪತ್ತೂರ್ ಮಹಾಜನಗಳು ವಾತ್ಸ್ಯಾಯನನ ಕಾಮಸೂತ್ರದಲ್ಲಿ ಪ್ರವೀಣರಾಗಿದ್ದುದಲ್ಲದೆ, ಭಾಷಾಜ್ಞಾನದಲ್ಲಿ ಪಾಂಡಿತ್ಯ ಪಡೆದಿದ್ದರು[85]. ಅರಸಿಕೆರೆಯ ಬ್ರಾಹ್ಮಣರು ವಿದ್ಯಾಧರರಾಗಿದ್ದುದಲ್ಲದೆ, ಅವರಿಗೆ ಕರ್ಣಾಟ, ಲಾಟ,

ದ್ರಾವಿಡ ಮತ್ತು ಇತರ ಅನೇಕ ದೇಶಗಳ ಭಾಷೆಗಳ ಪರಿಚಯವಿತ್ತು: ಮತ್ತು ಆ ಎಲ್ಲಾ ಭಾಷೆಗಳ ಲಿಪಿಜ್ಞಾನವಿತ್ತು[86]. ನಾಗೈಯಲ್ಲಿ 100 ವಿದ್ಯಾರ್ಥಿಗಳು ಶುಕ್ರಶಾಸ್ತ್ರವನ್ನೂ ಮಿಕ್ಕ 100 ಜನ ವ್ಯಾಸರ ಗ್ರಂಥಗಳನ್ನೂ ಇನ್ನೂ 100 ಜನ ಮನುಧರ್ಮಶಾಸ್ತ್ರವನ್ನೂ ಕಲಿಯುತ್ತಿದ್ದರು. ತುಣುಕು ತುಣುಕಾದ ದಾಖಲೆಗಳ ಸ್ಥಿತಿಯಿಂದ ಇನ್ನೂ 100 ಜನ ವಿದ್ಯಾರ್ಥಿಗಳು ಏನು ವ್ಯಾಸಂಗ ಮಾಡುತ್ತಿದ್ದರೆಂದು ತಿಳಿಯದಾಗಿದೆ[87]. ಉಮ್ಮಚಿಗೆಯಲ್ಲಿ ಹಿಂದೆ ನಾವು ತಿಳಿಸಿದಂತೆ, ಅಕ್ಕರಿಗರು (ಅಕ್ಷರಜ್ಞಾನಿಗಳು) ಗಣಿತಶಾಸ್ತ್ರ, ಖಗೋಳಶಾಸ್ತ್ರ, ಛಂದಶ್ಶಾಸ್ತ್ರ, ಕಾವ್ಯಶಾಸ್ತ್ರ ಮತ್ತು ವ್ಯಾಕರಣಶಾಸ್ತ್ರಗಳನ್ನು ಬೋಧನೆ ಮಾಡುತ್ತಿದ್ದರಲ್ಲದೆ, ಅವುಗಳನ್ನು ಕುರಿತು ಗ್ರಂಥಗಳನ್ನು ರಚಿಸುತ್ತಿದ್ದರು[88]. ಹೂಲಿ ಎಂಬಲ್ಲಿ ಈ ಸಾಮಾನ್ಯ ವಿಷಯಗಳೊಂದಿಗೆ, ನಾವು ಅರ್ಥಶಾಸ್ತ್ರದ ಉಲ್ಲೇಖವನ್ನೂ ಕಾಣಬಹುದು[89].

### ಶಿಸ್ತು

ಈ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳಿಗೆ ಬಹಳ ಕಠಿನವಾದ ಶಿಸ್ತಿನ ನಿಯಮಗಳನ್ನು ಹೊಂದಿದ್ದವು. ಈ ನಿಯಮಾವಳಿಗಳಲ್ಲಿ ಒಂದರ ಪ್ರಕಾರ, ವಿದ್ಯಾರ್ಥಿಗಳು ಕಷ್ಟಪಟ್ಟು ವ್ಯಾಸಂಗ ಮಾಡಬೇಕೆಂದೂ ಮತ್ತೊಂದು ನಿಯಮದ ಪ್ರಕಾರ, ವಿದ್ಯಾರ್ಥಿಗಳು ಬ್ರಹ್ಮಚಾರಿಗಳಾಗಿರಬೇಕೆಂದೂ ನಿಬಂಧನೆ ಇತ್ತು. ಧಾರವಾಡಜಿಲ್ಲೆಯ ಸೂಡಿ ಎಂಬಲ್ಲಿನ ಒಂದು ಶಾಸನದಂತೆ, ಯಾವುದಾದರೂ ವಿದ್ಯಾರ್ಥಿಯು ಆಸಕ್ತಿಯಿಂದ ವ್ಯಾಸಂಗಮಾಡದಿದ್ದರೆ, ಮೇಲ್ವಿಚಾರಕರು ಅವನನ್ನು ವಸತಿಗೃಹ ಅಥವಾ ಮಠದಲ್ಲಿ ಉಳಿಯಲು ಅವಕಾಶ ಕೊಡುವಂತೆಯೇ ಇರಲಿಲ್ಲ[90]. ಅನೇಕ ವಿದ್ಯಾರ್ಥಿಗಳನ್ನು ಒಳಗೊಂಡ ಉಮ್ಮಚ್ಚಿಗೆ ಅಗ್ರಹಾರದಲ್ಲಿ, ವಿದ್ಯಾರ್ಥಿಗಳು ಬೈದಾಡಿದರೆ, ಕಠಾರಿಯನ್ನು ಕೈಗೆ ತೆಗೆದುಕೊಂಡರೆ, ತಿವಿದಾಡಿದರೆ, ವ್ಯಭಿಚಾರ ಇತ್ಯಾದಿ ಸಂದರ್ಭಗಳಲ್ಲಿ ಅವರಿಗೆ ಜುಲ್ಮಾನೆಯನ್ನು ವಿಧಿಸುತ್ತಿದ್ದರು[91].

ವಿದ್ಯಾರ್ಥಿಗಳಲ್ಲಿ 'ನೈಷ್ಠಿಕಬ್ರಹ್ಮಚಾರಿಗಳು'[92] ಅಥವಾ ಆಜನ್ಮಬ್ರಹ್ಮಚಾರಿಗಳು ಎಂದೆನಿಸಿಕೊಂಡ ಒಂದು ವರ್ಗವಿತ್ತು. ಅವರನ್ನು ಹೂಯನ್‌ತ್ಸಾಂಗನು ಕೂಡ ಗಮನಿಸಿದ್ದಾನೆ[93]. ಅವರುಗಳು ಬ್ರಹ್ಮಚರ್ಯ ವ್ರತದ ನಿಯಮಗಳನ್ನು ಪಾಲಿಸಲು ಅಲಕ್ಷ್ಯಮಾಡಿದಾಗ, ನಿಯಮಗಳ ಪ್ರಕಾರ ಅವರಿಗೆ ಕಠಿನವಾದ ಶಿಕ್ಷೆ ನಿಗದಿಯಾಗಿತ್ತು. ಈ ರೀತಿಯಲ್ಲಿ ಒಂದು ಮಠದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಹೀಗೆ ಹೇಳಿದೆ: "ಅವರು ಆ ಸಿಬ್ಬಂದಿಯ ಆಚಾರ್ಯರೇ ಆಗಿರಲಿ ಅಥವಾ ಸನ್ಯಾಸಿಯೇ ಆಗಿರಲಿ, ಅವರು ಮಠದಲ್ಲಿರುವಷ್ಟು ಕಾಲ ಕಠಿನವಾದ ಬ್ರಹ್ಮಚರ್ಯವನ್ನು ಪರಿಪಾಲಿಸಬೇಕಿತ್ತು. ಇಂತಹ ಬ್ರಹ್ಮಚರ್ಯ ವ್ರತವನ್ನು ಪಾಲಿಸದಿದ್ದವರನ್ನು ಹಳ್ಳಿಯವರು, ನಾಗರಿಕರು ಮತ್ತು ದೊರೆ ಪರಸ್ಪರ ಸಮಾಲೋಚಿಸಿ, ಮಠಗಳಿಂದ ಹೊರಗಟ್ಟುತ್ತಿದ್ದರು".

### ಸುಶಿಕ್ಷಿತ ರಾಜಕುಮಾರಿಯರು

ಇದುವರೆಗೂ ನಾವು ಸಾಮಾನ್ಯ ಶಿಕ್ಷಣದ ಬಗ್ಗೆ ತಿಳಿದುಕೊಂಡದ್ದಾಯಿತು. ಈಗ ನಾವು ಕೆಲವು ವಿಶೇಷ ರೀತಿಯ ಶಿಕ್ಷಣಗಳು ಎಂದರೆ ಮಹಿಳೆಯರ ಶಿಕ್ಷಣ, ವೃತ್ತಿ ಶಿಕ್ಷಣ ಮತ್ತು ಜನಸಾಮಾನ್ಯರ ಶಿಕ್ಷಣದ ಬಗ್ಗೆ ತಿಳಿಯೋಣ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಅನೇಕ ಹೆಣ್ಣುಮಕ್ಕಳ ಶಾಲೆಗಳಿದ್ದವೆಂದು ಇಬ್ನ್ ಬತೂತನು 14ನೆ ಶತಮಾನದ ಪ್ರಾರಂಭದಲ್ಲಿ ನಮೂದಿಸಿರುವ ವರೆಗೆ, ನಮಗೆ ಯಾವ ದಾಖಲೆಗಳಲ್ಲೂ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಪ್ರತ್ಯೇಕವಾಗಿ ನಮೂದಿಸಿಲ್ಲ[95]. ಆದರೂ ಸುಶಿಕ್ಷಿತ ರಾಜಕುಮಾರಿಯರ ಉದಾಹರಣೆಗಳು ನಮಗೆ ದೊರಕಿರುವುದಲ್ಲದೆ, ಅವರು ಕುಶಲಕಲೆಗಳಲ್ಲಿ ಎಂದರೆ ಸಂಗೀತ, ನೃತ್ಯ ಹಾಗೂ ಆಡಳಿತದಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರೆಂದು ತಿಳಿದುಬಂದಿದೆ.

ಮೊದಲಿನ ಚಾಲುಕ್ಯರ ರಾಜಕುಮಾರಿಯರಲ್ಲಿ 1ನೆ ವಿಕ್ರಮಾದಿತ್ಯನ ಅಣ್ಣನಾದ ಚಂದ್ರಾದಿತ್ಯನ ರಾಣಿ ವಿಜಯಭಟ್ಟಾರಿಕೆ ಎಂಬವಳು ತನ್ನ ಹೆಸರಿನಲ್ಲಿ ದತ್ತಿಯೊಂದನ್ನು ನೀಡಿದಳು[96]. ಅವಳು ರಾಜ ಪ್ರತಿನಿಧಿಯೋ ಇಲ್ಲವೆ ರಾಜ್ಯಪಾಲಕಳೋ ಆಗಿದ್ದಿರಬಹುದು. ಅವಳು ಕವಯಿತ್ರಿಯೂ ಆಗಿದ್ದಳು. ಅಲ್ಲದೆ ಸಾಹಿತ್ಯವಿಮರ್ಶಕರಿಂದ ಗೌರವಕ್ಕೆ ಪಾತ್ರಳಾಗಿದ್ದಳು[97]. ಅವಳು "ಕೌಮುದೀ ಮಹೋತ್ಸವ" ಎಂಬ ಗ್ರಂಥದ ಕರ್ತೃವಾಗಿದ್ದಿರಬಹುದು.

ರಾಷ್ಟ್ರಕೂಟರ ಕಾಲದಲ್ಲಿ ರಾಜಕುಮಾರಿಯರು ಆಡಳಿತಗಾರರಾಗಿ ಅಧಿಕಾರ ನಡೆಸಿದ ಉದಾಹರಣೆ ಗಳಿಲ್ಲದಿದ್ದರೂ, ಸಾಮಾನ್ಯ ಮಹಿಳೆಯರು ಆ ಅಧಿಕಾರದಲ್ಲಿ ಇದ್ದ ನಿದರ್ಶನಗಳಿವೆ. ನಾಗರಖಂಡದ ನಾಳ್ಗಾವುಂಡ ಅಥವಾ ಕಮಿಷನರ್ ತನ್ನ ಪ್ರಭುವಿಗಾಗಿ ಹೋರಾಡಿ ಮರಣಹೊಂದಿದಾಗ, ಅವನ ಹೆಂಡತಿ ಯಾದ ಜಕ್ಕಿಯಬ್ಬೆಯು ಉತ್ತರಾಧಿಕಾರಿಣಿಯಾಗಿ ಅಧಿಕಾರ ಮಾಡಿ, ಅವನ ಕಾರ್ಯಗಳನ್ನು ಸಾಮರ್ಥ್ಯ ದಿಂದ ನಿರ್ವಹಿಸಿದಳು. ಅವಳು ನಿವೃತ್ತಿ ಹೊಂದಲಾಶಿಸಿದಾಗ ಅವಳ ಮಗಳನ್ನು ಆ ಕಾರ್ಯಕ್ಕೆ ನಾಮಕರಣ ಮಾಡಿದಳು ಎಂದು ತಿಳಿದು ಬಂದಿದೆ[98].

ಕಲ್ಯಾಣದ ಚಾಲುಕ್ಯರಲ್ಲಿ ಅನೇಕ ರಾಜಕುಮಾರಿಯರು ಪ್ರಾಂತಾಧಿಕಾರಿಗಳಾಗಿ ಆಡಳಿತ ನಡೆಸಿದ ಉದಾಹರಣೆಗಳಿವೆ. ಇವುಗಳಲ್ಲಿ ಉತ್ತಮವಾದ ನಿದರ್ಶನವೆಂದರೆ: ಅನೇಕ ವರ್ಷಗಳ ವರೆಗೆ ಕಿಸುಕಾಡು ವಿಭಾಗದಲ್ಲಿ ಆಳಿದ ಸತ್ಯಾಶ್ರಯನ ಮಗಳಾದ ಅಕ್ಕಾದೇವಿ[99]. ರಾಜಕುಮಾರಿಯರು ಕುಶಲಕಲೆಗಳಲ್ಲಿ ಪ್ರವೀಣರಾಗಿದ್ದರೆನ್ನಲು ಉತ್ತಮ ನಿದರ್ಶನವೆಂದರೆ, ಕಾಲಚೂರ್ಯ ಸೋವಿದೇವನ ರಾಣಿಯಾದ ಸೋವಲಾದೇವಿ. ಆಕೆ ಕ್ರಿ.ಶ. 1174ರಲ್ಲಿ ತನ್ನ ದೇಶದ ಹಾಗೂ ಇತರ ದೇಶಗಳ ಕಲಾಪರಿಣತರ ಸಭೆಯಲ್ಲಿ ನೃತ್ಯವಾಡಿ, ಅವರನ್ನು ಅಮಿತವಾಗಿ ಸಂತೋಷಪಡಿಸಿದಳೆಂದು ತಿಳಿದುಬಂದಿದೆ[100]. ತ್ರಿಭುವನಮಲ್ಲ ಮಲ್ಲಿದೇವ ಚೋಳ ಮಹಾರಾಜನ ರಾಣಿಯಾದ ಲಕ್ಷ್ಮಾದೇವಿಯು ತನ್ನ ಪತಿಯೊಡನೆ ಪಾಲುದಾರಳಾಗಿ ರಾಜ್ಯವಾಳಿದಳೇದು ಹೇಳಲಾಗಿದೆ. ಅವಳು ಕಾವ್ಯ, ಸಾಹಿತ್ಯ, ಕಲೆ, ಗಾನ (Vocal Music). ವಾದ್ಯ ಸಂಗೀತಗಳಲ್ಲಿ ಮತ್ತು ನೃತ್ಯಶಾಸ್ತ್ರದಲ್ಲಿ ಪ್ರವೀಣಳಾಗಿದ್ದಳು[101]. ಈ ರೀತಿಯಲ್ಲಿ ನಮಗೆ ಆ ರಾಜ ಕುಮಾರಿಯರ ಪಾಂಡಿತ್ಯದ ಬಗ್ಗೆ ತಿಳಿದಿದ್ದರೂ, ಅವರಿಗೆ ಯಾವ ರೀತಿಯಲ್ಲಿ ಈ ಶಿಕ್ಷಣದ ಏರ್ಪಾಡು ನಡೆಯುತ್ತಿತ್ತು ಎಂಬುದನ್ನು ತಿಳಿಯಲು ಸಾಧ್ಯವಾಗಿಲ್ಲ. ಬಹುಶಃ ಅವರಿಗೆ ಅವರ ಮನೆಗಳಲ್ಲಿ ಈ ಶಿಕ್ಷಣ ದೊರಕಿರಬಹುದು.

ದೇವಸ್ಥಾನಗಳಲ್ಲಿ ನಡೆಯುವ ಸೇವೆಗಳಲ್ಲಿ ನೃತ್ಯ, ಸಂಗೀತ ಮತ್ತು ನಾಟಕಾಭಿನಯಗಳು ತಪ್ಪದೆ ಗೋಚರಿಸುತ್ತವೆ. ಈ ಕಲೆಗಾರರಲ್ಲಿ ಬಹುಮಂದಿ ಮಹಿಳೆಯರು ಇದ್ದರೆಂದು ಊಹಿಸಿದರೆ ತಪ್ಪಾಗ ಲಾರದು. ಇತ್ತೀಚೆಗೆ ಕಂಡು ಬಂದ ಜಲಸಂಗವಿ ಶಾಸನವು ಒಬ್ಬ ಮಹಿಳೆಯಿಂದ ಕೆತ್ತಲ್ಪಟ್ಟದ್ದು[102]. ಈ ಶಾಸನದಲ್ಲಿ ವಾಸ್ತವವಾಗಿ ಅವಳು ಅದನ್ನು ಬರೆಯುತ್ತಿರುವಂತೆ ತೋರಿಸಲಾಗಿದೆ. ಸುಂದರವಾದ ಲಿಪಿ ಮತ್ತು ಅದನ್ನು ಶಿಲೆಯ ಮೇಲೆ ಕೆತ್ತುವ ಕಲೆ ಮಹಿಳೆಯರ ವಿದ್ಯೆಗಳಲ್ಲಿ ಒಂದಾಗಿತ್ತು ಎಂಬುದನ್ನಿದು ಎತ್ತಿ ತೋರಿಸುತ್ತದೆ.

### ವೃತ್ತಿ ಶಿಕ್ಷಣ

ಕದಂಬ, ಗಂಗ, ರಾಷ್ಟ್ರಕೂಟ ಮತ್ತು ಚಾಲುಕ್ಯ ದೊರೆಗಳು ಸುಂದರವಾದ ದೇವಾಲಯಗಳನ್ನು ಕಟ್ಟಿಸಿ ಬಿಟ್ಟು ಹೋಗಿದ್ದಾರೆ. ಈ ಕಲೆಯ ಶಿಲ್ಪವಿಭಾಗವು ನಮ್ಮ ಕಾಲದ ವರೆಗೂ ಉಳಿದು ಬಂದಿದೆ. ಶಿವಮೊಗ್ಗ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಂಧದ ಮರದ ಕೆತ್ತನೆಯ ಕೆಲಸಗಾರರು, ಹಿಂದಿನ

ಕಾಲದಲ್ಲಿ ಪುರಾತನ ದೇವಸ್ಥಾನಗಳನ್ನು ಸಿಂಗರಿಸಿದ ಕಲೆಗಾರರ ವಂಶಜರೆಂದು ಸ್ಪಷ್ಟವಾಗಿ ಹೇಳಬಹುದು. ಗುಡಿಕಾರರು ಅಥವಾ ದೇವಾಲಯ ನಿರ್ಮಾಪಕರು ಎಂದು ಈ ಕಲೆಗಾರರು ಪ್ರಖ್ಯಾತರಾಗಿದ್ದಾರೆ. ಆದುದರಿಂದ ಶಿಲ್ಪಕಲೆಯು ತಂದೆಯಿಂದ ಮಗನಿಗೆ ವಂಶಪಾರಂಪರ್ಯವಾಗಿ ಬಂದಿತೆಂದು ನಾವು ಊಹಿಸ ಬಹುದು.

ಶಿವಭಕ್ತನಾದ ಆದಯ್ಯ ಎಂಬವನಿಗೆ ಅವನ ತಂದೆಯು ವರ್ತಕತನದಲ್ಲಿ ಶಿಕ್ಷಣ ಕೊಟ್ಟನೆಂಬ ನಿದರ್ಶನದಿಂದ ತಂದೆಯು ಮಗನಿಗೆ ತನ್ನ ಉದ್ಯೋಗದ ಮೂಲತತ್ವಗಳನ್ನು ಬೋಧಿಸುತ್ತಿದ್ದನು ಎಂಬುದನ್ನು ತಿಳಿಯಬಹುದು. ಅವನು ತನ್ನ ಮಗನಿಗೆ ಅನೇಕ ರೀತಿಯ ವ್ಯವಹಾರಗಳನ್ನು ತಿಳಿಸಿದ ನೆಂದು ಕಾಣುತ್ತದೆ. ಅವನಿಗೆ ಪ್ರಯಾಣ ಮಾಡುವ ಬಗೆ ಮತ್ತು ಲಾಭ ಸಂಪಾದಿಸುವ ರೀತಿಗಳನ್ನು ತಿಳಿಸಿದನೆಂದು ತೋರುತ್ತದೆ[103]. ಬೌದ್ಧ ವಿಹಾರಗಳು ಮತ್ತು ಮಠಗಳು ಕಲೆ ಮತ್ತು ಹಸ್ತ ಕೌಶಲ ಕೇಂದ್ರಗಳಾಗಿದ್ದವು. ಹೂಯನ್‌ತ್ಸಾಂಗನ 'ಐದು ವಿಜ್ಞಾನ'ಗಳಲ್ಲಿ ತಾಂತ್ರಿಕ ಶಿಕ್ಷಣವೂ ಒಳಗೊಂಡಿತ್ತು. ನಾವು ಮುಂದೆ ಕಾಣುವಂತೆ ವೀರಶೈವ ಮಠಗಳು ಕಲೆ ಮತ್ತು ಹಸ್ತಕೌಶಲದ ಕೇಂದ್ರಗಳಾಗಿದ್ದವು. ಈ ರೀತಿಯಲ್ಲಿ ಮಠಗಳು ಮತ್ತು ಕುಶಲಕಲೆಗಾರರ ಮನೆಗಳು ತಾಂತ್ರಿಕ ಮತ್ತು ವೃತ್ತಿ ಶಿಕ್ಷಣಗಳ ಕೇಂದ್ರವಾಗಿದ್ದವು.

## ದೈಹಿಕ ಶಿಕ್ಷಣ

ಅಂಗಸಾಧನೆಯ ಪ್ರಾಮುಖ್ಯವನ್ನು ಮನಗಂಡು ಅದಕ್ಕೆ ರಾಜಕುಮಾರರ ಶಿಕ್ಷಣದ ಪಠ್ಯವಸ್ತುವಿನಲ್ಲಿ ಒಂದು ವಿಶೇಷವಾದ ಸ್ಥಾನವನ್ನು ಕೊಟ್ಟಿದ್ದರು. ಗಂಗರ ರಾಜಕುಮಾರನಾದ ತ್ರಿಯಂಬಕನು, ಅಂಗ ಸಾಧನೆಯಿಂದ ತನ್ನ ತೋಳುಗಳನ್ನು ಗುಂಡಗೆ, ಗಾತ್ರವಾಗಿ ಮತ್ತು ಗಟ್ಟಿಯಾಗಿ ಮಾಡಿಕೊಂಡಿದ್ದನೆಂದು ತಿಳಿದುಬರುತ್ತದೆ[104]. 'ಮಾನಸೋಲ್ಲಾಸ'ದಲ್ಲಿ ಕೂಡ ಸಹನಶಕ್ತಿಯ ಬೆಳವಣಿಗೆ ಮತ್ತು ಸುಲಭವಾಗಿ ಮಣಿ ಯುವ ದೇಹ ಹೊಂದಿರುವುದು ವ್ಯಾಯಾಮದ ಮುಖ್ಯವಾದ ಗುರಿಯಾಗಿತ್ತು ಎಂದು ಒತ್ತಿ ಹೇಳು ತ್ತದೆ[105]. ಆದರಲ್ಲಿ ಕಾಣುವ ಆಟಗಳ ಪಟ್ಟಿಯಲ್ಲಿ ಆನೆಗಳಿಗೂ ಮನುಷ್ಯರಿಗೂ ನಡೆಯುವ ಓಟದ ಪಂದ್ಯ, ಕುಸ್ತಿಯಾಟ, ಮುಷ್ಟಿಕಾಳಗ (Boxing) ಮತ್ತು ಪೋಲೋ ಉಲ್ಲೇಖವಾಗಿದೆ. ಅದರ ಪ್ರಕಾರ, ದೊರೆ ಗಳು ಕ್ರೀಡಾರಂಗಗಳನ್ನು ಕಟ್ಟಿಸಿ, ಅಲ್ಲಿ ಈ ಆಟಪಾಟಗಳನ್ನು ಅಂಗಸಾಧನೆಯ ಪ್ರದರ್ಶನಗಳನ್ನು ನಡೆಸಿ, ಅವನ್ನು ಅನೇಕ ಜನ ಪ್ರೇಕ್ಷಕರು ನೋಡುವಂತೆ ಮಾಡಬೇಕಾಗಿತ್ತು[106]. ಇದಲ್ಲದೆ ದೊರೆಗಳು ಕುಸ್ತಿ ಕಾಳಗದ ಒಂದು ಇಲಾಖೆಯನ್ನು ಸ್ಥಾಪಿಸಿ, ಅದರ ಮೂಲಕ ಕುಸ್ತಿಗಾರರಿಗೆ ಶಿಕ್ಷಣ ನೀಡಿ, ಕುಸ್ತಿಪಂದ್ಯ ಗಳನ್ನು ಏರ್ಪಡಿಸಬೇಕೆಂದು ಅದರಲ್ಲಿ ಹೇಳಿದೆ.

ಮಾನಸೋಲ್ಲಾಸದಲ್ಲಿ ವಿವರವಾಗಿ ವರ್ಣಿಸಿರುವ ಪೋಲೋ ಆಟದ ಜೊತೆಯಲ್ಲಿ[107] ಶ್ರವಣಬೆಳ ಗೊಳದ ಬಳಿ ಸಿಕ್ಕಿರುವ ಕ್ರಿ.ಶ. 10ನೆ ಶತಮಾನದ ಒಂದು ರಾಷ್ಟ್ರಕೂಟರ ಶಾಸನವು ಕುದುರೆ ಮೇಲೆ ಆಡುವ ಒಂದು ಚೆಂಡಾಟವನ್ನು ವರ್ಣಿಸಿದೆ. ಕ್ರಿ.ಶ. 15ನೆ ಶತಮಾನದಲ್ಲಿ ಸ್ಕಾಟ್ಲೆಂಡಿನಲ್ಲಿ ವೊತ್ತಮೊದ ಲಿಗೆ ಆಡಿರಬಹುದೆಂದು ಊಹಿಸಲಾದ ಗಾಲ್ಫ್ ಆಟವನ್ನು ಇದು ಹೋಲುತ್ತದೆ. ಗಂಗ ದೊರೆಯಾದ ನರಸಿಂಹನು ತನ್ನ ಚಿಕ್ಕ ವಯಸ್ಸಿನಲ್ಲೆ "ಚೆಂಡಿನೊಡನೆ ಆಟವಾಡಲು" ಕಲಿತನೆಂದು ಹೇಳಲಾಗಿದೆ[109]. ಆದರೆ ಪೂರ್ಣವಾದ ವಿವರಣೆ ಇಲ್ಲದಿರುವುದರಿಂದ ಅದು ಎಂತಹ ಆಟ ಎಂದು ಹೇಳಲಾಗುವುದಿಲ್ಲ.

ಈ ಆಟಗಳು ರಾಜಕುಮಾರರು ಮತ್ತು ವೃತ್ತಿನಿಪುಣ (Professional) ಆಟಗಾರರುಗಳಿಗೆ

ಮಾತ್ರ ಮೀಸಲಾಗಿತ್ತೆ ಹೊರತು ವಿದ್ವಾಂಸರಿಗೆ ಇರಲಿಲ್ಲ. ಅವರು ಇತರ ಸರಳ ಸಾಮಾನ್ಯ ಶಾರೀರಿಕ ಅಭ್ಯಾಸಗಳನ್ನೂ ಯೋಗಾಭ್ಯಾಸಗಳನ್ನೂ ಹೊಂದಿದ್ದರು[110].

## ಜನಪ್ರಿಯ ಅಥವಾ ಜನಸಾಮಾನ್ಯರ ಶಿಕ್ಷಣ

ದೇವಸ್ಥಾನಗಳು ಜನಸಾಮಾನ್ಯರ ಶಿಕ್ಷಣ ಕೇಂದ್ರಗಳಾಗಿದ್ದವು. ಹಳ್ಳಿಯ ಸಭಿಕರಿಗೆ ಪುರಾಣ ಭಟ್ಟರು ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ಓದಿ ಹೇಳುತ್ತಿದ್ದರು. ದೇವಸ್ಥಾನದ ಗೋಡೆಗಳ ಮೇಲೆ ಮಹಾಕಾವ್ಯಗಳ ದೃಶ್ಯಗಳನ್ನು ಶಿಲ್ಪದಲ್ಲಿ ಕೊರೆಯಲಾಗಿತ್ತು. ಇವು ಪುರಾಣಭಟ್ಟರು ಹೇಳಿದ ಕಥೆಗಳನ್ನು ಚಿತ್ರರೂಪದಲ್ಲಿ ವಿವರಿಸುತ್ತಿದ್ದವು. ಹಾವೇರಿ[111] ಮುಗದ್[112] ಮತ್ತು ನಾಗೈ[113]ಗಳಲ್ಲಿ ನಡೆಯುತ್ತಿದ್ದ ನೃತ್ಯ, ಸಂಗೀತ ಮತ್ತು ನಾಟಕಗಳ ಸಾರ್ವಜನಿಕ ಪ್ರದರ್ಶನಗಳು ಜನಗಳಲ್ಲಿ ಕಲಾಭಿರುಚಿಯನ್ನು ಹುಟ್ಟಿಸಿ ಕಲೆಯನ್ನು ಮೆಚ್ಚುವಂತೆ ಅವರಿಗೆ ಶಿಕ್ಷಣ ನೀಡುತ್ತಿದ್ದವು.

## ವೀರಶೈವ ಪ್ರಗತಿ

11ನೆ ಮತ್ತು 12ನೆ ಶತಮಾನದಲ್ಲಿ ನಡೆದ ವೀರಶೈವ ಪ್ರಯತ್ನ ಪರಂಪರೆಯು ಶಿಕ್ಷಣಕ್ಕೆ ಅನೇಕ ವಿಧಗಳಲ್ಲಿ ಉತ್ತೇಜನ ಕೊಟ್ಟಿತು. ಕನ್ನಡ ಶಿಕ್ಷಣಕ್ಕೆ ಹೆಚ್ಚಿನ ಪ್ರೇರಣೆ ದೊರಕಿದ್ದು ಬಸವೇಶ್ವರ ಮತ್ತು ಇತರ ನಾಯಕರು ತಾಯ್ನುಡಿಯನ್ನು ತಮ್ಮ ತತ್ತ್ವೋಪದೇಶದ ಮಾಧ್ಯಮವನ್ನಾಗಿ ಮಾಡಿದ್ದರಿಂದ. ಅವರ ಬರಹಗಳಲ್ಲಿ ನಾವು ಕಾಣುವ ಒಂದು ಮುಖ್ಯವಾದ ಲಕ್ಷಣವೆಂದರೆ ಕಾಯಕದ ಮಹತ್ವವನ್ನು ಒತ್ತಿ ಹೇಳಿದುದು. ಅರ್ಚಕರು ಅಥವಾ ಜಂಗಮರ ಹೊರತು, ಇತರರು ಅನ್ಯರ ಸಂಪಾದನೆಯಲ್ಲಿ ಬಾಳುವುದು ಒಂದು ಪಾಪವೆಂದು ಪರಿಗಣಿಸಲಾಗುತ್ತಿತ್ತು[114].

ವೀರಶೈವರು ತಮ್ಮ ತತ್ವಗಳನ್ನು ವಚನಗಳ ಮೂಲಕ ಪ್ರಸಾರ ಮಾಡಿದರಲ್ಲದೆ, ಅವರ ಮಠಗಳು ಅವರ ಧರ್ಮದ ಪ್ರಸಾರ, ಸಾಮಾಜಿಕ ಸುಧಾರಣೆ ಮತ್ತು ಶಿಕ್ಷಣಕ್ಕೆ ಏಕಕಾಲದಲ್ಲಿ ಸೇವೆ ಸಲ್ಲಿಸಿದವು. ಪ್ರಾಚೀನಕಾಲದ ಮಠಗಳು ಅಂದರೆ ವಿಶೇಷವಾಗಿ ಕಾಳಾಮುಖರ ಕಾಲದ್ದು, ಈಗ ವೀರಶೈವರ ವಶಕ್ಕೆ ಬಂದಂತೆ ಕಾಣುತ್ತದೆ. ಇದರ ಜೊತೆಗೆ ಅವರು ತಮ್ಮ ಸ್ವಂತ ಮಠಗಳನ್ನು ಸ್ಥಾಪಿಸಿಕೊಂಡರು. ಅಲ್ಲಿ ಗುರುವಿಗೆ ಅತ್ಯಂತ ಪ್ರಮುಖ ಸ್ಥಾನವಿತ್ತು.

ಮಠಗಳಲ್ಲಿ ಮೂರು ವರ್ಗಗಳಿದ್ದವು. ವಿರಕ್ತಮಠ, ಓದಿಸುವ ಮಠ ಮತ್ತು ಶಾಲಿ ಮಠ. ಮೊದಲನೆಯದು ಧರ್ಮ ಮತ್ತು ವೇದಾಂತದ ತತ್ವಗಳನ್ನು ಒತ್ತಿ ಹೇಳುತ್ತಿತ್ತು. ಎರಡನೆಯದು ಬೋಧನೆ, ಓದುವುದು ಮತ್ತು ಬರೆಯುವುದನ್ನು ತಿಳಿಸುತ್ತಿತ್ತು. ಮೂರನೆಯ ವರ್ಗವು ಓದುವುದು, ಬರೆಯುವುದು, ಲೆಕ್ಕಪತ್ರಗಳನ್ನಿಡುವುದು ಮತ್ತು ಶಿಕ್ಷಣದ ಜೊತೆಯಲ್ಲಿ ವೃತ್ತಿಶಿಕ್ಷಣವನ್ನು ಹೇಳಿಕೊಡುತ್ತಿತ್ತು—ಅಂದರೆ ಅಲ್ಲಿ ನೂಲುವುದು, ನೇಯುವುದು, ಸಾಮಾನ್ಯ ವೈದ್ಯಕೀಯ ಜ್ಞಾನ, ಮತ್ತು ವ್ಯವಸಾಯ ಶಾಸ್ತ್ರಗಳನ್ನು ಹೇಳಿಕೊಡುತ್ತಿದ್ದರು[115]. ಹೀಗೆ 11ನೆ 12ನೆ ಶತಮಾನದಲ್ಲಿ ಶೈಕ್ಷಣಿಕ ವಿಚಾರ ಹಾಗೂ ವ್ಯವಸ್ಥೆಯ ಬಗೆಗೆ ವೀರಶೈವರಲ್ಲಿ ಕ್ರಾಂತಿಯುಂಟಾಯಿತು. ತಾಯ್ನುಡಿಯೇ ನಿಜವಾದ ಶಿಕ್ಷಣದ ಮಾಧ್ಯಮ. ಎಲ್ಲಾ ಜಾತಿ ಮತ್ತು ಲಿಂಗ ಭೇದಗಳ ನಿರ್ಮೂಲನ, ಕಾಯಕದ ಮಹತ್ವ ಮತ್ತು ಗುರುಗಳಲ್ಲಿ ಪೂಜ್ಯಭಾವನೆ—ಈ ತತ್ವಗಳ ಆಧಾರದ ಮೇಲೆ ಉಂಟಾದ ಕ್ರಾಂತಿ ಅದು.

## ವಿಜ್ಞಾನಗಳು— ವೈದ್ಯಕೀಯ ಶಾಸ್ತ್ರ

ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ನಮಗೆ ಮೊತ್ತಮೊದಲನೆಯ ಆಧಾರವು ನಲ್ಲಾಳಫಲಕ. ಅವರಲ್ಲಿ ಉಲ್ಲೇಖಿಸಿದಂತೆ ಗಂಗರಾಜನಾದ ದುರ್ವಿನೀತನು, ವೈದ್ಯಕೀಯ ಶಾಸ್ತ್ರದಲ್ಲಿ ಆತ್ರೇಯ, ಧನ್ವಂತರಿ ಮತ್ತು ಚರಕರಿಗೆ ಸರಿಸಮನಾಗಿದ್ದನು[116]. ವೈದ್ಯಕೀಯ ಶಾಸ್ತ್ರದ ಬರೆಹಗಾರರಲ್ಲಿ ಮೊತ್ತಮೊದಲನೆಯ ಹೆಸರು ಜೈನ ಮಹಾಯತಿಯಾದ ಪೂಜ್ಯಪಾದನದು (ಕ್ರಿ. ಶ. 600). ಅವನು ಈ ಶಾಸ್ತ್ರದಲ್ಲಿ ಪ್ರವೀಣ ನಾಗಿದ್ದನೆಂದು ಹೇಳಲಾಗಿದೆ[117]. ನೃಪತುಂಗನು ನಾಗಾರ್ಜುನನನ್ನು ಮೊದಲ ಬರಹಗಾರರಲ್ಲಿ ಒಬ್ಬನೆಂದು ತಿಳಿಸುತ್ತಾನೆ, ವೈದ್ಯಕೀಯ ಶಾಸ್ತ್ರದ ಗ್ರಂಥವಾದ " ನಾಗಾರ್ಜುನ ಕಕ್ಷಾಪುಟ " ಎಂಬುದರ ಕೃತಿಕಾರನು ಈತನೇ ಎಂಬುದು ನಮಗೆ ಸರಿಯಾಗಿ ತಿಳಿದಿಲ್ಲ[118].

ಕ್ರಿ.ಶ. 1025ರಲ್ಲಿ ಚಾವುಂಡರಾಯನು ಬರೆದ " ಲೋಕೋಪಕಾರ " ಎಂಬ ಗ್ರಂಥವು ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ದೊಡ್ಡ ಅಧ್ಯಾಯವನ್ನು ಹೊಂದಿದೆ. ಅದರಲ್ಲಿ ಈ ಕೆಳಗಿನ ಶೀರ್ಷಿಕೆ ಗಳಿವೆ: " ನರವೈದ್ಯ (ಪುರುಷರ ರೋಗಗಳು ಮತ್ತು ಚಿಕಿತ್ಸೆಗಳು), ಸ್ತ್ರೀವೈದ್ಯ (ಹೆಂಗಸರ ರೋಗಗಳು ಮತ್ತು ಚಿಕಿತ್ಸೆಗಳು), ಬಾಲವೈದ್ಯ (ಮಕ್ಕಳ ರೋಗಗಳು ಮತ್ತು ಅದರ ಚಿಕಿತ್ಸಾಕ್ರಮ)[119]. ಮುಂದಿನ ಗ್ರಂಥ ಜಗದ್ದಳ ಸೋಮನಾಥನದು (ಸುಮಾರು ಕ್ರಿ.ಶ. 1150)[120]. ಅದರ ಹೆಸರು " ಕರ್ಣಾಟಕ ಕಲ್ಯಾಣಕಾರಕ ". ಅದು ಪೂಜ್ಯಪಾದ ಗ್ರಂಥದ ಭಾಷಾಂತರ. ಅದು 16 ವಿಧವಾದ ಜ್ವರಗಳು, ಅತಿಸಾರ, ರಕ್ತಪಿತ್ತ, ಕ್ಷಯ, ಜೀರ್ಣತೊಂದರೆಗಳು, ಗುಲ್ಮದ ರೋಗಗಳು ಮುಂತಾದವುಗಳ ವಿಚಾರವಾಗಿ ತಿಳಿಸುತ್ತದೆ. ಈ ಗ್ರಂಥದ ವಿಶೇಷ ಲಕ್ಷಣವೆಂದರೆ, ರೋಗಿಗಳ ಚಿಕಿತ್ಸಾಕ್ರಮದಲ್ಲಿ ಮಾಂಸ ಮತ್ತು ಮಾದಕದ್ರವ್ಯಗಳನ್ನು ಔಷಧಿಗಳಲ್ಲಿ ಗೊತ್ತುಪಡಿಸದಿರುವುದು. ಸುಮಾರು ಕ್ರಿ.ಶ. 1200ರಲ್ಲಿ ದೇವೇಂದ್ರಮುನಿ ಎಂಬವನು "ಬಾಲಗ್ರಹ ಚಿಕಿತ್ಸೆ " (ಮಕ್ಕಳರೋಗಗಳ ವಿಚಾರ) ಎಂಬ ಗ್ರಂಥವನ್ನು ಬರೆದನು[121].

ವೈದ್ಯಕೀಯಶಾಸ್ತ್ರದ ಶಿಕ್ಷಣದ ವಿಚಾರವಾಗಿ, ಬೌದ್ಧ ಮತ್ತು ವೀರಶೈವಮಠಗಳು ಈ ಶಾಸ್ತ್ರದ ಕೆಲವು ಮೂಲಪಾಠಗಳನ್ನು ಬೋಧಿಸಿವೆ. " ಮಿತಾಕ್ಷರ " ಎಂಬ ಗ್ರಂಥದಲ್ಲಿ ಒಂದು ಪ್ರಾಸಂಗಿಕ ಹೇಳಿಕೆಯಂತೆ ಕ್ರಿ.ಶ. 12ನೆ ಶತಮಾನದಲ್ಲಿ ವೈದ್ಯಕೀಯ ಪಾಠಕ್ರಮವು ಎಂಟು ವರ್ಷಗಳಿಗೆ ಬದಲಾಗಿ ನಾಲ್ಕು ವರ್ಷಗಳಲ್ಲೆ ಮುಗಿಯುತ್ತಿತ್ತು ಎಂದು ಹೇಳಲಾಗಿದೆ[122].

ವೈದ್ಯಕೀಯ ಶಾಸ್ತ್ರಪ್ರಯೋಗಗಳ ವಿಚಾರವಾಗಿ ಪ್ರಮಾಣಕೊಡಬೇಕಾದರೆ, ಕದಂಬ ದೊರೆಯಾದ ರವಿವರ್ಮನು ತನ್ನಮೆಚ್ಚಿನ ವೈದ್ಯರಿಗೆ ಧನಸಹಾಯ ಮಾಡಿದುದಾಗಿ ಹೇಳಲಾಗಿದೆ[123]. ಕ್ರಿ.ಶ. 1029ರಲ್ಲಿ ರಾಣಿಯಾದ ಸುಗ್ಗಲಾದೇವಿಯು ದೇವೂರಿನ ಶಿವದೇವಾಲಯಕ್ಕೆ ದತ್ತಿಕೊಟ್ಟಾಗ, ಇತರ ವಿಷಯಗಳೊಂದಿಗೆ, ಅಲ್ಲಿನ ವಿದ್ಯಾರ್ಥಿಗಳು ಮತ್ತು ವಿರಕ್ತರಿಗೆ ಆಹಾರ, ವಸ್ತ್ರ ಮತ್ತು ವೈದ್ಯಕೀಯ ಚಿಕಿತ್ಸೆಗಳಿಗೆ ಏರ್ಪಾಡುಮಾಡಿದಳೆಂದು ತಿಳಿದುಬಂದಿದೆ[124]. ಕ್ರಿ.ಶ. 1054ರಲ್ಲಿ ದಾವಣಗೆರೆಯ ಶಾಸನದಲ್ಲಿ ವಿಜಯಪಂಡಿತರೆಂಬ ವೈದ್ಯರನ್ನು " ಕಲಿಯುಗ ಧನ್ವಂತರಿ " ಎಂದು ಕರೆಯಲಾಗಿದೆ [125]. ಕೆಲವು ಇತರ ಸಾದೃಶ್ಯ ಪ್ರಮಾಣಗಳಿವು: ಕ್ರಿ.ಶ. 1087ರ ಶಾಸನದಲ್ಲಿ ಒಬ್ಬ ಸೈನಿಕ ವೈದ್ಯನು ಅಜೀರ್ಣಕ್ಕೆ ಕಾರಣಗಳನ್ನು ಕಂಡುಹಿಡಿದನೆಂದು ಹೇಳಲಾಗಿದೆ[126]. ಕ್ರಿ.ಶ. 1158ರಲ್ಲಿ ಬಳ್ಳಿಗಾವೆಯಲ್ಲಿ ಮೂರು ವೈದ್ಯಕೀಯ ಗೃಹ (ಚಿಕಿತ್ಸಾಲಯ)ಗಳಿದ್ದವೆಂದು ಹೇಳಲಾಗಿದೆ[127]. ಕ್ರಿ.ಶ. 1162ರ ಶಾಸನದಲ್ಲಿ ಕೋಡಿಯಮಠವು ಅನಾಥ ರೋಗಿಗಳ ಚಿಕಿತ್ಸಾಕೇಂದ್ರವಾಗಿತ್ತು—ಎಂದು ವರ್ಣಿಸಲಾಗಿದೆ [128].

### ಪಶುವೈದ್ಯ ಶಾಸ್ತ್ರ

ಪಶುವೈದ್ಯಶಾಸ್ತ್ರದ ವಿಚಾರವಾಗಿ ಹೇಳಬೇಕಾದರೆ, ದುರ್ವಿನೀತನು ಗಜತುರಗಗಳ ಶಿಕ್ಷಣದ ಶಾಸ್ತ್ರಗಳಲ್ಲಿ ವಿವರಿಸಿದ ತತ್ತ್ವಗಳ ಪ್ರಯೋಗವಲ್ಲಿ ರಾಜಪುತ್ರ (?) ಮತ್ತು ಶಾಲಿಹೋತ್ರರಿಗೆ ಪ್ರತಿಸ್ಪರ್ಧಿಯಾಗಿದ್ದನು[129] ಎಂದು ಹೇಳಲಾಗಿದೆ. ಕ್ರಿ.ಶ. 8ನೆ ಶತಮಾನದಲ್ಲಿ ಆಳಿದ ಅವರ ಉತ್ತರಾಧಿಕಾರಿಗಳಲ್ಲಿ ಒಬ್ಬನಾದ ಶ್ರೀಪುರುಷನು ಗಜಶಾಸ್ತ್ರ ಎಂದರೆ, ಆನೆಗಳ ಬಗ್ಗೆ ಒಂದು ಗ್ರಂಥವನ್ನು ರಚಿಸಿದನೆಂದು ತಿಳಿದು ಬಂದಿದೆ [130]. ಅವನ ಮಗನಾದ ಶಿವಮಾರಸೈಗೊಟ್ಟನು ಆನೆಗಳ ವ್ಯವಸ್ಥಾಪನೆಗಳ ಕ್ರಮಗಳ ಬಗ್ಗೆ ದೀರ್ಘವಾಗಿ ಅಧ್ಯಯನ ಮಾಡಿ "ಗಜಾಷ್ಟಕ" ಎಂಬ ಗ್ರಂಥವನ್ನು ರಚಿಸಿದನು [131]. 6ನೆ ವಿಕ್ರಮಾದಿತ್ಯನ ತಮ್ಮನಿರಬಹುದಾದ ಕೀರ್ತಿವರ್ಮನು "ಗೋವೈದ್ಯ" ಎಂಬ ಗ್ರಂಥದಲ್ಲಿ ಪಶುಗಳ ರೋಗಗಳು ಮತ್ತು ಅವಕ್ಕೆ ಚಿಕಿತ್ಸಾಕ್ರಮಗಳ ಬಗ್ಗೆ ತಿಳಿಸಿದ್ದಾನೆ[132]. 'ಮಾನಸೋಲ್ಲಾಸ'ದಲ್ಲಿ ಆನೆಗಳ ವಿಧಗಳು, ಅವುಗಳ ಪ್ರಕೃತಿಸ್ವಭಾವಗಳು ಮತ್ತು ಲಕ್ಷಣಗಳ ಬಗ್ಗೆ ತಿಳಿಸಲಾಗಿದೆ. ಅದರಲ್ಲಿ ಆನೆಗಳನ್ನು ಕೋಪೋದ್ರೇಕಗೊಳಿಸಲು ಬಳಸಬೇಕಾದ ಅನೇಕ ರೀತಿಯ ಔಷಧಿಗಳನ್ನು ಪ್ರಸ್ತಾವಿಸಿದೆ [133]. ಮಾನಸೋಲ್ಲಾಸದ "ಆಟ ಮತ್ತು ಬೇಟೆ"ಗೆ ಸಂಬಂಧಿಸಿದ ಅಧ್ಯಾಯದಲ್ಲಿ ಕೋಳಿ, ಪಕ್ಷಿ (ಲಾವಕ), ಟಗರು, ಕೋಣ, ಪಾರಿವಾಳ, ಗಿಡುಗ, ಜಿಂಕೆ—ಇತ್ಯಾದಿಗಳ ಬೇರೆ ಬೇರೆ ಬಗೆಗಳನ್ನು ಕುರಿತು ಹೆಚ್ಚಿನ ಸಂಗತಿಗಳನ್ನು ತಿಳಿಸಲಾಗಿದೆ[134].

### ಗಣಿತ, ಖಗೋಳ ಮತ್ತು ಜ್ಯೋತಿಷ್ಯ ಶಾಸ್ತ್ರ

ಮೊದಲೆ ತಿಳಿಸಿದಂತೆ ಕ್ರಿ.ಶ. 1012ರ ಉಮ್ಮಚಿಗೆ ಶಾಸನದಂತೆ, ಅಗ್ರಹಾರದ ಒಬ್ಬ ಶಿಕ್ಷಕರಾದ ನಾಗದೇಸಿಗ ಎಂಬವರು ಗಣಿತಶಾಸ್ತ್ರ ಮತ್ತು ಖಗೋಳಶಾಸ್ತ್ರಗಳನ್ನು ಕುರಿತು ಗ್ರಂಥರಚನೆ ಮಾಡಬಲ್ಲವರಾಗಿದ್ದರು[135].

ಸೌರಮಾನ ಮತ್ತು ಚಾಂದ್ರಮಾನ ಖಗೋಳಶಾಸ್ತ್ರಗಳಲ್ಲಿ ಸಂಪೂರ್ಣಚಂದ್ರರೆಂಬವರಿಗೆ ಪ್ರಾವೀಣ್ಯ ಇತ್ತೆಂದು ಉಲ್ಲೇಖವಾಗಿದೆ[136]. ಸುಮಾರು ಕ್ರಿ.ಶ. 1300ರಲ್ಲಿ ರಟ್ಟಕವಿ ವಿರಚಿತ 'ರಟ್ಟಮತ' ಎಂಬ ಗ್ರಂಥದಲ್ಲಿ ಚಂದ್ರಭಟ್ಟನು (ಸುಮಾರು ಕ್ರಿ.ಶ. 1000) ವೃಷ್ಟಿಶಾಸ್ತ್ರ (ಮಳೆಯ ಶಾಸ್ತ್ರ) ಎಂಬ ಗ್ರಂಥವನ್ನು ರಚಿಸಿದನೆಂದು ಹೇಳಲಾಗಿದೆ. ಕರ್ಣಾಟಕದಲ್ಲೇ ಅತ್ಯಂತ ಶ್ರೇಷ್ಠ ಗಣಿತಶಾಸ್ತ್ರಜ್ಞನೆಂದರೆ ರಾಜಾದಿತ್ಯ (ಸುಮಾರು ಕ್ರಿ.ಶ. 1120). ಇವನು ಅನೇಕ ಗ್ರಂಥಗಳನ್ನು ಅಂದರೆ, 'ವ್ಯವಹಾರಗಣಿತ', 'ಕ್ಷೇತ್ರಗಣಿತ', 'ವ್ಯವಹಾರರತ್ನ', 'ಲೀಲಾವತಿ', 'ಚಿತ್ರಹಸುಗೆ', 'ಜೈನ ಗಣಿತಸೂತ್ರ ಟೀಕೋದಾಹರಣ' ಮುಂತಾದವುಗಳನ್ನು ರಚಿಸಿದ್ದಾನೆ. ಅವನು ರಾಜವರ್ಮ, ಭಾಸ್ಕರ, ಬಾಚ, ಬಾಚಯ, ಬಾಚಿರಾಜ ಎಂಬ ಹೆಸರುಗಳಿಂದ ಪ್ರಸಿದ್ಧನಾಗಿದ್ದನಲ್ಲದೆ, ಅವನಿಗೆ "ಗಣಿತ ವಿಲಾಸ", ಓಜೆವೆಡಂಗ ಮತ್ತು ಪದ್ಯವಿದ್ಯಾಧರ ಎಂದು ಬಿರುದುಗಳು ಇದ್ದವೆಂದು ತಿಳಿಯುತ್ತದೆ. ಇವನ ಸ್ಥಳವು ಬೆಳಗಾವಿ ಜಿಲ್ಲೆಯ ಪೂವಿನಬಾಗೆ (ಇಂದಿನ ರಾಯಭಾಗ್). ಕನ್ನಡದಲ್ಲಿ ಗಣಿತಶಾಸ್ತ್ರವನ್ನು ರಚಿಸಿದ ಮೊತ್ತಮೊದಲ ಗ್ರಂಥಕಾರನಾದ ಅವನು ತನ್ನ ಕೃತಿಗಳಲ್ಲಿ ಆಗಿನ ಕಾಲದಲ್ಲಿ ತಿಳಿದಿದ್ದ ಗಣಿತಶಾಸ್ತ್ರದ ಎಲ್ಲ ರೂಪ ರೇಖೆಗಳನ್ನೂ ಕುರಿತು ಬರೆದಿದ್ದಾನೆ. ಗಣಿತಶಾಸ್ತ್ರವನ್ನು ಪದ್ಯದಲ್ಲಿ ಬರೆದು, ಅದನ್ನು ಸ್ಪಷ್ಟವಾಗಿ ಹಾಗೂ ಸುಲಭವಾಗಿ ಹೇಳುವುದು ಕಷ್ಟ. ಆದರೂ ಈ ಗಣಿತಶಾಸ್ತ್ರಜ್ಞನು ಕವಿಯೂ ಆಗಿ, ಗಣಿತಶಾಸ್ತ್ರದ ಉದಾಹರಣೆಗಳನ್ನೂ ಸೂತ್ರಗಳನ್ನೂ ಸುಲಭವಾಗಿ ಅರ್ಥವಾಗುವ ಹಾಗೆ, ಓದಲು ಮನೋಹರವಾಗಿರುವ ಶೈಲಿಯಲ್ಲಿ, ನಿರೂಪಿಸುವ ಅಪರೂಪವಾದ ವೈಶಿಷ್ಟ್ಯವನ್ನು ಸಾಧಿಸಿದ್ದಾನೆ. ಅವನು ಅಂಕಿಗಳನ್ನೂ ಪದಗಳನ್ನೂ ಕೌಶಲದಿಂದ ನಿರ್ವಹಿಸುವುದರಲ್ಲಿ ಸರಿಸಮವಾದ ಶಕ್ತಿಪಡೆದಿದ್ದನು[137].

ಕ್ರಿ.ಶ. 1049ರಲ್ಲಿ ಶ್ರೀಧರಾಚಾರ್ಯನು ಜ್ಯೋತಿಷ್ಯಶಾಸ್ತ್ರದ "ಜಾತಕತಿಲಕ" ಎಂಬ ಗ್ರಂಥವನ್ನು ಬರೆದನು. ಅವನು ಧಾರವಾಡ ಜಿಲ್ಲೆಯ ನರಗುಂದದಲ್ಲಿ ಜನ್ಮವೆತ್ತಿದವನು. ಕನ್ನಡದಲ್ಲಿ ಜ್ಯೋತಿಶ್ಶಾಸ್ತ್ರವನ್ನು ಬರೆದವರಲ್ಲಿ ಆತನೇ ಮೊದಲನೆಯವನಿರಬಹುದು. ಅವನು ಕವಿಯೂ ಆಗಿದ್ದನು. ಆತನಿಗೆ "ಗದ್ಯೋಪಾಧ್ಯಾಯ" "ವಿದ್ಯಾಧರ" ಮತ್ತು "ಬುಧಮಿತ್ರ" ಎಂಬ ಬಿರುದುಗಳಿದ್ದವು[138].

## ಲೋಕೋಪಕಾರ

ಕೊನೆಯದಾಗಿ 'ಲೋಕೋಪಕಾರ' ಮತ್ತು 'ಮಾನಸೋಲ್ಲಾಸ' ಎಂಬ ಎರಡು ಜ್ಞಾನಕೋಶಗಳಲ್ಲಿ ಅಡಕವಾಗಿರುವ ಕೆಲವು ವೈಜ್ಞಾನಿಕ ವಿಚಾರವಾಗಿ ಉಲ್ಲೇಖಮಾಡಬಹುದು. ಮೊದಲನೆಯದನ್ನು ಬರೆದವನು ಚಾವುಂಡರಾಯ (ಕ್ರಿ.ಶ. 1025). ಈ ಗ್ರಂಥದ ವೈದ್ಯಕೀಯ ವಿಭಾಗವನ್ನು ಹಿಂದೆ ನಾವು ಉಲ್ಲೇಖಮಾಡಿದ್ದೇವೆ. ಜೀವನದ ಕಲೆ ಮತ್ತು ವಿಜ್ಞಾನದ ಒಂದು ಕೈಪಿಡಿಯನ್ನು ಬರೆಯಬೇಕೆನ್ನುವುದೇ ಈ ಗ್ರಂಥಕರ್ತನು ಈ ಕೃತಿಯನ್ನು ಬರೆಯಲು ಇಟ್ಟುಕೊಂಡ ಗುರಿ. ಅದು ಹೇಗಾದರೂ ಇರಲಿ, ನಮಗೆ ಈಗ ಅಗತ್ಯವಾದುದು ಈ ಗ್ರಂಥದ ವೈಜ್ಞಾನಿಕ ವಿಭಾಗ ಮಾತ್ರ.

## ಗೃಹನಿರ್ಮಾಣ

ಈ ವಿಭಾಗದಲ್ಲಿ ಮನೆಗಳನ್ನು ಕಟ್ಟಲು ಉಪಯೋಗವಾಗುವ ಮರಗಳ ವಿಧಗಳು, ತಳಹದಿ ತೆಗೆಯುವುದು, ಸ್ನಾನಗೃಹ, ಪಾಕಗೃಹ ಮತ್ತು ಪ್ರವೇಶದ್ವಾರವು ಯಾವ ದಿಕ್ಕಿನಲ್ಲಿರಬೇಕೆನ್ನುವುದು, ಕೊಠಡಿಯ ಅಳತೆಗಳು, ಸ್ತಂಭಗಳ ಗಾತ್ರ—ಮುಂತಾದವುಗಳನ್ನು ತಿಳಿಸಲಾಗಿದೆ[139].

## ನೀರು

ಈ ವಿಭಾಗದಲ್ಲಿ ಬಾವಿಗಳನ್ನು ಅಗೆವ ವಿಚಾರ ತಿಳಿಸಿದೆ. ಇದರಲ್ಲಿ ಮಣ್ಣಿನ ಕೆಳಭಾಗದಲ್ಲಿರುವ ನೀರನ್ನು ಮುಟ್ಟಲು ಎಷ್ಟು ಆಳವಾಗಿ ಹೋಗಬೇಕು, ಅಂತಹ ನೀರಿನ ರುಚಿ, ಗಟ್ಟಿಯಾದ ಕಲ್ಲನ್ನು ಮೆದುವಾಗಿ ಮಾಡುವುದು ಹೇಗೆ ಮತ್ತು ಅದನ್ನು ಕ್ರಮದಲ್ಲಿ ಒಡೆಯುವ ವಿಧಾನ, ಅಗೆಯುವ ಉಪಕರಣಗಳನ್ನು ಹರಿತಮಾಡಿ ವಜ್ರದಂತೆ ಕಠಿಣ ಮಾಡುವ ವಿಧಾನ ಈ ವಿಷಯಗಳನ್ನು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ[140].

## ಸಸ್ಯಗಳು

ಈ ಅಧ್ಯಾಯ ಇಂದಿಗೂ ನಮಗೆ ಬಹಳ ಉಪಯುಕ್ತವಾದ ವಿಭಾಗ. ಇದರಲ್ಲಿ ಸಸಿಗಳನ್ನು ನೆಡುವುದು, ಗಿಡಗಳಿಗೆ ನೀರೆರೆಯುವುದು, ಸಸ್ಯಗಳಿಗೆ ತಗಲುವ ರೋಗಗಳು ಮತ್ತು ಅವುಗಳಿಗೆ ಚಿಕಿತ್ಸೆ ಇವುಗಳ ಬಗ್ಗೆ ಹೇಳಲಾಗಿದೆ[141]. ಇಲ್ಲಿ ಕೊಟ್ಟಿರುವ ನಿಯಮಗಳ ಪ್ರಕಾರ ಗಿಡಗಳನ್ನು ಬೆಳೆಸಿದರೆ, ಗಿಡಗಳ ಫಲ ಹಾಗೂ ಪುಷ್ಪಗಳನ್ನು ಹೆಚ್ಚು ಪಡೆಯಬಹುದು ಎಂಬುದನ್ನು ಪರೀಕ್ಷಿಸಿ, ಅದು ಎಷ್ಟರ ಮಟ್ಟಿಗೆ ಪ್ರಾಯೋಗಿಕ ಎಂಬುದನ್ನು ಕಂಡುಹಿಡಿಯುವುದು ಪ್ರಯೋಜನಕರವಾಗಬಹುದು. ಅವನು ಹೇಳಿರುವ ಹಣ್ಣಿನ ಮತ್ತು ಹೂಗಿಡಗಳನ್ನು ಕಸಿಮಾಡುವ ವಿಧಾನಗಳು ಇಂದಿಗೂ ಬಳಕೆಯಲ್ಲಿವೆ.

**ಸೌಂದರ್ಯ ಸಾಧನಗಳು**

ಈ ವಿಭಾಗದಲ್ಲಿ ಹೂಗಳಿಂದ ಸುಗಂಧವನ್ನು ಶೇಖರಿಸಿ, ಕೆಡದಂತೆ ಕಾಪಾಡುವ ಬಗೆ ಮತ್ತು ಸುವಾಸನೆಯ ವಸ್ತುಗಳನ್ನು ಇತರ ವಿಧಾನಗಳಿಂದ ಹೇಗೆ ತಯಾರಿಸುವುದು ಎಂಬುದರ ವಿಚಾರವಿದೆ[142].

**ಪಾಕಶಾಸ್ತ್ರ**

ಇದಕ್ಕೆ 'ಸೂಪಶಾಸ್ತ್ರ' ವೆಂದು ಕರೆಯುತ್ತಾರೆ. ಈ ಗ್ರಂಥಕರ್ತನು ಈ ವಿಭಾಗದಲ್ಲಿ ಅನೇಕ ವಿಧವಾದ ಖಾದ್ಯ ವಸ್ತುಗಳನ್ನು ತಯಾರಿಸುವುದು, ಅಲ್ಲದೆ ಆಹಾರ ಪದಾರ್ಥಗಳನ್ನು ಕೆಡದಂತೆ ಇಡುವ ವಿಧಾನಗಳು ಮತ್ತು ಹಣ್ಣುಗಳಿಂದ ರಸವನ್ನು ತೆಗೆದು ರುಚಿಕರವಾದ ಪಾನೀಯಗಳನ್ನು ತಯಾರಿಸುವುದನ್ನು ವಿವರಿಸಿರುತ್ತಾನೆ[143].

**ಮಾನಸೋಲ್ಲಾಸ**

ವಿಕ್ರಮಾದಿತ್ಯನ ಮಗ ಹಾಗೂ ಉತ್ತರಾಧಿಕಾರಿಯಾದ 3ನೆ ಸೋಮೇಶ್ವರನು 'ಮಾನಸೋಲ್ಲಾಸ' ಎಂಬ ಜ್ಞಾನಕೋಶವನ್ನು ರಚಿಸಿದನೆಂದು ಹೇಳಲಾಗಿದೆ. 'ಲೋಕೋಪಕಾರ'ವು ಜನಸಾಮಾನ್ಯರಿಗೆ ಮೀಸಲಾಗಿದ್ದರೆ, 'ಮಾನಸೋಲ್ಲಾಸ'ವು ರಾಜಕುಮಾರರಿಗೆ ಉಪಯುಕ್ತವಾದ ಗ್ರಂಥ. ಪಶುವೈದ್ಯ ಶಾಸ್ತ್ರದ ಬಗ್ಗೆ ಹೇಳಿದಾಗ, ಈ ಗ್ರಂಥದ ವಸ್ತುವಿನ ವಿಚಾರವಾಗಿ ನಾವಾಗಲೇ ಉಲ್ಲೇಖಿಸಿದ್ದೇವೆ. ಇನ್ನೂ ಕೆಲವು ವೈಜ್ಞಾನಿಕ ಸ್ವರೂಪದ ಸಂಗತಿಗಳನ್ನು ಉಲ್ಲೇಖಿಸಬಹುದು.

ಅರಮನೆಗಳ ರಚನೆಗಳ ವಿವರಗಳನ್ನು ನಾವು ನೋಡಿದಾಗ, ಆಗಿನ ಕಾಲದ ವಾಸ್ತುಶಿಲ್ಪಿಗಳಿಗೆ ಬೆಳಕು, ಗಾಳಿ ವ್ಯವಸ್ಥೆಯ ವಿಷಯಗಳಲ್ಲಿ ಪೂರ್ಣ ಗ್ರಹಣಶಕ್ತಿ ಇತ್ತು ಎಂದು ಗೊತ್ತಾಗುತ್ತದೆ[144].

ರಾಜಾಸ್ಥಾನದಲ್ಲಿ ನೆರೆದ ಅಧಿಕಾರಿಗಳನ್ನು ವಿವರಿಸುತ್ತಾ ಈ ಗ್ರಂಥಕರ್ತನು ಅವರಲ್ಲಿ 'ಶಾಸ್ತ್ರಾಧಿಕಾರಿ' ಎಂಬ ಅಧಿಕಾರಿಯನ್ನು ಸೂಚಿಸಿದ್ದಾನೆ. ಆತ ವಿಜ್ಞಾನಗಳ ಅಂದರೆ ವ್ಯವಸಾಯ, ಖಗೋಳಶಾಸ್ತ್ರ, ವೈದ್ಯಕೀಯ ಶಾಸ್ತ್ರ ಮುಂತಾದವುಗಳ ವಿಭಾಗದ ಅಧಿಕಾರಿಯಾಗಿರಬಹುದೆಂದು ಕಾಣುತ್ತದೆ[145].

ಸೂಪಶಾಸ್ತ್ರ ಅಥವಾ ಪಾಕಶಾಸ್ತ್ರದ ವಿಭಾಗದಲ್ಲಿ 9 ವಿಧವಾದ ನೀರುಗಳ ಬಗ್ಗೆ ತಿಳಿಸಲಾಗಿದೆ. ಸೋಮೇಶ್ವರನ ಪ್ರಕಾರ, ನೀರನ್ನು ಮಣ್ಣಿನ ಗಡಿಗೆ ಅಥವಾ ಚರ್ಮದ ಚೀಲಗಳಲ್ಲಿ ಶೇಖರಿಸಿ, ಅದನ್ನು ತ್ರಿಫಲದ ಮೂಲಕ ಶುದ್ಧೀಕರಿಸಬೇಕೆಂದು ತಿಳಿದುಬರುತ್ತದೆ[146].

ಮೂರ್ತಿಶಿಲ್ಪದಲ್ಲಿನ ಅಳತೆಗಳು, ಚಿತ್ರಕಲೆಯ ಸಾಮಗ್ರಿಗಳು, ಸುಗಂಧ ದ್ರವ್ಯಗಳು, ಉಡಿಗೆ ತೊಡಿಗೆಗಳು, ಪೀಠೋಪಕರಣಗಳು, ಸಾಗಾಣಿಕೆಯ ವಿಧಾನಗಳು—ಮುಂತಾದವುಗಳಿಗೆ ಸಂಬಂಧಿಸಿದ ಈ ಗ್ರಂಥ ವಿಭಾಗಗಳಲ್ಲಿ ವೈಜ್ಞಾನಿಕವೆಂದು ಕರೆಯಬಹುದಾದ ಹಲವಾರು ಸಂಗತಿಗಳಿವೆ[147]. ಈ ಮಾನಸೋಲ್ಲಾಸದ ಹೆಚ್ಚಿನ ವಿಚಾರ ಸಂಸ್ಕೃತ ಎಂಬ ಮುಂದೆ ಇರುವ ಒಂದು ಲೇಖನದಲ್ಲಿ ತಿಳಿಸಲಾಗಿದೆ.

## ಅಡಿಟಿಪ್ಪಣಿಗಳು

ಸಾಮಾನ್ಯವಾಗಿ ಉಪಯೋಗಿಸಿರುವ ಸಂಕೇತಾಕ್ಷರಗಳ ಅಂದರೆ E.I., E.C., M.E.R.. I.A., S.I.I., M.A.R., ಇವುಗಳ ಜೊತೆಗೆ ಈ ಕೆಳಗಿನ ಸಂಕೇತಾಕ್ಷರಗಳನ್ನು ಉಪಯೋಗಿಸಿದೆ :—

1, ಎಲ್. ರೈಸ್‌ಗೆ ರೈಸ್ :—ಮೈಸೂರು ಮತ್ತು ಕೊಡಗು ಶಾಸನಗಳು.
2. ಆರ್. ನರಸಿಂಹಾಚಾರ್ಯರಿಗೆ ಕೆ,ಕೆ.ಸಿ :—ಕರ್ನಾಟಕ ಕವಿಚರಿತೆ.
3. ಕೆ. ಜಿ. ಕುಂದಣಗಾರರಿಗೆ ಐ.ಎನ್.ಕೆ.ಕೆ. :—ಉತ್ತರ ಕರ್ನಾಟಕ ಮತ್ತು ಕೊಲ್ಲಾಪುರ ಶಾಸನಗಳು,

1. ಲೂಡರ್ಸ್ : ಬ್ರಾಹ್ಮೀಶಾಸನಗಳ ಪಟ್ಟಿ ನಂ. 1186
2. ಇದೇ ಪುಸ್ತಕದಲ್ಲಿ ನಂ. 1195
3. ಎಪಿಗ್ರಾಫಿಯಾ ಇಂಡಿಕಾ, I ಪುಟ 2.
4. ಎಪಿಗ್ರಾಫಿಯಾ ಕರ್ನಾಟಿಕಾ, VII, SK. 176
5. ಇದೇ ಪುಸ್ತಕದಲ್ಲಿ ನಂ. 178
6. ಇಂಡಿಯನ್ ಆಂಟಿಕ್ವೆರಿ, VII ಪುಟ 38
7. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, 1924-ಪು 71
8. M.A.R. 1921, ಪು. 21
9. I.A. VII, ಪು. 161
10. I.A. VI ಪು. 363
11. I.A. XIX, ಪು. 7
12. ಅಳ್ತೇಕರ್ : ರಾಷ್ಟ್ರಕೂಟರು ಮತ್ತು ಅವರ ಕಾಲಗಳು-88
13. ಆರ್. ನರಸಿಂಹಾಚಾರ್ಯ–ಕರ್ನಾಟಕ ಕವಿಚರಿತೆ–I ಪುಟಗಳು 17-19
14. ಇದೇ ಪುಸ್ತಕದಲ್ಲಿ ಪು. 17
15. ಅಳ್ತೇಕರ್—ರಾಷ್ಟ್ರಕೂಟರು—ಪುಟ 99
16. ಕ್ಯಾಂಬೆ ಫಲಕಗಳು—E.I. VIII ಪು. 35
17. ಬಿಲ್ಹಣ—ವಿಕ್ರಮಾಂಕದೇವಚರಿತ—II ಪು. 39
18. ಇದೇ ಪುಸ್ತಕದಲ್ಲಿ III ಪುಟ 15-19
19. ಸೋಮೇಶ್ವರ : ಮಾನಸೋಲ್ಲಾಸ-ಸಂ. ಜಿ.ಕೆ. ಶಿರ್‌ಗೊಂಡೇಕರ್ II ಪುಟ. 110 ff.
20. M.A.R.-1921 ಪು. 24
21. ಲೂಡರ್ಸ್ : ನಂ. 1186
22. ವಾಟರ್ಸ್-ಹುಯೆನ್‌ತ್ಸಾಂಗನ ಭಾರತದ ಪ್ರವಾಸಗಳು-II ಪು. 239
23. ಇದೇ ಪುಸ್ತಕದಲ್ಲಿ ಪು. 239
24. ಇದೇ ಪುಸ್ತಕದಲ್ಲಿ I, ಪು. 154-155
25. S.I.I.–XI (1) ನಂ. 144
26. E.C., VII SK. 98
27. E.C., VII SK. 185
28. J.B.B.R.A.S. IX ಪು. 275
29. E.C., V, AK. 138
30. E.C., X, KL. 106 d

31. E.C., XII CK 2
32. E.C., V, AK. 138
33. ಮೋರಸ್ ಜಿ.ಎಮ್., ಕದಂಬಕುಲ : ಪು. 473
34. E.C., V, AK. 138
35. E.C., VII, SK. 185
36. J.B.B.R.A.S., IX ಪು. 275
37. E.C., VII, SK. 185
38. E.C., V A.K. 138
39. ಆಳ್ತೇಕರ್ : ಪ್ರಾಚೀನ ಇಂಡಿಯಾದಲ್ಲಿ ಶಿಕ್ಷಣ ಪು. 232
40. E.C., VII, SK. 1856
41. E.C., VII, SK. 176
42. E.I., III, ಪು. 359
43. ಇದೇ ಪುಸ್ತಕದಲ್ಲಿ
44. ಹೈದರಾಬಾದ್ ಆರ್ಕಿಯಾಲಾಜಿಕಲ್ ಸೀರೀಸ್; VIII, ಪು. 23
45. E.I., III, ಪು. 359
46. M.A.R. 1936, Para 24
47. S.I.I., VI, ನಂ. 558
48. S.I.I., IX, (i) ನಂ. 133
49. I.N.K.K., ನಂ. 6
50. H.A.S., VIII, ಪು. 23-26
51. ಇದೇ ಪುಸ್ತಕದಲ್ಲಿ ಪು. 39
52. ಇದೇ ಪುಸ್ತಕದಲ್ಲಿ ಪು. 23
53. S.I.I., VI, ನಂ. 558
54. E.C., III, Md. ನಂ. 113
55. H.A.S., VIII, ಪು. 23-26
56. E.C., VII, SK. 176
57. ಇದೇ ಪುಸ್ತಕದಲ್ಲಿ SK. 176
58. ಕರ್ಣಾಟಕ ಶಾಸನಗಳು (ಸಂ. ಆರ್.ಎಸ್. ಪಂಚಮುಖಿ) I, ನಂ. 2
59. ಇದೇ ಪುಸ್ತಕದಲ್ಲಿ ನಂ. 4
60. I.A., VIII, ಪು. 287.
61. S.I.I., XI, (1) ನಂ. 169
62. E.I.. IV, ಪು. 63
63. E.I., XX, ಪು. 64 ff
64. J.B.B.R.A.S., IX, ಪು. 275
65. E.C., VII, SK. 123
66. ಇದೇ ಪುಸ್ತಕದಿಂದ SK. 102
67. ಇದೇ ಪುಸ್ತಕದಿಂದ SK. 92, 102
68. ಇದೇ ಪುಸ್ತಕದಿಂದ SK. 105

69. ಇದೇ ಪುಸ್ತಕದಿಂದ
70. H.A.S., VIII, ಪು. 35
71. E,C., XI, Dg. ಪು. 79
72. ಇದೇ ಪುಸ್ತಕದಿಂದ S.K. 185.
73. H.A.S., VIII, ಪು. 35
74. ಇದೇ ಪುಸ್ತಕದಿಂದ ಪು. 23 ಮತ್ತು, 37-38
75. E.I., XV, ನಂ. 6. ಪು. 93
76. ಬೀಲ್-ಹೂಯೆನ್‌ತ್ಸಾಂಗನ ಜೀವನ, ಪು. 113
77. E.C., VII, S.K. 185
78. ಇದೇ ಪುಸ್ತಕದಿಂದ
79. ಇದೇ ಪುಸ್ತಕದಿಂದ
80. H.A.S.. VIII, ಪು. 23 ff
81. ಇದೇ ಪುಸ್ತಕದಿಂದ ಪು. 39
82. E.I., XV, ಪು. 348 ff
83. E.I., VII, SK. 102
84. ಇದೇ ಪುಸ್ತಕದಿಂದ S.K. 123
85. E.C., VII, SK. 293
86. E.C.V. ,AK. 130
87. H.A.S., VIII, ಪು. 39
88. E.I., XX, ಪು. 64 ff
89. E.I., XVIII, ಪು. 170
90. ಇದೇ ಪುಸ್ತಕದಿಂದ XV, ನಂ. 6, ಪು. 93
91. E.I., XX, ಪು. 70
92. E.I., XII, ಪು. 168 ff
93. ವಾಟರ್ಸ್ : I ಪು. 160-161
94. E.I., XII ಪು. 290-291
95. ಇಬ್ನ್‌ಬತೂತನ ರೆಹ್ಲಾ—ಸಂ. ಮಹ್ದಿ ಹುಸೇನ್, ಪು. 179
96. I.A., VII ಪು. 163
97. ಕೆ.ಟಿ. ಪಾಂಡುರಂಗಿ : ಸಂಸ್ಕೃತ ಕವಯಿತ್ರಿಯರು, ಪು. 16-17
98. E.C., VII, SK. 217
99. E.I., XV, ಪು. 75 ff
100. J.B.B.R.A.S., XVIII, ಪು. 275
101. S.I.I., IX (1), ಪು. 273
102. ಕರ್ನಾಟಕ ವಿಶ್ವವಿದ್ಯಾಲಯ ಪತ್ರಿಕೆ-ಮಾನವಶಾಸ್ತ್ರ (Humanities) ನಂ. VI, ಜೂನ್ 62 ಪು. 57 ff
103. ಆದಯ್ಯನ ರಗಳೆ-ಶಿವಾನುಭವ-ಜುಲೈ 1933 ಪು. 74
104. M.A.R. 1925, ಪು. 68
105. ಮಾನಸೋಲ್ಲಾಸ, II, ಪು. 234 ff

106. ಇದೇ ಪುಸ್ತಕದಿಂದ, ಪು. 229-239
107. ಇದೇ ಪುಸ್ತಕದಿಂದ, ಪು. 211-224
108. E.C., II, SB. 133
109. M.A.R., 1921, ಪು. 21
110. E.C., VII, SK. 123
111. ಬೊಂಬೈ ಚಾರಿತ್ರಿಕ ಸಂಘದ ಪತ್ರಿಕೆ, III ಪು. 44
112. S.I.I., XV (1), ನಂ. 78
113. H.A.S., VIII, ಪು. 30
114. ಎಸ್.ಸಿ. ನಂದಿಮಠ:ವೀರಶೈವ ಧರ್ಮದ ಕೈಗನ್ನಡಿ Chap. II
115. ಬಿ.ಎಸ್. ಗದ್ದಗಿ ಮಠ-ಶಿಕ್ಷಣ ಮತ್ತು ಸಂಸ್ಕೃತಿಯಲ್ಲಿ ಕಾಯಕ ಶಿಕ್ಷಣ ಪದ್ಧತಿ—(ಸಂ) ಜಿ.ಎಸ್. ಹಾಲಪ್ಪ ಪು. 256 ff
116. M.A.R., 1924, ಪು. 71
117. K.K.C., I, ಪು. 6
118. ಇದೇ ಪುಸ್ತಕದಿಂದ ಪು. 12
119. ಚಾವುಂಡರಾಯ:ಲೋಕೋಪಕಾರ-ಸಂ. ಎಚ್. ಶೇಷಯ್ಯಂಗಾರ್, ಅಧ್ಯಾಯ 9
120. K.K.C., II, ಪು. 15
121. ಇದೇ ಪುಸ್ತಕದಿಂದ ಪು. 320
122. ಆಳ್ತೇಕರ್: ಪ್ರಾಚೀನ ಇಂಡಿಯಾದಲ್ಲಿ ಶಿಕ್ಷಣ, ಪು. 191·f·n.i.
123. E.I., XVI, ಪು. 264 ff
124. ಮುಂಬೈ ಕರ್ನಾಟಕ ಶಾಸನಗಳು, 25-1936-37
125. E.C., XI Dg. 74
126. ರೈಸ್:ಶಾಸನಗಳಿಂದ ಮೈಸೂರು ಮತ್ತು ಕೊಡಗು
127. E.C., VIII, Sb. 277
128. E.C., VII, SK. 102
129. M.A.R., 1924, ಪು. 71
130. K.K.C., I, ಪು. 17
131. ರೈಸ್—ಪು. 198-199
132. K.K.C.I., ಪು. 130.
133. ಮಾನಸೋಲ್ಲಾಸ II, ಪು. 30-1
134. ಇದೇ ಪುಸ್ತಕದಿಂದ II, ಪು. 38-45
135. E.I., XX, ಪು. 66
136. ರೈಸ್—ಪು. 199
137. K.K.C.I., ಪು. 123-27
138. ಇದೇ ಪುಸ್ತಕದಿಂದ
139. ಚಾವುಂಡರಾಯ : ಲೋಕೋಪಕಾರ ಪು. 7-8
140. ಇದೇ ಪುಸ್ತಕದಿಂದ ಪು. 12
141. ಇದೇ ಪುಸ್ತಕದಿಂದ ಪು. 12 ಮತ್ತು 13
142. ಇದೇ ಪುಸ್ತಕದಿಂದ ಪು. 14 ಮತ್ತು 15

143. ಇದೇ ಪುಸ್ತಕದಿಂದ ಪು. 15
144. ಮಾನಸೋಲ್ಲಾಸ II, ಪು. 13
145. ಇದೇ ಪುಸ್ತಕದಿಂದ ಪು. 18
146. ಇದೇ ಪುಸ್ತಕದಿಂದ ಪು. 25
147. ಇದೇ ಪುಸ್ತಕದಿಂದ ಪು. 8 ಮತ್ತು 24.

ಮೂಲ ಲೇಖಕರು : ಡಾ॥ ಜಿ. ಎಸ್. ದೀಕ್ಷಿತ್
ಅನುವಾದಕರು : ಶ್ರೀ ಎಂ. ಕೆ. ರಾಜಗೋಪಾಲ್

# ಕಲ್ಯಾಣ ಚಾಲುಕ್ಯರ ಯುಗ

ಹತ್ತನೆಯ ಶತಮಾನವು ರಾಜಕೀಯವಾಗಿ ಅಸ್ಥಿರವಾಗಿದ್ದ ಯುಗ. ಬೇರೆಬೇರೆ ಭಾಗದ ರಾಜರುಗಳ ಮಧ್ಯೆ ಯುದ್ಧಗಳು ಪದೇ ಪದೇ ನಡೆಯುತ್ತಿದ್ದುವು. ದನಗಳ್ಳರ ಮತ್ತು ದರೋಡೆಕಾರರ ಜೊತೆ ಹೋರಾಡಿ ಹಳ್ಳಿಗರು ತಮ್ಮನ್ನು, ತಮ್ಮ ಆಸ್ತಿಯನ್ನು, ತಾವೇ ರಕ್ಷಿಸಿಕೊಳ್ಳಬೇಕಾಗಿದ್ದಿತು. ಇವರ ಫಲವಾಗಿ ಇಡೀ ವಾತಾವರಣ ಉತ್ಸಾಹ ಶೌರ್ಯಧೈರ್ಯಗಳಿಂದ ತುಂಬಿ ತುಳುಕುತ್ತಿದ್ದಿತು. ಉದಾತ್ತ ಉದ್ದೇಶಕ್ಕಾಗಿ ಜನರು ಆಯುಧಗಳನ್ನು ಹಿಡಿದು ತಮ್ಮ ಜೀವನವನ್ನರ್ಪಿಸಲು ಸದಾ ಸಿದ್ಧರಾಗಿರುತ್ತಿದ್ದರು.

ಕಲ್ಯಾಣ ಚಾಲುಕ್ಯರ ಯುಗದಲ್ಲಿ ಜೈನಧರ್ಮವು ಬಹು ಪ್ರಭಾವಶಾಲಿಯಾಗಿತ್ತು. ಆದರೆ ಅದು ಅತ್ಯಂತ ಜನಪ್ರಿಯವಾದ ಧರ್ಮವಾಗಿದ್ದಿತೆಂದು ನಾವು ಹೇಳಲಾರೆವು. ಚಾಲುಕ್ಯರು ತಾವೇ ಸ್ವತಃ ಜೈನರಲ್ಲದಿದ್ದರೂ, ತಮ್ಮ ಹಿಂದಿನವರಂತೆ ಜೈನಧರ್ಮಕ್ಕೆ ಆಶ್ರಯವನ್ನು ನೀಡಿದ್ದರು. ಕನ್ನಡ ಸಾಹಿತ್ಯವು ತನ್ನ ಮೊದಲ ದಿನಗಳಲ್ಲಿ ಜೈನಕವಿಗಳಿಗೆ ವಿಶೇಷ ಋಣಿಯಾಗಿದೆ. ಕನ್ನಡವು ಸಾಹಿತ್ಯ ಕೃತಿಗಳ ನಿರ್ಮಾಣಕ್ಕೆ ಸರಿಯಾದ ಮಾಧ್ಯಮವಲ್ಲವೆಂಬ ಭಾವನೆ ಸಾಮಾನ್ಯವಾಗಿ ಹಬ್ಬಿದ್ದ ಕಾಲದಲ್ಲಿ ಅವರು ಆ ಭಾಷಾಕ್ಷೇತ್ರವನ್ನು ಉತ್ತು ಬೆಳಸಿದರು.

ಕಲ್ಯಾಣ ಚಾಲುಕ್ಯರು ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸುವ ಹೊತ್ತಿಗಾಗಲೇ ಕನ್ನಡ ಸಾಹಿತ್ಯವು ಸಾಕಷ್ಟು ಪ್ರಗತಿಯನ್ನು ಹೊಂದಿದ್ದಿತು, ಅನೇಕ ಕವಿಗಳು ಗದ್ಯ ಮತ್ತು ಪದ್ಯರೂಪವಾದ ಅನೇಕ ಕೃತಿಗಳನ್ನು ರಚಿಸಿದ್ದರು. ಅಷ್ಟು ಮಾತ್ರವಲ್ಲದೆ, ಅವೆರಡರ ಸಮ್ಮಿಶ್ರಣ ರೂಪವಾದ ಚಂಪೂ ರೀತಿಯಲ್ಲಿಯೂ ಅನೇಕ ಕೃತಿಗಳು ನಿರ್ಮಾಣವಾಗಿದ್ದುವು. ಚಂಪೂ ಶೈಲಿಯ ಕವಿಗಳಲ್ಲಿ ಒಂದನೆಯ ಗುಣವರ್ಮ, ಪಂಪ ಮತ್ತು ಪೊನ್ನರನ್ನು ಹೆಸರಿಸಬಹುದು. ಮುಂದಿನ ಕವಿಗಳ ಮೇಲೆ ಪಂಪ ಬೀರಿದ ಪ್ರಭಾವವಂತೂ ಅಪರಿಮಿತ. ಪಂಪನಿಂದ (ಸು. 950) ಬಸವನ (ಸು. 1150) ವರೆಗಿನ ಕನ್ನಡ ಸಾಹಿತ್ಯದ ಕಾಲವನ್ನು ಪಂಪಯುಗ ಎಂದು ನಿರ್ದೇಶಿಸಿರುವುದು ಉಚಿತವೇ ಆಗಿದೆ.

ಚಾಲುಕ್ಯರ ಆಶ್ರಯದಲ್ಲಿ ಕೃತಿರಚನೆ ಮಾಡಿದ ಕವಿಗಳಲ್ಲಿ ರನ್ನ ಮೊದಲಿಗ. ಚಕ್ರವರ್ತಿ ಎರಡನೆಯ ತೈಲ ಅವನ ಆಶ್ರಯದಾತ. ವೃತ್ತಿಯಲ್ಲಿ ಬಳೆಗಾರನೂ ಶ್ರದ್ಧಾವಂತ ಜೈನನೂ ಆಗಿದ್ದ ಜಿನವಲ್ಲಭನೆಂಬವನಿಗೆ ನಾಲ್ಕನೆಯ ಮಗುವಾಗಿ ಕ್ರಿ.ಶ. 949ರಲ್ಲಿ ರನ್ನ ಜನಿಸಿದ. ಅವನ ಜನ್ಮಸ್ಥಳ ಮುದುವೊಳಲ್ (ಈಗಿನ ಮುಧೋಳ್). ಆ ಕಾಲದ ಸುಪ್ರಸಿದ್ಧಗುರು ಅಜಿತಸೇನಾಚಾರ್ಯರ ಬಳಿ ಅವನ ವಿದ್ಯಾಭ್ಯಾಸ ನಡೆಯಿತು. ಮುಂದೆ, ಅವನೇ ಹೇಳಿಕೊಂಡಿರುವಂತೆ, ಕ್ರಮ ಕ್ರಮೇಣ ಅಭ್ಯುದಯ ಪರಂಪರೆಯನ್ನು ಪಡೆದ. ಆರಂಭದಲ್ಲಿ ಸಾಮಂತರ, ಮುಂದೆ ಮಂಡಲೇಶ್ವರರ, ಕೊನೆಯಲ್ಲಿ ಚಕ್ರವರ್ತಿಯ ಪೋಷಣೆಯನ್ನು ಪಡೆದ. ಈ ಚಕ್ರವರ್ತಿಯೇ ಕವಿಗೆ 'ಕವಿ ಚಕ್ರವರ್ತಿ' ಎಂಬ ಬಿರುದನ್ನು ಕೊಟ್ಟದ್ದು. ರನ್ನನ ಬಾಳಿನಲ್ಲಿ ಬಹು ಪ್ರಮುಖ ಪಾತ್ರವನ್ನು ವಹಿಸಿದ್ದ ಇಬ್ಬರು ಮಹನೀಯರೆಂದರೆ, ಗಂಗರಲ್ಲಿ ಮಂತ್ರಿಯಾಗಿದ್ದ ಚಾವುಂಡರಾಯ ಮತ್ತು ಅತ್ತಿಮಬ್ಬೆ. ಚಾವುಂಡರಾಯ ಸ್ವತಃ ವಿದ್ವಾಂಸನಾಗಿದ್ದು **ಚಾವುಂಡರಾಯ ಪುರಾಣ**ವೆಂಬ ಕೃತಿಯನ್ನೂ ರಚಿಸಿದ್ದಾನೆ. ಆದರೆ ಇವನ ಹೆಸರು ಪ್ರಸಿದ್ಧವಾಗಿರುವುದು ಅವನು ಶ್ರವಣಬೆಳಗೊಳದಲ್ಲಿ ಮಾಡಿಸಿದ ಗೊಮ್ಮಟನ ಭವ್ಯವಿಗ್ರಹದಿಂದ. ಅತ್ತಿಮಬ್ಬೆ ಕರ್ಣಾಟಕ

ರುವ ಅತಿಶ್ರೇಷ್ಠ ಮಹಿಳೆಯರಲ್ಲಿ ಒಬ್ಬಳು. ಅವಳು ಪೊನ್ನನ **ಶಾಂತಿಪುರಾಣದ** ಸಾವಿರ ಪ್ರತಿಗಳನ್ನು ಮಾಡಿಸಿ ದಾನವಾಗಿ ಕೊಟ್ಟಳೆಂದು ಉಕ್ತವಾಗಿದೆ. ಹೀಗೆ ರಾಜರು, ಮಂತ್ರಿಗಳು, ಧಾರ್ಮಿಕ ವ್ಯಕ್ತಿಗಳು ಎಲ್ಲಾ ಸೇರಿ ಈ 'ರತ್ನ'ವನ್ನು, 'ಕವಿರತ್ನ'ವನ್ನು, ಕಡೆದರು ; ಅದಕ್ಕೊಂದು ರೂಪವನ್ನು ಕೊಟ್ಟರು.

ರನ್ನನ ಕೃತಿಗಳಲ್ಲಿ ನಮಗೆ ಸಿಕ್ಕಿರುವುದು ಎರಡು ಅಥವಾ ಮೂರು. ಅವನ **ಚಕ್ರೇಶ್ವರ ಚರಿತ** ಮತ್ತು **ಪರಶುರಾಮ ಚರಿತ**ಗಳು ಲಭ್ಯವಾಗಿಲ್ಲ. ಈ ಕೃತಿಗಳ ವಸ್ತುವೇನಿದ್ದಿರಬಹುದೆಂಬುದನ್ನು ಕುರಿತು ವಿದ್ವಾಂಸರು ಊಹೆಗಳನ್ನು ಮಾಡಿದ್ದರೂ ಆ ಬಗ್ಗೆ ಖಚಿತವಾಗಿ ಏನೂ ಹೇಳಲಾರೆವು. ಅವನ ಸಿಕ್ಕಿರುವ ಕೃತಿಗಳು ಮೂರು–**ಅಜಿತಪುರಾಣ**, **ಗದಾಯುದ್ಧ (ಅಥವಾ ಸಾಹಸಭೀಮವಿಜಯ)** ಮತ್ತು **ರನ್ನಕಂದ.** ಅವನು ತನ್ನ **ಅಜಿತ ಪುರಾಣ**ವನ್ನು ಅತ್ತಿಮಬ್ಬೆಗಾಗಿ ಎರಡನೆಯ ತೈಲನ ಆಶ್ರಯದಲ್ಲಿ ಕ್ರಿ.ಶ. 993ರಲ್ಲಿ ಬರೆದ. ಅದು ಹನ್ನೆರಡು ಅಧ್ಯಾಯಗಳ ಪುಟ್ಟ ಕಾವ್ಯ ; ಅದರ ಹೆಸರೇ ಹೇಳುವಂತೆ ದೇಶಂ, ಪುರಂ, ರಾಜವೃತ್ತಕಂ, ಅರ್ಹದ್ವಿಭವಂ, ಚತುರ್ಗತಿ, ತಪೋಮಾರ್ಗಂ ಮತ್ತು ಫಲಂ ಎಂಬ ಎಂಟು ಅಂಗಗಳುಳ್ಳ ಒಂದು ಪುರಾಣ. ಎರಡನೆಯ ಜಿನನಾದ ಅಜಿತಸ್ವಾಮಿಯ ಕತೆಯೇ ಇಲ್ಲಿಯ ವಸ್ತು. ಇದು ಕೆಲವು ಸ್ವಾರಸ್ಯ ಪ್ರಸಂಗಗಳನ್ನುಳ್ಳ ಚಿಕ್ಕ ಕತೆ. ಮಧ್ಯೆ ಮಧ್ಯೆ ಅಲ್ಲಲ್ಲಿ ಜೈನಧರ್ಮದ ತತ್ವದ ವಿಸ್ತಾರವಾದ ನಿರೂಪಣೆಗಳನ್ನು ಮತ್ತು ದೀರ್ಘವಾದ ಪ್ರಕೃತಿವರ್ಣನೆಗಳನ್ನು ತಂದು ಈ ಕತೆಯನ್ನು ಎಂಟು ಅಧ್ಯಾಯ ಗಳಿಗೆ ವಿಸ್ತರಿಸಿದ್ದಾನೆ. (ಉಳಿದ ಅಧ್ಯಾಯಗಳಲ್ಲಿ ತೀರ್ಥಂಕರನಿಗೆ ನೇರವಾಗಿ ಸಂಬಂಧಪಡದ ಕತೆಯಿದೆ). **ಅಜಿತಪುರಾಣವು** ಮಹಾಕವಿಯೊಬ್ಬನ ಅಷ್ಟೊಂದು ಸಾರ್ಥಕವಲ್ಲದ ಪ್ರಥಮಕೃತಿಯಾಗಿದೆ. ಆದರೆ ಈ ಕೃತಿ ರನ್ನನ ಅಪಜಯವಾಗಿದೆಯೆಂದು ಇಲ್ಲಿ ಸೂಚಿಸುತ್ತಿಲ್ಲ. ಈ ಕಾವ್ಯದ ಕೆಲವು ಭಾಗಗಳು ಕನ್ನಡ ಸಾಹಿತ್ಯದಲ್ಲೇ ಅನುಪಮವಾದುವು. ಉದಾಹರಣೆಗೆ, ಮುಂದೆ ಜಿನನಾಗಲಿರುವ ವಿಮಲವಾಹನನ ಬಾಯಿಂದ ಬರುವ ವೈರಾಗ್ಯಗೀತೆಯಲ್ಲಿ ಭಾವಗೀತದ ಸೌಂದರ್ಯವಿದೆ ; ವಿಶ್ವಸಾಮಾನ್ಯವಾದ ಅನುಭವವಿದೆ. ಆ ಗೀತೆಯ ಪದ್ಯಗಳು ರನ್ನನಿಗೆ ಮಾತ್ರ ಸಾಧ್ಯವಿರುವ ಭಾಷೆಯಲ್ಲಿ ಮಾನುಷವಾದ ವೈಭವ ಮತ್ತು ಸುಖಗಳ ನಿಷ್ಫಲತೆಯನ್ನು ವರ್ಣಿಸುತ್ತವೆ. ಇತರ ಕಡೆಗಳಂತೆಯೇ ಇಲ್ಲಿಯೂ ರನ್ನ ಹೇಳುವುದನ್ನು ವಿಸ್ತರಿಸಲು ಹೋಗುತ್ತಾನೆ. ಇದರ ಫಲವಾಗಿ ಓದುಗರಿಗೆ ವರ್ಣನೆ ಸ್ವಲ್ಪ ಅತಿಯಾಯಿತು ಎಂಬ ಭಾವನೆ ಬರುತ್ತದೆ. ಅಜಿತಸ್ವಾಮಿಯ ಜನನ–ಜನ್ಮಾಭಿಷೇಕ ಮತ್ತು ಇಂದ್ರನ ನಾಟ್ಯದ ವರ್ಣನೆಗಳು ಪಂಪನ ಅನುಕರಣೆಗಳೇ ಆಗಿವೆ. ಈ ಕೃತಿಯ ಅತ್ಯುತ್ತಮ ಭಾಗವೆಂದರೆ ಸಗರನ ಕತೆ. ಇಲ್ಲಿಯ ಸಗರ ಮತ್ತು ಭಗೀರಥರ ಕತೆ ಜೈನಸಂಪ್ರದಾಯಕ್ಕೆ ಸೇರಿದ್ದು. ಇದಕ್ಕೂ, ಸುಪ್ರಸಿದ್ಧವಾಗಿರುವ ಹಿಂದೂ ಸಂಪ್ರದಾಯದ ಕತೆಗೂ ಅನೇಕ ವ್ಯತ್ಯಾಸಗಳಿವೆ.

**ಗದಾಯುದ್ಧ** ಅವನ ಎರಡನೆಯ ಮತ್ತು ಅತ್ಯುತ್ತಮ ಕೃತಿ. ಇದು ಆ ಕಾಲದ ಕ್ಷಾತ್ರಮನೋ ಭಾವಕ್ಕೆ ಅನುಗುಣವಾದ ವೀರಕಾವ್ಯ. ಶೌರ್ಯವು ಸಾಮಾಜಿಕ ಮೌಲ್ಯವಾಗಿದ್ದ ಕಾಲ ಮತ್ತು ದೇಶಗಳಲ್ಲಿ ರಚಿತವಾದ ಈ ಕೃತಿ ಶ್ರೇಷ್ಠ ಕವಿಗಳಲ್ಲೊಬ್ಬನ ಶ್ರೇಷ್ಠಕೃತಿಯಾಗಿದೆ. ಇಲ್ಲಿಯ ಕತೆ ಕುರುಕ್ಷೇತ್ರದ ಯುದ್ಧದ ಕೊನೆಯ ದಿನಕ್ಕೆ ಸಂಬಂಧಿಸಿದುದು. ಒಂದು ದಿನದ ಕತೆ ಮಾತ್ರ ಇಲ್ಲಿ ನಿರೂಪಿತವಾಗಿದೆ, ನಿಜ. ಆದರೆ ಕವಿ ಕತೆಯನ್ನು ಹೇಗೆ ಬೆಳಸಿರುವನೆಂದರೆ, ಅಲ್ಲಲ್ಲಿ ಬರುವ ಬೇರೆ ಬೇರೆ ಸಂಭಾಷಣೆಗಳಲ್ಲಿ ಅನೇಕ ವರ್ಣನೆಗಳಲ್ಲಿ ಇಡೀ ಮಹಾಭಾರತದ ಕತೆ ನಿರೂಪಿತವಾಗುತ್ತದೆ. ಈ ತಂತ್ರವನ್ನು ಕವಿಯೇ 'ಸಿಂಹಾವಲೋಕನ ಕ್ರಮ' ವೆಂದು ಕರೆದಿದ್ದಾನೆ. ಇದು ಈಗಿನ ಸಿನಿಮಾ ತಂತ್ರದ 'Flashback'ನ್ನು ಹೋಲುತ್ತದೆ. ಇಡೀ **ಗದಾಯುದ್ಧ ಕಾವ್ಯ ಪಂಪಭಾರತದ** ಹದಿಮೂರನೆಯ ಆಶ್ವಾಸಕ್ಕೆ ಋಣಿ. ರನ್ನ ಆ ಕೃತಿಯಿಂದ ಬೇಕಾದಷ್ಟು ಭಾವಗಳನ್ನೂ, ಉಕ್ತಿಗಳನ್ನೂ, ಕೊನೆಗೆ ಪದ್ಯಗಳನ್ನೂ ತೆಗೆದುಕೊಂಡು ಅವುಗಳನ್ನು ತನ್ನ ಕಲ್ಪನೆಯಿಂದ ಶ್ರೀಮಂತವಾಗಿಸಿದ್ದಾನೆ. ಕಾವ್ಯದ ನಾಯಕ ಭೀಮ. ಕವಿಯ ಪ್ರಕಾರ ಈ ಭೀಮ ಇಱಿವಬೆಡಂಗ ಸತ್ಯಾಶ್ರಯ (997–1108) ನಲ್ಲದೆ ಬೇರೆ ಯಾರೂ ಅಲ್ಲ. ಇವನು

ಎರಡನೆಯ ತೈಲಪನ ಮಗ ಮತ್ತು ಈ ಚಕ್ರವರ್ತಿಯ ಕಾಲದಲ್ಲೇ ರನ್ನ ತನ್ನ ಕಾವ್ಯವನ್ನು ಬರೆದದ್ದು. ಈ ಕಾವ್ಯದಲ್ಲಿ ಕೊನೆಯಲ್ಲಿ ಪಟ್ಟಾಭಿಷೇಕವಾಗುವುದು ಭೀಮನಿಗೆ; ದ್ರೌಪದಿ ಪಂಚಪಾಂಡವರ ಪತ್ನಿಯಲ್ಲ, ಅವಳು ಭೀಮನಿಗೆ ಮಾತ್ರ ಪತ್ನಿ. ಮೂಲ ಕಥೆಯಲ್ಲಿ ರನ್ನ ಮಾಡಿಕೊಂಡಿರುವ ಬದಲಾವಣೆಗಳಲ್ಲಿ ಇವು ಕೆಲವು. ಇಲ್ಲಿಯ ಪಾತ್ರಗಳಲ್ಲಿ ದುರ್ಯೋಧನ ನಮ್ಮ ಗಮನವನ್ನು ಸೆಳೆಯುತ್ತಾನೆ. ರನ್ನನ ಪ್ರಕಾರ ದುರ್ಯೋಧನ ಒಬ್ಬ 'ಮಹಾನುಭಾವ'. ಅವನು ಅನೇಕ ಪಾಪಗಳನ್ನು ಮಾಡಿದ್ದಾನೆ, ನಿಜ; ಆದರೆ ಅವನಲ್ಲಿ ಅನೇಕ ಮಾನವೀಯ ಗುಣಗಳೂ ತುಂಬಿವೆ. ಅವನು ಒಬ್ಬ ಆದರ್ಶ ಸ್ನೇಹಿತ, ತಂದೆ, ಸೋದರ ಮತ್ತು ಶಿಷ್ಯ; 'ಛಲ'ದಿಂದ ಕೂಡಿರುವ ಒಬ್ಬ ವೀರ. ಅವನು ಎಷ್ಟೇ ಅಪಜಯಗಳು ಒದಗಿದರೂ ತನ್ನ ಆದರ್ಶಗಳಿಗೇ—ಅವು ಸರಿಯಿರಲಿ ಇಲ್ಲದಿರಲಿ—ಅಂಟಿಕೊಳ್ಳುತ್ತಾನೆ. ಈ ಗುಣಗಳ ಮೂಲಕ ಅವನು ದುರಂತನಾಯಕರ ಉನ್ನತಮಟ್ಟಕ್ಕೆ ಏರುತ್ತಾನೆ. ವಿಮರ್ಶಕರೊಬ್ಬರು ಸರಿಯಾಗಿ ಗಮನಿಸಿರುವಂತೆ, ರನ್ನಕವಿ ಭೀಮನನ್ನು ಕೆಳಗಿಳಿಸದೆ, ದುರ್ಯೋಧನನನ್ನು ಮೇಲೇರಿಸಿದ್ದಾನೆ.

**ಗದಾಯುದ್ಧದ** ಶೈಲಿ ನಾಟಕೀಯ ಶೈಲಿ. ಇಲ್ಲಿ ಸಂಸ್ಕೃತ ನಾಟಕಕಾರ ಭಟ್ಟನಾರಾಯಣನ **ವೇಣೀಸಂಹಾರದ** ಪ್ರಭಾವ ಸ್ಪಷ್ಟವಾಗಿದೆ. ಓಜೋಗುಣ ಪ್ರಧಾನವಾದ ಶೈಲಿಯಲ್ಲಿ ರನ್ನನನ್ನು ಮೀರಿಸುವ ಕವಿ ಕನ್ನಡದಲ್ಲಿ ಮತ್ತೊಬ್ಬನಿಲ್ಲ. ಸರಸ್ವತಿಯ ಭಂಡಾರದ ಮುದ್ರೆಯನ್ನು ತಾನು ಒಡೆದಿರುವಂತೆ ಕವಿ ಒಂದೆಡೆ ಹೇಳಿಕೊಂಡಿದ್ದಾನೆ.

ಅವನ ಕೊನೆಯ ಕೃತಿ **ರನ್ನಕಂದ**. ಅದು ಪದ್ಯರೂಪದಲ್ಲಿರುವ ಬಹು ಚಿಕ್ಕ ಅರ್ಥಕೋಶ. ಅದರಲ್ಲಿ ಹನ್ನೆರಡು ಕಂದಪದ್ಯಗಳಿವೆ. ಅದು ದೊಡ್ಡ ಕವಿಯೊಬ್ಬನ ಕೃತಿಯೆನ್ನುವುದನ್ನು ಬಿಟ್ಟರೆ, ಅದರಲ್ಲಿ ಹೇಳಬಹುದಾದ ಗುಣಗಳೇನೂ ಇಲ್ಲ.

ರನ್ನನಿಗೆ ಸಮಕಾಲೀನನಾದ ಕವಿ ನಾಗವರ್ಮ. ಆ ಹೆಸರಿನ ಮತ್ತೊಬ್ಬ ಕವಿ ಮುಂದೆ ಬರುವುದರಿಂದ ಇವನನ್ನು ಮೊದಲನೆಯ ನಾಗವರ್ಮ (ನಾಗವರ್ಮ 1) ಎಂದು ನಿರ್ದೇಶಿಸುತ್ತಾರೆ. **ಛಂದೋಂಬುಧಿ** ಮತ್ತು **ಕರ್ಣಾಟಕ ಕಾದಂಬರಿಗಳು** ಇವನ ಕೃತಿಗಳು. ತನ್ನ ಆಶ್ರಯದಾತನಾಗಿದ್ದಿರಬಹುದಾದ ಚಂದ್ರನೆಂಬ ದೊರೆಯನ್ನು ಅವನು ಹೆಸರಿಸಿದರೂ ಅವನ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲ. ನಾಗವರ್ಮ ಒಬ್ಬ ಶೈವ ಬ್ರಾಹ್ಮಣ ಕವಿ ಮತ್ತು ನಮಗೆ ತಿಳಿದಮಟ್ಟಿಗೆ, ಕನ್ನಡ ಸಾಹಿತ್ಯದ ಜೈನೇತರ ಕವಿಗಳಲ್ಲಿ ಇವನು ಮೊದಲಿಗ.

ಅವನ **ಛಂದೋಂಬುಧಿ** ಮತ್ತು **ಕರ್ಣಾಟಕ ಕಾದಂಬರಿ**ಗಳೆರಡೂ ಕನ್ನಡ ಭಾಷಾ ಸಾಹಿತ್ಯಗಳಿಗೆ ವಿಶಿಷ್ಟ ಕೊಡುಗೆಗಳಾಗಿವೆ. **ಛಂದೋಂಬುಧಿ** ಛಂದಸ್ಸಿಗೆ ಸಂಬಂಧಪಟ್ಟ ಕೃತಿ. ನಮಗೆ ದೊರೆತಿರುವ ಛಂದೋಗ್ರಂಥಗಳಲ್ಲಿ ಇದು ಅತ್ಯಂತ ಪ್ರಾಚೀನವೂ ಅಧಿಕೃತವೂ ಆದ ಕೃತಿ. ಸಹಜವಾಗಿಯೇ ಹಿಂದಿನವರು ಇದನ್ನು ಛಂದಸ್ಸಿಗೆ ಪಠ್ಯಪುಸ್ತಕವಾಗಿ ಭಾವಿಸಿದರು. ಇದರ ಫಲವಾಗಿ ಅನೇಕ ಪ್ರಕ್ಷೇಪಗಳು, ತಿದ್ದುಪಾಟುಗಳು ನಡೆದು, ಕೃತಿ ಅನೇಕ ರೀತಿಯ ಮಾರ್ಪಾಟುಗಳನ್ನು ಪಡೆದಿದೆ. ಕೃತಿಕಾರ ಆರಂಭದ ಐದು ಅಧ್ಯಾಯಗಳಲ್ಲಿ ಅಕ್ಷರ, ಮಾತ್ರಾ ಮತ್ತು ಅಂಶ ವೃತ್ತಗಳನ್ನು ವಿವರಿಸಿ, ಕೊನೆಯ ಅಧ್ಯಾಯವನ್ನು ಆರು 'ಪ್ರತ್ಯಯ'ಗಳ ವಿವರಣೆಗೆ ಮೀಸಲಿಡುತ್ತಾನೆ. ಇವುಗಳಲ್ಲೆಲ್ಲ ತುಂಬ ಮುಖ್ಯವಾದುದು ಐದನೆಯ ಅಧ್ಯಾಯ. ಇಲ್ಲಿ ಷಟ್ಪದಿ, ತ್ರಿಪದಿ, ಗೀತಿಕೆ, ಛಂದೋವತಂಸ, ಅಕ್ಕರ—ಮುಂತಾದ ಕನ್ನಡಕ್ಕೆ ವಿಶಿಷ್ಟವಾದ ಅಂಶವೃತ್ತಗಳ ವಿವರಣೆ ಬಂದಿದೆ.

ಅವನ ಇನ್ನೊಂದು ಕೃತಿ **ಕರ್ಣಾಟಕ ಕಾದಂಬರಿ** ಸಂಸ್ಕೃತದ ಸುಪ್ರಸಿದ್ಧ ಕವಿ ಬಾಣನ **ಕಾದಂಬರಿಯ**

ಚಂಪೂರೂಪವಾದ ಕನ್ನಡ ಅನುವಾದ. ಹಿಂದಿನಿಂದ ಬಾಣ ಕನ್ನಡ ಕವಿಗಳಿಗೆ ಬಹಳ ಪ್ರಿಯನಾದ ಕವಿಯಾಗಿದ್ದ. ಅವನ ಆಲಂಕಾರಿಕ ಶೈಲಿಯನ್ನು ಬಹು ಆತುರದಿಂದ, ಒಮ್ಮೊಮ್ಮೆ ಔಚಿತ್ಯವಿಲ್ಲದೆ ಕನ್ನಡ ಕವಿಗಳು ಅನುಕರಿಸುತ್ತಿದ್ದರು. ನಾಗವರ್ಮ ಬರಿಯ ಅನುವಾದಕನಾಗಿರಲಿಲ್ಲ. ಅವನೊಬ್ಬ ಕವಿಯೂ ಆಗಿದ್ದ. ಇವರ ಫಲವಾಗಿ ನಮಗೆ ಇಲ್ಲಿ ದೊರಕುವುದು ಬರಿಯ ಅನುವಾದವಲ್ಲ; ಸ್ವತಂತ್ರಕೃತಿ ಎನ್ನಬಹುದಾದ ಶ್ರೇಷ್ಠಗ್ರಂಥ. ಅವನ ಕೃತಿ ಅನುವಾದದ ಒಂದು ಮಾದರಿಯೇ ಸರಿ. ಅವನು ಮೂಲವನ್ನು ಚಾಚೂ ತಪ್ಪದಂತೆ ಅನುಸರಿಸಿದ್ದಾನೆ ನಿಜ; ಆದರೆ ಕೆಲವು ಕಡೆಗಳಲ್ಲಿ ಮೂಲ ಭಾಗವನ್ನು ಸಂಗ್ರಹಿಸಿಯೂ ಇದ್ದಾನೆ. ಇಂತಹ ಅನುವಾದದಲ್ಲಿ ಅಲ್ಲಲ್ಲಿ ಕೆಲವು ಕೊರತೆಗಳು ಕಂಡುಬರುವುದು ಸಾಧ್ಯ. ಆದರೂ ಒಟ್ಟಿನಲ್ಲಿ ಇದೊಂದು ತೃಪ್ತಿಕರವಾದ ಅನುವಾದ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮಹಾಶ್ವೇತೆ ವೈಶಂಪಾಯನರ ಪ್ರಣಯ ಪ್ರಸಂಗ, ಮಹಾಶ್ವೇತೆಯ ತಪಸ್ಸು, ಚಂದ್ರಾಪೀಡ ಕಾದಂಬರಿಯರ ಪ್ರಣಯ ಕಥಾಭಾಗಗಳಂತಹ ಕೆಲವು ಭಾಗಗಳಲ್ಲಿ ಕಲಾವಿದನ ಕುಸುರಿ ಕೆಲಸವನ್ನು ನೋಡ ಬಹುದು. ಅನುವಾದವಾದರೂ ಇದು ಕನ್ನಡದ ಮೊದಲ ಪ್ರಣಯಕಾವ್ಯವೆಂದು ಹೇಳಬಹುದು.

ಹತ್ತನೆಯ ಶತಮಾನದ ಅಂತ್ಯದಲ್ಲಿ ಅನೇಕ ಕವಿಗಳಿದ್ದರು. ಅವರ ಕೃತಿಗಳಾವುವೂ ಲಭ್ಯವಾಗಿಲ್ಲ. ಗಜಾಂಕುಶ ಮತ್ತು ಮನಸಿಜರ ಹೆಸರುಗಳು ಮಾತ್ರ ಗೊತ್ತಿವೆ. ಕನ್ನಮಯ್ಯನ **ಮಾಲತೀಮಾಧವದ** ಹೆಸರು ತಿಳಿದಿದೆ. ಇದು ಬಹುಶಃ ಭವಭೂತಿಯ ಆದೇ ಹೆಸರಿನ ನಾಟಕದ ಚಂಪೂಶೈಲಿಯ ಅನುವಾದ ವಾಗಿದ್ದಿರಬಹುದು. **ಕರ್ಣಾಟೇಶ್ವರ ಕಥೆ** ಮತ್ತು **ಶೃಂಗಾರಪಿಂಡ**ಗಳೆಂಬ ಇನ್ನೂ ಕೆಲವು ಕೃತಿಗಳ ಹೆಸರುಗಳು ತಿಳಿದಿವೆ. ಇವುಗಳ ಕರ್ತೃಗಳ ಹೆಸರಾಗಲಿ ಇವುಗಳ ವಸ್ತುವಾಗಲಿ ತಿಳಿದಿಲ್ಲ. ಅದೇನೇ ಇರಲಿ, ಒಟ್ಟಿನಲ್ಲಿ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ತೀವ್ರವಾದ ಸಾಹಿತ್ಯಿಕ ಚಟುವಟಿಕೆಯಿದ್ದು, ಆ ಇಡೀ ಶತಮಾನದ ಸಾಹಿತ್ಯಸೃಷ್ಟಿಯನ್ನು ಕನ್ನಡ ಸಾಹಿತ್ಯ ವ್ಯವಸಾಯದ "ಮೊದಲ ಚಿನ್ನದ ಬೆಳೆ" ಯೆಂದು ನಿರ್ದೇಶಿಸಿರುವುದು ಬಹು ಉಚಿತವಾಗಿದೆ.

ಹನ್ನೊಂದನೆಯ ಶತಮಾನದಲ್ಲಿ "ಸಾಹಿತ್ಯ" ಎಂದು ಕರೆಯಬಹುದಾದ ಕೃತಿಗಳ ಸಂಖ್ಯೆ ಕಡಮೆ. ಈ ಶತಮಾನದ ಒಲವು ಶಾಸ್ತ್ರಕೃತಿಗಳ ಕಡೆ ಬಾಗಿರುವಂತೆ ತೋರುತ್ತದೆ. ಇದಕ್ಕೆ ಕಾರಣವನ್ನು ಊಹಿ ಸುವುದು ಸುಲಭವಲ್ಲ. ಈ ಶತಮಾನದ ಗಮನಾರ್ಹವಾದ ಇನ್ನೊಂದು ಸಂಗತಿಯೆಂದರೆ ಬ್ರಾಹ್ಮಣ ಕವಿಗಳು ಕನ್ನಡ ಭಾಷೆಯ ವಿಷಯದಲ್ಲಿ ಹೆಚ್ಚು ಹೆಚ್ಚಾಗಿ ಆಸಕ್ತಿಯನ್ನು ತೋರಲು ಆರಂಭಿಸಿದ್ದು. ಜೈನ ಧರ್ಮವು ಜನತೆಯ ಮೇಲೆ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತ ಬಂದ ಹಾಗೆ, ಇತರ ಧರ್ಮಗಳು ಕ್ರಮೇಣ ಪ್ರಬಲವಾಗುತ್ತ ಬಂದವು. ನಾಡಿನಲ್ಲಿ ರಾಜಕೀಯವಾದ ಧಾರ್ಮಿಕವಾದ ಒಂದು ಬಗೆಯ ಅಶಾಂತಿಯಿದ್ದಂತೆ ತೋರುತ್ತದೆ.

ಈ ಶತಮಾನದ ಚಟುವಟಿಕೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು: 1. ಶಾಸ್ತ್ರಕೃತಿ ಗಳ ರಚನೆ, 2. ಸಾಹಿತ್ಯ ಕೃತಿಗಳ ನಿರ್ಮಾಣ. ಶಾಸ್ತ್ರಕೃತಿಗಳ ಕರ್ತರು ಕೂಡ ತಮ್ಮ ಬರಹಗಳನ್ನು ಸಾಹಿತ್ಯವೆಂದು ಕರೆದುಕೊಂಡರು; ತಮ್ಮನ್ನು ಕವಿಗಳೆಂದು ಕರೆದುಕೊಂಡರು. ಈ ಶಾಸ್ತ್ರಕೃತಿಗಳೆಲ್ಲಾ ಪದ್ಯರೂಪದಲ್ಲಿವೆ (ಇದು ಕನ್ನಡಕ್ಕೆ ಮಾತ್ರ ವಿಶಿಷ್ಟವಾದುದಲ್ಲ. ಸಂಸ್ಕೃತ ಮತ್ತು ಇತರ ದೇಶೀಯ ಭಾಷೆಗಳಿಗೆಲ್ಲ ಇದು ಸಮಾನವಾದ ಅಂಶವಾಗಿದೆ).

ಎರಡನೆಯ ಚಾವುಂಡರಾಯ (ಸು. 1025)ನ ಸುಪ್ರಸಿದ್ಧ ಕೃತಿ **ಲೋಕೋಪಕಾರ**. ಚಾಲುಕ್ಯ ಚಕ್ರವರ್ತಿ ಎರಡನೆಯ ಜಯಸಿಂಹನ ಬಳಿ ಅಧಿಕಾರಿಯಾಗಿದ್ದ ಬ್ರಾಹ್ಮಣನೀತ. ಕೃತಿಯ ಹೆಸರೇ ಹೇಳುವಂತೆ, **ಲೋಕೋಪಕಾರವು** ಜನರಿಗೆ ಉಪಯುಕ್ತ ವಿಷಯಗಳುಳ್ಳ ಒಂದು ಕೋಶ. ಜ್ಯೋತಿಷ್ಯ, ವಾಸ್ತು,

ವೈದ್ಯ, ಸೂಪಶಾಸ್ತ್ರ—ಇವು ಅದರಲ್ಲಿರುವ ವಿಷಯಗಳಲ್ಲಿ ಕೆಲವು. ಆ ಕೃತಿಯ ಬಗ್ಗೆ ಹೇಳಲೇಬೇಕಾದ ಸಂಗತಿಯೆಂದರೆ ಅದರ ಸರಳ ಶೈಲಿ.

ಚಂದ್ರರಾಜ (ಸು. 1040) ಈ ಚಾವುಂಡರಾಯನ ಸಮಕಾಲೀನ. 'ಚಾಳುಕ್ಯ ಚಕ್ರವರ್ತಿ ಜಯಸಿಂಹನ ತೊಡೆಯ ಮೇಲೆ ಬೆಳೆದ' ರೇಚ ದೊರೆ ಇವನ ಆಶ್ರಯದಾತ. ರೇಚ ಬಹುವಿದ್ಯಾ ಸಮನ್ವಿತನಾಗಿದ್ದ ವ್ಯಕ್ತಿ. ಚಂದ್ರರಾಜನೂ ಅಷ್ಟೇ. ಅರುವತ್ತನಾಲ್ಕು ಕಲೆಗಳಲ್ಲೂ ನಿಷ್ಣಾತನಾದ ಪಂಡಿತನಾಗಿದ್ದ. ಅವನ ಪ್ರಕಾರ ಧರ್ಮ ಮತ್ತು ಅರ್ಥಗಳು ಕಾಮಕ್ಕೆ ಪೋಷಕವಾಗಿರುವುದರಿಂದ ಕಾಮ ಪ್ರಧಾನವಾದುದು. **ಮದನತಿಲಕ**ವೆಂಬ ಅವನ ಕೃತಿ ಕಾಮಶಾಸ್ತ್ರ ಸಂಬಂಧಿಯಾದುದು. ಆ ವಿಭಾಗಕ್ಕೆ ಸಂಬಂಧಿಸಿದ ಹಿಂದಿನ ಕೃತಿಕಾರರಾದ ವಾತ್ಸ್ಯಾಯನ, ವೈಶಿಕ, ಚರಾಯಣ, ಸ್ವರ್ಣನಾಭ, ಗೋನರ್ದೀಯ, ಘೋಟಮುಖ, ಗೋಣಿಕಾಪುತ್ರ ಮತ್ತು ಕೂಚಿಮಾರನನ್ನು ಹೆಸರಿಸಿದ್ದಾನೆ. ಅವನು ಎಲ್ಲಾ ಕಡೆಗಳಿಂದಲೂ ಸಂಗತಿಗಳನ್ನು ಸಂಗ್ರಹಿಸಿ ಅವುಗಳ ಸಾರವನ್ನು ಕೊಟ್ಟಿರುವಂತಿದೆ. ಅವನ ಶೈಲಿಯನ್ನು ಮೆಚ್ಚುವುದು ಕಷ್ಟ. ಕನ್ನಡದಲ್ಲಿ ಅಷ್ಟಾಗಿ ಪ್ರಚುರವಿಲ್ಲದ ಚಿತ್ರಕವಿತೆಯಿಂದ ಅವನ ಕೃತಿ ಕಿಕ್ಕಿರಿದಿದೆ. ಅವನು ಕನ್ನಡದಲ್ಲಿ ಬಹಳ ವಿರಳವಾಗಿದ್ದ ಅನೇಕ ವೃತ್ತಗಳನ್ನು ಬಳಸಿರುವುದು ಒಂದು ವಿಶಿಷ್ಟ ಸಂಗತಿ. ತನ್ನ ಕೃತಿಯನ್ನು ಒಂದು ಕಡೆ 'ಛಂದೋರ್ಣವ' ಎಂದು ವಿಶೇಷಿಸಿಕೊಂಡಿದ್ದಾನೆ.

ಜಯಕೀರ್ತಿ (ಸು. 1040) ಅವನ ಸಮಕಾಲೀನ. ಇವನೊಬ್ಬ ದಿಗಂಬರ ಜೈನ ಮತ್ತು ಕನ್ನಡಿಗ. ಇವನ **ಛಂದೋನುಶಾಸನ** ಸಂಸ್ಕೃತದಲ್ಲಿ ರಚಿತವಾಗಿರುವ ಒಂದು ಛಂದೋಗ್ರಂಥ. ಇದರ ಏಳನೆಯ ಅಧ್ಯಾಯದಲ್ಲಿ ಕನ್ನಡದ ಅಂಶವೃತ್ತಗಳ ಚರ್ಚೆಯಿದೆ. ಕನ್ನಡ ಛಂದಸ್ಸಿನ ದೃಷ್ಟಿಯಿಂದ ನೋಡುವುದಾದರೆ ಈ ಕೃತಿ ನಾಗವರ್ಮನ **ಛಂದೋಂಬುಧಿ**ಗೆ ಪೂರಕವಾಗಿದೆ ಎಂದು ಹೇಳಬಹುದು.

ಹನ್ನೊಂದನೆಯ ಶತಮಾನದ ಅತ್ಯಂತ ಪ್ರತಿಭಾಶಾಲಿ ಶಾಸ್ತ್ರ ಕೃತಿಕಾರರಲ್ಲಿ ಶ್ರೀಧರಾಚಾರ್ಯನೊಬ್ಬ. ಇವನು ಮತಾಚರಣೆಯಲ್ಲಿ ಜೈನನಾಗಿದ್ದ. ಚಾಲುಕ್ಯ ಚಕ್ರವರ್ತಿ ಆಹವಮಲ್ಲ ಅಥವಾ ಒಂದನೆಯ ಸೋಮೇಶ್ವರ (ಕ್ರಿ.ಶ. 1042–68) ಅವನ ಪೋಷಕ. ಅವನ ಕೃತಿ **ಜಾತಕತಿಲಕ** ಜ್ಯೋತಿಷ್ಯವಿಷಯವಾದ ಕನ್ನಡದ ಪ್ರಪ್ರಥಮ ಕೃತಿ. ತನ್ನ ಕೃತಿಯನ್ನು ಶ್ರೀಧರಾಚಾರ್ಯ 'ಜೋಯಿಸಗಬ್ಬ' (ಜೋತಿಷ್ಯ ಕಾವ್ಯ)ವೆಂದು ಕರೆದುಕೊಂಡಿದ್ದಾನೆ. ಅವನು ವಿಷಯ ನಿರೂಪಣೆಯಲ್ಲಿ ವರಾಹಮಿಹಿರನ **ಬೃಹಜ್ಜಾತಕ** ಮತ್ತು **ಲಘುಜಾತಕ**ಗಳಿಗೆ, ಕಲ್ಯಾಣವರ್ಮನ **ಸಾರಾವಲಿ**ಗೆ ಋಣಿಯಾಗಿದ್ದಾನೆ. ಅವನ ಶೈಲಿ ತೀರಾ ಸರಳವಾದರೂ ಕೃತಿಯಲ್ಲಿ ವಿಷಯ ಬಾಹುಲ್ಯವಿದೆ. ಅವನ ಕಾವ್ಯ **ಚಂದ್ರಪ್ರಭಚರಿತೆ** ದೊರಕಿಲ್ಲ. ಪಂಪನನ್ನು ಅನುಕರಿಸಿ, ಅವನು 'ಗಣಿತಧರ್ಮ'ವನ್ನು **ಜಾತಕತಿಲಕ**ದಲ್ಲೂ 'ಕಾವ್ಯಧರ್ಮ'ವನ್ನು **ಚಂದ್ರಪ್ರಭಚರಿತೆ**ಯಲ್ಲೂ ನಿರೂಪಿಸಿರುವುದಾಗಿ ಹೇಳಿಕೊಂಡಿದ್ದಾನೆ.

ಶಾಸ್ತ್ರ ಕೃತಿಕಾರರಲ್ಲಿ ಚಾಲುಕ್ಯ ರಾಜಕುಮಾರ ಕೀರ್ತಿವರ್ಮನ (ಸು. 1100) ಹೆಸರು ಗಮನಾರ್ಹವಾದುದು. ಅವನ ತಂದೆ ತ್ರೈಲೋಕ್ಯಮಲ್ಲ ಅಥವಾ ಒಂದನೆಯ ಸೋಮೇಶ್ವರ (ಕ್ರಿ.ಶ. 1042–68), ಅಣ್ಣ ವಿಕ್ರಮಾದಿತ್ಯ (ಕ್ರಿ.ಶ. 1076-1126). ಚಾಲುಕ್ಯ ರಾಜರೆಲ್ಲ ಬಹುಮಟ್ಟಿಗೆ ಶೈವರಾಗಿದ್ದರೂ ಕೀರ್ತಿವರ್ಮ ಮಾತ್ರ ಜೈನನಾಗಿದ್ದ. ಬ್ರಹ್ಮಶಿವನ ಪ್ರಕಾರ (12ನೆ ಶತಮಾನ), ಕೀರ್ತಿವರ್ಮನು ರಾಜಕುಮಾರನಾಗಿದ್ದುದರಿಂದ ಜೈನಧರ್ಮದ ಏಳಿಗೆಗಾಗಿ ಶ್ರಮಿಸಿದ್ದಲ್ಲದೆ ಉದಾರವಾಗಿ ಹಣವನ್ನೂ ವ್ಯಯಿಸಿದನು. ಅವನ ಅನೇಕ ಬಿರುದುಗಳಲ್ಲಿ 'ವಿದ್ಯಾರತ್ನ' ಎಂಬುದೂ ಒಂದು. ಅವನ ಕೃತಿ **ಗೋವೈದ್ಯ**—ದನಕರುಗಳ ಕಾಯಿಲೆಗಳಿಗೆ ಸಂಬಂಧಪಟ್ಟ ವೈದ್ಯಗ್ರಂಥ. ತನ್ನ ಕೃತಿಯಲ್ಲಿ ದನಕರುಗಳಿಗೆ ಬರುವ ಅನೇಕ ಕಾಯಿಲೆಗಳು, ಅವುಗಳಿಗೆ ಪರಿಹಾರ, ಯಂತ್ರಗಳನ್ನು ಕಟ್ಟುವುದು, ಬರೆಹಾಕುವುದು

ಇತ್ಯಾದಿ ವಿಷಯಗಳನ್ನು ಚರ್ಚಿಸಿದ್ದಾನೆ. ರಾಜಕುಮಾರನಾಗಿದ್ದು ಒಂದು ವೈದ್ಯಗ್ರಂಥವನ್ನು ಬರೆದಿರುವನೆಂದು ಏನೂ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ, ಆ ಕಾಲದ ರಾಜಕುಮಾರರ ವಿದ್ಯಾಭ್ಯಾಸ ಶ್ರಮದಾಯಕವಾಗಿದ್ದು ಅನೇಕ ಅಧ್ಯಯನ ವಿಷಯಗಳನ್ನೊಳಗೊಂಡಿದ್ದಿತು.

ಸಾಹಿತ್ಯಮೌಲ್ಯವಿರುವ ಎಲ್ಲೋ ಕೆಲವು ಕೃತಿಗಳು ಮಾತ್ರ ಹುಟ್ಟಿದುವು ಈ ಶತಮಾನದಲ್ಲಿ. ದುರ್ಗಸಿಂಹನ **ಪಂಚತಂತ್ರ** ಅಂತಹ ಕೃತಿಗಳಲ್ಲಿ ಒಂದು. ಅವನ ಹುಟ್ಟೂರಾದ ಸಯ್ಯಡಿಯು ಒಂದು ಸುಪ್ರಸಿದ್ಧ ಅಗ್ರಹಾರವಾಗಿದ್ದು ದೊಡ್ಡ ವಿದ್ಯಾಕೇಂದ್ರವೂ ಆಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ವೈದಿಕ ಧರ್ಮಾವಲಂಬಿಯಾಗಿದ್ದ ಇವನು ಚಾಲುಕ್ಯ ಚಕ್ರವರ್ತಿ ಜಯಸಿಂಹನಲ್ಲಿ (ಕ್ರಿ.ಶ. 1015–42) ಸಂಧಿವಿಗ್ರಹಿಯಾಗಿದ್ದ. ತನ್ನ ಕೃತಿಯನ್ನು ಕ್ರಿ.ಶ. 1031ರಲ್ಲಿ ಬರೆದನೆಂದು ಈಚೆಗೆ ಬಿಹಾರಿನ ಆರಾದಲ್ಲಿ ದೊರೆತ **ಪಂಚತಂತ್ರ**ದ ಹಸ್ತಪ್ರತಿಯೊಂದರಿಂದ ತಿಳಿದುಬಂದಿದೆ.

ದುರ್ಗಸಿಂಹ ವಿದ್ವಾಂಸರ ಮನೆತನಕ್ಕೆ ಸೇರಿದವನಾಗಿದ್ದನು. ಸಂಸ್ಕೃತ ಸಾಹಿತ್ಯದ ಅನೇಕ ಗ್ರಂಥಕರ್ತರನ್ನು ಅವನು ತನ್ನ ಕೃತಿಯಲ್ಲಿ ಸ್ಮರಿಸಿದ್ದಾನೆ. ಅವನು ಉದ್ಧರಿಸಿರುವ ಅಸಂಖ್ಯಾತ ಉಕ್ತಿಗಳನ್ನು ಗಮನಿಸಿದರೆ ಪ್ರಾಚೀನ ಭಾರತೀಯ ನೀತಿಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದಿದ್ದನೆಂಬುದು ಸ್ಪಷ್ಟವಾಗುತ್ತದೆ. ಅವನ **ಪಂಚತಂತ್ರವು** ವಸುಭಾಗಭಟ್ಟನ ಸಂಸ್ಕೃತ **ಪಂಚತಂತ್ರ**ದ ಆಧಾರದ ಮೇಲೆ ರಚಿತವಾಗಿರುವ ಗ್ರಂಥ. ಈ ಸಂಸ್ಕೃತ ಕೃತಿಗೆ ಸಂಬಂಧಿಸಿದಂತೆ ದುರ್ಗಸಿಂಹ ಹೇಳುವ ಕತೆ ಹೀಗಿದೆ: ಶಿವ ಪಾರ್ವತಿಗೆ ಅನೇಕ ಸ್ವಾರಸ್ಯ ಕಥೆಗಳನ್ನು ಹೇಳಿದ. ಶಿವನ ಗಣಗಳಲ್ಲೊಬ್ಬನಾದ ಪುಷ್ಪದಂತನೆಂಬವನು ಈ ಕತೆಗಳನ್ನು ಕೇಳಿಕೊಂಡ. ಯಾವುದೋ ಕಾರಣದಿಂದಾಗಿ ಅವನು ಗುಣಾಢ್ಯನೆಂಬ ಹೆಸರಿನಲ್ಲಿ ಭೂಮಿಗೆ ಅವತರಿಸಿ, ಪೈಶಾಚಿ ಭಾಷೆಯಲ್ಲಿ ಆ ಕತೆಗಳನ್ನು ಹೇಳಿದ. ಈ ಕಥಾ ಸಂಕಲನವೇ **ಬೃಹತ್‌ಕಥಾ**. ಈ ಕತೆಗಳ ಕಡಲಿನಿಂದ ವಸುಭಾಗಭಟ್ಟ ಕೇವಲ ಐದನ್ನು ಮಾತ್ರ ಆರಿಸಿಕೊಂಡು **ಪಂಚತಂತ್ರ** ಎಂಬ ಹೆಸರಿನಲ್ಲಿ ಸಂಸ್ಕೃತದಲ್ಲಿ ಹೇಳಿದ. ತಾನು ಈ ಸಂಸ್ಕೃತ ಕೃತಿಯನ್ನು ಕನ್ನಡದಲ್ಲಿ ಹೇಳಿರುವುದಾಗಿ ದುರ್ಗಸಿಂಹ ಹೇಳಿಕೊಂಡಿದ್ದಾನೆ. ವಸುಭಾಗಭಟ್ಟನ **ಪಂಚತಂತ್ರ** ಇದುವರೆಗೆ ಅಲಭ್ಯವಾಗಿ ಉಳಿದಿದೆ. ಆ ಕೃತಿಯ ಪರಂಪರೆಗೆ ಸೇರಿದ ಕೆಲವು ಕೃತಿಗಳು ಮಾತ್ರ ದೂರಪ್ರಾಚ್ಯದ ಕೆಲವು ದೇಶಗಳಲ್ಲಿ ದೊರಕುತ್ತವೆ. ಆದುದರಿಂದ ದುರ್ಗಸಿಂಹನ ಕೃತಿಗೆ ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿಯೂ ಬೆಲೆಯಿದೆ.

**ಪಂಚತಂತ್ರ**ದಲ್ಲಿ ಐದು ಅಧ್ಯಾಯಗಳಿವೆ : ಭೇದಪ್ರಕರಣ, ಪರೀಕ್ಷಾ ಪ್ರಕರಣ, ವಿಶ್ವಾಸ ಪ್ರಕರಣ, ವಂಚನಾ ಪ್ರಕರಣ ಮತ್ತು ಮಿತ್ರಕಾರ್ಯ ಪ್ರಕರಣ. ಪ್ರತಿ ಅಧ್ಯಾಯದಲ್ಲಿ ಕತೆಗಳಿವೆ; ಕತೆಯ ಒಳಗೆ ಕತೆಗಳಿವೆ. ಕತೆ ಹೇಳುವುದರಲ್ಲಿ ದುರ್ಗಸಿಂಹನದು ಎತ್ತಿದ ಕೈ. ಎಲ್ಲಿ ಸಂಕ್ಷಿಪ್ತವಾಗಿರಬೇಕು, ಎಲ್ಲಿ ವಿಸ್ತರಿಸಬೇಕು, ವಿವರಿಸಬೇಕು ಎಂಬುದು ಅವನಿಗೆ ಗೊತ್ತಿದೆ. ಅವನ ಭಾಷೆ ಕೆಲವು ಸಾರಿ ಬಾಣನ ಭಾಷೆಯಂತೆ ಅಲಂಕಾರ ಭೂಯಿಷ್ಠವಾಗಿರುತ್ತದೆ. ಹಾಗೆಯೇ ತೀರಾ ಸರಳವಾಗಿಯೂ ದುರ್ಗಸಿಂಹನು ಬರೆಯಬಲ್ಲ. ಅವನಲ್ಲಿ ಪದ್ಯಕ್ಕಿಂತ ಗದ್ಯಭಾಗಗಳೇ ಹೆಚ್ಚು. ಅವನ ಗದ್ಯ ಆಕರ್ಷಕವಾಗಿದೆಯಲ್ಲದೆ ಅವನ ಕಾಲದ ಅನೇಕ ಗಾದೆಯ ಮಾತುಗಳನ್ನೂ ಒಳಗೊಂಡಿದೆ. ಕನ್ನಡ ಗದ್ಯದ ಬೆಳವಣಿಗೆಯಲ್ಲಿ ಅವನ ಗದ್ಯಕ್ಕೆ ಸ್ಥಾನವುಂಟು. ಅವನಿಗೆ ಒಳ್ಳೆಯ ಹಾಸ್ಯಾಭಿರುಚಿಯೂ ಇದ್ದಿತು. ಪಂಚತಂತ್ರದ ಪಾತ್ರಗಳೆಲ್ಲವೂ ಬಹುಮಟ್ಟಿಗೆ ಪ್ರಾಣಿಗಳು. ಅವು ಮನುಷ್ಯರಂತೆ ಮಾತಾಡುತ್ತವೆ, ಯೋಚಿಸುತ್ತವೆ, ತತ್ವವನ್ನು ಬೋಧಿಸುತ್ತವೆ; ಶಾಸ್ತ್ರ ಗ್ರಂಥಗಳಿಂದ ಶ್ಲೋಕಗಳನ್ನು ಉದಾಹರಿಸುತ್ತವೆ. ಈ ಪ್ರಾಣಿ ಪ್ರಪಂಚವು ಮಾನುಷ ಪ್ರಪಂಚದ ಪ್ರತಿರೂಪವೇ ಆಗಿದೆ. ಗ್ರಂಥಕರ್ತೃವಿನ ಉದ್ದೇಶ ಕೇವಲ ಕಥಾ ನಿರೂಪಣೆಯಲ್ಲ, ನೀತಿಬೋಧನೆ. ಇಲ್ಲಿನ ಬಹುಮಟ್ಟಿನ ಕತೆಗಳೆಲ್ಲ ವಿಡಂಬನಾತ್ಮಕವಾಗಿವೆ.

**ಸುಕುಮಾರಚರಿತೆಯ** ಕರ್ತೃ ಶಾಂತಿನಾಥ (ಸು.ಕ್ರಿ.ಶ. 1060) ಬನವಾಸಿ 12,000ದ ಮಹಾ ಮಂಡಲೇಶ್ವರನಾಗಿದ್ದ ಲಕ್ಷ್ಮಣರಾಜನ ಬಳಿ ಒಬ್ಬ ಅಧಿಕಾರಿಯಾಗಿದ್ದ. ಲಕ್ಷ್ಮಣರಾಜನಿಗೆ 'ಚಾಲುಕ್ಯ ರಾಜ್ಯಕ್ಕೆ ಕಾರಣಮಾದಾಳ್' ಎಂಬ ಬಿರುದಿದ್ದಿತು. ಅವನಿಗೂ ಚಾಲುಕ್ಯ ಚಕ್ರವರ್ತಿಗೂ ಆತ್ಮೀಯ ಸಂಬಂಧವಿದ್ದಿತು. ಚಕ್ರವರ್ತಿಯು ಇವನನ್ನು ಸೋದರಪ್ರಾಯನನ್ನಾಗಿ ಕಾಣುತ್ತಿದ್ದ. ಶಾಂತಿನಾಥನೇ ರೆದಿರುವ ಕ್ರಿ.ಶ. 1068ರ ಒಂದು ಶಾಸನದಲ್ಲಿ ತನ್ನ ಕೃತಿ **ಸುಕುಮಾರಚರಿತೆಯ** ಹೆಸರನ್ನು ಹೇಳಿ ಕೊಂಡಿದ್ದಾನೆ.

ಜೈನಸಾಹಿತ್ಯದ ಅತ್ಯುತ್ತಮ ಕತೆಗಳಲ್ಲಿ ಸುಕುಮಾರಸ್ವಾಮಿಯ ಕತೆಯೂ ಒಂದು. ಈ ಕತೆ ಸಂಸ್ಕೃತ, ಪ್ರಾಕೃತ, ಕನ್ನಡ ಕವಿಗಳಿಗೆ ತುಂಬ ಪ್ರಿಯವಾಗಿದ್ದಿತು. ಕನ್ನಡ **ವಡ್ಡಾರಾಧನೆಯಲ್ಲಿ** (ಸು. 930) ಬರುವ ಕತೆಗಳಲ್ಲಿ ಇದೂ ಒಂದು. ಈ ಕತೆಯನ್ನು ಆರಿಸಿಕೊಂಡಿರುವ ಮುಂದಿನ ಕನ್ನಡ ಕವಿಯೇ ಶಾಂತಿನಾಥ. ಅವನು **ವಡ್ಡಾರಾಧನೆಯನ್ನು** ಓದಿದ್ದನೆಂಬುದಕ್ಕೆ **ಸುಕುಮಾರಚರಿತೆಯಲ್ಲಿ** ಬರುವ ಅನೇಕ ಭಾವಗಳೂ ಉಕ್ತಿಗಳೂ ಸಾಕ್ಷಿಗಳಾಗಿವೆ. ಅವನು ಇತರ ಅನೇಕ ಕೃತಿಗಳನ್ನೂ ಓದಿರಬಹುದು. ತತ್ಪರಿಣಾಮವಾಗಿ ಕೆಲವು ಸಣ್ಣ ವ್ಯತ್ಯಾಸಗಳೂ ಕಾಣಿಸಿಕೊಳ್ಳುತ್ತವೆ, ಅವನ ಕತೆಯಲ್ಲಿ.

**ಸುಕುಮಾರಚರಿತೆ** ಒಂದು ಚಂಪೂಕಾವ್ಯ. ಅವನಿಗೆ ಕೃತಿರಚನೆಯಲ್ಲಿ ಪಂಪ, ಪೊನ್ನ, ರನ್ನರು ಆದರ್ಶರಾಗಿದ್ದರೂ ಅವರಲ್ಲೆಲ್ಲ ಪಂಪನಿಗೆ ಶಾಂತಿನಾಥ ಮನಸೋತಿದ್ದನು. ಪಂಪನನ್ನು ಅನುಸರಿಸಿ, ಅವನು ತನ್ನ ಕಾವ್ಯದಲ್ಲಿ 'ಧರ್ಮ ಮತ್ತು ಕಾವ್ಯಧರ್ಮ'ಗಳೆರಡನ್ನೂ ನಿರೂಪಿಸಿರುವುದಾಗಿ ಹೇಳಿ ಕೊಂಡಿದ್ದಾನೆ. ಅವನ ಕಾವ್ಯದ ಉದ್ದಕ್ಕೂ ಪಂಪನ ಪ್ರಭಾವವನ್ನು ಗುರುತಿಸಬಹುದು. ಆದರೆ ಅವನು ಕೇವಲ ಅನುಕರಣ ಪ್ರಿಯನಲ್ಲ; ಬಹು ಶಕ್ತಿ ಸಂಪನ್ನನಾದ ಕವಿಯೂ ಹೌದು. ಅಲ್ಲಲ್ಲಿ ಜೈನ ಧರ್ಮದ ತತ್ವಗಳನ್ನು ಹೇರಿದ್ದರೂ, ಒಟ್ಟಿನಲ್ಲಿ ಕವಿ ಸೊಗಸಾಗಿ ಕಥೆಯನ್ನು ಹೇಳಿಕೊಂಡು ಹೋಗಿದ್ದಾನೆ.

ಸುಕುಮಾರಸ್ವಾಮಿಯ ಕತೆ ಒಬ್ಬ ವ್ಯಕ್ತಿಯದಲ್ಲ, ಅನೇಕ ಜನ್ಮಗಳನ್ನು ಎತ್ತಿದ ಒಂದು ಜೀವದ್ದು. ಅನೇಕ ಜನ್ಮಗಳನ್ನು ಎತ್ತಿ ಅಪಾರ ದುಃಖವನ್ನನುಭವಿಸಿ, ಕೊನೆಗೆ ಕರ್ಮಕ್ಷಯವನ್ನು ಮಾಡಿಕೊಂಡು ಮೋಕ್ಷವನ್ನು ಸಾಧಿಸಿದ ವಾಯುಭೂತಿಯ ಜೀವನಕಥೆಯಿದು. ವಾಯುಭೂತಿ, ಅವನ ಸೋದರ ಅಗ್ನಿಭೂತಿ, ಇವರ ಗುರು ಸೂರ್ಯಮಿತ್ರನ ಪಾತ್ರಗಳ ನಿರೂಪಣೆ ಮೆಚ್ಚುವಂತಹುದು. ವಾಯುಭೂತಿ ತನ್ನ ಕೊನೆಯ ಭವದಲ್ಲಿ ಸುಕುಮಾರಸ್ವಾಮಿಯಾಗಿ ಹುಟ್ಟುತ್ತಾನೆ. ಇವನ ಕತೆಯನ್ನೂ ಬಹು ಸೊಗಸಾಗಿ ನಿರೂಪಿಸಿದ್ದಾನೆ. **ವಡ್ಡಾರಾಧನೆಯಲ್ಲಿ** ಬರುವ ಕೆಲವು ಪ್ರಸಂಗಗಳನ್ನು ಶಾಂತಿನಾಥ ಕೈಬಿಟ್ಟಿರುವುದಕ್ಕೆ ಸಮರ್ಥನೆ ಹೇಳುವುದು ಕಷ್ಟ. ಒಟ್ಟಿನಲ್ಲಿ **ಸುಕುಮಾರಚರಿತೆಯಂತಹ** ಕಾವ್ಯ ಹುಟ್ಟದೇ ಇದ್ದಿದ್ದರೆ ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯಕ್ಷೇತ್ರ ಇನ್ನೂ ಬರಡಾಗಿ ಕಾಣುತ್ತಿದ್ದಿತು.

ವಚನ ಸಾಹಿತ್ಯದ ಇತಿಹಾಸದಲ್ಲಿ ಅತ್ಯಂತ ಪ್ರಾಚೀನ ಪ್ರಯತ್ನಗಳನ್ನು ಮಾಡಿದ ವಚನಕಾರನೊಬ್ಬನ ಹೆಸರನ್ನು ಇಲ್ಲಿ ನಾವು ಸ್ಮರಿಸಲೇಬೇಕು. ಅವನೇ ದೇವರ ದಾಸಿಮಯ್ಯ (ಸು.ಕ್ರಿ.ಶ. 1040). ಅವನು, ವೀರಶೈವ ಪುರಾಣಗಳ ಪ್ರಕಾರ, ಎರಡನೆಯ ಜಯಸಿಂಹನ ಕಾಲದಲ್ಲಿದ್ದವನು. ಮುಂದೆ ಉಚಿತ ಸ್ಥಾನ ದಲ್ಲಿ ಇವನ ಸಾಧನೆ ಸಿದ್ಧಿಗಳನ್ನು ಪ್ರಸ್ತಾವಿಸಲಾಗುತ್ತದೆ. **ಚಂದ್ರಚೂಡಾಮಣಿಶತಕದ** ಕರ್ತೃ ನಾಗ ವರ್ಮಾಚಾರ್ಯನು (ಸು. ಕ್ರಿ.ಶ. 1071) ಭುವನೈಕಮಲ್ಲ ಚಕ್ರವರ್ತಿಯ (ಕ್ರಿ.ಶ. 1069—76) ಸೈನ್ಯ ದಲ್ಲಿ ದಂಡನಾಥನಾಗಿದ್ದ ಉದಯಾದಿತ್ಯನಲ್ಲಿ ಸಂಧಿವಿಗ್ರಹಿಯಾಗಿದ್ದ. ಅದ್ವೈತಿಯಾಗಿದ್ದ ಇವನಿಗೆ 'ಗುಣ ಗಳ್ಳ'ನೆಂಬ ಬಿರುದೂ ಇದ್ದಿತು. ಅವನ ಕೃತಿ ಕನ್ನಡ ಶತಕ ಸಾಹಿತ್ಯದಲ್ಲಿ ಮೊತ್ತಮೊದಲನೆಯದು.

ಈಗ ನಾವು ಹನ್ನೆರಡನೆಯ ಶತಮಾನಕ್ಕೆ ಬರುತ್ತೇವೆ. ಇದು ಕರ್ಣಾಟಕದ ಇತಿಹಾಸದಲ್ಲಿ ಅನೇಕ ದೃಷ್ಟಿಗಳಿಂದ ಪ್ರಮುಖವಾದ ಯುಗ. ಈ ಮುಂಚೆ ನಾವು ನೋಡಿರುವಂತೆ, ಶೈವಧರ್ಮದಿಂದಾಗಿ ಜೈನಧರ್ಮವು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿದ್ದಿತು. ಇದು ಈ ಶತಮಾನದಲ್ಲಿಯೂ ಮುಂದು ವರಿಯಿತು. ಈ ಶತಮಾನದಲ್ಲಿ ಎರಡು ಧರ್ಮಗಳು ಕರ್ಣಾಟಕದ ದಿಗಂತದಲ್ಲಿ ಕಾಣಿಸಿಕೊಂಡುವು. ರಾಮಾನುಜರು ಹೊಯ್ಸಳನಾಡಿಗೆ ಬಂದು ಜೈನನಾಗಿದ್ದ ಹೊಯ್ಸಳ ದೊರೆ ವಿಷ್ಣುವರ್ಧನನನ್ನು ತಮ್ಮ ಶ್ರೀ ವೈಷ್ಣವಧರ್ಮದ ಕಡೆ ಕರೆದುಕೊಂಡರು. ಈ ಮತಾಂತರ ಜೈನಧರ್ಮಕ್ಕೆ ಒಂದು ಏಟಾಗಿ ಪರಿ ಣಮಿಸಿತು. ಉತ್ತರ ಕರ್ಣಾಟಕದಲ್ಲಿ ಬಸವ, ಅಲ್ಲಮ, ಸಿದ್ಧರಾಮ ಮತ್ತು ಚೆನ್ನಬಸವರ ನೇತೃತ್ವದಲ್ಲಿ ವೀರಶೈವಧರ್ಮವು ಮುಂದಕ್ಕೆ ಬಂದಿತು. ಸಾಮಾಜಿಕ, ಧಾರ್ಮಿಕ ಸಮಸ್ಯೆಗಳನ್ನು ಈ ಧಾರ್ಮಿಕ ನಾಯಕರು ಕ್ರಿಯಾತ್ಮಕವಾಗಿ ಎದುರಿಸಿದರು. ಜಾತೀಯತೆ, ವರ್ಣಾಶ್ರಮ, ಪೌರೋಹಿತ್ಯಗಳ ಸಾಮಾಜಿಕ ದುಷ್ಪರಿಣಾಮಗಳ ವಿರುದ್ಧ ಅವರು ನಿಂತರು. ಪರಿಣಾಮವಾಗಿ ಅದು ಒಂದು ಸಾಮಾಜಿಕ-ಧಾರ್ಮಿಕ ಕ್ರಾಂತಿಯಾಗಿ ಪರಿಣಮಿಸಿತು. ಈ ಆಂದೋಲನವು ಹೊಸ ರೀತಿಯ ಬರವಣಿಗೆಯೊಂದಕ್ಕೆ ಕಾರಣ ಭೂತವಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿತು. ಈ ಶತಮಾನದಲ್ಲಿ ಕನ್ನಡ ಭಾಷೆಯು ಸ್ಥಿತ್ಯಂತರವನ್ನು ಪಡೆಯಿತು : ಹಳಗನ್ನಡವು ನಡುಗನ್ನಡವಾಗಿ ವಿಕಾಸಹೊಂದಿದ ಕ್ರಿಯೆಯು ಸಂಪೂರ್ಣ ಗೊಂಡದ್ದು ಈ ಶತಮಾನದಲ್ಲಿ. ಹೀಗೆ, ಸಾಮಾಜಿಕವಾಗಿ ಧಾರ್ಮಿಕವಾಗಿ ಸಾಹಿತ್ಯ ಮತ್ತು ಭಾಷೆಗಳ ದೃಷ್ಟಿಯಿಂದ ಈ ಶತಮಾನವು ಕರ್ಣಾಟಕದ ಇತಿಹಾಸದಲ್ಲಿ ಬಹಳ ಮಹತ್ವದ್ದಾಗಿದೆ.

ಈ ಶತಮಾನದಲ್ಲಿ ಪ್ರಬಲವಾಗುತ್ತಿದ್ದ ಇತರ ಧರ್ಮಗಳ ವಿರುದ್ಧ ನಿಂತು ಜೈನರು ತಮ್ಮ ಧರ್ಮ ವನ್ನು ರಕ್ಷಿಸಿ ಜನಪ್ರಿಯಗೊಳಿಸುವ ಕಾರ್ಯದತ್ತ ಕೈಹಾಕಬೇಕಾಯಿತು. ನಯಸೇನನ **ಧರ್ಮಾಮೃತ** (ಕ್ರಿ.ಶ. 1112) ಅಂತಹ ಪ್ರಯತ್ನಗಳಲ್ಲಿ ಪ್ರಮುಖವಾದುದು. ನಯಸೇನ ಮುಳುಗುಂದದಲ್ಲಿ ಒಬ್ಬ ಸನ್ಯಾಸಿಯಾಗಿದ್ದು, 'ರಾಜಪೂಜ್ಯ'ನೂ ಆಗಿದ್ದ. ಚಂಪೂ ಶೈಲಿಯಲ್ಲಿರುವ ಅವನ ಕೃತಿ, ಹೆಸರೇ ಹೇಳು ವಂತೆ, ಸಾಮಾನ್ಯ ಮಾನವನ ಉದ್ಧಾರಕ್ಕಾಗಿ ರಚಿತವಾಗಿದೆ. ನಯಸೇನನಿಗಿಂತ ಹಿಂದಿನ ಚಂಪೂಕಾವ್ಯಗಳ ಭಾಷೆ ಕ್ಲಿಷ್ಟವೂ ಅಲಂಕಾರಭೂಯಿಷ್ಠವೂ ಆಗಿದ್ದಿತು. ಆ ಚಂಪೂ ಕವಿಗಳಲ್ಲಿ ಅನೇಕರು ವಿದ್ವಾಂಸರಿಗಾಗಿ ಬರೆದರು ; ಅವರಲ್ಲಿ ಬಹುಪಾಲು ಜನ ಸಾಮಾನ್ಯ ಮನುಷ್ಯನಿಗಾಗಿ ಕಾವ್ಯವನ್ನು ರಚಿಸಲಿಲ್ಲ. ಆ ಕವಿ ಗಳು ಅಷ್ಟಾದಶ ವರ್ಣನೆಗಳಲ್ಲಿ ದಾರಿ ತಪ್ಪಿದ್ದರು. ಆದರೆ ನಯಸೇನ ಬೇರೆ ಮಾರ್ಗವನ್ನು ಹಿಡಿದ. ತನ್ನ ಕಾವ್ಯದಲ್ಲಿ ತೀರಾ ಸರಳವಾದ ಭಾಷೆಯನ್ನು ಬಳಸಿದ. ಕನ್ನಡ ಸಂಸ್ಕೃತಗಳನ್ನು ವಿವೇಚನೆಯಿಲ್ಲದೆ ಮಿಶ್ರ ಮಾಡಿ ಬಳಸಿದವರನ್ನು ಅವನು ಖಂಡಿಸಿದ. ಅಂತಹ ಮಿಶ್ರಣವನ್ನು ತುಪ್ಪ ಎಣ್ಣೆಗಳ ಮಿಶ್ರಣಕ್ಕೆ ಹೋಲಿಸಿದ. ಆದರೆ ಅವನು ಸಂಸ್ಕೃತ ಪದಗಳ ಬಳಕೆಯ ವಿಷಯದಲ್ಲಿ ವಿರೋಧಿಯೇನೂ ಆಗಿರಲಿಲ್ಲ. ಅನಾವಶ್ಯಕವಾಗಿ ಸಂಸ್ಕೃತ ಪದಗಳ ಬಗ್ಗೆ ಅತಿಮಮತೆಯನ್ನು ಹೊಂದಿ, 'ದೇಶ್ಯ' ಕನ್ನಡ ಪದಗಳನ್ನು ಉಪೇಕ್ಷೆಮಾಡಿದವರನ್ನು ಮಾತ್ರ ಖಂಡಿಸಿದ್ದಾನೆ. ಈ ವಿಷಯದಲ್ಲಿ ಅವನು ಆಂಡಯ್ಯನಂತೆ 'ಉಗ್ರಾಭಿಮಾನಿ'ಯೇನೂ ಅಲ್ಲ.

ನಯಸೇನನದು ತುಂಬು ಅನುಭವ. ಅವನು ಬಹು ಉನ್ನತವಾದ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದ. ಅವನ ಕಾವ್ಯದಲ್ಲಿ ಅವನ ಕಾಲದ ಸಮಕಾಲೀನ ಜೀವನ ಬಹು ಸಮರ್ಪಕವಾಗಿ ವ್ಯಕ್ತವಾಗಿದೆ. ಉಪಮೆ ರೂಪಕಗಳು ಅವನ ವೈಶಿಷ್ಟ್ಯವೆಂದು ಕಾಣುತ್ತದೆ. ಅವನು ಬಳಸಿರುವ ಉಪಮೆಗಳ ಸಂಖ್ಯೆ ಓದುಗರನ್ನು ದಿಗ್ಭ್ರಮೆಗೊಳಿಸುತ್ತದೆ. ತನ್ನ ಸುತ್ತ ಮುತ್ತಣ ಆಡುಮಾತಿನ ಪ್ರಭಾವ ಅವನ ಮೇಲೆ ತೀವ್ರವಾಗಿದೆ. ಇದರ ಫಲವಾಗಿ ಅವನ ಕಾವ್ಯದಲ್ಲಿ ನೂರಾರು ಗಾದೆಗಳು ಆಶ್ರಯವನ್ನು ಪಡೆದಿವೆ. ಜೊತೆಗೆ ಅವನು ಗಾದೆಯ ಮಾತುಗಳ ಟಂಕಕಾರನೂ ಹೌದು.

**ಧರ್ಮಾಮೃತ** ಒಂದು ಕಥಾಸಂಕಲನ; ನಯಸೇನ ಬಹಳ ಒಳ್ಳೆಯ ಕತೆಗಾರ. ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ವಸುಭೂತಿ ಮತ್ತು ಜಿನೇಂದ್ರಭಕ್ತ ಶೆಟ್ಟಿಯರ ಕತೆ. ಚಂದ್ರಹಾಸನ ಕತೆಯನ್ನು ಹೋಲುವ ಧರ್ಮಕೀರ್ತಿಕುಮಾರನ ಕತೆ ಇಲ್ಲಿದೆ. ದ್ರೋಣಾಚಾರ್ಯ ಮತ್ತು ಸುವೇಗರ ಕತೆಯು ದ್ರೋಣ ಏಕಲವ್ಯರ ಕತೆಯನ್ನು ಹೋಲುತ್ತದೆ. ಒಂದೊಂದು ಕತೆಯೂ ಒಂದೊಂದು ನೀತಿಯನ್ನು ಪ್ರತಿಪಾದಿಸುತ್ತದೆ. ಕತೆಗಳು 'ಸಮ್ಯಗ್ದರ್ಶನವನ್ನೂ'—ಅದರ ಎಂಟು ಅಂಗಗಳನ್ನು, ಐದು 'ಅಣುವ್ರತ'ಗಳನ್ನೂ ಬೋಧಿಸುತ್ತವೆ. ಕವಿ ಹೇಳಿಕೊಂಡಿರುವಂತೆ **ಧರ್ಮಾಮೃತವು** ಜೈನಧರ್ಮದ ತಿರುಳನ್ನೊಳಗೊಂಡಿರುವ ಕಾವ್ಯ.

ನಯಸೇನನ ಶೈಲಿ ಸರಳ ಮತ್ತು ಅಪ್ರಯತ್ನಪೂರ್ವಕ. ಶಬ್ದಾಲಂಕಾರಗಳಿಗಾಗಿ ಅವನು ಎಲ್ಲಿಯೂ ತಿಣುಕಿಲ್ಲ. ಆದರೆ ಅವನಿಗೆ ಸಂಕ್ಷಿಪ್ತವಾಗಿ ಮತ್ತು ಧ್ವನಿಪೂರ್ಣವಾಗಿ ಹೇಳುವ ಕಲೆ ತಿಳಿಯದು. ಉಪಮೆಗಳನ್ನು ದುಂದಾಗಿ ಬಳಸುತ್ತಾನೆ. ಅವನ ಕಾವ್ಯವನ್ನೋದಿದ ಮೇಲೆ ಅವನಿಗೆ ಉಪಮೆಗಳ ಬಗ್ಗೆ ಇರುವ ಪ್ರಭುತ್ವವನ್ನು ನಾವು ಬಹಳ ಮೆಚ್ಚಬಹುದು. ಆದರೆ ಅವನು ಕಡಮೆ ಮಾತುಗಳನ್ನು ಬಳಸಿದ್ದರೆ ಚೆನ್ನಾಗಿದ್ದಿತೆಂದು ಆಶಿಸುತ್ತೇವೆ. ಒಟ್ಟಿನಲ್ಲಿ ನಯಸೇನ ಹನ್ನೆರಡನೆ ಶತಮಾನದ ಗಮನಾರ್ಹ ಕವಿಗಳಲ್ಲೊಬ್ಬನೆಂದು ಹೇಳಬಹುದು.

ಎರಡನೆಯ ನಾಗವರ್ಮ (ಸು.ಕ್ರಿ.ಶ. 1145) ಕವಿಯೂ ಹೌದು, ವೈಯಾಕರಣನೂ ಹೌದು; ಜಗದೇಕಮಲ್ಲ ಚಕ್ರವರ್ತಿಯ (ಕ್ರಿ.ಶ. 1138–1150) ಕಾಲದಲ್ಲಿ 'ಕಟಕೋಪಾಧ್ಯಾಯ'ನಾಗಿದ್ದನು. ಹದಿಮೂರನೆ ಶತಮಾನದ ಸುಪ್ರಸಿದ್ಧ ಕವಿ ಜನ್ನ ಅವನ ವಿದ್ಯಾರ್ಥಿ. ನಾಗವರ್ಮನಿಗೆ 'ಅಭಿನವ ಶರ್ವವರ್ಮ' ನೆಂಬ ಬಿರುದೂ ಇದ್ದಿತು. ಅವನ ಕೃತಿಗಳಲ್ಲಿ ಮೂರು ಉಪಲಬ್ಧವಾಗಿವೆ—**ಕಾವ್ಯಾವಲೋಕನ, ಭಾಷಾಭೂಷಣ ಮತ್ತು ಅಭಿಧಾನ ವಸ್ತುಕೋಶ.** ಅವನು ಒಂದು ಜಿನೇಂದ್ರ ಪುರಾಣವನ್ನೂ ಛಂದೋಗ್ರಂಥವೊಂದನ್ನೂ ಬರೆದಂತೆ ತಿಳಿದುಬರುತ್ತದೆ. ಆದರೆ ಅವೆರಡೂ ದೊರಕಿಲ್ಲ.

**ಕಾವ್ಯಾವಲೋಕನ** ಅಲಂಕಾರ ಶಾಸ್ತ್ರ ಗ್ರಂಥವಾದರೂ ಅದರ ಮೊದಲ ಅಧ್ಯಾಯವಾದ 'ಶಬ್ದಸ್ಮೃತಿ'ಯಲ್ಲಿ ಸಂಕ್ಷಿಪ್ತವಾಗಿ ಕನ್ನಡ ವ್ಯಾಕರಣವನ್ನು ನಿರೂಪಿಸಿದ್ದಾನೆ. **ಕವಿರಾಜಮಾರ್ಗದಲ್ಲಿ** ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಸಂಗತಿಗಳು ಬಂದಿದ್ದರೂ ವ್ಯಾಕರಣಕ್ಕೇ ಮೀಸಲಾದ ಮೊದಲ ಬರಹವೆಂದರೆ 'ಶಬ್ದಸ್ಮೃತಿ'ಯೇ. ಹದಿಮೂರನೆ ಶತಮಾನದ ಕೇಶಿರಾಜ ತನ್ನ ಸುಪ್ರಸಿದ್ಧ ವ್ಯಾಕರಣ ಶಬ್ದಮಣಿದರ್ಪಣವನ್ನು ಬರೆಯಲು ಪ್ರಚೋದನೆ ಕೊಟ್ಟದ್ದು ಬಹುಶಃ ಈ ಅಧ್ಯಾಯವೇ. **ಕಾವ್ಯಾವಲೋಕನದ** ಅಲಂಕಾರ ಶಾಸ್ತ್ರದ ಭಾಗಗಳಿಗೆ ಆಧಾರ ಸಂಸ್ಕೃತ ಆಲಂಕಾರಿಕನಾದ ರುದ್ರಟನ **ಕಾವ್ಯಾಲಂಕಾರ. ಭಾಷಾಭೂಷಣವು** ಸಂಸ್ಕೃತದಲ್ಲಿ ರಚಿತವಾಗಿರುವ ಕನ್ನಡ ವ್ಯಾಕರಣಗ್ರಂಥ. ಭಟ್ಟಾಕಳಂಕನ **ಶಬ್ದಾನುಶಾಸನಕ್ಕೆ** ಮುಂದೆ ಇದು ಮಾದರಿಯಾಯಿತು. **ಭಾಷಾಭೂಷಣಕ್ಕೆ** ಹದಿನೇಳನೆ ಶತಮಾನದ ಒಂದು ಕನ್ನಡ ವ್ಯಾಖ್ಯಾನವಿದೆ. **ಅಭಿಧಾನ ವಸ್ತುಕೋಶವು** ಪದ್ಯರೂಪವಾಗಿರುವ ಒಂದು ಕನ್ನಡ ಕೋಶ. ಹೀಗೆ ಕನ್ನಡ ಭಾಷೆಗೆ ನಾಗವರ್ಮನ ಕಾಣಿಕೆ ಗಣನಾರ್ಹವಾದುದಾಗಿದೆ. ಈ ದೃಷ್ಟಿಯಿಂದ ಕನ್ನಡ ಭಾಷಾ ಸಾಹಿತ್ಯಗಳ ಇತಿಹಾಸದಲ್ಲಿ ಅವನು ವಿಶಿಷ್ಟಸ್ಥಾನವನ್ನು ಪಡೆದುಕೊಂಡಿದ್ದಾನೆನ್ನಬಹುದು.

ಈ ಶತಮಾನದ ಬ್ರಹ್ಮಶಿವ (ಸು. 1150) ನ ಹೆಸರನ್ನು ವಿಶೇಷವಾಗಿ ಹೇಳಲೇಬೇಕು. ಅವನ ಕೃತಿ **ಸಮಯಪರೀಕ್ಷೆ.** ಹೆಸರೇ ಹೇಳುವಂತೆ, ಬೇರೆ ಬೇರೆ ಮತಗಳನ್ನು ಪರೀಕ್ಷಿಸುವುದು ಗ್ರಂಥಕರ್ತನ ಉದ್ದೇಶವಾಗಿದೆ. ಬ್ರಹ್ಮಶಿವ ದೊಡ್ಡ ವಿದ್ವಾಂಸನಾಗಿದ್ದುದಲ್ಲದೆ ಅನೇಕ ಮತಗಳ ಸಾಕ್ಷಾತ್ತಾದ ಪರಿಚಯವನ್ನೂ ಪಡೆದವನಾಗಿದ್ದ. ಅವನು ಆರಂಭದಲ್ಲಿ ಜೈನನಾಗಿದ್ದಿರಬೇಕು. ಮುಂದೆ ಅವನು ಶೈವನಾಗಿ ಮತಾಂತರ ಹೊಂದಿ, ಸ್ವಲ್ಪ ಕಾಲದ ಬಳಿಕ ಶೈವಧರ್ಮದಲ್ಲಿ ಅವನಿಗೆ ನಂಬಿಕೆ ಸಾಲದಾಗಿ ಮತ್ತೆ

ಜೈನಧರ್ಮಕ್ಕೆ ಹಿಂತಿರುಗಿದ. ಅವನು ಜೈನಧರ್ಮವೇ ಪರಮಶ್ರೇಷ್ಠವಾದುದೆಂದು ನಂಬಿದ್ದ. ತನ್ನ ಕೃತಿಯಲ್ಲಿ ಆ ಕಾಲದ ಎಲ್ಲ ಮತಗಳ ಕೊರತೆಗಳನ್ನೂ ಪಟ್ಟಿಮಾಡಿದ್ದಾನೆ, ಮತ್ತು ಅವುಗಳನ್ನು ಸ್ಪಷ್ಟೋಕ್ತಿಗಳಲ್ಲಿ ಖಂಡಿಸಿದ್ದಾನೆ. ಆದರೆ ಅವನು ಒಂದು ಪಕ್ಷಾವಲಂಬಿಯಾಗಿ ಮಾತನಾಡುವುದರಿಂದ ಅವನ ಟೀಕೆಗಳು ಏಕಪಕ್ಷೀಯವಾಗಿರುವುದು ಸಹಜವೂ ಆಗಿದೆ. ಅವನ ಶೈಲಿ ಅಷ್ಟೇನೂ ಹಿತವಾದುದಲ್ಲ. ಕೆಲವು ಸಾರಿ ಅದು ಖಡ್ಗದ ಧಾರೆಯಷ್ಟು ಮೊನಚಾಗಿರಬಲ್ಲುದು. ಅವನ ಕಾಲದ ಧಾರ್ಮಿಕ ಚಿತ್ರಣ ಅಲ್ಲಿರುವುದರಿಂದ ವೀರಶೈವಧರ್ಮದ ಉದಯಕ್ಕೆ ಹಿನ್ನೆಲೆಯಾಗಿದ್ದ ಧಾರ್ಮಿಕ ಸನ್ನಿವೇಶದ ಚಿತ್ರವನ್ನು ಸಮಯಪರೀಕ್ಷೆ ಒದಗಿಸಿಕೊಡುತ್ತದೆ. ಬೇರೆ ಬೇರೆ ಮತಗಳ ತೌಲನಿಕ ಅಧ್ಯಯನ ದೊರಕುವ ಈ ಕೃತಿಯಂತಹ ಕೃತಿ ಕನ್ನಡದಲ್ಲಿ ಇದೊಂದೇ.

ಚಾಲುಕ್ಯ ವಂಶದಲ್ಲಿ ಕೊನೆಯ ಸಮರ್ಥ ಚಕ್ರವರ್ತಿಯೆಂದರೆ ಮೂರನೆಯ ಸೋಮೇಶ್ವರ. ಅವನ ಉತ್ತರಾಧಿಕಾರಿಗಳಾಗಿ ಬಂದವರು ಬಹು ದುರ್ಬಲರಾಗಿದ್ದರು. ಇದರ ಫಲವಾಗಿ ಕಲಚೂರಿ ದೊರೆ ಬಿಜ್ಜಳ ಪ್ರಬಲನಾಗುತ್ತ ಬಂದು ಕೊನೆಗೆ ಕ್ರಿ.ಶ. 1156ರಲ್ಲಿ ಸಿಂಹಾಸನವನ್ನು ಆಕ್ರಮಿಸಿದ. ಅವನ ಆಳಿಕೆ ಕೆಲವು ವರ್ಷಗಳಾದರೂ ಅವನ ಕಾಲದಲ್ಲಿ ಬಸವ, ಅಲ್ಲಮರಂತಹ ಉನ್ನತ ವ್ಯಕ್ತಿಗಳ ನೇತೃತ್ವದಲ್ಲಿ ನಡೆದ ವೀರಶೈವ ಧರ್ಮದ ಆಂದೋಲನದ ಕಾರಣದಿಂದಾಗಿ ಅವನ ಕಾಲ ಗಮನಾರ್ಹವಾದುದಾಗಿದೆ. ಬಸವನೇ ವೀರಶೈವ ಧರ್ಮವನ್ನು ಸ್ಥಾಪಿಸಿದವನೆಂದು ಸಂಸ್ಕೃತ ಗ್ರಂಥಗಳಲ್ಲಾಗಲಿ ಕನ್ನಡ ಗ್ರಂಥಗಳಲ್ಲಾಗಲಿ ಉಕ್ತವಾಗದೆ ಇರುವುದರಿಂದ ಕ್ರಿ.ಶ. 1150ಕ್ಕೆ ಮುಂಚೆ ವೀರಶೈವ ಧರ್ಮವು ಒಂದಲ್ಲ ಒಂದು ರೀತಿಯಲ್ಲಿ ಇದ್ದಿರಬೇಕು. ಬಸವ ತನ್ನ ವಚನಗಳಲ್ಲಿ ಹಲವು 'ಆದ್ಯ'ರನ್ನು ಸ್ಮರಿಸಿದ್ದಾನೆ. ಇವರಲ್ಲಿ ಕೆಲವರಾದರೂ ಸ್ಪಷ್ಟವಾಗಿ ಐತಿಹಾಸಿಕ ವ್ಯಕ್ತಿಗಳು. ಉದಾಹರಣೆಗೆ ಜಯಸಿಂಹ ಚಕ್ರವರ್ತಿಯ (ಕ್ರಿ.ಶ. 1015–42) ಸಮಕಾಲೀನನಾಗಿದ್ದ ದೇವರ ದಾಸಿಮಯ್ಯ ವಚನಗಳನ್ನು ಬರೆದಿದ್ದಾನೆ. ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಸಕಲೇಶಮಾದರಸರು ಬಸವನಿಗಿಂತ ಹಿಂದಿನವರು. ಆದರೆ ವೀರಶೈವಧರ್ಮವು ಬಸವನ ಕಾಲದಲ್ಲಿ ಕರ್ಣಾಟಕದಲ್ಲಿ ಒಂದು ಧಾರ್ಮಿಕ ಸಾಮಾಜಿಕ ಶಕ್ತಿಯಾಗಿ ಬೆಳೆಯಿತೆಂಬುದು ಮಾತ್ರ ನಿರ್ವಿವಾದ ಸಂಗತಿ.

ಬಸವ ಜನ್ಮತಃ ಒಬ್ಬ ಬ್ರಾಹ್ಮಣನಾಗಿದ್ದರೂ ತನ್ನ ಕಾಲದ ಧರ್ಮದಲ್ಲಿ ಪ್ರಚಲಿತವಾಗಿದ್ದ ಅನ್ಯಾಯಗಳ ವಿರುದ್ಧ ಬಂಡೆದ್ದ. ಅವನೊಬ್ಬ ಕ್ರಾಂತಿಕಾರಿಯಾಗಿದ್ದು ಸರ್ವಸಮಾನತೆಗಾಗಿ ಹೋರಾಡಿದ. ಅವನು ಹೋರಾಡಿದ್ದು ಸ್ತ್ರೀಯರ ಪರವಾಗಿ, ಕೆಳವರ್ಗಗಳಲ್ಲಿ ಹುಟ್ಟಿದ ಜನರ ಪರವಾಗಿ. ಎಲ್ಲ ರೀತಿಯ ಸಾಮಾಜಿಕ ಅನ್ಯಾಯಗಳನ್ನು ಅವನು ಖಂಡಿಸಿದ. ಅವನು ಭಕ್ತಿಮಾರ್ಗವನ್ನು ಪ್ರತಿಪಾದಿಸಿ ಆತ್ಮಸಾಕ್ಷಾತ್ಕಾರಕ್ಕೆ ಭಕ್ತಿ ಅತ್ಯುತ್ತಮ ಮಾರ್ಗವೆಂದು ತೋರಿಸಿಕೊಟ್ಟ. ಈ ಕ್ರಾಂತಿಯಿಂದಾಗಿ ಅವನ ಬೋಧನೆಗೆ ತೀವ್ರ ಪ್ರಚಾರ ಸಿಕ್ಕಿ, ಭಾರತದ ಎಲ್ಲೆಡೆಗಳಿಂದ ಅಸಂಖ್ಯಾತ ಅನುಯಾಯಿಗಳು ದೊರೆತರು. ಹೀಗೆ ಮತಾಂತರಗೊಂಡ ಜನರು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದ್ದ ಎಲ್ಲ ಜಾತಿಗಳಿಗೆ, ಸಮಾಜದ ಭಿನ್ನ ಭಿನ್ನ ವರ್ಗಗಳಿಗೆ ಸೇರಿದವರಾಗಿದ್ದರು. ಸ್ತ್ರೀಯರು ಪುರುಷರಿಗೆ ಸಮಾನವೆಂದು ಸಾರಲಾಯಿತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಅವರಿಗೆ ಸಮಾನ ಅವಕಾಶಗಳನ್ನು ದೊರಕಿಸಿ ಕೊಡಲಾಯಿತು. ಉಳಿದವರ ಅವಜ್ಞೆಗೆ ಈಡಾಗಿದ್ದವರ, ಬಡವರ, ಅವಿದ್ಯಾವಂತರ, ದೀನದಲಿತರ ಉದ್ಧಾರವೇ ಆ ಕ್ರಾಂತಿಯ ಗುರಿಯಾಗಿದ್ದಿತು.

ಅನೇಕ ವಚನಕಾರರು ಸಮಾಜದ ತೀರ ಕೆಳಗಿನ ವರ್ಗದಿಂದ ಬಂದವರು. ಎಲ್ಲೋ ಕೆಲವರು ಮಾತ್ರ ಒಳ್ಳೆಯ ವಿದ್ಯಾವಂತರಾಗಿದ್ದರು. ಬಹುಪಾಲು ಜನರಿಗೆ ಅಂತಹ ಹೇಳಿಕೊಳ್ಳುವ ವಿದ್ಯೆಯೇನೂ ಇರಲಿಲ್ಲ. ಅವರು ಅನುಸರಿಸಿದ್ದ ವೃತ್ತಿಗಳೂ ಅನೇಕ ಬಗೆಯವು. ಬಸವ ಒಬ್ಬ ಭಂಡಾರಿಯಾಗಿದ್ದ ; ಸಿದ್ಧರಾಮ ಒಬ್ಬ ದೈವಭಕ್ತನೂ ಸಾಮಾಜಿಕ ಕಾರ್ಯಕರ್ತನೂ ಆಗಿದ್ದ ; ಮಾದರ ಚನ್ನಯ್ಯ ಚರ್ಮಕಾರನಾಗಿದ್ದ ;

ತುರುಗಾಹಿ ರಾಮಣ್ಣ ಒಬ್ಬ ದನಗಾಹಿ; ಸೂಜಿಕಾಯಕದ ರಾಮಿತಂದೆ ಒಬ್ಬ ದರ್ಜಿ; ಮೇದರ ಕೇತಯ್ಯ ಬುಟ್ಟಿ ಹೆಣೆವ ವೃತ್ತಿಯವನು; ಬಾಚಿ ಕಾಯಕದ ಬಸಪ್ಪ ಒಬ್ಬ ಬಡಗಿ. ಒಂದು ವೃತ್ತಿಗೂ ಇನ್ನೊಂದು ವೃತ್ತಿಗೂ ಸಾಮಾಜಿಕವಾಗಿ ಯಾವ ವ್ಯತ್ಯಾಸವೂ ಇರಲಿಲ್ಲವೆಂಬುದು ಈ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ. ಭಿನ್ನ ಭಿನ್ನ ವೃತ್ತಿಗಳನ್ನು ತ್ಯಾಗಮನೋಭಾವದಿಂದ ನಡೆಸಿಕೊಂಡು ಹೋಗಬೇಕೆಂದು ನಾಯಕರು ಘೋಷಿಸಿದರು. ಈ ತ್ಯಾಗಮನೋಭಾವದಿಂದ ತನ್ನ ವೃತ್ತಿಯನ್ನು ಅನುಸರಿಸಿದರೆ ದೈವಸಾಕ್ಷಾತ್ಕಾರ ಸಾಧ್ಯವಾಗುತ್ತದೆಯೆಂದು ಅವರು ನಂಬಿದ್ದರು. 'ಕಾಯಕ' ಎಂಬ ಮಾತಿಗೆ ಇದೇ ಅರ್ಥ. ಎಲ್ಲ ವಚನಕಾರರಿಗೂ ಅವನವನದೇ ಆದ ವಿಶಿಷ್ಟ ಅಭಿವ್ಯಕ್ತಿಯುಂಟು. ವಚನಕಾರ ತನ್ನ ಆಧ್ಯಾತ್ಮಿಕ ಅಥವಾ ಇತರ ಅನುಭವಗಳನ್ನು ತನ್ನ ಕಾಯಕಕ್ಕೆ ಸಂಬಂಧಿಸಿದ ರೂಪಗಳ ಮೂಲಕ ವ್ಯಕ್ತಪಡಿಸಿರುವುದು ಗಮನಾರ್ಹವಾದ ಸಂಗತಿ.

ವೀರಶೈವ ಧಾರ್ಮಿಕ ನಾಯಕರು ತಮ್ಮ ಆಲೋಚನೆ, ಅನುಭವಗಳನ್ನು ವಚನ ರೂಪದಲ್ಲಿ ಅಭಿವ್ಯಕ್ತಮಾಡಿದರು. ವಚನಗಳು ಸೂಕ್ತಿಗಳ ರೂಪದಲ್ಲಿರುವುವಲ್ಲದೆ ಅಲ್ಲಲ್ಲಿ ಪದ್ಯದ ಲಯವೂ ಗೋಚರ ವಾಗುತ್ತದೆ. ಜನಸಾಮಾನ್ಯರಿಗೂ ಅರ್ಥವಾಗುವಂತಹ ಭಾಷೆಯಲ್ಲಿ ತಮ್ಮ ಆಲೋಚನೆಗಳನ್ನು ಬೋಧಿಸುವುದು ವಚನಕಾರರ ಪ್ರಮುಖ ಉದ್ದೇಶವಾಗಿದ್ದಿತು. 'ವಚನ' ಎಂದರೆ ಸಾಮಾನ್ಯವಾಗಿ ಆಡಿದ್ದು ಎಂದರ್ಥ, ಗದ್ಯ ಎಂದರ್ಥ. ಆದರೆ ಇಲ್ಲಿ 'ವಚನ'ವೆನ್ನುವುದು ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಒಂದು ವಿಶಿಷ್ಟ ರೀತಿಯ ಬರಹವನ್ನು ಸೂಚಿಸುತ್ತದೆ. ವಚನಗಳು ಛಂದೋಬದ್ಧವಲ್ಲದಿದ್ದರೂ ಅವುಗಳಲ್ಲಿ ಒಂದು ಬಗೆಯ ಲಯವಿರುತ್ತದೆ. ನಮಗೆ ತಿಳಿದಮಟ್ಟಿಗೆ, ಕನ್ನಡಕ್ಕೆ ವಿಶಿಷ್ಟವಾದ ಪ್ರಕಾರ ವೆಂದರೆ ವಚನವೆ; ಸಾಹಿತ್ಯ ಪ್ರಕಾರಗಳಿಗೆ ಕರ್ಣಾಟಕದ ಕೊಡುಗೆಯೆಂದರೆ ವಚನವೇ.

ಹನ್ನೊಂದನೆಯ ಶತಕದ ದೇವರ (ಜೇಡರ) ದಾಸಿಮಯ್ಯ ವಚನಕಾರರಲ್ಲಿ ಮೊತ್ತಮೊದಲಿಗ. ಅವನು ವೃತ್ತಿಯಲ್ಲಿ ನೇಯ್ಗೆಯವನು. ವಾದ ವಿವಾದವೊಂದರಲ್ಲಿ ಅವನು ಜೈನರನ್ನು ಸೋಲಿಸಿದನೆಂದೂ ಉಲ್ಲೇಖವಿದೆ. ಚಾಲುಕ್ಯ ರಾಣಿ ಸುಗ್ಗಲದೇವಿ ಅವನ ಶಿಷ್ಯರಲ್ಲಿ ಒಬ್ಬಳಾಗಿದ್ದಳು. ಭಗವಂತನ ಅನುಗ್ರಹಕ್ಕೆ ಪಾತ್ರನಾದ ವ್ಯಕ್ತಿಯೆಂದು ಮುಂದಿನ ವಚನಕಾರರು ಅವನನ್ನು ಸ್ಮರಿಸಿದ್ದಾರೆ. ಅವನ ವಚನಗಳು ಸೊಗಸಾದ ರಚನೆಗಳಾಗಿದ್ದು ಒಳ್ಳೆಯ ರೂಪಕಗಳಿಗೆ ಛಂದೋಲಯಕ್ಕೆ ಪ್ರಖ್ಯಾತವಾಗಿವೆ.

ವಚನಕಾರರಲ್ಲೆಲ್ಲಾ ಬಹು ದೊಡ್ಡ ಹೆಸರೆಂದರೆ ಬಸವಣ್ಣನವರದು (ಸು.ಕ್ರಿ.ಶ. 1160). ಹಾಗೆ ನೋಡಿದರೆ ಅವರು ವಚನ ಆಂದೋಲನದ ಪ್ರಾಣಸ್ವರೂಪದಂತಿದ್ದಾರೆ. ಅವರ ವಾಸದ ಮನೆಯಾಗಿದ್ದ 'ಮಹಾಮನೆ'ಯು ವೀರಶೈವ ಧರ್ಮದ ಪ್ರಸಾರ ಕೇಂದ್ರವಾಗಿ ಪರಿಣಮಿಸಿತಲ್ಲದೆ ಅದು ಒಂದು ಅಕಾಡೆಮಿಯಂತೆಯೂ ಕೆಲಸ ಮಾಡುತ್ತಿದ್ದಿತು. ಅಲ್ಲಿ ನಡೆಯುತ್ತಿದ್ದ ಗೋಷ್ಠಿಗಳಿಗೆ 'ಅನುಭವಮಂಟಪ' ಮುಂತಾದ ಹೆಸರುಗಳಿದ್ದು ಅಲ್ಲಿ ಸೇರುತ್ತಿದ್ದ ಅನುಭಾವಿ ಭಕ್ತರಲ್ಲಿ ಧಾರ್ಮಿಕವಾದ ಆಧ್ಯಾತ್ಮಿಕವಾದ ಚರ್ಚೆಗಳು ನಡೆಯುತ್ತಿದ್ದವು.

ಬಸವಣ್ಣನವರಿಗೆ ಕಲಾವಿದನ ದೃಷ್ಟಿಯಿದ್ದಿತು; ಕವಿ ಹೃದಯವಿದ್ದಿತು. ವಚನ ಸಾಹಿತ್ಯದಲ್ಲಿಯೇ ಅತ್ಯಂತ ಸುಂದರವಾದುವು ಅವರ ಕೆಲವು ವಚನಗಳು. ಅವರಂತಹ ರೂಪಕ ನಿರ್ಮಾಣ ಶಕ್ತಿಯುಳ್ಳ ಕವಿಗಳು ಕನ್ನಡದಲ್ಲಿ ಬಹಳ ಜನರಿಲ್ಲ.

ಅಲ್ಲಮ ಅನುಭವಮಂಟಪದಲ್ಲಿ ಬಹು ಪ್ರಬಲನಾಗಿದ್ದವನು. ಅವನನ್ನು ಎಲ್ಲರೂ ಭಕ್ತಿಯಿಂದ ನೋಡುತ್ತಿದ್ದರು. ಅವನು ಸ್ಥಳದಿಂದ ಸ್ಥಳಕ್ಕೆ ಸಂಚರಿಸಿ, ಅನೇಕ ಸಾಧಕರನ್ನು ಸಂದರ್ಶಿಸಿ, ಅವರ

ಸಮಸ್ಯೆಗಳನ್ನು ಪರಿಹರಿಸುತ್ತ ಆ ಕಾಲದ ಆಧ್ಯಾತ್ಮಿಕ ಜ್ಞಾನಕ್ಕಾಗಿ ಹಂಬಲಿಸುತ್ತಿದ್ದ ಸಾಧಕರಿಗೆ ದಿವ್ಯ ಜ್ಯೋತಿಯಂತೆ ಇದ್ದನು. ಅನುಭಾವಿಯಾಗಿದ್ದ ಅವನು ಉನ್ನತವಾದ ಆಧ್ಯಾತ್ಮಿಕ ಶಿಖರಗಳನ್ನು ಏರಿದ್ದ.

ಅವನ ಆಧ್ಯಾತ್ಮಿಕ ಅನುಭವಗಳ ಅಸಾಮಾನ್ಯತೆಯಿಂದಾಗಿ ಅವನ ವಚನಗಳು ನಮಗೆ ಅರ್ಥವಾಗುವುದು ಕಷ್ಟವಾಗುತ್ತದೆ. ಅವನದು ಬಹುಮಟ್ಟಿಗೆ ರೂಪಕ ಭಾಷೆ. ಈ ಭಾಷೆ ಅವನ ವಿಶೇಷವೂ ಹೌದು. ಈ ಕಾರಣದಿಂದ ಅಲ್ಲಮನನ್ನು ಅರ್ಥಮಾಡಿಕೊಳ್ಳುವವರು ಅವನ ವಚನಗಳನ್ನು ಎಚ್ಚರಿಕೆಯಿಂದ ವಿಶೇಷ ಜ್ಞಾನದಿಂದ ಅಧ್ಯಯನ ಮಾಡಬೇಕಾಗುತ್ತದೆ.

ಚನ್ನಬಸವ ಬಸವನ ಸೋದರಳಿಯ. ಅವನು ಒಬ್ಬ ದೊಡ್ಡ ವಿದ್ವಾಂಸನಾಗಿದ್ದರಿಂದ, ಸಮಸ್ಯೆಗಳ ಚರ್ಚೆಯ ಕಾಲದಲ್ಲಿ ಸಂದೇಹಗಳು ಎದ್ದಾಗ ಅವುಗಳ ಪರಿಹಾರಕ್ಕೆ ಅವನ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದ್ದರು. ಸಿದ್ಧರಾಮ ಪ್ರಭಾವಶಾಲಿಯಾಗಿದ್ದ ಮತ್ತೊಬ್ಬ ವಚನಕಾರ. ಅವನ ಸ್ಥಳ ಸೊನ್ನಲಿಗೆ, ಈಗಿನ ಸೊಲ್ಲಾಪುರ. ಚನ್ನಬಸವ ಜ್ಞಾನಯೋಗಿಯಾಗಿದ್ದರೆ, ಸಿದ್ಧರಾಮ ಕರ್ಮಯೋಗಿ. 'ಒಂದೊಂದು ಕಣ್ಣಿನ ಕಣ್ಣೀರನ್ನೂ ಒರಸುವ ' ದೊಡ್ಡ ಆದರ್ಶವನ್ನು ಅವನ ವಚನಗಳು ಸಾರುತ್ತವೆ.

ವಚನಕಾರರಲ್ಲಿ ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯತಕ್ಕವಳು ಅಕ್ಕಮಹಾದೇವಿ. ಅವಳು ಮೀರೆಯಂತೆ ಆಂಡಾಳಂತೆ ಚಿಕ್ಕ ವಯಸ್ಸಿನಲ್ಲಿಯೇ ಭಗವಂತನನ್ನು ತನ್ನ ಪ್ರಿಯನೆಂಬುದಾಗಿ ಭಾವಿಸಿಕೊಂಡಳು. ಆದರೆ ಮುಂದೆ, ದೊರೆ ಕೌಶಿಕ ತನ್ನ ತಂದೆ ತಾಯಿಗಳನ್ನು ಹಿಂಸಿಸಬಹುದೆಂಬ ಭಯದಿಂದ ಆ ದೊರೆಯನ್ನು ಬಲವಂತದಿಂದ ಮದುವೆಯಾಗಬೇಕಾಯಿತು. ಆದರೆ ಅವಳು ಅವನ ಅರಮನೆಯಲ್ಲಿ ಬಹುಕಾಲ ಇರಲಿಲ್ಲ. ಕೌಶಿಕನ ಅರಮನೆಯನ್ನು ತ್ಯಜಿಸಿ, ತನ್ನ ಪ್ರಿಯನನ್ನು ಹುಡುಕಿಕೊಂಡು, ಭಕ್ತಿಗೀತೆಗಳನ್ನು ಹಾಡುತ್ತ ಸ್ಥಳದಿಂದ ಸ್ಥಳಕ್ಕೆ ಅಲೆದಳು. ಕಲ್ಯಾಣಕ್ಕೆ ಬಂದು ವೀರಶೈವ ಧಾರ್ಮಿಕ ನಾಯಕರನ್ನು ಭೇಟಿ ಮಾಡಿದಳು. ಕಲ್ಯಾಣದಿಂದ ಶ್ರೀಶೈಲಕ್ಕೆ ಹೋಗಿ, ಅಲ್ಲಿ ಪರಮಾತ್ಮನಲ್ಲಿ ಐಕ್ಯಳಾದಳು.

ಅವಳ ವಚನಗಳು ಭಾವಗೀತಾತ್ಮಕಗಳಾಗಿವೆ. ಅವು ಅವಳ ತೀರ ವೈಯಕ್ತಿಕವಾದ ಭಾವಗಳನ್ನು ವ್ಯಕ್ತಪಡಿಸುತ್ತವೆ. ಅವಳ ಚಿತ್ತಸ್ಥಿತಿಯ ಎಲ್ಲ ಮುಖಗಳೂ ಪ್ರತಿಫಲಿತವಾಗಿರುವ ಅವಳ ವಚನಗಳಲ್ಲಿ ಅದ್ಭುತ ಕಾವ್ಯಗುಣವಿದೆ.

ಮುಕ್ತಾಯಕ್ಕ, ರಾಣಿ ಮಹಾದೇವಿ ಮತ್ತು ನೀಲಮ್ಮ ಇವರು ವಚನಕಾರ್ತಿಯರಲ್ಲಿ ಇನ್ನೂ ಕೆಲವರು. ಕನ್ನಡ ಸಾಹಿತ್ಯದಲ್ಲಿ ಮೊದಮೊದಲು ಕೆಲಸ ಮಾಡಿದ ಸ್ತ್ರೀಯರಲ್ಲಿ ಇವರು ಮತ್ತು ಇತರರು ಪ್ರಮುಖರಾಗಿದ್ದಾರೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಇವರೆಲ್ಲರೂ ಸಾಧನೆಮಾಡಿ ಬಹಳ ಮುಂದುವರಿದಿದ್ದ ವ್ಯಕ್ತಿಗಳಾಗಿದ್ದರು.

ಮಡಿವಾಳ ಮಾಚಯ್ಯ ಮತ್ತು ಅಂಬಿಗರ ಚೌಡಯ್ಯರು ಸಾಮಾಜಿಕ ಅನ್ಯಾಯ, ದೋಷಗಳನ್ನು ಖಂಡಿಸಿ ಮಾತನಾಡಿದರು. ಅವುಗಳ ಬಗ್ಗೆ ತಮಗಿರುವ ದ್ವೇಷ ತಿರಸ್ಕಾರಗಳನ್ನು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಉರಿಲಿಂಗದೇವ ಮತ್ತು ಗಜೇಶಮಸಣಯ್ಯರು ಕೆಲವು ಮನೋಹರವಾದ ವಚನಗಳನ್ನು ಬರೆದಿದ್ದಾರೆ. 'ಮಧುರಭಾವ 'ದಲ್ಲಿ ಸಾಧನೆ ಮಾಡಿರುವ ಸಾಧಕರ ಶ್ರೇಷ್ಠ ಗೀತಗಳಿಗೆ ಇವರ ವಚನಗಳು ಹೆಗಲೆಣೆಯಾಗಬಲ್ಲವು. ಕಿನ್ನರಿ ಬ್ರಹ್ಮಯ್ಯ, ಕಂಬದ ಮಾರಿತಂದೆ, ನಗೆಯ ಮಾರಿತಂದೆ,

ಮಾದರ ಧೂಳಯ್ಯ, ಘಟ್ಟಿವಾಳಯ್ಯ ಮುಂತಾದವರು ಸಹಜ ಕಾವ್ಯಗುಣವಿರುವ ಅನೇಕ ವಚನಗಳನ್ನು ಬರೆದಿದ್ದಾರೆ.

ಹೀಗೆ ವಚನ ಆಂದೋಲನವು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಸಂಪ್ರದಾಯವನ್ನೇ ಆರಂಭಿಸಿ ಮುಂದೆ ಬಂದ ಕವಿಗಳಿಂದ ಶ್ರೀಮಂತಗೊಳಿಸಲ್ಪಟ್ಟ ಕೆಲವು ಹೆದ್ದಾರಿಗಳನ್ನು ತೆರೆದು ತೋರಿಸಿತು. ಕನ್ನಡವು ತಾತ್ವಿಕ, ಅನುಭಾವಿಕ ಆಲೋಚನೆಗಳನ್ನು ವ್ಯಕ್ತಮಾಡಲು ತಕ್ಕ ಮಾಧ್ಯಮವಾಗಬಲ್ಲುದೆಂಬ ಸಂಗತಿಯನ್ನು ವಚನಗಳು ಮೊತ್ತಮೊದಲು ಸ್ಪಷ್ಟಪಡಿಸಿದವು. ವಚನ ಆಂದೋಲನವು ಕರ್ಣಾಟಕದ ಜನರಿಗೆ ಕನ್ನಡ ಭಾಷೆಗೆ ಹೊಸ ಬೆಳಕನ್ನು ಹೊಸ ಜೀವನವನ್ನು ತಂದುಕೊಟ್ಟಿತು.

ಚಾಲುಕ್ಯರ ಆಳಿಕೆಯ ಕಾಲವು ಹೀಗೆ, ಸಾಹಿತ್ಯಕ್ಷೇತ್ರದಲ್ಲಿ ವಸ್ತುವೈವಿಧ್ಯದ ದೃಷ್ಟಿಯಿಂದ, ರೀತಿಯ ದೃಷ್ಟಿಯಿಂದ ಬಹು ಸಾರ್ಥಕವಾದ ಯುಗವೆನಿಸಿಕೊಳ್ಳುತ್ತದೆ.

**ಮೂಲಲೇಖಕರು ಮತ್ತು ಅನುವಾದಕರು : ಡಾ॥ ಎಂ. ಚಿದಾನಂದ ಮೂರ್ತಿ**

# ಸಂಸ್ಕೃತ–ಕಲ್ಯಾಣ ಚಾಲುಕ್ಯರ ಕಾಲ

ಕಲ್ಯಾಣದ ಪಶ್ಚಿಮ ಚಾಲುಕ್ಯ ದೊರೆಗಳು ಸಂಸ್ಕೃತ ಲೇಖಕರಿಗೆ ಕೊಡುತ್ತಿದ್ದ ಆಶ್ರಯವು ಕರ್ಣಾಟಕ ಚರಿತ್ರೆಯಲ್ಲೇ ಅಭೂತ ಪೂರ್ವವಾದುದೆಂದು ಹೇಳಬಹುದು. ಉತ್ತರದ ಶಾಸಕರಾದ ಭೋಜ ಮುಂತಾದವರಿಗೂ ದಕ್ಷಿಣದ ಶಾಸಕರಾದ ಆರನೆಯ ವಿಕ್ರಮಾದಿತ್ಯ ಮುಂತಾದವರಿಗೂ ಅತ್ಯುತ್ತಮ ಕವಿಗಳನ್ನು ಮತ್ತು ದಾರ್ಶನಿಕರನ್ನು ತಮ್ಮ ಆಸ್ಥಾನದಲ್ಲಿ ಅಮಿತ ಬಹುಮಾನಗಳನ್ನು ಕೊಟ್ಟು ಇಟ್ಟುಕೊಳ್ಳುವ ವಿಷಯದಲ್ಲಿ ಸ್ವಾಗತಾರ್ಹವಾದ ಒಂದು ಸ್ಪರ್ಧೆಯೇ ನಡೆದಂತೆ ಕಾಣುತ್ತದೆ. ಆದುದರಿಂದಲೇ ಸಮಗ್ರಭಾರತ ಖ್ಯಾತಿ ಪಡೆದು ಪ್ರಕಾಶಮಾನರಾಗಿದ್ದ ವಾದಿರಾಜ, ಬಿಲ್ಹಣ, ವಿಜ್ಞಾನೇಶ್ವರ ಮುಂತಾದವರು ಚಾಲುಕ್ಯರ ಆಸ್ಥಾನವನ್ನು ಅಲಂಕರಿಸಿದುದೂ ಸಂಸ್ಕೃತ ವಾಙ್ಮಯದ ಬೇರೆ ಬೇರೆ ಶಾಖೆಗಳಿಗೆ ಗಣನೀಯವಾಗಿ ಅವರಿಂದ ಕೊಡುಗೆಯಾದುದೂ ಕಂಡುಬರುತ್ತದೆ.

ಕ್ರಿ.ಶ. 1015ರಿಂದ 1042ವರೆಗೆ ರಾಜ್ಯಭಾರ ಮಾಡಿದ ಎರಡನೆ ಜಯಸಿಂಹನ (ಜಗದೇಕಮಲ್ಲನ) ಆಸ್ಥಾನದಲ್ಲಿದ್ದ ಜೈನನಾದ ವಾದಿರಾಜನು ಜೈನ ಸಂಸ್ಕೃತ ಲೇಖಕರ ತಾರಾಮಂಡಲದಲ್ಲಿ ಪ್ರಥಮಗಣ್ಯ ತಾರೆಯಾಗಿದ್ದನು. ಇವನು ಸಮಂತಭದ್ರ, ಅಕಳಂಕರಿಗೆ ಸಮಾನವಾದ ಸ್ಥಾನಕ್ಕೆ ಅರ್ಹನಾಗಿದ್ದನು. ಅವನ ಪ್ರತಿಭೆ ಕರ್ಣಾಟಕದಲ್ಲೆಲ್ಲ ಅನೇಕ ಶಾಸನಗಳಲ್ಲಿ (E.C. VIII 35–40, Belūr 117, etc.) ಯೋಗ್ಯ ರೀತಿಯಲ್ಲಿ ಹೊಗಳಿಕೆಗೆ ಪಾತ್ರವಾಗಿರುವುದಲ್ಲದೆ, ನಾಗವರ್ಮನ **ಕಾವ್ಯಾವಲೋಕನ** ಮತ್ತು ಶಾಂತಿನಾಥನ **ಸುಕುಮಾರಚರಿತ**-ಮುಂತಾದ ಸಾಹಿತ್ಯ ಗ್ರಂಥಗಳಲ್ಲಿಯೂ ಹೊಗಳಲ್ಪಟ್ಟಿದೆ. ಶ್ರವಣ ಬೆಳಗೊಳದಲ್ಲಿರುವ ಮಲ್ಲಿಸೇನ ಪ್ರಶಸ್ತಿಯ (12ನೆ ಶತಮಾನ) ಹಲವು ಶ್ಲೋಕಗಳಲ್ಲಿ ವಾದಿರಾಜನನ್ನು ಒಬ್ಬ ಅತ್ಯುತ್ತಮ ವಿದ್ವಾಂಸನೆಂದೂ ಸರ್ವದಾ ಜಯಶೀಲನಾಗುವ ವಾಗ್ಮಿಯೆಂದೂ ಹೊಗಳಿದೆ. ಅವುಗಳಲ್ಲಿ ಎರಡರ ಅನುವಾದಗಳನ್ನು ಇಲ್ಲಿ ಕೊಡಲಾಗಿದೆ.

"ಮೂರು ಲೋಕಗಳನ್ನೂ ಬೆಳಗಿದ ಮಾತು ಈ ಭೂಲೋಕದಲ್ಲಿ ಇಬ್ಬರಿಂದ ಮಾತ್ರ ಹೊರಬಿದ್ದಿದೆ: ಒಬ್ಬ ಜಿನರಾಜ, ಮತ್ತೊಬ್ಬ ವಾದಿರಾಜ."

"ವಾಗ್ದೇವಿಯ ಜನ್ಮಭೂಮಿಯಾದ, ಪ್ರಸಿದ್ಧ ಚಾಲುಕ್ಯ ಚಕ್ರವರ್ತಿಯ ಜಯಶಾಲಿ ರಾಜಧಾನಿಯಲ್ಲಿ ವಿಜಯಿಯಾದ ವಾದಿರಾಜನ ನಗಾರಿಯ ಧ್ವನಿ ಇದ್ದಕ್ಕಿದ್ದಂತೆ ಸಂಚರಿಸುತ್ತದೆ. ಅದರ ಖಂಡನ ಸಾಮರ್ಥ್ಯವು ವೃದ್ಧಿಯಾಗುತ್ತದೆಯೋ ಎಂಬಂತೆ, "ಜಹಿ" (ಹೊಡೆ) ಎಂಬ ಶಬ್ದವೂ 'ಜಹೀಹಿ' (ಬಿಡು) ಎಂಬ ಶಬ್ದವೂ ಸುಸ್ಪಷ್ಟವಾದ ಮೃದು ಮಧುರವಾದ ಸರಸಕವಿತೆಯೋ ಎಂಬಂತೆ ಎಲ್ಲ ಕಡೆಗೂ ಹರಡುತ್ತದೆ" (Hultzch ಅವರ ಅನುವಾದ E.I., III, P. 18).

ವಾದಿರಾಜನ ಅನೇಕ ಕೃತಿಗಳಲ್ಲಿ 4 ಸರ್ಗಗಳಿಂದ ಕೂಡಿದ ಸುಮಾರು 300 ಶ್ಲೋಕಗಳಿರುವ '**ಯಶೋಧರ ಚರಿತ**' ಎಂಬ ಚಿಕ್ಕ ಕಥಾ ಕಾವ್ಯವು 1912ರಲ್ಲಿ ತಂಜಾವೂರಿನಲ್ಲಿ ಪ್ರಕಾಶನಗೊಂಡಿದೆ. 12 ಸರ್ಗಗಳಿರುವ '**ಪಾರ್ಶ್ವನಾಥ ಚರಿತ**' ಎಂಬ ಸ್ವಲ್ಪ ದೊಡ್ಡ ಮಹಾಕಾವ್ಯ 1916ರಲ್ಲಿ ಬೊಂಬಾಯಿಯಲ್ಲಿ ಪ್ರಕಾಶಿತವಾಯಿತು. ಇವು ಜೈನ ವಿದ್ವಾಂಸರ ಪರಿಮಿತವಾದ ವಲಯದಲ್ಲಲ್ಲದೆ ಬೇರೆ ಕಡೆ

ಅಷ್ಟೊಂದು ಪ್ರಚಾರಕ್ಕೆ ಬಂದಿಲ್ಲ. ಬೌದ್ಧನಾದ ಧರ್ಮಕೀರ್ತಿಯ ಪ್ರಸಿದ್ಧವಾದ **ಪ್ರಮಾಣ ವಿನಿಶ್ಚಯದ** ಸರಣಿಯಲ್ಲೇ ರಚಿತವಾದ ಅಕಳಂಕನ ದಾರ್ಶನಿಕ ಮತ್ತು ತರ್ಕ ವಿಸ್ತಾರಗಳನ್ನೊಳಗೊಂಡಿರುವ ಪ್ರಮಾಣ ಭೂತವಾದ **ನ್ಯಾಯವಿನಿಶ್ಚಯಕ್ಕೆ** ವಿಸ್ತೃತ ವ್ಯಾಖ್ಯಾನ ರೂಪವಾಗಿರುವ 'ನ್ಯಾಯ ವಿನಿಶ್ಚಯ ಟೀಕಾ' ಎಂಬ ಇವನ ಅತ್ಯುತ್ತಮ ಕೃತಿ ಇದೀಗ ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ (ಕಾಶಿ-ಭಾರತೀಯ ಜ್ಞಾನ ಪೀಠದಿಂದ). ಈ ಸಂಪುಟಗಳ ಸಾಮಾನ್ಯ ಸಿಂಹಾವಲೋಕನ ಕೂಡ, ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ನಿಂದ ವಾದಿರಾಜನಿಗೆ ದೊರೆತ **'ಸತ್ತರ್ಕ ಷಣ್ಮುಖ'**, **'ಸ್ಯಾದ್ವಾದ ವಿದ್ಯಾಪತಿ'**, **'ಜಗದೇಕಮಲ್ಲವಾದಿ'**—ಎಂಬ ಬಿರುದುಗಳು ಅನ್ವರ್ಥವಾಗಿದ್ದುವೆಂದು ತೋರಿಸುವುದು. ವಾದಿರಾಜನು ಇಲ್ಲಿ ಭಾರತೀಯ ತತ್ತ್ವ ಶಾಸ್ತ್ರದ ಷಡ್ದರ್ಶನಗಳ ವಿಸ್ತಾರವಾದ ವಿಮರ್ಶೆಯನ್ನು ಕೊಡುತ್ತಾನೆ ; ಅನ್ಯಮತ ಪ್ರವರ್ತಕ ಬೌದ್ಧ ಧರ್ಮಕೀರ್ತಿಯ ವಿಚಾರಗಳನ್ನು ವ್ಯಾಖ್ಯಾನಿಸಿರುವ ಅರ್ಚಟ ಮತ್ತು ಧರ್ಮೋತ್ತರರ ಪ್ರತಿಪಾದನೆಗಳನ್ನೂ ಮೀಮಾಂಸಕರಾದ ಕುಮಾರಿಲಭಟ್ಟರನ್ನೂ ವೇದಾಂತಿಗಳಾದ ಶಂಕರ-ಮಂಡನ ಮಿಶ್ರರನ್ನೂ ಖಂಡಿಸುವ ಸಮರ್ಥ ದಾರ್ಶನಿಕನಾಗಿ ಕಾಣಿಸುತ್ತಾನೆ. ಇಲ್ಲಿ ನೂರಾರು ಕೃತಿಗಳ ಮತ್ತು ಲೇಖಕರ ಉಲ್ಲೇಖವಿದೆ. ಇವೆಲ್ಲವುಗಳ ಪರಿಪೂರ್ಣ ವಿಮರ್ಶೆಯನಂತರ ಜೈನರ ಸ್ಯಾದ್ವಾದವೇ ನಿರ್ದುಷ್ಟವಾದ ಆಧ್ಯಾತ್ಮಿಕ ತತ್ತ್ವ ವೆಂಬುದನ್ನು ವಾದಿರಾಜನು ಸ್ಥಾಪಿಸುತ್ತಾನೆ. ಅಷ್ಟೇನೂ ಪ್ರಚಾರದಲ್ಲಿಲ್ಲದ ಈ ಅದ್ಭುತ ಕೃತಿ ದಾರ್ಶ ನಿಕ ಭಾವನೆಗಳ ಚಿನ್ನದ ಗಣಿಯಾಗಿದೆ. ಈ ಬಗೆಗೆ ವಿದ್ವಾಂಸರುಗಳಿಂದ ವಿಮರ್ಶಾತ್ಮಕ ಅಧ್ಯಯನ ನಡೆಯಬೇಕಾಗಿದೆ. ವಾದಿರಾಜನ ತರ್ಕಶಾಸ್ತ್ರದ ಇನ್ನೊಂದು ಕೃತಿ **'ಪ್ರಮಾಣ ನಿರ್ಣಯ'** (ಬೊಂಬಾಯಿ ಯಲ್ಲಿ ಮುದ್ರಿತ-1917). ಇದು ವಿಭಿನ್ನವಾದ ಪ್ರಮಾಣಗಳ ವಿಷಯವನ್ನೊಳಗೊಂಡ ಸುಬೋಧ ಸಂಗ್ರಹ ಅಥವಾ ಕೈಪಿಡಿ.

ಕವಿಯಾಗಿ ಕೂಡ, ವಾದಿರಾಜನಿಗೆ ಅಗ್ರಸ್ಥಾನದ ಅರ್ಹತೆಯಿದೆ. ಅವನ **ಪಾರ್ಶ್ವನಾಥ ಚರಿತವು** ಗುಣಭದ್ರಾಚಾರ್ಯರ ಉತ್ತರ ಪುರಾಣದ ಆಧಾರದಿಂದ ರಚಿತವಾಗಿದ್ದು, ಜೈನ ತೀರ್ಥಂಕರನೊಬ್ಬನ ಧಾರ್ಮಿಕ ಜೀವನವನ್ನು ಚಿತ್ರಿಸುತ್ತದೆ. ಇದು ಸಾಂಪ್ರದಾಯಿಕ ಕವಿ ಸಮಯದ ಅಲಂಕಾರಗಳಿಂದಲೂ ದೀರ್ಘವಾದ ವರ್ಣನೆಗಳಿಂದಲೂ ಕೂಡಿದ ಮಹಾಕಾವ್ಯ. ಆದರೆ ಅವನ **'ಯಶೋಧರಚರಿತೆ'**ಯು ಸ್ಫೂರ್ತಿಭರಿತವಾ ದೊಂದು ಆಖ್ಯಾಯಿಕೆ. ದೌಷ್ಟ್ಯಕ್ಕೆ ಎಡೆಗೊಡುವ ಸ್ತ್ರೀಯ ದೌರ್ಬಲ್ಯವನ್ನೂ ಪಾಪದ ಫಲವನ್ನೂ ಸುಂದರವಾಗಿ ಚಿತ್ರಿಸುವ ಕಥಾನಕವುಳ್ಳ ಮಧುರವಾದ ಪದ್ಯಗಳಿಂದ ಇದು ಕೂಡಿದೆ. ಸಂಸ್ಕೃತ ಸಾಹಿತ್ಯದ ಸಾಮಾನ್ಯವಾದ ಶೃಂಗಾರ ಕಾವ್ಯಗಳಂತೆ ಸುಖಾಂತವೂ ರೋಮಾಂಚಕವೂ ಆದ ಪ್ರೇಮಕ್ಕೆ ಬದಲಾಗಿ, ಒಂದು ಸಂಸಾರದ ದುರಂತವನ್ನು ನಿರೂಪಿಸುವ ವಾಸ್ತವ ಕಥೆಯೊಂದನ್ನು ಇಲ್ಲಿ ನಾವು ಕಾಣುತ್ತೇವೆ. ಹೆಂಗಸಿನ ಚಿತ್ತ ಚಾಂಚಲ್ಯದಿಂದ ಶಾಂತಿಗೆಟ್ಟು ಹೋದ ಮನಸ್ಸಿನ ಜಿಜ್ಞಾಸುಗಳಿಗೆ ತತ್ತ್ವಜ್ಞಾನವುಂಟಾಗುವ ವರೆಗೆ, ಅವರೆಲ್ಲರನ್ನು ಒಂದಾದ ಮೇಲೊಂದರಂತೆ ಪುನರ್ಜನ್ಮಗಳ ದುಃಖದಲ್ಲಿ ಮುಳುಗಿಸುವುದನ್ನು ಕಾಣುತ್ತೇವೆ. ಸಾಮಾನ್ಯ ಜನರ ಹಿಂಸಾತ್ಮಕವಾದ ಪೂಜೆಯನ್ನೂ ಯಾಜ್ಞಿಕರ ಪ್ರಾಣಿಹಿಂಸಾತ್ಮಕವಾದ ಯಜ್ಞ-ಯಾಗಾದಿಗಳನ್ನೂ ದೂಷಿಸುವ ವಿಡಂಬನ ಮನೋಭಾವವನ್ನೂ ಇಲ್ಲಿ ಕಾಣಬಹುದು. ಅಜ್ಞಾತ ಲೇಖಕ ನಿಂದ ರಚಿತವಾದ ತಮಿಳಿನ **ಯಶೋಧರಕಾವ್ಯವೂ** (ಕ್ರಿ.ಶ. ಸುಮಾರು 11ನೆ ಶತಮಾನ) ಜನ್ನಕವಿ ವಿರಚಿತ ಕನ್ನಡ **ಯಶೋಧರಚರಿತವೂ** (ಕ್ರಿ.ಶ. 1209) ವಾದಿರಾಜನ ಸಂಸ್ಕೃತ ಮೂಲಕ್ಕೆ ವಿಶೇಷ ಋಣಿ ಗಳಾಗಿವೆ.

**ಪಾರ್ಶ್ವನಾಥ ಚರಿತದಲ್ಲಿ** ಅದನ್ನು ಬರೆದುದು ಕ್ರಿ.ಶ. 1026ರಲ್ಲಿ ಎಂದೂ ಬರೆದ ಸ್ಥಳ 'ಕಟ್ಟಗಾ ತೀರ' ಅಥವಾ ಘಟಪ್ರಭಾ ನದೀತೀರವೆಂದೂ ಹೇಳಿದೆ. ಇದೂ ಅನಂತಕೀರ್ತಿ ಮತ್ತು ವೀರನಂದಿ ಮೊದಲಾದ ಅನೇಕ ಹಿಂದಿನ ಗ್ರಂಥಕರ್ತರ ವಿಷಯವಾಗಿ ವಾದಿರಾಜನ ನಿರ್ದಿಷ್ಟವಾದ ಉಲ್ಲೇಖಗಳೂ ಸಂಸ್ಕೃತ ಸಾಹಿತ್ಯಚರಿತ್ರಕಾರರಿಗೆ ಅತ್ಯಮೂಲ್ಯವಾಗಿವೆ.

ಇಂದಿನ ವರೆಗೂ ಜೈನರಲ್ಲಿ ಅತ್ಯಂತ ಜನಪ್ರಿಯವಾಗಿರುವ '**ಏಕೀಭಾವಸ್ತೋತ್ರ**'ವು ವಾದಿರಾಜನ ಲೇಖನಿಯಿಂದಲೇ ಹೊರಹೊಮ್ಮಿದುದು. ಇದರಲ್ಲಿ ಭಕ್ತಿಪೂರ್ಣವಾದ 25 ಸುಂದರ ಶ್ಲೋಕಗಳಿವೆ. ಇದು ಲೇಖಕನ ಪ್ರಶಂಸೆಯಲ್ಲಿ ಕೊನೆಗೊಳ್ಳುತ್ತದೆ.

ಆದರೆ 'ವಾದಿರುದ್ರಗಣ' ಎಂಬ ಮತ್ತೊಂದು ಹೆಸರುಳ್ಳ ಲಕುಲೀಶ ಪಂಡಿತನೆಂಬ ಬಳ್ಳಿಗಾವೆಯ (ಬನವಾಸಿ 12,000 ಪ್ರಾಂತ) ಕಾಳಾಮುಖ ಶೈವಗುರುವೊಬ್ಬನು ವಾದಿಶ್ರೇಷ್ಠನಾದ ವಾದಿರಾಜನನ್ನೇ ಸೋಲಿಸಿದನೆಂದು ('ವಾದಿರಾಜ ಮುಖಮುದ್ರಂ') ಕ್ರಿ.ಶ. 1036ರ ಒಂದು ಶಾಸನದಲ್ಲಿ (E.C. Vol. I No. 126) ವಿಶೇಷವಾಗಿ ಬಣ್ಣಿಸಲಾಗಿದೆ–ಇದು ಈ ಸಂದರ್ಭದಲ್ಲಿ ಗಮನಿಸತಕ್ಕ ಸಂಗತಿ. ಜಗದೇಕಮಲ್ಲನಿಗೆ ಜೈನಮತದಲ್ಲಿ ವಿಶೇಷವಾದ ಆದರವಿದ್ದರೂ ತನ್ನ ರಾಜ್ಯದಲ್ಲಿ ಪ್ರಚಾರದಲ್ಲಿದ್ದ ಉಳಿದ ಮತಗಳ ವಿಷಯದಲ್ಲಿ ಅವನಿಗಿದ್ದ ಸಹಿಷ್ಣುತೆಗೆ ಇದು ಸೂಚಕವಾಗಿದೆ.

ಕನ್ನಡದಲ್ಲಿ ಪ್ರಖ್ಯಾತ ಕವಿಯಾಗಿರುವ 2ನೆ ನಾಗವರ್ಮನು ಜಗದೇಕಮಲ್ಲನ ಆಸ್ಥಾನದಲ್ಲಿ ಕಟಕೋಪಾಧ್ಯಾಯ ಅಥವಾ ಪಂಡಿತನಾಗಿದ್ದನೆಂದು ತಿಳಿದುಬರುತ್ತದೆ. ಕ್ಷೇಮಪುರ ಅಥವಾ ಗೇರುಸೊಪ್ಪೆಯ ಲಕ್ಷ್ಮಣ ವಿರಚಿತವಾದ **ಯಶೋಧರಚರಿತ ವ್ಯಾಖ್ಯಾನ**ದಲ್ಲಿ ಈಗ ಕಳೆದುಹೋಗಿರುವ ನಾಗವರ್ಮನ ಸಂಸ್ಕೃತ ಕೋಶಗ್ರಂಥವೊಂದರಿಂದ (ಗ್ರಂಥದ ಹೆಸರು ಉಕ್ತವಾಗಿಲ್ಲ) ಕೆಲವು ಭಾಗಗಳು ಉದ್ಧೃತವಾಗಿವೆ. ಈ ಕೃತಿಯು ಪ್ರಾಯಶಃ ಈ ಕಾಲದಲ್ಲಿಯೇ ರಚಿತವಾಗಿರಬೇಕು.

ಮತಿಸಾಗರನ ಶಿಷ್ಯನೂ ವಾದಿರಾಜನ ಸಹಾಧ್ಯಾಯಿಯೂ ಆದ ದಯಪಾಲನು **ಶಾಕಟಾಯನ ವ್ಯಾಕರಣ** ವಿಷಯಗಳನ್ನೊಳಗೊಂಡ '**ರೂಪಸಿದ್ಧಿ**' ಎಂದು ಪ್ರಸಿದ್ಧವಾದ ಅತ್ಯುಪಯುಕ್ತವಾದ ಪರಿಷ್ಕೃತ ಕೈಪಿಡಿಯೊಂದನ್ನು ತಯಾರಿಸಿದನು. ಅನೇಕ ಕನ್ನಡ ಶಾಸನಗಳಲ್ಲಿ ಈ ಕೃತಿ ವಿಶೇಷವಾಗಿ ಕೊಂಡಾಡಲ್ಪಟ್ಟಿದೆ (E.C. Vol, VIII ; Nos. :35,36,37, etc). ಒಂದೇ ಒಂದು ಶ್ಲೋಕವನ್ನು ಇಲ್ಲಿ ಉಲ್ಲೇಖಿಸಲಾಗಿದೆ :

> ಶಬ್ದಾನುಶಾಸನಸ್ಯೋಚ್ಚೈಃ ರೂಪಸಿದ್ಧಿರ್ಮಹಾತ್ಮನಾ
> ಕೃತಾ ಯೇನ ಸ ಚಾಭಾತಿ ದಯಪಾಲೋ ಮುನೀಶ್ವರಃ ॥ (E.C. VII. I, 39)

[ಮುನಿಶ್ರೇಷ್ಠನಾದ ದಯಪಾಲನಿಂದ ರಚಿತವಾದ 'ರೂಪಸಿದ್ಧಿ' ಎಂಬ ಕೃತಿಯು ಶಬ್ದಾನು ಶಾಸನಕ್ಕಿಂತಲೂ ಹೆಚ್ಚಾಗಿ ಪ್ರಕಾಶಿಸುತ್ತದೆ.]

ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನು ತನ್ನನ್ನು '**ವಿಕ್ರಮಾಂಕದೇವ ಚರಿತ**' ವೆಂಬ ಮಹಾಕಾವ್ಯದಿಂದ ಅಮರನನ್ನಾಗಿಸಿದ ಕಾಶ್ಮೀರದ ಬಿಲ್ಹಣನೆಂಬ ಕವಿಗೆ ಆಶ್ರಯ ಕೊಟ್ಟಿದ್ದನು. ಬಾಣನು ರಾಜನಾದ ಹರ್ಷನಿಗೆ ತನ್ನ ಗದ್ಯಕಾವ್ಯದಿಂದ ಮಾಡಿದ ಉಪಕಾರವನ್ನೆ ಬಿಲ್ಹಣನು 6ನೆ ವಿಕ್ರಮಾದಿತ್ಯನಿಗೆ ತನ್ನ ಪದ್ಯಕಾವ್ಯದಿಂದ ಮಾಡಿದನು. ಚಾರಿತ್ರಿಕ ಕೊರತೆಯುಳ್ಳ ಸಂಸ್ಕೃತಸಾಹಿತ್ಯದಲ್ಲಿ ಚಾರಿತ್ರಿಕ ವ್ಯಕ್ತಿಯೊಬ್ಬನನ್ನು ನಾಯಕನನ್ನಾಗಿ ಉಳ್ಳ ವಿಕ್ರಮಾಂಕದೇವಚರಿತವು ಗಣನೀಯ ಕೃತಿಗಳಲ್ಲಿ ಒಂದಾಗಿದೆ. ಇದರಲ್ಲಿ 18 ಸರ್ಗಗಳಿವೆ. ಇದರಲ್ಲಿ ಪೌರಾಣಿಕ ಕಥೆಗಳಿಗೂ ಅತಿಶಯೋಕ್ತಿಗಳಿಗೂ ಪ್ರಾಚುರ್ಯವಿದ್ದರೂ ಇಂದಿಗೂ ಇದು ಚರಿತ್ರಕಾರರ ಹಾಗೂ ಸಾಹಿತ್ಯವಿಮರ್ಶಕರ ಗಮನವನ್ನು ಒಂದೇರೀತಿ ಸೆಳೆಯುತ್ತಿದೆ. ಈ ಕೃತಿಯು ಲೇಖಕನಾದ ಬಿಲ್ಹಣನ ವಿಶದವಾದ ಆತ್ಮಚರಿತ್ರೆಯನ್ನು ಒದಗಿಸುವುದರಿಂದಲೂ ಸ್ವಾರಸ್ಯಪೂರ್ಣವಾಗಿದೆ. ತನ್ನ ಕಲೆಯ ಬಗ್ಗೆ ಅಭಿಮಾನ ತಳೆದು, ತನ್ನ ಗೌರವದ ಬಗ್ಗೆ ಭರವಸೆಯುಳ್ಳದಿದ್ದು, ಒಬ

ರಾಜನ ಆಸ್ಥಾನದಿಂದ ಮತ್ತೊಬ್ಬ ರಾಜನ ಆಸ್ಥಾನಕ್ಕೆ ಸಂಚರಿಸುತ್ತಿರುವ ಮಧ್ಯಕಾಲದ ಭಾರತದ ಪಂಡಿತನೊಬ್ಬನ ಜೀವನ ಚರಿತ್ರೆಯನ್ನು ವಿಶದವಾಗಿ ತಿಳಿಯಲು ಇದು ಸಹಾಯಕವಾಗಿದೆ. ತನ್ನ ಸುಂದರ ಕಾಶ್ಮೀರಧಾಮದ ವಿಷಯವಾಗಿರುವ ಬಿಲ್ಹಣನ ಸವಿನೆನಪುಗಳು ನಿಜವಾಗಿಯೂ ರಮ್ಯವಾಗಿವೆ :—

"ಆ ಪ್ರದೇಶದ ವಿಷಯವನ್ನು ಏನೆಂದು ಬಣ್ಣಿಸಲಿ! ಆಶ್ಚರ್ಯಕರ ಕಥೆಗಳ ಹಳೆಯ ಬೀಡಿದು. ಹಿಮಾಲಯ ಪರ್ವತದ ವಕ್ಷಸ್ಥಲದ ಲೀಲಾ ಅಲಂಕಾರವಿದು. ಒಂದು ಭಾಗವು ಸ್ವಾಭಾವಿಕ ಸೌಂದರ್ಯದಿಂದ ತುಂಬಿದ ಕೇಸರ ಪುಷ್ಪಗಳಿಂದ ಕೂಡಿದೆ. ಮತ್ತೊಂದು ಭಾಗವು ಸರಯೂ ನದೀತೀರದ ರಸಭರಿತವಾದ ಕಬ್ಬಿನ ತುಂಡಿನಂತೆ ಬಿಳುಪಾಗಿರುವ ದ್ರಾಕ್ಷೆಯ ಹಣ್ಣುಗಳಿಂದ ಕೂಡಿದೆ" (18–72).

ಬಿಲ್ಹಣನು ವಿದ್ಯೆಗೆ ತವರುಮನೆಯೆನಿಸಿದ (ಶಾರದಾದೇಶ) ಕಾಶ್ಮೀರದಲ್ಲಿ ಕಾವ್ಯತತ್ವ ಮತ್ತು ಇತರ ಶ್ರೇಷ್ಠಶಾಸ್ತ್ರಗಳ ಜ್ಞಾನವೆಂಬ ಚಿಲುಮೆಯಲ್ಲಿ ಮನಃಪೂರ್ತಿಯಾಗಿ ಪಾನಮಾಡಿದನು. ಕನ್ಯಾಕುಬ್ಜ, ಕಾಶಿ, ಪ್ರಯಾಗ, ಅಯೋಧ್ಯೆ—ಮುಂತಾದ ಉತ್ತರದೇಶದ ಪಟ್ಟಣಗಳಲ್ಲೂ ಪಶ್ಚಿಮದ ಸೋಮನಾಥ, ದಕ್ಷಿಣದ ಗೋಕರ್ಣಗಳಲ್ಲೂ ಸಂಚರಿಸಿ, ಭಾರತದೇಶದ ಎಲ್ಲ ಭಾಗಗಳಲ್ಲಿಯೂ ಪ್ರಯಾಣಮಾಡಿದನು. ಕವಿಯ ಮಾತುಗಳಲ್ಲೇ ಹೇಳುವುದಾದರೆ, 'ಧಾರಾನಗರಿ ಇಂತಹ ಮಹಾಕವಿಯನ್ನು ಸ್ವಾಗತಿಸುವ ಭಾಗ್ಯವನ್ನು ಕಳೆದುಕೊಂಡು ದುಃಖಿಸಿತು'. ಏಕೆಂದರೆ, ಅತ್ಯುದಾರಿಯಾದ ಭೋಜರಾಜನು ಆಗ ತಾನೇ ಕಾಲವಾಗಿದ್ದನು. ಕವಿ ಹೀಗೆ ಮುಂದುವರಿಸಿದ್ದಾನೆ :—

"ಹಳ್ಳಿಗಳಲ್ಲಿ, ಪ್ರಾಂತಗಳ ನಗರಗಳಲ್ಲಿ, ರಾಜಧಾನಿಗಳಲ್ಲಿ, ವನಗಳಲ್ಲಿ, ತೋಪುಗಳಲ್ಲಿ, ಸರಸತಿಗೆ ಪವಿತ್ರವಾದ ಎಲ್ಲ ಭೂಭಾಗಗಳಲ್ಲಿ, ಪಂಡಿತರು ಪಾಮರರೆನ್ನದೆ, ಮುದುಕರು ಜವ್ವನಿಗರೆನ್ನದೆ, ಗಂಡಸರು ಹೆಂಗಸರೆನ್ನದೆ, ಎಲ್ಲ ಕಡೆ ಎಲ್ಲರೂ ಅವನ ಶ್ಲೋಕಗಳನ್ನು ಆನಂದಪುಲಕಿತರಾಗಿ ಹಾಡುತ್ತಾರೆ" (18–89).

ಬಿಲ್ಹಣನಿಗೆ ತನ್ನ ಆದರ್ಶಕ್ಕೆ ಅನುಗುಣವಾದ ಆಶ್ರಯದಾತನೊಬ್ಬನು ದೊರೆತುದು ಕರ್ಣಾಟಕದಲ್ಲಿ ಮಾತ್ರ. ಕರ್ಣಾಟಕ ಚಕ್ರವರ್ತಿ **ವಿಕ್ರಮಾದಿತ್ಯನೇ** ಆತ. ಆತನು ಭೋಜರಾಜನಿಗಿಂತ ಹೆಚ್ಚಿನ ಉದಾರಿ. ಕವಿ ಹೀಗೆನ್ನುತ್ತಾನೆ :—

"ಮೇಧಾವಿಗಳಲ್ಲಿ ಅಗ್ರಗಣ್ಯನಾದ ಬಿಲ್ಹಣನು ಸಾಮಾನ್ಯ ದೊರೆಗಳನ್ನು ನಿರ್ಲಕ್ಷಿಸಿ, ಅತಿ ಕುತೂಹಲದಿಂದ ದಕ್ಷಿಣ ದೇಶದಲ್ಲಿ ವಿರಾಮವಾಗಿ ಸಂಚರಿಸಿದನು. ಭಾಗ್ಯಶಾಲಿಯಾದ ಕವಿ ಅಲ್ಲಿ ಚೋಳರಿಗೆ ಭಯಂಕರನಾದ ಚಾಲುಕ್ಯರಾಜನಿಂದ "**ವಿದ್ಯಾಪತಿ**" (ಪ್ರಮುಖಪಂಡಿತ) ಎಂಬ ಗೌರವವನ್ನು ಪಡೆದನು. ಅಲ್ಲದೆ, ದೊರೆಯಿಂದ ನೀಲಚ್ಛತ್ರ ಮತ್ತು ಗಜಗಳನ್ನೂ ಗೌರವರೂಪದಲ್ಲಿ ಪಡೆದುಕೊಂಡನು" (18–100).

ಕೇವಲ ಕೃತಜ್ಞತೆಯಿಂದಲೆ ಬಿಲ್ಹಣನು ತನ್ನ ಆಶ್ರಯದಾತನ ಜೀವನ ಚರಿತ್ರೆಯನ್ನು ರಸಭರಿತವೂ ಮೃದುಮಧುರವೂ ಆದ ಶ್ಲೋಕಗಳಲ್ಲಿ ಬರೆದಿದ್ದಾನೆ. ರಾಜನನ್ನು ಅತ್ಯುತ್ಕೃಷ್ಟ ಕಾವ್ಯನಾಯಕನನ್ನಾಗಿ, ರಾಮ–ಭೀಮರಿಗೆ ಸಮನನ್ನಾಗಿ, ನೂರಾರು ಯುದ್ಧಗಳ ವಿಜಯಿ ನಾಯಕನನ್ನಾಗಿ, ಅನೇಕ ಮಹಿಷಿಯರ ಮದನನನ್ನಾಗಿ, ಸಾಕ್ಷಾತ್ ಶಿವನ ಅನುಗ್ರಹಕ್ಕೆ ಪಾತ್ರನನ್ನಾಗಿ ಚಿತ್ರಿಸಿದ್ದಾನೆ.

ವಿಕ್ರಮಾಂಕದೇವಚರಿತವು ಅತ್ಯುತ್ತಮವಾದ ಒಂದು **ಮಹಾಕಾವ್ಯ**. ಬಿಲ್ಹಣನ ಶೈಲಿಯು ಸೊಬಗಿನಲ್ಲಿ, ಸರಳತೆಯಲ್ಲಿ, ಭಾವಸೌಂದರ್ಯದಲ್ಲಿ, ಪ್ರತಿಮೆಗಳ ಔಚಿತ್ಯದಲ್ಲಿ, ರಸಪರಿಪೋಷಣೆಯಲ್ಲಿ,

ಧ್ವನಿಸಂಪತ್ತಿನಲ್ಲಿ ಕಾಳಿದಾಸನಷ್ಟೇ ಸಿದ್ಧಿಯನ್ನು ಸಂಪಾದಿಸಿದೆ. ಮಹಾಕಾವ್ಯದ ರೀತಿಯಲ್ಲಿಯೇ ಇಲ್ಲಿ ಋತುಗಳ ಮತ್ತು ರಾಜಕ್ರೀಡೆಗಳ ವರ್ಣನೆ ಇದೆ. ಇದಲ್ಲದೆ, ಕರಹಾಟದ ರಾಜಕುಮಾರಿ, ರಾಜರ ಸಭೆಯಲ್ಲಿ ಈ ಕಾವ್ಯನಾಯಕನನ್ನು ವರಿಸಿದ ಸ್ವಯಂವರ ದೃಶ್ಯವನ್ನೂ ನಾವಿಲ್ಲಿ ಕಾಣುತ್ತೇವೆ.

ವಿಕ್ರಮಾಂಕದೇವಚರಿತದಿಂದಲೇ ಆರಿಸಿಕೊಳ್ಳಬಹುದಾದ ಕೆಲವು ಗಮನಾರ್ಹವಾದ ಚಾರಿತ್ರಿಕ ವಿಷಯಗಳನ್ನು ನಾವಿಲ್ಲಿ ನಿರ್ದೇಶಿಸಬಹುದು. ಈ ಕೃತಿ ಪುರಾಣೋಕ್ತವಾದ ಚಾಲುಕ್ಯವಂಶದ ಮೂಲ ವಿವರಣೆಯಿಂದ ಪ್ರಾರಂಭವಾಗುತ್ತದೆ. ಅತಿ ಬಲಶಾಲಿಗಳಾದ ರಾಷ್ಟ್ರಕೂಟ ದೊರೆಗಳಿಂದ ರಾಜ್ಯವನ್ನು ಸೆಳೆದುಕೊಂಡ ತೈಲಪನನ್ನು ವಿಶೇಷವಾಗಿ ಕೊಂಡಾಡುತ್ತದೆ. ಎರಡನೆಯ ಜಯಸಿಂಹನ ಮತ್ತು ಇನ್ನೂ ಅನೇಕರ ಕೇವಲ ನಾಮನಿರ್ದೇಶವಿದೆ. ಆದರೆ, ಕಥಾನಾಯಕನ ತಂದೆಯಾದ ಆಹವಮಲ್ಲನ (ಕ್ರಿ.ಶ. 1040–1079) ಸುದೀರ್ಘ ವರ್ಣನೆಯಿದೆ. ಅವನು ಚೋಳರನ್ನು ಜಯಿಸಿದ್ದಾಗಿಯೂ ಧಾರಾನಗರವನ್ನು ಮುತ್ತಿದುದರಿಂದ ಭೋಜರಾಜನು (ಪರಮಾರ ರಾಜ) ಪಲಾಯನ ಮಾಡಬೇಕಾಗಿ ಬಂದುದಾಗಿಯೂ ತಿಳಿಸುತ್ತದೆ (1ನೆ ಸರ್ಗ, 91–96). ಅವನು ದಾಹಲದ ದೊರೆಯಾದ ಕರ್ಣನ ಶಕ್ತಿಯನ್ನು ಕೆಡಿಸಿದನು. (1ನೆ ಸರ್ಗ, 102). ಕಂಚಿಗೆ ಮುತ್ತಿಗೆಹಾಕಿ, ದಕ್ಷಿಣ ಸಮುದ್ರದಲ್ಲಿ ಒಂದು ವಿಜಯಸ್ತಂಭವನ್ನು ನಿಲ್ಲಿಸಿದನು (1ನೆ ಸರ್ಗ, 111) ; ಮತ್ತು ಕಲ್ಯಾಣ ಪಟ್ಟಣವನ್ನು ನಿರ್ಮಿಸಿದನು.

ಚೋಳರ ದೊರೆ, ವೆಂಗಿ ರಾಜನಾದ ರಾಜಿಗ, ಕೇರಳ ಮತ್ತು ಚಕ್ರಕೋಟಗಳ ರಾಜ—ಇವರೊಡನೆ ನಡೆದ ಕದನಗಳಲ್ಲಿ ರಾಜಾ ವಿಕ್ರಮಾದಿತ್ಯನು ಗಳಿಸಿದ ವಿಜಯಗಳು ಈ ಕಾವ್ಯದಲ್ಲಿ ಪ್ರಮುಖವಾಗಿ ವರ್ಣಿತವಾಗಿವೆ.

ಬಿಲ್ಹಣನ ಲೇಖನಿಯಿಂದಲೇ ಹೊರಹೊಮ್ಮಿರುವ ಅತಿ ಜನಪ್ರಿಯವಾದ ಸಂಸ್ಕೃತ ಕೃತಿ—ಶೃಂಗಾರ ರಸಭರಿತವಾದ 50 ಸುಂದರ ಪದ್ಯಗಳಿರುವ '**ಚೌರಪಂಚಾಶಿಕ**' ಅಥವಾ '**ಬಿಲ್ಹಣಕಾವ್ಯ**'. ಒಬ್ಬ ಪ್ರೇಮಿಯು ತನ್ನ ಪ್ರಿಯತಮೆಯ ಸಾನ್ನಿಧ್ಯದಲ್ಲಿ ಅನುಭವಿಸಿದ ಸುಖಗಳ ಸವಿನೆನಪುಗಳು ಇಲ್ಲಿ ಶೃಂಗಾರ ರಂಜಿತವಾಗಿ ಪ್ರವಹಿಸುತ್ತವೆ. ಸಾಮಾನ್ಯವಾಗಿ ಪ್ರತಿಯೊಂದು ಶ್ಲೋಕದಲ್ಲಿಯೂ 'ಈಗಲೂ ನಾ ನೆನೆಯುತಿಹೆನು' ಎಂಬ ಪಲ್ಲವಿ ಕಾಣಬರುವುದು. ಪ್ರತಿಯೊಂದು ಶ್ಲೋಕವೂ ಅವನ ಪ್ರಿಯತಮೆಯ ಸೌಂದರ್ಯದ ಒಂದಲ್ಲ ಒಂದು ವೈಖರಿಯನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಪ್ರಾಯಶಃ ಈಚಿನ ಲೇಖಕನೊಬ್ಬನು ಇದಕ್ಕೆ ಪೀಠಿಕಾರೂಪವಾಗಿ ಸೇರಿಸಿರಬಹುದಾದ, ಇದರ ಉತ್ಪತ್ತಿ ಕಾರಣವನ್ನು ತಿಳಿಸುವ, ಒಂದು ರೋಮಾಂಚಕಾರಿ ಕಥೆಯನ್ನೂ ನಾವು ಕಾಣುತ್ತೇವೆ :

ಗುಜರಾತಿನ ದೊರೆಯಾದ ವೈರಿಸಿಂಹನ ಮಗಳಾದ '**ಶಶಿಕಲಾ**' ಅಥವಾ '**ಚಂದ್ರಲೇಖೆ**' ಎಂಬ ರಾಜಕುಮಾರಿಗೆ ಬಿಲ್ಹಣನು ಉಪಾಧ್ಯಾಯನಾಗಿದ್ದುದಾಗಿ ಚಿತ್ರಿಸಲ್ಪಟ್ಟಿದ್ದಾನೆ. ಉಪಾಧ್ಯಾಯನಿಗೂ ಸುಂದರಿಯಾದ ವಿದ್ಯಾರ್ಥಿನಿಗೂ ಪ್ರಣಯಸಮಾಗಮವುಂಟಾಯಿತು. ಆದರಿಂದ ಕುಪಿತನಾದ ಆಕೆಯ ತಂದೆ ಕವಿಯನ್ನು ಮರಣದಂಡನೆಗೆ ಗುರಿಪಡಿಸಿದನು. ವಧ್ಯಸ್ಥಾನಕ್ಕೆ ಹೋಗುತ್ತಿರುವಾಗ, ಪ್ರೇಮಭಾವದಲ್ಲೆ ಮುಳುಗಿದ್ದ ಕವಿ ದಾರಿಯಲ್ಲೇ ಈ ಶ್ಲೋಕಗಳನ್ನು ರಚಿಸಿ ಹೇಳಿದ್ದಾಗಿ ಕಾಣುತ್ತದೆ. ಇವನ್ನು ಕೇಳಿ ಕನಿಕರಗೊಂಡ ರಾಜನು ಕವಿಯ ಜೀವವನ್ನು ಉಳಿಸಿದ್ದಾಗಿಯೂ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದ್ದಾಗಿಯೂ ತೋರುತ್ತದೆ. ಈ ಕಥೆಯ ಐತಿಹಾಸಿಕ ಸಮರ್ಥನೆ ದುಸ್ಸಾಧ್ಯ.

ಇಂದಿನ ವರೆಗೂ ಭಾರತೀಯರ ಅನೇಕ ತಲೆಮಾರು ಜೀವನವನ್ನು ರೂಪಿಸಿದ ವಿಜ್ಞಾನೇಶ್ವರನ '**ಮಿತಾಕ್ಷರ**' ಎಂಬ ಮತ್ತೊಂದು ಉತ್ತಮವಾದ ಪ್ರಮಾಣಕೃತಿ ಈ ಪರಾಕ್ರಮಿ ಚಾಲುಕ್ಯಚಕ್ರವರ್ತಿಯ

ಆಶ್ರಯದಲ್ಲಿಯೇ ರಚಿತವಾಯಿತು. ನಿಸ್ಸಂದೇಹವಾಗಿ ಇದು ಪ್ರಾಚೀನವಾದ ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನವೇ ಆಗಿದೆ. ಆದರೂ ಇದು ವ್ಯಾಖ್ಯಾನ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಾದುದು ಹೌದು! ಇದು ಎಲ್ಲ ಪ್ರಾಚೀನ ಸ್ಮೃತಿಗಳ ಸಂಗ್ರಹದಂತೆ ಇದೆ. "ವಿಜ್ಞಾನೇಶ್ವರನ **ಮಿತಾಕ್ಷರವು** ಧರ್ಮಶಾಸ್ತ್ರ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ವ್ಯಾಕರಣದಲ್ಲಿ ಪತಂಜಲಿಯ **ಮಹಾಭಾಷ್ಯ**ಕ್ಕಿರುವ ಸ್ಥಾನಕ್ಕೂ ಅಲಂಕಾರಶಾಸ್ತ್ರದಲ್ಲಿ ಮಮ್ಮಟನ **ಕಾವ್ಯಪ್ರಕಾಶ**ಕ್ಕಿರುವ ಸ್ಥಾನಕ್ಕೂ ಇದು ಸರಿಹೋಲುತ್ತದೆ. ಅದಕ್ಕಿಂತ ಎರಡು ಸಾವಿರ ವರ್ಷಗಳ ಹಿಂದಿನ ವರೆಗೆ ಇದ್ದ ಧರ್ಮಶಾಸ್ತ್ರಕಲ್ಪನೆಯ ಸಾರವಿದು. ಇದು ಅನೇಕ ವ್ಯಾಖ್ಯಾನಗಳು ಮತ್ತು ವಿವರಣೆಗಳೆಂಬ ಹೊರ ಪ್ರವಾಹಕ್ಕೆ ಮೂಲವಾದ ಚಿಲುಮೆಯಾಯಿತು. ದತ್ತು ತೆಗೆದುಕೊಳ್ಳುವುದು, ಸ್ವತ್ತು, ಆಸ್ತಿವಿಭಾಗ-ಮುಂತಾದ ಹಿಂದೂ ನ್ಯಾಯಾಂಗಗಳ ವಿಷಯದಲ್ಲಿ ಬ್ರಿಟಿಷರ ಆಳಿಕೆಗೆ ಒಳಪಟ್ಟಿದ್ದ ಭಾರತದಲ್ಲಿ ಯಾವುದೇ ತೀರ್ಮಾನ ಕೈಕೊಳ್ಳಬೇಕಾದರೂ ಮಿತಾಕ್ಷರವು ಅತ್ಯುತ್ತಮ ಆಧಾರವಾಗಿದ್ದಿತು"—ಎಂಬ ಡಾ॥ ಪಿ. ವಿ. ಕಾಣೆಯವರ ಮಾತು ಯುಕ್ತವೇ ಆಗಿದೆ (History of Dharmasastra by P. V. Kane, p. 287).

ಕಾಯಿದೆಗೆ ಸಂಬಂಧಪಟ್ಟ ವಿಷಯಗಳಲ್ಲಿ, ಲೇಖಕನು ಅನುಸ್ಯೂತವಾದ ಮತ್ತು ನಿಖರವಾದ ಶೈಲಿಯಲ್ಲಿ ಅನುಸರಿಸುವ ಕ್ರಮಬದ್ಧವಾದ ರೀತಿಯನ್ನೂ ನೀತಿಶಾಸ್ತ್ರದಲ್ಲಿ ಅವನಿಗಿರುವ ವಿಸ್ತಾರವಾದ ಪಾಂಡಿತ್ಯವನ್ನೂ ತರ್ಕಬದ್ಧವಾದ ಅವನ ತೀಕ್ಷ್ಣಬುದ್ಧಿಯನ್ನೂ ನೋಡಿದಾಗ, ಮುಂದಿನ ಶತಮಾನಗಳಲ್ಲಿ ಇದಕ್ಕೆ ಕೊಟ್ಟ ಪ್ರಾಮಾಣ್ಯವನ್ನು ನೋಡಿ ಯಾರೂ ಅಚ್ಚರಿಪಡಬೇಕಾಗಿಲ್ಲ.

ಸ್ವಲ್ಪ ಅತಿಶಯೋಕ್ತಿ ಇದ್ದರೂ ಯಥಾರ್ಥವಾಗಿ ಸರ್ವಜ್ಞನೆಂಬ ಬಿರುದನ್ನು ಪಡೆದಿದ್ದ, ವಿಕ್ರಮಾದಿತ್ಯನ ಮಗನಾದ 3ನೆ ಸೋಮೇಶ್ವರನ (ಕ್ರಿ.ಶ. 1127–1138) ರಾಜ್ಯಭಾರಕ್ಕೆ ಈಗ ನಾವು ಬರುತ್ತೇವೆ. ಸಂಸ್ಕೃತ ಸಾಹಿತ್ಯದಲ್ಲೇ ಪ್ರಥಮವಾಗಿ, ತನ್ನ ಕಾಲದಲ್ಲಿದ್ದ ಎಲ್ಲ ವಿಧವಾದ ವಿಜ್ಞಾನ ಮತ್ತು ಕಲೆಗಳ ವಿಷಯವಾದ ವ್ಯಾಪಕವಾದ ಒಂದು ವಿಶ್ವಕೋಶವನ್ನು ರಚಿಸುವ ಕಾರ್ಯವನ್ನು ಕೈಗೊಂಡುದರಿಂದ ಇವನಿಗೆ ಈ ಬಿರುದು ಪಡೆಯಲು ಸಾಧ್ಯವಾಯಿತು. ಆಶ್ಚರ್ಯ ಸಂಗತಿಯೆಂದರೆ, ಅವನು ಈ ಮಹತ್ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ, '**ಅಭಿಲಷಿತಾರ್ಥ ಚಿಂತಾಮಣಿ**' (ಬಯಸಿದುದನ್ನೆಲ್ಲ ಕೊಡುವ ಮಣಿ) ಅಥವಾ '**ಮಾನಸೋಲ್ಲಾಸ**' (ಮನಸ್ಸಿಗೆ ಉತ್ಸಾಹ ಕೊಡುವುದು) ಎಂಬ ಕೃತಿಯನ್ನು ನೀಡಿದನು. ಅದರಲ್ಲಿ ಗ್ರಂಥವಿಷಯವಾಗಿ, ಎಲ್ಲರಿಗೂ ಉಪಕಾರವಾಗಿರುವ ಶಾಸ್ತ್ರ (ಶಾಸ್ತ್ರಂ ವಿಶ್ವೋಪಕಾರಕಂ) ಎಂದೂ ಎಲ್ಲರಿಗೂ ವಿದ್ಯಾದಾಯಕ (ಜಗದಾಚಾರ್ಯಪುಸ್ತಕ) ಎಂದೂ ಹೇಳಿದೆ. ಪುಸ್ತಕದ ಕ್ಷೇತ್ರ ವ್ಯಾಪಕವಾಗಿರುವುದರಿಂದ ಅದಕ್ಕೆ ಈ ಹೆಸರುಗಳು ಉಚಿತವಾಗಿವೆ. ಪರಕೀಯರ ದುರಾಕ್ರಮಣಕ್ಕೆ ತುತ್ತಾಗುವ ಮೊದಲು ಇದ್ದ ಹಿಂದೂಸಂಸ್ಕೃತಿಯ ಸಾರವನ್ನು ಇದು ಸಮಗ್ರವಾದ ವಿಭಿನ್ನಶಾಖೆಗಳಲ್ಲೂ ಅತ್ಯುತ್ತಮವಾಗಿ ನಿರೂಪಿಸುತ್ತದೆ. ಡಾ॥ ಶಾಮ ಶಾಸ್ತ್ರಿಗಳು ಹೇಳುವಂತೆ ವಾಸ್ತು ಶಿಲ್ಪ ಮತ್ತು ಶಿಲ್ಪ, ಮೂರ್ತಿಕಲೆ ಮತ್ತು ಸಂಗೀತ, ಚಿತ್ರಲೇಖನ—ಮುಂತಾದ ಲಲಿತಕಲೆಗಳು, ಶಕುನ ಶಾಸ್ತ್ರ, ಸಾಮಾಜಿಕ ಪದ್ಧತಿಗಳು, ಕ್ರೀಡೆಗಳು, ಮನೋರಂಜನೆಯ ಕಾರ್ಯಕ್ರಮಗಳು, ಪಾಕಶಾಸ್ತ್ರ, ಬುಡುಬುಡಿಕೆ, ಕೋಳಿ ಕಾಳಗ, ಸರ್ಪವಿದ್ಯೆ-ಮೊದಲಾದ ವಿಷಯಗಳಿಂದ ಕೂಡಿ ಪ್ರಮುಖ ಭಾರತೀಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ದ್ರಾವಿಡ ಪ್ರಭಾವಕ್ಕೆ ಯೋಗ್ಯ ಸ್ಥಾನವನ್ನು ಕೊಟ್ಟಿರುವ ಸಂಸ್ಕೃತ ಸಾಹಿತ್ಯದ ಮೊತ್ತಮೊದಲನೆಯ ಕೃತಿ ಇದು.

ಅತಿ ದೊಡ್ಡದಾಗಿಯೂ ಉಜ್ವಲವಾಗಿಯೂ ಇರುವ ಈ ಮಾನಸೋಲ್ಲಾಸವೆಂಬ ವ್ಯಾಪಕ ವಿಶ್ವಕೋಶದ ವಿಷಯವಾಗಿ ಸ್ಥೂಲವಾದ ಅಭಿಪ್ರಾಯ ತಳೆಯಲು ನಾವು ಈಗ ಪ್ರಯತ್ನಿಸಬಹುದು. ಸರಿಯಾಗಿ ಮೂರು ವಿಷಯಗಳನ್ನು ಪ್ರಸ್ತಾವಿಸುವ ಇಪ್ಪತ್ತು ಅಧ್ಯಾಯಗಳುಳ್ಳ ಈಗ್ರಂಥದ ಸಾಮಾನ್ಯೋದ್ದೇಶ

ಜನತೆಯ ಸುಧಾರಣೆ ; ವಿಶೇಷೋದ್ದೇಶ–ರಾಜರ ಸುಧಾರಣೆ. ಇದರ ನೂರು ಅಧ್ಯಾಯಗಳು ಇಪ್ಪತ್ತು ಅಧ್ಯಾಯಗಳ ಐದು ಸಂಪುಟಗಳಾಗಿ ಸಮವಿಭಾಗಗೊಂಡಿವೆ.

ಇಪ್ಪತ್ತು (ವಿಂಶತಿ) ಅಧ್ಯಾಯಗಳುಳ್ಳ ಪ್ರಥಮ ಸಂಪುಟದಲ್ಲಿ ಸಾಮಾನ್ಯವಾಗಿ ಹೇಳುವುದಾದರೆ : ಎಲ್ಲರಿಗೂ ಅನ್ವಯಿಸುವ ನೀತಿ, ಮಹತ್ವಾಕಾಂಕ್ಷೆಯುಳ್ಳ ರಾಜನಿಗೆ ಇರಬೇಕಾದ ಯೋಗ್ಯತೆ ಆವಶ್ಯಕತೆಗಳು, ರಾಜ್ಯವನ್ನು ಗೆಲ್ಲುವ ಸಾಧನಗಳು–ವಿವರಿಸಲ್ಪಟ್ಟಿವೆ. ನಿರ್ದಿಷ್ಟವಾಗಿ ನಿರ್ದೇಶಿತವಾದ ತ್ಯಾಜ್ಯಗಳು (ವರ್ಜನಗಳು) ಇವು :— ಸುಳ್ಳಾಡುವುದು (ಅಸತ್ಯ), ಪಿತೂರಿ (ಪರದ್ರೋಹ). ನೀತಿವಿರುದ್ಧ ಪ್ರಣಯ (ಅಗಮ್ಯ), ನಿಷಿದ್ಧ ಪದಾರ್ಥ ಸೇವನೆ (ಅಭಕ್ಷ್ಯ), ಅಸೂಯೆ, ಕೆಟ್ಟವರ ಸಹವಾಸ (ಪತಿತ ಸಂಗ), ಕ್ರೋಧ ಮತ್ತು ಆತ್ಮಸ್ತುತಿ. ಅವಶ್ಯ ಕರ್ತವ್ಯಗಳಿವು:—ದಾನ, ಮೃದು ಭಾಷಣ (ಮನೋಹರವಾಕ್ಯ), ಒಳ್ಳೆಯದನ್ನು ಮಾಡುವ ಕರ್ಮಗಳು (ಇಷ್ಟಾಪೂರ್ತ), ದೇವತಾಭಕ್ತಿ, ವಿದ್ವಾಂಸರಲ್ಲಿ ಮತ್ತು ಗೋವುಗಳಲ್ಲಿ ಶ್ರದ್ಧೆ–ಗೌರವ (ಗೋ ವಿಪ್ರ ತರ್ಪಣ), ಆಚಾರ್ಯರಲ್ಲಿ ಭಕ್ತಿ ಮತ್ತು ಆಶ್ರಿತ ರಕ್ಷಣೆ.

ಈ ಗ್ರಂಥದ ಎರಡನೆಯ ಸಂಪುಟದಲ್ಲಿ ರಾಜ್ಯವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳಾಗಿರುವ ರಾಜ, ಮಂತ್ರಿ, ಮಿತ್ರ, ಕೋಶ, ದೇಶ, ದುರ್ಗ, ಸೈನ್ಯ—ಎಂಬ ಸಪ್ತಾಂಗಗಳು (ಏಳು ವಿಭಾಗಗಳು). ಷಡ್ಗುಣಗಳಾದ ಸಂಧಿ, ವಿಗ್ರಹ (ಯುದ್ಧ), ಯಾನ, ಆಸನ, ತಾಟಸ್ಥ್ಯ, ಸಮಾಶ್ರಯ (ಅವುಗಳ ಸೇರ್ಪಡೆ)—ಎಂಬ ಆರು ಸಂದರ್ಭಗಳಿಗೆ ಅನುಗುಣವಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾಯಿದೆಗಳು ವಿವರವಾಗಿ ಚರ್ಚಿಸಲ್ಪಟ್ಟಿವೆ. ಸಾಮ, ದಾನ, ಭೇದ, ದಂಡ—ಎಂಬ ನಾಲ್ಕು ಪ್ರಸಿದ್ಧವಾದ ಉಪಾಯಗಳ ಪೂರ್ಣ ವಿವರಣೆಯೂ ಇದೆ. ಒಟ್ಟಿನಲ್ಲಿ ಎರಡನೆಯ ಸಂಪುಟವು ರಾಜನ ಸ್ಥಾನವನ್ನು ಭದ್ರಪಡಿಸಲು ಅನುಷ್ಠಿಸಬೇಕಾದ ಮಾರ್ಗಗಳನ್ನೂ ಉಪಾಯಗಳನ್ನೂ ತಿಳಿಸುತ್ತದೆ-ಎನ್ನಬಹುದು.

ಮೂರನೆಯ ಸಂಪುಟವು–ವಾಸ್ತುಶಿಲ್ಪ, ಚಿತ್ರಲೇಖನ, ತೈಲಚಿತ್ರಕಲೆ, ವಿಗ್ರಹಕಲೆ ಮತ್ತು ಗೃಹಸ್ಥ ಜೀವನದ ಸುಖಗಳ ವಿಷಯವಾಗಿ ವಿವರಗಳನ್ನು ನೀಡುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈ ಪುಸ್ತಕವು ರಾಜನು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನಂತರ ಅವನಿಗೆ ಉಪಲಬ್ಧವಾಗುವ ವಿವಿಧ ಸುಖೋಪಭೋಗಗಳ ವಿಶೇಷ ವಿವರಣೆಯನ್ನು ನೀಡುತ್ತದೆ. ಇಲ್ಲಿ ಉಲ್ಲೇಖಿಸಿರುವ ಕೆಲವು ಭೋಗಗಳ ವಿವರಗಳಿವು : ತಾಂಬೂಲ, ವಿಲೇಪ (ಮೈಗೆ ತೊಡೆಯುವ ಸುಗಂಧ ದ್ರವ್ಯ), ಅಂಬರ (ವಸ್ತ್ರ), ಭೂಷಣ, ಆಸನ, ಚಾಮರ, ಪುತ್ರ, ಭೋಜನ ಜಲ, ಪಾದಾಭ್ಯಂಗ, ಯಾನ (ವಾಹನ), ಛತ್ರ, ಧೂಪ, ಶಯನ ಮತ್ತು ಯೋಷಿತ್ (ಸ್ತ್ರೀಯರು).

ನಾಲ್ಕನೆ ಸಂಪುಟವು— ಶಸ್ತ್ರಪ್ರಾವೀಣ್ಯ, ವಿದ್ಯಾಭ್ಯಾಸ, ಆನೆಗಳನ್ನು ಪಳಗಿಸುವುದು, ಅಶ್ವಾರೋಹಣ ವಿದ್ಯೆ, ಕುಸ್ತಿ, ಹುಂಜನ ಕಾಳಗ, ನಾಯಿಗಳನ್ನು ಬೆಳೆಸುವುದು, ಮುದ್ದಿನ ಪಕ್ಷಿಗಳನ್ನೂ ಪ್ರಾಣಿಗಳನ್ನೂ ಮೀನುಗಳನ್ನೂ ಸಾಕುವುದು,ಕಾವ್ಯ–ಸಂಗೀತ–ನೃತ್ಯ–ಸರಸಸಂಭಾಷಣೆ ಮುಂತಾದ ವಿನೋದವಿಷಯಕ್ಕೆ ಗಮನಕೊಡುತ್ತದೆ.

ಕಡೆಯ ಸಂಪುಟವು–ಉದ್ಯಾನಗಳಲ್ಲಿ, ಮೈದಾನಗಳಲ್ಲಿ, ಪರ್ವತಗಳಲ್ಲಿ, ಮರಳಿನ ತೀರಗಳಲ್ಲಿ ನಡೆಸಲಾಗುವ ವಿವಿಧ ಕ್ರೀಡೆಗಳನ್ನು ವಿವರಿಸುತ್ತದೆ. ಅಲ್ಲದೆ, ಬೆಳದಿಂಗಳ ಊಟಗಳು, ಪಾನಗೋಷ್ಠಿಗಳು ಸಮಸ್ಯಾಪೂರ್ತಿಯ ಕಾರ್ಯಕ್ರಮಗಳು, ಚತುರಂಗ ಮತ್ತು ಪಗಡೆಯಾಟಗಳು, ಭಾರತೀಯ ಆಟಗಳಾದ ಕವಡೆ ಮತ್ತು ಹಾವು, ಸ್ತ್ರೀ ವಿನೋದಗಳು-ಮುಂತಾದ ವಿಷಯಗಳನ್ನು ಒಳಗೊಂಡಿದೆ.

ಲೌಕಿಕವಾದ ಅಭಿರುಚಿಯುಳ್ಳ ಈ ಅನೇಕ ವಿಷಯಗಳ ಜೊತೆಯಲ್ಲಿ ಸಂಸ್ಕೃತ ವಿದ್ಯೆಯ ಪ್ರತಿಯೊಂದು ಶಾಖೆಯೂ ಈ ಗ್ರಂಥದಲ್ಲಿ ಸಂಗೃಹೀತವಾಗಿದೆ. ರಾಜ್ಯ ಶಾಸ್ತ್ರ, ಖಗೋಳ ಶಾಸ್ತ್ರ, ಜ್ಯೋತಿಷ್ಯ, ಆಹಾರ ವಿಜ್ಞಾನ, ಅಲಂಕಾರ ಶಾಸ್ತ್ರ, ಕಾವ್ಯ, ಗಾನ, ನೃತ್ಯ, ಚಿತ್ರಕಲೆ, ವಾಸ್ತು ಶಿಲ್ಪ, ವೈದ್ಯ, ಅಶ್ವ–ಗಜ–ಶ್ವಾನ ಶಿಕ್ಷಣ, ಇವೇ ಮೊದಲಾದ ಬೇರೆ ಬೇರೆ ವಿಷಯಗಳನ್ನು ಸಂಕ್ಷೇಪವಾಗಿ ವಿವರಿಸುವ ಇಂತಹ ಮಹಾಗ್ರಂಥವು ಈ ವರೆಗೆ '**ಮಾನಸೋಲ್ಲಾಸ**'ವೊಂದೇ ಆಗಿದೆ. ಅಂಕಗಣಿತ ಮತ್ತು ದಶಮಾಂಶಕ್ರಮ, ಪಂಚಾಂಗ ರಚನಾಕ್ರಮ, ಶಕುನಗಳು, ಕಣಿ ಹೇಳುವುದು, ಹಸ್ತ ರೇಖಾಶಾಸ್ತ್ರ, ತೋಟಗಾರಿಕೆ, ಪ್ರಾಣಿ ವ್ಯಾಧಿಗಳ ಚಿಕಿತ್ಸೆ, ಗಣಿ ತೆಗೆಯುವುದು, ರಸಶಾಸ್ತ್ರ, ರತ್ನಗಳ ಮತ್ತು ಅನರ್ಘ್ಯ ಶಿಲೆಗಳ ಪರೀಕ್ಷೆ, ವಿವಾಹ ಮತ್ತು ಮಕ್ಕಳ ಪೋಷಣೆ, ಪಾಕಶಾಸ್ತ್ರ, ಮಾದಕ ಪಾನೀಯಗಳು, ಪಾನಕಗಳು, ವಾಹನಗಳು ಮತ್ತು ಸುಗಂಧ ದ್ರವ್ಯಗಳು–ಇವುಗಳ ವಿಷಯವಾಗಿ ಭಾರತೀಯರ ಅಭಿಪ್ರಾಯಗಳನ್ನು ಇಷ್ಟೊಂದು ವಿವರವಾಗಿ ಒಂದೇ ಗ್ರಂಥದಲ್ಲಿ ನೀಡುವ ಮತ್ತಾವ ಕೃತಿಯೂ ಇಲ್ಲ.

ಕೇವಲ ಪ್ರಾಯೋಗಿಕ ಮತ್ತು ಲೌಕಿಕ ದೃಷ್ಟಿಕೋನದಿಂದಲೇ ಈ ಗ್ರಂಥವು ರಚಿತವಾಗಿರುವುದರಿಂದ ವೈದಿಕ ದೇವತೆಗಳು, ಯಾಗಗಳು, ಯಾಜ್ಞಿಕ ಕರ್ಮಗಳು, ವೇದಾಂತ ವಿಷಯಗಳು ಅಥವಾ ಬೇರೆ ಬೇರೆ ಭಾರತೀಯ ದರ್ಶನಗಳು–ಇಂಥವುಗಳ ವಿಷಯವಾಗಿಯೇ ಆಗಲಿ–ಇಲ್ಲಿ ಯಾವ ವಿವರಗಳೂ ಇಲ್ಲ. ಸ್ತ್ರೀಯರು, ಮಂತ್ರಿಗಳು, ಸಾಮಂತರು, ಬೇರೆ ಬೇರೆ ವರ್ಗಗಳ ಅಧಿಕಾರಿಗಳು, ಕವಿಗಳು, ಗಾಯಕರು, ವಾದಿಗಳು, ನರ್ತಕರು–ಮುಂತಾದವರಿಗೆ ಪ್ರತ್ಯೇಕ ಸ್ಥಳವನ್ನು ಗೊತ್ತುಮಾಡಿರುವ, ಮಾದರಿ ರಾಜ ದರ್ಬಾರಿನ ಸ್ಪಷ್ಟ ಚಿತ್ರಣವನ್ನು ನಾವಿಲ್ಲಿ ಕಾಣುತ್ತೇವೆ.

**ಮಾನಸೋಲ್ಲಾಸವು** ಸರ್ವರಿಗೂ ರುಚಿಸುವ ವಿಷಯಗಳನ್ನೊಳಗೊಂಡ ಪರಿಪೂರ್ಣವಾಗಿರುವ ವಿಶ್ವತೋಮುಖವಾದ ಅದ್ವಿತೀಯ ಕೃತಿ. ಪ್ರಾಯಶಃ ಅದು ಜನಪ್ರಿಯವಾದ ಅನುಷ್ಟುಭ್ ವೃತ್ತದಲ್ಲಿ ರಚಿಸಿರುವ ಕೃತಿ; ಆದರೆ ಅಲ್ಲಲ್ಲಿ ಗದ್ಯಭಾಗಗಳು ಕಂಡುಬರುತ್ತವೆ. ಅದರ ಶೈಲಿಯು ಸುಲಭ ಮತ್ತು ಸರಳವಾಗಿರುವುದಲ್ಲದೆ, ಅನೇಕ ವೇಳೆ ಕಾವ್ಯಾತ್ಮಕವಾಗಿದೆ. ಈ ಮಹಾಗ್ರಂಥದಲ್ಲಿ ವಿವರಿಸಲಾದ ವಿಷಯಗಳ ವೈವಿಧ್ಯವು ಸೋಮೇಶ್ವರನ ಆಸ್ಥಾನದಲ್ಲಿದ್ದ ಧುರೀಣರ ಗೋಷ್ಠಿಯಿಂದ ರಚಿತವಾದ ಕೃತಿಯಿದೆಂದು ಸೂಚಿಸುವುದೇ ಹೊರತು, ರಾಜನ ಸ್ವಂತ ಕೃತಿಯೆಂದು ತೋರಿಸುವುದಿಲ್ಲ.

ಪ್ರಾಯಶಃ ಜೈನನಾದ ಪಾರ್ಶ್ವದೇವನು ಸೋಮೇಶ್ವರನ ಆಶ್ರಯದಲ್ಲಿದ್ದು '**ಸಂಗೀತ ಸಮಯಸಾರ**' ಎಂಬ ಗ್ರಂಥವನ್ನು ರಚಿಸಿದನು. ಮುಂದಿನ ಚಾಳುಕ್ಯ ಚಕ್ರವರ್ತಿಯಾದ ಎರಡನೆ ಜಗದೇಕಮಲ್ಲನ (ಕ್ರಿ.ಶ. 1138–1150) ಲೇಖನಿಯಿಂದ ಸಂಗೀತ ಕ್ಷೇತ್ರದಲ್ಲಿ ಪ್ರಮಾಣ ಭೂತವಾದ '**ಸಂಗೀತ ಚೂಡಾಮಣಿ**' ಎಂಬ ಕೃತಿ ಉದಯಿಸಿತು.

ಹತ್ತನೆ ಶತಮಾನಕ್ಕೆ ಸೇರಿರಬಹುದಾದ ಧನಂಜಯನ '**ನಾಮಮಾಲಾ**' ಎಂಬ ಸಂಸ್ಕೃತ ಶಬ್ದಕೋಶ ಮತ್ತು ಜಯಕೀರ್ತಿಯ '**ಛಂದೋನುಶಾಸನ**' ಎಂಬ ಛಂದೋಗ್ರಂಥ (ಸಂ: ಪ್ರೊ॥ ಎಚ್. ಡಿ. ವೇಲಂಕರ್, ಬೊಂಬಾಯಿ)–ಇವೆರಡೂ ಪ್ರಾಯಶಃ ಚಾಲುಕ್ಯ ರಾಜನಾದ ತೈಲನ ಕಾಲದಲ್ಲಿ ರಚಿತವಾಗಿರಬಹುದು. ಈ ಎರಡನೆಯ ಗ್ರಂಥವು ಕನ್ನಡದ ಕೆಲವು ಮುಖ್ಯ ಛಂದಸ್ಸುಗಳ ವಿಷಯವಾಗಿ ಗಮನಾರ್ಹ ಸಂಗತಿಗಳನ್ನು ತಿಳಿಸುತ್ತದೆ.

ಮೂಲ ಲೇಖಕರು: **ಶ್ರೀ ಕೆ. ಟಿ. ಪಾಂಡುರಂಗಿ**
ಅನುವಾದಕರು: **ಶ್ರೀ ಎಂ. ಎ. ಲಕ್ಷ್ಮೀತಾತಾಚಾರ್**

# ಚಾಲುಕ್ಯ ವಾಸ್ತುಶಿಲ್ಪ

ಚಾಲುಕ್ಯರ ವಾಸ್ತುಶಿಲ್ಪ ಶೈಲಿಯನ್ನು ಸಂಸ್ಕೃತ ಗ್ರಂಥಗಳಲ್ಲಿ ಉಕ್ತವಾಗಿರುವ ವೇಸರ ಶೈಲಿಯೊಡನೆ ಹೋಲಿಸಬಹುದು. ವೇಸರದಲ್ಲಿ ದಕ್ಷಿಣ ಭಾರತೀಯ ಅಥವಾ ದ್ರಾವಿಡ ಮತ್ತು ಉತ್ತರ ಭಾರತೀಯ ಅಥವಾ ನಗರ ವಾಸ್ತುಶಿಲ್ಪ ಸಂಪ್ರದಾಯಗಳು ಸೇರಿರುತ್ತವೆ. ಕಸೆನ್ಸ್ ಅವರು ಸೂಚಿಸುವಂತೆ, ಚಾಲುಕ್ಯ ವಾಸ್ತುಶಿಲ್ಪಿಗಳು ದಕ್ಷಿಣ ಭಾರತದ ಪಲ್ಲವರಂತೆ ಗೋಪುರ ರಚನೆಯಲ್ಲಿ ಅಂತಸ್ತುಗಳನ್ನು ಉಳಿಸಿಕೊಂಡರೂ ಪ್ರತಿ ಅಂತಸ್ತಿನ ಎತ್ತರವನ್ನು ಕಡಮೆ ಮಾಡಿ, ಅದನ್ನು ಸೂಕ್ಷ್ಮ ಅಲಂಕಾರ ಶಿಲ್ಪಗಳಿಂದ ತುಂಬಿದರು. ಮುಂದೆ ಇದು ಅತಿ ಎನ್ನುವಷ್ಟು ಹೆಚ್ಚಾಯಿತು ; ಪರಿಣಾಮವಾಗಿ, ಇವು ಮೊದಲ ನೋಟಕ್ಕೆ ಕಾಣಿಸ ದಾದಷ್ಟು ಸೂಕ್ಷ್ಮವಾದವು. ಇದರೊಡನೆ, ಚಾಲುಕ್ಯ ವಾಸ್ತುಶಿಲ್ಪಗಳ ಔತ್ತರೇಯ ಗೋಪುರ ರಚನೆಯ ತತ್ವಗಳನ್ನು ಸೇರಿಸಿಕೊಂಡು ಕೇಂದ್ರದ ಪ್ರತಿ ಅಂತಸ್ತಿನ ಮಾಡಗಳೂ ಸೇರಿ, ಹೆಚ್ಚು ಕಡಮೆ ಲಂಬವಾದ ಒಂದೇ ಪಟ್ಟಯೆಂಬಂತೆ ನಿರ್ಮಿಸಿದರು. ಇದಲ್ಲದೆ, ಮೂರನೆಯ ಅಂಶವೊಂದು ಇದರಲ್ಲಿ ಸೇರಿದೆ. ಐಹೊಳೆಯ ಸುಪ್ರಸಿದ್ಧ ದುರ್ಗಾಮಂದಿರದಲ್ಲಿರುವಂತೆ ಬೌದ್ಧರ ಚೈತ್ಯಗಳ ರೀತಿಯ ಅರ್ಧ ವರ್ತುಲಾಕಾರ.

ಚಾಲುಕ್ಯರ ದೇವಸ್ಥಾನಗಳ ರಚನೆಯ ಇತಿಹಾಸದಲ್ಲಿ ಕಸೆನ್ಸ್‌ಅವರು ಎರಡು ಘಟ್ಟಗಳನ್ನು ಗುರುತಿ ಸುತ್ತಾರೆ. ಮೊದಲನೆಯ ಘಟ್ಟವು ಎರಡನೆಯ ಪುಲಿಕೇಶಿಯ ಕಾಲವಾದ ಕ್ರಿ.ಶ. ಏಳನೆಯ ಶತಮಾನದ ಪೂರ್ವಾರ್ಧದಿಂದ ರಾಷ್ಟ್ರಕೂಟರಿಂದ ಸ್ವಲ್ಪಕಾಲ ಚಾಲುಕ್ಯರ ಅಧಿಕಾರಕ್ಕೆ ಉಂಟಾದ ವಿಘ್ನದ ಕಾಲದ ವರೆಗೆ, ಎಂದರೆ ಎಂಟನೆಯ ಶತಮಾನದ ವರೆಗೆ. ಎರಡನೆಯ ಘಟ್ಟವು, ಚಾಲುಕ್ಯರು ಎರಡನೆಯ ತೈಲಪ ನಿಂದ ಪುನರಧಿಕಾರ ಸ್ಥಾಪಿಸಿದ ಕಾಲದಿಂದ–ಎಂದರೆ ಹತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಕೊನೆಯವರೆಗೆ. ಮೊದಲ ಘಟ್ಟದಲ್ಲಿ, ಕಸೆನ್ಸ್ ಅವರ ಅಭಿಪ್ರಾಯದಂತೆ, ದಕ್ಷಿಣ ದೇಶದ ವಾಸ್ತುಶಿಲ್ಪಗಳೇ ಹೆಚ್ಚಾಗಿದ್ದುದರಿಂದ ದಾಕ್ಷಿಣಾತ್ಯ ಪದ್ಧತಿಯೇ ಮುಂದುವರಿಯಿತು. ಎರಡನೆಯ ಘಟ್ಟದಲ್ಲಿ ಶುದ್ಧ ದಾಕ್ಷಿಣಾತ್ಯ ಶೈಲಿಯಲ್ಲಿ ಮೊತ್ತ ಮೊದಲ ಬಾರಿಗೆ ನಿಖರವಾದ ಬದಲಾವಣೆ ಉಂಟಾಯಿತು. ಈ ಕಾಲದಲ್ಲಿ, ಹಿಂದಿನ ವಾಸ್ತುಶಿಲ್ಪ ಸಾಮಗ್ರಿಯಾದ ಮರಳುಗಲ್ಲಿನಿಂದ ಶಿಲ್ಪಗಳ ಒಲವು ಹಸುರು ಅಥವಾ ನೀಲ ಚ್ಛಾಯೆಯ ಕಪ್ಪುಗಲ್ಲಿನ ಕಡೆಗೆ ಹರಿಯಿತು. ಆದರೆ ಪ್ರಾಚೀನ ಉದಾಹರಣೆಗಳಾದ ಐಹೊಳೆ ಮತ್ತು ಪಟ್ಟದಕಲ್ಲು ಮೊದಲಾದೆಡೆಗಳಲ್ಲಿಯೂ ಔತ್ತರೇಯ ಪದ್ಧತಿಯ ಪ್ರಭಾವವು ಕಾಣಬರುತ್ತದೆ. ಗುಪ್ತರ ಸಂಪ್ರದಾಯದಲ್ಲಿರುವಂತೆ ಪೂರ್ಣಕಲಶ ಮತ್ತು ಗಂಗಾ-ಯಮುನೆಯರ ಸಾಕಾರ ಶಿಲ್ಪವು ಇಲ್ಲಿ ದೊರೆಯುತ್ತದೆ.

ಚಾಲುಕ್ಯರು ಚೈತ್ಯಾಕಾರದ ಬಂಡೆಯನ್ನು ಕೊರೆದು ಕುಸುರಿಗೆಲಸದಿಂದ ನಯಗೊಳಿಸುತ್ತಿದ್ದರು. ಚಾಲುಕ್ಯರ ಸುಪ್ರಸಿದ್ಧ ರಾಜಧಾನಿಯಾದ ಬಾದಾಮಿಯಲ್ಲಿ ಇಂತಹ ಹಲವಾರು ಸುಂದರ ಶಿಲಾದೇವಾ ಲಯಗಳಿವೆ. ಸಣ್ಣ ಸರೋವರಗಳ ದಂಡೆಯ ಮೇಲೆ, ಕಡಿದಾದ ಪ್ರಪಾತಗಳಡಿಯ ಸುಂದರ ಹಿನ್ನೆಲೆ ಯಲ್ಲಿ ನೆಲಸಿರುವ ನಾಲ್ಕು ಕಂಬಗಳ ಕೈಸಾಲೆಗಳು ನೈಋತ್ಯ ದಿಕ್ಕಿನಲ್ಲಿರುವ ಬಾದಾಮಿಗೆ ಅಭಿಮುಖವಾಗಿ ನಿಂತಿವೆ. ಆರನೆಯ ಶತಮಾನದಲ್ಲಿದ್ದ ಮೊದಲನೆಯ ಪುಲಿಕೇಶಿಯಿಂದ ಈ ಪಟ್ಟಣವು ಬಲಪಡಿಸಲ್ಪಟ್ಟಿತು.

ಮೊದಲನೆಯ ಪುಲಿಕೇಶಿಯ ಮಕ್ಕಳಾದ ಕೀರ್ತಿವರ್ಮ ಮತ್ತು ಮಂಗಳೇಶರು ಇಂತಹ ನಾಲ್ಕು ಶಿಲಾ ದೇವಾಲಯಗಳಿಗೆ ಕಾರಣರು ; ಇವುಗಳಲ್ಲಿ ಒಂದು ಶಿವಾಲಯ, ಒಂದು ಜೈನಬಸದಿ, ಉಳಿದೆರಡು ವಿಷ್ಣು ದೇವಾಲಯಗಳು. ಈ ಶಿಲಾ ದೇವಾಲಯಗಳ ರಚನೆಗೆ ಮಂಗಳೇಶನೇ ಪ್ರಮುಖ ಕಾರಣನಾದುದರಿಂದ ಅವನನ್ನು ಚಾಲುಕ್ಯ ವಾಸ್ತುಶಿಲ್ಪದ ಪಿತಾಮಹನೆಂಬ ಹೆಸರಿನಿಂದ ಕರೆಯುವುದು ಉಚಿತವಾಗಿದೆ. ಇಂತಹ ಒಂದು ಶಿಲಾ ದೇವಾಲಯದಲ್ಲಿ ಮಂಗಳೇಶನಿಂದಲೇ ರಚಿತವಾದ ಕ್ರಿ.ಶ. 578ನೆಯ ಸಂವತ್ಸರದ ಶಾಸನ ವೊಂದು ದೊರೆಯುತ್ತದೆ. ಈ ನಾಲ್ಕು ದೇವಾಲಯಗಳನ್ನು ಪ್ರಪಾತದ ಮುಖದ ವರೆಗೂ ಎತ್ತರಿಸಿದ ಒಡ್ಡುದಾರಿಗೊಂದು ಸೇರಿಸುತ್ತದೆ. ಪರ್ಸಿಬ್ರೌನರವರು ಸೂಚಿಸುವಂತೆ, ಪ್ರತಿದೇವಾಲಯವೂ ತನ್ನ ಮುಂಭಾಗದ ಪ್ರಾಂಗಣದೊಂದಿಗೆ, ಮುಂದುಗಡೆ ಒಂದು ತೆರೆದ ಅಂಗಳವನ್ನು ಹೊಂದಿದ್ದಂತೆ ತೋರುತ್ತದೆ. ಅವುಗಳ ಬಾಹ್ಯ ಆಕಾರದಲ್ಲಿಯೂ ಆಂತರಿಕ ರಚನೆಯಲ್ಲಿಯೂ ಕೆಲವು ಸಮಾನಾಂಶಗಳಿವೆ. ಅವುಗಳೆಂದರೆ, ಕಂಬಗಳಿಂದ ಕೂಡಿದ ಒಂದು ಮೊಗಸಾಲೆ, ಎತ್ತರವಾದ ಕಂಬಗಳ ಮೇಲೆ ಆಧರಿಸಿ ನಿಂತ ಒಂದು ಹಜಾರ ಮತ್ತು ಶಿಲೆಯಲ್ಲಿಯೇ ಆಳವಾಗಿ ಕೊರೆದಿರುವ ಚೌಕಾಕಾರದ ಒಂದು ಸಣ್ಣ ಗುಹೆ.

ಈ ಶಿಲಾದೇವಾಲಯಗಳ ಮೇಲ್ಚಾವಣಿಗೆ ಬಣ್ಣಗಳನ್ನು ಹಾಕಿದ್ದ ಸಾಧ್ಯತೆಯೂ ಇದೆ. ಒಂದರ ಚಾವಣಿಯ ಎರಡು ಚದರಗಜಗಳಷ್ಟು ಜಾಗದಲ್ಲಿ ಬಾವಲಿಯ ಹೇಸಿಗೆ ಹೊಗೆಗಳಿಂದ ಕಪ್ಪಾದ ಜೇಡರ ಬಲೆಯ ಪದರದಡಿಯಲ್ಲಿ ಭಿತ್ತಿಚಿತ್ರವೊಂದನ್ನು ಪಿ. ರಾಮ್‌ಬಾಕ್ ಮತ್ತು ವಿ. ಡಿ. ಗಾಲಿಶ್‌ರವರು ಸಾಕ್ಷಾತ್ತಾಗಿ ಕಂಡಿದ್ದಾರೆ ; ಇದು ಶಿವಪಾರ್ವತಿಯರ ನಿಶ್ಚಿತಾರ್ಥವನ್ನು ನಿರೂಪಿಸುವ ಚಿತ್ರ. ಮೃದಂಗಗಳು, ಝಲ್ಲರಿಗಳು, ಕೊಳಲುಗಳನ್ನುಳ್ಳ ವಾದ್ಯಗೋಷ್ಠಿಯ ಮುಂಭಾಗದಲ್ಲಿ ಇಬ್ಬರು ನರ್ತಕಿಯರು-ಪಾರ್ವತಿಯ ಕೃಪಾಕಟಾಕ್ಷದಡಿಯಲ್ಲಿ ದಿವ್ಯವಾಗಿ ನರ್ತಿಸುತ್ತಿರುವ ದೃಶ್ಯವದು. ಇಷ್ಟು ಹೀನವಾಗಿ ಸಂರಕ್ಷಿಸಲ್ಪಟ್ಟಿದ್ದರೂ ಈ ಪುಟ್ಟ ಭಿತ್ತಿಚಿತ್ರವು ಅದರ ರಚನೆಯಲ್ಲಿ, ಬಣ್ಣಗಳ ಆಯ್ಕೆ-ಹೊಂದಾಣಿಕೆಗಳಲ್ಲಿ, ನಯಗಾರಿಕೆ-ನಿರ್ದುಷ್ಟತೆಗಳಲ್ಲಿ ಯೂರೋಪಿನ ವಸ್ತುಸಂಗ್ರಹಾಲಯಗಳಲ್ಲಿನ ಶ್ರೇಷ್ಠ ಕಲಾಕೃತಿಗಳಿಗೆ ಸಮಾನವೆಂದು ಈ ಮಹನೀಯರು ಭಾವಿಸುತ್ತಾರೆ. ಈ ಚಿತ್ರದ ಪಾರ್ವತಿಯ ತುಸು ಬಾಗಿದ ಮುಖದ ಪ್ರಸನ್ನತೆಯು ಬಾಟಸೆಲ್ಲಿಯ ಕಲಾಕನ್ನಿಕೆ (Madonnas)ಯರನ್ನು ವಿಸ್ಮಯಕರವಾಗಿ ನೆನಪಿಗೆ ತರುತ್ತದೆಂದು ಅವರು ಹೇಳುತ್ತಾರೆ.

ಪರ್ಸಿಬ್ರೌನರು ಸೂಚಿಸುವಂತೆ ಈ ಶಿಲಾದೇವಾಲಯಗಳು ಶ್ರೇಷ್ಠದರ್ಜೆಯ ಶಿಲ್ಪವನ್ನೊಳ ಗೊಂಡಿವೆ. ಹದಿನೆಂಟು ಕೈಗಳ ಸುಂದರವಾದ ನಟರಾಜನ ಮೂರ್ತಿ, ತ್ರಿಭಂಗಿಯಲ್ಲಿ ನಿಂತಿರುವ ಮಹಿಷಾಸುರ ಮರ್ದಿನಿ, ಏಳು ಅಡಿ ಏಳು ಅಂಗುಲ ಎತ್ತರದ ಅರ್ಧನಾರೀಶ್ವರನಾದ ಶಿವ, ಆಕಾಶಗಾಮಿ ಗಳಾದ ಗಂಧರ್ವಯುಗಳ ಮತ್ತು ಮಾನವ ಶಿರದ ಮೇಲೆ ಐದು ಹೆಡೆಗಳನ್ನುಳ್ಳ, ಒಂದೇ ಬಿಂದುವಿನ ಸುತ್ತ ವರ್ತುಲಾಕಾರವಾಗಿ ಸುತ್ತಿಕೊಂಡಿರುವ ಬಾಲ—ಇವುಗಳಿರುವ ನಾಗಪ್ರತಿಮೆ—ಇವು ಮೊದಲ ಶಿಲಾದೇವಾಲಯದಲ್ಲಿನ ಶಿಲ್ಪಕೃತಿಗಳು ; ಎರಡನೆಯದರಲ್ಲಿನ ಶಿಲ್ಪಗಳೆಂದರೆ—ತನ್ನ ಎಡಗೈಯಲ್ಲಿ ಪೃಥ್ವಿಯನ್ನು ಮೇಲೆತ್ತಿರುವ ಮಹಾವರಾಹ, ಮತ್ತು ತನ್ನ ಒಂದು ಕಾಲನ್ನು ಆಕಾಶವನ್ನೆಲ್ಲ ಆವರಿಸುವಂತೆ ಎತ್ತಿ, ತಲೆಕೆಳಗಾಗಿ ಬೀಳುವಂತೆ ರಾಕ್ಷಸನೊಬ್ಬನನ್ನು ಎತ್ತಿ ಎಸೆಯುತ್ತಿರುವ ಬೃಹದಾಕಾರದ ತ್ರಿವಿಕ್ರಮ ; ಹನ್ನೊಂದಡಿ ಎತ್ತರದ ನಿಂತ ನಿಲುವಿನ ನರಸಿಂಹನ ಮೂರ್ತಿಯೊಂದಿಗೇ ಕೆತ್ತಿರುವ ಹರಿಹರ, ಆರು ಬೃಹದಾಕಾರದ ಸ್ತಂಭಗಳ ಮೇಲಿನ ಕೆತ್ತನೆಗಳು, ಗುಜ್ಜುಬಂಕದಲ್ಲಿನ ಸುಂದರ ಶಿಲ್ಪಗಳು, ಬಲಿಯ ಪ್ರಸಂಗದ ನಿರೂಪಣೆ, ಮಂಡಿತನಾದ ವಿಷ್ಣು—ಇವೆಲ್ಲ ಮೂರನೆಯ ದೇವಾಲಯದವು. ಈ ಮೇಲಿನವು ಗಳೆಲ್ಲ ಇಡೀ ಕರ್ಣಾಟಕದ ಬಹುಮುಖ್ಯ ಪ್ರಾಚೀನ ಶಿಲ್ಪ ಕೃತಿಗಳಲ್ಲಿ ಕೆಲವು. ನಾಲ್ಕನೆಯ ಶಿಲಾ ದೇವಾಲಯವನ್ನು ಪೂರ್ಣವಾಗಿ ಜೈನ ತೀರ್ಥಂಕರನಾದ ಆದಿನಾಥನಿಗೆ ಸಮರ್ಪಿಸಲಾಗಿದೆ. ಕಮಲಪುಷ್ಪದ ಮೇಲೆ ನಿಂತಿರುವ ಬಾಹುಬಲಿಯ ಕೈಕಾಲುಗಳನ್ನು ಮಾಧವೀಲತೆಯು ಸುತ್ತಿಕೊಂಡಿದೆ. ಪೀಠವೊಂದರ

ಮೇಲೆ ತನ್ನ ವಾಹನವಾದ ಕುಕ್ಕುಟಸರ್ಪದ ಪಕ್ಕದಲ್ಲಿರುವ ಪದ್ಮಾವತಿಯ ಮೂರ್ತಿಯು ಮತ್ತೊಂದು ಆಸಕ್ತಿ ಕೆರಳಿಸುವ ಶಿಲ್ಪಕೃತಿ.

ಪ್ರಮುಖವಾದ ಕೈಕಟ್ಟಡದ ದೇವಾಲಯಗಳಲ್ಲಿ ಭೂತನಾಥನ ಆಲಯವು ಮೊದಲನೆಯದು : ಇದರ ದ್ವಾರದಲ್ಲಿ ಗಂಗೆ-ಯಮುನೆಯರ ಆಕೃತಿಗಳಿವೆ. ಎರಡನೆಯದು, ಬಾದಾಮಿಗ್ರಾಮದ ಉತ್ತರದಲ್ಲಿ ಶಿಲೆಯೊಂದರ ಮೇಲೆ ನಿಂತಿರುವ ಮಾಲೆಗಿತ್ತಿ ದೇವಾಲಯ. ಈ ದೇವಾಲಯದ ಕಾಲ ಸುಮಾರು ಕ್ರಿ.ಶ. 625. ಇದನ್ನು ಮದರಾಸಿನ ಬಳಿಯ ಮಹಾಬಲಿಪುರದಲ್ಲಿನ 'ರಥ'ಗಳೆಂದು ಪ್ರಸಿದ್ಧವಾಗಿರುವ ಏಕಶಿಲಾನಿರ್ಮಿತ ದೇವಾಲಯಗಳಿಗೆ ಹೋಲಿಸಬಹುದು. ಅದರ ಬೃಹತ್ ಏಕಶಿಲಾಸ್ತಂಭಗಳು, ದೊಡ್ಡ ಬೋದಿಗೆಗಳು, ಅಗಲವಾದ ಸೂತ್ರವರಿಸೆಗಳು, ಚುಂಚುಲೋವೆಗಳು—ಇವೆಲ್ಲ ಗುಹಾಶಿಲ್ಪದ ಸಂಪ್ರದಾಯವನ್ನೇ ಸೂಚಿಸುತ್ತವೆ. ಪರ್ಸಿಬ್ರೌನರ ಪ್ರಕಾರ ಇಂತಹ ರಚನೆಯಲ್ಲಿ ಒಂದು ರೀತಿಯ ಸಂಯಮಪೂರಿತ ಶಕ್ತಿಯೂ ದಾರ್ಢ್ಯವೂ ಇವೆ.

ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿಗೆ ಸೇರಿದ ಐಹೊಳೆ, ಅಥವಾ ಶಾಸನಗಳಲ್ಲಿ ಉಕ್ತವಾದ ಆರ್ಯಪುರವು ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪದ ಒಂದು ದೊಡ್ಡ ಕೇಂದ್ರವಾಗಿದೆ. ಕ್ರಿ.ಶ. 450ರಲ್ಲಿ ನಿರ್ಮಿಸಲ್ಪಟ್ಟ ಲಡ್‌ಖಾನದ್ದೇ ಅಲ್ಲಿನ ಪ್ರಾಚೀನ ದೇವಾಲಯ. ಮೊದಲಿಗೆ ವಿಷ್ಣುಸಮರ್ಪಿತವಾಗಿದ್ದ ಈ ದೇವಾಲಯದ ರಚನೆಯ ಮೇಲೆ ಗುಪ್ತ ಸಂಪ್ರದಾಯದ ಪ್ರಭಾವವು ಸಾಕಷ್ಟಾಗಿದೆ, ಏಕೆಂದರೆ ಪೂರ್ಣ ಕಲಶ ಮತ್ತು ನೀತ ನಿಲುವಿನ ಗಂಗಾಯಮುನೆಯರ ಆಕೃತಿಗಳು ಇಲ್ಲಿವೆ. ಕ್ರಿ.ಶ. 634ರಲ್ಲಿ, ಎರಡನೆಯ ಪುಲಿಕೇಶಿಯ ಕಾಲದಲ್ಲಿ, ಅವನ ಆಶ್ರಯದಲ್ಲಿದ್ದ ರವಿಕೀರ್ತಿಯಿಂದ ಮೇಗುಟಿ ದೇವಾಲಯವು ನಿರ್ಮಿತವಾಯಿತು. 'ಮೇಗುಟಿ' ಎಂಬ ಶಬ್ದವು 'ಮೇಗುಡಿ' (ಮೇಲಿನ ಗುಡಿ) ಎಂಬ ಶಬ್ದದ ಅಪಭ್ರಂಶ ರೂಪ. ದೇವಾಲಯಕ್ಕೆ ಆ ಹೆಸರು ಬರಲು ಕಾರಣ, ಅದು ಎತ್ತರವಾದ ಸ್ಥಳದಲ್ಲಿ ನಿರ್ಮಿತವಾಗಿರುವುದು. ಜಿನನಿಗೆ ಸಮರ್ಪಿತವಾಗಿದ್ದ ಈ ಗುಡಿಯು ಗರ್ಭಗೃಹ ಮತ್ತು ನವರಂಗಗಳಿಂದ ಕೂಡಿದೆ. ಕೊಂಟ ಅಥವಾ ತ್ರಿಶೂಲವನ್ನು ಸದಾ ಹೊಂದಿರುತ್ತಿದ್ದವನೊಬ್ಬನು ವಾಸಿಸುತ್ತಿದ್ದುದರಿಂದ 'ಕೊಂಟಿಗುಡಿ' ಎಂದು ಹೆಸರುಪಡೆದ ಒಂದು ದೇವಾಲಯದ ನಾಲ್ಕು ಕಂಬಗಳಿಗೆ ಆಧಾರವೇ ಇಲ್ಲ ; ಅವು ಅಡಿಯಿಂದ ಗುಂಡಾದ ಬೋದಿಗೆಯ ವರೆಗೆ ಚೌಕಾಕಾರವಾಗಿವೆ.

ಐಹೊಳೆಯ ಅತ್ಯಂತ ಸುಂದರ ಮತ್ತು ಪ್ರಭಾವಪೂರ್ಣ ದೇವಾಲಯವೆಂದರೆ ದುರ್ಗದೇವಾಲಯ. ಇದು ಈ ಹೆಸರನ್ನು ಪಡೆಯಲು ಕಾರಣ ಇದು ದುರ್ಗ ಅಥವಾ ಕೋಟೆಯ ಬಳಿಯಿದ್ದುದೇ ಹೊರತು ದುರ್ಗಾದೇವಿಗೆ ಸಮರ್ಪಿತವಾಗಿದ್ದುದರಿಂದಲ್ಲ. ಬೌದ್ಧರ ಚೈತ್ಯಗಳಂತೆ ಲಾಳದ ಆಕಾರದ ಈ ದೇವಾಲಯವು ಪ್ರಾಯಶಃ ಮೊದಲು ಸೂರ್ಯನಾರಾಯಣ ದೇವಾಲಯವಾಗಿತ್ತು. ಆದರೆ ದೇವಾಲಯದ ಗೋಡೆಗಳ ಮಾಡಗಳಲ್ಲಿನ ಪ್ರತಿಮೆಗಳಲ್ಲಿ ಕೆಲವು ಶಿವನವು, ಮತ್ತೆ ಕೆಲವು ವಿಷ್ಣುವಿನವು. ಇದರ ಅತ್ಯಂತ ಪ್ರಮುಖ ಲಕ್ಷಣವೆಂದರೆ ಉತ್ತರ ದಿಕ್ಕಿನಲ್ಲಿರುವ ಅದರ ಶಿಖರ ; ಆದರೆ ದುರದೃಷ್ಟವಶಾತ್ ಅದರ ಮೇಲ್ಭಾಗವು ಭಗ್ನವಾಗಿದೆ. ಈ ಮಾದರಿಯ ಪರಿಪೂರ್ಣವಾದ ಉದಾಹರಣೆಯೆಂದರೆ ಹುಚ್ಚಿಮಲ್ಲಿಗುಡಿ,

ಐಹೊಳೆಯಿಂದ ರಸ್ತೆಯ ಮೂಲಕ ಹದಿನಾಲ್ಕು ಮೈಲಿಯಾದರೂ ಕಾಲುದಾರಿಯಿಂದ ತುಂಬ ಹತ್ತಿರವಿರುವ ಮಹಾಕೂಟೇಶ್ವರದಲ್ಲಿ ಪವಿತ್ರ ತೀರ್ಥವೊಂದರ ಸುತ್ತಮುತ್ತ ಕೆಲವು ದೇವಸ್ಥಾನಗಳಿವೆ. ಇದು ವಾತಾಪಿ ಇಲ್ವಲರೆಂಬ ದೈತ್ಯ ಸಹೋದರರನ್ನು ಅಗಸ್ತ್ಯರು ನಾಶಪಡಿಸಿದ ಸ್ಥಳವೆಂದು ಪ್ರತೀತಿಯಿದೆ. ಪಿಯರ್ ರಾಮ್‌ಬಾಕ್ ಮತ್ತು ವೈಟೋಲ್ಡ್ ಡಿ ಮೋರಿ ಗಾಲಿಶ್ ಅವರು ತಮ್ಮ 'Golden Age of Indian Art' (ಭಾರತೀಯ ಕಲೆಯ ಸುವರ್ಣಯುಗ) ಎಂಬ ಗ್ರಂಥದಲ್ಲಿ

ಮಹಾಕೂಟೇಶ್ವರದ ಅರ್ಧನಾರೀಶ್ವರನ ಸುಂದರ ಶಿಲ್ಪದ ಚಿತ್ರವೊಂದನ್ನು (ಚಿ. 26) ಮುದ್ರಿಸಿದ್ದಾರೆ. ಮಹಾಕೂಟೇಶ್ವರ ಹೆಸರಿನ ದೇವಾಲಯವು ಮೊದಲನೆಯ ಪುಲಿಕೇಶಿಯ ತಂದೆ ರಣರಾಗನಿಂದ ನಿರ್ಮಿಸಲ್ಪಟ್ಟಿದೆಂದು ಹೇಳುತ್ತಾರೆ. ಕ್ರಿ.ಶ. 601ರ ಶಾಸನವೊಂದರಿಂದ ಮಂಗಳೇಶನ ಅನುಮತಿಯೊಂದಿಗೆ ದುರ್ಲಭಾದೇವಿಯೆಂಬವಳು ಕಿಸುವೊಳಲು (ಪಟ್ಟದಕಲ್ಲು), ಕೆಂದೂರು, ನಂದಿಗ್ರಾಮ (ನಂದಿಕೇಶ್ವರ), ಮತ್ತು ಆರ್ಯಪುರ (ಐಹೊಳೆ)ಗಳನ್ನು ಮಹಾಕೂಟೇಶ್ವರನಾಥನ ಹೆಸರಿನಲ್ಲಿ ದತ್ತಿಬಿಟ್ಟಂತೆ ತಿಳಿಯುತ್ತದೆ.

ಮಲಪ್ರಭಾನದಿಯ ಎಡದಂಡೆಯ ಮೇಲೆ, ಬಾದಾಮಿಯಿಂದ ಹತ್ತು ಮೈಲಿಗಳ ದೂರದಲ್ಲಿರುವ ಪಟ್ಟದಕಲ್ಲಿನಲ್ಲಿ ಚಾಲುಕ್ಯ ವಾಸ್ತುಶಿಲ್ಪದ ಉಚ್ಛ್ರಾಯವನ್ನು ಕಾಣುತ್ತೇವೆ. ಅಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯ ವಾಸ್ತುಶಿಲ್ಪ ಸಂಪ್ರದಾಯಗಳು ಸಮರಸವಾಗಿ ಬೆರೆತಿವೆ. ಪರ್ಸಿ ಬ್ರೌನರು ಅದನ್ನು ಈ ಪಟ್ಟಿಯ ಮೂಲಕ ಸೂಚಿಸುತ್ತಾರೆ:

| ಔತ್ತರೇಯ | ದಾಕ್ಷಿಣಾತ್ಯ |
|---|---|
| ಪಾಪನಾಥ (ಸುಮಾರು ಕ್ರಿ.ಶ. 680) | ಸಂಗಮೇಶ್ವರ ಸು.ಕ್ರಿ.ಶ. 725) |
| ಜಂಬುಲಿಂಗ | ವಿರೂಪಾಕ್ಷ (ಸು.ಕ್ರಿ.ಶ. 740) |
| ಕರಿಸಿದ್ಧೇಶ್ವರ | ಮಲ್ಲಿಕಾರ್ಜುನ (ಸು.ಕ್ರಿ.ಶ. 740) |
| ಕಾಶಿನಾಥ | ಗಳಗನಾಥ (ಸು.ಕ್ರಿ.ಶ. 740) |

ವಿಶಾಲವಾದ ಪಾಪನಾಥ ದೇವಾಲಯವು ಏಳನೆಯ ಶತಮಾನದ ಕೊನೆಯ ಭಾಗಕ್ಕಿಂತ ಮುಂಚೆಯೇ ನಿರ್ಮಿತವಾದದ್ದಿರಬೇಕು. ಕಸೆನ್ಸ್ ಮತ್ತು ಪರ್ಸಿ ಬ್ರೌನರ ಪ್ರಕಾರ ಈ ದೇವಾಲಯವು ಮೊದಲಿಗೆ ವಿಷ್ಣು ಮತ್ತು ಸೂರ್ಯರಿಗೆ ಸಮರ್ಪಿತವಾಗಿದ್ದು, ಅನಂತರ ಶಿವಾಲಯವಾಗಿ ಪರಿವರ್ತಿತವಾಯಿತು. ಈ ದೇವಾಲಯದ ಮೂಲಯೋಜನೆ ಮತ್ತು ಮುಂಭಾಗದ ರಚನೆಗಳಲ್ಲಿ ಹಲವಾರು ಪ್ರಮಾಣರಹಿತ ಅಂಶಗಳೂ ಅನುಚಿತ ಅಂಶಗಳೂ ಸೇರಿವೆಯೆಂದು ಹೇಳುವ ಬ್ರೌನರು, ವಾಸ್ತುಶಿಲ್ಪಿಗಳ ಅನನುಭವವೇ ಇದಕ್ಕೆ ಕಾರಣವೆಂದು ಅಭಿಪ್ರಾಯಪಡುತ್ತಾರೆ. ಇದರ ಒಳರಚನೆಯ ವ್ಯಥತೆಯನ್ನು ಎಂದರೆ ಗೋಡೆಗಳ ಗಾತ್ರ ಮತ್ತು ಕಂಬಗಳ ಆಕಾರವನ್ನು ಗಮನಿಸಿದರೆ, ಇದರ ಮೇಲೆ ಗುಹಾಶಿಲ್ಪದ ಪ್ರಭಾವ ಉಂಟಾಗಿರಬೇಕೆಂದೂ ಅವರ ಅಭಿಪ್ರಾಯ. ಇದರ ಗೋಡೆಯೊಂದರ ಮೇಲಿನ ಒಂದು ಶಾಸನವು 'ಚತ್ತರ ರೇವಡಿ ಓವಜ್ಜ' ಎಂಬ ಶಿಲ್ಪಿಯನ್ನು ಹೆಸರಿಸಿ, ಅವನು ಈ ದೇವಾಲಯದ ಕನಿಷ್ಠ ಒಂದು ಭಾಗವನ್ನಾದರೂ ನಿರ್ಮಿಸಿದನೆಂಬ ಅಂಶವನ್ನು ತಿಳಿಸುತ್ತದೆ.

ಪಾಪನಾಥ ದೇವಾಲಯದ ರಚನೆಯಲ್ಲಿ ಕಾಣುವ ವಾಸ್ತುಶಿಲ್ಪಸಂಬಂಧದ ದೋಷಗಳನ್ನು ಅದರ ಮುಂದಿನ ಮಾದರಿಯಾದ ವಿರೂಪಾಕ್ಷ ಮಂದಿರದ ನಿರ್ಮಾಣದಲ್ಲಿ ಸರಿಪಡಿಸಿಕೊಳ್ಳಲಾಯಿತು. ತನ್ನ ಗಂಡನಾದ ಎರಡನೆಯ ವಿಕ್ರಮಾದಿತ್ಯನು (ಕ್ರಿ.ಶ. 733-44) ಕಾಂಚಿಯ ಮೇಲೆ ಮೂರು ಬಾರಿ ವಿಜಯ ಪಡೆದ ನೆನಪಿಗಾಗಿ ರಾಣಿ ಲೋಕಮಹಾದೇವಿಯು ಕ್ರಿ.ಶ. 740ರಲ್ಲಿ ಈ ದೇವಾಲಯ ನಿರ್ಮಾಣಕ್ಕೆ ಅಪ್ಪಣೆಯಿತ್ತದ್ದರಿಂದ ಇದು ಲೋಕೇಶ್ವರವೆಂದು ಪ್ರಸಿದ್ಧವಾಗಲು ಕಾರಣವಾಯಿತು. ಏಕತೆ ಹೊಂದಾಣಿಕೆಗಳಿರುವ ಈ ದೇವಾಲಯದ ವಿನ್ಯಾಸ ಉತ್ತಮವಾಗಿದೆ. 'ತ್ರಿಭುವನ ಆಚಾರಿ' ಎಂಬ ಬಿರುದನ್ನು ಪಡೆದಿದ್ದ ಸರ್ವಸಿದ್ಧಿ ಆಚಾರಿ ಮತ್ತು ಗುಂಡ ಎಂಬವರು ಇದರ ಶಿಲ್ಪಿಗಳು. ಇವರಲ್ಲದೆ ಬಲದೇವ, ದಾಮೋದರ, ಚಂಗಮ್ಮ. ಪುಳ್ಳಪ್ಪ ಮುಂತಾದ ಬೇರೆ ಹಲವಾರು ಶಿಲ್ಪಿಗಳ ಹೆಸರುಗಳೂ ನಮಗೆ ತಿಳಿಯುತ್ತವೆ. ಪೂರ್ಣ ದೇವಾಲಯದ ಬಗ್ಗೆ ಮಾತ್ರವಲ್ಲ, ವಿವರಗಳ ಬಗ್ಗೆಯೂ ಹರಿಸಿರುವ ಕಲ್ಪನಾಲಹರಿ

ಅದ್ಭುತವಾದದ್ದು ; ಶತಮಾನಗಳಗಟ್ಟಳೆ ಕಾಲದ ಪ್ರಭಾವಕ್ಕೆ ಒಳಗಾಗಿದ್ದರೂ ದೇವಾಲಯದ ಪ್ರತಿ ಮಾಸಲು ಬಣ್ಣದ ಕಲ್ಲಿನಲ್ಲಿ ಚೈತನ್ಯ ಸ್ಪಂದನಗಳಿವೆಯೆಂದು ಪರ್ಸಿಬ್ರೌನರು ಈ ದೇವಾಲಯವನ್ನು ತುಂಬು ಮನಸ್ಸಿನಿಂದ ಹೊಗಳಿದ್ದಾರೆ. ಅದರ ಬೃಹತ್ ರಚನೆಯನ್ನು ಕಂಡವರಿಗೆ ಈ ಹೊಗಳಿಕೆಯ ಯಥಾರ್ಥತೆ ತಿಳಿಯುತ್ತದೆ.

ವಿನ್ಯಾಸ ಮತ್ತು ರಚನೆಗಳಲ್ಲಿ ಇದರಂತೆಯೇ ಇರುವ ಮತ್ತೊಂದು ದೇವಾಲಯವೆಂದರೆ ಪಟ್ಟದ ಕಲ್ಲಿನ ತ್ರಿಲೋಕೇಶ್ವರ ಅಥವಾ ಮಲ್ಲಿಕಾರ್ಜುನ ದೇವಾಲಯ. ಎರಡನೆಯ ವಿಕ್ರಮಾದಿತ್ಯನ ಮತ್ತೊಬ್ಬ ರಾಣಿಯಾದ ಹೈಹಯ ರಾಜಕುಮಾರಿ ತ್ರೈಲೋಕ್ಯ ಮಹಾದೇವಿಯು ಇದರ ರಚನೆಗೆ ಕಾರಣಳು. ಇದರ ಕೆಲವು ಕಂಬಗಳ ಮೇಲೆ 'ಪಂಚತಂತ್ರ'ದ ಪ್ರಸಿದ್ಧವಾದ 'ಕೋತಿ ಮತ್ತು ಮೊಸಳೆಯ ಕತೆ,' ಮತ್ತು 'ಕೋತಿ ಮತ್ತು ಬೆಣ್ಣೆ'ಯ ಕತೆಗಳನ್ನು ನಿರೂಪಿಸುವ ಕೆತ್ತನೆಗಳಿವೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ (ಕ್ರಿ.ಶ. 973) ಎರಡನೆಯ ತೈಲಪನು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಉರುಳಿಸಿದನು. ಮಾನ್ಯಖೇಟ ಅಥವಾ ಮಳಖೇಡವೇ ಚಾಲುಕ್ಯರಿಗೂ ಮುಖ್ಯ ನಗರವಾಗಿ ಮುಂದುವರಿಯಿತು. ಎರಡನೆಯ ಜಯಸಿಂಹನ ಆಳಿಕೆಯ ಹೊತ್ತಿಗೆ ಕಲ್ಯಾಣಿ ಅಥವಾ ಕಲ್ಯಾಣವು ಶಾಶ್ವತವಾದ ನೆಲೆವೀಡಾಗಿ ಮಾರ್ಪಟ್ಟಿತ್ತು. ಕಲ್ಯಾಣವನ್ನು ನಿರ್ಮಿಸಿ ಅದನ್ನು ಪ್ರಪಂಚದ ಮತ್ತೆಲ್ಲ ನಗರಗಳಿಗಿಂತ ಸುಂದರವಾಗಿ ಮಾಡಿದವನು ಮೊದಲನೆಯ ಸೋಮೇಶ್ವರನೆಂದು ಬಿಲ್ಹಣನ ಹೇಳಿಕೆ. ಈ ಕಾಲದ ಚೋಳ ಶಾಸನಗಳು ಕಲ್ಯಾಣವನ್ನು ಚಾಲುಕ್ಯರ ರಾಜಧಾನಿಯೆಂದು ಕರೆಯಲು ಪ್ರಾರಂಭಿಸಿವೆ. ಚೋಳ-ಚಾಳುಕ್ಯರ ನಡುವಣ ಯುದ್ಧದಲ್ಲಿ ಕಲ್ಯಾಣವು ನಾಶವಾಗಿ, ಅಲ್ಲಿನ ಅರಮನೆ ನೆಲಸಮವಾಯಿತು. ತಂಜಾವೂರು ಜಿಲ್ಲೆಯ ದರಸುರಂನಲ್ಲಿ ಈ ಕಾಲಕ್ಕೆ ಸೇರಿದ ಚಾಲುಕ್ಯ ಶೈಲಿಯ ಶಿಲ್ಪವಾದ ದ್ವಾರಪಾಲಕನ ಮೂರ್ತಿಯೊಂದನ್ನು ಈಗಲೂ ಕಾಣಬಹುದು. ಇದನ್ನು ಕಲ್ಯಾಣದಿಂದ ರಾಜಾಧಿರಾಜನು ತೆಗೆದುಕೊಂಡು ಹೋಗಿದ್ದನು. ಎರಡನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಕಲ್ಯಾಣವು ಹಿರಿಯ ನಗರವಾಯಿತು. ಈ ನಗರದಲ್ಲಿ ಆಗ ಜೀವಿಸಿದ್ದ ವಿಜ್ಞಾನೇಶ್ವರನು ಇದನ್ನು ತುಂಬ ಹೊಗಳಿದ್ದಾನೆ. ಮೂರನೆಯ ಸೋಮೇಶ್ವರನ ಕಾಲದಲ್ಲಿಯೂ ಕಲ್ಯಾಣವು ರಾಜಧಾನಿಯಾಗಿ ಮುಂದುವರಿಯಿತು. ಕಲಚೂರ್ಯರ ಬಿಜ್ಜಳನ ಕಾಲದಲ್ಲಿಯೂ ಇದು ಪ್ರಾಮುಖ್ಯವನ್ನು ಪಡೆದಿತ್ತು.

ಈ ಹೊತ್ತು ಕಲ್ಯಾಣವು ಅರಮನೆ ದೇವಾಲಯಗಳ ಅವಶೇಷಗಳನ್ನೊಳಗೊಂಡ ಒಂದು ಸಣ್ಣ ಊರಾಗಿದೆ ಮಾತ್ರ. ಇವೆಲ್ಲ ಈಚೆಯ ಶತಮಾನಗಳಲ್ಲಿ ನಾಶವಾಗಿರಬೇಕು. ಎತ್ತ ಹೋದರತ್ತ ಇಲ್ಲಿ ನಾವು ಭಗ್ನಪ್ರತಿಮೆಗಳನ್ನು, ಶಿಲ್ಪಕೃತಿಗಳನ್ನು, ವಾಸ್ತುಶಿಲ್ಪದ ಅವಶೇಷಗಳನ್ನು ಕಾಣುತ್ತೇವೆ. ಇದರ ಹತ್ತಿರದಲ್ಲಿಯೇ ಇರುವ ಚಿಕ್ಕ ಗ್ರಾಮಗಳಾದ ಶಿವಪುರ ಮತ್ತು ನಾರಾಯಣಪುರಗಳು ಪ್ರಾಚೀನ ಕಲ್ಯಾಣದ ಭಾಗಗಳಾಗಿದ್ದಿರಬೇಕು. ಈ ಎರಡು ಕಡೆಗಳಲ್ಲಿಯೂ ಅದ್ಭುತವಾದ ದೇವಾಲಯಗಳಿವೆ. ನಾರಾಯಣಪುರದ ಎರಡು ದೇವಾಲಯಗಳಲ್ಲಿ ಒಂದು ಸುಮಾರು ಸರಿಯಾದ ರೀತಿಯಲ್ಲಿದ್ದರೂ, ಅದರ ಶೀಘ್ರ ಸಂರಕ್ಷಣೆ ಅತ್ಯಂತ ಆವಶ್ಯಕ ; ಮತ್ತೊಂದಕ್ಕೆ ಆಕಾಶವೇ ಚಾವಣಿಯಾಗಿ ದ್ವಾರಗಳು ಸುಂದರ ಕೆತ್ತನೆಗಳಿಂದ ಕೂಡಿವೆ.

ಹುಮ್ನಾಬಾದಿನ ಹತ್ತಿರವಿರುವ ಜಲಸಂಗ್ವಿಯ ಶಿವಾಲಯವು ಸಾಕಷ್ಟು ಚೆನ್ನಾಗಿ ಸಂರಕ್ಷಿತವಾಗಿದ್ದರೂ ಹಲವಾರು ಸಣ್ಣಪುಟ್ಟ ಸಂರಕ್ಷಣಾವಿಧಾನಗಳನ್ನಿಲ್ಲಿ ಅನುಸರಿಸಬೇಕು. ಈ ದೇವಾಲಯದ ಗೋಡೆಯೊಂದರ ಮೇಲೆ, ಚಾಲುಕ್ಯ ವಿಕ್ರಮಾದಿತ್ಯನ ಗುಣಗಾನ ಮಾಡುವ ಸಂಸ್ಕೃತ ಶ್ಲೋಕವೊಂದರ

ಬಿರುದುಬಿಲ್ಲೆಯನ್ನು ಧರಿಸಿದ ಸ್ತ್ರೀಯೊಬ್ಬಳ ಚಿತ್ರವನ್ನು ಕೆತ್ತಿದೆ. ಗುಡಿಯ ಗೋಡೆಯ ಮೇಲಿನ ನೃತ್ಯಗಣಪತಿಯೂ ಗಮನಾರ್ಹವಾದ ಶಿಲ್ಪಕೃತಿಯಾಗಿದೆ.

ಪರ್ಸಿಬ್ರೌನರ ಪ್ರಕಾರ ಬಳ್ಳಾರಿ, ಧಾರವಾಡ ಮತ್ತು ಹೈದರಾಬಾದ್ ಕರ್ಣಾಟಕದ ಭಾಗ ಗಳಲ್ಲಿನ ಈಚೆಯ ಚಾಲುಕ್ಯಶೈಲಿಯ (ಕ್ರಿ.ಶ. 1050-1300) ಕಟ್ಟಡಗಳು ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲಿನ ಪ್ರಾಚೀನ ಚಾಲುಕ್ಯ ಶೈಲಿಯ ರಚನೆಗಳ ಮತ್ತು ಮೈಸೂರಿನ ಹೊಯ್ಸಳ ದೇವಾಲಯಗಳ ನಡುವಣ ಕೊಂಡಿಯಂತಿದೆ. ಡಂಬಳದ ದೊಡ್ಡಬಸಪ್ಪನ ಗುಡಿಯೊಂದನ್ನು ಬಿಟ್ಟರೆ ಬೇರಾವುದೂ ಮೈಸೂರಿನ ಹೊಯ್ಸಳ ದೇವಾಲಯಗಳಂತೆ ನಕ್ಷತ್ರಾಕೃತಿಯಲ್ಲಿ ನಿರ್ಮಿತವಾಗಿಲ್ಲ ; ಸಮರೇಖೆ, ಸಮಕೋನಗಳ ತತ್ತ್ವದ ಆಧಾರದ ಮೇಲೆ ರಚಿತವಾಗಿರುವ ಅವು ಆಯತಾಕೃತಿಗಳಲ್ಲಿವೆ ಎಂಬ ಅಂಶದ ಕಡೆಗೆ ಬ್ರೌನರು ಗಮನ ಸೆಳೆಯುತ್ತಾರೆ. ಗದುಗಿನ ಸರಸ್ವತೀಮಂದಿರದ ಏಕಮೇವ ಅಪವಾದವೊಂದನ್ನುಳಿದು ಬೇರಾವ ದೇವಾಲಯದಲ್ಲಿಯೂ ಗರ್ಭಗೃಹದ ಸುತ್ತಲೂ ಒಳಪ್ರದಕ್ಷಿಣಾಪಥವಿಲ್ಲ. ಅಲ್ಲದೆ ದೇವಾಲಯಗಳ ಮುಖ್ಯದ್ವಾರವು ಮುಂದುಗಡೆಯಿರುವುದರ ಬದಲು ಪಕ್ಕಗಳಲ್ಲಿರುವುದು ಅಪರೂಪವೇನಲ್ಲ ; ಏಕೆಂದರೆ, ಪೂರ್ವದ ಅಂಚಿಗೆ ಅನೇಕ ಸಂದರ್ಭಗಳಲ್ಲಿ ಮತ್ತೊಂದು ಗರ್ಭಗೃಹವೋ ಕಂಬಗಳುಳ್ಳ ಮುಖಮಂಟಪವೋ ಇರುತ್ತದೆ.

ಚಾಲುಕ್ಯ ಶೈಲಿಯ ದೇವಾಲಯದ ಮತ್ತೊಂದು ಪ್ರಮುಖ ಲಕ್ಷಣವೆಂದರೆ, ಅದರ ದ್ವಾರಗಳ ಕಲಾಮಯತೆ. ಹೊಯ್ಸಳ ರೀತಿಯಲ್ಲಾದರೆ ಅದು ಕೇವಲ ಆಲಂಕಾರಿಕ ; ಆದರೆ ಚಾಲುಕ್ಯ ರೀತಿಯಲ್ಲಿ ಈ ವಿನ್ಯಾಸಕ್ಕೆ ತಳಹದಿಯಾಗಿ ವಾಸ್ತುಶಿಲ್ಪದ ಕೆಲವು ತತ್ತ್ವಗಳಿರುತ್ತವೆ. ಅದರ ಪ್ರಕಾರ, ಅಕ್ಕಪಕ್ಕಗಳಲ್ಲಿ ಗೋಡೆಗಂಬ, ಹಾಸುಗಲ್ಲು ಮತ್ತು ಲೋವೆಗಳಿರುತ್ತವೆ.

ಈ ರೀತಿಯ ಅತ್ಯಂತ ಪ್ರಾಚೀನ ಉದಾಹರಣೆಗಳು ಗದುಗು ರೈಲ್ವೆ ಜಂಕ್ಷನ್ನಿನ ಹತ್ತಿರದ ಕುಕ್ಕನೂರು ಎಂಬ ಹಳ್ಳಿಯಲ್ಲಿ ಸಿಗುತ್ತವೆ. ಇಲ್ಲಿನ ಎರಡು ದೇವಾಲಯಗಳಾದ ನವಲಿಂಗ ಮತ್ತು ಕಲ್ಲೇಶ್ವರಗಳು ಈ ಚಳವಳಿಯ ಮೂಲ ಸ್ವರೂಪವನ್ನು ತಿಳಿಸುವುದರ ಜೊತೆಗೆ, ಐಹೊಳೆ ಪಟ್ಟದಕಲ್ಲುಗಳಲ್ಲಿನ ಪ್ರಾಚೀನ ರೀತಿಗೂ ಈಗ ನಾವು ಪರಿಶೀಲಿಸುತ್ತಿರುವ ಈಚೆಯ ರೀತಿಗೂ ಮಧ್ಯದ ಒಂದು ಹಂತವನ್ನೊದಗಿಸುತ್ತವೆ. ಇವೆರಡರಲ್ಲಿ ನವಲಿಂಗವು ಸ್ವಲ್ಪ ಹಿಂದಿನದಾದರೂ ಈ ಎರಡೂ ಪ್ರಾಚೀನ ಶೈಲಿಯ ಪದ್ಧತಿಯಂತೆ ಮರಳುಗಲ್ಲಿನಿಂದ ನಿರ್ಮಿತವಾಗಿವೆ. ನವಲಿಂಗದಲ್ಲಿನ ಶಿಖರಗಳು ಪಟ್ಟದಕಲ್ಲಿನ ಮಾದರಿಯನ್ನು ಬಹುಮಟ್ಟಿಗೆ ಹೋಲುತ್ತಿದ್ದರೂ ಗುಮ್ಮಟದ ತುದಿಯು ಆಗಲೇ ಬದಲಾವಣೆಯ ಸೂಚನೆಗಳನ್ನು ಕೊಡುತ್ತದೆ. ನಂದಿಮಂಟಪ, ನಾಲ್ಕುಕಂಬಗಳುಳ್ಳ ನವರಂಗ, ಸುಖನಾಸಿ ಮತ್ತು ಗರ್ಭಗೃಹಗಳು, ಮಟ್ಟದಲ್ಲಿರುವ 67 ಅಡಿ ಉದ್ದ 37 ಅಡಿ ಅಗಲದ, ಕಲ್ಲೇಶ್ವರವು ತನ್ನೆಲ್ಲ ಭಾಗಗಳಿಂದ ಕೂಡಿ ಪೂರ್ಣ ವಾಗಿದೆ ; ಅದರ ಶಿಖರವು 37 ಅಡಿ ಎತ್ತರವಾಗಿದ್ದು ಅಚ್ಚುಕಟ್ಟಾದ, ಸಪ್ರಮಾಣವಾದ ರಚನೆಯಾಗಿದೆ. ಹೊರಗೋಡೆಗಳು ಹತ್ತಿರ ಹತ್ತಿರವಿರುವ ಗೋಡೆಗಂಬಗಳಿಂದ ಸರಳವಾದರೂ ಪ್ರಭಾವಪೂರ್ಣವಾಗಿ ಅಲಂಕೃತವಾಗಿವೆ. ಇಲ್ಲಿನ ಅತ್ಯಂತ ಶೈಕ್ಷಣಿಕ ಅಂಶವೆಂದರೆ, ಪಟ್ಟದಕಲ್ಲಿನ ಮಾದರಿಯಿಂದಾದ ಬದಲಾವಣೆಯ ಪ್ರಾರಂಭಿಕ ದೆಸೆಯನ್ನು ಸೂಚಿಸುವ ಗೋಪುರ.

ಈ ಶೈಲಿಯು ರೂಪುಗೊಂಡ ಮುಂದಿನ ಹಂತವನ್ನು ಗದುಗಿನಿಂದ ಏಳು ಮೈಲಿ ದೂರವಿರುವ ಲಕ್ಕುಂಡಿಯ ಜೈನದೇವಾಲಯದಲ್ಲಿ ಕಾಣಬಹುದು. ಇಲ್ಲಿನ ಬಾಹ್ಯರಚನೆಯು ಸಾಧಾರಣವಾಗಿ ಕಲ್ಲೇಶ್ವರ ದಂತೆಯೇ ಇದೆ. ಆದರೆ ಹೆಚ್ಚು ಶ್ರೀಮಂತ ಶಿಲ್ಪಗಳಿಂದ ಕೂಡಿ ಇದು ಇನ್ನೂ ಅಲಂಕಾರವಾಗಿದೆ. ಅದರ ಸ್ವರೂಪವೆಂದರೆ, ಮೇಲೆ ಚಿಕ್ಕ ಗೋಪುರವೊಂದಿರುವ ಸಣ್ಣ ಗೋಡೆಗಂಬ; ಅಕ್ಕಪಕ್ಕದ ಎರಡು

ಪುಟ್ಟ ಗೋಡೆಗಂಬಗಳಿಂದ ಹೊರಟು ಅದರ ಮೇಲೆ ಸುಂದರವಾಗಿ ಬಾಗಿರುವ ಒಂದು ಮೊನಚಾದ ಆವರ್ತ. ಹೊಯ್ಸಳ ವಂಶದ ಎರಡನೆಯ ಬಲ್ಲಾಳನು ಲಕ್ಕುಂಡಿಯನ್ನು ಕ್ರಿ.ಶ. 1161ರಲ್ಲಿ ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದನ್ನು ನಾವಿಲ್ಲಿ ನೆನೆಯಬಹುದು. ಆದರೆ ಅದಕ್ಕಿಂತ ಮೊದಲೇ ಅದೊಂದು ಪ್ರಮುಖ ಪಟ್ಟಣವಾಗಿದ್ದಿರಬೇಕು. ಸಹಜವಾಗಿಯೇ ಅದರ ಕಾಲವನ್ನು ಹನ್ನೊಂದನೆಯ ಶತಮಾನದ ಉತ್ತರಾರ್ಧವೆಂದು ಪರ್ಸಿಬ್ರೌನರು ನಿರ್ಧರಿಸುತ್ತಾರೆ.

ಮೂರನೆಯ ಘಟ್ಟದಲ್ಲಿ ಒಂದು ಹೊಸ ವಾಸ್ತುಶಿಲ್ಪ ಸಾಮಗ್ರಿಯು ಹೇರಳವಾಗಿ ಬಳಕೆಯಾದದ್ದನ್ನು ಕಾಣುತ್ತೇವೆ. ಇಲ್ಲಿಯ ವರೆಗೂ ಚಾಲುಕ್ಯ ದೇವಾಲಯಗಳಲ್ಲಿ ನಿರ್ದಿಷ್ಟ ಪ್ರಾಮುಖ್ಯವನ್ನೇನೂ ಪಡೆಯದ ಲೋವೆಯೊಂದಿರುತ್ತಿತ್ತು. ಇದು ಬಿಸಿಲು ಮಳೆಗಳಿಂದ ದೇವಾಲಯದ ಶಿಲ್ಪವನ್ನು ರಕ್ಷಿಸಲು ಅಸಮರ್ಥವಾದದ್ದರಿಂದ ಮುಂದೆ ಇನ್ನೂ ಸಮರ್ಥವಾದ ಉಪಾಯವೊಂದನ್ನು ಬಳಸಲಾಯಿತು. ಇದು ಲೋವೆಗಿಂತ ಹೆಚ್ಚಾಗಿ ಅಗಲವಾದ ಮುಂಜೂರಿನ ಆಕಾರವನ್ನು ಪಡೆಯಿತು ; ಹಲವು ವೇಳೆ ಎರಡು ಬಾಗುಗಳಿಂದ ಕಲಾತ್ಮಕವಾಗಿರುವುದು ಮಾತ್ರವಲ್ಲದೆ ಕಟ್ಟಡದ ಒಂದು ಉಪಯುಕ್ತ ಭಾಗವೂ ಆಯಿತು. ಧಾರವಾಡ ಜಿಲ್ಲೆಯ ಪೂರ್ವದ ಗಡಿಯಲ್ಲಿ ತುಂಗಭದ್ರಾ ನದಿಯ ದಡದ ಮೇಲಿರುವ ಚೌಡದಂಪುರ ಎಂಬ ಸಣ್ಣ ಗ್ರಾಮದಲ್ಲಿರುವ ಮುಕ್ತೇಶ್ವರ* ದೇವಾಲಯದಲ್ಲಿ ಈ ಮಾದರಿಯು ಮೊದಮೊದಲು ಬಳಕೆಗೊಂಡದ್ದನ್ನು ಕಾಣುತ್ತೇವೆ. ಮುಕ್ತೇಶ್ವರವನ್ನು ಬಹುಶಃ ಹನ್ನೊಂದನೆಯ ಶತಮಾನದ ಕೊನೆಯಲ್ಲಿ ನಿರ್ಮಿಸಲಾಯಿತು. ಈ ಸುಂದರವಾದ ಚಿಕ್ಕ ಮಂದಿರವು ಆ ಕಾಲದ ಜೀವಂತವಾದ, ಬೆಳೆಯುತ್ತಿದ್ದ, ಕಟ್ಟಡ ಕಲೆಯನ್ನು ತೋರಿಸುತ್ತದೆ.

ಈ ಶೈಲಿಯು ಹನ್ನೆರಡನೆಯ ಶತಮಾನದ ಹೊತ್ತಿಗೆ ಪರಿಪಕ್ವವಾಯಿತು, ತನ್ನ ಔನ್ನತ್ಯವನ್ನು ಪಡೆಯಿತು. ಈ ಮಾದರಿಯ ರಚನೆಗಳಲ್ಲಿ ಅತ್ಯಂತ ಸುಂದರವಾದ ಮೂರು ದೇವಾಲಯಗಳೆಂದರೆ : ಲಕ್ಕುಂಡಿಯ ಕಾಶೀವಿಶ್ವೇಶ್ವರ ದೇವಾಲಯ, ಹರಪನಹಳ್ಳಿಗೆ ಹದಿನೇಳು ಮೈಲಿ ದೂರದಲ್ಲಿರುವ ಕುರುವಟ್ಟಿಯ ಮಲ್ಲಿಕಾರ್ಜುನ ದೇವಾಲಯ ಮತ್ತು ಇಟ್ಟಗಿಯ ಮಹಾದೇವ ಮಂದಿರ. ಶ್ರೀಮಂತ ಹಾಗೂ ವೈವಿಧ್ಯಮಯ ಶಿಲ್ಪದ ಗೋಪುರದಿಂದೊಡಗೂಡಿದ ಕಾಶೀವಿಶ್ವೇಶ್ವರವು ಎರಡು ಗರ್ಭಗೃಹಗಳುಳ್ಳ ದೇವಾಲಯ. ದ್ವಾರಗಳು ಸೂಕ್ಷ್ಮವಾದ ಮತ್ತು ಸಂಕೀರ್ಣವಾದ ಶಿಲ್ಪದ ಒಂದು ಪರಿಪೂರ್ಣ ಮಾದರಿಯಾಗಿವೆ. ಕೆಲವು ಪಟ್ಟಿಕೆಗಳ ಕೆತ್ತನೆಗಳಂತೂ ಲೋಹಶಿಲ್ಪವನ್ನೋ ಕಸೂತಿಯನ್ನೋ ಹೋಲುತ್ತವೆ. ಈ ಕಾರಣದಿಂದ ಕಾಶೀವಿಶ್ವೇಶ್ವರ ದೇವಾಲಯವು ಅತ್ಯಂತ ಮಿಗಿಲಾದ ಆಲಂಕಾರಿಕ ವಾಸ್ತುಶಿಲ್ಪ ರಚನೆಗಳಲ್ಲಿ ಒಂದಾಗಿದೆ.

ಬಳ್ಳಾರಿ ಜಿಲ್ಲೆಯ ಕುರುವಟ್ಟಿಯಲ್ಲಿನ ಮಲ್ಲಿಕಾರ್ಜುನ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಮಂಟಪಗಳಿಂದ ಕೂಡಿ ಚೊಕ್ಕವಾಗಿದೆ. ಮಂಟಪದೊಳಗಿನ ಮತ್ತು ದ್ವಾರಮಂಟಪದ ಕಂಬಗಳು ಎಂದಿನಂತೆಯೇ ಶ್ರೀಮಂತ ಶಿಲ್ಪದಿಂದ ಕೂಡಿವೆ. ಆದರೆ ಹೆಚ್ಚಿನ ಆಸಕ್ತಿಯನ್ನು ಹುಟ್ಟಿಸುವುದೆಂದರೆ, ಕಟ್ಟಡದ ಮೇಲ್ಭಾಗವನ್ನು ಎತ್ತಿಹಿಡಿದ ಕಂಬಗಳ ಮೇಲ್ಭಾಗಗಳಲ್ಲಿನ ಗುಜ್ಜುಬಂಕಗಳ ದೊಡ್ಡವಾದ ಓರೆ ಶಿಲ್ಪಕೃತಿಗಳು.

ಬಳ್ಳಾರಿ—ಗದುಗುಗಳ ನಡುವಣ ಮೀಟರ್‌ಗೇಜ್ ರೈಲ್ವೆಗಾಡಿಯಲ್ಲಿ ಬನ್ನಿಕೊಪ್ಪ ನಿಲ್ದಾಣದ

---

*ಮುಕ್ತೇಶ್ವರವು ಸೇರಿದ ಕಾಲಕ್ಕೇ ಧಾರವಾಡ ಜಿಲ್ಲೆಯಲ್ಲಿನ ಹಾವೇರಿಯ ಸಿದ್ಧೇಶ್ವರ, ಹರಳಹಳ್ಳಿಯ ಸೋಮೇಶ್ವರ ಮತ್ತು ನೀರಲಗಿಯ ಸಿದ್ಧರಾಮೇಶ್ವರ ದೇವಾಲಯಗಳು ಸೇರಿವೆ.

(ಗದುಗಿನಿಂದ 22 ಮೈಲಿ ಪೂರ್ವಕ್ಕೆ) ದಕ್ಷಿಣಕ್ಕೆ ಸುಮಾರು ಮೂರು ಮೈಲಿ ದೂರದಲ್ಲಿನ ಇಟ್ಟಗಿಯ ಮಹಾದೇವಾಲಯವು ಕ್ರಿ.ಶ. 1112ರಲ್ಲಿ ನಿರ್ಮಿತವಾಯಿತು. ಮೈಸೂರಿನ ಹಳೇಬಿಡನ್ನು ಬಿಟ್ಟರೆ, ಕನ್ನಡ ನಾಡಿನಲ್ಲಿ ಇದೇ ಅತ್ಯಂತ ಸುಂದರವಾದುದೆಂದು ಕಸೆನ್ಸ್‌ರ ಅಭಿಪ್ರಾಯ. ಇದರ ವಿನ್ಯಾಸದಲ್ಲಿನ ವೈಶಿಷ್ಟ್ಯವೆಂದರೆ : ಗರ್ಭಗೃಹಕ್ಕೆ ಸೇರಿದ ಒಳಕೋಣೆ, ದಕ್ಷಿಣ-ಉತ್ತರ ಪಾರ್ಶ್ವಗಳಲ್ಲಿ ಕೈಪಿಡಿಗೋಡೆಗಳಿಂದ ಆವೃತವಾದ ಒಂದು ಹಜಾರ ಮತ್ತು ಪಾರ್ಶ್ವಗಳಲ್ಲಿ ತೆರೆದಿರುವ ಕಂಬಗಳುಳ್ಳ ಮತ್ತೊಂದು ಹಜಾರ. ದೇವಾಲಯವು ಪೂರ್ವಾಭಿಮುಖವಾಗಿದೆ ; ಪೂರ್ವದಿಕ್ಕಿನಂಚಿನ ಕೈಸಾಲೆಯು ಮೊದಲು ಅರುವತ್ತೆಂಟು ಕಂಬಗಳ ಮೇಲೆ ಆಧಾರಿತವಾಗಿತ್ತು. ಇದರಲ್ಲಿ ಇಪ್ಪತ್ತಾರು ದೊಡ್ಡ ಕಂಬಗಳು ನೆಲದ ಮೇಲೆ ನಿಂತು ಚಾವಣಿಗೆ ಪ್ರಮುಖ ಆಧಾರವನ್ನು ಒದಗಿಸುತ್ತವೆ ; ಮಿಕ್ಕವು ಚಿಕ್ಕವಾಗಿದ್ದು ಕೈಸಾಲೆಯ ಸುತ್ತಲಿನ ಕಲ್ಲುಬೆಂಚಿನ ಮೇಲೆ ನಿಂತು ಮುಂಜೂರುಗಳನ್ನು ಎತ್ತಿ ಹಿಡಿದಿವೆ. ಇಲ್ಲಿನ ಬಂಡೆಯೊಂದರ ಮೇಲೆ ಕೊರೆದಿರುವ ಶಾಸನದ ಪ್ರಕಾರ, ಈ ದೇವಾಲಯವನ್ನು ನಿರ್ಮಿಸಿದವನು ಪೂರ್ವಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಮಹಾದೇವ. 'ದೇವಾಲಯ ಚಕ್ರವರ್ತಿ' ಎಂದು ಈ ದೇವಾಲಯ ವನ್ನು ಶಾಸನವು ವರ್ಣಿಸಿರುವುದು ಸೂಕ್ತವಾಗಿದೆ.

ಧಾರವಾಡ ಜಿಲ್ಲೆಯ ಗದುಗಿನಲ್ಲಿ ಪ್ರಮುಖ ದೇವಾಲಯಗಳ ಒಂದು ಗುಂಪೇ ಇದೆ. ಇವುಗಳಲ್ಲಿ ಬಹುಪಾಲು ದುಃಸ್ಥಿತಿಯಲ್ಲಿವೆ. ಇವುಗಳಲ್ಲಿ ಸರಸ್ವತೀ ದೇವಾಲಯವು ಆಸಕ್ತಿ ಹುಟ್ಟಿಸುತ್ತದೆ. ಏಕೆಂದರೆ, ಇದರಲ್ಲಿನ ಒಂದು ಗರ್ಭಗೃಹವು ಮುಚ್ಚಲ್ಪಟ್ಟ ಪ್ರದಕ್ಷಿಣಾಪಥದಿಂದ ಆವೃತವಾಗಿದೆ ; ಚಾಲುಕ್ಯ ದೇವಾಲಯಗಳಲ್ಲಿ ಹೀಗಿರುವುದು ಇಲ್ಲಿ ಮಾತ್ರ. ಸೋಮೇಶ್ವರದಲ್ಲಿ ಗೋಡೆಗಳನ್ನು ಎರಡು ಹಂತವಾಗಿ ವಿಂಗಡಿಸಿದ್ದಾರೆ. ಗೋಡೆಗಳ ಅಲಂಕಾರ ಸಾಧನವಾಗಿ ಶಿಲ್ಪಕೃತಿಗಳನ್ನು ಬಳಸಿರುವುದು ಮತ್ತು ಮೇಲ್ಛಾಯಗಳ ಗಚ್ಚಿನ ಕೆಲಸ—ಇದು ಈಚೆಯ ಚಾಲುಕ್ಯರ ಮತ್ತು ಹೊಯ್ಸಳರ ರೀತಿಗಳ ಸಮ್ಮಿಲನದ ಒಂದು ಲಕ್ಷಣ.

ಈಚೆಯ ಚಾಲುಕ್ಯ ಶೈಲಿಯು ರೂಪುಗೊಂಡ ವಿವಿಧ ಹಂತಗಳನ್ನು ಸೂಚಿಸುವ ಈ ಪ್ರಮುಖ ಬೃಹತ್ ರಚನೆಗಳಲ್ಲದೆ, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿನ ಇಂತಹ ರಚನೆಯ ಹಲವಾರು ದೇವಾ ಲಯಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು : ಬಿಜಾಪುರ ಜಿಲ್ಲೆಯ ಹುನಗುಂದಕ್ಕೆ ಹದಿನಾರು ಮೈಲಿ ಆಗ್ನೇಯಕ್ಕೆ ಅರಸೀಬೀದಿಯಲ್ಲಿ (ವಿಕ್ರಮಾದಿತ್ಯನ ಹಳೆಯ ರಾಜಧಾನಿಯಾದ್ದರಿಂದ ವಿಕ್ರಮಪುರ ಎಂದೂ ಇದಕ್ಕೆ ಹೆಸರಿತ್ತು) ಎರಡು ಜೈನ ಬಸದಿಗಳಿವೆ ; ಇವುಗಳಲ್ಲಿ ಚಾಲುಕ್ಯ ಮತ್ತು ಕಲಚೂರ್ಯರ ಶಾಸನಗಳು ದೊರೆಯುತ್ತವೆ.

ಬಾದಾಮಿಗೆ ಒಂಬತ್ತು ಮೈಲಿ ನೈಋತ್ಯದಲ್ಲಿರುವ ಬೇಲೂರಿನ ನಾರಾಯಣನ ಗುಡಿಯಲ್ಲಿ ಜಗದೇಕ ಮಲ್ಲ ಜಯಸಿಂಹ ಮತ್ತು ಅವನ ಸೋದರಿ ಅಕ್ಕಾದೇವಿಯರ ಶಾಸನವೊಂದಿದೆ. ಬಾಗೇವಾಡಿಯ ಈಶಾನ್ಯಕ್ಕೆ ಆರು ಮೈಲಿ ದೂರದ ಇಂಗಳೇಶ್ವರದಲ್ಲಿ ಕ್ರಿ.ಶ. 1128ರಲ್ಲಿ ನಿರ್ಮಿತವಾದ ಜೈನ ಬಸದಿಗಳಿವೆ. ಹುನ ಗುಂದಕ್ಕೆ ಹತ್ತು ಮೈಲಿ ಈಶಾನ್ಯಕ್ಕೆ ಇರುವ ಕರ್ಡಿಯಲ್ಲಿ ಈಗ ಶಿವಾಲಯವಾಗಿ ಉಪಯೋಗಿಸುತ್ತಿರುವ ಜೈನ ಬಸದಿಯೊಂದರಲ್ಲಿ ಕ್ರಿ.ಶ. 1153ರ ಶಾಸನವೊಂದು ದೊರೆಯುತ್ತದೆ.

ಕಸೆನ್ಸ್ ಅವರು ಹೇಳುವ ಇತರ ಪರಿಚಿತ ಉದಾಹರಣೆಗಳೆಂದರೆ: ಹಾನಗಲ್, ಬಂಕಾಪುರ, ಹರಿಹರ, ರಟ್ಟೆಹಳ್ಳಿ, ಉಣಕಲ್, ಬೆಳಗಾವಿ, ಹಿರೇ ಹಡಗಲಿ, ನಿಲಗುಂದ, ಹೂವಿನ ಹಡಗಲಿ ಮತ್ತು ಹಳವಾಗಲು.

ಕೆಲವು ಶಾಸನಗಳಲ್ಲಿ ದೇವಾಲಯ ನಿರ್ಮಾಣದ ಬಗೆಗಿನ ಉಲ್ಲೇಖಗಳೂ ಇವೆ. ನಾಗೈಯ

ಕ್ರಿ.ಶ. 1092ರ ಶಾಸನವೊಂದು, ಹಿರಿಯ ದಂಡನಾಯಕ ಮಧುಸೂದನನು ಮಧುಸೂದನ ದೇವಾಲಯವನ್ನು ಕಟ್ಟಿದ ಬಗೆಗೆ ಹೇಳುತ್ತದೆ. ಇದು ಚಿನ್ನದ ಕಲಶ ಮತ್ತು ಹಲವಾರು ಶಿಲ್ಪಕೃತಿಗಳಿಂದ ಅಲಂಕೃತವಾಗಿತ್ತು (ಹೈದರಾಬಾದು ಪ್ರಾಚ್ಯವಸ್ತು ಸರಣಿಯಲ್ಲಿ ನಂ. 8, ಪುಟ 31-35)

ಕ್ರಿ.ಶ. 1090ರಲ್ಲಿ ಚೌಂಡರಸನಿಂದ ಕಟ್ಟಿಸಲ್ಪಟ್ಟ ಹಳಗೊಂದಿಯ ಬಲೇಶ್ವರ ದೇವಾಲಯವು ದೇವೇಂದ್ರನ ವಿಮಾನವನ್ನು ಹೋಲುತ್ತಿತ್ತಂತೆ (The early History of Deccan, Vol. I, ಪುಟ 426). ಕುಡತಿಣಿಯಲ್ಲಿ ಮಾರ್ತಾಂಡ ನಾಯಕನು ನಿರ್ಮಿಸಿದ ಮಾರ್ತಾಂಡೇಶ್ವರ ದೇವಾಲಯದ ಸಭಾಮಂಟಪವು ಇಡೀ ಪ್ರಪಂಚದ ಈ ರೀತಿಯ ಅತ್ಯಂತ ಸುಂದರ ಸಭಾಮಂಟಪಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಈ ಸಭಾಮಂಟಪದ ರಚನೆ ಎಷ್ಟು ಸುಂದರವಾಗಿದೆಯೆಂದರೆ, ಅದೊಂದು ಲತಾಮಂಟಪದಂತೆ ಗೋಚರಿಸುತ್ತಿತ್ತು. (The Early History of Deccan, ಸಂಪುಟ 1, ಪುಟ 426).

ಬಳ್ಳಿಗಾಮೆಯ ಕ್ರಿ.ಶ. 1159ರ ಒಂದು ದಸ್ತಾವೇಜಿನಲ್ಲಿ ಕೇಶವ ದೇವಾಲಯ ನಿರ್ಮಾಣದಲ್ಲಿ ಕೇಶಿರಾಜನು ವಹಿಸಿದ್ದ ಪಾತ್ರದ ಬಗೆಗೆ ಉಲ್ಲೇಖ ದೊರೆಯುತ್ತದೆ (E.C. VII, SK. 123). ಸೂಡಿಯಲ್ಲಿನ ಸುಂದರವಾದ ನಾಗೇಶ್ವರ ದೇವಾಲಯವು 'ಜ್ಞಾನದ ಗಣಿ', ನಿಜವಾದ 'ವಕ್ರೋಕ್ತಿ ವಾಚಸ್ಪತಿ' ಎಂದು ಹೆಸರು ಪಡೆದಿದ್ದ ಶಂಕರಾರ್ಯನಿಂದ ಕ್ರಿ.ಶ. 1060ರಲ್ಲಿ ನಿರ್ಮಿತವಾಯಿತು (EC., XV, 90).

ಹಲವಾರು ಪ್ರಖ್ಯಾತ ಶಿಲ್ಪಿಗಳ ಹೆಸರುಗಳೂ ಶಾಸನಗಳಿಂದ ನಮಗೆ ದೊರಕುತ್ತವೆ. ಮಧುಸೂದನ ದೇವಾಲಯದ ನಿರ್ಮಾಣದಲ್ಲಿ ಹಾಗೂ ಅದರ ಅಲಂಕರಣದಲ್ಲಿ ನಾಗೋಜನು ಭಾಗವಹಿಸಿದ್ದನು (E. I. I, 341). ಚಿತ್ರದುರ್ಗ ತಾಲೂಕಿನ ಒಂದು ಶಾಸನವು ಮಹಾಕಲನೆಂಬ ಶಿಲ್ಪಿಯೊಬ್ಬನ ಹೆಸರನ್ನು ಹೇಳಿ, ತಾನು ಕೊರೆದ ಶಾಸನಗಳ ಅಕ್ಷರಗಳನ್ನು ಸುತ್ತಿಕೊಂಡಿರುವಂತೆ ಸಿಂಹ, ಆನೆ, ಗಿಳಿ ಮುಂತಾದ ಪ್ರಾಣಿಗಳನ್ನು ಕೆತ್ತಬಲ್ಲವನಾಗಿದ್ದನೆಂದು ತಿಳಿಸುತ್ತದೆ (E.C., XI, Cd. 47).

ಹನ್ನೊಂದನೆಯ ಶತಮಾನದಲ್ಲಿ ಈ ಶೈಲಿಯು ಶಿವಮೊಗ್ಗ ಜಿಲ್ಲೆಗೂ ಪ್ರವೇಶಿಸಿತು. ಚಾಲುಕ್ಯರ ಸಾಮಂತರಾಗಿ ತಮ್ಮ ಆಳಿಕೆಯನ್ನು ಪ್ರಾರಂಭಿಸಿದ ಹೊಯ್ಸಳರು ಕ್ರಮವಾಗಿ ತಮ್ಮ ಕಟ್ಟಡಗಳಿಗೆ ಚಾಲುಕ್ಯ ಶೈಲಿಯನ್ನೇ ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಬಳಸಲು ಪ್ರಾರಂಭಿಸಿದರು. ಬಳ್ಳಿಗಾಮೆ ಶಿರಾಳಕೊಪ್ಪದ ಬಳಿಯ ಕುಪ್ಪಗದ್ದೆ ಮತ್ತು ಕುಪತೂರಿನ ದೇವಾಲಯಗಳು ಇದರ ಪರಿಪೂರ್ಣ ಮಾದರಿಗಳು. ಬಳ್ಳಿಗಾಮೆಯ ಕ್ರಿ.ಶ. 1070ರ ತ್ರಿಪುರಾಂತಕ ದೇವಾಲಯವು ತುಂಬ ಜನಪ್ರಿಯವಾದ 'ರಾಮಾಯಣ'ದಿಂದ ಮಾತ್ರವಲ್ಲ, 'ಪಂಚತಂತ್ರ'ದಿಂದಲೂ ಕತೆಗಳನ್ನು ನಿರೂಪಿಸಿರುವ ಶಿಲ್ಪಕ ಪುಟಿಕೆಗಳಿಗೆ (panels) ಹೆಸರುವಾಸಿಯಾಗಿದೆ. ಪ್ರಸಿದ್ಧ ಕತೆಗಳಾದ ಮೊಲ ಮತ್ತು ಆಮೆ, ನರಿ ಮತ್ತು ಟಗರುಗಳು, ಹಂಸಗಳು ಮತ್ತು ಆಮೆ, ಮೊಸಳೆ ಮತ್ತು ಕೋತಿ–ಇವುಗಳ ಕೆತ್ತನೆಗಳು ತುಂಬ ನಿಷ್ಠಾವಂತಿಕೆಯನ್ನು ತೋರಿಸುತ್ತವೆ.

ಬಳ್ಳಿಗಾಮೆಯ ಉಮಾಮಹೇಶ್ವರ ಮುಂತಾದವು ಸುಂದರ ಶಿಲ್ಪವಾಗಿವೆ. ಶಿವನ ಬಲಗಾಲು ನಂದಿಯ ಮೇಲಿದೆ, ಉಮೆಯು ಅವನ ಎಡತೊಡೆಯ ಮೇಲೆ ತನ್ನ ಬಲಗೈಯನ್ನು ಅವನ ಭುಜದ ಮೇಲಿಟ್ಟು ಮಂಡಿಸಿದ್ದಾಳೆ. ಶಿವನು ಜಟಾಮುಕುಟನಾಗಿ, ಮಕರಕುಂಡಲಧಾರಿಯಾಗಿ ಸ್ಮಿತವದನನಾಗಿದ್ದಾನೆ. ಉಮೆಯ ಗುಂಗುರು ಕೂದಲು ತುಂಬ ಮುದ್ದಾಗಿ ಚಿತ್ರಿತವಾಗಿದೆ. ಅವಳು ತನ್ನ ಎಡಪಾದವನ್ನು ತಾವರೆಯೊಂದರ ಮೇಲಿರಿಸಿದ್ದಾಳೆ. ಅವರ ಪಾರ್ಶ್ವಗಳಲ್ಲಿ ಕುಮಾರ-ಗಣಪತಿಯರು ನಿಂತಿದ್ದಾರೆ.

ಹೆಸರಿಸಬೇಕಾದ ಮತ್ತೊಂದು ನಿರ್ಮಾಣವೆಂದರೆ, ಬಳ್ಳಿಗಾವೆಯ ಗಂಡಭೇರುಂಡ ಸ್ತಂಭ. ಕ್ರಿ.ಶ. 1042ರಲ್ಲಿ ಮೊದಲನೆಯ ಚಾಲುಕ್ಯ ಸೋಮೇಶ್ವರನ ಸಾಮಂತನಾಗಿದ್ದ ಕದಂಬ ದೊರೆ ಚಾಮುಂಡರಾಯನು ಇದನ್ನು ನಿಲ್ಲಿಸಿದನು. ಇದಾದ ಮೇಲೆ ನಿರ್ಮಿತವಾದ ಜಗದೇಕಮಲ್ಲೇಶ್ವರ ದೇವಾಲಯವು ಈಗ ಇಲ್ಲವಾಗಿದೆ. ಗಂಡಭೇರುಂಡದ ಆಕೃತಿಯನ್ನು ತನ್ನ ಶಿಖರದಲ್ಲಿ ಹೊಂದಿರುವ ಈ ಬೃಹತ್ ಸ್ತಂಭವು ಸುಂದರವಾದ ಒಂದು ಏಕ ಶಿಲಾರಚನೆ. ಈ ಸ್ಫೂರ್ತಿಯುತವಾದ ಆಕೃತಿಯು ಅರ್ಧಮಾನುಷ–ಅರ್ಧಪಕ್ಷಿರೂಪವಾಗಿದ್ದು, ಎರಡನ್ನೂ ಸುಂದರವಾಗಿ ಸಮರಸಗೊಳಿಸಿ, ತನ್ನ ಪ್ರತಿ ಭಾಗದಲ್ಲಿಯೂ ಸಹಜವಾಗಿದೆ.

ಸ ಲ್ಪ ಆಸಕ್ತಿಯನ್ನು ಹುಟ್ಟಿಸುವ ಮತ್ತೊಂದು ಶಿಲ್ಪವು ಒಂದು ಶಿಲಾಶಾಸನದ ಶಿಖರ ಭಾಗದಲ್ಲಿ ದೊರೆಯುತ್ತದೆ (E.C., VII, ಶಿವಮೊಗ್ಗ–ಶಿಕಾರಿಪುರ, 129; ಕಾಲ ಕ್ರಿ.ಶ. 1071). ಆ ಆಕೃತಿಯು ಚಾಲುಕ್ಯರ ದೊರೆ ಭುವನೈಕಮಲ್ಲದೇವನ ಕಾಲದ ಗುಣಗಳ್ಳನೆಂಬವನದೆಂದು ಈ ಶಾಸನವು ತಿಳಿಸುತ್ತದೆ. ಈತನು ಸುಪ್ರಸಿದ್ಧ ಅದ್ವೈತಮತ ಪ್ರತಿಪಾದಕನಾಗಿದ್ದನು.

ನಾವು ಪರಿಶೀಲಿಸುತ್ತಿರುವ ಈ ಕಾಲದ ಕಂಚಿನ ಶಿಲ್ಪದ ಬಗ್ಗೆ ಒಂದು ಮಾತನ್ನು ಹೇಳಬೇಕು. ಚಾಲುಕ್ಯ ಶೈಲಿಯ ಕಂಚಿನ ಶಿಲ್ಪವು ದೊರೆಯುವುದು ತುಂಬ ಅಪರೂಪ; ಆದರೆ 1962ರಲ್ಲಿ ಬೊಂಬಾಯಿಯ ಕಾರ್ಲ್ ಖಂಡೇಲವಾಲರಿಂದ ಪರಿಷ್ಕೃತವಾದ ವಿನ್ಸೆಂಟ್‌ಸ್ಮಿತ್ತರ 'ಭಾರತ-ಸಿಂಹಳಗಳ ಲಲಿತಕಲಾ ಇತಿಹಾಸ'ದ (History of fine Arts in India and Ceylon) ಮೂರನೆಯ ಆವೃತ್ತಿಯಲ್ಲಿ ಮೂರು ಮಾದರಿಗಳನ್ನು ಕೊಟ್ಟಿದ್ದಾರೆ. 135A ಚಿತ್ರವು ಪ್ರಿನ್ಸ್ ಆಫ್ ವೇಲ್ಸ್ ವಸ್ತು ಸಂಗ್ರಹಾಲಯದಲ್ಲಿನ ಬಾಹುಬಲಿಯ ಮೂರ್ತಿಯದು.* ಗೊಮ್ಮಟನ ಸುಳಿಗುರುಳು ಅವನ ಭುಜಗಳ ಮೇಲೆ ಬಿದ್ದಿದೆ; ಮಾಧವೀಲತೆಯು ಅವನ ತೊಡೆ-ತೋಳುಗಳನ್ನು ಸುತ್ತುವರಿದಿದೆ; ಕಿವಿಗಳು ಉದ್ದ ವಾಗಿದ್ದು, ಮುಖವು ಪ್ರಸನ್ನತೆ, ಶಾಂತಿ ಮತ್ತು ಪಾವಿತ್ರ್ಯಗಳಿಂದ ದೀಪ್ತವಾಗಿದೆ. ಇದರ ಕಾಲ ಬಹುಶಃ ಒಂಬತ್ತನೆಯ ಶತಮಾನ.

136-B ಚಿತ್ರವು ಹದಿಮೂರನೆಯ ಶತಮಾನದ್ದಾಗಿದ್ದು, ಚಂದ್ರಶೇಖರನ ಮೂರ್ತಿಯದಾಗಿದೆ; ಆದರೆ ಇದು ಒರಟು. ಇದು ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿದೆ. ಪುದುಕೋಟೆಯ ವಸ್ತುಸಂಗ್ರಹಾ ಲಯದಲ್ಲಿ 9-10ನೆಯ ಶತಮಾನಕ್ಕೆ ಸೇರಿದ ನಿಂತ ನಿಲುವಿನ ಜೈನ ತೀರ್ಥಂಕರನ ಪ್ರತಿಮೆಯೊಂದಿದೆ. ಪ್ರಭಾವಳಿಯ ತುಂಬ ಇತರ ತೀರ್ಥಂಕರರ ಸಣ್ಣ ಸಣ್ಣ ಮೂರ್ತಿಗಳು ಕೆತ್ತಲ್ಪಟ್ಟಿವೆ (ಸ್ಮಿತ್ತರಲ್ಲಿ 139-A ಚಿತ್ರ).

---

*ಈ ಕಂಚಿನ ಪ್ರತಿಮೆಯು ಶ್ರವಣಬೆಳಗೊಳದ್ದಾಗಿದ್ದು, ಅದರ ಕಾಲವು ಒಂಬತ್ತನೆಯ ಶತಮಾನದ್ದಾದ್ದರಿಂದ, ಅದು ಪಶ್ಚಿಮದ ಗಂಗರದ್ದಾಗಿರಬಹುದು.

# ಚಿತ್ರ ಕಲೆ

## (ಪ್ರಾಚೀನ ಕಾಲ)

ವರ್ಣ ಚಿತ್ರಕಲೆಯು ಒಂದು ಸ್ವತಂತ್ರ ಕಲೆಯಾಗಿ ಅತಿ ಪ್ರಾಚೀನ ಕಾಲದಿಂದಲೂ ಕರ್ಣಾಟಕದ ಜನಗಳಿಗೆ ಗೊತ್ತಿದ್ದಿರಬೇಕು. ಏಕೆಂದರೆ ಹಲವಾರು ಕ್ರಿಸ್ತಪೂರ್ವ ಕಾಲದ ಸಂಸ್ಕೃತದ ಸಾಹಿತ್ಯಗ್ರಂಥಗಳಲ್ಲಿ ವರ್ಣಾಲೇಖ್ಯದ ಸಾಮಗ್ರಿಗಳ ಉಲ್ಲೇಖಗಳನ್ನು ನಾವು ಕಾಣುತ್ತೇವೆ. ಆದರೆ ಪ್ರಾಚೀನ ವರ್ಣಚಿತ್ರ ಮಾದರಿಗಳಾವುವೂ ಈಗ ಉಪಲಬ್ಧವಿಲ್ಲ. ಕರ್ಣಾಟಕವು ತನ್ನದೆಂದು ನ್ಯಾಯವಾಗಿಯೇ ಹೇಳಿಕೊಳ್ಳ ಬಹುದಾದ ಅತಿ ಪ್ರಾಚೀನ ವರ್ಣಚಿತ್ರಗಳೆಂದರೆ ಕ್ರಿ.ಶ. ದ ಮೊದಲೆರಡು ಶತಮಾನಗಳಿಗೆ ಸೇರಿದ ಅಜಂತದ ಗುಹೆ ಮತ್ತು ದೇವಾಲಯಗಳಲ್ಲಿನ ಚಿತ್ರಗಳು. ಮೊದಲನೆಯ ಗುಹೆಯಲ್ಲಿಯೇ, ಸುಂದರವಾಗಿ ವರ್ಣ ಗಳಲ್ಲಿ ನಿರೂಪಿತವಾಗಿರುವ ಕನ್ನಡದ ಚಕ್ರವರ್ತಿ ಎರಡನೆಯ ಪುಲಿಕೇಶಿಯು ವಿದೇಶೀಯ ರಾಯಭಾರಿಗಳನ್ನು ಸ್ವಾಗತಿಸುತ್ತಿರುವುದು ತೃಪ್ತಿ ತರುವ ವಿಷಯ.

ಅಜಂತದಲ್ಲಿ ವರ್ಣಚಿತ್ರಕಲೆಯ ಸ್ಥಾನ ಯಾವ ರೀತಿಯದಾಗಿಯೇ ಇರಲಿ, ದೇಶದ ಇತರ ಭಾಗ ಗಳಲ್ಲಿದ್ದಂತೆ ಇಲ್ಲಿಯೂ ಪ್ರಾಚೀನಕಾಲದಲ್ಲಿ ಚಿತ್ರಕಲೆಯು ಶಿಲ್ಪಕ್ಕೆ ಅಧೀನವಾಗಿತ್ತು. ವಾಸ್ತುಶಿಲ್ಪಕ್ಕೆ ಮತ್ತು ಶಿಲ್ಪಗಳ ವಿವರಗಳಿಗೆ ಹೆಚ್ಚು ಸೊಬಗನ್ನುಂಟುಮಾಡಲು ಈ ವರ್ಣಾಲೇಖ್ಯವನ್ನು ಸಾಮಾನ್ಯ ವಾಗಿ ಬಳಸಲಾಗುತ್ತಿತ್ತು. ಜೊತೆಗೆ ವರ್ಣಾಲೇಖ್ಯ ಕಲೆಯು ದೇವಾಲಯಗಳಲ್ಲಿ ಮಾತ್ರ ವಿಶೇಷವಾಗಿ ಬೆಳೆಯಿತು. ದಕ್ಷಿಣ ಭಾರತದ ದೇವಾಲಯಗಳಲ್ಲಿ ಕ್ರಿಸ್ತಶಕದ ಮೊದಲ ವರ್ಷಗಳಲ್ಲಿ ಮರದ ವಿಗ್ರಹಗಳ ಪ್ರತಿಷ್ಠಾಪನೆ ರೂಢಿಯಲ್ಲಿದ್ದ ವಿಷಯ ಈಗ ಬೆಳಕಿಗೆ ಬಂದಿದೆ. ಈ ಮರದ ಧ್ರುವ ಬೇರಗಳಿಗೆ (ಸ್ಥಿರವಾದ ಮೂಲ ಮೂರ್ತಿಗಳು) ಶ್ರೀಮಂತವಾದ ವಿವಿಧ ವರ್ಣಗಳನ್ನು ಹಾಕುತ್ತಿದ್ದರು. ವಿದ್ಯಾರಣ್ಯರಿ ಗಿಂತಲೂ ಹಿಂದಿನ ಕಾಲದಲ್ಲಿ ಶೃಂಗೇರಿಯ ಶಾರದಾವಿಗ್ರಹವೂ ದಾರುಮಯ (ಮರದಿಂದ ಮಾಡಿದ) ವಾಗಿತ್ತೆಂದು ಹೇಳುತ್ತಾರೆ; ಈಗಲೂ ಅಲ್ಲಿನ ನಿರುಪಯೋಗಿ ವಸ್ತುಗಳ ಕೋಠಿಯೊಂದರಲ್ಲಿ ಮರದ ದೊಡ್ಡ ಶಾರದಾವಿಗ್ರಹವೊಂದನ್ನು ನೋಡಬಹುದು. ಅದರ ಬದಲು, ಲೋಹದ ವಿಗ್ರಹವನ್ನು ಪ್ರತಿಷ್ಠಾಪಿಸಿದವರು ವಿದ್ಯಾರಣ್ಯರೆಂದು ಹೇಳುತ್ತಾರೆ. ನಿತ್ಯದ ಅಭಿಷೇಕಕ್ಕೆ ಬೇರೆಯ ಸ್ನಾಪನಬೇರವನ್ನು ಉಪಯೋಗಿಸುವ ಧಾರ್ಮಿಕ ವಿಧಿಗೆ ಕಾರಣ ಮರದ ಪ್ರತಿಮೆಗಳನ್ನು ಧ್ರುವಬೇರಗಳನ್ನಾಗಿ ಉಪಯೋ ಗಿಸುವ ಸಂಪ್ರದಾಯವೆಂದು ಹೇಳಬಹುದು. ಶಿವಲಿಂಗಗಳಿಗೆ ತಿಳಿಗಚ್ಚು ಬಣ್ಣಗಳನ್ನು ಹಾಕಿರುವ ಹಲವಾರು ಉದಾಹರಣೆಗಳಿವೆ. ಹಲವುವೇಳೆ ದೇವಸ್ಥಾನದ ಚಾವಣಿಗಳಿಗೂ ಗೋಡೆಗಳಿಗೂ ಬಣ್ಣ ಹಾಕು ತ್ತಿದ್ದರು. ಜೊತೆಗೆ ಜಾನಪದ ವಿನ್ಯಾಸಗಳನ್ನು ಸಾಕಷ್ಟು ಬಳಸುತ್ತಿದ್ದರು. ವಿಶೇಷವಾಗಿ, ರಂಗಮಂಟಪದ ಅಲಂಕಾರದಲ್ಲಿ ಹಲವಾರು ಬಣ್ಣಗಳೂ ವಿನ್ಯಾಸಗಳೂ ಬಳಸಲ್ಪಟ್ಟಿವೆ. ಗೋಡೆಗಳ ಮೇಲೆ, ಶ್ರದ್ಧಾವಂತ ಭಕ್ತರಿಗಾಗಿ, ಪುರಾಣದ ದೃಶ್ಯಗಳನ್ನು ಚಿತ್ರಿಸುತ್ತಿದ್ದುದರ ಜೊತೆಗೆ ಶಿವನ ಮತ್ತು ವಿಷ್ಣುವಿನ ಲೀಲಾ ಮೂರ್ತಿಗಳನ್ನು ವರ್ಣದಲ್ಲಿ ನಿರೂಪಿಸುತ್ತಿದ್ದರು. ಉತ್ಸವಗಳ ಕಾಲದಲ್ಲಿ ಚಿತ್ರಗಳಿಗೆ ಹೊಸ ಬಣ್ಣಗಳನ್ನು ಲೇಪಿಸಿ, ಚಿತ್ರದ ವಿವಿಧ ಭಾಗಗಳಿಗೆ ಹೊಸ ಮೆರುಗನ್ನು ಕೊಡುತ್ತಿದ್ದರು. ದೇವಾಲಯಗಳಲ್ಲಿ ಶಾಶ್ವತ ವಾಗಿ ಸಮರ್ಥ ವರ್ಣಶಿಲ್ಪಿಗಳನ್ನು ನೇಮಿಸಲಾಗುತ್ತಿತ್ತು.

ರಾಜರುಗಳು ಮತ್ತು ಶ್ರೀಮಂತರು ಕಲೆಗೆ ಆಶ್ರಯವಿತ್ತಿದ್ದರು. ರಾಜಾಸ್ಥಾನಗಳಲ್ಲಿ ಕಲಾವಿದರನ್ನು

ನೇಮಿಸುವ ವಿಷಯವಾಗಿ ನಾವು ಓದುತ್ತೇವೆ. ಉದಾಹರಣೆಗೆ, ಸುಮಾರು ಕ್ರಿ.ಶ. 707ಕ್ಕೆ ಸೇರಿದ ಮನ್ನೆಶಾಸನಗಳಲ್ಲಿ (E.C., IX—ನೆಲಮಂಗಲ, 80) ಗಂಗರಾಜರ ಆಸ್ಥಾನದ ಶಾಸನ ಶಿಲ್ಪಿಯು 'ಸರ್ವಕಲಾಧಾರಭೂತ-ಚಿತ್ರ ಕಲಾಭಿಜ್ಞೋಯ'ನಾಗಿದ್ದನೆಂಬ ಉಲ್ಲೇಖವಿದೆ. ಕ್ರಿ.ಶ. 776ಕ್ಕೆ ಸೇರಿದ ದೇವರಹಳ್ಳಿಯ ಶಾಸನವು (E.C., IV–ಮೈಸೂರು (i) ನೆಲಮಂಗಲ 86) ಆ ಶಾಸನವನ್ನು ಕೊರೆದವನು ಸಕಲ ಜ್ಞಾನಾಕರನಾಗಿದ್ದು ಚಿತ್ರಗಳಿಗೆ ಬಣ್ಣ ಹಾಕುವುದರಲ್ಲಿ ನಿಪುಣನಾಗಿದ್ದನೆಂದು ವರ್ಣಿಸುತ್ತದೆ. ಆದರೆ ಈ ವರ್ಣಶಿಲ್ಪಿಗಳ ಪ್ರತಿಭೆಯನ್ನು ತೋರಿಸುವ ಆಧಾರಗಳು ಈಗ ತುಂಬ ಕಡಮೆ; ಅವರ ಕೃತಿಗಳಲ್ಲಿ ಬಹುಪಾಲು ನಾಶವಾಗಿವೆ, ಇಲ್ಲವೆ ಕಾಲಮಹಿಮೆಯಿಂದ ಮಸುಳಿಹೋಗಿವೆ.

ಹಾಸನ ತಾಲೂಕು ಜಕ್ಕನಹಳ್ಳಿಯ ಕಲ್ಲೇಶ್ವರ ದೇವಾಲಯದ ನವರಂಗದ ಚಾವಣಿಯು ಒಂದು ಕಾಲಕ್ಕೆ ವಿಸ್ತೃತವಾಗಿ ವರ್ಣಯುತವಾಗಿತ್ತು. ಅದರಲ್ಲಿ ಈಗ ಉಳಿದಿರುವುದು ಸ್ವಲ್ಪ; ಮಾತ್ರವಲ್ಲ, ದೇವಾಲಯವೇ ನಾಶವಾಗಿದೆ. ಶ್ರವಣಬೆಳಗೊಳದ ಚಂದ್ರಗಿರಿಯ 12ನೆ ಶತಮಾನದ ಶಾಂತಿನಾಥ ಬಸದಿಯ ಗೋಡೆಗಳಿಗೆ ಎರಡನೆಯ ಬಾರಿ ವರ್ಣಲೇಪನ ಮಾಡಿದ್ದರೆಂಬ ವಿಷಯ ತಿಳಿಯುತ್ತದೆ.

ಮೂಲ ಲೇಖಕರು : ಡಾ|| ಎಂ. ಶೇಷಾದ್ರಿ
ಅನುವಾದಕರು : ಶ್ರೀ ಪಿ. ವಿ. ನಾರಾಯಣ

# ಅಧ್ಯಾಯ 10

## ರಾಜಕೀಯ ಇತಿಹಾಸ

### ದೋರಸಮುದ್ರದ ಹೊಯ್ಸಳರು

ಇಲ್ಲಿಯ ತನಕ ಕರ್ಣಾಟಕದಲ್ಲಿ ರಾಜ್ಯಭಾರಮಾಡಿದ ಕಲ್ಯಾಣದ ಚಾಲುಕ್ಯರ ಕಾಲದ ಇತಿಹಾಸ ಹಾಗೂ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗತಿಗಳು—ಇವುಗಳನ್ನು ಕುರಿತು ವಿವೇಚಿಸ ಲಾಗಿದೆ. ಚಾಲುಕ್ಯರ ರಾಜ್ಯ ಕ್ರಿ.ಶ. 1200ರಲ್ಲಿ ಕೊನೆಗೊಂಡಿತು. ಹಿಂದಿನ ಮೂರು ಅಧ್ಯಾಯಗಳಲ್ಲಿ ಹೇಳಿರುವ ರಾಜಕೀಯ ಇತಿಹಾಸ, ಉತ್ತರ ಕರ್ಣಾಟಕದಲ್ಲಿ ರಾಜಧಾನಿಗಳನ್ನು ಮಾಡಿಕೊಂಡಿದ್ದ ರಾಜ ಮನೆತನಗಳಿಗೆ ಸಂಬಂಧಪಟ್ಟಿದೆ. ಈಗ ಕಾಲದ ದೃಷ್ಟಿಯಿಂದ ಸ್ವಲ್ಪ ಹಿಂದಕ್ಕೆ ಹೋಗಿ, ಕಲ್ಯಾಣದ ಚಾಲುಕ್ಯರ ರಾಜ್ಯಭಾರ ಕೊನೆಗೊಳ್ಳುವುದಕ್ಕೆ ಎಷ್ಟೋ ಮುಂಚೆಯೇ ಕರ್ಣಾಟಕದ ದಕ್ಷಿಣ ಭಾಗದಲ್ಲಿ ಆರಂಭವಾಗಿದ್ದ ಹೊಯ್ಸಳ ರಾಜ್ಯದ ಹುಟ್ಟು ಮತ್ತು ಅಭಿವೃದ್ಧಿಯನ್ನು ಕುರಿತು ಅಧ್ಯಯನ ಮಾಡೋಣ ಹೊಯ್ಸಳರು ಮೂರು ಶತಮಾನಗಳ ಕಾಲ ಸುಪ್ರಸಿದ್ಧರಾಗಿ ರಾಜ್ಯಭಾರ ಮಾಡಿ, ನಾಶವಾಗದ ಕಲೆ ಸಾಂಸ್ಕೃತಿಕ ಸ್ಮಾರಕಗಳನ್ನು ಬಿಟ್ಟು ಹೋಗಿದ್ದಾರೆ.

ಹೊಯ್ಸಳರು ದೇಶೀಯ ರಾಜಮನೆತನದವರೇ ಆಗಿದ್ದರು. ಅವರು ತಮ್ಮ ಆಧಿಪತ್ಯದ ಉಚ್ಛ್ರಾಯ ಕಾಲದಲ್ಲಿ ಬಹುಮಟ್ಟಿಗೆ ಕನ್ನಡ ನಾಡನ್ನೆಲ್ಲ ಆಳುತ್ತಿದ್ದರು. ಅವರು ಪಶ್ಚಿಮ ಘಟ್ಟಗಳ ಮಲೆಪರೆಂಬ ಗಿರಿನಾಡಿನವರನ್ನು ಸೋಲಿಸಿ, 'ಮಲೆಪರೊಳೆ ಗಂಡ' ಎಂಬ ಬಿರುದನ್ನು ಪಡೆದುಕೊಂಡರು. 11ನೆಯ ಶತಮಾನದ ಆದಿ ಭಾಗದಲ್ಲಿ ಚೋಳರು ರಾಜೇಂದ್ರನ ನಾಯಕತ್ವದಲ್ಲಿ ಗಂಗದೇಶದ ಮೇಲೆ ದಂಡೆತ್ತಿ ಹೋದರು. ಗಂಗರು ಆಗ ತಾನೆ ಪ್ರಬಲರಾಗುತ್ತಿದ್ದ ಹೊಯ್ಸಳರಲ್ಲಿ ರಕ್ಷಣೆಯನ್ನು ಕೋರಬೇಕಾಯಿತು.

ಚೋಳರೂ ಹೊಯ್ಸಳರೂ ನಾಡಿನ ಪರಮಾಧಿಕಾರಕ್ಕಾಗಿ ಸೆಣಸಿದರು. ಕಡೆಗೆ 12ನೆಯ ಶತ ಮಾನದ ಆರಂಭದ ವೇಳೆಗೆ, ಹೊಯ್ಸಳರು ಚೋಳರನ್ನು ತಲಕಾಡಿನಿಂದ ಕಾಲ್ತೆಗೆಯುವಂತೆ ಮಾಡಿದರು. ಆದರೆ, ತಾವು ತಲೆಯೆತ್ತಿದ ಮೇಲೆ ಅವರು ಒಂದು ಶತಮಾನಕ್ಕೂ ಹೆಚ್ಚು ಕಾಲ ಪಶ್ಚಿಮದ ಚಾಲುಕ್ಯರ ಸಾಮಂತರಾಗಿಯೇ ಮುಂದುವರಿದರು. ವಿನಯಾದಿತ್ಯನಿಂದ ಹಿಡಿದು ಎರಡನೆಯ ವೀರಬಲ್ಲಾಳನ ವರೆಗಿನ ಹೊಯ್ಸಳ ಶಾಸನಗಳಲ್ಲೆಲ್ಲ ಅವರು ಚಾಲುಕ್ಯರಿಗೆ ಅಧೀನರಾಗಿ ನಡೆದುಕೊಂಡು ಬಂದ ಅಂಶವೇ ವಿದಿತ ವಾಗುತ್ತದೆ. ಒಂದನೆಯ ವೀರಬಲ್ಲಾಳನೇ 'ದಕ್ಷಿಣದ ಚಕ್ರವರ್ತಿ' ಎಂದು ಕರೆಸಿಕೊಂಡ ಮೊದಲನೆಯ ಅರಸು. ಹೊಯ್ಸಳ ಅರಸರು ಅದ್ಭುತ ರಾಜಕೀಯ ಪ್ರಜ್ಞೆಯಿಂದ ಕೂಡಿದವರಾಗಿದ್ದರು. ಅವರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಲು ಶಕ್ತರಾಗುವವರೆಗೂ ಕಾಲಕಾದು, ಕ್ರಮೇಣ ತಮ್ಮ ಆಧಿಪತ್ಯವನ್ನು ವಿಸ್ತರಿಸಿಕೊಂಡರು.

ಹೊಯ್ಸಳರ ಶಾಸನಗಳಲ್ಲಿ ಅವರ ರಾಜ್ಯೋದಯ ವಿಷಯದ ಕುರಿತು ಕೆಲವು ಸಾಂಪ್ರದಾಯಿಕ

ಉಲ್ಲೇಖಗಳು ಕಂಡುಬರುತ್ತವೆ. ಅವರು ಸೊಸೆವೂರನ್ನು (ಸಂಸ್ಕೃತ ಲೇಖಕರು ಹೇಳಿರುವ ಶಶಕಪುರ) ತಮ್ಮ ಜನ್ಮಸ್ಥಳವೆಂದು ಹೇಳಿಕೊಂಡಿದ್ದಾರೆ. ಈ ಸ್ಥಳ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಮೂಡಿಗೆರೆ ತಾಲೂಕಿನ ಅಂಗಡಿ ಎಂಬುದಾಗಿ ಗುರುತಿಸಲಾಗಿದೆ. ಇದು ಸಳ ಮತ್ತು ಹುಲಿಗೆ ಸಂಬಂಧಿಸಿದ ಘಟನೆಯ ಸ್ಥಳವೆಂದೂ ಅದರಿಂದಲೇ ಸಳನು 'ಪೊಯ್-ಸಳ' ಅಥವಾ ಹೊಯ್ಸಳ ರಾಜವಂಶದ ಸ್ಥಾಪಕನಾದನೆಂದೂ ಹೇಳಲಾಗಿದೆ. 'ಯದುವಂಶೋಜ್ವಲತಿಲಕನಾದ ಸಳನು ಶಶಕಪುರದ ವಾಸಂತಿಕಾದೇವಿಯನ್ನು ಗಂಧ, ಪುಷ್ಪ, ಪರಿಮಳಗಳಿಂದ ಅರ್ಚಿಸುತ್ತಿದ್ದಾಗ ಅರಣ್ಯದಿಂದ ಒಂದು ಹುಲಿ ಅಲ್ಲಿಗೆ ಬಂದಿತು. ಅಲ್ಲಿಯೇ ಇದ್ದ ಜೈನ ಮುನಿಯೊಬ್ಬ ಸಳನಿಗೆ ತನ್ನ ಕುಂಚವನ್ನು ಕೊಟ್ಟು, 'ಪೊಯ್-ಸಳ'–(ಹೊಡೆ–ಸಳ) ಎಂದನು. ಹುಲಿಯ ಸಂಹಾರವಾಯಿತು. ಅಂದಿನಿಂದ ಯದುವಂಶದ ರಾಜರಿಗೆ 'ಪೊಯ್ಸಳ' ಎಂಬ ಹೆಸರು ಬಂದಿತು. (EC., VI, Cm. 20). ಹೊಯ್ಸಳರ ಅನೇಕ ಶಾಸನಗಳಲ್ಲಿ, ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ, ಬಹುಮಟ್ಟಿಗೆ ಇದೇ ರೀತಿಯ ಉಲ್ಲೇಖವಿದೆ. ಹುಲಿ ಬಂದಾಗ ಕೂಗಿದ ಜೈನ ಮುನಿಯ ಹೆಸರು ಸುದತ್ತನೆಂದು ಒಂದು ಶಾಸನದಿಂದ (SB. 28) ತಿಳಿದುಬರುತ್ತದೆ. ಆ ಮುನಿಯೇ ದೇವಿ ಪದ್ಮಾವತಿಯ ಕೃಪೆ ಪಡೆದು ಸಳನಿಗೆ ರಾಜ್ಯಪ್ರಾಪ್ತಿ ಮಾಡಿಕೊಟ್ಟವನು (E.C., VIII Sb.28). ಇದೇ ವಿಷಯದ ಕಥೆಯನ್ನು ಇನ್ನೊಂದು ರೀತಿಯಲ್ಲಿ ಹೇಳುವುದುಂಟು: ಸಳ ಒಮ್ಮೆ ಸಹ್ಯಾದ್ರಿ ಅಥವಾ ಪಶ್ಚಿಮ ಘಟ್ಟಗಳಲ್ಲಿ ಬೇಟೆಯಾಡುತ್ತಿದ್ದಾಗ, ಹುಲಿಯನ್ನು ಅಟ್ಟಿಕೊಂಡು ಹೋಗುತ್ತಿದ್ದ ಒಂದು ಮೊಲವನ್ನು (ಸಂ. ಶಶ) ಕಂಡನು. 'ಇದು ವೀರಭೂಮಿ' ಎಂದು ತನ್ನಲ್ಲಿಯೇ ಹೇಳಿಕೊಳ್ಳುತ್ತಾ ಅವನು ಒಂಟಿಯಾಗಿ ಮುಂದೆ ಹೋಗುತ್ತಿದ್ದಾಗ, ಹತ್ತಿರದಲ್ಲಿಯೇ ಇದ್ದು ಭಯಭರಿತನಾದ ಮುನಿಯೊಬ್ಬ 'ಪೊಯ್–ಸಳ' ಎಂದು ಕೂಗಿಕೊಳ್ಳಲು, ಸ್ವಲ್ಪ (ಗೇಣು) ದೂರದಲ್ಲಿಯೇ ಇದ್ದ ಸಳ ಅದನ್ನು ತನ್ನ ಕತ್ತಿಯಿಂದ ಸಂಹರಿಸಿದನು. (E.C. V, Part I, Bl. 171). ಈ ಪ್ರಸಂಗ ನಡೆದ ಸ್ಥಳಕ್ಕೆ ಬಳಿಕ ಶಶಕಪುರ ಎಂಬ ಹೆಸರಾಯಿತು.

ಹೊಯ್ಸಳ ರಾಜವಂಶದ ಹಿಂದಿನ ಕಥೆ ಅಷ್ಟಾಗಿ ಸ್ಪಷ್ಟವಾಗಿಲ್ಲ. ಸಳನ ರಾಜ್ಯಭಾರದ ಕುರಿತು ನೇರವಾದ ಸಾಕ್ಷ್ಯ ಯಾವ ಶಾಸನದಲ್ಲೂ ಇಲ್ಲ. ಅವನು ಬಹುಶಃ ಸ್ಥಳೀಯ ನಾಯಕನೊಬ್ಬನಾಗಿದ್ದು, ಸ್ವಸಾಮರ್ಥ್ಯದಿಂದ ಖ್ಯಾತಿಗೆ ಏರಿರಬೇಕು. ಅವನ ತರುವಾಯ ಆಧಿಪತ್ಯಕ್ಕೆ ಬಂದ ನೃಪಕಾಮ, ವಿನಯಾದಿತ್ಯ, ಎರೆಯಂಗ ಮತ್ತು ಒಂದನೆಯ ಬಲ್ಲಾಳ—ಮೊದಲಾದವರು ತಮ್ಮ ರಾಜ್ಯವನ್ನು ಬಲಪಡಿಸಿಕೊಳ್ಳುವುದರಲ್ಲಿಯೇ ನಿರತರಾಗಿದ್ದರು. ಅವರು ದಕ್ಷಿಣದ ರಾಜ್ಯದವರಾದ ಚೆಂಗಾಳ್ವರು ಮತ್ತು ಕೊಂಗಾಳ್ವರನ್ನು ದಮನಮಾಡಿ, ನಿಧಾನವಾಗಿ ಅಭಿವೃದ್ಧಿಗೆ ಬರಬೇಕಾಯಿತು. ಬಹುಶಃ ಈ ವಂಶದ ಅತ್ಯಂತ ಮೊದಲನೆಯ ರಾಜನಾದ ನೃಪಕಾಮನ ರಾಜ್ಯಭಾರ ಕ್ರಿ.ಶ. 1006ರಲ್ಲಿ ಆರಂಭವಾಗಿರಬೇಕು. ಇವನ ಬಗೆಗೆ ದಾಖಲೆಗಳು ದೊರಕಿವೆ. ಇವನು ಗಂಗವಂಶದ ರಾಜರಿಗೆ ವಿಶಿಷ್ಟವಾಗಿದ್ದ 'ಪೆರ್ಮಾಡಿ' ಅಥವಾ 'ಪೆರ್ಮಾನಡಿ' ಎಂಬ ಬಿರುದುಗಳನ್ನು ಹೊಂದಿದ್ದುದನ್ನು ನೋಡಿದರೆ, ಹೊಯ್ಸಳ ರಾಜಮನೆತನಕ್ಕೂ ಗಂಗ ಮನೆತನಕ್ಕೂ ಸಂಬಂಧವಿರಬೇಕೆಂದು ವ್ಯಕ್ತವಾಗುತ್ತದೆ. ಹೊಯ್ಸಳ ವಂಶದವರು ಗಂಗವಂಶದವರಿಗೆ ಪ್ರಾಪ್ತವಾಗಿದ್ದ ದಾಳಿಯನ್ನು ತಪ್ಪಿಸುವ ಪ್ರಯತ್ನದಿಂದ ಕ್ರಮೇಣ ಪ್ರಮುಖತೆಗೆ ಬಂದು ಕಡೆಗೆ ಗಂಗವಾಡಿಯ ಮುಖಂಡರೂ ಪ್ರಭುಗಳೂ ಆದರು.

ನೃಪಕಾಮನ ಮಗ ವಿನಯಾದಿತ್ಯ ಸುಮಾರು ಕ್ರಿ.ಶ. 1047ರಲ್ಲಿ ಅಧಿಕಾರಕ್ಕೆ ಬಂದನು. ಅವನು ಬಹಳ ದೀರ್ಘಕಾಲ, ಎಂದರೆ, 50 ವರ್ಷಗಳ ಕಾಲಕ್ಕೆ ಮೇಲ್ಪಟ್ಟು ರಾಜ್ಯವಾಳಿರಬೇಕೆಂದು ಕಂಡುಬರುತ್ತದೆ. ಈ ಕಾಲದಲ್ಲಿಯೇ ಹೊಯ್ಸಳರು ಕಲ್ಯಾಣದ ಚಾಲುಕ್ಯರೊಡನೆ ಸಾಮಂತ ಸಖ್ಯವನ್ನು ಬೆಳಸಿಕೊಂಡರು. ಚಾಲುಕ್ಯ ಚಕ್ರವರ್ತಿ ಒಂದನೆಯ ಸೋಮೇಶ್ವರನ ಹಿರಿಯ ರಾಣಿಯ ಹೆಸರು ಹೊಯ್ಸಳದೇವಿ. ಹೊನ್ನಾಳಿಯ ಗೌಡನೊಬ್ಬನಿಂದ ಸ್ಥಾಪಿತವಾದ ಮಲ್ಲಿಕೇಶ್ವರನ ತೀರ್ಥಕ್ಕೋಸ್ಕರ ತುಂಗಾನದಿಯ ದಡೆಯ ಮೇಲೆ ಉಂಬಳಿ ಬಿಡುವ ಸಂಗತಿಯನ್ನುಳ್ಳ ಕ್ರಿ.ಶ. 1055ರ ಶಾಸನವೊಂದರಲ್ಲಿ ಈಕೆಯ ಹೆಸರಿನ

ಉಲ್ಲೇಖವಿದೆ. ಈ ಹೊಯ್ಸಳದೇವಿ ವಿನಯಾದಿತ್ಯನ ತಂಗಿಯೋ ಮಗಳೋ ಆಗಿರಬೇಕು. ಕ್ರಿ.ಶ. 1068ರಲ್ಲಿ ಒಂದನೆಯ ಸೋಮೇಶ್ವರ ಕಾಲವಾದ ಮೇಲೆ ಅವನ ಮಕ್ಕಳು ಎರಡನೆಯ ಸೋಮೇಶ್ವರ ಮತ್ತು ಅವನ ಸೋದರ ವಿಕ್ರಮಾದಿತ್ಯ ಇವರಿಬ್ಬರಿಗೂ ವೈಮನಸ್ಯ ಹುಟ್ಟಿತು. ವಿನಯಾದಿತ್ಯ ತನ್ನ ಮಗ ಎರೆಯಂಗನ ಸೇನಾಧಿಪತ್ಯದಲ್ಲಿ ದೊಡ್ಡದೊಂದು ಸೈನ್ಯವನ್ನು ಎರಡನೆಯ ಸೋಮೇಶ್ವರನ ನೆರವಿಗೆ ಕಳಿಸಿದನು. ಕೆಲವು ವರ್ಷಗಳು ಕಳೆದ ಮೇಲೆ, ಕ್ರಿ.ಶ. 1076ರಲ್ಲಿ ಎರಡನೆಯ ಸೋಮೇಶ್ವರ ಕಾಲವಾದನು. ಆರನೆಯ ವಿಕ್ರಮಾದಿತ್ಯನ ಅದೃಷ್ಟ ಚೆನ್ನಾಗಿತ್ತು. ಅವನು ಚಾಲುಕ್ಯ ಸಿಂಹಾಸನದ ಸ್ಪರ್ಧಾರಹಿತ ಅಧಿಪತಿಯಾದನು. ಆಗ ವಿನಯಾದಿತ್ಯನು ವಿಕ್ರಮಾದಿತ್ಯನ ಸಾರ್ವಭೌಮತ್ವವನ್ನು ಅಂಗೀಕರಿಸಲು ಶಂಕಿಸಲಿಲ್ಲ. ಎರೆಯಂಗ ಇನ್ನೂ ರಾಜಕುಮಾರನಾಗಿದ್ದಾಗಲೇ ಎರಡನೆಯ ಚಾಲುಕ್ಯ ಸೋಮೇಶ್ವರನ ಆಹ್ವಾನವನ್ನು ಅಂಗೀಕರಿಸಿ, ತನ್ನ ಶೌರ್ಯವನ್ನು ತೋರಿಸಲು ಇನ್ನೊಂದು ಅವಕಾಶ ಹೊಂದಿದನು. ಅವನು ಮಾಲವ ರಾಜ್ಯದ ಪ್ರತಾಪಶಾಲಿ ಎನಿಸಿದ್ದ ಭೋಜರಾಜನ ದುರ್ಗ ಧಾರಾನಗರವನ್ನು ಮುತ್ತಿ ಸ್ವಾಧೀನಪಡಿಸಿಕೊಂಡನು. ಹಾಗೆಯೇ ಅವನು ಚಕ್ರಗೊಟ್ಟವನ್ನು ವಶಪಡಿಸಿಕೊಂಡುದಲ್ಲದೆ (ಇದು ಮಧ್ಯಪ್ರದೇಶದ ಬಸ್ತಾರ್ ರಾಜ್ಯದಲ್ಲಿದೆ) ಕಳಿಂಗ ರಾಜ್ಯದ ಸೈನ್ಯಗಳನ್ನೂ ಸೋಲಿಸಿದುದಾಗಿ ಪ್ರತೀತಿ. ಹೀಗೆ ಅವನು ಹೊಯ್ಸಳರ ಕ್ಷಾತ್ರಶಕ್ತಿಗೆ ಮಹಾ ಕೀರ್ತಿಯನ್ನು ತಂದನು. ಚಾಲುಕ್ಯ ಚಕ್ರವರ್ತಿಯೇ ಈ ಎಲ್ಲ ದಂಡಯಾತ್ರೆಗಳ ವೆಚ್ಚವನ್ನು ವಹಿಸಿಕೊಂಡಿದ್ದನು. ಆದರೆ ಎರೆಯಂಗನಾಗಲೀ ಅವನ ತಂದೆಯಾಗಲೀ ತಾವು ಸ್ವತಂತ್ರರೆಂದು ಘೋಷಿಸಲು ಇಷ್ಟಪಡಲಿಲ್ಲ. ಅವರು 'ಸಮಧಿಗತ ಪಂಚಮಹಾಶಬ್ದ' ಇತ್ಯಾದಿ ವಿಶಿಷ್ಟ ಬಿರುದುಗಳನ್ನು ಹೊಂದಿ, ಚಾಲುಕ್ಯ ಚಕ್ರವರ್ತಿಯ ಸ್ವಾಮಿಭಕ್ತ ಸಾಮಂತರೆಂದು ಕರೆಸಿಕೊಳ್ಳಲು ತೃಪ್ತರಾಗಿದ್ದರು. ಎರೆಯಂಗನನ್ನು ಚಾಲುಕ್ಯಚಕ್ರವರ್ತಿಯ ಪರಾಕ್ರಮದ ಬಲಗೈಯೆಂದು ಕರೆಯುತ್ತಿದ್ದುದುಂಟು (E.C., IV ; No. 32).

ವಿಕ್ರಮಾದಿತ್ಯನು ಹೊಯ್ಸಳರ ಶಕ್ತಿ ಬೆಳೆದು ಪ್ರಬಲವಾಗುತ್ತಿದ್ದುದನ್ನು ಸ್ವಲ್ಪ ಶಂಕೆಯಿಂದಲೇ ನೋಡಿರಬೇಕು. ಡೆರ್ರೆಟ್ಟನ ಪುಸ್ತಕದಲ್ಲಿ ಇದಕ್ಕೆ ಒಂದು ದಾಖಲೆಯ ಉಲ್ಲೇಖವಿದೆ (Jainad Record E. I. XX, PP. 54–63—The Hoysalas-Foot-note to Page 36). ಇಪ್ಪತ್ತು ವರ್ಷಗಳ ಹಿಂದೆ ಎರೆಯಂಗ ಧಾರಾನಗರವನ್ನು ಮುತ್ತಿ, ನಾಶಮಾಡಿದುದಕ್ಕೆ ಸೇಡನ್ನು ತೀರಿಸಿಕೊಳ್ಳಲು ಪರಮಾರರ ದಂಡನಾಯಕ ಜಗದ್ದೇವ ದೋರಸಮುದ್ರದ ಮೇಲೆ ದಂಡೆತ್ತಿ ಬಂದನು. ಜಗದ್ದೇವನೂ ಎರೆಯಂಗನಂತೆಯೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಆದರೂ ಜಗದ್ದೇವನ ಈ ದಕ್ಷಿಣದ ದಂಡಯಾತ್ರೆಯನ್ನು ವಿಕ್ರಮಾದಿತ್ಯನು ತಪ್ಪಿಸಲು ಪ್ರಯತ್ನಿಸದೆ ಸುಮ್ಮನೆ ನೋಡುತ್ತಿದ್ದನೆಂದು ಭಾಸವಾಗುತ್ತದೆ. ಎರೆಯಂಗನ ಮಕ್ಕಳಾದ ಬಲ್ಲಾಳ ಮತ್ತು ವಿಷ್ಣುವರ್ಧನರು ಈ ದಾಳಿಯನ್ನು ಹಿಮ್ಮೆಟ್ಟಿಸಲು ಯಶಸ್ವಿಗಳಾದರು. ಈ ಪ್ರಸಂಗದಿಂದ ಹೊಯ್ಸಳರ ಮತ್ತು ಚಾಲುಕ್ಯರ ನಡುವಣ ಸಂಬಂಧ ಸ್ವಲ್ಪ ಕಲಕಿತು. ಹೊಯ್ಸಳರು ಸರ್ವತಂತ್ರ ಸ್ವತಂತ್ರ ಸ್ಥಾನಮಾನ ಬಯಸಲು ಅವಕಾಶವಾಯಿತು.

ವಿನಯಾದಿತ್ಯ ಕ್ರಿ.ಶ. 1098ರಲ್ಲಿ ಕಾಲವಾದನು. ಅವನ ತರುವಾಯ ಪಟ್ಟಕ್ಕೆ ಬಂದ ಎರೆಯಂಗನಿಗೆ ಆಗಲೇ ವಯಸ್ಸಾಗಿತ್ತು. ಅವನ ಪುತ್ರರಾದ ಬಲ್ಲಾಳ ಮತ್ತು ವಿಷ್ಣುವರ್ಧನರು ರಣರಂಗದಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದರು. ಎರೆಯಂಗನಿಗೆ ಚಾಲುಕ್ಯ ಸಾಮ್ರಾಟರ ವಿರುದ್ಧ ಬಹಿರಂಗವಾಗಿ ದಂಗೆಯೇಳಲು ಬಹುಶಃ ಇಷ್ಟವಿಲ್ಲದಿದ್ದರೂ ತನ್ನ ಪುತ್ರರ ಆಕಾಂಕ್ಷೆಯನ್ನು ದಮನ ಮಾಡಲು ಅವನು ಏನನ್ನೂ ಮಾಡಲಿಲ್ಲ. ಅಂತೆಯೇ ತನ್ನ ತಂದೆಯ ಕಾಲಾನಂತರ ಕ್ರಿ.ಶ. 1102ರಲ್ಲಿ ಸಿಂಹಾಸನವನ್ನೇರಿದ ಒಂದನೆಯ ಬಲ್ಲಾಳನಿಗೆ ಹೊಯ್ಸಳ ರಾಜ್ಯವನ್ನು ಇನ್ನೂ ವಿಸ್ತರಿಸಬೇಕೆಂಬ ಆಸೆಗೆ ಸಿದ್ಧತೆ ಒದಗಿತು.

ಇವನ ಕಾಲದಲ್ಲಿಯೇ ರಾಜಧಾನಿಯು ಬೇಲೂರಿಗೆ (ವೇಲಾಪುರ) ಬದಲಾಯಿಸಲ್ಪಟ್ಟಿತು. ದೋರ ಸಮುದ್ರ (ಹಳೇಬೀಡು) ಪರ್ಯಾಯ ರಾಜಧಾನಿಯಾಗಿ ಉಳಿಯಿತು. ಬಲ್ಲಾಳನು ಕ್ರಿ.ಶ. 1104ರಲ್ಲಿ ಚೆಂಗಾಳ್ವರ ಮೇಲೆ ಯಶಸ್ವಿಯಾದ ದಾಳಿ ಮಾಡಿದನು. ತನ್ನ ತಮ್ಮ ವಿಷ್ಣುವಿನೊಡನೆ ನೊಳಂಬವಾಡಿಯ ಆಕ್ರಮಣವನ್ನು ಕೈಕೊಂಡನು. ಅವನು ಬಹಳ ಸ್ವಲ್ಪಕಾಲ, ಎಂದರೆ, ಆರು ವರ್ಷ ಮಾತ್ರ (1102–1108) ರಾಜ್ಯಭಾರ ಮಾಡಿದನು. ಅವನ ತರುವಾಯ ಪಟ್ಟಕ್ಕೆ ಬಂದ ಅವನ ಕಿರಿಯ ತಮ್ಮ ವಿಷ್ಣು ವರ್ಧನನು ಈ ರಾಜವಂಶದ ಅರಸುಗಳಲ್ಲಿ ಅತ್ಯಂತ ಸಮರ್ಥನೆನಿಸಿದವನು.

ವಿಷ್ಣುವರ್ಧನನೇ ಹೊಯ್ಸಳರ ಕೀರ್ತಿಯನ್ನು ನಿಜವಾಗಿ ಸ್ಥಾಪಿಸಿದವನು. ದೋರಸಮುದ್ರ ಅಥವಾ ಹಳೇಬೀಡು ರಾಜ್ಯದ ರಾಜಧಾನಿಯಾಯಿತು. ರಾಷ್ಟ್ರಕೂಟ ರಾಜನಾದ ಧ್ರುವನು ಅಲ್ಲಿ ಕಟ್ಟಿಸಿದ ಕೆರೆಯ ಹೆಸರೇ ಅದಕ್ಕೆ ಬಂದಿದೆ (*Vide* Derrett: The Hoysalas, P. 34, Note on Page 221). ರಾಜ್ಯದ ಉತ್ತರದಲ್ಲಿ ಬಂಕಾಪುರ, ದಕ್ಷಿಣದಲ್ಲಿ ತಲಕಾಡು, ಪ್ರಾದೇಶಿಕ ರಾಜಧಾನಿಗಳಾದವು. ಅವನು ಹೊಂದಿದ 'ತಲಕಾಡುಗೊಂಡ', 'ಮಲೆಪರೊಳೆ ಗಂಡ', 'ಗಂಡಗಿರಿನಾಥ', 'ಕದನ ಪ್ರಚಂಡ' 'ಸತ್ಯರತ್ನಾಕರ', 'ವಿವೇಕ ನಾರಾಯಣ', 'ಸಾಹಸಭೀಮ' ಇತ್ಯಾದಿ ಅನೇಕ ಬಿರುದುಗಳು ಅವನ ಯುದ್ಧ ಸಾಮರ್ಥ್ಯವನ್ನೂ ಮಹಾ ವ್ಯಕ್ತಿತ್ವವನ್ನೂ ಹೊಗಳುತ್ತವೆ. ಗಂಗವಾಡಿಯನ್ನು ಗೆದ್ದುದು ಒಂದು ಪ್ರಚಂಡ ಸಾಧನೆಯಾಗಿತ್ತು. ಹೊಯ್ಸಳರು ತಾವೇ ತಲಕಾಡಿನ ಗಂಗ ಮನೆತನದ ಕ್ರಮ ಪ್ರಾಪ್ತ ಹಾಗೂ ನ್ಯಾಯಬದ್ಧ ವಾರಸುದಾರರೆಂದು ಭಾವಿಸಿಕೊಂಡರು. ಗಂಗವಾಡಿಯು ಚೋಳರ ಪ್ರಧಾನ ಪ್ರಾಂತವಾಗಿ ಇದ್ದುದು, ವಿಷ್ಣುವರ್ಧನನಿಗೆ ಸರಿಯಾಗಿ ಕಾಣಲಿಲ್ಲ. ಹೊಯ್ಸಳ ದಂಡನಾಯಕ ಗಂಗರಾಜನು ಕ್ರಿ.ಶ. 1116ರಲ್ಲಿ ತಲಕಾಡನ್ನು ಚೋಳರಿಂದ ವಶಪಡಿಸಿಕೊಂಡನು. ವಿಷ್ಣುವರ್ಧನನ ನಾಣ್ಯಗಳಲ್ಲಿ 'ತ ಲ ಕಾ ಡು ಗೊ ಂ ಡ' ಎಂಬ ಬಿರುದು ಕಂಡುಬರುತ್ತದೆ. ಗಂಗವಾಡಿಯ ವಿಜಯ ಇತರ ಅದ್ಭುತ ವಿಜಯಗಳಿಗೆ ನಾಂದಿಯಾಯಿತು. ಕೊಂಗು, ನಂಗಲಿ, ನೊಳಂಬವಾಡಿ, ಮತ್ತು ಕೊವತೂರುಗಳು ಸ್ವಾಧೀನವಾದವು. ತಲಕಾಡಿನ ವಿಜಯದ ತರುವಾಯ ಚೋಳರಾಜ್ಯದ ಮೇಲಣ ದಿಗ್ವಿಜಯ ಆರಂಭವಾಯಿತು. ವಿಷ್ಣುವರ್ಧನನ ಅನೇಕ ಶಾಸನಗಳಲ್ಲಿ ಅವನು ದಕ್ಷಿಣದಲ್ಲಿ ರಾಮೇಶ್ವರದ ವರೆಗೂ ದಿಗ್ವಿಜಯ ನಡೆಸಿದ ಉಲ್ಲೇಖವಿದೆ. ಅವನು 'ಕಾಂಚಿಗೊಂಡ' ಎಂಬ ಬಿರುದನ್ನು ಹೊಂದಿದ ನೆಂದು ಒಂದು ಶಾಸನದಿಂದ ತಿಳಿದುಬರುತ್ತದೆ (E.C., VI. Ch. 160). ಮಧುರೆಯು ಅವನ ಹಸ್ತಗತವಾಗಿ ನಾಶವಾಯಿತೆಂದೂ, ಅವನ ದಂಡನಾಯಕನೋರ್ವನಿಂದ ಜನನಾಥಪುರವು ನಾಶವಾಯಿ ತೆಂದೂ ಕಾಂಚಿಯಲ್ಲಿ ಜಯಭೇರಿಯ ಮೂಲಕ ಪ್ರಸಿದ್ಧಪಡಿಸಲಾಯಿತೆಂದೂ ಹೇಳಲಾಗಿದೆ. ಸೇಲಂ, ಕೊಯಮುತ್ತೂರು ಮತ್ತಿತರ ತಮಿಳುನಾಡಿನ ಭಾಗಗಳಲ್ಲಿ ದೊರಕುವ ವಿಷ್ಣುವರ್ಧನನ ಶಾಸನಗಳಲ್ಲಿ ಅವನು 'ಕಾಂಚಿಗೊಂಡ' ಬಿರುದನ್ನು ಹೊಂದಿದುದಕ್ಕೆ ಅರ್ಹತೆಯನ್ನು ಸೂಚಿಸಲಾಗಿದೆ. ಅವನ ದಂಡನಾಯಕ ಗಂಗರಾಜು ಯಶಸ್ವಿಯಾದ ಯುದ್ಧ ನಡೆಸಿದರೂ ಅವನು ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿಯೇ ಇದ್ದು, ಕ್ರಿ.ಶ. 1126ರಲ್ಲಿ ವಿಕ್ರಮಾದಿತ್ಯನು ಕಾಲವಾದ ಮೇಲೆಯೇ ತಾನು ಸ್ವತಂತ್ರ ರಾಜನೆಂದು ಘೋಷಿಸಿಕೊಂಡನು (E.C. IV, Yd. 1; E.C., IV, Sr, 34), ಅವನ ಸಾಮ್ರಾಜ್ಯವು ಕೊಂಗು (ಸೇಲಂ), ನಙ್ಗಲಿ (ಕೋಲಾರ ಜಿಲ್ಲೆಯ ಪೂರ್ವಭಾಗ), ತಲಕಾಡು (ಮೈಸೂರು ಜಿಲ್ಲೆ), ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನಗಲ್, ಹುಲಿಗೆರೆ, ಹಲಸಿಗೆ ಮತ್ತು ಬೆಳವೊಲ— ಈ ಪ್ರಾಂತಗಳಿಂದ ಕೂಡಿದ್ದಿತು. ಅವನು ಅಪ್ರತಿಮ ವೀರಯೋಧನೆಂಬ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ಸುಸಂಸ್ಕೃತ ವ್ಯಕ್ತಿಯೆಂದೂ ಗಣ್ಯನಾದ ರಾಜನೆಂದೂ ಆತನು ಗಳಿಸಿದ ಕೀರ್ತಿ ಮಿಗಿಲಾದುದು.

ವಿಷ್ಣುವರ್ಧನನ ಆಳಿಕೆಯಲ್ಲಿ ಪ್ರಸಿದ್ಧ ಶ್ರೀವೈಷ್ಣವ ಸಂತ ರಾಮಾನುಜರು ಕರ್ಣಾಟಕಕ್ಕೆ ಆಗಮಿಸಿದ್ದ ರಿಂದ ಗಮನಾರ್ಹವಾಯಿತು. ಪ್ರಚಲಿತವಿರುವ ಒಂದು ನಂಬಿಕೆಯ ಪ್ರಕಾರ, ಶ್ರೀ ರಾಮಾನುಜರು

ಮತೀಯ ಹಿಂಸೆಯನ್ನು ತಾಳಲಾರದೆ, ಚೋಳದೇಶದಿಂದ ಇಲ್ಲಿಗೆ ಓಡಿಬಂದರೆಂಬ ಪ್ರತೀತಿಯಿದ್ದರೂ ಅಂದಿನ ಚೋಳರಾಜರ ಕಾಲದಲ್ಲಿ ದೊರಕುವ ಚಾರಿತ್ರಿಕ ಅಂಶಗಳಿಂದ ಈ ನಂಬಿಕೆಗೆ ಆಧಾರ ದೊರಕುವುದಿಲ್ಲ.

ಶ್ರೀರಾಮಾನುಜರು ಕ್ರಿ.ಶ. 1116ರಲ್ಲಿ ವಿಷ್ಣುವರ್ಧನನನ್ನು ತೊಣ್ಣೂರು (ತೊಂಡನೂರು) ಬಳಿ ಸಂಧಿಸಿದಾಗ ಅವರಿಗೆ ಎಂಬತ್ತರ ಮೇಲ್ಪಟ್ಟು ವಯಸ್ಸಾಗಿತ್ತು : ಅವರು ವಿಷ್ಣುವರ್ಧನನನ್ನು ವೈಷ್ಣವ ಧರ್ಮಕ್ಕೆ ಒಲಿಯುವಂತೆ ಮಾಡಿಕೊಂಡರು. ಬಿಟ್ಟಿದೇವ ಎಂಬ ಅವನ ಹಿಂದಿನ ಹೆಸರು ವಿಷ್ಣುದೇವ ಎಂಬುದರ ಕನ್ನಡ ರೂಪವಾಗಿತ್ತು ; ಜನಪ್ರಿಯನಾಗಿದ್ದ ಅವನಿಗೆ ಅದು ಪ್ರೀತಿಯ ಹೆಸರಾಗಿತ್ತು. ಅವನ ಶಾಸನಗಳಲ್ಲಿ ಅವನು ವಿಷ್ಣುವರ್ಧನನೆಂಬ ಹೆಸರನ್ನು ಇಟ್ಟುಕೊಂಡ ಉಲ್ಲೇಖವಿದ್ದರೂ ಇದಿಷ್ಟೇ ಸಾಮಾನ್ಯವಾಗಿ ಇರುವ ನಂಬಿಕೆಯ ಪ್ರಕಾರ, ಅವನು ಜೈನಧರ್ಮದಿಂದ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದ ನೆನ್ನಲು ಪ್ರಬಲ ಸಾಕ್ಷ್ಯವೆನಿಸಲಾರದು. ಅಪರಿಮಿತ ಸಾಮರ್ಥ್ಯ, ಅತಿಶಯ ಮಾನವ ಪ್ರೇಮ, ಕಲಾತ್ಮಕ ಮನೋಧರ್ಮ-ಇವುಗಳಿಂದ ಕೂಡಿದ್ದ ವಿಷ್ಣುವರ್ಧನನು ಶ್ರೀವೈಷ್ಣವ ಮಹಾ ಸಂತನ ವ್ಯಕ್ತಿತ್ವಕ್ಕೂ ಸಂದೇಶಕ್ಕೂ ವಶವಾಗಿರಬೇಕು. ಹೀಗೆ ಮತಾಂತರ ಹೊಂದಿದ ಮೇಲೂ ಅವನು ಜೈನ ಗುರುಗಳಿಗೂ ಅವರ ಮಠಗಳಿಗೂ ರಾಜಾಶ್ರಯವನ್ನು ಮುಂದುವರಿಸಿದನು. ವಾಸ್ತವಿಕವಾಗಿ, ಅಂದಿನ ದಿನಗಳಲ್ಲಿ ಭಿನ್ನ ಭಿನ್ನ ಮತಧರ್ಮವನ್ನು ಅವಲಂಬಿಸಿದವರು ಶಾಂತಿ ಸುಖಗಳಿಂದ ಒಂದೇ ಕುಟುಂಬದಲ್ಲಿ ಬಾಳುತ್ತಿದ್ದ ನಿದರ್ಶನಗಳು ದೊರಕುತ್ತವೆ. ವಿಷ್ಣುವರ್ಧನನ ಕೀರ್ತಿವೆತ್ತ ರಾಣಿ ಶಾಂತಲಾದೇವಿಯೇ ಇದಕ್ಕೆ ನಿದರ್ಶನ. ಆಕೆ ಮೊದಲು ಜೈನಳು; ಆಕೆಯ ತಂದೆ ಮಾರಸಿಂಗಯ್ಯ ನಿಷ್ಠಾವಂತ ಶೈವನಾಗಿದ್ದನು; ತಾಯಿ ಮಾಚಿಕಬ್ಬೆ ನಿಷ್ಠಾವಂತ ಜೈನಳಾಗಿದ್ದಳು. ಶಾಂತಲಾದೇವಿಯು ಶ್ರವಣಬೆಳಗೊಳದಲ್ಲಿ ಜಿನ ದೇವಾಲಯವೊಂದನ್ನು ಕಟ್ಟಿಸಿದಳು. ' ಸವತಿಗಂಧವಾರಣೆ ' ಎಂಬ ಅವಳ ಬಿರುದಿಗೆ ' ಮರ್ಯಾದಾ ಹೀನ ಸವತಿಯರಿಗೆ ಮದಿಸಿದ ಆನೆಯಂತೆ ಭಯಂಕರ ಸ್ವರೂಪಳು ' ಎಂದು ಅರ್ಥ. ಬೇಲೂರಿನ ವಿಜಯನಾರಾಯಣನಿಗೆ ಅಂಕಿತವಾದ ಸುಪ್ರಸಿದ್ಧ ಚೆನ್ನಕೇಶವ ದೇವಾಲಯ ಮತ್ತು ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯಗಳ ಪ್ರತಿಷ್ಠೆ ಮಾಡಿದ ಆರು ವರ್ಷಗಳ ಬಳಿಕ ಕ್ರಿ.ಶ. 1123ರಲ್ಲಿ ಆಕೆ ಈ ಜಿನದೇವಾಲಯವನ್ನು ಕಟ್ಟಿಸಿದಳು. ವಿಷ್ಣುವರ್ಧನನು ವೈಷ್ಣವ ಧರ್ಮವನ್ನು ಅವಲಂಬಿಸಿದ ನೆನಪಿಗೆ ದೊಡ್ಡಗದ್ದವಳ್ಳಿಯಲ್ಲಿ ವರ್ತಕನೊಬ್ಬನು ಕ್ರಿ.ಶ. 1115ರಲ್ಲಿ ಕಟ್ಟಿಸಿದ ಲಕ್ಷ್ಮೀದೇವಿ ದೇವಾಲಯವೂ ಕ್ರಿ.ಶ. 1117ರಲ್ಲಿ ನಿರ್ಮಿತವಾದ ಕಪ್ಪೆ ಚೆನ್ನಿಗರಾಯ ದೇವಾಲಯವೂ ಕ್ರಿ.ಶ. 1130ರಲ್ಲಿ ನಿರ್ಮಿತವಾದ ಮರಳೆಯ ಕೇಶವ ದೇವಾಲಯವೂ ನಿದರ್ಶನಗಳಾಗಿ ನಿಂತಿವೆ.

ವಿಷ್ಣುವರ್ಧನನ ತರುವಾಯ ಪಟ್ಟಕ್ಕೆ ಬಂದ ಒಂದನೆಯ ನರಸಿಂಹನು ಕೇವಲ ಎಂಟು ವರ್ಷದ ಬಾಲಕನಾಗಿದ್ದನು. ಆದರೆ ವಿಷ್ಣುವರ್ಧನನಿಗೆ ವಿಶ್ವಾಸಾರ್ಹರಾದ ದಂಡನಾಯಕರೂ ಸಚಿವರೂ ಇದ್ದರು. ಕೆಲವರಂತೂ ' ಗರುಡ 'ರೆಂದೆನಿಸಿಕೊಂಡಿದ್ದರು. ಅಂದರೆ, ರಾಜನಿಗಾಗಿ ಪ್ರಾಣಾರ್ಪಣೆ ಮಾಡುವ ದೀಕ್ಷೆಯನ್ನು ಕೈಗೊಂಡು, ರಾಜನು ಕಾಲವಾದ ತರುವಾಯ ತಾವು ಬದುಕಿರಬಾರದೆಂಬ ವಿಶಿಷ್ಟ ಪದ್ಧತಿಯೊಂದನ್ನು ನಡೆಸಿಕೊಂಡು ಬಂದವರು ಈ ಹೊಯ್ಸಳ ರಾಜ್ಯಭಾರ ಕಾಲದಲ್ಲಿ ಕಂಡುಬರುತ್ತಾರೆ. ಇವರ ರಾಜಭಕ್ತಿಯ ನೆರವಿನಿಂದ ನರಸಿಂಹನು ಮೂವತ್ತು ವರ್ಷ ರಾಜ್ಯವನ್ನಾಳಿದನು. ಆದರೆ, ಅವನು ದುರದೃಷ್ಟವಶಾತ್, ಅತಿಭೋಗಿಯಾಗಿ ತನ್ನ ನಲವತ್ತನೆಯ ವಯಸ್ಸಿನಲ್ಲಿಯೇ ಅಕಾಲ ಮರಣ ಹೊಂದಿದನು. ಇವನ ಮಗ ಎರಡನೆಯ ಬಲ್ಲಾಳನಲ್ಲಿ ತಾತನ ಕೆಲವು ಗುಣಗಳು ಆನುವಂಶಿಕವಾಗಿ ಬಂದಿದ್ದವು. ತಂದೆ ಕಾಲವಾಗುವುದಕ್ಕೆ ಸುಮಾರು ಆರು ವರ್ಷಗಳು ಮುಂಚಿತವಾಗಿಯೇ ರಾಜಪ್ರತಿನಿಧಿಯಾಗಿ ಆತನು ಆಡಳಿತದ ಹೊಣೆಯನ್ನು ನಿರ್ವಹಿಸಿದ್ದನು.

ವಿಷ್ಣುವರ್ಧನನ ತರುವಾಯ ರಾಜ್ಯಭಾರ ಮಾಡಿದವರಲ್ಲಿ ಎರಡನೆಯ ಬಲ್ಲಾಳನ ಕಾಲವು

(ಕ್ರಿ.ಶ. 1173–1220) ಮಹತ್ತರವಾದುದು. ಚಕ್ರಾಧಿಪತ್ಯವು ವಿಶಾಲವಾಗಿ ವಿಸ್ತಾರವಾಯಿತು. ಅವನು 'ದಕ್ಷಿಣದ ಸಾರ್ವಭೌಮ'ನೆಂದು ವಹಿಸಿಕೊಂಡ ಬಿರುದು ಕೇವಲ ಒಂದು ಹೆಮ್ಮೆಯ ವಿಷಯವಾಗಿರಲಿಲ್ಲ. ಅವನು ರಾಜಕಾರಣದಲ್ಲಿ ಆವಶ್ಯಕವಾದ ಶಿಕ್ಷಣ ಪಡೆದಿದ್ದನು. ಅವನ ಹೆಸರಿನಿಂದಲೇ ರಾಜವಂಶಕ್ಕೆ 'ಬಲ್ಲಾಳ' ಎಂಬ ಹೆಸರು ಬಂದಿತು. ಇವನಿಂದ ಕೊಂಗಾಳ್ವರೂ ಚೆಂಗಾಳ್ವರೂ ದಮನವಾದರು. ರಾಜ್ಯದಲ್ಲಿ ಕಂಡುಬಂದ ಅವ್ಯವಸ್ಥೆ ಅಡಗಿಸಲ್ಪಟ್ಟಿತು. ಉಚ್ಚಂಗಿ ಎಂಬ ಅಪ್ರತಿಹತ ಕೋಟೆ ಕೈವಶವಾಯಿತು. ಬಲ್ಲಾಳನು 'ಗಿರಿದುರ್ಗಮಲ್ಲ'ನೆಂಬ ಬಿರುದನ್ನು ಹೊಂದಿದನು. ಉಚ್ಚಂಗಿಯಲ್ಲಿ ಪಾಂಡ್ಯ ಮನೆತನದವರು ಆಳುತ್ತಿದ್ದರು. ಅದು ಕೈವಶವಾದುದು ಒಂದು ಶನಿವಾರವಾದುದರಿಂದ ರಾಜನು 'ಶನಿವಾರಸಿದ್ಧಿ' ಎಂಬ ಬಿರುದನ್ನು ಹೊಂದಿದನು. ಪಾಂಡ್ಯರ ನೆರೆಯ ರಾಜ ಹೆಂಜೇರು ಚೋಳನ ಮೇಲೂ ಉತ್ತರದಲ್ಲಿ ತುಂಗಭದ್ರೆಯ ಆಚೆಗೂ ದಿಗ್ವಿಜಯಗಳು ನಡೆದವು. ಇವುಗಳಲ್ಲೆಲ್ಲಾ ಬಹಳ ಮುಖ್ಯವಾದುದೆಂದರೆ, ದೇವಗಿರಿಯ ಯಾದವರು ಅಥವಾ ಸೇವುಣರ ಮೇಲೆ ನಡೆಸಿದ ದಾಳಿ. ಹೊಯ್ಸಳರೂ ಯಾದವರೂ ಒಂದು ಇತ್ಯರ್ಥಕ್ಕೆ ಬರದಿದ್ದುದು ಒಂದು ದುರದೃಷ್ಟವೇ ಸರಿ. ಉತ್ತರದಲ್ಲಿ ನಿರಂತರ ಹೋರಾಟ ನಡೆದೇ ಇತ್ತು. ಯಾದವರು ಹೊಯ್ಸಳ ರಾಜ್ಯದೊಳಕ್ಕೆ ಆಗಾಗ ದಾಳಿ ಮಾಡುತ್ತಲೇ ಇದ್ದರು. ಗದುಗಿಗೆ ಹನ್ನೆರಡು ಮೈಲಿ ದೂರದಲ್ಲಿರುವ ಸೊರಟೂರಿನ ಬಳಿ ನಡೆದ ಪ್ರಸಿದ್ಧ ಕದನದಲ್ಲಿ ಯಾದವ ದೊರೆ ಭಿಲ್ಲಮನು ಪೂರ್ಣವಾಗಿ ಸೋತುಹೋದನು. ಅನೇಕ ಕೋಟೆಗಳು ಕೈವಶವಾದವು. ಕ್ರಿ.ಶ. 1193ರಲ್ಲಿ ಧಾರವಾಡ ಜಿಲ್ಲೆಯ ಲೊಕ್ಕಿಗುಂಡಿಯು ಅವನ ತಾತ್ಕಾಲಿಕ ರಾಜಧಾನಿಯಾಯಿತು. ಈ ವೇಳೆಗೆ ಚಾಲುಕ್ಯರ ಶಕ್ತಿ ನಶಿಸಿ ಹೋಗಿತ್ತು. ದೇವಗಿರಿಯ ಯಾದವರಿಗೂ ಎರಡನೆಯ ಬಲ್ಲಾಳನಿಗೂ ಚಾಲುಕ್ಯ ರಾಜ್ಯವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಪೈಪೋಟಿಯೇ ನಡೆಯಿತು. ಈ ಸಂದರ್ಭದಲ್ಲಿಯೇ ಸೊರಟೂರಿನಲ್ಲಿ ನಡೆದ ಕದನದಲ್ಲಿ ಪ್ರಚಂಡ ವಿಜಯ ಗಳಿಸಿದ ಎರಡನೆಯ ಬಲ್ಲಾಳನು ಉತ್ತರಕ್ಕೆ ನುಗ್ಗಿ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ಅಲ್ಲಿಂದ ಮುಂದೆ ಮಲಪ್ರಭಾ ನದಿಯೇ ಎರಡು ರಾಜ್ಯಗಳಿಗೂ ಮೇರೆಯಾಯಿತು ; ಉತ್ತರಕ್ಕೆ ಯಾದವರೂ ದಕ್ಷಿಣಕ್ಕೆ ಹೊಯ್ಸಳರೂ ಪ್ರತಿಷ್ಠಿತರಾದರು. ನೊಳಂಬವಾಡಿ ಪ್ರಾಂತವು ಬಲ್ಲಾಳನ ನೇರವಾದ ಆಡಳಿತಕ್ಕೆ ಸೇರಿತು. ಅವನು 'ಸಮಸ್ತ ಭುವನಾಶ್ರಯ', 'ಶ್ರೀ ಪೃಥಿವೀ ವಲ್ಲಭ.', 'ಮಹಾರಾಜಾಧಿರಾಜ', 'ಪರಮ ಭಟ್ಟಾರಕ', 'ಪರಮೇಶ್ವರ', 'ಪ್ರತಾಪ ಚಕ್ರವರ್ತಿ', 'ಯಾದವ ಚಕ್ರವರ್ತಿ', ಮತ್ತು 'ದಕ್ಷಿಣಾಧೀಶ್ವರ', ಎಂಬ ಸಾಮ್ರಾಟ ಬಿರುದುಗಳನ್ನು ಹೊಂದಿದನು.

ಹೊಯ್ಸಳರ ಇತಿಹಾಸದಲ್ಲಿ ಒಂದು ಸ್ವಾರಸ್ಯಕರ ವಿಚಾರವೆಂದರೆ, ಅವರು ತಮಿಳುದೇಶಕ್ಕೆ ಯಶಸ್ವಿಯಾಗಿ ಪ್ರವೇಶಿಸಿ, ಅಲ್ಲಿ ತಮ್ಮ ಪ್ರಭಾವವನ್ನು ಹರಡಿದುದು. ಕೊಯಮುತ್ತೂರು, ಮಧುರೆ ಮತ್ತು ಸೇಲಂ ಜಿಲ್ಲೆಗಳಲ್ಲಿ ಹಲವಾರು ಹೊಯ್ಸಳ ಶಾಸನಗಳು ದೊರಕಿವೆ. ಈ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಎರಡನೆಯ ಬಲ್ಲಾಳನು ತಮಿಳು ದೇಶದ ಮೇಲೆ ಒಂದು ಬಗೆಯ ರಾಜಕೀಯ ಆಧಿಪತ್ಯವನ್ನು ಸಾಧಿಸಿದುದಲ್ಲದೆ ಅಲ್ಲಿನ ಜನರ ಸಾಂಸ್ಕೃತಿಕ ಪ್ರಗತಿಗೂ ತುಂಬ ಗಮನವಿತ್ತಿದ್ದನೆಂದು ಕಂಡು ಬರುತ್ತದೆ. ಕುಲೋತ್ತುಂಗನ ರಾಜ್ಯಭಾರದ ಕೊನೆಕೊನೆಗೆ ಮಾತ್ರ ಬಲ್ಲಾಳನು ತಮಿಳು ದೇಶದ ರಾಜಕೀಯದಲ್ಲಿ ಪ್ರಸಿದ್ಧಿ ಪಡೆದುಕೊಳ್ಳುವ ಅವಕಾಶವನ್ನು ಹೊಂದಿದನು. ಚೋಳರೂ ಪಾಂಡ್ಯರೂ ಪರಸ್ಪರ ಪರಮಾಧಿಕಾರಕ್ಕಾಗಿ ನಡೆಸುತ್ತಿದ್ದ ಹೋರಾಟವೇ ಅವನು ಒಳ್ಳೆಯ ಪ್ರಭಾವ ಶಾಲಿಯಾಗಿ ಪಾತ್ರವಹಿಸಲು ಅವಕಾಶವನ್ನಿತ್ತಿತ್ತು. ಕ್ರಿ.ಶ. 1215ರಲ್ಲಿ ರಾಜರಾಜ ಚೋಳನು ಪಟ್ಟಕ್ಕೆ ಬಂದನು. ಅವನ ರಾಜ್ಯಭಾರದ ಕಾಲದಲ್ಲಿ ಅನೇಕ ದುರಂತಗಳಾದವು. ಕಾಕತೀಯರ ಅರಸು ತನ್ನ ರಾಜಧಾನಿ ವಾರಂಗಲ್ಲಿನಿಂದ ಯುದ್ಧ ನಡೆಸಿ, ತೆಲುಗು ಸೀಮೆಯ ಬಹು ಭಾಗವನ್ನು ವಶಪಡಿಸಿಕೊಂಡು, ದಕ್ಷಿಣದ ಕಡೆಗೆ ನುಗ್ಗುತ್ತಿದ್ದನು. ಕೃಷ್ಣಾ ನದಿಗೆ ದಕ್ಷಿಣದಲ್ಲಿದ್ದ ತೆಲುಗು ಪ್ರದೇಶದಲ್ಲಿ ಅಧಿಪತಿಯಾಗಿದ್ದ ಚೋಡ ನಾಯಕನು ಚೋಳರ ಶಕ್ತಿ ಕುಂದುತ್ತ ಹೋದಂತೆ ಕ್ರಮೇಣ ಬಲಿಷ್ಠನಾಗುತ್ತಿದ್ದನು. ಹೊಯ್ಸಳ ಬಲ್ಲಾಳನು ಮೈಸೂರಿನಲ್ಲಿ ಅತ್ಯಂತ

ಪ್ರಬಲನಾಗಿದ್ದನು. ಚೋಳರಾಜವಂಶದ ಚಿರಶತ್ರು ಪಾಂಡ್ಯರಾಜನು ಚೋಳರಾಜ್ಯದ ನೈಋತ್ಯ ಭಾಗದಲ್ಲಿ ದಾಳಿನಡೆಸಿದನು. ಈ ಪರೀಕ್ಷಾ ಸಮಯದಲ್ಲಿಯೇ ಬಲ್ಲಾಳನು ತಮಿಳು ರಾಜ್ಯದಲ್ಲಿ ತನ್ನ ಶಕ್ತಿ ಪ್ರದರ್ಶನ ಮಾಡಿದುದು. ಅವನ ಮಗ ರಾಜಕುಮಾರ ವೀರನರಸಿಂಹನು ಶ್ರೀರಂಗಂ ಮೇಲೆ (ಕೇವಲ'ರಂಗ'ಎಂದಿದೆ-E. C., VI, Ch. 56) ದಂಡೆತ್ತಿ ಹೋದನು. ಬಲ್ಲಾಳನು 'ಚೋಳರಾಜ್ಯ ಪ್ರತಿಷ್ಠಾಚಾರ್ಯ', ಮತ್ತು 'ಪಾಂಡ್ಯಗಜ ಕೇಸರಿ', ಎಂಬುದಾಗಿಯೂ ಅವನ ಮಗ ನರಸಿಂಹನು 'ಚೋಳಕುಲೈಕರಕ್ಷ' ಎಂಬುದಾಗಿಯೂ ವರ್ಣಿಸಲ್ಪಟ್ಟಿದ್ದಾರೆ. ಅವನು ಬಹುಶಃ ರಾಜತಂತ್ರದಿಂದಲೂ ತನ್ನ ಶಕ್ತಿಪ್ರದರ್ಶನ ದಿಂದಲೂ ಚೋಳ ಸಿಂಹಾಸನವನ್ನು ಹಿಂದಕ್ಕೆ ಗಳಿಸಿಕೊಟ್ಟನು.

ಬಲ್ಲಾಳನು ನಲವತ್ತೇಳು ವರ್ಷಗಳ ಮಹಾಸಾಧನೆಗಳಿಂದ ಕೂಡಿದ ರಾಜ್ಯಭಾರ ಮಾಡಿ, ಕ್ರಿ.ಶ. 1220ರಲ್ಲಿ ಕಾಲವಾದನು. ಅವನ ಮಗ ಎರಡನೆಯ ನರಸಿಂಹನು (ವೀರ ನರಸಿಂಹದೇವರಸ ಎಂಬ ಹೆಸರೂ ಇತ್ತು) ಪಟ್ಟಕ್ಕೆ ಬಂದು ತನ್ನ ಪ್ರಸಿದ್ಧ ತಂದೆಯ ಮಹಾ ಪರಂಪರೆಯನ್ನೇ ಮುಂದುವರಿಸಿ, ಕ್ರಿ.ಶ. 1235ರ ವರೆಗೆ ರಾಜ್ಯವನ್ನಾಳಿದನು. ಅವನು ಚೋಳ ಚಕ್ರಾಧಿಪತ್ಯಕ್ಕೆ ಹೊಸ ಜೀವಶಕ್ತಿ ಕೊಟ್ಟು ದಕ್ಷಿಣದಲ್ಲಿ ಶಕ್ತಿ ಸಮತೋಲವನ್ನು (Balance of Power) ಕಾಪಾಡಲು ಯಶಸ್ವಿಯಾದನು. ಯಾವುದೋ ವೈವಾಹಿಕ ಸಂಬಂಧವೂ ಏರ್ಪಟ್ಟಿರಬೇಕು. ಏಕೆಂದರೆ ತನ್ನ ಮಗಳನ್ನು ಚೋಳವಂಶದ ದೊರೆ ರಾಜರಾಜನಿಗೆ ಕೊಟ್ಟು ವಿವಾಹ ಮಾಡಿದ್ದನೆಂದು ತಿಳಿದು ಬರುತ್ತದೆ. ಹೊಯ್ಸಳರು ಬಹುಮಟ್ಟಿಗೆ ದಕ್ಷಿಣಭಾರತ ರಾಜಕೀಯದ ಮಧ್ಯಸ್ಥಗಾರರೆಂದೇ ಪರಿಗಣಿಸಲ್ಪಟ್ಟಿದ್ದರು. ಪಾಂಡ್ಯರ ಮತ್ತು ಚೋಳರ ಶಕ್ತಿ ಕುಂದುತ್ತ ಹೋದಂತೆ ಹೊಯ್ಸಳರೇ ದಕ್ಷಿಣ ಭಾರತದ ನಾಯಕಪಾತ್ರವನ್ನು ವಹಿಸಿಕೊಳ್ಳ ಬೇಕಾಯಿತು. ಎರಡನೆಯ ನರಸಿಂಹನು ಕಾಡವ (ಪಲ್ಲವ)ನಾಯಕ ಕೊಪರುಂಜಿಂಗನ ಮೇಲೆ ದಂಡೆತ್ತಿ ಹೋಗಿ, ಅವನು ಕೈಸೆರೆಹಿಡಿದಿಟ್ಟಿದ್ದ ಮೂರನೆಯ ರಾಜರಾಜನನ್ನು ಎರಡನೆ ಬಾರಿಗೆ ಮುಕ್ತಗೊಳಿಸಿ, ರಕ್ಷಿಸಿದನು. ಶ್ರೀರಂಗದಲ್ಲಿ ತೊಂಬತ್ತು ದಿನಗಳ ಕಾಲ ನಡೆದ ಯುದ್ಧದಲ್ಲಿ ಪಾಂಡ್ಯರ ಮತ್ತು ಕಾಡವರ ಸಂಯುಕ್ತ ಸೈನ್ಯವನ್ನು ಸೋಲಿಸಬಲ್ಲವನಾದನು. ಇದರ ತರುವಾಯ ಶ್ರೀರಂಗದ ಬಳಿ ತನ್ನ ಒಂದು ರಾಜಧಾನಿಯನ್ನೂ ಸ್ಥಾಪಿಸಿದನು. **ಗದ್ಯಕರ್ಣಾಮೃತ**ದಲ್ಲಿ ಉಲ್ಲೇಖವಾಗಿರುವಂತೆ ನರಸಿಂಹನು ಪಾಂಡ್ಯ ರಾಜ ಮಾರವರ್ಮನ್ ಸುಂದರ ಪಾಂಡ್ಯನಿಗೆ ಪೊಗದಿಯನ್ನು ವಿಧಿಸಿದನು.

ಎರಡನೆಯ ನರಸಿಂಹನು ಕಾಲವಾದ ತರುವಾಯ ಸೋಮೇಶ್ವರನು (ಕ್ರಿ.ಶ. 1235–1254)-ಇವನಿಗೆ ಸೋವಿದೇವ ಅಥವಾ ಸೋಮೇಶ್ವರ ಎಂಬ ಹೆಸರೂ ಇದ್ದಿತು—ಪಟ್ಟಕ್ಕೆ ಬಂದನು : ಇವನು ತನ್ನ ತಂದೆ ನಡೆಸಿದ ಕೆಲವು ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದನು. ಕಾಂಚೀಪುರವು ಹೊಯ್ಸಳರಿಗೂ ತೆಲುಗುಚೋಡರಿಗೂ ಕಲಹದ ಮೂಲವಾಯಿತು. ಹೊಯ್ಸಳರ ದಂಡಯಾತ್ರೆ ಕಾಂಚಿಯ ವರೆಗೂ ಮುಂದುವರಿಯಿತು. ಮೂರನೆಯ ರಾಜರಾಜನ ತರುವಾಯ ದೊರೆತನಕ್ಕೆ ಬಂದ ಮೂರನೆಯ ರಾಜೇಂದ್ರನು ಸಮರ್ಥನಾಗಿ ರಾಜ್ಯಭಾರಮಾಡಿ ಚೋಳರ ಪ್ರಭಾವವನ್ನು ಪುನರುಜ್ಜೀವನಗೊಳಿಸುವ ಆಶೆಯಿಂದ ಕೂಡಿದ್ದನು. ಪಾಂಡ್ಯರ ಮೇಲೆ ಅವನು ದಂಡೆತ್ತಿ ಹೋದಾಗ ಅವರನ್ನು ರಕ್ಷಿಸಿ, ಸೋಮೇಶ್ವರನು ಶಕ್ತಿಸಮತೋಲವನ್ನು ಕಾಪಾಡಬೇಕಾಯಿತು. ಜಟಾವರ್ಮ ಸುಂದರ ಪಾಂಡ್ಯನು ಕ್ರಿ.ಶ. 1251ರಲ್ಲಿ ಪಟ್ಟಕ್ಕೆ ಬಂದನು. ಇದು ಪಾಂಡ್ಯರ ಇತಿಹಾಸದಲ್ಲಿ ಒಂದು ಗಣನೀಯ ಅಂಶವಾಯಿತು. ದಕ್ಷಿಣ ಭಾರತದ ಎಲ್ಲ ರಾಜರೂ ಅವನ ಸಾಮರ್ಥ್ಯವನ್ನು ಮನಗಂಡರು. ಈ ಸಾಮಾನ್ಯ ಅಪಾಯದಿಂದ ಹೊಯ್ಸಳರ ಮತ್ತು ಚೋಳರ ನಡುವಿನ ಭಿನ್ನಾಭಿಪ್ರಾಯಗಳು ದೂರವಾಗಿ ಅವರು ಒಪ್ಪಂದಕ್ಕೆ ಬಂದರು. ಅವರು ತಮ್ಮ ಸರ್ವ ಸಾಮರ್ಥ್ಯವನ್ನೂ ಒಟ್ಟುಗೂಡಿಸಿ, ಪಾಂಡ್ಯರ ವಿರುದ್ಧ ಕಾದಾಡಿದರು. ಜಟಾವರ್ಮನ ಪ್ರತಾಪವನ್ನು ಅರಿತರೂ, ದಕ್ಷಿಣದಲ್ಲಿ ತಮ್ಮ ಸ್ವಾಧೀನದಲ್ಲಿದ್ದ ಭಾಗಗಳನ್ನು ಬಿಟ್ಟುಕೊಡಲು ನಿರಾಕರಿಸಿದರು.


ಹೊಯ್ಸಳರು
ಚಾಲುಕ್ಯರು
ಸೌರಾಷ್ಟ್ರರು
ಬ್ರೋಚ್
ನರ್ಮದಾ ನದಿ
ತಪತೀ ನದಿ
ಅಜಂತಾ
ನಾಸಿಕ್
ಎಲ್ಲೋರ
ಮಹಾನದಿ
ಭುವನೇಶ್ವರ
ಕಳಿಂಗ
ಗೋದಾವರೀ ನದಿ
ಕಾಕತೀಯರು
ಓರಂಗಲ್
ಕೃಷ್ಣಾ ನದಿ
ಪೂರ್ವ ಚಾಲುಕ್ಯರು
ಪಟ್ಟದಕಲ್ಲು
ಐಹೊಳೆ
ಬಾದಾಮಿ
ಗೋವೆ
ಬಂಕಾಪುರ
ಹೊಯ್ಸಳರು
ದೋರಸಮುದ್ರ
ಕಾಂಚೀ
ಮಧುರೆ
ಪಾಂಡ್ಯರು
ಅನುರಾಧಪುರ

ಚಿತ್ರ 11

ಕ್ರಿ.ಶ. 1254ರಲ್ಲಿ ಸಿಂಹಾಸನವನ್ನೇರಿದ ಸೋಮೇಶ್ವರನ ಮಗನಾದ ಮೂರನೆಯ ನರಸಿಂಹನ ಕಾಲದಲ್ಲಿ ಹೊಯ್ಸಳ ಚಕ್ರಾಧಿಪತ್ಯದ ವಿಭಜನೆಯುಂಟಾಯಿತು. ಸಾಮ್ರಾಜ್ಯವು ಹಿಡಿತಕ್ಕೆ ಬಾರದಷ್ಟು ದೊಡ್ಡದಾಗಿತ್ತು. ಅವರು ತಮಿಳು ದೇಶದಲ್ಲಿ ಹೊಸದಾಗಿ ಗೆದ್ದುಕೊಂಡಿದ್ದ ಭಾಗಗಳನ್ನು ಸುಭದ್ರವಾಗಿ ವ್ಯವಸ್ಥೆಗೊಳಿಸಲು ಹೆಚ್ಚಿನ ಗಮನ ಕೊಡಬೇಕಾಗಿತ್ತು. ಕೇವಲ ಈ ಆಡಳಿತ ಸೌಕರ್ಯಕ್ಕಾಗಿಯೇ ರಾಜ್ಯ ವಿಭಜನೆಯಾದುದು. ಅದು ಬಹುಶಃ ಸೋಮೇಶ್ವರನ ಒಪ್ಪಿಗೆಯಿಂದಲೇ ಶಾಂತವಾಗಿ ಆಯಿತು. ಪಿತ್ರಾರ್ಜಿತ ರಾಜ್ಯದ ಬಹು ಭಾಗ,–ಎಂದರೆ, ದೋರಸಮುದ್ರವನ್ನು ರಾಜಧಾನಿಯನ್ನಾಗಿ ಉಳ್ಳ ಅವರ ಸುತ್ತುಮುತ್ತಣ ಪ್ರಾಂತವು ನರಸಿಂಹನ ಭಾಗಕ್ಕೆ ಹೋಯಿತು. ಸೋಮೇಶ್ವರನ ಎರಡನೆಯ ಮಗ ರಾಮನಾಥನ ವಶಕ್ಕೆ ತಮಿಳು ಪ್ರಾಂತದ ಸೇಲಂ ಜಿಲ್ಲೆ, ಉತ್ತರ ಆರ್ಕಾಟ್ ಮತ್ತು ಚಿತ್ತೂರು ಜಿಲ್ಲೆಗಳ ಪಶ್ಚಿಮಾರ್ಧ, ಕರೂರನ್ನು, ಬಿಟ್ಟು ಇಡೀ ತಿರುಚಿರಾಪಳ್ಳಿ ಜಿಲ್ಲೆ, ತಂಜಾವೂರು ಜಿಲ್ಲೆಯ ತಂಜಾವೂರು ಪಾಪನಾಶನಂ ಮತ್ತು ಮನ್ನಾರುಗುಡಿ ತಾಲೂಕುಗಳು, ಪುದುಕೋಟೆ ರಾಜ್ಯದ ಪೂರ್ವ ಭಾಗ, ಮತ್ತು ಇಂದಿನ ಕೋಲಾರ ಜಿಲ್ಲೆಗೆ ಸೇರಿದ ಮೈಸೂರು ದೇಶದ ಪೂರ್ವಭಾಗ–ಇವೆಲ್ಲವೂ ಸೇರಿದವು. ಕಣ್ಣಾನೂರು ಅವನ ರಾಜಧಾನಿಯಾಯಿತು. ನರಸಿಂಹನು ಸಾಮರ್ಥ್ಯದಿಂದ ಪಿತ್ರಾರ್ಜಿತ ರಾಜ್ಯವನ್ನು ಆಳುತ್ತಾ ದಂಡೆತ್ತಿಬಂದ ಯಾದವರನ್ನು (ಸೇವುಣರನ್ನು) ಹಿಮ್ಮೆಟ್ಟಿಸಿದನು. ಸೋಮೇಶ್ವರ ಸಿಂಹಾಸನವನ್ನು ಬಿಟ್ಟ ಮೇಲೂ ಚಕ್ರಾಧಿಪತ್ಯದ ವಿಚಾರಗಳಲ್ಲಿ ಆಸಕ್ತಿ ಹೊಂದಿದ್ದು, ರಾಮನಾಥನಿಗೆ ವಿದೇಶನೀತಿಯ ಬಗೆಗೆ ಸಲಹೆ ನೀಡುತ್ತಿದ್ದನು. ದುರದೃಷ್ಟವಶಾತ್, ದಕ್ಷಿಣದಲ್ಲಿ ಉಂಟಾದ ಪರಾಭವದಿಂದ ರಾಮನಾಥನಿಗೆ ನರಸಿಂಹನ ರಾಜ್ಯಭಾಗದ ಮೇಲೆ ದಾಳಿಮಾಡುವ ದುರಾಶೆ ಹುಟ್ಟಿತು. ಕ್ರಿ.ಶ. 1279ರಲ್ಲಿ ರಾಜೇಂದ್ರ ಚೋಳನ ಅವಸಾನದಿಂದ ಚೋಳ ಸಾಮ್ರಾಜ್ಯದ ಪತನ ಆರಂಭವಾಯಿತು. ಅದು ಪೂರ್ಣವಾಗಿ ಪಾಂಡ್ಯ ಸಾಮ್ರಾಜ್ಯದಲ್ಲಿ ಲೀನವಾಯಿತು. ಪಾಂಡ್ಯ ರಾಜನಾದ ಮಾರವರ್ಮನ್ ಕುಲಶೇಖರನು ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿ ರಾಮನಾಥನ ಆಡಳಿತಕ್ಕೆ ಬಂದಿದ್ದ ತಮಿಳು ಜಿಲ್ಲೆಗಳು ಮತ್ತು ಚೋಳದೇಶ—ಈ ಎರಡರ ಮೇಲೂ ನಿರ್ವಿವಾದವಾದ ಪ್ರಭುತ್ವವನ್ನು ಗಳಿಸಿದುದರಿಂದ ಹೊಯ್ಸಳರಿಗೆ ದಕ್ಷಿಣದಲ್ಲಿ ಭಾರಿ ಪೆಟ್ಟು ಬಿದ್ದಂತಾಯಿತು. ಆತನು ಅತ್ಯಂತ ದುಸ್ತರದಿಂದ ಕಣ್ಣಾನೂರನ್ನು ಮತ್ತೆ ವಶಪಡಿಸಿ ಕೊಂಡುದಲ್ಲದೆ, ದಕ್ಷಿಣ ಆರ್ಕಾಟ್ ಮತ್ತು ತಿರುಚಿರಾಪಳ್ಳಿ ಜಿಲ್ಲೆಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿ ಕೊಳ್ಳಲು ಶಕ್ತನಾದನು.

ರಾಜ್ಯವಿಭಜನೆಯ ಫಲವು ಉತ್ತರೋತ್ತರ ಪರಸ್ಪರ ವಿದ್ವೇಷಕ್ಕೂ ರಾಜ್ಯದ ಸಂಪತ್ತು ಮತ್ತು ಸಾಧನಗಳ ವ್ಯಯಕ್ಕೂ ಕಾರಣವಾಯಿತು. ಇದರಿಂದ ಮೂರನೆಯ ನರಸಿಂಹನ ತರುವಾಯ ಸಿಂಹಾಸನಕ್ಕೆ ಬಂದ ಅವನ ಮಗ ವಿಷ್ಣುವರ್ಧನ ವೀರಬಲ್ಲಾಳ ದೇವರಸನೆಂದು ಪ್ರಸಿದ್ಧನಾದ ಮೂರನೆಯ ಬಲ್ಲಾಳನು ತನ್ನ ಆಳಿಕೆಯ ಕಾಲದಲ್ಲಿ ಇಬ್ಭಾಗವಾಗಿದ್ದ ತನ್ನ ಸಾಮ್ರಾಜ್ಯವನ್ನು ಮತ್ತೆ ಒಂದುಗೂಡಿಸಿದನು. ಪ್ರೊ. ನೀಲಕಂಠಶಾಸ್ತ್ರಿಗಳು ಹೀಗೆ ಬರೆಯುತ್ತಾರೆ: "ತಮಿಳು ಪ್ರದೇಶವನ್ನು ಕಳೆದುಕೊಂಡ ಮೇಲೆ, ಹೊಯ್ಸಳ ರಾಮನಾಥನು ತನ್ನ ಸೋದರನಾದ ಮೂರನೆಯ ನರಸಿಂಹನ ಮೇಲೆ ಅಂತಃಕಲಹವನ್ನು ಆರಂಭಿಸಿದನು. ಅದೇ ಕಾಲದಲ್ಲಿ ದೇವಗಿರಿಯ ಯಾದವರು, ಕಾಕತೀಯರು ಮೊದಲಾದ ಶತ್ರುಗಳು ನರಸಿಂಹನ ಮೇಲೆ ದಾಳಿ ಮಾಡಿದರು. ರಾಮನಾಥನು ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವು ಭಾಗಗಳನ್ನು ವಶಪಡಿಸಿಕೊಂಡು, ಸೇಲಂ ಜಿಲ್ಲೆಯ ಹೊಸೂರಿನ ಬಳಿಯಿರುವ ಕುಂದಣಿಯನ್ನು ರಾಜಧಾನಿ ಮಾಡಿಕೊಂಡು, ರಾಜ್ಯಭಾರ ನಡೆಸಲಾರಂಭಿಸಿದನು. ಕ್ರಿ.ಶ. 1292ರಲ್ಲಿ ನರಸಿಂಹನು ಕಾಲವಾದನು. ಮೂರನೆಯ ಬಲ್ಲಾಳನು ಸಿಂಹಾಸನಕ್ಕೆ ಬಂದನು. ರಾಮನಾಥನು ಇದನ್ನು ವಿರೋಧಿಸದಿದ್ದರೂ ಮೂರು ವರ್ಷಗಳ ತರುವಾಯ ಅವನು ಕಾಲವಾಗುವ ವರೆಗೂ ದ್ವೇಷ ಭಾವವನ್ನೇ ಬೆಳೆಸಿದನು. ಅವನ ಮಗ ವಿಶ್ವನಾಥನೂ ಕೆಲವು ವರ್ಷಗಳ ವರೆಗೆ ಅದೇ ಭಾವವನ್ನು ಮುಂದುವರಿಸಿ ಕೊನೆಗೆ ಕಾಲವಾದನು. ಹೀಗೆ, ಬಲ್ಲಾಳನು ಕ್ರಿ.ಶ. 1300ಕ್ಕೆ ಮುಂಚಿತವಾಗಿ ಮತ್ತೆ

ಒಂದುಗೂಡಿದ ಹೊಯ್ಸಳ ಸಾಮ್ರಾಜ್ಯದ ಅಧಿಪತಿಯಾದನು. ಅವನು ಕುಲಶೇಖರನ ಕಾಲಾನಂತರ ಪಾಂಡ್ಯದೇಶದಲ್ಲಿ ಉತ್ಪನ್ನವಾದ ಅಂತಃಕಲಹದ ಸಂದರ್ಭವನ್ನು ಉಪಯೋಗಿಸಿಕೊಂಡು ರಾಮನಾಥನು ಕಳೆದುಕೊಂಡಿದ್ದ ಸಾಮ್ರಾಜ್ಯದ ಭಾಗವನ್ನು ಮತ್ತೆ ಗಳಿಸಿಕೊಳ್ಳುವ ಹಂಬಲದಿಂದ ಒಂದು ಪಕ್ಷಕ್ಕೋ ಇನ್ನೊಂದಕ್ಕೋ ಆಗಾಗ ನೆರವಿತ್ತನು. ಆದರೆ ಅನಿರೀಕ್ಷಿತವಾಗಿ ಮಲ್ಲಿಕ್‌ಕಾಪುರನ ದಂಡಯಾತ್ರೆ ಒದಗಿಬಂದು ಅವನ ಆಶೆ ಕೈಗೂಡದೆ ಭಗ್ನವಾಯಿತು (A History of South India, 2nd Edition, P. 207).

ಹೊಯ್ಸಳ ವಂಶದ ಕಡೆಯ ಮಹಾ ಚಕ್ರವರ್ತಿ ಮೂರನೆಯ ಬಲ್ಲಾಳನ ಆಳಿಕೆಯ ಕಾಲವು ದಕ್ಷಿಣ ಭಾರತವಲ್ಲಿ ಪ್ರಕ್ಷುಬ್ಧತೆಯ ಕಾಲವಾಗಿತ್ತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಥಮವಾಗಿ ಕ್ರಿ.ಶ. 1310ರಲ್ಲಿ ಮುಸ್ಲಿಮರು ದಂಡಯಾತ್ರೆ ನಡೆಸಿ, ವಿಪುಲವಾಗಿ ಸೂರೆಮಾಡಿದರು. ದಕ್ಷಿಣದ ಹಿಂದೂರಾಜ್ಯಗಳಿಗೆ ಅವರ ಆಕ್ರಮಣದ ವಿನಾಶಸ್ವರೂಪದ ಕಲ್ಪನೆಯೇ ಇರಲಿಲ್ಲ. ಅಂತಃಕಲಹಗಳಿಂದ ಕೂಡಿದ್ದ ರಾಜ್ಯಗಳಿಗೆ ಮುಸ್ಲಿಮರ ಘೋರ ದಾಳಿಯನ್ನು ಎದುರಿಸಿ, ರಕ್ಷಣೆ ಮಾಡಿಕೊಳ್ಳುವ ಸಿದ್ಧತೆಯೇ ಇರಲಿಲ್ಲ. ಈ ರಾಜ್ಯಗಳ ಪೈಕಿ ಸೇವುಣರೆಂದು ಹೆಸರು ಪಡೆದ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಹೊಯ್ಸಳರು ಮತ್ತು ಪಾಂಡ್ಯರು ಮುಖ್ಯರಾಧವರು,—ಒಬ್ಬೊಬ್ಬರೂ ಪರಮಾಧಿಕಾರಕ್ಕಾಗಿ ಹೋರಾಡುತ್ತಿದ್ದರು. ಎಲ್ಲರೂ ಒಂದಾಗಿ ಹಿಂದೂಧರ್ಮವನ್ನು ರಕ್ಷಿಸಬೇಕೆಂಬ ಆವಶ್ಯಕತೆ ಇದರ ತರುವಾಯವೇ ಅವರಿಗೆ ಅರಿವಾದುದು. ಮೂರನೆಯ ಬಲ್ಲಾಳನು ಮುಸ್ಲಿಮರ ದಾಳಿಯನ್ನು ಎದುರಿಸುವುದಕ್ಕಾಗಿ ಒಂದು ರೀತಿಯ ಸಂಘಟಿತ ರೂಪದ ಹೋರಾಟಕ್ಕೆ ಪ್ರಯತ್ನಿಸಿದರೂ ಅನನುಕೂಲತೆಗಳ ದೆಸೆಯಿಂದ ಅವನ ಮಹಾಯೋಜನೆ ನಿಷ್ಫಲವಾಯಿತು. ಇತಿಹಾಸದಲ್ಲಿ ಹೊಯ್ಸಳರ ಮೂರನೆಯ ಬಲ್ಲಾಳನು ಒಳ್ಳೆಯ ಪ್ರತಿಭಾವಂತನಾಗಿ ರಚನಾ ಸಾಮರ್ಥ್ಯವನ್ನುಳ್ಳ, ಕಟ್ಟಕಡೆಯ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾನೆಂಬುದು ನಿಸ್ಸಂದೇಹವಾದುದೇ ಸರಿ.

ಮೂರನೆಯ ಬಲ್ಲಾಳನು ರಾಜ್ಯದ ವಿಭಜನೆಯನ್ನು ಕೊನೆಗಾಣಿಸಿ, ಪುನಃ ಒಟ್ಟುಗೂಡಿದ ರಾಜ್ಯವನ್ನು ಆಳಲಾರಂಭಿಸಿದನು. ಕ್ರಿ.ಶ. 1310ರಲ್ಲಿ ಮಲ್ಲಿಕ್‌ಕಾಪುರನು ದಕ್ಷಿಣ ಭಾರತಕ್ಕೆ ದಂಡೆತ್ತಿ ಬರುವ ವರೆಗೂ ಅವನು ರಾಜ್ಯದ ಶಾಂತಿ ಮತ್ತು ವ್ಯವಸ್ಥೆಗಳನ್ನು ಮತ್ತೆ ಸ್ಥಾಪಿಸಿ, ಗತಿಸಿದ ಘನತೆಯನ್ನು ಗಳಿಸಿಕೊಳ್ಳುವ ಪ್ರಥಮ ಕಾರ್ಯದಲ್ಲಿಯೇ ನಿರತನಾಗಿದ್ದನು. ಬನವಾಸಿ ಪ್ರದೇಶದಲ್ಲಿ ಹತೋಟಿಗೆ ಬಾರದ ಕೆಲವು ನಾಯಕ ಮುಖ್ಯರನ್ನು ಅಳುಕದೆ ಮಟ್ಟಹಾಕಿದನು. ಬಲ್ಲಾಳನ ಭಾವಮೈದುನ ಸೋಮೆಯ ದಂಡನಾಯಕನು ಶತ್ರುಗಳಾದ ಸೇವುಣರನ್ನು ದಿಟ್ಟತನದಿಂದ ಬಲವಾಗಿ ಪ್ರತಿಭಟಿಸಿದರೂ ರಾಜ್ಯಕ್ಕೆ ಅವರ ದಾಳಿಯ ಭಯ ತಪ್ಪಲಿಲ್ಲ. ಮಾಧವ ದಂಡನಾಯಕನು ಜಟಾವರ್ಮನ್ ವೀರಪಾಂಡ್ಯನ ಮೇಲೆ ಪ್ರಚಂಡ ವಿಜಯ ಗಳಿಸಿ ದಕ್ಷಿಣದಲ್ಲಿ ಹೊಯ್ಸಳರ ಅಧಿಕಾರವನ್ನು ಮತ್ತೆ ಸ್ಥಾಪಿಸಿದನು. ಕ್ರಿ.ಶ. 1310ರಲ್ಲಿ ಬಲ್ಲಾಳನು ರಾಜಧಾನಿಯಲ್ಲಿ ಇಲ್ಲದಿದ್ದಾಗ ಮಲ್ಲಿಕ್‌ಕಾಫುರ್ ದಂಡಯಾತ್ರೆ ನಡೆಸಿ, ದೋರಸಮುದ್ರವನ್ನು ಕೊಳ್ಳೆಹೊಡೆದನು. ಬಲ್ಲಾಳನು ತತ್‌ಕ್ಷಣ ರಾಜಧಾನಿಗೆ ಹಿಂದಿರುಗಿದರೂ ಸಾಕಷ್ಟು ಸಿದ್ಧತೆಯಿಲ್ಲದೆ ಅಂಥ ಪ್ರಬಲ ಶತ್ರುವಿನ ಮೇಲೆ ಯುದ್ಧ ಮಾಡುವುದು ಮೂರ್ಖತನವೆಂದು ಭಾವಿಸಿ, ಸಾಮಂತರ ಸಲಹೆಗೆ ಬಹು ವಿರುದ್ಧವಾಗಿಯೇ ಮಲ್ಲಿಕ್‌ಕಾಫುರನೊಡನೆ ಶಾಂತಿಯ ಒಪ್ಪಂದಕ್ಕೆ ಬಂದನು. ಆಗಿನ ವಿಷಮ ಪರಿಸ್ಥಿತಿಯನ್ನು ದಾಟಿದುದಾಯಿತು. ವಿನಾಶದ ಭೀತಿಯಿಂದ ರಾಜ್ಯವು ಪಾರಾಯಿತು. ಬಲ್ಲಾಳನು ತನ್ನ ರಾಜ್ಯದಲ್ಲಿ ಮುಸ್ಲಿಂ ದಂಡನ್ನು ಇಟ್ಟುಕೊಳ್ಳಲು ಒಪ್ಪಿಗೆ ನೀಡದಿದ್ದುದರಿಂದ ಕ್ರಿ.ಶ. 1318ರಲ್ಲಿ ಅವರು ಮತ್ತೊಂದು ಸಲ ದಂಡೆತ್ತಿ ಬಂದರು. ಕಠಾರಿಯ ಸಾಳುವ ರಸೆಯನಾಯಕನು ದಾಳಿಗಾರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಈ ದಂಡಯಾತ್ರೆಯ ಪ್ರಭಾವದಿಂದ ಎಲ್ಲ ರಾಜರ ದೃಷ್ಟಿಕೋನ ಬದಲಾಯಿಸಿತು. ಬಲ್ಲಾಳನು ಹಿಂದೆ ಶತ್ರುವಿಗೆ ವಶನಾಗಿ ಅವರಿಂದ ಉಂಟಾಗಿದ್ದ

ಅಪಮಾನದಿಂದ ಕನಲಿದ್ದನು. ಅವನು ಇತರ ಹಿಂದೂ ರಾಜ್ಯಗಳ ಮೇಲೆ ಆಧಿಪತ್ಯ ಸ್ಥಾಪಿಸಬೇಕೆಂಬ ಅಭಿಪ್ರಾಯವನ್ನು ತ್ಯಜಿಸಿದನು. ಮುಸ್ಲಿಂ ದಾಳಿಕಾರರ ವಿರುದ್ಧವಾಗಿ ನಿಲ್ಲಲು ಯಾವುದಾದರೊಂದು ಸುಸಂಘಟಿತವಾದ ಪ್ರಯತ್ನವನ್ನು ತ್ವರಿತವಾಗಿ ಮಾಡಬೇಕಾದುದು ಅವಶ್ಯವೆನಿಸಿತ್ತು. ಬಲ್ಲಾಳನೇ ಮುಖಂಡತ್ವ ವಹಿಸಿಕೊಂಡು ತಿರುವಣ್ಣಾಮಲೆಯನ್ನು ತನ್ನ ರಾಜಧಾನಿಯನ್ನಾಗಿಯೂ ಕಾರ್ಯ ಸ್ಥಾನವನ್ನಾಗಿಯೂ ಮಾಡಿಕೊಂಡು, ದಕ್ಷಿಣದ ಎಲ್ಲ ರಾಜರಿಗೂ ಒದಗಿದ್ದ ಆಪತ್ತನ್ನು ಎದುರಿಸಲು ಹಿಂದೂ ರಾಜ್ಯಗಳ ಒಂದು ರೀತಿಯ ಕೂಟವನ್ನು ರಚಿಸಿದನು. ಬಹಾವುದ್ದೀನ್ ಗುರುಷಸ್ಪ್ ದಂಗೆಯೆದ್ದ ಕಾರಣದಿಂದ ಕ್ರಿ.ಶ. 1326ರಲ್ಲಿ ಮೊಹಮ್ಮದ್-ಬಿನ್-ತೊಗಲಕನು ದಕ್ಷಿಣದ ಮೇಲೆ ಮತ್ತೊಮ್ಮೆ ದಂಡಯಾತ್ರೆ ಮಾಡುವ ಅಗತ್ಯ ಒದಗಿತು. ಆದರೆ, ತಲೆತಪ್ಪಿಸಿಕೊಂಡಿದ್ದ ದಂಗೆಕೋರರನ್ನು ಸುಲ್ತಾನನಿಗೆ ಒಪ್ಪಿಸಿದ ಪರಿಣಾಮವಾಗಿ ಆ ಸನ್ನಿವೇಶ ತಪ್ಪಿತು. ಕ್ರಿ.ಶ. 1336ರಲ್ಲಿ ಮಧುರೆಯಲ್ಲಿ ಸುಲ್ತಾನನ ಆಡಳಿತವನ್ನು ಸ್ಥಾಪಿಸಿದ ಪರಿಣಾಮವಾಗಿ ಹಿಂದೂಗಳ ಮನಸ್ಸಿನಲ್ಲಿ ಭಯವುಂಟಾಯಿತು. ಘಯಾಸುದ್ದೀನನು ಕ್ರಿ.ಶ. 1341ರಲ್ಲಿ ಸುಲ್ತಾನನಾದ ಮೇಲೆ ಅವರ ಆತಂಕ ಪರಮಾವಧಿಯನ್ನು ಮುಟ್ಟಿತು. ಇಬ್ನಬತೂತನು ವಿವರಿಸಿದಂತೆ, ಸುಲ್ತಾನನು ನಡೆಸಿದ ಕ್ರೌರ್ಯಕ್ಕೆ ಮಿತಿಯೇ ಇರಲಿಲ್ಲ. ಹಿಂದೂ ಧರ್ಮ ರಕ್ಷಣೆಯು ಎಲ್ಲಕ್ಕಿಂತ ಪ್ರಮುಖವಾದ ವಿಷಯವಾಯಿತು. ಕ್ರಿ.ಶ. 1342ರಲ್ಲಿ ನಡೆದ ಕೊಪ್ಪಂ (ಇಬ್ನಬತೂತಾ ಹೇಳುವ ಕೊಬ್ಬನ್) ಯುದ್ಧದಲ್ಲಿ ಬಲ್ಲಾಳನೇ ಮುಸ್ಲಿಮರ ಮೇಲೆ, ನಿರ್ಣಾಯಕ ವಿಜಯವನ್ನು ಗಳಿಸುವುದರಲ್ಲಿದ್ದರೂ ಶತ್ರುಗಳ ಅಪೇಕ್ಷೆಯಂತೆ ಹದಿನಾಲ್ಕು ದಿನಗಳ ಯುದ್ಧ ವಿರಾಮಕ್ಕೆ ಒಪ್ಪಿಗೆಯಿತ್ತನು. ಬಲ್ಲಾಳ ಕೊಟ್ಟ ಮಾತಿನಂತೆ ಯುದ್ಧವಿರಾಮವನ್ನು ಗೌರವವಾಗಿ ನಡೆಸಿದರೂ ಮುಸ್ಲಿಮರು ಅದನ್ನು ಉಲ್ಲಂಘಿಸಿದರು. ಅವರು ಯುದ್ಧವಿರಾಮ ಕಾಲದಲ್ಲಿಯೇ ಬಲ್ಲಾಳನನ್ನೂ ಅವನ ಸೈನ್ಯವನ್ನೂ ಹಠಾತ್ತಾಗಿ ಇದಿರಿಸಿ, ಅವನನ್ನು ಕೇವಲ ಮೋಸದಿಂದ ಸೆರೆಹಿಡಿದು ಕೊಂದು ಹಾಕಿದರು. "ಅವನ (ಬಲ್ಲಾಳನ) ಚರ್ಮವನ್ನು ಹುಲ್ಲಿನಿಂದ ತುಂಬಿ ಮಧುರೆಯ ಕೋಟೆ ಗೋಡೆಯ ಮೇಲೆ ನೇತು ಹಾಕಿದರು. ಅದೇ ಶರೀರಭಂಗಿಯನ್ನು ಕಂಡೆ" ಎಂದು ಇಬ್ನ ಬತೂತನು ಬರೆದಿದ್ದಾನೆ. ಬಲ್ಲಾಳ ರಣರಂಗದಲ್ಲಿ ವೀರ ಮರಣವನ್ನು ಅಪ್ಪಿದರೂ ಅವನು ಜೀವ ತೆತ್ತ ಉದ್ದೇಶವು ವಿಫಲವಾಗಲಿಲ್ಲ. ಹಿಂದೂ ಧರ್ಮವು ರಕ್ಷಿಸಲ್ಪಟ್ಟಿತು. ಬಲ್ಲಾಳನ ಈ ಘನಕಾರ್ಯವನ್ನು ವಿಜಯನಗರ ಸಾಮ್ರಾಜ್ಯ ಸಂಪೂರ್ಣಗೊಳಿಸಿತು.

## ಹೊಯ್ಸಳರ ವಂಶಾವಳಿ (1022–1342)

1. ನೃಪಕಾಮ 1022-1047
2. ವಿನಯಾದಿತ್ಯ 1047-1098
3. ಎರೆಯಂಗ 1063-1100

4. ಬಲ್ಲಾಳ I | 5 ವಿಷ್ಣುವರ್ಧನ 1100-1152 | ಉದಯಾದಿತ್ಯ

6. ನರಸಿಂಹ I 1152-1173
7. ಬಲ್ಲಾಳ II 1170-1220
8. ನರಸಿಂಹ II 1220-1238
9. ಸೋಮೇಶ್ವರ 1233-1267

10. ನರಸಿಂಹ III 1254-1292 | ರಾಮನಾಥ 1254-1295

11. ಬಲ್ಲಾಳ III 1291-1342 | ವಿಶ್ವನಾಥ 1295-1300

12. ಬಲ್ಲಾಳ IV

ಮೂಲ ಲೇಖಕರು : ಡಾ॥ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ಅನುವಾದಕರು : ಶ್ರೀ ಜಿ. ವಿ. ನಾರಾಯಣ ಮೂರ್ತಿ

# ದೇವಗಿರಿಯ ಯಾದವರು

ದೇವಗಿರಿಯ ಯಾದವರ ಇತಿಹಾಸವು (ದೇವಗಿರಿ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದೆ; ಅದಕ್ಕೆ ಇಂದಿನ ಹೆಸರು ದೌಲತಾಬಾದ್.) ಕರ್ಣಾಟಕ ಇತಿಹಾಸದ ವ್ಯಾಪ್ತಿಗೆ ಹೊರಗಾದುದೆಂದು ಬಹುಶಃ ಪರಿಗಣಿತ ವಾಗಬಹುದು. ಯಾದವರು ಕಲ್ಯಾಣದ ಚಾಲುಕ್ಯರ ತರುವಾಯ ಆಧಿಪತ್ಯಕ್ಕೆ ಬಂದು, ಕನ್ನಡ ದೇಶದ ಬಹುಭಾಗ ಪ್ರದೇಶದ ಮೇಲೆ ರಾಜ್ಯಭಾರ ಮಾಡಿದರು. ಅವರು ದೋರಸಮುದ್ರದ ಹೊಯ್ಸಳರೊಂದಿಗೆ ತೀವ್ರ ಹೋರಾಟವನ್ನು ನಡೆಸುತ್ತಿದ್ದುದರಿಂದ ಅವರ ರಾಜ್ಯದ ಎಲ್ಲೆಯು ಆಗಾಗ ಬದಲಾಗುತ್ತಿತ್ತು. ಕೊನೆಗೆ ಅವರು, ಉತ್ತರದಿಂದ ನುಗ್ಗಿದಾಳಿ ನಡೆಸಿದ ಮುಸ್ಲಿಮರಿಗೆ ಸೋತುಹೋದರು. ಇದು ವಿಜಯ ನಗರದ ಹುಟ್ಟಿಗೆ ಕಾರಣವಾಯಿತು. ಆ ಸಾಮ್ರಾಜ್ಯ, ಭಾರತದ ದಕ್ಷಿಣದ ತುತ್ತ ತುದಿಗೆ ಮುಸ್ಲಿಂ ವಿಸ್ತರಣೆ ಆಗದಂತೆ ಒಂದು ಪ್ರತಿಬಂಧಕ ಶಕ್ತಿಯಾಯಿತು.

ಹೀಗೆ ಯಾದವರು ಕರ್ಣಾಟಕದೊಂದಿಗೆ ಬಹಳ ಸಂಬಂಧ ಹೊಂದಿದ್ದರು. ಈ ರಾಜಮನೆತನದ ವಿಷಯವನ್ನು ಪರಿಶೀಲಿಸೋಣ.

ಕರ್ಣಾಟಕದ ಅನೇಕ ರಾಜರೂ ರಾಜವಂಶಗಳೂ ಪ್ರಾಚೀನಸಾಹಿತ್ಯಗಳಾದ ಇತಿಹಾಸ ಪುರಾಣಗಳಲ್ಲಿ ತಮ್ಮ ಹುಟ್ಟು ಮತ್ತು ಪರಂಪರೆಯ ವಿಷಯ ಉಕ್ತವಾಗಿದೆಯೆಂದು ಹೇಳಿಕೊಳ್ಳುತ್ತವೆ. ದಕ್ಷಿಣ ಭಾರತ ದಲ್ಲಿ ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳಲ್ಲಿ ಪ್ರಮುಖ ಪಾತ್ರ ವಹಿಸಿದ ದೇವಗಿರಿಯ ಯಾದವರು ನಹುಷನ ಮಗ ಯಯಾತಿಯ ಐವರು ಮಕ್ಕಳಲ್ಲಿ ಒಬ್ಬನಾದ ಯದುವಿನಿಂದ ತಮ್ಮ ವಂಶಾವಳಿಯನ್ನು ಹೇಳಿಕೊಳ್ಳುತ್ತಾರೆ. ಪುರಾಣಗಳ ಪ್ರಕಾರ, ಯಾದವ ಶಾಖೆಯು ಸುತ್ತಲಿನ ರಾಜ್ಯಗಳ ಮೇಲೆ ತನ್ನ ಅಧಿಕಾರವನ್ನು ವಿಸ್ತರಿಸಿ ದೊಡ್ಡ ರಾಜ್ಯವನ್ನು ಸ್ಥಾಪಿಸಿತು. ಯಾದವರು ಪೌರವರನ್ನು (ಪುರುವಿನ ವಂಶಜರು) ಸೋಲಿಸಿದುದಲ್ಲದೆ ದ್ರುಹ್ಯುಗಳನ್ನು ಪಂಜಾಬಿಗೆ ಓಡಿಸಿದರು. ಸಾಹಿತ್ಯ ಮತ್ತು ಶಾಸನಗಳಲ್ಲಿ ಇವರ ವಂಶಾವಳಿಯ ಬಗೆಗೆ ವಿವರವಾದ ಉಲ್ಲೇಖ ಕಂಡುಬರುತ್ತದೆ. ಈ ವಂಶದ ರಾಜ ಮಹಾದೇವನ ಮಂತ್ರಿ, ಹೇಮಾದ್ರಿ, ರಚಿಸಿರುವ **ವ್ರತಖಂಡ**ದ ಪ್ರಸ್ತಾವದಲ್ಲಿ ವಂಶಾವಳಿಯ ವಿಷಯವನ್ನು ತಿಳಿಸಲಾಗಿದೆ. ಈ ಕೃತಿಯಲ್ಲಿ ಹೇಳಿರುವಂತೆ ಕ್ಷೀರಸಾಗರ ಮಥನ ಕಾಲದಲ್ಲಿ ಜನಿಸಿ ಬಂದ ಚಂದ್ರನೇ ವಂಶದ ಮೂಲಸ್ಥಾಪಕ. ಚಂದ್ರನಿಂದ ಆರಂಭವಾದ ಪೂರ್ವೇತಿಹಾಸವು, ಪೌರಾಣಿಕ ಅಥವಾ ಕಾಲ್ಪನಿಕ ವೀರಾಧಿವೀರರನ್ನೊಳಗೊಂಡು ಮಹಾದೇವನ ವರೆಗೆ ಉಕ್ತವಾಗಿದೆ.

ಯಾದವರು ಆರಂಭದಲ್ಲಿ ಮಥುರಾ ರಾಜ್ಯದ ಪ್ರಭುಗಳಾಗಿದ್ದರು. ಕೃಷ್ಣನ ಕಾಲದಿಂದ ದ್ವಾರಾವತಿ ಅಥವಾ ದ್ವಾರಕಾನಗರದ ರಾಜರಾದರು. ಅವರು ಸುಬಾಹುವಿನ ಮಗ ದೃಢಪ್ರಹಾರನ ಕಾಲದಿಂದ ದಕ್ಷಿಣದ ಅರಸರಾದರು. ವ್ರತಖಂಡದಲ್ಲಿ ಹೇಳಿರುವಂತೆ ಅವನ ರಾಜಧಾನಿಯ ಹೆಸರು ಶ್ರೀನಗರ. ಇದು ಶಾಸನಗಳಲ್ಲಿ ಹೇಳಿರುವಂತೆ ಚಂದ್ರಾದಿತ್ಯಪುರ ಆಗಿರಬಹುದು; ಇಂದು ನಾಸಿಕ್ ಜಿಲ್ಲೆಯಲ್ಲಿರುವ ಚಂದೂರ್ ಆಗಿರಬಹುದು. ಸುಬಾಹುವಿನ ಮೊಮ್ಮಗ ಮೊದಲನೆಯ ಸೇವುಣಚಂದ್ರನ ಕಾಲಕ್ಕೆ ಈ ದೇಶ ಸೇವುಣ ದೇಶವೆಂದು ಹೆಸರು ಪಡೆಯಿತು. ಅವನು ಸೇವುಣ ಪುರವೆಂಬ ಹೆಸರಿನ ಪಟ್ಟಣವನ್ನು ನಿರ್ಮಿಸಿರ ಬಹುದು (Stanza 22, Vra). ನಾಸಿಕ್‌ದಿಂವ ದೇವಗಿರಿಯ ವರೆಗೆ (ದೌಲತಾಬಾದ್) ವಿಸ್ತರಿಸಿ,

ದಂಡಕಾರಣ್ಯದ ಅಂಚಿನ ವರೆಗೂ ಇದ್ದ ಪ್ರದೇಶಕ್ಕೆ ಸೇವುಣ ದೇಶವೆಂದು ಹೆಸರು. ಈ ಮನೆತನದ ರಾಜರಿಗೆ ವಂಶಪಾರಂಪರ್ಯವಾಗಿ 'ದ್ವಾರಾವತೀ ಪುರವರಾಧೀಶ್ವರ', ಮತ್ತು 'ವಿಷ್ಣು ವಂಶೋದ್ಭವ' ಎಂಬ ಬಿರುದುಗಳು ಇದ್ದವು. ಇವರು ಸುವರ್ಣ ಗರುಡಧ್ವಜವನ್ನು ಹಿಡಿದುಕೊಂಡು ಹೋಗುತ್ತಿದ್ದರು. ಇದೇ ಲಾಂಛನವು ಕೆಲವು ವೇಳೆ ಒಂಟಿಯಾಗಿಯೋ ಮತ್ತೆ ಕೆಲವು ವೇಳೆ ಹನುಮಂತನ ಚಿತ್ರದಿಂದಲೊ ಕೂಡಿರುತ್ತಿತ್ತು.

ಈ ಮನೆತನದ ಇತಿಹಾಸವು ಹನ್ನೆರಡನೆಯ ಶತಮಾನದಿಂದ ಮುಂದಕ್ಕೆ ಸ್ವಾರಸ್ಯವಾಗಿದೆ. ಆರಂಭದಲ್ಲಿ ಇವರು ರಾಷ್ಟ್ರಕೂಟರ ಮತ್ತು ಪಶ್ಚಿಮ ಚಾಲುಕ್ಯರ ಸಾಮಂತರಾಗಿದ್ದರು. ಸುತ್ತಲಿನ ದೇಶದಲ್ಲಿ ಅನಾಯಕತ್ವ ಉಂಟಾದಾಗ ತಮ್ಮ ಅಧಿಕಾರವನ್ನೂ ಪ್ರದೇಶವನ್ನೂ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಆರನೆಯ ವಿಕ್ರಮಾದಿತ್ಯನ ತರುವಾಯ ಚಾಲುಕ್ಯರ ಪ್ರಭಾವ ಬಹುಮಟ್ಟಿಗೆ ಇಳಿಮುಖವಾಯಿತು. ಕಲಚುರಿ ವಂಶ ಅಧಿಕಾರಕ್ಕೆ ಬಂದು ಲಿಂಗಾಯತ ಪಂಥ ಉಗಮವಾದ ಕಾರಣದಿಂದ ಆಂತರಿಕ ತೊಂದರೆಗಳಿಗೂ ಕಲಹಕ್ಕೂ ತುತ್ತಾಗಿ ಇನ್ನೂ ಕುಗ್ಗಿತು. ಯಾದವ ವಂಶದ ಪ್ರತಾಪಶಾಲಿ ದೊರೆ ಐದನೆಯ ಭಿಲ್ಲಮನು (ಕ್ರಿ.ಶ. 1185–1193) ಕಲಚುರಿಯರನ್ನೂ ಪಶ್ಚಿಮದ ಚಾಲುಕ್ಯರನ್ನೂ ಸೋಲಿಸಿ, ದಕ್ಷಿಣದಲ್ಲಿ ಚಾಲುಕ್ಯ ಚಕ್ರಾಧಿಪತ್ಯದ ಬಹು ಭಾಗಕ್ಕೆ ಪ್ರಭುವೆನಿಸಿಕೊಂಡನು. ಅವನು ದೇವಗಿರಿಯಲ್ಲಿ ತನ್ನ ರಾಜಧಾನಿಯನ್ನು ಕಟ್ಟಿದನು. ಅಲ್ಲಿಂದ ಮುಂದಕ್ಕೆ ಈ ವಂಶದ ಹೆಸರು ದೇವಗಿರಿಯ ಯಾದವರು ಎಂಬುದಾಗಿಯೇ ಆಯಿತು.

ದಕ್ಷಿಣದಲ್ಲಿ ಒದಗಿದ್ದ ರಾಜಕೀಯ ವಿಪ್ಲವದಿಂದ ಭಿಲ್ಲಮನಿಗೆ ಆಕ್ರಮಣಕಾರಿ ದಂಡಯಾತ್ರೆಯನ್ನು ನಡೆಸಲು ಅವಕಾಶವಾಯಿತು. ಅವನು ಎರಡು ಲಕ್ಷಕ್ಕೆ ಮೇಲ್ಪಟ್ಟ ಕಾಲಾಳುಗಳೂ, ಹನ್ನೆರಡು ಸಾವಿರ ರಾವುತರೂ ಉಳ್ಳ ಪ್ರಬಲವಾದ ಸೈನ್ಯವನ್ನು ಹೊಂದಿದ್ದನು. ಕಲ್ಯಾಣದ ನಾಲ್ಕನೆಯ ಸೋಮೇಶ್ವರನಿಂದ ಚಾಲುಕ್ಯರ ರಾಜಧಾನಿ ಕಲ್ಯಾಣವೊಂದನ್ನೇ ಅಲ್ಲದೆ ಎರಂಬರಗೆ ರಾಜಧಾನಿಯಾಗಿದ್ದ ಕಿಸುಕಾಡನಾಡನ್ನೂ (ಇಂದಿನ ಎಲಬುರ್ಗಾ, ಲಿಂಗಸುಗೂರು, ರಾಯಚೂರು ಜಿಲ್ಲೆ), ತರ್ದವಾಡಿನಾಡನ್ನೂ (ಬಿಜಾಪುರ ಜಿಲ್ಲೆ ಬಾಗೇವಾಡಿ ತಾಲೂಕಿನ ಮುತ್ತಿಗಿಸುತ್ತಣ ಪ್ರದೇಶ), ಬೆಳವೊಲವನ್ನೂ (ಧಾರವಾಡ ಜಿಲ್ಲೆಯ ಗದುಗಿನ ಸುತ್ತಣ ಪ್ರದೇಶ), ಸುತ್ತಮುತ್ತಲಿನ ಪ್ರದೇಶಗಳನ್ನೂ ಗೆದ್ದುಕೊಂಡನು. ಗೋವೆಯ ಕದಂಬರು, ಮೂರನೆಯ ಜಯಕೇಶಿಯ ಕಾಲದಲ್ಲಿ ಭಿಲ್ಲಮನ ಸಾರ್ವಭೌಮತ್ವವನ್ನು ಅಂಗೀಕರಿಸಿದರು.

ಇದೇ ಸಮಯದಲ್ಲಿಯೇ ದೋರಸಮುದ್ರದ ಹೊಯ್ಸಳರು ಚಾಲುಕ್ಯರ ದುರ್ಬಲತೆಯ ಅವಕಾಶವನ್ನು ಉಪಯೋಗಿಸಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದರು. ಅವರು ದಕ್ಷಿಣ ಭಾರತದ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ಸ್ಥಾಪಿಸಿಕೊಳ್ಳಲು ಯತ್ನಿಸಿದರು. ಹೊಯ್ಸಳರಿಗೂ ಯಾದವರಿಗೂ ಪರಮಾಧಿಕಾರಕ್ಕಾಗಿ ಹೋರಾಟ ಆರಂಭವಾಯಿತು, ಈ ಎರಡು ಪ್ರಬಲ ರಾಜ್ಯಗಳು ಒಂದು ಒಪ್ಪಂದಕ್ಕೆ ಬರದಿದ್ದುದು ದುರದೃಷ್ಟವೇ ಸರಿ. ಭಿಲ್ಲಮನು ಹೊಯ್ಸಳ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಶ್ರೀರಂಗಪಟ್ಟಣದ ವರೆಗೂ ನುಗ್ಗಿದನು. ಅವನು ಚೋಳ ರಾಜ್ಯವನ್ನೂ ಮುತ್ತಿ ಮೂರನೆಯ ಕುಲೋತ್ತುಂಗನನ್ನು ಗೆದ್ದನು. ಎರಡನೆಯ ಬಲ್ಲಾಳನು ಪ್ರಬಲ ಸೇನೆಯನ್ನು ಕಟ್ಟಿ, ಶ್ರೀರಂಗಪಟ್ಟಣದ ಬಳಿ ಇಂಗಳಗುಪ್ಪೆಯಲ್ಲಿ ಸೇವುಣರನ್ನು (ಯಾದವರನ್ನು) ಎದುರಿಸಿದನು. ಇದಾದ ಮೇಲೆ ಭಿಲ್ಲಮನು ಹೊಯ್ಸಳ ರಾಜ್ಯದಿಂದ ವಿಧಿಯಿಲ್ಲದೆ ಕಾಲ್ತೆಗೆಯಬೇಕಾಯಿತು (ಕ್ರಿ.ಶ. 1188–1189).

ಭಿಲ್ಲಮನ ಕಾಲದ ಶಾಸನಗಳಲ್ಲಿ, ಅವನು ಹಳೆಯ ಜಾತ್ ಸಂಸ್ಥಾನದ ಬೆಳವೊಲ ತರ್ದವಾಡಿ, ಮತ್ತು ಮುದ್ದಿಗಿಹಾಳ್‌ಗಳ ಮೇಲೆ ಆಧಿಪತ್ಯ ಸ್ಥಾಪಿಸಿದ ಉಲ್ಲೇಖವಿದೆ. ಅವನು ಉತ್ತರದಲ್ಲಿ ನಡೆಸಿದ

ದಂಡಯಾತ್ರೆ ಯಶಸ್ವಿಯಾಯಿತು. ಅವನು ಮಾಳವದ ವಿಂಧ್ಯವರ್ಮನನ್ನೂ ಗುಜರಾತಿನ ಎರಡನೆಯ ಭೀಮನನ್ನೂ ಸೋಲಿಸಿದನು. ತನ್ನ ರಾಜ್ಯಭಾರದ ಕೊನೆಯ ಕಾಲಕ್ಕೆ ಹೊಯ್ಸಳರೊಂದಿಗೆ ಘೋರ ಕದನದಲ್ಲಿ ನಿರತನಾದನು. ಎರಡನೆಯ ಬಲ್ಲಾಳನು ಯಾದವರ ಮೇಲೆ ಉಗ್ರ ದಂಡಯಾತ್ರೆ ಮಾಡಿ ಹಾನಗಲ್, ಗುತ್ತಿ, ಮತ್ತು ರಟ್ಟವಳ್ಳಿ ದುರ್ಗಗಳನ್ನು ವಶಪಡಿಸಿಕೊಂಡನು. ತರುವಾಯ ಹೊಯ್ಸಳ ಸೇನೆಯು ಗದುಗಿಗೆ ದಕ್ಷಿಣದಲ್ಲಿ ಹನ್ನೆರಡು ಮೈಲಿ ದೂರದಲ್ಲಿರುವ ಸೊರಟೂರು ಕೋಟೆಯನ್ನು ಮುತ್ತಿತು. ಭಿಲ್ಲಮನ ದಂಡನಾಯಕ ಜೈತ್ರಸಿಂಹನು ಬಲವಂತವಾಗಿ ಕಾಲ್ತೆಗೆಯಬೇಕಾಯಿತು. ಹೊಯ್ಸಳರಿಗೆ ಸೊರಟೂರು ಕದನದಲ್ಲಿ ಪ್ರಚಂಡ ಜಯ ಲಭಿಸಿತು. ಗದುಗಿಗೆ ಆರು ಮೈಲಿ ದೂರದಲ್ಲಿರುವ ಲೊಕ್ಕಿಗುಂಡಿ (ಲೊಕ್ಕುಂಡಿ) ಕೋಟೆಯಲ್ಲಿ ಆಶ್ರಯ ಪಡೆದಿದ್ದ ಯಾದವ ಸೇನಾನಾಯಕನು ಕೈಸೆರೆಯಾದನು. ಬಲ್ಲಾಳನು ಎರಂಬರಗೆ ಕಡೆ ನುಗ್ಗಿ ಹುಲಿಗೇರಿ, ಬೆಳವೊಲ, ಕಿಸುಕಾಡು, ಮತ್ತು ಕೃಷ್ಣಾ (ಹೆದ್ದೊರೆ) ನದಿಯ ವರೆಗಿನ ಪ್ರದೇಶಗಳನ್ನೆಲ್ಲ ಸ್ವಾಧೀನಪಡಿಸಿಕೊಂಡನು. ಬಲ್ಲಾಳನು ಎರಂಬರಗೆಯನ್ನು ತನ್ನ ಉತ್ತರದ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. 1196ರಲ್ಲಿ ಅಲ್ಲಿಯೇ ವಾಸಮಾಡಿರಬೇಕು. ಭಿಲ್ಲಮನು ತನ್ನ ಮಗ ಜೈತುಗಿಗೆ ಕ್ರಿ.ಶ. 1191ರಲ್ಲಿ ರಾಜ್ಯಭಾರವನ್ನು ವಹಿಸಿಕೊಟ್ಟನು; ಕ್ರಿ.ಶ. 1193ರಲ್ಲಿ ಅವನು ಕಾಲವಾಗಲು, ಜೈತುಗಿಯು ಸಿಂಹಾಸನವನ್ನೇರಿದನು.

ಭಿಲ್ಲಮನ ಮಗ ಜೈತುಗಿ ಅಥವಾ ಜೈತ್ರಪಾಲನು ಕ್ರಿ.ಶ. 1193ರಲ್ಲಿ ಸಿಂಹಾಸನವನ್ನೇರುವುದಕ್ಕೆ ಮುಂಚೆ ತನ್ನ ತಂದೆಯ ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದನು. ಅವನು ಹೊಯ್ಸಳರಿಗೆ ಸಾಮಂತರಾಗಿದ್ದ ನೊಳಂಬವಾಡಿಯ ಪಾಂಡ್ಯರನ್ನು ಜಯಿಸಿದನು. ಆದರೆ ಇನ್ನೂ ದಕ್ಷಿಣಕ್ಕೆ ತನ್ನ ರಾಜ್ಯದ ಎಲ್ಲೆಯನ್ನು ಹೆಚ್ಚಿಸಲು ಆಗಲಿಲ್ಲ; ಎರಡನೆಯ ಬಲ್ಲಾಳನನ್ನು ಕಿಸುಕಾಡು ಮತ್ತು ಬೆಳವೊಲ ಪ್ರಾಂತಗಳಿಂದ ಕಾಲ್ತೆಗೆವಂತೆ ಮಾಡಲಾಗಲಿಲ್ಲ. ಕೃಷ್ಣಾ ಮತ್ತು ತುಂಗಭದ್ರಾನದಿಗಳ ಸಂಗಮದ ವರೆಗೆ ಸೇವುಣ ರಾಜ್ಯದ ಮೇರೆಯನ್ನು ವಿಸ್ತರಿಸಿದುದರಿಂದ ಜೈತುಗಿ ಕಾಕತೀಯರೊಂದಿಗೆ ಕದನವನ್ನು ಕಟ್ಟಿಕೊಳ್ಳಬೇಕಾಯಿತು. ಕಾಕತೀಯರ ರಾಜ ಮಹಾದೇವ ಯುದ್ಧದಲ್ಲಿ ಸತ್ತನು. ಅವನ ಕಿರಿಯ ಮಗ ಗಣಪತಿ ಕೈಸೆರೆಯಾದನು. ಕಾಕತೀಯರ ರಾಜ್ಯವು ಜೈತುಗಿಯ ಅಧೀನವಾಯಿತು. ಜೈತುಗಿ ಯುವಕ ಗಣಪತಿಯನ್ನು ಬಹಳ ಮರ್ಯಾದೆಯಿಂದ ಕಂಡು, ಅವನನ್ನು ಬಿಡುಗಡೆಮಾಡಿ, ತಂದೆಯ ಸಿಂಹಾಸನದ ಮೇಲೆ ಕೂರಿಸಿದನು. ಉತ್ತರದಲ್ಲಿ ನರ್ಮದೆಯ ವರೆಗಿನ ಪ್ರದೇಶಗಳ ಮೇಲೆ ಯುದ್ಧ ಮಾಡಿದನು. ಪರಮಾರರ ಸುಭಟವರ್ಮನೂ ಚಾಲುಕ್ಯರ ಎರಡನೆಯ ಭೀಮನೂ ಅವನಿಗೆ ಶರಣಾಗತರಾದರು. ಸೇವುಣಸೈನ್ಯದಿಂದ ಅವರ ರಾಜ್ಯಗಳು ಕೊಳ್ಳೆ ಹೋದವು. ಕ್ರಿ.ಶ. 1197ರಲ್ಲಿ ಗುಜರಾತಿನಲ್ಲಿ ಲೂಟಿ ಹೊಡೆಯುತ್ತಿದ್ದ ಕುತುಬ್–ಉದ್ದೀನ್ ಐಬಕನ ಸೇನೆಯೊಡನೆ ಇವನು ಕದನ ಹೂಡಿರಬಹುದು. ಪ್ರಸಿದ್ಧ ಗಣಿತಶಾಸ್ತ್ರಜ್ಞ ಮತ್ತು ಜ್ಯೋತಿಷ್ಕ ಭಾಸ್ಕರಾಚಾರ್ಯನ ಮಗ ಲಕ್ಷ್ಮೀಧರನು ಜೈತ್ರಪಾಲನ ಆಶ್ರಯದಲ್ಲಿದ್ದನು. ಅವನು ಎಲ್ಲಾ ಪಂಡಿತರಿಗೂ ಮುಖಂಡನಾಗಿದ್ದನು; ಪ್ರಸಿದ್ಧ ಪಂಡಿತನಾಗಿ ವೇದ, ತರ್ಕಶಾಸ್ತ್ರ ಮತ್ತು ಮೀಮಾಂಸೆಗಳನ್ನು ಅರಿತಿದ್ದನು. ಕ್ರಿ.ಶ. 1200ರಲ್ಲಿ ಜೈತ್ರಪಾಲನ ಮಗ ಸಿಂಘಣನು ರಾಜ್ಯಸೂತ್ರ ವಹಿಸಿಕೊಂಡನು.

ಸಿಂಘಣನು ಈ ವಂಶದ ಅತ್ಯಂತ ದೊಡ್ಡ ಅರಸು. ಇವನ ಕಾಲದಲ್ಲಿಯೇ ಯಾದವರು ದಖನ್ನಿನಲ್ಲಿ ಶಕ್ತರೂ ಪ್ರಬಲರೂ ಆದರು. ಇವನು ಹೊಯ್ಸಳರನ್ನು ಸೋಲಿಸಿ, ಅವರು ತನ್ನ ತಾತನಿಂದ ಗೆದ್ದುಕೊಂಡಿದ್ದ ರಾಜ್ಯದ ಭಾಗಗಳನ್ನೆಲ್ಲ ಹಿಂದಕ್ಕೆ ಪಡೆದುಕೊಂಡು ದಕ್ಷಿಣದಲ್ಲಿ ತನ್ನ ವಂಶದ ಏಕೈಕ ಆಧಿಪತ್ಯವನ್ನು ಸ್ಥಾಪಿಸಿದನು. ಉತ್ತರದಲ್ಲಿಯೂ ವಿಸ್ತಾರವಾಗಿ ದಂಡಯಾತ್ರೆ ನಡೆಸಿ, ಅನೇಕ ಸಲ ಗುಜರಾತನ್ನು ಮುತ್ತಿ ಲಾಟನೆಂಬ ಅರಸನನ್ನು ಗೆದ್ದನು. ಮಾಲವದ ಮುಸಲ್ಮಾನ್ ದೊರೆಯೂ ಕಲಚುರಿಯರೂ ಛತ್ತಿಸ್‌ಘಡದ ಹಾಗೂ ಜಬ್ಬಲ್‌ಪುರದ ಚೇದಿಗಳೂ ಸೋಲಿಸಲ್ಪಟ್ಟರು. ಕೊಲ್ಲಾಪುರದ ಶಿಲಾಹಾರರೂ

ಗೋವೆಯ ಕದಂಬರೂ ದಕ್ಷಿಣದ ಮತ್ತಿತರ ಸಣ್ಣ ರಾಜ್ಯಗಳೂ ಇವನಿಗೆ ಅಧೀನವಾದವು. ಹೊಯ್ಸಳರ ಮೇಲೆ ತಾನು ಪಡೆದ ವಿಜಯದ ಜ್ಞಾಪಕಾರ್ಥವಾಗಿ ಕಾವೇರಿಯ ದಂಡೆಯ ಮೇಲೆ ಒಂದು ವಿಜಯ ಸ್ತಂಭವನ್ನು ನಿರ್ಮಿಸಿದನು (F.B.B.R.A.S,, Vol. XV, P, 386–87 and Vol. VII, P 43).

ಸಿಂಘಣನ ಕಾಲದಲ್ಲಿ ಯಾದವ ರಾಜ್ಯವು ವಿಸ್ತಾರವಾಯಿತು. ಯಾದವ ದೊರೆ ಚಕ್ರವರ್ತಿಗೆ ಸಹಜವಾದ 'ಸಮಸ್ತ ಭುವನಾಶ್ರಯ', 'ಪೃಥ್ವೀವಲ್ಲಭ', 'ಮಹಾರಾಜಾಧಿರಾಜ' ಎಂಬ ಬಿರುದುಗಳನ್ನು ಇಟ್ಟುಕೊಂಡನು. ಜ್ಯೋತಿಷ್ಕರಾದ ಚಂಗದೇವ ಮತ್ತು ಅನಂತದೇವ ಇವರಿಗೆ ಆಶ್ರಯ ದೊರೆಯಿತು. ಶಾರ್ಙ್ಗದೇವನೆಂಬವನು **'ಸಂಗೀತ ರತ್ನಾಕರ'** ಎಂಬ ಗ್ರಂಥವನ್ನು ರಚಿಸಿದನು. ಸಿಂಘಣನ ಮಗ ಜೈತುಗಿಯು ತಂದೆಗೆ ಮುಂಚೆಯೇ ಕಾಲವಾದನು. ಸಿಂಘಣನ ರಾಜ್ಯಭಾರ ಮೂವತ್ತೇಳು ವರ್ಷಗಳಷ್ಟು ದೀರ್ಘಕಾಲದ್ದಾಗಿದ್ದಿತು. ಅವನು ಕ್ರಿ.ಶ. 1146ರಲ್ಲಿ ಕಾಲವಾದಾಗ ಎಪ್ಪತ್ತು ವರ್ಷ ವಯಸ್ಸಿನವನಾಗಿರ ಬೇಕು. ಜೈತುಗಿಗೆ ಸೋದರರು ಇದ್ದರೋ ಇಲ್ಲವೋ ತಿಳಿಯದು. ಸಿಂಘಣ ಕಾಲವಾದ ಮೇಲೆ ಅವನ ಹಿರಿಯ ಮೊಮ್ಮಗ ಕೃಷ್ಣನಿಗೆ ಪಟ್ಟವಾಯಿತು.

ಸಿಂಘಣನ ಮೊಮ್ಮಕ್ಕಳಾದ ಕೃಷ್ಣ (ಕ್ರಿ.ಶ. 1247–1260) ಮತ್ತು ಮಹಾದೇವ (ಕ್ರಿ.ಶ 1260–1271) ಇವರು ಸಾಮ್ರಾಜ್ಯವನ್ನು ವ್ಯವಸ್ಥೆಯಲ್ಲಿಟ್ಟು ದಕ್ಷಿಣ ಮತ್ತು ಉತ್ತರಗಳ ನೆರೆರಾಜ ರೊಡನೆಯೂ ದಖನ್ನಿನ ಸಣ್ಣಪುಟ್ಟ ನಾಯಕರೊಡನೆಯೂ ಯಶಸ್ವಿಯಾಗಿ ಯುದ್ಧಮಾಡಿದರು. ಹೊಯ್ಸಳರಿಂದ ತುಂಗಭದ್ರೆಯ ಆಚೆ ಕೆಲವು ಪ್ರದೇಶಗಳೂ ಮಹಾದೇವನಿಂದ ಕೊಂಕಣದ ಉತ್ತರ ಭಾಗವೂ ದೊರಕುವಂತಾಯಿತು. ಕೃಷ್ಣ ಅನೇಕ ಯಜ್ಞಗಳನ್ನು ನಡೆಸಿದನು. ವ್ರತಖಂಡದಲ್ಲಿ ಹೇಳಿರುವಂತೆ "ಇದರಿಂದ ಬಹುಕಾಲದಿಂದಲೂ ಜನರ ಮನಸ್ಸಿನ ಮೇಲಿನ ಪ್ರಭಾವ ಕಳೆದುಕೊಂಡಿದ್ದ ವೈದಿಕ ಕರ್ಮಕಾಂಡಕ್ಕೆ ಹೊಸ ಶಕ್ತಿ ಬಂದಂತಾಯಿತು".

ಕೃಷ್ಣನ ಮಂಡಲಾಧಿಪತಿಯಾದ ಮಲ್ಲ ಅಥವಾ ಮಲ್ಲಶೆಟ್ಟಿಯು ಬಾಗೇವಾಡಿ ಗ್ರಾಮದಲ್ಲಿ ಮೂವತ್ತೆರಡು ಭಿನ್ನ ಭಿನ್ನ ಗೋತ್ರಗಳ ಬ್ರಾಹ್ಮಣರಿಗೆ ಭೂಮಿಯನ್ನು ಕೊಟ್ಟನು. ಇವರು ಆ ಪ್ರದೇಶದಲ್ಲಿ ಇಂದಿನ ಮಹಾರಾಷ್ಟ್ರ ಬ್ರಾಹ್ಮಣರ ಮೂಲ ಪುರುಷರಾದರು (I.A., Vol VII, P. 304). ಕುರುಂಬೆಟ್ಟದಲ್ಲಿರುವ ಒಂದು ಶಿಲಾಶಾಸನದಲ್ಲಿ (ಮಾನವಪುರ, ಗೋಕಾಕ ತಾಲೂಕು) ಈ ಮಲ್ಲಶೆಟ್ಟಿಯ ದಾನದ ಉಲ್ಲೇಖವಿದೆ. **ಸೂಕ್ತಿಮುಕ್ತಾವಳಿಯ** ಗ್ರಂಥಕರ್ತೃ ಬಿಲ್ಹಣನು ಕೃಷ್ಣನ ಸಲಹೆಗಾರನಾಗಿಯೂ ಸೈನ್ಯದ ನಾಯಕನಾಗಿಯೂ ಇದ್ದನು. ಕ್ರಿ.ಶ. 1260ರಲ್ಲಿ ಪಟ್ಟಕ್ಕೆ ಬಂದ ಕೃಷ್ಣನ ಸೋದರ ಮಹಾದೇವನ ಸಾಧನೆಗಳನ್ನು ವ್ರತಖಂಡದಲ್ಲಿ ವೈಭವವಾಗಿ ವರ್ಣಿಸಲಾಗಿದೆ. "ಅವನು ತೆಲಂಗಾಣ ರಾಜ್ಯದ ದೊರೆಯೆಂಬ ಹತ್ತಿಯ ರಾಶಿಗೆ ಬಿರುಗಾಳಿಯಂತಿದ್ದನು; ಗುರ್ಜರರ ಹೆಮ್ಮೆಯೆಂಬ ಪರ್ವತವನ್ನು ಸೀಳಿದ ವಜ್ರಾಯುಧದಂತಿತ್ತು ಅವನ ತೋಳಶಕ್ತಿ; ಅವನು ಕೊಂಕಣದ ದೊರೆಯನ್ನು ಲೀಲಾಜಾಲದಿಂದ ನಾಶಮಾಡಿದನು; ಹಮ್ಮಿನಿಂದ ಕೂಡಿದ ಕರ್ಣಾಟ ಮತ್ತು ಲಾಟದ ದೊರೆಗಳನ್ನು ನಗೆಗೇಡು ಮಾಡಿದನು" (I, 48; II, 13). ಮಹಾದೇವನ ಪ್ರಸಿದ್ಧ ಮಂತ್ರಿ ಹೇಮಾದ್ರಿಯು, ತನ್ನ ಪ್ರಭು ಗುಜರಾತಿನ ವಾಘೆಲರನ್ನೂ ಮಾಳವದ ಪರಮಾರರನ್ನೂ ತೆಲಂಗಾಣದ (ವಾರಂಗಲ್ಲಿನ) ಕಾಕತೀಯರನ್ನೂ ಸೋಲಿಸಿದನೆಂದು ಹೇಳಿಕೊಂಡಿದ್ದಾನೆ. ಹೇಮಾದ್ರಿಯ ಪ್ರಥಮ ಕೃತಿ ವ್ರತಖಂಡವು ಈ ವಂಶದ ಆದಿಯಿಂದ ನಡೆದ ಕಥೆಯನ್ನು ಅಮೋಘವಾಗಿ ತಿಳಿಸುತ್ತದೆ. ಹೇಮಾದ್ರಿಯು ವತ್ಸಗೋತ್ರದ ಬ್ರಾಹ್ಮಣ. ಅವನ ತಂದೆಯ ಹೆಸರು ಕಾಮದೇವ, ತಾತ ವಾಸುದೇವ; ಮುತ್ತಾತ ವಾಮನ. ಹೇಮನು ಬ್ರಾಹ್ಮಣರಿಗೆ ಬಹಳ ಉದಾರಾಶ್ರಯ ನೀಡುತ್ತಿದ್ದನು. ಪ್ರತಿದಿನವೂ ಅನೇಕರಿಗೆ

ಭೋಜನ ಮಾಡಿಸುತ್ತಿದ್ದನು. ಉದ್ದಾಮ ಪಂಡಿತನಾಗಿದ್ದು ಸಾಧು ಜೀವನವನ್ನೂ ಸಾಹಸ ಜೀವನವನ್ನೂ ನಡೆಸಬೇಕೆಂಬ ಆಕಾಂಕ್ಷೆಯಿಂದ ಕೂಡಿದ್ದನು. ಇವನು ಬರೆದಿರುವ '**ಚತುರ್ವರ್ಗ ಚಿಂತಾಮಣಿ**' ಎಂಬ ಗ್ರಂಥ ನಾಲ್ಕು ಭಾಗಗಳಿಂದ ಕೂಡಿದೆ: 1 **ವ್ರತಖಂಡ**: ಇದು ಉಪವಾಸ ಇತ್ಯಾದಿ ಧಾರ್ಮಿಕ ಆಚಾರಗಳನ್ನು ವಿವರಿಸುತ್ತದೆ. 2 **ದಾನಖಂಡ**: ಇದು ಮಹಾಧಾರ್ಮಿಕ ಮಹತ್ವವುಳ್ಳ ವಿವಿಧ ದಾನಗಳ ವಿವರಣೆಯಿಂದ ಕೂಡಿದೆ. 3 **ತೀರ್ಥಖಂಡ**: ಇದು ಯಾತ್ರೆ ಕೈಗೊಳ್ಳುವ ಕ್ಷೇತ್ರಗಳ ವಿವರಣೆಯಿಂದ ಕೂಡಿದೆ. 4 **ಮೋಕ್ಷಖಂಡ**: ಇದರಲ್ಲಿ ಅಂತಿಮ ಮೋಕ್ಷದ ಪ್ರಾಪ್ತಿವಿಧಾನ ಉಕ್ತವಾಗಿದೆ. ಐದನೆಯ ಖಂಡ ಅಥವಾ ಭಾಗಕ್ಕೆ 'ಪರಿಶಿಷ್ಟಖಂಡ'ವೆಂದು ಹೆಸರು. ಇದರಲ್ಲಿ 1 ಪೂಜಿಸಬೇಕಾದ ವಿಗ್ರಹಗಳು, 2 ಶ್ರಾದ್ಧಕರ್ಮಗಳ ವಿಚಾರ, 3 ಧಾರ್ಮಿಕ ಕರ್ಮಗಳನ್ನು ಮಾಡುವುದಕ್ಕೆ ಕಾಲ ಮತ್ತು ಋತುಗಳ ವಿವರಣೆ, 4 ಪ್ರಾಯಶ್ಚಿತ್ತ—ಇತ್ಯಾದಿಗಳ ದೀರ್ಘ ವಿವರಣೆಗಳೆಲ್ಲ ಬರುತ್ತವೆ. ಈ ಎಲ್ಲ ಕೃತಿಗಳೂ ಬಹಳ ಗೌರವಕ್ಕೆ ಪಾತ್ರವಾಗಿವೆ. ವಾಗ್ಭಟನ ವೈದ್ಯಗ್ರಂಥದ ಕುರಿತು '**ಆಯುರ್ವೇದ ರಸಾಯನ**'ಎಂಬ ವ್ಯಾಖ್ಯಾನವೂ ವೈಷ್ಣವ ಸಿದ್ಧಾಂತಗಳನ್ನು ಕುರಿತು ವಿವರಿಸುವ ಬೋಪದೇವನ '**ಮುಕ್ತಾಫಲ**'ವೆಂಬ ಗ್ರಂಥದ ಮೇಲಿನ ವ್ಯಾಖ್ಯಾನವೂ ಈತನದೆಂದೇ ಹೇಳಲಾಗಿದೆ. ಇವನು ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದ ನಡೆವಳಿಕೆಯ ಸಂಹಿತೆಯನ್ನೂ ಖಾಸಗಿ ಹಾಗೂ ಸಾರ್ವಜನಿಕ ಪತ್ರವ್ಯವಹಾರಗಳಲ್ಲಿ ಸಂಬೋಧಿಸುವ ರೂಪಗಳನ್ನೂ ಆಚರಣೆಗೆ ತಂದನು. ಹೇರಳವಾಗಿ ಉತ್ಪನ್ನ ಕೊಡುವ ಸುಲಭ ಬೆಲೆಯ ಆಹಾರಧಾನ್ಯ ಬಾಜ್ರಿಯನ್ನು ಈ ಹೇಮಾದ್ರಿಯೇ ಬಳಕೆಗೆ ತಂದನು.

ಬೋಪದೇವನು ಹೇಮಾದ್ರಿಯ ಆಶ್ರಯದಲ್ಲಿದ್ದನು. ಅವನು 'ಮುಕ್ತಾಫಲ'ವೆಂಬ ಕೃತಿಯನ್ನೂ ಭಾಗವತದ ಸಾರಾಂಶವನ್ನೊಳಗೊಂಡ '**ಹರಿಲೀಲಾ**' ಎಂಬ ಕೃತಿಯನ್ನೂ ರಚಿಸಿದನು. 'ಹರಿಲೀಲಾ' ಹೇಮಾದ್ರಿಯ ಪ್ರಾರ್ಥನೆಯ ಪ್ರಕಾರ ರಚಿತವಾಯಿತು. ಬೋಪದೇವ ಕೆಲವು ವೈದ್ಯಶಾಸ್ತ್ರಗ್ರಂಥಗಳನ್ನೂ ಬರೆದನೆಂದು ಹೇಳಲಾಗಿದೆ.

ಹೇಮಾದ್ರಿಯ ಜನಪ್ರಿಯ ಹೆಸರು ಹೇಮದಪಂತ. ಇವನು ಹಲವಾರು ದೇವಾಲಯಗಳನ್ನು ವಿಶಿಷ್ಟ ಶೈಲಿಯಲ್ಲಿ ಕಟ್ಟಿಸಿದನೆಂದು ಹೇಳಲಾಗಿದೆ. ಇವನ ಶಿಲ್ಪದ ರೀತಿಗೆ '**ಹೇಮದಪಂಥಿ**' ಎಂದೇ ಹೆಸರಾಗಿದೆ. ಲಂಕಾ ಅಥವಾ ಸಿಲೋನಿನಿಂದ ಪ್ರಚಾರಕ್ಕೆ ಬಂದ '**ಮೋಡಿ**' ಎಂಬ ಬರೆಹವಿಧಾನವನ್ನು ಈತನು ಆಚರಣೆಗೆ ತಂದನೆಂದು ಪ್ರತೀತಿ. ರಾಜ್ಯದ ಪ್ರಧಾನ ಸಚಿವನಾಗಿದ್ದ ಹೇಮಾದ್ರಿಯು ಸರಕಾರದ ಕಾಗದ ಪತ್ರಗಳ ಬರೆವಣಿಗೆಯನ್ನು ಪರಿಶೀಲಿಸಬೇಕಾಗಿತ್ತು. ಆದುದರಿಂದ ಬರೆವಣಿಗೆಯಲ್ಲಿ ಸುಧಾರಣೆಯನ್ನು ಕಂಡು ಹಿಡಿಯಬೇಕಾಯಿತು. ಸುಪ್ರಸಿದ್ಧ ಮರಾಠಾ ಸಂತ ಜ್ಞಾನದೇವ ಇವನ ಕಾಲದಲ್ಲಿ ಅಭಿವೃದ್ಧಿಗೆ ಬಂದನು. ಇವನು ಭಗವದ್ಗೀತೆಯ ಮೇಲಿನ ಮರಾಠೀವ್ಯಾಖ್ಯಾನ '**ಜ್ಞಾನೇಶ್ವರೀ**'ಯನ್ನು ಬರೆದು ಪೂರ್ಣಗೊಳಿಸಿದನು.

ಕ್ರಿ.ಶ. 1271ರಲ್ಲಿ ಸಿಂಹಾಸನಕ್ಕೆ ಬಂದ ರಾಮಚಂದ್ರ ಅಥವಾ ರಾಮದೇವನು ಕೃಷ್ಣನ ಮಗನೂ ಮಹಾದೇವನ ಅಳಿಯನೂ ಆಗಿದ್ದನು. ಇವನೇ ಈ ವಂಶದ ಕಡೆಯ ದೊರೆ. ಇವನು ಹೊಯ್ಸಳ ರಾಜ್ಯವನ್ನು ವಶಪಡಿಸಿಕೊಳ್ಳುವ ಅಂತಿಮ ಪ್ರಯತ್ನ ಮಾಡಿದನು. ದೋರಸಮುದ್ರದ ಮೇಲೆ ಎರಗಿದ ಸುಸಜ್ಜಿತಸೇನೆ ಹಿಮ್ಮೆಟ್ಟಬೇಕಾಯಿತು. ಇವನು ಸಣ್ಣಪುಟ್ಟ ನಾಯಕರನ್ನು ಗೆದ್ದರೂ ಗುಜರಾತಿನ ಮೇಲೆ ಮಾಡಿದ ದಂಡಯಾತ್ರೆ ವಿಫಲವಾಯಿತು. ಇವನ ಕಾಲದಲ್ಲಿ ಕ್ರಿ.ಶ. 1296ರಲ್ಲಿ ದಂಡೆತ್ತಿ ಬಂದ ಅಲ್ಲಾವುದ್ದೀನನು ದೇವಗಿರಿಯನ್ನು ಕೊಳ್ಳೆ ಹೊಡೆದನು. ರಾಮಚಂದ್ರ ಬಲಾತ್ಕಾರದಿಂದ ಅಪಮಾನಕರ ಒಪ್ಪಂದ ಮಾಡಿಕೊಂಡು ದಿಲ್ಲಿಗೆ ಪೊಗದಿ ಕೊಡಲು ಒಪ್ಪಿದನು. ಯಾದವರ ಕೀರ್ತಿ ಪೂರ್ಣವಾಗಿ ಮಾಯವಾಯಿತು. ಆದರೆ ಪೊಗದಿ ಸಲ್ಲಿಸಲು ನಿರಾಕರಿಸಿದ್ದರಿಂದ ಕ್ರಿ.ಶ. 1307ರಲ್ಲಿ ಮಲ್ಲಿಕ್ ಕಾಫುರನು

ಎರಡನೆಯ ಸಲ ರಾಜ್ಯದ ಮೇಲೆ ದಂಡೆತ್ತಿಬಂದು ರಾಮಚಂದ್ರನನ್ನು ಸೆರೆಹಿಡಿದು ದಿಲ್ಲಿಗೆ ತೆಗೆದುಕೊಂಡು ಹೋದನು. ಅಲ್ಲಿ ಬಿಡುಗಡೆ ಹೊಂದಿದ ರಾಮಚಂದ್ರ ಅಧೀನರಾಜನಾಗಿರಲು ಒಪ್ಪಿಕೊಂಡು ತನ್ನ ರಾಜ್ಯದ ಆಡಳಿತ ನಡೆಸಿದನು. ಐದು ವರ್ಷಗಳ ತರುವಾಯ, ಅವನ ಮಗ ಶಂಕರ ಅಥವಾ ಎರಡನೆಯ ಸಿಂಘಣನು ಸ್ವಾತಂತ್ರ್ಯ ಘೋಷಣೆಮಾಡಿಕೊಳ್ಳಲು, ಮಲ್ಲಿಕ್ ಕಾಫುರ್ ದಂಡೆತ್ತಿ ಬಂದು (ಕ್ರಿ.ಶ. 1313) ಅವನನ್ನು ಸೋಲಿಸಿ, ಕೊಂದುಹಾಕಿದನು. ಅಲ್ಲಾವುದ್ದೀನ್ ಕಾಲವಾದ ಮೇಲೆ, ದಿಲ್ಲಿಯಲ್ಲಿ ಉಂಟಾದ ಗೊಂದಲದ ಸಮಯುವನ್ನು ಉಪಯೋಗಿಸಿಕೊಂಡು ರಾಮಚಂದ್ರನ ಅಳಿಯ ಹರಪಾಲನು ದಂಗೆಯೆದ್ದು, ಅಲ್ಲಾವುದ್ದೀನನ ಮೂರನೆಯ ಮಗ ಮುಬಾರಕನಿಗೆ ಸೆರೆಸಿಕ್ಕಿ, ಜೀವಸಹಿತ ದಹನವಾದನು. ದೇವಗಿರಿ ಮುಸ್ಲಿಂ ಪ್ರಾಂತವಾಯಿತು.

ಮುಸ್ಲಿಮರ ದಂಡಯಾತ್ರೆಗಳು, ರಾಜ್ಯದಲ್ಲಿ ಅಂತಃಕಲಹ–ಇವು ಪ್ರಧಾನವಾಗಿ ಯಾದವ ವಂಶದ ಅವನತಿಗೆ ಕಾರಣವಾದವು. ಇವರ ರಾಜ್ಯವು ವಿಂಧ್ಯಪರ್ವತ ಮತ್ತು ಕೃಷ್ಣಾನದಿ ಈ ಮಧ್ಯದ ಪ್ರದೇಶದಲ್ಲಿ ಹರಡಿತ್ತು–ಎಂದರೆ, ಮಹಾರಾಷ್ಟ್ರ ಮತ್ತು ಕರ್ಣಾಟಕಗಳಲ್ಲಿ ಆವರಿಸಿತ್ತು. ಯಾದವ ಅರಸರು ಮಾಳವ, ಗುಜರಾತ್, ಮತ್ತು ಹೊಯ್ಸಳ ರಾಜ್ಯಗಳ ಮೇಲೆ ಯಶಸ್ವಿಯಾಗಿ ನಡೆಸಿದ ದಂಡಯಾತ್ರೆಗಳಿಂದ ದಖ್ಖನ್ನಿನಲ್ಲಿ ಈ ಮನೆತನದ ಕೀರ್ತಿಪ್ರತಿಷ್ಠೆಗಳು ಹೆಚ್ಚಿದವು. ರಾಜ್ಯದಲ್ಲಿ ಶಾಂತಿ ಸುಭದ್ರತೆ ನೆಲಸಿದ್ದವು ; ವ್ಯಾಪಾರ ಮತ್ತು ವಾಣಿಜ್ಯಗಳು ಅಭಿವೃದ್ಧಿಯಾದವು. ರಾಜ್ಯವು ಸಂಪದ್ಭರಿತವಾಯಿತು. ರಾಜ್ಯದ ಅತುಳ ಸಂಪತ್ತನ್ನು ಕೊಳ್ಳೆ ಹೊಡೆಯುವ ಪ್ರಧಾನ ಉದ್ದೇಶದಿಂದಲೇ ಅಲ್ಲಾವುದ್ದೀನನು ದಂಡೆತ್ತಿ ಬಂದನು. ಆಗಿನ ಕಾಲದ ಘಟನೆಗಳ ನಿರೂಪಣಕಾರರಾದ ಬರಾನಿ, ಇಸಾಮಿ, ಫೆರಿಸ್ಟಾ–ಈ ಎಲ್ಲ ಮುಸ್ಲಿಮರು ದಂಡಯಾತ್ರೆಯ ವಿವರಗಳನ್ನೂ ದೊರಕಿದ ಅಗಾಧವಾದ ಕೊಳ್ಳೆಯನ್ನೂ ವಿವರಿಸಿದ್ದಾರೆ. ಫೆರಿಸ್ಟನ ಹೇಳಿಕೆಯಂತೆ, ಅಲ್ಲಾವುದ್ದೀನನು 600 ಮಣ ಚಿನ್ನ, 7 ಮಣ ಮುತ್ತು, 2 ಮಣ ವಜ್ರ ಕೆಂಪು ಪಚ್ಚೆ ನೀಲಮಣಿ ಮತ್ತಿತರ ಪ್ರಶಸ್ತ ಶಿಲೆಗಳನ್ನು, 1,000 ಮಣ ಬೆಳ್ಳಿ ಮತ್ತು 4,000 ರೇಶ್ಮೆ ಮತ್ತಿತ್ತರ ವಸ್ತುಗಳನ್ನೂ ಹೊಂದಿದನು. ಫೆರಿಸ್ಟನ ಹೇಳಿಕೆಯಲ್ಲಿ ಉತ್ಪ್ರೇಕ್ಷೆಯಿರಬಹುದಾದರೂ ದಖ್ಖನ್ನಿನ ಮತ್ತು ದಕ್ಷಿಣ ಭಾರತದ ರಾಜ್ಯಗಳು ನಿಸ್ಸಂದೇಹವಾಗಿ ಅಗಾಧ ಸಂಪತ್ತನ್ನು ಹೊಂದಿದ್ದವು. ದಖನ್ನನ್ನು ದಿಲ್ಲಿಗೆ ಪುಷ್ಕಳವಾಗಿ ಹಾಲುಕರೆವ ಕಾಮಧೇನುವೆಂದು ಪರಿಗಣಿಸಲಾಗಿತ್ತು. ದೇವಾಲಯಗಳು ಶತಮಾನಗಳ ವರೆಗೆ ಸಂಪತ್ತಿನ ಕೇಂದ್ರಗಳಾಗಿದ್ದವು. ರಾಜ್ಯಗಳಲ್ಲಿದ್ದ ಆಂತರಿಕ ಅಶಕ್ತತೆಗಳಿಂದಲೂ ಅಂತರರಾಜ್ಯ ವೈಷಮ್ಯಗಳಿಂದಲೂ ಮುಸ್ಲಿಂ ದಾಳಿಕಾರರು ಅವುಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಅವಕಾಶವಾಯಿತು. ದಾಳಿಕಾರರಿಗೆ ಈ ರಾಜ್ಯಗಳನ್ನು ಸೋಲಿಸಿ ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಇಚ್ಛೆಯಿರಲಿಲ್ಲ ; ಏಕೆಂದರೆ, ಅದು ಅಗಾಧ ಪ್ರಯತ್ನದ ಜೊತೆಗೆ ಅನಿಶ್ಚಿತ ಗೆಲುವಿನ ವಿಷಯವೂ ಆಗಿದ್ದಿತು. ಆ ವಿಪತ್ತಿನ ಕಾಲದಲ್ಲಿ ದಖ್ಖನ್ನಿನಲ್ಲಿ ಪ್ರಬಲ ರಾಜ್ಯಗಳಿದ್ದರೂ ಯಾವವೂ ತತ್‌ಕ್ಷಣ ಐಕ್ಯಭಾವದಿಂದ ಸುಸಂಘಟಿತವಾಗಿ ಶತ್ರುಗಳನ್ನು ಎದುರಿಸಬೇಕೆಂಬ ಆವಶ್ಯಕತೆಯನ್ನು ಅರಿತುಕೊಂಡಂತೆ ಕಂಡುಬರುವುದಿಲ್ಲ. ಎಲ್ಲರೂ ಸನ್ನಿವೇಶಕ್ಕೆ ಆವಶ್ಯಕವಾದ ಅರಿವಿಲ್ಲದವರಾಗಿದ್ದುದಲ್ಲದೆ, ತಮ್ಮ ತಮ್ಮ ಪ್ರತಿಷ್ಠೆ ಮತ್ತು ಶಕ್ತಿಗಳ ರಕ್ಷಣೆಯ ಯೋಚನೆಯಲ್ಲಿಯೇ ವಿಮಗ್ನರಾಗಿದ್ದುದು ಅತ್ಯಂತ ದುರದೃಷ್ಟ ಎನ್ನಬೇಕು.

## ದೇವಗಿರಿಯ ಯಾದವರ ವಂಶಾವಳಿ

ಕರ್ಣ
|
ಭಿಲ್ಲಮ V ಕ್ರಿ.ಶ. 1175-1191
|
ಜೈತುಗಿ ಕ್ರಿ.ಶ. 1191-1210
|
ಸಿಂಘಣ ಕ್ರಿ.ಶ. 1210-1247
|
ಜೈತುಗಿ

- ಕೃಷ್ಣ ಕ್ರಿ.ಶ. 1246-1260
  - ರಾಮಚಂದ್ರ ಕ್ರಿ.ಶ. 1271-1311
    - ಶಂಕರದೇವ ಕ್ರಿ.ಶ. 1311–1312
    - ಬಲ್ಲಾಳ
    - ಬಿಂಬ
- ಮಹಾದೇವ ಕ್ರಿ.ಶ. 1260-70
  - ಅಮ್ಮಣ ಕ್ರಿ.ಶ. 1270-1271

ಮೂಲಲೇಖಕರು : ಶ್ರೀ ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ಅನುವಾದಕರು : ಶ್ರೀ ಜಿ. ವಿ. ನಾರಾಯಣ ಮೂರ್ತಿ

# ಕೆಲವು ಸಣ್ಣಪುಟ್ಟ ಅರಸು ಮನೆತನಗಳು

**ಚೆಂಗಾಳ್ವರು**

ಚೆಂಗಾಳ್ವರು ಅಥವಾ ಚೆಂಗಾಳುವರು ಮೈಸೂರು ಜಿಲ್ಲೆಯ ಪಶ್ಚಿಮದ ಭೂಭಾಗಗಳನ್ನು ಮತ್ತು ಕೊಡಗನ್ನು ಬಹುಕಾಲ ಆಳಿದ ರಾಜವಂಶೀಯರಲ್ಲಿ ಒಬ್ಬರು. ಚೆಂಗನಾಡು ಅಥವಾ ಇಂದಿನ ಹುಣಸೂರು ತಾಲೂಕು ಅವರ ಮೂಲ ನಿವಾಸವಾಗಿತ್ತು. ಅವರು ಚಂದ್ರವಂಶಕ್ಕೆ ಸೇರಿದ ಯಾದವರೆಂದು ಹೇಳಿಕೊಳ್ಳುತ್ತಾರೆ. ಈ ಮನೆತನವನ್ನು ದ್ವಾರಾವತಿಯ ಚೆಂಗಾಳ್ವನೆಂಬವನು ಸ್ಥಾಪಿಸಿದನೆಂದು ಹೇಳಲಾಗಿದೆ. ಅವನು ಬಿಜ್ಜಳೇಂದ್ರನನ್ನು ಸೋಲಿಸಿ, ಅವನ ಬಿರುದುಗಳನ್ನು ಕಿತ್ತುಕೊಂಡನೆಂದು ಹೇಳುತ್ತಾರೆ. ಈ ಬಿಜ್ಜಳೇಂದ್ರನು ಯಾರೆಂದು ಗುರುತಿಸುವುದು ಸಾಧ್ಯವಾಗಿಲ್ಲ.

ಚೆಂಗಾಳ್ವರು ಶ್ರದ್ಧಾವಂತ ಶೈವರು. ಅವರ ಮನೆತನದ ದೇವರು ಹುಣಸೂರು ತಾಲೂಕಿನ ಬೆಟ್ಟದಪುರದಲ್ಲಿರುವ ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ. ಬೆಟ್ಟದಪುರವನ್ನು ಶ್ರೀಗಿರಿ ಎಂದು ಅವರು ಕರೆಯುತ್ತಿದ್ದರು. ಚೆಂಗಾಳ್ವರ ಪ್ರಥಮ ಉಲ್ಲೇಖನವು ಎಡತೊರೆ ತಾಲೂಕಿನ ಹಣಸೋಗೆಯ ಜೈನ ಶಾಸನಗಳಲ್ಲಿ ದೊರಕುತ್ತದೆ. ರಾಮನೆಂಬ ದೊರೆಯು ಅನೇಕ ಜೈನ ಬಸದಿಗಳನ್ನು ಕಟ್ಟಿಸಿದನೆಂದೂ ಇವುಗಳಿಗೆ ಚೆಂಗಾಳ್ವರು ಕಾಲಾಂತರದಲ್ಲಿ ದತ್ತಿ ಹಾಕಿಕೊಟ್ಟರೆಂದೂ ತಿಳಿಯುತ್ತದೆ.

ಹನ್ನೊಂದನೆ ಶತಮಾನದ ಆದಿಭಾಗದಲ್ಲಿದ್ದ ನನ್ನಿ ಚೆಂಗಾಳ್ವನೆಂಬವನು ಈ ಬಸದಿಗಳಲ್ಲಿ ಒಂದನ್ನು ಪುನಃ ಕಟ್ಟಿಸಿದನು. ಕ್ರಿ.ಶ. 1004ರಲ್ಲಿ ಚೋಳರು ಗಂಗರ ಜೊತೆಯಲ್ಲೇ ಚೆಂಗಾಳ್ವರ ಅಧಿಕಾರವನ್ನು ಕಿತ್ತೊಗೆದರು. ಚೆಂಗಾಳ್ವರ ಶಾಸನಗಳು ಬಹುತೇಕವಾಗಿ ಹುಣಸೂರು ಎಡತೊರೆ ಮತ್ತು ಕೊಡಗುಗಳಲ್ಲಿ ದೊರಕುತ್ತವೆ.

ಚೋಳರ ದಂಡನಾಯಕನಾದ ಪಂಚವ ಮಹಾರಾಯನು ಹಣಸೋಗೆಯಲ್ಲಿ ಚೆಂಗಾಳ್ವರನ್ನು ಅಧೀನಪಡಿಸಿಕೊಂಡನು. ಮುಂದಿನ ಚೆಂಗಾಳ್ವ ದೊರೆಗಳು ಎರಡು ಶತಮಾನಗಳ ವರೆಗೆ ಚೋಳರ ಬಿರುದುಗಳನ್ನು ಪಡೆದಿದ್ದರು. ಚೋಳರನ್ನು ಹೊಯ್ಸಳರು ಹೊರಗಟ್ಟಿದ ಮೇಲೆ ಹೊಯ್ಸಳರೊಡನೆ ಚೆಂಗಾಳ್ವರಿಗೆ ಘರ್ಷಣೆಯಾಯಿತು. ಕ್ರಿ.ಶ. 1145ರಲ್ಲಿ ನಡೆದ ಒಂದು ಯುದ್ಧದಲ್ಲಿ ನರಸಿಂಹನು ಒಬ್ಬ ಚೆಂಗಾಳ್ವನನ್ನು ಕೊಂದು ಚೆಂಗನಾಡನ್ನು ವಶಪಡಿಸಿಕೊಂಡನು. ಹೊಯ್ಸಳ ನರಸಿಂಹನ ಮಗ ಇಮ್ಮಡಿ ಬಲ್ಲಾಳನಿಗೆ ಇನ್ನೊಬ್ಬ ಚೆಂಗಾಳ್ವನು ಗೌರವವನ್ನರ್ಪಿಸಿದನು. ಕ್ರಿ.ಶ. 1174ರಲ್ಲಿ ಬಲ್ಲಾಳನ ಮತ್ತೊಬ್ಬ ದಂಡನಾಯಕ ಬೆಟ್ಟರಸನು ಕೊಡಗಿಗೆ ಓಡಿಹೋಗಿದ್ದ ಚೆಂಗಾಳ್ವ ದೊರೆ ಮಹಾದೇವನನ್ನು ಕೊಂದನು. ಮುಂದಿನ ಚೆಂಗಾಳ್ವ ದೊರೆ ಪೆಮ್ಮವೀರಪ್ಪನು ಕೊಡಗರ ಸಹಾಯದಿಂದ ಹೊಯ್ಸಳರನ್ನು ಚೆಂಗನಾಡಿನಿಂದ ಓಡಿಸಿದನು. ಅಂತಿಮವಾಗಿ ಹೊಯ್ಸಳರು ಅವರ ಮೇಲೆ ಅಧಿಕಾರ ಸ್ಥಾಪಿಸಿದರು. ಕ್ರಿ.ಶ. 1245ರಲ್ಲಿ ಅವರು ಕಾವೇರಿಯ ದಕ್ಷಿಣಕ್ಕೆ ಕೊಡಗಿನ ಸಿದ್ಧಾಪುರದ ಬಳಿ ಕೊಡಗು ಶ್ರೀರಂಗಪಟ್ಟಣವೆಂಬ ಹೊಸ ರಾಜಧಾನಿಯನ್ನು ನಿರ್ಮಿಸಿದರು. ಸೋಮದೇವ ಮತ್ತು ಬೋಪದೇವ ಎಂಬ ಇಬ್ಬರು ಚೆಂಗಾಳ್ವ ದೊರೆಗಳು ಈ ಹೊಸ ನಗರದಲ್ಲಿ ಜೊತೆಯಾಗಿ ಆಳುತ್ತಿದ್ದರು. ಕ್ರಿ.ಶ. 1252ರಲ್ಲಿ ಅವರು ಹೊಯ್ಸಳ

ದೊರೆ ಸೋಮೇಶ್ವರನನ್ನು ರಾಮನಾಥಪುರದ ಬಳಿಯಲ್ಲಿ ಬರಮಾಡಿಕೊಂಡರು. ಕ್ರಿ.ಶ. 1280–1297ರ ವರೆಗೆ ಮಲ್ಲಿದೇವ ಮತ್ತು ಹರಿಹರದೇವ ಇವರು ಚೆಂಗಾಳ್ವ ದೊರೆಗಳಾಗಿದ್ದರು. 17ನೆ ಶತಮಾನವಲ್ಲಿ ಯಾವುದೇ ಚೆಂಗಾಳ್ವ ದೊರೆಯ ಹೆಸರನ್ನು ನಾವು ಕೇಳುವುದಿಲ್ಲ.

15ನೆಯ ಶತಮಾನದ ಕೊನೆಯ ವೇಳೆಗೆ ಚೆಂಗಾಳ್ವ ದೊರೆ ನಂಜರಾಜನೆಂಬವನು (ಕ್ರಿ.ಶ. 1502-1533) 'ನಂಜರಾಜ ಪಟ್ಟಣ'ವೆಂಬ ತನ್ನ ರಾಜಧಾನಿಯಲ್ಲಿ ಇದ್ದಂತೆ ಕೇಳುತ್ತೇವೆ. ಈ ಊರು ಕಾವೇರಿಯ ಉತ್ತರಕ್ಕೆ ಕೊಡಗಿನಲ್ಲಿದೆ. ನಂಜರಾಜನಿಂದೀಚೆಯ ದೊರೆಗಳು ತಮ್ಮನ್ನು ನಂಜರಾಜ ಪಟ್ಟಣದ ಅಧೀಶ್ವರರೆಂದು ಕರೆದುಕೊಳ್ಳುತ್ತಾರೆ–ನಂಜರಾಜನ ಕಿರಿಯ ಸೋದರ ಮಹಾದೇವನು ಚೆಂಗಾಶ್ವರ ವಂಶಾವಳಿಯನ್ನು ಕೊಟ್ಟಿದ್ದಾನೆ. ಜಯನೃಪ ಕಾವ್ಯದಲ್ಲಿ ಮಂಗರಸನು ತನ್ನ ತಂದೆಯು ಚೆಂಗಾಳ್ವ ದೊರೆಗಳ ಸಚಿವ ವಂಶದವನೆಂದು ತಿಳಿಸಿರುತ್ತಾನೆ. ಇದೇ ಸಚಿವ ಶಾಖೆಯ ಇನ್ನೊಬ್ಬ ವೀರಶೈವ ಕವಿ ನಂಜುಂಡನು ಸಾಂಗತ್ಯದಲ್ಲಿ 'ರಾಮನಾಥ ಚರಿತ' ಎಂಬ ಕಾವ್ಯವನ್ನು ಬರೆದಿದ್ದಾನೆ. ನಂಜರಾಜನ ಮಗನಾದ ನಂಜುಂಡ ಭೂವರನ ಮಂತ್ರಿಯಾಗಿದ್ದ ದೇವಪ್ಪನೆಂಬ ಜೈನಕವಿ ಸಾಂಗತ್ಯದಲ್ಲಿ 'ರಾಮ ವಿಜಯ ಕಾವ್ಯ'ವನ್ನು ರಚಿಸಿದ್ದಾನೆ. ಇವನ ಆಶ್ರಯದಾತ ನಂಜುಂಡರಾಜನನ್ನು ಇವನು ತನ್ನ ಕಾವ್ಯದಲ್ಲಿ ಕೊಂಡಾಡಿದ್ದಾನೆ. ಶಾಸನವೊಂದು (EP.C. Vol. I:ಹುಣಸೂರು 24) ಇದೇ ರಾಜನನ್ನು ವಿಶೇಷಿಸಿದೆ. ಇವನನಂತರ ಬಂದ ಶ್ರೀಕಂಠರಾಜನು ಕ್ರಿ.ಶ. 1540ರಲ್ಲಿ ಚಕ್ರವರ್ತಿಯ ಬಿರುದುಗಳನ್ನು ಧರಿಸಿದ್ದನು. ಪಿರಿಯರಾಜನು (ಕ್ರಿ.ಶ. 1586–1607) ಶ್ರೀರಂಗಪಟ್ಟಣವನ್ನು ಪುನಃ ಕಟ್ಟಿ ತನ್ನ ಹೆಸರಿನಲ್ಲಿ "ಪಿರಿಯಾ ಪಟ್ಟಣ"ವೆಂದು ಕರೆದನು. ಕ್ರಿ.ಶ. 1607ರಲ್ಲಿ ವಿಜಯನಗರದ ರಾಜ್ಯಪಾಲ ತಿರುಮಲರಾಯನು ಪಿರಿಯರಾಜನಿಗೆ ಮಳಲವಾಡಿ ಪ್ರದೇಶವನ್ನು ಕೊಟ್ಟನು. ಚೆಂಗಾಳ್ವರ ಕೊನೆಯ ದೊರೆ ವೀರ ರಾಜಯ್ಯನನ್ನು ಮೈಸೂರು ದೊರೆ ಕಂಠೀರವ ನರಸರಾಜ ಒಡೆಯನು (ಕ್ರಿ. ಶ. 1644ರಲ್ಲಿ) ಸೋಲಿಸಿ, ಚೆಂಗಾಳ್ವರ ದೊರೆತನವನ್ನು ಸಮಾಪ್ತಿಗೊಳಿಸಿದನು.

### ಕೊಂಗಾಳ್ವರು

ಕೊಂಗಾಳ್ವರು ಅರಕಲಗೂಡು ತಾಲೂಕು ಮತ್ತು ಉತ್ತರ ಕೊಡಗಿನ ಏಳು ಸಾವಿರ ಸೀಮೆ ಸೇರಿದಂತೆ ಇದ್ದ ರಾಜ್ಯವನ್ನು ಆಳುತ್ತಿದ್ದರು. ಈ ರಾಜ್ಯಕ್ಕೆ ' ಕೊಂಗನಾಡು ಎಂಟು ಸಾವಿರ ' ಎಂದು ಹೆಸರಿತ್ತು. ಕ್ರಿ.ಶ. 880ರ ಸುಮಾರಿನಲ್ಲಿ ಗಂಗರ ರಾಜಕುಮಾರ ಎರೆಯಪ್ಪನೆಂಬವನು ಅದರ ರಾಜ್ಯಪಾಲನಾಗಿದ್ದನು. ಕ್ರಿ.ಶ. 1004ರ ಸುಮಾರಿನಲ್ಲಿ ಕೊಂಗಾಳ್ವರಾಜ್ಯವು ಚೋಳರಿಂದ ನಿರ್ಮಿಸಲ್ಪಟ್ಟಿತು. ಚೋಳರಲ್ಲಿ ಮಹಾಸಾಮ್ರಾಟನಾದ ರಾಜರಾಜನು ಚೆಂಗಾಳ್ವರ ಮೇಲಿನ ಹಣಸೋಗೆಯ ಯುದ್ಧದಲ್ಲಿ ಮಹಾಪ್ರತಾಪವನ್ನು ತೋರಿದ ಪಂಚವ ಮಹಾರಾಯನಿಗೆ "ಕ್ಷತ್ರಿಯ ಶಿಕ್ಷಾಮಣಿ ಕೊಂಗಾಳ್ವ" ಎಂಬ ಬಿರುದಿನೊಂದಿಗೆ ಈ ಕೊಂಗನಾಡನ್ನು ಅನುಗ್ರಹಿಸಿದನು. ಪಂಚವ ಮಹಾರಾಯನನ್ನು (ಕ್ರಿ.ಶ. 1012) ರಾಜರಾಜನ ಪಾದ ಕಮಲಗಳ ಭೃಂಗವೆಂದು ವರ್ಣಿಸಲಾಗಿದೆ. ಸಾಮ್ರಾಟನು ಅವನಿಗೆ ವೆಂಗಿಮಂಡಲ (ಪೂರ್ವದ ಚಾಲುಕ್ಯ ರಾಜ್ಯ) ಮತ್ತು ಗಂಗಮಂಡಲದ (ಮೈಸೂರಿನ ಗಂಗರ ರಾಜ್ಯ) ಮಹಾದಂಡನಾಯಕ ಪದವಿಯನ್ನು ಕೊಟ್ಟಿದ್ದುದಾಗಿ ತಿಳಿದುಬರುತ್ತದೆ. ಪಂಚವ ಮಹಾರಾಯನು ನಾನು ತುಳುವರ (ದಕ್ಷಿಣ ಕನ್ನಡ) ಮೇಲೆ, ಕೊಂಕಣ (ಉತ್ತರ ಕನ್ನಡ)ದ ಮೇಲೆ, ಮಲಯ (ಮಲಬಾರು)ದ ಮೇಲೆ ದಂಡೆತ್ತಿ ಹೋಗಿ ತಿರುವಾಂಕೂರಿನ ದೊರೆ ಚೇರಮನನ್ನು ಸೋಲಿಸಿದುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ, ಅವನು ಉತ್ತರ ಮೈಸೂರಿನ ತೆಲುಗರನ್ನೂ ರಟ್ಟಿಗರನ್ನೂ ಸೋಲಿಸಿದುದಾಗಿ, ಧಾರವಾಡ ಬೆಳಗಾಂ ಜಿಲ್ಲೆಗಳಿಗೆ ಸೇರಿರುವ ಬೆಳ್ವಲ ನಾಡಿನ ಒಂದು ಭಾಗವನ್ನು ಆಳುತ್ತಿದ್ದುದಾಗಿ ಹೇಳಿಕೊಂಡಿದ್ದಾನೆ.

ಕೊಂಗಾಳ್ವರ ಮತ್ತೊಬ್ಬ ದೊರೆ ತ್ರಿಭುವನ ಮಲ್ಲ ಕೊಂಗಾಳ್ವದೇವ (ಕ್ರಿ.ಶ. 1079—1005) ಇವನು ಸಾಲಿಗ್ರಾಮವನ್ನು ಮುತ್ತಿದ ಚೆಂಗಾಳ್ವರನ್ನು ಸೋಲಿಸಿದನು. ದೊಡ್ಡಮಲ್ಲದೇವನು ಜೈನ ದೇವಾಲಯಗಳಿಗೆ ಉದಾರವಾದ ದತ್ತಿಗಳನ್ನು ಬಿಟ್ಟಿದ್ದಾನೆ. ವೀರ ಕೊಂಗಾಳ್ವದೇವನು (ಕ್ರಿ.ಶ. 1115) ಆದರ್ಶ ಜೈನನಾಗಿದ್ದು ಪ್ರಭಾಚಂದ್ರ ಸಿದ್ಧಾಂತ ದೇವರ ಶಿಷ್ಯನಾಗಿದ್ದನು. ವೀರಕೊಂಗಾಳ್ವದೇವನು ಸತ್ಯವಾಕ್ಯ ಜಿನಾಲಯವನ್ನು ಕಟ್ಟಿಸಿ ಅದಕ್ಕೆ ಉದಾರವಾದ ಕೊಡುಗೆಗಳನ್ನು ಬಿಟ್ಟನು. ತ್ರಿಭುವನಮಲ್ಲ ವೀರದೊಡ್ಡ ಕೊಂಗಾಳ್ವದೇವನು (ಕ್ರಿ, ಶ. 1171–1177) ತನ್ನ ರಾಜ್ಯದ ಮೇಲೆ ದಂಡೆತ್ತಿ ಬಂದ ಹೊಯ್ಸಳರನ್ನು ಹೊಡೆದಟ್ಟಿದನು.

ಕೊಂಗಾಳ್ವರು ಜೈನರಾಗಿದ್ದರು. ಅವರು ಪಂಚಮಹಾಶಬ್ದ, ಮಹಾಮಂಡಲೇಶ್ವರ, ಪೂರ್ವಶೈಲ ಸೂರ್ಯ, ಚೋಳಕುಲ ಘರಟ್ಟ, ಸೂರ್ಯವಂಶ ಚೂಡಾಮಣಿ—ಮೊದಲಾದ ಜೈನ ಬಿರುದುಗಳನ್ನು ಧರಿಸಿದ್ದರು. ಅವರು ಕ್ರಿ.ಶ. 1390ರ ವರೆಗೆ ಅಸ್ತಿತ್ವದಲ್ಲಿದ್ದು, ಅನಂತರ ವಿಜಯನಗರದಲ್ಲಿ ಬಹುಶಃ ಸಮಾವೇಶಗೊಂಡಿರಬಹುದು.

### ಉಚ್ಚಂಗಿಯ ಪಾಂಡ್ಯರು

ಸೂರ್ಯವಂಶಕ್ಕೆ ಸೇರಿದವರೆಂದು ಹೇಳಿಕೊಳ್ಳುವ ಉಚ್ಚಂಗಿಯ ಪಾಂಡ್ಯರು ಪ್ರಮುಖವಾದ ಒಂದು ರಾಜವಂಶ. ಅವರು ಮೂಲತಃ ಸಪ್ತ ಕೊಂಕಣಗಳಲ್ಲಿ ಒಂದಾದ 'ಹೈವೆ'ಯನ್ನು ಶಿಶುಗಲಿ ರಾಜಧಾನಿಯಿಂದ ಆಳುತ್ತಿದ್ದರು. ಕ್ರಿ.ಶ. 1113ರಲ್ಲಿ ಇದ್ದ ಪಾಂಡ್ಯರ ದೊರೆಗಳಲ್ಲೊಬ್ಬನು ತುನು ಗೋಕರ್ಣ ಪುರದ ಒಡೆಯನೆಂದೂ ಕೊಂಕಣಕ್ಷೇತ್ರದ ಸಂರಕ್ಷಕನೆಂದೂ ಹೇಳಿಕೊಳ್ಳುತ್ತಾನೆ. ಪಶ್ಚಿಮ ಚಾಲುಕ್ಯರ ರಾಜಪುತ್ರ ನರಸಿಂಹನು ಸಪ್ತಕೊಂಕಣವನ್ನು ಗೆದ್ದ ಮೇಲೆ ಪಾಂಡ್ಯರು ಉಚ್ಚಂಗಿಗೆ ವಲಸೆ ಹೋದರು. (ಈ ಉಚ್ಚಂಗಿಯು ಹಳೆ ಮೈಸೂರಿನ ಉತ್ತರ ಗಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಈಶಾನ್ಯ ಭಾಗದಲ್ಲಿರುವ ಒಂದು ಗಿರಿದುರ್ಗ). ಈಗ ಸ್ಥೂಲವಾಗಿ ಚಿತ್ರದುರ್ಗ ಜಿಲ್ಲೆಗೆ ಹೊಂದುವ ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಈ ಪಾಂಡ್ಯರು ಆಳುತ್ತಿದ್ದರು. ಈ ರಾಜಮನೆತನದ ಸ್ಥಾಪಕನು ಮಂಗಯ್ಯ ಅಥವಾ ಆದಿತ್ಯದೇವನು. ಅವನ ಮಗ ಚೇದಿರಾಜ. ಅವನ ಮಗನಾದ ಪಾಂಡ್ಯನು ಚೇದಿ ದೊರೆಗಳನ್ನು ಅಧೀನ ಪಡಿಸಿಕೊಂಡಂತೆ ಹೇಳಲಾಗಿದೆ. ಪಾಂಡ್ಯದೇಶದ ಮೇಲಣ ಒಲವಿನ ಕಾರಣದಿಂದಾಗಿ ಅವನಿಗೆ ಪಾಂಡ್ಯನೆಂದು ಹೆಸರಿತ್ತು. "ಅವನ ಕಂಕಣಗಳ ಹೊಡೆತಗಳು ಪುರಂದರನ ತಲೆಯ ಮೇಲೆ ಶಂಖಧ್ವನಿಮಾಡಿದವು. ಅವನ ಮತ್ಸ್ಯಲಾಂಛನವು ಮಹಾ ಪರ್ವತಗಳ ಮೇಲೆಲ್ಲ ಕೆತ್ತಲ್ಪಟ್ಟಿತು." ಅವನ ಮಗನು ಚಾಲುಕ್ಯ ಚೋಳ ದೊರೆಗಳಿಂದ ಅವರ ರಾಜ್ಯಗಳನ್ನು ಪಡೆದಂಥ ಪಲುತನು. ಈ ಪಾಂಡ್ಯದೊರೆಗಳ ಬಿರುದುಗಳು ಮಹಾ ಮಂಡಲೇಶ್ವರ, ಕಾಂಚೀಪುರಾಧೀಶ್ವರ, ಪರಿಚ್ಛೇದಿ ಗಂಡ—ಎಂಬವಾಗಿದ್ದವು.

ಚಾಲುಕ್ಯ ತ್ರಿಭುವನಮಲ್ಲನ ಅಧೀನದಲ್ಲಿ, ಸುಪ್ರಸಿದ್ಧ ಇರುಕ್ಕವೇಲನೆಂಬ ಹೆಸರಿನ ತ್ರಿಭುವನಮಲ್ಲ ಪಾಂಡ್ಯನು ಕ್ರಿ.ಶ. 1083ರಲ್ಲಿ ನೊಳಂಬವಾಡಿಯನ್ನು ಆಳುತ್ತಿದ್ದನು. ಅವನು ಕ್ರಿ.ಶ. 1101ರಲ್ಲಿ ಬಲ್ಲಕುಂದಿ ಮುನ್ನೂರರ ಒಡೆಯನಾಗಿದ್ದನು. ದಾವಣಗೆರೆಯ ಸಮೀಪದಲ್ಲಿರುವ ಬೆಳತೂರಿನಿಂದ ಆಳುತ್ತಿದ್ದನು. ಅವನನ್ನು ತ್ರಿಭುವನಮಲ್ಲನ ಬಲಗೈ ಎಂಬುದಾಗಿ ವರ್ಣಿಸಲಾಗಿದೆ. ಅವನಲ್ಲಿ ಚಾಲುಕ್ಯ ಚಕ್ರೇಶ್ವರನು ಎಷ್ಟು ನಂಬಿಕೆ ಇರಿಸಿದ್ದನೆಂದರೆ, ತ್ರಿಭುವನಮಲ್ಲ ಪಾಂಡ್ಯನೊಬ್ಬನೇ ಚೋಳ, ಆಂಧ್ರ, ಕಳಿಂಗ, ಅಂಗ, ವಂಗ, ಮಗಧ, ಮಾಳವ ಮತ್ತು ಗುರ್ಜರ ದೊರೆಗಳನ್ನು ಸದೆಬಡಿಯಲು ಸಾಕೆಂದು ವರ್ಣಿತನಾಗಿದ್ದಾನೆ. ತ್ರಿಭುವನಮಲ್ಲನು ಇಡೀ ಪೃಥ್ವಿಯನ್ನು ಸಾಮ್ರಾಟ್ ವಿಕ್ರಮನ ಅಧೀನಕ್ಕೆ

ತಂದನು. ಕ್ರಿ.ಶ. 1124ರಲ್ಲಿ ಅವನು ಸಾಂತಳಿಗೆ ಸಾವಿರ ಮತ್ತು ನೊಳಂಬವಾಡಿ ಪ್ರಾಂತ್ಯವನ್ನು ಪೂರ್ಣ ಅಧಿಕಾರದಿಂದ ಆಳುತ್ತಿದ್ದನು. ಅವನನ್ನು ವೀರ ನೊಳಂಬ ಪಲ್ಲವ ಪೆರ್ಮಾಡಿದೇವನ ಅಂದರೆ ಚಾಲುಕ್ಯ ಜಯಸಿಂಹನ ಕಿರಿಯ ಸಹೋದರನೆಂದು ವರ್ಣಿಸಲಾಗಿದೆ. ಅವರಿಬ್ಬರಲ್ಲಿ ಯಾವುದೇ ರೀತಿಯ ಬಾಂಧವ್ಯವಿತ್ತೇ ಎನ್ನುವುದು ನಮಗೆ ತಿಳಿಯದು. ಅವನ ಮೊಮ್ಮಗನನ್ನು ರಾಜಕುಮಾರನೆಂದು ಕರೆಯಲಾಗಿದೆ.

ಮುಂದಿನ ದೊರೆ ರಾಯಪಾಂಡ್ಯನು. ನೊಳಂಬವಾಡಿ ಮತ್ತು ಸಾಂತಳಿಗೆಗಳನ್ನು ಬೆಳತೂರಿನಿಂದ ಆಳುತ್ತಿದ್ದನು. ಅವನನ್ನು ಕಳಿಂಗ, ಸಿಂಗಳ, ಚೇಂದ್ರ, ಸಿಂಗ ಮತ್ತು ಕಲುತ ದೊರೆಗಳನ್ನು ಗೆದ್ದವನೆಂದು ವರ್ಣಿಸಲಾಗಿದೆ. ಅವನ ಮಕ್ಕಳು ಪಂಡಿತಪಾಂಡ್ಯ, ವೀರಪಾಂಡ್ಯ, ವಿಜಯಪಾಂಡ್ಯ ಅಥವಾ ಕಾಮದೇವ. ಪಂಡಿತ ಪಾಂಡ್ಯನು ಮಧುಸೂದನನ ಶಿಷ್ಯನಾಗಿದ್ದು ತಂದೆಯನಂತರ ಪಟ್ಟಕ್ಕೆ ಬರಲಿಲ್ಲ.

ವೀರಪಾಂಡ್ಯನು ಉಚ್ಚಂಗಿಯಿಂದ ಆಳುತ್ತಿದ್ದನು. ಅವನಿಗೆ ರಾಜಕುಮಾರನ ಬಲಭಾಗದಲ್ಲಿ ನಿಲ್ಲುವ ಗೌರವವನ್ನು ಕೊಡಲಾಗಿತ್ತು. ಅವನು ಮಲೆ ರಾಜ್ಯವನ್ನು ಗೆದ್ದು ಚಾಲುಕ್ಯ ಸಾಮ್ರಾಟನಿಗೆ ಅರ್ಪಿಸಿದನು. ಕ್ರಿ.ಶ. 1148ರಲ್ಲಿ ಅವನು ತುಂಗಭದ್ರಾ ಮತ್ತು ಹರಿದ್ರಾನದಿಗಳ ಸಂಗಮದ ಬಳಿ ದತ್ತಿಗಳನ್ನು ಬಿಟ್ಟನು. ಈ ದತ್ತಿಗಳನ್ನು ಸರ್ಪಯಾಗದ ಕೀರ್ತಿಯುಳ್ಳ ಜನಮೇಜಯನ ಹೆಸರಿನಲ್ಲಿ ಬಹುಶಃ ಈ ರಾಜಕುಮಾರನೇ ಕೊಟ್ಟಿರಬೇಕು.

ಮುಂದಿನ ದೊರೆ ವಿಜಯಪಾಂಡ್ಯನು ಕ್ರಿ.ಶ. 1184ರ ವರೆಗೆ ಸ್ವತಂತ್ರ ದೊರೆಯಾಗಿ ಆಳುತ್ತಿದ್ದಿರಬೇಕು. ಇದಕ್ಕೆ ಕಾರಣ ಚಾಲುಕ್ಯರು ಮತ್ತು ಕಲಚೂರ್ಯರ ಮೇಲಧಿಕಾರದ ಹೋರಾಟ. ವಿಜಯಪಾಂಡ್ಯನು ತನ್ನ ಕಿರೀಟಾಗ್ರವು ದೊಡ್ಡ ನೀಲಮಣಿಯಿಂದ ನಿರ್ಮಿಸಲಾಗಿತ್ತೆಂದೂ ತನ್ನ ಬಾಹುಗಳು ಸುವರ್ಣದ ತೋಳುಬಂದಿಯಿಂದ ಅಲಂಕರಿಸಲ್ಪಟ್ಟಿತ್ತೆಂದೂ ಹೇಳುತ್ತಾನೆ. ಅವನು ಕನಕಪರ್ವತಗಳಲ್ಲಿ ಮತ್ಸ್ಯಲಾಂಛನದ ವಿಜಯ ಸ್ತಂಭವನ್ನು ನಿಲ್ಲಿಸಿದನು. ಅವನ ಭಂಡಾರವು ತಾಮ್ರಪರ್ಣಿಯಿಂದ ಪಡೆದ ಮುತ್ತು ರತ್ನಗಳಿಂದ ತುಂಬಿತ್ತು. ಅವನ ಕೇಳೀಗೃಹವು ಮಲಯಪರ್ವತದ ಚಂದನ ವೃಕ್ಷಗಳ ಸಮೂಹದಲ್ಲಿತ್ತು. ಚೋಳರು ಉಚ್ಚಂಗಿಯನ್ನು ಹನ್ನೆರಡು ವರ್ಷಗಳ ಕಾಲ ಮುತ್ತಿದರೂ ಅದನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನು ಅದನ್ನು ಸುಲಭವಾಗಿ ಗೆದ್ದರೂ ವಿಜಯಪಾಂಡ್ಯನ ಮೇಲಣ ಗೌರವದಿಂದ ಉಚ್ಚಂಗಿಯನ್ನು ಅವನಿಗೇ ಹಿಂತಿರುಗಿಸಿದನು. ಆದರೂ ಹೊಯ್ಸಳರು ಉಚ್ಚಂಗಿಯ ಪಾಂಡ್ಯರ ರಾಜ್ಯವನ್ನು ತಮ್ಮ ಸಾಮ್ರಾಜ್ಯದಲ್ಲಿ ಅನುಕ್ರಮವಾಗಿ ಸಮಾವೇಶಗೊಳಿಸಿದರು.

## ಪದಿನಾಲ್ಕುನಾಡು

ಈ ರಾಜ್ಯವನ್ನು ಮುಮ್ಮಡಿ ಬಲ್ಲಾಳನ ಮಂತ್ರಿಯಾಗಿದ್ದ ಪೆರುಮಾಳ ದಂಡನಾಯಕನು ಸ್ಥಾಪಿಸಿದನು. ಅವನು ತಲಕಾಡಿನ ಬಳಿ ಮಾಲಂಗಿಯಲ್ಲಿ ಒಂದು ಘಟಿಕಾಲಯ (ವಿದ್ಯಾಕೇಂದ್ರ)ವನ್ನು ಸ್ಥಾಪಿಸಿ, ಅದಕ್ಕೆ ದತ್ತಿಬಿಟ್ಟನು. ಅವನ ಮಗ ಮಾಧವ ದಣ್ಣಾಯಕನು ಪದಿನಾಲ್ಕುನಾಡಿನ ದೊರೆಯಾಗಿದ್ದನು. ಈ ಪ್ರದೇಶವು ಮೈಸೂರಿನ ದಕ್ಷಿಣಕ್ಕೆ ಇತ್ತು. ಇಂದಿನ ಗುಂಡಲಪೇಟೆ ತಾಲೂಕಿನ ತೆರಕಣಾಂಬಿಯು ಅವರ ರಾಜಧಾನಿಯಾಗಿತ್ತು. ಅವನು ಕ್ರಿ.ಶ. 1318ರಲ್ಲಿ ಗೋವರ್ಧನ ಗಿರಿಯಲ್ಲಿ ಗೋಪೀನಾಥ ದೇವಾಲಯವನ್ನು ನಿರ್ಮಿಸಿ ಅದಕ್ಕೆ ದತ್ತಿಯನ್ನು ಹಾಕಿಕೊಟ್ಟನು. ಅವನನಂತರ ಕೇತಯ ದಣ್ಣಾಯಕನೂ (ಕ್ರಿ.ಶ. 1321) ಅನಂತರ ಅವನ ಮೊಮ್ಮಗ ಸಿಂಗೆಯ ದಣ್ಣಾನಾಯಕನೂ (ಕ್ರಿ.ಶ. 1338) ಅಧಿಕಾರಕ್ಕೆ ಬಂದರು. ಈ

ದೊರೆಗಳು ಕೊಂಗರ ಕಾಲ, ನೀಲಗಿರಿ ವಿಜೇತ, ಪಾಂಡ್ಯವಿಜೇತ, ಸ್ವಪ್ತಿ ಪುರಾಧೀಶ್ವರ—ಮೊದಲಾದ ಬಿರುದುಗಳನ್ನು ಧರಿಸಿದ್ದರು.

ಈ ರಾಜವಂಶಕ್ಕೆ ಸೇರಿದವರು ಗೋಪಾಲಸ್ವಾಮಿ ಬೆಟ್ಟದಕೋಟೆಯ ನವದಣ್ಣಾಯಕರು. ಅವರಲ್ಲಿ ಮುಖ್ಯನಾದವನು ಪೆರುಮಾಳ ದಣ್ಣಾಯಕ. ಈ ದಣ್ಣಾಯಕರಲ್ಲಿ ಭೀಮದಣ್ಣಾಯಕನ ನೇತೃತ್ವದಲ್ಲಿ ನಾಲ್ವರು ನಾಯಕರು ಸೇರಿ ಇತರ ಐವರೊಡನೆ ಜಗಳವಾಡಿದರು. ಅವರು ನಾಗರಪುರ (ನಂಜನಗೂಡು) ಮತ್ತು ರತ್ನಪುರಿ(ಎಡತೊರೆ)ಗಳನ್ನು ವಶಪಡಿಸಿಕೊಂಡರು. ಅವರು ಬೇರೆ ಬೇರೆ ಪ್ರಭುತ್ವಗಳನ್ನು ಏರ್ಪಡಿಸಿ ಕೊಂಡರು. ಸ್ವಲ್ಪ ಕಾಲಾನಂತರ ಅವರು ಬೆಟ್ಟದಕೋಟೆಯನ್ನು ಮುತ್ತಿ ವಶಪಡಿಸಿಕೊಂಡರು. ಬೆಟ್ಟದಕೋಟೆಯ ಮಂಚದಣ್ಣಾಯಕನು ಪರಿಸ್ಥಿತಿಯ ವಿಷಮತೆಯನ್ನು ಅರಿತು, ಬೆಟ್ಟದಿಂದ ಕುದುರೆಯ ಮೇಲೆ ಹಾರಿಕೊಂಡು ಪ್ರಾಣಬಿಟ್ಟನು. ವಿಜೇತರಾದ ದಣ್ಣಾಯಕರು ಬೆಟ್ಟದಕೋಟೆಯ ಸಿಂಹಾಸನದ ಮೇಲೆ, ಆ ಮನೆತನದ ಕಿರಿಯ ವ್ಯಕ್ತಿಯನ್ನು ಕೂಡಿಸಿದರು. ಅವರು ದಕ್ಷಿಣ ಕೊಡಗಿನ ದೇವಸಿಬೆಟ್ಟವನ್ನೂ ಸತ್ಯಮಂಗಲವನ್ನೂ ಗೆದ್ದಂತೆ ಹೇಳಿಕೊಂಡಿದ್ದಾರೆ.

ಬೆಟ್ಟದಕೋಟೆಯ ಅನಂತರದ ದೊರೆಗಳು ನಂಜನಗೂಡು ತಾಲೂಕಿನ ಹುರವನ್ನು ಆಳಿದರು. ಅವರು ಮಹಾ ಮಂಡಲೇಶ್ವರ, ಚೇರ-ಚೋಳ-ಪಾಂಡ್ಯ ಮೂರು ರಾಯರ ಗಂಡ, ನೀಲಗಿರಿ ಸದರಕೊಡೆಯರು, ನೀಲಗಿರಿ ನಾಡಾಳ್ವರು—ಮೊದಲಾದ ಬಿರುದುಗಳನ್ನು ತಳೆದಿದ್ದರು. ಕ್ರಿ.ಶ. 1530ರಲ್ಲಿ ಮಾಧವನಾಯಕನು ಉನ್ನತ ಬಿರುದುಗಳನ್ನು ಧರಿಸಿದ್ದನು.

## ನಿಡುಗಲ್ಲಿನ ಚೋಳರು

ಚೋಳರು ಎಂಟರಿಂದ ಹನ್ನೆರಡನೆ ಶತಮಾನಗಳ ವರೆಗೆ ಹೇಮಾವತಿ ಮತ್ತು ನಿಡುಗಲ್ಲುಗಳ ನಡುವಣ ಸಣ್ಣ ಭೂಭಾಗವನ್ನು ಪೆಂಜೇರು ಅಥವಾ ಹೆಂಜೇರು ರಾಜಧಾನಿಯಿಂದ ಆಳುತ್ತಿದ್ದರು. ಈಗ ಶಿರಾ ತಾಲೂಕಿನ ಉತ್ತರದ ಎಲ್ಲೆಯಲ್ಲಿರುವ ಹೇಮಾವತಿಗೆ ತಮಿಳಿನಲ್ಲಿ ಪೆರುಂಚೇರು ಎಂಬ ಹೆಸರಿತ್ತು. ಅವರ ಶಾಸನಗಳು ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ದೊರಕುತ್ತವೆ. ಅವರು ತಮ್ಮನ್ನು ಚೋಳ ಮಹಾರಾಜರೆಂದು ಕರೆದುಕೊಳ್ಳುತ್ತಿದ್ದರು. ಈ ರಾಜವಂಶದ ಆರಂಭದ ದೊರೆಗಳು ಬಹುಶಃ ಗಂಗರ ಅಧೀನ ದೊರೆಗಳಾಗಿದ್ದಿರಬೇಕು. ತುಮಕೂರು ಜಿಲ್ಲೆಯಲ್ಲಿ ದೊರಕಿರುವ ಕೆಲವು ಶಾಸನಗಳಲ್ಲಿ ಚೋಳ ಧನಂಜಯ ಎರಿಗ ಎಂಬವನು ಅಳವಡಿ ಆರುನೂರನ್ನು ಗಂಗರ ಸಾಮಂತನಾಗಿ ಆಳುತ್ತಿದ್ದನೆಂಬ ಬಗ್ಗೆ ಉಲ್ಲೇಖವಿದೆ (E.C. XII ಮಧುಗಿರಿ 92–94 : 97–101). ಅವನ ಜೊತೆಯಲ್ಲೇ ಆಳುತ್ತಿದ್ದ ಚೋಳರ ಮುತ್ತರಸನೆಂಬವನು ಶ್ರೀ ಪುರುಷನ ಕಾಲದವನೆಂದು ಗೊತ್ತಾಗಿದೆ, (E.C. XII, ಮಧುಗಿರಿ 94–96 ; 99). ಹನ್ನೆರಡನೆ ಶತಮಾನದ ಆರಂಭದ ಹೊತ್ತಿಗೆ ಇನ್ನೊಂದು ರಾಜವಂಶವು ಆರಂಭವಾಯಿತು. ಅವರು ಪಶ್ಚಿಮ ಚಾಲುಕ್ಯರು ಮತ್ತು ಹೊಯ್ಸಳರ ಅಧೀನದಲ್ಲಿ ಅನುಕ್ರಮವಾಗಿ ಬಾಳಿದರು. ಈ ವಂಶದ ಆರಂಭದ ದೊರೆಗಳಲ್ಲಿ ಒಬ್ಬನಾದ ಮಹಾಮಂಡಲೇಶ್ವರ ಇರುಂಗೊಳ ಚೋಳ ಮಹಾರಾಜನು ತಾನು ಸೂರ್ಯವಂಶಕ್ಕೆ ಸೇರಿದವನೆಂದೂ ಕರಿಕಾಲ ಚೋಳನ ವಂಶದವನೆಂದೂ ಹೇಳಿಕೊಳ್ಳುತ್ತಾನೆ. ಚೋಳರ ಶಾಸನಗಳು ಕ್ರಿ.ಶ. 1106ರಲ್ಲಿ ಅಳುತ್ತಿದ್ದ ಇರುಂಗೊಳ ಚೋಳ ಮಹಾರಾಜನ ಉಲ್ಲೇಖನ ಮಾಡುತ್ತವೆ. (E.C. XI, ಚಳ್ಳಕೆರೆ 16). ಕ್ರಿ.ಶ. 1128ರ ಶಾಸನದಲ್ಲಿ ಉಲ್ಲಿಖಿತನಾದ ದೊರೆ ಬಹುಶಃ ಇವನೇ ಇರಬೇಕು. ಇವನು ಕ್ರಿ.ಶ. 1262ರ ವರೆಗೆ ಆಳಿದ ರಾಜಮನೆತನ ವೊಂದನ್ನು ಆರಂಭಿಸಿದನು. ಈ ಮನೆತನದಲ್ಲಿ ಆಳಿದ ಕೆಲವರು : ಬ್ರಹ್ಮ ಭೋಗೇಂದ್ರ, ಮಂಗಿ, ಬೀಚಿ, ಗೋವಿಂದ, ಇರುಂಗುಣ ಅಥವಾ ಇರುಂಗೊಳ, ಮಲ್ಲಿದೇವನೆಂದು ಬಿರುದಾಂತ ಭೋಗಿ, ಬೊಮ್ಮ

ಮತ್ತು ಗಣೇಶ್ವರ—ಹೀಗೆ ಹನ್ನೊಂದು ತಲೆಮಾರಿನ ದೊರೆಗಳು ಆಗಿ ಹೋಗಿದ್ದಾರೆ. ಈ ವಂಶದ ಮೊದಲನೆಯವನು ವೊರಿಯಪುರದ (ಅಥವಾ ತಿರುಚನಾಪಳ್ಳಿ ಬಳಿಯ ಉರೈಯೂರ್) ಅಧಿಪತಿ ಕರಿಕಾಲಚೋಳ ಕುಲದ ಶಿರೋರತ್ನನೆನಿಸಿದ ಇರುಂಗೊಳನು. ಕ್ರಿ.ಶ. 1106ರಲ್ಲಿದ್ದ ಮೊದಲನೆಯ ಇರುಂಗೊಳನು ಗೋವಿಂದ ಮತ್ತು ಮಹಾದೇವಿಯರ ಮಗನು (E.C. XII, ಪಾವಗಡ 43) ಅವನ ಪೂರ್ಣವಾದ ಹೆಸರು ವೀರಪಾಂಡ್ಯ ಇರುಂಗೊಳದೇವನೆಂದು ಇರಬಹುದು. ಅವನು ರೊದ್ದಾಮುನ್ನೂರು, ಸಿರಾಮುನ್ನೂರು, ಹಾರ್ವೆಮುನ್ನೂರು, ಸಿಂಧವಾಡಿ ಸಾವಿರಗಳನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಇವುಗಳೆಲ್ಲವೂ ನಿಡುಗಲ್ಲು ಕೇಂದ್ರದ ಸುತ್ತಮುತ್ತಲಿದ್ದ ಪ್ರದೇಶಗಳೆನ್ನಬಹುದು. ಅವನು ಹೊಯ್ಸಳರೊಂದಿಗೆ ಸಂತತವಾದ ಘರ್ಷಣೆ ಹೊಂದಿದ್ದನು. ಅವನ ಮಗ ಮಲ್ಲಿದೇವನು ಚಾಲುಕ್ಯ ದೊರೆ ವಿಕ್ರಮಾದಿತ್ಯನ (ಕ್ರಿ.ಶ. 1147ರಲ್ಲಿ ಇಮ್ಮಡಿ ಜಗದೇಕಮಲ್ಲನ) ಸಾಮಂತ ದೊರೆಯಾಗಿದ್ದನು (E. C. XI, ಚಳ್ಳಕೆರೆ 21). ಅವನ ಮಂತ್ರಿ ತಂತ್ರಪಾಲ ನಾಮನ್ ಎಂಬವನು ನಿಡುಗಲ್ಲಿನ ದೇವರಿಗೆ ಕೊಟ್ಟ ದತ್ತಿಯಲ್ಲಿ ಅವನನ್ನು ವಿಶೇಷವಾಗಿ ಹೊಗಳಲಾಗಿದೆ (E.C. XII, ಪಾವಗಡ 35 ಮತ್ತು ಸಿರಾ 23). ಮಲ್ಲಿದೇವನಿಗೆ ಲಕ್ಷ್ಮಾದೇವಿ ಮತ್ತು ಸೀತಾದೇವಿ ಎಂಬ ಇಬ್ಬರು ಪತ್ನಿಯರಿದ್ದರು. ಇವರಲ್ಲಿ ಕೊನೆಯವಳು ನಣಂಬೇಶ್ವರ ದೇವಾಲಯಕ್ಕೆ ದಾನವನ್ನು ಕೊಟ್ಟಿದ್ದಾಳೆ. ಈ ದೇವಾಲಯವನ್ನು ಹೆಂಜೇರು ಪಟ್ಟಣದ ಘಟಿಕಾಸ್ಥಾನವೆಂದು ವರ್ಣಿಸಲಾಗಿದೆ (E.C. XII, ಪಾವಗಡ 35 ಸಿರಾ 23). ಈ ಮಲ್ಲಿದೇವನ ಕಾಲದ ಗೊತ್ತಿರುವ ಕೊನೆಯ ಇಸವಿ ಎಂದರೆ ಕ್ರಿ.ಶ. 1179. ಅನಂತರ ಕ್ರಿ.ಶ. 1207ರ ಶಾಸನದಲ್ಲಿ ಉಲ್ಲಿಖಿತನಾಗಿರುವ ಗೋವಿಂದರಾಯ ಎಂಬವನನ್ನು ನೋಡುತ್ತೇವೆ. ಅವನ ಮರಣಾನಂತರ ಅವನ ರಾಜ್ಯದ ಒಂದು ಭಾಗಕ್ಕೆ ಗೋವಿಂದವಾಡಿ ಎಂದು ಹೆಸರಾಯಿತು. ಅವನನಂತರ ಬರ್ಮ ಮತ್ತು ರಿಚಲೇದೇವಿ (E.C XII, ಪಾವಗಡ 50)–ಇನ್ನೊಂದು ಶಾಸನದಂತೆ ಪೆರುಮಾಲೆ ದೇವನ ಮಗ (E.C. XII, ಪಾವಗಡ 47 ಮತ್ತು 141) ನಾದ ಇಮ್ಮಡಿ ಇರುಂಗೊಳನು ಸಿಂಹಾಸನವನ್ನೇರಿದನು. ಅವನು ಬಿಲ್ವಿದ್ಯೆಯಲ್ಲೂ ಶಸ್ತ್ರಪ್ರಯೋಗದಲ್ಲೂ ಪ್ರವೀಣನಾಗಿದ್ದನು. ಕ್ರಿ.ಶ. 1232ರ ಶಾಸನದಲ್ಲಿ ಅವನು ನಿಡುಗಲ್ಲು (ಕಳಂಜನ–ಇನ್ನೊಂದು ಹೆಸರು—E.C. XII, ಪಾವಗಡ 52) ಬೆಟ್ಟದ ಮೇಲಿರುವ ಜೈನ ಬಸದಿಗೆ ದತ್ತಿಯನ್ನು ಬಿಟ್ಟಂತೆ ತಿಳಿದು ಬರುತ್ತದೆ.

ಕ್ರಿ.ಶ. 1247ರ ಇನ್ನೊಂದು ಶಾಸನದಲ್ಲಿ ಅವನಿಗೆ 'ದಾನವ ಮುರಾರಿ' ಎಂಬ ಬಿರುದನ್ನು ಕೊಡಲಾಗಿದೆ (E.C. XI, ಹಿರಿಯೂರು 37). ಅವನ ಮಗ ತ್ರಿಪುರಾಂತಕ ದೇವನು ಅಶೋಕನ ಶಾಸನಗಳು ದೊರೆತಿರುವ ಬ್ರಹ್ಮಗಿರಿಯಲ್ಲಿ, ಅಂದರೆ ಹನಿಯದುರ್ಗದಲ್ಲಿ ಆಳುತ್ತಿದ್ದನು (E.C. XII, ಸಿರಾ 340). ರೈಸರು ನಿರ್ಧರಿಸಿರುವ ಕ್ರಿ.ಶ. 1238ರ ಶಾಸನವೊಂದರಲ್ಲಿ ಇಮ್ಮಡಿ ಗೋವಿಂದನನ್ನು ಸೂರ್ಯವಂಶದ ಶ್ರೇಷ್ಠ ದೊರೆ ಎಂದು ವರ್ಣಿಸಲಾಗಿದೆ. ಇವನ ಮಗ ಮುಮ್ಮಡಿ ಇರುಂಗೊಳನ ಬಗೆಗೆ ನಮಗೇನೂ ತಿಳಿಯದು. ಇರಂಗೊಳನ ಮಗನು ಭೋಗ. ಈ ಭೋಗನ ಮಗ ಬೊಮ್ಮನು ಹರಿಯುನ ಮತ್ತು ನಿಡುಗಲ್ಲು ಕೋಟೆಗಳನ್ನು ಸೇರಿಸುವ ಅಜೇಯವಾದ ಕೋಟೆಯನ್ನು ಕಟ್ಟಿ ಕೀರ್ತಿವಂತನಾಗಿದ್ದಾನೆ. ಕ್ರಿ.ಶ. 1285ರಲ್ಲಿ ಹೊಯ್ಸಳ ದೊರೆ ಇಮ್ಮಡಿ ನರಸಿಂಹನು ನಿಡುಗಲ್ಲು ದುರ್ಗವನ್ನು ಗೆದ್ದನು. ಹೀಗೆ ನಿಡುಗಲ್ಲಿನ ಚೋಳರ ವಂಶವು ಕೊನೆಗೊಂಡಿತು.

ಮೂಲ ಲೇಖಕರು : ಡಾ॥ ಎಂ. ವಿ. ಕೃಷ್ಣರಾವ್
ಅನುವಾದಕರು : ಶ್ರೀ ಕೊರಟಿ ಶ್ರೀನಿವಾಸರಾವ್

# ಧರ್ಮ, ಸಮಾಜ ಮತ್ತು ಸಂಸ್ಕೃತಿ

## ಶ್ರೀ ಶಂಕರರ ಅದ್ವೈತ ವೇದಾಂತ

ಶೈವಮತ, ವೈಷ್ಣವಮತ ಮುಂತಾದ ಶಾಖೆಗಳನ್ನುಳ್ಳ ವೈದಿಕಧರ್ಮದೊಡನೆ ಅವೈದಿಕ ಧರ್ಮಗಳಾದ ಬೌದ್ಧ ಮತ್ತು ಜೈನಧರ್ಮಗಳು ಕರ್ಣಾಟಕಕ್ಕೆ ಬಂದು ರಾಜಾಶ್ರಯವನ್ನು, ಸಾಕಷ್ಟು ಮತಾನುಯಾಯಿಗಳನ್ನು ಪಡೆದವೆಂಬುದನ್ನು ನಾವು ಆಗಲೇ ನೋಡಿದ್ದೇವೆ. ಸುಮಾರು ಎಂಟನೆಯ ಶತಮಾನದಲ್ಲಿ ಪ್ರಾಚೀನ ಧರ್ಮ ಮತ್ತು ತತ್ತ್ವ ಗ್ರಂಥಗಳನ್ನು ಪುನರ್ವ್ಯಾಖ್ಯಾನಮಾಡಿದ ಶ್ರೀ ಶಂಕರರಂತಹ ಆಚಾರ್ಯರ ಆವಿರ್ಭಾವದಿಂದ ವೈದಿಕ ಧರ್ಮದಲ್ಲಿ ನವಚೇತನ ಸಂಚಾರವಾದಂತೆ ಕಾಣುತ್ತದೆ. ತಮಿಳು ನುಡಿಯಲ್ಲಿ ತಮ್ಮ ಭಕ್ತಿಸ್ತೋತ್ರಗಳನ್ನು ಹಾಡಿದ ಶೈವ ಮತ್ತು ವೈಷ್ಣವ ಸಂತರು (ನಾಯನ್ಮಾರುಗಳು ಮತ್ತು ಆಳ್ವಾರುಗಳು) ಧರ್ಮಜಾಗೃತಿಯನ್ನು ಉಂಟುಮಾಡಿದರು. ಅದು ಅವೈದಿಕಧರ್ಮಗಳ ಪ್ರಭಾವದ ಪ್ರವಾಹವನ್ನು ತಡೆಯಿತು. ದಕ್ಷಿಣಭಾರತವು ಆಚಾರ್ಯತ್ರಯರೆನಿಸಿದ ಶಂಕರ, ರಾಮಾನುಜ ಮತ್ತು ಮಧ್ವಾಚಾರ್ಯರುಗಳಿಗೆ ಜನ್ಮವಿತ್ತಿದೆ. ಅವರು ಒಬ್ಬೊಬ್ಬರು ವೇದಾಂತ ದರ್ಶನಕ್ಕೆ ತಮ್ಮ ತಮ್ಮ ದೃಷ್ಟಿಕೋನದಿಂದ ಸಿದ್ಧಾಂತರೂಪವನ್ನು ಕೊಟ್ಟರು. ಭಾರತದಲ್ಲೆಲ್ಲಾ ಆಮೇಲಿನ ಹಿಂದೂಧಾರ್ಮಿಕ ಜೀವನದ ಮತ್ತು ತತ್ತ್ವಶಾಸ್ತ್ರದ ವಾಹಿನಿಯ ಗತಿಯನ್ನು ರೂಪಿಸಿದ ಮಹಾ ಧಾರ್ಮಿಕ ಮುಖಂಡರು ಅವರು. ಭಕ್ತಿಮಾರ್ಗ ಪ್ರಚಾರದ ಮೂಲಕ ಹಿಂದೂಧರ್ಮಕ್ಕೆ ಹೊಸ ಚೈತನ್ಯವನ್ನು ಅವರು ತುಂಬಿದರು.

ಶ್ರೀ ಶಂಕರರು ಕೇರಳದಲ್ಲಿ ಹುಟ್ಟಿದರೂ ಕರ್ಣಾಟಕದಲ್ಲಿರುವ ಶೃಂಗೇರಿಯಲ್ಲಿ ಅವರ ಮುಖ್ಯವಾದ ಮಠವೊಂದನ್ನು ಸ್ಥಾಪಿಸಿದರು. ಅವರಿಂದ ಪ್ರತಿಪಾದಿತವಾದ ಸಿದ್ಧಾಂತವನ್ನು ಇಲ್ಲಿ ಸಮೀಕ್ಷೆ ಮಾಡೋಣ.

ಆಚಾರ್ಯ ಶಂಕರರು ಪ್ರಸಿದ್ಧಪಡಿಸಿರುವ ವೇದಾಂತಮತಕ್ಕೆ ಅದ್ವೈತ ಸಿದ್ಧಾಂತವೆಂದು ಹೆಸರು. ಶ್ರೀ ಶಂಕರರು ಅದಕ್ಕೆ ಸ್ಪಷ್ಟವಾದ ರೂಪವನ್ನು ಕೊಟ್ಟರು. ಸಂಪ್ರದಾಯವನ್ನು ಅನುಸರಿಸಿ, ಅವರು ತಮ್ಮ ಪ್ರಧಾನ ತತ್ತ್ವಪ್ರತಿಪಾದನೆಗೆ ಪ್ರಸ್ಥಾನತ್ರಯವನ್ನು ಅವಲಂಬಿಸಿದರು. ಉಪನಿಷತ್ತುಗಳು, ವೇದಾಂತ ಸೂತ್ರಗಳು ಮತ್ತು ಭಗವದ್ಗೀತೆ—ಇವು 'ಪ್ರಸ್ಥಾನತ್ರಯ'ವೆನಿಸಿವೆ. ಬ್ರಹ್ಮದೊಡನೆ ಜೀವಾತ್ಮದ ಅಭೇದವನ್ನು ಪ್ರತಿಪಾದಿಸಿ, ಐಕ್ಯವನ್ನು ಸಾಧಿಸುವುದೇ ಪ್ರಸ್ಥಾನತ್ರಯದ ಏಕೈಕ ತಾತ್ಪರ್ಯವೆಂಬುದನ್ನು ಅವರು ತೋರಿಸಿಕೊಟ್ಟರು.

ಗೌಡಪಾದರು ಮತ್ತು ಗೋವಿಂದ ಭಗವತ್ಪಾದರು ಶ್ರೀ ಶಂಕರರಿಗೆ ಮುಂಚೆಯೇ ಇದ್ದ ಇಬ್ಬರು ಅದ್ವೈತ ಆಚಾರ್ಯರು. ಅದ್ವೈತಮತವನ್ನು ಮೊತ್ತಮೊದಲು ಎತ್ತಿಹಿಡಿದು ಸಾರಿದವರು ಬಹುಶಃ ಗೌಡಪಾದರೇ. ಮಾಂಡೂಕ್ಯ ಉಪನಿಷತ್ತಿನ ಮೇಲೆ ಗೌಡಪಾದರು ಬರೆದಿರುವ 'ಕಾರಿಕಾ'ವ್ಯಾಖ್ಯಾನದಲ್ಲಿ ಅದ್ವೈತಸಿದ್ಧಾಂತವು ಒಂದು ರೂಪದಲ್ಲಿ ಕಂಡುಬರುತ್ತದೆ. ಶ್ರೀ ಶಂಕರರು ಗೌಡಪಾದ ಕಾರಿಕೆಯ ಮೇಲೂ ಒಂದು ಭಾಷ್ಯವನ್ನು ಬರೆದಿದ್ದಾರೆ.

ಶ್ರೀ ಶಂಕರರು ತಮ್ಮ ಗ್ರಂಥಗಳಲ್ಲೆಲ್ಲಾ ಸಾಂಖ್ಯ ಮತ್ತು ಮೀಮಾಂಸಕ ವಾದವನ್ನು ನಿರಾಕರಿಸಲು ಯತ್ನಿಸಿದ್ದಾರೆ. ಸಾಂಖ್ಯರು ಅಂಗೀಕರಿಸುವ ದ್ವೈತವು ಉಪನಿಷತ್ತುಗಳಿಗೆ ಸಮ್ಮತವಲ್ಲವೆಂಬುದನ್ನು ತೋರಿಸುವುದೇ ಶ್ರೀ ಶಂಕರರ ಉದ್ದೇಶ. ಸಾಂಖ್ಯರ ದ್ವೈತವು ಪುರುಷ ಮತ್ತು ಪ್ರಕೃತಿ ಎಂಬ ಎರಡು ಮೂಲ ತತ್ತ್ವಗಳನ್ನು ಒಪ್ಪಿಕೊಳ್ಳುತ್ತದೆ.

ವೇದಗಳ ಮುಖ್ಯ ತಾತ್ಪರ್ಯ ಬ್ರಾಹ್ಮಣಗಳಲ್ಲಿ ಅಡಗಿದೆ, ಉಪನಿಷತ್ತುಗಳಲ್ಲಿ ಅಲ್ಲ—ಎಂದು ಮೀಮಾಂಸಕರು ಅಭಿಪ್ರಾಯಪಡುತ್ತಾರೆ. ಕರ್ಮಕಾಂಡದ ಯಜ್ಞಯಾಗಾದಿ ಕರ್ಮಗಳ ಅನುಷ್ಠಾನದ ಮೂಲಕವೇ ಮುಕ್ತಿ ಎಂಬುದನ್ನು ಅವರು ಎತ್ತಿ ಹಿಡಿಯುತ್ತಾರೆ. ಅಲ್ಲದೆ, ಉಪನಿಷತ್ತುಗಳಲ್ಲಿ ಆತ್ಮವನ್ನು ಕುರಿತು ಹೇಳಿದ ಮಾತುಗಳು ಯಜ್ಞಯಾಗಾದಿಗಳ ಕರ್ತೃವಿಗೆ ಅನ್ವಯಿಸುವವು ಎಂದು ಅವರು ವಾದಿಸುತ್ತಾರೆ. ಕರ್ಮವೇ ಮೀಮಾಂಸಕ ಮತದ ಮುಖ್ಯವಿಷಯ, ಬ್ರಹ್ಮಜ್ಞಾನವಲ್ಲ.

ಮೀಮಾಂಸಕರ ಈ ನಿಲುವನ್ನು ಶ್ರೀ ಶಂಕರರು ವಿಸ್ತಾರವಾಗಿ ಖಂಡಿಸಿದ್ದಾರೆ. ಬ್ರಾಹ್ಮಣಗಳ ಮತ್ತು ಉಪನಿಷತ್ತುಗಳು ಭಿನ್ನವಾದ ಮಾರ್ಗಗಳನ್ನು ಪ್ರತಿಪಾದಿಸುತ್ತವೆ–ಎಂಬುದನ್ನು ಅವರು ತೋರಿಸುತ್ತಾರೆ. ವೇದಗಳ ಬಹುಮುಖ್ಯವಾದ ಭಾಗಗಳು ಉಪನಿಷತ್ತುಗಳು. ಉಪನಿಷತ್ತುಗಳ ತಾತ್ಪರ್ಯ ಕರ್ಮವಲ್ಲ, ಬ್ರಹ್ಮಜ್ಞಾನ. ಆತ್ಮವು ಬ್ರಹ್ಮ ಎಂಬುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ವಿಧಾನನ್ನು ಅವು ಬೋಧಿಸುತ್ತವೆ. ಬ್ರಾಹ್ಮಣಗಳು ಬೋಧಿಸುವ ಆಚಾರ ಮತ್ತು ನೈತಿಕ ನಡತೆ ಹೆಚ್ಚೆಂದರೆ ಸಾಧಕನ ಚಿತ್ತ ಶುದ್ಧಿಗೆ ಸಹಾಯಕವಾಗಬಹುದು. ಬ್ರಹ್ಮಸಾಕ್ಷಾತ್ಕಾರವು ಜ್ಞಾನದಿಂದ ಮಾತ್ರ ಸಾಧ್ಯ, ಕರ್ಮದಿಂದಲ್ಲ.

ಇಷ್ಟಲ್ಲದೆ, ಶ್ರೀ ಶಂಕರರು ತಮ್ಮ ಸಿದ್ಧಾಂತದ ಬ್ರಹ್ಮವನ್ನು, ಬೌದ್ಧರ ಶೂನ್ಯ ಅಲ್ಲ—ಎಂದು ತಿಳಿಸುತ್ತಾರೆ. ಈ ಬ್ರಹ್ಮವು ನಿತ್ಯಪ್ರಸಿದ್ಧವಾದ ಸದ್ವಸ್ತು ; ಅದಿಲ್ಲದೆ ಈ ಪ್ರಪಂಚವಿರದು. ಸಮಸ್ತ ವ್ಯಾವಹಾರಿಕ ಪ್ರಪಂಚದ ಆಧಾರವೇ ಅದು. ಸದ್ವಸ್ತುವನ್ನು ಅನುಭವ ವೇದ್ಯವಾಗಿ ಮಾಡುವುದರ ಮೂಲಕ ಆಧ್ಯಾತ್ಮಿಕ ಸಾಕ್ಷಾತ್ಕಾರವು ವ್ಯವಹಾರ ಪ್ರಪಂಚವನ್ನು ಇಲ್ಲಗೈಯುತ್ತದೆ. ಅದ್ವೈತಿಯು ನಾಮರೂಪಗಳನ್ನು ಅಲ್ಲಗಳೆಯುತ್ತಾನೆಯೇ ಹೊರತು, ಅವುಗಳಿಗೆ ಆಧಾರವಾದ ಸತ್ಯವನ್ನಲ್ಲ. ಸದ್ವಸ್ತುವಿನ ಇರುವಿಕೆಯು ಅನುಭವ ಸಿದ್ಧ. ಅದ್ವೈತಿಯು ತಿರಸ್ಕರಿಸುವುದು ಭೇದವನ್ನು ಮಾತ್ರ ; ಆದರೆ ಬೌದ್ಧನು ಭೇದವನ್ನೂ ಅದಕ್ಕೆ ಆಧಾರವಾದ ಸದ್ವಸ್ತುವನ್ನೂ ನಿರಾಕರಿಸುತ್ತಾನೆ. ಈ ವಿಶ್ವದ ಬದಲಾವಣೆಗಳ ಆಧಾರವಾಗಿ ಶಾಶ್ವತವೂ ಅಚಲವೂ ಆದದ್ದು ಏನೂ ಇಲ್ಲವೆಂಬುದು ಬೌದ್ಧನ ಅಭಿಮತ. ಈ ಅಭಿಪ್ರಾಯವನ್ನು ಶ್ರೀ ಶಂಕರರು ವೇದಾಂತ ಸೂತ್ರಗಳ ಎರಡನೆ ಅಧ್ಯಾಯದ ಮೇಲಿನ ತಮ್ಮ ಭಾಷ್ಯದಲ್ಲಿ ಸಂಪೂರ್ಣವಾಗಿ ನಿರಾಕರಿಸಿದ್ದಾರೆ.

ಸಚ್ಚಿತ್ ಸ್ವರೂಪವಾದ ಪರಮಾತ್ಮ ಅಥವಾ ಬ್ರಹ್ಮ ಅದ್ವೈತದ ಮೂಲತತ್ತ್ವ. ಈ ಬ್ರಹ್ಮದ ಅಸ್ತಿತ್ವದ ಬಗ್ಗೆ ವೇದವೇ ಪರಮ ಪ್ರಮಾಣ. ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲ ; ಅದು ಜ್ಞಾನ ಸ್ವರೂಪವೇ ಆಗಿದೆ. ಬ್ರಹ್ಮಭಿನ್ನವಾದದ್ದು ಏನೂ ಇಲ್ಲ. ಅದು ಅಸದೃಶವಾಗಿರುವುದರಿಂದ ಅದರ ವರ್ಣನೆ ಸಾಧ್ಯವಿಲ್ಲ. ಅದು ಸ್ವತಃಸಿದ್ಧ ಮತ್ತು ಸ್ವಪ್ರಕಾಶಕ. ಪ್ರಮಾಣಗಳೆಲ್ಲವೂ ಬ್ರಹ್ಮವೇನೆಂಬುದನ್ನು ನಿಷೇಧರೂಪವಾಗಿ (ನೇತಿ, ನೇತಿ–ಇದಲ್ಲ, ಇದಲ್ಲ ಎಂದು) ತಿಳಿಸುತ್ತವೆ. ಬ್ರಹ್ಮವನ್ನು (ವಿಷಯವಾಗಿ) ತಿಳಿದುಕೊಳ್ಳಲಾಗದು ; ಬ್ರಹ್ಮವೇ ನಾವಾಗಬಹುದು. ಶಾಸ್ತ್ರವಿಹಿತ ಕರ್ಮಗಳ ಅನುಷ್ಠಾನದಿಂದ ಚಿತ್ತ ಶುದ್ಧಿ ಪಡೆದು, ಶಾಸ್ತ್ರ ಪ್ರತಿಪಾದಿತವಾದ ಸತ್ಯವನ್ನು ಧ್ಯಾನ ಮಾಡುವ ಸಾಧಕರಿಗೆ ಬ್ರಹ್ಮಾನುಭವ ಸಾಧ್ಯ. ಪ್ರತ್ಯಕ್ಷ ಮತ್ತು ಅನುಮಾನಗಳು ಶಾಸ್ತ್ರಸಿದ್ಧವಾದ ಸದ್ವಸ್ತುವನ್ನು ಸಮರ್ಥಿಸುತ್ತವೆ.

ಕುಂಬಾರನು ಮಡಕೆಯನ್ನು ಮಾಡುವ ರೀತಿಯಲ್ಲಿ ಅದ್ವೈತಪ್ರತಿಪಾದ್ಯವಾದ ಬ್ರಹ್ಮವು ವಿಶ್ವದ ಕರ್ತೃವಲ್ಲ. ಶ್ರೀ ಶಂಕರರು ಸೃಷ್ಟಿವಾದವನ್ನು ಎತ್ತಿ ಹಿಡಿಯುವುದಿಲ್ಲ. ಅಸದ್ವಸ್ತುವನ್ನು ನಾವು ಯಾವುದರಿಂದಲೂ ಉಂಟುಮಾಡಲು ಸಾಧ್ಯವಿಲ್ಲ. ಕಾರ್ಯವು ಕಾರಣದಲ್ಲಿ ಅವ್ಯಕ್ತವಾಗಿದೆ ಎಂದು ಸಾಂಖ್ಯರು ಹೇಳುತ್ತಾರೆ. ಕಾರ್ಯವು ಕಾರಣದ ಒಂದು ಪರಿಣಾಮ ಮಾತ್ರ.

ಸಾಂಖ್ಯರು ಹೇಳುವ ಪರಿಣಾಮವಾದವನ್ನು ಶ್ರೀ ಶಂಕರರು ನಿರಾಕರಿಸುತ್ತಾರೆ. ಕಾರ್ಯವು ಕಾರಣದ್ದೇ ಆದ ಇನ್ನೊಂದು ಬದಲಾವಣೆ ಎನ್ನುವ ಸಾಂಖ್ಯರ ವಿವರಣೆ ಶ್ರೀ ಶಂಕರರಿಂದ ತಿರಸ್ಕೃತವಾಗಿದೆ. ಕಾರ್ಯವು ಕಾರಣದ ಅಭಿವ್ಯಕ್ತಿ ಅನ್ನುವುದಾದರೆ, ಅದು (ಕಾರ್ಯವು) ಮೊದಲು ಇತ್ತೆ ? ಇರಲಿಲ್ಲವೆ ? ಇತ್ತು ಎನ್ನುವುದಾದರೆ ಕಾರ್ಯ ಕಾರಣ ಸಂಬಂಧವೇ ವ್ಯರ್ಥವಾಗುತ್ತದೆ. ಅದಿಲ್ಲ ವೆಂದಾದರೆ ಆ ಅಭಿವ್ಯಕ್ತಿಗೆ ಒಂದು ಕಾರಣ ಬೇಕು ; ಮತ್ತು ಆ ಕಾರಣಕ್ಕೆ ಇನ್ನೊಂದು ಕಾರಣ ಬೇಕಾಗುತ್ತದೆ. ಹೀಗೆ ಅನಂತವಾದ ಕಾರಣಗಳ ಒಂದು ಸರಪಳಿಯೇ ಉಂಟಾಗುತ್ತದೆ. ಈ ರೀತಿಯಲ್ಲಿ ಕಾರಣ ಕಲ್ಪನೆ ಮೂಲತಃ ಅಚಿಂತ್ಯವಾಗಿದೆ. ಆದ್ದರಿಂದ ಅದ್ವೈತಿಯು ಕಾರ್ಯ ಮತ್ತು ಕಾರಣಗಳು ಸ್ವರೂಪತಃ ಒಂದೇ ಎಂದು ತೀರ್ಮಾನಿಸುತ್ತಾನೆ. ಅವು ಕಾರ್ಯಕಾರಣಗಳಾಗಿ ಇರುವುದು ತೋರಿಕೆ ಮಾತ್ರ. ಕಾರ್ಯಕಾರಣಗಳೆರಡೂ ಬ್ರಹ್ಮದ ಮಿಥ್ಯಾ ಕಲ್ಪನೆಗಳು. ಬ್ರಹ್ಮವು ವ್ಯವಹಾರ ಪ್ರಪಂಚಕ್ಕೆ ಕಾರಣವೂ ಅಲ್ಲ ; ಅಲ್ಲದೆ ಪ್ರಪಂಚವಾಗಿ ಮಾರ್ಪಟ್ಟೂ ಇಲ್ಲ.

ಅದ್ವೈತವಾದಕ್ಕೆ ಎರಡು ತತ್ತ್ವಗಳು ಆಧಾರವಾಗಿವೆ : ಪರಮಾರ್ಥಸತ್ಯವು ಎಂದೆಂದಿಗೂ ಅಬಾಧಿತ ಎಂಬುದು ಒಂದು ; ಅತ್ಯಂತ ಅಸತ್ತಾದದ್ದು ಗೋಚರವಾಗುವುದೇ ಇಲ್ಲವೆಂಬುದು ಇನ್ನೊಂದು. ಪರಮಾರ್ಥಸತ್ಯಕ್ಕೆ ಬ್ರಹ್ಮವೇ ಉದಾಹರಣೆ ; ಮತ್ತು ಅತ್ಯಂತ ಅಸತ್ತಾದ ವಸ್ತುವಿಗೆ 'ಬಂಜೆಯ ಮಗ' ಮತ್ತು 'ಮೊಲದ ಕೊಂಬು' ಉದಾಹರಣೆಗಳು. ಭೇದಾತ್ಮಕವಾದ ಜಗತ್ತೆಲ್ಲವೂ ಇವೆರಡರ ಮಧ್ಯದಲ್ಲಿದೆ. ನಾವು ನೋಡಿ ವ್ಯವಹರಿಸುತ್ತಾ ಬಾಳುತ್ತಿರುವ ಈ ನಾನಾತ್ಮಕವಾದ ವಿಶ್ವವು 'ಸತ್' ಅಲ್ಲ, 'ಅಸತ್' ಅಲ್ಲ. ತನಿನಿದ್ದೆಯಲ್ಲಿ ತಾತ್ಕಾಲಿಕವಾಗಿ ಆದರೂ ಈ ಭೇದಾತ್ಮಕ ಪ್ರಪಂಚವು ಇಲ್ಲವಾಗುತ್ತದೆ. ಅದು ಹೀಗೆ ಬಾಧಿತವಾಗುವುದರಿಂದ ಅದು 'ಸತ್' ಅಲ್ಲ. ನಮಗೆ ವೇದ್ಯವಾಗುತ್ತಿರುವುದರಿಂದ ಅದು 'ಅಸತ್' ಅಲ್ಲ. 'ಸತ್' ಎಂದಾಗಲಿ, 'ಅಸತ್' ಎಂದಾಗಲಿ, 'ಸದಸತ್' ಎಂದಾಗಲಿ—ನಿರ್ಣಯಿಸಲಾಗದಿರುವ ಪ್ರಪಂಚದಸ್ಥಿತಿಯೇ 'ಮಾಯಾ' ಎನಿಸುವುದು. ಬ್ರಹ್ಮವು ಜ್ಞಾನಕ್ಕೆ ವಿಷಯವಾದ ಪಕ್ಷದಲ್ಲಿ ಅತ್ಯಂತ ಸತ್ಯವಾದ ಅದರ ಸ್ವರೂಪಕ್ಕೆ ಲೋಪವುಂಟಾಗುವುದು. ಬ್ರಹ್ಮಭಿನ್ನವಾದ ಸದ್ವಸ್ತು ಇಲ್ಲವಾದ್ದರಿಂದ ಬ್ರಹ್ಮಕ್ಕೆ ವಿಶೇಷಣಗಳನ್ನೂ ಹಚ್ಚುವುದು ಯುಕ್ತವಲ್ಲ. ಅನಂತವಾದ ಜ್ಞಾನ, ಆನಂದಗಳನ್ನು ಬ್ರಹ್ಮ ಹೊಂದಿಲ್ಲ ; ಅದು ಜ್ಞಾನಾನಂದಗಳ ಸ್ವರೂಪವೇ ಆಗಿದೆ.

ಅದ್ವೈತಸಿದ್ಧಾಂತದ ಪ್ರಕಾರ ನಾನಾತ್ಮಕವಾದ ಪ್ರಪಂಚವು ಬ್ರಹ್ಮನ ಸೃಷ್ಟಿಯಲ್ಲ ; ಬ್ರಹ್ಮದ ಪರಿಣಾಮವೂ ಅಲ್ಲ. ಅದು ಬ್ರಹ್ಮದ ಭ್ರಮಾತ್ಮಕವಾದ ತೋರಿಕೆ ಮಾತ್ರ. ಅದ್ವೈತವಾದದ ಮುಖ್ಯ ಸಮಸ್ಯೆಯಿದು: "ಈ ಭ್ರಮಾತ್ಮಕವಾದ ಅಭಿವ್ಯಕ್ತಿ ಹೇಗೆ ಮತ್ತು ಯಾಕೆ ಉಂಟಾಗುತ್ತದೆ?" ವಿವರಿಸಲಾಗದ ಮತ್ತು ಜಟಿಲವಾದ "ಮಾಯಾ" (ಅವಿದ್ಯಾ) ಎನ್ನುವ ಶಬ್ದವೇ ಈ ಸಮಸ್ಯೆಗೆ ನೇರ ಉತ್ತರ. ನಾವು ಕಾಣುವ ವೈವಿಧ್ಯಕ್ಕೆ ಈ ಅವಿದ್ಯೆಯೇ ಕಾರಣ. ಅದರ ಕಾರ್ಯ ಎರಡು ವಿಧ. ಅದು ಆಧಾರವಾದ ಬ್ರಹ್ಮವನ್ನು ಮರೆಯಿಸುತ್ತದೆ ಮತ್ತು ಅದರ ಸ್ಥಾನದಲ್ಲಿ ಬಹುವಿಧವ ಈ ಪ್ರಪಂಚವನ್ನು ಮೂಡಿಸುತ್ತದೆ. ಅವಿದ್ಯೆಯನ್ನು ಅನಾದಿ ಎಂದು ಭಾವರೂಪವೆಂದು ನಿರೂಪಿಸುತ್ತಾರೆ. ಈ ಅವಿದ್ಯೆಯು (ಪಾರಮಾರ್ಥಿಕ ದೃಷ್ಟಿಯಿಂದ) ಭ್ರಮಾತ್ಮಕ ಮತ್ತು ಕಡೆಯಲ್ಲಿ ಇಲ್ಲವಾಗುತ್ತದೆ.

ಅಜ್ಞಾನಕಲುಷಿತವಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಉಂಟಾದ ಜ್ಞಾನವು ಬ್ರಹ್ಮಾನುಭವಕ್ಕೆ ಹೇಗೆ ಸಾಧನವಾದೀತು ? ಈ ಪ್ರಶ್ನೆಗೆ ಅದ್ವೈತಿಯು ಹೀಗೆ ಉತ್ತರಿಸುತ್ತಾನೆ : ಕೆಲವೊಮ್ಮೆ ಅಸತ್ಯವು ಸತ್ಯಕ್ಕೆ ಹೆಬ್ಬಾಗಿಲಾಗಬಹುದು. ಒಂದು ವಸ್ತುವನ್ನು ತಿಳಿಯಪಡಿಸುವ ಪ್ರಮಾಣವು ಆ ವಸ್ತುವಿನಷ್ಟೇ ಸತ್ಯವಾಗಿರ ಬೇಕಾಗಿಲ್ಲ. ಕನಸಿನ ಅನುಭವಗಳು ದೈಹಿಕವಾದ ಪರಿಣಾಮಗಳನ್ನು ಉಂಟುಮಾಡಬಹುದು. ಅಂತೆಯೇ, ವ್ಯಾವಹಾರಿಕವಾದ ಪ್ರಮಾಣವು ಪರಮಾರ್ಥ ಸತ್ಯವನ್ನು ತೋರಿಸಬಹುದು. ವಿಜ್ಞಾನ ಪ್ರಪಂಚದಲ್ಲಿ ಕಲ್ಪಿತ ಸಿದ್ಧಾಂತಗಳು ಸರಿಯಾದ ತತ್ತ್ವಗಳಿಗೆ ಕರೆದೊಯ್ಯುವುದನ್ನು ನೋಡುತ್ತೇವೆ. ಆದ್ದರಿಂದ ಪ್ರಮಾಣಗಳ ವ್ಯಾವಹಾರಿಕತೆಯು ಸತ್ಯಸಾಕ್ಷಾತ್ಕಾರಕ್ಕೆ ಪ್ರತಿಬಂಧಕವಾಗುವುದಿಲ್ಲ. ಕಾಳ್ಕಿಚ್ಚನ್ನು ಹುಟ್ಟಿಸುವ ಬಿದಿರು ಇಡಿ ಕಾಡನ್ನು ಸುಟ್ಟು, ತಾನೂ ಸುಟ್ಟುಹೋಗುವಂತೆ ಚರಮಜ್ಞಾನವು ಬೇರೆಲ್ಲ ಜ್ಞಾನ ಗಳನ್ನು ನಾಶಮಾಡಿ ತಾನೂ ಅಳಿಯುತ್ತದೆ. ಭೇದಾತ್ಮಕವಾದ ಈ ಪ್ರಪಂಚವು 'ಸತ್' ಅಲ್ಲ 'ಅಸತ್' ಅಲ್ಲ. ಅದ್ವೈತದಲ್ಲಿ ಹೇಳಿರುವ ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂಬ ಇಬ್ಬಗೆಯ ಸತ್ಯವನ್ನು ಅಖಂಡವಾದ ಒಂದೇ ಸತ್ಯವೆಂದು ತೋರಿಸಬೇಕು. ಆ ಬಗೆಯ ಸಮಗ್ರ ದೃಷ್ಟಿಯಿಲ್ಲದೆ ಈ ಪ್ರಪಂಚವು ಬ್ರಹ್ಮದ ತೋರಿಕೆಯ ಅಭಿವ್ಯಕ್ತಿ ಎನ್ನುವುದು ಸಮಂಜಸವಾಗುವುದಿಲ್ಲ. ವ್ಯವಹಾರ ಪ್ರಪಂಚದ ಸತ್ಯತೆಯು ಪರಮಾರ್ಥಕ್ಕೆ ಸೇರಿರುವುದು ಮತ್ತು ಕಡೆಯಲ್ಲಿ ಅದರಲ್ಲಿಯೆ ಪರ್ಯವಸಾನಗೊಳ್ಳುವುದು.

ಅದ್ವೈತ ಸಿದ್ಧಾಂತದ ಒಂದು ಪಕ್ಷದವರು ಹೀಗೆ ಹೇಳುತ್ತಾರೆ : ಅಜ್ಞಾನವು ಒಂದೇ ಒಂದು ಮತ್ತು ಅದು ಬ್ರಹ್ಮವನ್ನು ಪ್ರತಿಬಿಂಬಿಸುತ್ತದೆ. ಯಾವಾಗ ಆ ಪ್ರತಿಬಿಂಬಿತವಾದ ಬ್ರಹ್ಮವು ಮೋಕ್ಷವನ್ನು ಹೊಂದುತ್ತದೆಯೋ ಆಗ ಅವಿದ್ಯೆ ನಾಶವಾಗಿ ಹೋಗುತ್ತದೆ. ಆದರೆ ಅದ್ವೈತಿಗಳಲ್ಲಿ ಹೆಚ್ಚು ಜನ ಅಜ್ಞಾನದ ಅನೇಕತ್ವವನ್ನು ಒಪ್ಪುತ್ತಾರೆ. ಇದಕ್ಕೆ ಶ್ರೀ ಶಂಕರರ ಬೆಂಬಲವೂ ಇರುವಂತೆ ಕಾಣುತ್ತದೆ. ಅವಿದ್ಯೆ ಬ್ರಹ್ಮವಿಷಯಕ ಮತ್ತು ಅದು ಜೀವದಲ್ಲಿ ಆಶ್ರಿತವಾಗಿದೆ. ಇಲ್ಲೊಂದು ಆಕ್ಷೇಪಣೆ ಬರಬಹುದು : ಅವಿದ್ಯೆಯ ವ್ಯಾಪಾರವಿಲ್ಲದೆ ಜೀವದ ಅಸ್ತಿತ್ವವಿಲ್ಲ ಮತ್ತು ತನ್ನ ಕಾರ್ಯವಾದ ಜೀವವೇ ಅದಕ್ಕೆ ಆಶ್ರಯ ವಾಗಲಾರದು. ಹೀಗೆ ಅನ್ಯೋನ್ಯ ಆಶ್ರಯದ ದೋಷವನ್ನು ಅದ್ವೈತಿಯ ಮೇಲೆ ಹೇಳುತ್ತಾರೆ. ಅವಿದ್ಯೆಯ ಮತ್ತು ಜೀವತ್ವದ ಅನಾದಿ ಸಂಬಂಧವನ್ನು ಹೇಳಿ ಅದ್ವೈತಿಯು ಈ ದೋಷವನ್ನು ಪರಿಹರಿಸುತ್ತಾನೆ. ಅವಿದ್ಯೆಯಾಗಲಿ, ಜೀವವಾಗಲಿ ಇರಲಿಲ್ಲ ಎಂಬ ಕಾಲವೇ ಇಲ್ಲ ಎಂದು ಅದ್ವೈತಿ ಹೇಳುತ್ತಾನೆ. ಮಾಯೆ ಅಥವಾ ಅವಿದ್ಯೆಯು ಜೀವವನ್ನು ಆಶ್ರಯಿಸಿದ್ದರೂ ಜೀವದ ಅಧೀನವಲ್ಲ ಅದು. ಈಶ್ವರನೇ 'ಮಾಯೀ', ಅಂದರೆ ಮಾಯಾಧೀಶ. ಮಾಯೆಯನ್ನೇ ಉಪಾದಾನ ಕಾರಣವಾಗಿಟ್ಟುಕೊಂಡು ಅವನು ಸಮಸ್ತ ಪ್ರಪಂಚವನ್ನು ಸೃಷ್ಟಿಸುತ್ತಾನೆ. ಜೀವವು ಪ್ರಪಂಚವನ್ನು ಸೃಷ್ಟಿ ಮಾಡುವುದಿಲ್ಲ.

ಅದ್ವೈತಿಗಳಲ್ಲಿ ಕೆಲವರ ಅಭಿಪ್ರಾಯ ಹೀಗಿದೆ : ಅನಾದಿಯಾದ ಮಾಯೆಯಲ್ಲಿ ಬ್ರಹ್ಮದ ಪ್ರತಿ ಬಿಂಬವೆ ಈಶ್ವರ ಮತ್ತು ಅವಿದ್ಯೆಯಲ್ಲಿ ಬ್ರಹ್ಮದ ಪ್ರತಿಬಿಂಬಗಳು ಜೀವಗಳು. ಈ ಅಭಿಪ್ರಾಯವು ಈಶ್ವರನಿಗೂ ಜೀವಗಳಿಗೂ ಯಾವ ಸಾಮ್ಯವೂ ಇಲ್ಲದಂತೆ ಮಾಡುತ್ತದೆ.

ಅದ್ವೈತದ ಮುಖ್ಯ ತಾತ್ಪರ್ಯ ಜೀವ ಮತ್ತು ಬ್ರಹ್ಮದ ಅಭೇದ. ಇವನ್ನು ಸ್ಥಾಪಿಸಲು ಅದ್ವೈತಿಗೆ ಮುಖ್ಯ ಪ್ರಮಾಣ ಶ್ರುತಿ (ಉಪನಿಷತ್ತುಗಳು). ಶ್ರುತಿಯೇ ಈ ಅಭೇದವನ್ನು ನಿಸ್ಸಂದೇಹವಾಗಿ ಘೋಷಿಸಿದೆ ಎಂಬುದನ್ನು ಅವನು ತೋರಿಸುತ್ತಾನೆ. ಪ್ರಸಿದ್ಧವಾದ ಛಾಂದೋಗ್ಯ ಉಪನಿಷತ್ತು ಜೀವ–ಬ್ರಹ್ಮರ ಏಕತೆಯನ್ನು "ತತ್ತ್ವಮಸಿ, ಶ್ವೇತಕೇತೋ (ಹೇ ಶ್ವೇತಕೇತು, ನೀನೇ ಅದು") ಎಂಬ–ವಾಕ್ಯದಿಂದ ತಿಳಿಸಿಕೊಡುತ್ತದೆ. ಈ ಉಪದೇಶವನ್ನೇ ಪದೇ ಪದೇ ಒಂಭತ್ತು ಸಲ ಹೇಳಿರುವುದರಿಂದ ಇದೇ ಶ್ರುತಿಯ ಪರಮ ತಾತ್ಪರ್ಯ ಎಂಬುದು ತಿಳಿದುಬರುವುದು. ಬ್ರಹ್ಮೈಕ್ಯ ಜ್ಞಾನವನ್ನು ಬೆಂಕಿಯ ಬಿಸಿಯಂತೆ, ಇಂದ್ರಿಯಾನುಭವದಂತೆ ಅರಿಯಲಾಗದು.

ಉಪನಿಷತ್ತುಗಳಲ್ಲಿ ಹಲವು ಕಡೆ ಬ್ರಹ್ಮಕ್ಕೂ ಜೀವಕ್ಕೂ ಭೇದವನ್ನು ತಿಳಿಸುವ ವಾಕ್ಯಗಳೂ ಇವೆ. ಇವುಗಳು ವ್ಯವಹಾರ ಸಿದ್ಧವಾದ ದ್ವೈತವನ್ನು ಮುಂದೆ (ಬ್ರಹ್ಮದಲ್ಲಿ) ನಿರಾಕರಿಸುವುದಕ್ಕೋಸ್ಕರ ಬಂದಿರುವ ಅನುವಾದವೆಂಬುದು ಅದ್ವೈತಿಯ ಸಮಾಧಾನ.

ಪ್ರತ್ಯಕ್ಷವು ಅದ್ವೈತವನ್ನು ವಿರೋಧಿಸುವಂತೆ ಕಾಣುತ್ತದೆ. ಭೇದದಿಂದ ಕೂಡಿರುವ ಬೇರೆ ಬೇರೆ ವಸ್ತುಗಳನ್ನೊಳಗೊಂಡ ಪ್ರಪಂಚವನ್ನು ಪ್ರತ್ಯಕ್ಷವು ತೋರಿಸುತ್ತದೆ. ಪ್ರಥಮ ಪ್ರಮಾಣವಾದ ಪ್ರತ್ಯಕ್ಷ ಜ್ಞಾನವನ್ನು ಶ್ರುತಿಯು ಹೇಗೆ ನಿರಾಕರಿಸಬಲ್ಲುದು ?

ಈ ಪ್ರಶ್ನೆಯನ್ನೂ ಅದ್ವೈತಿಯು ಎರಡು ರೀತಿಯಲ್ಲಿ ಪರಿಹರಿಸುತ್ತಾನೆ: ಪ್ರತ್ಯಕ್ಷವು ನಮಗೆ ಪ್ರಥಮ ಪ್ರಮಾಣ, ನಿಜವೇ. ಇಷ್ಟರಿಂದ ಪ್ರತ್ಯಕ್ಷ ಜ್ಞಾನ ಸುಳ್ಳಾಗದು ಎಂಬ ನಿಯಮವಿಲ್ಲ. ಅದು ಪ್ರಥಮ ಪ್ರಮಾಣವಾದರೂ ಸರ್ವತ್ರ ಪ್ರಧಾನವಲ್ಲ. ಪೂರ್ವ ಪ್ರಮಾಣದ ಜ್ಞಾನವನ್ನು ಪ್ರಮಾಣಾಂತರ ಜ್ಞಾನವು ಅಲ್ಲಗಳೆಯುವುದು ಅನೇಕ ಸಂದರ್ಭಗಳಲ್ಲಿ ಕಂಡು ಬರುತ್ತಿದೆ. ಪರಮಾರ್ಥ ಸತ್ಯದ ವಿಷಯದಲ್ಲಿ ಶಾಸ್ತ್ರಜನ್ಯವಾದ ಜ್ಞಾನವು ಪ್ರತ್ಯಕ್ಷದಿಂದ ಉಂಟಾಗುವ ಜ್ಞಾನವನ್ನೂ ಅಲ್ಲಗಳೆಯುತ್ತದೆ. ಶ್ರುತಿಯು (ಪರಮಾರ್ಥ ವಿಷಯದಲ್ಲಿ) ಪ್ರತ್ಯಕ್ಷವನ್ನು ಅವಲಂಬಿಸಿಯೇ ಇಲ್ಲ. ಅದು ಸ್ವತಂತ್ರವಾದ ಪ್ರಮಾಣ.

ಪ್ರತ್ಯಕ್ಷದಿಂದ ಉಂಟಾಗುವ ಜ್ಞಾನಕ್ಕೆ ಅದ್ವೈತಿಯು ಆಪೇಕ್ಷಿಕ ಸತ್ಯತ್ವವನ್ನು ಮಾತ್ರ ಒಪ್ಪುತ್ತಾನೆ. ಬ್ರಹ್ಮಭಿನ್ನವಾದದ್ದೆಲ್ಲವೂ ಆಪೇಕ್ಷಿಕ ಸತ್ಯ ಮಾತ್ರ.

ಮುಮುಕ್ಷುವಾದ ಸಾಧಕನು ಶಾಸ್ತ್ರೋಪದಿಷ್ಟವಾದ ನೈತಿಕ ನಿಯಮಗಳನ್ನು ಅನುಸರಿಸಲೇ ಬೇಕು. ನೈತಿಕ ಉನ್ನತಿ ಮತ್ತು ಆಚಾರಶೀಲತೆ ಆತ್ಮಸಾಕ್ಷಾತ್ಕಾರಕ್ಕೆ ನೇರವಾಗಿ ಸಹಾಯಕಾರಿ ಅಲ್ಲವೆಂದು ಅದ್ವೈತಿಗಳಲ್ಲಿ ಕೆಲವರ ಮತ. ಸಂಯತ ಜೀವನ ಮತ್ತು ವಿಹಿತ ಕರ್ಮಗಳ ಅನುಷ್ಠಾನಗಳು ವೇದಾಂತಾಧ್ಯಯನಕ್ಕೆ ಆವಶ್ಯಕವಾದ ಮನಸ್ಸಿನ ಪ್ರಸನ್ನತೆಯನ್ನು ಪಡೆಯಲು ಸಹಾಯಕವಾಗುತ್ತವೆ. ಶ್ರೀ ಶಂಕರರು ಅವರ ಭಾಷ್ಯಗಳಲ್ಲಿ ಸಾಧಕನು ವೇದಾಂತಾಧ್ಯಯನದ ಅಧಿಕಾರವನ್ನು ಪಡೆದಿರಬೇಕೆಂದು ಆಶಿಸುತ್ತಾನೆ. ಸಾಧಕನಲ್ಲಿರಬೇಕಾದ ನಿರ್ದಿಷ್ಟವಾದ ಪೂರ್ವಸಿದ್ಧತೆಗಳು ಕೆಲವಿವೆ. ಅವುಗಳನ್ನು ಸಾಧನ ಚತುಷ್ಟಯವೆನ್ನುತ್ತಾರೆ. ನಿತ್ಯಾನಿತ್ಯ ವಸ್ತುಗಳ ವಿವೇಕ, ಇಹಪರಗಳಲ್ಲಿ ಕರ್ಮಫಲಭೋಗಕ್ಕಾಗಿ ಆಸೆ ಪಡದಿರುವುದು, ಶಮ ದಮ ಇತ್ಯಾದಿ ಆರು ಗುಣಗಳು, ಮತ್ತು ಮೋಕ್ಷಕ್ಕಾಗಿ ತೀವ್ರವಾದ ಆಸೆ. ಉನ್ನತವಾದ ನೈತಿಕ ಜೀವನವು ಪರಿಪೂರ್ಣತೆಯ ಹಾದಿಯಲ್ಲಿ ಅದ್ವೈತ ಸಾಧಕನಿಗೆ ಅವಶ್ಯಕವಾಗಿ ಬೇಕಾಗುವ ಮೊದಲ ಮೆಟ್ಟಲು. ಮುಕ್ತಿಯು ಬ್ರಹ್ಮಾತ್ಮೈಕ್ಯದ ಜ್ಞಾನದಿಂದಲೇ ಬರುವುದು. ಸಾಧನ ಚತುಷ್ಟಯ ಸಂಪನ್ನನಾದ ಮೇಲೆ ಸಾಧಕನು ಶಾಸ್ತ್ರಬೋಧಿತವಾದ ಅದ್ವಯಸತ್ಯವನ್ನು ಎಡೆಬಿಡದೆ ಧ್ಯಾನಿಸಲು ತೊಡಗುತ್ತಾನೆ. ಆ ರೀತಿಯ ನಿದಿಧ್ಯಾಸನವು ಕೊನೆಗೆ ಅಖಂಡಾಕಾರವೃತ್ತಿಯನ್ನು (Intuition) ಉಂಟುಮಾಡುತ್ತದೆ.

ಈ ಚರಮವೃತ್ತಿಯು (Intuition) ಅವಿದ್ಯೆಯನ್ನು ಕೊನೆಗಾಣಿಸುವುದಲ್ಲದೆ ತಾನೂ ತಿರೋಹಿತವಾಗುತ್ತದೆ. ಬಗ್ಗಡವಾದ ನೀರಿನ ಜೊತೆಗೆ 'ಕತಕ'ಕಾಯಿಯ ಪುಡಿಯನ್ನು ಮಿಶ್ರಮಾಡಿದರೆ ಮಣ್ಣು ಬೇರ್ಪಟ್ಟು ತಂಗುವುದಲ್ಲದೆ ತಾನೂ ಅದರೊಡನೆ ತಂಗುವಂತೆ, ಬ್ರಹ್ಮಾನುಭವದ ವೃತ್ತಿಯೂ ಅವಿದ್ಯೆಯೊಡನೆ ನಾಶವಾಗುತ್ತದೆ.

ಅಂತಿಮ ಜ್ಞಾನವಾದ ಬ್ರಹ್ಮಸಾಕ್ಷಾತ್ಕಾರವು ಹೊಸದಾಗಿ ಸೃಷ್ಟಿಯಾಗುವುದಲ್ಲ. ಅದು ಆತ್ಮದ

ಸ್ವರೂಪ ಜ್ಞಾನದ ಸಾಕ್ಷಾತ್ಕಾರ ಮಾತ್ರ. ತನ್ನ ಕೊರಳಲ್ಲಿ ಇದ್ದರೂ ಮರೆತುಬಿಟ್ಟ ಚಿನ್ನದ ಸರದಂತೆ ಅದು. ಅದ್ವೈತ ತತ್ತ್ವದ ಜ್ಞಾನವು ಯಾವ ಒಂದು ಪಂಗಡಕ್ಕಾಗಲಿ, ಮತದ ಉಪಶಾಖೆಗಾಗಲಿ ಮೀಸಲಲ್ಲ. ಅದು ಪಂಡಿತರಿಗೂ ಕಾದಿರಿಸಿರುವುದಲ್ಲ. ಶ್ರೀ ಶಂಕರರು (ಸಂಪ್ರದಾಯವನ್ನನುಸರಿಸಿ) ಶೂದ್ರರಿಗೆ ವೇದಾಧ್ಯಯನ ಮಾಡಲು ಹಕ್ಕಿಲ್ಲವೆಂದರೂ ಅವರಿಗೆ ಬ್ರಹ್ಮಜ್ಞಾನ ಪಡೆಯುವುದಕ್ಕೆ ಅಧಿಕಾರವನ್ನು ನಿರಾಕರಿಸಲಿಲ್ಲ. ಅವರಿಗಾಗಿ ಬ್ರಹ್ಮಸಾಕ್ಷಾತ್ಕಾರದ ಸುಲಭ ಸಾಧನವನ್ನು ಅನುಮೋದಿಸಿ ತೋರಿಸಿದ್ದಾರೆ. ಆಧ್ಯಾತ್ಮ ಸಾಕ್ಷಾತ್ಕಾರಕ್ಕೆ ಎಲ್ಲರಿಗೂ ಅನ್ವಯಿಸಲೇಬೇಕಾದ ಯಾಂತ್ರಿಕವಾದ ಒಂದೇ ಮಾರ್ಗವಲ್ಲ ಇರುವುದು. ಬೇರೆಬೇರೆ ಸಾಧಕರು ಬೇರೆಬೇರೆ ವಿಧಾನವನ್ನು ಅನುಸರಿಸುತ್ತಾರೆ. ಸಾಕ್ಷಾತ್ಕಾರವು ಎಲ್ಲರಿಗೂ ಸಾಧ್ಯವೆಂದು ಅದ್ವೈತದ ಅಭಿಪ್ರಾಯ. ಮೋಕ್ಷವು ಪರಕೀಯವಾದದ್ದೇನೂ ಅಲ್ಲದೆ ಸ್ವಸ್ವರೂಪದ ಅಭಿವ್ಯಕ್ತಿಯೇ ಆದದ್ದರಿಂದ ಯಾರಿಗೂ ಅಧಿಕಾರವಿಲ್ಲವೆಂದು ಹೇಳಲಾಗದು. ಅದು ಎಲ್ಲ ಜೀವಗಳ ಹುಟ್ಟುಹಕ್ಕು. ಕೆಲವರು ಮೋಕ್ಷವನ್ನು ಬೇಗ ಪಡೆಯಬಹುದು, ಉಳಿದವರು ಬಹಳ ಕಾಲ ತೆಗೆದುಕೊಳ್ಳಬಹುದು. ಆತ್ಮಸಾಕ್ಷಾತ್ಕಾರ ಪಡೆದ ಕೂಡಲೇ ಪ್ರತಿಜೀವವೂ ಈಶ್ವರನೊಡನೆ ಸೇರುವುದು, ಬ್ರಹ್ಮದೊಡನಲ್ಲ. ಎಲ್ಲ ಜೀವಕೋಟಿಯೂ ಸಾಕ್ಷಾತ್ಕಾರ ಪಡೆದ ಮೇಲೆ ಬ್ರಹ್ಮಸಾಕ್ಷಾತ್ಕಾರ ಉಂಟಾಗುವುದು.

ಬ್ರಹ್ಮ ಸಾಕ್ಷಾತ್ಕಾರವು ಸಂಪೂರ್ಣವಾಗಿ ಒಂದು ಜೀವಿಯ ವೈಯಕ್ತಿಕ ವ್ಯಾಪಾರವಲ್ಲ. ಆಧುನಿಕ ಸಮಾಜವಾದಿಯು ಸದಾ ಮುಂದಿಡುವ ವೈಯಕ್ತಿಕ ಹಕ್ಕು ಮತ್ತು ಸಾಮಾಜಿಕ ಕರ್ತವ್ಯಗಳ ಘೋಷಣೆಗಳಿಗೆ ಅದ್ವೈತದ 'ಸರ್ವಜೀವ ಮೋಕ್ಷವು' ಉತ್ತರ ರೂಪವಾಗಿದೆ. ಒಬ್ಬ ವ್ಯಕ್ತಿಯ ಆತ್ಯಂತಿಕ ಮೋಕ್ಷವು ಎಲ್ಲರ ಮೋಕ್ಷದೊಡನೆ ಹೆಣೆದುಕೊಂಡಿದೆ. ಆದ್ದರಿಂದಲೇ ಇತರ ಜೀವಗಳ ಮೋಕ್ಷಕ್ಕೆ ಸಹಾಯ ನೀಡಬೇಕಾದ ಆವಶ್ಯಕತೆ ಇದೆ.

ಅದ್ವೈತದ ಇನ್ನೊಂದು ಸ್ವಾರಸ್ಯವಾದ ತತ್ತ್ವ ಜೀವನ್ಮುಕ್ತಿ. ದೇಹಸಹಿತವಾಗಿದ್ದರೂ ಜೀವಾತ್ಮನು ಮುಕ್ತನಾಗಬಲ್ಲನು. ಅಂಥ ಮುಕ್ತಾತ್ಮನಿಗೆ ದೇಹದ ಯಾವ ಬಂಧವೂ ಇರುವುದಿಲ್ಲ.

ಮುಕ್ತಿ ಎಂದರೆ ಬರಿಯ ದುಃಖನಿವೃತ್ತಿ ಅಷ್ಟೇ ಅಲ್ಲ; ಅದು ಆನಂದಾತ್ಮಕವೂ ಹೌದು. ಅದು ಸಚ್ಚಿದಾನಂದ ಸ್ವರೂಪ. ಅದ್ವೈತ ಪ್ರತಿಪಾದಿತವಾದ ಆತ್ಮವು ಯಾವ ಅನುಭವದಿಂದಲೂ ಬಾಧಿತವಾಗುವುದಿಲ್ಲ. ಅನುಭವದ ಎಲ್ಲ ವಲಯದಲ್ಲಿಯೂ ಶ್ರೀ ಶಂಕರರು ಆತ್ಮದ ಸ್ಫುರಣೆಯನ್ನು ಹೇಳುತ್ತಾರೆ. ಬ್ರಹ್ಮ ಸಾಕ್ಷಾತ್ಕಾರದ ಮಾರ್ಗ ಬೌದ್ಧಿಕವಷ್ಟೇ ಅಲ್ಲ, ಜ್ಞಾನಮಾರ್ಗವು ಬ್ರಹ್ಮಪ್ರಾಪ್ತಿಯನ್ನು ಶೀಘ್ರವಾಗಿ ಉಂಟುಮಾಡಬಹುದು. ಹಾಗೆಂದು ಭಕ್ತಿಯ ಅತಿಶಯದಿಂದ ಹೃದಯದ ಕರಗುವಿಕೆ ಆಗಲಿ, ನಿಃಸ್ವಾರ್ಥ ಸೇವಾ ಪರಾಯಣತೆ ಆಗಲಿ, ಬ್ರಹ್ಮಪ್ರಾಪ್ತಿಗೆ ಮಾರ್ಗವಾಗಲಾರದು ಎಂದು ಹೇಳಲು ಸಾಧ್ಯವಿಲ್ಲ. ಪ್ರಮುಖ ಅದ್ವೈತ ಗುರುಗಳಲ್ಲೊಬ್ಬರಾದ ಮಧುಸೂದನ ಸರಸ್ವತಿಗಳು ಭಕ್ತಿಯ ಮೂಲಕ ಅದ್ವೈತ ಸಾಕ್ಷಾತ್ಕಾರವನ್ನು ಪಡೆಯಬಹುದೆಂದು ಪ್ರತಿಪಾದಿಸಿದ್ದಾರೆ. ಭಾವದ ಮತ್ತು ಭಕ್ತಿಯ ಬಗ್ಗೆ ಅವಹೇಳನ ಮಾಡುವುದಕ್ಕೆ ನಮ್ಮ ಜ್ಞಾನಮಾರ್ಗ ಪಕ್ಷಪಾತವೇ ಕಾರಣ.

ಅದ್ವೈತಮತದ ಪ್ರಕಾರ ಮುಕ್ತನಾದವನು ಉತ್ತಮ ಅರ್ಥದಲ್ಲಿ ಕಲಾವಿದನೂ ಹೌದು. ಅವನ ಜೀವನದ ಚಟುವಟಿಕೆಗಳಲ್ಲಿ ಲಾಭನಷ್ಟಗಳ ಲೆಕ್ಕಾಚಾರವಿಲ್ಲ. ಉದ್ದೇಶಪಟ್ಟೊ, ಯಾಂತ್ರಿಕವಾಗಿಯೊ ಅವನು ಯಾವ ಕಾರ್ಯವನ್ನೂ ಮಾಡನು. ಅವನ ಕ್ರಿಯೆಗಳೆಲ್ಲ ಕೇವಲ ಲೀಲಾತ್ಮಕ. ಯೋಗಕ್ಷೇಮದ ನಿಯಮಗಳಿಂದ ಅವನು ಬದ್ಧನಲ್ಲ. ಅವನಿಗೆ ಯಾವ ನಿಯಮಗಳೂ ಬೇಕಿಲ್ಲ ; ಅವನಿಗೆ ಅವನೇ ನಿಯಮ ! ಅವನು ಪರಮಾತ್ಮನೆ ಆದ್ದರಿಂದ ಅವನಿಗೆ ಹೊರತಾದದ್ದೇನೂ ಇಲ್ಲ.

ಮೂಲ ಲೇಖಕರು : ಡಾ. ಪಿ. ನಾಗರಾಜ ರಾವ್
ಅನುವಾದಕರು : ಸ್ವಾಮಿ ತದ್ರೂಪಾನಂದ

# ಶ್ರೀ ವೈಷ್ಣವ ಮತ

ಕರ್ಣಾಟಕಕ್ಕೆ ಆಚಾರ್ಯ ರಾಮಾನುಜರ ಹಾಗೂ ಶ್ರೀ ವೈಷ್ಣವ ಮತದ ಪ್ರವೇಶವು ಹೊಯ್ಸಳರ ಕಾಲದಲ್ಲಿ ಆರಂಭವಾಯಿತು. ರಾಜಮನೆತನದವರ ಆಶ್ರಯ ಪಾಲನೆಗಳನ್ನು ಪಡೆದುದು ಮಾತ್ರವಲ್ಲದೆ, ಅದು ಅತಿ ಶೀಘ್ರದಲ್ಲಿಯೇ ಜನಾನುರಾಗವನ್ನೂ ಗಳಿಸಿತು. ತಮಿಳುನಾಡಿನಲ್ಲಿ ಶ್ರೀವೈಷ್ಣವ ಮತ ಧರ್ಮಕ್ಕೆ ಆದಿನೆಲೆಯೆನಿಸಿದ ಕಾಂಚಿ ಮತ್ತು ಶ್ರೀರಂಗಗಳಷ್ಟೇ ಶ್ರೇಷ್ಠವೆನಿಸಿದ ಮೇಲುಕೋಟೆ-ಮುಂತಾದ ಸ್ಥಳಗಳಲ್ಲಿ ದೇವಾಲಯಗಳು ನಿರ್ಮಿಸಲ್ಪಟ್ಟವು.

ಶ್ರೀವೈಷ್ಣವ ಮತ, ಅದರ ತತ್ವ, ಧರ್ಮ ಹಾಗೂ ದರ್ಶನಗಳನ್ನು ಈಗ ಚರ್ಚಿಸೋಣ.

### ಧರ್ಮ

ಆಚಾರ್ಯ ರಾಮಾನುಜರು ಪ್ರತಿಪಾದಿಸಿದ ದರ್ಶನಕ್ಕೆ ವಿಶಿಷ್ಟಾದ್ವೈತವೆಂದೂ ಅವರು ಸ್ಥಾಪಿಸಿದ ಮತಸಂಪ್ರದಾಯಕ್ಕೆ ಶ್ರೀ ವೈಷ್ಣವಮತವೆಂದೂ ಹೆಸರು. ಅವರ ಮತವನ್ನು 'ಶ್ರೀವೈಷ್ಣವ ಮತ' ಎಂದು ಕರೆಯಲು ಎರಡು ಕಾರಣಗಳುಂಟು. ಮಹಾವಿಷ್ಣು ಆ ಮತದವರ ಮುಖ್ಯ ಆರಾಧ್ಯ ದೇವತೆ ಎಂಬುದು ಮೊದಲನೆಯ ಕಾರಣ. ಸರ್ವಕಾಲದಲ್ಲಿಯೂ ವಿಷ್ಣುವು ತನ್ನ ಕಾಂತೆಯಾದ ಶ್ರೀ ಅಥವಾ ಲಕ್ಷ್ಮಿಯೊಡನೆ ಕೂಡಿರುತ್ತಾನೆ—ಎಂಬುದು ಎರಡನೆಯ ಕಾರಣ. ಶ್ರೀವೈಷ್ಣವ ಧರ್ಮದಲ್ಲಿ ಲಕ್ಷ್ಮಿಗೆ ಅತ್ಯಂತ ಗಣ್ಯ ಸ್ಥಾನವುಂಟು, ಗುರು ಪರಂಪರೆಯಲ್ಲಿ ಅವಳು ಮೊದಲನೆಯವಳು. ಮಾನವಕೋಟಿ ತನ್ನ ಪಾಪಗಳನ್ನು ಕಳೆದುಕೊಳ್ಳಬೇಕಾದರೆ, ಅತ್ಯಾವಶ್ಯಕವಾಗಿ ಬೇಕಾದ ದೈವಕೃಪೆಯ ಪ್ರತೀಕಳವಳು. ದೇವಮಾನವರ ನಡುವಿನ ಅಪ್ರತ್ಯಕ್ಷ ಸೌಮ್ಯ ಕ್ಷಮಾದೇವತೆ ಅವಳು. ಈ ಅಂಶ ರಾಮಾನುಜರ ಸಿದ್ಧಾಂತ ದಲ್ಲಿ ಅತಿ ಪ್ರಧಾನವಾದುದರಿಂದ ಅವರ ಮತಕ್ಕೆ **ಶ್ರೀವೈಷ್ಣವ ಮತ** ಎಂಬ ಹೆಸರು ಬಂದಿದೆ.

ಸಾಕಷ್ಟು ಅಧಿಕೃತ ಪ್ರಮಾಣವಿಲ್ಲದಿದ್ದರೂ ಆಚಾರ್ಯರು ಕ್ರಿ.ಶ. 1096ರಲ್ಲಿ ಚೋಳರಾಜನ ಕಿರುಕುಳವನ್ನು ತಪ್ಪಿಸಿಕೊಳ್ಳಲು, ಮೈಸೂರಿಗೆ ಬಂದರೆಂದು 'ಗುರುಪರಂಪರೆ'ಯಲ್ಲಿ ನಿರೂಪಿಸಿರುವ ಆಚಾರ್ಯರ ಜೀವನ ಚರಿತ್ರೆಯಿಂದ ತಿಳಿದುಬರುತ್ತದೆ. ಕರ್ಣಾಟಕದಲ್ಲಿ ಶ್ರೀವೈಷ್ಣವರಿದ್ದರೆಂಬುದು ಅವರ ಭೇಟಿಗೆ ಕಾರಣವಿರಬಹುದು. ಕ್ರಿ.ಶ. 1093ರಲ್ಲಿ ಹೊಯ್ಸಳ ರಾಜನಾದ ವಿಷ್ಣುವರ್ಧನನು ಆಚಾರ್ಯರ ಶಿಷ್ಯನಾದನು. ಕ್ರಿ.ಶ. 1100ರಲ್ಲಿ ಮೇಲುಕೋಟೆಯಲ್ಲಿ ಚೆಲುವರಾಯ ಸ್ವಾಮಿಯ ವಿಗ್ರಹವು ಪ್ರತಿಷ್ಠೆ ಮಾಡಲ್ಪಟ್ಟಿತು. ಶ್ರೀರಂಗದಿಂದ ಬಂದ ಬಳಿಕ ಕ್ರಿ.ಶ. 1116ರ ವರೆಗೆ (ಮತ್ತೆ ಅಲ್ಲಿಗೆ ಹಿಂದಿರುಗುವ ವರೆಗೆ) ಆಚಾರ್ಯರು ನಮ್ಮ ನಾಡಿನಲ್ಲಿ ನೆಲಸಿದ್ದರೆಂದು ಹೇಳಬಹುದು.

ಮೈಸೂರಿಗೆ ಬರುವಾಗ ಆಚಾರ್ಯರು ಕೆಳಗೆ ಕಂಡ ಹಾದಿಯ ಮೂಲಕ ಬಂದಿರಬಹುದು: ನದಿ ಕಾವೇರಿಯನ್ನು ಅನುಸರಿಸಿ ಸತ್ಯಮಂಗಲದ ವರೆಗೆ ಬಂದು, ಅನಂತರ ಅಲ್ಲಿಂದ ಜ್ಯಾರೇಪೆಯನ್ನು ಬಳಸಿ ಕೊಂಡು ಮೈಸೂರಿಗೆ ಪಶ್ಚಿಮದಲ್ಲಿ ನಲವತ್ತು ಮೈಲಿಯಲ್ಲಿರುವ ರಾಮನಾಥಪುರದಲ್ಲಿ ಮತ್ತೆ ಕಾವೇರಿ ಯನ್ನು ಸಂದರ್ಶಿಸಿರಬೇಕು. ಹೀಗೆ ನೀಲಗಿರಿಯನ್ನು ಪ್ರವಾಸಿಸಿರಬೇಕು. ಮೈಸೂರಿಗೆ ಪಶ್ಚಿಮದಲ್ಲಿ

ಮೂವತ್ತು ಮೈಲಿಗಳ ದೂರದಲ್ಲಿರುವ ಇಂದು ಮಿರ್ಲೆ ಮತ್ತು ಸಾಲಿಗ್ರಾಮವೆಂದು ಹೆಸರುವಾಸಿಯಾದ ವಹ್ನಿ ಪುಷ್ಕರಿಣಿಯನ್ನು ವಾಯವ್ಯ ದಿಕ್ಕಿನಿಂದ ಅತಿ ಕಷ್ಟಸಾಧ್ಯದಿಂದ ಪ್ರವೇಶಿಸಿರಬೇಕು. ಸಾಲಿಗ್ರಾಮ ಎಂಬುದು ಇಂದಿಗೂ ಶ್ರೀವೈಷ್ಣವ ದೇವಾಲಯಗಳಲ್ಲಿಯೂ ಮನೆಗಳಲ್ಲಿಯೂ ಆರಾಧಿಸಲ್ಪಡುವ ವಿಷ್ಣುವಿನ ಸಂಕೇತ. ಸಾಲಿಗ್ರಾಮ ಎಂಬ ಊರಿನಲ್ಲಿ ಕಲ್ಲಿನಿಂದ ಮಾಡಲ್ಪಟ್ಟ ಆಚಾರ್ಯರ ತಿರುಪಾದಗಳು ಪ್ರತಿಷ್ಠೆ ಮಾಡಲ್ಪಟ್ಟಿವೆ. ಸಮೀಪದಲ್ಲಿ ಸೋಪಾನಗಳಿಂದ ದೇವಾಲಯಕ್ಕೆ ಸಂಬಂಧಿಸಿದಂತೆ ಒಂದು ತಿರು ಕಲ್ಯಾಣಿ ಇದೆ. ಪ್ರತಿಯೊಬ್ಬ ಯಾತ್ರಿಕನೂ ಅದರಲ್ಲಿ ಇಳಿದು ಅದರ ತೀರ್ಥವನ್ನು ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಳ್ಳುತ್ತಾನೆ. ಅದನ್ನು ಶ್ರೀ ವೈಷ್ಣವರು 'ಶ್ರೀ ಪಾದತೀರ್ಥ' ಎಂದು ಕರೆಯುತ್ತಾರೆ. ಆಚಾರ್ಯರು ಮೇಲಿನ ಸ್ಥಳಗಳಿಗೆ ಭೇಟಿ ಕೊಟ್ಟಿದ್ದರು ಎಂಬುದನ್ನು ಸ್ಥಾಪಿಸುವ ಒಂದು ಸವೆದು ಹೋಗಿರುವ ಶಾಸನವು ದೇವಸ್ಥಾನದ ಬಾಗಿಲಿನ ಚೌಕಟ್ಟಿನ ಮೇಲಿದೆ. ಅನಂತರ ಆಚಾರ್ಯರು ಮೈಸೂರಿಗೆ ಹದಿನಾರು ಮೈಲಿ ದೂರದಲ್ಲಿ ಮೇಲುಕೋಟೆ (ಯಾದವಗಿರಿ)ಯ ಮಾರ್ಗದಲ್ಲಿರುವ ತೊಂಡನೂರಿಗೆ ಭೇಟಿ ಕೊಟ್ಟರು. ಅದು ದ್ವಾರಸಮುದ್ರ ಅಥವಾ ಹಳೇಬೀಡಿನಲ್ಲಿ ಜೈನಮತಾವಲಂಬಿಗಳಾಗಿದ್ದ ಹೊಯ್ಸಳ ಬಲ್ಲಾಳರ ಅತಿಮುಖ್ಯವಾದ ಹೊರಕಾವಲಿನ ನೆಲೆಯಾಗಿದ್ದಿತು. ಆಗ ವಿಠ್ಠಲದೇವರಾಜ ಅಥವಾ ಬಿಟ್ಟಿದೇವ ಎಂಬ ದೊರೆ ಆಳುತ್ತಿದ್ದನು. ಆ ಕಾಲದಲ್ಲಿ ತೊಂಡನೂರು ಅವನ ಆಡಳಿತದ ಕೇಂದ್ರವಾಗಿದ್ದಿತು. ಆಚಾರ್ಯರು ರಾಜಪುತ್ರಿಯ ಮನೋವ್ಯಾಧಿಯನ್ನು ವಾಸಿಮಾಡಿ, ರಾಜದಂಪತಿಗಳ ಅನುರಾಗವನ್ನು ಗಳಿಸಿದರು ಎನ್ನುವರು. ಕ್ರಿ.ಶ. 1910ರ ಮೈಸೂರಿನ ಪ್ರಾಚ್ಯವಸ್ತು ಸಂಶೋಧನ ಸಂಸ್ಥೆಯ ವರದಿಯು ಅರಸುಗುವರಿಯ ಹೆಸರು ಪದ್ಮಾ ಎಂದು ಸೂಚಿಸುತ್ತದೆ. ಆಚಾರ್ಯರ ಈ ಕೆಲಸವು ದೊರೆ ಜೈನಮತವನ್ನು ಬಿಟ್ಟು ಅವರ ಶಿಷ್ಯನಾಗುವಷ್ಟು ಪರಿಣಾಮವನ್ನುಂಟುಮಾಡಿತು. ರಾಮಾನುಜರು ಬಿಟ್ಟಿದೇವನನ್ನು ತನ್ನ ಶಿಷ್ಯನನ್ನಾಗಿ ಅಂಗೀಕರಿರಿಸಿ ಅವನಿಗೆ ವಿಷ್ಣುವರ್ಧನನೆಂದು ಹೆಸರಿಟ್ಟರು. ಶ್ರವಣಬೆಳಗೊಳದೊಳಗಿರುವ ಒಂದು ಪುರಾಣವು ಹೀಗೆಂದು ಹೇಳುತ್ತದೆ. ಶಕಾಬ್ದಿ 1093 ದುರ್ಮುಖಿ ಸಂವತ್ಸರ (ಕ್ರಿ.ಶ. 1117)ದಲ್ಲಿ ರಾಮಾನುಜಾಚಾರ್ಯರ ಬೋಧನೆಗಳಿಂದ ಪ್ರೇರೇಪಿಸಿಲ್ಪಟ್ಟು ತಪ್ತಮುದ್ರಾಂಕಿತನಾಗಿ* ಬಿಟ್ಟಿವರ್ಧನನು ಶ್ರೀವೈಷ್ಣವ ಮತಾವಲಂಬಿಯಾದನು. ತನ್ನ ಹೆಸರನ್ನು ವಿಷ್ಣುವರ್ಧನನೆಂದು ಬದಲಾಯಿಸಿಕೊಂಡನು. ಬೇಲೂರಿನಲ್ಲಿ ಚೆನ್ನಿಗನಾರಾಯಣ, ತಲಕಾಡಿನಲ್ಲಿ ಕೀರ್ತಿನಾಯಣ, ತೊಂಡನೂರು ಮತ್ತು ಹರದನ ಹಳ್ಳಿಗಳಲ್ಲಿ ವಿಜಯನಾರಾಯಣ—ಮುಂತಾದ ಐದು ದೇವಾಲಯಗಳನ್ನು ಪ್ರತಿಷ್ಠೆಮಾಡಿದನು. ತೊಂಡನೂರಿನಲ್ಲಿ ಒಂದು ಕೆರೆಯನ್ನು ಕಟ್ಟಿ ಅದಕ್ಕೆ 'ತಿರುಮಲಸಾಗರ' ಎಂದು ಹೆಸರಿಟ್ಟನು. (Indian Antiquary Vol, II, May 1873). ಕ್ರಿ.ಶ. 1897ರಲ್ಲಿ ಮುದ್ರಿತವಾದ ಮೈಸೂರಿನ ಗೆಜೆಟೀರಿನ ಎರಡನೆಯ ಸಂಪುಟದ 274ನೆ ಪುಟ ಈ ರೀತಿ ಹೇಳುತ್ತದೆ: "ಮೇಲುಕೋಟೆಯ ಬಳಿ ತೊಂಡನೂರಿನಲ್ಲಿರುವ ಮೋತೀ ತಾಲಾಬ್" (ಮುತ್ತುಗಳ ಕೆರೆ) ಒಂದು ದೊಡ್ಡ ಕೆರೆ. ಎರಡು ಕಲ್ಲುಗುಡ್ಡಗಳ ಮಧ್ಯೆ ಅಡ್ಡಗಟ್ಟೆ ಹಾಕುವುದರಿಂದ ಅದು ನಿರ್ಮಿತವಾಗಿದೆ. ಯಾದವ ನದಿಯ ನೀರಿಗೆ ಅಣೆಕಟ್ಟುಕಟ್ಟಿ ಸುತ್ತಮುತ್ತಲಿನ ಬೆಟ್ಟಗುಡ್ಡಗಳ ಝರಿಗಳ ನೀರನ್ನು ಅದು ತಡೆಯುತ್ತದೆ. ಪಕ್ಕದ ಊರಾದ ಮೇಲುಕೋಟೆಯಲ್ಲಿ ಬಿಡಾರ ಮಾಡಿದ್ದ ರಾಮಾನುಜಾಚಾರ್ಯರಿಂದ ಕೆರೆಯು ಕಟ್ಟಲ್ಪಟ್ಟಿತೆಂದು ಪ್ರತೀತಿ."

ತೊಂಡನೂರಿನ ನೃಸಿಂಹ ದೇವಾಲಯದಲ್ಲಿ ರಾಮಾನುಜರು ತಮ್ಮ ವೇದಾಂತ ತತ್ವಗಳನ್ನು ಪ್ರತಿಪಾದಿಸಿದರೆಂದು ಹೇಳುತ್ತಾರೆ. ಅಲ್ಲಿದ್ದಾಗ ಒಮ್ಮೆ ಅವರಿಗೆ ನಾರಾಯಣಸ್ವಾಮಿಯು ಕನಸಿನಲ್ಲಿ ಕಾಣಿಸಿಕೊಂಡು "ರಾಮಾನುಜ,. ನಾನು ನಿನಗೆ ಅತ್ಯಂತ ಸಮೀಪವಾದ ಯಾದವಾದ್ರಿಯಲ್ಲಿ ನಿನ್ನ ಬರುವಿಕೆಯನ್ನು ಇದಿರು ನೋಡುತ್ತಿದ್ದೇನೆ" ಎಂದು ನುಡಿದಂತಾಯಿತು. ಎಚ್ಚತ್ತು ಆಚಾರ್ಯರು ತಾವು ಕಂಡ ಕನಸನ್ನು ತಮ್ಮ ಸಹೋದ್ಯೋಗಿಗಳಿಗೆಲ್ಲಾ ತಿಳಿಸಿದರು. ಅರಸು ವಿಷ್ಣುವರ್ಧನನಿಗೆ ದೇವರ

* ಶ್ರೀವೈಷ್ಣವ ಸಂಪ್ರದಾಯಕ್ಕೆ ಸೇರಿಸಲ್ಪಟ್ಟನೆಂಬ ಕುರುಹಿಗಾಗಿ ಲೋಹದಿಂದ ವಿಷ್ಣುವಿನ ಸಂಕೇತಗಳನ್ನು ಬೆಂಕಿಯಲ್ಲಿ ಕಾಯಿಸಿ ಭುಜಗಳ ಮೇಲೆ ಮುದ್ರಿಸುವುದು.

ಸಂದೇಶವನ್ನು ತಿಳಿಸಿದರು. ರಾಜನು ತತ್ಕ್ಷಣವೇ ಆಚಾರ್ಯರು ಹೇಳಿದ ಸ್ಥಳದಲ್ಲಿ ಕೂಲಿಯಾಳುಗಳನ್ನು ಬಿಟ್ಟು ಕಾಡು ಮೇಡುಗಳನ್ನು ಅಗೆದು ದಾರಿಮಾಡಲು ಆಜ್ಞೆನೀಡಿದನು. ಆಚಾರ್ಯರು ಮುಂದೆ ಹೋದ ಹಾಗೆಲ್ಲಾ ರಾಜನೂ ಅವರನ್ನು ಎಡೆಬಿಡದೆ ಶ್ರದ್ಧಾಭಕ್ತಿಯಿಂದ ಹಿಂಬಾಲಿಸಿದನು. ಕೆಲಸ ಸ್ಥಿರವಾಗಿ ಮುಂದುವರಿದು ಎಲ್ಲರೂ ವೇದಪುಷ್ಕರಿಣಿ ಎಂಬ ಸ್ಥಳಕ್ಕೆ ಬಂದು ತಲಪಿ ಪ್ರಾಚೀನ ಕಾಲದಲ್ಲಿ ದತ್ತಾತ್ರೇಯರು ಸನ್ಯಾಸವನ್ನು ಸ್ವೀಕರಿಸಿದ್ದ ಪರಿಧಾನ ಶಿಲೆಯನ್ನು ಕಂಡರು. ಆಗ ಆಚಾರ್ಯರಿಗೆ ಎಂಬತ್ತು ವರುಷ ವಯಸ್ಸಾಗಿದ್ದಿತು. ಯದುಗಿರಿಗೆ ಸುಮಾರು ಕ್ರಿ.ಶ. 1090 ನೆ ಇಸವಿಯ ಬಹುಧಾನ್ಯ ಸಂವತ್ಸರ ತೈಮಾಸದಲ್ಲಿ ಪ್ರವೇಶಿಸಿ ವೇದಪುಷ್ಕರಿಣಿಯಿಂದ ನಾರಾಯಣಸ್ವಾಮಿಯ ಮೂರ್ತಿಯನ್ನು ಹುಡುಕಿಕೊಂಡು ಮುಂದುವರಿಸಿದರು, ಕಲ್ಯಾಣಿಗೆ ನೈಋತ್ಯದಿಕ್ಕಿನಲ್ಲಿ ಸಂಪಿಗೆ ಮತ್ತು ಬಕುಳವೃಕ್ಷಗಳ ನಡುವೆ ತುಳಸಿಗಿಡಗಳಿಂಥ ಆವೃತವಾದ ಹುತ್ತದಲ್ಲಿರುವಂತೆ ಮೂರ್ತಿ ರಾಮಾನುಜರ ದಿವ್ಯ ಜ್ಞಾನದೃಷ್ಟಿಗೆ ಗೋಚರವಾಯಿತು. ತತ್ಕ್ಷಣವೇ ಎದ್ದು ಆಚಾರ್ಯರು ತಮಗೆ ಗೋಚರವಾದ ಮಾರ್ಗವನ್ನೇ ಅನುಸರಿಸಿ ಹೋಗಿ ಸ್ವಾಮಿಯ ಮೂರ್ತಿಯನ್ನು ಕಂಡುಹಿಡಿದು ಅದಕ್ಕೆ ಪ್ರಥಮಾರಾಧನೆಯನ್ನು ಸಲ್ಲಿಸಿದರು. ಇಂದಿಗೂ ಈ ಘಟನೆಯ ಸವಿನೆನಪಿಗಾಗಿ ವಿಜೃಂಭಣೆಯಿಂದ ಕೂಡಿದ ಒಂದು ಉತ್ಸವವು ನಡೆಯುತ್ತದೆ. ಆಚಾರ್ಯರು ಅದೇ ಸ್ಥಳದಲ್ಲಿ ಹುತ್ತದ ಮೇಲೆ ಒಂದು ನಾರಾಯಣ ದೇವಾಲಯವನ್ನು ಕಟ್ಟಿದರು.

ಮುಸ್ಲಿಂ ದೊರೆಯೊಬ್ಬ ದೆಹಲಿಗೆ ತೆಗೆದುಕೊಂಡೊಯ್ದ ಉತ್ಸವಮೂರ್ತಿ ರಾಮಪ್ರಿಯ ಅಥವಾ ಚಲುವರಾಯನನ್ನು ಮೇಲುಕೋಟೆಗೆ ವಾಪಸ್ಸುತಂದ ಘಟನೆಯೊಂದನ್ನು ಯಾದವಗಿರಿ ಮಾಹಾತ್ಮ್ಯೆ ಮತ್ತು ಆಚಾರ್ಯರ ಇತರ ಜೀವನ ಚರಿತ್ರೆಗಳು ಸೂಚಿಸುತ್ತವೆ. ಆ ಮೂರ್ತಿಯಲ್ಲಿ ಅನುರಕ್ತಳಾಗಿದ್ದ ಸುಲ್ತಾನನ ಮಗಳು ಮೇಲುಕೋಟೆಗೆ ಆಚಾರ್ಯರನ್ನು ಹಿಂಬಾಲಿಸಿಕೊಂಡು ಹೋದಳು. ಕೋಟೆಯ ಹೊರಗಡೆಯಲ್ಲಿ ಅವಳು ಅದೃಶ್ಯಳಾದಳಂತೆ. ಅವಳ ಜ್ಞಾಪಕಾರ್ಥವಾಗಿ ಒಂದು ವೃಂದಾವನ ಕಟ್ಟಲ್ಪಟ್ಟಿತು. ಅವಳ ಸಣ್ಣ ಪ್ರತಿಮೆಯೊಂದು ಇಂದಿಗೂ ಚೆಲುವರಾಯ ಸ್ವಾಮಿಯ ಪಾದದಲ್ಲಿಡಲ್ಪಟ್ಟಿದೆ. ಅವಳನ್ನು 'ಬೀಬೀ ನಾಚ್ಚಿಯಾರ್' ಎಂದು ಕರೆಯುತ್ತಾರೆ. ಅವಳಿಗೆ 'ನಂದಿ' ಎಂಬ ಹೆಸರೂ ಉಂಟು. ಕಾಲಾನಂತರದಲ್ಲಿ ಈ ಘಟನೆ 'ವರ ನಂದೀ ಕಲ್ಯಾಣ' ಎಂಬ ಕನ್ನಡ ಆಖ್ಯಾಯಿಕಾ ಕವಿತೆಯೊಂದರಲ್ಲಿ ಪ್ರಖ್ಯಾತವಾಗಿದೆ.

ಕರ್ಣಾಟಕ ಸಂಸ್ಕೃತಿಯ ಹೊನಲು ಪ್ರವಾಹದಿಂದುಕ್ಕಿ ಹರಿಯುವಂತೆ ಮಾಡಿದ ಉಪನದಿಗಳಲ್ಲಿ ಶ್ರೀವೈಷ್ಣವ ಮತ ಒಂದು. ತಮಿಳುನಾಡಿನಲ್ಲಿ ಹರಡಿದ ಭಕ್ತಿಪಂಥದ ಪ್ರವಾಹದ ಅಂಶವೇ ಅದು. ವೈಷ್ಣವ ಪಂಥಕ್ಕೆ ಸೇರಿದ ಆಳ್ವಾರುಗಳು ರಾಮಾನುಜರಿಗೆ ಹಿಂದಿನವರು. ಆಚಾರ್ಯರ ಮೇಲುಕೋಟೆಯ ಘಟನೆಯಿಂದಾರಂಭವಾದ ದೇವಾಲಯಗಳಿಗೆ ಮೂರು ದಿನಗಳ ಹರಿಜನ ಪ್ರವೇಶ ಪದ್ಧತಿಯು ಅಸಂಖ್ಯಾತ ಜನಭರಿತ 'ವೈರಮುಡಿ' ಸಂದರ್ಭದಲ್ಲಿ ಇಂದಿಗೂ ಜಾರಿಯಲ್ಲಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಹರಿಜನರನ್ನು 'ತಿರುಕುಲತ್ತಾರ್' ಎಂದು ಕರೆದು ಹೊಲೆಯ, ಪರಮ ಮುಂತಾದ ಹೇಯವಾದ ಹೆಸರಿನಿಂದ ಕರೆಯಲ್ಪಡುತ್ತಿದ್ದುದನ್ನು ತಪ್ಪಿಸಿದ ರಾಮಾನುಜರು ಗಾಂಧಿಜೀಯವರ ಭಾವನೆಗಳನ್ನು ಮುನ್ಸೂಚಿಸಿದ್ದಾರೆ.

ಆಚಾರ್ಯರ ಕಾಲದಲ್ಲಿ ಶ್ರೀವೈಷ್ಣವ ಮತವು ತನ್ನದೇ ಆದ ನಿರ್ದಿಷ್ಟ ತತ್ವ ಹಾಗೂ ಆಚರಣೆಗಳಿಂದ ಪರಿಪುಷ್ಟವಾಯಿತು, ಒಂದೆಡೆ ಪ್ರಸ್ಥಾನತ್ರಯವೆಂದು ಖ್ಯಾತಿ ಪಡೆದಿರುವ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ ಪೂರ್ವಾಚಾರ್ಯರುಗಳು ಮತ್ತು ರಾಮಾನುಜರಿಂದ ವ್ಯಾಖ್ಯಾನಗಳು ಏರ್ಪಟ್ಟು ಶ್ರೀವೈಷ್ಣವ ಮತವು ವಿಶಿಷ್ಟಾದ್ವೈತ ಸಿದ್ಧಾಂತವಾಗಿ ಬೆಳೆಯಿತು. ಮತ್ತೊಂದೆಡೆ

'ಪಾಂಚರಾತ್ರ' ಎಂದು ಪ್ರಸಿದ್ಧವಾಗಿರುವ ಆಗಮಗಳ ಮತ್ತು ತಮಿಳುನಾಡಿನ ಶ್ರೀವೈಷ್ಣವ ಪಂಥಕ್ಕೆ ಸೇರಿದ ಆಳ್ವಾರುಗಳ ಉಪದೇಶಗಳಿಂದ ಕೂಡಿದ ಫಲವಾಗಿ ರಾಮಾನುಜ ಸಿದ್ಧಾಂತವು ಬೆಳೆಯಲು ಅವಕಾಶವಾಯಿತು. ಅಂದರೆ, ರಾಮಾನುಜರು ಬರುವ ಮುನ್ನ ಪಾಂಚರಾತ್ರಾಗಮಗಳಲ್ಲಿ ಉಚಿತವಾದ ತತ್ವಗಳಿರಲಿಲ್ಲವೆಂದಲ್ಲ. ಆಚಾರ್ಯರು ವೈಷ್ಣವಾಗಮಗಳಲ್ಲಿ ಪ್ರತಿಪಾದಿತವಾಗಿರುವ 'ವ್ಯೂಹಾ' ತತ್ವವನ್ನು 'ಶ್ರೀಭಾಷ್ಯ' ವೆಂದು ನಾಮಾಂಕಿತವಾದ ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಅಳವಡಿಸಿ ತನ್ಮೂಲಕ ಶ್ರೀವೈಷ್ಣವ ಸಿದ್ಧಾಂತದಲ್ಲಿ ದೃಢೀಕರಿಸಿದ್ದಾರೆ.

ಶ್ರೀವೈಷ್ಣವ ಮತದ ಪ್ರಚಾರಕ್ಕೆ ತೊಡಗಿದಾಗ ಆಚಾರ್ಯರು ಜೈನ ಮತ್ತು ಶೈವ ಮತಗಳೇ ಮುಂತಾದ ಅನ್ಯಮತ ಧರ್ಮಾಚರಣೆಗಳಿಗೆ ಸೇರಿದವರನ್ನೂ ತನ್ನ ಮತಕ್ಕೆ ಸೇರಿಸಿಕೊಳ್ಳುವ ಸಮಸ್ಯೆಯನ್ನು ಪರಿಶೀಲಿಸಬೇಕಾಯಿತು. ಇದನ್ನು ಸಾಧಿಸಲು ಅನ್ಯಮತಸ್ಥರಿಗೆ 'ಶ್ರೀ ವೈಷ್ಣವ ಪಂಚಸಂಸ್ಕಾರ' ಎಂಬ ಮತದೀಕ್ಷೆಯನ್ನು ಕೊಡಬೇಕಾಯಿತು. ತಪ, ಪುಂಡ್ರ, ನಾಮ, ಮಂತ್ರ ಮತ್ತು ಯಜ್ಞ ಎಂಬಿವೇ ಆ ಪಂಚಸಂಸ್ಕಾರಗಳು. ವಿಷ್ಣುವಿನ ಸಂಕೇತವಾದ ಶಂಖಚಕ್ರಗಳನ್ನು ಉಪದೇಶಿಯ ಎಡಬಲ ಭುಜಗಳ ಮೇಲೆ ಮುದ್ರಿಸುವುದೇ ತಪ. ಹಣೆಮುಂತಾದ ದೇಹದ ಹನ್ನೆರಡು ಭಾಗಗಳಲ್ಲಿ ಶ್ರೀವೈಷ್ಣವ ಚಿಹ್ನೆಗಳನ್ನು ಧರಿಸುವುದೇ ಪುಂಡ್ರ (ದ್ವಾದಶ ಪುಂಡ್ರ). ವಿಷ್ಣುವಿನ ಒಂದು ಹೆಸರನ್ನು ಆಚಾರ್ಯರಿಂದ ಉಪದೇಶಿಯು ಪಡೆಯುವುದು 'ನಾಮ'. ಅನಂತರ ಮಂತ್ರ–ಮೂಲ ಮಂತ್ರ ಮತ್ತು ದ್ವಯಮಂತ್ರ. 'ಓಂ ನಮೋ ನಾರಾಯಣಾಯ' ಎಂದು ಪ್ರಸಿದ್ಧವಾದ ಅಷ್ಟಾಕ್ಷರಗಳೇ ಮೂಲ ಮಂತ್ರ. 'ಶ್ರೀ ಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ; ಶ್ರೀಮತೇ ನಾರಾಯಣಾಯ, ನಮಃ 'ಎಂಬ ಎರಡು ಪಜ್ತಿಗಳೇ ದ್ವಯಮಂತ್ರ. ಶ್ರೀವೈಷ್ಣವಸಿದ್ಧಾಂತದಲ್ಲಿ 'ಚರಮಶ್ಲೋಕ' ಎಂದು ಪರಿಗಣಿಸಲ್ಪಟ್ಟ ಗೀತೆಯ ಹದಿನೆಂಟನೆಯ ಅಧ್ಯಾಯದ 66ನೆ ಶ್ಲೋಕ ತಿಳಿಸುವ 'ಪ್ರಪತ್ತಿ' ಎಂದು ಹೆಸರಾದ ಶರಣಾಗತಿ ತತ್ವವು ತಿರುಮಂತ್ರ ದ್ವಯಗಳ ಜೊತೆಯಲ್ಲಿ ಉಪದೇಶಿಸಲ್ಪಡುತ್ತದೆ, ಗಂಡುಹೆಣ್ಣು, ಜಾತಿಮತಗಳೆಂಬ ಭೇದ ವಿಲ್ಲದೆ ಎಲ್ಲರೂ ಮುಕ್ತಿ ಪಡೆಯಲು ಹಾಗೂ ಶ್ರೀ ವೈಷ್ಣವ ದಿನಚರ್ಯೆಗೆ ಎಲ್ಲರೂ ಅರ್ಹರು ಎಂದು ಪಾಂಚರಾತ್ರ ಆಗಮಗಳು ತಿಳಿಸುತ್ತವೆ. ಪಾಂಚರಾತ್ರಗಳಲ್ಲಿ ಒಂದಾದ 'ಈಶ್ವರ ಸಂಹಿತೆ'ಯು ಶ್ರೀ ವೈಷ್ಣವ ಧರ್ಮಾಚರಣೆಯು ವಿಚಾರದಲ್ಲಿ ಗೋತ್ರ ಪ್ರವರಗಳ ವ್ಯತ್ಯಾಸವಾಗಲೀ ಉಚ್ಚನೀಚವೆಂಬ ಭಾವನೆಗಳಾಗಲೀ ಇಲ್ಲವೆಂದು ಸಾರಿ ಹೇಳುತ್ತದೆ.

ಮೇಲಿನ ಕ್ರಮದಲ್ಲಿ ಶ್ರೀವೈಷ್ಣವಮತ ಪ್ರಚಾರ ಮಾಡುತ್ತಿದ್ದಾಗ ಆಚಾರ್ಯರು ಸಾವಿರಾರು ಮಂದಿ ಅನ್ಯಮತಾವಲಂಬಿಗಳಾದ ಸ್ತ್ರೀಪುರುಷರನ್ನು ತಮ್ಮ ಮತಕ್ಕೆ ಸೇರಿಸಿರಬೇಕು. ಶ್ರೀವೈಷ್ಣವ ಮತನಿಷ್ಠೆಯುಳ್ಳವರಿಗೆ ಉಪದೇಶಿಸಿದ ಮೂರು ಸತ್ಯಾರ್ಥಪೂರಿತ ಮಂತ್ರಗಳಿಗೆ 'ರಹಸ್ಯ ತ್ರಯ' ಎಂದು ಹೆಸರು.

ರಹಸ್ಯತ್ರಯಕ್ಕೆ ನೀಡುವ ಮತ್ತಷ್ಟು ವಿವರಣೆಯು ವಿಶಿಷ್ಟಾದ್ವೈತ ವೇದಾಂತವೆಂದು ಖ್ಯಾತಿಗೊಂಡ ಶ್ರೀವೈಷ್ಣವಮತದ ಮುಖ್ಯ ತತ್ವಗಳನ್ನು ತಿಳಿಸುತ್ತದೆ.

'ಓಂ ನಮೋ ನಾರಾಯಣಾಯ' ಎಂಬ ತಿರುಮಂತ್ರವು ಮೂರು ಪದಗಳನ್ನೂ ಎಂಟು ಅಕ್ಷರ ಗಳನ್ನೊಳಗೊಂಡಿದೆ. ಅಕ್ಷರದಲ್ಲಿರುವ ಮೂರು ಪದಗಳು ಮೂರು ಪ್ರಧಾನ ಅರ್ಥಗಳನ್ನು ಸೂಚಿಸುತ್ತವೆ. ಶೇಷತ್ವ, ಪಾರತಂತ್ರ್ಯ ಮತ್ತು ಕೈಂಕರ್ಯ ಎಂಬಿವೇ ಆ ಮೂರು ಅರ್ಥಗಳು. ಪ್ರಣವವೆನಿಸಿದ 'ಓಂ' ಮೊದಲನೆಯ ಪದ. ಇದರಲ್ಲಿ ಅ, ಉ ಮತ್ತು ಮ ಎಂಬ ಮೂರು ಅಕ್ಷರಗಳು ಸೇರಿವೆ. ಈ ಮೂರು ಅಕ್ಷರಗಳನ್ನು ಮೂರು ವೇದಗಳಿಂದ ಆರಿಸಲಾಗಿದೆ. ವಿಶ್ವದಲ್ಲಿ ಸಕಲಕ್ಕೂ ಕಾರಣಭೂತನಾದ ಮತ್ತು

ಸರ್ವರಕ್ಷಕನಾದ, ಸರ್ವರಿಗೂ ಮೋಕ್ಷದಾಯಕನಾದ ನಾರಾಯಣನನ್ನು ಮೊದಲಕ್ಷರವಾದ 'ಅ' ಸೂಚಿಸುತ್ತದೆ. ದೈವಕೃಪೆಯ ಪ್ರತೀಕಳಾದ ಲಕ್ಷ್ಮಿಯು ನಾರಾಯಣನೊಡನೆ ಇರುವುದನ್ನೂ ಅದು ಸೂಚಿಸುತ್ತದೆ. ಶೇಷತ್ವವೇ ಜೀವಾತ್ಮನ ನಿಜಸ್ವರೂಪ. ಅವನು ನಾರಾಯಣನಿಗಲ್ಲದೆ ಅನ್ಯರಾರಿಗೂ ಶೇಷನಲ್ಲ ಎಂಬ ಅನನ್ಯ ಶೇಷತ್ವವನ್ನು 'ಉ' ಎಂಬ ಅಕ್ಷರವು ಸೂಚಿಸುತ್ತದೆ. ಪರಮಾತ್ಮ ಜೀವಾತ್ಮರುಗಳ ರಕ್ಷಕ ರಕ್ಷಿತ ಸಂಕೇತವಾದ 'ಮ' ಕಾರವು ಜೀವಾತ್ಮಸೂಚಕ. 'ನಮಃ' ಎಂಬ ಪದವು 'ನ ಮಮ' ಅಥವಾ 'ನನ್ನದು ಅಲ್ಲ' ಎಂಬ ಭಾವವನ್ನು ವ್ಯಕ್ತಪಡಿಸುತ್ತದೆ. ನನ್ನದಲ್ಲ ಎಂಬ ಅಹಂಕಾರರಹಿತಭಾವವು ಜೀವನದಲ್ಲಿ ಮೂಡಿದ ಕೂಡಲೇ ಅವನಿಗೆ ಸಕಲ ಕಲ್ಯಾಣಗಳೂ ಪ್ರಾಪ್ತವಾದಂತೆ. ಅದಿಲ್ಲದಿರುವ ವರೆಗೆ ಅವನು ದುಷ್ಕಾರ್ಯ ಪ್ರಣೀತನಾಗಿರುವನು. 'ನ ಮಮ' ಎಂಬ ಈ ಭಾವನೆಯಲ್ಲಿ ಎಲ್ಲ ಸದ್ಗುಣಗಳೂ ತುಂಬಿವೆ. ಅಂಥ ಅಹಂಕಾರರಹಿತ ಭಾವನೆಯಿಲ್ಲದಿದ್ದರೆ ಯಾವ ಯಜ್ಞಯಾಗಾದಿ ಪ್ರಾಯಶ್ಚಿತ್ತ ಕರ್ಮಗಳೂ ಫಲಕಾರಿಯಾಗುವುದಿಲ್ಲ.

ನಾರಾಯಣ ಎಂದರೆ ನಿತ್ಯವಾದ (ನರ—ಎಂದೂ ಅಳಿಯದ) ನಿವಾಸಸ್ಥಾನ (ಅಯನ) ವನ್ನು ಹೊಂದಿರುವವನು ಎಂದರ್ಥ. ಜ್ಞಾನ, ಆನಂದ, ವಿವೇಕ, ಸೌಂದರ್ಯ, ವ್ಯಕ್ತಿತ್ವ ಮುಂತಾದವುಗಳೇ ಆ ಗುಣಗಳು. ಅಂಥ ಅಮೂಲ್ಯವಾದ ಗುಣಗಳ ಸ್ಥಾನವೇ ಅಯನ. ಸಕಲ ಸಂಬಂಧದಿಂದಲೂ ನಾರಾಯಣನು ಜೀವಾತ್ಮನ ಬಂಧುವು. ಅವನ ಸೇವಾಕಾಂಕ್ಷೆ ಕೇವಲ ಆಕಸ್ಮಿಕವಾದುದಲ್ಲ, ಅದು ಜೀವಾತ್ಮನಿಗೆ ಸ ಭಾವೋತ್ಪನ್ನವಾದುದು. ನಿತ್ಯ ಕೈಂಕರ್ಯ ಪ್ರಾಪ್ತಿಗೋಸ್ಕರವೇ ಅವನ ಪ್ರಾರ್ಥನೆ. ಸರ್ವ ದೇಶದಲ್ಲಿಯೂ ಸರ್ವಕಾಲದಲ್ಲಿಯೂ ಸರ್ವದಶೆಗಳಲ್ಲಿಯೂ ಸ್ವಾಮಿಯ ಸೇವಾಪೇಕ್ಷೆಯೇ ಭಕ್ತನ ಏಕೈಕ ಗುರಿ.

'ಸ್ವಾಮಿಗೆ ಮಾತ್ರ ಸೇವಕನಾದ ನಾನು ನನ್ನದು ಎಂಬುದರಿಂದ ವಿಮುಕ್ತನಾದವನು, ಸರ್ವ ಸ್ವಾಮಿಯಾದ ಶ್ರೀಮನ್ನಾರಾಯಣನಿಗೆ ಅನವರತ ಸಕಲಸೇವೆ ಸಲ್ಲಿಸುವ ಸೌಭಾಗ್ಯ ನನಗೊದಗಲಿ' ಎಂಬುದೇ ತಿರುಮಂತ್ರದ ತಿರುಳು.

ಸಾಂಸಾರಿಕ ಸಂಬಂಧಗಳನ್ನೆಲ್ಲಾ ಬದಿಗೊತ್ತಿ, ಸ್ವಾಮಿಯೇ ಅನನ್ಯ ರಕ್ಷಕನೆಂದು ನಂಬಿ, ಎಂದೂ ಗುರಿ ತಪ್ಪುವುದಿಲ್ಲವೆಂದು ಅವಿಚ್ಛಿನ್ನವಾಗಿ ಅವನೆಡೆ ಸಾಗುತ್ತ, ಸದಾ ಸೇವಾತತ್ಪರನಾಗಿ ದ್ವಯ ತಿರುಮಂತ್ರಗಳ ಧ್ಯಾನಾಸಕ್ತನಾಗಿ, ಭಗವಂತನ ಜ್ಞಾನ ಪಡೆದ ಪರಮ ಭಾಗವತರ ಸತ್ಸಂಗದಲ್ಲಿದ್ದು ವೈರಾಗ್ಯ ಮತ್ತು ಸಂತುಷ್ಟಿ ಪೂರಿತನಾಗಿರುವುದು ಶ್ರೀ ವೈಷ್ಣವ ದೀಕ್ಷೆ ಹೊಂದಿದವನ ಅನಿವಾರ್ಯ ಆವಶ್ಯಕತೆಗಳು. ಜಗನ್ಮಾತೆಯಾದ ಶ್ರೀ ಲಕ್ಷ್ಮಿಯ ಕಟಾಕ್ಷದಿಂದ (ಮಧ್ಯಸ್ಥಿಕೆಯಿಂದ) ಮಾತ್ರ ಗುರಿಯನ್ನು ಮುಟ್ಟುವುದು ಸಾಧ್ಯವೆಂಬುದನ್ನು ದ್ವಯ ಮಂತ್ರವು ತಿಳಿಸುತ್ತದೆ. ತನ್ನದೆಂಬುದೇನೂ ಇಲ್ಲ (ಅಕಿಂಚನ್ಯ) ಎಂಬ ನಿರಹಂಭಾವದಿಂದ ಕೂಡಿ, ದೇವರನ್ನು ಬಿಟ್ಟರೆ ಅನ್ಯಶರಣ್ಯರಿಲ್ಲ ಎಂದು ಸ್ವಾಮಿಯಲ್ಲಿ ಅತ್ಯಂತ ವಿನಯ ದೈನ್ಯತೆಯಿಂ(ಅನನ್ಯಗತಿತ್ವದಿಂ)ದಿರುವುದೇ ದ್ವಯ ಮಂತ್ರೋಪದೇಶ ಪಡೆಯುವವನ ಲಕ್ಷಣವಾಗಿರಬೇಕು.

ಭಗವಂತನು ಸರ್ವಶಕ್ತ; ಪರಾತ್ಪರ. ಆದ್ದಾದರೂ ವಿನಯ ಸಂಪನ್ನನಾಗಿ ಬರುವ ಭಕ್ತನಿಗೆ ಅತಿಸುಲಭನು.

ದ್ವಯ ಮಂತ್ರದಲ್ಲಿರುವ 'ಚರಣ' ಶಬ್ದವು ಸ್ವಾಮಿಯ ಪಾದಗಳನ್ನು ಭಕ್ತನ ಏಕೈಕ ಆಶ್ರಯವೆಂದು ತಿಳಿಸುತ್ತದೆ. ಆಶ್ರಿತ ಜೀವನನ್ನು ಅವು ಎಂದೂ ಬಿಡವು. ಜೀವನು ಸ್ವಾಮಿಯ ಪ್ರೇಮಾದರಗಳ

ಸುಳಿವಿನಲ್ಲಿ ಸಿಗುವ ತನಕ ಬೇಟೆಯ ನಾಯಿಯಂತೆ ಅವನನ್ನು ಹಿಂಬಾಲಿಸುತ್ತಾನೆ. ಶ್ರೀ ವೈಷ್ಣವ ಮತದಲ್ಲಿ ಉಪಾಯ ಮತ್ತು ಉಪೇಯಗಳೆರಡೂ ಸ್ವಾಮಿಯೇ. ಆತನ ನಿತ್ಯ ಸೇವೆಯೇ ಜೀವನ ಗುರಿ.

ಅನ್ಯ ಮಾರ್ಗಗಳೆಲ್ಲವನ್ನೂ ಪರಿತ್ಯಜಿಸಿ, ಸ್ವಾಮಿಯೊಬ್ಬನೇ ಸಾಧನವೆಂದು ಒಪ್ಪಿ ಐಶ್ವರ್ಯ, ಪ್ರಗತಿ ಹಾಗೂ ಆತ್ಮ ಪ್ರಶಂಸೆಗಳಂತಹ ಇತರ ಪ್ರಾಪಂಚಿಕ ಉಪೇಯಗಳನ್ನು ಕಡೆಗಣಿಸಿ, ಅವನ ನಿತ್ಯ ಕೈಂಕರ್ಯ ಪ್ರಾಪ್ತಿಯನ್ನು ಗಳಿಸುವುದೇ ಜೀವನ ಚರಮ ಗುರಿ.

ದ್ವಯಮಂತ್ರದಲ್ಲಿ 'ನಾರಾಯಣಾಯ' ಎಂಬುದು ಅಂತ್ಯಪದ. 'ನಾವು ಅವನಿಗೋಸ್ಕರ ; ಅವನು ಸರ್ವಕ್ಕೂ ಸ್ವಾಮಿ' ಎಂಬುದು ಅದರ ಅರ್ಥ. ಆ ಶಬ್ದದ ಚತುರ್ಥೀ ವಿಭಕ್ತಿಯು ಸೇವಾ ಮನೋಭಾವ ವನ್ನು ಸೂಚಿಸುತ್ತದೆ. "ನಮಃ" ಶಬ್ದವು ಅಂಥ ಸೇವೆಗೆ ಅಡ್ಡಿಯಾದ ಸ್ವಾರ್ಥ ಹಾಗೂ ಲೌಕಿಕ ಸುಖ ಸಾಧನೆಗಳ ನಿರ್ಮೂಲವನ್ನು ಸೂಚಿಸುತ್ತದೆ.

ದ್ವಯ ಮಂತ್ರದನಂತರ ಗೀತೆಯ ಅಂತ್ಯ ಸಂದೇಶವೆನಿಸಿದ ಚರಮ ಶ್ಲೋಕವಿದೆ. ಮೋಕ್ಷ ಸಾಧನೆಗೆಂದು ಆಗಲೇ ಉಪದೇಶ ಪಡೆದಿದ್ದ ಮುಖ್ಯ ಮಾರ್ಗಗಳೆಲ್ಲವೂ ಕಷ್ಟ ಸಾಧ್ಯವೆಂದು ನಿರಾಶೆಯಿಂದ ಅರ್ಜುನನು ವ್ಯಾಕುಲಗೊಂಡುದರಿಂದ ಈ ಶ್ಲೋಕ ಚರಮ ಗೀತೆಯೆನಿಸಿತು. ಆತನ ಮನೋವೇದನೆ ಯನ್ನು ಪರಿಹಾರ ಮಾಡಲು ಎಲ್ಲ ಮಾರ್ಗಗಳಿಗಿಂತಲೂ ಅತ್ಯಂತ ಸುಲಭ ಸಾಧ್ಯವೆಂದು ಗೀತಾಚಾರ್ಯನು ಬೋಧಿಸಿದ ತತ್ವವು ಈ ಶ್ಲೋಕದಲ್ಲಿ ಅಡಗಿದೆಯೆಂದು ಶ್ರೀ ವೈಷ್ಣವರು ನಂಬುತ್ತಾರೆ.

ಚರಮ ಶ್ಲೋಕವು ಹೀಗಿದೆ :

> ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
> ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ

ಮೇಲಿನ ಶ್ಲೋಕದಲ್ಲಿ ಸರ್ವ ಧರ್ಮ ಎಂದರೆ ಸಕಲ ಧರ್ಮಗಳೆಂದರ್ಥ. ಇಚ್ಛಿತ ಫಲಕ್ಕೆ ಕರೆದೊಯ್ಯುವುದೇ ಧರ್ಮ. ಇಲ್ಲಿ ಧರ್ಮವೆಂದರೆ ಸಾಮಾನ್ಯ ಫಲಗಳಿಗೆ ಅನ್ವಯಿಸದೆ ಮೋಕ್ಷ ಪ್ರಧಾನ ವಾದ ಸಾಧನಗಳನ್ನು ಮಾತ್ರ ಸೂಚಿಸುತ್ತದೆ. ಇಂತಹ ಧರ್ಮಗಳು ಶ್ರುತಿ ಸ್ಮೃತಿ ಪ್ರಣೀತವಾದವುಗಳು. ಅವು ಅಸಂಖ್ಯಾತವಾದುದರಿಂದ ಧರ್ಮ ಶಬ್ದವನ್ನು ಬಹುವಚನದಲ್ಲಿ ಬಳಸಿದೆ. ಇವೇ ಜ್ಞಾನ, ಕರ್ಮ ಭಕ್ತಿಯೋಗಗಳು. ಸರ್ವ ಶಬ್ದವು ಈ ಮುಖ್ಯ ಮಾರ್ಗಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಲು ಸಾಧಕನಿಗೆ ಅರ್ಹತೆ ಕೊಡುವ ನಿತ್ಯ ಕರ್ಮಗಳನ್ನು ಸೂಚಿಸುತ್ತದೆ. ಹೀಗೆ ಶ್ಲೋಕದಲ್ಲಿರುವ 'ಸರ್ವ ಧರ್ಮಾನ್' ಶಬ್ದವು ಪ್ರತಿನಿತ್ಯ ಅಥವಾ ಸಂದರ್ಭವೊದಗಿದಂತೆ ಆಗಿಂದ್ದಾಗ್ಗೆ ಆಚರಿಸಬೇಕಾದ ವೇದ ಶಾಸ್ತ್ರೋಕ್ತವಾದ ಸಾಧನಗಳನ್ನು ಸೂಚಿಸುತ್ತದೆ.

ಪರಿತ್ಯಜ್ಯ ಶಬ್ದದಲ್ಲಿ 'ತ್ಯಾಗ' ಶಬ್ದಕ್ಕೆ—ಮೇಲೆ ಹೇಳಿದ ಮಾರ್ಗಗಳನ್ನು ಆಚರಿಸಿದ ಮೇಲೆ, ಅವು ಅಜ್ಞಾನದಿಂದ ಅನುಸರಿಸುತ್ತಿದ್ದ ಅನ್ಯಮಾರ್ಗಗಳು ಎಂಬ ತಿಳಿವಳಿಕೆಯುಂಟಾದ ಮೇಲೆ, ಅವುಗಳನ್ನು ಬಿಡುವುದು ಎಂದರ್ಥ. ಸರ್ವರಕ್ಷಕನಾದ ಸ್ವಾಮಿಮಾತ್ರ ನಿಜವಾದ ಧರ್ಮ. ಅವನೇ ಸಾಧ್ಯ ಮತ್ತು ಸಾಧನ. ಅವನೊಬ್ಬನನ್ನು ಮಾತ್ರ ಒಪ್ಪಿ ಮತ್ತಿತರ ಸಾಧನಗಳನ್ನೆಲ್ಲಾ ಬಿಡಬೇಕೆಂಬುದೇ ಇಲ್ಲಿನ ಮುಖ್ಯಾರ್ಥ.

'ಮಾಂ' ಶಬ್ದವು ದೇವನೊಬ್ಬನೇ ಏಕೈಕ ಆಶ್ರಯನೆಂದು ನಿರ್ದೇಶಿಸುತ್ತದೆ, 'ಶರಣಾಗತಿಯೇ'

ಸಾಧನ. ಅಮಿತ ಅಥವಾ ಅಸಂಕುಚಿತ ಸಂಪೂರ್ಣಮನೋಭಾವದಿಂದ ಸ್ವಾಮಿಗೆ ತನ್ನನ್ನು ತಾನು ಅರ್ಪಿತ ಮಾಡಿಕೊಳ್ಳುವುದೇ ಶರಣಾಗತಿ ಅಥವಾ ಪ್ರಪತ್ತಿ. ಚರಮಶ್ಲೋಕದ 'ಶರಣಂ' ಶಬ್ದವು ಪರಮಾಶ್ರಯದ ನೆಲೆಯಾದ ತ್ರಾತ ಅಥವಾ ರಕ್ಷಕನನ್ನೂ ತತ್ಸಾಧನವನ್ನೂ ಸೂಚಿಸುತ್ತದೆ. 'ವ್ರಜ' ಎಂದರೆ ಒಪ್ಪಿಕೋ ಎಂದರ್ಥ. ಇಲ್ಲಿ ನಿರಂಕುಶ ಮಾನಸಿಕವಾದ ಒಪ್ಪಿಗೆಯು ಉದ್ದೇಶಿತವಾಗಿದೆ. ಮೋಕ್ಷಕ್ಕೆ ಜೀವನು ಅನ್ಯೇತರ ಮಾರ್ಗಗಳೆಲ್ಲವನ್ನೂ ಬಿಟ್ಟು ಸ್ವಾಮಿಯೊಬ್ಬನನ್ನೇ ಅವಲಂಬಿಸುತ್ತಾನೆ ಎಂದು ಇದರಿಂದ ವೇದ್ಯವಾಗುತ್ತದೆ.

ಜೀವನಿಗೆ ಸ್ವಾಮಿಯು ಮೋಕ್ಷಕೊಡುವ ಹೊಣೆಯನ್ನು ತಾನೇ ತೆಗೆದುಕೊಳ್ಳುತ್ತೇನೆ ಎಂದು ಕೊಟ್ಟ ಭರವಸೆಯನ್ನು 'ಮೋಕ್ಷಯಿಷ್ಯಾಮಿ' ಶಬ್ದವು ಸೂಚಿಸುತ್ತದೆ. ಸ್ವಾಮಿಯು ಸರ್ವರನ್ನೂ ರಕ್ಷಿಸುತ್ತಾನೆಂಬ ಮಹಾವಿಶ್ವಾಸದಿಂದ ಜೀವನು ಭರನ್ಯಾಸ ಮಾಡಬೇಕು ಎಂಬುದು ರಾಮಾನುಜಾಚಾರ್ಯರಿಂದಲೂ ಅವರ ನಂತರ ಬಂದ ಇಬ್ಬರು ದೊಡ್ಡ ವೈಷ್ಣವ ವೇದಾಂತಾಚಾರ್ಯರುಗಳಾದ ಪಿಳ್ಳೈ ಲೋಕಾಚಾರ್ಯ ಮತ್ತು ವೇದಾಂತ ದೇಶಿಕರುಗಳಿಂದ ಸಾಕಷ್ಟು ವಿಶದವಾಗಿ ಪ್ರಚಾರ ಮಾಡಲ್ಪಟ್ಟ ರಹಸ್ಯತ್ರಯವೆಂಬ ಶ್ರೀವೈಷ್ಣವ ಸಿದ್ಧಾಂತದ ತಿರುಳು.

ಈ ನಂಬಿಕೆಯನ್ನೇ ಶ್ರೀವೈಷ್ಣವರು ಆಚಾರ್ಯರ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಆಚಾರ್ಯರು ತಮ್ಮ ಜೀವನದ ದಿನಚರಿಯಿಂದಲೂ ತಾವು ಪ್ರತಿಪಾದಿಸಿದ ವೇದಾಂತ ತತ್ವಗಳಿಂದಲೂ ಕರ್ಣಾಟಕ ದೇಶದ ತನ್ನ ಮತಾವಲಂಬಿಗಳ ಮೇಲೆ ಅಳಿಸಲಾಗದ ಶಾಶ್ವತ ಪ್ರಭಾವವನ್ನು ಬೀರಿದ್ದಾರೆ. 'ರಾಮಾನುಜರ ದಿವ್ಯಾಜ್ಞೆಯು ಮೇಲಿಂದ ಮೇಲೆ ಬೆಳೆಯಲಿ' (ರಾಮಾನುಜಸ್ಯ ದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಂ) ಎಂಬುದು ಶ್ರೀವೈಷ್ಣವರ—ಅವರು ಕರ್ಣಾಟಕದಲ್ಲಿ ಇರಲಿ, ಇಲ್ಲವೆ ಬೇರೆಲ್ಲಿಯಾದರೂ ಇರಲಿ – ನಿತ್ಯಪ್ರಾರ್ಥನೆಯಾಗಿದೆ.

**ವೇದಾಂತ ತತ್ವ**

ಕರ್ಣಾಟಕದಲ್ಲಿ ಪ್ರಚಾರದಲ್ಲಿದ್ದ ಮೂರು ವೇದಾಂತ ದರ್ಶನಗಳಲ್ಲಿ ವಿಶಿಷ್ಟಾದ್ವೈತವೂ ಒಂದಾಗಿದೆ. ಕ್ರಿ.ಶ. 1071 (ಶಾಲಿವಾಹನಶಕ 939) ರಲ್ಲಿ ಜನಿಸಿದ ರಾಮಾನುಜರು ಅದರ ಪ್ರತಿಪಾದಕರು. ಅದ್ವೈತ ವೇದಾಂತವನ್ನು ಬೋಧಿಸುವ ಶಂಕರಮತದಿಂದ ಅದು ಭಿನ್ನವಾಗಿದೆ. ಪ್ರಮಾಣ ಗ್ರಂಥಗಳಲ್ಲಿ ಪ್ರತಿಪಾದಿತ ವಾಗಿರುವ ತತ್ವಗಳ ಆಧಾರದ ಮೇಲೆ ಮತ್ತು ತರ್ಕ ಹಾಗೂ ವಿಚಾರದೃಷ್ಟಿಯಿಂದ ರಾಮಾನುಜರು ಶಂಕರ ಮತವನ್ನು ಒಪ್ಪಲಿಲ್ಲ. ಸಗುಣೇಶ್ವರ ಸಿದ್ಧಾಂತವನ್ನು ಒಪ್ಪುವ ವಿಶಿಷ್ಟಾದ್ವೈತ ವೇದಾಂತವು ಶಂಕರರ ಅದ್ವೈತಮಾರ್ಗದಲ್ಲಿ ಪ್ರತಿಪಾದಿತವಾದ ನಿರ್ಗುಣ ತತ್ವವನ್ನು ಒಪ್ಪುವುದಿಲ್ಲ. ಕಲ್ಯಾಣಗುಣಗಣ (ವಿಶೇಷಣ)ಮಯತ್ವದಿಂದ ಬ್ರಹ್ಮಾದ್ವೈತವನ್ನು (ಏಕಮೇವಾದ್ವಿತೀಯಂ ಬ್ರಹ್ಮ ಎಂಬುದನ್ನು) ಬೋಧಿಸುವುದರಿಂದ ಅದಕ್ಕೆ ಸಗುಣೇಶ್ವರಮತವೆಂದು ಹೆಸರು. ಕಲ್ಯಾಣಗುಣಗಳು ಅಸಂಖ್ಯಾತವಾದರೂ ಆಚಾರ್ಯರು ಕೆಲವನ್ನು ಪ್ರಧಾನವೆಂದು ಪರಿಗಣಿಸುತ್ತಾರೆ. ಸತ್ಯ, ಸೌಶೀಲ್ಯ ಮತ್ತು ಸೌಂದರ್ಯಗಳು ಅವುಗಳಲ್ಲಿ ಅತಿ ಮುಖ್ಯವಾದವು.

ಪರಮ ಪುರುಷ ಅಥವಾ ಪುರುಷೋತ್ತಮನಾದ ಸರ್ವೇಶ್ವರನ ನೀತಿ ಅಥವಾ ಸೌಂದರ್ಯಗುಣಗಳಿಗೆ ರಾಮಾನುಜರು ಬಹಳ ಪ್ರಾಧಾನ್ಯ ಕೊಟ್ಟಿದ್ದಾರೆ. ಕೇವಲ ಕಲ್ಯಾಣಗುಣಗಳ ಗುಚ್ಛವಲ್ಲದೆ, ಸ್ವಾಮಿಯು ಆಚಾರ್ಯರ ದೃಷ್ಟಿಯಲ್ಲಿ ಸಕಲ ಪರಿಪೂರ್ಣನಾದ ಸಾಕಾರ ಮೂರ್ತಿ. ಅವರ ಸಿದ್ಧಾಂತದಲ್ಲಿ ಗುಣರಹಿತವಾದ

ವಸ್ತುವಾಗಲಿ ವಸ್ತುರಹಿತಗುಣವಾಗಲಿ ಇಲ್ಲ. ಆಚಾರ್ಯರು ಈ ತತ್ವವನ್ನು ದೇವರಿಗೂ ಅನ್ವಯಿಸುತ್ತಾರೆ. ದೇವರು ಸಗುಣವೆನಿಸುವ ಪರವಸ್ತು. ಭಗವತ್ಸ್ವರೂಪದ ಈ ಸಹಜಗುಣವನ್ನು ಹೂವಿನಲ್ಲಿರುವ ಸುವಾಸನೆಗೂ ಬೆಂಕಿಯ ಜ್ವಾಲೆಯಲ್ಲಿರುವ ಕಾಂತಿಗೂ ಆಚಾರ್ಯರು ಹೋಲಿಸುತ್ತಾರೆ. ಏಕೈಕನಾದ ಬ್ರಹ್ಮನು 'ಅಖಿಲ ಹೇಯಪ್ರತ್ಯನೀಕರಹಿತನು' ಅಂದರೆ, ಅಪರಿಪೂರ್ಣತೆ ಅಥವಾ ದೋಷದಿಂದ ಕೂಡಿದ ಪ್ರತಿಯೊಂದರಿಂದಲೂ ಬೇರಾದವನು. ಸಕಲ ಪಾಪಗಳಿಗೂ ವಿರುದ್ಧನು. ದುಷ್ಟವಾದುವು ದೈವಿಕವಲ್ಲ. ಪರಮಾತ್ಮ ಜೀವಾತ್ಮರುಗಳ ಸಂಬಂಧದಲ್ಲಿ ಸ್ವಾಮಿಯನ್ನು ಜೀವನ ಸಮೀಪಕ್ಕೆ ಕರೆತರುವ ಅತ್ಯಂತ ಗಣ್ಯಗುಣವೆಂದರೆ ಆತನ ಕರುಣೆ. ರಾಮಾನುಜರು ಈಶ್ವರನನ್ನು ಪರಮ ಕಾರುಣಿಕನೆಂದು ವರ್ಣಿಸಿದ್ದಾರೆ. ವಿಶಿಷ್ಟಾದ್ವೈತ ವೇದಾಂತದ ತಾತ್ವಿಕ ಪರಿಭಾಷೆಯಲ್ಲಿ ಇಂತಹ ದೈವಿಕಗುಣಸಹಿತನಾದ ಪರಬ್ರಹ್ಮನು ಈಶ್ವರನೆಂದು ಕರೆಯಲ್ಪಟ್ಟಿದ್ದಾನೆ. ಸಕಲ ಕಲ್ಯಾಣಗುಣಗಳಿಗೂ ನೆಲೆಯಾದ ಈಶ್ವರನಿಗೆ ಸದೃಶನಾದವನಾಗಲಿ, ಅವನಿಗಿಂತ ಹೆಚ್ಚಿನ ಪರವಸ್ತುವಾಗಲಿ ಬೇರೊಂದಿಲ್ಲ. (ನ ತತ್‌ಸಮಶ್ಚಾಪ್ಯಧಿಕಶ್ಚ ದೃಶ್ಯತೇ). ಆಧಾರ ಆಧೇಯಗಳಂತೆ, ನಿಯತ ಅಥವಾ ಶೇಷ ಶೇಷಿಗಳಂತೆ ಅವನು ಜಗತ್ತಿನೊಡನೆ ಅಪೃಥಕ್‌ಸಿದ್ಧನಾಗಿ ಅವಿನಾ ಸಂಬಂಧವುಳ್ಳವನು. ಜೀವಾತ್ಮರುಗಳಿಗೆ ಆತನು ಆಧಾರ, ನಿಯತ, ಶರಣ್ಯ ಹಾಗೂ ಪರಮ ಆಪ್ತನು. ಜಗತ್ತಿನ ಸಕಲ ಚೇತನಾಚೇತನ ವಸ್ತುಗಳೊಂದಿಗೆ ಅಚ್ಛೇದ್ಯ ಸಂಬಂಧ ಹೊಂದಿದ್ದಾನೆ. ಚಿತ್ ಮತ್ತು ಅಚಿತ್ ವಸ್ತುಗಳು ಅವನಿಗೆ ವಿಶೇಷ ಗುಣಗಳು. ಆದುದರಿಂದ ಅವನಿಗೆ 'ಚಿದಚಿತ್ ವಿಶಿಷ್ಟ ಈಶ್ವರ' ಎಂದು ಹೆಸರು. ಜಗತ್ತು ಹಾಗೂ ಜೀವಾತ್ಮರೊಡನೆ ಈಶ್ವರನಿಗಿರುವ ಸಂಬಂಧವು 'ಶರೀರ ಶರೀರೀಭಾವ' ಸದೃಶವೆಂದು ಆಚಾರ್ಯರು ವರ್ಣಿಸಿದ್ದಾರೆ: ವಿಶ್ವವು ಭಗವಂತನ ಶರೀರ. ಆಚಾರ್ಯರ ಭಾವದಲ್ಲಿ ಶರೀರವೆಂದರೆ ಜೀವಾತ್ಮನ ಅಭಿವ್ಯಕ್ತಿಗೆ ಯೋಜಿಸಿದ ಒಂದು ಸಾಧನ. ಪರಮಾತ್ಮನು ಜೀವಿಗಳಲ್ಲಿ ಅಂತರ್ಯಾಮಿಯಾಗಿ ವಾಸಿಸುವ ಅಮೃತನು. ಅವನು ಜಗತ್ತಿನ ಆತ್ಮ. ಆತ್ಮರುಗಳ ಆತ್ಮ. ಸಕಲ ಜೀವಾತ್ಮರೂ ಪರಮಾತ್ಮನಂತೆಯೇ ನಿತ್ಯರು. ಆದರೆ ಪರಮಾತ್ಮನು ನಿತ್ಯರಲ್ಲಿ ನಿತ್ಯ. ಚೇತನಾತ್ಮರ ಚೈತನ್ಯ. ಆದರೂ ಅವರೆಲ್ಲರಿಂದಲೂ ಬೇರೆಯಾದವನು. ಸರ್ವಾಂತರ್ಯಾಮಿಯೂ, ಸಕಲಾತೀತನೂ ಅನೇಕದಲ್ಲಿ ಏಕನೂ ಆದವನು (ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ). ಜಗತ್ತಿನ ಸಕಲ ಚೇತನಾಚೇತನ ವಸ್ತುಗಳೂ ತಮ್ಮ ಅಸ್ತಿತ್ವವನ್ನು ಅವನಿಂದ ಪಡೆಯುತ್ತವೆ. ಅಲ್ಲದೆ ಅವುಗಳೆಲ್ಲವೂ ಅವನನ್ನೇ ಸಂಪೂರ್ಣವಾಗಿ ಆಶ್ರಯಿಸಿವೆ (ಶೇಷಭೂತ). ಒಳಗೆ ಆತ್ಮನಿಲ್ಲದೆ ಹೇಗೆ ದೇಹವಿರಲಾರದೋ ಹಾಗೆಯೇ ಈಶ್ವರನಿಲ್ಲದ ಸಕಲ ಜೀವಜಗತ್ತು ಕ್ಷಣಕಾಲವೂ ಉಳಿಯಲಾರದು.

ಯಾರಲ್ಲಿ ನಾವು ಜೀವಿಸುತ್ತೇವೆಯೋ, ಚಲಿಸುತ್ತೇವೆಯೋ ಅಲ್ಲದೆ ನಮ್ಮ ಅಸ್ತಿತ್ವವನ್ನು ಪಡೆಯುತ್ತೇವೆಯೋ ಆ ಪರವಸ್ತುವೇ ಈಶ್ವರ (ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ವಾ ಜಾತಾನಿ ಜೀವಂತಿ ಯತ್ಪ್ರಯಂತಿ ಅಭಿಸಂವಿಶಂತಿ). ಅನೇಕ ಜನ್ಮ ಪರ್ಯಟನಾನಂತರಗಳ ಮೇಲೆ ಈಶ್ವರ ಅಥವಾ ಭಗವಂತನಪ್ರಾಪ್ತಿಗಾಗಿ ಪ್ರತಿಯೊಬ್ಬ ಜೀವಿಯಲ್ಲಿಯೂ ಅಂತರ್ಗತವಾದ ಒಂದು ಹಾತೊರೆಯುಂಟಾಗುತ್ತದೆ. ಇಂತಹ ಬಯಕೆಯೇ ಜೀವನನ್ನು ಸಂಸಾರದ ಬಂಧನಗಳಿಂದ ವಿಮೋಚನೆ ಹೊಂದಲಪೇಕ್ಷಿಯ (ಮುಮುಕ್ಷುವ)ನ್ನಾಗಿ ಮಾಡುವುದು. ರಾಮಾನುಜರ ದೃಷ್ಟಿಯಲ್ಲಿ ಮೋಕ್ಷವೆಂದರೆ ಜೀವಾತ್ಮನು ಪರಮಾತ್ಮನಲ್ಲಿ ಐಕ್ಯನಾಗುವುದಲ್ಲ ಇಲ್ಲವೆ ಇಲ್ಲದಂತಾಗುವುದಲ್ಲ. ಮೋಕ್ಷವೆಂದರೆ ಬ್ರಹ್ಮನಲ್ಲಿ ಸಾಯುಜ್ಯಹೊಂದುವುದಲ್ಲ. ಸಾರೂಪ್ಯ ಪಡೆಯುವುದಲ್ಲ. ಮೋಕ್ಷದಶೆಯಲ್ಲಿ ಜೀವಾತ್ಮನು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡರೆ ಪರಮಾತ್ಮನ ಪರಿಪೂರ್ಣತೆಗೆ ಧಕ್ಕೆಯುಂಟಾಗುತ್ತದೆಂದು ಆಚಾರ್ಯರು ಲೇಶವೂ ಶಂಕಿಸುವುದಿಲ್ಲ. ಮೋಕ್ಷವೆಂದರೆ ಭಗವಂತನೊಡನೆ ಪಡೆದ ಸಖ್ಯ; ಆತ್ಮಾವಿಷ್ಕಾರ. ಮೋಕ್ಷ ಸಂಪೂರ್ಣ ವ್ಯಕ್ತಿತ್ವ ವಿಕಾಸವಲ್ಲದೆ ಆತ್ಮನಾಶವೇ ಆಗಿದ್ದರೆ, ಯಾರೂ ಅದರಲ್ಲಿ ಆದರಾಸಕ್ತಿಯನ್ನು ತೋರುತ್ತಿರಲಿಲ್ಲವೆಂದು ಆಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಅಪ್ಪಣೆಕೊಡಿಸಿದ್ದಾರೆ. ಆ

ಕಾರಣ, ಆತ್ಮನ ನಿಜಸ್ವರೂಪದ ಆವಿರ್ಭಾವವೇ (ಸ್ವಸ್ವರೂಪ ಆವಿರ್ಭಾವ) ಮೋಕ್ಷಲಕ್ಷಣ ಎಂದು ಅವರು ತಿಳಿಸಿದ್ದಾರೆ.

ಸಂಸಾರದಿಂದ ಬಿಡುಗಡೆಯ ಮಾರ್ಗವನ್ನು ಪರಮಾತ್ಮನೇ ಸೂಚಿಸಿರುವನು. ಆಚಾರ್ಯರು ಅವನನ್ನು ನಾರಾಯಣ ಎಂಬ ಹೆಸರಿನಿಂದ ಕರೆಯಲಿಚ್ಛಿಸುವರು. ನಾರಾಯಣ ಎಂದರೆ ನರರಲ್ಲಿ ನೆಲೆಯಿರುವವನು (ಅಯನ) ಎಂದರ್ಥ. ತನ್ನ ಅನೇಕ ಅವತಾರಗಳ ಮೂಲಕ ಮಾನವಶ್ರೇಷ್ಠನಂತೆ ಮಾನವನಿಗೆ ಆತನು ತೋರಿದ್ದಾನೆ. ತನ್ನ ಸಜಾತೀಯತೆಯನ್ನು—ಅಬಾಧಿತವಾದ ಸಂಪೂರ್ಣ ಆತ್ಮನಿವೇದನದಿಂದ ಸಂಸಾರಬಂಧನದಿಂದ ವಿಮುಕ್ತರಾದ ತನ್ನ ದೂತರೆನಿಸಿದ ಋಷಿಗಳು, ಅಥವಾ ದ್ರಷ್ಟಾರರು, ಭಕ್ತರು ಅಥವಾ ಶರಣರು ಇವರ ಮೂಲಕ ಅಪ್ರತ್ಯಕ್ಷವಾಗಿ ವ್ಯಕ್ತವಾಗಿಸಿದ್ದಾನೆ. ದೇವ-ಮಾನವ ಸಂಬಂಧವು ರಕ್ಷಕ ರಕ್ಷಿತ ಭಾವವನ್ನು ತಾಳಿದೆ. ಆಚಾರ್ಯರು ಪರತತ್ವದ ಎರಡು ಲಕ್ಷಣಗಳನ್ನು 'ಪರತ್ವ' ಮತ್ತು 'ಸೌಲಭ್ಯ' ಎನ್ನುತ್ತಾರೆ. ಅತೀತತೆ ಹಾಗೂ ಅಂತರ್ಯಾಮಿತ್ವವೆನಿಸಿದ ಪರಬ್ರಹ್ಮದ ಆ ಎರಡು ಭಾವಗಳನ್ನು ಆಚಾರ್ಯರು ತಮ್ಮ ದರ್ಶನದಲ್ಲಿ ಸಮನ್ವಯಗೊಳಿಸಲು ಬಹಳ ಯತ್ನಿಸಿದ್ದಾರೆ. ಪರಬ್ರಹ್ಮದ ಪರಿಪೂರ್ಣತೆಯೊಡನೆ ಜೀವಾತ್ಮನ ವೈಯಕ್ತಿಕ ವೈಶಿಷ್ಟ್ಯದ ಸಂಧಾನಕ್ಕೆ ಪ್ರಯತ್ನಿಸಿದ್ದಾರೆ. ಪರಿಪೂರ್ಣ ಶರಣಾಗತಿಯಲ್ಲಿ ಉಚ್ಚ-ನೀಚ, ಪಂಡಿತ-ಪಾಮರ, ಗಂಡು-ಹೆಣ್ಣು ಎಂಬ ಯಾವ ಭೇದವೂ ಇಲ್ಲ. ಎಲ್ಲರಿಗೂ ಸುಲಭಸಾಧ್ಯವಾದ ಮಾರ್ಗವೆಂದರೆ ಶರಣಾಗತಿಯಲ್ಲಿ ಪರ್ಯವಸಾನವಾಗುವ ಐಕಾಂತಿಕ ಭಕ್ತಿ. 'ಅನನ್ಯಗತಿತ್ವ' ಮತ್ತು 'ಅನನ್ಯಶರಣಾಗತಿ'ಯನ್ನು ಆಚಾರ್ಯರು ಎಂದೂ ನಿರಾಶೆಗೊಳಿಸದ ಮಾರ್ಗವೆಂದು ಒತ್ತಿಹೇಳಿದ್ದಾರೆ. ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಹೇಳಿರುವಂತೆ ಏಕಾಗ್ರಚಿತ್ತದ ಶ್ರದ್ಧಾನುರಾಗವೇ ಭಕ್ತಿಮಾರ್ಗ. ದೈನ್ಯದಿಂದ ಕೂಡಿದ ಆತ್ಮಾರ್ಪಣವೇ ಶರಣಾಗತಿ ಅಥವಾ ಪ್ರಪತ್ತಿ.

ಆಚಾರ್ಯರು ಮೇಲಿನ ತತ್ತ್ವವನ್ನು ತಮ್ಮ ಅನೇಕ ವೇದಾಂತ ಹಾಗೂ ಮತಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ವೇದಾಂತ ಸೂತ್ರಗಳಿಗೆ ಭಾಷ್ಯವನ್ನು ಬರೆದು, ಸಾಕಾರ ಬ್ರಹ್ಮವನ್ನೇ ಉಪನಿಷತ್ತುಗಳು ಪ್ರತಿಪಾದಿಸುತ್ತವೆ ಎಂದು ತೋರಿಸಿದ್ದಾರೆ. ಗೀತಾಚಾರ್ಯನು ತನ್ನ ಶಿಷ್ಯನಾದ ಅರ್ಜುನನಿಗೆ ಉಪದೇಶಿಸಿದ ಗೀತೆಯನ್ನು ಸರ್ವೋತ್ಕೃಷ್ಟವಾದ ಭಕ್ತಿಶಾಸ್ತ್ರವೆಂದು ಪರಿಗಣಿಸಿ, ಅದಕ್ಕೆ ಭಾಷ್ಯವನ್ನು ರಚಿಸಿದ್ದಾರೆ. "ಜ್ಞಾನಕರ್ಮಗಳ ಫಲವಾದ ಭಕ್ತಿಮಾರ್ಗವನ್ನು ಶ್ರೀಕೃಷ್ಣನು ಪ್ರಚಾರಮಾಡಿದನು. ಅಂತಹ ಪ್ರೇಮಾನುರಾಗದ ಸಾಧನೆಯೇ ವೇದಾಂತಶಾಸ್ತ್ರದ ಅಧ್ಯಯನ ಫಲ. ಸಕಲ ವೇದಾಂತ ಶಾಸ್ತ್ರಗಳೂ ಅವನೊಬ್ಬನೇ ಪ್ರೇಮಾನುರಾಗಗಳಿಗೆ ಯೋಗ್ಯನಾದವನು ಎಂದು ಸಾರುತ್ತವೆ. ಅವನು ಮಾತ್ರ ಸಕಲರ ಪ್ರೇಮಾದರಕ್ಕೀಡಾದವನು ಮತ್ತು ಸಾಂಸಾರಿಕ ಜಗತ್ತಿನಿಂದಲೂ ಉಪಾಧಿಪೂರಿತ ಜೀವನದಿಂದಲೂ (ಪರಮ ಪುರುಷಾರ್ಥ ಲಕ್ಷಣ ಮೋಕ್ಷ ಸಾಧನತಯಾ ವೇದಾಂತೋದಿತಂ ಸವಿಷಯಂ ಜ್ಞಾನ ಕರ್ಮಾಣಿ ಗೃಹೀತಂ ಭಕ್ತಿಯೋಗಂ ಅವತಾರಯಾಮಾಸ.) ಬಿಡುಗಡೆ ಹೊಂದಿ, ಜೀವನದ ಅಂತಿಮ ಗುರಿಯಾದ ಮೋಕ್ಷವನ್ನು ಪಡೆಯಲು ಸಾಧನ." ಎಂದು ಆಚಾರ್ಯರು ತಮ್ಮ ಗೀತಾಭಾಷ್ಯದ ಪೀಠಿಕೆಯಲ್ಲಿ ತಿಳಿಸಿದ್ದಾರೆ.

ಆಚಾರ್ಯರು ಪ್ರಪತ್ತಿಯನ್ನು ಒತ್ತಿಹೇಳಲು ತಮಿಳು ನಾಡಿನ ವೈಷ್ಣವ ಪಂಥಿಗಳಾದ ಆಳ್ವಾರುಗಳ ಪ್ರಭಾವವೇ ಕಾರಣ. 'ಆಳ್ವಾರ್' ಎಂದರೆ ಸ್ವಾಮಿ ಪ್ರೇಮದಲ್ಲಿ ಲೀನವಾದವರು ಎಂದರ್ಥ. ಸಂತರೂ ಕವಿಗಳೂ, ಆದ ಅವರು ಪಂಡಿತರೂ ದಾರ್ಶನಿಕರೂ ಆದ ಆಚಾರ್ಯರುಗಳಿಂದ ಭಿನ್ನರು. ಆಚಾರ್ಯರುಗಳಿಂದಲೇ 'ಪೂರ್ವಾಚಾರ್ಯರುಗಳು' ಎಂದು ಸೂಚಿಸಲ್ಪಟ್ಟಿದ್ದ ಹಿರಿಯ ಗುರುಪರಂಪರೆಯಿಂದ ಆಳ್ವಾರುಗಳ ತತ್ವಗಳು ರಾಮಾನುಜರಿಗೆ ದೊರೆತವು. ಟಂಕ, ದ್ರಾವಿಡ, ಗುಣದೇವ, ಬರೂಚಿ—

ಮುಂತಾದ ಹೆಸರುಗಳನ್ನು ಆಚಾರ್ಯರು ಆ ಗುಂಪಿನಲ್ಲಿ ಹೇಳುತ್ತಾರೆ. ಅವರುಗಳನಂತರ ಬಂದ ರಾಮಾನುಜರ ಹತ್ತಿರದ ಆಚಾರ್ಯರುಗಳೆಂದರೆ ನಾಥಮುನಿ ಮತ್ತು ಯಾಮುನಾಚಾರ್ಯರು. ಇವರುಗಳು ಸಂಸ್ಕೃತದಲ್ಲಿಯೂ ಅಳ್ವಾರುಗಳ ತಮಿಳು ಗ್ರಂಥಗಳಲ್ಲಿಯೂ ಅಪಾರ ಜ್ಞಾನ ಪಡೆದಿದ್ದರು. ನಾಥಮುನಿಗಳು 'ನಾಲಾಯಿರ ಪ್ರಬಂಧ'ಗಳೆಂದು ಹೆಸರು ಪಡೆದಿರುವ ಕವನಗಳನ್ನೂ ಸಂಕಲನ ಮಾಡಿ ಖ್ಯಾತಿಗೊಂಡಿದ್ದಾರೆ. ಯಾಮುನಾಚಾರ್ಯರು ಗೀತಾರ್ಥ ಸಂಗ್ರಹ, ಸಿದ್ಧಿತ್ರಯ, ಆಗಮ ಪ್ರಾಮಾಣ್ಯ ಮತ್ತು ಸ್ತೋತ್ರರತ್ನ--ಮುಂತಾದ ತಮ್ಮ ಗ್ರಂಥರಚನೆಯ ಮೂಲಕ ವಿಶಿಷ್ಟಾದ್ವೈತ ವೇದಾಂತ ದೃಷ್ಟಿಯಿಂದ ಪ್ರಸ್ಥಾನತ್ರಯ ವ್ಯಾಖ್ಯಾನಕ್ಕೆ ಕಾರಣರಾದರು. ತಮ್ಮ ಪ್ರಚಂಡ ಪಾಂಡಿತ್ಯದಿಂದ ಸಂಸ್ಕೃತ ಗ್ರಂಥಗಳಲ್ಲಡಗಿರುವ ತತ್ತ್ವಗಳ ದೃಷ್ಟಿಯಿಂದ ಆಳ್ವಾರುಗಳ ಸಿರಿನುಡಿಗಳನ್ನು ವ್ಯವಸ್ಥಿಗೊಳಿಸುವುದರ ಮೂಲಕ ನಾಥಮುನಿ ಮತ್ತು ಯಾಮುನರು 'ಆಚಾರ್ಯ'ರೆಂಬ ಬಿರುದನ್ನು ಗಳಿಸಿದ್ದಾರೆ. ಅಲ್ಲದೆ ಕವಿತಾಶಕ್ತಿ ಮತ್ತು ದಾರ್ಶನಿಕ ಕ್ರಮಗಳ ಮಿಲನವಾಗಲು ಆಚಾರ್ಯರು ಮಾರ್ಗ ತೋರಿದ್ದಾರೆ.

ರಾಮಾನುಜರು ಶ್ರೀಭಾಷ್ಯ, ವೇದಾರ್ಥಸಂಗ್ರಹ, ವೇದಾಂತದೀಪ, ಗೀತಾಭಾಷ್ಯ ಮತ್ತು ಗದ್ಯತ್ರಯಗ್ರಂಥಗಳಲ್ಲಿ ಈ ತತ್ವಗಳನ್ನು ವಿವರಿಸಿ ಅವುಗಳ ಮೂಲಕ ವಿಶಿಷ್ಟಾದ್ವೈತ ವೇದಾಂತದ ಭವ್ಯಭವನವನ್ನು ಕಟ್ಟಿದ್ದಾರೆ. ಆಳ್ವಾರುಗಳಲ್ಲಿ ಅತಿಶ್ರೇಷ್ಠರೆನಿಸಿದ ನಮ್ಮಾಳ್ವಾರ್ ವೇದವನ್ನು ತಮಿಳಿಗೆ ಅನುವಾದಮಾಡಿ 'ವೇದಂ ತಮಿಳ್ ಶೈಯ್ದಮಾರನ್' ಎಂದು ಖ್ಯಾತರಾಗಿದ್ದಾರೆ. ತಮಿಳಿನಲ್ಲಿರುವ ಆಳ್ವಾರುಗಳ ಸಿರಿನುಡಿಗಳಿಗೆ ಸಂಸ್ಕೃತದಲ್ಲಿರುವ ವೇದಾಂತವಾಕ್ಯಗಳ ಜೋಡಣೆಮಾಡಿ ಸದುಪಯೋಗ ಮಾಡಿ, ಅಮೋಘಸೇವೆ ಸಲ್ಲಿಸಿದುದರಿಂದ ಇವರು 'ಉಭಯ ವೇದಾಂತ ಪ್ರವರ್ತಕ'ರೆಂದು ನಾಮಾಂಕಿತ ರಾಗಿದ್ದಾರೆ. ಅಂತಹ ಸಂಯೋಗದಿಂದ ಆಚಾರ್ಯರ ದರ್ಶನದಲ್ಲಿ ಭಕ್ತಿ ಅನುಕಂಪ ಕೇವಲ ಬಾಹ್ಯವೆನಿಸದೆ ಜ್ಞಾನಪ್ರಚೋದಿತ ಅನುಕಂಪಾನುರಾಗಗಳ ಪರ್ಯವಸಾನ ಸ್ಥಿತಿಯಲ್ಲಿನ ಭಗವತ್ ಜ್ಞಾನೋತ್ಪನ್ನವಾದ ಅನುಕಂಪಾನುರಾಗವೆಂಬ ವಿಶೇಷ ಅರ್ಥವನ್ನು ಪಡೆದಿದೆ. ಆಚಾರ್ಯರು 'ಭಕ್ತಿ'ಶಬ್ದವನ್ನು ಧ್ಯಾನ ಮತ್ತು ಉಪಾಸನೆಗಳೊಡನೆ ಸಮದೂಗುತ್ತಾರೆ. ಜ್ಞಾನವೇ ಭಕ್ತಿಯಾಗಿ ಫಲಿಸಿ, ಅನವರತವೂ ಅವನ ಮತ್ತು ಅವನ ಸೇವಕರ (ಭಕ್ತರ) ನಿತ್ಯಕೈಂಕರ್ಯದಲ್ಲಿ ಪರ್ಯವಸಾನ ಹೊಂದುತ್ತದೆ. ಆದುದರಿಂದಲೇ ಆಚಾರ್ಯರ ತತ್ತ್ವ 'ಭಕ್ತಿರೂಪಾಪನ್ನ ಜ್ಞಾನ' ಎಂದು ಪ್ರಕೀರ್ತಿ ಪಡೆದಿದೆ. ಈ ಅಭಿಪ್ರಾಯವನ್ನು ತನ್ನ ಬ್ರಹ್ಮಸೂತ್ರಭಾಷ್ಯವಾದ ಶ್ರೀ ಭಾಷ್ಯದ ಆರಂಭದಲ್ಲಿ "ಶಾಸ್ತ್ರ ವ್ಯಾಸಂಗ ಜನಿತವಾದ ಜ್ಞಾನವು ಸ್ವಾಮಿ ಸೇವೆಯ ಪ್ರೇಮಾನುರಾಗದಲ್ಲಿ ಪರ್ಯವಸಾನವಾಗಲಿ—ಎಂದು ಪ್ರಾರ್ಥಿಸುತ್ತೇನೆ." (ಶ್ರುತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ)" ಎಂಬ ಮಂಗಳ ಶ್ಲೋಕದಲ್ಲಿ ವ್ಯಕ್ತಪಡಿಸಿದ್ದಾರೆ. ಭಗವದ್ಭಾಗವತರ ಪ್ರೀತ್ಯಾದರ ಅನುರಾಗ ಜನ್ಯವಾದ ಸೇವಾ ಅಥವಾ ಕ್ರಿಯಾ ಮನೋಭಾವವು ಆಚಾರ್ಯರನ್ನು ವಿಶಿಷ್ಟಾದ್ವೈತದ ದರ್ಶನ ತತ್ತ್ವಗಳಿಂದ ಶ್ರೀವೈಷ್ಣವ ಮತಾಚರಣೆಗಳಿಗೆ ಕರೆದೊಯ್ಯುತ್ತದೆ. ಅಲ್ಲದೆ ಅವರ ವಿಶಿಷ್ಟಾದ್ವೈತ ವೇದಾಂತ ತತ್ತ್ವಗಳನ್ನು 'ಚಿದಚಿದೀಶ್ವರ' ತತ್ವಗಳಲ್ಲಡಗಿಸಿದೆ.

ಆಚಾರ್ಯರೇ ಅಪ್ಪಣೆಕೊಡಿಸಿರುವಂತೆ ಅವರಿಂದ ಪ್ರತಿಪಾದಿತವಾದ ವೇದಾಂತ ತತ್ತ್ವಗಳು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ತತ್ತ್ವ, ಹಿತ ಮತ್ತು ಪುರುಷಾರ್ಥ ಎಂಬವೇ ಆ ಮೂರು ತತ್ತ್ವಗಳು. ಜೀವ, ಜಗತ್ತು ಮತ್ತು ಬ್ರಹ್ಮಗಳ ವೇದಾಂತ ಜ್ಞಾನವೇ ತತ್ತ್ವ. ಜೀವನದ ಅಂತ್ಯಗುರಿಯನ್ನು ಸಾಧಿಸಲು ಸಹಾಯಕವಾಗುವುದೇ ಹಿತ. ಅವಾವುದೆಂದರೆ, ಕೈಂಕರ್ಯ ಎಂಬ ಹೆಸರಿನಿಂದ ಕರೆಯಲ್ಪಡುವ ಸ್ವಾಮಿಗೆ ಮೀಸಲಾಗಿಡಲ್ಪಟ್ಟ ಕರ್ಮ, ಭಕ್ತಿ, ಪ್ರಪತ್ತಿಗಳು. ಜೀವನು ಸಾಧಿಸಬೇಕಾದ ಅಂತಿಮ ಗುರಿಯೇ ಪುರುಷಾರ್ಥ. ಸ್ವಾಮಿಯೊಡನೆ ಅವಿಚ್ಛಿನ್ನವಾದ, ಅತ್ಯಂತ ಸಮೀಪತರ ಸಂಬಂಧ ಮತ್ತು ಅವನಿಗೆ ಅನವರತವಾದ ಸೇವೆ—ಇವುಗಳೇ ಜೀವನ ಪುರುಷಾರ್ಥ.

ಆಚಾರ್ಯರು ವಿಶಿಷ್ಟಾದ್ವೈತ ದರ್ಶನದ ತಿಳಿವಳಿಕೆಯಿಂದ ತಾವು ಮಾತ್ರ ಸಂತುಷ್ಟರಾಗದೆ ಭಾರತ ದೇಶಾದ್ಯಂತ ಅದನ್ನು ಪ್ರಚಾರ ಮಾಡಲು ತಮ್ಮ ಜೀವಮಾನವನ್ನೆಲ್ಲಾ ಕಳೆದರು. ಅವರು ಮತ್ತು ಅವರ ಶಿಷ್ಯಕೋಟಿಗಳಿಂದ ಪ್ರಚಾರವಾದ ಸಿದ್ಧಾಂತವು ಇಂದು ಭಾರತದಲ್ಲೆಲ್ಲಾ ತನ್ನ ಭಕ್ತರನ್ನು ಪಡೆದಿದೆ.

ತಮಿಳು ನಾಡಿನಲ್ಲಿ ಶ್ರೀ ವೈಷ್ಣವ ಮತವನ್ನು ಪ್ರಚಾರ ಮಾಡುವಾಗ ಆಚಾರ್ಯರು ಅನೇಕ ಹಿಂಸೆ ಗಳಿಗೀಡಾಗಬೇಕಾಯಿತು. ತತ್ಕಾರಣದಿಂದ ಕರ್ಣಾಟಕಕ್ಕೆ ಬಂದು ಅವರು ಸ್ವಲ್ಪ ಕಾಲ ಇದ್ದರು. ಕರ್ಣಾಟಕದಲ್ಲಿ ಅವರು ಮತೋದ್ಧಾರ ಕೆಲಸವನ್ನು ಕೈಗೊಂಡಾಗ ಭಟ್ಟರು, ಹೆಬ್ಬಾರರು. ಹೆಮ್ಮಿಗೆಯರು, ಕದಂಬಿಯರು, ಕಂದಾಡೆಯರು, ನಲ್ಲಾನ ಚಕ್ರವರ್ತಿ, ತಾತಾಚಾರ್ಯರು–ಮತ್ತಿತರ ಧರ್ಮನಿಷ್ಠ ಮತ್ತು ಪಾಂಡಿತ್ಯದಿಂದ ಕೂಡಿದ ತಮಿಳು ಸಂಸಾರಗಳು ಮತ್ತು ಅನೇಕ ಬ್ರಾಹ್ಮಣೇತರ ಜನಾಂಗದವರು ಕರ್ಣಾಟಕದಲ್ಲಿ ಬಂದು ನೆಲಸಿದರು ("Cultural Heritage of India" Vol. IV, P. 176).

ದಾಕ್ಷಿಣಾತ್ಯರ ವಿಷ್ಣುಭಕ್ತಿ ಪಂಥವನ್ನು ಉತ್ತರ ಭಾರತದಲ್ಲಿ ಹರಡಲು ಸ್ವಾಮಿ ರಾಮಾನಂದರು ಕಾರಣರೆಂದು ಸಾಮಾನ್ಯವಾಗಿ ಪ್ರತೀತಿ. ಆದರೆ ನಿಜವಾಗಿಯೂ ಈ ಗೌರವ ರಾಮಾನಂದರ ಗುರುಗಳಾದ ಸ್ವಾಮಿ ರಾಘವಾನಂದರಿಗೆ ಸಲ್ಲಬೇಕೆಂದು ಕೆಲವರ ಅಭಿಪ್ರಾಯ. ಉತ್ತರ ಭಾರತದಲ್ಲಿ ಶ್ರೀ ವೈಷ್ಣವ ಮತಸ್ಥಾಪನೆಯ ಕಾರ್ಯದಲ್ಲಿ ಅವರು ಹೆಚ್ಚು ಶ್ರದ್ಧಾಸಕ್ತಿಯನ್ನು ವಹಿಸಿದ್ದರು. ರಾಮಾನುಜ ಮತ ಸಿದ್ಧಾಂತ ದಲ್ಲಿ ಆದರಾಸಕ್ತಿಗಳಿದ್ದ ಸ್ವಾಮಿ ರಾಘವಾನಂದರು ವಾರಣಾಸಿಗೆ ಹೋಗಿ ನೆಲಸಿದ್ದರು. ನಾಭಾಜೀಯವರ ಕೃತಿಯಾದ 'ಭಕ್ತಿಮಾಲೆ'ಯಲ್ಲಿ ರಾಮಾನುಜ ಪದ್ಧತಿಯು ಸ್ಪಷ್ಟವಾಗಿ ಉಕ್ತವಾಗಿದ್ದುದಲ್ಲದೆ, ರಾಘವಾ ನಂದರ ಮತವು ರಾಮಾನಂದರಿಂದ ಪ್ರಚಾರ ಮಾಡಲ್ಪಟ್ಟಿತೆಂದೂ ಹೇಳಲ್ಪಟ್ಟಿದೆ. 'ಹರಿಭಕ್ತಿ ಸಿಂಧು ವೇಲಾ' ಎಂಬ ಗ್ರಂಥದಲ್ಲಿ ರಾಘವೇಂದ್ರರು 'ರಾಮಮಂತ್ರ'ವನ್ನು ಉತ್ತರದಲ್ಲಿ ಪ್ರಚಾರ ಮಾಡಿದರೆಂದು ಹೇಳಿದೆ. ಅದರಲ್ಲಿ ಕಾಶಿಯಲ್ಲಿ ಪಂಚಗಂಗಾ ಘಾಟಿನಲ್ಲಿ ಅತಿ ಅವನತಿ ಸ್ಥಿತಿಯಲ್ಲಿರುವ 'ರಾಘವಾನಂದ' ಎಂದು ಕರೆಯಲ್ಪಡುವ ಒಂದು ಆಶ್ರಮದಲ್ಲಿ ರಾಘವಾಚಾರ್ಯ ಅಥವಾ ರಾಘವಾನಂದರು ವಾಸಿಸು ತ್ತಿದ್ದರೆಂದು ಹೇಳಿದೆ. (ವಂದೇ ಶ್ರೀ ರಾಘವಾಚಾರ್ಯಂ ರಾಮಾನುಜ ಕುಲೋದ್ಭವಂ। ಯಸ್ಮಾತ್ ಉತ್ತರಮಾಗತ್ವಾ ರಾಮಮಂತ್ರ ಪ್ರಚಾರಕಂ).

'ವೈಷ್ಣವ ಮತಾಬ್ಜ ಭಾಸ್ಕರ' ಮತ್ತು 'ರಾಮಾರ್ಚನ ಪದ್ಧತಿ' ಎಂಬವು ಸ್ವಾಮಿ ರಾಮಾ ನಂದರ ಕೃತಿಗಳೆಂದು ತಿಳಿದುಬಂದಿದೆ. ಎರಡನೆಯ ಗ್ರಂಥದಲ್ಲಿ ರಾಮಾನಂದರು ತಮ್ಮ ಗುರು ಪರಂಪರೆ ಯನ್ನು ಹೀಗೆ ತಿಳಿಸುತ್ತಾರೆ: "ರಾಮಚಂದ್ರ-ಸೀತಾಜಿ ವಿಷ್ವಕ್ಸೇನ–ಶಠಗೋಪ ಸ್ವಾಮಿ–ಶ್ರೀನಾದಮುನಿ– ಪುಂಡರೀಕಾಕ್ಷ ಆಚಾರ್ಯ-ಬೋಪದೇವಾಚಾರ್ಯ-ದೇವಾಧಿಪ-ಪುರುಷೋತ್ತಮ-ಗಂಗಾಧರ-ರಾಮೇಶ್ವರ ದ್ವಾರಾನಂದ–ದೇವಾನಂದ-ಶ್ರಿಯಾನಂದ–ಹರಿಯಾನಂದ–ರಾಘವಾನಂದ–ರಾಮಾನಂದ."

ಶ್ರೀ ರಾಮಾನುಜರು ರಚಿಸಿದ ಚಿದಚಿದೀಶ್ವರ ತತ್ವತ್ರಯವನ್ನು ರಾಮಾನಂದರು ಅಂಗೀಕರಿಸಿದ್ದಾರೆ. ಅವರ ಈಶ್ವರನೂ 'ಚಿದಚಿತ್ ವಿಶಿಷ್ಟ ಈಶ್ವರ'. ಆಚಾರ್ಯರ ರಹಸ್ಯತ್ರಯವಾದ ಮೂಲಮಂತ್ರ, ದ್ವಯ ಮತ್ತು ಚರಮ ಮಂತ್ರಗಳಲ್ಲಿ ಮೂಲ ಮಂತ್ರವನ್ನು 'ಶ್ರೀರಾಮ ರಾಮಾಯ ನಮಃ' ಎಂದೂ, ದ್ವಯ ಮಂತ್ರವನ್ನು "ಶ್ರೀಮದ್ರಾಮಚಂದ್ರ ಚರಣೌ ಶರಣಂ ಪ್ರಪದ್ಯೇ ; ಶ್ರೀಮತೇ ರಾಮಚಂದ್ರಾಯ ನಮಃ" ಎಂದೂ ಬದಲಾಯಿಸಿ, ಚರಮ ಮಂತ್ರವನ್ನು ವಾಲ್ಮೀಕಿ ರಾಮಾಯಣದ

> "ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ
> ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ"

ಎಂದೂ ಒಪ್ಪಿಕೊಂಡಿದ್ದಾರೆ.

ರಾಮಾನುಜರಿಂದ ಉಕ್ತವಾದ ವಿವೇಕ, ವಿಮೋಕ, ಅಭ್ಯಾಸ, ಕ್ರಿಯಾ, ಕಲ್ಯಾಣ, ಅನವಸಾದ ಮತ್ತು ಅನುದ್ಧರ್ಶ ಮೊದಲಾದ ಸಾಧನ ಸಪ್ತಕವನ್ನು ರಾಮಾನಂದರು ತಮ್ಮ ಕೃತಿಯಲ್ಲಿ ಹೇಳುತ್ತಾರೆ. ದಕ್ಷಿಣ ಭಾರತದ ವೈಷ್ಣವ ಸಂಪ್ರದಾಯವು ಭಿನ್ನವಾಗದೆ ಉತ್ತರಭಾರತದಲ್ಲಿಯೂ ಪ್ರಸರಿಸಿತೆಂದು ಸೂಚಿಸಬಹುದಾದ ವೈಷ್ಣವ ಜೀವನ ಸಂಪ್ರದಾಯ, ಪೂಜಾಕ್ರಮ ವಿಧಿಗಳು ಮತ್ತು ಕಾಲಕ್ಷೇಪವೆಂದು ಹೆಸರಾದ ಭಾಷಣಮಾಲಾ ಕ್ರಮ—ಮೊದಲಾದವುಗಳನ್ನು ರಾಮಾನಂದರು ಉತ್ತರ ಭಾರತದಲ್ಲಿ ಆಚರಣೆಗೆ ತಂದರು.

ಮೂಲ ಲೇಖಕರು : ಶ್ರೀ ಎಂ. ಯಾಮುನಾಚಾರ್ಯ
ಅನುವಾದಕರು : ಡಾ|| ಎಂ. ಎನ್. ನರಸಿಂಹನ್

# ದ್ವೈತ ವೇದಾಂತ

ವೇದಾಂತವನ್ನು ವಿಭಿನ್ನದೃಷ್ಟಿಗಳಿಂದ ಪ್ರತಿಪಾದಿಸಿದ ದಕ್ಷಿಣ ಭಾರತದ ಮೂವರು ಮಹಾ ಆಚಾರ್ಯರಲ್ಲಿ 13ನೆ ಶತಮಾನದಲ್ಲಿ ಪ್ರವರ್ಧಮಾನರಾಗಿದ್ದ ಮಧ್ವಾಚಾರ್ಯರೇ ಕಾಲದ ದೃಷ್ಟಿಯಿಂದ ಅರ್ವಾಚೀನರು. ಕರ್ಣಾಟಕ ಪ್ರಾಂತ್ಯದ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಹತ್ತಿರವೇ ಇರುವ ಒಂದು ಗ್ರಾಮದಲ್ಲಿ ಇವರು ಜನಿಸಿದರು. ಇವರು ತಮ್ಮ ಪೂರ್ವಜನ್ಮಗಳಲ್ಲಿ ಮಹಾಭಾರತದ ಭೀಮನೂ ರಾಮಾಯಣದ ಆಂಜನೇಯನೂ ಆಗಿದ್ದರೆಂದು ಸಾಮಾನ್ಯ ಜನರ ನಂಬಿಕೆ. ಇವರು ರಾಮಾನುಜರಂತೆ ಭಕ್ತಿಮಾರ್ಗವನ್ನೆ ಉಪದೇಶಿಸಿದರು ; ಮತ್ತು ಸತ್ಯದ ಸಮಸ್ಯೆಯನ್ನು ಬಿಡಿಸಲು ತರ್ಕಬದ್ಧವಾದ ಬೌದ್ಧಿಕ ಮಾರ್ಗದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಇವರ ದರ್ಶನವನ್ನು ವ್ಯಾಖ್ಯಾನಿಸಿ, ಮೇಧಾವಿಗಳಿಗೂ ಸಾಮಾನ್ಯ ಜನರಿಗೂ ಉಪದೇಶಿಸಿದ ಇವರ ಶಿಷ್ಯಾಗ್ರಣಿಗಳೆಲ್ಲರೂ ಪ್ರಾಯಶಃ ಕರ್ಣಾಟಕಕ್ಕೆ ಸೇರಿದವರು. ಇವರ ಮತಾನುಯಾಯಿಗಳಾದ ಮಠಗಳಲ್ಲಿ ಹೆಚ್ಚಿನವು ಕರ್ಣಾಟಕದಲ್ಲಿವೆ.

ಈಗ ನಾವು ಮಧ್ವಾಚಾರ್ಯರು ಉಪದೇಶಿಸಿದ ವೇದಾಂತ ಮತವನ್ನು ಸಮೀಕ್ಷಿಸೋಣ.

## ಮತ

ಬ್ರಹ್ಮಮೀಮಾಂಸೆಯ ಸಾಧನೆಯೇ, ಅಂದರೆ ಬ್ರಹ್ಮಜಿಜ್ಞಾಸೆಯೇ ಮನುಷ್ಯಜೀವನದ ಪರಮ ಪುರುಷಾರ್ಥ–ಎಂದು ಮಧ್ವಾಚಾರ್ಯರು ಗ್ರಹಿಸಿದರು. ಸರ್ವಸ್ವವನ್ನೂ ತನ್ನಲ್ಲಿ ಅಡಗಿಸಿಕೊಳ್ಳುವ ತತ್ತ್ವವೇ ಬ್ರಹ್ಮ ; ಅಂತೆಯೇ ಬ್ರಹ್ಮಮೀಮಾಂಸೆ ಅದಕ್ಕೆ ಸಾಧನ. ಆದುದರಿಂದ ಅವರು ಕೊಟ್ಟಿರುವ ಧಾರ್ಮಿಕ ಜೀವನದ ವಿವರಣೆ ಕೇವಲ ನಂಬಿಕೆಗಾಗಲಿ, ಮತಕ್ಕಾಗಲಿ ಸೀಮಿತವಾಗಿಲ್ಲ. ಮತಾಚರಣೆಯು ದರ್ಶನದ ಪ್ರಾಯೋಗಿಕ ವಿಭಾಗ.

ವೇದಾಂತಗಳ ದಾರ್ಶನಿಕ ಪ್ರತಿಪಾದನೆಗಳ ಸಮಸ್ಯೆ ಹಾಗೂ ಅವುಗಳ ಉಪದೇಶಗಳನ್ನು ನಿತ್ಯಜೀವನದಲ್ಲಿ ಆಚರಿಸುವ ಬಗೆಗೆ ಅವರು ತಾರ್ಕಿಕ ದೃಷ್ಟಿಯನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದರು.

ನಮ್ಮ ಜೀವನವನ್ನು ವ್ಯವಸ್ಥೆಗೊಳಿಸಲು ಉಪಯುಕ್ತವಾದ ಕೆಲವು ವಿಷಯಗಳನ್ನು ಆಚಾರ್ಯರ ಕೃತಿಗಳಿಂದಲೇ ನಾವು ಸಂಗ್ರಹಿಸಬಹುದು.

ಮಧ್ವಾಚಾರ್ಯರು ಬ್ರಹ್ಮಜಿಜ್ಞಾಸಾಪೇಕ್ಷಿಕೆಯನ್ನು ಈ ರೀತಿ ಪರಿಷ್ಕರಿಸಿಕೊಂಡಿದ್ದಾರೆ : ಪ್ರಪಂಚವು ಚಿತ್ತಚಾಂಚಲ್ಯವುಂಟುಮಾಡುವ ಅನೇಕ ವಿಷಯಗಳಿಂದ ಕೂಡಿದೆ. ಇವುಗಳ ಪ್ರಭಾವವಿಲ್ಲದಿರುವ ಜ್ಞಾನೇಂದ್ರಿಯಗಳೇ ಇಲ್ಲ. ಪ್ರತಿಯೊಂದು ಐಂದ್ರಿಯಕ ವಿಷಯವೂ ಆನಂದದಾಯಕವಾಗಿ ತೋರುತ್ತದೆ ಯಾದರೂ ಅದಕ್ಕೆ ಆನಂದ ಕೊಡುವ ಶಕ್ತಿಯಿಲ್ಲ. ಅದೂ ಅಲ್ಲದೆ, ಮಧ್ವಾಚಾರ್ಯರು ತಮ್ಮ '**ಅಣುವ್ಯಾಖ್ಯಾನ**'ದಲ್ಲಿ ಹೇಳುವಂತೆ, ವಿಶುದ್ಧ ವಿಜ್ಞಾನವುಳ್ಳ ಜನರು–ಅಂದರೆ, ಪೂರ್ವಾಭಿಪ್ರಾಯವಿಲ್ಲದೆ

ಕೇವಲ ತತ್ವದ ಅನನ್ಯ ಆರಾಧಕರಾದವರು ವಿರಳ. ಜನರು ಸಾಮಾನ್ಯವಾಗಿ ಪರಮ ತತ್ವವನ್ನು ಅನಾದರಿಸುತ್ತಾರೆ. ಪರತತ್ವ ಪ್ರತಿಪಾದಕರಿಗೆ ಎಂದೂ ಪ್ರೋತ್ಸಾಹವಿಲ್ಲ, ಆದರೂ ಚತುರ್ಮುಖನಂತಹ ದೈವಿಕ ವ್ಯಕ್ತಿಗಳೂ ಇದ್ದಾರೆ. ಅವರಿಗೋಸ್ಕರವೇ ಬಾದರಾಯಣರು ಬ್ರಹ್ಮಮೀಮಾಂಸೆಯನ್ನು ರಚಿಸಿದರು.

ಚತುರ್ಮುಖ ಮುಂತಾದವರನ್ನು ಪ್ರಸ್ತಾವಿಸಿರುವುದರಿಂದ ಮನುಷ್ಯರನ್ನು ಅಲ್ಲಗಳೆಯುವುದಾಗಿ ತಿಳಿಯಬಾರದು. ಮಧ್ವಾಚಾರ್ಯರು ತಮ್ಮ 37 ಕೃತಿಗಳಲ್ಲೂ ಸಂದರ್ಭೋಚಿತವಾಗಿ ಮನುಷ್ಯರು ವಿಷಯಾಕೃಷ್ಟರಾಗುವ ಪರಿಸ್ಥಿತಿಯನ್ನು ಉಲ್ಲೇಖಿಸಿದ್ದಾರೆ. ಚಿತ್ತಚಾಂಚಲ್ಯ ಹಾಗೂ ಅವುಗಳ ಪರಿಹಾರಗಳನ್ನು ವೈಯಕ್ತಿಕ ಮತ್ತು ಸಾಮಾಜಿಕ ವರ್ಗಗಳಾಗಿ ವಿವೇಚಿಸಬಹುದು.

**ವೈಯಕ್ತಿಕ**

1. **ವಿರೋಧಿ ಸಾಂಸಾರಿಕ ಪರಂಪರೆ :** ಬ್ರಹ್ಮಮೀಮಾಂಸೆಯನ್ನು ಸಾಧಿಸಲು ಪ್ರತಿಯೊಬ್ಬನೂ ತನ್ನ ಸಾಂಸಾರಿಕ ಪರಿಸ್ಥಿತಿಗಳನ್ನು ಸುಧಾರಿಸಲು ಪ್ರಯತ್ನಿಸಬೇಕು ; ಅಥವಾ ನಿರ್ಲಿಪ್ತನಾಗಿರಬೇಕು.

2. **ಮಂದ ಬುದ್ಧಿ, ಅನಾರೋಗ್ಯ, ಅಜ್ಞಾನಾಧಿಕ್ಯ :** ಇವು ಬ್ರಹ್ಮಮೀಮಾಂಸೆಯನ್ನು ಬಿಡಲು ನೆಪಗಳಾಗಬಾರದು. ಯಾವುದೇ ಸಂದರ್ಭದಲ್ಲೂ ಕೀಳುಮಟ್ಟದ ನಡೆವಳಿಕೆಯನ್ನು ಆಶ್ರಯಿಸಬಾರದು.

3. **ದಾಸ್ಯ ಮನೋಭಾವ :** ಈ ಪ್ರವೃತ್ತಿಯನ್ನು ಎಂದೂ ಬೆಳೆಸಬಾರದು. ಇಂತಹ ಮನಃ ಪ್ರವೃತ್ತಿಯನ್ನು ನಿರ್ಮೂಲಗೊಳಿಸಬೇಕು. ದುಷ್ಟತೆಗೆ ಮಣಿಯುವ ಅಭ್ಯಾಸವು ಆತ್ಮವಿನಾಶದಲ್ಲಿ ಪರ್ಯವಸಾನವಾಗಬಹುದು.

4. **ಪ್ರಾಣ ಸಂರಕ್ಷಣಾ ಪ್ರವೃತ್ತಿ :** ಈ ಪ್ರವೃತ್ತಿ ಬ್ರಹ್ಮಜ್ಞಾನಕ್ಕೆ ಅಡ್ಡಿ. ಭಯವೇ ಈ ಭಾವನೆಗೆ ಕಾರಣ. ಪರಬ್ರಹ್ಮನಲ್ಲಿ ಆಸಕ್ತನಾಗಿರುವವನಿಗೆ ಭಯವು ತಕ್ಕುದಲ್ಲ. ಜೀವನದ ಎಲ್ಲಾ ಸ್ಥಿತಿಗತಿಗಳೂ ಬ್ರಹ್ಮನ ಕೈವಾಡವಾಗಿರುವುದರಿಂದ ಅವನ ಹೊರತಾದ ಯಾವುದೂ ಭಯಕ್ಕೆ ಕಾರಣವಾಗಲಾರದು.

5. **ಕರ್ಮ :** 'ಎಲ್ಲವೂ ನಮ್ಮ ಕರ್ಮಾನುಗುಣ' ಎಂಬ ಭಾವನೆ ಮನುಷ್ಯನಲ್ಲಿ ಸ್ವಾಭಾವಿಕವಾಗಿರುವಂತೆ ಕಾಣುತ್ತದೆ. ಆದರೆ ಈ ಭಾವನೆ ದೃಢವಾದಂತೆಲ್ಲ ಇದು ಸರ್ವಕರ್ತೃವಾದ (ಶಕ್ತನಾದ) ಬ್ರಹ್ಮನನ್ನು ಅರಿಯಲು ಬಾಧಕವಾಗುತ್ತದೆ.

ಆದ್ದರಿಂದ ತಾನು ಮಾಡುವ ಕರ್ಮವನ್ನು ಅದರ ಫಲದಿಂದ ಸಂಗ ದೂರವಾಗಿರುವಂತೆ ಮಾಡಬಲ್ಲವನಾಗಬೇಕು.

6. **ಭಕ್ತಿ :** ಮನುಷ್ಯನು ಆಲಸ್ಯದ ಸ್ವಭಾವವುಳ್ಳವನು. ತನ್ನ ಬುದ್ಧಿಶಕ್ತಿಯನ್ನು ಅನಾದರಿಸಿ ಅವನು ಭಾವಪರವಶನಾಗುತ್ತಾನೆ. ಯಾವುದಾದರೂ ಒಂದು ವಿಷಯವನ್ನು ಕೂಡಲೆ ನಂಬುವನು. ಆದರೆ ಅದನ್ನು ವಿವೇಚಿಸಲು ನಿರಾಕರಿಸುವನು. ಈ ರೀತಿ ಮನುಷ್ಯರು ವಿಚಾರ ಶೂನ್ಯರಾಗಿ ನಂಬಿಕೆಗೆ ವಶರಾಗುತ್ತಾರೆ. ಮತ್ತೆ ಅದು ಕೆಲವು ಸಮಯಗಳಲ್ಲಿ ಕೆಟ್ಟ ಮತವಾಗಿ ಪರಿಣಮಿಸುತ್ತದೆ. ನಮ್ಮ

ವಿಚಾರ ಶಕ್ತಿಯು ಪೂರ್ಣತಃ ಚುರುಕಾಗಿಲ್ಲದಿದ್ದಲ್ಲಿ, ಕೇವಲ ನಂಬಿಕೆಯು ಆತ್ಮನಾಶದಲ್ಲಿ ಪರ್ಯವಸಾನ ಹೊಂದುತ್ತದೆ.

**7. ಸಿದ್ಧಾಂತದ ಮೇಲಣ ಅವಲಂಬನೆ :** ಸಾಮಾನ್ಯವಾಗಿ ಮನುಷ್ಯನು ಯಾವುದೇ ವಿಷಯದಲ್ಲಿಯೂ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪೂರ್ತಿಯಾಗಿ ವಿಮರ್ಶಿಸಿ, ಒಂದು ತೀರ್ಮಾನಕ್ಕೆ ಬರುವುದಿಲ್ಲ. ಅದಕ್ಕೆ ಬದಲು ಬೇರೆಯವರು ಈ ವಿಷಯದಲ್ಲಿ ಬಂದಿರುವ ತೀರ್ಮಾನಕ್ಕೇ ಇವನೂ ಬರುತ್ತಾನೆ. ಇದರಿಂದ ಒಂದು ದೊಡ್ಡ ತೊಂದರೆ ಇದೆ: ಯಾವುದೇ ತೀರ್ಮಾನವು ಕೇವಲ ಶಬ್ದಗಳಿಂದಾದ ಒಂದು ಹೇಳಿಕೆ ಮಾತ್ರವಷ್ಟೆ! ನಾವೇ, ಯುಕ್ತಾಯುಕ್ತ ವಿವೇಚನೆ ಮಾಡಿ, ಕೈಕೊಂಡ ನಿರ್ಣಯವು ವಿಮರ್ಶೆ ಮಾಡದೆ ನಾವು ಕೈಕೊಂಡ ಮತ್ತೊಬ್ಬರ ನಿರ್ಣಯಕ್ಕಿಂತ ಬೇರೆಯಾಗಿರುತ್ತದೆ. ಒಂದು ವಸ್ತುವಿನ ಸೌಂದರ್ಯವನ್ನು ವ್ಯಕ್ತಿಯು ತಾನೇ ನೋಡಿದಾಗ ಆನಂದಪಡುತ್ತಾನೆ. ಅದನ್ನು ಚೆನ್ನಾಗಿ ಆಲೋಚಿಸಿ ಕೈಗೊಂಡ ನಿರ್ಣಯದ ಪ್ರಾಮಾಣ್ಯವು ಶ್ಲಾಘನೀಯವಾದುದು. ಆದರೆ ಆಲೋಚನೆ ನಡೆದಾಗ, ಆ ಆಲೋಚನೆಯೇ ಎಲ್ಲವನ್ನೂ ತೀರ್ಮಾನಿಸುತ್ತದೆ. ಅಲ್ಲಿ ನಂಬಿಕೆಗೆ ಸ್ಥಾನವಿಲ್ಲ.

**8. ಅನುಮಾನ :** ಸ್ವಾನುಭವ ಪರಿಮಿತವಾದ ಹೇತುವು ಅಥವಾ ಕಾರಣವು ಆ ಅನುಭವಕ್ಕೇ ಇರುವ ಸಂಕೋಚಗಳಿಗೆ ಒಳಪಟ್ಟಿರುತ್ತದೆ ಅಥವಾ ಸೀಮಿತವಾಗಿರುತ್ತದೆ. ಈ ಅನುಭವವು ಅಜ್ಞಾನದ ಫಲವಾದ್ದರಿಂದ ಈ ಅನುಭವವನ್ನು ಅವಲಂಬಿಸಿರುವ ಅನುಮಾನವು ಅಜ್ಞಾನಕ್ಕೆ ಹೊರತಾಗಿರುವುದಿಲ್ಲ. ಅದೂ ಅಲ್ಲದೆ, ನಾವೇ ಕೈಕೊಂಡಿರುವ ಅನುಮಾನಾತ್ಮಕ ಜ್ಞಾನವು ನಿರ್ಣಯಾತ್ಮಕವಲ್ಲ. ಒಂದು ಕ್ಷಣದಲ್ಲಿ ಅದು ಒಂದು ವಿಷಯವನ್ನು ಸಾಧಿಸುವುದು. ಮತ್ತೊಂದು ಕ್ಷಣದಲ್ಲಿ ಅದಕ್ಕೆ ವಿರುದ್ಧವಾದ ವಿಷಯವನ್ನು ಸಾಧಿಸುವುದು. ಆದ್ದರಿಂದ ಅದನ್ನು "ಬ್ರಹ್ಮ ಮೀಮಾಂಸಾ" ತರ್ಕದಿಂದ ಸಾಧಿಸಬೇಕು. ಇದು ವೇದದ ಶರೀರವಾಗಿದೆ. ಆದ್ದರಿಂದಲೇ ಯಾವಾಗಲೂ ಅಪ್ರಮಾಣವಾಗಿರುವುದಿಲ್ಲ.

**9. ಪ್ರಾರ್ಥನೆ :** ಎಲ್ಲ ಸಂದರ್ಭಗಳಲ್ಲಿಯೂ ಪ್ರತ್ಯಕ್ಷನಾಗಿ ಕಾಣದಿರುವ ಯಾವುದೋ ಒಂದಕ್ಕೆ ಅಥವಾ ಸಂಪೂರ್ಣವಾಗಿ ಅಜ್ಞಾತವಾದ ಶಕ್ತಿಗೆ ಪ್ರಾರ್ಥನೆಯನ್ನು ಸಲ್ಲಿಸುವರು. ಅದು ಒಳ್ಳೆಯದನ್ನೇ ಮಾಡುತ್ತದೆ ಎಂದು ತಿಳಿಯುವುದು ಕೇವಲ ನಂಬಿಕೆ. ಆದ್ದರಿಂದ ಅದು ನಂಬಿಕೆಗಳಲ್ಲಿರುವ ಎಲ್ಲ ದೋಷಗಳಿಂದಲೂ ಕೂಡಿರುತ್ತದೆ. ಯಾವನು ಜಿಜ್ಞಾಸೆಯಲ್ಲಿಯೇ ಮುಳುಗಿರುತ್ತಾನೋ ಅವನಿಗೆ ಪ್ರಾರ್ಥನೆಯ ಆವಶ್ಯಕತೆ ಇಲ್ಲ. ಅಂಥವನಿಗೆ ಪ್ರಾರ್ಥನೆಯ ಫಲವನ್ನು, ಜಿಜ್ಞಾಸೆಯೇ ಒದಗಿಸುವುದು.

**10. ಔದಾಸೀನ್ಯ :** ಔದಾಸೀನ್ಯವು ಆಲಸ್ಯದ ಒಂದು ಪ್ರಭೇದ. ಬ್ರಹ್ಮನಿಂದ ಕೊಡಲ್ಪಟ್ಟ ಶರೀರ, ಪರಿಸರ, ಮುಂತಾದವುಗಳಿಂದಲೇ ಮನುಷ್ಯನು ಜೀವಿಸುತ್ತಿರುವಾಗ ಇಂತಹ ಆಲಸ್ಯದಲ್ಲಿ ಕಾಲ ಕಳೆಯುವುದು ಉಚಿತವಲ್ಲ.

**11. ವಿಚಾರ ವಿಮುಖತೆ :** ವಿಚಾರ ವಿದ್ವೇಷವು ಬ್ರಹ್ಮವಿದ್ವೇಷದಲ್ಲಿಯೇ ಪರ್ಯವಸಾನವಾಗುವುದು. ಕಾರಣ, ಬ್ರಹ್ಮಜ್ಞಾನವು ವಿಚಾರದ ಫಲ. ಅಂತತಃ ಈ ಔದಾಸೀನ್ಯ ಮತ್ತು ವಿದ್ವೇಷವನ್ನು ಪೂರ್ಣವಾಗಿ ನಾಶಮಾಡಲು ಬ್ರಹ್ಮಮೀಮಾಂಸೆಯ ಯಾಂತ್ರಿಕಾಧ್ಯಯನವೂ ಕಾಲಕ್ರಮದಲ್ಲಿ ಸಹಾಯಕವಾಗುವುದು.

**12. ಸಿದ್ಧಿ :** ಅನೇಕ ವೇಳೆ ಸಿದ್ಧಿ ಅಥವಾ ಜಯದ ಭಾವನೆಯೇ ಪ್ರಾರ್ಥನೆ ಅಥವಾ ಶ್ರದ್ಧೆಯನ್ನು ಬಲಪಡಿಸುತ್ತದೆ. ಆದರೆ ಈ ವಿಷಯದ ಪರ್ಯಾಲೋಚನೆಯ ಕ್ರಮವು ಸರಿಯಾದುದಲ್ಲ.

ಪ್ರತಿಯೊಂದು ಸಂದರ್ಭದಲ್ಲಿಯೂ ಸಿದ್ಧಿಯ ಕಾರಣವು ಬೇರೆಯೇ ಆಗಿರುತ್ತದೆ. ಸಿದ್ಧಿಯು ಶ್ರದ್ಧೆ ಅಥವಾ ಪ್ರಾರ್ಥನೆಯ ಫಲವೆಂಬುದು ಯಾವುದೋ ಇಚ್ಛೆಯಿಂದ ಪ್ರಚೋದಿತವಾದುದು. ಬ್ರಹ್ಮನ ಪ್ರಪಂಚದಲ್ಲಿ ನಂಬಿಕೆ ಮತ್ತು ಪ್ರಾರ್ಥನೆಗಳಿಗೆ ಸ್ಥಾನವಿಲ್ಲ.

**ಸಾಮಾಜಿಕ**

1. **ಗುರುಹಿರಿಯರ ಉಪದೇಶ** : ಹಿರಿಯರ ವಿಚಾರರೂಪವಾದ ಮಾರ್ಗದರ್ಶನವು, ಎಲ್ಲ ಪರಿಸ್ಥಿತಿಗಳಲ್ಲೂ ಬ್ರಹ್ಮಜಿಜ್ಞಾಸುವಿಗೆ ಅನುಕೂಲವಾದ ಸನ್ಮಾರ್ಗವನ್ನು ತಿಳಿಸುತ್ತದೆ. ತಾನಿರುವ ಪರಿಸರವು ಅನುಕೂಲವಾಗಿಲ್ಲದಿದ್ದಲ್ಲಿ ಮನುಷ್ಯನು ತನ್ನ ವಿಚಾರ ಶಕ್ತಿಯಿಂದ ತಾನೇ ಒಂದು ಸ್ವತಂತ್ರ ತೀರ್ಮಾನ ವನ್ನು ಕೈಗೊಂಡು, ದುಷ್ಪರಿಣಾಮವುಂಟುಮಾಡುವ ಅಂತಹ ಪರಿಸ್ಥಿತಿಗಳಿಂದ ಮೇಲೇಳಲು ಪ್ರಯತ್ನಿಸ ಬೇಕು.

2. **ಹಿರಿಯರಲ್ಲಿ ಗೌರವ, ಉಳಿದವರಲ್ಲಿ ಆತ್ಮೀಯತೆ** : ಗೌರವ ಮತ್ತು ಸೌಹಾರ್ದಗಳು ಮನಸ್ಸಿನ ಭಾವಗಳು. ಈ ಭಾವಗಳು ಮನುಷ್ಯನ ವಿಚಾರಶಕ್ತಿಗೆ ಅಡ್ಡಬರಬಾರದು.

3. **ವಿದ್ಯಾಸಂಸ್ಥೆಗಳು** : ಉತ್ತಮವಾದ ವಿದ್ಯಾಸಂಸ್ಥೆಗಳ ಮುಖ್ಯ ಲಕ್ಷಣವೆಂದರೆ, ಜನ ಸಾಮಾನ್ಯರ ಆಸಕ್ತಿ ಮತ್ತು ಧ್ಯೇಯಗಳ ಸಾಧನೆ. ಈ ಸಂಸ್ಥೆಗಳು ಬ್ರಹ್ಮಮೀಮಾಂಸೆಯ ಉದ್ದೇಶ ವನ್ನು ಸಾಧಿಸುವ ಸಲುವಾಗಿ ಇರಬಹುದು, ಅಥವಾ ಇಲ್ಲದಿರಬಹುದು. ಬ್ರಹ್ಮಮೀಮಾಂಸಾಧ್ಯಯನ ಕ್ಕೋಸ್ಕರವೇ ಮೀಸಲಾದ ಸಂಸ್ಥೆಗಳಿದ್ದರೋ ಅವು ಚೆನ್ನಾಗಿ ಅಭಿವೃದ್ಧಿ ಹೊಂದುವ ಲಕ್ಷಣ ಕಂಡು ಬರುತ್ತದೆ.

4. **ಗುರು** : ಬ್ರಹ್ಮಮೀಮಾಂಸಾ ವಿದ್ವೇಷಿಯಾದ ಗುರುವು ಹೆಸರಿಗೆ ಮಾತ್ರ ಗುರುವಾಗಿರು ತ್ತಾನೆ. ಬ್ರಹ್ಮಮೀಮಾಂಸಾ ಅಧ್ಯಯನವನ್ನು ಪೋಷಿಸುವ ಗುರುವೇ ನಿಜವಾದ ಗುರು.

5. **ಮಿತ್ರರು ಮತ್ತು ಶತ್ರುಗಳು** : ಬ್ರಹ್ಮಮೀಮಾಂಸಾ ಜ್ಞಾನಕ್ಕೆ ನೆರವಾಗುವವನೇ ಮಿತ್ರ, ಅದರ ಪ್ರಗತಿಗೆ ಅಡ್ಡಿಯಾಗಿ ನಿಲ್ಲುವವನೇ ಶತ್ರು.

6. **ಸಮಾಜ** ; ಬ್ರಹ್ಮಮೀಮಾಂಸೆಗೆ ಅನುಕೂಲವಾದ ಸಮಾಜವೇ ಒಳ್ಳೆಯ ಸಮಾಜ ಇದೇ ಅಭಿಪ್ರಾಯ ರಾಜಕೀಯ ಮತ್ತಿತರ ಸಂಸ್ಥೆಗಳಿಗೂ ಅನ್ವಯಿಸುತ್ತದೆ.

7. **ದುರದೃಷ್ಟ, ಅನಾರೋಗ್ಯ ಮತ್ತು ದುಃಖ** ; ಇವೆಲ್ಲಾ ಸ್ವಾಭಾವಿಕ ಘಟನೆಗಳು. ಅವು ಸಾಪೇಕ್ಷವಾಗಿರುವುದರಿಂದ ಈ ರೀತಿ ಕರೆಯಲ್ಪಡುತ್ತವೆ. ಬ್ರಹ್ಮಮೀಮಾಂಸಾ ವಿದ್ಯಾರ್ಥಿಯು (ಬ್ರಹ್ಮಜಿಜ್ಞಾಸುವು) ಒಳ್ಳೆಯದರಲ್ಲಿ ಬ್ರಹ್ಮನನ್ನು ತಿಳಿಯುವಂತೆ, ಇವುಗಳ ಹಿಂದೆಯೂ ಇರುವ ಬ್ರಹ್ಮತತ್ತ್ವ ವನ್ನು ತಿಳಿಯಬೇಕು. ಆದ್ದರಿಂದ ಅವನ ದೃಷ್ಟಿಯಿಂದ ಒಳ್ಳೆಯದಾಗಲೀ ಕೆಟ್ಟದ್ದಾಗಲೀ ಇಲ್ಲ.

8. **ಮಹತ್ವಾಕಾಂಕ್ಷೆ** : ಮಹತ್ವಾಕಾಂಕ್ಷೆಗೆ ಬದಲು ದೇವರು ಕೊಟ್ಟಿರುವುದರಲ್ಲಿ ತೃಪ್ತಿ ಪಡುವುದು ಬ್ರಹ್ಮಮೀಮಾಂಸೆಗೆ ಸಹಾಯಕವಾಗುತ್ತದೆ.

**9. ಧರ್ಮ:** ಬ್ರಹ್ಮಜ್ಞಾನಕ್ಕೆ ಸಹಕಾರಿಯಾದುದೇ ಧರ್ಮ. ಅದಕ್ಕೆ ಸಹಾಯಕವಾಗದುದೆ ಅಧರ್ಮ.

**10. ದೇಶ, ಕಾಲ ಅಥವಾ ಜೀವನ:** ಬ್ರಹ್ಮಮೀಮಾಂಸೆಯು ಎಲ್ಲಿ ಸಾಧ್ಯವೋ ಅಂತಹ ದೇಶ, ಕಾಲ ಅಥವಾ ಜೀವನವೇ ಉತ್ಕೃಷ್ಟವಾದದ್ದು.

**ಅಪ್ರಾಕೃತಿಕ**

**1. ವರ ಮತ್ತು ಶಾಪ:** ಸರ್ವ ಕರ್ತೃವಾದ ಬ್ರಹ್ಮನು ನಿರಂಕುಶಸ್ವತಂತ್ರ. ಅವನನ್ನು ಯಾರೂ ನಿಯಂತ್ರಿಸುವಂತಿಲ್ಲ.

ಯಾರೂ ಒಂದನ್ನು ನಿರ್ಮಿಸಲಾಗಲಿ, ನಾಶಪಡಿಸಲಾಗಲಿ ಶಕ್ತರಲ್ಲ; ಬ್ರಹ್ಮಸಂಕಲ್ಪವನ್ನು ಪರಿವರ್ತಿಸಲಾಗದು. ಆದ್ದರಿಂದ ವರವಾಗಲೀ ಶಾಪವಾಗಲೀ ಕೇವಲ ಮಾನಸಿಕ ಭಾವನೆಗಳು.

**2. ಮಹಾತ್ಮರು:** ಬ್ರಹ್ಮಲೋಕದಲ್ಲಿ ಯಾರೂ ವಿಶೇಷವಾಗಿ ಉತ್ಕೃಷ್ಟರಲ್ಲ. ಯಾವನು ಬ್ರಹ್ಮನ ಸರ್ವಕರ್ತೃತ್ವವನ್ನರಿಯುವನೋ ಅವನು ಮಹಾತ್ಮ.

**3. ಕರ್ಮ:** ವೈದಿಕ ಕರ್ಮಗಳು ಸ್ವರ್ಗ ಇತ್ಯಾದಿ ಸಾಧನೆಗೆ ಕಾರಣವೆಂದು ಹೇಳುವರು. ನಮ್ಮ ಆಸೆಗೆ ಅನುಗುಣವಾಗಿರುವ ಕೇವಲ ಕಲ್ಪನೆ ಇದು. ಕರ್ಮವು ಜಡ, ಅದು ಯಾವುದಕ್ಕೂ ಅಶಕ್ತ.

**4. ಇಂದ್ರಜಾಲ, ರಾಕ್ಷಸರು ಮತ್ತು ಭೂತಗಳು:** ಇವು ಕೇವಲ ಮಾನಸಿಕ ಭಾವನೆಗಳು.

**5. ದೇವತಾಂತರ ಭಯ:** ಬ್ರಹ್ಮನ ಸರ್ವೋತ್ಕೃಷ್ಟತೆಯನ್ನರಿಯಲು ದೇವತಾಂತರಗಳಲ್ಲಿ ಇರುವ ಭಯವು ತಡೆಯಾಗುತ್ತದೆ. ಆದರೆ ಹೀಗೆ ಭಯವನ್ನುಂಟುಮಾಡುವ ದೇವತೆಗಳು ಕೇವಲ ಭೂತಗಳೇ, ಬ್ರಹ್ಮಜ್ಞಾನವನ್ನು ಪೋಷಿಸುವ ದೇವತೆಗಳೇ ನಿಜವಾದ ದೇವತೆಗಳು.

**6. ಪರಬ್ರಹ್ಮದ ಬಗೆಗೆ ಯಾಂತ್ರಿಕ ಅಥವಾ ಕೇವಲ ಬೌದ್ಧಿಕವಾದ ಭಾವ:** ಅದನ್ನು ಅನುಸರಿಸುತ್ತಿದ್ದ ಹಾಗೆಯೇ ಸುಲಭವಾಗಿ ತ್ಯಜಿಸುವರು. ಆ ಕಾರಣ ಬ್ರಹ್ಮಜಿಜ್ಞಾಸೆಯಿಂದಲೇ ಈ ಭಾವವನ್ನು ತಳೆಯಬೇಕು.

**7. ನೈತಿಕ ಭಾವನೆಗಳು:** ಸತ್ಯ, ದಯೆ, ಶೌಚ, ದಾನ ಮುಂತಾದವುಗಳು. ಬ್ರಹ್ಮವನ್ನು ಬೋಧಿಸುವುದೇ ಸತ್ಯ, ಬ್ರಹ್ಮಜ್ಞಾನದ ಹಾದಿಯಲ್ಲಿ ನಡೆಸುವುದೇ ದಯೆ. ಬ್ರಹ್ಮಜ್ಞಾನ ಅಧ್ಯಯನ ಅಥವಾ ಅಧ್ಯಾಪನಕ್ಕೆ ಸಿದ್ಧಪಡಿಸಿಕೊಳ್ಳುವುದೇ ಶೌಚ (ಶುಚಿಯಾಗಿರುವಿಕೆ). ಬ್ರಹ್ಮಜ್ಞಾನವನ್ನು ಮತ್ತೊಬ್ಬರಿಗೆ ಉಪದೇಶಿಸುವುದೇ ದಾನ.

ಮೇಲೆ ಉಕ್ತವಾದ ಅಭಿಪ್ರಾಯಗಳನ್ನು ಎಲ್ಲ ದೃಷ್ಟಿಯಿಂದಲೂ ಮನುಷ್ಯನ ಇಡೀ ಜೀವನವನ್ನು ಬ್ರಹ್ಮಜ್ಞಾನಕ್ಕೋಸ್ಕರ ಮುಡಿಪಾಗಿಡಬೇಕೆಂಬುದೇ ಸೂತ್ರರೂಪವಾಗಿ ಹೇಳುವಲ್ಲಿ ಮಧ್ವಾಚಾರ್ಯರ

ಗುರಿ. ಬೇರೆ ದರ್ಶನಗಳಲ್ಲಿ ಪ್ರತಿಪಾದಿಸಲ್ಪಟ್ಟ ಶಾಶ್ವತವಾದ ನೈತಿಕ ಮತ್ತು ಆಧ್ಯಾತ್ಮಿಕ ತತ್ತ್ವಗಳು ಇಲ್ಲಿ ದೃಢೀಕರಿಸಲ್ಪಟ್ಟಿವೆ.

ವೈಷ್ಣವ ನಿಯಮಗಳಲ್ಲಿ ಮತ್ತೆಲ್ಲದಕ್ಕಿಂತಲೂ ಬ್ರಹ್ಮಮೀಮಾಂಸೆಯೇ ಅತ್ಯಂತ ಶ್ರೇಷ್ಠವಾದುದು ; ವೇದ ಪ್ರತಿಪಾದ್ಯನಾದ ಬ್ರಹ್ಮನು ಸಾಕ್ಷಾತ್ ವಿಷ್ಣುವೇ ಎಂದು ಮಧ್ವಾಚಾರ್ಯರ ಅಭಿಪ್ರಾಯ. ಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ, ಎಂತಹ ವಾತಾವರಣದಲ್ಲಿ ಬ್ರಹ್ಮ ಮೀಮಾಂಸೆಯು ಸಾಧ್ಯ ಎಂಬುದನ್ನು ಈ ರೀತಿ ವಿವರಿಸುತ್ತಾರೆ—

“ಬ್ರಹ್ಮಸೂತ್ರಕಾರರಾದ ಬಾದರಾಯಣರು ವೇದಗಳ ವಿಭಾಗ ಮಾಡಿದನಂತರ ಕೆಲವು ಪುರಾಣ ಗಳನ್ನೂ ಇತಿಹಾಸಗಳನ್ನೂ ರಚಿಸಿದರು. ಇವೆರಡರಲ್ಲಿ ವಿಷ್ಣುಪಾರಮ್ಯ ಪ್ರತಿಪಾದಕವಾದವುಗಳೇ ಉಪಾದೇಯ ಮತ್ತು ಬ್ರಹ್ಮಸೂತ್ರಗಳ ಸಹಾಯದಿಂದ ಇವುಗಳ ಅರ್ಥ ನಿರ್ಣಯ ಮಾಡಬೇಕು.” ಮಧ್ವಾಚಾರ್ಯರು ಹೀಗೆ ಮುಂದುವರಿಸಿದ್ದಾರೆ—“ಶರೀರದ ಭೌತಿಕ ಲಕ್ಷಣಗಳಿಗೂ ಜ್ಞಾನಕ್ಕೂ ನಿಕಟ ಸಂಪರ್ಕವಿದೆ. ಚತುರ್ಮುಖ ಬ್ರಹ್ಮನು ಪೂರ್ಣ ಲಕ್ಷಣ ಸಂಪನ್ನ. ಆದ್ದರಿಂದ ಅವನು ಆದರ್ಶ ಬೋಧಕ (ಗುರು). ಸಾಮಾನ್ಯವಾದ ಆಚಾರ್ಯರಲ್ಲಿಯೂ, ಶಾರೀರಿಕ ಲಕ್ಷಣ ಸಂಪನ್ನರು ಆಚಾರ್ಯಸ್ಥಾನಕ್ಕೆ ಉತ್ತಮಾಧಿಕಾರಿಗಳು. ಶ್ರೇಷ್ಠನೀತಿಯಿಂದ ಜ್ಞಾನ ಉದಯಿಸುತ್ತದೆ. ಯಥಾರ್ಥ ಜ್ಞಾನಕ್ಕೆ ಉತ್ತಮ ಲಕ್ಷಣಗಳು ಮೂಲಭೂತವಾದುವು. ಒಳ್ಳೆಯ ಲಕ್ಷಣಗಳು ಮತ್ತು ಶ್ರೇಷ್ಠ ನೈತಿಕತೆಯು ನಿಕಟ ಸಂಪರ್ಕ ವನ್ನು ಹೊಂದಿವೆ. ಸ್ತ್ರೀಯರ ವಿಷಯಗಳಲ್ಲಿಯೂ, ಅವರ ಸೌಂದರ್ಯವು ನೈತಿಕ ಪರಾಕಾಷ್ಠೆಯ ಸೂಚಕ. ಅಂತಹ ಜನರಿಗೆ ಬ್ರಹ್ಮಜ್ಞಾನದಿಂದುಂಟಾದ ವಿಷ್ಣುಭಕ್ತಿಯು ಸಾಧ್ಯ. ಸುಲಕ್ಷಣ ಸಂಪನ್ನನೂ ಪ್ರಸನ್ನ ಮನಸ್ಕನೂ ಆದ ಆಚಾರ್ಯನಿಂದ ಕೊಡಲ್ಪಟ್ಟ ಜ್ಞಾನವೇ ಫಲಪ್ರದವಾಗುವುದು ”.

ಮಧ್ವಾಚಾರ್ಯರು ತಮ್ಮ ‘ಕೃಷ್ಣಾಮೃತ ಮಹಾರ್ಣವ’ ಮತ್ತು ‘ತಂತ್ರಸಾರ’ ಎಂಬ ಗ್ರಂಥಗಳಲ್ಲಿ ವಿಷ್ಣು ಸಾಕ್ಷಾತ್ಕಾರಕ್ಕೆ ಸಹಾಯಕವಾಗುವ ಪುರಾಣಪ್ರತಿಪಾದಿತವಾದ ಕೆಲವು ನಿಯಮಗಳನ್ನು ಉಲ್ಲೇಖಿ ಸಿದ್ದಾರೆ. ಈ ಕೃತಿಗಳ ಕೊನೆಯ ಭಾಗಗಳಲ್ಲಿ ಬ್ರಹ್ಮಮೀಮಾಂಸಾ ಸಾಧನವೊಂದೇ ಬ್ರಹ್ಮಸಾಕ್ಷಾತ್ಕಾರ ದಲ್ಲಿ ಅಂದರೆ ವಿಷ್ಣುವಿನ ಸಾಕ್ಷಾತ್ಕಾರದಲ್ಲಿ ಕೊನೆಗೊಳ್ಳುತ್ತದೆ—ಎಂದು ತೋರಿಸಿದ್ದಾರೆ. “ಕೃಷ್ಣಾಮೃತ ಮಹಾರ್ಣವ”ದಲ್ಲಿ ಅನೇಕ ದೇವತೆಗಳಿಂದಲೂ ಋಷಿಗಳಿಂದಲೂ ಅನುಷ್ಠಿಸಲ್ಪಟ್ಟ ಸವಿವರವಾದ ಪೂಜೆಯು, ಅನವರತವಾಗಿ ಅನುಷ್ಠಿಸಿದ ಯಾಗಗಳು, ತೀರ್ಥ ಕ್ಷೇತ್ರಗಳ ಸಂದರ್ಶನ, ಪವಿತ್ರ ತೀರ್ಥ ಗಳಲ್ಲಿ ಮಾಡಿದ ಸ್ನಾನ ಹಾಗೂ ದಾನ ಮುಂತಾದವುಗಳಿಗಿಂತ ಅತ್ಯಂತ ಶ್ರೇಷ್ಠವಾದ ವ್ರತ ಎಂದು ಹೇಳ ಲ್ಪಟ್ಟಿದೆ. “ವಿಷ್ಣುವಿಗೆ ಸಮರ್ಪಣೆ ಮಾಡಿದ ದ್ರವ್ಯಗಳಿಂದಲೇ ಜೀವನ ನಡೆಸುವ ಅಭ್ಯಾಸವು ಮತ್ತೆಲ್ಲ ಕ್ಕಿಂತಲೂ ಮಿಗಿಲಾದುದು. ಪೂಜೆಯಲ್ಲಿ ಉಪಯೋಗಿಸುವ ದ್ರವ್ಯಗಳಾದರೋ ನೀರು, ಆಹಾರ ಮುಂತಾದವು. ಪೂಜೆಯಲ್ಲಿ ಉಪಯೋಗಿಸಿದನಂತರ ಅವೆಲ್ಲವೂ ಪ್ರಸಾದ. ಸಾಲಿಗ್ರಾಮ ಶಿಲೆಯ ಪೂಜೆಯು ಅತ್ಯಂತ ಶ್ರೇಷ್ಠ. ಸಾಕ್ಷಾತ್ ಹರಿಯೇ ಈ ಶಿಲೆಯಲ್ಲಿ ವಾಸಿಸುತ್ತಾನೆ. ದೇವತಾಂತರಗಳಿಗೆ ಮಾಡಿದ ಪೂಜೆಯಾಗಲೀ ಅವುಗಳಿಗೆ ಕೊಟ್ಟ ದ್ರವ್ಯಗಳಾಗಲೀ ಎಂದೂ ಒಳ್ಳೆಯದಲ್ಲ.”

ಪ್ರತಿ ಪಕ್ಷದ ಏಕಾದಶಿಯ ದಿವಸವೂ ಉಪವಾಸವಿರುವುದು ಅವಶ್ಯವಾಗಿ ಪಾಲಿಸಬೇಕಾದ ಮುಖ್ಯ ನಿಯಮ. ಕಾರಣ, ಆ ದಿವಸವು ವಿಷ್ಣುವಿಗೆ ಅರ್ಪಿತವಾಗಿದೆ. ವಿಷ್ಣುವಿನ ಚಿಹ್ನೆಗಳಾದ ಶಂಖ, ಚಕ್ರ, ಗದೆ, ಮತ್ತು ಪದ್ಮ ಇವುಗಳನ್ನು ತನ್ನ ಶರೀರದ ಮೇಲೆ ಗೋಪೀಚಂದನವೆಂಬ ಮೃತ್ತಿಕೆಯಿಂದ ಅಂಕಿತ ಮಾಡಿಕೊಳ್ಳುವುದು ಒಂದು ಪವಿತ್ರಕಾರ್ಯ. ವೈಷ್ಣವ ಪುರಾಣಗಳಲ್ಲಿ ಹೇಳಿರುವ ವಿಷ್ಣುವಿನ ನಾಮ ಸಂಕೀರ್ತನವನ್ನು ಸರ್ವದಾ ಮಾಡಬೇಕು. ಈ ವ್ರತಗಳನ್ನೂ ನಿಯಮಗಳನ್ನೂ ಪಾಲಿಸದಿದ್ದಲ್ಲಿ

ವಿವಿಧ ಯಜ್ಞ ಯಾಗಾದಿಗಳೂ ದಾನ, ತಪಸ್ಸು, -ಅಧ್ಯಯನ, ಮತ್ತು ಶ್ರಾದ್ಧಾದಿಗಳಿಂದ ಪಿತೃದೇವತೆಗಳ ಸಂತೃಪ್ತಿ,-ಇವೆಲ್ಲವೂ ವ್ಯರ್ಥ. ಹೀಗೆ ವಿಷ್ಣುವಿನ ಅನನ್ಯಾರಾಧಕನ ಜೀವನವು ಪ್ರಶಂಸನೀಯ. ಬೇರೆ ಕ್ಷೇತ್ರದಲ್ಲಿ ಒಬ್ಬನು ಉನ್ನತ ಸ್ಥಾನವನ್ನು ಗಳಿಸಿದ್ದರೂ ಅವನು ಫಲಾಪೇಕ್ಷೆಯಿಲ್ಲದೆ ವಿಷ್ಣುವಿನ ಧ್ಯಾನವನ್ನು ಮತ್ತು ನಾಮ ಸಂಕೀರ್ತನವನ್ನು ಮಾಡಲು ಮರೆಯಬಾರದು. ಶ್ರುತಿ ಸ್ಮೃತಿಗಳು ವಿಧಿಸಿರುವ ನಿಯಮವಿದು. ಈ ರೀತಿ ನಿಯಮಗಳನ್ನುಲ್ಲೇಖಿಸಿ, ಮಧ್ವಾಚಾರ್ಯರು ಉಪನಿಷತ್ತಿನ ವಾಕ್ಯವನ್ನು ಉದಾಹರಿಸುತ್ತಾರೆ. 'ಬ್ರಹ್ಮಜ್ಞಾನದಿಂದುಂಟಾಗುವ ಫಲವೇ ಸಿದ್ಧಿಗೆ ದಾರಿಯಾಗುತ್ತದೆ ; ಸಿದ್ಧಿಯನ್ನು ಸಾಧಿಸಿಕೊಡುವುದೇ ವ್ರತ ಅಥವಾ ಆಚಾರ ಎಂದು ಅವರು ತೋರಿಸುತ್ತಾರೆ. ಅಂತಹ ವ್ರತಗಳೇ ವೇದ ಬೋಧಿತವಾದವುಗಳು. ಜ್ಞಾನಮೂಲವಾದ ಇವು ಫಲಾಭಿಸಂಧಿರಹಿತ ಎಂಬ ದೃಷ್ಟಿಯಿಂದ ನಿವೃತ್ತ ಎಂದು ಹೇಳಬಹುದು. ತಮ್ಮ ತಂತ್ರಸಾರದಲ್ಲಿ ಮಧ್ವಾಚಾರ್ಯರು ವಿಷ್ಣುವಿನ ವಿಭಿನ್ನವಾದ ಪ್ರತಿಮೆಗಳನ್ನು ಹೇಗೆ ತಯಾರಿಸುವುದೆಂಬುದನ್ನು ವಿವರಿಸಿದ್ದಾರೆ. ವಿಷ್ಣುವಿನ ಧ್ಯಾನಮಾಡಲು ಅನುಸರಿಸಬೇಕಾದ ವಿವಿಧ ನಿಯಮಗಳನ್ನು ಉದ್ಧರಿಸಿದ್ದಾರೆ. ವಿಷ್ಣುವಿನ ಪ್ರತಿಮೆಗಳನ್ನು ಪ್ರತಿಷ್ಠೆಮಾಡುವ ರೀತಿಯನ್ನು, ಈ ಪ್ರತಿಷ್ಠೆಗೆ ಬೇಕಾಗಿರುವ ದೇವಾಲಯಗಳ ರಚನಾಕ್ರಮಗಳನ್ನು ಮತ್ತು ವಿಷ್ಣುವಿನ ಬೇರೆ ಬೇರೆ ರೂಪಗಳ ಧ್ಯಾನಕ್ರಮವನ್ನು ವಿಶದೀಕರಿಸಿದ್ದಾರೆ. ವಿಷ್ಣುವಿನ ಈ ವಿಧವಾದ ಪೂಜೆಯು ಅವನಿಗೆ ಆನಂದವನ್ನುಂಟು ಮಾಡುವುದು. ಕಾರಣ, ಅವನು ಆ ಮೂರ್ತಿಯಲ್ಲಿ ವಿಶೇಷ ಸಾನ್ನಿಧ್ಯವನ್ನು ಮಾಡಿದ್ದಾನೆ ಎಂದೂ ಅವರು ತೋರಿಸಿದ್ದಾರೆ. ಧ್ಯಾನವನ್ನು, ಅನ್ವರ್ಥವಾಗಿ ಅನುಷ್ಠಿಸಬೇಕಾದರೆ ಸೂಕ್ತ ಶಿಕ್ಷಣ ನೀಡುವ ಯೋಗ್ಯ ಗುರುವನ್ನು ಪಡೆಯಬೇಕು. ಈ ಗುರುಗಳ ಶ್ರೇಣಿಗಳು (ಪರಸ್ಪರ ಸಂಬಂಧವು) ನಿರಂತರವಾಗಿ ನಿರೂಪಿಸಲ್ಪಟ್ಟಿವೆ. ಅವರಲ್ಲಿ ಚತುರ್ಮುಖ ಬ್ರಹ್ಮನು ಅತ್ಯಂತ ಶ್ರೇಷ್ಠ. ನಿಜವಾದ ಆಚಾರ್ಯನು ಈ ಪರಂಪರೆಗೆ ಸೇರುವನು. ಒಂದು ಸಲ ಒಬ್ಬ ಗುರುವನ್ನು ಆಶ್ರಯಿಸಿದನಂತರ ಅವನಿಗಿಂತಲೂ ಉತ್ಕೃಷ್ಟನಾದ ಮತ್ತೊಬ್ಬನು ಸಿಗುವ ವರೆಗೂ, ಅವನನ್ನು ಬಿಡಬಾರದು.

ಈ ಭಾವನೆಗಳನ್ನೆಲ್ಲಾ ವಿವರಿಸಿದ ಅನಂತರ ಮಧ್ವಾಚಾರ್ಯರು ಎರಡು ವಿಧವಾದ ಧ್ಯಾನಗಳ ವೈಶಿಷ್ಟ್ಯವನ್ನು ನಿರೂಪಿಸುತ್ತಾರೆ. (1) ಬ್ರಹ್ಮ ಮೀಮಾಂಸೆ ಮತ್ತು (2) ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಯೋಗಕ್ರಮಗಳನ್ನು ಅನುಸರಿಸಿ ಮಾಡಿದ ಧ್ಯಾನ. ಬ್ರಹ್ಮಮೀಮಾಂಸೆಯೇ ಅತ್ಯಂತ ಶ್ರೇಷ್ಠ. ಕಾರಣ, ಶಾಸ್ತ್ರದ ಅನವರತಾಧ್ಯಯನ ಮತ್ತು ಅಧ್ಯಾಪನದಿಂದಲೇ ಒಳ್ಳೆಯದಾಗುವುದು. ಈ ಆಚರಣೆಯೇ ವಿಷ್ಣು ಸಾಕ್ಷಾತ್ಕಾರಕ್ಕೂ ಅದರ ಮೂಲಕ ಮೋಕ್ಷಕ್ಕೂ ದಾರಿಮಾಡಿಕೊಡಲೂ ಸಾಕು. ಸಾಕ್ಷಾತ್ಕಾರವು ನಿಜವಾದ ಅರ್ಥದಲ್ಲಿ, 'ಲಕ್ಷಣರೂಪವಾಗಿ ಉಕ್ತವಾದ ಭಕ್ತಿಯ ಫಲ' ಎಂದು ಮಧ್ವಾಚಾರ್ಯರು ಪರಿಸಮಾಪ್ತಿ ಮಾಡಿದ್ದಾರೆ.

## ದರ್ಶನ

ಮಧ್ವದರ್ಶನವು "ದ್ವೈತ" ಎಂಬ ಹೆಸರಿನಿಂದ ಜನಪ್ರಿಯವಾಗಿದೆ. ಅವರ ಬ್ರಹ್ಮಜಿಜ್ಞಾಸೆಯೇ ಅದರ ಕೇಂದ್ರ. ಆನಂದದಾಯಕವಾದ ದರ್ಶನದ ವಿವರಣೆಯನ್ನು ನೀಡಿರುವುದರಿಂದ ಅವರಿಗೆ "ಮಧು" ಎಂಬ ಶಬ್ದದಿಂದ ವ್ಯುತ್ಪನ್ನವಾದ "ಮಧ್ವ" ಎಂಬ ಹೆಸರು ಬಂದಿದೆ. ಈ ಕಾರಣದಿಂದಲೇ ಅವರು "ಆನಂದತೀರ್ಥ"ರೆಂದೂ ಪ್ರಸಿದ್ಧರಾಗಿದ್ದಾರೆ. ಪೂರ್ಣನಾದ ಬ್ರಹ್ಮನನ್ನು ಅರಿತಿರುವುದರಿಂದ ಅವರನ್ನು "ಪೂರ್ಣಪ್ರಜ್ಞ" ಮತ್ತು "ಸರ್ವಜ್ಞ" ಎಂದು ಕರೆಯುತ್ತಾರೆ. ತಮ್ಮ ಗ್ರಂಥಗಳಲ್ಲಿ ತಾವು ಪ್ರಾಣಾಧಿದೇವತೆಯಾದ ಮುಖ್ಯ ವಾಯುವೆಂದೂ, ಬ್ರಹ್ಮಮೀಮಾಂಸೆಗೆ ಅಥವಾ ಬ್ರಹ್ಮಜಿಜ್ಞಾಸೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಾಢವಾಗಿ ಅಭ್ಯಸಿಸಿರುವುದಾಗಿಯೂ ಹೇಳಿಕೊಂಡಿದ್ದಾರೆ.

ತಾವು, ಬ್ರಹ್ಮಮೀಮಾಂಸೆಗೆ ವ್ಯಾಖ್ಯಾನ ಮಾಡಲು ತೊಡಗಿದ್ದಕ್ಕೆ ಅವರು ಈ ರೀತಿ ಕಾರಣಗಳನ್ನು ಹೇಳುತ್ತಾರೆ : ದುಃಖದ ಕಳಂಕದಿಂದ ದೂರವಾದ ಆನಂದಾನುಭವವೇ, ಎಲ್ಲ ಚೇತನಗಳಿಗೂ ಪರಮ ಪ್ರಯೋಜನ. ಎಲ್ಲ ಪದಾರ್ಥಗಳಲ್ಲೂ ಅಂತರ್ಯಾಮಿಯಾಗಿರುವ ಪರತತ್ತ್ವವಾದ ಬ್ರಹ್ಮನ ಅನುಗ್ರಹದಿಂದಲೇ ಇದನ್ನು ಹೊಂದಲು ಸಾಧ್ಯ. ಬ್ರಹ್ಮಜ್ಞಾನವು ಆ ಪರಬ್ರಹ್ಮನನ್ನು ಕುರಿತ ಅವಿಚಲಿತ ಧ್ಯಾನದಲ್ಲಿ ಕೊನೆಗೊಳ್ಳುತ್ತದೆ.

ಜ್ಞಾನಪ್ರದವಾದ ಭಿನ್ನ ಭಿನ್ನ ಮೂಲಗಳು ಪ್ರಪಂಚಕ್ಕೇ ಸೀಮಿತವಾಗಿರುವುದರಿಂದ ಬ್ರಹ್ಮಜ್ಞಾನಕ್ಕೆ ವೇದವೊಂದೇ ಮೂಲ. ಆದ್ದರಿಂದ ವೇದಗಳೂ ಅಪೌರುಷೇಯ. ಅಂದರೆ, ದೋಷಗಳಿಗೆ ಎಡೆಯಾಗುವ ಮನುಷ್ಯನಿರ್ಮಿತವಲ್ಲ. ಆದ್ದರಿಂದ ಅವು ಸ್ವತಃಪ್ರಮಾಣ. ಅವುಗಳ ಸಹಾಯವಿಲ್ಲದೆ ಬ್ರಹ್ಮಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ.

ಸಾಮಾನ್ಯ ಅನುಭವಗಳಿಗೆ ಹೊರತಾದ ಸಮಸ್ಯೆಗಳ ವಿಷಯವಾಗಿ ಚರ್ಚಿಸುವ ವಿಸ್ತೃತವಾದ ವಾಙ್ಮಯವೇ ವೇದ. ವೇದದ ಒಂದೇ ಒಂದು ಪದದ ಅರ್ಥವನ್ನು ನಿರ್ಣಯಿಸಲೂ ನಿಷ್ಕೃಷ್ಟವಾದ ಜ್ಞಾನ ಆವಶ್ಯಕ. ಅವುಗಳ ಯಥಾರ್ಥವಾದ ಅರ್ಥನಿರ್ಣಯಮಾಡುವ ದೃಷ್ಟಿಯಿಂದಲೇ ಬಾದರಾಯಣರು ಬ್ರಹ್ಮಸೂತ್ರಗಳನ್ನು ರಚಿಸಿದರು.

ಮಧ್ವಾಚಾರ್ಯರಿಗಿಂತ ಮೊದಲು, ಅವುಗಳನ್ನು ಅರ್ಥಮಾಡಿಕೊಳ್ಳಲು ಅನೇಕರು ಪ್ರಯತ್ನಗಳನ್ನು ನಡೆಸಿದರು. ಆದರೆ ಅವೆಲ್ಲ, ಮೊದಲೇ ತಾವು ಹೊಂದಿದ್ದ ಅಭಿಪ್ರಾಯಗಳಿಂದಲೋ ಅಥವಾ ಬೇರೆ ಕಾರಣಗಳಿಂದಲೋ ಕಲುಷಿತವಾಗಿದ್ದುವು. ಸೂತ್ರಗಳ ವಾಸ್ತವಾರ್ಥವು ತಿಳಿಯದೆಯೇ ಅಥವಾ ಅಜ್ಞಾತವಾಗಿಯೇ ಇದ್ದಿತು.

ಇದರಿಂದ, ಮಧ್ವಾಚಾರ್ಯರಿಗೆ, ಸೂತ್ರಗಳ ಕರ್ತೃವಾದ ಬಾದರಾಯಣರ ಅಭಿಪ್ರಾಯಕ್ಕನು ಗುಣವಾಗಿ ಅವುಗಳನ್ನು ವ್ಯಾಖ್ಯಾನಮಾಡುವ ಸಂದರ್ಭ ಒದಗಿತು. ಮಧ್ವಾಚಾರ್ಯರು ಒಟ್ಟು 37 ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಬ್ರಹ್ಮಸೂತ್ರ ಭಾಷ್ಯ, ಅಣುವ್ಯಾಖ್ಯಾನ, ನ್ಯಾಯವಿವರಣ ಮತ್ತು ಅಣುಭಾಷ್ಯ ಇವು ಬ್ರಹ್ಮಸೂತ್ರಗಳ ಅಭಿಪ್ರಾಯಗಳನ್ನು ವ್ಯಾಖ್ಯಾನಿಸುವವು. ಈ 4 ಕೃತಿಗಳಲ್ಲಿ ಹೇಳಲ್ಪಟ್ಟ ಅಭಿಪ್ರಾಯಗಳೇ ಅವರ ಇತರ ಕೃತಿಗಳಲ್ಲೂ ವಿಶೇಷವಾಗಿ ಕಂಡುಬರುತ್ತವೆ. ಮಧ್ವಾಚಾರ್ಯರು ದಶೋಪನಿಷದ್ಭಾಷ್ಯಗಳನ್ನೂ ದಶಪ್ರಕರಣಗಳನ್ನೂ ಋಗ್ಭಾಷ್ಯ, ಗೀತಾಭಾಷ್ಯ, ಗೀತಾತಾತ್ಪರ್ಯ, ಮಹಾಭಾರತ ತಾತ್ಪರ್ಯನಿರ್ಣಯ ಮತ್ತು ಭಾಗವತ ತಾತ್ಪರ್ಯ ಮೊದಲಾದ ಗ್ರಂಥಗಳನ್ನೂ ಬರೆದರು. ಉಳಿದ ಅವರ ಗ್ರಂಥಗಳು, ಅವರ ಉಪದೇಶಗಳ ಅನುಷ್ಠಾನ ಕ್ರಮಗಳನ್ನು ತಿಳಿಸುತ್ತವೆ.

ಈ ಉಪದೇಶದ ಹಿನ್ನೆಲೆಯಲ್ಲೇ ಅವರ ದರ್ಶನ, ಜ್ಞಾನವಾದ, ಅಧ್ಯಾತ್ಮಶಾಸ್ತ್ರಭಾಗಗಳನ್ನು ಸಂಗ್ರಹವಾಗಿ ಸೂಚಿಸಬಹುದು.

**ಮಧ್ವಾಚಾರ್ಯರ ಜ್ಞಾನವಾದ :**

ಜ್ಞಾನ ವಿಷಯಕವಾದ ಸಿದ್ಧಾಂತವು ತತ್ತ್ವವನ್ನರಿಯಲು ಇರುವ ಏಕೈಕ ಮಾರ್ಗ. ಅವರ ಜ್ಞಾನಸಿದ್ಧಾಂತವನ್ನು ಅರಿಯಲು, ಅತ್ಯಂತ ಶ್ರದ್ಧೆಯಿಂದ ಸತ್ಯವನ್ನು ಅರ್ಥಮಾಡಿಕೊಳ್ಳಲು ಪೂರ್ಣವಾಗಿ ಪ್ರಯತ್ನಿಸುವ ಅಧಿಕಾರದ ಆವಶ್ಯಕತೆಯನ್ನು ಮಧ್ವಾಚಾರ್ಯರು ಒತ್ತಿ ಹೇಳಿದ್ದಾರೆ. ತತ್ವವನ್ನರಿಯಲು

ಮೊತ್ತಮೊದಲು ಅದರ ಮೂಲವನ್ನು ಸ್ಪಷ್ಟಪಡಿಸಬೇಕೆಂದು ಮಧ್ವಾಚಾರ್ಯರು ಜ್ಞಾನದ ಸಂಪೂರ್ಣ ಕ್ಷೇತ್ರವನ್ನೇ ಪರಿಶೋಧಿಸಿದ್ದಾರೆ.

**ಜ್ಞಾನ**

ಜ್ಞಾತೃ ಸಂಬಂಧವೇ ಜ್ಞಾನದ ಮುಖ್ಯಲಕ್ಷಣ ; ಅಂದರೆ ಜ್ಞಾತೃಜ್ಞೇಯಗಳಿಗಿರುವ ಸಂಬಂಧ. ಜ್ಞಾತೃವಿಲ್ಲದ ಜ್ಞಾನ ಮತ್ತು ಜ್ಞಾನವಿಲ್ಲದ ವಿಷಯ ಎರಡೂ ಅರ್ಥವಿಲ್ಲದವು.

**ಜ್ಞಾನ ಪ್ರಾಮಾಣ್ಯ**

ಜ್ಞಾನವು ಸ್ವತಃ ಪ್ರಮಾಣ ; ಅದು ಪರತಃ ಪ್ರಮಾಣವಲ್ಲ. ಪ್ರಾಮಾಣ್ಯಾಪ್ರಾಮಾಣ್ಯವಿಹೀನ ಜ್ಞಾನವು ಅಪ್ರಸಿದ್ಧ.

ಜ್ಞಾನಕ್ಕಿಂತ ಉತ್ತಮವಾದುದು ಯಾವುದೂ ಇಲ್ಲ. ಅಲ್ಲದೆ ಎಲ್ಲವೂ ಜ್ಞಾನಾಧೀನ. ಕಾರಣ, ಯಾವುದೇ ಪದಾರ್ಥವಿದ್ದರೂ ಅದು ಜ್ಞಾನರೂಪದಲ್ಲಿಯೇ ವೇದ್ಯವಾಗಬೇಕು.

ವಿಷಯವು ಇದ್ದಂತೆಯೇ ಅರಿವಾದರೆ ಅದು ಪ್ರಾಮಾಣ್ಯ ಜ್ಞಾನ ; ಅಂದರೆ ಜ್ಞಾನವು ಯಾವ ರೀತಿ ಇದೆಯೋ, ಪದಾರ್ಥವೂ ಅದೇ ರೀತಿ ಇದೆ ಎಂದರ್ಥ.

**ಭ್ರಮ : (ಅಪ್ರಾಮಾಣ್ಯಜ್ಞಾನ)**

ಜ್ಞಾನ ಸಾಮಗ್ರಿಯಲ್ಲಿ ಇರುವ ದೋಷದಿಂದ ಭ್ರಮಾತ್ಮಕ ಜ್ಞಾನವು ಉಂಟಾಗುವುದು. ಪ್ರಸಿದ್ಧವಾದ ಶುಕ್ತಿ—ರಜತ ಭ್ರಮ (ಕಪ್ಪೆಚಿಪ್ಪು—ಬೆಳ್ಳಿ)ವನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ದೋಷದಿಂದ ಕೂಡಿರುವ ಕಣ್ಣೇ, ಅದಕ್ಕೆ ಕಾರಣ. ಅದು ಕಪ್ಪೆಚಿಪ್ಪನ್ನು ಹೊಳೆಯುವ ಒಂದು ಪದಾರ್ಥವಾಗಿ ಗ್ರಹಿಸುತ್ತದೆ. ಈ ಸಂದರ್ಭದಲ್ಲಿ, ರಜತದ ಸಂಸ್ಕಾರವು ಬುದ್ಧಿಯಲ್ಲಿ ಕೆಲಸ ಮಾಡುತ್ತದೆ. ಅನಂತರ " ಇದು ಬೆಳ್ಳಿ " ಎಂಬ ಭ್ರಮೆ ಉಂಟಾಗುವುದು. ಕಪ್ಪೆಚಿಪ್ಪು, ಬೆಳ್ಳಿಗಳಲ್ಲಿ ಮೊದಲನೆಯದಾದ ಕಪ್ಪೆಚಿಪ್ಪು ಸತ್ಯ, ಬೆಳ್ಳಿ ಮಿಥ್ಯ. ಸತ್ಯವಾದ ಕಪ್ಪೆಚಿಪ್ಪು, ಅಸತ್ಯವಾದ ಬೆಳ್ಳಿಯೆಂದು ಭ್ರಮೆಯಲ್ಲಿ ತಪ್ಪಾಗಿ ಎಣಿಸಲ್ಪಡುತ್ತದೆ. ಆದ್ದರಿಂದ, ಸತ್ಯವನ್ನೇ ಅಸತ್ಯವನ್ನಾಗಿಯೂ, ಅಸತ್ಯವನ್ನೇ ಸತ್ಯವನ್ನಾಗಿಯೂ ಗ್ರಹಿಸುವುದೇ ಭ್ರಮೆ. ಭ್ರಮೆಯ ಈ ವಾದವು, "ಅಭಿನವಾನ್ಯಥಾಖ್ಯಾತಿ" ಎಂದು ಕರೆಯಲ್ಪಡುತ್ತದೆ.

ಈ ವಿಭಜನೆಯಿಂದ ಪದಾರ್ಥಗಳು ಸತ್ಯವಾಗಿರುತ್ತವೆ ಅಥವಾ ಅಸತ್ಯವಾಗಿರುತ್ತವೆ ಎಂಬ ತೀರ್ಮಾನ ಉಂಟಾಗುತ್ತದೆ. ಇವೆರಡಕ್ಕೂ ಮಧ್ಯಸ್ಥವಾದ ಸತ್ಯಾಸತ್ಯವಾದ ಅಥವಾ ಸತ್ಯಾಸತ್ಯವಲ್ಲದ ಯಾವ ಪದಾರ್ಥವೂ ಇಲ್ಲ.

**ಜ್ಞಾನದ ಪ್ರಾಮಾಣ್ಯಾಪ್ರಾಮಾಣ್ಯಗಳನ್ನು ತಿಳಿಯುವುದಕ್ಕೆ ಕಾರಣ :** ದೋಷರಹಿತವಾದ ಜ್ಞಾನ ಸಾಮಗ್ರಿಯಿಂದುಂಟಾಗುವ ಪ್ರಮಾತ್ಮಕ ಜ್ಞಾನವನ್ನೂ, ಆ ಜ್ಞಾನದ ಪ್ರಾಮಾಣ್ಯವನ್ನೂ

ಆ ಸಾಮಗ್ರಿಯೇ ಗ್ರಹಿಸಬಲ್ಲುದು. ಜ್ಞಾನ, ಪ್ರಾಮಾಣ್ಯ ಮೂಲ ಮತ್ತು ಜ್ಞಾನ ಪ್ರಾಮಾಣ್ಯ ಗ್ರಹಣ ಎರಡೂ ಈ ರೀತಿಯಲ್ಲಿ ಇನ್ನೊಂದನ್ನು ಅವಲಂಬಿಸಿಲ್ಲ, ಅದು ಸ್ವತಃಸಿದ್ಧ. ಅಪ್ರಾಮಾಣ್ಯದ ವಿಷಯ ಬೇರೆ. ಅಪ್ರಾಮಾಣ್ಯ ಜ್ಞಾನವುಂಟಾಗಲು ಜ್ಞಾನ ಸಾಮಗ್ರಿಯಲ್ಲಿ ದೋಷವಿದ್ದೇ ಇರಬೇಕು. ಅದನ್ನು ತಿಳಿಯಲು ಬಾಹ್ಯ ಸಾಧನಗಳ ಆವಶ್ಯಕತೆಯಿದೆ. ಅಂದರೆ ವ್ಯಾಪಕವಾದ ಅಥವಾ ಉತ್ತಮವಾದ ವಿಷಯವನ್ನು ಬಿಟ್ಟುಬಿಡುವುದು ; ಅಥವಾ ಅಂಗವನ್ನಾಗಿ ಮಾಡುವುದು ಮತ್ತು ನಿಷ್ಫಲವಾದ ಕರ್ಮವನ್ನು ಅಥವಾ ಉತ್ತಮ ಧ್ಯೇಯ ಅಥವಾ ಆದರ್ಶವು ಇಲ್ಲದ ಕ್ರಿಯೆಯನ್ನು ನಡೆಸುವುದು. ಆದ್ದರಿಂದ ಅಪ್ರಾಮಾಣ್ಯ ಗ್ರಹಣವು ಪರತಃ, ಅಂದರೆ ಇನ್ನೊಂದರಿಂದ ಅಥವಾ ಯಾವುದು ಇನ್ನೊಂದನ್ನು ಸಾಧಿಸುವುದಿಲ್ಲವೋ ಕೇವಲ ನಿರಾಕರಿಸುತ್ತದೆಯೋ ಅದರಿಂದ.

ಈ ಅಭಿಪ್ರಾಯಗಳನ್ನು ಸ್ಥಿರೀಕರಿಸುವುದರಿಂದ, ಅವು, ಜ್ಞಾನವೇ ನಮ್ಮ ಪೂರ್ಣ ಗೌರವಕ್ಕೆ ಅರ್ಹವಾದದ್ದು ಎಂದು ತಿಳಿಯಲು ಸಹಾಯಕವಾಗುವುವು. ಭ್ರಮಾತ್ಮಕ ಜ್ಞಾನವು ಸ್ವತಃ ಬಾಧಿಸಲ್ಪಡುವುದು. ಪ್ರಮಾತ್ಮಕ ಜ್ಞಾನವು ಸ್ವತಃ ಸಾಧಿಸಲ್ಪಡುವುದು.

**ಅನುಪ್ರಮಾಣ** : ಜ್ಞಾನದ ಮೂಲವು, ಅದರ ಅನುಪ್ರಮಾಣ. ಅದರ ಪ್ರಾಮಾಣ್ಯವು ಜ್ಞಾನದ ಪ್ರಾಮಾಣ್ಯದಿಂದ ಸ್ಪಷ್ಟಪಡಿಸಲ್ಪಡುತ್ತದೆ. ಮಧ್ವಾಚಾರ್ಯರು ಜ್ಞಾನವನ್ನು ಕೇವಲ ಪ್ರಮಾಣವೆಂದೂ ಅದರ ಸಾಧನವನ್ನು ಅನುಪ್ರಮಾಣವೆಂದೂ ಕರೆಯುತ್ತಾರೆ. ಅನುಪ್ರಮಾಣವು 3 ವಿಧ : ಜ್ಞಾನೇಂದ್ರಿಯಗಳು, ಅನುಮಾನ ಮತ್ತು ಶಬ್ದ. ವಿವಿಧ ದರ್ಶನಕಾರರಿಂದ ಪರಿಗಣಿಸಲ್ಪಟ್ಟಿರುವ ವಿಭಿನ್ನವಾದ ಜ್ಞಾನ ಸಾಧನಗಳನ್ನು ಈ 3 ಅನುಪ್ರಮಾಣಗಳಲ್ಲಿ, ಒಂದಿಲ್ಲದಿದ್ದರೆ ಇನ್ನೊಂದರಲ್ಲಿ ಅಡಗಿಸಬಹುದು.

(i) **ಪ್ರತ್ಯಕ್ಷ :** ಜ್ಞಾನೇಂದ್ರಿಯಗಳು ಪ್ರತ್ಯಕ್ಷ ಸಾಧನಗಳು.

ಐದು ಬಾಹ್ಯ ಜ್ಞಾನೇಂದ್ರಿಯಗಳು—ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ; ಶರೀರದ ಒಳಗಿರುವ ಮನಸ್ಸು, ಮತ್ತು ಸಾಕ್ಷಿ ಹೀಗೆ ಒಟ್ಟು ಏಳು. ಸಾಕ್ಷಿಯು ಜ್ಞಾತೃವಿನ ಇರವು. ಅದು ಎಲ್ಲವನ್ನೂ ಗ್ರಹಿಸುವುದು. ಇತರ ಜ್ಞಾನೇಂದ್ರಿಯಗಳ ಹಾಗಿರದೆ, ಅದು ಜ್ಞಾನ ಸ್ವರೂಪ, ಸರ್ವಂ ಸಹ, ಸರ್ವದಾ ಪ್ರಮಾಣ. ಅದು ತನ್ನ ಜ್ಞಾನವನ್ನು ಮತ್ತು ಅದರ ವಿಷಯಗಳನ್ನು ಮತ್ತು ಮತ್ತೊಬ್ಬರಿಂದ ಉಂಟಾದ ಜ್ಞಾನವನ್ನು, ಮನಸ್ಸು ಹಾಗೂ ಜ್ಞಾನೇಂದ್ರಿಯಗಳನ್ನು ಗ್ರಹಿಸುತ್ತದೆ. ಉತ್ಪನ್ನವಾದ ಜ್ಞಾನವು ಮನಸ್ಸಿನ ವೃತ್ತಿ ಅಥವಾ ಪರಿಣಾಮ. ವಿಷಯಕ್ಕೂ ಜ್ಞಾನೇಂದ್ರಿಯಕ್ಕೂ ಇರುವ ಸಂಬಂಧವು (ಪ್ರತ್ಯಾಸತ್ತಿ) ವೃತ್ತಿಗೆ ಕಾರಣ. ಸಾಕ್ಷಿಯಿಂದಲೇ ಉಂಟಾದ ಜ್ಞಾನವು ಸಾಕ್ಷಾತ್ಕಾರ. ಜ್ಞಾತೃವಾದ ಆತ್ಮ, ಸುಖ, ದುಃಖ, ದೇಶ, ಕಾಲ ಮುಂತಾದವುಗಳೆಲ್ಲ ಅದಕ್ಕೆ ವಿಷಯಗಳು. ಪ್ರತಿಯೊಂದು ಜ್ಞಾನೇಂದ್ರಿಯಕ್ಕೂ ಅದಕ್ಕೆಂದೇ ಇರುವ ವಿಷಯವಿದೆ. ವೃತ್ತಿಯು ನಾಶವಾಗುವ ಮೊದಲು ಮನಸ್ಸಿನಲ್ಲಿಯೇ ಸಂಸ್ಕಾರವನ್ನರ್ಪಿಸುವುದು. ಅದರಿಂದಲೇ ಮನಸ್ಸು ಸ್ಮರಣೆಯನ್ನುಂಟು ಮಾಡುವುದು.

ಪ್ರತಿಯೊಂದು ಅನುಪ್ರಮಾಣವು ಸವಿಕಲ್ಪಕ. ಕಾರಣ, ಅದರ ವಿಷಯವು ವಿಶೇಷಣ ವಿಶಿಷ್ಟವಾದದ್ದು. ಜ್ಞಾನದಲ್ಲಿ ಪದಾರ್ಥ ಮತ್ತು ಅದರ ಗುಣ-ಎಂದು ಎರಡು ವಿಭಾಗ ಮಾಡುವುದು ಅನುಚಿತ. ಒಂದು ಇನ್ನೊಂದರ ದ್ಯೋತಕ. ಪದಾರ್ಥವು ಒಂದು ಅಭೇದ್ಯ—ಪ್ರತ್ಯೇಕಿಸಲು ಸಾಧ್ಯವಾಗದೆ ಇರುವ ವಿಶಿಷ್ಟವಸ್ತು. ಈ ರೀತಿ ಅಭೇದ್ಯವು ತಾನೇ ಸವಿಶೇಷ. ಆದ್ದರಿಂದ ನಿರ್ವಿಕಲ್ಪಕವೆಂದು ಕರೆಯಲಾಗುವ ಜ್ಞಾನವು ಅಸತ್ಯ. ನಿರ್ವಿಕಲ್ಪಕ, ನಿರ್ಗುಣ ಅಥವಾ ನಿರ್ವಿಶೇಷ ಎಂಬ ಅಭಿಪ್ರಾಯವೇ ಅನುಚಿತ.

ಈಶಜ್ಞಾನ, ಲಕ್ಷ್ಮೀಜ್ಞಾನ, ಯೋಗಿಜ್ಞಾನ,ಅಯೋಗಿಜ್ಞಾನ ಎಂಬ ನಾಲ್ಕು ವಿಧವಾದ ಜ್ಞಾನಗಳಿವೆ. ಇವುಗಳಲ್ಲಿ ಮೊದಲಿನೆರಡು ಶುದ್ಧ ಸಾಕ್ಷಿ ಜ್ಞಾನ. ಈಶನು, ಸರ್ವವೂ ಸರ್ವಕ್ಕೂ ಮೂಲ ಎಂಬ ಜ್ಞಾನ ಉಳ್ಳವನು. ಲಕ್ಷ್ಮಿಯು ಸರ್ವಜ್ಞೆ. ಉಳಿದ ಇನ್ನೆರಡು ಜ್ಞಾನಗಳಲ್ಲಿ ಸಾಕ್ಷಿಯ ಜೊತೆಯಲ್ಲಿ ವೃತ್ತಿಯೂ ಸಹಕರಿಸುವುದು. ಯೋಗಿಜ್ಞಾನವು ಬ್ರಹ್ಮಮೀಮಾಂಸೆಯ ಅಧ್ಯಯನದಿಂದುಂಟಾಗುವುದು. ದೋಷವಿಲ್ಲದ ಯೋಗಿಜ್ಞಾನಕ್ಕೆ 'ಋಜು' ಎಂದು ಹೆಸರು. ಅದು ಈಶ ಮತ್ತು ಲಕ್ಷ್ಮಿಯನ್ನು ಬಿಟ್ಟು ಉಳಿದೆಲ್ಲವನ್ನು ಗ್ರಹಿಸಬಲ್ಲದು. ಯೋಗಿ ಮತ್ತು ಅಯೋಗಿಗಳಲ್ಲಿ, ಜ್ಞಾನವು ದೋಷಾದೋಷ ಮಿಶ್ರಿತವಾದುದು. ಕೀಳ್ಮಟ್ಟದ ಜ್ಞಾನವು ಹೆಚ್ಚು ದೋಷವುಳ್ಳದ್ದು.

ಜ್ಞಾನದ ಈ ವಿಭಾಗವು ಅಗಮ್ಯವಾದ ಜ್ಞಾನದ ಉತ್ಕೃಷ್ಟತೆಯನ್ನು ತಿಳಿಸುತ್ತದೆ; ಮತ್ತು ಜ್ಞಾನವು ಎಲ್ಲರಿಗೂ ಸುಲಭಸಾಧ್ಯವೆಂದು ತಿಳಿಯುವುದೂ ಅಯುಕ್ತವೆಂದು ತೋರ್ಪಡಿಸುತ್ತದೆ.

(ii) **ಅನುಮಾನ:** ಒಂದು ಪದಾರ್ಥವು ಮತ್ತೊಂದು ಪದಾರ್ಥದ ಜೊತೆಯಲ್ಲಿ ಸಾಹಚರ್ಯವನ್ನು (ವ್ಯಾಪ್ತಿಯನ್ನು) ಹೊಂದಿದ್ದ ಪಕ್ಷದಲ್ಲಿ, ಒಂದರ ಜ್ಞಾನದಿಂದ ಇನ್ನೊಂದರ ಜ್ಞಾನ ಉಂಟಾಗುವುದಕ್ಕೆ ಕಾರಣ–ಅನುಮಾನ. ಒಂದು ಪದಾರ್ಥಕ್ಕೆ ಮತ್ತೊಂದು ಪದಾರ್ಥದ ಜೊತೆಯಲ್ಲಿ ಸಾಹಚರ್ಯ ಸಾಕ್ಷಾತ್ ಒಂದು ಕಡೆ, ಪ್ರತ್ಯಕ್ಷವಾಗಿರುತ್ತದೆ. ಹೇತುವಿಗೂ (ಸಾಧನಕ್ಕೂ) ಸಾಧ್ಯಕ್ಕೂ ಇರುವ ಸಂಬಂಧವು ಅನೇಕ ಸಲ ವೀಕ್ಷಿಸುವುದರಿಂದ ಸಿದ್ಧವಾಗುತ್ತದೆ. ಕಾರ್ಯ, ಕಾರಣ ಅನ್ವಯ, ವ್ಯತಿರೇಕ, ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಮುಂತಾದ ಅನೇಕ ವಿಧ ಕಾರಣಗಳಿವೆ.

(iii) **ಆಗಮ (ಶಬ್ದಪ್ರಮಾಣ):** ದೋಷರಹಿತವಾದ ಉಕ್ತಿಯೇ ಆಗಮ ಅಥವಾ ಶಬ್ದ ಪ್ರಮಾಣ. ಒಂದು ಹೇಳಿಕೆ ಒಬ್ಬ ವ್ಯಕ್ತಿಯದಾಗಿದ್ದರೆ ಅದು ಆ ವ್ಯಕ್ತಿಯಲ್ಲಿರುವ ಭ್ರಮ, ಅಜ್ಞಾನ, ಅಶಕ್ತತೆ ಮುಂತಾದ ದೋಷಗಳಿಂದ ಕಲುಷಿತವಾಗುವುದು. ಪ್ರಮಾಣ್ಯವಾದ ವಚನವು ಈ ದೋಷಗಳಿಲ್ಲದೆ ಇರುವುದು. ಆದರೆ ಅವುಗಳಲ್ಲಿ ಯಾವುದೊಂದೂ ಜ್ಞಾನಪ್ರಾಮಾಣ್ಯದ ಭರವಸೆಯನ್ನು ನೀಡಲಾರದು.

ಪ್ರಾಪಂಚಿಕ ವ್ಯವಹಾರಗಳೆಲ್ಲವೂ ಈ ಮೂರು ಜ್ಞಾನದ ಆಕರಗಳಿಂದಲೇ ನಡೆಯುತ್ತವೆ. ಆದರೆ ಅವುಗಳಲ್ಲಿ ಜ್ಞಾನೇಂದ್ರಿಯವು ಅದರ ವಿಷಯವನ್ನು ಸ್ವತಂತ್ರ ಸತ್ಯವಾಗಿ ತೋರ್ಪಡಿಸುವುದು. ಅನುಮಾನ ಮತ್ತು ಆಗಮಗಳ ವಿಷಯವೂ ಹೀಗೆಯೇ. ಇವುಗಳು ಇರುವಾಗ ಎಲ್ಲ ಪದಾರ್ಥಗಳ ಸತ್ಯತ್ವಕ್ಕೂ ಮೂಲವಾದ ತತ್ತ್ವವನ್ನು ಅರಿಯಲು ಅವಕಾಶವಿಲ್ಲ. ಆದರೆ ಈ ಮೂಲತತ್ತ್ವವನ್ನು ಅರಿಯುವ ಆವಶ್ಯಕತೆ ಇದೆ. ಏಕೆಂದರೆ, ಜ್ಞಾನವೇದ್ಯವಾದ ಈ ಪದಾರ್ಥಗಳು ಯಾವುವೂ ಶಾಶ್ವತವಲ್ಲ. ಪ್ರತಿಯೊಂದೂ ಪರಿವರ್ತನೆಯುಳ್ಳದ್ದು.

ಎಲ್ಲ ಪದಾರ್ಥಗಳ ಹಿನ್ನೆಲೆಯಲ್ಲೂ ಇರುವ ಮೂಲತತ್ತ್ವವನ್ನು ತಿಳಿಯಬೇಕೆಂದು ಆಸಕ್ತಿ ಇರುವವನಿಗೆ ವೇದಗಳು ಅವರ್ಜನೀಯ. ಬೇರೆ ಉಪಾಯವಿಲ್ಲ. ವೇದಗಳು ಈ ಮೂಲತತ್ತ್ವವನ್ನು ತಿಳಿಸುವಾಗ ಈ ಮೂಲತತ್ತ್ವದಿಂದಲೇ ಹೊರಹೊಮ್ಮುವ ವಿಶ್ವಕ್ಕೆ ಕಾರಣಗಳಾದ ಜ್ಞಾತೃ ಸಂಬಂಧವಾದ ಮತ್ತು ವೈಷಯಿಕವಾದ ತತ್ತ್ವಗಳನ್ನೂ ತಿಳಿಸುತ್ತವೆ. ಈ ಮೂಲಕಾರಣ ಅವರ್ಜನೀಯ ಎಂಬ ಅಭಿಪ್ರಾಯವನ್ನುಂಟುಮಾಡುವ ವರೆಗೆ ಪ್ರಪಂಚ ಜ್ಞಾನವು ಪ್ರಮಾಣ ಎಂಬ ತೀರ್ಮಾನಕ್ಕೆ ಈ ಸತ್ಯದ ಅರಿವು ಕಾರಣ. ಇದರಿಂದ ವೇದಗಳು ಕೇವಲ ವಿಭಿನ್ನವಾದ ಅನುಪ್ರಮಾಣ ಗಳನ್ನು ಮಾತ್ರವಲ್ಲ. ಪೂರ್ಣವಾದ ಜ್ಞಾನಪ್ರಪಂಚವನ್ನೇ ನಿರೂಪಿಸುತ್ತವೆ. ವೇದವೊಂದೇ

ಅನುಪ್ರಮಾಣ ಮತ್ತು ಬೇರೆ ಅನುಪ್ರಮಾಣಗಳು ವೇದಕ್ಕೆ ಅನುಗುಣವಾಗಿರುವ ವರೆಗೆ ಉಪಾದೇಯ ಗಳೆಂದು ಇದರಿಂದ ನಿರ್ಣಯ ಮಾಡಬಹುದು.

ಮಧ್ವಾಚಾರ್ಯರು "ಜ್ಞಾನಕ್ಕೆ ಸಾಧನ ಒಂದೇ, ಅದೇ ವೇದ. ಅದರ ಪ್ರಾಮಾಣ್ಯವು ಸಿದ್ಧವಾಗಿದೆ". ಎಂದಿದ್ದಾರೆ.

ವೇದಗಳು ಪ್ರಮಾಣವೆಂದು ಹೇಳುವುದರಿಂದ ಬ್ರಹ್ಮಸೂತ್ರಗಳಿಂದ ತೋರಿಬಂದ ವಿಚಾರಗಳ ಬೆಳಕಿನಲ್ಲಿ ವೇದಗಳ ಅರ್ಥನಿರ್ಣಯವನ್ನು ಮಾಡಬೇಕೆಂಬುದು ಸ್ಪಷ್ಟ. ಈ ಅರ್ಥನಿರ್ಣಯ ಕ್ರಮಕ್ಕೇ ಬ್ರಹ್ಮಮೀಮಾಂಸಾ ಅಥವಾ ಬ್ರಹ್ಮಜಿಜ್ಞಾಸಾ ಎಂದು ಹೆಸರು. ಅದು ಕ್ಷಣೇ ಕ್ಷಣೇ ವೃದ್ಧಿಹೊಂದುತ್ತಿರುವ ಬುದ್ಧಿಯ ನಿರಂತರ ಸಕ್ರಿಯತೆ. ಅನವರತವಾದ ಈ ಕ್ರಮದಲ್ಲಿ ಮೂರು ಅಂಶಗಳನ್ನು ನಿರೂಪಿಸಬಹುದು: ಅವು ಶ್ರವಣ–ವೇದದ ಅರ್ಥವನ್ನು ತಿಳಿದುಕೊಳ್ಳುವುದು ; ಮನನ–ಪುನಃ ಪುನಃ ಚಿಂತಿಸುವುದರಿಂದ ಸರ್ವ ಸಂಶಯ ನಿವಾರಣೆ ; ನಿಧಿಧ್ಯಾಸನ—ಈ ಜಿಜ್ಞಾಸೆಗೋಸ್ಕರ ಜೀವನವನ್ನೇ ಅರ್ಪಣವಾಗಿಡುವುದು. ಈ ಅರ್ಪಣೆಯಿಂದ ಅತ್ಯುತ್ಕಟ ಪ್ರೀತಿಯುಂಟಾಗುವುದು. ಈ ಅನನ್ಯ ಪ್ರೀತಿಗೆ 'ಭಕ್ತಿ' ಎಂದು ಹೆಸರು. ಇದು ಜಿಜ್ಞಾಸೆಗೆ ಪ್ರೋತ್ಸಾಹ ಕೊಡುತ್ತದೆ. ಏಕೆಂದರೆ ತೀವ್ರವಾದ ಭಕ್ತಿಗೆ ಜಿಜ್ಞಾಸೆಯೇ ಕಾರಣ. ಅರಿಯಬೇಕೆಂದು ಮನೋಭಾವವುಂಟುಮಾಡುವ ಇದು ಶ್ರವಣಕ್ಕೆ ಕಾರಣವಾಗುವುದು. ಜಿಜ್ಞಾಸಾ ಪ್ರಕ್ರಿಯೆ ಈ ರೀತಿ ಉತ್ತರೋತ್ತರಾಭಿವೃದ್ಧಿಯಾಗುತ್ತಿರುವುದು. ಒಂದು ಸಲ ಇದು ಉಂಟಾದ ನಂತರ ಮನುಷ್ಯನು ಅದರಲ್ಲೇ ನಿರತನಾಗುತ್ತಾನೆ. ಅಲ್ಲದೆ, ಅದರಿಂದ ಅವನು ನಿವೃತ್ತನಾಗುವಂತೆಯೇ ಇಲ್ಲ.

## ಮಧ್ವಾಚಾರ್ಯರ ಪ್ರಮೇಯವಾದ

'ಸತ್' ಆದದ್ದು ಯಾವುದೋ ಅದೇ ಸತ್ಯ—ಜ್ಞಾನಕ್ಕೆ ವಿಷಯವಾಗಿರುವ ಸ್ಥಿತಿ. ಅದು ಬ್ರಹ್ಮಮೀಮಾಂಸೆಯಿಂದ ನಿರೂಪಿಸಲ್ಪಡುತ್ತದೆ.

ಮಧ್ವಾಚಾರ್ಯರು ಬ್ರಹ್ಮಮೀಮಾಂಸೆಯ ಪ್ರಮುಖ ವಿಷಯಗಳನ್ನು ಬ್ರಹ್ಮಸೂತ್ರದ ಮೊದಲನೆಯ 3 ಸೂತ್ರಗಳಲ್ಲಿ ಕೊಟ್ಟಿದ್ದಾರೆ. ಬ್ರಹ್ಮಸೂತ್ರವು ಒಟ್ಟು 564 ಸೂತ್ರಗಳಿಂದ ಕೂಡಿದ್ದು 4 ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟಿದೆ.

**1** ಶುದ್ಧವಾದ ಆನಂದವನ್ನು ಪಡೆಯಲು ವೇದ ಮತ್ತು ಬ್ರಹ್ಮದ ಜಿಜ್ಞಾಸೆ ಅವರ್ಜನೀಯ ಎಂಬುದನ್ನು ಮಧ್ವಾಚಾರ್ಯರು ಮೊದಲನೆಯ ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ. ಪರಬ್ರಹ್ಮವು ವೇದದಿಂದಲೇ ಪ್ರತಿಪಾದಿಸಲ್ಪಡುವುದು. 'ವಿಷ್ಣು', 'ನಾರಾಯಣ' ಮತ್ತು 'ಹರಿ' ಇವು ಅವನ ವೈದಿಕ ಪರ್ಯಾಯ ಪದಗಳು.

**2** ಎರಡನೆಯ ಸೂತ್ರದಲ್ಲಿ, ಮಧ್ವಾಚಾರ್ಯರು, ಪ್ರಪಂಚದ ಎಲ್ಲ ಪದಾರ್ಥಗಳಿಗೂ, ಸತ್ಯತ್ವವನ್ನು ಕೊಡುವ ಪರಬ್ರಹ್ಮನನ್ನು ಪ್ರತಿಪಾದಿಸಿದ್ದಾರೆ.

ಅವರು ಎರಡು ವಿಧವಾದ ತತ್ತ್ವವನ್ನು ಪ್ರತಿಪಾದಿಸಿದ್ದಾರೆ–ಸ್ವತಂತ್ರ ಮತ್ತು ಪರತಂತ್ರ.

ಇದರಲ್ಲಿ ಮೊದಲನೆಯದರ ಸತ್ಯತ್ವವು ಸ್ವತಃಸಿದ್ಧ. ಎರಡನೆಯದರ ಸತ್ಯತ್ವವು ಮೊದಲನೆಯದನ್ನು ಅವಲಂಬಿಸಿದೆ.

**ಸ್ವತಂತ್ರ :** ಸ್ವತಂತ್ರವಾದುದೆ ಪರಬ್ರಹ್ಮ. ಪರತಂತ್ರತತ್ತ್ವಕ್ಕೆ ಪರಬ್ರಹ್ಮವು ಜನ್ಮ, ಜೀವ, ಸ್ಥಾನ, ನಾಶ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳನ್ನು ಕೊಡುತ್ತದೆ.

**ಅಸ್ವತಂತ್ರ :** ಪರತಂತ್ರತತ್ತ್ವಕ್ಕೆ ಸ್ವಾಯತ್ತ ಸ್ಥಿತಿ ಇಲ್ಲ.

ಪರತಂತ್ರತತ್ತ್ವವು ಎರಡು ವಿಧ—ಚೇತನ ಮತ್ತು ಅಚೇತನ (ಜಡ).

**ಚೇತನ :** ಚೇತನಾತ್ಮಕರು ಮೂರು ವಿಧ.

1. ಬ್ರಹ್ಮಮೀಮಾಂಸಾಧಿಕಾರಿಗಳು ಮತ್ತು ಅದರಿಂದ ಶುದ್ಧಆನಂದಾತ್ಮಕವಾದ ಬ್ರಹ್ಮಪ್ರಾಪ್ತಿ ಹೊಂದುವವರು.

2. ಬ್ರಹ್ಮಮೀಮಾಂಸೆಯಲ್ಲಿ ಅನಾಸಕ್ತರು. ಆದ್ದರಿಂದಲೇ ನಿತ್ಯಬದ್ಧರು.

3. ಬ್ರಹ್ಮಮೀಮಾಂಸಾ ವಿರೋಧಿಗಳು. ಆದ್ದರಿಂದಲೇ ನಿರಂತರವಾದ ದುಃಖಕ್ಕೆ ಪಾತ್ರರಾದ ನಿತ್ಯಸಂಸಾರಿಗಳು. ಕಡೆಯ ಎರಡು ವಿಭಾಗದವರ ಸೃಷ್ಟಿಯು ನಿಷ್ಫಲವಲ್ಲ. ಏಕೆಂದರೆ ಅವರಿಂದ ಉಂಟುಮಾಡಲ್ಪಟ್ಟ ಗೊಂದಲವೇ ಜ್ಞಾನದ ಉತ್ಪತ್ತಿಯಲ್ಲಿ ಕೊನೆಗೊಳ್ಳುತ್ತದೆ. ಇವರಲ್ಲಿ ಮೊದಲನೆಯವರಾದ ಮುಕ್ತಿಯೋಗ್ಯರಲ್ಲಿ ದೇವ, ಋಷಿ, ಪಿತೃ, ರಕ್ಷಕ (ಚಕ್ರವರ್ತಿ) ಮತ್ತು ಮನುಷ್ಯೋತ್ತಮ ಎಂದು ಐದು ವಿಧ. ತಮ್ಮ ಶಕ್ತ್ಯನುಸಾರವಾಗಿ ಅವರು ಬ್ರಹ್ಮಮೀಮಾಂಸೆಯನ್ನರಿಯುವರು. ಈ ಶಕ್ತಿಯು ಪರಬ್ರಹ್ಮನಿಂದ ಕೊಡಲ್ಪಟ್ಟಿದ್ದು. ಬ್ರಹ್ಮಾನಂದಾನುಭವವು ಅವರ ಜ್ಞಾನಕ್ಕೆ ಅನುಗುಣವಾಗಿರುವುದು. ಪರಬ್ರಹ್ಮನು ಚೇತನ ಪದಾರ್ಥಗಳ ಭಿನ್ನಭಿನ್ನವಾದ ಸ್ಥಿತಿಯನ್ನು ಅವರವರ ಕರ್ಮಾನುಗುಣವಾಗಿ ಕೊಡುವನು.

ಜಡ : ಜಡ ಪದಾರ್ಥಗಳಲ್ಲಿ ವೇದವು ಅನಾದಿ ಮತ್ತು ಅನಂತ. ಪ್ರಕೃತಿ, ಕಾಲ ಮತ್ತು ದೇಶ ಇವುಗಳು ನಿತ್ಯ ಮತ್ತು ಅನಿತ್ಯವಾದ ವಸ್ತುಗಳಿಂದ ಕೂಡಿವೆ. ಪ್ರತಿಯೊಂದರಲ್ಲೂ ದ್ರವ್ಯವು ಶಾಶ್ವತ ಮತ್ತು ಗುಣಗಳು ಪರಿಣಾಮಿ(ಪರಿಣಾಮ ಉಳ್ಳವು). ಕಾರ್ಯಗಳು ಕಾಲಕ್ರಮದಲ್ಲಿ ಉತ್ಪತ್ತಿ ಮತ್ತು ವಿನಾಶವುಳ್ಳವು.

ಪ್ರತಿಯೊಂದು ಪದಾರ್ಥದ ಅಸ್ತಿತ್ವವು ಮುಖ್ಯವಾಗಿ ಬ್ರಹ್ಮನಿಂದ ಆದದ್ದು. ನಿತ್ಯನಾದ ಬ್ರಹ್ಮನಿಂದ ಆ ರೀತಿ ಸೃಷ್ಟಿಸಲ್ಪಟ್ಟಿರುವುದೇ ಪದಾರ್ಥಗಳು ನಿತ್ಯವಾಗಿ ಅಥವಾ ಸತ್ಯವಾಗಿರುವುದಕ್ಕೆ ಕಾರಣ.

ಬ್ರಹ್ಮನ ಸೃಜನ ಕ್ರಿಯೆಯು ಗೊಂದಲಕ್ಕೆ ಅವಕಾಶ ಕೊಡುವುದಿಲ್ಲ. ಈ ತತ್ತ್ವವನ್ನು ವಿವರಿಸಲು ಮಧ್ವಾಚಾರ್ಯರು ಬ್ರಹ್ಮನಿಗೂ ಜೀವನಿಗೂ ಇರುವ ಪಂಚವಿಧ ಭೇದಗಳನ್ನು ಪ್ರತಿಪಾದಿಸುತ್ತಾರೆ :

ಬ್ರಹ್ಮನಿಗೂ ಜೀವನಿಗೂ ಇರುವ ಭೇದ, ಬ್ರಹ್ಮನಿಗೂ ಜಡಕ್ಕೂ ಇರುವ ಭೇದ, ಜೀವನಿಗೂ ಜಡನಿಗೂ ಇರುವ ಭೇದ, ಜೀವನಿಗೂ ಮತ್ತೊಂದು ಜೀವಿಗೂ ಇರುವ ಭೇದ ಮತ್ತು ಜಡಕ್ಕೂ ಮತ್ತೊಂದು ಜಡಕ್ಕೂ ಇರುವ :ಭೇದ. ಪ್ರಪಂಚದಲ್ಲಿರುವ ಚೇತನ, ಅಚೇತನ, ಮತ್ತು ಬ್ರಹ್ಮ ಇವು ವಿಭಿನ್ನ ತತ್ತ್ವಗಳೆಂದು ನಿರ್ಣಯ ಮಾಡಿದ್ದಾರೆ.

ಪ್ರಪಂಚದ ಪ್ರತಿಯೊಂದು ಪದಾರ್ಥವೂ ಪರಿಣಾಮವುಳ್ಳದ್ದು. ಆದ್ದರಿಂದ ಅದು ಉತ್ಪತ್ತಿ ಮತ್ತು ನಾಶವುಳ್ಳದ್ದು. ಬ್ರಹ್ಮವೇ ಈ ವಿಕಾರಗಳಿಗೆಲ್ಲ ಕಾರಣ ಮತ್ತು ಬ್ರಹ್ಮವೊಂದೇ ನಿರ್ವಿಕಾರ. ಸಮುಗ್ರವಾದ ಈ ವಿಶ್ವವು ಯಾರ ಸಹಾಯವೂ ಇಲ್ಲದೆ ಪೂರ್ಣವಾಗಿ ಬ್ರಹ್ಮನಿಂದಲೇ ರಚಿಸಲ್ಪಟ್ಟಿದ್ದು.

3. ಮೂರನೆಯ ಸೂತ್ರದಲ್ಲಿ ಬ್ರಹ್ಮ ಜಿಜ್ಞಾಸೆಯೊಂದೇ ಬ್ರಹ್ಮಜ್ಞಾನಕ್ಕೆ ಮೂಲವೆಂಬುದನ್ನು ಮಧ್ವರು ತೋರಿಸಿದ್ದಾರೆ.

4. ನಾಲ್ಕನೆಯ ಸೂತ್ರದಲ್ಲಿ ಮಧ್ವಾಚಾರ್ಯರು ಆ ಬ್ರಹ್ಮವು ಅನಂತ ಕಲ್ಯಾಣ ಪರಿಪೂರ್ಣವಾಗಿರುವುದರೀದಲೇ ಬ್ರಹ್ಮ ಎಂದು ಪ್ರತಿಪಾದಿಸುತ್ತಾರೆ. ಇವುಗಳಲ್ಲಿ ಒಂದೊಂದು ಗುಣವೂ ಪೂರ್ಣ ಅಂದರೆ ಕಾಲ ಮತ್ತು ದೇಶಾತೀತ. ಈ ಕಾರಣದಿಂದಲೇ ಬ್ರಹ್ಮವು ವಿಷ್ಣುವೆಂದು ಕರೆಯಲ್ಪಡುತ್ತದೆ. ವೇದದಲ್ಲಿರುವ ಪ್ರತಿಯೊಂದು ಶಬ್ದವೂ ಪರಮಾತ್ಮ ವಾಚಕವೇದೂ ಅದರಿಂದ ಬೇರೆ ಶಬ್ದಗಳು, ಯಾವ ಭಾಷೆಯಲ್ಲೇ ಆಗಲಿ, ಯಾವ ಕಾಲದಲ್ಲಿಯೇ ಆಗಲಿ, ಮೊತ್ತಮೊದಲು ಆ ಶಬ್ದದಿಂದಲೇ ಬೋಧಿತವಾದ ಗುಣದಿಂದ ಕೂಡಿರುವ ಬ್ರಹ್ಮವಾಚಕವೆಂದೂ ಈ ಶಬ್ದಗಳು ಪ್ರಾಪಂಚಿಕ ಪದಾರ್ಥಗಳಿಗೆ ಅನ್ವಯಿಸುವಾಗಲೂ ಆ ಗುಣದಿಂದ ಕೂಡಿರುವ ಬ್ರಹ್ಮವೇ ಈ ಪದಾರ್ಥಗಳಲ್ಲಿ ಅಂತರ್ಗತವಾದ ತತ್ತ್ವವೆಂದೂ ಮಧ್ವಾಚಾರ್ಯರು ಸ್ಪಷ್ಟಪಡಿಸುತ್ತಾರೆ. ಈ ನಿರ್ವಚನದ ಕ್ರಮವನ್ನು ಮಧ್ವಾಚಾರ್ಯರು 'ಸಮನ್ವಯ'ವೆಂದು ಕರೆಯುತ್ತಾರೆ.

5. ಐದನೆಯ ಸೂತ್ರದಲ್ಲಿ ಹೇಗೆ ಬ್ರಹ್ಮವೊಂದೇ ತಿಳಿಯಬೇಕಾದ ತತ್ತ್ವವೆಂದೂ ಅದನ್ನು ತಿಳಿಯುವುದರಿಂದ ಮತ್ತೆಲ್ಲವೂ ತಿಳಿಯುವುದೆಂದೂ ತೋರಿಸಿದ್ದಾರೆ.

ಮೊದಲನೆಯ ಅಧ್ಯಾಯದ ಉಳಿದ ಭಾಗದಲ್ಲಿ ಮಧ್ವಾಚಾರ್ಯರು ಪ್ರತಿಯೊಂದು ವಿಧವಾದ ವೈದಿಕ ಶಬ್ದವನ್ನೂ ಅಧ್ಯಯನ ಮಾಡಿ, ಅದನ್ನು ಬ್ರಹ್ಮನಿಗೆ ಅನ್ವಯಿಸುತ್ತಾರೆ. ಒಂದು ಸಲ ಒಂದು ಪದವನ್ನು ಸಮನ್ವಯ ಮಾಡಿದನಂತರ ವ್ಯಾಖ್ಯಾನದಲ್ಲಿ ಅದನ್ನು ಅಳವಡಿಸಿಕೊಳ್ಳುತ್ತಾರೆ. ಆ ರೀತಿ ಅವರ ಭಾಷ್ಯವು ತನ್ನದೇ ಆದ ರೀತಿಯನ್ನು ಪಡೆಯುತ್ತದೆ. ಪ್ರತಿಯೊಂದು ಪದವೂ ಸರ್ವಕರ್ತೃವಾದ ಬ್ರಹ್ಮವನ್ನೇ ಪ್ರತಿಪಾದಿಸುವುದರಿಂದ, ಅವರ ದೃಷ್ಟಿಯಲ್ಲಿ ಮಂಗಳಕರವಾದ ಅಥವಾ ಅಮಂಗಳಕರವಾದ ಶಬ್ದಗಳಿಗೆ ವ್ಯತ್ಯಾಸವೇ ಇಲ್ಲ. ಬ್ರಹ್ಮ ವಿಷಯಕವಾದ ವಾಸ್ತವ ಜ್ಞಾನವಿಲ್ಲದಿರುವುದೇ ಭಿನ್ನವಾದಗಳಿಗೂ ಅವುಗಳನ್ನವಲಂಬಿಸಿದ ದರ್ಶನಗಳಿಗೂ ಕಾರಣವೆಂದು ಎರಡನೆಯ ಅಧ್ಯಾಯವಾದ ಅವಿರೋಧಾಧ್ಯಾಯದಲ್ಲಿ ಅವರು ತೋರಿಸಿದ್ದಾರೆ. ಬ್ರಹ್ಮಮೀಮಾಂಸೆಯೊಂದೇ ದಿವ್ಯಸಾಧನವೆಂದು ಮೂರನೆಯ ಸಾಧನಾಧ್ಯಾಯದಲ್ಲಿ ತೋರಿಸಿದ್ದಾರೆ. ನಾಲ್ಕನೆಯ ಫಲಾಧ್ಯಾಯದಲ್ಲಿ ಬ್ರಹ್ಮಮೀಮಾಂಸಾ ಜ್ಞಾನವು ಆನಂದರೂಪವಾದ ಬ್ರಹ್ಮಪ್ರಾಪ್ತಿಯನ್ನು ಉಂಟುಮಾಡುವುದೆಂದೂ ತೋರಿಸಿದ್ದಾರೆ.

ಇದು ಮಧ್ವಾಚಾರ್ಯರ ಬ್ರಹ್ಮಮೀಮಾಂಸೆಯ ರೂಪರೇಖೆ. ಅವರು ಬ್ರಹ್ಮನಿಂದ ಅತಿರಿಕ್ತವಾದುದು ಯಾವುದೂ ಇಲ್ಲವೆಂದು ನಿರೂಪಿಸಿದ್ದಾರೆ. ಮಧ್ವಾಚಾರ್ಯರ ಮಾತಿನಲ್ಲೇ ಹೇಳುವದಾದರೆ " ಬ್ರಹ್ಮಣೋऽನ್ಯತ್ರ ಜಗತೋ ಅಭಾವಾತ್ ". ಈ ರೀತಿ ಮಧ್ವಾಚಾರ್ಯರು (ಬಹುಮುಖವಾದ ಈ ವಿಶ್ವವನ್ನು ಒಂದು ತತ್ವದಲ್ಲಿ ನಿರೂಪಿಸುವ) ವೇದೋಕ್ತವಾದ ಅದ್ವೈತವನ್ನು ಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ. ಅವರಿಗೆ ಈ ಭಾವನೆಯೇ " ಆನಂದ ".

ಮೂಲ ಲೇಖಕರು : ಶ್ರೀ ಎಚ್. ಎನ್. ರಾಘವೇಂದ್ರಾಚಾರ್
ಅನುವಾದಕರು : ಶ್ರೀ ಎಂ. ಎ. ಲಕ್ಷ್ಮೀತಾತಾಚಾರ್

# ಶೈವ ಮತ್ತು ವೀರಶೈವ ಧರ್ಮಗಳು

**ಹೊಯ್ಸಳರ ಕಾಲ**

ಕರ್ಣಾಟಕದಲ್ಲಿ ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳು ಬಹಳವಾಗಿ ಧಾರ್ಮಿಕ ಕ್ಷೋಭೆಯಿಂದ ಕೂಡಿದ ಕಾಲ. ವೇದೋಪನಿಷತ್ತುಗಳ ಆಧಾರವನ್ನು ಹೊಂದಿ, ಸಂಪ್ರದಾಯಬದ್ಧವಾದ ವೈದಿಕಧರ್ಮವನ್ನು ಪ್ರಸಾರಮಾಡಿದ ಮೂರು ಪಂಥಗಳ ತತ್ತ್ವಗಳನ್ನು ಈ ತನಕ ನಾವು ಪರಿಶೀಲಿಸಿದ್ದೇವೆ. ಇವುಗಳ ಜೊತೆಗೆ ಶಾಸ್ತ್ರಸಮ್ಮತ ಬ್ರಾಹ್ಮಣ ಸಂಪ್ರದಾಯಕ್ಕೆ ನಿಷ್ಠೆಹೊಂದದ ಇತರ ಧರ್ಮಗಳೂ ದೇಶದಲ್ಲಿದ್ದವು.

ಈಗ ನಾವು ಅಂಥವುಗಳೆರಡನ್ನು ಕುರಿತು, ಹೊಯ್ಸಳರ ಕಾಲದಲ್ಲಿ ಶೈವಧರ್ಮ ಮತ್ತು ವೀರಶೈವ ಧರ್ಮಗಳ ಪ್ರಾಬಲ್ಯವನ್ನು ಕುರಿತು ವಿವೇಚಿಸೋಣ.

ಹೊಯ್ಸಳರು ಚಾಳುಕ್ಯ ಹಾಗೂ ರಾಷ್ಟ್ರಕೂಟರಂತೆ ಒಂದಕ್ಕಿಂತ ಹೆಚ್ಚು ಧರ್ಮದ ಅನುಯಾಯಿಗಳೂ ಆಶ್ರಯದಾತರೂ ಆಗಿದ್ದರು. ವಿಷ್ಣುವರ್ಧನನ ತಂದೆ ಎರೆಯಂಗನು ವೈಷ್ಣವ; 'ಶ್ರೀವರಪದ್ಮ ಭೃಂಗ' ಎಂದೆನಿಸಿಕೊಂಡಿದ್ದನು. ಆತನ ಮಗ ಒಂದನೆಯ ಬಲ್ಲಾಳನಾದರೊ ಶೈವ; 'ಮಾಹೇಶ್ವರ ಸಮಯಾಧಾರ'ನಾಗಿದ್ದನಂತೆ. ಒಮ್ಮೆಯಂತೂ ಆತ 'ಶೈವರ ಶಿರೋಮಣಿ' ಎಂದು ಕರೆಸಿಕೊಂಡಿದ್ದನು. ಕ್ರಿ.ಶ. 1101ರಲ್ಲಿ ತನ್ನ ಪೂರ್ವಜರ ವಾಸಸ್ಥಾನವಾದ ಸೋಸೂರಿಗೆ ಹೋಗುವ ಹಾದಿಯಲ್ಲಿ ಒಂದು ಶಿವಾಲಯಕ್ಕೆ ಆತ ದಾನಶಾಸನ ಹಾಕಿಸಿಕೊಟ್ಟಿರುವುದು ಕಂಡುಬರುತ್ತದೆ (Derrett : The Hoysalas, P. 43). ವಿಷ್ಣುವರ್ಧನ ಹಾಗೂ ಒಂದನೆ ಬಲ್ಲಾಳರು ಅವರ ಪೂರ್ವವಯಸ್ಸಿನಲ್ಲಿ ಜೈನಗುರುಗಳ ಪ್ರಭಾವಕ್ಕೆ ಒಳಗಾಗಿದ್ದರೂ ಅವರು ಆ ಕಾಲದ ಉದಾರ ದೃಷ್ಟಿಯ ಮನಃಪ್ರವೃತ್ತಿಗೆ ಸರಿಸಮನಾಗಿ ಮುಂದುವರಿದರು.

ನರಸಿಂಹ ಮತ್ತು ಎರಡನೆ ಬಲ್ಲಾಳರು 'ಮಾಹೇಶ್ವರಸಮಯ' ಅಥವಾ 'ಶೈವಧರ್ಮ'ದ ಸಂರಕ್ಷರಾದರೂ 'ವೈಷ್ಣವಚಕ್ರವರ್ತಿ'ಗಳೆಂದು 'ವೈಷ್ಣವ ಧರ್ಮರಕ್ಷಕ'ರೆಂದು ಹೆಸರಾಗಿದ್ದರು. ಹೊಯ್ಸಳ ರಾಜರ ಅನ್ಯಮತ ಸಹಿಷ್ಣುತೆಯಿಂದ ಬೇರೆಬೇರೆ ಧರ್ಮಗಳು ಶಾಂತಿಯುತವಾಗಿ ಸಹಬಾಳ್ವೆ ನಡೆಸಲು ಅವಕಾಶವಾಯಿತು; ಅಷ್ಟೇ ಅಲ್ಲ. ಅದರಿಂದ ಎಲ್ಲ ಧಾರ್ಮಿಕ ಪೂಜೆಯ ಗುರಿಯು ಕಟ್ಟಕಡೆಗೆ ಒಂದೇಯೆ ಎಂಬ ಅರಿವೂ ಹೆಚ್ಚಿತು. ನಾಮರೂಪಗಳು ಮಾತ್ರ ಭಿನ್ನವಾಗಬಹುದು. ಬೇಲೂರಿನ ಕೇಶವ ದೇವಾಲಯದ ಶಾಸನ (E.C. Pt. I, Vol. V, P. 99), ಆ ಕಾಲಕ್ಕಿಂತ ಈಚಿನದಾದರೂ ಅದರ ಪ್ರಾರ್ಥನಾ ಪದ್ಯ ಈ ಮಹತ್ತರವಾದ ಭಾವನೆಗೆ ಸ್ಮರಣೀಯವಾದ ಅಭಿವ್ಯಕ್ತಿಯನ್ನಿತ್ತಿದೆ.

> "ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
> ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
> ಅರ್ಹಶ್ಚೇತಿ ಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
> ಸೋऽಯಂ ನೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ

"ಯಾವನನ್ನು ಶೈವರು ಶಿವನೆಂದೂ ವೇದಾಂತಿಗಳು ಬ್ರಹ್ಮನೆಂದೂ ಬೌದ್ಧರು ಬುದ್ಧನೆಂದೂ ಪ್ರಮಾಣವನ್ನು ಹುಡುಕುವುದರಲ್ಲಿ ಗಟ್ಟಿಗರಾದ ನೈಯಾಯಿಕರು ಕರ್ತನೆಂದೂ ಜೈನಶಾಸನದಲ್ಲಿ ನಿರತರಾದವರು ಅರ್ಹನೆಂದೂ ಮೀಮಾಂಸಕರು ಕರ್ಮವೆಂದೂ ಉಪಾಸಿಸುತ್ತಾರೋ ಆ ಈಶನಾದ ಕೇಶವನು ನಮ್ಮ ಇಷ್ಟಾರ್ಥವನ್ನು ಕೈಗೂಡಿಸಲಿ".

ಹೊಯ್ಸಳ ಸಾಮ್ರಾಜ್ಯದ ಅರಸರೂ ಹಾಗೆಯೇ ಸಾಮಂತರೂ 'ಚತುಸ್ಸಮಯ ಸಮುದ್ಧರಣ' ಎಂಬ ಬಿರುದನ್ನು ಧರಿಸಿದ್ದರು. ರಾಜನು ತನ್ನ ದೇಶದಲ್ಲಿದ್ದ ಬೌದ್ಧ, ಜೈನ, ಶೈವ ಮತ್ತು ವೈಷ್ಣವ ಎಂಬ ದಾರ್ಶನಿಕ ಪದ್ಧತಿ ಹಾಗೂ ಮತಧರ್ಮಗಳ ರಕ್ಷಕನೆಂದು ಆ ಬಿರುದು ಪ್ರಕಟಿಸಿತು. ವಿಷ್ಣುವರ್ಧನನು ತಾನು ವೈಷ್ಣವನಾದರೂ ಶೈವಧರ್ಮವನ್ನು ಗೌರವಿಸಿದನು. ಉದಾಹರಣೆಗೆ, ಅವನು ಲೆಕ್ಕವಿಲ್ಲದಷ್ಟು ಯುದ್ಧಗಳನ್ನು ಮಾಡಬೇಕಾಗಿ ಬಂದರೂ ಅವುಗಳ ಮಧ್ಯದಲ್ಲಿಯೇ ಬಂಕಾಪುರದಲ್ಲಿ ಹೊಯ್ಸಳೇಶ್ವರನಿಗೆ ಒಂದು ದೇವಾಲಯವನ್ನು ಸಮರ್ಪಿಸಲು ಸಮಯ ಮಾಡಿಕೊಂಡನು (Derrett: The Hoysalas, p. 67).

ಶೈವಧರ್ಮವು ಭಾರತದಲ್ಲೆಲ್ಲ ಏಳಿಗೆ ಹೊಂದಿತ್ತು; ಅದರಲ್ಲಿ ಅನೇಕ ಪಂಥಗಳಿದ್ದವು. ಕರ್ಣಾಟಕದಲ್ಲಿ ವೇದ ಪ್ರಾಮಾಣ್ಯವನ್ನಂಗೀಕರಿಸಿದ ಸಂಪ್ರದಾಯಬದ್ಧ ಶೈವವೂ, ಆಗಮಕ್ಕೆ ಮಾನ್ಯತೆಯಿತ್ತ ಪಾಶುಪತಶೈವವೂ ಇದ್ದವು. ಶೈವಧರ್ಮದ ಇತರ ಬಗೆಗಳು ಕೂಡ ಕಾಶ್ಮೀರ, ತಮಿಳುನಾಡು ಮತ್ತು ತೆಲುಗು ದೇಶಗಳಲ್ಲಿ ಪ್ರಖ್ಯಾತಿ ಹೊಂದಿದ್ದುವು. ಈ ವಿದ್ಯಮಾನಗಳಲ್ಲಿ 12ನೆಯ ಶತಮಾನದಲ್ಲಿ ಬಾಳಿದ ಶರಣರು—ಕರ್ಣಾಟಕದ ಮಹಾ ಅನುಭಾವಿಗಳು—ಉದಾರವೂ ಸುಧಾರಣಾತ್ಮಕವೂ ಆದ ವೀರಶೈವವೆಂಬ ಧರ್ಮದ ಮುನ್ನಡೆಗೆ ಪ್ರೋತ್ಸಾಹ ನೀಡಿದರು. ಶೈವಧರ್ಮದ ಕೆಲವು ಸಾಮಾನ್ಯ ಲಕ್ಷಣ ಅದಕ್ಕುಂಟು. ಆದರೆ, ಬೇರೆ ಹಲವು ಬಗೆಗಳಲ್ಲಿ ಅದಕ್ಕಿಂತ ಇದು ಭಿನ್ನವಾಗಿ ಸ್ವತಂತ್ರವಾದುದು.

ಸಕಲ ಮಾನವರೂ ಸಮಾನರು ಎಂಬುದನ್ನು ಆ ಶರಣರು ಎತ್ತಿ ಹಿಡಿದರು. ಸರ್ವವ್ಯಾಪಿಯಾದ ಆಧ್ಯಾತ್ಮಿಕ ಸತ್ಸ್ವರೂಪವೂ ನಿಷ್ಕಲವೂ ಆದ ಶಿವನ ಅದ್ವೈತಭಾವದ ಪೂಜಾನಿಷ್ಠೆಯಲ್ಲಿ ನೈತಿಕ ಜೀವನವನ್ನು ನಡೆಸಬೇಕೆಂದು ಅವರು ಒತ್ತಿ ಹೇಳಿದರು.

ಪರಂಪರಾಗತ ಶೈವಧರ್ಮವು ತನ್ನ ವೇದಮೂಲವನ್ನು ಉಳಿಸಿಕೊಂಡಿತು. ದೇವಾಲಯಗಳಲ್ಲಿ ಸಾಮಾನ್ಯವಾಗಿ ವೇದಮಂತ್ರಘೋಷ, ಉತ್ಸವ, ಸಂಗೀತ, ಮತ್ತು ನೃತ್ಯ—ಇವುಗಳಿಂದ ಕೂಡಿದ ಸಾರ್ವಜನಿಕ ಪೂಜೆಗೆ ಏರ್ಪಾಟು ಮಾಡಿತು. ಈ ವಿಷಯಗಳಲ್ಲಿ ಅದು ಶಾಸ್ತ್ರೋಕ್ತ ವೈಷ್ಣವ ಧರ್ಮವನ್ನು ಹೋಲಿತು. ಅದರಲ್ಲಿ ಶಿವನೇ ಪರದೈವ; ಮತ್ತೊಂದರಲ್ಲಿ ವಿಷ್ಣು. ಇಷ್ಟು ಹೊರತು, ಬೇರೆ ವ್ಯತ್ಯಾಸವಿಲ್ಲ. ಶೈವಧರ್ಮ ತತ್ವಗಳಿಂದ ಹೊಮ್ಮಿಬಂದ ಸುಧಾರಣಾತ್ಮಕವಾದ ವೀರಶೈವಧರ್ಮದ ವಿಷಯವೇ ಬೇರೆ. ವೀರಶೈವಧರ್ಮವು ತನ್ನದೇ ಆದ ಆಚರಣೆಯನ್ನು ರೂಪಿಸಿಕೊಂಡಿತು. ದೀಕ್ಷೆ ಹೊಂದಿದವನು ಪರಮಾತ್ಮನ ಸಂಕೇತವಾದ ಲಿಂಗವನ್ನು ತನ್ನ ದೇಹದ ಮೇಲೆ ಧರಿಸಬೇಕೆಂಬ ಪದ್ಧತಿಯನ್ನು ಅದು ವಿಧಿಸಿತು. 'ಸ್ಥಾವರಲಿಂಗ'ವನ್ನು ಹೊಂದಿದ ಪವಿತ್ರವಾದ ಶಿವಾಲಯಗಳಿಗಿಂತಲೂ ಮಿಗಿಲಾಗಿ, ಈ ಇಷ್ಟಲಿಂಗವೇ ಪೂಜ್ಯವಸ್ತುವಾಯಿತು. ದೈವೀಪಥವನ್ನು ಮೆಟ್ಟಿದ ಗುರು ಹಾಗೂ ಜಂಗಮರಿಗೆ ಗೌರವಸ್ಥಾನವಾಯಿತು. ಸಮಾಜದಲ್ಲಿ ಸಮಾನತೆಯನ್ನು ಒತ್ತಿ ಹೇಳಿದುದು ಅತ್ಯಂತ ಗಮನಾರ್ಹವಾಯಿತು; ವೈಯಕ್ತಿಕ ಪೂಜೆ ಹಾಗೂ ಶಿಕ್ಷಣಕ್ಕೆ ಬಹಳ ಪ್ರಾಮುಖ್ಯ ಕೊಡಲಾಯಿತು. ಸಂಸ್ಕೃತಕ್ಕಿಂತ ಹೆಚ್ಚಾಗಿ ಕನ್ನಡವೇ ಬಳಕೆಗೆ ಬಂದಿತು. ಪ್ರಾಚೀನ ಶಾಸ್ತ್ರಗ್ರಂಥಗಳಿಗಿಂತ ಸಮಕಾಲೀನ ಅನುಭಾವಿಗಳ ಉಪದೇಶಕ್ಕೆ ಹೆಚ್ಚು ಬೆಲೆ ಕೊಡಲಾಯಿತು. ಇವೇ ಶೈವಧರ್ಮಕ್ಕಿಂತ ವೀರಶೈವಧರ್ಮವು ಬೇರೆಯೆಂದು

ತೋರಿಸುವ ಮುಖ್ಯಾಂಶಗಳು. ಇವು ಆ ಧರ್ಮವನ್ನು ಮತ ಪ್ರಸಾರಣೆಯ ಉತ್ಸಾಹದಿಂದ ಉಜ್ವಲವೂ ಕ್ರಾಂತಿಕಾರಿಯೂ ಆದ ಧರ್ಮವನ್ನಾಗಿ ಮಾಡಿದವು.

ಚಾಳುಕ್ಯಸಾಮ್ರಾಜ್ಯ ಪತನಹೊಂದಿನ ಮೇಲೆ ಕರ್ಣಾಟಕದ ಬಹುಭಾಗ ಹೊಯ್ಸಳರ ಕೈವಶ ವಾಯಿತು. ಅಲ್ಲಿಂದೀಚೆಗೆ ಹೊಯ್ಸಳ ಸಾಮ್ರಾಜ್ಯಕ್ಕೆ ನಾನಾ ರೀತಿಯಲ್ಲಿ ಕಲ್ಯಾಣದ ಶರಣರ ಸಂಪರ್ಕ ವುಂಟಾಯಿತು.

ಹೊಯ್ಸಳರ ಆಳಿಕೆ ಕೊನೆಗೊಂಡು ವಿಜಯನಗರ ಸಾಮ್ರಾಜ್ಯ ತಲೆಯೆತ್ತಿದ ಬಳಿಕ ವೀರಶೈವ ಧರ್ಮವು ಮತ್ತೆ ಪುನರುಜ್ಜೀವನ ಹೊಂದಿ, ಜನಬಳಕೆಯಲ್ಲಿ ಬಹು ವ್ಯಾಪಕವಾಗಿ ಹರಡಿತು.

ಮೂಲ ಲೇಖಕರು : ಡಾ॥ ಎ. ಎಲ್. ಶಿವರುದ್ರಪ್ಪ
ಅನುವಾದಕರು : ಶ್ರೀ ಸಿ. ಮಹಾದೇವಪ್ಪ

# ವೀರಶೈವ ಧರ್ಮ

## (ಶಕ್ತಿ ವಿಶಿಷ್ಟಾದ್ವೈತ)

ವೇದಾಂತದ ಮೂರು ಪಂಥಗಳಾದ ಅದ್ವೈತ, ವಿಶಿಷ್ಟಾದ್ವೈತ, ದ್ವೈತಗಳೇ ಅಲ್ಲದೆ ಕರ್ಣಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವೇಶ್ವರ, ಸಿದ್ಧರಾಮ ಮತ್ತು ಇತರರ ನೇತೃತ್ವದಲ್ಲಿ ವೀರಶೈವಧರ್ಮದ ಆಂದೋಳನ ಆರಂಭವಾಯಿತು. ಈ ಆಂದೋಳನವು ಆ ಕಾಲದ ಧಾರ್ಮಿಕ ಆಚಾರ ವಿಚಾರಗಳ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿತು. ಈ ಪಂಥದ ಸಿದ್ಧಾಂತ ಮತ್ತು ತತ್ತ್ವಸಾರಾಂಶವು ಶಕ್ತಿವಿಶಿಷ್ಟಾದ್ವೈತವೆಂದು ಪ್ರಸಿದ್ಧವಾಗಿದೆ.

ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವ ಶೈವಧರ್ಮವು ಪ್ರಪಂಚದ ಜೀವಂತವಾದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಆರ್ಯ ಪೂರ್ವದ ಸಿಂಧೂ ಸಂಸ್ಕೃತಿಯಲ್ಲಿ ಶಿವಾರಾಧನೆ ಇದ್ದಿತೆಂದೂ ಶಿವನನ್ನು ಪಶುಪತಿಯ ರೂಪದಲ್ಲಿ ಪೂಜಿಸುತ್ತಿದ್ದರೆಂದೂ ಹರಪ್ಪಾ ಮೊಹೆಂಜೊದಾರೋಗಳಲ್ಲಿ ಸಿಕ್ಕಿರುವ ಅವಶೇಷಗಳಿಂದ ವ್ಯಕ್ತಪಡುತ್ತದೆ ಎಂದು ಸರ್‌ಜಾನ್ ಮಾರ್ಷಲ್ಲರು ಅಭಿಪ್ರಾಯಪಟ್ಟಿದ್ದಾರೆ. ಆರ್ಯಪೂರ್ವಕಾಲದ ಶಿವನು ವೈದಿಕ ರುದ್ರನಾಗಿ ಪಶುಪತಿಯಾಗಿ ವೇದಗಳ ಕಾಲದಲ್ಲಿ ಗುರುತಿಸಲ್ಪಟ್ಟಿದ್ದಾನೆ. ಶಿವನ ಹಲವಾರು ಹೆಸರುಗಳಾದ ರುದ್ರ ಪಶುಪತಿ ಮೊದಲಾದುವು ಚತುರ್ವೇದಗಳಲ್ಲಿಯೂ ಕಂಡುಬರುತ್ತವೆ. ಉಪನಿಷತ್ತುಗಳಲ್ಲಿ ಕೂಡ ಶೈವವೇದಾಂತ ತತ್ವಗಳು ಪ್ರತಿಪಾದಿತವಾಗಿವೆ. ಶತರುದ್ರೀಯ ಮತ್ತು ವಾಜಸನೇಯ ಸಂಹಿತೆಗಳನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿ ನೋಡಿದಲ್ಲಿ, ಆರ್ಯಪೂರ್ವಕಾಲದ ಶಿವನಿಗೆ ಅನ್ವಯಿಸುತ್ತಿದ್ದ ಅನೇಕ ವಿಶೇಷಣಗಳಿಂದಲೇ ವೇದಗಳ ರುದ್ರನನ್ನು ವರ್ಣಿಸಲಾಗಿದೆ ಎಂದು ಕಂಡುಬರುತ್ತದೆ. ಶ್ವೇತಾಶ್ವತರೋಪನಿಷತ್ತಿನಲ್ಲಿಯೂ ಸಹ, ಶಿವ ಮತ್ತು ರುದ್ರ ಶಬ್ದಗಳು ಒಂದೇ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ.

ಆರ್ಯಪೂರ್ವಕಾಲದಲ್ಲಿ ಲಿಂಗವು ಆರಾಧನೆಯ ಒಂದು ಸಾಧನವಾಗಿತ್ತು. ಮೊಹೆಂಜೊದಾರೋ ಮತ್ತು ಹರಪ್ಪಾಗಳಲ್ಲಿನ ಅಗೆತಗಳಿಂದ ಸಿಕ್ಕಿರುವ ಅವಶೇಷಗಳಿಂದ ಆ ಕಾಲದ ಜನರು ಶಿವನನ್ನು ಸಾಕಾರ ರೂಪದಲ್ಲಿಯೂ ಲಿಂಗಾಕಾರದಲ್ಲಿಯೂ ಪೂಜಿಸುತ್ತಿದ್ದುದು ತಿಳಿದುಬರುತ್ತದೆ. ಶಿವನ ಸಂಕೇತವಾದ ಶಿವಲಿಂಗವು ಸಾರ್ವತ್ರಿಕವಾಗಿ ಶೈವರ ಆರಾಧನೆಯ ಸಂಕೇತವಾಗಿದ್ದುದು ಕಂಡುಬರುತ್ತದೆ.

ಡಾ॥ ಆನಂದಕುಮಾರಸ್ವಾಮಿಗಳು "ಲಿಂಗವು ಲೈಂಗಿಕ ಸಂಕೇತಕ್ಕೆ ದೃಷ್ಟಾಂತವೆಂಬುದು ಸರಿಯಲ್ಲ. ಇದರ ಮೂಲವು ಬಹುಶಃ ಲೈಂಗಿಕವಾಗಿರಲಾರದು. ಸ್ತೂಪದಿಂದ ರೂಪಗೊಂಡಿರಬಹುದು. ಅದು ಮಾನವಾಕಾರವನ್ನು ಅಷ್ಟಾಗಿ ಪಡೆದಿರದ ಕಾರಣ ಶಿವನ ಅತ್ಯುತ್ತಮ ಸಂಕೇತವೆಂದು ಪರಿಗಣಿಸಲ್ಪಟ್ಟು ಆದರಿಸಲ್ಪಡುತ್ತಿದೆ" ಎಂದು ಹೇಳುತ್ತಾರೆ. ಅಥರ್ವವೇದ ಸಂಹಿತೆಯಲ್ಲಿ ಯೂಪಸ್ತಂಭದ ಸ್ತುತಿಯಲ್ಲಿರುವ ಲಿಂಗದಿಂದಲೇ ಶಿವಲಿಂಗದ ಪೂಜೆಯು ಪ್ರಾರಂಭವಾಗಿ ರೂಢಿಗೆ ಬಂದಿತೆಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ.

ತೈತ್ತಿರೀಯ ನಾರಾಯಣೋಪನಿಷತ್ತಿನಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸುವುದರ ಕಾರಣವೇನಿರಬಹುದೆಂಬುದಕ್ಕೆ ಒಂದು ಸುಳಿವು ಸಿಕ್ಕುತ್ತದೆ :

ಲೀಯತೇ ಯತ್ರ ಭೂತಾನಿ ನಿರ್ಗಚ್ಛಂತಿ ಪುನಃ ಪುನಃ
ತೇನ ಲಿಂಗಂ ಪರಂ ವ್ಯೋಮ ನಿಷ್ಕಲಃ ಪರಂ ಶಿವ ಃ

[ಸಮಸ್ತ ಜೀವರಾಶಿಗಳೂ ಯಾವುದರಲ್ಲಿ ವಿಲೀನವಾಗುತ್ತವೆಯೋ ಮತ್ತು ಯಾವುದರಿಂದ ಮತ್ತೆ ಮತ್ತೆ ಉದ್ಭವಿಸುತ್ತವೆಯೋ ಯಾವುದು ಪರಮ ಶ್ರೇಷ್ಠವೂ ಮಂಗಳಕರವೂ ಇಂದ್ರಿಯಾತೀತವೂ ಆಗಿದೆಯೋ ಅದರ ಸಂಕೇತವೇ ಲಿಂಗ] ಶಿವನ ಸಂಕೇತವಾದ ಲಿಂಗವು ಕಾಲಾತೀತವಾದುದು, ರೂಪರಹಿತವಾದುದು, ಅನಂತವಾದುದು. ಈ ಗುಣಗಳು ಲಿಂಗಕ್ಕೆ ಒಂದು ವಿಶಿಷ್ಟವಾದ ಮಹತ್ವವನ್ನು ತಂದುಕೊಡುತ್ತವೆ.

ಲಿಂಗದ ವಿವೇಚನೆಯ ಬಗೆಗೆ ಸೂಕ್ಷ್ಮಾಗಮದ ಆರನೆಯ ಪಟಲದಲ್ಲಿ ಈ ವಿವರಣೆ ದೊರೆಯುತ್ತದೆ :

ಲೀನಂ ಪ್ರಪಂಚರೂಪಂ ಹಿ ಸರ್ವಮೇತತ್ ಚರಾಚರಂ
ಸರ್ಗಾದ್ಗಮ್ಯತೇ ಭೂಯಃ ತಸ್ಮಾಲ್ಲಿಂಗ ಮುದೀರ್ಯತೇ
ನಿರಾಮಯಂ ನಿರಾಕಾರಂ ನಿರ್ಗಮಂ ನಿರ್ಮಲಂ ಶಿವಂ
ತಸ್ಮಾತ್ ಲಿಂಗಂ ಪರಂ ಬ್ರಹ್ಮ ಸಚ್ಚಿದಾನಂದ ಲಕ್ಷಣಂ

[ಪ್ರಪಂಚ ರೂಪದಲ್ಲಿರುವ ಈ ಎಲ್ಲಾ ಚರಾಚರವೂ ಅದರಲ್ಲಿ ಲೀನವಾಗಿದೆ ; ಮತ್ತೆ ಮತ್ತೆ ಸೃಷ್ಟಿಯಲ್ಲಿ ಅದರಿಂದ ಹೊರ ಬರುತ್ತದೆ ; ಆದ್ದರಿಂದ ಅದು ಲಿಂಗವೆಂದು ಹೇಳಲ್ಪಡುತ್ತದೆ. ಅದು ದೋಷರಹಿತವೂ ಆಕಾರ ರಹಿತವೂ ಪರಿಶುದ್ಧವೂ ಮಂಗಳಕರವೂ ಆದದ್ದು ; ಆದ್ದರಿಂದ ಲಿಂಗವು ಸಚ್ಚಿದಾನಂದ ಸ್ವರೂಪಕವಾದ ಪರಬ್ರಹ್ಮವು].

ಪರಮೇಶ್ವರನ 'ಮೂರ್ತ ಅಮೂರ್ತ ' ರೂಪದ ಬಗೆಗೆ ಬೃಹದಾರಣ್ಯಕೋಪನಿಷತ್ತಿನಲ್ಲಿ ವಿವರಣೆ ಸಿಕ್ಕುತ್ತದೆ. ರೂಪ ಮತ್ತು ಅಪರೂಪಗಳು ಬ್ರಹ್ಮವಸ್ತುವಿನ ಅಸ್ತಿತ್ವದ ಎರಡು ರೀತಿಗಳು. ಪರಮಾತ್ಮನು ತನ್ನ ಅವ್ಯಕ್ತ ರೂಪದಲ್ಲಿ ಅಮೂರ್ತ, ನಿರಾಕಾರ. ವ್ಯಕ್ತರೂಪದಲ್ಲಿ ಮೂರ್ತ, ಸಾಕಾರ. ಶಿವನ ನಿರಾಕಾರ ಸಂಕೇತವಾದ ಲಿಂಗವು ಶಿವನ ಮೂರ್ತ ಸ್ವರೂಪವನ್ನು ಸೂಚಿಸುತ್ತದೆ. ಲಿಂಗವು ಪ್ರತಿಕೃತಿಯೂ ಅಲ್ಲ, ಪ್ರತೀತವೂ ಅಲ್ಲ. ಆದರೆ ಅದು ಪರಮಾತ್ಮನಾದ ಶಿವನನ್ನೇ ಸಾಕ್ಷಾತ್ತಾಗಿ ಸೂಚಿಸುವ ಒಂದು ಸಂಕೇತ. ಈ ಭಾವನೆಯಿಂದಲೇ ಶೈವರು ಶಿವಲಿಂಗವನ್ನು ಆರಾಧಿಸುತ್ತಾರೆ.

ಶೈವಧರ್ಮವು ಆಗಮಗಳಿಂದ ಮತ್ತು ಪೌರಾಣಿಕ ಹಿಂದೂಧರ್ಮದಿಂದ ಕ್ರಮೇಣ ಪ್ರಭಾವಿತವಾಯಿತು. ಶೈವ ಧರ್ಮದ ಉಪಾಸಕರಲ್ಲಿ ಪಾಶುಪತರೂ, ಕಾಳಾಮುಖರೂ ಉತ್ತರದಿಂದ ದಕ್ಷಿಣಕ್ಕೆ ಬಂದರು. ದಕ್ಷಿಣಕ್ಕೆ ಬಂದ ಶೈವರೆಲ್ಲರೂ ಆಗಮಗಳಲ್ಲಿ ವಿಧಿಸಲ್ಪಟ್ಟಿರುವ ವಿಧಿನಿಯಮಗಳನ್ನೆಲ್ಲಾ ಆಚರಿಸುತ್ತಿದ್ದರು. ಅವುಗಳಲ್ಲಿ ಲಿಂಗಧಾರಣೆಯು ಒಂದಾಗಿದ್ದರೂ ಅದು ಕಡ್ಡಾಯವಾಗಿರಲಿಲ್ಲ. ವೇದಪೂರ್ವ ಮತ್ತು ವೇದಗಳ ಕಾಲದಲ್ಲಿದ್ದ ಶೈವ ಧರ್ಮದ ಪೂಜಾಪದ್ಧತಿಗಳಿಂದ ಭಾರತದ ಹಲವಾರು ಭಾಗಗಳಲ್ಲಿ ಶೈವಧರ್ಮದ ಹಲವಾರು ಪಂಥಗಳು ರೂಪುಗೊಂಡವು. ಇವುಗಳಲ್ಲಿ ವೀರಶೈವವೂ ಒಂದು. ಇದು ಮುಖ್ಯವಾಗಿ ದಕ್ಷಿಣದಲ್ಲಿ, ಎಂದರೆ–ಕರ್ಣಾಟಕ, ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಪ್ರವರ್ಧಮಾನಕ್ಕೆ ಬಂದಿತು.

ವೀರಶೈವ ಧರ್ಮದಲ್ಲಿನ ದರ್ಶನವನ್ನು ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತವೆಂದು ಕರೆಯುತ್ತಾರೆ. ಈ ಪಂಥವು ಇತರ ಶೈವ ಪಂಥಗಳಾದ ಕಾಶ್ಮೀರ ಶೈವ ಮತ, ಕಾಳಾಮುಖ, ಪಾಶುಪತ, ಶೈವಸಿದ್ಧಾಂತ ಮತ್ತು ಶ್ರೀಕಂಠನ ಶಕ್ತಿವಿಶಿಷ್ಟಾದ್ವೈತಗಳಿಂದ ಆಚಾರ ವಿಚಾರಗಳಲ್ಲಿ ಪ್ರಭಾವಿತವಾಗಿದೆ. ಆದರೆ ಶೈವ ಮತದ ಈ ಧಾರ್ಮಿಕ ಪಂಥದಲ್ಲಿ ತನ್ನದೇ ಆದ ಕೆಲವು ವಿಶಿಷ್ಟ ಗುಣಗಳಿವೆ : ಅವು ಲಿಂಗಧಾರಣೆ, ಅಷ್ಟಾವರಣ ಮತ್ತು ಷಟ್ಸ್ಥಲಗಳು.

ಪರಂಪರಾಗತವಾದ ನಂಬಿಕೆ ಇದು : ವೀರಶೈವ ಧರ್ಮವು (1) ರೇಣುಕ, (2) ದಾರುಕ, (3) ಏಕೋರಾಮ, (4) ಪಂಡಿತಾರಾಧ್ಯ, (5) ವಿಶ್ವಾರಾಧ್ಯ—ಈ ಪಂಚಾಚಾರ್ಯರುಗಳಿಂದ ಆರಂಭವಾಯಿತು. (1) ಕೊಲ್ಲಿಪಾಕಿಯ ಸೋಮೇಶ್ವರ, (2) ಉಜ್ಜೈನಿಯ ವಟವೃಕ್ಷ ಸಿದ್ಧೇಶ್ವರ, (3) ದ್ರಾಕ್ಷಾರಾಮ ಕ್ಷೇತ್ರದ ರಾಮನಾಥ, (4) ಶ್ರೀ ಶೈಲದ ಮಲ್ಲಿಕಾರ್ಜುನ, (5) ಕಾಶಿಯ ವಿಶ್ವನಾಥ—ಈ ಶಿವಲಿಂಗಗಳಿಂದ (ಅಂದರೆ, ಇವುಗಳ ಅನುಗ್ರಹದಿಂದ) ಈ ಆಚಾರ್ಯರು ಉದ್ಭವಿಸಿದರು. ಇಂದಿಗೂ ಈ ಕೆಳಕಂಡ ಸ್ಥಳಗಳಲ್ಲಿ ಈ ಆಚಾರ್ಯರುಗಳಿಗೆ ಸಂಬಂಧಿಸಿದ ಮಠಗಳಿವೆ :—(1) ಮೈಸೂರು ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಬಾಳೇಹೊನ್ನೂರು (ರಂಭಾಪುರಿ) ; ಆಂಧ್ರ ದೇಶದ ಕೊಲ್ಲಿಪಾಕಿಯಲ್ಲಿ ಮೊದಲು ಸ್ಥಾಪಿಸಿದ ಮೂಲ ಮಠವನ್ನು ಬಾಳೇ ಹೊನ್ನೂರಿಗೆ ಬದಲಾಯಿಸಿ ಅನಂತರ ಉಜ್ಜೈನಿಗೆ ಸ್ಥಳಾಂತರಿಸಲಾಯಿತು. (2) ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಯ ಉಜ್ಜೈನಿ, (3) ಉತ್ತರ ಪ್ರದೇಶದ ಗರವಾಲಾ ಜಿಲ್ಲೆಯ ಹಿಮವತ್‌ಕೇದಾರ, (4) ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಶ್ರೀಶೈಲ ಮತ್ತು (5) ಉತ್ತರ ಪ್ರದೇಶದಲ್ಲಿರುವ ಕಾಶಿ (ವಾರಾಣಸಿ).

ಮೇಲೆ ಉಲ್ಲೇಖಿಸಿರುವ ಆಚಾರ್ಯರ ವಿಷಯದವಾದ ಪರಂಪರೆಯ ಹೇಳಿಕೆಯಿಂದ ಅವರು ಐತಿಹಾಸಿಕ ವ್ಯಕ್ತಿಗಳಲ್ಲವೆಂದು ಭಾವಿಸಬಾರದು. ಈ ಆಚಾರ್ಯರುಗಳ ಐತಿಹಾಸಿಕತೆಯನ್ನು ಪ್ರಾಮಾಣಿಕವೂ, ನಿಸ್ಸಂದೇಹವೂ ಖಚಿತಕಾಲ ನಿರ್ದೇಶನವುಳ್ಳವೂ ಆದ ಉಪಲಬ್ಧ ಸಾಹಿತ್ಯಿಕ ಆಧಾರಗಳಿಂದ ನಿರ್ಧರಿಸಬಹುದು. ಶ್ರೀಪತಿ ಪಂಡಿತನ ಶ್ರೀಕರ ಭಾಷ್ಯದಲ್ಲಿ ರೇಣುಕ ಅಥವಾ ರೇವಣಸಿದ್ಧ ಮರುಳ ಮತ್ತು ಏಕೋರಾಮ ಇವರ ವಿಷಯವಾಗಿ ಹೇಳುವಲ್ಲಿ ಅವರ ಚರಿತ್ರೆ ಮತ್ತು ಕೆಲಸ ಕಾರ್ಯಗಳ ವಿಷಯವಾಗಿ ವಿಸ್ತಾರವಾದ ವಿವರಣೆ ದೊರೆಯುತ್ತದೆ.

ಆಂಧ್ರದ ಶೈವ ಲೇಖಕರಲ್ಲಿ ಮಂಚಣ್ಣ ಪಂಡಿತ, ಶ್ರೀಪತಿ ಪಂಡಿತ, ಮತ್ತು ಮಲ್ಲಿಕಾರ್ಜುನ ಪಂಡಿತರು ಮುಖ್ಯರು. ಇವರು ಪಂಡಿತತ್ರಯರೆಂದು ಪ್ರಸಿದ್ಧರಾಗಿದ್ದಾರೆ. ಈ ಮೂವರಲ್ಲಿ ಮಂಚಣ್ಣ ಪಂಡಿತ ಮೊದಲನೆಯವನು, ಶ್ರೀಪತಿ ಪಂಡಿತ ಎರಡನೆಯವನು; ಮಲ್ಲಿಕಾರ್ಜುನ ಪಂಡಿತ ಮೂರನೆಯವನು. ಮಲ್ಲಿಕಾರ್ಜುನ ಪಂಡಿತನು ಹಲವಾರು ಕೃತಿಗಳನ್ನು ರಚಿಸಿದ್ದಾನೆ. ಈತನು ಕರ್ಣಾಟಕದಲ್ಲಿ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿ ಜನಪ್ರಿಯನಾಗಿದ್ದ ಬಸವೇಶ್ವರನ ಸಮಕಾಲೀನ. ಶ್ರೀಪತಿ ಪಂಡಿತನು ಕೃಷ್ಣಾನದೀ ತೀರದಲ್ಲಿರುವ ವಿಜಯವಾಡದವನು. ಈತನು ಕ್ರಿ.ಶ. 1074–1126ರ ವರೆಗೆ ಆಳಿದ ಪಶ್ಚಿಮ ಚಾಳುಕ್ಯರ ಆರನೆಯ ವಿಕ್ರಮಾದಿತ್ಯನ ಸೇನಾಧಿಪತಿಯಾದ ಅನಂತಪಾಲನ ಗುರುವಾಗಿದ್ದನೆಂದು ಹೇಳುತ್ತಾರೆ. ಈ ವಿಷಯ ಪಲ್ಲಿಕೇತನ ಶಾಸನ ಕ್ರಿ.ಶ.(1120) ದಿಂದಲೂ ಸ್ಪಷ್ಟವಾಗುತ್ತದೆ. ಈತನು ವೀರಶೈವಧರ್ಮ ಮತ್ತು ದರ್ಶನಕ್ಕೆ ಪ್ರಮಾಣಗ್ರಂಥವಾದ ಶ್ರೀಕರಭಾಷ್ಯವನ್ನು ರಚಿಸಿದನು. ಶ್ರೀಪತಿ ಪಂಡಿತನು ಬಸವೇಶ್ವರ (ಹನ್ನೆರಡನೆಯ ಶತಮಾನ)ನಿಗಿಂತಲೂ ಅರ್ಧ ಶತಮಾನ ಮುಂಚೆ ಇದ್ದನೆಂದು ಹೇಳಲು ನಂಬಲರ್ಹವಾದ ಆಧಾರವಿದೆಯೆಂದು ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ. ವೀರಶೈವ ಧರ್ಮವು ಬಸವೇಶ್ವರನಿಗಿಂತ ಮೊದಲೇ ಇದ್ದಿತೆಂದು ಈ ಮುಂದಿನ ಧಾರ್ಮಿಕ ಸಾಹಿತ್ಯಾಧಾರಗಳಿಂದ ಹೇಳಬಹುದು : ಗುರುವಿನಿಂದ ದೀಕ್ಷೆ ಕೈಗೊಂಡು ಉಪದೇಶ ಪಡೆದ ಮೇಲೆ ಶರೀರದ ಮೇಲೆ

ಲಿಂಗಧಾರಣೆ ಮಾಡಿಕೊಳ್ಳುವುದು ವೀರಶೈವ ಧರ್ಮದ ಮುಖ್ಯ ಲಕ್ಷಣಗಳಲ್ಲಿ ಒಂದು. ಒಂಬತ್ತನೆಯ ಶತಮಾನದಲ್ಲಿದ್ದ ರಾಜಶೇಖರನು ಪ್ರಾಣಲಿಂಗವನ್ನು ತೋಳಿನ ಮೇಲೆ ಧರಿಸುವ ಪದ್ಧತಿ ಒಂದು ಶೈವ ಪಂಥದಲ್ಲಿ ಇದ್ದಿತೆಂದು ಉಲ್ಲೇಖಿಸಿದ್ದಾನೆ. ಹನ್ನೊಂದನೆಯ ಶತಮಾನದ ಪೂರ್ವದಲ್ಲಿದ್ದ ಶಿವಯೋಗಿ ಶಿವಾಚಾರ್ಯನು ಸಿದ್ಧಾಂತ ಶಿಖಾಮಣಿಯಲ್ಲಿ ಲಿಂಗಧಾರಣೆಯ ವಿಷಯವಾಗಿ ವಿಸ್ತಾರವಾದ ವಿವರಣೆಯನ್ನು ನೀಡಿದ್ದಾನೆ. ವಾತುಲಾಗಮವು ವೀರಶೈವಧರ್ಮದ ಅಸ್ತಿತ್ವವನ್ನೂ ಅಂಗದ ಮೇಲೆ ಲಿಂಗವನ್ನು ಧರಿಸುವುದನ್ನೂ ಉಲ್ಲೇಖಿಸುತ್ತವೆ. ವೀರಶೈವ ಶಬ್ದವು ಆಗಮಗಳಷ್ಟೇ ಪ್ರಾಚೀನವಾದುದು. ಈ ಆಗಮಗಳು ನಿಸ್ಸಂದೇಹವಾಗಿ ಬಸವೇಶ್ವರನ ಆಗಮನಕ್ಕಿಂತಲೂ ಪೂರ್ವದವು. ಇಷ್ಟೇ ಅಲ್ಲದೆ, ಮೊಹೆಂಜೊದಾರೋ ಪುರಾವೆಗಳಿಂದ ಆ ಕಾಲದಲ್ಲಿಯೂ ಸಹ, ಮನುಷ್ಯನ ದೇಹದ ಮೇಲೆ ಧರಿಸಬಹುದಾದಂತಹ ಪುಟ್ಟ ಪುಟ್ಟ ಲಿಂಗಗಳಿದ್ದುವೆಂಬುದಕ್ಕೆ ಖಚಿತವಾದ ಆಧಾರಗಳು ದೊರೆಯುತ್ತವೆ. ಸರ್ ಜಾನ್‌ಮಾರ್ಷಲ್ಲರು ಅಂಥ ಲಿಂಗಗಳ ಅಸ್ತಿತ್ವವನ್ನೂ ಉಪಯುಕ್ತತೆಯನ್ನೂ ಒತ್ತಿ ಹೇಳುತ್ತಾರೆ.

ವೀರಶೈವ ಧರ್ಮದಲ್ಲಿನ ದರ್ಶನವನ್ನು ಶಕ್ತಿವಿಶಿಷ್ಟಾದ್ವೈತವೆನ್ನುತ್ತಾರೆ. ವೀರಶೈವಧರ್ಮವು ಸಾಮಾನ್ಯವಾಗಿ ಇಪ್ಪತ್ತೆಂಟು ಶಿವಾಗಮಗಳನ್ನು ಪ್ರಮಾಣವೆಂದು ಭಾವಿಸುತ್ತದೆ. ಅಲ್ಲದೆ ಅಲ್ಲಲ್ಲಿ ವೇದಗಳ ಶ್ಲೋಕಗಳನ್ನು ಉದ್ಧರಿಸುವುದರ ಮೂಲಕ ವಿವಕ್ಷಿತ ತತ್ವವು ವೇದಸಮ್ಮತವೆಂದು ಸ್ಪಷ್ಟಪಡಿಸುತ್ತದೆ. ಆದರೆ ವೇದೋಪನಿಷತ್ತುಗಳು ಎಲ್ಲೆಲ್ಲಿ ಶೈವಾಗಮದೊಡನೆ ಒಮ್ಮತ ಹೊಂದಿವೆಯೋ ಅಂತಹವುಗಳನ್ನು ಮಾತ್ರ ವೀರಶೈವ ಧರ್ಮವು ಅಧಿಕೃತವೆಂದು ಅಂಗೀಕರಿಸುತ್ತದೆ.

ಮೂಲ ತತ್ವವು ಒಂದೇ ಆದರೂ ಆಂಧ್ರದಲ್ಲಿ ಪ್ರಚಲಿತವಾಗಿರುವ ವೀರಶೈವಧರ್ಮವು ಕರ್ನಾಟಕದ ವೀರಶೈವ ಧರ್ಮಕ್ಕಿಂತ ಕೆಲವು ಸಂಪ್ರದಾಯಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನವಾಗಿ ಆಚರಣೆಯಲ್ಲಿದೆ. ಆಂಧ್ರದಲ್ಲಿನ ವೀರಶೈವಧರ್ಮದಲ್ಲಿ ವೇದದಲ್ಲಿನ ಕರ್ಮಕಾಂಡಗಳಿಗೂ ಧಾರ್ಮಿಕ ಆಚಾರ ವಿಚಾರಗಳಿಗೂ ಹೆಚ್ಚು ಪ್ರಾಮುಖ್ಯವನ್ನು ಕೊಡಲಾಗಿದೆ. ಕರ್ನಾಟಕದಲ್ಲಿ ವ್ಯಕ್ತಿ, ಜಗತ್ತು ಮತ್ತು ದೇವರು—ಇವುಗಳಿಗೆ ಸಂಬಂಧಿಸಿದ ಕೆಲವು ದಾರ್ಶನಿಕ ತತ್ತ್ವಗಳ ಆಧಾರದ ಮೇಲೆ ನೈತಿಕ ವ್ಯವಹಾರ ಮತ್ತು ಸಮಾಜ ಸುಧಾರಣೆಗಳಿಗೆ ಪ್ರಾಧಾನ್ಯ ಕೊಡಲಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ, ಮೊದಲಾದ ಶಿವಶರಣಶರಣೆಯರ ಅನುಭಾವಿಗಳ ನೇತೃತ್ವದಲ್ಲಿ ಕರ್ನಾಟಕದಲ್ಲಿ ವೀರಶೈವಧರ್ಮದಲ್ಲಾದ ಬೆಳವಣಿಗೆಯನ್ನು ಸಂಗ್ರಹವಾಗಿ ಹೀಗೆ ಹೇಳಬಹುದು :—

(1) ಶಿವನಲ್ಲಿ ಭಕ್ತಿಭಾವ ಸಮರ್ಪಣೆಗೇ ಸರ್ವ ಪ್ರಾಧಾನ್ಯವನ್ನು ಕೊಡಲಾಯಿತು.

(2) ಧಾರ್ಮಿಕ ಆಚರಣೆಯಲ್ಲಿ ಸ್ತ್ರೀಯರಿಗೆ ಸಮಾನಸ್ಥಾನ ; ದೀಕ್ಷೆ ಅಥವಾ ಉಪದೇಶವನ್ನು ಪಡೆಯುವ ಹಕ್ಕು ; ಲಿಂಗಧಾರಣೆಯ ಅವಕಾಶ—ಇವನ್ನು ಕೊಡಲಾಯಿತು ;

(3) ವೀರಶೈವ ಧರ್ಮವನ್ನು ಅನುಸರಿಸುವವರಿಗೆ ವರ್ಣಾಶ್ರಮ ಧರ್ಮದ ನಿರ್ಬಂಧವನ್ನು ಸಡಿಲಿಸಲಾಯಿತು.

(4) ಹರಿಜನರಿಗೆ ಪೂಜಾಕಾರ್ಯಗಳಲ್ಲಿಯೂ ಧಾರ್ಮಿಕ ವ್ಯವಹಾರಗಳಲ್ಲಿಯೂ ಸಮಾನ

ಸ್ಥಾನಮಾನಗಳನ್ನು ಕೊಟ್ಟು ಅವರನ್ನು ಉದ್ಧರಿಸಲು ಪ್ರಯತ್ನಗಳು ನಡೆದವು; ಶಾಕಾಹಾರ, ಮದ್ಯ ನಿಷೇಧ-ಇವುಗಳಿಗೆ ಮಹತ್ವಕೊಡಲಾಯಿತು.

(5) ವೀರಶೈವ ಧರ್ಮದಲ್ಲಿ ಶ್ರದ್ಧೆಯಿಟ್ಟಿದ್ದವರಿಗೆ ಕಾಯಕದ ಮಹತ್ವವನ್ನು ಒತ್ತಿಹೇಳಿ ' ಕಾಯಕವೇ ಕೈಲಾಸ ' ಎಂಬುದನ್ನು ಮನದಟ್ಟು ಮಾಡಿಕೊಡಲಾಯಿತು.

(6) ಅನುಭಾವಿಗಳಾದ ಶಿವಶರಣರು ನೀತಿ ಮತ್ತು ತತ್ತ್ವ ಪ್ರಚಾರಕ್ಕಾಗಿ ಪದ್ಯಗಂಧಿಯಾದ ಗದ್ಯ ರೂಪದಲ್ಲಿ ಸುಲಭಶೈಲಿಯಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ಈ ವಚನ ಸಾಹಿತ್ಯವು ಕನ್ನಡಭಾಷೆ ಮತ್ತು ಸಾಹಿತ್ಯವನ್ನು ಸಂಪದ್ಭರಿತವನ್ನಾಗಿ ಮಾಡಿತು.

**ಷಟ್ಸ್ಥಲಗಳು**

ಲಿಂಗಧಾರಣೆ, ಅಷ್ಟಾವರಣ ಮತ್ತು ಷಟ್ಸ್ಥಲಗಳು ಈ ಧರ್ಮದ ಪ್ರಮುಖ ತತ್ತ್ವಗಳು. ಲಿಂಗ ಮತ್ತು ಅಂಗಗಳು ಪರಶಿವನ ದ್ವಿವಿಧ ರೂಪಗಳು—ಎಂದು ಷಟ್ಸ್ಥಲ ಮಾರ್ಗದಲ್ಲಿ ಹೇಳಿದೆ. ಸ್ಥಲವು ಬ್ರಹ್ಮನೆಂದೂ ಶಿವನ ಕೊನೆಯ ವರ್ಗವೆಂದೂ–ಶಿವನ ಪರಮಪದಾರ್ಥರೂಪವಾದ ಬ್ರಹ್ಮನೆಂದು, (Brahman, the ultimate category of Shiva) ವಿವರಿಸಲಾಗಿದೆ.' ಸ್ಥ ' ಎಂದರೆ ಸ್ಥಾನ, ಎಲ್ಲಾ ಕ್ರಿಯಾಶಕ್ತಿಗಳ ಮತ್ತು ಜೀವಿಗಳ ಆಧಾರ ಅಥವಾ ಮೂಲಸ್ಥಾನ. ' ಲ ' ಎಂದರೆ ಲಯ; ಎಲ್ಲಾ ಕ್ರಿಯಾಶಕ್ತಿಗಳೂ ಎಲ್ಲಾ ಜೀವಿಗಳೂ ಹಿಂದಿರುಗುವ ಮೂಲಸ್ಥಾನ ಅದೇ. ಬರಿಯ ಲಯವನ್ನು ಕೊಠಡಿಯೊಳಗಿನ ಅಥವಾ ಗಡಿಗೆಯೊಳಗಿನ ಬಯಲೆಂದು ಹೇಗೆ ಪರಿಗಣಿಸಬಹುದೋ ಹಾಗೆ ' ಸ್ಥಲ 'ವನ್ನು ಪೂಜೆಯ ವಸ್ತುವಾಗಿ(ಬ್ರಹ್ಮನ್) ಮತ್ತು ಪೂಜೆಮಾಡುವ ವ್ಯಕ್ತಿಯಾಗಿ (ಜೀವಾತ್ಮ) ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಇವುಗಳನ್ನು ಕ್ರಮವಾಗಿ ಲಿಂಗಸ್ಥಲ ಮತ್ತು ಅಂಗಸ್ಥಲವೆಂದು ಕರೆಯಬಹುದು.

> ಉಪಾಸ್ಯೋಽಪಾಸಕತ್ವೇನ ಸ್ವಯಮೇವ ದ್ವಿಧಾ ಭವೇತ್
> ಲಿಂಗಸ್ಥಲಮುಪಾಸ್ಯಂ ಸ್ಯಾತ್ ಅಂಗಸ್ಥಲಮುಪಾಸಕಮ್

ಉಪಾಸಕ ಮತ್ತು ಉಪಾಸ್ಯವೆಂಬ ಉಪಾಧಿಭೇದದಿಂದ ಇದೇ ಲಿಂಗವೇ ಎರಡು ರೂಪವಾಗಿದೆ. ಉಪಾಸ್ಯ ಲಿಂಗಸ್ಥಲ, ಉಪಾಸಕ ಅಂಗಸ್ಥಲ (ಅನುಭವಸೂತ್ರ).

ಲಿಂಗಸ್ಥಲವು ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ ಎಂದು ಮೂರು ತೆರನಾಗಿದೆ. ಸಾಧಕರು ತಮ್ಮ ದೃಷ್ಟಿ, ಯೋಗ್ಯತೆ, ತಿಳಿವಳಿಕೆಗಳಿಗನುಸಾರವಾಗಿ ಭಾವಿಸಿ ಧ್ಯಾನಿಸಲು ಅನುಕೂಲ ವಾಗಲೆಂದು ಇವುಗಳನ್ನು ಕಲ್ಪಿಸಿದ್ದಾರೆ. ಅದೇ ರೀತಿ, ಅಂಗಸ್ಥಲವು ಯೋಗಾಂಗ, ಭೋಗಾಂಗ ಮತ್ತು ತ್ಯಾಗಾಂಗಗಳೆಂದು ಮೂರು ವಿಧವಾಗಿದೆ. ' ಅಂ ' ಎಂದರೆ ಬ್ರಹ್ಮ; ' ಗ ' ಎಂದರೆ ಹೋಗುವಂತಹುದು ಎಂದರ್ಥ. ಯೋಗಾಂಗವು ಪ್ರಜ್ಞೆಯ ಒಂದು ಸ್ಥಿತಿ. ಯೋಗಾಂಗದಲ್ಲಿ ಸಾಧಕನು ಶಿವನೊಡನೆ ಐಕ್ಯನಾಗಿ ಆನಂದವನ್ನು ಪಡೆಯುತ್ತಾನೆ. ಭೋಗಾಂಗವು ತೈಜಸವಾದುದು. ಇದರಲ್ಲಿ ಭಕ್ತನು ಶಿವನೊಡನೆ ಅವನ ಎಲ್ಲವನ್ನೂ ಪ್ರಸಾದ ರೂಪವಾಗಿ ಭೋಗಿಸುತ್ತಾನೆ. ಮೂರನೆಯದು ತ್ಯಾಗಾಂಗ. ಇದು ವಿಶ್ವವಲ್ಲದೆ ಬೇರೊಂದಲ್ಲ. ಇಲ್ಲಿ ವ್ಯಕ್ತಿಯು ಮಾಯೆಯನ್ನು ತೊರೆಯುತ್ತಾನೆ; ಎಂದರೆ ಜನನ ಮರಣಗಳ ಮಿಥ್ಯಾಕಲ್ಪನೆಯಿಂದ ದೂರ ಸರಿಯುತ್ತಾನೆ. ಈ ಒಂದೊಂದು ಅಂಗಸ್ಥಲವೂ ಎರಡೆರಡು ಉಪಭಾಗಗಳಾಗಿ ಕವಲೊಡೆದು ಒಟ್ಟು ಆರು ಭಾಗಗಳಾಗಿ, ಆರು ಲಿಂಗಸ್ಥಳಗಳೊಂದಿಗೆ ಅನುಕ್ರಮವಾಗಿ

ಸಂಬಂಧಿಸಿರುತ್ತದೆ. ಷಟ್ಸ್ಥಲ ಸಿದ್ಧಾಂತವ ಸೂತ್ರದ ಮೇಲೆ ಈ ವಿಭಾಗಗಳನ್ನು ಮಾಡಲಾಗಿದೆ. ಇದರಿಂದ ಸಾಧಕನು ಹಂತಹಂತವಾಗಿ ಏರಿ ಪರಮಾತ್ಮನನ್ನು ತಲಪುವುದು ಸಾಧ್ಯವಾಗುತ್ತದೆ.

ಶಕ್ತಿ (ಕ್ರಿಯಾಶಕ್ತಿ)ಯು ಶಿವನೊಂದಿಗೆ ಪ್ರತ್ಯೇಕಿಸಲಾಗದಂತೆ ಒಂದುಗೂಡಿದೆಯೆಂಬುದು ವೀರಶೈವಧರ್ಮದಲ್ಲಿನ ಪ್ರಧಾನ ಮೂಲತತ್ತ್ವ. ಭಗವಂತನಾದ ಶಿವನ ಶಕ್ತಿಯು ಸೃಷ್ಟಿಗಾಗಿ ಸಂಚಲಿಸಿದಾಗ (ಸ್ಪಂದಿಸಿದಾಗ) ಅದು 'ಪ್ರವೃತ್ತಿ' ಎಂದೆನಿಸಿಕೊಳ್ಳುತ್ತದೆ. ಅದೇ ಶಕ್ತಿಯು ಹಿಂದಿರುಗಿದಾಗ 'ನಿವೃತ್ತಿ' ಎನಿಸುತ್ತದೆ; ಅದನ್ನೇ ಭಕ್ತಿಯೆಂದು ಕರೆಯುವುದು. ಇವು ಶಕ್ತಿಯ ದ್ವಿಮುಖ ಕ್ರಿಯೆಗಳು. ಪ್ರವೃತ್ತಿ ಜಗತ್ತನ್ನು ಪ್ರಕಟಪಡಿಸುತ್ತದೆ. ನಿವೃತ್ತಿ ಭಕ್ತಿರೂಪವಾಗಿ ಭಗವಂತನೆಡೆಗೆ ಹಿಂದಿರುಗುವಂತೆ ಮಾಡುತ್ತದೆ. ಒಂದೇ ಶಕ್ತಿಯು ಈ ದ್ವಿಮುಖವಾದ ರೂಪಗಳಲ್ಲಿ 'ಮಾಯೆ'ಯೆಂದೂ 'ಭಕ್ತಿ'ಯೆಂದೂ ಕರೆಯಲ್ಪಡುತ್ತದೆ. ಲಿಂಗದಲ್ಲಿನ ಶಿವನಲ್ಲಿನ ಶಕ್ತಿಯು ಅಂಗದಲ್ಲಿ (ಜೀವನಲ್ಲಿ) ಭಕ್ತಿರೂಪವಾಗಿ ಕಾಣಿಸುತ್ತದೆ. ಹೀಗೆ ಲಿಂಗದ ಐಕ್ಯವೇ ಶಿವ ಮತ್ತು ಜೀವದ ತಾದಾತ್ಮ್ಯ. ಇದು ಪಾರಿಭಾಷಿಕವಾಗಿ ಲಿಂಗಾಂಗಸಾಮರಸ್ಯವೆನಿಸಿಕೊಳ್ಳುತ್ತದೆ.

ಜೀವಾತ್ಮ (ಅಂಗ) ಮತ್ತು ಪರಮಾತ್ಮ (ಲಿಂಗ)ರ ಐಕ್ಯವನ್ನು ಭಕ್ತಿ ಮಾರ್ಗವನ್ನು ಅನುಸರಿಸುವುದರಿಂದ ಸಾಧಿಸಿಕೊಳ್ಳಬಹುದು. ಭಕ್ತಿಯು ಬೇರೆ ಬೇರೆ ಮಟ್ಟದ ವಿವಿಧವಾದ ರೂಪಗಳಲ್ಲಿ ಪ್ರಕಟಪಡಿಸಿಕೊಳ್ಳುತ್ತದೆ. ಅವು ಶ್ರದ್ಧೆ, ನೈಷ್ಠಿಕ, ಅವಧಾನ, ಅನುಭಾವ, ಆನಂದ ಮತ್ತು ಐಕ್ಯ (ಸಮರಸ)ಗಳು. ಶ್ರದ್ಧಾಭಕ್ತಿಯು ಆಧ್ಯಾತ್ಮಿಕ ಸಾಧನೆಗೆ ಮುಖ್ಯವಾದ ಪ್ರವರ್ತಕ ಶಕ್ತಿ. ಇದು ಸರಳವಾದ ಮತ್ತು ನಿಷ್ಕಲ್ಮಷವಾದ ನಂಬಿಕೆಯಿಂದ ಮುಂದುವರಿದು, ನಿಷ್ಠೆಯಾಗಿ ಪರಿಣಮಿಸುತ್ತದೆ. ನಿಷ್ಠೆಯೆಂಬುದು ಭಗವಂತನಲ್ಲಿ ದೃಢವಾದ ಭಕ್ತಿ. ಇದನ್ನು ಅವಧಾನ ಭಕ್ತಿ ಎನ್ನುತ್ತಾರೆ. ಈ ಮೂರೂ ಷಟ್ಸ್ಥಲ ಸಿದ್ಧಾಂತದ ಪ್ರಕಾರ ಭಕ್ತಿಯ ಮೊದಲ ಮೂರು ವಿಭಾಗಗಳು. ಮುಂದಿನ ವಿಭಾಗದಲ್ಲಿ ಭಕ್ತಿಯು ಭಾಗಶಃ ದೈವೀ ಜೀವನವನ್ನು ಅನುಭವಿಸುವ ಶಕ್ತಿಯನ್ನು ವೃದ್ಧಿಗೊಳಿಸುತ್ತದೆ. ಆದುದರಿಂದ ಇದನ್ನು ಅನುಭವ, ಅಥವಾ ಅನುಭಾವದ ಪ್ರಾರಂಭಿಕ ಹಂತವೆನ್ನುತ್ತಾರೆ. ಮುಂದೆ ಇದು ಆನಂದಭಕ್ತಿಯಾಗಿ ಪರಿಣಮಿಸುತ್ತದೆ. ಇದರಲ್ಲಿ ದೈವೀ ಜೀವನದ ನಿಜವಾದ ಆನಂದವುಂಟಾಗುತ್ತದೆ. ಕೊನೆಗೆ ಇದು ದೈವೀಜೀವನದ ಪೂರ್ಣಾನುಭವವನ್ನು ಪಡೆದು ಪರಮಾತ್ಮನಲ್ಲಿ ತಾದಾತ್ಮ್ಯ ಹೊಂದುತ್ತದೆ. ಎಂದರೆ ದೇವತ್ವದಲ್ಲಿ ಒಂದಾಗುತ್ತದೆ. ಆದುದರಿಂದ ಇದು ಸಮರಸಭಕ್ತಿ. ಈ ಆರು ತೆರನಾದ ಭಕ್ತಿಮಾರ್ಗವನ್ನು ಅನುಸರಿಸುವವರು ಕ್ರಮವಾಗಿ ಭಕ್ತ, ಮಹೇಶ, ಪ್ರಾಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ–ಎನ್ನಿಸುತ್ತಾರೆ. ಈ ಆರು ಅಂಗಸ್ಥಲಗಳು ಆರು ಲಿಂಗಸ್ಥಲಗಳಿಗೆ ಅನುಗುಣವಾಗಿವೆ.

## ಅಷ್ಟಾವರಣ

ಆತ್ಮಜ್ಞಾನ ಪ್ರಾಪ್ತಿಗೂ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದುವುದಕ್ಕೂ ಎಂಟು ಬಗೆಯ ಸಾಧನಗಳಿವೆ. ಈ ಸಾಧನಗಳು ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ ಮತ್ತು ಮಂತ್ರ. ಗುರು ಭಕ್ತನಿಗೆ ಆಧ್ಯಾತ್ಮ ಬೋಧಕನಾಗಿ ಶಿವಜ್ಞಾನ ಪಡೆಯುವುದಕ್ಕೆ ದೀಕ್ಷೆಯನ್ನು ಕೊಡುತ್ತಾನೆ; ಭಕ್ತಿ ಮತ್ತು ಸಮರ್ಪಣೆಯ ಮಾರ್ಗವನ್ನು ತೋರುತ್ತಾನೆ. ಲಿಂಗ ಶಿವಸ್ವರೂಪಿ, ಜಂಗಮ ಶುದ್ಧಾತ್ಮ. ಮುಕ್ತಿ ಹೊಂದಲು ಇಚ್ಛಿಸುವ ಭಕ್ತ ತನ್ನ ಸರ್ವಸ್ವವನ್ನೂ ಗುರು-ಲಿಂಗ-ಜಂಗಮಕ್ಕೆ ಸಮರ್ಪಿಸಬೇಕು. ಅವನು ದೈವಾನುಗ್ರಹ ಪಡೆಯಲು ಮತ್ತು ಅವರಲ್ಲಿ ತಾನು ಒಂದಾಗಲು ಉಪಾಸನೆ ಮಾಡಬೇಕು. ಇವು ದೈವತ್ವದ ಮೂರು ಮುಖಗಳು. ಪೂಜೆ ಮಾಡಲು ಗುರು ಅಥವಾ ಜಂಗಮ ಸಿಕ್ಕದಿದ್ದಲ್ಲಿ ಲಿಂಗವನ್ನೇ ಗುರು-ಜಂಗಮವೆಂದು ಭಾವಿಸಿ ಪೂಜಿಸಬೇಕು.

## ವೀರಶೈವ ಧರ್ಮ

**ಏಕಮೂರ್ತಿಸ್ತ್ರಯೋ ಭಾಗಃ ಗುರುರ್ಲಿಂಗಂ ಚ ಜಂಗಮಂ**

ಗುರು, ಲಿಂಗ, ಜಂಗಮರು ಏಕರೂಪದ ಮೂರು ಭಾಗಗಳು

ಭಕ್ತನು ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಲು ಎಂಟು ನಿಯಮಗಳನ್ನು ಪಾಲಿಸಬೇಕು.

(1) ಗುರುವಿನಲ್ಲಿ ವಿಧೇಯತೆ. (2) ನಿತ್ಯ ಲಿಂಗಾರ್ಚನೆ. (3) ಜಂಗಮರಲ್ಲಿ ಗೌರವಭಾವ. (4) ಹಣೆ ಮತ್ತು ದೇಹವ ಮೇಲೆ ವಿಭೂತಿಧಾರಣೆ. (5) ರುದ್ರಾಕ್ಷಿ ಧಾರಣೆ. (6) ಗುರು ಜಂಗಮರನ್ನು ಪೂಜಿಸಿ ಅವರ ಪಾದದ ಮೇಲೆ ಎರೆದ ಪಾದೋದಕ ಸ್ವೀಕರಣ, ಅಥವಾ ಶಿವಾರ್ಚನೆಯಾದ ಮೇಲೆ ಲಿಂಗದ ಮೇಲೆ ಎರೆದ ತೀರ್ಥಸ್ವೀಕರಣ, ಈ ರೀತಿಯಾದ ಶುದ್ಧೋದಕ ಪವಿತ್ರವಾದುದರಿಂದ ತೀರ್ಥವಾಗಿ ಸ್ವೀಕರಿಸಬೇಕು. (7) ಪ್ರಸಾದ : ಗುರು ಅಥವಾ ಲಿಂಗ ಅಥವಾ ಜಂಗಮಕ್ಕೆ ಅರ್ಪಿಸಿದ ನಂತರ ಭಾಂಡದಲ್ಲಿ ಉಳಿದ ಆಹಾರ. ಅವರು ಭುಂಜಿಸಿದ ಮೇಲೆ, ಭಾಂಡದಲ್ಲಿ ಉಳಿದುದನ್ನು ಪವಿತ್ರ ಭಾವನೆಯಿಂದ ಸ್ವೀಕರಿಸಬೇಕು, (8) ದೇವರನ್ನು ಧ್ಯಾನ ಮಾಡುತ್ತ 'ನಮಶ್ಶಿವಾಯ' ಎಂಬ ಪಂಚಾಕ್ಷರಿಯನ್ನು ಜಪಿಸುವುದೇ ಮಂತ್ರ. ಇದು ವೀರಶೈವರು ಪ್ರತಿನಿತ್ಯ ಅನುಸರಿಸಬೇಕಾದ ವಿಧಿ.

ಒಟ್ಟಿನಲ್ಲಿ ಹೇಳುವುದಾದರೆ, ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಶರಣರೂ ಅನುಭಾವಿಗಳೂ ಕರ್ಣಾಟಕದಲ್ಲಿ ಪಟ್ಸ್ಥಲ ಸಿದ್ಧಾಂತವನ್ನು ವಚನಗಳ ರೂಪದಲ್ಲಿ ಪ್ರಸಾರಮಾಡಿದರು. ಭಕ್ತಿಮಾರ್ಗದಲ್ಲಿ ನೈತಿಕಾಚರಣೆಗೆ ಇರುವ ಮಹತ್ವವನ್ನು ಒತ್ತಿಹೇಳಿದರು. ಧರ್ಮವೆಂಬುದು ಒಂದು ತೆರನ ಜೀವನ ವಿಧಾನ ಎಂದು ತೋರಿಸಿ, ಈ ಧಾರ್ಮಿಕ ಜೀವನಕ್ಕೆ ಶುದ್ಧೀಕರಣ ಆವಶ್ಯಕವೆಂಬುದನ್ನು ವ್ಯಕ್ತಪಡಿಸಿದರು. ಭಕ್ತಿಮಾರ್ಗದಲ್ಲಿ ಅನನ್ಯಶರಣಾಗತಿ ಬಹುಮುಖ್ಯ ಎಂದು ಹೇಳಿ, ಆತ್ಮಸಾಕ್ಷಾತ್ಕಾರವೇ ಆಧ್ಯಾತ್ಮಿಕ ಪ್ರಗತಿಯ ಅಂತಿಮ ಧ್ಯೇಯ ಎಂಬುದನ್ನು ಸಾರಿದರು.

**ಮೂಲಲೇಖಕರು ಮತ್ತು ಅನುವಾದಕರು : ಡಾ॥ ಜೆ. ರುದ್ರಪ್ಪ**

# ಜೈನಧರ್ಮ

## (ಹೊಯ್ಸಳರ ಕಾಲ)

ಈ ಹಿಂದಿನ ಪ್ರಕರಣಗಳಲ್ಲಿ ಜೈನಧರ್ಮದ ತತ್ತ್ವಗಳನ್ನು ಕುರಿತು ಪ್ರಸ್ತಾವಿಸಲಾಗಿದೆ. ಹೊಯ್ಸಳರ ಕಾಲಕ್ಕೆ ಮೊದಲು ಅನೇಕ ಶತಮಾನಗಳ ಕಾಲ ಜೈನಧರ್ಮವು ಕನ್ನಡ ನಾಡಿನಲ್ಲಿ ಒಂದು ಗೌರವವಾದ ಸ್ಥಾನವನ್ನು ಪಡೆದಿದ್ದಿತು. ಕನ್ನಡ ಜನತೆಯ ಸಾಂಸ್ಕೃತಿಕ ಜೀವನಕ್ಕೆ ಈ ಧರ್ಮವು ಮಹತ್ವದ ಕಾಣಿಕೆಯನ್ನು ಅರ್ಪಿಸಿತು. ನಾವು ಈಗಾಗಲೆ ನೋಡಿರುವಂತೆ ಕನ್ನಡ ಸಾಹಿತ್ಯದ ಮೊತ್ತಮೊದಲಿನ ಅಮರ ಕೃತಿಗಳು ಜೈನರಿಂದಲೇ ನಿರ್ಮಿತವಾದವು. ಶ್ರೀವೈಷ್ಣವ ದರ್ಶನ, ಶೈವದರ್ಶನ, ಮತ್ತು ವೀರಶೈವ ದರ್ಶನಗಳ ಪುನರುತ್ಥಾನವಾದ ಮೇಲೆ ಜೈನಧರ್ಮಕ್ಕೆ ಸ್ವಲ್ಪಮಟ್ಟಿಗೆ ಆಘಾತ ಉಂಟಾಯಿತು. ಆದರೂ ಜೈನಧರ್ಮವು ತನ್ನ ಸ್ಥಾನಮಾನಗಳನ್ನು ಮುಂದುವರಿಸಿಕೊಂಡು ಬಂದು ಜನತೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಲೇ ಇತ್ತು.

ಈಗ ನಾವು ಹೊಯ್ಸಳರ ಕಾಲದಲ್ಲಿ ಜೈನಧರ್ಮದ ಸ್ಥಿತಿಗತಿಗಳನ್ನು ವಿಚಾರ ಮಾಡೋಣ.

ಜೈನಧರ್ಮವು ಕ್ರಿಸ್ತಪೂರ್ವದಲ್ಲಿ ಉತ್ತರ ಭಾರತದಿಂದ ಕರ್ಣಾಟಕಕ್ಕೆ ಬಂದು, ಒಂದು ಹೊಸ ಪಂಥವನ್ನು ನಿರ್ಮಿಸಿತು ; ಮತ್ತು ಕ್ರಮಕ್ರಮವಾಗಿ ಬೆಳೆದು ಸುಮಾರು ಒಂದುಸಾವಿರ ವರ್ಷಗಳ ವರೆಗೆ ಒಂದು ಪ್ರಬಲ ಪಂಥವಾಗಿ ನೆಲಸಿತು. ಅದು ಕರ್ಣಾಟಕದ ಅತ್ಯಂತ ಪ್ರತಿಷ್ಠಿತ ರಾಜಮನೆತನಗಳ ಭವಿತವ್ಯದಲ್ಲಿ ಮಾರ್ಗದರ್ಶಿಯಾಗಿ ನಿಂತಿತು. ಜೈನ ಆಚಾರ್ಯರು ಗಂಗ ಮತ್ತು ಹೊಯ್ಸಳ ಸಮ್ರಾಟರನ್ನು ಆಶೀರ್ವದಿಸಿ ಅನುಗ್ರಹಪೂರ್ವಕ ಉತ್ತೇಜನವಿತ್ತರು. ಹೊಯ್ಸಳ ಸಾಮ್ರಾಜ್ಯದ ಹಿರಿಮೆಗೆ ಆ ಆಚಾರ್ಯರ ದೂರದರ್ಶಿತ್ವವೂ ವಿಚಾರ ಪರಿಣತಿಯೂ ಮುಖ್ಯ ಕಾರಣಗಳಾಗಿದ್ದವೆಂದು ನಾವು ಧಾರಾಳವಾಗಿ ಹೇಳಬಹುದಾಗಿದೆ. ರಾಜ್ಯಗಳಲ್ಲಿ ರಾಜಕೀಯ ಪುನರ್ವ್ಯವಸ್ಥೆಯು ಅವಶ್ಯಕವೆಂದು ಕಂಡು ಬಂದಾಗ, ಈ ಜೈನ ಆಚಾರ್ಯರು ಶಕ್ತರಾದ ಮುಂದಾಳುಗಳನ್ನು ಪ್ರೋತ್ಸಾಹಿಸಿ, ಅವರಿಗೆ ಹೊಸ ರಾಜ್ಯಗಳನ್ನು ಕಟ್ಟಲು ನೆರವಾಗುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಗಂಗರ ಮತ್ತು ಹೊಯ್ಸಳರ ರಾಜ್ಯಗಳ ಸ್ಥಾಪನೆಯನ್ನುಕೊಡಬಹುದು. ಜೈನ ಆಚಾರ್ಯರಾದ ಸಿಂಹನಂದಿ ಮತ್ತು ಸುದತ್ತರು ಪ್ರಖ್ಯಾತ ಮೇಧಾವಿಗಳಾಗಿದ್ದರು. ಈ ಹೊಸ ರಾಜ್ಯಗಳ ನಿರ್ಮಾಣದಲ್ಲಿ ತೊಡಗಿದ್ದ ನಾಯಕರುಗಳಿಗೆ ಈ ಜೈನ ಆಚಾರ್ಯರು ಎಲ್ಲ ರೀತಿಯ ಸಾಧನ ಸಾಮಗ್ರಿಗಳನ್ನು ಒದಗಿಸಿಕೊಡುತ್ತಿದ್ದರು. ಅವರ ಮುಖ್ಯವಾದ ಗುರಿಯೆಂದರೆ, ದೇಶದ ಪುನರ್ವ್ಯವಸ್ಥೆಗಾಗಿ ಬೇಕಾಗಿದ್ದ ರಾಜಕೀಯ ಹಿನ್ನೆಲೆಯನ್ನು ಒದಗಿಸುವುದೇ ಆಗಿದ್ದಿತು. ಕ್ರಿ.ಶ. 11ನೆಯ ಮತ್ತು 14ನೆಯ ಶತಮಾನಗಳು ಜೈನಧರ್ಮದ ಪ್ರಚಾರ ಮತ್ತು ಪ್ರಭಾವಗಳ ಪ್ರಚೋದನೆಗೆ ಬೇಕಾದ ಸನ್ನಿವೇಶವನ್ನು ಒದಗಿಸಿದ್ದವು. ಹೊಯ್ಸಳ ದೊರೆಗಳಲ್ಲಿ ಬಹುಮಂದಿ ಜೈನಧರ್ಮಿಯರಾಗಿದ್ದರು ಮತ್ತು ಅವರು ಜೈನ ದೇವಾಲಯಗಳ ಮತ್ತು ಜೈನ ಸಂಘ ಸಂಸ್ಥೆಗಳ ಆಶ್ರಯದಾತರಾಗಿದ್ದು ಅವುಗಳ ಉಚ್ಛ್ರಾಯ ಸ್ಥಿತಿಗೆ ಬೇಕಾದ ಸಹಾಯ ಸಂಪತ್ತುಗಳನ್ನು ಉದಾರವಾಗಿ ಒದಗಿಸುತ್ತಿದ್ದರು. ದಕ್ಷಿಣ ಭಾರತದಲ್ಲಿ ಸರ್ವತ್ರ ಕಂಡುಬರುವ ಜೈನ ದೇವಾಲಯಗಳೂ ಚೈತ್ಯಗಳೂ ತೀರ್ಥಂಕರರ ಪ್ರತಿಮೆಗಳೂ ಗುರುಗಳ ಸಮಾಧಿ ಸ್ಥಾನಗಳಾದ ನಿಶಿದಿಗೆಗಳೂ ಮತ್ತು

ಶಾಸನಗಳು—ಇವೆಲ್ಲವೂ ಹೊಯ್ಸಳರ ಕಾಲದಲ್ಲಿ ಜೈನಧರ್ಮವು ಈ ಪ್ರದೇಶದಲ್ಲಿ ತುಂಬ ಜನಪ್ರಿಯ ಧರ್ಮವಾಗಿದ್ದಿತೆಂಬುದನ್ನು ತೋರಿಸುತ್ತವೆ. ಜೈನಧರ್ಮವು ರಾಜಮನೆತನದಿಂದ ಸಾಧಾರಣ ಪ್ರಜೆಗಳ ವರೆಗೆ ಎಲ್ಲ ಬಗೆಯ ಜನ ನಂಬಿ ನಡೆಸುತ್ತಿದ್ದ ಜೀವಂತ ಧರ್ಮವಾಗಿದ್ದಿತು. ಅದು ಐಹಿಕ ಜೀವನದಲ್ಲಿ ಜನತೆಯನ್ನು ಭಕ್ತಿ ಮತ್ತು ಪರೋಪಕಾರ ಬುದ್ಧಿಗಳತ್ತ ಸ್ಫೂರ್ತಿಗೊಳಿಸಿ, ಆಮುಷ್ಮಿಕ ಜೀವನಕ್ಕೆ ಬೇಕಾದ ನೆಮ್ಮದಿ ಮತ್ತು ನಂಬಿಕೆಗಳನ್ನು ಮೂಡಿಸುತ್ತಿದ್ದಿತು.

ಹೊಯ್ಸಳ ಸಾಮ್ರಾಜ್ಯದ-ಸಮಯವನ್ನು ಜೈನಧರ್ಮದ ಅಸಾಧಾರಣ ಬುದ್ಧಿಶಕ್ತಿಯ ನಿರ್ಮಾಣ ಕಾಲವೆಂದು ಖಚಿತವಾಗಿ ಹೇಳಬಹುದು. ಹೊಯ್ಸಳರ ಜನ್ಮಸ್ಥಳವು ಮೂಡಿಗೆರೆ ತಾಲೂಕಿನಲ್ಲಿರುವ ಅಂಗಡಿ ಎಂಬ ಸ್ಥಳ. ಈ ಸ್ಥಳಕ್ಕೆ ಹಿಂದೆ ಸೊಸೆವೂರು ಅಥವಾ ಶಶಕಪುರ ಎಂಬ ಹೆಸರಿದ್ದಿತು. ಅದು ಜೈನಧರ್ಮದ ಭದ್ರವಾದ ನೆಲೆಯಾಗಿದ್ದಿತು (E.C., VI P. 13). ಈಗಲೂ ಆ ಪ್ರದೇಶದಲ್ಲಿ ಅನೇಕ ಜೈನ ಬಸದಿಗಳೂ ವಾಸಂತಿಕಾದೇವಿಯೆಂದು ಪ್ರಖ್ಯಾತವಾಗಿರುವ ಹೊಯ್ಸಳರ ಕುಲದೇವತೆಯಾದ ಶ್ರೀ ಪದ್ಮಾವತೀದೇವಿಯ ದೇವಾಲಯವೂ ಇವೆ.

ಹೊಯ್ಸಳ ಮನೆತನದ ಮೂಲ ಪುರುಷನಾದ ಸಳನು ಕುಂದಕುಂದಾನ್ವಯದ ನಂದಿಸಂಘಕ್ಕೆ ಸೇರಿದ ಸುದತ್ತ ಅಥವಾ ವರ್ಧಮಾನ ಮುನಿಯೆಂಬ ಸುಪ್ರಸಿದ್ಧ ಆಚಾರ್ಯರ ಕೃಪಾಪಾತ್ರನಾಗಿದ್ದನು. ಈ ಆಚಾರ್ಯರು ಹೊಯ್ಸಳರ ರಾಜಕಾರ್ಯಗಳ ಆಡಳಿತದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದರು. ಹೊಯ್ಸಳರ ಪ್ರಭುತ್ವವು ಮುಂದುವರಿಯಲು ಪ್ರಾರಂಭದಲ್ಲಿ ಈ ಆಚಾರ್ಯರು ಸಹಾಯ ಮಾಡಿದರು. ಜೈನಧರ್ಮದ ವಿಷಯದಲ್ಲಿ ಹೊಯ್ಸಳರು ತಳೆದಿದ್ದ ಅಚಲ ಶ್ರದ್ಧೆಗೆ ಪ್ರಾಯಶಃ ಇದು ಕಾರಣವಾಗಿರಬೇಕೆಂದು ಕಾಣುತ್ತದೆ.

ಸಳನನಂತರ ಆಳಿದ ರಾಜರು ಜೈನ ಧರ್ಮಕ್ಕೆ ವಿಶೇಷ ಆಶ್ರಯವನ್ನು ಕೊಟ್ಟರು. ಸುದತ್ತಾಚಾರ್ಯರು ಸಳ, ವಿನಯಾದಿತ್ಯ ಮತ್ತು ನೃಪಕಾಮರ ಆಡಳಿತ ಕಾಲದಲ್ಲಿಯೂ ಹೊಯ್ಸಳ ರಾಜ್ಯದ ಭವಿಷ್ಯದ ಮಾರ್ಗದರ್ಶಕರಾಗಿದ್ದರೆಂದು ಹೇಳಬಹುದು. 2ನೆಯ ವಿನಯಾದಿತ್ಯನ ಗುರುವು ಶಾಂತಿದೇವರೆಂಬ ಆಚಾರ್ಯರು. ಅವರು ಕ್ರಿ.ಶ. 1062ರಲ್ಲಿ ದಿವಂಗತರಾದರು (EC. II, P. 67). ಶಾಂತಿದೇವಾಚಾರ್ಯರು ರಾಜಗುರುಗಳೇ ಅಲ್ಲದೆ ರಾಷ್ಟ್ರಗುರುಗಳೂ ಆಗಿದ್ದರು. ಜೈನ ಧರ್ಮಾನುಯಾಯಿ ಆಗಿದ್ದ 2ನೆಯ ವಿನಯಾದಿತ್ಯನು ಅನೇಕ ಕೆರೆಗಳನ್ನೂ ದೇವಸ್ಥಾನಗಳನ್ನೂ ಜೈನ ಚೈತ್ಯಾಲಯಗಳನ್ನೂ ಕಟ್ಟಿಸಿ, ಸುಪ್ರಸಿದ್ಧನಾದ ಬಲೀಂದ್ರನಿಗಿಂತ ಹೆಚ್ಚಿನ ಹಿರಿಮೆಯನ್ನು ಗಳಿಸಿದನು (E.C. VI P. 143). ಮುಂದೆ ಸಿಂಹಾಸನಕ್ಕೆ ಬಂದ ಎರೆಯಂಗನೆಂಬ ದೊರೆಯು ಜೈನಧರ್ಮಕ್ಕೆ ತೋರಿದ ಭಕ್ತಿ ಮತ್ತು ಔದಾರ್ಯಗಳಲ್ಲಿ ಹಿಂದಿನವರಿಗೇನೂ ಕಡಮೆಯಾಗಿರಲಿಲ್ಲ. ಕುಂದ ಕುಂದಾನ್ವಯದ ಮೂಲ ಸಂಘದ ದೇಶೀಯ ಗಣದ ಅಧ್ಯಕ್ಷರಾಗಿದ್ದ ಸುಪ್ರಸಿದ್ಧ ಗೋಪನಂದ್ಯಾಚಾರ್ಯರು ಎರೆಯಂಗನ ಗುರುಗಳಾಗಿದ್ದರು. ಶ್ರವಣ ಬೆಳಗೊಳದಲ್ಲಿ ಚಂದ್ರಗಿರಿಯಲ್ಲಿರುವ ಕತ್ತಲೆ ಬಸದಿಯ ಶಾಸನವು, ಈ ಗೋಪನಂದ್ಯಾಚಾರ್ಯರು ಬಹು ದಿನಗಳಿಂದ ಅಭಿವೃದ್ಧಿ ಹೊಂದದೆ ಸುಪ್ತವಾಗಿದ್ದ ಜೈನ ಧರ್ಮವನ್ನು ಗಂಗ ದೊರೆಗಳ ಕಾಲದ ವೈಭವ ಶಿಖರಕ್ಕೆ ಏರಿಸಿದರೆಂಬ ವಿಚಾರವನ್ನು ತಿಳಿಸುತ್ತದೆ (E.C. V. P. 148).

1ನೆಯ ಬಲ್ಲಾಳರಾಜನ (ಕ್ರಿ.ಶ. 1100-1106) ಗುರುವು ಚಾರುಕೀರ್ತಿಮುನಿ ಎಂಬವರು. ಸಿದ್ಧರ ಬಸದಿಯಲ್ಲಿರುವ ಒಂದು ಶಾಸನದಿಂದ, ಈ ಚಾರುಕೀರ್ತಿಮುನಿಗಳು ಸಕಲ ವಿದ್ಯಾಪಾರಂಗತರಾಗಿದ್ದರೆಂದು ತಿಳಿದುಬರುತ್ತದೆ. ಅವರು ಪ್ರಖ್ಯಾತ ವೈಯಾಕರಣರೂ ತಾರ್ಕಿಕರೂ ಆಯುರ್ವೇದ ಆಚಾರ್ಯರೂ ಆಗಿದ್ದರು. ಈ ಆಚಾರ್ಯರ ಮೈಮೇಲೆ ಬೀಸಿದ ಗಾಳಿಯು ಕೂಡ ರೋಗಗಳನ್ನೂ ವಾಸಿಮಾಡು

ತ್ತಿದ್ದಿತು–ಎಂದ ಮೇಲೆ ಅವರ ಔಷಧದಿಂದ ಬಲ್ಲಾಳರಾಜನಿಗೆ ಸಂಭವಿಸಿದ್ದ ರೋಗವು ವಾಸಿಯಾಯಿತೆಂಬುದರಲ್ಲಿ ಆಶ್ಚರ್ಯವೇನು ? (E. C. II P. 254)

ಹೊಯ್ಸಳ ರಾಜರುಗಳಲ್ಲಿ ಅತ್ಯುನ್ನತನೂ ಸುಪ್ರಖ್ಯಾತನೂ ಆಗಿದ್ದ ವಿಷ್ಣುವರ್ಧನನು ರಾಮಾನುಜಾಚಾರ್ಯರ ಪ್ರಭಾವಕ್ಕೊಳಗಾಗಿ ತನ್ನ ಧರ್ಮವನ್ನು ತ್ಯಜಿಸಿದನೆಂದು ತಿಳಿದುಬರುತ್ತದೆ. ಆದರೂ ಆತನ ಇಡೀ ಆಧಿಪತ್ಯ ಕಾಲದಲ್ಲಿ ಆತನು ಜೈನಧರ್ಮದ ಪೋಷಕನೂ ಉದಾರ ಆಶ್ರಯದಾತನೂ ಆಗಿದ್ದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಕ್ರಿ.ಶ. 1125ನೆಯ ಇಸವಿಯ ವರೆಗೂ ಜೈನ ಗುರುಗಳಾದ ಶ್ರೀಪಾಲ ತ್ರೈವಿದ್ಯ ದೇವರಿಗೆ ಆತನು ಅಸೀಮ ಭಕ್ತನಾಗಿದ್ದನೆಂದು ತಿಳಿದು ಬರುತ್ತದೆ. ಈ ಜೈನ ಆಚಾರ್ಯರನ್ನು ಷಡ್ದರ್ಶನಗಳ ಷಣ್ಮುಖರೆಂದೂ ಉನ್ನತ ನ್ಯಾಯಶಾಸ್ತ್ರ ಕೋವಿದರೆಂದೂ ಹೇಳಲಾಗಿದೆ. ವಾದೀಭಸಿಂಹ, ವಾದಿ ಕೋಲಾಹಲ, ತರ್ಕಚಕ್ರವರ್ತಿ––ಎಂಬ ಬಿರುದುಗಳನ್ನು ಹೊಂದಿದ್ದು ತಮ್ಮ ಗಣದ ಅಭ್ಯುದಯಕಾರರೆಂಬ ಹೆಸರನ್ನು ಪಡೆದಿದ್ದರು.

ಭೈರದೇವ ದೇವಸ್ಥಾನದ ಶಾಸನ (E.C. VI, P. 149–190)ದಿಂದ ಜೈನಬಸದಿಯನ್ನು ಕಟ್ಟಿಸಿದನೆಂದೂ ಜೈನ ದೇವಾಲಯಗಳ ಜೀರ್ಣೋದ್ಧಾರಕ್ಕೂ ಜೈನಯತಿಗಳ ಆಹಾರದಾನಕ್ಕೂ ಸೂಕ್ತವಾದ ಏರ್ಪಾಟುಗಳನ್ನು ಮಾಡಿದ್ದನೆಂದೂ ತಿಳಿದುಬರುತ್ತದೆ. ಬೇಲೂರು ಶಾಸನ (ಕ್ರಿ.ಶ. 1129, M.A.R., 1911, P.43)ದಿಂದ ಮಲ್ಲಿ ಜಿನಾಲಯಕ್ಕೆ ದತ್ತಿಯನ್ನು ಕೊಟ್ಟನೆಂದು ತಿಳಿದು ಬರುತ್ತದೆ. ಕ್ರಿ.ಶ. 1133ರಲ್ಲಿ ಈತನು ಪಾರ್ಶ್ವನಾಥ ದೇವಾಲಯಕ್ಕೆ ತನ್ನ ದಿಗ್ವಿಜಯಗಳ ಸ್ಮಾರಕವಾಗಿ ಒಂದು ಗ್ರಾಮವನ್ನು ದತ್ತಿಯಾಗಿ ಕೊಟ್ಟನಲ್ಲದೆ, ತನ್ನ ರಾಜಧಾನಿಯಾದ ದೋರಸಮುದ್ರದಲ್ಲಿದ್ದ ಪಾರ್ಶ್ವನಾಥ ದೇವರನ್ನು ವಿಜಯಪಾರ್ಶ್ವನಾಥನೆಂದು ಕರೆದುದಲ್ಲದೆ ತನ್ನ ಮಗನಿಗೆ ವಿಜಯ ನರಸಿಂಹನೆಂದು ಹೆಸರಿಟ್ಟನು (E. C. V, P. 83, 124). ವಿಷ್ಣುವರ್ಧನನು ತನ್ನ ಪ್ರಾಚೀನಧರ್ಮಕ್ಕೂ ಹೊಸದಾಗಿ ಸ್ವೀಕರಿಸಿದ ನವೀನಧರ್ಮಕ್ಕೂ ಏಕರೀತಿಯಾದ ಶ್ರದ್ಧಾಸಕ್ತಿಗಳನ್ನು ತೋರಿಸುತ್ತಿದ್ದನು.

ವಿಷ್ಣುವರ್ಧನನ ಪಟ್ಟಮಹಿಷಿಯಾದ ಶಾಂತಲಾದೇವಿ ಜೈನಧರ್ಮದಲ್ಲಿ ಅಚಲ ಶ್ರದ್ಧೆಯುಳ್ಳವಳಾಗಿದ್ದಳು. ಜೈನ ದೇವಾಲಯಗಳಿಗೆ ಆಕೆ ವಿಶೇಷ ಧನಸಹಾಯವನ್ನು ಮಾಡಿದಳು. ಶಾಂತಲಾದೇವಿಯು ಶ್ರವಣಬೆಳಗೊಳದಲ್ಲಿ "ಸವತಿ ಗಂಧವಾರಣ ಬಸದಿ" ಎಂಬ ಜೈನ ದೇವಾಲಯವನ್ನು ಕಟ್ಟಿಸಿದಳು. ಮೇಘಚಂದ್ರ ತ್ರೈವಿದ್ಯ ದೇವರ ಶಿಷ್ಯರಾದ ಪ್ರಭಾಚಂದ್ರ ಸಿದ್ಧಾಂತ ದೇವರು ಶಾಂತಲಾದೇವಿಯ ಗುರುಗಳಾಗಿದ್ದರು.

ವಿಷ್ಣುವರ್ಧನನ ಕೆಲವರು ಮಹಾಮಂತ್ರಿಗಳೂ ಸೈನ್ಯಾಧಿಪತಿಗಳೂ ಅತ್ಯಂತ ನಿಷ್ಠ ಜೈನರಾಗಿದ್ದರು. ಇವರಲ್ಲಿ ಬಹು ಉನ್ನತ ಸ್ಥಾನವನ್ನು ಪಡೆದಿದ್ದ ಸೈನ್ಯಾಧಿಪತಿಯೆಂದರೆ ಗಂಗರಾಜ. ಈತನು ಶ್ರವಣಬೆಳಗೊಳವಲ್ಲಿಯೂ ಚಂದ್ರಗಿರಿ ಅಥವಾ ಚಿಕ್ಕ ಬೆಟ್ಟದ ದಕ್ಷಿಣದಲ್ಲಿರುವ ಜಿನನಾಥಪುರವೆಂಬ ಗ್ರಾಮದಲ್ಲಿಯೂ ಅನೇಕ ಜೈನ ದೇವಾಲಯಗಳನ್ನು ಕಟ್ಟಿಸಿದನು. ದೊಡ್ಡ ಬೆಟ್ಟದಲ್ಲಿರುವ ಗೋಮಟೇಶ್ವರ ದೇವಾಲಯದ ಸುತ್ತಲೂ ಒಂದು ಪ್ರಾಕಾರವನ್ನು ಕಟ್ಟಿಸಿದವನು ಈತನೇ. ಈತನು ಅನೇಕ ಪ್ರಾಚೀನ ಜೈನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದುದಲ್ಲದೆ, ಅನೇಕ ಸಂಘ ಸಂಸ್ಥೆಗಳಿಗೆ ಉದಾರವಾದ ದತ್ತಿಗಳನ್ನು ಕೊಟ್ಟನು. ಈತನ ಹೆಂಡತಿ ಲಕ್ಷ್ಮೀಮತಿ ಎಂಬ ಸಾಧ್ವೀಮಣಿಯು ಜೈನ ಸಿದ್ಧಾಂತದ ಪ್ರಕಾರ "ಸಲ್ಲೇಖನ" ವ್ರತದಿಂದ ಅಸು ನೀಗಿದುದನ್ನು ಆಕೆಯ ಪತಿ ಗಂಗರಾಜನು ಶ್ರವಣಬೆಳಗೊಳದಲ್ಲಿ ಕೆತ್ತಿಸಿರುವ ಶಾಸನದಿಂದ ತಿಳಿದುಬರುತ್ತದೆ. ವಿಷ್ಣುವರ್ಧನನ ಇತರ ಜೈನ ಸೇನಾನಿಗಳೆಂದರೆ ಬೊಪ್ಪ, ಪುರಿಸ, ಮರಿಯಾನೆ ಮತ್ತು ಭರತೇಶ್ವರ. ಹೊಯ್ಸಳ ರಾಜರೂ ಈ

ಸೈನ್ಯಾಧಿಪತಿಗಳೂ ಜೈನ ಗುರುಗಳಿಗೆ ತೋರಿಸಿರುವ ಭಕ್ತಿ ಮತ್ತು ಜೈನ ಧರ್ಮದಲ್ಲಿಯೂ ಜೈನ ಸಂಘ ಸಂಸ್ಥೆಗಳಲ್ಲಿಯೂ ಇಟ್ಟಿದ್ದ ಶ್ರದ್ಧಾ ಸಕ್ತಿಗಳನ್ನು ತೋರಿಸುವ ಅನೇಕ ಶಾಸನಗಳು ಶ್ರವಣಬೊಳಗೊಳದಲ್ಲಿ ಮತ್ತು ಇತರ ಸ್ಥಳಗಳಲ್ಲಿಯೂ ಇವೆ.

ಅನಂತರ ಸಿಂಹಾಸನಕ್ಕೆ ಬಂದ 1ನೆಯ ನರಸಿಂಹನ ಪ್ರಖ್ಯಾತಿಯು ವಿಷ್ಣುವರ್ಧನನ ಕೀರ್ತಿ ಪ್ರತಿಷ್ಠೆಗಳನ್ನೂ ಆತನ ಸೈನ್ಯಾಧಿಪತಿಗಳ ರಾಜನಿಷ್ಠೆಯನ್ನೂ ಅವಲಂಬಿಸಿತ್ತಲ್ಲದೆ ಆತನ ಸೈನ್ಯ ಬಲವನ್ನು ಅವಲಂಬಿಸಿರಲಿಲ್ಲ. ಜೈನ ಧರ್ಮದಲ್ಲಿ ವಿಶೇಷ ನಿಷ್ಠಾವಂತನಾಗಿದ್ದ ಹುಳ್ಳನು ನರಸಿಂಹನ ಬಲಿಷ್ಠ ಸೈನ್ಯಾಧಿಪತಿಯೂ ಆತನ ಭಂಡಾರಿಯೂ ಆಗಿದ್ದನು. ಭಂಡಾರಿ ಬಸದಿಯಲ್ಲಿರುವ ಕ್ರಿ. ಶ. 1159ರ ಶಾಸನದಿಂದ ನರಸಿಂಹ ದೊರೆಯು ಶ್ರವಣಬೆಳ್ಗೊಳಕ್ಕೆ ಬಂದು ಗೊಮ್ಮಟೇಶ್ವರನಿಗೆ ವಂದಿಸಿ, ಈತನ ಪ್ರಭಾವಶಾಲಿ ಸೇನಾನಿಯಾಗಿದ್ದ ಹುಳ್ಳನು ಕಟ್ಟಿಸಿದ್ದ ಚತುರ್ವಿಂಶತಿ ತೀರ್ಥಂಕರರ ಬಸದಿಯನ್ನು ಸಂದರ್ಶಿಸಿ ಸಂತೋಷಪಟ್ಟು, ಸಮ್ಯಕ್ತ್ವ ಚೂಡಾಮಣಿಯೆಂದು ಹೆಸರಾಂತ ಹುಳ್ಳನ ಬಿರುದಿಗೆ ಹೊಂದಿಕೆಯಾಗುವಂತೆ ಆ ಬಸದಿಗೆ ಭವ್ಯ ಚೂಡಾಮಣಿಯೆಂಬ ಅಭಿಧಾನವನ್ನಿತ್ತನು.

2ನೆಯ ಬಲ್ಲಾಳ ಅಥವಾ ವೀರಬಲ್ಲಾಳ ರಾಜನು (ಕ್ರಿ.ಶ. 1173–1220) ಜೈನಧರ್ಮಕ್ಕೆ ಪ್ರಸಿದ್ಧ ಆಶ್ರಯದಾತನಾಗಿದ್ದನು. ನಂದಿ ಸಂಘದ ಅರುಂಗಲಾನ್ವಯದ ವಾಸುಪೂಜ್ಯ ವ್ರತಿಗಳು ಈತನ ಗುರುವಾಗಿದ್ದರು. 2ನೆಯ ಬಲ್ಲಾಳನು ಹುಳ್ಳನ ಪ್ರಾರ್ಥನೆಯ ಮೇರೆಗೆ ಆತನ ತಂದೆಯು ಮಾಡಿದ್ದ ದತ್ತಿಗಳನ್ನು ಸ್ಥಿರೀಕರಿಸಿದನು. ಎರಡನೆಯ ಬಲ್ಲಾಳನು ತನ್ನ ಸೈನ್ಯಾಧಿಪತಿಗಳ ಮತ್ತು ಪ್ರಜೆಗಳ ಇಷ್ಟಾರ್ಥಗಳನ್ನು ತಪ್ಪದೆ ನಡೆಸುತ್ತಿದ್ದನು. ಕ್ರಿ.ಶ. 1176ರ (M.A.R., 1923) ಶಾಸನದಿಂದ ದೇವಿಸೆಟ್ಟಿ ಎಂಬ ಒಬ್ಬ ಶ್ರೀಮಂತ ವರ್ತಕನು ಆತನ ಗುರುಗಳಾದ ಮೂಲ ಸಂಘದ ದೇಶಿಕ ಗಚ್ಛದ ಬಾಲಚಂದ್ರಮುನಿಗಳ ಆದೇಶದಂತೆ ದೋರ ಸಮುದ್ರದಲ್ಲಿ ವೀರಬಲ್ಲಾಳ ಜಿನಾಲಯ ಎಂಬ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ.

ಹೊಯ್ಸಳರಾಜರ ಔದಾರ್ಯದೀದ ದೋರಸಮುದ್ರ ರಾಜಧಾನಿಯೇ ಜೈನರ ಪ್ರಬಲ ಕೇಂದ್ರವಾಯಿತೆಂಬುದು ಗಮನಾರ್ಹವಾಗಿದೆ. ಕ್ರಿ.ಶ. 1192ರಲ್ಲಿ ಶ್ರೀಪಾಲದೇವರ ಶಿಷ್ಯರುಗಳಾದ ಮರಿಸೆಟ್ಟಿ, ಕಾಮಿಸೆಟ್ಟಿ, ಭಾರತಿಸೆಟ್ಟಿ, ಮತ್ತು ರಾಜಸೆಟ್ಟಿ—ಇವರುಗಳು ದೋರಸಮುದ್ರದಲ್ಲಿ ಅಭಿನವ ಶಾಂತಿನಾಥ ದೇವರ ಒಂದು ಸೊಗಸಾದ ಜಿನಾಲಯವನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ.

ಹೊಯ್ಸಳರಾಜರ ಔದಾರ್ಯದಿಂದ ದೋರಸಮುದ್ರ ರಾಜಧಾನಿಯೇ ಜೈನರ ಪ್ರಬಲ ಕೇಂದ್ರವಾಯಿತೆಂಬುದು ಗಮನಾರ್ಹವಾಗಿದೆ. ಕ್ರಿ.ಶ. 1192ರಲ್ಲಿ ಶ್ರೀಪಾಲದೇವರ ಶಿಷ್ಯರುಗಳಾದ ಮರಿಸೆಟ್ಟಿ, ಕಾಮಿಸೆಟ್ಟಿ, ಭಾರತಿಸೆಟ್ಟಿ, ಮತ್ತು ರಾಜಸೆಟ್ಟಿ—ಇವರುಗಳು ದೋರಸಮುದ್ರದಲ್ಲಿ ಅಭಿನವ ಶಾಂತಿನಾಥ ದೇವರ ಒಂದು ಸೊಗಸಾದ ಜಿನಾಲಯವನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ.

ಮುಂದಿನ ದೊರೆಗಳಾದ 3ನೆಯ ನರಸಿಂಹ ಮತ್ತು ರಾಮನಾಥ ಇವರು ನಿಷ್ಠಾವಂತ ಜೈನರಾಗಿದ್ದರು. 3ನೆಯ ನರಸಿಂಹ ದೊರೆಯು, ಕ್ರಿ.ಶ. 1254ರ ಬಸ್ತಿಹಳ್ಳಿ ಶಾಸನದಿಂದ ತಿಳಿದು ಬರುವಂತೆ, ಬೊಪ್ಪನೆಂಬ ಸೈನ್ಯಾಧಿಪತಿಯು ದೋರಸಮುದ್ರದಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದನಲ್ಲದೆ, ಅದಕ್ಕೆ ಅನೇಕ ದತ್ತಿಗಳನ್ನು ಬಿಟ್ಟನು. ಮತ್ತೊಂದು ವಿಶೇಷ ಸಂಗತಿಯೆಂದರೆ, ಕವಿಚಕ್ರವರ್ತಿ ಬಿರುದಾಂಕಿತನಾದ ಮಹಾಕವಿ ಜನ್ನನು (ಕ್ರಿ.ಶ. 1180–1260)

ಈ ರಾಜನ ಮಹಾಮಂತ್ರಿಯೂ ಸೈನ್ಯಾಧಿಪತಿಯೂ ಆಸ್ಥಾನ ಕವಿಯೂ ಆಗಿದ್ದನು. ಜನ್ನನು ಹಳೆಯಬೀಡಿನಲ್ಲಿರುವ ವಿಜಯ ಪಾರ್ಶ್ವನಾಥ ದೇವಾಲಯದ ಮುಂಭಾಗದಲ್ಲಿ ಸೊಗಸಾದ ಮುಖಮಂಟಪ ವನ್ನು ಕಟ್ಟಿಸಿ, ಅಲ್ಲಿ ಜೈನರ ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥಸ್ವಾಮಿಯ ಜೀವನ ಚರಿತ್ರೆಯ ನ್ನೊಳಗೊಂಡ ಆತನ ಅಮರ ಕಾವ್ಯವಾದ ಅನಂತನಾಥ ಪುರಾಣದ ಒಂದು ಸಾವಿರ ಪ್ರತಿಗಳನ್ನು ಬರೆಸಿ, ಉದಾರ ಸಂಭಾವನೆಯೊಂದಿಗೆ ವಿದ್ವಾಂಸರಿಗೆ ಕೊಟ್ಟು ಗೌರವಿಸಿದನೆಂದು ತಿಳಿದು ಬರುತ್ತದೆ. ಬಾಲಕರಗಣದ ಮೇಘನಂದಿ ಸಿದ್ಧಾಂತಿದೇವರು ಜನ್ನನ ಆಧ್ಯಾತ್ಮಿಕ ಗುರುಗಳಾಗಿದ್ದರು. ತ್ರಿಕೂಟರತ್ನ ತ್ರಯ ಶಾಂತಿನಾಥ ಜಿನಾಲಯದ ಪೂಜೆ ಮತ್ತು ರಕ್ಷಣೆಗಳಿಗಾಗಿ ಈ ಗುರುಗಳಿಗೆ ಒಂದು ದತ್ತಿಯನ್ನು ಕೊಡಲಾಯಿತು. ಮೇಘನಂದಿ ಆಚಾರ್ಯರನ್ನು ಮಹಾಮಂಡಲಾಚಾರ್ಯರೆಂದೂ ರಾಜಗುರುಗಳೆಂದೂ ವರ್ಣಿಸಲಾಗಿದೆ (E.C. II, 334). 3ನೆಯ ನರಸಿಂಹನ ಪ್ರತಿಸ್ಪರ್ಧಿಯಾದ ರಾಮನಾಥನೂ ನಿಷ್ಠಾವಂತ ಜೈನನಾಗಿದ್ದನು. ಅವನು ಕೊಗಿಲಿ ಎಂಬ ಸ್ಥಳದಲ್ಲಿರುವ ಚನ್ನಪಾರ್ಶ್ವನಾಥ ದೇವಾಲಯಕ್ಕೆ ಉದಾರವಾದ ದತ್ತಿಗಳನ್ನು ಬಿಟ್ಟನು. 3ನೆಯ ಬಲ್ಲಾಳನು ಜೈನಧರ್ಮದ ವಿಷಯದಲ್ಲಿ ಯಾವ ಭಾವನೆಯನ್ನು ಹೊಂದಿದ್ದನೆಂಬ ವಿಚಾರದಲ್ಲಿ ನಮಗೆ ಯಾವ ಆಧಾರಗಳೂ ಸಿಕ್ಕಿಲ್ಲ.

ಹೊಯ್ಸಳ ರಾಜರ ಅಧೀನದಲ್ಲಿದ್ದ ಅನೇಕ ರಾಜರುಗಳು ಜೈನಧರ್ಮವನ್ನು ಅವಲಂಬಿಸಿದ್ದರು. ಪೊಂಬುರ್ಚದ ಸಾಂತರರು ಜೈನಧರ್ಮದ ಪ್ರಬಲ ಅನುಯಾಯಿಗಳಾಗಿದ್ದರು. ಭುಜಬಲ ಸಾಂತರನು ಆತನ ರಾಜಧಾನಿಯಾದ ಪೊಂಬುರ್ಚದಲ್ಲಿ ಒಂದು ಜೈನದೇವಾಲಯವನ್ನು ಕಟ್ಟಿಸಿ, ಅದನ್ನು ತನ್ನ ಗುರುಗಳಾದ ಕನಕನಂದಿದೇವರಿಗೆ ಒಪ್ಪಿಸಿ, ಒಂದು ಗ್ರಾಮವನ್ನು ದತ್ತಿಯಾಗಿ ಬಿಟ್ಟನು. ವೀರಸಾಂತರನ (ಕ್ರಿ.ಶ.1061) ಮಂತ್ರಿಯಾದ ನಾಗಲರಸನು ಜೈನಧರ್ಮದ ಅಭೇದ್ಯ ಕೋಟೆಯಂತಿದ್ದನು (M.A.R., 1931, P. 198). ಅರಕಲಗೂಡು ಮತ್ತು ಕೊಡಗಿನ ದೊರೆಗಳಾಗಿದ್ದ ಕೊಂಗಾಳ್ವರು ಜೈನಧರ್ಮದ ಪ್ರಖ್ಯಾತ ಆಶ್ರಯದಾತರಾಗಿದ್ದರು. ಅವರು ಅನೇಕ ಜೈನ ದೇವಾಲಯಗಳನ್ನು ಕಟ್ಟಿಸಿ ದತ್ತಿಗಳನ್ನು ಬಿಟ್ಟರು.

ಹುಣಸೂರು ತಾಲೂಕಿನ ಚೆಂಗಾಳ್ವರು ಜೈನಧರ್ಮದ ಆಶ್ರಯದಾತರಾಗಿದ್ದರು. ಕ್ರಿ.ಶ. 1091 ರಿಂದ ಕ್ರಿ.ಶ. 1100ರ ವರೆಗೆ (M.A.R., 1925, P. 25 ; E.C. VI, P. 26) ಅವರು ಹನಸೋಗೆ ಎಂಬ ಪಟ್ಟಣದಲ್ಲಿ 64 ಬಸದಿಗಳನ್ನು ಕಟ್ಟಿಸಿ, ಅವುಗಳಿಗೆ ದತ್ತಿಗಳನ್ನು ಬಿಟ್ಟರು.

### ಆಧ್ಯಾತ್ಮಿಕ ಸಂಘ–ಸಂಸ್ಥೆಗಳು

ಶ್ರವಣಬೆಳಗೊಳದಲ್ಲಿ ದೊರಕಿರುವ ಅನೇಕ ಶಾಸನಗಳಿಂದ ಮಠಾಧಿಪತಿಗಳ ಮತ್ತು ಗುರುಗಳ ಪಟ್ಟಾವಳಿಗಳು ದೊರೆತು, ಅನೇಕ ಶತಮಾನಗಳ ಗುರುಪರಂಪರೆಗಳು ಸೂಚಿತವಾಗಿ, ಅನೇಕ ಯತಿಗಳ, ಸಂಸ್ಥೆಗಳ ನಾಮಾವಳಿಗಳು ಮತ್ತು ಅವರ ಕಾರ್ಯಚಟುವಟಿಕೆಗಳು ಗೊತ್ತಾಗುತ್ತವೆ. ಸಿದ್ಧರ ಬಸದಿಯ ಶಾಸನ (ಶ.ಕ 1320 ; ಕ್ರಿ.ಶ. 1398. E. C. II))ದಿಂದ ಅರಹದ್ಬಲಿ ಆಚಾರ್ಯರು ಅವರ ಇಬ್ಬರು ಶಿಷ್ಯರಾದ ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರಿಂದ ಪ್ರಭಾವಿತರಾಗಿ ಕುಂದಕುಂದಾನ್ವಯದ ಮೂಲ ಸಂಘವನ್ನು ನಾಲ್ಕು ಶಾಖೆಗಳನ್ನಾಗಿ ವಿಭಜಿಸಿ ಅವುಗಳಿಗೆ ಸೇನ, ನಂದಿ, ದೇವ ಮತ್ತು ಸಿಂಹ ಎಂಬ ಹೆಸರುಗಳನ್ನುಕೊಟ್ಟು, ಆ ಕಾಲದಲ್ಲಿ ಅಲ್ಲಲ್ಲೆ ಕಂಡುಬರುತ್ತಿದ್ದ ಒಳ ಅಸೂಯೆಗಳನ್ನು ಪರಿಹಾರ ಮಾಡಿದರು. ಸುಮಾರು ಕ್ರಿ.ಶ. 1000ದ ಸಂವತ್ಸರದೊಳಗೆ ಸಂಘಗಳು, ಗಣಗಳು, ಗಚ್ಛಗಳು, ಬಲಿಗಳು, ಶಾಖೆಗಳು—ಇವು ಯತಿಗಳ ಸಂಸ್ಥೆಗಳಲ್ಲಿ ಬಹಳವಾಗಿ ಬೆಳೆದು ಅನೇಕ ವಿಭಾಗಗಳನ್ನು ಹೊಂದಿದವೆಂಬುದು ಕಂಡುಬರುತ್ತದೆ.

ಹೊಯ್ಸಳರ ಕಾಲದಲ್ಲಿ ಜೈನರ ಸಂಘಗಳಲ್ಲಿ ಈ ಕೆಳಗಿನ ಹೆಸರುಗಳನ್ನು ನಾವು ನೋಡುತ್ತೇವೆ : ಮೂಲಸಂಘ, ನಂದಿಸಂಘ, ಮಯೂರ ಸಂಘ, ಕಿತ್ತೂರು ಸಂಘ, ಕೊಲ್ಲತೂರ ಸಂಘ, ನಂದಿಗಣ, ದೇಶಿಗಣ, ದ್ರಾಮಿಳಗಣ, ಕಾನೂರಗಣ, ಪುಸ್ತಕಗಚ್ಛ, ವಕ್ರಗಚ್ಛ, ತಗರಿಲಗಚ್ಛ, ಮಂಡಿತಳಗಚ್ಛ, ಇಂದುಳೀಶ್ವರ ಬಲಿ, ಪನಸೋಗೆ ಬಲಿ ಇತ್ಯಾದಿ. ದಿಗಂಬರ ಜೈನ ಸಮಾಜದ ಈ ಶಾಖೆಗಳ ಆಚಾರ್ಯರು ವೈದುಷ್ಯ, ಸಂನ್ಯಸನ ಮತ್ತು ತಪಸ್ಸಿನಲ್ಲಿ ವಿಶೇಷ ಪ್ರಖ್ಯಾತಿಯನ್ನು ಗಳಿಸಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ.

ಮೂಲ ಲೇಖಕರು ಮತ್ತು ಅನುವಾದಕರು : ಶ್ರೀ ಕೆ. ಎಸ್. ಧರಣೇಂದ್ರಯ್ಯ

# ಸಾಮಾಜಿಕ ಜೀವನ ಹಾಗೂ ಆರ್ಥಿಕ ಪರಿಸ್ಥಿತಿ

## ಹೊಯ್ಸಳರ ಕಾಲ

ಹೊಯ್ಸಳರ ಕಾಲದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಹಿಂದಿನ ಪದ್ಧತಿಯನ್ನೇ ಅನುಸರಿಸಿ ಬಂದಿದ್ದವು. ಗ್ರಾಮಕೂಟ ಹಾಗೂ ದೇವಾಲಯ ಇವೇ ಮುಂತಾದ ಸಂಸ್ಥೆಗಳು ಸಮಾಜದ ಆರ್ಥಿಕ ಕ್ಷೇತ್ರದಲ್ಲಿ, ಸಾರ್ವಜನಿಕ ಸಹಕಾರ, ಸಾಂಘಿಕ ಚಟುವಟಿಕೆಗಳನ್ನು ಉತ್ತಮ ಮಟ್ಟದಲ್ಲಿ ನಡೆಸಲು ಪೌರಜೀವನಕ್ಕೆ ನೆರವಾಗುತ್ತಿದ್ದವು. ಹಿಂದೂ ಧರ್ಮ, ಅದರ ಸಂಪ್ರದಾಯ ಹಾಗೂ ಆಚರಣೆಗಳಿಗೆ ಅನುಸಾರವಾಗಿ ಪ್ರಜೆಗಳು ಸಾಮಾಜಿಕ, ಆರ್ಥಿಕ ಜೀವನಗಳನ್ನು ಮುಂದುವರಿಸಲು ಇಂತಹ ಸಂಸ್ಥೆಗಳನ್ನು ಬೆಳಸಿ ವೃದ್ಧಿಗೊಳಿಸುವುದರಲ್ಲಿ ತೀವ್ರವಾದ ಆಸಕ್ತಿಯನ್ನು ತಾಳಬೇಕಾದುದು ಅತಿ ಮುಖ್ಯವಾಗಿತ್ತು.

## ಸಾಮಾಜಿಕ ಜೀವನ

ವ್ಯಕ್ತಿಯ ನಿರ್ದಿಷ್ಟ ಮತೀಯ ಆವಶ್ಯಕತೆಗಳು ಅವನ ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತಿದ್ದವು. ವ್ಯಕ್ತಿಯನ್ನು ಬಿಟ್ಟರೆ, ಒಂದು ಪ್ರಧಾನವರ್ಗವೆನಿಸಿದ ಕುಟುಂಬವೇ ಸಮಾಜದಲ್ಲಿ ಬಹು ಮುಖ್ಯವಾದುದು. ಆ ಕಾಲದ ಕುಟುಂಬ ಜೀವನದ ಸಾಮಾಜಿಕ ಆಗುಹೋಗುಗಳು ಧಾರ್ಮಿಕ ತತ್ತ್ವ ಹಾಗೂ ನಂಬಿಕೆಗಳ ಮೇಲೆ ನಿಂತಿರುತ್ತಿದ್ದವು, ಆ ಧಾರ್ಮಿಕ ತತ್ತ್ವ ಹಾಗೂ ನಂಬಿಕೆಗಳು ಅಂದಿನ ಕುಟುಂಬದ ಜೀವನ ಸ್ವರೂಪದ ಮೇಲೆ ಪ್ರಬಲವಾದ ಪ್ರಭಾವ ಬೀರಿದ್ದುವು.

ಕುಟುಂಬದ ಹಿರಿಯ ವ್ಯಕ್ತಿಯೇ ಅದರ ಯಜಮಾನನಾಗುತ್ತಿದ್ದ. ತನಗೆ ಸಂಬಂಧಿಸಿದ ವೃತ್ತಿಗನುಸಾರವಾಗಿ ಕುಟುಂಬದ ಗೊತ್ತುಗುರಿಗಳು ತಮ್ಮದೇ ಆದ ವಿಶೇಷ ಲಕ್ಷಣಗಳಿಂದ ಕೂಡಿದ್ದುವು. ಸಾಮಾನ್ಯವಾಗಿ ಹೇಳುವುದಾದರೆ ಗೆಳೆಯರು, ಮಕ್ಕಳುಮರಿ ಹಾಗೂ ಐಶ್ವರ್ಯಗಳೇ ಪ್ರಾಪಂಚಿಕ ಸುಖ. ಒಳ್ಳೆಯ ನಡತೆ ವಿನಯ ಹಾಗೂ ವಿಚಾರಶೀಲತೆಗಳೇ ಪ್ರಾಮಾಣಿಕ ಜೀವನಕ್ಕೆ ಸುಭದ್ರತೆಯನ್ನು ನೀಡಿದ್ದುವು. ದೀರ್ಘಾಯುಸ್ಸು, ಐಶ್ವರ್ಯ, ಖ್ಯಾತಿ, ಗಾಂಭೀರ್ಯ ಹಾಗೂ ಶೌರ್ಯ—ಇವು ಜೀವನದ ಪಂಚ ಧ್ಯೇಯಗಳಾಗಿದ್ದವು ಎಂದು ಶಾಸನಗಳಿಂದ ತಿಳಿದುಬರುತ್ತದೆ.

ಕುಟುಂಬ ಜೀವನದ ಭದ್ರತೆಗೆ ತಂದೆ ತಾಯಿ ಮಕ್ಕಳ ನಡುವಿನ ಪರಸ್ಪರ ಪ್ರೀತಿ ವಾತ್ಸಲ್ಯಗಳೇ ಕಾರಣಗಳಾಗಿದ್ದುವು. ಕುಟುಂಬದ ಚೌಕಟ್ಟಿನಲ್ಲಿಯೇ ಸ್ವಾಭಾವಿಕವಾದ ಕರ್ತವ್ಯಗಳೂ ಅಳವಟ್ಟಿದ್ದುವು. ವೀರಪುತ್ರರು ಹಾಗೂ ಗಣ್ಯ ಮಾತಾ ಪಿತೃಗಳ ಸ್ಮರಣೆಗಾಗಿ ಕೆರೆಗಳನ್ನು ಕಟ್ಟಿಸುತ್ತಿದ್ದರು, ಪ್ರತಿಮೆಗಳನ್ನು ಸ್ಥಾಪಿಸುತ್ತಿದ್ದರು; ಶಾಸನಗಳನ್ನು ನೆಡಿಸುತ್ತಿದ್ದರು.

ಈ ಕಾಲದಲ್ಲೇ ದಕ್ಷಿಣ ಇಂಡಿಯಾದಲ್ಲಿ ವರ್ಣಾಶ್ರಮ ಧರ್ಮವು ದೃಢವಾಗಿ ನೆಲೆಗೊಂಡಿತ್ತು. ಈ ಧರ್ಮವನ್ನು ಉಳಿಸಿ ಬೆಳೆಸುವ ಹೊಣೆಯನ್ನು ಹೊಯ್ಸಳ ದೊರೆಗಳು ತಾವೇ ಹೊತ್ತರು. ಶಾಸನವೊಂದರಲ್ಲಿ ಹೊಯ್ಸಳ ದೊರೆ ಒಂದನೆ ನರಸಿಂಹನ ಆಳಿಕೆಯಲ್ಲಿ ವರ್ಣಸಂಕರಕ್ಕೆ ಎಡೆಯೇ

ಇರಲಿಲ್ಲವೆಂಬ ಸೋಜಿಗದ ಸಂಗತಿ ನಿರೂಪಿತವಾಗಿದೆ. 'ಚತುಸ್ಸಮಯ ಸಮುದ್ಧರಣ' 'ಸಕಲಸಮಯ ರಕ್ಷಾಮಣಿ'–ಈ ಬಿರುದುಗಳನ್ನು ಹೊಯ್ಸಳ ದೊರೆಗಳು ಹಾಗೂ ಅವರ ಮಹಾ ಸಾಮಂತರು ಪಡೆದಿದ್ದರು. ಇಲ್ಲಿ 'ಸಮಯ' ಎಂದರೆ ಪ್ರಾಚೀನ ಪದ್ಧತಿ ಎಂದು ಅರ್ಥ; ಮತಧರ್ಮ ಹಾಗೂ ಮನೋಧರ್ಮ ಎಂದೂ ಅರ್ಥ.

ಆ ಕಾಲದ ಮಧ್ಯಮ ವರ್ಗದ ಜನರಲ್ಲಿ 'ಶೆಟ್ಟಿ' ಎಂಬ ಒಂದು ವರ್ಗವು ಪ್ರಧಾನ ಪಾತ್ರವನ್ನು ವಹಿಸಿದ್ದಿತು—ಎಂಬುದನ್ನು ಇಲ್ಲಿ ತಿಳಿಸಬಹುದು. ಹಾಗೆಯೇ ವರ್ತಕಮಂಡಲಿ ಮತ್ತು 'ವೀರಪಾಂಚಾಲ'ರೆಂಬ ಶಿಲ್ಪಕಾರರು, ರತ್ನಪರೀಕ್ಷಕರು, ಸುವರ್ಣಕಾರರು, ಬಡಗಿಗಳು, ಗಾರೆಯವರು, ಕಂಚುಗಾರರು ಅಷ್ಟೇ ಸ್ಥಾನ ಗಳಿಸಿದ್ದರು.

ಜನಬಳಕೆಯಲ್ಲಿದ್ದಿರಬಹುದಾದ ವಿವಿಧ ರೀತಿಯ ವಿವಾಹಗಳ ಆಚರಣೆಯ ಹಾಗೂ ಪದ್ಧತಿಯ ಬಗೆಗಾಗಲೀ, ಅವುಗಳಿಗೆ ಸಂಬಂಧಿಸಿದ ಮತಾಚರಣೆಯ ವಿಚಾರವಾಗಿಯಾಗಲೀ ಹೆಚ್ಚು ವಿವರಗಳು ದೊರೆಯುವುದಿಲ್ಲ. ಆದರೆ, ಹೊಯ್ಸಳರ ಕಾಲದ ಜನರು ಜೀವನದ ಇತರ ಕಾರ್ಯ ಚಟುವಟಿಕೆಗಳಲ್ಲಿದ್ದಂತೆಯೇ, ಇದರಲ್ಲಿಯೂ ಪ್ರಾಚೀನ ಪದ್ಧತಿಯ ಜನಬಳಕೆಯನ್ನೇ ಅನುಸರಿಸಿದರು. ಉಚ್ಚವರ್ಗದ ಜನರು, ಪ್ರಾಚೀನ ಧರ್ಮಶಾಸ್ತ್ರಕಾರರು ವಿಧಿಸಿದ ನಿಯಮಗಳಿಗೆ ಅನುಗುಣವಾಗಿಯೇ ನಡೆದುಕೊಂಡರೆಂದು ಊಹಿಸಬಹುದು.

ಶ್ರೀಮಂತ ವರ್ಗದವರಲ್ಲಂತು ಒಬ್ಬ ಪತ್ನಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುವುದು ರೂಢಿಯಾಗಿ, ಅದೊಂದು ಸಾಮಾಜಿಕ ಗೌರವದ ವಿಷಯವಾಗಿದ್ದಂತೆ ತೋರುವುದು. ಅದು ಏನೇ ಇರಲಿ, ಸಾಮಾನ್ಯಜನತೆಯಲ್ಲಿ ಏಕಪತ್ನೀ ವ್ರತದ ನಿಯಮವೇ ರೂಢಿಯಲ್ಲಿದ್ದಂತೆ ತೋರುತ್ತದೆ.

ಕೆಲವು ವೇಳೆ ಭಾವಿಸಿದಂತೆ ಮಹಿಳೆಯರ ಸ್ಥಿತಿ ದಾಸ್ಯ ಎಂಬ ಭಾವನೆ ಇರಲಿಲ್ಲ. ಸಮಾಜದಲ್ಲಿ ಸ್ತ್ರೀಯರಿಗೆ ಗೌರವ ಸ್ಥಾನವಿತ್ತು. ರಾಜ್ಯದಾಡಳಿತದಲ್ಲಿ ಕೂಡ ಅವರು ಭಾಗವಹಿಸಿದರು. ವಿಷ್ಣುವರ್ಧನನ ಖ್ಯಾತಿಗಳಿಸಿದ ರಾಣಿ ಶಾಂತಲಾದೇವಿ ಇಡೀ ರಾಜ್ಯವನ್ನೇ ಆಳುತ್ತಿದ್ದು ಮಾರ್ಗದರ್ಶಕಳಾಗಿದ್ದಳೆಂದು ಹೇಳಲಾಗಿದೆ. ಸಾಮಂತರಾಜ ಬರಮಯ್ಯನ ಹಿರಿಯ ಪತ್ನಿ 'ಬಾಗನಬ್ಬೆ' ಕ್ರಿ. ಶ. 1089 ರಲ್ಲಿ ಆಳುತ್ತಿದ್ದಳೆಂದೂ ತಿಳಿದುಬರುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಮಹಿಳೆಯರು ಧಾರ್ಮಿಕ ಸಂಸ್ಥೆಗಳ ಆಡಳಿತದಲ್ಲಿಯೂ ಹೊಣೆಗಾರಿಕೆಯ ಪದವಿಗೆ ಬರಲು ಅರ್ಹರೆಂದು ಪರಿಗಣಿತರಾಗಿದ್ದರು. ಉದಾಹರಣೆಗೆ ಕ್ರಿ. ಶ. 1255ರ ಶಾಸನಗಳ ಪ್ರಕಾರ ಕುಂಜನಂಬಿಶೆಟ್ಟಿ ಎಂಬವನು ಕುಂಜೇಶ್ವರ ದೇವಾಲಯಕ್ಕೆ ಹೆಚ್ಚು ಭೂಮಿಯ ಕೊಡುಗೆಯನ್ನು ಕೊಟ್ಟಿದ್ದನೆಂದೂ ಆ ದೇವಾಲಯದ ಮೇಲ್ವಿಚಾರಣೆಯ ಅಧಿಕಾರವನ್ನು ಅವನ ಮಗಳಾದ 'ಘನಕುಮಾರಿ ಚಂದವ್ವೆ'ಯೇ ನಿರ್ವಹಿಸಿದಳೆಂದೂ ತಿಳಿದುಬರುತ್ತದೆ.

ಮಹಿಳೆಯರು ಸಾಹಿತ್ಯ ಹಾಗೂ ಕಲೆಯ ಕ್ಷೇತ್ರದಲ್ಲಿ ಸಹ ಪ್ರಮುಖ ಸ್ಥಾನ ಪಡೆದಿದ್ದರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲಿಗಳೆನಿಸಿದ ಕಂತಿಯು ಕವಯಿತ್ರಿಯಾಗಿ ಹೆಸರುಗಳಿಸಿದ್ದಳು. ರಾಣಿ ಶಾಂತಲಾದೇವಿ ಭರತಾಗಮ ಮಂದಿರದಲ್ಲಿ ಒಂದು ರತ್ನಜ್ಯೋತಿಯೆಂದೂ, ಎಲ್ಲಾ ವಿಧದ ನೃತ್ಯದಲ್ಲಿ ಹಸ್ತಾಲಂಕಾರೆಯೆಂದೂ ಸಂಗೀತದಲ್ಲಿ ಸರಸ್ವತಿ ಎಂದೂ ವರ್ಣಿಸಲ್ಪಟ್ಟಿದ್ದಾಳೆ. ಮಹಿಳೆಯರು ಸ್ವಂತ ಆಸ್ತಿಯನ್ನು ಪಡೆಯಬಹುದಾಗಿತ್ತು. ಮಾರುವ ಇಲ್ಲವೆ ಕೊಳ್ಳುವ ಅಧಿಕಾರವೂ ಅವರಿಗಿತ್ತು.

ಕೊಡುಗೆಗಳನ್ನು ಕೊಡುವ ಕಾಲದಲ್ಲಿ ಕುಟುಂಬಕ್ಕೆ ಸೇರಿದ ಮಹಿಳೆಯರು, ಗಂಡು ಮಕ್ಕಳು ಹಾಗೂ ನೆಂಟರಿಷ್ಟರ ಒಪ್ಪಿಗೆಯನ್ನು ಪಡೆದ ವಿವರಗಳನ್ನು ಶಾಸನಗಳಲ್ಲಿ ಕಾಣುತ್ತೇವೆ.

ಇಷ್ಟಾದರೂ, ಒಟ್ಟಿನಲ್ಲಿ ಮಹಿಳೆಯರ ಸ್ಥಾನವನ್ನು ಸಮಾಜದಲ್ಲಿ ಉತ್ತಮಪಡಿಸಲು ಇನ್ನೂ ಅನೇಕಾನೇಕ ಸುಧಾರಣಾ ಕಾರ್ಯಗಳು ಅತ್ಯಾವಶ್ಯಕವೆನಿಸಿದ್ದಿರಬಹುದು. ಬಸವಣ್ಣನವರ ಪ್ರಭಾವ ಯುತವಾದ ನೇತೃತ್ವದಲ್ಲಿ ಹಿರಿಯ ವೀರಶೈವ ಸುಧಾರಕರು ಈ ಅಗತ್ಯವನ್ನು ಪೂರೈಸಿದರು. ಬಸವಣ್ಣನವರ ಭಾವನೆಯಲ್ಲಿ ಹೆಣ್ಣಿನ ಕಲ್ಪನೆ ದಿವ್ಯವೂ ಮಹೋನ್ನತವೂ ಆಗಿತ್ತು. ಕ್ರೀಡಾವಿನೋದಗಳ ಬಗೆಗಾದರೋ ಉಳಿದವುಗಳ ಜೊತೆಗೆ ಮುಂದೆ ಹೇಳಿದವುಗಳು ಜನಪ್ರಿಯವಾಗಿದ್ದಂತೆ ಕಾಣುತ್ತವೆ: (1) ಕುಸ್ತಿ (2) ಜೂಜು (3) ಸಂಗೀತ ಮತ್ತು ನೃತ್ಯ (4) ನಾಟಕ.

ಆ ಕಾಲದ ಸಾಹಿತ್ಯದಲ್ಲಿ ಕ್ವಚಿತ್ತಾಗಿ ಅಲ್ಲಲ್ಲಿ ಜಟ್ಟಿಗಳ, ಅವರ ದೈಹಿಕ ಶಕ್ತಿಯ ವರ್ಣನೆ ಬರುತ್ತದೆ. ಹಾಗೆಯೇ ಜೂಜುಕೋರತನಕ್ಕೆ ಮರುಳಾಗುವುದು, ಆ ದುರ್ವ್ಯಸನಾಸಕ್ತಿಯಿಂದ ಒದಗುವ ಹಾನಿ—ಈ ವಿಷಯಗಳ ವರ್ಣನೆಯನ್ನು ಕಾಣಬಹುದು.

ಸಂಗೀತವನ್ನು ವಿಶೇಷವಾಗಿ ಅಭ್ಯಾಸಮಾಡಿ, ಮೆಚ್ಚಿಕೊಳ್ಳುತ್ತಿದ್ದರೆಂದು ತೋರುತ್ತದೆ. ರಾಣಿ ಶಾಂತಲಾದೇವಿ ಸಂಗೀತ ಹಾಗೂ ನೃತ್ಯಗಳಲ್ಲಿ ಪ್ರವೀಣೆಯಾಗಿದ್ದಳು ಎಂದು ಹಿಂದೆಯೇ ತಿಳಿಸಿದೆ.

ಹೀಗೆ ಹೊಯ್ಸಳ ದೊರೆಗಳೂ, ಗಣ್ಯವ್ಯಕ್ತಿಗಳೂ ಇತರ ವಿಷಯಗಳಲ್ಲಿ ಇದ್ದಂತೆ, ಈ ಲಲಿತ ಕಲೆಗಳ ಅಭ್ಯಾಸ, ಉತ್ತೇಜನಗಳ ವಿಷಯದಲ್ಲಿಯೂ ಅವರು ಜನರಿಗೆ ನಾಯಕರಾಗಿದ್ದರು. ಮದ್ದಳೆ, ತಾಳ, ಝಲ್ಲರಿ ಮುಂತಾದ ಸಂಗೀತ ವಾದ್ಯಗಳ ವಿಷಯ ಸಮಕಾಲೀನ ಸಾಹಿತ್ಯದಲ್ಲಿ ಬಂದಿರುತ್ತದೆ. ದೇವಾಲಯದ ಊಳಿಗದವರಲ್ಲಿ ಸಂಗೀತಗಾರರು, ನೃತ್ಯಾಚಾರ್ಯರು, ಹಾಗೂ ನರ್ತಕಿಯರು ಇದ್ದರೆಂದು ತಿಳಿದು ಬರುತ್ತದೆ.

'ರಂಗಭೋಗ'ದ ಉಪಯೋಗಕ್ಕಾಗಿಯೇ ಅನೇಕ ದತ್ತಿ ದಾನಗಳನ್ನು ಕೊಡುತ್ತಿದ್ದರೆಂದು ಶಾಸನ ಗಳಿಂದ ತಿಳಿದು ಬರುತ್ತದೆ. ಇವುಗಳನ್ನು ರಂಗ ಇಲ್ಲವೆ ನಾಟಕಗಳ ಅಭಿನಯಕ್ಕೆ ಅಥವಾ ಧಾರ್ಮಿಕ ದೃಶ್ಯ ಇಲ್ಲವೆ ಸಂಭಾಷಣೆಗಳಿಗಾಗಿ ನೀಡುತ್ತಿದ್ದ 'ಉದಾರ ಆಶ್ರಯ' ಎನ್ನಬಹುದು. ದೇವಾಲಯದ ಅಧಿಕಾರ ವರ್ಗದಲ್ಲಿ ನಾಟಕರಂಗದ ವ್ಯವಸ್ಥಾಪಕನೂ ಒಬ್ಬನಾಗಿದ್ದನು. ಹಾಲು ಮತ್ತು ಅದರ ಉತ್ಪನ್ನಗಳನ್ನು ಯಥೇಚ್ಛವಾಗಿ ಆಹಾರಕ್ಕೆ ಬಳಸುತ್ತಿದ್ದರು. ಅಕ್ಕಿ ಮತ್ತು ಜೋಳವನ್ನು ಹಿಟ್ಟುಮಾಡಿ, ದೋಸೆ ಮುಂತಾದ ಪದಾರ್ಥಗಳನ್ನು ಮಾಡುತ್ತಿದ್ದರು. ಹಣ್ಣು, ತರಕಾರಿಗಳು ನಿತ್ಯಬಳಕೆಯ ಆಹಾರವಾಗಿದ್ದುವು. ಜೋಳ, ಅದರ ಹಿಟ್ಟಿನಿಂದ ಮಾಡಿದ ರೊಟ್ಟಿಗಳು ಮುಖ್ಯ ಆಹಾರ ಪದಾರ್ಥ. ಅತಿ ವಿಶೇಷ ತಿಂಡಿಗಳಲ್ಲಿ 'ಮಂಡಿಗೆ, ಇಡ್ಡಲಿಗೆ, ಶಾಲ್ಯನ್ನ, ಮನಸರವಲಿಗೆ'ಗಳು ಗಮನಾರ್ಹವಾದವು. ಹಣ್ಣುಗಳಲ್ಲಿ ಮಾವು, ಬಾಳೆ, ಹಲಸು—ಮುಂತಾದ ಹಣ್ಣುಗಳನ್ನು ಹೆಸರಿಸಬಹುದು.

ಕೂಲಿಗಾರರಿಗೆ ಹಾಗೂ ಇತರ ಕೆಲಸ ಮಾಡಿದವರಿಗೆ ಹಣದ ಬದಲಾಗಿ ಧಾನ್ಯಗಳನ್ನು ಕೊಡುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಮಾತ್ರವಲ್ಲದೆ ಇತ್ತೀಚಿನ ವರೆಗೂ ರಾಜ್ಯದ ಆರ್ಥಿಕ ಜೀವನದಲ್ಲಿ ಇದೊಂದು ವೈಶಿಷ್ಟ್ಯವೇ ಆಗಿತ್ತು. ಪ್ರಜೆಗಳ ಒಕ್ಕೂಟದ ಉದ್ಯಮ, ದೇಶ ಹಾಗೂ ದೊರೆಯ ವಿಷಯದಲ್ಲಿಟ್ಟಿದ್ದ ಅಭಿಮಾನ ಸ್ವಾಮಿನಿಷ್ಠೆಗಳ ಫಲವಾಗಿ, ಇತರ ಪ್ರಾಚೀನ ರಾಜ್ಯಗಳಂತೆಯೇ ಹೊಯ್ಸಳ ರಾಜ್ಯಕ್ಕೂ ಭದ್ರವಾದ ಅಸ್ತಿತ್ವ ಮತ್ತು ಭವ್ಯ ಹಿರಿಮೆಗಳು ಇದ್ದುವು. ಪ್ರಜೆಗಳಿಂದ ಪಡೆದ ಕೆಲವು ನಿರ್ದಿಷ್ಟವಾದ

ತೆರಿಗೆಗಳನ್ನು ಅವರಿಗಾಗಿಯೇ, ಧಾರ್ಮಿಕ ಇಲ್ಲವೆ ಸಾಮಾಜಿಕ ಉದ್ದೇಶಗಳಿಗಾಗಿ ವ್ಯಯ ಮಾಡುತ್ತಿದ್ದ ವಿಷಯವನ್ನು ಆ ಕಾಲದ ಶಾಸನಗಳು ಪದೇ ಪದೇ ಸಾರುತ್ತವೆ. ಕೆರೆಗಳನ್ನು ಕಟ್ಟಿಸುವುದು, ಅವುಗಳನ್ನು ದುರುಸ್ತಿಪಡಿಸುವುದು ಇವೇ ಮುಂತಾದ ಸಾರ್ವಜನಿಕ ಹಿತಕಾರಿ ಕಾರ್ಯಗಳನ್ನು ಮಾಡುವುದರಲ್ಲಿ ಜನರು ಒಬ್ಬರಿಗೊಬ್ಬರು ಪೈಪೋಟಿಯಿಂದ ಸೇವೆ ಸಲ್ಲಿಸುತ್ತಿದ್ದರು. ಕೃಷಿ ಉದ್ಯೋಗಕ್ಕೆ ಸಂಬಂಧಿಸಿದ ವ್ಯವಹಾರಗಳು ಅಂದಿನ ಜನತೆಯ ಸಾಂಘಿಕ ಜೀವನದ ಒಂದು ಕಲ್ಪನೆಯನ್ನು ನಮಗೆ ತಂದುಕೊಡುತ್ತವೆ. ಕೃಷಿಯ ಉದ್ದೇಶದಿಂದ ಕೆರೆಗಳನ್ನು ಕಟ್ಟಿಸುತ್ತಿದ್ದ ಸಂಗತಿಗಳನ್ನು ಶಾಸನಗಳ ದಾಖಲೆಗಳಲ್ಲಿ ಬಹಳವಾಗಿ ತಿಳಿಸಿರುವುದನ್ನು ಕಾಣಬಹುದು. ರಾಜಕೀಯ ಕ್ಷೇತ್ರದಲ್ಲಿ ಗಡಿಯ ತೀರ್ಮಾನದಲ್ಲಾಗಲಿ, ದನಕರುಗಳ ರಕ್ಷಣೆಯಲ್ಲಾಗಲಿ, ವ್ಯಾಜ್ಯಗಳಿಗೆ ನ್ಯಾಯ ದೊರಕಿಸುವ ಕಾರ್ಯದಲ್ಲಾಗಲಿ ಜನರು ತಮ್ಮಲ್ಲಿದ್ದ ಐಕಮತ್ಯ ಭಾವನೆಗೆ ಉಜ್ವಲ ನಿದರ್ಶನವಾಗಿದ್ದರು.

ಪ್ರಜೆಗಳು ತಮ್ಮ ದೊರೆಗೆ ಹಲವಾರು ಬಗೆಯಲ್ಲಿ ತಮ್ಮ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಕೊಟ್ಟ ವಾಗ್ದಾನವನ್ನು ಪೂರ್ಣಗೊಳಿಸುವುದು, ದೊರೆಗಾಗಿ ಪ್ರಾಣವನ್ನು ಮುಡಿಪಾಗಿ ಇಡುವುದು, ಆ ಕಾಲದಲ್ಲಿ ಕಂಡುಬಂದ ಮತ್ತೊಂದು ಪ್ರೇರಕ ಶಕ್ತಿ. ವೀರಬಲ್ಲಾಳನ ದಾನ ಹಾಗೂ ವಿಜಯಾಭ್ಯುದಯಕ್ಕಾಗಿಯೇ ಕುವರಲಕ್ಷ್ಮನು ತನ್ನ ಐಶ್ವರ್ಯ ಹಾಗೂ ಜೀವನವನ್ನೇ ಮುಡಿಪಾಗಿ ಇಟ್ಟ ಆದರ್ಶ ನಮ್ಮ ಕಣ್ಣ ಮುಂದೆ ಇದೆ.

ಕ್ರಿ. ಶ. 1220ರ ಬೇಲೂರಿನ ಶಾಸನದಲ್ಲಿ ಬಲ್ಲಾಳ ದೊರೆ ಅವನನ್ನು ತನ್ನ ಸ್ವಂತ ಮಗನಂತೆ ಸಾಕಿದನೆಂಬುದು ತಿಳಿದುಬರುತ್ತದೆ. "ಸೇವಕ ಹಾಗೂ ದೊರೆ ಇವರ ನಡುವೆ ಯಾವ ಅಂತರವೂ ಇರಲಿಲ್ಲ. ರಾಜವೈಭವ ಹಾಗೂ ರಾಜಚಿಹ್ನೆಗಳು ಇಬ್ಬರಿಗೂ ಸಮಾನ. ಇಬ್ಬರೂ ಏಳಿಗೆಯ ಉನ್ನತಮಟ್ಟದಲ್ಲಿ ರಾಜ್ಯ ರಕ್ಷಣೆಯಲ್ಲಿದ್ದರು. . . . . ವೀರ ಬಲ್ಲಾಳದೇವನ ದಾನದ ಮತ್ತು ಜಯದ ಅಭ್ಯುದಯಕ್ಕಾಗಿ ತನ್ನ ಸಂಪತ್ತನ್ನು ತನ್ನ ಪ್ರಾಣವನ್ನು ಕುವರಲಕ್ಷ್ಮ ಮುಡಿಪಾಗಿ ಇಟ್ಟಿದ್ದ . . . . ಕುವರಲಕ್ಷ್ಮನ ನುಡಿ :ಒಂದೇ ನುಡಿ. ಕಲ್ಲಿನಲ್ಲಿ ಕೆತ್ತಿದ ಅಕ್ಷರದಂತೆ ಅದು ಸತ್ಯ ಹಾಗೂ ಸೊಗಸಾದುದು. ಬಲ್ಲಾಳದೊರೆಗೆ ಎಂದಿಗೂ ಪರಾಧೀನತೆ ಬಾರದ ಹಾಗೆ ನೋಡಿಕೊಳ್ಳಲು ಮಾತುಕೊಟ್ಟಿದ್ದ. ಎಲ್ಲಾ ಪರಿಸ್ಥಿತಿಗಳಲ್ಲಿಯೂ ಬಲ್ಲಾಳ ದೊರೆಗೆ ನೆಚ್ಚಿನ ಬಂಟನಾಗಿಯೇ ಉಳಿದ. ತನ್ನ ಸ್ವಾಮಿಗೆ, ತನ್ನ ನಿಷ್ಠೆಯ ಕುರುಹಾಗಿ ತನಗೆ ಸಮಾನನಾದವನು 'ಗರುಡ' ಮಾತ್ರ, ಮತ್ತಾರೂ ಗರುಡನಿಗೆ ಸಮಾನರಲ್ಲ. ತನ್ನ ಆಕೃತಿ ಹಾಗೂ ಗರುಡನ ಆಕೃತಿ—ಈ ಎರಡೂ ಸಮಾನವಾಗಿ ಅಚ್ಚೊತ್ತಿದಂತಿದ್ದುವು."

> ದೊರೆ ಪತಿಭಕ್ತಿಗೆ ತನ್ನೊಳ್ । ಗರುಡಂ ಗರುಡಂಗೆ ತಾನೆ ದೊರೆ ಪೆಱರಾರುಂ॥
> ದೊರೆಯಲ್ಲರೆಂಬ ತೆಱದಿಂ। ದೊರೆಯಾದುವು ತನ್ನ ಗರುಡನೆಸೆವಾಕೃತಿಗಳ್॥
>
> (ಬೇಲೂರು 112 ನೆ ಶಾಸನ)

ಗರುಡರು—ಸಾಯುವತನಕ ವಿಶ್ವಾಸಯೋಗ್ಯ ವೀರರು, ಎನ್ನಿಸಿಕೊಂಡವರ ಸಾಲಿಗೆ ಸೇರುವುದು ರಾಜನ ಬಳಿಯ ಯೋಧರಿಗೆ ದೊರೆಯುತ್ತಿದ್ದ ಅತ್ಯುನ್ನತವಾದ ಗೌರವ ಪದವಿಯಾಗಿತ್ತು.

ಗ್ರಾಮಗಳನ್ನು ನಿರ್ಮಿಸಲು ಅರಣ್ಯಗಳನ್ನು ಕಡಿಯುವುದು, ಕೆರೆಕಟ್ಟೆಗಳನ್ನು ಕಟ್ಟಿಸುವುದು. ಹೊಲಗದ್ದೆಗಳನ್ನು ಕೊಡಿಗೆ ನೀಡುವುದು—ಇವೇ ಮುಂತಾದ ಕಾರ್ಯಗಳು ಜನತೆಯಲ್ಲಿದ್ದ ಸೇವಾಧರ್ಮದ ಮೂರ್ತ ಅಭಿವ್ಯಕ್ತಿಯಾದ್ದವು. ಅನೇಕ ಅಗ್ರಹಾರಗಳ, ಪಟ್ಟಣಗಳ, ಹಳ್ಳಿಗಳ, ನಿರ್ಮಾಣಕ್ಕೆ ದೊರೆಗಳು ಹಾಗೂ ರಾಣಿಯರೇ ಕಾರಣ. ಇಂದಿಗೂ ಅವರ ಹೆಸರನ್ನು ಪಡೆದಿರುವ ಅಸಂಖ್ಯಾತ

ದೇವಾಲಯಗಳು ಹಾಗೂ ಕೆರೆಗಳು ಇವೆ. ದೊರೆಗಳು ತಮ್ಮ ಪ್ರಜೆಗಳಿಗೆ ಹೇಗೆ ಪ್ರೀತಿ ಪಾತ್ರರಾಗಿದ್ದರು ಎಂಬುದಕ್ಕೆ ಇವು ಪ್ರಬಲ ಸಾಕ್ಷಿಯಾಗಿವೆ.

ರಾಜ್ಯದಲ್ಲಿ ನಾನಾ ರೀತಿಯ ಸೇವೆ ಸಲ್ಲಿಸಿದವರ ಯೋಗ್ಯತೆಯನ್ನು ಹೊಯ್ಸಳ ದೊರೆಗಳು ಗಮನಿಸುತ್ತಿದ್ದರು. ಹೊಲ ಗದ್ದೆಗಳನ್ನು ಕೊಡಿಗೆಯಾಗಿ ಕೊಡುವುದರ ಮೂಲಕ ತಮ್ಮನ್ನು ಸೇವಿಸಿದ ಜನರನ್ನು ಗೌರವಿಸುವುದು ಒಂದು ಬಗೆಯಾಗಿತ್ತು. ಈ ದಾನಗಳಲ್ಲಿ 'ಉಂಬಳಿ' 'ಮಾನ್ಯ' ಹಾಗೂ 'ಕೊಡಿಗೆ' ಎಂಬವು ಕೆಲವು ಬಗೆ. ಶ್ಲಾಘ್ಯವಾದ ಸೇವೆಗಳಿಗೋಸ್ಕರ ನೀಡುತ್ತಿದ್ದ ಇತರ ಪ್ರಶಸ್ತಿಗಳೂ ಇದ್ದುವು. ಹಿಂದೆ ಹೇಳಿದ ಕುವರಲಕ್ಷ್ಮ ಅಥವಾ ಲಕ್ಕಯ್ಯ ತನ್ನ ಎಡಗಾಲಿಗೆ ಚಿನ್ನದ ತೊಡವನ್ನು ಧರಿಸಿಕೊಳ್ಳುವ ವಿಶೇಷ ಅಧಿಕಾರವನ್ನು ಪಡೆದಿದ್ದನು. ದೇಶಸೇವೆಯಲ್ಲಿ ತೊಡಗಿ ಪ್ರಾಣ ತೊರೆದವರಿಗೆ ಸ್ಮಾರಕ ಶಿಲೆಗಳನ್ನು ನೆಡಿಸುವುದು ಅವರಿಗೆ ಗೌರವ ಸಲ್ಲಿಸುವ ಮತ್ತೊಂದು ಬಗೆಯಾಗಿತ್ತು. '**ವೀರಗಲ್ಲುಗಳು**' ಎಂದು ಕರೆಸಿಕೊಳ್ಳುತ್ತಿದ್ದ ಈ ಸ್ಮಾರಕ ಶಿಲಾಶಾಸನಗಳು ಎಣಿಕೆಗೆ ಮೀರಿದಷ್ಟು ದೇಶದಾದ್ಯಂತ ವ್ಯಾಪಿಸಿ ಬಿದ್ದಿರುವುದನ್ನು ಕಾಣಬಹುದು. ಇದು ಕರ್ಣಾಟಕದೇಶದ ವೈಶಿಷ್ಟ್ಯ.

ಜನರ ಸಂಸ್ಕೃತಿ, ನಾಗರಿಕತೆಗಳಲ್ಲದೆ ಮಿಕ್ಕ ಅವರ ದೃಢನಂಬಿಕೆ ಹಾಗೂ ಭಾವನೆಗಳು ಅವರ ಜೀವನಕ್ರಮ ಹಾಗೂ ವರ್ತನೆಗಳನ್ನು ಪ್ರತಿಬಿಂಬಿಸುತ್ತಿದ್ದವು. ಉದಾಹಾರಣೆಗಾಗಿ, ಅವರಿಗೆ ಗೋವುಗಳಲ್ಲಿಯೂ ಅವನ್ನು ದಾನವಾಗಿ ಸ್ವೀಕರಿಸುವವರಲ್ಲಿಯೂ ಎಂದರೆ ಬ್ರಾಹ್ಮಣರಲ್ಲಿಯೂ ಪೂಜ್ಯ ಭಾವನೆ ಇತ್ತು. ಸಾಂಪ್ರದಾಯಿಕ ಪದ್ಧತಿಗಳನ್ನೂ ಹಳೆಯ ನಡೆವಳಿಗಳನ್ನೂ ರಕ್ಷಿಸಿಕೊಂಡು ಬರಬೇಕಾಗಿತ್ತಲ್ಲದೆ ಅವುಗಳನ್ನು ಮುಂದುವರಿಸಲೂ ಬೇಕಾಗಿತ್ತು. ಈ ಪುರಾತನ ಪದ್ಧತಿಯ ಅಥವಾ ಆಚರಣೆಯ ಒಲವು ಬಹುಮಟ್ಟಿಗೆ ಜೀವನದ ಎಲ್ಲಾ ವೃತ್ತಿಕ್ಷೇತ್ರದಲ್ಲೂ ಜನರ ಮನೋಭಾವವನ್ನು ಹಿಡಿತದಲ್ಲಿಟ್ಟುಕೊಂಡಿದ್ದಿತು.

ಪುರುಷರು, ಅದಕ್ಕಿಂತಲೂ ಮಿಗಿಲಾಗಿ ಮಹಿಳೆಯರು ತಮ್ಮ ಉಡುಪು ಮತ್ತು ಅಲಂಕಾರಗಳಿಗೆ ಹೆಚ್ಚು ಗಮನ ಕೊಡುತ್ತಿದ್ದರು. ಇದನ್ನು 'ಸೌಂದರ್ಯ ಸಂಸ್ಕೃತಿ' ಎಂದು ಕರೆಯಬಹುದು. ಪುರುಷರಿಗೆ ಅತ್ಯಾವಶ್ಯಕವಾಗಿ ಬೇಕಾಗಿದ್ದ ಉಡುಪು ತೀರ ಕಡಮೆ ಹಾಗೂ ಸರಳ. ಹೊಲಿಗೆ ಬೀಳದ ಉದ್ದನೆಯ 'ಪಂಚೆ' ಅದರ ಮೇಲೆ 'ಬಂದಿ' ಅಥವಾ 'ಬನಿಯನ್' ಎಂದು ಕರೆಸಿಕೊಳ್ಳುವ ಹೊಲಿದ ಅಂಗಿ, ಇದರ ಜೊತೆಗೆ ಒಂದು ರುಮಾಲು—ಇವು ಅವರ ಉಡುಪು. ಮಹಿಳೆಯರ ಉಡುಪಿನ ಬಟ್ಟೆಗಳ ಮೇಲೆ ಸುಂಕವನ್ನು ಹಾಕಲಾಗುತ್ತಿತ್ತು, ಎಂದು ಹೇಳಿದ ಮೇಲೆ ಆಗಿನ ಮಹಿಳೆಯರು ವಸ್ತ್ರಗಳಿಗೆ ನಯವಾದ ಕುಸುರಿಗೆಲಸ ಮಾಡುವುದು ಅವುಗಳನ್ನು ಜೋಪಾನವಾಗಿ ಧರಿಸಲು ಅತಿ ಆಸಕ್ತಿ ತೋರಿಸುವುದು—ಇವುಗಳ ಸೂಚಕವೆಂದು ಅರ್ಥವಾಗುತ್ತದೆ.

### ಆರ್ಥಿಕ ಪರಿಸ್ಥಿತಿ

ಸಾಮಾನ್ಯವಾಗಿ ಹೊಯ್ಸಳ ದೊರೆಗಳು ಸಂಸ್ಥಾನದ ಕಂದಾಯದ ಆಡಳಿತ ವಿಷಯಗಳಲ್ಲಿಯಲ್ಲದೆ, ಸಾಮಾಜಿಕ ಹಾಗೂ ಆರ್ಥಿಕ ನೀತಿಗಳನ್ನು ನಿರ್ಣಯಿಸುವುದರಲ್ಲಿಯೂ, ಪುರಾತನ ಹಾಗೂ ಮಧ್ಯಕಾಲಿಕ ಹಿಂದೂ ಲೇಖಕರ ನೀತಿ ನಿಯಮಗಳಿಗೇ ಸ್ಥಾನ ಕೊಟ್ಟಿದ್ದರು. ಜನರಿಗೆ ಮತ್ತು ಪ್ರಾಣಿಗಳಿಗೆ ರಕ್ಷಣೆ ಒದಗಿಸುವುದು, ಬಡತನ–ನಿರುದ್ಯೋಗ–ಕಷ್ಟಕಾರ್ಪಣ್ಯಗಳನ್ನು ನಿವಾರಣೆ ಮಾಡುವುದು, ಸಾರ್ವಜನಿಕರ ಬಳಕೆಗಾಗಿ ನೀರಾವರಿ, ಜಲಾಶಯ, ರಸ್ತೆಗಳನ್ನು ನಿರ್ಮಿಸುವುದು ಹಾಗೂ ದುರುಸ್ತಿಪಡಿಸುವುದು—ಇವೇ ಮುಂತಾದ ಹೊಯ್ಸಳ ದೊರೆಗಳ ಆಡಳಿತ ಚಟುವಟಿಕೆಗಳ ರೂಪರೇಖೆಯನ್ನು ಶಾಸನಗಳ ಅಧ್ಯಯನದಿಂದ

ತಿಳಿಯಲು ನಮಗೆ ಸಾಧ್ಯ. ದೊರೆಗಳು ತಮ್ಮ ಪ್ರಜೆಗಳನ್ನು ರಕ್ಷಿಸುತ್ತಿದ್ದ ಬಗೆಯನ್ನು ಶಾಸನಗಳು ತಪ್ಪದೆ ಪ್ರಸ್ತಾವಿಸುತ್ತವೆ. ತೆರಿಗೆಯನ್ನು ಹೊರುವುದು ಪ್ರಧಾನವಾಗಿ ತಮ್ಮ ಹಿತರಕ್ಷಣೆಗಾಗಿಯೇ ಎಂದು ಪ್ರಜೆಗಳು ತಿಳಿದಿದ್ದರು.

ಶಾಸನಗಳ ಅಧ್ಯಯನದಿಂದ ಹೀಗೆ ತಿಳಿದುಬರುತ್ತದೆ: (ಅ) ಹೊಯ್ಸಳ ದೊರೆಗಳು ವ್ಯವಸಾಯದಲ್ಲಿ ಪ್ರಗತಿ ಹೊಂದಲು ಪ್ರೋತ್ಸಾಹ ನೀಡುತ್ತಿದ್ದರು ಮತ್ತು ಕಂದಾಯ ವಿನಾಯತಿಯನ್ನು ಕೊಡುವುದರ ಮೂಲಕ ರೈತರನ್ನು ಆಕರ್ಷಿಸುತ್ತಿದ್ದರು. (ಆ) ವಿಶಾಲವಾಗಿರುವ ಪ್ರದೇಶವನ್ನು ಕೃಷಿಗೆ ಒಳಪಡಿಸುವ ಉದ್ದೇಶ ಮಾತ್ರವಲ್ಲ; ಹಾಗೆ ಮಾಡಲು ಕೈಗೊಂಡ ವಿಧಾನವೂ ಹೊಯ್ಸಳರ ಭೂಸುಧಾರಣಾ ನೀತಿಯ ಒಂದು ಮುಖ್ಯ ಅಂಶ. (ಇ) ಈ ಆಡಳಿತ ನೀತಿಯೆ ಹೊಯ್ಸಳರ ಭೂಕಂದಾಯಾಭಿವೃದ್ಧಿಗೆ ದಾರಿ ಮಾಡಿಕೊಟ್ಟಿತ್ತು.

ನೀರು ಸರಬರಾಜಿನ ಕೊರತೆಗಳಿಂದ ಬರುವ ಅನೇಕ ತೊಂದರೆಗಳನ್ನು ತಗ್ಗಿಸಲು ಕೆರೆಗಳನ್ನು ನಿರ್ಮಿಸುವ, ಬಾವಿಗಳನ್ನು ತೋಡಿಸುವ, ಕಾಲುವೆಗಳನ್ನು ಅಗೆಸುವ, ಏರಿಗಳು ಹಾಗೂ ತೂಬುಗಳನ್ನು ದುರುಸ್ತಿಪಡಿಸುವ ಅನೇಕ ಜಯಪ್ರದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದ್ದುವು. ರಾಜ್ಯದಲ್ಲೆಲ್ಲಾ ವ್ಯವಸಾಯದ ಅಭಿವೃದ್ಧಿಗಾಗಿ ಹೊಯ್ಸಳ ದೊರೆಗಳು ಕೊಡುತ್ತಿದ್ದ ಗಮನಗಳಿಗೆ ಇವೆಲ್ಲಾ ಸಾಕ್ಷಿ. ಒಬ್ಬ ವ್ಯಕ್ತಿಗಾಗಲೀ ಸಂಸ್ಥೆಗಳಿಗಾಗಲೀ ಜಮೀನುಗಳನ್ನು ಕೊಡುಗೆ ಕೊಡುವುದರ ಮೂಲಕ, ಇಲ್ಲವೆ ಕಂದಾಯವನ್ನು ಮಾಫಿ ಮಾಡುವುದರ ಮೂಲಕ ಕೆರೆಗಳನ್ನು ನಿರ್ಮಿಸುವ ಕಾರ್ಯಕ್ಕೆ ಪ್ರೋತ್ಸಾಹ ಕೊಡಲಾಗುತ್ತಿತ್ತು.

ಒಡೆದ ಕೆರೆಗಳನ್ನು ದುರುಸ್ತಿಪಡಿಸುವುದು, ಹೂಳು ತೆಗೆಸುವುದು, ನಷ್ಟವನ್ನು ತಡೆಗಟ್ಟುವುದು—ಇವುಗಳನ್ನೊಳಗೊಂಡ ನೀರಾವರಿ ಕೆಲಸಗಳು ಗ್ರಾಮಪಂಚಾಯತಿಯ ಆಡಳಿತಕ್ಕೆ ಸೇರಿದ ಕರ್ತವ್ಯವಾಗಿತ್ತು. ಖಾಸಗೀ ಜನರಿಂದ ಹಾಗೂ ದೇವಾಲಯಗಳಿಂದ ಬಂದ ದಾನ ಹಾಗೂ ಧನಸಹಾಯ, ರಾಜ್ಯದ ನೆರವು ಮತ್ತು ಕೆರೆಯಿಂದ ಬಂದ ಉತ್ಪತ್ತಿಗಳಿಂದ ನೀರಾವರಿ ಕೆಲಸಗಳ ನಿರ್ವಹಣೆಯಾಗುತ್ತಿತ್ತು. ಕೆರೆ ಕಟ್ಟೆಗಳ ನಿರ್ಮಾಣ, ದುರುಸ್ತಿ ನೀರು ಹಂಚಿಕೆಗಳು ನೀರಾವರಿಯ ಮುಖ್ಯ ಕೆಲಸವಾಗಿದ್ದವು. ಬೇಸಾಯ, ಸಾಗಾಣಿಕೆ ಹಾಗೂ ನೀರಾವರಿಗಳಿಗೆ ಅತ್ಯಾವಶ್ಯಕವಾದ ದನಕರುಗಳ ಅಭಿವೃದ್ಧಿಯೂ ವ್ಯವಸಾಯಕ್ಕೆ ಸಂಬಂಧಿಸಿದ ಪ್ರಮುಖ ಕಾರ್ಯವಾಗಿತ್ತು.

ಈ ಕಾಲದ ಕೈಗಾರಿಕೆಗಳಲ್ಲಿ ಲೋಹಕೈಗಾರಿಕೆ (ಚಿನ್ನ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆ), ನೇಯ್ಗೆ, ಮರಗೆಲಸ, ಕುಂಬಾರಗೆಲಸ—ಇವೇ ಮುಂತಾದವುಗಳಿದ್ದವು. ಈ ಕೈಗಾರಿಕೆಗಳು ಸರಕಾರದ ಪೋಷಣೆ ಹಾಗೂ ಸಾರ್ವಜನಿಕರ ಬೆಂಬಲವನ್ನು ಪಡೆದಿದ್ದವು. ಈ ಕೈಕಸಬುಗಾರಿಕೆಗಳು ಬಹುಸಂಖ್ಯಾತ ಜನಸಾಮಾನ್ಯರ ಆವಶ್ಯಕತೆಗಳನ್ನು ಪೂರೈಸುತ್ತಿದ್ದವು. ಅವರ ಬೇಡಿಕೆಗಳು ಸಾಮಾನ್ಯವಾದವುಗಳು. ಹೆಚ್ಚು ಕಡಮೆ ಸ್ವಾವಲಂಬಿಯಾದ ಮಿತವ್ಯಯ ನಿರ್ವಹಣೆಯೇ ಎನ್ನಬಹುದು. ವೀರ ಪಾಂಚಾಲರು (ಕೈಕಸಬುದಾರ ವರ್ಗ) ದೊರೆಗಳ ವಿಶೇಷ ಕೃಪಾಪೋಷಣೆಗೆ ಪಾತ್ರರಾಗಿದ್ದರೆಂಬುದು ತಿಳಿದ ವಿಷಯವೇ. ಈ ಕೈಗಾರಿಕೆಗಳ ಅಭಿವೃದ್ಧಿಯೇ ದೇಶದ ಗ್ರಾಮಾಂತರ ಆರ್ಥಿಕ ಸ್ಥಿತಿಯನ್ನು ಭದ್ರಗೊಳಿಸುವಲ್ಲಿ ಬಹು ಮಟ್ಟಿಗೆ ನೆರವಾಯಿತು.

ದೇಶದ ಆರ್ಥಿಕದ ಬೆನ್ನೆಲುಬಾದ ವಾಣಿಜ್ಯದ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗಳಿಗೆ ಮಹತ್ತರವಾದ ಗಮನ ಕೊಡಲಾಗುತ್ತಿತ್ತು. ಈ ಮುಂದಿನ ವಾಣಿಜ್ಯ ವ್ಯವಹಾರಗಳನ್ನು ಸಾಮಾನ್ಯವಾಗಿ ಶಾಸನಗಳಲ್ಲಿ

ನೋಡಬಹುದು :–(1) ಧಾನ್ಯಗಳ ಮಾರಾಟಗಾರರು (2) ವಸ್ತ್ರವ್ಯಾಪಾರಿಗಳು (3) ಆನೆ ಕುದುರೆ ಮುಂತಾದ ಪಶು ವ್ಯಾಪಾರಿಗಳು (4) ಚಿನ್ನಗೆಲಸದವರು (5) ಎಣ್ಣೆವ್ಯಾಪಾರಿಗಳು (6) ವೀಳೆಯದೆಲೆ ಮಾರುವವರು (7) ಸೌದೆ ವ್ಯಾಪಾರಿಗಳು (8) ಬೀದಿಯಲ್ಲಿ ವ್ಯಾಪಾರ ಮಾಡುವವರೂ ವ್ಯವಹಾರ ನಡೆಸುತ್ತಿದ್ದರು.

ಅರಸೀಕೆರೆ ತಾಲೂಕು ಬಾಣಾವರದ ಕ್ರಿ. ಶ. 1188ರ ಶಾಸನದ ಪ್ರಕಾರ ಕಮ್ಮಟ ಚಟ್ಟಸೆಟ್ಟಿ ಎಂಬವನು ಕುದುರೆ, ಆನೆ, ಮುತ್ತುಗಳನ್ನು ಹಡಗಿನಲ್ಲಿ ಆಮದುಮಾಡಿ, ದೊರೆಗಳಿಗೆ ಮಾರಿದನೆಂದು ನಮಗೆ ತಿಳಿದುಬರುತ್ತದೆ. ಅವನ ಸೋದರ ದಾಸಯ್ಯಸೆಟ್ಟಿಯು ಪೂರ್ವದಿಂದ ಪಶ್ಚಿಮದ ವರೆಗೂ ಉತ್ತರದಿಂದ ದಕ್ಷಿಣದ ವರೆಗೂ ಸರಕು ಸಾಗಾಣಿಕೆ ವ್ಯವಹಾರವನ್ನು ಇಟ್ಟಿದ್ದನೆಂದೂ ತಿಳಿದುಬರುತ್ತದೆ. ಹೊಯ್ಸಳಸೋಮೇಶ್ವರ (1255)ನ ಕಾಲದಲ್ಲಿ ಕುಂಜನಂಬಿಸೆಟ್ಟಿಯು ಮಾಳವ, ಕಳಿಂಗ, ಚೋಳ ಮತ್ತು ಪಾಂಡ್ಯದ ಮಹಾರಾಜರಿಗೆ ಬೇಕಾದ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದನು. ಅವನು ಕೇವಲ ವರ್ತಕಶ್ರೇಷ್ಠಿಯಾಗಿರದೆ ಮಹಾ ರಾಯಭಾರಿಯೂ ಆಗಿದ್ದನು. ಸತ್ಯ ಹಾಗೂ ದಯಾ ಮೂರ್ತಿಯಾಗಿ ಶಾಂತಿ ಹಾಗೂ ಕದನ ಕಾಲದ ಸಮಾಲೋಚಕನಾಗಿ ಗಣ್ಯತೆ ಪಡೆದಿದ್ದನು.

ಈ ನಾನಾ ವಿಧದ ವಾಣಿಜ್ಯ ವ್ಯವಹಾರದಲ್ಲಿ ತೊಡಗಿದ್ದ ಜನರಿಗೆ ತಮ್ಮದೇ ಆದ ಸ್ವಂತ ಸಂಘವೊಂದಿರುತ್ತಿತ್ತು. ಅದನ್ನು 'ವಾಣಿಜ್ಯ ವೃತ್ತಿಸಂಘ' ಎನ್ನಬಹುದು. ಬಹುಶಃ ಈ ಸಂಘಗಳ ಮೂಲಕ ತಮ್ಮ ಆಯಾಯಾ ವ್ಯವಹಾರಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿದ್ದಿರಬಹುದು. ಈ ಸಂಘಗಳು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿದ್ದುವು. ಮೊಸಲೆ, ಬೆಳಗೊಳ, ಅರಸೀಕೆರೆ, ದಲಿಗೆ, ಇವು ಕೆಲವು ದೊಡ್ಡ ವ್ಯಾಪಾರ ಕೇಂದ್ರಗಳಾಗಿದ್ದುವು. ಈ ಕಾಲದಲ್ಲಿ ಹತ್ತಿಯ ದಾರ, ಬಟ್ಟೆ, ಮಸ್ಲಿನ್, ಸಾಮ್ರಾಣಿ, ಅಡಕೆ, ತೆಂಗು ಮತ್ತು ದಂತ–ಈ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದರು.

ಉದ್ದಿಮೆ ಹಾಗೂ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿದಂತೆ ತೆರಿಗೆ ವಿಧಿಸುವುದರಲ್ಲಿ ಒಳ್ಳೆಯ ಉದಾರ ನೀತಿ ಇದ್ದುದರಿಂದ ಹೊರ ಇಲ್ಲವೆ ಒಳನಾಡಿನ ವ್ಯಾಪಾರಗಳು ಸಾಮಾನ್ಯವಾಗಿ ಹೊಯ್ಸಳರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೆ ಏರಿದವೆಂದು ಹೇಳಬಹುದು.

ಮೂಲ ಲೇಖಕರು : ಶ್ರೀ ಡಿ. ಎಚ್. ಕೊಪ್ಪಾರ್
ಅನುವಾದಕರು : ಶ್ರೀ ಎಚ್.ವಿ ಶ್ರೀನಿವಾಸ ಶರ್ಮ

# ಶಿಕ್ಷಣ ಮತ್ತು ವಿಜ್ಞಾನ

## (ಹೊಯ್ಸಳರ ಕಾಲ)

ಹೊಯ್ಸಳರ ಕಾಲದ ಶಿಕ್ಷಣಸಂಸ್ಥೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು : ಹಿಂದು ಮತ್ತು ಜೈನ ಎಂದು. ವಿಷ್ಣುವರ್ಧನನು ವೈಷ್ಣವ ಮತಾವಲಂಬಿಯಾದ ಮೇಲೆ ಜೈನ ಮತವು ಸ್ವಲ್ಪ ಮಟ್ಟಿಗೆ ಕಳೆಗುಂದಿತು. ಆದರೂ ಹೊಯ್ಸಳರ ಆಡಳಿತದ ಕೊನೆ ದಿನಗಳ ವರೆಗೂ ಅವರ ವಿದ್ಯಾ ಕೇಂದ್ರಗಳು ಮುಂದುವರಿಯುತ್ತಲೇ ಇದ್ದುವು. ಹೊಯ್ಸಳ ದೊರೆಗಳು ಎರಡು ವರ್ಗಗಳಿಗೂ ಸಮಾನವಾಗಿ ಆಶ್ರಯವನ್ನು ಕೊಟ್ಟಿದ್ದರು.

ಹಿಂದೂ ವಿದ್ಯಾಕೇಂದ್ರಗಳಲ್ಲಿ ಅಗ್ರಹಾರಗಳು, ಘಟಿಕಗಳು, ಬ್ರಹ್ಮಪುರಿಗಳು, ಮಠಗಳು ಹಾಗೂ ದೇವಾಲಯಗಳು ಹಿಂದಿನಿಂದಲೂ ಉಚ್ಛ್ರಾಯ ಸ್ಥಿತಿಯಲ್ಲಿದ್ದವು.

ಹಾಸನ ಜಿಲ್ಲೆಯ ಸರ್ವಜ್ಞಪುರ, ನಾಗರಖಂಡ, ಕೆಲ್ಲಾಂಗ್ರೆ (Kellangre) (ಶಿವಮೊಗ್ಗ ಜಿಲ್ಲೆ) ಇವು ಪ್ರಸಿದ್ಧವಾದ ಅಗ್ರಹಾರಗಳಲ್ಲಿ ಕೆಲವು. ಸರ್ವಜ್ಞಪುರದ ಬ್ರಾಹ್ಮಣರ ವ್ಯಾಸಂಗ ಮತ್ತು ಸಾಹಿತ್ಯ ಚಟುವಟಿಕೆಗಳ ಸ್ಪಷ್ಟ ವಿವರಣೆಗಳನ್ನು ಕ್ರಿ. ಶ. 1234ರ ಶಾಸನದಲ್ಲಿ ಕೊಟ್ಟಿರುವುದನ್ನು ಉದಾಹರಣೆಗೆ ನೋಡಬಹುದು ಕೆಲವು ಬೀದಿಗಳಲ್ಲಿ ವೇದ ಮತ್ತು ಸ್ತೋತ್ರಗಳ ಪಠನ, ಆರು ವಿಧವಾದ ತರ್ಕ ನಡೆಯುತ್ತಿದ್ದುವೆಂದೂ, ಹೊಸ ಹೊಸ ಪ್ರದರ್ಶನಗಳಿಗೆ ಕೆಲವು ಬೀದಿಗಳಲ್ಲಿ ಮಂಟಪಗಳಿದ್ದವೆಂದೂ ತಿಳಿದುಬರುತ್ತದೆ. ಇಲ್ಲಿ ಬ್ರಾಹ್ಮಣರ ತಂಡಗಳು ಎಲ್ಲರಿಗೂ ಏಕ ಕಾಲದಲ್ಲಿ ವೇದ ಪಠನಮಾಡಿ ತೋರಿಸುವುದೂ ಕೆಲವು ವೇಳೆ ಗಾಢ ವಿಷಯಗಳ ವ್ಯಾಖ್ಯಾನವನ್ನು ಕೇಳುವುದೂ ಇನ್ನೂ ಕೆಲವು ವೇಳೆ ತರ್ಕಗಳ ದೀರ್ಘ ಚರ್ಚೆ ನಡೆಸುವುದೂ ಉತ್ಸಾಹದಿಂದ ಪುರಾಣಗಳನ್ನು ಪಠಿಸುವುದೂ ಸ್ಮೃತಿ, ಕಾವ್ಯ, ನಾಟಕಗಳಲ್ಲಿ ಬರುವ ಹಲವು ಭಾಗಗಳಿಗೆ ಅರ್ಥ ನಿರ್ಣಯಮಾಡುವುದೂ–ಇವು ನಡೆಯುತ್ತಿದ್ದುವೆಂದೂ ಆ ಶಾಸನದಿಂದ ತಿಳಿದು ಬರುವುದು. ಆ ಅಗ್ರಹಾರದಲ್ಲಿ ನೂರ ಇಪ್ಪತ್ತೆರಡು ಅಂತಹ ವಿದ್ವಾಂಸರಿದ್ದರೆಂದೂ ತಿಳಿದುಬರುತ್ತದೆ. ಶಿವಮೊಗ್ಗ ಜಿಲ್ಲೆಯ ಬಂದಳಿಕೆಯಲ್ಲಿನ 1204 ರ ಶಾಸನದಲ್ಲಿ ಬನವಾಸಿಯ ಎಪ್ಪತ್ತರ ನಾಡಿನ ನಾಗರಖಂಡದಲ್ಲಿ ಐದು ಅಗ್ರಹಾರಗಳು ಇದ್ದುವೆಂದೂ ವೇದ ಪುರಾಣಗಳನ್ನು ಬೋಧಿಸುವ ಅಥವಾ ಪಠಿಸುವ ಎಲ್ಲ ಬ್ರಾಹ್ಮಣರ ಧ್ವನಿ ಅವುಗಳಿಂದ ಹೇಗೆ ಹೊರಬರುತ್ತಿತ್ತೆಂಬುದನ್ನೂ ತಿಳಿಸಿದೆ. ಗ್ರಾಮವನ್ನು ಉಪಾಧ್ಯಾಯರುಗಳಿಗೆ ವಹಿಸಿ, ಅವರಿಗೆ ಆವಶ್ಯಕವೆನಿಸಿದ ಪೀಠೋಪಕರಣ, ಪಾತ್ರೆ ಮುಂತಾದ ಸಾಮಗ್ರಿಗಳಿರುವ ಮನೆಗಳನ್ನು ಒದಗಿಸಿಕೊಡುವುದು–ಈ ಮೂಲಕ ಈ ಸಂಸ್ಥೆಗಳನ್ನು ಪೋಷಿಸಿಕೊಂಡು ಬರುತ್ತಿದ್ದರು. ವೇದಪಠನ ಮತ್ತು ವ್ಯಾಸಂಗದ ಸಂಪ್ರದಾಯವನ್ನು ಅಳಿಯದಂತೆ ಉಳಿಸುವುದೇ ಒಂದು ಪುಣ್ಯಕಾರ್ಯವೆಂದೂ ಪರಿಗಣಿಸಲಾಗಿತ್ತು.

'ಘಟಿಕಾ' ಎಂಬುದು ಮತ್ತೊಂದು ಕೇಂದ್ರವಾಗಿತ್ತು. ಇಲ್ಲಿ ಗುರು ಶಿಷ್ಯರಿಬ್ಬರೂ ಜ್ಞಾನಾರ್ಜನೆಗಾಗಿ ಶ್ರಮಿಸುತ್ತಿದ್ದರು. ಶಾಸನಗಳು '**ಘಟಿಕಗಳು**' ಹಾಗೂ '**ಘಟಿಕಸ್ಥಾನ**' ಗಳ ವಿಷಯವನ್ನು ತಿಳಿಸುತ್ತವೆ. ಶಿಕ್ಷಣೋದ್ದೇಶಗಳಿಗಾಗಿ ದೇವಾಲಯಗಳನ್ನು ಬಳಸಿಕೊಳ್ಳುತ್ತಿದ್ದರು. ಇದಕ್ಕೆ ನೊಣಂಬೇಶ್ವರ

ದೇವಾಲಯವನ್ನು 'ಹೆಂಜಾರ ಪಟ್ಟಣ'ದ ದೊಡ್ಡ 'ಘಟಿಕಾಸ್ಥಾನ'ವೆಂದು ಕರೆಯುತ್ತಿದ್ದುದೇ ಒಂದು ನಿದರ್ಶನ.

ಇಂಥದೇ ಮತ್ತೊಂದು ಸಂಸ್ಥೆಯೆಂದರೆ 'ಬ್ರಹ್ಮಪುರಿ'. ಅದು ಉಚ್ಚ ಶಿಕ್ಷಣದ ಸ್ಥಾನವಾಗಿತ್ತು. ಆ ಕಾಲದಲ್ಲಿ ವ್ಯಾಸಂಗ ಹಾಗೂ ಶಿಕ್ಷಣಕ್ಕಾಗಿಯೇ ಮೀಸಲಾಗಿದ್ದ ಸಾರ್ವಜನಿಕ ಸ್ಥಳಗಳಲ್ಲಿ ದೇವಾಲಯಗಳು ಬೌದ್ಧ ವಿಹಾರಗಳಂತೆ ಅತಿ ಪ್ರಧಾನವಾದ ಸ್ಥಾನವನ್ನು ಪಡೆದಿದ್ದುವು. ಹಿಂದೂ ದೇವಾಲಯಗಳು ಅವುಗಳ ಕಾರ್ಯನಿರ್ವಹಣೆಗಳು ಆಗಿನ ಯುಗಧರ್ಮವನ್ನು ಪ್ರತಿಬಿಂಬಿಸುತ್ತವೆ. ಇತರ ವಿಷಯಗಳೊಡನೆ ಅವು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದುವು. ಕ್ರಿ. ಶ. 1158ನೆ ಶಾಸನದ ಪ್ರಕಾರ ಶಿಕಾರಿಪುರ ತಾಲೂಕಿನ ತಾಳಗುಂದ ದೇವಾಲಯದಲ್ಲಿ ಚಿಕ್ಕ ಸಂಸ್ಕೃತ ಕಾಲೇಜೊಂದು ಇತ್ತೆಂದೂ ಋಗ್ವೇದ, ಯಜುರ್ವೇದ, ಸಾಮವೇದ, ಪ್ರಭಾಕರ, ಮೀಮಾಂಸೆ, ವೇದಾಂತ, ಭಾಷಾಶಾಸ್ತ್ರ ಮತ್ತು ಕನ್ನಡ-ಇವುಗಳನ್ನು ವ್ಯಾಸಂಗ ಮಾಡುವ 48 ವಿದ್ಯಾರ್ಥಿಗಳಿಗೆ ಅಲ್ಲಿ ಉಚಿತ ಆಹಾರ ಹಾಗೂ ಶಿಕ್ಷಣವನ್ನು ಕೊಡುತ್ತಿದ್ದರೆಂದೂ ತಿಳಿದುಬರುತ್ತದೆ. ಸಮಾಜದ ಶ್ರೀಮಂತವರ್ಗ ಮತ್ತು ರಾಜ್ಯಸರ್ಕಾರಗಳು ಉಪಕಾರದ ಭಾವನೆಯಿಂದ ಶಿಕ್ಷಣದ ಏಳಿಗೆಗೆ ಹುರುಡಿನಿಂದ ದುಡಿಯುತ್ತಿದ್ದವು.

ಉಚ್ಚಮಟ್ಟದ ವಿದ್ವತ್ತನ್ನು ಪಡೆದ ಜ್ಞಾನಿಗಳು ಈ ಸಾರ್ವಜನಿಕ ವಿದ್ಯಾಲಯಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೂ ದೂರ ದೇಶಗಳಿಂದ ವಿದ್ಯಾರ್ಥಿಗಳು ವಿದ್ಯಾಲಯದ ಬಾಗಿಲಿಗೆ ಬರುವಂತೆ ಆಕರ್ಷಣೆಗೊಳಿಸಲೂ ಮಹತ್ತರವಾದ ಕೆಲಸಮಾಡುತ್ತಿದ್ದರು. ಹನ್ನೆರಡು ಸಾವಿರದ ಬನವಾಸಿಗೆ ರಾಜಧಾನಿಯಾದ ಬಳ್ಳಿಗಾಮೆ ಎಂಬ ವಿಶಾಲನಗರದಲ್ಲಿ ಮೂರು ಪುರಗಳೂ ಏಳು ಬ್ರಹ್ಮಪುರಿಗಳೂ ಶಿವ, ವಿಷ್ಣು, ಬ್ರಹ್ಮ, ಜಿನ, ಬುದ್ಧರಿಗೆ ಅರ್ಪಿಸಿದ ಐದು ಮೂಲ ಮಠಗಳೂ ಜೈನ ಬಸದಿ ಹಾಗೂ ಬೌದ್ಧ ವಿಹಾರಗಳ ಜೊತೆಗೆ ಅನೇಕ ಸುಂದರ ದೇವಾಲಯಗಳೂ ಇದ್ದುವು. ಈಚೆಗೆ ಸ್ಥಾಪಿಸಿದ ಮಠಗಳಲ್ಲಿ ಅತಿ ಪೂಜ್ಯತೆಗೆ ಪಾತ್ರರಾದ ಗುರುಗಳನ್ನುಳ್ಳ ಕಾಳಾಮುಖ ಪಂಗಡಕ್ಕೆ ಸೇರಿದ 'ಕೋಡಿಯ ಮಠ'ವು ಒಂದಾಗಿತ್ತು. ವಾಮಶಕ್ತಿ ಎಂಬ ಗುರುವೊಬ್ಬರ ಸಾಧನೆಗಳನ್ನು ಶಾಸನಗಳು ನಿರರ್ಗಳವಾಗಿ ಬಣ್ಣಿಸುತ್ತವೆ.

ವೀರಬಲ್ಲಾಳನ ಮಹಾಮಂತ್ರಿ ಚಂದ್ರಮೌಳಿಯು ಸಂಗೀತ, ಆಗಮ, ತರ್ಕ, ವ್ಯಾಕರಣ, ಉಪನಿಷತ್ತು, ಪುರಾಣ, ನಾಟಕ–ಮುಂತಾದವುಗಳಲ್ಲಿ ಪಾಂಡಿತ್ಯ ಪಡೆದಿದ್ದನೆಂದು ಕ್ರಿ.ಶ. 1182ರ ಶಾಸನ ಬಣ್ಣಿಸುತ್ತದೆ. ಒಂದನೆ ನರಸಿಂಹನ ಕಾಲದಲ್ಲಿದ್ದ 'ನಯಕೀರ್ತಿ ಯತಿಪ ಸಿದ್ಧಾಂತ ಚಕ್ರೇಶ್ವರ'ನು ವ್ಯಾಕರಣ, ತರ್ಕ, ಕಾವ್ಯ, ನಾಟಕಗಳಲ್ಲಿ-ಉದ್ದೇಶದಿಂದೊಡಗೂಡಿದ ಪದ್ಯ ರಚನೆಯಲ್ಲಿ-ತತ್ತ್ವ, ಧಾರ್ಮಿಕ ವಿದ್ಯೆ, ಲೌಕಿಕಜ್ಞಾನ, ಸಕಲಕಲೆ ಹಾಗೂ ಪ್ರಿಯ ವಚನಗಳಲ್ಲಿ–ಚತುರನಾಗಿದ್ದನೆಂದು ತಿಳಿದುಬರುತ್ತದೆ.

ಜೈನ ಹಾಗೂ ಬೌದ್ಧಮಠಗಳಲ್ಲಿ ಜಾತಿ ಮತ ಭೇದವಿರಲಿಲ್ಲ. ವಿದ್ಯಾನ್ವೇಷಣೆಯಲ್ಲಿ ಯಾರೇ ಬರಲಿ, ಉಚ್ಚ ಶಿಕ್ಷಣ ದೊರಕುತ್ತಿತ್ತು.

ಹೊಯ್ಸಳ ದೊರೆಗಳು, ಶ್ರೀಮಂತರು, ಹೊಯ್ಸಳ ರಾಜ್ಯದ ವರ್ತಕಶ್ರೇಷ್ಠರು, ಇವರುಗಳೇ ಅಲ್ಲದೆ ಚಾಳುಕ್ಯ ಮತ್ತು ಕಳಚುರ್ಯ ರಾಜರೂ ನೆರೆ ಹೊರೆಯ ರಾಜ್ಯದ ಶ್ರೀಮಂತ ಜನರೂ ಈ ಮಠಗಳಿಗೆ, ದೇವಾಲಯಗಳಿಗೆ ಹಾಗೂ ಬ್ರಹ್ಮಪುರಿಗಳಿಗೆ ದತ್ತಿ, ಉಂಬಳಿ, ಕೊಡುಗೆಗಳನ್ನು ಬಿಡುತ್ತಿದ್ದರೆಂಬುದಕ್ಕೆ ಶಾಸನಗಳು ಆಧಾರವಾಗಿವೆ.

ಪ್ರಾಥಮಿಕ ಶಿಕ್ಷಣದ ಆವಶ್ಯಕತೆಗೆ ಹಾಗೂ ಪ್ರಮುಖತೆಗೆ ಸಮಾಜ ಮಾನ್ಯತೆ ಕೊಟ್ಟಿದ್ದಂತೆ ಕಾಣುತ್ತದೆ. ಈ ಕಾಲದಲ್ಲಿ ಒಂದು ಬಗೆಯ ಪ್ರಾಥಮಿಕ ಶಿಕ್ಷಣಕ್ಕಾಗಿ ಇದ್ದ ಶಾಲೆಗಳ ವ್ಯಾಪ್ತಿ, ವಿಧಾನ, ನಿರ್ವಹಣೆಗಳ ವಿಚಾರವಾಗಿ ಅಷ್ಟಾಗಿ ತಿಳಿದಿರಲಿಲ್ಲವಾದರೂ ಪ್ರತಿಯೊಂದು:ಹಳ್ಳಿಯಲ್ಲೂ ಶಾಲೆಗಳಿದ್ದುವೆಂದು ಊಹಿಸಬಹುದು. ಕ್ರಿ.ಶ. 1174ರ ಶಾಸನದಲ್ಲಿ ಬಲ್ಲಾಳದೇವನ ಮಹಾಮಂತ್ರಿ ಹೆಗ್ಗಡೆ ಎರೆಯಣ್ಣನು ನರಸಿಂಹಪುರದಲ್ಲಿ ಒಂದು ಸೌಧವನ್ನು ಕಟ್ಟಿಸಿ, ಬಾಲಕರಿಗೆ 'ಕರ್ಣಾಟ'ವನ್ನು ಬೋಧಿಸಲು ಅಗ್ರಹಾರದ 'ಬೋಳೆಯ ಸೋವಿಯಣ್ಣ' ಎಂಬವರನ್ನು ನೇಮಕಮಾಡಿದ್ದನೆಂದೂ, ಇಪ್ಪತ್ತು ಬಾಲಕರಿಗೆ ಹನ್ನೆರಡು ಗದ್ಯಾಣಗಳನ್ನು ಅಡಿಗೆಯ ಹೆಂಗುಸಿಗೆ ಮೂರು ಗದ್ಯಾಣಗಳನ್ನು ಅವರ ಜೀವನೋಪಾಯಕ್ಕಾಗಿ ಗೊತ್ತುಪಡಿಸಿದ್ದನೆಂದೂ ತಿಳಿದುಬರುತ್ತದೆ. ವಿದ್ಯಾಭ್ಯಾಸಕ್ಕಾಗಿಯೇ ಕೊಡುಗೆ ಬಿಡುವ ಕಾರ್ಯವನ್ನು ಪುಣ್ಯಕಾರ್ಯವೆಂದು ಪರಿಗಣಿಸುತ್ತಿದ್ದರೆಂಬುದಕ್ಕೆ ನಿರ್ದಿಷ್ಟ ಹೇಳಿಕೆಗಳು ಸಿಕ್ಕುತ್ತವೆ. ಶಿಕಾರಿಪುರ ತಾಲೂಕಿನ ಕ್ರಿ.ಶ. 1158ನೆ ಶಾಸನದಲ್ಲಿ ಹೀಗಿದೆ: ಉಪಾಧ್ಯಾಯನಿಗೆ ವೃತ್ತಿಯನ್ನೂ. ಜನತೆಗೆ ಶಿಕ್ಷಣ ಅವಕಾಶವನ್ನೂ ಯಾರೇ ಒದಗಿಸಿ ಕೊಡಲಿ ಅವರು ಧರ್ಮ, ಅರ್ಥ, ಕಾಮಗಳನ್ನು ಸಾಧಿಸಲು ಮತ್ತೆ ಯಾವ ದಾನವನ್ನು ಮಾಡಬೇಕು ? ವಿದ್ಯಾರ್ಥಿಗಳಿಗೆ ಸ್ನಾನ, ಭೋಜನ, ವಸ್ತ್ರ ಹಾಗೂ ಉಪದಾನಗಳನ್ನು ಯಾರೇ ನೀಡಲಿ, ಆ ವ್ಯಕ್ತಿಯ ಇಷ್ಟಾರ್ಥಗಳೆಲ್ಲಾ ನೆರವೇರುತ್ತವೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ತೀರ್ಥಯಾತ್ರೆ ಹಾಗೂ ಯಜ್ಞಯಾಗಾದಿಗಳಿಂದ ಬರಬಹುದಾದ ಪುಣ್ಯಕ್ಕಿಂತಲೂ ಜ್ಞಾನದಾನದಿಂದ ಬರುವ ಪುಣ್ಯ ಕೋಟಿ ಮಡಿ ಅಧಿಕ.

"ಉಪಾಧ್ಯಾಯಸ್ಯ ಯೋ ವೃತ್ತಿಂ ದತ್ವಾಧ್ಯಾಪಯತೇ ಜನಾನ್
ಕಿಂ ನ ದತ್ತಂ ಭವೇತ್-ತೇನ ಧರ್ಮ ಕಾಮಾರ್ಥದರ್ಶಿನಾ
ಛಾತ್ರಾಣಾಂ ಭೋಜನಾಭ್ಯಂಗ ವಸ್ತ್ರಂ ಭಿಕ್ಷಾಮಥಾಪಿ ಚ
ದತ್ವಾ ಪ್ರಾಪ್ನೋತಿ ಪುರುಷಃ ಸರ್ವಾನ್ ಕಾಮಾನ್ ನ ಸಂಶಯಃ
ಯತ್‌ಪುಣ್ಯಂ ತೀರ್ಥಯಾತ್ರಾಯಾಂ ಯತ್ ಪುಣ್ಯಂ ಯಜ್ವನಾಂ ತಥಾ
ತತ್‌ಪುಣ್ಯಂ ಕೋಟಿಗುಣಿತಂ ವಿದ್ಯಾದಾನಾಲ್ಲಭೇನ್ನರಃ"

ಮಹಿಳಾ ವಿದ್ಯಾಭ್ಯಾಸಕ್ಕೆ ಬರಬಹುದಾದರೆ, ಕೆಲವು ಮಹಿಳೆಯರು ಸಾಹಿತ್ಯಕ್ಷೇತ್ರ ಮತ್ತು ಲಲಿತಕಲೆಗಳಲ್ಲಿ ಪ್ರತಿಭಾವಂತರಾಗಿದ್ದರೆಂದು ನಾವು ತಿಳಿಯಬಹುದು. ಕಂತಿಯು ಕವಯಿತ್ರಿಯೂ ಹೌದು; ಉತ್ತಮ ಮಟ್ಟದ ತತ್ವಜ್ಞಾನಿಯೂ ಹೌದು. ಅಕ್ಕಮಹಾದೇವಿಯೂ ಅವರಲ್ಲೊಬ್ಬಳು. ಶಾಂತಲಾದೇವಿಯು ಸುಪ್ರಸಿದ್ಧಳು. ಸಾಮಾನ್ಯ ಮಹಿಳೆಯರೂ ಅದೇ ಮಟ್ಟದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರೋ ಇಲ್ಲವೋ ನಂಬುವುದು ಕಷ್ಟ. ಅಧಿಕ ಸಂಖ್ಯೆಯ ಮಹಿಳಾ ಸಮೂಹಕ್ಕೆ ಸಾರ್ವತ್ರಿಕವಾಗಿ ಪುರಾಣ ಕತೆಗಳನ್ನು ಹಾಡಿ ನಿರೂಪಿಸುವುದು, ಧಾರ್ಮಿಕ ಪ್ರವಚನ ಮಾಡುವುದು, ನಾಟಕ ಪ್ರದರ್ಶನವನ್ನೇರ್ಪಡಿಸುವುದು—ಈ ವಿಧವಾದ 'ಶ್ರವ್ಯ-ದೃಶ್ಯ ಶಿಕ್ಷಣ'ವೆಂದು ಕರೆಯಬಹುದಾದ ವಿದ್ಯಾಭ್ಯಾಸವನ್ನು ಕೊಡಲಾಗುತ್ತಿತ್ತು. ಇದಕ್ಕೆ ದೇವಾಲಯಗಳೇ ರಂಗಸ್ಥಳಗಳಾಗಿದ್ದವು.

ಹೊಯ್ಸಳ ದೊರೆಗಳು ಬಹುಮಟ್ಟಿಗೆ ಯುದ್ಧಗಳಲ್ಲೇ ನಿರತರಾಗಿರುತ್ತಿದ್ದರು. ಈ ಉದ್ದೇಶಕ್ಕಾಗಿಯೇ ದೊಡ್ಡ ಸೈನ್ಯವನ್ನು ಸಂರಕ್ಷಿಸಬೇಕಾಗಿತ್ತು. ಬಿಲ್ಲು, ಬಾಣ, ಭಲ್ಲೆ, ರಥ, ಇತರ ಆಯುಧಗಳುಳ್ಳ ಸೈನಿಕ ಸಾಧನಗಳನ್ನು ತಯಾರಿಸಿ ಶೇಖರಿಸಿಕೊಳ್ಳಬೇಕಾಗಿತ್ತು. ಇದರಿಂದ ಕಮ್ಮಾರರು ಹಾಗೂ ಬಡಗಿಗಳಿಗೆ, ಗಣಿ ಹಾಗೂ ಲೋಹದ ಕೈಗಾರಿಕೆಗೆ ಪ್ರೇರಣೆಯೊದಗಿರಬೇಕು. ಈ ಕೈಗಾರಿಕಾ ಉದ್ದಿಮೆಯು ವಂಶಪಾರಂಪರ್ಯವಾದುದಾಗಿತ್ತು ಹಾಗೂ ಕುಟುಂಬದ ಕಸಬಾಗಿತ್ತು. ವೀರ ಪಾಂಚಾಲದಂತಹ ವ್ಯಾಪಾರ ಸಂಸ್ಥೆಗಳು ಈ ಕಸಬುದಾರರ ಕಾರ್ಯಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸಿ ಉತ್ತಮ ಮಟ್ಟಕ್ಕೆ ಏರಿಸುತ್ತಿದ್ದುವು. ಪ್ರತಿಯೊಬ್ಬ ಒಳ್ಳೆಯ ಕಸುಬುದಾರನ ಮನೆಯೇ ಚಿಕ್ಕ ತಾಂತ್ರಿಕ ಶಾಲೆಯಾಗಿತ್ತು.

ಅಭ್ಯಾಸಿಗಳು ಕಲಿಯುವಾಗಲೇ ಹಣ ಸಂಪಾದನೆ ಮಾಡುತ್ತಿದ್ದರು. ಅಲ್ಲದೆ ತಮ್ಮ ಒಡೆಯರ ಬಳಿ ನಿಕಟವರ್ತಿಗಳಾಗಿದ್ದರು. ಹೀಗೆ ಕಸಬುಗಾರಿಕೆ ಹಾಗೂ ಕೌಶಲಗಳು ವ್ಯಕ್ತಿಯಿಂದ ವ್ಯಕ್ತಿಗೆ ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಬಂದಿದ್ದವು.

ಹೊಯ್ಸಳ ದೊರೆಗಳ ಕಾಲದಲ್ಲಿ ನಿರ್ಮಿಸಿದ ಸುಂದರ ಹಾಗೂ ಭವ್ಯ ದೇವಾಲಯಗಳೂ ಚೈತ್ಯಗಳೂ ತಮ್ಮ ವೃತ್ತಿಯಲ್ಲಿ ಮಹತ್ತರ ತರಬೇತಿ ಪಡೆದ ವಿಚಕ್ಷಣ ರೂವಾರಿಗಳೂ ಶಿಲ್ಪಶಾಸ್ತ್ರಜ್ಞರೂ ಇದ್ದರೆಂಬುದನ್ನು ಸೂಚಿಸುತ್ತವೆ. ತರಬೇತಿಯ ಶಿಕ್ಷಣದಲ್ಲಿ ಪುರಾಣ, ಗಣಿತ, ಚಿತ್ರಗೆಲಸ, ವಾಸ್ತುಶಿಲ್ಪಗಳ ಆಳವಾದ ಜ್ಞಾನನಿರ್ಮಾಣ ಅಡಗಿದ್ದಿತು. ಹೊಯ್ಸಳಾಚಾರಿಯ ಒಂದು ಕುಟುಂಬವು ವಾಸ್ತುಶಿಲ್ಪ, ಶಿಲ್ಪಶಾಸ್ತ್ರ ಪ್ರತಿಮಾಶಿಲ್ಪ ವರ್ಣಚಿತ್ರಗಳಿಗೆ ಪ್ರಸಿದ್ಧವಾಗಿತ್ತು. ಸಂಗೀತ ಹಾಗೂ ಲಲಿತಕಲಾ ವ್ಯಾಸಂಗಗಳು, ರಾಜ ವಂಶ ಮತ್ತು ಶ್ರೀಮಂತಕುಟುಂಬಗಳಿಗೆ ಸಾಮಾನ್ಯವಾಗಿ ಸೀಮಿತಗೊಂಡಿದ್ದವು. ವಂಶಪಾರಂಪರ್ಯವಾಗಿ ಕೆಲವು ಕುಟುಂಬಗಳು ಇವುಗಳಲ್ಲಿ ಪರಿಶ್ರಮ ಪಡೆದಿದ್ದವು ಆ ಕಾಲದ ಹಲವಾರು ಶಾಸ್ತ್ರಗಳಲ್ಲಿ ಆಯುರ್ವೇದ, ಪಶುವೈದ್ಯ, ಗಣಿತಶಾಸ್ತ್ರಗಳು ಶ್ರೇಷ್ಠತೆಯ ಮಟ್ಟವನ್ನು ಮುಟ್ಟಿದ್ದವೆಂದು ಹೇಳಲಾಗಿದೆ.

ಮಂಗರಾಜನು ಒಂದು ರೀತಿಯಲ್ಲಿ ಹೊಯ್ಸಳರ ಕಾಲದಿಂದ ಹೊರಗಿನವನಾದರೂ ಕ್ರಿ.ಶ. 1360ರಲ್ಲಿ ಹೊಯ್ಸಳ ರಾಜ್ಯದಲ್ಲೇ ಜೀವಿಸಿದ್ದಿರಬಹುದೆಂದು ಊಹಿಸುವರು. ಅವನು 'ಖಗೇಂದ್ರಮಣಿದರ್ಪಣ'ದ ಕರ್ತೃ. ಮನುಷ್ಯನ ನಾನಾ ಬಗೆಯ ರೋಗಗಳು, ಅವುಗಳ ಪರೀಕ್ಷೆ, ಹಾಗೂ ಚಿಕಿತ್ಸೆಗಳ ಬಗೆಗೆ ಗ್ರಂಥಕರ್ತನಿಗಿದ್ದ ಅಪಾರ ಜ್ಞಾನಸಂಪತ್ತನ್ನು ಆ ಗ್ರಂಥ ಪ್ರಕಟಪಡಿಸುತ್ತದೆ.

ಹೊಯ್ಸಳದೊರೆಗಳು ಪಶುವೈದ್ಯಶಾಸ್ತ್ರವನ್ನು ಅಭಿವೃದ್ಧಿಪಡಿಸುವುದರಲ್ಲಿ ತೀವ್ರವಾದ ಆಸಕ್ತಿಯನ್ನು ತೋರುತ್ತಿದ್ದರು. ಕ್ರಿ.ಶ. 1196ರ ತುಮಕೂರಿನ 45ನೆ ಶಾಸನದ ಪ್ರಕಾರ ವೀರಬಲ್ಲಾಳ ದೊರೆ ಆನೆಗಳ ವಿಷಯದ ವ್ಯಾಸಂಗದಲ್ಲಿ ಆಸಕ್ತಿವಹಿಸಿದ್ದನೆಂದು ತಿಳಿದುಬರುತ್ತದೆ.

ಮೂಲ ಲೇಖಕರು : ಡಿ.ಎಚ್. ಕೊಪ್ಪಾರ್
ಅನುವಾದಕರು : ಶ್ರೀ ಎಚ್. ವಿ. ಶ್ರೀನಿವಾಸ ಶರ್ಮ

# ಕನ್ನಡ

## ಹೊಯ್ಸಳರ ಯುಗ

ಧರ್ಮಶ್ರದ್ಧೆ, ವೀರಾವೇಶ, ಲೌಕಿಕಾಭ್ಯುದಯ ಮತ್ತು ಕುಶಲಕಲೆಗಳ ಹಾಗೂ ವಿದ್ವತ್ತಿನ ಬಗೆಗೆ ಪ್ರೋತ್ಸಾಹದ ಈ ದೃಷ್ಟಿಗಳಿಂದ ಹೊಯ್ಸಳಯುಗವು ಗಮನಾರ್ಹವಾದ ಕಾಲವಾಗಿದೆ. ಹಿಂದಿನಿಂದ ಬಂದ ಗುರುಕುಲ (ಅಗ್ರಹಾರ ಇತ್ಯಾದಿ)ಗಳ ಅಭಿವೃದ್ಧಿಯಷ್ಟೇ ಅಲ್ಲದೆ, ಹೊಸ ಶಿಕ್ಷಣಕ್ಷೇತ್ರಗಳೂ ಈ ಕಾಲದಲ್ಲಿ ಸ್ಥಾಪಿತವಾದುವು. ವಿದ್ವಾಂಸರಲ್ಲಿ ಕಂಡುಬರುತ್ತಿದ್ದ ಆರೋಗ್ಯಕರವಾದ ಸ್ಪರ್ಧಾಮನೋಧರ್ಮದಿಂದಾಗಿ, ಅಂದಿನ ಸಾಹಿತ್ಯಕ್ಷೇತ್ರವು ಸಮೃದ್ಧವಾದ ಬೆಳೆಯನ್ನು ಕೊಟ್ಟಿತು. ಆಸ್ಥಾನಕವಿಪಟ್ಟಗಳೂ ಏರ್ಪಟ್ಟವು. ಪುರುಷರು ಪರಾಕ್ರಮಪ್ರಿಯರಾಗಿದ್ದಂತೆ, ಸ್ತ್ರೀಯರು ಕುಶಲಕಲೆಗಳಲ್ಲಿ ಪ್ರವೀಣೆಯರಾಗಿದ್ದರು. ದೇಶಭಕ್ತಿ, ರಾಜಭಕ್ತಿ, ಧರ್ಮಶ್ರದ್ಧೆ ಮತ್ತು ಅತ್ಯಂತ ಶುಚಿಯಾದ ಜೀವನನಿಷ್ಠೆ, ಆತ್ಮಾರ್ಪಣಬುದ್ಧಿ, ಮತ್ತು ಮಾನವತಾಪ್ರೇಮ—ಈ ಲಕ್ಷಣಗಳು ಅಂದಿನ ಸಾಹಿತ್ಯದಲ್ಲಿ, ಅದರಲ್ಲೂ ಶಾಸನಗಳಲ್ಲಿ ಪ್ರತಿಬಿಂಬಿತವಾಗಿವೆ. ಹೀಗಾಗಿ, ಇಂಥ ಜನಜೀವನ ಅಂದಿನ ಸಾಹಿತ್ಯಕ್ಕೆ ಅತ್ಯಂತ ಸತ್ವಯುತವಾದ ಸ್ಫೂರ್ತಿಯನ್ನೊದಗಿಸಿತು. ಗುಣ, ಗಾತ್ರ, ವೈವಿಧ್ಯ—ಈ ಮೂರು ದೃಷ್ಟಿಗಳಿಂದಲೂ ಹೊಯ್ಸಳಕಾಲದ ಕನ್ನಡಸಾಹಿತ್ಯವು ವಿಶೇಷ ಗಮನಾರ್ಹವಾದ ಸಿದ್ಧಿಯನ್ನು ಸೂಚಿಸುತ್ತದೆ.

ನಾಗಚಂದ್ರನು, ಒಂದನೆಯ ಬಲ್ಲಾಳನ (ಕ್ರಿ.ಶ. 1100—1110) ಆಸ್ಥಾನದಲ್ಲಿ ಆಸ್ಥಾನಕವಿಯಾಗಿದ್ದನು. ಹತ್ತನೆಯ ಶತಮಾನದ ಆದಿಕವಿ ಪಂಪನನ್ನು ಮೇಲ್ಪಂಕ್ತಿಯಾಗಿರಿಸಿಕೊಂಡು ಇವನು ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡಿದ್ದಾನೆ. ಇವನು ಮತದಲ್ಲಿ ಜೈನ. ಪಂಪನಂತೆ ತನ್ನ ಕಾವ್ಯಪ್ರಜ್ಞೆಯನ್ನು ಲೌಕಿಕ—ಆಗಮಿಕ ಎಂದು ವಿಭಾಗಿಸದೆ, ಈ ಅಭಿನವಪಂಪನು ತನ್ನ ಎರಡೂ ಕೃತಿಗಳಲ್ಲಿ ಒಮ್ಮುಖವಾದ ಜೈನಧರ್ಮಶ್ರದ್ಧೆಯನ್ನೇ ಪ್ರಕಟಿಸಿದ್ದಾನೆ.

ನಾಗಚಂದ್ರನು ಮಾನವ ದೌರ್ಬಲ್ಯಗಳಿಂದ ಕೂಡಿದ ರಾಜಾಧಿರಾಜರನ್ನು ತನ್ನ ಕೃತಿಯಲ್ಲಿ ಎತ್ತಿ ಮೆರೆಯಿಸುವ ಬಗ್ಗೆ ಆಸಕ್ತಿ ವಹಿಸಲಿಲ್ಲ. ಕಾವ್ಯದ ಕಥಾನಾಯಕ ಹೇಗಿರಬೇಕು ಎನ್ನುವ ವಿಚಾರದಲ್ಲಿ ಇವನು ಪಂಪನಿಂದ ಬೇರೆಯಾದ ಮತವನ್ನು ಪ್ರಕಟಿಸಿದನು. **ಪಂಪರಾಮಾಯಣ**ವೆಂದು ಕರೆಯಿಸಿಕೊಳ್ಳುವ ಇವನ **ರಾಮಚಂದ್ರಚರಿತಪುರಾಣ**ದಲ್ಲಿ 'ನಾಯಕನು ಉದಾತ್ತನಾದರೆ ಕೃತಿ ವಿಶ್ರುತವಾಗುತ್ತದೆ. ಚಿನ್ನದಿಂದ ಮಾಡಿದ ಕಂಠಿಕೆಯ ಹಾಗೆ, ಕಬ್ಬಿಣದಿಂದ ಮಾಡಿದ ಕಂಠಿಕೆಯು ಉಪಾದೇಯವಾಗುತ್ತದೆಯೆ'?—ಎನ್ನುತ್ತಾನೆ. ಹಾಗೆಯೆ, ತನ್ನ ಕೃತಿಗೆ ಸಾಮಾನ್ಯನಾದ ವ್ಯಕ್ತಿಯೊಬ್ಬನನ್ನು ನಾಯಕನನ್ನಾಗಿ ಆರಿಸಿಕೊಳ್ಳದೆ, ಶ್ರೀರಾಮಚಂದ್ರನಂಥ ಉದಾತ್ತನನ್ನು ನಾಯಕನನ್ನಾಗಿ ಮಾಡಿಕೊಂಡ ಬಗ್ಗೆ ಹೆಮ್ಮೆಪಡುತ್ತಾನೆ. ಹೀಗೆ ಕಥಾನಾಯಕನ ಬಗ್ಗೆ ನಾಗಚಂದ್ರ ತಾಳಿದ ಈ ಸ್ವತಂತ್ರ ಮನೋವೃತ್ತಿ ಅದುವರೆಗಿನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತೀರಾ ಹೊಸದಾಗಿ ತೋರುತ್ತದೆ. ನಾಗಚಂದ್ರನ ಅಪಾರವಾದ ನೈತಿಕನಿಷ್ಠೆ, ಧರ್ಮ ಶ್ರದ್ಧೆ, ಸೊಗಸಾದ ಪಾತ್ರಕಲ್ಪನೆ, ಮಧುರವಾದ ಶೈಲಿ—ಇವುಗಳು ಅವನನ್ನು ಕನ್ನಡದ ಬಹುದೊಡ್ಡ ಕವಿಗಳ ಸಾಲಿನಲ್ಲಿ ನಿಲ್ಲಿಸುತ್ತವೆ. ರಸಭಾವವ್ಯಂಜನೆಯಲ್ಲಿ

ನಾಗಚಂದ್ರನದು ಸಿದ್ಧಹಸ್ತ. ಅವನ ರಾವಣನ ಪಾತ್ರ ವಿವೇಚನ ಶೀಲವಾದ ಮತ್ತು ಅತ್ಯಂತ ಮಾನವೀಯವಾದ ಪಾತ್ರವಾಗಿದೆ. ನಾಗಚಂದ್ರನ **ಪಂಪರಾಮಾಯಣವು** ವಿಮಲಸೂರಿಯ **ಪಉಮ ಚರಿಅ** ಎಂಬ ಪ್ರಾಕೃತ ಭಾಷೆಯ ಕೃತಿಯನ್ನವಲಂಬಿಸಿ ರಚಿತವಾಗಿದ್ದರೂ ನಾಗಚಂದ್ರನು ವಸ್ತು ವಿನ್ಯಾಸದಲ್ಲಿ ತನ್ನದೇ ಆದ ಸ್ವಂತಿಕೆಯನ್ನೂ ಕೌಶಲವನ್ನೂ ಪ್ರಕಟಿಸಿದ್ದಾನೆ. ಅವನ ಇನ್ನೊಂದು ಕೃತಿ **ಮಲ್ಲಿನಾಥ ಪುರಾಣ.** ಇದು ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥ ಜಿನನ ಜೀವನ ಮತ್ತು ಸಂದೇಶಗಳನ್ನು ಕುರಿತದ್ದು. ಈ ಕೃತಿಯಲ್ಲಿ ಕಂಡುಬರುವ ನಿಸರ್ಗವರ್ಣನೆಯ ಭಾಗಗಳು ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾಗಿವೆ.

ಕನ್ನಡದ ಪ್ರಥಮ ಕವಯಿತ್ರಿಯಾದ ಕಂತಿಯು ನಾಗಚಂದ್ರನ ಸಮಕಾಲೀನಳು. ಅವಳ ಬುದ್ಧಿಯ ಚುರುಕುತನವೂ ಕೌಶಲವೂ **ಕಂತಿ ಹಂಪನ ಸಮಸ್ಯೆಗಳಲ್ಲಿ** ಕಂಡು ಬರುತ್ತವೆ. ಬಲ್ಲಾಳನ ಆಸ್ಥಾನದಲ್ಲಿ ನಾಗಚಂದ್ರನು, ತಾನು ಅರ್ಧ ರಚಿಸಿದ ಪದ್ಯಗಳನ್ನು, ಪೂರ್ಣಗೊಳಿಸುವ ಪರೀಕ್ಷೆಗೆ–ಇದಕ್ಕೆ 'ಸಮಸ್ಯಾ ಪೂರ್ತಿ' ಎಂದು ಹೆಸರು, ಕಂತಿಯನ್ನು ಒಳಪಡಿಸಿ ಅವಳ ಶಕ್ತಿಯನ್ನು ಪರೀಕ್ಷಿಸಿದನೆಂದು ಹೇಳಲಾಗಿದೆ. ಈ ಸ್ಪರ್ಧೆಯಲ್ಲಿ ಕಂತಿ ಯಶಸ್ವಿಯಾದಳಂತೆ. ಕಂತಿಯಿಂದ ಪ್ರಶಂಸೆ ಪಡೆಯುವ ಮಹದಾಶೆ ನಾಗಚಂದ್ರನಿಗೆ ಇತ್ತೆಂದೂ ಅದಕ್ಕಾಗಿ ನಾಗಚಂದ್ರನು ತಾನು ಮೃತಿ ಹೊಂದಿದಂತೆ ನಟಿಸಿದಾಗ, ಕಂತಿಯು ನಾಗಚಂದ್ರನು ಮೃತನಾದನೆಂದು ಭಾವಿಸಿ, ಅವನನ್ನು ಕುರಿತು ಸೊಗಸಾದ ಶೋಕಗೀತೆಯಲ್ಲಿ ನಾಗಚಂದ್ರನನು ಸ್ತುತಿಸಿದಳೆಂದೂ ಒಂದು ದಂತಕಥೆ.

ಅನಂತರ ಪಟ್ಟಕ್ಕೆ ಬಂದವನು ವಿಷ್ಣುವರ್ಧನ. ಇವನ ಆಸ್ಥಾನದಲ್ಲಿ ರಾಜಾದಿತ್ಯನೆಂಬ ಆಸ್ಥಾನಕವಿಯಿದ್ದನು. ಇವನು ಬಹುದೊಡ್ಡ ಜೈನ ಪಂಡಿತ; ಕಾವ್ಯನಿರ್ಮಿತಿಯಲ್ಲಿ ಹೇಗೋ ಹಾಗೆ ಗಣಿತದಲ್ಲಿಯೂ ಇವನು ಪರಿಣತ. **ಕ್ಷೇತ್ರಗಣಿತ, ವ್ಯವಹಾರ ಗಣಿತ** ಮತ್ತು **ಲೀಲಾವತಿ** ಎಂಬ ಗಣಿತ ಶಾಸ್ತ್ರ ಕೃತಿಗಳನ್ನು ಪದ್ಯರೂಪದಲ್ಲಿ ರಚಿಸಿದನು. ರಾಜನಾದ ವಿಷ್ಣುವರ್ಧನನನ್ನು ಕುರಿತ ಪ್ರಶಂಸೆಯ ಉಲ್ಲೇಖಗಳು ಇವನ ಕೃತಿಯಲ್ಲಿವೆ.

ಒಂದನೆಯ ನರಸಿಂಹನ (ಕ್ರಿ.ಶ. 1152—1173) ಆಸ್ಥಾನದಲ್ಲಿ ಸುಮನೋಬಾಣನು ಒಬ್ಬ ಅಧಿಕಾರಿಯಾಗಿದ್ದನು. ಇವನು ಅಧ್ಯಾಪಕನೂ ಕವಿಯೂ ಹೌದು. ಕನ್ನಡದ ಮತ್ತೊಬ್ಬ ದೊಡ್ಡ ಕವಿಯಾದ ಜನ್ನನ ತಂದೆ ಇವನು. ಈತ ಒಂದು ಜೈನ ಪುರಾಣವನ್ನು ಬರೆದನೆಂದು ಹೇಳಲಾಗಿದೆ. ಇವನನ್ನು ಕುರಿತು ಅನಂತರದ ಕವಿಗಳಿಗೆ ವಿಶೇಷ ಗೌರವ. ಜಗದ್ದಳ ಸೋಮನಾಥನು ಬರೆದ **ಕರ್ಣಾಟಕ ಕಲ್ಯಾಣ ಕಾರಕ** ವೆಂಬ ವೈದ್ಯಗ್ರಂಥವನ್ನು ಪರಿಷ್ಕರಿಸಲು ಈತ ನೆರವಾದನೆಂದೂ ಹೇಳಲಾಗಿದೆ. ಕೀರ್ತಿವರ್ಮನ (ಕ್ರಿ.ಶ. 1125) **ಗೋವೈದ್ಯ** ಕನ್ನಡದ ಮೊದಲ ವೈದ್ಯಗ್ರಂಥ. ಜಗದ್ದಳ ಸೋಮನಾಥನ **ಕರ್ಣಾಟಕ ಕಲ್ಯಾಣ ಕಾರಕ** ಎರಡನೆಯ ವೈದ್ಯಗ್ರಂಥ. ಇದರಲ್ಲಿ ವಿವಿಧರೋಗಗಳ ವಿಷಯ, ಅವುಗಳಿಗೆ ಕಾರಣ, ರೋಗನಿವಾರಣೋಪಾಯ—ಇತ್ಯಾದಿಗಳು ವಿವರವಾಗಿ ತಿಳಿಯಾಗಿ ವರ್ಣಿಸಲ್ಪಟ್ಟಿವೆ. ಹೊಯ್ಸಳರ ಕಾಲದಲ್ಲಿ ಧರ್ಮಗ್ರಂಥ ಹಾಗೂ ಶಾಸ್ತ್ರಗ್ರಂಥಗಳ ಜೊತೆಗೆ ಲೌಕಿಕ ಗ್ರಂಥಗಳೂ ರಚಿತವಾದವು.

ಒಂದನೆಯ ನರಸಿಂಹನ ಕಾಲವು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಸಾಹಿತ್ಯ ಪ್ರಕಾರಗಳು, ಮತ್ತು ಸತ್ವ ಶೈಲಿಗಳ ದೃಷ್ಟಿಯಿಂದ ಒಂದು ಹೊಸ ಯುಗವನ್ನು ತೆರೆಯಿತು. ಈ ನೂತನ ಯುಗದ ನೇತಾರನಾದ ಹರಿಹರ ದೇವನು, ನರಸಿಂಹನ ಆಸ್ಥಾನದಲ್ಲಿ ಕರಣಿಕನಾಗಿದ್ದು, ಅನಂತರ ಭಗವತ್ಸೇವೆಗಾಗಿ ತನ್ನ

ವೃತ್ತಿಯನ್ನು ತೊರೆದು, ಹಂಪೆಯಲ್ಲಿ ನೆಲಸಿದನು. ಅಲ್ಲಿ ಕನ್ನಡ ಸಾಹಿತ್ಯದಲ್ಲಿ ಅಮೂಲ್ಯವಾದ ಮತ್ತು ಮುಂದಿನ ಕವಿಗಳ ಮೇಲೆ ವಿಶೇಷ ಪ್ರಭಾವಶಾಲಿಯಾಗುವಂಥ ಕೃತಿಗಳನ್ನು ರಚಿಸಿದನು.

ಹರಿಹರ ದೇವನೂ ಅವನ ಸೋದರಳಿಯನಾದ ರಾಘವಾಂಕನೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೂತನ ಯುಗಪ್ರವರ್ತಕರೆಂದು ಹೆಸರಾಗಿದ್ದಾರೆ. ಹರಿಹರನ **ಗಿರಿಜಾ ಕಲ್ಯಾಣವು** ಕಾಳಿದಾಸನ **ಕುಮಾರ ಸಂಭವದ** ವಸ್ತುವನ್ನು ಅಳವಡಿಸಿಕೊಂಡು, ಪ್ರೌಢ ಶೈಲಿಯಲ್ಲಿ ರಚಿತವಾದ ಕಾವ್ಯವಾಗಿದೆ. ಕಾಳಿದಾಸನ ಕುಮಾರಸಂಭವ ಇದರ ವಸ್ತುವಾದರೂ ಹರಿಹರನು ತನ್ನ ದರ್ಶನಕ್ಕೆ ಅನುಗುಣವಾದ ರೀತಿಯಲ್ಲಿ ಕಥಾವಸ್ತುವನ್ನು ಮಾರ್ಪಡಿಸಿಕೊಂಡಿದ್ದಾನೆ. ಪ್ರತಿಭೆ, ವರ್ಣನಾಶಕ್ತಿ ಹಾಗೂ ಶಯ್ಯೆಯ ದೃಷ್ಟಿಯಿಂದ **ಗಿರಿಜಾ ಕಲ್ಯಾಣವು** ಕನ್ನಡದ ಮಹಾಕಾವ್ಯಗಳಲ್ಲಿ ಒಂದಾಗಿದೆ. ಇದರಲ್ಲಿ ಕವಿಯು ಗಮನ (ದೇವಕುಮಾರನು ಉದಿಸಿಬರುವ) ಕುಮಾರ ಸಂಭವದ ಕಡೆಗಿಂತ ಗಿರಿಜೆಯ ಭಕ್ತಿಯ ಗೆಲುವಿನ ಕಡೆಗೆ ಹರಿದಿದೆ. ಈ ಕೃತಿಯಲ್ಲಿ ಹರಿಹರ ತನ್ನದೇ ಆದ ಸಂದೇಶವನ್ನು ಸಾರಿದ್ದಾನೆ.

ಹರಿಹರ ದೇವನು ನೂರಕ್ಕೂ ಮಿಗಿಲಾಗಿ ರಗಳೆಗಳನ್ನು (ರಗಳೆಯೆಂಬುದು ಒಂದು ಬಗೆಯ ಪದ್ಯಜಾತಿ) ಬರೆದಿದ್ದಾನೆ. ಕನ್ನಡ ಸಾಹಿತ್ಯಕ್ಕೆ ಈ ರಗಳೆಗಳು ಮಹತ್ವದ ಕೊಡಿಗೆಯಾಗಿವೆ. ದಕ್ಷಿಣ ಭಾರತದ ತಮಿಳುನಾಡಿನ ಶಿವಭಕ್ತರ ಹಾಗೂ ಕನ್ನಡದ ವೀರಶೈವ ಶರಣರ ಜೀವನ ಮತ್ತು ಸಾಧನೆಗಳನ್ನು ಹರಿಹರ ದೇವನು ಈ ರಗಳೆಗಳಲ್ಲಿ ಅತ್ಯಂತ ಸತ್ವಯುತವಾಗಿ ಮತ್ತು ಉತ್ಸಾಹಯುತವಾಗಿ ಚಿತ್ರಿಸಿದ್ದಾನೆ. ಅವರ ಅಸಾಧಾರಣವಾದ ಶಿವಭಕ್ತಿ, ನಿಷ್ಠೆ, ಸಮರ್ಪಣಭಾವ, ಅವರು ತಮ್ಮ ಬದುಕನ್ನು ರೂಪಿಸಿಕೊಂಡ ದೈವೀತೇಜಸ್ಸಿನ ನಿರ್ದೇಶನ—ಇವುಗಳು ಈ ಪಾತ್ರಚಿತ್ರಣದ ಸ್ಫೂರ್ತಿಯ ಸೆಲೆಯಾಗಿವೆ. ಹರಿಹರ ದೇವನು ಮೂಲತಃ ಭಕ್ತನಾದ ಕಾರಣ, ಅವನು ತನ್ನ ಕೃತಿಗಳ ಮೂಲಕ ಭಕ್ತಿಯ ಆವೇಶವನ್ನು ಓದುಗರಲ್ಲಿ ಪ್ರಚೋದಿಸಬಲ್ಲವನಾಗಿದ್ದಾನೆ. ಹರಿಹರ ದೇವನ ರಗಳೆಗಳ ವಸ್ತುವಿರಚನೆಯೂ ಕಥನ ಕ್ರಮವೂ ನಮಗೆ ಆಂಗ್ಲಕವಿ ಛಾಸರನ '**ಕ್ಯಾಂಟರ್ ಬರೀ ಟೇಲ್ಸ್**' ಅನ್ನು ನೆನಪಿಗೆ ತರುತ್ತವೆ. ಹರಿಹರ ದೇವನು ತನ್ನ ಕೃತಿಗಳಲ್ಲಿ ವಿಶಿಷ್ಟವಾದ ಮತ್ತು ಉದಾತ್ತವಾದ ಜೀವನದರ್ಶನವನ್ನು ಚಿತ್ರಿಸಿದ್ದಾನೆ. ಇವನ ಕೃತಿಗಳಿಂದ ಕನ್ನಡ ಸಾಹಿತ್ಯವು ಹೊಸ ಮಜಲನ್ನೂ ಸತ್ವ—ಸೌಂದರ್ಯಗಳನ್ನೂ ಪಡೆಯಿತು.

ಪಂಪನಿಂದ ಮೊದಲಾಯಿತೆಂದು ಭಾವಿಸಲಾಗಿರುವ ರಾಜಾಧಿರಾಜರನ್ನು ಕಾವ್ಯದ ಕಥಾನಾಯಕರಲ್ಲಿ ಸಮಾವೇಶಗೊಳಿಸುವ ಪದ್ಧತಿ, ಹರಿಹರನಿಂದ ಸಂಪೂರ್ಣವಾಗಿ ತಿರಸ್ಕೃತವಾಯಿತು. ಶಿವನನ್ನೂ ಶಿವಶರಣರನ್ನೂ ಮಾತ್ರವೆ ಹೊಗಳುವುದಾಗಿ, ಹಾಗಲ್ಲದೆ ಸಾವ-ಕೆಡುವ ರಾಜರುಗಳನ್ನು ಹೊಗಳುವುದಿಲ್ಲ ವೆಂದು ಹರಿಹರನು ಪ್ರತಿಜ್ಞೆ ಮಾಡಿ ಉದ್‌ಘೋಷಿಸಿದನು. ರಾಘವಾಂಕನೂ ವಂತ್ತಿತರ ಅನೇಕ ಕವಿಗಳೂ ಹರಿಹರನ ಮಾರ್ಗವನ್ನೆ ಅನುಸರಿಸಿದರು.

ಕನ್ನಡ ಸಾಹಿತ್ಯದಲ್ಲಿ ಷಟ್ಪದೀ ಪ್ರಕಾರವನ್ನು ಪ್ರವರ್ತನಗೊಳಿಸಿದ ಕೀರ್ತಿ ರಾಘವಾಂಕನಿಗೆ ಸಲ್ಲುತ್ತದೆ. ಹರಿಹರನು ತನ್ನೆಲ್ಲ ಕೃತಿಗಳನ್ನೂ (ಗಿರಿಜಾ ಕಲ್ಯಾಣವನ್ನು ಬಿಟ್ಟು) ರಗಳೆಯಲ್ಲಿ ಬರೆದರೆ, ರಾಘವಾಂಕನು ತನ್ನೆಲ್ಲ ಕೃತಿಗಳನ್ನೂ ಷಟ್ಪದಿಯಲ್ಲಿ ಬರೆದನು. ಇದರಿಂದಾಗಿ ಅದುವರೆಗೂ ಬಳಕೆಯಲ್ಲಿ ಇಲ್ಲದಿದ್ದ ದೇಶೀಯ ವಾದ ಈ ಷಟ್ಪದೀ ಪ್ರಕಾರವು ರಾಘವಾಂಕನ ಅನಂತರದ ಕವಿಗಳಲ್ಲಿ ತುಂಬ ಪ್ರಿಯವಾದ ಮಾರ್ಗವಾಗಿ ಪರಿಣಮಿಸಿತು. ಭಾಷೆ—ಸಾಹಿತ್ಯ—ಛಂದಸ್ಸುಗಳ ದೃಷ್ಟಿಯಿಂದಲೂ ಹರಿಹರನ ಅನುಯಾಯಿಯಾದ ರಾಘವಾಂಕನು ಕನ್ನಡ ಸಾಹಿತ್ಯದಲ್ಲಿ ಹೊಸ ಮಾರ್ಗದ ಮುಂದಾಳು ಎಂಬ ಗೌರವಕ್ಕೆ ಪಾತ್ರನಾಗಿದ್ದಾನೆ. ಅವನ ಕೃತಿಗಳು ಆರು : **ಹರಿಶ್ಚಂದ್ರ ಕಾವ್ಯ**, **ಸಿದ್ಧರಾಮ ಪುರಾಣ**, **ಸೋಮನಾಥ ಚರಿತೆ**, **ವೀರೇಶ ಚರಿತೆ**, **ಶರಭ ಚಾರಿತ್ರ** ಮತ್ತು **ಹರಿಹರ ಮಹತ್ವ** [ಇವುಗಳಲ್ಲಿ ಹರಿಹರ ಮಹತ್ವ ಇನ್ನೂ ಸಿಕ್ಕಿಲ್ಲ].

ನಾಟಕೀಯತೆ, ಸನ್ನಿವೇಶ ನಿರ್ಮಾಣ ಕೌಶಲ, ಶ್ರೀಮಂತ ಪದರಚನಾತಿಶಯತೆ, ನವೀನ ದೃಷ್ಟಿ ಕೋನ ಮತ್ತು ವಿಶಿಷ್ಟ ಸಂದೇಶ–ಇವುಗಳಿಂದ ಅವನ ಕೃತಿಗಳು ಮಹತ್ವದವುಗಳಾಗಿವೆ. ಕನ್ನಡ ನುಡಿಗಟ್ಟು ಗಳನ್ನು ಅತ್ಯಂತ ಸತ್ವಯುತವಾಗಿ ಬಳಸಿ ಮುಂದಿನ ಕವಿಗಳಿಗೆ ಈತ ಮಾರ್ಗದರ್ಶಕನಾಗಿದ್ದಾನೆ. ಭಾಷೆಯಲ್ಲಿ ಹೊಸ ಬೆಳವಣಿಗೆಗೆ ದಾರಿಮಾಡಿಕೊಟ್ಟಿದ್ದಾನೆ.

ಹರಿಹರ–ರಾಘವಾಂಕರ ಜೊತೆಗೆ, ಹೆಸರಿಸಬಹುದಾದ ಇನ್ನೊಬ್ಬ ಮುಖ್ಯನಾದ ಕವಿ ಕೆರೆಯ ಪದ್ಮರಸ. ಅವನು ಬೇಲೂರಿನ ಕೆರೆಯನ್ನು ಕಟ್ಟಿಸಿದ್ದರಿಂದ ಅವನ ಹೆಸರಿಗೆ "ಕೆರೆಯ" ಎಂಬ ವಿಶೇಷಣ ಅಂಟಿಕೊಂಡಿತು. ಆತ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದನು. ಅವನ ವಿದ್ವತ್ತು ವಿಶೇಷ ಗೌರವಕ್ಕೆ ಪಾತ್ರವಾಗಿತ್ತು. ಹರಿಹರ ರಾಘವಾಂಕರಂತೆ ಇವನೂ ಸಂಸ್ಕೃತದಲ್ಲಿ ಘನ ಪಂಡಿತ ನಾಗಿದ್ದನು. ರಾಘವಾಂಕನ ಹಾಗೆಯೇ ಇವನು ವಾದ-ವಿವಾದ-ಚರ್ಚೆಗಳಲ್ಲಿ ಭಾಗವಹಿಸಿ ಹೆಸರುವಾಸಿ ಯಾಗಿದ್ದನು. ಇವನು ಹರಿಹರನನ್ನು ಅನುಸರಿಸಿ, **ದೀಕ್ಷಾಬೋಧೆ** ಎಂಬ ಕೃತಿಯನ್ನು ರಗಳೆಯಲ್ಲಿ ಬರೆದನು. ಈ ಕೃತಿ ವೀರಶೈವ ಧರ್ಮದ ಕೆಲವು ಅಂಶಗಳ ವಿವೇಚನೆಯನ್ನು ಕುರಿತದ್ದು. ನರಸಿಂಹ ಬಲ್ಲಾಳನ ಆಸ್ಥಾನದ ಎಷ್ಟೋ ಕವಿಗಳು, ಕೆರೆಯ ಪದ್ಮರಸನನ್ನು ಕುರಿತು ಸ್ತುತಿ ಪದ್ಯಗಳನ್ನು ಬರೆದಿರುವರೆಂದು ಹೇಳಲಾಗಿದೆ. ಕೆರೆಯ ಪದ್ಮರಸನ ಪ್ರಭಾವದಿಂದ ರಾಘವಾಂಕನು ರಾಜಾಸ್ಥಾನವನ್ನು ಪ್ರವೇಶಿಸಲು ಸಾಧ್ಯವಾಯಿತೆಂದು ಹೇಳಲಾಗಿದೆ.

ಎರಡನೆಯ ಬಲ್ಲಾಳನ (ಕ್ರಿ.ಶ. 1173–1220) ಮಂತ್ರಿಯಾದ ಬೂಚಿರಾಜನು ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಗಳಲ್ಲಿ ಪರಿಣತನಾಗಿದ್ದನೆಂದು ಶಾಸನವೊಂದರಲ್ಲಿ ಉಲ್ಲೇಖಿಸಿದೆ. ಎರಡನೆಯ ನರಸಿಂಹ ಬಲ್ಲಾಳನ ಕಾಲದಲ್ಲಿ ಅನೇಕ ಕವಿಗಳಿಂದ ರಚಿತವಾದ ಶಾಸನಗಳು ಇಂದು ಉಪಲಬ್ಧವಾಗಿವೆ. ಅವುಗಳಲ್ಲಿ ಕೆಲವನ್ನು ಪರಿಶೀಲಿಸಬಹುದು.

ದೇವಪ್ರಿಯ, ಶ್ರೀ, ವಿರೂಪಾಕ್ಷ ಪಂಡಿತ, ಕಲ್ಲಯ್ಯ, ಮತ್ತು ಮಲೆಯ–ಇವರು ಇಂಥ ಶಾಸನ ಕವಿಗಳಲ್ಲಿ ಕೆಲವರು. ಹೊಯ್ಸಳರ ಕಾಲವು ಅತ್ಯಂತ ಕಾವ್ಯಮಯವಾದ ಅನೇಕ ಶಾಸನಗಳ ರಚನೆಗೆ ಹೆಸರಾಗಿದೆ. ಅದರಲ್ಲಿಯೂ ಈ ಮಾತು ಎರಡನೆಯ ನರಸಿಂಹ ಬಲ್ಲಾಳನ ಕಾಲಕ್ಕೆ ಹೆಚ್ಚು ಅನ್ವಯಿ ಸುತ್ತದೆ. ಅವನ ಕಾಲದಲ್ಲಿ ಅನೇಕ ಶಿಕ್ಷಣ ಕೇಂದ್ರಗಳು ಅಭಿವೃದ್ಧಿ ಹೊಂದಿದವು; ಅನೇಕರು ಕವಿತೆಯ ರಚನೆಯಲ್ಲಿ ಪ್ರತಿಭಾನ್ವಿತರಾಗಿ ಬೆಳಗಿದರು.

ರುದ್ರಭಟ್ಟನು ಕನ್ನಡದಲ್ಲಿ ಕೃತಿರಚನೆ ಮಾಡಿದ ವೈದಿಕ ಕವಿಗಳಲ್ಲಿ ಮೊತ್ತಮೊದಲನೆಯ ಪ್ರಮುಖ ಕವಿ. ಅವನ **ಜಗನ್ನಾಥ ವಿಜಯವು** ಪ್ರೌಢಶೈಲಿಯಲ್ಲಿ ರಚಿತವಾಗಿದೆ. ಶ್ರೀ ಕೃಷ್ಣನ ಜೀವನ ಮತ್ತು ವಿಜಯಗಳೇ ಇದರ ವಸ್ತು. ರುದ್ರಭಟ್ಟನು ಶ್ರೀ ಕೃಷ್ಣನಲ್ಲಿ ವಿಶೇಷ ಭಕ್ತಿಯುಳ್ಳ ಉದ್ದಾಮ ಪಂಡಿತ. **ಜಗನ್ನಾಥ ವಿಜಯದ** ರಚನೆ ರುದ್ರಭಟ್ಟನ ಪಾಲಿಗೆ ದೈವೀಸಾಕ್ಷಾತ್ಕಾರದ ಒಂದು ಸಾಧನೆ ಮಾತ್ರ. ಕಾವ್ಯವು ದೈವೀಭಾವದೊಂದಿಗೆ ತನ್ಮಯವಾಗಲು ಒಂದು ಸಾಧನ, ಕಾವ್ಯ ಸಮಾಧಿ–ಎಂದು ರುದ್ರಭಟ್ಟನು ಹೇಳುತ್ತಾನೆ. **ಜಗನ್ನಾಥ ವಿಜಯದ** ಕಥಾವಸ್ತುವಿನ ಮೂಲ **ವಿಷ್ಣು ಪುರಾಣ**.

ಎರಡನೆಯ ಬಲ್ಲಾಳನ ಆಸ್ಥಾನದಲ್ಲಿದ್ದ ಮೂವರು ಜೈನ ಕವಿಗಳಿಂದ ಈ ಕಾಲದಲ್ಲಿ ರಚಿತವಾದ ಮೂರು ಜೈನ ಪುರಾಣಗಳು ನಮಗೆ ಉಪಲಬ್ಧವಾಗಿವೆ. ಇವರಲ್ಲಿ ನೇಮಿಚಂದ್ರ ಮತ್ತು ಜನ್ನ ಇವರಿಬ್ಬರೂ ಸೀಮಾ ಪುರುಷರೆಂದು, ಅನಂತರ ಕಾಲದ ಮಧುರನೆಂಬ ಕವಿ ಪ್ರಶಂಸಿಸಿದ್ದಾನೆ.

ನೇಮಿಚಂದ್ರನ **ನೇಮಿನಾಥಪುರಾಣವು**, 22ನೆ ತೀರ್ಥಂಕರನಾದ ನೇಮಿನಾಥನ ಜೀವನ ಹಾಗೂ

ಸಂದೇಶಗಳನ್ನು ವಸ್ತುವನ್ನಾಗಿ ಉಳ್ಳದ್ದು. ಕಾವ್ಯವೆಂಬುದು ಸಹಜಸ್ಫೂರ್ತಿಯಿಂದ ಮೂಡಿಬರಬೇಕು. ಅದು ಅವರವರ ಒತ್ತಾಯದಿಂದ ಮೂಡಿಬರತಕ್ಕದ್ದಲ್ಲ—ಎಂಬ ಮಾತನ್ನು ನೇಮಿಚಂದ್ರನು ಮನಮುಟ್ಟುವಂತೆ ಹೇಳಿದ್ದಾನೆ. **ನೇಮಿನಾಥ ಪುರಾಣದ** ಕಥೆ ಅಪೂರ್ಣವಾಗಿ ಅರ್ಧದಷ್ಟಿರುವುದರಿಂದ ಇದಕ್ಕೆ **ಅರ್ಧನೇಮಿ ಪುರಾಣವೆಂದು** ಹೆಸರು ಬಂದಿದೆ. ನೇಮಿಚಂದ್ರನ ಇನ್ನೊಂದು ಕೃತಿ ಶೃಂಗಾರ ಪ್ರಧಾನವಾದ **ಲೀಲಾವತಿ** ಎಂಬುದು. ಇದು ಸುಬಂಧುವಿನ **ವಾಸವದತ್ತಾ** ಎಂಬ ಕೃತಿಯ ಆಧಾರದಿಂದ ರಚಿತವಾಗಿದ್ದಿರಬಹುದು. ಕಾವ್ಯದ ಮೂಲಕ ಧರ್ಮಪ್ರಸಾರವಾಗಬೇಕೆಂಬುದು ನಾಗಚಂದ್ರನ ಕಾವ್ಯೋದ್ದೇಶವಾದರೆ, ಕವನವೆಂಬುದು ಭಗವತ್‌ಸಾಕ್ಷಾತ್ಕಾರದ ಸಾಧನ ಎಂದು ರುದ್ರಭಟ್ಟನು ಭಾವಿಸುತ್ತಾನೆ. ನೇಮಿಚಂದ್ರನು ಮಾತ್ರ 'ಶೃಂಗಾರಮೆ ರಸಂ' ಎಂದು ಉದ್ಘೋಷಿಸಿದ್ದಾನೆ. ತನ್ನ ಲೀಲಾವತಿಯನ್ನು ಗಂಗಾಪ್ರವಾಹಕ್ಕೆ ಹೋಲಿಸಿ, ಪ್ರೇಮತೃಷಿತರಾದವರಿಗೆ ಇದು ತೃಪ್ತಿಯ ನೆಲೆ ಎಂದು ಹೇಳುತ್ತಾನೆ. ನೇಮಿಚಂದ್ರನ **ಲೀಲಾವತಿಯು** ಬಾಣನ **ಕಾದಂಬರಿಯನ್ನೂ** ಮೀರಿಸಿತೆಂದು, ನೇಮಿಚಂದ್ರನ ಅನಂತರದ ಕವಿಯೊಬ್ಬ ಅಭಿಪ್ರಾಯಪಡುತ್ತಾನೆ. ನೇಮಿಚಂದ್ರನು ಸಮ್ಮೋಹಕನಾದ ಕವಿ ; ಶೃಂಗಾರ ಸನ್ನಿವೇಶಗಳ ನಿರ್ಮಾಣದಲ್ಲಿ ಅವನದು ಸಿದ್ಧ ಹಸ್ತ. ಅವನ ಪ್ರತಿಭಾವಿಲಾಸವೂ, ಶೈಲಿಯ ಮೇಲಿನ ಪ್ರಭುತ್ವವೂ ಅನ್ಯಾದೃಶವಾಗಿವೆ. ಈ ಕಾಲದ ಮೂರನೆಯ ಜೈನ ಪುರಾಣ ಆಚಣ್ಣಕವಿಯ (ಕ್ರಿ.ಶ. 1195) **ವರ್ಧಮಾನ ಪುರಾಣದ** ರಚನೆಗೆ ಪ್ರೇರಣೆಯನ್ನೊದಗಿಸಿದವನು, ಬಲ್ಲಾಳನ ಮಂತ್ರಿಗಳಲ್ಲಿ ಒಬ್ಬನಾದ ರೇಚಣ ಎಂಬವನು. ಇಪ್ಪತ್ತನಾಲ್ಕನೆಯ ತೀರ್ಥಂಕರನ ವ್ಯಕ್ತಿವೈಶಿಷ್ಟ್ಯವನ್ನೂ ಸಾಧನೆಗಳನ್ನೂ ಈ ಪುರಾಣವು ವಿಸ್ತಾರವಾಗಿ ವಿವರಿಸುತ್ತದೆ ; ಇದರ ಶೈಲಿ ಓದುಗರಲ್ಲಿ ಭಕ್ತಿಭಾವ ಪ್ರಚೋದಕವಾಗಿಯೂ ಅಲಂಕಾರ ಪೂರ್ಣವಾಗಿಯೂ ಇದೆ.

ಈ ಕಾಲದ ಅತ್ಯಂತ ಶ್ರೇಷ್ಠಕವಿ ಜನ್ನ. ಬಲ್ಲಾಳರಾಜನಿಂದ ಜನ್ನನು ಕವಿಚಕ್ರವರ್ತಿ ಎಂಬ ಪ್ರಶಸ್ತಿಯನ್ನು ಪಡೆದನು. ಹತ್ತನೆಯ ಶತಮಾನದ ರನ್ನ ಮತ್ತು ಪೊನ್ನರಿಗೆ, ಅವರ ಆಶ್ರಯದಾತರು ಕವಿಚಕ್ರವರ್ತಿ ಪ್ರಶಸ್ತಿಯನ್ನು ಕೊಟ್ಟ ಹಾಗೆ, ತನಗೆ ತನ್ನ ಆಶ್ರಯದಾತನಾದ ಬಲ್ಲಾಳ ರಾಜನು ಕವಿಚಕ್ರವರ್ತಿ ಪದವಿಯನ್ನು ಕೊಟ್ಟನೆಂದು ಜನ್ನ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಈ ಹೆಮ್ಮೆ ಉಚಿತವೇ ಆಗಿದೆ. ಜನ್ನ ಕನ್ನಡದ ಬಹುದೊಡ್ಡ ಕವಿ ಎಂದು ಅನಂತರದ ಕವಿಗಳಿಂದ, ವಿಮರ್ಶಕರುಗಳಿಂದ ಪ್ರಶಂಸಿಸಲ್ಪಟ್ಟಿದ್ದಾನೆ. ಬಲ್ಲಾಳನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ ಜನ್ನ ವಿಶೇಷ ಧರ್ಮಶ್ರದ್ಧೆಯುಳ್ಳವನಾಗಿದ್ದನು. ನಾಗಚಂದ್ರನ ಕೃತಿಗಳಂತೆ, ಜನ್ನನ ಕೃತಿಗಳೆರಡೂ ಅದೇ ಜೈನಧರ್ಮಶ್ರದ್ಧೆಯನ್ನು ಪ್ರಕಟಪಡಿಸುತ್ತವೆ. ನಾಗಚಂದ್ರನ ಹಾಗೆ ಜನ್ನನೂ ಜಿನಮಂದಿರಗಳ ನಿರ್ಮಾಣಕ್ಕೆ ಕಾರಣನಾದನು. **ಯಶೋಧರ ಚರಿತೆ** ಅವನ ಕೃತಿ ರತ್ನ. 'ಜೀವದಯೆ ಜೈನಧರ್ಮಂ' ಎಂಬುದನ್ನು ಈ ಕೃತಿ ಸೊಗಸಾಗಿ ಪ್ರತಿಪಾದಿಸುತ್ತದೆ. ಜನ್ನನು ಅನೇಕ ಕಾವ್ಯಮಯವಾದ ಶಾಸನಗಳನ್ನು ರಚಿಸಿದ್ದಾನೆ. **ಅನಂತನಾಥ ಪುರಾಣ** ಇವನ ಇನ್ನೊಂದು ಕೃತಿ. ಇದು ಹದಿನಾಲ್ಕನೆಯ ತೀರ್ಥಂಕರ ಅನಂತನಾಥನ ಜೀವನ ಮತ್ತು ಸಂದೇಶಗಳನ್ನು ಕುರಿತದ್ದು. ಪಾತ್ರಚಿತ್ರಣದಲ್ಲಿ ಜನ್ನ ನಿಪುಣ. ಪ್ರಣಯವಸ್ತುವನ್ನು, ಅದರ ವಿವಿಧ ಮುಖಗಳನ್ನು ಚಿತ್ರಿಸಿರುವ ಕನ್ನಡದ ಕೆಲವೇ ಕವಿಗಳಲ್ಲಿ ಇವನೂ ಒಬ್ಬ. ಇವುಗಳ ಕೃತಿಗಳ ಹಿನ್ನೆಲೆ ಧಾರ್ಮಿಕವಾಗಿದ್ದರೂ ಅವನು ಆರಿಸಿಕೊಳ್ಳುವ ವಸ್ತುಗಳು ತೀವ್ರವಾದ ಮಾನವೀಯ ಭಾವಗಳಿಂದ ಸ ಂದಿಸುತ್ತವೆ. ಮಾನವಸ್ವಭಾವದ ವೈಪರೀತ್ಯದಿಂದಾಗುವ ದುರಂತತೆಯನ್ನು ಜನ್ನ ಚಿತ್ರಿಸಿ, ಈ ದುರಂತದಲ್ಲಿ ತೊಳಲುವ ವ್ಯಕ್ತಿಗಳ ಅಸಹಾಯಕತೆಯನ್ನು, ಅನುಕಂಪ ಹುಟ್ಟುವ ರೀತಿಯಲ್ಲಿ ನಿರೂಪಿಸಿದ್ದಾನೆ. ಮನುಷ್ಯನ ಭಾವ–ರಾಗ–ತುಮುಲಗಳನ್ನು ವಸ್ತುವನ್ನಾಗಿಸಿಕೊಂಡು ಜನ್ನನು ಚಿತ್ರಿಸುವ ನೇರವೂ ಸೂಕ್ಷ್ಮವೂ ಆದ ವಿಧಾನ ಅತ್ಯಪೂರ್ವವಾಗಿದೆ. ಮಾನವನ ಭಾವರಾಗಗಳ ಅಪಮೃತೆಯನ್ನಷ್ಟೇ ಅಲ್ಲದೆ, ಜೀವನದ ಚಿರಂತನ ಮೌಲ್ಯಗಳು ಯಾವುವು ಎಂಬುದನ್ನೂ ಜನ್ನನು ತೋರಿಸಿದ್ದಾನೆ.

ಎರಡನೆಯ ಬಲ್ಲಾಳನ ಆಳಿಕೆ ಸಾಹಿತ್ಯ ನಿರ್ಮಿತಿಯ ವೈಪುಲ್ಯದಿಂದಲೂ ಶ್ರೇಷ್ಠತೆಯಿಂದಲೂ ಗಮನಾರ್ಹವಾಗಿದೆ. ಇನ್ನೊಂದು ವಿಶೇಷವಾದ ಸಂಗತಿಯೆಂದರೆ, ಕನ್ನಡ ಸಾಹಿತ್ಯದ ಮೂರು ಪ್ರಧಾನವಾದ ಧಾರ್ಮಿಕ ಪ್ರವಾಹಗಳೂ ಈ ಕಾಲದಲ್ಲಿ ಜೊತೆಗೂಡಿ ಮುಪ್ಪುರಿಗೊಂಡಿವೆ.

ಬಲ್ಲಾಳನ ಅನಂತರ ಪಟ್ಟಕ್ಕೆ ಬಂದ ಎರಡನೆಯ ನರಸಿಂಹನ (ಕ್ರಿ.ಶ. 1220–1238) ಕಾಲದಲ್ಲೂ ಜನ್ನನು ಆಸ್ಥಾನ ಕವಿಯಾಗಿ ಮುಂದುವರಿದನು. ಈ ಕಾಲದಲ್ಲಿ ಜನ್ನನಲ್ಲದೆ ಬೇರೆ ಬೇರೆಯ ಶಾಸನ ಕವಿಗಳೂ ಇದ್ದರು. ಅವರಲ್ಲಿ ಸೋಮನಾಥ ಪಂಡಿತ, ಚಿದಾನಂದ ಕವಿ, ಮತ್ತು ದಶಕೀರ್ತಿ ದೇವರು—ಮುಖ್ಯರಾದವರು. ಇವರು ಸಹಜ ಕವಿಗಳು. ಇವರಲ್ಲಿ ಮೊದಲನೆಯವನಿಗೆ 'ಸುಕವಿ ಕಂಠಾಭರಣ' ಎಂಬ ಬಿರುದಿತ್ತು.

ನರಸಿಂಹನ ಮಂತ್ರಿಗಳಲ್ಲಿ ಒಬ್ಬನಾದ ಪೋಲಾಳ್ವದಂಡನಾಥನು, ಷಟ್ಪದಿಯಲ್ಲಿ **ಹರಚಾರಿತ್ರ** ವೆಂಬ ಕೃತಿಯನ್ನು ಬರೆದಿದ್ದಾನೆ. ಈ ಕವಿಯ ಗುಣಾತಿಶಯಗಳು ಆ ಕಾಲದ ಶಾಸನವೊಂದರಲ್ಲಿ ವರ್ಣಿತವಾಗಿವೆ. ಹರಿಹರ ಪಂಥವನ್ನು ಪ್ರಸಾರಮಾಡಿದ ಈತನು ಹರಿಹರದಲ್ಲಿ ಹರಿಹರ ದೇವಸ್ಥಾನವನ್ನು ಕಟ್ಟಿಸಿದನು.

ಈ ಕಾಲದ ಕವಿಗಳ ಧರ್ಮಶ್ರದ್ಧೆ, ವಿದ್ವತ್ತಿಗೂ ಸಾಹಿತ್ಯ ನಿರ್ಮಿತಿಗೂ ದೊರೆಯುತ್ತಿದ್ದ ಪ್ರೋತ್ಸಾಹ—ಇವು, ನರಸಿಂಹನ ಅನಂತರದ ಹೊಯ್ಸಳರಾಜ ಸೋಮೇಶ್ವರನ (ಕ್ರಿ.ಶ. 1223–1257) ಕಾಲದ ವರೆಗೂ ಮುಂದುವರಿದು ಬಂದವು. ಅನೇಕ ವಿದ್ಯಾಸಂಸ್ಥೆಗಳು ಪುನರುಜ್ಜೀವನ ಹೊಂದಿದವು. ಶಾಸನಗಳು ರಚಿತವಾದವು. ಅನೇಕ ಉದ್ದಾಮ ಜೈನ ಕವಿಗಳು, ಪ್ರಾಸಂಗಿಕವಾಗಿ ಪರಸ್ಪರ ಸಂಬಂಧಿಗಳಾಗಿದ್ದುದು ಈ ಕಾಲದ ಕನ್ನಡ ಸಾಹಿತ್ಯದ ಒಂದು ವಿಶೇಷ ಸಂಗತಿ. ಜನ್ನನು ಕವಿ ಸುಮನೋಬಾಣನ ಮಗ ; ಕನ್ನಡದ ಬಹು ಮುಖ್ಯವಾದ ಕಾವ್ಯ ಸಂಕಲನ ಗ್ರಂಥವಾದ **ಸೂಕ್ತಿ ಸುಧಾರ್ಣವವನ್ನು** ರಚಿಸಿದ ಮಲ್ಲಿಕಾರ್ಜುನನಿಗೆ (ಕ್ರಿ.ಶ. 1245) ಜನ್ನನ ತಂಗಿಯನ್ನು ಕೊಟ್ಟು ಮದುವೆಯಾಗಿತ್ತು. **ಸೂಕ್ತಿ ಸುಧಾರ್ಣವ**ದಲ್ಲಿ ಹೊಯ್ಸಳ ವಂಶವು ಸ್ಥಾಪನೆಯಾದ ವಿಷಯವೂ ಹೊಯ್ಸಳ ರಾಜರ ವಂಶವೃಕ್ಷವೂ ವಿವರವಾಗಿ ವರ್ಣಿತವಾಗಿದೆ. ರಾಜನಾದ ಸೋಮೇಶ್ವರನ ಶೌರ್ಯ-ಪ್ರತಾಪಗಳೂ ವಿವರವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲ್ಪಟ್ಟಿವೆ. ಮಲ್ಲಿಕಾರ್ಜುನನ **ಸೂಕ್ತಿಸುಧಾರ್ಣವ**, ಅವನಿಗಿಂತ ಹಿಂದಿನ ಸುಮಾರು ಇಪ್ಪತ್ತು ಕನ್ನಡದ ಪ್ರಮುಖ ಕವಿಗಳಿಂದ ಆಯ್ದ ಕಾವ್ಯಭಾಗಗಳನ್ನು ಒಳಗೊಂಡು ಹಳಗನ್ನಡ ಪರಂಪರೆಯ ಅಭ್ಯಾಸಕ್ಕೆ ತುಂಬ ಉಪಯುಕ್ತವಾದ ಗ್ರಂಥವಾಗಿದೆ.

ಮಲ್ಲಿಕಾರ್ಜುನನ ಮಗನಾದ **ಕೇಶಿರಾಜನು** ಕನ್ನಡದ ಸುಪ್ರಸಿದ್ಧ ವೈಯಾಕರಣನಾಗಿದ್ದಾನೆ. ಅವನ ಕೃತಿಯಾದ **ಶಬ್ದಮಣಿದರ್ಪಣ**ದಲ್ಲಿ ಬರುವ ಸೂತ್ರಗಳೂ ಅವುಗಳಿಗೆ ಅವನು ಕನ್ನಡದ ಅನೇಕ ಪೂರ್ವಗ್ರಂಥಗಳಿಂದ ಎತ್ತಿಕೊಟ್ಟಿರುವ ನಿದರ್ಶನಗಳೂ ಅವನ ಆಳವಾದ ವಿದ್ವತ್ತಿಗೂ ಸೂಕ್ಷ್ಮದೃಷ್ಟಿಗೂ ಸಾಕ್ಷಿಯಾಗಿವೆ. **ಶಬ್ದಮಣಿದರ್ಪಣ**ದ ಅಧ್ಯಯನವಿಲ್ಲದ ವಿದ್ವತ್ತು ಅಪೂರ್ಣವೇ ಸರಿ. ಇದು ಕೇವಲ ವ್ಯಾಕರಣ ಗ್ರಂಥವಾದರೂ ಓದಲು ತುಂಬಾ ಸ್ವಾರಸ್ಯವಾಗಿದೆ. **ಕೇಶಿರಾಜನಿಗೆ**, ಹಿಂದಿನ ಎರಡು ಶತಮಾನಗಳಲ್ಲಿ ಕನ್ನಡ ಭಾಷೆಯು ಯಾವ ಅವಸ್ಥಾಂತರಗಳೊಳಗಿಂದ ಹಾಯ್ದು ಬಂತೆಂಬುದನ್ನು ಗುರುತಿಸಲು ಇದು ಉಪಯುಕ್ತವಾದ ಗ್ರಂಥವಾಗಿದೆ. ಕೇಶಿರಾಜನು ಇನ್ನೂ ಹಲವು ಗ್ರಂಥಗಳನ್ನು ಬರೆದನೆಂದು ತಿಳಿದುಬಂದಿದೆ ; ಆದರೆ ಅವು ಯಾವುವೂ ಸಿಕ್ಕಿಲ್ಲ.

ನಯಸೇನ (ಕ್ರಿ.ಶ. 1112) ಮತ್ತು ಆಂಡಯ್ಯ (ಕ್ರಿ.ಶ. 1235) ಇವರು ಈ ಕಾಲದ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಗೋಚರವಾಗುತ್ತಿದ್ದ ಹೊಸ ಜಾಡುಗಳನ್ನು ತಮ್ಮ ಬರವಣಿಗೆಗಳಲ್ಲಿ ಪ್ರದರ್ಶಿಸಿದ್ದಾರೆ.

ಕನ್ನಡ ಭಾಷೆ ಸಂಸ್ಕೃತದ ಹಿಡಿತದಿಂದ ತಪ್ಪಿಸಿಕೊಂಡು ಅಚ್ಚಗನ್ನಡವಾಗಬೇಕೆಂದು, ಕನ್ನಡ ಕವಿತೆಯಲ್ಲಿ ಸಂಸ್ಕೃತಶಬ್ದ ಪ್ರಯೋಗವಿರಕೂಡದೆಂದು ಇವರಿಬ್ಬರೂ ಪ್ರತಿಪಾದಿಸುತ್ತಾರೆ. ಆದರೆ ಈ ಸಮಸ್ಯೆಯನ್ನು ಇವರಿಬ್ಬರೂ ಬೇರೆ ಬೇರೆಯ ರೀತಿಯಲ್ಲಿ ಎದುರಿಸಿದರು. ಆಂಡಯ್ಯನಂತೂ ಅತಿರೇಕದ ಹಾದಿಯನ್ನು ಹಿಡಿದು, ತಾನು ಒಂದು ಸಂಸ್ಕೃತ ಪದವನ್ನೂ ತನ್ನ ಕೃತಿಯಲ್ಲಿ ಬಳಸುವುದಿಲ್ಲವೆಂದು ಘೋಷಿಸಿದನು. ಈ ಪ್ರತಿಜ್ಞೆ ಅಕ್ಷರಶಃ ಪಾಲಿಸಿ ತೃಪ್ತಿಗೊಂಡನಾದರೂ ಪ್ರತಿಜ್ಞಾಪಾಲನೆಗೆ ಆತ ತದ್ಭವಗಳನ್ನೇ ಆಶ್ರಯಿಸಬೇಕಾಯಿತು. ಅಲ್ಲದೆ ಆಂಡಯ್ಯನ ಈ ಪ್ರಯೋಗವು, ಅನಂತರದ ಕವಿಗಳಿಂದ ಅನುಕೃತವಾಗಲಿಲ್ಲ. ನಯಸೇನನು, ಕನ್ನಡ ಕಾವ್ಯದಲ್ಲಿ ಸಂಸ್ಕೃತದ ಬೆರಕೆಯನ್ನು ಕುರಿತು ‘ ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ’ ಎಂದರೂ ಆಂಡಯ್ಯನಂತೆ ಅತಿರೇಕದ ಮಾರ್ಗವನ್ನು ಹಿಡಿಯಲಿಲ್ಲ. ಅವನು ಎತ್ತಿಹಿಡಿದ ಅಚ್ಚಗನ್ನಡ ಮಾರ್ಗ, ಕನ್ನಡ ಕಾವ್ಯವು ಸರಳವಾದ ಸಲೀಸಾದ ಭಾಷಾಶೈಲಿಯನ್ನು ರೂಪಿಸಿಕೊಳ್ಳಲು ಅನುವುಮಾಡಿಕೊಟ್ಟಿತು. ನಯಸೇನನಿಗೆ ಮುನ್ನ ಕನ್ನಡ ಕವಿಗಳು, ಪಂಡಿತ ಮನ್ನಣೆಯ ಬಗ್ಗೆ ವಿಶೇಷ ಕಾತರರಾಗಿದ್ದರು. ಆದರೆ ಹೊಯ್ಸಳ ಯುಗದಲ್ಲಿ, ಸಾಹಿತ್ಯವು ಜನಸಾಮಾನ್ಯರನ್ನು ಮುಟ್ಟಬೇಕೆನ್ನುವ ಭಾವನೆ ಪ್ರಚಲಿತವಾದದ್ದು ಒಂದು ವಿಶೇಷದ ಸಂಗತಿಯಾಗಿದೆ. ಹರಿಹರ–ರಾಘವಾಂಕರ ಕೃತಿಗಳು, ಅದರಲ್ಲೂ ಹರಿಹರನ ರಗಳೆಗಳು ಈ ಒಂದು ಮಾತಿಗೆ ನಿದರ್ಶನವಾಗಿವೆ. ಈ ಕಾಲದಲ್ಲಿ ಬಸವೇಶ್ವರ ಮತ್ತು ಇತರ ವೀರಶೈವ ಶರಣರಿಂದ ರಚಿತವಾದ ವಚನಗಳು, ಕನ್ನಡ ಸಾಹಿತ್ಯದ ಸಂಪತ್ತನ್ನು ಹೆಚ್ಚಿಸಿದವು. ಈ ವಚನಗಳು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಪ್ರಕಾರಗಳಾಗಿವೆ. ವ್ಯಾಕರಣಕಾರ ಕೇಶಿರಾಜನು ಕನ್ನಡದ ಭಾಷೆಯ ಬೆಳವಣಿಗೆಯ ಮೇಲೆ ಒಂದು ಬಗೆಯ ಕಟ್ಟುಪಾಡನ್ನೂ, ಹತೋಟಿಯನ್ನೂ ಹಾಕಲು ವೀರ ಪ್ರಯತ್ನ ಮಾಡಿದನು. ಆದರೆ ಭಾಷೆಯ ಸಹಜದಾದ ಬೆಳವಣಿಗೆಯ ಮೇಲೆ ವಿಧಿಸುವ ಯಾವ ನಿಯಂತ್ರಣವೂ ಸಫಲವಾಗುವುದಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಕೇಶಿರಾಜನ ಪ್ರಯತ್ನವು ಸಫಲವಾಗಲಿಲ್ಲ. ಕನ್ನಡಭಾಷೆ ಬೆಳವಣಿಗೆಯಾದಂತೆಲ್ಲಾ ಹಿಂದಿನ ಎಷ್ಟೋ ಪದಗಳು ಉದುರಿಹೋದವು. ನಿದರ್ಶನಕ್ಕೆ, ಸ್ವರಾಂತವಾದ ಪದಗಳು ಈ ಕಾಲದಲ್ಲಿ ಬಳಕೆಗೆ ಬಂದುದನ್ನು ನೋಡಬಹುದು. ಕೇಶಿರಾಜನು ವಿಧಿಸಿದ ಎಷ್ಟೋ ನಿಯಮಗಳು ಪರಿಣಾಮಕಾರಿಯಾಗದೆ ಹೋದವು. ಹೊಯ್ಸಳರ ಆಳಿಕೆಯ ಕೊನೆ ಕೊನೆಗೆ ಕನ್ನಡಭಾಷೆ ಹೊಸತೊಂದು ಮಜಲನ್ನು ಮುಟ್ಟಿತು.

ಕನ್ನಡ ಸಾಹಿತ್ಯಕ್ಕೆ ಹೊಯ್ಸಳಯುಗದ ಮತ್ತೊಂದು ಶ್ರೀಮಂತವಾದ ಬಳುವಳಿ, ಆ ಕಾಲದ ಶಾಸನ ಸಾಹಿತ್ಯ. ಜನ್ನನ ಪ್ರತಿಭೆಯನ್ನು, ಶಾಸನಗಳ ರಚನೆಗೂ ಬಳಸಿಕೊಳ್ಳಲಾಯಿತು. ಶ್ರೇಷ್ಠಕವಿಯಾದ ಜನ್ನನ ಶಾಸನಗಳು ಒಂದು ಸಂಕಲನ ಗ್ರಂಥವಾಗಿ ಪ್ರಕಟವಾಗಿವೆ. ಅಂದಿನ ಕಾಲದ ಈ ಶಾಸನಗಳಲ್ಲಿ, ಆ ಕಾಲದಲ್ಲಿದ್ದ ಕೆಲವು ವ್ಯಕ್ತಿಗಳ ಸೊಗಸಾದ ವರ್ಣನೆಯನ್ನು ಕಾಣಬಹುದು. ಅಂತೂ ವ್ಯಕ್ತಿಗಳ ಸಾಹಸ, ಕಾರುಣ್ಯ, ಗಾಂಭೀರ್ಯಾದಿ ಗುಣಗಳು ಸುಂದರವಾಗಿ ಚಿತ್ರಿತವಾಗಿವೆ. ವಿಷ್ಣುವರ್ಧನನಂಥ ಈ ಚಕ್ರವರ್ತಿಯ ವ್ಯಕ್ತಿ ಚಿತ್ರಣ ಮಾತ್ರವಲ್ಲದೆ, ಅವನ ರಾಣಿಯಾದ ಶಾಂತಲೆಯ ಮತ್ತು ಅಂದಿನ ಬದುಕಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ಇತರ ವ್ಯಕ್ತಿಗಳ ಸಂಗತಿಯೂ ಈ ಶಾಸನಗಳಲ್ಲಿ ಉಲ್ಲಿಖಿತವಾಗಿದೆ. ಕೆಲವು ಹೆಸರುಗಳು ಹೀಗಿವೆ: ಚಟ್ಟ, ಗಂಗರಾಜ, ಬೊಪ್ಪ, ಬಿಟ್ಟಿಯಣ್ಣ, ಮುದ್ದರಸ, ಚಾವಿಮಯ್ಯ, ತೈಲ, ಶ್ರೀಮತಿ, ಕಂತಿ, ಪೋಚಿತಬ್ಬೆ, ಜಕ್ಕಿಯಬ್ಬೆ, ಬಾಚವ್ವೆ, ಮೈದವ್ವೆ, ಮತ್ತು ಸುಗ್ಗಲಾದೇವಿ.

ಅಂದಿನ ಸಾಮಾಜಿಕ, ಧಾರ್ಮಿಕ ರಾಷ್ಟ್ರೀಯ ಜೀವನದ ಯಥಾವತ್ತಾದ ಚಿತ್ರಗಳೂ ಆಗಿನ ಜನರ ಆದರ್ಶಗಳೂ ಶಾಸನಸ್ಥವಾದ ವ್ಯಕ್ತಿಚಿತ್ರಗಳಲ್ಲಿ ಪ್ರತಿಬಿಂಬಿತವಾಗಿವೆ.

ಈ ಯುಗದಲ್ಲಿ ಕನ್ನಡಭಾಷೆ ಸ್ಪಷ್ಟತೆ, ಬಿಗಿ ಮತ್ತು ಸೌಂದರ್ಯಗಳಲ್ಲಿ ಉನ್ನತಮಟ್ಟವನ್ನು ಮುಟ್ಟಿತು.

ಮೂಲ ಲೇಖಕರು : ಶ್ರೀ ಎಸ್. ಎಸ್. ಮಾಳವಾಡ.
ಅನುವಾದಕರು : ಡಾ॥ ಜಿ. ಎಸ್. ಶಿವರುದ್ರಪ್ಪ.

# ಸಂಸ್ಕೃತ

## (ಹೊಯ್ಸಳರ ಕಾಲ)

ಹೊಯ್ಸಳರ ಕಾಲದಲ್ಲಿ ಸಾಮಾನ್ಯವಾಗಿ ಸಂಸ್ಕೃತ ಸಾಹಿತ್ಯದ ಎಲ್ಲಾ ಶಾಖೆಗಳಿಗೂ ತಕ್ಕಷ್ಟು ಗಮನ ಸಲ್ಲುತ್ತಿತ್ತಾದರೂ ತತ್ತ್ವಶಾಸ್ತ್ರಕ್ಕೆ ವಿಶೇಷ ಪ್ರಾಮುಖ್ಯ ದೊರೆಯಿತು. ತತ್ತ್ವ ಶಾಸ್ತ್ರ ಸಾಹಿತ್ಯ ಚರಿತ್ರೆಯಲ್ಲಿ ಆ ಕಾಲದಲ್ಲಿ ಎರಡು ಮಹಾ ಪ್ರಮುಖ ಘಟ್ಟಗಳು ಕಾಣಬರುತ್ತವೆ. ಅವು ವಿಶಿಷ್ಟಾದ್ವೈತ ಮತ್ತು ದ್ವೈತ ವೇದಾಂತ ಪ್ರವರ್ತಕರಾದ ಶ್ರೀ ರಾಮಾನುಜ ಮತ್ತು ಶ್ರೀ ಮಧ್ವ ಎಂಬ ಮಹಾ ಆಚಾರ್ಯರುಗಳಿಂದ ರೂಪಗೊಂಡವು. ಶ್ರೀ ರಾಮಾನುಜರು ಹೊಯ್ಸಳ ಮಹಾರಾಜ ವಿಷ್ಣುವರ್ಧನನನ್ನು ಶ್ರೀ ವೈಷ್ಣವ ಮತಕ್ಕೆ ಪರಿವರ್ತನೆಗೊಳಿಸಿದರು. ಶ್ರೀ ಮಧ್ವರು ಹೊಯ್ಸಳವಂಶದ ಮುಮ್ಮಡಿ ನರಸಿಂಹ ಮತ್ತು ಮುಮ್ಮಡಿ ಬಲ್ಲಾಳ ಎಂಬ ಪ್ರಖ್ಯಾತ ರಾಜರ ಸಮಕಾಲೀನರಾಗಿದ್ದರು. ಹೊಯ್ಸಳ ರಾಜರ ಆಸ್ಥಾನದಲ್ಲಿ ವಿದ್ಯಾಚಕ್ರವರ್ತಿ ವಂಶದಲ್ಲುದಿಸಿದ ಕವಿಗಳು ಆಸ್ಥಾನ ಕವಿಗಳಾಗಿದ್ದರು. ಈ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಸ್ಥಿತಿ ಹೇಗಿತ್ತೆಂಬುದರ ಚಿತ್ರವನ್ನು ಈ ಮುಂದಿನ ವಿವರಣೆ ಸಂಗ್ರಹವಾಗಿ ನಿರೂಪಿಸುತ್ತದೆ.

ವೇದ ಸಾಹಿತ್ಯದಲ್ಲಿ ಶ್ರೀ ಮಧ್ವರ ಋಗ್ಭಾಷ್ಯ ಮತ್ತು ವಿದ್ಯಾತೀರ್ಥರ ರುದ್ರಪ್ರಶ್ನಭಾಷ್ಯ –ಈ ಎರಡೂ ವಿಶೇಷ ಗಮನಾರ್ಹವಾಗಿವೆ. ಸಂಹಿತೆ, ಬ್ರಾಹ್ಮಣ, ಸೂತ್ರ ಮೊದಲಾದವುಗಳ ಹಲಕೆಲವು ಭಾಗಗಳ ಮೇಲೆ ಈ ಕಾಲದಲ್ಲಿ ಮತ್ತು ಇದಕ್ಕೂ ಮುಂಚೆ ರಚಿತವಾಗಿದ್ದ ಅನೇಕ ವ್ಯಾಖ್ಯಾನಗಳೂ ವಿವರಣ ಗ್ರಂಥಗಳೂ ಸಾಯಣರ ಸುಪ್ರಸಿದ್ಧ ಭಾಷ್ಯದಲ್ಲಿ ಪ್ರಾಯಶಃ ಅಡಕವಾಗಿ ಹೋಗಿರಬೇಕು. ಸಾಯಣರು ತಮ್ಮ ಹಿಂದಿನ ಅನೇಕ ಗ್ರಂಥಕರ್ತರನ್ನು ಸ್ಮರಿಸುತ್ತಾರೆ; ಆದರೆ ಅವರ ಗ್ರಂಥಗಳು ಈಗ ದೊರೆಯುತ್ತಿಲ್ಲ.

ಪುರಾಣಗಳ ಕ್ಷೇತ್ರದಲ್ಲಿ, ಭಾಗವತ ಪುರಾಣವು ಈ ಕಾಲದಲ್ಲೇ, ಬಹುಶಃ ಕೃಷ್ಣಾ ಗೋದಾವರೀ ಪ್ರದೇಶದಲ್ಲಿ, ತನ್ನ ಈಗಿನ ರೂಪವನ್ನು ಪಡೆಯಿತೆಂದು ನಂಬಲಾಗಿದೆ. ಶ್ರೀ ಶಂಕರರಾಗಲಿ ಶ್ರೀರಾಮಾನುಜರಾಗಲಿ ಭಾಗವತದಿಂದ ಉದ್ಧರಣಗಳನ್ನು ಎತ್ತಿ ಹೇಳಿಲ್ಲ. ಆದರೆ, ಶ್ರೀ ಮಧ್ವರು 'ಭಾಗವತ ತಾತ್ಪರ್ಯ ನಿರ್ಣಯ' ಎಂಬ ಒಂದು ಗ್ರಂಥವನ್ನು, ಭಾಗವತದ ಸಾರ ಸಂಗ್ರಹವನ್ನು–ರಚಿಸಿದ್ದಾರೆ. ಭಾಗವತವು ಈಗ ಎರಡು ಆಕರಗಳಲ್ಲಿ ದೊರೆಯುತ್ತದೆ. ಒಂದು ಚಿತ್ಸುಖ, ಪುಣ್ಯಾರಣ್ಯ, ಶ್ರೀಧರ–ಇವರು ತಮ್ಮ ವ್ಯಾಖ್ಯಾನಗಳಲ್ಲಿ ಅನುಸರಿಸಿರುವ ಪಾಠ; ಇನ್ನೊಂದು ವಿಜಯಧ್ವಜ, ಯಾದವಾರ್ಯ, ಸತ್ಯಧರ್ಮರು ಒಪ್ಪಿ ಅನುಸರಿಸಿರುವ ಪಾಠ. ಶ್ರೀ ಮಧ್ವರ 'ಮಹಾಭಾರತ ತಾತ್ಪರ್ಯ ನಿರ್ಣಯ'ವು ಮಹಾಭಾರತದ ಸಾರಸಂಗ್ರಹ. ಮುಖ್ಯವಾಗಿ ಮಹಾಭಾರತದಲ್ಲಿ ಉಕ್ತವಾದ ತತ್ತ್ವ ವಿಚಾರವನ್ನು ಎತ್ತಿ ಹೇಳಿ ಸ್ಪಷ್ಟಪಡಿಸುವ ಗ್ರಂಥ. ವಿಷ್ಣುಪುರಾಣಕ್ಕೆ ವಿಶಿಷ್ಟಾದ್ವೈತ ಮತಾನುಸಾರವಾಗಿ ವಿವರಣೆ ಕೊಡುತ್ತ ವಿಷ್ಣುಚಿತ್ತರು ಒಂದು ವ್ಯಾಖ್ಯಾನ ಬರೆದಿದ್ದಾರೆ. ಮಧ್ವಾಚಾರ್ಯರು ತಮ್ಮ ತಾತ್ಪರ್ಯನಿರ್ಣಯದಲ್ಲಿ ಅಡಕವಾಗಿ ಹೇಳಿರುವ ಪ್ರಕಾರ ನಾರಾಯಣಪಂಡಿತನು ರಾಮಾಯಣವನ್ನು ಅಡಕ ಮಾಡಿ ಸಂಗ್ರಹ ರಾಮಾಯಣವನ್ನು ರಚಿಸಿದ್ದಾನೆ.

ಸ್ಮೃತಿ, ನಿಬಂಧ, ಪೂಜೆ, ಆರಾಧನೆ, ಪ್ರಾರ್ಥನೆ ಮೊದಲಾದ ಆಚಾರ ನಿತ್ಯಕರ್ಮಗಳ ವಿಷಯದಲ್ಲಿ ವೇದಾಂತ ಶಾಖೆಗಳ ಪ್ರವರ್ತಕರಾದ ಉಭಯ ಆಚಾರ್ಯರುಗಳ ಗ್ರಂಥಗಳನ್ನು ಬಿಟ್ಟರೆ, ಈ ಕಾಲದಲ್ಲಿ ಹೆಚ್ಚು ಗ್ರಂಥಗಳು ಲಭ್ಯವಾಗಿಲ್ಲ. ಶ್ರೀರಾಮಾನುಜರ ಭಗವದಾರಾಧನಕ್ರಮ ಮತ್ತು ಗದ್ಯತ್ರಯ, ಪರಾಶರಭಟ್ಟರ ಶ್ರೀ ಗುಣರತ್ನಕೋಶ, ಶ್ರೀಮಧ್ವರ ಸದಾಚಾರ ಸ್ಮೃತಿ, ತಂತ್ರಸಾರ, ದ್ವಾದಶಸ್ತೋತ್ರ, ಕೃಷ್ಣಾಮೃತ ಮಹಾರ್ಣವ–ಮೊದಲಾದವು ಈ ವಿಷಯಗಳ ಮೇಲಿನ ಗ್ರಂಥಗಳು. ನಾರಾಯಣ ಪಂಡಿತ ವಿರಚಿತವಾದ ದಿನತ್ರಯ ಮೀಮಾಂಸೆಯು ಆಚಾರ ವಿಷಯವಾದ ಮತ್ತೊಂದು ಚಿಕ್ಕ ಗ್ರಂಥ.

ದರ್ಶನ ವಿಭಾಗವನ್ನು ಗಮನಿಸಿದರೆ, ಪೂರ್ವ ಮೀಮಾಂಸೆ, ನ್ಯಾಯ, ವೈಶೇಷಿಕ ಮುಂತಾದ ವಿಷಯಗಳ ಮೇಲೆ ಈ ಪ್ರದೇಶದಲ್ಲಿ ಈ ಕಾಲದಲ್ಲಿ ಬಹಳ ಗ್ರಂಥಗಳೇನೂ ಹುಟ್ಟಲಿಲ್ಲ. ರಾಷ್ಟ್ರದ ಬೇರೆ ಭಾಗಗಳಲ್ಲಿ ವಿಶೇಷವಾಗಿ ಪ್ರಾಚೀನ ನ್ಯಾಯ ಮತ್ತು ಮೀಮಾಂಸೆಯ ಎರಡು ಶಾಖೆಗಳಲ್ಲಿ ಅನೇಕ ಗ್ರಂಥಗಳು ಹುಟ್ಟಿದವು. ಆದರೇನು ? ವೇದಾಂತದ ವಿಷಯದಲ್ಲಿ ಈ ಕಾಲವು ನೀಡಿದ ಕೊಡುಗೆ ಅದ್ಭುತವಾದದ್ದು ; ಎಂದೂ ಮರೆಯಲಾಗದಂಥದು. ಇಬ್ಬರು ಮಹಾ ಆಚಾರ್ಯರುಗಳೂ ಅವರ ಶಿಷ್ಯರೂ ಅವರ ಗ್ರಂಥರಚನೆಯ ಪರಿಣಾಮವಾಗಿ ಅದ್ವೈತ ವೇದಾಂತದ ಅನುಯಾಯಿಗಳು ಕೂಡ, ಈ ಕಾಲದಲ್ಲೂ ಆ ಮುಂದಿನ ಶತಮಾನಗಳಲ್ಲೂ ವಿಪುಲವಾಗಿ ಗ್ರಂಥನಿರ್ಮಾಣ ಮಾಡಿದ್ದಾರೆ.

ಶ್ರೀರಾಮಾನುಜಾಚಾರ್ಯರು ಹುಟ್ಟಿದ್ದೂ ವಿದ್ಯಾಭ್ಯಾಸ ಮಾಡಿದ್ದೂ ಸಂನ್ಯಾಸದೀಕ್ಷೆ ವಹಿಸಿದ್ದೂ ಚೋಳದೇಶದಲ್ಲೇ ಆದರೂ ವಿಷ್ಣುವರ್ಧನನ ಆಳಿಕೆಯ ಕಾಲದಲ್ಲಿ ಹೊಯ್ಸಳ ರಾಜ್ಯಕ್ಕೆ ಬಂದರು. ಅವರು ವಿಶಿಷ್ಟಾದ್ವೈತ ವೇದಾಂತ ಶಾಖೆಯನ್ನು ಸ್ಥಾಪಿಸಿ ಬ್ರಹ್ಮಸೂತ್ರಗಳಿಗೂ ಭಗವದ್ಗೀತೆಗೂ ಭಾಷ್ಯ ಬರೆದರು. ತಮ್ಮ ವೇದಾಂತ ಸಂಗ್ರಹ ಎಂಬ ಗ್ರಂಥದಲ್ಲಿ ಕೆಲಕೆಲವು ಉಪನಿಷದ್ಭಾಗಗಳನ್ನಾಯ್ದು ಅವಕ್ಕೆ ವ್ಯಾಖ್ಯಾನ ಬರೆದರು. ವೇದಾಂತಸಾರ, ವೇದಾಂತ ದೀಪಿಕಾ ಎಂಬ ಮತ್ತೂ ಎರಡು ಗ್ರಂಥಗಳನ್ನು ರಚಿಸಿದರು. ವೇದಾಂತ ತತ್ತ್ವಗಳ ಬಗೆಗೆ ಅವರು ಮಾಡಿದ ಅರ್ಥವಿವರಣೆ ಬಹು ಪರಿಣಾಮಕಾರಿಯಾಯಿತು. ಹೊಯ್ಸಳನಾಡಿನಲ್ಲೂ ದಕ್ಷಿಣ ಭಾರತದ ಇತರ ಪ್ರದೇಶಗಳಲ್ಲೂ ಅವರ ವೇದಾಂತ ಶಾಖೆ ಬಲವಾಗಿ ಬೇರೂರಿತು. ಶ್ರೀರಾಮಾನುಜರ ಅಪ್ಪಣೆಯ ಪ್ರಕಾರ, ರಾಮಮಿಶ್ರದೇಶಿಕನು ಶ್ರೀಭಾಷ್ಯವಿವೃತಿಯನ್ನು ರಚಿಸಿದನು. ಶ್ರೀರಾಮಾನುಜರ ಸೋದರ ಪುತ್ರನಾದ ವತ್ಸವರದನು ತತ್ತ್ವಸಾರವನ್ನು ರಚಿಸಿದನು. ವರದ ವಿಷ್ಣುಮಿಶ್ರನ ಮಾನಯತಾತ್ಮ್ಯ ನಿರ್ಣಯವು ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಜ್ಞಾನ ಪ್ರಾಮಾಣ್ಯ ಹೇಗೆಂಬುದನ್ನು ವಿವರಿಸುತ್ತದೆ. ವರದನಾರಾಯಣ ಭಟ್ಟಾರಕನ ಪ್ರಜ್ಞಾಪರಿತ್ರಾಣ ಮತ್ತು ಪರಾಶರನ ತತ್ತ್ವರತ್ನಾಕರ–ಇವೆರಡು ಈ ಕಾಲದ ಮತ್ತೆರಡು ಗ್ರಂಥಗಳು. ಇವನ್ನು ವೇದಾಂತ ದೇಶಿಕರು ತಮ್ಮ ನ್ಯಾಯಪರಿಶುದ್ಧಿಯಲ್ಲಿ ಪ್ರಸ್ತಾವಿಸಿದ್ದಾರೆ. ದಿವ್ಯಸೂರಿ ಪ್ರಭಾವದೀಪಿಕಾ, ಸರ್ವದರ್ಶನ ಶಿರೋಮಣಿ, ಮೋಕ್ಷಸಿದ್ಧಿ, ನ್ಯಾಯಕುಲಿಶ-ಇವು ವೇದಾಂತ ದೇಶಿಕರ ಸೋದರಮಾವನು ರಚಿಸಿದ ಗ್ರಂಥಗಳು. ವಿಷ್ಣುಚಿತ್ತನ ಪ್ರಮೇಯ ಸಂಗ್ರಹ-ಸಂಗತಿಮಾಲಾ ಮತ್ತೊಂದು ಉಪಯುಕ್ತಗ್ರಂಥ. ಶ್ರೀಭಾಷ್ಯದ ಮೇಲಿನ ಶ್ರುತಪ್ರಕಾಶಿಕಾ ಮತ್ತು ವೇದಾಂತ ಸಂಗ್ರಹದ ಮೇಲಿನ ತಾತ್ಪರ್ಯದೀಪಿಕಾ–ಇವುಗಳ ಕರ್ತನಾದ ಸುದರ್ಶನ ಸೂರಿಯು ವೇದಾಂತ ದೇಶಿಕರ ಹಿರಿಯ ಸಮಕಾಲೀನರಲ್ಲೊಬ್ಬ. ಹೀಗೆ ವಿಶಿಷ್ಟಾದ್ವೈತ ಕ್ಷೇತ್ರದಲ್ಲಿ ಶ್ರೀರಾಮಾನುಜರನ್ನನುಸರಿಸಿ, ಅವರ ಅನತಿಕಾಲಾನಂತರದಲ್ಲಿಯೇ ಬಹು ಮಟ್ಟಿನ ಸಾಹಿತ್ಯ ಚಟುವಟಿಕೆ ಸಂತತವಾಗಿ ನಡೆಯುತ್ತಲೇ ಬಂತೆಂದು ಸ್ಪಷ್ಟವಾಗುತ್ತದೆ. ಈ ಚಟುವಟಿಕೆ ವಿಜಯನಗರದ ಕಾಲದಲ್ಲಿ ಶ್ರೀವೇದಾಂತ ದೇಶಿಕರ ಗ್ರಂಥಗಳಿಂದ ತುತ್ತತುದಿಮುಟ್ಟಿತು.

ಶ್ರೀಮಧ್ವರು ಹೊಯ್ಸಳ ವಂಶದ ಮುಮ್ಮಡಿ ನರಸಿಂಹ ಮತ್ತು ಮುಮ್ಮಡಿ ಬಲ್ಲಾಳರ ಸಮಕಾಲೀನರು. ಅವರು ತಮ್ಮ ಮೂವತ್ತೆರಡು ಗ್ರಂಥಗಳಲ್ಲಿ ಹಿಂದೂಗಳ ಸಮಗ್ರ ಧರ್ಮಸಾಹಿತ್ಯ

ವನ್ನೆಲ್ಲಾ ವಿವೇಚಿಸಿದ್ದಾರೆ ; ತಮ್ಮ ದ್ವೈತ ಸಿದ್ಧಾಂತವನ್ನು ಸಮರ್ಥಿಸಿದ್ದಾರೆ. ಅವರ ಋಗ್ಭಾಷ್ಯವನ್ನು ಈ ಮೊದಲೇ ಪ್ರಸ್ತಾವಿಸಿದೆ. ಅವರು ಬ್ರಹ್ಮ ಸೂತ್ರಗಳ ಮೇಲೆ ನಾಲ್ಕು ಗ್ರಂಥಗಳನ್ನು ಬರೆದಿದ್ದಾರೆ : ಭಾಷ್ಯ, ಅಣುಭಾಷ್ಯ, ಅಣುವ್ಯಾಖ್ಯಾನ ಮತ್ತು ನ್ಯಾಯ ವಿವರಣ. ಗೀತೆಯ ಮೇಲೆ ಎರಡು ಗ್ರಂಥಗಳು : ಭಾಷ್ಯ ಮತ್ತು ತಾತ್ಪರ್ಯ. ಉಪನಿಷತ್ತುಗಳ ಮೇಲೆ ವ್ಯಾಖ್ಯಾನ ಬರೆದಿದ್ದಾರೆ. ತಮ್ಮ ಹತ್ತು ಪ್ರಕರಣಗಳಲ್ಲಿ ವಿಷ್ಣು ಸರ್ವೋತ್ತಮತ್ವ, ಭೇದಸಿದ್ಧಾಂತ, ವೇದಾಪೌರುಷೇಯತಾ ಮೊದಲಾದ ವಿಷಯಗಳನ್ನು ಚರ್ಚಿಸಿದ್ದಾರೆ. ಯಜ್ಞಗಳಿಗೂ ಇತರ ಕರ್ಮಾಚರಣೆಯ ತಂತ್ರಗಳಿಗೂ ಕರ್ಮ ನಿರ್ಣಯವೆಂಬ ಗ್ರಂಥದಲ್ಲಿ ಅವರು ಹೊಸ ಅರ್ಥವನ್ನೂ ಹೊಸ ಸಂಕೇತವನ್ನೂ ಕೊಟ್ಟಿದ್ದಾರೆ. ಖಂಡನತ್ರಯವೆಂಬ ಗ್ರಂಥದಲ್ಲಿ ಅದ್ವೈತದ ಮಿಥ್ಯಾತ್ವ ಸಿದ್ಧಾಂತವನ್ನು ಖಂಡಿಸಿದ್ದಾರೆ. ಅವರು ರಚಿಸಿರುವ ಭಾರತ ಮತ್ತು ಭಾಗವತಗಳ ಸಾರಸಂಗ್ರಹ ಮತ್ತು ಇತರ ಗೌಣ ಗ್ರಂಥಗಳ ವಿಷಯವನ್ನು ಈ ಹಿಂದೆಯೇ ಪ್ರಸ್ತಾವಿಸಿದೆ. ಅವರ ಸೋದರಿ ಕಲ್ಯಾಣಿದೇವಿಯು ಜೀವಗಳ ತಾರತಮ್ಯವನ್ನು ವಿವರಿಸುವ ಒಂದು ಚಿಕ್ಕ ಗ್ರಂಥವನ್ನೂ ಎರಡು ಸ್ತೋತ್ರಗಳನ್ನೂ ರಚಿಸಿದ್ದಾಳೆ. ತ್ರಿವಿಕ್ರಮ ಪಂಡಿತನ ತತ್ತ್ವಪ್ರದೀಪವು ಶ್ರೀಮಧ್ವರ ಬ್ರಹ್ಮಸೂತ್ರ ಭಾಷ್ಯದ ಮೇಲಿನ ಆದ್ಯತಮ ವ್ಯಾಖ್ಯಾನ. ಬ್ರಹ್ಮ ಸೂತ್ರಗಳಲ್ಲಿನ ಅಧಿಕರಣಗಳ ಅನುಕ್ರಮವಿನ್ಯಾಸಕ್ಕೆ ಆಧಾರವೇನೆಂದು ವಿವರಿಸುವ ಸಂಬಂಧದೀಪಿಕಾ ಎಂಬ ಗ್ರಂಥವನ್ನು ತ್ರಿವಿಕ್ರಮ ಪಂಡಿತನ ತಮ್ಮ ಶಂಕರಾಚಾರ್ಯನು ರಚಿಸಿದ್ದಾನೆ. ತ್ರಿವಿಕ್ರಮ ಪಂಡಿತನ ಮಗ ನಾರಾಯಣ ಪಂಡಿತನು ರಚಿಸಿರುವ ನಯಚಂದ್ರಿಕಾ ಅಣುವ್ಯಾಖ್ಯಾನದ ಮೇಲಿನ ವ್ಯಾಖ್ಯಾನ. ಅವನ ಪ್ರಮಾಣ ಲಕ್ಷಣ ಟಿಪ್ಪಣಿ ಮತ್ತು ತತ್ತ್ವಮಂಜರಿಯೆಂಬೆರಡೂ ಅವುಗಳ ವಿಚಾರದಲ್ಲಿ ಇತರ ಕಡೆಗಳಲ್ಲಿ ದೊರೆಯುವ ಪ್ರಸ್ತಾಪಗಳಿಂದ ಮಾತ್ರ ಗೊತ್ತಾಗಿವೆ. ತ್ರಿವಿಕ್ರಮಾರ್ಯದಾಸನ ಆನಂದಮಾಲಾ ಎಂಬುದು ಅಣುಭಾಷ್ಯದ ಮೇಲಿನ ಒಂದು ವ್ಯಾಖ್ಯಾನ. ಗೋದಾವರೀ ತೀರದ ಪುಣತಾಂಬೆಯ ನಿವಾಸಿ ಪದ್ಮನಾಭತೀರ್ಥನು ಮಧ್ವಾಚಾರ್ಯರ ಸಂಗಡ ವೇದಾಂತ ವಿಷಯವಾಗಿ ವಾದಮಾಡಿ ಸೋತು, ಮಧ್ವಮತವನ್ನು ಅಂಗೀಕರಿಸಿದ ಬಳಿಕ, ಆ ಮತ ವಿಷಯವಾಗಿ ಸುಮಾರು ಹದಿನಾಲ್ಕು ಗ್ರಂಥಗಳನ್ನು ರಚಿಸಿದನು. ಆತನ ಸತ್ತರ್ಕರತ್ನಾವಳಿ ಮತ್ತು ಸನ್ನ್ಯಾಯ ರತ್ನಾವಳಿಗಳು ಕ್ರಮವಾಗಿ ಸೂತ್ರಭಾಷ್ಯ ಮತ್ತು ಅಣುವ್ಯಾಖ್ಯಾನಗಳ ಮೇಲಿನ ವ್ಯಾಖ್ಯಾನಗಳು. ದಶಪ್ರಕರಣಗಳ ಮೇಲಿನ ಆತನ ವ್ಯಾಖ್ಯಾನ ಗಳಲ್ಲಿ ಕೆಲವು ಮಾತ್ರ ಹಸ್ತಪ್ರತಿಯಲ್ಲಿ ದೊರೆಯುತ್ತವೆ ; ಉಳಿದವು ಇತರ ಕಡೆ ಬರುವ ಪ್ರಸ್ತಾಪಗಳಿಂದ ತಿಳಿಯಬರುತ್ತವೆ. ಗೀತಾಭಾಷ್ಯ ಗೀತಾ ತಾತ್ಪರ್ಯಗಳಿಗೂ ಆತ ವ್ಯಾಖ್ಯಾನ ಬರೆದಿದ್ದಾನೆ. ಪದ್ಮನಾಭನ ಹಿಂದಿನ ಹೆಸರು ಆನಂದ ಭಟ್ಟಾರಕನೆಂದು. ಆತನ ವಂಶಸ್ಥರು ಮುಂದೆ ಮೂರು ಶತಮಾನಗಳ ಕಾಲ ನ್ಯಾಯಾಮೃತ ಕಂಟಕೋದ್ಧಾರದ ಕರ್ತೃವಾದ ಆನಂದಭಟ್ಟಾರಕನ ವರೆಗೂ ಪುಣತಾಂಬೆಯಲ್ಲಿಯೇ ನೆಲಸಿದ್ದರು. ಆ ಮೇಲೆ ಪಂಡರಪುರದ ಮೂಲಕ ಆಂಧ್ರಕ್ಕೂ ಕರ್ನಾಟಕಕ್ಕೂ ವಲಸೆಹೋದರು. ಬಲದೇವನು ತಾನು ರಚಿಸಿದ ಜೀವಗೋಸ್ವಾಮಿಯ ತತ್ತ್ವಸಂದರ್ಭದ ವ್ಯಾಖ್ಯಾನದಲ್ಲಿ ಪದ್ಮನಾಭ ತೀರ್ಥನ ಪ್ರಸ್ತಾಪಮಾಡುತ್ತಾನೆ. ನರಹರಿತೀರ್ಥನು ಶ್ರೀ ಮಧ್ವರ ಸಾಕ್ಷಾಚ್ಛಿಷ್ಯ. ಆತನು ಕಳಿಂಗದಲ್ಲಿ ಪ್ರಾಂತಾಧಿಪತಿಯಾಗಿದ್ದನೆಂಬ ಐತಿಹ್ಯಕ್ಕೆ ಶ್ರೀಕೂರ್ಮ ಮತ್ತು ಸಿಂಹಾಚಲಂ ಶಾಸನಗಳಿಂದ ಪುಷ್ಟಿ ದೊರೆತಿದೆ. ಗೀತಾಭಾಷ್ಯದ ಮೇಲೂ ಯಮಕ ಭಾರತದ ಮೇಲೂ ಆತ ರಚಿಸಿರುವ ವ್ಯಾಖ್ಯಾನಗಳ ಕೆಲವು ಭಾಗಗಳು ಸಿಕ್ಕಿವೆ. ವಿಷ್ಣುತತ್ತ್ವನಿರ್ಣಯ ಮತ್ತು ಕರ್ಮ ನಿರ್ಣಯಗಳ ಮೇಲಿನ ಆತನ ವ್ಯಾಖ್ಯಾನಗಳಿಂದ ಜಯತೀರ್ಥರು ಉದಾಹರಣಗಳನ್ನು ಎತ್ತಿ ಕೊಟ್ಟಿದ್ದಾರೆ. ಇತರ ಪ್ರಕರಣಗಳಿಗೆ ಆತ ಬರೆದ ವ್ಯಾಖ್ಯಾನಗಳು ನಷ್ಟವಾಗಿ ಹೋಗಿವೆ. ಭಾಷ್ಯಕಾರರ ಮತ್ತು ಈ ಪ್ರಾಚೀನ ವ್ಯಾಖ್ಯಾನ ಕಾರರ ಕಾಲವು ಹೊಯ್ಸಳರ ಕಾಲಕ್ಕೆ ಸೇರಿಹೋಗುತ್ತದೆ. ಟೀಕಾಚಾರ್ಯರು ವಿಜಯನಗರ ಕಾಲಕ್ಕೆ ಸೇರುತ್ತಾರೆ.

ಅನೇಕ ಮಂದಿ ಪ್ರಸಿದ್ಧ ಅದ್ವೈತ ಗ್ರಂಥಕಾರರು ಈ ಕಾಲದಲ್ಲಿ ಬಾಳಿದರು. ನ್ಯಾಯಮಕರಂದ, ನ್ಯಾಯ ದೀಪಾವಳಿ, ಪ್ರಮಾಣಮಾಲಾ-ಈ ಮೂರೂ ಆನಂದಬೋಧ ಭಟ್ಟಾಚಾರ್ಯನ ಮಹಾಕೃತಿಗಳು. ಚಿತ್ಸುಖನು ಹೆಸರಿಸಿರುವ ಬ್ರಹ್ಮಪ್ರಕಾಶಿಕಾ ಮತ್ತು ಜ್ಞಾನೋತ್ತಮಮಿಶ್ರ ವಿರಚಿತವಾದ ಸುರೇಶ್ವರನ ವಾರ್ತಿಕದ ಮೇಲಿನ ವ್ಯಾಖ್ಯಾನ-ಈ ಎರಡೂ ಆನಂದಬೋಧನಿಗಿಂತಲೂ ಹಿಂದಿನವು. ಗಂಗಾಪುರ ಭಟ್ಟಾರಕನೂ ಹಿಂದಿನ ಗ್ರಂಥಕಾರನೇ. ಅವನ ಪದಾರ್ಥತತ್ತ್ವನಿರ್ಣಯಕ್ಕೆ ಆನಂದಜ್ಞಾನನ ವ್ಯಾಖ್ಯಾನವಿದೆ. ಆನಂದಬೋಧನ ಎಲ್ಲಾ ಮೂರು ಗ್ರಂಥಗಳಿಗೂ ಆನಂದಜ್ಞಾನನ ಗುರು ಅನುಭೂತಿ ಸ್ವರೂಪನು ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಚಿತ್ಸುಖ ಮತ್ತು ಸುಖಪ್ರಕಾಶರೂ ಕೂಡ, ಆನಂದ ಬೋಧನ - ನ್ಯಾಯಮಕರಂದಕ್ಕೆ ವ್ಯಾಖ್ಯಾನ ಬರೆದಿದ್ದಾರೆ. ಪ್ರಕಟಾರ್ಥವು ಬ್ರಹ್ಮಸೂತ್ರ ಭಾಷ್ಯದ ಮೇಲಿನ ಒಂದು ವ್ಯಾಖ್ಯಾನ. ಸಿದ್ಧಾಂತಲೇಶಸಂಗ್ರಹದಲ್ಲಿ ಪ್ರಕಟಾರ್ಥದ ಒಂದು ವ್ಯಾಖ್ಯಾನದಿಂದ- ವಿವರಣ ಎಂಬುದರಿಂದ-ಉದ್ಧರಣಗಳನ್ನು ಎತ್ತಿ ಹೇಳಿದೆ. ತತ್ತ್ವಾಲೋಕವು ಆನಂದಜ್ಞಾನನ ಒಂದು ಕೃತಿ. ಬಹುಶ: ಅವನು ಪ್ರಕಟಾರ್ಥಕ್ಕೆ ತಾನೂ ಒಂದು ವ್ಯಾಖ್ಯಾನ ಬರೆದಿರಬೇಕು ; ತನ್ನ ಇತರ ಗ್ರಂಥಗಳಲ್ಲಿ ಪ್ರಕಟಾರ್ಥದ ಅಭಿಪ್ರಾಯಗಳನ್ನು ಪೂರ್ತಿಯಾಗಿ ಒಪ್ಪುವುದಿಲ್ಲವಾದರೂ ಅದಕ್ಕೆ ವ್ಯಾಖ್ಯಾನ ಬರೆದಿರಬಹುದೆಂದು ನಂಬಬಹುದು. ಸಿದ್ಧಾಂತಲೇಶದಲ್ಲಿ ಪ್ರಸ್ತಾವಿಸಿರುವ ವೇದಾಂತ ಕೌಮುದಿ ಕೂಡ ಈ ಕಾಲದ ಗ್ರಂಥವೆಂದು ತೋರುತ್ತದೆ. ಪ್ರಕಾಶಾತ್ಮನ ಪಂಚಪಾದಿಕ ವಿವರಣ ಮತ್ತು ಅಖಂಡಾನಂದನ ತತ್ತ್ವದೀಪನ-ಇವು ವಿವರಣ ಶಾಖೆಯ ಗುರುಗಳ ಸಾಲಿಗೆ ಸೇರಿದ ಗ್ರಂಥಗಳು. ವಾದೀಂದ್ರನ ಮಹಾವಿದ್ಯಾವಿಡಂಬನವು ಅನಂತರ ಕಾಲದ ಲೇಖಕರಲ್ಲಿ ವಿಶೇಷ ಕುತೂಹಲವನ್ನು ಕೆರಳಿಸಿತು. ವಾದೀಂದ್ರನು ದೇವಗಿರಿಯ ರಾಜ ಸಿಂಘಣನಿಗೆ ಮತ ವಿಷಯಗಳಲ್ಲಿ ಸಲಹೆಕೊಡುವ ಧರ್ಮಸಚಿವನಾಗಿದ್ದನು. ಭುವನಸುಂದರ ಸೂರಿಯು ಮಹಾವಿದ್ಯಾವಿಡಂಬನಕ್ಕೆ ವ್ಯಾಖ್ಯಾನದೀಪಿಕಾ ಎಂಬ ಒಂದು ವ್ಯಾಖ್ಯಾನವನ್ನು ಬರೆದನು. ಶ್ರೀ ಹರ್ಷ ಮತ್ತು ಚಿತ್ಸುಖರ ಮಹಾ ಕೃತಿಗಳು ಈ ಲೇಖಕರ ಮೇಲೂ ಮುಂದಿನ ಲೇಖಕರ ಮೇಲೂ ವಿಶೇಷ ಪರಿಣಾಮ ಬೀರಿದವು. ಅವರ ಗ್ರಂಥಗಳು ವಿಶಿಷ್ಟಾದ್ವೈತ ಮತ್ತು ದ್ವೈತಮತದ ಗ್ರಂಥಕಾರರು ವಿರೋಧಿಸಿ ಖಂಡನ ಗ್ರಂಥಗಳನ್ನು ರಚಿಸುವಂತೆಯೂ ಪ್ರೇರಿಸಿದವು. ಅಮಲಾನಂದ ಅಥವಾ ವ್ಯಾಸಾಶ್ರಮನು ಅನುಭವಾನಂದನ ಮತ್ತು ಸುಖಪ್ರಕಾಶಮುನಿಯ ಶಿಷ್ಯ ; ಸುಖ ಪ್ರಕಾಶಮುನಿಯು ಚಿತ್ಸುಖನ ಶಿಷ್ಯ. ಗೀತಾ ತಾತ್ಪರ್ಯ ಬೋಧಿನೀ ಮತ್ತು ಉಪನಿಷದ್ರತ್ನಗಳು ಶಂಕರಾನಂದನ ಕೃತಿಗಳು. ಮಹಾಮಹಿಮರಾದ ವಿದ್ಯಾರಣ್ಯರು ಶಂಕರಾನಂದನ ಶಿಷ್ಯರು. ಹೀಗೆ ಅದ್ವೈತಸಾಹಿತ್ಯವು ವಿದ್ಯಾರಣ್ಯರ ಕಾಲದ ವರೆಗೂ (ವಿಜಯನಗರ ಕಾಲವನ್ನು ಆರಂಭಗೊಳಿಸುವವರು ಅವರೇ.) ಅನೇಕ ಮಂದಿ ಪ್ರಸಿದ್ಧ ಗ್ರಂಥಕಾರರಿಂದ ಸಂಪದ್ಭರಿತವಾಗಿ ವೃದ್ಧಿಹೊಂದುತ್ತಲೇ ಬಂತು.

ಜೈನ ವಿದ್ವಾಂಸರಲ್ಲಿ, ಸಾರಚತುಷ್ಟಯಕ್ಕೆ ವ್ಯಾಖ್ಯಾನ ಬರೆದ ಬಾಲಚಂದ್ರನೂ ಗುರುಪಂಚ ಸ್ಮೃತಿಯನ್ನು ರಚಿಸಿದ ರಾಮಚಂದ್ರಮಾಲಾಧಾರಿಯೂ ಈ ಕಾಲಕ್ಕೆ ಸೇರುತ್ತಾರೆ. ಶ್ರೇಯಾನಿಶ ಭಟ್ಟನಾಥ, ಬಾಹುಬಲಿ ಮಾಲಾಧಾರಿ, ಶ್ರುತಮುನಿ, ಸೇನಗಣ, ಶುಭಚಂದ್ರ—ಮೊದಲಾದ ಕೆಲವು ಜೈನವಿದ್ವಾಂಸರ ಹೆಸರುಗಳು ಈ ಕಾಲದ ಶಾಸನಗಳಲ್ಲಿ ಕಂಡುಬರುತ್ತವೆ.

ವೀರಶೈವ ಮತ್ತು ಪಾಶುಪತಮತದ ವಿದ್ವಾಂಸರು ಹೊಯ್ಸಳರ ಆಸ್ಥಾನಕ್ಕೆ ನೇರವಾಗಿ ಸಂಬಂಧ ಪಟ್ಟಿರಲಿಲ್ಲ. ಆದರೆ ಹೊಯ್ಸಳ ವಂಶದವರ ರಾಜ್ಯವಿಸ್ತಾರ ಈ ಮತಗಳ ಕೆಲವು ಪ್ರಸಿದ್ಧ ವಿದ್ಯಾಕೇಂದ್ರಗಳಿದ್ದ ಪ್ರದೇಶಗಳನ್ನೂ ಒಳಗೊಂಡು ವ್ಯಾಪಿಸಿತ್ತು. ಆದ್ದರಿಂದ ಈ ಕಾಲದಲ್ಲಿ ಬಾಳಿದ ಈ ಮತಗಳ ಕೆಲವರು ಪ್ರಮುಖ ವಿದ್ವಾಂಸರನ್ನು ಇಲ್ಲಿ ಹೆಸರಿಸಬಹುದು: ಪಾಲ್ಕುರಿಕೆ ಸೋಮಣ್ಣ, ಗುರುಲಿಂಗಾರ್ಯ, ಗೊಬ್ಬೂರು ಸಂಗಣ, ಮಲ್ಲಿನಾಥ, ಚೆನ್ನರಾಮ ಮೊದಲಾದವರು ವೀರಶೈವ ಪಂಡಿತರಲ್ಲಿ

ಪ್ರಮುಖರು. ಗೊಲಕಿಮಠ ಮತ್ತು ಹುಲಿಮಠಗಳು 13ನೆಯ ಶತಮಾನದಲ್ಲಿ ಕಾಲಾಮುಖ ಶೈವಮತದ ಪ್ರಮುಖ ಕೇಂದ್ರಗಳಾಗಿದ್ದವು. ಬಳ್ಳಿಗಾವೆಯು 12 ನೆಯ ಶತಮಾನದಲ್ಲಿ ಸರ್ವ ಪ್ರಮುಖ ಕೇಂದ್ರವಾಗಿತ್ತು.

ಮತೀಯೇತರ ಸಾಹಿತ್ಯವನ್ನು ಗಮನಿಸಿದರೆ, ಹೊಯ್ಸಳ ರಾಜರ ಆಸ್ಥಾನದಲ್ಲಿ ಒಂದು ಕವಿವಂಶ ಪರಂಪರೆಯೇ ಕಾಣಬರುತ್ತದೆ. ಆ ವಂಶದವರಲ್ಲಿ ಮೂವರು ವಿದ್ಯಾಚಕ್ರವರ್ತಿ ಎಂಬ ಬಿರುದು ಪಡೆದಿದ್ದರು. ಮೊದಲನೆಯ ವಿದ್ಯಾಚಕ್ರವರ್ತಿಯು ಇಮ್ಮಡಿ ವೀರಬಲ್ಲಾಳನ ಆಸ್ಥಾನದಲ್ಲಿದ್ದನು. ಕಲ್ಲಿನ ಮೇಲೆ ಕೆತ್ತಿರುವ ಕಾವ್ಯಶೈಲಿಯ ಅನೇಕ ಶಾಸನಗಳನ್ನು ಆತ ರಚಿಸಿದ್ದಾನೆ. ಅವನ ಮಗ ವೈದ್ಯನಾಥನು ಇಮ್ಮಡಿ ವೀರನಾರಸಿಂಹನ ಆಸ್ಥಾನದಲ್ಲಿದ್ದನು. ಆ ಮೇಲೆ ವೈದ್ಯನಾಥನ ಮಗನು ಎರಡನೆಯ ವಿದ್ಯಾಚಕ್ರವರ್ತಿಯಾದನು. ಅವನು ಗದ್ಯಕರ್ಣಾಮೃತವನ್ನು ಬರೆದನು. ಈ ಗದ್ಯಗ್ರಂಥವು ಇಮ್ಮಡಿ ನರಸಿಂಹನಿಗೂ ಪಾಂಡ್ಯ ಮಗಧ ಪಲ್ಲವರಾಜರುಗಳ ಒಗ್ಗೂಡಿದ ಸೈನ್ಯಕ್ಕೂ ನಡೆದ ಯುದ್ಧವನ್ನು ವರ್ಣಿಸುತ್ತದೆ. ಅವನ ಮಗ ವಾಸುದೇವನನ್ನು 'ಶ್ರೀವಲ್ಲಭ' ಎಂದು ಕರೆಯುತ್ತಿದ್ದರು. ಅವನ ಮಗನೇ ಮುಮ್ಮಡಿ ವಿದ್ಯಾಚಕ್ರವರ್ತಿ. ಅವನು ರುಕ್ಮಿಣೀಕಲ್ಯಾಣವೆಂಬ ಮಹಾಕಾವ್ಯವನ್ನು 16 ಆಶ್ವಾಸಗಳಲ್ಲಿ ರಚಿಸಿದ್ದಾನೆ. ಮೊದಲನೆಯ ಆಶ್ವಾಸದಲ್ಲಿ ಹೊಯ್ಸಳರಾಜರ ವಂಶಪರಂಪರೆಯನ್ನೂ ತನ್ನ ವಂಶದ ಸಂಕ್ಷೇಪ ವಿವರಣೆಯನ್ನೂ ಕೊಡುತ್ತಾನೆ. ಕಾವ್ಯಪ್ರಕಾಶಕ್ಕೂ ಅಲಂಕಾರ ಸರ್ವಸ್ವಕ್ಕೂ ಅವನು ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಆ ವಾಖ್ಯಾನಗಳಲ್ಲಿ ಹೊಯ್ಸಳ ರಾಜರ ಪ್ರಶಂಸಾಪರವಾದ ತನ್ನ ಸ್ವಂತರಚನೆಗಳನ್ನೇ ಉದಾಹರಣೆಯಾಗಿ ಕೊಡುತ್ತಾನೆ. ವಿದ್ಯಾಚಕ್ರವರ್ತಿ ವಂಶದವರ ಈ ಗ್ರಂಥಗಳಲ್ಲಿ ಅವರ ಕಾವ್ಯಪ್ರತಿಭೆ ವ್ಯಕ್ತವಾಗುವುದಲ್ಲದೆ, ಹೊಯ್ಸಳ ವಂಶದ ಚರಿತ್ರೆಯ ಮೇಲೆ ಬಹು ಉಪಯುಕ್ತವಾದ ಬೆಳಕೂ ಬೀಳುತ್ತದೆ.

ತ್ರಿವಿಕ್ರಮ ಪಂಡಿತನ ಉದಾಹರಣವು ಪಾಂಚಾಲೀಶೈಲಿಯ ಒಂದು ಸೊಗಸಾದ ಕಾವ್ಯ. ಅರ್ಧ ಭ್ರಮಕ, ಮುರಜ, ಗೋಮೂತ್ರಿಕ—ಮೊದಲಾದ ವಿವಿಧ ಬಂಧಗಳಲ್ಲಿ ಕವಿ ತನ್ನ ಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದಾನೆ. ಕಾವ್ಯದ ವಸ್ತು ಅನಿರುದ್ಧ ಉಷೆಯರ ವಿವಾಹ; ಆದರೂ ಶ್ರೀಕೃಷ್ಣನೇ ಈ ಕಾವ್ಯದ ನಾಯಕ. ನಾರಾಯಣ ಪಂಡಿತನ ಮಧ್ವವಿಜಯವೂ ಮಣಿಮಂಜರಿಯೂ ಜೀವನ ಚರಿತ್ರೆಯನ್ನು ವಿವರಿಸುವ ಕಾವ್ಯಗಳು. ಮಧ್ವವಿಜಯದಲ್ಲಿ ಶ್ರೀಮಧ್ವರ ಜೀವನ ಚರಿತ್ರೆಯನ್ನು ಕೊಡುವುದರ ಜೊತೆಗೆ ಅವರು ರಚಿಸಿದ ಗ್ರಂಥಗಳನ್ನೂ ಅವರು ಸ್ಥಾಪಿಸಿದ ಸಿದ್ಧಾಂತಗಳನ್ನೂ ಸಂಕ್ಷೇಪವಾಗಿ ನಿರೂಪಿಸಿದೆ. ಮಣಿ ಮಂಜರಿಯಲ್ಲಿ ಲೋಕಸ್ವರೂಪವನ್ನು ವಿವರಿಸಿದೆ. ಪಾರಿಜಾತ ಹರಣವು ಅದೇ ಕವಿಯ ಒಂದು ಸಣ್ಣ ಕಾವ್ಯ. ಹೀಗೆ, ಮತೀಯೇತರ ಸಾಹಿತ್ಯ ಕೂಡ, ಹೊಯ್ಸಳರ ಕಾಲದಲ್ಲಿ ಸ್ವಲ್ಪಮಟ್ಟಿಗೆ ಅಭಿವೃದ್ಧಿ ಹೊಂದಿರುವುದು ಕಂಡುಬರುತ್ತದೆ.

ಮೂಲ ಲೇಖಕರು : ಶ್ರೀ ಕೆ. ಟ. ಪಾಂಡುರಂಗಿ
ಅನುವಾದಕರು : ಶ್ರೀ ಎಲ್. ಗುಂಡಪ್ಪ

# ಪ್ರಾಕೃತ

## (ಆದಿಕಾಲ)

ಬೇರೆಬೇರೆ ಕರ್ಣಾಟಕ ರಾಜವಂಶಗಳ ಆಳಿಕೆಯ ಕಾಲಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಬೆಳವಣಿಗೆಯನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿಚಾರಮಾಡಿದ್ದೇವೆ.

ಈಗ ಪ್ರಾಕೃತದಲ್ಲಿ ಸಾಹಿತ್ಯದ ಬೆಳವಣಿಗೆ ಹೇಗಾಯಿತೆಂಬ ವಿಚಾರವನ್ನು ಸ್ವಲ್ಪ ತಿಳಿದುಕೊಳ್ಳೋಣ. ಪ್ರಾಕೃತ ಸಾಹಿತ್ಯವನ್ನು ಬೆಳಸಿದವರು ಮುಕ್ಕಾಲು ಮೂರುವೀಸಪಾಲು ಜೈನರು; ಕರ್ಣಾಟಕವನ್ನು ತಾಯ್ನಾಡು ಮಾಡಿಕೊಂಡ ಜೈನವಿದ್ವಾಂಸರು. ಇಲ್ಲಿ ಗಮನಕ್ಕೆ ತೆಗೆದುಕೊಂಡಿರುವ ಕಾಲ ಹೊಯ್ಸಳರ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ; ಆ ಹಿಂದಿನ ಕಾಲಕ್ಕೂ ಅನ್ವಯಿಸುತ್ತದೆ. ಹೊಯ್ಸಳಕಾಲದ ಅಂತ್ಯವು ಕರ್ಣಾಟಕ ಚರಿತ್ರೆಯ ಆದಿಕಾಲದ ಅಂತ್ಯಕ್ಕೆ ಸರಿಹೊಂದುವುದೆಂದು ಹೇಳಬಹುದಾದ್ದರಿಂದಲೂ ಪ್ರಾಕೃತ ಸಾಹಿತ್ಯದ ಬಹುಮಟ್ಟಿನ ಭಾಗವೆಲ್ಲಾ ಪೂರ್ವ ಮಧ್ಯಕಾಲಕ್ಕೆ ಸೇರುವುದಾದ್ದರಿಂದಲೂ ಆ ವಿಷಯವನ್ನು ಈ ಅಧ್ಯಾಯದಲ್ಲಿ ಚರ್ಚಿಸುವುದು ಯುಕ್ತವೇ ಆಗಿದೆ.

ಪ್ರಾಕೃತ ಭಾಷೆಗಳು, ಅವು ಈಗ ಇರುವಂತೆ, ಮುಖ್ಯವಾಗಿ ಸಂಸ್ಕೃತದ ಮಾದರಿಯಲ್ಲೇ ರೂಪಿತವಾಗಿವೆ. ಆದರೆ, ಅವುಗಳ ಶಬ್ದಸಂಪತ್ತು ಮತ್ತು ವಾಕ್ಯದಲ್ಲಿ ಶಬ್ದಗಳ ಪರಸ್ಪರ ಸಂಬಂಧಗಳನ್ನು ಗಮನಿಸಿದರೆ, ಅವು ಇಂಡೋ–ಆರ್ಯನ್ ಆಗಿರಲೇ ಬೇಕಾಗಿಲ್ಲದಂಥ ಹಲವು ಅಂಶಗಳು ಗೋಚರಿಸುತ್ತವೆ. ಪ್ರಾಕೃತ ಭಾಷೆಗಳನ್ನಾಡುವ ಜನರು ಕರ್ಣಾಟಕಕ್ಕೆ ಯಾವಾಗ ಬಂದರೆಂದು ಖಚಿತವಾಗಿ ಹೇಳುವುದು ಕಷ್ಟ. ಆದರೆ, ಅದು ಬಹು ಹಿಂದಿನ ಸಂಗತಿಯಾಗಿರಬೇಕು; ದ್ರಾವಿಡ ಭಾಷೆಗಳನ್ನಾಡುವ ಮತ್ತು ಇಂಡೋ ಆರ್ಯನ್ ಭಾಷೆಗಳನ್ನಾಡುವ ಜನವರ್ಗಗಳು ಪರಸ್ಪರ ಸಂಪರ್ಕ ಪಡೆದ ಕಾಲದಷ್ಟೇ ಹಿಂದಿನದಾಗಿರಬೇಕು. ಬಿಹಾರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಹಾಕ್ಷಾಮವುಂಟಾದಾಗ ಭದ್ರಬಾಹು ಮುನಿ ತನ್ನ ಮುನಿಸಂಘದೊಡನೆ ರಾಜಶಿಷ್ಯನಾದ ಚಂದ್ರಗುಪ್ತ ಮೌರ್ಯನನ್ನೂ ಜೊತೆಯಲ್ಲಿ ಕರೆದುಕೊಂಡು (ಸು. ಕ್ರಿ. ಪೂ. 300) ಕರ್ಣಾಟಕಕ್ಕೆ ಬಂದನೆಂದೂ ಶ್ರವಣಬೆಳುಗೊಳದ ಬಳಿ ನೆಲಸಿ ತಪೋನಿರತನಾದನೆಂದೂ ಪ್ರಬಲವಾದ ಒಂದು ಐತಿಹ್ಯವಿದೆ[1]. ವಿಚಾರ ಪ್ರಾರಂಭಕ್ಕೆ ಇದೊಂದು ಸ್ಪಷ್ಟ ಸೀಮಾಸ್ಥಾನವೇನೋ ಹೌದು. ಆದರೆ, ಜೈನ ಬೌದ್ಧ ಪರಿವ್ರಾಜಕ ಸಂನ್ಯಾಸಿಗಳು ಬೇರೆಬೇರೆ ಕಾಲಗಳಲ್ಲಿ ನಾನಾ ಮಾರ್ಗಗಳಿಂದ ದಕ್ಷಿಣ ದೇಶಕ್ಕೆ ಬಂದಿದ್ದಿರಬಹುದೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಅವರೆಲ್ಲರೂ ತಾವು ಉಪದೇಶ ಮಾಡುವಾಗ ಮಗಧದ ಪ್ರಾಕೃತಗಳನ್ನೇ ಬಳಸುತ್ತಿದ್ದರು. 'ಶ್ರಮಣ' ಅಥವಾ 'ಶ್ರವಣ' ಎಂಬ ಮಾತು (ಜೈನ ಮುಖ್ಯವಾಗಿ, ಜೈನ ಸಂನ್ಯಾಸಿ) ಎಂಬರ್ಥದಲ್ಲಿ ತಮಿಳು, ಕನ್ನಡ–ಎರಡು ಭಾಷೆಗಳಲ್ಲಿಯೂ ಬಳಕೆಯಿದೆ. ಜೈನಮತವು ಭಾರತದ ಈ ಭಾಗಗಳಿಗೆ ಬಹಳ ಹಿಂದಿನ ಕಾಲದಲ್ಲಿಯೇ ಬಂದಿರಬೇಕೆಂಬುದಕ್ಕೆ ಇದೊಂದು ಪ್ರಬಲವಾದ ಸಾಕ್ಷಿ.

ಆಗ ಕರ್ಣಾಟಕದ ಒಂದು ಭಾಗವು ಮೌರ್ಯ ಚಕ್ರಾಧಿಪತ್ಯದಲ್ಲಿ ಅಡಕವಾಗಿತ್ತು, ಅಶೋಕನ ಶಾಸನಗಳು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಸ್ಥಳಗಳಲ್ಲಿಯೂ ಕೊಪ್ಪಳ ಮತ್ತು ಮಸ್ಕಿಗಳಲ್ಲಿಯೂ ದೊರೆತಿರುವುದು ಇದಕ್ಕೆ ಸಮರ್ಥನೆ ಕೊಡುತ್ತದೆ[2]. ಈ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ. ಜನಗಳಿಗೆ

ತಿಳಿವಳಿಕೆಯುಂಟುಮಾಡುವುವೇ ಈ ಶಾಸನಗಳ ಉದ್ದೇಶವಾದ್ದರಿಂದ, ಈ ರಾಜಶಾಸನಗಳನ್ನು ಓದಿ ವಿವರಿಸಬಲ್ಲವರು ಕೆಲವರಾದರೂ ಇದ್ದಿರಬೇಕು.

ಮೂಲ ಸೂತ್ರಗಳನ್ನು ಕಾಪಾಡಿಟ್ಟುಕೊಳ್ಳುವುದು, ಧವಳ–ಜಯಧವಳ–ಮಹಾಧವಳಗಳಲ್ಲಿ ಪರ್ಯವಸಾನವಾದ ಬಗೆಬಗೆಯ ವ್ಯಾಖ್ಯಾನಗಳನ್ನು ಪ್ರಾಕೃತ ಸಂಸ್ಕೃತಗಳಲ್ಲಿ ರಚಿಸುವುದು, ಈಗ ಉಳಿದಿರುವ ಈ ವ್ಯಾಖ್ಯಾನಗಳ ಏಕೈಕ ಹಸ್ತಪ್ರತಿಗಳು ದೊರೆತಿರುವುದು—ಇವೆಲ್ಲ ಕರ್ಣಾಟಕಕ್ಕೆ ಸೇರಿದ ಪ್ರದೇಶದಲ್ಲಿಯೇ. ಕರ್ಮಸಿದ್ಧಾಂತದ ವಿಸ್ತಾರವಾದ ವಿವರಣೆಯನ್ನೊಳಗೊಂಡಿರುವ ಈ ಹಸ್ತಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿರುವ ಅದರ ರಕ್ಷಕರಿಗೆ ವಿದ್ವತ್ಪ್ರಪಂಚವು ಅತ್ಯಂತ ಋಣಿಯಾಗಿದೆ.

ಧವಳ, ಜಯಧವಳ, ಮಹಾಧವಳ—ಇವುಗಳ ಹಸ್ತಪ್ರತಿಯಿರುವುದು ಒಂದೊಂದೇ ; ಇವು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಸಿದ್ಧಾಂತ ಬಸದಿಯಲ್ಲಿವೆ. ಇವನ್ನು ತಾಳೆಯೋಲೆಯ ಮೇಲೆ ಹಳಗನ್ನಡ ಅಕ್ಷರದಲ್ಲಿ ಶಾಯಿಯಿಂದ ಬರೆದಿದ್ದಾರೆ. ಇವು ಕ್ರಿ.ಶ. 12ನೆಯ ಶತಮಾನದ ಮೊದಲನೆಯ ಪಾದದಷ್ಟು ಹಳೆಯವು. ಷಟ್ಖಂಡಾಗಮದ ಮೂಲ ಸೂತ್ರಗಳು ಈಗ ಲುಪ್ತವಾಗಿರುವ ಪೂರ್ವಗ್ರಂಥಗಳ ಕಳೆದುಳಿದ ಭಾಗಗಳು. ಜೈನಧರ್ಮಕ್ಕೆ ವಿಶಿಷ್ಟವಾದ ಕರ್ಮಸಿದ್ಧಾಂತದ ಬಹು ವಿಸ್ತಾರವಾದ ವಿವರಣೆ ಇವುಗಳಲ್ಲಿ ದೊರೆಯುತ್ತದೆ. ಧರಸೇನನಿಗೆ ಈ ಸಿದ್ಧಾಂತದ ಜ್ಞಾನವಿತ್ತು. ಕಾಥಿಯವಾಡದ ಗಿರಿನಗರ ಅಥವಾ ಗಿರ್ನಾರಿನಲ್ಲಿ ಆತ ತಪಸ್ಸುಮಾಡುತ್ತಿದ್ದನು. ತನ್ನ ಅಂತ್ಯಕಾಲ ಸಮೀಪಿಸಿತೆಂದು ಆತನಿಗೆ ಅರಿವಾದಾಗ ತನಗೆ ಎಷ್ಟು ಗೊತ್ತಿತ್ತೋ ಅಷ್ಟನ್ನು ಪುಷ್ಪದಂತನಿಗೂ ಭೂತಬಲಿಗೂ ಹೇಳಿಕೊಟ್ಟನು. ಅವರಿಬ್ಬರೂ ಗುಜರಾತಿನ (ಬ್ರೋಚ್ ಡಿಸ್ಟ್ರಿಕ್ಟಿನಲ್ಲಿರುವ) ಅಂಕುಲೇಶ್ವರದ ಮೂಲಕ ಕರ್ಣಾಟಕದ ಬನವಾಸಿಗೆ ಬಂದು ಸೇರಿದರು. ಬೇರೊಂದು ಸಂಪ್ರದಾಯ ಕಥೆಯ ಪ್ರಕಾರ ಭೂತಬಲಿಯು ಇನ್ನೂ ಕೆಳಕ್ಕೆ (ದಕ್ಷಿಣಕ್ಕೆ) ಹೋಗಿ ತಮಿಳುನಾಡನ್ನು ತಲಪಿದನೆಂದು ತಿಳಿಯಬರುತ್ತದೆ. ಪ್ರಾಕೃತದಲ್ಲಿಯೂ ಸಂಸ್ಕೃತದಲ್ಲಿಯೂ ವಿಸ್ತಾರವಾದ ವ್ಯಾಖ್ಯಾನಗಳು ರಚಿತವಾದದ್ದು ಕರ್ಣಾಟಕದಲ್ಲಿ, ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ. ಕುಂದಕುಂದ, ಶ್ಯಾಮಕುಂದ, ತುಂಬುಲೂರ, ಸಮಂತಭದ್ರ, ಬಪ್ಪದೇವ—ಇವರಂಥ ಪ್ರಖ್ಯಾತಪಂಡಿತರು ಈ ವ್ಯಾಖ್ಯಾನಗಳನ್ನು ಬರೆದರು. ಇವೆಲ್ಲ ಈಗ ಪ್ರತ್ಯೇಕವಾಗಿ ದೊರೆಯುತ್ತಿಲ್ಲ. ಆದರೆ, ವೀರಸೇನನು ರಚಿಸಿ ಕ್ರಿ.ಶ. 816ರಲ್ಲಿ[3] ಸಮಾಪ್ತಿಮಾಡಿದ ಧವಳಾವ್ಯಾಖ್ಯಾನದಲ್ಲಿ ಸೇರಿ ಅಡಕವಾಗಿ ಹೋಗಿರಬೇಕು. ಅದು ಸ್ವಲ್ಪಭಾಗ ಪ್ರಾಕೃತದಲ್ಲಿಯೂ ಸ್ವಲ್ಪಭಾಗ ಸಂಸ್ಕೃತದಲ್ಲಿಯೂ ರಚಿತವಾಗಿದೆ; 72,000 ಶ್ಲೋಕಗಳಷ್ಟು ವಿಸ್ತಾರವಾಗಿದೆ. ಅದರಲ್ಲಿ ಐದು ಖಂಡಗಳಿವೆ. ಆರನೆಯ ಖಂಡವು ಮಹಾಬಂಧ ಅಥವಾ ಮಹಾಧವಳಾ[4] ಎಂದು ಹೆಸರುಗೊಂಡಿದೆ. ಅದರಲ್ಲಿ 30 ರಿಂದ 40 ಸಾವಿರ 'ಗ್ರಂಥ'ಗಳಿವೆ.

ಅದೇ ರೀತಿ ಗುಣಧರನೂ ಅಂಗಶಾಸ್ತ್ರ ಜ್ಞಾನವನ್ನು ಪರಂಪರೆಯಿಂದ ಪಡೆದಿದ್ದನು. ಅದರ ಆಧಾರದ ಮೇಲೆ ಕಷಾಯಪ್ರಾಭೃತದ ಸೂತ್ರಗಳನ್ನು ಪ್ರಾಕೃತದಲ್ಲಿ ರಚಿಸಿದನು. ಆರ್ಯಮಂಕ್ಷು, ನಾಗಹಸ್ತಿ, ಯತಿವೃಷಭ—ಈ ಮೂವರೂ ಅದಕ್ಕೆ ಪ್ರಾಕೃತದಲ್ಲಿ ಟಿಪ್ಪಣಿಗಳನ್ನು ಬರೆದರು. ಪ್ರಾಯಶಃ ಈ ಸಾಮಗ್ರಿಯನ್ನೆಲ್ಲಾ ಉಪಯೋಗಿಸಿಕೊಂಡು ವೀರಸೇನನು ಜಯಧವಳಾವ್ಯಾಖ್ಯಾನವನ್ನು[5] (ಪ್ರಾಕೃತ ಸಂಸ್ಕೃತಗಳಲ್ಲಿ) ಬರೆಯಲು ಪ್ರಾರಂಭಿಸಿದನೆಂದು ತೋರುತ್ತದೆ. ಆದರೆ, 20,000 'ಗ್ರಂಥಾಗ್ರ'ಗಳನ್ನು ಬರೆದ ಬಳಿಕ, ಆತನು ಮರಣ ಹೊಂದಿದನು. ಆತನ ಪ್ರಖ್ಯಾತ ಶಿಷ್ಯನೂ ರಾಷ್ಟ್ರಕೂಟ ಅಮೋಘವರ್ಷನ ಆಚಾರ್ಯನೂ ಆದ ಜಿನಸೇನನು ಮತ್ತೆ 40,000 'ಗ್ರಂಥಾಗ್ರ'ಗಳನ್ನು ಬರೆದು ಸೇರಿಸಿ ಶಕವರ್ಷ 759ರಲ್ಲಿ ಎಂದರೆ ಕ್ರಿ.ಶ. 837ರಲ್ಲಿ ಗ್ರಂಥವನ್ನು ಪೂರ್ತಿಮಾಡಿದನು. ಪಂಚಸ್ತೂಪಾನ್ವಯದ ಯತಿಗಳು ಪುರಾತನವಾದ ಕರ್ಮಶಾಸ್ತ್ರಗಳನ್ನು ಬಲ್ಲವರಾಗಿ ಅದರ ರಕ್ಷಕರಾಗಿ ಚೆನ್ನಾಗಿ ಕಾಪಾಡಿಟ್ಟುಕೊಂಡಿದ್ದರು. ಅವರ ಮೂಲಕ ಈ ಜ್ಞಾನದ ಅವಶಿಷ್ಟಭಾಗಗಳು ಸೌರಾಷ್ಟ್ರ ಮತ್ತು ಗುಜರಾತುಗಳ ಮಾರ್ಗವಾಗಿ

ಪೂರ್ವಭಾರತದಿಂದ ದಕ್ಷಿಣ ಭಾರತಕ್ಕೆ ಬಂದು ಸೇರಿದವು. ಹೀಗೆ ಈ ಜ್ಞಾನ, ಪಂಚಸ್ತೂಪಾನ್ವಯದವರಿಂದ ಬಂದು ಸೇರಿದರೂ ವೀರಸೇನ ಜಿನಸೇನರು ಪರಮ ಪ್ರಖ್ಯಾತರಾದರು ; ಎಷ್ಟು ಮಟ್ಟಿಗೆ ಎಂದರೆ, ಅವರ 'ಸೇನ'ಗಣವು ಪಂಚಸ್ತೂಪಾನ್ವಯದ ಸ್ಥಾನವನ್ನಾಕ್ರಮಿಸಿ ಅಲ್ಲಿ ಎಂದೆಂದಿಗೂ ತಾನೇ ನೆಲೆನಿಂತು ಬಿಟ್ಟಿತು[6].

ದಕ್ಷಿಣದ ಜೈನಗ್ರಂಥಕಾರರಲ್ಲಿ ಕುಂದಕುಂದನು ಮಹೋತ್ಕೃಷ್ಟನಾದವನು ; ಪರಮ ಪ್ರಮಾಣ ಪುರುಷನೆಂದು ನಿಸ್ಸಂದಿಗ್ಧವಾಗಿ ಎಲ್ಲರೂ ಒಪ್ಪಿರುವಂಥವನು ; ಮಹಾವೀರ ಮತ್ತು ಗೌತಮರಿಗೆ ಮಾತ್ರ ಎರಡನೆಯವನೆನ್ನಿಸಿದವನು. ಒಂದು ಯತಿಪರಂಪರೆ ಅವನಿಂದ ಆರಂಭವಾಯಿತೆಂಬುದಕ್ಕೆ ಕುಂದ ಕುಂದಾನ್ವಯವೆಂದು ಒಂದು ಅನ್ವಯವಿರುವುದೇ ಸಾಕ್ಷಿ. ಅದು ಹೇಗಾದರೂ ಇರಲಿ, ಸಂಪ್ರದಾಯದ ಕಥೆಗಳು ಅವನ ವ್ಯಕ್ತಿತ್ವವನ್ನು ಮುಚ್ಚಿ ಮಸುಕುಮಾಡಿಬಿಟ್ಟಿವೆ. ಅವನು ತನ್ನ ವಿಷಯವಾಗಿ ಹೇಳಿಕೊಂಡಿರುವುದೆಲ್ಲಾ ಇಷ್ಟೇ—ತಾನು ಭದ್ರಬಾಹುವಿನ ಶಿಷ್ಯನೆಂದು. ತಮಿಳು ಮತ್ತು ಕನ್ನಡ ದೇಶಗಳೆರಡೂ ಅವನು ತಮ್ಮವನೆಂದುಕೊಳ್ಳುತ್ತವೆ. ಆದರೆ ಅವನ ಗ್ರಂಥಗಳು ಕರ್ಣಾಟಕದಲ್ಲಿ ಹೆಚ್ಚು ಜನಪ್ರಿಯವಾಗಿವೆ ; ಅವನ್ನು ಅಧ್ಯಯನ ಮಾಡುವುದು ಕರ್ಣಾಟಕದಲ್ಲೇ ಹೆಚ್ಚು. ಅವನು ಬಾಳಿದ್ದು ಕ್ರಿಸ್ತಶಕದ ಆದಿಯ ಯಾವುದೋ ಒಂದು ಕಾಲದಲ್ಲಿ, ಹಿಂದೆ ಪ್ರಸ್ತಾಪಿಸಿರುವ ಧರಸೇನನ ಅನಂತರ ಕಾಲದಲ್ಲಿ. ಈಗ ನಮಗೆ ಸಿಕ್ಕಿರುವ ಕುಂದಕುಂದನ ಎಲ್ಲಾ ಗ್ರಂಥಗಳೂ ಪ್ರಾಕೃತದಲ್ಲಿವೆ ; ಅಥವಾ ಈಚೆಗೆ ಜೈನ ಶೌರಸೇನೀ ಎಂದು ಕರೆಯುವ ಭಾಷೆಯಲ್ಲಿವೆ. ಅವನ ಮೂರು ಪ್ರಧಾನಗ್ರಂಥಗಳು ಯಾವುವೆಂದರೆ: (1) ಪಂಚಾಸ್ತಿಕಾಯ—ಐದು ಅಸ್ತಿಕಾಯಗಳನ್ನೂ ಮೋಕ್ಷಸಾಧನವಾದ ಮಾರ್ಗವನ್ನೂ ವಿವರಿಸುತ್ತದೆ. (2) ಪ್ರವಚನಸಾರ—ಜ್ಞಾನ, ಜ್ಞೇಯ, ಚಾರಿತ್ರಗಳನ್ನು (ಮುಖ್ಯವಾಗಿ ಶ್ರಮಣರಿಗೆ ಸಂಬಂಧಿಸಿದ್ದು) ಯಥಾಕ್ರಮವಾಗಿ ವಿಶದಪಡಿಸುವ ನಿರೂಪಣೆ. (3) ಸಮಯಸಾರ—ಆತ್ಮನ ವಿಷಯದಲ್ಲಿ ವಾಸ್ತವಿಕ ದೃಷ್ಟಿಯಿಂದ ಮಾಡಿರುವ ಒಂದು ವಿವೇಚನೆ. ಸಮಯಸಾರವು ಆತ್ಮಸಾಕ್ಷಾತ್ಕಾರಕ್ಕಾಗಿ ಅಧ್ಯಯನ ಮಾಡಬೇಕಾದ ಬಹು ಮುಖ್ಯಗ್ರಂಥಗಳಲ್ಲೊಂದೆಂದು ಸಮಸ್ತ ಜೈನಶಾಖೆಗಳವರೂ ಅಭಿಪ್ರಾಯ ಪಡುತ್ತಾರೆ. ಆತನ ಇತರ ಗ್ರಂಥಗಳು ಯಾವುವೆಂದರೆ :—ನಿಯಮಸಾರ, ಪ್ರಾಕೃತ ಭಕ್ತಿಗಳು, ಎಂಟು ಪಾಹುಡಗಳು, ಬಾರಸ ಅಣುವೆಕ್ಖ ಇತ್ಯಾದಿ. ಇವುಗಳಲ್ಲಿ ಕೆಲವು ಚಿಕ್ಕಗ್ರಂಥಗಳಾದರೂ ಜೈನಧರ್ಮದ ಬೇರೆಬೇರೆ ಮುಖಗಳನ್ನು ಕ್ರಮಬದ್ಧವಾಗಿ ನಿರೂಪಿಸುವ ಕೈಪಿಡಿಗಳಾಗಿವೆ. ಕುಂದಕುಂದನ ಮೂರು ಪ್ರಧಾನಗ್ರಂಥಗಳಿಗೆ ಬಾಲಚಂದ್ರನು ಕನ್ನಡದಲ್ಲಿ ಒಂದು ವ್ಯಾಖ್ಯಾನ ಬರೆದಿದ್ದಾನೆ. ನಿಯಮಸಾರಕ್ಕೆ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ (ಕ್ರಿ.ಶ. 1185ರಲ್ಲಿ ಮೃತನಾದ) ಪದ್ಮನಾಭನೂ, ಕುಂದಕುಂದನ ಮೂರು ಪ್ರಧಾನಗ್ರಂಥಗಳಿಗೂ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ (ಈ ವ್ಯಾಖ್ಯಾನಗಳು ಈಗ ನಮಗೆ ದೊರೆಯುತ್ತಿವೆ) ಜಯಸೇನನೂ ಕರ್ಣಾಟಕದ ನಿವಾಸಿಗಳು[7].

ವಟ್ಟಕೇರನ ಮೂಲಾಚಾರವೂ[8] ಶಿವಾರ್ಯನ ಭಗವತೀ ಆರಾಧನವೂ[9] ಕರ್ಣಾಟಕದಲ್ಲೇ ರಚಿತವಾದವೆಂದು ನಿರ್ದಿಷ್ಟಪಡಿಸಿ ಹೇಳಲಾಗುವುದಿಲ್ಲವಾದರೂ ಅವುಗಳ ರಚನೆ ದಕ್ಷಿಣದೇಶದಲ್ಲೇ ನಡೆದಿರಬೇಕೆಂದು ಹೇಳಬಹುದು. (ವಟ್ಟಕೇರನೂ ಕುಂದಕುಂದನೂ ಒಬ್ಬನೇ ಆಗಿರಬೇಕೆಂದು ಕೆಲವರು ನಂಬುತ್ತಾರೆ). ಜೈನಮತಾನುಸಾರವಾದ ಲೋಕವಿವರಣೆಗೆ ಸಂಬಂಧಪಟ್ಟ ಎರಡು ಪ್ರಾಕೃತಗ್ರಂಥಗಳು ಸರ್ವನಂದಿಯ ಲೋಕವಿಭಾಗ[10] ಮತ್ತು ಯತಿವೃಷಭನ ತಿಲೋಯ ಪಣ್ಣತ್ತಿ[11]ಗಳು ಕರ್ಣಾಟಕದಲ್ಲೇ ರಚಿತವಾಗಿರಬೇಕೆಂಬುದು ಹೆಚ್ಚು ಸಂಭವನೀಯವಾಗಿದೆ.

ದಕ್ಷಿಣದೇಶದಲ್ಲಿ ಪ್ರಸಿದ್ಧರಾದ ಜೈನಸಂನ್ಯಾಸಿಗಳು ಧವಲಾ ಮುಂತಾದವುಗಳ ಅಧ್ಯಯನದಲ್ಲಿ ವಿಶೇಷ ಆಸಕ್ತರಾಗಿರುತ್ತಿದ್ದರು. ಇದರಿಂದ ಕರ್ಣಾಟಕದ ಜೈನಮುನಿಗಳು ಪ್ರಾಕೃತಗಳನ್ನು ಕಲಿಯುವ ಪರಿಪಾಠ

ಉಳಿದುಕೊಂಡು ಬಂತು. ಈ ಗ್ರಂಥಗಳು ಬಹು ಸೂಕ್ಷ್ಮವಿಚಾರಗಳನ್ನೊಳಗೊಂಡು ಬಹಳ ಕಷ್ಟವಾಗಿದ್ದದ್ದು ಮಾತ್ರವೇ ಅಲ್ಲ, ಪರಮ ಪವಿತ್ರವೆಂದೂ ಭಾವಿಸಲ್ಪಟ್ಟಿದ್ದವು. ಅಂಥ ಪವಿತ್ರಗ್ರಂಥಗಳನ್ನು ಗೃಹಸ್ಥರು ಓದಲಾಗದೆಂದೂ ನಂಬಿಕೆಯಿತ್ತು. ಸಿದ್ಧಾಂತ ಚಕ್ರವರ್ತಿ ಎಂದು ಪ್ರಸಿದ್ಧನಾದ ನೇಮಿಚಂದ್ರನು ಶ್ರಾವಕ ಶ್ರೇಷ್ಠನಾದ ಚಾಮುಂಡರಾಯನಿಗಾಗಿ ಪ್ರಾಕೃತ ಶ್ಲೋಕಗಳಲ್ಲಿ ಅವುಗಳ ಸಾರವನ್ನು ಸಂಗ್ರಹಿಸಿ ಹೇಳಿದನೆಂದು ಸಂಪ್ರದಾಯದ ಹೇಳಿಕೆ. ಧವಳಾ ಮೊದಲಾದವಕ್ಕೆ ಸಿದ್ಧಾಂತ ಎಂದು ಹೆಸರು ಚಾಮುಂಡರಾಯನು ರಾಜಮಲ್ಲ ಅಥವಾ ರಾಚಮಲ್ಲ (ಕ್ರಿ.ಶ. 974-84) ಎಂಬ ಗಂಗರಾಜನ ಮಂತ್ರಿ ಮತ್ತು ದಂಡನಾಯಕ; ಶ್ರವಣಬೆಳಗೊಳದಲ್ಲಿ ಬಾಹುಬಲಿಯ ಬೃಹದಾಕಾರದ ಶಿಲಾಮೂರ್ತಿಯನ್ನು ಕಡೆಸಿ ನಿಲ್ಲಿಸಿದವನು ಈತನೇ. ಚಾಮುಂಡರಾಯನಿಗೆ ಗೊಮ್ಮಟನೆಂದೂ ಒಂದು ಹೆಸರಿತ್ತು. ನೇಮಿಚಂದ್ರನ ಈ ಸಾರಸಂಗ್ರಹವು ಅವನಿಗೋಸ್ಕರ ರಚಿತವಾದ್ದರಿಂದ ಅದು ಗೊಮ್ಮಟಸಾರ[12]ವೆಂದು ಹೆಸರುಗೊಂಡು ಪ್ರಸಿದ್ಧವಾಯಿತು. ಅದರಲ್ಲಿ ಎರಡು ಭಾಗಗಳಿವೆ: ಜೀವಕಾಂಡ ಮತ್ತು ಕರ್ಮಕಾಂಡ. ಲಬ್ಧಿಸಾರ ಮತ್ತು ಕ್ಷಪಣಸಾರಗಳು ಅದಕ್ಕೆ ಅನುಬಂಧಿಸಿದ (ಸಹಾಯಕ) ಗ್ರಂಥಗಳು. 58ಗಾಥೆಗಳನ್ನೊಳಗೊಂಡು ಪ್ರಾಕೃತದಲ್ಲಿ ರಚಿತವಾಗಿರುವ ನೇಮಿಚಂದ್ರನ ದ್ರವ್ಯಸಂಗ್ರಹವು ಜೈನಮತ ತತ್ವಗಳನ್ನು ನಿರೂಪಿಸುತ್ತದೆ. ಚಾಮುಂಡರಾಯನು ಗೊಮ್ಮಟಸಾರಕ್ಕೆ (ಕನ್ನಡದಲ್ಲಿ ?) ವ್ಯಾಖ್ಯಾನ ಬರೆದನೆಂದು ಸಂಪ್ರದಾಯದ ಹೇಳಿಕೆ. ಇದಕ್ಕೆ ಆಧಾರ ಸಾಲದು, ಸಂಶಯಕ್ಕೆ ಆಸ್ಪದವಿದೆಯೆಂದಲ್ಲ. ಕೇಶವವರ್ಣಿಯು ಅದಕ್ಕೆ ಕನ್ನಡದಲ್ಲಿ ಒಂದು ವ್ಯಾಖ್ಯಾನ ಬರೆದನು (ಕ್ರಿ.ಶ. 1359). ಅನಂತರಕಾಲದಲ್ಲಿ (ಕ್ರಿ.ಶ. 16ನೆಯ ಶತಮಾನದ ಆರಂಭದಲ್ಲಿ) ಸಾಳುವ ಮಲ್ಲಿರಾಯನ ಸಮಕಾಲೀನನಾದ ನೇಮಿಚಂದ್ರನು ಇದನ್ನು ಸಂಸ್ಕೃತಕ್ಕೆ ಪರಿವರ್ತನೆ ಮಾಡಿದನು. ಧವಳಾ ಮುಂತಾದವುಗಳಲ್ಲಿ ಅಡಕವಾಗಿರುವ ವಿಷಯಗಳ ಅಧ್ಯಯನವು ಈ ಗೊಮ್ಮಟಸಾರದಿಂದ ಕರ್ಣಾಟಕದಲ್ಲಿ ಜೀವಂತವಾಗಿ ಮುಂದುವರಿದುಕೊಂಡು ಬಂತು. ಇದನ್ನು ಕಲಿಯುವುದಕ್ಕೂ ಇದರಿಂದ ಸ್ಫೂರ್ತಿಪಡೆಯುವುದಕ್ಕೂ ಉತ್ತರದಿಂದ ಜೈನಮುನಿಗಳು ಕರ್ಣಾಟಕಕ್ಕೆ ಗುಂಪುಗುಂಪಾಗಿ ಬರತೊಡಗಿದರು.

ಮಹಾಕವಿ ಪುಷ್ಪದಂತನು ಕರ್ಣಾಟಕದಲ್ಲಿ ಹುಟ್ಟಿದವನಲ್ಲ. ಆದರೆ ಅವನು ರಾಷ್ಟ್ರಕೂಟರಾಜ ಮುಮ್ಮಡಿ ಕೃಷ್ಣನ ಕೈಕೆಳಗಿನ ಅಧಿಕಾರಿಗಳಾದ ಭರತ ಮತ್ತು ನನ್ನರ ಆಶ್ರಯದಲ್ಲಿ ಮಾನ್ಯಖೇಟದಲ್ಲಿ (ಇದು ಈಗಿನ ಮಳಖೇಡ) ನೆಲಸಿ, (1) ಮಹಾಪುರಾಣ (ಕ್ರಿ.ಶ. 965)[13], (2) ನಯಕುಮಾರ ಚರಿಯ[14] ಮತ್ತು (3) ಜಸಹರಚರಿಯ[15] ಎಂಬ ಮೂರು ಪಾಕೃತ-ಅಪಭ್ರಂಶಗ್ರಂಥಗಳನ್ನು ರಚಿಸಿದನು. ಈ ಗ್ರಂಥಗಳ ಪೀಠಿಕೆಗಳಲ್ಲಿ ಪುಷ್ಪದಂತನು ತನ್ನ ವಿಷಯವಾಗಿಯೂ ತನ್ನ ಆಶ್ರಯದಾತರ ವಿಷಯವಾಗಿಯೂ ತಾನು ಮಾನ್ಯಖೇಟಕ್ಕೆ ಬಂದದ್ದು ಹೇಗೆ, ತನ್ನ ಗ್ರಂಥಗಳನ್ನು ರಚಿಸಿದ್ದು ಹೇಗೆ ಎಂಬ ವಿಷಯವಾಗಿಯೂ ಬಹಳ ಸ್ವಾರಸ್ಯವಾದ ವಿವರಗಳನ್ನು ಕೊಡುತ್ತಾನೆ. ಮೊದಲನೆಯ ಗ್ರಂಥವು ಜಿನಸೇನ-ಗುಣಭದ್ರ ವಿರಚಿತವಾದ ಸಂಸ್ಕೃತ ಮಹಾಪುರಾಣದಲ್ಲಿರುವಂತೆ ಅರುವತ್ತಮೂರು ಮಂದಿ ಶಲಾಕಾಪುರುಷರ ಸಾಂಪ್ರದಾಯಿಕ ಕಥೆಯನ್ನು ಕುರಿತದ್ದು, ಎರಡು ಮತ್ತು ಮೂರನೆಯ ಗ್ರಂಥಗಳು ನೀತಿ ಮತ್ತು ಮತವಿವರಣೆಗಳಿಂದ ಕೂಡಿ ನಾಗಕುಮಾರ ಮತ್ತು ಯಶೋಧರರ ಚರಿತ್ರೆಗಳನ್ನು ವಿವರಿಸುತ್ತವೆ. ಅನಂತರ ಕಾಲಗಳಲ್ಲಿ ಅವರು ಕನ್ನಡಕೃತಿಗಳಲ್ಲೂ ಕಾಣಿಸಿಕೊಳ್ಳುತ್ತಾರೆ. ಅಪಭ್ರಂಶಕವಿಯಾದ ಸ್ವಯಂಭು[16] ಕೂಡ, ಕರ್ಣಾಟಕದೊಡನೆ ಬಹಳ ಹತ್ತಿರದ ಸಂಬಂಧವುಳ್ಳವನಾಗಿದ್ದವನೆಂಬುದು ಅಸಂಭವನೀಯವೇನಲ್ಲ. ಅವನ ಬಂಧುಗಳಲ್ಲಿ ಕೆಲವರ ಹೆಸರುಗಳು ಹಾಗೆ ಸೂಚಿಸುವಂತಿವೆ ; ಅಲ್ಲದೆ, ಅವನು ಯಾಪನೀಯ ಸಂಘಕ್ಕೆ ಸೇರಿದವನೆಂದು ಹೇಳುತ್ತಾರೆ. ಈ ಯಾಪನೀಯ ಸಂಘಕ್ಕೆ ಕರ್ಣಾಟಕವೇ ಮುಖ್ಯವಾದ ನೆಲೆ, ತೌರುಮನೆ[17] ಎನ್ನಬಹುದು. ಆ ಮುಂದೆ ಅಪಭ್ರಂಶದಲ್ಲಿ ರಚಿತವಾದ ಕರಕಂಡ ಚರಿಯು[18] ಕರ್ತನಾದ ಕನಕಾಮರ ಕವಿಯು ಕನ್ನಡದ ಬಹು ಹತ್ತಿರದ ಪರಿಚಯವುಳ್ಳವನಂತೆ ಕಾಣುತ್ತಾನೆ; ಏಕೆಂದರೆ, ಅವನು ತೇರದಲ್ಲಿರುವ ಜೈನಗವಿಗಳನ್ನು ವಿವರವಾಗಿ ವರ್ಣಿಸುತ್ತಾನೆ ; ಶಿಲಾಹಾರರ ಪುರಾತನ ನಗರ ತಗರವೇ ಈ

ತೇರ. ಮನೋಹರವಾದ ಆಕರ್ಷಕವಾದ ಅಪಭ್ರಂಶ ಛಂದಸ್ಸುಗಳು ಕರ್ಣಾಟಕದಲ್ಲಿನ ಸಂಸ್ಕೃತ ಮತ್ತು ಕನ್ನಡ ಕವಿಗಳ ಮೇಲೆ ವಿಶೇಷ ಪ್ರಭಾವ ಬೀರಿದವೆಂದು ನಂಬಬಹುದು, ಅದರಲ್ಲಿ ಅಸಂಭವಾಂಶವೇನೂ ಇಲ್ಲ. ಕನ್ನಡದ ಅತ್ಯಂತ ಪ್ರಾಚೀನ ಗದ್ಯಗ್ರಂಥ ವಡ್ಡಾರಾಧನೆ; ಅದರ ಕೆಲ ಕೆಲವು ಭಾಗಗಳು ಪ್ರಾಕೃತ ಮೂಲಗಳ ಆಧಾರದ ಮೇಲೆ ರಚಿತವಾಗಿರಬೇಕೆಂದು ಭಾವಿಸಲು ಸಾಧಕವಾದ ಅನೇಕ ಅಂಶಗಳು ಅದರಲ್ಲಿ ಕಾಣಬರುತ್ತವೆ[19].

ಕರ್ಣಾಟಕದಲ್ಲಿ ಧವಳಾ ಮುಂತಾದವುಗಳ ಅಧ್ಯಯನದಿಂದಲೇ[20] ತ್ರಿವಿಕ್ರಮನು ತನ್ನ ಪ್ರಾಕೃತ ವ್ಯಾಕರಣವನ್ನು[21] ರಚಿಸುವುದಕ್ಕೆ ಪ್ರಾಯಶಃ ಪ್ರೇರಣೆ ಪಡೆದನೆಂಬುದು ಹೆಚ್ಚು ಸಂಭವನೀಯವಾಗಿದೆ. (ಕ್ರಿ.ಶ. 1172ರಲ್ಲಿ ಮೃತನಾದ) ಹೇಮಚಂದ್ರನ ಪ್ರಾಕೃತವ್ಯಾಕರಣದಿಂದ ಬಹುಪಾಲಿನ ಸಾಮಗ್ರಿಯನ್ನು ಬಳಸಿಕೊಂಡು ಅವನು ಆ ಕಾರ್ಯವನ್ನು ಅತ್ಯಂತ ಪ್ರಶಂಸನೀಯವಾಗಿ ನೆರವೇರಿಸಿದ್ದಾನೆ. ಅದು ಸಮಗ್ರ ದಕ್ಷಿಣದೇಶಕ್ಕೇ ಪ್ರಾಕೃತ ವ್ಯಾಕರಣವಾಗಿ ಪರಿಣಮಿಸಿತು. ಅನೇಕಮಂದಿ ಜೈನೇತರ ಗ್ರಂಥಕಾರರು ಅದಕ್ಕೆ ಸಂಸ್ಕೃತದಲ್ಲಿ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ತ್ರಿವಿಕ್ರಮನು ಅರ್ಹನಂದಿಯ ಶಿಷ್ಯ. ಅವನ ಪ್ರಾಕೃತ ವ್ಯಾಕರಣವು ಕ್ರಿ.ಶ. 1236ರ ಅನಂತರ ಅನತಿಕಾಲದಲ್ಲೇ ರಚಿತವಾಯಿತು. ಅದು ಸೂತ್ರಗಳು ಮತ್ತು ಅವುಗಳಿಗೆ ತಾನೇ ರಚಿಸಿದ ವೃತ್ತಿಯನ್ನೊಳಗೊಂಡಿದೆ. ಅವನನ್ನು ಪ್ರಾಕೃತವ್ಯಾಕರಣಗಳ ದಾಕ್ಷಿಣಾತ್ಯ ಶಾಖೆಯ ಆರಂಭಕಾರನೆಂದು ಕರೆಯಬಹುದು. ಜೈನಮುನಿಗಳ ಪರಿಸರದಿಂದ ಹೊರಗಿನವರು ಕೂಡ, ಅವನ ವ್ಯಾಕರಣವನ್ನು ಕಲಿಯುವುದು ರೂಢಿಗೆ ಬಂತು.

ಜೈನಮುನಿಗಳು, ಕೆಲವರು ಗೃಹಸ್ಥರು ಕೂಡ, ಸಂಸ್ಕೃತ ಪ್ರಾಕೃತ ಭಾಷಾಸಾಹಿತ್ಯಗಳೆರಡರಲ್ಲೂ ನುರಿತ ವಿದ್ವಾಂಸರಾಗಿದ್ದರು. ಆದಿಕಾಲದ ಕನ್ನಡಸಾಹಿತ್ಯವನ್ನು ಸಮೃದ್ಧಿಗೊಳಿಸಿ ಅದಕ್ಕೆ ಪ್ರೌಢ ಸಾಹಿತ್ಯದ ಸ್ಥಾನವನ್ನು ತಂದುಕೊಟ್ಟವರು ಅವರೇ. ನೃಪತುಂಗ, ಪಂಪ ಮೊದಲಾದವರ ಗ್ರಂಥಗಳಿಂದ ಇದು ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಗ್ರಂಥಕಾರರ ಬಹುಮುಖವಾದ ಸಾಹಿತ್ಯವ್ಯವಸಾಯದ ಪರಿಣಾಮವಾಗಿ ಕನ್ನಡಮಾತುಗಳು ಕ್ರಮಕ್ರಮವಾಗಿ ಪ್ರಾಕೃತ ಭಾಷೆಯಲ್ಲಿ ಸೇರಿಹೋದವು; 'ದೇಶಿ' ಎಂಬ ಅನುಕೂಲವಾದ ವೇಷದಲ್ಲಿ ಪ್ರವೇಶಿಸತೊಡಗಿದವು[22]. ಅದೇ ಪ್ರಕಾರ, 'ತದ್ಭವ' ಎಂದು ಕರೆಯಲ್ಪಡುವ ಶಬ್ದರೂಪಗಳನ್ನು ಸಿದ್ಧಗೊಳಿಸುವುದರಲ್ಲಿ ಪ್ರಾಕೃತ ಭಾಷೆಯ ಧ್ವನಿಶಾಸ್ತ್ರದ ನಿಯಮಗಳು ವಿಶೇಷವಾಗಿ ಅನ್ವಯವಾಗ ತೊಡಗಿದವು[23]. ನಯಸೇನ, ಆಂಡಯ್ಯ ಮೊದಲಾದ ಕವಿಗಳು ಅಚ್ಚ ಸಂಸ್ಕೃತ ಶಬ್ದಗಳಿಗೆ ಬದಲಾಗಿ ಈ ತದ್ಭವಗಳನ್ನೇ ಹೆಚ್ಚುಹೆಚ್ಚಾಗಿ ಬಳಸತೊಡಗಿದರು. ಹೀಗೆ ಆದಿಕಾಲದ ಕನ್ನಡಭಾಷೆಯೂ ಸಾಹಿತ್ಯವೂ ಸಂಸ್ಕೃತಕ್ಕೆ ಎಷ್ಟು ಮಟ್ಟಿಗೆ ಋಣಿಗಳೋ ಅಷ್ಟೇ ಮಟ್ಟಿಗೆ ಪ್ರಾಕೃತಕ್ಕೂ ಋಣಿಗಳಾಗಿವೆ.

## ಅಡಿಟಿಪ್ಪಣಿಗಳು

1. ಬಿ. ಎ. ಸಾಲೆತೊರೆ : Mediaeval Jainism (ಮಧ್ಯಕಾಲೀನ ಜೈನಮತ). PP 3 f., Bombay 1938; ಆರ್. ಎಸ್. ಮುಗಳಿ : The Heritage of Karnataka (ಕರ್ನಾಟಕದ ಪರಂಪರೆಯು ಆಸ್ತಿ) P. 10, Bangalore 1946.
2. ಆರ್. ಎಸ್. ಮುಗಳಿ : The Heritage of Karnataka, P. 43. Bangalore, 1946.
3. Shatkhandagama with Dhavala (ಷಟ್ಖಂಡಾಗಮ : ಧವಳದೊಡನೆ), ಸಂಪಾದಕ : ಎಚ್. ಎಲ್. ಜೈನ್, ಸಂಪುಟಗಳು 1—16, ಅಮರಾವತಿ-ವಿದಿಶಾ, 1939–59.
4. ಮಹಾಬಂಧ, ಸಂಪುಟಗಳು 1-7, ಬನಾರಸಿನ ಜ್ಞಾನಪೀಠದಿಂದ ಪ್ರಕಟಿಸಲ್ಪಟ್ಟದ್ದು, 1947-58.
5. Kashaya-prabhrita with Jayadhavala (ಕಷಾಯಪ್ರಾಭೃತ, ಜಯಧವಳ ಸಮೇತ), ಇದುವರೆಗೆ ಪ್ರಕಟವಾಗಿರುವುದು, ಸಂಪುಟಗಳು 1-8, ಬಿ. ಡಿ. ಜೈನ ಸಂಘ, ಮಥುರಾ, 1944 ರಿಂದ ಮೊದಲುಗೊಂಡು.
6. ಎ. ಎನ್. ಉಪಾಧ್ಯೆ : ಪಂಚಸ್ತೂಪಾನ್ವಯ, ಜೈನ ಸಿದ್ಧಾಂತ ಭಾಸ್ಕರ, ಸಂಪುಟ 16-1 ಆರಾ. 1949.
7. ಎ. ಎನ್. ಉಪಾಧ್ಯೆ : ಪ್ರವಚನಸಾರ, ಬೊಂಬಾಯಿ 1935. ಅದರ ಪೀಠಿಕೆಯು ಕುಂದಕುಂದ ಮತ್ತು ಅವರ ಗ್ರಂಥ ಮೊದಲಾದವನ್ನು ಕೂಲಂಕಷವಾಗಿ ಚರ್ಚಿಸುವ ಒಂದು ಪ್ರಬಂಧ.
8. ವಸುನಂದಿಯ ಸಂಸ್ಕೃತ ವ್ಯಾಖ್ಯಾನದೊಡನೆ ಸಂಪಾದಿಸಿ ಪ್ರಕಟಿಸಿದ್ದು, ಬೊಂಬಾಯಿ 1919, ಜೊತೆಗೆ ಪ್ರವಚನ ಸಾರದ ಪೀಠಿಕೆ, ಪುಟ 26.
9. ಎನ್. ಪ್ರೇಮಿ : ಜೈನಸಾಹಿತ್ಯ ಔರ್ ಇತಿಹಾಸ, ಪು. 1 f, 2ನೆಯ ಸಂಸ್ಕರಣ, ಬೊಂಬಾಯಿ 1956.
10. ಎ. ಎನ್. ಉಪಾಧ್ಯೆ : Brihat-Kathakosa of Harisena, Bombay, 1943, see PP. 50 f.
11. ಅದರ ಸಂಸ್ಕರಣವು ಸೋಲಾಪುರದಿಂದ (1943 ಮತ್ತು 1951 ರಲ್ಲಿ) ಎರಡು ಭಾಗಗಳಲ್ಲಿ ಪ್ರಕಟವಾಗಿದೆ.
12. ಎಸ್. ಸಿ. ಘೋಷಾಲ್ : ದ್ರವ್ಯ ಸಂಗ್ರಹ, ಪೀಠಿಕೆ, ಆರಾ, 1917. ಎ. ಎನ್. ಉಪಾಧ್ಯೆ ; ಗೊಮ್ಮಟಸಾರದ ಮೇಲಿನ ಜೀವತತ್ತ್ವಪ್ರದೀಪಿಕಾ : ಅದರ ಕರ್ತೃ, ಕಾಲ, Indian culture, VII, I PP. II, 23-33, I PP. 48-58, ಬೊಂಬಾಯಿ 1940; ಅದೇ : ಗೊಮ್ಮಟ ಶಬ್ದದ ಅರ್ಥನಿರ್ಣಯಕ್ಕೆ ಸಾಧಕವಾದ ಸಾಮಗ್ರಿ, Indian Historical Quarterly, XVI, PP.819-26, ಕಲ್ಕತ್ತ 1940.
13. ಪಿ. ಎಲ್. ವೈದ್ಯ : ಮಹಾಪುರಾಣ, ಸಂಪುಟಗಳು 1-3, ಬೊಂಬಾಯಿ, 1937-41.
14. ಸಂಪಾದಕ : ಎಚ್. ಎಲ್. ಜೈನ್, ಕರಂಜ, 1933.
15. ಸಂಪಾದಕ : ಪಿ.ಎಲ್. ವೈದ್ಯ, ಕರಂಜ, 1931.
16. ಎನ್. ಪ್ರೇಮಿ : ಜೈನ ಸಾಹಿತ್ಯ ಔರ್ ಇತಿಹಾಸ.
17. ಯಾಪನೀಯ ಸಂಘ, ಒಂದು ಜೈನ ಶಾಖೆ : Journal of the University of Bombay, I, 4. PP. 224-31, Bombay, 1933.
18. ಸಂಪಾದಕ : ಎಚ್. ಎಲ್. ಜೈನ್, ಕರಂಜ, 1934. ಬನಾರಸಿನ ಭಾರತೀಯ ಜ್ಞಾನಪೀಠದಿಂದ ಪ್ರಕಟಿಸಲಿರುವ ಪರಿಷ್ಕೃತಸಂಸ್ಕರಣವೊಂದು ಈಗ ಅಚ್ಚಿನಲ್ಲಿದೆ.
19. ಎ. ಎನ್. ಉಪಾಧ್ಯೆ : ಬೃಹತ್ ಕಥಾಕೋಶ, ಪೀಠಿಕೆ, ಪು. 63 ff, ಬೊಂಬಾಯಿ, 1943.
20. ವೀರಸೇನ ಜಿನಸೇನರ ವಿಷಯವನ್ನೂ ಅವರ ಲೇಖನ ಸಾಗರದ ಪ್ರವಾಹವನ್ನೂ ಅವನು ಪ್ರಸ್ತಾವಿಸುತ್ತಾನೆ.
21. ಸಂಪಾದಕ : ಪಿ. ಎಲ್. ವೈದ್ಯ, ಸೋಲಾಪುರ, 1954.
22. ಎ.ಎನ್. ಉಪಾಧ್ಯೆ : Kanarese words in Desi Lexicons, Annals of the B.O.R.I, XII, 3, PP. 274-84, Poona, 1931.
23. ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿನ ಅಪಭ್ರಂಶ ಪ್ರಕರಣವನ್ನು ನೋಡಿ.

ಮೂಲಲೇಖಕರು : ಡಾ॥ ಎ.ಎನ್. ಉಪಾಧ್ಯೆ
ಅನುವಾದಕರು : ಶ್ರೀ ಎಲ್. ಗುಂಡಪ್ಪ

# ವಾಸ್ತು ಮತ್ತು ಶಿಲ್ಪ

## (ಹೊಯ್ಸಳರ ಕಾಲ)

ಹೊಯ್ಸಳರ ಕಾಲವು (ಕ್ರಿ.ಶ. 11ರಿಂದ 13ನೆಯ ಶತಕಗಳು ಅತ್ಯಂತ ಗಣನೀಯವಾದ ರೀತಿಯಲ್ಲಿ ವಾಸ್ತು ಹಾಗೂ ಶಿಲ್ಪಕಲಾ ಚಟುವಟಿಕೆಗಳ ಸಮೃದ್ಧಿಯನ್ನು ಕಂಡಿತು. ಹೊಯ್ಸಳರು ಚಾಲುಕ್ಯರ ಸಾಮಂತ ರಾಜರಾಗಿ ಆಳಿಕೆ ಪ್ರಾರಂಭಿಸಿದ್ದರಿಂದ ವಾಸ್ತುಶೈಲಿಯ ವಿಷಯದಲ್ಲಿ ಅವರು ಚಾಲುಕ್ಯ ವಾಸ್ತು ಸಂಪ್ರದಾಯವನ್ನೇ ಅನುಸರಿಸುವದು ಸ್ವಾಭಾವಿಕವಾಗಿತ್ತು. ಆದರೆ, ಬಹುಬೇಗ ಅವರು ತಮ್ಮದೇ ಆದ ಶೈಲಿ ಒಂದನ್ನು ಬೆಳೆಯಿಸಿಕೊಂಡರು. ಅವರ ವಾಸ್ತು ಸಂಬಂಧೀಯ ವೈಶಿಷ್ಟ್ಯಗಳನ್ನು ಅರಿತುಕೊಳ್ಳಬೇಕಾದರೆ, ಹೊಯ್ಸಳ ದೇವಾಲಯಗಳನ್ನು ಈ ಮುಂದೆ ಕಾಣಿಸಿದ ದೃಷ್ಟಿಯಿಂದ ಅಭ್ಯಸಿಸಬೇಕು : (1) ಮಂದಿರದ ಬಾಹ್ಯರೂಪ ಮತ್ತು ಮಂದಿರದ ವಿನ್ಯಾಸ ವಿಧಾನ, (2) ಗೋಡೆಗಳ ಮೇಲ್ಮೈ ರೂಪಿಸುವ ಕ್ರಮ, (3) ಶಿಖರ ರಚನಾ ವಿಧಾನ ಮತ್ತು ಸ್ತಂಭಗಳ ಅಲಂಕರಣ ವಿಧಾನ.

ಕಟ್ಟಡವು ಸರಳವಾಗಿದ್ದಾಗ ಅದು ವಾಡಿಕೆಯ ಮೂರು ಅಂತರ್ಭಾಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ: ಗರ್ಭಗೃಹ, ಅದರ ಮುಂದೆ ಸುಖನಾಸಿ, ಅದಕ್ಕೆ, ಹೊಂದಿಕೊಡು ನವರಂಗ; ಕೆಲ ಸಂದರ್ಭಗಳಲ್ಲಿ, ನವರಂಗದ ಮುಂಬದಿಗೆ ಕಂಬಗಳಿಂದ ಕೂಡಿದ ಮುಖಮಂಟಪ ಇರುವದುಂಟು. ಒಮ್ಮೊಮ್ಮೆ ಒಂದೇ ಗರ್ಭಗೃಹದ ಬದಲು, ಹೊಯ್ಸಳ ದೇವಾಲಯಗಳು ಎರಡು, ಮೂರು, ನಾಲ್ಕು, ಐದು ಸಹ ಗರ್ಭಗೃಹ ಹೊಂದಿರುವದುಂಟು. ಮಂದಿರದ ವೇದಿಕೆಯ ವಿನ್ಯಾಸವು ನಕ್ಷತ್ರಾಕಾರದಲ್ಲಿರುವದು.

ವಿಶೇಷ ಲಕ್ಷಣೋಪೇತವಾದ ಹೊಯ್ಸಳ ದೇವಾಲಯವು ‘ ಜಗತಿ ’ ಎಂಬ ವೇದಿಕೆಯ ಮೇಲೆ ನಿಂತಿರುತ್ತದೆ. ಈ ವೇದಿಕೆಯ ಆಕೃತಿಯು ನಕ್ಷತ್ರಾಕಾರದ ಮಂದಿರದ ಮಂಡನೆಗೆ ಅನುರೂಪವಾಗಿರುವದು. ಸ್ಥಾಪತ್ಯ ದೃಷ್ಟಿಯಿಂದ ಇದಕ್ಕೆ ಬಹಳ ಮಹತ್ವವುಂಟು. ಏಕೆಂದರೆ, ಇದು ದೇವಾಲಯಕ್ಕೆ ಹೆಚ್ಚಿನ ಎತ್ತರವನ್ನು ಒದಗಿಸುವದು. ಸಾಮಾನ್ಯವಾಗಿ: ಗುಡಿಯು ಕುಳ್ಳವಾಗಿರುವದುಂಟು. “ ಜಗತಿ ” –ವೇದಿಕೆಯು ವಿಶಾಲವಾಗಿರುವುದರಿಂದ ಮತ್ತು ಮಂದಿರದ ಅಂತರ್ಭಾಗದಲ್ಲಿ ಪ್ರದಕ್ಷಿಣೆ ಹಾಕಲು ಸೌಕರ್ಯ ಇಲ್ಲದ್ದರಿಂದ, ಈ ಸ್ಥಳವು ಪ್ರದಕ್ಷಿಣೆಗೆ ಒಳ್ಳೆಯ ಅವಕಾಶ ಮಾಡಿಕೊಡುವುದು.

ಗೋಡೆಯ ಮೇಲ್ಮೈಯಲ್ಲಿ ಅನೇಕ ಗೂಡುಗಳನ್ನು ಉಂಟು ಮಾಡಿಕೊಂಡು, ಆಲಂಕಾರಿಕ ಶಿಲ್ಪಕೃತಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಿಕೊಂಡದ್ದೇ ಅಲ್ಲದೆ, ಬೆಳಕು ನೆಳಲಿನ ಚೆಲ್ಲಾಟದ ಮೋಡಿಗೆ ಎಡೆಮಾಡಿಕೊಳ್ಳಲಾಯಿತು.

ವೇದಿಕೆಯ ಮೇಲೆ ನಿಂತ ಮಂದಿರದ ತಳಭಾಗವನ್ನು ಅನೇಕ ಹಂತಗಳ ಪಟ್ಟಿಗಳಾಗಿ ವಿಂಗಡಿಸಿ ಅವುಗಳಲ್ಲಿ ಜೀವಕಳೆಯಿಂದ ಕೂಡಿದ ಆಲಂಕಾರಿಕ ಶಿಲ್ಪಕಾರ್ಯಗಳನ್ನು ಮಾಡಲಾಗಿದೆ. ಇಂಥ ಪಟ್ಟಿಕೆಗಳು ಮಂದಿರದ ಸುತ್ತೂ ಇವೆ. ಕೆತ್ತನೆಯ ಕೆಲಸವುಳ್ಳ ಈ ಪಟ್ಟಿಕೆಗಳಲ್ಲಿ ಸಾಮಾನ್ಯವಾಗಿ ಒಂದೇ ಬಗೆಯ ಸಾಂಪ್ರದಾಯಿಕ ಕ್ರಮವನ್ನು ಅನುಸರಿಸಲಾಗಿದೆ. ತೀರ ಕೆಳಗಿನದು, ನಾನಾ ಪ್ರಕಾರಗಳ ಭಂಗಿಗಳಲ್ಲಿಯೂ ಭಾವಗಳಲ್ಲಿಯೂ ಇರುವ ಆನೆಗಳ ಸಾಲುಮೆರವಣಿಗೆಯಿಂದ ಕೂಡಿದ್ದು, ಇದು ಬಲದ

ಮತ್ತು ದೃಢತೆಯ ಪ್ರತೀಕ. ಇದರ ಮೇಲೆ ಅಶ್ವಾರೋಹಿಗಳ ಸಾಲು, ಅದರ ಮೇಲೆ ಹೂಬಳ್ಳಿಗಳ ಅಲಂಕಾರ ರೇಖೆಗಳಿಂದ ಕೂಡಿದ ಸುಳಿವುಗಳ ಸಾಲು.

ರಂಧ್ರಜಾಲಗಳಿಂದ ಕೂಡಿದ ಕಲ್ಲಿನ ವಾತಾಯನಗಳನ್ನು (ಜಾಳಾಂಧ್ರ) ಪಟ್ಟದಕಲ್ಲು ಮತ್ತು ಎಲ್ಲೋರಾ (ವೇಳೂರು) ಗಳಲ್ಲಿ ಬಳಸಲಾಗಿದೆ ; ನಿಜ. ಆದರೆ ಅತ್ಯಂತ ಸುಂದರವಾಗಿಯೂ ಆಲಂಕಾರಿಕವಾಗಿಯೂ ಕೊರೆಯಲಾದ ಶಿಲಾ ವಾತಾಯನಗಳು ಹೊಯ್ಸಳ ಶೈಲಿಗೇ ಮೀಸಲು ಎನ್ನಬೇಕು.

ವಿಸ್ತಾರದ ಗೋಡೆಯ ಮೇಲ್ಬದಿಯ ಮೇಲೆ, ಸಿಂಗಾರಗೊಳಿಸಿದ ಗೂಡುಗಳಲ್ಲಿ, ಅವುಗಳ ಮೇಲೂ ಹೂವು ಬಳ್ಳಿಗಳ ಹಂದರ ಹರವಿರಲು, ಶಿಲ್ಪಿಯು ದೇವತಾ ಮೂರ್ತಿಗಳನ್ನು ಇರಿಸಿದ್ದಾನೆ. ಆ ಮೂರ್ತಿಗಳು ಸೂಕ್ಷ್ಮ ಶಿಲ್ಪಕಾರ್ಯಗಳಿಂದ ಪರಿಶೋಭಿತವಾಗಿ ಶಿಲ್ಪಿಯ ಕೌಶಲವನ್ನು ಹೊಮ್ಮಿಸುತ್ತವೆ.

ಪರ್ಸೀ ಬ್ರಾವುನ್ ಅವರ ಪ್ರಕಾರ, ಶಿಖರದ ಆಕಾರ ವಿಶೇಷ ಮತ್ತು ಅದರ ರಚನಾ ವಿಧಾನ ಇವು ಈ ಶೈಲಿಯ ಪ್ರಧಾನ ಲಕ್ಷಣಗಳೆಂದು ತಿಳಿಯಬೇಕು.

ಈ ಶೈಲಿಯ ಮತ್ತೊಂದು ವೈಶಿಷ್ಟ್ಯ ಎಂದರೆ ರಾಟಾಳ ಮೂಲಕ ಸಿದ್ಧಪಡಿಸಿದ ಕಲ್ಲ ಕಂಬಗಳು. ಇವು, ಆಕಾರ ಭೇದದಿಂದಲೂ ಅಲಂಕಾರ ಭೇದದಿಂದಲೂ ತಮ್ಮದೇ ಆದ ಲಕ್ಷಣಗಳಿಂದ ಕೂಡಿವೆ. ಶಿಲೆಯನ್ನು ಮೊದಲು ಬೇಕಾದ ಗಾತ್ರಕ್ಕೆ ಮತ್ತು ಆಕೃತಿಗೆ ಅಳವಡಿಸಿಕೊಂಡು, ರಾಟಾಳಕ್ಕೆ ಲಂಬವಾಗಿ ನಿಲ್ಲಿಸಿ, ಆ ಕಲ್ಲುತುಂಡು ತಿರುಗುವಂತೆ ಮಾಡಿ, ಉಳಿಯ ಮೂಲಕ ಬೇಕಾದ ರೀತಿಯಲ್ಲಿ ಅದನ್ನು ಕೊರೆಯಲಾಗುತ್ತಿತ್ತು. ಕಂಬದಲ್ಲಿ ನಾನಾವಿಧ ನಿಮ್ನೋನ್ನತಗಳನ್ನು ಉಂಟುಮಾಡುವಲ್ಲಿ, ತೆಳುವಾದ ದಪ್ಪವಾದ ರೇಖಾ ರಚನೆಯಲ್ಲಿ ಮತ್ತು ಗೆರೆ ಗೆರೆಗಳ ನಡುವಿನ ಸ್ಥಾನವಿತರಣೆಯಲ್ಲಿ ಶಿಲ್ಪಿ ತನ ಚಾತುರ್ಯ ತೋರಿಸುತ್ತಿದ್ದ. ಕಂಬಗಳ ಶೋಭೆ ಇನ್ನಷ್ಟು ಹೆಚ್ಚಲೆಂದು ಹೊಯ್ಸಳ ದೇವಾಲಯದ ಈ ಕಂಬಗಳ ಮೇಲ್ಭಾಗದಲ್ಲಿ ವೆಜ್ಜ ಹಾಕಿರಿಸಿದ ಇಳಿಜಾರಾದ ಅಲಂಕೃತ ಆಧಾರಶಿಲೆ ಅಥವಾ ಮದನಕೈ ನಿಲ್ಲಿಸಲಾಗುತ್ತಿತ್ತು.

ಮೇಲುನೋಟದ ಶೋಧನೆಯಿಂದಲೇ, ಹಳೆಯ ಮೈಸೂರು ಸಂಸ್ಥಾನದ ಬೇರೆಬೇರೆ ಜಿಲ್ಲೆಗಳಲ್ಲಿ ಎಂಬತ್ತರಿಂದ ತೊಂಬತ್ತರಷ್ಟು ಹೊಯ್ಸಳರ ಸ್ಮಾರಕದೇವಾಲಯಗಳಿವೆ—ಎಂದು ಕಂಡುಬಂದಿದೆ. ಸೊಸೆವೂರು (ಅಂಗಡಿ) ಎಂಬಲ್ಲಿ ಅನೇಕ ಹಾಳುಗುಡಿಗಳು ಮತ್ತು ಜೈನ ಬಸದಿಗಳಿರುವವು. ಹೊಯ್ಸಳರು ಇಲ್ಲಿಯೇ ಮೊತ್ತಮೊದಲು ಪ್ರಾಬಲ್ಯಕ್ಕೆ ಬಂದದ್ದು. ಕೇಶವನ ಮೂರ್ತಿ, ವಸಂತಮ್ಮ ದೇವಾಲಯದಲ್ಲಿನ ಸಪ್ತಮಾತೃಕೆಗಳು, ಯಕ್ಷಿಣಿಯ ವಿಗ್ರಹ—ಇವುಗಳು ಹೊಯ್ಸಳರ ಸ್ಥಾಪತ್ಯ ಮತ್ತು ಶಿಲ್ಪಕಲೆಯ ಮೊದಮೊದಲಿನ ಉದಾಹರಣೆಗಳಾಗಿವೆ. ಹಳೆ ಬೆಳಗೊಳದ ಹಾಳಾದ ಜೈನದೇವಾಲಯವು ಬಹುಶಃ ಎರೆಯಂಗನ ಕಾಲದ್ದೆಂದು ತೋರುತ್ತದೆ. ಸಮಚತುರಸ್ರ ಆಕಾರದಲ್ಲಿರುವ ದೊಡ್ಡಗಡ್ಡವಳ್ಳಿ ಎಂಬಲ್ಲಿನ ಲಕ್ಷ್ಮೀದೇವಿಯ ದೇವಾಲಯವು ವಿಷ್ಣುವರ್ಧನನ ಆಳಿಕೆಯಲ್ಲಿ ಕ್ರಿ.ಶ. 1113ರಲ್ಲಿ ಕಟ್ಟಲ್ಪಟ್ಟಿತು. ಇದನ್ನು ಕಟ್ಟಿಸಿದವರು ಒಬ್ಬ ದೊಡ್ಡವ್ಯಾಪಾರಿ ಮತ್ತು ಅವನ ಪತ್ನಿ. ಈ ದೇವಾಲಯವೂ ಹೊಯ್ಸಳಕಲೆಯ ಇನ್ನೊಂದು ಮೊದಲ ಮಾದರಿಯಾಗಿದೆ. ಬೇಲೂರ ಕೇಶವ ದೇವಾಲಯವು ಅತ್ಯಂತ ಶ್ರೇಷ್ಠಕೋಟಿಯ ಮಾದರಿಯಾಗಿದ್ದು, ಇದನ್ನು ಕ್ರಿ.ಶ. 1117ರಲ್ಲಿ ಸ್ವಯಂ ವಿಷ್ಣುವರ್ಧನನ ಆಣತಿಯಂತೆ ಕಟ್ಟಲಾಯಿತು. ಇದನ್ನು ಕಟ್ಟಿಸಿದ್ದು ತಲಕಾಡಿನಲ್ಲಿ ಅವನು ಚೋಳರನ್ನು ಗೆದ್ದದ್ದರ ನೆನಪಿಗಾಗಿ. ಈ ದೇವಾಲಯದಲ್ಲಿ

ಒಂದು ಸತ್ವಸಂಪನ್ನ ಶಿಲ್ಪಖಚಿತ ದೃಶ್ಯಪಟ್ಟಿಕೆಯಿದ್ದು, ಅದು ವಿಷ್ಣುವರ್ಧನನ ದರ್ಬಾರದ ದೃಶ್ಯವನ್ನು ಚಿತ್ರಿಸುತ್ತದೆ. ತಲಕಾಡಿನ ಕೀರ್ತಿನಾರಾಯಣ ಮಂದಿರವು ಸಹ ವಿಷ್ಣುವರ್ಧನನಿಂದಲೇ ರಚಿತವಾದದ್ದು. ಕೇಶವ ದೇವಾಲಯವನ್ನು ಹೊಂದಿಕೊಂಡಿರುವ ಕಪ್ಪೆ ಚೆನ್ನಿಗರಾಯ ದೇಗುಲವನ್ನು, ವಿಷ್ಣುವರ್ಧನನ ರಾಣಿ ಶಾಂತಲಾದೇವಿ ಕಟ್ಟಿಸಿದಳು. ಒಂದನೆಯ ನರಸಿಂಹನ ಆಳಿಕೆಯಲ್ಲಿ ವಾಸ್ತು ನಿರ್ಮಾಣಕಾರ್ಯ ಅವ್ಯಾಹತವಾಗಿ ಸಾಗಿತು. ಹದಿನೈದಕ್ಕೂ ಹೆಚ್ಚು ದೇವಾಲಯಗಳ ವಿಷಯ ತಿಳಿದುಬಂದಿದೆ. ಅತ್ಯಂತ ಮಹತ್ವದವು ಎಂದರೆ,—ದಾವಣಗೆರೆಯ ಬಳಿಯ ಆನೆಕೊಂಡದ ಈಶ್ವರ ದೇವಾಲಯ (ಕ್ರಿ.ಶ. 1160), ಹಾಸನದ ಬಳಿಯ ಕೋರಮಂಗಲದ ಬುಚೇಶ್ವರ ದೇವಾಲಯ. (ಕ್ರಿ.ಶ. 1173), ಮತ್ತು ಹಳೇಬೀಡಿನ ಪ್ರಖ್ಯಾತ-ಹೊಯ್ಸಳೇಶ್ವರ ದೇವಾಲಯ. ಬಲ್ಲಾಳನ ನಾಲ್ವತ್ತೇಳು ವರ್ಷಗಳ ಆಳಿಕೆಯಲ್ಲಿ, ದೇವಾಲಯ ನಿರ್ಮಾಣ ಕಾರ್ಯವು ಶಿಖರಕ್ಕೆ ಮುಟ್ಟಿತು. ಈ ಕಾಲದ ಅತ್ಯಂತ ಪ್ರಸಿದ್ಧ ದೇವಾಲಯಗಳೆಂದರೆ,—ತರಿಕೆರೆಯ ಬಳಿ ಅಮೃತಪುರದ ಅಮೃತೇಶ್ವರ ದೇವಾಲಯ (ಕ್ರಿ.ಶ. 1196), ಹಳೇಬೀಡಿನ ಕೇದಾರೇಶ್ವರ ದೇವಾಲಯ (ಕ್ರಿ.ಶ. 1219), ಮತ್ತು ಅರಸಿಕೆರೆಯ ಈಶ್ವರ ದೇವಾಲಯ (ಕ್ರಿ.ಶ. 1200). ಇನ್ನು ಹಾರನಹಳ್ಳಿಯ ಸೋಮೇಶ್ವರ ದೇಗುಲ (ಕ್ರಿ.ಶ. 1234) ಮತ್ತು ಬಸ್ರಾಳದ ಮಲ್ಲಿಕಾರ್ಜುನ ದೇಗುಲ ಇವು, ಇಮ್ಮಡಿ ನರಸಿಂಹನ ಆಳಿಕೆಯ ಕಾಲಕ್ಕೆ ಸಂಬಂಧಿಸಿದಂಥವು. ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹನ ಮತ್ತು ಸದಾಶಿವನ ದೇಗುಲಗಳು, ಸೋಮೇಶ್ವರನ ಆಳಿಕೆಗೆ ಸಂಬಂಧಿಸಿದಂಥವು. ಗೋವಿಂದನ ಹಳ್ಳಿಯ ಪಂಚಲಿಂಗ ದೇಗುಲವು (ಕ್ರಿ.ಶ. 1250) ಸಹ ಸೋಮೇಶ್ವರನ ಆಳಿಕೆಯಲ್ಲಿ ನಿರ್ಮಿತವಾದದ್ದು. ಇಲ್ಲಿಯ ವರೆಗೆ ತಿಳಿದು ಬಂದಿರುವ ಐಮಡಿಯ ದೇಗುಲ ಇದೊಂದೇ. ಮುಮ್ಮಡಿ ನರಸಿಂಹನ ಆಳಿಕೆಯಲ್ಲಿ ನಿರ್ಮಿತವಾದ ದೇಗುಲಗಳು ಇವು: ತುಮಕೂರು ಜಿಲ್ಲೆಯ ತುರುವೆಕೆರೆಯ ಕೇಶವ ಮತ್ತು ಮೂಲೆಶಂಕರೇಶ್ವರ ದೇಗುಲಗಳು (ಕ್ರಿ.ಶ. 1260), ಶೆಟ್ಟಿಕೆರೆಯ ಯೋಗಮಾಧವ ದೇಗುಲ (ಕ್ರಿ.ಶ. 1261), ಮತ್ತು ಅದ್ಭುತವೂ ಅಪ್ರತಿಮವೂ ಆದ ಸೋಮನಾಥಪುರದ ಕೇಶವ ದೇವಾಲಯ (ಕ್ರಿ.ಶ. 1268).

ಬೇಲೂರು, ಹಳೇಬೀಡು, ಮತ್ತು ಸೋಮನಾಥಪುರ ದೇವಾಲಯಗಳು ಹೊಯ್ಸಳ ಶಿಲ್ಪಶೈಲಿಯ ಅತ್ಯುತ್ಕೃಷ್ಟ ಸೃಷ್ಟಿ ಎಂದು ಪರಿಗಣಿಸಬಹುದು. ಫರ್ಗ್ಯೂಸನ್ ಅವರು, ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಾಸ್ತುವಿಚಾರದಲ್ಲಿ ಅಧಿಕಾರಯುಕ್ತ ವಾಣಿಯಿಂದ ಮಾತನಾಡಬಲ್ಲ ಶ್ರೇಷ್ಠವ್ಯಕ್ತಿ. ಅವರ ಅಭಿಪ್ರಾಯದಂತೆ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು ವಾಸ್ತು ಶಿಲ್ಪಸೃಷ್ಟಿಯಲ್ಲಿ ರತ್ನಪ್ರಾಯವಾಗಿದೆ. ಗಾಥಿಕ್ ಕಲೆಯ ಯಾವ ನಿರ್ಮಿತಿಗಿಂತಲೂ ಇದು ಅದೆಷ್ಟೋ ಮಿಗಿಲಾದದ್ದು. ವಿಷ್ಣುವರ್ಧನನ ಅಧಿಕಾರಿಗಳಲ್ಲಿ ಒಬ್ಬನಾದ ಕೇತಮಲ್ಲನ (ಕ್ರಿ.ಶ. 1121) ಆಜ್ಞೆಯಂತೆ ಈ ದೇವಾಲಯ ಕಾರ್ಯವನ್ನು ಪ್ರಾರಂಭಿಸಲಾಯಿತು, ಮತ್ತು ಇಪ್ಪತ್ತು ವರ್ಷಗಳ ತರುವಾಯ ನಿರ್ಮಾಣಕಾರ್ಯ ಮುಗಿಯಿತು. ಇದನ್ನು ನಿರ್ಮಿಸಿದಾತನು, ನರಸಿಂಹದೊರೆಯ ಪ್ರಖ್ಯಾತ ಸ್ಥಪತಿ ಕೇದಾರೋಜನು. ಈತನು ದೇವಾಲಯಕ್ಕೆ ನಾಲ್ಕು ದ್ವಾರಗಳನ್ನೂ ಮರೆಯ ಸಲುವಾಗಿ ಅಲಂಕೃತ ರಂಧ್ರರಚಿತ ತೆರೆಗಳನ್ನೂ ಅಳವಡಿಸಿದನು. ಫರ್ಗ್ಯೂಸನ್ ಅವರು, ಅಥೆನ್ಸಿನ ಪಾರ್ಥೆನಾನ್ (Parthenon) ಮತ್ತು ಹಳೇಬೀಡಿನ ಹೊಯ್ಸಳ ದೇವಾಲಯ—ಇವುಗಳ ನಡುವೆ ತುಲನಾತ್ಮಕ ವಿಚಾರ ಮಂಡಿಸುತ್ತಾರೆ. ಈ ಎರಡೂ ಮಂದಿರಗಳು ಒಂದರಿಂದ ಒಂದು ತೀರ ವಿಭಿನ್ನವೆಂಬುದೇನೋ ನಿಜ. ಸ್ಥಾಪತ್ಯರಚನಾವಿನ್ಯಾಸ ದೃಷ್ಟಿಯಿಂದ ಇವು ಅಲ್ಫಾ (ಗ್ರೀಕವರ್ಣಮಾಲೆಯ ಮೊದಲ ಅಕ್ಷರ) ಮತ್ತು ಒಮೆಗಾ (ಗ್ರೀಕ ವರ್ಣಮಾಲೆಯ ಕೊನೆಯ ಅಕ್ಷರ) ಇದ್ದಂತೆ. ಆದರೆ ಅವು ಆಯಾ ವರ್ಗಗಳಿಗೆ ಸಂಬಂಧಿಸಿದಂತೆ ಅತ್ಯುತ್ತಮ ಉದಾಹರಣೆಗಳಾಗಿವೆ; ಮತ್ತು ಅವುಗಳ ಮಧ್ಯಾಂತರದಲ್ಲಿಯೇ ಕಲಾಕೌಶಲದ ವಿಸ್ತಾರವೆಲ್ಲ ಹರಡಿಕೊಂಡಿದೆ. ಫರ್ಗ್ಯೂಸನ್ ಬರೆಯುತ್ತಾರೆ:—"ವಾಸ್ತುವಿನ್ಯಾಸ ನಿರ್ಮಿತಿಗೆ ಪರಿಶುದ್ಧವೂ

ಸಂಸ್ಕಾರ ಸಂಪನ್ನವೂ ಆದ ಬೌದ್ಧಿಕ ಬಲ ಹೇಗೆ ಬೆರೆಯಿಸಬಹುದು ಎಂಬುದಕ್ಕೆ ಪಾರ್ಥೆನಾನ್ (Parthenon) ಒಂದು ಉತ್ತಮ ಉದಾಹರಣೆ ಆಗಿದೆ. ಪ್ರತಿಯೊಂದು ಭಾಗವೂ ಪ್ರತಿಯೊಂದು ಪರಿಣಾಮವೂ ಸಂಖ್ಯಾಶಾಸ್ತ್ರದ ನಿರ್ಣೀತವಾದ ಲೆಕ್ಕಕ್ಕೆ ತಕ್ಕಂತೆ ನಿಯೋಜಿತವಾಗಿದ್ದು, ಇದಕ್ಕೆ ಇನ್ನೆಂದೂ ಸರಿಸಾಟಿ ಇರಲಿಲ್ಲ ಎಂಬಂತೆ, ಯಾಂತ್ರಿಕ ಅಸಂದಿಗ್ಧತೆಯಿಂದ ಈ ಮಂದಿರ ರಚಿತವಾಗಿದೆ. ಇದೆಲ್ಲಕ್ಕೂ ವಿರುದ್ಧವಾಗಿದೆ ಹಳೇಬೀಡಿನ ದೇಗುಲ. ಇದು ನಿಯಮಬದ್ಧವೇನೋ ಇದೆ. ಆದರೆ ಭೂವಿನ್ಯಾಸದ (Plan) ಬಾಹ್ಯರೂಪರೇಖೆಯಲ್ಲಿ ವಿಚಾರಪೂರ್ವಕ ವೈವಿಧ್ಯ ಸಾಧಿಸಿದ್ದಿದೆ. ಇದಕ್ಕೂ ಹೆಚ್ಚಿನ ವೈವಿಧ್ಯ ಕಂಡುಬರುವದು ವಿವರ ಯೋಜನೆಯಲ್ಲಿ. ಪಾರ್ಥೆನಾನ್ (Parthenon) ಮಂದಿರದ ಕಂಬಗಳೆಲ್ಲ ಒಂದೇ ಬಗೆಯಾಗಿವೆ. ಆದರೆ, ಭಾರತದ ಮಂದಿರದಲ್ಲಿ ಯಾವ ಎರಡು ಸಣ್ಣ ಭಾಗಗಳೂ ಸರ್ವಥಾ ಒಂದೇ ಬಗೆಯಾಗಿ ಇರುವದಿಲ್ಲ. ಒಂದೊಂದು ಅಲಂಕಾರ್ಕರೇಖೆಯ ಮಾಟ-ಮಣಿತವೂ ಒಂದೊಂದು ಬಗೆ. ಸಮಸ್ತ ಮಂದಿರದಲ್ಲಿ ಯಾವ ಎರಡು ಮೇಲು ಹೊದಿಕೆಯ ಹಂದರಗಳೂ (Canopy) ಒಂದರಂತೆ ಒಂದಿರುವದಿಲ್ಲ; ಮತ್ತು ಒಂದೊಂದು ಭಾಗವೂ ಆನಂದಭರಿತ ಕಲ್ಪನಾ ವೈಪುಲ್ಯವನ್ನು ಪ್ರದರ್ಶಿಸುತ್ತದೆ— ಲೆಕ್ಕಾಚಾರದ ಪ್ರತಿ ಕಟ್ಟುನಿಟ್ಟನ್ನು ಕಡೆಗಣಿಸಿಯೂ ಕೂಡ. ಮಾನವ ಗ್ರಹಿಕೆಯಲ್ಲಿ ಯಾವುದೆಲ್ಲ ಕ್ರೂರವೋ ಅಥವಾ ಯಾವುದೆಲ್ಲ ಮಾನವ ಭಾವನಿರ್ಭರ ಮಾರ್ದವತೆಯಿಂದ ಗಭೀರವೋ ಅವೆಲ್ಲವನ್ನೂ ಇಲ್ಲಿ ಈ ಭಿತ್ತಿಗಳ ಮೇಲೆ ಚಿತ್ರಿಸಲಾಗಿದೆ. ಆದರೆ, ಶುದ್ಧ ಬುದ್ಧಿ ಪ್ರದರ್ಶನದ ದೃಷ್ಟಿಯಿಂದ ಇಲ್ಲಿ ಏನೂ ಇಲ್ಲವೇ ಇಲ್ಲ—ಇದೇ ಬಗೆಯಾಗಿ ಪಾರ್ಥೆನಾನ್ (Parthenon) ಮಂದಿರದಲ್ಲಿ ಮಾನವ ಭಾವಲೇಶವೂ ಕಣ್ಣಿಗೆ ಬೀಳದು.

"ಭಾರತದ ಈ ಮಾದರಿಗಳ ಅಭ್ಯಾಸದ ಮೌಲ್ಯ ಏನೆಂದರೆ,—ಇದು ವಾಸ್ತು ವಿಷಯಕ ವಿವೇಚನೆಯ ಮೂಲಭೂತ ದೃಷ್ಟಿಯನ್ನೇ ಅಪರಿಮಿತ ಎನ್ನುವಷ್ಟು ವಿಸ್ತಾರಗೊಳಿಸುತ್ತದೆ. ಈ ವರೆಗೆ ನಮಗೆ ಸುಪರಿಚಿತವಿದ್ದ ರೂಪಗಳಿಂದ ತೀರ ವಿಭಿನ್ನವಾದ, ಮತ್ತು ಸಂಪೂರ್ಣವಾಗಿ ಒಂದರಂತೆ ಒಂದಲ್ಲದ ರೂಪ ಆಕಾರಗಳಿಗೆ ನಾವು ಪಳಗಿಕೊಂಡ ಮೇಲೆ ನಮಗನಿಸುತ್ತದೆ,—ನಮ್ಮ ದೃಷ್ಟಿ ತೀರ ಸಂಕುಚಿತ ಎಂದು; ಅದು ಒಂದೇ ಬಗೆಯ ರೂಪದಿಂದ ಅಥವಾ ಒಂದೇ ಬಗೆಯ ಮೋಹಕ ಆಕಾರದಿಂದ ತೃಪ್ತ ಎಂದು".

ಪರ್ಸಿ ಬ್ರಾವುನ್ ಸಹ ಇದೇ ಭಾವನೆಯನ್ನು ಪ್ರತಿಧ್ವನಿಸುತ್ತಾರೆ. ಅವರೆನ್ನುವರು 'ಹಳೇಬೀಡಿನ ದೇವಾಲಯವು, ಧನವ್ಯಯ ದೃಷ್ಟಿಯಿಂದ ಅತಿಶಯವೆನಿಸಿದರೂ, ರೂಪ ನಿರ್ಮಾಣ ದೃಷ್ಟಿಯಿಂದ ಉತ್ಕೃಷ್ಟತೆಯ ಶಿಖರವಾಗಿ ಮೆರೆಯುತ್ತದೆ'.

ಸೋಮನಾಥಪುರದ ಕೇಶವ ದೇವಾಲಯದ ಪ್ರಾಕಾರಸಹಿತ ಉದ್ದಗಲ ಒಟ್ಟು 215' × 177' ಉಂಟು. ಮಂದಿರದ ಮಧ್ಯದ ಸಮಚತುಷ್ಕೋನಾಂಗಣದಲ್ಲಿ ತ್ರಿಕೂಟಾಚಲನುಂಟು. ಸುತ್ತಲೂ ಅರುವತ್ತನಾಲ್ಕು ಸಣ್ಣ ಸಣ್ಣ ಕೋಣೆಗಳಿದ್ದು, ಒಂದೊಂದರ ಮುಂದೂ ಕಂಬಗಳುಂಟು. ಈ ದೇವಾಲಯವು ನಕ್ಷತ್ರಾಕಾರದ ಗೋಪುರಗಳಿಂದಲೂ, ಲಾವಣ್ಯಪೂರ್ಣ ಶಿಲ್ಪಕೃತಿಗಳಿಂದಲೂ ಅಪ್ರತಿಮ ಎನಿಸಿಕೊಂಡಿದೆ. ಮಧ್ಯವರ್ತಿ ಗರ್ಭಗೃಹದ ಮೂಲ ಮೂರ್ತಿಯು ಬಹುಶಃ ಕಳೆದು ಹೋಗಿದ್ದು, ಅದರ ಸ್ಥಳದಲ್ಲಿ ಒಂದು ಸಾಮಾನ್ಯ ಮೂರ್ತಿಯಿದೆ. ಸಣ್ಣ ಬಲಕೋಣೆಯಲ್ಲಿನ ವೇಣುಗೋಪಾಲ ವಿಗ್ರಹ ಮತ್ತು ಎಡಕೋಣೆಯಲ್ಲಿನ ಜನಾರ್ದನ ವಿಗ್ರಹ-ಇವುಗಳ ಕಾರುಕಾರ್ಯ ಕಲಾದೃಷ್ಟಿಯಿಂದ ಚಾರುತಮವಾಗಿದೆ. ಆ ಪಟ್ಟಣ ಮತ್ತು ಆ ದೇವಾಲಯ ಎರಡೂ ಕ್ರಿ.ಶ. 1268ರಲ್ಲಿ ಸೋಮ ಎಂಬ ಮುಮ್ಮಡಿ ನರಸಿಂಹನ ದಂಡನಾಯಕನಿಂದ ಸ್ಥಾಪಿತವಾದಂಥವು.

ಶ್ರೇಷ್ಠಶ್ರೇಣಿಯ ಹೊಯ್ಸಳ ದೇವಾಲಯಗಳನ್ನು ನಿರ್ಮಿಸಿದ ಕೆಲವರು ಪ್ರಖ್ಯಾತ ಶಿಲ್ಪಿಗಳ ಮತ್ತು ಸ್ಥಪತಿಗಳ ಬಗೆಗೆ ಸ್ವಲ್ಪ ಸಂಗತಿಗಳನ್ನು ಸಂಗ್ರಹಿಸಬಹುದಾಗಿದೆ. ಸರ್ವಸಾಮಾನ್ಯ ತಿಳಿವಳಿಕೆ ಏನೆಂದರೆ, ಬೇಲೂರ ದೇವಾಲಯವು ಜಕಣಾಚಾರಿ ಮತ್ತು ಅವನ ಮಗ ಡಂಕಣಾಚಾರಿ—ಇವರ ಪರಿಶ್ರಮದ ಫಲ ಎಂದು. ಆದರೆ ಇದು ಕೇವಲ ಕಲ್ಪಿತ ದಂತಕಥೆ, ವಾಸ್ತವ ಇತಿಹಾಸವಲ್ಲ. ವಸ್ತುತಃ, ವಿಷ್ಣುವರ್ಧನನ ಬೇಲೂರ ಶಿಲ್ಪಿಗಳ ಹೆಸರು ತಿಳಿದು ಬರುತ್ತವೆ. ಶಿಲ್ಪಿಗಳು ತಾವು ಕಂಡರಿಸಿದ ಪ್ರತಿಮೆಗಳ ಬುಡದಲ್ಲಿ ತಮ್ಮತಮ್ಮ ಹೆಸರುಗಳನ್ನು ಕೊರೆದಿದ್ದಾರೆ. ಇವರೆಲ್ಲರಲ್ಲಿ ಅಗ್ರಗಣ್ಯರೆಂದರೆ: ದಾಸೋಜ, ಮತ್ತು ಅವನ ಮಗ ಚವನ (ಚಾವಣ). ಇವರು ಬಳ್ಳಿಗ್ರಾಮದಿಂದ (ಬಳ್ಳಿಗಾವೆ) ಬಂದವರು. ಹೊರಗೋಡೆಯಲ್ಲಿ ಮೂವತ್ತೆಂಟು ಶಿಲಾಬಾಲೆಯರ ಪ್ರತಿಮೆಗಳಿದ್ದು ಅವುಗಳಲ್ಲಿ ದಾಸೋಜ ಕಂಡರಿಸಿದ ಪ್ರತಿಮೆಗಳು ಇವು: ಉಡುಗೆ ಸೆಳೆವ ಕೋತಿಯೊಂದಿಗೆ ನಿಂತ ಬಾಲೆ, ತನ್ನ ಕೇಶಪಾಶದಿಂದ ನೀರುಹಿಂಡುವ ಕೋಮಲೆ, ಲೋಲಾಕುವಿನೊಂದಿಗಿರುವ ಕಾಳಿ. ಇವಲ್ಲದೆ ನವರಂಗದ ನಾಲ್ಕು ಕಂಬಗಳ ಮದನಕೈ ಒಂದರ ಮೇಲೆ ಸಹ, ತನ್ನದೀರ್ಘ ಕೇಶಪಾಶದಲ್ಲಿನ ನೀರು ಹಿಂಡುವ ಸುಂದರಿಯೋರ್ವಳ ಪ್ರತಿಮೆಯಿದ್ದು ಅದು ಕೂಡ ದಾಸೋಜ ಕೃತವೇ. ಡಾ॥ ಆಶ್ವಿನ್ ಲಿಪ್ಪೆ (Dr. Aschwin Lippe), ಮೆಟ್ರೋಪೊಲಿಟನ್ ಮ್ಯೂಜಿಯಂ ಕ್ಯುರೇಟರ್, ನ್ಯೂಯಾರ್ಕ್—ಇವರು, ಕೇಶವ ವಿಗ್ರಹದ ಪಾದಪೀಠದ ಮೇಲಿದ್ದ ಲಿಪಿಯ ಮುದ್ರಿಕೆಯೊಂದನ್ನು ಕಳಿಸಿದ್ದು, ಅದರ ಮೇಲೆ ಬಳ್ಳಿಗಾಮೆ ದಾಸೋಜನ ಹೆಸರಿದೆ. ನಾಲ್ಕು ಅಡಿ ಎತ್ತರದ ಕೇಶವನ ಸುಂದರವಾದ ಈ ಮೂರ್ತಿಯು ಕಿಕ್ಕೇರಿ ಎಂಬ ಸ್ಥಳದ್ದು. ಪ್ರಖ್ಯಾತ ಪ್ರದರ್ಶನಾಲಯದ ದಾಖಲೆ ಪುಸ್ತಕದಲ್ಲಿ ಬರೆಯಲಾದ ವಿವರಗಳು ಸರಿಯಾಗಿದ್ದ ಪಕ್ಷದಲ್ಲಿ, ಒಂದು ಸಂಗತಿ ವ್ಯಕ್ತಪಡುತ್ತದೆ. ಅದೆಂದರೆ: ನಮ್ಮ ಈ ಪ್ರಖ್ಯಾತ ಶಿಲ್ಪಿ ದಾಸೋಜ ಕಿಕ್ಕೇರಿಯಲ್ಲಿಯೂ ಕೆಲಸಮಾಡುತ್ತಿದ್ದ. ದಾಸೋಜನ ಹೆಸರು ಕೊರೆಯಲಾದ ಒಂದು ವಿಗ್ರಹವು, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಿಂದಲೂ ಬಂದಿದೆ.

ಚಾವಣ (ಚವನ) ಸಹ ಬೇಲೂರಲ್ಲಿ ನಾಲ್ಕು ಮದನಕೈ ವಿಗ್ರಹಗಳನ್ನು ಕಂಡರಿಸಿದ್ದಾನೆ. ಚಪಲಳಾದ ಬೇಟೆಗಾರ್ತಿ ಮತ್ತು ನೃತ್ಯಲೀನ ಸುಂದರಿ—ಈ ಮನೋಮೋಹಕ ವಿಗ್ರಹಗಳು ನವರಂಗದ ಸ್ತಂಭದ ಮೇಲಿದ್ದು ಅವುಗಳ ಕರ್ತೃ ಚವನ ಎಂಬ ಶಿಲ್ಪಿ. ದಾಸೋಜ, ಚವನರಿಗೆ ಅನೇಕ ಬಿರುದುಗಳಿದ್ದವು. ದಾಸೋಜನು "ಬಿರುದ ರೂವಾರಿ ಗೊಂದಲ ಬಡಿವ" ಎಂಬ ಬಿರುದು ಧರಿಸಿದ್ದರೆ, ಚವನನ ಬಿರುದು,—"ಮುಚ್ಚರಿಪ ಬಿರುದ ರೂವಾರಿ ಮದನ ಮಹೇಶ" ಎಂದು. ಅವನ ಇನ್ನೊಂದು ಬಿರುದು, "ಮುಚ್ಚರಿಪ ಬಿರುದ ರೂವಾರಿ ಶರಭ ಭೇರುಂಡ". ಬೇಲೂರ ದೇವಾಲಯದ ಶಿಲ್ಪ ವೈಭವಕ್ಕೆ ತಮ್ಮ ತಮ್ಮ ಕೊಡುಗೆ ನೀಡಿದ ಬೇರೆ ಹಲವರು ಮಹತ್ವದ ಶಿಲ್ಪಿಗಳ ಹೆಸರುಗಳು ತಿಳಿದಿವೆ. ಪಾದರಿ ಮಲ್ಲೋಜ—ಬಿರದ ರೂವಾರಿ ಗನಡ್ಗತ್ತರಿ; ಮಲ್ಲಿಯಣ್ಣ—ಮುಚ್ಚರಿಪ ರೂವಾರಿ ಗಿರಿ ವಜ್ರದಂಡ; ಗದುಗಿನ ನಾಗೋಜ—ರೂವಾರಿ ಜಗದ್ವಲ್ಲಣ; ಮತ್ತು ಚಿಕ್ಕಹಂಪ.

ಹಳೇಬೀಡು ಕೂಡ ಹಲವರು ಪ್ರಖ್ಯಾತ ಶಿಲ್ಪಿಗಳ ಹೆಸರು ಒದಗಿಸುವುದು. ಕಾಲಿದಾಸಿ ಎಂಬಾತ ಕೇದಾರೋಜನಿಗಾಗಿ ಕೆಲಸ ಮಾಡುತ್ತಿದ್ದನು. ಹೊಯ್ಸಳೇಶ್ವರ ಮಂದಿರದ ಮತ್ತೊಬ್ಬ ಶ್ರೇಷ್ಠ ಶಿಲ್ಪಿ ಮಬು ಎಂಬಾತ. ಕೇದಾರೇಶ್ವರ ಮಂದಿರದಲ್ಲಿರುವ ನಾಟ್ಯಸರಸ್ವತೀ ವಿಗ್ರಹವು ಹರಿಪ ಎಂಬ ಶಿಲ್ಪಿಯ ಕೃತಿ.

ಹೊಯ್ಸಳರ ಕಾಲದ ಮತ್ತೊಬ್ಬ ಉತ್ತಮ ಶಿಲ್ಪಿ ಮಲ್ಲಿತಮ್ಮ. ಈತನ ಹೆಸರು ಮೊದಲು ಕಾಣಿಸಿಕೊಳ್ಳುವದು ತರಿಕೆರೆ ತಾಲೂಕು ಅಮೃತಪುರದ ಅಮೃತೇಶ್ವರ ಮಂದಿರದಲ್ಲಿ. ಇಮ್ಮಡಿ ಬಲ್ಲಾಳನ ಆಳಿಕೆಯಲ್ಲಿ, ಕ್ರಿ.ಶ. 1196ರಲ್ಲಿ ಅಮೃತೇಶ್ವರ ದಣ್ಣಾಯಕ ಇದನ್ನು ಕಟ್ಟಿಸಿದನು. ಈತನು ಆ ಮೇಲೆ

ಕೆಲಸಮಾಡಿದ್ದು ಕ್ರಿ.ಶ. 1234ರಲ್ಲಿ ಹಾರನಹಳ್ಳಿಯ ಕೇಶವ ಮಂದಿರದಲ್ಲಿ. ಹಾರನಹಳ್ಳಿ—ಹಾಸನ ಜಿಲ್ಲೆಯಲ್ಲಿ ಅರಸಿಕೆರೆಯ ದಕ್ಷಿಣಕ್ಕೆ ಐದು ಮೈಲಿ ದೂರದಲ್ಲಿದೆ.

ನುಗ್ಗೆಹಳ್ಳಿಯ ಲಕ್ಷ್ಮೀನರಸಿಂಹ ದೇಗುಲದ ಉತ್ತರ ದಿಕ್ಕಿನ ಗೋಡೆಯ ಮೇಲೆ ಮಲ್ಲಿತಮ್ಮನಿಂದ ರಚಿತವಾದ ಹದಿನಾರು ವಿಗ್ರಹಗಳಿವೆ. ನುಗ್ಗೆಹಳ್ಳಿ ಇರುವದು, ಹಾಸನ ಜಿಲ್ಲೆಯ ಚೆನ್ನರಾಯ ಪಟ್ಟಣದ ಈಶಾನ್ಯಕ್ಕೆ ಹನ್ನೆರಡು ಮೈಲಿದೂರದಲ್ಲಿ. ಸೋಮೇಶ್ವರನ ಆಳಿಕೆಯಲ್ಲಿ ಸೋಮಣ್ಣ ದಣ್ಣಾಯಕ ಎಂಬಾತನು ಕ್ರಿ.ಶ. 1249ರಲ್ಲಿ ಈ ದೇವಾಲಯ ಕಟ್ಟಿಸಿದನು. ಮಲ್ಲಿತಮ್ಮನ ಸಂಗಾತಿಯಾದ ನಂದಿಯ ಬೈಚೋಜನು, ಈ ದೇವಾಲಯದ ದಕ್ಷಿಣದ ಗೋಡೆಯ ಮೇಲಿನ ಪ್ರತಿಮೆಗಳನ್ನು ನಿರ್ಮಿಸಿದನು. ಬೈಚೋಜನ ಹೆಸರು ತುಮಕೂರು ಜಿಲ್ಲೆಯ ನಾಗಲಾಪುರದ ಕೇಶವೇಶ್ವರ ಮಂದಿರದಲ್ಲಿಯೂ ಕಾಣಿಸಿಕೊಳ್ಳುತ್ತದೆ.

ಹಾಸನ ಜಿಲ್ಲೆಯ ಜಾವಗಲ್ಲಿನ ಲಕ್ಷ್ಮೀನರಸಿಂಹ ದೇಗುಲದಲ್ಲಿ, ಮತ್ತು ಮಂಡ್ಯಜಿಲ್ಲೆಯ ಗೋವಿಂದನ ಹಳ್ಳಿಯ ಪಂಚಲಿಂಗ ದೇಗುಲದಲ್ಲಿ ಮಲ್ಲಿತಮ್ಮನು ಅಂಕಿತಹಾಕಿದ ಅನೇಕ ಮೂರ್ತಿಗಳಿವೆ. ಜಾವಗಲ್ಲ ದೇವಾಲಯದಲ್ಲಿ ಈತನು ಹದಿನೇಳು ಮೂರ್ತಿಗಳನ್ನು ಕಂಡರಿಸಿದ್ದಾನೆ. ಅಲ್ಲದೆ, ಎಡಬಲಕ್ಕೆ ಮದ್ದಳೆಯ ವಾದ್ಯದವರಿದ್ದ ನಾಟ್ಯಲಕ್ಷ್ಮಿಯ ವಿಗ್ರಹವಂತೂ ಬಹಳ ಅಂದವಾಗಿದೆ. ಗೋವಿಂದನ ಹಳ್ಳಿಯ ಪಂಚಲಿಂಗ ದೇಗುಲದಲ್ಲಿ ಇಬ್ಬರು ದ್ವಾರಪಾಲಕರ ಮೂರ್ತಿಗಳಿಗೆ ಮಲ್ಲಿತಮ್ಮನ ಅಂಕಿತ ಉಂಟು. ಆದರೆ ಈತನ ಪ್ರತಿಭೆಗೆ ಮತ್ತು ಕಾರುಕಾರ್ಯ ಕೌಶಲಕ್ಕೆ ಕಳಸವಿಡುವ ಕೃತಿ ಎಂದರೆ, ಕ್ರಿ.ಶ. 1268ರಲ್ಲಿ ರಚಿತವಾದ ಸೋಮನಾಥಪುರದ ಸುಪ್ರಸಿದ್ಧ ಕೇಶವದೇವಾಲಯ. ಸುಮಾರು ನಾಲ್ವತ್ತು ಪ್ರತಿಮೆಗಳಿಗೆ ಮಲ್ಲಿತಮ್ಮನ ಅಂಕಿತವಿದೆ.

ಮಾಲ್ಲಿತಮ್ಮನ ಆಶ್ರಯದಾತನಾದ ಸೋಮನು, ಜಕ್ಕಣ್ಣ ಎಂಬ ಶಿಲ್ಪಿಯನ್ನೂ ತುರುವೆಕೆರೆಯ (ತುಮಕೂರುಜಿಲ್ಲೆ) ಮೂಲೆಶಂಕರೇಶ್ವರ ದೇವಾಲಯದ ಅಲಂಕರಣಕ್ಕೆ ನಿಯಮಿಸಿಕೊಂಡಿದ್ದನು ಎಂಬ ವಿಷಯ ಕೂತೂಹಲಕಾರಿ ಆಗಿದೆ. ಜಕ್ಕಣ್ಣನು ದಾಸೋಜ ಮತ್ತು ಕಾಲಿದಾಸಿ ಎಂಬ ಶಿಲ್ಪಿಗಳ ತರುವಾಯ ಬಂದವನಾದರೂ ಕರ್ನಾಟಕದಲ್ಲೆಲ್ಲ, ಆತನ ಹೆಸರು ಬೆಳ್ಳಕ್ಕರಿಗರೆನಿಸಿದ ಹಳ್ಳಿಗರ ಬಾಯಲ್ಲಿ ಕೂಡ ಕೇಳಿಬರುತ್ತದೆ. ಇಷ್ಟೇಅಲ್ಲ, ಹೊಯ್ಸಳ ಶೈಲಿಯ ಸ್ಥಾಪತ್ಯ ಮತ್ತು ಶಿಲ್ಪ ಸಮಸ್ತವೂ ಜಕ್ಕಣನಿಂದಲೇ ನಿರ್ಮಿತ ಎಂಬಂತಾಗಿದೆ. ತಾವು ನಿರ್ಮಿಸಿದ ಶಿಲ್ಪಕೃತಿಗಳ ಕೆಳಗೆ ಕೇವಲ ತಮ್ಮ ಹೆಸರಿನ ಮೊದಲ ಅಕ್ಷರವನ್ನಷ್ಟೇ ಬರೆಯುವದು ಶಿಲ್ಪಿಗಳ ಸಂಪ್ರದಾಯ ಆಗಿತ್ತೆಂದು ತೋರುತ್ತದೆ. ಮಬ ಎಂಬ ಶಿಲ್ಪಿ 'ಮೋ' ಇಂದಿಷ್ಟೇ ಕೊರೆದಿರುವನು. ಅರಳ ಗುಪ್ಪೆಯ ಕೇಶವ ದೇವಾಲಯದಲ್ಲಿ (ಕ್ರಿ.ಶ. 13 ನೆ ಶತಕ) ಕೆಲಸ ಮಾಡಿದ ಹೊನ್ನೋಜನು ಕೇವಲ 'ಹೇ' ಎಂದು, ಇಪ್ಪತ್ತೇಳು ಮೂರ್ತಿಗಳಲ್ಲಿ ಹದಿಮೂರರ ಮೇಲೆ ಬರೆದಿರುವನು.

ಮಲ್ಲಿತಮ್ಮನಲ್ಲದೆ ಚೌಡಯ್ಯ, ಬಾಲಯ್ಯ, ಮಸಣಿತಮ್ಮ ಮೊದಲಾದವರು ಸೋಮನಾಥಪುರದಲ್ಲಿ ಕೆಲಸಮಾಡಿದವರು. ವೀಣಾವಾದನ ಮಗ್ನಳಾಗಿ ನಿಂತ ಸರಸ್ವತೀ ವಿಗ್ರಹವು ಬಹಳ ವಿಮೋಹಕವಾಗಿದ್ದು ಅದರ ಕರ್ತೃವು ಯಲಮಸಯ ಎಂಬ ಶಿಲ್ಪಿ.

ಮೂಲ ಲೇಖಕರು : ಡಾ॥ ಎಂ. ಶೇಷಾದ್ರಿ
ಅನುವಾದಕರು : ಶ್ರೀ ನಾರಾಯಣ ಸಂಗನು

# ಲಲಿತ ಕಲೆಗಳು

## (ಹೊಯ್ಸಳರ ಕಾಲ)

ಭಾರತೀಯ ಲಲಿತ ಕಲೆಗಳ ಸ್ಫೂರ್ತಿಮೂಲ ಧಾರ್ಮಿಕ ಭಾವನೆ. ಧರ್ಮಶಾಸ್ತ್ರ ಮತ್ತು ತತ್ತ್ವಜ್ಞಾನ ಇವುಗಳು ನಿರ್ದೇಶಿಸುವಂತೆ, ಸೌಂದರ್ಯಾಭಿವ್ಯಕ್ತಿ ಹಾಗು ಸೂಕ್ಷ್ಮಾನುಸೂಕ್ಷ್ಮ ಸೌಂದರ್ಯ ಬೋಧೆಯ ಪ್ರಚೋದನೆ-ಇವೇ ಲಲಿತಕಲೆಗಳ ಗುರಿ. ಜೀವನದ ಗುರಿಗೆ ಅನುಗುಣವಾಗಿಯೇ ಲಲಿತಕಲೆಗಳು ವ್ಯಕ್ತವಾಗುತ್ತವೆ. ಸ್ಥಳೀಯ ಪರಿಕರ ಪರಿಸ್ಥಿತಿಗಳಿಗೆ ಅನುಸಾರವಾಗಿ ಲಲಿತಕಲೆಗಳು ರೂಪಗೊಳ್ಳುವದುಂಟು. ಕರ್ಣಾಟಕವು ನೂರಾರು ವರ್ಷಗಳಿಂದಲೂ ಧಾರ್ಮಿಕ ಪ್ರಭಾವಗಳಿಗೆ ಒಳಗಾದ ನಾಡು. ವೈವಿಧ್ಯಪೂರ್ಣವೂ ಚಿತ್ತಾಕರ್ಷಕವೂ ಆದ ನೈಸರ್ಗಿಕ ದೃಶ್ಯಗಳಿಂದ ಕೂಡಿದ ದೇಶ ಕರ್ಣಾಟಕ. ತತ್‌ಪರಿಣಾಮವಾಗಿ ಭಾರತೀಯ ಲಲಿತಕಲಾಭಂಡಾರಕ್ಕೆ ಕನ್ನಡ ನಾಡು ಕೊಟ್ಟ ಕೊಡುಗೆ ತುಂಬ ವೈಭವೋಪೇತವಾದದ್ದು; ಅಲ್ಲದೆ, ಅದು ತನ್ನ ಲಲಿತ ಕಲೆಗಳಲ್ಲಿ ಜನಜೀವನದ ಬಲ ವೈಪುಲ್ಯವನ್ನೂ ಆನಂದ ಸಮೃದ್ಧಿಯನ್ನೂ ಧಾರಾಳವಾಗಿ ಸುರಿದಿದೆ. ಹೊಯ್ಸಳರ ಪ್ರಭುತ್ವದಲ್ಲಿ, ಕರ್ಣಾಟಕದ ವಾಸ್ತುಕಲೆ ಮತ್ತು ಶಿಲ್ಪಕಲೆ ಇವು ಸ್ವಯಂ ಪ್ರತಿಭೆ, ಕಲ್ಪಕತೆ, ಕಾರ್ಯಕೌಶಲ, ಕಲಾಚಮತ್ಕೃತಿ, ವಾಸ್ತುಮಂಡನೆ, ವಿವರ ದಕ್ಷತೆ—ಈ ಎಲ್ಲ ದೃಷ್ಟಿಯಿಂದಲೂ ಶ್ರೇಷ್ಠತೆಗೆ ಸಾಕ್ಷಿಸ್ವರೂಪವಾಗಿವೆ. ಹೊಯ್ಸಳರ ಕಾಲದಲ್ಲಿ ವರ್ಣರಂಜಿತ ಚಿತ್ರಕಲೆ, ಸಂಗೀತ, ಮತ್ತು ನೃತ್ಯ ಇವೇ ಮೊದಲಾದ ಲಲಿತಕಲೆಗಳು ಹೇಗೆ ವಿಕಾಸಗೊಂಡವು ಎಂಬ ಬಗೆಗೆ ನೇರವಾದ ಉಲ್ಲೇಖಗಳು ಎಲ್ಲಿಯೂ ದೊರಕುವದಿಲ್ಲ. ಆದರೆ, ಹೊಯ್ಸಳರ ಕಾಲದ ಹಳೇಬೀಡು, ಬೇಲೂರು, ಸೋಮನಾಥಪುರ, ಮತ್ತು ಇನ್ನಿತರ ಕಡೆಗಳಲ್ಲಿರುವ ದೇವಾಲಯಗಳಲ್ಲಿನ ಮೂರ್ತಿಶಿಲ್ಪದ ಕೂಲಂಕಷ ಅನುಶೀಲನದಿಂದ, ಲಲಿತಕಲೆಗಳ ವಿಕಾಸವಿಷಯಕ ಕಲ್ಪನೆ ನಮಗೆ ಬರುವದು. ಅಸಂಖ್ಯಾತವಾಗಿ ದೊರಕುವ ನಾನಾವಿಧ ಶಿಲಾಮೂರ್ತಿಗಳು ಜೀವಸ್ಪಂದನದಿಂದ ಕೂಡಿದಂಥವುಗಳಾಗಿವೆ.

ಸಹಜ ಸ್ವಾಭಾವಿಕ ರೂಪ ಪ್ರತಿಪಾದನೆಯ ದೃಷ್ಟಿಯಿಂದ ಕನ್ನಡ ಕಲಾಕಾರರು ಸಿದ್ಧಹಸ್ತರೆಂದೇ ಹೇಳಬೇಕು. ಲಾವಣ್ಯ, ಪ್ರಾಸಾದಿಕತೆಗಳು, ಅಂತರ್ನಿಹಿತ ಬಲ ಮತ್ತು ಜೀವಂತ ಚಲನೆಗಳು ಅಭಿರಾಮತೆಯಿಂದ ಬೆರೆದು ಎಲ್ಲ ಮಾನವ ಮತ್ತು ಪ್ರಾಣಿಗಳ ಶಿಲ್ಪಕೃತಿಗಳಲ್ಲಿ ಹೊರಹೊಮ್ಮಿದ್ದುಂಟು. ಇದರಿಂದಾಗಿ ಹೊಯ್ಸಳರ ಕಾಲದಲ್ಲಿ ರೂಪಸಂಬಂಧೀಯ ಕಾರುಕಾರ್ಯ ಕಳಸ ಕಟ್ಟಿತ್ತು ಎಂಬುದು ಸಿದ್ಧವಾಗುತ್ತದೆ.

ಚಾಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದಲ್ಲಿ, ಸುಪ್ರಸಿದ್ಧ ಅಜಂತಾ ಪ್ರದೇಶವು ಬಹುಶಃ ಕರ್ಣಾಟಕ ಸಾಮ್ರಾಜ್ಯದ ಭಾಗವಾಗಿರಬೇಕು. ಏನಿಲ್ಲವೆಂದರೂ ಅದು ಕರ್ಣಾಟಕದ ಗಡಿಗಳಿಗೆ ತೀರ ಸಮೀಪವರ್ತಿಯಾಗಿತ್ತು. ಅಜಂತಾದ ಭಿತ್ತಿ ಚಿತ್ರಗಳಲ್ಲಿ ಒಂದು, ಇಮ್ಮಡಿ ಪುಲಿಕೇಶಿಯು ಪರ್ಸಿಯನ್ ರಾಯಭಾರಿಯನ್ನು ಸ್ವಾಗತಿಸುವ ದೃಶ್ಯ ಎಂದು ಹೇಳಲಾಗುತ್ತದೆ. ಅದೇನೇ ಇರಲಿ, ಅಜಂತಾಗುಹೆಗಳಲ್ಲಿ ಒಳಮಾಳಿಗೆಯ ಮೇಲೆ ರೇಖಿಸಲಾದ ಅನೇಕ ಜಾಮಿತಿಕ ಆಕೃತಿಗಳು ತರುವಾಯದ ಕಾಲದಲ್ಲಿ ಕರ್ಣಾಟಕದ ಅನೇಕ ದೇವಾಲಯಗಳಲ್ಲಿ ಶಿಲ್ಪರೂಪದಲ್ಲಿ ಉಪಯೋಗಿಸಲ್ಪಟ್ಟಿವೆ—ವಿಶೇಷತಃ ಮಕರ ತೋರಣ ಅಥವಾ ಭುವನೇಶ್ವರಿಯಲ್ಲಿ. ಅಜಂತಾದ ಸ್ತ್ರೀಪುರುಷರ ರೂಪಗಳಲ್ಲಿ ಉಪಯೋಗಿಸಿದ ಆಭರಣಗಳು ಮತ್ತು ರತ್ನಾದಿ ಅಲಂಕರಣಗಳು ಹೊಯ್ಸಳ ಶಿಲ್ಪಕೃತಿಗಳಲ್ಲಿಯೂ ಕಾಣಬರುತ್ತವೆ; ಮತ್ತು ಅವುಗಳ ಶೈಲಿ

ದಾಕ್ಷಿಣಾತ್ಯ ಶೈಲಿ ಎಂದು ತೋರುತ್ತದೆ. ಬಹುಶಃ ದಕ್ಷಿಣದಿಂದ ಹೋದ ಕಲಾಕಾರರು ಅಜಂತಾದಲ್ಲಿ ಕೆಲಸಮಾಡಿರಬೇಕು. ಕರ್ಣಾಟಕದಲ್ಲಿ, ಹೊಯ್ಸಳರ ಕಾಲದವು ಎಂದು ಹೇಳಬಹುದಾದ ವರ್ಣಚಿತ್ರಗಳ ಅವಶೇಷಗಳು ಬಹಳ ವಿರಳ. ಆದರೂ ಕನ್ನಡ ಕಾವ್ಯಗಳಲ್ಲಿ ಚಿತ್ರಗಳ, ಭಾವಚಿತ್ರಗಳ ಉಲ್ಲೇಖ ವಿಪುಲವಾಗಿ ಬರುವದುಂಟು; ಹಾಗೂ ಇದರ ಜೊತೆಜೊತೆಗೆ ಅಧಿಕಾರಪೂರ್ಣ ಕಲಾವಿಮರ್ಶೆಗೆ ಮತ್ತು ಕಲಾಪ್ರಶಂಸೆಗೆ ಕೊರತೆಯೇನಿಲ್ಲ. ಕನ್ನಡ ಗ್ರಂಥಗಳ ಪಾತ್ರಕೆಗಳಲ್ಲಿರುವ ಚಿತ್ರೀಕರಣವನ್ನು ಅದರಲ್ಲೂ ಜೈನರ ಗ್ರಂಥಮಾತೃಕೆಗಳಲ್ಲಿ, ಗಮನಿಸುವದು ಅವಶ್ಯ, ಅವುಗಳಲ್ಲಿ ಕಲಾವಿದ ರೂಪನಿರ್ಮಾಣ ಮತ್ತು ಅಲಂಕರಣರತನಾದುದನ್ನು ನಾವು ಕಾಣಬಹುದು. ಕನ್ನಡ ಕವಿಗಳಾದ ಪೊನ್ನ, ಮತ್ತು ರುದ್ರಭಟ್ಟ, ಚೀರಘಟ್ಟಿ ಎಂಬ ಓರ್ವ ಹೆಸರಾಂತ ಚಿತ್ರಗಾರನ ಹೆಸರನ್ನು ನಿರ್ದೇಶಿಸುತ್ತಾರೆ. ಶಾಸನಗಳ ಲಿಪಿವಿನ್ಯಾಸ ಸಹ ಉತ್ತಮ ಕೋಟಿಯ ಕಲಾಕಾಂತಿಯಿಂದ ಕೂಡಿದ್ದಾಗಿದೆ. ಅಕ್ಷರಗಳ ಅಡಿ ಮುಡಿಗಳಲ್ಲಿ ಕಾಣುವ ಒಕ್ಕಣಿಕೆಯ ಸೆಳೆತಕ್ಕೆ ಮೂಡಿದ ಗೆರೆಗಳ ಮೋಡಿಯ ಬೆಡಗೇನು ಕಡಮೆಯೆ ? ಅದೇ ಬಗೆಯಾಗಿ ಶಿಲಾಖಂಡದ ಶಿರೋಭಾಗದಲ್ಲಿ ಪರಿಶೋಭಿಸುವ ಶಿಲ್ಪಖಚಿತ ಪಟ್ಟಿಕೆಗಳೂ ಗಮನಾರ್ಹ. ಕ್ರಿ.ಶ. 1159ರಲ್ಲಿ ಓರ್ವ ಶಿಲ್ಪಿಯ ಉಲ್ಲೇಖ ಬರುತ್ತದೆ. ಈತನು ಒಂದೇ ಒಂದು ತಾಡೋಲೆಯ ಪುಟದಲ್ಲಿ ಸ್ಫುಟವಾಗಿ ಸುಂದರವಾಗಿ ವಿರಾಟಪರ್ವದ ಗೋಗ್ರಹಣ ಪ್ರಸಂಗವನ್ನು ಸಂಪೂರ್ಣ ಬರೆದು ಮುಗಿಸಿದ್ದಾನೆ ! (A. K. 141, Rice: Mysore and Coorg from inscriptions, P. 192). ಕೈ ಬರೆಹದ ಬೆಡಗು ಕೂಡ ಕುಂಚ, ಇಲ್ಲವೆ ಕೈ ಉಳಿಯ ಕೌಶಲದ ಹತ್ತಿರಹತ್ತಿರಕ್ಕೇ ಬರುತ್ತದೆ. ಸಂಸ್ಕೃತ ಸಾಹಿತ್ಯ ಗ್ರಂಥಗಳು, ವರ್ಣಸಮೇತ ಅಂಕಿತ ಚಿತ್ರಗಳುಳ್ಳ ಮೊಗಶಾಲೆಗಳ, ಸಂಚಾರೀ ಪ್ರದರ್ಶನಗಳ ಮತ್ತು ರೂಪಸಾದೃಶ್ಯವುಳ್ಳ ಭಾವಚಿತ್ರ ಲೇಖನಗಳ ಮಾತನ್ನು ಪ್ರಸ್ತಾವಿಸುತ್ತವೆ.

ಚಿತ್ರಗಾರನಿಗೆ ನೃತ್ಯ ಕಲೆಯ ವಿಷಯವಾಗಿ ನೈಪುಣ್ಯ ಇರುವದು ಅಗತ್ಯ ಎಂದು ಪರಿಗಣಿಸ ಲಾಗುತ್ತದೆ. "ಕಾಲಕಾಲಾಂತರದ ಭಾರತೀಯ ವರ್ಣ ಚಿತ್ರಗಳಲ್ಲಿ ಕಂಡುಬರುವ ಲಯ, ಭಂಗಿ, ಅಭಿರಾಮತೆ, ಗತಿಶೀಲತೆ, ವಿಗ್ರಹಗಳ ಅಂಗಾಂಗಗಳ ಭಾವೋದ್ದೀಪಕ ಮುದ್ರಾ ವಿಶೇಷಗಳು–ಇವೆಲ್ಲ ಚಿತ್ರಕಾರನು ನೃತ್ಯಾಭ್ಯಾಸಮೂಲಕ ಸ್ವಾಯತ್ತಪಡಿಸಿಕೊಂಡ ಗುಣ ಸಂಪದಗಳೆಂದೇ ಹೇಳಬೇಕು. ಇಂತಹ ಚಿತ್ರಕಾರನಿಗೆ ಅಂಗಚಲನೆಯ ಸಂಮೋಹಿನಿಯ ಬಗೆಗೆ ಒಂದು ಬಗೆಯ ಅಂತರ್ದೃಷ್ಟಿಯೇ ಇರುವದುಂಟು. 'ವಿಷ್ಣುಧರ್ಮೋತ್ತರಂ' ಎಂಬ ಗ್ರಂಥವು ವರ್ಣ ಚಿತ್ರಗಳನ್ನು ಹೀಗೆ ವರ್ಗೀಕರಿಸುತ್ತದೆ: ಸತ್ಯ, ನಗರ, ವೈಣಿಕ, ಮಿಶ್ರ ಎಂದು. ಇವಲ್ಲದೆ ಅರಮನೆಗಳನ್ನು ಅಲಂಕರಿಸಲು ಅಗತ್ಯವಿದ್ದವು ಗಳನ್ನು ನಿರ್ದೇಶಿಸುತ್ತದೆ". (K. ಭರತ ಅಯ್ಯರ್ :Indian Art, P. 66. 1958).

ನೃತ್ಯ ಮತ್ತು ಸಂಗೀತ ಮಾನವನ ಉಚ್ಚ ಆತ್ಮಸಂಬಂಧೀಯ ಸಂವೇದಗಳನ್ನು ಹೊರಹೊಮ್ಮಿ ಸುತ್ತವೆ. ಬೇಲೂರ ಕೇಶವ ದೇವಾಲಯದೊಳಗಿನ ಅಲಂಕರಣ ಪಟ್ಟಿಕೆಗಳಲ್ಲಿ, ಜಾಣ್ಮೆಯಿಂದ ಕೊರೆಯಲಾದ ವಾದನರತ ಪುಟ್ಟಪುಟ್ಟ ಪ್ರತಿಮೆಗಳನ್ನು ಪ್ರದರ್ಶಿಸಲಾಗಿದೆ. ಬೇಲೂರ ದೇವಾಲಯದ ಪೂರ್ವದ್ವಾರದ ಬಲಕ್ಕೆ ಹನ್ನೊಂದನೆಯ ಶಿಲ್ಪಕೃತಿಯು ಒಬ್ಬ ಹುಡುಗನು ಕೊಳಲು ಬಾಜಿಸಿ ಕುಣಿವಂತೆ ತೋರಿಸಿದ್ದಿದೆ. ಇನ್ನು, ಹನ್ನೆರಡನೆಯದು ಒಬ್ಬ ಗಾಡಿಯ ಹಾಡುಗಾರ್ತಿ ಅದೇ ತನ್ನ ಹಾಡು ಮೊದಲಿಸಿದ ಹಾಗಿದೆ. ಆಕೆ ತನ್ನ ಮೋಡಿಗೂಡಿದ ತುಟಿ ಪಟಲಗಳನ್ನು ಅದೇ ಬಿಚ್ಚಿ ಬಾಯ್ದೆರೆಗೆ ಬಂದ ರಾಗದ ಆವೇಗ ಅಂಕೆಯಲ್ಲಿಟ್ಟು ಘನತೆಗೆ ಒಪ್ಪು ವಂತೆ ಹಾಡುವಂತಿದೆ. ಹದಿನಾಲ್ಕನೆಯದು, ಒಬ್ಬ ಲಲನೆ ತನ್ನ ಎಡಗೈಯಲ್ಲಿ ರುದ್ರವೀಣೆ ಹಿಡಿದು ಅದೇ ಒಂದು ರಾಗಾಲಾಪನೆಯನ್ನು ಅದರ ಮೇಲೆ ಮಿಡಿದು ಮುಗಿಸಿದ ಹಾಗುಂಟು. ಈಗ ಪ್ರಚಲಿತವಿರುವ ಹೆಚ್ಚು ಭಾರವಾದ ಸರಸ್ವತೀವೀಣೆಯ ಶೋಧಕ್ಕಿಂತ ಮುಂಚೆ ರುದ್ರವೀಣೆಯೇ ಮೂಲತಃ ಇದ್ದುದು. ರುದ್ರವೀಣೆ ಎರಡು ಸೋರೆಬುರುಡೆಯಿಂದ ದಪ್ಪನಾದ ಬಿದಿರು ಕೊಳವೆಯಿಂದ ಕೂಡಿದ ಹಗುರವಾದ ವಾದ್ಯೋಪಕರಣ. ನರ್ತಕ ಕುಣಿವಾಗ

ಅನಾಯಾಸವಾಗಿ ಕೈಯಲ್ಲಿ ಅಳವಡಿಸಲು ಬರುವಂಥದು. ಹೊಯ್ಸಳ ಕಾಲದ ನೃತ್ಯ ಶಿಲ್ಪದಲ್ಲಿ ಹಾಡುಗಾರಿಕೆಯು ಮತ್ತು ಬಾಜನೆಯು ಸರಿಬೆರಕೆಯನ್ನು ತೋರಿಸಲಾಗಿದೆ. ಹದಿನೆಂಟನೆಯ ಶಿಲ್ಪಕೃತಿಯಲ್ಲಿ ಒಬ್ಬ ಕುಣಿಯುತ್ತ ಚರ್ಮವಾದ್ಯ ಬಾಜಿಸುತ್ತಿರಲು, ಇನ್ನಿಬ್ಬರು ಮೃದಂಗ ಬಾಜಿಸಿ ಅವನಿಗೆ ಜೋಡುಗೊಡುವಂತಿದೆ. ಇದೇ ರೀತಿ ಇಪ್ಪತ್ತನೆಯ ಶಿಲ್ಪವು ಒಬ್ಬಾತನು ಎರಡೂ ಕೈಗಳಲ್ಲಿ ತಾಳ ಹಿಡಿದು ಹಾಡುವ ಹಾಗೆ ತೋರಿಸುತ್ತದೆ. ಹೊಯ್ಸಳ ಅರಸುಮನೆತನದ ಅನೇಕ ರಾಣಿಯರು ನೃತ್ಯ-ಸಂಗೀತ ಗಳಲ್ಲಿ ನಿಷ್ಣಾತರಾಗಿದ್ದರೆಂಬುದು ತುಂಬ ಸ್ವಾರಸ್ಯದ ಸಂಗತಿಯಾಗಿದೆ.

ಆಗಿನ ಕಾಲದಲ್ಲಿ ಸಂಗೀತದೊಂದಿಗೆ ನೃತ್ಯವೂ ಬಹಳ ವಿಕಾಸಹೊಂದಿತ್ತು. ನೃತ್ಯವು ಧರ್ಮೋತ್ಸಾಹ ಜಯೋತ್ಸಾಹ ಅಥವಾ ಕೌಟುಂಬಿಕ ಉಲ್ಲಾಸ ಇವುಗಳ ಅಭಿವ್ಯಕ್ತಿಯೇ ಆಗಿದೆ. ಹೊಯ್ಸಳರ ಕಾಲದ ಕನ್ನಡ ಸಾಹಿತ್ಯದಲ್ಲಿ ಲಲಿತಕಲೆಗಳು, ಸಂಗೀತ, ನೃತ್ಯ ಮತ್ತು ನಾಟಕಗಳ ವಿಷಯಕ್ಕೆ ತುಂಬ ಬಣ್ಣನೆಯ ಮಾತುಗಳಿವೆ. ದೇವಾಲಯಗಳ ಶಿಲ್ಪಕಾರ್ಯಗಳಲ್ಲಂತೂ ಕರ್ಣಾಟಕ ನೃತ್ಯ ಚಿತ್ರೀಕರಣ ವಿಧವಿಧ ಭಾವ ಭಂಗಿಗಳಲ್ಲಿ ಚಿತ್ತಾಕರ್ಷಕವಾಗಿ ಪ್ರದರ್ಶಿತವಾಗಿದೆ. ಹೊಯ್ಸಳರ ಕಾಲದಲ್ಲಿ, ಉಚ್ಚವರ್ಗದ ಮಹಿಳೆಯರು ನೃತ್ಯವನ್ನು ಒಂದು ಕಮನೀಯ ಕಲೆಯೆಂದು ಅಭ್ಯಾಸ ಮಾಡುತ್ತಿದ್ದರು. ಬೇಲೂರು ಕೇಶವ ದೇವಾಲಯದ ಮದನಕೈ ವಿಗ್ರಹಗಳು ಬೆರಗುಪಡಿಸುವ ಕಲಾಕೃತಿಗಳಾಗಿವೆ. ಅವುಗಳಲ್ಲಿ ಅನೇಕ ವಿಗ್ರಹಗಳು ನೃತ್ಯದಲ್ಲಿಯೇ ವಾದ್ಯಗಳ ಬಾಜನೆಯಲ್ಲಿಯೇ ವೇಷ ಭೂಷಣ ಧರಿಸುವದರಲ್ಲಿಯೇ ನಿರತವಾಗಿರುವಂತೆ ರೂಪಿಸಲಾಗಿವೆ. ಅವೆಲ್ಲ 'ರಸ' 'ಭಾವ' ನಿರ್ಭರವಾಗಿವೆ; ಪ್ರಮಾಣಬದ್ಧ ವಾಗಿಯೂ ಆಪಾದ ಮಸ್ತಕ ಅಲಂಕೃತವಾಗಿಯೂ ಇವೆ. ಲಾವಣ್ಯಪೂರ್ವಕವಾದ ಆ ತರುಣಿಯರ ತುಂಬುಮೈ ಅರ್ಧ ನಗ್ನವಾಗಿದ್ದರೂ ವಿಷಯಲೋಲುಪ ವಿಚಾರಗಳು ನೋಡುಗರ ಎಡಬಲಕ್ಕೂ ಸುಳಿಯವು. ನಿಂತ ನಿಲುವುಗಳು, ಒಲೆದ ಮೊಗಗಳು, ಮಣಿದ ಕೈಗಳು ಎಲ್ಲವೂ ಭಾವಾಭಿವ್ಯಕ್ತಿಗೆ ಪರಸ್ಪರ ಪೋಷಕವಾಗಿವೆ. ವಿಗ್ರಹಗಳು ನಿಂತಿರಲಿ, ಅಥವಾ ನೃತ್ಯರತವಾಗಿರಲಿ, ಶಿಲ್ಪಿ ಅವುಗಳಿಗೆ ಕೊಟ್ಟ ಭಂಗಿ, ಇಟ್ಟ ಭಾವ, ಅಭಿರಾಮತೆಯಿಂದ ಓತಪ್ರೋತವಾಗಿವೆ. ಅನೇಕ ವಿಗ್ರಹಗಳು ಮೋಹಿನೀ ನರ್ತನ ಗಳನ್ನು ಪ್ರತಿನಿಧಿಸುವವೆಂದು ಭಾಸವಾಗುವುದು. ಪ್ರಚಲಿತವಿರುವ ಪ್ರಾದೇಶಿಕ ದಂತಕಥೆಯ ಪ್ರಕಾರ, ಕೇಶವನು ಪೂರ್ವಕಾಲದಲ್ಲಿ ಬಾಬಾಬುಡನ್ ಬೆಟ್ಟದಲ್ಲಿ ವಾಸವಾಗಿದ್ದನು. ಆದರೆ ಆಮೇಲೆ ಆತನು ಭಸ್ಮಾ ಸುರನ ವಧೆಯ ಸಲುವಾಗಿ ಮೋಹಿನೀ ರೂಪದಲ್ಲಿ ಅವತರಿಸಿ ತನ್ನ ನೆರೆಹೊರೆಯಲ್ಲಿ ನೆಲಸಿದ್ದ ಆ ರಾಕ್ಷಸನನ್ನು ವಧಿಸಿದನು. ತುಂಬ ಸಂಭವ ಇರುವ ಒಂದು ಅಂಶವೆಂದರೆ, ಅಲ್ಲಿನ ನರ್ತನಲೀನ ಸುಂದರಿಯರ ಆ ನಾನಾ ವಿಧ ನೃತ್ಯ ಭಂಗಿಗಳು ಕೇವಲ ಸಾಂಪ್ರದಾಯಿಕ ನರ್ತಕಿಯರ ಕಲಾತ್ಮಕ ನಿಲುವುಗಳಷ್ಟೇ ಆಗಿರದೆ, ಅವು ಮೋಹಿನೀ ನೃತ್ಯದ ನಾನಾವಿಧದ ವಿಮೋಹಕ ಅವಸ್ಥಾಂತರಗಳೆಂದು ತೋರುತ್ತವೆ. ಪೂರ್ವದ್ವಾರದ ದಕ್ಷಿಣ ದಿಕ್ಕಿಗಿರುವ ಮದನಕೈ ವಿಗ್ರಹಗಳಲ್ಲಿ ಎಂಟನೆಯದು ಮದ್ದಲೆಯ ನೃತ್ಯ. ಒಬ್ಬ ಯುವತಿಯು ಒಂದು ಪ್ರಚಂಡ ನೃತ್ಯಭಂಗಿಯಲ್ಲಿದ್ದು, ತನ್ನ ತೋಳುಗಳನ್ನು ತಲೆಯ ಹತ್ತಿರ ಎತ್ತರಕ್ಕೆ ಎತ್ತಿ, ಒಂದು ಬಾಗಿದ ಗುಣಿಯಿಂದ 'ದವಣೆ' ಎಂಬ ವಾದ್ಯದ ಮೇಲೆ ಬಡಿದು ತಾಳಹಾಕುತ್ತಾಳೆ. ಆ ವಾದ್ಯ 'ಡಮರುಗ'ದ ಹಾಗೆ ಆದರೂ ಅದರ ಗಾತ್ರ ಅದಕ್ಕಿಂತ ಬಹಳ ದೊಡ್ಡದು; ಮತ್ತು ಅದು ದೇವಾಲಯ ಸಂಗೀತದಲ್ಲಿ ಬಹು ಜನಪ್ರಿಯವಾದದ್ದು. ಆಕೆಯ ನೃತ್ಯ ಭಂಗಿ ಸುಲಭ ಸಾಧ್ಯವಲ್ಲದ್ದು; ತುಂಬ ನುರಿತ ಬಲಿಷ್ಠ ನರ್ತನ ಪಟು ಮಾತ್ರ ಆ ಭಂಗಿ ಸಾಧಿಸಬಲ್ಲನು; ಮತ್ತು ಅದಕ್ಕೆ ಹೆಣ್ಣಿನ ಬಹು ಭದ್ರವಾದ ಬಡನಡುವಿನ ಬಳುಕಿರಬೇಕು. ಹತ್ತನೆಯ ವಿಗ್ರಹ, ಓರ್ವ ಲತಾಂಗಿ 'ದವಣೆ' ಬಾಜಿಸುತ್ತ ಕುಣಿಯುವದನ್ನು ತೋರಿಸುತ್ತದೆ. ಹದಿಮೂರನೆಯ, ಹತ್ತೊಂಬತ್ತನೆಯ, ಮತ್ತು ಇಪ್ಪತ್ತೈದನೆಯ ವಿಗ್ರಹಗಳಲ್ಲಿ ಮೋಹಿನೀ ನೃತ್ಯ ಕಾಣಬಹುದು. ಇಪ್ಪತ್ತೆರಡನೆಯ ವಿಗ್ರಹ ದುರ್ಗೆ ನರ್ತಿಸುವ ನೋಟ. ದುರ್ಗೆ ಕಪಾಲ ಕಿರೀಟ ಧರಿಸಿ, ಕಪಾಲ ಚುಚ್ಚಿದ ತ್ರಿಶೂಲ ಎಡಗೈಯಲ್ಲಿರಿಸಿ ಕುಣಿಯುತ್ತಿದ್ದಾಳೆ.

ಇಪ್ಪತ್ತೊಂಬತ್ತನೆಯದು ವ್ಯಜನ ನರ್ತನ. ಲಲನೆ ಒಬ್ಬಳು ಬಲಗೈಯಲ್ಲಿ ಲಾವಂಚದ ಬೀಸಣಿಗೆ ಹಿಡಿದು ಎಡಗೈಯಲ್ಲಿ ವೀಳ್ಯದ ಎಲೆಗಳನ್ನಿರಿಸಿ ಅದೇ ಆಗ ಕುಣಿತಕ್ಕೆ ತೊಡಗಿದಂತಿದೆ. ಮೂವತ್ತನೆಯದು ನಾಗವೀಣಾ ನೃತ್ಯ. ಒಬ್ಬ ನೀರೆ ನೀಳವಾದ ತಂತುವಾದ್ಯ ಒಂದನ್ನು ನುಡಿಸುತ್ತ ಕುಣಿವ ನೋಟ ಅದು. ಆಕೆ ವಾಡಿಕೆಯಂತೆ ತನ್ನ ಎಡ ಕಾಲ್ಬೆರಳುಗಳಿಂದ ತಾಳ ತಟ್ಟುತ್ತಿರಲು, ಅವಳ ಬಲ ಬದಿಗೆ ಒಬ್ಬ ಪುರುಷ ಮೃದಂಗ ಬಾಜಿಸುವ; ಮತ್ತು ಇನ್ನೊಬ್ಬ ಆಕೆಗೆ ಗಾಳಿಬೀಸುತ್ತ, ಆಕೆ ಬೇಕಾದಾಗ ತನ್ನ ತುಟಿಗಿಡಲು ಬರುವಂತೆ ತುಂಬಿದ ಸುಧಾಪಾತ್ರ ಅಣಿಗೊಳಿಸಿ ಹಿಡಿದಿದ್ದಾನೆ. ಮೂವತ್ತೆರಡನೆಯದು ಕೊಳಲ ಕುಣಿತ. ಒಬ್ಬ ಲಾವಣ್ಯವತಿ ಲತಾಂಗಿ, ಕೃಷ್ಣನಿಗೆ ಪ್ರಿಯವಾದ ವೇಣುಭಂಗಿಯಲ್ಲಿ ಮಣಿದು ಕುಣಿಯುತ್ತಿದ್ದಾಳೆ. ಕೈಯಲ್ಲಿ ಕೊಳಲಿಲ್ಲದಿದ್ದರೂ ಅದನ್ನೂದುವಂತೆ ಆಕೆ ನಟಿಸುತ್ತಿದ್ದಾಳೆ ಮಾತ್ರ. ಆಕೆಯ ಮುಖ ಮತ್ತು ಮೈ ಮುಕ್ಕಾಲುಭಾಗ ಕಣ್ಣಿಟಕುವ ನಿಲುವು, ನೋಟ; ಅವಳ ಕೈಬೆರಳುಗಳು ಕೊಳಲ ಮೇಲಾಡುವಂತೆ ಮಣಿದು ಕುಣಿವಂತಿವೆ. ಅವಳ ಬಲಕ್ಕೆ ಮಂಗವೊಂದು ಮನಸೋತು ಅವಳನ್ನೇ ನೋಡುವಂತಿರಲು, ಎಡಕ್ಕೆ ಸೇವಕನೊಬ್ಬ ಆಕೆಗೆ ಕೊಳಲು ನೀಡುತ್ತಿದ್ದಾನೆ. ಇನ್ನು ಡಮರುಗ ನೃತ್ಯವು (ಸಂ. 33), ಒಬ್ಬಾಕೆ ಎಡಗೈಯಲ್ಲಿ "ಡಮರುಗ", ಬಲಗೈಯಲ್ಲಿ "ಚಿಟ್ಟಿತಾಳ" ಹಿಡಿದು ಕುಣಿಯುವಂತಿರಲು, ಇಬ್ಬರು ಮೃದಂಗ ಬಾರಿಸಿ ಆಕೆಗೆ ಜೊತೆಗೊಡುತ್ತಿದ್ದಾರೆ. ನರ್ತಕಿಯ ಭಂಗಿ ಚಲನ ಪ್ರಭಾವದಿಂದ ಕೂಡಿ, ಪ್ರತಿಮೆಯು ಜೀವಂತ ಎಂಬಷ್ಟು ಪ್ರತ್ಯಕ್ಷವಿದೆ.

ಮೂಕ ನಾಟಕಗಳ, ಗೊಂಬೆಯ ಆಟಗಳ ಉಲ್ಲೇಖಗಳು ಹನ್ನೆರಡನೆಯ ಶತಮಾನಗಳ ಗ್ರಂಥಗಳಲ್ಲಿ ಬರುವವಾದ್ದರಿಂದ ಜನಸಾಮಾನ್ಯರಿಗೆ ರುಚಿಸುವ ನಾಟಕ ರಂಗವೂ ಇತ್ತೆಂದು ಸಿದ್ಧವಾಗುವದು. ಜೊತೆ ಜೊತೆಗೆ ಬಯಲಾಟಗಳೂ ಇರುತ್ತಿದ್ದವು. ಇತಿಹಾಸ ಪುರಾಣಗಳ ಆಧಾರದ ಮೇಲೆ ರಚಿತವಾದ ಜನಪ್ರಿಯ ಆಟಗಳು ಸರ್ವಸಾಮಾನ್ಯ ಲಕ್ಷಣಗಳಾಗಿದ್ದವು. ಅವುಗಳಲ್ಲಿ ಸಂಗೀತ, ನೃತ್ಯ, ಸಂಭಾಷಣೆ ಇವೆಲ್ಲ ಸಮಾವೇಶಗೊಂಡಿರುತ್ತಿದ್ದವು.

ಆ ಕಾಲದ ಸಾಹಿತ್ಯ ಮತ್ತು ಕಲಾಕೃತಿಗಳ ವೈಭವದಿಂದ ತೀರ್ಮಾನಿಸಿ ಹೇಳುವದಾದರೆ, ಹೊಯ್ಸಳ ಕಾಲದ ಜನರು ಸದಭಿರುಚಿಯಿಂದ ಕೂಡಿದ ಕಲಾ ಸಂಪನ್ನ ಜೀವನಯಾಪನ ಮಾಡುತ್ತಿದ್ದರೆಂಬಲ್ಲಿ ಸಂದೇಹವಿಲ್ಲ. ಜೀವನದಲ್ಲಿ ಅವರು ಸೌಂದರ್ಯದ ಆರಾಧಕರಾಗಿದ್ದುದೇ ಅಲ್ಲದೆ ಕಲಾನಂದವನ್ನು ಆಸ್ವಾದಿಸುತ್ತಿದ್ದರು.

ಮೂಲಲೇಖಕರು : ಡಾ।। ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ಅನುವಾದಕರು : ಶ್ರೀ ನಾರಾಯಣ ಸಂಗಮ

# ಸಂಗೀತ

## (ಪ್ರಾಚೀನಕಾಲ)

ಇದುವರೆಗೂ ಹೊಯ್ಸಳರ ಕಾಲದಲ್ಲಿ ವಿಜೃಂಭಿಸಿದ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಲಲಿತ ಕಲೆಗಳ ಬಗ್ಗೆ ಸಾಧಾರಣವಾಗಿ ಪ್ರಸ್ತಾವಿಸಿದ್ದೇವೆ. ನೃತ್ಯವೂ ಸಂಗೀತದ ಅವಿಭಾಜ್ಯ ಅಂಗವಾದ್ದರಿಂದ ಶಿಲ್ಪಕಲೆಗಳಲ್ಲಿನ ನೃತ್ಯಭಂಗಿಗಳ ವಿವರಣೆಗಳಲ್ಲಿ ಉದಾಹರಣೆಗಳೊಡನೆ ಕೆಲವೆಡೆ ಸಂಗೀತ ಮತ್ತು ಸಂಗೀತ ವಾದ್ಯಗಳ ಬಗ್ಗೆಯೂ ಆನುಷಂಗಿಕವಾಗಿ ಉಲ್ಲೇಖ ಮಾಡಲಾಗಿದೆ.

ದೇಶವನ್ನು ಅನೇಕ ರಾಜಸಂತತಿಗಳು ಆಳಿದ ಕಾಲದಲ್ಲಿ ರೂಢಿಯಲ್ಲಿದ್ದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಇವುಗಳ ವಿವರಣೆಯ ಪ್ರಯತ್ನ ಮಾಡಿದ್ದಿದೆ. ಆದರೆ ವರ್ಣರಂಜಿತ ಚಿತ್ರಕಲೆ ಮತ್ತು ಸಂಗೀತ ಇವುಗಳು ಪರಸ್ಪರ ಪೂರಕ ಕಲೆಗಳೆಂದು ಹೇಳಲು ಬರುವಂತಿಲ್ಲ.

ಮಾನವನ ಮನೋಭಾವಗಳ ಅಭಿವ್ಯಕ್ತಿಗೆ ಸಂಗೀತ ಮತ್ತು ಸಂಗೀತಸಾಧನೆ ಉಪಯುಕ್ತ ಉಪಕರಣ ಎಂಬ ಮಾತು ಮಾನವನಷ್ಟೇ ಪುರಾತನವಾದುದು. ಲಲಿತ ಕಲೆಗಳಲ್ಲಿ ಸಂಗೀತವು ಅತ್ಯಂತ ಸ್ವಯಂ ಪ್ರೇರಿತವಾದ ಹಾಗೂ ಬಹಳ ಸೂಕ್ಷ್ಮವಾದ ಕಲೆಯೆನಿಸಿದೆ. ಆದರೆ ಸಂಗೀತದ ಪ್ರಧಾನ ಲಕ್ಷಣಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯಲ್ಲಿದ್ದು, ಅದರ ಕ್ರಮವಿಕಾಸ ಮತ್ತು ಪುರೋಭಿವೃದ್ಧಿಗಳು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಆಗಿದ್ದು ಬೇರೆ ಬೇರೆ ರೀತಿಯಲ್ಲಿಯೇ ಅವು ರೂಪಗೊಳ್ಳುತ್ತ ಬಂದಿವೆ.

ದೇಶ ವಿಸ್ತಾರವಾಗಿದ್ದಲ್ಲಿ, ಅದೇ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಸಂಗೀತ ಶೈಲಿ ಬೇರೆ ಬೇರೆ ಆಗಿರುವದುಂಟು. ಇದಕ್ಕೆ ಭಾರತೀಯ ಸಂಗೀತ ಶೈಲಿಗಳೇ ಸಾಕ್ಷಿ. ದಕ್ಷಿಣ ಭಾರತದಲ್ಲಿ ರೂಢಿಯಲ್ಲಿರುವ ಸಂಗೀತ ಪದ್ಧತಿಯನ್ನು "ಕರ್ಣಾಟಕ ಸಂಗೀತ"ವೆಂದು ಕರೆಯಲಾಗಿದೆ.

ಈಗ ನಮ್ಮ ಉದ್ದೇಶ ಕರ್ಣಾಟಕ ಸಂಗೀತದ ಮೂಲ ಮತ್ತು ಬೆಳವಣಿಗೆಗಳನ್ನು ನಿರೂಪಿಸುವುದು.

ಭಾರತ ದೇಶದ ಸಂಗೀತವು ಸಾಮವೇದದ ಕಾಲದಷ್ಟು ಪ್ರಾಚೀನ. ಈ ವೇದ ಮಂತ್ರ ಘೋಷ ಗಳನ್ನು ವೈಶಿಷ್ಟ್ಯಪೂರ್ಣವಾಗಿ ಸಂಗೀತ ರೂಪದಲ್ಲಿಯೇ ಹಾಡಲಾಗುತ್ತಿದ್ದುದರಿಂದ ಸಾಮವೇದವನ್ನು ಉತ್ತಮ ವೇದವೆಂದು ಪರಿಗಣಿಸಲಾಗಿದೆ. ಭಗವದ್ಗೀತೆಯಲ್ಲಿ "ವೇದಗಳಲ್ಲಿ ನಾನು ಸಾಮವೇದ" ಎಂದು (ಭಗವದ್ಗೀತೆ ಅಧ್ಯಾಯ ಹತ್ತು, ಶ್ಲೋಕ 22) ಹೇಳಿದೆ.

ಕರ್ಣಾಟಕ ಸಂಗೀತದ (ಮತ್ತು ಸಾಮಾನ್ಯವಾಗಿ ಭಾರತೀಯ ಸಂಗೀತದ) ಮೂಲ ತತ್ವವೆಂದರೆ, ವ್ಯಾಕರಣದ ಮಾರ್ಗೀಯ ಭಾಗವಾದ 'ಸ್ಫೋಟಸೂತ್ರ'ದ ವಿಸ್ತೃತಕ್ರಿಯೆ, ಅಂದರೆ, ಸ್ಫೋಟವೆಂಬುದು (ಅಥವಾ ಪರನಾದ) ನಾನಾರ್ಥ ಸೂಚಕ ನಾದದ ಅಂತಿಮ ಕಾರಣರೂಪವಾಗಿದೆ; ಮತ್ತು ವಿಶ್ವವು ಶಬ್ದ

ಬ್ರಹ್ಮನ ಪ್ರತ್ಯಕ್ಷ ಅಭಿವ್ಯಕ್ತಿ ಸ್ವರೂಪವಾಗಿದೆ. ಶಬ್ದ ಸೂತ್ರದ ಸೂಕ್ಷ್ಮ ವಿಭಾಗಗಳು ಹಿಂದಿನ ಋಷಿವರ್ಯರುಗಳಿಂದ ಧ್ವನಿಪ್ರಸ್ತಾರದ ಮೂಲಕ ನಿರೂಪಿಸಲ್ಪಡುತ್ತಿದ್ದವು. ವೇದಮಂತ್ರಗಳ ಘೋಷಣೆ ಮತ್ತು ಉದಾತ್ತ ಅನುದಾತ್ತ ಸ್ವರಾಘಾತಗಳುಳ್ಳ ಉಚ್ಚಾರಣೆಗಳನ್ನು ಬಾಯಿಪಾಠದ ಮೂಲಕ ಗುರುವು ಶಿಷ್ಯರಿಗೆ ಬೋಧಿಸುತ್ತಿದ್ದನು. ಇಂದಿಗೂ ಈ ಸಂಪ್ರದಾಯವು ರೂಢಿಯಲ್ಲಿದೆ.

ಧಾರ್ಮಿಕ ನಿಯಮ ಪಾಲನೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಂಗೀತವು ಲಲಿತ ಕಲೆಗಳಲ್ಲಿ ಒಂದಾಗಿ ಸಾಮಾಜಿಕ ಪುರೋಭಿವೃದ್ಧಿಗಳಿಗೂ ಸಾಧನೆಯಾಗಿ ಬೆಳೆದು ಬಂದಿದೆ. ಕರ್ಣಾಟಕದಲ್ಲಿ ಅನಾದಿಕಾಲದಿಂದ ಪ್ರಸಿದ್ಧವಾದ ಮೊದಲ ಸಂಗೀತ ಗ್ರಂಥವೆಂದರೆ ಭರತನ 'ನಾಟ್ಯಶಾಸ್ತ್ರ'. ಧಾರ್ಮಿಕ, ಲೌಕಿಕ ಮತ್ತು ಜಾನಪದಗಳೆಂಬ ಮೂರು ವಿವಿಧ ಆಧಾರಗಳಿಂದ ರೂಪುಗೊಂಡ ಸಂಗೀತ ಪದ್ಧತಿಗಳು ಪ್ರಾಚೀನ ಕರ್ಣಾಟಕದಲ್ಲಿ ರೂಢಿಯಲ್ಲಿದ್ದುವು. ಎರಡು ಗಮನಾರ್ಹವಾದ ಮತ್ತು ಪರಸ್ಪರ ಪೂರಕವಾದ ನಾದ ಮಾಧುರ್ಯ ಪದ್ಧತಿಗಳು ಪ್ರಾಚೀನ ಭಾರತ ದೇಶದಲ್ಲಿ ರೂಢಿಯಲ್ಲಿದ್ದುದಾಗಿ ತಿಳಿದುಬರುತ್ತದೆ. ಮೊದಲನೆಯ ಪದ್ಧತಿಯೆಂದರೆ ಗಾನಾನುಸರಣೆಯಲ್ಲಿ ಅವರೋಹಣ (ಅನುದಾತ್ತ) ಕ್ರಮದಲ್ಲಿ ರಾಗದ ಕೊನೆಯ ಸ್ವರವನ್ನು (ಆಧಾರಸ್ವರವನ್ನು) ಸೇರುವುದು. ಎರಡನೆಯ ಪದ್ಧತಿ ಗಾನಾನುಸರಣೆಯಲ್ಲಿ ಆರೋಹಣ ಕ್ರಮದಲ್ಲಿ ಆಧಾರಸ್ವರದಿಂದ ಮಧ್ಯೆಯಿರುವ ಸ್ವರಗಳ ಮೇಲೆ ಹಾದು ಹೋಗಿ, ರಾಗದ ಮೇಲಿನ ಸ್ವರವನ್ನು ಸೇರುವುದು. ರಾಗದ ಆಧಾರ ಶಬ್ದದ ಸ್ಪಂದನಗಳ ಎರಡರಷ್ಟು ಮೌಲ್ಯವನ್ನು ರಾಗದ ಕೊನೆಯ ಸಂಗತ ಶಬ್ದರೂಪವು ಹೊಂದಿದ್ದು, ಏಳು ಕೋಮಲ ಮತ್ತು ತೀವ್ರ ಶಬ್ದರೂಪಗಳಿಂದ ರಾಗವು ನಿರ್ಮಾಣವಾಗುತ್ತಿದ್ದಿತು. ಈ ಏಳು ಶಬ್ದರೂಪಗಳನ್ನು ಸ್ವರಗಳೆಂದು ಕರೆಯಲಾಗಿದೆ[1]. ರಾಗದಲ್ಲಿ ಈ ಸ್ವರಗಳ ಸ್ಥಾನಗಳ ಬಗ್ಗೆ ಯಾವ ನಿರ್ಧಾರವೂ ಕಂಡುಬಂದಿರಲಿಲ್ಲ. ಕೆಳಗಿನ ಆಧಾರಸ್ವರವನ್ನು ಮಾತ್ರ 'ಶುದ್ಧಸ್ವರ' (ಪ್ರಕೃತಿಸ್ವರ)ವೆಂದು ಕರೆದು ಉಳಿದ ಸ್ವರಗಳನ್ನು 'ವಿಕೃತಸ್ವರಗಳೆಂದು' (ಬದಲಾವಣೆಯಾಗಬಹುದಾದ ಸ್ವರಗಳು) ಭಾವಿಸಲಾಯಿತು. ಈ ಸ್ವರಗಳು ವಿವಿಧ ಅಂತರಗಳೊಡನೆ ಶ್ರುತಿಗಳಿಂದ ರಾಗದಲ್ಲಿ ನಿರ್ಮಾಣವಾದುವು. ಇದರಿಂದ ಒಂದು ಅಷ್ಟಕವು 22 ಶ್ರುತಿಗಳಿಂದ ರೂಪಗೊಂಡು ಶುದ್ಧ ಹಾಗೂ ವಿಕೃತ ಸ್ವರಗಳಿಗೆ ನಿಯಮಿತವಾದ ಶ್ರುತಿಗಳನ್ನು ಹಂಚಲಾಯಿತು[2]. ಆದ್ದರಿಂದ ಭಾರತ ದೇಶದ ಸಂಗೀತ ಪದ್ಧತಿಯ ಆಧಾರ ರಾಗವು ಈ ಕೆಳಕಂಡ ಶ್ರುತಿಗಳ ವಿಂಗಡಣೆಯನ್ನು ಹೊಂದಿದೆ :

ಷಡ್ಜ (4), ಋಷಭ (3), ಗಾಂಧಾರ (2), ಮಧ್ಯಮ (4), ಪಂಚಮ (4), ಧೈವತ (3), ನಿಷಾದ (2)[3].

ಪ್ರಾಚೀನ ಶಾಸ್ತ್ರೀಯ ಬುನಾದಿಗೆ ಅನುಗುಣವಾಗಿ ನಿಯಮಬದ್ಧವಾದ ಕ್ರಮಗಳೊಡನೆ ರೂಪಗೊಂಡ ಪದ್ಧತಿಯು 'ಮಾರ್ಗ' ವೆನಿಸಿತು. ಧಾರ್ಮಿಕ ಸಂಗೀತವು ಸಶಾಸ್ತ್ರೀಯ ಸ್ವರೂಪದಲ್ಲೇ ಕಂಬಾಲಗಳು ಮತ್ತು ಕಪಾಲಗಳೆಂಬ ರೂಪಗಳಲ್ಲಿ ಉಳಿದುವು; ಮತ್ತು ಇವುಗಳನ್ನು ಶಾರ್ಙ್ಗದೇವನು ವಿವರಿಸಿದ್ದಾನೆ[4].

ಪ್ರಾಚೀನ ಕರ್ಣಾಟಕ ಸಂಗೀತದ ಸಂಪ್ರದಾಯಗಳ ಬಗ್ಗೆ ಕೆಲವು ಸಮಕಾಲಿಕ ಸಾಹಿತ್ಯದ ಆಧಾರಗಳೂ ದೊರೆತಿವೆ. ಆ ಕಾಲದ ಕೆಲವು ಕರ್ಣಾಟಕ ಸಂಗೀತ,ಶಾಸ್ತ್ರಜ್ಞರು ಹಾಗೂ ಗಾಯಕರ ಹೆಸರುಗಳೂ ತಿಳಿದುಬಂದಿವೆ. ಅಕ್ಕಮಹಾದೇವಿ, ಸೈಗೊಟ್ಟ ಶಿವಮಾರ, ಶಾಂತಲಾ, ಚಾಂದಲಾ, ಮತ್ತು ಪದ್ಮಲಾ, ರೇಚ ಭೂಪಾಲ ಮತ್ತು ಚಂದ್ರರಾಜ, ತಿಪ್ಪನೋಜ ಮತ್ತು ಪೊಳಾಳ್ವ ದಂಡನಾಥ.

ಭರತನು ನಿರೂಪಿಸಿದ ಶಾಸ್ತ್ರಪದ್ಧತಿಗಳು ಪ್ರಾಚೀನ ಕರ್ಣಾಟಕದಲ್ಲಿದ್ದ ಅನೇಕ ಸಂಗೀತಗಾರರು

ಮತ್ತು ನೃತ್ಯಕಲಾವಿದರುಗಳಿಗೆ ಪ್ರೇರಕವಾಗಿವೆ[5]. ಕನ್ನಡ ಕಾವ್ಯಗಳಲ್ಲಿ ಕಂಡುಬರುವ ‘ ಭರತ ’ ಮತ್ತು ‘ ಭರತಜ್ಞ ’ ಎಂಬವು ಸಾಧಾರಣವಾಗಿ ನರ್ತಕರಿಗೆ ಅನ್ವಯವಾಗುತ್ತವೆ. ಅಂತೆಯೇ ಭರತಶಾಸ್ತ್ರ ಮತ್ತು ಭರತಾಗಮ ಎಂಬವು ನಾಟ್ಯದ ಶಾಸ್ತ್ರಭಾಗ ಹಾಗೂ ಕಲಾಭಾಗಗಳಿಗೆ ಅನ್ವಯಿಸುತ್ತವೆ. ಸಂಗೀತ ಶಾಸ್ತ್ರಜ್ಞರು ‘ ಗಾಂಧರ್ವ ’ ಎಂಬ ಶಬ್ದವನ್ನು ‘ ಗಾಂಧರ್ವರಿಂದ ಹೊರಬೀಳುವ ಸಂಗೀತ ’ವೆಂದು ಹೇಳಿ ಉಲ್ಲೇಖಿಸಿರುವುದರಿಂದ ಕನ್ನಡ ಕವಿಗಳೂ ಇದೇ ಸಂಬೋಧನೆಯನ್ನೇ ಸಂಗೀತಕ್ಕೆ ಬಳಸಿದ್ದಾರೆ. ಕೆಲವು ಸಂಪ್ರದಾಯಬದ್ಧರಾದ ಗ್ರಂಥಕರ್ತರುಗಳು ಸಂಗೀತ ಶಾಸ್ತ್ರಕ್ಕನುಗುಣವಾದ ಕೆಲವು ಶಾಸ್ತ್ರೀಯ ಪದ್ಯಭಾಗಗಳನ್ನು ಉದ್ಧರಿಸಿದ್ದಾರೆ[6].

ಜೀವನವೃತ್ತಿಗಾಗಿ ಅನೇಕ ಪಂಡಿತರೂ ಕಲಾ ಹವ್ಯಾಸಕ್ಕಾಗಿ ಇತರರೂ ಸಂಗೀತವನ್ನು ಕಲಿಯುತ್ತಿದ್ದರು. ಪಂಡಿತರ ಸ್ಥಾನವು ಸಮಾಜದಲ್ಲಿ ಮಾನ್ಯವಾಗಿರುತ್ತಿದ್ದಿತು. ಸ್ತ್ರೀಯರು ಮತ್ತು ಪುರುಷರು ಸಂಗೀತವನ್ನು ಅಭ್ಯಾಸಮಾಡುತ್ತಿದ್ದರೂ ಸ್ತ್ರೀಯರ ಸಂಖ್ಯೆಯು ಮೇಲುಗೈಯಾಗಿರುತ್ತಿದ್ದಿತು. ರಾಜವಿದ್ಯೆಗಳಲ್ಲಿ ಸಂಗೀತವು ಒಂದು ಆವಶ್ಯಕವಾದ ಭಾಗವೆಂದು ಭಾವಿಸಲಾಗಿದ್ದು ಪ್ರತಿಯೊಬ್ಬ ರಾಜಪುತ್ರ ಪುತ್ರಿಯರೂ ಸಂಗೀತ ವಿದ್ಯೆಯಲ್ಲಿ ಪಾರಂಗತರಾಗುತ್ತಿದ್ದರು ; ಇಲ್ಲವೆ ಸಂಗೀತ ಕಲೆಯಲ್ಲಿ ಅಭಿರುಚಿಯನ್ನು ಹೊಂದಿದ ರಸಜ್ಞರಾಗುತ್ತಿದ್ದುದೂ ಉಂಟು. ಸಂಗೀತಗಾರರಿಗೆ ರಾಜ್ಯದಲ್ಲಿ ಪ್ರತ್ಯೇಕವಾದ ನಿವಾಸಸ್ಥಾನ ವಿರುತ್ತಿತ್ತು[7]. ನಗರಗಳು ಸಂಗೀತ ಮತ್ತು ನೃತ್ಯಪ್ರದರ್ಶನಗಳಿಗಾಗಿ ಪ್ರತ್ಯೇಕ ರಂಗಮಂಟಪಗಳನ್ನು ಹೊಂದಿದ್ದುವು[8]. ವಾದ್ಯ ಸಂಗೀತದ ತನಿಕಚೇರಿಗಳು ವೀಣೆ ಮತ್ತು ಕೊಳಲು ವಾದ್ಯಗಳಲ್ಲಿ ಮದ್ದಳೆಗಳ ಸಹವಾದನದೊಡನೆ ನಡೆಯುತ್ತಿದ್ದುವು. ಅವನದ್ಧ ವಾದ್ಯಗಳು ಅಪರೂಪವಾಗಿ ತನಿಕಚೇರಿಗಳಲ್ಲಿ ಉಪಯುಕ್ತವಾಗಿದ್ದುವು. ಹಾಡುಗಾರಿಕೆಯಲ್ಲಿ ಒಬ್ಬನೇಗಾಯಕ[9], ಯುಗ್ಮ[10] ಅಥವಾ ಗೋಷ್ಠಿಗಳು[11] ಸಹ, ಪಕ್ಕವಾದ್ಯಗಳೊಡನೆ ಕಂಡುಬರುತ್ತಿದ್ದುವು. ಪ್ರಮುಖ ಗಾಯಕನನ್ನು ‘ ಮುಖರಿ ’ ಎಂದು ಕರೆದು ಈತನನ್ನು ಅನೇಕವೇಳೆ ಸಹಗಾಯಕರೂ ಅನುಸರಿಸುತ್ತಿದ್ದರು. ಆಸ್ಥಾನದಲ್ಲಿ ಗಾಯನವು ಸಾಮಾನ್ಯವಾಗಿ ವೀಣೆಯ ಮಾದರಿಯ ಲ್ಯೂಟ್ ಎಂಬ ತಂತೀವಾದ್ಯ, ಅಥವಾ ಕೊಳಲು, ಮತ್ತು ಅವನದ್ಧ, ತತ ಮತ್ತು ಸುಷಿರವಾದ್ಯಗಳೊಡನೆ ನಡೆಯುತ್ತಿದ್ದಿತು. ‘ ವೃಂದ ’ ಅಥವಾ ಗೋಷ್ಠಿಗಾನವೂ ಪ್ರಾದೇಶಿಕ ಹಾಗೂ ಲೌಕಿಕ ಗಾಯನವೂ ಅವುಗಳ ನಿಯಮಿತವಾದ್ಯಗಳೊಡನೆ ‘ ಕುತಪ ’ ಎಂದು ಕರೆಯಲಾಗಿ ರೂಢಿಯಲ್ಲಿದ್ದುವು[12]. ಅಧಿಕ ಸಂಖ್ಯೆಯಲ್ಲಿ ರಾಗಗಳು ಕರ್ಣಾಟಕದಲ್ಲಿ ರೂಢಿಯಲ್ಲಿದ್ದರೂ ‘ ಬತ್ತೀಸ ’ ವೆಂದು ಕರೆಯಲಾದ ಮೂವತ್ತೆರಡು ರಾಗಗಳ ಗುಂಪು ವಿಶೇಷವಾಗಿ ಬಳಕೆಯಲ್ಲಿದ್ದುವು[13]. ಸಂಗೀತವು ಸಾಮಾಜಿಕ ಜೀವನದಲ್ಲಿ ಒಂದು ಆವಶ್ಯಕವಾದ ಭಾಗವಾಗಿದ್ದು ಮೇಲ್ಮಟ್ಟದ ಜನರಲ್ಲಿ ಅವರ ಪುತ್ರಿಯರೊಡನೆ ಕೊಡಲಾಗುತ್ತಿದ್ದ ಬಳುವಳಿಗಳೊಡನೆ ಲ್ಯೂಟ್‌ವಾದಕರು, ಮದ್ದಳೆಕಾರರು, ವೇಣುವಾದಕರು, ಗಾಯಕರು ಮತ್ತು ನರ್ತಕರೂ ಸೇರಿರುತ್ತಿದ್ದರು[14].

ಅವನದ್ಧವಾದ್ಯಗಳಲ್ಲಿ ವಿವಿಧ ರೀತಿಯ ‘ ಪಟಹ ’ ಮತ್ತು ‘ ಭೇರಿ ’ ಮುಂತಾದವುಗಳ ಬಗ್ಗೆಯೂ ಕೊಂಬು ಮತ್ತು ಕಹಳೆಯಂತಹ ಸುಷಿರವಾದ್ಯಗಳ ಬಗ್ಗೆಯೂ ನಮಗೆ ವಿವರಣೆಗಳು ದೊರಕಿವೆ. ಈ ವಾದ್ಯಗಳನ್ನು ಹಬ್ಬಹರಿದಿನಗಳಲ್ಲಿ, ವಿಜಯೋತ್ಸಾಹ ಸಮಾರಂಭಗಳಲ್ಲಿ, ಜನರನ್ನು ಒಟ್ಟುಗೂಡಿಸುವಾಗ—ಬೇಟೆಯ ಕಾಲಗಳಲ್ಲಿ, ಆಹ್ವಾನದ ಭೇರಿಗಳನ್ನು ಮೊಳಗಿಸುವಾಗ—ಯಾಗಯಜ್ಞಾದಿ ಸಂದರ್ಭಗಳಲ್ಲಿ, ಕೆಲವು ಒಳ್ಳೆಯ ಮುಹೂರ್ತಗಳಲ್ಲಿ ಮತ್ತು ದಿನದ ಕಾಲವನ್ನು ಸೂಚಿಸಲು ಉಪಯೋಗಿಸುತ್ತಿದ್ದರು. ಐದು ವಾದ್ಯಗಳ ನಾದವನ್ನು ಹೊಂದಿದ್ದ ‘ ಪಂಚಮಹಾಶಬ್ದ ’ವೆಂಬ ಪ್ರಸಿದ್ಧ ವಾದ್ಯವು ಕರ್ಣಾಟಕದಲ್ಲಿ ಹೆಚ್ಚು ಬಳಕೆಯಲ್ಲಿದ್ದಿತು[15]. ಕಥಾನಿರೂಪಣೆಯಲ್ಲಿ ಪದ್ಯಗಳನ್ನು ಓದುವಾಗ ಸಂಗೀತವನ್ನು ಅಳವಡಿಸುತ್ತಿದ್ದರು[16]. ಮಹಾಕಾವ್ಯಗಳನ್ನು ಸಂಗೀತ ರೂಪದಲ್ಲಿ ಪಠನಮಾಡುವುದು ಒಂದು ಉತ್ತಮ ಕಲೆಯೆನಿಸಿದ್ದಿತು. ಕಲಾತ್ಮಕವಾದ ಮತ್ತು ಅನ್ವರ್ಥವಾದ ಹೆಸರುಗಳನ್ನು ಕಲೆಗಾರರು

ಗೊತ್ತುಪಡಿಸಿಕೊಳ್ಳುತ್ತಿದ್ದರು. ಈ ಹೇಳಿಕೆಯು ನೃತ್ಯ ಶಿಕ್ಷಕ ಅಂಗಜ[17], ಉಕಕುಲನೆಂಬ ಗಾಯಕ[18], ಮದನವೀಣಾ (ಕಾಮುನಲ್ಯೂವ್) ಎಂಬ ಪರಿಚಾರಿಕೆ[19], ರಾಗಮಂಜರಿ ಎಂಬ ನರ್ತಕಿ[20], ಧರವಿ ಮತ್ತು ಶರೀರಿ ಎಂಬ ವೀಣೆಗಳು[21], ಮತ್ತು ಕಲಾಭಾಷಿಣಿ[22] ಮತ್ತು ಅಭಿರಾಮ[23] ಎಂಬ ತುತ್ತೂರಿ (Trumpet) ಮುಂತಾದ ಹೆಸರುಗಳಿಂದ ವಿಶದಪಡುತ್ತದೆ.

ಕನ್ನಡದ ಕವಿಗಳು ಸಂಗೀತ ವಾದ್ಯಗಳಲ್ಲಿ ತತ, ಸುಷಿರ, ಅವನದ್ಧ ಮತ್ತು ಘನ ಎಂಬ ನಾಲ್ಕು ಶಾಸ್ತ್ರೀಯ ವರ್ಗೀಕರಣವನ್ನು ತಿಳಿದಿದ್ದರು[24]. ಅವರು ರೂಢಿಯಲ್ಲಿದ್ದ ಅನೇಕ ವಾದ್ಯಗಳನ್ನೂ ಆ ಕಾಲದ ಸಂಗೀತಗ್ರಂಥಗಳಲ್ಲಿ ವಿವರಿಸಲಾದ ವಾದ್ಯಗಳನ್ನೂ ಸಮಗ್ರವಾಗಿ ಅರಿತಿದ್ದರು. ಕೆಲವು ಗ್ರಂಥಗಳಲ್ಲಿ ಕಿನ್ನರಿ, ವಲ್ಲಕಿ, ವಿಪಂಚಿ, ರಾವಣಹಸ್ತ, ದಂಡಿಕಾ, ತ್ರಿಸರಿ, ಜಂತ್ರ, ಸ್ವರಮಂಡಲ ಮತ್ತು ಪರಿವಾದಿನಿ ಎಂಬ ತಂತೀವಾದ್ಯಗಳ ಹೆಸರುಗಳೂ ಕಂಡುಬಂದಿವೆ. ಅಲ್ಲದೆ, ಕೆಲವು ಗ್ರಂಥಗಳಲ್ಲಿ ಸುಷಿರ ವಾದ್ಯಗಳನ್ನು ಶಂಖ, ಶೃಂಗ, ವಂಶ, ತಿತ್ತಿರಿ, ಬಂಬುಲಿ ಮತ್ತು ಕಹಳೆಗಳೆಂದು ಹೆಸರಿಸಲಾಗಿದೆ. ಒತ್ತು, ಕರಡೆ, ಮೃದಂಗ, ಢಕ್ಕೆ, ಪಟಹ, ಆವುಜ, ದುಂದುಭಿ, ಪಣವ, ಭೇರಿ, ಡಿಂಡಿಮ, ತ್ರಿವಳಿ, ನಿಸ್ಸಾಳ, ಡಮರು, ಚೆಂಬಕ, ದಂಡೆ, ರುಂಜ, ಡೋಲುಗಳೆಂಬ ತಾಳವಾದ್ಯಗಳೂ ರೂಢಿಯಲ್ಲಿದ್ದುವು. ಇದೇ ವರ್ಗದ ಮುಕುಂದ[25], ರವಲಿ[26], ಕಂಠೀರವ[27], ಗಜಢಕ್ಕೆ[28], ಸಿಂಹಘಂಟೆ[29], ಪವಲ[30], ಮತ್ತು ಚಿಂಕಿರು[31] ಎಂಬ ರೂಢಿಯಲ್ಲಿದ್ದ ವಾದ್ಯಗಳಿಗೆ ಸಮನಾದ ಆಧುನಿಕ ವಾದ್ಯಗಳಾವುವೂ ಇನ್ನೂ ಕಂಡುಬಂದಿಲ್ಲ. ಆಗ ಉಪಯುಕ್ತವಾಗಿದ್ದ ಘನವಾದ್ಯಗಳೆಂದರೆ : ಘಂಟೆ, ಜಯಘಂಟೆ, ಕಿಂಕಿಣಿ, ಝಲ್ಲರಿ, ತಾಳ ಮತ್ತು ಕಂಸಾಲಗಳು. ಕೆಲವೆಡೆಗಳಲ್ಲಿ ವೀಣೆ ಮತ್ತು ಮೃದಂಗ ಮುಂತಾದ ಸಂಗೀತವಾದ್ಯಗಳ ರಚನಾಭಾಗಗಳ ಬಗ್ಗೆಯೂ ವಿವರಣೆಗಳಿವೆ. ಸಂಗೀತವಾದ್ಯಗಳ ಬಗ್ಗೆ ಅತ್ಯಧಿಕವಾದ ವಿವರಣೆಗಳನ್ನು ನೀಡಿ ಮೂವತ್ತೆರಡು ವೀಣೆಗಳು ಮತ್ತು ಹದಿನೆಂಟು ಕೊಳಲುಗಳನ್ನು ಸೂಚಿಸಿರುವವನು ಪಾಲುಕುರಿಕೆ ಸೋಮನಾಥನೆಂಬುದು ಗಮನಾರ್ಹ[32].

ಸಂಗೀತರಚನೆಯಲ್ಲಿಯೂ ಕರ್ಣಾಟಕವು ವಿಶ್ವದ ಸಂಗೀತಪದ್ಧತಿಗೆ ಸುಭದ್ರ ಬುನಾದಿ ಯನ್ನೊದಗಿಸಿದೆ. ಮೊತ್ತಮೊದಲು ಸಂಗೀತ ರೂಪಗಳ ಬಗ್ಗೆ ವಿವೇಚಿಸಿದವನೆಂದರೆ ಮತಂಗ. ಈತ ಕರ್ಣಾಟಕದಲ್ಲಿ ರೂಪಗೊಂಡ ಸುಮಾರು ಐವತ್ತು ಪ್ರಬಂಧಗಳನ್ನು ವಿವರಿಸಿದ್ದಾನೆ. ಅನಂತರ ಬಂದ ಸಂಗೀತ ರಚನೆಗಳೆಂದರೆ ಕಂದ, ವೃತ್ತ, ಗಾಥಾ, ಧೋತಕ, ಜೇತಕ, ವರ್ಮ, ದ್ವಿಪದಿ, ಶುಕಸರಿತ ಮತ್ತು ಕೈವಡವೆಂಬವು. ದಕ್ಷಿಣದ ಚಾಲುಕ್ಯರಾಜನಾದ ಮೂರನೆಯ ಸೋಮೇಶ್ವರನು ಅನೇಕ ಪ್ರಬಂಧ ಗಳನ್ನು ದೃಷ್ಟಾಂತಗಳೊಡನೆ ವಿವರಿಸಿದ್ದಾನೆ[33]. ಎರಡನೆಯ ಜಗದೇಕಮಲ್ಲನು ತನ್ನ "ಸಂಗೀತ ಚೂಡಾಮಣಿ" ಗ್ರಂಥದಲ್ಲಿ ನೂರಕ್ಕೂ ಮಿಗಿಲಾಗಿ ರಚನಾರೂಪಗಳನ್ನು ವಿವರಿಸಿದ್ದಾನೆ[34]. ಈ ಶಾಸ್ತ್ರಜ್ಞರುಗಳು ಶಾರ್ಙ್ಗದೇವನಿಗೆ ಅವನು ವಿಶದವಾಗಿ ವಿವರಿಸಿರುವ ಎಪ್ಪತ್ತ ನಾಲ್ಕು ಪ್ರಬಂಧಗಳಿಗೆ ಆಧಾರವನ್ನೊದಗಿಸಿದ್ದಾನೆ[35].

ಪ್ರಸ್ತುತ ಕಾಲದಲ್ಲಿ ಮೇಲೆ ಸೂಚಿಸಲಾದ ಸಂಗೀತರೂಪಗಳೇ ಅಲ್ಲದೆ, ಇತರ ಕೆಲವು ರಚನೆಗಳೂ ರೂಢಿಯಲ್ಲಿದ್ದುದು ಗಮನಾರ್ಹವಾದುದು. ಅವುಗಳು ಬೆದಂಡೆ, ಚತ್ತಾಣ, ಮೆಲ್ವಾಡು, ಪಾಡು, ಪಾಡುಗಬ್ಬ, ಬಾಜನೆಗಬ್ಬ, ಸುವ್ವಿ, ಚೌಪದಿ ಮತ್ತು ಅಡ್ಡತನ ಎಂಬವು. ಕನ್ನಡ ಗ್ರಂಥಗಳಲ್ಲಿ ಒನಕೆವಾಡು, ಓವಿ, ಧವಳ, ಮಂಗಳಾಚಾರ, ಮತ್ತು ಏಲಾ ಎಂಬ ಗೀತರೂಪಗಳನ್ನೂ ಸೂಚಿಸಲಾಗಿದೆ.

## ಅಡಿಟಿಪ್ಪಣಿಗಳು

1. ಭರತ: ನಾಟ್ಯಶಾಸ್ತ್ರ, (ಕಾವ್ಯಮಾಲಾ ಸಂಪುಟ) XXXIX, 25—28, ಪುಟಗಳು 304, 306. 307. ಶಾರ್ಙ್ಗದೇವ: ಈ ಹಿಂದೆಯೇ ಉದ್ಧರಿಸಿರುವ ಲೇಖನ ಭಾಗ, 1, 314—16 ; 1, 14, 17.
2. ಭರತ: ಹಿಂದೆಯೇ ಉದ್ಧರಿಸಿರುವ ಲೇಖನಭಾಗ ; ಮತಂಗ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, ಪುಟ 10 ಮತ್ತು ಸಂಬಂಧಪಟ್ಟ ಇತರ ಪ್ರಕರಣಗಳು. ಶಾರ್ಙ್ಗದೇವ : ಹಿಂದೆಯೇ ಉದ್ಧರಿಸಿರುವ ಲೇಖನಭಾಗ.
3. ಉದಾ :—ಸುಧಾಕಲಶ, ಸಂಗೀತಸಾರ, ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, ಅಭಿನವಭರತ ಸಾರಸಂಗ್ರಹ, 11, 53.
4. ಶಾರ್ಙ್ಗದೇವ, 1—8.
5. ಪಂಪ: ಭಾರತ, 11, 34 ; ರನ್ನ: ಅಜಿತತೀರ್ಥಂಕರ ಪುರಾಣ ತಿಲಕಂ, 111, 8; ಅಗ್ಗಳ: ಚಂದ್ರಪ್ರಭಪುರಾಣ, 11, 17 ; XII, 179; ಜನ್ನ: ಅನಂತನಾಥ ಪುರಾಣ, II, 11 ; ಚೌಂಡರಸ : ಅಭಿನವದಶಕುಮಾರ ಚರಿತೆ, VIII, 164, ಪದ್ಯವಾದ ಮೇಲಿನ ಗದ್ಯಭಾಗ.
6. ಉದಾ :—ರನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, IV, 30, ಪದ್ಯವಾದ ಮೇಲಿನ ಗದ್ಯಭಾಗ ; ಅಗ್ಗಳ: ಹಿಂದೆಯೇ ಉದ್ಧರಿಸಿರುವ ಲೇಖನಭಾಗ, XV, 12.
7. ರನ್ನ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, X, 1, ಪದ್ಯವಾದ ಮೇಲಿನ ಗದ್ಯಭಾಗ; ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VIII, 48 ; XI, 120 ; ಸೋಮರಾಜ : ಉದ್ಭಟಕಾವ್ಯ 1, 80.
8. ಪೊನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, XI, 84, ಪದ್ಯವಾದ ಮೇಲಿನ ಗದ್ಯಭಾಗ; ನೇಮಿಚಂದ್ರ: ಲೀಲಾವತಿ, II, 21 ; ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VI, 87.
9. ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VII, 96; ನಾಗಚಂದ್ರ: ಮಲ್ಲಿನಾಥ ಪುರಾಣ, VI, 98.
10. ಉದಾ :—ಪೊನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, II, 28.
11. ಪಂಪ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, V, 58 ; ನಾಗಚಂದ್ರ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, 1, 57; ಜನ್ನ : ಹಿಂದೆಯೇ ಉಲ್ಲೇಖಿಸರುವ ಗ್ರಂಥ, VIII, 7 ಪದ್ಯವಾದ ಮೇಲಿನ ಗದ್ಯಭಾಗ.
12. ಜನ್ನ : V, 2 ಪದ್ಯವಾದ ಮೇಲಿನ ಗದ್ಯಭಾಗ; ಪೊನ್ನ: X, 36.

12. (a) ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VI, 85.

13. ಬಸವ, ವಚನಸಂಖ್ಯೆ, 498 ; ಪಾಲ್ಕುರಿಕಿ ಸೋಮನಾಥ : ಬಸವಪುರಾಣ.
14. ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VI, 85.
15. ಉದಾ:—ಅಗ್ಗಳ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ XIII, 144 ; ಗಿರಿಜಾಕಲ್ಯಾಣ, V—1, 9 ; ನಯಸೇನ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ V, 51 ; VII, 63 ; ರಾಘವಾಂಕ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, III. 57 ; ರುದ್ರಭಟ್ಟ : ಜಗನ್ನಾಥ ವಿಜಯ, XVII, 31 ; ಜನ್ನ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, X, 15, ಪದ್ಯವಾದ ಮೇಲಿನ ಗದ್ಯಭಾಗ ; ಪಂಪ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, X, 36; ಬಸವ, ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, 63೪; ಪೊನ್ನ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, X, 151.
16. ಗುಣವರ್ಮ II : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, IV, 28 ; IX, 86.
17. ಪಂಪ: ಆದಿಪುರಾಣ, IV, 15.
18. ಪೊನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VII, ; 129.
19. ಅಗ್ಗಳ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VII, 85.
20. ಚೌಂಡರಸ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VIII, 164, ಪದ್ಯವಾದ ಮೇಲಿನ ಗದ್ಯಭಾಗ.
21. ನೇಮಿಚಂದ್ರ: ಲೀಲಾವತಿ, VI, 36.
22. ಗುಣವರ್ಮ II : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VI, 34.
23. ಅದೇ, VIII, 30.

24. ಉದಾ:—ಪಂಪ: ಆದಿಪುರಾಣ, V, 35; ಪೊನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, VI, 113.
25. ಪಂಪ ಭಾರತ : I, 107 ; XIII, 12, XIV, II.
26. ಅದೇ, X, 32, 35, ಪದ್ಯವಾದ ಮೇಲಿನ ಗದ್ಯಭಾಗ.
27. ಅದೇ, X, 150.
28. ಪೊನ್ನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, X, I, ಪದ್ಯವಾದ ಮೇಲಿನ ಗದ್ಯಭಾಗ.
29. ಶಾಂತಿನಾಥ: ಸುಕುಮಾರ ಚರಿತೆ, VIII, 63.
30. ನಯಸೇನ: ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, XIII, 19.
31. ನೇಮಿಚಂದ್ರ: ಲೀಲಾವತಿ, VIII, 74 ಪದ್ಯವಾದ ಮೇಲಿನ ಗದ್ಯಭಾಗ.
32. ಪಾಲ್ಕುರಿಕಿ ಸೋಮನಾಥ : ಪಂಡಿತಾರಾಧ್ಯ ಚರಿತ್ರವು, ಪರ್ವತ ಪ್ರಕರಣ.
33. ಸೋಮೇಶ್ವರ III : ಅಭಿಲಷಿತಾರ್ಥ ಚಿಂತಾಮಣಿ, ಹಸ್ತಪ್ರತಿ, A, 626, ಪ್ರಾಚ್ಯಸಂಶೋಧನ ಕಾರ್ಯಾಲಯ, ಮೈಸೂರು.
34. ಜಗದೇಕಮಲ್ಲ II : ಸಂಗೀತ ಚೂಡಾಮಣಿ, ಹಸ್ತಪ್ರತಿ, 5081, ಪ್ರಾಚ್ಯಸಂಶೋಧನಕಾರ್ಯಾಲಯ, ಮೈಸೂರು.
35. ಶಾರ್ಙ್ಗದೇವ : ಹಿಂದೆಯೇ ಉಲ್ಲೇಖಿಸಿರುವ ಗ್ರಂಥ, IV.

ಮೂಲಲೇಖಕರು : ಶ್ರೀ ಆರ್. ಸತ್ಯನಾರಾಯಣ
ಅನುವಾದಕರು : ಶ್ರೀ ಟಿ. ಆರ್. ನಾಗರತ್ನಮ್ಮ

# ಅನುಬಂಧ 1

## ಆಡಳಿತ ಸಂಸ್ಥೆಗಳು—ಆದಿಕಾಲ

### ಮೌರ್ಯರ ಆಳಿಕೆಯಲ್ಲಿ

ಪ್ರಾಂತೀಯ ಸರ್ಕಾರವನ್ನು ನಡೆಸಲು ಆಯುಪುತ ಅಥವಾ ರಾಜಕುಮಾರ ನೇಮಕವಾಗಿದ್ದ ವಿಚಾರವನ್ನು ಅಶೋಕನ ಶಾಸನಗಳು ತಿಳಿಸುತ್ತವೆ. ಇವರಿಗೆ **ಮಹಾಮಾತ್ರರು** ಸಹಾಯಕರಾಗಿದ್ದರು; ಆಡಳಿತದ ವಿವಿಧ ಮುಖಗಳ ನಿರ್ವಹಣೆ ಅವರ ಕರ್ತವ್ಯವಾಗಿತ್ತು. ಈ ಮಹಾಮಾತ್ರರಲ್ಲಿ **ಧರ್ಮ ಮಹಾಮಾತ್ರರೂ** ಇದ್ದು, ಇವರು ಧರ್ಮಕಾರ್ಯ ಹಾಗೂ ಮತಾಚಾರ, ಸಾಧು ಸನ್ಯಾಸಿಗಳು ಅಲ್ಲದೆ ಜನತೆಯ ಧಾರ್ಮಿಕ ಆಚರಣೆ ಈ ಸಂಬಂಧವಾದ ಕರ್ತವ್ಯವನ್ನು ನೋಡಿಕೊಳ್ಳಬೇಕಾಗಿದ್ದಿತು. 'ದೇವಾನಾಂಪ್ರಿಯ'ನು ('ದೇವತೆಗಳ ಒಲುಮೆಗಳಿಸಿದ' ಅಶೋಕನು) ಮೇಲ್ವಿಚಾರಕರಿಗೂ ಕೈಕೆಳಗಿನ ಅಧಿಕಾರಿಗಳಿಗೂ ಅವರು ತಮಗೆ ಒಪ್ಪಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡುವಂತೆ ನಿರೂಪಿಸುತ್ತಿದ್ದನು. ಅಶೋಕನ ಶಾಸನಗಳು ಕರ್ಣಾಟಕದಲ್ಲಿ ಕಾಣಬಂದಿವೆ. ಈ ಮೊದಲೇ ತಿಳಿಸಿದಂತೆ ಮೌರ್ಯರ ಆಡಳಿತವನ್ನು ಈ ಪ್ರದೇಶದಲ್ಲಿಯೂ ರೂಢಿಸಲಾಯಿತೆಂದು ಭಾವಿಸಬಹುದು. ಸಿದ್ಧಾಪುರದ ಬಳಿಯ ಇಸಿಲವು ಮೌರ್ಯಚಕ್ರಾಧಿಪತ್ಯದ ಉಕ್ಕಡ (out-post) ವಾಗಿದ್ದಿತೆಂದು ಇಲ್ಲಿ ತಿಳಿಸಬೇಕಾಗಿದೆ.

### ಶಾತವಾಹನರ ಆಳಿಕೆಯಲ್ಲಿ

ಕ್ರಿ.ಪೂ. ಒಂದು ಮತ್ತು ಎರಡನೆ ಶತಮಾನದಲ್ಲಿ ಕರ್ಣಾಟಕದಲ್ಲಿ ಶಾತವಾಹನರ ಆಧಿಪತ್ಯವಿದ್ದಾಗ ದಖನ್ನಿನಲ್ಲಿ ರಜ್ಜುಕರ ಆಡಳಿತ ಪದ್ಧತಿಯಿದ್ದಾಗ ಅವು ಜನಪ್ರಿಯವಾಗಿದ್ದವು. ರಜ್ಜುಕರನ್ನು ಅಧಿಕಾರಿಗಳೆಂದು ಅಶೋಕನ ಶಾಸನಗಳಲ್ಲಿ ಹೇಳಲಾಗಿದೆ. ಇವರ ನಿಖರವಾದ ಕೆಲಸ ಭೂಮಿಯನ್ನು ಅಳೆದು ಕಂದಾಯವನ್ನು ನಿಷ್ಕರ್ಷಿಸುವುದಾಗಿತ್ತು. 'ರಜ್ಜುಕ' ಎಂದರೆ ಹಗ್ಗವನ್ನು ಹಿಡಿದವನೆಂದು ಅರ್ಥವಾಗುವಂತೆ, 'ಸಿರಸ್ತೆದಾರ್' ಎಂದರೆ ಪರ್ಷಿಯನ್ ಭಾಷೆಯಲ್ಲಿ ಹಗ್ಗ ಹಿಡಿದವನೆಂದೇ ಆಗುವುದರಿಂದ–ಪುರಾತನವಾದ ಕೆಲವು ಕಾರ್ಯಾಂಗ ಹುದ್ದೆಗಳು ಈ ಆಧುನಿಕ ಕಾಲದವರೆಗೂ ನಡೆದು ಬಂದಿವೆಯೆಂಬುದು ಸ್ವಾರಸ್ಯವಾಗಿ ತೋರುತ್ತದೆ. ಕದಂಬರ ಮತ್ತು ಗಂಗರ ಆಳಿಕೆಯಲ್ಲಿ ದೇಶವನ್ನು ನಾಡುಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ನಾಡಿನಲ್ಲಿಯೂ ಅನೇಕ ಹಳ್ಳಿಗಳಿರುತ್ತಿದ್ದವು. ಗಂಗವಾಡಿ, ನೊಳಂಬವಾಡಿ ಮತ್ತು ಇತರ ದೇಶಗಳು ಕೂಡ, ಬೇರೆ ಬೇರೆ ನಾಡುಗಳಾಗಿ, ತರುವಾಯ ಆ ನಾಡುಗಳು ಕೆಲ ಕೆಲವು ಹಳ್ಳಿಗಳ ಗುಂಪುಗಳಾಗಿ, ಬಹುಶಃ ಕಂದಾಯ ನಿರ್ಧಾರ ಮತ್ತು ವಸೂಲಿಯ ಸಲುವಾಗಿ ವಿಂಗಡಣೆ ಮರುವಿಂಗಡಣೆಗೊಂಡಿದ್ದವು. ಹಳ್ಳಿಗಳ ಮಹಾಜನರು ಸ್ಥಳೀಯ ಆಡಳಿತದಲ್ಲಿ ಕೇಂದ್ರದ ಕೈವಾಡವಿಲ್ಲದೆ ಹೆಚ್ಚಿನ ಅಧಿಕಾರಗಳನ್ನು ಅನುಭವಿಸುತ್ತಿದ್ದರು.

### ಗಂಗರ ಆಳಿಕೆಯಲ್ಲಿ

ಗಂಗರಲ್ಲಿ ರಾಜತ್ವದ ಕರ್ತವ್ಯವನ್ನು ಕುರಿತು ಪ್ರಗತಿಪರ ಭಾವನೆ ನೆಲಸಿತ್ತು. ಕಲ್ಯಾಣದ

ಚಾಲುಕ್ಯರಲ್ಲಿ ಈ ಆಡಳಿತ ಪದ್ಧತಿಯು ಮತ್ತಿಷ್ಟು ವಿಸ್ತಾರಗೊಂಡಿತೆಂದು ಗೊತ್ತಾಗುತ್ತದೆ. ಚಕ್ರವರ್ತಿಗೆ 'ಶ್ರೀ ಪೃಥ್ವೀವಲ್ಲಭ', 'ಮಹಾರಾಜಾಧಿರಾಜ ಪರಮೇಶ್ವರ' ಮತ್ತು 'ರಾಜ ಪರಮೇಶ್ವರ ಭಟ್ಟಾರಕ' ಇತ್ಯಾದಿ ಹೆಸರುಗಳಿದ್ದವು. ಮುಖ್ಯವಾಗಿ ಇವರು ನೆರೆಯ ರಾಜ್ಯಗಳ ಮೇಲೆ ಪದೇ ಪದೇ ಬಿದ್ದು, ಯುದ್ಧಮಾಡಿ ಗೆದ್ದು, ಗೆದ್ದುದನ್ನು ಭದ್ರಗೊಳಿಸಿಕೊಳ್ಳುತ್ತಾ ತಮ್ಮ ದೇಶವನ್ನು ವಿಸ್ತರಿಸಿಕೊಳ್ಳುತ್ತಿದ್ದರು. ದುಷ್ಟನಿಗ್ರಹ ಮತ್ತು ಶಿಷ್ಟಪರಿಪಾಲನೆ ರಾಜನ ಆದ್ಯ ಕರ್ತವ್ಯವಾಗಿತ್ತು. ಮಹಾಮಾತ್ಯರು ತಮಗೆ ರಾಜನಿಂದ ಒಪ್ಪಿಸಲಾದ ರಾಜಾಧಿಕಾರವನ್ನು ದೇಶದ ಎಲ್ಲ ಭಾಗಗಳಲ್ಲಿಯೂ ರಾಜನ ಜಾಗ್ರತ ಮೇಲ್ವಿಚಾರಣೆಯಲ್ಲಿ ಚಲಾಯಿಸುತ್ತಾ ಆಡಳಿತ ನಡೆಸುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಯಶಸ್ವಿ ಆಡಳಿತದ ಗುಟ್ಟು ರಾಜ ಮತ್ತು ಮಂತ್ರಿಗಳಲ್ಲಿ ಜನತೆ ಇಟ್ಟ ಅಚಲವಾದ ವಿಶ್ವಾಸ, ಜನತೆಯ ಹಿತಾಸಕ್ತಿಯಲ್ಲಿ ಆಡಳಿತದ ನಿಕಟತೆ, ಅಲ್ಲದೆ ರಾಜ ಮತ್ತು ಪ್ರಜೆಗಳ ಸಹ ಪ್ರಯತ್ನ ಇವನ್ನವಲಂಬಿಸಿದ್ದಿತು. ಪ್ರಜೆಗಳ ಅತ್ಯುನ್ನತ ಕ್ಷೇಮವನ್ನು ಸಾಧಿಸುವುದು ರಾಜನ ಹೊಣೆಯಾಗಿತ್ತು. ಎಲ್ಲ ರಾಜಕೀಯ ಸಂಸ್ಥೆಗಳ ಆಶಯ ಹಾಗೂ ಸಾಧನೆ, ಇಡೀ ಸಮಾಜದ ಐಹಿಕ ಸುಖ ಹಾಗೂ ನೈತಿಕ ಬೆಳವಣಿಗೆಗಾಗಿ ಶ್ರಮಿಸುವುದಾಗಿತ್ತು. ಒಂದು ಶಾಸನ ಹೀಗೆ ಹೇಳುತ್ತದೆ: "ರಾಜರ ನಡೆವಳಿಕೆ ಮನುವಿನಂತೆ. ಅವರ ನೀತಿ ಪುರಾತನ ರಾಜರುಗಳು ಅನುಸರಿಸಿದ್ದ ನೀತಿಯಂತೆ. ಬೇರೆಯವರ ಕ್ಷೇಮಾಭ್ಯುದಯವೇ ಅವರು ಆರ್ಜಿಸಿದ ಸಿರಿ. ತಮ್ಮನ್ನು ನಂಬಿದ ಆಶ್ರಿತರ ತೃಪ್ತಿಯೇ ಅವರ ತೃಪ್ತಿ". ವರ್ಣಾಶ್ರಮ ಧರ್ಮದ ರೀತ್ಯಾ ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಯನ್ನು ಪಾಲಿಸಲು ರಾಜರು ಬದ್ಧರಾಗಿದ್ದರು. "ತಮಗೆ ವಿಧಾಯಕವಾಗಿದ್ದ ಕರ್ತವ್ಯ (ಧರ್ಮ)ದಿಂದ ಜನರು ವಿಮುಖರಾಗಲು ರಾಜರು ಆಸ್ಪದ ಕೊಡಬಾರದು ; ಏಕೆಂದರೆ, ಯಾರು ತಮ್ಮ ಕರ್ತವ್ಯವನ್ನು ಪಾಲಿಸುವರೋ ಆರ್ಯರ ಪದ್ಧತಿಗಳನ್ನು ಆಚರಿಸುವರೋ, ಜಾತಿ ಮತ್ತು ವರ್ಗದ ಕಟ್ಟಳೆಯಂತೆ (ವರ್ಣಾಶ್ರಮ ಧರ್ಮದಂತೆ) ನಡೆದುಕೊಳ್ಳುವರೋ–ಅವರು ಇಹದಲ್ಲಿಯೂ ಪರದಲ್ಲಿಯೂ ಸುಖಿಗಳಾಗುವರು". ಪವಿತ್ರ ಹಾಗೂ ಅನುಕರಣೀಯವಾದ ಕರ್ತವ್ಯದಂತೆ ರಾಜ ಧರ್ಮವನ್ನು ಪಾಲಿಸತಕ್ಕ ಪ್ರಸ್ತಾಪ ಈ ಬಗೆಯ ಗಂಗ ಮತ್ತು ಕದಂಬರ ಶಾಸನಗಳಲ್ಲಿ ಅಸಾಧಾರಣವಾಗಿ ಪದೇ ಪದೇ ಕಾಣಬರುವುದು. ಮಾಧವ ಕೊಂಗಾಣಿ ವರ್ಮನು ಸಭ್ಯ ಜನರ ದೇಶವೊಂದನ್ನು ಗಳಿಸಿ ಆಳಿದನು (ಸ್ವಭುಜ-ಜವ-ಜಯ-ಜನಿತ-ಜನಪದಸ್ಯ). ಅವನು 'ಕೊಂಗಾಣಿವರ್ಮ ಧರ್ಮಮಹಾಧಿ ರಾಜ' ಎಂದು ಹೆಸರುಗೊಂಡಿದ್ದನು. ವಿಷ್ಣುಗೋಪನು ಗುರುಗಳ, ಗೋವುಗಳ ಮತ್ತು ಬ್ರಾಹ್ಮಣರ ಪೂಜೆಯಲ್ಲಿ ನಿರತನಾಗಿದ್ದನು. ಜಾತಿ ಮತ ಧರ್ಮ ಪಂಥದವರಿಗೆ ನೀಡಿದ್ದ ರಕ್ಷಣೆಗಾಗಿ ದುರ್ವಿನೀತನು ವೈವಸ್ವತಮನುವಿಗೆ ಹೋಲುವನೆಂದು ಉತ್ತನೂರು ಲಿಖಿತ ಫಲಕದಲ್ಲಿ ವಿವರಿಸಲಾಗಿದೆ. ನೀತಿಶಾಸ್ತ್ರಕ್ಕನು ಸಾರವಾಗಿ ಆಳಿದವರಲ್ಲಿ ನೀತಿಮಾರ್ಗನು ಪ್ರಮುಖನೆಂದು ಪ್ರಶಂಸಿಸಲಾಗಿದೆ. ಸಾಮಾನ್ಯ ಕಾನೂನುಗಳನ್ನು ಘೋಷಿಸುವುದರಿಂದ ಹಾಗೂ ಜಾರಿಗೆ ತರುವುದರಿಂದ ಮಾತ್ರವಲ್ಲ, ಬಲಶಾಲಿಗಳು ದುರ್ಬಲರನ್ನು ಶೋಷಿಸುವುದನ್ನು ತಡೆಗಟ್ಟಿ ಅಂತಹರಿಂದ ರಾಜ್ಯವನ್ನು ರಕ್ಷಿಸುವುದರ ಮೂಲಕವೂ ಪ್ರಜೆಗಳ ಹಿತವನ್ನು ಕಾಪಾಡುವುದು ಕರ್ತವ್ಯವಾಗಿದ್ದಿತು. ಹೀಗೆ ತನ್ನ ಪ್ರಜೆಗಳಿಗೆ ರಕ್ಷಣೆ ನೀಡಿದ್ದರಿಂದ ರಾಜ್ಯದ ಆದಾಯದಲ್ಲಿ ರಾಜ ತನ್ನ ಪಾಲನ್ನು ಪಡೆಯುತ್ತಿದ್ದ; ಅಲ್ಲದೆ ತನ್ನ ಜನರ ಆಧ್ಯಾತ್ಮಿಕ ಗಳಿಕೆಯಲ್ಲಿಯೂ ಭಾಗಿಯಾಗುತ್ತಿದ್ದ. ಹೀಗೆ ರಕ್ಷಣೆನೀಡುವುದು ಪ್ರಜೆಗಳ ಖಾಸಗಿ ಹಾಗೂ ಸಾರ್ವಜನಿಕ ಜೀವನಕ್ಕೆಲ್ಲಾ ವ್ಯಾಪಿಸುತ್ತಿತ್ತಾದರೂ ವ್ಯಕ್ತಿಸ್ವಾತಂತ್ರ್ಯಕ್ಕೆಂದಿಗೂ ನಿರ್ಬಂಧವಿರಲಿಲ್ಲ. ರಾಜ್ಯವು ಖಾಸಗಿ ಆಸ್ತಿ ಪಾಸ್ತಿಗಳ ವ್ಯವಸ್ಥೆಯನ್ನೂ ಭೂಮಿಯ ಒಡೆತನ ಸಹಿತ ಎಲ್ಲ ಸಂಪತ್ತಿನ ಮೇಲೆ ಎಲ್ಲ ಬಗೆಯ ವ್ಯಕ್ತಿಗತವಾದ ಹಕ್ಕುಬಾಧ್ಯತೆಗಳನ್ನೂ ಖಚಿತವಾಗಿಯೇ ಮನ್ನಿಸಿತ್ತು.

ಗಂಗರಾಜ್ಯವು ಮತಸಂಪ್ರದಾಯಬದ್ಧ ಪ್ರಭುತ್ವವಾಗಿರಲಿಲ್ಲ. ಏಕೆಂದರೆ ಧರ್ಮಗುರು ವರ್ಗದವರಿಗೆ ಸರ್ವಹಿತದೃಷ್ಟಿಯಿಂದ ಮನ್ನಣೆಗೆ ಪಾತ್ರರಾದ ನಾಯಕರ ನೇತೃತ್ವದಲ್ಲಿ ಒತ್ತಟ್ಟಿಗೆ ಕೂಡಿ ವರ್ತಿಸಲಿಕ್ಕೆ ಸಾಧಕವಾದ ವ್ಯವಸ್ಥೆ ಇರಲಿಲ್ಲ. ಇದು ಮಾತ್ರವಲ್ಲ, ರಾಜರು ಯಾವ ನಿರ್ದಿಷ್ಟ ಪಂಥದ

ಪ್ರಭಾವಕ್ಕೂ ಸಿಗುತ್ತಿರಲಿಲ್ಲ ಮತ್ತು ಪ್ರಜಾಹಿತ ವ್ಯವಸ್ಥೆಯ ಯಾವ ತೊಡರಿಗೂ ಮಣಿಯುತ್ತಿರಲಿಲ್ಲ ವೆಂಬುದು ಸಹ, ಕಾರಣ. ಆದರೂ ಧರ್ಮಗುರುವರ್ಗದವರ ಸಲಹೆ ಎಂದಿಗೂ ಮುಖ್ಯವಾದುದೆಂದು ಭಾವಿಸಲಾಗಿತ್ತು. ಗಂಗ ರಾಜ್ಯವನ್ನು ದಡಿಗ ಮತ್ತು ಮಾಧವರು ಸ್ಥಾಪಿಸಿ, ಅದನ್ನು ತನ್ನ ಸಲಹೆಯಂತೆ ಆಳುವುದರಲ್ಲಿ ಸಹಾಯವೆಸಗಿದ್ದ ಸಿಂಹನಂದಿ, ಅವಿನೀತ ಮತ್ತು ದುರ್ವಿನೀತರ ಸಮಕಾಲೀನರಾಗಿದ್ದ ವಿಜಯಕೀರ್ತಿ ಮತ್ತು ಪೂಜ್ಯಪಾದರು ಶಿವಮಾರನ ಗುರುಗಳಾದ ತೊರಹಾಚಾರ್ಯ ಮತ್ತು ಅವರ ಶಿಷ್ಯ ಪುಷ್ಪನಂದಿ, ಮಾರಸಿಂಹ ಮತ್ತು ಚಾವುಂಡರಾಯರ ರಾಜಗುರುವಾದ ಅಜಿತಸೇನ—ಇವರ ಜೀವನಚರಿತ್ರೆಗಳು ರಾಜ್ಯದ ಆಡಳಿತದ ಮೇಲೆ ಅವರು ಬೀರುತ್ತಿದ್ದ ಪ್ರಭಾವಕ್ಕೆ ಉತ್ತಮ ನಿದರ್ಶನ ಗಳಾಗಿವೆ. ಈ ಆಚಾರ್ಯರು ತಮ್ಮ ಶಿಷ್ಯರಾದ ಅರಸರ ಶೀಲವನ್ನು ಹಾಗೂ ಜೀವಿತವನ್ನು ಗಣನೀಯವಾಗಿ ರೂಪಿಸುತ್ತಿದ್ದರು.

ಆ ಕಾಲದ ಶಾಸನಗಳು ಧರ್ಮಕರ್ತರಾದ ಅರಸುಗಳನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತವೆ : ದುರ್ವಿನೀತನು ಅನುಪಮ ಶಕ್ತಿಯ ಆಗರ, ಸದ್ಗುಣದ ನಡೆವಳಿಕೆಯಲ್ಲಿ ಯುಧಿಷ್ಠಿರ. ರಾಜನೀತಿಯಲ್ಲಿ ಅತಿ ಪ್ರವೀಣ, ಅದರಂತೆ ನಡೆಯುವುದರಲ್ಲಿ ಸಮರ್ಥನು ಆಗಿದ್ದನೆಂದೂ ಅಲ್ಲಿ ವರ್ಣಿಸಲಾಗಿದೆ. ಮಾರಸಿಂಹನ ಕೂಡ್ಲೂರು ಲಿಖಿತ ಫಲಕಗಳು, ಇತರರಿಗೆ ಒಳಿಯದನ್ನು ಮಾಡುವಲ್ಲಿ ಅವನ ಆನಂದ, ನಾರಿ ಮತ್ತು ಸಿರಿಯ ಬಗ್ಗೆ ಅವನ ಜುಗುಪ್ಸೆ, ಒಳ್ಳೆಯವರ ವಿಚಾರದಲ್ಲಿ ಕೆಟ್ಟದ್ದನ್ನು ಆಲಿಸುವಲ್ಲಿ ಅಸಹನೆ, ಸಾಧುಗಳಿಗೂ ಬ್ರಾಹ್ಮಣರಿಗೂ ದಾನನೀಡುವುದರಲ್ಲಿ ತೋರುತ್ತಿದ್ದ ಶ್ರದ್ಧೆ, ರಕ್ಷಣೆ ಬೇಡಿದವರ ಬಗ್ಗೆ ಪ್ರೇಮ–ಇವನ್ನು ಶ್ಲಾಘಿಸುತ್ತವೆ. ಪಾಂಡಿತ್ಯ, ಸಹನೆ, ಸತ್ಯ, ಆತ್ಮನಿಗ್ರಹ, ಪರಿಶುದ್ಧತೆ, ಜೀವಕ್ಕೆ ಘಾಸಿಗೊಳಿಸದಿರುವಿಕೆ, ಆಧ್ಯಾತ್ಮಿಕ ಮಾರ್ಗದರ್ಶಕರಲ್ಲಿ ವಿಧೇಯತೆ, ಕಷ್ಟಪೀಡಿತರ ಬಗ್ಗೆ ಅನುಕಂಪ, ಉದಾತ್ತ ಮನಸ್ಸು, ಅಗಾಧ ಪರಿಜ್ಞಾನ, ಇತರರ ಐಶ್ವರ್ಯವನ್ನು ಆಶಿಸದಿರುವುದು, ದೇವ ಬ್ರಾಹ್ಮಣರ ವಿಚಾರದಲ್ಲಿ ಪೂಜ್ಯಭಾವ–ಇವು ಗಂಗರಾಜರುಗಳ ವಿಷಯವಾಗಿ ಶಾಸನಗಳು ತಿಳಿಸಿದ ಗುಣಗಳಲ್ಲಿ ಕೆಲವು.

## ಅಧಿಕಾರದ ಮಿತಿ

ರಾಜನ ಪ್ರಭುತ್ವ ನಿರಂಕುಶವಾಗಿರಲಿಲ್ಲ. ಏಕೆಂದರೆ, ರಾಜ್ಯಾಂಗ ಕೇವಲ ರಾಜನ ಹಿತದ ಸಲುವಾಗಿ ಅಥವಾ ಬಂಧುವರ್ಗದ ಸಲುವಾಗಿ ರೂಪಿಸಿರಲಿಲ್ಲ. ಆದರೆ ಎಲ್ಲ ವರ್ಗಗಳವರಿಗೂ ಪೂರ್ಣಸ್ವಾತಂತ್ರ್ಯ ಅಲ್ಲದೆ ಅವರವರ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಆಧ್ಯಾತ್ಮಿಕ ಹಾಗೂ ಐಹಿಕ ಸುಖದ ಗಳಿಕೆಗೆ ಅವಕಾಶಮಾಡಿಕೊಡಲಾಗಿತ್ತು. ಸಮಾಜಕ್ಕೆ ಗೊತ್ತಾದ ಇಡೀ ಸಂಪ್ರದಾಯಬದ್ಧವಾದ ಧಾರ್ಮಿಕ ಹಾಗೂ ಲೌಕಿಕ ಶಾಸನಪದ್ಧತಿಗಳನ್ನು ನಡೆಸುವ ಸಲುವಾಗಿಯೇ ರಾಜತ್ವವನ್ನು ಸ್ಥಾಪಿಸಲಾಗಿತ್ತು. ರಾಜನ ಪ್ರಭುತ್ವಾಧಿಕಾರ ದೈವಿಕಸ್ವರೂಪದ್ದೆಂದು ಪ್ರಜೆಗಳು ಒಪ್ಪಿದ್ದರು. ಧರ್ಮ, ಕಾನೂನು ಕಟ್ಟಲೆಗಳೂ ದೈವಿಕವಾದವು–ವ್ಯತ್ಯಸ್ತವಾಗದಿರತಕ್ಕವು ಎಂಬ ಭಾವನೆಯನ್ನು ತಳೆದು, ಅವರು ರಾಜರುಗಳ ನಿರಂಕುಶಾಧಿ ಕಾರಕ್ಕೆ ತಡೆಹಾಕಿದ್ದರು. ಈ ಪ್ರಕಾರ ರಾಜರಿಗೆ ಶಾಸನ ನಿರ್ಮಾಣಾಧಿಕಾರವಿರಲಿಲ್ಲ. ಅವರ ಪ್ರಧಾನಕರ್ತವ್ಯ ನ್ಯಾಯಪ್ರದಾನ ಮತ್ತು ದುಷ್ಟರನ್ನು ನಿಗ್ರಹಿಸಿ ನ್ಯಾಯ ಮತ್ತು ಶಾಂತಿಯನ್ನು ಕಾಪಾಡುವುದಾಗಿತ್ತು. ಇದರ ಜೊತೆಗೆ, ಸ್ಥಳೀಯ ರಾಜರು ಅಥವಾ ಸಾಮಂತರು ತಮ್ಮ ಅಧಿಕಾರವನ್ನು ಪೂರ್ಣವಾಗಿ ಅನು ಭವಿಸಲು ಅವಕಾಶವಿದ್ದುದರಿಂದ ರಾಜಾಧಿಕಾರದ ವ್ಯಾಪ್ತಿ ಬಹುಮಟ್ಟಿಗೆ ಮಿತಗೊಳಿಸಲಾಗಿತ್ತು. ಪ್ರಜಾ ಪೀಡಕ ರಾಜನಿಗೆ ಸಾಮಂತರ ಒಕ್ಕೂಟದ ವಿರೋಧ ಪ್ರಬಲವಾಗಿರಲು ಶಕ್ಯವಿತ್ತು.

ರಾಜತ್ವವು ಸಾಮಾನ್ಯವಾಗಿ ಆನುವಂಶಿಕವಾಗಿದ್ದರೂ ಸಿಂಹಾಸನಕ್ಕೇರುವ ಬಾಧ್ಯತೆ ಆಳುವ ರಾಜನ

ವಂಶದವರಿಗೇ ಸಂಪೂರ್ಣವಾಗಿ ಸೀಮಿತವಾಗಿರಲಿಲ್ಲ. ರಾಜ್ಯದ ಮಂತ್ರಾಲೋಚನಾ ಸಭೆಯ ಒಪ್ಪಿಗೆಯಿಂದ ಮಾತ್ರವೇ ಆ ಬಾಧ್ಯತೆ ಸಾಧ್ಯವಾಗುತ್ತಿತ್ತು. ಈ ಸಭೆಯ ಅಧಿಕಾರ ಕೇವಲ ಹೆಸರಿಗೆ ಮಾತ್ರ. ತನ್ನಮಂತ್ರಿಗಳನ್ನು ನೇಮಕ ಮಾಡುವ ಅಥವಾ ವಜಾಮಾಡುವ ಹಕ್ಕು ರಾಜನಲ್ಲಿರುತ್ತಿದ್ದಿತು. ಇಷ್ಟಾದರೂ ರಾಜ ಮೃತಪಟ್ಟಾಗ, ಮಂತ್ರಾಲೋಚನಾ ಸಭೆ ರಾಜ್ಯದ ಹಿತದೃಷ್ಟಿಯಿಂದ ಸಿಂಹಾಸನಕ್ಕೆ ವಂಶಾನುಗತವಾದ ಹಕ್ಕನ್ನು ನಿರಾಕರಿಸಲು ಅಗತ್ಯವಿದ್ದರೆ ತನ್ನ ಸಂಪ್ರದಾಯವಾಗಿ ಬಂದ ಉಚ್ಚಾಧಿಕಾರವನ್ನು ಚಲಾಯಿಸುತ್ತಿತ್ತು. ಮಂತ್ರಿಗಳಿಂದ ಹಾಗೂ ಜನನಾಯಕರಿಂದ ಆಯ್ಕೆಯಾಗಿದ್ದ ನಂದಿವರ್ಮನ್ ಪಲ್ಲವಮಲ್ಲನ ಸಿಂಹಾಸನಾರೂಢರಾಗಲು ಹರ್ಷ, ರಾಜರಾಜ ಮತ್ತು ವಿಕ್ರಮಾದಿತ್ಯರನ್ನು ಮಂತ್ರಿಗಳು ಆಹ್ವಾನಿಸಿದ್ದು, ರಾಷ್ಟ್ರಕೂಟ ಕಂಭನನ್ನು ಆತನ ಕಿರಿಯ ಸಹೋದರ ಗೋವಿಂದ ಕೆಳಗಿಳಿಸಿದ್ದು, ಅವಿನೀತನು ಬೇರೊಬ್ಬರ ಹೊಟ್ಟೆಯಲ್ಲಿ ಜನಿಸಿದ ಮತ್ತೊಬ್ಬ ಮಗನ ಪರವಾಗಿ ದುರ್ವಿನೀತನ ಸಿಂಹಾಸನದ ಬಾಧ್ಯತೆಯನ್ನು ತಳ್ಳಿಹಾಕಿದ್ದು—ಅಂದು ರೂಢಿಯಲ್ಲಿದ್ದ ಇಂಥ ಪದ್ಧತಿಗೆ ಸಾಕಷ್ಟು ನಿದರ್ಶನಗಳಾಗಿವೆ. ಆಳುತ್ತಿದ್ದ ರಾಜ ತನ್ನ ಸಮೀಪ ಬಂಧುವರ್ಗದಲ್ಲಿ ಅಥವಾ ಪುತ್ರರಲ್ಲಿ ಅತ್ಯಂತ ಸಮರ್ಥನಾದವನನ್ನು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಆರಿಸಿದ ಅನೇಕ ಪ್ರಸಂಗಗಳಿವೆ. ಹಿರಿಯ ಮಗನಿಗೆ ಅವನ ಹುಟ್ಟಿನ ದೆಸೆಯಿಂದಲೇ ವಿಧಾಯಕವಾದ ಬಾಧ್ಯತೆ ಇರಲಿಲ್ಲ. ಉತ್ತರಾಧಿಕಾರಿಯಾಗಿ ಆಯ್ಕೆಯಾಗುವಲ್ಲಿ ಈ ಜನರ ವರಸೆ ಇದ್ದಿತು: ರಾಜನ ಚಿಕ್ಕಪ್ಪ, ತನಗಿಂತಲೂ ಕಿರಿಯವನಾಗಿದ್ದರೆ, ಆ ಕಿರಿಯ ಸಹೋದರ ಅಥವಾ ಹಿರಿಯ ಸಹೋದರನ ಮಗ, ತನ್ನ ಸ್ವಂತಮಗ ಅಥವಾ ದತ್ತುಮಗ. ಯುವರಾಜ ಮತ್ತು ಆ ಮನೆತನದ ರಾಜಕುಮಾರರು ಚಿಕ್ಕವರಿದ್ದಾಗಲೇ ಅವರಿಗೆ ರಾಜಕೀಯ ವಿಜ್ಞಾನ, ಅಶ್ವಶಾಸ್ತ್ರ, ಧನುರ್ವಿದ್ಯೆ, ವೈದ್ಯ, ಕಾವ್ಯ, ವ್ಯಾಕರಣ ನಾಟಕ ಮತ್ತು ಇತಿಹಾಸ ಇವುಗಳನ್ನು ಮಾತ್ರವಲ್ಲದೆ ನೃತ್ಯ (ಭರತ ಶಾಸ್ತ್ರ), ಸಂಗೀತ ಮತ್ತು ವಾದ್ಯವಾದನದಲ್ಲಿಯೂ ಉತ್ತಮ ಶಿಕ್ಷಣ ಕೊಡಿಸುವ ವ್ಯವಸ್ಥೆ ಇದ್ದಿತು. ಚಿಕ್ಕಂದಿನಲ್ಲಿಯೇ ಅವರನ್ನು ಪ್ರಾಂತ್ಯಗಳಿಗೆ ರಾಜಪ್ರತಿನಿಧಿಗಳಾಗಿಯೋ ರಾಜ್ಯಪಾಲರಾಗಿಯೋ ನೇಮಕ ಮಾಡಿ ಆಡಳಿತದ ಅನುಭವ ಗಳಿಸುವಂತೆ ಮಾಡಲಾಗುತ್ತಿತ್ತು. ಅವರು ಈ ರೀತಿ ಗಳಿಸಿದ ತಮ್ಮ ಅಮೂಲ್ಯವಾದ ಮತ್ತು ಅಪಾರ ಅನುಭವವನ್ನು ಅನಂತರಕಾಲದಲ್ಲಿ ರಾಜ್ಯದ ದಕ್ಷ ಆಡಳಿತ ನಡೆಸುವುದರಲ್ಲಿ ವಿನಿಯೋಗಿಸುತ್ತಿದ್ದರು. ಶಿವಮಾರನ ಆಳಿಕೆಯಲ್ಲಿ ಎರೆಯಂಗನು ತೊರೆನಾಡು ಮತ್ತು ಕೊಂಗಳನಾಡುಗಳನ್ನು ರಾಜ್ಯಪಾಲನಾಗಿ ಆಳುತ್ತಿದ್ದನು. ಶ್ರೀಪುರುಷನು ರಾಜನಾಗುವುದಕ್ಕೆ ಮೊದಲು ಎಲೆನಗರನಾಡು, ಅವನ್ಯನಾಡು ಮತ್ತು ಪೊಂಕುಂದ—ಈ ಪ್ರದೇಶಗಳಿಗೆ ರಾಜ್ಯಪಾಲನಾಗಿದ್ದನು. ತಾನು ರಾಜನಾದ ಮೇಲೆ ಕಡುಂಬೂರು, ಆಸಂದಿನಾಡು ಮತ್ತು ಕೊವಲಾಳನಾಡು ಇವುಗಳ ಆಡಳಿತವನ್ನು ತನ್ನ ಮಕ್ಕಳಾದ ಶಿವಮಾರ, ವಿಜಯಾದಿತ್ಯ ಮತ್ತು ದುಗ್ಗಮಾರ:ಎರೆಯಪ್ಪ—ಇವರಿಗೆ ವಹಿಸಿಕೊಟ್ಟಿದ್ದನು. ಕೆಲವು ಸಂದರ್ಭಗಳಲ್ಲಿ ರಾಜಕುಮಾರರು ರಾಜನೊಡನೆ ಆಡಳಿತದಲ್ಲಿ ಸಹಭಾಗಿಗಳಾಗಿರುತ್ತಿದ್ದರು ; ರಾಜನು ಬೇಟೆಗಾಗಿಯೋ ಹೊರದೇಶಗಳಲ್ಲಿ ದಂಡಯಾತ್ರೆಗಾಗಿಯೋ ಹೋಗಿದ್ದಾಗ ಆಡಳಿತದ ಜವಾಬ್ದಾರಿಯನ್ನು ರಾಜಕುಮಾರರು ನಿರ್ವಹಿಸಬೇಕಾಗಿದ್ದಿತು. ರಾಜಾಧಿಕಾರದ ಗೌರವ ಮತ್ತು ರಕ್ಷಣೆಯ ದೃಷ್ಟಿಯಿಂದ ಆಗಾಗ್ಗೆ ರಾಜಪ್ರತಿನಿಧಿಗಳನ್ನೂ ರಾಜ್ಯಪಾಲರನ್ನೂ ವರ್ಗಾಯಿಸುವ ನಡೆವಳಿಯಿತ್ತೆಂದು ಗೊತ್ತಾಗುತ್ತದೆ. ರಾಜ ತನ್ನ ಪತ್ನಿಯರ ಪೈಕಿ ಯಾರೊಬ್ಬಳ ಮೇಲೆ ಹೆಚ್ಚಿನ ಪ್ರೀತಿಯನ್ನಿಟ್ಟಿರುತ್ತಿದ್ದರೂ ಅವನ ಬಹುಪತ್ನಿತ್ವ ನೀತಿ ಅನೇಕ ಸನ್ನಿವೇಶಗಳಲ್ಲಿ ಬಿಕ್ಕಟ್ಟಿನ ಸ್ಥಿತಿಯನ್ನುಂಟುಮಾಡುತ್ತಿತ್ತು. ಅಸಮಾಧಾನಗೊಂಡ ಬೇರೆ ಬೇರೆ ಪತ್ನಿಯರ ಮಕ್ಕಳು ಪದೇ ಪದೇ ಉತ್ತರಾಧಿಕಾರಕ್ಕಾಗಿ ಗೊಂದಲನಡೆಸುತ್ತಿದ್ದದ್ದುಂಟು.

### ರಾಜನ ಆಸ್ಥಾನ

ರಾಜ್ಯಗಳಲ್ಲಿ ಭವ್ಯವಾದ ರಾಜಾಸ್ಥಾನಗಳಿದ್ದವು. ಸಾರ್ವಜನಿಕ ಸಮಾರಂಭಗಳಲ್ಲಿ ಸರ್ವಾಲಂಕಾರ ಭೂಷಿತನಾಗಿ, ದೇದೀಪ್ಯಮಾನನಾಗಿ, ವೈಭವದಿಂದ ಕೂಡಿ ರಾಜನು ಆಸ್ಥಾನದಲ್ಲಿ ಕಾಣಿಸಿಕೊಳ್ಳುವ

ವಾಡಿಕೆಯತ್ತು. ತನ್ನ ಪ್ರಜೆಗಳ ಮುಂದೆ ರಾಜತ್ವದ ಅಟ್ಟಹಾಸ, ಗೌರವ, ಪ್ರತಿಷ್ಠೆಗಳನ್ನು ಬೆಳಗಿಸಿಕೊಳ್ಳುವುದು, ಭಯಭಕ್ತಿಯನ್ನು ಕಲ್ಪಿಸುವುದು ಈ ವಾಡಿಕೆಯ ಪರಮೋದ್ದೇಶ. ಆಸ್ಥಾನದಲ್ಲಿ ಸಾಮಂತರು, ಅಧಿಕಾರಿಗಳು, ರಾಣಿ, ಛತ್ರಚಾಮರದವರು, ರಾಜಗುರುಗಳು, ಮತ್ತು ಇತರ ಗಣ್ಯರು ಹಾಜರಿದ್ದು ಅದರ ಘನತೆಯನ್ನು ಹೆಚ್ಚಿಸಿ, ಅಲ್ಲಿ ವೈಭವದ ದೃಶ್ಯಕ್ಕೆ ಕಾರಣರಾಗುತ್ತಿದ್ದರು. ರಾಜನೂ ತನ್ನ ಅಪರಿಮಿತ ಔದಾರ್ಯದಿಂದ ತನ್ನ ಆಸ್ಥಾನದಲ್ಲಿ ಅನೇಕ ಘನ ಕವಿಪುಂಗವರು ಮತ್ತು ವಿದ್ವಾಂಸರು ಬಂದು ಸೇರುವಂತೆ ಆಕರ್ಷಿಸುತ್ತಿದ್ದನು. ದರ್ಬಾರಿನಲ್ಲಿ ಅವರ ಕೃತಿಗಳನ್ನೂ ವಾದವಿವಾದಗಳನ್ನೂ ಆಲಿಸುತ್ತಿದ್ದನು. ಕೆಲವು ವೇಳೆ ತಾತ್ವಿಕ ವಿಚಾರಗಳ ಜಿಜ್ಞಾಸೆಯಲ್ಲಿ ತಾನೂ ಪಾತ್ರವಹಿಸುತ್ತಿದ್ದನು. ಇದರಿಂದ ಬೌದ್ಧಿಕ ಉಲ್ಲಾಸಕ್ಕೆ ಅವಕಾಶವಾಗುತ್ತಿತ್ತು. ಇಂಥ ಮಹತ್ವದ ಸಮಾರಂಭಗಳಲ್ಲಿ ಬ್ರಾಹ್ಮಣರಿಗೆ ಮತ್ತು ಆಚಾರ್ಯರಿಗೆ ಭೂದಾನ ನೀಡಲಾಗುತ್ತಿತ್ತು, ಕಂದಾಯದ ವಿನಾಯಿತಿಯನ್ನೂ ಘೋಷಿಸಲಾಗುತ್ತಿತ್ತು,

### ಮಂತ್ರಿಗಳು

ಇಡೀ ಆಡಳಿತ ಪದ್ಧತಿಯಲ್ಲಿ ರಾಜ ಶಿಖರಪ್ರಾಯನಾಗಿರುತ್ತಿದ್ದ. ಆದರೆ ರಾಜಾಧಿಕಾರದ ಕರ್ತವ್ಯಗಳು ಬಹು ತೊಡಕಾಗಿದ್ದುದರಿಂದ ಅವನು ಮಂತ್ರಿಗಳು, ಸೇನಾಧಿಕಾರಿಗಳು, ಪುರೋಹಿತವರ್ಗ ಮತ್ತು ಕವಿಗಳಿಂದ ಕೂಡಿದ ಮಂತ್ರಾಲೋಚನಾ ಸಭೆಯ ಸಹಾಯವನ್ನು ಅಪೇಕ್ಷಿಸಬೇಕಾಗಿತ್ತು. ಈ ಸಭೆಗೆ ಸದಸ್ಯರನ್ನು ಆರಿಸುವಲ್ಲಿ ಚುನಾವಣಾ ಪದ್ಧತಿಯಿರಲಿಲ್ಲ. ಸಭೆಯ ಎಲ್ಲ ಸದಸ್ಯರೂ ರಾಜನಿಂದ ನೇಮಕವಾದವರೇ. ಮಂತ್ರಿಗಳು ಪ್ರಬಲರಾಗಿದ್ದರು. ರಾಜನು ಪ್ರಾಪ್ತವಯಸ್ಕನಾಗದಿದ್ದಾಗ ಅವರು ಆಡಳಿತ ನಡೆಸುತ್ತಿದ್ದರು. ರಾಜನ ಇಚ್ಛೆ ಹಾಗೂ ಜನತೆಯ ಅಪೇಕ್ಷೆ ಎರಡೂ ಹೊಂದಿಕೆಯಾಗುವಂತೆ ಯತ್ನಿಸುತ್ತಿದ್ದರು. ಕಷ್ಟ ಸಮಯಗಳಲ್ಲಿ ಸಾರ್ವಜನಿಕಾಭಿಪ್ರಾಯವು ಅನೇಕ ವೇಳೆ ರಾಜನನ್ನು ದೋಷಮುಕ್ತನನ್ನಾಗಿ ಮಾಡುತ್ತಿತ್ತು; ರಾಜನನ್ನು ತಪ್ಪುದಾರಿಗೆ ಒಯ್ವ ಹೊಣೆ ಮಂತ್ರಿಗಳ ತಲೆಗೆ ಕಟ್ಟುತ್ತಿತ್ತು. ಹೊಯ್ಸಳರ ಆಳಿಕೆ ಬಂದು ಅವರ ರಾಜ್ಯ ವಿಸ್ತಾರಗೊಂಡಾಗ, **ಪಂಚಪ್ರಧಾನ** ಹೆಚ್ಚುಹೆಚ್ಚಾಗಿ ಪ್ರಬಲವಾಯಿತು.

ಮಂತ್ರಿಗಳ ಸಂಖ್ಯೆ ರಾಜ್ಯದ ಅಗತ್ಯಕ್ಕೆ ಸೂಕ್ತವಾಗಿತ್ತು. ಈ ವಿಷಯದಲ್ಲಿ ಯಾವುದೇ ಕಟ್ಟುನಿಟ್ಟಾದ ನಿಯಮವಿರಲಿಲ್ಲ. ಆಡಳಿತದ ಮತ್ತು ಅರಮನೆಯ ಅಧಿಕಾರಿಗಳ ನಡುವೆ ಅಂತರವನ್ನು ಕಲ್ಪಿಸಲಾಗಿತ್ತು. ದಂಡನಾಯಕ (ಸೇನಾಧಿಪತಿ), ಸರ್ವಾಧಿಕಾರಿ (ಪ್ರಧಾನಿ), ಮನ್ನೆವೆರ್ಗಡೆ (ರಾಜನ ಮನೆ ವಾರ್ತೆಗಾರ), ಹಿರಿಯ ಭಂಡಾರಿ, ಯುವರಾಜ, ಮತ್ತು ಸಂಧಿವಿಗ್ರಹಿ (ಶಾಂತಿ ಮತ್ತು ಸಮರಮಂತ್ರಿ ಇವನನ್ನು 'ಮಲ್ಲವಿಜಯ ಸೂತ್ರಧಾರಿ'ಎಂದು ಕರೆಯುತ್ತಿದ್ದುದುಂಟು), ಮಹಾಪ್ರಧಾನ (ಮುಖ್ಯ ಮಂತ್ರಿ ಹಾಗೂ ಮಂತ್ರಾಲೋಚನಾ ಸಭೆಯ ಪ್ರಮುಖ)—ಈ ಮಂತ್ರಿಗಳು ಆಡಳಿತ ನಿರ್ವಹಣೆಯಲ್ಲಿ ಮಾತ್ರವಲ್ಲದೆ, ಪ್ರವಾಸ ಮತ್ತು ದಂಡಯಾತ್ರೆಗಳಲ್ಲಿ ರಾಜನಿಗೆ ನೆರವಾಗುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಈ ಸಭೆಯು ಶ್ರೀಕರಣಾಧಿಕಾರಿ. ಹಿರಿಯ ಭಂಡಾರಿ, ಸೇನಾಧಿಪತಿ, ಮಹಾಪಸಾಯಿತ ಮತ್ತು ಸಂಧಿವಿಗ್ರಹಿ—ಇವರುಗಳಿಂದ ಕೂಡಿತ್ತು. ತುರ್ತುಸಮಯಗಳಲ್ಲಿ ಸಂಧಿವಿಗ್ರಹಿ ಮತ್ತು ಸರ್ವಾಧಿಕಾರಿ ಸ್ಥಾನಗಳನ್ನು ಹಿರಿಯ ದಂಡನಾಯಕನಲ್ಲಿ ವಿಲೀನಗೊಳಿಸಲಾಗುತ್ತಿತ್ತು. ಆಗ ಇವನು ಸಮರಘೋಷಣೆಯೋ ಘರ್ಷಣೆಯನ್ನು ನಿಲ್ಲಿಸುವಿಕೆಯೋ ಇಂತಹ ಅತಿಮುಖ್ಯ ವಿಚಾರದ ಕುರಿತು ರಾಜನಿಗೆ ಸಲಹೆ ನೀಡಬೇಕಿತ್ತು. ಕೇವಲ ಅರ್ಹತೆಯ ಮೇಲೆ ಮಂತ್ರಿಗಳ ನೇಮಕ. ಕೆಲವು ಸಂದರ್ಭಗಳಲ್ಲಿ ಮಂತ್ರಿಪದವಿ ಆನುವಂಶಿಕವಾಗಿರುತ್ತಿತ್ತು. ಇದಕ್ಕೆ ಚಾವುಂಡರಾಯನೇ ನಿದರ್ಶನ. ಬೂತುಗ ಮತ್ತು ಮಾರಸಿಂಹರಿಗೆ ಮಂತ್ರಿಗಳಾಗಿದ್ದ ತನ್ನತಂದೆ ತಾತರಂತೆಯೇ ಇವನು ಸಹೋದರ ನಾಗವರ್ಮನೊಡನೆ ಮಾರಸಿಂಹ ಮತ್ತು ರಕ್ಕಸ ಇವರ ಸೇವೆಯಲ್ಲಿದ್ದು ಅತಿ ನಿಷ್ಠೆಯಿಂದಲೂ ಶ್ರದ್ಧೆಯಿಂದಲೂ ಸೇವೆ ಸಲ್ಲಿಸಿದನು.

**ಅರಮನೆಯ ಅಧಿಕಾರಿಗಳು**

ಅರಮನೆಯ ಮುಖ್ಯ ಅಧಿಕಾರಿಗಳು ಮಹಾಪಸಾಯಿತ (ಉಡುಪುಭಕ್ಷಿ), ಮಹಾಲಯಕ ಬಹುಶಃ 'ಮಹಾ ಆರ್ಯಕ' (ಮನೆವಾರ್ತೆಭಕ್ಷಿ) ಅಥವಾ ಅಂತಃಪುರಾಧ್ಯಕ್ಷ ಅಂತಪಸಾಯಿತ (ಅರಮನೆಗೆ ಸಂಬಂಧಪಟ್ಟಂತೆ, ಕಾರ್ಯದರ್ಶಿ) ಮತ್ತು ನಿಧಿಕಾರ (ಖಜಾಂಚಿ), ಶಾಸನಾಧಿಕಾರಿ, ಕಕ್ಷ ಪಾತಾಲಿಕ, ರಾಜಪಾಲಕ, ಪಡಿಯಾರ, ಹದಿಯಾರ ಅಥವಾ ಹದಿಹಾರ (ಅರಮನೆಯ ಕಾವಲುಗಾರರ ಮೇಲ್ವಿಚಾರಕ ಅಧಿಕಾರಿ), ಸಜ್ಜೆವಳ್ಳ (ಶಯ್ಯಾಗೃಹಾಧಿಕಾರಿ), ಹಡಪದ (ವೀಳ್ಯಕಾರ) ಇತ್ಯಾದಿ,. ಸರ್ವಾಧಿಕಾರಿಹುದ್ದೆಯ ಕುರಿತು ಕೆಲವು ಶಾಸನಗಳ ಲಿಖಿತದಲ್ಲಿ ಸಮಾರಂಭಗಳ ಮೇಲ್ವಿಚಾರಕನೆಂದೂ ಇನ್ನು ಕೆಲವಲ್ಲಿ ಕರಣದ ಮುಖ್ಯಸ್ಥ 'ಶ್ರೀ ಕರಣ ಹೆಗ್ಗಡೆ' ಎಂದೂ ತಿಳಿಸಲಾಗಿದೆ. ರಾಜರೊಡನೆ ಸಂಪರ್ಕವಿದ್ದ ಮತ್ತೊಬ್ಬ ಅಧಿಕಾರಿ ಎಂದರೆ **ಧರ್ಮಾಧಿಕರಣ** ಅಥವಾ ಧರ್ಮಕರಣಿಕ. ಧಾರ್ಮಿಕವಿಚಾರಗಳ, ಗಡಿವಿವಾದಗಳ ಬಗ್ಗೆ ತನಿಖೆ ನಡೆಸುವುದು ಮತ್ತು ನ್ಯಾಯ ಸಲ್ಲಿಸುವುದು ಇವನ ಕರ್ತವ್ಯವಾಗಿತ್ತು. ಹೊಯ್ಸಳರ ಆಳಿಕೆಯಲ್ಲಿ ಈ ಅಧಿಕಾರಿಗೆ **ಲೋಕೋಪಕಾರಕರಣ** ಎಂದು ಹೆಸರಿತ್ತು. ಅಂದರೆ ಸಾರ್ವಜನಿಕೋಪಯುಕ್ತ ಧರ್ಮಕಾರ್ಯಗಳಿಗೆ ರಾಜನ ಕೊಡುಗೆಯನ್ನು ಊರ್ಜಿತಗೊಳಿಸಲು ನೇಮಕವಾದ ಅಧಿಕಾರಿ ಇವನು. ಹೊಯ್ಸಳರ ಆಳಿಕೆ ಬಲಗೊಂಡಂತೆಲ್ಲ **ತಂತ್ರಾಧಿಕಾರಿ ಮನೆವೆಗ್ಗಡೆ** (ಅರಮನೆಯ ಪಾರುಪತ್ಯಗಾರ) ಮತ್ತು **ಬಾಹತ್ತರನಿಯೋಗಾಧಿಪತಿ** (ಅಧಿಕಾರಿಗಳ ಮೇಲ್ವಿಚಾರಕ) ಈ ಅಧಿಕಾರಿಗಳನ್ನೂ ಅರಮನೆಯ ಅಧಿಕಾರಿವರ್ಗದಲ್ಲಿ ಸೇರಿಸಲಾಯಿತೆಂದು ತೋರುತ್ತದೆ.

ರಾಜ್ಯದ ಪರಿಣಾಮಕಾರಿ ಆಡಳಿತದ ಸಲುವಾಗಿ ರಾಜನಿಗೆ ನಂಬಿಕೆಗೆ ಅರ್ಹರಾದ ಆಪ್ತ ಕಾರ್ಯದರ್ಶಿಗಳ ಮತ್ತು ಗೋಪ್ಯಗುಮಾಸ್ತರ ಅಗತ್ಯವಿತ್ತು. ಪ್ರತಿಯೊಂದು ಪ್ರಾಮುಖ್ಯ ವಿಚಾರವನ್ನು ಕುರಿತು ರಾಜನು ಅವರ ಸಲಹೆಯನ್ನು ಕೇಳುತ್ತಿದ್ದ. **ರಾಯಸೂತ್ರಧಾರಿ** (ರಾಜ ಬರಹಗಾರ), ಮಹಾಮಾತ್ರ (ಇವನು ನೈತಿಕಪರಾಮರ್ಶಕನಲ್ಲ, ಆದರೆ ಶಾಸನದ ವಾಕ್ಸರಣಿಯ ಮೇಲ್ವಿಚಾರಕ), **ರಜ್ಜುಕ** (ಬಹುಶಃ ಕಂದಾಯದ ಇತ್ಯರ್ಥ ಸಲುವಾಗಿ ಏರ್ಪಟ್ಟ ಅಧಿಕಾರಿ), **ರಹಸ್ಯಾಧಿಕ** (ಅಂತರಂಗ ಕಾರ್ಯದರ್ಶಿ), ಮತ್ತು ಲೇಖಕ-ಇವರೆಲ್ಲರ ಬಗ್ಗೆಯೂ ದಾಖಲೆಗಳಿವೆ. **ಕಡತ**ದಲ್ಲಿ ದಾಖಲು ಗಳನ್ನಿಡುವ ಲೇಖಕನಲ್ಲಿ ಆಡಳಿತ ನಡೆಸುವ ಅರ್ಹತೆಯ ಜತೆಗೆ ಎಲ್ಲ ಬಗೆಯ ಆಚಾರಗಳ ಮತ್ತು ಭಾಷೆಗಳ ಪರಿಚಯ, ಕಂದಾಯ ವಸೂಲಿಮಾಡುವ ಕ್ರಮ ಮತ್ತು ವೆಚ್ಚದ ರೀತಿ, ಚಟುವಟಿಕೆಯ ಸ್ವಭಾವ, ಒಳ್ಳೆಯ ಮತ್ತು ಸ್ಫುಟವಾದ ಬರವಣಿಗೆ, ಪಠನದಲ್ಲಿ ಚುರುಕುತನ–ಇವು ಅಗತ್ಯವೆಂದು ಭಾವಿಸಲಾಗಿತ್ತು. ರಾಜನ ಲಿಖಿತ ನಿರೂಪ ಅವನ ಕಾರ್ಯದರ್ಶಿಯ ಮೂಲಕ ಪ್ರಧಾನಕಾರ್ಯದರ್ಶಿಗೆ ಮುಟ್ಟುತ್ತಿತ್ತು. ಇದನ್ನು ಇಲಾಖಾ ಮುಖ್ಯಾಧಿಕಾರಿಗಳು ಪರಿಶೀಲಿಸಿದ ತರುವಾಯ ಕಂದಾಯದ ಅಧಿಕಾರಿಗಳೂ ಲೆಕ್ಕದ ಅಧಿಕಾರಿಗಳೂ ಕಂದಾಯ ಬಾಬತು ಪುಸ್ತಕದಲ್ಲಿ ದಾಖಲು ಮಾಡುವಂತೆ ಪ್ರಧಾನಕಾರ್ಯದರ್ಶಿ ಆಜ್ಞೆ ಹೊರಡಿಸುತ್ತಿದ್ದ.

ಮಂತ್ರಾಲೋಚನಾ ಸಭೆ ಮತ್ತು ರಾಜನ ಕಾರ್ಯದರ್ಶಿಗಳ ಅಧಿಕಾರ ಮುಂದೆ ಬಹುಮಟ್ಟಿಗೆ ದುರ್ಬಲವಾದಂತೆ ಕಾಣುತ್ತದೆ. ರಾಜರು ರಾಜ್ಯದ ವಿಸ್ತರಣೆಯ ಆಕಾಂಕ್ಷೆಯಿಂದ ಸೈನಿಕಾಚರಣೆಯಲ್ಲಿ ಆಸಕ್ತರಾಗಿ, ಧರ್ಮಶಾಸ್ತ್ರ ಪಟುಗಳ ಪ್ರಭಾವಕ್ಕಿಂತ ಸೇನಾಧಿಕಾರಿಗಳ ದುಷ್ಪ್ರಭಾವಕ್ಕೆ ಸಿಕ್ಕಿಬೀಳುತ್ತಿದ್ದುದೆ ಇದಕ್ಕೆ ಕಾರಣ.

## ರಾಜ್ಯತಂತ್ರ

ನೀತಿಶಾಸ್ತ್ರವನ್ನು ರಾಜಕುಮಾರರು ಅಭ್ಯಾಸಮಾಡುವುದು ಕಡ್ಡಾಯವಾಗಿದ್ದುದರಿಂದ ರಾಯಭಾರ ಕೌಶಲ ಹಾಗೂ ರಾಜ್ಯತಂತ್ರಗಳಿಗೆ ಬಹು ಪ್ರಾಮುಖ್ಯವನ್ನು ನೀಡಲಾಗಿತ್ತೆಂಬುದನ್ನು ಅರಿಯಬಹುದು. ಮಾಧವನು ತಾನು ರಾಜ್ಯಾಡಳಿತ ಪರಿಜ್ಞಾನದಲ್ಲಿ ಪ್ರವೀಣನೆಂದು ಹೆಮ್ಮೆಪಟ್ಟುಕೊಂಡಿದ್ದ. ದುರ್ವಿನೀತನ ಬಿದಿರೂರು ತಾಮ್ರ ಫಲಕಗಳು ರಾಜಾಧಿಕಾರದ ಮೂರು ಅಂಶಗಳನ್ನು ಅಂದರೆ, ಪ್ರಭುಶಕ್ತಿ (ಪರಮಾಧಿಕಾರ), ಮಂತ್ರಶಕ್ತಿ (ರಾಯಭಾರ ಕೌಶಲ), ಮತ್ತು ಉತ್ಸಾಹಶಕ್ತಿ (ಚುರುಕುತನ ಹಾಗೂ ಉತ್ಸಾಹದ ಮನಸ್ಸು) ಗಳನ್ನು ಅವನು ಹೊಂದಿದ್ದನೆಂದು ತಿಳಿಸುತ್ತವೆ. ರಾಜರನೇಕರಿಗೆ ರಾಜ್ಯಗಳನ್ನು ಗೆಲ್ಲುವಲ್ಲಿ ಆಸಕ್ತಿ ಮತ್ತು ಸೈನಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಉತ್ಸಾಹ–ಇವು ಸತತವಾದ ಗುಣಗಳಾಗಿದ್ದವು. ಪರಿಣಾಮವಾಗಿ, ತಮ್ಮ ರಾಜ್ಯಗಳ ಮೇಲೆ ಪ್ರಬಲ ಶಕ್ತಿಗಳು ದಾಳಿನಡೆಸುವುದನ್ನು ತಡೆಗಟ್ಟಲು, ಕೆಲವು ವೇಳೆ ಯಾವುದೊಂದು ರಾಜ್ಯ ಅಪಾಯಕರವಾದ ರೀತಿಯಲ್ಲಿ ಬೆಳೆಯುವುದನ್ನು ತಪ್ಪಿಸಲು, ಇತರ ರಾಜ್ಯಗಳೊಡನೆ ಸಖ್ಯವನ್ನು ಬೆಳೆಸಲಾಗುತ್ತಿತ್ತು. ಮತ್ತೆ ಕೆಲವು ಸಂದರ್ಭಗಳಲ್ಲಿ ಬೇರೆ ಪ್ರದೇಶಗಳ ಗಳಿಕೆಗಾಗಿಯೂ ಸಖ್ಯಕ್ಕೆ ಕೈಹಾಕಲಾಗುತ್ತಿತ್ತು. ಹಗೆತನವನ್ನು ಮೊದಲೇ ಘೋಷಿಸದೆ ಯುದ್ಧ ಹೂಡದಿರುವುದು, ಯುದ್ಧದಲ್ಲಿ ನ್ಯಾಯವಿರುದ್ಧವಾದ ವಿಧಾನಗಳನ್ನು ಅನುಸರಿಸದಿರುವುದು, ಹೋರಾಡದಿರುವವರನ್ನು ಪೀಡಿಸದಿರುವುದು, ಯುದ್ಧ ನಿಂತು ಒಪ್ಪಂದವಾದಾಗ ಸ್ಥಳೀಯ ಹಕ್ಕು ಬಾಧ್ಯತೆಗಳನ್ನು ಮತ್ತು ಸಂಪ್ರದಾಯಗಳನ್ನು ಗೌರವಿಸುವುದು, ಪರಾಜಿತರಾದ ಸ್ಥಳೀಯ ರಾಜವಂಶವನ್ನು ಅಲ್ಲಿನ ಜನತೆಗೆ ಉಳಿಸಿಕೊಡುವುದು–ಇವೆಲ್ಲಾ ಅಂಗೀಕೃತವಾದ ರಾಜಕೀಯ ಸಿದ್ಧಾಂತಗಳಾಗಿದ್ದವು. ಇದೇ ಧರ್ಮಯುದ್ಧದ ರೀತಿ, ಗಂಗರಾಜ ಅವಿನೀತನು ತಾನು ಗೆದ್ದ ರಾಜ್ಯದ ಹಕ್ಕು ಬಾಧ್ಯತೆಗಳನ್ನು ಉಳಿಸಿದ್ದನಂತೆ. ರಾಷ್ಟ್ರಕೂಟ ಮೂರನೆ ಗೋವಿಂದನು ಶಿವಮಾರನಿಗೆ ಅವನ ರಾಜ್ಯದೊಂದಿಗೆ ಸಿಂಹಾಸನವನ್ನೂ ಒಪ್ಪಿಸಿದ್ದಲ್ಲದೆ, ಗೋವಿಂದ ಮತ್ತು ಎರಡನೆ ನಂದಿವರ್ಮರು ಶಿವಮಾರನಿಗೆ ಸ್ವಹಸ್ತದಿಂದಲೆ ಕಿರೀಟಧಾರಣೆಮಾಡಿದರು. ಅವನ ವಂಶಾನುಗತನಾದ ರಾಜ್ಯಕ್ಕೆ ಅವನ ಹಕ್ಕುದಾರಿಕೆಯನ್ನು ಈ ನಡೆವಳಿಕೆಯಿಂದ ಮನ್ನಿಸಿದಂತಾಯಿತು.

## ಪ್ರಾಂತೀಯ ಆಡಳಿತ

ಗಂಗವಾಡಿಯ ರಾಜಕೀಯ ಮತ್ತು ಸಾಮಾಜಿಕ ಜೀವನದ ಮೇಲುನೋಟದಿಂದ ರಾಜ್ಯದ ಆಡಳಿತ ವ್ಯವಸ್ಥೆಯ ಪರಿಚಯವಾಗುತ್ತದೆ. ಈ ವ್ಯವಸ್ಥೆ ವಿಸ್ತಾರವಾಗಿತ್ತು. ಹಲವು ಇಲಾಖೆಗಳು ವಿವಿಧ ಮಟ್ಟದ ನೌಕರರ ವರ್ಗ, ಅವರ ಕೆಲಸಗಳ ವಿಧಾಯಕ-ಇವೆಲ್ಲ ರಾಜ್ಯದಲ್ಲಿ ಏರ್ಪಟ್ಟು ವಿವರದಲ್ಲಿ ಮೌರ್ಯ ಮತ್ತು ಗುಪ್ತ ಆಡಳಿತವನ್ನು ಹೋಲುವಂತಿದ್ದವು. ರಾಜ್ಯವನ್ನು ದಕ್ಷ ಆಡಳಿತದ ಸಲುವಾಗಿ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಈ ಪ್ರಾಂತ್ಯಗಳನ್ನು ಮತ್ತೆ ನಾಡು, ವಿಷಯ, ವೆಂತ್ಯ, ಕಂಪಣ-ಹೀಗೆ ಗ್ರಾಮಗಳ ಪಟ್ಟಣಗಳ ತಂಡಗಳೊಡನೆ ಮರುವಿಂಗಡಿಸುವ ವ್ಯವಸ್ಥೆಯಿತ್ತು. ಗ್ರಾಮಗಳು ಆಡಳಿತದ ಕೊನೆಯ ತುಕಡಿಗಳಾಗಿದ್ದವು. (ರಾಷ್ಟ್ರಪತಿ, ವಿಷಯಪತಿ, ಗ್ರಾಮಕೂಟ, ಕಾಯುಕ್ತಕ, ನಿಯುಕ್ತಾಧಿಕಾರ). ಪ್ರಾದೇಶಿಕ ವಿಂಗಡಣೆಗಳು, ಗಂಗವಾಡಿ 96,000, ಬನವಾಸಿ 12,000, ಪುನ್ನಾಡು 10,000, ಕೆರೆಕುಂಡ 300, ಎಲೆನಗರನಾಡು 70, ಅವನ್ಯನಾಡು 30 ಮತ್ತು ಪೊನೆಕುಂಡ 12—ಎಂದು ಹೆಸರುವಾಸಿಯಾಗಿದ್ದವು. ಕೆಲವು ಹಳೆಯ ಶಾಸನಗಳಲ್ಲಿ ಸೂಚಿತವಾಗಿರುವ ಈ ಸಂಖ್ಯೆ ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಪಟ್ಟಿರುವಂತೆ, ಸಂಗ್ರಹವಾದ ಆದಾಯಕ್ಕೆ ನೇರವಾದ ಪ್ರಸ್ತಾಪವೇ ವಿನಾ, ಸಾಗುವಳಿಯ ವಿಸ್ತೀರ್ಣವಲ್ಲ ; ಅಥವಾ ಜಿಲ್ಲೆ ಅಥವಾ ನಗರಕ್ಕೆ ಆಧಾರ ಭೂತವಾದ ವಾಸ್ತವಿಕ ಇಲ್ಲವೇ ಉತ್ಪ್ರೇಕ್ಷೆಯ ಮತ್ತು ಅನೂಚಾನವಾಗಿ ನಡೆದು ಬಂದ ನಗರಗಳ,

ಪಟ್ಟಣಗಳ ಮತ್ತು ಗ್ರಾಮಗಳ ಸಂಖ್ಯೆಯೂ ಅಲ್ಲ. ಮೇಲೆ ತಿಳಿಸಿದ ವ್ಯಾಖ್ಯಾನಗಳನ್ನು ಸಮರ್ಥಿಸಲಿಕ್ಕೆ ಸಾಕಷ್ಟು ರುಜುವಾತುಗಳಿವೆ.

ಪ್ರತಿ ಪ್ರಾಂತ್ಯವನ್ನೂ ಓರ್ವ ರಾಜಪ್ರತಿನಿಧಿ ಆಳುತ್ತಿದ್ದ. ಇವನು ರಾಜಕುಟುಂಬದ ರಾಜಕುಮಾರನೋ ರಾಜ್ಯದ ಶಕ್ತಿವಂತ ಘನತೆವೆತ್ತ ವ್ಯಕ್ತಿಯೋ ಹಿಂದೆ ರಾಜ್ಯವಾಳಿದ ವಂಶಗಳ ಪ್ರತಿನಿಧಿಯೋ ಆಗಿರುತ್ತಿದ್ದ. ಅನೇಕಾವರ್ತಿ ರಾಜನ ಮಂತ್ರಿಗಳು ಪ್ರಾಂತ್ಯಾಧಿಪತಿಗಳಾಗಿ ನೇಮಕವಾಗುತ್ತಿದ್ದರು. ಪ್ರತಿಪ್ರಾಂತ್ಯದ ಆಡಳಿತವೂ ಕೇಂದ್ರಾಡಳಿತದ ಪಡಿಯಚ್ಚಿನಂತಿರುತ್ತಿತ್ತು. ರಾಜಪ್ರತಿನಿಧಿ ತನ್ನದೇ ಆದ ಸೇನೆಯನ್ನಿಟ್ಟುಕೊಂಡಿರುತ್ತಿದ್ದ ; ರಾಜಸಭೆಯನ್ನು ನಡೆಸುತ್ತಿದ್ದ ; ದಾನಧರ್ಮಗಳ ಸಹಾಯವನ್ನೆಸಗುತ್ತಿದ್ದ ; ತನ್ನ ಅಧಿಕಾರವ್ಯಾಪ್ತಿಯೊಳಗೆ ತಾನೇ ರಾಜನಂತೆ ವರ್ತಿಸುತ್ತಿದ್ದ. ದಂಡನಾಯಕ ಅಥವಾ ದಣ್ಣಾಯಕ ಎಂದು ಸಾಮಾನ್ಯವಾಗಿ ಇವನಿಗೆ ಹೆಸರಿತ್ತು. ಸಾಮಾನ್ಯ ವ್ಯವಹಾರದ ಜತೆಗೆ ಸೈನಿಕ ಕರ್ತವ್ಯವೂ ಇವನ ಪಾಲಿಗಿತ್ತು. ಹೊಸದಾಗಿ ಜಯಿಸಿದ ಪ್ರದೇಶಗಳಲ್ಲಿ ಸೇನಾಧಿಪತಿ, ಚಮೂಪತಿ, ಅಥವಾ ಸೇನಾಧ್ಯಕ್ಷನಾಗಿಯೂ ಇರುತ್ತಿದ್ದ. ಸಾಮಂತರ ಮೇಲೆ ಅಥವಾ ಆಶ್ರಿತರಾಜರ ಮೇಲೆ ಅಂಕುಶವನ್ನಿಟ್ಟುಕೊಂಡಿದ್ದವರು 'ಮಹಾಸಾಮಂತಾಧಿಪತಿ' ಎಂಬ ಬಿರುದು ಪಡೆದಿದ್ದರು. ಹೊಯ್ಸಳರು ಈ ಹುದ್ದೆಯನ್ನು ನಡೆಸಿಕೊಂಡುಬಂದರು ; ಆದರೆ ಆಶ್ರಿತ ಪ್ರದೇಶಗಳ ಮೇಲ್ವಿಚಾರಕ ಅಧಿಕಾರಿಗಳೆಂದು ಇವರನ್ನು ಕರೆದರು (ಮುನ್ನೆಯ ಮಹಾಸಾಮಂತರ ಅಧಿಷ್ಠಾಯಹಾರ). ಇವರಿಗೆ ಇನ್ನೂ ಹೆಚ್ಚಿನ ಕರ್ತವ್ಯಗಳನ್ನು ವಿಧಿಸಿದರು. ಉದಾಹರಣೆ ಯಾವುದೆಂದರೆ : ಉತ್ತರದ ಗಡಿಯ ಆಯಕಟ್ಟಿನ ಹಾಗೂ ದುರ್ಬಲ ಪ್ರದೇಶಗಳಲ್ಲಿ ಸೇನೆಯ ಚಲನೆ ನಡೆದಾಗ ಸೇನಾರಕ್ಷಕರಾಗಿ ನಡೆದುಕೊಳ್ಳುವುದು.

ಪಾಂತ್ಯಗಳ ಅಧಿಪತಿಗಳಿಗೆ ಈ ಹಲವು ಹೆಸರುಗಳಿದ್ದವು : ಸೇನಾಧಿಪತಿ, ಹಿರಿಯ ಹೆದ್ದವಳ, ಮಹಾಪ್ರಚಂಡದಂಡನಾಯಕ, ಅಥವಾ ದಣ್ಣಾಯಕ ಸರ್ವಾಧಿಕಾರಿ. ಕಂದಾಯ ಕವಳಿಗೆಗಳನ್ನು ವಸೂಲು ಮಾಡುವುದೂ ನ್ಯಾಯಾಂಗವನ್ನು ನಿರ್ವಹಿಸುವುದೂ ಇವರ ಜವಾಬ್ದಾರಿಯಾಗಿತ್ತು. ಆದರೆ ರಾಜನ ಅನುಮತಿಯಿಲ್ಲದೆ ಕಂದಾಯವನ್ನು ರದ್ದುಗೊಳಿಸುವುದಾಗಲಿ ಸುಂಕಗಳನ್ನು ಮತ್ತು ಇತರ ಹೊರೆಯನ್ನು ಹೇರುವುದರ ಮೂಲಕ ಆದಾಯವನ್ನು ಹೆಚ್ಚಿಸುವುದಾಗಲಿ ಇವರಿಗೆ ಶಕ್ಯವಿರಲಿಲ್ಲ. ರಾಜನ ಸಂಬಂಧದಿಂದ ಪ್ರಾಂತ್ಯದ ಅಧಿಪತಿಗಳ ಸ್ಥಾನಮಾನ ಈ ಬಗೆಯಿದ್ದಿತು: ಪ್ರಾಂತ್ಯಾಧಿಪತಿಗಳು ತಮ್ಮ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ಉಚ್ಚ ಅಧಿಕಾರವನ್ನು ಚಲಾಯಿಸಲು ಬಾಧ್ಯಪಟ್ಟಿದ್ದರೂ ಒಬ್ಬರೊಡನೊಬ್ಬರು ಯುದ್ಧ ಹೂಡುವ ಹಕ್ಕನ್ನು ಹೊಂದಿದ್ದರೂ ಅವರು ರಾಜನ ವಿಷಯದಲ್ಲಿ ಸ್ವಾಮಿಭೃತ್ಯರಂತೆ ಇರಬೇಕಾಗಿದ್ದಿತು. ಹೊಯ್ಸಳರ ಕಾಲದಲ್ಲಿ ಪ್ರಾಂತ್ಯಾಧಿಪತಿಗಳು ಪ್ರಮುಖವಾಗಿ ಸೈನಿಕಾಧಿಕಾರಿಗಳಾದರು. ಶಾಂತಿ ಮತ್ತು ಶಿಸ್ತನ್ನು ಕಾಪಾಡುವುದು, ಗಡಿಗಳನ್ನು ರಕ್ಷಿಸುವುದು ಮತ್ತು ತಮ್ಮ ಅಧೀನದಲ್ಲಿ ಕಾಯಂ ಆದ ಸೇನೆಯನ್ನಿಡುವುದು (ಪಡೈವಿಡು)—ಇವರಿಗೆ ನಿಯೋಜಿತವಾದ ಕರ್ತವ್ಯಗಳು.

'ರಾಜಾಧ್ಯಕ್ಷ ಹೆಗ್ಗಡೆ' ಅಥವಾ 'ರಾಜಾಧ್ಯಕ್ಷದ ಕರಣಂ' ಎಂಬೀ ಹೆಸರಿನಿಂದ ಕರೆಯಲಾಗುತ್ತಿದ್ದ ಹೆಗ್ಗಡೆಗಳು ಜಿಲ್ಲೆಗಳ ಆಡಳಿತದಲ್ಲಿರುತ್ತಿದ್ದರು. ಸಾಮಾನ್ಯವ್ಯವಹಾರಗಳು ಹಾಗೂ ಸೈನಿಕಕರ್ತವ್ಯ ಕೂಡ ಅವರ ಪಾಲಿಗಿತ್ತು. ಆದರೆ ಹಣಕಾಸಿನ ವ್ಯವಹಾರದ ಮಟ್ಟಿಗೆ ಇವರು ಶ್ರೀಕರಣ ಸರ್ವಾಧಿಕಾರಿಯ ಹತೋಟಿಗೊಳಪಟ್ಟಿದ್ದರು. ಈ ಸರ್ವಾಧಿಕಾರಿ ಮಂತ್ರಾಲೋಚನಾಸಭೆಯ ಓರ್ವ ಮುಖ್ಯಮಂತ್ರಿಯಾಗಿದ್ದು ರಾಜ್ಯದ ಆದಾಯ ಮತ್ತು ಹಣಕಾಸಿನ ಇಲಾಖೆಯ ಮೇಲಿನ ಮೇಲುಸ್ತುವಾರಿ ನಡೆಸುತಿದ್ದ. ಆಡಳಿತ ವ್ಯವಸ್ಥೆಯಲ್ಲಿ ಮಾರ್ಪಾಟುಗಳು, ಆಡಳಿತದ ದೆಸೆಯಿಂದ ಪ್ರದೇಶಗಳ ಹಂಚಿಕೆ, ಅಧಿಕಾರಿಗಳ ಕರ್ತವ್ಯಕುರಿತು

ಸ್ಪಷ್ಟ ನಿರ್ದೇಶನ ಇವು ರಾಷ್ಟ್ರಕೂಟ ಮಹಾಧಿಪತ್ಯ ಸ್ಥಾಪನೆಯಾದಾಗ ಕಾಣಿಸಿಕೊಂಡವೆನ್ನಬಹುದು. ಸಾಮಾನ್ಯ ವ್ಯವಹಾರಗಳ ಆಡಳಿತ ತೊಡಕಿನ ಹಾಗೂ ಗುರುತರ ಸ್ವಭಾವದ್ದಾದ ಕಾರಣ, ಅನೇಕ ಪಟ್ಟಣಗಳನ್ನು ಖಜಾನೆಯ ಕೇಂದ್ರಗಳನ್ನಾಗಿ ಏರ್ಪಡಿಸಲಾಗಿತ್ತು. ಇವನ್ನು ಶ್ರೀಕರಣ ಅಧಿಕಾರಿ, ಮಾಣಿಕ್ಯ ಭಂಡಾರಿ, ಮತ್ತು ಕೋಶಾಧ್ಯಕ್ಷರು ಮುಂತಾದ ಭಂಡಾರಿಗಳ ವಶಕ್ಕೆ ಬಿಡಲಾಗಿತ್ತು. ಭಂಡಾರಿಗಳು ಹೆಗ್ಗಡೆಗಳಿಗೆ ಅವರ ಆದಾಯಬಾಬಿನ ಕೆಲಸಕಾರ್ಯಗಳ ದಕ್ಷ ನಿರ್ವಹಣೆಯಲ್ಲಿ ಮತ್ತು ವಿನಾಯಿತಿ ನೀಡದಿರುವ ಪ್ರದೇಶಗಳಲ್ಲಿ ಕಂದಾಯ ವಸೂಲಿಮಾಡುವ ಉದ್ಯಮದಲ್ಲಿ ಸಹಾಯಕರಾಗಿರುತ್ತಿದ್ದರು. ಹೆಗ್ಗಡೆಗಳ ಅಧೀನದಲ್ಲಿದ್ದ ಅನೇಕ ಅಧಿಕಾರಿಗಳ ಪೈಕಿ ಸುಂಕವೆಗ್ಗಡೆ ಮತ್ತು ಶ್ರೀಕರಣ ಹೆಗ್ಗಡೆಗಳಿದ್ದರು. ಶ್ರೀಕರಣ ಹೆಗ್ಗಡೆ ಜಿಲ್ಲೆಯ ಒಬ್ಬ ಮುಖ್ಯಾಧಿಕಾರಿಯಾಗಿದ್ದ. ಪ್ರತಿಯೊಬ್ಬರಿಂದಲೂ ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆ ಮತ್ತು ರಾಜನ ಆಜ್ಞೆಯಂತೆ ವಿನಾಯಿತಿಗೊಂಡದ್ದು ಇವನ್ನು ‘ ಸೆವದಿ ’ಯಲ್ಲಿ ಬರೆದಿಡಬೇಕಾದದ್ದು ಕೆಳಗಿನ ಅಧಿಕಾರಿಗೆ ಒಪ್ಪಿಸಲಾಗಿದ್ದ ಕರ್ತವ್ಯವಾಗಿತ್ತು. ಇದೇ ಬಗೆಯಾಗಿ, ಸೈನಿಕ ಠಾಣಾಧಿಕಾರಿಗಳಾದ ಪಟ್ಟಗಾರರು ಮತ್ತು ನಾಯಕರು ಕೋಟೆಕೊತ್ತಲಗಳ ನಿರ್ಮಾಣಾಧಿಕಾರಿಗಳಾದ ‘ ಮನ್ನೆಯರು ’, ವೆಂತ್ಯ ಮತ್ತು ಕಂಪಣಗಳನ್ನು ನೋಡಿಕೊಳ್ಳುತ್ತಿದ್ದ ನಾಡಗಾವುಂಡರು, ನಾಡಪ್ರಭುಗಳು, ಮತ್ತು ಗ್ರಾಮಗಳ ಆಡಳಿತವನ್ನು ನಡೆಸುತ್ತಿದ್ದ ಪ್ರಭುಗಳು ಅಥವಾ ಗೌಡರು–ಇವರ ಕೈಕೆಳಗೂ ಗಣಕರು (ಲೆಕ್ಕಗುಮಾಸ್ತರು) ಕೆಲಸಮಾಡಲು ನೇಮಕವಾಗಿದ್ದರು. ಈ ಗಣಕರು ಅನೇಕಾವರ್ತಿ ತಮ್ಮ ಪ್ರಾಮಾಣಿಕತೆ ಮತ್ತು ದಕ್ಷ ಸೇವೆಯ ಸಲುವಾಗಿ ಶ್ರೀಕರಣ ಹುದ್ದೆಗೆ, ಕೆಲವು ವೇಳೆ ಸ್ಥಳೀಯ ಖಜಾನೆಯ ಭಂಡಾರಿ ಹುದ್ದೆಗೆ ತೇರ್ಗಡೆ ಹೊಂದುತ್ತಿದ್ದರು.

**ಕಂದಾಯದ ಆಡಳಿತ**

ಭೂಕಂದಾಯ ಸರ್ಕಾರದ ಪ್ರಧಾನ ಆದಾಯವಾಗಿತ್ತು. ಈ ಕಂದಾಯದ ದರ ಪುರಾತನ ಪದ್ಧತಿಯಂತೆ ಒಟ್ಟು ಉತ್ಪನ್ನದ ಆರನೇ ಒಂದು ಭಾಗದಷ್ಟು. ಈ ಕಂದಾಯವನ್ನು ವಿಧಿಸುವ ಸಲುವಾಗಿ ಸಾಗುವಳಿ ಜಮೀನಿನ ಪರಿಶೀಲನೆಯನ್ನು ಎಚ್ಚರಿಕೆಯಿಂದ ನಡೆಸಿ ಅದಕ್ಕೊಂದು ದಾಖಲೆ ಪುಸ್ತಕವನ್ನಿಟ್ಟು ಅದರಲ್ಲಿ ನಮೂದಿಸಲಾಗುತ್ತಿತ್ತು. ಇದರಿಂದ ಪ್ರತಿಯೊಬ್ಬ ವ್ಯವಸಾಯಗಾರನಿಗೂ ತಾನೆಷ್ಟು ಕರ ತೆರಬೇಕಾಗುವುದು ಎಂಬುದು ನಿಖರವಾಗಿ ಮಾಹಿತಿಯಾಗುತ್ತಿತ್ತು. ಬಹು ತುರ್ತಿನ ಸಂದರ್ಭಗಳಲ್ಲಿ ರಾಜನು ಪ್ರಜಾಸಭೆಗಳ ಅನುಮತಿಯಿಂದ ಕಂದಾಯದ ದರವನ್ನು ಉತ್ಪನ್ನದ ನಾಲ್ಕನೆ ಒಂದರ ಪ್ರಮಾಣಕ್ಕೆ ಏರಿಸುತ್ತಿದ್ದ. ಆದರೆ ಈ ಏರಿಕೆ ಅತ್ಯಪೂರ್ವ ಸನ್ನಿವೇಶಗಳಲ್ಲಿ ಮಾತ್ರ. ಸಾಗುವಳಿಯ ಎಲ್ಲ ಜಮೀನನ್ನು ಏಕರೀತಿಯ ಅಳತೆಯಿಂದ ಅಳೆಯದಿದ್ದರೂ ಜಮೀನಿನ ಫಲವತ್ತತೆಯನ್ನು ಗಮನದಲ್ಲಿರಿಸಿಕೊಂಡು ಭೂಗುಣವನ್ನು ದರ್ಜೆಪ್ರಕಾರ ವಿಂಗಡಿಸಲಾಗುತ್ತಿತ್ತು. ಕಂದಾಯವನ್ನು ನಿರ್ಧರಿಸುವಲ್ಲಿ ನಿರಂಕುಶ ಪ್ರವೃತ್ತಿಯಿರಲಿಲ್ಲ. ಹವಾಮಾನದ ವೈಪರೀತ್ಯ, ಭೂಗುಣ ಇವನ್ನು ಗಮನಿಸಿ ಅದಕ್ಕನುಗುಣವಾಗಿ ಮಿತವಾಗಿ ಕಂದಾಯವನ್ನು ಮೊದಲೆರಡು ವರ್ಷಗಳ ವರೆಗೆ ವಿಧಿಸಲಾಗುತ್ತಿತ್ತು. ಕಡೆಗೆ ಮೂರನೆ ವರ್ಷದಲ್ಲಿ ನಿರ್ದಿಷ್ಟವಾಗಿ ನಿರ್ಧಾರವಾಗಿಬಿಡುತ್ತಿತ್ತು. ಭೂಮಿ ಸಾಗುವಳಿಯಾಗದಿದ್ದಾಗ, ಸಾಕಷ್ಟು ನೀರಿನ ಸೌಕರ್ಯವಿಲ್ಲದಿದ್ದಾಗ ಅಥವಾ ಪ್ರವಾಹದಿಂದ ತೊಂದರೆಗೆ ಒಳಗಾದಾಗ ಕಂದಾಯ ಮಾಫಿ ಮಾಡಲಾಗುತ್ತಿತ್ತು.

ಅಳತೆಗಾಗಿ ಉಪಯೋಗಿಸಲಾಗುತ್ತಿದ್ದ ಉಪಕರಣ, ಶಾಸನಗಳಲ್ಲಿ ಸೂಚಿಸಿರುವಂತೆ ವಿವಿಧ ಪ್ರಮಾಣಗಳ ಕೋಲು, ಭೇರುಂಡ, ಗಂಗ, ಮಾರ್ಗುಂಡಿ, ಕಚ್ಚವಿ, ಒತ್ತೊಲ, ದಂಡ ಅಥವಾ ರಾಜಮಟ್ಟದ ದಂಡ, ವರಿಸೆ ಕೋಲು—ಈ ಹೆಸರಿನ ಕೋಲುಗಳಿದ್ದವು. ವರಿಸೆಕೋಲು ತರಿಜಮೀನಿನ ಮುಖ್ಯವಾಗಿ

'ಎಟ್ಟ' ಜಮೀನಿನ ಅಳತೆಗಾಗಿ ಉಪಯೋಗಿಸಲ್ಪಡುತ್ತಿತ್ತು. ಹನ್ನೆರಡು ಬೆರಳಗಲದ ಹದಿನೆಂಟು ಗೇಣು(?)ಗಳ ಉದ್ದದ 'ಮಾನದಂಡವೆಂಬ ಕೋಲು ಒಂದಿತ್ತು. ಇವು ಮಾತ್ರವಲ್ಲದೆ, 36 ಹೆಜ್ಜೆಯ 48 ಹೆಜ್ಜೆಯ ಕೋಲುಗಳೂ ಬಳಕೆಯಲ್ಲಿದ್ದವು. ಭೂ ಅಳತೆಯ ಘಟಕಗಳಿಗೆ (units) ಸಾಮಾನ್ಯವಾಗಿ ನಿವರ್ತನ, ಮತ್ತರ್ ಮತ್ತು ಖಮ್ಮ ಎಂಬ ಹೆಸರುಗಳನ್ನು ಉಪಯೋಗಿಸಲಾಗುತ್ತಿದ್ದಿತು. ಇದರಲ್ಲಿ ಕೊನೆಯದೇ (ಖಮ್ಮ) ತೀರ ಚಿಕ್ಕ ಘಟಕ. ನವಧಾನ್ಯಗಳ ಅಳತೆಗೋಸ್ಕರ (ಕಾಳು ಮತ್ತು ಬೇಳೆ) ಉಪಯೋಗಿಸಲಾಗುತ್ತಿದ್ದ ಅಳತೆ 'ಮಿಷ್ಕ'. 10 ಮಿಷ್ಕಗಳು ಒಂದು ಫಲ; 64 ಫಲಗಳು ಒಂದು ಮಣ. 24 ಮಣಗಳು ಒಂದು ಕೊಳಗ; 29 ಕೊಳಗಗಳು ಒಂದು ಖಂಡುಗ. ಹೊಟ್ಟು ತೆಗೆದ ಅಕ್ಕಿಗಾಗಿ ಅಡ್ಡ. ಭತ್ತಕ್ಕಾಗಿ ಸೊಲ್ಲಗೆ, ಎಣ್ಣೆಗಾಗಿ ಮಣ ಅಳತೆಯ ಬಗೆಯಾಗಿತ್ತು.

ದಾನಗಳಿಗಾಗಿ ಅಲ್ಲದೆ ನಿತ್ಯವ್ಯವಹಾರಕ್ಕಾಗಿ ಸುವರ್ಣ, ನಿಷ್ಕ, ಗದ್ಯಾಣ, ಎಂದು ವಿವರಿಸಿ ಈ ಚಿನ್ನದ ನಾಣ್ಯಗಳನ್ನು, ಅಲ್ಲದೆ ಇದಕ್ಕೂ ಕಡಮೆ ಮೌಲ್ಯದ ನಾಣ್ಯಗಳನ್ನೂ ಬಳಸಲಾಗುತ್ತಿತ್ತೆಂದು ಅನೇಕ ಶಾಸನಗಳು ತಿಳಿಸುತ್ತವೆ. ಅರ್ಧ ಸುವರ್ಣವನ್ನು ಪೊನ್ ಅಥವಾ ಹೊನ್ ಎಂದು ಕರೆಯಲಾಗುತ್ತಿತ್ತು. ಬಹುಶಃ ಇದು ಪಣ ಅಥವಾ ಹಣ ಎಂದು ರೂಪಾಂತರವಾಗಿರುವುದು ನಿಸ್ಸಂದೇಹ. ಹಾಗ, ಕೊಡೆವಣ, ಮತ್ತು ಕಾಸು ಈ ನಾಣ್ಯಗಳ ಪ್ರಸ್ತಾಪವೂ ಇದೆ. ಇವುಗಳ ಮತ್ತು ಚಿನ್ನದ ನಾಣ್ಯಗಳ ಪರಸ್ಪರ ಪ್ರಮಾಣವೇನೆಂಬುದು ಶಾಸನಗಳಲ್ಲಿ ಸ್ಪಷ್ಟವಾಗಿಲ್ಲ. ಬೆಳ್ಳಿಯ ನಾಣ್ಯಗಳು ನಾಣ್ಯವ್ಯವಸ್ಥೆಯಲ್ಲಿ ಕಾಣಬಾರದಿರುವುದಕ್ಕೆ ವಿಶಾಲವಾದ ದೇಶದ ನಾಣ್ಯ ಪೂರೈಕೆಗೆ ಸಾಕಾಗುವಷ್ಟು ಬೆಳ್ಳಿಯ ಅಭಾವವೇ ಮುಖ್ಯ ಕಾರಣ. ಅನೇಕ ಬಗೆಯ ಮೌಲ್ಯದ ಚಿನ್ನದ ನಾಣ್ಯಗಳು ಗುಂಡಾಕೃತಿಯಲ್ಲಿ ಗುಳಿಗೆಯಾಕಾರದಲ್ಲಿ ಇರುತ್ತಿದ್ದವು; ಸಾದಾ ಹಾಗೂ ನಯವಾಗಿ, ಒಂದು ಸೂಕ್ಷ್ಮ ರಂಧ್ರದ ಗುರುತಿನಿಂದ ಕೂಡಿರುತ್ತಿದ್ದವು. ಗಂಗರ ಕಾಲದ ಚಿನ್ನದ ನಾಣ್ಯಗಳ ಮೇಲ್ಮೊಗದಲ್ಲಿ ಆನೆ, ಹಿಂಭಾಗದಲ್ಲಿ ಪುಷ್ಪಗಳ ನಕಾಶೆ ಇರುತ್ತಿದ್ದವು. ತೂಕ 52.3 ರಿಂದ 58.5 ರವೆ (ಗ್ರೇಯ್ನ್) ಗಳಷ್ಟಿರುತ್ತಿತ್ತು. ಸಾಮುದಾಯಿಕ ಭೂಮಿಗಳ ಬೆಳೆಯ ಆರನೆ ಒಂದು ಭಾಗದಷ್ಟು, ಅರಣ್ಯಪ್ರದೇಶದ ಮತ್ತು ಖುಷ್ಕಿ ಭೂಮಿಗಳ ಉತ್ಪತ್ತಿಯಲ್ಲಿ ಐದನೆ ಒಂದು ಭಾಗದಷ್ಟು, ಕೆರೆಗಳ ಅಚ್ಚುಕಟ್ಟಿನಲ್ಲಿ ಆದ ಬೆಳೆಗಳ ಮೂರನೆ ಒಂದು ಭಾಗದಷ್ಟು ಭೂಗರ್ಭದ ನಿಧಿ ನಿಕ್ಷೇಪದ ಮೂರನೆ ಒಂದು ಭಾಗದಷ್ಟು (ತ್ರಿಭೋಗಾಭ್ಯಂತರ)—ಹೀಗೆ ಸಾಮಾನ್ಯ ಕಂದಾಯ ತೆರಿಗೆಗಳು ಪುರಾತನ ಆರ್ಯಪದ್ಧತಿಯಂತೆ ರಾಜನಿಗೆ ಸಲ್ಲಬೇಕಾದುದರ ಜತೆಗೆ ನೀರಾವರಿ ತೆರಿಗೆ, ವ್ಯಾಪಾರ ಪದಾರ್ಥಗಳ ಮೇಲೆ ದಾರಿ ತೆರಿಗೆ, ಒಳ ಸುಂಕ. ಮತ್ತು ಹಲವಾರು ಅಪರಾಧಗಳಿಗಾಗಿ ವಿಧಿಸಿದ ದಂಡ ಇವೂ ಕೂಡ, ರಾಜ್ಯದ ಆದಾಯವಾಗಿದ್ದವು. ಶುಕ್ರನ 'ನೀತಿಸಾರ' ಹೇಳುವಂತೆ, ರಾಜನು ರೈತರ ಮೇಲೆ ಕಂದಾಯ ಕವಳಿಗೆಗಳನ್ನು ಹೊರಿಸಬೇಕಾದ್ದು—ಮಾಲೆ ಕಟ್ಟಲು ಹೂವಾಡಿಗ ಕಾಡಿನಲ್ಲಿ ಗಿಡಗಳಿಂದ ಹೂವು ಹಾಗೂ ಎಲೆಗಳನ್ನು ಆಯುವ ಹಾಗೆಯೇ ವಿನಾ ಇದ್ದಿಲು ಸುಡುವವನಂತಲ್ಲ. ಒಳ ಸುಂಕದ ಸಂಗ್ರಹ ಅಥವಾ ಅದರ ವಹಿವಾಟಿನ ನಿರ್ವಹಣೆಯ ಕರ್ತವ್ಯ ಸರ್ಕಾರ ನೇಮಕಮಾಡಿದ ಪ್ರತಿನಿಧಿಯ ಪಾಲಿಗಿತ್ತು. ಇದನ್ನು ಬೇರೆ ಬೇರೆ ಬಾಬುಗಳ ಹೆಸರಿನಲ್ಲಿ ಹೆಜ್ಜುಂಕ ಅಥವಾ ಪೆರ್ಜುಂಕ ಎಂದು ಕರೆಯಲಾಗಿತ್ತು. ಮಾರಾಟದ ಕೆಲವು ಆಯ್ದ ಪದಾರ್ಥಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು; ಕಿರಿಕುಳ ತೆರಿಗೆ, ಅಥವಾ ಚಿಲ್ಲರೆ ತೆರಿಗೆ ಕಡಮೆ ವ್ಯಾಪಾರವಿದ್ದ ಸಾಮಾನುಗಳ ಮೇಲೆ ವಿಧಿಸಿದ್ದು; ವದ್ದರವುಳ ಮತ್ತು ಪನ್ನೆಯ-ನೀರು ಸರಬರಾಜು, ಅಡಕೆ ಮತ್ತು ವೀಳೆಯದೆಲೆ ಮೇಲಿನ ಸುಂಕ; ಬೀಳ್ಕೊಡೆ ಸುಂಕ ವೀಳೆಯದೆಲೆ ಹೊರೆಯ ಮೇಲೆ ಪಟ್ಟಣಿಗರು ತೆರುವ ಸುಂಕ; ನಿತ್ಯಬಳಕೆಯ ಚಿಲ್ಲರೆ ಪದಾರ್ಥಗಳ ಮೇಲಿನ ಲೈಲಲಿಕೆ, ಮನ್ನೆಯ, ಆಯ, ದಾಯ, ದಶಬಂಧ (ಶೇಕಡ ಹತ್ತರಷ್ಟು ತೆರಿಗೆ); ಪೀರವಣ ಮತ್ತು ಉಪ್ಪಿನ ತೆರಿಗೆ–ಇವು ವಸೂಲಾಗುತ್ತಿದ್ದ ಅತಿ ಮುಖ್ಯವಾದ ತೆರಿಗೆಗಳಲ್ಲಿ ಕೆಲವು. ಧಾನ್ಯ ಮತ್ತು ಇತರ ಪದಾರ್ಥಗಳನ್ನು ಮುಖ್ಯವಾಗಿ ಎತ್ತುಗಳ ಮೂಲಕ ಸಾಗಿಸಬೇಕಾಗಿದ್ದ ಪ್ರದೇಶಗಳಲ್ಲಿ ತೆರಿಗೆ ಹಣ

ಹಾಗೂ ಸುಂಕದ ವಸೂಲಿಯಲ್ಲಿ ಅಗತ್ಯ ಪದಾರ್ಥಗಳ ಪೈಕಿ ಕೆಲವಕ್ಕೆ ಅಂದರೆ ಅಡಕೆ, ಅಕ್ಕಿ, ಹುಣಸೆ ಹಣ್ಣು, ಎಣ್ಣೆ ಮತ್ತು ತುಪ್ಪ ಇವಕ್ಕೆ ವಿನಾಯಿತಿ ತೋರಿಸಲಾಗುತ್ತಿತ್ತು.

ಕೇಂದ್ರ ಸರ್ಕಾರ ವಿಧಿಸಿದ ವಿಶೇಷ ತೆರಿಗೆಗಳ ಸಹಿತ ಕಂದಾಯ ವಸೂಲುಮಾಡುವುದೂ ವಸೂಲಾದುದನ್ನು ವರಿಷ್ಠ ಸರ್ಕಾರಕ್ಕೆ ಪಾವತಿ ಮಾಡುವುದೂ ಗ್ರಾಮಸಂಸ್ಥೆಯ ಜವಾಬ್ದಾರಿಯಾಗಿತ್ತು. ಇದರ ಜೊತೆಗೆ ಗ್ರಾಮಸಂಸ್ಥೆ ಬೇರೆ ಕೆಲವು ತೆರಿಗೆಗಳನ್ನು ವಿಧಿಸುತ್ತಿತ್ತು. ಅವು ಯಾವುವೆಂದರೆ ಹಡಿಕೆ, ಹೆರಣೆ, ಮುಲಬ್ರಯ, ಅವಿಚ್ಚು ಇವು ಮನೆಕಟ್ಟುವುದಕ್ಕೆ ಉಪಯೋಗಿಸುವ ಭೂಮಿ, ಮರಗಳು, ನೇಗಿಲುಗಳು, ಮಾರುಕಟ್ಟೆಗಳು, ಸಕ್ಕರೆ ಕಾರ್ಖಾನೆಗಳು(ಆಲೆಮನೆ) ಇವುಗಳ ಮೇಲೆ ವಿಧಿಸಿದ ತೆರಿಗೆಗಳು. ಇದು ಮಾತ್ರವಲ್ಲ, ನಾನಾ ಬಗೆಯ ಬಲಾತ್ಕಾರದ ಬಿಟ್ಟಿ ಕರಣಿಕರ ಕಾಣಿಕೆ, ಕಪ್ಪ, ಬಾಂದು ನೆಡುವ ಬಗ್ಗೆ ಚಂದಾ, ಸೇನೆಗಾಗಿ ಇಮ್ಮಡಿವಂತಿಗೆ ಅಥವಾ ನಷ್ಟಪರಿಹಾರಕ್ಕೆ ಹಣ, ಆನೆ ಕುದುರೆಗಳಿಗೆ ಮೇವು ಇವನ್ನು ಸಹ ಪಡೆಯುತ್ತಿತ್ತು. ಈ ಬಗೆ ಬಗೆಯ ಹೊಣೆಗಳಲ್ಲಿ ಎಲ್ಲವೂ ತೆರಿಗೆಯ ರೂಪದಲ್ಲಿ ತೀರುತ್ತಿರಲಿಲ್ಲ. ಸ್ವಯಂ ಪ್ರೇರಿತವಾಗಿ ಒಪ್ಪಿಸಿದ ಕಾಣಿಕೆಯಂತಿದ್ದವು. ತೋಟಗಾರರು ಮತ್ತು ರೈತರು ತಮ್ಮ ತೋಟಗಳ ಮೊದಲ ಫಲವನ್ನೂ ರಾಜನ ಸೇನೆ ಅಥವಾ ಅಧಿಕಾರಿಗಳು ಪ್ರವಾಸದಲ್ಲಿದ್ದಾಗ ಅವರಿಗೆ ಆಹಾರ, ಮೇವು ಮತ್ತು ವಾಹನಗಳನ್ನೂ ಒದಗಿಸಬೇಕಾಗಿದ್ದಿತು. ತೆರಿಗೆಯ ದರ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸದಿಂದಿರುತ್ತಿತ್ತು. ಆನೆಗಳ ಮೇಲೆ 10 ಪಣ, ಒಂದು ಮೂಟೆ ಕರಿ ಮೆಣಸಿಗೆ ಒಂದು ಅಳಾಕ್ಕು, ವೀಳೆಯದೆಲೆಗೆ ಒಂದು ಕವಳಿಗೆ, ಧಾನ್ಯಕ್ಕೆ ಒಂದು ಉರಿ, ಬಟ್ಟೆಗೆ ಕಾಸು ಇದೇ ಮೊದಲಾದ ರೀತಿಯಲ್ಲಿ ಗ್ರಾಮಸಂಸ್ಥೆಗಳು ತೆರಿಗೆಯನ್ನು ವಿಧಿಸುತ್ತಿದ್ದವೆಂದು ಅನೇಕ ಶಾಸನಗಳು ತಿಳಿಸುತ್ತವೆ. ಭೂ ಮಾಲಿಕನಿಗೆ ಬಲಾತ್ಕಾರದ ಬಿಟ್ಟಿ, ಭೂ ಕಂದಾಯ, ಮೇವಿನ ತೆರಿಗೆ, ವಿವಾಹದ ಮೇಲೆ ತೆರಿಗೆ ಇವೆಲ್ಲಾ ಊಳಿಗಮಾನ್ಯ ರೀತಿಯ ತೆರಿಗೆಗಳು. ನಿತ್ಯ ಬಳಕೆಯ ಪದಾರ್ಥಗಳ ಮೇಲಿನ ಹಲವಾರು ಪರೋಕ್ಷ ತೆರಿಗೆಗಳೂ ಇದ್ದವು. ಇವೆಲ್ಲಾ ಹಣಕಾಸಿನ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಭೂಮಿ ಉಳುವವರ ಹಿತಾಸಕ್ತಿಯನ್ನು ಎಂದೂ ಗಮನಿಸುತ್ತಿರಲಿಲ್ಲವೆಂದು ಸೂಚಿಸುತ್ತವೆ.

ಭೂ ಕಂದಾಯ ಮತ್ತು ತೆರಿಗೆಗಳ ವಸೂಲಿಪದ್ಧತಿ ಸುಲಭವಾಗಿದ್ದಿತು. ಗ್ರಾಮಗಳ ಗೌಡ ಮತ್ತು ಕರಣ ಅಲ್ಲಿನ ಕುಟುಂಬಗಳ ಮತ್ತು ಅವರ ಜಮೀನು ಬಗ್ಗೆ ದಾಖಲೆ ಪುಸ್ತಕವನ್ನಿಡಬೇಕಾದದ್ದು ಅವರ ಕರ್ತವ್ಯವಾಗಿತ್ತು. ಈ ದಾಖಲೆಯಲ್ಲಿ ಅವರ ಉದ್ಯೋಗ, ಜಾತಿ, ಆದಾಯ, ಆಳುಕಾಳುಗಳು, ದನಕರುಗಳು-ಮುಂತಾದ ಆಸ್ತಿ ಪಾಸ್ತಿ, ನಗದಾಗಿಯೋ ದವಸ ಮೂಲಕವೋ ತೆರುವ ಕಂದಾಯ, ವಿನಾಯಿತಿ ಉಂಟೇ ಅಥವಾ ಇಲ್ಲವೇ, ಕಂದಾಯ ಅಥವಾ ತೆರಿಗೆಯ ಪ್ರತಿಯಾಗಿ ನೀಡಬೇಕಾದ ಸೇವೆ ಮುಂತಾದ ವಿವರಗಳು ಕಾಣಿಸಲಾಗುತ್ತಿದ್ದವು. ಜಿಲ್ಲೆಯ ನಾಯಕ ಮತ್ತು ನಾಡಗಾವುಂಡರ ಕೈಕೆಳಗೆ ರೆವಿನ್ಯೂ ಅಧಿಕಾರಿಗಳ ಸಿಬ್ಬಂದಿಯಿದ್ದು ಅವರು ಗ್ರಾಮ ಹಾಗೂ ಪಟ್ಟಣಗಳ ದೊಡ್ಡ ಗುಂಪುಗಳ ಬಗ್ಗೆ ಇದೇ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಸುಂಕದ ವಸೂಲಿಯ ಅಧಿಕಾರಿ, ಆಡಳಿತಗಾರನ ಮತ್ತು ನ್ಯಾಯಮೂರ್ತಿಯ ಕರ್ತವ್ಯಗಳನ್ನೂ ರಾಜ್ಯದ ದಾಖಲೆ ಕಾಗದ ಪತ್ರಗಳ ಪರೀಕ್ಷಕನ ಕೆಲಸ ವನ್ನೂ ನೋಡಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲೂ ತಕ್ಕ ಸಿಬ್ಬಂದಿಯೊಡನೆ 'ಧರ್ಮಕರಣಿಕನು' ಇರುತ್ತಿದ್ದನು. ಜಿಲ್ಲೆಯ ಮೂಲಕ ಹಾದುಹೋಗುವ ವರ್ತಕರ ಸಾಮಾನುಗಳ ವಿವರಗಳನ್ನು ದಾಖಲೆ ಇಡುವುದಲ್ಲದೆ ಅವರ ರಹದಾರಿಯನ್ನು ಪರೀಕ್ಷಿಸುವ ಕಾರ್ಯಭಾರವೂ ಅವರ ದಾಗಿತ್ತು. ಕರಣಿಕರ ಸಿಬ್ಬಂದಿಗೆ ನ್ಯಾಯ ಸಂಬಂಧವಾದ ದಸ್ತಾವೇಜುಗಳನ್ನು ಬರೆಯುವುದು ಮಾತ್ರವಲ್ಲ, ಲೆಕ್ಕಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಗ್ರಾಮದ ಭೂಮಿಗಳ ಮೇಲೆ ಅಧಿಕಾರವಿಟ್ಟುಕೊಳ್ಳುವುದೂ ಅವರ ಹೊಣೆಯಾಗಿತ್ತು. ಶಾಸನಗಳಲ್ಲಿ ಇವರು ಹೆಗ್ಗಡೆಗಳು, ಪೆರ್ಗಡೆಗಳು ಅಥವಾ ನಾಡಪ್ರಭುಗಳು ಇವರ ಅಧೀನದಲ್ಲೂ ಲೆಕ್ಕ ಗುಮಾಸ್ತರಿದ್ದ ವಿಚಾರವು ಉಲ್ಲೇಖವಾಗಿದೆ. ಇಷ್ಟೆ ಅಲ್ಲ. ಸೇನಬೋವರು,

ತೆರಿಗೆ ವಸೂಲಿಕಾರರು (ತೆರಿದಾರ), ಭೂಹಿಡುವಳಿ ಅಧಿಕಾರಿಗಳು (ಮಣ್ಣಿಮಗಂದಿರು), ಮೇಲುಸ್ತುವಾರಿಗಾರರು, ಮೇಲ್ವಿಚಾರಕರು ಮತ್ತು ಭೂ ದಾಖಲೆ ಪುಸ್ತಕಗಳವರು—ಇವರೆಲ್ಲರ ಉಲ್ಲೇಖವೂ ಶಾಸನಗಳಲ್ಲಿದೆ. ಕಂದಾಯ ದಾಖಲೆ ಪುಸ್ತಕದಲ್ಲಿ ಹೆಚ್ಚು ಕಡಮೆಯ ಬಗ್ಗೆ ನಿಖರವಾದ ಅಂಶಗಳನ್ನು ಕಾಣಿಸಬೇಕಾದ್ದು ಅವರ ಜವಾಬ್ದಾರಿಯಾಗಿತ್ತು.

## ಗ್ರಾಮಾಡಳಿತ

ಹಳ್ಳಿ ಅಥವಾ ಗ್ರಾಮಗಳು ನಾಡಿನ ಮತ್ತು ಅದರ ಆಡಳಿತದ ಬೆನ್ನೆಲುಬುಗಳಂತಿದ್ದವು. ಕಗ್ಗೊಲೆಯ ಕದನಗಳಲ್ಲಿ ಗ್ರಾಮಗಳಿಗೆ ತೊಂದರೆಯಿರುತ್ತಿರಲಿಲ್ಲ. ಅವು ಆಡಳಿತದಲ್ಲಿ ಸ್ವಯಂಪೂರ್ಣವಾಗಿದ್ದವು; ಅವಕ್ಕೆ ಆನುವಂಶಿಕ ಮುಖಂಡ ಮತ್ತು ಗಣಕರಿರುತ್ತಿದ್ದರು. ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು ಅಭಿವೃದ್ಧಿಗೊಳ್ಳುವಂತೆ ಮಾಡುವುದೇ ಕೇಂದ್ರ ಸರ್ಕಾರದ ನೀತಿ ಆಗಿದ್ದು, ಈ ಆಡಳಿತಗಳು ಕೇಂದ್ರದ ಪ್ರವೇಶಕ್ಕೆ ಅಗತ್ಯವೇ ಇಲ್ಲದಿರುವ ರೀತಿಯಲ್ಲಿ ದಕ್ಷವಾಗಿ ವ್ಯವಹರಿಸಲೂ ಅವಕಾಶವನ್ನು ಕಲ್ಪಿಸಿದ್ದವು. ಬಲಾಢ್ಯರಾದ ದುರ್ವರ್ತನೆಗಾರರು ಹತೋಟಿಯನ್ನು ಮೀರಿ ವರ್ತಿಸಿದ ಸನ್ನಿವೇಶದಲ್ಲಿ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಅಂಥವರ ಮೇಲೆ ಪ್ರಯೋಗಿಸುವಲ್ಲಿ ಸಹಾಯವೆಸಗುವುದೇ ಕೇಂದ್ರ ಸರ್ಕಾರದ ಮುಖ್ಯ ಕರ್ತವ್ಯವಾಗಿತ್ತು. ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮಸಭೆಯಿರುತ್ತಿತ್ತು. ಸಾಮಾನ್ಯವಾಗಿ ಇದು ಗ್ರಾಮದ ದೇವಸ್ಥಾನದ ಮಂಟಪದಲ್ಲಿ ಸೇರುತ್ತಿತ್ತು. ಸಭೆಗೆ ಪ್ರವೇಶ ಹೇಗೆ? ಅವರ ಕಟ್ಟುಪಾಡೇನು? ಎಂಬುದು ತಿಳಿಯದು. ಆದರೆ ದಕ್ಷಿಣದಲ್ಲಿ ಒಂಬತು ಹತ್ತನೆ ಶತಮಾನಗಳಲ್ಲಿ ಗ್ರಾಮದ 'ಮಹಾಜನ'ಕ್ಕೆ ಪ್ರವೇಶದ ಅವಕಾಶವಿದ್ದುದು ಅಗ್ರಹಾರದಲ್ಲಿನ ಪಾಲುದಾರರಿಗೆ ಮಾತ್ರ. ಆದರೆ ಇಂಥವರಿಗೆ ವೇದದ ಜ್ಞಾನವಿರಬೇಕಾಗಿತ್ತು. ಕಡೆಯ ಪಕ್ಷ ಮಂತ್ರ, ಬ್ರಾಹ್ಮಣ ಮತ್ತು ಧರ್ಮಶಾಸ್ತ್ರಗಳು ಗೊತ್ತಿರಬೇಕಿತ್ತು. ಈ ಸಭೆಯ ಕಾರ್ಯಕಲಾಪಗಳಲ್ಲಿ ಇತರ ವರ್ಣೀಯರಾಗಲಿ ರಾಜನ ಅಧಿಕಾರಿಗಳಾಗಲಿ ಹಾಜರಿರುವುದಕ್ಕೆ ಯಾವ ನಿರ್ಬಂಧವೂ ಇರಲಿಲ್ಲ. ಮೇಲೆ ತಿಳಿಸಿದ ಕಡ್ಡಾಯ ಅಡ್ಡಿಯಾಗುತ್ತಿರಲಿಲ್ಲ.

ಸಭೆಗೆ ಪರ್ಯಾಲೋಚನೆ ಹಾಗೂ ಕಾರ್ಯನಿರ್ವಾಹಕ—ಈ ಎರಡೂ ಕರ್ತವ್ಯಗಳಿದ್ದವು. ಈ ಸಭೆಗಳು ತಾವೇ ಎಲ್ಲಾ ಧರ್ಮದತ್ತಿಗಳ ರಕ್ಷಕರಂತಿದ್ದವು. ಅನೇಕ ವೇಳೆ ಅವು ದೇವಾಲಯಗಳಿಗೂ ಧಾರ್ಮಿಕ ಸಂಸ್ಥೆಗಳಿಗೂ ತೆರಿಗೆಯಿಲ್ಲದ ಪುದುವಟ್ಟುಗಳನ್ನು ಏರ್ಪಡಿಸುತ್ತಿದ್ದವು. ಗ್ರಾಮದ ಭೂಮಿಯನ್ನು ವಿಕ್ರಯಮಾಡಿ, ರಾಜ್ಯಕ್ಕೆ ಸಲ್ಲಬೇಕಾದ ತೆರಿಗೆಗೆ ತಕ್ಕ ವ್ಯವಸ್ಥೆ ಮಾಡಿ, ಇಂಥ ಪುದುವಟ್ಟುಗಳನ್ನು ಏರ್ಪಡಿಸುತ್ತಿದ್ದವು. ತೆರಿಗೆಗೆ ಬದಲಾಗಿ ಕಸಬುದಾರರು ಸಲ್ಲಿಸುತ್ತಿದ್ದ ಸೇವೆಯನ್ನು ಪಡೆದುಕೊಳ್ಳುವುದರ ಜತೆಗೆ ಗ್ರಾಮಗಳಿಂದ ಕೆಲಭಾಗದಷ್ಟು ಕಂದಾಯವನ್ನೂ ಈ ಸಭೆ ವಸೂಲುಮಾಡುತ್ತಿತ್ತು. ಅಲ್ಲದೆ ಭೂಮಿಗಳ ವ್ಯವಹಾರದಲ್ಲಿ ಗ್ರಾಮವಾಸಿಗಳು ನಡೆಸಿದ ತಪ್ಪಿಗಾಗಿ ಅವರನ್ನು ಶಿಕ್ಷಿಸಲು ದೇವಸ್ಥಾನದ ಅಧಿಕಾರಿಗಳು ನ್ಯಾಯ ಕರ್ತವ್ಯವನ್ನು ವಹಿಸಿಕೊಳ್ಳುವಂತೆ ಆದೇಶ ನೀಡುತ್ತಿದ್ದಿತು. ಗ್ರಾಮವಾಸಿಗಳು ಧರ್ಮದ ಸೊತ್ತನ್ನು ನಾಶಗೊಳಿಸಲು ಯತ್ನಿಸಿದಾಗ ಇದನ್ನು ಅರಿತೂ ಸಭೆ ಸೂಕ್ತಕ್ರಮ ಜರುಗಿಸದೆ ಕರ್ತವ್ಯವಿಮುಖವಾದಾಗ (ಇದನರಿತು ಉಪೇಕ್ಷಿಸಿದರಾದಡೆ), ಆ ಧರ್ಮದ ನಾಶಕ್ಕೆ ಸಭೆಯೇ ಹೊಣೆಯಾಗಬೇಕಿತ್ತು. ಸಭೆಯು ತನ್ನ ಸಮಿತಿಗಳ ಮೂಲಕ ಬಿಟ್ಟುಬಿಟ್ಟ ತಳಾರಿಕೆ, ಬಾಲಪಣ—ಮುಂತಾದ ತೆರಿಗೆಗಳನ್ನು ವಸೂಲು ಮಾಡುತ್ತಿತ್ತಲ್ಲದೆ ಮುಖ್ಯವಾಗಿ ದೇವಾಲಯಗಳಿಗೆ ವಿನಾಯಿತಿ ತೋರಿಸುತ್ತಿತ್ತು. ಕಂದಾಯ ಕೊಡಲು ತಪ್ಪಿದಲ್ಲಿ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿತ್ತು. ಸಾರ್ವಜನಿಕ ಬಾವಿಗಳು, ಜಲಾಶಯಗಳು ಮತ್ತು ನೀರಾವರಿಯ ಕಾರ್ಯಗಳನ್ನು ಸಭೆಯ ಸಮಿತಿ ನಿರ್ವಹಿಸುತ್ತಿತ್ತು. ಜಮೀನು ವರ್ಗಾವರ್ಗಿ ಹಾಗೂ ಕಂದಾಯದ ವಸೂಲಿ, ಲೆಕ್ಕಗಳನ್ನಿಡುವ

ಕರ್ತವ್ಯ ಕೂಡ ಇದರ ಪಾಲಿಗಿತ್ತು. ಮಹಾಸಭೆಯು ನಿಗದಿಯಾದ ಬಡ್ಡಿ ದರದ ಮೇಲೆ ನಗದು ಹಣವನ್ನೂ ಬತ್ತವನ್ನೂ ಗೊತ್ತಾದ ಕಾಲದಲ್ಲಿ ಪಾವತಿ ಮಾಡುವ ಷರತ್ತಿನ ಮೇಲೆ ಸಾಲ ತೆಗೆದು ಕೊಳ್ಳುತ್ತಿತ್ತು. ಈ ಸಾಲ ಬಹುಶಃ ಕೆರೆಗಳು, ಕಟ್ಟೆಗಳು, ನಾಲೆಗಳು ಮತ್ತು ತೋಟಗಳ ದುರಸ್ತಿಗಾಗಿ ವಿಧಾಯಕಪಡಿಸಿದ ತೆರಿಗೆ ತೆತ್ತು ಭೂಮಾಲಿಕರು ಗ್ರಾಮದ ಕೆರೆಯ ನೀರನ್ನು ಬಳಸಿಕೊಳ್ಳಲು ಅನುಮತಿ ಕೊಡಲಾಗುತ್ತಿತ್ತು. ಕೆಲವು ವೇಳೆ ಉಚಿತವಾಗಿಯೂ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತಿತ್ತು. ಅಗ್ರಹಾರಗಳನ್ನು ಸಮಭಾಗಗಳಾಗಿ ವಿಂಗಡಿಸುವುದೂ ಪ್ರತಿವಿಭಾಗವೂ ಸಲ್ಲಿಸಬೇಕಾದ ತೆರಿಗೆಗಳನ್ನು ವಿಧಾಯಕಪಡಿಸುವುದೂ ವಿಭಾಗಗಳ ಪರಸ್ಪರ ಸಂಬಂಧಗಳನ್ನು ನಿರ್ದೇಶಿಸುವುದೂ ಅದರ ಜವಾಬ್ದಾರಿಯಾಗಿತ್ತು. ಅಭಿವೃದ್ಧಿಗೊಳಿಸುವಲ್ಲಿ, ರಸ್ತೆಗಳ ಉಪಯೋಗದಲ್ಲಿ. ತೋಟ ಮತ್ತು ನೀರಿನ ಬಳಕೆಯಲ್ಲಿ ಈ ವ್ಯವಸ್ಥೆ ಏರ್ಪಟ್ಟಿತ್ತು. ಸಭೆಯು ಭೂಮಿಗಳನ್ನು ವಿಕ್ರಯಿಸಿದಾಗ ಆ ಭೂಮಿಗಳ ಎಲ್ಲೆ ವಿಚಾರಗಳ ತಕರಾರುಗಳನ್ನು ತೀರ್ಮಾನಿಸಲೂ ಸಮ್ಮತಿಸುತ್ತಿತ್ತು. ಅಸಮವೆಂದು ತಿಳಿದು ಕೆಲವು ಸಂದರ್ಭಗಳಲ್ಲಿ ಹಿಂದಿನ ನಿರ್ಧಾರಗಳನ್ನು ರದ್ದುಗೊಳಿಸಿ ಸಮನಾಗಿ ಹಂಚುವ ಮುನ್ನ ತನ್ನವರ ಮೂಲಕ ಭೂಮಿಯನ್ನು ಅಳತೆಮಾಡಿಸಿ ಸಂಬಂಧಪಟ್ಟ ಜನರು ಅದಕ್ಕೆ ಸಮ್ಮತಿಸುವಂತೆ ಒತ್ತಾಯಪಡಿಸಲಾಗುತ್ತಿತ್ತು. ಈ ನಡವಳಿಕೆಗೆ ಕಾನೂನಿನಷ್ಟೆ ಅಧಿಕಾರ ವ್ಯಾಪ್ತಿಯುಂಟೆಂದು ಸ್ಪಷ್ಟಪಡಿಸಲಾಗುತ್ತಿತ್ತು. ಇಂಥ "ಸಮಾಜ ಶಾಸನ" ಗಳಿಗೆ ರಾಜನು ಸಮರ್ಥನೆ ನೀಡುತ್ತಿದ್ದ. ಒಪ್ಪಂದವನ್ನು ಉಲ್ಲಂಘಿಸಿದವರಿಗೆ ಅಥವಾ ಅತಿಕ್ರಮಿಸಿದವರಿಗೆ, ಬಹಿಷ್ಕಾರ ಇಲ್ಲವೆ ಇತರ ಶಿಕ್ಷೆ ವಿಧಿಸಲಾಗುತ್ತಿತ್ತು. ಆಗಾಗ್ಗೆ ಎಲ್ಲ ಈ ಲೆಕ್ಕಗಳನ್ನು ರಾಜನ ಅಧಿಕಾರಿಗಳು ಮತ್ತು ಪರಿಶೀಲಕರು ತನಿಖೆ ನಡೆಸುತ್ತಿದ್ದರು. ಧರ್ಮದ ಪುದುವಟ್ಟುಗಳು ದುರುಪಯೋಗವಾದದ್ದನ್ನು ಪತ್ತೆಹಚ್ಚುತ್ತಿದ್ದರು. ವಿವಾದ ವಿಚಾರಗಳ ಸಂದರ್ಭದಲ್ಲಿ ಕೆಲವು ವೇಳೆ ರಾಜನ ಅಧಿಕಾರವನ್ನು ಬೇಡಲಾಗುತ್ತಿತ್ತು. ಭೂಮಿಯ ಸಂಬಂಧವಾದ ಅಥವಾ ಧಾರ್ಮಿಕ ಸಂಬಂಧವಾದ ವಿವಾದಗಳಲ್ಲಿ ಧರ್ಮಕರಣಿಕನು ವಿಚಾರಣೆ ನಡೆಸಿ ಸಂಬಂಧಿಸಿದವರೆಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಇತ್ಯರ್ಥಪಡಿಸುತ್ತಿದ್ದನೆಂದು ಶಾಸನಗಳು ಹೇಳುತ್ತವೆ. ಆದರೆ ರಾಜನ ಅಧಿಕಾರಿಗಳು ಸಾಮಾನ್ಯವಾಗಿ ಸ್ಥಳೀಯ ಆಡಳಿತ ವ್ಯವಹಾರಗಳಲ್ಲಿ ಕೈಹಾಕುತ್ತಿರಲಿಲ್ಲವೆಂದೇ ವ್ಯಕ್ತಪಡುತ್ತದೆ. ಆದರೂ ಒಮ್ಮೊಮ್ಮೆ ದೇವಾಲಯಗಳ ಪುದುವಟ್ಟು ಮುಖ್ಯವಾಗಿ ಬ್ರಹ್ಮಾದೇಯ ಮತ್ತು ದೇವದಾನ ಭೂಮಿಗಳ ವಿಚಾರದ ಲೆಕ್ಕಗಳನ್ನು ತರಿಸಿಕೊಂಡು ಆ ಬಗ್ಗೆ ಅಧಿಕಾರಿಗಳು ನಿರ್ಧಾರ ಕೊಡುತ್ತಲೂ ಇದ್ದರು. ದೇವಾಲಯಗಳಿಗೆ ದತ್ತಿಬಿಟ್ಟ ಭೂಮಿಗಳನ್ನು ನೋಡಿಕೊಳ್ಳಲು ನಿರ್ದೇಶಿಸಲ್ಪಟ್ಟಿದ್ದ ಪೂಜಾರಿಗಳು ಮತ್ತು ಅವರ ಕುಟುಂಬದವರನ್ನು ಗ್ರಾಮಸ್ಥರು ತುಂಬಾ ಗೌರವಿಸುತ್ತಿದ್ದರು. ಇವರಿಗೆ **ತಮ್ಮಡಿಗಳು** ಅಥವಾ **ಸ್ಥಾನಪತಿಗಳೆಂಬ** ಹೆಸರಿತ್ತು.

### ಭೂಮಿಯ ಅನುಭೋಗ

ಭೂದಾನದ ಹಂಚಿಕೆಯ ರೀತಿ ಬಗೆಬಗೆಯಾಗಿದ್ದವು. ಕೆಲವು ಉಂಬಳಿ ಎಂದು; ಅಂದರೆ ಕಂದಾಯವಿಲ್ಲದೆ ಸಂಪ್ರದಾಯದಂತೆ ಅಷ್ಟಭೋಗಗಳ ಬಾಧ್ಯತೆಯುಳ್ಳ ದಾನ. ರೈತರು ಭೂಮಿಯನ್ನು ಮೂರು ಬಗೆಯ ಅನುಭೋಗದಲ್ಲಿ ಪಡೆದಿದ್ದವರೆಂದು ಶಾಸನಗಳ ಉಲ್ಲೇಖಗಳು ತಿಳಿಸುತ್ತವೆ: 1) **ಸರ್ವಮಾನ್ಯ:** ಸರ್ಕಾರ ತನ್ನ ಎಲ್ಲ ಹಕ್ಕುಬಾಧ್ಯತೆಗಳನ್ನೂ ಬಿಟ್ಟುಕೊಟ್ಟ ಒಂದು ಬಗೆಯ ದಾನ. 2) **ತ್ರಿಭೋಗ:** ಮೂರು ಬೇರೆ ಬೇರೆ ವರ್ಗಗಳು ಅಂದರೆ ಖಾಸಗಿ ವ್ಯಕ್ತಿ, ಗ್ರಾಮದ ದೇವರು ಮತ್ತು ಬ್ರಾಹ್ಮಣರು ಒಟ್ಟಾಗಿ ಹೊಂದಿದ್ದ ಅನುಭೋಗ. 3) **ತಳವೃತ್ತಿ:** ದೇವರಿಗೆ, ಬ್ರಾಹ್ಮಣರಿಗೆ, ದೇವಾಲಯಗಳಿಗೆ ಮತ್ತು ಧರ್ಮಸಂಸ್ಥೆಗಳಿಗೆ ಕೆಲವು ವೇಳೆ ನಿರ್ದಿಷ್ಟ ಅವಧಿಯ ಕಾಲಕ್ಕೆ, ಮತ್ತೆ ಕೆಲವು ವೇಳೆ ಸೂರ್ಯ ಚಂದ್ರರಿರುವ ತನಕ ಎಲ್ಲ ಕಂದಾಯದ ವಿನಾಯಿತಿಯಿಂದ ಮಾಡಿದ ಭೂದಾನ. ಗ್ರಾಮಗಳಲ್ಲಿ ಅಥವಾ ಕೆಲವು ಗುಂಪಿನ ಹಳ್ಳಿಗಳಲ್ಲಿ ಬ್ರಾಹ್ಮಣರಿಗೆ 'ಅಗ್ರಹಾರ' ಎಂಬ ಹೆಸರಿನಲ್ಲಿ ಭೂದಾನ ಮಾಡುತ್ತಿದ್ದುದಾಗಿ

ತಿಳಿದುಬರುತ್ತದೆ. ಇಡೀ ಭೂ ಆಸ್ತಿಯನ್ನು ವೃತ್ತಿಗಳಾಗಿ ವಿಂಗಡಿಸಲಾಗುತ್ತಿತ್ತು. ಗ್ರಾಮಗಳ ವಿಸ್ತೀರ್ಣ ಮತ್ತು ಪ್ರಮಾಣಕ್ಕನುಗುಣವಾಗಿ ಈ ವೃತ್ತಿಗಳು ವ್ಯತ್ಯಾಸಗೊಂಡಿದ್ದವು. ಶಾಸ್ತ್ರಗಳ ಜ್ಞಾನಕ್ಕಾಗಿ, ಪಾಂಡಿತ್ಯ ಮತ್ತು ಪ್ರತಿಭೆಗಾಗಿ, ಆಚಾರನಿಷ್ಠೆಗಾಗಿ, ಘನವಿದ್ವತ್ತಿಗಾಗಿ (ವಿದ್ಯಾದಾನ) ವ್ಯಕ್ತಿಶಃ ಬ್ರಾಹ್ಮಣರಿಗೆ ಭೂದಾನ ಕೊಡಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ದೇವಾಲಯಗಳಿಗೂ ಪೂಜಾರಿಗಳಿಗೂ ವಿಶೇಷ ಸಮಾರಂಭ ನಡೆಸಿದಾಗ ದಾನದ ಕಾರ್ಯ ನಡೆಯುತ್ತಿತ್ತು. ದಾನ ಸ್ವೀಕರಿಸಲು ಇಂತಹ ಸಮಾರಂಭಗಳಿಗೆ ಆಗಮಿಸಿದ ಪ್ರವಾಸಿಕ ವೈದಿಕರು (ಅತಿಥಿ ಮಹತ್ತಿಗಳ್) ತಂಗಲು ಸೂಕ್ತ ವಸತಿಯನ್ನು (ಬಿಡಾರ) ಏರ್ಪಡಿಸಲಾಗುತ್ತಿತ್ತು. ಖಾಸಗಿ ಜನರು ಭೂಮಿಯನ್ನು ಕೊಂಡು ದೇವಾಲಯಗಳಿಗೆ ಪೂಜೆ ಪುನಸ್ಕಾರಾದಿ ಗಳಿಗೂ ದೇವರ ಉತ್ಸವ ಸಂಭ್ರಮಗಳ ಸಲುವಾಗಿಯೂ ಒಪ್ಪಿಸಿಬಿಡುತ್ತಿದ್ದ ಪ್ರಸಂಗಗಳಿದ್ದವು. ಕೆಲವು ಕೆರೆಗಳಿಗೋಸ್ಕರ (ಬಿತ್ತುಕಟ್ಟ ಅಥವಾ ಬಿತ್ತುಕಟ್ಟು) ಕೊಡುಗೆಗಳನ್ನು ಮಾಡಿದ ಸಂಗತಿ ಅನೇಕ ಶಾಸನಗಳಿಂದ ಗೊತ್ತಾಗುತ್ತದೆ. ಇದು ಬಹುಶಃ ದಶಬಂಧದಂಥದ್ದೇ ಇರಬೇಕು. ಕೆರೆಯನ್ನು ಕಟ್ಟುವಿಕೆ ಅಥವಾ ದುರುಸ್ತು ಮಾಡಿದ ಸೇವೆಗಾಗಿ, ಚಾಲ್ತಿಯ ದರದ ಹತ್ತನೆ ಒಂದು ಭಾಗದಷ್ಟು ದರದ ರೀತಿಯಲ್ಲಿ ಮಾಡಿದ ಭೂದಾನವೇ ಈ **ದಶಬಂಧ**. ಇದೂ ಬಹುಶಃ 'ಬಿತ್ತು'ವುದಕ್ಕಾಗಿ ಅಥವಾ ಬಿತ್ತನೆ ಸಾಗುವಳಿಗಾಗಿ ವಿಧಿಸಲಾಗುತ್ತಿದ್ದ ವಾಡಿಕೆಯ ತೆರಿಗೆಯಲ್ಲಿ ಮಾಡಿದ ಕಡಿತವಾಗಿದ್ದಿರಬೇಕು. ಕೆರೆಕೊಡಿಗೆ, ಕಟ್ಟುಕೊಡಿಗೆಗಳು ಕೂಡ ಕೆರೆಗಳ ನಿರ್ಮಾಣ ಅಥವಾ ಅದರ ವ್ಯವಸ್ಥೆಗಾಗಿ ಸಲ್ಲಿಸಿದ ಸೇವೆಯ ನಿಮಿತ್ತ ನೀಡಿದ ಕಂದಾಯ ರಹಿತ ಭೂದಾನ. ಶಾಸನಗಳಲ್ಲಿ ಸೂಚಿತವಾಗಿರುವ ಮತ್ತೊಂದು ಬಗೆಯ ಭೂಮಿ 'ಏತ್ತ ಭೂಮಿ' ಎಂದರೆ, ಏತದಿಂದ ನೀರನ್ನೆತ್ತಿ ಸಾಗುವಳಿಮಾಡುವ ಭೂಮಿ. ಬಿತ್ತುಕಟ್ಟು, ದಶಬಂಧ, ಕೆರೆಕೊಡಿಗೆ ಮುಂತಾದವು ನದಿಗಳಿಗೆ ಅಣೆಕಟ್ಟನ್ನು ಹಾಕುವುದು, ಇದರಿಂದ ಕಾಲುವೆಗಳ ಮೂಲಕ ನೀರನ್ನು ಒದಗಿಸು ವುದು, ಕೆರೆಗಳನ್ನು ಬಾವಿಗಳನ್ನು ಮತ್ತು ಜಲಾಶಯಗಳನ್ನು ನಿರ್ಮಿಸುವುದು ಮತ್ತು ದುರುಸ್ತಿಗೊಳಿಸು ವುದು ಈ ಮೊದಲಾದ ರೀತಿಯಲ್ಲಿ ರಾಜನು ತನ್ನ ಪ್ರಜೆಗಳ ಕ್ಷೇಮಾಭ್ಯುದಯವನ್ನೂ ಮಮತೆಯನ್ನೂ ಬಯಸುತ್ತಿದ್ದನೆಂಬುವಕ್ಕೆ ನಿದರ್ಶನಗಳಿವೆ. ಇದು ಮಾತ್ರವಲ್ಲ, ನೀರಾವರಿಗೋಸ್ಕರ ಉತ್ತಮರೀತಿಯಲ್ಲಿ ನೀರು ಒದಗಿಸುವುದಕ್ಕೆ ಎಷ್ಟು ಮಹತ್ವ ನೀಡುತ್ತಿದ್ದನೆಂಬುದಕ್ಕೂ ಸ್ಪಷ್ಟ ನಿದರ್ಶನಗಳಾಗಿವೆ.

ಇನ್ನು ಬೇರೆ ಬಗೆಯ ಭೂದಾನದ ಸ್ವಾರಸ್ಯಸಂಗತಿಗಳೂ ದೊರೆಯುತ್ತವೆ. ದಂಡಯಾತ್ರೆಯಲ್ಲಿ ಮತ್ತು ಯುದ್ಧದಲ್ಲಿ ಸಲ್ಲಿಸಿದ ಅಮೋಘ ಸೇವೆಗಾಗಿ ಸೈನಿಕರಿಗೆ ಕಂದಾಯ ರಹಿತವಾದ ಭೂದಾನ ಇದು. ಯುದ್ಧದಲ್ಲಿ ಮಡಿದವರ ಕುಟುಂಬಗಳಿಗೆ ನೀಡಿದ ಭೂ ಕೊಡುಗೆಗೆ ಬಾಳ್‌ಗಚ್ಚು ಅಥವಾ ಕಲ್ನಾಡು ಎಂದು ಹೆಸರು. ಮಡಿದವನ ಕತ್ತಿಯನ್ನು ತೊಳೆದು ಆ ಮೂಲಕ ಭೂಮಿದಾನ ಮಾಡಲಾಗುತ್ತಿತ್ತು. ಕೊಲೆಯಿಂದ ಮಲಿನ ವಾದುದನ್ನು ಶುದ್ಧಿಗೊಳಿಸುವುದೇ ಬಹುಶಃ ತೊಳೆಯುವ ಉದ್ದೇಶವಿದ್ದಿರಬೇಕು. ಕಲ್ನಾಡೆಂದರೆ ಕಲ್ಲುಗಳಿಂದ ನಿಬಿಡವಾದ ಪ್ರದೇಶ. ಆದರೆ ಅದನ್ನು ಬಳಸಿದ ರೀತಿ, ಯುದ್ಧದಲ್ಲಿ ಮಡಿದವನ ಕುಟುಂಬ ಭರಣಕ್ಕಾಗಿ ಅಥವಾ ಸಾರ್ವಜನಿಕ ಸೇವೆಯಲ್ಲಿ ಕೊಲ್ಲಲ್ಪಟ್ಟವನ ಜನರಿಗೆ ಕೊಟ್ಟ ಭೂದಾನವೆಂದು ಸೂಚಿಸುವುದು. ಬಾಳ್‌ಗಚ್ಚು ಮತ್ತು ಕಲ್ನಾಡುಗಳಂತೆಯೇ ಇರುವ ರಕ್ತಕೊಡುಗೆ ಅಥವಾ ನೆತ್ತರು ಕೊಡುಗೆಯ ವಿಚಾರವೂ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಆಕ್ರಮಣಕಾರರಿಂದ ಹಳ್ಳಿಗಳನ್ನು ರಕ್ಷಿಸಿ, ಕಳ್ಳಕಾಕರ ಗುಂಪಿನಿಂದ ಅಥವಾ ಶತ್ರುಗಳಿಂದ ಅಪಹಾರವಾದ ದನಕರುಗಳನ್ನು ಬಿಡಿಸುವ ಪ್ರಕರಣಗಳಲ್ಲಿ ಹುತಾತ್ಮರಾದ ವೀರರ ಕುಟುಂಬಗಳಿಗೆ ಇತ್ತ ದಾನವಿದು. ದಾನ ಅಪವಿತ್ರವಾಗದಿರಲು ಅತಿಕ್ರಮಣವಾಗದಿರಲು ಒಂದು ಅತ್ಯಗತ್ಯವಾದ ಷರತ್ತನ್ನು ವಿಧಿಸಲಾಗುತ್ತಿತ್ತು. ಅಂದರೆ, ಗ್ರಾಮದ 'ಹದಿನೆಂಟು' ಜಾತಿಯವರು—ರೈತರು, ಕೈಕಸಬಿನವರು ಮತ್ತು ವ್ಯಾಪಾರಗಾರ ಜಾತಿಗಳವರು, ಮತ್ತು ಬಣಜಿಗರ ನೇತೃತ್ವದಲ್ಲಿ ಬಲಗೈಗಳವರು, ಪಾಂಚಾಲರ ನಾಯಕತ್ವದಲ್ಲಿ ಎಡಗೈಗಳವರು, ಕಡೆಯಲ್ಲಿ ಮಾದಿಗರು—ಇವರು ಯಾರೂ ಆಕ್ರಮಿಸದಂತೆ ನಿರ್ಬಂಧವಿತ್ತು. ಗ್ರಾಮಮುಖಂಡ (ಗೌಡ), ಸೇನಬೋವ, ಮಾದಿಗಾರ್, ಮತ್ತು ಗ್ರಾಮಲೇಖಕ— ಇವರು ಗ್ರಾಮದ ಅಧಿಕಾರಿಗಳು. ಕಂದಾಯವನ್ನು ವಸೂಲುಮಾಡುವುದು, ಸ್ಥಳೀಯ ಜನರ ಸಹಾಯದಿಂದ

ಹಳ್ಳಿಗಳನ್ನು ದರೋಡೆಕಾರರಿಂದ ರಕ್ಷಿಸುವುದು—ಇವು ಗೌಡನ ಕೆಲಸ. ರೆವೆನ್ಯೂ ಮುಖ್ಯ ಅಧಿಕಾರಿಯಾಗಿದ್ದ ಮಟ್ಟಿಗೆ ಅವನು ನ್ಯಾಯಾಂಗ ಹಾಗೂ ಪೋಲಿಸು ನ್ಯಾಯಮೂರ್ತಿಯ ಅಧಿಕಾರವನ್ನೂ ಚಲಾಯಿಸುತ್ತಿದ್ದ ತನ್ನ ಗ್ರಾಮನಿವಾಸಿಗಳಿಂದ ಅವನು ಚುನಾಯಿತನಾಗುತ್ತಿರಲಿಲ್ಲ; ಅಥವಾ ರಾಜನಿಂದ ನೇಮಕ ಗೊಳ್ಳುತ್ತಿರಲೂ ಇಲ್ಲ. ಅವನು ಆನುವಂಶಿಕ ಅಧಿಕಾರಿ. ಅವನಿಗೆ ಆನುವಂಶಿಕ ಹಕ್ಕುಬಾಧ್ಯತೆಗಳಿದ್ದವು ಈ ಹಕ್ಕುಬಾಧ್ಯತೆಯನ್ನು ಮಾರುವ ಮೂಲಕ ವರ್ಗಾಯಿಸುವ ಹಕ್ಕನ್ನೂ ಹೊಂದಿದ್ದ. ಕೆಲವು ವೇಳೆ ಗೌಡನ ಹೆಂಡತಿ, ಗೌಡತೀರಿಕೊಂಡಾಗ ಆ ಹಕ್ಕುಬಾಧ್ಯತೆಗಳನ್ನು ಅವಳು ಅನುಭವಿಸುವ ಏರ್ಪಾಟೂ ಇತ್ತು. ಗ್ರಾಮಾಧಿಕಾರಿಗಳನ್ನು ಜಾಣತನದಿಂದಲೂ ದಕ್ಷತೆಯಿಂದಲೂ ಗೌಡನ ವಿಥವೆ ನಿಭಾಯಿಸಿದ ಪ್ರಸಂಗಗಳು ಕೆಲವು ಶಾಸನಗಳಿಂದ ತಿಳಿದುಬರುತ್ತವೆ. ಗ್ರಾಮದಿಂದ ಪಡೆಯಲು ರಾಜನು ಬಾಧ್ಯಪಟ್ಟ ಸೌದೆ, ಹುಲ್ಲು, ಮೇವು, ಎಣ್ಣೆ, ಬಟ್ಟೆ, ತರಕಾರಿ, ಉಪ್ಪು—ಮುಂತಾದವುಗಳಿಗೆ ಗ್ರಾಮಮುಖಂಡನೂ ಬಾಧ್ಯನಾಗಿದ್ದ. ಗೌಡ ಬಹುಶಃ ನಾಡಿನ, (ಸಭೆಯ) ಸದಸ್ಯನಾಗಿರುತ್ತಿದ್ದ. ಇವನು ನಾಡಿನ ಕಂದಾಯ ನಿಗದಿ ಪಡಿಸುವ ಅಧಿಕಾರಿಯೂ ಆಗಿದ್ದುದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಹದ್ದು ಬಸ್ತುಗಳ ವಿಚಾರದಲ್ಲಿ ಉಂಟಾದ ವಿವಾದಗಳನ್ನು ಸುಮುಖವಾಗಿ ಬಗೆಹರಿಸುವಲ್ಲಿ ಸದಸ್ಯರಿಗೆ ನೆರವಾಗುತ್ತಿದ್ದನು.

**ಪಟ್ಟಣದ ಆಡಳಿತ**

ಪಟ್ಟಣದ ನಿರ್ಮಾಣಕ್ಕಾಗಿ ನಿವೇಶನವನ್ನು ಗಿಡ ಮರಗಳಿಂದ ತುಂಬಿದ, ಸಾರವತ್ತಾದ, ಉತ್ತಮ ನೀರು ಮತ್ತು ಆಹಾರ ಸಿಗುವಂಥ, ಹಾಗೂ ಗುಡ್ಡಗಾಡುಗಳಿಗೆ ಬಹು ದೂರವಿರದ ಜಾಗದಲ್ಲಿ ಆರಿಸ ಲಾಗುತ್ತಿತ್ತು. ಸುತ್ತಲೂ ಸಾಲುಸಾಲಾದ ಕೋಟೆಗಳಿಂದ, ಆಳವಾದ ದುರ್ಗಮಕಂದಕಗಳಿಂದ ಪಟ್ಟಣಗಳು ಭದ್ರವಾಗಿರುತ್ತಿದ್ದವು. ಒಳ್ಳೆರಸ್ತೆಗಳು, ಗೋಡೆಗಳು, ಜಲಾಶಯಗಳು, ಸಾರ್ವಜನಿಕ ಉದ್ಯಾನ ವನಗಳು, ಹಣ್ಣಿತೋಟಗಳು, ಮದ್ಯದಂಗಡಿಗಳು, ದೇವಾಲಯಗಳು, ಕಮಲಪುಷ್ಪಗಳಿಂದ ಕೂಡಿದ ಕಲ್ಯಾಣಿಗಳು, ತೋಪುಗಳು, ಪ್ರಯಾಣಿಕರು ತಂಗಲು ಸತ್ರಗಳು (ವಿಶ್ರಾಂತಿ ಗೃಹಗಳು) ಇವೆಲ್ಲವನ್ನೂ ಪಟ್ಟಣಗಳು ನಿರ್ಮಿಸಬೇಕಿತ್ತು.

ಪಟ್ಟಣಗಳಲ್ಲಿ ಎಲ್ಲ ಹದಿನೆಂಟು ಜಾತಿಯವರಿರುತ್ತಿದ್ದರು. ಪುರಸಭೆಯಲ್ಲಿ ಪೌರಾಧ್ಯಕ್ಷ, ಸೇನಬೋವ, ಮಣಿಗಾರ, ಮುಮುರಿ ದಂಡದ ಪ್ರತಿನಿಧಿ, ಅಲ್ಲದೆ ವ್ಯಾಪಾರಿಸಂಸ್ಥೆಗಳ ಪ್ರತಿನಿಧಿ ಇವರಿರುತ್ತಿದ್ದರು. ಪಟ್ಟಣಗಳ ಆಡಳಿತ ಸಾಮಾನ್ಯವಾಗಿ ವರ್ತಕ ಸಂಸ್ಥೆಗಳ ನಿಗಮ ಸಭೆಗಳ ಕೈಯ್ಯಲ್ಲಿದ್ದಿತು. ಕೆಲವು ವೇಳೆ ಇದು ಪೌರರ ಸಭೆಯಾಗಿ ವಿಶಾಲವಾಗುತ್ತಿತ್ತು. ಇದಕ್ಕೆ ಪಟ್ಟಣ ಸ್ವಾಮಿಯೇ ಅಧಿಪತಿ. ತಲಕಾಡು, ಮಂಕುಂದ, ಮತ್ತು ಮಾನ್ಯಪುರ-ಮುಂತಾದ ಗಂಗರ ರಾಜಧಾನಿ ಪಟ್ಟಣಗಳಲ್ಲಿ ಪೌರಸಭೆಗಳಿದ್ದವೆಂದೂ ಈ ಪಟ್ಟಣಗಳ ಆರೋಗ್ಯ, ಧರ್ಮಸತ್ರಗಳ ವಹಿವಾಟು, ಅಲ್ಲದೆ ರಸ್ತೆಗಳ ರಿಪೇರಿ ಇವನ್ನು ಪಟ್ಟಣಸ್ವಾಮಿಯು ನೋಡಿಕೊಳ್ಳುತ್ತಿದ್ದನೆಂದೂ ಶಾಸನದಾಖಲೆಗಳಿಂದ ಗೊತ್ತಾಗುವುದು. ಪಟ್ಟಣದ ವ್ಯವಸ್ಥೆಯಲ್ಲಿ ವರ್ತಕಶ್ರೇಣಿಗಳದೇ ಪ್ರಧಾನತೆ. ಗಾಣಿಗರು, ಕುಂಬಾರರು, ಹಣದ ಲೇವಾದೇವಿಗಾರರು, ಹಗಲುಕಾರ್ಮಿಕರು, ಮೇದರು ಮತ್ತು ಪಾಂಚಾಲರು ಅಥವಾ ಕೈಕಸಬಿನ ಐದು ಶ್ರೇಣಿಗಳವರು ಇದರಲ್ಲಿ ಮಿಳಿತರಾಗಿದ್ದರು. ಶ್ರೇಣಿಗಳು, ಠೇವಣಿ ಸ್ವೀಕರಿಸಿ ಅದಕ್ಕಾಗಿ ಬಡ್ಡಿ ತೆರುತ್ತಿದ್ದವು. ಅಶ್ವ, ಗಜ, ಮುತ್ತು ಇವನ್ನು ಹಡಗುಗಳ ಮೂಲಕ ಆಮದುಮಾಡಿ ರಾಜರಿಗೆ ವಿಕ್ರಯಿಸುತ್ತಿದ್ದ ಬ್ರಾಹ್ಮಣಕುಲದ ವರ್ತಕರ ವಿಚಾರ ಕೆಲವು ಶಾಸನಗಳಲ್ಲಿ ಉಲ್ಲೇಖವಾಗಿದ್ದರೂ ವರ್ತಕರು ಹಾಗೂ ಅನೂಚಾನವಾಗಿ ಬಂದ ವೃತ್ತಿವರ್ಗದವರು ಬಹುವಾಗಿ ' ವೀರ ಬಣಜಿಗ ' ರೆನಿಸಿದ್ದರು. ಪಟ್ಟಣಗಳು ವ್ಯಾಪಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಾಮಗ್ರಿಸಮೇತ ಪ್ರಯಾಣಮಾಡುವ ವರ್ತಕ ಸಮುದಾಯಗಳು ಕಲೆಯುವ ಸ್ಥಳಗಳಾಗಿದ್ದವು. ವಿಭೂತಿಪಟ್ಟಧರಿಸಿಕೊಂಡ ಕೇರಳ ಮತ್ತು ಮಲಯಾಳದ

ವರ್ತಕರು ದಾನನೀಡುವುದರಲ್ಲಿ ಖ್ಯಾತಿಗೊಂಡಿದ್ದರೆಂದೂ ರತ್ನ ಪರೀಕ್ಷೆಯಲ್ಲಿ ಪ್ರವೀಣರಾಗಿದ್ದರೆಂದೂ ರಾಜರುಗಳ ಅಗತ್ಯಗಳನ್ನು ಪೂರೈಸಿ ಅವರ ವಿಶ್ವಾಸಗಳಿಸಿ, ಮಿತ್ರ ಹಾಗೂ ಶತ್ರು ರಾಜರುಗಳ ನಡುವೆ ನಂಬಿಕೆಗೆ ಅರ್ಹರಾದ ಮಧ್ಯಸ್ಥಗಾರರಂತೆ ವರ್ತಿಸುತ್ತಿದ್ದರೆಂದೂ ದಾಖಲೆಗಳಲ್ಲಿ ಹೇಳಲಾಗಿದೆ.

ಪಟ್ಟಣಸಭೆಯು ಅಲ್ಲಿನ ಮನೆಗಳು, ಎಣ್ಣೆ ಗಾಣಗಳು, ಕುಂಬಾರರು, ಅಗಸರು, ಗಾರೆಯವರು, ಮೇದರು, ಅಂಗಡಿಕಾರರು ಇವರ ಮೇಲೆಲ್ಲಾ ತೆರಿಗೆಯನ್ನು ವಿಧಿಸುತ್ತಿದ್ದಿತು; ಅಲ್ಲದೆ ಆಮದು ಮತ್ತು ರಫ್ತಿನ ಮೇಲೆ ಸುಂಕ ಹಾಕುತ್ತಿತ್ತು. ಆದರೆ ಪ್ರಧಾನ ತೆರಿಗೆಗಳಲ್ಲಿ ಬ್ರಾಹ್ಮಣರಿಗೆ ವಿನಾಯಿತಿ ಇತ್ತು. ಪಟ್ಟಣದ ಕಾನೂನು ಮತ್ತು ಶಿಸ್ತುಪಾಲನೆಯ ಕೆಲಸವನ್ನು ನಾಗರಿಕ ಅಥವಾ ತೋಟಿಗಾರ, ನ್ಯಾಯಾಧೀಶ ಮತ್ತು ಪೋಲೀಸು ಮುಖ್ಯಸ್ಥನ ಮೂಲಕ ಈ ಸಭೆಯು ನೋಡಿಕೊಳ್ಳುತ್ತಿದ್ದಿತು. ರಸ್ತೆ ಮತ್ತು ಮನೆಗಳ ಸಂಬಂಧವಾದ ವ್ಯವಹಾರಗಳನ್ನು ಅದು ಬಗೆಹರಿಸಬೇಕಾಗಿತ್ತಲ್ಲದೆ, ಬೆಲೆಗಳನ್ನು ಕ್ರಮಗೊಳಿಸುವುದು, ಜನಗಣನೆ ನಡೆಸುವುದು, ಪಟ್ಟಣಕ್ಕೆ ಬಂದು ಹೋಗುವ ಜನರ ದಾಖಲೆಯನ್ನಿಡುವುದು, ರಾಜನಿಗೆ ಲೆಕ್ಕಗಳನ್ನು ತಪ್ಪದೆ ಒಪ್ಪಿಸುವುದು–ಇವೂ ಅದರ ಕರ್ತವ್ಯವಾಗಿತ್ತು. ಮನೆಗಳ, ಬೀದಿಗಳ ಮತ್ತು ನೈರ್ಮಲ್ಯದ ಕುರಿತು ನಿಯಮಗಳನ್ನು ಗೋಪರ ಮತ್ತು ಸ್ಥಾನಿಕರ ನೆರವಿನಿಂದ ಜಾರಿಗೆ ತರಬೇಕಾಗಿದ್ದಿತು. ವಾರ್ಷಿಕ ದುರುಸ್ತಿ ಅಥವಾ ಸಾರ್ವಜನಿಕ ಸೇವೆ ಸಲ್ಲಿಸುವ ಷರತ್ತಿನ ಮೇಲೆ ಬ್ರಾಹ್ಮಣರು, ನಾಡಿಗೆ ಸಲ್ಲಬೇಕಾದ ತೆರಿಗೆ ಸುಂಕಗಳಿಂದ ವಿನಾಯಿತಿ ಪಡೆದಿದ್ದರು. ಇವರು ತಮ್ಮವರ ಪೈಕಿ ತಿಂಗಳಿಗೆ ಒಬ್ಬೊಬ್ಬರನ್ನು ಸರದಿಯಾಗಿ ಮುಖ್ಯಸ್ಥರಾಗಿ (ಮಾಸವೆಗ್ಗಡೆತನಕ್ಕೆ) ನೇಮಕ ಮಾಡಿಕೊಂಡು, ಅವರ ಮೂಲಕ ಈ ಕರ್ತವ್ಯವನ್ನು ಯಶಸ್ವಿಯಾಗಿ ಪಾಲಿಸುತ್ತಿದ್ದರು.

ಪಟ್ಟಣಸಭೆಗಳು ಹೆಚ್ಚಿನ ಸ್ವಯಮಾಧಿಕಾರವನ್ನೂ ಸ್ವಾತಂತ್ರ್ಯವನ್ನೂ ಹೊಂದಿದ್ದವು. ಸಹಾಯದ ನೀಡಿಕೆ, ರಹದಾರಿಗಳ ವಿತರಣೆ ಈ ಪಟ್ಟಣದ ಆಡಳಿತ ನಡೆಸುವುದು—ಈ ಹಕ್ಕುಬಾಧ್ಯತೆಗಳನ್ನೂ ಅನುಭವಿಸುತ್ತಿದ್ದುವು. ರಾಜನು ಈ ಹಕ್ಕುಬಾಧ್ಯತೆಗಳನ್ನು ಶ್ರದ್ಧೆಯಿಂದ ರಕ್ಷಿಸಿ ಕಾಯುತ್ತಿದ್ದನು. ಶಾಸನವೊಂದರಲ್ಲಿ ಒಂದು ಸ್ವಾರಸ್ಯ ವಿಚಾರ ಕಾಣಬರುತ್ತದೆ. ಇದು ರಾಜನಿಗೆ ಅನ್ವಯಿಸಿದ್ದು. ರಾಜನು ಒಬ್ಬ ಪಟ್ಟಣಸ್ವಾಮಿಯಾದ ಶೆಟ್ಟಿಗೆ ಸೇರಿದ ಉಂಬಳಿ ಭೂಮಿಯನ್ನು ಕೊಂಡ ಬಗೆಯನ್ನು ಈ ಶಾಸನ ತಿಳಿಸುತ್ತದೆ. ರಾಜನು ಆ ಶೆಟ್ಟಿಯ ಕಾಲುತೊಳೆದು (ಕಾಲ್‌ಗರ್ಚಿ) ಸೂಕ್ತ ಒಪ್ಪಂದ ಮಾಡಿಕೊಂಡು, ಪಟ್ಟಣದ ವೈದಿಕರ ಮತ್ತು ಜನರ ಸಮಕ್ಷದಲ್ಲಿ ಕೊಂಡುಕೊಂಡನಂತೆ.

## ಸೈನ್ಯದ ಆಡಳಿತ

ದೇಶದ ಸೈನ್ಯದ ವ್ಯವಸ್ಥೆ ಊಳಿಗಮಾನ್ಯ ಪದ್ಧತಿಯದಾಗಿತ್ತು. ರಾಜನ ಸ್ವಂತ ಸೇನೆಯ ಜೊತೆಗೆ ಯುದ್ಧ ಸಮಯದಲ್ಲಿ ಪ್ರಾಂತೀಯ ರಾಜಪ್ರತಿನಿಧಿಗಳು (ರಾಜ್ಯಪಾಲರು) ತಮ್ಮ ಪಾಲಿನ ಸೈನಿಕರನ್ನು ಒದಗಿಸಬೇಕಾಗಿದ್ದಿತು. ಅಷ್ಟೇ ಅಲ್ಲ, ಅವರು ಎಲ್ಲ ಸೌಲಭ್ಯಗಳನ್ನೂ ನೀಡಬೇಕಾಗಿದ್ದಿತು. ಕಷ್ಟವಿಲ್ಲದೆ ರಾಜರು ತಮಗೆ ಬೇಕೆನಿಸುವಷ್ಟು ಸೈನಿಕರನ್ನು ಕೂಡಿಸಲು ಸಾಧ್ಯವಿತ್ತು. ಸ್ಥಾಯಿ ಸೈನ್ಯದಲ್ಲಿ ಕಾಲ್ಬಲ, ಅಶ್ವಾರೋಹಿ ಪಡೆ ಮತ್ತು ಆನೆಗಳಿದ್ದವು. ಇವೆಲ್ಲ ಸುವ್ಯವಸ್ಥಿತ ಹಾಗೂ ಸುಸಜ್ಜಿತಗೊಂಡಿದ್ದವಲ್ಲದೆ ಶ್ರೇಷ್ಠ ಸಾಮರ್ಥ್ಯಕ್ಕೆ ತಯಾರಿಕೆ ಪಡೆದಿದ್ದವು. ಸಂಪ್ರದಾಯದ ಚತುರಂಗ ಬಲದ ವಿಚಾರ ಪ್ರಸ್ತಾಪವಿದ್ದರೂ ಸೈನಿಕ ವ್ಯವಸ್ಥೆಯಲ್ಲಿ ರಥ ಅದರ ಒಳ ಅಂಗವಾಗಿತ್ತೆಂಬುದಕ್ಕೆ ಖಚಿತವಾದ ಸೂಚನೆ ಣಬರುವುದಿಲ್ಲ. ರಥಗಳನ್ನು ಒಮ್ಮೊಮ್ಮೆ ಉಪಯೋಗಿಸಿದ್ದಿರಬಹುದು. ಚಪ್ಪಟೆಯ ಗಾಲಿಗಳು, ಚಕ್ರಕ್ಕೆ ಸರಿಯಾಗುವಂತಹ ಅಚ್ಚುಮರ, ಲಗತ್ತಾದ ಮರದ ಪಟ್ಟಿಗಳು ಇವುಗಳಿಂದಿದ್ದ ಒಂದು ಬಗೆಯ

ತೆರೆದ ವಾಹನಗಳು ಅಶ್ವಗಳಿಂದ ಎಳೆಯಲಾಗುತ್ತಿದ್ದು ರಣರಂಗದಲ್ಲಿ ಬಳಕೆಯಲ್ಲಿದ್ದವೆಂದು ಗೊತ್ತಾಗುವುದು. ಗಾಡಿಕಾರರ (ಬಂಡಿಯಕಾರ) ವಿಚಾರ ಹೊಯ್ಸಳರ ಶಾಸನಗಳಲ್ಲಿ ಕಾಣಬರುವುದು. ಇದರಿಂದ, ಗಾಡಿಕಾರರು ಯುದ್ಧಕ್ಕೆ ಉಪಯೋಗವಾಗುವ ಗಾಡಿಗಳನ್ನು ಒದಗಿಸುತ್ತಿದ್ದರಲ್ಲದೆ, ಯುದ್ಧದಲ್ಲೂ ಭಾಗವಹಿಸುತ್ತಿದ್ದರೆನ್ನಲು ಸಾಧ್ಯವಿದೆ.

ಉಚ್ಚ ಸೈನ್ಯಾಧಿಕಾರಿಗಳಿಗೆ ದಂಡನಾಯಕ, ದಣ್ಣಾಯಕ ಅಥವಾ ಮಹಾಪ್ರಚಂಡ ದಣ್ಣಾಯಕ, ಮಹಾ ಸಾಮಂತಾಧಿಪತಿ ಮತ್ತು ಸೇನಾಧಿಪತಿ, ಹಿರಿಯ ಹೆದ್ದವಳ ಎಂಬ ಹೆಸರುಗಳಿದ್ದವು. ಸೈನ್ಯಾಧಿಪತಿಗಳ ಶ್ರೇಣಿಯಲ್ಲಿ ಮುಖ್ಯರಾದ ಮೇಲೆ ಮುಂದಿನ ಹುದ್ದೆಗಳವರೆಂದರೆ ದಂಡಾಧಿಪರು. ಅವರ ದರ್ಪ, ಒಳ್ಳೆತನ, ಉದಾರತೆ, ಧೈರ್ಯ ಮತ್ತು ಈ ಗುಣಗಳ ಪ್ರಶಂಸೆ ಅನೇಕ ಶಾಸನಗಳಲ್ಲಿ ಲಿಖಿತಗೊಂಡಿದೆ. ಅಶ್ವಗಳ ನಾಯಕರನ್ನು ಪಳ್ಳಿಕಾರ, ಅದಲಜ, ಅಶ್ವಾಧ್ಯಕ್ಷ, ಅಥವಾ ತುರಗಸಹಣಿ ಎಂದು ಕರೆಯಲಾಗುತ್ತಿತ್ತು. ಗಣಿಗಳ ಮೇಲ್ವಿಚಾರಕರು (ಒಕರ ಮಾಂಡಲಿಕ), ವೈದ್ಯ, ಮತ್ತು ಮಹಾ ವದ್ದವ್ಯವಹಾರಿ ಮುಂತಾದ ಇತರ ಅಧಿಕಾರಿಗಳಿದ್ದರು. ಇದರಲ್ಲಿ ಕೊನೆಯ ಅಧಿಕಾರಿ ಬಹುಶಃ ಸೇನೆಗೆ ಸರಬರಾಜು ಮಾಡುತ್ತಿದ್ದ ಕಂಟ್ರಾಕ್ಟರನಿದ್ದಿರಬಹುದು. ರಾಜ್ಯದ ಗಡಿಗಳಲ್ಲೆಲ್ಲಾ ಸೇನೆಯ ಚಲನದ ರಕ್ಷಣೆಯನ್ನು ನೋಡಿಕೊಳ್ಳಲು ರಕ್ಷಕರಿರುತ್ತಿದ್ದರು. ಪೂರ್ವದ ಗಡಿಯಲ್ಲಿದ್ದ ಇಂಥ ರಕ್ಷಕರನ್ನು “ ಮೂಡ ದಾತಾರ ” ಎಂದು ಕರೆಯಲಾಗುತ್ತಿತ್ತು.

ಹೊಯ್ಸಳರ ಕಾಲದಲ್ಲಿದ್ದಂತೆ ಗಂಗರಾಜರ ಕಾಲದಲ್ಲಿಯೂ ಸೈನ್ಯಕ್ಕೆ ಬಿಲ್ಲುಗಾರಿಕೆಯಲ್ಲಿ ಪ್ರವೀಣರಾದ ಬೇಡರೇ ಮೊದಲಾದ ಸ್ಥಳೀಯ ಜಾತಿಯವರನ್ನು ಸೇರಿಸಿಕೊಳ್ಳುವುದು ವಾಡಿಕೆಯಾಗಿದ್ದಿರಬಹುದು. ಸೇನೆಯಲ್ಲಿ ಅಕ್ಕಸಾಲಿಗರು, ಬಡಗಿಗಳು ಸಹಿತ ಎಲ್ಲ ಕೋಮುಗಳವರೂ ಇದ್ದರು. ಕೆಲವು ವೇಳೆ ಕೋಮುವಾರು ಪಡೆಗಳನ್ನು ಪ್ರತ್ಯೇಕವಾಗಿ ವ್ಯವಸ್ಥೆಮಾಡಿ ಬ್ರಾಹ್ಮಣ ದಣ್ಣಾಯಕರ ಆಧೀನದಲ್ಲಿಡಲಾಗುತ್ತಿತ್ತು. ಕಾಲ್ಬಲದಲ್ಲಿ ಆದೇ ಕಸಬಾಗುಳ್ಳವರೂ ಅಲ್ಲದವರೂ ಆದ ಸೈನಿಕರು, ರಾಜನ ದೂತರು ಮತ್ತು ಸೇವಕರು ಇರುತ್ತಿದ್ದರು. ಆದರೆ ಇವರು ಅಷ್ಟಾಗಿ ಪ್ರಯೋಜಕರೆಂದು ಎಣಿಸಿರಲಿಲ್ಲ. ಸಾಮಂತರು ದೂರ ದೇಶಗಳಲ್ಲಿ ದಂಡಯಾತ್ರೆ ನಡೆಸುವಾಗ ಅನೇಕಾವರ್ತಿ ಹಣಕ್ಕಾಗಿ ಹೋರಾಡುವ ಸೈನಿಕ ದಳವನ್ನು ನೇಮಿಸಿಕೊಳ್ಳುತ್ತಿದ್ದರು. ಕಾಲಾಳುಗಳು ತಮ್ಮ ರಕ್ಷಣೆಗೋಸ್ಕರ ಚರ್ಮದ ಚಪ್ಪಟೆ ಕವಚವನ್ನೂ ಚಪ್ಪಟೆಯ ಶಿರಸ್ತ್ರಾಣವನ್ನೂ ಧರಿಸುತ್ತಿದ್ದರು. ಭಲ್ಲೆ ಮತ್ತು ಬಾಣಗಳಿಂದ ರಕ್ಷಿಸಿಕೊಳ್ಳಲು ಅವರು ಉಕ್ಕಿನ ಕವಚಗಳನ್ನೂ, ಗುರಾಣಿಯನ್ನೂ ಉಪಯೋಗಿಸುತ್ತಿದ್ದರು. ಮೇಲೆ ಬೀಳುವ ಕಾರ್ಯಾಚರಣೆಯಲ್ಲಿ ಚಿಲುಕುಕಟ್ಟು, ಅಗಲವಾದ ಕತ್ತಿ, ಈಟಿ ಮತ್ತು ಬಾಣ ಭಲ್ಲೆಗಳನ್ನೂ ಪ್ರಯೋಗಿಸುತ್ತಿದ್ದರು. ಒಂದು ಬಗೆಯ ಗುಂಡುಮದ್ದಿನ ಅಸ್ತ್ರಗಳನ್ನು ಒಯ್ಯುತ್ತಿದ್ದರು. ಬೆಟ್ಟಗುಡ್ಡಗಳ ಮೇಲಿನ ಕೋಟೆಗಳನ್ನೇರುವ ಕಷ್ಟದಾಯಕವಾದ ಕೆಲಸದಲ್ಲಿ ಅವರಿಗೆ ತಯಾರಿ ಕೊಡಲಾಗುತ್ತಿತ್ತು. ಅಶ್ವಾರೋಹಿ ಸೈನಿಕರು ಯುದ್ಧರಂಗದಲ್ಲಿ ಎದೆಗೆ ರಕ್ಷಣೆಯ ಫಲಕಗಳನ್ನೂ ಚಪ್ಪಟೆಯ ಶಿರಸ್ತ್ರಾಣಗಳನ್ನೂ ಧರಿಸುತ್ತಿದ್ದರಲ್ಲದೆ, ಈಟಿ, ಕಠಾರಿ, ಕತ್ತಿ ಮತ್ತು ಚಿಲುಕು ಕಟ್ಟುಗಳನ್ನೂ ಉಪಯೋಗಿಸುತ್ತಿದ್ದರು. ಯುದ್ಧದ ಸಲುವಾಗಿಯೇ ಬಹುವಾಗಿ ಸಮುದ್ರದ ಮೂಲಕ ಆಮದು ಮಾಡಲಾಗುತ್ತಿದ್ದ ಅಶ್ವಗಳು ಉಕ್ಕಿನ ಕವಚಗಳಿಂದ ರಕ್ಷಿಸಲ್ಪಡುತ್ತಿದ್ದವು.

ಸೈನ್ಯದಲ್ಲಿ ಆನೆಗಳ ಪಡೆ ಬಹು ಮುಖ್ಯವಾದ ಅಂಗವಾಗಿತ್ತು. ಯೋಧರನ್ನು ಕೊಲ್ಲುವ ಬಗ್ಗೆ (ವಧಕ್ರಮ) ಅವಕ್ಕೆ ವಿಶೇಷ ತಯಾರಿ ಕೊಡಲಾಗುತ್ತಿತ್ತು. ಮನುಷ್ಯಾಕೃತಿಯ ಕೃತಕ ವಸ್ತುವನ್ನು ಅವು ತಮ್ಮ ಕಾಲಡಿಯಲ್ಲಿ ತುಳಿದು ಕೊಲ್ಲುವಂತೆ ಮಾಡುವುದೇ ತಯಾರಿಯ ಕ್ರಮ. ಮಾವಂತ (ಮಾವುತರು) ಮತ್ತು ಒಕ್ಕಟಿಗಾರ (ಯುದ್ಧ ಸಮಯದಲ್ಲಿ ಆನೆಗಳನ್ನು ಕಾಯಲು ನೇಮಕವಾದ ಸೈನಿಕ)

ಇವರಿಗೆ ಆನೆಗಳನ್ನು ನಿಭಾಯಿಸಲು ವಿಶೇಷ ತಯಾರಿ ಕೊಡುವ ವ್ಯವಸ್ಥೆಯಿತ್ತು. ಆನೆಗಳ ಸೇನಾನಿಗೆ 'ಗಜಸಹಣಿ' ಎಂಬ ಹೆಸರಿತ್ತು. ಆನೆಗಳ ಬಳಕೆಯಿಂದ ಯೋಧರ ಧೈರ್ಯ, ಸಾಹಸ ಮತ್ತು ಜಾಣ್ಮೆ ವೃದ್ಧಿಯಾಗುವದಿದ್ದುದರಿಂದ ಸೈನಿಕರಿಗೂ ರಾಜಕುಮಾರರಿಗೂ ಆನೆಗಳೊಡನೆ ಕಾದಾಡಲು ಸೂಕ್ತ ಶಿಕ್ಷಣಕೊಡುವ ಏರ್ಪಾಟೂ ಇತ್ತೆನ್ನಬಹುದು. ಹಲವು ಗಂಗರಾಜಕುಮಾರರನ್ನು 'ಆನೆಗಳ ಗರ್ವವನ್ನು ಮುರಿದ ತರುಣಸಿಂಹಗಳು' ಎಂದು ಶಾಸನದಲ್ಲಿ ಬಣ್ಣಿಸಲಾಗಿದೆ. ಆನೆಗಳನ್ನು ಹಿಡಿಯುವುದು, ಅವುಗಳ ಸಾಕುವಿಕೆ, ಕಾದಾಡಲು ತಯಾರಿ—ಇವು ಗಂಗರ ಕಾಲದಲ್ಲಿ ಪರಿಪೂರ್ಣತೆ ಪಡೆದಿದ್ದವು. ಶಿವಮಾರನ ಗಜಾಷ್ಟಕದ ಪ್ರಕಾರ ಈ ಎಲ್ಲ ಅಂಶಗಳಲ್ಲೂ ವಿವರವಾದ ಗ್ರಂಥಗಳಿದ್ದವೆಂದು ಕಂಡುಬರುತ್ತದೆ. ಸ್ವದೇಶದಲ್ಲೇ ಕಾಡಾನೆಗಳನ್ನು ಹಿಡಿದು ಪಳಗಿಸುತ್ತಿದ್ದುದರಿಂದ ಹಿಡಿದ ಮೇಲೆ ಬಹುಶಃ ಪ್ರತಿಸಾಮಂತನೂ ಆ ಪೈಕಿ ಹಲವು ಆನೆಗಳನ್ನು ಸಾಕಬೇಕಾಗಿದ್ದಿತು. ಈ ಸಲುವಾಗಿ ಕೆಲವು ವೇಳೆ ಸೇನಾನಾಯಕನಿಗೆ ಶಾಶ್ವತವಾಗಿ ಅನುಭವಿಸಲಿಕ್ಕಾಗಿ ಗ್ರಾಮಗಳನ್ನು ಬಿಡಲಾಗಿತ್ತು. ರಣರಂಗದಲ್ಲಿ ಆನೆಗಳು ರಕ್ಷಣೆಯ ಮೊದಲ ಸಾಲಿನಲ್ಲಿ ಅಭೇದ್ಯವಾದ ಗೋಡೆಯಂತಿದ್ದರೂ ಚೆಲ್ಲಾಪಿಲ್ಲಿಯ ಸ್ಥಿತಿಯಲ್ಲಿ ಅನೇಕಾವರ್ತಿ ಅವು ಯುದ್ಧದ ಫಲಿತಾಂಶವನ್ನು ನಿರ್ಧರಿಸಿಬಿಡುತ್ತಿದ್ದವು. ಇನ್ನೇನು ವಿಜಯ ಕೈಸೇರಿತೆನ್ನುವ ಕೊನೆ ಗಳಿಗೆಯಲ್ಲಿ ಸೋಲು ಮತ್ತು ವಿನಾಶದಲ್ಲಿ ಪರ್ಯವಸಾನವಾಗುವಂತೆ ಮಾಡಿಬಿಡುತ್ತಿದ್ದವು. ಆನೆಗಳ ಪಡೆಯೊಡನೆ ಕಾದಾಡುವುದು ಅತಿ ಭಯಂಕರ. ಕಾದಾಟ ಸೈನಿಕರ ಪರಾಕ್ರಮ ಮತ್ತು ದೇಹಬಲವನ್ನು ಎಂದೂ ಪರೀಕ್ಷಿಸುವಂತಾಗಿರುತ್ತಿತ್ತು. ಆನೆಗಳೊಡನೆ ಕಾದಾಡುವ ರಾಜನ ಪರಾಕ್ರಮದ ಕುರಿತು ಶಾಸನಗಳಲ್ಲಿ ಪ್ರಶಂಸೆಯ ಉಲ್ಲೇಖವಿದೆ. ಕಪ್ಪಾದ ಆನೆಗಳ ಮೇಲೆ ಬಿದ್ದು ಕಾದಾಡಿದ ಘಟನೆಯನ್ನು "ಇಂದ್ರನ ವಜ್ರಾಯುಧದ ಪೆಟ್ಟಿಗೆ ತತ್ತರಿಸಿಹೋದ ಬೆಟ್ಟಗಳಂತೆ ಕತ್ತಿಯ ಆಘಾತಕ್ಕೆ ಸಿಕ್ಕಿ ಘಾಸಿಗೊಂಡ ಆನೆಗಳ ರಕ್ತದಿಂದ ತೊಯ್ದು, ರಾಕ್ಷಸರೂ ಪಿಶಾಚಿಗಳೂ ರುಂಡವಿಲ್ಲದ ಮುಂಡಗಳ ನರ್ತನದಲ್ಲಿ ಹಿಂಬಾಲಿಸಿದಂತಾಗಿದ್ದವು." ಎಂದು ವರ್ಣಿಸಿದೆ.

ರಕ್ಷಣೆಗೋಸ್ಕರವೇ ರಾಜರುಗಳು ಯುದ್ಧ ಮಾಡುವುದನ್ನು ಒಂದು ಕಸಬಾಗಿಟ್ಟುಕೊಂಡಿದ್ದರು. ಹುಲ್ಲುಗಾವಲು ಪ್ರದೇಶದಲ್ಲಿ ಎಂದೂ ಭೀಕರವಾಗಿ ಯುದ್ಧ ನಡೆಯುವ ವಾಡಿಕೆ. ಯುದ್ಧ ಸಮಯದಲ್ಲಿ ಸೇನೆಯ ವಿಶೇಷ ಅಗತ್ಯಗಳ ಸಲುವಾಗಿ 'ಆನೆಯ ಸೇನೆ', 'ಕುದುರೆಯ ಸೇನೆ' ಮತ್ತು 'ದಂಡಿನ ಭ್ಯಾಗತೆ' ಈ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಸೇನೆಯ ಚಲನದಲ್ಲಿ ತುತೂರಿ, ಕೊಂಬು, ಕಹಳೆ, ನಗಾರಿಗಳ ಶಬ್ದಗಳು ಭೋರ್ಗರೆಯುತ್ತಿದ್ದವು. ಯುದ್ಧ ಭೂಮಿಯಲ್ಲಿ ಶಿಬಿರಕ್ಕಾಗಿ 'ಜವನಿಕೆ'ಗಳನ್ನು (ಗುಡಾರ) ನೆಡಲಾಗುತ್ತಿತ್ತು. ಬೋವರು (ಹೊರುವವರು), ಬೀಡಿನ ಬೋವರು, ಕಿರಿಯ ಕೊಟ್ಟಾರದ ಬೋವರ್ಕಳ್ ಮತ್ತು ಜಗತಿಕೊತ್ತಳಿ—ಇವರೆಲ್ಲಾ ಶಿಬಿರದ ಊಳಿಗದವರಾಗಿದ್ದರು. ಯುದ್ಧಕ್ಕಾಗಿ ಆನೆಗಳನ್ನು ನುಗ್ಗಿಸಿದಾಗ ಅವುಗಳ ಓಡಾಟವನ್ನು ಹತೋಟಿಗಿಟ್ಟುಕೊಳ್ಳಲು ಕಾಲುಗಳಿಗೂ ಹೊಟ್ಟೆಯ ಸುತ್ತಲೂ ಸರಪಳಿಯನ್ನು ಬಿಗಿಯಲಾಗುತ್ತಿತ್ತು. ಆನೆಗಳ ಸಾಲಿನ ತರುವಾಯ ಬಿಲ್ಲುಬಾಣಗಳನ್ನು ಹಿಡಿದ ಕಾಲಾಳುಪಡೆ, ಅಶ್ವಾರೋಹಿ ಪಡೆಗಳು, ಮತ್ತು ಸೈನ್ಯಕ್ಕೆ ಬೇಕಾದ ಆಹಾರ ಸಾಮಗ್ರಿಗಳ ವಾಹನಗಳು ಸಾಗುತ್ತಿದ್ದವು. ರಾಜನ ರಥಕ್ಕೆ ಅಥವಾ ಸೇನೆಯ ಮುಂದಿದ್ದ ಆನೆಯ ಮೇಲೆ ಧ್ವಜವನ್ನು ಏರಿಸಲಾಗುತ್ತಿತ್ತು. ಅಗಾಧಶಬ್ದದ ನಗಾರಿಯನ್ನು ಬಾರಿಸಿದಾಗ ಅದು ಬಹು ದೂರದ ತನಕ ಕೇಳಿಸುತ್ತಿದ್ದು, ಸೈನಿಕರಲ್ಲಿ ಸ್ಫೂರ್ತಿಯನ್ನು ಉಬ್ಬಿಸುತ್ತಿದ್ದುದಲ್ಲದೆ, ಶತ್ರುಗಳಲ್ಲಿ ವಿಪರೀತ ಭಯವನ್ನೂ ಉಂಟುಮಾಡುತ್ತಿದ್ದಿತು. ಪ್ರತಿದಿನದ ಪೂಜಾದಿಗಳಿಗಾಗಿ **'ಕೇತಕಿ ಆಚಾರ್ಯ'** ಎಂಬ ಪೂಜಾರಿ ಸೈನ್ಯದೊಡನೆ ಇರುತ್ತಿದ್ದನು. ಶತ್ರು ಹುಲ್ಲನ್ನು ಕಚ್ಚಿದರೆ ತೀರಿತು, ಅವನು ಶರಣಾದಂತೆಯೇ. ಇದೊಂದು ಅಂತಹ ಸೂಚನೆಯಾಗಿತ್ತು. ಸೇನೆಯ ನಾಯಕರ ಒಗ್ಗಟ್ಟಿಗೆ ಅನೇಕವೇಳೆ ಬಣಗಳೂ ಒಳಗುಂಪುಗಳೂ ವೈಯಕ್ತಿಕ ಅಸೂಯೆಗಳೂ ಭಂಗ ತರುತ್ತಿದ್ದವು. ಮುಖಂಡನ ನಷ್ಟದಿಂದ ಸಾಮಾನ್ಯವಾಗಿ ಯುದ್ಧದಲ್ಲಿ ಪರಾಭವವೆಂದು ಗಣನೆ. ಭೀತಿ ಒಮ್ಮೆ ತಲೆದೋರಿಬಿಟ್ಟಿತೆಂದರೆ ಪಲಾಯನ ಮಾಡುವ ಸೈನಿಕರನ್ನು ಒಟ್ಟುಗೂಡಿಸುವುದು

ಅಸಾಧ್ಯವಾಗಿಬಿಡುತ್ತಿತ್ತು. ಪರಾಭವ ಹಲವು ಸಂದರ್ಭಗಳಲ್ಲಿ ಅನರ್ಥಕರ ಪಲಾಯನವಾಗಿ ಪರಿಣಮಿಸುತ್ತಿತ್ತು.

ಗಡಿಗಳಲ್ಲಿ ಘರ್ಷಣೆ ಸಾಮಾನ್ಯವಾಗಿ ದನಗಳ ಹಿಡಿಯೋಣದರಿಂದ ಆರಂಭವಾಗುತ್ತಿತ್ತು. ಇದು ಶತ್ರುವಿನ ವಿರೋಧ ನಡವಳಿಕೆಗಳಲ್ಲಿ ಒಂದೆಂದು ಭಾವಿಸಲಾಗುತ್ತಿತ್ತು. ಹುಲ್ಲುಗಾವಲಿನಿಂದ ದನಗಳನ್ನು ಮಧ್ಯದ ಕಾಡಿಗೆ ಅಟ್ಟುವುದೇ ಯುದ್ಧ ಘೋಷಣೆಯಂತೆ. ಆ ತರುವಾಯ ಆ ದನಗಳನ್ನು ಹಿಂದಕ್ಕೆ ಪಡೆಯುವಲ್ಲಿ ಕದನ. ವಿಜಯ ಅತಂತ್ರ ಸ್ಥಿತಿಯಲ್ಲಿರುವ ಸಮಯದಲ್ಲಿ ಸೇನಾನಿ ಸಮರ್ಥನಾದ ವೀರನೊಬ್ಬನಿಗೆ ವೀಳ್ಯ ಕೊಡುವುದರ ಮೂಲಕ ನಾಯಕತ್ವವನ್ನು ಒಪ್ಪಿಸುವ ವಾಡಿಕೆಯಿತ್ತು. ಇಂಥ ಕಾರ್ಯಕ್ಕೆ ಆಯ್ಕೆಯಾಗುವುದು ಮಹಾ ಗೌರವವಾಗಿತ್ತು. ಯೋಧರ ಪರಾಕ್ರಮಕ್ಕೆ ಉತ್ತೇಜನ ನೀಡುವಂಥ ಒಂದು ನಂಬಿಕೆಯೆಂದರೆ, ಅವರ ಪರಾಕ್ರಮವನ್ನು ಸ್ವರ್ಗದ ಅಪ್ಸರೆಯರು ತೀವ್ರತೆಯಿಂದ ವೀಕ್ಷಿಸುತ್ತಿದ್ದು ಅವರು ಮಡಿದರೆ ರಣಭೂಮಿಯಿಂದ ಅವರನ್ನು ತಮ್ಮೊಡನೆ ವೈಭವದ ಮೆರವಣಿಗೆಯಲ್ಲಿ ಸ್ವರ್ಗಸುಖವನ್ನು ಅನುಭವಿಸಲು ಒಯ್ದುಬಿಡುವರೆಂದು ಪ್ರಚಲಿತವಾಗಿತ್ತು. ಆ ಹಳೆಕಾಲದ ಸೈನ್ಯ ವ್ಯವಸ್ಥೆಯ ವಿಚಿತ್ರವಾದೊಂದು ಪದ್ಧತಿ ಎಂದರೆ, ರಾಜನ ಸೇವೆಯಲ್ಲಿ ನಿರತರಾಗಿ ರಣರಂಗದಲ್ಲಿ ಅವನೊಡನೆ ದೇಹತ್ಯಾಗಮಾಡಲು ಪ್ರತಿಜ್ಞೆ ತೊಟ್ಟು, ಅವನ ಜತೆಯಲ್ಲಿ ತಾವೂ ಸೇರಿ ಇಹಲೋಕವನ್ನು ಬಿಡುವ ಕೆಲವರ ಸತ್ಯಸಂಕಲ್ಪ. ನೀತಿಮಾರ್ಗನ ಓರ್ವ ಅನುಯಾಯಿ ತನ್ನ ಒಡೆಯನೊಡನೆ ಜೀವಂತ ಸಮಾಧಿಯಾಗಿ ತನ್ನ ಸ್ವಾಮಿನಿಷ್ಠೆಯನ್ನು ತೋರ್ಪಡಿಸಿಕೊಂಡ. ರಾಜಮಲ್ಲ ಸತ್ಯವಾಕ್ಯ ಬಿಕ್ಕಳಿಕೆಯಿಂದ ಕಂಬಳೆಯಲ್ಲಿ ನಿಧನವಾದಾಗ ಅವನ ಅನುಯಾಯಿಗಳ ಪೈಕಿ ಕೆಲವರು ಸಂಕಟದಿಂದ ಅಗ್ನಿಪ್ರವೇಶಮಾಡಿ ಸಾವನ್ನಪ್ಪಿದರು. ರಾಜನ ಈ ಅಂಗರಕ್ಷಕರು ಹೊಯ್ಸಳರ ಕಾಲದಲ್ಲಿ "ಗರುಡ"ರೆಂದು ಪ್ರಸಿದ್ಧರಾದರು. ಈ ಗರುಡರ ದಳಗಳು ಒಂದು ನೂರರಿಂದ ಒಂದು ಸಾವಿರ ಸಂಖ್ಯೆಯಲ್ಲಿದ್ದವರು ತಮ್ಮ ರಾಜ ಸತ್ತಾಗ ತಾವು, ತಮ್ಮ ಸತಿಯರು ಮತ್ತು ಸೇವಕವರ್ಗದವರೊಡನೆ ದೃಢ ಸಂಕಲ್ಪದಿಂದ ಆತ್ಮತ್ಯಾಗ ಮಾಡಿಕೊಂಡ ಪ್ರಕರಣಗಳು ಅನೇಕ ಶಾಸನಗಳಲ್ಲಿ ಕಂಡುಬರುವುವು.

**ನ್ಯಾಯಾಂಗ**

ಶಾಸನಗಳಲ್ಲಿ ನ್ಯಾಯವಿತರಣ ಸಂಬಂಧವಾದ ಕ್ರಮಗಳಿಗೆ ಆಧಾರ ದೊರೆಯುವಂತಿಲ್ಲ. ಅಧಿಕಾರಿಗಳ ವಿವೇಚನೆಗಳಿಗಾಗಿ ಒಂದು ಬಗೆಯ ಥಟ್ಟನೆಯ ನ್ಯಾಯ ಪ್ರದಾನವಾಗುತ್ತಿತ್ತು. ರಾಜನೇ ಉಚ್ಚ ನ್ಯಾಯಾಲಯದಂತೆ. ಪ್ರಾಮುಖ್ಯವಾದ ವಿವಾದಗಳಲ್ಲಿ ರಾಜನ ಕೈವಾಡವೇ ಪರಿಣಾಮಕಾರಿಯಾಗಿರುತ್ತಿತ್ತು. ಅವನು ತನ್ನ ಬಂಧುಗಳು ಮತ್ತು ಸಮೀಪದವರಿಗೆ ಕೂಡ, ಪಕ್ಷಪಾತ ತೋರುತ್ತಿದ್ದಿಲ್ಲ. ಅವನ ಬಂಧುಗಳು ಯಾರಾದರೂ ಅನ್ಯಾಯಕೃತ್ಯಗಳನ್ನು ನಡೆಸಿದಾಗ ತೊಂದರೆಗೊಳಗಾದವರಿಗೆ ಪರಿಹಾರ ಕಲ್ಪಿಸದೆ ಇರುತ್ತಿರಲಿಲ್ಲ. ರಾಜ 'ಧರ್ಮಾಧ್ಯಕ್ಷಂಗಳ್'ಮತ್ತು 'ರಾಜಾಧ್ಯಕ್ಷಂಗಳ್' ಎಂಬ ನ್ಯಾಯಾಧಿಕಾರಿಗಳನ್ನು ನೇಮಕ ಮಾಡುತ್ತಿದ್ದ. ಇವರು ನೈತಿಕ ನ್ಯಾಯ ಮತ್ತು ರಾಜಕೀಯ ವಿಚಾರಗಳನ್ನು ಕುರಿತು ವಿಚಾರಿಸಿ ನ್ಯಾಯವಿತರಣೆಮಾಡಬೇಕಾಗಿದ್ದಿತು. ಸಿಂಹಾಸನಕ್ಕೆ ದ್ರೋಹ ಬಗೆಯುವುದನ್ನು ತಡೆಗಟ್ಟುವುದೂ ದಾನ ದತ್ತಿಗಳ ಆಡಳಿತವನ್ನು ಯೋಗ್ಯರೀತಿಯಲ್ಲಿ ನಡೆಸುವುದೂ ಅವರ ಮುಖ್ಯಕರ್ತವ್ಯವಾಗಿತ್ತು. ಮಹಾದಂಡನಾಯಕ ಮತ್ತು ನಾಡುಗಳ ಮುಖಂಡ ಇವರೂ ಸಹ ಹತೋಟಿಗಿಟ್ಟುಕೊಳ್ಳುವ ಮತ್ತು ಶಿಕ್ಷಿಸುವ ಅಧಿಕಾರವನ್ನು ಚಲಾಯಿಸುತ್ತಿದ್ದರು., 'ದ್ರೋಹ ಘರಟ್ಟ', ಧರ್ಮಾಧಿಕರಣ' ಅಥವಾ 'ಧರ್ಮಕರಣಿಕ' ಎಂದು ಕರೆಯಲ್ಪಡುತ್ತಿದ್ದ ಇವರು ರೆವಿನ್ಯೂಬಾಬತು ವಿವಾದಗಳನ್ನು ಬಗೆಹರಿಸಿ ನ್ಯಾಯ ಸಲ್ಲಿಸುತ್ತಿದ್ದರೆನ್ನಲಾಗಿದೆ.

ಗಂಗವಾಡಿಯ ನ್ಯಾಯವಿತರಣೆಯಲ್ಲಿ ಗಮನಾರ್ಹವಾದ ಒಂದು ಅಂಶವಿತ್ತು. ಇದು ಆಸ್ತಿಪಾಸ್ತಿಯ ವಿಭಾಗ ಮತ್ತು ಉತ್ತರಾಧಿಕಾರಿತನದ ಸಂಬಂಧವಾದದ್ದು. ಗಂಡು ಸಂತತಿ ಇಲ್ಲದೆ ಪುರುಷ ತೀರಿಕೊಂಡಾಗ ಅವನ ಆಸ್ತಿಪಾಸ್ತಿಗೆ ಅವನ ವಿಧವೆಯ ಮತ್ತು ಮಗಳ ಹಕ್ಕುಬಾಧ್ಯತೆಯನ್ನು ಮನ್ನಿಸಿದ ವಿಚಾರವನ್ನು ಕೆಲವು ಶಾಸನಗಳು ತಿಳಿಸುತ್ತವೆ. ಇನ್ನು ಕೆಲವು ಶಾಸನಗಳು ವಿಧವೆಯ ಹಕ್ಕುಬಾಧ್ಯತೆಯನ್ನು ಪೂರ್ಣವಾಗಿ ನಿರಾಕರಿಸಿದುದನ್ನೂ ಮೃತನ ಸಹೋದರರ ಹಕ್ಕನ್ನು ಅಂಗೀಕರಿಸಿದುದನ್ನೂ ಸೂಚಿಸುತ್ತವೆ. ಅಳಿಯನ, ಅವನಿಲ್ಲವಾದರೆ ಚಿಕ್ಕಪ್ಪ, ದೊಡ್ಡಪ್ಪ (ಕಿರಿಯಯ್ಯ ಮತ್ತು ಹಿರಿಯಯ್ಯ) ಮತ್ತು ಅವರ ಮಕ್ಕಳ ಹಕ್ಕಿನ ವಿಚಾರವನ್ನು ಇನ್ನೊಂದು ಶಾಸನ ಪ್ರಸ್ತಾವಿಸುತ್ತದೆ. ಆಸ್ತಿಪಾಸ್ತಿಗಳಿಗೆ ಮಿಕ್ಕ ಯಾವ ವಾರಸುದಾರರೂ ಇಲ್ಲವಾದಾಗ, ದಾಸಿಯ ಮಕ್ಕಳು ಹಕ್ಕುದಾರರಾಗುವಂತೆ ಮಾಡುವ ಪದ್ಧತಿ ದೇಶದಲ್ಲಿ ಚಾಲ್ತಿಯಲ್ಲಿ ತ್ತೆಂಬುದು ಹಲವಾರು ಶಾಸನಗಳಿಂದ ಅರಿಯಬಹುದು. ಈ ಶಾಸನಗಳು ದಾಸಿಯ ಹೆಣ್ಣು ಮತ್ತು ಗಂಡು ಮಕ್ಕಳ ಹಕ್ಕಿನ ಬಗ್ಗೆ ಕ್ರಮವನ್ನು ಸೂಚಿಸಿವೆ (ತೊತ್ತಿನ ಮಕ್ಕಳಿಗೆ ಸಲ್ಲುವದು). ದಾಸಿಯರು ಸಹಿತ ಆಸ್ತಿಪಾಸ್ತಿಗಳಿಗೆ ಯಾರೂ ವಾರಸುದಾರರಿಲ್ಲದಿರುವ ಸಂದರ್ಭದಲ್ಲಿ, ಕಟ್ಟಕಡೆಯ ವ್ಯವಸ್ಥೆಯಾಗಿ ಅದನ್ನು ಜನರ ಸಮ್ಮತಿಯೊಡನೆ ಧರ್ಮಕಾರ್ಯಗಳಿಗೆ ವಿನಿಯೋಗಿಸಿಬಿಡಲಾಗುತ್ತಿತ್ತು. ಅಕೃತ್ಯಗಳ ಮತ್ತು ಸಾಮಾನ್ಯ ವಿವಾದಗಳಲ್ಲಿ ಅಂಥ ದೊಡ್ಡ ವ್ಯತ್ಯಾಸ ಮಾಡುತ್ತಿದ್ದಿಲ್ಲ. ರಾಜನ ನ್ಯಾಯಸ್ಥಾನ ಅಥವಾ ಮುಖ್ಯನ್ಯಾಯಾಧಿಕಾರಿಗಳಿಂದ ಬಗೆಹರಿಸಬೇಕಾಗಿದ್ದ ಸಾಮಾನ್ಯ ವಿವಾದಗಳು ಅತ್ಯಲ್ಪವಾಗಿರುತ್ತಿದ್ದವು. ನ್ಯಾಯ ವಿವಾದಗಳ ಇತ್ಯರ್ಥ ಗ್ರಾಮಕೂಟಗಳು ಮತ್ತು ಪುರಸಭೆಗಳ ಜವಾಬ್ದಾರಿಯಾಗಿದ್ದದ್ದು ವಾಡಿಕೆ. ವಿಲ್ಲ ವಿವಾದಗಳೂ ಸಮಸ್ಯೆಗಳೂ ಸ್ಥಳದ ಪ್ರಮುಖರ ಸಾಕ್ಷ್ಯದ ಆಧಾರದ ರೀತ್ಯಾ ತೀರ್ಮಾನವಾಗ ಬೇಕಿದ್ದವು. ಎಲ್ಲೆಗಳ ವಿಷಯವಾಗಿ ವಿವಾದ ಉಂಟಾದಾಗ ನಾಡಿನ ಅಧಿಕಾರಿಗಳು— ಗೌಡರು, ವರ್ತಕರು, ಗ್ರಾಮದ ಜನರು ವಿವಾದಕ್ಕೆ ಗುರಿಯಾದ ಆಸ್ತಿಯ ಪರಿಶೀಲನೆ ನಡೆಸಿ, ಸಾಕ್ಷ್ಯ ಪಡೆದು, ತರುವಾಯ ತೀರ್ಪು ಕೊಡಲು ಒಂದು ಸ್ಥಳದಲ್ಲಿ ಕಲೆಯುತ್ತಿದ್ದರು. ಇಂಥ ದೊಡ್ಡಕೂಟದವರ ಸರ್ವಾನುಮತದ ನಿರ್ಧಾರವನ್ನು ಬಯಸುತ್ತಿದ್ದುದು ಸಾಮಾನ್ಯ ವಾಡಿಕೆಯಾಗಿತ್ತು. ಗ್ರಾಮದ ಸೇನಬೋವ ತೀರ್ಮಾನವನ್ನು ಬರೆದಿಡುವನು. ಪಂಚಾಯಿತರ ತೀರ್ಪನ್ನು ಸಂಬಂಧಪಟ್ಟವರೆಲ್ಲ ಒಪ್ಪಲೇಬೇಕಾಗಿದ್ದಿತು. ನ್ಯಾಯವ್ಯವಹಾರಗಳಲ್ಲಿ ಸಾಮಾನ್ಯವಾಗಿ ಕುಲವೇ (ಬಳಿ ಅಥವಾ ಕೋಮು) ಪ್ರಥಮ ನ್ಯಾಯಾಲಯ. ಇಲ್ಲಿ ವಿವಾದಾಸ್ಪದವಾದ ಆಸ್ತಿಪಾಸ್ತಿಗಳ ಸರಿ ಸಮಾನ ಹಂಚಿಕೆಗಾಗಿ ಯತ್ನವಾಗುತ್ತಿತ್ತು. ಇದರ ಅಧಿಕಾರವನ್ನು ಪ್ರಶ್ನಿಸಿದಾಗ ಅಥವಾ ತಿರಸ್ಕರಿಸಿದಾಗ, ಆಗ್ಗೆ ಸ್ಥಳದ ವಣಿಕ ಸಂಘವಾದ 'ಶ್ರೇಣಿ'ಗಳು' ಎಲ್ಲ ಜಾತಿಯ ಮತ್ತು ಕಸುಬಿನವರ 'ಪೂಗ' ಸಂಸ್ಥೆಯವರು ಮತ್ತು ಅದೇ ಸ್ಥಳದ ಎಲ್ಲ ನಿವಾಸಿಗಳು ಪಂಚಾಯ್ತಿ ನಡೆಸುತ್ತಿದ್ದರು. ಈ ಸ್ಥಳೀಯ ನಾಯಾಲಯಗಳಿಗೆ ಉನ್ನತರಾದವರು ರಾಜನ ಅಧಿಕಾರಿಗಳು. ಸಭೆಯ ಅಭಿಮತದಂತೆ ಸರ್ವಾನುಮತದ ನಿರ್ಧಾರವನ್ನು ವಿವಾದಿಗಳ ಮೇಲೆ ಹೊರಿಸುವುದು, ವಿವಾದಿಗಳು ಆ ಪ್ರಕಾರ ನಡೆಯುವಂತೆ ಮಾಡುವುದು—ಇವರ ಕೆಲಸವಾಗಿತ್ತು. ಖಾತರಿಯಾದ ರುಜುವಾತು ಬರದಿದ್ದಲ್ಲಿ ಇವರು ಹದ್ದುಬಸ್ತಿನ ಗುರುತುಗಳನ್ನು ಪರೀಕ್ಷಿಸುವುದರಿಂದಲೋ ಗ್ರಾಮದ ಗೌರವಸ್ಥರ ಹೇಳಿಕೆ ಪಡೆದೋ ತೀರ್ಪು ಕೊಡುತ್ತಿದ್ದರು. ರಾಜ ತನ್ನ ಸ್ವಂತ ಅಧಿಕಾರದಿಂದ ಹದ್ದುಬಸ್ತಿನ ವಿವಾದಗಳಲ್ಲಿ ತೀರ್ಪುಕೊಟ್ಟು ವಿವಾದಾಸ್ಪದವಾದ ಪ್ರದೇಶವನ್ನು ಸರಿಸಮನಾಗಿ ಎರಡೂ ಪಕ್ಷದವರಿಗೆ ಹಂಚಿಬಿಡುತ್ತಿದ್ದ. ಕಂದಾಯ ತೆರುವವರು ತಮ್ಮ ಸ್ಥಿರ ಆಸ್ತಿಯನ್ನು ತೆರಿಗೆ ತೆರುವವರಿಗೆ ಮತ್ತು ಬ್ರಹ್ಮಾದೇಯ (ತೆರಿಗೆ ರಹಿತ) ಭೂ ಮಾಲೀಕರು ಆ ಭೂಮಿಯನ್ನು ಈಗಾಗಲೇ ಅಂಥ ರಿಯಾಯಿತಿ ಪಡೆದವರಿಗೆ ಮಾತ್ರ ಮಾರತಕ್ಕದ್ದೆಂಬ ವಿಧಾಯಕವಿತ್ತು. ಇದರಿಂದ ಭೂಮಾರಾಟ ಸಂಬಂಧವಾದ ವಿವಾದದ ಅವಕಾಶವನ್ನು ಮತ್ತಷ್ಟು ಮಿತಿಗೊಳಿಸಿದಂತಾಯಿತು.

ಇದು ಮಾತ್ರವಲ್ಲದೆ, ಸ್ಥಿರಆಸ್ತಿಯ ಮಾರಾಟ ಸಾಕ್ಷಿಗಳೆದುರಲ್ಲಿ ಆಗುತ್ತಿದ್ದಿತು. ಮಕ್ಕಳ, ಜ್ಞಾತಿಗಳ (ರಕ್ತಸಂಬಂಧಿಗಳ), ನೆರೆಯವರ, ಬಂಧುಗಳ ಮತ್ತು ಮಹಾಜನರ ಒಪ್ಪಿಗೆಯಿಂದ ಆಗಬೇಕೆಂಬ ಕ್ರಮವೂ

ಇತ್ತು. ಜತೆಗೆ ಸುವರ್ಣ ಮತ್ತು ಉದಕದಾನ ಪೂರ್ವಕವಾಗಿಯೇ ನಡೆಯಬೇಕಾಗಿತ್ತು. ಮಾರಾಟದ ವ್ಯವಹಾರ ಮುಗಿದ ತರುವಾಯ ಉಂಟಾಗಬಹುದಾದ ಹದ್ದುಬಸ್ತಿನ ಯಾವ ತಕರಾರನ್ನೇ ಆಗಲಿ, ಮಾರಾಟ ಮಾಡಿದವರು ಬಗೆಹರಿಸಿಕೊಡಲು ಸಮ್ಮತಿಸುತ್ತಿದ್ದರು. ಬೇಸಾಯಕ್ಕೆ ಮಾತ್ರ ಜಮೀನು ಕೊಡುವುದು ಸಾಮಾನ್ಯವಾಗಿ ಬಂದ ಪದ್ಧತಿ (ಜಲಪಾಷಾಣವರ್ಜಿತ ಬೆಳೆಭೂಮಿಯಗೊಳ್); ಮತ್ತೊಬ್ಬರಿಗೆ ಆಧಾರಭೋಗ್ಯ ಮಾಡಲು ಪ್ರತಿಬಂಧಕವಿತ್ತು. ಭೂಮಿಯ ಮಾರಾಟ ಕೆಲವು ಸಂದರ್ಭಗಳಲ್ಲಿ ಸೇವೆ ಸಲ್ಲಿಸುವವರಿಗೆ ಅಥವಾ ಸಾಲದ ಪಾವತಿಗಾಗಿ ಸಾಲಗಾರನಿಗೇ ವರ್ಗಾಯಿಸುವಂತೆ ನಿರ್ದಿಷ್ಟ ಪಡಿಸಲಾಗುತ್ತಿತ್ತು. ನ್ಯಾಯವಿತರಣೆಯ ಕರ್ತವ್ಯದಲ್ಲಿ ಜಾತಿಗಳ, ಸಂಘಗಳ, ಕುಟುಂಬಗಳ ಹಕ್ಕು ಬಾಧ್ಯತೆಗಳಿಗೆ ಮಾತ್ರವಲ್ಲ, ಸ್ಥಳೀಯ ಪದ್ಧತಿಗಳಿಗೂ ಕಟ್ಟುನಿಟ್ಟಿನ ಗಮನವೀಯಲಾಗುತ್ತಿತ್ತು. ಮನ್ನಣೆ ಪಡೆದ ಕಾನೂನು ಅಥವಾ ಪದ್ಧತಿಗಳನ್ನು ಅತಿಕ್ರಮಿಸಿದಲ್ಲಿ ಅದಕ್ಕಾಗಿ ಭಾರಿ ಶಿಕ್ಷೆ ವಿಧಿಸಲಾಗುತ್ತಿತ್ತು. ಅನೇಕ ತಕರಾರುಗಳು ಭೂಮಿಯ ಹದ್ದುಬಸ್ತಿನ ನಿರ್ಧಾರ ಸಂಬಂಧವಾದವು. ಯಾವುದೇ ಪಂಗಡಕ್ಕೆ ಅನ್ಯಾಯದ ಅಪಾಯವನ್ನು ತಪ್ಪಿಸಲು ರಾಜ ಅಥವಾ ಅಧಿಕಾರಿಗಳು ಆಗಾಗ್ಗೆ ವಿವಾದಕ್ಕೊಳಪಟ್ಟ ಪಕ್ಷಗಳು ದೇವರ ಮುಂದೆ ಕಠಿನ ಪರೀಕ್ಷೆಗೆ ನಿಂತು ಅವನ ಸಾಕ್ಷ್ಯ ಪಡೆಯಲು ಅವಕಾಶ ನೀಡುತ್ತಿದ್ದರು. ಕಾಗದ ಪತ್ರಗಳ ಮೂಲಕ ರುಜುವಾತು, ಹಾಗೂ ನೆರೆಹೊರೆಯವರ ಸಾಕ್ಷ್ಯ ದೊರಕದಿದ್ದಾಗ ಅಥವಾ ಸಾಕಷ್ಟಿಲ್ಲದೆ ಮತ್ತು ಅತೃಪ್ತಿಕರವಾಗಿರುವಾಗ ವಾದಿ ಪ್ರತಿವಾದಿಗಳಿಬ್ಬರೂ ನಿರ್ಧಾರದಂತೆ ನಡೆದುಕೊಳ್ಳಲು ಸಮ್ಮತಿಸಿದಾಗ ಮಾತ್ರವೆ ಅಂತಿಮವಾಗಿ ಕಠಿನ ಪರೀಕ್ಷೆಯ ಮೂಲಕ ದೈವ ಸಾಕ್ಷ್ಯವನ್ನು ಪಡೆಯಲಾಗುತ್ತಿತ್ತು. ಮೋಸ, ದ್ರೋಹ, ಹೊಡೆತ, ದೋಷಾರೋಪಣೆ, ಅಥವಾ ಹಿಂಸಾಕೃತ್ಯಗಳು ಮುಂತಾದ ದುಷ್ಕರ್ಮ ಅಪರಾಧಗಳ ವಿಚಾರಣೆಯ ಸಂದರ್ಭದಲ್ಲಿ ಇಂಥ ಕಠಿನಪರೀಕ್ಷೆಯೇ ಸಾಕ್ಷ್ಯವಾಗುತ್ತಿತ್ತು. ಈ ಪರೀಕ್ಷೆ ಜನಸಮೂಹದ ಎದುರಿನಲ್ಲಿ ಬಹುವಾಗಿ ದೇವಸ್ಥಾನಗಳ ಮುಂದೆ ನಡೆಯುತ್ತಿತ್ತು. ಈ ಪರೀಕ್ಷೆಯ ಕ್ರಮವೆಂದರೆ: ನಿಷ್ಪಕ್ಷರಾದ ಮತ್ತು ಜ್ಞಾನವಂತರಾದ ಬ್ರಾಹ್ಮಣರು ಗ್ರಾಮದ ದೇವರನ್ನು ಪೂಜೆಮಾಡಿದ ತರುವಾಯ ಆಪಾದನೆಗೆ ಸಂಬಂಧಪಟ್ಟ ವಿಚಾರದ ಬರವಣಿಗೆ 'ಶಿರಪತ್ರ'ವೊಂದನ್ನು ಕಠಿನ ಪರೀಕ್ಷೆಗೆ ಯಾವನು ಸಿದ್ಧನಾಗಿರುವನೋ ಅವನ ತಲೆಮೇಲೇರಿಸಲಾಗುವುದು. 'ಸೂರ್ಯ, ಚಂದ್ರ, ಅಗ್ನಿ–ಇವರು ಜನರ ನಡತೆಯನ್ನು ಗಮನಿಸುವರು' ಎಂಬ ಮಂತ್ರೋಚ್ಚಾರಣೆಯೊಂದಿಗೆ ಆ ಶಿರಪತ್ರವನ್ನಿರಿಸುವ ಕಾರ್ಯವನ್ನು ಮುಖ್ಯನ್ಯಾಯಮೂರ್ತಿ ನೆರವೇರಿಸುವನು. ಪರೀಕ್ಷೆಯ ಅನಂತರ ನ್ಯಾಯಮೂರ್ತಿಗಳು ಫಲಿತಾಂಶವನ್ನು ಪರಿಶೀಲಿಸಿ ತೀರ್ಪುಕೊಡುವರು. ಇದರಲ್ಲಿ ಯಶಸ್ಸು ಪಡೆದ ಪಕ್ಷಕ್ಕೆ 'ಜಯಪತ್ರ'ವನ್ನು ನೀಡುವರು.

## ಬಾದಾಮಿ ಚಾಲುಕ್ಯರ ಆಡಳಿತದಲ್ಲಿ

ಈಗಾಗಲೇ ತಿಳಿಸಿದ ಆಡಳಿತದ ಅನೇಕ ಲಕ್ಷಣಗಳು ಚಾಲುಕ್ಯರ ಕಾಲದಲ್ಲಿಯೂ ರೂಢಿಯಲ್ಲಿದ್ದವು. ಇವಲ್ಲದೆ ಕೆಲವು ವಿಶೇಷವಾದ ವೈಲಕ್ಷಣ್ಯಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಕೈಗಾರಿಕೆಗಳನ್ನು ಸ್ಥಳೀಯ ಸಂಸ್ಥೆಗಳ ವಶಕ್ಕೆ ಬಿಡಲಾಗಿತ್ತು. ಎಲ್ಲ ಉತ್ಪಾದನಾವಸ್ತುಗಳ ಮೇಲಿನ ತೆರಿಗೆಗಳು ಮತ್ತು ರಾಜ್ಯಕ್ಕೆ ಸಲ್ಲಬೇಕಾಗಿದ್ದ ನ್ಯಾಯಬದ್ಧವಾದ ಎಲ್ಲಾ ಬಗೆಯ ಕಂದಾಯ ಕಾಣಿಕೆಗಳನ್ನು ವಸೂಲುಮಾಡುವ ಹೊಣೆಯನ್ನೂ ಅವು ಹೊಂದಿದ್ದವು. ಕ್ರಮವಾಗಿ ಇಂಥ ಸ್ಥಳೀಯ ಸಂಸ್ಥೆಗಳ ಪರಂಪರೆಯೇ ಇದ್ದು ಅವು ಕೆಲಮಟ್ಟಿಗೆ ರಾಜ್ಯದ ಅಧಿಕಾರ ಮತ್ತು ಕೆಲಮಟ್ಟಿಗೆ ಸ್ವತಂತ್ರವಾದ ಅಧಿಕಾರವನ್ನೂ ಅದೇ ವೇಳೆ ರಾಜನೊಡನೆ ಸಮಾನಾಧಿಕಾರದ ಕರ್ತವ್ಯವನ್ನೂ ನಿರ್ವಹಿಸುತ್ತಿದ್ದವು. ರಾಜ್ಯದ ಮತ್ತು ಜನರ ನಡುವೆ ಮಧ್ಯವರ್ತಿಯಾಗಿಯೂ ವರ್ತಿಸುತ್ತಿದ್ದವು. ಅವಕ್ಕೆ ಪ್ರಾತಿನಿಧ್ಯ ಸ್ವರೂಪವಿದ್ದುದರಿಂದ ರಾಜ್ಯ ಮತ್ತು ಜನ ಈ ಉಭಯತ್ರರಿಂದಲೂ ಪ್ರೋತ್ಸಾಹವಿರುತ್ತಿತ್ತು. ಕೈಗಾರಿಕೆಗಳು

ಮತ್ತು ವ್ಯವಸಾಯ ಇವೆರಡೂ ಸಮಾನವಾದ ಗಮನ ಗಳಿಸಿದ್ದವು. ಎಲ್ಲ ಕಸಬುಗಳಿಗಿಂತ ವ್ಯವಸಾಯ ಘನತರವಾದುದೆಂಬ ಭಾವನೆಯಿದ್ದಿತು. ಈ ಸ್ಥಳೀಯ ಸಂಸ್ಥೆಗಳು ಕಲೆ ಮತ್ತು ಸಂಸ್ಕೃತಿಯನ್ನೂ ಪೋಷಿಸುತ್ತಿದ್ದವು. ವಾಸ್ತುಶಿಲ್ಪ, ಮೂರ್ತಿಶಿಲ್ಪ (ಕೆತ್ತನೆಯ ಕಲೆ), ಚಿತ್ರಕಲೆ, ಒಡವೆಗಳು, ಲೋಹ ವಸ್ತುಗಳು, ಆಯುಧಗಳು, ರಕ್ಷಾಕವಚಗಳು, ರೇಷ್ಮೆ, ಹತ್ತಿ ಮತ್ತು ಉಣ್ಣೆ ಬಟ್ಟೆಗಳು ಮತ್ತು ಇತರ ವಸ್ತುಗಳ ತಯಾರಿಗಳು ಈ ಸ್ಥಳೀಯ ಸಂಸ್ಥೆಗಳ ಪ್ರೋತ್ಸಾಹದಿಂದ ಶ್ರೇಷ್ಠರೀತಿಯ ಕುಶಲತೆಯನ್ನು ಪಡೆದಿದ್ದವು. ಈ ಸ್ಥಳೀಯ ಸಂಸ್ಥೆಗಳು ಕೋಮುವಾರು ವಿದ್ವೇಷದಿಂದಾಗಲಿ ಜಾತಿಭಾವನೆಯಿಂದ ಅಥವಾ ವ್ಯಕ್ತಿಗತವಾದ ಹಿತಾಸಕ್ತಿಯಿಂದಾಗಲಿ ಸಂಪೂರ್ಣವಾಗಿ ದೂರವಾಗಿದ್ದು, ತಮ್ಮ ಕರ್ತವ್ಯವನ್ನು ಮತಪಂಥಗಳ ಸೋಂಕಿಲ್ಲದೆ ಕೇವಲ ಜಾತ್ಯತೀತ ಭಾವನೆಯಿಂದಲೇ ನಿರ್ವಹಿಸುತ್ತಿದ್ದವೆಂಬುದನ್ನು ಶಾಸನಗಳಿಂದ ತಿಳಿಯಬಹುದು.

ಸದಸ್ಯರ ನೈತಿಕ ಹಾಗೂ ವಿದ್ಯಾಪ್ರೌಢಿಮೆ ಮತ್ತು ಅರ್ಹತೆ, ಸಭೆಗಳು ತಮ್ಮ ಕರ್ತವ್ಯವನ್ನು ಪಾಲಿಸುತ್ತಿದ್ದ ಬಗೆ, ಕಾರ್ಯಕಲಾಪದ ಭಾಷೆಗಳಲ್ಲಿ ಅವರ ಜ್ಞಾನ, "ರಾಜನೀತಿ"ಯಲ್ಲಿ ಅವರಿಗಿದ್ದ ನಿಪುಣತೆ ರಾಜಕೀಯ ದೂರದರ್ಶಿತ್ವ ಮತ್ತು ಆಡಳಿತ ತಂತ್ರಸಾಮರ್ಥ್ಯ ಇವೆಲ್ಲವನ್ನೂ ಕೆಲವು ಶಾಸನಗಳು ಸ್ಪಷ್ಟಗೊಳಿಸುತ್ತವೆ.

ಯಾವುದೇ ಗ್ರಾಮದ ಎಲ್ಲ ಕುಟುಂಬಗಳವರೂ ಮಹಾಜನಕ್ಕೆ ಸೇರಿದವರಿರುತ್ತಿದ್ದರು. ಗಂಗ ಮತ್ತು ಹೊಯ್ಸಳರ ಶಾಸನಗಳ ಪ್ರಕಾರವೇ ರಾಷ್ಟ್ರಕೂಟ ಮತ್ತು ಚಾಲುಕ್ಯರ ಶಾಸನಗಳು ಕೂಡ, ಬ್ರಹ್ಮಾದೇಯ ಭೂಮಿಗಳ ವ್ಯವಹಾರ ವ್ಯಾಪ್ತಿಗಳಲ್ಲಿ ಮತ್ತು ದೇವಾಲಯಗಳಿಗೆ ಬಿಟ್ಟ ದತ್ತಿ ದಾನಗಳ ವ್ಯವಸ್ಥೆಯಲ್ಲಿ ಮಹಾಜನರೆಂದು ಕರೆಸಿಕೊಂಡ ಬ್ರಾಹ್ಮಣಸದಸ್ಯರದೇ ಹೆಚ್ಚಿನ ಆಧಿಪತ್ಯವಾಗಿತ್ತೆಂದು ಗೊತ್ತಾಗುವುದು. ಇನ್ನು ಬೇರೆ ಸ್ವರೂಪದ ಎಲ್ಲ ದಾನಗಳಲ್ಲಿಯೂ ಇತರ ಜಾತಿಯವರಿಗೂ ಆ ಅಧಿಕಾರ ವಿತ್ತೆಂದು ತಿಳಿಯುವುದು. ಕ್ರಿ. ಶ. 725ರ ಒಂದು ಶಾಸನವು, ಪಟ್ಟಾಧಿಕಾರಿ ರಾಜಕುಮಾರ ವಿಕ್ರಮಾದಿತ್ಯನು ಒಂದಾನೊಂದು ಪಟ್ಟಣದ ಮಹಾಜನಗಳಿಗೂ ನಗರಗಳಿಗೂ ಹದಿನೆಂಟು ಪ್ರಕೃತಿಗಳಿಗೂ ಸಂವಿಧಾನದ ದಾನವಿತ್ತನೆಂದು ಹೇಳಿದೆ. ಮಹಾಜನಗಳನ್ನು ಕುರಿತು ಅನೇಕ ಶಾಸನಗಳಲ್ಲಿ ಪ್ರಶಂಸೆಯ ಉಲ್ಲೇಖವಿದೆ. ಸದಸ್ಯರ ವಿಚಾರವಾಗಿ, ಅವರು ಒಳ್ಳೆಯ ಗುಣವಂತರೂ ಅನುಪಮ ಅರ್ಹತೆ ಯುಳ್ಳವರೂ ಪೂಜ್ಯತೆ ಗಳಿಸಿದವರೂ ಅಲ್ಲದೆ ಕಲೆಗಳಲ್ಲಿ ಚತುರರೂ ಆಗಿದ್ದರೆಂದು ಅಲ್ಲಿ ಶ್ಲಾಘಿಸಲಾಗಿದೆ. ಅವರು ಧರ್ಮದರ್ಶಿಗಳಂತೆ, ಹಣದ ವಹಿವಾಟುದಾರರಂತೆ ಕರ್ತವ್ಯವನ್ನೆಸಗುತ್ತಿದ್ದರು. ಶಾಲೆಗಳನ್ನೂ ಕೆರೆಗಳ ಮತ್ತು ದೇವಾಲಯಗಳ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಿದ್ದರು. ದೇವಾಲಯಗಳ ಜೀರ್ಣೋದ್ಧಾರ ಮತ್ತು ಕೆರೆಗಳ ದುರುಸ್ತಿ, ಮುಖ್ಯ ಉತ್ಸವಗಳ ಆಚರಣೆ, ಈ ಸಲುವಾಗಿ ಧನಸಂಗ್ರಹ ಮಾಡುತ್ತಿದ್ದರು. ರಾಜನಿಗೆ ಸಲ್ಲಬೇಕಾದ ವಾರ್ಷಿಕ 'ಮೇಲವರಂ' ಅನ್ನು ತಪ್ಪದೆ ಸಲ್ಲಿಸುತ್ತಿದ್ದರಲ್ಲದೆ, ಗ್ರಾಮಗಳ ಆಡಳಿತ ವೆಚ್ಚಕ್ಕೆ ಸಾಕಷ್ಟು ಮೀಸಲಾಗಿರಿಸುತ್ತಿದ್ದರು. ತಮ್ಮ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿನ ಸಾಮಾನ್ಯ ಹಾಗೂ ಅಕೃತ್ಯಗಳ ಮೊಕದ್ದಮೆಗಳ ಇತ್ಯರ್ಥದಲ್ಲಿ ಮಹಾಜನ ಸಭೆಗಳು ಬಹುಮಟ್ಟಿನ ಸ್ವಾತಂತ್ರ್ಯ ಹೊಂದಿದ್ದವು. ಭೂಮಿಯ ಒಡೆಯರು ಗ್ರಾಮಸ್ಥರೇ ವಿನಾ ರಾಜನಲ್ಲವಾದ್ದರಿಂದ ಆ ಸಂಬಂಧವಾದ ವಿವಾದಗಳು ಪದೇಪದೇ ಏಳುತ್ತಿದ್ದವು. ರಾಜ ಒಡೆಯನಲ್ಲದಿದ್ದರೂ ರೈತರ ಮೇಲೆ ದುಬಾರಿಯ ಕಂದಾಯ ಹೇರುತ್ತಿದ್ದ. ಕೆಲವು ವೇಳೆ ಅವರು ಉತ್ಪಾದಿಸಿದ ಬೆಳೆಗಳ ಮೇಲೆ ಶೇಕಡ ಎಪ್ಪತ್ತರಷ್ಟು ಈ ಕಂದಾಯವಿರುತ್ತಿತ್ತು. ಜೀರ್ಣೋದ್ಧಾರಕ್ಕಾಗಿ ಮತ್ತು ಯುದ್ಧಕಾರ್ಯಾಚರಣೆಯ ಸಲುವಾಗಿ ಇದೆಂದು ಹೇಳಲಾಗಿದೆ.

ನಾಡುಗಳ ಮತ್ತು ರಾಜ್ಯದ ಸಣ್ಣಪುಟ್ಟ ವಿಭಾಗಗಳ ಆಡಳಿತದಲ್ಲಿ ರಾಜನೊಡನೆ ರಾಣಿಯರೂ

ಸಂಪರ್ಕವಿಟ್ಟುಕೊಂಡಿದ್ದರು. ಧಾರ್ಮಿಕ ವಿಚಾರಗಳಲ್ಲಿಯೂ ದಾನ ನೀಡುವುದರಲ್ಲಿಯೂ ಅವರು ಸಹಾಯಕರಾಗಿರುತ್ತಿದ್ದರು. ಕರ್ಣಾಟಕದ ಸಾಮ್ರಾಜ್ಯಗಳ ಮತ್ತು ರಾಜ್ಯಗಳ ವೈಶಿಷ್ಟ್ಯವೆಂದರೆ, ರಾಣಿಯರು ಮತ್ತು ರಾಜಕುಮಾರಿಯರು ದಂಡಯಾತ್ರೆಗಳಲ್ಲಿ ಭಾಗಿಗಳಾಗುತ್ತಿದ್ದುದು.

ರಾಜ ಶಾಸನಬದ್ಧನಾದ ದೊರೆ. ಅವನ ಅಧಿಕಾರ ಮಿತಿಗೊಂಡಿತ್ತು. ಪುರೋಹಿತ ವೈದಿಕ ವರ್ಗದವರ ವಿವರಣೆಯ ಪ್ರಕಾರವಾದ ರಾಜ್ಯಧರ್ಮದೊಳಗೆ ಅದು ಸೀಮಿತವಾಗಿತ್ತು. ರಾಜನ ಅಧಿಕಾರಿಗಳ ಹೆಸರು ಗಂಗ ಮತ್ತು ಹೊಯ್ಸಳ ರಾಜರ ಕಾಲದಲ್ಲಿದ್ದಂತೆಯೇ ಇತ್ತು.

ಚಾಲುಕ್ಯ ಚಕ್ರಾಧಿಪತ್ಯದ ಕೇಂದ್ರ ಆಡಳಿತದ ಅಧಿಕಾರಿಗಳ ಪೈಕಿ ಕೆಲವರನ್ನು ವಿಶೇಷತಃ ಗಮನಿಸ ಬೇಕಾಗುತ್ತದೆ. ' ಮಹಾ ಸಂಧಿ ವಿಗ್ರಹಿ ' ಮತ್ತು ' ವಿಷಯಪತಿ ' ಇವರು ಭೂದಾನಗಳ ವಿಚಾರದಲ್ಲಿ ವ್ಯವಹರಿಸುತ್ತಿದ್ದರು. ' ಮಹಾ ಮತ್ತರಾಧಿಕಾರಿಣಿಗಳು ' ಇವರು ' ಮಹಾ ಮತ್ತರ ' (ಗ್ರಾಮಗಳ ಗೃಹಸ್ಥರು) ಕಾರ್ಯಕಾರಿಣಿ ಸಮಿತಿಯ ಪ್ರತಿನಿಧಿಗಳು. ' ಶ್ರೀಕರಣ ಸರ್ವಾಧಿಕಾರಿ ', ' ಕರಿತುರಗ ವೆರ್ಗಡೆ ', ' ಶಾಸನಾಧಿಕಾರಿನ್ ', ' ದಾನಾಧಿಕಾರಿನ್ ', ' ಧರ್ಮಾಧಿಕಾರಿನ್ ' ಮತ್ತು ' ಲೇಖಕ ' ಇವರೆಲ್ಲ ಮತ್ತೆ ಕೆಲವರು. ಲೇಖಕನು ದತ್ತಿಗಳ ವಿಚಾರವನ್ನು ಸಂಗ್ರಹವಾಗಿ ಮುಂದೆ ಭಿನ್ನ ಭಿನ್ನ ವ್ಯಾಖ್ಯಾನಗಳಿಗೆ ಅವಕಾಶವಿರದಂತೆ ಕರಾರುವಾಕ್ಕಾಗಿ ದಾಖಲೆ ಇಡಬೇಕಾಗಿದ್ದಿತು. ಲೇಖಕನ ಕರ್ತವ್ಯ ಕುರಿತು ಕೌಟಿಲ್ಯನು ಹೀಗೆ ವಿವರಿಸಿರುವನು. " ಸ್ಫುಟಸುಸ್ವರ ಯಥಾ ಸ್ಥಾನ ವಾಕ್ಯ ಪ್ರಧಾನ ಅವಿಶ್ರಮ ಸುಭಗ ಪಠನ ಪ್ರವೀಣ ".

ರಾಷ್ಟ್ರದ ಮಂತ್ರಿಗಳು ಕೆಲವು ವೇಳೆ ಆಶ್ರಿತ ರಾಜರಿಗೆ ತಕ್ಕಂಥ ಬಿರುದುಗಳನ್ನು ಹೊಂದಿದ್ದರು. " ಪಂಚ ಮಹಾ ಶಬ್ದಗಳು " ಅಂದರೆ ಐದು ವಾದ್ಯಗಳಾದ ಕೊಂಬು, ನಗಾರಿ, ಶಂಖ, ಭೇರಿ, ಮತ್ತು ಜಯಘಂಟೆ ಅಥವಾ ಜಾಗಟೆಯ ಗೌರವವೂ ಅವರಿಗಿದ್ದಿತು. ಅವರಿಗೆ ಅರಮನೆಗಳಂಥ ನಿವಾಸಗಳನ್ನು ಒದಗಿಸಲಾಗುತ್ತಿತ್ತು. ಅಲ್ಲದೆ ಉತ್ಸವಸಮಾರಂಭಗಳಲ್ಲಿ ಸವಾರಿಗಾಗಿ ಆನೆಗಳೂ ರತ್ನಖಚಿತವಾದ ಸೊಗಸು ಉಡುಪುಗಳೂ ಸೇವಕರ ಹಿಂಡು ಮತ್ತು ಗೌರವಸೂಚಕವಾದ ಇತರ ಮರ್ಯಾದಾ ಪರಿಕರಗಳೂ ಅವರಿಗೆ ನೀಡಲಾಗುತ್ತಿದ್ದವು.

ಈ ಪೈಕಿ ಕೆಲವರು ರಾಜನ ಆಸ್ಥಾನದಷ್ಟೇ ವೈಭವ ಯುಕ್ತವಾದ ಆಸ್ಥಾನಗಳನ್ನಿಟ್ಟುಕೊಂಡಿದ್ದರು. ಮೂಲದತ್ತಿಸಂಬಂಧವಾದ ದಸ್ತಾವೇಜುಗಳು, ರಾಜನ ಕಾಗದ ಪತ್ರಗಳು, ಪುದುವಟ್ಟುಗಳು ಮತ್ತು ಇತರ ದಾನ ಪತ್ರಗಳು—ಇವನ್ನು ಮುಖ್ಯವಾದ ಠಾಣೆಗಳಲ್ಲಿ ಶೇಖರಿಸಿ ಇಡಲಾಗಿತ್ತು. ರಾಜನ ಎಲ್ಲ ನಿರೂಪಗಳನ್ನೂ ಲೇಖಕ ಬರೆದಿಟ್ಟುಕೊಳ್ಳುತ್ತಿದ್ದ. ಆ ಮೇಲೆ ಕಚೇರಿಯು ಬರವಣಿಗೆ ಇರಿಸುತ್ತಿತ್ತು. ರಾಜನ ಮುದ್ರೆ ಬೀಳುವ ಮೊದಲು ' ಶಾಸನಾಧಿಕಾರಿಕ ಕ್ಷಪತಂಕ ' ಅದಕ್ಕೆ ಸಹಿ ಹಾಕುವ ವಾಡಿಕೆಯಿತ್ತು.

**ರಾಷ್ಟ್ರಕೂಟರ ಆಳಿಕೆಯಲ್ಲಿ**

ರಾಷ್ಟ್ರಕೂಟರ ರಾಜ್ಯದಲ್ಲಿ ಎರಡು ಬಗೆಯ ಆಡಳಿತವಿದ್ದಿತು. ಆಳುವ ದೊರೆಗಳು ಮತ್ತು ಅವರ ಅಧಿಕಾರಿಗಳು ಕೆಲವು ಪ್ರದೇಶಗಳಲ್ಲಿ ನೇರವಾಗಿ ಆಡಳಿತ ನಡೆಸುತ್ತಿದ್ದರು. ಇನ್ನು ಕೆಲವು ಪ್ರದೇಶಗಳು ರಾಷ್ಟ್ರದ ಕಕ್ಷೆಯೊಳಗಿನ ಆಶ್ರಿತ ವಂಶದವರ ವಶಕ್ಕೆ ಒಳಪಟ್ಟಿದ್ದವು. ಇವರು ತಮ್ಮ ಒಳ ಆಡಳಿತದಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರು.

ಚಕ್ರಾಧಿಪತ್ಯವನ್ನು ರಾಷ್ಟ್ರಗಳೆಂಬ ಹೆಸರಿನಲ್ಲಿ ಪ್ರಾಂತ್ಯಗಳಾಗಿ ವಿಭಾಗಿಸಲಾಗಿತ್ತು. ಈ ರಾಷ್ಟ್ರ ದೊಡ್ಡ ರಾಜಕೀಯ ತುಕಡಿಯಾಗಿತ್ತು. ಇದನ್ನು ಹಲವು ಜಿಲ್ಲೆಗಳನ್ನೊಳಗೊಂಡ ವಿಭಾಗಗಳಿಗೆ ಹೋಲಿಸಬಹುದು. ಕೆಲವು ಸಂದರ್ಭಗಳಲ್ಲಿ ರಾಷ್ಟ್ರಕ್ಕೆ ಬದಲಾಗಿ ಮಂಡಲ ಎಂಬ ಪದವನ್ನು ಬಳಕೆ ಮಾಡಲಾಗುತ್ತಿತ್ತು. ಲಾಟಮಂಡಲ ಅಥವಾ ಆಂಧ್ರಮಂಡಲವೇ ಇದಕ್ಕೆ ನಿದರ್ಶನ. ರಾಷ್ಟ್ರಕ್ಕೂ ಚಿಕ್ಕ ಪ್ರದೇಶ ವಿಷಯ. ಕೆಲವು ಸಂದರ್ಭದಲ್ಲಿ ವಿಷಯವನ್ನು ದೇಶ ಎಂದೂ ಹೇಳಲಾಗುತ್ತಿತ್ತು. ತರುವಾಯ ಭುಕ್ತಿ; ಇದು ವಿಷಯಕ್ಕಿಂತ ಚಿಕ್ಕದು. ಇದರಲ್ಲಿ ಹಲವಾರು ಗ್ರಾಮಗಳ ತುಕಡಿಗಳಿದ್ದವು. ಇವಲ್ಲಿ ನಿರ್ದಿಷ್ಟ ಸಂಖ್ಯೆಯ ಸಣ್ಣ ಹಳ್ಳಿಗಳೂ, ಕೊಪ್ಪಲುಗಳೂ ಸೇರಿಕೊಂಡಿದ್ದವು. ಭುಕ್ತಿಗೆ ಕನ್ನಡದಲ್ಲಿ ಸಮಾನಪದ 'ನಾಡು' ಎಂದು; ಕನ್ನಡ ಶಾಸನಗಳಲ್ಲಿ ಇದು ಸರ್ವೇ ಸಾಮಾನ್ಯವಾಗಿ ಕಾಣಬರುತ್ತದೆ. ನಾಡು ಎಂಬ ಹೆಸರು ಕ್ರಮೇಣ ಹೆಚ್ಚು ಚಾಲ್ತಿಗೆ ಬಂದಿತು. ಗ್ರಾಮ ಅಥವಾ ಊರು ಎಲ್ಲಕ್ಕಿಂತ ಚಿಕ್ಕದಾದ ಭಾಗ.

ಆಡಳಿತದ ಚೌಕಟ್ಟು ಮೂರು ಶ್ರೇಣಿಯದಾಗಿತ್ತು, ಅಂದರೆ ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರ, ಮತ್ತು ಸ್ಥಳೀಯ ಆಡಳಿತ. ಇವುಗಳ ಕೆಲವು ವಿಶೇಷ ಲಕ್ಷಣಗಳನ್ನು ಇದೀಗ ಗಮನಿಸಬಹುದು. ಪಟ್ಟಾಭಿಷಿಕ್ತಳಾದ ರಾಣಿ ರಾಜನೊಡನೆ ರಾಜಾಧಿಕಾರವನ್ನು ನ್ಯಾಯವಾಗಿ ಹೊಂದಿದ್ದಳೆಂದು ವ್ಯಕ್ತ ಪಡುತ್ತದೆ. ಆದರೆ ಅವಳು ಈ ಅಧಿಕಾರವನ್ನು ಚಲಾಯಿಸಿದ ಸಂದರ್ಭಗಳು ವಿರಳವಿದ್ದಿರಬೇಕು. ಧ್ರುವನ ರಾಣಿ ನೀಲಮಹಾದೇವಿಯದೊಂದು ಮುಖ್ಯ ನಿದರ್ಶನ : ಈಕೆ ತನ್ನ ಪತಿಯ ಅರಿವಿಲ್ಲದೆ ಅಥವಾ ಸಮ್ಮತಿ ಪಡೆಯದೆ ಸ್ವತಂತ್ರವಾಗಿ ಬ್ರಾಹ್ಮಣರಿಗೆ ಒಂದು ಗ್ರಾಮವನ್ನು ದಾನನೀಡಿದ ದಾಖಲೆ ಯುಳ್ಳ ಒಂದು ತಾಮ್ರಶಾಸನ ಬೆಳಕಿಗೆ ಬಂದಿದೆ. ಈ ದಾನದ ಸನ್ನದಿನಲ್ಲಿ ರಾಣಿಗೆ ಪರಮಾಧಿಕಾರ ರೂಪದ 'ಪರಮೇಶ್ವರಿ' ಮತ್ತು 'ಪರಮ ಭಟ್ಟಾರಿಕಾ' ಎಂಬ ಈ ಬಿರುದುಗಳನ್ನು ಕೊಡಲಾಗಿದೆ. ದಾನದ ನಿರೂಪವನ್ನು ಯಥಾವಿಧಿಯಾಗಿ ರಾಜ ಪ್ರತಿನಿಧಿಗಳಿಗೂ ಕೆಳ ಅಧಿಕಾರಿಗಳಿಗೂ ಹೆಸರಿಸಲಾಗಿದೆ.

ರಾಜ ಪ್ರಾಪ್ತವಯಸ್ಕನಲ್ಲದಿದ್ದಾಗ ರಾಜ್ಯದ ಆಡಳಿತವನ್ನು ನಡೆಸಲು ಪಾಲಕನೊಬ್ಬನನ್ನು (ರೀಜೆಂಟ್) ನೇಮಕ ಮಾಡಲಾಗುತ್ತಿತ್ತು. ಯುವರಾಜ ಅಥವಾ ಪಟ್ಟಕ್ಕೆ ನಿಯೋಜಿತನಾದ ರಾಜ ಕುಮಾರ ರಾಜ ಮಂಡಲಿಯಲ್ಲಿ ರಾಜನ ಅನಂತರದ ಅತಿ ಮುಖ್ಯರಾದ ಗಣ್ಯ ವ್ಯಕ್ತಿಗಳು. ಸಾಮಾನ್ಯವಾಗಿ ಮಕ್ಕಳ ಪೈಕಿ ಅತ್ಯಂತ ಹಿರಿಯ, ಮಕ್ಕಳಿಲ್ಲವಾದರೆ ರಾಜನ ಕಿರಿಯ ಸಹೋದರ ಯುವರಾಜ ಪದವಿಗೇರುವ ವ್ಯವಸ್ಥೆಯಿತ್ತು. ಆದರೆ ಆಳುವ ಸಮರ್ಥತೆಯಿಲ್ಲದಿದ್ದರೂ ಕೂಡ, ವ್ಯಕ್ತಿಯ ಹಿರಿತನವೊಂದೇ ಆಯ್ಕೆಗೆ ಸಾಧನವಾಗಿರಲಿಲ್ಲ, ವಿಧಿವತ್ತಾದ ಸಮಾರಂಭದಲ್ಲಿ ಅಧಿಕಾರವನ್ನು ವಹಿಸಿಕೊಟ್ಟ ಹೊರತು ಯುವರಾಜ ತನಕ್ಕೆ ಮನ್ನಣೆ ಸಿಗುತ್ತಿರಲಿಲ್ಲ. ರಾಜನ ಬದಲಾಗಿ ಅವನ ಅಧಿಕಾರವನ್ನು ನಿರ್ವಹಿಸಲಿಕ್ಕೆ ಯುವರಾಜನಿಗೆ ಬಾಧ್ಯತೆ ಇತ್ತು. ಅವನು ಸಚಿವಮಂಡಲದಲ್ಲಿದ್ದು ರಾಜನ ಎಲ್ಲ ಮೂಲಭೂತ ಅಧಿಕಾರಗಳನ್ನೂ ಚಲಾಯಿಸುತ್ತಿದ್ದ. ಪಟ್ಟಾಧಿಕಾರಿ ರಾಜಕುಮಾರನಲ್ಲದೆ, ಇತರ ರಾಜಕುಮಾರರೂ ರಾಜ ಕುಟುಂಬ ದವರೂ ಸಾಮಾನ್ಯವಾಗಿ ಪ್ರಾಂತಗಳ ರಾಜ್ಯಪಾಲ ಪದವಿಯನ್ನು ವಹಿಸಿಕೊಳ್ಳುವ ಮೂಲಕ ರಾಜ್ಯಾಡಳಿತದಲ್ಲಿ ಭಾಗವಹಿಸುತ್ತಿದ್ದರು.

ರಾಜ್ಯದೊಳಗಿನ ಶಾಂತಿ ಹಾಗೂ ಭದ್ರತೆಯ ಅಗತ್ಯಗಳನ್ನು ಪೂರೈಸಲೂ ಪರನಾಡುಗಳಲ್ಲಿ ಭಾರಿ ಪ್ರಮಾಣದ ಸೈನಿಕ ದಂಡಯಾತ್ರೆ ನಡೆಸಲೂ ರಾಷ್ಟ್ರಕೂಟರಾಜರು ಬೇರೆ ಬೇರೆ ಅಂತಸ್ತಿನ ಅಧಿಕಾರಿ ವರ್ಗಗಳಿಂದ ಕೂಡಿದ ಸುವ್ಯವಸ್ಥಿತ ಕಾಯಂ ಸೇನೆಯನ್ನು ಇಟ್ಟಿದ್ದರು. ಕರ್ಣಾಟಕದ ಸೈನಿಕರು

ರಣೋತ್ಸಾಹದಲ್ಲಿ ಮತ್ತು ಯುದ್ಧ ಚತುರತೆಯಲ್ಲಿ ಸುಪ್ರಸಿದ್ಧರಾಗಿದ್ದರು. ಇತರ ರಾಜ್ಯಗಳ ರಾಜರು ಇವರನ್ನು ಗೌರವಿಸುತ್ತಿದ್ದರು. ತಮ್ಮ ಸೇನೆಯಲ್ಲಿ ಸೇವೆಸಲ್ಲಿಸಲು ಅವರನ್ನು ಆಹ್ವಾನಿಸುತ್ತಿದ್ದರು. ರಾಜಶೇಖರನಂಥ ಕವಿಗಳೂ, ಅಲ್ ಮಸೂದಿಯಂಥ ಅರಬೀ ಲೇಖಕರೂ ಕರ್ಣಾಟಕ ಯೋಧರ ನೈಜ ಶೌರ್ಯ ಮತ್ತು ಅನುಪಮ ಪರಾಕ್ರಮವನ್ನು ಉಜ್ವಲವಾಗಿ ಪ್ರಶಂಸಿಸಿದ್ದಾರೆ.

ಆಶ್ರಿತ ರಾಜ್ಯಗಳ ಮತ್ತು ದೊಡ್ಡ ಪ್ರಾಂತಗಳ ಆಡಳಿತ ಯಂತ್ರ ಸಾಮ್ರಾಜ್ಯ ಆಡಳಿತ ಮಾದರಿಯಲ್ಲೇ ಇರುತ್ತಿತ್ತು. ವಿವಿಧ ಅಂತಸ್ತಿನ ಆಶ್ರಿತ ರಾಜರಿದ್ದರು. ಉನ್ನತ ಅಂತಸ್ತಿನವರನ್ನು 'ಮಹಾಸಾಮಂತ'ರೆಂದೂ ಕೆಳ ಅಂತಸ್ತಿನವರನ್ನು 'ಸಾಮಂತ'ರೆಂದೂ ಕರೆಯಲಾಗುತ್ತಿತ್ತು. ರಾಜ ಮತ್ತು ಕೇಂದ್ರ ಸರ್ಕಾರದ ಮಂತ್ರಿಗಳು ಆಶ್ರಿತ ರಾಜರ ಮೇಲೆ ಆಧಿಪತ್ಯ ನಡೆಸುತ್ತಿದ್ದರೂ ಒಳ ಆಡಳಿತದಲ್ಲಿ ನೇರವಾಗಿ ಪ್ರವೇಶಿಸುತ್ತಿರಲಿಲ್ಲ. ಆಶ್ರಿತರಾಜರಿಗೆ ಮತ್ತು ಪ್ರಾಂತ್ಯಗಳ ರಾಜ್ಯಪಾಲರುಗಳಿಗೆ 'ಪಂಚ ಮಹಾಶಬ್ದ'ದ ಮರ್ಯಾದೆ ಸಲ್ಲುತ್ತಿತ್ತು. ಇವರು ಈ ದಶೆಯಿಂದ, ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದ್ದಾಗಲೆಲ್ಲಾ ಪಂಚವಾದ್ಯಗಳ ಶಬ್ದಮರ್ಯಾದೆಯಿಂದ ಸಾಗುವ ಅವಕಾಶವನ್ನು ಗಳಿಸಿಕೊಂಡಿದ್ದರು. ದೊಡ್ಡ ಪ್ರಾಂತ್ಯಗಳ ರಾಜ್ಯಪಾಲರುಗಳಿಗೆ ಆಶ್ರಿತ ರಾಜರುಗಳಿಗಿದ್ದಷ್ಟೇ ಹಕ್ಕು ಬಾಧ್ಯತೆಗಳಿದ್ದವು. ಪ್ರಾಂತ್ಯದ ರಾಜಪ್ರತಿನಿಧಿಗೆ 'ರಾಷ್ಟ್ರಪತಿ' ಎಂಬ ಹೆಸರಿದ್ದಿತು. ಕ್ರಮೇಣ ಈ ಹುದ್ದೆಯ ಹೆಸರು 'ಮಹಾ ಮಂಡಲೇಶ್ವರ' ಎಂದಾಯಿತು. ಮುಂದೆ ಇದು ಹೆಚ್ಚು ಹೆಚ್ಚಾಗಿ ಜನಪ್ರಿಯವಾಯಿತು.

ಮಹಾ ಮಂಡಲೇಶ್ವರನಿಗಿಂತ ಅಂತಸ್ತಿನಲ್ಲಿ ಕಡಮೆಯಾದ ಪದವಿ 'ಮಾಂಡಲಿಕ'. ಇದಕ್ಕೆ ಕೆಳಗಿನದು 'ವಿಷಯಪತಿ'. ವಿಷಯದ ಅಧಿಕಾರ ಮತ್ತು ಭುಕ್ತಿಯ ಅಧಿಪತಿಯಾದವನು 'ಭೋಗಪತಿ'. ಈ ಭೋಗಪತಿಯನ್ನು ಕನ್ನಡದಲ್ಲಿ 'ನಾಡಗಾಮುಂಡ' ಅಂದರೆ ನಾಡಿನ ಮುಖಂಡ ಎಂದು ಪದೇ ಪದೇ ಹೇಳುವುದುಂಟು. ಗ್ರಾಮದ ಮುಖ್ಯಸ್ಥನಿಗೆ ಗ್ರಾಮಕೂಟ ಎಂದು ನಾಮಧೇಯ ; ಕನ್ನಡದಲ್ಲಿ 'ಗಾವುಂಡ' ಅಥವಾ 'ಗೌಂಡ' ಎಂದು. ದೊಡ್ಡ ದೊಡ್ಡ ಗ್ರಾಮಗಳು, ಪಟ್ಟಣಗಳು ಮತ್ತು ನಗರಗಳಿಗೆ ಪುರ ಮತ್ತು ನಗರಗಳೆಂದು ಹೆಸರು. ಇವು ಪ್ರತ್ಯೇಕವಾದ ತಮ್ಮದೇ ಆಡಳಿತವನ್ನು ಹೊಂದಿದ್ದ ತುಕಡಿಗಳಾಗಿದ್ದವು.

ಆಶ್ರಿತ ರಾಜತ್ವವು ಆನುವಂಶಿಕವಾಗಿತ್ತು. ಮೇಲಂತಸ್ತಿನ ಆಶ್ರಿತ ರಾಜರು ಈ ವಿಚಾರಗಳಲ್ಲಿ ಅಧಿರಾಜನಿಗೆ ಅಧೀನರಾಗಿದ್ದರು. ಅವರು ಕ್ರಮವಾಗಿ ತಪ್ಪದೆ ಕಪ್ಪ ತೆರಬೇಕಾಗಿದ್ದಿತು. ತಮ್ಮ ಬಳಿ ಚಕ್ರವರ್ತಿಯ ರಾಯಭಾರಿಯನ್ನು ಇಟ್ಟುಕೊಳ್ಳಬೇಕಾಗಿಯೂ ಇದ್ದಿತು. ವಿಶೇಷ ಸಮಾರಂಭಗಳಲ್ಲಿ ಮತ್ತು ಕರೆ ಬಂದಾಗ ಚಕ್ರವರ್ತಿಯ ಆಸ್ಥಾನದಲ್ಲಿ ಅವರು ಹಾಜರಿರಬೇಕಾದುದು ಅವರ ಕರ್ತವ್ಯ. ಚಕ್ರವರ್ತಿಯ ಸೇನೆಗೆ ನಿರ್ದಿಷ್ಟ ಪ್ರಮಾಣದಲ್ಲಿ ಸೈನಿಕರನ್ನು ಒದಗಿಸಬೇಕಾಗಿತ್ತಲ್ಲದೆ ಅಧಿರಾಜ ಹೂಡಿದ ಯುದ್ಧಗಳಲ್ಲಿ ಭಾಗಿಯಾಗುವುದೂ ಅಗತ್ಯವಾಗಿತ್ತು. ಆದರೆ ಅವರು ತಮ್ಮ ವರಮಾನಕ್ಕೆ ತಾವೆ ಯಜಮಾನರಾಗಿದ್ದರು. ತೆರಿಗೆಗಳನ್ನು ವಿಧಿಸಲೂ ಕೇಂದ್ರದ ಅನುಮತಿಯಿಲ್ಲದೆ ಹಳ್ಳಿಗಳ ಪರಭಾರೆ ಮಾಡಲೂ ಬಾಧ್ಯರಾಗಿದ್ದರು. ಇನ್ನು ಸಣ್ಣ ಪುಟ್ಟ ಪಾಳೆಯಗಾರರ ವಿಷಯದಲ್ಲಿಯಾದರೋ ಅವರ ಸ್ವಾತಂತ್ರ್ಯ ಬಹುಮಟ್ಟಿಗೆ ಮೊಟಕಾಗಿತ್ತು.

ಪ್ರಾಂತ್ಯದ ರಾಜ್ಯಪಾಲರುಗಳು ರಾಜ್ಯದ ಉನ್ನತ ಅಧಿಕಾರಿಗಳಾಗಿದ್ದರು. ಇವರು ಕೇಂದ್ರ ಆಡಳಿತದ ನೇರವಾದ ಹತೋಟಿಗೆ ಒಳಪಟ್ಟಿದ್ದು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ತಮ್ಮ ಪ್ರದೇಶದ ರೆವಿನ್ಯೂ, ಸಿವಿಲ್ ಮತ್ತು ಸೈನಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಕೇಂದ್ರದ ನಿರೂಪದಂತೆ

ತೆರಿಗೆಗಳನ್ನು ವಿಧಿಸಿ ವಸೂಲುಮಾಡುತ್ತಿದ್ದರು. ಜನರ ನಿತ್ಯವ್ಯವಹಾರದ ಅಗತ್ಯಗಳನ್ನು ಪೂರೈಸುತ್ತಿದ್ದರು. ಸೈನಿಕರನ್ನು ಜಮಾಯಿಸಿ, ತಯಾರಿಕೊಟ್ಟು, ದಕ್ಷಸೇನೆಯನ್ನು ವ್ಯವಸ್ಥೆಗೊಳಿಸಿ, ಎಂಥ ತುರ್ತು ಸಮಯದಲ್ಲಿಯೂ ಕಾರ್ಯಾಚರಣೆಗಾಗಿ ಸನ್ನದ್ಧವಾಗಿಟ್ಟಿರುತ್ತಿದ್ದರು. ದೇವಸ್ಥಾನಗಳ ನಿರ್ಮಾಣದ ಮೂಲಕ ಜನರಲ್ಲಿ ಶ್ರೇಷ್ಠಮಟ್ಟದ ಭಕ್ತಿ ಮತ್ತು ಧರ್ಮಶ್ರದ್ಧೆಯನ್ನು ರೂಢಿಸುತ್ತಿದ್ದರು. ಹೀಗೆ ನಿರ್ಮಾಣವಾದ ದೇವಸ್ಥಾನಗಳಿಗೆ ಸರ್ಕಾರದಿಂದಲೂ ಉದಾರ ಬುದ್ಧಿಯ ಜನರಿಂದಲೂ ಧಾರಾಳವಾದ ದತ್ತಿಗಳು ಬರುತ್ತಿದ್ದವು. ಸಾರ್ವಜನಿಕೋಪಯೋಗದ ಕಾರ್ಯಗಳನ್ನು ಉತ್ತೇಜಿಸಲಾಗುತ್ತಿತ್ತು. ಪ್ರೌಢ ಶಿಕ್ಷಣದ ಶಾಲೆ, ಕಾಲೇಜು ಮತ್ತು ಇತರ ಸಂಸ್ಥೆಗಳು ಉದಾರ ಸಹಾಯದಿಂದ ಸ್ಥಾಪನೆಯಾಗುತ್ತಿದ್ದವು. ಪಟ್ಟಣಗಳು ಮತ್ತು ನಗರಗಳ ಆಡಳಿತವ್ಯವಸ್ಥೆ ಪೌರಾಡಳಿತ ಸಂವಿಧಾನದಂತೆ ಅಥವಾ ರಾಜನು ವಿಧಿಸಿದ ಅಥವಾ ಅವನ ಅನುಮತಿ ಪಡೆದ ಶಾಸನದಂತೆ ನಡೆಯುತ್ತಿತ್ತು.

ಗ್ರಾಮಗಳ ಆಡಳಿತ ವ್ಯವಸ್ಥೆಯನ್ನು ಅಲ್ಲಿನ ಹಿರಿಯರ ಕೂಟ ನೋಡಿಕೊಳ್ಳುತ್ತಿತ್ತು. ಈ ಕೂಟದ ಸಂಖ್ಯೆ ಅಲ್ಲಿ ನೆಲಸಿದ್ದ ಮೂಲ ಕುಟುಂಬಗಳ ಆಧಾರದ ಮೇಲೆ ನಿರ್ಧಾರವಾಗುತ್ತಿತ್ತು. ಈ ಪ್ರಾತಿನಿಧಿಕ ಸಂಸ್ಥೆಯ ಸಂಖ್ಯೆ ಮತ್ತು ಅದರ ನಿರ್ದೇಶ (ಹೆಸರು) ಒಮ್ಮೆ ಗೊತ್ತುಮಾಡಿದ ಮೇಲೆ ಅದು ಸಾಮಾನ್ಯತಃ ಸ್ಥಿರವಾಗಿರುತ್ತಿತ್ತು. ಹೊಸದಾಗಿ ಕುಟುಂಬಗಳು ಬಂದು ನೆಲಸಿದ್ದಾಗ್ಯೂ, ಗ್ರಾಮ ಬೆಳೆದಂತೆಲ್ಲಾ ಅವರ ಸಂಖ್ಯೆ ಸೇರ್ಪಡೆಯಾದರೂ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುತ್ತಿರಲಿಲ್ಲ. ಕೂಟದ ಸದಸ್ಯರನ್ನು ಸಾಮಾನ್ಯವಾಗಿ 'ಮಹಾಜನ' ರೆಂದು ಕರೆಯಲಾಗುತ್ತಿತ್ತು. ಕ್ರಮೇಣ ಈ ಹೆಸರಿಗೆ ನಿರ್ದಿಷ್ಟವಾದ ಒಂದು ಅರ್ಥ ರೂಪುಗೊಂಡಿತು. ಮುಖ್ಯವಾಗಿ ಅಗ್ರಹಾರದ ಗ್ರಾಮಗಳಿಗೆ ಈ ಹೆಸರು ಬಳಕೆಗೆ ಬಂತು.

ಊರು, ಊರವರು ಮತ್ತು ಒಕ್ಕಲು ಇವನ್ನೂ ಈ ಕೂಟದ ಹೆಸರೆಂದು ಪರಿಗಣಿಸಲಾಯಿತು. ಗ್ರಾಮಕೂಟವನ್ನು ಅನೇಕಾವರ್ತಿ ಅದರ ಮೂಲಸದಸ್ಯರನ್ನು ಸೂಚಿಸುವ ಸಂಖ್ಯೆಯೊಡನೆ ಕೂಡಿಸಿ ಹೇಳುವುದು ವಾಡಿಕೆಯಾಗಿತ್ತು.

ಗ್ರಾಮನಿವಾಸಿಗಳ ಕ್ಷೇಮಾಭ್ಯುದಯಗಳಿಗೆ ಸಂಬಂಧಿಸಿದ ಅನೇಕ ಕಾರ್ಯ ಚಟುವಟಿಕೆಗಳನ್ನು ಗ್ರಾಮಕೂಟವು ಹತೋಟಿಯಲ್ಲಿಟ್ಟುಕೊಂಡು ಮಾರ್ಗದರ್ಶನ ನೀಡುತ್ತಿತ್ತು. ಸೇನಾಪಡೆಯ ಸಹಾಯದಿಂದ ಅದೇ ನಿವಾಸಿಗಳ ಪ್ರಾಣ ಮತ್ತು ಆಸ್ತಿಪಾಸ್ತಿಗಳ ಭದ್ರತೆಯನ್ನು ರಕ್ಷಿಸುತ್ತಿತ್ತು. ಭೂಕಂದಾಯ ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಬೇಕಾದ ಇತರ ತೆರಿಗೆಗಳನ್ನು ವಸೂಲು ಮಾಡುವ ಜವಾಬ್ದಾರಿಯು ಅದರ ಪಾಲಿಗಿತ್ತು. ಶಾಲೆಗಳು, ದೇವಸ್ಥಾನಗಳು ಮತ್ತು ಧಾರ್ಮಿಕ ಸಂಸ್ಥೆಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿತ್ತು. ಕೆರೆಗಳು, ವಿಶ್ರಾಂತಿ ಗೃಹಗಳು ಮತ್ತು ಸಾರ್ವಜನಿಕೋಪಯುಕ್ತ ಕಾರ್ಯಗಳನ್ನು ಸುವ್ಯವಸ್ಥೆಯಿಂದ ನಡೆಸುತ್ತಿದ್ದಿತು. ಸಾರ್ವಜನಿಕ ಆಸ್ತಿ ಮತ್ತು ಹಣಕ್ಕೆ ಧರ್ಮದರ್ಶಿಗಳಂತೆಯೂ ಲೇಣೆ ದೇಣೆಯ ಧನಿಕನಂತೆಯೂ (ಬ್ಯಾಂಕ್) ವ್ಯವಹರಿಸುತ್ತಿತ್ತು. ಗ್ರಾಮಗಳಲ್ಲಿನ ವಿವಾದಗಳನ್ನು ಬಗೆಹರಿಸುತ್ತಿದ್ದಿತು.

ಗ್ರಾಮಾಧಿಕಾರಿಗಳಲ್ಲಿ ಮುಖ್ಯಸ್ಥನಾದವನಿಗೆ ಗ್ರಾಮಕೂಟ ಅಥವಾ ಗಾವುಂಡ ಎಂದು ಹೆಸರು. ಇವನ ಸ್ಥಾನ ಜೀವಾಳದಂಥದು. ಈ ಸ್ಥಾನ ಆನುವಂಶಿಕವಾದದ್ದು. ಇವನು ತನ್ನ ಸೇವೆಗಾಗಿ ಕಂದಾಯವಿಲ್ಲದ ಭೂಮಿ ಮತ್ತು ಚಿಲ್ಲರೆ ಆದಾಯದಲ್ಲಿ ಒಂದು ಪಾಲನ್ನು ಪಡೆಯುತ್ತಿದ್ದ. ಗ್ರಾಮಕೂಟನ ತರುವಾಯ ಅಷ್ಟೇ ಅತ್ಯಗತ್ಯವಾದವನೆಂದರೆ ಸೇನಬೋವ ಅಥವಾ ಗ್ರಾಮದ ಗಣಕ. ಇವನು ಗ್ರಾಮದ ಎಲ್ಲ ಹಣಕಾಸು ವಹಿವಾಟಿನ ವಿವರವಾದ ಲೆಕ್ಕಗಳನ್ನಿಡುತ್ತಿದ್ದ. ಗ್ರಾಮದ ಜೀವನದಲ್ಲಿ

ಮುಖ್ಯ ಪಾತ್ರ ವಹಿಸುತ್ತಿದ್ದ ಮತ್ತೊಬ್ಬ ಗಣ್ಯವ್ಯಕ್ತಿ ಊರೊಡೆಯ. ಇವನು ಗ್ರಾಮಕೂಟದ ಆಯ್ಕೆಯಾದ ಮುಖ್ಯಸ್ಥ. ಗ್ರಾಮದ ಹಿತಕ್ಕೆ ಸಂಬಂಧಿಸಿದ ಅನೇಕ ಕಾರ್ಯಗಳ ನಿರ್ವಹಣೆಗೆ ಇವನು ಜವಾಬ್ದಾರನಾಗಿರುತ್ತಿದ್ದ.

ಅಗ್ರಹಾರ ಗ್ರಾಮದ ಮಹಾಜನಕೂಟದಲ್ಲಿ ಕುಟುಂಬಗಳ ಹಿರಿಯರು ಸದಸ್ಯರಾಗಿದ್ದು ಗ್ರಾಮಾಡಳಿತದ ಮೇಲೆ ಒಟ್ಟಧಿಕಾರವುಳ್ಳವರಾಗಿದ್ದರು. ಈ ಕೂಟದ ಸದಸ್ಯಬಲವನ್ನು ಅಂಕಿಗಳ ಮೂಲಕ ತಪ್ಪದೆ ಸೂಚಿಸಲಾಗುತ್ತಿತ್ತು. ಕೆಲವು ದೊಡ್ಡ ಅಗ್ರಹಾರಗಳಲ್ಲಿ ಕೂಟದ ಪ್ರತಿನಿಧಿಗಳ ಸಂಖ್ಯೆ ಒಂದು ಸಾವಿರದಷ್ಟಿದ್ದಿತೆಂದು ಗೊತ್ತಾಗುವುದು. ಊರೊಡೆಯನು ಈ ಕೂಟದ ಕಾರ್ಯಕಾರಿ ಮಂಡಲಿಯ ಮುಖ್ಯಸ್ಥ ಮತ್ತು ಅಧ್ಯಕ್ಷ. ಗ್ರಾಮದ ನಾನಾಮುಖ ಕರ್ತವ್ಯಗಳನ್ನು ನಿಭಾಯಿಸುವುದು ಮಹಾಜನ ಕೂಟದ ಹೊಣೆ. ಅದರ ಜೊತೆಗೆ ಶಿಕ್ಷಣದ ಅಭಿವೃದ್ಧಿಗಾಗಿ ತನ್ನೆಲ್ಲ ಚಟುವಟಿಕೆಗಳನ್ನು ಕೇಂದ್ರೀಕರಿಸುತ್ತಿತ್ತು. ಅನೇಕಾವರ್ತಿ ಈ ಶಿಕ್ಷಣ, ಕಾಲೇಜು ಅಥವಾ ಅದಕ್ಕೂ ಹೆಚ್ಚಿನ ಅಧ್ಯಯನದ ಶ್ರೇಷ್ಠಮಟ್ಟವನ್ನು ಮುಟ್ಟಿರುತ್ತಿತ್ತು. ಅಗ್ರಹಾರದ ಗ್ರಾಮಗಳು ತೆರಿಗೆಗಳಿಂದ ವಿನಾಯಿತಿ ಪಡೆದಿದ್ದರೂ ಕೇಂದ್ರ ಸರ್ಕಾರಕ್ಕೆ ಅತ್ಯಲ್ಪ ಜೋಡಿ ಕಂದಾಯವನ್ನು ಸಲ್ಲಿಸಬೇಕಾಗಿತ್ತು. ಆದರೆ ಸಾಮಾನ್ಯ ಗ್ರಾಮಗಳ ಮೇಲೆ ವಿಧಿಸಲಾಗುತ್ತಿದ್ದ ಇತರ ಬಗೆಯ ಕಾಣಿಕೆ, ಚಂದಾ ಮೊದಲಾದ ತೆರಿಗೆಗಳಿಂದ ಅವು ವಿನಾಯಿತಿ ಪಡೆದಿದ್ದವಲ್ಲದೆ, ರಾಜ್ಯದ ಅಧಿಕಾರಿಗಳಿಗೆ ಯಾವ ಬಗೆಯ ಸೇವೆಯನ್ನೂ ಸಲ್ಲಿಸಬೇಕಾಗಿರಲಿಲ್ಲ.

### ಕಲ್ಯಾಣದ ಚಾಲುಕ್ಯರ ಕಾಲದಲ್ಲಿ

ರಾಷ್ಟ್ರಕೂಟರನಂತರ ಬಂದವರು ಕಲ್ಯಾಣದ ಚಾಲುಕ್ಯರು. ಇವರ ಆಡಳಿತ ವ್ಯವಸ್ಥೆ ಹಿಂದಿನವರ ದಂತೆಯೇ ಇತ್ತು. ನರ್ಮದೆಯಿಂದ ಕಾವೇರಿಯ ತನಕ ಚಾಲುಕ್ಯ ಸಾಮ್ರಾಜ್ಯ ಹಬ್ಬಿತ್ತು. ದಂಡನಾಯಕ, ಪರಬಲ ಮಹಾಪ್ರಚಂಡ ದಂಡನಾಯಕ ಮತ್ತು ಇತರರನ್ನು ಸೇನೆಯ ಅಧಿಪತಿಗಳೆಂದು ಶಾಸನಗಳು ಹೇಳುತ್ತವೆ. ಒಂದು ಸಚಿವಮಂಡಲವಿದ್ದು ಅದರ ಕರ್ತವ್ಯಗಳು ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿದ್ದವು. ಪ್ರಧಾನರೂ ಮಹಾಪ್ರಧಾನರೂ ಇದ್ದರು. ಮುಖ್ಯ ಸಚಿವರು ಕೆಲವು ವೇಳೆ 'ಮಂತ್ರಿ ಚೂಡಾಮಣಿ' ಅಥವಾ 'ಅಮಾತ್ಯ ಕೇಸರಿ' ಎಂದು ನಿರ್ದೇಶಗೊಂಡಿದ್ದರು. ವಿದೇಶಾಂಗ ಮಂತ್ರಿಗೆ 'ಸಂಧಿ ವಿಗ್ರಹಿಕ' ಎಂಬ ಹೆಸರಿತ್ತು. ಅವರ ಕರ್ತವ್ಯಗಳಲ್ಲಿ ವಿಶೇಷ ಆಯ್ಕೆ ಕಂಡುಬರುತ್ತಿತ್ತು. 'ಕನ್ನಡ ಸಂಧಿ ವಿಗ್ರಹಿಕ' 'ಲಾಟ ಸಂಧಿವಿಗ್ರಹಿಕ' ಮತ್ತು 'ತಡೆಯ ದಂಡನಾಯಕ' ಈ ಅಧಿಕಾರಿಗಳ ಹುದ್ದೆಗಳು ಅವರು ನಿರ್ವಹಿಸಬೇಕಾಗಿದ್ದ ಕರ್ತವ್ಯಗಳ ಸಂಕೇತವಾಗಿದೆ.

ಪ್ರಾಂತ್ಯಾಡಳಿತವು ಕೇಂದ್ರ ಸರ್ಕಾರದ ಯಥಾಪ್ರತಿಯಂತಿತ್ತು. ರಾಜ್ಯಪಾಲರು ಸಾಧಾರಣವಾಗಿ ರಾಜಮನೆತನದವರಾಗಿರುತ್ತಿದ್ದರು, ಅಥವಾ ರಾಜಕುಮಾರರು ಇಲ್ಲವೇ ನಿಷ್ಠಾವಂತ ಆಶ್ರಿತ ರಾಜರು. ಒಮ್ಮೊಮ್ಮೆ ಅತ್ಯಂತ ಸಮರ್ಥರಾದ ಸೇನಾನಿಗಳನ್ನು ಆ ಸ್ಥಾನಕ್ಕೆ ಏರಿಸಲಾಗುತ್ತಿತ್ತು. ರಾಣಿಯರು, ರಾಜಕುವರಿಯರು ಸಹ ಕೆಲವು ವೇಳೆ ಪ್ರಾಂತ್ಯ ಆಡಳಿತಗಳಲ್ಲಿ ಭಾಗಿಗಳಾಗಿರುತ್ತಿದ್ದರು. ಎಪ್ಪತ್ತು ಗ್ರಾಮಗಳ ಮೇಲೆ—ಮುಂದೆ ಇದಕ್ಕೆ ಇನ್ನೂ ಕೆಲವು ಗ್ರಾಮಗಳನ್ನು ಸೇರಿಸಲಾಯಿತು—ಆಳಿಕೆ ನಡೆಸುತ್ತಿದ್ದ ಅಕ್ಕಾದೇವಿಯಂತೆ, ವಿಕ್ರಮಾದಿತ್ಯನ ರಾಣಿಯರು ಪ್ರಾಂತೀಯ ರಾಜಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಕ್ಕಾದೇವಿ ಕೆಲಕಾಲದ ವರೆಗೆ ಹನ್ನೆರಡು ಸಾವಿರದ ಪ್ರದೇಶವೊಂದರ ಆಳಿಕೆಯನ್ನು ಮಹಾಮಂಡಲೇಶ್ವರನೊಡನೆ ನಡೆಸಿದಳು. ರಾಜಪ್ರತಿನಿಧಿಗಳ ಪತ್ನಿಯರಿಗೆ ಉನ್ನತ ಅಧಿಕಾರಸ್ಥಾನವಿದ್ದು, ಅವರು ಸನದುಗಳನ್ನು ಕೊಡುವುದು ಅಥವಾ ನೂತನಗೊಳಿಸುವುದು, ದೇವಸ್ಥಾನಗಳಿಗೆ ಭೂಮಿಯ ದಾನ ನೀಡುವುದು, ಕೆರೆಗಳ ನಿರ್ಮಾಣ ಅಥವಾ ದುರಸ್ತಿ ಮಾಡುವುದು—ಈ ಕಾರ್ಯಗಳಲ್ಲಿ ತಮ್ಮ

ಪತಿಗಳ ಜೊತೆಯಲ್ಲಿ ಸಹಭಾಗಿಗಳಾಗಿರುತ್ತಿದ್ದರೆಂದು ಆ ಕಾಲದ ಅನೇಕ ಶಾಸನಗಳಿಂದ ವ್ಯಕ್ತಪಡುತ್ತದೆ. ಸ್ಥಳೀಯ ಆಡಳಿತ ವಿಶದವಾಗಿ ವಿಸ್ತರಿಸಿ ಅನೇಕ ಒಳ ಸುತ್ತುಗಳನ್ನು ಒಳಕೊಂಡಿತ್ತು. ಕಂಪಣ ಅಥವಾ ಸಣ್ಣ ಪ್ರಮಾಣದ ಜಿಲ್ಲೆಗಳು ಇದ್ದವು. ಕೆಲವು ವೇಳೆ ಪಟ್ಟಣಗಳನ್ನು ಆಡಳಿತ ಸೌಕರ್ಯಕ್ಕಾಗಿ ಒಟ್ಟುಗೂಡಿಸಲಾಗುತ್ತಿತ್ತು. ಸಣ್ಣ ವಿಭಾಗಗಳನ್ನು ಪ್ರಭುಗಳು, ನಾಡ ಗಾವುಂಡರು ಮತ್ತು ದಂಡನಾಯಕರು ಆಳುತ್ತಿದ್ದರು. ಕೆಲವೊಮ್ಮೆ ದಂಡನಾಥ ಮತ್ತು ಪ್ರಧಾನರು ತಮ್ಮ ಕಾರ್ಯಗಳನ್ನು ಒಟ್ಟುಗೂಡಿ ನಡೆಸುತ್ತಿದ್ದರು. ಚಾಲುಕ್ಯ ಸಾಮ್ರಾಜ್ಯದ ಕಡೆ ಕಡೆಯ ದಿನಗಳಲ್ಲಿ ಅಂಕಿಗಳ ಅಂಕಿತದಿಂದ ಕೊನೆಗೊಳ್ಳುವ ಪ್ರದೇಶಗಳ ಹೆಸರುಗಳನ್ನು 'ನಾಡು' ಮತ್ತು 'ದೇಶ'ಗಳು ಎಂದು ಪರಿವರ್ತಿಸಲಾಯಿತು. ಬಹುಶಃ, ಇದು ವಿಸ್ತಾರವಾಗಿ ಬೆಳೆಯುತ್ತಿರುವ ರಾಷ್ಟ್ರ, ಅದರ ಪ್ರಜಾಸಂಖ್ಯೆ, ಮತ್ತು ಆಡಳಿತದ ತೊಡಕುಗಳು ಇವನ್ನು ಒಳಗೊಳ್ಳುವ ಉದ್ದಿಶ್ಯದಿಂದ ಇದ್ದಿರಬಹುದು.

ಶಾಸನಗಳಲ್ಲಿ ಕಾಣಬರುವ 'ಗ್ರಾಮ ಮಹತ್ತರ' ಮತ್ತು 'ರಾಷ್ಟ್ರ ಮಹತ್ತರ' ಶಬ್ದಗಳು ಕೇಂದ್ರ ಮತ್ತು ಪ್ರಾದೇಶಿಕ ಅಧಿಕಾರಿಗಳ ನಡುವಣ ವ್ಯತ್ಯಾಸವನ್ನು ಸೂಚಿಸುತ್ತವೆ. ಕೇಂದ್ರ ತನ್ನ ಪ್ರತಿನಿಧಿಗಳ ಮೂಲಕ ಪ್ರಾದೇಶಿಕ ಅಧಿಕಾರಿಗಳ ಮೇಲೆ ಪೂರ್ಣ ಹತೋಟಿ ಚಲಾಯಿಸುತ್ತಿದ್ದುದನ್ನು ಇದು ತೋರಿಸುತ್ತದೆ. ಮಹತ್ತರ ಇಲಾಖೆಯ ಮುಖ್ಯಸ್ಥ. ಅಧಿಕಾರಿಗಳನ್ನು ತರತಮ ಕ್ರಮದಲ್ಲಿ ಸುವ್ಯವಸ್ಥಿತವಾಗಿ ರೂಪಿಸಲಾಗಿತ್ತು. ಈ ಇಲಾಖೆಯ ಮಹತ್ತರ ಸರ್ವಾಧಿಕಾರಿ. ಇವನನ್ನು ನೇರವಾಗಿ ಚಕ್ರವರ್ತಿಯೇ ನೇಮಕ ಮಾಡುತ್ತಿದ್ದ. ಇವನು ಪಟ್ಟಣ ಶೆಟ್ಟಿ ಅಥವಾ ಶ್ರೇಣಿಯ ಆಧಿಪತ್ಯದಲ್ಲಿದ್ದ ಪಟ್ಟಣಗಳ ಸಂಘ ಮತ್ತು ಸಂಸ್ಥೆಗಳಿಗೆ ತಜ್ಞಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದ. ಕೆಲವು ಪಟ್ಟಣಗಳ ಪೌರ ಸಭೆಗಳಿಗೆ ಒಂದು ಸಾವಿರ ಮಹಾಜನರಿರುತ್ತಿದ್ದರು. ಮುಖ್ಯ ಅಧಿಕಾರಿಗಳು ಊರೊಡೆಯ, ಗಾವುಂಡ, ನಾಡಗೌಡ ಮತ್ತು ಪೆರ್ಗಡೆ (ಪಾರುಪತ್ಯಗಾರ). ಈ ಅಧಿಕಾರಿಗಳ ಸಂಖ್ಯೆ ಆ ಪಟ್ಟಣಗಳ ಪ್ರಾಮುಖ್ಯಕ್ಕೆ ತಕ್ಕಂತೆ ಬಗೆಬಗೆಯಾಗಿದ್ದಿತು. ಹಲವು ಸೆಟ್ಟಿಗಳು ಮತ್ತು ಗಾವುಂಡರು ಕೆಲವು ವೇಳೆ ಪಟ್ಟಣದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ರಾಜನ ಸನ್ನದಿನಂತೆ ಭರವಸೆ ಪಡೆದ ಸ್ವತಂತ್ರ ಸಂಸ್ಥೆಯೋಪಾದಿ ಕೇಂದ್ರದ ಹಸ್ತಕ್ಷೇಪವಿಲ್ಲದೆ ಕಾರ್ಯನಿರ್ವಹಿಸುತ್ತಿದ್ದರು. ಸ್ಥಳೀಯ ಸಂಸ್ಥೆಗಳು ತಮಗೆ ಸ್ವತಂತ್ರ ಆಡಳಿತ ಬೇಕೆಂದು ಅಪೇಕ್ಷೆಪಟ್ಟಾಗ ಅದನ್ನು, ಸ್ಥಳೀಯ ಸಚಿವಮಂಡಲಿಯಿಂದ, ನಾಡಗೌಡ ಮತ್ತು ಪಾರುಪತ್ಯಗಾರನಿಂದ ಪಡೆಯುತ್ತಿದ್ದವು. ಅಭದ್ರತೆಯ ಸ್ಥಿತಿಯಿಂದ ಅಲ್ಲದೆ ಆಕ್ರಮಣಯುದ್ಧ ಭೀತಿ ನಿಂತುಹೋಗಿದ್ದ ಪರಿಸ್ಥಿತಿಯಲ್ಲಿ ನೂತನಗೊಳಿಸಿದ ವಿಧಿಗಳ ರೀತ್ಯಾ ಅವರು ಪಡೆಯುತ್ತಿದ್ದರು. ಈ ವಿಧಿಗಳು ತೆರಿಗೆಗಳು ಮತ್ತು ದಂಡಗಳಿಗೆ ಅನ್ವಯಿಸುತ್ತಿದ್ದವು. ಸಲ್ಲಿಸತಕ್ಕ ವಿಧಾನ, ತೆರತಕ್ಕ ಮೊತ್ತ ಇವನ್ನು ಕಾಲಮಾನದ ಏರಿಳಿತಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.

ಗ್ರಾಮದ ಹಿರಿಯರು ಬ್ರಾಹ್ಮಣರಾಗಿದ್ದರೆ ಮಹಾಜನರೆಂದೂ; ವೈಶ್ಯರಾಗಿದ್ದರೆ ನಖರರೆಂದೂ ಹೆಸರುಗಳಿಸಿದ್ದರು. ಇವರೆಲ್ಲ ಕೆಲವು ಕುಟುಂಬಗಳ ಗುಂಪಿನವರು; ತಮ್ಮ ಶೀಲ ಮತ್ತು ಅರ್ಹತೆಯ ದಶೆಯಿಂದ ಮಾನ್ಯತೆ ಪಡೆದ ಪ್ರಾಪ್ತವಯಸ್ಕ ಸದಸ್ಯರು. ತೆರಿಗೆಗಳ ಸ್ವರೂಪವನ್ನು ನಿರ್ಧರಿಸುವುದು, ಲೇವಾದೇವಿ ಮತ್ತು ವ್ಯಾಪಾರವನ್ನು ನಡೆಸುವುದು, ವಿದ್ಯಾಸಂಸ್ಥೆಗಳನ್ನು ವ್ಯವಸ್ಥೆಗೊಳಿಸುವುದು, ದೇವಸ್ಥಾನಗಳ ದಾನಧರ್ಮದತ್ತಿಗಳ ಆಡಳಿತವನ್ನು ನೋಡಿಕೊಳ್ಳುವುದು, ಪ್ರಮುಖ ಆಗಂತುಕರನ್ನೂ ವಿದ್ವಾಂಸರನ್ನೂ ಗೌರವಿಸುವುದು–ಈ ಕಾರ್ಯಗಳನ್ನು ಇವರು ನೆರವೇರಿಸುತ್ತಿದ್ದರು.

ನ್ಯಾಯ ಪ್ರದಾನ ಕಾರ್ಯವನ್ನು ಮಹಾಜನರೂ ಗ್ರಾಮದ ಮುಖಂಡನೂ ನಡೆಸುತ್ತಿದ್ದರು. ಧರ್ಮಶಾಸ್ತ್ರ ಮತ್ತು ಸ್ಥಳೀಯ ಸಂಪ್ರದಾಯಗಳಿಗನುಸಾರವಾಗಿ ನ್ಯಾಯವಿತರಣೆ ಕೆಲಸ ಕಟ್ಟುನಿಟ್ಟಾಗಿ

ಸಾಗುತ್ತಿತ್ತು. ಪರಸ್ಪರ ಸಂಧಾನದ ಮೂಲಕ ಅನಗತ್ಯವಾದ ವಿವಾದಗಳನ್ನು ತಡೆಗಟ್ಟಲಾಗುತ್ತಿತ್ತು. ವಿವಾದಾಸ್ಪದವಾದ ಹಾಗೂ ಸಂಶಯಾತ್ಮಕವಾದ ಸಾಕ್ಷ್ಯಗಳ ಸಂದರ್ಭದಲ್ಲಿ.ನಿರ್ದೋಷಿಯೋ ಅಲ್ಲವೋ ಎಂಬುದನ್ನು ಗೊತ್ತುಹಚ್ಚಲು ನಾನಾಬಗೆಯ ಉಗ್ರ ಪರೀಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಎಲ್ಲೆಯ, ಮಾಲೀಕತ್ವದ ಮತ್ತು ಆಸ್ತಿಪಾಸ್ತಿಗಳ ಹಕ್ಕುದಾರಿಕೆ ಮತ್ತು ಇನ್ನೂ ಅನೇಕತರದ ವಿವಾದಗಳನ್ನು ಮಹಾಜನರು ಮತ್ತು ಮುಖ್ಯಸ್ಥ ಬಗೆಹರಿಸುತ್ತಿದ್ದರು. ಇವರದೇ ಅಂತಿಮ ತೀರ್ಮಾನವಾಗಿರುತ್ತಿತ್ತು.

**ಕಲ್ಯಾಣದ ಕಲಚೂರಿಗಳು**

ಕಲಚೂರಿಗಳ ಆಡಳಿತ ಪದ್ಧತಿ ಮತ್ತು ಸಂಸ್ಥೆಗಳು ಕಲ್ಯಾಣದ ಚಾಲುಕ್ಯರು ಮಾಡಿದ್ದ ಏರ್ಪಾಟಿನ ಮುಂದುವರಿಕೆಯೇ ಆಗಿತ್ತು. ಈ ಸಾಮ್ರಾಜ್ಯದ ಆಡಳಿತ ವಿಚಾರವಾಗಿ, ಕ್ರಿ.ಶ. 1126ರಿಂದ 1139ರ ತನಕ ಆಳಿದ ಮೂರನೆಯ ಸೋಮೇಶ್ವರನ '**ಅಭಿಲಷಿತಾರ್ಥ ಚಿಂತಾಮಣಿ**' ಮತ್ತು ನಾಗವರ್ಮನು ಕನ್ನಡದಲ್ಲಿ ರಚಿಸಿದ '**ಅಭಿಧಾನ ವಸ್ತುಕೋಶ**' ಇವುಗಳಿಂದ ಅನೇಕ ಅಂಶಗಳು ಗೊತ್ತಾಗುವುವು.

ರಾಜನ ಆಸ್ಥಾನದ ರಾಜವೈಭವ ಹಾಗೂ ಅಟ್ಟಹಾಸದ ವೈಖರಿಯನ್ನು ಈ ಎರಡೂ ಗ್ರಂಥಗಳು ತಿಳಿಸುತ್ತವೆ. ರಾಜಸಭೆ, ಅದರ ಭವ್ಯತೆ ಮತ್ತು ಶೋಭಾಯಮಾನ ಕುರಿತು ಉಜ್ವಲವಾದ ವರ್ಣನೆಯಿದೆ. ಸಿಂಹಾಸನದ ಉಭಯ ಪಾರ್ಶ್ವಗಳಲ್ಲಿಯೂ ರಾಜ ತನ್ನ ರಾಣಿಯರು, ರಾಜಕುಮಾರಿಯರು, ಪುರೋಹಿತರು, ಗುರುಗಳು, ದಂಡನಾಯಕ, ಮತ್ತು ಆಶ್ರಿತರಾಜರು–ಇವರಿಂದ ಕೂಡಿ ವಿನೋದ, ಸಂಗೀತ, ರಾವುತರ ಪಂದ್ಯ, ಕುಸ್ತಿ ಮತ್ತು ಇತರ ಆಟಪಾಟಗಳಲ್ಲಿ ಸಂತಸದಿಂದ ನಲಿಯುತ್ತಿದ್ದ ಪ್ರಜೆಗಳಿಗೆ ದರ್ಶನ ವೀಯುತ್ತಿದ್ದ. ಆಡಳಿತದಲ್ಲಿ ಮಹಿಳೆಯ ಪಾತ್ರ, ಆಗಲೇ ತಿಳಿಸಿದಂತೆ ಮಹತ್ತರವಾದುದಾಗಿತ್ತು. ಕಾಲಚೂರಿ ದಾಖಲೆಗಳು ಮುಖ್ಯವಾಗಿ ಸೋವಿದೇವನಿಗೆ ಸಂಬಂಧಪಟ್ಟವು, ಕೆಲವು ಸ್ವಾರಸ್ಯ ವಿಚಾರಗಳನ್ನು ತಿಳಿಸುವುವು. ಪ್ರಧಾನರಾಣಿ ಸೋವಲದೇವಿಗೆ ರಾಜಾಧ್ಯಕ್ಷ ರೇವಣ್ಣಯ್ಯನು ಮುಖ್ಯಗಣಕನಾಗಿದ್ದನೆಂದು ಅವು ಹೇಳುತ್ತವೆ. ರಾಜನ ಅಂತಃಪುರದಲ್ಲಿ ತಮಿಳುನಾಡು, ಮಹಾರಾಷ್ಟ್ರ, ಆಂಧ್ರ, ಗುರ್ಜರ ಮತ್ತು ಕಾಂಭೋಜದ ರಾಜಕುವರಿಯರಿದ್ದರು. ಬಿಜ್ಜಳನ ರಾಣಿ ಇಚ್ಚಲದೇವಿ, ಅವನ ಮಗಳು ಸಿರಿಯದೇವಿ ಇವರು ಕಲೆಗಳಲ್ಲಿಯೂ ಸಾಹಿತ್ಯದಲ್ಲಿಯೂ ಪಾಂಡಿತ್ಯ ಗಳಿಸಿದ್ದರು. ಇವರು ಆಗಾಗ್ಗೆ ದೇವಸ್ಥಾನಗಳಿಗೂ ಕೆರೆಗಳ ನಿರ್ಮಾಣಕ್ಕೂ ಪೂಜಾಮಂದಿರಗಳ ಸ್ಥಾಪನೆಗೂ ಸಹಾಯವೆಸಗುತ್ತಿದ್ದರು. ರಾಷ್ಟ್ರದ ಆಳಿಕೆಯಲ್ಲಿ ರಾಜ ಮತ್ತು ರಾಣಿಯರಿಗೆ ಮೈಲಾರ ಗಾಮುಪ, ದಾಸಿಮಯ್ಯ ದಂಡನಾಯಕ, ಕಾಸಿಮಯ್ಯ, ಬಿಜ್ಜಳನಾಯಕ, ಸೋವಿದೇವ, ಲಕ್ಷ್ಮಣ ದಂಡೇಶ, ದಂಡನಾಥ ಚಂದುಗಿದೇವ–ಮುಂತಾದ ಖ್ಯಾತಿವೆತ್ತ ಮಂತ್ರಿಗಳು ಸಹಾಯಕರಾಗಿದ್ದರು.

ರಾಷ್ಟ್ರವನ್ನು ಮಂಡಲಗಳು, ಕೊಟ್ಟವ್‌ಗಳು, ನಾಡುಗಳು ಮತ್ತು ಹಳ್ಳಿಗಳ ತಂಡಗಳಾದ ಕುರ್‍ರಮ್‌ಗಳು–ಹೀಗೆ ವಿಂಗಡಿಸಲಾಗಿತ್ತು. ರಾಜ್ಯಪಾಲರುಗಳು ಮತ್ತು ದಂಡನಾಯಕರುಗಳ ಜತೆಗೆ ಸಾರ್ವಭೌಮ ಪ್ರಭುತ್ವದ ತನಿಖಾಧಿಕಾರಿಗಳನ್ನೂ ನೇಮಕ ಮಾಡುತ್ತಿದ್ದರು. ಪ್ರಾಂತ್ಯಗಳ ಆಡಳಿತದ ವಿಧಾನ, ಕಾರ್ಯಾಚರಣೆ ಇವನ್ನು ಪರಿಶೀಲಿಸಿ, ತಾಳೆನೋಡುವುದು ಇವರ ಕೆಲಸವಾಗಿತ್ತು. ದೇಶದ ಸಾಮಾಜಿಕ, ಆರ್ಥಿಕ, ಶಿಕ್ಷಣ ಮತ್ತು ಸಾಂಸ್ಕೃತಿಕ ಸತ್ವವನ್ನು ಇದರಿಂದ ರಕ್ಷಿಸಿ ನೆಲೆಗೊಳಿಸುವುದ ಸಾಧ್ಯವಾಗಿತ್ತು.

## ಹೊಯ್ಸಳರ ಕಾಲದಲ್ಲಿ

ಪೊಯ್ಸಳರು ಚಾಲುಕ್ಯರಿಗೂ ಗಂಗರಿಗೂ ಅವರ ಆಡಳಿತ ಪದ್ಧತಿಗೋಸ್ಕರ ಬಹುಮಟ್ಟಿಗೆ ಋಣಿಗಳಾಗಿದ್ದರು. ಸಂಧಿವಿಗ್ರಹಿ ಮತ್ತು ಶ್ರೀಕರಣಾಧಿಕಾರಿ ಮತ್ತು ಇತರ ಅಧಿಕಾರಿಗಳ ಮೂಲಕ ಪ್ರಾಂತೀಯ ಸರ್ಕಾರದ ವ್ಯವಸ್ಥೆ, ರಾಜ್ಯಪಾಲರುಗಳಾಗಿ ರಾಜಕುಮಾರರನ್ನು ನೇಮಕ ಮಾಡುವಿಕೆ, ರಾಷ್ಟ್ರದೊಳಗೇ ವರ್ಗಾವರ್ಗಿ ನಡೆವಳಿಕೆ, ತಮ್ಮ ಬಗ್ಗೆ ನಿಷ್ಠೆಯನ್ನು ಬಲಪಡಿಸಲು ಪ್ರವಾಸ–ಈ ಕೆಲವು ರಾಜಕೀಯ ನಡೆವಳಿಕೆಗಳನ್ನು ಚಾಲುಕ್ಯರಿಂದ ಹೊಯ್ಸಳರು ಎರವಾಗಿ ಪಡೆದರು.

ನಾಡುಗಳ ವ್ಯವಸ್ಥೆ ಮತ್ತು ಅವುಗಳ ಆಡಳಿತ, ನಾಡಗೌಡ, ನಾಡಪ್ರಭು, ನಾಡ ಸೇನಬೋವ, ಮುಂತಾದ ಅಧಿಕಾರಿಗಳ ಪರಂಪರೆ–ಇವೆಲ್ಲ ಗಂಗರು ಬಿಟ್ಟುಹೋದ ಆಸ್ತಿ. ಹೊಯ್ಸಳರ ಆಡಳಿತದಲ್ಲಿ ಒಂದು ಲಕ್ಷಣ ಪ್ರಾಮುಖ್ಯವಾಗಿ ಕಾಣಬರುತ್ತದೆ : ರಾಜನ ಅಧಿಕಾರದ ಮೇಲೆ ಪರಿಣಾಮಕಾರಿಯಾಗಿ ಅಂಕೆಯಿಡುವ ಪ್ರಭಾವಶಾಲಿಯಾದ ವ್ಯವಸ್ಥೆಯಾಗಿ ಸಚಿವ ಮಂಡಲಿಯನ್ನು ಬೆಳಸುವುದೇ ಇದರ ಸ್ವರೂಪ. ಹೊಯ್ಸಳಸಾಮ್ರಾಜ್ಯದ ವಿಸ್ತರಣಾ ಶಕ್ತಿ ವೃದ್ಧಿಗೊಳ್ಳುವಂತಾದುದಕ್ಕೆ ಆಡಳಿತದಲ್ಲಿ ರಾಜನಿಗೆ ಸಹಾಯಕರಾಗಿದ್ದ ಪಂಚಪ್ರಧಾನರ ವಿವೇಕ, ಜಾಣತನ ಮತ್ತು ಚುರುಕು ಬುದ್ಧಿಗಳೇ ಕಾರಣ.

ರಾಜನು ಎಲ್ಲ ಧರ್ಮಗಳ ರಕ್ಷಕನಾಗಿರುತ್ತಿದ್ದ. ಮತಸಂಬಂಧವಾದ ವಿವಾದಗಳಲ್ಲಿ, ಜಿಜ್ಞಾಸೆಗಳಲ್ಲಿ ರಾಜ ಬಹು ಎಚ್ಚರಿಕೆಯಿಂದ, ವಿವೇಚನೆಯಿಂದ ವರ್ತಿಸುತ್ತಿದ್ದ. ಏಕೆಂದರೆ ಯಾವುದೇ ಧರ್ಮದ ವಿಚಾರದಲ್ಲಿ ಪಕ್ಷಪಾತ ತೋರಿದ್ದಾದರೆ, ಅದರ ಪರಿಣಾಮವಾದ ರಾಜಾನುಗ್ರಹ ಸಮಾಜದ ಮೂಲವನ್ನೇ ತೀವ್ರವಾಗಿ ಘಾತಿಸಿಬಿಡುವುದೆಂದು ಅವನು ಪೂರ್ಣವಾಗಿ ಗ್ರಹಿಸಿದ್ದ.

ಆ ಕಾಲದಲ್ಲಿ ಮತಸಂಬಂಧವಾದ ಸಹಿಷ್ಣುತೆ ನೆಲಸಿದ್ದಕ್ಕೆ ಇದು ಬಹುಮಟ್ಟಿಗೆ ಕಾರಣ ಭೂತವಾಗಿತ್ತು. ಆದರೆ ಪುರೋಹಿತರುಗಳನ್ನು ಆಧ್ಯಾತ್ಮಿಕ ಗುರುಗಳನ್ನಾಗಿ ಮಾಡಿಕೊಂಡು ಆಧ್ಯಾತ್ಮಿಕ ಮತ್ತು ಐಹಿಕ ವಿಚಾರಗಳಲ್ಲಿ ಅವರ ಬುದ್ಧಿವಾದವನ್ನು ಕೇಳುವುದು, ಅಂದಿನ ಸಾಮಾನ್ಯ ನಡೆವಳಿಕೆಯಾಗಿತ್ತು. ಪ್ರತಿಯೊಬ್ಬ ರಾಜನೂ ಗಂಗರ ಕಾಲದಲ್ಲಿದ್ದಂತೆ ಸಮಾಲೋಚನೆಗಾಗಿ, ಸಲಹೆಗಾಗಿ ಆಧ್ಯಾತ್ಮಿಕ ಗುರುಗಳಲ್ಲಿ ಹೋಗುವ ಸಂಪ್ರದಾಯವಿತ್ತು. ಪುರೋಹಿತರ ಪ್ರಭಾವ ಅಧಿಕವಾಗಿತ್ತು. ಸೋಮದೇವ ಮತ್ತು ಎರಡನೆ ನರಸಿಂಹನ ರಾಜಗುರು ರುದ್ರಶಕ್ತಿ, ಎರಡನೆ ವೀರಬಲ್ಲಾಳನ ರಾಜಗುರು ವೇದಾಂತ ತರ್ಕ ಮತ್ತು ಇತರ ವಿಜ್ಞಾನಗಳಲ್ಲಿ ಪ್ರತಿಭಾವಂತನಾಗಿದ್ದ ವಾಮಶಕ್ತಿದೇವ, ಇವರ ವಿಚಾರದಲ್ಲಿ ಪ್ರಶಂಸಿಸಿರುವ ಶಾಸನಗಳಿಂದ ಅದನ್ನು ಅರಿಯಬಹುದು.

ಎರಡನೆ ಬಲ್ಲಾಳನ ರಾಣಿಯರು ಸಮರ್ಥ ಆಡಳಿತಗಾರರೂ ಯೋಧರೂ ಆಗಿದ್ದರು. ಉಮಾದೇವಿ ತನ್ನ ಪತಿಯೊಡನೆ ಉತ್ತರದ ದಂಡಯಾತ್ರೆಯಲ್ಲಿ ಸಾಗಿ, ಬೆಳಗುತ್ತಿಯ ಮಲ್ಲಿದೇವರಸನು ತನ್ನ ತಂದೆ ಈಶ್ವರ ದೇವರಸನ ಮರಣಾನಂತರ ದಂಗೆಯೆದ್ದಾಗ, ಅವನ ವಿರುದ್ಧ ನಡೆಸಿದ ಪ್ರತೀಕಾರ ದಾಳಿಯಲ್ಲಿ ಸಾಕ್ಷಾತ್ತಾಗಿ ಭಾಗವಹಿಸಿದ್ದಳು. ರಾಜ ದಂಡಯಾತ್ರೆ ಕೈಗೊಂಡಾಗ ಆಕೆ ದೋರಸಮುದ್ರವನ್ನು ಆಳುತ್ತಿದ್ದಳಲ್ಲದೆ ಆಡಳಿತವನ್ನೂ ನಡೆಸುತ್ತಿದ್ದಳು. ಎರಡನೆ ಬಲ್ಲಾಳನ ರಾಣಿ ಅಭಿನವಕೇತಲಾದೇವಿ ಕುಂದವಾಡದ ಗೌಡ ಮತ್ತು ಸೆಟ್ಟಿಗಳಿಗೆ ಆ ಗ್ರಾಮದಲ್ಲಿ ಬುಧವಾರದ ಸಂತೆಯನ್ನೇರ್ಪಡಿಸುವಂತೆ ನಿರೂಪಿಸಿದ್ದಳು. ಎರಡನೆ ನರಸಿಂಹನ ಆಳಿಕೆಯಲ್ಲಿ ಕ್ರಿ. ಶ. 1224–27 ರಲ್ಲಿ ಅಮೃತಪಡಿಗೋಸ್ಕರ ನೀಡಿದ್ದ ಹಣದಿಂದ ಕೂಡ ಎರಡು ದೇವಸ್ಥಾನಗಳು ಸರ್ಕಾರಕ್ಕೆ ತೆರಿಗೆಗಳನ್ನು ಸಲ್ಲಿಸಲು ಅಸಮರ್ಥವಾಗಿ ಆ ಕಾರಣದಿಂದ ದೇವಸ್ಥಾನಗಳ ಸೇವೆಯನ್ನು ನಿಲ್ಲಿಸಿದ ವಿಚಾರ ಉಮಾದೇವಿಯ ಗಮನಕ್ಕೆ ಬಂದಾಗ ಆಕೆ

ಹಣದ ವ್ಯವಸ್ಥೆಮಾಡಿ, ದೇವಸ್ಥಾನಕ್ಕೆ ಸಂಬಂಧಿಸಿದ ವೃತ್ತಿಗಳನ್ನು ರದ್ದುಗೊಳಿಸಿ ಸ್ವಾಧೀನಕ್ಕೆ ತೆಗೆದುಕೊಂಡು ಅವನ್ನು ಸಿದ್ಧಾಯಗಳು (ತೆರಿಗೆಗಳು) ಮತ್ತು ಒಂದೊಂದು ವೃತ್ತಿಗೆ ಎರಡೂವರೆ ಪಣದಂತೆ ದೇವಸ್ಥಾನಕ್ಕೆ ಸಲ್ಲಿಸಲು ಸಿದ್ಧರಾಗಿದ್ದ ಬೇರೆ ಬ್ರಾಹ್ಮಣರಿಗೆ ಮಾತ್ರ ಹಂಚಿದಳು.

ರಾಣಿಯರಿಗೆ ಪ್ರತ್ಯೇಕ ಸಿಬ್ಬಂದಿ ಇರುತ್ತಿತ್ತು. ಶ್ರೀಕರಣ ಅವರಿಗೆ ಸಹಾಯಕ. ಎರಡನೆ ನರಸಿಂಹನ ರಾಣಿ ಪದ್ಮಲ ಮಹಲದೇವಿ ಕ್ರಿ.ಶ. 1206ರಲ್ಲಿ ಪೆರ್ಗಡೆ ನಾಯಣ್ಣನನ್ನು ಶ್ರೀಕರಣನನ್ನಾಗಿ ನೇಮಕಮಾಡಿಕೊಂಡದ್ದಕ್ಕೆ ನಿದರ್ಶನವಿದೆ. ಅಂತಃಪುರದ ಸಂಬಂಧವಿದ್ದ ಇನ್ನಿಬ್ಬರು ಮುಖ್ಯ ಅಧಿಕಾರಿಗಳು ಪಸಾಯತ ಅಥವಾ ಮಹಾಪಸಾಯತ–ಇವರ ಬಗ್ಗೆ 'ಆಸ್ತಿನಿರ್ವಾಹಕ' 'ಉಡುಪುಭಕ್ಷಿ' ಎಂಬ ಬೇರೆ ಬೇರೆ ವಿವರಣೆಗಳಿವೆ ಮತ್ತು "ಅಂತಃಪಸಾಯತ". ದೇಶದ ಕೆಲವು ಪ್ರದೇಶಗಳ ಆಡಳಿತ ಕರ್ತವ್ಯವೂ ಮಹಾಪಸಾಯತ ಹುದ್ದೆಯೊಡನೆ ಅಂಟಿಕೊಂಡಿತ್ತು. ಕೆಲಮಟ್ಟಿಗೆ, ಈ ಅಧಿಕಾರಿಯ ವಿಚಾರದಲ್ಲಿ ರಾಜ ನಿಟ್ಟಿದ್ದ ನಂಬಿಕೆ ಮತ್ತು ಆಗಾಗ್ಗೆ ರಾಣಿಯರು ತಮ್ಮ ಪತಿಗಳ ಮೇಲೆ ಬೀರುತಿದ್ದ ಪ್ರಭಾವವನ್ನು ಇದು ಸೂಚಿಸುವುದು. ಜಿಲ್ಲಾ ಪ್ರದೇಶವೊಂದರ ಗೊಂದಲ ಸ್ಥಿತಿಯಲ್ಲಿ ರಾಜಮನೆತನದ ವಿಶ್ವಾಸ ಪಡೆದಿದ ಸಮರ್ಥ ಹಾಗೂ ದಕ್ಷ ವ್ಯಕ್ತಿಯ ಅಗತ್ಯ ಕಾಣಬಂದಾಗ, ಅಂಥ ಜಿಲ್ಲೆಗಳ ಆಡಳಿತಗಳೊಡನೆ ಮಹಾ ಪಸಾಯತರ ನೆರವಿನ ಸಂಬಂಧವನ್ನು ಏರ್ಪಡಿಸಲಾಗುತ್ತಿತ್ತು. ಈ ಮುಖ್ಯ ಹುದ್ದೆಗೆ ಆಯ್ಕೆ ಯಾವ ಒಂದು ನಿರ್ದಿಷ್ಟ ಜಾತಿಗೆ ಸೀಮಿತವಾಗಿರಲಿಲ್ಲ ಅಥವಾ ಶ್ರೀಮಂತ ಮನೆತನದವರಿಗೆ ಮಾತ್ರವೇ ಮೀಸಲಾಗಿದ್ದಿಲ್ಲ. ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣರೂ, ಇತರರೂ ಆ ಹುದ್ದೆಯಲ್ಲಿದ್ದರು. ಕ್ರಿ. ಶ. 1195 ರಲ್ಲಿ ಓರ್ವ ಕ್ಷೌರಿಕ ಮೂಕಗೌಡನ ಮಗ ಬಿಲ್ಲಮಾದಯ್ಯ ಮಹಾಪಸಾಯತನಾಗಿದ್ದನೆಂದು ತಿಳಿದುಬರುತ್ತದೆ.

ಅರಮನೆಯ ಇನ್ನು ಬೇರೆ ಮುಖ್ಯ ಅಧಿಕಾರಿಗಳ ಪೈಕಿ ದ್ವಾರಪಾಲಕನೊಬ್ಬ. ಪಡಿಯರ, ಹಡಿಹಯು ಅಥವಾ ಹಡಿಹಾರ ಎಂದೂ ಇವನಿಗೆ ಹೆಸರುಗಳಿದ್ದವು. ಅರಮನೆಯ ದ್ವಾರದ ರಕ್ಷಕರಿಗೆ ಇವನು ಮೇಲ್ವಿಚಾರಕನಾಗಿದ್ದ. ಈ ಹುದ್ದೆಯ ನೇಮಕದಲ್ಲಿ ಕೂಡ ಎಲ್ಲ ವರ್ಗಗಳವರಿಗೂ ಅವಕಾಶವಿತ್ತು. ಮಲಗುವ ಕೋಣೆಗಳ ಮೇಲ್ವಿಚಾರಕ ಸೆಜ್ಜೆವಳ್ಳ. ಹಿರಿಯ ಹಡಪದ ವೀಳ್ಯಕಾರ. ಇವನು ಮತ್ತೊಬ್ಬ ಅರಮನೆಯ ಮುಖ್ಯ ಅಧಿಕಾರಿ. ಮನೆಯ ಮಂತ್ರಿ ಮತ್ತು ಮನೆತನಾಧಿಕಾರಿ ಇವರು ಅರಮನೆಗೋಸ್ಕರವೇ ಮೀಸಲಾದ ಇತರ ಅಧಿಕಾರಿಗಳು.

ಶ್ರೀಕರಣ ಸರ್ವಾಧಿಕಾರಿ ಮತ್ತು ಭಂಡಾರಿ ಎಂಬಿಬ್ಬರು ಮಂತ್ರಿಗಳ ಕರ್ತವ್ಯಗಳನ್ನು ಹೊಯ್ಸಳರ ಕಾಲದಲ್ಲಿ ಚೆನ್ನಾಗಿಯೇ ವಿಶದಪಡಿಸಲಾಗಿತ್ತು. ಹಿರಿಯ ಭಂಡಾರಿಗೆ ಖಜಾನೆಯ ಅನೇಕ ಬಾಬುಗಳು, ಅಲ್ಲಿ ಶೇಖರಿಸಿಡುವ ಸಾಮಾನುಗಳು–ಇವುಗಳ ಮಾಹಿತಿ ಇಡಬೇಕಿತ್ತು ; ವೆಚ್ಚದ ಲೆಕ್ಕ ಮತ್ತು ಆಡಳಿತದ ವಿಚಾರವೂ ತಿಳಿದಿರಬೇಕಿತ್ತು ; ರಾಜ್ಯದ ಎಲ್ಲ ಖಜಾನೆಗಳ ಮೇಲೆ ಮೇಲ್ವಿಚಾರಣೆ ನಡೆಸಲೂ ಅಗತ್ಯವಿತ್ತು. ಮರಿಯಾನೆ ದಂಡನಾಯಕ, ಹುಲ್ಲಯ್ಯ ಮತ್ತು ಇತರರು ಗಳಿಸಿದ್ದ ಖ್ಯಾತಿ ಅವರ ಕಾರ್ಯದ ಮಹತ್ವವನ್ನು ಸೂಚಿಸುವುದು. ಅನೇಕ ಖಜಾನೆ ಕೇಂದ್ರಗಳೂ (ಭಂಡಾರ ವಾಡ ದುರ್ಗಗಳ್) ಇದ್ದವು. ಅರಸಿಕೆರೆ, ಹಲಕೂರು, ಲಿಕ್ಕಿ ಇತ್ಯಾದಿ ರಾಜಧಾನಿಗಳೂ ಇದ್ದವು. ಈ ಪ್ರತಿಯೊಂದು ಖಜಾನೆಗೂ ಒಬ್ಬೊಬ್ಬ ಭಂಡಾರಿ ಇದ್ದು ಅವನು ಆ ಸ್ಥಳದ ಇಲಾಖೆಯ ಮುಖ್ಯಸ್ಥನಾಗಿರುತ್ತಿದ್ದ. ಖಜಾನೆಗೆ ಶ್ರೀಕರಣಾಧಿಕಾರಿ ಯನ್ನೂ ಸೇರಿಸಲಾಗಿತ್ತು. ಒಡವೆಗಳನ್ನು ಪರೀಕ್ಷಿಸುವ ಅಧಿಕಾರಿಗಳೂ ಪ್ರತ್ಯೇಕವಾಗಿ ನೇಮಕಗೊಂಡು ಒಡವೆಗಳ ಮತ್ತು ರತ್ನಗಳ ಸುಪರ್ದಿನಲ್ಲಿ ಅವರನ್ನಿಡಲಾಗಿತ್ತು. ಮಾಣಿಕ್ಯ ಭಂಡಾರಿಗಳೆಂದು ಇವರಿಗೆ ಹೆಸರು. ಸೈನ್ಯಕ್ಕೂ ಖಜಾನೆಯೊಂದಿತ್ತು. ಇಲ್ಲಿ ಉಡುಪು, ಕೋಲುಗಳು, ಔಷಧಿಗಳು ಮತ್ತು ಸೈನ್ಯಕ್ಕೆ ಅತ್ಯಗತ್ಯ ವಾಗಿ ಬೇಕಾದ ಇತರ ಸಾಮಾನುಗಳನ್ನೂ ಕೂಡಿಡಲಾಗುತ್ತಿತ್ತು. ಸೈನ್ಯದ ಮೋತಿಖಾನೆಯ ಅಧಿಕಾರಿಗೆ

ಪಟ್ಟಿಶ ಭಂಡಾರಿ ಎಂಬ ಹೆಸರಿತ್ತು. ಈ ಅಧಿಕಾರಿಗಳ ಜತೆಗೆ ಖಜಾನೆಯ ತನಿಖಾಧಿಕಾರಿಗಳು ಅಥವಾ ಮೇಲ್ವಿಚಾರಣಾಧಿಕಾರಿಗಳು, ಕೋಶಾಧ್ಯಕ್ಷರು ಮತ್ತು ಮಾಣಿಕ್ಯ ಭಂಡಾರದ ಅಧ್ಯಕ್ಷರು-ಇವರೂ ಇರುತ್ತಿದ್ದರು. ಪ್ರತ್ಯೇಕ ಖಜಾನೆಯನ್ನು ಸ್ಥಾಪಿಸಿ ಲೆಕ್ಕಾಚಾರ ರೆವಿನ್ಯೂ ಬಾಬುಗಳಲ್ಲಿ ಪ್ರವೀಣರಾದವರನ್ನು ಅದಕ್ಕೆ ನೇಮಕ ಮಾಡಿದ್ದರೂ ಸಹ, ಖಜಾನೆಯ ಮೇಲೆ ಸಾಮಾನ್ಯತಃ ಉಸ್ತುವಾರಿ ಮತ್ತು ಕಟ್ಟುನಿಟ್ಟಾದ ಕಾವಲಿರುವ ಕರ್ತವ್ಯ ಆ ಸ್ಥಳದ ರಾಜಾಧ್ಯಕ್ಷ ಹೆಗ್ಗಡೆಯ ಪಾಲಿಗೂ ಇರುವಂತಾಗಿತ್ತು. ಈ ಕಾರಣದಿಂದ ಅವರನ್ನು 'ಭಂಡಾರದ ಅಧಿಪರ್' ಎಂದು ಕರೆಯಲಾಗುತ್ತಿತ್ತು. ಹಿರಿಯ ಭಂಡಾರಿಯು ಖಜಾನೆಯನ್ನು ನೋಡಿಕೊಳ್ಳುತ್ತಿದ್ದರೆ, ಶ್ರೀಕರಣ ಸರ್ವಾಧಿಕಾರಿ ಲೆಕ್ಕಾಚಾರದ ಇಲಾಖೆಯ ಮೇಲ್ವಿಚಾರಕನಾಗಿರುತ್ತಿದ್ದ. ಇವನ ಕೈಕೆಳಗೆ ಶ್ರೀಕರಣ ಹೆಗ್ಗಡೆಗಳಿದ್ದರು. ಇವರ ಅಧಿಕಾರದ ವ್ಯಾಪ್ತಿ ಜಿಲ್ಲೆಗಳ ಮೇಲಿದ್ದು ಅವರು ತಮ್ಮ ಸಮೀಪದ ಮೇಲಧಿಕಾರಿಗೆ ಅಂದರೆ ಸ್ಥಳದ ರಾಜ್ಯಪಾಲನಿಗೆ ಜವಾಬ್ದಾರರಾಗಿರುತ್ತಿದ್ದರು. ಲೆಕ್ಕಗಳನ್ನು ಇಡುವ ಗುಮಾಸ್ತರು ಅಂದರೆ ಗಣಕರೂ ಇದ್ದರು. ಇವರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಸೇವೆಯ ಪ್ರತಿಫಲವಾಗಿ ಶ್ರೀಕರಣ ಹುದ್ದೆಗೆ ಇವರನ್ನು ಏರಿಸಲಾಗುತ್ತಿತ್ತು. ಅಷ್ಟೇ ಅಲ್ಲ, ಸ್ಥಳೀಯ ಖಜಾನೆಯ ಭಂಡಾರಿ ಸ್ಥಾನಕ್ಕೂ ಬಡ್ತಿ ನೀಡಲಾಗುತ್ತಿತ್ತು.

ಹಿರಿಯ ಭಂಡಾರಿ ಮತ್ತು ಶ್ರೀಕರಣಸರ್ವಾಧಿಕಾರಿ – ಇವರ ಕರ್ತವ್ಯಗಳನ್ನು ಕುರಿತು ಸ್ಪಷ್ಟವಾಗಿಯೇ ನಿರ್ದಿಷ್ಟಪಡಿಸಲಾಗಿದ್ದಿತು. ಇವರು ಪ್ರಧಾನ ಆಲೋಚನಾಸಭೆಗೆ ಸೇರಿದ ಇಬ್ಬರು ಮುಖ್ಯ ಸದಸ್ಯರಾಗಿದ್ದರು. ಕಂದಾಯ ಕವಳಿಗೆಗಳ ವಸೂಲಿ, ಸುಂಕ ಮತ್ತು ರತ್ನ ಇವುಗಳ ಮೇಲಿನ ಹತೋಟಿ –ಇವು ಲೆಕ್ಕಾಚಾರ ಇಲಾಖೆಯಿಂದ ಬೇರ್ಪಟ್ಟಿದ್ದವು. ಲೆಕ್ಕಾಚಾರದ ಇಲಾಖೆ 'ಕಡತ'ಗಳನ್ನಿಡಬೇಕಾಗಿದ್ದಿತು. ಈ ಕಡತಗಳಲ್ಲಿ ಆದಾಯ ಮತ್ತು ವೆಚ್ಚಗಳನ್ನು ಹೆಚ್ಚಿನ ಗಮನದಿಂದ ನಮೂದಿಸಲಾಗುತ್ತಿದ್ದುದು ಹೊಯ್ಸಳರ ಕಾಲದ ಗಮನಾರ್ಹವಾದ ಲಕ್ಷಣವಾಗಿತ್ತು, ಇದರಿಂದ ರಾಜ್ಯದ ಆದಾಯದಲ್ಲಿ ಸ್ವಪ್ರಯೋಜನಕ್ಕಾಗಿ ದುರುಪಯೋಗಮಾಡಿಕೊಳ್ಳುವುದಕ್ಕೂ ಭ್ರಷ್ಟಾಚಾರಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಸಾರ್ವಜನಿಕ ಸೇವೆಯಲ್ಲಿ ಶೀಲ ಹಾಗೂ ಗೌರವವನ್ನು ಕಾಪಾಡುವ ನಿಮಿತ್ತ ಈ ನೀತಿಯನ್ನು ಕ್ರಮೇಣ ಬಹುಶಃ ಬೆಳೆಸಿಕೊಂಡು ಬಂದಿದ್ದಿರಬಹುದು. ಶ್ರೀಮಂತರೂ ನಿಷ್ಠಾವಂತ ನೌಕರರೂ ರಾಜ್ಯದ ಆಡಳಿತದ ಮೇಲೆ ಉಂಟುಮಾಡಿದ್ದ ಸತ್ಪರಿಣಾಮ ಅಗಾಧವಾಗಿದ್ದದ್ದರಿಂದ ಕ್ರಮ ಕ್ರಮೇಣ ಆನುವಂಶಿಕ ಉತ್ತರಾಧಿಕಾರಿ ಪದ್ಧತಿ ಚಾಲ್ತಿಯಲ್ಲಿ ಬರುವಂತಾಯಿತು.

ಆದರೆ ಇದು ಪಂಚಪ್ರಧಾನ ಸಭೆಯ ನೇಮಕಗಳಲ್ಲಿ ಅಡಚಣೆಯನ್ನುಂಟುಮಾಡಲು ಅವಕಾಶವೀಯುತ್ತಿದ್ದಿಲ್ಲ. ಈ ಸಭೆ ಎಂದೂ ಪರಿಶುದ್ಧತೆ, ನ್ಯಾಯ, ಅನುಪಮಸೇವೆ ಮತ್ತು ನಿಷ್ಠೆಯ ಸಂಕೇತವಾಗಿದ್ದಿತು. ಹೊಯ್ಸಳರು ರಾಜ್ಯಗಳನ್ನು ಗೆದ್ದ ಘಟನೆಗಳ ಸಮುಸಮನಾಗಿ ಅವನ್ನು ಭದ್ರಗೊಳಿಸಿಕೊಳ್ಳುವ ಕಾರ್ಯ ನಡೆಯಬೇಕಾಗಿದ್ದದ್ದರಿಂದಲೂ ಇಂಥ ಕಾರ್ಯಕ್ಕಾಗಿ ಒಳ್ಳೆ ಜಾಣತನ, ಚತುರ ನೀತಿಗಳು ಅಗತ್ಯವಾಗಿದ್ದುದರಿಂದಲೂ ಭಂಡಾರಿ, ಸಂಧಿವಿಗ್ರಹಿ ಮತ್ತು ಸರ್ವಾಧಿಕಾರಿ ಇವರಿಗೆ ಹೆಚ್ಚಿನ ಅಧಿಕಾರ ಮತ್ತು ಪ್ರಾಮುಖ್ಯವನ್ನು ವಹಿಸಲಾಗುತ್ತಿತ್ತು. ಹೊಯ್ಸಳರ ಮುಂದಿನ ರಾಜರ ಕಾಲದಲ್ಲಿ ಅವರು ರಾಜ್ಯಗಳನ್ನು ಗೆಲ್ಲುವ ಕಾರ್ಯದಲ್ಲಿ ಸತತವಾಗಿ ತೊಡಗಿದಾಗ ಸೈನಿಕ ಅಧಿಕಾರಿಗಳು, ಸೇನಾಧಿಪತಿಗಳು ಮತ್ತು ಮಹಾಪಸಾಯತ–ಇವರು ಸಭೆಯ ಇತರ ಅಧಿಕಾರಿಗಳಿಗಿಂತ ಹೆಚ್ಚು ಹೆಚ್ಚು ಪ್ರಾಮುಖ್ಯವನ್ನು ಪಡೆಯುತ್ತ ಬಂದರು. ಇದರಿಂದ ಕೆಲಮಟ್ಟಿಗೆ ಸೈನಿಕ ಸ್ವಪ್ರತಿಷ್ಠೆಗೆ ಆಸರೆ ದೊರೆತಂತಾಯಿತು.

ರಾಜನ ಎಲ್ಲ ಪ್ರವಾಸಗಳಲ್ಲಿಯೂ ದಂಡಯಾತ್ರೆಗಳಲ್ಲಿಯೂ ಮಂತ್ರಿಗಳು ಅವನೊಡನೆ ಇರುತ್ತಿದ್ದರು. ಅಷ್ಟೇ ಅಲ್ಲ, ರಾಜ್ಯದ ಆಡಳಿತವನ್ನೂ ನಡೆಸುತ್ತಿದ್ದರು. ಹೊಯ್ಸಳರ ಆಳಿಕೆಯ

ಮೊದಲಿನ ಎರಡು ಅಥವಾ ಮೂರು ತಲೆಮಾರುಗಳಲ್ಲಿ ಮಂತ್ರಿಗಳು ಬಹು ಪ್ರಬಲರಾಗಿದ್ದರೆಂದು ಭಾವಿಸಲು ತಕ್ಕಷ್ಟು ಆಧಾರಗಳಿವೆ. ರಾಜನ ಇಚ್ಛೆ ಹಾಗೂ ಜನರ ಕ್ಷೇಮಾಭ್ಯುದಯವನ್ನು ಸರಿ ಹೊಂದಿಸುವ ಕಷ್ಟಸಾಧ್ಯವಾದ ಕಾರ್ಯ ಅವರ ಮುಂದಿದ್ದಿತು. ಏಕೆಂದರೆ ರಾಜ್ಯದ ಯಾವುದೇ ದುರಾಡಳಿತಕ್ಕೂ ಜನರು ಮಂತ್ರಿಗಳನ್ನೇ ಜವಾಬ್ದಾರರನ್ನಾಗಿ ಪರಿಗಣಿಸುತ್ತಿದ್ದರು. ಕ್ರಿ.ಶ. 1120 ಮತ್ತು 1139ರಲ್ಲಿ ಪುನಃ 1182 ರಲ್ಲಿ ಪಂಚಪ್ರಧಾನ ಕೂಟವು ತುಂಬಾ ಮುಖ್ಯವಾಗಿತ್ತೆಂದೂ ಗಂಗ ಮಂಡಲ ಮತ್ತು ನೊಳಂಬವಾಡಿಗಳ ಗಡಿಯ ವಿಚಾರದಲ್ಲಿ ಉಂಟಾದ ವಿವಾದದಲ್ಲಿ ಈ ಕೂಟ ಇತ್ಯರ್ಥ ಪಡಿಸಿತೆಂದೂ ತಿಳಿಯಬರುತ್ತದೆ. ಆದರೆ ಹದಿಮೂರನೆ ಶತಮಾನದ ಆರಂಭದಲ್ಲಿ ಎರಡನೆಯ ಬಲ್ಲಾಳನ ಆಳಿಕೆ ಸಂಭವವಾದದ್ದರ ಜತೆಯಲ್ಲಿಯೇ ರಾಜನ ಅಧಿಕಾರ ಹಿಂದೆಂದೂ ಇಲ್ಲದಷ್ಟು ಬೆಳೆಯಿತು. ಈ ದಿಶೆಯಿಂದ ಮಂತ್ರಿಗಳ ಅಧಿಕಾರ ಕ್ರಮೇಣ ಇಳಿಮುಖವಾಗುತ್ತಾ ಬಂದಿತು. ಇದರ ಪರಿಣಾಮವಾಗಿ ಈ ಸಭೆ ಕೇವಲ ಹೆಸರಿನಲ್ಲಿ ಮಾತ್ರ ಉಳಿದಿತ್ತೆಂದು ಮುಂದಿನ ಶಾಸನಗಳು ಸೂಚಿಸುತ್ತವೆ. ಹೊಯ್ಸಳರ ಕಷ್ಟಕಾಲದಲ್ಲಿ ಬಹುಶಃ ಪ್ರಬಲ ಸೇನಾನಿಗಳು ರಾಜನೊಡನೆ ಸೇರಿಕೊಂಡು ಅವನ ನಾಯಕತ್ವದಲ್ಲಿ ಪಂಚಪ್ರಧಾನ ಸಭೆಯನ್ನು ಕೂಡಿಸಿ ಅದರಲ್ಲಿ ತಾವೇ ಪ್ರಬಲರಾಗಿ ಒಂದು ಬಗೆಯ ಸೈನಿಕ ಸರ್ವಾಧಿಕಾರತ್ವವನ್ನು ರೂಢಿಸಿಕೊಂಡಿರಬಹುದೆನಿಸುತ್ತದೆ.

**ಪ್ರಾಂತೀಯ ಆಡಳಿತ**

ವಿಷ್ಣುವರ್ಧನನ ಕಾಲದಲ್ಲಿ ದೇಶವನ್ನು ಹಲವು ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಈ ಪೈಕಿ ತಲಕಾಡು, ಕೊಂಗುನಾಡು, ನಂಗಲಿ, ಗಂಗವಾಡಿ, ನೊಳಂಬವಾಡಿ, ಹಲಗೆರೆ, ಹಲಸಿಗೆ, ಕುಂತಲ, ತೊಂಡರನಾಡು, ಕಂಗನಾಡು, ಪುನ್ನಾಡು, ಏಳುಸಾವಿರ, ಮತ್ತು ಬನವಾಸಿ ಇವು ಅತಿ ಮುಖ್ಯವಾದವು.

ಪ್ರಾಂತ್ಯಗಳಂತೆಯೇ ವ್ಯಾಪಾರಿ ಕೇಂದ್ರಗಳನ್ನೂ ಗಡಿಗಳಲ್ಲಿ ಸ್ಥಾಪಿಸಲಾಗಿತ್ತು. ಇಲ್ಲಿ ವಿದೇಶೀಯರು ಸೇರಿ ಸಂತೆಗಳಲ್ಲಿ ಸಾಮಾನುಗಳ ವಿನಿಮಯ ಮಾಡಿಕೊಳ್ಳುತ್ತಿದ್ದರು. ದನಗಳ ಕಳವು ಮತ್ತು ರಾಜ್ಯದ ಮತ್ತು ನೆರೆಯ ಜನರ ಮಧ್ಯೆ ತಿಕ್ಕಾಟದ ಸಾಧ್ಯತೆಯಿದ್ದದ್ದರಿಂದ ಸಣ್ಣ ಜಿಲ್ಲೆಗಳನ್ನು ಪ್ರತ್ಯೇಕ ಪ್ರಾಂತ್ಯಗಳನ್ನಾಗಿ ಮಾಡಿ ಅವನ್ನು ಬಲಾಢ್ಯನಾದ ಮತ್ತು ರಕ್ಷಣಾಸಾಮರ್ಥ್ಯವುಳ್ಳ ರಾಜ್ಯಪಾಲನ ವಶಕ್ಕೆ ಒಪ್ಪಿಸಲಾಗುತ್ತಿತ್ತು.

ಅಂದು ವಾಡಿಕೆಯಲ್ಲಿದ್ದ ನಡೆವಳಿಕೆಯಂತೆ ಪ್ರಾಂತ್ಯಗಳನ್ನು ರಾಜ್ಯಪಾಲರ ಹತೋಟಿಗೆ ಒಳಪಡಿಸಲಾಗುತ್ತಿತ್ತು. ಇವರಾದರೊ, ಗೆದ್ದ ರಾಜ್ಯಗಳ ಹಳೆಯ ರಾಜಮನೆತನದವರು ಅಥವಾ ರಾಣಿಯರ ಬಂಧುಗಳು ಅಥವಾ ಆಳಿಕೆಗಾರರ ಕುಟುಂಬದವರು ಅಥವಾ ಅನುಪಮವಾದ ಸೇನೆ ಮತ್ತು ಅರ್ಹತೆಗಾಗಿ ಆರಿಸಲ್ಪಟ್ಟವರು ಆಗಿದ್ದರು. ಪಟ್ಟಾಧಿಕಾರಿಯಾದ ರಾಜಕುಮಾರ ಮತ್ತು ಕೆಲವು ವೇಳೆ ರಾಣಿಯರು ಪ್ರಾಂತ್ಯಗಳ ಅಧಿಕಾರದಲ್ಲಿರುತ್ತಿದ್ದರು. ಆಸಂದಿ 500 ನ್ನಾಳಿದ ವಿಷ್ಣುವರ್ಧನನ ಸತಿ ಬೊಮ್ಮಲ, ಕುಂಬಳವನ್ನಾಳಿದ ಎರಡನೆ ಬಲ್ಲಾಳನ ಸತಿ ಚೋಳಮಹಾದೇವಿ ಇವರೇ ಅದಕ್ಕೆ ನಿದರ್ಶನ. ಬೇವೂರು ದಂಗೆಯಲ್ಲಿ ಅಸಮ ಸಾಹಸ ತೋರಿ ಅದನ್ನು ಅಡಗಿಸುವಲ್ಲಿ ಮಡಿದ ಕೇತಮಲ್ಲನಾಯಕನ ಕುಟುಂಬದವರಿಗೆ ಚೋಳಮಹಾದೇವಿಯು 'ಕೊಡುಗೆ' ನೀಡಿದುದನ್ನೂ ಗಮನಿಸಬಹುದು. ಕೆಲವು ಸಂದರ್ಭಗಳಲ್ಲಿ ರಾಣಿಯ ಅಥವಾ ರಾಜನ ಬಂಧುಗಳು ಪ್ರಾಂತ್ಯದ ಅಧಿಕಾರದಲ್ಲಿರುತ್ತಿದ್ದರು. ಶಾಂತಲಾದೇವಿಯ ಸೋದರಳಿಯ ಬೆಲ್ಲೆಯನಾಯಕ ಮಳಿಗಿಯ ರಾಜ್ಯಪಾಲನಾಗಿದ್ದ (Kp. 68). ರಾಜಲಾದೇವಿಯ ಸೋದರಮಾವ ಮಂಚಿರಸನು ವಿಷ್ಣುಸಮುದ್ರವನ್ನು ಆಳುತ್ತಿದ್ದ. ಪ್ರಾಂತ್ಯಗಳ ರಾಜ್ಯಪಾಲ

ಹುದ್ದೆಗಳನ್ನು ಆನುವಂಶಿಕ ಸ್ಥಾನಗಳನ್ನುಳಿದು ರಾಜನೇ ನೀಡುತ್ತಿದ್ದ. ರಾಜ್ಯಕ್ಕೆ ಅಮೋಘವಾದ ಸೇವೆ ಸಲ್ಲಿಸಿದ್ದಕ್ಕೆ ಮನ್ನಣೆಯಾಗಿ ಅವರನ್ನು ಸಾಮಂತರೆಂದು ಕರೆಯಲಾಗುತ್ತಿತ್ತು. ಸೈನಿಕ ಕಾರ್ಯಾಚರಣೆಯ ಸನ್ನಿವೇಶದಲ್ಲಿ ಕೆಲವು ವೇಳೆ ರಾಜ್ಯಪಾಲ ಪದವಿ ನೀಡಿಕೆಯನ್ನು ನಿರ್ಧರಿಸಲಾಗುತ್ತಿತ್ತು. ಎರಡನೆ ಬಲ್ಲಾಳನು ಬೆಲ್ಲಿಯನಾಯಕನಿಗೆ ಮಾಂಡಲಿಕ ಸ್ಥಾನದ ಪೂರ್ಣ ಅಂತಸ್ತನ್ನು ಇತ್ತದ್ದು, ಎರಡನೆ ನರಸಿಂಹನು ಕುಮಾರ ಧೋಲ ಭೂಕೆರೆ ದಂಡನಾಯಕನಿಗೆ ಪೂರ್ವ ಪ್ರದೇಶದ ರಾಜ್ಯಪಾಲತನವನ್ನು ಒಪ್ಪಿಸಿದ್ದು ಇಲ್ಲಿ ಗಮನಿಸತಕ್ಕ ವಿಚಾರ.

ಪುನರ್ ವ್ಯವಸ್ಥೆಯ ಮಹಾಕಾರ್ಯ ಮತ್ತು ಪ್ರದೇಶಗಳ ಆಕ್ರಮಣ ಉದ್ಯಮವನ್ನು ಬಹುತೇಕ ವಾಗಿ ಈ ಆನಂವಂಶಿಕ ರಾಜ್ಯಪಾಲರು ಅಥವಾ ಸಾಮಂತರು, ಮತ್ತು ರಾಜನ ಆಯ್ಕೆಯ ರಾಜ್ಯಪಾಲರು ಮಾತ್ರವೆ ನಿರ್ವಹಿಸುತ್ತಿದ್ದರು. ಅವರಲ್ಲನೇಕರು ಗಂಗ ಪಾಳೆಯಗಾರರು. ಇವರು ಚೋಳರ ಆಧಿಪತ್ಯದಲ್ಲಿ ರೊಚ್ಚಿಗೆದ್ದು ಕಟ್ಟಕಡೆಗೆ ಆ ಆಧಿಪತ್ಯವನ್ನು ಕೊನೆಗಾಣಿಸಿ ಸ್ವಾತಂತ್ರ್ಯವನ್ನು ಮತ್ತೆ ಗಳಿಸಲು ಹೊಯ್ಸಳ ರೊಡನೆ ಸ್ನೇಹೋದ್ದೇಶದಿಂದ ಕೂಡಿಕೊಂಡಿದ್ದವರು. ಆನುವಂಶಿಕ ರಾಜ್ಯಪಾಲರು ಸ್ವಾತಂತ್ರ್ಯಕ್ಕೋಸ್ಕರ ಯಾವಾಗಲೂ ಸಂಚು ನಡೆಸುತ್ತಲೇ ಇರುತ್ತಿದ್ದರು. ತಮ್ಮ ಸಲುವಾಗಿಯೇ ಸಣ್ಣ ಪಾಳೆಯ ಪಟ್ಟುಗಳನ್ನು ಸ್ಥಾಪಿಸಿಕೊಳ್ಳುವ ಕುಹಕವಾದ ಯೋಜನೆಯುಳ್ಳವರಾಗಿದ್ದರು. ಗಡಿಗಳಲ್ಲಿದ್ದ ರಾಜ್ಯಪಾಲರುಗಳು ರಾಜಕೀಯ ಕ್ರಾಂತಿ ಅಥವಾ ರಾಜವಂಶದ ಬದಲಾವಣೆಯ ಸಮಯದಲ್ಲಿ ಅವಕಾಶಗಳನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಿದ್ದರು. ಹೊಯ್ಸಳ ಆಡಳಿತದ ಗೌರವ ಘನತೆ ಮತ್ತು ರಾಜ್ಯದ ಅಧಿಪತಿಯಾಗಿ ರಾಜ ಕುಟುಂಬದವರು ಮುಂದುವರಿಯುವಿಕೆ ಇವನ್ನು ಉಳಿಸಬೇಕೆಂದಿರುವ ಪಕ್ಷದಲ್ಲಿ ಈ ರಾಜ್ಯಪಾಲರುಗಳ ವಿಚಾರದಲ್ಲಿ ಸದಾ ಜಾಗರೂಕವಾಗಿರುವುದು ಮಾತ್ರವಲ್ಲ, ಕಟ್ಟುನಿಟ್ಟಾದ ಹತೋಟಿಯನ್ನೂ ಇಟ್ಟುಕೊಳ್ಳಬೇಕಾಗಿದ್ದದ್ದು ಅಗತ್ಯವಾಗಿತ್ತು.

ಅಪೂರ್ಣ ಸ್ವಾತಂತ್ರ್ಯದಿಂದಿದ್ದ ರಾಜ್ಯಪಾಲರುಗಳಿಂದ ಅಪಾಯ ಸೂಚನೆಗಳಿದ್ದವಾದ ಕಾರಣ ಅವರ ಕಾರ್ಯಭಾರಗಳ ಮೇಲೆ ನಿಗಾ ಇಡುವಂತೆ ಮೇಲ್ವಿಚಾರಕರನ್ನು ನೇಮಕ ಮಾಡುವ ಅಗತ್ಯ ಹೊಯ್ಸಳ ರಾಜರಿಗಿತ್ತು. ಚಾಲುಕ್ಯರಿಂದ ಅನುಕರಣೆ ಮಾಡಲಾಗಿದ್ದ ಅತ್ಯಂತ ಮುಖ್ಯವಾದ ಹುದ್ದೆ ಇದು. ಕ್ರಿ.ಶ. 1192ರಲ್ಲಿ ಸಂದರೆ ಹರಿಯಣ್ಣ, 1195ರಲ್ಲಿ ತೊಡಪಲ್ಲಿ ದಂಡನಾಯಕ (ದಣಾಯಕ), ಬೆನೂಗಳ್ಳಿಯಲ್ಲಿ ಕವನಯ್ಯದಣಾಯಕ–ಇವರುಗಳು ಎರಡನೆ ಬಲ್ಲಾಳನ ಪ್ರತಿನಿಧಿಗಳಾಗಿ ಉತ್ತರದ ಸಾಮಂತರ ಮೇಲಿದ್ದ ಮೇಲ್ವಿಚಾರಕರ ಪೈಕಿ ಕೆಲವರಾಗಿದ್ದರು. ದಕ್ಷಿಣದಲ್ಲಿ ಚಕ್ರಾಧಿಪತ್ಯ ಬೆಳೆದಂತೆಲ್ಲಾ ಮತ್ತು ಹೊಯ್ಸಳರ ರಾಜ್ಯದ ಗಡಿ ಪಾಂಡ್ಯ ಮತ್ತು ಕಾಡವರಾಜ್ಯಗಳನ್ನು ಅಂಟಿಕೊಂಡಂತಾದಾಗ, ದಕ್ಷಿಣದಲ್ಲಿನ ಸಾಮಂತ ಪ್ರದೇಶಗಳಲ್ಲಿ ಮೇಲ್ವಿಚಾರಕರ ಆಗತ್ಯತೆಯನ್ನು ಮನಗಾಣಲಾಯಿತು. ಈ ದಶೆಯಿಂದ ಎರಡನೆ ನರಸಿಂಹನ ಪ್ರತಿನಿಧಿಯಾಗಿ ಅಮ್ಮಣ್ಣನನ್ನು ನೇಮಕಮಾಡುವ ಪ್ರಸಂಗ ಒದಗಿತು; ಸಾಮಂತರ ಮೇಲೆ ಇವನನ್ನು ನಿಯೋಜಿಸಲಾಯಿತು. ಕ್ರಿ.ಶ. 1253ರ ತನಕ ಇವನು ಅಧಿಕಾರದಲ್ಲಿದ್ದ. ದಕ್ಷಿಣ ಪ್ರಾಂತ್ಯಗಳ ಅನೇಕಸ್ಥಳಗಳಲ್ಲಿ ಸೋಮೇಶ್ವರನ ಪ್ರತಿನಿಧಿಗಳಿದ್ದರು. ಪುದುಕೋಟೆಯಲ್ಲಿ ಸಿಂಗಣ್ಣ ದಂಡನಾಯಕ, ತಿರುಚಿರಪಳ್ಳಿಯಲ್ಲಿ ಸೋಮಯ್ಯ, ತಂಜಾವೂರಿನಲ್ಲಿ ಕಂಪಯ್ಯ, ಚಕ್ರಾಧಿಪತ್ಯದ ದಕ್ಷಿಣದ ವಿವಿಧ ಪ್ರದೇಶಗಳಲ್ಲಿ ಆಳಿಕೆ ನಡೆಸುತ್ತಿದ್ದರು.

ರಾಜಕೀಯ ಸ್ಥಿತಿಗತಿಗಳಿಗನುಗುಣವಾಗಿ ರಾಜನ ಖಚಿತ ಇಚ್ಛೆಯಂತೆ ರಾಜ್ಯಪಾಲರುಗಳ ನೇಮಕ ಅಥವಾ ಅವರನ್ನು ಈ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವರ್ಗಾಯಿಸುವ ಅಗತ್ಯವುಂಟಾಗುತ್ತಿತ್ತು. ಸರ್ವಾಧಿಕಾರಿಗಳನ್ನು ರಾಜ್ಯಪಾಲ ಹುದ್ದೆಗೆ ಬಡ್ತಿನೀಡುತ್ತಿದ್ದುದು ಕೇವಲ ಸೈನಿಕ ದಕ್ಷತೆಗಾಗಿ. ಇದು ಸಾಮಾನ್ಯ ನಡೆವಳಿಯಾಗಿತ್ತು. ಕ್ರಿ.ಶ. 1158ರಲ್ಲಿ ಹಿರಿಯ ಮನೆವೆಗ್ಗಡೆ ಗಜಸಹಣಿ ಬಿಲಿಮಯ್ಯನನ್ನು

ತುಮಕೂರಿನ, ಇನ್ನೊಮ್ಮೆ ಕಡೂರಿನ ರಾಜ್ಯಪಾಲ ಹುದ್ದೆಯಿಂದ ಸರ್ವಾಧಿಕಾರಿ ಪದವಿಗೆ ನೇಮಕಮಾಡಿದ್ದೂ ಅಮುಖ್ಯವಾದ ಪ್ರಾಂತ್ಯಗಳಿಂದ ರಾಜ್ಯಪಾಲರನ್ನೂ ಅವರ ಸೈನಿಕ ಸಾಮರ್ಥ್ಯವನ್ನು ಗಣನೆಗೆ ತಂದುಕೊಂಡು ಬೇರೆ ಕಡೆಗಳಿಗೆ ವರ್ಗಾಯಿಸಿದುದೂ ಸಾದೃಶ್ಯವಾಗುತ್ತದೆ. ವಾಮರನ ಮಗ ಅಮಾತ್ಯ ದಂಡನಾಯಕನನ್ನು ಕ್ರಿ.ಶ. 1236ರಲ್ಲಿ ಹಾಸನದಿಂದ ಬಳ್ಳಾರಿಗೂ, ಬಳ್ಳಾರಿಯಲ್ಲಿ ರಾಜ್ಯಪಾಲನಾಗಿದ್ದ ಅಮ್ಮಣ್ಣನನ್ನು ಕ್ರಿ.ಶ. 1239ರಲ್ಲಿ ಚೋಳ ಪ್ರದೇಶದ ಮೇಲೆ ಮೇಲುಸ್ತುವಾರಿ ನೋಡುವುದಕ್ಕಾಗಿ ಚೆಂಗಲ್ಪಟ್ಟಿಗೂ, ಕ್ರಿ.ಶ. 1235ರಲ್ಲಿ, ತಿರುಚಿರಪಳ್ಳಿಯ ರಾಜ್ಯಪಾಲ ದೊಡ್ಡ ದಣಾಯಕನ ಮಗ ವಲ್ಲಿದಣಾಯಕನನ್ನು ತಿರುಚರಪಳ್ಳಿಯಿಂದ ಕ್ರಿ.ಶ. 1237ರಲ್ಲಿ ಚೆಂಗಲ್ಪಟ್ಟಿಗೂ, ಮೂರನೆ ನರಸಿಂಹನ ಆಳಿಕೆಯಲ್ಲಿ ಯಲಹಂಕದ ರಾಜ್ಯಪಾಲನಾಗಿದ್ದ ನಂದಗೆರೆಯ ಬಾಚಿಯರಸನನ್ನು ಗಡಿ ಪ್ರಾಂತ್ಯಗಳಿಗೂ ವರ್ಗಮಾಡಿದ ವಿಚಾರಗಳು ಬಡ್ತಿ ಮತ್ತು ವರ್ಗಾವರ್ಗಿ ನಿತ್ಯವ್ಯವಹಾರವಾಗಿದ್ದವೆಂದು ಸೂಚಿಸುತ್ತವೆ. ಉತ್ತರದಿಂದ ಯಾದವರು ಚಕ್ರಾಧಿಪತ್ಯದ ಮೇಲೆ ಆಕ್ರಮಣ ಮಾಡುವರೆಂಬ ಭೀತಿ ತಲೆದೋರಿದಾಗ, ಮತ್ತು ಚಕ್ರಾಧಿಪತ್ಯ ಒಡೆದು ಛಿದ್ರವಾಗುವಂತಹ ಭ್ರಾತೃವಿನಾಶಕ ಒಳಕಲಹಗಳು ಕಾಣಿಸಿಕೊಂಡಾಗ, ದಾಡಿ ಸೋಮಯ್ಯದಣಾಯಕ, ಸಿಂಗಯ್ಯ ಮತ್ತು ಅವರ ಮಕ್ಕಳು ಆಗ್ನೇಯದಲ್ಲಿ, ತೆರಕಣಾಂಬಿಯಲ್ಲಿ ಮಾಧವ, ಪೆನುಕೊಂಡೆಯಲ್ಲಿ ಅಳಿಯ ಮಾಚಯ್ಯ ಮತ್ತು ಅವನ ಮಕ್ಕಳು—ಈ ಪ್ರಮುಖ ರಾಜ್ಯಪಾಲರುಗಳ ಸೇವೆ ರಾಜವಂಶಕ್ಕೆ ಅತ್ಯಾವಶ್ಯಕವೆಂದು ಬಗೆದು ಅವರನ್ನು ಎಲ್ಲಿಗೂ ವರ್ಗಮಾಡಲಿಲ್ಲ.

ತನ್ನ ಸುಖಸಂತೋಷಕ್ಕಾಗಿ ತಾನೇ ನಿರ್ಮಿಸಿಕೊಂಡ ನಗರಗಳಲ್ಲಿ ರಾಜ ವಾಸಿಸುತ್ತಿದ್ದಂತೆ, ಪ್ರತಿಯೊಬ್ಬ ರಾಜ್ಯಪಾಲನೂ ತನ್ನದೇ ರಾಜಧಾನಿ ನಗರವನ್ನು ಏರ್ಪಡಿಸಿಕೊಂಡು ಅಲ್ಲಿ ತಂಗಿರುತ್ತಿದ್ದ. ಯುದ್ಧ ಕಾರ್ಯಾಚರಣೆಯ ಕ್ಷೇತ್ರದ ಸಮೀಪ ಹೂಡಲಾಗಿದ್ದ ಸೈನಿಕರ ಶಿಬಿರಗಳನ್ನು ರಾಜ ನಗರಗಳಾಗಿ ಕೇವಲ ಆಯಕಟ್ಟಿನ ದೃಷ್ಟಿಯಿಂದಲೇ ಪರಿವರ್ತಿಸಲಾಗುತ್ತಿತ್ತು. ಮೊದಲು ಸೊಸೆವೂರು, ತರುವಾಯ ದೋರಸಮುದ್ರ ಹೊಯ್ಸಳರ ಮುಂಚಿನ ರಾಜಧಾನಿಗಳಾಗಿದ್ದವು. ಅದರ ಅಭೇದ್ಯತೆಯ ದೆಸೆಯಿಂದಲೇ ಉಚ್ಚಂಗಿಯನ್ನು ವಿಷ್ಣುವರ್ಧನ ಕ್ರಿ.ಶ. 1137ರಲ್ಲಿ ರಾಜನಗರಿಯಾಗಿ ಮಾಡಿ ಅಲ್ಲಿ ವಾಸಿಸಿ ಉತ್ತರದಿಂದ ಬರುವ ದಾಳಿಕಾರರಿಂದ ದೇಶವನ್ನು ರಕ್ಷಿಸಲು ಉದ್ಯುಕ್ತನಾದನು. ಉಚ್ಚಂಗಿ ಮಾತ್ರವಲ್ಲದೆ, ದೋರ ಸಮುದ್ರ, ಬೇಲೂರು, ವಿಷ್ಣುಸಮುದ್ರ ಮತ್ತು ತೊಣ್ಣೂರು ಇವನ್ನೂ ಅವನು ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದ ; ಆಗಾಗ್ಗೆ ಅಲ್ಲಿಯೂ ತಂಗುತ್ತಿದ್ದ. ಮೊದಲನೆ ಬಲ್ಲಾಳನು ತನ್ನ ರಾಜಧಾನಿಯನ್ನು ಬೇಲೂರಿಗೆ ವರ್ಗಾಯಿಸಿ, ಆ ಸ್ಥಳದ ಸುತ್ತಲೂ ಭಾರಿಕೋಟೆಗಳನ್ನೂ, ಆಳವಾದ ಕಂದಕಗಳನ್ನೂ ನಿರ್ಮಿಸಿ ಭದ್ರಪಡಿಸಿದ. ಎರಡನೆ ಬಲ್ಲಾಳನು ಹನಯ ಕೋಟೆಯನ್ನು ವಿಜಯಗಿರಿ ಎಂದು ಕರೆದ. ಆದರೆ ತಾನು ಮಾತ್ರ ವಿಜಯಸಮುದ್ರ ಅಥವಾ ವಿರೂಪಾಕ್ಷಪುರದಲ್ಲಿ ವಾಸಿಸುತ್ತಿದ್ದ. ಅವನು ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಖಜಾನೆಯ ಪಟ್ಟಣವಾಗಿದ್ದ ಬೊಗಲಿಯಲ್ಲಿ ಮೊದಲು ನೆಲಸಿದ್ದ. ಸೇವುಣರ ಮೇಲೆ ಕ್ರಿ. ಶ. 1196 ಮತ್ತು 1197 ರಲ್ಲಿ ನಡೆಸಿದ ದಂಡಯಾತ್ರೆಯ ಸಮಯದಲ್ಲಿ ಎರಂಬರಗೆ ಮತ್ತು ಕುಕ್ಕನೂರು, ಕೊಪ್ಪ ಮತ್ತು ಹುಲಿಗೆರೆ ಈ ಸ್ಥಳಗಳಲ್ಲಿಯೂ ವಾಸಿಸಿದ್ದ. ತನ್ನ ಭೋಗದ ಸಲುವಾಗಿಯೂ ಚೋಳಮಂಡಲದ ಸಾಮಂತರ ಮೇಲೆ ಹತೋಟಿಯನ್ನಿಟ್ಟುಕೊಳ್ಳುವ ನಿಮಿತ್ತವಾಗಿಯೂ ಸೋಮೇಶ್ವರ ತಾನು ನಿರ್ಮಿಸಿದ ಶ್ರೀರಂಗಕ್ಕೆ ಉತ್ತರದ ಕಣ್ಣನೂರು ಅಥವಾ ವಿಕ್ರಮಪುರ ಎಂಬಲ್ಲಿ ತಂಗಿದ್ದ. ಖ್ಯಾತಿಗಳಿಸಿದ ರಾಜರುಗಳಲ್ಲಿ ಕೊನೆಯವನಾದ ಮೂರನೆ ಬಲ್ಲಾಳನು ಕ್ರಿ.ಶ. 1341ರಲ್ಲಿ ತೊಣ್ಣೂರಿನಲ್ಲಿ ವಾಸವಾಗಿದ್ದ. ಮುಸ್ಲಿಮರ ದಾಳಿಯಿಂದ ಪಾರಾಗಲು ಕೊನೆಗೆ ಉನ್ನಮಲ್ಲಪಟ್ಟಣಕ್ಕೆ ಹೋಗಿ ನೆಲಸಿದ.

ಗಡಿಗಳಲ್ಲಿದ್ದ ರಾಜ್ಯಪಾಲರುಗಳು ದನಗಳ ಅಪಹಾರಕ್ಕೆ ಆಸ್ಪದವಿಲ್ಲದಂತೆ ಗಡಿಗಳನ್ನು ರಕ್ಷಿಸುವುದು ಮಾತ್ರವಲ್ಲ, ಶತ್ರುಗಳ ದಾಳಿಯನ್ನು ಬಡಿದಟ್ಟಿ, ಶಾಂತಿಯನ್ನು ಕಾಪಾಡುವುದೂ ಅವರ ಆದ್ಯ ಕರ್ತವ್ಯ

ವಾಗಿತ್ತು. ಗಡಿಗಳನ್ನು ಬಲಪಡಿಸಲು ಕಾಯಂ ಸೇನೆಯನ್ನು ಅಲ್ಲಿ ಇಡುವ ಆವಶ್ಯಕತೆಯುಂಟಾಯಿತು. ವಿಜಯಾದಿತ್ಯಮಂಗಲ ಮತ್ತು ತಲಕಾಡಿನ ರಾಜ್ಯಪಾಲರು ತಮ್ಮದೇ ಆದ ಸ್ವಂತ ಸೇನೆಯನ್ನಿಟ್ಟು ಕೊಂಡಿದ್ದರು. ತಮ್ಮದೇ ಆದ ಆಸ್ಥಾನವನ್ನು ನಡೆಸಿಕೊಂಡು ಬರುತ್ತ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ತಾವೇ ರಾಜರಂತೆ ವರ್ತಿಸುತ್ತಿದ್ದರು. ಸಿವಿಲ್ ಅಧಿಕಾರಿಗಳಾಗಿ ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ವಸೂಲುಮಾಡಿ, ಖಜಾನೆಗೆ ಮುಟ್ಟಿಸುವುದು ಅಲ್ಲದೆ ಸಾಮಾನ್ಯ ವ್ಯವಹಾರ ಮತ್ತು ದುಷ್ಕರ್ಮಗಳ ಸಂಬಂಧವಾದ ನ್ಯಾಯ ನಿರ್ವಹಣೆಯ ಕರ್ತವ್ಯಕ್ಕೂ ಅವರು ಜವಾಬ್ದಾರರಾಗಿರುತ್ತಿದ್ದರು.

ಪ್ರಾಂತ್ಯಗಳನ್ನು 'ನಾಡು'ಗಳಾಗಿ ವಿಂಗಡಿಸಲಾಗಿತ್ತು. ಅವುಗಳ ಸಂಖ್ಯೆ ಅಲ್ಲಿನ ಆದಾಯ ಅಥವಾ ಸೈನಿಕ ಪೂರೈಕೆಗಳ ಪ್ರಾಮುಖ್ಯಕ್ಕನುಗುಣವಾಗಿರುತ್ತಿತ್ತು. ಗಂಗವಾಡಿ ಹದಿನಾಲ್ಕು 'ನಾಡು' ಗಳಾಗಿ ವಿಭಾಗವಾಗಿತ್ತು. ರಾಜ್ಯಪಾಲನ ಕೈಕೆಳಗಿದ್ದ ಅಧಿಕಾರಿ ಹೆಗ್ಗಡೆ. 'ಹೆಗ್ಗಡೆಕರಣ', 'ರಾಜಾಧ್ಯಕ್ಷ ಕರಣ', 'ರಾಜ್ಯಹೆಗ್ಗಡೆ'—ಹೀಗೆಂದೂ ಇವನನ್ನು ಕರೆಯುಲಾಗುತ್ತಿತ್ತು. ಅಧಿಕಾರಿಗಳ ವರ್ಗದಲ್ಲಿ ಇವನೇ ಶ್ರೇಷ್ಠಾಧಿಕಾರಿಯಾಗಿದ್ದದ್ದರಿಂದ, ಸಾಮಾನ್ಯ ವ್ಯವಹಾರ ಮತ್ತು ಸೈನಿಕ ವಿಚಾರವನ್ನೂ ಕೆಲಮಟ್ಟಿಗೆ ಕಂಗಾಯ ಕವಳಿಗೆಗಳ ವಸೂಲಿ ಮತ್ತು ವಿಲೇವಾರಿ, ನ್ಯಾಯಾಂಗದ ನಿರ್ವಹಣೆ, ಇನ್ನು ಕೆಲಮಟ್ಟಿಗೆ ಶತ್ರುಗಳ ಆಕ್ರಮಣವನ್ನು ತಡೆಗಟ್ಟುವ ಸೈನಿಕ ಕಾರ್ಯ, ಆಗಾಗ್ಗೆ ರಾಜನ ಅಥವಾ ರಾಜ್ಯಪಾಲನ ಆಜ್ಞಾನುಸಾರ ಶತ್ರುವಿನ ಪ್ರದೇಶದಲ್ಲಿ ದಾಳಿ ನಡೆಸುವುದು—ಈ ಎಲ್ಲ ಕಾರ್ಯಗಳ ಜವಾಬ್ದಾರಿಯೂ ಅವನ ಪಾಲಿಗಿತ್ತು. ಅವನು ಕಂದಾಯ ಮತ್ತು ತೆರಿಗೆಗಳನ್ನು ವಿಧಿಸಲು ಅಥವಾ ರದ್ದುಗೊಳಿಸಲು ರಾಜ್ಯಪಾಲನ ಅನುಮತಿಯನ್ನು ಕೇಳಬೇಕಿತ್ತು, ಇದೇ ರೀತಿ ರಾಜ್ಯಪಾಲನು ರಾಜನ ಅನುಮತಿಯನ್ನು ಪಡೆಯಬೇಕಿತ್ತು. ಶ್ರೀಕರಣ ಹೆಗ್ಗಡೆ, ಸುಂಕವೆಗ್ಗಡೆ, ಖನವೆಗ್ಗಡೆ, ದಂಡಾಯ ವೆಗ್ಗಡೆ—ಇವರುಗಳ ಕರ್ತವ್ಯ ಸ್ಪಷ್ಟವಾಗಿ ನಿರ್ದಿಷ್ಟಪಡಿಸಲಾಗಿದ್ದು, ನಾಡಿನ ಮತ್ತು ಪ್ರಾಂತ್ಯದ ಆಡಳಿತವನ್ನು ನ್ಯಾಯ ಮತ್ತು ಸಮಾನದೃಷ್ಟಿಯಿಂದ ನಿರ್ವಹಿಸುವಲ್ಲಿ ಇವರು ನಾಡಹೆಗ್ಗಡೆಯೊಡನೆ ಜತೆಗೂಡಿ ಕೆಲಸಮಾಡುತ್ತಿದ್ದರೆಂದು ಗೊತ್ತಾಗುವುದು. ಇವನ ಸಹಾಯಕ ಅಧಿಕಾರಿ ಸುಂಕವೆಗ್ಗಡೆ. ಇವನು ಮಗ್ಗದೆರೆ, ಆಡುದೆರೆ, ಚಾಲಪಣ, ಗಾಣದೆರೆ, ಒಕ್ಕಲುದೆರೆ—ಈ ತೆರಿಗೆಗಳನ್ನೂ ಸಂತೆಗಳಲ್ಲಿ ಅಡಕೆ, ಉಪ್ಪು, ಮೆಣಸು, ಅರಿಶಿನ, ಕುದುರೆಗಳು, ಆನೆಗಳು, ರತ್ನಗಳು ಮತ್ತು ಶ್ರೀಗಂಧದ ಮರ ಮುಂತಾದವು ಗಳ ಮೇಲಿನ ಸುಂಕವನ್ನೂ ವಸೂಲು ಮಾಡುತ್ತಿದ್ದ. ಆದರೆ ತೆರಿಗೆಗಳಿಂದ ಹಳ್ಳಿಗಳು ರಾಜನಿಂದ ವಿನಾಯಿತಿ ಪಡೆದಾಗ ಅಥವಾ ಸ್ಥಳೀಯ ದೇವರುಗಳ ಸಲುವಾಗಿ ಅಂದರೆ ದೇವಸ್ಥಾನಗಳ ಆಯವ್ಯಯ ದಲ್ಲಿ ಸೇರಿಸಿದ ವೆಚ್ಚವನ್ನು ಮಾಡಲಿಕ್ಕಾಗಿ ಆ ಹಳ್ಳಿಗಳನ್ನು ಮುಡುಪಿಟ್ಟಾಗ ಅಂಥ ಹಳ್ಳಿಗಳಿಂದ ತೆರಿಗೆಗಳನ್ನು ಅಧಿಕಾರಿಗಳು ವಸೂಲು ಮಾಡದಂತೆ ಕಟ್ಟುನಿಟ್ಟಾದ ನಿರ್ಬಂಧವಿತ್ತು. ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ, ರಾಜನ ಆಜ್ಞೆಯನ್ನು ಉಲ್ಲಂಘಿಸಿದರೆ ಕಠಿನವಾದ ಶಿಕ್ಷೆಗೆ ಗುರಿಯಾಗಬೇಕಿತ್ತು. ಸಾಮಾನ್ಯ ವ್ಯವಹಾರ, ಸೈನಿಕ ಅಥವಾ ನ್ಯಾಯಾಂಗದ ಯಾವುದೇ ಆಡಳಿತ ನಡೆಸುವ ಪ್ರತಿ ಹೆಗ್ಗಡೆಯ ಅಧೀನ ದಲ್ಲಿಯೂ ಒಬ್ಬ ಸೇನಬೋವನಿರುತ್ತಿದ್ದ. ಸೈನಿಕ ಇಲಾಖೆಯಲ್ಲಿ ರಾಜ್ಯನೀತಿಯ ಆವಶ್ಯಕತೆಗಾಗಿ ರಾಜ್ಯಪಾಲರುಗಳನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ವರ್ಗಾಯಿಸುವುದು ರೂಢಿಯಲ್ಲಿ ಇದ್ದಂತೆ ಭ್ರಷ್ಟಾಚಾರ ಮತ್ತು ಹಣದ ದುರುಪಯೋಗವನ್ನು ತಪ್ಪಿಸಲು ಸುಂಕದ ಇಲಾಖೆಯಲ್ಲಿಯೂ ವರ್ಗಾವರ್ಗಿ ಮಾಡಲಾಗುತ್ತಿತ್ತು.

ರಾಜನೊಡನೆ ಕೆಲಮಟ್ಟಿಗೆ, ರಾಜ್ಯಪಾಲರೊಡನೆ ಮತ್ತೆ ಕೆಲಮಟ್ಟಿಗೆ ಸಂಬಂಧಪಟ್ಟಿದ್ದ ಬೇರೆ ಮುಖ್ಯ ಅಧಿಕಾರಿ ಧರ್ಮಾಧಿಕರಣ. ಸಾಂತರರ ಶಾಸನಗಳಲ್ಲಿ ಈ ಹೆಸರು ಕಾಣಬರುವುದು. ಆದರೆ ಹೊಯ್ಸಳರ ಕಾಲದಲ್ಲಿ ಈ ಅಧಿಕಾರಿಯನ್ನು ಬೇರೆ ಹೆಸರಿನಿಂದ ಅಂದರೆ ಲೋಕೋಪಕಾರಕರಣ ಎಂದರೆ ಸಾರ್ವಜನಿಕತ ಹಿತಗಳಿಗೆ ಸಂಬಂಧಪಟ್ಟ ಅಧಿಕಾರಿ ಎಂದು ಕರೆಯುತ್ತಿದ್ದರು. ತಂತ್ರಾಧಿಕಾರಿ ಅಥವಾ

ತಂತ್ರಾಧಿಷ್ಠಾಯಕ ರಾಜ್ಯದ ಮತ್ತೊಬ್ಬ ಮುಖ್ಯ ಅಧಿಕಾರಿ. ರಾಯಭಾರ ಕೌಶಲ ಮತ್ತು ರಾಜನೀತಿಜ್ಞತೆಯಲ್ಲಿ ತೊಡಗುವುದು ಈ ಅಧಿಕಾರಿಯ ಕರ್ತವ್ಯವೆಂದು ಕೆಲವು ಶಾಸನಗಳಲ್ಲಿ ವಿವರಿಸಲಾಗಿದೆ- 'ಚತುರ್ವಿಧ ಪ್ರಣೀತ ನೀತಿಚಾಣಾಕ್ಯ ತಂತ್ರಾಧಿಕಾರಿ' ಎಂದು ಹೇಳಲಾಗಿದೆ. ಮನೆವೆಗ್ಗಡೆ ಎಂಬ ಇನ್ನೊಬ್ಬ ಅಧಿಕಾರಿ ರಾಜನ ನಂಬಿಕೆಗೆ ಪಾತ್ರನಾದವನಿದ್ದು, ಕೆಲವು ಸಂದರ್ಭಗಳಲ್ಲಿ ಮುಖ್ಯವಾದ ಪ್ರಾಂತ್ಯಗಳ ರಾಜ್ಯಪಾಲನಾಗುತ್ತಿದ್ದ.

## ಸೈನ್ಯಾಡಳಿತ

ಸೈನ್ಯದ ಆಡಳಿತವು ಗಂಗರು ಮತ್ತು ಇತರ ರಾಜವಂಶಗಳ ಕಾಲದಲ್ಲಿದ್ದ ಹಾಗೆ ಸಾಮಂತ ಸ್ವರೂಪದಲ್ಲಿತ್ತೆಂದು ಶಾಸನಗಳಿಂದ ತಿಳಿಯಬರುತ್ತದೆ. ಸೈನ್ಯದಲ್ಲಿ ರಾಜನ ಸ್ವಂತ ಸೇನೆ ಅಥವಾ ಅಂಗರಕ್ಷಕ ಪಡೆ, ಮತ್ತು ಯುದ್ಧ ಸಮಯದಲ್ಲಿ—ಕ್ರಾಂತಿಕಾರಕ ಆಂದೋಳನಗಳ ವೇಳೆಯಲ್ಲಿ—ರಾಜ್ಯಪಾಲರುಗಳು ಒದಗಿಸಿದ ಸೇನಾದಳ ಆಗಿಂದಾಗ್ಗೆ ದಂಡಯಾತ್ರೆ ಅಥವಾ ದೇಶದ ರಕ್ಷಣೆಯ ಸಲುವಾಗಿ ಕೂಡಿಸಿದ ಕೂಲಿ ಸೈನಿಕರೂ ಇರುತ್ತಿದ್ದರು.

ಸೇನೆಯಲ್ಲಿ ಅಶ್ವಪಡೆ ಬಹು ಮುಖ್ಯ ಅಂಗವಾಗಿದ್ದಿತೆಂದು ತೋರುತ್ತದೆ. ರಕ್ಷಣೆ ಮತ್ತು ಆಕ್ರಮಣ ಕಾರ್ಯಾಚರಣೆಗಳೆರಡರಲ್ಲಿಯೂ ಈ ಪಡೆಯನ್ನು ಉಪಯೋಗಿಸಲಾಗುತ್ತಿತ್ತು. ವಿಷ್ಣುವರ್ಧನನ ಕಾಲದಲ್ಲಿ ಮುಖ್ಯವಾಗಿ ಕಾಂಭೋಜದಿಂದ ತರಿಸಿದ ಅಶ್ವಗಳು ಈ ಪಡೆಯಲ್ಲಿದ್ದವು. ಬಗೆ ಬಗೆಯ ರೀತಿಯಲ್ಲಿ ಮುನ್ನುಗ್ಗಿ ನಡೆಯುವುದು, ದಂಡಯಾತ್ರೆಯಲ್ಲಿ ದಾಳಿನಡೆಸುವುದು, ಕಷ್ಟ ಸಹಿಸುವಿಕೆ, ಸ್ಥೈರ್ಯ ಮತ್ತು ಧೈರ್ಯಗಳಿಸುವಿಕೆ—ಈ ಎಲ್ಲ ವಿಚಾರಗಳಲ್ಲಿಯೂ ಕುದುರೆಗಳಿಗೆ ಶಿಕ್ಷಣವೀಯಲು ಶಾಲೆಗಳೇರ್ಪಟ್ಟಿದ್ದವು. ಕ್ರಿ.ಶ. 1140ರಲ್ಲಿ ಬೊಮ್ಮಲದೇವಿ ಅನಂತಪಾಲನನ್ನು 'ರಾಜನ ಅಶ್ವಸವಾರಿ ಶಾಲೆ'ಯ "ಅಶ್ವ ಸಹಣಿ" ಅಥವಾ ಕುದುರೆ ತರಬೇತುಗಾರನಾಗಿದ್ದು ಅದರ ಮೇಲೆ ಮೇಲ್ವಿಚಾರಕನಾಗಿರುವಂತೆ ನೇಮಕಮಾಡಿಕೊಂಡಿದ್ದಳು. ಅಶ್ವಗಳ ಯಜಮಾನನನ್ನು ಪಳ್ಳಿಕಾರ, ಅಶ್ವಾಧ್ಯಕ್ಷ ಮತ್ತು ತುರಗಸಹಣಿ ಎಂದು ಕರೆಯಲಾಗುತ್ತಿತ್ತು. ಹಳೇಬೀಡಿನ ಕೇದಾರೇಶ್ವರ ದೇವಾಲಯದ ಗೋಡೆಗಳ ಮೇಲಿರುವ ಕೆತ್ತನೆಗಳು ಅಶ್ವಾರೋಹಿ ಪಡೆಗಳ, ಕಾಲ್ಬಲಗಳ ರಕ್ಷಾಕವಚಗಳು ಮತ್ತು ಉಡಿಗೆ ತೊಡಿಗೆಗಳು ಹೇಗಿದ್ದವೆಂದು ಪರಿಚಯಮಾಡಿ ಕೊಡುತ್ತವೆ. ಬೇಡರದು ಅತ್ಯಂತ ಗಮನಾರ್ಹವಾದ ತುಕಡಿ. ಏಕೆಂದರೆ ಅವರು ಬಿಲ್ಲು ಬಾಣ ಪ್ರಯೋಗದಲ್ಲಿ ಪ್ರವೀಣರಾಗಿದ್ದರು. ಅವರು ಪದೇ ಪದೇ ಗ್ರಾಮಗಳಿಗೆ ಮುತ್ತಿಗೆ ಹಾಕುವುದು, ಹೆಂಗಸರನ್ನು ಅಪಮಾನಗೊಳಿಸುವುದು, ದನಗಳನ್ನು ಅಪಹರಿಸುವುದು—ಇವಲ್ಲಿ ತೊಡಗುತ್ತಿದ್ದುದರಿಂದ ಹೊಯ್ಸಳ ರಾಜರು ಅವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿದ್ದರು. ಈ ಕಾರಣದಿಂದ ಅವರನ್ನು ಹೊಯ್ಸಳ ಶಿಬಿರದ ನಿಷ್ಠಾವಂತ ಪ್ರತಿನಿಧಿಗಳು (ಹೊಯ್ಸಳ ಬೀಡಿನ ಪರಮವಿಶ್ವಾಸಿಗಳಪ್ಪ) ಎಂದು ಗೌರವ ಭಾವನೆಯಿಂದ ಕರೆಯಲಾಗುತ್ತಿತ್ತು.

ಈಗಾಗಲೇ ಕಂಡಿರುವಂತೆ ಪುರಾತನಕಾಲದಲ್ಲಿ ಆನೆಗಳು ಸೈನ್ಯವ್ಯವಸ್ಥೆಯಲ್ಲಿ ಬಹು ಮುಖ್ಯ ಭಾಗವಾಗಿದ್ದವು. ಆನೆಗಳ ತಯಾರಿಗಾಗಿ ಪ್ರತ್ಯೇಕ ಕೇಂದ್ರಗಳಿದ್ದವು. ಎರಡನೆ ಬಲ್ಲಾಳನ ಆಳಿಕೆಯಲ್ಲಿ ನರಸೀಪುರ ತಾಲೂಕಿನ ಕೋಳಿಗುಂಡ ಇಂತಹ ಕೇಂದ್ರವಾಗಿತ್ತು. ಮಾವಂತರು ಆನುವಂಶಿಕ ಉದ್ಯೋಗದವರು. ಅವರಲ್ಲಿ ಕೆಲವರು ಬಹಳ ಐಶ್ವರ್ಯವಂತರಾಗಿದ್ದರೆಂದು ಶಾಸನಗಳು ತಿಳಿಸುತ್ತವೆ. ಕೇತಯಮಾವಂತ ಎಂಬವನು ಕ್ರಿ.ಶ. 1147ರಲ್ಲಿ ತುಂಬಾ ವೆಚ್ಚದಲ್ಲಿ ಶಿವದೇವಾಲಯವೊಂದನ್ನು ಕಟ್ಟಿಸಿದ್ದು ಇದಕ್ಕೆ ಒಂದು ನಿದರ್ಶನ. ಮಾವಂತರು ಮತ್ತು ಅಕ್ಕತಿಗ (ಯುದ್ಧದಲ್ಲಿ ಆನೆಗಳನ್ನು

ಕಾಯಲು ನೇಮಕವಾಗಿದ್ದ ಸೈನಿಕರು "ಆನೆಯ ಕೊಲಿಗಪುರಿಗೆ") ಇವರಿಗೆ ಗಜಸಹಣೆಯಂತೆಯೇ ಯುದ್ಧವೇಳೆಯಲ್ಲಿ ಅಥವಾ ಗಾಬರಿಯಿಂದ ಚೆಲ್ಲಾಪಿಲ್ಲಿಯಾಗಿ ಪಲಾಯನವಾಗುವ ಸಂದರ್ಭದಲ್ಲಿ ಆನೆಗಳನ್ನು ಒಳ್ಳೆಯ ಹತೋಟಿಯಲ್ಲಿಟ್ಟು ನೋಡಿಕೊಳ್ಳುವ ಬಗೆಯಲ್ಲಿ ವಿಶೇಷ ತಯಾರಿಕೊಡಲಾಗುತ್ತಿತ್ತು. ಏಕೆಂದರೆ ಮುತ್ತಿಗೆಯಲ್ಲಿ ಭೀಕರ ಹೋರಾಟ ಆನೆಯ ಪಡೆಗಳಿಂದಲೇ ನಡೆಯುವದಿತ್ತು. ಮಾವಂತರು ಉಪಯೋಗಿಸುತ್ತಿದ್ದ ಆಯುಧಗಳೆಂದರೆ ಬಿಲ್ಲು ಬಾಣಗಳು ಮತ್ತು ಉದ್ದವಾದ ಬರ್ಚಿಗಳು. ಯುದ್ಧ ರಭಸದಲ್ಲಿ ಈ ಬರ್ಚಿಗಳು ಕಾಲ್ಬಲದ ಯೋಧರನ್ನು ಇರಿಯಲೆಂಬುದೇ ಅದರ ಪ್ರಯೋಗದ ಉದ್ದೇಶ.

ಸೈನ್ಯದಲ್ಲಿ ಜಾತಿವಾರು ತಂಡಗಳನ್ನು ಪ್ರತ್ಯೇಕವಾಗಿ ಏರ್ಪಡಿಸಿ ಅವನ್ನು ಬ್ರಾಹ್ಮಣರ ನಾಯಕತ್ವ ದಲ್ಲಿ ಬಿಟ್ಟಿದ್ದರೂ ಕೂಡ, ಸೈನಿಕಸೇವೆ ಯಾವೊಂದು ನಿರ್ದಿಷ್ಟ ಜಾತಿಗೆ ಮಿತಿಪಡಿಸಿದ್ದಿಲ್ಲ. ಮಹಾ ದಂಡನಾಯಕರಲ್ಲಿ ಕೆಲವರು ಬ್ರಾಹ್ಮಣರಾಗಿದ್ದರು. ಅಕ್ಕಸಾಲಿಗರೂ, ಕೌರಿಕರೂ ಸೇನೆಯಲ್ಲಿದ್ದರು. ಎಲ್ಲ ಸಾಮಂತರು ಮತ್ತು ದಂಡನಾಯಕರು ತಮ್ಮ ಸ್ವಂತ ಖಾಯಂ ಸೇನೆಗಳನ್ನಿಟ್ಟುಕೊಂಡಿದ್ದರು. ಇವುಗಳಲ್ಲಿ ಆವಶ್ಯಕವಾದಷ್ಟು ಅಶ್ವಗಳೂ ಆನೆಗಳೂ ಗಂಡಾಳುಗಳೂ ಉನ್ನತಾಧಿಕಾರಿಗಳೂ (ಎಂಕರು) ಅಲ್ಲದೆ ಕೂಲಿ ಸಿಪಾಯಿಗಳೂ ಇದ್ದರು. ಯುದ್ಧದಲ್ಲಿ ಅಥವಾ ಗಡಿ ಆಕ್ರಮಣಕಾರ್ಯದಲ್ಲಿ ಆಕ್ರಮಣ ಕಾರರನ್ನು ಹಿಮ್ಮೆಟ್ಟಿಸಿ ಶೌರ್ಯತೋರಿದ ಕೂಲಿ ಸೈನಿಕರಿಗೆ ಕೂಡ ಕೆಲವು ವೇಳೆ ಉನ್ನತನಾಯಕತ್ವ ವನ್ನು ಒಪ್ಪಿಸಲಾಗುತ್ತಿತ್ತು. ಒಮ್ಮೊಮ್ಮೆ ಗ್ರಾಮಗಳು ಅಥವಾ ನಾಡುಗಳು ಸಿಪಾಯಿಗಳನ್ನು (ನಾಡಾಳು) ಒದಗಿಸುತ್ತಿದ್ದವು. ನಾಡಾಳುಗಳಲ್ಲಿ ಬೇಡರು, ಕಳ್ಳರು, ಮತ್ತು ಅಂಥ ಬೇರೆಯ ಗುಡ್ಡಗಾಡಿನವರು ಇರು ತ್ತಿದ ರು. ಇವರಿಂದ ಸೇವೆ ಪಡೆಯುವುದರ ಮೂಲಕ ಅಂದರೆ ಗಡಿ ಹಲ್ಲೆ ಮತ್ತು ದನಗಳ ಅಪಹಾರವನ್ನು ತಡೆಗಟ್ಟುವ ಕಾರ್ಯದಲ್ಲಿ ಬಳಸಿಕೊಳ್ಳುವ ಬಗೆಯಲ್ಲಿ ಇವರಿಗೆ ಅಲ್ಪ ಸ್ವಲ್ಪ ತಯಾರಿ ಕೊಡುವಂತಾಗಿತ್ತು. ಸ್ಥಿರವಾದ ಸೇನೆಯನ್ನಿಟ್ಟುಕೊಳ್ಳುವ ಸಲುವಾಗಿ ಸಾಮಂತರಿಗೆ ಉಂಬಳಿ ಜಮೀನನ್ನು ನೀಡಲಾಗುತ್ತಿತ್ತು. ಆನೆಯ ಸೆಸ್ಸೆ, ಕುದುರೆಯ ಸೆಸ್ಸೆ, ವೀರಸೆಸ್ಸೆ, ಮತ್ತು ಆಗೊಮ್ಮೆ ಈಗೊಮ್ಮೆ ಕಟಕಸೆಸ್ಸೆ ಮತ್ತು ದಂಡಿನ ಭಾಗತೆ-ಮುಂತಾದ ಪ್ರತ್ಯೇಕ ತೆರಿಗೆಗಳನ್ನು ಸೈನ್ಯವನ್ನಿಟ್ಟು ನಡೆಸಿಕೊಳ್ಳುವ ಸಲುವಾಗಿ ವಿಧಿಸ ಲಾಗುತ್ತಿತ್ತು. ಗಡಿಗಳಲ್ಲಿ ಸೈನಿಕ ಠಾಣೆ ದಂಡಿನ ಶಿಬಿರಗಳಿರುತ್ತಿದ್ದವು, ಅಥವಾ ರಾಜ್ಯಪಾಲರ ಮತ್ತು ದಣಾಯಕರ ನಿವಾಸಸ್ಥಾನಗಳನ್ನು ಚೆನ್ನಾಗಿ ಕಾಯುವ ಏರ್ಪಾಟಿತ್ತು. ಇದಕ್ಕೆ ಕಾರಣ ಅಲ್ಪ ಸ್ವಲ್ಪ ಕಾರಣಗಳಿಗಾಗಿಯೂ ಪದೇ ಪದೇ ಪ್ರಾಪ್ತವಾಗುತ್ತಿದ್ದ ಹಲ್ಲೆಗಳನ್ನು ತಡಗಟ್ಟುವುದೇ ಆಗಿತ್ತು.

ಯುದ್ಧಕ್ಕೆ ಮುನ್ನವೇ ರಾಜನು ಸಿಪಾಯಿಗಳಿಗೆ ಅವರ ನಿಷ್ಠಾವಂತ ಸೇವೆಯ ಭರವಸೆಗಾಗಿ ಸಹಾಯ ನೀಡುತ್ತಿದ್ದ. ಅದು ಮಾತ್ರವಲ್ಲ, ಅವರು ಶೌರ್ಯ ಹಾಗೂ ಪರಾಕ್ರಮ ಪ್ರದರ್ಶಿಸಲೆಂಬ ಉದ್ದಿಶ್ಯವೂ ಸಹಾಯ ನೀಡಿಕೆಯಿತ್ತು. ಯುದ್ಧದಲ್ಲಿ. ಮಡಿದ ಸೈನಿಕರ ಸಂಸಾರದವರಿಗೆ ಸೂಕ್ತ ಪರಿಹಾರದ ವ್ಯವಸ್ಥೆಯನ್ನೂ ರಾಜ ಕೈಗೊಳ್ಳುತ್ತಿದ್ದ. ವ್ಯಕ್ತಿಗತವಾದ ಪ್ರತಿಭೆಗಾಗಿ ನೀಡಿದ ಭೂಸಹಾಯಕ್ಕೆ 'ಬಾಳ್ಗಟ್ಟು' ಅಥವಾ 'ರಕ್ತಕೊಡಗಿ' ಎನ್ನಲಾಗುತ್ತಿತ್ತು. ಯುದ್ಧದ ವಿಷಮ ಸ್ಥಿತಿಯಲ್ಲಿ ಸೇನೆಯ ನಾಯಕತ್ವವನ್ನು ಪಳಗಿದ ಯೋಧನಿಗೆ ವೀಳ್ಯಕೊಟ್ಟು ವಹಿಸಿಕೊಡುವುದು ಯುದ್ಧಕಾಲದ ಪ್ರಾಸಂಗಿಕ ರೂಢಿಯಾಗಿರುತ್ತಿತ್ತು. ಇಂಥ ಸನ್ನಿವೇಶದಲ್ಲಿ 'ಸುಭಟ' ಎಂಬ ಬಿರುದನ್ನು ರಾಜ ಇತ್ತು, ಅವನು ಎಡಗಾಲಲ್ಲಿ ಧರಿಸಲು ಚಿನ್ನದ ತೊಡವನ್ನು ಒಪ್ಪಿಸಿ ಗೌರವಿಸುತ್ತಿದ್ದ.

ರಾಜನಾಗಲಿ ಸೇನಾಧಿಪತಿಯಾಗಲಿ ಯುದ್ಧಕ್ಕೆ ತೆರಳುವ ಮುನ್ನ ದೇವಾಲಯಕ್ಕೆ ದಾನ ನೀಡುವುದು, ಅಥವಾ ತಮ್ಮ ಇಷ್ಟದೇವತೆಗೆ ಭಕ್ತಿ ಸಲ್ಲಿಸುವುದು ಪದ್ಧತಿಯಾಗಿತ್ತು. ತನ್ನ ಇಷ್ಟ

ದೈವ ವಿಜಯನಾರಾಯಣನಿಗೆ ಸಲ್ಲಿಸಿದ ಭಕ್ತಿ ಶ್ರದ್ಧೆಯ ಪೂಜೆಯ ಫಲವಾಗಿಯೇ ಎರಡನೆ ಬಲ್ಲಾಳನು ದಕ್ಷಿಣದ ಚಕ್ರಾಧಿಪತ್ಯವನ್ನು ಗಳಿಸಿದನೆಂದು ಹೇಳಲಾಗಿದೆ.

ಚಾಲುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳ ಚಕ್ರೇಶ್ವರರಿಂದ ತಮಗೆ ಬಂದ ಆಡಳಿತ ಪದ್ಧತಿಯಲ್ಲಿ ವಿಜಯನಗರದರಸರು ಮುಖ್ಯವಾದ ಮಾರ್ಪಾಟುಗಳನ್ನೇನೂ ಮಾಡಲಿಲ್ಲ.

ಮೂಲ ಲೇಖಕರು ಮತ್ತು ಅನುವಾದಕರು : ಡಾ|| ಎಂ.ವಿ. **ಕೃಷ್ಣರಾವ್**

# ಅನುಬಂಧ 2

## ಕರ್ನಾಟಕದಲ್ಲಿ ಶಾಕ್ತಪೂಜಾಪದ್ಧತಿ

ಶಾಕ್ತಪೂಜಾಪದ್ಧತಿ ಎಂಬ ಮಾತು ಸಾಮಾನ್ಯವಾಗಿ ಅಸ್ಪಷ್ಟವಾದ ಸಂಗತಿಗಳನ್ನೆಬ್ಬಿಸಿ ಅನೇಕ ವೇಳೆ ತಪ್ಪು ತಿಳಿವಳಿಕೆಗೆ ಈಡಾಗಿರುತ್ತದೆ; ಅಲ್ಲದೆ ಎಲ್ಲ ಸಂದರ್ಭಗಳಲ್ಲಿಯೂ ಮನಸ್ಸಿಗೆ ಒಪ್ಪುವಂತಹದೂ ಅಲ್ಲ. ಅದು ಕರ್ನಾಟಕ ಪ್ರಾಂತದಲ್ಲಿ ಮೈದೋರಿದುದರ ಸಂಬಂಧವಾಗಿ ಅದರ ಪ್ರಾಮುಖ್ಯವನ್ನು ವಿಶದ ಪಡಿಸಲು ನಾವು ಯತ್ನಿಸುತ್ತೇವೆ. ಕರ್ನಾಟಕ ಎಂಬುದು, ಅದು ಸೂಚಿಸುವ ಅರ್ಥಸಂಬಂಧಕ್ಕಿಂತ ಅಥವಾ ವಿಸ್ತೃತ ಮೈಸೂರಿನ ಸದ್ಯದ ಎಲ್ಲೆಗಿಂತ ಹೆಚ್ಚು ವಿಶಾಲವಾದ ಅರ್ಥವನ್ನೊಳಗೊಂಡಿದೆ. ಅಲ್ಲದೆ ಶಾಕ್ತಾರಾಧನೆಯೆಂಬುದು ಭಾರತದ ಉಳಿದ ಭಾಗದವರ ಕೂಡ, ಕರ್ನಾಟಕದವರೂ ಆಚರಿಸಿದ ಮತಶ್ರದ್ಧೆಯ ಲೋಕೋತ್ತರ ವಿಷಯವೆಂಬುದನ್ನು ಅರಿತು ನೆನಪಿನಲ್ಲಿಟ್ಟುಕೊಳ್ಳುವುದಗತ್ಯ. ವಾಸ್ತವಿಕವಾಗಿ ಈ ಆರಾಧನಾ ಪದ್ಧತಿಯನ್ನು ವಿಶ್ವಸಂಬಂಧ ದೃಷ್ಟಿಯಿಂದ ನೋಡಲು ಸಾಧ್ಯ. ಫ್ರೆಡರಿಕ್ ಹೆಯ್ಲರ್ ತನ್ನ 'ದಾಸ್‌ಗೆಬೆಟ್' (Dasgebet) ಎಂಬ ಬೃಹದ್ಗ್ರಂಥದಲ್ಲಿ ವಿಪುಲವಾದ ಉದಾಹರಣೆಗಳಿಂದ ತೋರಿಸಿಕೊಟ್ಟಿರುವಂತೆ ದೈವವನ್ನು ಪಿತನೆಂದು ಭಾವಿಸಿದಂತೆ ಮಾತೆಯೆಂದು ಭಾವಿಸಿದ್ದುದೂ ಅಷ್ಟೇ ಸಹಜ ಹಾಗೂ ಮೂಲಭೂತವಾದ ಕಲ್ಪನೆ. ಅದು ಪ್ರಾಚೀನ ಪ್ರಪಂಚದ ಪ್ರತಿಯೊಂದು ಭಾಗದಲ್ಲಿಯೂ ವ್ಯಾಪಕವಾಗಿ ಕಂಡುಬರುತ್ತಿದ್ದಿತು. ಮಹಾ ಮಾತೆಯ ಆರಾಧನಾ ಪದ್ಧತಿ ಇಜಿಪ್ಟ್, ಇಸ್ರೇಲ್ ಮತ್ತು ಮೆಡಿಟರೇನಿಯನ್ನಿನ ಸುತ್ತಮುತ್ತಣ ದೇಶಗಳಲ್ಲಿ ಜನಬಳಕೆಯ ಪ್ರಬಲವಾದ ಆಚರಣೆಯಾಗಿದ್ದಿತು.

ಈ ಸಂದರ್ಭದಲ್ಲಿ ಇ. ಎ. ಪೇನ್ (E. A. Payne) ತನ್ನ 'ಶಾಕ್ತರು' (The Saktas) ಎಂಬ ಗ್ರಂಥದಲ್ಲಿ ಸೂಚಿಸಿರುವಂತೆ ಇತರ ದೇಶಗಳಲ್ಲಿ ನಾಗರಿಕತೆ ಬೆಳೆದಂತೆ ಮತಶ್ರದ್ಧೆಯ ಅಂಗವಾಗಿ ಶಕ್ತಿಪೂಜೆಯ ಪ್ರಾಮುಖ್ಯವು ಬರಬರುತ್ತ ಹೆಚ್ಚು ಹೆಚ್ಚಾಗಿ ಇಳಿಮುಖವಾಗತೊಡಗಿದರೆ, ಮತದ ಬೆಳವಣಿಗೆಯ ಆದಿಕಾಲಕ್ಕಿಂತ ಆ ಅನಂತರದಲ್ಲಿಯೇ ದೇವಿಯರ ಬಗೆಗೆ ಗಣ್ಯತೆಯನ್ನು ತೋರಿಸುವುದರಲ್ಲಿ ಭಾರತದೇಶವು ಅಸದೃಶವಾಗಿದ್ದಿತ್ತೆಂಬುದು ಗಮನಾರ್ಹವಾದ ಸ್ವಾರಸ್ಯಕರ ಸಂಗತಿ. 'ಮತ ಹಾಗೂ ನೀತಿಶಾಸ್ತ್ರಗಳ ವಿಶ್ವಕೋಶ' (Encyclopaedia of Religion and Ethics)ದಲ್ಲಿರುವ 'ಸ್ತ್ರೀಮೂಲತತ್ತ್ವ' (The female Principle) ಎಂಬ ತನ್ನ ಲೇಖನದಲ್ಲಿ ಸ್ಟಾರ್‌ಬಕ್ ಕೂಡ ಅಭಿಪ್ರಾಯಪಡುವುದೇನೆಂದರೆ, ವೇದಗಳಲ್ಲಿ ಚಿತ್ರಿತವಾಗುವ ಜೀವನದ ಬಹುಮಟ್ಟಿಗೆ ಪುರಾತನವಾದ ವಿದ್ಯಮಾನದಲ್ಲಿ ದೇವತೆಗಳ ನಡುವೆ ದೇವಿಯರಿಗೆ ಬಹು ಅಮುಖ್ಯವಾದ ಸ್ಥಾನವಿದೆ; ಆದರೆ ಜನತೆ ಶಾಂತಜೀವನವನ್ನು ಕೈಕೊಂಡು ಕೃಷಿಯ ಉದ್ಯಮದಲ್ಲಿ ತೊಡಗಿ ನೆಲಸಿದ ಬಳಿಕ ಸ್ತ್ರೀದೇವತೆಗಳ ಆರಾಧನೆಯು ಅತ್ಯಂತ ಪ್ರಮುಖತೆಯ ಸ್ಥಾನಕ್ಕೇರಿತು. ಅತಿಪುರಾತನ ಕಾಲದಿಂದಲೂ ಭಾರತದಲ್ಲಿ ಮಹಿಳೆಯರಿಗೆ ಉಚ್ಚಸ್ಥಾನವನ್ನು ಕೊಟ್ಟಿದ್ದೇ ಅದಕ್ಕೆ ಕಾರಣ ಎಂದು ತಿಳಿಸಿದ್ದಾನೆ.

ಶಕ್ತಿ ಎಂಬ ಪದ ಚೈತನ್ಯ, ಪ್ರಭಾವ ಅಥವಾ ಕಾರ್ಯನಿರ್ವಹಣ ಸಾಮರ್ಥ್ಯದ ಸಂಕೇತವಾಗಿದೆ. ಅದು ವಿಶ್ವದ ಆದಿತತ್ತ್ವವೆನಿಸಿ ಅದರಿಂದಲೆ ಎಲ್ಲ ಬಗೆಯ ವ್ಯವಹಾರವೂ ನಡೆಯುವುದೆಂದು ಗ್ರಹಿಸಲ್ಪಟ್ಟಿದೆ. ಗುರುತ್ವಾಕರ್ಷಣೆ ಇಲ್ಲವೆ ವಿದ್ಯುಚ್ಛಕ್ತಿಯಂತೆ ವ್ಯಕ್ತಿಸ್ವರೂಪವಲ್ಲದ ಅಸ್ತಿತ್ವವೆಂದಂತೂ

ಅದನ್ನು ಭಾವಿಸದೆ, 'ಮಹಾದೇವಿ' ಅಥವಾ 'ಜಗದಂಬೆ' ಎಂದು ಮಾತೃಭಾವನೆಯಿಂದ ಆರಾಧಿಸಲಾಗಿದೆ. ಅಪಕ್ವವಾದ ಸರ್ವಚೇತನವಾದದಿಂದ ಹಿಡಿದು ಅತ್ಯುಚ್ಚ ತತ್ತ್ವದರ್ಶನದ ಎಲ್ಲ ಮಟ್ಟದಲ್ಲಿಯೂ ಅಸಂಖ್ಯಾತವಾದ ಹೆಸರುಗಳಿಂದ ಸರ್ವದಾ ಈ ಆದಿಶಕ್ತಿಯೇ ಉಪಾಸನೆಯ ಧ್ಯಾನವಸ್ತು.

ಶಕ್ತಿಯನ್ನು ಕುರಿತ ಭಾವನೆ ವೇದದಷ್ಟು ಹಿಂದಿನದು. ವೇದಗಳಲ್ಲಿನ ದೇವತೆಗಳ ಪ್ರಧಾನಲಕ್ಷಣವೆಂದರೆ ಶಕ್ತಿ, ಪ್ರಭಾವ. ದರ್ಶನಗಳಲ್ಲೆಲ್ಲ ಬಹುಶಃ ಅತಿ ಹಿಂದಿನದಾದ ಸಾಂಖ್ಯದ ಪ್ರಕೃತಿತತ್ತ್ವದೊಡನೆ ಶಕ್ತಿಯ ದಾರ್ಶನಿಕ ಭಾವನೆ ನಿಕಟವಾಗಿ ಸಂಬಂಧಿಸಿದೆ. ಸಾಂಖ್ಯದರ್ಶನದ ಎರಡು ಪ್ರಮುಖ ತತ್ತ್ವಗಳಾದ ಪುರುಷ ಮತ್ತು ಪ್ರಕೃತಿ ತತ್ತ್ವಗಳು ಒಂದಲ್ಲ ಮತ್ತೊಂದು ರೂಪದಲ್ಲಿ ಭಾರತದ ಅಖಂಡ ದೇವತಾಖ್ಯಾನ ಅಥವಾ ಪುರಾಣಸಾಹಿತ್ಯಕ್ಕೆ ಆಧಾರವಾಗಿವೆ. ಶಿವ–ಶಕ್ತಿರೂಪವಾಗಿ ಸಂಕೇತಗೊಂಡ ಪುರುಷ ಮತ್ತು ಸ್ತ್ರೀತತ್ತ್ವಗಳ ಸಮಾವೇಶವೇ ವಿಶ್ವೋತ್ಪತ್ತಿಗೆ ಕಾರಣವೆಂಬ ಸಿದ್ಧಾಂತ ತಂತ್ರದ ಅಡಿಗಲ್ಲು ಈ ಶಾಕ್ತಮತ. ಇದು ಪುರಾತನ ಚೀನೀಯರ ಯಿನ್-ಯಾಂಗ್ (yin-yang) ತತ್ತ್ವರೂಪದ ಜಡ-ಅಜಡ, ಲಯ–ಸೃಷ್ಟಿ, ಅಪಸರ್ಪಣ–ಉತ್ಸರ್ಪಣ, ಅರೂಪ–ಸರೂಪ, ಸ್ತ್ರೀ–ಪುರುಷ–ಈದ್ವಂದ್ವ ಭಾವಗಳ ಕಲ್ಪನೆಯನ್ನು ಸ್ಮರಣೆಗೆ ತಂದುಕೊಡುತ್ತದೆ. ಈ ಸಾಂಖ್ಯದರ್ಶನದ ಪ್ರಕೃತಿ-ಪುರುಷ ತತ್ತ್ವಗಳಂತೆ ನಿತ್ಯಭಿನ್ನವಾದುವೆಂದೆನಿಸದೆ ಶಿವ–ಶಕ್ತಿಯರು ಅವಿನಾಭಾವ ಸಂಬಂಧಿಗಳಾಗಿಯೆ ಇರುವರು. ಈ ಭಾವನೆಯು ಎಷ್ಟರ ಮಟ್ಟಿಗೆ ಶ್ರೇಷ್ಠವರ್ಗದ ಭಾರತೀಯ ವಿಚಾರಧಾರೆಗೆ ಮೂಲಭೂತವಾಗಿದೆಯೆಂಬುದನ್ನು ಉದಾಹರಣೆಗೆ ಕಾಳಿದಾಸನು ತನ್ನ ರಘುವಂಶದ ಆದಿಯಲ್ಲಿ ಜಗತ್ತಿನ ಮಾತಾಪಿತರನ್ನು ಕುರಿತು ಮಾಡಿರುವ ಪ್ರಾರ್ಥನಾ ಪದ್ಯದಿಂದ ವಿವೇಚಿಸಬಹುದಾಗಿದೆ. ಶಿವನಿಗೂ ಶಕ್ತಿಗೂ ಇರುವ ತಾರತಮ್ಯವು ನಾವು ಯಾವುದನ್ನು ಒತ್ತಿಹೇಳುತ್ತೇವೆ ಎಂಬುದಕ್ಕೆ ಸಂಬಂಧಿಸಿದುದು. ಶಾಕ್ತಪದ್ಧತಿಗಳು ಶಕ್ತಿಯ ಅಂಶವನ್ನು ಒತ್ತಿಹೇಳಿದರೆ ಉತ್ತರದ ಕಾಶ್ಮೀರೀಶೈವ, ದಕ್ಷಿಣದ ಶೈವಸಿದ್ಧಾಂತ ಹಾಗೂ ಕರ್ಣಾಟಕದಲ್ಲಿಯೇ ಹುಟ್ಟಿ ನೆಲಸಿರುವ ವೀರಶೈವ—ಇವುಗಳು ತಮ್ಮ ಕಟ್ಟುಕಟ್ಟಳೆಯಲ್ಲಿ ಶಕ್ತಿಯ ಭಾವನೆಯೇ ನಿರ್ಣಾಯಕವಾಗಿದ್ದರೂ ಶಿವನಿಗೇ ಪ್ರಾಧಾನ್ಯವನ್ನಿತ್ತಿವೆ. ಇದಕ್ಕೆ ಸ್ವಾರಸ್ಯವಾದ ನಿದರ್ಶನವನ್ನು ವೀರಶೈವಾಚಾರಪರರಾದ ಕೆಳದಿಯ ನಾಯಕರು ಮೂಕಾಂಬಿಕೆಯ ಮಹಾಭಕ್ತರಾಗಿದ್ದ ಸಂಗತಿಯಲ್ಲಿ ಕಾಣಬಹುದು. ಈ ಮೂಕಾಂಬಿಕೆಯ ಪ್ರಖ್ಯಾತ ದೇವಸ್ಥಾನವು ದಕ್ಷಿಣ ಕನ್ನಡದ ಕೊಲ್ಲೂರಿನಲ್ಲಿ ಕೊಡಚಾದ್ರಿ ಶಿಖರದ ಬುಡದಲ್ಲಿದೆ. ಇಲ್ಲಿ ಮೂಕಾಂಬಿಕಾದೇವಿಯ ಪ್ರತಿಮೆಯಲ್ಲದೆ ಆರಾಧನೆಯ ಮೂಲಮೂರ್ತಿಯಾಗಿ ಸ್ಫಟಿಕಲಿಂಗವಿದೆ. ಪರಂಪರಾಗತವಾಗಿ ಬಂದ ನಂಬಿಕೆಯ ಪ್ರಕಾರ ಆ ಲಿಂಗಮಧ್ಯದಲ್ಲಿ ಉದ್ದಕ್ಕೂ ಹಾದುಹೋಗುವ ಸ್ವರ್ಣರೇಖೆಯು ಶಿವ-ಶಕ್ತಿಯರ ಭಿನ್ನಾಭಿನ್ನ ಸಂಯೋಗವನ್ನು ಗುರುತಿಸುವುದಾಗಿದೆ.

ಆಧುನಿಕ ಜಗತ್ತಿಗೆ ಶಾಕ್ತಮತ ಪದ್ಧತಿಯನ್ನು ಪ್ರತಿಪಾದಿಸುವುದರಲ್ಲಿ ಮೊದಲಿಗನಾದ ಸರ್ ಜಾನ್ ವುಡ್ರೋಫ್ (Sir John Woodroffe) ಶಾಕ್ತ ಸಿದ್ಧಾಂತದ ನಿಲವನ್ನು ಸಾಂಖ್ಯದರ್ಶನದ ದ್ವೈತವಾದ ಮತ್ತು ಶಂಕರರ ಅದ್ವೈತವೇದಾಂತದ ಅತಿ ಏಕತತ್ತ್ವವಾದ–ಈ ಎರಡರ ನಡುವಣ ನಿಲವೆಂದು ಅಭಿಪ್ರಾಯಪಟ್ಟಿರುತ್ತಾನೆ. ಸಾಂಖ್ಯದರ್ಶನದ ಜಡವೆನಿಸಿದ ಪ್ರಕೃತಿಯಂತಿರದೆ ಶಕ್ತಿಯು ಚೇತನದ ಒಂದು ತತ್ತ್ವವಾಗಿದೆ; ಅದು ಅದ್ವೈತವೇದಾಂತದ ಮಾಯೆಯ ಹಾಗೆ ಸಂಪೂರ್ಣವಾಗಿ ಭ್ರಾಂತಿಜನಕವೇನಲ್ಲ; ಸದಸದಾತ್ಮಿಕವಾದ ಅಸಾಧಾರಣ ಸವ್ಯಸಂಯೋಗಬಲವನ್ನುಳ್ಳ ತತ್ತ್ವವದು. ಈ ಒಂದು ಅರ್ಥವ್ಯತ್ಯಾಸದೊಡನೆ ಪ್ರಕೃತಿ ಮತ್ತು ಮಾಯೆ ಎಂಬ ಪದಗಳನ್ನು ಸಂಬಂಧಪಟ್ಟ ಸಾಹಿತ್ಯದಲ್ಲಿ ಶಕ್ತಿ ಪದದ ಸಮಾನಾರ್ಥಕಗಳಾಗಿ ಅಡ್ಡಿಯಿಲ್ಲದೆ ಬಳಸಲಾಗಿದೆ. ಪ್ರಕೃತಿಯಂತೆ ಶಕ್ತಿ ತ್ರಿಗುಣಾತ್ಮಕ: ತಮಸ್ (ಕತ್ತಲು), ರಜಸ್ (ಕ್ರಿಯಾತ್ಮಕತೆ) ಮತ್ತು ಸತ್ತ್ವ (ಬೆಳಕು)–ಈ ಮೂರು ಗುಣಗಳನ್ನೂ ಕ್ರಮವಾಗಿ ಕಪ್ಪು, ಕೆಂಪು ಮತ್ತು ಬಿಳುಪು ಬಣ್ಣಗಳಿಂದ ಸಂಕೇತರೂಪವಾಗಿ ನಿರೂಪಿಸಲಾಗಿದೆ. ಈ ತ್ರಿಗುಣಗಳಲ್ಲಿ ಪ್ರಧಾನವಾದುದಕ್ಕನುಗುಣವಾಗಿ, ತ್ರಿಗುಣಾತ್ಮಕ

ಳಾಗಿಯೇ ಸದಾ ಇರುವ ದೇವಿಯನ್ನು ಕಾಳಿ (ಈ ಮಾತಿಗೆ ಕಪ್ಪು ಎಂದೇ ಅರ್ಥ), ಲಕ್ಷ್ಮಿ (ಸಾಂಪ್ರದಾಯಿಕವಾಗಿ ಹವಳದ ಕೆಂಬಣ್ಣವುಳ್ಳವಳು) ಮತ್ತು ಸರ್ವಶುಕ್ಲಾ ಸರಸ್ವತಿಯರ ರೂಪದಲ್ಲಿ ಪೂಜಿಸುವರು. ಇದೇ ಹೆಸರುಗಳಿಂದ ಕೂಡಿ ರುದ್ರ, ವಿಷ್ಣು ಮತ್ತು ಬ್ರಹ್ಮರ ಪೌರಾಣಿಕ ಪತ್ನಿಯರೆನಿಸಿದವರಿಂದ ಪ್ರತ್ಯೇಕಗೊಳಿಸುವುದಕ್ಕಾಗಿ ಕ್ರಿಯಾತ್ಮಕ ತ್ರಿಗುಣಾಧಿದೇವತೆಗಳಿಗೆ 'ಮಹಾ' ಎಂಬ ಪದವನ್ನು ಸಾಮಾನ್ಯವಾಗಿ ಸೇರಿಸಿ ಹೇಳುವರು. ಈ ಪ್ರಕಾರ ಮಹಾಲಕ್ಷ್ಮಿ ವಿಷ್ಣುವಿನ ಪತ್ನಿಯಲ್ಲ, ಆತನಲ್ಲಿಯೇ ಇರುವ ಪರಿಣಾಮ ಪ್ರಭಾವ; ಬೇರೆ ಮಾತಿನಲ್ಲಿ ಹೇಳುವುದಾದರೆ ಆತನ ಶಕ್ತಿ ಆಕೆ. ಈ ಭೇದಗಣನೆಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಆ ಹೆಸರುಗಳನ್ನು ಹಾಗೆಹಾಗೆಯೆ ಮುಂದೆ ಅಧಿಭೂತ, ಅಧಿದೈವ ಹಾಗೂ ಅಧ್ಯಾತ್ಮಕ್ಷೇತ್ರಗಳಿಗೆ ಸಂಬಂಧಿಸಿದ ಶಕ್ತಿಪೂಜೆಯ ಗಮನಾರ್ಹವಾದ ಮೂರು ಹಂತ ಇಲ್ಲವೆ ಮಟ್ಟಗಳನ್ನು ಗುರುತಿಸುವಲ್ಲಿ ಬಳಸಲಾಗುವುದು.

## 2

ಮೊದಲನೆಯ ಮಟ್ಟದಲ್ಲಿ ದೇವಿಯನ್ನು ಆಕೆಯ ಘೋರಸ್ವರೂಪದಲ್ಲಿ ಪೂಜಿಸುವುದು. ಎಂದರೆ ಮಾನವ ಜೀವಿತದ ಸಮಸ್ತ ಹಂತಗಳಲ್ಲಿಯೂ ಆಧಿಭೌತಿಕವನ್ನು ಒಪ್ಪಿಕೊಂಡಂತೆ; ಸೋಂಕುರೋಗ, ಕ್ಷಾಮ ಹಾಗೂ ಪ್ರಾಕೃತಿಕ ಪ್ರಳಯ, ಒಟ್ಟಿನಲ್ಲಿ ವ್ಯಾಪಕ ಹಾಗೂ ಅನಿವಾರ್ಯರೂಪವಾಗಿ ಬರುವ ಸಾವು ನೋವುಗಳನ್ನು ಧೈರ್ಯದಿಂದ ಎದುರಿಸತೊಡಗಿದಂತೆ. ಈ ಆಧಿಭೌತಿಕ ಹಾಗೂ ಮುಂದಿನ ಆಧಿದೈವಿಕ ಮಟ್ಟದಲ್ಲಿ ಈ ಎರಡೂ ನಿಕಟವಾಗಿ ಸಂಬಂಧಪಟ್ಟು ಮಹತ್ತ್ವ ಕೊಡುವುದು ಯುಕ್ತಿಯುಕ್ತವಲ್ಲದ ಆದರೂ ಪ್ರಮಾಣಭೂತವಾದ ಪ್ರಕೃತಿಶಕ್ತಿಗಳಿಗೆ, ಭೀಕರ–ರಹಸ್ಯಾತ್ಮಕಳಾದ ಪ್ರಕೃತಿದೇವಿಯಿಂದ ಮೂಡಿದ ಭಯಭಕ್ತಿ ಹಾಗೂ ರಹಸ್ಯಾರಾಧನೆಯ ಮನೋಭಾವಗಳಿಗೆ ಈ ಭಾವಗಳನ್ನು ರುಡಾಲ್ಫ್ ಆಟೊ (Rudolf Otto) 'ನೂಮಿನಸ್ (Numinous)'—'ದೈವೀಪ್ರಭಾವದ ಆಶ್ಚರ್ಯಾದ್ಭುತ ಮನೋಭಾವ'—ಎಂಬ ಪದದಲ್ಲಿ ಒಂದೆಡೆ ಒಟ್ಟುಗೂಡಿಸಿದ್ದಾನೆ. ಭೀಕರವೂ ನಿಗೂಢವೂ ಆದ ದೈವೀಶಕ್ತಿಯ ಉಗ್ರವೂ ಆವೇಶಪೂರಿತವೂ ಆದ ಅವಸ್ಥೆಯು ಮತಶ್ರದ್ಧೆಯ ತೀವ್ರಾನುಭವದ ಜೀವಂತ ಅಂಶವಾಗಿ ಹೇಗೆ ಉಳಿದಿದೆಯೆಂಬುದನ್ನು ಮನಗಾಣುವಂತೆ ತೋರಿಸಿಕೊಟ್ಟಿದ್ದಾನೆ. ಈ ತತ್ತ್ವದ ತಳಹದಿಯ ಪ್ರಾಧಾನ್ಯವನ್ನು ಇಂದಿನ ಕಾಲದಲ್ಲಿ ಬಹಳ ತಪ್ಪಾಗಿ ತಿಳಿದುಕೊಂಡಿದ್ದರೂ ಹಿಂದೆ ಯಾವಾಗಲೂ ಅದನ್ನು ಎಲ್ಲರೂ ಒಪ್ಪಿದ್ದರು. ಓದುಬರಹ ಬಾರದ ಸ್ಥಳೀಯರ ಪ್ರತಿಭಾಶಕ್ತಿಯಿಂದ ಚಿತ್ರಿತವಾಗಿ ಜನಸಾಮಾನ್ಯರು ಪೂಜಿಸುತ್ತಿದ್ದ ದೇವತೆಗಳೇ ಘೋರದೇವಿಯ ವಿವಿಧ ರೂಪಗಳು. ಇಡೀ ಭಾರತದಲ್ಲಿ, ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಪೂಜಿಸಲ್ಪಡುವ ಅಸಂಖ್ಯಾತ ಗ್ರಾಮದೇವತೆಗಳು ತಮಃಪ್ರಧಾನವಾದ ಮಹಾಕಾಳಿಯ ಪ್ರಾದುರ್ಭಾವಗಳೇ ಸರಿ.

ತನ್ನ ಸಮಷ್ಟಿ ಹಾಗೂ ವ್ಯಷ್ಟಿರೂಪವಾದ ಅಂಶಗಳಲ್ಲಿ ಸುಪ್ತಚೇತನದ ಅಸಂಬದ್ಧವಾದ ಆದರೆ ಕ್ರಿಯಾತ್ಮಕವೆನಿಸಿದ ಕಾರ್ಯವಿಧಾನವನ್ನು ಕುರಿತ ಸುಪ್ತಸ್ಪರ್ಶಿ ಮನಶ್ಶಾಸ್ತ್ರದ ಸಂಶೋಧನ ಜ್ಞಾನದ ಬೆಳಕಿನಲ್ಲಿ ಈ ಬಗೆಯ ಇಂದ್ರಿಯಗೋಚರ ವಿಷಯಗಳ ಸ್ವಾರಸ್ಯವನ್ನು ಗ್ರಹಿಸುವ ಸ್ಥಿತಿಯಲ್ಲಿ ಜಗತ್ತು ಇಂದು ಇದೆಯೆಂಬುದನ್ನು ಈ ಮಧ್ಯೆ ಗಮನಿಸಬಹುದಾಗಿದೆ. ತತ್ತ್ವಜ್ಞಾನದಲ್ಲಿ ಕೂಡ ಅಸ್ತಿತ್ವವಾದದ ರೂಪದಲ್ಲಿ ಪ್ರಬಲವಾದ ಕ್ಷೋಭೆಯುಂಟಾಯಿತು. ಮನುಷ್ಯನು ಪ್ರಮುಖವಾಗಿ ವಿಚಾರಶಕ್ತಿಯುಳ್ಳ ಜೀವಿ ಎಂಬ ದೃಢ ಹಾಗೂ ಸುಭದ್ರವಾದ ಪಾಶ್ಚಾತ್ಯರ ಭಾವನೆಗೆ ವಿರುದ್ಧವಾಗಿ ಅಸ್ತಿತ್ವವಾದವು ತಲೆದೋರಿ ನೆಲೆಗೊಂಡಿತು. ಈ ಪ್ರತಿಕ್ರಿಯೆಯನ್ನು ಮೊದಲು ಒಂದು ಶತಮಾನದ ಹಿಂದೆಯೇ ಡೆನ್ಮಾರ್ಕಿನ ತತ್ತ್ವಜ್ಞಾನಿಯಾದ ಸೊರೆನ್ ಕಿರ್ಕೆಗಾದನು ಮಾತಿನಲ್ಲಿ ವ್ಯಕ್ತಪಡಿಸಿದನು. 'ಭೀತಿಯ ಭಾವನೆ' ಮತ್ತು 'ಅಂಜಿಕೆ ಹಾಗೂ ನಡುಕ' ಎಂಬ ಆತನ ಪ್ರಸಿದ್ಧ ಗ್ರಂಥಗಳೆರಡರ ಶಿರೋನಾಮಗಳು ಅರ್ಥವತ್ತಾಗಿವೆ. ನಮ್ಮ ಕಾಲದ ಅಸ್ತಿತ್ವವಾದಿ ತತ್ತ್ವಜ್ಞರನೇಕರಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ ಅವರೆಲ್ಲರೂ ನಿರ್ಮಿಸಿರುವ

ಮೇಲ್ಕಟ್ಟಡಕ್ಕೆ ಭೀತಿಭಾವದ ತಳಹದಿಯನ್ನು ಹಾಕುವಲ್ಲಿ ತಮ್ಮ ಸಮ್ಮತಿಯನ್ನು ನೀಡಿದ್ದಾರೆ. ವಿಚಾರವಾದವು ಪಟ್ಟು ಹಿಡಿದು ತಳ್ಳಿಹಾಕಿದ ಅಪ್ರಿಯವಾದ ಅನುಭವಗಳು ಮುನ್ಸಿಡಿದೇಳುವುದಕ್ಕೆ ತೊಡಗಿ, ಆಧುನಿಕ ಮಾನವನ ಲಕ್ಷ್ಯವನ್ನು ತಮ್ಮ ಕಡೆಗೆ ಬಲವಾಗಿ ಸೆಳೆದಿವೆ.

ಹೀಗೆ ಡಾ. ವಿಲಿಯಂ ಬ್ಯಾರೆಟ್ ಅಸ್ತಿತ್ವವಾದ ತತ್ತ್ವದ ತನ್ನ ಅಮೂಲ್ಯಜ್ಞಾನವನ್ನೊಳಗೊಂಡ 'ಅವಿಚಾರಿ ಮಾನವ' (Irrational Man) ಎಂಬ ಗ್ರಂಥದಲ್ಲಿ ಉಗ್ರಕನ್ನಿಕೆಯರಿಗೆ ಮಾನವನ ಜೀವನ ವಿಧಾನದಲ್ಲಿ ಅವರಿಗೆ ಸಲ್ಲಬೇಕಾದ ಯೋಗ್ಯಸ್ಥಾನವನ್ನಿತ್ತ ಪ್ರಾಚೀನ ಗ್ರೀಕರ ವಿವೇಕವನ್ನು ಕುರಿತು ವ್ಯಾಖ್ಯಾನ ಮಾಡಿದ್ದಾನೆ. ಆ ರೌದ್ರಿಯರಿಂದ ನಾವು ತಪ್ಪಿಸಿಕೊಳ್ಳಬೇಕೆಂದು ಭಾವಿಸುವ ಸಮಯದಲ್ಲಿ ಅವರೇನು ಅಂತಹ ಹೊರಗಿನವರಲ್ಲವೆಂಬುದನ್ನು ಹೀಗೆ ಮಾತ್ರ ಅರಿತುಕೊಳ್ಳುತ್ತೇವೆ ಎಂದು ಆತನು ತಿಳಿಸಿರುತ್ತಾನೆ. ವಾಸ್ತವವಾಗಿ ಅವರು ಪರಕೀಯರಾಗಿರುವುದಕ್ಕೆ ಪ್ರತಿಯಾಗಿ ಮಿಕ್ಕ ಎಲ್ಲ ದೇವತೆಗಳು ಹಾಗೂ ದೈತ್ಯರುಗಳ ಹಾಗೆ ನಮಗೇ ಸೇರಿದವರಾಗಿದ್ದಾರೆ. ಅವರನ್ನು ಮರೆಯಲು ಇಲ್ಲವೆ ಅವರ ಇರವನ್ನೇ ಅಲ್ಲಗಳೆಯಲು ಹೂಡಿದ ಸಂಚು, ಹೀಗೆ ಮಾಡುವುದರಿಂದ ಆಧುನಿಕ ಸಮಾಜವು ಸ್ವವಿಚಾರದಿಂದ ಓಡಿಹೋಗಲು ಕೈಕೊಂಡ ವ್ಯವಸ್ಥಿತವಾದ ವಿಪುಲಪ್ರಯತ್ನಗಳಲ್ಲಿನ ಮತ್ತೊಂದು ಮೋಸದ ಕೃತ್ಯವಾಗಿ ಮಾತ್ರ ಪರಿಣಮಿಸುತ್ತದೆ.

ವಿಷಯಾಂತರವಾದಂತೆ ತೋರಬಹುದಾದುದಕ್ಕಾಗಿ ಕ್ಷಮಾಯಾಚನೆಯನ್ನೇನೂ ಮಾಡುವ ಅಗತ್ಯವಿಲ್ಲ. ಏಕೆಂದರೆ ಈ ಪರಿಶೀಲನೆಗೊಳಗಾದ ಇಂದ್ರಿಯಗೋಚರ ವಿಷಯಗಳ ತಿಳಿವಳಿಕೆ ಅವುಗಳ ವರ್ಣನೆಗಿಂತ ಪ್ರಾಧಾನ್ಯದಲ್ಲಿ ಕಡಮೆಯಾದುದೇನಲ್ಲ. ನಮ್ಮ ವಿಷಯಕ್ಕೆ ಹಿಂತಿರುಗೋಣ. ರೋಮನರು 'ರೌದ್ರಿಯರು' (Furies) ಎಂದು ಹೆಸರಿಟ್ಟ ಗ್ರೀಕಮತದ ಯುಮನೈಡೀಸ್ ಅಥವಾ ಎರಿನೀಸರನ್ನು ಭಾರತದ ಗ್ರಾಮದೇವತೆಗಳು ನಮಗೆ ಚೆನ್ನಾಗಿ ನೆನಪುಮಾಡಿಕೊಡುತ್ತವೆ. ಕರ್ಣಾಟಕದಲ್ಲಿ ಪೂಜಿಸಲ್ಪಟ್ಟ ಈ ದೇವತೆಗಳ ಹೆಸರುಗಳು ಅಸಂಖ್ಯಾತ. ಅವರ ಸಾಮಾನ್ಯ ಹೆಸರು ಅಮ್ಮ ಎಂದು. 'ಮೈಸೂರು ದೇಶವಿಚಾರ ಕೋಶ' (Mysore Gazetteer)ದಿಂದ ಆರಿಸಿದ ಪಟ್ಟಿಯಿದು : ಮಾರಿಯಮ್ಮ (ಅಥವಾ ಮಾರಮ್ಮ), ಸಿಡಿಬಿನದೇವಿ, ಊರಮ್ಮ, ದುರ್ಗಮ್ಮ, ಸುಣಕಲ್ಲಮ್ಮ, ಮಾಹೇಶ್ವರಮ್ಮ, ಪೂಜಮ್ಮ, ಉದ್ದಾಲಮ್ಮ, ಕುಕ್ಕಲಮ್ಮ, ಸುಖಜಮ್ಮ, ಯಲ್ಲಮ್ಮ, ಗಂಗಮ್ಮ, ಮಾಸ್ತಮ್ಮ, ಮಣೆಗಮ್ಮ, ಹಿಂದಮ್ಮ, ಹೊಸಕೆರೆಅಮ್ಮ, ಹಲಸಮ್ಮ, ಮುತ್ಯಾಲಮ್ಮ, ಪಟಾಲಮ್ಮ, ಮಶಿನಮ್ಮ, ಹುನಸಮ್ಮ, ಕಾಳಮ್ಮ, ಮತಂಗಮ್ಮ, ಮದ್ದೂರಮ್ಮ, ಚಂದಮ್ಮ, ಕರಿಯಮ್ಮ, ಸಿಡಿಬಮ್ಮ, ಅಕ್ಕಮ್ಮ, ಮಲ್ಲಮ್ಮ, ಹುಲಿಯಮ್ಮ ಮತ್ತು ಇತರರು.

ಮನುಷ್ಯರ ಹಾಗೂ ದನಕರುಗಳ ಸಾಂಕ್ರಾಮಿಕ ರೋಗ, ಕ್ಷಾಮ ಹಾಗೂ ಪ್ರಕೃತಿಯ ಪ್ರಕೋಪದಿಂದುಂಟಾಗುವ ಹಾನಿ—ಇವೆಲ್ಲವೂ ದೇವಿಯ ಪ್ರಾದುರ್ಭಾವವೆಂದು ಜನರ ಭಾವನೆ. ಇವುಗಳನ್ನು ಹೋಗಲಾಡಿಸುವುದೇ ಈ ದೇವತೆಗಳ ಕಾರ್ಯ. ತನ್ನನ್ನು ತಾನೆ ಆಕೆ ತೊಲಗಿಸಿಕೊಳ್ಳಬೇಕು ; ಇಲ್ಲವೆ ತನ್ನ ಉಗ್ರ ಮುಖಭಾವವನ್ನು ಬಿಟ್ಟು ಪ್ರಸನ್ನವದನಳಾಗಬೇಕು. ಪೂಜಾವಿಧಾನಗಳು ಮಾರ್ಪಡುತ್ತವೆ. ಆದರೆ ಸಾಮಾನ್ಯವಾಗಿ ಪ್ರಾಣಿಬಲಿಯನ್ನೊಳಗೊಂಡಿರುತ್ತವೆ. ದೇವಿಯ ಆರಾಧಕನು ಯಾವಾಗಲೂ ಕೆಳವರ್ಗಕ್ಕೆ ಸೇರಿದವನು. ಪರಿಗಣಿತ ಕೋಮು ಎಂದು ಹೇಳುವ ವರ್ಗಕ್ಕೆ ಸೇರಿದವನೂ ಪೂಜಾರಿಯಾಗಿರುವುದು ಅಪರೂಪವೇನಲ್ಲ. ದೇವಿಯ ಪೂಜೆ ಪ್ರತ್ಯೇಕವಾಗಿ ನಡೆಯುವುದಲ್ಲ; ವಿಶೇಷವಾಗಿ ಹಬ್ಬದ ದಿನಗಳಲ್ಲಿ ಪುರುಷದೇವತೆಗಳ ಜೊತೆಗೇ ಆಗುತ್ತದೆ. 'ದಕ್ಷಿಣ ಭಾರತದ ಗ್ರಾಮದೇವತೆಗಳು' (The village Gods of South India) ಎಂಬ ತನ್ನ ಗ್ರಂಥದಲ್ಲಿ ಬಿಷಪ್ ವೈಟ್‌ಹೆಡ್ ಈ ದೇವಿಯರಲ್ಲೊಬ್ಬರ ಆದರ್ಶ ಉತ್ಸವವನ್ನು ವಿವರವಾಗಿ ವರ್ಣಿಸಿದ್ದಾನೆ. ಅದು

ಬೆಂಗಳೂರಿನ ಮಾಹೇಶ್ವರಮ್ಮನನ್ನು ಕುರಿತದ್ದು. ನೆರೆಯ ಗುಡಿಯ ಮುನೇಶ್ವರ ದೇವರಿಗೆ ಸಂಬಂಧಪಟ್ಟೇ ಆ ಉತ್ಸವ ನಡೆಯುತ್ತದೆ. ಆ ದೇವಿಯರಿಗೆ ಯಾವ ದೊಡ್ಡ ದೇವಾಲಯವೂ ಇರುವುದಿಲ್ಲ; ಕೇವಲ ಸಣ್ಣ ಗುಡಿಗಳು ಮಾತ್ರ ಇದ್ದು ಸ್ಥಳೀಯ ಭಕ್ತರು ಅವುಗಳಿಗೆ ನಡೆದುಕೊಳ್ಳುತ್ತಾರೆ. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಕಟ್ಟಡದ ಪ್ರಾಕಾರದೊಳಗೇ ಒಂದು ಮರದ ಕೆಳಗೆ ಒಂದು ಗುಡಿಯಿದೆ. ಅಲ್ಲಿ ಜನರು ಕೋಳಿಯನ್ನು ಬಲಿಕೊಡುವರು. ಇದೊಂದು ಸೋಜಿಗದ ಸಂಗತಿ. ಕೆಲವು ವೇಳೆ ದೇವಿಗೆ ಆಶ್ರಯ ಮಾಡಿಕೊಡಲು ಸಣ್ಣ ಗೂಡುಗಳನ್ನು ಕಟ್ಟಿರುತ್ತಾರೆ. ಅನೇಕ ವೇಳೆ ಮರದ ಕೆಳಗಿನ ಒಂದು ಕಲ್ಲು ದೇವಿಯ ಪ್ರತೀಕವಾಗಿರುತ್ತದೆ. ಇಲ್ಲವೆ ಅಂಥದೇ ಯಾವುದೋ ಒಂದು ಸಂಕೇತವಿದ್ದು ಅದಕ್ಕೆ ಯಾವ ಕಟ್ಟಡದ ಆಶ್ರಯವೂ ಇರುವುದಿಲ್ಲ. ಮಾರಿಕಾಂಬ ಎಂಬ ಹೆಸರಿನಿಂದ ಪೂಜಿಸುವ ಉತ್ತರ ಕನ್ನಡದ ಸಿರ್ಸಿಯ ಕಾಳಿಯ ದೇವಾಲಯವು ಕೆಲವೇ ಕೆಲವು ದೊಡ್ಡ ದೇವಸ್ಥಾನ ಗಳಲ್ಲೊಂದು. ಗೋಕರ್ಣದಲ್ಲಿ ಭದ್ರಕಾಳಿಯ ಪ್ರಸಿದ್ಧ ದೇವಾಲಯವಿದೆ. ದಕ್ಷಿಣ ಕನ್ನಡದಲ್ಲಿ ಮಂಗಳೂರಿನ ಬಳಿ ಪೊಳಲಿಯಲ್ಲಿರುವ ರಾಜರಾಜೇಶ್ವರಿಯ ಸಂಬಂಧಿ ಆ ಭದ್ರಕಾಳಿ. ಕರ್ಣಾಟಕದಲ್ಲಿ ಕಾಳಿಯ ಪೂಜೆ ಯಾವ ತಾಂತ್ರಿಕ ಕಾಮಸಂಬಂಧವಾದ ಆಚರಣೆಗೂ ಅಥವಾ ಈಗಿನ ಕಾಲದಲ್ಲಿ ನಿಷೇಧಿಸಲ್ಪಟ್ಟಿರುವ ಪದ್ಧತಿಗಳಿಗೂ ಸೇರಿದುದಲ್ಲ. ಆದರೆ ಆ ಆಚರಣೆಗಳು ಹಿಂದಿನ ಕಾಲದಲ್ಲಿ ರೂಢಿಯಲ್ಲಿದ್ದಿರಬಹುದು; ಅದರಲ್ಲಿಯೂ ಲಕುಲೀಶ, ಪಾಶುಪತ, ಕಾಳಾಮುಖ, ಕಾಪಾಲಿಕ ಹಾಗೂ ಅಘೋರಪಂಥಿಗಳಂತಹ ಶೈವಪಂಗಡಗಳಿಗೆ ಸಂಬಂಧಿಸಿದಂತೆ ಎಂಬುದನ್ನು ನಂಬಲು ಕಾರಣವುಂಟು.

## 3

ಮಹಾಲಕ್ಷ್ಮಿಯ ಪೂಜಾ ಪದ್ಧತಿಯ ರಾಜಸಿಕ ಊರ್ಧ್ವ ಸಮಭೂಮಿ ಅಥವಾ ಮಟ್ಟವೆಂಬುದು ಮುಂದಿನದು. ಕುತೂಹಲಕಾರಿ ವಿಪರ್ಯಾಯವನ್ನು ಇಲ್ಲಿ ಮೊತ್ತಮೊದಲಿಗೆ ನಾವು ಕಾಣಬಹುದು. ಸಾಮಾನ್ಯವಾದ ಪೌರಾಣಿಕ ಪದ್ಧತಿಯಲ್ಲಿ ಸತ್ತ್ವಗುಣದೊಡನೆ ವಿಷ್ಣುವೂ ರಾಜಸಿಕ ಗುಣದೊಡನೆ ಸೃಷ್ಟಿ ಕರ್ತನಾದ ಬ್ರಹ್ಮನೂ ಸಂಬಂಧಿಸಿದವರಾದರೂ ಮಹಾಲಕ್ಷ್ಮಿಯು ವಿಷ್ಣುವಿನ ಶಕ್ತಿಯಾಗಿ ರಾಜಸಿಕ ಗುಣ ಪ್ರಧಾನಳಾದವಳೆಂದೇ ಚಿತ್ರಿತಳಾಗಿದ್ದಾಳೆ. ಸರಸ್ವತಿಯನ್ನಾದರೊ ಸಾತ್ವಿಕಳೆಂದೇ ತಿಳಿದಿರುವರು. ಇದರಲ್ಲಿ ಅಸಾಧಾರಣವಾದ ಔಚಿತ್ಯವಿದೆ. ಏಕೆಂದರೆ ವಿಷ್ಣುವಿನ ನಾನಾ ಅವತಾರಗಳ ಮುಖ್ಯ ಗುರಿ ಅಸುರರ ವಿನಾಶ. ದೇವತೆಗಳನ್ನು ಮೊದಲಿನಂತೆ ಸುಸ್ಥಿತಿಯಲ್ಲಿರಿಸಿ ಧರ್ಮವನ್ನು ಮತ್ತೆ ನೆಲೆ ಗೊಳಿಸುವುದೇ ಅದರ ಉದ್ದೇಶ. ಈ ಗುರಿಯನ್ನು ಸಾಧಿಸುವುದೇ ಮಹಾಲಕ್ಷ್ಮಿಯು ಕೈಗೊಳ್ಳಬೇಕಾದ ನಿಜವಾದ ಕಾರ್ಯ. ಆಕೆಯ ಆದರ್ಶ ಸ್ವರೂಪದ ವ್ಯಕ್ತ ರೂಪಿಣಿಯೆ ದುರ್ಗಾದೇವಿ. ಸಾಂಕೇತಿಕ ಆಯುಧಗಳನ್ನು ಧರಿಸಿದ ಅಷ್ಟಬಾಹುಗಳನ್ನುಳ್ಳವಳಾಗಿ, ಧರ್ಮದ ಪ್ರತೀಕವಾದ ಸಿಂಹದ ಸವಾರಿಯನ್ನು ಮಾಡುತ್ತ, ತನ್ನ ಪಾದದಡಿಯಲ್ಲಿ ಮಣಿದು ಬಿದ್ದ ಅಸುರನೊಬ್ಬನ ದೇಹಾಕೃತಿಯನ್ನು ಮೆಟ್ಟಿರುವಂತೆ ಶಿಲ್ಪ ಹಾಗೂ ನಾಣ್ಯಗಳಲ್ಲಿ ಆಕೆಯನ್ನು ರೂಪಿಸಲಾಗಿದೆ. ಆಕೆ ಸಮರದ ಅಧಿದೇವತೆ. ಆ ಕಾರಣ ರಾಜರ ಹಾಗೂ ಸಾಮ್ರಾಜ್ಯಗಳ ಭಾಗ್ಯದೇವತೆ ಆಕೆ. ಆದ್ದರಿಂದಲೇ ಆಕೆಗೆ ರಾಜರಾಜೇಶ್ವರೀ ಎಂಬ ಹೆಸರು ಬಂದಿದೆ. ಯುಗ ಯುಗಗಳಿಂದಲೂ ಭಾರತದ ಜನತೆ ಹಾಗೂ ರಾಜರಿಂದ ಒಂದಲ್ಲ ಒಂದು ರೂಪದಲ್ಲಿ ಆರಾಧಿತಳಾದ ದೇವಿಯೆಂದರೆ ಆಕೆ. ಗ್ರೀಕ್ ದೇಶದ ಪೆರಿಕ್ಲಿಯುಸ್ ಮತ್ತು ಇಂಗ್ಲೆಂಡಿನ ಎಲಿಜಬೆತಳ ಕಾಲದೊಡನೆ ಹೋಲಿಸಲ್ಪಟ್ಟ ಗುಪ್ತ ಸಾಮ್ರಾಟರ ಯುಗದಲ್ಲಿ ಆ ಚಕ್ರವರ್ತಿಗಳಿಂದ ಪೂಜಿತಳಾದವಳು ಆಕೆ. ರಜಪೂತ ರಾಜರು ಸದಾ ಆಕೆಯ ವಿಶೇಷ ಭಕ್ತರಾಗಿದ್ದರು. ಕನೂಜಿನ ಗೂರ್ಜರ ಪ್ರತೀಹಾರ ಸಾಮ್ರಾಟರು ಆಕೆಯನ್ನು ಆರಾಧಿಸಿದರು. ದಕ್ಷಿಣದಲ್ಲಿ ಪಲ್ಲವರು, ಚೋಳರು ಹಾಗೂ ಪಾಂಡ್ಯರು ಆಕೆಯ ಕೃಪಾರಕ್ಷೆಯನ್ನು ಬೇಡಿದರು. ವಿಜಯನಗರದ ಅರಸರು ಅತಿ ವೈಭವದಿಂದ ಆಕೆಯ ಉತ್ಸವ ಗಳನ್ನಾಚರಿಸಿದರು. ಅಂಬಾಭವಾನಿ ಎಂಬ ಹೆಸರನ್ನುಳ್ಳ ಆಕೆಯಿಂದಲೇ ಶಿವಾಜಿಗೆ ವೀರಾವೇಶವುಂಟಾಯಿತು.

ನಮಗೆ ಅತಿ ಸಮೀಪದಲ್ಲಿಯೇ ಮೈಸೂರು ರಾಜಮನೆತನದ ಪರಿಪಾಲಕಳಾದ ಚಾಮುಂಡೇಶ್ವರಿಯಾಗಿ ಆ ದೇವಿ ಇದ್ದಾಳೆ.

'ಚಾಮುಂಡಾ' ಎಂಬುದು ನಿಜವಾಗಿ ಕಾಳಿಯ ಹೆಸರುಗಳಲ್ಲೊಂದು. ಹದಿನೆಂಟನೆಯ ಶತಮಾನದ ಅಂತ್ಯದ ವೇಳೆಗೆ ನರಬಲಿಯನ್ನು ನಿಲ್ಲಿಸುವ ತನಕ ಆ ದೇವಿಗೆ ಚಾಮುಂಡಿ ಬೆಟ್ಟದಲ್ಲಿ ಜನರನ್ನು ಬಲಿಕೊಡುತ್ತಿದ್ದರೆಂಬುದಕ್ಕೆ ಸಾಕ್ಷಿಯುಂಟು. ಸುಮಾರು ಆ ಕಾಲದ ವೇಳೆಗೆ ಮೈಸೂರಿನಲ್ಲಿ ವಾಸವಾಗಿದ್ದ ಅಬ್ಬೆ ದುಬಾಯಿ ಎಂಬ ಫ್ರೆಂಚ್ ಸುವಾರ್ತಾ ಪ್ರಸಾರಕನು ತನ್ನ 'ಹಿಂದುಗಳ ಜೀವನವಿಧಾನ, ವಾಡಿಕೆ ಹಾಗೂ ಆಚರಣೆಗಳು' ಎಂಬ ಗ್ರಂಥದಲ್ಲಿ ಹೀಗೆ ಬರೆದಿರುತ್ತಾನೆ: 'ಶ್ರೀರಂಗಪಟ್ಟಣಕ್ಕೆ ಅತಿ ದೂರವೇನಲ್ಲದ ಬೆಟ್ಟದ ತಪ್ಪಲಿಗೆ ಸೇರಿದಂತೆ ಮೈಸೂರು ಪಟ್ಟಣವಿದೆ. ಆ ಬೆಟ್ಟದ ಮೇಲೆ ಒಂದು ಸಣ್ಣ ದೇವಸ್ಥಾನ ಈಗಲೂ ಇರುವುದನ್ನು ಕಾಣಬಹುದು. ಮೂರ್ತಿಪೂಜಕರಾದ ರಾಜರು ರಾಜ್ಯವನ್ನು ಇನ್ನೂ ಆಳುತ್ತಿದ್ದಾಗ ಅಲ್ಲಿ ಕೊಡುತ್ತಿದ್ದ ನರಬಲಿಯ ದೆಸೆಯಿಂದ ಆ ದೇವಾಲಯದ ಹೆಸರು ಎಲ್ಲೆಲ್ಲೂ ಪ್ರಖ್ಯಾತವಾಗಿದ್ದಿತು. ತಾವು ಇನ್ನೂ ಬಾಲಕರಾಗಿದ್ದಾಗ ಈ ಘೋರ ಪದ್ಧತಿ ಆಚರಣೆಯಲ್ಲಿದ್ದಿತೆಂದು ಮುದುಕರು ನನಗೆ ಹೇಳಿದ್ದಾರೆ'. ಮೊದಲನೆ ಮಟ್ಟದ ಈ ಪೂಜೆ ಎರಡನೆ ಮಟ್ಟದ ಪೂಜೆಯಾಗಿ ಪರಿಣಮಿಸಿದಂತೆ ತೋರುತ್ತದೆ. ಈಗ ಪೂಜಿಸುತ್ತಿರುವ ಪ್ರತಿಮೆ ಆಗಲೇ ವಿವರಿಸಿದ ದುರ್ಗಾದೇವಿಯ ಶ್ರೇಷ್ಠ ರೂಪವನ್ನುಳ್ಳದ್ದು. ಬೆಟ್ಟದ ಮೇಲಿರುವ ಅತಿ ಪ್ರಾಚೀನವಾದ ದೇವಾಲಯವೆಂದರೆ ಮಹಾಬಲೇಶ್ವರನ ದೇವಸ್ಥಾನವೆಂಬುವು ಕೂಡ ಗಮನಾರ್ಹವಾದ ಸಂಗತಿ. ಅದರಲ್ಲಿ ಹತ್ತನೆಯ ಶತಮಾನದಿಂದ ಆರಂಭವಾದ ಶಾಸನಗಳಿರುವುದು ಕಂಡುಬರುತ್ತದೆ. ಆ ಬೆಟ್ಟದ ಹೆಸರೇ ಆದಿಯಲ್ಲಿ 'ಮಹಾಬಲಗಿರಿ' ಎಂದಿದ್ದಂತೆ ತೋರುತ್ತದೆ. ಬೆಟ್ಟದ ಮೇಲಕ್ಕೆ ಹೋಗುವ ದಾರಿಯ ಮೂರನೆ ಎರಡರಷ್ಟು ದೂರದಲ್ಲಿರುವ ಶಿವನಿಗೇ ಮೀಸಲಾಗಿ ಪೂಜ್ಯವಾಗಿರುವ ನಂದಿಯ ಬೃಹದಾಕಾರದ ವಿಗ್ರಹದಿಂದ ಮಹಾಬಲಗಿರಿ ಎಂಬ ಆ ಬೆಟ್ಟದ ಹೆಸರು ಶಿವಸಂಬಂಧಿಯಾದುದೆಂಬುದನ್ನು ದೃಢಪಡಿಸುತ್ತದೆ. ಬೆಟ್ಟದ ಈ ಹೆಸರಿನ ಬದಲಾವಣೆ ಕೂಡ ಶಿವಸಂಬಂಧವಾಗಿದ್ದುದು ಶಕ್ತಿ ಸಂಬಂಧವಾಗಿ ಮಾರ್ಪಟ್ಟುದರ ಸೂಚನೆಯನ್ನು ಮಾಡಿಕೊಡುತ್ತದೆ.

ಮಹಿಷಾಸುರನನ್ನು ಮರ್ದಿಸಿದುದೇ ದುರ್ಗಾದೇವಿಯ ಪ್ರಮುಖ ಸಾಹಸಕೃತ್ಯ. ಮೈಸೂರು ಎಂಬ ಹೆಸರು ಬಂದಿರುವುದೇ ಈ ಘಟನೆಯನ್ನು ಸೂಚಿಸುತ್ತದೆ. ಆ ಪೌರಾಣಿಕ ಸಂಗತಿಯನ್ನು ಗ್ರಾಮಾಂತರದಲ್ಲಿ ಎಲ್ಲರೂ ನಿಶ್ಚಿತವೆಂದೇ ತಿಳಿದಿರುವರು. ಪ್ರತಿವರ್ಷವೂ ಶರತ್ಕಾಲದಲ್ಲಿ ಒಂಬತ್ತು ದಿನಗಳು ಬಂಗಾಳದಲ್ಲಿ ದುರ್ಗಾಪೂಜೆ ಎಂದೂ ದಕ್ಷಿಣ ಹಾಗೂ ಬೇರೆ ಕಡೆಗಳಲ್ಲಿ ದಸರಾ ಅಥವಾ ನವರಾತ್ರಿ ಎಂದೂ ಕರೆಯುವ ಉತ್ಸವವನ್ನು ಭಾರತದ ರಾಷ್ಟ್ರೀಯ ಉತ್ಸವವೆಂದು ಕರೆಯಬಹುದು. ರಾಜರಿಗೂ ಅವರ ಪ್ರಜೆಗಳಿಗೂ ಅದು ಏಕರೀತಿಯಲ್ಲಿ ಪವಿತ್ರವಾದ ಹಬ್ಬ. ಪುರಾಣಗಳಲ್ಲಿ ಈ ಹಬ್ಬದ ವಿಷಯ ಕಂಡುಬರುತ್ತದೆ. ದುರ್ಗಾಮಾತೆಯನ್ನು ಯುಧಿಷ್ಠಿರ ಅರ್ಜುನರು ಪೂಜಿಸಿದುದನ್ನು ಮಹಾಭಾರತದಲ್ಲಿ ನಾವು ಕಾಣುತ್ತೇವೆ. ಸುಮಾರು ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಉತ್ತರ ಕರ್ಣಾಟಕದ ನಿವಾಸಿಯಾದ ಜೈನಕವಿ ಸೋಮದೇವನು ತನ್ನ 'ಯಶಸ್ತಿಲಕ' ದಲ್ಲಿ ಅದರ ಪ್ರಾಮುಖ್ಯವನ್ನು ಕುರಿತು ತಿಳಿಸಿದ್ದಾನೆ. ನಾಲ್ಕು ಶತಮಾನಗಳ ಅನಂತರ ವಿಜಯನಗರದ ಅರಸರು ನಡೆಸಿದ ದುರ್ಗಾದೇವಿಯ ವಿಧಿವತ್ತಾದ ಪೂಜೋತ್ಸವಗಳ ವಿಜೃಂಭಣೆಯ ವರ್ಣನೆಯನ್ನು ಕಾಣುತ್ತೇವೆ. ಹಂಪೆಯ ಮಹರ್ನವಮಿ ದಿಬ್ಬದ ಆಶ್ಚರ್ಯಕರವಾದ ಬೃಹತ್ಪ್ರಮಾಣವನ್ನು ನಾವು ನೋಡಿದಲ್ಲಿ ಇಂದೂ ಆ ಪೂಜೋತ್ಸವಗಳು ಹೇಗಿದ್ದುವೆಂಬುದನ್ನು ಊಹಿಸಿಕೊಳ್ಳಬಹುದು. ರಾಜಮನೆತನದವರು ಆ ದಿಬ್ಬದ ಮೇಲಿನಿಂದ ಸೈನಿಕರ ಪ್ರದರ್ಶನಗಳನ್ನು ವೀಕ್ಷಿಸುತ್ತಿದ್ದರು. ಮಹರ್ನವಮಿಯ ಪೂಜೆಯ ವ್ಯಾಪ್ತಿಗೆ ವಿಶೇಷವಾಗಿ ಆಯುಧಪೂಜೆಯೂ ಪ್ರಾಸಂಗಿಕವಾಗಿ ಮನೆಬಳಕೆಯ ಪಾತ್ರೆ ಸಲಕರಣೆಗಳ ಸಮೇತ ಎಲ್ಲ ಬಗೆಯ

ಆಯುಧೋಪಕರಣಗಳ ಸಿದ್ಧತೆಯೂ ಸೇರಿದ್ದುವು. ಮೈಸೂರಿನ ದಸರಾಮಹೋತ್ಸವದ ಅಸದೃಶವಾದ ಮಹಾವೈಭವ ಹಾಗೂ ನಯನಮನೋಹರವಾದ ಉಜ್ಜ್ವಲ ದೃಶ್ಯಗಳು ವಿಜಯನಗರದ ಪರಂಪರೆಯಿಂದಲೇ ಬಂದುವು.

ಈಗ ನಾವು ಆ ವಾರ್ಷಿಕ ಮಹೋತ್ಸವವನ್ನಲ್ಲದೆ ಪೂಜೆಯ ವಿಧಾನಗಳ ಕಡೆ ದೃಷ್ಟಿ ಹರಿಸಬಹುದು. ಅವು ಇನ್ನೆಂದೂ ಸ್ಥಳೀಯವಾದುವಾಗಲಿ, ಅಸಂಸ್ಕೃತವಾದವುಗಳಾಗಲಿ ಆಗಿಲ್ಲ. ಬಹುಶಃ ಕೆಲವೊಂದು ವಿವರಗಳಲ್ಲಿ ಹೊರತು ಆ ಪೂಜಾವಿಧಾನಗಳೆಲ್ಲ ಶಾಸ್ತ್ರ ಪುರಾಣಗಳಲ್ಲಿ ಅಳವಟ್ಟಿರುತ್ತವೆ. ದುರ್ಗಾದೇವಿಯ ಆರಾಧನಾ ಪದ್ಧತಿಯ ಪವಿತ್ರಗ್ರಂಥವೆಂದರೆ 'ದೇವೀ ಭಾಗವತ ಪುರಾಣ'; ಅದರ ವೇದವಾಕ್ಯವೆಂದರೆ 'ದೇವೀ ಮಾಹಾತ್ಮ್ಯ', ಚಂಡಿ ಅಥವಾ ಚಂಡಿಪಾಠವೆಂದು ಕೂಡ ಕರೆಯಲ್ಪಟ್ಟ, ಮಾರ್ಕಂಡೇಯ ಪುರಾಣದಲ್ಲಿನ ಒಂದು ಆಖ್ಯಾನವಾದ ಈ ಕೃತಿ ದೇವಿಯ ಸ್ತೋತ್ರಾರ್ಹವಾದ ಸಾಹಸಕಾರ್ಯಗಳ ಸಾರಸಂಗ್ರಹ. ಈ ಸುಪ್ರಸಿದ್ಧ ಗ್ರಂಥ ಏಳುನೂರು ಶ್ಲೋಕಗಳನ್ನುಳ್ಳ ಕಾರಣ ಸಪ್ತಶತಿಯೆಂದು ಕರೆಯಲ್ಪಟ್ಟಿದೆ. ಗೌಡಪಾದರು ರಚಿಸಿದ್ದೆಂದು ಹೇಳುವ ಕಾರಿಕೆಗಳಲ್ಲಿ ಆ ಶ್ಲೋಕಗಳ ಎಣಿಕೆಯ ಕ್ರಮ ಒಮ್ಮೆಗೇ ನಿರ್ಣಯಿಸಲ್ಪಟ್ಟಿದೆ. ಈ ಒಂದು ಸಂಗತಿಯು ಅದರ ಕಾಲ ಹಾಗೂ ಪವಿತ್ರತೆಗೆ ಸಾಕ್ಷಿಯಾಗಿದೆ. 'ವೇದವತ್ ಸಪ್ತಶತಿ' ಎಂಬ ಉಕ್ತಿಯಿಂದ ಅದು ವೇದದಂತೆ ಪ್ರಖ್ಯಾತಿಯನ್ನುಳ್ಳದು. ವಿಧಿವತ್ತಾದ ಪಾರಾಯಣದೊಡನೆ ನ್ಯಾಸ ಮುದ್ರೆಗಳಂತಹ ದೀರ್ಘ ಅನುಷ್ಠಾನಗಳಿರುತ್ತವೆ. ವಿಶೇಷ ಸಂದರ್ಭಗಳಲ್ಲಿ ಆ ಆಚರಣೆಗಳು ಹೋಮಗಳಿಂದ ಅನುಸರಿಸಲ್ಪಡುತ್ತವೆ. ವೇದಪಾಠಕ್ರಮದ ಮೇರೆ ದೊಡ್ಡಪ್ರಮಾಣದಲ್ಲಿ ನಡೆಸುವ ಶಾಂತಿಕ್ರಿಯೆಗಳನ್ನು ಯಾಗಗಳೆಂದು ಕರೆಯಲಾಗಿದೆ. ಉದಾಹರಣೆಗೆ ಶತಚಂಡೀಯಾಗ ಸಹಸ್ರಚಂಡೀ ಯಾಗಗಳು.

ಈ ಸಂಬಂಧವಾಗಿ ವಿಶೇಷ ಆಸಕ್ತಿಯನ್ನುಂಟುಮಾಡುವ ಕೆಲವು ಸಂಗತಿಗಳನ್ನು ತಿಳಿಸಬಹುದಾಗಿದೆ. ಆದಿಯಲ್ಲಿ ಬರುವ ಸಂಕಲ್ಪವು ದೇವಿಯೊಬ್ಬಳನ್ನೇ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂದು ಕರೆದು ಆಹ್ವಾನಿಸಿದೆ. ಈ ಪೂಜೆಯ ಕೇಂದ್ರತತ್ತ್ವವಾದ ನವಾರ್ಣಮಂತ್ರ ಚಾಮುಂಡಿಯನ್ನು ಉದ್ದೇಶಿಸಿ ಸಂಬೋಧಿಸಿದ್ದಾಗಿದೆ. ದುರ್ಗಾಮಾತೆಯ ಮಧ್ಯಸ್ಥಿಯೊ ಎಂಬಂತೆ ದೇವಿ ಚಾಮುಂಡಿ ಕಾರ್ಯನಿರ್ವಹಣೆ ಮಾಡುವಳು. ಗ್ರಂಥದೊಳಗೇ ದೇವಿಯನ್ನು ಕುಮಾರಿ ಎಂಬುದಾಗಿ ವರ್ಣಿಸಿದೆಯಲ್ಲದೆ ಶಿವನ ಸತಿಯೆಂದಲ್ಲ. ಕಥಾನಿರೂಪಣೆಯಲ್ಲಿ ಪ್ರಾಸಂಗಿಕವಾಗಿ ಆಕೆ ಕಾಣಿಸಿಕೊಳ್ಳುವುದೂ ದೂತಿಯಾಗಿಯೆ. ಹಾಗೆ ನೋಡಿದರೆ ಆ ಸಂಗತಿಗಳು ವಿಷ್ಣುವಿಗೇ ಸಂಬಂಧಪಟ್ಟವು. ಮಹಾಕಾಳಿಯ ಕೃಪಾಪ್ರಸಾದದಿಂದ ವಿಷ್ಣು ಮಧುಕೈಟಭಾಸುರರನ್ನು ಕೊಂದ ಕಥೆಯಿಂದಲೇ ದೇವೀಮಾಹಾತ್ಮ್ಯ ಪ್ರಾರಂಭವಾಗುತ್ತದೆ. ಗ್ರಂಥದ ಮುಖ್ಯವಾದ ಭಾಗದಲ್ಲಿ ದೇವಿಯನ್ನು ವಿಷ್ಣುಮಾಯಾ ಎಂದು ಕರೆದಿದೆ. ಗ್ರಂಥದ ಕಡೆಕಡೆಯಲ್ಲಿ ಪದೇ ಪದೇ ನಾರಾಯಣೀ ಎಂದೇ ಕರೆದು ಪ್ರಾರ್ಥಿಸಲಾಗಿದೆ. ಶ್ರೀರಾಮನಿಂದ ಆದ ರಾವಣವಧೆಯನ್ನು (ರಾಮಲೀಲಾ) ಉತ್ತರ ಭಾರತದಲ್ಲಿ ದಸರಾದೊಂದಿಗೆ ಸಮಾವೇಶಗೊಳಿಸಿರುವುದೂ ಗಮನಾರ್ಹವಾದ ಅಂಶ. ಮಹಾನವಮಿಯಿಂದ ಆರು ತಿಂಗಳಿಗೆ ಸರಿಯಾಗಿ ಶ್ರೀರಾಮನವಮಿಯಲ್ಲಿ ಮುಕ್ತಾಯವಾಗುವ ಚೈತ್ರ ಶುಕ್ಲಪಕ್ಷದ ಮೊದಲ ಒಂಬತ್ತು ದಿನಗಳನ್ನು ವಸಂತ ನವರಾತ್ರಿಯೆನ್ನುವರು. ಈ ಎಲ್ಲ ಅಂಶಗಳು ವಿಷ್ಣುವಿನ ಶಕ್ತಿಯಾದ ಮಹಾಲಕ್ಷ್ಮಿಯೊಡನೆ ದುರ್ಗಿ ಸಮಾವೇಶಗೊಂಡಿರುವುದನ್ನು ದೃಢಪಡಿಸುತ್ತವೆ.

ದುರ್ಗಾದೇವಿಯ ಪೂಜೆ ಬೇರೆ ಬೇರೆ ಹೆಸರುಗಳಲ್ಲಿ ಭಾರತದ ಆದ್ಯಂತ ವ್ಯಾಪಕವಾಗಿ ಆಚರಣೆಯಲ್ಲಿದೆ. ಕರ್ಣಾಟಕದ ನಾನಾ ಭಾಗಗಳಲ್ಲಿ ದೇವಿಯ ಪವಿತ್ರ ಪೀಠಗಳು ಹಲವಿವೆ. ಶಕ್ತಿಪೂಜೆಗೆ ಒಂದಾನೊಂದು ಕಾಲದಲ್ಲಿ ಮಹಾ ಕೇಂದ್ರವಾಗಿದ್ದಿರಬೇಕಾದ ಕನ್ನಡ ಜಿಲ್ಲೆಯಲ್ಲಿಯೇ ಅಕ್ಷರಶಃ ದೇವಿಯ ನೂರಾರು ದೇವಸ್ಥಾನಗಳಿವೆ. ಅತಿಮುಖ್ಯವಾದ ಪೂಜಾಪೀಠಗಳಲ್ಲಿ ಕೆಲವನ್ನು ಮಾತ್ರ

ಇಲ್ಲಿ ಹೆಸರಿಸಲು ಸಾಧ್ಯ. ಈಗಾಗಲೆ ಕೊಲ್ಲೂರಿನ ಪ್ರಸ್ತಾಪ ಮಾಡಲಾಗಿದೆ. ಅಲ್ಲಿರುವ ದೇವಿಯ ಪ್ರತಿಮೆಗೆ ಲಕ್ಷ್ಮಿಯ ಲಾಂಛನಗಳಿವೆ. ಮೂಕಾಸುರನನ್ನು ಕೊಂದ ನೆನಪಿಗೆ ಮೂಕಾಂಬೆ ಯೆಂಬ ಹೆಸರಿನಿಂದಲೇ ಆಕೆಯನ್ನು ಕರೆಯುತ್ತಾರೆ. ಕೋಲಾರ ಪಟ್ಟಣದಲ್ಲಿ ಸ್ಥಳೀಯ ವಾಗಿ ಕೋಲಾರಮ್ಮ ಎಂದು ಪ್ರಖ್ಯಾತಳಾದ ದುರ್ಗಾದೇವಿಯ ಒಂದು ಪ್ರಾಚೀನ ದೇವಾಲಯವಿದೆ. ಪುರಾತನ ಕಾಲದಲ್ಲಿ ಆ ದೇವಿಯನ್ನು ಪಿಡಾರಿಯಾರ್ ಎಂದು ಕರೆಯುತ್ತಿದ್ದಂತೆ ತೋರುತ್ತದೆ. ಆ ದೇವಸ್ಥಾನದ ಪುನರ್ನಿರ್ಮಾಣವನ್ನು ಮಾಡಿದ ಚೋಳರಾಜರು ಭಕ್ತಿಭಾವದಿಂದ ಆರಾಧಿಸಿದ ದೇವಿ ಆಕೆ. ಆ ರಾಜರು ಹಾಕಿಸಿದ ತಮಿಳಿನ ದಾನಶಾಸನಗಳೇ ದೇವಾಲಯದ ಗೋಡೆಗಳ ತುಂಬ ಎಲ್ಲೆಲ್ಲೂ ಇವೆ. ದೇವಿಯ ಪ್ರತಿಮೆಯು ಮಹಿಷಾಸುರಮರ್ದಿನಿ (ದುರ್ಗಾಮಾತೆ) ಯದು, ಸಪ್ತಮಾತೃಕೆಯರ ಸಮೂಹದೊಡನೆ ಕೂಡಿದೆ. ಆ ದೇವಿಯರ ಗಡಣದ ಬಗೆಗೆ ಹೇಳುವ ಸಂದರ್ಭ ಮುಂದೆ ಬರುತ್ತದೆ. ಕರ್ಣಾಟಕದ ಗಡಿಯಲ್ಲಿ ಶಕ್ತಿಪೂಜೆಯ ಒಂದು ಪ್ರಮುಖಸ್ಥಾನವೆನಿಸಿದ ಕೊಲ್ಲಾಪುರದ ಹೆಸರನ್ನಿಲ್ಲಿ ಹಾಗೆಯೇ ಉಸಿರಿಸಬಹುದು. ಅಲ್ಲಿನ ದೇವಿ ಮಹಾಲಕ್ಷ್ಮಿಯು ಮಹಾಕಾಳಿ, ಮಹಾಸರಸ್ವತಿಯರಿಂದೊಡಗೊಂಡಿದ್ದಾಳೆ. ಈ ಮೂರು ಸ್ಥಳಗಳ ಹೆಸರುಗಳೂ ಹೆಚ್ಚು ಕಡಮೆ ಏಕರೂಪವಾಗಿರುವುದು ಕುತೂಹಲಕಾರಿಯಾಗಿದೆ. ಸಪ್ತಶತಿಯ ಪೀಠಿಕೆಯಲ್ಲಿ ಸುರಥ ರಾಜನ ರಾಜ್ಯವನ್ನು ಕಸಿದುಕೊಂಡ ಶತ್ರುಗಳನ್ನು ಕೋಲವಿಧ್ವಂಸಿಗಳೆಂದು ಕರೆದಿದ್ದಾರೆ. ಮತ್ತೆ ಒಂದೇ ಒಂದು ಸ್ಥಳವನ್ನು ಉಲ್ಲೇಖಿಸಬಹುದು ; ಅದೇ ಪೊಳಲಿ. ಮಂಗಳೂರು ಬಳಿ ನೇತ್ರಾವತಿಗೆ ಸೇರುವ ಒಂದು ಹೊಳೆಯ ದಡದ ಮೇಲಿರುವ ಆ ಊರು ಸಪ್ತಶತಿಯ ಪೌರಾಣಿಕ ಕಥೆಗೆ ನೇರವಾಗಿ ಸಂಬಂಧಪಟ್ಟದ್ದು. ಐತಿಹ್ಯದ ಪ್ರಕಾರ ಸುರಥನೂ ಆತನ ಕಷ್ಟಕಾಲದ ಸ್ನೇಹಿತನೂ ಇದೇ ಸ್ಥಳದಲ್ಲಿ ದೇವಿಯ ಮಣ್ಣಿನ ಪ್ರತಿಮೆಗಳನ್ನು ಮಾಡಿ ಆರಾಧಿಸಿ ವ್ರತಾಚರಣೆ ಹಾಗೂ ಭಕ್ತಿನಿಷ್ಠೆಗಳಿಂದ ದೇವಿಯ ಪ್ರಸನ್ನತೆಯನ್ನು ಪಡೆದರು. ಅಲ್ಲಿನ ದೇವಸ್ಥಾನ ಬಹಳ ಪ್ರಾಚೀನವಾದುದು. ಅದರಲ್ಲಿ ದೇವಿಯರ ಬಹುಗಾತ್ರದ ಮಣ್ಣಿನ ಪ್ರತಿಮೆಗಳಿವೆ. ಅವುಗಳಲ್ಲಿ ಮುಖ್ಯ ಪ್ರತಿಮೆಯಾದ ರಾಜರಾಜೇಶ್ವರಿ ದೇವಿಯನ್ನು ಆರಾಧಿಸುತ್ತಿರುವಂತೆ ದೇವಾಲಯದ ಹಾಸುಗಲ್ಲಿನ ಮೇಲೆ ಕೆತ್ತನೆ ಮಾಡಲಾಗಿದೆ. ಇದೊಂದು ದೇವೀಪೂಜೆಯ ಪ್ರಮುಖ ಕೇಂದ್ರ. ವಿಜಯನಗರ ಸಾಮ್ರಾಜ್ಯದ ಅತ್ಯುನ್ನತಿಯ ಕಾಲದಲ್ಲಿ ರಾಜ್ಯದ ಈ ಭಾಗಕ್ಕೆ ಭೇಟಿಯಿತ್ತ ಅಬ್ದುಲ್ ರಜಾಕ್ ಎಂಬ ಮುಸ್ಲಿಂ ಪ್ರವಾಸಿಯ ನಿರೂಪಣೆಯ ಪ್ರಕಾರ, ಅದು ಒಂದು ಕಾಲದಲ್ಲಿ ಬಹು ಸಂಪದ್ಭರಿತವಾಗಿ ವೈಭವಾಲಂಕೃತವಾಗಿತ್ತೆಂದು ವ್ಯಕ್ತವಾಗುತ್ತದೆ.

## 4

ಪರಿಶುದ್ಧತೆಯ ಕುರುಹಾದ ಧವಳ ವರ್ಣದಿಂದ ಪರಿಶೋಭಿತಳೂ ಸತ್ತ್ವಗುಣಸಾಕಾರಳೂ ಆದ ಸರಸ್ವತಿಯ ರೂಪವನ್ನು ಧರಿಸಿದ ಶಕ್ತಿಯ ಆರಾಧನಾ ಪದ್ಧತಿಯ ಮೂರನೆ ಘಟ್ಟಕ್ಕೆ ಈಗ ಬರೋಣ. ಕಾವ್ಯಕರ್ತರ ಕಾಲದಲ್ಲಿ ಕಲಾಧಿದೇವತೆಯೆಂದೂ, ವಿದ್ಯಾಧಿದೇವತೆಯೆಂದೂ ಸರಸ್ವತಿಯನ್ನು ಚಿತ್ರಿಸಿರುತ್ತಾರೆ. ಚತುರ್ಭುಜಳಾದ ಆಕೆ ತನ್ನ ಎರಡು ಕೈಗಳಲ್ಲಿ ವೀಣೆ ಹಾಗೂ ಪುಸ್ತಕಗಳನ್ನು ಧರಿಸಿದವಳು. ಆಧ್ಯಾತ್ಮಿಕ ಸಾಧನೆಗೆ ಮಹತ್ತ್ವವನ್ನು ಕೊಟ್ಟಾಗ ವೀಣೆಯ ಬದಲು ಜಪಸರವಿರುತ್ತಿತ್ತು. ಸರಸ್ವತಿಯ ಆರಾಧನೆಯ ಪುರಾಣಗಳಿಂದ ವೇದಗಳ ವರೆಗೂ ಎಂಬಂತೆ ಒಂದು ಪ್ರಗತಿಕ್ರಮ ಇರುವಂತೆ ತೋರುತ್ತದೆ. ಋಗ್ವೇದದಲ್ಲಿ ಕಾಣಿಸಿಕೊಳ್ಳುವ ಕೆಲವು ದೇವತೆಗಳಲ್ಲಿ ಸರಸ್ವತಿ ಮುಖ್ಯಳಾದವಳು. ಎರಡು ಸಂಪೂರ್ಣ ಋಕ್ಕುಗಳಲ್ಲಿಯೂ ಇತರ ಋಕ್ಕುಗಳ ಭಾಗಗಳಲ್ಲಿಯೂ ಆಕೆ ಸ್ತುತಿಸಲ್ಪಟ್ಟಿದ್ದಾಳೆ. ಹಲವುಬಾರಿ ಇಳಾ ಮತ್ತು ಭಾರತಿಯರೊಡನೆ ಸರಸ್ವತಿ ಸ್ತುತ್ಯಳಾಗಿದ್ದಾಳೆ. ಆಕೆಯ ಗುಣಶೀಲಗಳ ಸ್ವರೂಪವನ್ನು ಕೆಳಗಿನ ಸರಸ್ವತೀ ಸಂಬಂಧವಾದ ಮೂರು ಋಕ್ಕುಗಳಿಂದ ಕಂಡುಕೊಳ್ಳಬಹುದಾಗಿದೆ :

ಪ್ರಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ ।

ಯಜ್ಞಂ ವಷ್ಟು ಧಿಯಾವಸುಃ

"ಸರಸ್ವತೀದೇವಿಯು ಜನರನ್ನು ಶುದ್ಧಿಗೊಳಿಸುವವಳು ; ಯಜ್ಞಾದಿಗಳಿಂದ ಆರಾಧನೆ ಮಾಡುವ ಜನರಿಗೆ ಅನ್ನಾದಿಗಳನ್ನು ಕೊಡುವವಳು; ಮತ್ತು ಧನರೂಪವಾದ ಐಶ್ವರ್ಯಪ್ರಾಪ್ತಿಗೂ ಕಾರಣಭೂತಳಾದವಳು. ಇಂತಹ ಸರಸ್ವತಿಯು ನಾವು ಕೊಡುವ ಹವಿರ್ಲಕ್ಷಣರೂಪವಾದ ಅನ್ನಾದಿಗಳಿಂದ ತೃಪ್ತಿಗೊಂಡು ನಮ್ಮ ಯಜ್ಞವನ್ನು ಸಾಂಗವಾಗಿ ನೆರವೇರುವಂತೆ ಮಾಡಲಿ."

ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಂ ।

ಯಜ್ಞಂ ದಧೇ ಸರಸ್ವತೀ ॥

"ನಾವು ಸ್ತೋತ್ರಮಾಡುವ ಸರಸ್ವತೀದೇವಿಯು ಮನುಷ್ಯರನ್ನು ಪ್ರಿಯವಾದ ಮತ್ತು ಸತ್ಯವಾದ ಮಾತುಗಳನ್ನಾಡುವಂತೆ ಪ್ರೇರಿಸುವವಳು ಅಥವಾ ಸತ್ಯಭಾಷಿಗಳಾದ ಜನರಿಗೆ ಒಳ್ಳೆಯ ಕೆಲಸಗಳಲ್ಲಿ ಪ್ರವೃತ್ತಿಯುಂಟಾಗುವಂತೆ ಪ್ರೇರಿಸುವವಳು ಮತ್ತು ಸದ್ಬುದ್ಧಿಯುಳ್ಳ ಜನರನ್ನು ಸತ್ಕಾರ್ಯ ಮಾಡುವುದರಲ್ಲಿ ಜ್ಞಾಪಕಮಾಡಿ ಸಹಾಯ ಮಾಡುವವಳು. ಇಂತಹ ಸರಸ್ವತಿಯು ನಾವು ಮಾಡುವ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರುವಂತೆ ಮಾಡಲಿ".

ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ ।

ಧಿಯೋ ವಿಶ್ವಾ ವಿರಾಜತಿ ॥

"ಸರಸ್ವತೀ ನದಿಯು ಬಹು ಅಗಾಧ ಪ್ರವಾಹದಿಂದ ಹರಿಯುತ್ತಿರುವುದರಿಂದ ಈ ನದಿಯಲ್ಲಿ ಬಹು ಹೆಚ್ಚಾಗಿ ನೀರಿರುವುದು ಮತ್ತು ಈ ದೇವಿಯು ತನ್ನನ್ನು ಸ್ತೋತ್ರಮಾಡುವ ಅಥವಾ ಯಜ್ಞದಿಂದ ಆರಾಧಿಸುವ ಜನರ ಮನಸ್ಸನ್ನು ಪ್ರಕಾಶಗೊಳಿಸುವಳು ಎಂದರೆ ಜನರ ಬುದ್ಧಿಯನ್ನು ಚುರುಕಾಗುವಂತೆ ಪ್ರೇರಿಸುವಳು".

ಬೇರೊಂದೆಡೆ ಸೂಕ್ತಾರ್ಥವೊಂದರಲ್ಲಿ 'ಮಾತೆಯರ ಮಾತೆ, ನದಿಗಳ ನದಿ, ದೇವತೆಗಳ ದೇವತೆ' ಎಂದು ಆಕೆಯನ್ನು ಸ್ತುತಿಸಲಾಗಿದೆ. ಈ ಸಮ್ಮಿಶ್ರ ಪ್ರತಿಮೆಗಳು ವೇದಗಳ ಹಾಗೂ ಪ್ರಾಸಂಗಿಕವಾಗಿ ಭಾರತದಲ್ಲಿನ ಎಲ್ಲ ಧಾರ್ಮಿಕ ಕಲ್ಪನೆಗಳ ವೈಶಿಷ್ಟ್ಯವಾಗಿವೆ. ಸರಸ್ವತಿಯನ್ನು ಕುರಿತು ಆಗಾಗ್ಗೆ ಹೀಗೆ ಸ್ತುತಿಸಿದ ಸಂದರ್ಭಗಳಲ್ಲಿ ಆಕೆಯನ್ನು ನದಿಯೆಂದೇ ಸ್ತುತಿಸುವಾಗ ಆ ಋಷಿಗಳು ತಮ್ಮ ಮನಸ್ಸಿನಲ್ಲಿ 'ಪ್ರಜ್ಞಾವಾಹಿನಿ'ಯಂತಹ ಒಂದರ ಕಲ್ಪನೆಯನ್ನು ಹೊಂದಿದ್ದರೆಂದು ತೋರುತ್ತದೆ. ಕಣ್ಣಿಗೆ ಕಟ್ಟುವಂತೆ ಆ ಪ್ರಜ್ಞಾವಾಹಿನಿಯ ವರ್ಣನೆಯನ್ನು ವಿಲಿಯಂ ಜೇಮ್ಸ್ ಮಾಡಿರುವುದನ್ನು ಕಾಣಬಹುದು.

ವೇದದಲ್ಲಿ ಸರಸ್ವತಿಗೆ ಅನೇಕ ಮೂಲ ನಿರ್ದೇಶನಗಳುಂಟು. ಪ್ರಥಮತಃ ವಾಕ್ಸಂಬಂಧವಾದುದು. ಋಗ್ವೇದದಲ್ಲಿ ತನ್ನನ್ನೇ ಕುರಿತ ಒಂದು ಸಂಪೂರ್ಣವಾದ ಋಕ್ಕಿನಲ್ಲಿ ವಾಗ್ದೇವಿ ತನ್ನನ್ನು ಸಂಬೋಧಿಸಿ ತಾನು ಸಕಲ ದೇವತೆಗಳಿಗೂ ಆಧಾರ ಸ್ವರೂಪಳೆಂದೂ ಸ್ಫೂರ್ತಿಕಾರಣಳೆಂದೂ ಹೇಳಿಕೊಂಡಿರುವಳು. ಇದನ್ನು 'ದೇವೀ ಸೂಕ್ತ'ವೆಂದು ಆ ಅನಂತರದ ಪರಂಪರೆ ಹೆಸರಿಸಿತು. ಸಪ್ತಶತಿಯ ಪವಿತ್ರವಾದ ಪಾರಾಯಣದ ಸಂಬಂಧದಲ್ಲಿ ಇದನ್ನು ಬಳಸಿಕೊಳ್ಳಲಾಗಿದೆ. ಚಿನ್ಮಾತ್ರ ಗೋಚರಳಾದ ಅದಿತಿಯೊಡನಿರುವ ಸಾಮ್ಯ ನಿರೂಪಣೆಯು ಸರಸ್ವತಿಯ ಮತ್ತೊಂದು ಸಂಬಂಧ. ಇಡೀ ವೇದದ ತುಂಬ ಆ ಅದಿತಿಯ ಸುಳುಹು ತೋರಿದೆ. 'ಅದಿತಿ' ಎಂಬುದಕ್ಕೆ ವಿಮೋಚನೆ ಹಾಗೂ ಸ್ವಾತಂತ್ರ್ಯವೆಂದೇ ಶಬ್ದಾರ್ಥ. ಪಾಪ ಹಾಗೂ ದುಃಖಾನುಭವಗಳ ಪಾಶದಿಂದ ಮುಕ್ತರನ್ನಾಗಿ ಮಾಡುವ ಅಧಿಕಾರ ಆಕೆಗುಂಟು. ಅದಿತಿಗೆ ಸಂಬಂಧಿಸಿದ ಉಲ್ಲೇಖಗಳು ಬಹು ವಿರಳವಾದರೂ ಮುಂದೆ ಕೊಟ್ಟಿರುವಂತೆ ಪಾಠದಿಂದ ಆಕೆಯ ನಿಷ್ಕರ್ಷಕ ಪ್ರಾಧಾನ್ಯವನ್ನು ಕಂಡುಕೊಳ್ಳಲು ಸೂಚನೆ ದೊರೆಯುತ್ತದೆ. ಅದಿತಿಯು ಸ್ವರ್ಗ; ಅದಿತಿಯು ಆಕಾಶ; ಅದಿತಿಯು ಮಾತೆ, ಪಿತ ಮತ್ತು ಸುತ; ಅದಿತಿಯು ಸಕಲ ದೇವತೆ; ಅದಿತಿಯು ಜನರ ಐದು ವರ್ಗ; ಅದಿತಿಯು ಉತ್ಪತ್ತಿ ಹಾಗೂ ಜನನ".

ವೇದಗಳ ಸಾಕ್ಷಾಜ್ಜನನಿಯೆಂದು ಮೇಲಿಂದ ಮೇಲೆ ಉಲ್ಲೇಖಗೊಂಡು ಇಡೀ ವೇದದಲ್ಲಿ ಅತ್ಯಂತ ಪವಿತ್ರವಾದ ಮಂತ್ರವೆಂದು ಭಾವಿಸಲ್ಪಟ್ಟ ಪ್ರಖ್ಯಾತ ಗಾಯತ್ರೀ ಮಂತ್ರದೊಡನೆ ಸರಸ್ವತಿಗಿರುವ ಮೂಲ ಸಂಯೋಜನೆಯಾದರೊ ಅತಿ ಮುಖ್ಯವಾದುದು. ಕೇವಲ ಬಾಹ್ಯಪ್ರಮಾಣದಿಂದ ನೋಡುವುದಾದರೆ ವೇದದಲ್ಲಿ ಎಲ್ಲಕ್ಕಿಂತ ಕಿರಿಯ ದೇವತೆಯಾದ ಸವಿತೃವಿನ ಕುರಿತ ವೃತ್ತವದು. ಸವಿತೃವೇ ಪರ್ಯಾಯವಾಗಿ ಸಾವಿತ್ರಿಯೆಂದು ಕರೆಯಲ್ಪಟ್ಟಿದೆ. ಈ ಹೆಸರೂ ಸರಸ್ವತಿಯ ಹೆಸರೂ ಎರಡೂ ಒಂದೇ ಎಂದು ಗೊತ್ತುಹಚ್ಚಲಾಯಿತು. ಸವಿತರ್ ಒಬ್ಬ ಪುರುಷ ದೇವತೆ. ಆದರೂ ಸಾಂಪ್ರದಾಯಿಕವಾಗಿ ಗಾಯತ್ರಿಯನ್ನು ಪೌರಾಣಿಕ ಪಂಚಮಹಾ ಪೂಜಾದೇವತೆಗಳ ಸ್ವರೂಪವನ್ನುಳ್ಳ ದೇವಿಯನ್ನಾಗಿ ಚಿತ್ರಿಸಲಾಗಿದೆ: ಗಣಪತಿ, ವಿಷ್ಣು, ಶಕ್ತಿ, ಶಿವ ಮತ್ತು ಸೂರ್ಯ—ಇವರನ್ನು ಕುರಿತ ಆ ಪೂಜೆಯಲ್ಲಿ ಶಕ್ತಿಯ ಅಂಶವೇ ಪ್ರಮುಖವಾಗಿರುವಂತೆ ಕಾಣುತ್ತದೆ. ನಾವು ಉಲ್ಲೇಖಪಡಿಸಿದ ದೇವೀಭಾಗವತವು ವಾಸ್ತವವಾಗಿ ಗಾಯತ್ರಿಯ ಪೂಜೆಯನ್ನು ದೇವೀಪೂಜೆಯ ಮೊತ್ತಮೊದಲ ರೂಪವೆಂದು ನಿರೂಪಿಸಿದೆ. ಅದು ಸಹಸ್ರನಾಮ ಸ್ತೋತ್ರ ಹಾಗೂ ಇತರ ಪೂಜಾವಿಧಾನಗಳ ಸಾಧನ ಸಾಮಗ್ರಿಗಳೊಡನೆ ಗಾಯತ್ರೀ ಪೂಜೆಯ ಅರ್ಥವನ್ನು ವಿಶದಪಡಿಸುತ್ತದೆ. ಈ ಪುರಾಣದ ಆರಂಭದ ಪ್ರಾರ್ಥನಾ ಶ್ಲೋಕವು ವೇದದ ಗಾಯತ್ರೀಮಂತ್ರದ ಉತ್ತಮವಾದ ಭಾವಾನುವಾದವಾಗಿದೆ.

ಸರಸ್ವತಿಯು ಪ್ರಮುಖವಾಗಿ ಜ್ಞಾನ ಅಥವಾ ವಿದ್ಯೆಯ ಅಧಿದೇವತೆ. ಹೀಗೆ ಸರ್ವವಿದ್ಯಾಧಿದೇವಿಯೆನಿಸಿದ ಆ ವಾಣೀದೇವಿಯು ಸಕಲ ವಾಗ್ರಚನಾ ಸ್ವರೂಪವನ್ನೇ ವಿವರಿಸಿ ತಿಳಿಸಿಕೊಡಬಲ್ಲವಳೆಂದು ಭಾವಿಸಲಾಗಿದೆ. ಸಂಸ್ಕೃತ ವರ್ಣಮಾಲೆಯ ಐವತ್ತು ಅಕ್ಷರಗಳನ್ನು ಮಾತೃಕೆಯರು (ಕಿರಿಯ ತಾಯಂದಿರು) ಎಂದು ಕರೆದಿರುವರು. ಪ್ರತಿಯೊಂದು ಅಕ್ಷರದಲ್ಲಿಯೂ ಅದರದೇ ಆದ ಒಂದು ಶಕ್ತಿ ತುಂಬಿರುತ್ತದೆ. ಆ ವರ್ಣಗಳ ಸಮಷ್ಟಿರೂಪವೇ ಸರಸ್ವತಿಯ ಶರೀರವಾಗಿ ಆಕೆ ತನ್ನಲ್ಲಿಯೇ ಜ್ಞಾನಸರ್ವಸ್ವವನ್ನೂ ಒಳಕೊಂಡವಳು. ಅಕ್ಷರಗಳು ಅವು ಒಂಟಿಯಾಗಿರಲಿ, ಇಲ್ಲವೆ ಒಟ್ಟಾಗಿರಲಿ ಅಸಾಧಾರಣವಾಗಿ ಶಕ್ತಿಪೂರ್ಣವಾದುವು; ಸಮುಚಿತವಾಗಿ ಬಳಸಿದ ಎಲ್ಲ ಪದಗಳೂ ಶಕ್ತಿಯ ಸಾಧನಗಳು ಎಂದು ಭಾವಿಸಿರುವರು, ಗಾಯತ್ರೀ ಸಹಸ್ರನಾಮದಲ್ಲಿನ ಹೆಸರುಗಳು ಅರ್ಥವತ್ತಾಗಿ ವರ್ಗಗಳಾಗಿವೆ. ಪ್ರತಿವರ್ಗದಲ್ಲಿಯೂ ಅವು ವರ್ಣಮಾಲೆಯ ಅದೇ ಅಕ್ಷರದಿಂದ ಅನುಕ್ರಮವಾಗಿ ಆರಂಭವಾಗುವುವು. ಹಿಂದೆಯೇ ಹೇಳಲಾದ ಸಪ್ತಮಾತೃಕೆಯರನ್ನು ಏಳು ವರ್ಗಗಳಾಗಿ ವಿಂಗಡಣೆಗೊಂಡ ಸಂಸ್ಕೃತದ ವರ್ಣಗಳು ಪ್ರತಿನಿಧಿಸುವುವೆಂದು ಭಾವಿಸಿದ್ದಾರೆ. ಸರಸ್ವತಿ ಪ್ರಧಾನವಾಗಿ ವಾಣಿ; ಮಾತ್ರಾತ್ಮಕಳಾದವಳು.

ಪದಗಳ ಇಲ್ಲವೆ ಅನುಷ್ಠಾನದ ನ್ಯಾಸಮುದ್ರಾಕ್ರಿಯೆಗಳ ಪ್ರಯೋಗವು (ಬೇರೊಂದು ಬಗೆಯ ಭಾಷೆ) ಸರಸ್ವತಿಯನ್ನು ಶಕ್ತಿಯೆಂಬುದಾಗಿ ಒಮ್ಮೆಗೇ ಕಂಡುಕೊಂಡುದರ ಒಂದು ಗ್ರಹಿಕೆಯಾಗಿದೆ.

ಸರಸ್ವತಿ ಮತ್ತು ಸಪ್ತಮಾತೃಕೆಯರ ಪ್ರತಿಮೆಗಳಾದರೋ ಅಪರೂಪವಾದುವಲ್ಲ. ಹಿಂದೆಯೇ ತಿಳಿಸಿದ ಕೋಲಾರದ ದೇವಾಲಯದಲ್ಲಲ್ಲದೆ ಕರ್ನಾಟಕದ ನಾನಾ ಸ್ಥಳಗಳಲ್ಲಿ ಉದಾಹರಣೆಗೆ ಹಾವೇರಿಯ ಸಿದ್ಧೇಶ್ವರ ದೇವಾಲಯ ಹಾಗೂ ಐಹೊಳೆಯಲ್ಲಿ ಸಪ್ತಮಾತೃಕೆಯರ ಪ್ರತಿಮೆಗಳಿವೆ. ಎಲ್ಲೋರದ ಹದಿನಾಲ್ಕನೆಯ ಗುಹೆಯಲ್ಲಿಯೂ ಅವುಗಳನ್ನು ಕಾಣಬಹುದು. ತಾಮ್ರದ ದತ್ತಿಶಾಸನಗಳ ಪ್ರಕಾರ ಮೊದಮೊದಲು ಚಾಲುಕ್ಯರಿಗೆ ಸಪ್ತಮಾತೃಕೆಯರು ಅಭಿಮಾನ ದೇವತೆಯರಾಗಿದ್ದರೆಂಬುದು ಸುವಿದಿತವಾಗಿದೆ. ನಮಗೆ ಸಮೀಪವಾಗಿರುವ ಮೈಸೂರಿಗೆ ದಸರಾ ಉತ್ಸವಗಳ ಸಮಯದಲ್ಲಿ ಆಗಮಿಸಿ ಬೆಟ್ಟದ ಮೇಲಿರುವ ಕೊಳದಲ್ಲಿ ದೇವೀಕೆರೆಯೆಂಬ ಸಣ್ಣ ಕಲ್ಯಾಣಿಯಲ್ಲಿ ಚಾಮುಂಡೇಶ್ವರಿಯ ತೆಪ್ಪೋತ್ಸವವನ್ನು ನೋಡಿದವರು ಈ ಸಪ್ತಮಾತೃಕೆಯರನ್ನು ಗಮನಿಸಿರಬಹುದು. ವಿಶಿಷ್ಟಾಕೃತಿಯುಳ್ಳ ಈ ಸಪ್ತಮಾತೃಕೆಯರು ಒಬ್ಬೊಬ್ಬರೂ ವೈಭವಯುತವಾಗಿ ಅಲಂಕೃತವಾಗಿಯೂ ದೇದೀಪ್ಯಮಾನವಾಗಿ ಜಗಜಗಿಸುತ್ತಲೂ ಇರುವ ತಮ್ಮ ತಮ್ಮ ವೇದಿಕೆಗಳ ಮೇಲೆ, ಪ್ರಮುಖದೇವಿಯಾದ ಚಾಮುಂಡೇಶ್ವರಿಯ ಸುತ್ತಲೂ ಮಂಡಿಸಿರುವುದನ್ನು ಕಾಣಬಹುದು.

ಕರ್ನಾಟಕದಲ್ಲಿ ಸರಸ್ವತಿಯ ಸುಪ್ರಸಿದ್ಧವಾದ ಪ್ರತಿಮೆಯೆಂದರೆ ಶೃಂಗೇರಿಯ 'ಶಾರದಾಂಬಾ' ದೇವಿಯ ಪ್ರತಿಮೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆ ಶಾರದಾಂಬೆಯ ಗೌರವಾರ್ಥವಾಗಿ ಶೃಂಗೇರಿಗೆ ಶಾರದಾಪೀಠವೆಂಬ ಹೆಸರು ಬಂದಿದೆ. ಶಂಕರಾಚಾರ್ಯರು ಸ್ಥಾಪಿಸಿದ ಇತರ ಪ್ರಮುಖ ಮಠಗಳಲ್ಲಿ ಅವರು ಶಾರದಾದೇವಿಯ ಪ್ರತಿಮೆಯನ್ನು ಪ್ರತಿಷ್ಠೆಮಾಡಿದಂತೆ ಇಲ್ಲಿಯೂ ಮಾಡಿದರೆನ್ನುವರು. ಈ ಪ್ರತಿಮೆಯ ಹೆಸರು ಶರತ್ಕಾಲದಲ್ಲಿ ಪೂಜಿಸುವ ದುರ್ಗಾದೇವಿಯೊಡನೆ ತನಗಿರುವ ಅನನ್ಯತೆಯನ್ನು ಸೂಚಿಸುತ್ತದೆ. ಸುಪರಿಚಿತವಾದ ಶಾರದಾಸ್ತುತಿಯಲ್ಲಿ ಆಕೆಯನ್ನು 'ಕಾಶ್ಮೀರ ಪುರವಾಸಿನಿ' ಎಂದರೆ ಕಾಶ್ಮೀರದ ರಾಜಧಾನಿಯಾದ ಶ್ರೀನಗರದಲ್ಲಿ ನಿವಾಸಮಾಡಿಕೊಂಡಿರುವವಳು ಎಂದು ವರ್ಣಿಸಿದೆ. ಸುಮಾರು ಕ್ರಿಸ್ತಶಕಾರಂಭದಲ್ಲಿ ಕಾಶ್ಮೀರವು ಒಂದು ಪ್ರಬಲ ವಿದ್ಯಾಪೀಠವಾಗಿತ್ತೆಂಬುದು ಸುಪ್ರಸಿದ್ಧವಾದ ಸಂಗತಿ. ಸುಸ್ಪಷ್ಟವಾದ ಈ ಸೂಚನೆಯನ್ನಲ್ಲದೆ ಆ ಸ್ತೋತ್ರಪದ್ಯವು ಶ್ರೀಚಕ್ರ (ಶ್ರೀನಗರ ಅಥವಾ ಶ್ರೀಪುರವೆಂದು ಅನೇಕವೇಳೆ ಹೇಳಲ್ಪಟ್ಟದ್ದು) ವನ್ನು ಕೂಡ ಉಲ್ಲೇಖಮಾಡಿದೆ. ಮಹಾರಹಸ್ಯಾರಾಧನೆಯಲ್ಲಿ ಬಳಸುವ ಯಂತ್ರವಾದ ಆ ಶ್ರೀಚಕ್ರಮಧ್ಯದಲ್ಲಿ ಶ್ರೀದೇವಿಯು ನೆಲಸಿರುತ್ತಾಳೆಂದು ನಂಬುವರು.

ಶ್ರೀ ಚಕ್ರವು ಏಕಕೇಂದ್ರಕವಾದ ಬಹು ತ್ರಿಕೋಣಗಳಿಂದ ಆದ ಒಂದು ರಚನೆ. ಅದರ ನಾನಾ ಬಿಂದುಸ್ಥಾನಗಳಲ್ಲಿ ದಾರ್ಶನಿಕ ಯೋಜನೆಗನುಗುಣವಾಗಿ ಸಂಸ್ಕೃತ ವರ್ಣಮಾಲೆಯ ಅಕ್ಷರಗಳೂ ಬೀಜಾಕ್ಷರಗಳೂ ಇರುತ್ತವೆ. ಪೂಜಾವಿಧಿಯನ್ನರಿತವರು ಆ ತ್ರಿಕೋಣಾತ್ಮಕ ಶ್ರೀಯಂತ್ರವನ್ನು ಪೂಜಿಸಿ ಧ್ಯಾನಿಸುವರು. ಕಡೆಕಡೆಯ ಅನೇಕ ಉಪನಿಷತ್ತುಗಳಲ್ಲಿಯೂ ತಾಂತ್ರಿಕ ಗ್ರಂಥಗಳಲ್ಲಿಯೂ ಅದರ ವರ್ಣನೆ ಕಂಡುಬರುತ್ತದೆ. ಯಂತ್ರಗಳ ಸಮಗ್ರ ರಚನಾಕ್ರಮದ ಅತ್ಯುಚ್ಚ ಮಾದರಿ ಅದು. ಆ ಶ್ರೀಚಕ್ರದ ಪೂಜೆಯನ್ನು ಕುರಿತ ಜನಪ್ರಿಯವಾದ ಪ್ರಯೋಗಗ್ರಂಥಗಳಲ್ಲೆಲ್ಲ ಶಂಕರಾಚಾರ್ಯ ವಿರಚಿತವಾದುದೆನ್ನುವ 'ಸೌಂದರ್ಯಲಹರಿ' ಬಹು ಮುಖ್ಯವಾದುದು. ತಾವು ಸ್ಥಾಪಿಸಿದ ಹಲವಾರು ಮಠಗಳಲ್ಲಿಯೇ ಅಲ್ಲದೆ ದೇವೀಪೂಜೆಗೆ ಪ್ರಸಿದ್ಧವಾದ ಇತರ ಕೇಂದ್ರಗಳೆನಿಸಿದ ಕಾಂಚೀಪುರ ಮತ್ತು ಈಗಾಗಲೆ ತಿಳಿಯಪಡಿಸಿದ ಕೊಲ್ಲೂರುಗಳಲ್ಲೂ ಶಂಕರಾಚಾರ್ಯರು ಶ್ರೀಚಕ್ರವನ್ನು ಸ್ಥಾಪಿಸಿದರೆಂದು ಹೇಳುವರು. ಅವರು ಹಿಂದೂಧರ್ಮದ ಭಾಗ್ಯವು ಬಹು ಇಳಿಮುಖವಾಗಿದ್ದ ವೇಳೆಯಲ್ಲಿ ಅದು ನವಚೈತನ್ಯದಿಂದ ಚೇತರಿಸಿಕೊಳ್ಳುವುದಕ್ಕೆ ಮುಖ್ಯ ಕಾರಣಕರ್ತರಾದರು. ಗಾಯತ್ರಿಗೆ ಸಂಬಂಧಿಸಿದಂತೆ

ಈಗಾಗಲೇ ಹೆಸರಿಸಿರುವ ಪಂಚಾಯತನ ಪೂಜೆಯು ಪ್ರಮುಖ ದೇವತೆಗಳಲ್ಲಿ ಸಮಾನ ಭಕ್ತಿ ಭಾವವನ್ನು ಹೊಂದುವಂತೆ ಉತ್ತೇಜನವನ್ನಿತ್ತರು. ಶಾಕ್ತ ಎಂಬ ಪದಕ್ಕೇ ಮೀಸಲಾದ ಅರ್ಥದೃಷ್ಟಿಯಿಂದಲೂ ಶಾಕ್ತತಂತ್ರದಲ್ಲಿ ಉಕ್ತವಾದ ಕ್ರಮಕ್ಕೆ ಅನುಗುಣವಾಗಿಯೂ ಶಾಕ್ತರೆಂದೆನಿಸಿದವರಲ್ಲವಾದರೂ ಅವರು ಶಕ್ತಿಯ ಭಾವನಾರೂಪಕ್ಕೆ ವಿಶೇಷ ಮಹತ್ತ್ವ ಕೊಟ್ಟಿದ್ದರೆಂಬುದು ಸುಸ್ಪಷ್ಟ. ಶಾರದಾಂಬೆಯೇ (ಸರಸ್ವತಿ) ಅವರ ಇಷ್ಟದೇವತೆಯಾದುದು ಕಾರ್ಯೋಚಿತವಾಗಿ. ಆ ಪೂಜಾವ್ಯವಸ್ಥೆಯ ಮೇರೆಯೊಳಗೆ ಸಮಗ್ರ ಶ್ರೌತ–ಸ್ಮಾರ್ತ ಪದ್ಧತಿಗಳ ಸಾಹಿತ್ಯ ಸಮೂಹವೇ ಒಂದುಗೂಡಿದೆ: ವೇದ, ವೇದಾಂತ, ಸ್ಮೃತಿ, ಶಾಸ್ತ್ರ, ಪುರಾಣ ಹಾಗೂ ಆಗಮಗಳು ಆ ಸಾಹಿತ್ಯ ಸಮುದಾಯ. ಅದನ್ನು ಪಂಡಿತರ ಆರಾಧನೆಯೆಂದು ಕರೆಯಬಹುದು. ಕೇರಳದಲ್ಲಿ ಜನಿಸಿದರೂ ಇಡೀ ಭಾರತದ ಆದ್ಯಂತ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯ ತನಕ (ಕನ್ಯಾಕುಮಾರಿ–ಇದು ಕೂಡ ಶಕ್ತಿಯ ಒಂದು ಹೆಸರು) ಶಂಕರಾಚಾರ್ಯರು ವ್ಯಕ್ತಿಶಃ ಪರಿಚಿತರಾಗಿ ವಿಖ್ಯಾತಿಗಳಿಸಿದವರಾದರೂ ಅವರ ಪ್ರಮುಖ ಮೂಲಪೀಠ ಕರ್ಣಾಟಕದ ಮಧ್ಯದಲ್ಲಿರುವ ಶೃಂಗೇರಿಯಲ್ಲಿ ಸ್ಥಾಪಿತವಾಗಿರುವುದು ನಮಗೆ ಹೆಮ್ಮೆಯನ್ನುಂಟುಮಾಡುವುದು. ಅವರ ಉತ್ತರಾಧಿಕಾರಿಗಳಾದ ಪೀಠಾಧಿಪತಿಗಳು ತಮ್ಮನ್ನು ಶಾರದಾಮ್ಮನವರ ಪರಮ ಭಕ್ತರೆಂದು ವರ್ಣಿಸಿ ಕೊಂಡಿರುವರಷ್ಟೇ ಅಲ್ಲದೆ, ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯರೆಂದೂ ಕರೆದುಕೊಂಡಿದ್ದಾರೆ. ಕರ್ಣಾಟಕ ರಾಜ್ಯದ ಆಧ್ಯಾತ್ಮಿಕ ಸಂಸ್ಥಾಪಕರು ಎಂದು ಆ ಮಾತಿನ ಭಾವಾರ್ಥ.

ಶಕ್ತಿಪೂಜಾನುಬಂಧಿ ವಿದ್ಯೆಯಾದ ಕುಂಡಲಿನೀಯೋಗವನ್ನು ಕುರಿತು ಈ ಸಂದರ್ಭದಲ್ಲಿ ಸಂಗ್ರಹವಾಗಿ ಉಲ್ಲೇಖಿಸಬೇಕಾಗಿದೆ. ಕುಂಡಲಿನೀ ಶಕ್ತಿಯು ವಾಕ್ ಶಕ್ತಿಯ ಅತಿಸೂಕ್ಷ್ಮ ತೇಜೋ ಬಿಂದುವಿಗೆ ಪೀಠರೂಪವಾಗಿ ಮನುಷ್ಯ ಶರೀರದ ಬೆನ್ನಹುರಿಯ ಕೆಳಗೆ ಮೂಲಾಧಾರ ಚಕ್ರದಲ್ಲಿ ಸುಪ್ತ ಭುಜಗಾಕೃತಿಯಲ್ಲಿರುವುದೆಂದು ವರ್ಣಿತವಾಗಿದೆ. ಶಾಸ್ತ್ರೋಕ್ತವಾದ ಆಸನಗಳ ಮೂಲಕ ಶಾರೀರಕವೂ ಧ್ಯಾನೈಕವೂ ಆದ ಯೋಗಾಭ್ಯಾಸಗಳಿಂದ ನಿದ್ರಿಸುತ್ತಿರುವ ಕುಂಡಲಿನೀಶಕ್ತಿಯನ್ನು ಎಚ್ಚರಿಸಿದಾಗ ಅದು ಸುಷುಮ್ನಾ ನಾಡಿಯೊಳಗೆ ಊರ್ಧ್ವಮುಖವಾಗಿ ಬಾಣದಂತೆ ನೆಗೆದು ಮಾರ್ಗದಲ್ಲಿರುವ ಮಿಕ್ಕ ಐದು ಚಕ್ರಗಳನ್ನು ಭೇದಿಸಿ, ಮಿದುಳಿನ ಪ್ರಾಂತದಲ್ಲಿರುವ ಸಹಸ್ರಾರದ ಗುರಿಯನ್ನು ಮುಟ್ಟುತ್ತದೆ. ಈ ಯೋಗಾನುಶೀಲನ ಕ್ರಿಯೆಯು ಆನಂದಾಮೃತಾಸ್ವಾದನೆಗೆ ದಾರಿ ತೋರಿಸುತ್ತದೆ. ಆ ನಿತ್ಯಾನಂದವೇ ಈ ಬಗೆಯ ಯೋಗದ ಗುರಿ. ಇಲ್ಲಿ ನಮ್ಮ ಗಮನವನ್ನು ಸೆಳೆಯುವ ಅಂಶವೆಂದರೆ ಕುಂಡಲಿನಿಯೇ ವಾಕ್ಶಕ್ತಿ. ಕುಂಡಲಿನಿಯ ಉತ್ಥಾಪನೆಗೆ ಸರಸ್ವತೀಚಲನವೆಂಬ ಪಾರಿಭಾಷಿಕ ಶಬ್ದವುಂಟು. ಕುಂಡಲಿನೀ ಶಕ್ತಿಪಥವಾದ ಸುಷುಮ್ನಾನಾಡಿಯನ್ನು ಕೂಡ ಸರಸ್ವತಿ ಎನ್ನುವರು. ಆ ನಾಡಿಯ ಉಭಯ ಪಾರ್ಶ್ವಗಳಲ್ಲಿರುವ ಇಡಾ ಮತ್ತು ಪಿಂಗಳಾ ಎಂಬ ನಾಡಿಗಳನ್ನು ಗಂಗೆಯಮುನೆಯರೆಂದು ಕರೆದಿರುವುದನ್ನು ತಾಂತ್ರಿಕ ಶಾಸ್ತ್ರ ಪರಿಭಾಷೆಯಲ್ಲಿ ಮಾತ್ರವಲ್ಲದೆ ಭಕ್ತಿಮಾರ್ಗದ ಕಬೀರರಂತಹ ಇತರ ಸಾಧಕರ ವಚನಗಳಲ್ಲಿಯೂ ಕಾಣಬಹುದು. ಅಲ್ಲದೆ ಸಂಸ್ಕೃತ ವರ್ಣಮಾಲೆಯ ಐವತ್ತು ಅಕ್ಷರಗಳನ್ನು ಕುಂಡಲಿನೀಪಥದಲ್ಲಿ ಅಡ್ಡ ಬರುವ ಷಟ್ಚಕ್ರಗಳ ದಳಗಳಿಗೆಲ್ಲ ಹಂಚಿರುವರು. ಪುರಾಣ ಹಾಗೂ ತಂತ್ರಗಳಲ್ಲಿ ಈ ಯೋಗ ಪದ್ಧತಿಯು ಲಲಿತಾ (ತ್ರಿಪುರ ಸುಂದರೀ) ಸಂಬಂಧವಾದುದಾಗಿ ಶೈವಸಂಕೇತವನ್ನುಳ್ಳದಾಗಿದೆ. ಆದರೆ ಅದರಿಂದ ಆ ಹೆಸರುಗಳ ಹಿಂದೆ ಅಡಗಿರುವ ಅರ್ಥಕ್ಕೆ ಯಾವ ಬಾಧೆಯೂ ಉಂಟಾಗಿಲ್ಲ. ಲಲಿತೋಪಾಸನಾ ಮಾರ್ಗದ ಸ್ಥಳೀಯ ಉತ್ಕೃಷ್ಟ ಕೃತಿಯೆಂದರೆ ಬ್ರಹ್ಮಾಂಡಪುರಾಣದ ಲಲಿತೋಪಾಖ್ಯಾನ. ಸಂಬಂಧಪಟ್ಟ ವಿಪುಲ ಸಾಹಿತ್ಯವೂ ಇದೆ. ಈ ಮನೋಹರವಾದ ವಿಷಯವನ್ನು ಆಳವಾಗಿ ವಿವೇಚಿಸಬೇಕೆಂಬ ಚಾಪಲ್ಯವನ್ನು ಬಲವಾಗಿ ತಡೆಹಿಡಿದುಕೊಳ್ಳಬೇಕಾಗಿದೆ. 'ಸರಸ್ವತಿ' ಎಂದು ಗ್ರಹಿಸಿಕೊಳ್ಳಲ್ಪಟ್ಟ ಶಕ್ತಿಯ ಸೂಕ್ಷ್ಮವೂ ಬಹುಮುಖವೂ ಆದ ವ್ಯಾಪ್ತಿಯನ್ನು ಸ್ಪಷ್ಟಪಡಿಸಲು ಬೇಕಾದಷ್ಟನ್ನಾದರೂ ಹೇಳಲಾಗಿದೆ ಎಂದು ತೋರುತ್ತದೆ.

ವಿಷಯ ಪರಿಸಮಾಪ್ತಿಯ ಮುನ್ನ ಕೆಲವು ಸಾಮಾನ್ಯ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಒಂದು ಜೀವಂತ ವಿಷಯ ಅದು ಹೇಗಿದೆಯೋ ಹಾಗೆ ಇರತಕ್ಕದ್ದು ಅದರ ಬಾಂಧವ್ಯಗಳ ಆಧಾರದ ಮೇಲೆ ಮಾತ್ರ. ಪೃಥಕ್ಕರಿಸಿ ಪ್ರತಿಪಾದಿಸುವುದೆಂದರೆ ಅದನ್ನು ನಿಸ್ಸತ್ವಗೊಳಿಸಿದಂತೆಯೆ. ಭಾರತದ ತತ್ವವಿಚಾರವನ್ನು ಕುರಿತು ಠಾಕೂರರು "ಪಾಂಡಿತ್ಯದ ಹೊದಿಕೆಯಲ್ಲಿ ಎಂದೆಂದಿಗೂ ಕೆಡದಂತೆ ಮಾನವ ಭಾವನೆಗಳ ಮೃತ ರೂಪಗಳನ್ನು ಮಾದರಿಯಾಗಿ ಪಟ್ಟಿ ಅಂಟಿಸಿದ ಪೆಟ್ಟಿಗೆಗಳಲ್ಲಿ ರಕ್ಷಿಸಿಟ್ಟು ಪ್ರದರ್ಶನಕ್ಕೆ ಇರಿಸಿದಾಗ ಅದು ತನ್ನ ಎಲ್ಲಾ ತಾತ್ಪರ್ಯವನ್ನೂ ಕಳೆದುಕೊಳ್ಳುತ್ತದೆ"ಯೆಂದು ಹೇಳಿದ್ದಾರೆ. ಈ ಮಾತು ಭಾರತದ ಧಾರ್ಮಿಕ ಸಂಗತಿಗಳಿಗೆ ಇನ್ನೂ ಹೆಚ್ಚು ದೃಢವಾಗಿ ಅನ್ವಯಿಸುತ್ತದೆ. ನಾವು ವಿಚಾರಮಾಡುತ್ತಿರುವ ಸಂಗತಿಗಳು ಬಹು ಅಸಂಸ್ಕೃತವಾದವುಗಳಿಂದ ಹಿಡಿದು ಅತಿ ಪರಿಷ್ಕೃತವಾದವುಗಳ ವರೆಗೆ ಇಂದೂ ಜೀವಂತವಾಗಿವೆ. ಯಾವುದೋ ಒಂದು ಏಕಕಾಲಿಕತೆ ಅಥವಾ ಸಮಕಾಲಿಕ ಘಟನೈಕ್ಯತೆಯೆಂದೆನ್ನಬಹುದಾದ ಅದು ಜೀವಂತ ಸಂಗತಿಗಳ ವೈಲಕ್ಷಣ್ಯವೇ ಹೊಗತು ಕಾಲಕ್ರಮಾಗತ ಘಟನೆಗಳ ಪರಿವಿಡಿಯಲ್ಲ. ಆದ್ದರಿಂದ ಅವುಗಳನ್ನು ಐತಿಹಾಸಿಕವಾಗಿ ರೂಢಿಗತವಾದ ಅರ್ಥದೃಷ್ಟಿಯಿಂದ ಸಂಪೂರ್ಣವಾಗಿ ಗತಕಾಲದವುಗಳೆನಿಸಿ ಕಟ್ಟಕಡೆಯದಾಗಿ ಮುಗಿದೇ ಹೋದವು ಎಂಬಂತೆ ವಿವೇಚಿಸಲಾಗದು. ಮೂಲ ಅಂಶಗಳು ಯುಗಾಂತರಗಳಿಂದಲೂ ಒಂದೇ ರೀತಿಯಲ್ಲಿವೆ. ಕಾಲ ಕಾಲಕ್ಕೆ ಹೆಸರುಗಳು ಹಾಗೂ ಆಂತರಿಕ ಸಂಬಂಧದ ಆದರ್ಶ ರೂಪಗಳು ಮಾತ್ರ ಮಾರ್ಪಟ್ಟಿವೆ. ಆ ಮಾರ್ಪಾಟೂ ಸಮಪ್ರಮಾಣದಲ್ಲಾಗಲಿ, ಪ್ರಾಂತೀಯವಾಗಿಯಾಗಲಿ ಆದುದಲ್ಲ; ಸ್ವಪರಿಪೂರ್ಣ ಸಂಪ್ರದಾಯಗಳಲ್ಲಿ ಮಾತ್ರ, ಅದೂ ಅನೇಕ ವೇಳೆ ಜನರ ಗುಂಪಿನಲ್ಲಿ ವೈಯಕ್ತಿಕವಾಗಿ ಕೂಡ ಕಣ್ಣಿಗೆ ಬೀಳದಂತೆ ಆಗಿದೆ. ಆ ಮಾರ್ಪಾಟಿನಲ್ಲಿ ಏಕರೂಪತೆಗಳಿದ್ದರೂ ಅವುಗಳಿಗೆ ಆಧಾರವಾಗಿ ಮೂಲ ಸ್ವಾತಂತ್ರ್ಯ ಇಲ್ಲವೆ ಆಯ್ಕೆಯ ಸ್ವಾಂತತ್ರ್ಯವಿದೆ. ಗೀತಾವಾಕ್ಯದಲ್ಲಿ ಹೀಗೆ ಹೇಳಿದೆ :

"ಯೇ ಯಥಾ ಮಾಂ ಪ್ರಪದ್ಯಂತೇ
ತಾಂಸ್ತಥೈವ ಭಜಾಮ್ಯಹಮ್ ।
ಮಮ ವರ್ತ್ಮಾನುವರ್ತಂತೇ
ಮನುಷ್ಯಾಃ ಪಾರ್ಥ ಸರ್ವಶಃ ॥

ಆ ಕಾರಣ ನಿಯಮಾಚರಣೆಯ ತತ್ತ್ವ ವ್ಯಕ್ತಿಯ ಮಟ್ಟ ಹಾಗೂ ಅಧಿಕಾರಕ್ಕೆ ಹೊಂದಿಕೊಳ್ಳುವಂತಿದ್ದು ಇಷ್ಟದೇವತೆಯನ್ನು ಯಾವ ರೂಪದಲ್ಲಿ ಪೂಜಿಸಬೇಕೆಂಬ ವಿಷಯದಲ್ಲಿ ಆಯ್ಕೆಯ ಸ್ವಾತಂತ್ರ್ಯವಿರುತ್ತದೆ. ಚಂಚಲ ಸ್ವಭಾವದಲ್ಲಿನ ವೈಪರೀತ್ಯಕ್ಕಷ್ಟೇ ಅಲ್ಲದೆ ಮನೋಭಾವದ ಮಾರ್ಪಾಟಿಗೂ ಇಲ್ಲಿ ಅವಕಾಶವಿದೆ. ಏಕೆಂದರೆ ಪ್ರತಿಯೊಂದು ಧಾರ್ಮಿಕ ಮನೋವೃತ್ತಿಯೂ ಅದಿರುವ ವೇಳೆಯಲ್ಲಿ ಮತ್ತೊಂದರ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದರೂ ಅದು ಚಿರಕಾಲ ಇರಲಾರದು. ಆದರೂ ಇದು ಅತಿ ಸಹಜ. ಆ ಕಾರಣ ಇದಕ್ಕೆ ಅವಕಾಶವನ್ನು ಕೊಟ್ಟೇ ತೀರಬೇಕು.

ಯುಗ ಯುಗಗಳಲ್ಲೆಲ್ಲ ಭಾರತೀಯ ಮತದ ಆದ್ಯ ಗುಣವೆನಿಸಿದ ಈ ವೈಲಕ್ಷಣ್ಯವು ವೇದದಲ್ಲಿ ದೃಷ್ಟಾಂತದಿಂದ ತೋರಿಸಲ್ಪಟ್ಟಿದೆ. ವಿದೇಶೀ ವಿದ್ವಾಂಸರು ಏಕದೇವತಾರಾಧನೆ ಹಾಗೂ ಬಹುದೇವತಾರಾಧನೆಗಳ ಕಠಿನ ತತ್ತ್ವಗಳನ್ನು ಕಂಡು ದಿಗ್ಭ್ರಾಂತರಾದರು. ಮ್ಯಾಕ್ಸ್ ಮುಲ್ಲರ್ ಅದನ್ನು ವಿವರಿಸಲು 'Henotheism' 'ಸರ್ವೋತ್ಕೃಷ್ಟೈಕದೇವತಾ ಪೂಜೆ' ಎಂಬ ಪದವನ್ನು ಬಳಕೆಗೆ ತಂದನು : ಏಕತೆ ಮತ್ತು ಅನೇಕತೆಗಳ ಒಂದು ಸಜೀವ ಸಮ್ಮಿಳನ ; ಇದು ಪ್ರತ್ಯೇಕವಾಗಿ ಅವೆರಡರಲ್ಲಿ ಯಾವುದೂ ಅಲ್ಲದ ಸಂಪೂರ್ಣವಾಗಿ ಬೇರೆಯದಾದ ಮೂರನೆಯದು (ಮೂರನೆಯದಾದ ಯಾವುದೋ ಒಂದು). ಅನಿವಾರ್ಯ

ವಾದ ಆ ವಿಕಲ್ಪದ್ವಯವನ್ನು ಎದುರಿಸುವಾಗ ಭಾರತೀಯ ಮನೋದೃಷ್ಟಿ ಪಕ್ಷ ಹಿಡಿಯಲು ನಿರಾಕರಿಸಿ ಆ ದೃಷ್ಟಿಗೆ ಇದು ಅದು ಎಂಬುದಿಲ್ಲ, ಯಾವಾಗಲೂ ಎರಡೂ, ಸಾಧ್ಯವಾದರೆ ಏಕಕಾಲದಲ್ಲಿ, ಇಲ್ಲವಾದರೆ ಕಡೆಗೆ ಒಂದಾದ ಮೇಲೊಂದರಂತೆ ಅಥವಾ ವಿಕಲ್ಪವಾಗಿ ಅಗತ್ಯವೆನಿಸಿದವು. ಸಹಬಾಳ್ವೆಯೇ ಅದರ ಸೂತ್ರ. ದೇವತೆಗಳ ನಿಗದಿಯಾದ ಶ್ರೇಣಿಯಲ್ಲಿ ಏನೇ ದರ್ಜೆಯಿರಲಿ ಯಾವುದು ಜನರ ಗಮನವನ್ನು ಸೆಳೆಯುವಂತಿದ್ದಿತೋ ಆ ದೇವತೆಯನ್ನೇ ಸರ್ವಶ್ರೇಷ್ಠವೆಂದು ಭಾವಿಸಲಾಗುತ್ತಿದ್ದಿತು. ಒಬ್ಬ ದೇವತೆ ಯನ್ನು ಇಲ್ಲವೆ ಇನ್ನಿಬ್ಬರನ್ನು ಅಥವಾ ವಿವಿಧ ದೇವತೆಗಳ ಗುಂಪನ್ನು ಜನರು ಪ್ರಾರ್ಥಿಸುತ್ತಿದ್ದರು. ವಿಶ್ವದೇವತೆಗಳೆಂಬ ಪ್ರತ್ಯೇಕ ದೇವತೆಗಳ ಸಮೂಹವನ್ನು ಕೂಡ ಆಹ್ವಾನಿಸುತ್ತಿದ್ದರು. ವೇದದ ಪ್ರಮಾಣವಾಕ್ಯವಿದು : ಏಕಂ ಸತ್ ವಿಪ್ರಾ ಬಹುಧಾ ವದಂತಿ—ಇರುವುದು ಒಂದೇ, ಆದರೆ ಜ್ಞಾನಿಗಳು ಅದನ್ನು ಬಹುವಿಧವಾಗಿ ವರ್ಣಿಸುವರು : ಸಹಸ್ರನಾಮ ಸ್ತೋತ್ರಗಳ ಜನಪ್ರಿಯತೆಯನ್ನು ಗಮನಿಸಿರಿ.

ಪ್ರಚಾರ ಪ್ರಮುಖತೆಗಳು ಘನತೆಯ ಮೋಸಹೋಗಲಾಗದ ಚಿಹ್ನೆಗಳೇನಲ್ಲವೆಂಬುದು ಮತ್ತೊಂದು ಗಮನಾರ್ಹವಾದ ವೈಲಕ್ಷಣ್ಯ. ಆಧುನಿಕ ಮನಶ್ಶಾಸ್ತ್ರಜ್ಞರು ಜಾಗೃತ್ ಚೇತನದ ಬದಲು ಸುಪ್ತಚೇತನದ ಪಾತ್ರವನ್ನೇ ಎತ್ತಿಹಿಡಿಯುವ ಕಡೆಗೆ ಒಲಿದಿರುವಂತೆ, ಮುನ್ನೆಲೆಗಿಂತ ಹಿನ್ನೆಲೆಯನ್ನೇ ಹೆಚ್ಚು ಅರ್ಥಗರ್ಭಿತ ವಾದುದೆಂದು ಹಲವು ವೇಳೆ ಭಾವಿಸಲಾಗಿದೆ. ಅಂಕಿ ಅಂಶಗಳ ನಿರ್ಣಯಗಳು ಅಲ್ಪಫಲಕಾರಿಗಳು. ಇಂದ್ರ, ಅಗ್ನಿ ಹಾಗೂ ಸೋಮರು ಉದಾಹರಣೆಗೆ ಪದೇ ಪದೇ ಸ್ತುತ್ಯರಾದ ದೇವತೆಗಳಾದರೂ ಸಂಕೀರ್ಣ ದೇವತೆಗಳ ಸ್ತೋತ್ರವನ್ನು ಮಾಡುವ ಸಲುವಾಗಿ ಬಂದ ಒಂದು ಆಕಸ್ಮಿಕ ಸ್ತುತಿಯಲ್ಲಿ ಕಾಣಿಸಿಕೊಳ್ಳುವ ಅತಿ ಗೌಣದೇವತೆಗಳನ್ನು ಉದ್ದೇಶಿಸಿ ಮಾಡಿದ ಗಾಯತ್ರೀ ಮಂತ್ರವನ್ನು ವೇದದ ಸಾರವೆಂದು ಹೇಗೆ ಪರಿಗಣಿಸಿರುವರೆಂಬುದನ್ನು ನೋಡಿದ್ದೇವೆ. ಅದಿತಿಯ ಸ್ಥಾನವು ಹೇಗೆ ನಿರ್ಣಾಯಕವಾದುದು ಎಂಬುದನ್ನೂ ನಾವು ಕಂಡಿದ್ದೇವೆ. ಇಂದ್ರ ಹಾಗೂ ಇತರ ದೇವತೆಗಳ ಪರವಾಗಿ ಮಧ್ಯೆ ಪ್ರವೇಶಿಸಿದ ವಿಷ್ಣುವಿಗೆ ಉಪೇಂದ್ರನೆಂಬ ವಿಶೇಷಣ ಉಂಟು. ಗೌಣ ಅಥವಾ ಸಹಾಯಕನಾದ ಇಂದ್ರನೆಂಬುದೇ ಅದರ ಅರ್ಥ. ಇಂತಹದೇ ಆದ ವಿದ್ಯಮಾನಗಳಿಗೆ ಗುರಿಯಾಗಿ ದೇವಿ ಅಥವಾ ಶಕ್ತಿ ತನ್ನ ಕಾರ್ಯಸಿದ್ಧಿಯಾದ ಬಳಿಕ ಪುನಃ ಅಧಿಕಾರಸ್ಥಾನಕ್ಕೇರಿಸಲ್ಪಟ್ಟ ದೇವತೆಗಳೊಳಗೇ ಅಂತರ್ಗತವಾದಳು. ಈ ಎಲ್ಲ ಅಭಿಪ್ರಾಯಗಳೂ ಮೇಲಿಂದ ಮೇಲೆ ಉಕ್ತವಾದ ವೇದೋಕ್ತಿಯಲ್ಲಿ ಸಂಗ್ರಹವಾಗಿವೆ : ಪರೋಕ್ಷಪ್ರಿಯಾ ವೈ ದೇವಾಃ –ದೇವತೆಗಳು ಪರೋಕ್ಷಾಗಮನವನ್ನು ನಿಜವಾಗಿ ಪ್ರೀತಿಸಿದವರು ; ಅಥವಾ ಬೇರೆ ಮಾತಿನಲ್ಲಿ ಹೇಳುವುದಾದರೆ, ಮುನ್ನೆಲೆಯನ್ನು ಬಿಟ್ಟು ಹಿನ್ನೆಲೆಯನ್ನೇ ಆಶಿಸುವವರು. ಸಾಮಾನ್ಯವಾಗಿ ದೇವತೆಗಳನ್ನು ಕಾಣದೆಡೆಯಿಂದ ಪ್ರತ್ಯಕ್ಷವಾಗುವಂತೆ ಕೋರುವ ಆವಾಹನ, ಪೂಜೆಯ ಅನಂತರ ಅಥವಾ ಉತ್ಸವಕಾಲದ ಕಡೆಯಲ್ಲಿ ಆ ದೇವತೆಗಳು ಯಾವ ಕಾಣದೆಡೆಯಿಂದ ಬಂದರೋ ಅಲ್ಲಿಗೇ ಹಿಂದಕ್ಕೆ ಹೋಗಲು ಬಿಟ್ಟುಕೊಡುವ ವಿಸರ್ಜನ–ಈ ಸಂಗತಿಯ ಉದಾಹರಣೆಯಿಂದ ಮೇಲೆ ತಿಳಿಸಿದ ಅಭಿಪ್ರಾಯ ನಿದರ್ಶನಕ್ಕೆಬಂದಂತಾಗುತ್ತದೆ. ಹೀಗೆ ಜನಪ್ರಿಯವಾದ ಪೂಜೋತ್ಸವಗಳ ಅಂತ್ಯದಲ್ಲಿ ಗಣೇಶ ಅಥವಾ ದುರ್ಗಾಮಾತೆಯ ಪ್ರತಿಮೆಗಳನ್ನು 'ಪುನರಾಗಮನಾಯ ಚ' ಎಂಬ ಮಂಗಳದೊಡನೆ ಭಕ್ತಿಗೌರವಗಳಿಂದ ನೀರಿನಲ್ಲಿ ತೇಲಿಬಿಡುವರು. 'ಶಕ್ತಿ' ಮಾನವವ್ಯವಹಾರಜ್ಞಾನಕ್ಕೆ ಹೊಂದಿಕೊಂಡಂತೆಯೇ, ಸಿಂಹಾಸನವನ್ನೇರಿ ಅದರ ಮೇಲೆ ಕುಳಿತು ಕೊಳ್ಳುವುದಕ್ಕಿಂತ ಪ್ರಭುತ್ವಸೂಚಕವಾದ ಆ ಸಿಂಹಾಸನದ ಹಿಂದೆ ಹುದುಗಿದ ಪ್ರಭಾವವಾಗಿ ಉಳಿದು ಕೊಂಡಿರಲೆಂದೇ ಇಚ್ಛಿಸಿದೆ. ಎಲ್ಲ ಪುರುಷಕಾರ್ಯಗಳ ಹಿಂದಿರುವ ಪ್ರೇರಕ ಶಕ್ತಿಯೇ ನಾರಿ. ವೇದದ ರಹಸ್ಯೋಕ್ತಿಯಲ್ಲಿ : "ವಾಸ್ತವವಾಗಿ ಯಾವುದು ಸ್ತ್ರೀಯೋ ಅದನ್ನು ಪುರುಷನೆಂದು ಕರೆದಿದೆಕಣ್ಣುಳ್ಳವನು ಕಾಣುತ್ತಾನೆ, ಕುರುಡನು ಕಾಣಲರಿಯ" ಅಖಂಡ ಶಕ್ತಿಯ ಅವ್ಯಕ್ತನಿಧಿಸ್ವರೂಪವಾದ ಬ್ರಹ್ಮನೇ ಹಿನ್ನೆಲೆ. ಅಲ್ಲಿಂದಲೆ ವಿಶ್ವಲೀಲಾವಿಲಾಸ ಮೈದೋರಿ ಮತ್ತೆ ಯಾವ ಚ್ಯುತಿಯೂ ಉಂಟಾಗದಂತೆ ಅದರಲ್ಲಿಯೇ ಲೀನವಾಗುವುದು. ಸುಷುಪ್ತಿ, ಸ್ವಪ್ನ ಮತ್ತು ಜಾಗೃತಿ ಎಂಬ ಅವಸ್ಥಾತ್ರಯಗಳಿಗೆ ಮೂಲಭೂತವಾಗಿರುವ ತುರೀಯ (ನಾಲ್ಕನೆಯ) ಅವಸ್ಥೆಯ ವೇದಾಂತಭಾವನೆಯ ಪ್ರತಿರೂಪವೇ ಆದಿಶಕ್ತಿಯ ಕಲ್ಪನೆ. ಆ

ಅವಸ್ಥಾತ್ರಯಗಳು ಕ್ರಮವಾಗಿ ಕಾಳಿ (ಅನ್ವರ್ಥಕವಾಗಿ ಯೋಗನಿದ್ರಾ ಮತ್ತು ಕಾಲರಾತ್ರೀ ಎಂದೂ ಕರೆದಿದೆ) ; ದುರ್ಗಾದೇವಿ (ಪುರಾಣದ ಪ್ರಕಾರ ಸಕಲದೇವತೆಗಳ ಶಕ್ತಿ–ಎಂದರೆ ತೇಜಸ್ಸನ್ನು ಒಟ್ಟುಗೂಡಿಸಿ ಕೊಂಡು)–ಸ್ವಪ್ನಾವಸ್ಥೆಗೆ ಸದೃಶಳಾಗಿ ತೈಜಸಳೆಂದು ಹೆಸರಾದವಳು ; ಸರಸ್ವತಿ–ಜಾಗ್ರದವಸ್ಥೆಯೆಂಬುದು ಸ್ಪಷ್ಟ. ಈ ಮೂವರಿಗೆ ಸಂವಾದಿಯಾಗಿ ಹೊಂದಿಕೆಯುಳ್ಳವಾಗಿವೆ. ಬ್ರಹ್ಮಸೃಷ್ಟಿಯ ಸಾಕ್ಷಿಸ್ವ ರೂಪಿಣಿಯೇ ಆ ಸರಸ್ವತಿ.

ಮೇಲೆ ಹೇಳಿದ ವಿಚಾರಗಳ ಬೆಳಕಿನಲ್ಲಿ ಶಾಕ್ತಪೂಜಾಪದ್ಧತಿಯ ಇತಿಹಾಸವನ್ನು ನಿರೂಪಿಸಬೇಕು. ಭಾರತೀಯರಲ್ಲಿ ಚಾರಿತ್ರಿಕ ಪ್ರಜ್ಞೆ ಸಾಕಷ್ಟಿಲ್ಲವೆಂಬ ಆಧುನಿಕರ ಆರೋಪಣೆ ಇದ್ದೇ ಇದೆ. ಆದಾಗ್ಯೂ ಅಗತ್ಯವಾಗಿ ಅತಿಮುಖ್ಯವೆನಿಸಿದ ಸಂಗತಿಗಳಲ್ಲಿ ಆನುಪೂರ್ವಿಕ ಕ್ರಮವು ಪ್ರಧಾನವಾದುದೇನಲ್ಲವೆಂಬುದೇ ಭಾರತೀಯರ ದೃಢವಾದ ಅನುಭವ. ವಾಸ್ತವಿಕ ಸಂಗತಿಗಳನ್ನು ಹೊರಗಿನಿಂದಲೇ ಪರಿಶೀಲಿಸಿದ ಅನೇಕ ಪಂಡಿತೋತ್ತಮರಾದ ವಿದ್ವಾಂಸರು ಆ ಸಂಗತಿಗಳನ್ನು, ಅವುಗಳ ನಿಜವಾದ ಸಂದರ್ಭವನ್ನು ತಿಳಿಯದೆ, ಅವುಗಳಿಗೆ ತೀರ ಭಿನ್ನವಾಗಿ ವಿರುದ್ಧವಾದ ವ್ಯಾಖ್ಯಾನವನ್ನು ಮಾಡಿದ್ದಾರೆ. ಲೋಕವಸ್ತುಗಳು ಅವು ತೋರುವಂತೆ ಇಲ್ಲವೆಂಬುದೇ ಮಾಯಾವಾದದ ಮುಖ್ಯಸಾರಾಂಶ. ಮುಖಮೌಲ್ಯವನ್ನು ನೋಡಿ ಅವು ಅಷ್ಟೇ ಬೆಲೆಯುಳ್ಳವೆಂದು ಭಾವಿಸಲಾಗದು. ಒಂದು ದೃಷ್ಟಾಂತದಿಂದ ಇದು ಸ್ಪಷ್ಟವಾಗಬಹುದು. ಅದು ನಮ್ಮ ವಿಷಯಕ್ಕೆ ವಿಶೇಷವಾಗಿ ಸಂದರ್ಭೋಚಿತವಾಗಿಯೂ ಇದೆ. ಬ್ರಹ್ಮನ ದೇವಸ್ಥಾನಗಳು, ಪುಷ್ಕರದಲ್ಲಿರುವುದೊಂದನ್ನು ಬಿಟ್ಟರೆ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲವೆಂಬುದು ವಾಸ್ತವಿಕ ವಿಷಯ. ಅದನ್ನು ಕಂಡು ಹಿಂದುಗಳ ತ್ರಿಮೂರ್ತಿಗಳಲ್ಲಿ ಬ್ರಹ್ಮನನ್ನು ಯಾವುದೋ ಒಂದು ಕಾಲದಲ್ಲಿ ಪೂಜಿಸದೆ ಕೈಬಿಟ್ಟು, ವಿಷ್ಣು ಮತ್ತು ಶಿವ—ಈ ಇಬ್ಬರನ್ನು ಮಾತ್ರ ಪೂಜಿಸುತ್ತಿದ್ದರೆಂದು ಭಾವಿಸಿದರು. ಈ ಬಗೆಗೆ ವಿಚಿತ್ರವಾದ ಪುರಾಣದ ಕಥೆಗಳನ್ನೇ ಕಟ್ಟಿದರು. ವಾಸ್ತವಾಂಶವೇನೆಂದರೆ ಚತುರ್ಮುಖ ಬ್ರಹ್ಮನು ಚತುರ್ವೇದಗಳ ಮೂರ್ತಿಮತ್ತಾದ ಆದರ್ಶರೂಪ. ವೇದಾಧ್ಯಯನವೇ ಆತನಿಗೆ ಬಹಳ ಒಪ್ಪುವಂತಹ ಪೂಜೆ. ಬ್ರಹ್ಮನಿಗೆ ಮನುಷ್ಯಭಾವಾರೋಪಣೆ ಮಾಡಿ ಕೆತ್ತಿದ ಶಿಲಾಪ್ರತಿಮೆಯ ರೂಪದಲ್ಲಿ ಆತನನ್ನು ಪೂಜಿಸುವುದು ಒಂದು ವಿಷಾದಕರ ವಿಡಂಬನೆ. ಯಾವಾಗ ವೇದಪಠನ ಮಾಡುವರೋ ಆಗ ಬ್ರಹ್ಮನಿಗೆ ತನ್ನ ಪೂಜೆ ಸಂದಂತೆ ; ಆರಾಧನೆಯ ಸಮಯದಲ್ಲಿ ವೇದಮಂತ್ರಗಳಿಂದ ಯಾವ ದೇವತೆಯನ್ನುದ್ದೇಶಿಸಿ ಪ್ರಾರ್ಥಿಸಿದೆಯೆಂಬುದು ಗಣ್ಯವಿಷಯವಲ್ಲ. ಬ್ರಹ್ಮಯಜ್ಞದ ವಿಷಯದಲ್ಲಿ ಹೇಳಿದ ಈ ನಿರೂಪಣೆಯು ವಾಕ್ ಹಾಗೂ ವಾಕ್ಸಾದೃಶ್ಯ ವುಳ್ಳವನ್ನು ಪ್ರತಿನಿಧಿಸುವವಳೂ ಭಾವನಿವೇದನದ ಮೂಲತತ್ತ್ವಸ್ವರೂಪಳೂ ಆದ ಬ್ರಹ್ಮನ ಶಕ್ತಿಯಾದ ಸರಸ್ವತಿಗೆ ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಅನ್ವಯಿಸುತ್ತದೆ. ಈ ಕಾರಣಕ್ಕಾಗಿ ಶಾಕ್ತಪೂಜಾ ಪದ್ಧತಿಯ ಒಳಗಿನ ಸಂಗತಿಗಳಿಂದಲೋ ಎಂಬಂತೆ ಅದರ ಇತಿಹಾಸವನ್ನಿಲ್ಲಿ ಪರೋಕ್ಷವಾಗಿ ನಿರೂಪಿಸಲಾಗಿದೆ.

ಹಿಂದೂ ದೇವತಾಪ್ರತಿಮೆಗಳನ್ನು ನಿಕಟವಾಗಿ ಹೋಲುತ್ತಿದ್ದ ಸ್ತ್ರೀದೇವತೆಗಳ ಪ್ರತಿಮೆಗಳನ್ನು ಮಹಾಯಾನಬೌದ್ಧಧರ್ಮದವರು ಭಕ್ತಿಭರದಿಂದ ಪೂಜಿಸುತ್ತಿದ್ದರು ; ಆ ಧರ್ಮ ಈಗ ಯಾವ ಗುರುತೂ ಉಳಿಯದಂತೆ ವಾಸ್ತವವಾಗಿ ಮಾಯವಾಗಿದ್ದರೂ ಅಥವಾ ಹಿಂದೂಧರ್ಮದಲ್ಲಿ ಲೀನವಾಗಿ ಹೋಗಿದ್ದರೂ ಆ ದೇವತಾಪ್ರತಿಮೆಗಳು ದಕ್ಷಿಣಭಾರತದಲ್ಲಿ ಕೂಡ ಆರಾಧ್ಯಮೂರ್ತಿಗಳಾಗಿ ವಾಡಿಕೆಯಲ್ಲಿದ್ದಿರಬೇಕು ಎಂದು ಹೇಳದೆ, ನಾವು ಈ ಪ್ರಸ್ತಾಪವನ್ನು ಸಮಾಪ್ತಿಗೊಳಿಸುವಂತಿಲ್ಲ. ಜೈನರು ಕೂಡ ತಮ್ಮ ಆರಾಧನಾಪದ್ಧತಿಯಲ್ಲಿ ಶಕ್ತಿದೇವತೆಗಳಿಗೆ ಪ್ರಮುಖಸ್ಥಾನವನ್ನಿತ್ತರು. ಇದಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿರುವ ಹೊಂಬುಚ್ಚದ ಪ್ರಸಿದ್ಧ ಪದ್ಮಾವತೀ ಅಮ್ಮನವರ ಪ್ರಖ್ಯಾತವಾದ ಬಸದಿಯು ಒಂದು ನಿದರ್ಶನ. ಆದರೆ ಇವನ್ನು ಶಾಕ್ತಭಾವನೆಗಳ ಪ್ರಭಾವವನ್ನು ಬೆರಳಿಟ್ಟು ತೋರಿಸುವಂತಹವು

ಗಳೆಂದೇ ಪರಿಗಣಿಸಬೇಕಲ್ಲದೆ ಕೇವಲ ಶಕ್ತಿಪೂಜೆಯ ಉದಾಹರಣಗಳೆಂದು ಭಾವಿಸಬಾರದು. ಅಂತೂ ಕರ್ಣಾಟಕದಲ್ಲಿ ಶಕ್ತಿಪೂಜೆಯ ವ್ಯಾಪಕತೆಯನ್ನು ಒಂದು ಪ್ರತ್ಯೇಕ ಪಂಥವೆಂಬುದಕ್ಕಿಂತ ಹೆಚ್ಚಾಗಿ ದಿಟವಾಗಿ ಮತಸಂಪ್ರದಾಯಜಾಲದೊಳಗಿನ ಒಂದು ಎಳೆಯೆಂದು ನಿರೂಪಿಸಲು ಬೇಕಾದಷ್ಟನ್ನು ಹೇಳಿದ್ದಾಯಿತು.

ಮೂಲ ಲೇಖಕರು : ಶ್ರೀ ಕೆ. ಗುರುದತ್
ಅನುವಾದಕರು : ಶ್ರೀ ಸಿ. ಮಹಾದೇವಪ್ಪ

ಚಿತ್ರ 1. ನವಶಿಲಾಯುಗದ ಕೊಡಲಿಗಳು
(ಮೈಸೂರು ಜಿಲ್ಲೆಯ ಟಿ. ನರಸೀಪುರದಿಂದ)

ಚಿತ್ರ 2. ಘಟಪ್ರಭಾ ನದಿಯ ಕಲ್ಲುಹರಳ ತಳದ ಸಾಮಾನ್ಯ ನೋಟ

ಚಿತ್ರ 4. ಘಟಪ್ರಭಾನದಿಯ ಗುಂಡುಕಲ್ಲಿನ ತಳ
(ಹಳೆಯ ಶಿಲಾಯುಗ ಅನೇಕ ಉಪಕರಣಗಳ
ರಚನೆ ಇವುಗಳಿಂದ ಇದೇ ಸ್ಥಳದಲ್ಲಿ ಆಗುತ್ತಿತ್ತು)

ಚಿತ್ರ 3. ಗುಲ್ಬರ್ಗ ಜಿಲ್ಲೆಯ ಸನ್ನತಿಯ ಬೌದ್ಧ ದಿಬ್ಬ

ಚಿತ್ರ 5. ಉತ್ಖನನದ ಸಾಮಾನ್ಯನೋಟ
(ಟಿ. ನರಸೀಪುರ 22)



ಚಿತ್ರ 6. ಅಶೋಕನ ಶಿಲಾಶಾಸನ (ಬ್ರಹ್ಮಗಿರಿ)

ಚಿತ್ರ 7. ಬನವಾಸಿಯ ದಿಬ್ಬ



ಚಿತ್ರ 8. ಗೆರಸೊಪ್ಪೆ ಜಲಪಾತ (ಇಲ್ಲಿ ಶರಾವತೀನದಿ 830 ಅಡಿ ಎತ್ತರದಿಂದ ನೇರವಾಗಿ ಕೆಳಗೆ ದುಮುಕುತ್ತದೆ)

ಚಿತ್ರ 9. ಸನ್ನತಿಯ ಆಯಕ ಸ್ತಂಭ, ಕುಟುಂಬದೃಶ್ಯ ಸಹಿತ

ಚಿತ್ರ 10. ಬುದ್ಧನ ಮೂಲಸ್ಥಾನ, ಸನ್ನತಿಯ ಸ್ತೂಪದ ಕಲ್ಲುಮುಚ್ಚಳ

ಚಿತ್ರ 11. ತಾಳಗುಂದದ ಶಿಲಾಸ್ತಂಭ ಶಾಸನ
(5ನೆ ಶತಮಾನ)



ಚಿತ್ರ 12. ಹಲ್ಮಿಡಿ ಶಾಸನ (5ನೆಯ ಶತಮಾನ)

ಚಿತ್ರ 13. ಮಹಾಕೂಟೇಶ್ವರ ಚಾಲುಕ್ಯ ಅರ್ಧನಾರೀಶ್ವರ (6ನೆ ಶತಮಾನ)

ಚಿತ್ರ 14. ಪಟ್ಟದಕಲ್ಲಿನ ಪಾಪನಾಥ ದೇವಾಲಯ

ಚಿತ್ರ 15. ಹರಿಹರದ ಹರಿಹರೇಶ್ವರ ದೇವಾಲಯ

ಚಿತ್ರ 16. ಐಹೊಳೆಯ ದುರ್ಗಾದೇವಾಲಯ

ಚಿತ್ರ 17. ಬಾದಾಮಿಯ ನಾಗ

ಚಿತ್ರ 18· ಲಡ್ಖನ್ ದೇವಾಲಯ
(ಬಿಜಾಪುರ ಜಿಲ್ಲೆಯ ಐಹೊಳೆ)

ಚಿತ್ರ 19. ಕುಳಿತ ವಿಷ್ಣು (ಬಾದಾಮಿಯ 3ನೆ ಗುಹೆ)

ಚಿತ್ರ 20. ತ್ರಿವಿಕ್ರಮ (ಬಾದಾಮಿಯ 3ನೆ ಗುಹೆ)

ಚಿತ್ರ 21. ಬಾದಾಮಿ ಗುಹೆಯ ಒಂದು ತೈಲಚಿತ್ರ

ಚಿತ್ರ 22. ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯ

ಚಿತ್ರ 23. ಪಟ್ಟದಕಲ್ಲಿನ ಲೋಕಮಹಾದೇವಿ ಅಥವಾ ವಿರೂಪಾಕ್ಷದೇವಾಲಯ

ಚಿತ್ರ 24. ಬಾದಾಮಿಯ ಹದಿನೆಂಟು ತೋಳುಗಳ ನಟರಾಜ

ಚಿತ್ರ 25. ತುಮಕೂರು ಜಿಲ್ಲೆಯ ಅರಳಗುಪ್ಪೆಯ ಮೇಲ್ಚಾವಣಿಯ ಶಿವತಾಂಡವ



ಚಿತ್ರ 26. ಶ್ರವಣಬೆಳಗೊಳದ ಚಾವುಂಡರಾಯ ಬಸ್ತಿ

ಚಿತ್ರ 27. ಲಕುಲೀಶ



ಚಿತ್ರ 28. ಶ್ರವಣಬೆಳಗೊಳದ ಗೊಮ್ಮಟೇಶ್ವರ ಬೃಹನ್ಮೂರ್ತಿ

ಚಿತ್ರ 29. 'ಶ್ರೀ ಕವಿರತ್ನ' ಎಂಬ ಹಸ್ತಾಕ್ಷರ.
(ಶ್ರವಣಬೆಳಗೊಳ)




ಚಿತ್ರ 30 ಪಶ್ಚಿಮ ಗಂಗರ ಚಿನ್ನದ ನಾಣ್ಯಗಳು

ಚಿತ್ರ 31. ಪಂಚಕೂಟ ಬಸದಿ (ಹಾಸನ ಜಿಲ್ಲೆಯ ಕಂಬದ ಹಳ್ಳಿ)

ಚಿತ್ರ 32. ಗುಳ್ಳಕಾಯಜ್ಜಿ ಶ್ರವಣಬೆಳಗೊಳ

ಚಿತ್ರ 33. ಗಂಗ - ರಾಷ್ಟ್ರಕೂಟ ಯುದ್ಧವನ್ನು ತೋರಿಸುವ ಹಿರೇಗುಂಡಗಲ್ಲಿನ ಒಂದು ವೀರಗಲ್ಲು

ಚಿತ್ರ 34. ಹಿರೇ ಮಧುರೆಯ ಒಂದು ವೀರಗಲ್ಲು

ಚಿತ್ರ 35: ಶ್ರವಣಬೆಳಗೊಳ ಗೋಮಟೇಶ್ವರನ ಮುಖದ ಸಮೀಪ ದೃಶ್ಯ

ಚಿತ್ರ 36: ಶ್ರವಣಬೆಳಗೊಳದ ಜೈನಮಠದಲ್ಲಿರುವ ಗಂಗರ ಕಾಲದ ಕೊರೆದ ಲೋಹ ಪ್ರತಿಮೆ



ಚಿತ್ರ 37. ನೀತಿಮಾರ್ಗನ ಮರಣಾವಯಸ್ಥೆ ಕಲ್ಲು (ದೊಡ್ಡಹುಂಡಿ)



ಚಿತ್ರ 38. ಕಪ್ಪೆ ಅರಭಟ್ಟನ ಶಾಸನ - ಬಾದಾಮಿ

ಚಿತ್ರ 39. ಶ್ರವಣಬೆಳಗೊಳದ ಭಂಡಾರಿಬಸದಿಯ ಇಂದ್ರ ನೃತ್ಯ

ಚಿತ್ರ 40. ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಸಾಮಾನ್ಯ ದೃಶ್ಯ



ಚಿತ್ರ 41. ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಭಿತ್ತಿ ವಿವರ ಮತ್ತು ಅಲಂಕಾರದ ಪಟ್ಟಿಗಳು

ಚಿತ್ರ 42. ಹಳೇಬೀಡು ಹೊಯ್ಸಳೇಶ್ವರ ದೇವಾಲಯದ ಇನ್ನೊಂದು ಭಿತ್ತಿವಿವರ

ಚಿತ್ರ 43. ಯಕ್ಷಗಾನ ಪ್ರಸಂಗ - ಹಳೇಬೀಡು

ಚಿತ್ರ 44. ಶುಕಹಸ್ತೆ ಶಿಲಾಬಾಲಿಕೆ – ಚೆನ್ನಕೇಶವ ದೇವಾಲಯ, ಬೇಲೂರು ಕ್ರಿ.ಶ. 1117

ಚಿತ್ರ 45. ದರ್ಪಣಾವಲೋಕನೆ
ಚೆನ್ನಕೇಶವ ದೇವಾಲಯ, ಬೇಲೂರು

ಚಿತ್ರ 46. ನೃತ್ಯಭಂಗಿಯ ಶಿಲಾಬಾಲಿಕೆ
ಚೆನ್ನಕೇಶವ ದೇವಾಲಯ, ಬೇಲೂರು

ಚಿತ್ರ 47. ಪ್ರಸಾಧನಾರತೆ - ಚೆನ್ನಕೇಶವ ದೇವಾಲಯ, ಬೇಲೂ

ಚಿತ್ರ 48. ಬೇಲೂರು ಚೆನ್ನಕೇಶವ ದೇವಾಲಯದ ನವರಂಗದಲ್ಲಿರುವ ಮದನ ಶಿಲಾಬಾಲಿಕೆ, ಇದರ ಪಾದಪೀಠದಲ್ಲಿ ಶಿಲ್ಪಿ ಚವನನ ಹೆಸರಿದೆ.

ಚಿತ್ರ 49. ಬೇಲೂರು ಚೆನ್ನಕೇಶವ ದೇವಾಲಯದ ನವರಂಗದ ಸ್ತಂಭಗಳು

ಚಿತ್ರ 50. ಬೇಲೂರು ಚೆನ್ನಕೇಶವ ದೇವಾಲಯದ ಮಧ್ಯದ ಮೇಲ್ಛಾವಣಿ – ನರಸಿಂಹನ ಕಿರಿಯ ವಿಗ್ರಹದೊಡನೆ

ಚಿತ್ರ 51. ಸೋಮನಾಥಪುರದ ಕೇಶವ ದೇವಾಲಯ



ಚಿತ್ರ 52. ಸೋಮನಾಥಪುರ ಕೇಶವ ದೇವಾಲಯದ
ಹೊಯ್ಸಳ ಶಾಸನ ಶಿಲೆ

ಚಿತ್ರ 53. ಶಾಂತಿನಾಥ ಜೈನ ಬಸದಿಯ ಭಿತ್ತಿ ವಿವರ - ಹಾಸನ ಜಿಲ್ಲೆಯ ಜಿನನಾಥಪುರ

# ಆಧಾರಗ್ರಂಥಗಳು (ಸಾಮಾನ್ಯ)

## ಶಾಸನಗಳು

### English


| | | | |
|---|---|---|---|
| Archaeological Survey of India (Annual Report) | | Abbreviated as | A.R.S.A.I. |
| ,, ,, South India | | ,, | A·R.S·I· |
| ,, ,, West India | | | |
| Bombay Archaeological Report | Bombay 1898 | | |
| Epigraphia Carnatica | Vols. I-XII (1886-1894 Ed. by Lewis Rice | ,, | E.C. |
| Epigraphia Indica | Vols. I-XVI | ,, | E·I. |
| Hyderabad Archaeological Series | | ,, | H·A.S. |
| Historical Inscriptions of South India | Sewell and Iyengar | ,, | H.I·S.I. |
| Inscriptions of Bombay Karnatak | C.R.K· Acharlu | ,, | B.K. |
| Inscriptions of Northern Karnataka, Kolhapur State | K.G· Kundanagar | ,, | N.K.K. |
| Karnatak Inscriptions | Ed. R.S. Panchmukhi | ,, | K.I· |
| Mysore Archaeological Report | | ,, | M·A.R· |
| Mysore Archaeological Department | Sravanabelagola Inscriptions | | |
| South Indian Inscriptions | Vol. I-IV E. Hultzsch Venkayya and Krishna Sastry | ,, | S.I.I. |
| Annual Report of South Indian Epigraphy | | ,, | A.R.S.I.E. |
| Catalogue of Indian Coins | | ,, | C.I.C. |
| Corpus Inscriptionum Indicarum | | ,, | C.I·I. |

| | |
|---|---|
| Rangachariar | Inscriptions of the Madras Presidency |
| Gai, G.S· | Karnataka Epigraphy<br>Bombay Karnataka Inscriptions |
| Srikanta Sastri, S· | Sources of Karnataka History, Vol. I, 1940 |
| ನರಸಿಂಹಾಚಾರ್, ಆರ್. | ಶಾಸನ ಪದ್ಯಮಂಜರಿ |

## Gazetteers and Government Publications


Gazetteer of the Bellary, South Kanara and Dharwar Districts
Imperial Gazetteer of India, 1908
Mysore and Coorg from Inscriptions, 1909
Mysore Gazetteer, 1897 by B. Lewis Rice
Revised 1927-1930 by C. Hayavadana Rao
Manual of Coorg—by Richter


## Journals


| | | |
|---|---|---|
| Annals of the Bhandarakar Oriental Research Institute | Abbreviated as | A.B.O.R.I. |
| Annals of Oriental Research, Madras | ,, | A.O.R. |
| Bibliotheca Indica (Calcutta) | ,, | B.I. |
| Indian Antiquary | ,, | I.A. |
| Indian Historical Quarterly | ,, | I.H.Q. |
| Journal of the Bombay Branch of the Royal Asiatic Society | ,, | J.B.B.R.A.S. |
| Journal of the Asiatic Society of Bengal | ,, | J.A.S.B. |
| Journal of the Royal Asiatic Society | ,, | J.R.A.S. |
| Journal of Andhra Historical Research Society | ,, | J.A.H.R.S. |
| Journal of Indian History | ,, | J.I.H. |
| Karnataka Historical Review | ,, | K.H.R. |
| New Indian Antiquary | ,, | N.I.A. |
| Proceedings of the Indian History Congress | ,, | P.I.H.C. |
| Proceedings of the All India Oriental Conference | ,, | P.O.C. |
| Quarterly Journal of the Mythic Society | ,, | Q.J.M.S. |


# POLITICAL HISTORY

## English


| *Author* | *Name of the Book* |
|---|---|
| Alexander Kyd Nainni, Rev: | The History of the Konkan (1894). |
| Ball, K.N.: | Ancient India (1921). |
| Barnett, L.D.: | Antiquities of India (1913). |
| Beveridge: | History of India. |
| Bhandarkar, Sir R.G.: | Early History of the Dekhan. |
| Bharatiya Vidya Bhavan: | The History and Culture of the Indian People (7 Volumes). |

Bruce Foote : Indian Pre-Historic Antiquities.
Cambridge University : The Cambridge History of India.
Elliot and Dowson : History of India as told by her own Historians.
Fleet : The Dynasties of the Kanarese Districts (abbreviated as D.K.D.).
Jayaswal, K.P. : A History of Indian History.
Jouveau Dubreuil : Ancient History of the Deccan.
Krishnaswami Iyengar, S. : The Beginnings of South India.
Mazumdar, Roy Chaudhuri and Datta : An Advanced History of India
Mc Crindle : Ancient India
More, W.H. and Chatterji, A.C. A Short History of India
Nilkantha Sastry, K.A. : A History of India
,, ,, A History of South India
Saletore. B.A. : Ancient Karnatak Vol. I.
Sattianathier, R. : A College Text-Book of Indian History.
Shaafat Ahmad Khan : History and Historians of India.
Smith, V.A. : The Early History of India.
Subramanya Iyer, K.V. : Historical Sketches of Ancient Dekhan, 1929.
Vaidya, C.V. : Mediaeval Hindu India (3 Volumes).
,, Epic India
West, E.W. Major : History of Bombay Karnatak.
Yazdani : Early History of the Deccan (2 Volumes).

## Religion, Society and Culture

Barth : Religions of India
Basham, A.L. : The wonder that was Ind.
Bhandarkar, D.R. ; Carmichael Lectures (Calcutta University)
Bhandarkar, Sir R.G. : Vaishnavism, Saivism and Minor religious systems.
Bharata Iyer, K. : Indian Art, 1958.
Brown, Percy : Indian Architecture — Buddhist.
,, ,, ,, — Hindu.
,, ,, ,, — Islamic Period.
Carpenter, J.E. : Theism in Mediaeval India.
Daftari, K.L. : The Social Institutions in Ancient India.
De : A History of Sanskrit Literature.
Deussen, Paul : The Philosophy of the Upanishads.
Dikshitar, V.R.R. Hindu Administrative Institutions.
Enthven, R.E. : Bombay Tribes and Castes.
Fergusson : History of Indian and Eastern Architecture

| | |
|---|---|
| Ganguli O.C. : | Ragas and Raginis. |
| Goswami, D. : | The Story of Indian Music. |
| Frazer, R.W. : | A Literary History of India. |
| Goetz, Hermann : | 5000 years of Indian Art. London, 1959. |
| Havell, E.B. : | Indian Sculpture and Painting. |
| ,, | Indian Architecture. |
| Havell, E. B. : | Ancient and Mediaeval Architecture. |
| Hiriyanna, M. : | Outlines of Indian Philosophy. |
| Hopkins. E. W. : | History of Religions. |
| Iyer, L. K. A. : | Mysore Tribes and Castes. |
| Kane, P. V. : | Dharmasastra (6 volumes). |
| Kautilya : | Artha Sastra—Edited by Dr. Shama Sastri. |
| Keith, A. B. | A History of Sanskrit Literature. |
| Krishnaswami Iyengar, S. | Some contributions of South India to Indian Culture. |
| Kulkarni, C. M. | Ancient Indian History and Culture. |
| Mac Donnel, A. A. | Sanskrit Literature. |
| Macnicol | Indian Theism |
| Mahalingam, T. V. | South Indian Polity. |
| Max Muller | History of Ancient Sanskrit Literature. |
| ,, | Six Systems of Indian Philosophy. |
| Mazumdar, D. N. | The Matrix of Indian Culture. |
| Mazumdar, R. C. | Corporate Life in Ancient India. |
| Mugali, R. S. | The Heritage of Karnataka, Bangalore, 1946. |
| Nandimath, Dr. S. C. | A Hand-book of Veerasaivism. |
| Nanjundiah, H. V. | Ethnographical Survey of India. |
| Popley, H. A. | Music in India. |
| Radhakrishnan, Sarvapalli | Indian Philosophy (2 Volumes). |
| Ramakrishna Mission Institute of Culture | Cultural Heritage of India (4 Volumes) |
| Ramaswami Iyengar, M. S. and B. Seshagiri Rao | Studies in South Indian Jainism. |
| Rambach, P. and Golish | The Golden Age of Indian Art. |
| Ranade, R. D. | Pathway to God in Kannada Literature, 1960. |
| Rawlinson, H. G. | India — A short Cultural History. |
| Rhys Davids, T. W. | Buddhist India. |
| Rice, E. P. | History of Kannada Literature. |
| Richter, G. | Castes and Tribes. |
| Roy Chaudhuri | Early History of the Vaishnava Sect. |
| Sakhare, M. R. | A History and Philosophy of Lingayat Religion 1942. |
| Saletore .A B. | Mediaeval Jainism, 1938. |
| Sambamurthy, P. | South Indian Music, Parts I-IV. |
| Sarma, S. R. | Jainism and Karnataka Culture. |
| ,, | Our Heritage and its Significance. |

| | |
|---|---|
| Smith, V. A. | History of Art in India and Ceylon. |
| Stevenson, Sinclair | The Heart of Jainism. |
| Thurston, Edgar | Castes and Tribes of South India. |
| Venkateswara S.V. | Indian Culture through the Ages. |
| Weber | History of Indian Literature. |
| Winternitz | History of Indian Literature |
| Zimmer | The Art of Indian Asia (2 volumes), New York, 1955. |

## ಕನ್ನಡ

| | |
|---|---|
| ಅಣ್ಣಾ ರಾವ್ ಮಿರ್ಜಿ | ಜೈನಧರ್ಮ |
| ನರಸಿಂಹಾಚಾರ್, ಆರ್. | ಕರ್ಣಾಟಕ ಕವಿಚರಿತೆ (3 ಸಂಪುಟಗಳು) |
| ಬಸವನಾಳ, ಎಸ್.ಎಸ್. | ವೀರಶೈವ ತತ್ವಪ್ರಕಾಶ |
| ,, | ಬಸವಣ್ಣನ ವಚನಗಳು |
| ಮುಗಳಿ, ಆರ್.ಎಸ್. | ಕನ್ನಡ ಸಾಹಿತ್ಯ ಚರಿತ್ರೆ |
| ಶ್ರೀನಿವಾಸ ಮೂರ್ತಿ, ಎಂ.ಆರ್. | ವಚನಶಾಸ್ತ್ರ ಸಾರ |
| ,, | ಭಕ್ತಿಭಂಡಾರಿ ಬಸವಣ್ಣನವರು |
| ಹಳಕಟ್ಟಿ, ಫ.ಗು. | ವಚನಶಾಸ್ತ್ರ (3 ಸಂಪುಟಗಳು) |

ಈ ತನಕ ಕಾಣಿಸಿರುವ ಸಾಮಾನ್ಯ ಆಧಾರ ಗ್ರಂಥಗಳೊಡನೆ ಕೆಳಗಿನವು ಅಧ್ಯಾಯಗಳ ಆಧಾರ ಗ್ರಂಥಗಳಾಗಿವೆ.

## ಅಧ್ಯಾಯ 1

| | |
|---|---|
| Foote, R.B. | Geology of the Southern Mahratta Country |
| Geological Survey of India | Memoirs of the Geological Survey of India Vol. XII, 1876; Memoirs, Vol. XXVIII, Part 2 (1900). |
| Krishnan, M.S. | Geology of India and Burma, 4th Edition, 1960. |
| Mysore Geological Department | Bulletins and Miscellaneous Publications. |
| Radhakrishna, B.P. | The Mysore Plateau, its structure and physiographic evolution, 1952. |
| Rama Rao, B. | A Hand-book of Geology of the Mysore State, 1962. |
| Smeeth, W.F. | Outlines of the Geology of Mysore—Mysore Geological Department Bulletin No. 6, 1916. |
| Wadia, D.N. | Geology of India, 3rd Edition, 1961. |

## ಅಧ್ಯಾಯ 2

| | |
|---|---|
| Buchanan Hamilton F. | A journey from Madras through the countries of Mysore, Canara and Malabar etc., Vols. I and II, 1807. |

Cameron, C. — Forest Trees of Mysore and Coorg, 1894.

Ditmars, R.L. — Reptiles of the World, 1941.

Government of India — Agricultural Marketing in India–Indian Fish

Government of Mysore — Mysore Five Year Plans, Vols. I, II and III: Meteorological Department — Administration Reports: Annual Report of Rainfall, etc.

Hooken, J.D. — A Sketch of the Flora of British India, Oxford, 1906.

Howard H. — Wheat in India, 1922.

Krumbiegel, G.H. — Forest Trees of Mysore and Coorg, Bangalore, 1894.

Salim Ali. — The Book of Indian Birds.

Simkins, E. — Agricultural Georgraphy of the Deccan Plateau, 1926.

Yajnanarayana Iyer, A.K. — The Antiquity of some field and forest flora of India, 1953.


## ಅಧ್ಯಾಯ 3


Buchanan, Francis — Journey from Madras through the countries of Mysore, Canara and Malabar etc.

Gai, G.S. — Historical Grammar of Old Kannada, 1946. Vol. II.

Government of India — Census of India, 1961. Vol. I. Language Tables.

Katre, S. N. — The Formation of Konkani.

Kittel, F. — A Grammar of the Kannada Language, 1903

Narasimhacharya, R — History of the Kannada Language, 1934.

Narasimhiah, A. N. — A Grammar of the Oldest Kanarese Inscription, 1941.

Ramaswami Ayyar, L. V. — Materials for a Sketch of Tulu Phonology, Indian Linguistics, VI.

Risley, H. — Peoples of India, 1908.

Silva, S. — Memorandum on the Konkani Languages. 1959.

University of Mysore — Kannada Kaipidi, Vol. I, Part 4, 1936.


## ಅಧ್ಯಾಯ 4 ಮತ್ತು 5


H.E.H. Nizam's Government Archaeological Dept. — Annual Report 1938—Appendix B. Note on Excavations at Maski.

Hultzsch — Inscriptions of Asoka.

Panchamukhi, R.S. — Archaeology of Karnataka, Dharwar, 1953.
Sircar, D.C. — Successors of the Satavahanas
Thapar, B K. — Maski, 1954—' Ancient India ', No. 13, 1957, page 4-142.
Wheeler, Sir Mortimer — Brahmagiri and Chandravalli 1947 —' Ancient India ', No. 4.
Wheeler, Sir Mortimer — Early India and Pakistan : Thames and Hudson, London, 1959.


ಅಧ್ಯಾಯ 6

## Political


Banerjea, Pramathanath : — Public Administration in Ancient India
Gopalan, R. : — History of the Pallavas of Kanchi
Father Heras : — Studies in Pallava History.
Jayaswal, K. P. : — Hindu Polity.
Krishna Rao, M. V. : — The Gangas of Talakad, 1936
Lakshminarayan Rao, N. : — Genealogy and Chronology of the Nolamba Pallavas
Mahalingam T. V. : — The Banas in South Indian History, 1950
Moraes, G. J. H. : — The Kadamba Kula.
Sattianathier, R. : — Studies in the ancient history of Tondaimandalam


## Cultural


Ananda Alwar : — Indian Architecture.
Burgess : — Indian Architecture.
Cousens, Henry : — The Chalukyan Architecture of the Kanarese Districts.
Fergusson, James and Meadows Taylor : — Architecture in Dharwar and Mysore.
Hawkes, R. P. : — The Architectural antiquities of Western India.
ಗೋವಿಂದ ಪೈ, ಎಂ. — ಮೂರು ಉಪನ್ಯಾಸಗಳು.
ಜೋಶಿ, ಎಸ್. ಬಿ. — ಕನ್ನಡದ ನೆಲೆ
ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಾಶನಗಳು : — ಚಾವುಂಡರಾಯ ಪುರಾಣ, ರನ್ನನ ಗದಾಯುದ್ಧ ಮತ್ತು ಅಜಿತಪುರಾಣ.
Krishna Sastry, H. : — South Indian Images of Gods and Goddesses
Krishna, M. H. — Excavations at Chandravalli.
Manasara — Sanskrit Text translated By Dr. P. K. Acharya (Sanskrit).
ಮುಳಿಯ ತಿಮ್ಮಪ್ಪಯ್ಯ — ಕವಿರಾಜಮಾರ್ಗ ವಿವೇಕ.

| | |
|---|---|
| ಮುಳಿಯ ತಿಮ್ಮಪ್ಪಯ್ಯ | ಕನ್ನಡನಾಡೂ ದೇಸಿ ಸಾಹಿತ್ಯವೂ |
| Mazumdar | History of Education in Ancient India. |
| ನರಸಿಂಹಾಚಾರ್, ಡಿ. ಎಲ್. | ವಡ್ಡಾರಾಧನೆ. |
| Otto Schrader, Dr. | Introduction to Pancharatra and Ahirbudhnya Samhita, Adyar Library, Madras. |
| ಪಾಠಕ್, ಕೆ. ಬಿ. (ಸಂಪಾದಿತ) | ಕವಿರಾಜಮಾರ್ಗ |
| Rea, Alexander | South Indian Buddhist Antiquities. |

ಅಧ್ಯಾಯ 7

| | |
|---|---|
| Gopalan, R. | The Pallavas of Kanchi, Madras 1928. |
| Jouveau Dubreuil, G. | The Pallavas, 1917. |
| Saletore, B. A. | Ancient History and the Deccan, 1920. |
| Sastry, K. A. N. | Foreign notices of India. |
| Kielhorn | The Classical Age. |
| Venkataramanayya, Dr. N. | The Eastern Chalukyas of Vengi. |
| Ganguly, O. C. | Eastern Chalukyas, Benares, 1937. |
| Schoff, W. H. | Periplus of the Erythraean Sea, 1912. |
| Watters, T. | Travels of Yuwan Chwang (Hiuen Tsiang) in India (in 2 volumes.) |
| Takakasu. T. | A record of the Buddhist World as practised in India and the Malay Archipelago. |
| ,, | Buddhist Records in the Western World. |
| Kane, P. V. | A History of Sanskrit Poetics. |
| Bilhana | Vikramanka Devacharita, Edited by Murarilal, Benares, 1946 (Sanskrit). |
| ರನ್ನ | ಗದಾಯುದ್ಧ |
| Ramakrishna Kavi, M. and Ramanatha Sastri, S. K. (Editors) | Kaumudi Mahotsava (Sanskrit), 1929. |

ಅಧ್ಯಾಯ 8

| | |
|---|---|
| Altekar, A. S. | Rashtrakutas and their Times, 1934. |
| Bisheswaranath Sen | A History of the Rashtrakutas. |
| Krishna Rao, Dr. M. V. | The Gangas of Talakad. |
| Ganguli O. C. and Goswami, A. | The Art of the Rashtrakutas. |
| Belvalkar S. K. | Systems of Sanskrit Grammar. |
| Handigur | 'Yasastilaka' and Indian Culture. |
| Jain, H. L. | Introduction to 'Shatkhandagama.' |
| Vidyabhushana, S. C. | History of the Mediaeval Schools of Indian Logic. |

| | |
|---|---|
| Geiger | Mahavamsa. |
| ವೆಂಕಟರಾವ್ ಮತ್ತು ಶೇಷ ಅಯ್ಯಂಗಾರ್ (ಸಂಪಾದಕರು.) | ಕವಿರಾಜಮಾರ್ಗ |
| ಗುಂಡಪ್ಪ, ಎಲ್. (ಸಂಪಾದಕರು.) | ಆದಿಪುರಾಣ ಸಂಗ್ರಹ |
| ನರಸಿಂಹಾಚಾರ್, ಡಿ. ಎಲ್. (ಸಂಪಾದಕರು.) | ವಡ್ಡಾರಾಧನೆ. |
| Narasimhiah, Dr. A. N. | Discriptive Grammar of the Kannada Languages. |
| Gai C. S. | ,, ,, |
| ಗೋವಿಂದ ಪೈ, ಎಂ. | ಮೂರು ಉಪನ್ಯಾಸಗಳು. |
| ತಿಮ್ಮಪ್ಪಯ್ಯ, ಎಂ. | ನಾಡೋಜ ಪಂಪ |
| ,, | ಕವಿರಾಜಮಾರ್ಗ ವಿವೇಕ |
| ಮುಗಳಿ, ಡಾ॥ ಆರ್. ಎಸ್. | ಪಂಪಮಹಾಕವಿ. |


## ಅಧ್ಯಾಯ 9


| | |
|---|---|
| Coelho William | The Hoysala Vamsa—Bombay 1950. |
| Derrett, J. D. M. | The Hoysalas—Oxford, 1956. |
| Dinakar Desai | Mahamandalesvaras under the Chalukyas of Kalyan, 1950. |
| Mazumdar, A. K. | The Chalukyas of Gujarat. |
| Nilakanta Sastri, K. A. | The Cholas (in 2 Volumes). |
| Roy Choudhuri | History of the Western Chalukyas, 1948. |
| Nagavarma | 'Abhidana Vastu Kosa', Edited by H. Sesha Iyengar and H. A. Venkata Rao. |
| Somesvara | 'Abhilashitartha Chintamani', Edited by G. K. Shrigondokar, Gaekwads Oriental Series. Edited by Dr. R, Shama Sastri, Mysore Oriental Library Series. |
| Kumaraswamiji | Buddha and Basava, 1956, |
| ಭೀಮಕವಿ | ಬಸವ ಪುರಾಣ |
| ಹರಿಹರ | ಒಸವರಾಜದೇವರ ರಗಳೆ |
| ವಿರೂಪಾಕ್ಷ ಪಂಡಿತ | ಚನ್ನಬಸವ ಪುರಾಣ. |
| Cousens Henry | Chalukyan Architecture |
| Kea, A. | Chalukyan Architecture at Bellary. |
| Saletore, B. A. | Ancient Karnatak, History of Tuluva (1976) |
| Kamath, S. U. | Tuluva in Vijayanagara Times (1965 unpublished). |


## ಅಧ್ಯಾಯ 10


| | |
|---|---|
| Coelho, William | The Hoysala Vamsa, Bombay, 1950 |
| Derrett, J. D. M. | Tho Hoysalas, Oxford, 1956. |
| Sardesai, G. S. | A New History of the Marathas, Vol. 1, 1957. |

| | |
|---|---|
| Venkataraman, K. R. | The Hoysalas in the Tamil Country. |
| Briggs, J. | Histry of the Rise of tho Muhammadan power in India, Vol. II. |
| Venkatramanayya, N. | The Early Muslim expansion in South India, Madras, 1942. |
| Sankaracharya | Commentaries on the Upanishads, Brahma Sutras and the Bhagavad Geeta. |
| Vachaspati | Bhamati |
| Vidyaranya | Vivarana Prameya Sangraha. |
| Appayya Dikshita | Siddantalesa Sangraha, Translated by S. Suryanarayana Sastri |
| Upadhye, A. N. | Introduction to 'Brihatkatha Kosa' |
| Narasimhachar, R. | The Channakesava Temple at Belur, 1919 |
| ,, | The Kesava Temple at Somanathapura, 1917 |
| ,, | The Lakshmidevi Temple at Doddagadda-valli, 1919. |
| Bharata | 'Natya Sastra', Kavyamala Series, Bombay 1894. |
| Kallinatha | 'Kalanidhi Commentary' on the 'Sangita Ratnakara' of Sarngadeva. |
| Matanga | 'Brihaddesi', Edited by Sambasiva Sastri, Trivandrum, Sanskrit Series, 1928. |
| Sarngadeva | 'Sangita Ratnakara', Edited by S. Subra-manya Sastri, Adyar Library Series. |

## ಅನುಬಂಧಗಳ ಆಧಾರ ಗ್ರಂಥಗಳು

| | |
|---|---|
| Altekar, A. S. | Thc Rashtrakutas and their times, 1934. |
| ,, | The State and Government in Ancient India, Delhi, 1962. |
| Derrett, J. D. M. | Hoysalas. |
| Kautilya | 'Artha Sastra'—Translated by R. Shama Sastri, 1923. |
| Krishna Rao M. V. | The Gangas of Talakad, Madras 1936. |
| ,, | Studies in Kautilya, New Delhi, 1958 |
| Mahalingam, T.V. | South Indian Polity Madras, 1955. |
| Mukherji, Radha Kumud | Local Government in Ancient India, Oxford, 1920. |
| S acharya | 'Sukraneeti'—Translated by B.K. Sarkar, Allahabad, 1913. |

# ಗ್ರಂಥ ವಿವರ ಸೂಚಿ

ಅ


ಅಂಗಸ್ಥಲ 531
ಅಕಳಂಕ 277, 313
ಅಕಳಂಕದೇವ 294
ಅಕಿಂಚನವ್ರತ 291
ಅಕ್ಕಲಕೋಟೆ 372
ಅಕ್ಕಮಹಾದೇವಿ 96
ಅಕ್ಕಾದೇವಿ 326
ಅಗಸ್ಟಸ್ 119
ಅಗಸ್ತ್ಯತೀರ್ಥ 113
ಅಗ್ಗಲರಸ (ತೆಕಲ್‌ನಾಡು) 155
ಅಗ್ನಿಶಿಲೆ 2
ಅಗ್ರಹಾರಗಳು 414, 415
ಅಘೋರಪಂಥಿ 628
ಅಚಲನ್ 263
ಅಜಂತಾ, 131, 464, 576
  ಗುಹಾದೇವಾಲಯಗಳು
ಅತ್ತಿಮಬ್ಬೆ 433
ಅರ್ಥಶಾಸ್ತ್ರ 178, 312
ಅಥರ್ವವೇದ...... 125, 172, 176, 527
  ಶಿರೋಪನಿಷತ್, ಸಂಹಿತೆ
ಅದಿತಿ 633
ಅದುರುಗಳಲ್ಲದ ಖನಿಜಗಳು 27
ಅದ್ವೈತ ಗ್ರಂಥಕಾರರು 561
  (ಹೊಯ್ಸಳರ ಕಾಲ)
ಅದ್ವೈತ ಸಿದ್ಧಾಂತ 491, 493, 494, 625
ಅರ್ಧ ನಾರೀಶ್ವರ 180
ಅನವದ್ಧ ವಾದ್ಯಗಳು 581
ಅನಂತಪುರ ಶಾಸನ 152
ಅನಂತಕೃಷ್ಣಯ್ಯರ್ 83
ಅನಂತ ಕೀರ್ತಿ 447
ಅನಿಲಾಪುರ, ಚಂದ್ರಾಪುರ 354
ಅನ್ನಕೊಂಡದ ಶಾಸನ 340
ಅನ್ಯಮತ ಸಹಿಷ್ಣುತೆ 390, 393
ಅನೇಕಾಂತ ದೃಷ್ಟಿ 197
ಅಡಕೆ 67
ಅಣುಸಿದ್ಧಾಂತ 199
ಅಣ್ಣಿಗೆರೆಯ ಶಾಸನ 328
ಅಪ್ಪು ಗಿಡಗಳು 56
ಅಬ್ದುಲ್ ರಜಾಕ್ 631
ಅಬ್ಬೆದುಬಾಯಿ 629
ಅಭಿಲಷಿತಾರ್ಥ ಚಿಂತಾಮಣಿ ಅಥವಾ ಮಾನ
  ಸೋಲ್ಲಾಸ' 337, 451, 613
ಅಭಿಧಾನ ವಸ್ತುಕೋಶ 613
ಅಮೆರಿಕ 11
ಅಮೋಘವರ್ಷ92, 162, 286, 293, 310
ಅಮೋಘವೃತ್ತಿ 309
ಅಯ್ಯವರ್ಮ 161
ಅಯ್ಯಂಗಾರ್, ಎಸ್. ಕೆ 376
ಅರಣ್ಯಸಂಪತ್ತು 38
ಅರವಿಂದರು 186
ಅರಾಬಿಕಾ (ಕಾಫಿ) 66
ಅರಿಕುಲ್ಗೆ ನಾಡು 372
ಅಲಂಕಾರ ಶಿಲೆಗಳು 16
ಅಲ್ಲಮಪ್ರಭು 96, 443, 444
ಅಲ್ಬರೂನಿ 393, 394
ಅಲ್‌ಇದ್ರಿಸಿ 401
ಅಲ್‌ಮಸೂದಿ 609
ಅಲೆಗ್ಸಾಂಡ್ರಿಯ 271
ಅವಂತಿ ಸುಂದರಿ ಕಥಾ 161, 229. 230
ಅವನಿಜನಾಶ್ರಯ ಪುಲಿಕೇಶಿ 321

ಅವಿನೀತ (ಗಂಗ) 161, 169, 196
ಅವಿಭಕ್ತ ಕುಟುಂಬ ಪದ್ಧತಿ 129
ಅವಿಚಾರಿ ಮಾನವ 627
ಅರ್ಶ್ವಿನ್, ಡಾ। 573
ಅಶ್ವಘೋಷ (ಬುದ್ಧಚರಿತ) 177, 230
ಅಶೋಕನ ಶಾಸನಗಳು 152, 204
ಅಷ್ಟಸಾಹಸ್ರೀ 313
ಅಷ್ಟಶತಿ 294
ಅಷ್ಟಾಧ್ಯಾಯೀ 127
ಅಷ್ಟಾವರಣ 529
ಅಸಗ 232, 301, 312, 312
ಅಸ್ತಿಕಾಯಗಳು 200
ಅಲ್ತೇಕರ್, ಡಾ। 215, 403
ಅಳಿಯಸಂತಾನ 383

ಆ

ಆಕ್ಸಿರಿಂಖಸ್ ಪಪೈರಸ್ (ಗ್ರೀಕ್) 91, 99, 220, 401
ಆಗುಂಬೆ ಕಣಿವೆ 36
ಆಚುಗಿ–(ಎರಡನೆಯ) 356, 367
ಆಚಾರ್ಯ ರಾಮಾನುಜರು......ಕರ್ನಾಟಕಕ್ಕೆ ಬಂದದಾರಿ......ಹರಿಜನೋದ್ಧಾರ 497 498, 499, 500
ಆತಕ್ಕೂರು ಶಾಸನ 236
ಆರ್ಥಿಕ ಪರಿಸ್ಥಿತಿ (ಪುಲಿಕೇಶಿಯ ಕಾಲ) 400
ಆರ್ಥಿಕ ಆಡಳಿತ (ಚಾಲುಕ್ಯರ ಕಾಲ) 402
ಆದಿಜೀವ ಕಲ್ಪ 3, 17 18
ಆದಿಜೀವಕಾಲ 17
ಆದಿಜೀವಕಲ್ಪದ ಶಿಲೆಗಳು 18
ಆದಿತೀರ್ಥಂಕರ 305
ಆದಿಪುರಾಣ 298, 301, 302, 312, 409
ಆದಿತ್ಯವರ್ಮ 250
ಆನಂದತೀರ್ಥ 515
ಆನಂದ ಕುಮಾರಸ್ವಾಮಿ, ಡಾ॥ 527
ಆನೆಗಳ ಪಡೆ 601
ಆಪ್ತಮೀಮಾಂಸೆ 294, 313
ಆಪ್ತಪರೀಕ್ಷಾ 313
ಆಮದಾಗುತ್ತಿದ್ದ ವಸ್ತುಗಳು (ಚಾಲುಕ್ಯರ ಕಾಲ) 402
ಆಯತ ಸ್ತಂಭಗಳು 122
ಆಯುರ್ವೇದ ರಸಾಯನ 482
ಆಳುಪರು 382
ಆವನಿಯ ಶಾಸನ 165
ಆರ್ಷೇಯ ಕಲ್ಪದ ಶಿಲೆಗಳು 12, 18
ಆರ್ಷೇಯಕಲ್ಪ 12, 17

ಇ

ಇಂಗಳದ ಹಾಳು 14
ಇಂಗ್ಲೀಷ್ 89
ಇಂದರಸ 372
ಇಂದ್ರ 173
ಇಂದ್ರ (ಮುಮ್ಮಡಿ, ರಾಷ್ಟ್ರಕೂಟ) 287
ಇಂದ್ರನಂದಿ 224
ಇಟ್ಟಗಿಯ ಮಹಾದೇವಾಲಯ 461
ಇಕ್‌ಸ್ಟೆಡ್ 82, 85
ಇಟ್ಟಗಿ
ಇತ್ಸಿಂಗ್ 269, 270, 397
ಇಬ್ನ್ ಬತೂತ 401, 476
ಇಸಿಲ 90, 117, 130

ಈ

ಈಶಾವಾಸ್ಯೋಪನಿಷತ್ತು 186

ಉ

ಉಚ್ಚ ಶಿಕ್ಷಣದ ಸಂಸ್ಥೆಗಳು (ರಾಷ್ಟ್ರಕೂಟರ ಹಾಗೂ ಕಡೆಕಡೆಯ ಚಾಲುಕ್ಯರ ಕಾಲ) 42
ಉಡುಗೆ ತೊಡುಗೆಗಳು (ಕನ್ನಡಿಗರು, 10ನೆಯ ಶತಕ) 212
ಉತ್ತರ ಪುರಾಣ 312
ಉತ್ತರದ ಪ್ರಸ್ಥಭೂಮಿ 36, 42
ಉದಯಾದಿತ್ಯ 167
ಉದಯೇಂದಿರಂ ಶಾಸನ 156

ಉದ್ಯೋಗ ಮತ್ತು ವಾಣಿಜ್ಯ (ಪುಲಿಕೇಶಿಯ ಕಾಲ) 401
ಉಪನಿಷತ್ತುಗಳು 176, 189, 311
ಉಪಾಧ್ಯೆ, ಎ. ಎನ್, ಡಾ। 230
ಉಪೇಂದ್ರ 185
ಉಮಾಸ್ವಾತಿ 276
ಉಷಾದೇವಿ 173
ಉಡ್ರೋಫ್, ಸರ್, ಜಾನ್ 625

ಊ

ಊಳಿಗಮಾನ್ಯ ಪದ್ಧತಿ 46, 47, 600

ಋ

ಋಗ್ಭಾಷ್ಯ 186, 558
ಋಗ್ವೇದ 170, 185, 311

ಎ

ಎಣ್ಣೆ ಬೀಜಗಳು 65
ಎರವರು 85
ಎರೆಯ ರಾಮ 364
ಎರೆಗಂಗ ಅಥವಾ ಎರೆಯಪ್ಪ 147,165,486
ಎರೆಗಂಗ ನೀತಿಮಾರ್ಗ 155
ಎರೆಯಮ್ಮ 213
ಎರೆಯಂಗ 535
ಎಲ್ಲಾಪುರ 23
ಎಲಿಫೆಂಟಾ ಗುಹಾಮಂದಿರಗಳು 244, 314, 317
ಎಲಿಯಟ್, ಸರ್ ಚಾರಲ್ಸ್ 171
ಎಲ್ಬುರ್ಗದ ಸಿಂದರು 367, 369
ಎಲ್ಲೋರ ಗುಹಾಂತರ್ದೇವಾಲಯ 115, 314, 570

ಏ

ಏಕಾಕ್ಷರಿ 229
ಏಲಕ್ಕಿ 66

ಐ

ಐತಿಹ್ಯಗಳು, ಆಖ್ಯಾನಗಳು 111, 113
ಐದು ಪದಾರ್ಥಗಳು (ಲಕುಲೀಶ ಪಂಥ) 182, 183
ಐಹೊಳೆ ಶಾಸನ 162, 240, 263
ಐಹೊಳೆ 65, 264, 454, 456
ಐಹೊಳೆ ಪ್ರಶಸ್ತಿ 347

ಒ

ಒಟ್ಟಕೇಶ 128
ಒಲೊಯ್ ಖೊರಾ 382

ಓ

ಓಫೋಲ್ (ಕನಿಷ್ಕನ ನಾಣ್ಯದ ಮೇಲಿನ ಬರವಣಿಗೆ) 179

ಕ

ಕಂಚಿ 248
ಕಂಚಿನ ಶಿಲ್ಪ 468
ಕಂಚುಗಾರ 263
ಕಂತಿ 541
ಕಂದ್ರೊಳ್ಳಿ ಶಾಸನ 356
ಕುಂತಲ ದೇಶ 180
ಕುಂದ ಕುಂದ 128, 565
ಕುಂದವರ್ಮರಸ 382
ಕಟ್ಟಡಗಳು 265
ಕಠೋಪನಿಷತ್ತು 172,186
ಕಡಪ ಶಿಲಾ ಸಮುದಾಯ 22
ಕಡಪಾ ಶ್ರೇಣಿಗಳು 7
ಕಣ್ಣಕೈರ (ಎರಡನೆಯ) 364
ಕರ್ಣಾಟಕದ ಭೂವಿಕಾಸ 1,11
,, ಭೂ ಚರಿತ್ರೆ 6, 18

ಕರ್ನಾಟಕದ ಭೂ ವಿಜ್ಞಾನ 18
,, ಖನಿಜ ಸಂಪತ್ತು 22
,, ವೇಶ್ಯಾ ಸ್ತ್ರೀಯರು 267
,, ರಾಣಿಯರು 267
,, ದತ್ತಿ ದಾನಾದಿಗಳು 267
,, ಭಾಷೆಗಳು (ಚಾಲುಕ್ಯರ ಕಾಲ) 268
,, ಆಹಾರ ಪದ್ಧತಿ 269
,, ಪೀಠಾಲಂಕರಣಗಳು 270
,, ಮಠದ ಜೀವನ 270
,, ವಾಣಿಜ್ಯ ವ್ಯವಹಾರ 271
,, ಪ್ರಮುಖ ದೇವಾಲಯಗಳು 462, 463
ಕರ್ನಾಟಕ ಸಂಗೀತ 579
ಕರ್ನಾಟಕ ಕಲ್ಯಾಣಕಾರಕ 552
ಕರ್ನಾಟಕ ಭಾಷಾಭೂಷಣ 93
ಕತ್ರೆ, ಎಸ್, ಎಂ, ಡಾ। 100
ಕದಂಬ ತೈಲ 337
ಕದಂಬರು 132, 234
ಕದಂಬರ ವಂಶ ವೃಕ್ಷ 136
ಕದಂಬ ಮಯೂರ ಶರ್ಮ 160
ಕನಿಷ್ಕ 126
ಕನ್ನಡ 90
ಕನ್ನಡ ಸಾಹಿತ್ಯ ಚರಿತ್ರೆ 310
ಕನ್ನಡ ಸಾಹಿತ್ಯದ ಪ್ರಗತಿ 433
ಕನ್ನಡದ ಮೂಲ ಛಂದಸ್ಸು 307
ಕನ್ನಡದ ಪ್ರಾಚೀನತೆ 219
ಕನ್ನಡ (ಆದಿಕಾಲ) 219
ಕನ್ಹೇರಿ 290
ಕಪಾಲೀ ಸ್ತ್ರೀಯರು 126
ಕಪ್ಪದ ಗುಡ್ಡ 61
ಕಪ್ಪೆ ಅರಭಟ್ಟ 266
ಕಪ್ಪೆ ಚನ್ನಿಗರಾಯ ದೇವಾಲಯ 470
ಕಬ್ಬಿಣದ ಅದುರು 23,40
ಕಬ್ಬು 65
ಕಮಲನಾರಾಯಣ ದೇವಾಲಯ 359
ಕಮಲಾದೇವಿ 359
ಕರಡಿ ಕಲ್ಲು 378
ಕರಗಳು, ದತ್ತಿಗಳು 215, 216
ಕರವಣ ಮಾಹಾತ್ಮ್ಯ 181
ಕರ್ಮಸಿದ್ಧಾಂತ 200
ಕರಾವಳೀ ಪ್ರದೇಶ 35,39
ಕರಾವಳಿಯ ಕಾಡುಗಳು 56
ಕಲಚೂರಿಗಳು (ಗೋರಖಪುರ) 346
,, (ಕಲ್ಯಾಣದ) 346
ಕಲಚೂರ್ಯರು (ಚೇದಿಯ) 846
,, (ಮಾಹಿಷ್ಮತಿಯ) 339,353
ಕಲಚೂರಿಗಳ ವಂಶವೃಕ್ಷ 339,
ಕಲದ್ಗಿ 17
ಕಲದ್ಗಿ ಬೆಣಚುಕಲ್ಲು 43
ಕಲ್ಯಾಡಿ 14
ಕಲ್ಯಾಣ 324,347
ಕಲ್ಯಾಣದ ಚಾಲುಕ್ಯರು 319,323
,, (ವಂಶಾವಳಿ) 321
ಕಲಿಯಣ್ಣ 365
ಕಲ್ಲೇಶ್ವರ ದೇವಾಲಯ 234,235
,, (ಜಕ್ಕನಹಳ್ಳಿ) 465
ಕವಿಗಳು, ಸಂಗೀತವಾದ್ಯಗಳು 582
ಕವಿ ಪರಮೇಶ್ವರ 230
ಕವಿ ರಹಸ್ಯ 310
ಕವಿರಾಜಮಾರ್ಗ 92,97,141,207, 219,220,222,223,297,298, 310.
ಕವುರೇಮ (ಪ್ರಮುಖಶಾಸನವುಳ್ಳ ಊರು) 243
ಕಸೆನ್ಸ್, ಡಾ। 234,454, 461
ಕಾಂಚೀಪುರ 205,206
ಕಾಕುತ್ಸ್ಥವರ್ಮ (ಕದಂಬ) 132,221
ಕಾಗದದ ಕಾರ್ಖಾನೆಗಳು 40
ಕಾಡು ಕುರುಬರು 85
ಕಾಡುಪಾಪಗಳು 69
ಕಾಣೆ, ಪಿ.ವಿ (ಮಹಾಮಹೋಪಾಧ್ಯಾಯ) 311
ಕಾತಂತ್ರ ವ್ಯಾಕರಣ 131,228,309
ಕಾರ್ತಿಕೇಯ 178
ಕಾಪಾಲಿಕರು 180,182
ಕಾಫಿ 66

ಕಾಫಿ ಬೆಳೆಯುವ ಪ್ರದೇಶ 39
ಕಾಯಾವರೋಹಣ 181
ಕಾರ್ಯಕಾರಿವರ್ಗ 418, 419
ಕಾರ್ತವೀರ್ಯ (ಒಂದನೆಯ) 363
,, (ಎರಡನೆಯ) 364
,, (ಮೂರನೆಯ) 364
,, (ನಾಲ್ಕನೆಯ) 364
ಕಾಳಾಮುಖ ಪಂಥ 181,208,368,388.
ಕಾಳಾಮುಖ ಗುರುಗಳು 209, 210
ಕಾಲುವೆ ಜಾಲಗಳು 51
ಕಾಳಿದಾಸ 136,178,625
ಕಾವೇರಿ (ನದಿ) 37,193
ಕಾವ್ಯಾವಲೋಕನ 93
ಕಾವ್ಯಾದರ್ಶ 231,298,310
ಕಾಷಾಯ ಪ್ರಭಾತ 224
ಕಿಕ್ಕಾಯಿ ತಾಯಿ 383
ಕಿರಾತಾರ್ಜುನೀಯ 161,223,227, 229
ಕಿರಿಯ ಗ್ರಾನೈಟುಗಳು 16
ಕೀಟಾಹಾರಿಗಳು 71
ಕೀರ್ತಿವರ್ಮ 393, 437
ಕೀರ್ತಿವರ್ಮ (ಮೊದಲನೆಯ) 241
,, (ಎರಡನೆಯ) 253, 319
ಕೀರ್ತಿಪುರ 369
ಕೀಳ್ಗುಂಟೆ 213
ಕುಂಡಿ 363
ಕುಟುಂಬ ಪದ್ಧತಿ 211
ಕುದುರೆ ಮುಖ 36
ಕುಂಭ ಶವ ಸಂಸ್ಕಾರ 108
ಕುಮಾರ ವ್ಯಾಸ ಭಾರತ 96
ಕುಮಾರ ದತ್ತ 129
ಕುಮಾರ ಗುಪ್ತ 134
ಕುಮಾರಿಲ ಭಟ್ಟ 277, 291
ಕುಮಾರಸ್ವಾಮಿ, ಡಾ॥ 316
ಕುರುವಟ್ಟಿ 460
ಕುವರಲಕ್ಷ್ಮ 543
ಕುಶಿಕ 181
ಕೂಡಲ ಸಂಗಮ (ಕಪ್ಪಡಿ) 350
ಕೂಡ್ಲು ಶಾಸನ 152
ಕೃತಿಮಾಲ 193
ಕೃಷ್ಣ, ಎಂ. ಎಚ್. ಡಾ। 120
ಕೃಷ್ಣ (ಒಂದನೆಯ) 282,292,315
ಕೃಷ್ಣ (ಮುಮ್ಮಡಿ) 280,287,293
ಕೃಷ್ಣಮಾಚಾರ್ಯ (ಶ್ರೀರಂಗಪಟ್ಟಣ) 97
ಕೃಷ್ಣಾ 37,124
ಕೃಷ್ಣಾಮೃತ ಮಹಾರ್ಣವ 514
ಕೆಮ್ಮಣ್ಣುಗುಂಡಿ 23,25
ಕೆರೆಯ ಪದ್ಮರಸ 554
ಕೆಳದಿಯ ನಾಯಕರು 625
ಕೆಸುಗೊಳ 92
ಕೇಕಯ ಶಿವನಂದಿವರ್ಮ 160
ಕೇತಕೀ ಆಚಾರ್ಯ 602
ಕೇದಾರೇಶ್ವರ ದೇವಾಲಯ 209
ಕೇವಲಿಗಳು 199
ಕೇಶಿರಾಜ 93, 308, 365
ಕೈರಾ ದತ್ತಿಶಾಸನ 247
ಕೈಲಾಸ ದೇವಾಲಯ 316
ಕೈಲಾಸರಸ 372
ಕೊಡಗು ಭಾಷೆಯ ಸಾಮಾನ್ಯಲಕ್ಷಣ 100
ಕೊಡವದ 'ಪತ್ತೊಲೆಪಳಮೆ' 100
ಕೊಪರುಂಜಿಂಗ 472
ಕೊಪ್ಪಂ 476
ಕೊಂಕಣಿ 100
ಕೊಂಗಾಳ್ವರು 486
ಕೊಂಗುಣಿವರ್ಮ 152
ಕೊರಗರು (ಜನಾಂಗ) 476
ಕೊಲ್ಲಾಪುರ 208
ಕೋಲೆ, ಆರ್. ಎ. ಕ್ಯಾಪ್ಟನ್ (ವ್ಯಕ್ತಿ) 100
ಕೋಳಿವಾಡ 207
ಕೋಲಾರದ ಚಿನ್ನದ ಗಣಿ 13, 39
ಕೋಲಾರ ಶಿಸ್ತು ಭೂವಲಯ 13
ಕೊಸ್ಮಸ್ ಇಂದಿಕ ಪ್ಲುಸ್ತಸ್ 271
ಕ್ಲೋಸ್‌ಪೇಟೆ ಗ್ರಾನೈಟು 16, 18
ಕೌಟಿಲ್ಯ 125, 312
ಕೌಂಡಿನ್ಯ 183,184
ಕೌಮಾರ ಅಥವಾ ಕಾತಂತ್ರ ವ್ಯಾಕರಣ 309

ಕೌಮುದಿ ಮಹೋತ್ಸವ 267,275
ಕೌರುಷ 181
ಕೌಶೀತಕೀ ಬ್ರಾಹ್ಮಣ 174
ಕಾಂಟರ್‌ಬರಿ ಟೇಲ್ (ಛಾಸರ್) 553
ಕ್ರಾಫರ್ಡ್, ಎಂ॥ 236
ಕ್ರಿಟೇಷಿಯಸ್ ಯುಗ 10
ಕ್ಷತ್ರ ಚೂಡಾಮಣಿ 231
ಕ್ಷಾತ್ರಯುಗ 212
ಕ್ಷೇತ್ರಗಣಿತ 552
ಕ್ರೋಮೈಟು ನಿಕ್ಷೇಪಗಳು 23

ಖ

ಖಗೇಂದ್ರ ಮಣಿ ದರ್ಪಣ 550
ಖನಿಜ ಸಂಪತ್ತು 22
ಖನಿಜಗಳ ಉತ್ಪಾದನೆ (ಪಟ್ಟಿ) 32,33,34,
ಖುಸ್ರು (ಎರಡನೆಯ) 245
ಖುಷ್ಕಿ ಬೇಸಾಯ 43

ಗ

ಗಣಿತಸಾರ ಸಂಗ್ರಹ 310
ಗಣಕಾರಿಕಾ 182
ಗಣಿತ, ಖಗೋಳ, ಜ್ಯೋತಿಷ್ಯ ಶಾಸ್ತ್ರ 425, 426
ಗತಪ್ರತ್ಯಾಗತ 229
ಗಂಗರು (ತಲಕಾಡಿನ) 137
ಗಂಗವಾಡಿ 376
ಗಂಗಪುರಿ 377
ಗಂಗಾದೇವಿ 350
ಗಂಗಾಪಾಣಿ (ತೆಂಗಿನ ಜಾತಿ) 66
ಗಂಧಹಸ್ತಿ ಮಹಾಭಾಷ್ಯ 276
ಗಂಧಕದ ನಿಕ್ಷೇಪಗಳು 23
ಗಂಧದ ಮರ 60
ಗದುಗಿನ ದೇವಾಲಯಗಳು 461
ಗದ್ಯ ಕರ್ಣಾಮೃತ 472
ಗದ್ಯ ಚಿಂತಾಮಣಿ 231
ಗಜಾಷ್ಟಕ 145,224
ಗಜಶಾಸ್ತ್ರ 227
ಗಲಗಲಿ 113
ಗಾಥಾ ಸಪ್ತಶತಿ (ಹಾಲರಾಜ) 121,126, 131,228
ಗಾರ್ಗ್ಯ 181
ಗಾಲಿಶ್ 455,456
ಗಾಲವ 113
ಗುತ್ತಿ 379
ಗುತ್ತರ ವಂಶಾವಳಿ 370
ಗುತ್ತಲಿನ ಗುತ್ತರು 370
ಗುಡಿಮಲ್ಲನ ಲಿಂಗ 179
ಗುಡಿಮಲ್ಲಂ ಶಾಸನ 155
ಗುಡ್ಡ ಮನೆ ಶಾಸನ 172
ಗುಣಧರ 564
ಗುಣಗಾಂಕಿಯ 224
ಗುಣಭದ್ರ 312
ಗುಣನಂದಿ 301
ಗುಣವರ್ಮ (ಒಂದನೆಯ) 433
,, (ಎರಡನೆಯ) 465
ಗುಣಸಾಗರ 382
ಗುರುರಾಜ ಭಟ್ಟ, ಪಿ, ಡಾ। 386
ಗುವರದೇವ (ಒಂದನೆಯ) 355
,, (ಎರಡನೆಯ) 355
,, (ಮೂರನೆಯ 356
ಗೊಮ್ಮಟ 304,317,363
ಗೋಕರ್ಣ 180
ಗೋಧಿ 65
ಗೋಪನಂದ್ಯಾಚಾರ್ಯ 535
ಗೋಪಿನಾಥ ರಾವ್, ಟಿ.ವಿ 179
ಗೋವಿಂದ 144
ಗೋವಿಂದ (ಇಮ್ಮಡಿ) 282
,, (ಮುಮ್ಮಡಿ) 83,84
ಗೋವಿಂದ ಭಗವತ್ಪಾದರು 491
ಗೋವೆಯ ಕದಂಬರು 354
,, (ವಂಶಾವಳಿ) 362
ಗೋವಿಂದ ಪೈ, ಎಂ 101, 104
ಗೋವಿಂದ ಪೊಡ್ಡಿ 268
ಗೋವೈದ್ಯ 552

ಗೌಡಪಾದರು 491
ಗೊಂಡೋ ಫರ್ನೆಸ್ 178
ಗೊಂಡ್ವಾನ ಭೂಭಾಗ 10
ಗೊಂಡ್ವಾನ ಶಿಲಾ ಸಮೂಹ 10
ಗ್ರಾನೈಟ್ ಶಿಲೆ 2
ಗ್ರಾನೈಟುಗಳು 14
ಗ್ರಾನೈಟ್ ಶಿಲಾ ರಚನೆಗಳು 36
ಗೃಹ್ಯ ಸೂತ್ರಗಳು 174

ಘ

ಘಟಪ್ರಭಾ 37
ಘಟಿಕಸ್ಥಾನ 547
ಘಟಿಕಗಳು 412, 413
ಘನಕುಮಾರಿ ಚಂದವ್ವೆ 541
ಘವ್ಯಸಾಸ 262
ಘಾರಾಪುರಿ 401
ಘೋರ ಆಂಗೀರಸ 189
ಘೋಷಾ ಪದ್ಧತಿ 212

ಚ

ಚಂಡದಂಡ 160
ಚಂದ್ರಮೌಳಿ 548
ಚಂದ್ರಾದಿತ್ಯ 250
ಚಂದ್ರಗುಪ್ತ ವಿಕ್ರಮಾದಿತ್ಯ 134
ಚಂದ್ರಪ್ರಭ ಪುರಾಣ 232
ಚಂದ್ರವಳ್ಳಿ 120, 205, 233
ಚಂದ್ರವಳ್ಳಿಯ ಶಾಸನಗಳು 133, 204
ಚಂದ್ರವಳ್ಳಿಯ ಆಂಕ್ಲೇ ಗುಹೆಗಳು 204
ಚಂದ್ರರಾಜ 377, 437
ಚಂದ್ರಗಿರಿ 196
ಚಂದ್ರಗುಪ್ತ ಮೌರ್ಯ 116
ಚಂಪು 310
ಚತುರ್ವರ್ಗ ಚಿಂತಾಮಣಿ 482
ಚತ್ರಾಣ ಮತ್ತು ಬೆದಂಡೆ 223
ಚರಕ ಶಾಖೆ 311
ಚಲಲಿಂಗ 177
ಚಾವಣ 573
ಚಾವುಂಡರಾಯ 149, 230, 231, 304, 433, 566
ಚಾರಿತ್ರಿಕ ಭೂವಿಜ್ಞಾನ 2, 3, 6
ಚಾಲಬ್ಬೆ 268
ಚಾವುಂಡರಾಯ ಪುರಾಣ 149, 304
ಚಾರ್ನಕೈಟುಗಳು 14, 16, 18
ಚಾರ್ಮಾಡಿ ಕಣಿವೆ 36
ಚಾಲುಕ್ಯರ ವಂಶಾವಳಿ 365
ಚಾಲುಕ್ಯ ದೇವಾಲಯಗಳು 457, 458
ಚಾಲುಕ್ಯರ ವಾಸ್ತುಶಿಲ್ಪ 454
ಚಾತುರ್ವರ್ಣ ವ್ಯವಸ್ಥೆ 395
ಚಾವುಂಡ (ಎರಡನೆಯ) 367
ಚೌದಂಡಪುರ 460
ಚಿಕ್ಕಬಳ್ಳಾಪುರ ಶಾಸನ 156
ಚಿಕ್ಕದೇವರಾಜ ಒಡೆಯರು 96
ಚಿತ್ತವಳ್ಳಿಯ ಮಾರ್ಕಂಡೇಶ ರ ದೇವಾಲಯ- 385
ಚಿನ್ನದ ಗಣಿ (ಹಟ್ಟಿ) 24
ಚಿನ್ನದ ಗಣಿ (ಬೆಳ್ಳಾರ) 24
ಚಿಂಚೋಳಿ 17
ಚಿಲ್ಲುಕ 181, 209
ಚೀರಘಟ್ಟ 576
ಚೆಂಗನಾಡು 485
ಚೆಂಗಾಳ್ವರು 485
ಚೋಳರು 376
ಚೋಳರು (ಕರ್ಣಾಟಕದ) 375
ಚೋಳರು (ವಂಶವೃಕ್ಷ) 381
ಚೋಳಿಂಗಪುರ ಶಾಸನ 156
ಚೂಡಾಮಣಿ 224, 229, 277

ಛ

ಛಂದಸ್ಸೂತ್ರ 310
ಛಂದೋನುಶಾಸನ 313

ಜ

ಜಗತಿ 569
ಜಗದೇಕಮಲ್ಲ (ಇಮ್ಮಡಿ) 338
ಜಗದ್ದೇವ 339, 468
ಜಗನ್ನಾಥ ವಿಜಯ 380
ಜಟಾವರ್ಮ 472
ಜಟಾಸಿಂಹ ನಂದಿ 230
ಜಟಿಂಗ ರಾಮೇಶ್ವರ ಗುಡ್ಡ 114
ಜನಾಂಗಗಳು ಮತ್ತು ಬುಡಕಟ್ಟುಗಳು 82
ಜನೋಪಯೋಗಗಳು (ಪುಲಿಕೇಶಿಯ ಕಾಲ) 397, 399
ಜನ್ನ 537, 555, 556
ಜಯಕೀರ್ತಿ (ಛಂದೋನು ಶಾಸನ) 313, 437, 453
ಜಯಕೇಶಿ 337, 357
ಜಯಕೇಶಿ (ಇಮ್ಮಡಿ) 339
ಜಯಕೇಶಿ (ಮೂರನೆಯ) 359
ಜಯತೇಜ (ಗಂಗದೊರೆ) 156
ಜಯದ್ವಿಟ್ಟ 256
ಜಯಪತ್ರ 605
ಜಯನಂದಿವರ್ಮ 154
ಜಯಂತ 354
ಜಯಸಿಂಹ (ವಿಷ್ಣುವರ್ಧನ) 161
ಜಯಸಿಂಹ (ಜಗದೇಕಮಲ್ಲ II) 209
ಜಯಸಿಂಹ 329, 377
ಜಯಸಿಂಹ (ಎರಡನೆಯ) 326, 446
ಜಯಸಿಂಹವರ್ಮ (ಧರಾಶ್ರಯ) 320
ಜಯಸಿಂಹ ರಾಜ 390
ಜಯಸಿಂಗರಸ 383
ಜಲಜ ಶಿಲೆಗಳು 2, 3
ಜಯಸಂಗ್ವಿ ಶಿವಾಲಯ 458
ಜಲಾನಯನ ಪ್ರದೇಶಗಳು 36
ಜಾತಕಗಳು (ಬೌದ್ಧ) 177
ಜಾತಿ ಪದ್ಧತಿ 211
ಜಾನ್ ಟೈಲರ್ ಅಂಡ್ ಸನ್ಸ್ 24
ಜಾನ್ ಮಾರ್ಷಲ್, ಸರ್ 171, 527, 530
ಜ್ವಾಲಾ ಮುಖಜ ಶಿಲಾ ಸಮೂಹ 11
ಜಿನಸೇನ 132, 230, 312 409
ಜಿನಸೇನಮುನಿ 298
ಜೀಮೂತವಾಹನ 385
ಜೀವನ ವೆಚ್ಚ (ಚಾಲುಕ್ಯರ ಕಾಲ) 406
ಜೀವಾವಶೇಷಗಳು 3, 6, 10
ಜೀವಿತ ವಾರ 385
ಜೈತುಗಿ 480
ಜೈನಧರ್ಮ 127, 195, 259, 290
ಜೈನ ಬಸದಿಗಳಂ 267
ಜೈನ ನೀತಿತತ್ತ್ವ 202
ಜೈನ ಆಧ್ಯಾತ್ಮ ತತ್ತ್ವಶಾಸ್ತ್ರ 198
ಜೈನ ವಿದ್ವಾಂಸರು (ಹೊಯ್ಸಳರ ಕಾಲ) 561
ಜೈನೇಂದ್ರ 309
ಜೈನೇಂದ್ರ ವ್ಯಾಕರಣ 230, 252
ಜೈವಿಕ ಅಂಶಗಳು 37
ಜೋಗ 39
ಜೋಗವು 348
ಜೋಗದ ವಿದ್ಯುಚ್ಛಕ್ತಿ ಕೇಂದ್ರ 40
ಜೋಷಿ 105
ಜ್ಞಾನವಾದ 516

ಟ

ಟರ್ಷಿಯರಿ ಯುಗ 11
ಟಾಲೆಮಿ 130, 132, 371, 382
ಟಿಪ್ಪುಸುಲ್ತಾನ 44
ಟೀ 66
ಟೈಬಿರಿಯಸ್ 119
ಟ್ರ್ಯಾಪ್ 107

ಡ

ಡಂಬಳ 336
ಡೆಕ್ಕನ್ ಟ್ರ್ಯಾಪುಗಳು 22
ಡೆರ್ರೆಟ್ಟಾ 468

ತ

ತಂತ್ರಸಾರ 514
ತಟ್ಟುಕೋಟಿ ಶಾಸನ 222
ತತ್ವಾರ್ಥ ಸೂತ್ರ 276
ತತ್ವಾರ್ಥರಾಜ ವಾರ್ತಿಕ 277
ತವಂಟಕಲ್ಲಿನ ಶಾಸನ 221
ತ್ರಸ 200
ತಾಮ್ರಪರ್ಣಿ (ಮುತ್ತುಗಳು) 193
ತಾಮ್ರ ಶಿಲಾಯುಗದ ಸಂಸ್ಕೃತಿ (ಕರ್ಣಾಟಕ) 109
ತಾಮ್ರ ಶಿಲಾಯುಗದ ನಿವೇಶನಗಳ ಪಟ್ಟಿ 109, 110
ತಾರಾಭಗವತಿ 207
ತಾಳಗುಂದ ಶಾಸನ 119, 135, 152, 160, 180
ತೀರ್ಥಂಕರರು (24 ಜನ) 305
ತೀವ್ರಭೂಚಲನೆ 10, 11
ತ್ರಿಕೂಟೇಶ್ವರ ಶಾಸನ (ಗದಗ) 356
ತ್ರಿಣೇತ್ರ ಅಥವಾ ಮುಕ್ಕಣ್ಣ ಕದಂಬ 180
ತ್ರಿನೇತ್ರ (ಪಲ್ಲವ) 161
ತ್ರಿಪಿಟಕ 177
ತ್ರಿಪುರುಷ ದೇವಾಲಯ 391
ತ್ರಿಭುವನ ಮಲ್ಲ 360
ತ್ರಿಭವನಮಲ್ಲ ಕೊಂಗಾಳ್ವದೇವ 487
ತ್ರಿಭೋಗಾಭ್ಯಂತರ ಸಿದ್ಧಿ 328
ತ್ರಿವಿಕ್ರಮ 185, 309, 567
ತ್ರಿವಿಕ್ರಮ ಚಂಪೂಕೃತಿ 310
ತ್ರಿವಿಕ್ರಮ ವಿಟ್ಟ (ತ್ರಿವಿಕ್ರಮದೇವ) 157
ತ್ರಿಷಷ್ಟಿ ಲಕ್ಷಣ ಮಹಾ ಪುರಾಣ 304
ತೈತ್ತಿರೀಯ ಆರಣ್ಯಕ 190
ತೈತ್ತಿರೀಯ ನಾರಾಯಣೋಪನಿಷತ್ತು 528
ತೈತ್ತಿರೀಯ ಶ್ಲೋಕವಾರ್ತಿಕ 311
ತೈಲ (ಇಮ್ಮಡಿ, ಚಾಲುಕ್ಯ) 148, 324, 325. 376
ತೈಲ (ಮೂರನೆಯ) 348
ತೈಲನ (ಇಮ್ಮಡಿ) ವಂಶಾವಳಿ 322
ತೋರಿಕೆಯ ನಿಕ್ಷೇಪಗಳು 19
ತೋತ್ಕಾಪ್ಪಿಯಂ 219
ತುಂಬಲೂರಾಚಾರ್ಯ 224, 276
ತೊಂಡಮಂಡಲ 148

ಥ

ಥರ್ಸ್ಟನ್, ಎಡ್ಗರ್ 83, 85
ಥಾಮಸ್, ಫಾದರ್ ಸ್ಟೀಫನ್ಸ್ 101
ಥಾಮಸ್ ಹಾಲೆಂಡ್, ಸರ್ 16

ದ

ದಂಡಿ 161, 229, 230; 298, 310, 396
ದಂತಿವರ್ಮ 281
ದಂತಿವರ್ಮ (ಇಮ್ಮಡಿ) 318
ದಂತಿದುರ್ಗ (ರಾಷ್ಟ್ರಕೂಟ) 162, 281, 292
ದಖನ್ ಟ್ರ್ಯಾಪು 11, 12, 17, 18
ದತ್ತಕ ಸೂತ್ರವೃತ್ತಿ 227
ದಮಯಂತಿ 310
ದಯಾನಂದ ಸರಸ್ವತಿ 186
ದಶಕುಮಾರ ಚರಿತೆ 230, 231, 396
ದಾಯಿಮ 364
ದಿಙ್ನಾಗ 277
ದೀಪವಂಶ 204
ದೀರ್ಘನಿಕಾಯ 177
ದ್ವಿಚರಿಗಳು 79
ದುಗ್ಗಮಾರ 143, 144
ದುರ್ಗಸಿಂಹ 309, 377, 431
ದುರ್ಗಾದೇವಾಲಯ (ಐಹೊಳೆ) 456
ದುರ್ವಿನೀತ (ಗಂಗರಾಜ) 140, 161, 169, 196, 227, 230, 297
ದೇವಗಿರಿಯ ಯಾದವರು 478
ದೇವಗಿರಿಯ ಯಾದವರ ವಂಶಾವಳಿ 484
ದೇವಸ್ಥಾನಗಳ ರಚನೆ (ಎರಡು ಘಟ್ಟಗಳು) 454
ದೇವರ ದಾಸಿಮಯ್ಯ 326, 439
ದೇವರ ದಾಸಿಮಯ್ಯ ಪುರಾಣ 326
ದೇವಚಂದ್ರ 224
ದೇವನ ಹಳ್ಳಿ ಶಾಸನ 152

ದೇವಾಲಯಗಳ ರಚನೆ (ಇತಿಹಾಸ) 454
ದೇವಾಲಯಗಳ ಶೈಲಿ 459
ದೇವಾಲಯಗಳು (ಪುಲಿಕೇಶಿಯ ಕಾಲ) 397, 398
ದೊಡ್ಡಹುಂಡಿ ಶಿಲಾಶಾಸನ 236
ದೊಂತೆಯ ದೇವ 189
ದೋರ ಸಮುದ್ರ 537
ದ್ವೈತ ವೇದಾಂತ ತತ್ವ 509, 515

ಧ

ಧನಂಜಯ (ನಾಮಮಾಲ) 453
ಧರ್ಮಕೀರ್ತಿ 206, 277
ಧರ್ಮಪಾಲ 205
ಧರ್ಮಪುರ 320
ಧರ್ಮ ಮತ್ತು ತತ್ವಶಾಸ್ತ್ರ (ರಾಷ್ಟ್ರಕೂಟರ ಕಾಲ) 289
ಧರ್ಮಸ್ಥಳ 206
ಧರ್ಮೋತ್ತರ ಟಿಪ್ಪಣಿಕ 294
ಧರಸೇನ 564
ಧವಳ, ಜಯಧವಳ, ಮಹಾಧವಳ 312, 564
ಧಾರ್ಮಿಕ ಸ್ವಾತಂತ್ರ್ಯ 392
ಧಾರ್ಮಿಕ ನಂಬಿಕೆ, ಅನುಸರಣೆಗಳು 290
ಧಾರವಾಡ ಶಿಸ್ತುಗಳು 18, 23, 24
ಧಾರವಾಡ ಶಿಲಾಸಮೂಹ 12, 13, 22
ಧಾರವಾಡ ಶಿಲಾ ನಿಕ್ಷೇಪಗಳು 36
ಧಾರಾಶ್ರಯ ಜಯಸಿಂಹವರ್ಮ 247
ಧ್ವನಿ ವೈಲಕ್ಷಣ್ಯಗಳು 94, 96
ಧುಮರ್ ಲೆನಾ 316
ಧ್ರುವ 282
ಧ್ರುವರಾಜ (ಇಂದ್ರವರ್ಮ) 246

ನ

ನಂಜರಾಜ 486
ನಂದಿವರ್ಮ ಪಲ್ಲವ 163
ನಂದಿವರ್ಮ 142
ನಂದಿ ಶಾಸನ 156
ನಂದಿ ಬೆಟ್ಟಗಳು 37, 209
ನಕರ 262, 263
ನಗರೇಶ್ವರ ದೇವಸ್ಥಾನ 368
ನಟರಾಜಮೂರ್ತಿ 177, 180
ನಡಿಕೇರಿಯಂಡ ಚಿನ್ನಪ್ಪ 100
ನನ್ನ (ರಟ್ಟರ ಮೂಲ ಪುರುಷ) 363
ನಯಸೇನ (ಧರ್ಮಾಮೃತ) 440, 441
ನಯಸೇನ ಮತ್ತು ಆಂಡಯ್ಯ 556, 557
ನಯವಾದ 197
ನರಸೀಪುರ (ತಿರುಮಕೂಡಲು) 108
ನರಸಿಂಹ (ಒಂದನೆಯ) 247, 470, 537, 540
ನರಸಿಂಹ (ಎರಡನೆಯ) 472
ನರಸಿಂಹ (ಮೂರನೆಯ) 474, 537
ನರಸಿಂಹದೇವ 147
ನರಸಿಂಹಾಚಾರ್, ಡಿ.ಎಲ್. 90
ನರಸಿಂಹಾಚಾರ್, ರಾ. 117
ನವರಂಗದ ಚಾವಡಿ (ಕಲ್ಲೇಶ್ವರ ದೇವಾಲಯ, ಜಕ್ಕನಹಳ್ಳಿ) 465
ನವಶಿಲಾಯುಗ (ಕರ್ನಾಟಕದಲ್ಲಿ) 107
ನಳಚಂಪು 309
ನೂಮಿನಸ್ 626
ನಾಗವರ್ಮ 93, 354
ನಾಗವರ್ಮನ ಕೃತಿಗಳು 435, 436
ನಾಗವರ್ಮ (ಎರಡನೆಯ) 448
ನಾಗವರ್ಮನ (ಎರಡನೆಯ) ಕೃತಿಗಳು 441
ನಾಗಚಂದ್ರ (ರಾಮಚಂದ್ರ ಚರಿತ ಪುರಾಣ) 551
ನಾಗಚಂದ್ರ (ಮಲ್ಲಿನಾಥ ಪುರಾಣ) 552
ನಾಗರಾಜ (ಪುಣ್ಯಾಸ್ರವ) 128
ನಾಗಾರ್ಜುನ 131
ನಾನಘಾಟ್ ಶಾಸನ (ಕ್ರಿ.ಪೂ. 184–125) 125
ನಾಟ್ಯಶಾಸ್ತ್ರ 264
ನ್ಯಾಯ ವೈಶೇಷಿಕ ಯೋಗ ದರ್ಶನಗಳು 180
ನ್ಯಾಯಕುಮುದ ಚಂದ್ರೋದಯ 294
ನಾಥುಲಾಲ್ ಪ್ರೇಮ್‌ಜಿ 128
ನಾಲ್ಕುವರ್ಣಗಳು 262

ನಿಕ್ಷೇಪಗಳು (ಕ್ರೋಮೈಟು ಮತ್ತು ಗಂಧಕ) 23
ನೀಗ್ರೋಯಿಡ್ 85
ನೀತಿವಾಕ್ಯಾಮೃತ 312, 395
ನೀತಿಮಾರ್ಗ (ಇಮ್ಮಡಿ) 147
ನಿರ್ಜೀವ ಕಲ್ಪ 3
ನಿರ್ಜರ 201
ನಿತ್ಯಹರಿದ್ವರ್ಣದ ಕಾಡುಗಳು, ಮರಗಳು 38, 40
ನಿಡುಗಲ್ಲಿನ ಚೋಳರು 489
ನೀರಾವರಿ 49, 50
ನೊಳಂಬ ಪಲ್ಲವರು 163, 164
ನೊಳಂಬ ಪಲ್ಲವ ವಂಶ 164, 168
ನೊಳಂಬವಾಡಿ 376
ನೆರೂರ ದತ್ತಿ ಶಾಸನ 250
ನೇಮಿಚಂದ್ರ 554, 555, 566
ನೃತ್ಯ (ಹೊಯ್ಸಳರ ಕಾಲ) 141, 280, 290
ನೃಪತುಂಗ 409, 567
ನೃಪತುಂಗ ವರ್ಮ 147
ನೃಪಕಾಮ 467
ನೈಷ್ಕರ್ಮ ಸಿದ್ಧಿ 311

ಪ

ಪಂಚನಮಸ್ಕಾರ 500
ಪಂಚವ್ರತಗಳು 202
ಪಂಚಪಾದಿಕಾ 211
ಪಂಚವಾರ್ಷಿಕ ಯೋಜನೆಗಳು 50
ಪಂಚತಂತ್ರ 377, 438
ಪಂಚಮಹಾಶಬ್ದ 609
ಪಂಚಾಚಾರ್ಯರು 529
ಪಂಡಿತತ್ರಯ 529
ಪಾಂಡ್ಯರಾಜ 472
ಪಾಂಡುರಂಗ ಪಳ್ಳಿ 635
ಪಂಢರಾಪುರ 292
ಪಂಪ 211, 319, 397
ಪಂಪಾಕ್ಷೇತ್ರ 114, 301
ಪಕ್ಷಿಗಳು 72
ಪಟ್ಟದ ಕಲ್ಲು 264. 265, 570
ಪಣಿಯಾಡಿ, ಎಸ್.ಯು 99
ಪತಂಜಲಿ 178, 451
ಪದ್ಮಪಾದ 311
ಪಯಸ್ವಿನಿ 193
ಪರಮತ ಸಹಿಷ್ಣುತೆ 260
ಪರಮಂ ಪದಂ 186
ಪರಶುರಾಮಕ್ಷೇತ್ರ 114
ಪರ್ಮಿಯನ್ ಕಾಲ 10
ಪರ್ಸಿ ಬ್ರೌನ್ 317, 455, 456, 458, 459, 570
ಪರಾಂತಕ, (ಒಂದನೆಯ ಚೋಳ ರಾಜ) 151
ಪರಾವಲಂಬಿ ಸಸ್ಯಗಳು 56
ಪರಾಶರ ಗೃಹ್ಯಸೂತ್ರ 714
ಪರೀಕ್ಷಾಮುಖ ಸೂತ್ರ 294, 313
ಪರೀಷಹಗಳು 305
ಪಾಟಲೀಪುರ 152
ಪಾಣಿನಿ 177, 276, 308
ಪಾರ್ಫಿರಿಗಳು 16
ಪಾಲಕ 608
ಪಾನೀಯಗಳು (ಕರ್ಣಾಟಕದ) 269
ಪಾರ್ಶ್ವಾಭ್ಯುದಯ 312, 318
ಪಾಶುಪತವ್ರತ 176
ಪಾಶುಪತಪಂಥ, ಅದರ ಸಾಹಿತ್ಯ 180, 184
ಪಾರ್ಶ್ವಪಂಡಿತ 365
ಪಾರ್ಶ್ವದೇವ (ಸಂಗೀತ ಸಮಯಸಾರ) 453
ಪಿಂಗಳ 310
ಪಿರಿಯಾಪಟ್ಟಣ 486
ಪುಣ್ಯಾಸ್ರವ (ನಾಗರಾಜ) 126
ಪುದ್ಗಲ 198, 199
ಪುನ್ನಾಟ 140, 169
ಪುನ್ನಾಟದ ದೊರೆಗಳ ಶಾಸನ 169
ಪುನ್ನಾಟದ ಸ್ಕಂದವರ್ಮ 139
ಪುಲಸ್ತ್ಯಸ್ಮೃತಿ 269
ಪುಷ್ಪದಂತ 566
ಪುಲಿಕೇಶಿ (ಮೊದಲನೆಯ) 241, 274
ಪುಲಿಕೇಶಿ (ಇಮ್ಮಡಿ) 152, 161, 162, 240, 244, 248, 320, 401
ಪುರಾತನ ಶಿಸ್ತುಗಳು 18
ಪುದಲ್‌ನಾಡು 151

ಪೂಜ್ಯಪಾದ 141, 230, 252, 266
ಪೂಜಾಪದ್ಧತಿಗಳು 257
ಪೂಟ್ 107
ಪೃಥಿವೀಪತಿ (ಮೊದಲನೆಯ, ಗಂಗ) 154
ಪೃಥಿವೀರಾಮ 363
ಪೃಥ್ವೀವಲ್ಲಭ (ಸೇಣವಾರ) 385
ಪೂರ್ವದ್ರಾವಿಡ ಬುಡಕಟ್ಟು 85
ಪೂರ್ವ ಆಸ್ಟ್ರೋಲಾಯಿಡ್ 85
ಪೂರ್ವಮೀಮಾಂಸಾ 311
ಪ್ರಭಾಚಂದ್ರ 294, 313
ಪ್ರಮೇಯ ಕಮಲ ಮಾರ್ತಾಂಡ 294, 313
ಪ್ರಹ್ಲಾದ 151
ಪ್ರಶ್ನೋತ್ತರ ರತ್ನಮಾಲಿಕಾ 310
ಪ್ರಮೇಯವಾದ 520
ಪ್ರಾಂತೀಯ ಭೇದಗಳು (ಹೊಸಗನ್ನಡ) 97, 98
ಪ್ರಾಚೀನಾನ್ವೇಷಣ ವಿದ್ಯೆ 178
ಪ್ರಾಥಮಿಕ ಶಿಕ್ಷಣ (ಕ್ರಿ.ಶ. 12ನೆಯ ಶತಮಾನ) 411, 412
ಪ್ರಾಣಿ ಸಂಪತ್ತು (ಕರ್ಣಾಟಕದ) 69
ಪ್ರಾಕ್ಚಾರಿತ್ರಿಕ ಸಂಸ್ಕೃತಿಗಳು (ಕರ್ಣಾಟಕದ) 103
ಪ್ರಾಚೀನ ಭಾರತದ ಇತಿಹಾಸ 117
ಪ್ರೌಢ ವ್ಯಾಸಂಗ ಕ್ರಮ (ರಾಷ್ಟ್ರಕೂಟರ ಕಾಲ) 309
ಪೆರುಂಗತ್ತೈ 228
ಪೆನ್ನಾರ್ 37, 164
ಪೆರನಗರ 155
ಪೆರುಂಬನಪ್ಪಾಡಿ 151
ಪೆನಿನ್ಸುಲಾರ್ ನೈಸುಗಳು 14, 18
ಪೆಗ್ಮಟೈಟ್ 14
ಪೆರ್ಮಾಡಿದೇವ 358
ಪೆರ್ಮಾಡಿ 337, 348
ಪೆರಿಪ್ಲಸ್ 367, 371, 401, 402
ಪೆರುಮಾಳ ದಂಡನಾಯಕ 488
ಪೊಳಾಳ್ ಚೋರ (ನೊಳಂಬರಾಜ) 154
ಪೋಲಾಳ್ವದಂಡನಾಥ 556
ಪ್ರೊಲರಾಜ 339

ಫ

ಫರ್ಗ್ಯುಸನ್ 208, 234, 571, 572
ಫ್ಲೀಟ್, ಡಾ॥ 117. 124, 234, 247,, 250, 258, 271, 319, 320 321, 324, 351, 376, 401
ಫೆರುಜಿನಸ್ ಸಿಲ್ಟುಗಳು 13
ಫೆಲ್ಡ್ ಸ್ಪಾರ್ ಹರಳುಗಳು 16

ಬ

ಬಂಕಿದೇವ 383,
ಬಂಕಿದೇವ (ಇಮ್ಮಡಿ) 383
ಬರ್ಗಸ್, ಡಾ॥ 316
ಬಡ್ಡಿ ದರಗಳು (ಚಾಲುಕ್ಯರ ಕಾಲ) 405
ಬನವಾಸಿ 132, 205, 237, 332
ಬರ್ನೆಲ್ 280
ಬಪ್ಪಾದೇವಿ 355
ಬಲ್ಹಾರ 281
ಬಲ್ಲಾಳ (ಒಂದನೆಯ) 468, 535
ಬಲ್ಲಾಳ (ಎರಡನೆಯ) 476, 499
ಬಲ್ಲಾಳ (ಮೂರನೆಯ) 474, 537
ಬಸವೇಶ್ವರರು, ಅವರ ವ್ಯಕ್ತಿತ್ವ 96, 349, 389, 442
ಬಳ್ಳಿಗಾವೆಯ ಶಾಸನ 267, 377, 391. 514
ಬಾಗನಬ್ಬೆ 541
ಬಾಗೇವಾಡಿ 349
ಬಾಟಸೆಲ್ಲಿಯ ಕಲಾ ಕನ್ನಿಕೆಯರು 455
ಬಾಣರ ವಂಶವೃಕ್ಷ 178, 228
ಬಾದಾಮಿ, ಗವಿಗಳು 180, 208 264, 266
ಬಾದಾಮಿ ಕಾಳಗ 180
ಬಾದಾಮಿಯ ಚಾಲುಕ್ಯರು 237, 274
ಬಾರ್ನೆಟ್, ಎಲ್. ಡಿ. ಡಾ॥ 91, 385
ಬಾಬಾಬುಡನ್‌ಗಿರಿ 36, 37, 55, 61, 66
ಬಾಲಕ್ರೀಡಾ (ವಿಶ್ವರೂಪನ ಕೃತಿ) 311
ಬಾಲಚಂದ್ರ (ರಟ್ಟರ ಆಸ್ಥಾನ ಕವಿ) 365

ಬಾಲಚಂದ್ರಮುನಿ 531
ಬಿಜಯತಿಮಂಗಲ 167
ಬಿಜ್ಜಳ 340, 347, 348, 350, 358, 368
ಬಿಟ್ಟಿದೇವ (ನೋಡಿ ವಿಷ್ಣುವರ್ಧನ)
ಬಿಲ್ಹಣ, ಅವನ ಕೃತಿಗಳು 238, 329, 409, 448, 458, 481, 450
ಬಿಳಿಗಿರಿರಂಗನ ಬೆಟ್ಟ 16, 83
ಬ್ರಿಗೆಲ್, ಜೆ, ಶಿ। 99
ಬೀಬೀನಾಚ್ಚಿಯಾರ್ 498
ಬುಕನನ್ 83
ಬುದ್ಧಚರಿತ 230
ಬುಲ್ಲರ್. ಡಾ. 181
ಬೂತುಗ (ಗಂಗರಾಜ) 147, 165 236, 375
ಬೂತುಗ (ಎರಡನೆಯ) 207
ಬೂದಿಕೋಟೆ ಶಾಸನ 156
ಬ್ರೂಸ್‌ಫುಟ್ 16
ಬ್ಯೂಲರ್, ಡಾ॥ 227, 333
ಬೃಹದಾರಣ್ಯಕ ಶ್ಲೋಕ ವಾರ್ತಿಕ 311
ಬೃಹತ್ಕಥೆ 180, 223, 227 228, 396
ಬೃಹತ್ಕಥಾ ಸರಿತ್ಸಾಗರ 180
ಬೃಹತ್ಕಥಾಕೋಶ 117. 305
ಬ್ರಹ್ಮಗಿರಿ, ಶಾಸನ (ಅಶೋಕ) 90, 233
ಬ್ರಹ್ಮಪುರಿಗಳು 416, 548
ಬ್ರಹ್ಮಸೂತ್ರ, ಬ್ರಹ್ಮಸೂತ್ರ ಭಾಷ್ಯ 311, 514, 181, 395
ಬ್ರಹ್ಮಶಿಲಾ 437, 441
ಬ್ರಾಹ್ಮಣಗಳು 187, 311
ಬ್ರಾಹ್ಮೀ ಶಾಸನಗಳು 204
ಬೆಲೆಗಳು (ಚಾಲುಕ್ಯರ ಕಾಲ) 406
ಬೇಗುಮ್ರಾ ತಾಮ್ರಶಾಸನ 301
ಬೇಲೂರು ಶಾಸನ, ದೇವಾಲಯ 390, 576
ಬೈಜಾಂಟಿಯನ್ (ಸ್ಥಳ) 232
ಬೋಧಾಯನ ಧರ್ಮಸೂತ್ರ 394
ಬೋಪದೇವ 482
ಬೌದ್ಧಮತ 126, 204, 290
ಬೌದ್ಧ ವಿಹಾರಗಳು 267
ಬೌದ್ಧರ ಶಿಕ್ಷಣಕ್ರಮ (12ನೆಯ ಶಕದವರೆಗೆ) 410

ಭ

ಭಂಡಾರ್ಕರ್, ಆರ್.ಜಿ. ಡಾ. 247
ಭಕ್ತಿಸ್ತೋತ್ರಗಳು (ಶಂಕರಾಚಾರ್ಯ) 311
ಭಗವತೀ ಆರಾಧನಾ 305, 365
ಭಗವದ್ಗೀತೆ 192, 311
ಭಗೀರಥ 176
ಭಟ್ಟಾಕಳಂಕ 94, 224
ಭದ್ರಬಾಹು 116, 128, 169, 196
ಭದ್ರಬಾಹು ಚರಿತ 117
ಭರತ (ನಾಟ್ಯಶಾಸ್ತ್ರ) 264, 580
ಭರತ ಅಯ್ಯರ್, ಕೆ. (ಇಂಡಿಯನ್ ಆರ್ಟ್) 576
ಭವಭೂತಿ 178, 276, 311
ಭಾಗವತ 193, 277
ಭಾರತದ ಭೂ ಚರಿತ್ರೆ 6
ಭಾರತದ ಭೂ ವಿಕಾಸ 7
ಭಾರವಿ 161, 229
ಭಾರತೀಯ ಕಲೆಯ ಸುವರ್ಣಯುಗ 456
ಭಾಷಾಪಟ್ಟಿ (ಕರ್ಣಾಟಕದ) 87
ಭಾಷೆ ಮತ್ತು ಸಾಹಿತ್ಯ 130
ಭಿಲ್ಲಮ (5 ನೆಯ) 479
ಭೀಮ ಶಿಲಾಸ್ತೋಮ 17
ಭೂ ಐತಿಹಾಸಿಕ ಮಾನದಂಡ 3
ಭೂ ಕಾಲ ಮಾನದಂಡ 4
ಭೂಕಾಲ ಚಕ್ರ, ಭೂಕಾಲ (ಮೊದಲ) 3, 6, 21
ಭೂಗೋಳದ ನಿರ್ಧಾರಕ ಗುಣ 44
ಭೂ ಚರಿತ್ರೆ 1, 2, 6, 10, 11
ಭೂ ಚರಿತ್ರ ಗ್ರಂಥ 3
ಭೂ ಚರಿತ್ರೆಯ ಆಧಾರ 7
ಭೂ ಚಲನೆ 7, 17
ಭೂದೇವಿ 188
ಭೂ ಭಾಗದ ವಿಚ್ಛೇದನ 11
ಭೂ ಭೌತ ವಿಜ್ಞಾನ 22

ಭೂವರ್ಗಗಳು 3
ಭೂವಿಕಾಸ 1
ಭೂವಿನ್ಯಾಸ 36
ಭೂಸವೆತ 18, 19
ಭೂ ವೈಜ್ಞಾನಿಕ ಭೂಪಟ 15
ಭೂ ಹೊರಮೈಲಕ್ಷಣ ವಿಜ್ಞಾನ 18
ಭೂಮಿತಿ 310
ಭೂಮಿಯ ಆಯುಸ್ಸು, ಆತ್ಮಕಥೆ, ವಿಕಾಸ 2, 2
ಭೈರವದೇವ ದೇವಸ್ಥಾನ 536
ಭೋಗನಂದೀಶ್ವರ ದೇವಾಲಯ 155
ಭೌಗೋಳಿಕ ಅಂಶಗಳು, ಸನ್ನಿವೇಶ 85, 182
187, 189

ಮ

ಮಂಗಳೇಶ 162, 181, 241, 242, 264
274, 323, 510
ಮಂಗೇಶರಾವ್, ಪಂಜೆ 101
ಮಂಜುಶ್ರೀ 206
ಮಂಜುನಾಥ 206
ಮಂಡನ ಮಿಶ್ರ 311
ಮಣಿಮಂಗಳಂ ಶಾಸನ 378
ಮಣಿಮೇಖಲೈ 151
ಮದಲಸಾ ಚಂಪೂ 310
ಮದನ ತಿಲಕ 377
ಮಧುಕೂಪ (ವಿಷ್ಣುವಿನ ಮೂರನೆಪಾದ) 186
ಮಧ್ಯಶಿಲಾಯುಗ (ಕರ್ನಾಟಕದಲ್ಲಿ) 105
ಮಧ್ಯಂತರ ಪ್ರದೇಶ 41
ಮಧ್ವಾಚಾರ್ಯರು 186, 513, 514
515, 516, 520
ಮಧ್ವಾಚಾರ್ಯರ ತತ್ವ ಸಿದ್ಧಾಂತ 509, 512
ಮಯೂರಶರ್ಮ (ಕದಂಬ) 133, 152, 211
ಮತ್ತವಿಲಾಸ 277
ಮತೀಯೇತರ ಸಾಹಿತ್ಯ (ಹೊಯ್ಸಳರ ಕಾಲ)
562
ಮಥುರಾ 190
ಮನ್ನೆಶಾಸನ 155
ಮಮ್ಮಟ (ಕಾವ್ಯಪ್ರಕಾಶ) 451
ಮರಳು ಶಿಲೆ 2
ಮರಗಳು (ಪಟ್ಟಿ) 57, 60
ಮರಾಠರ ಅಧಿಕಾರ 46
ಮರಾಠಿ 89
ಮಲಪ್ರಭಾ 37
ಮಲಯಾಳ 88, 99
ಮಲ್ಲವಾದಿ 294
ಮಲ್ಲದೇವ 153
ಮಲ್ಲಿಕಾರ್ಜುನ ದೇವಾಲಯ 460
ಮಲ್ಲಿಕಾರ್ಜುನ 364
ಮಲ್ಲಿಕಾಫರ 475
ಮಲೇರು 85
ಮಹಿಳೆಯರ ಸ್ಥಾನ (ಪುಲಿಕೇಶಿಯ ಕಾಲ) 396
ಮಹಿಷಾಸುರ ಮರ್ದಿನಿ 180
ಮಹಾಕೂಟ 181, 264
ಮಹಾಕೂಟಸ್ತಂಭ ಶಾಸನ 241, 243,
247, 274
ಮಹಾವಲಿ, ಮಹಾಬಲಿ 151
ಮಹಾದೇವಿ 625
ಮಹಾವೀರಾಚಾರ್ಯ 310
ಮಹಾವಂಶ 204, 219
ಮಹಾಜನ 215, 262, 263
ಮಹಾರಥಿ 128
ಮಹಾಪುರಾಣ 132
ಮಹಾಭಾರತ 176, 310
ಮಹಾಭಾಷ್ಯ 178
ಮಹಾ ಮಾತೃಗಳು 585
ಮಹಾಕೂಟೇಶ್ವರ ದೇವಾಲಯಗಳು 456
ಮಹಾಮಂಡಲೇಶ್ವರರು 387, 609
ಮಹಾಬಲೇಶ್ವರ ಲಿಂಗ 180
ಮಹೆಂಜೊದಾರೊ 171
ಮಹೇಂದ್ರವರ್ಮ 161
ಮಹೇಂದ್ರ 147, 165
ಮಹೇಂದ್ರಮಾತಲಿ ಸಂಜಲ್ಪ 312
ಮಹೇಂದ್ರವರ್ಮನ ಮತ್ತವಿಲಾಸ 182
ಮಳವಳ್ಳಿ ಶಾಸನ 152
ಮಳಖೇಡ 279
ಮಳೆ 49

ಮಯೂರ 178
ಮೃಗೇಶವರ್ಮ 160
ಮೃಚ್ಛ ಕಟಕ (ಹಲಾಯುಧ) 310
ಮ್ಯಾಕ್‌ಡೊನೆಲ್, ಡಾ॥ 173
ಮಾರ್ಕೊಪೋಲೋ 400
ಮಾರ್ಟಿಮರ್ ವ್ಹೀಲರ್, ಸರ್ 12, 199, 233, 294, 313
ಮಾಣಿಕ್ಯನಂದಿ 294, 313
ಮಾದಲಾಂಬಿಕೆ 349
ಮಾದರಸ 349
ಮಾಧವ (ಇಮ್ಮಡಿ) 139, 227
ಮಾಧವ (ಅಯ್ಯವರ್ಮನ ಮಗ) 161
ಮಾನಸಾರ 233
ಮಾನಸೋಲ್ಲಾಸ 409, 427
ಮಾನ್ಯಖೇಟ 286, 458
ಮಾನ್‌ಸೂನ್ 37, 38
ಮಾಯಾಯೋಗ 188
ಮಾರಸಿಂಗ ದೇವ 385, 386
ಮಾರಸಿಂಹ 148
ಮಾಸೇನರು (ಶ್ರವಣಬೆಳಗೊಳ ಶಾಸನಗಳು) 308
ಮಾಸ್ಕಿ 119
ಮ್ಯಾಕ್ಸ್ ಮುಲ್ಲರ್, ಪ್ರೊ। 111, 227, 636
ಮ್ಯಾಕದೋನಿ ಶಾಸನ 124
ಮಿತಾಕ್ಷರ 334, 390
ಮೀನುಗಳು 80
ಮುಕ್ತಾಫಲ (ಬೋಪದೇವ) 482
ಮುಕ್ತೇಶ್ವರ ದೇವಾಲಯ 460
ಮುಖ್ಯಭಾಷೆಗಳ ಪಟ್ಟಿ (ಭಾರತದ) 102
ಮುಗಳಿ, ಆರ್. ಎಸ್. ಡಾ। 310
ಮುದನೂರಿನ ಶಾಸನ 151
ಮುಸ್ಲಿಮರ ದಂಡಯಾತ್ರೆಗಳು 483
ಮುನಿಚಂದ್ರ 365
ಮುಮ್ಮಡಿ ಕೃಷ್ಣ (ರಾಷ್ಟ್ರಕೂಟ) 148
ಮುಮ್ಮಡಿ ತೈಲ 339
ಮುಜುಂದಾರ್, ಎನ್. ಜಿ. 120
ಮೂರನೆಯ ಇಂದ್ರ 309
ಮೂರನೆಯ ಗೋವಿಂದ (ರಾಷ್ಟ್ರಕೂಟ) 154
ಮೂಲಿಕೆಗಳು 61
ಮೂರ್ತಿಶಿಲ್ಪ 314, 315
ಮುಂಡ (ಟಿಬೆಟೊ ಬರ್ಮನ್) 89
ಮೆಗಾಸ್ತನೀಸ್ (ಇಂಡಿಕಾ) 152, 190
ಮೆಗಾಲಿಥಿಕ್ ನಾಗರಿಕತೆ 119
ಮೆಗಾಲಿಥಿಕ್ ಸಂಸ್ಕೃತಿ 119
ಮೇರೂರು ಶಾಸನ (ಮುಮ್ಮಡಿಕೃಷ್ಣನಕಾಲ) 376
ಮೇಲುಹೊದಿಕೆ ನಿಕ್ಷೇಪಗಳು 20
ಮೇಲ್ಕೋಟೆ 497
ಮೈತರಯ್ಯ (ಕಲಚೂರಿಗಳ ಅಧಿಕಾರಿ) 348
ಮೈತ್ರೇಯ 181, 206,
ಮೈಲಿತೀರ್ಥ 363
ಮೈಸೂರಿನ ಗಂಗರು 234
ಮೊದಲನೆ ರಾಚಮಲ್ಲ 154
ಮೊದಲನೆ ಪುಲಿಕೇಶಿ 134
ಮೊದಲನೆ ವಿಕ್ರಮಾದಿತ್ಯ (ಚಾಲುಕ್ಯ) 151
ಮೊಳಕಾಲ್ಮೂರು 114
ಮೊರೇರ ಮನೆ (ಮೌರ್ಯರ) 119
ಮೊರೇರಂಗಡಿ 113
ಮೊರೇಸ್, ಡಾ। 234
ಮೌರ್ಯ ಚಂದ್ರಗುಪ್ತ 196
ಮೌರ್ಯರ ನಿವಾಸಿಗಳು 116

ಯ

ಯಜುರ್ವೇದ 174
ಯರಂಬರಗೆ 367
ಯಶಸ್ ತಿಲಕ ಚಂಪೂ 311, 325, 375
ಯಶೋಧರ ಚರಿತ 377
ಯುಕ್ತಿ ಚಿಂತಾಮಣಿ 312, 313
ಯಾಜ್ಞ ವಲ್ಕ್ಯಸ್ಮೃತಿ 311
ಯಾಪ್ಪರೂಙ್ಗಲಕ್ಕಾರಿಗೈ (ಛಂದೋಗ್ರಂಥ ಅಮೃತಸಾಗರ) 224
ಯೋಜಿತ ಆರ್ಥಿಕಾಭಿವೃದ್ಧಿ 50

ರ

ರಕ್ಕಸಗಂಗ 149

ರಕ್ಷಾಗುತ್ತಿದ್ದ ವಸ್ತುಗಳು (ಪುಲಿಕೇಶಿಯ ಕಾಲ) 401
ರನ್ನ, ಕೃತಿಗಳು 161, 433, 434, 435
ರಟ್ಟರು 363
ರಟ್ಟರಾಜ 371
ರಟ್ಟಮತ 425
ರಣಂಜಯ (ಆಳುಪ ದೊರೆ) 382
ರವಿವರ್ಮ (ಕದಂಬ) 160
ರವಿಕೀರ್ತಿ 259, 274, 275, 393.
ರಹಸ್ಯತ್ರಯದ ವಿವರಣೆ 500, 501
ರಜ್ಜುಕ 585
ರಾಗಿ ಬತ್ತ ಬೆಳೆಯುವ ಭಾಗಗಳು 39
ರಾಘವ ಪಾಂಡವೀಯ 231
ರಾಘವಾಂಕನ ಕೃತಿಗಳು 553
ರಾಜಕುಮಾರರ ಶಿಕ್ಷಣಕ್ರಮ 408
ರಾಜ್ಯಪಾಲರುಗಳು (ಕ್ರಿ.ಶ. 13ನೆಯ ಶಕದ ವರೆಗೆ) 613, 614, 619
ರಾಜಧಾನಿಗಳು ಮತ್ತು ಶಿಬಿರಗಳು 264
ರಾಜಮಲ್ಲ ಸತ್ಯವಾಕ್ಯ (ಒಂದನೆಯ ಗಂಗ) 151, 165
ರಾಜಮಲ್ಲ (ಮೂರನೆಯ) 147
ರಾಜಮಲ್ಲ (ನಾಲ್ಕನೆಯ) 149
ರಾಜರಾಜ ಚೋಳ 470
ರಾಜಶೇಖರ 530, 609
ರಾಜಾವಳೀಕಥೆ 224
ರಾಜಾದಿತ್ಯ 425, 552
ರಾಜೇಂದ್ರ ಚೋಳ 149
ರಾಜೇಂದ್ರ (ಮೊದಲನೆಯ) 377
ರಾಜೇಂದ್ರ (ಎರಡನೆಯ) 377
ರಾಜೇಂದ್ರ (ಮೂರನೆಯ) 472
ರಾಮನಾಥ 537
ರಾಮಾನುಜಾಚಾರ್ಯರು (ನೋಡಿ-ಆಚಾರ್ಯ ರಾಮಾನುಜರು) 181, 388, 469
ರಾಮಾಯಣ 176
ರಾಷ್ಟ್ರಕೂಟರ ಆಳಿಕೆ 309
ರಾಷ್ಟ್ರಕೂಟರು, (ಮಳಖೇಡದ) 279
ರಾಷ್ಟ್ರಕೂಟರ ಕಾಲ, ಬೆಲೆಗಳ ಪಟ್ಟಿ 404
ರಾಷ್ಟ್ರಕೂಟರ ವಂಶವೃಕ್ಷ 289
ರಾಷ್ಟ್ರಪತಿ 609
ರಿಚರ್ಡ್ಸ್, ಎಫ್. ಜೆ. 82
ರಿಲಿಜನ್ ಆಫ್ ಇಂಡಿಯ (ಬಾರ್ತ್) 171
ರುಡಾಲ್ಫ್ ಆಟೊ 626
ರುದ್ರ 170, 174
ರುದ್ರದೇವ 340
ರುದ್ರಪ್ರಶ್ನಭಾಷ್ಯ 558
ರೂಪಾಂತರ ಶಿಲೆಗಳು 3
ರೆನೆಗ್ರೌಸೆ (ಫ್ರೆಂಚ್ವಿಮರ್ಶಕ) 318
ರೇಡಿಯೋ ಆರ್ಕೈವ್ ವಿಧಾನ 2
ರೈಸ್ 117, 165, 196, 223, 224, 376

ಲ

ಲಕುಲೀಶ 180, 208, 388
ಲಕುಲೀಶ ಪಂಡಿತ (ವಾದಿರುದ್ರಗುಣ) 448
ಲಕುಲೀಶ ಶೈವರು 182
ಲಕ್ಕುಂಡಿಯ ಜೈನದೇವಾಲಯ 60, 459
ಲಕ್ಷ್ಮಿ 188
ಲಕ್ಷ್ಮೀದೇವ ಅಥವಾ ಲಕ್ಷ್ಮಣ ಒಂದನೆಯ 364
ಲಕ್ಷ್ಮೀದೇವ (ಎರಡನೆಯ) 365
ಲಟ್ಟನೂರ 279
ಲವಾಣಿ (ಭಾಷೆ) 89
ಲಲ್ಲಿಯ (ಮುಮ್ಮಡಿ ಕೃಷ್ಣನ ಶತ್ರು) 148
ಲಾಕುಳ ಸಿದ್ಧಾಂತ 209
ಲ್ಯಾಟರೈಟ್ ಪ್ರಸ್ಥಭೂಮಿಗಳು 39
ಲೀಲಾವತಿ 552
ಲೂಡರ್ಸ್ 127
ಲೇಮುಲವಾಡ 311
ಲೋಕ ವಿಭಾಗ (ಜೈನ ಭೂಗೋಳ) 152
ಲೋಕೋಪಕಾರ (ಚಾವುಂಡರಾಯ) 426, 427
ಲೋಹದಿಂದ ಕೂಡಿದ ಖನಿಜಗಳು 23
ಲಿಂಗಧಾರಣೆ 529
ಲಿಂಗಪೂಜೆ 172
ಲಿಂಗಪುರಾಣ 181
ಲಿಂಗ ಸ್ಥಲ 531
ಲಿಂಗಾಂಗ ಸಾಮರಸ್ಯ 532

ವ

ವಚನಕಾರರು (ವೀರಶೈವ) 442, 445
ವಚನಕಾರ್ತಿಯರು (ವೀರಶೈವ) 444
ವಚನ ಸಾಹಿತ್ಯ 389
ವಜ್ರದ ಗಣಿಗಳು 402
ವಡ್ಡಾರಾಧನೆ 305, 307
ವರ್ಣವೃತ್ತಗಳು (ಸಂಸ್ಕೃತ) 307
ವರ್ಣಾಶ್ರಮ ಧರ್ಮ 188, 393
ವರ್ಧಮಾನ ಪುರಾಣ 232, 312
ವರಾಂಗ ಚರಿತ 230
ವರುಣ 173
ವಲಭೀ ವಿಶ್ವ ವಿದ್ಯಾನಿಲಯ 397
ವಲ್ಲಾಳದ ಕದನ (ಕ್ರಿ.ಶ. 913) 156
ವಜೀರಿಸ್ಥಾನ 178
ವಾಜಸನೇಯ ಸಂಹಿತೆ 527
ವಾಣಿಜ್ಯ ಸಂಘಗಳು (ಚಾಲುಕ್ಯರ ಕಾಲ) 404, 405
ವಾಣಿಜ್ಯದ ಬೆಳವಣಿಗೆ (ಹೊಯ್ಸಳರ ಕಾಲ) 545
ವಾತಾಪಿ 241
ವಾದಿರಾಜನ ಕೃತಿಗಳು 230, 446
ವಾದ್ಯಗಳು (ಕರ್ಣಾಟಕದ 10 ನೆ ಶತಮಾನದ) 212
ವಾಯುಪುರಾಣ 181
ವಾಸುದೇವ (ಇಮ್ಮಡಿ) 179
ವಾಸ್ತುಶಿಲ್ಪ 314, 315
ವಿಕ್ಕಯ್ಯ 368
ವಿಕ್ರಮಪುರ 326, 333
ವಿಕ್ರಮ ವರ್ಷ 332
ವಿಕ್ರಮಾರ್ಜುನ ವಿಜಯ (ನೋಡಿ, ಪಂಪ) 298, 301
ವಿಕ್ರಮಾದಿತ್ಯ 248, 332, 337, 379, 468
ವಿಕ್ರಮಾದಿತ್ಯ (ಮೊದಲನೆಯ) 153
ವಿಕ್ರಮಾದಿತ್ಯ (ಎರಡನೆಯ) 252
ವಿಕ್ರಮಾದಿತ್ಯ (ಐದನೆಯ) 326
ವಿಕ್ರಮಾದಿತ್ಯ (ಜಯವೇರು) 155
ವಿಕ್ರಮಾದಿತ್ಯ (ಶಾಸನಗಳು) 326, 334
ವಿಕ್ರಮಾದಿತ್ಯ ಮತ್ತು ಭೋಜರಾಜ 449
ವಿಕ್ರಮಾಂಕ ದೇವಚರಿತ 328, 379
ವಿಜಯ ಸ್ಕಂದಾವಾರಃ (ಸೈನಿಕ ಶಿಬಿರಗಳು) 265
ವಿಜಯಾದಿತ್ಯ 143, 145. 146, 153, 154, 161, 251, 276, 356, 378
ವಿಜ್ಜಿಕಾ 267
ವಿಜ್ಞಾನೇಶ್ವರ (ಮಿತಾಕ್ಷರ) 334, 390, 450, 451
ವಿನಯವತಿ 264
ವಿನಯಾದಿತ್ಯ 251, 319, 467, 535
ವಿನಾಕೋಟಿ 268
ವಿನ್ಸೆಂಟ್ ಸ್ಮಿತ್ 292, 463
ವಿದ್ಯಾನಂದ 313
ವಿದ್ವಾಂಸರಿಗೆ ಸೌಕರ್ಯಗಳು 419
ವಿಮಲ (ಪ್ರಶ್ನೋತ್ತರ ರತ್ನಮಾಲಿಕಾ) 310
ವಿಮಲ ಸೂರಿ (ಪಉಮಚರಿ ಅ) 552
ವಿರೋಚನ 151
ವಿಲಿಯಂ ಬ್ಯಾರೆಟ್ 627
ವಿಶಿಷ್ಟಾದ್ವೈತ 497
ವಿಶ್ವರೂಪ (ಸುರೇಶ್ವರಾಚಾರ್ಯ) 311
ವಿಷ್ಣುವರ್ಧನ 333, 440, 469, 497, 536
ವಿಷ್ಣುಗೋಪ 161
ವಿಷ್ಣುವರ್ಮ 160
ವೀರಗಲ್ಲು 266, 544
ವೀರನರಸಿಂಹ 472
ವೀರನಾರಾಯಣ (ಆಹವಮಲ್ಲ) 352
ವೀರನಾರಾಯಣ (ಚೋಳ) 151
ವೀರನಾರಾಯಣ (ಪರಾಂತಕ) 156
ವೀರನಂದಿ 232, 447
ವೀರ ಬಣಂಜ 395
ವೀರಬಲ್ಲಾಳ 543, 548
ವೀರರಿಗೆ ಸ್ಮಾರಕಗಳು (ಪುಲಿಕೇಶಿಯ ಕಾಲ) 399
ವೀರರಾಜೇಂದ್ರ (ಮೊದಲನೆಯ) 378
ವೀರಶೈವ ಮತ, ಧರ್ಮ 349, 389, 524
ವೀರಶೈವ ವಿದ್ವಾಂಸರು (ಹೊಯ್ಸಳರಕಾಲ) 551
ವ್ರತ ಖಂಡ (ಹೇಮಾದ್ರಿ) 331
ವೃತ್ತಿ ಶಿಕ್ಷಣ 421
ವೆಲಂಕರ್, ಪ್ರೊ. ಎಚ್.ಡಿ. 453
ವೇದಸಾಹಿತ್ಯ 311

ವೇದಾಂತ ತತ್ವ 503, 505
ವೇಣುಗ್ರಾಮ 365
ವೇಮ ಕಾಡ್‌ಫಿಸಿಸ್ (ಕುಶಾನರಾಜ) 178
ವೇಮುಲವಾಡ 321
ವೇಳವಾಳಿ (ಒಂದು ರೀತಿ, ವೀರಮರಣ) 213
ವೇಳೆವಾಕ್ಯ (ವೀರವ್ರತ) 399
ವೇಷಭೂಷಣಗಳು (ಕರ್ಣಾಟಕದ) 269
ವೈಖಾನಸ ಸೂತ್ರ 191
ವೈದಿಕ ದೇವತೆಗಳು 173
ವೈದಿಕ ಧರ್ಮ 125, 192
ವೈದುಂಬರು 155
ವೈದುಂಬರೋಲು 155
ವೈದ್ಯಕೀಯ ಶಾಸ್ತ್ರ ಶಿಕ್ಷಣ 424
ವೈದ್ಯನಾಥ (ಪ್ರತಾಪರುದ್ರೀಯ) 157
ವೈಟ್‌ಹೆಡ್ ಬಿಷಪ್ 627
ವೈರಮುಡಿ ಉತ್ಸವ 499
ವೈಷ್ಣವ ಮತ, ಧರ್ಮ 185, 388, 389
ವ್ಯವಹಾರ ಗಣಿತ 552
ವೆಂಕಟರಾವ್‌ಗುರ್ತಿ 125
ವೆಂಕಟಸುಬ್ಬಯ್ಯ ಎ. ಡಾ॥ 231

ಶ

ಶಂಕರಾಚಾರ್ಯರು 232, 294, 310, 311, 395, 538
ಶಂಕರಗಣ (ಕಲಚೂರಿವಂಶ) 347
ಶಕ್ತಿವಿಶಿಷ್ಟಾದ್ವೈತ (ವೀರಶೈವ ದರ್ಶನ) 527 529
ಶತಪಥ ಬ್ರಾಹ್ಮಣ 174, 185, 187
ಶತರುದ್ರೀಯ 174, 527
ಶಬ್ದ ಮಣಿದರ್ಪಣ (ಕೇಶಿರಾಜ) 93, 308, 556
ಶಬ್ದಾನುಶಾಸನ 94, 224, 309
ಶಬ್ದಾವತಾರ 230
ಶಲಾಕಾಪುರುಷರು (ಅರವತ್ತಮೂವರು) 305
ಶರ್ವವರ್ಮ 131
ಶಶಿಕಲಾ (ಚಂದ್ರಲೇಖೆ) 450
ಶಾಂತಲಾ ದೇವಿ 470, 541
ಶಾಂತಿವರ್ಮ 227
ಶಾಂತಿನಾಥ 439
ಶಾಂತಿದೇವ 535
ಶಾಕಟಾಯನ (ವ್ಯಾಕರಣ ಪ್ರಸ್ಥಾನ) 309
ಶಾಕ್ಯಶಿಲಾ 205
ಶಾರ್ಙ್ಗದೇವ 481, 580
ಶಾತವಾಹನರು 119
ಶಾತವಾಹನರ ನಿವಾಸಸ್ಥಳಗಳು 111
ಶಾಮಾಶಾಸ್ತ್ರಿ, ಡಾ॥ 415, 671
ಶಾಸನ ಸಾಹಿತ್ಯ (ಹೊಯ್ಸಳರ ಕಾಲ) 557
ಶಾಸ್ಥ (ಒಂದನೆಯ) 354
ಶಾಸ್ಥ (ಎರಡನೆಯ) 355
ಶಾಸ್ಥ (ಮೂರನೆಯ) 360
ಶಾಸ್ತ್ರಾವು ಕಲ್ಲು 206
ಶಿರುತ್ತೊಂಡ 180
ಶಿಲಗಪ್ಪದಿಕಾರಂ 151, 219
ಶಿಲಾಹಾರರು, (ಅಕ್ಕಲಕೋಟೆ, ದ.ಕೊಂಕಣ) 371, 374
ಶಿಲಾಹಾರ ವಿಜಯಾದಿತ್ಯ 365
ಶಿಲಾದಿತ್ಯ ಹರ್ಷ 161
ಶಿಲ್ಪಶಾಸನ ವಿದ್ಯೆ 178
ಶಿಲಾ ದೇವಾಲಯಗಳ ಶಿಲ್ಪಗಳು 455, 456
ಶಿಲಾದ್ರವ 2
ಶಿಲಾಯುಧಗಳು 20
ಶಿಲಾಕುಸಿತ 18
ಶಿಲಾಸಮೂಹಗಳು (ಕರ್ಣಾಟಕದ) 16, 17, 18, 22, 27
ಶಿಲಾತೊಡಕು 14, 16
ಶಿವಸಮುದ್ರ 39
ಶಿವಕೋಟಿ (ವಡ್ಡಾರಾಧನೆ) 305
ಶಿವಮಾರ, ಶಿವಮಾರನ ಶಾಸನ 142, 143 145, 154, 196, 308
ಶಿವಾದ್ವೈತ 529
ಶಿಸ್ತು ಭೂವಲಯಗಳು 13, 19
ಶುಕ್ಲಧ್ಯಾನ 305
ಶೂದ್ರಕ 178
ಶೂಲಬ್ರಹ್ಮ (ವೀರವ್ರತ) 399
ಶ್ರುತಶೀಲ 310

ಶ್ರುತಾವತಾರ (ಇಂದ್ರನಂದಿ) 224
ಶ್ರವಣಬೆಳಗೊಳ 116, 235
ಶೈವಧರ್ಮ 170, 179, 258, 314, 388, 524
ಶೈವಪುರಾಣಗಳು 176
ಶೈವಸಿದ್ಧಾಂತ; ದರ್ಶನ 529, 534
ಶ್ರೇಣಿಗಳು 215
ಶ್ರೇಡರ್ 277
ಶೃಂಗೇರಿ 232, 634
ಶ್ವೇತಾಶ್ವತರೋಪನಿಷತ್ 172, 175
ಶ್ರೀಕರಣಾಧಿಕಾರಿ 614. 615
ಶ್ರೀಕಂಠಶಾಸ್ತ್ರಿ ಎಸ್. 163
ಶ್ರೀಧರಾಚಾರ್ಯ (ಜಾತಕತಿಲಕ) 426, 437
ಶ್ರೀನಗರ 478
ಶ್ರೀಪತಿ ಪಂಡಿತ (ಶ್ರೀಕರಭಾಷ್ಯ) 529
ಶ್ರೀಪರ್ವತ (ಕದಂಬ ದೊರೆ) 151
ಶ್ರೀಪರ್ವತ 160
ಶ್ರೀಪಾಲದೇವರು 537
ಶ್ರೀ ಮಧ್ವ (ನೋಡಿ-ಮಧ್ವಾಚಾರ್ಯರು) 558
ಶ್ರೀರಂಗರಾಜ 569
ಶ್ರೀರಂಗ 497
ಶ್ರೀರಾಮಾನುಜರು(ನೋಡಿ-ರಾಮಾನುಜಾಚಾರ್ಯ) 558
ಶ್ರೀ ವಲ್ಲಭ (ಚಾಲುಕ್ಯ) 153
ಶ್ರೀ ವರ್ಧದೇವ 229
ಶ್ರೀವಿಲ್ಲಿ ಪುತ್ತೂರು ಶಾಸನ 157
ಶ್ರೀವಿಜಯ 223
ಶ್ರೀ ವೈಷ್ಣವ ಮತ, ದರ್ಶನ 497, 534

ಷ

ಷಟ್ಖಂಡಾಗಮ 312
ಷಟ್ಸ್ಥಲ 592, 531
ಷಡ್‌ದರ್ಶನ ಸಮುಚ್ಚಯ 184
ಷಪವತಿ ಪ್ರಕರಣ 312, 313

ಸ

ಸರ್ಕಾರ್ ಡಾ. ಡಿ. ಸಿ. 227
ಸಣಪುಲ್ಲ 371
ಸತೀಪದ್ಧತಿ 399
ಸತ್ಯಾಶ್ರಯ ಶಿಲಾದಿತ್ಯ 320
ಸಮತಲ ಭೂಶೋಧನೆ 108
ಸಮುದ್ರಗುಪ್ತ 137
ಸಮ್ಯಗ್‌ದರ್ಶನ, ಜ್ಞಾನ, ಚಾರಿತ್ರ 197, 202
ಸಮಂತಭದ್ರ 128, 276, 294
ಸರಯೂಪುರ 346
ಸಲ್ಲೇಖನ:ವಿಧಿ 213
ಸರ್ವನಂದಿ 152
ಸರ್ವಸಿದ್ಧಿ ಆಚಾರ್ಯ 263
ಸರ್ವದರ್ಶನ ಸಂಗ್ರಹ 182
ಸರ್ವಜ್ಞಾತ್ಮ 311
ಸರ್ವಾರ್ಥಸಿದ್ಧಿ (ಪೂಜ್ಯಪಾದ) 276
ಸ್ಯನಿಗಳು 69
ಸಸ್ಯಸಂಪತ್ತು (ಕರ್ಣಾಟಕದ) 55
ಸಹ್ಯಾದ್ರಿ ಪರ್ವತಗಳು 35, 36, 37, 40
ಸಾತಾರಾ ದಾನಶಾಸನ 254
ಸಾಮನ್ಗಡದ ದತ್ತಿಲಿಪಿ 253
ಸಾಮವೇದ 579
ಸಾಮಾಜಿಕ ವ್ಯವಸ್ಥೆ 262
ಸಾಮಾಜಿಕ ಪರಿಸ್ಥಿತಿ 128
ಸಾಮಾಜಿಕ ಪರಿಸ್ಥಿತಿ (ಪುಲಿಕೇಶಿಯ ಕಾಲ) 396
ಸಾಯಣ ಮಾಧವ 182
ಸಾಲದೇವಿ 352
ಸಾಲಿಗ್ರಾಮ 498
ಸಾಲೆತೊರೆ, ಬಿ. ಎ. ಡಾ॥ 271, 382, 384
ಸ್ಟಾರ್ ಬಕ್ 624
ಸ್ಥಾವರಲಿಂಗ 525
ಸ್ಮಾರಕ ಮಂದಿರಗಳು 266
ಸ್ಮಾರ್ತ ಪುರಾಣಿಕ (ಮತ, ರಾಷ್ಟ್ರಕೂಟರ ಕಾಲ) 292
ಸ್ಯಾದ್ವಾದ ಸಿದ್ಧಾಂತ 196, 198

ಸ್ವಾಮಿಕಣ್ಣುಪಿಳ್ಳೈ, ಎಲ್. ಡಿ. 221
ಸ್ವಾಮಿರಾಜ 242
ಸಿಮುಕ 124
ಸ್ಥಿರ ಪ್ರದೇಶ 7
ಸ್ಮಿತ್. ವಿ. ಎ. ಡಾ॥ 117, 130, 318
ಸ್ತ್ರೀಮೂಲತತ್ವ 624
ಸ್ತ್ರೀಯರ ಸ್ಥಾನ ಮಾನ (10ನೆ ಶತಮಾನದಲ್ಲಿ) 212
ಸ್ತ್ರೀ ಶಿಕ್ಷಣ 420
ಸುಕುಮಾರ ಚರಿತೆ 439
ಸುಗ್ಗಲಾದೇವಿ 209, 326, 388
ಸುಣ್ಣ ಶಿಲೆಗಳು 13
ಸುದತ್ತ 534
ಸುಪಾರಕ (ಸೋಪಾರ) 401
ಸುಭಟ 622
ಸುಮನೋ ಬಾಣ 552
ಸುರೇಶ್ವರ 311, 313
ಸುಲೇಮಾನ್ 286, 291
ಸುಸಾಲ (ಶಾತವಾಹನರ ಕಾಲದ ದಾನಿ). 123
ಸೂಕ್ತಿ ಸುಧಾರ್ಣವ (ಮಲ್ಲಿಕಾರ್ಜುನ) 556
ಸೂಕ್ಷ್ಮಾಗಮ 528
ಸೂಡಿ ಶಾಸನ 368
ಸ್ತೂಪಗಳು 205
ಸೂತಸಂಹಿತೆ 181
ಸೆಲರ (ಶಿಲಾಹಾರರ ವಂಶದ ಹೆಸರು) 372
ಸೇತುಬಂಧನ 145, 224,
ಸೇನ ಬೋವ 610
ಸೇನವರರು 385
ಸೇನೇಶ್ವರ ದೇವಾಲಯ 386
ಸ್ವೆಯ್ಸ್, ಸರ್, ಟಿ, 178
ಸೈಗೊಟ್ಟ ಶಿವಮಾರ (ಗಂಗರಾಜ) 162, 164, 224,
ಸೈನಿಕ ಶಿಬಿರಗಳು 265,
ಸೊರೆನ್ ಕಿರ್ಕೆಗಾಲ್ 626
ಸೊನ್ನಲಿಗೆ (ಸೊನ್ನಲಾಪುರ) 361
ಸೋಮೇಶ್ವರ (ಒಂದನೆಯ) 327, 467
ಸೋಮೇಶ್ವರ (ಎರಡನೆಯ) 328, 468
ಸೋಮೇಶ್ವರ (ಮೂರನೆಯ) 337,409
ಸೋಮೇಶ್ವರ 378, 472
ಸೋಮೇಶ್ವರಾಚಾರ್ಯ 368
ಸೋಮದೇವ 375, 395, 629
ಸೋಮದೇವ ಸೂರಿ 311, 312
ಸೋಮೇಶ್ವರ ಸೂರಿ 209
ಸೋಲಿಗರು 83
ಸೋವಿ (ಯಿ) ದೇವ 350
ಸಂಕಮ 352
ಸಂಕ್ಷೇಪ ಶಾರೀರಕ (ಸರ್ವಜ್ಞಾತ್ಮ) 311,
ಸಂಗೀತ ರತ್ನಾಕರ (ಶಾರ್ಙ್ಗದೇವ) 481
ಸಂಘಾರಾಮಗಳು 205, 206
ಸಂಧಿ ವಿಗ್ರಹಿ 607, 614
ಸಂಹಿತೋಪನಿಷತ್ತು 186
ಸ್ಕಂದವರ್ಮ (ಪಲ್ಲವ) 161
ಸಾಂಘಿಕ ಚಟುವಟಿಕೆಗಳು 263
ಸಾಂಖ್ಯದರ್ಶನ 625
ಸಿಂಘಣ 352, 360, 365, 480, 481
ಸಿಂಧೂಲಿಪಿ 90
ಸಿಂಧೂಗಂಗಾ ಮೆಕ್ಕಲುಪ್ರದೇಶ 7
ಸಿಂಹನಂದಿ 137, 139, 196, 230, 534,
ಸಿಂಹವರ್ಮ (ಪಲ್ಲವ) 160, 161
ಸೊಂಡೂರು 23
ಸೌಂದರನಂದ 230
ಸೌಂದತ್ತಿ ಶಾಸನ 365
ಸೌಂದತ್ತಿಯ ರಟ್ಟರು 363
,, (ವಂಶಾವಳಿ) 366

ಹ

ಹತ್ತನೆಯ ಶತಮಾನದ ಕವಿಗಳು 436
ಹತ್ತಿ ಬೆಳೆಯ ಮುಖ್ಯ ಕೇಂದ್ರಗಳು 65
ಹದಿನೆಂಟು ಶ್ರೇಣಿಗಳು 262
ಹಸ್ತಿಮಲ್ಲ (ಗಂಗರಾಜ) 151
ಹಳೇಬೀಡು-ಪಾರ್ಥೆನಾನ್, ದೇವಾಲಯಗಳು 571, 572
ಹರ್ಬರ್ಟ ರಿಸ್ಲಿ ಸರ್, 85
ಹರ್ಮನ್‌ಗೋಟ್ಸ್. ಮಿ॥ 318
ಹರಳಯ್ಯ ಮತ್ತು ಮಧುವಯ್ಯ 350
ಹರಿಹರ 180, 553
ಹರಿಷೇಣ 117, 305
ಹರಿವರ್ಮ 139

ಹರಿಭದ್ರಸೂರಿ 184
ಹರಿದತ್ತಾಚಾರ್ಯ 182
ಹರಿಲೀಲಾ (ಬೋಪದೇವ) 482
ಹಲಸರು 85
ಹಲಾಯುಧ 310
ಹಲಾಯುಧ ಕೋಶ (ನಿಘಂಟು) 310
ಹಲ್ಮಿಡಿ ಶಾಸನ 90, 91
ಹರ್ಷ 162, 224,
ಹರ್ಷಚರಿತೆ 228
ಹಾತಿಗುಂಫಾ ಶಾಸನ 128
ಹಾಲ 126, 131
ಹಾವುಗಳು 79
ಹಿಂಗಾರು ಮಳೆ 38
ಹಿಡಿಂಬಾಸುರ 113
ಹಿಪ್ಪನೇರಳೆ ಗಿಡ 63
ಹಿಪ್ಪಾಲಸ್ 121
ಹಿರೇಗುಂಡಗಲ್ಲಿನ ವೀರಗಲ್ಲು 166
ಹಿರೇ ಹಡಗಲಿಯ ಶಾಸನ 124
ಹೆಗ್ಗಡದೇವನಕೋಟೆ 308
ಹೆರಾಸ್, ರೆವರೆಂಡ್ 220
ಹೆಲಿಯೋ ಡೋರಸ್ 190
ಹೇಮಸೇನ 231
ಹೇಮಾದ್ರಿ 331, 481
ಹೇಮಾದ್ರಿ (ವ್ರತಖಂಡ) 478
ಹೇಮಾವತಿ 181, 213, 164
ಹೇರಾಣಿಕ 129
ಹುಲ್ಷ್, ಡಾ॥ 91, 220
ಹೂಯನ್ ತ್ಸಾಂಗ್ 64, 67, 70, 132, 135, 204, 205, 244, 245, 247, 259, 261, 262, 263, 396
ಹೂವುಗಳು 68
ಹ್ಯಾವೆಲ್ 208
ಹೈದರಾಲಿ 44
ಹೊಯ್ಸಳರು (ದೋರಸಮುದ್ರದ) 466, 524
ಹೊಯ್ಸಳರ ದೇವಾಲಯಗಳು 459, 570, 573
ಹೊಯ್ಸಳರ ವಂಶಾವಳಿ 467, 477
ಹೊಯ್ಸಳರ ಕಾಲದ ಶಿಲ್ಪಿಗಳು 573, 574
ಹೊಯ್ಸಳರ ಭೂಸುಧಾರಣೆ 545
ಹೊಯ್ಸಳರ ಕಾಲದ ಕೈಗಾರಿಕೆ 545
ಹೊಯ್ಸಳ ವಿಷ್ಣುವರ್ಧನ (ನೋಡಿ ಬಿಟ್ಟಿದೇವ) 380, 383
ಹೊರಕಲ್ 208
ಹೊಸ ಗನ್ನಡ ನುಡಿಗನ್ನಡಿ 97
ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ 97
ಹಂದಿ ಬೆನ್ನು, ಗುಡ್ಡಗಳು 36, 41

# ಒಪ್ಪೋಲೆ

| ಪುಟ | ಪಂಕ್ತಿ | ತಪ್ಪು | ಸರಿ |
|---|---|---|---|
| 63 | 1 | ಹಿಪನೇರಳೆಗಿಡ | ಹಿಪ್ಪನೇರಳೆಗಿಡ |
| 93 | 30 | ಕರ್ನಾಟಿಕ | ಕರ್ನಾಟಕ |
| 98 | 8 | ರಿಯಿುತುಸ | ಹರಿಯಿತು. |
| 101 | 2 | ಅಂಶವಾಗಿದು | ಅಂಶವಾಗಿದ್ದು |
| 114 | 5 | ವಿರಾಟಂ | ವರಾಟಂ |
| 114 | 7 | ಹವ್ಯಿಗಂ | ಹವಿಗಂ |
| 114 | 9 | ವಿರಾಟ | ವರಾಟ |
| 119 | 6 | ಇಂದು | ಇದು |
| 132 | 25 | ಇಳಿಹಾಸ | ಇತಿಹಾಸ |
| 154 | 24 | ಗೋಂವಿದನೇ | ಗೋವಿಂದನೇ |
| 175 | 11 | ರುಕ್ಷಿಸುವವನು | ರಕ್ಷಿಸುವವನು |
| 190 | 3 | ಶನ್ನೋ | ತನ್ನೋ |
| 270 | 10 | ಕೊಳ್ಳುವನು | ಕೊಳ್ಳುವರು |
| 289 | 15 | 935-928 | 915-928 |
| 325 | 35 | ಉಲ್ಲಖಿಸಲ್ಪಟ್ಟ | ಉಲ್ಲೇಖಿಸಲ್ಪಟ್ಟ |
| 328 | 35 | ವಾಳಿಗಳನ್ನಸಗಿ | ದಾಳಿಗಳನ್ನಸಗಿದ. 1ನೆ ಸೋಮೇಶ್ವರನು |
| 390 | 25 | ನಾಲ್ಮಡಿ | ಆರನೆ |
| 390 | 32 | ಸಂದರ್ಧ | ಸಂದರ್ಭ |
| 408 | 8 | ಸಮುನ್ಯರ | ಸಾಮಾನ್ಯರ |
| 408 | 15 | ಬೇಕೆಂದಿದನು | ಬೇಕೆಂದಿದ್ದನು |
| 417 | 6 | ಸೆತ್ರವೂ | ಸತ್ರವೂ |
| 434 | 1 | ರುವ | ದ |
| 435 | 9 | ಉತ್ನತ | ಉನ್ನತ |
| 443 | 30 | ಶಕ್ತಿಯುುಳ | ಶಕ್ತಿಯುಳ್ಳ |
| 447 | 6 | ಸತ್ತರ್ಕಷಣ್ಮುಖ | ಷಟ್ತರ್ಕಷಣ್ಮುಖ |
| 458 | 19 | ಎರಡನೆಯ | ಆರನೆಯ |
| 478 | 29 | ನಾಸಿಕ್‌ದಿಂವ | ನಾಸಿಕ್‌ದಿಂದ |
| 489 | 30 | ಆಳುತ್ತಿದ್ದ | ಆಳುತ್ತಿದ್ದ |
| 495 | 20 | ಆಶಿಸುತ್ತಾನೆ | ಆಶಿಸುತ್ತಾರೆ. |
| 517 | 1 | ವೊತ್ತವೊದಲು | ಮೊತ್ತಮೊದಲು |
| 528 | 16 | ಅದರಿಂವ | ಅದರಿಂದ |
| 543 | 31 | ಯಾದ್ದವು | ಯಾಗಿದ್ದವು |
| 549 | 16 | ದತ್ತಾ | ದತ್ವಾ |
| 556 | 15 | ಕಎಗಳು | ಕವಿಗಳು |
| 568 | 17 | ಒಂಡು | ಒಂದು |
| 581 | 13 | ಪ್ರತ್ಯೇಕವಾವ | ಪ್ರತ್ಯೇಕವಾದ |
| 592 | 21 | ಮಾಲಕ | ಮೂಲಕ |
| 596 | 15 | ಒಂಬತು | ಒಂಬತ್ತು |
| 600 | 24 | ಸೃನ್ಯದ | ಸೈನ್ಯದ |
| 600 | 32 | ಣಬರುವುದಿಲ್ಲ | ಕಾಣಬರುವುದಿಲ್ಲ |
| 604 | 16 | ವಿಲ್ಲ | ಎಲ್ಲ |
| 615 | 11 | ಪಡೆದಿದ | ಪಡೆದಿದ್ದ |
| 622 | 10 | ಕೌರಿಕ | ಕ್ಷೌರಿಕ |
| 622 | 21 | ನಡೆಸಿಕೊಳ್ಳವ | ನಡೆಸಿಕೊಳ್ಳುವ |
| 622 | 27 | ನೀಡಿಕೆಯಿತ್ತು | ನೀಡಿಕೆಗಿತ್ತು |

ಯಂಶೈವಾಸ್ಸಮುಪಾಸತೆ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯ್ಯಾಯಿಕಾಃ ಅರ್ಹಶ್ಚೇತಿ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ ಸೋಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ॥

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ॥

ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮವೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಅವನೇ ಆದ—ಈ ಶ್ರೀ ಕೇಶವನೆಂಬ ಈಶನು ನಿಮಗೆ ಇಷ್ಟಾರ್ಥವನ್ನು ಪಾಲಿಸಲಿ.